Regd. No. M. 3618

Estd. 1921 ಇಸವಿ.

1942ನೇ ಇಸವಿಯ
'ನವ್ಯ ಭವಿಷ್ಯ'
ಬೆಲೆ
0—3—0
ಅಗಸ್ತ್ಯ ಆಫೀಸ್,
ನವಭಾರತ ಪುಸ್ತಕ
ಭಂಡಾರ, ಉಡುಪಿ

ಸ್ವಂತ ಪ್ರಕಾಶನ
ನವಯುಗ ಪ್ರೆಸ್
ನೊಂದಣಿ ಸ್ಥಳದಿಂದ
ಕೋರ್ಟಿನ ಪೇಟೆಯಲ್ಲಿ
ನೂತನವಾಗಿ ಕಟ್ಟಲ್ಪ
ಟ್ಟ ರಾಮಾಂಜನೇಯ
ಬಿಲ್ಡಿಂಗ್ಸ್‌ಗೆ ಒಯ್ಯಲ್ಪ
ಟ್ಟಿದೆ.

ಸಂಪುಟ ೨೧
Vol 21

ಸಂಸ್ಥಾಪಕರು:—ಶ್ರೀ ಎ ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

1-1-1942

ಸಂಚಿಕೆ ೧೮
No. 18

EVEN IN WAR

'THE SHOW MUST GO ON'

ALL THE MORE SO IN THE CASE OF

NAVAYUGA

The Harbinger of a New age after the War.

ಕನ್ನಡ

Our Annual Number of 1942

COMES OUT ON 15-1-1942

NAVAYUGA always blazes a new path in its **Annual Numbers**

RATES OF ADVERTISEMENT

Full page Rs. 25/-; ½page Rs 15/-; ¼page Rs. 8/-;
⅛page Rs. 5/-; 1square inch Re 1/-
(Cover pages extra)

WHY NOT GO IN FOR A FLASH ADVERTISEMENT IN THE ANNUAL?

Send your Advts. to;—

The Advt. Manager, NAVAYUGA, UDIPI

'ನವಯುಗ'ದ ನವವತ್ಸರದ ನವಕಾಣಿಕೆ

ಪರ್ಯಾಯ ವಿಶೇಷ ಸಂಚಿಕೆ

೧೯೪೨ನೇ ಜನವರಿ ೧೫ಕ್ಕೆ ವಿಶೇಷ ರೀತಿಯಲ್ಲಿ ಪ್ರಕಟವಾಗುವುದು.

The VIJAYA BANK Ltd.

Estd: 1931

Head Office:—MANGALORE.

ANNOUNCEMENT

A Branch of the Bank has been opend at

BRAHMAVAR

on Thrusday the 25th December 1941

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ಥ ಹೆಣ್ಣುಮಕ್ಕಳಿಗೆ

ಏಳು ದಿವಸದ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿ ತಿಂಗಳ ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ನಂತರ ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹುರಪೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೮ ಆಣೆ.

ಮಾಲಕರು.— ಹಾಲಪ್ಪಾ ಫಕೀರಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬಳ್ಳಿ ಫಾರ್ಮಸಿ,— ಹುಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ — ಬಸಪ್ಪ ಸಿದ್ಧಲಿಂಗಪ್ಪ ಧಾರವಾಡರ, ವಿಜಾಪೂರ. ಚಿಕ್ಕೋಡಿಯಲ್ಲಿ.— ಸಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ್, ಬಳ್ಳಾರಿ.— ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ. **ಗೋಕಾಕ:**— ಸಂಗಪ್ಪ ಶಿವಲಿಂಗಪ್ಪ ಆಂದಾನಿ.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯು ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು — ಜೋಕೆ!

"ವಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ, ಮುಂತಾದ [illegible] ತೆಗೆದು ಹಾಕುತ್ತದೆ. ಬುದ್ಧಿಬಲ [illegible], [illegible] ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ವಿಳಾಸ: 'ವಿಕ್ರಂ ಡಿಸ್ಟ್ರಿಬ್ಯೂಟರ್ಸ್,'

24—ಕನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಕು ೧—೧—೪೨ರಿಂದ ತಾರೀಕು ೮—೧—೪೨ರ ವರೆಗೆ

ಮೇಷ— ಮಾತು ಅನುಕೂಲ್ಯವಾದುದು. ಆದರೆ ಅದರ ಫಲವನ್ನು ಕಾಯ್ದುಕೊಳ್ಳಲು ನಿಮ್ಮಿಂದ ಸಾಧ್ಯವಾಗಲಾರದು. ಅಧಿವ್ಯಾಧಿಗಳ ಪೀಡೆಯು ಅಧಿಕವಾಗಲಿದೆ. ನಿಮ್ಮ ಯೋಜನೆಗಳು ಉದ್ಯಮಗಳಿಗೆ ವಿಪಕ್ಷೀಯರ ತೊಡಕು ತೊಂದರೆಗಳಿರುವವಾದರೂ ಗುರ್ವನುಗ್ರಹವೊಂದಿರುವುದರಿಂದ ಕೆಲವು ಭಾಗಗಳಲ್ಲಿ ಯಶಸ್ವಿಗಳಾಗುವಿರಿ. **ಆಪ್ತೇಷ್ಟರ ವಿರಹ ಮ**ತ್ತು ಪ್ರವಾಸಗಳಿಂದ ದುಃಖ ಸಂಭವಿಸುವಂತಿದ್ದರೂ ತಾ. 1. 2. 3 ಮತ್ತು 8ನೇ ದಿನಗಳು ಸತ್ಫಲದಾಯಿಗಳಾಗಿವೆ.

ವೃಷಭ— ಅಪಾಯಗಳನ್ನು ಉಪಾಯದಿಂದ ಪಾರುಗಾಣಬಹುದಾದರೂ ಸ್ವಸ್ಥ ನಿಮ್ಮಲ್ಲಿ ಸಮಯೋಚಿತ ಬುದ್ಧಿಯ ಅಭಾವದಿಂದ ಅವುಗಳನ್ನು ಎದುರಿಸಲು ಶಕ್ತಿಯು ಸಾಕಾಗಲೊಲ್ಲದು. ಸ್ತ್ರೀಜನತೆಯೊಡನೆ ವ್ಯವಹಾರ ಮಾಡುವಾಗ ಎಷ್ಟು ಜಾಗರೂಕರಾಗಿದ್ದರೂ ಸಾಲದು. ಪಿತ್ತಾಧಿಕ್ಯದಿಂದ ಆರೋಗ್ಯಕ್ಕೆ ಹಾನಿಯಿದೆ. ನೌಕರಿ, ವ್ಯಾಪಾರ, ಜೂಜು ಮುಂತಾದವುಗಳ ಮೂಲಕ ದಿನವಹಿಸಗೆ ಸಾಕಾಗುವಷ್ಟು ಧನದ ಆದಾಯವಿದೆ. ತಾ. 3. 4. 5 ಗೃಹಸುಖ, ಭೋಜನ, ಧನಲಾಭಗಳುಂಟಾಗುವವು.

ಮಿಥುನ— ಈವಾರದ ಹೆಚ್ಚಿನ ದಿನಗಳನ್ನು ಪ್ರವಾಸದಲ್ಲೇ ಕಳೆಯಬೇಕಾದ ಪ್ರಸಂಗಗಳೊದಗಬಹುದು. ನಿಮ್ಮ ಸಂಪದ್ಭಾಗ್ಯವು ಉತ್ತಮವಾಗಿರುವದಾದರೂ ಆರೋಗ್ಯಭಾಗ್ಯದಿಂದ ವಂಚಿತರಾದುದರಿಂದ ನಿಶ್ಚಿಂತರಾಗಿರಲಾರಿರಿ. ಸಾಹಸಿಗಳಾದ ತರುಣ ಜನವರ್ಗದ ಬೆಂಬಲವು ನಿಮಗಿರುವುದರಿಂದ ಹೆಚ್ಚಾಗಿ ನೀವು ಕೈಗೊಂಡ ಕಾರ್ಯಗಳು ನಿಮ್ಮಿಚ್ಛೆಯಂತೆ ಯಶಸ್ವಿಯಾಗಲಿವೆ. ತಾ. 3 1.5 ಮತ್ತು 8ರಲ್ಲಿ ಆಪ್ತೇಷ್ಟರಲ್ಲಿ ಕಲಹ, ಧನಮಾನಗಳಿಗೆ ಹಾನಿಯೂ ಒದಗಬಹುದು.

ಕರ್ಕಾಟಕ— ಸ್ತ್ರೀ ನಿಮಿತ್ತ ಲೋಕಾಪವಾದಕ್ಕೂ ಕಷ್ಟನಷ್ಟಗಳಿಗೂ ಗುರಿಯಾಗಲಿರುವಿರಿ. ಚಂಚಲವಾದ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಲು ತುಂಬಾ ಕಷ್ಟವಾದೀತು. ವಿಪಕ್ಷೀಯರು ದುರ್ಬಲರಿರುವದರಿಂದ ನಿಮ್ಮ ಔದ್ಯೋಗಿಕ ಭಾಗಕ್ಕೆ ಯಾವೊಂದು ತರದ ತೊಂದರೆಯೂ ಇಲ್ಲವು. ಅಲ್ಪ ಯತ್ನದಿಂದ ಸ್ಥಾನಮಾನಗಳನ್ನೂ ಅಧಿಕ ಧನವನ್ನೂ ಸಂಪಾದಿಸುವಿರಿ. ತಾ. 1. 5 ಮತ್ತು 8ರಲ್ಲಿ ಸುಖಭೋಗ, ಭೋಜನ ಲಾಭವಾಗಲಿವೆ.

ಸಿಂಹ— ಹೊಸ ವರ್ಷಾರಂಭವಾದರೂ ನಿಮ್ಮ ಭಾಗಕ್ಕೆ ಈಗಿನ **ಗ್ರಹಮಾನ** ರೀತ್ಯಾ **ಓಲ್ಡ್ ಈಸ್ ಗೋಲ್ಡ್** (Old is gold) ಎಂಬ **ಇಂಗ್ಲಿಷ್ ಗಾದೆಯಂತೆ ಕಳೆದ ದಿನಗಳೇ ಎಷ್ಟೋ ಉತ್ತಮವಾಗಿ**ದ್ದವು. **ಶತ್ರುಪಕ್ಷದವರಿಗೆ ಇದು** ಅಭಿ**ವೃದ್ಧಿಯ ಕಾಲವಾದುದರಿಂದ ನಿಮ್ಮ ಯಾವೊಂದು ಪ್ರಯತ್ನವೂ ಯಶಸ್ವಿಯಾಗಲೊಲ್ಲದು. ಸ್ಥಾನಮಾನಗಳಿಗೆ ತುಂಬಾ ಹಾನಿಯಿದೆ. ಗೃಹಕಲಹ, ಆರ್ಥಿ**ಕ ದುರವ**ಸ್ಥೆ ಮುಂತಾದವುಗಳಿಂದ ನಿಮ್ಮ** ಮನೋರೋಗವು ಅಧಿಕವಾಗಿ **ತನ್ಮೂ**ಲಕ ಅನಾರೋಗ್ಯಕ್ಕೆ ಗುರಿಯಾಗುವಿರಿ. ತಾ. 3 1. 5. ರಲ್ಲಿ ಅಲ್ಪಸ್ವಲ್ಪವಿದ್ದ ಧನವನ್ನೂ ಮಾನವನ್ನೂ ಕಾಯ್ದುಕೊಳ್ಳುವುದು ಕಷ್ಟವಾದೀತು.

ಕನ್ಯಾ— ಕೆಟ್ಟಹುಣ್ಣು, ಪಿತ್ತರಿ ಜನರೋಗಗಳು ನಿಮ್ಮನ್ನು ಸದಾ ಬಾಧಿಸಲಿವೆ. ಶತ್ರುವರ್ಗದವರಿಂದ ಹೆಚ್ಚಿನ ನಷ್ಟಕ್ಕೆ ಗುರಿಯಾಗುವಿರಲ್ಲದೆ ಮಾನಕ್ಕೂ ಕೂಡ ಭಂಗವಿದೆ. ಆದರೂ ನಿಮಗೆ ಕುಟುಂಬಕರ ಮತ್ತು ಮಿತ್ರವರ್ಗದವರ ಸಹಕಾರವು ಜಾಸ್ತಿಗಿರುವುದರಿಂದಲೂ ಮತ್ತು ಸ್ವಯಂ ನೀವು ಚತುರರಿರುವುದರಿಂದಲೂ ಉಪಾಯದಿಂದ ಕಾರ್ಯವನ್ನು ಸಾಧಿಸುವಿರಿ. ವಿದ್ಯಾವ್ಯಾಸಂಗಗಳ ಮೂಲಕ ಕೀರ್ತಿಗೆ ಬೇಕಷ್ಟು ಸಂಪಾದಿಸುವಿರಿ. ತಾ. 6. 7ಹೊರತಾಗಿ ಮಿಕ್ಕುಳಿದ ದಿನಗಳಲ್ಲಿ ನಿಮ್ಮ ಕಾರ್ಯಕಲಾಪವು ಅವ್ಯಾಹತವಾಗಿ ಮುಂದರಿವದು.

ತುಲಾ— ಉದರ ರೋಗ, ನೇತ್ರವೇದನೆ ಮುಂತಾದುವುಗಳಿಂದ ಚಿಂತಾಕುಲರಾದ ನಿಮಗೆ ಮೇಲಿಂದ ಮೇಲೆ ಸಂಭವಿಸತಕ್ಕ ಪ್ರವಾಸವು ಮತ್ತಷ್ಟು ಕಷ್ಟನಷ್ಟ

(೧೧ನೇ ಪುಟ ನೋಡಿರಿ).

BHUVANENDRA PRODUCTS LTD.,

Head Office and Factory:
Katapadi, S. Kanara

Depots:
1 Mah ratha Galli, Hubli
2. 57 Big street, Triplicane, Madras

"BHUVANENDRA"

Danthadavan Choorna

Economical in use Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ (3) ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ L. I. M.

ಪುನಃ ಚರ್ಚಿಲ್ ರುಸವೆಲ್ಟ್ ಸಮ್ಮಿಲನ

ಮುಖ್ಯ ಮಂತ್ರಿ ಚರ್ಚಿಲ್.

ಬ್ರಿಟನಿನ ಮುಖ್ಯ ಮಂತ್ರಿ ಮಿ. ಚರ್ಚಿಲ್ಲರು ಅನಿರೀಕ್ಷಿತವಾಗಿ ಅಮೇರಿಕಕ್ಕೆ ಧಾವಿಸಿರುವರು. ವಾಷಿಂಗ್ಟನಿನಲ್ಲಿ ಲೋಕದ ಪ್ರಮುಖ ರಾಷ್ಟ್ರಗಳೆರಡರ ಸೂತ್ರಧಾರಿಗಳಾದ ರುಸವೆಲ್ಟ್-ಚರ್ಚಿಲ್ಲರೊಳಗೆ ಮಹತ್ವದ ಮಾತುಕತೆ ನಡೆದಿರುವದು. ಚರ್ಚಿಲ್ ರುಸವೆಲ್ಟರು ಇದಕ್ಕೂ ಮೊದಲು ಅಟ್ಲಾಂಟಿಕ್ ಸಮುದ್ರದ ... ಜಹಾಜದಿಂದ ... 'ಪ್ರಿನ್ಸ್ ಆಫ್ ವೇಲ್ಸ್' ಯುದ್ಧ ಹಡಗದಲ್ಲಿ ಮೊದಲು ಭೆಟ್ಟಿಯಾಗಿ ... ಲೋಕ ಪ್ರಸಿದ್ಧಿಯ 'ಅಟ್ಲಾಂಟಿಕ್ ಘೋಷಣ' ಹೊರಡಿಸಿದ್ದರು. ಇದೀಗ ಅವರ ದ್ವಿತೀಯ ಚರಿತ್ರಾರ್ಹ ಸಮ್ಮಿಲನ. ಮಿ. ಚರ್ಚಿಲ್ಲರೊಡನೆ ಲಾರ್ಡ ಬೀವರ್ ಬ್ರೂಕರು, ... ಲ, ನೌಕಾ, ವಿಮಾನದಳದ ಪ್ರಮುಖಾಧಿಕಾರಿಗಳೂ, ಲಂಡನಿನಲ್ಲಿದ್ದ ಅಮೇರಿಕನ್ ರಾಯಭಾರಿಯೂ ವಾಷಿಂಗ್ಟನ್ನಿಗೆ ಹೋಗಿರುವರು. ಅಮೇರಿಕದ ಯುದ್ಧ ವಿಭಾಗಗಳ ಪ್ರಮುಖರೂ ಈ ಮಾತುಕತೆಯಲ್ಲಿ ಭಾಗವಹಿಸಿರುವರು. ಇಂದಿನಂತಹ ಭಯಂಕರ ವಾತಾವರಣದಲ್ಲಿ ಇಂಗ್ಲಂಡಿನ ಮುಖ್ಯ ಮಂತ್ರಿಯು, ಅಮೇರಿಕಕ್ಕೆ ಧಾವಿಸುವದರಲ್ಲಿ ಆಶ್ಚರ್ಯ ಮತ್ತು ಮಹತ್ವ ಎರಡೂ ಇವೆ. ಮಿ. ಚರ್ಚಿಲ್ಲರು ಅಧ್ಯಕ್ಷರ ಅತಿಥಿಯಾಗಿದ್ದು ಅವರೊಳಗಿನ ಸಂಭಾಷಣೆಯು ವ್ಹೈಟ್ ಹೌಸಿನಲ್ಲೇ ನಡೆದಿರುವದು. ಇಡೀ ಪ್ರಪಂಚದಲ್ಲಿ ಹಿಟ್ಲರ್ ಶಾಹಿಯನ್ನು ಪರಾಜಯಗೊಳಿಸುವದೇ ನಮ್ಮ ಪ್ರಮುಖ ಧ್ಯೇಯ. ಇದು ಪೂರ್ವಭಾವಿ ಸಂಭಾಷಣೆ. ರಶ್ಯಾ, ಚೀನದಂತಹ ಇತರ ಮಿತ್ರರಾಷ್ಟ್ರಗಳನ್ನೂ ಕೂಡಿಕೊಂಡು ಮುಂದೆ ನಡೆಯಲಿರುವ ಸಮ್ಮೇಲನಗಳ ಪೂರ್ವರಂಗವಿದು ಎಂದು ಅಧ್ಯಕ್ಷ ರುಸುವೆಲ್ಟರಂದಿರುವರು.

ವಾಷಿಂಗ್ಟನಿನಲ್ಲಿ

ಅಧ್ಯಕ್ಷ ಭವನವಾದ ವ್ಹೈಟ್ ಹೌಸಿನಲ್ಲಿ ಇಬ್ಬರು ಲೋಕಪ್ರಮುಖರನ್ನು ಪ್ರತ್ನಿಸಲು ಅಮೇರಿಕದ 250 ಪತ್ರಿಕಾ ಪ್ರತಿನಿಧಿಗಳು ನೆರೆದಿದ್ದ ಸಭೆಯಲ್ಲಿ ರುಸವೆಲ್ಟ್ ಚರ್ಚಿಲ್ಲರಿಬ್ಬರೂ ತಾವು ಯುದ್ಧ ಗೆಲ್ಲುವೆವೆಂಬ ಕುರಿತು ದೃಢವಾದ ಭರವಸೆ ಪ್ರದರ್ಶಿಸಿರುವರು. ಮಿ. ಚರ್ಚಿಲ್ಲರು ಪ್ರಶ್ನೆಗಳಿಗೆ ಉತ್ತರವೀಯುತ್ತಾ, ಅತಿ ಪೂರ್ವದಲ್ಲಿ ಮಿತ್ರರಾಷ್ಟ್ರಗಳು ಧಾಳಿಯಾರಂಭಿಸಲಾಗುವ ವರೆಗೆ ಸಿಂಗಾಪುರವು ದೃಢವಾಗಿ ರಕ್ಷಿಸಲ್ಪಡುವದು ಎಂದು ರಶ್ಯದ ಅಸಾಧಾರಣ ಸಾಹಸವನ್ನು ಶ್ಲಾಘಿಸಿ, ಇನ್ನು ಯುದ್ಧ ಸ್ಥಿತಿಯಲ್ಲಿ ರಶ್ಯದಲ್ಲಾದ ನಷ್ಟದಿಂದ ಜರ್ಮನಿಯು ಕೊಡತಕ್ಕಂತಹ ... ವೆಂದರು. ಮಿತ್ರರಾಷ್ಟ್ರಗಳು, ಜರ್ಮನಿಯು ಹೊರಗಿನ ಹೋರಾಟದಿಂದ ದೂರಾಗ್ಯೂ ಒಳಗಿನಿಂದ ... ಕಲ್ಲದೆ ಆಂತರಿಕ ಕಲಹದಿಂದಾಗುವ ಅದರ ಪತನವನ್ನು ನಿರೀಕ್ಷಿಸತಕ್ಕುದಿಲ್ಲವೆಂದು ಚರ್ಚಿಲ್ಲರ ಅಭಿಪ್ರಾಯ. ಸ್ವಯುತ್ಯ ... ಸಂಗದಲ್ಲಿ ಮಿತ್ರರಾಷ್ಟ್ರಗಳು ಪೂರ್ತಿ ಒಗ್ಗಟ್ಟಿನಿಂದ ಕಾರ್ಯ ಕೈಕೊಳ್ಳುವ ಹಂಚಿಕೆ ನಡೆದಿದೆಯೆಂದರು. "ಕಳೆದ ಕೆಲವು ತಿಂಗಳುಗಳಿಂದ ಯುದ್ಧವು ನಮಗನುಕೂಲವಾಗಿದೆಯೆಂದು ನಿಮ್ಮ ಭಾವನೆಯೇ?" ಎಂಬ ಪ್ರಶ್ನೆ ಬಂದಾಗ ಚರ್ಚಿಲ್ಲರೆಂದರು "ರಶ್ಯವು ಗೆಲ್ಲುತ್ತಿರುವದನ್ನು, ಅಮೇರಿಕಾ ಇಂಗ್ಲಂಡುಗಳು ಭುಜಕ್ಕೆ ಭುಜಕೊಟ್ಟು ನಿಂತಿರುವದನ್ನು ಕಾಣುವಾಗ ನನಗುಂಟಾಗುವ ಸಮಾಧಾನವನ್ನು ವಿವರಿಸಲು ಸಾಧ್ಯವಿಲ್ಲ" ಅಕ್ಷಿಸ್ ರಾಷ್ಟ್ರಗಳನ್ನು ಸೋಲಿಸಲು ಎಷ್ಟು ಕಾಲ ಹಿಡಿಯಬಹುದು? ಎಂಬ ಮತ್ತೊಂದು ಪ್ರಶ್ನೆಗೆ "ನಾವು ಯುದ್ಧವನ್ನು ಸರಿಯಾಗಿ ನಡೆಸದಿದ್ದರೆ ಎಷ್ಟು ಕಾಲ ಹಿಡಿಯಬಹುದೋ ಅದರ ಅರೆವಾಸಿ ಕಾಲದೊಳಗೆ ವ್ಯವಸ್ಥಾಪೂರ್ವಕ ನಡಿಸಿ ಗೆಲ್ಲಬಹುದು!" ಎಂದು ಉತ್ತರಕೊಟ್ಟರು. ತಾ 24ರ ಕ್ರಿಸ್‌ಮಸ್ ದಿನದ ನಿಮಿತ್ತ ನೆರೆದ 10ಸಾವಿರ ಜನರಿದಿರು ವ್ಹೈಟ್ ಹೌಸಿನಲ್ಲಿ ರುಸವೆಲ್ಟ್-ಚರ್ಚಿಲ್ಲರ ಭಾಷಣವಾಯಿತು. 'ನಮ್ಮ ದೇಶವು ಈ ಕಾಲದಲ್ಲಿ ಯುದ್ಧ ... ದೊಡನೆ ಮತ್ತೊಂದು ಹೊಸ ... ಸಿದ್ಧತೆಗಾಗಿ ನಮ್ಮನ್ನು ಕರೆಯುತ್ತಿದೆ. ನಮ್ಮ ಹೃದಯದ ... ದಯವನ್ನು ... ನಡುವ ಸಿದ್ಧತೆಯನ್ನು ಅಪೇಕ್ಷಿಸುತ್ತಿದೆ. ನಾವು, ಸಂಕಷ್ಟ ... ನಿಮ್ಮ ಹೃದಯವನ್ನು ... ತನ್ನೊಳಗೆ ... ಹೋರಿದ ... ಶಾಂತಿ ವಿಜಯ ... ಕ್ಷಣಿಯಾದಲ್ಲಿ ಅಗಲೇ ಕ್ರಿಸ್‌ಮಸ್ ದಿನದ ಎಲ್ಲ ... ಪ್ರಾರ್ಥನೆ ... ಸಾರವಾಗಿ ನವೀಹಬ್ಬವನ್ನು ಆಚರಿಸುವಂತಾಗುವದು" ಎಂದು ರುಸವೆಲ್ಟರ ಸಂದೇಶ. "ಅನ್ಯರ ಭೂಮಿ ಐಶ್ವರ್ಯಗಳ ಆಶೆ, ಅನ್ಯರನ್ನು ನಷ್ಟಕ್ಕೀಡುಮಾಡಿ ಲಾಭ ಹೊಂದುವ ಕಾಡುಬಯಕೆ-ಇವು ನಮ್ಮನ್ನು ... ರಂಗಕ್ಕೆ ದೂಡಿಲ್ಲವೆಂಬುದನ್ನು ನಾವು ಖಚಿತಪಡಿಸಿಕೊಂಡು ... ಈ ಕ್ರಿಸಮಸಿನಲ್ಲಿ ನಾವು ... ನಂತಾಗಬಹುದು" ಎಂದು ಚರ್ಚಿಲ್ಲರು ಸಂದೇಶವಿತ್ತಿರುವರು.



ರುಸವೆಲ್ಟ-ಚರ್ಚಿಲ್ಲ ಪ್ರಥಮ ಭೇಟಿ ನಡೆದ ಯುದ್ಧಹಡಗ—ಪ್ರಿನ್ಸ್ ಆಫ್ ವೇಲ್ಸ್

ಸೆನೆಟಿನಲ್ಲಿ ಭಾಷಣ

ತಾ 26ರಲ್ಲಿ ಅಮೇರಿಕದ ಸೆನೆಟ ಸಭೆಯಲ್ಲಿ ಮಿ. ಚರ್ಚಿಲ್ಲರ ಉತ್ತೇಜನದಾಯಕ ಭಾಷಣವಿತ್ತು. ಯುದ್ಧ ಸ್ಥಿತಿಯ ಉಜ್ವಲ ಚಿತ್ರವನ್ನು ... ನಡಿಸಿರುವರು. ಜಪಾನು ಯುದ್ಧದಿಂದುಂಟಾದ ತಡೆ ತೊಂದರೆಗಳನ್ನು ಸವಿಸ್ತಾರವಾಗಿ ಹೇಳಿ "ನಾವಿಬ್ಬರೂ ಸಂಪೂರ್ಣ ತಯಾರಾಗಿರದ ವೇಳೆಯಿಂದ ಹಲವು ನಿರಾಶಾದಾಯಕ ಘಟನೆಗಳು ... ಸಂಭವಿಸಲಿವೆ. 1942ನೇ ಇಸವಿಯು ನಮಗೆ ಅತ್ಯಂತ ಕಷ್ಟದ ವರುಷ. ಆದರೆ 1943ರಲ್ಲಿ ಇದರ ಪರಿಣಾಮ ... ಯಾಗಬಹುದು ... ರುವೆವು" ಎಂದರು. ಮಿತ್ರರಾಷ್ಟ್ರಗಳ ಯುದ್ಧ ಯೋಜನೆಯು ತಯಾರಾಗಿದೆಯೆಂದು ... ಹೇಳಿ ಅಮೇರಿಕದ ಒಂದಂದು ಕ್ರಿಯಾಶೀಲ ... ಈ ವರೆಗೆ ಸಹಾಯವಾಗಿರುವದೆಂದರು. ಲಿಬ್ಯದಲ್ಲಿ 10000ದಷ್ಟು ವೈರಿ ಸೇನೆ ... ಇದು ... ಒಂದು ... ಇವೆಲ್ಲ ನಾಶವಾದುದು ತಮ್ಮ ... ಸಾಧಿಸಿದ್ದೇವೆಂದು ... ಕಾರಣವಿದ ಎಂದು ತಿಳಿಸಿ 'ಜಪಾನು ಎಂದೆಂದಿಗೂ ಮರೆಯಲಾಗದಂತಹ ... ಕಲಿಸಬೇಕು" ಎಂದು ಚರ್ಚಿಲ್ಲರು ಘಂಟಾಘೋಷವಾಗಿ ಹೇಳಿರುವರು.

ಅಧ್ಯಕ್ಷ ರುಸವೆಲ್ಟ್.

ಮಾತುಕತೆಗಳು

ಇಂಗ್ಲಂಡು-ಅಮೇರಿಕಗಳ ಯುದ್ಧ ಪ್ರತಿನಿಧಿಗಳು ಪಾಲುಗೊಂಡ ಸಮ್ಮೇಲನದೊಡನೆ ಚರ್ಚಿಲ್-ರುಸವೆಲ್ಟ್ ಮಾತುಕತೆಯು ... ವಾಗಿ ನಡೆಯುತ್ತಿದೆ. ಕೆನಡಾದ ಮುಖ್ಯಮಂತ್ರಿ ಮಿ. ಮೆಕೆಂಝೀ ಕಿಂಗ್ ಇವರು ಆಮಂತ್ರಣದಂತೆ ಆಗಮಿಸಿ ಈ ಸಂಭಾಷಣೆಗಳಲ್ಲಿ ಭಾಗವಹಿಸಿರುವರು. ಅಧ್ಯಕ್ಷ ರುಸವೆಲ್ಟರು ರಶ್ಯನ್ ರಾಯಭಾರಿ ಮಿ. ಲಿಟ್ವಿನೋವರೊಡನೆ ದೀರ್ಘ ಸಂಭಾಷಣೆ ನಡೆಸಿರುವರು. ಇದೀಗ ಮೊದಲ ಮಾತುಕತೆಯು ಮುಗಿದ್ದು, ನಾಜೀವಾದದ ನಿರ್ನಾಮಕ್ಕಾಗಿ ಸೋವಿಯೆಟ್ ರಶ್ಯದೊಡನೆ ... ಚೀನ ... ಮುಂದಕ್ಕೆ ನಡೆಯಲಿವೆಯೆಂದು ಪ್ರಕಟವಾಗಿದೆ.

Greetings.

The Directors, Officers and Staff of the Canara Bank Limited join in sending you this message of appreciation for your good will and patronage during the last year. We sincerely wish you a Peaceful, Happy and Prosperous New Year

ESTD 1906

CANARA BANK, Ltd.

1942ನೇ ಇಸವಿಯ

ಡೈರಿಗಳು

ನವಭಾರತ ಪುಸ್ತಕಭಂಡಾರ ಉಡುಪಿ

ಇಲ್ಲಿ ಸಿಗುತ್ತವೆ

ಭಾರತದ ರಾಜಕೀಯ ಪರಿಸ್ಥಿತಿ

—ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ—

ಕಾಂಗ್ರೆಸ್ ಕಾರ್ಯಕಾರೀ ಸಮಿತಿ.

ಇದೇ ತಾ. ೨೭ರಿಂದ ಬಾರ್ಡೋಲಿಯ ಸ್ವರಾಜ್ಯ ಆಶ್ರಮದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಸೇರಿ 'ಯುದ್ಧ ಮತ್ತು ಭಾರತ'ದ ಕುರಿತು ಗಾಢ ಆಲೋಚನೆ ನಡಿಸಿರುವದು. ಈ ತನಕ ಆ ಸಂಬಂಧ ನಿರ್ಣಯವಾವುದೂ ಆಗಿಲ್ಲ. ವಸ್ತುಸ್ಥಿತಿಯ ಮಹತ್ವದಿಂದಾಗಿ ಸದಸ್ಯರೊಳಗೆ ಭಿನ್ನಾಭಿಪ್ರಾಯವಿರುವದರಿಂದ ವರ್ಕಿಂಗ್ ಸಮಿತಿಯು ಕೊನೆಯ ಪಕ್ಷ ಏಳು ದಿನಗಳ ತನಕವಾದರೂ ನಡೆಯಬಹುದೆಂದು ಊಹಿಸಲಾಗಿದೆ. ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದ ಕುರಿತು ತನ್ನ ವಿಶ್ವಾಸವು ಹಿಂದಿನವಲಿಗಿಂತಲೂ ಬಲಗೊಂಡಿರುವದೆಂದು ಸೂಚಿಸಿ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಆಮಂತ್ರಿಸಿದರು. ಶ್ರೀ. ಸಿ. ರಾಜಗೋಪಾಲಾಚಾರಿ, ಅಜಾದ್ ಮೊದಲಾದವರು ಕಾಂಗ್ರೆಸು ತನ್ನ ಬೇಡಿಕೆಯನ್ನು ಸರಕಾರದ ಮುಂದಿಟ್ಟು ಅದು ಸ್ವೀಕರಿಸುವಂತೆ ಮಾಡಬೇಕು, ಸತ್ಯಾಗ್ರಹವನ್ನು ಮನ್ನಾ ಮಾಡಿಸಬೇಕು ಎಂಬ ಅಭಿಪ್ರಾಯ ಸೂಚಿಸಿದವರೆಂದು ತಿಳಿದು ಬರುತ್ತದೆ. ಅರ್ಥಾತ್ ಪೂನಾ ಬೇಡಿಕೆಯ ಪುನರುತ್ಥಾನದ ಯತ್ನ ನಡೆದಿದೆ. ಬಾಬು ರಾಜೇಂದ್ರ ಪ್ರಸಾದರೇ ಮೊದಲಾದವರು ಸತ್ಯಾಗ್ರಹದ ಕುರಿತು ಅಚಲ ವಿಶ್ವಾಸ ಪ್ರದರ್ಶಿಸಿದವರು. ಪಂಡಿತ ನೆಹರುಗಳು ಕೇವಲ ಸ್ವಾತಂತ್ರ್ಯದ ಸಂಪಾದನಕ್ಕಿಂತಲೂ ಹೆಚ್ಚಿನದ ಶರ್ತಹಾಕಿ ಅದು ಪೂರೈಸಲ್ಪಟ್ಟರೆ ಯುದ್ಧ ಸಹಕಾರವೀಯಬೇಕೆಂಬ ಅಭಿಪ್ರಾಯವುಳ್ಳವರಂತಿವೆ. ಅಂತೂ ಸತ್ಯಾಗ್ರಹಕ್ಕಿಂತಲೂ ರಾಜಕೀಯ ಬೇಡಿಕೆಯ ಕಡೆಗೆ ಕಮಿಟಿಯ ಮೆಂಬರರ ಲಕ್ಷ್ಯವು ಹೋಗಿರುವುದು. ಆದರೆ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹವನ್ನೇ ಗಟ್ಟಿ ಹಿಡಿದಿರುವರು. ಸದ್ಯ ಸ್ಥಿತಿಯಲ್ಲಿ ಬ್ರಿಟಿಷ್ ಸರಕಾರದಿಂದ ರಾಜಕೀಯ ಬೇಡಿಕೆಯನ್ನು ಸ್ಪಷ್ಟ ಪಡಿಸಿ ಫಲವಿಲ್ಲವೆಂದೂ, ಸರಕಾರವದಕ್ಕೆ ಕಿವಿಗೊಡುವುದಿಲ್ಲವೆಂದೂ ಒಂದೊಮ್ಮೆ ಪರ್ಯಾಲೋಚಿಸಿದರೂ ಒಂದು ವಾಗ್ದಾನಕ್ಕಿಂತ ಹೆಚ್ಚಿನದೇನನ್ನು ಕೊಡುವಂತಿಲ್ಲವೆಂದೂ ಗಾಂಧಿಯವರ ಅಭಿಪ್ರಾಯ. ತನ್ನಿಂದ ಕಾಯಿದೇಭಂಗವನ್ನು ಮನ್ನಾ ನಡಿಸುವದು ಅಸಾಧ್ಯವೆಂದು ಗಾಂಧಿಯವರ ಸ್ಪಷ್ಟಾಭಿಪ್ರಾಯವಿದೆ. ಮುಖರೆಲ್ಲಾ ಗಾಂಧಿಯವರೊಡನೆ ಖಾಸಗೀ ಸಂಭಾಷಣೆ ನಡಿಸಿರುವರು. ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯ ಸಭೆಯನ್ನು ಅಲಹಾಬಾದಿನಲ್ಲಿ ಕರೆಯಬೇಕೆಂದು ಪಂಡಿತ ನೆಹರುಗಳ ಅಭಿಪ್ರಾಯವಿದ್ದರೂ ಗಾಂಧಿಯವರ ಅಭಿಪ್ರಾಯದಂತೆ ಜನವರಿ 15ರಲ್ಲಿ ವಾರ್ಧದಲ್ಲೇ ಸೇರುವ ನಿರ್ಣಯವಾಗಿದೆ. ಸರಕಾರವನ್ನು ಸಂಕಷ್ಟಕ್ಕೀಡು ಮಾಡುವ ಇಚ್ಛೆಯಿಲ್ಲದೆ ತಾನು ವ್ಯಕ್ತಿ ಸತ್ಯಾಗ್ರಹ ಹೂಡಿರುವದರಿಂದ ಯುದ್ಧಾನಂತರ ಅದನ್ನು ಸಾಮೂಹಿಕವಾಗಿ ನೂಡಬೇಕಾಗುವದೆಂದೂ ಯುದ್ಧ ವಿರೋಧವಾಗಿ ಹೂಡಿರುವ ಸತ್ಯಾಗ್ರಹವನ್ನು ಈ ಕಾಲದಲ್ಲಿ ನಿಲ್ಲಿಸುವದೆಂದರೆ ತನ್ನನ್ನು ತಾನೇ ಅಲ್ಲಗಳೆದಂತಾಗುವುದೆಂದೂ ಗಾಂಧಿಯವರು ಸಮಿತಿಯ ಸಭೆಯಲ್ಲಿ ಹೇಳಿರುವರು.

ಭಾಗಲ್ಪುರ ಹಿಂದೂ ಸಭಾಧಿವೇಶನದ ಮೇಲೆ ಪ್ರತಿಬಂಧನೆ.

ಬಿಹಾರ ಸರಕಾರವು, ಡಿಸೆಂಬರ 23-24ರಲ್ಲಿ ಭಾಗಲ್ಪುರದಲ್ಲಿ ಸೇರಲಿದ್ದ ಹಿಂದೂ ಮಹಾಸಭೆಯ 23ನೇ ವಾರ್ಷಿಕಾಧಿವೇಶನಕ್ಕೆ ತಡೆಹಾಕಿದ್ದಿತು. ಹಿಂದೂ ಮಹಾಸಭಾ ಕಾರ್ಯಕರ್ತರು ಅಲ್ಲಿ ಅಧಿವೇಶನವನ್ನು ನಡೆಯಿಸುವ ದೃಢಸಂಕಲ್ಪ ಮಾಡಿ ನಿಶ್ಚಿತ ಸಮಯಕ್ಕೆ ಸರಿಯಾಗಿ ಹಿಂದೂ ಮುಖಂಡರೆಲ್ಲಾ ಅಲ್ಲಿಗೆ ಹೊರಡಹತ್ತಿದರು. ಹಿಂದೂ ಸಭೆಯ ಚಾಲ್ತಿ ಹಾಗೂ ನಿಯೋಜಿತ ಅಧ್ಯಕ್ಷ ವೀರ ಸಾವರ್ಕರರನ್ನು ಗಯಾ ಸ್ಟೇಶನಿನಲ್ಲಿ ಕೈದು ಮಾಡಲಾಯಿತು. ಹಿಂದುಗಳ ಅಗ್ರಗಣ್ಯ ಧುರೀಣರಾದ ಡಾ| ಮೂಂಜೆ, ಭಾಯಿ ಪರಮಾನಂದರು ಶ್ರೀ. ವರದ ರಾಜಲು ನಾಯಿಡು ಮೊದಲಾದವರನ್ನೂ ಬಂಧಿಸಲಾಗಿದೆ. ಬಂಗಾಳದ ಅರ್ಥಿಕ ಮಂತ್ರಿಗಳೂ ಹಿಂದೂ ಮಹಾಸಭೆಯ ಕಾರ್ಯಕಾರೀ ಅಧ್ಯಕ್ಷರೂ ಆದ ಡಾ| ಶ್ಯಾಮ ಪ್ರಸಾದ ಮುಖರ್ಜಿಯವರನ್ನು ಮುಂದಿನ ಅಧ್ಯಕ್ಷರಾಗಿ ನಿಯಮಿಸಿ ಭಾಗಲ್ಪುರಕ್ಕೆ ಹೋಗಬಾರದೆಂದು ಶ್ರೀ ಸಾವರ್ಕರರು ಕೇಳಿಕೊಂಡಿದ್ದರು. ಆದರೆ ಸದ್ಯ ಸ್ಥಿತಿಯಲ್ಲಿ ತನಗೆ ದೂರವಿರಲು ಸಾಧ್ಯವಿಲ್ಲವೆಂದು ತಿಳಿಸಿ ಬಿಹಾರ್ ಸರಕಾರದ ಧೋರಣೆಯನ್ನು ಕಠಿಣವಾಗಿ ಟೀಕಿಸಿ ಶ್ರೀ ಮುಕರ್ಜಿಯವರು ಭಾಗಲ್ಪುರಕ್ಕೆ ಹೊರಟು ಬಂಧಿತರಾಗಿರುವರು. ಡಾ| ಮುಖರ್ಜಿಯವರನ್ನು ಬಂಗಾಳಕ್ಕೆ ಸಾಗಿಸಿ ಅಲ್ಲಿ ಬಿಡುವ ಯೋಚನೆ ಅಧಿಕಾರಿಗಳಿಗಿದ್ದರೂ ಮುಖರ್ಜಿಯವರದಕ್ಕೊಪ್ಪಲಿಲ್ಲ. ಅವರನ್ನು ಒಂದು ದಿನ ಬಂಧನದಲ್ಲಿಟ್ಟು ಬಿಡುಗಡೆ ಮಾಡಲಾಗಿದೆ. ಡಾ| ಮುಖರ್ಜಿಯವರು ಮಿ. ಫಜ್ಲುಲ್ ಹಕ್ಕರ ಪತ್ರದಂತೆ ಭಾಗಲ್ಪುರಕ್ಕಾಗಿ ಕಲ್ಕತ್ತೆಗೆ ಹೋಗಿರುವರು. ಭಾಗಲ್ಪುರದಲ್ಲಿ ನಡೆದ ಹಿಂದೂ ಸಭಾ ಪ್ರತಿನಿಧಿಗಳ ಸಭೆಯನ್ನು ಪೋಲೀಸರು ಲಾಠಿ ಚಾರ್ಜುಮಾಡಿ ಚದರಿಸಿರುವರು. ಪಂಜಾಬಿನ ಹಿಂದಿನ ಮಂತ್ರಿ ಸರ್, ಜಿ. ಸಿ. ನರಂಗರೇ ಮೊದಲಾದವರೂ ದಸ್ತಗಿರಿಯಾಗಿರುವರು. ಸುಮಾರು 500ಮಂದಿಯು ಕೈದುಮಾಡಲ್ಪಟ್ಟು ಈಗ ಹಿಂದೂ ಸಭೆಯು ಈ ಸಂಬಂಧದ ಚಳವಳವನ್ನು ನಿಲ್ಲಿಸಿರುವದು.

--ಹಿಂದೂ ಪ್ರಮುಖರ ಬಂಧನ--

ಕಾಂಗ್ರೆಸ್ ಧುರೀಣರ ಖಂಡನೆ.

"ಸಭೆ ಸೇರಲಿಚ್ಛಿಸಿದ ಹಿಂದೂ ಧುರೀಣರು ಕೇಂದ್ರ ಸರಕಾರದ ವಿಶ್ವಾಸಪಾತ್ರರು ಮತ್ತು ಸರಕಾರದ ಸಮರ್ಥಕರು. ಅವರು ಯುದ್ಧ ಸಹಾಯದಲ್ಲಿ ನಿರತರಿದ್ದವರು. ಇಂಥವರ ಕಾರ್ಯವನ್ನು ಬಿಹಾರು ಸರಕಾರವು ಸುಗಮಗೊಳಿಸಲಿಲ್ಲವೇಕೋ ತಿಳಿಯದು. ಸಂಧಾನದ ಎಲ್ಲಾ ಪ್ರಯತ್ನಗಳೂ ನಿರರ್ಥಕವಾದಾಗ ಕಾಯಿದೇಭಂಗವು ಅನಿವಾರ್ಯವಾಗುತ್ತದೆ. ಕ್ರಮಬದ್ಧ ಸಭೆಸೇರಿಸುವ ಅತ್ಯಂತ ನ್ಯಾಯವಾದ ಹಕ್ಕಿಗಾಗಿ ವೀರ ಸಾವರ್ಕರ್, ಡಾ| ಮೂಂಜೆ, ಬಂಗಾಳದ ಮಂತ್ರಿ ಡಾ| ಮುಖರ್ಜಿಯವರು ಕೂಡ ಗೌರವಾರ್ಹ ಅಪರಾಧ ಮಾಡಿ ಬಂಧಿತರಾದನ್ನು ಕಂಡು ನನಗಾನಂದವಾಗುತ್ತದೆ. ನಾನವರನ್ನು ಅಭಿನಂದಿಸುತ್ತೇನೆ. ಬಿಹಾರ್ ಸರಕಾರದ ಈ ವರ್ತನೆಯು ಬಿಹಾರಿನ, ಹಾಗೂ ಅಖಿಲ ಹಿಂದೂ ಮುಸಲ್ಮಾನರ ಐಕ್ಯಸಾಧನೆಯ ಹಾದಿಯಾಗುವದೆಂದು ನನ್ನಾಶೆ. ತನಗೆ ಬೇಕೆಂದಪೇಕ್ಷಿಸುವ ಸ್ವಾತಂತ್ರ್ಯವನ್ನು ಸಹೋದರ ಸಂಘವೊಂದರ ಪಾಲಿಗೆ ಇರಕೂಡದೆಂದು ಮುಸ್ಲಿಂಲೀಗಾದರೂ ಅಪೇಕ್ಷಿಸುವಂತಿಲ್ಲವೆಂದು ನನ್ನ ದೃಢ ವಿಶ್ವಾಸ. ಬಿಹಾರಿನ ದುರಂತ ನಿವಾರಣೆಗೆ, ಹಿಂದೂ ಸಭೆಯ ಮೇಲಿನ ಬಹಿಷ್ಕಾರವನ್ನು ತೆಗೆದುಹಾಕಿ ಸಭೆ ಜರಗಿಸಲು ಬಿಡುವ ಒಂದೇ ಒಂದು ಹಾದಿಯಿದೆ"- ಎಂದು ಗಾಂಧಿಯವರಂದಿದ್ದಾರೆ. ಬಾಬು ರಾಜೇಂದ್ರ ಪ್ರಸಾದ್, ಸರ್, ಟಿ. ಬಿ. ಸಪ್ರು, ಜಯಕರ ಮೊದಲಾದ ಎಲ್ಲಾ ಧುರೀಣರೂ ಈ ಕುರಿತು ನಿಷೇಧ ಸೂಚಿಸಿರುವರು. ದೇಶದಲ್ಲೆಲ್ಲಾ ಹರತಾಳ ಸಭೆಗಳು ನಡೆದಿರುವವು. ವೈಸರಾಯರಿಗೆ ವಿನಂತಿಗಳು ಹೋಗಿರುವವು. ಆದರೆ ವೈಸರಾಯರು ಎಲ್ಲಾ ಜವಾಬ್ದಾರಿಯನ್ನು ಪ್ರಾಂತಿಕ ಸರಕಾರದ ಮೇಲೆ ಹಾಕಿರುವರೆಂದು ತಿಳಿದುಬರುತ್ತದೆ.

(೯ನೇ ಪುಟ ನೋಡಿ.)

ಹೊಲಿಯುವ ನೂಲಿನ ಉಂಡೆಗಳು

ಈಗ ಹೊಸತಾಗಿ ಯಂತ್ರಗಳ ಮತ್ತು ನುರಿತ ಕೆಲಸಗಾರರ ಸಹಕಾರದಿಂದ ತಯಾರಿಸಲ್ಪಡುತ್ತವೆ. ಎಲ್ಲಾ ಕಡೆಗಳಲ್ಲೂ ಏಜಂಟರುಗಳು ಕೂಡಲೇ ಬೇಕಾಗಿದ್ದಾರೆ.

ತಿಳಿಯಬೇಕಾದ ಸ್ಥಳ:-
ಬಡವರಬಂಧು ಹೊಸಿಯರಿಸ್,
(ಪ್ರೊಪ್ರೈಟರು ಬಡವರಬಂಧು)
ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್
ಮಂಗಳೂರು.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪೋಲಿಸಿದಾರರಿಗೂ, ಏಜಂಟರಿಗೂ
ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ

ನವ ವರ್ಷವು
ಆನಂದದಾಯಕವಾಗಿಯೂ
ಅಭಿವೃದ್ಧಿಕರವಾಗಿಯೂ
ಪರಿಣಮಿಸಲೆಂದು

ನಾವು
ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬದ್ರರ್ಸ್ ಲಿಮಿಟೆಡ್.

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು,

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಉಡುಪಿ, ಮದ್ರಾಸು, ಬೆಂಗಳೂರು, ತ್ರಿವೇಂಡ್ರಂ, ಮಂಗಳೂರು, ಕಲ್ಲಿಕೋಟೆ
ಬೊಂಬಾಯಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,
ಆಸ್ಪತ್ರೆ ಬಳಿ, ಉಡುಪಿ.

ಶ್ರೀ ರಾಮಾ ರೆಸ್ಟೋರೆಂಟ್,
ಶ್ರೀ ಕಾಶೀಮಠದ ಕಟ್ಟೋಣ,
ಉಡುಪಿ.
ಮೇಲ್ದರಗತಿಯ, ಉಪಹಾರ ಮತ್ತು
ಭೋಜನಗೃಹ. ಪ್ರಯಾಣಿಕರಿಗೆ
ವಿಶಿಷ್ಟ ಅನುಕೂಲತೆಗಳಿವೆ,
ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ,
ಎಚ್. ರಾಮಚಂದ್ರ ನಾಯಕ್,
ಮಾಲಕ.

ಸಮಾಚಾರ ಸಂಗ್ರಹ

ಹೋಂಗ್‌ಕೋಂಗ್ ಪತನ.

ಚೀನಾದಲ್ಲಿರುವ ಬ್ರಿಟಿಷ್ ವಸಾಹತಾದ ಹೋಂಗ್‌ಕೋಂಗ್ ಬಂದರವು 18 ದಿನಗಳ ಚರಿತ್ರಾರ್ಹ ಪ್ರತಿಭಟನೆ ಕೊಟ್ಟು ಕೊನೆಗೆ ಅನ್ಯೋಪಾಯ ಕಾಣದೆ ಜಪಾನರಿಗೆ ಶರಣಾಗತವಾಗಿರುವದು. ಹೋಂಗ್‌ಕೋಂಗಿನ ಪ್ರತಿಭಟನೆಯನ್ನು ಜಪಾನರೇ ಶ್ಲಾಘಿಸಿರುವರು. ಅಲ್ಲಿಯ ಸೇನಾನಿಯಾಗಿದ್ದ ಸರ್. ಮಾರ್ಕ್ಸ್‌ಯಂಗ್ ಇವರೂ ನಾಗರಿಕರೂ ಶ್ಲಾಘನೀಯ ಸ್ಥೈರ್ಯ ಪ್ರದರ್ಶಿಸಿರುವರು. ಜಪಾನೀ ಸೇನೆಯು ಬ್ರಿಟಿಷ್ ಸೇನೆಯ ಎಂಟುಪಾಲು ಅಧಿಕವಿತ್ತೆಂದು ತಿಳಿದುಬರುತ್ತದೆ. ಮುಖ್ಯವಾಗಿ ನೀರಿನ ಸರಬರಾಯಿಗಳನ್ನೆಲ್ಲಾ ಜಪಾನರು ಬೋಂಬು ಮೂಲಕ ನಾಶಗೊಳಿಸಿದುದೇ ಹೋಂಗ್‌ಕೋಂಗಿನ ಪತನಕ್ಕೆ ಕಾರಣವೆಂದು ತಿಳಿದುಬರುತ್ತದೆ. "ತಮಗಿದ್ದ ಪ್ರಬಲ ಪ್ರತಿಕೂಲಗಳಿಗಿದಿರಾಗಿ ಬ್ರಿಟಿಷ್ ಮತ್ತು ಕೆನಡಾ ಸೈನಿಕರು ತೋರಿಸಿದ ಧೈರ್ಯ ಸ್ಥೈರ್ಯಗಳು ಚುಂಕಿಂಗ್ ಚೀನೀಯರೆಲ್ಲರ ಶ್ಲಾಘನೆ ಮತ್ತು ಗೌರವಕ್ಕೆ ಪಾತ್ರವಾಗಿದೆ. ಅದು ಚೀನೀ ಸ್ಫೂರ್ತಿಯಷ್ಟೇ ಅಲ್ಲ; ಎಲ್ಲಾ ಮಿತ್ರರಾಷ್ಟ್ರಗಳವರಿಗೆ ನವಸ್ಫೂರ್ತಿಯನ್ನಿತ್ತಿದೆ" ಎಂದು ಚೀನೀ ಸರಕಾರೀ ಪ್ರಕಟಣೆಯು ಹೋಂಗ್‌ಕೋಂಗ್ ಹೋರಾಟ ವಿಧಾನವನ್ನು ಶ್ಲಾಘಿಸಿರುವದು.

ಫಿಲಿಪ್ಪೈನಿನ ಸಮರ.

ಅಮೇರಿಕದ ಫಿಲಿಪ್ಪೈನಿನ ಮೇಲೆ ಅತಿ ಪ್ರಬಲ ಸೇನೆಗಳನ್ನು ತಂದಿಳಿಸಿ ಜಪಾನರು ಭೀಕರ ಹೋರಾಟ ಹೂಡಿರುವರು. ಸುರಕ್ಷಿತವಾಗಿ ಹಡಗು ಮೂಲಕ ಸೈನ್ಯ ತಂದಿಳಿಸಲು ಜಪಾನರಿಗೆ ಶಕ್ಯವಾದುದರಿಂದ ಮಿತ್ರರಾಷ್ಟ್ರಗಳ ಹಡಗು ಬಲದ ಕುರಿತು ಗಲಿಬಿಲಿಯೆದ್ದಿದೆ. ಜಪಾನರ ವಿಮಾನಧಾಳಿ ಬಿರುಸಾಗಿದೆ. ಅಮೇರಿಕನ್ ಸೇನೆಯು ದೃಢವಾಗಿ ಪ್ರತಿಭಟಿಸುತ್ತಿರುವದಾದರೂ ಜಪಾನರ ಬಲವಾದ ಒತ್ತಾಯದಿಂದ ಹಲವೆಡೆ ಹಿಂಜರಿಯಬೇಕಾಗಿ ಬಂದಿದೆ. ಫಿಲಿಪ್ಪೈನಿನ ಮುಖ್ಯ ಪಟ್ಟಣದ ಕಡೆಗೆ ಎರಡು ದಿಕ್ಕಿನಿಂದ ಜಪಾನೀ ಸೇನೆ ಮುಂದೊತ್ತುತ್ತಿರುವುದರಿಂದ, ಅಲ್ಲಿಯ ಕಮಾಂಡರ್-ಇನ್-ಚೀಫರು ಸ್ವತಃ ರಣಕಣಕ್ಕೆ ಹೊರಟಿರುವರು. ಅಮೇರಿಕದ ಬಲವಾದ ಟೇಂಕುಗಳನ್ನು ಮುಂದೆ ಹಾಕಿ ತೀವ್ರ ಪ್ರತಿಭಟನೆ ಕೊಡಲಾಗಿದೆ.

ಮನಿಲಾದ ಮೇಲೆ ಬರ್ಬರ ಧಾಳಿ

ಫಿಲಿಪ್ಪೈನಿನ ಬದಿಯ ಮನಿಲಾ ಬಂದರವು ಹಲವು ಬಾರಿ ಧಾಳಿಗೊಳಗಾದ ಮೇಲೆ ಈಗ ಬಹಿರಂಗ ನಗರವಾಗಿ ಅಮೇರಿಕಾ ಸರಕಾರದಿಂದ ಸಾರಲ್ಪಟ್ಟಿದೆ. ಅಲ್ಲಿಯ ಅಮೇರಿಕಾಧಿಕಾರಿಗಳ ಕಾರ್ಯಾಲಯಗಳು ಪಟ್ಟಣದ ಹೊರಗೊಯ್ಯಲ್ಪಟ್ಟಿವೆ. ಎಲ್ಲಾ ರಕ್ಷಣಾಸಿದ್ಧತೆಗಳಾದ ಗನ್ನು, ಸೇನೆ, ವಿಮಾನ ಮೊದಲಾದುವುಗಳನ್ನು ತೆಗೆಯಲಾಗಿದೆ. ಆದರೂ ಜಪಾನೀ ವಿಮಾನಗಳು 'ಓಪನ್ ಸಿಟಿ'ಯ ಮೇಲೆ ನಿರಾತಂಕವಾಗಿ ಧಾಳಿ ನಡಿಸಿ ಹಲವು ಕಟ್ಟಡಗಳನ್ನು ಧ್ವಂಸಮಾಡಿರುವವು. 300 ವರುಷಗಳ ಮೊದಲಿನ ಸುಪ್ರಸಿದ್ಧ ಇಗರ್ಜಿಯೊಂದು ಬೆಂಕಿ ಹಿಡಿಯಲ್ಪಟ್ಟಿದೆ. ಪೆಟ್ಟಿಗೊಳಗಾದ ಬಿದ್ದವರು ಸುಮಾರು 50 ಮಂದಿ ಮೃತರಾಗಿರುವರು. 2500,000 ಡಾಲರುಗಳಷ್ಟು ನಷ್ಟವಾಗಿದೆ. ಬಹಿರಂಗ ನಗರದ ಮೇಲೆ ಬೋಂಬು ಹಾಕಿದುದರಿಂದ ಹಾಹಾಕಾರವೆದ್ದಿದೆ. "ಮುಖ್ಯವಾಗಿ ಚೀನಾಯುದ್ಧಾನಂತರ ಜಪಾನು ಹಲವು ವರುಷಗಳಿಂದ ಇಂತಹ ಅನಾಗರಿಕ ವರ್ತನೆಯನ್ನು ಪ್ರದರ್ಶಿಸಿದೆ. ಹಿಟ್ಲರನು ಯುರೋಪಿನಲ್ಲಿ ತೋರುತ್ತಿರುವ ಕ್ರೌರ್ಯ ಮತ್ತು ಅಮಾನುಷತ್ವವನ್ನೇ ಜಪಾನರಿಲ್ಲಿ ತೋರಿಸುತ್ತಿದ್ದಾರೆ"-ಎಂದು ಕೋರ್ಡೆಲ್ ಹಲ್ಲರು ಮನಿಲಾದ ಅತ್ಯಾಚಾರವನ್ನು ಖಂಡಿಸಿರುವರು. ಜಪಾನು ಹಡಗುಗಳ ಮೇಲೆ ಅಮೇರಿಕಾ ಸಬ್‌ಮೆರೀನುಗಳು ಧಾಳಿಯಿಟ್ಟಿರುವವು.

ಮಲಯಾದ ಯುದ್ಧ

ಮಲಯಾದಲ್ಲಿ ಜಪಾನರು ಇನ್ನೂ ಹೆಚ್ಚಿನ ಸೇನೆ ತಂದಿಳಿಸಿ ಧಾಳಿಯನ್ನು ಬಲಗೊಳಿಸಿರುವರು. ಇಪ್ಪೋದಿಂದ 25 ಮೈಲು ದೂರದ ಸುಂಗೇಯಿಯಲ್ಲಿ ಇತ್ತಂಡದ ಸೇನೆಗಳಿಗೆ ಘರ್ಷಣೆ ನಡೆಯುತ್ತಿದೆ. ಇಪ್ಪೋಪಟ್ಟಣವನ್ನು ಬಲಿಗೊಡುವ ವ್ಯವಸ್ಥೆ ನಡೆಯುತ್ತಿದೆ. ಬ್ರಿಟಿಷ್ ಸೇನಾವಿಭಾಗವಾದ ಹಿಂದೀದಳಗಳು ಮಲಯಾದ ಯುದ್ಧದಲ್ಲಿ ಪ್ರದರ್ಶಿಸಿದ ಹಲವು ವಿಧದ ಸಾಹಸಗಳು ಶ್ಲಾಘಿಸಲ್ಪಟ್ಟಿವೆ. ಸರವಕ್‌ನ ಮುಖ್ಯ ಪಟ್ಟಣವಾದ ಕುಚಿಂಗ ಗೆ ಜಪಾನರು ಪ್ರವೇಶಿಸಿದೆ. ಆ ಪಟ್ಟಣದ ವ್ಯವಹಾರ ಸಂಬಂಧಗಳು ಪೂರ್ತಿ ಕಡಿದು ಹೋಗಿವೆ.

ಲಿಬ್ಯದ ಯುದ್ಧ.

ಲಿಬ್ಯಯುದ್ಧದ ಮೊದಲನೇ ಅಂಕವು ತಮ್ಮ ಪಾಲಿಗೆ ವಿಜಯಯುತವಾಗಿ ಕೊನೆಗೊಂಡಿರುವದೆಂದು ಬ್ರಿಟಿಷರ ಭಾವನೆಯಿದೆ. ಬೆಂಗಾಝಿಯಿಂದ ವಿರೋಧಿಗಳನ್ನು ಹಿಂದಕ್ಕಟ್ಟಿ ಬ್ರಿಟಿಷ್ ಸಾಮ್ರಾಜ್ಯ ಸೇನೆಯು ಅದನ್ನು ವಶಪಡಿಸಿ ಕೊಂಡಿರುವದು. ಹಿಂದೀ ಸೈನ್ಯವು ಇದರಲ್ಲಿ ಮುಖ್ಯಭಾಗವಹಿಸಿರುವದು. ಹಿಂಜಟ್ಟಲ್ಪಟ್ಟ ವೈರಿ ಸೇನೆಯು ಜೆಡಾಬಿಯಾಕ್ಷೇತ್ರದಲ್ಲಿ ಹೋರಾಟ ಕೊಡುತ್ತಲೇ ಇದೆ. ಬ್ರಿಟಿಷರು ವಿಮಾನದಲ್ಲಿ ಮೇಲ್ಮೈಯಾಗಿರುವದರಿಂದ ಜರ್ಮನಿ-ಇಟೆಲಿಗಳ ವ್ಯವಹಾರ ಹಾದಿಗಳ ಮೇಲೆ ಪ್ರಬಲಧಾಳಿ ನಡಿಸುತ್ತಿರುವರು. "ಎರಡನೇ ಬಾರಿ ಬೆಂಗಾಝಿಯು ವಿರೋಧಿಗಳ ವಶವಾಯಿತೆಂಬುದನ್ನು ತಿಳಿದು ಇಟೆಲಿಯಾನರಿಗೆ ನಿಜವಾಗಿ ದುಃಖವಾಗಿದೆ. ಅದನ್ನು ಹಿಂದೀ ಸೇನೆಯು ವಶಪಡಿಸಿಕೊಂಡಿತು" ಎಂದು ಇಟೆಲಿಯು ಸಾರಿದ. ಪೂರ್ವ ರಣಕಣಗಳ ಸರ್ವ ಸೇನಾನಿಯಾಗಿದ್ದ ಸರ್. ಆರ್. ಬ್ರೂಕ್ ಪೋಫಮ್ ಇವರ ಸ್ಥಾನದಲ್ಲಿ ಸರ್. ಹೆನ್ರಿ. ಪೌನಾಲರನ್ನು ಬ್ರಿಟಿಷ್ ಸರಕಾರವು ನೇಮಿಸಿದೆ.

ಸೈಂಟ್ ಪಿಯರೀ ದ್ವೀಪ.

ನ್ಯೂಫೌಂಡ್‌ಲೇಂಡಿನ ಬಳಿಯ ಸೈಂಟ್ ಪಿಯರಿ ಮತ್ತು ಮಿಕ್ವೆಲೋನ್ ಎಂಬ ಎರಡು ಸಣ್ಣ ದ್ವೀಪಗಳನ್ನು ಜನರಲ್ ಡಿ. ಗೋಲೆಯರ ಸ್ವತಂತ್ರ ಫ್ರೆಂಚ ದಳದ ನಾವಿಕಾಧಿಕಾರಿಯಾದ ಮುಸೆಲಿಯರ್ ಇವರು ರಕ್ತಪಾತ ವಿನಹ ಆಕಸ್ಮಿಕವಾಗಿ ವಶಪಡಿಸಿಕೊಂಡಿರುವರು. ಇವು ಕೇವಲ 93ಚದರ ಮೈಲು ವಿಸ್ತೀರ್ಣವಿದ್ದು 4000 ಜನ ಸಂಖ್ಯೆಯುಳ್ಳ ದ್ವೀಪಗಳು. ಅಮೇರಿಕಾ ಮತ್ತು ಕೆನಡಾ ಸರಕಾರಗಳು ಈ ವರ್ತನೆಯು ಹಿಂದಿನ ಒಪ್ಪಂದಕ್ಕೆ ವಿರುದ್ಧವೆಂದೂ ತಮ್ಮ ಸಮ್ಮತಿ ವಿನಹಾ ಈ ಆಕ್ರಮಣ ನಡೆದಿರುವದೆಂದೂ ಅಭಿಪ್ರಾಯ ಸೂಚಿಸಿರುವವು. ಅಲ್ಲಿದ್ದ ವಿಚಿ ಗವರ್ನರರು ನಿರ್ಬಂಧಕ್ಕೊಳಗಾಗಿರುವರು. ಅಲ್ಲಿ ಮತ ತೆಗೆದಾಗ ನೇಕಡಾ 98ಮಂದಿ ಜನರಲ್ ಡಿ. ಗೋಲೆಯರ ಪಕ್ಷವಾಗಿ ಮತಕೊಟ್ಟಿರುವರು.

ರಶ್ಯದ ಯುದ್ಧ

ರಶ್ಯಾ ರಣರಂಗದಲ್ಲಿ ಎಲ್ಲಾ ವಿಭಾಗಗಳಲ್ಲೂ ಕೆಂಪು ಸೇನೆಯು ಧಾಳಿಯಾರಂಭಿಸಿರುವದು. ಜರ್ಮನರು ಹಿಮ್ಮೆಟ್ಟುತ್ತಲೇ ಇದ್ದಾರೆ. ಪ್ರತಿನಿತ್ಯ ಹಲವು ಹಳ್ಳಿಗಳನ್ನು ರಶ್ಯನರು ವಶಪಡಿಸಿಕೊಳ್ಳುತ್ತಿರುವರು. ಹಲವು ಪ್ರಾಮುಖ್ಯ ಪಟ್ಟಣಗಳು ಪುನಃ ರಶ್ಯನರ ಕೈಸೇರಿವೆ. ವಿಪರೀತ ಹಿಮದ ನಿಮಿತ್ತ ರಕ್ಷಣಾನುಕೂಲತೆ ಮಾಡಿಕೊಳ್ಳುವದು ಅಸಾಧ್ಯವಾಗಿ ಅವರ ಮೊದಲನೇ ರಕ್ಷಣಾ ಲೈನು ಸಂಪೂರ್ಣವಾಗಿ ಛೇದಿಸಲ್ಪಟ್ಟಿದೆ. ಇನ್ನು ಕೆಲವೇ ದಿನಗಳಲ್ಲಿ ಜರ್ಮನರು ತಮ್ಮ ಎರಡನೇ ರಕ್ಷಣಾಗೆರೆಯ ವರೆಗೆ ಹಿಂದಕ್ಕಟ್ಟಲ್ಪಡುವರೆಂದು ನಿರೀಕ್ಷಿಸಲಾಗಿದೆ. ಸಾರೋಸ್ಲೋವಿಸ್ಕ ಎಂಬ ಮುಖ್ಯ ನಗರವು ಕೆಂಪುಸೇನೆಯ ಸ್ವಾಧೀನತೆಗೆ ಬಂದಿದೆ.

ರಂಗೂನಿನ ಮೇಲೆ ಧಾಳಿ.

ಡಿಸಂಬರ ತಾ.23 ಮತ್ತು 25ರಲ್ಲಿ ರಂಗೂನಿನ ಮೇಲೆ ಜಪಾನೀ ವಿಮಾನ ಧಾಳಿ ನಡೆದಿರುವದು. ಮೊದಲನೇ ಧಾಳಿಯು ಅತಿ ಪ್ರಬಲವಿದ್ದು 600ನಾಗರಿಕರು ಮಡಿದಿರುವರು. ಜನರು ಅಡಗಿಕೊಳ್ಳುವದನ್ನು ಬಿಟ್ಟು ಗಲಿಬಿಲಿಗೊಂಡು ರಸ್ತೆಗೋಡಿ ಬಂದುದೇ ಇಷ್ಟೊಂದು ಹಾನಿಗೆ ಕಾರಣವೆಂದೂ ಜಾರತವು ಇದರಿಂದ ಪಾಠ ಕಲಿಯಬೇಕೆಂದೂ ಎಚ್ಚರಿಸಲಾಗಿದೆ. ಎರಡನೇ ಧಾಳಿಯಲ್ಲಿ ಹೆಚ್ಚಿನ ಹಾನಿಯಾಗಿಲ್ಲ. 20ಜಪಾನೀ ವಿಮಾನಗಳನ್ನು ಕೆಡಹಲಾಗಿದೆ. ಚುಂಕಿಂಗಿಗೆ ಹೊರಟಿದ್ದ ಜನರಲ್ ವೇವೆಲರು ವಿಮಾನ ನಿಲ್ದಾಣವೊಂದರ ಮೇಲೆ ಧಾಳಿಯಾಗುವಾಗ ಅದೇ ನಿಲ್ದಾಣದಲ್ಲಿದ್ದರೆಂದು ತಿಳಿದುಬರುತ್ತದೆ.

ಪ್ರಕೃತ ಮದ್ರಾಸಿಗೆ ಭೀತಿಯಿಲ್ಲ.

ಮದ್ರಾಸ್ ಸರಕಾರವು ಒಂದು ಪ್ರಕಟಣೆ ಹೊರಡಿಸಿ ಸದ್ಯಸ್ಥಿತಿಯಲ್ಲಿ ಮದ್ರಾಸನ್ನು ಬಿಟ್ಟುಹೋಗುವ ಅಪಾಯವಾಗಲೀ ಜಗತ್ಯವಾಗಲೀ ಇಲ್ಲವೆಂದು ಅಭಯಕೊಟ್ಟಿರುವದು. ಮದ್ರಾಸಿನ ಜನರಲ್ಲಿ ಬಹು ವಿಧದ ಗೊಂದಲನೆದ್ದಿದೆ. ಹಲವು ಅಧ್ಯಾಪಕನೀಯರು ತಮ್ಮ ಕುಟುಂಬಗಳನ್ನು ಕಾಂಜೀವರಮ್ ಮೊದಲಾದ ಕಡೆಗಳಿಗೆ ಸಾಗಿಸುತ್ತಿದ್ದಾರೆ. ಸದ್ಯಸ್ಥಿತಿಯಲ್ಲಿ ಪ್ರತ್ಯೇಕ ಅಥವಾ ಬದ್ಧಾಯವಾಗಿ ಮದ್ರಾಸನ್ನು ಖಾಲಿಮಾಡಬೇಕಾದ ಅವಾಯವೇನೂ ಇಲ್ಲ. ಅಂತಹ ಸಂದರ್ಭ ಬಂದಲ್ಲಿ ವ್ಯವಸ್ಥಾಪೂರ್ವಕ ನಗರವನ್ನು ಖಾಲಿ ಮಾಡುವ ಯೋಜನೆಯನ್ನು ಸರಕಾರವು ತಯಾರಿಸುತ್ತಿದೆ. ಪರಿಸ್ಥಿತಿಯು ಹಾಗಾದಲ್ಲಿ ನಾಗರಿಕರಿಗೆ ಹೊರಡಲನುಕೂಲವಾಗುವ ಸಮಯ ಕೊಟ್ಟು ಸರಕಾರವು ಸಾರ್ವಜನಿಕರಿಗೆ ಮುಂದಾಗಿ ಎಚ್ಚರಕೊಡುವದು. ಎಂದು ಸರಕಾರದ ಪ್ರಕಟಣೆ ತಿಳಿಸುತ್ತದೆ.

Greetings

FOR

The New Year

The Directors, Officers and the Staff of The Canara Industrial & Banking Syndicate, Ltd, join in sending to their numerous shareholders, constituents, well-wishers and friends, their hearty greetings for a Prosperous and Happy New Year and express gratitude for their increasing co-operation, good-will and support in the past and solicit the same in the future.

The Canara Industrial & Banking Syndicate, Ltd.,

UDIPI, S. India.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

The Directors & the Staff of the

The Canara Banking Corporation Ltd.

join in sending their best wishes for a

HAPPY & PROSPEROUS NEW YEAR

to all their Share-holders, Depositors and constituents.

ಉಡುಪಿ, **ಗುರುವಾರ,** ೧-೧-೧೯೪೨

ಹಿಂದೂ ಮಹಾಸಭೆ.

ಭಾಗಲ್ಪುರದಲ್ಲಿ ಸೇರಲಿದ್ದ ಹಿಂದೂ ಮಹಾಸಭೆಯ ಮೇಲೆ ಬಿಹಾರ್ ಸರಕಾರದ ಪ್ರತಿಬಂಧಕ ಬಿದ್ದು, ವೀರ ಸಾವರ್ಕರ್, ಡಾ|ಮೂಂಜೆ, ಭಾಯಿ ಪರಮಾನಂದ, ಡಾ| ಶ್ಯಾಮಪ್ರಸಾದಮುಖರ್ಜಿ ಮೊದಲಾದ ಪ್ರಮುಖ ಹಿಂದೂಧುರೀಣರು ದಸ್ತಗಿರಿಗೊಳಗಾದುದು ಉತ್ತಮ ಘಟನೆಯೆಂದೇ ಭಾವಿಸಬೇಕು. ಸರಕಾರಕ್ಕೆ ಬಹುಮುಖದ ಪಾಠವನ್ನದು ಕಲಿಸಿದೆ. ಹಿಂದೂ ಮಹಾಸಭೆಯವರೂ ಮನನ ಮಾಡಬೇಕಾದ ಅಂಶವು ಅದರಲ್ಲಿದೆ. ಸರಕಾರದ ವರ್ತನೆಯನ್ನು ಖಂಡಿಸುವುದರಲ್ಲಿ ಕಾಂಗ್ರೆಸ್ ಧುರೀಣರು ಹಾಗೂ ಇತರಪಕ್ಷಪ್ರಮುಖರು ಹಿಂದೂ ಸಭೆಯವರಿಗಿಂತ ಹಿಂದಾಗಲಿಲ್ಲ. ದೇಶದ ಸರ್ವ ಕಡೆಗಳಲ್ಲಿ ಹರತಾಳ, ನಿಷೇಧ ಸಭೆಗಳು ಜರಗುದುವು. "ಭಾಗಲ್ಪುರ ದುರಂತವು ಐಕ್ಯಮತ್ಯ ಅನಿವಾರ್ಯದ ಸುಸ್ಪಷ್ಟ ನಿದರ್ಶನ. ಯಾಕೆಂದರೆ ಕಾಯಿದೆಯ ಹೆಸರಿನಿಂದ ಅದು ಸಾರ್ವಜನಿಕರ ಮನಸ್ಸಿನ ಮೇಲೆ ಕಿಡಿ ಹಾರಿಸಿದೆ. ಕಾಯಿದೆಯು ವ್ಯಕ್ತಿಯನ್ನು ಗೌರವಿಸಲಿದೆಯೆಂದಾಗಲೀ ಗೌರವಿಸಬೇಕೆಂದಾಗಲೀ ನಾನು ಸ್ವೀಕರಿಸೆ. ಆದರೆ ಒಂದು ಸರಕಾರವು ತನ್ನ ಎಲ್ಲಾ ಪ್ರಾಂತ್ಯದ ಮಂತ್ರಿಯೋಬ್ಬನನ್ನು ಹಾಗೂ ಶ್ರೀ. ಸಾವರ್ಕರ್, ಸರ್. ಗೋಕುಲಚಂದ ನಾರಂಗ್, ಡಾ. ಮೂಂಜೆ ಶ್ರೀ. ಚಟರ್ಜಿಯಂಥವರನ್ನು ಬಂಧಿಸಿದುದು ಹೊರತು ಬೇರೇನೂ ಮಾಡಲಾರದಾದ ಆ ಸರಕಾರದಲ್ಲಿ ನಾಗರಿಕತೆ ಮತ್ತು ಆಡಳಿತ ಸಾಮರ್ಥ್ಯವು ದಿವಾಳಿಯಾಗಿದೆ ಎಂದು ಅದನ್ನು ಖಂಡಿಸಲೇಬೇಕು. ಈ ರೀತಿ ಬೇರೆ ಯಾವ ಪಕ್ಷದ ಮುಖಂಡರ ಮೇಲೆ ಕೈಮಾಡುತ್ತಿದ್ದರೂ ಆ ಸಂದರ್ಭದಲ್ಲಿ ಕೂಡ ನಾನು ಹೀಗೆಯೇ ಹೇಳುತ್ತಿದ್ದೆ" ಎಂದು ಸರ್. ತೇಜ ಬಹದೂರ್ ಸಪ್ರುಗಳಂಥವರು ಕೂಡ ಉದ್ಗಾರಗೈಯ್ಯುವಂತಾಗಿದೆ. ಬಿಹಾರ್ ಸರಕಾರವು ಬೇನುತಪ್ಪಿಯನ್ನು ಕಣಕಿದನನಂತೆ ನಾಲ್ಕೂ ಸಿಕ್ಕಿಸಿದ ಜೇನುಗೂಡಾರಕ್ಕೊಳಗಾಗಿದೆ. ಮಹಾತ್ಮಾಗಾಂಧಿ, ರಾಜೇಂದ್ರ ಪ್ರಸಾದರಂತಹ ಕಾಂಗ್ರೆಸ್ ಧುರೀಣರು ಸರಕಾರದ ವರ್ತನೆಯನ್ನು ಕಠೋರವಾಗಿ ಖಂಡಿಸಿದ್ದಾರೆ. ಉಲ್ಲೇಖಯೋಗ್ಯ ಸಂಗತಿಯೆಂದರೆ, ಯಾವ ಸಮಾಜವನ್ನು ಈ ಅಧಿವೇಶನವು ಕರೆಸಬಹುದೆಂದು ಹೆದರಿ ಬಿಹಾರ್ ಸರಕಾರವು ತಡೆಯಿತೋ ಆ ಭಾಗಲ್ಪುರದ ಮುಸಲ್ಮಾನರೇ ಇದರ ನಿಷೇಧಾರ್ಥವಾಗಿ ಆಚರಿಸಲ್ಪಟ್ಟ ಹರತಾಳದಲ್ಲಿ ಭಾಗವಹಿಸಿದ್ದರು. ಇವೆಲ್ಲಾ ಘಟನೆಗಳ ಮಥಿತಾರ್ಥವೇನು?

ಸರಕಾರಕ್ಕೊಂದು ಪಾಠ.

ಆಪತ್ತಿಗೊಳಗಾದವನಲ್ಲಿ ನ್ಯಾಯನಿಷ್ಠುರತೆಯನ್ನಲ್ಲವಾದರೂ ಆತನ ಮರ್ಮವನ್ನು ಪರೀಕ್ಷಿಸುವ ಪಾಡಿಕೆ. ಬಿಹಾರ್ ಸರಕಾರದಲ್ಲಿ ಅದನ್ನೂ ಕಾಣದಂತಾಗಿದೆ. ಇದು ಯುದ್ಧಕಾಲ. ರಾಷ್ಟ್ರೀಕ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟರೂ ಜನರ ಮನವನ್ನೊಲಿಸಿಕೊಳ್ಳುವ ಸಹಾಯಿಸುವಿಕೆಯನ್ನು ಪಡೆವ ಸರಕಾರವು ತೋರಬೇಕಿತ್ತು. ಬಿಹಾರ್ ಸರಕಾರವು ಜಾತೀಯ ಗಲಭೆಯ ಸಂಭವನೀಯತೆಯನ್ನು ಭಾಗಲ್ಪುರಾಧಿವೇಶನವನ್ನು ತಡೆಗಟ್ಟಿತು. ಆದರೆ ಈ ಸಂದೇಹಕ್ಕೆ ಯಾವುದೂ ಆಧಾರ ದೊರೆತಿಲ್ಲ. ಅದು ಎರಡು ಬಗೆಯಿಂದ ಸುಳ್ಳಾಗಿದೆ. ಮೊದಲನೆಯದಾಗಿ ಭಾಗಲ್ಪುರ ಮುಸಲ್ಮಾನರೂ ಸರಕಾರದ ವರ್ತನೆಯ ಖಂಡನೆಯಲ್ಲಿ ಪಾಲುಪಡೆದರು. ಎರಡನೆಯದಾಗಿ, ಭಾಗಲ್ಪುರದ ಶಾಂತಿರಕ್ಷಣೆಯ ಹೆಸರಿನಿಂದ ಸರಕಾರವು ಅಖಿಲಭಾರತದ ಮನಶ್ಶಾಂತಿಯನ್ನು ಕೆಡಿಸಿದೆ. ಇದು ಆಧಾರ ರಹಿತ ಹಾಗೂ ಸ್ವಮಾಪಾತ್ಮಕ ಧೋರಣೆಯೆಂಬುದಕ್ಕೆ ಬೇರಾವ ನಿದರ್ಶನ ಬೇಕು? ಸರಕಾರವು ಕಾಯಿದೆಯನ್ನು ಕುರುಡನ ಬಡಿಗೆಯಂತೆ ಉಪಯೋಗಿಸಬಾರದು; ವಿಚಾರಚಕ್ಷುವಿನ ಮೂಲಕ ಪ್ರಮಾಣಪರವನ್ನು ನೋಡಿಕೊಂಡು ಅದನ್ನು ಪ್ರಯೋಗಿಸಬೇಕು ಎಂಬ ಪಾಠವನ್ನು ಭಾಗಲ್ಪುರ ಪ್ರಕರಣವು ಕಲಿಸಿದೆ.

ಎರಡನೆಯದಾಗಿ ಜಾತೀಯ ಜಗಳಕ್ಕೆ ತಪ್ಪು ಸ್ಥಾನವನ್ನು ಕೊಟ್ಟಿದ್ದ ಸರಕಾರದ ಕಣ್ಣನ್ನೂ ಭಾಗಲ್ಪುರ ಖಿನ್ನಮಾನವು ತೆರೆದ ಬಲ್ಲುದು. "ಭಾರತದ ಜಾತೀಯ ಜಗಳದ ದೆಸೆಯಿಂದ ಯಾವುದಾದರೊಂದು ತೀರ್ಮಾನವು ಮುಖ್ಯವಲ್ಲ" ಎಂದು ಸರಕಾರವನ್ನುತ್ತರಿಸೀ ಇದೆ. "ನಮಗೆ ಸ್ವಾತಂತ್ರ್ಯನೀವ ನಿಮ್ಮ ಕರ್ತವ್ಯವನ್ನು ನೀವು ಮಾಡಿ; ನಮ್ಮೊಳಗಿನ ಜಗಳವನ್ನು ನಾವು ಬಗೆಹರಿಸಿಕೊಳ್ಳುವೆವು"–ಎಂದು ಕಾಂಗ್ರೆಸ್ ಧುರೀಣರದನ್ನು ಪ್ರತಿಭಟಿಸುತ್ತಾ ಬಂದಿದ್ದಾರೆ. ಹಿಂದೀಯರ ಅಭಿಪ್ರಾಯಭೇದವು ಮೂಲಭೂತ ಹಕ್ಕುಗಳೆದಿರು ನಿಲ್ಲುವದಿಲ್ಲವೆಂಬುದನ್ನು ಪಂಥಪಕ್ಷಗಳ ಭೇದವಿಲ್ಲದೆ ನಡೆದಿರುವ ಭಾಗಲ್ಪುರ ದುರಂತದ ಖಂಡನೆಯು ಸೂಚಿಸುತ್ತದೆ. 'ನಮ್ಮಲ್ಲಿ ಅಂತಃಕಲಹವಿದೆ-ಆದರೆ ಸರಕಾರವು ತಪ್ಪು ಮಾಡುವಾಗ ನಾವು ಒಗ್ಗಟ್ಟಾಗಿ ಪ್ರತಿಭಟಿಸುವೆವು' ಎಂಬ ಸಿಕ್ಷಣವು ಸರಕಾರಕ್ಕೊಂದು ಯುದ್ಧಾಹ್ವಾನವಾಗಿ ಗುಡುಗಿದಂತಿದೆ. ಜಾತೀಯ ಭಾವನೆಯೆಂಬ ಮನೋರೋಗವೊಂದನ್ನು ಸರಕಾರವು ಹರಡಬಹುದು; ಅದನ್ನಾಶ್ರಯಿಸಿ ತನ್ನ ಸ್ವಾರ್ಥ ಸಾಧಿಸಬಹುದು. ಆದರೆ ಈ ಆಧಾರದಿಂದ ಜನರ ಮೂಲಭೂತ ಹಕ್ಕನ್ನಪಹರಿಸುವಾಗ ಮಾತ್ರ ಎಲ್ಲರೂ ಕೆರಳುವರು ಎಂಬುದು ಇದರಿಂದ ಸ್ವತಃ ಸಿದ್ಧ. ಭಾಗಲ್ಪುರವು ಕಲಿಸಿದ ಪಾಠವನ್ನು ಬಿಹಾರ್ ಸರಕಾರವಷ್ಟೇ ಅಲ್ಲ-ಬ್ರಿಟಿಶ್ ಸರಕಾರವೂ ಕಲಿತುಕೊಂಡು ತನ್ನ ಧೋರಣೆಯನ್ನು ಸುಧಾರಿಸಿಕೊಳ್ಳುವದಾದರೆ ಈ ಪ್ರಮಾದವು ಅದಕ್ಕೊಂದು ವರಪ್ರಾಯವಾಯಿತೆಂದೇ ಹೇಳಬಹುದು. ಆದರೆ ಸರಕಾರವು ದಷ್ಟ ಮುದುಗನಂತೆ ತನ್ನಾಟವನ್ನೇ ಮುಂದುವರಿಸಬಹುದು–ಇಂತಹ ಪಾಠವನ್ನು ಕಲಿಯಲಾರದು ಎಂಬ ಸಂದೇಹವಿದೆ.

ಹಿಂದೂ ಸಭೆಯವರಿಗೊಂದು ಪಾಠ.

ಭಾಗಲ್ಪುರ ಪ್ರಕರಣದಿಂದ ಹಿಂದೂ ಮಹಾಸಭೆಯು ಸಂಪಾದಿಸಿದಂತಹ ಸಹಾನುಭೂತಿಯು ಅದರ ಚರಿತ್ರೆಯಲ್ಲಿ ಅಸ್ವಾದ್ವಿತೀಯವಾದುದು. ಮಹಾಸಭೆಯು ತನ್ನ ದೀರ್ಘ ಜೀವನದ ವಿವಿಧ ಕಾರ್ಯಕಲಾಪಗಳಿಂದ ದೊರಕಿಸಿಕೊಳ್ಳಲಾಗದ ಪ್ರತಿಷ್ಠೆಯನ್ನು ಈಯೊಂದು ಘಟನೆಯಿಂದ ಸಂಪಾದಿಸಿರುವದು. ಇದೇನನ್ನು ಸೂಚಿಸುತ್ತದೆ? ಕಾಯಿದೆ ಭಂಗವು ಮಹಾಸಭೆಯ ಸ್ವೀಕೃತ ಧೋರಣೆಯಲ್ಲ. ಗಾಂಧಿಯವರಂದಂತೆ ಯುದ್ಧ ಸಹಾಯಕರನ್ನಿಸಿದ್ದ ಹಿಂದೂ ಧುರೀಣರಿಗೆ ಭಾಗಲ್ಪುರದ ಘರ್ಷಣೆಯು ಸಧಿಕರಿಸಿಗೊದಗಿದ ಅಪಘಾತದಂತೆ ಸಂಭವಿಸಿತು; ಉದ್ದೇಶಪೂರ್ವಕವಾಗಿಂದ ಹೊರಟ ಸೋಲ್ಜರನಿಗೆ ಬಿದ್ದ ಹೊಡೆತ ಅದಲ್ಲ! ಆದರೆ ದೇಶವು ಮಹಾಸಭೆಯು ಈ ಸ್ಥಿತಿಗಿತ್ತ ಮನ್ನಣೆಯನ್ನು ಅವರ ಬೇರಾವ ಅವತಾರಕ್ಕೂ ಕೊಟ್ಟಿಲ್ಲ. ಅಂದರೇನು: ಇಂತಹ ಕಾರ್ಯವನ್ನೆ ದೇಶವು ಮಹಾಸಭೆಯಿಂದ ಅಪೇಕ್ಷಿಸುತ್ತಿದೆ; ಈ ರೀತಿ ಜನ್ಮಸಿದ್ಧ ಹಕ್ಕುಗಳ ರಕ್ಷಣೆಯೊಂದೇ ಪ್ರಕೃತ ಅವಕ್ಕೆ ಬೇಕಾಗಿದೆ. ಕೃತಕ, ಕ್ಷುಲ್ಲಕ ವರ್ಗಭೇದ, ಜಾತಿಭೇದವದಕ್ಕೆ ಬೇಕಾಗಿಲ್ಲ. ಮಹಾಸಭೆಯ ಮುಖಂಡರು ಈ ಪಾಠವನ್ನು ಕಲಿಯಲಿಕ್ಕಿದೆ. ಸರಕಾರದ ದಂಡಧಾರಿ ಕ್ರಿಯೆಯು ಗೋಚರವಾದಾಗ ಅದನ್ನು ಪ್ರತಿಭಟಿಸುವದರಲ್ಲಿ ಧೀರತನವಿದೆ. ಆದರೆ ಅದು ಅದೃಶ್ಯವಾಗಿದ್ದು ತನ್ನಾಟವಾಡುವಾಗ ಅದನ್ನು ಸಮರ್ಥಿಸುವದರಲ್ಲಿ ಅಜ್ಞಾನವಿದೆ. ಅಂತಹ ಧೀರತನವನ್ನು ಪ್ರದರ್ಶಿಸಿದ ಹಿಂದೂ ಸಭೆಯೇ ಇಂತಹ ಅಜ್ಞಾನವನ್ನು ಪ್ರದರ್ಶಿಸಬಾರದು. ನಾಗರಿಕ ಹಕ್ಕು ಬಾಧ್ಯತೆಗಾಗಿ ಸರಕಾರದೊಡನೆ ಹೋರಾಡುವ ಕಾಂಗ್ರೆಸಿನ ರೀತಿಯನ್ನು ಮಹಾಸಭೆಯು ಸಂದರ್ಭಕ್ಕೆ ಒಳಗಾದರೂ ಅನುಕರಿಸಿದುದರಿಂದಲೇ ಭಾಗಲ್ಪುರ ಘಟನೆಯಿಂದ ಅದು ಕೀರ್ತಿಶಾಲಿಯಾಯಿತೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು, ಮಹಾಸಭಾ ಕಾರ್ಯಕರ್ತರು ತಮ್ಮ ಧೋರಣೆಯನ್ನು ತಿದ್ದಿಕೊಳ್ಳುವರೆ?

ಕಾಂಗ್ರೆಸ್ ಕಾರ್ಯಕಾರಿ ಸಮಿತಿ.

ಬಾರ್ಡೋಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀಮಂಡಲಿಯು ಹೆಚ್ಚುಕಡಿಮೆ ಒಂದು ವಾರ ಸಭೆ ಕೂಡಿ ಸದ್ಯಸ್ಥಿತಿಯನ್ನು ಆಳವಾಗಿ ವಿಚಾರಿಸಿ ನಿರ್ಧಾರಕ್ಕೆ ಬಂದಿರುವದೆಂದು ತಿಳಿಯುತ್ತೇವೆ. ಅದರ ಸವಿವರ ವೃತ್ತಾಂತವು ನಮಗೀವರೆಗೆ ದೊರೆತಿಲ್ಲ. ಆದರೆ ಅಂದಿನ ಪೂನಾದ ಪರಿಸ್ಥಿತಿಯು ಪುನರಾವರ್ತಿತವಾಗಿರುವದೆಂದೂ ಗಾಂಧಿಯವರು ತನ್ನ ಜವಾಬ್ದಾರಿಯನ್ನು ಕೆಳಗಿಟ್ಟು ದೂರವಾದರೆಂದೂ ತಿಳಿಬುಬರುತ್ತದೆ. ವರ್ಕಿಂಗ್ ಕಮಿಟಿಯ ನಿರ್ಣಯದಲ್ಲಿ ಕಾಂಗ್ರೆಸ್ ಬೇಡಿಕೆಯನ್ನು ಮನ್ನಿಸುವ ಕಠಿಣ ಶರ್ತಹಾಕಿ ಸರಕಾರಕ್ಕೆ ಸಂಧಾನದ ಬಾಗಿಲನ್ನು ತೆರೆದಿಡಬೇಕು ಎಂಬುದೇ ಪ್ರಾಮುಖ್ಯ ಭಾಗ. ಸತ್ಯಾಗ್ರಹವನ್ನು ಇನ್ನಷ್ಟು ಮಿತಿಗೊಳಿಸಿ ಅದನ್ನು ಗಾಂಧಿಯವರ ಹಸ್ತಕ್ಕೊಪ್ಪಿಸಿ ಒತ್ತಟ್ಟಿಗಿರಿಸಬೇಕೆಂದು ವರ್ಕಿಂಗ್ ಕಮಿಟಿಯ ಹೆಚ್ಚಿನವರ ಅಭಿಪ್ರಾಯವಿತ್ತು. ಅರ್ಥಾತ್ ಸತ್ಯಾಗ್ರಹದ ಪ್ರಾಮುಖ್ಯತೆಯು ಕಡಿಮೆಯಾಗಿ, ದೇಶದ ಬೇಡಿಕೆಗೆ ಪ್ರಧಾನ ಸ್ಥಾನ ದೊರೆತಿದೆ. ಗಾಂಧಿಯವರ ಅಹಿಂಸಾ ಪ್ರಯೋಗವು ಎಲ್ಲಾ ಸಂದರ್ಭಗಳಲ್ಲೂ ಅಂಗೀಕಾರಾರ್ಹವೇ ಎಂಬ ಕುರಿತು ಸಂದೇಹವೂ ಪ್ರದರ್ಶಿಸಲ್ಪಟ್ಟಿತ್ತು. 'ಎಲ್ಲಾ ಯುದ್ಧಗಳನ್ನೂ ವಿರೋಧಿಸಬೇಕು; ಸತ್ಯಾಗ್ರಹದ ಸತ್ಪರಿಣಾಮದ ಕುರಿತು ನನ್ನ ವಿಶ್ವಾಸವು ಪುಟಗೊಂಡಿದೆ; ಈ ಕಾಲದಲ್ಲಿ ಸತ್ಯಾಗ್ರಹವನ್ನು ಬಿಡುವದೆಂದರೆ ನನ್ನನ್ನು ನಾನೇ ಮರೆಯುವದೆಂದರ್ಥ' ಎಂಬ ಗಾಂಧಿಯವರ ಮತಕ್ಕೆ ವರ್ಕಿಂಗ್ ಕಮಿಟಿಯ ಧೋರಣೆಯು ಹೊಂದಿಕೆಯಾಗಿಲ್ಲವೆಂಬುದು ಖಂಡಿತ. ಆದ್ದರಿಂದಲೇ ಗಾಂಧಿಯವರು ಕಾಂಗ್ರೆಸ್ ಹೊಣೆಯನ್ನು ಕೆಳಗಿಟ್ಟು ದೂರ ಸರಿದಿರಬೇಕು. ಗಾಂಧಿಯವರೊಟ್ಟಿಗೆ, ರಾಜಕೀಯಕ್ಕೊಗ್ಗದ ಶುದ್ಧ ಸಾತ್ವಿಕ ವೃತ್ತಿಗೂ ವರ್ಕಿಂಗ್ ಕಮಿಟಿಯು ವಿದಾಯವನ್ನಿತ್ತಂತಾಯಿತು; ವಾತಾವರಣಕ್ಕೊಗ್ಗುವ ರಾಜನೀತಿಯನ್ನಂಗೀಕರಿಸಿತು. ಅರ್ಥಾತ್ ದೇಶದ ಆಂತರಿಕ ಆತುರವೊಂದನ್ನು ವರ್ಕಿಂಗ್ ಕಮಿಟಿಯು ಕಮನಗೊಳಿಸಿದೆ. ರಾಷ್ಟ್ರಾಭಿಪ್ರಾಯವನ್ನು ಸರಿಯಾಗಿ ಪ್ರತಿಬಿಂಬಿಸಿದೆ. ಇದು ಶುಭಸೂಚನೆಯೆಂದು ನಮ್ಮ ಅಭಿಪ್ರಾಯ.

ಈ ಸಂದರ್ಭದಲ್ಲಿ ಪೂನಾದ ಘಟನೆಯು ಜ್ಞಾಪಕಕ್ಕೆ ಬರುತ್ತದೆ. ಸರಕಾರಕ್ಕೆ ಶರತ್ತು ಸಹಕಾರವನ್ನು ಪೂನಾದಲ್ಲಿ ಕಾಂಗ್ರೆಸ್ ನೀಡಿದಾಗ- ಗಾಂಧಿಯವರೊಮ್ಮೆ ವಿದಾಯ ಪಡೆದಿದ್ದರು. ಅದನ್ನು ಸರಕಾರವು ಅಲಕ್ಷಿಸಿ, ಪ್ರತಿಭಟನೆಯೊಂದೇ ಕಾಂಗ್ರೆಸಿನ ಕರ್ತವ್ಯವಾಗಿ ಉಳಿದಾಗ ಗಾಂಧೀ ನಾಯಕತ್ವದ ಹೊರತು ರಾಷ್ಟ್ರಸಭೆಗೆ ಅನ್ಯಥಾ ಹಾದಿ ತೋರಲಿಲ್ಲ. ಇಂದು ಪುನಃ ಪೂನಾದ ಪರಿಸ್ಥಿತಿಯೇ ಸಂಭವಿಸಿದೆ. ಸರಕಾರವು ಈ ಅವಕಾಶದಲ್ಲಾ

ಏಕಕಾಲದಲ್ಲಿ ಚರ್ಚಿಲ್, ಏಡನರ ಅಮೇರಿಕಾ-ರಶ್ಯಾ ಪ್ರಯಾಣ!

ಸುಮಾತ್ರಾ ಆಕ್ರಮಣ.

ಬ್ರಿಟಿಷರ ಸುಮಾತ್ರಾ ದ್ವೀಪದ ಮೇಲೆ ಜಪಾನೀ ಗಾಳಿಕೊಡೆಯ ಸೈನಿಕರು ಇಳಿದು ಅದನ್ನಾಕ್ರಮಿಸಹತ್ತಿರುವರು. ಈ ವರೆಗೆ ಅದರ ಪ್ರತಿಭಟನೆ ಜಯಶೀಲವಾಗಿ ನಡೆದಂತೆ ಕಂಡುಬರುವುದಿಲ್ಲ. ಸುಮಾತ್ರಾದ ಮೇಲೆ ತೀವ್ರ - ವಿಮಾನ ಧಾಳಿಯೂ ನಡೆಯಿತು.

ಏಡನ್-ಸ್ಟಾಲಿನ್ ಭೇಟಿ.

ಬ್ರಿಟನಿನ ವಿದೇಶ ಮಂತ್ರಿ ಮಿ ಏಡನರು ಮೋಸ್ಕೋವಿಗೆ ಗುಪ್ತ ಪ್ರಯಾಣ ಬೆಳೆಸಿ ಕಾಮ್ರೇಡ್ ಸ್ಟಾಲಿನರೊಡನೆ ದೀರ್ಘ ಮಾತುಕತೆ ನಡೆಸಿರುವರು. ಹಿಟ್ಲರ್‌ಶಾಹಿಯ ಪೂರ್ಣ ಪರಾಜಯ ಮತ್ತು ಯುದ್ಧಾನಂತರದ ವ್ಯವಸ್ಥೆಯ ಕುರಿತು ಸೌಹಾರ್ದಪೂರ್ಣ, ಸಮ್ಮತಿದಾಯಕ ಸಂಭಾಷಣೆ ನಡೆದಿರುವದೆಂದು ತಿಳಿದುಬರುತ್ತದೆ. ಮಿ. ಏಡನರು ರಶ್ಯಾ ರಣಕಣಗಳನ್ನೂ ಸಂದರ್ಶಿಸಿರುವರು. ಇಂಗ್ಲೆಂಡು-ರಶ್ಯಾಗಳು ಏಕಮನಸ್ಸಿನಿಂದ ಹೋರಾಡುವ ಯೋಜನೆ, ರಶ್ಯಕ್ಕೆ ಇಂಗ್ಲೆಂಡಿನ ಯುದ್ಧಸಾಮಗ್ರಿ ಸರಬರಾಯಿ ಮೊದಲಾದ ಕುರಿತು ಮಾತುಕತೆಗಳು ನಡೆದಿರುವವು.

ಚರ್ಚಿಲ್ಲರ ಕೆನಡಾ ಪ್ರಯಾಣ

ವಾಷಿಂಗ್ಟನ್ನಿನಲ್ಲಿ ರೂಸವೆಲ್ಟರೊಡನೆ ಮಹತ್ವದ ಮಾತುಕತೆ ನಡೆಸಿ ಅಲ್ಲಿಂದ ಕೆನಡಾದ ಮುಖ್ಯ ಮಂತ್ರಿ ಮೆಕೇಂಝಿ ಕಿಂಗರನ್ನು ಕೂಡಿಕೊಂಡು ಮಿ. ಚರ್ಚಿಲ್ಲರು ಒಟ್ಟಾವಕ್ಕೆ ಆಗಮಿಸಿರುವರು. ಅಲ್ಲಿ ಅವರಿಗೆ ಅತ್ಯಪೂರ್ವ ಸ್ವಾಗತ ದೊರೆತಿರುವದು. ಯುದ್ಧ ಹಂಚಿಕೆಯ ಕುರಿತು ಕೆನಡಾದ ಮುಖ್ಯಾಧಿಕಾರಿಗಳೊಡನೆ ಮಹತ್ವದ ಮಾತುಕತೆ ನಡೆಸುತ್ತಿರುವರು ಬ್ರಿಟನಿನ ಪ್ರಧಾನ ಸಚಿವ. ಹಾಗೂ ವಿದೇಶ ಮಂತ್ರಿಗಳು ಏಕಕಾಲದಲ್ಲಿ ಅಮೇರಿಕಾ, ಕೆನಡಾ, ರಶ್ಯಾಗಳಿಗೆ ಪ್ರಯಾಣ ಬೆಳೆಸಿರುವ ಈ ಪರಿಕ್ರಮ ಸಂದರ್ಭಕ್ಕೆ ವಿಶೇಷ ಮಹತ್ವ ಕೊಡಲಾಗಿದೆ. ಮಿತ್ರರಾಷ್ಟ್ರಗಳು ಸುವ್ಯವಸ್ಥೆಯಿಂದ ಯುದ್ಧ ನಡೆಸುವ ಕಾಲ ಬಾಗಿದಂತೆ ಮುಖ್ಯ ಯುದ್ಧಮಂಡಳಿಯೊಂದನ್ನು ಸ್ಥಾಪಿಸುವದೇ ಈ ಸಂಭಾಷಣೆಗಳ ಗುರಿಯೆಂದೂ ಆ ಸಂಬಂಧದಲ್ಲಿ ಎಲ್ಲಾ ರಾಷ್ಟ್ರಗಳ ಪರಿಷತ್ತೊಂದು ಸದ್ಯದಲ್ಲಿಯೇ ವಾಷಿಂಗ್ಟನ್ನಿನಲ್ಲಿ ಸೇರಲಿದೆಯೆಂದೂ ತಿಳಿದುಬರುತ್ತದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಬಾರ್ಡೋಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಸಮಿತಿಯು ನಿರ್ಣಯ ರಚನೆಗಾಗಿ ನೆಹರು, ಆಜಾದ್, ಸಿ. ಆರ್, ರಾಜೇಂದ್ರಪ್ರಸಾದರುಗಳಿರುವ ಒಂದು ಸಬ್ ಕಮಿಟಿಯನ್ನು ನೇಮಿಸಿದೆ. ತಾ. 28ನೇ ಮಧ್ಯಾಹ್ನ ಮತ್ತು 29ನೇ ಪೂರ್ವಾಹ್ನ ಮೌನದಿನವಾದುದರಿಂದ ಗಾಂಧೀಜಿಯವರು ಅದರಲ್ಲಿ ಭಾಗವಹಿಸಲಿಲ್ಲ. ಸದಸ್ಯರೊಳಗೆ ಪ್ರಧಾನವಾಗಿ ಮೂರು ವಿಧದ ಅಭಿಪ್ರಾಯಗಳಿದ್ದವು. ಪೂನಾ ಬೇಡಿಕೆಯನ್ನು ಪುನಃ ಮುಂದೆ ತಂದು ಯುದ್ಧಕಾಲಕ್ಕಾಗಿ ಸಮ್ಮಿಶ್ರ ಮಂತ್ರಿಮಂಡಲ ಸ್ಥಾಪಿಸುವದು. ಬ್ರಿಟಿಷ್ ಸರಕಾರವು ಸ್ವಾತಂತ್ರ್ಯ ದಾನವಿತ್ತಲ್ಲಿ ಯುದ್ಧ ಸಹಾಯವೀಯುವದು. ಗಾಂಧಿಯವರ ಅಭಿಪ್ರಾಯದಂತೆ ಎಲ್ಲಾ ಯುದ್ಧಗಳನ್ನೂ ವಿರೋಧಿಸುವದು. ವರ್ಕಿಂಗ್ ಕಮಿಟಿಯು ರಾಷ್ಟ್ರೀಯ ಬೇಡಿಕೆಯನ್ನು ಮನ್ನಿಸುವ ಶರ್ತ ಹಾಕಿ ಸರಕಾರದ ಸಂಧಾನ ಸೂಚನೆಗೆ ಸಿದ್ಧತೆಯನ್ನು ವ್ಯಕ್ತಪಡಿಸಿ ಸತ್ಯಾಗ್ರಹವನ್ನು ನಿಲ್ಲಗೊಳಿಸಿ ಹಿಂದೆ ಹಾಕುವ ಠರಾವು ಮಾಡಿರುವದೆಂದೂ ಗಾಂಧಿಯವರು ತಮ್ಮ ಜವಾಬ್ದಾರಿಯನ್ನು ಬಿಟ್ಟುಕೊಟ್ಟಿರುವರೆಂದೂ, ಗಾಂಧೀ ಪಕ್ಷೀಯ ಇತರ ಸದಸ್ಯರು ಅದನ್ನು ವಿರೋಧಿಸಿಲ್ಲವೆಂದೂ ತಿಳಿದುಬರುತ್ತದೆ. ವರ್ಕಿಂಗ್ ಸಮಿತಿಯ ಚರ್ಚೆಯಲ್ಲಿ, ಗಾಂಧಿ, ರಾಜಾಜಿ, ನೆಹರುಗಳ ಮೂರು ಮುಖ್ಯ ಭಿನ್ನಾಭಿಪ್ರಾಯಗಳು ತೋರಿಬಂದವು.

ರಶ್ಯದ ಯುದ್ಧ.

ರಶ್ಯಾ ರಣಕಣಗಳಿಂದ ನಾಜೀ ಸೇನೆ ಸಾರ್ವತ್ರಿಕವಾಗಿ ಹಿಂಜರಿಯುತ್ತಿದೆ. 51 ಜರ್ಮನ್ ಸೇನಾ ಡಿವಿಜನುಗಳು ನಿರ್ಮೂಲವಾಗಿವೆ. ಎಲ್ಲಾ ರಂಗಗಳಲ್ಲಿಯೂ ರಶ್ಯದವರೇ ಮುಂದೊತ್ತುತ್ತಿದ್ದಾರೆ. ಮೋಸ್ಕೋ ನಗರವು ಪ್ರಕೃತ ಅಪಾಯರಹಿತವಾಗಿ ನಿಂತಿದೆ.

ಮಹಾತ್ಮಾ ಗಾಂಧಿಯವರು ಪುನಃ ನಿವೃತ್ತರಾದರೆ?

ವರೂ ಆ ದಿನಕ್ಕಿಂತ ಭಿನ್ನವಾಗಿ ವರ್ತಿಸುವರೆಂಬುವದಕ್ಕೆ ಆಧಾರವಿಲ್ಲ. ಅಂತಹ ಪರಿಸ್ಥಿತಿಯೊದಗಿದರೆ ಮುಂದೇನು? ಪುನಃ ಗಾಂಧಿಯವರನ್ನಾಶ್ರಯಿಸುವದೊಂದೇ ಗತಿಯೆ? ಇನ್ನೂ ಹಾಗಾದಲ್ಲಿ ಕಾಂಗ್ರೆಸಿನ ಗಾಂಧೀ ತ್ಯಾಗನೆಂದರೆ ಅದೊಂದು ನಟನೆ ಮಾತ್ರ, ಅಥವಾ ಒಂದು ಪ್ರಯೋಗ ಮಾತ್ರವೆಂದಾಗಬಹುದು. ಗಾಂಧಿಯವರನ್ನು ಗೌರವಬಲದಿಂದ- ಮನಸ್ಸಾಕ್ಷಿಯನ್ನು ಬಚ್ಚಿಟ್ಟು- ನೇತಾರನು ಕರಿಸಿದೆ; ಕೇವಲ ನಟನೆಯನ್ನು ಕೈಗೊಂಡು ಕಾರ್ಯ ಸಾಧಿಸದಿದೆ, ಎಂಬ ಸಾಧಾರ ಆರೋಪವು ಈ ವರೆಗಿತ್ತು. ಗಾಂಧೀ ಎಲ್ಲೆಯನ್ನು ಬಿಟ್ಟು ಒಂದು ಹೆಜ್ಜೆ ಮುಂದೆ-ಪಥಸಾಗದೆ ಕೂಡಲೇ ಮೊದಲಿನ ಸ್ಥಾನಕ್ಕೇನೇ ಹಿಂದೆ-ಸಾಗುವ ಆಟವು ಹಲವು ಬಾರಿ ನಡೆದರೆ, ಆ ಮೇಲೆ ಗಾಂಧೀ ನಾಯಕತ್ವವೊಂದೇ ಸಹಜನಾದುದು- ಮಿಕ್ಕ ಸುಧಾರಣೆಗಳು ನಟನೆ ಮಾತ್ರವೆಂಬಂತಾಗುವದು ಸ್ವಾಭಾವಿಕ. ಮಹಾತ್ಮರ ಅಹಿಂಸಾತ್ಮಕ ಧೋರಣತ್ವವು ಇಚ್ಛಿತ ಫಲದಾಯಕವಲ್ಲವೆಂದು ಖಚಿತವಾಗಿರುವಾಗ, ಅನಿವಾರ್ಯವಾಗಿ ಅದನ್ನೇ ಆಶ್ರಯಿಸುವ ಪರಿಸ್ಥಿತಿ ಪುನಃ ಒದಗಿದರೆ ಅಲ್ಲಿ ಕಾಂಗ್ರೆಸಿನ ನಿಸ್ಸಹಾಯಕತ್ವವಲ್ಲದೆ ಬೇರೇನೂ ಗೋಚರಿಸಲಾರದು. ಆದ್ದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇಂದಿನ ಹೊಸ ಹೆಜ್ಜೆಯನ್ನು ಶ್ಲಾಘಿಸುವಾಗ, ಅದು ಇನ್ನು ಹಿಂದಿರುಗಲಾರೆನೆಂಬ ದೃಢಶಪಥವನ್ನು ಕಟ್ಟಿಕೊಂಡೇ ಮುಂದುವರಿಯುವಂತಾಗಲಿ ಎಂದು ಆಶಿಸುತ್ತೇವೆ. ಸರಕಾರವು ತನ್ನ ಬೇಡಿಕೆಯನ್ನು ಅಂಗೀಕರಿಸದಿದ್ದಲ್ಲಿ ಖಾಸಾಗಿ ಅದನ್ನು ಒತ್ತಾಯಪೂರ್ವಕ ಸರಕಾರದ ಕೈಗೆ ತುರುಕಿಸಲು ಕಾಂಗ್ರೆಸು ಮುಂದೆ ಧಾವಿಸಬೇಕು. ಹೊರತು ಪುನಃ ಗಾಂಧಿಯವರ ಮುಖನೋಡುವ ಹವ್ಯಾಸವಿರಬಾರದು. ಗಾಂಧಿಯವರನ್ನು ಪಂಚಾಯತಿ ವಹಿಸಿ ಕಾಂಗ್ರೆಸ್ ಅಖಿಲಭಾರತದಲ್ಲಿ ಅನನ್ಯವರ್ಚಸ್ಸುಳ್ಳ ಪ್ರಮುಖನೊಬ್ಬನನ್ನು ದೂರವಿರಿಸಿದ ಕೊರತೆಗೊಳಗಾಗಿದೆಯೆಂಬುದು ನಿಜ. ಆದರೆ ಸದ್ಯದ ವಾತಾವರಣವು ಹಾಗಾಗದ ವಿನಹ ವ್ಯವಹರಿಸಲು ಸಾಧ್ಯವಾಗುವಂತದಲ್ಲ. ಗಾಂಧೀ ವಿಹಾಯತಿಯ ಕುಂದನ್ನು ಪಂಡಿತ ನೆಹರುಗಳು ನಿವಾರಿಸಿಕೊಡಬಲ್ಲರೆಂದು ನಮ್ಮ ವಿಶ್ವಾಸ. ಗಾಂಧೀ ಗಂಧವನ್ನು ಪೂರ್ಣವಾಗಿ ತೊಳೆದುಕೊಂಡಾಗಲೇ ಆ ಜವಾಬ್ದಾರಿ ವಹಿಸಲು ನೆಹರುಗಳಿಂದ ಸಾಧ್ಯ. ಇವೆಲ್ಲಾ ಘಟನೆಗಳ ಮಹತ್ವವನ್ನು ಮನಗಂಡು ಪಂಡಿತ ನೆಹರು ಮತ್ತು ಕಾಂಗ್ರೆಸ್ ವರ್ಕಿಂಗ್ ಸಮಿತಿಯು ಈಗ ಇಟ್ಟ ಹೆಜ್ಜೆಯಲ್ಲೇ ಸ್ವಾತಂತ್ರ್ಯ ಸಾಧನೆಯವರೆಗೂ ದೃಢವಾಗಿ ಮುಂದೊತ್ತುವರೆಂದು ನಂಬಿದ್ದೇವೆ.

1942.

ಶತಮಾನಗಳ ಸ್ಮರಣೆಯಲ್ಲುಳಿಯಬಹುದಾದ ಮಹಾ ದುರಂತಗಳನ್ನು ತಂದೊಡ್ಡಿದ 1941ನೇ ಇಸವಿ ಮುಗಿಯಿತು. ಅದು ಅರ್ಧದಾರಿಗೆ ಬಿಟ್ಟ ಲೋಕವಿಪತ್ತುಗಳನ್ನು ಪೂರ್ತಿಗೊಳಿಸಲಿಕ್ಕಾಗಿಯೇ 1942 ಮುಂದೆ ಬಂದಿದೆ. ಗತವರುಷದ ಆದಿಯಲ್ಲಿ ಇಂಗ್ಲೆಂಡು ದ್ವೀಪವು ಅನುಭವಿಸಿದ ಯಾತನೆಯು ಅದರ ಮಧ್ಯ ಮತ್ತು ಕೊನೆಯ ಭಾಗದಲ್ಲಿ ತುಸು ಕಡಿಮೆಯಾಗಿತ್ತು. ಮಧ್ಯ ಪೂರ್ವದ ಯುದ್ಧದ ಭರ ಭರಾಟೆಯು ವರುಷದು. 1941ರ ಅತಿ ಮುಖ್ಯ ಘಟನೆಯೆಂದರೆ ರಶ್ಯಾ ಮತ್ತು ಜಪಾನಿನ ಯುದ್ಧ. ಹಾನಿಯ ಅತಿಕಟ್ಟ ದಾಖಲೆಯಾದ ಮಾನವ ಮಾರಣದ ಪರಮಾವಧಿಯಾಗಿ- ರಶ್ಯಾ ರಣರಂಗವು ಇನ್ನೂ ನಿಂತಿದೆ. ಜಪಾನು ಯುದ್ಧ ಕ್ಷೇತ್ರವನ್ನು ಅನಿರೀಕ್ಷಿತ ಅನುಭೂತವನ್ನುಂಟು ಮಾಡಿದೆ. ಹಿಟ್ಲರನ ಹೊಡೆತದಿಂದ ಬ್ರಿಟಿಷರ ಪ್ರತಿಷ್ಠೆಗೆ ಕುಂದು ತರುವ ವಿದ್ಯಮಾನಗಳುಂಟಾಗಿದ್ದರೂ ಅದಕ್ಕೆ ಸೈನ್ಯ ಸಹಿತ ರಣಗಳ ಹಾನಿಯೊದಗಿರಬಹುದು. ಆದರೆ ಬ್ರಿಟಿಷ ಸಾಮ್ರಾಜ್ಯಕ್ಕಾದ ಎಲ್ಲಿಯೂ ಕಡಿಯಲ್ಪಟ್ಟಿರುವದಿಲ್ಲ. ಜಪಾನು ಯುದ್ಧಕ್ಕಿಳಿದು ಅದನ್ನು ಸಾಧಿಸಿದಂತಿದೆ. ಶತಮಾನಗಳ ಸಂಬಂಧವಿದ್ದ 'ಹೋಂಗ್ ಕೋಂಗ' ಬ್ರಿಟಿಷರ ಕೈತಪ್ಪಿದ. ಮಲಯಾದ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಎಲ್ಲಕ್ಕಿಂತ ಮಹತ್ವದ ಘಟನೆಯಾಗಿ 1942 ಬರುವಾಗ ಯುದ್ಧವನ್ನು ಭಾರತದ ಬಾಗಿಲಿನ ವರೆಗೆ ತಂದಿಟ್ಟೇ ಬಂದಿದೆ. ಮಿ. ಚರ್ಚಿಲ್ಲರಂತೆ ಅತಿ ಕಷ್ಟದ ವರುಷ 1942!

ಅಂತೂ 1942ನೇ ಇಸವಿಯೆಂದರೆ ಕಣ್ಣ ಮುಂದಿರುವ ವಿಪತ್ತಾಧಿಕ್ಯವೆಂದಾದರೆ, 'ಏನು ಬಾರದೇನೇ ಹೋಗಲಿ' ಎಂದು ವರುಷವನ್ನು ಕಳೆಯಬೇಕಿದೆ. ಯುದ್ಧದ ವೇಗದಿಂದ ನಿತ್ಯ ಜೀವನ, ವ್ಯಾಪಾರ ವಹಿವಾಟು, ಚಲನವಲನ-ಅಂತೂ ಎಲ್ಲಾ ವಿಧದಲ್ಲಿಯೂ ಜನಜೀವನವು ಅತ್ಯಂತ ಕಷ್ಟವಾಗಿ ಪರಿಣಮಿಸಿದೆ. 1942 ಇದಕ್ಕೊಂದು ಪರಿಹಾರವಾಗುವ ಲಕ್ಷಣವು ಕಾಣುವದಿಲ್ಲ-ಅದನ್ನು ಪೋಷಿಸುವ ಚಿಹ್ನೆಯೇ ಒಡೆದು ತೋರುತ್ತಿದೆ. ಮುಂದಿನ ಲೋಕ ಸುಭಿಕ್ಷೆಯ ಕಾಲವನ್ನು ನೋಡುವದಕ್ಕೆ ಈ ಕಠಿಣ ವರುಷವನ್ನು ಕಳೆಯುವ ಧೈರ್ಯ, ಸ್ಥೈರ್ಯ, ಅನುಕೂಲತೆಗಳು ಸರ್ವರಿಗೂ ದೊರೆಯಲೆಂದು ಹಾರೈಸುತ್ತೇವೆ.

ಉಪಾಧ್ಯಾಯರು ಬೇಕು.

ಬುಡ್ನಾರು ಏಡೆಡ್ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಗ್ರೇಡ್ ತರಬೇತಾದ ಉಪಾಧ್ಯಾಯರೊಬ್ಬರು ಬೇಕಾಗಿದೆ. ಇಷ್ಟವುಳ್ಳವರು ಅದನ್ನು ಬೇಗನೆ ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯುವದು.

ಬಿ. ದೇಜಪ್ಪ ಶೆಟ್ಟಿ, ಮೆನೇಜರ್.
ಬುಡ್ನಾರು ಏಡೆಡ್ ಶಾಲೆ, ಶಿವಳ್ಳಿ ಗ್ರಾಮ
ಉಡುಪಿ ಪೋಸ್ಟ್.

NAVAYUGA Udipi, S. I.

To
[illegible]
[illegible]
[illegible]

A BRIGHT & HAPPY NEW YEAR.
(1942)

K. K. SHETTY, Editor. K. H. SHETTY, Proprietor.

ನಾವು ನಮ್ಮ ಚಂದಾದಾರರಿಗೂ, ಜಾಹೀರಾತುದಾರರಿಗೂ, ವಾಚಕರಿಗೂ, ಬರಹಗಾರರಿಗೂ, ಪ್ರತಿನಿಧಿಗಳಿಗೂ, ಏಜಂಟರಿಗೂ ಪ್ರೋತ್ಸಾಹಕರಿಗೂ ಮತ್ತು ಯಾವತ್ತು ಹಿತಚಿಂತಕರಿಗೂ

ಇದಿನ ಬರುವ
ಹೊಸವರ್ಷವು
ಆನಂದ, ಸುಖ ಮತ್ತು ಶಾಂತಿದಾಯಕವಾಗಲೆಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಕೆ. ಕೆ. ಶೆಟ್ಟಿ, ಸಂಪಾದಕ, **ಕೆ. ಎಚ್. ಶೆಟ್ಟಿ,** ವ್ಯಾಪಕ
ನವಯುಗ, ಉಡುಪಿ.

ಉಡುಪಿ ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ
— ತಾ. 2—1—1942ರಿಂದ —
ದಕ್ಷಿಣ ಭಾರತದಲ್ಲಿ ಯಶಸ್ವಿಯಾಗಿ, ಪ್ರತಿ ಜಿಲ್ಲೆಯ
ಮನೆ ಮಾತಾಗಿ ಮೆರೆದ ಚಿತ್ರ.
ನಾಗಯ್ಯಾ, ಕಾಂಚನ ಮಾಲಾ, ದೊರೆಸ್ವಾಮಿ, ರಾಘವನ್,
ಕಲ್ಯಾಣಿ ಇನ್ನಿತರ—

"ವಂದೇ ಮಾತರಂ"

ಮುಂದಿನ ಚಿತ್ರ: ಸತಿ ಮಹಾನಂದ, ತಾ. 8—1—42.
ಅನಂತರ: ಭೂಕೈಲಾಸ, ತಾ. 15—1—42.
ಬರಲಿವೆ: ಪದ್ಮಿನಿ, ಮುಸಾಫಿರ್.

ದಕ್ಷಿಣಕನ್ನಡ

ಮಂಗಳೂರು.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸಭೆಯು ತಾ. 21-12-41ರಲ್ಲಿ ವೆಂಕಪ್ಪ ಘಂಟೆ ಸಭಾ ನಡೆದದ್ದು ಶ್ರೀ ಶಂಕರರಾವ್, ವಕೀಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ರಾತ್ರಿ ಘಂಟೆ 8ಕ್ಕೆ ಡಿನ್ನರ್ ಪಾರ್ಟಿ ಇತ್ತು. ಮದ್ರಾಸಿನ ಬ್ಯಾರಿಸ್ಟರ್ ತಿ. ಕೆ. ಪಿಳ್ಳೆಯವರೂ ಆಮಂತ್ರಿಸಲ್ಪಟ್ಟಿದ್ದರು. ಅವರ ಮತ್ತು ರಾವ್ ಸಾಹೇಬ್ ರಂಗನಾಥ ಶೆಣೈಯವರ ಭಾಷಣಗಳಾದ ನಂತರ, ಪ್ರೆಸಿಡೆಂಟರು ವಂದನೆಗಳನ್ನು ಅರ್ಪಿಸಿದರು.

ಮಹಾಜನ ಬಡವರ ವಸ್ತ್ರ ಭಂಡಾರ-ಸ್ಥಳೀಯ ವಸ್ತ್ರವ್ಯಾಪಾರಿಗಳು ಚಿಮ್ಮಟ್ಲೀ ಚಂದಾ ಎತ್ತಿ ಒಂದು ಬಡವರ ವಸ್ತ್ರ ಭಂಡಾರವನ್ನು ತಾ. 24ರಲ್ಲಿ ಸ್ಥಾಪಿಸಿದರು. ಜಿಲ್ಲಾ ಕಲೆಕ್ಟರರು ಇದರ ಉದ್ಘಾಟನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಶ್ರೀಗಳಾದ ಬಿ. ವೈ. ಶಂಕರರಾಯರು, ಎಸ್. ಸರ್ವೋತ್ತಮ, ಎಸ್. ನಾಗರಾಜಯ್ಯ, ರಾಘವೇಂದ್ರಪ್ಪ ಮೊದಲಾದ ನಾಗರಿಕರು ಮಾತಾಡಿದರು. ಮಿ| ಯಾಬಿಟ್ ಕಲೆಕ್ಟರು ಧನ್ಯವಾದಗಳನ್ನರ್ಪಿಸಿದರು. ವಸ್ತ್ರವ್ಯಾಪಾರಿಗಳು ಬಡವರಿಗಾಗಿ ಕಡಿಮೆ ದರದಲ್ಲಿ ಅಕ್ಕಿಯನ್ನೊದಗಿಸುವುದಕ್ಕೋಸ್ಕರ ಅಕ್ಕಿ ಡಿಪೋ ತೆರೆಯಲು ರೂ. 508ನ್ನು ಸಂಗ್ರಹಿಸಿಕೊಟ್ಟಿರುತ್ತಾರೆ.

ಕಯ್ಯೂರು ಕೇಸಿನ ಕೈದಿಗೆ ಏಟು-ಕಯ್ಯೂರು ಕೊಲೆ ಮೊಕದ್ದಮೆಯ ಓರ್ವ ಕೈದಿಗೆ ಸೆಷ್ಷನ್ಸ್ ಕೋರ್ಟಿನ ಕಂಪೌಂಡಿನಲ್ಲಿ ಕೈದಿಗಳ ಬಂದೋಬಸ್ತಿಗಾಗಿ ಇದ್ದ ಪೋಲೀಸರು ಹೊಡೆದುದರ ಕುರಿತು ಜಡ್ಜರಲ್ಲಿ ವಕೀಲರಾದ ಶ್ರೀ| ಆರ್| ಆರ್| ಕಲ್ಲೆಂಕರ್ ಅವರು ಕೈದಿಯ ಕಡೆಯಿಂದ ಫಿರ್ಯಾದು ಮಾಡಿರುತ್ತಾರೆಂದು ತಿಳಿದುಬರುತ್ತದೆ. ಈ ಘಟನೆಯು ನಡೆದುದು ತಾ. 23ರಲ್ಲಿ. ತಾ. 24ರಲ್ಲಿ ಕೋರ್ಟಿನೊಳಗೆ ಸಹ ಕೈದಿಗಳ ಕೋಳವನ್ನು ತೆಗೆಯಲಿಲ್ಲವಾಗಿಯೂ, ಕೈದಿಗಳು ಕೇಳಿದಾಗ ಅದೆ ವಕೀಲರಾದ ಶ್ರೀ ಎ| ಕೆ| ಪಿಳ್ಳೆಯವರು ಇದು ಸರಿಯಲ್ಲವೆಂದು ಆಕ್ಷೇಪವೆತ್ತಲಾಗಿ ಕೋಳಗಳು ತೆಗೆಯಲ್ಪಟ್ಟುವೆಂದೂ ತಿಳಿದುಬರುತ್ತದೆ.

ಪೋಲೀಸರ ಕೈಗೆ ಸಿಕ್ಕಿರುವ ಕೈದಿಗಳಿಗೆ ಈ ರೀತಿಯ ಏಟು ಕೊಡುವುದು ತಪ್ಪು ಎಂಬುದನ್ನು ಬಹಿರಂಗವಾಗಿ ಖಂಡಿಸುವ ಬಗ್ಗೆ ತಾ. 26ನೇ ಸಾಯಂಕಾಲ ಮೈದಾನದಲ್ಲಿ ಶ್ರೀ| ಜೋಸ್ಸರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ| ಜೋಸ್ಸರೂ, ಶ್ರೀಗಳಾದ ಕೇಶವರಾಮಯ್ಯರೂ, ಕೃಷ್ಣರಾಯರೂ ಮತ್ತು ಕೆ| ಶಿವರಾಯರೂ ಭಾಷಣ ಮಾಡಿ, ಜನರು ಇಂಥ ದಬ್ಬಾಳಿಕೆಗಳಿಗೆ ಎದೆಕೊಡಲು ಸದಾ ಸಿದ್ಧರಿರಬೇಕೆಂದೂ, ಪೋಲೀಸರ ಹಿಂಸೆಗೆ ಹೆದರಬಾರದೆಂದೂ, ಇಂತಹ ದುರಂತಗಳು ಎಲ್ಲೇ ನಡೆದರೂ ಅವನ್ನು ಬಹಿರಂಗವಾಗಿ ಖಂಡಿಸುವುದು ನಾಗರಿಕರ ಕರ್ತವ್ಯವೆಂದೂ ಹೇಳಿದರು.

ಹೊಸ ಜಿಲ್ಲಾ ಜಡ್ಜರು-ಜನವರಿ ತಾ. 20ರಿಂದ ಮಂಗಳೂರಿನ ಜಿಲ್ಲಾ ಮತ್ತು ಸೆಷ್ಷನ್ಸ್ ಜಡ್ಜರಾಗಿ ಶ್ರೀ| ಕೆ| ಎಸ್| ಗಣೇಶ ಅಯ್ಯರ್ ಅವರು ನೇಮಕಗೊಂಡಿದ್ದಾರೆ. ಜನವರಿ ತಾ. 20ರಿಂದ ಜನವರಿ ತಾ. 24ರ ವರೆಗೆ ಈಗಿನ ಜಡ್ಜರಾಗಿರುವ ಶ್ರೀ| ಪಾರ್ಥಸಾರಥಿ ಅಯ್ಯರ್ ಅವರು ಕಯ್ಯೂರು ಕೊಲೆಮೊಕದ್ದಮೆಯ ಸಂಬಂಧ ಎಡಿಶನಲ್ ಜಡ್ಜರಾಗಿ ನೇಮಕಗೊಂಡಿದ್ದಾರೆ.

ಶ್ರೀ| ಎಸ್| ಸತ್ಯಮೂರ್ತಿಗಳು-ನಿನ್ನೆಯ ದಿನ ಸಾಯಂಕಾಲ ಶ್ರೀ| ಎಸ್| ಸತ್ಯಮೂರ್ತಿಗಳು ಮಂಗಳೂರಿಗೆ ಬಂದರು. ಅವರನ್ನು ಜಿಲ್ಲೆಯ ಕಾಂಗ್ರೆಸ್ ಮುಖಂಡರು ಎದಿರುಗೊಂಡು ಗೌರವಿಸಿದರು. ನಿನ್ನೆ ಸಾಯಂ. 7ಘಂಟೆಗೆ ಮೈದಾನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ| ಸತ್ಯಮೂರ್ತಿಗಳು ಭಾಷಣ ಮಾಡಿ ಈಗಿನ ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟನ್ನು ವಿವರಿಸಿ ಇಲ್ಲಿದೆ ಈಗ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಅನುಸರಿಸಬೇಕೆಂದೂ, ಜನರ ಆತ್ಮಶಕ್ತಿಯನ್ನು ಲೋಕದ ಮುಂದೆ ಸಾರುತ್ತಿರಲಿಕ್ಕೆ ಉಳಿದುದು ಅದೊಂದೇ ಉಪಾಯವೆಂದೂ ಅದರಿಂದ ಅದನ್ನು ಉಪಯೋಗಿಸಿಕೊಳ್ಳಬೇಕೆಂದೂ ಹೇಳಿದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡ್ಯ ವಾದ ನಿರ್ಧಾರಗಳನ್ನು ಮಾಡಿದರೆಂದೂ, ಅದರ ಮುಖ್ಯ ನಿರ್ಧಾರ ಮಾಡಿದರೂ ನಾವುಗಳು ಅದನ್ನು ಪಾಲಿಸಬೇಕೆಂದೂ, ಹಾಗೆ ಪಾಲಿಸಿ ನಮ್ಮ ವಿರೋಧ ಅಭಿಪ್ರಾಯಗಳನ್ನು ನಮ್ಮ ಅಭಿಪ್ರಾಯಕ್ಕೆ ಬರುವಂತೆ ಮಾಡಬೇಕೆಂದೂ, ಹಾಗೆಂದು ಕಾಂಗ್ರೆಸಿನ ಶಿಸ್ತಿಗೆ ವಿರೋಧವಾಗಿ ನಡೆಯಬಾರದೆಂದೂ ಹೇಳಿದರು. ಶ್ರೀ| ಬಿ| ದಾಮೋದರ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್ ಕೆಲಸಗಾರರೊಡನೆ ವಿಚಾರ ವಿನಿಮಯ-ಈ ದಿನ ಪೂರ್ವಾಹ್ನ 9ಘಂಟೆ ಸಮಯ ಡಿ| ಕಾಂ| ಆಫೀಸಿನಲ್ಲಿ ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರ ಸಭೆಯೊಂದು ಸೇರಿತು. ಶ್ರೀ| ಸತ್ಯಮೂರ್ತಿಗಳು ಹಾಜರಿದ್ದರು. ಅನೇಕ ವಿಷಯಗಳು ಚರ್ಚಿಸಲ್ಪಟ್ಟುವು. ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರೂ, ನ್ಯಾಯವಿಧಾಯಕ ಸಭೆಗಳ ಸದಸ್ಯರೂ, ಜಿಲ್ಲಾ ಮತ್ತು ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಜನರೂ ಚರ್ಚೆಯಲ್ಲಿ ಭಾಗವಹಿಸಿದ್ದರು. ನೆರೆದ ಸಭೆಯವರಿಗೆ ಶ್ರೀ| ದಾಮೋದರ ಬಾಳಿಗರು ಟೀಪಾರ್ಟಿಯನ್ನಿತ್ತು ಗೌರವಿಸಿದರು.

ಕೆನರಾಹೈಸ್ಕೂಲಿನ ಸುವರ್ಣೋತ್ಸವ-ಈ ಉತ್ಸವವು ತಾ. 26ರಲ್ಲಿ ಆರಂಭವಾಯಿತು. ತಾ.28ರಲ್ಲಿ ಕೈಗಾರಿಕೆ, ವಸ್ತು ಪ್ರದರ್ಶನವು ಶ್ರೀ| ಶ್ರೀ| ಸುಕೃತೀಂದ್ರ ಸ್ವಾಮಿಜಿಯವರ ಹಸ್ತದಿಂದ ತೆರೆಯಲ್ಪಟ್ಟಿತು. ತಾ. 30ರ ವರೆಗೆ ಸಮಾರಂಭಗಳು ನಡೆಯಲಿವೆ.

ಕೆನರಾ ಚೇಂಬರ್ ಆಫ್ ಕಾಮರ್ಸ್-ಇದರ ವಾರ್ಷಿಕ ವರ್ಧಂತ್ಯುತ್ಸವವು ಶ್ರೀ ಸಾಹುಕಾರ ವೆಂಕಟಾಚಲಂ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯಾಪಾರಿಗಳು ಈಗಿನ ಕಾಲದಲ್ಲಿ ಅಗತ್ಯ ಇರುವ ಬದಲಾವಣೆಗಳನ್ನು ಸದಾ ತಿಳಿದಿರಬೇಕೆಂದು ಅಧ್ಯಕ್ಷರು ಹೇಳಿದರು.

ಉಡುಪಿ.

ಉಡುಪಿ ತಾಲ್ಲೂಕು ವಿದ್ಯಾರ್ಥಿ ಕಾಂಗ್ರೆಸ್ ಸೇವಾದಳದ ಸಂಘದ ಕಾರ್ಯಕಾರಿ ಮಂಡಲಿಯ ಪ್ರಥಮ ಸಭೆಯು ತಾ. 18-1-42ಕ್ಕೆ ಇಟ್ಟದ್ದರೂ, ತಾ 4-1-42ಕ್ಕೆ ನೇ ಹೋಮರ್ ಹಯರ್ ಎಲಿಮೆಂಟ್ರಿ ಶಾಲೆಯಲ್ಲಿ ಜರಗಲಿಕ್ಕಿರುವುದೆಂದು ಶ್ರೀ. ಕೆ. ಜಗನ್ನಾಥನಾಯಕರು ತಿಳಿಸುತ್ತಾರೆ.

ಹರೆಕಾಳ:- ಒಂದು ಮಹಾಸಭೆಯ ಪ್ರವಾಸ ಮುಖಂಡರುಗಳನ್ನು ಬಿಹಾರ್ ಸರಕಾರವು ಕೈದು ಮಾಡಿದ ಸಂಬಂಧ ಕಳೆದ ತಾ 27ರಲ್ಲಿ ಹರತಾಳವಿತ್ತು. ಸಂಜೆ ಸಾರ್ವಜನಿಕ ಸಭೆಯೊಂದು ರಥಬೀದಿಯಲ್ಲಿ ಜರಗಿ ಮುಖಂಡರುಗಳನ್ನು ಕೈದು ಮಾಡಿದ ಬಿಹಾರ್ ಸರಕಾರದ ವರ್ತನೆಯನ್ನು ಖಂಡಿಸಿ ಠರಾವಾಯಿತು.



"ಎವರೆಸ್ಟ್ ಗೋಲ್ಡ್" ಫ್ಯಾಶನ್ ಚೈನುಗಳು.

ಕಾಲೇಜು ವಿದ್ಯಾರ್ಥಿನಿಯರು ಮೋಹಿಸಿ ಧರಿಸುವ ಚೈನುಗಳು ಈ ಚೈನುಗಳು 5 ವರುಷ ಗ್ಯಾರಂಟಿ ಕೊಡಲಾಗುವ ಎವರೆಸ್ಟ್ ಚಿನ್ನದಿಂದ ತಯಾರಿಸಲ್ಪಟ್ಟು ಅತ್ಯುತ್ತಮ ವಿವಿಧ ಜಾತಿಯ ಕಲ್ಲುಗಳಿಂದ ಪೋಣಿಸಲ್ಪಟ್ಟು ಎಲ್ಲರಿಗೂ ಮನಸಂತೋಷಪಡಿಸುವಂತಹದು ಇದನ್ನು ಧರಿಸಿದ ಮಾತ್ರದಿಂದ ಕೊರಳಿಗೆ ಶೋಭೆ ಬರುವುದು. ಹೆಚ್ಚೇಕೆ? ಸರ್ವರ ವೈಷ್ಯಿಯೂ ಈ ಕಂಠೀಸರದ ಕಡೆಗೇ ಆಕರ್ಷಿಸಲ್ಪಡುವುದು.

24 ಇಂಚು ಉದ್ದದ ಚೈನಿಗೆ ರೂಪಾಯಿ 4 - ಪೋಸ್ಟೇಜು ಪ್ರತ್ಯೇಕ. ಇಂದೇ ಆರ್ಡರನ್ನು ಕಳುಹಿ.

The Everest Agencies,
P. O. BASAVANGUDI, BANGALORE CITY

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಶಾನಿಯವರ

"ಗೊನೊಕಿಲರ್" ರಿಜಿಸ್ಟರ್ಡ್

ಜಗತ್ಪ್ರಸಿದ್ಧ

ಕಳಲಿ ಮದ್ದುಗಳಿಗೆ ಮರುಳಾಗದಿರಿ ಪಡೆಯಬೇಕಾದ ಮೊದಲು ಕೆಳಗೆ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹಸಿರುಹಳದಿಯಾಗಿ ಹೋಗುವುದು ಮತ್ತು ಉರಿಯುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಹಾರಿ. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦-೬-೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎಸ್. ಜಶಾನಿ,** ವಿಟ್ಠಲಭಾಯಿ ಪಟೇಲ ರೋಡ್, ಮುಂಬಯಿ.

Sole Manufacturer DR. D. N. JASANI, Vittalbhai Patel Road, BOMBAY 4

ತಾಲೂಕು ಕೇಂದ್ರ ಸ್ಥಾಪನೆ:—ತಾಲೂಕಿನಲ್ಲೊಂದು ಕೇಂದ್ರ ಹೆಣ್ಣವರ ಸಂಘ ಸ್ಥಾಪನೆಯ ಸಲುವಾಗಿ ತಾ. 13-1-42ರಲ್ಲು ಮೋಹನ್ ಹಾ| ಎ| ರಾಜೆಯವರ ಮಧ್ಯಾಹ್ನ ಎರಡು ಘಂಟೆಗೆ ಒಂದು ಸಭೆ ಜರಗಲಿರುವುದೆಂದೂ ತಾಲೂಕಿನ ಬೇರೆ ಬೇರೆ ಹೆಣ್ಣವರ ಸಂಘಗಳು ಒಟ್ಟುಗೂಡಿ ಪ್ರತಿನಿಧಿಯನ್ನು ಕಳುಹಿಸಬೇಕಾಗಿಯೂ ಅಂದಿನ ಸಭೆಗೆ ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಅಧ್ಯಕ್ಷರಾಗಲಿರುವರೆಂದೂ ತಾಲೂಕು ಎಜ್ಯುಕೇಶನಲ್ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕಣಾರಿ ವಿಜಂಟರು:- ಚೊಡ್ಡ ದೊಡ್ಡ ಕಂಪೆನಿಯ ಅಧಿಕೃತ ಏಜಂಟರೆಂದು ಹೇಳಿಕೊಂಡು ದೃಷ್ಟಿಚಿಕಿತ್ಸೆಗಳ ಆದರಗಳನ್ನು ಸಂಗ್ರಹಿಸುವರ ಕೆಲವು ಏಜಂಟರುಗಳು ಊರಿಗೆ ಬಂದಿರುವರೆಂದೂ ಅವರ ಮಾತಿಗೆ ಬಲಿಬಿದ್ದು ಯಾರೂ ಮೋಸ ಹೋಗಬಾರದಾಗಿ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.

ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ| ವಿಶ್ವಜ್ಞ ತೀರ್ಥ ಶ್ರೀಪಾದಂಗಳವರು ಕೆಲದ ಹಾರ ಉಡುಪಿಗೆ ಚಿತ್ತೈಸಿದರು. ಪರ್ಯಾಯದ ಅದಮಾರು ಮಠದ ಕಡೆಯಿಂದ ಸಂಭ್ರಮದ ಸ್ವಾಗತವೀಯಲ್ಪಟ್ಟು ಬಿರುದಾದಿ ಸನ್ಮಾನಗಳು ಶ್ರೀಕೃಷ್ಣ ಮಠದಲ್ಲಿ ಆದವು. ಸಾವಿರ ಲಕ್ಷ ಗರುಡೋತ್ಸವ ಸೇವೆಯನ್ನಿತ್ತುದು ಮಾತ್ರವಲ್ಲದೆ ಸಮ್ಮಾನದ ಭೋಜನ ಹಾಲಿಯಲ್ಲಿ ಮಹಾ ಸಂತರ್ಪಣೆ ಮಾಡಿಸಿದರು.

ಇಬ್ಲಂಗೋಡು-ಏಡುಬ್ ಶಾಲೆಯಲ್ಲಿ ತಾ. 26ರಂದು ಸುತ್ತಲ ರಕ್ಷಕರ ಸಭೆಯು ಶ್ರೀ| ಬಿ| ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಎನ್. ಎಸ್. ಶೆಟ್ಟಿ, ಬಿ ಜಗನ್ನಾಥ ರೈಗಳು ಮಾತನಾಡಿದರು. ಈ ತನಕ ಹರಿಜನ ಬಾಲಕರಿಗೆ ಈ ಶಾಲೆಯಲ್ಲಿ ಪ್ರವೇಶವಿಲ್ಲದಿದ್ದು, ಇನ್ನು ಮುಂದಕ್ಕೆ ಪ್ರವೇಶ ದೊರಕುವಂತಾಯಿತು. ತಾ. 27ರಂದು ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಕೊಂಬಳೆಯಲ್ಲಿ ಜರಗಿದ ಸಭೆಯಲ್ಲಿ ಅಲ್ಲಿಯ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಕೊಡುವ ಏರ್ಪಾಡು ನಡೆಯಿತು.

ಬಾರಕೂರು:— ಇಲ್ಲಿ ನೆಲೆಸಿದ ಶ್ರೀ| ಶ್ರೀನಿವಾಸ ಕಲ್ಕೂರರಿಂದ ಹುಟ್ಟಿ ವಸ್ತ್ರಕವಾಗಿ ನಡೆಯಿಸಲ್ಪಡುತ್ತಿರುವ ಶ್ರೀ| ಭಾರತೀ ಸಂಗೀತ ಶಾಲೆಯ ತೃತೀಯ ವರ್ಧಂತ್ಯುತ್ಸವವು ತಾ 21-12-41 ರಲ್ಲಿ ಕುಂದಾಪುರದ ಡಿ. ಮು. ಕೋರ್ಟು ವಕೀಲರು ಶ್ರೀ| ಎ. ವಿ. ಎನ್. ಹೆಬ್ಬಾರರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಪ್ರಾರ್ಥನೆ, ವಂದನಾಪತ್ರ, ಸಂಗೀತ ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು.

ಬ್ರಹ್ಮಾವರ—ವಿಜಯಬ್ಯಾಂಕಿನ ವಾರ್ಷಿಕೋತ್ಸವವು ತಾ. 25-12-41ರಲ್ಲಿ ಶ್ರೀ| ಪಿ. ಎಸ್. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರೆಯಲ್ಪಟ್ಟಿತು. ಶ್ರೀ| ಕೆ. ಬಿ. ಬಲ್ಲಾಳರು ಅಧ್ಯಕ್ಷರೂ ಬ್ಯಾಂಕಿನ ಆವಶ್ಯಕತೆ, ಪ್ರಯೋಜನ, ವಿಜಯಬ್ಯಾಂಕಿನ ಈ ವರೆಗಿನ ಅಭಿವೃದ್ಧಿಯ ಕುರಿತು ಮಾತನಾಡಿದರು. ಶ್ರೀ| ಬಲ್ಲಾಳರ ಪ್ರೋತ್ಸಾಹದಿಂದ ಅಲ್ಲಿ ಸುಮಾರು 60 ಶ್ಯಾರುಗಳು ವಿಕ್ರಯವಾದವು. ಆ ಶಾಧಿಗಳಿಗೆ ಶ್ರೀ| ಬಿ. ಮೋನಪ್ಪ ಸೇರ್ವೆಗಾರರು ಭೋಜನಸತ್ಕಾರ ವಿತ್ತರು.

ಶಿರ್ವ—ಶಿರ್ವಾ ಪಂಚಾಯಿತ ಬೋರ್ಡಿನ ಸಿಂದ ತಾಲೆಗಳ ಹಾಗೂ ಮಹಾಜನರ ಸಹಕಾರ ಪಡೆದು ನವೆಂಬರ ತಾ. 20, 21, 22ರಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ತಾ. 20ರಲ್ಲಿ ಸುಮಾರು 1500 ಮಕ್ಕಳು ಆರೋಗ್ಯ ಗೀತೆ ಹಾಡುತ್ತ ಮೆರವಣಿಗೆ ಮಾಡಿದರು. ತಾ. 21ರಲ್ಲಿ ಎರಡು ವರ್ಷದೊಳಗಿನ ಮಕ್ಕಳ ಆರೋಗ್ಯ ಪರೀಕ್ಷೆ. ಸಂಜೆ 3 ಘಂಟೆಗೆ ಶಾಲಾಮಕ್ಕಳ ಕಲಾಪ್ರದರ್ಶನ ನಡೆಯಿತು. ಮಕ್ಕಳ ವಿವಿಧ ವಿನೋದಾವಳಿಯೊಂದಿಗೆ ಅಂದಿನ ಕಾರ್ಯಕ್ರಮ ಕೊನೆಗೊಳಿಸಲಾಯಿತು.

ತಾ. 22ರಲ್ಲಿ ಕಾಫಿ ಹೋಟೆಲು, ಸೇಂದಿ ಅಂಗಡಿ, ವಠಾರಗಳನ್ನು ಸಂದರ್ಶಿಸಿ ಆರೋಗ್ಯದ ವಿಷಯ ಉಪಯುಕ್ತ ಸೂಚನೆ ಕೊಡಲಾಯಿತು. ನಂತರ ಸಾಯಂಕಾಲ ಘಂಟೆ ನಾಲ್ಕಕ್ಕೆ ಮಂಚಕಲ್ಲು ಪೇಟೆಯಲ್ಲಿ ಸಾರ್ವಜನಿಕ ಸಭೆಯು ಡಾಕ್ಟರ್ ಕೆ. ಕೆ. ರೈಗಳವರ ಅಧ್ಯಕ್ಷತೆಯಲ್ಲಿ ಕೂಡಿತು. ತಾ. 21ರಲ್ಲು ಡಾಕ್ಟರರಿಂದ ಪರೀಕ್ಷಿಸಿ ಆರಿಸಲ್ಪಟ್ಟ ಆರೋಗ್ಯವಾಗಿ ಮೂರು ಮಕ್ಕಳಿಗೂ ಪಂಚಾಯ್ತಿಗಳಲ್ಲಿ ಗೆದ್ದ ಮಕ್ಕಳಿಗೂ ಬಹುಮಾನ ಹಂಚಲಾಯಿತು. ಕೆ. ಮಹಾಬಲ ಸೆಟ್ಟಿ ಮೊದಲಾದವರ ಭಾಷಣವಾಯಿತು. ತಾ. ಬೋ. ಅಧ್ಯಕ್ಷ ಶ್ರೀ. ಯಸ್. ಅಂದಯ್ಯಹೆಗ್ಗಡೆ ಧನ್ಯವಾದದಿಂದ ಸಭೆ ಮುಕ್ತಾಯವಾಯಿತು.

ಭಾರತದ ರಾಜಕೀಯ ಪರಿಸ್ಥಿತಿ

(೪ನೇ ಪುಟದಿಂದ ಮುಂದುವರಿದುದು).

ನೆಹರು ಅಜಾದರ ಹಿತಬೋಧೆ.

ಅಸ್ಸಾಮಿನಲ್ಲಿ ಗವರ್ನರರ ಸರ್ವಾಧಿಕಾರ.

ಅಸ್ಸಾಮಿನ ಸರ್. ಮಹಮ್ಮದ್ ಸಾದುಲ್ಲಾ ಮಂತ್ರಿಮಂಡಲದ ಮೇಲೆ ಅವಿಶ್ವಾಸ ಠರಾವು ಬಂದು ಅದು ರಾಜಿನಾಮೆ ಕೊಟ್ಟಿದೆ. ಮೊದಲು ಮಂತ್ರಿಯಾಗಿದ್ದು ಈಗ ಬೇರೆ ಪಕ್ಷ ಸ್ಥಾಪಿಸಿಕೊಂಡಿರುವ ಶ್ರೀ. ರೋಹಿಣೀ ಕುಮಾರ್ ಚೌಧರಿಯವರಿಗೆ ಕಾಂಗ್ರೆಸ್ ಪಕ್ಷದ ಸರ್ವ ಬೆಂಬಲವಿದ್ದರೂ ಅದರಿಂದ ಗವರ್ನರರು ಸಮಾಧಾನ ಹೊಂದದೆ- ಇತರ ಮಂತ್ರಿಮಂಡಲ ಸ್ಥಾಪನೆಯು ಸಾಧ್ಯವಾಗದೆ, ಭಾರತರಚನಾ ಕಾನೂನಿನ ೯೩ನೇ ಕಲಮಿನಂತೆ ಅಧಿಕಾರವನ್ನು ತಾನೇ ವಹಿಸಿಕೊಂಡಿರುವರು. ಯುದ್ಧ ಗುರಿಯನ್ನು ಸಾಧಿಸುವ ಹೊಸ ಮಂತ್ರಿ ಮಂಡಲದ ರಚನೆಯಾಗುವದಾದರೆ ತಾನು ೯೩ನೇ ಕಲಮಿನನ್ವಯದ ಅಧಿಕಾರವನ್ನು ಹಿಂದೆಗೆಯುವದಾಗಿ ಗವರ್ನರರ ಪ್ರಕಟಣೆಯಿದೆ.

ಶರತ್ ಚಂದ್ರ ಬೋಸರು ಮದ್ರಾಸಿಗೆ

ಬಂಗಾಳದ ಆಲಿಪುರ ಜೈಲಿನಲ್ಲಿ ದಿಗ್ಬಂಧಿತರಾಗಿದ್ದ ಶ್ರೀ. ಶರತ್ ಚಂದ್ರ ಬೋಸರನ್ನು ಮದ್ರಾಸಿನ ಜೈಲೊಂದಕ್ಕೆ ವರ್ಗಾಯಿಸಿರುವರು. ಬಂಗಾಳಾ ಮಂತ್ರಿಮಂಡಲದ ಬಿಕ್ಕಟ್ಟಿನಲ್ಲಿ ಶ್ರೀ. ಶರತ್ ಚಂದ್ರರ ಕೈಯಿರುವದೇ ಇದಕ್ಕೆ ಕಾರಣವೆಂದು ಊಹಾಪೋಹೆಬ್ಬಿದೆ. ಮುಖ್ಯಮಂತ್ರಿ ಮಿ ಫಜಲುಲ್ ಹಕ್ಕರು ಕೇಂದ್ರ ಸರಕಾರದೊಡನೆ ವಾದಿಸಿ ಶ್ರೀ. ಬೋಸರನ್ನು ಕೊಂಡೊಯ್ಯುವ ಸಮಯವನ್ನು ಹಿಂದೆ ಹಾಕಿಸಿ, ಆ ಮೇಲೆ ಹೌರಾ ಸ್ಟೇಶನಿಗೆ ಧಾವಿಸಿ ಶ್ರೀ. ಬೋಸರೊಡನೆ ಸಂಭಾಷಿಸಿ ಬಂದಿರುವರು. ಹಾಗೆ ಬಂದವರೇ ಪ್ರಾಂತ್ಯಾನು ಪ್ರಸಾದ ಮುಖರ್ಜಿಯವರಿಗೆ ಕೂಡಲೇ ಕಲ್ಕತ್ತಕ್ಕೆ ಬರುವಂತೆ ತಂತಿ ಕೊಟ್ಟಿರುವರು.

ನೆಹರು, ಅಜಾದರ ಗರ್ಜನೆ.

ಬಾರ್ದೋಲಿಯ ಹಳ್ಳಿಗಳಿಂದ ನಡೆದುಕೊಂಡು ಬಂದು ಬಾರ್ಡೋಲಿಯಲ್ಲಿ ಸೇರಿದ್ದ 15000 ರೈತರ ಸಭೆಯಲ್ಲಿ ಗಾಂಧಿ, ನೆಹರು, ಅಜಾದ, ಅಬ್ದುಲ್ ಗಫರ್ ಖಾನ್, ಖಾನ್ ಸಾಹೇಬ್, ಗೋವಿಂದ ವಲ್ಲಭ ಪಂತ್, ಭುಲಾಭಾಯಿ ದೇಸಾಯಿಯವರು ಭಾಷಣವಿತ್ತರು. ಗಾಂಧಿಜಿಯವರು "ದಿನಂ ಪ್ರತಿ ನೂಲು ತೆಗೆದು ಆ ಮೇಲೆ 'ನಮ್ಮ ಸ್ವಾತಂತ್ರ್ಯವೆಲ್ಲಿದೆ?' ಎಂದು ನನ್ನನ್ನು ಪ್ರಶ್ನಿಸಿರಿ!' ಎಂದರು. ಮೌಲಾನ ಅಜಾದರು ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ವಿವರಿಸಿದರು. "ಜನರು ದಿಗಿಲುಗೊಳ್ಳಬಾರದು. ಭಯವೆಂಬುದು ಜಪಾನು ಅಥವಾ ಫೇಸಿಸ್ಟರಿಗಿಂತ, ಇಲ್ಲವೇ ಪ್ರತ್ಯಕ್ಷ ಯುದ್ಧಾಕ್ರಮಣಕ್ಕಿಂತ ಅಪಾಯಕರವಾದುದು" ಎಂದು ಎಚ್ಚರಿಸಿದರು. ಪಂಡಿತ ನೆಹರೂರವರು 'ನಾವು ಬಂಧನಕ್ಕೊಳಗಾದುದರಿಂದಲೇ ಬ್ರಿಟಿಷರನ್ನು ವಿರೋಧಿಸುತ್ತೇವೆ. ಅಂತೆಯೇ ಫೇಸಿಸ್ಟರನ್ನೂ ಕೊನೆಯ ವರೆಗೂ ವಿರೋಧಿಸುತ್ತೇವೆ. ನಮ್ಮ ಭೂಮಿಯ ಸ್ವಾತಂತ್ರ್ಯವೇ ನಮಗಿರುವ ಮೊದಲ ಸಂಬಂಧವೆಂಬುದನ್ನು ಯಾವ ಸಂದರ್ಭದಲ್ಲೂ ಮರೆಯುವಂತಿಲ್ಲ" ಎಂದರು. ಈ ಯುದ್ಧಾಂತ್ಯದಲ್ಲಿ ಎಲ್ಲಾ ರಾಷ್ಟ್ರಗಳು ಸ್ವತಂತ್ರವಾಗಿರುವ ಹೊಸ ವ್ಯವಸ್ಥೆಯಾಗುವದು, ಸಾಮ್ರಾಜ್ಯವಾದವು ನಶಿಸಿಹೋಗುವದೆಂದು ತಿಳಿಸಿ "ಯಾವ ದೇಶವೂ ತ್ಯಾಗ ವಿನಹಾ ಸ್ವಾತಂತ್ರ್ಯ ಪಡೆದುದಿಲ್ಲ. ಭಾರತವು ಸರ್ವ ತ್ಯಾಗಕ್ಕೆ ಸಿದ್ಧವಾಗಬೇಕು" ಎಂದರು.

ಮಂದ ಪಕ್ಷೀಯರ ನಿರ್ಧಾರ.

ಮೈಲಾಪುರದಲ್ಲಿ ಡಿಸಂಬರ 26ರಲ್ಲಿ ಸೇರಿದ ಅಖಿಲ ಭಾರತ ಮಂದ ಪಕ್ಷೀಯರ ಫಡರೇಶನಿನ 23ನೆಯ ಅಧಿವೇಶನದಲ್ಲಿ ಅಧ್ಯಕ್ಷರಾದ ಸರ್. ಜಗದೀಶ ಪ್ರಸಾದ ಸಿಂಗರು, ಭಾರತೀಯರಿಗೆ ನಿಶ್ಚಿತ ಸಮಯದೊಳಗೆ ಪೂರ್ಣಾಧಿಕಾರ ಬಿಟ್ಟುಕೊಡಬೇಕು; ಆರ್ಥಿಕ, ಔದ್ಯೋಗಿಕ ರಾಷ್ಟ್ರೀಯತೆಯನ್ನು ಸಾಧಿಸಬೇಕು ಎಂದು ತನ್ನ ಭಾಷಣದಲ್ಲಿ ತಿಳಿಸಿರುವರು. ಭಾರತೀಯರಿಗೆ ಜವಾಬ್ದಾರಿಯಿತ್ತಾಯಲು ಸರಕಾರಕ್ಕೆ ಮನಸ್ಸಿಲ್ಲವೆಂದು ಟೀಕಿಸಿರುವರು.

ವೇವೆಲ್—ಚಿಯಾಂಗ್ ಭೇಟಿ.

ಭಾರತದ ಸರ್ವಸೇನಾನಿ ಜನರಲ್ ವೇವೆಲರು ಡಿಸಂಬರ ತಾ. 23ರಲ್ಲಿ ಚುಂಕಿಂಗಿಗೆ ಗುಪ್ತಪ್ರಯಾಣ ಬೆಳೆಸಿ ಚಿಯಾಂಗ್ ಕೈ-ಶೆಕರೊಡನೆ ಮೂರು ದಿನಗಳ ಸಮಾಲೋಚನೆ ನಡೆಸಿ ಹಿಂದಿರುಗಿರುವರು. ಈ ಮಾತುಕತೆಯಲ್ಲಿ ಅಮೇರಿಕದ ವಿಮಾನದಳದ ಮುಖ್ಯಸ್ಥರಾದ ಮೇಜರ್ ಜನರಲ್ ಬ್ರೆಟ್ ಮತ್ತು ಆಂಗ್ಲೋ-ಅಮೇರಿಕಾ, ಚೀನಗಳ ಇತರ ಮುಖ್ಯ ಮುಖಂಡರೂ ಭಾಗವಹಿಸಿದ್ದರು. ಪೂರ್ವ ದೇಶಗಳ ಯುದ್ಧಕಾರ್ಯದ ಕುರಿತು ಸವಿವರ ಚರ್ಚೆ ನಡೆದು ಸರ್ವಸಮ್ಮತಿಯ ನಿರ್ಧಾರವಾಗಿರುವದೆಂದು ತಿಳಿದುಬರುತ್ತದೆ.

—ಬರ್ಮಾದ ಜವಾಬ್ದಾರಿ ವೇವೆಲರ ಮೇಲೆ!

ಬರ್ಮಾದ ಜವಾಬ್ದಾರಿ ವೇವೆಲರು ಹೊತ್ತರು.

ಸರ್. ವೇವೆಲರು ಬರ್ಮಾ ರಕ್ಷಣೆಯ ಜವಾಬ್ದಾರಿ ವಹಿಸಿರುವರು. ಲೆಫ್ಟನೆಂಟ್ ಜನರಲ್ ಟಿ. ಜ. ಹಟ್ಟನ್ ಇವರು ಬರ್ಮದ ಸೇನಾನಿಯಾಗಿ ಕಾರ್ಯಕ್ಕೆ ಇಳಿದಿರುವರು. ಬರ್ಮವನ್ನು ಆಕ್ರಮಿಸಲು ಜಪಾನರು ಸಮರ್ಥರಾದರೆ ಭಾರತದ ಮುಖ್ಯ ಭಾಗಗಳ ಮೇಲೆ ದಾಳಿಯಿಡಬಹುದಾಗುವ ವಿಮಾನ ನಿಲ್ದಾಣಗಳು ಅವರಿಗೆ ದೊರೆಯಬಹುದು. ಟೆನಾಸೆರಿಮ್ ನಿಲ್ದಾಣಗಳು ಮತ್ತು ಬಂದರಗಳು ದೊರೆತು ಅಲ್ಲಿಂದ ಬಂಗಾಳಕೊಲ್ಲಿಯ ಹಡಗ ಸಂಚಾರವನ್ನು ಅಪಾಯಕ್ಕೀಡುಮಾಡಬಹುದು. ಮತ್ತು ಭಾರತದ ಪೂರ್ವಕರಾವಳಿಯ ಬಂದರುಗಳಿಗೆಲ್ಲಾ ಅಪಾಯವಿದೆ. ಅಮೇರಿಕಾದಿಂದ ಚೀನಾಕ್ಕೆ ರಕ್ಷಾಸ್ತ್ರಗಳ ರಸ್ತೆಯೂ ಬರ್ಮದ ಮೂಲಕವೇ ಇರುವದರಿಂದ ಅದಕ್ಕೂ ತೊಂದರೆಯಿದೆ ಎಂಬುದೇ ಜನರಲ್ ವೇವೆಲರನ್ನು ಬ್ರಿಟಿಷ್ ಸರಕಾರವು ನೇಮಿಸಲು ಕಾರಣ. ಜನರಲ್ ಹಟ್ಟನರು ೫೭ ವರುಷ ಪ್ರಾಯದವರಿದ್ದು ತನ್ನ 19ನೇ ವಯಸ್ಸಿನಿಂದ ಸೈನ್ಯದಲ್ಲಿ ಸೇರಿ ತರಬೇತಿ ಹೊಂದಿದವರು.

MADRAS PROVINCIAL

WAR COMMITTEE

EDINBURGH IS A FINE CITY.

IT HAS NOW CLAIMED THE

PRIVILEGE OF REPLACING

TWO FINE SHIPS

H. M. S. PRINCE OF WALES

AND

H. M. S. REPULSE.

WE WANT MORE SHIPS

MORE MEN

MORE MONEY

CAN YOU HELP? AND WILL YOU?

ಆಗ-?

ತಾರುಣ್ಯವು ತೊಲಗಿದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ಬಂದ ಪ್ರಳಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ- ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : ದ. ಭಾರತ.

The Canara Mutual Assurance Company, Limited.

UDIPI : : S. INDIA.

ಫ್ಯಾಸಿಸಂ ಮತ್ತು ಧರ್ಮ

ರಷ್ಯವನ್ನು ಬಿಟ್ಟರೆ, ಜಗತ್ತಿನಲ್ಲಿರುವ ರಾಜ್ಯಗಳೆಲ್ಲವೂ, ಒಂದಲ್ಲ ಒಂದು ರೂಪಿನಲ್ಲಿ ಯಾವುದಾದರೊಂದು ಧರ್ಮವನ್ನು ತಮ್ಮ ರಾಜ್ಯದ ಧರ್ಮವನ್ನಾಗಿ ಸ್ವೀಕರಿಸಿವೆ. ಕೊನೆಗೆ ಫ್ಯಾಸಿಸ್ಟ್ ರಾಜ್ಯಗಳಾದ, ಇಟಲಿ, ಜರ್ಮನಿಗಳು ಸಹ, ಇಂದಿಗೂ ಕ್ರಿಸ್ತಾಯಿ ಧರ್ಮದ ಸೋಗಿನಲ್ಲಿಯೇ ಅನರ್ಥಗಳನ್ನು ಮಾಡುತ್ತಿವೆ. ಜರ್ಮನ್ ರೀಶ್‌ನ ಧರ್ಮವಿಭಾಗದ ಮಂತ್ರಿಯಾದ ಹರ್ ಕೇರಲ್ ಹೇಳುವುದನ್ನು ಕೇಳಿ:- "ರಾಷ್ಟ್ರೀಯ ಸಮಾಜವಾದ (National Socialism)ದ ಮೂಲ ತತ್ವವೇ ಶ್ರದ್ಧೆ. ಪ್ರೇಮವೇ ಅದರ ಕೆಲಸ. ನಮ್ಮ ನೆರೆಯವರೊಡನೆ ಅಂದರೆ ಸ್ವದೇಶಿಯರೊಡನೆ ಪ್ರೇಮಪೂರ್ವಕವಾಗಿ ವ್ಯವಹರಿಸುವುದೇ, ರಾಷ್ಟ್ರೀಯ ಸಮಾಜವಾದದ ಕ್ರಿಸ್ತಾಯಿ ಧರ್ಮವಾಗಿದೆ." ಫ್ರಾಂಕೋ ಮತ್ತು ಮುಸೋಲಿನಿಗಳ ಧರ್ಮವೇನೆಂಬುವರ ಪ್ರತ್ಯಕ್ಷ ಪ್ರಮಾಣವು ಜಗತ್ತಿನೆದುರಿನಲ್ಲಿದ್ದೇ ಇದೆ. ಮುಸೋಲಿನಿಯ ವಿಚಾರಗಳನ್ನು ಕೇಳಿ:-

"ಇಂದಿಗೂ ಮನುಷ್ಯರಲ್ಲಿ ಸಹೋದರಭಾವವಿಲ್ಲ. ಅವರಿಗೆ ಅದು ಬೇಕಾಗಿಯೂ ಇಲ್ಲ. ಆದುದರಿಂದಲೇ ಶಾಂತಿಯ ವಿಷಯವನ್ನು ಚರ್ಚಿಸುವುದು ತೀರ ಅವಿವೇಕತನ. ಯುದ್ಧದ ವಿರಾಮಕಾಲವೇ ಶಾಂತಿ. ಮನುಷ್ಯನ ಭಾಗ್ಯದಲ್ಲಿ ಯಾವಾಗಲೂ ಯುದ್ಧ ಮಾಡುವುದೇ ಬರೆದಿರುವುದು. ಅವನು ಇತರರೊಡನೆ ಯುದ್ಧ ಮಾಡಲಿ, ಅಥವಾ ತನ್ನೊಡನೆ ತಾನು ಕಾದಾಟ ನಡೆಸಲಿ. ಯುದ್ಧದ ಉದ್ದೇಶವು ಆಗಾಗ್ಗೆ ಬದಲಾವಣೆಯಾಗುತ್ತಲೇ ಇದೆ- ಒಂದು ಸಾರಿ ಆರ್ಥಿಕ ಉದ್ದೇಶಗಳಿಗಾಗಿ ಯುದ್ಧ ನಡೆಯುವುದು. ಒಂದು ವೇಳೆ ಧರ್ಮಕ್ಕಾಗಿ ನಡೆಯುವುದು. ಕೆಲವು ವೇಳೆ ರಾಜಕೀಯ ಕಾರಣಗಳಿಗಾದರೆ, ಕೆಲವು ವೇಳೆ ಕೇವಲ ಆವೇಶದಿಂದಲೇ ನಡೆಯುತ್ತದೆ...... ಮನುಷ್ಯರಲ್ಲಿ ಸಹ ಭೂಮಿಗಾಗಿ ಆಗಲಿ, ಸೀರಿಗಾಗಿ ಆಗಲಿ, ಅಥವಾ ರೊಟ್ಟಿಯ ಕಾರಣದಿಂದಲಾಗಲಿ, ಕೊನೆಗೆ ರಮಣಿಯ ಚುಂಬನಕ್ಕಾದರೂ ಸರಿ!"

ಹಿಟ್ಲರನು ದೇವರು

ಜರ್ಮನಿಯಲ್ಲಿ 'ನಮಸ್ಕಾರ' ಮತ್ತು ಅಭಿವಂದನೆಗಳ ಸ್ಥಾನದಲ್ಲಿ ಈಗ "ಹೈಲ್ ಹಿಟ್ಲರ್" ಎಂಬ ಶಬ್ದಗಳನ್ನು ಉಪಯೋಗಿಸುತ್ತಿರುವರು. ವೈಯಕ್ತಿಕ ಸ್ವಾತಂತ್ರ್ಯ ಮತ್ತು ತಮ್ಮ ಮನಸ್ಸಿಗನುಕೂಲವಾಗಿ ಯಾವ ಕೆಲಸವನ್ನೂ ಅಲ್ಲಿ ಮಾಡಲವಕಾಶವಿಲ್ಲ. ನಾಜೀವಾದಕ್ಕೆ ವಿರೋಧವಾಗಿರುವವರೂ ಸಹ, ಪ್ರತಿದಿನವೂ 'ಹಿಟ್ಲರ್ ಸಹಸ್ರನಾಮ'ವನ್ನು ಜಪಿಸಲೇಬೇಕು. ಒಂದು ಕಡೆ ಹರ್ ಕರೋಲನು "ಜನ್ಮ ನೀಡುವುದೊಂದೇ ಉದ್ದೇಶ, ಏನೆಂದರೆ ಜನರು ತಮ್ಮ ಅಂತರ್ವಾಣಿಗನುಸಾರವಾಗಿ ಕೆಲಸಮಾಡಲು ಸ್ವಾತಂತ್ರ್ಯ ಕೊಡುವುದು" ಎಂದು ಹೇಳುತ್ತಾನೆ. ಆದರೆ ಪುನಃ ಅವನೇ "ನಿಜವಾದ ಕ್ರಿಸ್ತಾಯಿ ಧರ್ಮವೇನೆಂಬುದನ್ನು ಜಗತ್ತಿಗೆ ತೋರಿಸಲು ಒಬ್ಬ ಹೊಸ ಅಧಿಕಾರಿಯು ಹುಟ್ಟಿದ್ದಾನೆ ಅವನೇ ಎಡಾಲ್ಫ್ ಹಿಟ್ಲರ್" ಎನ್ನುತ್ತಾನೆ. ಒಬ್ಬ ಜರ್ಮನ್ ಕುಮಾರಿಯಾದ ಡಾ| ಎಂಗೇಲ್ಮ್ಯಾಕ್ ಎಂಬವನು ಇನ್ನೂ ಮುಂದೆ ಹೋಗಿ ಈ ರೀತಿ ಹೇಳುತ್ತಾನೆ. "ಜಗತ್ತಿನ ಮೇಲೆ, ದೇವರು ಏಸುಕ್ರಿಸ್ತನ ರೂಪದಲ್ಲಲ್ಲ, ಹರ್ ಹಿಟ್ಲರನ ರೂಪದಲ್ಲಿ ಅವತರಿಸಿರುವನು". ಸ್ವಯಂ ಹಿಟ್ಲರನೇ ಹೇಳುವುದನ್ನು ಕೇಳಿ "ರಾಷ್ಟ್ರೀಯ ಸಮಾಜವಾದವೇ ಜರ್ಮನಿಯ ಧರ್ಮ, ಹಿಟ್ಲರನು ಆ ಧರ್ಮದ ಮುಖಂಡ; ಪೈಗಂಬರ್". ಆಸ್ಟ್ರಿಯವನ್ನು ನುಂಗುವ ಮೊದಲು ಹಿಟ್ಲರನು ಈ ರೀತಿ ಹೇಳಿದ್ದನು:-

"ದೇವರ ಇಚ್ಛೆ, ಅವನು ರೀಶ್ (ಜರ್ಮನಿಯ ರಾಜಸಭೆ)ನ ನೇತೃತ್ವಕ್ಕೆಂದು ಒಬ್ಬ ಹುಡುಗ (ಹಿಟ್ಲರ್)ನನ್ನು ಕಳುಹಿಸಿದನು. ಇದರಿಂದ ಅವನು ತನ್ನ ಮಾತೃಭೂಮಿಯನ್ನು (ಹಿಟ್ಲರನ ಮಾತೃಭೂಮಿಯು ಆಸ್ಟ್ರಿಯ) ರೀಶ್‌ನೊಳಗೆ ಸೇರಿಸಿಕೊಳ್ಳಲೆಂದು...... ......ಶೂಶ್ನಿಗ್ನನು ತನ್ನ ವಚನವನ್ನು ಭಂಗಮಾಡಲು, ಅದೂ ಸಹ ದೇವರಿಂದಲೇ ಆಯಿತೆಂದು ತಿಳಿದೆನು. 3 ದಿನಗಳಲ್ಲಿ ದೇವರು ಅವನನ್ನು ಸೋಲಿಸಿ, ನಾನು ನನ್ನ ದೇಶದ ನೇತೃತ್ವವನ್ನು ವಹಿಸಿಕೊಳ್ಳುವ ಗೌರವವನ್ನು ದಾನ ಮಾಡಿದನು".

ಹಿಟ್ಲರನನ್ನು ಶರಣು ಹೋಗಿ

"ಸರ್ವ ಧರ್ಮಾನ್ ಪರಿತ್ಯಜ್ಯ, ಹಿಟ್ಲರಂ ಶರಣಂ ವ್ರಜ"— ಜರ್ಮನಿಯು ಇಂದು ಇದೇ ಸಿದ್ಧಾಂತವನ್ನನುಸರಿಸುತ್ತಿದೆ. ಅಲ್ಲಿ "ರಾಷ್ಟ್ರೀಯತಾ ಪರಮೋಧರ್ಮಃ" ಎಂಬುದನ್ನೇ ಜಪಿಸುತ್ತಿರುವರು. ಮೊದಲು ರಾಷ್ಟ್ರದ ಗೌರವ, ನಂತರವೇ ನು ಅಲ್ಲಿರುವುದು "ಅಸ್ತ್ರಶಸ್ತ್ರ ಯುದ್ಧ ಮತ್ತು ರಕ್ತರಂಜಿತ ಭೂಮಿ"ಗಳು ನ್ಯಾಜಿಗಳ ಧರ್ಮವಿದು. 1938ರಲ್ಲಿ ನಾಜಿ ಪಾರ್ಟಿಯ ರ್‍ಯಾಲಿಯಲ್ಲಿ ಹರ್ ರೋಜೆನ್‌ವರ್ಗನು ಈ ರೀತಿ ಹೇಳಿದನು—"ನಾವು ನಮ್ಮ ಮನಸ್ಸಿನಿಂದ ಕ್ಯಾಥೋಲಿಕ್, ಪ್ರಾಟೆಸ್ಟೆಂಟ್ ಎಂಬ ಹೆಸರನ್ನು ಸಹ ಅಳಿಸಿಬಿಡಬೇಕು. ನಮ್ಮ ಶಾಲೆಗಳಲ್ಲಿ ಬಾಲಕರಿಗೆ ಕೊಡುವ ಶಿಕ್ಷಣದಲ್ಲಿ ಸುಧಾರಣೆ ಮಾಡಲಾಗುವುದು. ನಮ್ಮ ಭಾವೀ ಸಂತತಿಗೆ ಯಹೂದೀ ಭಾವನೆಯ ಕಳಂಕವೇ ಉಂಟಾಗದಂತೆ ಮಾಡುವೆವು." ಇದೇ ಇಂದಿನ ಜರ್ಮನಿಯ ಧರ್ಮ! ಈಶ್ವರನ ರಾಷ್ಟ್ರೀಯಕರಣವಾಗಿ ಹೋಗಿದೆ. ಅಲ್ಲಿ ಧರ್ಮದ ಹೊಸ ಸಂಸ್ಕರಣವುಂಟಾಗಿದೆ.

ಇಟಲಿಯಲ್ಲಿ

ಇನ್ನು ಇಟಲಿಯ ಧರ್ಮವನ್ನು ನೋಡೋಣ. 1929ರಲ್ಲಿ ಪೋಪ್ ಮತ್ತು ಮುಸೋಲಿನಿಗಳ ನಡುವೆ ಜಗಳವುಂಟಾಯಿತು. ಆಗ ಪೋಪರು ಮುಸೋಲಿನಿಯನ್ನು ಪಿಶಾಚಿ ಎಂದು ಸಹ ಹೇಳಿದ್ದರು. ಆದರೆ ಕೊನೆಗೆ ಧರ್ಮಾಧ್ಯಕ್ಷರಾದ ಪೋಪರು ಫ್ಯಾಸಿಜಂನ ಅಧ್ಯಕ್ಷನೆದುರಿನಲ್ಲಿ ಬಗ್ಗಲೇ ಬೇಕಾಯಿತು. ಮುಸೋಲಿನಿಯು ಅಬಿಸೀನಿಯಾ ನೀತಿಯನ್ನು ಜಗತ್ತೇ ನಿಂದಿಸಿತು. ಆದರೆ ಪೋಪರು ಮಾತ್ರ ಒಂದು ಶಬ್ದವನ್ನೂ ಆಡಲಿಲ್ಲ. ಇದಕ್ಕಿಂತ ಹೆಚ್ಚಿನ ಪ್ರಮಾಣವು ಸ್ಪೇನಿನಲ್ಲಿ ಫ್ಯಾಸಿಸ್ಟ್ ಆಕ್ರಮಣದ ಸಂಬಂಧವಾಗಿ ದೊರೆಯುತ್ತದೆ. ಅಲ್ಲಿ ಪೋಪ್ ಮಹಾಶಯರು ಫ್ರಾಂಕೋವನ್ನು ಬಹಳವಾಗಿ ಸಮರ್ಥಿಸಿದರು. ಮತ್ತು ಅವನನ್ನು ಕ್ಯಾಥೋಲಿಕ್ ಧರ್ಮದ ಉದ್ಧಾರಕನೆಂದು ಹೊಗಳಿದರು. ಆದರೆ ನಾಜಿಗಳನ್ನೇನೋ ವಿರೋಧಿಸಿದ್ದರು. ಏಕೆಂದರೆ ಅವರು ತಮ್ಮ ರಾಜ್ಯದಲ್ಲಿ ಪೋಪರ ಸತ್ತೆಯನ್ನೇ ನಾಶಮಾಡಿರುವರು. ಇಲ್ಲಿರುವ ತಮಾಷೆಯೆಂದರೆ, ಒಂದು ಕಡೆ ಪೋಪರು, ಮುಸೋಲಿನಿ ಮತ್ತು ಫ್ರಾಂಕೋಗಳನ್ನು ಸಮರ್ಥಿಸುವರು. ಮತ್ತೊಂದು ಕಡೆ ಇವರಿಬ್ಬರೂ ಹಿಟ್ಲರನನ್ನು ಖಂಡಿಸುವರು. ಅಂದರೆ ಪೋಪರು ಒಬ್ಬರ ಸಮರ್ಥನೆ, ಮತ್ತೊಬ್ಬನ ವಿರೋಧವನ್ನು ಮಾಡುವರು. ಆದರೂ, ಮೂರು ಮಂದಿ ಫ್ಯಾಸಿಸ್ಟ್ ಡಿಕ್ಟೇಟರರ ಮೈತ್ರಿಯಲ್ಲಿ ಯಾವ ವ್ಯತ್ಯಾಸವೂ ಉಂಟಾಗಿಲ್ಲ. 1935ರಲ್ಲಿ ಹಿಟ್ಲರನು ಇಟಲಿಗೆ ಹೋಗಲು, ಫ್ಯಾಸಿಸ್ಟರು ಸ್ವಾಗತಿಸಿದ್ದರು; ಮತ್ತು ನಾಜೀ ಸ್ವಸ್ತಿಕ ಧ್ವಜವನ್ನೇ ಹಾರಿಸಿದ್ದರು. ಆಗ ಪೋಪರು ಇದನ್ನು ವಿರೋಧಿಸಿದ್ದರು. ಏಕೆಂದರೆ ಇದರಿಂದ ಕ್ರಿಸ್ತಾಯಿ ಧರ್ಮ ಚಿಹ್ನೆಯಾದ 'ಕ್ರಾಸ್'ಗೆ ಅವಮಾನವಾಯಿತೆಂದು. ಆಗ ಮುಸೋಲಿನಿಯ ಪತ್ರಿಕೆಯಾದ 'ಪೋಪೊಲೋ ಡಿ ಇಟೇಲಿಯಾ' ಎಂಬುದು ಪೋಪರನ್ನು ಚೆನ್ನಾಗಿ ನಿಂದಿಸಿತು. ಫ್ಯಾಸಿಸ್ಟರ ಉದ್ದೇಶಗಳನ್ನು ಕೆಳಗಿನ ಅವರ ವಿಜ್ಞಾಪನೆಯ ಪ್ರಕಟಣೆಗಳಿಂದ ತಿಳಿಯಬಹುದು:—

1. ಬೇರೆ ಬೇರೆ ಸಂತತಿಯವರು, ಒಬ್ಬರೊಡನೊಬ್ಬರು ಸೇರದೆ ಬೇರೆ ಬೇರೆ ಇರಬೇಕು.
2. ರಕ್ತದ ಪವಿತ್ರತೆಯ ರಕ್ಷಣೆ ಮತ್ತು ವೃದ್ಧಿಯನ್ನು ಎಲ್ಲಾ ರೀತಿಯಿಂದಲೂ ಮಾಡಬೇಕು.
3. ಶಿಕ್ಷಣದ ಮುಖೋದ್ದೇಶವು ಜಾತೀಯ ಗುಣಗಳ ವಿಕಾಸ ಮತ್ತು ಆತ್ಮಗಳಲ್ಲಿ ಜಾತಿಪ್ರೇಮವನ್ನುಂಟುಮಾಡುವುದು
4. ಧರ್ಮವು ಜಾತಿ (Race)ಗಿಂತ ಕೆಳಗಿದೆ. ಮತ್ತು ಧರ್ಮವನ್ನು ಜಾತಿಗೆ ಅನುಕೂಲವಾಗಿ ಮಾಡಿಕೊಳ್ಳಬೇಕು
5. ಮನುಷ್ಯನ ವೈಯಕ್ತಿಕ ಜೀವನವು ಕೇವಲ ರಾಜ್ಯದ ಮೂಲಕ ಮತ್ತು ರಾಜ್ಯಕ್ಕಾಗಿಯೇ ಇದೆ. ಅವನಿಗಿರುವ ಅಧಿಕಾರವೆಲ್ಲವೂ ರಾಜ್ಯದಿಂದಲೇ ದೊರೆತಿವೆ.

ಇವೇ ಫ್ಯಾಸಿಸ್ಟ್ ಧರ್ಮದ ವಿಚಿತ್ರ ಸಿದ್ಧಾಂತಗಳು. ಈ ಸಿದ್ಧಾಂತಗಳನ್ನು ಮುಸೋಲಿನಿ, ಹಿಟ್ಲರ್ ಮತ್ತು ಫ್ರಾಂಕೋ ಮೂವರೂ ಪಾಲಿಸಿಕೊಂಡು ಬರುತ್ತಿರುವರು. ಅವರ ಕೆಲಸಗಳಲ್ಲಿ ಭಿನ್ನತೆ ಇದ್ದರೂ, ಅವರ ಹೃದಯಗಳಲ್ಲಿ ಒಂದೇ ಒಂದು ರಕ್ತವು ಸಂಚರಿಸುತ್ತಿದೆ. ಈ ಫ್ಯಾಸಿಜಂ ಎಂಬುದು ಸಮಸ್ತ ಮಾನವ ಜಾತಿಗೇ ಒಂದು ಶಾಪದಂತಿದೆ. ಇದು ಕೊನೆಗಂಡ ನಂತರವೇ ಸಮಸ್ತ ಮಾನವ ಸಮಾಜದಲ್ಲಿ ಪ್ರೇಮ ಮತ್ತು ಸಹೋದರ ಭಾವನೆಗಳು ಸ್ಥಾಪಿಸಲ್ಪಡುವುವು.

—S. L.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನ ಸ್ಖಲನ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಉರಿಯುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು, ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ 1ರ ಕ್ರಯ ರೂ. 1-8-0.

ಕಸ್ತೂರಿ ಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅತಿಉತ್ತಮವಾದ ಶಕ್ತಿವರ್ಧಕ. ಪ್ರಸವದಿಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗರ್ಭಕೋಶವನ್ನು ಕ್ರಮಶಃ ಕುಗ್ಗಿಸುವುದು, ರಕ್ತಧಾತುವಿನ ಅಭಿವೃದ್ಧಿಯಾಗಿ, ಬಾಣಂತಿಯು ಪುಷ್ಟಿ, ಹೊಂದುವಲ್ಲದೆ, ಶಿಶುವಿಗೆ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ಕ್ರಯ 1-8-0

ಎಂ. ಗಿರಿಜಯ್ಯ ಎಂಡ್ ಸನ್ಸ್.

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಕರ್ನಾಟಕ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಬಾರಿಬಾಗ್ ರೋಡ್, ಕರೀ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ. (3) ವೆಂಕಟೇಶ್ವರ ಪಟಸ್ತರ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲಕ್ಷ್ಮೀವಿಲಾಸ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ, (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ, (7) ಡಾ| ಶ್ರೀನಿವಾಸ. ಪೈ, ಪುತ್ತೂರು, (8) ಶಾಂತಾರಾಮ ಎಸ್ಟೇಟ್ ಕಮಿಟಿ, ಬೆಳ್ತಂಗಡಿ (9) ನವಭಾರತ ಬುಕ್ ಡಿಪೋ, ಕೋಟೆಯ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಕಾರ್ಗೋಡ | ಶ್ರೀ ರಾಮ ಸ್ಟೋರ್ಸ್ ಹೌಸ್, ಶ್ರೀ ರಾಮ ಪೇಟೆ, (12) ಕೆ. ಶ್ರೀನಿವಾಸ ಶೆಣ್ಯೈ, ತೀರ್ಥಹಳ್ಳಿ. (13) ಬಿ. ಯಸ್. ಶಂಕರನಾರಾಯಣ್, ಮರ್ಚೆಂಟ್, ಚಿಕ್ಕಮಗಳೂರು.

Degrees Books Medicines

Free H. L. M. S. M. B. H. M. D. etc Free Homeo-Ayur-Unani-Naturo degree By post also—Practitioners also get soon Homeo Materiamedica, Rs. 5. Homeo practice book Rs 4. Insanity Cure Pills Rs. 10 Enclose 2 annas stamp:—

Principal, Indian Homeopath Institute & Society (Govt. Regd.)

P.O. Mahuva. (Kathiawar Dt. India.)

Sidha-Kalpa Kavach (Regd.)

No 3 Rs. 2, No 2 Rs 5 No. 1. Rs. 7 Special Rs 10, Extra Special Rs. 17, for love marriage health, wealth. Ask any six questions with M. O. Re 1/- and get correct answers by return post Life reading Rs. 2 No V. P. P. Send M. O. Free pamphlets, Prof. Dr. N. H. Chhatbar.

P. O. Mahuva (Kathiawar India.)

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹುಣ್ಣು ಆಗಿ ಬತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯುವಿದ್ದರೆ, ದೇಹದ ಸತ್ವ ಕ್ಷಯವಾಗಿದ್ದರೆ; ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇನು ಬೀಳುತ್ತಿದ್ದರೆ, ಉಷ್ಣ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಶ್ವೇತ ಕುಷ್ಠ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೆಂಗಸರು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸದಾಕಾಲ ಜ್ವರದಿಂದ ಇದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಉಪಯುಕ್ತವು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಪಾವು ಹಾಲಿನಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಧ್ಯಾಹ್ನ ಇನ್ನೆರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಛಳಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, **ಬಾಗಲಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, **ದಾವಣಗೇರಿ:**—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ.

ವಿಮಾ ಏಜಂಟರಿಗೆ, ಸಬ್ ಏಜಂಟರಿಗೆ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮನ್ನು ಈಗ ವಿಚಾರಿಸಿರಿ—

ಡಿ. ಎ. ಪ್ಯಾಸ್, ಬ್ರ್ಯಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.

ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಸ್ಪೆಕ್ಟರ್, ಕಾರ್ಕಳ, ದ. ಕ.

ಶ್ರೀ. ಕೆ. ಗಣಪಯ್ಯ ಶೆಟ್ಟಿ, ಜನರಲ್ ಏಜೆಂಟ್, ಉಡುಪಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರ್ಯಾಂಚ್.

ಅಪ್ಪಟ ಕಪ್ಪಾದ ಕೂದಲನ್ನು ಬಯಸುವಿರಾ ಬೇಕು—ಅಮುಲಕೀ ತೈಲ.
ಬನಂದ ಉತ್ಸಾಹ ಶಕ್ತಿ ಹೆಚ್ಚಿಸಲು—ಅಮುಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು—ಅಮುಲಕೀ ತೈಲ.
ನಾರೀಮಣಿಗಳ ಸೌಂದರ್ಯಕ್ಕೆ—ಅಮುಲಕೀ ತೈಲ.
ಪುಷ್ಪಗಂಧಾನ್ವಿತ, ಪುಷ್ಪಗಳ ಬದಲ್ಯಾವ್ದೇ ಅಮುಲಕೀ ತೈಲ
ಪ್ರತಿಯೊಬ್ಬ ಗಾಯಕನ್ಯರಿಗೆ ಬೇಕಾದುದೇ—ಅಮುಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ— ಅಮುಲಕೀ ತೈಲ.
ಭಾರತದ ಮಹಿಳೆಯರು ಪ್ರೀತಿಸುವದು— ಅಮುಲಕೀ ತೈಲ.
ಬೆಳಗುವ ತಾರೆಯರ-ನಯನದ ಸ್ವಾಸ್ಥ್ಯಕ್ಕೆ—ಅಮುಲಕೀ ತೈಲ.
ಲಲನೆಯರು ಮೆಚ್ಚುವದು—ಅಮುಲಕೀ ತೈಲ.
ವಾತಾದಿ ತ್ರಿದೋಷನಾಶಕವೇ—ಅಮುಲಕೀ ತೈಲ.
ಪರಿಶೋಧಿತ ತಿಲತೈಲದಿಂದಲೆ ತಯಾರಿಸಿದ—ಅಮುಲಕೀ ತೈಲ.
ಸರ್ವಶಿರೋರೋಗನಿವಾರಕ ಅತ್ಯಂತ ಹಿತಾವಹ-ಅಮುಲಕೀ ತೈಲ.
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಅಮುಲಕೀ ತೈಲ.

ಅಮುಲಕೀ ತೈಲ ವಸ್ತ್ರೋಪಯೋಗಿ ಸಿದೆ.

2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು:-ನವಭಾರತ ಬುಕ್ ಡಿಪೊ, ಉಡುಪಿ. ಗ[illegible] ಕ್ರಿ, ಅನಂತ ಪ್ರೆಸ್, ಕೋಟ. ಶ್ರೀ ಕೃಷ್ಣ ಮೆಡಿಕಲ್ ಸ್ಟೋರ್ಸ್ ಸಬ್ರಹ್ಮಣ್ಯ, ದ. ಕ.

ಈ ವಾರದ ಭವಿಷ್ಯ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಗಳಿಗೆ ಗುರಿಪಡಿಸುವದು. ಸತಿಪತಿಗಳಲ್ಲಿ ಕಲಹವು ತಲೆದೋರಲಿದೆ. ಮಾತ್ರವಲ್ಲ, ಸ್ನೇಹ ಸಂಪರ್ಕದಲ್ಲಿ ಮನಸ್ತಾಪವುಂಟಾಗಬಹುದು. ಖರ್ಚು ಹೆಚ್ಚಿರುವುದಾದರೂ ಸಾಕಷ್ಟು ಉತ್ಪತ್ತಿಯಿರುವುದರಿಂದ ಹಣದ ಅಭಾವವುಂಟಾಗದು. ಕೆಲಸಗಾರರಿಗೂ ನೌಕರರಿಗೂ ವಿಶೇಷವಾದ ಕಷ್ಟ ಕಷ್ಟವಾಗಬಹುದು. ತಾ. 1. 5. 6. 7 ಈ ದಿನಗಳಲ್ಲಿ ಮಿತ್ರ ಸಮಾಗಮ, ಇಷ್ಟಪ್ರಾಪ್ತಿ, ಸುಖಲಾಭಗಳಿವೆ.

ವೃಶ್ಚಿಕ—ಈ ಹೊಸ ವರ್ಷವು ನಿಮಗೆ ಹೊಸ ಹುರುಪು ಮತ್ತು ಚೈತನ್ಯವನ್ನು ಕೊಡಲು ಶಕ್ತವಾಗಿರುವುದು. ನಿಮ್ಮ ಕಾರ್ಯಕಲಾಪಗಳು ಸ್ಥಿರ ಪ್ರಗತಿಯನ್ನೇ ಹೊಂದಲಿವೆ. ಆಪದ್ಧನವನ್ನು ಸಂಗ್ರಹಿಸಲಿಕ್ಕಿದು ಸುಸಮಯವು. ಜನತೆಯಲ್ಲಿ ಗೌರವಾದರಗಳನ್ನು ಪಡೆಯುವಿರಿ. ವಿರೋಧಿಗಳಿಂದ ನಿಮಗೆ ಯಾವ ಕುಂದುಕೊರತೆಯಿಲ್ಲವು. ಆರೋಗ್ಯ ಸುಖವು ಉತ್ತಮವಿದೆ. ವಾರಾಂತ್ಯದ 3 ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಧನು—ನಿಮ್ಮಲ್ಲಿ ತಮೋಗುಣದ ಸ್ವಭಾವವು ಅಧಿಕವಾಗಿ ತೋರುವುದರಿಂದ ಹಟ್ಟಿನವರಲ್ಲಿ ನಿಷ್ಕಾರಣವಾದ ವಿವಾದಗಳು ಬೆಳೆದು ಕಲಹಕ್ಕೆ ಎಡೆಯಾಗುವುದು. ಹೆಚ್ಚೇಕೆ ನೀವೆಲ್ಲಿ ಪುರಸ್ಕೃತರಾಗುತ್ತಿದ್ದಿರೋ ಅವರೇ ನಿಮ್ಮನ್ನು ತಿರಸ್ಕಾರ ದೃಷ್ಟಿಯಿಂದ ನೋಡುವರು. ಪುಕ್ಕಟೆ ನೀವು ಯೋಚನಾದ ಚಿಂತೆಗೆ ಗುರಿಯಾಗುವಿರಿ. ಅನಿವಾರ್ಯವಾದ ಮನೋರೋಗವು ನಿಮ್ಮ ಬಾಧಿಸುತ್ತಿರುವುದು. ಹಣದ ತಾಪತ್ರಯ, ಮಿತ್ರ ಜನರ ನೀಚ ಭಾವಗಳಿಂದ ಮನನೊಂದ ನಿಮಗೆ ತಾ. 1. 2. ೪ ರಂದು ಕೊಂಚ ಸುಖ ಸಿಗಲಿದೆ.

ಮಕರ—ಸದಾಚಾರ ಸಂಪನ್ನರಾದ ಸಜ್ಜನ ವೃಂದಕ್ಕೆ ನಿಮ್ಮ ಸದ್ಗುಣಗಳಿಂದ ಮಿತ್ರೀಭೂತರಾಗಿರುವುದು. ಪಶುಭೃತ್ಯಾದಿ ಸಕಲ ಗೃಹೋಪಕರಣಗಳು ಅಭ್ಯುದಯವಾದವು. ಸಕಲೋಪಸ್ಕರಯುತವಾದ ಶಯ್ಯಾಸುಖವನ್ನು ಅನುಭವಿಸುವಿರಿ. ಆದರೆ ಕುಮಿತ್ರರ ಕುತ್ರಿಮ ಜಾಲಕ್ಕೆ ಸಿಲುಕಿ ಕಷ್ಟ ನಷ್ಟಗಳಿಗೆ ಗುರಿಯಾಗುವ ಸಂಭವವಿದೆ. ಇಂದ್ರಿಯ ನಿಗ್ರಹ ಶಕ್ತಿಯು ಇಲ್ಲದಿರುವುದರಿಂದ ಕೆಲವೊಂದು ಕುಕರ್ಮವನ್ನು ಮಾಡುವಿರಿ. ರಾಜಕೀಯ ವಿಜಯಕ್ಕೀವಾರವು ಹಿತವಲ್ಲ. ವಾರಾದಿಯ 5 ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಕುಂಭ—ವಿಕ್ರಮಸಂವತ್ಸರದೊಡನೆ ಶನಿಯು ನಿಮ್ಮ ಜನಿತಿಯೂ ಆದ ಅಂಗಾರಕನು ಸ್ವಕ್ಷೇತ್ರವನ್ನು ಹೊಂದಿರುವುದರಿಂದ ಸದ್ಯ ನೀವು ಅದ್ವಿತೀಯ ಸಾಹಸಿಗಳಾಗಿರುವಿರೆಂದರೆ ತಪ್ಪಾಗದು. ಮಾತ್ರವಲ್ಲ, ಇತರ ಹಲವು ಗ್ರಹರು ಶುಭಸ್ಥಾನದಲ್ಲಿರುವುದರಿಂದ ನಿಮ್ಮ ಶ್ರಮದ ಅತ್ಯಲ್ಪಾಂಶವೂ ಕೂಡ ಮಹತ್ಫಲದಾಯಕವಾಗುವುದರಲ್ಲಿ ಸಂದೇಹವಿಲ್ಲ. ಸದ್ಯ ವ್ಯಯವಾದ ನಿಮ್ಮ ಖರ್ಚಿಗಿಂತ ಉತ್ಪತ್ತಿಯು ಸಂತಸಗೊಳಿಸುವುದಾದರೂ ದಿನಾಂತ್ಯದಲ್ಲಿ ಒಂದು ಕಾಸನ್ನೂ ಇಟ್ಟುಕೊಳ್ಳುವ ಸ್ವಭಾವವು ಈಗ ನಿಮಗಿಲ್ಲ. ತಾ. 1. 2. 3. ೫ ರಲ್ಲಿ ಬಂಧು ಕಲಹದಿಂದ ಮನಸ್ಸಿಗೆ ಅಸಮಾಧಾನವಾದೀತು.

ಮೀನ—ಶುಭಾಶುಭ ಗ್ರಹರು ನಿಮಗೀವಾರದಲ್ಲಿ ಸಮಬಲರಿರುವುದರಿಂದ ಲಾಭ ನಷ್ಟ, ಸುಖದುಃಖ, ಜಯಾಪಜಯಗಳು ಸಮನಾಗಿ ಪರಿಣಮಿಸಲಿವೆ. ವ್ಯಾಪಾರದಲ್ಲಿ ಒಳ್ಳೆಯ ಲಾಭವಿದೆ. ಮುಂದಿನ ಧನದ ಬಯಕೆಯು ರಾಜಕೀಯಾದಿ ಇತರ ಕ್ಷೇತ್ರಗಳಲ್ಲೂ ಆಸಕ್ತಿಗಳ ಮೂಲಕವೂ ವ್ಯಯವಾಗುವದು. ಬುದ್ಧಿಶಕ್ತಿಗಳ ಪ್ರಕೋಪ ಮತ್ತು ವಾತದೋಷದಿಂದ ಆರೋಗ್ಯ ಕೆಟ್ಟು ದೇಹ ಕೃಶವಾಗಲಿದೆ. ವಾರಾಂತ್ಯದ 3 ದಿನಗಳು ಆರೋಗ್ಯ, ಧನಸುಖದಾಯಕಗಳಿವೆ.

Our Yearly Greetings

to all our Agents, Policyholders and Wellwishers

For the X'MAS and the NEW YEAR

THE

ASIAN ASSURANCE Co. Ltd.

BOMBAY.

J. A. Putran,

Branch Manager.

ಹಿಂದೂ ದೇಶದ



ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಕ ಮುಲಾಮು. —

ಇಷ್ಟರವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ಪ್ರಾಣಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಕಾಲದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗಿ ಪ್ರವರ್ತಿಸುವ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager.

ಯಂ. ಆರ್. ಪುಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ಶುಚಿ ರುಚಿಯಾದ ದಿನವಹಿ ಸ್ಪೆಷಲ್ ತಿಂಡಿಗಳು!

ಬೇಸಿಗೆ ಕಾಲದ ತಂಪಾದ ಪಾನೀಯಗಳು!!

ಕಿವಿಗೆ ಇಂಪಾದ ಗಾಯನ! ವಿಶಾಲವಾದ ಆವರಣ!!!

ಸತ್ಯನಾರಾಯಣ ರೆಸ್ಟೋರೆಂಟ್

(ನಂ. 233.)

ಹಳೇ ತಾಲೂಕಾ ಕಚೇರಿ ಹಳ್ಳಿ ರಸ್ತೆ. ಲಾಲಬಾಗ್

ಒಂದಿನ ಗೇಟಿನ ಎದುರು

ವಿಶ್ವೇಶ್ವರಪುರಂ. **ಬೆಂಗಳೂರು ಸಿಟಿ.**

ಪ್ರೊಪ್ರೈಟರ್— **ಎ. ವಿ. ಶ್ರೀನಿವಾಸ ಕಾರಂತ.**

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦		ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೨ ೧೪ ೦		ಮೋಹಿನಿ	ಬೆಲೆ ೧ ೮ ೦
ಕಣ್ಣೀರು	ಬೆಲೆ ೨ ೦ ೦		ಅಸಾತ್ಮಸಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦		ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦		ವೀರರಾಜ ವಿಜಯು	೦ ೧೨ ೦
ನನ್ನ ಗತಿ	೦ ೪ ೧		ಪಾಣಿಗ್ರಹಣ	೦ ೩ ೦

ಕೆಟಲಾಗಿಗೆ ಬರೆಯಿರಿ—

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ, ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾಗಿದ್ದು ಅರೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು.

ಸೀಸೆ ೧ಕ್ಕೆ ೧೨ ಆಣೆ;

ಟಿ. ಖ. ೯ ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು — ನವಭಾರತ ಬುಕ್ ಡಿಪೋ, ಉಡುಪಿ.

ಸ್ಥಾಪನೆ: 1920

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೈನ್ ಬೋರ್ಡ್ ಜಮಾನದ ಬೇಜು, ಮೊನೊಗ್ರಾಮ್, ? ? ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುತ್ತವೆ.

Crown Rubber Stamp Co. 18 Balmatt Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

ನವಜೀವಾಮೃತ ಎಂಬ ಸೂತಿಕಾ ರಸಾಯನ



(ಇದು ರಹಸ್ಯ ಮದ್ದಲ್ಲ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಆ ಔಷಧಿಯ ಬಾಟ್ಲಿಗಳು ಬಹಳ ಕಡಿಮೆ ಸಮಯಗಳಿಗೆ ಬರುವವು. ಅಂದರೆ ಕೇವಲ ಎರಡು ಬಾಟ್ಲುಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿವರ ಮತ್ತು ಬೆಲೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೩ ಕೊಡಿಯಾಲಬೈಲು, ದ. ಕ.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921

CANARA BANK SUPPLIMENT

ಕೆನರಾ ಬ್ಯಾಂಕ್ ಸಪ್ಲಿಮೆಂಟ್

ಸಂಪುಟ ೨೧ Vol: 21

ಸಂಸ್ಥಾಪಕರು:—ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

ಸಂಚಿಕೆ ೧೦ No. 10

8-1-1942

ಕೆನರಾ ಬ್ಯಾಂಕಿನ ಸ್ಥಾಪಕರಾದ

ದಿವಂಗತ ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈಗಳವರ ಜೀವನ ಚರಿತ್ರೆ

ಕೆನರಾ ಬ್ಯಾಂಕಿನ ಸ್ಥಾಪಕರಾದ ಶ್ರೀ. ಎ. ಸುಬ್ಬರಾವ್ ಪೈಗಳವರು ಸಂದುಹೋಗಿ ಇಂದಿಗೆ ೩೩ ವರ್ಷಗಳು ಮಿಕ್ಕಿದವು. ಈ ಮೂವತ್ತು ಸಮಯಾಂತರದಲ್ಲಿ ನಮ್ಮ ಈ ತಾಯಿನಾಡಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಮಹತ್ವದ ಮಾರುಪಾಟುಗಳು ಆಗಿಹೋಗಿವೆಯೆಂಬುದು ಎಲ್ಲರಿಗೂ ತಿಳಿದ ಅಂಶ. ನಮ್ಮ ವಾಚಕ ವರ್ಗದಲ್ಲಿ ಬಹುಮಂದಿಗೆ ಮಾನ್ಯ ಸ್ಥಾಪಕರ ಕಾಲೀನ ಜೀವಿತ ಕ್ರಮವು ಪರಿಭಾವನೆಯ ಅಭ್ಯಾಸವೂ ಯಾವ ರೀತಿಯಲ್ಲಿತ್ತೆಂಬುವರ ಕುರಿತು ಸ್ವಂತ ಅರಿವು ಇಲ್ಲವೆಂದೆನ್ನಬಹುದು. ಆದುದರಿಂದ ಶ್ರೀ. ಸುಬ್ಬರಾಯರ ಜೀವಿತ ವೃತ್ತಾಂತವನ್ನೂ ಅವರು ನಿರ್ವರ್ತಿಸಿದ ಕಾರ್ಯಗಳನ್ನೂ ಗ್ರಹಣಮಾಡುವುದೆಂದರೆ ನಮ್ಮ ದೇಶದ ಆ ಕಾಲದ ಪರಿಸ್ಥಿತಿಯನ್ನ ನಮ್ಮ ಮಾನಸಿಕ ರಾಜ್ಯದಲ್ಲಿ ಕಲ್ಪಿಸಬೇಕಾಗುವುದು.

ದಿವಂಗತ ಶ್ರೀ ಪೈಗಳು ಶಾಲಾ ಮತ್ತು ಕೊಲೇಜ್ ವಿದ್ಯಾವ್ಯಾಸಂಗದಲ್ಲಿ ಅತ್ಯಂತ ನಿಪುಣರೆಂಬದಾಗಿ ಖ್ಯಾತಿಹೊಂದಿದ್ದರು. ಆದರೆ ಚಿಕ್ಕ ವಯಸ್ಸಿನಲ್ಲಿ ಮಾತ್ರ ಇತರ ದೊಡ್ಡ ಮನುಷ್ಯರಂತೆ ಶಾಲಾ ಪಾಠಗಳಿಗಿಂತ ಆಟಗಳ ಕಡೆಗೆನೇ ಮಾನ್ಯರ ಮನಸ್ಸು ಹೆಚ್ಚಾಗಿ. ೧೮೭೦ನೆಯ ಇಸವಿಯಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ ಪ್ರೆಸಿಡೆನ್ಸಿ ಕೊಲೇಜಿಗೆ ಪ್ರವೇಶವಾಗಿ ಬಿ. ಎ. ಪರೀಕ್ಷೆಯಲ್ಲಿ ಸಂಸ್ಥಾನದ ದ್ವಿತೀಯ ಸ್ಥಾನವನ್ನು ಪಡೆದದ್ದೂ ಆಯಿತು. ಆ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದವರೆಂದರೆ ದಕ್ಷಿಣ ಹಿಂದೂಸ್ಥಾನದ ಪ್ರಥಮ ಐ. ಸಿ. ಎಸ್. ಪದವೀಧರರಾದ ಸ್ವರ್ಗವಾಸಿ ರತ್ನವೇಲು ಚೆಟ್ಟಿಯಾರರು. ಕೆಲವು ಕಾಲ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ರಾಮಚಂದ್ರ ಐಯ್ಯರರೂ ನಮ್ಮ ಚರಿತ್ರನಾಯಕರೂ ಮದ್ರಾಸಿನಲ್ಲಿ ಸಹಪಾಠಿಗಳೂ ಮಿತ್ರರೂ ಆಗಿದ್ದರೆಂಬುದು ನಮ್ಮ ಮೈಸೂರು ನಾಡಿನ ವಾಚಕರಿಗೆ ಅನುರಂಜಿಸಲಿಕ್ಕೆ ಸಾಕು. ಬಿ. ಎ. ಪರೀಕ್ಷೆಯಲ್ಲಿ ತಪ್ಪಿಹೋದ ಸಮಯವು ಮಾನ್ಯರಿಗೆ ಬಿ. ಎಲ್. ಪರೀಕ್ಷೆಯಲ್ಲಾದರೂ ಲಭಿಸಿತು. ಆ ಪರೀಕ್ಷೆಯಲ್ಲಿ ಅವರ ಹೆಸರು ಇಡೀ ಸಂಸ್ಥಾನದ ತೇರ್ಗಡೆ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಅಲಂಕರಿಸಿತು. ಬಿ. ಎಲ್. ಕ್ಲಾಸಿನಲ್ಲಿ ಕಲಿಯುವಾಗ ಮಾನ್ಯರ ವಿಚಕ್ಷಣತೆಯೂ ಬುದ್ಧಿ ಪ್ರಭೆಯೂ ಆಗಿನ ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಹೊಲ್ಲೊವೇ ದೊರೆಗಳ ದೃಷ್ಟಿಪಥದಲ್ಲಿ ಬಿದ್ದು, ದೊರೆಗಳ ಅಮೂಲ್ಯ ಕಾನೂನು ಪುಸ್ತಕ ಭಂಡಾರದ ಉಪಯೋಗವೂ, ಪ್ರತಿ ಶನಿವಾರ ನ್ಯಾಯಮೂರ್ತಿಗಳು ವಿದ್ಯಾರ್ಥಿಗಳೊಡನೆ ನಡೆಸುತ್ತಿದ್ದ ಬೋಧಪರ ಮತ್ತು ಕೌತುಕವಾದ ಸಂಭಾಷಣೆಗಳ ಅಮೂಲ್ಯ ಲಾಭವೂ ಮಾನ್ಯರಿಗೆ ದೊರಕಿತು. ಕಡೆಗೆ ದೊರೆಗಳಿಗೆ ನಮ್ಮ ಸುಬ್ಬರಾಯರ ಮೇಲೆ ಎಷ್ಟೊಂದು ಪ್ರೀತಿ ಬೆಳೆದಿತ್ತೆಂದರೆ ಅವರನ್ನು ಉಚ್ಚ ಶಿಕ್ಷಣಕ್ಕೋಸ್ಕರ ವಿಲಾಯತಿಗೆ ತನ್ನೊಡನೆ ಕರಕೊಂಡು ಹೋಗುವ ಇಚ್ಛೆಯನ್ನೂ ವ್ಯಕ್ತಪಡಿಸಿದರಂತೆ. ಆದರೆ ಅಂದಿನ ಗಡುಸು ಸಾಮಾಜಿಕ ಕಟ್ಟಳೆಗಳಿಂದ ಅದು ಸಾಧ್ಯವಾಗಲಿಲ್ಲ.

ವಿದ್ಯಾವ್ಯಾಸಂಗವು ಮುಗಿದ ತರುವಾಯ ಮಾನ್ಯರು ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಕೋರ್ಟ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಸಿವಿಲ್ ವ್ಯವಹಾರಗಳನ್ನಲ್ಲದೆ ಕ್ರಿಮಿನಲ್ ಕೇಸುಗಳಲ್ಲಿ ಪ್ರಾರಂಭದಿಂದ ಅಂತ್ಯದ ವರೆಗೆ ವಕಾಲತ್ತು ಸ್ವೀಕರಿಸಲಿಲ್ಲ. ವಕೀಲಿ ವೃತ್ತಿಯಲ್ಲಿ ಸುಬ್ಬರಾಯರು ತುಂಬಾ ಕೀರ್ತಿಯನ್ನೂ ದ್ರವ್ಯಸಂಗ್ರಹವನ್ನೂ ಮಾಡಿ ಆಗಿನ ಪ್ರಮುಖ್ಯ ವಕೀಲರಲ್ಲಿ ಶ್ರೇಷ್ಠ ಪದವಿಯನ್ನು ಸಂಪಾದಿಸಿದರು. ಆದರೆ ಮಾನ್ಯರ ಒಂದು ವಿಚಿತ್ರ ಸದ್ಗುಣ ಎಂದರೆ ಇತ್ತಂಡದ ಕಕ್ಷಿಗಾರರನ್ನು ಸಮಾಧಾನಪಡಿಸಿ ರಾಜಿಯಿಂದ ಖಟ್ಲೆಗಳನ್ನು ಇತ್ಯರ್ಥಮಾಡುವುದೇ. ಇದರಿಂದಾಗಿ ನಾಡಿನ ಹಲವಾರು ಸಂಭಾವಿತ ಕುಟುಂಬಗಳು ಕೋರ್ಟುಖರ್ಚುಗಳ ನಷ್ಟಕಷ್ಟಗಳಿಂದ ರಕ್ಷಿಸಲ್ಪಟ್ಟವು.

೧೮೯೧ರಲ್ಲಿ ಮಾನ್ಯರು ಕೆಲವು ಉತ್ಸಾಹೀ ತರುಣರ ಒಂದು ಸಂಘವನ್ನು ಸ್ಥಾಪಿಸಿ ತನ್ನ ಮುಖಂಡತನದಿಂದ ಮಂಗಳೂರಿನಲ್ಲಿ ಕೆನರಾ ಹೈಸ್ಕೂಲ್ ಎಂಬ ಹೆಸರಿನಿಂದ ಒಂದು ವಿದ್ಯಾಪೀಠವನ್ನು ನಿರ್ಮಾಣ ಮಾಡಿದರು. ಇಂದು ಈ ಶಾಲೆಯು ಸಂಸ್ಥಾನದಲ್ಲಿ ಹೆಸರುವಾಸಿಯಾಗಿ ತನ್ನ ಜೀವಿತದ ೫೦ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಇದಾದ ಕೆಲವು ವರ್ಷಗಳಲ್ಲಿಯೇ ಕೆನರಾ ಗರ್ಲ್ಸ್ ಸ್ಕೂಲ್ ಎಂಬ ಹೆಸರಿನಿಂದ ಹುಡುಗಿಯರ ಶಾಲೆಯೊಂದನ್ನು ಸ್ಥಾಪಿಸಿದರು. ಸ್ತ್ರೀ ವಿದ್ಯಾಭ್ಯಾಸವೇ ದೇಶದ ಉನ್ನತಿ ಮಾರ್ಗವೆಂಬುದನ್ನು ಮಾನ್ಯರು ಸುಮಾರು ಅರ್ಧ ಶತಮಾನದ ಹಿಂದೆಯೇ ಲಕ್ಷಿಸಿ ಆಗಿನ ಕೆಲವು ಹಿಂದು ವಿತಂತುಗಳನ್ನು ಪೂನೆಯ ವಿಧವಾಶ್ರಮಕ್ಕೆ ಕಳುಹಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಾರಸ್ಥರಿಗೆ ಅನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದ ಒಂದೇ ಒಂದು ಬ್ಯಾಂಕೆಂದರೆ ಬೇಂಕ್ ಆಫ್ ಮದ್ರಾಸ್ ಎಂಬ ಸಂಸ್ಥೆಯಾಗಿತ್ತು. ಸಂಸ್ಥೆಯ ಪರಿಮಾಣಕ್ಕೆ ಅನುಗುಣವಾಗಿ ಆ ಬ್ಯಾಂಕು ದೊಡ್ಡ ವರ್ತಕರಿಗೂ ಶ್ರೇಷ್ಠ ತರಗತಿಯ ಗೃಹಸ್ಥರಿಗೂ ಮಾತ್ರ ಸಾಲಗಳನ್ನು ಕೆಲವೆಡೆ ೧೨ರಿಂದ ೧೮ರ ಸಲೆಯ ಬಡ್ಡಿಯಿಂದ ಕೊಡುವ ವಾಡಿಕೆ ಇತ್ತು. ಹೀಗಾಗಿ ಚಿಕ್ಕವ್ಯಾಪಾರಿಗಳ ಪಾಡು ತುಂಬಾ ಶೋಕಜನಕವಾಗಿತ್ತು. ಈ ಪರಿಸ್ಥಿತಿಯ ಸುಧಾರಣೆಗೋಸ್ಕರ ಮಾನ್ಯರು ೧೯೦೬ನೇ ಜುಲೈ ೧ನೇ ಎಸ ಕೆನರಾ ಬ್ಯಾಂಕ್ [illegible] ಬ್ಯಾಂಕಿಂಗ್ ವ್ಯವಹಾರದ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಬ್ಯಾಂಕಿನ ಪ್ರಾರಂಭದ ನಿಬಂಧನೆಯೆಂದರೆ ಯಾವ ಸಂದರ್ಭದಲ್ಲೂ ಯಾವ ಸಾಲಕ್ಕೂ ೧೦ರ ಸಲೆಗೆ ಮಿಕ್ಕಿದ ಬಡ್ಡಿಯನ್ನು ವಿಧಿಸಬಾರದೆಂಬುದು.

ಮಾನ್ಯರು ಆ ಕಾಲದಲ್ಲಿ ವಾಕ್ಚಾತುರ್ಯದಲ್ಲಿ ಪ್ರಸಿದ್ಧ ಪುರುಷರೆಂದೆನಿಸಿದ್ದರು. ಆಂಗ್ಲ ಭಾಷೆಯಲ್ಲಾಗಲೀ ದೇಶಭಾಷೆಗಳಲ್ಲಾಗಲೀ, ಎಡೆತಡೆ ಇಲ್ಲದ ವಾಕ್ಪಟುಗಳಾಗಿದ್ದರು. ಅಂದು ಕನ್ನಡದ ಕಡೆಗೆ ತುಂಬಾ ಉದಾಸೀನತೆ ಇದ್ದ ಸಮಯದಲ್ಲಿ ಮಾನ್ಯರ ಕನ್ನಡ ವ್ಯಾಸಂಗವೂ ಕನ್ನಡ ವಾಙ್ಮಯ ಜ್ಞಾನವೂ ಅವರನ್ನು ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಕರನ್ನಾಗಿ ನೇಮಿಸುವಂತೆ ಸಾಧಿಸಿತು. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೆಲವು ವರ್ಷಗಳ ವರೆಗೆ ಈ ರೀತಿ ಅವರು ಕನ್ನಡದಲ್ಲಿ ಪರೀಕ್ಷಕರಾಗಿದ್ದರು. ಆದರೆ ಪ್ರತಿಯೊರ್ವ ಕನ್ನಡಿಗನಿಗೆ ಸಂಸ್ಕೃತದ ಸ್ವಲ್ಪವಾದರೂ ಜ್ಞಾನವಿರಬೇಕೆಂಬುದೇ ಅವರ ಹೇಳಿಕೆಯಾಗಿತ್ತು. ಹೀಗಾಗಿ ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿವೇತನ (Scholarship)ವನ್ನು ಅಪೇಕ್ಷಿಸುವ [illegible] ಬಡ ವಿದ್ಯಾರ್ಥಿಯು ಸಂಸ್ಕೃತವನ್ನು ಎರಡನೇ ಭಾಷೆಯಾಗಿ ಕಲಿಯಬೇಕೆಂಬ ನಿಕಟ ನಿಬಂಧನೆಯನ್ನು ಅವರು ಶಾಲೆಯಲ್ಲಿ ಏರ್ಪಡಿಸಿದ್ದರು. ಆದರೆ ದುರ್ಭಾಗ್ಯದಿಂದ ಅವರ ನಿಧನದ ತರುವಾಯ ಈ ನಿಬಂಧನೆಯೂ ರದ್ದಾಯಿತು.

ಮಂಗಳೂರಿನಂತಹ ಒಂದು ಪ್ರಾಂತಿಕ ಪಟ್ಟಣದ ಪರಿಸರದಲ್ಲಿ ಮಾನ್ಯರ ವಕೀಲಿ ವೃತ್ತಿಯ ವರಮಾನವು ದೊಡ್ಡದಿದ್ದರೂ ಆ ಹುಟ್ಟಿನ ಹೆಚ್ಚಿನಂಶವು ಬಡಪಾಯಿಗಳ ಸುಖಜೀವನಕ್ಕೂ, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೂ ವಿನಿಯೋಗಿಸಲ್ಪಡುತ್ತಿತ್ತು. ಕ್ರಿಸ್ತೀಯರವೇದಪುಸ್ತಕವಾದ ಬೈಬಲ್ ಗ್ರಂಥದ ಹೇಳಿಕೆಯಂತೆ ತನ್ನ ಬಲಗೈ ಮಾಡಿದ ದಾನವು ಎಡಕೈಗೆ ತಿಳಿಯದಂತೆ ವರ್ತಿಸಿದವರೆಂದರೆ ಇದು ಮಾನ್ಯರೇ ಸರಿ. ಅವರ ದಾನಧರ್ಮಗಳಿಗೂ ಪರೋಪಕಾರಕ್ಕೂ ಜಾತಿಮತಗಳೆಂಬ ಬೇಲಿಗಟ್ಟುಗಳಿದ್ದಿಲ್ಲ. ನಮ್ಮ ಮಕ್ಕಳಿಗೆ ಅವರ ಯೋಗ್ಯತಾನುಸಾರ ಉತ್ತಮ ತರದ ವಿದ್ಯಾಭ್ಯಾಸವನ್ನು ಕೊಟ್ಟು, ತನ್ನ ನಿಧನದ ತರುವಾಯದ ಆರು ತಿಂಗಳ ಅಶನವಸನಕ್ಕೆ ಸಾಕಷ್ಟಲ್ಲದ ಹೆಚ್ಚಿನ ಹಣ ಒದಗಿಸಿಕೊಡು

(೩ನೇ ಪುಟಕ್ಕೆ ಮುಂದುವರಿದಿದೆ.)

The VIJAYA BANK Ltd.

Estd: 1931

Head Office:—**MANGALORE.**

ANNOUNCEMENT

A Branch of the Bank has been opend at

BRAHMAVAR

on Thrusday the 25th December 1941

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸದ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳ ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹುಳಿಖಾರವನ್ನು ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—೦—೨ ಪೋಸ್ಟ ಚಾರ್ಜು ೮ ಆಣೆ.

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಹುಬಳ್ಳಿ ಫಾರ್ಮಸಿ,—ಹುಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ.—**ದಾವಣಗೇರಿ** ಪ್ರೆಸ್ಸ್, ಬಳ್ಳಾರಿ—ಎಚ್. ವಿರೂಪಾಕ್ಷಪ್ಪ ಏಜಂಟ, ಬಳ್ಳಾರಿ. ಗೋಕಾಕ.—ಸಂಗಪ್ಪ ಶಿವಲಿಂಗಪ್ಪ ಅಂದಾನಿ

ಸುಂದರ! **ಸುಧೃಢ!**

1942ನೇ ಇಸವಿಯ

ಡೈರಿಗಳು

(ಹಲವು ತರದ ಮಾಹಿತಿಯನ್ನೊಳಗೊಂಡಿವೆ)

ತುಳುನಾಡ್ ಡೈರಿ	0—5—0
ಕರ್ನಾಟಕ ಡೈರಿ (ಸಣ್ಣದು)	0—6—0
,, (ಮುಚ್ಚಳದ್ದು)	0—7—0
,, (ದೊಡ್ಡದು)	0—10—0
,, (ಮುಚ್ಚಳದ್ದು)	0—12—0

ಪ್ರತಿಯೊಂದಕ್ಕೂ ಅಂಚೆ ವೆಚ್ಚ 0-2-6 ಪ್ರತ್ಯೇಕ

ಕ್ರಯ ಮತ್ತು ಅಂಚೆ ವೆಚ್ಚ ಸ್ಟಾಂಪು ಮೂಲಕ ಕಳಿಸಿ ಬುಕ್ ಪೋಸ್ಟ್ ದ್ವಾರಾ ಡೈರಿ ತರಿಸಿಕೊಳ್ಳಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, **ಮಕ್ಕಳ** ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . . ದ. ಭಾರತ.

The Canara Mutual Assurance Company, Limited.

UDIPI : S. INDIA.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

READ & ADVERTISE IN

ANTARANGA

BHUVANENDRA PRODUCTS LTD.,

Head Office and Factory: **Katapadi,** S. Kanara

Depots: 1 Mahratha Galli. Hubli; 2. 57 Big street, Triplicane Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು.— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ ಆರ್. ಎಸ್. ಶೆಟ್ಟಿ ರಥಬೀದಿ (3) ಡಾಕ್ಟರ್ ಸಿ ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೀನಗಿರಿ ಪೈ L. I. M.

ಬ್ಯಾಂಕಿನ ಮೂರು ಮುಖ್ಯ ಸೇವೆಗಳು

By Sri. M. Mukunda Kini.

ಜನ ಸಾಮಾನ್ಯಕ್ಕೂ ವ್ಯಾಪಾರಿ ವರ್ಗಕ್ಕೂ ಹಲವು ವಿಧಗಳಿಂದ ಸಲ್ಲಿಸುವ ಬ್ಯಾಂಕಿನ ಸೇವೆಯು ಅತೀ ಅಗತ್ಯವಾಗಿದೆ. ಮತ್ತು ಆದರ್ಶವಾಗಿದೆ. ಇದರ ಸಮಾನ ಸೇವೆಯು ಜನತೆಗೆ ಬೇರೊಂದಿಲ್ಲ. ಬ್ಯಾಂಕಿನಲ್ಲಿ ಲೆಕ್ಕಾಚಾರ ವಹಿವಾಟುಗಳನ್ನು ನಡೆಸುವುದು, ಹಣ ಪಾವತಿಯನ್ನು ಚೆಕ್ಕುಗಳ ಮುಖಾಂತರವೇ ಸಲ್ಲಿಸುವುದು ಮುಂತಾದವುಗಳಿಂದ ಸಿಗುವ ಪ್ರಯೋಜನಗಳು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಅವುಗಳನ್ನು ಇಲ್ಲಿ ವಿಸ್ತರಿಸುವುದಿಲ್ಲ. ಇತರ ಚಿಕ್ಕ ಚಿಕ್ಕ ಸೇವೆಗಳ- ಉದಾ:- ಹಣದ ಸಂರಕ್ಷಣೆಯೋಜನೆ ವಿಮಾಕಂತು. ತೆರಿಗೆ ಮೊದಲಾದವುಗಳನ್ನು ಗಿರಾಕಿಗಳ ಪರವಾಗಿ ಪಾವತಿ ಮಾಡುವುದು.- ಕುರಿತು ಟಿಪ್ಪಣಿಯನ್ನು ಬರೆಯುವ ಅಗತ್ಯವು ಇಲ್ಲ. ಆದರೂ ವರ್ತಕರು ಬ್ಯಾಂಕಿನಿಂದ ಪಡೆಯಬಹುದಾದ ಸಾಲಗಳನ್ನು ಯಾವ ರೀತಿಯಲ್ಲಿ ಹೇಗೆ ಉಪಯೋಗಿಸಬಹುದು ಎಂಬದನ್ನು ಸ್ವಲ್ಪ ವಿಸ್ತಾರವಾಗಿ ಹೇಳಬೇಕಾಗಿದೆ.

ಬ್ಯಾಂಕು ಸಾಲವನ್ನು ಕೊಡಲು ಅಪೇಕ್ಷಿಸುತ್ತದೆ.

ಬ್ಯಾಂಕು ತನ್ನ ಗಿರಾಕಿಗಳಿಟ್ಟ ಠೇವಣಾತಿಗಳ ಮೇಲೆ ಹುಟ್ಟುವ ಬಡ್ಡಿಯನ್ನು ಕೊಡಬೇಕು. ಅಲ್ಲದೆ ಬ್ಯಾಂಕಿನ ಕಾರ್ಯಕ್ರಮಗಳನ್ನು ಸಾಂಗವಾಗಿ ನಡೆಯಿಸಲು ತಗಲುವ ಖರ್ಚನ್ನು ಕಳೆದಮೇಲೆ ಸ್ವಲ್ಪ ಲಾಭಾಂಶವನ್ನು ಉಳಿಸಬೇಕಾಗಿದೆ. ಬ್ಯಾಂಕಿನಿಂದ ಕೊಟ್ಟ ಸಾಲಗಳಲ್ಲಿ ಹುಟ್ಟಿ ಬರುವ ಬಡ್ಡಿಯೇ ಬ್ಯಾಂಕಿನ ಮುನಾಫೆಯ ಅರ್ಧಕ್ಕಿಂತಲೂ ಹೆಚ್ಚಾಗಿರುತ್ತದೆ. ಆದುದರಿಂದ ಬ್ಯಾಂಕು ತನ್ನಲ್ಲಿರುವ ಹಣವನ್ನು ಸಾಲವಾಗಿ ಕೊಡಲು ಅಪೇಕ್ಷಿಸುತ್ತದೆ. ಠೇವಣಾತಿ ಹಣವನ್ನು ಸಾಲವನ್ನಾಗಿ ಕೊಡುವುದರಿಂದ ಅದು ಸುರಕ್ಷಿತವಾಗಿರುವಂತೆಯೂ ಸುಲಭವಾಗಿ ಹಿಂದೆ ಪಡೆಯುವಂತೆಯೂ ಬ್ಯಾಂಕು ಜಾಗ್ರತೆ ವಹಿಸಿಕೊಳ್ಳಬೇಕು. ಕಾರಣ ಠೇವಣಾತಿದಾರರು ತಮ್ಮ ಹಣವನ್ನು ಯಾವ ಸಮಯದಲ್ಲಿ ಆಗಲೀ ಯಾ ನಿಶ್ಚಿತ ಸಮಯದ ಮೇಲಾಗಲೀ ಅಪೇಕ್ಷಿಸಿದಲ್ಲಿ ಅವರ ಹಣವನ್ನು ಮರಳಿ ಕೊಡುವರೆ ತಯಾರಿರಬೇಕು.

ಭದ್ರತೆಯ ಸಾಲಗಳು ಯಾವಾಗಲೂ ಸುರಕ್ಷಿತ ಮತ್ತು ದ್ರವರೂಪವಾಗಿರುತ್ತವೆ.

ಸಾಲವನ್ನು ಕೊಡುವಾಗ ಸಾಲ ಪಡೆಯುವವನಿಂದ ತಕ್ಕಷ್ಟು ಭದ್ರತೆಯನ್ನು ಯೋಗ್ಯ ಜವಾಬ್ದಾರಿಯನ್ನು ಪಡಕೊಂಡರೆ ಅಂತಹ ಸಾಲವು ಯಾವಾಗಲೂ ಸುರಕ್ಷಿತವಾಗಿರುತ್ತದೆ. ಇದರಿಂದ ಕೇವಲ ಬ್ಯಾಂಕಿಗೆ ಮಾತ್ರವಲ್ಲದೆ ಸಾಲಗಾರನಿಗೂ ಬಹಳ ಪ್ರಯೋಜನವಿದೆ. ಕಾರಣ ಇಂಥ ಸಾಲಗಳು ಯಾವಾಗಲೂ ಕಮ್ಮಿ ದರದ ಬಡ್ಡಿಯಲ್ಲಿ ಸಿಗುತ್ತವೆ. ಅಕ್ಕಿ, ಭಂಗಾರ ಮೊದಲಾದುವುಗಳ ಮೇಲೆ ಸಿಕ್ಕುವ ಸಾಲಗಳು ಮೇಲಿನ ತರಗತಿಗೆ ಸೇರುತ್ತವೆ. ಯೋಗ್ಯ ಜವಾಬ್ದಾರಿ ಇಲ್ಲದ ಮತ್ತು ಸ್ವ ಸಾಲಗಳು ಯಾವಾಗಲೂ ಸುರಕ್ಷಿತವಲ್ಲ. ಮಾತ್ರವಲ್ಲದೆ ಅದರ ಬಡ್ಡಿಯ ದರವು ಮೇಲೆ ಹೇಳಿದ ಸಾಲದ ದರಕ್ಕಿಂತ ಎರಡುಪಾಲು ಹೆಚ್ಚಾಗಿರುವುದು. ಹಿಂದೂ ದೇಶದಲ್ಲಿ ಜೀನಸು, ಚಿನ್ನಾಭರಣ, ಧವಸ ಧಾನ್ಯಗಳ ಅಡವಿನಮೇಲೆ ಕೊಡುವ ಸಾಲಗಳು ಸರ್ವ ಸಾಮಾನ್ಯವಾಗಿ ಹೆಚ್ಚಿಗೆ ಬಳಕೆಯಲ್ಲಿರುತ್ತವೆ.

ಭಂಗಾರದ ಅಡವಿನ ಸಾಲ.

ಸರಿಯಾಗಿ ನೋಡುವುದಾದರೆ ಭಂಗಾರದ ಅಡವಿನಮೇಲೆ ಸಾಲ ಕೊಡುವುದರಿಂದ ಬ್ಯಾಂಕಿಗೆ ಅಷ್ಟು ಪ್ರಯೋಜನವಿಲ್ಲ. ಆದರೂ, ಹಿಂದೂ ದೇಶದಲ್ಲಿ ಸರ್ವ ಸಾಧಾರಣವಾಗಿ ಚಿನ್ನವನ್ನೇ ಅಡವಿಟ್ಟು ಸಾಲವನ್ನು ಪಡೆಯುವುದು ರೂಢಿಯಲ್ಲಿರುವುದರಿಂದ ಜನರ ಅನುಕೂಲತೆಯ ಕಡೆಗೆ ತನ್ನ ದೃಷ್ಟಿಯನ್ನಿಡುವುದು ಬ್ಯಾಂಕಿನ ಕರ್ತವ್ಯವಾಗಿದೆ. ವಿಮರ್ಶಿಸಿ ನೋಡುವಲ್ಲಿ ನಮ್ಮಲ್ಲಿ ಕೇವಲ ಕಮ್ಮಿ ಜನರ ಹತ್ತಿರ ಇತರ ಸಂಸ್ಥೆಗಳ ಪಾಲು ಪತ್ರಿಕೆಗಳು ಇರುವುದರಿಂದ ಅವುಗಳ ಆಧಾರದ ಮೇಲೆ ಸಾಲಗಳನ್ನು ಪಡೆಯುವುದು ಕಮ್ಮಿ. ಹೀಗಾಗಿ ಭಂಗಾರದ ಅಡವಿನಮೇಲೆ ಸಾಲ ಕೊಡುವುದು ನಮ್ಮ ದೇಶದಲ್ಲಿ, ಬ್ಯಾಂಕಿನ ಪ್ರಧಾನ ಕಾರ್ಯಕಲಾಪವಾಗಿದೆ. ಅಂತರಾಷ್ಟ್ರೀಯ ಪರಿಸ್ಥಿತಿಯ ದೆಸೆಯಿಂದಾಗಿ ಪ್ರತಿಯೊಂದು ಸಾಮಾನು ವಸ್ತು ಪತ್ರಿಕೆಗಳ ಬೆಲೆಗಳು ಹೆಚ್ಚುಕಡಿಮೆಯಾಗುತ್ತಾ ಹೋಗುವ ಈ ಸಮಯದಲ್ಲಿ ಭಂಗಾರದ ಧಾರಣೆ ಮಾತ್ರ ದಿನೇ ದಿನೇ ಹೆಚ್ಚಾಗಿ ಹೋಗುವುದರಿಂದ ಬಂಗಾರದ ಅಡವಿನ ಮೇಲೆ ಕೊಡುವ ಸಾಲಗಳಿಂದ ಬ್ಯಾಂಕಿಗೆ ಭದ್ರತೆಯು ಇನ್ನಷ್ಟು ಹೆಚ್ಚುವುದು.

ಧವಸಧಾನ್ಯಗಳ ಅಡವಿನ ಸಾಲಗಳು.

ವರ್ತಕ ವರ್ಗಕ್ಕೆ ಧವಸಧಾನ್ಯ, ಜೀನಸು ಮೊದಲಾದವುಗಳ ಅಡಿನ ಮೇಲೆ ಕೊಡುವ ಸಾಲವು ಬಹಳ ಪ್ರಾಮುಖ್ಯವಾದುದು. ಈ ತರದ ಸಾಲವು ಈಗ ಇಡೀ ಜಗತ್ತಿನಲ್ಲಿ ಪ್ರಸಿದ್ಧವಾಗಿರುತ್ತದೆ. ಒಂದು ಸಮಯದಲ್ಲಿ ದಕ್ಷಿಣ ಹಿಂದೂ ದೇಶದ ವರ್ತಕರು ತಮ್ಮದೇ ಆಗಿರುವ ಭಂಡವಾಳದಿಂದ ವಹಿವಾಟು ನಡೆಸಬೇಕೆಂಬ ಭಾವನೆಯಿದ್ದುದರಿಂದ ಈ ಸಾಲಗಳು ಅಷ್ಟು ಬಳಕೆಯಲ್ಲಿರಲಿಲ್ಲ. ಒಂದು ಯೋಗ್ಯ ಬ್ಯಾಂಕಿನ ಸಲಹೆಗಳ ಮೇರೆಗೆ ಕ್ರಮವಾದ ಮಿತಿಯಿಂದ ವ್ಯವಹಾರಕ್ಕೆ ಬೇಕಾದ ಭಂಡವಾಳವನ್ನು ಹೆಚ್ಚಿಸುವುದರಲ್ಲಿ ವ್ಯಾಪಾರದ ರಹಸ್ಯವು ಅಡಗಿರುತ್ತದೆ. ಇಂತಹ ಭಯಂಕರ ಮುಗ್ಗಟ್ಟಿನ ದಿನಗಳಲ್ಲಿ ವ್ಯಾಪಾರದಲ್ಲಿ ಸಿಕ್ಕುವ ಲಾಭವು ಬಹಳ ಕಡಿಮೆಯಾಗಿರುವುದರಿಂದ ವ್ಯಾಪಾರದ ಮುಗಟಾಟವನ್ನು ಹೆಚ್ಚು ಹೆಚ್ಚು ಮಾಡಿದ ಹಾಗೆ ಲಾಭಾಂಶವು ಹೆಚ್ಚುವುದು. ಸಾಮಾನು ಪತ್ರಿಕೆಗಳನ್ನು ಪದೆದು ಬ್ಯಾಂಕಿನಲ್ಲಿ ಅಡವಿಟ್ಟು ಪಡೆದುಕೊಳ್ಳುವ ಸಾಲವು ನಮ್ಮ ಒಂದು ಭಂಡವಾಳದ ಹಾಗೆ ಆಗುತ್ತದೆ. ಇದರಿಂದ ಅಗ್ಗ ದರದಲ್ಲಿ ಸಾಮಾನನ್ನು ಪಡಕೊಂಡು ಸಾವಕಾಶದಿಂದ ಬೆಲೆ ಏರುವ ಸಮಯದಲ್ಲಿ ಮಾರಲು ಬಹಳ ಅನುಕೂಲವಾಗುತ್ತದೆ.

In the Garden of South India

— ದಕ್ಷಿಣ ಭಾರತೋದ್ಯಾನದಲ್ಲಿ —

ಕೆನರಾ ಬ್ಯಾಂಕಿಗಿರುವ 37 ಶಾಖೆಗಳಲ್ಲಿ ಒಂದು ಆಲ್ಲೆಪ್ಪಿ ಎಂಬಲ್ಲಿ ಇರುವುದು. ಅನೇಕ ವರುಷಗಳಿಂದ ಇಲ್ಲಿಯ ವ್ಯಾಪಾರಿ ವ ಇತರ ವರ್ಗದವರು ಈ ಬ್ಯಾಂಕಿನಿಂದ ಪ್ರಯೋಜನ ಪಡೆಯುತ್ತಾ ಬಂದಿರುವರು. ಹೀಗೆ ಪ್ರತ್ಯಕ್ಷ ಸಹಾಯದಿಂದ ಉತ್ತೇಜನವನ್ನು ಹೊಂದುವ ವ್ಯಾಪಾರವಾವುದು.

ಎಲ್ಲೆಪ್ಪಿ ಎಂಬುದು ತಿರುವಾಂಕೂರು ರಾಜ್ಯದಲ್ಲಿರುವ ಒಂದು ಮುಖ್ಯ ಬಂದರು. ಈ ಬಂದರಿನಿಂದ ವರ್ಷಂಪ್ರತಿ ಸರಾಸರಿ ಸುಮಾರು 10 ಲಕ್ಷ ಟನ್ನಿನ ಸರಕು ರಫ್ತಾಗಲ್ಪಡುವದು. ಅಂದರೆ ಇಡೀ ತಿರುವಾಂಕೂರು ರಾಜ್ಯದಿಂದ ರಫ್ತಾಗುವ ಸರಕಿನ ಅರ್ಧಾಂಶಕ್ಕೂ ಮೇಲೆನ್ನಬಹುದು.

ತೆಂಗಿನಕಾಯಿ, ಕೊಬರಿ, ತೆಂಗಿನ ನಾರು, ಹುರಿಹಗ್ಗ, ನಾರಿನಿಂದ ಹೊಸೆದ ಚಾಪೆಗಳು, ಜಮಖಾನೆಗಳು- ಇವೇ ಇಲ್ಲಿಯ ಮುಖ್ಯವಾದ ವ್ಯಾಪಾರ ಸರಕುಗಳು.

ಹುಂಡಿಗಳು.

ವ್ಯಾಪಾರಿಗಳು ತಮ್ಮ ಸಾಮಾನನ್ನು ಒಬ್ಬರಿಗೊಬ್ಬರು ಮಾರಿ, ಪರಸ್ಪರ ಹುಂಡಿಗಳನ್ನು ಬ್ಯಾಂಕಿನಲ್ಲಿ ವಟ್ಟಾಯಿಸಿ ಹಣ ಪಡೆಯುತ್ತಾರೆ. ಇದೊಂದು ತರದ ಬ್ಯಾಂಕಿನಿಂದ ಕೊಡುವ ಸಾಲವು. ಅಷ್ಟೊಂದು ಭದ್ರತೆಯುಳ್ಳ- ಅದರೆ ವ್ಯಾಪಾರಿಗಳಿಗೆ ಬಹಳ ಅನುಕೂಲ ಮತ್ತು ಅತೀ ಅಗತ್ಯ. ಹುಂಡಿಯ ಅವಧಿಯು ಮುಗಿಯುವುದರೊಳಗೆ, ವ್ಯಾಪಾರಿಗಳು ತಮ್ಮಲ್ಲಿರುವ ಮಾಲನ್ನು ಸಾವಕಾಶದಿಂದ ಮಾರಿ ಹಣವನ್ನು ಜಮಾಯಿಸಿ ಹುಂಡಿಯ ಹಣವನ್ನು ಮರಳಿ ಬ್ಯಾಂಕಿಗೆ ಪಾವತಿ ಮಾಡಲು ಇದರಿಂದ ಬಹಳ ಅನುಕೂಲ. ಅಲ್ಲದೆ ವ್ಯಾಪಾರಸ್ಥರ ಹಿತ ದೃಷ್ಟಿಯಿಂದ ಈ ಹುಂಡಿಗಳ ಉಪಯೋಗವು ಅಗತ್ಯವಾಗಿದೆ. ಉದಾಹರಣೆಗಾಗಿ ಒಬ್ಬ ರಖಂ ವ್ಯಾಪಾರಿಯು ಇನ್ನೊಬ್ಬ ಚಿಲ್ಲರೆ ವ್ಯಾಪಾರಿಗೆ ತನ್ನಲ್ಲಿರುವ ಸಾಮಾನನ್ನು ಮಾರಿ, ಅದರ ಬೆಲೆಯನ್ನು ಲೆಕ್ಕದ ಪುಸ್ತಕದಲ್ಲಿ ಖರ್ಚು ಬರೆದಿಟ್ಟರೆ, ಚಿಲ್ಲರೆ ವ್ಯಾಪಾರಿ [illegible] ಅನುಕೂಲತೆಯ ಮೇರೆಗೆ ಹಣಪಾವತಿ ಮಾಡುವ ವರೆಗೆ ಕಾಯಬೇಕಾಗುತ್ತದೆ. ಅಂತಹ ಪಾವತಿಗೆ ದೀರ್ಘ ಸಮಯ ಹೋಗಬಹುದು. ಇದರಿಂದ ರಖಂ ವ್ಯಾಪಾರಿಗೆ ಹಣದ ಅಡಚಣೆಯು ಹೆಚ್ಚುವುದು. ಬದಲಾಗಿ ರಖಂ ವ್ಯಾಪಾರಿಯು ಒಂದು ಹುಂಡಿಯನ್ನು ಚಿಲ್ಲರೆ ವ್ಯಾಪಾರಿಯ ಒಪ್ಪಿಗೆಯಿಂದ ನಿಶ್ಚಿತ ಸಮಯದ ಮೇಲೆ ಇಂತಿಷ್ಟು ಹಣವನ್ನು ಕೊಡುತ್ತೇನೆಂಬ ಶರ್ತಗಳಿಂದ ಬರಾಯಿಸಿದರೆ ತನಗೆ ಅಗತ್ಯವಿದ್ದಾಗ ಆ ರಖಂ ವ್ಯಾಪಾರಿಯು ಸದ್ರಿ ಹುಂಡಿಯನ್ನು ಬ್ಯಾಂಕಿನಲ್ಲಿ ವಟ್ಟಾಯಿಸಿ ಹಣವನ್ನು ಪಡೆಯಬಹುದು. ಇಂಥ ಹುಂಡಿ ವಹಿವಾಟುಗಳು ಅಮೇರಿಕಾ, ಇಂಗ್ಲಾಂಡು ದೇಶಗಳಲ್ಲಿ ಬಹಳವಾಗಿ ಪ್ರಸಿದ್ಧವಾಗಿರುವುದಲ್ಲದೆ, ಬ್ಯಾಂಕಿನ ಮುಖ್ಯ ಕಾರ್ಯಕಲಾಪವು ಆಗಿರುತ್ತದೆ.

ಕೆನರಾ ಬ್ಯಾಂಕು ಬಡ್ಡಿಯ ದರಗಳನ್ನು ವಿಶೇಷವಾಗಿ ತಗ್ಗಿಸಿ ಹುಂಡಿ ವಹಿವಾಟು ಧವಸಧಾನ್ಯಗಳ ಅಡವಿನ ಸಾಲಗಳ ಉಪಯೋಗವು ಎಲ್ಲರಿಗೂ ದೊರಕಬೇಕೆಂದು ಸದಾ ಪ್ರಯತ್ನಿಸುತ್ತದೆ.

ತೆಂಗಿನ ಕಾಯಿಯು ಇಲ್ಲಿಂದ ಹೆಚ್ಚಾಗಿ ಬೊಂಬಾಯಿ, ಕರಾಚಿ ಮುಂತಾದ ದೇಶೀಯ ಬಂದರುಗಳಿಗೆ ರವಾನಿಯಾಗುತ್ತದೆ. 1938–39ರಲ್ಲಿ ರವಾನಿಯಾದ ತೆಂಗಿನಕಾಯಿ ಸಾಧಾರಣ 15 ಲಕ್ಷಕ್ಕೆ ಮಿಕ್ಕಿರಬಹುದೆಂದೂ, 1939–40ರಲ್ಲಿ 8 ಲಕ್ಷ ಆಗಿರಬಹುದೆಂದೂ ಅಂಕೆ ವಿಜ್ಞಾನಸ್ಥರು ಹೇಳುತ್ತಾರೆ. ಅದರೆ ಹೀಗೆ ರವಾನಿಯಾಗುವ ತೆಂಗಿನ ಕಾಯಿಯ ಮೇಲೆ ಸರಕಾರದವರು ರಫ್ತು ಸುಂಕವನ್ನು ಹೊರಿಸುವ ಕಾರಣ ಈ ಸಂಖ್ಯೆಯು ಇಷ್ಟರಲ್ಲೇ ನಿಂತಿರುವುದು. ಇದರಿಂದ ತಿರುವಾಂಕೂರು ದೇಶದ ಎಣ್ಣೆ ಕೈಗಾರಿಕೆಗಂತೂ ಬಹಳ ಪ್ರಯೋಜನ ಉಂಟಾಗಿದೆ. ಯಾಕೆಂದರೆ ಸುಂಕವಿಲ್ಲದೆ ಹೋಗಿದ್ದರೆ ಸ್ಥಳೀಯ ಮಿಲ್ಲುಗಳಿಗೆ ಅಲ್ಲಿಯ ಕೊಬರಿಯೇ ಸಿಕ್ಕುವ ಹಾಗಿದ್ದಿಲ್ಲ. ನಾಜೂಕಾದ ಬಿಳಿ ಕೊಬರಿಯು ಬೊಂಬಾಯಿ, ಕರಾಚಿ ಮುಂತಾದ ಬಂದರುಗಳಿಗೆ ಸಂಪೂರ್ಣವಾಗಿ ರವಾನಿಯಾಗುತ್ತದೆ. ಸ್ಥಳೀಯ ಮಿಲ್ಲುಗಳಲ್ಲಿ ತಯಾರಾಗುವ ಎಣ್ಣೆಯು ಆ ವ್ಯಾಪಾರದಲ್ಲಿ ಸುಪ್ರಸಿದ್ಧವೆನಿಸಿ ಕೊಚ್ಚಿ ಬಂದರಕ್ಕೆ ರಫ್ತು ಮಾಡಲ್ಪಡುತ್ತದೆ. ಕೆಂಚಿತ್ತಾಗಿ ನೆರೆಹೊರೆಯ ತಮಿಳು ಪ್ರಾಂತ್ಯಗಳಿಗೂ ಹೋಗುತ್ತದೆ.

ಎಲ್ಲೆಪ್ಪಿಯಲ್ಲಿ ನಾರಿನ ಕೈಗಾರಿಕೆಯೇ ಹೆಚ್ಚು. ಸುತ್ತಮುತ್ತಲಿರುವ ಹಳ್ಳಿಗಳಲ್ಲಿಯೂ ಇದೇ ಮುಖ್ಯವಾದ ವ್ಯಾಪ್ತಿ. ಎಷ್ಟೋ ಜನರಿಗೆ ಇದೇ ಜೀವನೋಪಾಯವಾಗಿರುವುದು. ಅಂಕೆ ಸಂಖ್ಯೆಯ ಟಿಪ್ಪಣಿಯಿಂದ ಕಂಡುಬರುವದೇನೆಂದರೆ ಈ ಬಂದರಿನಿಂದ ರಫ್ತು ಮಾಡಲ್ಪಟ್ಟ ನಾನಾ ವಿಧದ ನಾರಿನ ಪದಾರ್ಥಗಳ ಮೊಬಲಗು 1938-39ರಲ್ಲಿ ರೂ. 85ಲಕ್ಷ 1939-40ರಲ್ಲಿ ರೂ. 75ಲಕ್ಷ. ಈಗಿನ ಯುದ್ಧವು ಪ್ರಾರಂಭವಾದಂದಿನಿಂದ ನಾರಿನ ಸರಕುಗಳ ರಫ್ತು ತುಸು ಮಾತ್ರ ಕಮ್ಮಿಯಾಗಿದೆ. ಅಂತೂ ಸೈನಿಕ ಇಲಾಖೆಯವರು ಇವನ್ನು ವಿಶೇಷ ಖರೀದಿ ಮಾಡಲು ಉದ್ಯಮಿಸಿದುದರಿಂದ ಈ ಕೈಗಾರಿಕೆಗೆ ಒಂದು ಉತ್ತೇಜನ ಸಿಕ್ಕಿದಂತಾಗಿದೆ.

ಇಲ್ಲಿಂದ ರಫ್ತಾಗುವ ಇನ್ನೂ ಕೆಲವು ಸಾಮಾಗ್ರಿಗಳಿವೆ. ಕಾಳು ಮೆಣಸು, ಶುಂಠಿ ಅರಸಿನ ಇವು ಹೆಚ್ಚಾಗಿ ದೇಶೀಯ ಬಂದರುಗಳಿಗೆ ಹೋಗುವವು. ರಬ್ಬರು ಇಲ್ಲಿ ಧಾರಾಳ. ಇಲ್ಲಿ ತಯಾರಾದ ರಬ್ಬರು ಕೊಲೊಂಬೊ ಮಾರ್ಕೆಟಿನ ಮುಖಾಂತರ ಇಡೀ ಜಗತ್ತಿಗೆಲ್ಲಾ ರವಾನಿಯಾಗುವುದು. ಆದರೂ ಇತ್ತೀಚೆಗೆ ರಬ್ಬರ್ ಕೈಗಾರಿಕೆಗಳು ನಮ್ಮ ದೇಶದಲ್ಲೂ ಪ್ರಗತಿ ಹೊಂದಿರುವ ಕಾರಣ ಅಲ್ಪಸ್ವಲ್ಪ ರಬ್ಬರು ಇಲ್ಲಿಯೇ ಖರ್ಚಾಗುತ್ತದೆ.

ಮೇಲೆ ಹೇಳಿದ ವ್ಯಾಪಾರವಲ್ಲದೆ ಎಲ್ಲೆಪ್ಪಿಯಲ್ಲಿ ಇನ್ನು ಬೇರೆ ತರದ ವ್ಯಾಪಾರ ಚಲನೆಯಿದೆ. ಬಾರಿಯಲ್ಲಿ ಸಂಚರಿಸುವ ದೋಣಿ ಹಡಗುಗಳ ಮೂಲಕ ಕೊಚ್ಚಿಗೂ ಎಲ್ಲೆಪ್ಪಿಗೂ ಬಹಳವಾದ ವ್ಯಾಪಾರ ಬದಲಾವಣೆಗಳು ನಡೆಯುತ್ತವೆ. ಇತರ ಕೆಲವು ದೊಡ್ಡ ಪಟ್ಟಣಗಳೊಡನೆ ದೋಣಿ ಬಂಡಿಗಳಲ್ಲಿ ನಡೆಯುವದೂ ಉಂಟು.

(4ನೇ ಪುಟ ನೋಡಿ.)

ನಾಗಪ್ಪಯ್ಯನವರ ಬ್ಯಾಂಕಿಂಗ್ ಅನುಭವ

ಬ್ಯಾಂಕಿನಲ್ಲಿ ಹಣ ಇಟ್ಟರೆ ಬಡ್ಡಿ ಸಿಕ್ಕುತ್ತದೆ; ಬ್ಯಾಂಕಿನಿಂದ ಹಣಪಡೆಕೊಂಡರೆ ಬಡ್ಡಿ ಕೊಡಬೇಕಾಗುತ್ತದೆ— ಇದಕ್ಕಿಂತ ಹೆಚ್ಚಿಗೆ ಬ್ಯಾಂಕಿಂಗ್ ನಮ್ಮ ಊರಿನಲ್ಲಿ ಯಾರಿಗೂ ಗೊತ್ತಿರಲಿಲ್ಲ. ಯಾರಿಗೂ ಗೊತ್ತಿರಲಿಲ್ಲವೆಂದರೆ ನಮ್ಮ ನಾಗಪ್ಪಯ್ಯನವರಿಗೂ ಗೊತ್ತಿರಲಿಲ್ಲವೆಂದಲ್ಲ. ಅವರು ತಮ್ಮ ಅಡಿಕೆ ಮಾರಟಕ್ಕೆಂದು ವರುಷಕ್ಕೆರಡೋ, ಮೂರೋ ಬಾರಿ ಮಂಗಳೂರಿಗೆ ಹೋದಾಗ ಅಲ್ಲಿ ಬಂದರಿನ ವ್ಯಾಪಾರಿಗಳಿಗೆ ಅಡಿಕೆಮಾರಿ ಅವರಿಂದ ಚೆಕ್ಕನ್ನು ಪಡೆಕೊಂಡು ಬ್ಯಾಂಕಿಗೆ ಹೋಗಿ ಅದನ್ನು ನಗದಾಯಿಸಿದ್ದರಿಂದ ಅವರಿಗೆ ಬ್ಯಾಂಕುಗಳ ವಿಷಯ ಹೆಚ್ಚಿನ ಮಾಹಿತಿ ಇದೆಯೆಂದು ನಮ್ಮೂರಲ್ಲಿ ಎಲ್ಲರಿಗೂ ಗೊತ್ತಿತ್ತು.

ಎಲ್ಲಿಯಾದರೂ ನಾಲ್ಕು ಜನರು ಸೇರಿದ್ದಲ್ಲಿ ನಾಗಪ್ಪಯ್ಯನವರಿಂದ ಅವರ ಬ್ಯಾಂಕಿಂಗ್ ಅನುಭವವನ್ನು ಕೇಳಿಕೊಳ್ಳುವುದೆಂದರೆ ನಮಗೆಲ್ಲರಿಗೂ ಆತುರ. ಮಂಗಳೂರಿನ ದೊಡ್ಡ ದೊಡ್ಡ ವ್ಯಾಪಾರಿಗಳಂತೆ ಸಾವಿರಾರು ರೂಪಾಯಿಗಳ ವ್ಯಾಪಾರ ಪ್ರತಿದಿನ ಅವರಿಗಿದೆಯಂತೆ. ಆದರೆ ಅವರ ಅಂಗಡಿಗೆ ಕಳ್ಳರು ಕನ್ನಹಾಕಿದರೆ ಹತ್ತಿಪ್ಪತ್ತು ರೂಪಾಯಿಗಳು ಕೂಡಾ ದೊರಕವಂತೆ! ಅಷ್ಟೆ ಮಾತ್ರವಲ್ಲ, ವ್ಯಾಪಾರಕ್ಕೆಂದು ಹಳ್ಳಿಯವರು ಹೋದರೆ ಅವರಿಗೆ ನಗದುಕೊಡಲು ಅವರ ಅಂಗಡಿಯಲ್ಲಿ ಹಣವಿರುವುದಿಲ್ಲವಂತೆ! ಅದರೂ ದಿನಕ್ಕೆ ಸಾವಿರಗಟ್ಟಲೆ ರೂಪಾಯಿ ಬೆಲೆಯುಳ್ಳ ಮಾಲನ್ನು ಅವರು ಪಡಕೊಳ್ಳುತ್ತಾರಂತೆ! ಅವರು ರೂಪಾಯಿ ಬದಲು ಚೆಕ್ ಕೊಡುತ್ತಾರಂತೆ. ಚೆಕ್ಕಿನ ಮೇಲೆ ಎಷ್ಟು ಬೇಕೋ ಅಷ್ಟು ರೂಪಾಯಿಗಳನ್ನು ಬರೆದು ಅದಕ್ಕೆ ಸಹಿ ಹಾಕಿದರೆ ಸಾಕಂತೆ. ಅದನ್ನು ಬ್ಯಾಂಕಿಗೆ ಹೋಗಿ ತೋರಿಸಿದರೆ ಹಣ ಸಿಕ್ಕುತ್ತದಂತೆ. ಇದನ್ನೆಲ್ಲಾ ಕೇಳುವಾಗ ನಮ್ಮಲ್ಲಿ ಯಾರಾದರೊಬ್ಬರು "ಏನು ನಾಗಪ್ಪಯ್ಯನವರೇ! ಚೆಕ್ ಎಂದರೆ ರೂಪಾಯಿ ನೋಟುಗಳ ಹಾಗೇನು?' ಎಂದು ಕೇಳಿದರೆ "ಏನು ಮಂಕುಗಳಪ್ಪಾ ನೀವು. ಅಲ್ಲಾ, ಕಮಲಪುರ ವ್ಯಾಪಾರಿಗಳೆಂದರೆ ಸರಕಾರವೋ— ನೋಟು ಹೊರಡಿಸಲಿಕ್ಕೆ— ನೋಟುಗಳ ಹಿಂದೆ ಯಾರಾದರೂ ಸಹಿ ಮಾಡಬೇಕೇ ರೂಪಾಯಿ ಸಿಕ್ಕಬೇಕಾದರೆ"

ಎಂದು ಆಕ್ಷಣವೇ ಅನ್ನುತಿದ್ದರು. ಆಗ ಇನ್ನೊಬ್ಬನು "ಹಾಗಾದರೆ ಚೆಕ್ಕಿನ ಮೇಲೆ ಸಹಿ ಹಾಕಬೇಕೆ? ಆದೇನು ಪ್ರೋನೋಟೋ?" ಅದಕ್ಕೆ ಉತ್ತರವಾಗಿ, "ಛೆ, ಛೆ. ಏನು ಹೇಳುತ್ತೀರಪ್ಪಾ ನೀವು? ನನಗೆ ಬರತಕ್ಕ ಹಣಕ್ಕೆ ನಾನು ಪರನೋಸರಿ ನೋಟು ಕೊಡುವುದುಂಟೆ? ನಿಮಗೆಲ್ಲಾ ಏನುಗೊತ್ತಿದೆ? ಏನಾದರೂ ಅನುಭವಸಿಕ್ಕ ಬೇಕಾದರೆ ನಾಲ್ಕು ಊರುತಿರುಗಬೇಕು. ಊರು ಬಿಟ್ಟು ಗೊತ್ತಿಲ್ಲದ ನಿಮಗೆ ಇದೆಲ್ಲಾ ಹೇಗೆ ಗೊತ್ತಾಗ ಬೇಕು!" ಎನ್ನುವುದು ನಾಗಪ್ಪಯ್ಯನವರ ವಾಡಿಕೆಯಾಗಿತ್ತು. ನಾಗಪ್ಪಯ್ಯನವರಿಂದ ಅವರ ಬ್ಯಾಂಕಿಂಗ್ ಅನುಭವವನ್ನು ಕೇಳುವುದೆಂದರೆ ನಮಗೆಲ್ಲರಿಗೂ ಒಂದು ತಮಾಷೆಯಾಗಿತ್ತು.

ಆದರೆ, ಇವೆಲ್ಲಾ ಮೂರು ವರುಷಗಳ ಹಿಂದಿನ ಮಾತು. ಇತ್ತೀಚೆಗೆ ಅವರೊಡನೆ ಈ ಮಾತನ್ನೆತ್ತುವುದೆಂದರೆ ಮೃತ್ಯುವನ್ನು ಮರಿಸಿದ ಹಾಗೆ. ಈಗ ಆ ವಿಚಾರವನ್ನೆತ್ತಿದ ಕೂಡಲೆ ಕಣ್ಣು ಕೆಂಪೇರಿಸಿ "ನಾಕಯ್ಯ ನಿಮ್ಮ ತಮಾಷೆ" ಎನ್ನುತ್ತಾರೆ. ಇದರ ಕಾರಣವಿಷ್ಟೆ: ಅರ್ಬಟ್ನೋಟು ಬ್ಯಾಂಕಿನಲ್ಲಿ ಅವರ ಸಾವಿರ ರೂಪಾಯಿ ಇತ್ತು.

ಮೂರು ವರ್ಷಗಳ ಹಿಂದೆ ಕೋರ್ಟು ಖಚೇರಿಗಳಿಗೆ ರಜೆಸಿಕ್ಕುವ ಮೊದಲನೆ ವಾರದಲ್ಲಿ ನಮ್ಮ ನಾಗಪ್ಪಯ್ಯನವರಿಗೆ ನೆರೆಯೂರಿನ ರಾಮಪ್ಪನ ಮೇಲೆ ನಡೆಸಿದ ವ್ಯಾಜ್ಯ ಡಿಕ್ರಿಯಾಗಿ ಸುಮಾರು ಸಾವಿರ ರೂಪಾಯಿ ಸಿಕ್ಕಿತ್ತು. ವಕೀಲರಿಂದ ಸಿಕ್ಕಿದ ಚೆಕ್ಕನ್ನು ವಿಲಾಯತಿಯ ದೊಡ್ಡ ಬ್ಯಾಂಕಿನಲ್ಲಿ ವಟಾಯಿಸಲು ಹೋಗಿ, 2 ತಾಸು ಅಲ್ಲಿ ಕಳೆದು ಹಣವನ್ನು ಪಡಕೊಂಡು ಹೊರ ಬರುತ್ತಲೇ ನಾಗಣ್ಣಶೆಟ್ರ ಭಂಡಸಾಲೆಯ ಸ್ಟೋರು ರಾಮುಭಾಗರ ದರ್ಶನವಾಯಿತು ನಮ್ಮ ನಾಗಪ್ಪಯ್ಯನವರಿಗೆ. ಕ್ಷೇಮ ಸಮಾಚಾರಗಳನ್ನು ಕೇಳಿ, ಬಂದ ವಿಷಯವೇನೆಂದು ಶೆಣಾಯಿಗಳು ಕೇಳಲು, ನಾಗಪ್ಪಯ್ಯನವರು ತಮಗೆ ಸಿಕ್ಕಿದ ಹಣದ ವಿಷಯವನ್ನು ಹೇಳಿ ಅದನ್ನು ಬ್ಯಾಂಕಿನಲ್ಲಿ ಠೇವಣಾತಿಯಾಗಿ ಇಡಬೇಕೆಂದಿದ್ದೇನೆಂದು ಹೇಳಿದರು. ಆಗ ಶೆಣಾಯಿಯವರು "ಬ್ಯಾಂಕಿನಲ್ಲಿಡುವುದಾದರೆ ಸ್ವಾಮಿಾ! ಇದೇ ಬ್ಯಾಂಕಿನಲ್ಲಿಡಿರಿ. ಆರ್ಬಟ್ ನೋಟ್ ಬ್ಯಾಂಕೆಂದರೆ ಇದುವೇ. ನಮ್ಮೂರ ಬ್ಯಾಂಕುಗಳೆಂದು ನಾವು ಸುಮ್ಮನೆ ಹೇಳುವುದು. ನಮ್ಮವರ ಆಲೋಚನೆ ಎಂದರೆ ಸಿಕ್ಕಿದವರನ್ನು ಹಿಡಿದು ತಿನ್ನುವುದು. ನೋಡಿ, ನಮ್ಮ ಬೇಂಕುಗಳ ಸೇಕಡಾ ನಾಲ್ಕಕ್ಕಿಂತ ಹೆಚ್ಚಿನ ಬಡ್ಡಿ, ಕೊಡುವುದಿಲ್ಲಾ— ಅವರಿಗೆ ಪೂರೈಸುವುದಿಲ್ಲವಂತೆ! ಈ ಬ್ಯಾಂಕು ಶೇಕಡಾ ಆರನ್ನು ಕೊಡುತ್ತದೆ. ಇವರಿಗೆ ಹೇಗೆ ಸಾಧ್ಯವಾಗುತ್ತದೆ? ಇದೇನು ಸಣ್ಣ ಬ್ಯಾಂಕೆಂದು ತಿಳಕೊಳ್ಳಬೇಡಿ. ಇದಕ್ಕೆ 80ಕ್ಕಿಂತ್ಲ ಹೆಚ್ಚಿನ ಶಾಖೆಗಳಿವೆ. ಡಿಲ್ಲಿ, ಕಲ್ಕತ್ತಾ, ಬೊಂಬಾಯಿ, ಕೊಲಂಬೊ ಮತ್ತು ಲಂಡನ್ನಿನಲ್ಲಿ ಸಹಾ ಎಲ್ಲಾ ಕಡೆಯಲ್ಲಿಯೂ ಇವೆ. ನಮ್ಮ ಜಿಲ್ಲೆಯ ಎಲ್ಲಾ ಬ್ಯಾಂಕುಗಳು ಒಟ್ಟುಕೂಡಿದರೂ ಇದರಷ್ಟು ಆಗಲಾರದು." ಇವೆಲ್ಲಾ ಕೇಳಿ ನಮ್ಮ ನಾಗಪ್ಪಯ್ಯನವರೆಂದರು. "ಇಡುವುದಾದರೆ ಇಲ್ಲೇ ಇಡುತ್ತೇನೆ ಶೆಣಾಯಿಯವರೇ' ಎನ್ನುತ್ತಾ ಬ್ಯಾಂಕಿಗೆ ಹೋಗಿ ಠೇವಣಾತಿ ಇಟ್ಟು ಊರಿಗೆ ಬಂದರು.

ಬಂದವರೇ ಆರ್ಬಟ್ ನೋಟ್ ಬ್ಯಾಂಕಿನ ವಿಷಯ ನಮಗೆಲ್ಲಾ ಹೇಳಿದರು ಅಂದಿನಿಂದ 2 ತಿಂಗಳು ಅವರ ಹಣದ ಬಡ್ಡಿಯು ಮನಿಯಾರ್ಡರ್ ಮೂಲಕ ಬಂದ ದಿನ ನಮಗೆ ಬ್ಯಾಂಕಿನ ವಿಷಯ ಕೇಳುವ ಸಂದರ್ಭ ಸಿಕ್ಕುತ್ತಿತ್ತು. "ನಾವು ಕೂತಲ್ಲಿಯೇ ನಮಗೆ ಬಡ್ಡಿ ಕಳುಹಿಸಿ ಕೊಡುತ್ತಾನೆ. ಎಷ್ಟು ಒಳ್ಳೆಯ ಜನರಪ್ಪಾ ಇವರು" ಎನ್ನುತ್ತಿದ್ದರು ನಾಗಪ್ಪನವರು. ಮೂರನೇ ತಿಂಗಳಲ್ಲಿ ಯಾರೋ ನಮ್ಮ ಊರಿಗೆ ವರ್ತಮಾನ ತಂದರೇನೆಂದರೆ ಆರ್ಬಟ್ ನೋಟ್ ಬ್ಯಾಂಕು ದಿವಾಳಿಯಾಯಿತೆಂದು. ಅದನ್ನು ಕೇಳಿ ನಾಗಪ್ಪಯ್ಯನವರು "ಅಬದ್ಧ ಮಾತಾಡುತ್ತೀರಯ್ಯ, ಸುಮ್ಮನೆ ಹೆದರಿ ಹೇಳಿದರೆ ನಾನು ನಂಬುತ್ತೇನೆಯೇ? ಅದೇನು ಸಿಕ್ಕಿದವರ ಹಣ ತಿಂದು ಬಿಡುವ ಬ್ಯಾಂಕೆಂದು ತಿಳಿದುಕೊಂಡಿದ್ದಿರೋ ನೀವು? ಇಷ್ಟು ದೊಡ್ಡ ಬ್ಯಾಂಕು! ವಿಲಾಯತಿ ಬ್ಯಾಂಕುಗಳನ್ನು ಬಿಟ್ಟರೆ ಇದಲ್ಲವೇ ಶ್ರೇಷ್ಠ ಬ್ಯಾಂಕು!" ಎಂದರು. ಮರುದಿನ ಈ ವಿಷಯ ಪತ್ರಿಕೆಗಳಲ್ಲಿ ಕೂಡಾ ಬಂತು. ಇದನ್ನು ಓದಿ ನಾಗಪ್ಪಯ್ಯನವರು ಆ ಕ್ಷಣವೇ ಮಂಗಳೂರಿಗೆ ಹೊರಟುಬಂದರು ಮರುದಿನವೇ ಅವರು ಊರಿಗೆ ಬಂದಿದ್ದರಂತೆ. ಅವರು ಯಾವಾಗ ಬಂದರು ಹೇಗೆ ಬಂದರು ಎಂದು ಈಗಲೂ ಕೂಡಾ ಯಾರಿಗೂ ಗೊತ್ತಿಲ್ಲ ಕೆಲವು ದಿನಗಳ ವರೆಗೆ ಅವರು ನೋಡಲು ಸಿಕ್ಕುವುದು ಕಷ್ಟವಾಗಿತ್ತು. ಈಗ ಅವರನ್ನು ಕಾಣಬರುವದಾದರೂ ಬ್ಯಾಂಕಿನ ವಿಷಯ ಮಾತನಾಡಲು ಸಿಕ್ಕಲಾರರು

ನಾಗಪ್ಪಯ್ಯನವರ ಹಾಗೆ ಬ್ಯಾಂಕಿಂಗ್ ಅನುಭವ ಪಡಕೊಂಡವರು ನಮ್ಮ ದೇಶದಲ್ಲಿ ಅನೇಕರಿರಬಹುದು. ಜಾಹೀರಾತುಗಳಿಗೆ ಬೆರಗಾಗಿ ಬಡ್ಡಿಯ ಆಶೆಗಾಗಿ ತಮ್ಮ ಹಣದ ಭದ್ರತೆಯನ್ನು ನೋಡದೆ ತಮ್ಮಲ್ಲಿದ್ದದ್ದನ್ನೆಲ್ಲಾ ಕಳಕೊಂಡವರೆಷ್ಟು ಜನರಿರಬಹುದು? ಹೆಚ್ಚು ಶಾಖೆಗಳಿದ್ದರೆ ಅದು ದೊಡ್ಡ ಬ್ಯಾಂಕಾಗುವುದಿಲ್ಲ. ಬಡ್ಡಿಗೆ ಒತ್ತಿ ತಮ್ಮ ಠೇವಣಾತಿಗಳ ಮೇಲೆ ದೊರೆಯಬೇಕಸ್ನುವುದು ಠೇವಣಾತಿದಾರರ ದೃಷ್ಟಿಯಲ್ಲಿ ಹಿತವಲ್ಲ ಎಂಬುದನ್ನು ನಮ್ಮ ಜನರು ತಿಳಿಯಬೇಕು ಇದನ್ನು ಕೇಳಿ ಹೆಚ್ಚಿನವರಿಗೆ ಆಶ್ಚರ್ಯವಾಗಬಹುದು. ಆದರೆ ಇದು ನಿಜ.

ಬ್ಯಾಂಕುಗಳು ಠೇವಣಾತಿಗಳ ಮೇಲೆ ಬಡ್ಡಿ ಕೊಡುವುದಾದರೂ ಹೇಗೆ? ತಮ್ಮಲ್ಲಿ ಬಂದ ಠೇವಣಾತಿ ಹಣವನ್ನು ಇತರರಿಗೆ ಹೆಚ್ಚಿನ ದರದಲ್ಲಿ ಸಾಲಕೊಟ್ಟು ಆದರಿಂದ ಸಿಕ್ಕಿದ ಹಣದಿಂದ ಠೇವಣಿಗಳ ಮೇಲೆ ಬಡ್ಡಿ, ತಮ್ಮ ಖರ್ಚು ಮತ್ತು ಲಾಭಪಡೆಯಬೇಕು. ಠೇವಣಿಗಳ ಮೇಲೆ ಹೆಚ್ಚು ಬಡ್ಡಿ ಕೊಡಬೇಕಾದರೆ ಸಾಲಗಳ ಮೇಲೆ ಹೆಚ್ಚು ಬಡ್ಡಿ ವಸೂಲು ಮಾಡಬೇಕು. ಒಳ್ಳೆಯ ಭದ್ರತೆಯುಳ್ಳವರು ಹೆಚ್ಚಿನ ಬಡ್ಡಿಕೊಡಲು ಸಿದ್ಧರಿರುವುದಿಲ್ಲ. ಆದುದರಿಂದ ಹೆಚ್ಚಿನ ಬಡ್ಡಿಕೊಡುವ ಬ್ಯಾಂಕುಗಳಿಗೆ ಭದ್ರವಾದ ಸಾಲಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ಯಾವ ಬ್ಯಾಂಕಿನ ಸಾಲಗಳು ಭದ್ರವಾಗಿರುವುದಿಲ್ಲವೋ ಆ ಬ್ಯಾಂಕುಗಳ ಠೇವಣಾತಿದಾರರ ಹಣ ಭದ್ರವಾಗಿಲ್ಲವೆಂದು ಪ್ರತ್ಯೇಕ ಹೇಳಬೇಕಾಗತ್ತವಿಲ್ಲ. ಹೆಚ್ಚಿನ ಅನುಭವಕ್ಕೆ ನಮ್ಮ ನಾಗಪ್ಪಯ್ಯನವರನ್ನು ಕೇಳಿರಿ— ಕೇಳಿ ಹಾಗ ಮಾತ್ರ ಮಾರುದ್ದ ನಿಂತುಕೊಳ್ಳಿರಿ. ಇಲ್ಲದಿದ್ದರೆ ಅವರ ದೊಣ್ಣೆಯ ಪ್ರಹಾರವೇ ನಿಮ್ಮ ಗತಿ!

ದಿವಂಗತ ಡಿ. ಸುಬ್ಬರಾವ್ ಪೈಗಳವರ ಜೀವನ ಚರಿತ್ರೆ!

೧ನೇ ಪುಟದಿಂದ ಮುಂದುವರಿಸಿದ್ದು.

ವುದು ಉಚಿತವಲ್ಲವೆಂದು ಅವರು ಆಗಿಂದಾಗ್ಗೆ ಅನ್ನುವ ವಾಡಿಕೆ ಇತ್ತು. ಮತ್ತು ಅನೇಕ ಧನಿಕರ ಮಕ್ಕಳು ಯಾವ ರೀತಿಯಲ್ಲಿ ಹಿರಿಯ ಧನಸಂಗ್ರಹದ ದೆಸೆಯಿಂದ ನಡತೆಯನ್ನೂ ಜೀವಮಾನವನ್ನೂ ಕಳಕೊಂಡ ಉದಾಹರಣೆಗಳನ್ನು ಪದೇ ಪದೇ ಎತ್ತಿ ಹೇಳುತ್ತಿದ್ದರು.

ಮಾನ್ಯರಿಗೆ ಚಿತ್ತಾಕರ್ಷಕವಾದ ರಾಜಯೋಗ್ಯ ಮುಖಚರ್ಯೆಯೂ ಇತ್ತು. ಇದರಿಂದಾಗಿ ೧೯೦೮ರಲ್ಲಿ ಜರುಗಿದ ಸ್ವಜಾತಿ ಸಮಾಜದ ಪರಿಷತ್ತಿಗೆ ಉತ್ತರದಲ್ಲಿ ಸತಾರದಿಂದ ತೊಡಗಿ ದಕ್ಷಿಣದಲ್ಲಿ ಕೊಲ್ಲಾಂ ತನಕ ಊರುಗಳಿಂದ ಬಂದಿದ್ದ ಸಭಾಸದರು ಮಾನ್ಯರ ಪೃಥಗಾತ್ಮತೆಗೆ ಮನಸೋತು ಹೋದರು. ಅನ್ಯ ಜನಾಂಗದ ಕೈಯಾಳುಗಳಾಗಿರುವ ನಮ್ಮ ನಾಡು ಅವರ ಮನಸ್ಸಿಗೆ ತುಂಬಾ ನಾಟಿತ್ತು. ಆದರಿಂದಾಗಿ ರಾಜ್ಯಭಾರಕ್ಕೆ ಸಂಬಂಧಪಟ್ಟ ಯಾವ ಕಾರ್ಯದಲ್ಲಾಗಲಿ ಗವರ್ನರುಗಳ ಆಗಮನ ಮುಂತಾದ ಯಾವ ಸಂದರ್ಭದಲ್ಲಿಯೂ ಎನ್ನಾದರೂ ಭಾಗ ವಹಿಸುತ್ತಿರಲಿಲ್ಲ.

ಮಾನ್ಯರಿಗೆ ನಮ್ಮ ಸನಾತನ ಧರ್ಮದಲ್ಲಿ ತುಂಬಾ ಶ್ರದ್ಧೆ. ಶುದ್ಧ ಆಸ್ತಿಕರೂ ಧರ್ಮಾವಲಂಬಿಗಳೂ ಆಗಿದ್ದು ಸಂಕುಚಿತ ಶಾಸ್ತ್ರಾನುಸರಣವನ್ನು ಅವರು ಮೆಚ್ಚುತಿದ್ದಿಲ್ಲ. ಆಡಂಭಾವವಾಗಲೀ ಡಂಭಾಚಾರವಾಗಲೀ ಅವರಿಗೆ ಸಹನವಾಗುತ್ತಿದ್ದಿಲ್ಲ. ಮಹಾನುಭಾವರ ಸಂಭಾಷಣೆಗಳ ಒಂದು ವಿಶೇಷತ್ವವೆಂದರೆ— 'ನಾನು' ಎಂಬ ಶಬ್ದದ ಅಭಾವವೇ. ಮತ್ತವರ ವಿಶಾಲ ಪುಸ್ತಕ ಜ್ಞಾನವೂ ರಸಿಕ ಮಾತುಗಳೂ ಸಂಸಪಾದ ನುಡಿಗಳೂ ಅವರ ಸಂಭಾಷಣೆಯನ್ನು ಅಮೂಲ್ಯವೆಂದೆಣಿಸುತಿದ್ದುವು

ತಾರುಣ್ಯದಿಂದಲೂ ಮಾನ್ಯರಿಗೆ ವಾತರೋಗವಿತ್ತು. ಅದರಿಂದಾಗಿ ಆಗಿಂದಾಗ್ಗೆ ಬಹಳ ಕಷ್ಟಗಳನ್ನನುಭವಿಸುತಿದ್ದರೂ ದರೂ, ಆ ಯಾತನೆಯನ್ನು ಮಾತಿಲ್ಲದೆ ಸಹಿಸುತ್ತಿದ್ದರು. ಕಡೆಗೆ ತಮ್ಮ ಬರೀ ೨೭ನೇ ವರ್ಷದಲ್ಲಿ ಬಡವರ ಬಂಧುಗಳೆನಿಪ್ಪ ಈ ಮಹಾನುಭಾವರು, ಹಿಂದುಗಳಿಗೆಲ್ಲಾ ಪವಿತ್ರವಾದ ನಾರಾಯಣ ಮಂತ್ರವನ್ನು ಉಚ್ಚರಿಸುತ್ತಾ ೧೯೦೯ನೇ ಇಸವಿ ಜುಲೈ ತಾರೀಕು ೨೫ನೇ ದಿನ ಇಹಲೋಕವನ್ನು ತ್ಯಜಿಸಿದರು. ಇದರಿಂದ ಗೌಡಸಾರಸ್ವತ ಸಮಾಜದ ಮತ್ತು ನಮ್ಮ ದಕ್ಷಿಣಕನ್ನಡದ ಒಂದು ದಿವ್ಯ ಜ್ಯೋತಿಯೇ ಮಾಯವಾದಂತಾಯಿತು.

In the Garden of South India

— ದಕ್ಷಿಣ ಭಾರತೋದ್ಯಾನದಲ್ಲಿ —

೩ನೇ ಪುಟದಿಂದ ಮುಂದುವರಿದದ್ದು

ಇಲ್ಲಿಗೆ ಅಕ್ಕಿಯು, ಭತ್ತವು ರಂಗೂನಿನಿಂದ ಧಾರಾಳವಾಗಿ ಬರುತ್ತವೆ. ಬಣ್ಣ ಹಾಕುವ ಮತ್ತು ತೊಗಲು ಹದಮಾಡುವ ಸಾಮಗ್ರಿಗಳು ಯಂತ್ರೋಪಯಂತ್ರಗಳು, ರಸಾಯನಿಕ ದ್ರವ್ಯಗಳು ಇವೇ ಮೊದಲಾದವುಗಳನ್ನು ಇಲ್ಲಿನ ವ್ಯಾಪಾರಸ್ಥರು ಪರದೇಶದಿಂದಲೂ, ಪರಪ್ರಾಂತಗಳಿಂದಲೂ ಆಮದು ಮಾಡುತ್ತಾರೆ. ಅಂತೂ ಆಮದು ಮಾಡುವ ಸರಕುಗಳಲ್ಲಿ ಅಕ್ಕಿಯೇ ಮುಖ್ಯವಾದದ್ದು. 1938-39 ರಲ್ಲಿ(ಕೊಚ್ಚಿಯನ್ನು ಬಿಟ್ಟು) ಹೊರಗಿನಿಂದ ತರಿಸಿದ ಅಕ್ಕಿಯ ಮೊಬಲಗು ರೂ. 2೨ ಲಕ್ಷವಂತೆ 1939-40ರಲ್ಲಿ 20ಲಕ್ಷವಂತೆ.

ಇಲ್ಲಿ ಕೆಲವು ಪಾಶ್ಚಾತ್ಯ ವಾಣಿಜ್ಯ ಸಂಸ್ಥೆಗಳು ಬಂದು ವಿಧವಿಧದ ಸರಕುಗಳಲ್ಲಿ ವ್ಯಾಪಾರವನ್ನು ನಡೆಯಿಸುತ್ತಾ ಇವೆ. ಕೆಲವು ನಾರಿನ ಸರಕುಗಳಲ್ಲೂ ಇನ್ನು ಕೆಲವು ಕುಂಬಿ ಮೆಣಸುಗಳಲ್ಲೂ ಕೇಂದ್ರೀಕರಿಸಿವೆ. ಮತ್ತು ಕೆಲವು ನಾರಿನ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳನ್ನೇ ಸ್ಥಾಪಿಸಿರುತ್ತವೆ. ಈಗೀಗ್ಗೆ ಹಲವು ದೇಶೀಯ ಸಂಘಗಳು ಮುಂದುವರಿದು ಯೋಗ್ಯ ರೀತಿಯಲ್ಲಿ ವ್ಯಾಪಾರ ನಡೆಯಿಸಬಂದರೂ ಹೆಚ್ಚು ಕಡಿಮೆ ಅರ್ಧಾಂಶಕ್ಕೆ ಸರಿಯಾದ ವ್ಯಾಪಾರವು ಪಾಶ್ಚಾತ್ಯರ ವಶವೇ ಸೇರಿರುವುದು.

ಕೆನರಾ ಬೇಂಕಿನ ಚಿಕ್ಕದೊಂದು ಚರಿತ್ರೆ.

೧ನೇ ಪುಟದಿಂದ ಮುಂದುವರಿದುದು.

ಈ ಕುರಿತು ನಮ್ಮೂರಿನ "ಕಂಲೀಡರ"ವು ತನ್ನ ಅಮೂಲ್ಯ ಪತ್ರಿಕೆಯಲ್ಲಿ ಅದು ಈ ರೀತಿ ಉಲ್ಲೇಖಿಸಿದೆ. "...ರೊಂದು ಈ ಬೇಂಕಿನ ಅಬೇಧ್ಯವಾದ ಸುಭದ್ರ ಪರಿಸ್ಥಿತಿಯ ನಿಶ್ಚಿತ ಲಕ್ಷಣವೆಂದಷ್ಟೇ ಅಲ್ಲ; ಈ ಸಂಸ್ಥೆಯ ವಿ... ಯೋಗಗಳು "ಎಕ್ಸ್‌ಪರ್ಟರ" ಎಂತಹ ಕಠಿಣ ಕ್ರಮದ ಪರಿಶೋಧನೆಗಾದರೂ ಒಳಗಾಗ ಬಲ್ಲುವು. ರಿಜರ್ವ್ ಬೇಂಕು ಅಸ್ತಿಯಿಸಬಹುದಾದಂತಹ ಗಹನಾನಿಯಮಾವಳಿಗಳ ಪರೀಕ್ಷೆಗಾದರೂ ದೃಢವಾಗಿ ನಿಂತಿರುವುದು ಎಂಬ ವಿಶ್ವಾಸವು ಈ ಸಂಸ್ಥೆಯ ಆಡಳಿತ ಮಂಡಲಿಕ್ಕೆ ಸಂಪೂರ್ಣವಾಗಿ ಇದೆ ಎಂದೂ ಇದರಿಂದಲೇ ಸ್ಪಷ್ಟವಾಗುವುದು.

ಆ ತರುವಾಯ- 1938ರಲ್ಲಿ ರಿಜರ್ವ್ ಬೇಂಕಿನ ಒಬ್ಬ ಲೆಕ್ಕ ಪರಿಶೋಧಕರು ನಡೆಸಿದ ಲೆಕ್ಕ ಪರೀಕ್ಷೆಯ ಫಲಿತಾಂಶವಾಗಿ, ಈ ಬಿಕ್ಕಟ್ಟಿನಿಂದ ಈ ಬೇಂಕು ಜಯಶೀಲವಾಗಿ ಹೊರಬಿದ್ದು ಇಂದಿಗೂ ಅದರ ಪೋಷಕ ವರ್ಗದವರಿಗೆ ಸೇವೆಯನ್ನು ನಿಶ್ಚಿತತೆಯಿಂದ ಸಲ್ಲಿಸುತ್ತದೆ.

ಕಗ್ಗತ್ತಲಿನ ಹಿಂದೆಯೇ ಪ್ರಭಾತವೆಂಬ ನಾಣ್ಣುಡಿಯಂತೆ ಈ ಸಂಧಿಗ್ಧ ಪರಿಸ್ಥಿತಿಯ ಹಿಂದೆಯೇ ಜನತೆಯ ಆದರ ಸನ್ಮಾನ ಲಕ್ಷಣವಾಗಿ ಈ ಬೇಂಕಿನ ಠೇವಣಿಗಳು ಮತ್ತನ್ನು ಹೆಚ್ಚಿದವು. ಇಂದಿಗೆ ಈ ಸಂಖ್ಯೆಯು ರೂಪಾಯಿ 99ಲಕ್ಷಕ್ಕೆ ಮಿಕ್ಕಿದೆ. ಇಂತಹ ಪರಿಸ್ಥಿತಿಯಿಂದ ಈ ಬೇಂಕಿನ ಪ್ರಾಚೀನ ಸಂಪ್ರದಾಯ "ಸುಭದ್ರತೆಯೇ ಪ್ರಥಮ ಧ್ಯೇಯ" ಎಂಬ ಕಾರ್ಯನೀತಿಗೆ ಲೋಪ ಬಾರದಂತೆ ಠೇವಣಿಗಳ ಹಣಗಳನ್ನು ಮತ್ತೂ ಭದ್ರಪಡಿಸಬೇಕಾದುದರಿಂದ ಈಗ ಅಧಿಕೃತ ಮೂಲ ಧನವನ್ನು 10ಲಕ್ಷದಿಂದ 25ಲಕ್ಷಕ್ಕೆ ಏರಿಸಲುದ್ಯುಕ್ತವಾಗಿದೆ.

ಅಂದಿನ ಈ ಚಿಕ್ಕ ಕಾಳು ಇಂದು ಮಹಾ ವೃಕ್ಷವಾಗಿ ಚಿಗುರಿ ಬೆಳೆದುದು ಪ್ರಾಮಾಣಿಕತೆಯ ಮತ್ತು ಕಾರ್ಯಕುಶಲತೆಯ ಪರಿಣಾಮವಲ್ಲದೆ ಮತ್ತೇನು?

The Canara Banking Corporation Ltd.,
(Incorporated in British India with limited liability)
ESTED 1906.
OUR RATES OF INTEREST ON DEPOSITS

Current ...	1 %	P. A.
Savings Bank ...	2½ %	„
Short-term .	1½%	„
Fixed for 3 months	2 %	„
6 „	2¼%	„
9 „	2¾ %	„
12 „	3 %	,
24 „	3½ %	,

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೮-೧-೧೯೪೨

ಕೆನರಾ ಬೇಂಕು.

ದಕ್ಷಿಣ ಕನ್ನಡಾ ಜಿಲ್ಲೆಗೆ ಜನಪ್ರಿಯವಾಗಿರುವ ಕೆನರಾ ಬೇಂಕಿನ ಕುರಿತು ಪ್ರಸ್ತಾಪಿಸುವ ಸಂದರ್ಭ ಒದಗಿದುದು ನಮಗಾನಂದದ ಸಂಗತಿ. ಅದರ ಪೃಥಿವಾದ- ಅಭಿವೃದ್ಧಿಪರವಾದ-ಕಾರ್ಯಕಲಾಪಗಳ ಚರಿತ್ರೆಯು ಈ ಸಂಚಿಕೆಯಲ್ಲಿ ಬಂದಿದೆ. ಒಂದು ಆರ್ಥಿಕ ವಹಿವಾಟಿನ ಸಂಸ್ಥೆಯು ತಾನು ಬಾಳಿ ಅನ್ಯರನ್ನು ಬದುಕಿಸುವ ಧ್ಯೇಯವನ್ನಿಟ್ಟುಕೊಂಡಿರಬೇಕು. ಇಂತಹ ಸಂಸ್ಥೆಗಳಿಗೆ ದೃಢತರದ ಅಸ್ತಿವಾರವಿದ್ದರೇನೇ ಅವುಗಳಿಗೆ ಚಿರಸ್ಥಾಯೀ ಅಸ್ತಿತ್ವವಿದೆ; ಆ ತಳಹದಿಯ ಬದಲಿಗೆ ಜನಮನಾಕರ್ಷಣೆಯ ಗಾಳಿಗೋಪುರ ಪ್ರದರ್ಶನಕ್ಕೇನೇ ಪ್ರಥಮಲಕ್ಷ್ಯವೀಯುವ ಸಂಸ್ಥೆಗಳು ಸಂಶೇ ಹಕ್ಕೆಡೆಗೊಡುತ್ತವೆ. ಕೆನರಾ ಬೇಂಕು ಈ ಗುಟ್ಟನ್ನರಿತಿದೆ, ಆದುದರಿಂದಲೇ 'ಭದ್ರತೆ ಮೊದಲು' ಎಂಬುದನ್ನು ಮೂಲ ಧ್ಯೇಯವಾಗಿಟ್ಟುಕೊಂಡು ಮುಂದುವರಿದುದರ ಪರಿಣಾಮವಾಗಿ ತನ್ನ ದೀರ್ಘ ಜೀವನದ ಪ್ರತಿಯೊಂದು ವರುಷವನ್ನೂ ಅಭಿವೃದ್ಧಿ ಪಥದ ಒಂದೊಂದು ಮೆಟ್ಟಿಲು ಕಲ್ಲಾಗಿ ಮಾರ್ಪಡಿಸಿದೆ ತತ್ಫಲವಾಗಿ ಇಂದು ಕೆನರಾ ಬೇಂಕೆಂದರೆ ಸರ್ವತೋಮುಖ ಅಭಿವೃದ್ಧಿ ಪಡೆದಿರುವ ಸಂಸ್ಥೆ; ಭಯ ಸಂದೇಹಗಳ ಕಾರ್ಮುಗಿಲು ಕವಿದಿರುವ ಇಂದಿನ ವಾತಾವರಣದಲ್ಲಿ ಸುರಕ್ಷಿತತೆಯ ಆರ್ಥಿಕ ನೆಲೆಯನ್ನು ಹುಡುಕುವವರಿಗೆ ಆಶ್ರಯವಾಗಬಲ್ಲ ಸಂಸ್ಥೆ.

ಹಿರಿಯದಾದ, ಕ್ರಮಬದ್ಧವಾದ ಈ ಸಂಸ್ಥೆಯ ಜೀವನ ವರ್ಷಗಳು- ೨ ದಶಕಗಳಲ್ಲಿ ಅದು ಹೊಂದಿರುವ ಅಭಿವೃದ್ಧಿ- ಅದರ ಜನೋಪಯೋಗಿ ವ್ಯವಹಾರ ವಿಭಾಗಗಳು- ಇವೆಲ್ಲಾ ತಕ್ಕಮಟ್ಟಿಗೆ ಈ ಸಂಚಿಕೆಯಲ್ಲಿ ಬಂದಿವೆ. ಈ ಚರಿತ್ರೆಯಲ್ಲಿ ಸಾರ್ವಜನಿಕರು ನಿಸ್ಸಂದೇಹವಾಗಿ ಅಂಗೀಕರಿಸಲಾಗುವ ಆಶ್ವಾಸನಾಂಶಗಳೇ ಇವೆ. ಇಂತಹ ಅಮೂಲ್ಯ ವಾಖ್ಯೆಯುಳ್ಳ ಬೇಂಕನ್ನೇ ಜನರು ಆಶ್ರಯಿಸುತ್ತಾ ಹೋಗುತ್ತಿರುವರು. ಸ್ವಾಭಾವಿಕವಾಗಿ ಅದರ ಠೇವಣಾತಿಗಳು ಬಹಳವಾಗಿ ಹೆಚ್ಚಿದವು ಇತರ ವಹಿವಾಟುಗಳೂ ಅಭಿವೃದ್ಧಿ ಹೊಂದಿದವು ಈ ವಿಭಾಗಗಳಲ್ಲಿ ಅಭಿವೃದ್ಧಿಯುಂಟಾದ ದೆಸೆಯಿಂದ ಬೇಂಕು ಹೊಸ ಪಾಲುಭಂಡವಾಳವನ್ನು ಶೇಖರಿಸುವ ಅವಶ್ಯತೆಯುಂಟಾಗಿದೆ. ಆದ್ದರಿಂದಲೇ 50 ರೂ ಪರೌಲ್ಯದ 8000 ಶೇರುಗಳನ್ನು ರೂ 5ರ ಉತ್ಪತ್ತಿಯ ಶರ್ತದೊಡನೆ ಶೇಖರಿಸುವ ಸಂಕಲ್ಪವನ್ನು ಈ ಬೇಂಕು ಮಾಡಿದೆ. ಇವರ ಸಂಗ್ರಾಹಕ ಪಟ್ಟಿಯು ಇದೇ ತಾ. 19ರಿಂದ 24ರ ವರೆಗೆ ಮಾತ್ರ ತೆರೆಯಲ್ಪಡುವುದು ಶೇರಿನ ಪರೌಲ್ಯವನ್ನು ಕಂತುಪ್ರಕಾರ ಕಟ್ಟುವ ವ್ಯವಸ್ಥೆಯೂ ಇದೆ. ಬೇಂಕಿನಿಂದ ಪಡೆಯುವ ಶೇರುಗಳಿಗೆ ಭದ್ರತೆಯೂ ಇದೆ, ಸಮಾಧಾನಕರ ಉತ್ಪತ್ತಿಯೂ ಇದೆ. ಬೇಂಕುಗಳಲ್ಲಿ ನಿಶ್ಚಿತ ಠೇವಣಾತಿಗಳಿಗೆ ಇರುವ ದರದ ಸಲಿಗೂ ಕಡಿಮೆಯ ಬಡ್ಡಿ ದೊರೆಯುತ್ತಿರುವಾಗ ಕೆನರಾ ಬೇಂಕಿನ ಶೇರುಗಳಿಗೆ 10ರ ಸಲಿಯ ಉತ್ಪತ್ತಿಯಿರುವುದು ಆಕರ್ಷಣೀಯವೇ ಸರಿ.

ಕನರಾ (ಕನ್ನಡ) ಬೇಂಕಿನಿಂದಾಗಿ ಕರ್ನಾಟಕದ ಹೆಸರು ಸರ್ವತ್ರ ಪ್ರಚಾರವಾಗುವಂತಾಗಿದೆ. ಇದೊಂದು ಪ್ರಾಂತಿಕ ಪ್ರತಿಷ್ಠೆಯ ಪಥ ಉತ್ತರದಲ್ಲಿ ಬೊಂಬಾಯಿಯವರೆಗೆ, ದಕ್ಷಿಣದಲ್ಲಿ ಕ್ವಿಲೋನಿನ ತನಕ ಅವರ ಶೇರುಗಳಿಗಾಗಿ ಆತುರದ ಬೇಡಿಕೆ ಬರುತ್ತಿದೆಯೆಂದ ಮೇಲೆ, ಬೇಂಕಿನವರಾಗೂ ಅದರ ನಾಮದಲ್ಲೈಕ್ಯವಾಗಿರುವ ಕನ್ನಡದ-ಮೇಲ್ಮೆಗಾಗಿ ಹೆಗ್ಗಳಿಕೆ ಪಡಲೇಬೇಕು ಇಂತಹ ಸ್ವಾಭಿಮಾನವು ಕಾರ್ಯತಃ ಫಲಿಸುವಂತೆ ಬೇಂಕಿನ ವ್ಯವಸ್ಥಾಪಕರು ಹೊಸ ಶೇರುಗಳ ಸಾಕಷ್ಟು ಭಾಗವನ್ನು ದಕ್ಷಿಣ ಕನ್ನಡಿಗರಿಗಾಗಿ ಮೀಸಲಿರಿಸುವರೆಂದು ಆಶಿಸುತ್ತೇವೆ. ಕನ್ನಡ ನಾಮವನ್ನು ಜನಪ್ರಿಯ ಗೊಳಿಸಿರುವ ಕೆನರಾ ಬೇಂಕಿನ ಪಾಲು ಪಡೆಯಲು ದಕ್ಷಿಣಕನ್ನಡಿಗರು ಆತುರಿಸುತ್ತಿರಬಹುದು, ಅದು ಪ್ರತಿಯೊಬ್ಬ ದಕ್ಷಿಣಕನ್ನಡಿಗನ ಕರ್ತವ್ಯವೆನ್ನುತ್ತೇವೆ.

ಬೇಂಕಿನ ಆಡಳಿತ ಮಂಡಳಿಯವರ ಕಾರ್ಯವಿಚಕ್ಷಣತೆಯ ಕುರಿತು ಪ್ರತ್ಯೇಕವಾಗಿ ಪ್ರಸ್ತಾಪಿಸಬೇಕೆಂದಿಲ್ಲ. ಕೆಟ್ಟ ವಾತಾವರಣದ ದೆಸೆಯಿಂದ ಸುಂಟರ ಗಾಳಿಯೆದ್ದಾಗ, ಚತುರ ನಾವಿಕನಂತೆ ಹಡಗನ್ನು ದಡ ಸೇರಿಸಿದ ಅವರ ಕಾರ್ಯದಾಕ್ಷ್ಯವು ಬೇಂಕಿನ ಚರಿತ್ರೆಯಲ್ಲಿ ಕಾಣಲು ಸಿಕ್ಕುತ್ತದೆ. ಇಂತಹ ಅನನ್ಯಸಾಧಾರಣಾ ಚತುರರ ಕೈಯಲ್ಲಿ ಕೆನರಾ ಬೇಂಕಿನ ಸೂತ್ರವಿರುವಾಗ ಅದರ ಉಜ್ವಲ ಭವಿಷ್ಯವನ್ನು ಸಂದಿಸಬಲ್ಲ ಪರಿಸ್ಥಿತಿಜನ್ಯ ಆತಂಕಗಳು ಕೂಡಾ ಇಲ್ಲವಿರುವದು ಇನ್ನಷ್ಟು ಸಂತೋಷದ ಸಂಗತಿ. ಇದು, ಯುದ್ಧವ್ಯಾಪಾರಕ್ಕೆ ಸಹಾಯಕವಾಗುತ್ತಿರುವ ಕಾಲ. ಆದರೆ ಯುದ್ಧ ಕ್ಷೇತ್ರಗಳಾಗಬಲ್ಲ ಭಾಗಗಳಲ್ಲೆಲ್ಲಿಯೂ ಕೆನರಾ ಬೇಂಕಿನ ಶಾಖೆಗಳಿಲ್ಲ, ಮದರಾಸ್, ಮುಂಬಯಿ, ಕಲ್ಕತ್ತಾ, ಬೆಂಗಳೂರು, ಅಥವಾ ಬೇರಾವ ಕರಾವಳಿಯ ಅಪಾಯ ಸ್ಥಳಗಳಲ್ಲಿಯೂ ಈ ಬೇಂಕಿನ ಶಾಖೆಗಳಿಲ್ಲ. ಈ ರೀತಿ ಭವಿತವ್ಯದ ಉಜ್ವಲ ಕೃತಿ, ಭವಿಷ್ಯದ ನಿರಾತಂಕ ಪ್ರಗತಿಯ ಆಶ್ವಾಸನೆಗಳಿರುವ-ಆಕರ್ಷಣೀಯ ವ್ಯವಹಾರವಿರುವ ಕನರಾ ಬೇಂಕಿನಂತಹ ಆಶ್ರಯವು ಈ ಜಿಲ್ಲೆಯಲ್ಲಿ ದೊರೆಯುವದು ಅದೃಷ್ಟವೆನ್ನಬೇಕು. ಈ ಬೇಂಕು ಹೊಸ ಶೇರು ಬಂಡವಾಳವನ್ನು ತೆರೆದು ಒಂದು [illegible] ಸಾರ್ವಜನಿಕರ ಮುಂದಿಟ್ಟಿದೆ [illegible] ರು, ಮುಖ್ಯವಾಗಿ ದಕ್ಷಿಣಕನ್ನಡಿಗರು ಇದರ ಉಪಯೋಗವನ್ನು ಪಡೆದುಕೊಳ್ಳಲಿ- ಬೇಂಕು ಇನ್ನಷ್ಟು ಪ್ರಗತಿಹೊಂದಿ ಸಾರ್ವಜನಿಕ ಸೇವೆ ಸಲ್ಲಿಸುವಂತಾಗಲಿ- ಎಂದು ಹಾರೈಸುತ್ತೇವೆ.

ವಾರದ ವಾರ್ತೆ

ಆಕ್ಸಿಸ್ ವಿರೋಧಿ ಮಿತ್ರಕೂಟ.

ಆಕ್ಸಿಸ್ ರಾಷ್ಟ್ರಗಳ ವಿರುದ್ಧವಾಗಿ ತಮ್ಮ ಎಲ್ಲಾ ಶಕ್ತಿ ಸಲಕರಣೆಗಳನ್ನು ಉಪಯೋಗಿಸುವೆವು; ಮತ್ತು ಪ್ರತ್ಯೇಕವಾಗಿ ಒಪ್ಪಂದಮಾಡಿಕೊಳ್ಳುವಂತಿಲ್ಲವೆಂಬ ಒಂದು ಒಪ್ಪಂದ ಕರಾರನ್ನು 26 ರಾಷ್ಟ್ರಗಳು ಮಾಡಿಕೊಂಡಿರುವವು ಇದು ಚರ್ಚಿಲ್-ರೂಸವೆಲ್ಟ ಸಂಭಾಷಣೆಯ ಪರಿಣಾಮ. ಅಮೇರಿಕದ ವಾಷಿಂಗ್ಟನಿನ ಸರಕಾರೀ ಭವನದಲ್ಲಿ ಈ ಕರಾರು ಪತ್ರಕ್ಕೆ ಅಮೇರಿಕ, ಇಂಗ್ಲಾಂಡು. ರಷ್ಯಾ, ಚೀನಾ, ಕೆನಡಾ ಮೊದಲಾದ 26 ರಾಷ್ಟ್ರಗಳ ಸಹಿ ಬಿದ್ದಿದೆ ಭಾರತವು ಇದರಲ್ಲಿ ಸೇರಿದ್ದು ಈ ದೇಶದ ಪರವಾಗಿ ಸರ್ ಜಿ. ಎಸ್. ಬಾಜಪಾಯಿಯವರು ಸಹಿಹಾಕಿರುವರು

ಶಾಂತ ಸಾಗರದ ಸೇನಾನಿ-ವೇವೆಲ್

ಭಾರತದ ಸೇನಾನಿಯಾಗಿರುವ ಜನರಲ್ ಸರ್. ವೇವೆಲರನ್ನು ಶಾಂತಸಾಗರದ ಪ್ರಾಂತದ ರಣರಂಗದ ಸಮ್ಮಿಳಿತ ಮಿತ್ರ ಸೈನ್ಯಗಳ ಸರ್ವ ಸೇನಾನಿಯು. [illegible] ಡೆಂಟ್ ರೂಸವೆಲ್ಟ ಮತ್ತು ಚರ್ಚಿಲ್ಲರು ನೇಮಿಸಿರುವರು ಮೇಜರ್ ಜನರಲ್ ಜಿ. ಎಚ್ ಬ್ರೆಟ್ ಇವರು ಸಹಾಯಕ ಸರ್ವಸೇನಾನಿಯಾಗಿರುವರು ಅಮೇರಿಕದ ಏಶ್ಯಾ ನಾವಿಕ ದಳದ ದಂಡನಾಯಕ ಎಡ್ಮಿರಲ್ ಹಾರ್ಟರು ವೇವೆಲರ ಕೆಳಗೆ ಮಿತ್ರರಾಷ್ಟ್ರಗಳ ಹಡಗು ಪಡೆದ ನಾಯಕರಾಗಿರುವರು ಸಿಂಗಾಪುರದ ಸೇನಾನಿ ಸರ್. ಹೆನ್ರಿ ಪೌನಾಲರು ಇನ್ನು ಮುಂದೆ ಸಮ್ಮಿಳಿತ ಸೈನ್ಯದ ಮುಖ್ಯಾಧಿಕಾರಿಯಾಗಿ ವೇವೆಲರ ಕೈಕೆಳಗೆ ಯುದ್ಧ ನಡೆಸುವರು ಚೀನಾದಲ್ಲಿರುವ ಎಲ್ಲಾ ಅಮೇರಿಕನ್ ಸೈನ್ಯ, ಆಕಾಶ ಬಲದ ಮುಖ್ಯಾಧಿಕಾರವನ್ನು ಚಿಯಾಂಗ್ ಕೈಶೇಕರಿಗೆ ಯಲಾಗಿದೆ. ಜನರಲ್ ವೇವೆಲರ ಕೆಳಗೆ ಸಿಂಗಾಪುರ, ಮಲಯ, ಫಿಲಿಪೈನ್ಸ್ ರಣರಂಗಗಳೆಲ್ಲಾ ಸೇರುವವು ಇದು ಚಾರಿತ್ರಪೂರ್ವ ಮಹಾ ಜವಾಬ್ದಾರಿಯಿರುವ ಸ್ಥಳ. ವೇವೆಲರು ಭಾರತದ ಸೇನಾನಿಸ್ಥಾನದಿಂದ ನಿವೃತ್ತರಾಗಿ ಜನರಲ್ ಆಚಿನ್‌ಲೆಕರು ಅವರ ಸ್ಥಾನಕ್ಕೆ ಬರುವರೆಂದು ಊಹಿಸಲಾಗಿದೆ

ಮಿ. ಚರ್ಚಿಲ್ಲರೊಡನೆ ಮುಂದಿನ ಪತ್ನಿಯರ ಬೇಡಿಕೆ

ಸರ್. ತೇಜಬಹದೂರು ಸಪ್ರು ಮತ್ತು ಇತರ 12ಮಂದಿ ಲಿಬರಲ್ ಮುಖಂಡರು. ಮಿ ಚರ್ಚಿಲ್ಲರಿಗೆ ಕೇಬಲ್ ಕಳುಹಿಸಿ ಭಾರತದ ಬೇಡಿಕೆಯನ್ನು ಕೂಡಲೇ ಮನ್ನಿಸುವಂತೆ ವಿಜ್ಞಾಪಿಸಿಕೊಂಡಿರುವರು. ಕೇಂದ್ರ ಸರಕಾರ ಕಾರ್ಯಕಾರೀ ಸಮಿತಿಯಲ್ಲಿ ಎಲ್ಲಾ ಪಕ್ಷದ ಮತ್ತು ಎಲ್ಲಾ ಜಾತಿಯ ಮುಖಂಡರನ್ನು ನೇಮಿಸಿಕೊಂಡು ಎಲ್ಲಾ ಜವಾಬ್ದಾರಿಗಳನ್ನು ಅವರಿಗೆ ವಹಿಸಿಕೊಟ್ಟು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೇ ಈ ಕೇಬಲಿನ ಸಾರಾಂಶ. ಇಂಗ್ಲಾಂಡಿನ ಸ್ಯೂಸ್ ಕ್ರೋನಿಕಲ್ ಮೊದಲಾದ ಪತ್ರಿಕೆಗಳೂ ಚರ್ಚಿಲ್ಲರನ್ನು ಆ ರೀತಿ ಮಾಡುವಂತೆ ಒತ್ತಾಯಿಸಿವೆ.

ಮನಿಲಾದ ಪತನ

ಅರಕ್ಷಿತ ನಗರವೆಂದು ಸಾರಲ್ಪಟ್ಟಿರುವ ಫಿಲಿಪ್ಪೈನಿನ ರಾಜಧಾನಿ ಮನಿಲಾ [illegible] ಬಿಟ್ಟು ಹೋಗಿದ್ದ ಅಮೇರಿಕದ ಮನಿಲಾ ದ್ವೀಪವನ್ನು ಜಪಾನೀ ಸೇನೆಯು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡಿದೆ. ಅದರ ಬಳಿಯ ಕೇವಿಟಿ ಎಂಬ ಹಡಗಿನ ನಿಲ್ದಾಣವನ್ನೂ ಅಮೇರಿಕಾದವರು ಖಾಲಿ ಮಾಡಿ ಬಿಟ್ಟುಹೋಗಿರುವರು. ಈಗ ಮನಿಲಾದ ದಕ್ಷಿಣ ಕಡೆಯಲ್ಲಿ ಅಮೇರಿಕಾದವರು ಜಪಾನರನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಅಲ್ಲಿಯ ಕೋರಿಜಡರ್ ದ್ವೀಪದ ಮೇಲೆ ಜಪಾನ್ ಧಾಂಟಿಗಳ ಕಾಲ [illegible] ಜಪಾನೀ ಧಾಳಿ ನಡೆದಿದೆ.

ಮಲಯಾದ ಯುದ್ಧ

ಮಲಯಾದಲ್ಲಿ ಜಪಾನೀ ಸೇನೆ ಮುಂದೊತ್ತುತ್ತಲೇ ಇದೆ ಅಲ್ಲಿಯ ಪೆರಾಕ್ ಎಂಬಲ್ಲಿಗೆ ಹೊಸತಾಗಿ ಜಪಾನೀ ಸೇನೆ ಕಾಲಿಟ್ಟು ತೀವ್ರ ಹೋರಾಟ ನಡೆದಿದೆ. ಕ್ವಾಂಟಾನ್ ನಗರದ ಹೊರವಲಯಕ್ಕೆ ಜಪಾನ್ ಸೇನೆ ಬಂದು ಅಲ್ಲಿಯ ವಿಮಾನ ನಿಲ್ದಾಣವನ್ನು ಹಿಡಿಯುವ ಪ್ರಯತ್ನ ನಡೆಸಿದೆ ಜಪಾನಾಕ್ರಮಿತ ಕೆಡಾ ವಿಮಾನ [illegible] ಮೇಲೆ ಬ್ರಿಟಿಷರು ಧಾಳಿ ನಡೆಸಿದ್ದಾರೆ [illegible] ಜಪಾನರು ಈಗ ಸಿಂಗಾಪುರದ ಮೇಲೆ [illegible] ವಿಮಾನ ಧಾಳಿ ನಡೆದಿರುವದು

ಲಿಬ್ಯದ ಯುದ್ಧ

ಲಿಬಿಯದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸೇನೆಯು [illegible] ಬಾರ್ಡಿಯಾವನ್ನು ವಶಪಡಿಸಿಕೊಂಡಿರುವರು. ಅಲ್ಲಿದ್ದ [illegible] ಕೈದಿಗಳನ್ನು [illegible] ಬಿಡುಗಡೆ ಮಾಡಲಾಗಿದೆ [illegible]

ರಶ್ಯದ ಯುದ್ಧ

[illegible] ರಶ್ಯನ್ ಸೇನೆಯು [illegible] ಮುಂದೊತ್ತುತ್ತಲೇ ಇದೆ. [illegible] ಜರ್ಮನರ [illegible] ಹಿಟ್ಲರನು [illegible] ಮಹಾಯುದ್ಧ [illegible] ಮುಖ್ಯವಾದುದು. ರಶ್ಯದ [illegible] ಕೊನೆಯ [illegible] ಯುದ್ಧ [illegible] ಬೆನ್ನಟ್ಟುವದು [illegible] ಕಾರಣ?

This Prospectus has been filed with the Assistant Registrar of Joint Stock Companies, Mangalore and copies have been delivered to the Registrars of Joint Stock Companies, Mysore, Cochin and Travancore.

The Subscription List will open on **Monday** the 19th January 1942 and close on Saturday the 24th January 1942 or earlier as may be decided by the Directors of the Company.

ESTABLISHED: 1906

Canara Bank, Limited.

(Incorporated in British India under the Indian Companies Act 1882)
Liability of Members Limited.

Registered Office:
LIGHT HOUSE HILL, MANGALORE.

BRANCHES:

Alleppey, Arsikere, Bangalore-City, Belgaum, Bombay-Fort, Bombay-Mandvi, Bombay-Girgaum, Bombay-Parel, Bombay-Kalbadevi, Badagara, Bantwal, Belthangady, Calicut, Cannanore, Chikmagalur, Cochin, Coondapoor, Cherai, Davangere, Dharwar, Dodballapur, Ernakulam, Ganguli, Hubli, Karkala, Kasaragode, Kumbla, Kayamkulam, Mangalore-Bunder, Mangalore City, Manjeshwar, Moolky, Payyannur, Puttur, Quilon, Udipi and Uppinangady.

Authorised Capital Rs. 25,00,000
Divided into
20,000 Ordinary Shares of Rs. 50 each
AND
30,000 five per cent Cumulative Preference Shares of Rs. 50 each.

The following special rights and privileges shall attach to the Preference Shares

1 *The holders of such Preference Shares shall be entitled to receive out of the profits of the Company* as a first charge a cumulative preferential dividend at the rate of 5% per annum on the capital for the time being paid up on such shares respectively

2. In the event of the Company being wound up the surplus assets thereof shall be applied in the first place in repayment to the holders of the said Preference Shares and of any other shares entitled to rank pari passu with them the full amount paid thereon and arrears (if any) of the preferential dividend aforesaid to the commencement of winding up and subject as aforesaid such surplus assets shall belong to and be divided among the other members of the Company

The Company is to be at liberty from time to time to create and issue further Preference Shares ranking, *in all respects pari passu with the above mentioned Preference shares,*

Issued and Subscribed Capital.	**Paid up Capital.**
12,000	6,000 Shares Rs. 50 paid up
Ordinary Shares of	6,000 Shares Rs. 20 paid up
Rs. 50 each.	Less calls in arrears Rs. 1,868-12-11

Present Issue

5,000 five per cent Cumulative Preference Shares of Rs. 50 each which number may be increased at the discretion of the Directors

Out of the above a sufficient number of shares have been offered in the first place to the holders of existing shares in the proportion of one preference Share for every two Ordinary Shares held by them respectively,

The amount payable in respect of the Preference Shares is as follows —
On application Rs. 5 per share with Re. 0—1—0 entrance fee for each share.
On allotment Rs. 5 per share.

The balance of Rs. 40 per share is payable in eight quarterly instalments of Rs. 5 each. The first such instalment will fall due on 15th May 1942 and the others on the 15th of every succeeding third month thereafter,

OR

The shares may be made fully paid up at the option of the allottee either on allotment or at any time before 15th May 1942.

Board of Directors

Messrs.

1. A. Srinivasa Pai B. A., B. L., *Advocate, Kasaragod. (Chairman).*
2. B. Venkatrao Baliga, B.A., B. L., M. L. A., *Vakil, Mangalore.*
3. U. Srinivasa Malliah, *merchant, Mangalore.*
4. M. Padmanabha Raghunatha Pai, *merchant, Mangalore.*
5. M. Venkatesh Pai, *Banker, Mangalore.*
6. H. Laxminarayana Kamath, *merchant, Ganguli.*
7. C. Shrinivasa Rao, *Savkar, Nagar.*
8. M. Gopalkrishna Kamath, *merchant, Coondapur.*
9. A. Damodara Pai, B. A. B. L., *Vakil, Mangalore.*
10. V. Venkat Rao, B. A., *Retired Tahsildar, Mangalore.*
11. S. Pundalika Nayak. *Commission Agent, Bombay.*
12. K. P. Janardhan Prabhu. B. A., *Land-holder, Mangalore.*

GENERAL MANAGER.

Mr. P. S. Nayak, B. A., B. L., *Fellow of the Indian Institute of Bankers.*

AUDITOR.

Mr. A. Umanath Rao, B.A., Dip. Econ., G. D. A., R. A. *Registered Accountant & Auditor.*

PROS

Of the history of the Canara Bank occupies in banking circles, little need be

Increase of Capital

The business of the Company has extent that the Directors consider the tim the ever increasing contacts consequent o belief that there is an unsatisfied demand

Present Issue

The present issue is limited to 500 increased at the discretion of the Director as may be necessary are offered in the first one preference share for every two existin to our patrons and well-wishers. The expectation that there will be a good dem

The subscription lists will open on as soon as applications for the approxima sufficient for the present are received but the 24th January 1942.

Voting

No member shall be entitled to be or by proxy or as a proxy for another me be reckoned in a quorum, until he shall payable by him in respect of shares held

If two or more persons be jointly e one of them may vote in respect thereof, more than one of several joint holders be whose name stands first in the Register o shares, and no other, shall be entitled to

At each general meeting at which vote on a show of hands and on a poll or for every two Preference Shares of which

Transfer of Shares

The following are the provisions w

"An application for the registratio either by the transferor or transferee, but and uncontrolled discretion, and witho transfer of shares, voluntary or otherwise not. If the Directors decide to recogni is made by the transferor, no registration effected unless the Bank gives notice of weeks of the receipt of notice no objecti in its Register of Members, the name of to the same conditions as if the applicat Where however the Bank refuses to reg within two months of the date when the send to the Transferee and Transferor n

"For the purpose of this Article no to have been duly given, if dispatched b ment of transfer, and shall be deemed to post".

Report of the Auditor

Under Section 93 1A (1) o

I beg to report that the net profit ing three years have been as follows:-

Year ending 31—12—19
Year ending 31—12—19
Year ending 31—12—19

Out of its profits the Bank has p

For the year ending 31—12—193

Dividend of 9% and bonus of 1 of Rs. 50 paid up and 6000 share in arrears Rs. 225.

For the year ending 31—12—193

Dividend of 9% and bonus of 1

, its policies and the position it now
.e that will read this Prospectus.

last few years developed to such an
d for increasing its capital. Further
opment of business have justified the
f the Bank.

ice Shares (which number may be
par. Of these such number of shares
o present Shareholders at the rate of
ld by them respectively and the rest
sufficiently attractive to justify an
se shares.
19th January 1942 and will be closed
f shares which the Directors consider
will the lists be open after Saturday

vote on any question, either personally
y general meeting, or upon a poll, or
l calls and all other monies presently
ly or jointly with others.
ares conferring the right to vote, any
re sole owner thereof, but in case
rsonally or by proxy the member
present as one of the holders of such
ect of the same.
l to be present a member has one
very Ordinary Share and one vote
older.

re restrictions on transfer:
of shares in the Bank may be made
rs may at any time, in their absolute
any reasons decline to register any
court sales) whether fully paid up or
nent of transfer and such application
case of partly paid up shares, be
ion to the transferee. If within two
y the transferee, the Bank shall enter
e, in the same manner, and subject
ration was made by the transferee
sfer of any shares, the Bank shall,
of transfer was lodged with the Bank,
refusal".
ansferee or transferor shall be deemed
t to the address given in the instru-
delivered in the ordinary course of

Companies Act. 1913.
ara Bank, Ltd., in each of the follow-

Rs.	67,443	14	1
Rs.	55,003	0	6
Rs.	71,726	5	0
Rs.	1,94,173	3	7

as follows:—

n 6000 shares
up less calls
Rs. 35,322 5 6

6000 shares

in arrears Rs. 1178 — Rs. 38,131 6 4

For the year ending 31—12—1940

Dividend of 8% per annum on 6000 shares of Rs. 50 paid up and 6000 shares Rs. 15 paid up less calls in arrears Rs. 108 0 1. — Rs. 31,180 0 6

The Bank has transferred the following amounts to one or other Reserves during each of the following three years.

Year ending 31—12—1938	...	Rs.	31,307	9	0
Year ending 31—12—1939	...	Rs.	18,200	0	0
Year ending 31—12—1940	..	Rs.	41,369	3	7
		Rs.	90,876-12-7		

The trading results and all charges and expenses incidental thereto excluding income or profits having no relation to the trading for the period covered and excluding also items of profit or income of a non-recurring nature are as follows:-

	1938	1939	1940
Income	Rs. 5,61,075 13 7	5,17,054 15 9	4,87,685 13 11
Expenditure	„ 4,87,064 13 7	4,49,128 9 11	4,21,362 12 3
Trading Results:„	74,011 0 0	67,926 5 10	66,323 1 8

The accounts for the year beginning with 1st January 1941 remain to be made up in due course.

Place: MANGALORE.
Date 14-12-1941.

(*Sd.*) **A. Umanath Rao,**
AUDITOR.

Application for shares

Application for shares should be made upon the form accompanying the prospectus and sent to any office of the Bank together with a remittance of the amount due on application.

Where no allotment is made the deposit will be returned in full, and where the number of shares allotted is less than the number applied for, the balance of the deposit will be applied towards the remaining payments and the balance if any returned.

Failure to pay any future instalments on shares allotted when due will render previous payments liable to forfeiture.

APPLICATIONS FOR 10 SHARES AND APPLICATIONS BY DEPOSITORS AND CUSTOMERS OF THE BANK WILL RECEIVE PREFERENTIAL CONSIDERATION.

Brokerage

A brokerage of annas two per share will be paid to authorised brokers on all shares applied for through them and allotted.

Prospectuses and forms of application can be obtained at any office of the Bank.

Copies of the Memorandum and Articles of Association of the Bank are available for inspection during business hours at the Registered Office and at the Chickmagalur, Cochin and Alleppey Offices of the Bank. This prospectus is issued subject to the provisions contained in such Memorandum and Articles of Association.

The company has places of business in the States of Mysore, Cochin and Travancore and for the purposes of the Companies Acts in the several States the addresses of principal offices are respectively as follows:-

1. Syed Road, Chikmagalur.
2. Mattanchery, Cochin.
3. Gowri Mahal, Alleppey.

Share Certificates

Share Certificates will be ready within two months of payment in full of the shares to which they relate.

sd. K. P. Janardhan Prabhu.	sd. U. Subraya Malliah Under Power of Attorney from Mr. Ullal Srinivas Malliah.
sd. A. Damodara Pai.	sd. V. Venkat Rao.
sd. H. Laxminarayana Kamath.	sd. M. Venkatesh Pai.
sd. B. Venkatarao Baliga.	sd. M. Gopala Krishna Kamath.
sd. M. Madhava Rau Under Power of Attorney from Mr. A. Srinivasa Pai.	sd. M. Padmanabha Raghunath Pai.
sd. Sujir Damodor Nayak Under Power of Attorney from Mr. Sujir Pandalik Nayak	sd. M. Laxman Pai Under Power of Attorney from Mr. C. Srinivasa Rao.

MANGALORE,
Dated 15th December 1941.

ಮಂಗಳೂರು—ಬಹುತರ ಬಂಧು ಪ್ರಾಪ ಖಾನೆಯವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ಥಿಯೇಟರ್ಸ್‌ನ ಆಶ್ರಯದಲ್ಲಿ ಇದೇ ತಾ. 31-12-41ರಲ್ಲಿ "ರತಿಕಲ್ಯಾಣ"ವೆಂಬ ಗೊಂಬೆ ಆಟವು ಅತಿ ನೂತನವಾಗಿ ನಡೆಯಿತು. ಎರಡು ಮೂರು ಸಾವಿರ ಜನರು ನೆರೆದಿದ್ದರು. ಈ ಆಟದ ಮ್ಯಾನೇಜರಾದ ಶ್ರೀ ನಾರಾಯಣ ಮಲ್ಯರು ಪ್ರಸಿದ್ಧ ಅರ್ಥಧಾರಿಗಳೊಡಗೂಡಿ ಪ್ರದರ್ಶನವನ್ನಾರಂಭಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಪ್ರದರ್ಶನಾಂತ್ಯದಲ್ಲಿ ಕರ್ನಾಟಕ ಥಿಯೇಟರ್ಸ್‌ನ ಪರವಾಗಿ ಶ್ರೀ. ಟಿ. ವಿ. ಶೆಣೈಯವರು ಶ್ರೀ ಮಲ್ಯರ ಪ್ರದರ್ಶನವನ್ನೂ ಕರ್ನಾಟಕ ಥಿಯೇಟರ್ಸ್‌ನವರು ಕನ್ನಡ ಭಾಷೆ ಮತ್ತು ಭಾರತೀಯ ಕಲೆಗಳ ಪ್ರವರ್ಧನೆಗಾಗಿ ಮಾಡುತ್ತಿರುವ ಸೇವೆಯನ್ನೂ ಪ್ರಶಂಸಿಸಿದರು. ಆ ನಂತರ ಥಿಯೇಟರ್ಸ್‌ನ ಪರವಾಗಿ ಒರ್ಗನೈಸರು ಆದಂಥ ಶ್ರೀ. ಎಂ. ಎ. ದೇವಡಿಗಾರರು ಶ್ರೀ ಮಲ್ಯರಿಗೆ ಬೆಳ್ಳಿಯ ಕಪ್ ಒಂದನ್ನು ಕೊಟ್ಟು ಬಹುಮಾನಿಸಿದರು. ಯ ಪ್ರಾರ್ಥನ ಮಾಡಿದರು. ಶ್ರೀಗಳಾದ ಬಿ. ಸುಬ್ಬಣ್ಣಶೆಟ್ಟಿ, ಮುತ್ತಯ್ಯ ಹೆಗ್ಡೆಯವರು ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷರ ಭಾಷಣ, ನಾಟಕಾದಿ ವಿನೋದಗಳಿಂದ ಸಭಾಂತ್ಯವಾಯಿತು.

Greetings.

The Directors, Officers and Staff of the Canara Bank Limited join in sending you this message of appreciation for your good will and patronage during the last year. We sincerely wish you a Happy and Prosperous New Year.

ESTD. 1906.

CANARA BANK Ltd.

ಉಡುಪಿ.

ಸತ್ಕಾರ:—ಪ್ರಭಾಕರ ಪ್ರೆಸ್ಸಿನ ಸ್ಥಾಪಕರಾದ ಶ್ರೀ ಪಿ. ನಾರಾಯಣ ಪ್ರಭುಗಳಿಗೆ ಶ್ರೀ ಯು. ಉಪೇಂದ್ರ ಪೈಗಳು ತಾವು ಹೊಸತಾಗಿ ಕಟ್ಟಿಸಿದ ಚಿತ್ತರಂಜನ ಭವನದಲ್ಲಿ ಶ್ರೀ. ಕೊಬ್ಬಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ತಾ. 1-1-42ರಲ್ಲಿ ಟೀಪಾರ್ಟಿ ಸತ್ಕಾರವಿತ್ತರು. ಉಪಾಹಾರ ಮುಗಿದೊಡನೆ ಶ್ರೀ. ಉಪೇಂದ್ರ ಪೈಗಳು ಸತ್ಕಾರದ ಉದ್ದೇಶವನ್ನು ವಿವರಿಸಿದರು. ಅನಂತರ ಶ್ರೀಗಳವರಾದ ಲಕ್ಷ್ಮೀನಾರಾಯಣ ರಾವ್, ಜನಾರ್ದನ ಅಳಪೆ, ಪಿ. ಶೀನ ಶೆಟ್ಟಿ, ಡಾಕ್ಟರ್ ಮಾಧವ ಪೈಗಳೇ ಮೊದಲಾದವರು ಶ್ರೀ. ನಾರಾಯಣ ಪ್ರಭುಗಳ ಗುಣಕಥನ ಮಾಡಿದರು. ಚಿತ್ತರಂಜನ ಭವನವು ಎರಡು ಮಾಳಿಗೆಯ ಉತ್ತಮ ಕಟ್ಟಡವಾಗಿದ್ದು ಸರಕಾರಿ ಆಸ್ಪತ್ರೆಯ ಒಂಬದಿಯ ಹಿಂಭಾಗದಲ್ಲಿ ನಗರದ ಕೇಂದ್ರದಲ್ಲಿದೆ. ಇಂಥ ಕಟ್ಟಡವನ್ನು ಶ್ರೀ. ಪೈಗಳು ಪ್ರಭಾಕರ ನಿವಾಸಕ್ಕಾಗಿ ವಿನಿಯೋಗಿಸಿರುವುದು ಅಭಿವಂದನೀಯ.

ಉಡುಪಿ ತಾಲೂಕು ಎಯಿಡೆಡ್ ಶಾಲಾ ಮೆನೇಜರರ ಸಂಘದ ಮಹಾಸಭೆಯು ತಾ. 11-1-42ನೇ ಅಪರಾಹ್ನ ಘಂಟೆ 2ಕ್ಕೆ ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸತಕ್ಕದೆಂದು ತಾ. 4-1-42ರಲ್ಲಿ ಜರಗಿದ ಕಾರ್ಯಕಾರಿ ಮಂಡಳಿಯ ಸಭೆಯಲಿ ನಿರ್ಣಯಿಸಲಾಗಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಸೇವಾ ಶಿಬಿರ—ತಾ. 3-1-42ರಲ್ಲಿ ಉಡುಪಿ ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಷನವರು ಡಾ. ಯಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪರ್ಯಾಯ ಸಂಬಂಧ ಸೇವಾ ಶಿಬಿರ ತೆರೆಯಬೇಕೆಂದು ನಿರ್ಧರಿಸಿದ್ದಾರೆ. ಆ ಪ್ರಕಾರ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಸಂತೆಕಟ್ಟೆಯಲ್ಲಿಯೂ, ರಥಬೀದಿಯಲ್ಲಿಯೂ ಎರಡು ಶಿಬಿರಗಳು ತೆರೆಯಲ್ಪಟ್ಟವು.

ಕುಂದಾಪುರ—ಇಲ್ಲಿಯ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಕಳೆದ ತಾ. 21ರಲ್ಲಿ ಸಬ್ ಕಲೆಕ್ಟರ್ ಶ್ರೀ ಆರ್. ಪ್ರಸಾದರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ವಕೀಲ್ ಕೆಲ್ಕಬೈಲು ನಾರಪ್ಪಶೆಟ್ಟರು ಭವನದ ಪ್ರೀ

ಬರುವ ವಾರ

'ನವಯುಗ'ದ

ಪರ್ಯಾಯ ಸಂಚಿಕೆ

ವಿಶೇಷ ರೀತಿಯಲ್ಲಿ ಹೊರಡುವುದು.

ನೂರಾರು ಪುಟಗಳು ! ಹಲವಾರು ಚಿತ್ರಗಳು !

ಬೆಲೆ: ೦—೮—೦

0—9—0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಲಾಗುವುದು.

ಮೆನೇಜರ್, ನವಯುಗ, ಉಡುಪಿ.

DIAMONDS! DIAMONDS!

K. R. K. SHET.

Opposite Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನಾಯಿತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

The Board of Directors of

Shri Ramakrishna Theatre Ltd.,

wish

our Share-holders, Patrons, clients & Sympathisers.

a happy and prosperous

new year.

ಹೊಲಿಯುವ ನೂಲಿನ ಉಂಡೆಗಳು

ಈಗ ಹೊಸತಾಗಿ ಯಂತ್ರಗಳ ಮತ್ತು ನುರಿತ ಕೆಲಸಗಾರರ ಸಹಕಾರದಿಂದ ತಯಾರಿಸಲ್ಪಡುತ್ತವೆ. ಎಲ್ಲಾ ಕಡೆಗಳಲ್ಲೂ ಏಜಂಟರುಗಳು ಕೂಡಲೇ ಬೇಕಾಗಿದ್ದಾರೆ.

ತಯಾರಿಸುವ ಸ್ಥಳ:—

ಬಹುಜನಬಂಧು ಹೊಸಯಾಯರಿಸ್,

(ಫ್ಯಾಕ್ಟರಿ ಬಡವರಬಂಧು)

ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್.

ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣಗಳಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ರುಮಾಲು ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, ಉಡುಪಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. No. 114/1941.

ಅರ್ಜಿದಾರು—ಕಂಡ್ಲೂರು ಭಟ್ಕಳ ಮ್ಯಾದಿನ ಸಾಹೇಬ—ಬಾಪು ಸಾಹೇಬರ ಮಗ, ಕುಂದಾಪುರ ತಾಲ್ಲೂಕು ಅಮಾಸೆ ಬೈಲು ಗ್ರಾಮ, 2. ರುಕೀಯಾಬಿ—ಕಂಡ್ಲೂರು ಭಟ್ಕಳ ಹಸನ ಸಾಹೇಬರ ವಿಧವೆ, ಉಡುಪಿ ತಾಲ್ಲೂಕು ಪಡ ತೋನ್ಸೆ ಗ್ರಾಮ—ಎದುರು ಇಲ್ಲ

1ನೇ ಅರ್ಜಿದಾರನ ಮಗ ವ 2ನೇ ಅರ್ಜಿದಾರಳ ಗಂಡ ಕಂಡ್ಲೂರು ಭಟ್ಕಳ ಹಸನ್ ಸಾಹೇಬರು ತಾ. 4-8-1940 ರಲ್ಲಿ ಮೃತಪಟ್ಟಿರುತ್ತಾರೆಂದೂ ಅವರಿಗೆ ಇದ್ದ The Empire of India Life Assurance Co. Ltd.ನ ಇನ್ಶುರೆನ್ಸ್ ಕಂಪೆನಿಯ ನಂಬ್ರ 59179ನೇ ಪೋಲಿಸಿಯ ಹಣಗಳನ್ನು ಪಡೆಯುವರೆ ಅರ್ಜಿದಾರರು ಅರ್ಹರೆಂದೂ, ಆ ಕುರಿತು 1ನೇ ಅರ್ಜಿದಾರನ ಹೆಸ್ರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಸಹ ಅರ್ಜಿ ಕೊಟ್ಟಿರುವದ್ರಿಂದ ಆ ಕುರಿತು ಯಾರದ್ದಾದರು ಆಕ್ಷೇಪ ಇದ್ದಲ್ಲಿ ತಾ. 22-1-42ನೇ ದಿವ್ಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದೆಂತ ಈ ಮೂಲಕ ತಿಳಿಸಲಾಗುತ್ತದೆ.

Coondapur 2-1-1942. S. N. Acharya, Advocate for petitioners.

ನೋಟೀಸು

ಉಡುಪಿ ಡಿ ಮುನ್ಸಿಫ್ ಕೋರ್ಟಿನಲ್ಲಿ.

O. P. No. 65/41.

1 ಶೇಷು ಹೆಂಗ್ಸು—ತೋಮು ಹೆಂಗ್ಸಿನ ಮಗಳು, 2. ಕವಲು ಹೆಂಗ್ಸು—ತಂಗಿ ಹೆಂಗ್ಸಿನ ಮಗಳು, ಉಡುಪಿ ತಾಲ್ಲೂಕು ಬಡಾ ಗ್ರಾಮದಲ್ಲಿರುವವರು —ಅರ್ಜಿದಾರರು.

ಉಡುಪಿ ತಾಲ್ಲೂಕು ಬಡಾ ಗ್ರಾಮದ ಕೃಷ್ಣ ಗುರಿಕಾರರ ಅಳಿಯ ಮೃತ ಕೊರಗ ಗುರಿಕಾರರ ಹಕ್ಕಿನ ಮೇಲ್ಕಂಡ ಅರ್ಜಿಯಲ್ಲಿ ವಿವರಿಸಿದ ಸಾಲವನ್ನು ವಸೂಲು ಮಾಡುವರೆ, ಸದ್ರಿ ಕೊರಗ ಗುರಿಕಾರರು ತಾ. 14-3-36ರಲ್ಲಿ ಬರೆದಿಟ್ಟ ವಿಲ್‌ನಾಮೆ ಪ್ರಕಾರ ಹಕ್ಕುದಾರರಾದ ಅರ್ಜಿದಾರರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಅರ್ಜಿದಾಕ್ಲು ಮಾಡಿರುವುದರಿಂದ, ಹಾಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಆಕ್ಷೇಪವಿರುವುದಾದರೆ, ಅವರು ತಾ. 21-1-42ನೇ ದಿನ ಬೆಳಗ್ಗೆ ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವರಿಗೂ ತಿಳಿಸಲಾಗುತ್ತದೆ.

By order of the Court

ಉಡುಪಿ, ತಾ. 31-12-41 K. J. Ballal, ಅರ್ಜಿದಾರರ ಕಡೆ ವಕೀಲ್.

NOTICE

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. No. 66/1941

1 ತುಂಗಮ್ಮ, 2 ಮಹಾಮಾಯಿ ಅಮ್ಮ, 3 ಪುರ್ಷಪ್ಪನಾಯ್ಕ—ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದ್ರೆ.—

1939ನೇ ಇಸವಿಯ ಎಪ್ರಿಲು ತಿಂಗಳಲ್ಲಿ ಹಾಲಿ ಬೊಂಬಾಯಿಯಲ್ಲಿ ಮೃತಪಟ್ಟ ಕಪ್ಪು ನಾಯಕರವರು, ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್ ಇದರಲ್ಲಿ F. D. 102/35ನೇಗೆ ಡಿಪೋಜಿಟಾಗಿ ಇಟ್ಟ ಅಸ್ಲು ವ ಬಡ್ಡಿ ಕೂಡಾ ರೂ. 371-0-0ನ್ನು ಪಡೆಯಲು ಸದ್ರಿ ಮೃತರ ವಾರೀಸುದಾರರಾದ ತಾವು ಹಕ್ಕುದಾರರೆಂತಲೂ, ಆ ಬಗ್ಗೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತಲೂ, ಮೇಲ್ಕಂಡ ಅರ್ಜಿದಾರು ದಾಖ್ಲು ಮಾಡಿದ ಅರ್ಜಿಯು 26-1-42ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ದಿವ್ಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ, ಅರ್ಜಿಯು ಅರ್ಜಿದಾರ್ರ ಗುಣಕ್ಕೆ ತೀರ್ಮಾನಿಸಲ್ಪಡುವುದು.

ಉಡುಪಿ, 5-1-42 B. Vasudeva Rao, Counsel for Petitioners.

ಕೆನರಾ ಬೇಂಕಿನ ಚಿಕ್ಕದೊಂದು ಚರಿತ್ರೆ

'ಕೆನರಾ ಬೇಂಕ್ ಲಿಮಿಟೆಡ್' ಎಂಬ ಈ ಸಂಸ್ಥೆಯು 1906ನೇ ಇಸವಿ ಜುಲೈ ತಾರೀಕು 1ರಲ್ಲಿ ಪ್ರಥಮತಃ ಜನ್ಮವೆತ್ತಿತು. ಅಗ್ಗೆ ಒಂದು ವಿದೇಶಿ ಬೇಂಕು ಅತಿ ಕಡಿಮೆ ಬಡ್ಡಿಯನ್ನು ಠೇವಣಿಗರಿಗೆ ಕೊಟ್ಟು ಸಂಸ್ಥಾನದ ಯಾವತ್ತೂ ಧನ ಸಂಗ್ರಹವನ್ನು ತನ್ನ ಕೈಯೊಳಗೆ ಇರಿಸಿಕೊಂಡು, ಮುಂದು ಬಿದ್ದುದರಿಂದ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ 'ಹಾ ಹಾ'ಕಾರವು ಎದ್ದು ಮಧ್ಯಮ ತರಗತಿಯವರಿಗೆ ಹೇಳಲಸದಳ ಕಷ್ಟನಷ್ಟಗಳು ಸಂಭವಿಸಿದುವು. ಇದರಿಂದಾಗಿ ಅಂದಿನ ನಮ್ಮ ಜಿಲ್ಲೆಯ ಮುಖಂಡರೆಲ್ಲ ಕೂಡಿ ಕೆಲವು ನಿಶ್ಚಿತ ವ್ಯವಹಾರನೀತಿಯ ಒಡಗೂಡಿದ ಜಿಲ್ಲೆಯದಾದದ್ದೇ ಒಂದು ಬೇಂಕನ್ನು ಸ್ಥಾಪಿಸಬೇಕಾಗಿ ಎಣಿಸಿದುದರ ಫಲವಾಗಿ ಈ ಬೇಂಕು ಅಂದು ತನ್ನ ಕಾರ್ಯಕ್ರಮಕ್ಕೆ ತೊಡಗಿತು.

ಇದರ ಮೊದಲನೇ ನಿಶ್ಚಿತಾರ್ಥವೆಂದರೆ ಠೇವಣಿಗರ ಹಣಗಳ ಭದ್ರತೆ ಈ ಧ್ಯೇಯವನ್ನು ಮನಗಂಡು ಬೇಂಕಿನ ವರ್ಷಾವಧಿ ಮುನಾಫೆಯ ಶೇಕಡಾ 25ರ ಅಂಶವನ್ನು ಆಪದ್ಧನ ರೂಪದಿಂದ ಒಟ್ಟುಗೂಡಿಸುತ್ತಾ ಬಂದು ಭಾವೀ ನಷ್ಟಗಳನ್ನು ಅಧಿಗಮಿಸಲೋಸುಗ ಒಂದು ಕ್ಷೇಮಸ್ಥಿತಿಯನ್ನು ನಿರ್ಮಾಣಮಾಡಬೇಕೆಂಬ ಈ ಮೊತ್ತ ಮೊದಲಿನಿಂದಲೂ ನಿಬಂಧನೆಯಾಗಿದ್ದು, ಇಂದು ಕೂಡಾ 35 ವರ್ಷಗಳು ಸಂದುಹೋದರೂ ಈ ನಿಬಂಧನೆಯು ಪಾಲಿಸಲ್ಪಡುತ್ತಲಿದೆ. ಅದರಿಂದಾಗಿ ಒಂದು 1916ರಲ್ಲಿ ತೊಡಗಿದ ಈ ಕ್ಷೇಮನಿಧಿಯು ಒಂದು 1941ರಲ್ಲಿ ಮೂಲ ಧನಕ್ಕಿಂತ ಮಿಕ್ಕಿರುತ್ತದೆ. ಎರಡನೇ ಧ್ಯೇಯವೆಂದರೆ ಬೇಂಕಿನ ಯಾವತ್ತೂ ಮೊತ್ತವನ್ನು ಸ್ವಲ್ಪ ಸ್ವಲ್ಪವಾಗಿ ದ್ರವ ರೂಪದಲ್ಲಿರಿಸುವುದು—ಅಂದರೆ ಯಾವ ಸಂದರ್ಭದಲ್ಲಿಯೂ ಮಾರ್ಪಡಿಸಬಹುದಾದ ಸರಕಾರಿ ಸಾಲಪತ್ರಗಳನ್ನು ಬೇಂಕು ಪಡಕೊಳ್ಳಬೇಕೆಂಬುದು. ಮೊದಲನೇ ಆದರ್ಶದಂತೆ ಈ ಎರಡನೇ ಧ್ಯೇಯವೂ ಇಂದು ಬೇಂಕಿನ ಆಡಳಿತ ಮಂಡಳಿಯವರಿಗೆ ಮನಸ್ಸಿನಲ್ಲಿದೆ. ಅದು ಸಲಿಕಾರವಾಗಿ ಬೇಂಕಿನ ಪರಿಮಾಣಕ್ಕೆ ಸರಿಗುಣವಾದ ಮೊತ್ತವು ಸರಕಾರಿ ಸಾಲ ಪತ್ರಗಳಲ್ಲಿದೆ. ಮೂರನೇ ಧ್ಯೇಯವೆಂದರೆ—ಲಾಭದ ದುರಭಿಲಾಷೆಯಿಂದ ಅಧಿಕ ಬಡ್ಡಿದರವನ್ನು ಸಾಲಪಡಕೊಳ್ಳುವ ವ್ಯಾಪಾರಿ ಮುಂತಾದ ಉದ್ಯಮಿಗಳ ಮೇಲೆ ಹೊರಿಸದೆ ಇರುವುದು. ಇವಕ್ಕನುಗುಣವಾಗಿ ಹತ್ತರ ಸಲಿಗೆ ಸಿಕ್ಕಿದ ಬಡ್ಡಿಯನ್ನು ಎಂದೂ ಬೇಂಕಿನವರು ಎತ್ತಲಾಗದೆಂಬ ನಿಬಂಧನೆಯು ಇಂದೂ ಜಾರಿಯಲ್ಲಿದೆ. ಆದರೂ ಇಂದಿನ ವಾಣಿಜ್ಯ ಕ್ಷೇತ್ರದ ಪರಿಸ್ಥಿತಿಗೆ ಸರಿಯಾಗಿ ಹತ್ತರ ಒಳಲಾಗಿ ಐದರ ಸಲಿಯ ಬಡ್ಡಿಯಿಂದಲೂ ಈ ಬೇಂಕು ಸಾಲ ಕೊಡುತ್ತಿರುವುದು.

ಪ್ರಾರಂಭದಲ್ಲಿ ಈ ಬೇಂಕಿನ ಮೂಲಧನವು ಬರೇ ಅರ್ಧ ಲಕ್ಷ ರೂಪ್ಯಗಳಷ್ಟು. ಪ್ರಥಮ ವರ್ಷದಲ್ಲಿಯೇ ಠೇವಣಿಗರಿಗಳು ರೂಪಾಯಿ 19,000 ದಷ್ಟಕ್ಕೆ ಒಂದವು. ಇದೇ ರೀತಿ ವರ್ಷಂಪ್ರತಿ ಠೇವಣಿಗರು ಯಾವ ಪರಿಮಾಣದಲ್ಲಿ ವೃದ್ಧಿ ಯಾಗು ವೆಂಬುದಕ್ಕೆ ಈ ಕೆಳಗಿನ ಪಟ್ಟಿಯೇ ಸಾಕ್ಷಿ(ಪೂರಕವಾಗುತ್ತದೆ). ಪ್ರಥಮದ ಎರಡು ವರ್ಷಗಳಲ್ಲಿ ಠೇವಣಿಗ-ಳು ಅತೀ ಶೀಘ್ರಗತಿಯಿಂದ ವರ್ಧಿಸಿದರೂ, ಬೇಂಕಿನ ಶಾಖೆಗಳೊಂದೂ ತೆರೆಯಲ್ಪಡಲಿಲ್ಲ.

ತುಂಬಾ ಠೇವಣಿಗರಿಗೆ ಒಂದು ಬೇಂಕು ಭದ್ರವಾದ ಸಾಧನಗಳ ಮೇಲೆಯೇ ಸಾಲಕೊಡಬೇಕೆಂದಿದ್ದರ ಪರಿಮಿತ ಕ್ಷೇತ್ರ ಪಟದಲ್ಲೇ ಉದ್ಯಮಿಸಬೇಕು.

ಬರೇ ಹದಿಮೂರು ವರ್ಷಗಳ ಹಿಂದೆ ಈ ಬೇಂಕು ಆಗಿನ ವಾಡಿಕೆಯಂತೆ ತನ್ನ ಗಿರಾಕಿಗಳಲ್ಲಿ ಮುಕ್ಕಾಲು ಪಾಲಿನವರಿಗೆ ಬರೇ ಪ್ರೋನೋಟ ಗಳ ಮೇಲೆ ಸಾಲಗಳನ್ನೇ ಕೊಡುತಿತ್ತು. ಆದರೆ 1929ನೇ ಆರ್ಥಿಕ ಮುಗ್ಗಟ್ಟು ತಲೆದೋರಿದಂದಿನಿಂದ ಈ ಕಾರ್ಯಕ್ರಮವನ್ನು ಬದಲು

ವರ್ಷ	ವಿಕ್ರಯಿಸಲ್ಪಟ್ಟ ಬಂಡವಾಳ	ತೆತ್ತ ಬಂಡವಾಳ	ಕಾಯ್ದ ನಿಧಿ	ಠೇವಣಿ	ನಡೆವ ಬಂ. ಮೊತ್ತ
1916	2,25 000	2,00,000	89,000	3,60,000	6,83,000
1920	3,00,000	3,00,000	1,61,000	8,99,000	14,19,000
1921	3,00,000	3 00,000	2 62,000	18,10,000	24,69,000
1928	3,00,000	3,00,000	3,88,000	37,12,000	46 99,000
1932	6,00,000	3,30,000	4,31,000	55,16,000	65,62,000
1936	6,00,000	3,33,000	4,50,000	79,61,000	97,25,000
1937	6,00,000	3,33,000	4,50,550	83,96,000	1,03,41,450
1940	6 00,000	3,92,000	4,50,000	86,71,700	1,09,96 000

ಸಾಧ್ಯವಿಲ್ಲ. ಕೆಲವರಲ್ಲಿ ಇದರ ಶಾಖೆಗಳನ್ನು ತೆರೆದು, ಹಲವು ವಿಧದ ಭದ್ರತೆಗಳ ಮೇಲೂ, ಐದ ವಿಧದ ಜನತೆಗಳ ಸಹಕಾರದಿಂದಲೂ ಎಂಥಾದ್ದೊಂದು ಯಿಸಿತು. ಇಂದು ಈ ಬೇಂಕಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಿಮರ್ಶಿಸಿದಲ್ಲಿ ಅಂದಾ ವ್ಯಾಪಾರಿಗಳು ಬರೇ ಕಾಲಾಂಶಕ್ಕಿಂತ ಕಡಿಮೆ ಇದ್ದು ಉಳಿದ



ಬೇಂಕು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುವದು ಸ್ವಾಭಾವಿಕವಾದೊಂದೇ. ಹಾಗೆ ಶಿಕೆ. ಇದರಂತೆ ಕೆನರಾ ಬೇಂಕು ತನ್ನ ಪ್ರಥಮ ಶಾಖೆಯನ್ನು 1926ರಲ್ಲಿ ಈ ಜಿಲ್ಲೆಯಲ್ಲಿ ಕಾರ್ಕಳದಲ್ಲಿ ತೆರೆಯಿತು. ಅನಂತರವಾಯ ಪರಂಪರೆಯಿಂದ ಪ್ರತಿ ವರುಷವೆಂಬಂತೆ ಶಾಖೆಗಳನ್ನು ತೆರೆದು ಬಂದು ಇಂದಿಗೆ ಈ ಬೇಂಕಿನ 37 ಶಾಖೆಗಳು ನಮ್ಮ ಈ ಭಾರತದ ಪಶ್ಚಿಮ ಕರಾವಳಿಯ ಎಲ್ಲಾ ರೇವುಗಳಲ್ಲಿಯೂ, ನೆರೆಯಾದ ಮೈಸೂರು ಮತ್ತು ಕರ್ನಾಟಕದ ಪ್ರಮುಖ ನಗರಗಳಲ್ಲೂ ಸ್ಥಾಪಿತವಾಗಿವೆ.

ಪ್ರತಿಯೊಂದು ಹೊಸ ಶಾಖೆಯು ಸ್ಥಾಪನಾ ದಿವಸದಿಂದಲೇ ವರ್ಷದ ಪರ್ಯಂತವಾಗಿ ಬೆಳೆವ ವರಿಸುವ ನಿರ್ಮಲ ನೀತಿಯನ್ನು ಈ ಬೇಂಕು ಇಂದೂ ಎಲ್ಲೆಂದೂ ಕೊಂಡಿರಿಸುತ್ತದೆ ಇದರ ಫಲವಾಗಿ ಯಾವದೊಂದೂ ವರ್ಷದ ಸಾಲ ಮೂಲಗಳ ಪಟ್ಟಿಯಲ್ಲಿ (Balance Sheet) 'ಪ್ರೀಂಜ್ ಸ್ಥಾಪನೆ ಖರ್ಚು' ಎಂಬ ಶಿರೋನಾಮೆಯನ್ನು ಯಾರೂ ಕಾಣರು. ಮುಖ್ಯವಾದ ಸಾಲಗಳು ಚಿನ್ನ, ಬೆಳ್ಳಿ ಸರಕು, ಜಿನಸುಗಳು, ಮೋಲುಗದ್ದೆಗಳು ಮುಂತಾದ ನಿಶ್ಚಿತ ಭದ್ರತೆಗಳ ಮೇಲೆ ಕೊಡಲ್ಪಡುವಂಥವುಗಳಾಗಿವೆ. ಆದರೆ ಈ ಬದಲಾವಣೆಯನ್ನು ತಂದೊಡ್ಡಲು ಬೇಂಕು ಇದರ ಬಡ್ಡಿಯ ದರವನ್ನು ಶೇಕಡಾ 10ರ ಪರಿಮಾಣದಿಂದ ಕೆಳಗಿಳಿಸಿ ಅದರ ಫಲಿತಾಂಶವಾಗಿ ಠೇವಣಿಗಳ ಬಡ್ಡಿಯನ್ನು ಕಡಿಮೆಮಾಡಬೇಕಾಯಿತು. ಹೀಗಾಗಿ ಪ್ರಾರಂಭದಲ್ಲಿ ಎಣಿಸಿದ ಠೇವಣಿಗಳ ಏಳರ ಸಲಿಯ ಬಡ್ಡಿಯು ಇಂದು ಮೂರರ ಸಲಿಯಾದಂತೆ, ಸಾಲಗಳ ಮೇಲಿದ್ದ 10 ಸಲಿಯ ಬಡ್ಡಿಯು ಇಂದು ಐದರ ಸಲಿಯಂತೆ ನಡೆಯುತ್ತದೆ. ಅಂತೆಯೇ ಅರ್ಧಕ್ಕರ್ಧ ಬಡ್ಡಿಯ ಇಳಿತವಾದರೂ, ಈ ಬೇಂಕಿನ ಠೇವಣಿಗಾರರು ತಮ್ಮ ಹಣಗಳನ್ನು ಇನ್ನಷ್ಟು ಹೆಚ್ಚಿಗೆ ಈ ಬೇಂಕಿನಲ್ಲಿ ಡಿಪೋಸಿಟು ಮಾಡುವುದು ಈ ಬೇಂಕಿನ ವರ್ಗದ ಉದಾರ ಬುದ್ಧಿಯು ಮತ್ತು ವಿಶಾಲ ದೃಷ್ಟಿಯು ಸೂಚಕಗಳಾಗಿವೆ. ಅದರಿಂದಾಗಿ ಪ್ರಾರಂಭದ ಬರೇ ಅರ್ಧ ಲಕ್ಷ ರೂಪಾಯಿ ಮೊತ್ತ ವಿದ್ದ

ಈ ಬೇಂಕು ಇಂದು ತನ್ನ ದ್ರವ್ಯ ಸಂಚಯವನ್ನು ಒಂದು ಕೋಟಿಗೆ ಮಿಕ್ಕಿ ವೃದ್ಧಿಸಿದೆ.

ಕಾಲಚಕ್ರವು ಒಂದೇ ಗತಿಯಿಂದ ತಿರುಗವುದಿಲ್ಲ. ತನ್ನ 23ನೇ ವಯದ ತನಕ ಈ ಬೇಂಕಿಗೆ ಚಿಕ್ಕಾಸೊಂದು ನಷ್ಟಬಂದದ್ದಿಲ್ಲ. ಆದರೆ 1929ನೇ ವರ್ಷದಲ್ಲಿ ದಿಗಂತದಲ್ಲಿ ಆರ್ಥಿಕ ಕಾರ್ಮುಗಿಲುಗಳು ಮೂಡಿದುವು. ಆ ಚಂಡ ಮಾರುತವು ಬೀಸುವ ಮೊದಲೇ ಪ್ರಾಜ್ಞನಾವಿಕನಂತೆ ಈ ನಮ್ಮ ಚಿಕ್ಕ ಬೇಂಕಿನ ಆಗಿನ ಆಡಳಿತ ಮಂಡಳದ ಡೈರೆಕ್ಟರರು ತಮ್ಮ ನಾವೆಯನ್ನು ಸುಸಜ್ಜಿತ ಪಡಿಸಿದುದರಿಂದ ಈಶನ ಕೃಪೆಯಿಂದ ಏನೊಂದೂ ಹಾನಿಯಿಲ್ಲದೆ ಈ ಬೇಂಕು ದಡ ಸೇರಿತು. ಈ ಹತ್ತು ವರ್ಷಗಳ ಅಂತರದಲ್ಲಿ ಅಪರಿಮಿತ ಬೇಂಕುಗಳು ಮುರಿದು ಬಿದ್ದುವು.ಮುಖ್ಯವಾಗಿ ಪ್ರಖ್ಯಾತಿಪಟ್ಟ ಟ್ರಾವನ್‌ಕೂರ್ ನೇಶನಲ್ ಎಂಡ್ ಕ್ವಿಲನ್ ಬೇಂಕ್ 1938 ರಲ್ಲಿ ತನ್ನ ಕಾರ್ಯಕ್ರಮವನ್ನು ನಿಲ್ಲಿಸಿಕೆ ಬಾಗಿಲು ಮುಚ್ಚಿತು. ಅದರಿಂದಾಗಿ ಆಗಿನ ಪರಿಸ್ಥಿತಿಯು ತುಂಬಾ ಭಯಾಸ್ಪದವಾಗಿ ಮದ್ರಾಸಿನ ಆಗಿನ ಮುಖ್ಯ ಸಚಿವರ್ಯರಾದ ಮಾನ್ಯ ಶ್ರೀ ರಾಜಗೋಪಾಲಾಚಾರ್ಯರು ಜನತೆಗೆ ಅಭಯದಾನವನ್ನು ಕೊಡಬೇಕಾಗಿ ಕೂಡಾ ಬಂತು. ಮಾನ್ಯರು 1938ನೇ ಜೂನ್ ತಾ 25 ರಲ್ಲಿ ಮದ್ರಾಸು ಸಂಸ್ಥಾನದ ಪ್ರಾಮುಖ್ಯ ... ಪತ್ರಗಳನ್ನು ರಿಜರ್ವ್ ಬೇಂಕಿನವರಿಂದ ಪರೀಕ್ಷಿಸಲ್ಪಡುವ ಬಗ್ಗೆ ಮದ್ರಾಸು ಸರಕಾರದವರು ಉಪಾಯಗಳನ್ನು ಕೈಕೊಳ್ಳುತ್ತಿದ್ದಾರೆಂಬ ಅಪ್ಪಣೆ ಕೊಡಿಸಿದರಿಂದ ಅಂದಿನ ಗಲಭೆಯು ನಿವಾರಣೆಯಾಗಿ ಜನತೆಗೆ ಸ್ವಲ್ಪ ಮನಃಶಾಂತಿಯು ಲಭಿಸಿತು. ಆದರೆ ಕಾನೂನು ಮೇರೆಗೆ ಬೇಂಕಿನ ಆಡಳಿತೆಯವರು ತಾವಾಗಿ ಒಪ್ಪದ ಹೊರತು ಅಂಥಹದೊಂದು ಲೆಕ್ಕ ವಿಮರ್ಶೆಯು ಸಾಧ್ಯವಿದ್ದಿಲ್ಲ ಹಾಗಾಗಿ ಅಂದಿನ ಬೇಂಕುಗಳ ಗಿರಾಕಿ ವರ್ಗದವರ ಮನೋಚಾಂಚಲ್ಯವನ್ನು ಹೋಗಲಾಡಿಸಿ ಶಾಂತಿ ನಿರ್ಮಾಣ ಉಂಟಾಗಬೇಕಾದರೆ ಬೇಂಕುಗಳು ತಾವಾಗಿಯೇ ರಿಜರ್ವ್ ಬೇಂಕಿನವರಿಂದ ಲೆಕ್ಕ ಪರೀಕ್ಷೆಯನ್ನು ಮಾಡಿಸಲಿಕ್ಕೆ ಮುಂದೊತ್ತಬೇಕೆಂಬ ಮಾನ್ಯ ಪ್ರಧಾನರ ಹೇಳಿಕೆಯ ಗೂಢಾರ್ಥ. ಅದರಂತೆ ಕೆನರಾ ಬೇಂಕಿನವರು ತಮ್ಮ ಯಾವತ್ತು ಲೆಕ್ಕಪತ್ರಗಳನ್ನೂ, ರಿಜರ್ವ್ ಬೇಂಕಿನ ಯಾವನೊಬ್ಬ ಹುದ್ದೆದಾರನಿಂದ ಪರಿಶೋಧನೆ ನಡೆಸುವಂತೆ ತಾವಾಗಿಯೇ ರಿಜರ್ವ್ ಬೇಂಕಿನ ಗವರ್ನರರಿಗೆ ಪತ್ರ ಕೊಟ್ಟರು.

(ಮುಂದುವರಿಯುವದು)

MADRAS PROVINCIAL WAR COMMITTEE

EDINBURGH IS A FINE CITY

IT HAS NOW CLAIMED THE

PRIVILEGE OF REPLACING

TWO FINE SHIPS

H. M. S. PRINCE OF WALES

AND

H. M. S. REPULSE.

WE WANT MORE SHIPS

MORE MEN

MORE MONEY

CAN YOU HELP? AND WILL YOU?

CONFIDENCE

is a great asset in building Business.

The Bombay Life Assurance Company Limited.

has created Public Confidence

by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India,
Including Indian States.

Udipi, Mangalore, Calicut,
Madras, Trivandrum, Bangalore City,
and Bombay 4.



"ಎವರೆಸ್ಟ್ ಗೋಲ್ಡ್" ಫ್ಯಾಷನ್ ಚೈನುಗಳು.

ಎಲ್ಲಾ ಕಾಲೇಜು ವಿದ್ಯಾರ್ಥಿನಿಯರು ಮೋಹಿಸಿ ಧರಿಸುವ ಚೈನುಗಳು

ಈ ಚೈನುಗಳು 5 ವರುಷ ಗ್ಯಾರಂಟಿ ಕೊಡಲಾಗುವ ಎವರೆಸ್ಟ್ ಚಿನ್ನದಿಂದ ತಯಾರಿಸಲ್ಪಟ್ಟು ಅತ್ಯುತ್ತಮ ವಿವಿಧ ಜಾತಿಯ ಕಲ್ಲುಗಳಿಂದ ಪೋಣಿಸಲ್ಪಟ್ಟು ಎಲ್ಲರಿಗೂ ಮನಸಂತೋಷಪಡಿಸುವಂತಹದು ಇದನ್ನು ಧರಿಸಿದ ಮಾತ್ರದಿಂದ ಕೊರಳಿಗೆ ಶೋಭೆ ಬರುವುದು. ಹೆಚ್ಚೇಕೆ ಸರ್ವರ ದೃಷ್ಟಿಯೂ ಈ ಕೊರಳಿನ ಕಡೆಗೇನೇ ಆಕರ್ಷಿಸಲ್ಪಡುವುದು.

24 ಇಂಚು ಉದ್ದದ ಚೈನಿಗೆ ರೂಪಾಯಿ 4 – ಪೋಸ್ಟೇಜು ಪ್ರತ್ಯೇಕ. ಇಂದೇ ಆರ್ಡರನ್ನು ಕೊಡಿರಿ.

The Everest Agencies,
P. O. BASAVANGUDI, BANGALORE CITY.

ಟೆಂಡರ್ ನೋಟೀಸು.

ಉಡುಪಿ ಮುನ್ಸಿಪಾಲಿಟಿಯ 1942-43ನೇ ವರ್ಷದ ಕಾಮಗಾರಿಕೆಯಬಗ್ಗೆ ತಾ. 19-1-42ನೇ ಸೋಮವಾರ ಅಪರಾಹ್ನ ಮೂರು ತಾಸಿನ ತನಕ ಕಂಟ್ರಾಕ್ಟರಿಂದ ಟೆಂಡರುಗಳು ಸ್ವೀಕರಿಸೋಣಾಗುವವು. ಮುನ್ಸಿಪಾಲಿಟಿಯ ದಾಖಲೆಯಲ್ಲಿ ರಿಜಿಸ್ಟ್ರಿಯಾಗದ ಉಮೇದ್ವಾರರು ರೂಪಾಯಿ 5-ನ್ನು ಮುನ್ಸಿಪಲ್ ಖಜಾನೆಗೆ ಪಾವತಿ ಮಾಡಿ ಕಂಟ್ರಾಕ್ಟರಾಗಿ ರಿಜಿಸ್ಟರ್ ಮಾಡಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಮುನ್ಸಿಪಲ್ ಆಫೀಸು ಸಮಯ ಖುದ್ದು ಬಂದು ಪಡೆಯಬಹುದು.

ಕಾಮಗಾರಿಕೆಯ ತಪಶೀಲು.

ಕಾಮಗಾರಿಕೆಯ ವಿವರ,	ಅಂದಾಜು ಖರ್ಚು.	ಟೆಂಡರ್ ಡಿಪೋಜಿಟ್
ಕರಾವಳಿ ರಸ್ತೆಯ ದುರುಸ್ತಿ,	ರೂಪಾಯಿ 2000/-	ರೂಪಾಯಿ 100/-

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ "ಗೊನೊಕಿಲರ್" ರಿಜಿಸ್ಟರ್ಡ್

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸಂಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ್' ಎಂಬ ಕ್ರಿಮಿಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ ರೋಡ್, ಮುಂಬಯಿ.

Sole Manufacturer **DR. D. N. JASANI, Vittalbhai Patel Road, BOMBAY 4**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟಡ,
ಉಡುಪಿ.

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳಿವೆ.

ಎಲ್. ರಾಮಚಂದ್ರ ನಾಯಕ್,
ಪ್ರೊಪ್ರೈಟರ್.

Degrees: Books: Medicines

Free H. L. M. S. M. B. H. M. D. etc. Free Homeo-Ayur-Unani-Naturo degree By post also—Practitioners also get soon. Homeo Materiamedica, Rs. 5. Homeo practice book Rs 4, Insanity Cure Pills Rs. 10 Enclose 2 annas stamp.—

Principal, Indian Homeopath Institute & Society (Govt. Regd.)
P O Mahuva, (Kathiawar [K. India.)

Sidha-Kalpa Kavach (Regd.)

No 3 Rs. 3, No 2 Rs 5 No. 1. Rs 7 Special Rs 10, Extra Special Rs. 17, for love marriage health, wealth, Ask any six questions with M. O. Re 1/4 and get correct answer by return post Life reading Rs 2 No V. P. P. Send M. O. Free pamphlets Prof. Dr. N. H. Chhatbar.
P. O. Mahuva (Kathiawar India.)

...ಸೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋಶರಕ್ಕೆ ಹಾದೀ ಹಾಗು ಕತ್ತುತ್ತಿದ್ದರೆ, ...ರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ...ಯುವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ...ಗಿದ್ದರೆ, ಮೂಲವ್ಯಾಧಿ, ಬಗೇಂಪ್ರ, ಗಂಡುಮಾಲಿ, ಕೈಕಾಲು ಶೂಲಿ, ಅಸ್ಥಾಂಗ ...ಯು ನಡುಸೋಯುವದು ಸ್ತ್ರೀಯರಿಗೆ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ...ಟು ಗರ್ಭಿಯಿಂದ ಗರ್ಭಕೋಶ ನಾಶಗೊಂಡಿದ್ದರೆ, ಸರಿಯಾಗಿ ಋತುವಾಗದಿ...ರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು...ದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪ...ಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ...ಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸ...ಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ...ತುಪ್ಪದಲ್ಲಿ ತಕ್ಕೊಳ್ಳಬೇಕು

ಪಥ್ಯ. ಹುಳಿ ಖಾರ, ಕುಂಬಳಕಾಯಿ, ಬಕ್ಕಿಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ-**

...ಏಜಂಟರು—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ,ಬಾಗಲ...ಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ—ಧಾರವಾಡ ಫಾರ್ಮಸಿ, ...ದಾವಣಗೇರಿ:—ದಾವಣಗೇರಿ ಸ್ಟೋರ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**

ಆಯುರ್ವೇದ ಔಷಧಾಲಯ ಗದಗ

ವಿಮಾ ಏಜಂಟರಿಗಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಪ್ರತಿನಿಧಿಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ವಿಚಾರಿಸುತ್ತಿರುವುದಾದರೆ ನಿಮ್ಮೊಡನೆ ಪಿಡಾರಿಸಿರಿ—

ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.

...ಕೆ. ಕೆ. ನಾರಾಯಣ ರಾವ್, ಸ್ಪೆಶಿಯಲ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.

...ಕೆ. ಕೆ. ಗಣಪಯ್ಯ ಶೆಟ್ಟಿ, ಸ್ಪೆಶಿಯಲ್ ಆರ್ಗನೈಜರ್, ಉಡುಪಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್

...ಷ್ಟ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—ಆಮಲಕೀ ತೈಲ.
...ನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು—ಆಮಲಕೀ ತೈಲ.
...ಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ.
...ರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
...ಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ—ಆಮಲಕೀ ತೈಲ.
...ತಿಯೊಬ್ಬ ಗೃಹಸ್ಥರಿಗ ಬೇಕಾದುದೇ—ಆಮಲಕೀ ತೈಲ.
...ವೃದ್ಧ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ
...ರತದ ಮಹಿಳೆಯರು ಪ್ರೀತಿಸುವರು—ಆಮಲಕೀ ತೈಲ.
...ಗುವ ತಾರೆಯೇ-ಕೂದಲಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
...ನೆಯರು ಮೆಚ್ಚುವರು—ಆಮಲಕೀ ತೈಲ.
...ತಾದಿ ತ್ರಿದೋಷನಾಶಕವೇ—ಆಮಲಕೀ ತೈಲ.
...ಶೋಧಿತ ತಿಲತೈಲದಿಂದಲೇ ತಯಾರಿಸಿದ—ಆಮಲಕೀ ತೈಲ.
...ಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ
...ವ್ಯರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ

ಆಮಲಕೀ ತೈಲವನ್ನೇ ಉಪಯೋಗಿಸಿರಿ

...ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) **ಕುಂಜಾಲು**

...ಕೆಸ್ಟರು:-ನವಭಾರತ ಬುಕ್‌ಡಿಪೋ, ಉಡುಪಿ, ಗಣಪಯ್ಯ ಲಕ್ಷ್ಮೀನಾರಾಯಣ ಬ್ರದರ್ಸ್, ಕೋಟ ...ಕನಲ್ ಮೆಡಿಕಲ್ ಸ್ಟೋರ್ಸ್ ಸ ಬ್ರಹ್ಮಣ್ಯ, ದ. ಕ.

ASIAN ASSURANCE CO. LTD.

EST 1910

Progress as on 31—12—1940.

Paid up Capital	...	Rs. 4,89,750
Life Fund Exceed	...	80,00,000
Assets Exceed	....	1,00,00,000
Business in Force Exceed	...	4,17,00,000

War or No War "Asian" has maintained its steady Progress. Join its Agency Force

J. A. Putran,

Branch Manager

MANGALORE

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫಾಕ್ಟರಿ, ಬೆಂಗಳೂರು.

ಧಾತುಪುಷ್ಟಿಲೇಹ

ಇದು ಬಾಲಕರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೋಮರೋಗ, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು, ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನು ಉಂಟುಮಾಡುವದು. ಬಾಟ್ಲ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಕೊಡುವ, ರಕ್ತಧಾತುವಿನ ಅಭಿವೃದ್ಧಿಗಾಗಿ, ಬಾಣಂತಿಯರು ಪುಷ್ಟಿ ಹೊಂದವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1) [illegible], ಕಮಿಶನ್ ಅಂಡ್ ಜನರಲ್ ಮರ್ಚಂಟ್ಸ್, 183 ಸ [illegible] ರೋಡ್, [illegible], ನಂಬ್ರ 12 (2) ಜನರಲ್ ಸ್ಟೋರ್ಸ್, ಜ. ಜ. ಕಿ, [illegible]. (3) [illegible] ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, [illegible], ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಎ. ಸುಬ್ರಮ್ಮ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ (7) ಡಾ। ಶ್ರೀನಿವಾಸ. ಸ್ಟೋ, ಪುತ್ತೂರು (8) [illegible] ಶೆಟ್ಟಿ, ಬೆಳ್ತಂಗಡಿ (9) ನವಭಾರತ ಬುಕ್ ಡಿಪೋ, [illegible], ಉಡುಪಿ (10) [illegible] ಫಾರ್ಮಸಿ, [illegible]. (11) [illegible] ಶ್ರೀ [illegible], ಶ್ರೀ [illegible]. (12) [illegible]. (13) [illegible], ಚಿಕ್ಕಮಂಗಳೂರು

ಎಚ್ಚರಿಕೆ.

ಜತೆಯವರಲ್ಲಿ ಮುಚ್ಚಿನ ಚಿಂತೆಯು ನಿಮಗೆ ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತವೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ, ಮುಂತಾದ ದುಷ್ಪರಿಣಾಮಗಳನ್ನು ತೆಗೆದು ಹಾಕುತ್ತವೆ. ಬುದ್ಧಿಬಲ, ಪರಾಕ್ರಮ, ಕೆಲಸ ಹುರುಪು ಇವುಗಳನ್ನು ಬೆಳೆಸುತ್ತವೆ. **ಬೆಲೆ ರೂ ೨—೮—೦**

ವಿಳಾಸ: 'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್,

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಕ್ ಮುಲಾಮು. —

ಇತ್ತೀಚೆಗೆ ನಮ್ಮ

ವಿಲಿಯಮ್ ಎಂಡ್ ಕೋ—ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ಸಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ: ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೇಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ಸಹಾಯದಿಂದ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ಶುಚಿ ರುಚಿಯಾದ ದಿನವಹಿ ಸ್ಪೆಷಲ್ ತಿಂಡಿಗಳು!

ಬೇಸಿಗೆ ಕಾಲದ ತಂಪಾದ ಪಾನೀಯಗಳು!!

ಕಿವಿಗೆ ಇಂಪಾದ ಗಾಯನ! ವಿಶಾಲವಾದ ಆವರಣ!!!

ಸತ್ಯನಾರಾಯಣ ರೆಸ್ಟೋರೆಂಟ್

(ನಂ. 233.)

ಹಳೇ ಕಾನಕಾನ ಹಳ್ಳಿ ರಸ್ತೆ. ಲಾಲಬಾಗ್

ಹಿಂದಿನ ಗೇಟಿನ ಎದುರು

ವಿಶ್ವೇಶ್ವರಪುರಂ. **ಬೆಂಗಳೂರು ಸಿಟಿ.**

ಪ್ರೊಪ್ರೈಟರ್ — **ಎ. ಪಿ. ಶ್ರೀನಿವಾಸ ಕಾರಂತ.**

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ ಪತ್ತೇದಾರಿ, ಪೌರಾಣಿಕ ಕಾದಂಬರಿಗಳು ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ, ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	**ಅನಾಥನಂದಿನಿ**	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ಸನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೨ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು— **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾದಗಿದೆ

ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವವು

ಸೀಸೆ ಒಕ್ಕೆ ೧೨ ಆಣೆ;

ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು— **ನವಭಾರತ ಬುಕ್ ಡಿಪೋ, ಉಡುಪಿ**

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ** 1920

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ... ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವ.

Crown Rubber Stamp Co. 18 Balmat Road, MANGALORE.

Approved firm by the Govt. Mysore
Certified by the Agent of the Govt. of India in Ceylon

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅನೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೫ **ಕೊಡಿಯಾಲಬೈಲು, ಮಂಗಳೂರು**

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI

Regd. No. M. 3618 | Estd. 1921 ಸ್ಥಾಪಿತ

ಸಾಹುಕಾರರಿಗೂ ವರ್ತಕರಿಗೂ ಬೇಕಾಗುವ ತರ ತರದ ಫಾರ್ಮ್,
ಶಾಲೆಗೆ ಪುಸ್ತಕಗಳೂ ಲೆಕ್ಕ ಪುಸ್ತಕಗಳೂ ಸುಲಭ ದರದಲ್ಲಿ ನಾಜೂಕಾಗಿ ಮಾಡಿ ಕೊಡಲ್ಪಡುತ್ತವೆ.
ನವಯುಗ ಪ್ರೆಸ್, ಉಡುಪಿ

1942ನೇ ಇಸವಿಯ
'ವರ್ಷ ಭವಿಷ್ಯ'
ಬೆಲೆ
0—3—0
ಅಗತ್ಯ ಓದಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಪುಟ ೨೧ | Vol. 21

ಸಂಪಾದಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

29—1—1942

ಸಂಚಿಕೆ ೨೧ | No. 21

THE VIJAYA BANK, LTD.

Head Office Mangalore.

BRANCHES Kadri Mangalore, Hampankatta Mangalore, Udipi, Coondapur, Karkal, Kaup & Brahmavar

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಸೇಕಡಾ 4ರ ದರದಲ್ಲಿ, 4 ಯಾ ಹೆಚ್ಚು ತಿಂಗಳುಗಳಿಗೆ **1942**ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲಿ ಸ್ವೀಕರಿಸಲ್ಪಡುತ್ತವೆ

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಪ್ರಧಾನ ಕಾರ್ಯಾಲಯ ಮಂಗಳೂರು.

ಶಾಖೆಗಳು:- ಕದ್ರಿ-ಮಂಗಳೂರು, ಹಂಪನಕಟ್ಟೆ-ಮಂಗಳೂರ, ಉಡುಪಿ, ಕುಂದಾಪುರ, ಕಾರ್ಕಳ, ಕಾಪು ಮತ್ತು ಬ್ರಹ್ಮಾವರ

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರುಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, **ಬೆಂಗಳೂರು.**

TEN LACS IN TEN MINUTES.

The lists of our 5% Cumulative Preference Shares which opened on 19th January closed the same day before noon.

The subscriptions received within those few minutes totalled over Rupees fifteen Lacs.

We thank our customers, friends and depositors whose unstinted support enabled us to close the lists in so short a time.

We thank them for this proof of their sympathy and confidence and assure them that we will try to deserve this confidence in every way possible.

CANARA BANK LIMITED.

Estd. 1906

ಈ ವಾರದ ಭವಿಷ್ಯ

ತಾರೀಕು ೨೯—೧—೪೨ರಿಂದ ತಾರೀಕು ೫—೨—೪೨ರ ವರೆಗೆ

ಮೇಷ—ನಿಮ್ಮ ಪರಿಶ್ರಮವು ಪೂರ್ಣ ಫಲದಾಯಿಯಾಗುವುದರಿಂದ ನಿಮಗೆ ಆರ್ಥಿಕ ವಿಷಯಕವಾದ ಚಿಂತೆಯು ಸ್ವಲ್ಪವೂ ಇರದು. ದುಡಿದ ಧನವನ್ನು ಹೆಚ್ಚಾಗಿ ಸಂಗ್ರಹಿಸಿಡುವಿರಿ. ಮನಃಸಂಕಲ್ಪಗಳು ಕಾರ್ಯಗೂಪಕ್ಕೆ ಬರಲಿವೆ. ಗೃಹಸುಖಕ್ಕೆ ಕೊರತೆಬಾರದು. ಆದರೆ ನಿಮ್ಮ ಮನೆಯಲ್ಲಿರತಕ್ಕ ಕುಜ ಶನಿಗಳು ಭಯ ಮತ್ತು ಅಪಾಯ ಕಾರಿಗಳಿರುವರು. ಶಸ್ತ್ರಾಸ್ತ್ರಗಳಿಂದಲೂ ಅಪ್ತೇಷ್ಟರಿಂದಲೂ ದುಃಖವುಂಟಾಗಲಿದೆ. ತಾ. 31ರಿಂದ 4ರ ವರೆಗಿನ ದಿನಗಳಲ್ಲಿ ವೈರ, ಕಲಹ, ಶೋಕಾದಿಗಳು ಸಂಭವಿಸದಂತೆ ಜಾಗ್ರತರಾಗಿರಿ.

ವೃಷಭ—ವ್ಯಯದಲ್ಲಿರತಕ್ಕ ಸ್ವಂಗಾರಕರು ಜನ್ಮದಲ್ಲಿರತಕ್ಕ ಗುರು ಮತ್ತು ಭಾಗ್ಯದಲ್ಲಿರತಕ್ಕ ರವಿ ಇವರೆಲ್ಲರೂ ಪ್ರತಿಕೂಲರಿರುವುದರಿಂದ ಆರ್ಥಿಕ ಸಂಕಷ್ಟ, ಪರ್ಯಟನ, ಮಾನಸಿಕ ಭಯ,ವ್ಯಥೆಗಳು ಸದಾ ನಿಮ್ಮನ್ನು ಹಿಂಬಾಲಿಸುವವು. ಸ್ಥಾನಚಲನೆಯ ಸಂಭವವೂ ಕೂಡ ಇದೆ. ಅನಾರೋಗ್ಯ ಪೀಡಿತರಾದ ನಿಮಗೆ ಆಕಸ್ಮಿಕ ಅನರ್ಥಗಳೊದಗಿ ಮುಂದೇನು ಮಾಡಬೇಕೆಂಬ ಯೋಚನೆಯೂ ಹೋಯದು. ನೌಕರಿ ಮತ್ತು ವ್ಯಾಪಾರ ಭಾಗದಲ್ಲಿ ಕ್ರಮವು ಸ್ಪರ್ಧಕವಾಗುವುದರಿಂದ ತಾ. 31. 1 ಈ ದಿನಗಳಲ್ಲಿ ಸುಖಿಗಳಾಗಿರುವಿರಿ.

ಮಿಥುನ—ಲಾಭಸ್ಥಾನದಲ್ಲಿ ಕುಜ ಶನಿಗಳು ಪ್ರಬಲರಾಗಿರುವುದರಿಂದಲೂ ಶುಕ್ರಾಚಾರ್ಯರ ಪೂರ್ಣಾನುಗ್ರಹವಿರುವುದರಿಂದಲೂ ನೀವೀ ವಾರದಲ್ಲಿ ಇಚ್ಛಾಧಿಕವಾದ ಫಲವನ್ನು ಪಡೆಯುತ್ತಿರುವಿರಿ. ವಿಜಯವು ನಿಮ್ಮ ಕರಗತವಾಗಿರುವುದರಿಂದ ಸರ್ವತ್ರ ಜನಾದರವು ದೊರೆವುದು. ಸ್ತ್ರೀಧನ ಪ್ರಾಪ್ತಿಯ ಯೋಗವಿದೆ. ಆದರೆ ಗೃಹಿಣಿಯು ಪ್ರತಿಕೂಲವಾಗಿ ವರ್ತಿಸಿ ನಿಮ್ಮ ಮನಸ್ಸಿಗೆ ಖೇದವನ್ನುಂಟುಮಾಡಲಿರುವಳು. ಪ್ರವಾಸದಿಂದ ಆರೋಗ್ಯ ಕೆಡಲಿದೆ. ತಾ. 31. 1, 5 ಪ್ರತಿಕೂಲ.

ಕರ್ಕಾಟಕ—ಈ ವಾರದಲ್ಲಿ ನಿಮಗೆ ಇಷ್ಟಕ್ಕಿಂತ ಅನಿಷ್ಟವು ದ್ವಿಗುಣವಾಗಿ ಪರಿಣಮಿಸಲಿದೆ. ವೃಥಾ ಪರ್ಯಟನದಿಂದ ಅರ್ಥ ಆರೋಗ್ಯಗಳಿಗೆ ಹಾನಿಯಾಗುವದು. ಮುಂಚೆಯೇ ಚಂಚಲರಾಗಿದ್ದ ನಿಮ್ಮ ಮನಸ್ಸು ಈಗೀಗ ವಿಶೇಷ ಚಾಂಚಲ್ಯವನ್ನು ಹೊಂದುವದು. ಅಸತ್ಕ್ರಿಯೆಗಳಲ್ಲಿ ಪ್ರವರ್ತಿಸಿ ಸಮಾಜದ ನಿಂದೆಗೆ ಗುರಿಯಾಗುವ ಪ್ರಸಂಗ ಬಂದೀತು. ಸ್ತ್ರೀ ನಿಮಿತ್ತ ಕಷ್ಟಾನಿಷ್ಟಗಳನ್ನು ಹೊಂದುವಿರಿ. ದಿನಯಾಪನೆಗೆ ತಕ್ಕಷ್ಟು ಧನವನ್ನು ಸಂಪಾದಿಸಲು ಶಕ್ತರಾದ ನೀವು ತಾ. 31. 1. 5 ಈ ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಸಿಂಹ—ನಿಮ್ಮ ಗೃಹಪತಿಯಾದ ರವಿಯ ಅನುಗ್ರಹದಿಂದ ನಿಮ್ಮ ಕೆಲವು ಮನೋರೋಗಗಳು ನಿವಾರಣೆಹೊಂದುವವಾದರೂ ವಿಪಕ್ಷೀಯರ ಆಧಿಕ್ಯದಿಂದ ಮನಸ್ಸಿಗೆ ನೆಮ್ಮದಿಯು ಸ್ವಲ್ಪವೂ ಸಿಗಲಾರದು. ಪರಿವಾರವ್ಯತಿರೇಕದಿಂದ ನಿಮ್ಮ ಶಕ್ತಿಯುಕ್ತಿಗಳು ಬೆಳಕಿಗೆ ಬರಲೊಲ್ಲವು. ಶತ್ರು ಜನರ ಕುಯುಕ್ತಿಗಳಿಗೆ ಸಿಲುಕಿ ಹಲ ಕೆಲವು ಕಾರ್ಯಗಳಲ್ಲಿ ಪರಾಭವ ಹೊಂದುವಿರಿ. ಸ್ವಪ್ರೇತರ ಸಕಲ ವೃತ್ತಿಯವರಿಗೂ ಆಯಕ್ಕಿಂತ ವ್ಯಯ ಅಧಿಕವಾದೀತು. ತಾ. 1. 1. 5 ಅರ್ಥ ಮಾನಗಳಿಗೆ ಹಾನಿಕಾರಿಗಳು.

ಕನ್ಯಾ—ನಿಸರ್ಗತಃ ಸೌಮ್ಯರಾದ ಗ್ರಹರು ನಿಮಗೆ ಶುಭವಾಗಿರುವುದರಿಂದ ಈ ವಾರವೆಲ್ಲ ನಿಮ್ಮ ಹಲವಾರು ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ. ಉದ್ಯೋಗದಲ್ಲಿ ಉನ್ನತ ಸ್ಥಾನ ಪ್ರಾಪ್ತಿಯಿದೆ. ಧನಧಾನ್ಯಗಳು ಪರಿಪೂರ್ಣವಿರುವುದರಿಂದ ಗೃಹಸ್ಥಾಶ್ರಯವಿರದು. ಬಂಧು ಮಿತ್ರರ ಸಹಕಾರವು ಅತ್ಯುತ್ತಮವಿರುವದು. ಆದರೆ ಬಾಹ್ಯಾಂತರಿಕ ರೋಗಗಳು ಅಧಿಕವಾಗಿ ಪೀಡಿಸುವವು. ತಾ. 2. 3. 4 ಈ ದಿನಗಳು ಅತಿವ್ಯಯ, ಅನಾರೋಗ್ಯಕಾರಿಗಳಾಗಿವೆ.

(೧೧ನೇ ಪುಟ ನೋಡಿರಿ.)

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜ ೮ ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ—ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ. ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದ ಹುರುಪು ಇವುಗಳನ್ನು ಬೆಳೆಸುತ್ತದೆ. ಬೆಲೆ ರೂ. ೨—೮—೦

ವಿಳಾಸ: 'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್',

24—ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ನವಯುಗದ

ಪರ್ಯಾಯ ವಿಶೇಷ ಸಂಚಿಕೆ

ನೂರು ಪುಟಗಳು! **ಐವತ್ತರಷ್ಟು ಚಿತ್ರಗಳು!**

ಪ್ರಸಿದ್ಧರನೇಕರ ವಿಚಾರವರ ಲೇಖನ, ಕತೆ, ಕವನಗಳು.

ಬೆಲೆ ಬರೇ ೦ ೮ ೦.

೦ ೯ ಂಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುವುದು. (ವಿ. ಪಿ. ಕ್ರಮವಿಲ್ಲ)

ಮೆನೇಜರ್, **ನವಯುಗ**, ಉಡುಪಿ.

BHUVANENDRA PRODUCTS LTD.,

Head Office and Factory:

Katapadi, S. Kanara

Depots:

1 Mah ratha Galli. Hubli

2. 57 Big street, Triplicane. Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ

ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ**, (2) **ಶ್ರೀ. ಆರ್. ಎಸ್. ಶೆಣೈ ರಥಬೀದಿ.**
(3) **ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ** L. I. M.

ಚುಟುಕು ಟೀಕೆ-ಟಿಪ್ಪಣಿ

ಅಪಜಯಕ್ಕಾಗಿ ಇಟೆಲಿಯಾನರ ಪ್ರಾರ್ಥನೆ.

ಇತರರು ರಾತ್ರಿ ಹಗಲು ವಿಜಯಕ್ಕಾಗಿ ಹಾರೈಸುತ್ತಿರುವಾಗ ಇಟೆಲಿಯ ಜನರು ಅಪಜಯಕ್ಕಾಗಿ ಪ್ರಾರ್ಥಿಸುತ್ತಿದ್ದಾರಂತೆ! ಇತ್ತಲಾಗಿ ಇಟಲಿ ಬಿಟ್ಟು ಬಂದಿರುವ ರಾಜನೀತಿಜ್ಞರೊಬ್ಬರಿತ್ತಿರುವ ಅಭಿಪ್ರಾಯವಿದು. ಅದೇಕೆಂದು ಬಲ್ಲಿರಾ? ತಮ್ಮ ಮೇಲೆ ಅಧಿಕಾರ ನಡಿಸುವ ಜರ್ಮನರನ್ನೂ ಈಗಣ ಸರಕಾರವನ್ನೂ ನಿವಾರಿಸಲು ಅವರು ಕಾಣುವ ಹಾದಿ ಅದೊಂದೇ. ತಮ್ಮ ಪೀಡೆಯನ್ನು ತಾವಾಗಿ ನಿವಾರಿಸಿಕೊಳ್ಳುವಷ್ಟು ಧೈರ್ಯಸ್ಥೈರ್ಯವಿಲ್ಲದ ಅಂಜುಗುಳಿಗಳೇ ಇಟೆಲಿಯಾನರು? ಅವರೇ ಕ್ರಾಂತಿಯನ್ನೆಬ್ಬಿಸುವ ಸಾಹಸ ಮಾಡಬಾರದೇಕೆ?

ರಷ್ಯದ ವಿಜಯದ ರಹಸ್ಯ

ರಷ್ಯೋ-ಜರ್ಮನ್ ಯುದ್ಧದಲ್ಲಿ ಸೋವಿಯೆಟ್ ವಿಮಾನಪಡೆಯು ಗಣನೀಯ ಸ್ಥಾನ ಪಡೆದಿದೆ. ಆದುದರಿಂದಲೇ ಅಲ್ಲಿ ನಾಝಿ ವಿಮಾನ ಪಡೆಯ ಆಟವು, ಆರಂಭದಲ್ಲಿ ಇಂಗ್ಲೆಂಡಿನಲ್ಲಿ ನಡೆದಂತೆ ನಡೆಯಲು ಸಾಧ್ಯವಾಗಲಿಲ್ಲ. ರಷ್ಯದ ವಶ 6000 ಬೋಂಬರ್ ಮತ್ತು 3000 ಫೈಟರ್ ವಿಮಾನಗಳಿದ್ದುವು. 10,000 ಮಂದಿ ವಿಮಾನ ಚಾಲಕರು, 30 ಸಾವಿರ ಮಂದಿ ವೈಮಾನಿಕ ಕೆಲಸಗಾರರಿದ್ದರು. ವಿಮಾನ ಕೈಗಾರಿಕೆಯಲ್ಲಿ ಜರ್ಮನಿಯಿಂದ ಹಿಂದಿರಲಿಲ್ಲ ಸೋವಿಯೆಟ್ ರಷ್ಯ. ರಷ್ಯೋ-ಜರ್ಮನ್ ಯುದ್ಧಾರಂಭದಲ್ಲೇ ಸೋವಿಯೆಟ್ ವಿಮಾನಬಲವನ್ನು ನಿರ್ನಾಮಗೊಳಿಸಲಾಗಿದೆಯೆಂದು ಗೊಬ್ಬೆಲ್ಸರು ಉದ್ಘೋಷಿಸಿದರೂ ಈಗಲೂ ಅದು ನಾಜಿಗಳಿಗೆ ಕಂಪಿಸುವಷ್ಟು ಗಟ್ಟಿಯಾಗಿರುವದು. ಆದುದರಿಂದಲೇ ಸೋವಿಯೆಟ್ ರಷ್ಯಕ್ಕೀಗ ಜರ್ಮನಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ.

ಸಿಂಗಪುರದ ಪ್ರಾಮುಖ್ಯತೆ.

ಮಲಯ, ಫಿಲಿಪ್ಪೈನ್ಸ್ ಮತ್ತು ಬೋರ್ನಿಯೋ ಮೊದಲಾದ ಸ್ಥಳಗಳಲ್ಲಿ ಸುಲಭವಾಗಿ ಜಯ ಹೊಂದಿರುವ ಜಾಪಾನರೀಗ ಸಿಂಗಪುರ ನೌಕಾನಿಲಯವನ್ನು ಹಿಡಿಯುವ ಸಾಹಸಕ್ಕೆ ಮುಂದಾಗಿದ್ದಾರೆ. ಇಷ್ಟರಲ್ಲೇ ಶಾಂತ ಸಾಗರದ ನೈಋತ್ಯ ಭಾಗವು ಸಂಪೂರ್ಣವಾಗಿ ಜಾಪಾನರ ವಶವಾಗಿದೆ. ಸಿಂಗಪುರವನ್ನು ಅವರು ಗೆಲ್ಲುವಂತಾದರೆ ಮತ್ತೆ ಅವರನ್ನು ತಡೆಗಟ್ಟುವುದೇ ಅಸಾಧ್ಯವೆನ್ನಬಹುದು. ಆದುದರಿಂದ ಸಿಂಗಪುರದ ಮೇಲೆ ಹೊಂದಿದೆ ದೂರ ಪ್ರಾಚ್ಯದ ಯುದ್ಧದ ಅದೃಷ್ಟ. ಅದನ್ನು ಜಾಪಾನರು ಶೀಘ್ರವಾಗಿ ಗೆಲ್ಲಲು ಶಕ್ತರಾದರೆ– ಮತ್ತವರ ಕೈಮೇಲಾದಂತೆಯೇ ಸರಿ. ಆ ಶಕ್ತಿ ಜಾಪಾನರಿಗಿರುವುದೋ ನೋಡಬೇಕು.

ಸರಕಾರವು ಈಗ ಕಣ್ತೆರೆಯಿತೇ?

ಹಿಂದೂ ದೇಶದಲ್ಲೇ ಮೋಟರ್ ವಾಹನ ತಯಾರಿ ಕಾರ್ಖಾನೆ ಸ್ಥಾಪಿಸಲು ಸರ್. ಎಮ್. ವಿಶ್ವೇಶ್ವರಯ್ಯನವರು ಈವರೆಗೆ ಮಾಡಿಕೊಂಡು ಬಂದಿರುವ ಪ್ರಯತ್ನವೆಲ್ಲಾ ನಿಷ್ಫಲವಾಗಿರುತ್ತದೆ. ಸರಕಾರವೇ ಆ ಕುರಿತು ವಕ್ರದೃಷ್ಟಿ ಬೀರಿತ್ತು. ಈಗ ಕೋಟ್ಯಾಧೀಶ ಬಿರ್ಲಾಗರು ರೂ. 10 ಕೋಟಿ ಭಂಡವಾಳದ ಕಂಪೆನಿ ಮೂಲಕ ಬರೋಡ ಸಂಸ್ಥಾನದ ಓಖಾ ಎಂಬಲ್ಲಿ ಮೋಟರ್ ವಾಹನ ತಯಾರಿ ಕಾರ್ಖಾನೆಯೊಂದನ್ನು ಸ್ಥಾಪಿಸುವ ಯೋಜನೆಯನ್ನಾರಂಭಿಸುತ್ತಾರೆ. ಅಮೆರಿಕದ ಕಂಪೆನಿಯೊಂದರ ಸಹಾಯದಿಂದ ಪ್ರಕೃತ ಈ ಕಾರ್ಖಾನೆಯಲ್ಲಿ ಟ್ರಕ್‌ಗಳನ್ನು ಮಾತ್ರ ತಯಾರಿಸಲಾಗುವುದು. ಜಾಪಾನ್ ಯುದ್ಧವು ಸರಕಾರದ ಕಣ್ಣು ತೆರೆಯಿಸಿರಬೇಕು. ಇಲ್ಲವಾದರೆ ಅದು ತನ್ನ ಮೂರ್ಖ ಧೋರಣೆಯನ್ನು ಥಟ್ಟನೆ ಬದಲಾಯಿಸುತ್ತಿದ್ದಿಲ್ಲ. ಈ ಕಾಲದಲ್ಲಿ ಯುದ್ಧಾವಶ್ಯಕ ಯಂತ್ರ ಸಾಮಾಗ್ರಿಗಳನ್ನು 6000 ಮೈಲು ದೂರದಿಂದ ತರಿಸುವುದು ಹೇಗೆ? ಹಿಂದು ದೇಶದಲ್ಲೇ ತಯಾರಿಸಿ ಒದಗಿಸಿ ಕೊಳ್ಳುವುದು ಹೇಗೆ?

ಚರ್ಚಿಲ್ಲರನ್ನು ಹಿಡಿವ ಯತ್ನ.

ಚರ್ಚಿಲ್ಲರು ಯುನೈಟೆಡ್ ಸ್ಟೇಟ್ಸಿನಿಂದ ಹಿಂತಿರುಗುವಾಗ ಅವರನ್ನು ಹಿಡಿಯಬೇಕೆಂದು ಏಕ್ಸಿಸ್ ರಾಷ್ಟ್ರಗಳು ಒಳಸಂಚು ನಡಿಸಿದ್ದರು. ಅವರದು ನಿಷ್ಫಲವಾಯಿತೆಂದು ತಿಳಿದು ಬರುತ್ತದೆ. ಅವರನ್ನೊಯ್ಯುವ ಹಡಗವನ್ನು ತಡೆಯಲು ಅಮೆರಿಕದ ಸಮುದ್ರ ಕರಾವಳಿಯಲ್ಲಿ ಹಲವು ಯು. ಬೋಟುಗಳು ಸಂಗ್ರಹಿಸಲ್ಪಟ್ಟಿದ್ದುವು. ಅವರು ದಕ್ಷಿಣ ಅತ್ಲಾಂತಿಕ ಸಾಗರ ಮಾರ್ಗವಾಗಿ ವಿಮಾನ ಮೂಲಕ ಹೋಗಬಹುದೆಂದು ಊಹಿಸಿ ತಡೆಯಲು ಹಲವು ವಿಮಾನಗಳನ್ನು ಸಂಗ್ರಹಿಸಲಾಗಿತ್ತು. ಚರ್ಚಿಲ್ಲರಂಥವರ ಸುರಕ್ಷಿತತೆಯ ಜವಾಬ್ದಾರಿ ಹೊತ್ತಿರುವ ಬ್ರಿಟಿಸ್ ಅಧಿಕಾರಿಗಳನ್ನು ವಂಚಿಸುವ ಪ್ರಯತ್ನವು ಮೂರ್ಖತನವಲ್ಲವೇ? ಒಂದುವೇಳೆ ಚರ್ಚಿಲ್ಲರನ್ನು ಹಿಡಿಯಲು ಸಾಧ್ಯವಾದರೂ ಜನತೆಯ ಉತ್ಸಾಹ ಕುಂದಿ ಹೋಗುವುದೆಂಬುದು ಬರಿಯ ಭ್ರಾಂತಿಯೇ ಸರಿ. ಅದರಿಂದ ಜನರು ಮತ್ತಷ್ಟು ಉರಿದೇಳದಿರುವರೇ?

ಆಶ್ಚರ್ಯಕರ ಪರ್ಯವಸಾನ

ಬರ್ಮಾದ ಸ್ವಾತಂತ್ರ್ಯಸಾಧನೆಯ ಕುರಿತು ಬ್ರಿಟಿಷ್ ಸರಕಾರವನ್ನೊಲಿಸಿಕೊಳ್ಳಹೋದ ಪ್ರಧಾನ ಮಂತ್ರಿ ಯು. ಸೋರವರ ಗತಿಯಾದರೂ ಅದೆಷ್ಟು ಆಶ್ಚರ್ಯಕರ! ಬರ್ಮಕ್ಕೆ ಸಾಮಂತ ಸ್ವರಾಜ್ಯವನ್ನು ಪಡೆವ ಅವರ ಪ್ರಯತ್ನವು ಫಲಿಸಲಿಲ್ಲ. ಬ್ರಿಟಿಷ್ ಸರಕಾರವು ಅಧಿಕಾರ ಬಿಟ್ಟುಕೊಡಲು ಸಿದ್ಧವಿರಲಿಲ್ಲ. ಆದರೆ ಸತ್ಕಾರ ಮತ್ತು ಮಾನ್ಯತೆಗೇನೂ ಕಡಿಮೆ ಇರಲಿಲ್ಲ. ತಾನು ಬರಿಗೈಯಿಂದ ಹಿಂದಿರುಗಿದಲ್ಲಿ ತನಗೆ ಸ್ವಾಗತ ದೊರೆಯಲಾರದೆಂದವರು ಸ್ಪಷ್ಟವಾಗಿ ಬ್ರಿಟಿಷ್ ಸರಕಾರಕ್ಕೆ ತಿಳಿಸಿದ್ದರು. ಯುದ್ಧದಲ್ಲಿ ಬರ್ಮೀಯರು ಸಂಪೂರ್ಣ ಮನಸ್ಸಿನಿಂದ ಸಹಕರಿಸಬೇಕಾದರೆ ಬರ್ಮಕ್ಕೆ ಸಾಮಂತ ಸ್ವರಾಜ್ಯವೀಯಬೇಕೆಂದು ಪಣ ತೊಟ್ಟಿದ್ದರು. ಯು. ಸೋರವರು ಬರಿಗೈಯಿಂದ ಹಿಂತಿರುಗದಂತೆ ಬ್ರಿಟಿಷ್ ಸರಕಾರವೇ ನೋಡಿರುವುದು. ತನ್ನ ಸ್ವಾಗತದ ಕುರಿತು ಯು. ಸೋರವರು ಚಿಂತಿಸಬೇಕಾಗಿಯೇ ಇಲ್ಲ. ಜಾಪಾನರೊಡನೆ ಸಂಪರ್ಕ ಬೆಳೆಸಿದ ಆರೋಪದಿಂದ ಅವರನ್ನು ನಿರ್ಬಂಧದಲ್ಲಿಡಲಾಗಿದೆ. ಬ್ರಿಟಿಷ್ ಸರಕಾರಕ್ಕೆ ಬೇಕಾದ ಸಹಕಾರವೀಯಲು ಸಿದ್ಧರಿರುವ ಸರ್. ಪಾಟುನ್‌ರವರನ್ನು ಪ್ರಧಾನ ಮಂತ್ರಿಗಳನ್ನಾಗಿ ಮಾಡಲಾಗಿದೆ.

ಉಪಾಧ್ಯಾಯರು ಬೇಕು.

ಉಡುಪಿ ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಹಾಗಾದ ಉಪಾಧ್ಯಾಯರು ಬೇಕು. ಅಪೇಕ್ಷೆಯುಳ್ಳವರು ಕೂಡಲೇ ಮುಖತಃ ನೋಡಬಹುದು. ಯಾ ಪತ್ರವ್ಯವಹಾರ ಮಾಡುವುದು.

K. Jagannath Nayak.
Manager,
Modern Higher Ele. School
Udipi

To every Mangalorean-to every Kanarite, this deserving appreciation conveys a convincing appeal:

The Managing Director,

The Popular Insurance Co. Ltd.,
MANGALORE

Death claims on Policy Nos. 57 & 1745
Late Mr. A. C. Mascarenhas.

Dear Sir,

I thank you for your cheque of Rs. 5,761/9 - on the Canara Banking Corporation, Ltd., Mangalore, in full and final settlement of the above death claims.

The adventages of effecting life assurance in the "**Popular**"- a company of our own district—are amply proved by the fact that out of the many policies held by my husband in different Companies, yours was the first to settle my claims. Your promptness and assistance throughout has been impressive.

I wish you more popularity and greater business especially in our own district.

Yours faithfully,
(Sd.) **Cecilia F. Mascarenhas**

Sturrock Road,
Mangalore, 20-1-1942

In insuring with and working for the 'Popular' you help the progress of a Life Office of your own District

The Popular Insurance Company, Limited.
MANGALORE.

'ಫನ್ ಫೇರೋ?' ಲೈಸೆನ್ಸ್ ಹೊಂದಿರುವ ಜುಗಾರಿ ಕಳವೋ?

ಪರ್ಯಾಯ ಉತ್ಸವ ಸಂದರ್ಭದಲ್ಲಿ ಉಡುಪಿಗೆ ಬಂದಿರುವ 'ಫನ್ ಫೇರ್' (ವಿನೋದಾವಳಿ) ಎಂಬುದು ಇನ್ನೂ ಉಡುಪಿಯಲ್ಲಿ ನಡೆಯುತ್ತಲೇ ಇದೆ. ಅದಕ್ಕೆ ಎಷ್ಟು ಸಮಯದ ಲೈಸೆನ್ಸಿರುವದೋ ತಿಳಿಯದು. ಪರ್ಯಾಯ ಉತ್ಸವವು ಮುಗಿದು ಹಲವು ದಿನಗಳಾದರೂ ಈ 'ಫನ್ ಫೇರು' ದಿನೇ ದಿನೇ ಹೆಚ್ಚೆಚ್ಚು ಜನರನ್ನು ಆಕರ್ಷಿಸುತ್ತಿದೆ. ಅದೇಕೆ? ಅದರ ವಿನೋದಾವಳಿ ಎಂಬುದು ಕೇವಲ ಆಡೊಂದು ನೋಗು. ಒಳಗೆ ಮುಖ್ಯವಾಗಿ ನಡೆಯುತ್ತಿರುವುದು ಜುಗಾರಿ. ಅದಕ್ಕೆ ಗೇಮ್ ಆಫ್ ಸ್ಕಿಲ್ (ಚಾತುರ್ಯದಾಟ) ಎಂಬ ವಂಚಕ ಹೆಸರು ಕೊಡಲಾಗಿದೆ. ಬೀಡಿ ಬೀಡ ಮಾರುವ ಮತ್ತು ಸಾಮಾನು ಹೊತ್ತು ಜೀವನ ನಿರ್ವಾಹಮಾಡುವ ಬಡವರಿಂದ ಹಿಡಿದು ದೊಡ್ಡ ವ್ಯಾಪಾರಿಗಳು, ವಕೀಲರುಗಳೇ ಮೊದಲಾದವರು ಈ ಜುಗಾರಿಯಾಡುವುದರಲ್ಲಿ ಅತ್ಯಾಸಕ್ತಿ ವಹಿಸುತ್ತಿದ್ದಾರೆ. ಎಷ್ಟೋ ಮಂದಿ ಚಿಕ್ಕ ವಿದ್ಯಾರ್ಥಿಗಳೂ ಅತ್ಯಾಸಕ್ತಿಯಿಂದ ಜುಗಾರಾಡುತ್ತಿದ್ದಾರೆ.

ಗನ್‌ಬೋಟು ಜೇಕನ 'ಫನ್ ಫೇರು'

ಕೆಲವು ವರ್ಷಗಳ ಹಿಂದೆ ಮಂಗಳೂರಿಗೆ, ಪ್ರಸಿದ್ಧ ಜಟ್ಟಿ ಗನ್‌ಬೋಟು ಜೇಕನ ಫನ್‌ಫೇರೊಂದು ಬಂದು ಮಾಡಿದ ಹಾವಳಿಯನ್ನು ನಾನೀ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಪ್ರಸ್ತಾಪಿಸಲೆಳಸುತ್ತೇನೆ. ಒಂದೇ ತಿಂಗಳಲ್ಲಿ ಅವನು ಸುಮಾರು 30 ಸಾವಿರ ರೂಪಾಯಿ ಸಂಪಾದಿಸಿದ್ದನು. ತನ್ನ ಲೈಸನ್ಸನ್ನು ಇನ್ನೊಂದು ತಿಂಗಳು ಮುಂದುವರಿಸುವುದಾದರೆ ಮಂಗಳೂರು ನಗರ ಸಭೆಯವರಿಗೆ 3000 ರೂಪಾಯಿ ಕೊಡಲು ಮುಂದಾಗಿದ್ದನು. ಆದರೆ ಅಷ್ಟರಲ್ಲೇ ಪಟ್ಟಣದಲ್ಲೆಲ್ಲಾ ಬೊಬ್ಬೆಯೆದ್ದಿತ್ತು. ಅತನಿಗೆ ಮೊದಲು ಕೊಟ್ಟಿದ್ದ ಲೈಸೆನ್ಸಿನ ಅವಧಿಯನ್ನೇ ಕಡಿಮೆಮಾಡಬೇಕೆಂಬ ಚಳವಳವೆದ್ದಿತ್ತು. ಎಷ್ಟೋ ಮಂದಿ ಬಡಬಗ್ಗರು ಮತ್ತು ಧನಿಕರು ಕೂಡಾ ತಮ್ಮ ಸರ್ವಸ್ವ ಕಳಕೊಂಡು ಕಂಗೆಟ್ಟಿದ್ದರು. ವಕೀಲರೊಬ್ಬರು ಊರು ಬಿಟ್ಟು ಬೊಂಬಾಯಿಗೆ ಹೋಗಿ ವಾಸಿಸಬೇಕಾದ ಸಂಗತಿ ನನಗೆ ಸ್ವತಃ ಗೊತ್ತಿದೆ. ಆದುದರಿಂದ ಮುನಿಸಿಪಾಲಿಟಿಯವರು ಗನ್‌ಬೋಟು ಜೇಕನಿಗೆ ಮತ್ತೊಂದು ತಿಂಗಳ ಲೈಸೆನ್ಸ್ ಕೊಡಲಿಲ್ಲ. ಅವನು ಫನ್ ಫೇರಿನ ಹೆಸರಲ್ಲಿ ಜುಗಾರಿ ನಡಿಸುತ್ತಿರುವನೆಂಬ ಕುರಿತು ನಗರ ಸಭೆಯಲ್ಲಿ ಪ್ರಶ್ನೋತ್ತರ ಮತ್ತು ತೀವ್ರ ಚರ್ಚೆ ನಡೆದಿತ್ತು. ಕಲೆಕ್ಟರರಿಗೆ ಕೂಡಾ ಅರ್ಜಿಗಳು ಹೋಗಿದ್ದವು.

ಜನತೆಯು ತೆಗೆದುಕೊಳ್ಳಬೇಕಾದ ಎಚ್ಚರಿಕೆ.

ನಗರಸಭೆಯ ಜವಾಬ್ದಾರಿ.

ಗನ್ ಬೋಟ್‌ಜೇಕನ ಫನ್‌ಫೇರಿನಲ್ಲಿ ಬರೀ ಜುಗಾರಿಯೇ ಅಲ್ಲದೆ, ಜನರು ನೋಡಿ ಮನಮೆಚ್ಚತಕ್ಕ ವಿನೋದಾವಳಿ, ಕುಸ್ತಿ, ಕವಾತುಗಳು ಹಲವಿದ್ದವು. ಆದರೆ ಉಡುಪಿಗೆ ಬಂದಿರುವುದರಲ್ಲಿ ಅಂತಹದೇನೂ ಇರುವುದೆಂದು ಹೇಳಬರುವುದಿಲ್ಲ. ಹೆಚ್ಚಿನ ಜನರು ಕೇವಲ ಜುಗಾರಿ ಆಡುವುದಕ್ಕೇನೇ ಹೋಗುತ್ತಾರೆ. ನರ್ತನ, ಜಾದು ಮೊದಲಾದುವನ್ನು ಕಣ್ಣೆತ್ತಿ ಕೂಡಾ ನೋಡುವುದಿಲ್ಲ. ಈ ಫನ್‌ಫೇರಿನವರು ಬಡ ಉಡುಪಿ ಪಟ್ಟಣದಿಂದ ಕೆಲವು ಸಾವಿರ ರೂಪಾಯಿಗಳನ್ನೊಯ್ಯುವರೆಂಬುದರಲ್ಲಿ ಸಂದೇಹವೇ ಇಲ್ಲ.

ಈ ಫನ್‌ಫೇರಿನ ರೂಪದ ಜುಗಾರಿಯು ನಮ್ಮಲ್ಲಿ ಸರ್ವಸಾಮಾನ್ಯವಾಗಿ ನಡಿಸಲ್ಪಡುವ ಕಾಲಿ ಮುಂಡವನ್ನೇ ಹೋಲುತ್ತದೆ. ಕೆಂಪು, ಹಳದಿ, ನೀಲಿ ಮೊದಲಾದ ಬಣ್ಣಗಳ ಚಿಕ್ಕ ಚೌಕಗಳುಳ್ಳ ಹಲಿಗೆಯೊಂದನ್ನು ಒರಗಿಸಿಟ್ಟು, ಅದರ ಬುಡದಲ್ಲಿ ಮೇಜಿನ ಮೇಲೆ ಸದ್ರಿ ಚೌಕಗಳ ಬೇರೆ ಬೇರೆ ಬಣ್ಣಗಳ ದೊಡ್ಡ ಗೋಳಗಳನ್ನು ಬಿಡಿಸಿಟ್ಟು, ಈ ಗೋಳಗಳಲ್ಲಿ ಯಾವುದನ್ನಾದರೂ ಆರಿಸಿ, ಹಣಕೊಟ್ಟು ಪಡದ ಟಿಕೇಟುಗಳನ್ನಿಡಹೇಳಿ, ಎಲ್ಲರೂ ತಮಗೆ ತೋರಿದ ಬಣ್ಣವನ್ನಾರಿಸಿ ಪಣವಿಟ್ಟಮೇಲೆ, ಒಬ್ಬನ ಮೂಲಕ ಬಾಣಗಳನ್ನು ಬಣ್ಣಗಳ ಚೌಕಗಳುಳ್ಳ ಹಲಿಗೆಗೆ ಹೊಡಿಯಹೇಳಿ, ಆ ಬಾಣಗಳು ಯಾವ ಬಣ್ಣದ ಚೌಕಗಳಿಗೆ ನಾಟುವವೋ ಅವುಗಳಿಗೆ ಪಣವಿಟ್ಟವರಿಗೆ ಮಾತ್ರ ಅದರ ದುಬಾರಿ ಹಣ ಕೊಡುವದೆಂಬುದು ಕೇವಲ ಜುಗಾರಿಯಲ್ಲದೆ ಇದರಲ್ಲಿ ಚಾತುರ್ಯವೇನಿದೆ? ಚಾನ್ಸಿನಿಂದ ಕೆಲವರಿಗೇನೋ ಹಣ ಸಿಗಬಹುದು. ಆದರೆ ಇಂಥವರೂ ಕೂಡಾ ಇನ್ನೂ ಹೆಚ್ಚು ಹಣಪಡೆಯುವ ಆಸೆಯಿಂದ ದೀರ್ಘಕಾಲ ಆಡಿದರೆ ಇದ್ದುದನ್ನೆಲ್ಲಾ ಕಳಕೊಳ್ಳುವ ಸಂಭವವೇ ಹೆಚ್ಚು. ತತ್ರಿಯಂತಹ ಚಿಕ್ಕ ಚೆಂಡನ್ನು, ಬೇರೆ ಬೇರೆ ಸಂಖ್ಯೆಗಳು ಬರೆಯಲ್ಪಟ್ಟಿರುವ ಚಚೌಕ ಕುಳಿಗಳೊಳಗೆ ಬಿಸಾಡುವ ಆಟವೂ ಇದರಂತೆಯೇ. ಈ ಚೆಂಡು ಯಾವ ಸಂಖ್ಯೆಯ ಕುಳಿಗೆ ಬೀಳುವುದೋ ಆ ಸಂಖ್ಯೆಗೆ ಪಣವಿಟ್ಟವರಿಗೆ ಹಣ ಸಿಗುತ್ತದೆ. ಬಾಕಿ ಉಳಿದ ಸಂಖ್ಯೆಗಳ ಮೇಲಿಟ್ಟವರೆಲ್ಲಾ ಕಳಕೊಳ್ಳುತ್ತಾರೆ. ಇದು ಕೂಡಾ ಕೇವಲ ಚಾನ್ಸ್ ಅಲ್ಲದೆ ಅದರಲ್ಲಿ ಹಸ್ತ ಕೌಶಲವೇನೂ ಇರುವುದಿಲ್ಲ. ಚಚೌಕಗಳ ಚೌಕಟ್ಟುಗಳೊಳಗೆ ಬರೆಯಲ್ಪಟ್ಟಿರುವ ಅಂಕೆಗಳನ್ನು ಕೂಡಿಸುವ ಇನ್ನೊಂದು ಆಟವೂ ಇದೇ ರೀತಿ ಚಾನ್ಸ್ ಆಗಿದೆ. ಅದರಲ್ಲಿ ಯಾವ ರೀತಿಯ ಬುದ್ಧಿವಂತಿಗೆಗಾಗಲಿ, ಚಾತುರ್ಯಕ್ಕಾಗಲೀ ಅವಕಾಶವೇ ಇರುವುದಿಲ್ಲ.

ಇಂತಹ ಪ್ರತ್ಯಕ್ಷವಾದ ಜುಗಾರಿ ಕಳಕ್ಕೆ ಜನರು ಹೋಗಿ ಹಣವನ್ನು ಕಳಕೊಳ್ಳದಂತೆ ಎಚ್ಚರದಿಂದಿರಬೇಕು. ತಂದೆ ತಾಯಂದಿರು ಅಥವಾ ರಕ್ಷಕರು ಚಿಕ್ಕ ಹುಡುಗರನ್ನು ಈ ಜುಗಾರಿ ಕಳಕ್ಕೆ ಕಳುಹಿಸಬಾರದು. ಬದಲಿಗೆ ಅದನ್ನು ಬಹಿಷ್ಕರಿಸುವಂತೆ ಗಮನ ತೆಗೆದುಕೊಳ್ಳತಕ್ಕದ್ದು. ಏನೋ ವಿನೋದ ನಡೆಯುತ್ತದೆಂದು ತಮ್ಮ ಮಕ್ಕಳನ್ನು ಹಣಕೊಟ್ಟು ನೋಡಕಳುಹಿಸಬಾರದು. ಈ ಫನ್ ಫೇರಿನಲ್ಲಿ ಹಾಗೆ ನೋಡತಕ್ಕದ್ದೆಂಬುದೇನೂ ಇರುವುದಿಲ್ಲ.

ಪಟ್ಟಣದ ಜನತೆಯ ನಿಜವಾದ ಹಿತಚಿಂತಕರಾರೂ ಇಂತಹ 'ಫನ್‌ಫೇರಿಗೆ' ಲೈಸೆನ್ಸ್ ಕೊಡಲಾರರು. ಅದರಿಂದ ದೊಡ್ಡ ಅಂಟುರೋಗವೊಂದನ್ನು ಪಟ್ಟಣದೊಳಗೆ ಬಿಟ್ಟುಮಾಡಿದಂತಾಗುವುದೆಂದರೆ ಅತಿಶಯೋಕ್ತಿಯಾಗಲಾರದು. ಇಂದಿನ ಮೇಲೆ ಈ ವಿಷಯದಲ್ಲಿ ನಗರ ಸಭೆಯ ಜವಾಬ್ದಾರಿಯು ಎಂತಹದೆಂಬುದನ್ನು ನಾನಿಲ್ಲಿ ಪ್ರತ್ಯೇಕ ಹೇಳಬೇಕಾಗಿಲ್ಲ! ಈ ಫನ್‌ಫೇರಿಗೆ ದೀರ್ಘಕಾಲದ ಲೈಸೆನ್ಸ್ ಕೊಟ್ಟಿದ್ದರೆ ಅದನ್ನು ರದ್ದುಮಾಡುವುದು ನಗರ ಸಭೆಯ ಕರ್ತವ್ಯವಿದೆ. ಲೈಸೆನ್ಸಿನ ಅವಧಿಯು ಬೇಗನೆ ಮುಗಿಯುವುದಾದರೆ ಅದು ನವೀಕರಿಸಲ್ಪಡದಂತೆ ನಗರ ಸಭೆಯವರು ಗಮನಕೊಡತಕ್ಕದ್ದು. ಅಂತೂ ಈ ಫನ್‌ಫೇರೆಂಬ ಮಾರಿರೋಗವು ಆದಷ್ಟು ಬೇಗ ಉಡುಪಿಯಿಂದ ಉಚ್ಚಾಟನೆ ಮಾಡಲ್ಪಟ್ಟರೆ ಕ್ಷೇಮವಾಗಬಹುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಕೆ. ಕೆ. ಶೆಟ್ಟಿ

— ಕೋರ್ಟು ನೋಟೀಸು —

ಕಾರ್ಕಳ ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. No. 1048/1941.
O. S. No. 228/1928.

ಅಂಕಯ್ಯ ಶೆಟ್ಟಿ — ಅರ್ಜಿದಾರ.

ಮತ್ತು

ಸೀತು ಹೆಂಗ್ಸು ಕೂಡಾ 17ಜನರು - ಎದ್ರಿರು.

ಯವರೊಳಗೆ

17ನೇ ಎದ್ರಿ, ಮಂಜುನಾಥ ಯಾನೆ ನಾಡಿಯ ಈ ನಾಯ್ಕ, ಶೀನಗಿರಿ ನಾಯ್ಕರ ಮಗ, ಕಾರ್ಕಳ ತಾಲೂಕು ಕುಕ್ಕುಜೆ ಗ್ರಾಮದಲ್ಲಿರುವವ.

ಸದ್ರಿ 17ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:- ಈ ಕೋರ್ಟು O. S. No 228/28ನೇ ವ್ಯಾಜ್ಯದ ತೀರ್ಪಿಯ ಅಮ್ಮಲ್ಯಾರಿ ಬಗ್ಗೆ ಅರ್ಜಿದಾರನು ಮೇಲ್ಕಾಣಿಸಿದ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಆದುದರಿಂದ ಅಮ್ಮಲ್ಯಾರಿ ಯಾಕೆ ನಡಿಸಕೂಡದು ಎಂಬುದಕ್ಕೆ ಸಬೂಬು ತೋರಿಸಲಿಕ್ಕೆ ತಾ. 9-2-1942ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ನೀನು ಹಾಜ್ರಾಗಬೇಕೆಂತ ಇದರಿಂದ ನಿಮಗೆ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

K. C. Kamath.

ಅರ್ಜಿದಾರನ ಕಡೆ ವಕೀಲ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ!

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ಸಾಧ್ಯವಾಗಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : S. INDIA.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

GREETINGS.

The Directors, Officers and Staff of the Canara Bank Limited join in sending you this message of appreciation for your good will and patronage during the last year. We sincerely wish you a Happy and Prosperous New Year.

ESTD: 1906.

CANARA BANK LTD.

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,

ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರಾದ **ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ. 19-1-41ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ.**

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.

(ಸಹಿ) ಬಿ. ಮಂಜಯ್ಯ ಹೆಗ್ಡೆ.
ಬಿ. ಎ. ಬಿ. ಎಲ್.
ಚೇರ್ಮೆನ್

DIAMONDS! **DIAMONDS!**

K. R. K. SHET.

Opposite Govt- College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected)) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

Degrees: Books: Medicines

Free H. L. M. S. M. B. H. M. D etc Free Homeo-Ayur-Unani-Naturo degree Py post also—Practitioners also get soon Homeo Materiamedica, Rs. 5. Homeo practice book Rs 4. Insanity Cure Pills Rs. 10 Enclose 2 annas stamp:—

Principal, Indian Homeopath Institute & Society (Govt. Regd.)
P.O. Mahava, (Kathiawar Dt, India.)

Sidha-Kalpa Kavach (Regd.)

No. 3 Rs. 2, No 2 Rs. 5 No. 1. Rs. 7 Special Rs. 10, Extra Special Rs. 17, for ove marriage health, wealth, Ask any six questions with M. O. Re. 1/4 and get correct answers by return post Life reas ng Rs. 2 No. V. P. P. Send M. O. I red pamphlets, Prof. Dr. N. H. Chhatbar.
P. O. Mahuva (Kathiawar India)

COPY OF CABLE FROM LT.-COL. MOORE BRABAZON.
Minister of Aircraft production; London, To H. E. The Governor of Madras

It is with Pride and gratitude that I Acknowledge the Further Generous gifts from the Madras Governor's war fund. A halifax heavy bomber Squadron is now being named Madras Presidency This Powerful Addition to our Attacking force will enable us to strike still heavier blows against the common enemy and will be evidence of the Loyal Generosity of the People of Madras-

ವಾರದ ವಿಶೇಷ ವಾರ್ತೆ

ಜರ್ಮನರು ರಶ್ಯದಿಂದೋಡಿಸಲ್ಪಡುವರು.

ರಶ್ಯದ ಬ್ರಿಟಿಷ್ ರಾಯಭಾರಿಯಾಗಿದ್ದ ಸರ್ ಸ್ಟಾಫೋರ್ಡ್ ಕ್ರಿಪ್ಸರೀಗ ಲಂಡನಿಗೆ ಹಿಂತಿರುಗಿರುವರು. ರಶ್ಯನರ ಆತ್ಮವಿಶ್ವಾಸ ಮತ್ತು ಯುದ್ಧದಲ್ಲಿ ಜಯಸಾಧಿಸುವ ಶಕ್ತಿಯು ಅತ್ಯಂತ ಪ್ರಶಂಸನೀಯವಾದುದು. ಚಳಿಗಾಲದ ಹೋರಾಟಕ್ಕೆ ತಕ್ಕ ಸಿದ್ಧತೆಯುಳ್ಳವರಿರುವುದರಿಂದ ಸೋವಿಯೆಟ್ ಸೈನಿಕರು ಜರ್ಮನರನ್ನು ಹಿಂದೋಡಿಸುತ್ತಿರುವರು. ಚಳಿಗಾಲ ಮುಗಿದು ವಸಂತಋತುವಾರಂಭವಾದೊಡನೆಯೇ ಜರ್ಮನರು ರಶ್ಯನರ ಮೇಲೆ ಪುನಹ ಧಾಳಿ ನಡಿಸುವುದು ನಿಶ್ಚಯ. ಅದನ್ನು ಜಯಶೀಲವಾಗಿ ತಡೆಗಟ್ಟಬರುವ ಚಳಿಗಾಲದೊಳಗೆ ಜರ್ಮನ್ ಸೇನೆಯನ್ನು ಸಂಪೂರ್ಣ ನಾಶಗೊಳಿಸುವ ನಿರೀಕ್ಷೆಯು ರಶ್ಯನರಲ್ಲಿದೆ ಈಗ ರಶ್ಯದಲ್ಲಿ 9 ಮಿಲ್ಯ ಮಂದಿ ಶಸ್ತ್ರಸಿದ್ಧ ಸೈನಿಕರಿರುತ್ತಾರೆ. ರಶ್ಯನರು ಜರ್ಮನಿಯನ್ನು ಸಂಪೂರ್ಣವಾಗಿ ಪರಾಜಯಗೊಳಿಸುವ ನಿರ್ಧಾರವುಳ್ಳವರಿರುವರು. ಜಪಾನು ಮತ್ತು ರಶ್ಯಗಳೊಳಗಿನ ವೈಷಮ್ಯವು ಕೂಡಾ ಯುದ್ಧವಲ್ಲದೆ ಇತ್ಯರ್ಥವಾಗುವಂತಹದಲ್ಲೆಂದು ಅಭಿಪ್ರಾಯಪಡುತ್ತಿರುವರು.

ಮಲಯದಲ್ಲಿ ಜಪಾನರ ಒತ್ತಾಟ.

ಮಲಯದ ಯುದ್ಧದ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ. ಹೋರಾಟವು ಯಥಾ ಪ್ರಕಾರ ನಡೆಯುತ್ತಿದೆ. ಸಿಂಗಪುರದಿಂದ 80 ಮತ್ತು 65 ಮೈಲುಗಳ ದೂರದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ಮಲಯದ ಪೂರ್ವ ಕರಾವಳಿಯಲ್ಲಿ ಬ್ರಿಟಿಷ್ ಸೇನೆಯು ಹಿಂದೆ ಸರಿದಿರುತ್ತದೆ. ಮಲಯದ ಪರಿಸ್ಥಿತಿಯು ಉತ್ಕಟವಾಗಿರುವುದರಿಂದ ಆಸ್ಟ್ರೇಲಿಯದ ಮಂತ್ರಿಗಳು ಚಿಂತೆಗೊಂಡಿರುತ್ತಾರೆ. ಮಲಯದ ಪಶ್ಚಿಮ ಕರಾವಳಿಗೂ ಜಪಾನರು ನುಗ್ಗುತ್ತಿದ್ದಾರೆ. ಅವರಿಗೆ ವಿಮಾನ ಮೂಲಕ ಆಹಾರವನ್ನೊದಗಿಸಲಾಗುತ್ತಿದೆ. ಮಲಯದಲ್ಲಿ ಎರಡು ಸಂಗಡದ ಆಸ್ಟ್ರೇಲಿಯಾದ ಸೈನಿಕರು ಜಪಾನರಿಂದ ಮುತ್ತಿಗೆ ಹಾಕಲ್ಪಟ್ಟರೂ ಧೈರ್ಯದಿಂದ ಕಾದಾಡಿ ತಪ್ಪಿಸಿಕೊಂಡು ಅತ್ಯಂತ ಪ್ರಶಂಸೆಗೆ ಪಾತ್ರರಾಗಿರುವರು. ಜಪಾನರು ಡಚ್ ಇಂಡೀಸಿನ ಮೇಲೆ ವಿಮಾನಧಾಳಿ ನಡಿಸಿರುತ್ತಾರೆ. ಫಿಲಿಪ್ಪೈನ್ ದ್ವೀಪದಲ್ಲಿ ಜಪಾನರು ಹೆಚ್ಚಿನ ಸೇನೆ ತಂದು ಮುಂದೊತ್ತುತ್ತಿದ್ದಾರೆ. ಅಮೇರಿಕಾದ ಸೇನಾನಾಯಕರಾದ ಜನರಲ್ ಮೇಕ್ ಆರ್ಥರರ ಸೇನೆಯು ಜಪಾನರ ಮೇಲೇರಿ ಹೋಗಿ ಕೆಲವೆಡೆಗಳಿಂದ ಅವರನ್ನು ಹಿಂದಕ್ಕಟ್ಟಿದೆ. ಆಸ್ಟ್ರೇಲಿಯದ ಸಮೀಪದ ರೋಬಲ್ ಹಾರ್ಬರಿನ ಮೇಲೆ ಜಪಾನರು ಧಾಳಿಯಿಕ್ಕುತ್ತಿದ್ದಾರೆ. ಆಸ್ಟ್ರೇಲಿಯದ ಮೇಲೆ ಕೂಡ ಧಾಳಿ ನಡಿಸಬಹುದೆಂಬ ನಿರೀಕ್ಷೆಯಿಂದ ಅಲ್ಲಿಯ ಸರಕಾರವು ಭರದಿಂದ ಯುದ್ಧಸಿದ್ಧತೆ ನಡಿಸುತ್ತಿದೆ. ಯುದ್ಧಾರಂಭದಲ್ಲಿ ಅಮೇರಿಕದ ಪರ್ಲ್ ಹಾರ್ಬರಿನ ಮೇಲೆ ಜಪಾನರು ಧಾಳಿಯಿಟ್ಟಾಗ, ಅಮೇರಿಕಾದ ನೌಕಾಧಿಕಾರಿಗಳಾದ ಎಡ್ಮಿರಲ್ ಕಿಮ್ಮೆಲರೇ ಮೊದಲಾದವರು, ಮೊದಲಾಗಿ ಎಚ್ಚರಿಸಲ್ಪಟ್ಟರೂ ತಕ್ಕ ಮುಂಜಾಗ್ರತೆ ತೆಗೆದುಕೊಳ್ಳಲಿಲ್ಲೆಂಬುದೀಗ ಸಿದ್ಧವಾಗಿದೆ. ಶಾಂತ ಸಾಗರದ ಯುದ್ಧದಲ್ಲಿ ಆಸ್ಟ್ರೇಲಿಯದ ಸಲಹೆಗೆ ಗಣನೀಯಸ್ಥಾನ ದೊರೆಯಬೇಕೆಂದು ಪ್ರಧಾನ ಮಂತ್ರಿ ಕರ್ಟಿನರು ವ್ಯಕ್ತಗೊಳಿಸಿರುತ್ತಾರೆ.

ಲಿಬಿಯದ ಹೋರಾಟ

ಲಿಬಿಯದಲ್ಲಿ ಇದೇ ತಾ. 21ರಲ್ಲಿ ಜನರಲ್ ರೊಮ್ಮೆಲರು ಬ್ರಿಟಿಷ್ ಸೇನೆಯ ಮೇಲೆ ಧಾಳಿ ನಡಿಸಿ ದೊಡ್ಡ ಹೋರಾಟವು ನಡೆಯುತ್ತಿರುವುದು. ಈ ಯುದ್ಧವು ಜೆಡಬಾಯ ಕಣಿವೆಯ ಬಳಿ ನಡೆಯುತ್ತಿರುವುದು. ಯುದ್ಧದ ಪರಿಣಾಮವು ಈ ವರೆಗೆ ತಿಳಿದಿರುವುದಿಲ್ಲ. ಬ್ರಿಟಿಷ್ ವಿಮಾನಗಳು ತ್ರಿಪೋಲಿ ಮೊದಲಾದ ಸ್ಥಳಗಳ ಮೇಲೆ ಧಾಳಿ ನಡಿಸಿರುತ್ತವೆ.

ಹಿಂದುಸ್ಥಾನದ ಕುರಿತಾದ ಧೋರಣೆ ಬದಲಿಸಬೇಕು.

ಇದೇ ತಾ. 24ರಲ್ಲಿ ಲಂಡನಿನಲ್ಲಿ ಹಿಂದೀ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು. ಮೆಸ್ಸರ್ಸ್ ಎಡ್ವರ್ಡ್ ಥೋಮ್ಸನ್, ಸೋರೆನ್ಸನ್, ಡೊಬ್ಬಿ, ಕೃಷ್ಣ ಮೆನನ್ ಮೊದಲಾದವರು ಭಾಷಣ ಮಾಡಿದರು. ಬ್ರಿಟಿಷ್ ಸರಕಾರವು ಹಿಂದುದೇಶದ ಸ್ವಾತಂತ್ರ್ಯವನ್ನು ಕೂಡಲೆ ಅಂಗೀಕರಿಸಬೇಕೆಂಬ ಠರಾವು ಈ ಸಭೆಯಲ್ಲಿ ಮಂಜೂರಾಯಿತು: ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಬ್ರಿಟಿಷ್ ಸರಕಾರವು ನೇಶನಲ್ ಕಾಂಗ್ರೆಸಿನೊಡನೆ ರಾಜಿ ಪ್ರಸ್ತಾಪ ನಡಿಸಬೇಕೆಂಬ ಇನ್ನೊಂದು ನಿರ್ಣಯವಾಯಿತು. ಮಿತ್ರರಾಷ್ಟ್ರಗಳು ಜಯಹೊಂದಬೇಕಾದರೆ ಬ್ರಿಟನು ಹಿಂದುದೇಶದ ಕುರಿತಾದ ತನ್ನ ಧೋರಣೆಯನ್ನು ಬದಲಿಸಬೇಕು. ಬ್ರಿಟಿಷ್ ಸರಕಾರದ ಕುರಿತು ಹಿಂದೀಯರಲ್ಲಿ ನೆಲೆಗೊಂಡಿರುವ ಅತೃಪ್ತಿಯನ್ನು ಜಪಾನು ಸದುಪಯೋಗಗೊಳಿಸುತ್ತಿರುವುದೆಂದು ಮಿ. ಹೇರಿ ಪೊಲ್ಲಿಟರೆಂದರು.

ರಂಗೂನಿನಮೇಲೆ ವಿಮಾನ ಯುದ್ಧ.

ಇದೇ ತಾ. 23ರಲ್ಲಿ ಜಪಾನರು ಎರಡು ಸಲ ರಂಗೂನಿನ ಮೇಲೆ ವಿಮಾನ ಧಾಳಿ ನಡಿಸಲೆತ್ನಿಸಿದಾಗ ಬ್ರಿಟಿಷ್ ಮತ್ತು ಅಮೇರಿಕಾದ ವಿಮಾನಗಳು ಜಪಾನ ವಿಮಾನಗಳೊಡನೆ ಹೋರಾಡಿ 24 ವೈರಿ ವಿಮಾನಗಳನ್ನು ನಾಶಮಾಡಿರುವವೆಂದು ತಿಳಿದುಬರುತ್ತದೆ.

ಬರ್ಮಾದಲ್ಲಿ ಚೀನೀ ಸೇನೆ

ಬರ್ಮಾದಲ್ಲಿರುವ ಬ್ರಿಟಿಷ್ ಸೇನೆಯ ಸಹಾಯಕ್ಕಾಗಿ ಚೀನೀ ಸೇನೆಯು ಕಳುಹಿಸಲ್ಪಟ್ಟಿರುವುದು. ಅ. ? ತು ಬಹಳ ಶಿಸ್ತಿನಿಂದ ನಡೆಯುತ್ತಿರುವರು. ಬರ್ಮಾಯರು ಅವರನ್ನು ಅತ್ಯಾನಂದದಿಂದ ಸ್ವಾಗತಿಸಿ ಸತ್ಕರಿಸುತ್ತಿರುವರು. ಇಂಗ್ಲೆಂಡು ಕೂಡಾ ಜಪಾನಿನೊಡನೆ ಹೋರಾಡಲು ಹೆಚ್ಚಿನ ಸೇನೆ ಮತ್ತು ವಿಮಾನ ಪಡೆ ಕಳುಹಿಸುತ್ತಿರುವುದು. ಆಸ್ಟ್ರೇಲಿಯವು ಜಪಾನರನ್ನೆದುರಿಸಲು ಭರದಿಂದ ಸಿದ್ಧತೆ ನಡಿಸುತ್ತಿರುವುದು.

ಪ್ರಕಟನೆ.

ಪಂಚಾಯತ ಬೋರ್ಡು ಕಾರ್ಕಳ.

ಇದೇ ಬರುವ ಫೆಬ್ರವರಿ ತಿಂಗಳ ತಾರೀಕು 10ನೇ ಮಂಗಳವಾರ ಅಪರಾಹ್ನ ಘಂಟೆ 3ಕ್ಕೆ ಕಾರ್ಕಳ ಪಂಚಾಯತ ಬೋರ್ಡು ಆಫೀಸಿನಲ್ಲಿ, ಕಾರ್ಕಳ ವಾರ ಸಂತೆಯ 1942-43ನೇ ವರ್ಷದ ವಸೂಲು ಮಾಡುವ ಹಕ್ಕನ್ನು ಬಹಿರಂಗವಾಗಿ ಏಲಂ ಮಾಡಲಾಗುವುದೆಂಬದಾಗಿ ಈ ಮೂಲಕ ಸರ್ವಜನರಿಗೆ ತಿಳಿಸಲಾಗುತ್ತದೆ.

ವಿ. ಸೂ:- ಷರತ್ತಿನ ವಗೈರೆಬಗ್ಗೆ ವಿವರವಾದ ಶರ್ತನಾಮೆಯನ್ನೊಳಗೊಂಡ ಪ್ರಕಟಣಾ ಪ್ರತಿಗಳನ್ನು ಬೋರ್ಡು ಆಫೀಸಿನಲ್ಲಿ ಪಡೆಯಬಹುದು.

S. ಹಿರಿಯಣ್ಣ ಹೆಗ್ಡೆ, ಪ್ರೆಸಿಡೆಂಟ್.
ಪಂಚಾಯತಬೋರ್ಡು ಆಫೀಸು, ಕಾರ್ಕಳ.
ತಾರೀಕು 24-1-1942.

The Canara Banking Corporation Ltd.

(Incorporated in British India with limited liability)

ESTED 1906

OUR RATES OF INTEREST ON DEPOSITS

Current	1%	P. A.
Savings Bank	2½%	„
Short-term	1¾%	„
Fixed for 3 months	2%	„
6 „	2¼%	„
9 „	2½%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೨೯-೧-೧೯೪೨

ವ್ಯಾಪಾರಿಗಳಿಗೆ ಎಚ್ಚರಿಕೆ.

ಯುದ್ಧದ ನಿಮಿತ್ತ ಕೆಲವು ಸಾಮಾನುಗಳ ಬೆಲೆಯು ಬಹಳವಾಗಿ ಏರಿರುವುದು. ಇನ್ನು ಕೆಲವುಗಳ ಬೆಲೆಯನ್ನು ವ್ಯಾಪಾರಿಗಳು ಬೇಕೆಂದು ವಿಪರೀತವಾಗಿ ಏರಿಸಿ ಲಾಭ ಹೊಡೆಯುತ್ತಿರುವರು. ವ್ಯಾಪಾರಿಗಳಿಗೆ ಸಮಾಜದಲ್ಲಿ ಗಣನೀಯವಾದೊಂದು ಸ್ಥಾನವಿದೆ- ಸಮಾಜಕ್ಕೆ ಆವಶ್ಯಕವಾದ ಸಾಮಾಗ್ರಿಗಳನ್ನವರು ಒದಗಿಸಿಕೊಟ್ಟು ಅದರ ಸೇವೆ ಮಾಡುತ್ತಾರೆ. ಆದರೆ ಸೇವಾ ದೃಷ್ಟಿಯು ಒಂದಿಷ್ಟಾದರೂ ಇಲ್ಲದೆ ಕೇವಲ ಲಾಭದ ಗಿಡುಗ ದೃಷ್ಟಿಯಿಂದಲೇ ನಡೆದರೆ ಅವರು ಸಮಾಜೋಪಕಾರಿಗಳಾಗುವ ಬದಲಿಗೆ ಕಂಟಕರಾಗುತ್ತಾರೆ. ಜನತೆಯಲ್ಲಿ ಕ್ಷೋಭೆಯೆದ್ದು ಗಲಾಟೆ, ಲೂಟಿಗಳು ನಡೆಯಲು ಅವರೇ ಕಾರಣರಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅವರ ಮೇಲೆ ಯಾವುದಾದರೊಂದು ರೀತಿಯ ನಿರ್ಬಂಧ ಹಾಕುವುದು ಸರಕಾರದ ಕರ್ತವ್ಯವಾಗುವುದು.

ಪಂಡಿತ ಜವಾಹರಲಾಲರು ಬೆನಾರೀಸ್ ಜಿಲ್ಲಾ ರಾಜಕೀಯ ಪರಿಷತ್ತನ್ನು ತೆರೆಯುವಾಗ ವ್ಯಾಪಾರಿಗಳಿಗೆ ಎಚ್ಚರವಿತ್ತಿರುವರು. ಸಮಾಜದ ತೀವ್ರವಾದ ಆವಶ್ಯಕತೆಯನ್ನು ಕಡೆಗಣಿಸಿ, ಮುಂದೆ ಹೆಚ್ಚಿನ ಲಾಭ ಪಡೆಯುವ ದುರಾಶೆಯಿಂದ ಧವಸ ಧಾನ್ಯಗಳನ್ನು ಅಡಗಿಸಿಟ್ಟುಕೊಳ್ಳುವುದು ಆತ್ಮಘಾತುಕ ಘೋರಣೆಯಾಗಿದೆ. ಅವುಗಳಿಗೆ ಕಟ್ಟಕಡೆಗೆ ಯಾವ ಬೆಲೆಯೂ ದೊರೆಯದ ಹೋಗಬಹುದೆಂದವರು ಸೂಚಿಸಿರುವರು.

ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ದೀರ್ಘವಾದೊಂದು ಲೇಖನ ಬರೆದು, ದವಸ ಧಾನ್ಯಗಳ ಮತ್ತು ವಸ್ತ್ರದ ವ್ಯಾಪಾರಿಗಳು, ಆದಷ್ಟು ಹೆಚ್ಚು ಮುನಾಫೆ ಪಡೆಯುವ ತಮ್ಮ ಲೋಭ ದೃಷ್ಟಿಯನ್ನು ಬಿಟ್ಟು ಸಮಾಜಕ್ಷೇಮ ದೃಷ್ಟಿಯಿಂದ ಆದಷ್ಟು ಕಡಿಮೆ ದರದಲ್ಲಿ ಸಾಮಾನುಗಳನ್ನು ಮಾರಲೆತ್ನಿಸಬೇಕೆಂದು ವಿನಂತಿಸಿರುವರು. ತಾವು ಜನತೆಯ ಪ್ರಯೋಜನಕ್ಕಾಗಿಯೇ ಧವಸಧಾನ್ಯಗಳನ್ನು ತಂದಿಟ್ಟು ಮಾರುವವರೆಂಬ ಅಭಿಪ್ರಾಯವನ್ನವರು ಉಂಟುಮಾಡದಿದ್ದರೆ ಲೂಟಿಮಾಡಲ್ಪಡುವ ಅಪಾಯಕ್ಕೊಳಗಾಗುವರು. ವ್ಯಾಪಾರಿಗಳು ಜನತೆಯ ಸಂಪರ್ಕವುಳ್ಳವರಾಗಿ ಅವರ ಹಿತಸಾಧನಾ ದೃಷ್ಟಿಯಿಂದ ನಡೆಯಬೇಕು. ವ್ಯಾಪಾರಿಗಳು ಸರಿದಾರಿಯಲ್ಲಿ ನಡೆಯುವಂತೆ ಕಾಂಗ್ರೆಸ್ ಕೆಲಸಗಾರರು ಅವರಿಗೆ ಬುದ್ಧಿವಾದ ಹೇಳಬೇಕೆಂದು ಸೂಚಿಸಿರುವರು.

ಮಿತವಾದ ಲಾಭವಿಟ್ಟು ಸಾಮಗ್ರಿಗಳನ್ನು ಮಾರಲು ಯಾರ ಆಕ್ಷೇಪವೂ ಇರಲಾರದು. ಆದರೆ ಹಲವು ಮಂದಿ ವ್ಯಾಪಾರಿಗಳು ಯುದ್ಧವನ್ನೊಂದು ನೆವನವಾಗಿ ಮಾಡಿಕೊಂಡು ಸಾಮಾನುಗಳ ಬೆಲೆಯನ್ನು ದುಬಾರಿ, ನಾಲ್ಕು ಬಾರಿ ಮಾತ್ರವಲ್ಲ ಎಂಟು ಬಾರಿ ಕೂಡಾ ಹೆಚ್ಚಿಸಿರುವುದಿದೆ. ದುಡ್ಡು ಮಾಡಲು ಇದೊಂದು ಸಂದರ್ಭವೆಂಬ ಮನೋವೃತ್ತಿಯಿಂದವರು ಯಾವ ನೀತಿ ನಿಯಮವೂ ಇಲ್ಲದ ವರ್ತನೆಯುಳ್ಳವರಿರುತ್ತಾರೆ. ಇಂಥವರ ಸಮಾಜ ಹಾನಿಕಾರಕ ಸ್ವಾರ್ಥಸಾಧನೆಯ ಮೇಲೆ ನಿರ್ಬಂಧ ಹಾಕಲೇ ಬೇಕಾಗುವುದು. ಲೋಕದ ಹಲವು ದೇಶಗಳಲ್ಲಿ ಸರಕಾರಗಳು ಖಾಸಾಗಿ ಸ್ವಾರ್ಥಸಾಧಕರ ಮೇಲೆ ಬೇರೆಬೇರೆ ರೀತಿಯ ಅಂಕೆಯಿಡುತ್ತಿವೆ. ಆದರೆ ಹಿಂದು ದೇಶದಲ್ಲಿ ಸರಕಾರವು ಆ ಕುರಿತು ಈ ವರೆಗೆ ಗಮನ ಕೊಟ್ಟಂತೆ ತೋರುವುದಿಲ್ಲ. ಅಲ್ಲಲ್ಲಿ ಜಿಲ್ಲಾಧಿಕಾರಿಗಳು ವ್ಯಾಪಾರಿಗಳಿಗೆ ಎಚ್ಚರವಿತ್ತಿರುತ್ತಾರೆ. ಧವಸ-ಧಾನ್ಯಗಳ ಬೆಲೆಯನ್ನು ನಿಶ್ಚೈಸುವ ಏರ್ಪಾಡು ಮಾಡಿರುತ್ತಾರೆ. ಆದರೆ ಅವನ್ನು ವ್ಯಾಪಾರಿಗಳು ಎಷ್ಟರ ಮಟ್ಟಿಗೆ ಪಾಲಿಸುವರೆಂಬುದನ್ನು ನೋಡುವ ಏರ್ಪಾಡನ್ನೇನೂ ಮಾಡಿಲ್ಲ. ಆದುದರಿಂದ ವ್ಯಾಪಾರಿಗಳು ತಮ್ಮಿಚ್ಛಾನುಸಾರ ನಡೆಯಬಹುದಾಗಿದೆ. ವ್ಯಾಪಾರಿಗಳು ಜನತಾಹಿತದೃಷ್ಟಿಯಿಂದ ವರ್ತಿಸದೆ ಸಾಮಾಗ್ರಿಗಳ ಬೆಲೆಯನ್ನು ಮನಸ್ವೇಚ್ಛ ಏರಿಸಿ ಸಮಾಜದಲ್ಲಿ ಕ್ಷೋಭೆಯನ್ನುಂಟುಮಾಡಲು ಕಾರಣರಾದರೆ ಸರಕಾರವು ಅವರ ಮೇಲೆ ಕಠಿಣ ನಿರ್ಬಂಧವನ್ನು ಹಾಕುವುದು ಕರ್ತವ್ಯವಾಗುವುದು. ಯಾಕಂದರೆ ಜನತೆಯನ್ನು ವಂಚಿಸಿ ಯಾವ ರೀತಿಯಿಂದಾದರೂ ತನ್ನ ಸ್ವಾರ್ಥಚೀಲ ತುಂಬಿಸಲು ಹಾತೊರೆಯುವ ನೀತಿ-ಧರ್ಮ ಬಾಹಿರ ತುಚ್ಛ ಸ್ವಾರ್ಥವು, ಕಳವು ದರೋಡೆಗಳಷ್ಟೇ ಸಮಾಜ ಹಾನಿಕಾರಕ ತಸ್ಕರರಾಗಿರುತ್ತದೆ.

ಬೆನಾರೀಸ್ ಹಿಂದು ವಿಶ್ವವಿದ್ಯಾಲಯ.

ಪಂಡಿತ ಮಾಲವೀಯರ ಸೇವಾತತ್ಪರ ಜೀವನದ ದಿವ್ಯ ಸ್ಮಾರಕವೇ ಹಿಂದು ವಿಶ್ವವಿದ್ಯಾಲಯ. ಅವರು ಕಾಶಿ ವಿಶ್ವನಾಥನ ಕಟಾಕ್ಷ ಪಡೆದು ನಿರ್ಮಿಸಿರುವ ಶಾರದಾ ಮಂದಿರವದು. ಬೆನಾರೀಸ್ ಹಿಂದು ವಿಶ್ವ ವಿದ್ಯಾಲಯದ ಮೂಲಕ ಕಾಶಿ ವಿಶ್ವನಾಥನು ಪ್ರತ್ಯಕ್ಷವಾಗಬೇಕೆಂದವರ ಪ್ರಾರ್ಥನೆಯ ಪರಿಣಾಮವಾಗಿ ಆ ಕರುಣಾಮಯನ ಕೃಪೆಯಿಂದ ಕಾಶಿ ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಮಹಾತ್ಮರೊಬ್ಬರು ತನಗೆ ಪ್ರಥಮವಾಗಿ ರೂ. 101ನ್ನಿತ್ತು ತೀವ್ರವಾಗಿ ಅದು ಒಂದು ಕೋಟಿ ಒಂದು ರೂಪಾಯಿಯಾಗಲೆಂದು ಹರಸಿದರು ಅಂತೆಯೇ ಆಯಿತು. 10 ವರ್ಷಗಳ ಕಾಲದಲ್ಲಿಯೇ ಅನಾಥ್ಯವೆಂದು ತೋರಿದುದು ಸಾಧಿಸಲ್ಪಟ್ಟಿತೆಂದು ಪಂಡಿತ ಮಾಲವೀಯರೇ, ಬೆನರೀಸ್ ವಿಶ್ವ ವಿದ್ಯಾಲಯದ ರಜತೋತ್ಸವದ ಸಂದರ್ಭದಲ್ಲಿ ಕೃತಜ್ಞತೆ ಮತ್ತು ವಂದನಾಪೂರಿತ ಹೃದಯದಿಂದ ಹೇಳಿರುವರು. ಹಿಂದಿನ ನಳಂದ ತಕ್ಷಶಿಲಾ ಮಹಾವಿದ್ಯಾಲಯಗಳ ಕೀರ್ತಿಯನ್ನು ಇಂದು ನವೀಕರಿಸಿ ಅತ್ಯುಜ್ವಲವಾಗಿ ಬೆಳಗಿಸಿರುವ ಹಿಂದೀಯರೆಲ್ಲರ ಹೆಮ್ಮೆಯ ಸಂಸ್ಥೆ ಕಾಶಿ ಹಿಂದು ವಿಶ್ವ ವಿದ್ಯಾಲಯ.

ಪಂಡಿತ ಮಾಲವೀಯರು 1905ರಲ್ಲಿ ಕಾಶಿಯಲ್ಲಿ ಹಿಂದು ವಿಶ್ವವಿದ್ಯಾಲಯ ಸ್ಥಾಪಿಸುವ ಕಲ್ಪನೆ ಮಾಡಿ 1911ರಲ್ಲಿ ಅದರ ಯೋಜನೆ ತಯಾರಿಸಿ, ಹಲವು ಮಂದಿ ವಿದ್ವಾಂಸರ ಸಹಕಾರ ಪಡೆದು ಹಣ ಸಂಗ್ರಹಿಸತೊಡಗಿದರು. ದರ್ಭಾಂಗದ ಮಹಾರಾಜರು ರೂ. 5 ಲಕ್ಷವನ್ನು ಉದಾರದಾನವಿತ್ತು ಪ್ರೋತ್ಸಾಹಿಸಿದರು. ಅನಂತರ ಹಲವು ರಾಜ ಮಹಾರಾಜರುಗಳೂ, ಇತರ ಶ್ರೀಮಂತರೂ ಉದಾರ ಸಹಾಯಮಾಡಿದರು. ಆಂದಿನ ವೈಸರಾಯರಾದ ಲೋರ್ಡ್ ಹಾರ್ಡಿಂಜರೇ ರಾಜಮಹಾರಾಜರುಗಳೊಡನೆ ಹಣ ಸಹಾಯಕ್ಕಾಗಿ ವಿನಂತಿಮಾಡಿಕೊಂಡು ನೆರವಾದರು. ಹೀಗೆ ಸರ್ವೆಡೆಯಿಂದಲೂ ಉದಾರ ಸಹಾಯ ದೊರೆತ ಪರಿಣಾಮವಾಗಿ 1916ನೇ ಇಸ್ವಿ ಫೆಬ್ರವರಿ ತಾ. 4ನೇ ವಸಂತ ಪಂಚಮಿ ದಿನ ಹಿಂದು ವಿಶ್ವ ವಿದ್ಯಾಲಯವು ಸ್ಥಾಪಿಸಲ್ಪಟ್ಟಿತು

1916ರಿಂದ ಅದು ನಿಸ್ಸಯಕರ ಅಭಿವೃದ್ಧಿ ಹೊಂದಿ, 13 ಸಾವಿರ ಎಕ್ರೆ ಸ್ಥಳವನ್ನು ವಿಶ್ವವಿದ್ಯಾಲಯಕ್ಕಾಗಿ ಪಡೆಯಲಾಯಿತು. 30 ಲಕ್ಷ ರೂಪಾಯಿ ವ್ಯಯಿಸಿ ಭವ್ಯ ಕಟ್ಟಡಗಳು ರಚಿಸಲ್ಪಟ್ಟವು. 1921ರಲ್ಲಿ ಹಿಂದುದೇಶವನ್ನು ಸಂದರ್ಶಿಸಿದ ಪ್ರಿನ್ಸ್ ಆಫ್ ವೇಲ್ಸ್ ಎಡ್ವರ್ಡರೇ ಈ ವಿಶ್ವವಿದ್ಯಾಲಯವನ್ನು ತೆರೆದರು. ಆ ವರ್ಷಾಂತ್ಯದೊಳಗೆ 5 ಕೊಲೇಜುಗಳು ಸ್ಥಾಪಿಸಲ್ಪಟ್ಟು ಹಿಂದು ದೇಶದ ಬೇರೆ ಬೇರೆ ಕಡೆಗಳಿಂದ 1000 ಮಂದಿ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬಂದರು. ಆನಂತರ ಕ್ರಮಶಃ ಹೆಚ್ಚೆಚ್ಚಾಗಿ ಕೊಲೆಜುಗಳು ಸ್ಥಾಪಿಸಲ್ಪಟ್ಟವು. ಸ್ತ್ರೀಯರಿಗಾಗಿ ಪ್ರತ್ಯೇಕ ಕೊಲೆಜೊಂದು ಸ್ಥಾಪಿಸಲ್ಪಟ್ಟಿತು. ಬೇರೆ ಬೇರೆ ವಿಷಯಗಳ ವ್ಯಾಸಂಗಕ್ಕಾಗಿ ಕೊಲೆಜುಗಳಾದುವು. ಲೋಕದ ಪ್ರಥಮ ಶ್ರೇಣಿಯ ವಿಶ್ವವಿದ್ಯಾಲಯವಾಗಿ ಬೆನಾರೀಸ್ ವಿಶ್ವವಿದ್ಯಾಲಯವು ಬೆಳೆದು ಬೆಳಗಿತು.

ಬೆನಾರೀಸ್ ವಿಶ್ವವಿದ್ಯಾಲಯದ ರಜತೋತ್ಸವವು ಕಳದ ವಾರ ಅತ್ಯಂತ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಮಹಾತ್ಮ ಗಾಂಧಿಯವರೇ ಈ ಸಂದರ್ಭದಲ್ಲಿ ಕನ್ವೊಕೇಶನ್ ಭಾಷಣಮಾಡಿದರು. ಇಂದೀಗ ಪಂಡಿತ ಮಾಲವೀಯರು 81 ವರ್ಷದ ಹಣ್ಣು ಮುದುಕ. ಇನ್ನಾದರೂ ಅವರು ರೂ. 5 ಕೋಟಿ ಸಂಗ್ರಹಿಸಿ 20 ಕೊಲೆಜು ಮತ್ತು 50 ವಿದ್ಯಾರ್ಥಿ ಭವನಗಳನ್ನು ಸ್ಥಾಪಿಸುವ ಕಲ್ಪನೆಯುಳ್ಳವರಿದ್ದಾರೆ. ಅದೇನೂ ಅಸಾಧ್ಯ ಕಲ್ಪನೆಯಲ್ಲ. ಸ್ವತಂತ್ರ ಹಿಂದುಸ್ಥಾನದಲ್ಲಿ ಬೆನಾರೀಸ್ ವಿಶ್ವವಿದ್ಯಾಲಯವು ರಾಷ್ಟ್ರೀಯ ಸಂಸ್ಕೃತಿಯ ಕೇಂದ್ರವಾಗಿ ಪ್ರಮುಖಸ್ಥಾನ ಪಡೆಯದಿರಲಾರದು. ಅದಕ್ಕೆ ಉಜ್ವಲ ಭವಿಷ್ಯವಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಅತ್ಯಂತ ಪ್ರೀತಿ ಮತ್ತು ಅಭಿಮಾನದಿಂದ ಈ ವಿಶ್ವವಿದ್ಯಾಲಯದ ಅಭಿವೃದ್ಧಿಯನ್ನು ಹಾರೈಸಿ ಅದಕ್ಕೆ ಸಹಾಯಮಾಡುವುದು ಹಿಂದೀಯರೆಲ್ಲರ ಕರ್ತವ್ಯವಿದೆ.

ಕೆನರಾ ಬೇಂಕಿನ ಹೊಸ ಶೇರುಗಳು.

ಈ ಬೇಂಕಿನ ಹೊಸ ಶೇರುಗಳು ತೆರೆಯಲ್ಪಟ್ಟ ಅರ್ಧ ಘಂಟೆಯೊಳಗೇನೆ ಅವುಗಳೆಲ್ಲಾ ಕೂಡಿಕೆಯಾಗಿ ಶೇರು ಸಂಗ್ರಹವನ್ನು ನಿಲ್ಲಿಸಬೇಕಾಗಿರುವುದೆಂಬುದು, ಅದರ ಮೇಲೆ ಜನತೆಯ ಅಸಾಧಾರಣ ವಿಶ್ವಾಸವನ್ನು ಸಿದ್ಧಗೊಳಿಸುತ್ತದೆ. ಶೇರುಗಳು ತೆರೆಯಲ್ಪಡುವ ದಿನದ ಮೊದಲೇ, 4 ಲಕ್ಷ ರೂಪಾಯಿ ಮೌಲ್ಯದ 8,000 ಶೇರುಗಳ ಬದಲಿಗೆ ರೂ. 15 ಲಕ್ಷ ಮೌಲ್ಯದ 30,000 ಶೇರುಗಳಿಗೆ ಬಿಕ್ಕಿದ ಅರ್ಜಿಗಳು ಬಂದು ಗ್ರಾಹಕರಿಗೆ ಕೊಡುವರೆ ಶೇರುಗಳು ಬೇಂಕಿನವರ ವಶವಿಲ್ಲದಂತಾಗಿದೆಯೆಂದು ತಿಳಿಯುತ್ತೇವೆ. ಬೇಂಕುಗಳ ಶೇರುಗಳ ಇಷ್ಟೊಂದು ತ್ವರಿತವಾಗಿ ಏನೊಂದೂ ಶ್ರಮವೂ ಇಲ್ಲದೆ ಮಾರಾಟವಾಗಿ ಹೋಗಿರುವುದು ಸಾನಂದ ವಿಸ್ಮಯ ವಿಷಯವಿದ್ದು, ಆ ಕುರಿತು ಕೆನರಾ ಬೇಂಕಿನ ಅಧಿಕಾರಿಗಳು ನ್ಯಾಯವಾದ ಹೆಮ್ಮೆಪಡಬಹುದಾಗಿದೆ.

ಭೀಷಣ ಯುದ್ಧದ ನಿಮಿತ್ತ ಉಂಟಾಗಿರುವ ಸಾಂಪತ್ತಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಮತ್ತು ಇಂದೀಗ ಯುದ್ಧವು ಹಿಂದೂದೇಶದ ಹೊಸ್ತಿಲಲ್ಲೇ ಇರುವ ವಿಪತ್ಕಾಲದಲ್ಲಿ ಕೆನರಾ ಬೇಂಕಿನ ಕುರಿತು ಜನತೆಯು ತೋರಿಸಿರುವ ವಿಶ್ವಾಸವು ಅದರ ವ್ಯವಹಾರ ಚತುರತೆ,ಜನಪ್ರಿಯತೆ,ಮತ್ತು ಸೇವಾತತ್ಪರತೆಯ ದ್ಯೋತಕವಾಗಿರುತ್ತದೆ.

ಕೆನರಾ ಬೇಂಕಿನ ಈ ಅಸಾಧಾರಣ ವಿಜಯದ ಪರಿಣಾಮವಾಗಿ ಅದು ಕ್ಷಣಮಾತ್ರದಲ್ಲೆಂಬಂತೆ ಠೇವಣಾತಿದಾರರ ರೂ. 99 ಲಕ್ಷ ಹಣವನ್ನು ಭದ್ರಗೊಳಿಸಿದಂತಾಯಿತು. ಚಂದಾ ಹಾಕಲ್ಪಟ್ಟ ಮೂಲ ಧನಕ್ಕೂ, ಠೇವಣಾತಿಯ ಮೊತ್ತಕ್ಕೂ, ಇರಬೇಕಾದ ಶತಮಾಂಶ ಪ್ರಮಾಣವು ಈ ಬೇಂಕಿಗೆ ಸಾಧ್ಯವಾಗಿರುವುದು ಅತ್ಯಭಿನಂದನೀಯ ವಿಷಯವಿದೆ. ಕೆನರಾ ಬೇಂಕು ಇಂದು ಕನ್ನಡಿಗರೆಲ್ಲಾ ಹೆಮ್ಮೆ ಪಡಬೇಕಾಗಿರುವ ಸಂಸ್ಥೆಯಾಗಿ ಬೆಳೆದು ಜನಸೇವೆ ಮಾಡುತ್ತಿರುವುದು. ಅದು ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಿ, ಜಾತಿ ಮತ ಸಂಕುಚಿತ ಮನೋಭಾವನೆಗಳಿಲ್ಲದೆ ಶುದ್ಧ ರಾಷ್ಟ್ರೀಯ ಧೋರಣೆಯಿಂದ ತನ್ನ ವ್ಯವಹಾರವನ್ನು ಮತ್ತಷ್ಟು ವ್ಯಾಪಕಗೊಳಿಸಿ ಕರ್ನಾಟಕದ ಅಗ್ರಗಣ್ಯ ಬೇಂಕಿಂಗ್ ಸಂಸ್ಥೆಯಾಗಿ ಬೆಳೆದು ಬೆಳಗಲೆಂದು ನಾವು ಹಾರೈಸುತ್ತೇವೆ.

ಈ ಬೇಂಕಿನ ತಾ. 31-12-41ಕ್ಕೆ ಅಂತ್ಯವಾಗುವ ವರ್ಷದ ಲೆಕ್ಕಪಟ್ಟಿಯು ಸದ್ಯದಲ್ಲೇ ಪ್ರಕಟವಾಗುವುದೆಂದು ತಿಳಿಯುತ್ತೇವೆ. ಈ ವರ್ಷದ ನಿವ್ವಳ ಮುನಾಫೆಯು ಬಹಳ ಆಕರ್ಷಕ. ಠೇವಣಿದಾರರಿಗೆ ಶೇಕಡ 8ರ ಸಲೆಯ ಮುನಾಫೆ ಹಂಚಲಾಗುವುದೆಂಬುದು ಸಂತೋಷ ವಾರ್ತೆ.

★ ಸೋವಿಯೆಟ್ ಸೇನೆಯ ದೊಡ್ಡ ವಿಜಯ ★

ಸೋವಿಯೆಟ್ ಸೇನೆಯ ಮುನ್ನಡೆ

ಇದೇ ತಾ. 24ರಲ್ಲಿ ಸೋವಿಯೆಟ್ ಸೇನೆಯು 70 ಮೈಲು ಉದ್ದ ರಣರಂಗದಲ್ಲಿ ಜರ್ಮನ್ ಸೇನಾ ವ್ಯೂಹವನ್ನು ಭೇದಿಸಿ ಲೆನಿನ್‌ಗ್ರಾಡ್ ಮತ್ತು ಉಕ್ರೈನ್ ರೈಲ್ವೆಯನ್ನು ಕಡಿದು ಹಾಕುವಷ್ಟು ಮುಂದೊತ್ತಿರುವದು. ಈ ರೈಲ್ವೇ ರಸ್ತೆಯು ಕಡಿದು ಹಾಕಲ್ಪಟ್ಟರೆ ಜರ್ಮನರಿಗೆ ಲೆನಿನ್‌ಗ್ರಾಡ್ ಪ್ರದೇಶಕ್ಕೆ ಹೆಚ್ಚಿನ ಸೇನೆ ತರಲು ಅಸಾಧ್ಯವಾಗುವುದು. ಈ ರೈಲ್ವೆಯ ಮೂಲಕವೇ ಹಿಟ್ಲರರು ಒಂದೆಡೆಯಿಂದ ಇನ್ನೊಂದೆಡೆಗೆ ಇಚ್ಛಾನುಸಾರ ಸೇನೆಗಳನ್ನು ಕಳುಹಿಸುತ್ತಿದ್ದರು. ಸೋವಿಯೆಟ್ ಸೈನಿಕರು ಈ ವರೆಗೆ 5000 ಚದರ ಮೈಲು ಸ್ಥಳವನ್ನು ಗೆದ್ದಿರುವರು. ಲೆನಿನ್ ಗ್ರಾಡಿನ ದಕ್ಷಿಣ ಮತ್ತು ಮೋಸ್ಕೋ ಪಟ್ಟಣದ ವಾಯುವ್ಯದಲ್ಲಿ ವಾಲ್ಡಾಯಿ ಗುಡ್ಡ ಪ್ರದೇಶದಲ್ಲಿ ಸೋವಿಯೆಟ್ ಸೈನಿಕರು ದೊಡ್ಡ ವಿಜಯ ಪಡೆದ ಪರಿಣಾಮವಾಗಿ ಹಲವು ಮಂದಿ ಜರ್ಮನ್ ಸೈನಿಕರು ಶರಣಾಗತರಾಗಿರುವರು. ದಕ್ಷಿಣದಲ್ಲಿ ಜನರಲ್ ಗೊರೊಡಿಯನ್ಸ್ಕಿಯವರ ಸೇನೆಯು ಖಾರ್ಕೋವಿನ ಕಡೆಗೆ ಮುನ್ನಡೆಯುತ್ತಿದೆ. ತೀವ್ರ ಚಳಿಯ ನಿಮಿತ್ತ ಸಾವಿರಾರು ಮಂದಿ ಜರ್ಮನರು ರಣರಂಗಗಳಲ್ಲಿ ಮರಗಟ್ಟಿ ಸತ್ತು ಹೋಗಿರುವರೆಂದು ತಿಳಿದುಬರುತ್ತದೆ.

ಅಮೆರಿಕದ ಪ್ರಚಂಡ ವಿಮಾನಪಡೆ

ಅಮೆರಿಕವು ಪ್ರಚಂಡ ವಿಮಾನ ಪಡೆಯನ್ನು ತಯಾರಿಸುವ ನಿರ್ಧಾರ ಮಾಡಿರುವುದು. 33,000 ವಿಮಾನಗಳನ್ನು ತಯಾರಿಸುವ ಯೋಜನೆಯನ್ನೀಗ ಕೈಕೊಳ್ಳಲಾಗಿದೆ. ಅದಕ್ಕಾಗಿ 7,114 [illegible] ಡಾಲರುಗಳನ್ನು ವ್ಯಯಿಸಲಾಗುವುದು.

ಜರ್ಮನಿಯ ಪರಿಸ್ಥಿತಿ.

ಯುದ್ಧಾರಂಭವಾದಂದಿನಿಂದ ಇದೀಗ ಪ್ರಥಮ ಸಲ ಜರ್ಮನ್ ಜನತೆಯು ಅಪಜಯದ ಭೀತಿಯುಳ್ಳದಾಗಿದೆ. ಜರ್ಮನಿಯಲ್ಲಿ ಶೀಘ್ರವಾಗಿ ಕ್ರಾಂತಿಯುಂಟಾಗುವುದೆಂದು ನಂಬುವುದು ನಿರರ್ಥಕ. ಜರ್ಮನಿಗೆ ಈಗ ಅಮೆರಿಕ ಮತ್ತು ಇಂಗ್ಲೆಂಡುಗಳ ಬೆದರಿಕೆಯಿಲ್ಲ. ರಷ್ಯ ಮತ್ತು ಪೋಲೆಂಡುಗಳ ಭೀತಿ ಹಿಡಿದಿದೆ. ಜರ್ಮನರಿಗೆ ಇನ್ನೂ ಹಿಟ್ಲರರ ಮೇಲೆ ಕುರುಡು ನಂಬಿಕೆಯಿದೆ. ಆದರೆ ನಾಝಿ ಪಕ್ಷ ಮತ್ತು ಸೇನೆಗಳೊಳಗೆ ವೈಷಮ್ಯವೆದ್ದಿದೆ. ಯುದ್ಧದಲ್ಲುಂಟಾದ ಭಯಂಕರ ಪ್ರಾಣಹಾನಿಯು ಜನತೆಗೀಗ ತಿಳಿಯಹತ್ತಿದೆ. ಪೋಲೆಂಡ್, ಬಲ್ಗೇರಿಯ, ರುಮೇನಿಯ.

ಚೀನೀ ಸೈನಿಕರ ಪ್ರಬಲ ಪ್ರತಿಧಾಳಿ.

ಹಂಗೆರಿ ಮತ್ತು ಗ್ರೀಸುಗಳ ಆಸ್ಪತ್ರೆಗಳೆಲ್ಲಾ ಗಾಯಗೊಂಡ ಜರ್ಮನ್ ಸೈನಿಕರಿಂದ ತುಂಬಿವೆ. ಈಗ ಗಾಯಗೊಂಡವರನ್ನು ಫ್ರಾನ್ಸಿಗೊಯ್ಯಲಾಗುತ್ತಿದೆ. ಜರ್ಮನಿಯಿಂದ ಪೋರ್ಚುಗಲ್ಲಿಗೆ ಒಂದಿರುವ ಅಮೆರಿಕಾದ ರೇಡಿಯೋ ವಾರ್ತಾ ಪ್ರಸಾರಕನೊಬ್ಬನ ಅಭಿಮತ.

ಒಂದು ಮಿಲ್ಯ ಹಿಂದೀ ಸೈನಿಕರು

ಈಗ ತಿಂಗಳೊಂದಕ್ಕೆ ಸುಮಾರು 50,000ದಂತೆ ಹಿಂದೀಯರು ಸೇನೆಗೆ ಸೇರಿಸಲ್ಪಡುತ್ತಿರುವರು. ಇಂದೀಗ 1000,000 ಶಸ್ತ್ರಸಿದ್ಧ ಹಿಂದೀ ಸೈನಿಕರಿರುವರು. ಯುದ್ಧದ ಕೊನೆಯ 8 ತಿಂಗಳುಗಳಲ್ಲಿ 53,000 ಮಂದಿ ಹಿಂದೀಯರು ಹೊಸತಾಗಿ ಸೇನೆಗೆ ಸೇರಿಸಲ್ಪಟ್ಟರು. ಅನಂತರ 100,000 ಮಂದಿಯನ್ನು ಪುನಃ ಸೇರಿಸಿಕೊಳ್ಳುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

ಚೀನೀಯರ ಪ್ರತಿಯುದ್ಧ

ಜನವರಿ ತಾ. 23ರಲ್ಲು ಚೀನೀಯರು ಹುನಾನ್ ರಣರಂಗಗಳಲ್ಲಿ ಜಪಾನರ ಮೇಲೇರಿಹೋಗಿ ಹೋರಾಟ ನಡೆಸುತ್ತಿರುವರು. ಟವಾಂಗ್ ಕಿಯ ಎಂಬಲ್ಲಿ 24 ಘಂಟೆಗಳ ಕದನದ ನಂತರ ಚೀನೀಯರು ಪಟ್ಟಣವನ್ನು ವಶಪಡಿಸಿಕೊಂಡಿರುವರು. ಕ್ವಾಂಟೂನ್ [illegible] ಜಪಾನರನ್ನು [illegible] ರುವರು. [illegible] ಪಟ್ಟಣ[illegible] ಜಪಾನರೊಡನೆ ಹೋರಾಟ ನಡೆಸುತ್ತಿರುವರು. ದಕ್ಷಿಣ [illegible] ಪ್ರಾಂತದಲ್ಲಿ [illegible] ಚೀನೀಯರು ಜಪಾನರ [illegible]

ನ್ ರೈಲ್ವೆ ರಸ್ತೆಯನ್ನು ನಾಶಮಾಡಿರುವರು. ಯುನ್ನಾನ್ ಮತ್ತು ಸಯಾಮಿನ ಎಲ್ಲೆಗಳಲ್ಲಿ ನವನೂರ್ಗಳೊಂದಿಗೆ ಚೀನೀ ಸೈನಿಕರು ಸಂಗ್ರಹಿಸಲ್ಪಡುತ್ತಿದ್ದಾರೆ. ಬ್ರಹ್ಮದ ಸಹಾಯಕ್ಕಾಗಿ ಸ್ವೇಚ್ಛೆಯಿಂದ ಒಂದಿರುವ ಅಮೆರಿಕಾದ ಸ್ವಯಂಸೇವಕರು ಇಷ್ಟರ ವರೆಗೆ 15 ಜಪಾನೀ ವಿಮಾನಗಳನ್ನು ಹೊಡೆದುರುಳಿಸಿರುವರು, [illegible] ವಿಮಾನ [illegible] ನಾಶಮಾಡಿರುವರು. ಫ್ರೆಂಚ್ ಇಂಡೋ ಚೈನದ ಮುಖ್ಯ ಪಟ್ಟಣವಾದ ಹೆನೋಯಿಯ ಮೇಲೆ ಇದೇ ತಾ. 25ರಲ್ಲು ಪ್ರಥಮ 70 ಚೀನೀ ವಿಮಾನಗಳು ಧಾಳಿ ನಡೆಸಿ ಹಾವಳಿ ಮಾಡಿರುವವು. ಸೈಯಾಂ ಮತ್ತು ಫ್ರೆಂಚ್ ಇಂಡೋ ಚೈನಗಳ ಮೇಲೆ ಚೀನೀಯರು ಧಾಳಿ ನಡೆಸಬೇಕೆಂಬ ಆಲೋಚನೆ ನಡೆದಿದೆ.

ಬಂಗಾಳಕೊಲ್ಲಿಯಲ್ಲಿ ಹಡಗ ಮುಳುಗಿಸಲ್ಪಟ್ಟಿತು.

ಬಂಗಾಳಕೊಲ್ಲಿಯಲ್ಲಿ 2 ವ್ಯಾಪಾರಿ ಹಡಗಗಳು ವೈರಿಗಳಿಂದ ಮುಳುಗಿಸಲ್ಪಟ್ಟಿರುವವೆಂದು ತಿಳಿದುಬರುತ್ತದೆ. ಒಂದರ ಜನವು ರಂಗೂನಿಗೆ ಹೋಗಿ ಇಳಿದಿದ್ದಾರೆ.

67 ಜಪಾನಿನ ವಿಮಾನ ನಾಶ

ಬರ್ಮಾ ಮತ್ತು ಇತರ ಕದನಗಳ ವಿಮಾನ ಯುದ್ಧಗಳಲ್ಲಿ ಇಷ್ಟರ ವರೆಗೆ ಒಟ್ಟು 67 ಜಪಾನಿ ವಿಮಾನಗಳು ನಾಶಮಾಡಲ್ಪಟ್ಟಿರುವವು. ನಾಶವಾದ ಬ್ರಿಟಿಷ್ ವಿಮಾನಗಳು 9.

ಇದೇ ತಾ. 26[illegible] ಬಿಸಿ ವಾರ್ತೆಯು ಮಲಯಾದ [illegible] ರನ್ನು ನ[illegible]ಸುತ್ತಿರುವರೆಂದು ತಿಳಿದುಬರುತ್ತದೆ.

ಥೈಲೆಂಡು ಜಪಾನಿನೊಡನೆ ಸಂಪೂರ್ಣವಾಗಿ ಸೇರಿ ಇಂಗ್ಲೆಂಡ್ ಮತ್ತು ಅಮೆರಿಕಗಳ ಮೇಲೆ ಯುದ್ಧ ಸಾರಿದೆ ಬ್ರಿಟಿಷ್ ವಿಮಾನಗಳು ಥೈಲೆಂಡಿನ ಮುಖ್ಯ ಪಟ್ಟಣದ ಮೇಲೆ ಧಾಳಿಯಿಟ್ಟು ಹೆಚ್ಚಿನ ಹಾವಳಿ ಮಾಡಿರುತ್ತವೆ.

ಇದೇ ತಾ. 25ರಲ್ಲು ಮಲಯದ ಬಳಿಯ ಮಕಸ್ಸಾರ್ ಅಖಾತದ ಮುಖಾಂತರ ಪಶ್ಚಿಮಕ್ಕೆ ಹೋಗುತ್ತಿದ್ದ ಜಪಾನ ಹಡಗ ಪಡೆಯಮೇಲೆ ಮಿತ್ರ ರಾಷ್ಟ್ರಗಳ ವಿಮಾನಗಳು ಮತ್ತು ಹಡಗಗಳು ಧಾಳಿ ನಡಿಸಿ, ಸೈನಿಕರನ್ನೊಯ್ಯುವ 5 ಹಡಗಗಳು ಮುಳುಗಿಸಲ್ಪಟ್ಟಿರುವುವೆಂದು ಪ್ರಕಟಿಸಲ್ಪಟ್ಟಿದೆ.

ಯಕ್ಷಗಾನ ಸಮಾರಂಭ–ಇದೇ ತಾ. 31-1-42ನೇ ಶನಿವಾರ ರಾತ್ರಿ ಘಂಟೆ 9 30ಕ್ಕೆ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾಕೋವಿದರ ಕೂಡ ಏಕೆಯಿಂದ 'ಭೀಷ್ಮಾರ್ಜುನರ ಕಾಳಗ' ಯಕ್ಷಗಾನ ಸಮಾರಂಭವು ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಸ್ಕೂಲಾ ವರಾಂಡದಲ್ಲಿ ಜರಗಲಿರುವುದು. ಸಮಾಜದವರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕೆ. ಜಿ. ಬಲ್ಲಾಳ್, B. A. LL. B.
ಅಧ್ಯಕ್ಷ, ಉಡುಪಿ ತಾಲೂಕು ಹರಿಜನ ಸೇವಕ ಸಂಘ.
ನಾರಾಯಣ ಶೆಟ್ಟಿ, ಹರಿಜನ ಸೇವಕ, ಜಿಲ್ಲಾ ಹರಿಜನ ಸೇವಕ ಸಂಘ, ಮಂಗಳೂರು.

ದಿವಂಗತ ಸರ್. ಪಿ. ರಾಘವೇಂದ್ರರಾಯರು–ಭಾರತ ಸರಕಾರದ ಆರ್ಥಿಕ ಖಾತೆಯಲ್ಲಿ ಕಾರ್ಯದರ್ಶಿ ಸ್ಥಾನದಲ್ಲಿದ್ದ ಹೆಸರಾಂತ ಸರ್ ಪಿ. ರಾಘವೇಂದ್ರ ರಾಯರು ಇದೇ ತಾ. 23ರಲ್ಲಿ ದಿಲ್ಲಿಯಲ್ಲಿ ಹೃದಯಸ್ತಂಭನದಿಂದ ಇಹಯಾತ್ರೆ ಮುಗಿಸಿದುದು ಶೋಚನೀಯ ವಿದೆ. ರಾಯರು ದಕ್ಷಿಣ ಕನ್ನಡದ ಸ್ವಂಟೂರಿನವರು. ಅನುಕ್ರಮ ಹೀಗೆ ಸರಕಾರದ ಉನ್ನತ ಹುದ್ದೆಗಳನ್ನೇರುತ್ತಾ ಬಂದ [illegible] ಐ. ಸಿ. ಎಸ್ [illegible] ದಕ್ಷಿಣ ಕನ್ನಡದವರು [illegible] ಸರ್. ರಾಯರ ನಿಧನದಿಂದ ಭಾರತವು ಉನ್ನತಾಧಿಕಾರಿಗಳಲ್ಲೊಬ್ಬರನ್ನು ಕಳಕೊಂಡಂತಾಯಿತು. ದಕ್ಷಿಣ ಕನ್ನಡವು ಹೆಗ್ಗಳಿಕೆ ಪಡಬಹುದಾಗಿದ್ದ ಸತ್ಪುತ್ರನೊಬ್ಬನನ್ನು ನೀಗಿದಂತಾಯಿತು. ದಿವಂಗತರ ಆತ್ಮಕ್ಕೆ ಶಾಂತಿಯುದಿಲಿ; ಅವರ ಬಂಧುಮಿತ್ರರೊಡನೆ ನಮ್ಮ ಸಹಸಂತಾಪವಿದೆ.

ಪ್ರಸಿದ್ಧಿ ಪತ್ರಿಕೆ.

[illegible] ಶ್ರೀ ವಾರೆಮ್ಮ ದೇವಸ್ಥಾನದ ಪೂಜೆಯ ಕಟ್ಟಡವು ಪ್ರತಿಷ್ಠಾಪನೆಗೊಂಡಿದೆ.

ದೇಶ ಕಲ್ಯಾಣಾರ್ಥವಾಗಿಯೂ ಸುಭಿಕ್ಷಾರ್ಥವಾಗಿಯೂ ಶ್ರೀ ವಾರೆಮ್ಮ ದೇವರ ಜಾತ್ರೆಯನು ನಡೆಸುವದಕ್ಕೆ ಶ್ರೀದೇವರ ಅಪ್ಪಣೆಯನ್ನು ಪಡೆಕೊಂಡು ಈ ಕಾರ್ಯವನ್ನು ಆರಂಭಿಸಿ ಇದೇ ಬರುವ ಫಾಲ್ಗುಣ ಶುದ್ಧ 3 ಮಂಗಳವಾರ(ತಾ. [illegible]) ರಾತ್ರಿ [illegible] ಘಂಟೆ [illegible] ಪೂಜಾ ವಿನಿಯೋಗಗಳು ನಡೆದು [illegible] ಶ್ರೀ ದೇವರ ರಥೋತ್ಸವವಾಗಿ ಅದೇ ದಿವಸ ಸಾಯಂಕಾಲ [illegible] ಘಂಟೆಯಿಂದ ಬಲಿ ಕೋಲಗಳು ನಡೆದು ನಂತರ [illegible] ಫಾಲ್ಗುಣ ಶುದ್ಧ 4 ಮಂಗಳವಾರ ರಾತ್ರಿ [illegible] ಘಂಟೆಯ ವರೆಗೆ ಪ್ರತಿನಿತ್ಯದಲ್ಲಿ ನದರಿ ಘಂಟೆಗೆ [illegible] ಭಕ್ತ ಜನರಿಂದ ಬಂದ ಕಾಯಿ ಹಣ್ಣು, [illegible] ಉಡಿ, ತುಲಾಭಾರ ಕಾಣಿಕೆ ವಗೈರೆ ಹರಕೆಗಳನ್ನು ಒಪ್ಪಿಸುವರೇ ಸಮಯ ವೇಳೆಯನ್ನು ನಿಶ್ಚಯಿಸಿರುತ್ತದೆ. ಪ್ರಯುಕ್ತ ಈ ಮಹೋತ್ಸವಕ್ಕೆ ಎಲ್ಲಾ [illegible] ಬರಬೇಕೆಂತ ಅಪೇಕ್ಷಿಸುತ್ತೇವೆ.

ಈ ತಿಂಗಳು ತಾ [illegible] ನೇ ನಡೆಯುವ ಶ್ರೀ ವಾರೆಮ್ಮ ದೇವರ ಜಾತ್ರೆ ಸಂಬಂಧ [illegible] ಘಂಟೆಯಿಂದ ಅಂಗಡಿಗಳ ಬಗ್ಗೆ ಜಾಗೆಗಳನ್ನು [illegible] ದಿವಸದಿಂದ ಮುಂದೆ ತಾ. [illegible] ನೇ [illegible] ವರೆಗೆ ಕೊಡಲ್ಪಡುವವು.

[illegible] ಗಡಿಹಿತ್ತಿಲು ಗ್ರಾಮ, ತಾ. 10-1-42.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ
ತಾ 31–1-1942ರಿಂದ
ಡೈರೆಕ್ಟರ್ ಶಾಂತಾರಾಮರವರ ಅಪ್ರತಿಮ ಚಿತ್ರರತ್ನ
ಪಡೋಸಿ
ಅನೀಸ್, ಮಝರ್‌ಖಾನ್, ಜಾಗೀರ್‌ದಾರ್ ನಟಿಸಿರುವ ಪ್ರಭಾತ್ ಚಿತ್ರ।
ನಡೆಯುವ ಚಿತ್ರ: RKO ರೇಡಿಯೋದವರ
ಸ್ವಿಸ್ ಫೆಮಿಲಿ ರೊಬಿನ್‌ಸನ್
ಬರುವ ಚಿತ್ರ: 'ಮಹಾತ್ಮಾ ಗಾಂಧಿ'ಯವರ
ಜೀವನ ಚರಿತ್ರೆ-
ಅನಂತರ: ಚಿತ್ರಲೇಖಾ, ಡೈಮಂಡ್ ಕ್ವೀನ್, ಮುಸಾಫಿರ್,
ಇತ್ಯಾದಿ.

ಪ್ರಕಟಣೆ

ಉಡುಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೆಟುಗಳಲ್ಲಿ ಗಾಡಿ ಚಾಕಗಳಲ್ಲಿ ಮತ್ತು ವಧಾಗೃಹದಲ್ಲಿ 1942-1943ನೇ ವರ್ಷದಲ್ಲಿ ವರಿವಸೂಲು ಮಾಡುವ ಸ್ವತಂತ್ರವು ತಾ. 30-1 1942ನೇ ಶುಕ್ರವಾರ ಪೂರ್ವಾಹ್ನ ಘಂಟೆ 11ಕ್ಕೆ ಉಡುಪಿ ಮುನಿಸಿಪಾಲ್ ಆಫೀಸಿನಲ್ಲಿ ಉಡುಪಿ ಮುನಿಸಿಪಾಲ್ ಕಮಿಶನರರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವದು ಬಾಯಸ್ ಉಳ್ಳವರು ಏಲಮಿಗೆ ನಿಲ್ಲಬಹುದು

ಏಲಮಿನ ಶರ್ತಗಳನ್ನು ವ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಾಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

ಮುನಿಸಿಪಲ್ ಆಫೀಸು,
ಉಡುಪಿ.
ತಾ. 20-12-1941.

Harischandra Rao.
ಕಮಿಶನರ್, ಯು. ಯು.

ಹೊಲಿಯುವ
ನೂಲಿನ
ಉಂಡೆಗಳು
ಈಗ ಹೊಸತಾಗಿ ಯಂತ್ರಗಳ ಮತ್ತು ನುರಿತ ಕೆಲಸಗಾರರ ಸಹಕಾರದಿಂದ ತಯಾರಿಸಲ್ಪಡುತ್ತದೆ. ಎಲ್ಲಾ ಕಡೆಗಳಲ್ಲೂ ಏಜಂಟರುಗಳು ಕೂಡಲೇ ಬೇಕಾಗಿದ್ದಾರೆ.
ತಯಾರಿಸುವ ಸ್ಥಳ:–
ಬಿಹಪರಬಂಧು ಹೊಸಿಯರಿಸ್,
(ಪ್ರೊಪ್ರೈಟರರು ಬಡವರಬಂಧು)
ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್
ಮಂಗಳೂರು.

ESTD: 1906

THE

CANARA BANKING CORPORATION, LTD.,

(Incorporated in British India with Limited Liability)

Head office:- UDIPI, S. Kanara.

NOTICE

Sir (s) Madam'

The Ordinary Annual General Meeting of the shareholders of the Corporation will be held at its Registered Office at Udipi on Sunday the 1st March, 1942 at 3 P. M. to transact the following business:

1. To receive, consider and adopt the Directors Report and the Balance Sheet as at 31-12-1941 and the Profit & Loss Statement for the year 1941 with the Auditors' Certificate

2. To declare a dividend.

3. To elect 4 Directors in the place of:
   1. Sri B. Vaikunta Baliga,
   2. Dewan Bahadur U. Rama Rao,
   3. Dr. B. Rama Baliga,
   4. Sri U. Gopalakrishna Nayak,

   who retire by rotation but are eligible for re-election (under Articles Nos. 105, 106, & 107.)

4. To appoint an Auditor or Auditors for the year 1942 and fix the amount of his or their remuneration. (The last year's auditors are eligible for re-election and are willing to accept the Office).

It is requested that you will be kind enough to attend the meeting. If it should be inconvenient for you to attend the meeting in person, you may appoint another shareholder of the Corporation as your proxy.

The proxy form should be duly filled in and stamped with 2 one anna revenue stamps, bear your signature and should be deposited at the Registered Office of the Bank by 3 P. M. on 26—2—1942.

N. B. The Register of Members and transfer books of the Corporation will remain closed from 10—2—1942 to 2—3—1942 both days inclusive.

(By Order of the Board)

OFFICE OF THE CORPORATION, UDIPI, 24th January, 1942. (Sd) V. R. Kamath. Manager.

ಪ್ರಕಟಣೆ

ಉಡುಪಿ ಮುನಿಸಿಪಾಲಿಟಿಯೊಳಗಿರುವ ಮೂರು "ಮಟನ್ ಸ್ಟೋಲು"ಗಳು ತಾ. 1-4-1942ರಿಂದ ಒಂದು ವರ್ಷಕ್ಕೆ ಬಾಡಿಗೆಗೆ ಕೊಡಲ್ಪಡುವವು. ಬಾಡಿಗೆಗೆ ವಹಿಸಿಕೊಳ್ಳಲು ಅಪೇಕ್ಷಿಸುವವರು ತಮ್ಮ ಟೆಂಡರುಗಳನ್ನು ಬರಹ ಮೂಲಕ ಮುನಿಸಿಪಾಲ್ ಕಮಿಶನರರಿಗೆ "ಸೀಲ್" ಕವರಿನಲ್ಲಿ ಕಳುಹಿಸುವದು. ಈ ಟೆಂಡರು ಕವರುಗಳು ಮುನಿಸಿಪಾಲ್ ಆಫೀಸಿನಲ್ಲಿ ಮುನಿಸಿಪಾಲ್ ಕಮಿಶನರರಿಂದ 1942ನೇ ಇಸ್ವಿ ಜನವರಿ ತಾ. 30ರಲ್ಲು ಅಪರಾಹ್ನ ಮೂರು ಘಂಟೆಯ ವರೆಗೆ ಸ್ವೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಾಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

ಮುನಿಸಿಪಾಲ್ ಆಫೀಸು, ಉಡುಪಿ. ತಾ. 20-12-1942.

Harischandra Rao.
ಕಮಿಶನರ್, ಯು. ಯಂ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಬಿ. ಸಿ. ಯಂ. ವರ್ಧಂತಿ— ಸ್ಥಳೀಯ ಬಿ. ಸಿ. ಯಂ. ಸಂಸ್ಥೆಯ 43ನೇ ವಾರ್ಷಿಕ ವರ್ಧಂತಿಯು ತಾ. 24ನೇ ಸಾಯಂಕಾಲ ಬಿ. ಸಿ. ಯಂ. ಶಾಲೆಯಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಎಲ್. ಎಸ್. ಪಾರ್ಥಸಾರಥಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀ. ಪಿ. ಆರ್. ನಾಯಡಾರ್ ಅವರು ಗತವರ್ಷದ ವರದಿಯನ್ನೋದಿದರು. ಶ್ರೀ ಯಂ. ಎಸ್. ಏಕಾಂಬರ ರಾಯರು ಶ್ರೀ ಸ್ವಾಮಿ ಈಶ್ವರಾನಂದರ ವಿಷಯವಾಗಿ ಭಾಷಣಮಾಡಿದರು. ಶ್ರೀ ಸ್ವಾಮಿಗಳು 43 ವರ್ಷಗಳ ಹಿಂದೆ ಬಿ. ಸಿ. ಯಂ.ನನ್ನು ಸ್ಥಾಪಿಸಿ ಹಿಂದುಳಿದವರನ್ನು ಮುಂದಕ್ಕೆ ತರಲು ಎಷ್ಟರ ಮಟ್ಟಿಗೆ ಸಾಹಸಪಟ್ಟಿದ್ದರೆಂಬುದನ್ನು ತಿಳಿಸಿದರು. ಮಾನ್ಯ ಅಧ್ಯಕ್ಷರು ಬಿ. ಸಿ. ಯಂ. ಮಾಡುತ್ತಿರುವ ಒಳ್ಳೆಯ ಕಾರ್ಯವನ್ನು ಪ್ರಶಂಸಿಸಿ ಅದಕ್ಕೆ ಅಭಿವೃದ್ಧಿಯನ್ನು ಕೋರಿದರು. ಬಿ. ಸಿ. ಯಂ. ಶಾಲಾ ಮಕ್ಕಳು ವಿವಿಧ ವಿನೋದಾವಳಿಗಳಿಂದ ಸಭೆಯವರನ್ನು ಆನಂದಗೊಳಿಸಿದರು.

ಜಿಲ್ಲಾ ಬೋರ್ಡು ಸಭೆ—ಫೆಬ್ರವರಿ ತಾ. 12ನೇ ಗುರುವಾರ ಪೂರ್ವಾಹ್ನ 9-55ಕ್ಕೆ ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಮಂಗಳೂರು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಸೇರುವುದು. ಬೋರ್ಡಿನ ಸದಸ್ಯರಲ್ಲೊಬ್ಬರನ್ನು ರೂರಲ್ ಡಿವೆಲಪ್‌ಮೆಂಟ್ ಸಮಿತಿಗೆ ಆರಿಸುವುದೇ ಈ ವಿಶೇಷ ಸಭೆಯ ಉದ್ದೇಶ.

ಉಡುಪಿ.

ಸ್ಕೌಟ್ ಸತ್ಕಾರ ಕೂಟ—ಪರ್ಯಾಯ ಮಹೋತ್ಸವದ ಸುವ್ಯವಸ್ಥೆಯ ಕಾರ್ಯಭಾಗದಲ್ಲಿ ನೆರವಾದ ಉಡುಪಿ ಕೇಂದ್ರ ರೋವರ್ಸ್ ಮತ್ತು ಸ್ಕೌಟುಗಳನ್ನು ಸನ್ಮಾನಿಸಲು 80 ಮಂದಿ ಸದಸ್ಯರ ಆ ಕೂಟವನ್ನು ಪರ್ಯಾಯ ಪಟ್ಟಾಭಿಷಿಕ್ತರಾದ ಶ್ರೀ ವಿದ್ಯಾರತ್ನ ಶ್ರೀಗಳವರು ತಾ. 26 ರಂದು ಏರ್ಪಾಡಿಸಿಕೊಂಡು ಸಾಮೂಹಿಕ ಭಾವಚಿತ್ರ (group phota) ವನ್ನು ತೆಗೆಯಿಸಿದ್ದಲ್ಲದೆ, ಸ್ಕೌಟರ ಶಿಸ್ತು, ವ್ಯವಸ್ಥೆಗಳ ಕ್ರಮ, ಸೇವಾಬುದ್ಧಿಗಳನ್ನು ಶ್ಲಾಘಿಸಿದರು. ಶ್ರೀಕೃಷ್ಣನ ತಾರುಣ್ಯದ ಲೀಲೆಗಳ ಅಂತರಾರ್ಥವನ್ನು ಗ್ರಹಿಸಿದರೆ ಸ್ಕೌಟು ಚಳುವಳಿಯ ಮೂಲ ಪ್ರವರ್ತಕನೆಂದೂ ಅಂತಹ ಭಗವಾನ್ ಶ್ರೀಕೃಷ್ಣ ಕ್ಷೇತ್ರದ ಸ್ಕೌಟರ ಯಶೋದುಂದುಭಿಯು ಎಲ್ಲೆಲ್ಲಿಯೂ ಕೇಳುವಂತಾಗಲೆಂದೂ ಶ್ರೀಗಳವರ ಆಕಾಂಕ್ಷೆಯೆಂಬುದನ್ನು ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ವಿವರಿಸಿದರು. ತದನಂತರ ಸ್ಕೌಟ್ ಸಂಘದ ಅಧ್ಯಕ್ಷರಾದ ಡಾ| ಸುಂದರರಾಮಯ್ಯ, ಅಸಿಸ್ಟಾಂಟ್ ಕಮಿಷನರಾದ ಶ್ರೀ. ಬಿ. ಎನ್. ಬಾಳಿಗಾ, ಪರ್ಯಾಯ ಸ್ಕೌಟ್ ಶಿಬಿರದ ಉಸ್ತುವಾರಿ ವ್ಯವಸ್ಥಾಪಕ ಶ್ರೀ. ಕುಂಜೂರು ರಾಮಚಂದ್ರರಾವ್ ಇವರುಗಳು ಸ್ಕೌಟರ ಸೇವೆಯನ್ನು ಈ ರೀತಿ ಪ್ರಕಟವಾಗಿ ಆದರಿಸಿ ಮನ್ನಿಸಿದ ಶ್ರೀಗಳವರ ಔದಾರ್ಯವನ್ನು ಕೊಂಡಾಡಿ ಧನ್ಯವಾದ ಭಾಷಣಗಳನ್ನಿತ್ತರು.

ಶ್ರೀ ಕೃಷ್ಣದೇವರ ಮಠದಲ್ಲಿ ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ತಾ. 25-1-1942ನೆ ದಿನ ಸಾಯಂಕಾಲ ಇತರ ಏಳು ಜನ ಶ್ರೀಪಾದಂಗಳವರುಗಳ ಸಮ್ಮುಖದಲ್ಲಿ ಪರ್ಯಾಯ ಶ್ರೀ ಕೃಷ್ಣಾಪುರ ಮಠಕ್ಕೆ ಮಹಾ ಜನರ ಮೆಚ್ಚುಗೆಗೆ ಪಾತ್ರವಾಗುವಂತೆ ವಿದ್ಯುದ್ದೀಪಗಳ ಡೆಕೊರೇಶನ್ ಸಂಯೋಜನೆ ಮಾಡಿಕೊಟ್ಟ ದಿ. ಮಂಗಳೂರು ಎಲೆಕ್ಟ್ರಿಕ್ ಸರ್ವಿಸ್ ಟ್ರೆಕರೀದರ ಮಾಲಕರಾದ ಶ್ರೀ.ಬಿ.ಎ. ಭಟ್ಟರಿಗೆ ಸುವರ್ಣಪದಕವನ್ನು ಬಹುಮಾನವಾಗಿ ದಯಪಾಲಿಸಿ ಗೌರವಿಸಿದರು.

ತಾ. 22-1-42ರಲ್ಲಿ ಇಲ್ಲಿಯ ಬಿ. ಇ. ಎಂ. ಎಲಿಮೆಂಟರಿ ಶಾಲಾ "ರಕ್ಷಕರ ದಿನ"ವು ಶ್ರೀ ಕೆ| ಲಕ್ಷ್ಮೀನಾರಾಯಣ ಐತಾಳ ಬಿ. ಎ., ಬಿ. ಎಲ್. ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕಾಸರಗೋಡು—ತಾ. 13-1-42ರಲ್ಲಿ ಕಾಸರಗೋಡಿನ ಬಂಟರ ಯಾನೆ ನಾಡವ ಸದ್ಗೃಹಸ್ಥರ ಸಭೆಯೊಂದು ವಕೀಲ್ ಶ್ರೀ. ಕೆ. ತಿಮ್ಮಶೆಟ್ಟರ ಆಫೀಸಿನಲ್ಲಿ (ಅವರ ಅಧ್ಯಕ್ಷತೆಯಲ್ಲಿ) ಜರಗಿ, ಸ್ವಜಾತಿ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿ ಭವನವನ್ನು ತೆರೆಯಬೇಕೆಂದು ನಿಶ್ಚಯಿಸಲಾಯಿತು. ಈ ಬಗ್ಗೆ ಡಾಕ್ಟರ್ ಪಿ. ವಿಟ್ಠಲ ಭಂಡಾರಿಗಳು ಅಧ್ಯಕ್ಷ ಮತ್ತು ವಕೀಲ್ ಶ್ರೀ. ಸುಂದರರಾಮ ಶೆಟ್ಟರು ಕಾರ್ಯದರ್ಶಿಗಳಾಗಿ ಇರುವ 9 ಜನರ ಕಮಿಟಿಯೊಂದ್ನು ರಚಿಸಲಾಯಿತು. ಬರುವ ಜೂನಿನಲ್ಲಿ ವಿದ್ಯಾರ್ಥಿ ಭವನವು ತೆರೆಯಲ್ಪಡಲಿರುವುದಾಗಿ ತಿಳಿದುಬರುತ್ತದೆ.

ಮಂಜೇಶ್ವರ—ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವವು ತಾ. 1-1-1942ರಲ್ಲಿ ಡಾಕ್ಟರ್ ಕೆ. ನೇಮಿ ರಾಜಾಳ್ವರ ಅಧ್ಯಕ್ಷತೆಯಲಿ ಜರಗಿತು.

ಕಾರ್ಕಳ—ಸ್ಥಳೀಯ ಬೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ಇದೇ ತಾ. 24ರ ದಿನ ಶ್ರೀ. ಎ. ಬಿ. ಶೆಟ್ಟಿ ಯಂ. ಎಲ್. ಎ.ಯವರ ಅಧ್ಯಕ್ಷತೆಯಲ್ಲಿ ಸಂದರ್ಭೋಚಿತ ಕಾರ್ಯಕ್ರಮಗಳಿಂದ ಕೂಡಿ ಬಹು ವಿಜೃಂಭಣೆಯಿಂದ ನಡೆಯಿತು. ಕುಮಾರಿ ಪಾರ್ವತಿ ಬಿ. ಎ. ಯಲ್. ಟಿ. ಯವರು ಶಾಲೆಯ ಸ್ವಸ್ತಿ ವಾಚನ ಮಾಡಿದರು.

ಶ್ರೀ ಬಿ ನ್. ಸಬ್ಬರಾಯ ಅಡ್ಯಂತಾಯ ಬಿ. ಎ. ಯವರು ಇಲ್ಲಿಯ ಗೌರವ ಬೆಂಚ್ ಮೆಜಿಸ್ಟ್ರೇಟರಾಗಿ ಸರಕಾರದಿಂದ ನಿಯಮಿತರಾಗಿದ್ದಾರೆ.

ಇದೇ ತಾ. 13ರ ದಿನ ರಾತ್ರಿ 9-30 ಗಂಟೆಗೆ ಮಂಗಳೂರಿನಿಂದ ಇಲ್ಲಿಗೆ ಬರುತಿದ್ದ ಹನುಮಾನ ಮೋಟರ ಕಂಪೆನಿಯ ಒಂದು ಬಸ್ಸು ಚಲಿಸುವಾಗ ಮಗುಚಿಬಿದ್ದು ಕಂಡಕ್ಟರ ಶಿವಪ್ಪ ಎಂಬವನು ತಕ್ಷಣ ಮೃತನಾದನು. ಉಳಿದವರಿಗೆ ಸಾಧಾರಣ ಗಾಯಗಳಾಗಿ ಇಲ್ಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು.

ಮುಂಡಾಜೆ—ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಜಾತ್ರೆಯು ತಾ. 12-2-42ರಿಂದ 14-2-42ರ ವರೆಗೆ ಮಾಮೂಲು ಮೇರೆಗೆ ವಿಜೃಂಭಣೆಯಿಂದ ಜರಗಲಿರುವುದು.

ನಿಂಜೂರು—ಇಲ್ಲಿಯ S. U. S. ಸಂಘದವರು 'ಸ್ವಜ ಪ್ರೇಮ' ಎಂಬ ನಾಟಕವನ್ನು ತಾ. 21-2-42ಕ್ಕೆ ಅಭಿನಯಿಸಲಿರುವರು. ಶ್ರೀ. ಶಂಕರ ನಾರಾಯಣ ಸಾಮಗರ ಹರಿಕಥೆಯೂ ಇದೆ.

ಬೆಳ್ತಂಗಡಿ—ಬೆಳ್ತಂಗಡಿ ಸಹಕಾರಿ ಸಂಘದ ನೂತನ ಕಟ್ಟೋಣದ ಪ್ರವೇಶೋತ್ಸವವು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಇವರಿಂದ ತಾ. 6-2-42ಕ್ಕೆ ಜರಗಿಸಲ್ಪಡುವುದು.

ಬೆಳ್ಳೆ— ತಾ. 25-1-42ರಲ್ಲಿ ಬೆಳ್ಳೆ ಪಂಚಾಯತ ಬೋರ್ಡಿನವರಿಂದ ಆರೋಗ್ಯ ಮತ್ತು ಶಿಶು ಸಪ್ತಾಹ ಆಚರಣೆಯು ಶ್ರೀ. ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು.

ಬೋಳಾರ ಬಿ— ಆರ್. ಕೆ. ಪಾದ್ರೆರ್ ಇವರದೂ ಹೈಯರ್ ಎಲಿಮೆಂಟರಿ ಶಾಲಾ ಕಟ್ಟೋಣದ ಸಹಾಯಾರ್ಥವಾಗಿ, ಮಾನ್ಯ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಲ್ಲಿ, ಶಾಲಾ ವಿದ್ಯಾರ್ಥಿಗಳಿಂದ 'ಉದಯ ಸಿಂಹ'ವೆಂಬ ನಾಟಕವು ತಾ. 10-1-42ರಲ್ಲು ಅಭಿನಯಿಸಲ್ಪಟ್ಟಿತು. ಈ ನಾಟಕವು ಯಶಸ್ವಿಯಾಗುವಂತೆ ಸಹಕರಿಸಿದ ಸರ್ವರಿಗೂ ಶಾಲಾ ಸಂಘವು ಧನ್ಯವಾದಗಳನ್ನು ಅರ್ಪಿಸುತ್ತದೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ "ಗೊನೊಕಿಲರ್" ರಿಜಿಸ್ಟರ್ಡ್

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೩೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ

Sole Manufacturer Dr. D. N. Jasani, Vittalbhai Patel Road, Bombay 4.

R. O. C. No B1—1--1—12.

ಪ್ರಕಟಣೆ

1939ನೇ ಇಸವಿ ಅಕ್ಟೋಬರ ತಿಂಗಳ ತಾರೀಕು 9ರ ಆರೋಗ್ಯ ಖಾತೆಗೆ ಸಂಬಂಧಪಟ್ಟ ನಂಬ್ರ 3075ನೇ ಗವರ್ನ್‌ಮೆಂಟು ಹುಕುಮಿನಂತೆ ಸಾರವಾಗಿ ನಿಯಮಿಸಿದ ನ್ಯಾಯ ಗತಿಸಿದ ನಂತರ ಲೈಸನ್ಸು ಬಗ್ಗೆ ಯಾ ಲೈಸನ್ಸು ಹೊಸ್ತುಪಡಿಸುವ ಬಗ್ಗೆ ಬರಕೊಳ್ಳುವ ಪ್ರತಿ ಅರ್ಜಿಯ ಮೇಲೆ ಆಯಾಯ ಸಮಯದಲ್ಲಿ ಜ್ಯಾರಿಯಲ್ಲಿರುವ ಲೈಸನ್ಸು ಫೀಸು ಅಲ್ಲದೆ ಅಂಥಾ ಲೈಸನ್ಸ್ ಫೀಸಿನ ಶೇಕಡಾ 12½ರ ಸಲೆಯಲ್ಲಾಗುವ ಮೊಬಲಗನ್ನು ಕೂಡಿಸಿ ಹೆಚ್ಚಿಗೆ ತೆರಬೇಕೆಂದು ವಿಧಿಸಿ ತಾ. 19-12-1941ರಲ್ಲಿ ಜರಗಿದ ಉಡುಪಿ ನಗರ ಸಭೆಯಲ್ಲಿ ನಿರ್ಣಯವಾಗಿದ್ದು ಸದರಿ ನಿರ್ಣಯವು ತಾ.1-4-1942 ರಿಂದ ಜ್ಯಾರಿಗೆ ಬರುವದು.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ, 1942-43ನೇ ಅಫೀಶಿಯಲ್ ವರ್ಷದ ಮೊದಲ್ಗೊಂಡು ಲೈಸನ್ಸು ಹೊಸ್ತುಪಡಿಸುವವರು ಯಾ ಹೊಸ ಲೈಸನ್ಸು ಪಡಕೊಳ್ಳುವವರು ಆಯಾ ವರ್ಷ ಪ್ರಾರಂಭನಾಗುವ 30 ದಿವಸಗಳಿಗೆ ಮುಂಚಿತವಾಗಿ ಲೈಸನ್ಸು ಫೀಸು ಪಾವತಿ ಮಾಡಿ, ಆ ಬಗ್ಗೆ ಒಂದಾಣೆ ಕೋರ್ಟು ಫೀ ಸ್ಟ್ಯಾಂಪು ಅಂಟಿಸಿ ಅರ್ಜಿ ಬರಕೊಂಡು ಲೈಸನ್ಸು ಪಡಕೊಳ್ಳುವದು. ಅಲ್ಲದೆ 1942-43ನೇ ವರ್ಷದ ಬಗ್ಗೆ ಲೈಸನ್ಸು ಹೊಸತುಪಡಿಸುವವರು ತಾ. 1-3-1942ರ ವರೆಗೆ ಹಣ ಪಾವತಿ ಮಾಡಿ ಅರ್ಜಿ ಬರಕೊಂಡು ಲೈಸನ್ಸು ಪಡಕೊಳ್ಳುವದು. ಮತ್ತು ಹೊಸ ಲೈಸನ್ಸು ಪಡಕೊಳ್ಳುವವರು ಸಹಾ 30 ದಿವಸಗಳಿಗೆ ಮುಂಚಿತವಾಗಿಯೇ ಅರ್ಜಿ ಮಾಡಿ ಲೈಸನ್ಸು ಪಡಕೊಳ್ಳುವದು. ಇದಕ್ಕೆ ತಪ್ಪಿದಲ್ಲಿ ಉಡುಪಿ ನಗರ ಸಭೆಯವರು ಮೇಲೆ ಹೇಳಿದ ಗವರ್ನಮೆಂಟು ಹುಕುಮಿನನುಸಾರವಾಗಿ ನಿರ್ಣಯಿಸಿದ ಮೇರೆಗೆ ಹೆಚ್ಚಿನ ದರದ ಲೈಸನ್ಸು ಫೀಸು ವಸೂಲಿ ಕೊಡಬೇಕಾದೀತು ಎಂದು ಸಮಸ್ತ ಜನರಿಗೂ ಈ ಮೂಲಕ ತಿಳಿಸಿ ಎಚ್ಚರಪಡಿಸೋಣಾಗಿದೆ. ತಿಳಿದಿರುವದು.

ಮುನಿಸಿಪಲ್ ಆಫೀಸು, ಉಡುಪಿ,
ತಾ. 2-1-1942.

ಟಿ. ಹರಿಶ್ಚಂದ್ರ ರಾವ್,
ಕಮಿಶನರ್,
ಉಡುಪಿ ಮುನಿಸಿಪಾಲಿಟಿ.

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ
R. E. P. 720/41.

ದುಗ್ಗಮ್ಮ ಯಾನೆ ವೆಂಕಮ್ಮ—ಅರ್ಜಿದಾರಳು,
ಸುಬ್ರಾಯ ನ್ಯಾಕ ಕೂಡಾ— ಯದ್ರಿಗಳು.

7ನೇ ವೇಣುಗೋಪಾಲ ರಾವ್ -- ಅಮ್ಮೆಂಬಳ ಮಂಗೇಶ ರಾಯರ ಮಗ- ಮಂಗಳೂರು ತಾಲೂಕು ಇವರಿಗೆ—

ಅರ್ಜಿದಾರಳು ನಿಮಗೆ ಬಹಾ ಐವೇಜು ವಸೂಲಿ ಹಕ್ಕು ಜಪ್ತಿಯೀಲಂ ಪಡಿಸಬೇಕೆಂತ ವಗೈರೆ ಮಾಡಿದ ವೇಟ್ಟೋರುವಳನ್ನು ಚಾರಿಯು ತಾ.6-2-42 ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವದ್ರಿಂದ ಆ ದಿವಸ ಹಗಲು ಘಂಟೆ 11ಕ್ಕೆ ನೀವು ಸ್ವತಹಾ ಯಾ ವಕೀಲ್ ದ್ವಾರ ಹಾಜರಾಗಿ ಉದಹರಿಸದಿದ್ದರೆ ನಿಮ್ಮ ಗೈರಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸುವರು.

By Order of Court

ಪುತ್ತೂರು, } **H. Sanjiva Shetty.**
11-1-42. } Advocate for Petitioner

ನಾವು ರಕ್ಷಣೆಗೆ ಅರ್ಹರು
ಅಪ್ಪಾ.....
ಅದು ನಿನ್ನ ಕರ್ತವ್ಯ

ಆಪತ್ತು ಸನ್ನಿಹಿತನಾದಾಗ ಯಾವ ಆಲೋಚನಾಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಅಪ್ತಭಾಂಧವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯವನ್ನು ಅಸ್ತಿಪಾಸ್ತಿಗಳನ್ನು ಭಾವಿ ಭದ್ರತೆಯನ್ನು ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರುದಾಳಿಯನ್ನು ತಡೆಯಲು ನಿಮ್ಮ ಶಕ್ತಿಮೀರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿಂದ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳ ರೂ ೩/೮/- ಲಾಭ ಬರುವುದು

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

61-73-Ka

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. S. No. 158/1941.

ದಿಯೋಗ ಕಾಮತ್ ಸಹಾ—ವಾದಿರು
ಮತ್ತು
ಜೂಲಿಯಾನ್ ಬ್ಯಾ ಸಹಾ— ಪ್ರತಿವಾದಿರು

ಸದ್ರಿ ದಾವೆಯು 5ನೆ ಪ್ರತಿವಾದಿ, ಬೆಂಜಮಿನ್ ಕಾಮತ್, ವಾಸ್ಕುವಲ್ ಕಾಮತನ ಮಗ, 6ನೆ ಪ್ರತಿವಾದಿಳು, ಕೋರಾ ಬ್ಯಾ, ದಾಮಿಯನ ಕಾಮತನ ವಿಧವೆ, ಉಡುಪಿ ತಾಲ್ಲೂಕು ನಿಟ್ಟೂರು ಗ್ರಾಮಸ್ಥರು ಇವರಿಗೆ ಯಾ ಮುಖ್ಯ ಕೋರ್ಟು ಹುಕುಂ ಪ್ರಕಾರ ತಿಳಿಸುವದೇನೆಂದ್ರೆ, ಸದ್ರಿ ದಾವೆಯಲ್ಲಿ ವಾದಿರು ಪ್ರತಿವಾದಿರ ಮೇಲೆ ನೀಡಿದ ಹಕ್ಕು ಸ್ಥಾಪಿಸಿ ಪಾಲಿನ ಗುಡಕ್ಕೆ ಡಿಕ್ಲರೇಶನ್ ವ ಇಂಜಂಕ್ಷನ್ ಡಿಕ್ರಿ ಕೇಳಿ ಮಾಡಿದ ಸದ್ರಿ ದಾವೆಯು ಮೇಲೆ ಕಾಣ್ಸಿದ ಪ್ರತಿವಾದಿರ ಹಾಜರು ಬಗ್ಗೆ ತಾ 23-2 1942 ಕ್ಕೆ ಇಟ್ಟಿದೆ. ಅದ್ರಿಂದ ಆ ಕುರಿತು ಆಕ್ಷೇಪವಿದ್ದ ಸದ್ರಿ ತಾ 23-2-42ನೆ ದಿವ್ಸ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದೆಪ್ಪ ಕೊಳ್ಳಬಹುದು, ತಪ್ಪಿದ್ರೆ ಸದ್ರಿ ಪ್ರತಿವಾದಿರ ಆಕ್ಷೇಪದ ಉಜರು ಇಲ್ಲಾ ಸದ್ರಿ ದಾವೆಯು ಕ್ರಮ ಪ್ರಕಾರ ಮುಂದರಿಸಲ್ಪಡುತ್ತದೆಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳ್ಸಿಯದೆ

M. K. Gopalkrishna Rau.
B. A. B. L. Vakil

Karkala. } ವಾದಿರ ಕಡೆ ವಕೀಲ್
20-1 1942 }

ನೋಟೀಸು

ಕುಂದಾಪುರ ಡಿ| ಮು| ಕೋರ್ಟಿನಲ್ಲಿ
O. P. o 1942

ಶಿವ ಅಡಿಗ-ರಾಮ ಅಡಿಗರ ಮಗ
ಕಮ್ಮಲಶಿಲೆ ಗ್ರಾಮ — ಅರ್ಜಿದಾರ.
ಕೃಷ್ಣ ಅಡಿಗ—ಗೋಪಾಲ ಅಡಿಗರ ಮಗ
ಕಮ್ಮಲಶಿಲೆ ಗ್ರಾಮ—ರೆಸ್ಪೊಂಡೆಂಟ್

ತಾ. 12-8-41ರಲ್ಲಿ ... ಅರ್ಜಿದಾರನ ... ಅರ್ಜಿದಾರನು ... ಸರ್ಟಿಫಿಕೇಟಿನ ಬಗ್ಗೆ ... ಆಕ್ಷೇಪವಿದ್ದವರು ಈ ಕೋರ್ಟಿನಲ್ಲಿ ತಾ. 12 2-42ರಲ್ಲಿ ಹಾಜರಾಗತಕ್ಕದ್ದು.

(By order of Court.)

ಕೆ. ಎಲ್. ನಂಪಾಡಿ,
ಅರ್ಜಿದಾರನ ವಕೀಲ್.

ನೋಟೀಸು

ಕುಂದಾಪುರ ಡಿ ಮುನ್ಸಿಫ್ ಕೋರ್ಟಿನಲ್ಲಿ
1940ನೇ ಇಸವಿ ... O. S. 244.
1941 ,, ... ನಂ. 1081.
1ನೇ ...

ಎದುರಿಗೆ

... ಕುಂದಾಪುರ ತಾಲೂಕು ... — ಪ್ರತಿವಾದಿ.
... ಸದರಿ ... ಇವರಿಗೆ—

ಮೇಲೆ ಹೇಳಿದ ವ್ಯಾಜ್ಯದಲ್ಲಿ ... 1942ನೇ ಇಸವಿ ಫೆಬ್ರವರಿ ತಿಂಗಳು 2ನೇ ತಾರೀಕು ... ತಿಳಿಸೋಣಾಗುತ್ತದೆ.

ಕುಂದಾಪುರ, } **M. M. Ural.**
ತಾ.19-1-42. } Advocate for Defendents

ಉಪಾಧ್ಯಾಯರು ಬೇಕು.

ಉಡುಪಿ ಅನಂತೇಶ್ವರ ಏಡೆಡ್ ಎಲಿಮೆಂಟರಿ ಶಾಲೆಗೆ ಸೆಕೆಂಡ್ರಿ ಗ್ರೇಡ್ ತರಬೇತಾದ ಉಪಾಧ್ಯಾಯರೊಬ್ಬರು ಬೇಕಾಗಿದೆ. ಇಷ್ಟವುಳ್ಳವರು ಹೆಚ್ಚಿನ ಮಾಹಿತಿಗೆ ಬರಕೊಳ್ಳುವುದು ಯಾ ಮುಖತಃ ಮಾತನಾಡುವುದು

ಮೆನೇಜರ್,
ಅನಂತೇಶ್ವರ ಏಡೆಡ್ ಎಲಿಮೆಂಟರಿ ಶಾಲೆ
ಉಡುಪಿ.

ಮುಂದೆ ಲೋಕದಲ್ಲಾವ ನವ ನಿರ್ಮಾಣವಾಗಬಹುದು?

ಫೆಸಿಸ್ಟರದೋ? ಸಾಮ್ರಾಜ್ಯವಾದಿಗಳದೋ? ಸಮತಾವಾದಿಗಳದೋ?

ಅದೊಂದು ಮಹಾ ಪ್ರಲಯದ ರೂಪದಲ್ಲಿ ಯುದ್ಧವೀಗ ಲೋಕವನ್ನಾವರಿಸಿರುವುದು. ಈ ಮಹಾ ಪ್ರಲಯಾಂತ್ಯದಲ್ಲಿ ಮಹಾಕ್ರಾಂತಿಯೆದ್ದು ನವ ನಿರ್ಮಾಣವೊಂದುಂಟಾಗುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಜರ್ಮನಿ, ಇಟಲಿ ಮತ್ತು ಜಾಪಾನ್ ಮೊದಲಾದ ಫೆಸಿಸ್ಟ್ ರಾಷ್ಟ್ರಗಳು, ಹಿಟ್ಲರರ ನಾಯಕತ್ವದಲ್ಲಿ ತಮ್ಮದೇ ಆದೊಂದು ನವ ನಿರ್ಮಾಣವನ್ನು ಲೋಕದಲ್ಲಿ ಸ್ಥಾಪಿಸಲು ಈ ಮಹಾ ಯುದ್ಧವನ್ನು ಹೂಡಿರುತ್ತವೆ. ಲೋಕದ ರಾಜ್ಯಗಳನ್ನೆಲ್ಲಾ ತಮ್ಮೊಳಗೆ ಹಂಚಿಕೊಂಡು ಅವುಗಳ ಮೇಲೆ ತಮ್ಮ ಪ್ರಭಾವವನ್ನು ನೆಲೆಗೊಳಿಸಿ, ತಮ್ಮ ಸ್ವಾರ್ಥಕ್ಕಾಗಿ ಅವನ್ನುಪಯೋಗಿಸಬೇಕೆಂದೇ ಈ ಫೆಸಿಸ್ಟರ ಆಕಾಂಕ್ಷೆ. ಮೇಲು ಜನಾಂಗವಾಗಿರುವ ತಾವು ಇತರ ಕೀಳು ಜನಾಂಗಗಳ ಮೇಲೆ ಅಧಿಕಾರ ನಡಿಸುವ ಹಕ್ಕುಳ್ಳವರಿರುವೆವೆಂದೇ ಈ ಫೆಸಿಸ್ಟರ ಅಭಿಮತ.

ಸಾಮ್ರಾಜ್ಯವಾದಕ್ಕೂ ಫೆಸಿಸ್ಟ್‌ವಾದಕ್ಕೂ ಹೆಚ್ಚಿನ ಅಭ್ಯಂತರವಿರುವುದೆಂದು ಹೇಳಬರುವುದಿಲ್ಲ. ಸಾಮ್ರಾಜ್ಯವಾದದ ಉಗ್ರಸ್ವರೂಪವೆನ್ನಬಹುದು ಫೆಸಿಸ್ಟ್‌ವಾದವನ್ನು. ಇಂಗ್ಲೆಂಡು ಮತ್ತು ಅಮೆರಿಕಗಳು ಸಹಕರಿಸಿ ಬಂದುಗೂಡಿ ನಡೆದು ಅವುಗಳ ನಾಯಕತ್ವದಲ್ಲಿ ಲೋಕದಲ್ಲಿ ನವ ನಿರ್ಮಾಣವೊಂದನ್ನು ನೆಲೆಗೊಳಿಸಬೇಕೆಂದೇ ಚರ್ಚಿಲ್ ಮತ್ತು ರೂಸವೆಲ್ಟರ ಆಕಾಂಕ್ಷೆ. ಅತ್ಲಾಂತಿಕ ಚಾರ್ಟರಿನಲ್ಲಿ ಅಪೇಕ್ಷಿಸುವ ಮುಂದಿನ ನವ ನಿರ್ಮಾಣದ ರೂಪರೇಖೆಯನ್ನು ನಾವು ಕಾಣಬಹುದು. ಬ್ರಿಟನ್ನಾಗಲಿ ಅಮೆರಿಕವಾಗಲಿ ತನ್ನ ಸ್ವಾರ್ಥವನ್ನು ಬಿಟ್ಟುಕೊಡಲು ಸಿದ್ಧವಿಲ್ಲ. ತನ್ನ ನಾಯಕತ್ವದಲ್ಲಿ ಇಡೀ ಲೋಕದಲ್ಲಿ ನವ ವ್ಯವಸ್ಥೆಯೊಂದನ್ನು ಸ್ಥಾಪಿಸಿ ತಮ್ಮ ಪ್ರಭಾವವನ್ನು ಅಚ್ಚಳಿಯದಿರಿಸಿಕೊಳ್ಳಬೇಕೆಂದೇ ಅವುಗಳ ಆಶೆ.

ಆದರೆ ಲೋಕದ ಪರಿಸ್ಥಿತಿಯನ್ನು ನೋಡಿದರೆ ಫೆಸಿಸ್ಟ್ ಮತ್ತು ಸಾಮ್ರಾಜ್ಯವಾದಿಗಳೆರಡೂ ಇನ್ನು ಮುಂದೆ ಲೋಕದಲ್ಲಿ ಪ್ರಭಾವಕ್ಕೆ ಬರಲಾರವೆಂದು ಸ್ಪಷ್ಟವಾಗಿ ಹೇಳಬಹುದು. ಈ ಮಹಾ ಯುದ್ಧದಲ್ಲಿ ಫೆಸಿಸ್ಟ್‌ವಾದವು ಪರಾಜಯ ಹೊಂದಿದರೆ ಬೆನ್ನಲ್ಲಿಯೇ ಮಹತ್ತ್ವಾದ ಕ್ರಾಂತಿಯೆದ್ದು ಸಮತಾವಾದಕ್ಕೆ ಹೆದ್ದಾರಿಯನ್ನು ಮಾಡಿಕೊಡುವುದೆಂದೇ ಹೇಳಬಹುದು. ಆದುದರಿಂದಲೇ ಇಂದೀಗ ಅದೃಷ್ಟವು, ಅಗ್ರಗಣ್ಯ ಫೆಸೀಸ್ಟ್ ರಾಷ್ಟ್ರವಾದ ಜರ್ಮನಿಯೊಡನೆ ಜೀವನ್ಮರಣ ಹೋರಾಟ ನಡಿಸಿ ಅದನ್ನು ಪರಾಜಯಗೊಳಿಸುವ ಮಹತ್ಕಾರ್ಯವನ್ನು ಸೋವಿಯೆಟ್ ರಸ್ಯದ ಮೂಲಕ ಮಾಡಿಸುವಂತೆ ತೋರುತ್ತದೆ. ಸ್ವಾಭಾವಿಕವಾಗಿಯಾದರೂ ಮುಂದೆ ಒಂದಲ್ಲೊಂದು ದಿನ ಸ್ಥಾಪಿತವಾಗಬೇಕಾದ ನವ ನಿರ್ಮಾಣವೆಂದರೆ ಸಮತಾವಾದ; ಈ ಯುದ್ಧದಿಂದ ಅದು ಬೇಗನೆ ಬರುವಂತಾಗುವುದೆನ್ನಬಹುದು.

ಹಿಟ್ಲರ್ ಮುಸಲೋನಿ, ಚರ್ಚಿಲ್, ರೂಸವೆಲ್ಟರುಗಳಂತೆಯೇ ಸ್ಟೇಲಿನ್ ಮೊಲೊಟೋವರೂ ತಮ್ಮದೇ ಆದೊಂದು ನವ ನಿರ್ಮಾಣದ ಆಕಾಂಕ್ಷೆಯನ್ನು ಕಟ್ಟಿಕೊಳ್ಳದಿರಲಾರರು. ಇಂದೀಗ ಜರ್ಮನಿಯನ್ನು ಜೈಸುವ ಪ್ರಚಂಡ ಜವಾಬ್ದಾರಿಯು ಸೋವಿಯೆಟ್ ರಸ್ಯದ ಮೇಲೆ ಬಿದ್ದಿದೆ. ಅದನ್ನದು ಜಯಶೀಲವಾಗಿ ನಿರ್ವಹಿಸುವ ಸಂಭವ ತೋರುವುದರಿಂದ ಯುರೋಪಿನ ಮುಂದಿನ ರಚನೆಯಲ್ಲಿ ಅವರ ಮಾತೇ ಗಣನೀಯವಾಗುವುದು. ಆಗ ಸ್ಟೆಲಿನರು ಯುರೋಪಿನಲ್ಲೆಲ್ಲಾ ಸಮತಾವಾದವನ್ನು ಸ್ಥಾಪಿಸಲು ಮುಂದಾಗದಿರಲಾರರು. ಸಮತಾವಾದವು ಇಡೀ ಯುರೋಪಿನಲ್ಲೊಮ್ಮೆ ನೆಲೆಗೊಳ್ಳುವಂತಾಯಿತೆಂದರೆ ಮತ್ತೆ ಇಡೀ ಲೋಕದಲ್ಲೇ ಸ್ಥಾಪಿತವಾಗಲು ಹೆಚ್ಚು ಸಮಯ ಹೋಗಲಾರದು.

ಸೋವಿಯೆಟ್ ರಸ್ಯದ ಮೇಲಿನ ಹೋರಾಟದ ಸೇನಾ ನಾಯಕತ್ವವನ್ನು ಹಿಟ್ಲರರು ಸ್ವತಹ ವಹಿಸಿ ನಡೆದ ಪ್ರಥಮ ಹೋರಾಟದಲ್ಲಿ ಅಪಜಯ ಹೊಂದಿರುವರು. ಮೋಸ್ಕೋ ಪಟ್ಟಣದ ಸಮೀಪದ ಮೊಚ್ಚೈಸ್ಕಿನಲ್ಲಿ ಜರ್ಮನರು ದೊಡ್ಡ ಅಪಜಯ ಪಡೆದು ಹಿಂದೆ ಸರಿದಿರುವರು. ಹಿಟ್ಲರರು ಇದೇ ರೀತಿ ಇನ್ನೆರಡು ಅಪಜಯಗಳನ್ನು ಪಡೆದರೆಂದರೆ ಅವರ ಪತನ ನಿಶ್ಚಯವೆಂದೇ ಹೇಳಬಹುದು. ಸ್ಟೆಲಿನರೀಗ ಎರಡು ಯುದ್ಧಗಳನ್ನು ಗೆದ್ದಿರುವರು. ಒಂದು ಯುಕ್ತಿಯಿಂದ ಹಿಂದೆ ಸರಿದು, ಇನ್ನೊಂದು ಶಕ್ತಿಯಿಂದ ಮುಂದೊತ್ತಿ. ಬರುವ ಜೂನ್ ತಿಂಗಳೊಳಗೆ ಸ್ಟೆಲಿನರು ಇನ್ನೆರಡು ದೊಡ್ಡ ವಿಜಯಗಳನ್ನು ಪಡೆದರೆಂದರೆ ಹಿಟ್ಲರರು ಎರಡು ರಣರಂಗಗಳಲ್ಲಿ ಹೋರಾಡಬೇಕಾಗುವುದು. ರಸ್ಯದೊಡನೆ ಮತ್ತು ಜರ್ಮನಿಯಲ್ಲೇ ಏಳುವ ಕ್ರಾಂತಿಯೊಡನೆ. ಆಗ ಸ್ಟೆಲಿನ್ ಮೊಲೊಟೋವರ ಪ್ಲೇನೇ ಹಠಾತ್ತಾಗಿ ಫಲಕಾರಿಯಾಗುವುದು. ಆಗ ಸಾಮ್ರಾಜ್ಯವಾದಿ ಅಥವಾ ಭಂಡವಾಳಶಾಹಿ ರಾಷ್ಟ್ರಗಳು ಚಕಿತವಾಗಿ, ಲೋಕದ ಮುಂದಿನ ರಚನೆಯ ಕುರಿತು ಆಲೋಚಿಸಲು ಪರಿಷತ್ತು ಕರೆಯಬಹುದು. ಆಗ ಇಂಗ್ಲೆಂಡ್ ಅಮೆರಿಕ ಮೊದಲಾದ ಮಿತ್ರರಾಷ್ಟ್ರಗಳ ಒತ್ತಾಯದ ಮೇರೆಗೆ ಸ್ಟೆಲಿನರ ನವರಚನೆಯ ಪ್ಲೇನು ಕೆಲಮಟ್ಟಿಗೆ ಬದಲಾವಣೆಯಾಗಬಹುದು. ಆದರೆ 1919-39ರ ಪರಿಸ್ಥಿತಿಯನ್ನು ಪುನಃ ನೆಲೆಗೊಳಿಸಬೇಕೆಂದು ಈ ಭಂಡವಾಳಶಾಹಿ ರಾಷ್ಟ್ರಗಳು ಪ್ರಯತ್ನಿಸಿದರೆ ಪ್ರಯೋಜನವಾಗಲಾರದು. ಪಾಶ್ಚಾತ್ಯ ನಾಗರಿಕತೆಯಲ್ಲೇ ದೊಡ್ಡ ಕ್ರಾಂತಿಯೊಂದೀಗ ಉಂಟಾಗುತ್ತಿರುವುದು. ಅದರ ನಾಯಕತ್ವವನ್ನು ರಸ್ಯವೇ ವಹಿಸುವುದು.

ಜರ್ಮನಿಯು ಪರಾಜಿತವಾದ ಮೇಲೆ, ಮುಂದದು ಪುನಹ ಯಥಾ ಪ್ರಕಾರ ಸೇನೆ ಸಿದ್ಧತೆಮಾಡಿ ಲೋಕಕಂಟಕವಾಗದಂತೆ ಅದರ ಪೂರ್ವ ಭಾಗವನ್ನು ರಸ್ಯದ ಮೇಲ್ವಿಚಾರದಲ್ಲಿರಿಸಲಾಗುವುದು. ದಕ್ಷಿಣ ಮತ್ತು ಪಶ್ಚಿಮ ಭಾಗಗಳನ್ನು ಫ್ರಾನ್ಸಿನ ಅಧೀನಪಡಿಸಲಾಗುವುದು. ಫ್ರಾನ್ಸಿನಲ್ಲಿ ಕಮ್ಯೂನಿಸ್ಟ್ ರಾಜ್ಯಭಾರ ಸ್ಥಾಪಿಸಲ್ಪಡುವುದು. ಇಡೀ ಯುರೋಪಿನಲ್ಲಿ ಕಮ್ಯೂನಿಸ್ಟ್ ರಾಜ್ಯಗಳ ಸಂಯುಕ್ತ ರಾಜ್ಯಭಾರ ಸ್ಥಾಪಿಸಲ್ಪಡುವ ಸಂಭವವಿರುವುದೆಂದು ಭಾವಿಸಲಾಗಿದೆ. ಆದುದರಿಂದಲೇ ನಾಝಿಗಳು ಹೆದರುವುದು ಸೋವಿಯೆಟ್ ರಸ್ಯಕ್ಕಲ್ಲದೆ ಬ್ರಿಟನು ಮತ್ತು ಅಮೆರಿಕಕ್ಕಲ್ಲ. ರಸ್ಯದ ವಿಷಯದಲ್ಲಿ ಜರ್ಮನರು ಬಹಳ ಭೀತಿಗೊಂಡಿರುವರೆಂದು ಇತ್ತಲಾಗಿ ಜರ್ಮನಿ ಬಿಟ್ಟು ಬಂದಿರುವ ಅಮೆರಿಕಾದ ಪತ್ರಿಕಾ ವ್ಯವಸಾಯಿಯೊಬ್ಬನು ಹೇಳಿರುವನು. ಹಿಟ್ಲರರು ಒಮ್ಮೆಯೇ ರಸ್ಯದ ಮೇಲೆ ಯುದ್ಧ ಹೂಡಲು ಕಾರಣವೇನೆಂಬುದೀಗ ಸ್ಪಷ್ಟವಾಗುವುದು.

CONFIDENCE

is a great asset in building Business.

The Bombay Life Assurance Company Limited.

has created Public Confidence

by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India,

Including Indian States.

Udipi, Mangalore, Calicut,
Madras, Trivandrum, Bangalore City,
and Bombay 4.

MADRAS PROVINCIAL
WAR COMMITTEE

EDINBURGH IS A FINE CITY.
IT HAS NOW CLAIMED THE
PRIVILEGE OF REPLACING
TWO FINE SHIPS
H. M. S PRINCE OF WALES
AND
H. M. S. REPULSE.
WE WANT MORE SHIPS
MORE MEN
MORE MONEY

CAN YOU HELP? ADN WILL YOU?

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಘೋರತರ ವೇದನೆ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ಹೊರಗೆ ಬಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, [illegible] ಉರಿಯಿಂದ ಜೀವು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, [illegible], ಕೈಕಾಲು ಬೂಲಿ, ಅರ್ಧಾಂಗ ವಾಯು ನಡುಸೋಯುವದು [illegible] ಹೋಗುತ್ತಿದ್ದರೆ, ಹೊಲಿ ಕುಟು ಗರ್ಭದಿಂದ [illegible], ಸಂತಾನ [illegible] ದ್ದರೆ, ಮೂತ್ರ [illegible] ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವದು [illegible] ಔಷಧ ಅರ್ಧ ತೊಲಿ ತುಪ್ಪ ದಲ್ಲಿ ತಕ್ಕೊಳ್ಳಬೇಕು. [illegible] ಎರಡು ಸಾರೆ ತಕ್ಕೊಳ್ಳಬೇಕು. [illegible] ದಿವಸ ಸೇವಿಸ ಬೇಕು. ಈ ಔಷಧವನ್ನು [illegible] ಮುಕಿನಾಲಿಯಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.
ಪಥ್ಯ: [illegible] ಬಿಡಬೇಕು.
ಬಾಟ್ಲಿ ೧ಕ್ಕೆ ರೂ. — ಪೋಸ್ಟ್ ಚಾರ್ಜ ೮ ಆಣೆ.
ಏಜೆಂಟರು.—ಗದಗ—ಗದಗ ಫಾರ್ಮಸಿ, ಹುಬ್ಬಳ್ಳಿ—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟ [illegible], ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೆ [illegible]
[illegible]
ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ

ವಿಮೆ ಮಾಡಲಿಕ್ಕಾಗಲೀ, ಏಜನ್ಸಿ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರವುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ತಿಳಿಯ [illegible]
ಇ. ಎ. ಪ್ಯಾನ್ಸ್, [illegible]
ಕೆ. ಕೆ. ನಾರಾಯಣ ರಾವ್, [illegible]
ಕೆ. ಕೆ. ಗಣಪಯ್ಯ ಶೆಟ್ಟಿ, [illegible]
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಸೂರನ್ಸ್ [illegible]
[illegible]

ಆಚ್ಛ ಕನ್ನಡದ [illegible]—ಅಮೂಲಕೀ ತೈಲ.
ಆನಂದ ಉತ್ಸಾಹ [illegible]—ಅಮೂಲಕೀ ತೈಲ.
ತಂಪಾದ ನೇತ್ರಗಳು [illegible]—ಅಮೂಲಕೀ ತೈಲ.
ನಾರೀಮಣಿಗಳ ಸೌಂದರ್ಯ [illegible]—ಅಮೂಲಕೀ ತೈಲ
ಪುಷ್ಪಗಂಧಾನೋದಿತ, [illegible] ಅಮೂಲಕೀ ತೈಲ.
ಪ್ರತಿಯೊಬ್ಬ [illegible]—ಅಮೂಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ [illegible]—ಅಮೂಲಕೀ ತೈಲ
ಭಾರತದ ಮಹಿಳೆಯರು [illegible]—ಅಮೂಲಕೀ ತೈಲ
ಬೆಳಗುವ [illegible]—ಅಮೂಲಕೀ ತೈಲ.
ಲಲನೆಯರು ಮೆಚ್ಚುವುದು—ಅಮೂಲಕೀ ತೈಲ
ವಾತಾದಿ ತ್ರಿದೋಷನಾಶನೀ—ಅಮೂಲಕೀ ತೈಲ.
ನಿರೋಧಿತ [illegible]—ಅಮೂಲಕೀ ತೈಲ.
ಸರ್ವಶಿರೋರೋಗನಿವಾರಕ [illegible]—ಅಮೂಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಅಮೂಲಕೀ ತೈಲ.
ಅಮೂಲಕೀ ತೈಲ ವನ್ನೇ ಉಪಯೋಗಿಸಿರಿ.
2 ಔನ್ಸಿನ ಸೀಸೆ 1ರ ಕ್ರಯ 0-6-0 4 ಔನ್ಸಿನ ಸೀಸೆ 1ರ ಕ್ರಯ 0-11-0.
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಬಳಾಲು
ಸ್ಟಾಕಿಸ್ಟರು:—ನವಭಾರತ ಬುಕ್ ಡಿಪೋ, ಉಡುಪಿ, [illegible], ಕೋಟ, ದಿ ನ್ಯಾಶನಲ್ ಮೆಡಿಕಲ್ ಸ್ಟೋರ್ಸ್ [illegible]

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.

For further particulars and agency terms, please call at or write to
Branch Manager,
The Asian Assurance Co., Ltd., Mangalore.

ಈ ವಾರದ ಭವಿಷ್ಯ.

(೨೩ನೇ ಪುಟದಿಂದ ಮುಂದರಿದುದು.)

ತುಲಾ:—ಕೈಗೆ ಬಂದ ತುತ್ತು ಬಾಯಿಗೆ ದೊರೆಕದು. ಆವಶ್ಯಕವೆನಿಸಿದ ವಸ್ತುವು ಅತಿ ದುರ್ಲಭವಾಗುವದು. ಇಂತಹ ಹಲವಾರು ಸಂಘಟನೆಗಳು ನಡೆಯಲಿವೆ. ಮನೆಯವರೊಳಗೆ ಪರಸ್ಪರ ಕಲಹವು ಹುಟ್ಟಿ ವೈರಭಾವವು ಹೆಚ್ಚುವದು. ಇದರಿಂದ ಶತ್ರು ಜನರಿಗೆ ಎಡೆ ದೊರೆತಂತಾಗುವದು. ಹೃದ್ರೋಗ, ನೇತ್ರಪೀಡೆಗಳಿಂದ ಸದಾ ದುಃಖಿಗಳಾದ ನಿಮಗೆ ತಾ. 31ರಿಂದ 1ರ ವರೆಗಿನ ದಿನಗಳಲ್ಲಿ ಕೊಂಚ ಆರೋಗ್ಯ, ಧನಲಾಭ, ಸುಖಗಳಿವೆ.

ವೃಶ್ಚಿಕ—ನಿಮ್ಮ ದೈವವು ಈ ವಾರದಲ್ಲಿ ಪರಾಕಾಷ್ಠವನ್ನು ಹೊಂದಿರುವದು. ಪುಣ್ಯಕಾಲವು ಸಂಕಲ್ಪದಲ್ಲೇ ಕಳೆದು ಹೋಯಿತೆಂಬ ಗಾದೆಯಂತೆ ವೃಥಾ ಕಾಲಹರಣ ಮಾಡದೆ ನಿಮ್ಮ ಅಭೀಷ್ಟವನ್ನು ಆದಷ್ಟು ಬೇಗನೆ ಪೂರೈಸಿಕೊಳ್ಳಿರಿ. ಕಾಮಧೇನುವೇ ಸಮೀಪದಲ್ಲಿರಲು ಯಾವನು ತಾನೆ ಇಷ್ಟಾರ್ಥವನ್ನು ಪೂರೈಸಿಕೊಳ್ಳದಿರುವನು! ಆದಕಾರಣ ಸಜ್ಜನರಿಗೆ ತಮ್ಮಿಚ್ಛೆಯನ್ನು ಕೊನೆಗಾಣಿಸಲು ವಾರಾಂತ್ಯದ 3 ದಿನಗಳು ಸರ್ವ ವಿಧದಿಂದ ಬಹು ಸಹಾಯಕಾರಿಗಳಾಗಿವೆ.

ಧನು— ನಿಮ್ಮ ಮನೋದೌರ್ಬಲ್ಯದಿಂದಾಗಿ ಇತರರ ಮೇಲಂತಿರಲಿ, ನಿಮ್ಮಲ್ಲೇ ನಿಮಗೆ ವಿಶ್ವಾಸವಿರದು. ಮನುಷ್ಯ ಸಹಜವಾದ ತಪ್ಪಿನಿಂದ ಅಧಿಕಾರಿ ವರ್ಗದವರ ಕೋಪಕ್ಕೆ ಸಿಲುಕಲಿರುವಿರಿ. ಶತ್ರು [illegible] ಪೀಡೆ, ರೋಗಭಯ ಇವುಗಳಿಂದ [illegible] ನಿಮಗೆ ಪುತ್ರ ಸಂ[illegible] ಸಂಭವಿಸಲಿದೆ. ಆಚಿಂತ್ಯವಾದ ಮನೋರೋಗದಿಂದಾಗಿ ನಿಮಗೆ ಸ್ವಪ್ನದಲ್ಲೂ ಸುಖವಿರದು. ಆರ್ಥಿಕ ತಗಾದೆಯು ಅಧಿಕವಾಗಿದ್ದರೂ ತಾ. 29. 30. ಗಳಲ್ಲಿ ಖರ್ಚಿಗೆ ತಕ್ಕಷ್ಟು ಧನ, ಸುಖ, ಇಷ್ಟಪ್ರಾಪ್ತಿಯಿದೆ.

ಮಕರ—ಮನಸ್ಸಿನ ಧೈರ್ಯವು ನಾಶವಾಗಿ [illegible] ದಂತೆ ನಿಮ್ಮ ಈಗಿನ ಅವಸ್ಥೆಯಾಗಿರುವುದು. ಹಿತಕ್ಕಾಗಿ ಮಾಡಿದ ಯತ್ನವು ಅಹಿತವಾಗಿ ಪರಿಣಮಿಸೀತು. ಸಂಸರ್ಗಗುಣದಿಂದೆಂಬಂತೆ ದುರ್ಜನರ ಮೈತ್ರಿಯಿಂದ ದುಷ್ಕಾರ್ಯದಲ್ಲಿ ಪ್ರವರ್ತಿಸಿ ಜನಾಪವಾದ ಕಷ್ಟ ನಷ್ಟಗಳಿಗೆ ಗುರಿಯಾಗುವಿರಿ. ಆದರೂ ಶುಭಗ್ರಹರ ಪೂರ್ಣ ಅನುಗ್ರಹವು ನಿಮಗಿರುವುದರಿಂದ ಸಜ್ಜನ ವೃಂದಕ್ಕೂ ಸತ್ಕರ್ಮಾಚಾರಿಗಳಿಗೂ ಹೆಚ್ಚಿನ ಅಪಾಯವಿರದು. ಹಣದ ತಾಪತ್ರಯವಿರದು. ವಾರಾದಿಯ 4 ದಿನಗಳು ಉತ್ತಮವಿವೆ.

ಕುಂಭ—ಕಷ್ಟಸಾಧ್ಯವಾದ ಕಾರ್ಯವೂ ನಿಮಗೆ ತೃಣಪ್ರಾಯವೆನಿಸುವದು ನೀಚ ಜನರಿಂದಲೂ ಪುತ್ರಮುಖದಿಂದಲೂ ಧನಲಾಭವಿದೆ. ಆರೋಗ್ಯವು ಮುಂಚೆಗಿಂತ ಸುಧಾರಿಸುವದು. ಮಾನಸಿಕ ಧೈರ್ಯಸ್ಥೈರ್ಯಗಳಿಂದ ಕೂಡಿದ ನೀವು ಬಲವತ್ತರವಾದ ಶತ್ರುವನ್ನೂ ನಿಗ್ರಹಿಸುವಿರಿ. ಕುಲಕ್ಕೆ ಮೃತ್ಯು ಕೊಡಲೀ ಕಾವು ಎಂಬಂತೆ ನಿಮ್ಮ ಆತ್ಮೀಯ ಬಂಧುಗಳನ್ನು ನಂಬಿ ಮೋಸಹೋಗಬೇಡಿರಿ. ಕೆಲವೊಮ್ಮೆ ನಿಷ್ಠುರ ಭಾಷಣದಿಂದ ಕಲಹವಾದೀತು. ತಾ. 29. 30. 5 ಈ ದಿನಗಳಲ್ಲಿ ಪ್ರವಾಸ, ವಿಘ್ನ, ಆಕಸ್ಮಿಕ ಅನಿಷ್ಟಗಳೊದಗಲಿವೆ.

ಮೀನ—ನಿಮ್ಮ ಶಕ್ತಿಗನುಗುಣವಾಗಿ ದುಡಿಯುವಿರಾದರೂ ಅದರಲ್ಲಿನ ಹೆಚ್ಚಿನಂಶವು ಅಸತ್ಕಾರ್ಯಗಳ ಸಲುವಾಗಿ ವ್ಯಯವಾಗುವದು. ಹೆಚ್ಚಿನ ಕಾರ್ಯಗಳು ಶತ್ರುಗಳಿಂದ [illegible] ಅರ್ಧ ಮಧ್ಯವಾಗಿ ಉಳಿವವು. ರಾಜಕೀಯ ಭಾಗದಲ್ಲಿ ನಷ್ಟ ಪರಾಭವವಿದೆ. ಪಿತ್ತಪ್ರಕೋಪ ವಿಕಾರದಿಂದ ಅನಾರೋಗ್ಯಕ್ಕೆ ಗುರಿಯಾಗುವಿರಿ. ಆದರೂ ಸನ್ಮಿತ್ರರ ಮತ್ತು ಜನತೆಯ ಬೆಂಬಲವು ನಿಮಗಿರುವುದರಿಂದ ವಾರಾಂತ್ಯದ 1 ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಧಾತುಪುಷ್ಟಿಲೇಹ
[illegible] ಬಲವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು [illegible], ಕೈ ಕಾಲು ಉರಿ [illegible], [illegible], [illegible] ವಿಚಾರ ಶಕ್ತಿಯನ್ನೂ ಹೆಚ್ಚಿಸುತ್ತದೆ, [illegible] ದೌರ್ಬಲ್ಯವನ್ನು ಹೋಗಲಾಡಿಸಿ [illegible] ವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ
ಇದು [illegible] ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, [illegible] ಅಂಗಗಳನ್ನು [illegible], ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವ [illegible] ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್.
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.
ಔಷಧಿ ಸಿಕ್ಕುವ ಸ್ಥಳ— (1) [illegible] ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 [illegible], ನಂಬ್ರ 12 (2) ಜನರಲ್ ಸ್ಟೋರ್ಸ್, [illegible]. (3) [illegible] ಬ್ರದರ್ಸ್, 91 [illegible] ಬೆಂಗಳೂರ ಸಿಟಿ (4) [illegible], ಮೈಸೂರು. (5) [illegible] ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, [illegible] (7) [illegible] ಶ್ರೀನಿವಾಸ [illegible], (8) [illegible], ಬೆಳ್ತಂಗಡಿ. (9) ನವಭಾರತ ಬುಕ್ ಡಿಪೋ, [illegible], ಉಡುಪಿ. (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) [illegible] ಶ್ರೀ [illegible] ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ [illegible]. (13) [illegible], ಮರ್ಚೆಂಟ್, ಚಿಕ್ಕಮಂಗಳೂರು.

ಅಮೃತಾಂಜನ ಲಿಮಿಟೆಡ್

ಯುದ್ಧದ ತುಟ್ಟಿಯಿಂದಾಗಿ ಅಮೃತಾಂಜನ ಬಾಟ್ಲಿಗಳಿಗೆ ಟಿನ್ ಡಬ್ಬಿಯ ಕವಚಗಳ ಬದಲಾಗಿ ರಟ್ಟಿನ ರಕ್ಷಾ ಕವಚಗಳನ್ನು ಉಪಯೋಗಿಸಲ್ಪಟ್ಟಾಗ್ಯೂ ಅಮೃತಾಂಜನವು ಎಂದಿನಂತೆಯೇ ಇದ್ದು ಯಾವ ಬದಲಾವಣೆಯನ್ನೂ ಹೊಂದಿಲ್ಲವೆಂಬುದನ್ನು ಅಸಂಖ್ಯಾತ ಗಿರಾಕಿಗಳ ಗಮನಕ್ಕೆ ತರಲಾಗಿದೆ. ಮಹಾಜನರ ಪ್ರೋತ್ಸಾಹವನ್ನು ಎಂದಿನಂತೆ ನಿರೀಕ್ಷಿಸಲಾಗಿದೆ.

AMRUTANJAN Ltd.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾಹಿತ್ಯದೃಷ್ಟಿಯಿಂದೊದಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು, ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ಮೊದಲು ಬಗೆಯಲ್ಲಿ ಪ್ರಕಟವಾಗಿ ಇನ್ನು ಮುಂದೆ ಪ್ರಕಟಿಸಲಿರುವ ಪುಸ್ತಕಗಳು.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	[illegible]	ಭಯಂಕರ ಸೇಡು	[illegible]
ಭೀಷಣ ಸಾಹಸ	[illegible]	ನಾಗಿಣಿ	[illegible]
ಕರಿನೀರು	[illegible]	ಅಪೂರ್ವ ಸಂಧಿಸ	[illegible]
ಭಗವಾನ್ ದಾಸ	[illegible]	ಸ್ಕೂಲ ಮಿಸ್ಟ್ರೆಸ್	[illegible]
ಅವಿವಾಹಿತರ ಸಮಸ್ಯೆ	[illegible]	ಮಿರ್ಜಾಜ ವಿಜಯ	[illegible]
ನನ್ನ ಗತಿ	[illegible]	ಪಾಣಿಗ್ರಹಣ	[illegible]

ಕಟ್ಟಲಾಗಿ ಬರೆಯಿರಿ.

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು—ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಣಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಉಪಯೋಗಿಸದೆ ಆರೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುತ್ತವೆ

ಸೀಸೆ ಒಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಮ್. ಪಿ. ಪ್ರಸಾದ ಔಷಧಾಲಯ. ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು— ನವಭಾರತ ಬುಕ್ ಡಿಪೋ, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾಲಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager.

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೇನೆಜರ್

ಸ್ಥಾಪನೆ 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳು ... ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವುದು.

Crown Rubber Stamp Co 18 Balmatt Road, MANGALORE.

Approved firm by the Govt. Mysore

Certified by the Agent of the Govt of India in Ceylon

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ನವಜೀವಾಮೃತ ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ **ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದಕ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ.

ಉಡುಪಿ.

ವೆಲ್ಲರಿಗೆಯೂ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ಕಾಮಚಂದ್ರ ನಾಯಕ್, ಪ್ರೊಪ್ರೈಟರ್.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618 | Estd. 1921 ಸ್ಥಾಪಿತ

ಸಾಹುಕಾರರಿಗೂ ವರ್ಗ
ದಾರರಿಗೂ ಬೇಕಾಗುವ
ತರ ತರದ ವರ್ಗ,
ಊಳಿಗ ಪುಸ್ತಕಗಳೂ
ಲೆಕ್ಕ ಪುಸ್ತಕಗಳೂ
ಸುಲಭ ದರದಲ್ಲಿ
ಸಾಜೂರಾಗಿ ಮಾಡಿ
ಕೊಡಲ್ಪಡುತ್ತವೆ.
ನವಯುಗ ಪ್ರೆಸ್,
ಉಡುಪಿ.

ನವಯುಗ

1942ನೇ ಇಸವಿಯ
'ವರ್ಷ ಭವಿಷ್ಯ'
ಬೆಲೆ
0—3—0
ಅಗತ್ಯ ಓದಿರಿ.
ನವಭಾರತ ಪುಸ್ತಕ
ಭಂಡಾರ, ಉಡುಪಿ.

ಸಂಪುಟ ೨೧ | Vol. 21

ಸಂಪಾದಕರು:—ಶ್ರೀ ಎ. ಬಿ. ಶೆಟ್ಟರು, ಬಿ. ಎಲ್. ಎ.

NAVAYUGA WEEKLY

5-2-1942

ಸಂಚಿಕೆ ೨೨ | No. 22

THE VIJAYA BANK, LTD.

Head Office **Mangalore.**

BRANCHES: Kadri-Mangalore, Hampankatta-Mangalore, Udipi, Coondapur, Karkal, Kaup & Brahmavar

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಶೇಕಡಾ 4ರ ದರದಲ್ಲಿ, 4ಯೂ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು.

ದಿ ವಿಜಯಾ ಬೇಂಕ್, ಲಿಮಿಟೆಡ್.

ಪ್ರಧಾನ ಕಾರ್ಯಾಲಯ-ಮಂಗಳೂರು.

ಶಾಖೆಗಳು:- ಕದ್ರಿ-ಮಂಗಳೂರು, ಹಂಪನಕಟ್ಟೆ-ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಕಾಪು ಮತ್ತು ಬ್ರಹ್ಮಾವರ.

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಹಾಗು ಸತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೂಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ; ಚಟ್ಟೆ ಬಿದ್ದಿದ್ದರ, ಉಷ್ಣದಿಂದ ಜೇರು ಇಳಿದಿದ್ದರ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೋಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಸೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. **ಮೊದಲ** ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ **ತಕ್ಕೊಳ್ಳಬೇಕು.** ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ **ತಕ್ಕೊಳ್ಳಬೇಕು.** ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲ**ಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, **ದಾವಣಗೇರಿ:**—ದಾವಣಗೇರಿ ಪ್ರೆಸ್.

ಮಾಲಕರ ಗಾಳಕ್ಕೆ ತಪ್ಪದ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ನಿಮ್ಮ ಹಾಗೂ ಮಕ್ಕಳಿಗೋಸ್ಕರ, ನಿಜವಾದ ಪ್ರಯೋಜನಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೇ ನೀವು ಜೋಡಿಸುತ್ತಿರುವವರಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಆರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

Degrees: Books: Medicines

Free H. L. M. S. M. B., H. M. D. etc Free Homeo Ayur Unani Nature Decree By post also—Practitioners also get soon Homeo Materia Medica Rs 5 Homeo practice book Rs 4, Instant Cure Pills Rs 10 Enclose 2 annas stamp —

Principal, Indian Homeopath Institute (Society) (Govt Regd.)

P. O. Mehsana (Kathiawar Dt, India.)

Sidha-Kalpa Kavach (Regd.)

No 3 Rs 2, No 2 Rs 5 No 1 Rs 7 Special Rs 10 Extra Special Rs 17, for ... health wealth ... any ... with M. O. ... and get ... by return post Life ... ng ... 2 No ... Send M. O. ... pamphlets Prof Dr N. H. Chhatbar,

P. O. Mahuva (Kathiawar India.)

ಉಪಾಧ್ಯಾಯರು ಬೇಕು

ಉಡುಪಿ ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಗೆ ಸೆಕೆಂಡ್ರಿಗ್ರೇಡ್ ಟ್ರೈನ್ಡ್ ಪಾಸಾದ ಉಪಾಧ್ಯಾಯರು ಬೇಕು. ಅಪೇಕ್ಷೆಯುಳ್ಳವರು ಕೂಡಲೇ ಮುಖತಃ ಮಾತನಾಡುವುದು. ಯಾ ಪತ್ರವ್ಯವಹಾರಮಾಡುವುದು.

K. Jagannath Nayak.
Manager,
Modern Higher Ele. School.
Udipi

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮೈನೆರೆಯುತ್ತಾರೆ. ಎಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಮೈಲಿಗೆ ಮುಟ್ಟು ಸರಿಯಾಗಿ ಸ್ತ್ರೀಯರು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ನಂತರ ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಡದೆ ಸೇವಿಸಬೇಕು.

ಪಥ್ಯ:— ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—0—0 ಪೋಸ್ಟ ಚಾರ್ಜ ೮ ಆಣೆ.

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಗುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ೩ ಗಾಳಕೋಟಿ ಧಾರವಾಡ, ವಿಜಾಪೂರ ... ಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ ... ದಾವಣಗೇರಿ.—ದಾವಣಗೇರಿ ಪ್ರೆಸ್ಸ್. ಬಳ್ಳಾರಿ ... ಬಳ್ಳಾರಿ. ಗೋಕಾಕ —ಸಂಗಪ್ಪ ಶಿವಲಿಂಗಪ್ಪ ಅಂಗಡಿ.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೇ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು – ಜೋಕೆ!

“ಬಿಕ್ರಂ” ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ದೌರ್ಬಲ್ಯಗಳನ್ನು ನಿವಾರಿಸುತ್ತದೆ ಸ್ವಪ್ನದೋಷ, ನಿರ್ಬಲತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ ಮುಂತಾದ ಮುಪ್ಪಿನ ಲಕ್ಷಣ ತಗೆದು ಹಾಕುತ್ತವೆ. ಬುದ್ಧಿ ಬಲ, ಜ್ಞಾಪಕ ಶಕ್ತಿ, ಕೆಲಸ, ಹುರುಪು ಇವುಗಳನ್ನು ಬೆಳೆಸುತ್ತದೆ. ಬೆಲೆ ರೂ ೩-೮-೦

ವಿಳಾಸ: ‘ಬಿಕ್ರಂ ಡಿಸ್ಟ್ರಿಬ್ಯೂಟರ್ಸ್’

24—ಕಾನಕಾನಹಳ್ಳಿ, ರೋಡ್, ಬಸವನಗುಡಿ, ಬೆಂಗಳೂರು

DIAMONDS! DIAMONDS!

K. R. K. SHET.

Opposite Govt- College, Hampankatta MANGALORE

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANT!

ಉತ್ಕೃಷ್ಟ ತರಗತಿಯ ಚುನ್ನೈತ (First quality ...) ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ನ್ಯಾಯವಾದ ಕಡಿಮೆಯಾದಂತೆ ನಮ್ಮ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ನೋಡಿರಿ. ಇದರ ಗಾಜು ಯಾಂದನ್ನು ಗವರ್ನಮೆಂಟ್ ಕೊಲೇಜಿನ ಎದುರಿಗದ ತರೆಯಲಾಗಿದ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಈ ವಾರದ ಭವಿಷ್ಯ

ತಾರೀಕು ೫—೨—೪೭ರಿಂದ ತಾರೀಕು ೧೨—೨—೪೭ರ ವರೆಗೆ

ಮೇಷ—ಆತ್ಮೀಯರ ವಿರಹದಿಂದಲೂ ವ್ಯರ್ಥ ಖರ್ಚು ಮತ್ತು ಪರ್ಯಟನಾದಿಗಳಿಂದಲೂ ನಿಮ್ಮ ದೇಹ ಮನಸ್ಸುಗಳಿಗೆ ಸುಖಶಾಂತಿಯಿರದು. ವಿಷಮ್ಯಗಳಿಂದ ಆರೋಗ್ಯಕ್ಕೆ ತೊಂದರೆಯೂ ಪ್ರಯಾಣದಲ್ಲಿ ಆಕಸ್ಮಿಕ ಅಪಘಾತಗಳೂ ಕೂಡ ಪ್ರಾಪ್ತವಾಗುವಂತಿವೆ. ಗುರು ಕೃಪೆಯ ನಿಮಗೆ ಪೂರ್ಣ ಬೆಂಬಲವಿರುವದರಿಂದ ಹಿಡಿದ ಕಾರ್ಯದಲ್ಲಿ ವಿಜಯ, ಶತ್ರುಗಳ ನಾಶ, ಗೃಹಸುಖ, ಮತ್ತು ಧನಲಾಭವೂ ತ್ವಾತ್ಕರವೆನಿಸಿರುವುದು. ವಾರಾಂದಿಯ ೩ ದಿನಗಳಲ್ಲಿ ಸಮಾಜದಲ್ಲಿ ಗೌರವವನ್ನೂ ಯಶಸ್ಸನ್ನೂ ಗಳಿಸುವಿರಿ.

ವೃಷಭ—ಕಾಲವು ಸಂಪೂರ್ಣ ನಿಮ್ಮ ಮೇಲೆ ಮುನಿದಿರುವದು ಆತಿವ ನಿಮ್ಮ ಮನಸ್ಸಂಕಲ್ಪಗಳು ಕಣ್ಣಿದಿಯೊಳಗಿನ ಗಂಟಿನಂತಾಗುವುವು. ಆರ್ಥಿಕ ಬಿಕ್ಕಟ್ಟಂತೂ ನಿಮ್ಮನು ತಲೆಯೆತ್ತದಂತೆ ಮಾಡುವದು. ಕೇವಲ ಗಿನ ... ಕಾರಿಗಳ ಅನರ್ಥಪರಂಪರೆಗಳು ಮೇಲಿಂದ ಮೇಲಕ್ಕೆ ಬರಲಿವೆ ಆದ್ದರಿಂದ ನಿಮ್ಮ ಪ್ರಿಯರನ್ನೂ ಯಾರನ್ನೂ ಗಳ ನಂಬಿ ಮೋಸ ಹೋಗದೆ ... ಮಾಡತಕ್ಕ ಎಚ್ಚರವು ನಿಮಗೆ ಹೊಸಬರ ಗುಣ ದು. ಆದರೂ ತಾ. ೭ರಿಂದ ೧೦ರ ವರೆಗಿನ ದಿನಗಳಲ್ಲಿ ನೀವು ಹೆಚ್ಚಿನ ಎಚ್ಚರಿಕೆಯನ್ನು ಹೊಂದಬೇಕಾಗ್ಲ.

ಮಿಥುನ—ಗೃಹಶಕ್ತಿ ... ಯಿಂದಾಗಿಯೂ ಸ್ವಸ್ಥತೆಯು ಸ್ಥಿರವಾಗಿರುವದರಿಂದಲೂ ನಿಮ್ಮ ಮನಸ್ಸಿಗೆ ತಕ್ಕ ... ದವರಾಗಬಹುದು ... ನ ಜನರೊಡನೆ ದೊರೆಯತಕ್ಕ ಸಮ್ಮಾನಾದರಗಳಿಂದಲೂ ವಿವಿಧೋದ್ಯಮಗಳಿಂದಲೂ ಅನಿರೀಕ್ಷಿತವಾಗಿ ಲಭಿಸತಕ್ಕ ಧನಗಳಿಂದಲೂ ನೀವು ಬಹು ಸುಖಿಗಳಾಗಿಯೇ ತೋರಿಸಿಕೊಳ್ಳುವಿರಿ. ಸ್ತ್ರೀ ಮೂಲಕ ವಸ ಲಭಿಸುವ ಯೋಗವಿದೆ. ನಿಮ್ಮ ... ಮುಂಗೋಪವು ಹೆಚ್ಚಾಗಿ ತೋರಿ ಬರಬಹುದಾದ್ದರಿಂದ ವಾರಾಂದಿಯ ೧ ದಿನಗಳಲ್ಲಿ ಸ್ವಲ್ಪ ಜಾಗ್ರತೆಯಿಂದಿರುವ ಮಾತ್ರವು.

ಕರ್ಕಾಟಕ—ಈ ವಾರವಿಷ್ಟ ನಿಮ್ಮ ಭಾಗಕ್ಕೆ ಅನುಕೂಲನಾದ ಗ್ರಹಸಂಚಾರ ಲಂಭವಿಷ್ಟರತಕ್ಕ ಗುರುವೊಬ್ಬನೇ. ಇತರ ಎಲ್ಲಾ ಗ್ರಹವೂ ಪ್ರತಿಕೂಲರಿರುವುದರಿಂದ ನಿಮ್ಮ ಮೇಲೆ ಇಲ್ಲಸಲ್ಲದ ಅಪವಾದಗಳೂ ಸ್ತ್ರೀನಿಮಿತ್ತ ಅಪಮಾನ ಕಲಹಾದಿಗಳೂ ವಿದ್ಯಾಕೀರ್ತಿಗಳಿಗೆ ಕಳಂಕವೂ ಕೂಡ ಪ್ರಾಪ್ತವಾಗುವಂತಿದ್ದರೂ ಬೃಹಸ್ಪತ್ಯಾಚಾರ್ಯರ ಅನುಗ್ರಹದಿಂದ ಅವುಗಳು ಬಹುಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಚಿತ್ತಕ್ಷೋಭೆಯಿಂದ ಕರ್ತವ್ಯತಾ ಮೂಢರಾಗುವಿರಿ ಖರ್ಚನ್ನು ಒಮ್ಮೆಲೆ ಕಡಿಮೆಮಾಡಿದರೂ ಸಾಲಮಾಡುವ ಪ್ರಸಂಗ ಬರಲಿದೆ. ಆದ ಕಾರಣ ತಾ ೭ರಿಂದ ೧೦ರ ವರೆಗೆ ಸಾಹಸಕ್ಕೆ ಮನಗೊಡದೆ ಮಿತಭಾಷಿಗಳೂ ಮಿತವ್ಯಯಿಗಳೂ ಆಗಿರಿ.

ಸಿಂಹ—ನೀವೀವಾರದಲ್ಲಿ ಶತ್ರು ಜನರ ಪೀಡೆಯಿಂದ ಪಾರಾಗುವಿರಲ್ಲದೆ ನಿಮ್ಮ ಮನೋರೋಗವೂ ಹೆಚ್ಚಿನಂಶ ಶಾಂತವಾಗಲಿದೆ. ಆರೋಗ್ಯವೂ ಆರ್ಥಿಕ ಸಂಪತ್ತೂ ಮುಂಚೆಗಿಂತ ಸುಧಾರಿಸುವದು. ಆದರೆ ನಿಮ್ಮ ಆಹಾರ ವಿಚಾರಗಳು ಗುರುಹಿರಿಯರ ಮನಸ್ಸಿಗೆ ಸರಿಬೀಳದೆ ಪರಸ್ಪರ ಮನಸ್ತಾಪಕ್ಕೊಳಗಾಗಬೇಕಾಗುವ ಪ್ರಸಂಗಗಳೊದಗಲಿವೆ ಧರ್ಮ ಕರ್ಮಗಳಲ್ಲಿ ಬಹಳ ಲೋಪವಾಗುವದು. ವ್ಯಾಪಾರಿಗಳಿಗೂ ಶ್ರಮಜೀವಿಗಳಿಗೂ ಮತ್ತು ಲೇಖಕರಿಗೂ ವಿನಯಾಪವಾದಯು ಸ್ವಲ್ಪ ಕಷ್ಟಕ್ಕೆ ನಿಲ್ಲಲಿದೆ. ತಾ. 7. 8 ಹೊರತಾಗಿ ಮಿಕ್ಕುಳಿದ ದಿನಗಳಲ್ಲಿ ಇಚ್ಛೆಯಂತೆ ಫಲಪ್ರಾಪ್ತಿಯಾಗಲಾರದು.

ಕನ್ಯಾ— ನೀವೆಷ್ಟೇ ನಿಪುಣರಿರುವಿರಾದರೂ ಈ ವಾರದಲ್ಲಿ ಶತ್ರುಜನರ ಮಾಯಾಜಾಲಕ್ಕೆ ಸಿಲುಕಿ ಬಹುತರನಾದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಆತ್ಮೀಯರ ವಿಯೋಗದಿಂದ ತಂದೆಮಕ್ಕಳಲ್ಲೂ ಗಂಡಹೆಂಡಿರಲ್ಲೂ ಉಂಟಾಗತಕ್ಕ ವಿವಾದಗಳಿಂದಲೂ ಮನಸ್ಸಿಗೆ ನೆಮ್ಮದಿಯಿರದು ರಾಜಕೀಯ ಭಾಗದಲ್ಲಿ ಫಲವು ಸ್ವಲ್ಪವೇ ಕಾಣುವದಲ್ಲದೆ ಮಾನ ಕ್ಕೂ ಕೂಡ ಭಂಗವುಂಟಾಗಲಿವೆ. ಕಜ್ಜಿ ಹುಣ್ಣು ಪಕ್ಕೆ ಚರ್ಮರೋಗಗಳು ಸದಾ ಬಾಧಿಸಲಿವೆ. ಆದರೂ ಸುರಾಸುರ ಮಂತ್ರಿದ್ವಯರ ಅನುಗ್ರಹದಿಂದ ಮೇಲ್ಕಂಡ ಅನಿಷ್ಟಗಳು ಕೆಲಮಟ್ಟಿಗೆ ದೂರವಾಗಲಿವೆ. ತಾ. 7. 8. 11. 12 ಈ ದಿನಗಳಲ್ಲಿ ಧನಮಾನಗಳಿಗೆ ಧಕ್ಕೆಯುಂಟಾದೀತು.

(೧೧ನೇ ಪುಟ ನೋಡಿ)

BHUVANENDRA PRODUCTS LTD.,

Head Office and Factory: **Katapadi**, S. Kanara

Depots: 1 Mahratha Galli, Hubli
2. 57 Big street, Triplicane, Madras

“BHUVANENDRA”

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

“ಭುವನೇಂದ್ರ”

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಟ್ಟಿ ರಥಬೀದಿ. (3) ಡಾಕ್ಟರ್ ಪಿ. ಜಿ. ಆಚಾರ್ಯ್ಸ ಫಾರ್ಮಸಿ, ಡಾಕ್ಟರ್ ಕೆ. ಕೇಶವಗಿರಿ ಶೈ L. I. M.

ಚುಟುಕು ಟೀಕೆ-ಟಿಪ್ಪಣಿ

ಕೂಡಲಿ ಮುಷ್ಟಿಗೆ

ಆಸ್ಟ್ರೇಲಿಯದ ಕೇಳಿಕೆಗಳಿಗೆಲ್ಲಾ ಕೂಡಲೆ ಚರ್ಚಿಲ್ಲರು ಒಪ್ಪಿಬಿಟ್ಟಿರುತ್ತಾರೆ. ಲಿಬಿಯ ಮೊದಲಾದ ರಣರಂಗಗಳಲ್ಲಿ ಹೋರಾಡುತ್ತಿರುವ ತನ್ನ ಸೈನಿಕರು, ವೈಮಾನಿಕರನ್ನೆಲ್ಲಾ ಅದು ಹಿಂದೆ ಕರೆಯ ತೊಡಗಿದೆ. ಮಾತ್ರವಲ್ಲದೆ ಅಮೆರಿಕ ಮತ್ತು ಬ್ರಿಟನುಗಳು ಅದಕ್ಕೆ ಕೂಡಲೆ ಸಹಾಯನೀಯಲು ಮುಂದಾಗಿವೆ. ಜಪಾನಿನ ಧಾಳಿಯನ್ನೆದುರಿಸಲು ಆಸ್ಟ್ರೇಲಿಯದ ಲ್ಲೆಲ್ಲಾ ಭರದಿಂದ ಸಿದ್ಧತೆನಡೆದಿದೆ. ಯಾಕೆ? ೭೦ ಲಕ್ಷ ಜನರಿಗಾಗಿ ಕಾದಿಡಲ್ಪಟ್ಟಿರುವ ಅತಿ ದೊಡ್ಡ ವಸಾಹತಲ್ಲವೆ ಆಸ್ಟ್ರೇಲಿಯ?

ತೀರಾ ಅಲಕ್ಷ್ಯ!

ಮಲಯ ಹೋಯಿತು. ಸಿಂಗಪುರದ ಗತಿಯು ಹೊಂಕೊಂಗಿನಂತೆಯೇ ಆಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಬಳಿಕ ಮೇಲೆ ಹಿಂದುದೇಶದ ಪಾಡೇನು? ಅದರ ರಕ್ಷಣೆಗಾಗಿ ಯಾವ ಸಿದ್ಧತೆ ನಡೆಯುತ್ತಿದೆ? ಅದರ ಅಲ್ಪ ಸ್ವಲ್ಪ ಸೇನೆಯೂ ಹೊರಗಿರುತ್ತದೆ ಇಂತಹ ಗಂಡಾಂತರದ ಸಂದರ್ಭದಲ್ಲಾದರೂ ಬ್ರಿಟಿಷ್ ಸರಕಾರವು ಹಿಂದುದೇಶಕ್ಕೆ ಸ್ವಾತಂತ್ರ್ಯವಿತ್ತು ಯುದ್ಧಕ್ಕೆ ಹಿಂದೀಯರೆಲ್ಲರ ಉತ್ಸಾಹಪರ ಸಹಾಯ ಪಡೆಯಲು ಸಿದ್ಧವಿಲ್ಲ. ಕಳೆದ ವಾರ ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ಮಾಡಿದ ಭಾಷಣದಲ್ಲಿ ಹಿಂದುದೇಶದ ಪ್ರಸ್ತಾಪವೇ ಇಲ್ಲ. ಹಿಂದುಸ್ಥಾನದ ಕುರಿತು ಇಷ್ಟೊಂದು ಅಲಕ್ಷ್ಯವೇ? ಸಿಂಗಪುರ ಹೋದರೆ ಆಸ್ಟ್ರೇಲಿಯಕ್ಕಿಂತ ಮೊದಲು ಹಿಂದುದೇಶಕ್ಕಲ್ಲವೇ ಅಪಾಯ?

ಕೈಗೊಂಬೆಯಾಗಿ ನಡೆಯಲಿಲ್ಲ.

ರಶ್ಯದಲ್ಲಿ ನಾಝಿ ಸೇನೆಯು ದೊಡ್ಡ ಅಪಜಯ ಪಡೆಯುತ್ತಿರುವಾಗ, ಜಪಾನು ಪೂರ್ವದಲ್ಲಿ ರಶ್ಯದ ಮೇಲೆ ಬೀಳಬೇಕೆಂದು ಹಿಟ್ಲರರ ಅಪೇಕ್ಷೆ ಇದ್ದಿತಂತೆ. ಆದರೆ ಜಪಾನು ಹಿಟ್ಲರರ ಕೈಗೊಂಬೆಯಾಗಿ ನಡೆಯಲಿಲ್ಲ. ರಶ್ಯದ ಬಂಜರು ಪ್ರದೇಶದ ಮೇಲೆ ಬಿದ್ದರೆ ಅದಕ್ಕೆ ದೊರೆವ ಪ್ರಯೋಜನವೇನು? ಬದಲಿಗೆ ಮಲಯ, ಡಚ್ ಈಸ್ಟ್ ಇಂಡೀಸ್, ಬರ್ಮ ಇವನ್ನು ಆಕ್ರಮಿಸಿದರೆ ಜಪಾನಿಗೆ ಅತ್ಯವಶ್ಯಕವಾದ ರಬ್ಬರು, ಟಿನ್, ಪೆಟ್ರೋಲು ಮೊದಲಾದುವು ದೊರೆಯುಂತಾಗುವುದು. ಆದುದರಿಂದಲೇ ಜಪಾನು ತನಗುಚಿತ ಕಂಡ ದಾರಿಯನ್ನೇ ಹಿಡಿಯಿತು. ಮುಸೊಲಿನಿಯಂತೆ ತನ್ನ ಸ್ವಾತಂತ್ರ್ಯವನ್ನು ಹಿಟ್ಲರರಿಗೆ ಮಾರಿಬಿಡಲಿಲ್ಲ.

ಚೈನದಿಂದ ಕಲಿತ ಪಾಠ

ತಾನು ಅಮೆರಿಕಕ್ಕೆ ಹೋಗಿ ಕಲಿತುದು ಪಾಠವೆಂದರೆ, ಸ್ವಾತಂತ್ರ್ಯ[illegible] ರಾಷ್ಟ್ರೀಯ ಚೈನವು ಈಗ ೪½ ವರ್ಷಗಳಿಂದ, ಅತ್ಯಾಧುನಿಕ ರಣಸಿದ್ಧ ಜಪಾನನ್ನು ಒಮ್ಮೆಯೂ ನಿಶ್ಶಸ್ತ್ರವಾಗಿ ಎದುರಿಸುತ್ತದಲ್ಲಿ [illegible] ಧೈರ್ಯ ಮತ್ತು ಸ್ಥೈರ್ಯವೆಂದು ಚರ್ಚಿಲ್ಲರು [illegible] ತನ್ನ ಭಾಷಣವಲ್ಲೆಯೆ [illegible]. ಈ ಪಾಠ ಕಲಿಯಲಿಕ್ಕೆ ಅಮೆರಿಕಕ್ಕೆ ಹೋಗುವ ಅವಶ್ಯವಿದ್ದಿತೇ? ಬಲ್ಲವರೂ ಚೈನದಿಂದ ಕಲಿತ ಪಾಠವನ್ನವರು ಹಿಂದುದೇಶದ ಕುರಿತು ಉಪಯೋಗಿಸಲು ಸಿದ್ಧವಿದ್ದರೆ, ಸ್ವತಂತ್ರ ಹಿಂದುಸ್ಥಾನವು [illegible] ಧೈರ್ಯವನ್ನು ಎತ್ತಿ [illegible] ಸ್ಥೈರ್ಯದಿಂದ ಹೋರಾಡುವ [illegible] ತಯಾರಿರುವರೇ?

GREETINGS.

The Directors, Officers and Staff of the Canara Bank Limited join in sending you this message of appreciation for your good will and patronage during the last year. We sincerely wish you a Happy and Prosperous New Year.

ESTD. 1906

CANARA BANK LTD.

ಹಿಟ್ಲರರ ಜಂಭ.

ಚಳಿಗಾಲದ ನಿಮಿತ್ತ ರಶ್ಯದಲ್ಲಿ ಜರ್ಮನ್ ಸೇನೆಗೆ ಪರಾಜಯವಾಗಿದೆ. ಚಳಿಗಾಲ ದಾಟಲಿ, ಆ ಮೇಲೆ ರಶ್ಯವನ್ನು ಪ್ರತಿಭಟಿಸುವುದು ತನಗೆ ಸಂದಿತೆಂದು ಜಂಭಹೊಡೆದಿದ್ದಾರೆ ಹಿಟ್ಲರರು ಜನವರಿ ತಾ. 20ರಲ್ಲಿ ಕೊಟ್ಟೊಂದು ಭಾಷಣದಲ್ಲಿ. 10 ವಾರಗಳಲ್ಲಿ ಸೋವಿಯೆಟ್ ರಶ್ಯವನ್ನು ಮುರಿದು ಮುಕ್ಕುವೆನೆಂದು ಯುದ್ಧಾರಂಭದಲ್ಲಿ ಉದ್ಘೋಷಿಸಿದ ಬಡಾಯಿಯನ್ನು ಹಿಟ್ಲರರು ಮರೆತಿರುವರೇನು? ಇನ್ನೂ ಹಿಟ್ಲರರು ರಶ್ಯದ ಕುರಿತು ತನ್ನ ಮನೋವೃತ್ತಿಯನ್ನು ಬದಲಾಯಿಸದುದು ಆಶ್ಚರ್ಯ.

ಲಂಚದ ಸಂಚು ನಡೆಯಲಿಲ್ಲ.

ಜರ್ಮನ್ ಗುಪ್ತಚರರು ರಶ್ಯದ ಹಲವು ಸೇನಾನಾಯಕರುಗಳಿಗೆ ಹೇರಳ ಲಂಚಕೊಟ್ಟು ರಶ್ಯದಲ್ಲಿ ವಂಚಾಪಾರಂಗವನ್ನೆಬ್ಬಿಸುವ ಒಳಸಂಚು ನಡೆಸಿದ್ದರಂತೆ. ಆದುದರಿಂದಲೇ ಶೀಘ್ರ ವಿಜಯದ ಸ್ವಪ್ನವಿದ್ದಿತವರಲ್ಲಿ. ಆದರೆ ಅದು ಅವರ ಮನಸಿನ ಮಂಡಿಗೆಯಾಗಿಬಿಟ್ಟಿತು. ಜರ್ಮನ್ ಗುಪ್ತಚರರು ವೃಥಾ ದುಡ್ಡು ಹಾಳುಮಾಡಿದ್ದೇ ಬಂತು. ಗ್ರೀಸಿನಲ್ಲಿ ಇಟಲಿಯವರೂ ಇದೇ ರೀತಿ ಮಾಡಿದ್ದರಂತೆ. ಅದು ಕೂಡಾ ಎಷ್ಟೊಂದು ನಿರರ್ಥಕವಾಗಿತ್ತೆಂಬುದು ಸುವಿದಿತ ವಿಷಯ.

ದ. ಭಾ. ಹಿಂದೀ ಪ್ರಚಾರ ಸಭೆಯ ವಾರ್ಷಿಕ ಅಧಿವೇಶನಗಳು. ಮುಂದಿನ ವರ್ಷ ರಜತ ಜಯಂತಿ.

ಕಳೆದ ತಿಂಗಳ ಕೊನೆಯ ವಾರದಲ್ಲಿ ಮದರಾಸಿನಲ್ಲಿ ದ. ಭಾ. ಹಿಂದೀ ಪ್ರಚಾರ ಸಭೆಯ ವಾರ್ಷಿಕ ಅಧಿವೇಶನಗಳು ವಿಶೇಷ ವೈಭವದಿಂದ ಜರಗಿದವು. ಪದವೀದಾನ ಸಮಾರಂಭಕ್ಕೆ ಆಚಾರ್ಯ ವಿನೋಬಾ ಭಾವೆ ಅವರು ದೀಕ್ಷಾಂತ ಭಾಷಣ ಮಾಡಿದ್ದಾರೆ [illegible] ಪ್ರಮುಖ ಹಿಂದೀ ಪ್ರೇಮಿ [illegible] ಶ್ರೀ ರಂಗನಾಥದಿವಾಕರರು ಅಧ್ಯಕ್ಷರಾಗಿದ್ದರು [illegible] ಭಾಷೆಯಲ್ಲಿ ಒಂದು [illegible] ವರೆಗೆ ಭಾಷಣಮಾಡಿ [illegible] ಕಾರ್ಯಕ್ರಮದಲ್ಲಿ ಹಿಂದೀ ಪ್ರಚಾರದ ಮಹತ್ವವನ್ನು [illegible] ಉದಾಹರಣೆಗಳಿಂದ ವರ್ಣಿಸಿದರು. [illegible] ಸಭೆಯ [illegible] ಮುಂದಿನ ವರ್ಷ ಆಚರಿಸ [illegible]. ಇದನ್ನು ಸಭೆಯ [illegible] ಪ್ರಚಾರಕರೂ ಕರ್ನಾಟಕ [illegible] ಪಂಡಿತ ಸಿದ್ಧನಾಥ ಪಂತರು [illegible]. ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಹಿಂದೀ ಪ್ರಾಧ್ಯಾಪಕರಾದ ಶ್ರೀ. ಎಸ್. ನಾಗಪ್ಪನವರು ಅನುಮೋದಿಸಿದರು.

ಈ ಸಲದ ವಾರ್ಷಿಕ ಅಧಿವೇಶನದಲ್ಲಿ ಸಭೆಯ [illegible] ಚುನಾವಣೆಯು ನಡೆಯಿತು. [illegible] ಸ್ಥಾನಗಳಿಗೆ ಇಷ್ಟೊಂದು [illegible] ಉಮೇದುವಾರರು [illegible]. ಚುನಾವಣೆಯು ಬಹಳ ತೀವ್ರವಿದ್ದು ಸಭೆಯ ಇತಿಹಾಸದಲ್ಲಿ ಅಪೂರ್ವವಾಗಿತ್ತು. ಸಭೆಯ ಪ್ರಧಾನ ಮಂತ್ರಿಗಳ [illegible] ಯಾವತ್ತೂ ಪ್ರಮುಖ ಕಾರ್ಯಕರ್ತರು [illegible]. [illegible] ಸ್ಥಾನಗಳನ್ನೆ ಈಗಿನ ಪ್ರಧಾನ ಮಂತ್ರಿಗಳಾದ ಶ್ರೀ [illegible] ವಿಶ್ವನಾಥ [illegible] ನಗರ ಸಂಚಾಲಕರಾದ ಎಸ್. ಆರ್. [illegible] ಮತ್ತು ಕರ್ನಾಟಕ ಪ್ರಾಂತೀಯ ಸಭೆಯ ಕಾರ್ಯದರ್ಶಿಗಳಾದ ಶ್ರೀ. ಸಿದ್ಧನಾಥ ಪಂತರು ಆರಿಸಲ್ಪಟ್ಟರು. ಕರ್ನಾಟಕದ ಸಾರ್ವಜನಿಕ ಹಿಂದೀ ಪ್ರೇಮಿಗಳ ಪರವಾಗಿ ಶ್ರೀ [illegible] ಆರಿಸಲ್ಪಟ್ಟರು.

[illegible] ಹಿಂದೀ ಪ್ರಚಾರ ಪ್ರದರ್ಶನ" ಎಂಬ ರಾಷ್ಟ್ರಭಾಷಾ ಪ್ರಚಾರ [illegible] ಪ್ರದರ್ಶನವು ಏರ್ಪಟ್ಟಿತ್ತು. ಶ್ರೀ. ಸಿದ್ಧನಾಥ ಪಂತರು ಇದರ ವ್ಯವಸ್ಥಾಪಕರಾಗಿದ್ದರು. [illegible] ವಿದ್ಯಾಲಯದ ಇತಿಹಾಸ ಪ್ರೊ॥ ರಾಧಾಕುಮುದ ಮುಖರ್ಜಿಯವರು ಈ ಪ್ರದರ್ಶನದ ಪ್ರಾರಂಭೋತ್ಸವವನ್ನು ಜರುಗಿಸಿದರು. ಪ್ರದರ್ಶನದಲ್ಲಿದ್ದ ವ್ಯಂಗ್ಯಚಿತ್ರಗಳಲ್ಲಿ "V. for Visharad" "[illegible]" ಎಂಬುದನ್ನು ಕಂಡು ಎಲ್ಲರೂ ಮೆಚ್ಚಿದರು.

THE TROPICAL INSURANCE COMPANY LTD.,

H. O. NEW DELHI

WANTED

Immediately Organisers in our rapid expansion scheme for the following Centres in the District of South Kanara. Well educated young local men with energy push and initiative willing to take to Life Insurance career are selected and trained as probationers. Initial Salary of Rs. 30 - per month besides commission on personal business. No guarantee of business.

1. Mangalore City, 2. Buntwal, 3 Puttur, 4. Kasaragod, 5 Karkala 6. Udipi, 7. Coondapoor.

Apply with credentials to:

M. Sunderram Shetty,

BRANCH MANAGER.

THE TROPICAL INSURANCE CO LTD.,

MANGALORE.

ಎಂತಹ ಸ್ವರ್ಗ ನರಕದಂತರ!

(ಸ್ತ್ರೀ ಪುರುಷ ಪ್ರೇಮ ಸಂಬಂಧದ ಹೊರತು ಕನ್ನಡದಲ್ಲಿ ಸಣ್ಣ ಕತೆಗಳು ಬರೆಯಲ್ಪಡುವುದೇ ಕಡಿಮೆ. ಸಮಾಜದಲ್ಲಿ ಇತರ ಹಲವು ವಿಷಮ ಸಮಸ್ಯೆಗಳಿರುತ್ತವೆ. ಅವುಗಳ ಕುರಿತು, ಜನ ಸಾಮಾನ್ಯರ ದೃಷ್ಟಿಯನ್ನೆಳೆಯುವಂತೆ ಚಿಕ್ಕ ಕತೆಗಳು ಬರೆಯಲ್ಪಟ್ಟರೆ ಸಾಹಿತ್ಯ ಹಾಗೂ ಸಮಾಜ ಸೇವೆಗಳ ಸ್ನೇಹಕ್ಕೆ ಕಾರಣವಾದಂತಾಗುವುದು. ಕೆಳಗಣ ಕತೆಯು ಅಂತಹದೊಂದು ಮಾದರಿಯಿರುತ್ತದೆ ಸಂ. ನ.)

1939ನೇ ಸಾಲಿನ ಬೇಸಗೆಯ ಯೌವನದ; ಏಪ್ರಿಲ್ ತಿಂಗಳ ಆರಂಭದ ಒಂದು ದಿನ. 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಳನ್ನು ಶೇಖರಿಸುವರೆ ಬೊಂಬಾಯಿ ನಗರಕ್ಕೆ ಹೋಗಿದ್ದ ನಾವು ಕೆಲವರು, ಹೊಟೆಲು ಮ್ಹಾಲಕರೊಬ್ಬರು ವಾಸಿಸುತ್ತಿದ್ದ ಅದೊಂದು ಗಲ್ಲಿಗೆ ಹೋಗುತ್ತಿದ್ದೆವು. ನಮ್ಮ ಮೋಟರ್ ಕಾರು ಧಾವಿಸುವಾಗ ಹೊರತು ಮೆಲ್ಲಗೆ ಹೋಗುವಾಗ ಅಥವಾ ನಿಂತಾಗ ಸೆಕೆಯನ್ನು ತಡಕೊಳ್ಳುವುದೇ ಕಷ್ಟವಾಗಿತ್ತು. ಅದರ ಮಾಡ ಮೇಲೆಯೇ ಅಗ್ನಿವೃಷ್ಟಿ ಕೆಯಿರುವಂತೆ ತಾಪವು ನಮ್ಮನ್ನು ಬೇಯಿಸಿ ಬಿಡುವಷ್ಟು ತೀವ್ರವಾಗಿತ್ತು.

ನಾವು ಅದೊಂದು ಸಪೂರ ಗಲ್ಲಿಗೆ ಪ್ರವೇಶಿಸಿದೆವು. ಅದರ ಹೆಸರೇನ ನನಗೆ ನೆನಪಿಲ್ಲ. ನಮ್ಮ ಕಾರನ್ನು ನಿಲ್ಲಿಸಿ ನಮಗೆ ಬೇಕಾದ ಹೊಟೆಲು ಮ್ಹಾಲಕರ ನಿವಾಸವನ್ನು ಹುಡುಕಿದೆವು. ಆಗ ಜೀವನದಲ್ಲಿ ನಾನು ಎಂದೂ ಮರೆಯದ ದೃಶ್ಯವೊಂದು ನನ್ನ ಕಣ್ಣಿಗೆ ಬಿದ್ದು ಚಕಿತಗೊಳಿಸಿತು. ನಾನು ಕೆಲವು ನಿಮಿಷಗಳ ವರೆಗೆ ಅದನ್ನೇ ನೋಡುತ್ತಾ ಬೆರಗಾಗಿ ನಿಂತುಬಿಟ್ಟೆ. ನನ್ನ ಸಂಗಾತಿಗಳ ದೃಷ್ಟಿಗದು ಬಿದ್ದಿರಲಿಲ್ಲ. ಅದರ ನನ್ನ ಹೃದಯವನ್ನದು ಒಮ್ಮೆಯೇ ಕರಗಿಸಿ ನೀರುಮಾಡಿ ಬಿಟ್ಟಿತು. ಹಲವು ಸೌಧಗಳ ಕಟ್ಟಡಗಳ ವೈಭವದಿಂದ ಲಕ್ಷ್ಮೀ ನಿವಾಸದಂತೆ ಭಾಸವಾಗುವ ಬೊಂಬಾಯಿಯಂತಹ ನಗರದಲ್ಲಿಯೂ ಇದು ಸಾಧ್ಯವೇ ಎಂದು ನಾನು ಚೋದ್ಯಪಟ್ಟೆ.

ಗಲ್ಲಿಯ ಒಂದು ಬದಿಯಲ್ಲಿ ಸ್ವಲ್ಪ ವಿಶಾಲವಾದೊಂದು ಕಸದ ಕೊಂಪೆಯಿದ್ದಿತು. ಅದರ ದುರ್ವಾಸನೆಯು ನಮ್ಮ ಮೂಗಿಗೆ ಹೊಡೆದು ನಮ್ಮನ್ನಲ್ಲಿಂದ ಬೇಗನೆ ಹೋಗಲು ಒತ್ತಾಯಿಸುತ್ತಿತ್ತು. ಅಂತಹ ಸ್ಥಳದಲ್ಲೊಂದೆಡೆ ಸುಮಾರು ನಡುಪ್ರಾಯ ದಾಟದ ಸ್ತ್ರೀಯೋರ್ವಳು, ಹರಿಹರಿದು ಹೋಗಿದ್ದ ಸೀರೆಯನ್ನುಟ್ಟು ಕುಳಿತಿದ್ದಳು. ತುಂಬಿದ ಅವಳ ಗರ್ಭವು ಮುಂದಾಗಿ ಕಣ್ಣಿಗೆ ಹೊಡೆಯುತ್ತಿತ್ತು. ಅವಳಿಗೆ ಏಳಲು ಸಾಧ್ಯವೇ ಇಲ್ಲವೇ ಎಂಬಷ್ಟು ದೊಡ್ಡದಾಗಿದ್ದಿತದು. ಅವಳ ಬಳಿಯಲ್ಲಿಯೇ ಸುಮಾರು ಮೂರು ವರ್ಷದ ಮಗುವೊಂದು ಕೂತು ಒಂದೇ ಸಮನೆ ಕೂಗುತ್ತಿತ್ತು. ಸ್ತ್ರೀಯು ಅದರ ಗೋಷ್ಠಿಯೇ ಇಲ್ಲದವಳಂತೆ ಮಗುವಿನ ತಲೆಯಲ್ಲಿ ಹೇನು ನೋಡುತ್ತಿದ್ದಳು ಅವಳ ಮುಖವು ಕಸದ ಕೊಂಪೆಯ ಕೊಳಕು ಮಣ್ಣಿನಂತೆಯೇ ಇದ್ದಿತು. ಸುಡುವ ಬಿಸಿಲಲ್ಲಿ ಈ ತುಂಬಿದ ಗರ್ಭಿಣಿ ಮತ್ತು ಅವಳ ಮಗುವು ಪಡೆದಿದ್ದ ಆಶ್ರಯವೆಂದರೆ, ಮರದ ಕೆಲವು ಗೆಲ್ಲುಗಳು ಅಡ್ಡ ಹಾಕಲ್ಪಟ್ಟಿರುವ ಚಿಕ್ಕದಾದೊಂದು ಚಪ್ಪರ. ಎಂತಹ ಕರುಣಾಜನಕ ನೋಟವಿದು! ಅಂದು ಆದಷ್ಟು ಹೆಚ್ಚು ಪಾಲು ಶೇಖರಿಸಬೇಕೆಂಬ ನನ್ನ ಉತ್ಸಾಹಕ್ಕದು ಒಮ್ಮೆಯೇ ತಣ್ಣೀರೆರೆದು ಬಿಟ್ಟಿತು. ಸಮಾಜದ ಘೋರ ವೈಷಮ್ಯವು, ಅಮಾನುಷ ಅನ್ಯಾಯವು ನನ್ನ ಹೃದಯವನ್ನು ಶೂಲದಂತೆ ಕೊರೆಯಹತ್ತಿತು. ಪ್ರಗಾಢ ಚಿಂತಾಛಾಯೆಯು ನನ್ನ ಮುಖವನ್ನಾವರಿಸಿಬಿಟ್ಟಿತು. ಹಾ! ಎಂದು ನಿಟ್ಟುಸಿರಿಟ್ಟು ತಿರುಗಿ ತಿರುಗಿ ಆ ಸ್ವರ್ಗಪ್ರವಕ ನೋಟದ ಕಡೆಗೆ ದೃಷ್ಟಿ ಹರಿಸುತ್ತಾ ಗೊಂಬೆಯಂತೆ ನನ್ನ ಸಂಗಾತಿಗಳ ಬೆನ್ನು ಹಿಡಿದು ಹೋದೆ. ಅದರ ಯಾವಾಗಲೂ ಮುಂದಾಗಿ ಮಾತಾಡುವ ನನಗೆ ಆಗ ಹೊಟೆಲು ಮ್ಹಾಲಕರಿಂದ ಪಾಲು ಪಡೆಯುವ ಕುರಿತು ಒಂದೇ ಒಂದು ಮಾತನ್ನಾದರೂ ಆಡಲು ಸಾಧ್ಯವಾಗಲಿಲ್ಲ. ಅಷ್ಟೊಂದು ನಿರುತ್ಸಾಹಗೊಂಡಿತ್ತು ನನ್ನ ಮನಸ್ಸು.

ಅಂದು ಸಂಜೆ, ಬೊಂಬಾಯಿ ಲೈಫ್ ಇನ್ಶ್ಯೂರೆನ್ಸ್ ಕಂಪನಿಯ ಪ್ರಾಂತ ಏಜೆಂಟರಾದ ಕೊಚ್ಚಿಕರ ಸಹೋದರರಲ್ಲಿ ಹಿರಿಯರೂ, ಉತ್ಸಾಹಶಾಲಿಗಳೂ, ವಿನಯಶೀಲರೂ, ಸರಳಚಿತ್ತರೂ ಆದ ಶ್ರೀ. ಕೆ ವಿಶ್ವನಾಥ ಪೈಗಳು, ನಮ್ಮನ್ನು, ಉಪಾಹಾರಕ್ಕೆ ಅವರ ನಿವಾಸಸ್ಥಾನಕ್ಕೆ ಬರಬೇಕೆಂದು ಆಮಂತ್ರಿಸಿದ್ದರು. ಅಂತೆಯೇ ಸಂಜೆ ಸುಮಾರು 5½ ಘಂಟೆಗೆ ನಾವು ಅಲ್ಲಿಗೆ ಹೋದೆವು. ಸಮುದ್ರವನ್ನು ನೂಗಿದು ಸೇರಿಸಿದ ಸ್ಥಳದಲ್ಲಿ ನೂತನವಾಗಿ ಒಂದೇ ಸಾಲಿನಲ್ಲಿ ಭವ್ಯವಾಗಿ ಕಟ್ಟಲ್ಪಟ್ಟಿರುವ ನವ ಕಟ್ಟಡಗಳಲ್ಲೊಂದಾದ ಕಾಪ್ರೂರು ನಿವಾಸದ ಎರಡನೇ ಮಾಳಿಗೆಯಲ್ಲಿದ್ದರು ಶ್ರೀ. ವಿಶ್ವನಾಥ ಪೈಗಳು. ನಾವು ಹೋದೊಡನೆ ಅತ್ಯಂತ ಪ್ರೀತಿಯಿಂದ ನಮ್ಮನ್ನು ಬರಮಾಡಿಕೊಂಡು ಆ ನವೀನ ಕಟ್ಟಡದ ವೈಭವ ಮತ್ತು ಆಧುನಿಕ ಸಲಕರಣೆಗಳನ್ನೆಲ್ಲಾ ನಮಗೆ ತೋರಿಸಿ ವಿವರಿಸಿದರು. ಅದರ ಮಾಲಕರಾದ ಕಾಪ್ರೂರ್ ಸಹೋದರರು ಮೂರನೇ ಮಾಳಿಗೆಯಲ್ಲಿ ವಾಸಿಸುತ್ತಿದ್ದರು. ಅವರು ಹವಾ ಬದಲಾವಣೆಗಾಗಿ ನಾಸಿಕಕ್ಕೆ ಹೋಗಿದ್ದರು. ಆದುದರಿಂದ ಮೂರನೇ ಮಾಳಿಗೆಯಲ್ಲಿ, ಆಕರ್ಷಕ ಪೋಷಾಕಿನ ಇಬ್ಬರು ದರ್ವಾನರ ಹೊರತು ಮತ್ತಾರೂ ಇರಲಿಲ್ಲ. ಶ್ರೀ. ಪೈಗಳು ನಮ್ಮನ್ನು ಅಲ್ಲಿಗೆ ಕರೆದೊಯ್ದು ಅದರ ಸೊಬಗನ್ನು ತೋರಿಸಿದರು. ಆ ವೈಭವವನ್ನು ಹೇಳುವುದಾದರೂ ಏನು! ಬಂದಿರುವವರಾರೆಂದು ಒಳಗಿಂದಲೇ ನೋಡಿ ತಿಳಿವಂತೆ ಬಾಗಿಲಲ್ಲೇ ನವೀನ ಯಾಂತ್ರಿಕೋಪಕರಣವೊಂದಿದ್ದಿತು. ಒಳಗೆ ಪ್ರವೇಶಿಸಿದೊಡನೆಯೇ ಅರಮನೆಗೆ ಹೊಕ್ಕಂತಾಯಿತು. ನಮಗೆ ನೆಲದ ಮೇಲೆ ಮನೋರಂಜಕವಾಗಿ ರಂಜಿಸುವ ರತ್ನಕಂಬಳಿಗಳು ಹಾಕಲ್ಪಟ್ಟಿದ್ದುವು. ಅವುಗಳ ಬಣ್ಣವನ್ನೇ ಪ್ರತಿ ಕೋಣೆಗಳ ಗೋಡೆಗಳಿಗೂ ಕೊಡಲಾಗಿತ್ತು. ಅದೇ ಬಣ್ಣದ ಮನೋಜ್ಞ ಚಿತ್ರಗಳು ಚಿತ್ರಿಸಲ್ಪಟ್ಟಿದ್ದುವು. ಬಿಸಿ ನೀರು, ಅಡಿಗೆ ಮೊದಲಾದವುಗಳನ್ನೆಲ್ಲಾ ಇಲೆಕ್ಟ್ರಿಕ್ ಶಕ್ತಿಯಿಂದಲೇ ನಡಿಸುವ ವ್ಯವಸ್ಥೆ ಇತ್ತು. ಇಂತಹ ಭವ್ಯ ಹಾಗೂ ವಿಶಾಲ ನಿವಾಸದಲ್ಲಿ ಆಗ ವಾಸಮಾಡಿಕೊಂಡಿದ್ದುದು ಇಬ್ಬರು ದರ್ವಾನರು ಮಾತ್ರ, ನಾವು ಎಲ್ಲವನ್ನೂ ನೋಡಿ ಕೆಳಗೆ ಶ್ರೀ ಪೈಗಳ ಮಾಳಿಗೆಗಿಳಿದು ಹಲವು ಬಗೆಯ ರುಚಿಕರ ಸಿಹಿ ಪದಾರ್ಥ ಮತ್ತು ಹಣ್ಣು ಹಂಪಲುಗಳಿಂದ ತುಂಬಿದ ಉಪಾಹಾರ ತೆಗೆದುಕೊಂಡೆವು. ಶ್ರೀ. ಪೈಗಳಿದ್ದ ಕಟ್ಟಡದ ದಕ್ಷಿಣದ ಭವ್ಯವಾದ ಇನ್ನೊಂದು ಕಟ್ಟಡದ ಎರಡನೇ ಮಾಳಿಗೆಯಲ್ಲಿ, ಪ್ರಸಿದ್ಧ ಸಿನೆಮಾ ನಟಿ, ಹಾಗೂ ಸೌಂದರ್ಯ ರಾಣಿ ನಸೀಮಳು ಏಕಾಕಿಯಾಗಿ ಬಹಳ ವೈಭವದಿಂದ ವಾಸಿಸುತ್ತಿರುವುದನ್ನು ನಾವು ಕಂಡೆವು. ಉತ್ತರದ ಇನ್ನೊಂದು ಕಟ್ಟಡದಲ್ಲಿ ಇಂದೋರಿನ ಜೈನ ಕೋಟ್ಯಾಧೀಶರೊಬ್ಬರು, ತನ್ನ ಹಣ, ಚಿನ್ನಾಭರಣ, ರತ್ನಾದಿಗಳ ರಕ್ಷಣೆಗಾಗಿ, ದೊಣ್ಣೆಪೆಟ್ಟಿಯ ಭೀಮಕಾಯರಾದ ಅನೇಕ ಮಂದಿ ಬಯ್ಯಾರುಗಳನ್ನು, ಓಟದ ಹೋರಿಗಳಂತೆ ಇಟ್ಟುಕೊಂಡು, ಅವರೆಲ್ಲಾ ಸೂರ್ಯ ಮುಳುಗುವ ಮೊದಲೇ ಸಾಲುಸಾಲಾಗಿ ಕೂತು ಹೊಟ್ಟೆತುಂಬ ತಿಂದು ತೇಗುತ್ತಿರುವುದನ್ನು ಶ್ರೀ ಪೈಗಳು ನಮಗೆ ತೋರಿಸಿದರು. ಸುಮಾರು 6½ ಘಂಟೆಯ ಹೊತ್ತಿಗೆ ನಾವು ಶ್ರೀ. ಪೈಗಳನ್ನು ಬೀಳ್ಕೊಟ್ಟು ಹೊರಡುವಾಗ, ಕೆಲವೇ ಗಜಗಳ ಸಮುದ್ರತೀರದಲ್ಲಿ, ಬೊಂಬಾಯಿ ಪಟ್ಟಣದ ಸ್ತ್ರೀಪುರುಷರು ಸಹಸ್ರ ಗಟ್ಟಲೆಯಲ್ಲಿ ಸಾಲು ಸಾಲಾಗಿ ಕೂತೋ, ನಡೆದು ಹೋಗುತ್ತಲೋ ವಿಹರಿಸುವ ಉಲ್ಲಾಸಕರ ನೋಟವನ್ನು ನಾವು ಕಂಡೆವು. ಆದರೆ ನನ್ನ ಮನಸ್ಸು ಮಾತ್ರ ಮತ್ತಷ್ಟು ನಿರುತ್ಸಾಹಗೊಂಡಿತ್ತು. ನನ್ನ ಚಿಂತೆಯು ಇಮ್ಮಡಿ ನಾಲ್ಮಡಿಯಾಗಿ ಹೆಚ್ಚಿದ್ದಿತು. ಆ ಕಸದ ಕೊಂಪೆಯ ತುಂಬಿದ ಗರ್ಭಿಣಿ ಮತ್ತವಳ ಮಗುವಿನ ದೃಶ್ಯವು, ಕಣ್ಣಿಗೆ ಕಟ್ಟಲ್ಪಟ್ಟಂತೆ ಮುಂದೆ ಬಂದು ನಿಂತು "ಅಯ್ಯೋ!" ಎಂದು ಗೋಳಿಡುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ನಸೀಮಾ ಳೆಲ್ಲಿ? ಆ ತುಂಬಿದ ಗರ್ಭಿಣಿ ಸ್ತ್ರೀಯೆಲ್ಲಿ? ಎಂತಹ ಸ್ವರ್ಗ ನರಕದಂತರವಿದು! ಇಂತಹ ವಿಷಮತೆಯೇ ಸಮಾಜ ಶರೀರದ ಘೋರ ವಿಷಾಣುವಾಗಿ ಅದರ ಸ್ವಾಸ್ಥ್ಯವನ್ನು ಕೆಡಿಸಬರುವುದೇ? ಅದನ್ನು ನಿವಾರಿಸಲು ಸಮಾಜವಾಗಲಿ, ಸರಕಾರವಾಗಲಿ ಏನು ಮಾಡುತ್ತಿದೆ?

— ವಿಜಯ —

CONFIDENCE

is a great asset in building Business.

The Bombay Life Assurance Company Limited

has created Public Confidence

by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India,

Including Indian States.

Udipi, Mangalore, Calicut,

Madras, Trivandrum, Bangalore City,

and Bombay 4.

ರೇಡಿಯೋದಲ್ಲಿ

ಕೊಡ್ಯಕಲ್ ಶ್ರೀನಿವಾಸರಾಯರ ಕತೆ.

ತಾ. 27—1—1942ರಂದು ಮೈಸೂರು ಆಕಾಶವಾಣಿಯಿಂದ ಅಖಿಲಕರ್ನಾಟಕಕ್ಕೆ ಹೇಳಲ್ಪಟ್ಟ ಕತೆ 'ಭೂತ ಸಂಚಾರ.' ಅದು 'ನಂದಾದೀಪ'ದ ಕತೆಗಳಲ್ಲೊಂದು.

ಅದರಂತೆಯೇ ಮನಮುಟ್ಟುವ ಸ್ವಾರಸ್ಯದ ಇತರ **ಕತೆಗಳಿವೆ**

ಕೊಡ್ಯಕಲ್‌ರ 'ನಂದಾದೀಪ'ದಲ್ಲಿ.

ಬೆಲೆ ೮ ಆಣೆ. ಒಂಭತ್ತಾಣೆಯ ಸ್ಟಾಂಪುಗಳನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ನವಭಾರತ ಬುಕ್ ಡಿಪ್ಪೋ, ಉಡುಪಿ.

ವಾರದ ವಿಶೇಷ ವಾರ್ತೆ

ನೌಕೆಗಾಗಿ ೧೮ ಬಿಲ್ಯ ಡೋಲರು ವೆಚ್ಚ

ಯುದ್ಧ ಹಡಗ ಮತ್ತು ವಿಮಾನಗಳಲ್ಲಿ ಅಮೇರಿಕವು ಇತರ ರಾಷ್ಟ್ರಗಳನ್ನೆಲ್ಲಾ ಓಂದೆ ಹಾಕುವಂತೆ ಅವುಗಳಿಗಾಗಿ 18,000,000,000 ಡೋಲರುಗಳನ್ನು ವೆಚ್ಚಮಾಡುವ ಕಾರ್ಯಕ್ರಮವನ್ನು ಅಮೇರಿಕವು ಕೈಕೊಂಡಿರುವುದು. ಈ ಯುದ್ದದಲ್ಲ 1942ನೇ ಇಸ್ವಿಯು ಸಂಘ್ನವಾದು ವಿದ ಅದರಲ್ಲ ಹೇರಿ ವಿಸ್ತರ ಮತ್ತೆ ಪ ಜಯ ಪಡೆಯ... ಬೇಕಾದ ಸಿದ್ಧತೆಯನ್ನು ಅಮೇರಿಕವು ನಡೆಸುವುದೆಂದು ನೌ ... ತಜ್ಞರ ಅಭಿಪ್ರಾಯ

೩ ಲಕ್ಷಕ್ಕಿಂತ ಹೆಚ್ಚು ಹತರಾಗಿರುವರು

ಕಳೆದ ಡಿಸೆಂಬರ ತಾ 6ನೇದ ಜನವರಿ 15ರ ವರೆಗೆ ರಶ್ಯದ ಯುದ್ಧದಲ್ಲಿ 300,000 ಕ್ಕಿಂತಲೂ ಮಿಕ್ಕಿದ ಜರ್ಮನರು ಕೊಲ್ಲಲ್ಪಟ್ಟಿರುವರೆಂದು ತಿಳಿದು ... ದ ಹಿಡಿದೆ ಮತ್ತು ರೋಗಗಳಿಗೆ ... ಉತ್ತಿರುವರೆಷ್ಟು ... ರುವುದಿಲ್ಲ. ರಶ್ಯನರು ... ಗದಲ್ಲಿ 50 ಮೈಲು ... ದು ಜರ್ಮನರೇ ... ಗ್ರಾಡ ... ಫೆಬ್ರುವರಿ ... ... ನಿಂದ ಆಚೆ ... [illegible]

ಜಪಾನಿನ ಮುಂದಿನ ಉದ್ದೇಶ

... ಸಿಂಗಾಪುರವನ್ನು ... ಗೆದ್ದ ... ಮತ್ತು ... ಗಳ್ಳುವುದೇ ಜಪಾನಿನ ಮುಂದಿನ ... ದ್ದೇಶವೆಂದು ... ಪೋರ್ಟ್ ಡಾರ್ವಿನ್ ... ನವನ್ನು ಗೆಲ್ಲುವ ಗೂಢವಾಗಿ ಹೋಗಲಾರರು. ಅವು ಸ್ಮಾರಕ್ಕೇನೇ ಮುಂದೊತ್ತಿ ... ಕೆಲ್ಲ ಮತ್ತು ... ಸಮುದ್ರಗಳ ... ಗಳನ್ನು ... ಬಹುದೆಂದು ... ಲೆಫ್ಟಿನೆಂಟ್ ಕಮಾಂಡರ್ ಕೆನ್ ವರ್ಮಿಯಂಬ ಹೆಸರಿನವನ್ ... ಕೆಲವು ವಾರಪತ್ರ ... ದಲ್ಲಿ ... ದಿದ್ದಾನೆ.

ಚೀನೀಯರ ಪ್ರಬಲ ವಿಜಯ

ಜಪಾನರು ರಶ್ಯದಲ್ಲಿ ಸಿಕ್ಕಿ ಬಿದ್ದಿರ ... ಜಪಾನರು ಚೈನದ ಯುದ್ಧ ... ಗದಲ್ಲಿ ... ಗಿ ಪ್ರಬಲ ... ಗಳನ್ನು ಪಡೆಯುತ್ತಿದ್ದಾರೆ. ದ ... ದಲ್ಲಿ ಇತ್ತಲಾಗಿ ಚೀನೀ ಮತ್ತು ... ಸೇನೆಗಳಿಗೆ ಪ್ರಬಲ ಹೋರಾಟಗಳು ನಡೆದು ಜಪಾನರು ದೊಡ್ಡ ... ನಷ್ಟವಾದ ... ರೆಂದು ... ಜನರಲ್ ... ಪ್ರಕಟಿಸ ... ಜಪಾನರು ... ಸಲ್ಪಟ್ಟಿದ್ದಾರೆ

ಬರ್ಮಾ ರಸ್ತೆಯ ಪ್ರಾಮುಖ್ಯತೆ

ಬರ್ಮಾ ರಸ್ತೆ ... ಪ್ರತಿ ... 40,000 ಟನ್ ಸಾಮಗ್ರಿ ... ತಿಂಗಳು ... 400 ... ಚೈನದ ... ಗಳಲ್ಲಿ ... ಪ್ರತಿದಿನ 500 ... ಸಾಮಾನು ತಂದೊಯ್ಯುತ್ತವೆ

ವರ್ಷಕ್ಕೆ ೩೦.೦೦೦ ವೈಮಾನಿಕರ ತರಬೇತಿ

ಅಮೇರಿಕದ ನೌಕಾಖಾತೆಯವರು ವರ್ಷಕ್ಕೆ 30,000 ವೈಮಾನಿಕರನ್ನು ತರಬೇತಿ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿರುವರು ... ಪ್ರತಿ ... ವಿದ್ಯಾಲಯದಲ್ಲಿಯೂ ... ವೈಮಾನಿಕ ತರಬೇತಿ ಕೊಡುವ ... ಯಲ್ಪಡುವುದು.

ಹೆಚ್ಚಿಗೆ ಸೈನಿಕರಿಗಾಗಿ ಒತ್ತಾಯ.

ಚಳಿಗಾಲ ದಾಟಿದ ನಂತರ ರಶ್ಯದ ಮೇಲೆ ಪ್ರಚಂಡ ಧಾಳಿ ನಡಿಸಲು ಹಿಟ್ಲರನು ಸಿದ್ಧತೆ ಮಾಡುತ್ತಿರುವಂತಿದೆ. ಈ ಧಾಳಿಗೆ ರುಮೇನಿಯವು ೫ ಲಕ್ಷ ಸೈನಿಕರನ್ನೊದಗಿಸಬೇಕೆಂದು ಹಿಟ್ಲರರು ಕೇಳಿದಾಗ ಅವು ಹೊಡಲು ಒಪ್ಪಲಿಲ್ಲ ಯಾಕೆಂದರೆ ಈ ವರೆಗೆ ರಶ್ಯದ ಯುದ್ಧದಲ್ಲಿ ಕೊಲ್ಲಲ್ಪಟ್ಟ ಮತ್ತು ಗಾಯಗೊಂಡ ರುಮೇನಿಯನ್ ಸೈನಿಕರ ಸಂಖ್ಯೆ 2 ಲಕ್ಷ ಮಿಕ್ಕಿರುವುದು ಆದರೆ ಹಂಗೇರಿಯು 3 ಲಕ್ಷ ಸೈನಿಕರನ್ನೊದಗಿಸಲು ಸಿದ್ಧತೆ ತೋರಿಸಿದಾಗ ರುಮೇನಿಯಕ್ಕೂ ಅಷ್ಟೇ ಸೈನಿಕರನ್ನು ಕಳುಹಿಸದೆ ನಿರ್ವಾಹವಿಲ್ಲವಾಗಿದೆ. ಸರ್ಬಿಯದಲ್ಲಿ ಶಾಂತಿಯನ್ನು ರಕ್ಷಿಸುವ ಜವಾಬ್ದಾರಿಯನ್ನು ಹಿಟ್ಲರರು ಬುಲ್ಗೇರಿಯಾಸರ ಮೇಲೆ ಹಾಕಿ ಅಲ್ಲಿಂದ 80,000 ಜರ್ಮನ್ ಸೈನಿಕರನ್ನು ಹಿಂದೆ ಕರೆದಿರುವರು.

ಮಲಯದ ಯುದ್ಧ ಮುಗಿಯಿತು.

ಮಲಯವು ಸಂಪೂರ್ಣವಾಗಿ ಈಗ ಜಪಾನರ ವಶವಾಗಿರುವುದು. ಅಲ್ಲಿ ಕಾದುತ್ತಿದ್ದ ಬ್ರಿಟಿಷ್ ಸೈನಿಕರೆಲ್ಲಾ ಸಿಂಗಾಪುರ ದ್ವೀಪದಲ್ಲಿ ಸಂಗ್ರಹಿಸಲ್ಪಟ್ಟಿರುತ್ತಾರೆ. ಸಿಂಗಾಪುರ ಮತ್ತು ಮಲಯಗಳನ್ನು ... ಜೊಹೋರು ಜಲಸಂಧಿ ... ಮಾರ್ಗವನ್ನು ಜಪಾನರು ... ದ್ದಾರೆ. ನೆಲಮಾರ್ಗವಾಗಿಯೇ ಸಿಂಗಾಪುರವನ್ನು ... ಗೆಲ್ಲಲು ಜಪಾನರು ಪ್ರಯತ್ನಿಸುತ್ತಿರುವಂತಿದೆ.

ಜಾವದ ಮೇಲೆ ಧಾಳಿ

... ಯುದ್ಧದಲ್ಲಿ ಜಾವದ ಮೇಲಿನ ಜಪಾನರ ಧಾಳಿಯು ಅತ್ಯಂತ ... ದುದು. ಅದಕ್ಕೀಗ ಜಪಾನರು ... ಮಾಡುತ್ತಿರುವಂತಿದೆ. ... ಕಡೆಗಳಿಂದ ಜಪಾನರು ಮುಂದೊತ್ತುತ್ತಿದ್ದಾರೆ. ... ಸ್ಥಳದಲ್ಲಿರುವ ... ದ್ವೀಪಗಳನ್ನು ಜಪಾನರು ಹಿಡಿಯಬಹುದೆಂದು ನಂಬಲಾಗಿದೆ.

ಜಪಾನರ ತಪ್ಪೇನು?

ಆಸ್ಟ್ರೇಲಿಯವನ್ನು ಬಿಳಿಜನರ ನಾಡಾಗಿ ಕಾಯ್ದು ಕೊಳ್ಳುವುದು ಅಲ್ಲಿನ ಬಿಳಿಜನರ ಕರ್ತವ್ಯವೆಂದು ಅಲ್ಲಿಯ ಪ್ರಧಾನ ಮಂತ್ರಿ ಮಿ. ಕರ್ಟಿನರು ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆ. ಆಸ್ಟ್ರೇಲಿಯವನ್ನು ಬಿಳಿಜನರ ನಾಡಾಗಿಯೇ ಕಾದಿಡುವುದು ಕರ್ತವ್ಯವಾದರೆ, ಏಸ್ಯಾಖಂಡವು ಏಸ್ಯಾಖಂಡದ ಜನರದೇ ಆಗಬೇಕು. ಅಲ್ಲಿಂದ ಬಿಳಿಜನರು ಓಡಿಸಲ್ಪಡಬೇಕೆಂಬ ಜಪಾನರ ಉದ್ದೇಶದಲ್ಲಿ ತಪ್ಪೇನು?

ಪರಿಸ್ಥಿತಿಯು ಪುನರಾವರ್ತನೆಯೋ?

... ದಿನಗಳ ಹಿಂದೆ ಲಿಬಿಯದಲ್ಲಿ ಬ್ರಿಟಿಷ್ ಸೇನೆಯು ಒಂದೇಸವನೆ ತ್ರಿಪೋಲಿಯ ವರೆಗೂ ಮುಂದೊತ್ತಿದ್ದಿತು ಆದರೆ ಅನಂತರ ಸ್ವಲ್ಪ ಸಮಯದಲ್ಲೇ ಮುಂದೊತ್ತಿದಷ್ಟೇ ತೀವ್ರಗತಿಯಿಂದ ಹಿಂದೆ ಸರಿದು ಬರಬೇಕಾಯಿತು. ಈಗ ಪುನಃ ಅದೇ ರೀತಿ ಬೆಂಘಾಜಿಯ ವರೆಗೆ ಶೀಘ್ರವಾಗಿ ಬ್ರಿಟಿಷ್ ಸೇನೆಯು ಮುಂದೊತ್ತಿತು. ಆದರೆ ಇತ್ತಲಾಗಿ ಬೆಂಘಾಜಿಯನ್ನು ಬಿಟ್ಟು ಶೀಘ್ರದ ಹಿಂದೆ ಸರಿಯಬೇಕಾಗಿರುವುದು ಆಶ್ಚರ್ಯಕರ ಸಂಗತಿ. ಹೀಗೆ ಮುಂದಿನಾಗ್ರತೆ ತೆಗೆದುಕೊಳ್ಳದೆ ಪರಿಸ್ಥಿತಿಯನ್ನು ಪುನರಾವರ್ತಿಸ ಬಿಡುವುದು ದೊಡ್ಡ ಅಚಾತುರ್ಯವಲ್ಲವೇ?

ಹಿಂದೀಕರಣದಿಂದೇನು?

ಈಗಣ ವೈಸರಾಯರ ಎಗ್ಸಿಕ್ಯೂಟಿವ್ ಮೆಂಬರರ ಸ್ಥಾನಕ್ಕೆಲ್ಲಾ ಹಿಂದೀಯರನ್ನೇ ನೇಮಿಸುವ ಆಲೋಚನೆ ನಡೆದಿರುವುದಂತೆ. ಅದರಿಂದಾಗುವ ಪ್ರಯೋಜನವೇನು ... ಬಿಳಿ ನೌಕರರ ಬದಲಿಗೆ ಕರಿಯರು ಬಂದರೆ ಮತ್ತಷ್ಟು ಕೇಡೇ ಹೊರತು ಒಳ್ಳೇದಿಲ್ಲ. ಎಗ್ಸಿಕ್ಯೂಟಿವ್ ಕೌನ್ಸಿಲ್ ಇರಲಿ, ವೈಸರಾಯರೇ ಹಿಂದೀಯರಾದರೂ ಹಿಂದುದೇಶಕ್ಕೆ ಸ್ವಾತಂತ್ರ್ಯ ದೊರೆತಂತಾಗುವುದೆ? ಇಂತಹ ಕಣ್ಣುಕಟ್ಟುಗಳ್ಲಾ ಹಿಂದೀಯರು ಮರುಳಾಗುವ ದಿನಗಳು ಎಂದೋ ಸಂದುಹೋಗಿವೆ

THE
Canara Industrial & Banking Syndicate, Limited.
(Incorporated in British India. Liability of share holder limited)
Estd] Head Office: UDIPI. (S. India) [1925
Authorised Capital .. Rs. 50,00,000.
Subscribed Capital .... Rs. 14,73,620.
Paid up Capital ... .. Rs. 6,12,250
Reserves ... ... Rs. 2,10,000
Branches in the important commercial centres of Karnatak, Malabar, and Rayalaseema Districts and in Bombay and Secunderabad.
All kinds of Banking business transacted.
Our new Issue of Rs. 10 Lakhs of ... Cumulative Preference Shares of Rs. 10 each is an ideal form of safe and remunerative investment with unique features
INVESTORS PLEASE NOTE
From about the middle of April 1942, premium will be levied also on applications for 100 shares and above at Rs 5/- per every hundred shares. Details will be notified in the Prospectus.
APPLY FOR PROSPECTUS.

ಬ್ಯಾಂಕಿನ ಪಾಲುಗಳು
ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,
ಇದರ ಪಾಲುಗಳನ್ನು ಪಡಕೊಳ್ಳಿರಿ.
ಈ ಬ್ಯಾಂಕಿಂಗ್ ಸಂಸ್ಥೆಯು 1931ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.
ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ 19-1-41ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ
ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.
(ಸಹಿ) ಬಿ. ಮಂಜಯ್ಯ ಹೆಗ್ಡೆ
ಬಿ. ಎ. ಬಿ ಎಲ್.
ಚೇಯರ್‌ಮೆನ್

TOURISTS' ONLY IDEAL RESORT
CAFE' ROYAL
(REGISTERED)
SHIVALLI BRAHMINS'
High Class Boarding & Lodging House
HOSPITAL ROAD. UDIPI.
ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ
'ಕೆಫೆ ರೋಯಲ್'
ಆಸ್ಪತ್ರೆ ರಸ್ತೆ, ಉಡುಪಿ.

The Canara Banking Corporation Ltd.

(Incorporated in British India with limited liability)

ESTED 1906.

OUR RATES OF INTEREST ON DEPOSITS

Current	1%	P. A.
Savings Bank	2½%	„
Short-term	1½%	„
Fixed for 3 months	2%	„
6 „	2¼	„
9 „	2½	„
12 „	3	„
24 „	3½	„

Advances made at cheap rates of interest against approved securities and Banking business of every description transacted

ನವಯುಗ

ಉಡುಪಿ, ಗುರುವಾರ, ೧೨–೨–೧೯೪೨

ಪೂರ್ವದ ಯುದ್ಧದಲ್ಲಿ ರಾಷ್ಟ್ರೀಯ ಚೀನದ ಸ್ಥಾನ.

ರಾಷ್ಟ್ರೀಯ ಚೀನವು, ಅಪ್ರತಿಮ ವೀರ ಮಾರ್ಶಲ್ ಚ್ಯಾಂಗರ ನಾಯಕತ್ವದಲ್ಲಿ ಜಪಾನಿನೊಡನೆ ಜೀವನ್ಮರಣ ಹೋರಾಟದಲ್ಲಿ ನಿರತವಾಗಿ ಈಗ ೫ ವರ್ಷ ಸಂದು ಹೋಯಿತು. ಇಂದೀಗ ಅದು ದಕ್ಷಿಣ ಚೈನದಲ್ಲಿ ಜಪಾನರ ಮೇಲೆ ಬಿದ್ದು ಹೋರಾಡಿ ದೊಡ್ಡ ವಿಜಯಗಳನ್ನು ಪಡೆಯುತ್ತಿದೆ. ಚಾಂಗ್‌ಶಾ ಯುದ್ಧದಲ್ಲಿ ಚೀನೀಯರು ಪಡೆದ ವಿಜಯವು ಅತಿದೊಡ್ಡದು.

ರಾಷ್ಟ್ರೀಯ ಚೈನವು ಈಗ ಮಿಲ್ಯಗಟ್ಲೆ ಸೇನೆಯನ್ನು ತರಬೇತಿಮಾಡಿಕೊಂಡಿದೆ. ಅವರ ಜನಸಂಖ್ಯೆಯು ಅಪಾರವಾದುದರಿಂದ ಎಷ್ಟು ಬೇಕಾದರೂ ಸೇನೆಯನ್ನೊದಗಿಸಿಕೊಳ್ಳುವ ಅನುಕೂಲತೆಯು ಅದಕ್ಕಿದೆ ಮಾತ್ರವಲ್ಲದೆ ವೈರಿಯೊಡನೆ ಎಡಬಿಡದೆ ಸುಮಾರು ೫ ವರ್ಷ ಹೋರಾಡಿದ ಪರಿಪಕ್ವಯುದ್ಧಾನುಭವವೂ ಅದಕ್ಕಿರುತ್ತದೆ.

ಅತ್ಯಾಧುನಿಕ ಯುದ್ಧೋಪಕರಣ ಸಿದ್ಧತೆ ಮತ್ತು ಯುದ್ಧಾನುಭವವಿರುವ ಜಪಾನಿಗೆ ಇಷ್ಟು ದೀರ್ಘಕಾಲದಲ್ಲಿಯೂ ಚೈನವನ್ನು ಗೆಲ್ಲಲಸಾಧ್ಯವಾಗಲು ಕಾರಣವೇನು? ಜಪಾನ ಸೈನಿಕರು ಅಷ್ಟೇನೂ ಉತ್ತಮರಲ್ಲವೇ? ಅವರ ಯುದ್ಧವಿಧಾನದಲ್ಲೇನಾದರೂ ದೋಷವಿದೆಯೇ? ಎಂಬ ಸಂದೇಹಗಳುಂಟಾಗಿದ್ದುವು. ಮಲಯದ ಯುದ್ಧದಿಂದ, ಜಪಾನ ಸೈನಿಕರೆಷ್ಟು ಸಾಹಸಿಗಳು ಮತ್ತು ಯುದ್ಧ ಚತುರರೆಂಬುದೀಗ ಲೋಕವಿದಿತವಾಗಿರುತ್ತದೆ. ಅಂತಹ ಉತ್ಕೃಷ್ಟ ಸೈನಿಕರನ್ನು ಜಯಶೀಲವಾಗಿ ಪ್ರತಿಭಟಿಸಿ ನಿಲ್ಲುವುದೆಂದರೆ ಸಾಮಾನ್ಯ ಕೆಲಸವೇನೂ ಅಲ್ಲ. ಇಂದೀಗ ಸುಮಾರು ಒಂದು ಮಿಲ್ಯ ಉತ್ಕೃಷ್ಟ ಜಪಾನ ಸೈನಿಕರನ್ನು ರಾಷ್ಟ್ರೀಯ ಚೈನವು, ಟೇಂಕ್ ಮೊದಲಾದ ದೊಡ್ಡ ಯಂತ್ರೋಪಕರಣ ಮತ್ತು ವಿಮಾನಪಡೆಯಿಲ್ಲದೆ ಪ್ರತಿಭಟಿಸಿ ಹೋರಾಡಬೇಕಾಗಿದೆ. ಅದನ್ನದು ಇತ್ತಿತ್ತಲಾಗಿ ಬಹಳ ಜಯಶೀಲವಾಗಿ ನಡೆಸುತ್ತಿರುವುದು ಅತ್ಯಂತ ಪ್ರಶಂಸನೀಯ.

ಚೈನವು ಇಂದು ಹಲವು ರಣರಂಗಗಳಲ್ಲಿ ಜಪಾನನ್ನು ಪ್ರಬಲವಾಗಿ ಪ್ರತಿಭಟಿಸುತ್ತಿರುವುದು ಮಾತ್ರವಲ್ಲದೆ ಬರ್ಮದ ರಕ್ಷಣೆಗಾಗಿ ಬ್ರಿಟಿಷರ ಕರೆಯ ಮೇರೆಗೆ ತನ್ನ ಸೇನೆಯನ್ನು ಕಳುಹಿಸುತ್ತಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ನಿಸ್ಸತ್ವವಾಗಿದ್ದ ಹಳೆಯ ಚೈನವು ಇಂದು ನವಚೈತನ್ಯ, ಚೈತನ್ಯ ಮತ್ತು ಆತ್ಮವಿಶ್ವಾಸದಿಂದ ತಲೆಯೆತ್ತಿ ನಿಂತಿರುವುದು ದೊಡ್ಡ ವಿಷಯವಾಗಿದೆ. ಆದುದರಿಂದ ಪೂರ್ವದ ಯುದ್ಧದಲ್ಲಿ ರಾಷ್ಟ್ರೀಯ ಚೀನವು ಪ್ರಮುಖ ಸ್ಥಾನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

ಆದರೆ ರಾಷ್ಟ್ರೀಯ ಚೈನಕ್ಕೆ ಹೆಚ್ಚು ಯುದ್ಧೋಪಕರಣ ಮತ್ತು ವಿಮಾನಗಳನ್ನೊದಗಿಸುವುದು ಅಮೆರಿಕ ಮತ್ತು ಬ್ರಿಟನ್ನಿನ ಕರ್ತವ್ಯ. ಬರ್ಮಾದ ರಸ್ತೆ ಕಡಿದುಹೋದರೆ ಚೈನಕ್ಕೆ ಸಹಾಯ ದೊರೆಯುವುದು ಕಷ್ಟ. ಜಪಾನನ್ನು ಸೋಲಿಸಲು ರಾಷ್ಟ್ರೀಯ ಚೈನಕ್ಕೆ ನೆರವಾಗುವುದು ಅಷ್ಟೇ ಅಗತ್ಯ. ಸಿಂಗಪುರದಂತೆಯೇ ಬರ್ಮಾ ರಸ್ತೆಯನ್ನು ರಕ್ಷಿಸುವುದು ಬ್ರಿಟನ್ ಮತ್ತು ಅಮೆರಿಕೆಗಳ ಕರ್ತವ್ಯ. ಸಾಕಷ್ಟು ಆಧುನಿಕ ಯುದ್ಧೋಪಕರಣ ಮತ್ತು ಯುದ್ಧ ವಿಮಾನಗಳ ಸಹಾಯವನ್ನು ಪಡೆದಲ್ಲಿ ರಾಷ್ಟ್ರೀಯ ಚೈನವು ಧಾಳಿಕಾರ ಜಪಾನನ್ನು ಪರಾಜಯಗೊಳಿಸಲು ಶಕ್ತವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಮಿತ್ರರಾಷ್ಟ್ರಗಳು ಚೈನವು ಸಂಪೂರ್ಣವಾಗಿ ಸ್ವತಂತ್ರವಾಗುವಂತೆ ಅದಕ್ಕೆ ಬೇಕಾದ ಸಹಾಯವನ್ನು ಬೇಗ ದಲೂ ಮಾಡಿ ಒದಗಿಸಲೇ ಬೇಕು. ಅದರಿಂದ ಜಪಾನು ಅತಿ ದೊಡ್ಡ ಆಘಾತವನ್ನು ಪಡೆದು ಉತ್ಸಾಹ ಕುಂದುವಂತಾಗುವುದು

ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರ ಭಾಷಣ.

ಜನವರಿ ತಾ. 27ರಲ್ಲಿ, ಚರ್ಚಿಲ್ಲರು ಯುದ್ಧದ ಪರಿಸ್ಥಿತಿಯನ್ನೆಲ್ಲಾ ಇದ್ದಕ್ಕಿದ್ದಂತೆ ವಿಮರ್ಶಿಸಿ ಒಂದು ದೀರ್ಘವಾದ ಭಾಷಣವನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಾಡಿ, ಪಾರ್ಲಿಮೆಂಟಿನ ವಿಶ್ವಾಸದ ಅಭಿಪ್ರಾಯವನ್ನು ಕೇಳಿದರು. ದೂರ ಪ್ರಾಚ್ಯದಿಂದ ಇನ್ನೂ ಕೆಟ್ಟ ವರ್ತಮಾನ ಕೇಳುವ ಸಂಭವವಿದೆ. ಅಲ್ಲಿಯ ಪರಿಸ್ಥಿತಿಯು ಕೆಟ್ಟದಾಗಿದೆ. ಇನ್ನೂ ಕೆಟ್ಟದುಂಟಾಗಲಿದೆ. ಇಂಗ್ಲೆಂಡಿನಲ್ಲಿ ಚರ್ಚಿಲ್ ಪಂಗಡದ ಅಧಿಕಾರವನ್ನು ಹೋಗಲಾಡಿಸಿ ಒಟ್ಲರರು ತನಗೆ ಬೇಕಾದಂತಹ ಸಂಧಿಯನ್ನು ಬ್ರಿಟನ್ನಿನ ಮೇಲೆ ಹೊರಿಸಲು ಅನುಕೂಲ ಪರಿಸ್ಥಿತಿಯನ್ನುಂಟುಮಾಡುವ ಉದ್ದೇಶದಿಂದಲೇ ಹೆರ್ ಹೆಸ್ಸರು ಇಂಗ್ಲೆಂಡಿನಲ್ಲಿ ಬಂದಿಳಿಯುವ ಸಾಹಸ ಮಾಡಿದುದು. ಪೂರ್ವದಲ್ಲಿ ಯುದ್ಧವುಂಟಾಗದಿರುವಾಗ, ರಸ್ಯ ಮತ್ತು ಲಿಬಿಯಗಳಿಗೆ ಹೆಚ್ಚಿನ ಯುದ್ಧಸಾಮಾಗ್ರಿ ಮತ್ತು ಸೇನೆ ಕಳುಹಿಸಿದುದು ಯುಕ್ತವಾದುದೋ ಎಂಬುದೇ ವಿಚಾರಿಸತಕ್ಕ ಪ್ರಶ್ನೆ. ಮಂತ್ರಿ ಮಂಡಲದಲ್ಲೇನಾದರೂ ದೋಷವಿದ್ದರೆ ಅದರ ಸಂಪೂರ್ಣ ಜವಾಬ್ದಾರಿ ತನ್ನದು. ಹನೆಯ ತೊಡಕಿನ ನಿಮಿತ್ತ ಸ್ಟೆಲಿನರಿಗಿತ್ತ ವಾಗ್ದಾನದಂತೆ ರಸ್ಯಕ್ಕೆ ಸಹಾಯ ಕಳುಹಿಸುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಲಿಬಿಯದಲ್ಲಿ ಜನರಲ್ ರೊಮ್ಮೆಲರ ಹೆಚ್ಚಿನ ಸೇನೆಯು ನಾಶಮಾಡಲ್ಪಟ್ಟಿರುತ್ತದೆ. ಪರ್ಲ್ ಹಾರ್ಬರಿನ ಮೇಲೆ ಜಾಪಾನರು ಆಕಸ್ಮಾತ್ತಾಗಿ ಧಾಳಿ ನಡಿಸಿ ಉಂಟಾದ ನೌಕಾ ನಷ್ಟದಿಂದ ಶಾಂತ ಸಾಗರದಲ್ಲಿ ಜಾಪಾನಿನ ನೌಕಾಬಲದ ಪ್ರಮಾಣವು ಹೆಚ್ಚು ಪಂತಾಯಿತು. ಫಿಲಿಪ್ಪೈನಿನಲ್ಲಿ ಜನರಲ್ ಮೆಕ್‌ಆರ್ಥರು ತೋರಿಸುತ್ತಿರುವ ವೀರತ್ವವು ಅತ್ಯಂತ ಪ್ರಶಂಸನೀಯವಾದುದು. ಜಾಪಾನಿನ ನೌಕಾಬಲವು ಬೇಗನೆ ಕುಂಠಿತವಾಗುವ ಹಾಗಿಲ್ಲ. ಮಲಯ ಮತ್ತು ಸಿಂಗಪುರದಲ್ಲಿ ಪ್ರತಿ ಇಂಚು ಸ್ಥಳಕ್ಕೂ ತೀವ್ರ ಹೋರಾಟ ನಡೆಸಲ್ಪಡುವುದು. ಅಲ್ಲಿಗೆ ಹೆಚ್ಚಿನ ಸೇನಾ ಸಹಾಯವನ್ನು ಕಳುಹಿಸಲಾಗುವುದು. ಸ್ವದೇಶ ರಕ್ಷಣೆಗಾಗಿ ಆಸ್ಟ್ರೇಲಿಯದ ಮತ್ತು ನ್ಯೂಜಿಲೆಂಡಿನ ಸೇನೆಗಳು ಹಿಂತಿರುಗಲು ಆಕ್ಷೇಪವೇನೂ ಇಲ್ಲ. ಅವುಗಳಿಗ ಅಮೆರಿಕ ಮತ್ತು ಬ್ರಿಟನುಗಳು ಹೆಚ್ಚಿನ ಸೇನಾ ಸಹಾಯ ಕಳುಹಿಸಲಿವೆ. ಶಾಂತಸಾಗರದ ಯುದ್ಧಕ್ಕೆ ಎರಡನೇ ಸ್ಥಾನವೀಯುವ ಪ್ರಶ್ನೆಯೇ ಇಲ್ಲ. ಇಂಗ್ಲಂಡಿನ ರಕ್ಷಣೆಯಲ್ಲಿ ಮತ್ತು ಜರ್ಮನಿಯ ಮೇಲೆ ಧಾಳಿ ನಡಿಸುವುದರಲ್ಲಿ ಅಮೆರಿಕದ ವಿಮಾನಗಳು ಇನ್ನು ಮುಂದೆ ಭಾಗವಹಿಸಲಿವೆ. ಅಮೆರಿಕಾದ ಸೇನೆಯು ಇಷ್ಟರಲ್ಲೇ ಇಂಗ್ಲಂಡಿಗೆ ಬಂದಿರುತ್ತದೆ. ಎಂತಹ ಬೆಲೆ ಕೊಡಬೇಕಾಗಿ ಬಂದರೂ, ಈ ಯುದ್ಧದಲ್ಲಿ ಬಿಡದೆ ಕೊನೆತನಕ ಹೋರಾಡಿಯೇ ಸಿದ್ಧವೆಂದು ಪ್ರೆಸಿಡೆಂಟ್ ರೂಸವೆಲ್ಟರು ಭರವಸ ಕೊಟ್ಟಿರುವರೆಂಬುದೇ ಚರ್ಚಿಲ್ಲರ 95 ಮಿನಿಟು ಭಾಷಣದ ಸಾರಾಂಶ.

ಯುದ್ಧ ಸಂಬಂಧವಾಗಿ ಬ್ರಿಟಿಷ್ ಮಂತ್ರಿಮಂಡಲವು ಕೆಲವುಪ್ಪಿಗೆ ತೀವ್ರ ಟೀಕೆಗೊಳಗಾದುದೆಂದರೆ ಇದೀಗ ಪ್ರಥಮ ಸಲ. ಇದಕ್ಕೆ ಮುಖ್ಯವಾಗಿ ದೂರ ಪ್ರಾಚ್ಯದ ದೊಡ್ಡ ಅಪಜಯಗಳೇ ಕಾರಣ. ವೈರಿಯನ್ನೆದುರಿಸಿ ಪರಾಜಯಗೊಳಿಸಲು ಬೇಕಾದ ಸಿದ್ಧತೆಯು ನಡದೇ ಇದೆಯೆಂದು ದೂರಪ್ರಾಚ್ಯದ ಬ್ರಿಟಿಷ ಸೇನಾಪತಿಗಳು ಹಲವು ಸಲ ಉದ್ಘೋಷಿಸಿದ್ದರು. ಆದರೆ ಅವರಲ್ಲೇನೂ ಹುರುಳಿರಲಿಲ್ಲೆಂಬುದು ಈಗ ಸ್ಪಷ್ಟವಾಗಿದೆ. ಪೂರ್ವದಲ್ಲಿ ಬೇಕಾದಷ್ಟು ಸೇನೆಯು ಇರಲೇ ಇಲ್ಲ ಎಂಬುದನ್ನೀಗ ಚರ್ಚಿಲ್ಲರೊಪ್ಪಿರುತ್ತಾರೆ. ಬಂಡವಾಳಶಾಹಿಯ ಸ್ವಾರ್ಥದ ನಿಮಿತ್ತ ಇಂಗ್ಲೆಂಡಿನಲ್ಲಿ ಬೇಕಾದ ಪರಸ್ಪರ ಪ್ರಮಾಣದಲ್ಲಿ ಮಾತ್ರ ಯುದ್ಧಸಾಮಗ್ರಿಗಳು ತಯಾರಾಗುತ್ತಿವೆ. ಆದುದರಿಂದ ಮಂತ್ರಿಮಂಡಲದಲ್ಲಿ ಬದಲಾವಣೆಯಾಗಬೇಕೆಂಬುದು ಇನ್ನೊಂದು ಟೀಕೆ. ಯುದ್ಧತಂತ್ರದಲ್ಲಿಯೂ ಬ್ರಿಟಿಷ ಸೇನಾನಾಯಕರ ಅಚಾತುರ್ಯ ಮತ್ತು ಅಜ್ಞಾನವನ್ನು ಪಾರ್ಲಿಮೆಂಟ್ ಸದಸ್ಯರು ಕೆಲವರು ಖಂಡಿಸಿದರು. ರಸ್ಯವು ಅತಿ ದುರ್ಬಲವಾಗಿದ್ದು ಬೇಗನೆ ಗೆಲ್ಲಲ್ಪಡುವುದೆಂಬ ಬ್ರಿಟಿಷ್ ಸೇನಾನಿಗಳ ತಪ್ಪು ಭಾವನೆಯೇ, ಇನ್ನೊಂದು ರಣರಂಗವನ್ನು ತೆರೆಯುವರ ಬ್ರಿಟನು ಹಿಂಜರಿಯಲು ಕಾರಣವಾಯಿತು. ಹಿಂದೂದೇಶದ ಮತ್ತು ಇತರ ಕೊಲೊನಿಗಳ ಕುರಿತಾದ ಬ್ರಿಟಿಷ್ ಸರಕಾರದ ಧೋರಣೆಯು ಕಟುವಾಗಿ ಟೀಕಿಸಲ್ಪಟ್ಟಿತು. ಆದರೆ ಚರ್ಚಿಲ್ಲರು ಈ ಟೀಕೆಗಳಿಗೆಲ್ಲಾ ಸಮರ್ಪಕ ಉತ್ತರ ಕೊಡುವಷ್ಟರ ಸಹನೆಯುಳ್ಳವರಿರಲಿಲ್ಲ. ಅವರ ಸಹ ಮಂತ್ರಿಗಳ ಕುರಿತಾದ ಟೀಕೆಯ ಕುರಿತವರು ಅದೇಕೋ ಅಸಹಿಷ್ಣುತೆ ತೋರಿಸಿರುವರು. ತಪ್ಪುಗಳೇನಾದರೂ ಆಗಿದ್ದರೆ ಅದರ ಜವಾಬ್ದಾರಿಯನ್ನೆಲ್ಲಾ ತಾನೇ ತೆಗೆದುಕೊಂಡಿರುವರು. ಹೆಸ್ ಪ್ರಕರಣದ ರಹಸ್ಯವನ್ನು ಈಗ ಬೆಳಕಿಗೆತರಲು ಕಾರಣವೇನೋ ತಿಳಿಯದು. 1940ನೇ ಜುಲ್ಯಾಯಲ್ಲಿ ಫ್ರಾನ್ಸು ಪತನ ಹೊಂದಿ ಬ್ರಿಟಿಷ್ ಸಾಮ್ರಾಜ್ಯವು ಬಹಳ ದುರ್ಬಲವಾಗಿದ್ದಾಗ ಸುಮ್ಮನೆ ಕೂತ ಜಾಪಾನು, ಬ್ರಿಟನಿಗೆ ಅಮೆರಿಕವು ಸಹಾಯ ಮಾಡಲು ಮುಂದಾಗಿ ಪರಿಸ್ಥಿತಿಯು ಸುಧಾರಿತವಾಗುವಾಗ ಯುದ್ಧಮಾಡುವುದೆಂದು ಬ್ರಿಟಿಷ್ ಸರಕಾರವು ನಿರೀಕ್ಷಿಸಲಿಲ್ಲ. ಆದುದರಿಂದಲೇ ಮಧ್ಯಪೂರ್ವದಲ್ಲದು ದೊಡ್ಡ ಯುದ್ಧಕ್ಕೆ ಕೈಹಾಕಿತೆಂಬುದನ್ನು ಚರ್ಚಿಲ್ಲರೊಪ್ಪಿರುತ್ತಾರೆ. ಆರಂಭದಲ್ಲೀಗ ಜಾಪಾನು ವಿಜಯಗಳನ್ನು ಪಡೆದರೂ ಕ್ರಮಶ ಅಮೆರಿಕ ಮತ್ತು ಇಂಗ್ಲೆಂಡುಗಳೊಂದುಗೂಡಿ ಅದನ್ನು ಜಯಶೀಲವಾಗಿ ಪ್ರತಿಭಟಿಸಲು ಸಾಧ್ಯವಾಗುವುದೆಂಬ ಭರವಸೆಯನ್ನು ಚರ್ಚಿಲ್ಲರು ಸೂಚಿಸಿರುವರು. ಆದರೆ ಜಾಪಾನು ಅಷ್ಟರಲ್ಲಿ ವಶಮಾಡಿಕೊಂಡು ಭದ್ರಗೊಳಿಸುವ ಹಲವು ಪ್ರಾಮುಖ್ಯ ದ್ವೀಪಗಳನ್ನು ಪುನಃ ಗೆಲ್ಲುವುದೊಂದು ದೊಡ್ಡ ಸಮಸ್ಯೆಯಾಗಿ ನಿಲ್ಲದಿರಲಾರದು. ಆಸ್ಟ್ರೇಲಿಯ ಮತ್ತು ಹಿಂದೂದೇಶದಿಂದ ಜಾಪಾನನ್ನು ಪ್ರತಿಭಟಿಸುವ ಪ್ರಯತ್ನ ನಡೆಯುವುದೆಂದು ಕೂಡಾ ಚರ್ಚಿಲ್ಲರು ಹೇಳಿರುವರು. ಚರ್ಚಿಲ್ಲರು ತನ್ನ ಮನೋವೃತ್ತಿಯನ್ನು ಬದಲಾಯಿಸಿ ಹಿಂದುದೇಶ ಮತ್ತು ಬರ್ಮಗಳಿಗೆ ಸ್ವಾತಂತ್ರ್ಯವೀಯಲು ಸಿದ್ಧರಾದರೆ ಮಾತ್ರ ಜನತೆಯು ಈ ಯುದ್ಧದಲ್ಲಿ ಉತ್ಸಾಹ ತೋರಿಸಿ ಜಾಪಾನರನ್ನೆದುರಿಸಲು ಮುಂದಾಗಬಹುದು. ಇಲ್ಲವಾದರೆ ಅವುಗಳ ಪಾಡು ಕೂಡಾ ಮಲಯದಂತೆಯೇ ಆಗಬಹುದು. ಕೇವಲ ಕೆಲಮಂದಿ ಸೈನಿಕರು ಮಾತ್ರ ಹೋರಾಟ ನಡಿಸಿ ಸಂಖ್ಯಾಬಲದಲ್ಲಿ ಅತಿ ಹೆಚ್ಚಾಗಿರುವ ಜಾಪಾನರನ್ನು ಜೈಸಲಾಗದೆ ಹಿಂದೆ ಸರಿಯಬೇಕಾಗುವುದು. ಹಿಂದುಸ್ಥಾನದಲ್ಲಿ ಹೆಚ್ಚಿನ ಸೇನೆಯನ್ನು ಸಿದ್ಧಪಡಿಸಿ ಉಪಯೋಗಿಸುವ ಗೊಡವೆಗೇನೇ ಬ್ರಿಟನು ಹೋಗಿಲ್ಲೆಂದು ಮಿ. ಅಟ್ಲೆಯವರು ಪಾರ್ಲಮೆಂಟಿನಲ್ಲಿ ನಡೆದ ಚರ್ಚೆಗೆ ಉತ್ತರವೀಯುವಾಗ ಒಪ್ಪಿರುವರು. ಬ್ರಿಟಿಷ್ ಸರಕಾರದ ಈಗಣ ಭಾವನಾಕೋಣವು ಬದಲಾಗದೆ ಅವರಿಗೆ ಬರ್ಮ ಮತ್ತು ಹಿಂದುದೇಶಗಳ ಜನಸಾಮಾನ್ಯರ ಉತ್ಸಾಹಪರ ಬೆಂಬಲ ದೊರೆಯಲಾರದು.

★ ಸಿಂಗಪುರವನ್ನಾವರಿಸಲು ಜಾಪಾನರ ಯತ್ನ ★

ಚೈನದಲ್ಲಿ ಜಾಪಾನರಿಗೆ ದೊಡ್ಡ ಅಪಜಯ

ಸಿಂಗಪುರದ ಯುದ್ಧ.

ಸಿಂಗಪುರವನ್ನು ಸುತ್ತಲಿಂದಲೂ ಆವರಿಸಿ ಗೆಲ್ಲಲು ಜಪಾನು ಪ್ರಯತ್ನ ನಡಿಸುತ್ತಿರುವುದು. ಹಾಂಕಾಂಗಿನಷ್ಟು ಸುಲಭವಾಗಿ ಸಿಂಗಪುರವನ್ನು ವಶಪಡಿಸಿಕೊಳ್ಳಲು ಜಾಪಾನರಿಗೆ ಸಾಧ್ಯವಾಗಲಾರದು. ಸಿಂಗಪುರದವರ ಕುರಿತು ಸಹಾನುಭೂತಿ ತೋರಿಸಿ ಬ್ರಿಟಿಷ್ ಚಕ್ರವರ್ತಿಗಳು ಸಂದೇಶ ಕಳುಹಿಸಿರುವರು. ಸಿಂಗಪುರದ ಮೇಲೆ ಜಾಪಾನರು ಎಡೆಬಿಡದೆ ಪ್ರಬಲ ವಿಮಾನ ಧಾಳಿ ನಡೆಸುತ್ತಿರುವರು. ಜಾಪಾನರನ್ನೆದುರಿಸಲು ಬೇಕಾದ ಸಿದ್ಧತೆಯು ಸಿಂಗಪುರದಲ್ಲಿ ನಡಿಸಲ್ಪಡುತ್ತಿದೆ. ಅಲ್ಲಿಗೆ ಶೀಘ್ರವಾಗಿ ಹೆಚ್ಚಿನ ಸಹಾಯ ಕಳುಹಿಸುವ ಯತ್ನ ನಡೆದಿದೆ. ಸಿಂಗಪುರವನ್ನು ಮಲಯ ದ್ವೀಪಕ್ಕೆ ಜೋಡಿಸುವ ಸೇತುವೆಯನ್ನು ಸ್ಫೋಟಗೊಳಿಸಲಾಗಿದೆ. ಎದುರಿನಿಂದ ಸಿಂಗಪುರದ ಮೇಲೆ ಧಾಳಿಯಿಡಲು ಜಾಪಾನರಿಗೆ ಸಾಧ್ಯವಾಗಲಾರದು. ಆದುದರಿಂದ ಅದನ್ನವರು ಕ್ರಮೇಣ ಆವರಿಸಿ ಗೆಲ್ಲಲೆತ್ನಿಸಬಹುದೆಂದು ನಂಬಲಾಗಿದೆ. ಸಿಂಗಪುರದ 200ಚದರ ಮೈಲು ಪ್ರದೇಶದಲ್ಲಿ ಎಷ್ಟು ಸೇನೆ ಇರುವುದೆಂದು ಹೇಳಲು ಸಾಧ್ಯವಿಲ್ಲ. ಮಲಯ ಸೇನೆಯನ್ನೆಲ್ಲಾ ಅಲ್ಲಿಗೊಯ್ಯಲಾಗಿದೆ. ಸಿಂಗಪುರವನ್ನು ಸುತ್ತಲಿಂದಲೂ ಆವರಿಸುವ ಪ್ರಯತ್ನವನ್ನು ಇಷ್ಟರಲ್ಲೇ ಜಾಪಾನರು ನಡಿಸಿರುತ್ತಾರೆ. ಸಿಂಗಪುರದಲ್ಲಿರುವ ಸುಮಾರು ಒಂದು ಮಿಲ್ಯ ಜನರಿಗೆ ಮತ್ತು ಸೈನಿಕರಿಗೆ ಬೇಕಷ್ಟು ನೀರು ಮತ್ತು ಆಹಾರ ದೊರೆಯುವುದು ಕಷ್ಟವಾಗಬಹುದು. ಮಾಲ್ಟ ಮತ್ತು ಪರ್ಲ್ ಹಾರ್ಬರುಗಳಷ್ಟೇ ಅಲ್ಲವಾದರೂ ಅವುಗಳ ನಂತರ ಎರಡನೇ ಸ್ಥಾನವನ್ನು ಸಿಂಗಪುರವು ಪಡೆಯುತ್ತದೆ. ಹಾಂಕಾಂಗಿಗಿಂತ ಎಷ್ಟೋ ಪ್ರಾಮುಖ್ಯವಾದುದು. ಬ್ರಿಟಿಷ್ ಸಾಮ್ರಾಜ್ಯದ ಅತ್ಯಂತ ಪ್ರಾಮುಖ್ಯ ವ್ಯಾಪಾರ ದಸ್ತುಗಳನ್ನು ಕಾಪಾಡುವ ಜಲಕೋಟೆಯದು. 250 ಮಿಲ್ಯ ಜನರುಗಳುಳ್ಳ ಸಾಮ್ರಾಜ್ಯ ವ್ಯಾಪಾರದ ಕೈಕೀಲಿ. ಆದುದರಿಂದಲೇ ಬ್ರಿಟನು ಅದನ್ನು ತನ್ನ ಪೂರ್ವದ ದುರ್ಭೇದ್ಯ ಜಲ ಕೋಟೆಯನ್ನಾಗಿ ಮಾಡಲು ಪ್ರಯತ್ನಿಸಿರುವುದು. ಅದರ ನೌಕಾನಿಲಯವು ಅತಿ ದೊಡ್ಡದಾಗಿ ಆತ್ಯಾಧುನಿಕ ಅನುಕೂಲತೆಯುಳ್ಳದಿರುವುದು. ಲೋಕದ ಅತಿ ದೊಡ್ಡ ನೌಕಾ ಪಡೆಯನ್ನಲ್ಲಿ ಇರಿಸಲು ಸಾಧ್ಯವಿದೆ. ಆತ್ಯಾಧುನಿಕ ಯುದ್ಧ ಹಡಗಗಳನ್ನಲ್ಲಿ ರಿಪೇರ್ ಮಾಡಿ ಸರಿಗೊಳಿಸುವ ಸಲಕರಣೆಗಳಿರುತ್ತವೆ. ಅದನ್ನು ಸುಭದ್ರವಾಗಿರಿಸಲು ಬೇಕಾದ ಏರ್ಪಾಡನ್ನೆಲ್ಲಾ ಬ್ರಿಟನು ಮೊದಲೇ ಮಾಡಿರುತ್ತದೆ. ಆದುದರಿಂದ ಅದನ್ನು ಗೆಲ್ಲುವುದು ಸುಲಭ ಸಾಧ್ಯವಲ್ಲ. ಸಿಂಗಪುರದ ಯುದ್ಧವು ಅತ್ಯಂತ ಸಂದಿಗ್ಧವಾಗಿದ್ದು ಜಾಪಾನಿನ ಅದೃಷ್ಟವು ಮುಖ್ಯವಾಗಿ ಅದರ ಮೇಲೆ ಹೊಂದಿಕೊಂಡಿರುವುದು. ಇಲ್ಲವಾದರೆ ಜಾಪಾನು ಅದನ್ನು ಹಾಗೆಯೇ ಹಿಂದೆಬಿಟ್ಟು ಮುಂದೊತ್ತಲು ಪ್ರಯತ್ನಿಸಬೇಕು. ಅದೇನು ಮಾಡಲಿರುವುದೋ ನೋಡಲಿದೆ.

ಹಿಟ್ಲರರ ಭಾಷಣ.

ಜರ್ಮನಿಯಲ್ಲಿ ಹಿಟ್ಲರರ ಆಳ್ವಿಕೆಯು ಸ್ಥಾಪಿತವಾಗಿ ಕಳೆದ ಜನವರಿ ತಾ. 30ಕ್ಕೆ 9 ವರ್ಷವಾಯಿತು. ಆ ಸಂಬಂಧವಾದ ವಾರ್ಷಿಕೋತ್ಸವವನ್ನು ಆಚರಿಸುವಾಗ ಹಿಟ್ಲರರೊಂದು ಭಾಷಣವಿತ್ತು, ದೀರ್ಘ ಯುದ್ಧಕ್ಕಾಗಿ ಜರ್ಮನರು ಸಿದ್ಧರಿರಬೇಕು ರಷ್ಯದ ಅಪಜಯಕ್ಕೆ ತೀವ್ರ ಚಳಿಗಾಲವೇ ಕಾರಣ. ಚಳಿಗಾಲ ಮುಗಿದೊಡನೆಯೇ ರಷ್ಯದ ಮೇಲೆ ಪುನಃ ಪ್ರಚಂಡ ಧಾಳಿ ನಡಿಸಲ್ಪಡುವುದು. ಸಬ್‌ಮೆರೀನ್ ಯುದ್ಧವನ್ನು ಹೆಚ್ಚಿಸಲಾಗುವುದೆಂದು ಹೇಳಿರುವರು. ಈ ಯುದ್ಧಕ್ಕೆ ಮೂಲ ಕಾರಣ ಬ್ರಿಟನು. ಯುರೋಪನ್ನು ವಿಭಾಗಿಸುವ ಕುತಂತ್ರವನ್ನದು ನಡಿಸಿ ತನ್ನ ಸ್ವಾರ್ಥಸಾಧನೆಗಾಗಿ ಈ ಯುದ್ಧ ಹೂಡಿರುತ್ತದೆ. ಬ್ರಿಟಿಷರು ಈಗಿನ ದೊಡ್ಡವರು. ಜರ್ಮನಿಯು ದೊಡ್ಡ ಸಾಮ್ರಾಜ್ಯವಾಗಿದ್ದಾಗ ಬ್ರಿಟನು ಚಿಕ್ಕ ಹಸುರು ದ್ವೀಪ ಮಾತ್ರವಾಗಿತ್ತು. ಕಳೆದಯುದ್ಧದಲ್ಲಿ ಅಪಜಯವಾಗಲು ಜರ್ಮನರೇ ಕಾರಣ. ತಾನು ಜೀವಂತವಿರುವನಕ 1918ರ ಇತಿಹಾಸವು ಪುನರಾವರ್ತಿತವಾಗಲಾರದು ಇಡೀ ಜರ್ಮನ್ ರಾಷ್ಟ್ರವು ಈಗ ಒಂದಾಗಿದೆ ನಾಝಿ ಪಕ್ಷ ಮತ್ತು ಸೇನೆಗಳೊಳಗೇನೂ ವೈಮನಸ್ಯವಿಲ್ಲ. ಬ್ರಿಟನಿನೊಡನೆ ಸಂಧಾನಮಾಡಿಕೊಳ್ಳುವ ತನ್ನ ಪ್ರಯತ್ನವೆಲ್ಲ ನಿಷ್ಫಲವಾಗಿದೆ. ತಮಗೆ ಇಂಗ್ಲೆಂಡು ಮತ್ತು ಅಮೇರಿಕಗಳಿಂದೇನೂ ಬೇಕಾಗಿಲ್ಲ. ಕಚ್ಚಾಮಾಲುಗಳ ಕೊರತೆ ಇರುವ ಜರ್ಮನಿ, ಇಟಲಿ ಮತ್ತು ಜಪಾನುಗಳೀಗ ಒಂದಾಗಿ ಯುದ್ಧದಲ್ಲಿ ನಿರತವಾಗಿರುತ್ತವೆ. ಸೋವಿಯೆಟ್ ಸೇನೆಯಲ್ಲ, ರಷ್ಯದ ತೀವ್ರ ಚಳಿಯೇ ಜರ್ಮನ್ ಸೇನೆಯ ಅಪಜಯಕ್ಕೆ ಮುಖ್ಯ ಕಾರಣ. ಚಳಿಗಾಲದ 1 ತಿಂಗಳು ದಾಟಿದ ಮೇಲೆ ಜರ್ಮನ್ ಸೇನೆಯು ತನ್ನ ಪ್ರಚಂಡ ಧಾಳಿಯನ್ನು ಮುನ್ನಡೆಸುವುದು. ಜರ್ಮನ್ ಸೇನೆ ಮತ್ತು ವಿಮಾನ ಪಡೆಯಷ್ಟು ಬಲವಾದುದು ಲೋಕದಲ್ಲೇ ಇಲ್ಲ. ಹೋರಾಡಿ ಜಯಹೊಂದುವ ಹೊರತು ಇನ್ನಾವ ದಾರಿಯೂ ಜರ್ಮನಿಗೀಗ ಉಳಿದಿಲ್ಲ. ಅದು ಕಷ್ಟವಾಗಬಹುದು; ಅಥವಾ ಕಠಿಣವಾಗಬಹುದು. ಯುದ್ಧವು ಈ ವರ್ಷದಲ್ಲಾದರೂ ಕೊನೆಗೊಂಡುವುದೋ ಎಂದು ಹೇಳಲು ತನ್ನಿಂದ ಸಾಧ್ಯವಿಲ್ಲ. ಎಲ್ಲೆಲ್ಲಿ ವೈರಿಯು ಜರ್ಮನಿಯನ್ನೆದುರಿಸುವನೋ ಅಲ್ಲಲ್ಲಿ ಆತನನ್ನು ಜೈಸಲಾಗುವುದೆಂಬುದರಲ್ಲಿ ತನಗೆ ಸಂದೇಹವೇ ಇಲ್ಲ. ಜರ್ಮನಿಯು ಈಗ ಯು. ಬೋಟುಗಳನ್ನು ಪ್ರಚಂಡವಾಗಿ ಹೆಚ್ಚಿಸಿರುತ್ತದೆ ಎಲ್ಲಾ ಸಮುದ್ರಗಳಲ್ಲಿಯೂ ಅವು ವೈರಿ ಹಡಗಗಳನ್ನು ಮುಳುಗಿಸಲೆತ್ನ ನಡಿಸಲಿವೆ. ಜರ್ಮನ್ ಕೆಲಸಗಾರರು ಹೆಚ್ಚೆಚ್ಚು ಮದ್ದು ಗುಂಡುಗಳನ್ನು ತಯಾರಿಸಬೇಕು. ಈ ಯುದ್ಧವು ಇಡೀ ಯುರೋಪ್ ಖಂಡಕ್ಕಾಗಿ ಮತ್ತು ಮಾನವಕೋಟಿಗಾಗಿ ನಡಿಸಲ್ಪಡುತ್ತಿದೆ. ಆದರಲ್ಲಿ ಜರ್ಮನಿಯ ಜನತೆಯು ತಕ್ಕ ಭಾಗವಹಿಸಿ ನೆರವಾಗಲು ಮುಂದಾಗಬೇಕು. ಸೈನಿಕರು ತಮ್ಮ ಕರ್ತವ್ಯವನ್ನು ಮಾಡಿಯೇ ಮಾಡುವರೆಂಬುದೇ ಹಿಟ್ಲರರ ಭಾಷಣದ ಸಾರಾಂಶ.

ಕೆಂಪು ಸೇನೆಯ ಮುನ್ನಡೆ.

ದಕ್ಷಿಣ ರಣರಂಗದಲ್ಲಿ ಸೋವಿಯೆಟ್ ಸೇನೆಯು ಮುನ್ನಡೆಯುತ್ತಿರುವುದು. ಜನವರಿ ತಾ. 31ರಲ್ಲು 24ಘಂಟೆಗಳಲ್ಲಿ 20 ಹಳ್ಳಿಗಳನ್ನದು ಗೆದ್ದಿರುವುದು. ಮೋಸ್ಕೋದ ಬಳಿಯ ಕಲಿನಿನ್ ರಣರಂಗದಲ್ಲಿ ಸೋವಿಯೆಟ್ ಸೇನೆ 10 ಹಳ್ಳಿಗಳನ್ನು ಗೆದ್ದಿರುವುದು ಮಧ್ಯ ರಣರಂಗದಲ್ಲಿ ಕಳೆದ ಮೂರು ದಿನಗಳ ಯುದ್ಧದಲ್ಲಿ 1900 ಮಂದಿ ಜರ್ಮನರು ಕೊಲ್ಲಲ್ಪಟ್ಟಿರುವರು.

ಜಪಾನರಿಗೆ ದೊಡ್ಡ ಅಪಜಯ

ದಕ್ಷಿಣ ಚೈನದಲ್ಲಿ ವೈಪೋ ಪ್ರದೇಶದಲ್ಲಿ ನಡೆದ ಏದಿನಗಳ ತೀವ್ರ ಹೋರಾಟದಲ್ಲಿ ಚೀನೀ ಸೇನೆಯು ಜಾಪಾನರನ್ನು ಸಂಪೂರ್ಣವಾಗಿ ಪರಾಜಯಗೊಳಿಸಿರುವುದು ಈಗ ಚೀನೀ ಸೇನೆಯು ಕ್ಯಾಂಟನ್ ಪಟ್ಟಣದಿಂದ 70ಮೈಲು ಮಾತ್ರ ದೂರದಲ್ಲಿದೆ ಪೊಕ್ಕೋ ಎಂಬ ಸಂದುಕಟ್ಟಿನ ಸ್ಥಳವನ್ನು ಚೀನೀಯರು ಗೆದ್ದುದರಿಂದ ಅವರಿಗೆ ಬಹಳ ಪ್ರಯೋಜನವಾಗಿದೆ. ಕ್ಯಾಂಟನ್ ಕೌಲೂನು ರೈಲ್ವೇ ರಸ್ತೆಯ ಪ್ರದೇಶದಲ್ಲೀಗ ತೀವ್ರ ಹೋರಾಟ ನಡೆಯುತ್ತಿದೆ. ಮಧ್ಯ ಚೈನದಲ್ಲಿ ನಾನ್‌ಚಾಂಗಿನ ಬಳಿ ಜಾಪಾನರು ನಡಿಸಿದ ಹಲವು ಧಾಳಿಗಳನ್ನು ಪ್ರತಿಭಟಿಸಲಾಗಿದೆ. ಇಟೆಂಗಿನ ಈಶಾನ್ಯದಲ್ಲಿಯೂ ಜಾಪಾನರು ಮುಂದೊತ್ತಲೆತ್ನಿಸಿದಾಗ ಹಿಮ್ಮೆಟ್ಟಿಸಲಾಗಿದೆ. ಉತ್ತರ ಹೊನಾನಿಯಲ್ಲಿ ಚೀನೀಯರು ಕೆಲವು ಸ್ಥಳಗಳನ್ನು ಗೆದ್ದಿರುವರು.

ಉಡುಪಿ.

ತಾ. 30-1-42ರಲ್ಲಿ [illegible] ಅಕ್ಕಿ ಮುಡಿಗೆ ರೂ 6-4-0, ಸೇರಿಗೆ 0-2-6, ಗುಜ್ಜು ರೂ 5-14-0, ಸೇರಿಗೆ 0-2-3. [illegible] 5-8-0, ಸೇರಿಗೆ 2 2-0 ವರೆಗೆ [illegible].

ಯಕ್ಷಗಾನ:- ಹರಿಜನ ಸೇವಾ ಸಂಘದ ಪರವಾಗಿ ವಕೀಲ್ ಶ್ರೀ [illegible] ಬಲ್ಲಾಳ್, ಶ್ರೀ ಎನ್. ಎಸ್. ಕಿಲ್ಲೆ ಶ್ರೀಯುತರುಗಳ [illegible] ಊರಿನ ಸುಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನ ತಾಳಮದ್ದಳೆಯೊಂದು ತಾ 31-2-42ರಲ್ಲಿ [illegible] ಎ. ಹಾಲು ವಠಾರದಲ್ಲಿ ಜರಗಿತು. ಪ್ರಸಂಗ- [illegible]. ಶ್ರೀ ಬಿ. ತಿಮ್ಮಪ್ಪ [illegible] ಹಾಡುವಿಕೆ, ಶ್ರೀ [illegible] ರಾಯರ ಮೃದಂಗ ವಾದನವೂ ಮನಮೋಹಕವಿದ್ದವು. [illegible] ಶ್ರೀ ಬಾಲಕೃಷ್ಣ ರಾಯರು ಕೌರವ, ಶ್ರೀ [illegible] ಶಂಕರ ನಾರಾಯಣ ಶಾಸ್ತ್ರಿಗಳು ಭೀಷ್ಮ, ಶ್ರೀ ಎನ್. ಎಸ್. ಕಿಲ್ಲೆಯವರು ಕೃಷ್ಣ, ಶ್ರೀ [illegible] ಸುಬ್ರಾಯ ಆಚಾರಿಗಳು ಅರ್ಜುನ, ಶ್ರೀ ಎನ್. ಆರ್. ಶಾಸ್ತ್ರಿಗಳು ಧರ್ಮರಾಯ, ಶ್ರೀ ಅಂಬ್ಲಪಾಡಿ [illegible] ದ್ರೋಣನ ಅರ್ಥ [illegible] ಶ್ರೀ ಕೃಷ್ಣನ ಅರ್ಥವೂ ಕೃಷ್ಣ-ಭೀಷ್ಮ ಸಂವಾದವೂ ಅತಿಯಾಗಿ ಜನರುಗಳಿಗೆ ಹಿಡಿಸಿತು.

The Pangal Nayak Bank Limited.

(Incorporated in India in 1920.)

Notice under Section 47 of the Indian Companies Act, 1913.

(As amended by Act XXII of 1936)

It is hereby notified that the Register of Members of the above Bank will be closed from Monday, the 23rd February 1942 to Saturday, the 14th March 1942, both days inclusive.

By order of the Board.

UDIPI, 28th January 1942 — **P. LAKSHMAN NAYAK,** *Secretary & Treasurer*

NOTICE.

Is hereby given that M/S. Y. Vyasa Rao, son of Gopalakrishnaya, land Lord, Badage Yekkar, holder of ordinary shares of the Company No. 1075, & 1077, and Ullal Santhaya Kini, son of Ullal Ganapathi Kini, Merchant Kumbla, holder of ordinary shares of the company No. 777-776, have intimated that the concerned Share-certificates are lost by them and have applied for issue of duplicate-certificates. Any person desirous of objecting to the issue of such duplicates is requested to lodge his objections by 20-2-'42.

Office of the Bank. 30—1—1942. — For the Moolky Bank, Limited, **M. R. Pursa,** *President & Manager.*

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ತಾ. 6—2—1942ರಿಂದ

'ಮಹಾತ್ಮಾ ಗಾಂಧಿ'

ಬರುವ ಚಿತ್ರ:ಡೈಮಂಡ ಕ್ವೀನ್,ಮುಸಾಫಿರ್, ಬಂಧನ್

From:- 6—2—42

'MAHATMA GANDHI'

Coming:- **Daimond Queen, Musafir, Bandan.**

S. R. Theater Limited.

The Canara Banking Corporation Ltd.

(Incorporated in British India with limited liability)

ESTED 1906.

OUR RATES OF INTEREST ON DEPOSITS

Current		1%	P. A.
Savings Bank		2½%	,,
Short-term		1¾%	,,
Fixed for 3 months		2%	,,
6	,,	2¼	,,
9	,,	2½	,,
12	,,	3	,,
24	,,	3½	,,

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೫-೨-೧೯೪೨

ಪೂರ್ವದ ಯುದ್ಧದಲ್ಲಿ ರಾಷ್ಟ್ರೀಯ ಚೀನದ ಸ್ಥಾನ.

ರಾಷ್ಟ್ರೀಯ ಚೀನವು, ಅಪ್ರತಿಮ ವೀರ ಮಾರ್ಶಲ್ ಚ್ಯಾಂಗರ ನಾಯಕತ್ವದಲ್ಲಿ ಜಾಪಾನಿನೊಡನೆ ಜೀವನ್ಮರಣ ಹೋರಾಟದಲ್ಲಿ ನಿರತವಾಗಿ ಈಗ 4 ವರ್ಷ ಸಂದು ಹೋಯಿತು. ಇಂದೀಗ ಅದು ದಕ್ಷಿಣ ಚೈನದಲ್ಲಿ ಜಪಾನರ ಮೇಲೆ ಬಿದ್ದು ಹೋರಾಡಿ ದೊಡ್ಡ ವಿಜಯಗಳನ್ನು ಪಡೆಯುತ್ತಿದೆ. ಚಾಂಗ್‌ಶಾ ಯುದ್ಧದಲ್ಲಿ ಚೀನೀಯರು ಪಡೆದ ವಿಜಯವು ಅತಿದೊಡ್ಡದು.

ರಾಷ್ಟ್ರೀಯ ಚೈನವು ಈಗ ಮಿಲ್ಯಗಟ್ಲೆ ಸೇನೆಯನ್ನು ತರಬೇತಿಮಾಡಿಕೊಂಡಿದೆ. ಅದರ ಜನಸಂಖ್ಯೆಯು ಅಪಾರವಾದುದರಿಂದ ಎಷ್ಟು ಬೇಕಾದರೂ ಸೇನೆಯನ್ನೊದಗಿಸಿಕೊಳ್ಳುವ ಅನುಕೂಲತೆಯು ಅದಕ್ಕಿದೆ. ಮಾತ್ರವಲ್ಲದೆ ವೈರಿಯೊಡನೆ ಎಡೆಬಿಡದೆ ಸುಮಾರು ೫ವರ್ಷ ಹೋರಾಡಿದ ಪರಿಪಕ್ವಯುದ್ಧಾನುಭವವೂ ಅದಕ್ಕಿರುತ್ತದೆ.

ಅತ್ಯಾಧುನಿಕ ಯುದ್ಧೋಪಕರಣ ಸಿದ್ಧತೆ ಮತ್ತು ಯುದ್ಧಾನುಭವವಿರುವ ಜಾಪಾನಿಗೆ ಇಷ್ಟು ದೀರ್ಘಕಾಲದಲ್ಲಿಯೂ ಚೈನವನ್ನು ಗೆಲ್ಲಲಸಾಧ್ಯವಾಗಲು ಕಾರಣವೇನು? ಜಪಾನ ಸೈನಿಕರು ಅಷ್ಟೇನೂ ಉತ್ತಮರಲ್ಲವೇ? ಅವರ ಯುದ್ಧವಿಧಾನದಲ್ಲೇನಾದರೂ ದೋಷವಿದೆಯೇ? ಎಂಬ ಸಂದೇಹಗಳುಂಟಾಗಿದ್ದುವು. ಮಲಯದ ಯುದ್ಧದಿಂದ, ಜಾಪಾನ ಸೈನಿಕರೆಷ್ಟು ಸಾಹಸಿಗಳು ಮತ್ತು ಯುದ್ಧ ಚತುರರೆಂಬುದೀಗ ಲೋಕವಿದಿತವಾಗುತ್ತದೆ. ಅಂತಹ ಉತ್ಕೃಷ್ಟ ಸೈನಿಕರನ್ನು ಜಯಶೀಲವಾಗಿ ಪ್ರತಿಭಟಿಸಿ ಜೈಸುವುದೆಂದರೆ ಸಾಮಾನ್ಯ ಕೆಲಸವೇನೂ ಅಲ್ಲ. ಇಂದೀಗ ಸುಮಾರು ಒಂದು ಮಿಲ್ಯ ಉತ್ಕೃಷ್ಟ ಜಾಪಾನ ಸೈನಿಕರನ್ನು ರಾಷ್ಟ್ರೀಯ ಚೈನವು, ಟೇಂಕ್ ನೊಡನಾದ ದೊಡ್ಡ ಯಂತ್ರೋಪಕರಣ ಮತ್ತು ವಿಮಾನಪಡೆಯಿಲ್ಲದೆ ಪ್ರತಿಭಟಿಸಿ ಹೋರಾಡಬೇಕಾಗಿದೆ. ಅದನ್ನದು ಇತ್ತಿತ್ತಲಾಗಿ ಬಹಳ ಜಯಶೀಲವಾಗಿ ನಡಿಸುತ್ತಿರುವುದು ಅತ್ಯಂತ ಪ್ರಶಂಸನೀಯ.

ಚೈನವು ಇಂದು ಹಲವು ರಣರಂಗಗಳಲ್ಲಿ ಜಪಾನನ್ನು ಪ್ರತಿಭಟಿಸುತ್ತಿರುವುದು ಮಾತ್ರವಲ್ಲದೆ ಬರ್ಮದ ರಕ್ಷಣೆಗಾಗಿ ಬ್ರಿಟಿಷ್ ಸರಕಾರದ ಸಹಾಯಕ್ಕೆ ಸೇನೆಯನ್ನು ಕಳುಹಿಸಿತ್ತು. ಎಷ್ಟೋ ಕಾಲ ಮುಖ್ಯವಾಗಿ ನಿಸ್ಸತ್ವವಾಗಿದ್ದ ಹಳೆಯ ಚೈನವು ಇಂದು ನವಚೈತನ್ಯ, ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸದಿಂದ ತಲೆಯೆತ್ತಿ ನಿಂತಿರುವುದು ಬಹು ಹಿತಕರವಾಗಿದೆ. ಆದುದರಿಂದ ಪೂರ್ವದ ಯುದ್ಧದಲ್ಲಿ ರಾಷ್ಟ್ರೀಯ ಚೀನವು ಪ್ರಮುಖ ಸ್ಥಾನವನ್ನು ವಹಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ.

ಆದರೆ ರಾಷ್ಟ್ರೀಯ ಚೈನಕ್ಕೆ ಹೆಚ್ಚು ಯುದ್ಧೋಪಕರಣ ಮತ್ತು [illegible] ನ್ನೊದಗಿಸುವುದು ಅಮೇರಿಕ ಮತ್ತು ಬ್ರಿಟನುಗಳ ಕರ್ತವ್ಯ. [illegible] ಜಯಗೊಳಿಸಲು [illegible] ವುದು. [illegible] ನನ್ನು ಸೋಲಿಸಲು ರಾಷ್ಟ್ರೀಯ ಚೈನಕ್ಕೆ ನೆರವಾಗುವುದು ಅತ್ಯಗತ್ಯ. ಸಿಂಗಪುರದ ಮೇಲೆ ಬರ್ಮಾ ರಸ್ತೆಯನ್ನು ರಕ್ಷಿಸುವುದು ಬ್ರಿಟನ್ ಮತ್ತು ಅಮೇರಿಕೆಗಳ ಕರ್ತವ್ಯ. ಸಾಕಷ್ಟು ಆಧುನಿಕ ಯುದ್ಧೋಪಕರಣ ಮತ್ತು ಯುದ್ಧ ವಿಮಾನಗಳ ಸಹಾಯವನ್ನು ಪಡೆದಲ್ಲಿ ರಾಷ್ಟ್ರೀಯ ಚೈನವು ಧಾಳಿಕಾರ ಜಪಾನನ್ನು ಪರಾಜಯಗೊಳಿಸಲು ಶಕ್ತವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಮಿತ್ರರಾಷ್ಟ್ರಗಳು ಚೈನವು ಸಂಪೂರ್ಣವಾಗಿ ಸ್ವತಂತ್ರವಾಗುವಂತೆ ಅದಕ್ಕೆ ಬೇಕಾದ ಸಹಾಯವನ್ನು ಹೇಗಾದರೂ ಮಾಡಿ ಒದಗಿಸಲೇ ಬೇಕು. ಇದರಿಂದ ಜಾಪಾನು ಅತಿದೊಡ್ಡ ಆಘಾತವನ್ನು ಪಡೆದು ಉತ್ಸಾಹ ಕುಂದುವಂತಾಗುವುದು.

ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರ ಭಾಷಣ.

ಜನವರಿ ತಾ. 27ರಲ್ಲಿ, ಚರ್ಚಿಲ್ಲರು ಯುದ್ಧದ ಪರಿಸ್ಥಿತಿಯನ್ನೆಲ್ಲಾ ಇದ್ದಕ್ಕಿದ್ದಂತೆ ವಿವರಿಸಿ ಪ್ರಮುಖ್ಯವಾದೊಂದು ಭಾಷಣವನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಾಡಿ, ಪಾರ್ಲಿಮೆಂಟಿನ ವಿಶ್ವಾಸದ ಅಭಿಪ್ರಾಯವನ್ನು ಕೇಳಿದರು. ದೂರ ಪ್ರಾಚ್ಯದಿಂದ ಇನ್ನೂ ಕೆಟ್ಟ ವರ್ತಮಾನ ಕೇಳುವ ಸಂಭವವಿದೆ. ಅಲ್ಲಿಯ ಪರಿಸ್ಥಿತಿಯು ಕೆಟ್ಟದಾಗಿದೆ. ಇನ್ನೂ ಕೆಟ್ಟದುಂಟಾಗಲಿದೆ. ಇಂಗ್ಲೆಂಡಿನಲ್ಲಿ ಚರ್ಚಿಲ್ ಸಂಗಡದ ಅಧಿಕಾರವನ್ನು ಹೊರಹಾಕಿ ಹಿಟ್ಲರರು ತನಗೆ ಬೇಕಾದಂತಹ ಸಂಧಿಯನ್ನು ಬ್ರಿಟನಿನ ಮೇಲೆ ಹೊರಿಸಲು ಅನುಕೂಲ ಪರಿಸ್ಥಿತಿಯನ್ನುಂಟುಮಾಡುವ ಉದ್ದೇಶದಿಂದಲೇ ಹೆರ್ ಹೆಸ್ಸರು ಇಂಗ್ಲೆಂಡಿನಲ್ಲಿ ಬಂದಿಳಿಯುವ ಸಾಹಸ ಮಾಡಿದುದು. ಪೂರ್ವದಲ್ಲಿ ಯುದ್ಧವುಂಟಾಗದಿರುವಾಗ್ಯರಸ್ಯ ಮತ್ತು ಲಿಬಿಯಗಳಿಗೆ ಹೆಚ್ಚಿನ ಯುದ್ಧಸಾಮಾಗ್ರಿ ಮತ್ತು ಸೇನೆ ಕಳುಹಿಸಿದುದು ಯುಕ್ತವಾದುದೋ ಎಂಬುದೇ ವಿಚಾರಿಸತಕ್ಕ ಪ್ರಶ್ನೆ. ಮಂತ್ರಿ ಮಂಡಲದಲ್ಲೇನಾದರೂ ದೋಷವಿದ್ದರೆ ಅದರ ಸಂಪೂರ್ಣ ಜವಾಬ್ದಾರಿ ತನ್ನದು. ಹವೆಯ ತೊಡಕಿನ ನಿಮಿತ್ತ ಸ್ಟೆಲಿನರಿಗಿತ್ತ ವಾಗ್ದಾನದಂತೆ ರಸ್ಯಕ್ಕೆ ಸಹಾಯ ಕಳುಹಿಸುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಲಿಬಿಯದಲ್ಲಿ ಜನರಲ್ ರೊಮ್ಮೆಲರ ಹೆಚ್ಚಿನ ಸೇನೆಯು ನಾಶಮಾಡಲ್ಪಟ್ಟಿರುತ್ತದೆ. ಪರ್ಲ್ ಹಾರ್ಬರಿನ ಮೇಲೆ ಜಾಪಾನರು ಅಕಸ್ಮಾತ್ತಾಗಿ ಧಾಳಿ ನಡಿಸಿ ಉಂಟಾದ ನೌಕಾ ನಷ್ಟದಿಂದ ಶಾಂತ ಸಾಗರದಲ್ಲಿ ಜಾಪಾನಿನ ನೌಕಾಬಲದ ಪ್ರಮಾಣವು ಹೆಚ್ಚುವಂತಾಯಿತು. ಫಿಲಿಪ್ಪೈನಿನಲ್ಲಿ ಜನರಲ್ ಮೆಕ್‌ಆರ್ಥರು ತೋರಿಸುತ್ತಿರುವ ವೀರತ್ವವು ಅತ್ಯಂತ ಪ್ರಶಂಸನೀಯವಿದೆ. ಜಾಪಾನಿನ ನೌಕಾಬಲವು ಬೇಗನೆ ಕುಂಠಿತವಾಗುವ ಹಾಗಿಲ್ಲ. ಮಲಯ ಮತ್ತು ಸಿಂಗಪುರದಲ್ಲಿ ಪ್ರತಿ ಇಂಚು ಸ್ಥಳಕ್ಕೂ ತೀವ್ರ ಹೋರಾಟ ನಡೆಸಲ್ಪಡುತ್ತದೆ. ಅಲ್ಲಿಗೆ ಹೆಚ್ಚಿನ ಸೇನಾ ಸಹಾಯವನ್ನು ಕಳುಹಿಸಲಾಗುವುದು. ಸ್ವದೇಶ ರಕ್ಷಣೆಗಾಗಿ ಆಸ್ಟ್ರೇಲಿಯದ ಮತ್ತು ನ್ಯೂಜಿಲೆಂಡಿನ ಸೇನೆಗಳು ಹಿಂತಿರುಗಲು ಆಕ್ಷೇಪವೇನೂ ಇಲ್ಲ. ಅವುಗಳಿಗೆ ಅಮೇರಿಕ ಮತ್ತು ಬ್ರಿಟನುಗಳು ಹೆಚ್ಚಿನ ಸೇನಾ ಸಹಾಯ ಕಳುಹಿಸಲಿವೆ. ಹಿಂದೀಸಾಗರದ ಯುದ್ಧಕ್ಕೆ ಎರಡನೇ ಸ್ಥಾನವೀಯುವ ಪ್ರಶ್ನೆಯೇ ಇಲ್ಲ. ಇಂಗ್ಲಂಡಿನ ರಕ್ಷಣೆಯಲ್ಲಿ ಮತ್ತು ಜರ್ಮನಿಯ ಮೇಲೆ ಧಾಳಿ ನಡಿಸುವುದರಲ್ಲಿ ಅಮೆರಿಕದ ವಿಮಾನಗಳು ಇನ್ನು ಮುಂದೆ ಭಾಗವಹಿಸಲಿವೆ. ಅಮೆರಿಕಾದ ಸೇನೆಯು ಇಷ್ಟರಲ್ಲೇ ಇಂಗ್ಲಂಡಿಗೆ ಬಂದಿರುತ್ತದೆ. ಎಂತಹ ಬೆಲೆ ಕೊಡಬೇಕಾಗಿ ಬಂದರೂ, ಈ ಯುದ್ಧದಲ್ಲಿ ಬಿಡದೆ ಕೊನೆತನಕ ಹೋರಾಡಿಯೇ ಸಿದ್ಧವೆಂದು ಪ್ರೆಸಿಡೆಂಟ್ ರೂಸವೆಲ್ಟರು ಭರವಸ ಕೊಟ್ಟಿರುವರೆಂಬುದೇ ಚರ್ಚಿಲ್ಲರ 115 ಮಿನಿಟು ಭಾಷಣದ ಸಾರಾಂಶ.

ಯುದ್ಧ ಸಂಬಂಧವಾಗಿ ಬ್ರಿಟಿಷ್ ಮಂತ್ರಿಮಂಡಲವು ಕೆಲವುಟ್ಟಿಗೆ ತೀವ್ರ ಟೀಕೆಗೊಳಗಾದುದೆಂದರೆ ಇದೀಗ ಪ್ರಥಮವಲ್ಲ. ಇದಕ್ಕೆ ಮುಖ್ಯವಾಗಿ ದೂರ ಪ್ರಾಚ್ಯದ ದೊಡ್ಡ ಅಪಜಯಗಳೇ ಕಾರಣ. ವೈರಿಯನ್ನೆದುರಿಸಿ ಪರಾಜಯಗೊಳಿಸಲು ಬೇಕಾದ ಸಿದ್ಧತೆಯು ನಡದೇ ಇದೆಯೆಂದು ದೂರ ಪ್ರಾಚ್ಯದ ಬ್ರಿಟಿಷ್ ಸೇನಾನಿಗಳು ಹಲವು ಸಲ ಉದ್ಘೋಷಿಸಿದ್ದರು. ಆದರೆ ಅವರಲ್ಲೇನೂ ಹುರುಳಿರಲಿಲ್ಲೆಂಬುದು ಈಗ ಸ್ಪಷ್ಟವಾಗಿದೆ. ಪೂರ್ವದಲ್ಲಿ ಬೇಕಾದಷ್ಟು ಸೇನೆಯು ಇರಲೇ ಇಲ್ಲವೆಂಬುದನ್ನೀಗ ಚರ್ಚಿಲ್ಲರೊಪ್ಪಿರುತ್ತಾರೆ. ಧಂಧವಾಳಶಾಹಿಯ ಸ್ವಾರ್ಥದ ನಿಮಿತ್ತ ಇಂಗ್ಲೆಂಡಿನಲ್ಲಿ ನೇಕಡ 75ರಷ್ಟರ ಪ್ರಮಾಣದಲ್ಲಿ ಮಾತ್ರ ಯುದ್ಧಸಾಮಗ್ರಿಗಳು ತಯಾರಾಗುತ್ತಿವೆ. ಆದುದರಿಂದ ಮಂತ್ರಿಮಂಡಲದಲ್ಲಿ ಬದಲಾವಣೆಯಾಗಬೇಕೆಂಬುದು ಇನ್ನೊಂದು ಟೀಕೆ. ಯುದ್ಧತಂತ್ರದಲ್ಲಿಯೂ ಬ್ರಿಟಿಷ್ ಸೇನಾನಾಯಕರ ಅಚಾತುರ್ಯ ಮತ್ತು ಅಜ್ಞಾನವನ್ನು ಪಾರ್ಲಿಮೆಂಟ್ ಸದಸ್ಯರು ಕೆಲವರು ಖಂಡಿಸಿದರು. ರಸ್ಯವು ಅತಿ ದುರ್ಬಲವಾಗಿದ್ದು ಬೇಗನೆ ಗೆಲ್ಲಲ್ಪಡುವುದೆಂಬ ಬ್ರಿಟಿಷ್ ಸೇನಾನಿಗಳ ತಪ್ಪು ಭಾವನೆಯೇ, ಇನ್ನೊಂದು ರಣರಂಗವನ್ನು ತೆರೆಯುವರೆ ಬ್ರಿಟನು ಹಿಂಜರಿಯಲು ಕಾರಣವಾಯಿತು. ಹಿಂದೂದೇಶದ ಮತ್ತು ಇತರ ಕೊಲೊನಿಗಳ ಕುರಿತಾದ ಬ್ರಿಟಿಷ್ ಸರಕಾರದ ಧೋರಣೆಯು ಕಠಿಣ ಟೀಕಿಸಲ್ಪಟ್ಟಿತು. ಆದರೆ ಚರ್ಚಿಲ್ಲರು ಈ ಟೀಕೆಗಳಿಗೆಲ್ಲಾ ಸಮರ್ಪಕ ಉತ್ತರ ಕೊಡುವಷ್ಟರ ಸಹನೆಯುಳ್ಳವರಿರಲಿಲ್ಲ. ಅವರ ಸಹ ಮಂತ್ರಿಗಳ ಕುರಿತಾದ ಟೀಕೆಯ ಕುರಿತವರು ಅದೇಕೋ ಅಸಹಿಷ್ಣುತೆ ತೋರಿಸಿರುವರು. ತಪ್ಪುಗಳೇನಾದರೂ ಆಗಿದ್ದರೆ ಅದರ ಜವಾಬ್ದಾರಿಯನ್ನೆಲ್ಲಾ ತಾನೇ ತೆಗೆದುಕೊಂಡಿರುವರು. ಹೆಸ್ ಪ್ರಕರಣದ ರಹಸ್ಯವನ್ನು ಈಗ ಬೆಳಕಿಗೆತರಲು ಕಾರಣವೇನೋ ತಿಳಿಯದು. 1940 ನೇ ಜುಲ್ಯಾಯಲ್ಲಿ ಫ್ರಾನ್ಸು ಪತನ ಹೊಂದಿ ಬ್ರಿಟಿಷ್ ಸಾಮ್ರಾಜ್ಯವು ಬಹಳ ದುರ್ಬಲವಾಗಿದ್ದಾಗ ಸುಮ್ಮನೆ ಕೂತ ಜಾಪಾನು, ಬ್ರಿಟನಿಗೆ ಅಮೇರಿಕವು ಸಹಾಯ ಮಾಡಲು ಮುಂದಾಗಿ ಪರಿಸ್ಥಿತಿಯು ಸುಧಾರಿತವಾಗುವಾಗ ಯುದ್ಧಮಾಡುವುದೆಂದು ಬ್ರಿಟಿಷ್ ಸರಕಾರವು ನಿರೀಕ್ಷಿಸಲಿಲ್ಲ. ಆದುದರಿಂದಲೇ ಮಧ್ಯಪೂರ್ವದಲ್ಲದು ದೊಡ್ಡ ಯುದ್ಧಕ್ಕೆ ಕೈಹಾಕಿತೆಂಬುದನ್ನು ಚರ್ಚಿಲ್ಲರೊಪ್ಪಿರುತ್ತಾರೆ. ಆರಂಭದಲ್ಲೀಗ ಜಾಪಾನು ವಿಜಯಗಳನ್ನು ಪಡೆದರೂ ಕ್ರಮಶ ಅಮೆರಿಕ ಮತ್ತು ಇಂಗ್ಲೆಂಡುಗಳೊಂದುಗೂಡಿ ಅದನ್ನು ಜಯಶೀಲವಾಗಿ ಪ್ರತಿಭಟಿಸಲು ಸಾಧ್ಯವಾಗುವುದೆಂಬ ಭರವಸೆಯನ್ನು ಚರ್ಚಿಲ್ಲರು ಸೂಚಿಸಿರುವರು. ಆದರೆ ಜಾಪಾನು ಆಸ್ಪದಲ್ಲ ವಶಮಾಡಿಕೊಂಡು ಭದ್ರಗೊಳಿಸುವ ಹಲವು ಪ್ರಾಮುಖ್ಯ ದ್ವೀಪಗಳನ್ನು ಪುನಃ ಗೆಲ್ಲುವುದೊಂದು ದೊಡ್ಡ ಸಮಸ್ಯೆಯಾಗಿ ನಿಲ್ಲದಿರಲಾರದು. ಆಸ್ಟ್ರೇಲಿಯ ಮತ್ತು ಹಿಂದೂದೇಶದಿಂದ ಜಾಪಾನನ್ನು ಪ್ರತಿಭಟಿಸುವ ಪ್ರಯತ್ನ ನಡೆಯುವುದೆಂದು ಕೂಡಾ ಚರ್ಚಿಲ್ಲರು ಹೇಳಿರುವರು. ಚರ್ಚಿಲ್ಲರು ತನ್ನ ಮನೋವೃತ್ತಿಯನ್ನು ಬದಲಾಯಿಸಿ ಹಿಂದುದೇಶ ಮತ್ತು ಬರ್ಮಗಳಿಗೆ ಸ್ವಾತಂತ್ರ್ಯವೀಯಲು ಸಿದ್ಧರಾದರೆ ಮಾತ್ರ ಜನತೆಯು ಈ ಯುದ್ಧದಲ್ಲಿ ಉತ್ಸಾಹ ತೋರಿಸಿ ಜಾಪಾನರನ್ನೆದುರಿಸಲು ಮುಂದಾಗಬಹುದು. ಇಲ್ಲವಾದರೆ ಅವುಗಳ ಪಾಡು ಕೂಡಾ ಮಲಯದಂತೆಯೇ ಆಗಬಹುದು. ಕೇವಲ ಕೆಲಮಂದಿ ಸೈನಿಕರು ಮಾತ್ರ ಹೋರಾಟ ನಡಿಸಿ ಸಂಖ್ಯಾಬಲದಲ್ಲಿ ಅತಿ ಹೆಚ್ಚಾಗಿರುವ ಜಾಪಾನರನ್ನು ಜೈಸಲಾಗದೆ ಹಿಂಪೆ ಸರಿಯಬೇಕಾಗುವುದು. ಹಿಂದುಸ್ಥಾನದಲ್ಲಿ ಹೆಚ್ಚಿನ ಸೇನೆಯನ್ನು ಸಿದ್ಧಪಡಿಸಿ ಉಪಯೋಗಿಸುವ ಗೊಡವೆಗೇನೇ ಬ್ರಿಟನು ಹೋಗಿಲ್ಲೆಂದು ಮಿ. ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗೆ ಉತ್ತರವೀಯುವಾಗ ಒಪ್ಪಿರುವರು. ಬ್ರಿಟಿಷ್ ಸರಕಾರದ ಈಗಣ ಭಾವನಾಕೋಣವು ಬದಲಾಗದೆ ಅವರಿಗೆ ಬರ್ಮ ಮತ್ತು ಹಿಂದುದೇಶಗಳ ಜನಸಾಮಾನ್ಯರ ಉತ್ಸಾಹಪರ ಬೆಂಬಲ ದೊರೆಯಲಾರದು.

★ ಸಿಂಗಪುರವನ್ನಾವರಿಸಲು ಜಾಪಾನರ ಯತ್ನ ★

ಚೈನದಲ್ಲಿ ಜಾಪಾನರಿಗೆ ದೊಡ್ಡ ಅಪಜಯ

ಸಿಂಗಪುರದ ಯುದ್ಧ.

ಸಿಂಗಪುರವನ್ನು ಸುತ್ತಲಿಂದಲೂ ಆವರಿಸಿ ಗೆಲ್ಲಲು ಜಾಪಾನು ಪ್ರಯತ್ನ ನಡಿಸು

ಹಿಟ್ಲರರ ಭಾಷಣ.

ಜರ್ಮನಿಯಲ್ಲಿ ಹಿಟ್ಲರರ ಆಳ್ವಿಕೆಯು ಸ್ಥಾಪಿತವಾಗಿ ಕಳೆದ ಜನವರಿ ತಾ. 30ಕ್ಕೆ 9 ವರ್ಷವಾಯಿತು. ಆ ಸಂಬಂಧವಾದ ವಾರ್ಷಿಕೋತ್ಸವವನ್ನು ಆಚರಿಸುವಾಗ ಹಿಟ್ಲರರೊಂದು ಭಾಷಣವಿತ್ತು, ದೀರ್ಘ ಯುದ್ಧಕ್ಕಾಗಿ ಜರ್ಮನರು ಸಿದ್ಧರಿರಬೇಕು. ರಸ್ಯದ ಅಪಜಯಕ್ಕೆ ತೀವ್ರ ಚಳಿಗಾಲವೇ ಕಾರಣ. ಚಳಿಗಾಲ ಮುಗಿದೊಡನೆಯೇ ರಸ್ಯದ ಮೇಲೆ ಪುನಃ ಪ್ರಚಂಡ ಧಾಳಿ ನಡಿಸಲ್ಪಡುವುದು. ಸಬ್‌ಮೆರೀನ್ ಯುದ್ಧವನ್ನು ಹೆಚ್ಚಿಸಲಾಗುವುದೆಂದು ಹೇಳಿರುವರು. ಈ ಯುದ್ಧಕ್ಕೆ ಮೂಲ ಕಾರಣ ಬ್ರಿಟನು. ಯುರೋಪನ್ನು ವಿಭಾಗಿಸುವ ಕುತಂತ್ರವನ್ನು ನಡಿಸಿ ತನ್ನ ಸ್ವಾರ್ಥಸಾಧನೆಗಾಗಿ ಈ ಯುದ್ಧ ಹೂಡಿರುತ್ತದೆ. ಬ್ರಿಟನರು ಈಗಿನ ದೊಡ್ಡವರು. ಜರ್ಮನಿಯು ದೊಡ್ಡ ಸಾಮ್ರಾಜ್ಯವಾಗಿದ್ದಾಗ ಬ್ರಿಟನು ಚಿಕ್ಕ ಹಸುರು ದ್ವೀಪ ಮಾತ್ರವಾಗಿತ್ತು. ಕಳೆದಯುದ್ಧದಲ್ಲಿ ಅಪಜಯವಾಗಲು ಜರ್ಮನರೇ ಕಾರಣ. ತಾನು ಜೀವಂತವಿರುವನಕ 1918ರ ಇತಿಹಾಸವು ಪುನರಾವರ್ತಿತವಾಗಲಾರದು ಇದೀ ಜರ್ಮನ್ ರಾಷ್ಟ್ರವು ಈಗ ಒಂದಾಗಿದೆ ನಾಜಿ ಪಕ್ಷ ಮತ್ತು ನೇ ಸ ನ ಗ ಳೂ ಒ ಗ್ಗೇ ನ ವೆ... ನ್ಯೆವನ್ನುವಿಲ್ಲ. ಬ್ರಿಟನಿನೊಡನೆ ಸಂಧಾನಮಾಡಿಕೊಳ್ಳುವ ತನ್ನ ಪ್ರಯತ್ನವೆಲ್ಲಾ ನಿಷ್ಫಲವಾಗಿದೆ. ತನಗೆ ಇಂಗ್ಲೆಂಡು ಮತ್ತು ಅಮೇರಿಕಗಳಿಂದೇನೂ ಬೇಕಾಗಿಲ್ಲ. ಕಚ್ಚಾಮಾಲುಗಳ ಕೊರತೆ ಇರುವ ಜರ್ಮನಿ, ಇಟೆಲಿ ಮತ್ತು ಜಾಪಾನುಗಳೀಗ ಒಂದಾಗಿ ಯುದ್ಧದಲ್ಲಿ ನಿರತವಾಗಿರುತ್ತವೆ. ಸೋವಿಯೆಟ್ ಸೇನೆಯಲ್ಲ, ರಸ್ಯದ ತೀವ್ರ ಚಳಿಯೇ ಜರ್ಮನ್ ಸೇನೆಯ ಅಪಜಯಕ್ಕೆ ಮುಖ್ಯ ಕಾರಣ. ಚಳಿಗಾಲದ 1 ತಿಂಗಳು ದಾಟಿದ ಮೇಲೆ ಜರ್ಮನ್ ಸೇನೆಯು ತನ್ನ ಪ್ರಚಂಡ ಧಾಳಿಯನ್ನು ಮುನ್ನಡೆಸುವುದು. ಜರ್ಮನ್ ಸೇನೆ ಮತ್ತು ವಿಮಾನ ಪಡೆಯಷ್ಟು ಬಲವಾದುದು ಲೋಕದಲ್ಲೇ ಇಲ್ಲ. ಹೋರಾಡಿ ಜಯಹೊಂದುವ ಹೊರತು ಇನ್ನಾವ ದಾರಿಯೂ ಜರ್ಮನಿಗೀಗ ಉಳಿದಿಲ್ಲ. ಅದು ಕಷ್ಟವಾಗಬಹುದು; ಅಥವಾ ಕಠಿಣವಾಗಬಹುದು. ಯುದ್ಧವು ಈ ವರ್ಷದಲ್ಲಾದರೂ ಕೊನೆಗೊಂದುವುದೋ ಎಂದು ಹೇಳಲು ತನ್ನಿಂದ ಸಾಧ್ಯವಿಲ್ಲ. ಎಲ್ಲೆಲ್ಲಿ ವೈರಿಯು ಜರ್ಮನಿಯನ್ನೆದುರಿಸುವನೋ ಅಲ್ಲಲ್ಲಿ ಆತನನ್ನು ಜೈಸಲಾಗುವುದೆಂಬುದರಲ್ಲಿ ತನಗೆ ಸಂದೇಹವೇ ಇಲ್ಲ. ಜರ್ಮನಿಯು ಈಗ ಯು. ಬೋಟುಗಳನ್ನು ಪ್ರಚಂಡವಾಗಿ ಹೆಚ್ಚಿಸಿರುತ್ತದೆ ಎಲ್ಲಾ ಸಮುದ್ರಗಳಲ್ಲಿಯೂ ಅವು ವೈರಿ ಹಡಗಗಳನ್ನು ಮುಳುಗಿಸಲೆತ್ನ ನಡಿಸಲಿವೆ. ಜರ್ಮನ್ ಕೆಲಸಗಾರರು ಹೆಚ್ಚು ಮದ್ದು ಗುಂಡುಗಳನ್ನು ತಯಾರಿಸಬೇಕು. ಈ ಯುದ್ಧವು ಇಡೀ ಯುರೋಪ್ ಖಂಡಕ್ಕಾಗಿ ಮತ್ತು ಮಾನವಕೋಟಿಗಾಗಿ ನಡಿಸಲ್ಪಡುತ್ತಿದೆ, ಆದರಲ್ಲಿ ಜರ್ಮನಿಯ ಜನತೆಯು ತಕ್ಕ ಭಾಗವಹಿಸಿ ನೆರವಾಗಲು ಮುಂದಾಗಬೇಕು. ಸೈನಿಕರು ತಮ್ಮ ಕರ್ತವ್ಯವನ್ನು ಮಾಡಿಯೇ ಮಾಡುವರೆಂಬುದೇ ಹಿಟ್ಲರರ ಭಾಷಣದ ಸಾರಾಂಶ.

ತ್ತಿರುವುದು. ಹೊಂಕೊಂಗಿನಷ್ಟು ಸುಲಭವಾಗಿ ಸಿಂಗಪುರವನ್ನು ವಶಪಡಿಸಿಕೊಳ್ಳಲು ಜಾಪಾನರಿಗೆ ಸಾಧ್ಯವಾಗಲಾರದು. ಸಿಂಗಪುರದವರ ಕುರಿತು ಸಹಾನುಭೂತಿ ತೋರಿಸಿ ಬ್ರಿಟಿಷ್ ಚಕ್ರವರ್ತಿಗಳು ಸಂದೇಶ ಕಳುಹಿಸಿರುವರು. ಸಿಂಗಪುರದ ಮೇಲೆ ಜಾಪಾನರು ಎಡೆಬಿಡದೆ ಪ್ರಬಲ ವಿಮಾನ ಧಾಳಿ ನಡೆಸುತ್ತಿರುವರು. ಜಾಪಾನರನ್ನೆದುರಿಸಲು ಬೇಕಾದ ಸಿದ್ಧತೆಯು ಸಿಂಗಪುರದಲ್ಲಿ ನಡಿಸಲ್ಪಡುತ್ತಿದೆ. ಅಲ್ಲಿಗೆ ಶೀಘ್ರವಾಗಿ ಹೆಚ್ಚಿನ ಸಹಾಯ ಕಳುಹಿಸುವ ಯತ್ನ ನಡೆದಿದೆ. ಸಿಂಗಪುರವನ್ನು ಮಲಯ ದ್ವೀಪಕ್ಕೆ ಜೋಡಿಸುವ ಸೇತುವೆಯನ್ನು ಸ್ಫೋಟಗೊಳಿಸಲಾಗಿದ ...ದೆ ರಿಂದ ಸಿಂಗಪುರದ ಮೇಲೆ ಧಾಳಿಯಿಡಲು ಜಾಪಾನರಿಗೆ ಸಾಧ್ಯವಾಗಲಾರದು ಆದುದರಿಂದ ಅದನ್ನವರು ಕ್ರಮಶಃ ಆವರಿಸಿ ಗೆಲ್ಲಲೆತ್ನಿಸಬಹುದೆಂದು ನಂಬಲಾಗಿದೆ. ಸಿಂಗಪುರದ 200ಚದರ ಮೈಲು ಪ್ರದೇಶದಲ್ಲಿ ಎಷ್ಟು ಸೇನೆ ಇರುವುದೆಂದು ಹೇಳಲು ಸಾಧ್ಯವಿಲ್ಲ. ಮಲಯ ಸೇನೆಯನ್ನೆಲ್ಲಾ ಅಲ್ಲಿಗೊಯ್ಯಲಾಗಿದೆ. ಸಿಂಗಪುರವನ್ನು ಸುತ್ತಲಿಂದಲೂ ಆವರಿಸುವ ಪ್ರಯತ್ನವನ್ನು ಇಷ್ಟರಲ್ಲೇ ಜಾಪಾನರು ನಡಿಸಿರುತ್ತಾರೆ. ಸಿಂಗಪುರದಲ್ಲಿರುವ ಸುಮಾರು ಒಂದು ಮಿಲ್ಯ ಜನರಿಗೆ ಮತ್ತು ಸೈನಿಕರಿಗೆ ಬೇಕಷ್ಟು ನೀರು ಮತ್ತು ಆಹಾರ ದೊರೆಯುವುದು ಕಷ್ಟವಾಗಬಹುದು. ಪಾಲ್ಮ ಮತ್ತು ಪರ್ಲ್ ಹಾರ್ಬರುಗಳಷ್ಟೇ ಅಲ್ಲವಾದರೂ ಅವುಗಳ ನಂತರ ಎರಡನೇ ಸ್ಥಾನವನ್ನು ಸಿಂಗಪುರವು ಪಡೆಯುತ್ತದೆ. ಹೊಂಕೊಂಗಿಗಿಂತ ಎಷ್ಟೋ ಪ್ರಾಮುಖ್ಯವಾದುದು. ಬ್ರಿಟಿಷ್ ಸಾಮ್ರಾಜ್ಯದ ಅತ್ಯಂತ ಪ್ರಾಮುಖ್ಯ ವ್ಯಾಪಾರ ರಸ್ತೆಗಳನ್ನು ಕಾಪಾಡುವ ಜಲಕೋಟೆಯದು.250 ಮಿಲ್ಯ ಜನಗಳಿರುವ ಸಾಮ್ರಾಜ್ಯ ವ್ಯಾಪಾರದ ಕೈಕೀಲಿ. ಆದುದರಿಂದಲೇ ಬ್ರಿಟನು ಅದನ್ನು ತನ್ನ ಪೂರ್ವದ ಮರ್ಫೀದ್ಧ ಜಲ ಕೋಟೆಯನ್ನಾಗಿ ಮಾಡಲು ಪ್ರಯತ್ನಿಸಿರುವುದು. ಅದರ ನೌಕಾನಿಲಯವು ಅತಿ ದೊಡ್ಡದಾಗಿ ಅತ್ಯಾಧುನಿಕ ಅನುಕೂಲತೆಯುಳ್ಳದಿರುವುದು. ಲೋಕದ ಅತಿ ದೊಡ್ಡ ನೌಕಾ ಪಡೆಯನ್ನಲ್ಲಿ ಇರಿಸಲು ಸಾಧ್ಯವಿದೆ. ಅತ್ಯಾಧುನಿಕ ಯುದ್ಧ ಹಡಗಗಳನ್ನೆಲ್ಲ ರಿಪೇರ್ ಮಾಡಿ ಸರಿಗೊಳಿಸುವ ಸಲಕರಣೆಗಳಿರುತ್ತವೆ. ಅದನ್ನು ಸುಭದ್ರವಾಗಿರಿಸಲು ಬೇಕಾದ ಏರ್ಪಾಡನ್ನೆಲ್ಲಾ ಬ್ರಿಟನು ಮೊದಲೇ ಮಾಡಿರುತ್ತದೆ. ಆದುದರಿಂದ ಅದನ್ನು ಗೆಲ್ಲುವುದು ಸುಲಭ ಸಾಧ್ಯವಲ್ಲ. ಸಿಂಗಪುರದ ಯುದ್ಧವು ಅತ್ಯಂತ ಸಂದಿಗ್ಧವಾಗಿದ್ದು ಜಾಪಾನಿನ ಅದೃಷ್ಟವು ಮುಖ್ಯವಾಗಿ ಅದರ ಮೇಲೆ ಹೊಂದಿಕೊಂಡಿರುವುದು. ಇಲ್ಲವಾದರೆ ಜಾಪಾನು ಅದನ್ನು ಹಾಗೆಯೇ ಹಿಂದೆಬಿಟ್ಟು ಮುಂದೊತ್ತಲು ಪ್ರಯತ್ನಿಸಬೇಕು. ಅದೇನು ಮಾಡಲಿರುವುದೆಂದು ನೋಡಲಿದೆ.

ಕೆಂಪು ಸೇನೆಯ ಮುನ್ನಡೆ.

ದಕ್ಷಿಣ ರಣರಂಗದಲ್ಲಿ ಸೋವಿಯೆಟ್ ಸೇನೆಯು ಮುನ್ನಡೆಯುತ್ತಿರುವುದು. ಜನವರಿ ತಾ. 31ರಲ್ಲು 24ಘಂಟೆಗಳಲ್ಲಿ 20 ಹಳ್ಳಿಗಳನ್ನದು ಗೆದ್ದಿರುವುದು. ಮೋಸ್ಕೋದ ಬಳಿಯ ಕಲಿನಿನ್ ರಣರಂಗದಲ್ಲಿ ಸೋವಿಯೆಟ್ ಸೇನೆ 10 ಹಳ್ಳಿಗಳನ್ನು ಗೆದ್ದಿರುವುದು. ಮಧ್ಯ ರಣರಂಗದಲ್ಲಿ ಕಳೆದ ಮೂರು ದಿನಗಳ ಯುದ್ಧದಲ್ಲಿ 1900 ಮಂದಿ ಜರ್ಮನರು ಕೊಲ್ಲಲ್ಪಟ್ಟಿರುವರು.

ಜಪಾನರಿಗೆ ದೊಡ್ಡ ಅಪಜಯ

ದಕ್ಷಿಣ ಚೈನದಲ್ಲಿ ವೈಟೋ ಪ್ರದೇಶದಲ್ಲಿ ನಡೆದ ಏದಿನಗಳ ತೀವ್ರ ಹೋರಾಟದಲ್ಲಿ ಚೀನೀ ಸೇನೆಯು ಜಾಪಾನರನ್ನು ಸಂಪೂರ್ಣವಾಗಿ ಪರಾಜಯಗೊಳಿಸಿರುವುದು ಈಗ ಚೀನೀ ಸೇನೆಯು ಕಾಂಟನ್ ಪಟ್ಟಣದಿಂದ 70ಮೈಲು ಮಾತ್ರ ದೂರದಲ್ಲಿದೆ. ಪೋಕ್ಲೋ ಎಂಬ ಸಂಯುಕ್ತ ಸ್ಥಳವನ್ನು ಚೀನೀಯರು ಗೆದ್ದುದರಿಂದ ಅವರಿಗೆ ಬಹಳ ಪ್ರಯೋಜನವಾಗಿದೆ. ಕಾಂಟನ್ ಕೌಲೂನು ರೈಲ್ವೇ ರಸ್ತೆಯ ಪ್ರದೇಶದಲ್ಲೀಗ ತೀವ್ರ ಹೋರಾಟ ನಡೆಯುತ್ತಿದೆ. ಮಧ್ಯ ಚೈನದಲ್ಲಿ ನಾನ್‌ಚಾಂಗಿನ ಬಳಿ ಜಾಪಾನರು ನಡಿಸಿದ ಹಲವು ಧಾಳಿಗಳನ್ನು ಪ್ರತಿಭಟಿಸಲಾಗಿದೆ. ಇಚಾಂಗಿನ ಈಶಾನ್ಯದಲ್ಲಿಯೂ ಜಾಪಾನರು ಮುಂದೊತ್ತಲೆತ್ನಿಸಿದಾಗ ಹಿಮ್ಮೆಟ್ಟಿಸಲಾಗಿದೆ. ಉತ್ತರ ಹೊನಾನಿಯಲ್ಲಿ ಚೀನೀಯರು ಕೆಲವು ಸ್ಥಳಗಳನ್ನು ಗೆದ್ದಿರುವರು.

ಉಡುಪಿ.

ತಾ. 30-1-42ರಲ್ಲಿ ಎಕ್ಸ್ಚೇಂಜ ಕಟ್ಟಿದ ಧಾರಣೆಯಲ್ಲಿ ಮುಡಿಗೆ ಅಕ್ಕಿ ಮುಡಿಗೆ ರೂ 6-4-0, ಸೇರಿಗೆ 0-2-6, ಗುಡ್ಡು ರೂ 5-14-0, ಸೇರಿಗೆ 0-2-3. ಕೊಚ್ಚಲು 5-8-0, ಸೇರಿಗೆ 2 2-0 ವರ ಸಿಕ್ಕುತ್ತಿರುತ್ತಾರೆ.

ಯಕ್ಷಗಾನ:-ಹರಿದಾಸ ಸೇವಾ ಸಂಘದ ವತಿಯಾಗಿ ವಕೀಲ್ ಶ್ರೀ ಕೆ ಜಿ ಬಲ್ಲಾಳ್, ಶ್ರೀ ಎನ್| ಎಸ್| ಕಿಲ್ಲೆ ಶ್ರೀ ಯು| ನಾಗಪ್ಪಯ್ಯನವರ ಪ್ರವಾಪತಿತ್ವದಲ್ಲಿ ಊರಿನ ಸುಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದ ಯಕ್ಷಗಾನ ತಾಳಮದ್ದಳೆಯೊಂದು ತಾ. 31-2-42ರಲ್ಲಿ ಮೋಹನ್ ಡಿ. ಶಾಲಾ ವರಾಂಡದಲ್ಲಿ ಜರಗಿತು, ಪ್ರಸಂಗ- ಶ್ರೀ ಸ್ವಾಮಿಜನರ ಕಾಳಗ. ಶ್ರೀ ಬಿ. ಮೈಂದಪ್ಪ ಶೈಗಾರ ಹಾಡುವಿಕೆ, ಶ್ರೀ ಪ್ರಭಾಕರ ರಾಯರ ಮೃದಂಗ ವಾದನವೂ ಮನಮೋಹಕವಿತ್ತು. ಎಡ್ವೊಕೇಟ್ ಶ್ರೀ ಬಾಲಕೃಷ್ಣ ರಾಯರು ಕೌರವ, ಶ್ರೀ ಕುಂಜಿಕೃಷ್ಣ ನಾರಿಯಣ ಶಾಸ್ತ್ರಿಗಳು ಭೀಷ್ಮ, ಶ್ರೀ ಎನ್| ಎಸ್| ಕಿಲ್ಲೆಯವರು ಕೃಷ್ಣ, ಶ್ರೀ ಅರ್ಗೋಳ ಸುಬ್ರಾಯಚಾರಿಗಳು ಅರ್ಜುನ, ಶ್ರೀ ಎನ್| ಆರ್| ಶಾಸ್ತ್ರಿಗಳು ಧರ್ಮರಾಯ, ಶ್ರೀ ಅಂಬ್ಲಪಾಡಿ ಹಿರಿಯಣ್ಣ ಶೆಟ್ಟರು ದ್ರೋಣನ ಅರ್ಥ ಮಾಡಿದ್ದರು ಶ್ರೀ ಕೃಷ್ಣನ ಅರ್ಥವು ಕೃಷ್ಣ-ಭೀಷ್ಮ ಸಂವಾದವೂ ಅತಿಯಾಗಿ ಜನರಿಗೆ ಹಿಡಿಸಿತು.

The Pangal Nayak Bank Limited.

(Incorporated in India in 1920.)

Notice under Section 37 of the Indian Companies Act, 1913,

As amended by Act XXII of 1936-)

It is hereby notified that the Register of Members of the above Bank will be closed from Monday, the 23rd February 1942 to Saturday, the 14th March 1942, both days inclusive.

By order of the Board.

UDIPI. 28th January 1942 | **P. LAKSHMAN NAYAK,** *Secretary & Treasurer*

NOTICE.

Is hereby given that M/S. Y. Vyasa Rao, son of Gopalakrishnaya, Land Lord, Badaga Yekkar, holder of ordinary shares of the Company No. 1075, & 1077, and Ullal Santhaya Kini, son of Ullal Ganapathi Kini, Merchant Kumbla, holder of ordinary shares of the company No. 777-776, have intimated that the concerned Share-certificates are lost by them and have applied for issue of duplicate-certificates. Any person desirous of objecting to the issue of such duplicates is requested to lodge his objections by 20-2-'42.

Office of the Bank. 30—1—1942. | For the Moolky Bank, Limited, **M. R. Punja,** *President & Manager,*

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ತಾ. 6—2—1942ರಿಂದ

'ಮಹಾತ್ಮಾ ಗಾಂಧಿ'

ಬರುವ ಚಿತ್ರ:ಡ್ಯಾಮಂಡ ಕ್ವೀನ್,ಮುಸಾಫಿರ್, ಬಂಧನ್

From:- 6—2—42

'MAHATMA GANDHI'

Coming:- **Daimond Queen, Musafir, Bandan.**

S. R. Theater Limited.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ವಿದ್ಯಾರ್ಥಿಗಳ ಪರಿಷತ್ತು. ಶ್ರೀ ಎ. ಕೆ. ಪಿಳ್ಳೆಯವರು ಅಧ್ಯಕ್ಷರು—ದ. ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಚತುರ್ಥ ಪರಿಷತ್ತು ತಾ. 31ನೇ ಜನವರಿ ಮತ್ತು 1ನೇ ಫೆಬ್ರವರಿಯಲ್ಲಿ ಕೆನರಾ ಹೈಸ್ಕೂಲಿನ ಘನವಸೇಂದ್ರ ಸಭಾಸದನದಲ್ಲಿ ಯಶಸ್ವಿಯಾಗಿ ಜರಗಿತು. ತಾ. 31ನೇ ಪ್ರಾತಃಕಾಲ ವಿದ್ಯಾರ್ಥಿಗಳಿಂದ ಪ್ರಭಾತ ಫೇರಿ ನಡೆಸಲ್ಪಟ್ಟಿತು. ಎಂಟು ಘಂಟೆಗೆ ಧ್ವಜವಂದನೆಯ ಕಾರ್ಯವು ನಡೆಯಿತು. ಶ್ರೀ ಬಿ. ವೈಕುಂಠ ಬಾಳಿಗರು ರಾಷ್ಟ್ರಧ್ವಜವನ್ನೇರಿಸಿ ರಾಷ್ಟ್ರಧ್ವಜದ ಮಹತ್ವವನ್ನು ವರ್ಣಿಸಿದರು.

ಅದೇ ದಿನ ಸಾಯಂಕಾಲ ವಿದ್ಯಾರ್ಥಿಗಳ ಸಂಘದ ಕಟ್ಟಡದಿಂದ ಅಧ್ಯಕ್ಷರ ಮೆರವಣಿಗೆಯು ಹೊರಟು ಮುಖ್ಯ ಬೀದಿಗಳಲ್ಲಿ ಸಂಚರಿಸಿ ಸಾಯಂಕಾಲ 6-30ಕ್ಕೆ ಸಭಾಸ್ಥಾನಕ್ಕೆ ಬಂದುಮುಟ್ಟಿತು. ಅಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎಸ್. ಭಾಸ್ಕರ ರೈಗಳವರು ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಸ್ವಾಗತ ಬಯಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಂಘದ ವಿಷಯವಾದ ಚರಿತ್ರೆಯನ್ನು ವಿವರಿಸಿ ಪ್ರಕೃತ ಹಿಂದೆಯಂಗೆ ವಿದ್ಯಾರ್ಥಿಗಳ ಚಳವಳದಿಂದ ಒಂದು ತರದ ಭೀತಿಯುಂಟಾದಂತಿದೆಯೆಂದೂ, ಆದರೆ ಅದಕ್ಕೆ ಅವಕಾಶವಿಲ್ಲವೆಂದೂ, ಮುಖ್ಯವಾಗಿ ಮಾಡುವುದು ವಿದ್ಯಾರ್ಥಿಗಳ ಉದ್ದೇಶವಲ್ಲವೆಂದೂ, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಲೋಚಿಸಿ, ಚರ್ಚಿಸಿ, ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ತಿಳಿಸುವುದು ವಿದ್ಯಾರ್ಥಿ ಸಂಘಗಳ ಉದ್ದೇಶವೆಂದೂ ಹೇಳಿದರು. ಇದೇ ಸಂದರ್ಭದಲ್ಲಿ ಸರಕಾರದವರು ಹೊರಿಸಿದ ಕೆಲವು ನಿರ್ಬಂಧಗಳನ್ನು ಟೀಕಿಸಿದರು. ಮತ್ತೊಮ್ಮೆ ಸಕಲರಿಗೂ ಸ್ವಾಗತ ಬಯಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಉದ್ಘಾಟನಾ ಸಮಾರಂಭ.

ಪರಿಷತ್ತಿನ ಉದ್ಘಾಟನಾ ಸಮಾರಂಭವು ಶ್ರೀ ಎ. ಬಿ. ಶೆಟ್ಟಿ ಯಂ. ಎಲ್. ಎ., ಅವರಿಂದ ನೆರವೇರಿಸಲ್ಪಟ್ಟಿತು. ಉದ್ಘಾಟನಾ ಕಾರ್ಯವನ್ನು ನೆರವೇರಿಸುತ್ತ ಶ್ರೀಯುತರು, ವಿದ್ಯಾರ್ಥಿ ಸಂಘದ ಕಾರ್ಯಕ್ರಮದಲ್ಲಿ ತಮಗಿದ್ದ ಆಸಕ್ತಿಯನ್ನು ವಿವರಿಸಿ, ವಿದ್ಯಾರ್ಥಿಗಳು ಈಗ ಜಾತಿ, ಸಮಾಜ ಕೋಮುಗಳ ಜನರಲ್ಲಿರುವ ಭೇದಗಳನ್ನು ದೂರೀಕರಿಸುವುದಕ್ಕೆ ಸಹಾಯಮಾಡಬೇಕೆಂದೂ, ಹಳ್ಳಿಗಳ ಜನರಿಗೆ ವಿದ್ಯೆಯ ಬೆಳಕನ್ನು ಕೊಡುವುದು ವಿದ್ಯಾರ್ಥಿಗಳ ಕರ್ತವ್ಯವೆಂದೂ ಹೇಳಿ, ಪರಿಷತ್ತಿಗೆ ಶುಭವಾಗಲೆಂದು ಹರಿಸಿ ಉದ್ಘಾಟನೆಯನ್ನು ಮಾಡಿದರು.

ವಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಲ್ಲಿ ಮತ್ತು ಪಾಶ್ಚಾತ್ಯದೇಶಗಳಲ್ಲಿ ವಿದ್ಯಾರ್ಥಿ ಚಳವಳಗಳು ಹೇಗೆ ನಡೆಯುತ್ತವೆಂಬುದನ್ನು ವಿವರಿಸಿ ನಮ್ಮ ವಿದ್ಯಾರ್ಥಿಗಳು ಇತರ ರಾಜಕೀಯ ಪಕ್ಷಗಳ ಮುಂದಾಳುಗಳ ಕೈಗೊಂಬೆಗಳಾಗಬಾರದೆಂದೂ, ಪ್ರತಿಯೊಬ್ಬರೂ ತಮ್ಮಷ್ಟಕ್ಕೆಯೇ ವಿಚಾರಮಾಡಿ ತಮಗೆ ಸರಿಯಾಗಿ ತೋರಿದರೆ ಮಾತ್ರ ಆ ಕೆಲಸಗಳನ್ನು ಮಾಡಬೇಕೆಂದೂ ಎಚ್ಚರಿಸಿದ್ದಲ್ಲದೆ ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯ, ದೇಶದ ಗೌರವ ಈ ಪ್ರಶ್ನೆಗಳು ಮುಂದೆ ಬಂದಾಗ ಅವುಗಳಿಗಾಗಿ ಹೋರಾಡಬೇಕೆಂದರು. ಅಧ್ಯಕ್ಷರ ಭಾಷಣವಾಗಿ ಸಭೆಯು ಮರು ದಿನಕ್ಕೆ ಮುಂದರಿಸಿಡಲ್ಪಟ್ಟಿತು.

ತಾ. 1ರಲ್ಲಿ ವಿಷಯ ನಿಯಾಮಕ ಸಮಿತಿಯ ಸಭೆ ಜರಗಿ ಹಲವು ಠರಾವುಗಳು ಮಂಜೂರಾದುವು. ಆ ನಂತರ ಮಹಾಧಿವೇಶನವು ಜರಗಿತು. ವಿಷಯ ನಿಯಾಮಕ ಸಮಿತಿಯಲ್ಲಿ ಮಂಜೂರಾದ ಠರಾವುಗಳು ಪುನಃ ಮಹಾಸಭೆಯ ಮುಂದೆ ಚರ್ಚೆಗೆ ಬಂದುವು. ವಿದ್ಯಾರ್ಥಿ ಸಂಘಗಳು ಸಂಸ್ಕೃತಿ ಮತ್ತು ವಿದ್ಯಾಸಂಬಂಧವಾದುವುಗಳಾದ್ದರಿಂದ ಅವುಗಳು ರಾಜಕೀಯ ಚಳವಳದಲ್ಲಿ ಭಾಗವಹಿಸಬಾರದೆಂಬ ಠರಾವು ಮಂಜೂರಾಯಿತು. ಇತರ ಠರಾವುಗಳಲ್ಲಿ, ಶಾಲೆಗಳಲ್ಲಿ ಎಂಟು ತಿಂಗಳು ಮಾತ್ರ ಫೀಸು ವಸೂಲುಮಾಡಬೇಕು, ಪರೀಕ್ಷೆಗಳಿಗೆ ಎಲ್ಲಾ ವಿದ್ಯಾರ್ಥಿಗಳನ್ನು ಕಳುಹಿಸಬೇಕು, ದಿನಕ್ಕೆ ಒಂದೇ ಹೊತ್ತು ಪರೀಕ್ಷೆ ನಡೆಯಬೇಕು; ಎರಡು ತಾಸುಗಳಿಗಿಂತ ಅಧಿಕ ಪರೀಕ್ಷೆ ನಡೆಯಬಾರದು, ದಿಗ್ಬಂಧಿತರನ್ನು ವಿಚಾರಣೆಗೆ ಗುರಿಪಡಿಸಬೇಕು; ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡಬೇಕು ಎಂಬಿತ್ಯಾದಿ ಠರಾವುಗಳು ಮಂಜೂರು ಮಾಡಲ್ಪಟ್ಟಿತು. ಅಧ್ಯಕ್ಷರ ಉಪಸಂಹಾರ ಭಾಷಣ, ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಸೆಟ್ಟರಿಂದ ಧನ್ಯವಾದ ಸಮರ್ಪಣೆಗಳಾದ ಮೇಲೆ ಸಭೆ ಮುಕ್ತಾಯವಾಯಿತು.

ಸಾಯಂಕಾಲ ಭಾಷಣ ಸ್ಪರ್ಧೆ, ವಿವಿಧ ವಿನೋದಾವಳಿಗಳು ನಡೆದು ಪರಿಷತ್ತಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಬೆಳ್ಳೆ—ವಕೀಲ ಶ್ರೀ ಬಿ. ರಾಮ ಸೆಟ್ಟರ ಮೊಮ್ಮಗನಾಗಿದ್ದು ಬೆಳ್ಳೆ ಕಳಮನೆಯ ಏಕಮಾತ್ರ ಪುತ್ರಸಂತಾನವಾಗಿದ್ದ ದಿವಂಗತ ಕುಮಾರ ಬಿ. ವಿ. ಪ್ರಫುಲ್ಲಕುಮಾರರ ವೃಂದಾವನ ಸ್ಥಾಪನೆಯು ತಾ. 27-1-42ರಲ್ಲಿ ಸುಮಾರು 600 ಜನ ಸಮಕ್ಷಮದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶ್ರೀ ಎಸ್. ಮಣ್ಣ ಹೆಗ್ಡೆಯವರ ಪೌರೋಹಿತ್ಯ ವಹಿಸಿದ್ದರು. ಪಟ್ಟೂರು, ಕೋಟೆಬಾಗಿಲು, ಬೆಳ್ಳೆ, ಭಜನಾಮಂಡಲಿಯವರು ಭಾಗವಹಿಸಿ ಸಂಭ್ರಮದ ಭಜನಾಸಪ್ತಾಹ ನಡೆಯಿತು. ಶ್ರೀ ಗಳಾದ ಕುಕ್ಕಿಲ ಗಣಪಯ ಸೆಟ್ಟರು, ಕೌಡೂರು ಅಂತಯ ಹೆಗ್ಡೆಯವರು ದಿವಂಗತರ ಗುಣವರ್ಣನೆ ಮಾಡಿ ಹೃದ್ಯವಾದ ಭಾಷಣವಿತ್ತ ಮೇಲೆ ಶ್ರೀ ಬಿ. ಲೋಕಯ ಸೆಟ್ಟರ ಧನ್ಯವಾದ, ಊಟೋಪಚಾರಗಳಾಗಿ ಸಮಾರಂಭವು ಕೊನೆಗೊಂಡಿತು.

ಕಲ್ಯಾಣಪುರ—ಆಸುಪಾಸಿನ ರೈತರ ಸಭೆ ತಾ. 31ರಲ್ಲಿ ಡಿವೀಜನಲ್ ಸ್ಪೆಕ್ಟರ್ ಶ್ರೀ ಕೆ. ಸಂಜೀವ ಶೆಟ್ಟರ ವ್ಯವಸ್ಥಾಪಕತ್ವದಲ್ಲಿ ಶ್ರೀ ಎ. ವಿ. ರಿಬೆಲ್ಲೊರವರ ಅಧ್ಯಕ್ಷತೆಯಲ್ಲಿ ಜರಗಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳು ಚರ್ಚಿಸಲ್ಪಟ್ಟು ರೈತರ ಸಂಘವೊಂದು ಸ್ಥಾಪನೆಯಾಗಿರುವುದು.

ಅಚ್ಚಡ— ಅಚ್ಚಡ ಬೋರ್ಡು ಹುಡುಗಿಯರ ಶಾಲಾತಿಂಗಳ ಹಬ್ಬವು ಮತ್ತು ಕೋಟಿ ವಿನೋದಾವಳಿ ವಿವಿಧ ಕಾರ್ಯಕ್ರಮಗಳಿಂದ ಶ್ರೀ ಸೀತಾರಾಮ ಭಂಡಾರಿ ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು.

ಮಲ್ಪೆ—ಕೊಡವೂರು ಬಿಲ್ಲವ ಸಮಾಜದ ಮಹಾಸಭೆಯು ಫೆಬ್ರವರಿ ತಾ. 8ನೇ ಆದಿತ್ಯವಾರ ಗಂಟೆ 12ಕ್ಕೆ ಕಲ್ಮಾಡಿ ಗರಡಿಯ ಅಂಗಣದಲ್ಲಿ ಶ್ರೀಯುತ್. ಶಾಲಪ್ಪ ಜತ್ತನ್ನ ಬಿ. ಎ. ಸಬ್ ರಿಜಿಸ್ಟ್ರಾರ್, ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ ಸಂಬಂಧಪಟ್ಟ ಜಾತಿ ಬಾಂಧವರು ತಪ್ಪದೆ ಈ ಸಭೆಯಲ್ಲಿ ಭಾಗಿಗಳಾಗಬೇಕಾಗಿ, ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಮೂಲ್ಕಿ—ಕಳೆದ ತಾರೀಕು 25ರಲ್ಲು ಬೋರ್ಡು ಹೈಸ್ಕೂಲು ಫುಟ್‌ಬಾಲ್ ಟೀಮಿನವರಿಗೂ ಹೆಜಮಾಡಿ ಯೂನಿಯನ್ ಫುಟ್‌ಬಾಲ್ ಟೀಮಿನವರಿಗೂ ನಡೆದ ಫುಟ್‌ಬಾಲ್ ಪಂದ್ಯಾಟದಲ್ಲಿ ಹೈಸ್ಕೂಲು ಟೀಮಿನವರು ಜಯಶೀಲರಾಗಿರುವರು. ಈ ವರ್ಷದ S. S. L. C ಪರೀಕ್ಷೆಗೆ ಸ್ಥಳೀಕ ಬೋರ್ಡು ಹೈಸ್ಕೂಲಿನಿಂದ 32+2/38+4 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಳುಹಿಸಲ್ಪಟ್ಟಿರುವರು. ಸ್ಥಳೀಕ ಕೋ-ಆಪರೇಟಿವ್ ಟೌನ್ ಬೇಂಕಿನ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ 18-1-42ರಲ್ಲಿ ಜರಗಿತು.

ನಿಂಜೂರು— ತಾ. 21ಕ್ಕೆ ಶ್ರೀ ಶಂಕರನಾರಾಯಣ ಸಾಮಗರ ಹರಿಕಥೆ ಇದೆಯೆಂದು ಪ್ರಕಟವಾಗಿದೆಯಷ್ಟೆ. ಆದರೆ ಆ ದಿನಗೆ ಬರಲು ಅನಾನುಕೂಲವಾದ್ದರಿಂದ ಶ್ರೀ ಬೋನಿಯವರು ಹರಿಕಥೆ ಮಾಡುವರು.

ಪಣಂಬೂರು:- ತಾ. 30-1-42ನೇ ಶುಕ್ರವಾರ ಸಂಜೆ ಘಂಟೆ 4ಕ್ಕೆ ಪಣಂಬೂರಿನಲ್ಲಿ ಶ್ರೀ ಕುಂಞ ಪುತ್ರನ್‌ರವರು ಹತ್ತು ಸಮಸ್ತರ ಸಹಕಾರದಿಂದ ಕಟ್ಟಿಸಿದ "ವೀರ ಹನುಮಾನ್ ವ್ಯಾಯಾಮ ವಿದ್ಯಾ ಭವನ"ದ ಪ್ರವೇಶೋತ್ಸವವು ಬಿಲ್ಲವರ ಬಂಧು ಪತ್ರಿಕೆಯ ಸಂಪಾದಕರಾದ ಶ್ರೀ ಮಂಗಳೂರು ಬಾಬಪ್ಪನವರಿಂದ ನೆರವೇರಿಸಲ್ಪಟ್ಟಿತು. ವ್ಯಾಯಾಮ ಪ್ರದರ್ಶನವಾದ ಮೇಲೆ ಸಭಿಕರ ಪೈಕಿ ಶ್ರೀ ಯಂ. ಆರ್. ಪಣಂಬೂರ್‌ರವರ ಶ್ರೀ ಬಿ. ನರಸಪ್ಪನವರು, ಶ್ರೀ ಬಾಳಲಕ್ಷ್ಮೀಪತಿರಾವ್, ಶ್ರೀ ಮೂಲ್ಕಿ ಕೃಷ್ಣಪ್ಪಯವರು, ಶ್ರೀ ವಿ. ವೇಣುಗೋಪಾಲ ತಿಂಗಳಾಯರು ಇವರುಗಳು ಭಾಷಣ ಕೊಟ್ಟರು. ಸಭಿಕರ ಪೈಕಿ ಕೆಲಮಹನೀಯರು ಧನಸಹಾಯವಿತ್ತರು. ಅಧ್ಯಕ್ಷರು ದಶ್ರೀ ಬಾಬಪ್ಪನವರು ಪವಿತ್ರೊಂದು ರೂಪಾಯಿಗಳನ್ನು ದಾನವಾಗಿ ಕೊಟ್ಟದ್ದಲ್ಲದೆ ಶ್ರೀ ನರಸಪ್ಪನವರ ಕೇಳಿಕೆಯಂತೆ ಕಟ್ಟಡದ ಸರಳಿನಿಂದೊಡಗೂಡಿದ ಪ್ರತಿಕೃತಿ ಬಾರ್ ಕಂಬಗಳೆರಡನ್ನು ತಾನು ಹಾಕಿಸಿ ಕೊಡುವುದಾಗಿ ವಾಗ್ದತ್ತ ಮಾಡಿದರು. ಬಳಿಕ ಅಧ್ಯಕ್ಷರು ಹಾಗೂ ಸಭಿಕರು ನಿರ್ಣಯಿಸಿದ ಮೇರೆಗೆ ಸರ್ವಾನುಮತಿಯಿಂದ ಶ್ರೀ ಕುಂಞ ಪುತ್ರನ್‌ರವರಿಗೆ "ವ್ಯಾಯಾಮವಿಶಾರದ" ಎಂಬ ಬಿರುದನ್ನು ಕೊಡಲಾಯಿತು. ಅಧ್ಯಕ್ಷರ ಭಾಷಣ ಮುಗಿದು ಮಂಗಲಗೀತೆಯಾಗಿ ಫಲಹಾರದೊಂದಿಗೆ ಸಭೆಯು ಕೊನೆಗೊಂಡಿತು.

ಮದ್ರಾಸು ಗವರ್ನರರ ಯುದ್ಧ ಫಂಡು.

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯವಮಾಡಿದವರ ಹೆಸರಿನ ಪಟ್ಟಿ.

ಭಾಗ ೧.

400-8-0 ಮಂಗಳೂರು ಕ್ಲಬ್. 66-0-0 ಎಂ. ವಿ. ಸುಬ್ರಹ್ಮಣ್ಯನ್. 50-0-0 ಡಬ್ಲ್ಯು. ಜೆಫ್ರಿಸ್, ಡಬ್ಲ್ಯು. ಬಿ. ಜಾಕ್ಸನ್, ಜಿ. ಎನ್. ಕೌನ್, 20-0-0 ಎಂ. ಕೇಶವನ್ ಉಣ್ಣಿ ನಾಯರ್. 18-0-0 ರಾವ್ ಬಹದೂರ್ ಯು. ವಾಮನ ನಾಯಕ್. 17-8-0 ಪಿ. ಜಿ. ಮೇನನ್. 17-0-0 ಆರ್. ಪ್ರಸಾದ್. 12-0-0 ರಾವ್ ಸಾಹೇಬ್, ಬಿ. ಆನಂದ ಬಾಳಿಗ. 11-8-0 ರಾವ್‌ಸಾಹೇಬ್, ಎಕ್ಸ್. ಕುಲಾಸೊ. 10-0-0 ಕ್ಯಾಪ್ಟನ್ ಸಿ. ಕೆ. ಮೇನನ್, ರಾವ್ ಬಹದೂರ್, ಸಿ. ಡಿ. ಜೆ. ಪಿಂಟೊ. 8-0-0 ರಾವ್ ಸಾಹೇಬ್, ಯು. ಮಂಜಪ್ಪ, ರಾವ್ ಬಹದೂರ್, ದಾಸಪ್ಪ ಕಾಮತ್, ಎಚ್. ಶಂಕರ ರಾವ್. 7-0-0 ಖಾನ್ ಸಾಹೇಬ್, ಎಂ. ಸುಲ್ತಾನ್ ಮೊಹಿಯುದ್ದೀನ್ ಮಖ್ದೂಂ ಸಾಹೇಬ್. 6-8-0 ರಾವ್ ಬಹದೂರ್ ಡಾ॥ ಕೆ. ಶ್ರೀನಿವಾಸ ರಾವ್, 6-0-0 ಕೆ. ಎಸ್. ಭಟ್. 5-0-0 ಕೆ. ಕೃಷ್ಣಯ್ಯ, ಡಾ॥ ಕೆ. ಫ್ರೀಮನ್, ಕೆ. ಅಚ್ಯುತನ್ ನಾಯರ್, ಪಿ. ರಾಘವೇಂದ್ರ ರಾವ್, ಎಂ. ವೆಂಕಟಪ್ಪ, ಬೈಲ್ ಗೋಪಾಲಕೃಷ್ಣಯ್ಯ, ಕೆ. ಆರ್. ವೆಂಕೋಬ ರಾವ್, ರೈಸಾಹೇಬ್, ಈ. ಸಿ. ಎ. ಮಸ್ಕರೇಂಜಸ್.

ಭಾಗ ೨.

1001-0-0. ಅಪೋಸ್ತಲಿಕ್ ಕಾರ್ಮೆಲ್ ಶಾಲಾ ಮತ್ತು ಕಾಲೇಜುಗಳ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ಪುತ್ತೂರು ತಾಲೂಕು ವಾರ್ ಸಬ್ ಕಮಿಟಿ. 1000-0-0 ಸೈಂಟ್ ಅಲೋಶಿಯಸ್ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು. 600-0-0 ಕಾಸರಗೋಡು ತಾಲೂಕು ವಾರ್ ಸಬ್ ಕಮಿಟಿ. 300-0-0 ಡಾ॥ ಕೆ. ಮಾಧವ ನಾಯಕ್. 250-0-0 ವಾಲ್ಟರ್ ಬ್ರದರ್ಸ್, ಮಂಗಳಪಾಡಿ ಗ್ರಾಮಸ್ಥರು, ಗವರ್ನಮೆಂಟ್ ಕಾಲೇಜ್ ಸಿಬ್ಬಂದಿ. 206-0-0 ಮ್ಯಾಚ್ ಟಿಕೆಟು ಮಾರಾಟದ ಹಣ. 201-0-0 ವರ್ಗೀಸ್ ಮಠದ ಶ್ರೀಮದ್ ಈಶ್ವರಾನಂದ ಭಾರತಿ ಸ್ವಾಮಿ. 175-0-0 ಹೊಸದುರ್ಗ ನಿವಾಸಿಗಳು 150-0-0 ಕಾಸರಗೋಡಿನ ಸರಕಾರಿ ಉದ್ಯೋಗಸ್ಥರು. 125-0-0 ಕುಂಬಳೆ ಗ್ರಾಮಸ್ಥರು. 106-0-0 ಬಂಟ್ವಾಳ ಕೋಚಣ್ಣ ಆಳ್ವ.

(ಮುಂದುವರಿಯುವುದು.)

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" ರಿಜಿಸ್ಟರ್ಡ್

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೆಳಗಿನ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಹಾರಿ, ಅರ್ಥ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ವಿಕ್ರೇತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer Dr. D. N. JASANI, Vittalbhai Patel Road, BOMBAY 4.

NOTICE

ಮಂಗ್ಳೂರು ಡಿಸ್ಟ್ರಿಕ್ಟು ಕೋರ್ಟಿನಲ್ಲಿ

S. C. No. 322/1934.
R. E. P. No 553/1941.

ಗಣಪಯ್ಯ ಪಾಲ — ಅರ್ಜಿದಾರ.

ಅಮದು ಬ್ಯಾರಿ ಸಾಹೇ — ರೆಸ್ಪಾಂಡೆಂಟರು.

3ನೇ ರೆಸ್ಪಾಂಡೆಂಟ—

ಉಮ್ಮಾತುಮ್ಮ = ಹಸನ ಬ್ಯಾರಿ ಮಗಳು, ಮಂಗ್ಳೂರು ತಾಲ್ಲೂಕು ಪೈಕಂಪಾಡಿ ಗ್ರಾಮದಲ್ಲಿರುವವಳು

ನೀವು ಈ ಅಪ್ಲಿಕೇಶನಿಯಲ್ಲಿ ಹಾಜರು ಪಡಿಸಿದ ವಿಲಿಂ ಮಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1942ನೇ ಇಸವಿ ಫೆಬ್ರವರಿ ತಿಂಗಳ ತಾರೀಕು 18ನೇ ಹಗಲು ಘಂಟೆ 10-30ಕ್ಕೆ ನಿಶ್ಚಯಿಸಲಾಗಿಯದೆಂತ ಈ ಮೂಲಕ ತಿಳಿಸಲಾಗುತ್ತದೆ. ಆ ಪ್ರಕಾರ ಆ ದಿನ ನೀವು ಹಾಜ್ರಾಗದೆ ಇದ್ದಲ್ಲಿ ಏಕಪಕ್ಷವಾಗಿ ತೀರ್ಮಾನವಾಗುವುದು.

ಮಂಗ್ಳೂರು, ತಾ. 2-2-'42 } P. Sanjiva Rao, Vakil for Petitioner.

ಇಟೆಲಿಯ ಅವಸ್ಥೆ ನೋಡಿದಿರಾ?

ಜನತೆಗೆ ಯುದ್ಧ ಬೇಡವಾದರೂ ನಿಲ್ಲಿಸುವ ಶಕ್ತಿ ಅವರಿಗಿಲ್ಲ.

ರೋಮನ್ ಪಟ್ಟಣದಲ್ಲಿಂದು ತಿನ್ನಲು ರೊಟ್ಟಿಯಿಲ್ಲ. ವಿನೋದಕ್ಕಾಗಿ ನೋಡಲು ಸರ್ಕಸುಗಳಿಲ್ಲ.

ಮುಸಲೋನಿಯವರು ಇಂದೀಗ ಹಿಟ್ಲರರ ಕೈಗೊಂಬೆಯಾಗಿಬಿಟ್ಟಿರುವರು. ಹಿಟ್ಲರರ ಸೂತ್ರಚಾಲನೆಯಂತೆ ಅವರು ನಡಿಯಲೇ ಬೇಕು. ಬೇರೆ ಯಾವ ಸ್ವಾತಂತ್ರ್ಯವೂ ಅವರಿಗಿರಲಾರದು. ಒಂದೊಮ್ಮೆಗೆ ಅವರು ಬ್ರಿಟನಿನೊಡನೆ ರಾಜಿಮಾಡುವ ಮನಸ್ಸುಳ್ಳವರಾದರೂ ಆ ಸ್ವಾತಂತ್ರ್ಯವೇ ಅವರಿಗಿಲ್ಲ. ಇಟೆಲಿಯು ಇಂದೀಗ ನಾಝಿ ಸೈನಿಕರು ಮತ್ತು ಗೆಸ್ಟಪೋ ಗುಪ್ತ ಪೋಲೀಸರ ಅಂಕೆಗೊಳಗಾಗಿದೆ. ಅದುದರಿಂದಲೇ ಇಟೆಲಿಯ ಜನರು ಜುಗುಪ್ಸೆಗೊಂಡು ಈ ಯುದ್ಧದಲ್ಲಿ ಬ್ರಿಟನೇ ಗೆಲ್ಲಬೇಕೆಂದು ಹಾತೊರೆಯುತ್ತಿದ್ದಾರೆ. ಯಾಕೆಂದರೆ ಆಗ ಮಾತ್ರ ಅವರ ಮೇಲಿನ ನಾಝಿಗಳ ಹಿಡಿತವು ಹೋಗುವುದು. ಖಾಸಗಿಯಾಗಿ ಹೆಚ್ಚಿನ ಇಟೆಲಿಯಾನರು ಜರ್ಮನಿಯ ಅಪಜಯದ ಕುರಿತೇ ಮಾತಾಡಿಕೊಳ್ಳುತ್ತಿದ್ದಾರೆ. ಜನತೆಯಲ್ಲಿ ಒಳಗಿಂದೊಳಗೆ ತೀವ್ರ ಅತೃಪ್ತಿಯು ವೇಗಯುಂಟಾಗಿದೆ. ಆದರೆ ದಂಗೆಯು ದಾವಾಗ್ನಿಯಾಗಿ ಸ್ಫೋಟವಾಗುವ ಶಕ್ತಿಯು ಅದಕ್ಕಿಲ್ಲದಾಗಿದೆ.

ಹಿಂದಿನ ರೋಮನ್ ಸಾಮ್ರಾಜ್ಯದ ಕ್ರೂರ ಏಕತಂತ್ರಾಧಿಕಾರಿಗಳು ಜನತೆಯನ್ನು ರೊಟ್ಟಿ ಮತ್ತು ಸರ್ಕಸ್‌ಗಳಿಂದ ಸಮಾಧಾನಪಡಿಸಿದ್ದರು. ಆದರೆ ಇಂದು ರೋಮನರಿಗೆ ಅದು ಕೂಡಾ ಇಲ್ಲ. ಇಟಲಿಯು ಇಂದು ವ್ಯಥೆಗೊಂಡು ನಿಸ್ತೇಜವಾಗಿದೆ. ಪರಿಸ್ಥಿತಿಯು ಇದೇ ರೀತಿ ಮುಂದುವರಿದರೆ, ಬಡಜನರು ಉಪವಾಸಬೀಳುವ ದಿನವು ದೂರವಿರಲಾರದೆಂದು ಅಲ್ಲಿಯ ಪರಿಸ್ಥಿತಿಯನ್ನು ಸ್ವತಃ ಕಂಡುಬಂದಿರುವ ಪತ್ರಿಕಾ ವ್ಯವಸಾಯಿಯೊಬ್ಬನ ಅಭಿಮತ.

ಫೆಸಿಸ್ಟ್ ಮೀನೊಂದರ ವಿನೋದಕರ ಕತೆಯೊಂದು ಈಗ ಜನತೆಯಲ್ಲೆಲ್ಲಾ ಹಬ್ಬಿರುತ್ತದೆ. ಇಟೆಲಿಯಾನ ಕುಟುಂಬವೊಂದಕ್ಕೆ ತಿನ್ನಲೇನೂ ಇದ್ದಿರಲಿಲ್ಲ. ಒಂದು ದಿನ ಕುಟುಂಬದ ಯಜಮಾನನು ಮೀನು ಹಿಡಿಯಹೋಗಿ ದೊಡ್ಡ ಮೀನೊಂದನ್ನು ಹಿಡಿದು ಹಿರಿಹಿರಿ ಹಿಗ್ಗುತ್ತಾ ಮನೆಗದನ್ನು ತಂದು, ಕಟ್ಟಕಡೆಗೆ ನಾವೊಂದು ಮೀನನ್ನು ಹುರಿದು ತಿನ್ನುವಂತಾಯಿತೆಂದನು ಹೆಂಡತಿಯೊಡನೆ.

"ಎಣ್ಣೆಯಿಲ್ಲದೆ ಮೀನನ್ನು ಹುರಿಯುವುದಾದರೂ ಹೇಗೆಂ"ದು ಪ್ರಶ್ನಿಸಿದಳು ಹೆಂಡತಿ.

"ಹಾಗಿದ್ದರೆ ಹಾಗಾದರೆ. ಅದನ್ನು ನಾವು ಬೇಯಿಸಿ ತಿನ್ನಬಹುದೆಂ"ದ ಗಂಡ.

"ಇದ್ದಲು ಯಾ ಕಟ್ಟಿಗೆ ಇಲ್ಲದೆ ಅದನ್ನು ಬೇಯಿಸಲು ಬೆಂಕಿಮಾಡುವುದಾದರೂ ಹೇಗೆ"ಂದಳು ಹೆಂಡತಿ.

"ಸರಿ. ಅದನ್ನು ಸಿರ್ಕದೊಂದಿಗಾದರೂ ತಿನ್ನುವ" ಎಂದು ಉದ್ಗರಿಸಿದ ಗಂಡ.

"ಮನೆಯಲ್ಲಿ ಸಿರ್ಕವಾದರೂ ಇರಬೇಕಲ್ಲವೇ!" ನಿಟ್ಟುಸಿರಿಟ್ಟಳು ಹೆಂಡತಿ.

ಜುಗುಪ್ಸೆಗೊಂಡ ಗಂಡನು ಮೀನನ್ನು ಸಮುದ್ರಕ್ಕೇನೇ ಬಿಸಾಡಿಬಿಟ್ಟ. ಈಜಾಡಿಕೊಂಡು ಹೋಗುವ ಮೊದಲು ಅದು ನೀರಿನಲ್ಲಿ ತಲೆಯೆತ್ತಿ "ಮುಸಲೋನಿಯವರಿಗೆ ಜಯವಾಗಲಿ" ಎಂದು ಘೋಷಿಸಿತು.

ಇಟೆಲಿಯಾನರು ಯಾವಾಗಲೂ ಪದಾರ್ಥಮಾಡಲು ಎಣ್ಣೆ ಉಪಯೋಗಿಸುತ್ತಾರೆ. ಆದರೆ ಈಗ ಸರಕಾರದ ನಿರ್ಬಂಧದ ಮೇರೆಗೆ ಕೊಡಲ್ಪಡುವ ಎಣ್ಣೆಯು ಒಂದು ದಿನಕ್ಕೂ ಸಾಲದಾಗಿದೆ. ಬೆಣ್ಣೆಯು ದೊರೆಯುವುದೇ ಕಷ್ಟವಾಗಿದೆ. ಹಣ್ಣು ಹಂಪಲು ತರಕಾರಿಗಳನ್ನೆಲ್ಲಾ ಜರ್ಮನರು ಒಯ್ದು ಉಳಿದವುಗಳ ಬೆಲೆಯು 7 ಪಾಲು ಹೆಚ್ಚಾಗಿರುತ್ತದೆ. [illegible] ಬರುವ [illegible] ಗೃಹವೆಲ್ಲಾ ಬರಿದಾಗಿ ಹೋಗಿ [illegible]

ಇಟೆಲಿಯಲ್ಲಿ [illegible] ದೊರೆಯುವ ಒಂದೇ ಒಂದು ಆಹಾರ ವಸ್ತುವೆಂದರೆ ರುಚಿಯಿಲ್ಲದ ಕಂದುಬಣ್ಣದ ರೊಟ್ಟಿ. ಈಗ ಅದರ ಮೇಲೆ ಕೂಡಾ ಸರಕಾರವು ನಿರ್ಬಂಧ ಹಾಕಿರುತ್ತದೆ. ಇದರಿಂದ ಜನರಲ್ಲಿ ತೀವ್ರ ಅತೃಪ್ತಿಯುಂಟಾಗಿದೆ.

ಇಟೆಲಿಯಲ್ಲಿ ಆಹಾರವೇ ಇಲ್ಲವೆಂದಲ್ಲ. [illegible] ಮೂರು ಪವನುಗಳ ವರೆಗೆ ಕೊಡಲು ಸಾಧ್ಯವಿದ್ದರೆ ಹೊಟೆಲುಗಳಲ್ಲಿ ಒಳ್ಳೇ ಊಟ ಸಿಗಬಹುದು. ಹೊಟೆಲು ಮಾಲಿಕರು ಸುಮಾರು 10 ಶಿಲ್ಲಿಂಗಿಗೆ ಒಂದರಂತೆ [illegible] ನಿರ್ಬಂಧವನ್ನು ಸರಕಾರದವರು ಹಾಕಿದರೂ ಅದರಿಂದೇನೂ ಪ್ರಯೋಜನವಾಗುವ ಹಾಗಿಲ್ಲ. [illegible] ಅತ್ಯಂತ [illegible] ಹೋಟೆಲಲ್ಲಾದರೂ ಒಂದೂವರೆ [illegible] ಶಿಲ್ಲಿಂಗ್ ಕೊಡಬೇಕಾಗಿದೆ.

ಇಟೆಲಿಯಾನ ಗೃಹಿಣಿಯರು ಹತಾಶರಾಗಿರುತ್ತಾರೆ! ಮನೆಯಲ್ಲಿ ಅಡಿಗೆ ಮಾಡುವುದೊಂದು ಸಮಸ್ಯೆಯಾಗಿ ನಿಂತಿದೆ. ಆಹಾರ ಸಾಮಾಗ್ರಿ ಮತ್ತು ಎಣ್ಣೆ ಮಾತ್ರವಲ್ಲದೆ ಕಟ್ಟಿಗೆಯ ಕೊರತೆಯೂ ಇದೆ. ಅದನ್ನು ಪಡೆಯಲು ಇಡೀ ದಿನ ರಸ್ತೆ [illegible]ಮುಗಳಲ್ಲಿ ಕಾದು ನಿಲ್ಲಬೇಕಾಗಿದೆ. ಹಲವರು ಮನೆಯ ಮರದ ಸಾಮಾನುಗಳನ್ನು ಒಡೆದು ಒಲೆಗೆ ಹಾಕುತ್ತಿರುತ್ತಾರೆ.

ಈ ಚಳಿಗಾಲದಲ್ಲಿ ಸರಿಯಾದ ಬೆಚ್ಚಗಿನ ಉಡುಗೆಯುಡುವ ಇಟೆಲಿಯಾನರು ಹೆಚ್ಚು ಮಂದಿ ಇರಲಾರರು. ವಸ್ತ್ರದ ಉಪಯೋಗದ ಮೇಲೂ ಈಗ ನಿರ್ಬಂಧ ಹಾಕಲಾಗಿದೆ. ಪಾದರಕ್ಷೆಗಳ ಬೆಲೆಯಂತೂ ವಿಪರೀತ ಏರಿಹೋಗಿದೆ. ಅವುಗಳು ಕೂಡಾ 2 ತಿಂಗಳುಗಳಲ್ಲಿ ಹಾಳಾಗಿ ಹೋಗುತ್ತವೆ.

ಹೀಗೆ ಜೀವನದ ಅವಶ್ಯಕತೆಗಳೇ ದೊರೆಯಲು ಅಸಾಧ್ಯವಾಗಿರುವಾಗ ವಿನೋದ ಕಾಲಕ್ಷೇಪವಾದರೂ ಎಲ್ಲಿ? ಇಟೆಲಿಯಾನ ಚಲಚಿತ್ರಗಳು ಕೆಟ್ಟದಾಗಿವೆ. ಜರ್ಮನ್ ಚಿತ್ರಗಳು ಬಹಿಷ್ಕರಿಸಲ್ಪಡುತ್ತವೆ. ಇತರ ದೇಶಗಳ ಚಿತ್ರಗಳು ತೋರಿಸಲ್ಪಡುವುದೇ ಅಪರೂಪ. ವಿನೋದಪ್ರಿಯರಾದ ಇಟೆಲಿಯಾನರಲ್ಲಿಂದು ವಿನೋದೋಲ್ಲಾಸವೇ ಇಲ್ಲವಾಗಿದೆ. ನಗಾಡಬೇಕಾದಾಗ ಅವರು ಸರಕಾರದ ಮತ್ತು ಜರ್ಮನರ ಕುರಿತು ಏನಾದರೂ ಪರಿಹಾಸ್ಯಮಾಡಿ ನಗುತ್ತಾರೆ.

ಸಾರ್ವಜನಿಕ ನರ್ತನವನ್ನು ಸರಕಾರವೇ ಯುದ್ಧಕಾಲದಲ್ಲಿ ನಿಷೇಧಿಸಿರುತ್ತದೆ. ಗುಪ್ತವಾಗಿ ಮಾತ್ರ ಖಾಸಗಿ ನರ್ತನ ನಡಿಸಬಹುದು. 20 ವರ್ಷಗಳ ಫೆಸಿಸ್ಟ್ ಆಳ್ವಿಕೆಯ ಕ್ರೂರತೆಯು ಇಟೆಲಿಯಾನ ಜನತೆಯ ಸ್ವಭಾವವನ್ನು ಬದಲಿಸಲಿಲ್ಲ. ಆದರೆ ಈ ಯುದ್ಧದ ಸಂಕಷ್ಟ ಮತ್ತು ಅಪಮಾನವು ಅದನ್ನು ಮಾರ್ಪಡಿಸಿ ಬಿಟ್ಟಿರುವುದು. ನಕ್ಕು ನರ್ತಿಸುತ್ತಿದ್ದ ಜನರೆಲ್ಲಾ ಇಂದು ಸಂತಪ್ತರಾಗಿ ಮೌನವಾಗಿರುತ್ತಾರೆ. ಖಾಸಗಿಯಾಗಿ ಜರ್ಮನ್ ಸೈನ್ಯಾಧಿಕಾರಿಗಳನ್ನು ಹಂದಿಗಳೆಂದು ಬೈಯ್ಯುತ್ತಾರೆ. ಇಟೆಲಿಯಾನ ಸ್ತ್ರೀಯರಾರೂ ಜರ್ಮನ್ ಸೈನಿಕರ ಸಂಗಾತಿಗಳಾಗಿ ಹೋಗುವದಿಲ್ಲ. ಇಟೆಲಿಯಲ್ಲಿ ಗುಪ್ತಚರ ಕೆಲಸ ಮಾಡಲು ಕಳುಹಿಸಲ್ಪಟ್ಟಿರುವ ಜ[illegible] ಇಟೆಲಿಯಾನ ತರುಣಿಯರಾರೂ ಸಂಪರ್ಕ ಬೆಳೆಸುವುದಿಲ್ಲ.

ಇಟೆಲಿಯಲ್ಲಿ ಜರ್ಮನ್ ಸೈನಿಕರ ಸ್ವೈರ ವರ್ತನೆಯು ದಿನೇ ದಿನೇ ಹೆಚ್ಚುತ್ತಿದೆ. ಹೋಟೆಲಿಗೆ ಹೋದರೆ ಅವರು ದುಡ್ಡು ಕೊಡುವುದಿಲ್ಲ. ಇಟೆಲಿಯನ್ನು ಬೇಗನೆ ಜರ್ಮನಿಯ ಅಧೀನ ರಾಜ್ಯವಾಗಿ ಮಾಡಲಾಗುವುದೆಂದು ಹೆಮ್ಮೆ ಕೊಚ್ಚಿಕೊಳ್ಳುತ್ತಾರೆ. ಇಟೆಲಿಯಾನರಿಗಿದು ಅಸಹನೀಯವಾಗಿದೆ. ಆದರೆ ಅವರು ಅಸಹಾಯಕರಾಗಿದ್ದಾರೆ.

ಯಾವ ಆಲೋಚನಾಪರ ಮನುಷ್ಯನೂ

ತನಗೆ ಅತ್ಯಂತ ಪ್ರಿಯತಮವಾದ ತನ್ನ ಸಂಸಾರ, ತನ್ನ ಮನೆ, ತನ್ನ [illegible] ಗುರಿಯಾಗಿರುವುದನ್ನು [illegible] ಅವನು [illegible] ಅವನು [illegible]

ಪ್ರತಿ ೧೦ ರೂಪಾಯಿನ [illegible] ಸರ್ಟಿಫಿಕೇಟಿಗೂ ರೂ ೩/೯/- ಲಾಭ ಬರುವುದು

[illegible] ಈಗಲೇ [illegible]

[illegible] ವಿವರಗಳು [illegible]

ಹೊಲಿಯುವ ನೂಲಿನ ಉಂಡೆಗಳು

ಈಗ ಹೊಸತಾಗಿ ಯಂತ್ರಗಳ ಮತ್ತು ನುರಿತ ಕೆಲಸಗಾರರ ಸಹಕಾರದಿಂದ ತಯಾರಿಸಲ್ಪಡುತ್ತವೆ. ಎಲ್ಲಾ ಕಡೆಗಳಲ್ಲೂ ಏಜಂಟರುಗಳು ಕೂಡಲೇ ಬೇಕಾಗಿದ್ದಾರೆ.

ತಯಾರಿಸುವ ಸ್ಥಳ:–
ಬಡವರಬಂಧು ಹೊಸಾಯರಿಸ್,
(ಪ್ರೊಪ್ರೈಟರರು ಬಡವರಬಂಧು)
ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್.
ಮಂಗಳೂರು.

TENDER NOTICE.

Sealed tenders are invited for the printing works and for the supply of stationery articles for the use of the **District Board** for the year from 1st April 1942 to **31st March** 1943 and will be receivd by the President District Board South Kanara, on the following dates:-

Tenders for printing up to 5 P. M. on 9-2-1942

do stationery articles up to 5 P. M. on 11-2-'42

Forms of tender for printing works and list of stationery articles for the year with terms and conditions governing the acceptance of tenders will be supplied on payment of rupee one each respectively.

Tenders for the printing works and the supply of stationery articles should be sent in separate covers superscribed "Tender for printing works for 1942-43" and "Tender for stationery articles for 1942-43" respectively and the covers containing the tenders should be addressed to the President, District Board, South Kanara, Mangalore.

South Kanara Dt. Board Office
MANGALORE, 23-1-1942.

K. Vittal Shetty,
President, Dt. Board,
S Kanara

NOTICE.

Is hereby given that in enforcement of the lien held by the Bank against the shares No. 236-240 registered in the name of Sri. H. Ramanna Shetty, son of Honnaiya Shetty, Land holder Hejmadi, the same will be sold by public auction at the registered office of the Bank on **16-2-1942** at 1. P. M.

Office of the Bank.
Date:- 30-1-1942.

For the Moolky Bank, Ltd.,
M. R. Punja,
President & Manager

Keep the enemy away
from India
Contribute AGAIN to
the Governer's war fund.
Buy MORE defence bonds
and savings certificats.

**GIVE AND LEND
FOR
VICTORY.**

ಲೋಜೋವಸ್ಕಿಯ ರಹಸ್ಯ ಪೂರ್ಣ ಜೀವನ

(ರಷ್ಯದ ಪ್ರಕಟನಾ ಖಾತೆಯ ಮಂತ್ರಿ ಲೋಜೋವಸ್ಕಿಯ ಶಬ್ದಗಳನ್ನು, ಸೋವಿಯಟ್ ರೇಡಿಯೋವನ್ನು ಕೇಳುವವರೆಲ್ಲರೂ ಬಲ್ಲರು. ಪ್ರಚಾರ ವಿಭಾಗದಲ್ಲಿ ಇವರ ಅಸಾಧಾರಣ ಪ್ರತಿಭೆಯನ್ನು ಶತ್ರುಗಳು ಸಹ ಒಪ್ಪಿಕೊಂಡಿದ್ದಾರೆ. ಈ ಲೇಖನದಲ್ಲಿ ಅವರ ಶಬ್ದ ಚಿತ್ರವೇ ಕೊಡಲ್ಪಟ್ಟಿದೆ. ಈ ಲೇಖನದ ಮೂಲ ಲೇಖಕರು ನ್ಯೂಸ್ ಕ್ರಾನಿಕಲ್‌ನ ಮಾಸ್ಕೋ ಸುದ್ದಿಗಾರರಾದ ಮಿ. ಫಿಲಿಪ್ಸ್ ಜೋರ್ಡನ್‌ರವರು.) ಸಂಪಾದಕ

ಊರಿನ ಉಪಾಧ್ಯಾಯರ ಮಗನು ರಸ್ತೆಯ ಪಕ್ಕದಲ್ಲಿ ಬೆಂಕಿ ಕಡ್ಡಿಗಳನ್ನೂ, ನಿಂಬೆ ಹಣ್ಣುಗಳನ್ನೂ ಮಾರುವುದನ್ನು ಕಂಡು, ಆತನ ನೆರೆ ಹೊರೆಯವರು ಆಶ್ಚರ್ಯ ಚಕಿತರಾಗುವುದು ಸ್ವಾಭಾವಿಕ; ಆದರೆ 55 ವರ್ಷಗಳ ಹಿಂದೆ ಜಾರ್ ಕಾಲದಲ್ಲಿನ ರಷ್ಯದ ಒಂದು ಅಜ್ಞಾತ ಹಳ್ಳಿಯಲ್ಲಿ ಒಬ್ಬ ಪ್ರವಾಸಿಗೆ ಈ ದೃಶ್ಯವೇ ಕಾಣುತ್ತಿತ್ತು. ಆದರೆ ಇದರಲ್ಲಿ ಸ್ವಾರಸ್ಯವೇನೆಂದರೆ ಯಾರಿಗೂ ಇದನ್ನು ಕಂಡು ಆಶ್ಚರ್ಯವೂ ಕೂಡ ಆಗುತ್ತಿರಲಿಲ್ಲ.

ಈ ವಿಚಿತ್ರ ಬಾಲಕನಿಗೆ ಆಗ ಇನ್ನೂ 8 ವರ್ಷವಾಗಿತ್ತು. ಯಾರಾದರೂ ಅವನ ಹೆಸರನ್ನು ಕೇಳಿದರೆ ಅವನು "ಸೋಲೋಮನ್ ಅಬ್ರಾಮೊ ವಿಜ್‌ಡ್ರಿಡ್ಜೋ." ಎಂದೇ ಹೇಳುತ್ತಿದ್ದನು

ಈಗ ಅದೇ ಬಾಲಕನು ತನ್ನ 63ನೇ ವರ್ಷದವನಾಗಿದ್ದು, ಒಳ್ಳೆ ಸುಸಂಸ್ಕೃತನೂ, ಹಸನ್ಮುಖಿಯೂ ಆಗಿದ್ದಾನೆ. ಈಗ ಅವನು ತನ್ನ ಹೆಸರನ್ನು "ಸೋಲೋಮನ್ ಅಬ್ರಾಮೋವಿಚ್ ಲೋಜೋವಸ್ಕಿ" ಎಂದು ಹೇಳುತ್ತಿದ್ದಾನೆ.

ಸೋವಿಯೆಟ್ ರಷ್ಯದ ಆಡಳಿತ ವರ್ಗದಲ್ಲಿ ಸ್ಟಾಲಿನ್ನನನ್ನು ಬಿಟ್ಟರೆ, ಇವನಷ್ಟು ಪ್ರಖ್ಯಾತನಾದ ವ್ಯಕ್ತಿಯು ಬೇರೆ ಯಾರೂ ಇಲ್ಲ. ಇವನು ರಷ್ಯದ ಪ್ರಕಟನಾ ಖಾತೆಯ ಬಹಳ ಮುಖ್ಯ ವ್ಯಕ್ತಿಯಾಗಿದ್ದಾನೆ.

ಸುಳ್ಳು ಹೇಳುವವನಲ್ಲ.

ಲೋಜೋವಸ್ಕಿಯು ಯುದ್ಧದಲ್ಲಿ ನಿರತವಾಗಿರುವ ಒಂದು ದೇಶದ ಪ್ರಕಟನಾ ಖಾತೆಯ ಪ್ರಧಾನನಾಗಿದ್ದರೂ, ಜೋಸೆಫ್ ಗೋಬೆಲ್ಸ್‌ನಂತೆ ಇವನು ಅಸತ್ಯ ಭಾಷಣವನ್ನು ಎಂದಿಗೂ ಮಾಡುವವನಲ್ಲ. ಜರ್ಮನಿಯ ಪ್ರಕಟನ ಖಾತೆಯ ಸರ್ವಸ್ವವಾದ ಗೋಬೆಲ್ಸನು ಬಹಳ ಸುಳ್ಳುಗಾರ. ಆದರೆ ಲೋಜೋವಸ್ಕಿಗೆ ಅದರಲ್ಲಿ ಬಹಳ ತಿರಸ್ಕಾರ.

ಸೋವಿಯೆಟ್ ಸರ್ಕಾರದ ಪ್ರಧಾನನಾದ ಸ್ಟಾಲಿನನ ವಿದೇಶ ನೀತಿಯ ಪ್ರತಿಪಾದಕನಾಗಿ ಲೋಜೋವಸ್ಕಿಯು ಬಹಳ ಸ್ವಲ್ಪ ಕಾಲದಲ್ಲೇ ವಿಶ್ವ ವಿಖ್ಯಾತನಾದನು. ರಷ್ಯ ಜರ್ಮನಿ ಯುದ್ಧಕ್ಕೆ ಮೊದಲು ಕೂಲಿಗಾರರ ಸಭೆಯೊಡನೆ ಸಂಪರ್ಕವಿಟ್ಟಿರುವ ವ್ಯಕ್ತಿಗಳಲ್ಲಿ ಇವನೂ ಒಬ್ಬನಾಗಿದ್ದನೆಂಬುದರ ವಿನಹ ಇವನ ವಿಚಾರವಾಗಿ ಇನ್ನೇನೂ ತಿಳಿದಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ರಹಸ್ಯ ಸಂಪೂರ್ಣ ಮನುಷ್ಯನ ವ್ಯಕ್ತಿತ್ವದ ಬಗ್ಗೆ ಜನರಲ್ಲಿ ಉತ್ಸುಕತೆಯುಂಟಾಗುವುದು ಸ್ವಾಭಾವಿಕವೇ ಆಗಿದೆ.

ಇವನು ತನ್ನ ಕಿಶೋರಾವಸ್ಥೆಯನ್ನು ಕಮ್ಮಾರನ ಅಂಗಡಿಯಲ್ಲಿ ಕಳೆದಿದ್ದರೂ ಅವನ ರೀತಿ ನೀತಿಗಳು, ನಡೆನುಡಿಗಳಲ್ಲಿ ಅದರ ಚಿಹ್ನೆಗಳು ತೋರುವುದಿಲ್ಲ. ಶಿಷ್ಟಾಚಾರದಲ್ಲಿ ಇವನು ಆದರ್ಶ ವ್ಯಕ್ತಿಯಾಗಿದ್ದಾನೆ. ಇವನ ಕೈ ಬೆರಳುಗಳು ಸಣ್ಣವು.

ಸುಲಭ ಸಾಧ್ಯ.

ಸೋವಿಯಟ್ ಯೂನಿಯನ್ನಿನಲ್ಲಿ ಲೋಜೋವಸ್ಕಿಯಂತಹ ವ್ಯಕ್ತಿಯೇ ಇಲ್ಲವೆನ್ನಬಹುದು. ಇವನ ವ್ಯವಹಾರ ಕುಶಲತೆ, ಇತರರಲ್ಲಿ ಬೆರೆಯುವುದು. ಮತ್ತು ಉಡಿಗೆ ತೊಡಿಗೆಗಳಲ್ಲಿ ಏನೋ ಒಂದು ವಿಶೇಷ ಉದ್ದೇಶವು ಅಡಗಿರಬಹುದೆಂದು ತೋರುತ್ತದೆ. ಪ್ರಾಯಶಃ ಈ ಸಹಾಯಕ ಸಾಮಗ್ರಿಯೊಡನೆ ಇವನ ತೀಕ್ಷ್ಣವಾದ ವ್ಯಂಗ್ಯವು ಮತ್ತಷ್ಟು ಆಕರ್ಷವಾಗಿ ಬಿಡುವುದು. ಲೋಜೋವಸ್ಕಿಯು ತನ್ನ ಎದುರಿನಲ್ಲಿ ರಕ್ತ ವರ್ಣದ ಒಂದು ಸಣ್ಣ ಧ್ವಜವನ್ನು ಅಂಟಿಸಿಕೊಂಡಿರುವನು. ಇದರಿಂದ ಅವನು ರಷ್ಯದ ಸರ್ವ ಶ್ರೇಷ್ಠ ಕೌನ್ಸಿಲಿನ ಸದಸ್ಯನೆಂಬುದು ಪ್ರಕಟವಾಗುತ್ತದೆ.

ಪತ್ರಿಕೆಯ ಸುದ್ದಿಗಾರರಿಗೆ ಹೇಳಿಕೆಯನ್ನು ಕೊಡುವಾಗ ಮೇಜಿನ ಮೇಲೆ ಲೆನಿನ್ನ ಡ್ ಪೀಠಿಯು ಯಾವಾಗಲೂ ಇದ್ದೇ ಇರುವುದು.

21ನೇ ವಯಸ್ಸಿನಲ್ಲಿ ಇವನು ಸೈನ್ಯದಲ್ಲಿ ಸೇರಿ ಕಾಜಾನಿಗೆ ಹೋದನು. ಅಲ್ಲಿ ಇವನ ಪರಿಚಯವು ಮೊದಲು ಸಮಾಜವಾದೀ ಸಾಹಿತ್ಯದಿಂದ ಆಯಿತು. ಅಲ್ಲೇ ಇವನಿಗೆ ಮುಂದೆ ಕ್ರಾಂತಿಕಾರಿ ಸಿದ್ಧಾಂತವನ್ನು ಸ್ವೀಕರಿಸಲು, ಲೆನಿನ್ನನ ವ್ಯಕ್ತಿತ್ವದ ಪ್ರಭಾವ ಉಂಟಾಯಿತು.

2 ವರ್ಷಗಳ ನಂತರ ಇವನು ಸಾಮಾಜಿಕ ಲೋಕತಂತ್ರವಾದೀ ದಳದಲ್ಲಿ ಸೇರಿ, ಸ್ವಲ್ಪ ದಿನಗಳ ನಂತರ ಕಾಜಾನಿನ ಬೋಲ್ಶೆವಿಕ್ ಸಮಿತಿಯ ಸದಸ್ಯನಾಗಿ ಆರಿಸಲ್ಪಟ್ಟನು. ಆದರೆ ಕಾಜಾನಿನಲ್ಲಿ ಹೆಚ್ಚು ಕಾಲವಿರಲಿಲ್ಲ. ಲೋಜೋವಾಯಾಕ್ಕೆ ಹೋದನು. ಅಲ್ಲೇ ಅವನು ಈಗಿನ ಹೆಸರನ್ನಿಟ್ಟುಕೊಂಡನು. ಲೋಜೋವಾಯಾದಲ್ಲಿ ಇವನು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಜೀವಿಸುತ್ತಿದ್ದನು.

1903ರಲ್ಲಿ ಬಂಧನ.

ನಂತರ ಇವನು ಕೂಲಿಗಾರರೊಡನೆ ಸಂಬಂಧ ಬೆಳೆಸಿದನು. ಕೂಲಿಗಾರರ ಚಿಕ್ಕ ಗುಂಪನ್ನು ಸ್ಥಾಪಿಸಿ, ಅವರ ಆವಶ್ಯಕತೆಗಳು ಮತ್ತು ಅವರ ಅಧಿಕಾರಗಳ ಜ್ಞಾನವನ್ನುಂಟುಮಾಡಿಕೊಂಡನು. ಈ ಕಾರ್ಯದಲ್ಲಿ ಇವನು ದಿನದಿನಕ್ಕೆ ಬಹಳ ಯಶಸ್ವಿಯಾಗುತ್ತ ಬರಲು, 1903ರಲ್ಲಿ ಅಧಿಕಾರಿಗಳು ಇವನನ್ನು ಬಂಧಿಸಿದರು.

ಲೋಜೋವಸ್ಕಿಯು 2 ವರ್ಷಗಳ ನಂತರ ರಷ್ಯಕ್ಕೆ ಬಂದ ಕೂಡಲೆ ಬಂಧಿಸಲ್ಪಟ್ಟನು. ಸ್ವಲ್ಪಕಾಲ ಸೆರೆಮನೆಯಲ್ಲಿದ್ದು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಪುನಃ ಹಿಡಿದು ಸೆರೆಯಲ್ಲಿಟ್ಟರು. ಆದರೆ ಲೋಜೋವಸ್ಕಿಯು ಜಾರ್‌ಶಾಹಿ ಪೋಲೀಸರ ವಶಕ್ಕೆ ಸಿಕ್ಕಿಬೀಳುವವನಾಗಿರಲಿಲ್ಲ. ಎರಡನೆ ಸಾರಿಯೂ ಹೇಗೋ ಜೇಲಿನಿಂದ ತಪ್ಪಿಸಿಕೊಂಡು ಫ್ರಾನ್ಸಿಗೆ ಹೋಗಿಬಿಟ್ಟನು. ಅಲ್ಲಿ ಇವನು ಕ್ರಾಂತಿಕಾರಿ ಸಾಹಿತ್ಯವನ್ನು ನಿರ್ಮಿಸುವುದರಲ್ಲಿಯೂ ತನ್ನ ಸಮಯವನ್ನು ಕಳೆಯುತ್ತಿದ್ದನು.

ರಷ್ಯದ ಹಾಸ್ಯ.

ಆಗ ಇವನು ಬೆಂಕಿಕಡ್ಡಿ ಮತ್ತು ನಿಂಬೆ ಹಣ್ಣನ್ನು ಮಾರುತ್ತಿದ್ದನು. ಈಗಲೂ ಇವನಿಂದ ಇತರರಿಗೆ ಇದೇ ವಸ್ತುಗಳೇ ದೊರೆಯುತ್ತವೆ. ಹೇಗೆಂದರೆ ಇವನ ಉತ್ತರವು ಬೆಂಕಿ ಕಿಡಿಯ ರೂಪವನ್ನು ಧರಿಸಿರುತ್ತದೆ. ಅಥವಾ ನಿಂಬೆಹಣ್ಣಿನಂತಿರುತ್ತದೆ-ಕೇಳುವವರ ಹಲ್ಲು ಬಹಳ ಹುಳಿಯಾಗಿ ಬಿಡುವವು. ಇತ್ತೀಚೆಗಂತೂ ಲೋಜೋವಸ್ಕಿಯು ಇತರರಿಗೆ ಹುಳಿಹುಳಿಯಾದ ನಿಂಬೆಹಣ್ಣುಗಳನ್ನೇ ತಿನ್ನಿಸುತ್ತಿದ್ದಾನೆ!

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ನಿಮ್ಮದೇ ಆಗುವ ನಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಉಡುಪಿ : : ದ. ಭಾರತ.

The Canara Mutual Assurance Company, Limited.

UDIPI : : S. INDIA.

ಈ ವಾರದ ಭವಿಷ್ಯ.

(ಹಿಂದಿನ ಪುಟದಿಂದ ಮುಂದರಿದುದು)

ತುಲಾ—ನಿಮ್ಮ ಹೆಚ್ಚಿನ ಉದ್ಯಮಗಳು ನೀರಿನಲ್ಲಿ ಮಾಡಿದ ಹೋಮದಂತಾಗಲಿವೆ. ಆರೋಗ್ಯವೂ ಕೂಡ ಚೆನ್ನಾಗಿರಲಾರದು. ಮಾತ್ರವಲ್ಲ, ನಿಮ್ಮ ಅರ್ಧಾಂಗಿಯೂ ಕೂಡ ರೋಗದ ಬಲೆಗೆ ಸಿಲುಕುವಳು. ಪ್ರವಾಸಿಗರಿಗೆ ಈ ಕಾಲವು ಹೆಚ್ಚಿನ ಕಷ್ಟ ಮತ್ತು ನಷ್ಟಕಾರಿಯಾಗಿ ಪರಿಣಮಿಸಲಿದೆ. ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವುದರಿಂದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವಿರಿ. ಇಂತಹ ದುಸ್ಥಿತಿಯಲ್ಲಿ ನಿಮ್ಮ ಕೈಹಿಡಿದೆತ್ತುವವರೆಂದರೆ ನಿಮ್ಮ ಸಮೀಪ ಬಂಧುಗಳು ಮತ್ತು ಆಪ್ತಮಿತ್ರರು. ತಾ. ೫. ೬. ೯. ೧೦ ಈ ದಿನಗಳಲ್ಲಿ ಕಾರ್ಯಕ್ಕೆ ವಿಘ್ನಗಳೂ ಧನ ಮಾನಾದಿಗಳಿಗೆ ಹಾನಿಯೂ ತಗಲಲಿದೆ.

ವೃಶ್ಚಿಕ—ಕರ್ಮಾಧಿಪತಿಯು ನಾಶ ಮಾಡುವವನ್ನು ನಿಮ್ಮ ಶೌರ್ಯಾದಿ ಗುಣಗಳನ್ನು ನೋಡಿ ಶತ್ರುವರ್ಗದವರೂ ನಿಮ್ಮ ಮೈತ್ರಿಯನ್ನು ಬಯಸುವರು. ನಿರಾಮಯರಾದ ನೀವು ಸಂಸಾರಿಕ ತಾಪತ್ರಯಗಳೊಂದೂ ಇಲ್ಲದೆ ಉತ್ತಮ ರೀತಿಯಿಂದ ಗೃಹಸುಖವನ್ನನುಭವಿಸಲಿರುವಿರಿ. ನಿಮ್ಮ ಮಾತೇ ಸರ್ವತ್ರ ಆಜ್ಞಾರೂಪವಾಗಿ ಪರಿಣಮಿಸಲಿದೆ. ಸಕಲ ಜನರಿಂದಲೂ ಮಾನಾರ್ಹರಾಗುವಿರಿ. ಯತ್ನ ಮಾಡಿದ ಉತ್ತಮವಾದ ಸ್ಥಾನವನ್ನು ಹೊಂದುವರು. ತಾ. ೫. ೬. ೯. ೧೦ ಸಕಲ ಕಾರ್ಯಾರಂಭಗಳಿಗೂ ಉತ್ತಮ ದಿನಗಳಾಗಿವೆ.

ಧನು—ನಿಮ್ಮ ಭಾಗ್ಯ ಕರ್ಮ ಮತ್ತು ಲಾಭಪತಿಗಳು ಧನಸ್ಥಾನವನ್ನಾಶ್ರಯಿಸಿರುವುದರಿಂದ ನಿಮಗೆ ಪ್ರತಿಕೂಲರಾಗಿರತಕ್ಕ ಕುಜಶನಿಗಳಿಂದಾಗಲಿ ಗುರುವಿನಿಂದಾಗಲಿ ನಿಮ್ಮ ಕರ್ಮಗಳಿಗೂ ಶತ್ರುಲಭ್ಯವು ಹಾನಿಯೊದಗದು. ಆದರೆ ನಿಮ್ಮ ಮನೋವ್ಯಾಪಾರವು ಸಂಕುಚಿತವಾಗಿರುವುದರಿಂದ ಕಾರ್ಯಪ್ರವೃತ್ತರಾಗಲು ಹಿಂಜರಿಯುವಿರಿ. ವಿರೋಧಿಗಳು ಆಗಾಗ ಪೀಡಿಸುವುದರಿಂದ ಮನಸ್ಸು ಸದಾ ಚಂಚಲವಾಗಿರುವುದು. ನಿಮ್ಮ ಮತ್ತು ಮಕ್ಕಳ ಆರೋಗ್ಯದ ಕಡೆಗೆ ಸ್ವಲ್ಪ ದೃಷ್ಟಿಯನ್ನಿಡುವುದುತ್ತಮ. ತಾ. ೯. ೧೦ ಅತಿವ್ಯಯ, ಅನಾರೋಗ್ಯಕಾರಿಗಳಾಗಿವೆ.

ಮಕರ—ಸುಖಸ್ಥಾನದಲ್ಲಿ ಕುಳಿತಿರತಕ್ಕ ಕುಜಶನಿಗಳು ನಿಮಗೆ ಸ್ವಪ್ನದಲ್ಲೂ ಸುಖನಿದ್ರೆ ಬಿಡಲೊಲ್ಲರು. ದಿನೇ ದಿನೇ ಪ್ರಬಲಿಸಲಾಗತಕ್ಕ ಶತ್ರುವರ್ಗದವರಿಂದ ನಿಮ್ಮ ಯಾವ ಮನೋರಥವೂ ಈಡೇರಲೊಲ್ಲದು. ನೀವು ನಿರಪರಾಧಿಗಳಿದ್ದರೂ ಕೂಡ ಕೆಲವೊಮ್ಮೆ ಸಾಂಸರ್ಗಿಕ ದೋಷದಿಂದ ಸಾಪರಾಧಿಗಳಾಗುವಿರಿ. ಗೃಹಪರಿವಾರದಲ್ಲೇನೂ ಕೊರತೆಯಿಲ್ಲದಿದ್ದರೂ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಿರುವಿರಿ. ನಿಮ್ಮ ನೆಂಟರಿಷ್ಟರೊಡನೆ ಹಲವರೊಡನೆ ಜಗಳವಾದೀತು. ಆದರೂ ತಾ. ೭ರಿಂದ ೧೦ರ ವರೆಗಿನ ದಿವಸಗಳು ನಿಮ್ಮ ಭಾಗಕ್ಕೆ ಶ್ರೇಯೋದಾಯಿಗಳಾಗಿವೆ.

ಕುಂಭ—ವಿಕ್ರಮಕಾರಕನೂ ತಪ್ಪತಿಯೂ ಆದ ಕುಜನು ಸ್ವಕ್ಷೇತ್ರಗತನಿದ್ದು ಶುಕ್ರ ಶನಿಗಳ ಬೆಂಬಲದಿಂದ ಕೂಡಿರುವ ನಿಮಗೆ ಅಸಾಧ್ಯವಾದ ಕಾರ್ಯ ವಾವುದೂ ಇರಲಾರದು. ತತ್ರಾಪಿ ಸದಾಚಾರಿಗಳಿಗಂತೂ ಹೆಚ್ಚಿನ ಅಭಿಲಷಿತಗಳು ಅನಾಯಾಸದಿಂದ ಸಿದ್ಧಿಸಲಿವೆ. ಆದರೆ ನಿಮ್ಮ ಬಂಧುವರ್ಗದವರು ಶತ್ರುಜನರ ಪಕ್ಷಕ್ಕೆ ಹಿಂದಿನಿಂದ ಸಹಾಯ ನೀಡುವುದರಿಂದ ನಿಮ್ಮ ರಹಸ್ಯಗಳು ಶತ್ರು ಜನರ ವಶವಾಗಲಿವೆ. ಇದರಿಂದ ಮುಂದಿನ ಮಾರ್ಗಕ್ಕೆ ತೊಡಕುಂಟಾದೀತು. ಆದರೂ ವಾರಾಂತ್ಯದ ೩ ದಿನಗಳಲ್ಲಿ ನೀವು ಸದ್ಯರ ಆಶಕ್ತಿಯುತರಾಗಿ ಬಲಾತ್ಕಾರದಿಂದಲಾದರೂ ವಾಂಛಿತಾರ್ಥವನ್ನು ಹೊಂದುವಿರಿ.

ಮೀನ—ನಿಮ್ಮ ಶಕ್ತಿ ಮನ್ನತಿಕ್ರಮಿಸಿ ನೀವೀ ವಾರದಲ್ಲಿ ದುಡಿಯುವಿರಿ. ನಿಮ್ಮ ಹಿತು ಮಾತ್ರ ಅದಕ್ಕಿಂತಲೂ ಹೆಚ್ಚಿರುವುದರಿಂದ ಪರರೊಡನೆ ಸಾಲ ಮಾಡಬೇಕಾದ ಪ್ರಸಂಗ ಬಂದೀತು. ಕೋರ್ಟು ಕಾರ್ಯಗಳಲ್ಲಿ ವ್ಯರ್ಥ ಧನವ್ಯಯವಲ್ಲದೆ ಇಷ್ಟಾರ್ಥವು ಸಿದ್ಧಿಸಲಾರದು. ಆಗಿಂದಾಗ್ಯೆ ಪಿತ್ಥ ಸಂಬಂಧ ಕಾಹಿಲೆಯು ತಲೆದೋರೀತು. ಸನ್ಮಿತ್ರರ ಬೆಂಬಲದಿಂದ ನೀವು ತಾ. ೫-೬-೧೧-೧೨ ಈ ದಿನಗಳನ್ನು ಅನಾಯಾಸದಿಂದಲೂ ಸುಖದಿಂದಲೂ ಕಳೆಯುವಿರಿ.

ಬಿಚ್ಚು ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—ಆಮಲಕೀ ತೈಲ.
ಆನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು—ಆಮಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ.
ನಾರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ-ಆಮಲಕೀ ತೈಲ
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—ಆಮಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ
ಭಾರತದ ಮಹಿಳೆಯರು ಪ್ರೀತಿಸುವರು—ಆಮಲಕೀ ತೈಲ.
ಬೆಳಗುವ ತಾರೆಯೇ-ಮದುಳಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
ಲಲನೆಯರು ಮೆಚ್ಚುವರು—ಆಮಲಕೀ ತೈಲ.
ವಾತಾದಿ ತ್ರಿದೋಷನಾಶಕವೇ—ಆಮಲಕೀ ತೈಲ.
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—ಆಮಲಕೀ ತೈಲ.
ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ

ಆಮಲಕೀ ತೈಲವನ್ನೇ ಉಪಯೋಗಿಸಿರಿ.

2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು:-ನವಭಾರತ ಬುಕ್‌ಡಿಪೋ, ಉಡುಪಿ, ಗದಾಯ್ಯಲಕ್ಕ ಡನಾಯಕ್ ಬ್ರದರ್ಸ್, ಕೋಟ ದಿ ಜನರಲ್ ಮೆಡಿಕಲ್ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.

For further particulars and agency terms, please call at or write to

Branch Manager,

The Asian Assurance Co., Ltd., Mangalore.

ಧಾತುಪುಷ್ಟಿಲೇಹ

ಇದು ಬಾಲಕರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನದೋಷ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಿಚ್ಚುವುದು, ಮಲಬದ್ಧತೆ, ಬಳಲಿಕೆ, ಆಲಸ್ಯ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ 1ರ ಕ್ರಯ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಒಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು, ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ- (1)ಪುಷ್ಕರ್ ಸ್ಟೋರ್ಸ್, ಕಮಿಶನ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸ್ಯಾಂಡರ್ಸ್ ರೋಡ್, ವರಲಿ, ಬೊಂಬಾಯಿ, ನಂಬ್ರ 12. (2) ಜನರಲ್ ಸ್ಟೋರ್ಸ್, ಜ. ಪಿ. ಗಿ, ಪಾಟಿಂಗ. (3) ಮುಲ್ಲರ್ ಹಿಟ್ನರ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ದನ್ವಂತರಿ ವೈದ್ಯಶಾಲೆ, ಶಿವರಾಮ ಬಜಾರ್, ಮೈಸೂರು (5) ಸಂಗಮ್ ದ ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ರಮ್ಮ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ.(7) ಡಾ| ಶ್ರೀನಿವಾಸ. ಸ್ಯ, ಪುತ್ತೂರು. (8) ಕಾಂತಾವರ ವಾಸ್ತೇವ ಶರ್ಮ, ಬೆಳ್ತಂಗಡಿ. (9) ನವಭಾರತ ಬುಕ್ ಡಿಪೋ, ಕೋಟದ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಕಾಸರಗೋಡು ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ- (13) ಬಿ. ಯಸ್. ನರಸಿಂಗರಾವ್, ಮರ್ಚೆಂಟ್, ಚಿಕ್ಕಮಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಕ್ ಮುಲಾಮು. —

ಇಷ್ಟರವರೆಗಣ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಕ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager. **ಯಂ. ಆರ್. ಪೂಂಜ,** ಪ್ರಸಿಡೆಂಟ್ ಮತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— **ಹಾಗಾದರೆ** —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ವಾಸ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು:

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಶೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,

ಮ್ಯಾನೇಜರ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನಂದನ ಅಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕಣ್ಣೀರು	ಬೆಲೆ ೨ ೦ ೦	**ಅನಾಥನಂದಿನಿ**	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾರಗಿದೆ ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪೋ, ಉಡುಪಿ.**

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೯ **ಕೂಡಿಯಾಲಬೈಲು, ಉಡಪಿ.**

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3678
Estd. 1921 ಸ್ಥಾಪಿತ.

ಸಾಹುಕಾರರಿಗೂ ವರ್ತ
ಕರರಿಗೂ ಬೇಕಾಗುವ
ತರ ತರದ ವರ್ಗ,
ಊಳಿಗ ಪುಸ್ತಕಗಳೂ
ಲೆಕ್ಕ ಪುಸ್ತಕಗಳೂ
ಸುಲಭ ದರದಲ್ಲ
ಸಾಜೂಕಾಗಿ ಮಾಡಿ
ಕೊಡಲ್ಪಡುತ್ತವೆ.
ನವಯುಗ ಪ್ರೆಸ್,
ಉಡುಪಿ.

ನವಯುಗ

1942ನೇ ಇಸವಿಯ
'ವರ್ಷ ಭವಿಷ್ಯ'
ಬೆ.
0—3—0
ಆಗತ್ಯ ಓದಿರಿ.
ನವಭಾರತ ಪುಸ್ತಕ
ಭಂಡಾರ, ಉಡುಪಿ.

ಸಂಪುಟ ೨೧ | Vol. 21
ಸಂಪಾದಕರು—ಶ್ರೀ ಎ ಬಿ ಶೆಟ್ಟರು, ಬಿ. ಎ. ಎಲ್. ಟಿ.
NAVAYUGA WEEKLY
12-2-1942
ಸಂಚಿಕೆ ೨೩ | No. 23

THE VIJAYA BANK, LTD.
Head Office. Mangalore.
BRANCHES: Karnataka, Mangalore, ... Udipi, Coondapur, Karkal, ...

SEASON DEPOSITS
are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಿಗಳು
ಸಾಲಿಯಾನ ಸೇಕಡಾ ೪ರ ದರದಲ್ಲಿ ೪ ಯಾ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಮುಕ್ತಾಯವಾಗುವ ಠೇವುಗಳನ್ನು ಎಲ್ಲಾ ಶಾಖೆಗಳಲ್ಲಿ ಸ್ವೀಕರಿಸಲ್ಪಡುವವು

ದಿ ವಿಜಯಾ ಬೇಂಕ್ ಲಿಮಿಟೆಡ್.
ಪ್ರಧಾನ ಕಾರ್ಯಾಲಯ-ಮಂಗಳೂರು.
ಶಾಖೆಗಳು:- ಕದ್ರಿ-ಮಂಗಳೂರು, ಹಂಪನಕಟ್ಟೆ-ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಕಾಪು ಮತ್ತು ಬ್ರಹ್ಮಾವರ.

ಮಗುವನ್ನು ಸಂತೋಷವಾಗಿಟ್ಟಿರಿ
ಅದಕ್ಕೆ **ಗ್ರೈಪ್ ಸಿರಪ್** ಕೊಡಿ
ಟ್ರೇಡ್ GTW ಮಾರ್ಕ್
ಮಕ್ಕಳಿಗೆ ಅತ್ಯುತ್ತಮವಾದ ಔಷಧಿ
ಆಹಾರದಲ್ಲಿನ ದೋಷದೋಷಗಳನ್ನು ಸರಿಪಡಿಸಿ, ಹೊಟ್ಟೆ ನೋವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಸಂಕಟಗಳನ್ನೂ ಹೋಗಲಾಡಿಸುವುದು.
ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.
ತಯಾರಿಸುವವರು
ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ,
ಮಲ್ಲೇಶ್ವರಂ. ಬೆಂಗಳೂರು ಸಿಟಿ.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಕ್ಕೆ ಹೋದಾಗ ಉರಿ ಬರುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ಸಾಡಹೊಂದಿದ್ದರೆ, ಸರಿಯಾಗಿ ಫೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೇನಿಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ತಕ್ಕೊಳ್ಳಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.
ಪಥ್ಯ: ಹಸೀಖಾರ, ಹುಳಿ ತಿನ್ನುವದು, ಸ್ತ್ರೀಸಂಗ ವರ್ಜಿತ.
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲ**ಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ,
ದಾವಣಗೇರಿ:—ದಾವಣಗೇರಿ ಪ್ರೆಸ್.
ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು
ಮಾಲಕರ ವಿಳಾಸ: **ರೇವಣಸಿದ್ದಪ್ಪ ಸಾಬಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ, ಗದಗ.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ಸಮ್ಮೊಡನೆ ವಿಚಾರಿಸಿರಿ—
ಇ. ಎ. ಪ್ಯಾಸ್, ಬ್ರಾಂಚ್ ಸಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

"ASIAN"
Offers all that is best in Insurance
Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.
For further particulars and agency terms, please call at or write to
Branch Manager,
The Asian Assurance Co., Ltd., Mangalore.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯು ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಶಾಂತಿಯೂ ಹಾಳಾಗುವದು—ಜೋಕೆ!

“ವಿಕ್ರಂ” ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುಗಳನ್ನು ಸರಿಪಡಿಸುತ್ತವೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತವೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತವೆ. ಬೆಲೆ ರೂ. ೨—೮—೦

ವಿಳಾಸ: **‘ವಿಕ್ರಂ ಡಿಸ್ಟ್ರಿಬ್ಯೂಟರ್ಸ್,’**
24—ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

DIAMONDS! DIAMONDS!

K. R. K. SHET.

Opposite Govt- College, Hampankatta MANGALORE.
SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾತ (first quality, selected))ಎಮ್‌ಸ್ಟ್ರ ಹಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರು ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಶೂಲೆ ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ನಂತರ ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲಿ ಬಿಡಬೇಕು. ೭ ದಿನಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:—ಶಾಂತಪ್ಪ ಫಕೀರಪ್ಪ ಹಾವನೂರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೆರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ:—ಎಚ್. ವಿರುಪಾಕ್ಷಪ್ಪ ವ.ಚೆಂಗ, ಬಳ್ಳಾರಿ. ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಈ ವಾರದ ಭವಿಷ್ಯ

ತಾರೀಕು ೧೨—೨—೪೦ರಿಂದ ತಾರೀಕು ೧೮—೨—೪೦ರ ವರೆಗೆ

ಮೇಷ—ವಿಷವಹ್ನಿಗಳಿಂದಲೂ ಶಸ್ತ್ರಾಸ್ತ್ರಗಳಿಂದಲೂ ದೇಹಕ್ಕೆ ಅಪಾಯು ತಗಲುವ ಸಂಭವವಿದೆ. ಆಕಸ್ಮಿಕವಾಗಿ ಪ್ರವಾಸದ ಯೋಗವಿದೆ. ಸ್ವಜನ ವಿರಹದಿಂದಲೂ ನಿಷ್ಕಾರಣ ಕಲಹದಿಂದಲೂ ದುಃಖಾಪಮಾನಗಳಿಗೆ ಗುರಿಯಾಗಲಿರುವಿರಿ. ಜನತೆಯ ಬೆಂಬಲವು ಉತ್ತಮವಿರುವುದರಿಂದ ವಿಘ್ನಗಳನ್ನೆದುರಿಸಿ ಜಯಶ್ರೀಯನ್ನು ಸಂಪಾದಿಸುವಿರಿ. ಸಪ್ರಕೃತ ಋಣದಿಂದ ಮುಕ್ತರಾಗುವಿರಿ. ಗೃಹಶಾಪತ್ರಯಗಳಿಂದ ನಿವೃತ್ತರಾದ ನಿಮಗೆ ತಾ. 13ರಿಂದ 17ರ ವರೆಗಿನ ದಿನಗಳು ಸುಖ,ಲಾಭ, ಸಿದ್ಧಿಕಾರಿಗಳಾಗಿವೆ.

ವೃಷಭ—ಜನ್ಮದಲ್ಲಿರುವ ಗುರು ಮತ್ತು ವ್ಯಯಗತರಾದ ಕುಜಶನಿಗಳು ಬಹಳ ಅನಿಷ್ಟಕಾರಿಗಳಿರುವುದರಿಂದ ನಿಮಗೀವಾರದಲ್ಲಿ ಆಕಸ್ಮಿಕವಾದ ಖರ್ಚುಗಳೂ ಅನರ್ಥ ಪರಂಪರೆಗಳೂ ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ. ಹಣದ ಶಾಪತ್ರಯದಿಂದಲೂ ಅನಾರೋಗ್ಯ ಸ್ತ್ರೀಕಲಹಗಳಿಂದಲೂ ಬುದ್ಧಿಯು ಸ್ಥಿಮಿತದಲ್ಲಿರದು. ಅವಿವೇಕದಿಂದಾಗಿ ಸ್ಥಾನನಾಶವನ್ನು ಕೂಡ ಹೊಂದುವ ಸಂಭವವಿದೆ. ವಾರಾಂತ್ಯದ 3 ದಿನಗಳಲ್ಲ ರವಿ ಶುಕ್ರರ ಅನುಗ್ರಹದಿಂದ ಧನವಸನಗಳನ್ನು ಪಡೆವಿರಿ. ಮಿತ್ರರ ಭೆಟ್ಟಿಯಾಗಲಿದೆ.

ಮಿಥುನ—ಅಷ್ಟಮಸ್ಥ ಬುಧ ಶುಕ್ರರು ಮತ್ತು ಲಾಭಸ್ಥ ಕುಜ ಶನಿಗಳ ಅನುಗ್ರಹದಿಂದ ನಿಮ್ಮ ತನುಮನೋರೋಗಗಳು ಬಹುತೇಕ ದೂರವಾಗಲಿವೆ. ಯಾವ ಉದ್ಯೋಗವನ್ನು ಮಾಡಿದರೂ ನಿಮಗದರಲ್ಲಿ ಸೋಲಾಗಲಿ ನಷ್ಟವಾಗಲಿ ಪ್ರಾಪ್ತವಾಗಲಾರದು. ಬಹು ಜನರಿಂದ ಮಾನಿತರಾಗುವಿರಿ. ಸಂಪನ್ನ ಸ್ತ್ರೀಯರ ಸ್ನೇಹ ಪ್ರೇಮಾದಿಗಳೂ ಲಭಿಸುವ ಯೋಗವಿದೆ. ತಾ. 13ರಿಂದ 17ರ ವರೆಗಿನ 5 ದಿನಗಳಲ್ಲಿ ಮಾರ್ಗಾತಿಕ್ರಮಣ, ಹಣದ ನಿಮಿತ್ತ ಜಗಳ,ರಾಜಭಯ,ಉದರ ರೋಗಾದಿಗಳು ಕಂಡುಬರಬಹುದು.

ಕರ್ಕಾಟಕ—“ಹತಾರುಷ್ಟೇ ಗುರುಸ್ತ್ರಾತಾ” ಎಂಬ ನೀತಿ ವಚನದಂತೆ ಒಂದು ವೇಳೆ ಹರಿಯೇ ಮುನಿದು ಬಂದರೂ ಗುರುಕೃಪೆಯೊಂದಿದ್ದರೆ ಆ ಆಪತ್ತಿನಿಂದ ಪಾರಾಗಬಹುದು. ಅಂತೆಯೇ ಈ ವಾರದಲ್ಲಿ ಸಕಲ ಗ್ರಹರೂ ನಿಮ್ಮ ಮೇಲೆ ಮುನಿದಿದ್ದರೂ ಗುರು ಕೃಪೆಯೊಂದು ಪರಿಪೂರ್ಣವಿರುವುದರಿಂದ ನೀವಂತಹ ಅಪಾಯಕ್ಕೆ ಸಿಲುಕಲಾರಿರಿ, ಸ್ತ್ರೀವರ್ಗವೇ ನಿಮ್ಮ ಮೇಲೆ ಸೇಡು ತೀರಿಸಲು ಟೊಂಕ ಕಟ್ಟಿ ನಿಂತಿರುವುದರಿಂದ ಅವರೊಡನೆ ಯಾವ ವಿಧವಾದ ವ್ಯವಹಾರವನ್ನೂ ಮಾಡದಿರುವುದು ಜಾಣರ ಲಕ್ಷಣ. ನಿಷ್ಕಾರಣವಾಗಿ ಜನಾಪವಾದಕ್ಕೆ ಸಿಲುಕಲಿರುವಿರಿ. ತಾ. 12. 13. 14. ಇದ್ದುದರಲ್ಲಿ ಕಿಂಚಿದುತ್ತಮ.

ಸಿಂಹ—ದೇಹಾಲಸ್ಯವು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದಲೂ ಶತ್ರುಜನರ ಉಪದ್ರವವೂ ಕೂಡ ಅಧಿಕವಾಗುತ್ತಿರುವುದರಿಂದಲೂ ನಿಮಗೆ ಉದ್ಯೋಗದಲ್ಲಿ ಎಳ್ಳಷ್ಟೂ ಆಸಕ್ತಿಯಿರದು. ಆರ್ಥಿಕ ಬಿಕ್ಕಟ್ಟಿನಿಂದಲೂ ಸ್ಥಾನಚ್ಯುತಿಯ ಭಯದಿಂದಲೂ ನಿಮ್ಮ ಮನೋರೋಗ ವಧಿಕವಾಗಿ ತನ್ನಿಮಿತ್ತ ದೇಹವು ಕೃಶವಾದೀತು. ವ್ಯಾಪಾರಾದಿ ಸ್ವೋದ್ಯೋಗಗಳಲ್ಲಿ ನಷ್ಟವಧಿಕವಾಗಲಿದೆ, ತಾ. 12. 18. 19 ಈ ಮೂರು ದಿನಗಳಲ್ಲಿ ಪ್ರವಾಸ,ಕಾರ್ಯಹಾನಿ,ಆಕಸ್ಮಿಕ ದೇಹಾಪಾಯವೇ ಮೊದಲಾದ ಅನಿಷ್ಟಗಳಿಗೆಡೆಯಿದೆ.

ಕನ್ಯಾ—ನಿಮ್ಮ ಎಲ್ಲಾ ಕಾರ್ಯಕಲಾಪಗಳೂ ಸುವ್ಯವಸ್ಥಿತವಾಗಿರುವವಾದರೂ ಗೃಹಕೃತ್ಯ ವಿಚಾರದಲ್ಲಿ ಅವ್ಯವಸ್ಥೆಯು ಮೇಲಿಂದ ಮೇಲೆ ತೋರಿಬರಲಿವೆ. ನೇತ್ರೋದರ ರೋಗಗಳಿಂದ ದೈಹಿಕ ಸುಖಕ್ಕೂ ಕಿಂಚಿದ್ಹಾನಿಯಿದೆ. ಸ್ತ್ರೀಯ ಪ್ರೀತಿಯಿಂದಲೂ ಬಂಧುಮಿತ್ರರ ನೆರವಿನಿಂದಲೂ ನೀವು ಶತ್ರುಗಳನ್ನು ನಿಗ್ರಹಿಸುವಿರಲ್ಲದೆ ಮನದಿಚ್ಛೆಯಂತೆ ಕಾರ್ಯವನ್ನು ಸಾಧಿಸುವಿರಿ ಸಂಪದ್ಭಾಗವು ಉತ್ತಮವಿರುವದು. ವಾರಾದಿಯ 3 ದಿನಗಳಲ್ಲಿ ಆಕಸ್ಮಿಕ ಗಂಡಾಂತರಗಳೊದಗಬಹುದು, ಜಾಗ್ರತರಾಗಿರಿ.

ತುಲಾ— ವ್ಯಥಾಪರ್ಯಟನದಿಂದಲೂ ದೇಹಾಲಸ್ಯದಿಂದಲೂ ಶೋಕಸಂತಪ್ತರಾ

(೧೧ನೇ ಪುಟನೋಡಿರಿ.)

BHUVANENDRA PRODUCTS LTD.,

Head Office and Factory: **Katapadi,** S. Kanara

Depots: 1 Maharatha Galli, Hubli
2. 57 Big street, Triplicane- Madras.

“ಭುವನೇಂದ್ರ”

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

“ಭುವನೇಂದ್ರ”

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ಠಕ್ಕಣ್ಣಿ.**
(3) **ಡಾಕ್ಟರ್ ಪಿ. ಜೆ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಕೆ. ಹೆಗ್ಡೆ** L. I. M.

ಚುಟುಕು ಟೀಕೆ-ಟಿಪ್ಪಣಿ

'ಹೊಕು — ಇಚಿ'

ನಾಝಿಗಳ ಅಧಿಕಾರ ವ್ಯಾಪನೆ ಮತ್ತು ಸ್ಥಾಪನೆಯ ಗುರಿಯೇ 'ಲೆಬನ್ ಸ್ರೌಮ್'. ಇಡೀ ಯುರೋಪು ಖಂಡವು ಅದರೊಳಗೆ ಸೇರಿದೆ. ಅಣಕಿಸುವುದರಲ್ಲಿ ಅತಿ ಜಾಣರಾದ ಜಪಾನರ ಲೆಬನ್ ಸ್ರೌಮಿಗೆ 'ಹೊಕು-ಇಚಿ' ಎಂದು ಹೆಸರು. ಜಪಾನ ಚಕ್ರವರ್ತಿಗಳ ಕೈಕೆಳಗೆ ಪೂರ್ವ ಏಸ್ಯದ ಹಾಗೂ ಇಡೀ ಸ್ಯಾಖಂಡದ ಜನಾಂಗಗಳೆಲ್ಲಾ ಒಂದುಗೂಡಿ ಬಂಧುಭಾವದಿಂದ ನಡೆಯಬೇಕೆಂಬುದೇ 'ಹೊಕು-ಇಚಿ'ಯ ಅರ್ಥ. ಆ ಕುರಿತು ಜಪಾನರು ಅಂಧವಿಶ್ವಾಸವುಳ್ಳವರಿದ್ದಾರೆ. ಇಡೀ ಏಸ್ಯಾ ಖಂಡದ ಮೇಲೆ ಅಧಿಕಾರ ಸ್ಥಾಪಿಸುವ ಹಕ್ಕು ತಮ್ಮದೆಂದೇ ಅವರ ನಿಶ್ಚಲ ಮನೋನಿರ್ಧಾರ.

ವ್ಯಕ್ತಿಗಳಲ್ಲ-ಯಂತ್ರಗಳು!

ಜಪಾನರು ತಮ್ಮ ದೇಶಕ್ಕಾಗಿ ಎಂತಹ ತ್ಯಾಗಮಾಡುವುದಕ್ಕೂ ತಯಾರಿರುವರು. ತಮ್ಮ ಚಕ್ರವರ್ತಿಗಳಿಗಾಗಿ ಏನು ಮಾಡುವುದಕ್ಕೂ ಸಿದ್ಧರವರು. ಅವರಿಗೆ ಸ್ವತಂತ್ರ ವ್ಯಕ್ತಿತ್ವವೆಂಬುದೇ ಇಲ್ಲದೆ ಕೇವಲ ನರಯಂತ್ರಗಳಂತೆ ನಡೆಯುತ್ತಾರೆ. ಇಂದೀಗ ಅವರು ಬಹಳ ಸಂಕಷ್ಟಗಳಿಗೊಳಗಾಗಿದ್ದಾರೆ. ಜೀವನದ ಆವಶ್ಯಕತೆಗಳೇ ದೊರೆಯುವುದು ಬಹಳ ಪ್ರಯಾಸ. ಮುಖ್ಯ ಆಹಾರ ಧಾನ್ಯವಾದ ಅಕ್ಕಿಯನ್ನು ಕೂಡಾ ಅದೊಂದು ನಿಶ್ಚಿತ ಪ್ರಮಾಣದಲ್ಲಿ ಮಾತ್ರ ಉಪಯೋಗಿಸುವ ನಿರ್ಬಂಧಕ್ಕವರು ಒಳಗಾಗಬೇಕಾಗಿದೆ. ಸಂಚಾರಾನುಕೂಲತೆಗಳೆಲ್ಲಾ ನಿಲ್ಲಿಸಲ್ಪಟ್ಟವೆ. ಖಾಸಗಿ ಮೋಟರು ಕಾರುಗಳಂತಿರಲಿ, ಟೇಕ್ಸಿಗಳು ಕೂಡಾ ಇರುವುದಿಲ್ಲ. ಆದರೂ ಈ ಸಂಕಷ್ಟಗಳನ್ನೆಲ್ಲಾ ಜಪಾನರು ಅತ್ಯಂತ ತಾಳ್ಮೆಯಿಂದ ತಾಳಿಕೊಳ್ಳುತ್ತಿದ್ದಾರೆ. ಆ ಕುರಿತು ಗುಣುಗುಟ್ಟುವವರು ಕೂಡ ಇಲ್ಲ. ದೇಶಕ್ಕಾಗಿ ಅವರು ಇನ್ನೂ ಹೆಚ್ಚಿನ ಕಷ್ಟ ಸಹಿಸಲು ಸಿದ್ಧರಿದ್ದಾರೆ.

ನಾಝಿಗಳಿಗೆ ಸೋಲು ನಿಶ್ಚಯ.

ಬ್ರಿಟಿಷ್ ರಾಯಭಾರಿಯಾಗಿ ರಶ್ಯಕ್ಕೆ ಹೋಗಿ, ಅಸಾಧ್ಯವೆನಿಸಿದುದನ್ನು ಸಾಧ್ಯಗೊಳಿಸಿ, ರಶ್ಯ ಮತ್ತು ಇಂಗ್ಲೆಂಡುಗಳೊಳಗೆ ಮೈತ್ರಿಯುಂಟಾಗಲು ಮುಖ್ಯ ಕಾರಣರಾದ ಸರ್ ಸ್ಟಾಫೋರ್ಡ್ ಕ್ರಿಪ್ಸರಿಂದು ಇಂಗ್ಲೆಂಡಿಗೆ ಹಿಂತಿರುಗಿದ್ದಾರೆ. ಸೋವಿಯೆಟ್ ಸೇನೆಯು ನಾಝಿಗಳನ್ನು ಸೋಲಿಸುವುದು ನಿಶ್ಚಯ. ಆದರೆ ಬ್ರಿಟನು, ರಶ್ಯದೊಡನೆ ಈಗ ಮಾಡಿಕೊಂಡಿರುವ ಒಡಂಬಡಿಕೆಯ ಒಪ್ಪಂದದ ಬದಲಿಗೆ ಹಾರ್ದಿಕ ಮೈತ್ರಿ ಬೆಳೆಸಿ ಮುಂದಿನ ನವನಿರ್ಮಾಣದಲ್ಲಿ ಅವರೊಂದಿಗೆ ಅಂತಃಕರಣಪೂರ್ವಕವಾಗಿ ಸಹಕರಿಸಬೇಕೆಂದು ಸೂಚಿಸಿರುವರು. ಆದರೆ ಚರ್ಚಿಲ್ ಕೂಟದವರದಕ್ಕೆ ಸಿದ್ಧರಿರುವರೇ?

ಹಿಂದೂ ದೇಶದ ಕುರಿತು ಸ್ಪಷ್ಟೋಕ್ತಿ.

ಸರ್. ಸ್ಟಾಫೋರ್ಡ್ ಕ್ರಿಪ್ಸರನ್ನು ಬ್ರಿಟಿಷ್ ಮಂತ್ರಿಮಂಡಲದಲ್ಲಿ ಸೇರಿಸಲಾಗುವುದೆಂದು ಸುದ್ದಿಯುಂಟಾಗಿತ್ತು. ಆದರೆ ಅವರಂತಹ ಯಥಾರ್ಥವಾದಿಯು ಮಂತ್ರಿಯಾಗಲು ಹೇಗೆ ಸಾಧ್ಯ? ಹಿಂದು ದೇಶದ ಕುರಿತಾದ ಅವರ ಸ್ಪಷ್ಟೋಕ್ತಿಯಿಂದಲೇ ಚರ್ಚಿಲ್ ಪ್ರಭೃತಿಗಳು ತಳಮಳಗೊಂಡಿರಬೇಕು. ಹಿಂದು ದೇಶಕ್ಕೆ ಸ್ವಾತಂತ್ರ್ಯವೀಯುವ ವಿಷಯದಲ್ಲಿ ನ್ಯಾಯಯುತ ಜವಾಬ್ದಾರಿ ಇಂಗ್ಲೆಂಡಿನದು. ಬ್ರಿಟಿಷ್ ಸರಕಾರವು ಹಿಂದೀಯರಿಗೆ ಸ್ವಾತಂತ್ರ್ಯವೀಯಲು ಮುಂದಾಗಬೇಕು. ಅವರೊಳಗಣ ಅನೈಕ್ಯವನ್ನು ನೆವನವಾಗಿ ಮುಂದೊಡ್ಡಬಾರದೆಂದು ಕ್ರಿಪ್ಸರು ಸ್ಪಷ್ಟವಾಗಿ ಹೇಳಿಬಿಟ್ಟಿರುವರು. ಮೊದಲು ಹಿಂದೀಯರು ಒಕ್ಕಟ್ಟಾಗಬೇಕು; ಆ ಮೇಲೆ ಅವರಿಗೆ ಸ್ವಾತಂತ್ರ್ಯವೀಯಲಾಗುವುದೆಂಬ ಪಲ್ಲವಿಯನ್ನೇ ಒಂದಿಷ್ಟು ಬೇಸರವಿಲ್ಲದೆ ಈಗಲೂ ಹಾಡುತ್ತಿರುವ ಇಂಡಿಯಾ ಸೆಕ್ರೆಟರಿ ಮಿಸ್ಟರ್ ಅಮೆರಿ ಮತ್ತು ಈ ಸಲ ಲೋರ್ಡ್ಸ ಸಭೆಯ ತನ್ನ ಭಾಷಣದಲ್ಲಿ ಅಮೆರಿಯನ್ನೂ ಹಿಂದೆ ಹಾಕಿಬಿಟ್ಟಿರುವ ಇಂಡಿಯಾ ಅಂಡರ್ ಸೆಕ್ರೆಟರಿ ಲೋರ್ಡ್ ಡಿವೋನ್‌ಶಾಯರುಗಳು ಎಷ್ಟು ಕಣ್ಣು ಕೆಂಪು ಮಾಡಿಕೊಳ್ಳಲಿಕ್ಕಿಲ್ಲ ಕ್ರಿಪ್ಸರ ಯಥಾರ್ಥೋಕ್ತಿಯಿಂದ!

ಹಿಂದೂ ದೇಶದ ಗೊಡವೆಯೇ ಇಲ್ಲ.

ಹಿಂದು ದೇಶದ ಗೊಡವೆಯೇ ಬ್ರಿಟಿಷ್ ಸರಕಾರಕ್ಕಿರುವಂತಿಲ್ಲ. ನ್ಯೂಝೀಲೆಂಡಿನಂತಹ ಚಿಕ್ಕ ವಸಾಹತಿನಷ್ಟರ ಸ್ಥಾನಮಾನಕ್ಕೂ ಅದು ಅರ್ಹವಾಗಿಲ್ಲ ಬ್ರಿಟಿಷ್ ಸರಕಾರದ ದೃಷ್ಟಿಯಲ್ಲಿ. ಪ್ರಕೃತದ ಪರಿಸ್ಥಿತಿಯಲ್ಲಿ ಹಿಂದು ದೇಶದ ಬಿಕ್ಕಟ್ಟನ್ನು ಪರಿಹರಿಸದೆ ಹಾಗೆಯೇ ಬಿಡುವುದು ದೊಡ್ಡ ತಪ್ಪು. ಯಾರಾದರೂ ತನ್ನನ್ನು ಹಿಂದೂ ದೇಶಕ್ಕೆ ಹೋಗ ಹೇಳಿದರೆ ತಾನು ಅಲ್ಲಿಗೆ ಹೋಗಲು ಸಿದ್ಧನಿರುವೆನೆಂದು ಸರ್ ಸ್ಟಾಫೋರ್ಡರೆಂದಿರುವರು. ಅವರು ಹಿಂದು ದೇಶಕ್ಕೆ ಕಳುಹಿಸಲ್ಪಟ್ಟರೆ ಹಿಂದೀ ಬಿಕ್ಕಟ್ಟನ್ನವರಿಗೆ ಪರಿಹರಿಸಲು ಸಾಧ್ಯವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅದು ಚರ್ಚಿಲ್ ಕೂಟದವರಿಗೆಂದಿಗೂ ಸಹ್ಯವಾಗಲಿಕ್ಕಿಲ್ಲ. ಹಿಂದು ದೇಶವು ಇನ್ನೊಂದು ಪರರಾಷ್ಟ್ರದ ಆಕ್ರಮಣಕ್ಕೊಳಗಾಗಬೇಕೆಂದು ತೋರುತ್ತದೆ— ಬ್ರಿಟಿಷ್ ಸರಕಾರದ ದೃಷ್ಟಿಯಲ್ಲದು ಸ್ವಾತಂತ್ರ್ಯಾರ್ಹತೆ ಪಡೆಯಬೇಕಾದರೆ!

ಹಿಂದು ದೇಶವನ್ನಾಳುವುದಾರು?

"ಹಿಂದೀ ಸಿವಿಲ್ ಸರ್ವಿಸಿನಲ್ಲಿರುವ ಯುರೋಪಿಯನರು ಕೇವಲ 573 ಮಂದಿ. ಅಂದ ಮೇಲೆ ಹಿಂದುದೇಶವನ್ನು ಬ್ರಿಟಿಷರಾಳುವುದೆಂದು ಹೇಳುವುದು ವಿಕಟಹಾಸ್ಯವಾಗಿದೆ." ಇಂಡಿಯಾ ಅಂಡರ್ ಸೆಕ್ರೆಟರಿಗಳಾದ ಡ್ಯೂಕ್ ಆಫ್ ಡಿವೋನ್ ಶಾಯರರು, ಹಿಂದೀ ಪ್ರಶ್ನೆಯ ಕುರಿತು ಲೋರ್ಡ್ಸ ಸಭೆಯಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಹೇಳಿದ ಮಾತಿದು. ಸಿವಿಲ್ ಸರ್ವಿಸಿನ ಮಾತಂತಿರಲಿ, ಹಿಂದೀಯರೊಬ್ಬರೇ ವೈಸರಾಯರಾಗಿ ನೇಮಿಸಲ್ಪಟ್ಟರೆ ಹಿಂದುದೇಶಕ್ಕೆ ಸ್ವಾತಂತ್ರ್ಯ ದೊರೆತಂತಾಗುವುದೇ? ನಿಜವಾದ ಅಧಿಕಾರದ ಸೂತ್ರವನ್ನು ಬ್ರಿಟನು ಭದ್ರಮುಷ್ಟಿಯಿಂದ ಹಿಡಕೊಂಡಿರುವಾಗ ಅದರ ವಾಹಕರು ಯಾರಾದರೇನು? ಹಿಂದುದೇಶದ ವಿದೇಶಾಂಗ ಪ್ರಶ್ನೆಯನ್ನು ನಿರ್ಧರಿಸುವವರಾರು? ಹಣಕಾಸು ಮತ್ತು ಸೇನೆಯ ಮೇಲೆ ನಿಜವಾದ ಅಧಿಕಾರ ನಡೆಸುವವರಾರು? ಬ್ರಿಟಿಷ್ ಸರಕಾರವೇ? ಅವರ ಹಿಂದೀ ಅಧಿಕಾರಿಗಳೇ?

ರಾಜಾಜಿಯವರ ಆತುರ!

ಬ್ರಿಟಿಷರಿಗಿಂತಲೂ ರಾಜಾಜಿಯವರು ಬ್ರಿಟಿಶಿನ ಹಿತಸಾಧಿಸಲು ಮುಂದಾಗಿರುವಂತೆ ತೋರುತ್ತದೆ ಅವರ ಇತ್ತಲಾಗಿನ ಭಾಷಣಗಳನ್ನು ನೋಡಿದರೆ. ಬ್ರಿಟನು ತನ್ನ ಹಿತ ಮತ್ತು ಪೂರ್ವದ ಯುದ್ಧವನ್ನು ಜಯಶೀಲವಾಗಿ ನಡಿಸುವ ದೃಷ್ಟಿಯಿಂದ ಕಾಂಗ್ರೆಸಿನ ಕೋರಿಕೆಗಳಿಗೊಪ್ಪಿ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ರಚಿಸಬೇಕೆಂದೇ ರಾಜಾಜಿಯವರ ಇತ್ತಲಾಗಿನ ಭಾಷಣಗಳ ಸುರಿಮಳೆಯ ಪಲ್ಲವಿ. ಪ್ರಕೃತದ ಸಂದಿಗ್ಧ ಪರಿಸ್ಥಿತಿಯಲ್ಲಿ ಹಿಂದೀಯರು ಅಧಿಕಾರ ಪಡೆಯಲು ಅಷ್ಟೊಂದು ಆತುರ ಪಡಬೇಕೇಕೆ? ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ನಿರೀಕ್ಷಿಸುತ್ತಾ ತಣ್ಣಗಿರುವುದು ಮೇಲಲ್ಲವೇ?

THE TROPICAL
INSURANCE COMPANY LTD.,
H. O. **NEW DELHI**

WANTED

Immediately Organisers in our rapid expansion scheme for the following Centres in the District of South Kanara. Well educated young local men with energy, push and initiative willing to take to Life Insurance career are selected and trained as probationers. Initial Salary of Rs. 30/- per month **besides commission on personal business. No guarantee of business.**

1. Mangalore City, 2. Buntwal, 3. Puttur. 4. Kasaragod. 5. Karkala 6. Udipi, 7. Coondapoor.

Apply with credentials to:-

M. Sunderram Shetty,
BRANCH MANAGER,
THE TROPICAL INSURANCE CO, LTD.,
MANGALORE.

ನೋಟೀಸು.

ಉಡುಪಿ ಗ್ರಾಮದ ಪಿಲ್ಲಾರಿ ಮನೆ ವೆಂಕಪ್ಪ ಶೆಟ್ಟರ ಮೊಮ್ಮಗಳ ವ [illegible] ಅಣ್ಣ ಶೆಟ್ಟರ ಮಗಳು ಲಚ್ಚಮ್ಮ ಶೆಡ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ, ನನ್ನ [illegible] ಶೆಡ್ತಿಗೆ ಕುಂದಾಪುರ ತಾಲೂಕ [illegible] ವೆಂಕಪ್ಪ ಶೆಟ್ಟರು ರೂ 800ಕ್ಕೆ ಬರೆಕೊಟ್ಟ ಈಡು ದಸ್ತಾವೇಜಿನ ಅಸಲು ಬದ್ಧ ಹಣದ ಬಗ್ಗೆ ನನ್ನ ಅಕ್ಕ ಸದಿಯಮ್ಮ ಶೆಡ್ತಿಯು ಇದಿಯಾಗಿ ಸದ್ರಿಯವರ ಮೇಲೆ ಹಾಕಿದ ಕುಂದಾಪುರ ಡಿಮ್ಯು ಕೋರ್ಟ್ ಕೃಮ ನಂಬ್ರ 154/1934ನೇ ಡಿಕ್ರಿ ಹಣ ಮತ್ತು ನನ್ನ ಅಕ್ಕ ಅನಂತ ಶೆಟ್ಟಿಗೆ ಅನಗಳ್ಳಿ ಗ್ರಾಮದ [illegible] ವೆಂಕಟರಮಣ [illegible] ಗ್ರಾಣಿಗಳು ತಾ. 10-5-1922 ರಲ್ಲು ರೂ.2000ಕ್ಕೆ ಬರೆಕೊಟ್ಟ ಈಡು ದಸ್ತಾವೇಜಿನ ಅಸಲು ಬದ್ಧ [illegible] ಕುಂದಾಪುರ ತಾಲೂಕು [illegible] ದ್ದಿರುವ [illegible] ಭಟ್ಟರ ಮಗ [illegible] ಭಟ್ಟರು ಭೋಗ್ಯಾದಿ ಅದಾ ದಸ್ತಾವೇಜನ್ನು ಬರಿಸಿಕೊಂಡ ಪ್ರಕಾರ ಅವರು [illegible] ನನ್ನ ತಂದೆ ಅಣ್ಣ ಶೆಟ್ಟರು ಎಲ್ಲಾ ಮಕ್ಕಳ ಬಗ್ಗೆ ಮಾಡಿದ ಫಂಡಾಗಿರುವದರಿಂದ ಅವರಲ್ಲಾರೂ ಅಂದರೆ ನಾನು, ನನ್ನ ಅಕ್ಕ [illegible] ಶೆಡ್ತಿ ಮತ್ತು ನನ್ನ ತಂಗಿ [illegible] ಶೆಡ್ತಿಯ ಮಕ್ಕಳು [illegible] ಮತ್ತು [illegible] ಅದನ್ನು ಪಡಿಯಲಿಕ್ಕೆ ಅರ್ಹರಾಗಿರುತ್ತೇವೆ. ಅದ್ದರಿಂದ ಸದ್ರಿ ಹಣಗಳನ್ನು ಪಡಿಯಲಿಕ್ಕೆ ಸದ್ರಿ ಸದಿಯಮ್ಮ ಶೆಡ್ತಿ ಒಬ್ಬಳಿಗೇನೇ ಯಾತರದ ಹಕ್ಕು ಇರುವದಿಲ್ಲ. ಸದ್ರಿ ಹಣಗಳನ್ನು ಪಡೆಯಲು ನಮಗಿರುವ ಹಕ್ಕನ್ನು ಸದ್ರಿ ಸದಿಯಮ್ಮ ಶೆಡ್ತಿ ಒಬ್ಬಳಿಂದಲೇ ಯಾರಾದರೂ ಟ್ರಾನ್ಸ್‌ಫರ್ ಪಡೆದರೆ ಅದು ನನಗೆ ಯಾ ನನ್ನ ತಂಗಿ ಮಕ್ಕಳಿಗೆ [illegible] ವ ಕರದಲ್ಲಿಯೂ ಬಾಧಿಕವಾಗಲಿಕ್ಕಿಲ್ಲ. ಆ ಕುರಿತು ನಮ್ಮೊಳಗೆ ರಿಜಿಸ್ತ್ರಿ [illegible] ತಕರಾರು [illegible] ಆಗಿಯದೆ. ಶಿವರಾಮ.

[illegible] ಎರಡುಗೆರೆ ಲಚ್ಚಮ್ಮ ಶೆಡ್ತಿ ರುಜು

ಹರಕೆಗಿದೆ-ಔಷಧಿಗಿಲ್ಲ!

"ಅಯ್ಯಾ, ನನ್ನ ಮಗುವೊಂದು ಬದುಕುವ ಸಂಭವ ತೋರುವುದಿಲ್ಲ. ತಿಂದದ್ದೆಲ್ಲ ಹೊಂಕಡಿಯಾಗಿ ಹೋಗುತ್ತದೆ. ದೇಹವು ಬಹಳ ಕ್ಷೀಣವಾಗಿ ಎಲುಬು ಮತ್ತು ಚರ್ಮ ಮಾತ್ರವಿದೆ. ನಿಮಿತ್ತದಲ್ಲಿ ಕೇಳಿದಾಗ ಮಾರಣಕಟ್ಟೆಯ ಹರಕೆ ಬಾಕಿಯಿದೆಯೆಂದು ತೋರಿಬಂದಿದೆ. ಆದುದರಿಂದ ನಾಡದು ಗುರುವಾರದಿಂದ ನನಗೆ ನಾಲ್ಕೈದು ದಿವಸ ಕೆಲಸಕ್ಕೆ ಬರಲಾಗುವುದಿಲ್ಲ. ಇನ್ನೊಬ್ಬಳನ್ನು ಕಳುಹಿಸುತ್ತೇನೆ ಬದಲಿಗೆ" ಎಂದಳು ನಮ್ಮ ಮನೆಕೆಲಸದ ತುಂಗು ಮುಂಜಾನೆ ಬಂದವಳೆ. ಕಣ್ಣೀರು ತುಂಬಿ ನೋರ ಹೊಮ್ಮುವುದರಲ್ಲಿರುವುದನ್ನವಳು ಸೆರಗಿಂದೊರಸಿಕೊಂಡಳು. ಅವಳ ಹಿಂದಿನೆರಡು ಮಕ್ಕಳು ತೀರಿಹೋಗಿದ್ದುವು. ಮೂರನೇದರ ಗತಿಯೂ ಹಾಗೆಯೇ ಆಗುವುದೇ ಎಂದು ತಳಮಳಗೊಂಡಿದ್ದಳು.

"ಮಗುವನ್ನು ಆಸ್ಪತ್ರೆಗೊಯ್ದು ಪರೀಕ್ಷೆ ಮಾಡಿಸಿ ಮದ್ದು ತಾ" ಎಂದು ನಾನು ಅವಳೊಡನೆ ಹಲವು ಬಾರಿ ಒತ್ತಾಯ ಮಾಡಿದರೂ, "ಯಾಕೆ ಮಣ್ಣಿಗೆ? ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನಾನು ಹಲವು ಸಲ ಔಷಧಿ ತಂದು ನೋಡಿದ್ದೇನೆ. ಅವರೇನೋ ಬಣ್ಣದ ನೀರು ಕೊಡುತ್ತಾರೆ. ಅದನ್ನು ನಮಗೆ ದೊಡ್ಡವರಿಗೆ ತೆಗೆದುಕೊಳ್ಳುವುದಕ್ಕೇನೇ ಸಾಧ್ಯವಾಗುವುದಿಲ್ಲ. ಚಿಕ್ಕ ಮಗುವಿಗೆ ಕೊಡುವುದಾದರೂ ಹೇಗೆ? ಬೇಕಷ್ಟು ಹಾಲು ತುಪ್ಪ ತೆಗೆದುಕೊಳ್ಳುವ ನಿಮಗಾದೀತು ಆ ಮದ್ದೆಲ್ಲ. ನಮ್ಮಂಥ ಬಡವರದನ್ನು ತೆಗೆದುಕೊಂಡರೆ ಮರುದಿನ ಏಳಲಾರದಂತಾದೀತೆ"ಂದು ತುಂಗುವು ಬಾಯಿ ಹಾರಿಸಿದ್ದಳು. ಯಾರಾದರೂ ಡಾಕ್ಟರರನ್ನು ಕರೆಸಿ ಮಗುವನ್ನು ಪರೀಕ್ಷೆ ಮಾಡಿಸೆಂದರೆ, "ಅನ್ನಕ್ಕೆ ಗತಿಯಿಲ್ಲದ ನಾವು ಡಾಕ್ಟರರನ್ನು ಕರೆಸಲು ದುಡ್ಡಿಗೆಲ್ಲಿಗೆ ಹೋಗುವುದು? ನಮ್ಮ ನೆರೆಮನೆಯ ರುಕ್ಮಕ್ಕನು ಕಠಿಣ ಕಾಯಿಲೆಯಲ್ಲಿದ್ದ ಗಂಡನನ್ನು ಪರೀಕ್ಷಿಸಲು ಡಾಕ್ಟರರನ್ನು ಕರೆಸಿ ಅವರ ಬೀಲಿನ ಹಣ ತೆರಲು ಬೆಂಡೋಲೆ ಕೂಡಾ ಅಡವಿಡಬೇಕಾಯಿತು. ಅಷ್ಟು ಮಾಡಿಯೂ ಗಂಡನಾದರೂ ಬದುಕಿದನೇ? ಮೊನ್ನೆ ತೀರಿಹೋದ." ಎಂದು ವಾದಿಸಿದ್ದಳು.

ಮಾರಣಕಟ್ಟೆಗೆ ಹರಕೆ ಸಲ್ಲಿಸಲು ಹೋಗುವ ಪ್ರಸ್ತಾಪವು ನನ್ನಲ್ಲೊಮ್ಮೆಯೇ ಉದ್ವೇಗವನ್ನುಂಟುಮಾಡಿತು. "ತುಂಗು, ನೀನೀಗ ಒಳಗೆ ಹೋಗಿ ಕೆಲಸ ಮಾಡು. ಮಾರಣಕಟ್ಟೆಗೆ ಹೋಗುವುದು ನಾಡದಲ್ಲವೇ? ಇವತ್ತಲ್ಲವಲ್ಲ!" ಎಂದು ನಾನು ಒಗ್ಗನೆ ಕೂತಲ್ಲಿಂದ ಎದ್ದು ಅಂಗಿ ಹಾಕಿಕೊಂಡು ಹೊರಹೊರಟೆ. ತುಂಗುವಿನ ಮನೆಯು ನಮ್ಮ ಮನೆಯಿಂದ ಹೆಚ್ಚು ದೂರವಿರಲಿಲ್ಲ. ನಾನು ನೆಟ್ಟಗೆ ಅಲ್ಲಿಗೆ ನಡೆದೆ. ಅವಳ ಮಗುವನ್ನು ನೋಡಿದೆ. ಅದು ಕೇವಲ ಹುಳದ ಬಾಧೆಯೆಂದು ನಿರ್ಧರಿಸಿಕೊಂಡೆ. ನನ್ನ ಮಗುವಿಗೂ ಹುಳದ ಬಾಧೆಯಿಂದ ಅದೇ ರೀತಿ ಆಗಿತ್ತು. ಅಲ್ಲಿಂದ ಕೂಡಲೇ ನನ್ನ ಮಿತ್ರ ಡಾಕ್ಟರರೊಬ್ಬರ ರೋಗಿಗೆ ಹೋಗಿ ಹುಳಕ್ಕೆ ಔಷಧಿ ತಂದು ಮನೆಗೆ ಬಂದೆ. ಆಗ ತುಂಗುವೂ ನನ್ನವಳೂ ಮಾರಣಕಟ್ಟೆಯ ಮಹಿಮೆಯ ಕುರಿತು ಮಾತಾಡುತ್ತಿದ್ದರು. ನಾನು ಒಮ್ಮೆಯೇ ಅಡಿಗೆ ಕೋಣೆಗೆ ಧಾಳಿಯಿಟ್ಟು, "ತುಂಗು, ಇಗೋ ಈ ಔಷಧಿಯನ್ನು ಅರ್ಧ ಕುಡ್ತೆ ಬಿಸಿನೀರಿಗೆ ಹಾಕಿ ಮಗುವಿಗೆ ಕುಡಿಸು. ಈಗಲೇ ಹೋಗು. ಮತ್ತೆ ಕೇಳೋಣವಂತೆ ನಿನ್ನ ಮಾರಣಕಟ್ಟೆಯ ಪುರಾಣ!" ಎಂದೆ ನಾನು

"ಅಯ್ಯಾ, ಇನ್ನು ನಿಮ್ಮದೊಂದು ಮದ್ದು ಮಾಡುವುದು ಬಾಕಿಯಾಗಬಾರದೆಂದೇ? ನನಗೆ ಮದ್ದು ಮಾಡಿ ಮಾಡಿ ಸಾಕಾಗಿದೆ. ಮಾರಣಕಟ್ಟೆಗೆ ಹೋಗದೆ ಯಾವ ಔಷಧಿ ಮಾಡಿದರೂ ಪ್ರಯೋಜನವಿಲ್ಲವಂತೆ" ತುಂಗು ಹೇಳಿದಳು.

"ಮಾರಣಕಟ್ಟೆಗೆ ಹೋಗುವುದು ನಾಡದಲ್ಲವೇ? ಇವತ್ತು ಈ ಔಷಧಿ ಕೊಡು. ನಾಳೆಯೇ ನಿನ್ನ ಮಗುವಿಗೆ ಸೌಖ್ಯವಾಗದಿದ್ದರೆ ನೀವು ಮಾರಣಕಟ್ಟೆಗಲ್ಲ, ಅದರಾಚೆ ಕಟ್ಟೆಗೆ ಬೇಕಾದರೂ ಹೋಗಬಹುದು. ಅದರ ವೆಚ್ಚವನ್ನೆಲ್ಲಾ ನಾನು ನೋಡುತ್ತೇನೆ. ಈಗ ನಿನ್ನ ಅಧಿಕ ಪ್ರಸಂಗವನ್ನೆಲ್ಲಾ ನಿಲ್ಲಿಸಿ ಕೂಡಲೆ ಹೋಗಿ ಇದನ್ನು ನಿನ್ನ ಮಗುವಿಗೆ ಕೊಡು. ಅದು ನಾಳೆಯೇ ಸೌಖ್ಯವಾದರೆ ಮಾತ್ರ, ನಿನ್ನ ನಿಮಿತ್ತ, ಹರಕೆಗಳನ್ನೆಲ್ಲಾ ಇನ್ನು ಮುಂದೆ ಬಿಟ್ಟುಬಿಡಬೇಕು. ಹೋಗು ಬೇಗ" ಎಂದೆ ನಾನು ಕಠಿಣವಾಗಿ. ತುಂಗುವು ಮತ್ತೆ ವಾದಿಸಲು ಧೈರ್ಯವಿಲ್ಲದೆ "ಅಯ್ಯಪ್ಪ. ನೀವು ಸಿಟ್ಟುಮಾಡಬೇಡಿ. ನನ್ನ ಮಗುವಿಗೆ ನಾಳೆಯೇ ಸೌಖ್ಯವಾದರೆ ನೀವು ಹೇಳಿದಂತೆ ಕೇಳುವುದು ಮಾತ್ರವಲ್ಲದೆ ನಿಮ್ಮ ಪಾದ ತೊಳೆದು ತೀರ್ಥ ತೆಗೆದುಕೊಳ್ಳುತ್ತೇನೆ" ಎಂದು ಹುಳದ ಔಷಧಿ ಪೊಟ್ಟಣವನ್ನು ನನ್ನಿಂದ ತೆಗೆದುಕೊಂಡು ತುಂಗು ಅವಸರದಿಂದ ಹೊರಟುಹೋದಳು.

ೲೲ ೲೲ ೲೲ

ಮಧ್ಯಾಹ್ನ ಸುಮಾರು 12 ಘಂಟೆ ಹೊತ್ತಿಗೆ ತುಂಗುವು ಗಲಿಬಿಲಿಗೊಂಡು ಪುನಹ ಮನೆಗೆ ಓಡಿಬಂದು "ಅಯ್ಯಾ, ಮಗುವಿನ ಹೊಟ್ಟೆಯಿಂದ ಲೆಕ್ಕವಿಲ್ಲದಷ್ಟು ಹುಳಗಳು ಹೊರಬಿದ್ದಿರುತ್ತವೆ. ಈಗ ಬೋಧವೇ ಇಲ್ಲದಂತಾಗಿದೆ ಅದಕ್ಕೆ. ಏನು ಮಾಡುವುದು?" ಎಂದು ಕೇಳಿದಳು.

"ಗಾಬರಿಪಡಬೇಡ ತುಂಗು. ಇನ್ನೊಮ್ಮೆ ಬರೀ ಬಿಸಿನೀರು ಕುಡಿಸದಕ್ಕೆ. ಅದರ ಹೊಟ್ಟೆಯಲ್ಲಿ ಹಿಂಡುಗಟ್ಟಿರುವ ಹುಳಗಳೆಲ್ಲಾ ಖಾಲಿಯಾಗಲಿ, ಸುಮಾರು 2 ಘಂಟೆ ಹೊತ್ತಿಗೆ ಸ್ವಲ್ಪ ಮಜ್ಜಿಗೆ ಹಾಕಿ ಅನ್ನ ಕೊಡು. ಅರ್ಧ ಕುಡ್ತೆ ಮಜ್ಜಿಗೆ ಇಲ್ಲಿಂದಲೇ ಕೊಂಡುಹೋಗು. ಮಗುವಿನ ಹೊಟ್ಟೆ ಈಗ ಚಿಕ್ಕದಾಗಿರುವುದಿಲ್ಲವೇ?" ಎಂದೆ ನಾನು.

"ಹೊಟ್ಟೆ ಬಹಳ ಚಿಕ್ಕದಾಗಿದೆ. ಅಯ್ಯ ನೀವು ಹೇಳಿದಂತೆ ಮಗುವಿಗೆ ಸೌಖ್ಯವಾದರೆ ನನ್ನ ಪುಣ್ಯ. ಎರಡನ್ನು ಕಳಕೊಂಡಿರುವ ಪಾಪಿ ನಾನು. ದೇವರು ಇದನ್ನಾದರೂ ನನ್ನ ಮುಖಕ್ಕೆಸೆದು ಹೋಗುತ್ತಿದ್ದರೆ!" ಒಂದೇ ಸವನೆ ಕಣ್ಣೀರಿಟ್ಟಳು ತುಂಗು.

ತಾಯಿಯ ಕರುಳಿನ ಕೂಗನ್ನು ಕಂಡು ನನಗೂ ಸಹಿಸಲಾರದಾಯಿತು. "ಅಳುವಿ ಯಾಕೆ? ನಿನ್ನ ಮಗುವಿಗೆ ನಾಳೆಯೇ ಖಂಡಿತ ಗುಣವಾಗುತ್ತದೆ" ಎಂದೆ ನಾನು ಓದಲು ಉಪ್ಪರಿಗೆ ಮೆಟ್ಟಲೇರುತ್ತಾ.

ೲೲ ೲೲ ೲೲ

ಅರುಣೋದಯದಲ್ಲೇ ಕೆಲಸಕ್ಕೆ ಬರುವ ತುಂಗುವು ಮರು ದಿನ ಬಹಳ ಹೊತ್ತು ಮೂಡಿಬಂದರೂ ಬರಲೇ ಇಲ್ಲ. 'ಬೇಡವಾದ ಕೆಲಸಕ್ಕೆ ಕೈಹಾಕುವುದೆಂದರೆ ನಿಮಗೆ ಬಹಳ ವಿನೋದ! ಏನಾಯಿತೋ ಏನೋ ತುಂಗುವಿನ ಮಗುವಿಗೆ! ಪ್ರಾಯಶಃ ಏನೋ ಹೆಚ್ಚು ಕಡಿಮೆ ಆಗಿರಬೇಕು. ಇಲ್ಲವಾದರೆ ಎಷ್ಟುಮಾತ್ರಕ್ಕೂ ಅವಳು ಕೆಲಸಕ್ಕೆ ಬರಲು ಇಷ್ಟು ತಡಮಾಡುತ್ತಿದ್ದಿಲ್ಲ. ತನಗೆ ಬರಲಾಗುವುದಿಲ್ಲೆಂದು ಹೇಳಿಯಾದರೂ ಕಳುಹಿಸುತ್ತಿದ್ದಳು." ಎಂದಳು ನನ್ನಾಕೆ ಉಪ್ಪರಿಗೆ ಹತ್ತಿ ನಾನು ಓದುವಲ್ಲಿಗೆ ಬರುತ್ತಾ. ನಾನು ಸ್ವಲ್ಪ ಸಂದೇಹಗ್ರಸ್ತನಾದೆ. ಯಾಕೆಂದರೆ ಸುಮಾರು 12 ಘಂಟೆ ಹೊತ್ತಿಗೆ ಮನೆಗೆ ಬಂದುಹೋದ ತುಂಗುವು ಆ ಮೇಲೆ ಏನಾಯಿತೆಂದು ಬಂದು ಹೇಳಲಿಲ್ಲ. ಮರು ದಿನವಾದರೂ ಎಂದಿಗಿಂತಲೂ ಬೇಗ ಬಂದು ಮಗುವಿನ ಪರಿಸ್ಥಿತಿಯನ್ನು ನನಗೆ ತಿಳಿಸುವಳೆಂಬ ನನ್ನ ಆತುರವನ್ನು ನನ್ನಾಕೆಯು ಮತ್ತಷ್ಟು ಹೆಚ್ಚಿಸಿದಳು.

ಸ್ವಲ್ಪ ಹೊತ್ತಿನಲ್ಲೇ, "ಅಮ್ಮಾ-ಅಮ್ಮಾ! ಎಲ್ಲಿ ಹೋಗಿರುವಿರಿ?" ಎಂದು ಕೂಗಿದಳು ತುಂಗು ಕೆಳಗಿಂದ. ನಾವಿಬ್ಬರೂ ಕೆಳಗಿಳಿದು ಬರಲು ಒಂದೇ ಸವನೆ ಉಪ್ಪರಿಗೆ ಮೆಟ್ಟಲಕಡೆಗೆ ಧಾವಿಸಿದೆವು. ಇಬ್ಬರೂ ಅವಸರದಲ್ಲಿ ಒಬ್ಬರೊಬ್ಬರನ್ನು ದೂಡಿಕೊಂಡೆಂಬಂತೆ ಕೆಳಗಿಳಿದು ಬಂದೆವು. ಒಮ್ಮೆಯೇ ನಾನು ತುಂಗುವಿನ ಮುಖದ ಕಡೆಗೆ ದೃಷ್ಟಿಹರಿಸಿದೆ. ಅಲ್ಲಿ ಆನಂದದ ನಲಿದಾಟವನ್ನು ಕಂಡು ಅತ್ಯುಲ್ಲಾಸಗೊಂಡೆ. ಅವಳು ಮಗುವನ್ನು ನನ್ನ ಕಾಲಮೇಲಿಟ್ಟು ಉದ್ದಂಡ ನಮಸ್ಕಾರಮಾಡಿದಳು. ಅವಳ ಕಂಗಳಿಂದ ಸಂತತ ಧಾರೆಯಾಗಿ ಆನಂದಭಾಷ್ಪವು ಹರಿದುಬರುತಿತ್ತು. ಒಂದೇ ಒಂದು ಮಾತನ್ನಾದರೂ ಹೇಳಲು ಅಸಾಧ್ಯವಾಗಿತ್ತವಳಿಗೆ.

ನಾನು ಆನಂದ ತುಂದಿಲಾಂತರಂಗನಾಗಿ ಮುಂದೇನು ಮಾಡುವುದೆಂದು ತಿಳಿಯದೆ ಗೊಂಬೆಯಂತೆ ನಿಂತುಬಿಟ್ಟೆ. ಆದರೆ ನನ್ನಾಕೆ ನನಗೆ ನೆರವಾದಳು. ಅವಳು ತುಂಗುವಿನ ಮಗುವನ್ನೆತ್ತಿ ಗಲ್ಲ ಹಿಡಿದು ಲ್ಲಾಡಿಸಿದಳು. ಅದು ಒಮ್ಮೆಯೇ ಕೂಗಿತು. ತುಂಗುವು ಮಗುವನ್ನು ನನ್ನಾಕೆಯ ಕೈಯಿಂದ ತೆಗೆದುಕೊಂಡು ಸಂತೈಸಿದಳು.

"ನೀನೇಕೆ ನಿನ್ನೆ ಸಂಜೆ ಮನೆಗೆ ಬಂದು ಮಗುವಿನ ಪರಿಸ್ಥಿತಿಯನ್ನು ತಿಳಿಸಲಿಲ್ಲ ತುಂಗು? ಇವತ್ತು ಬೆಳಿಗ್ಗೆ ಬರಲು ಇಷ್ಟು ಹೊತ್ತೇನು? ನಮ್ಮನ್ನು ಬಹಳ ಗಡಿಬಿಡಿಯಲ್ಲಿ ಹಾಕಿದೆಯಲ್ಲ" ಎಂದೆ ನಾನು.

"ಅಯ್ಯಾ, ನಿನ್ನೆ ರಾತ್ರಿಯ ವರೆಗೆ ಮಗುವಿಗೆ ಬೋಧವೇ ಇರಲಿಲ್ಲ. ನಾವು ಗಡಿಬಿಡಿಯಾಗಿದ್ದೆವು. ನಾನು ಸ್ವಲ್ಪ ಮಜ್ಜಿಗೆ ಅನ್ನ ಕೊಟ್ಟದ್ದೂ ಬಲಾತ್ಕಾರದಿಂದ. ಆ ಮೇಲೆ ನಾವೆಲ್ಲಾ ಮಲಗುವ ಹೊತ್ತಿಗೆ ಮಗುವಿಗೆ ಸ್ವಲ್ಪ ವಿಚಾರ ಬಂತು. ಆಗ ಸ್ವಲ್ಪ ಗಂಜಿತೆಳಿ ಕೊಟ್ಟೆ. ಅಳುವುದಕ್ಕೆಲ್ಲಾ ಆರಂಭಮಾಡಿತು. ಸುಮಾರು 10 ಘಂಟೆ ರಾತ್ರಿಗೆ ಪುನಹ ಎಚ್ಚರವಾದಾಗ ಸ್ವಲ್ಪ ಗಂಜಿ ಮತ್ತು ತೆಳಿ ಕೊಟ್ಟೆ. ಮಗುವಿಗೆ ಸಂಬೋಧ ಬಂತು. ನಮಗೆ ಹೊಸ ಜೀವವೇ ಬಂದಂತಾಯಿತು. ಸ್ವಲ್ಪ ಹೊತ್ತಿನ ಮೇಲೆ ಪುನಹ ಅಮಲು ಬಂದು ಮಲಗಿದ ಮಗುವು ಏಳುವಾಗ ಹೊತ್ತೇರಿ ಬಂದಿದ್ದಿತು. ಅದು ಸೌಖ್ಯವಾಗಿರುವುದನ್ನು ಕಂಡು ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ. ಅದಕ್ಕೆ ಪ್ರಾಣದಾನ ಮಾಡಿದವರು ನೀವು. ಮೊದಲದನ್ನು ನಿಮ್ಮ ಪಾದಕ್ಕೊಪ್ಪಿಸಬೇಕೆಂದು, ಬೆಳಿಗ್ಗೆ ಸ್ವಲ್ಪ ಗಂಜಿ ಕೊಟ್ಟು ಅದನ್ನಿಲ್ಲಿ ತರುವಾಗ ತಡವಾಯಿತು. ಅಯ್ಯಾ ಬಡವರಾದ ನಾವು ನಿಮ್ಮ ಋಣವನ್ನು ಹೇಗೆ ತೀರಿಸಲಿ! ನೀವು ಮಾಡಿದ ಉಪಕಾರವನ್ನು........." ಮುಂದೆ ಮಾತಾಡದಾದಳು ತುಂಗು. ಕೃತಜ್ಞತೆಯ ಪ್ರತಿಮೂರ್ತಿಯಾಗಿ ನಿಂತಿದ್ದಳು.

"ನಾನು ಮಾಡಿದ ಉಪಕಾರವೆಷ್ಟೆಂದು ಬಲ್ಲೆಯಾ ತುಂಗು? 4½ ಆಣೆ ಬೆಲೆಯ ಹೊಟ್ಟೆ ಹುಳದ ಔಷಧಿಯನ್ನು ನಿನ್ನ ಮಗುವಿಗೆ ತಂದುಕೊಟ್ಟದ್ದಷ್ಟೆ. ಹೊಟ್ಟೆ ಹುಳದ ಹೊರತು ಬೇರೇನೂ ರೋಗವೇ ಇರಲಿಲ್ಲ ನಿನ್ನ ಮಗುವಿಗೆ. 4½ ಆಣೆ ಔಷಧಿಗೆ ದುಡ್ಡಿಲ್ಲದ ನೀನು ಮಾರಣಕಟ್ಟೆಯ ಹರಕೆಗೆ ಎಷ್ಟು ವೆಚ್ಚಮಾಡುತ್ತಿದ್ದೆ? ಅದಕ್ಕೆಲ್ಲಿಂದ ಹಣ ಒದಗಿಸಿಕೊಂಡೆ? ಸತ್ಯ ಹೇಳು" ಪ್ರಶ್ನಿಸಿದೆ ನಾನು.

"ನನ್ನೆರಡು ಹಳೆಯ ಕೊಪ್ಪು ಜೋಡನ್ನು ಅಡವಿಟ್ಟು 6 ರೂಪಾಯಿ ಪಡಕೊಂಡಿದ್ದೆ. ನನ್ನ ಕೈಯಲ್ಲೇನೂ ಇರಲಿಲ್ಲ. ನಿಮ್ಮ ಪಾದದಾಣೆ ಇದು ಸತ್ಯ" ಉತ್ತರವಿತ್ತಳು ತುಂಗು.

"ಔಷಧಿಗೆ ದುಡ್ಡಿಲ್ಲ. ಹರಕೆಗಿದೆಯಲ್ಲವೇ! ನಿನ್ನ ಮಗುವಿಗೆ ಸ್ವಲ್ಪ ಶಕ್ತಿ ಬರಲು ಏನಾದರೊಂದು (ಟೋನಿಕ್) ಕೊಡಬೇಕಾಗಿದೆ. ಅದನ್ನು ನಾನು ಸಂಜೆ ತಂದು ಕೊಡುತ್ತೇನೆ. ಇನ್ನು ಮುಂದೆ ಮಾರಣಕಟ್ಟೆಗೆ ಹೋಗುವ ಅವಶ್ಯವೇನೂ ಇಲ್ಲವಷ್ಟೆ" ನಾನೆಂದೆ ನಸುನಕ್ಕು.

"ಅಯ್ಯಾ, ನೀವೇ ನಮ್ಮ ಪಾಲಿನ ದೈವವಾದ ಮೇಲೆ ನಾನಿನ್ನು ಮಾರಣಕಟ್ಟೆಗೆ ಹೋಗುವುದೇಕೆ? ನೀವು ಹೇಳಿದ ಹಾಗೆ ಕೇಳುತ್ತೇನೆ. ಮಗುವಿಗೆ ಶಕ್ತಿ ಬರಲು ಕೊಡುವ ಔಷಧಿಯು ದುಬಾರಿಯೆಂದು ಹೇಳಿದರೆ ಈಗಲೆ ತಂದು ಕೊಡುತ್ತೇನೆ. ಅಯ್ಯಾ, ನೀವು ಕೈಯಿಂದ ಹಾಕಬಾರದು" ಎಂದಳು ತುಂಗು. "ಅದೆಲ್ಲಾ ಮತ್ತೆ ನೋಡುವ- ಈಗ ಹೋಗು. ಮಗುವನ್ನು ಮನೆಯಲ್ಲಿ ಬಿಟ್ಟು ಬಾ" ಎಂದು ಓದಲು ಹೊರಟೆ ನಾನು.

—ಐತಾಳ.

ರೇಡಿಯೋದಲ್ಲಿ

ಕೊಡ್ಲೆಕಲ್ ಶ್ರೀನಿವಾಸರಾಯರ ಕತೆ.

ತಾ. **27—1—1942**ರಂದು ಮೈಸೂರು ಆಕಾಶವಾಣಿಯಿಂದ ಅಖಿಲಕರ್ನಾಟಕಕ್ಕೆ ಹೇಳಲ್ಪಟ್ಟ ಕತೆ 'ಭೂತ ಸಂಚಾರ.' ಅದು 'ನಂದಾದೀಪ'ದ ಕತೆಗಳಲ್ಲೊಂದು.

ಅದರಂತೆಯೇ ಮನಮುಟ್ಟುವ ಸ್ವಾರಸ್ಯದ ಇತರ ಕತೆಗಳಿವೆ

ಕೊಡ್ಲೆಕಲ್'ರ 'ನಂದಾದೀಪ' ಪುಸ್ತಕದಲ್ಲಿ.

ಬೆಲೆ ೮ ಆಣೆ. ಒಂಭತ್ತಾಣೆಯ ಸ್ಟಾಂಪುಗಳನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುತ್ತದೆ.

ನವಭಾರತ ಬುಕ್ ಡಿಪೋ, ಉಡುಪಿ.

"Service of Mankind is Service of God"

The Bombay Life Assurance Company., Limited

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including Indian States

Udipi.

Also Offices at:-

Mangalore, Calicut, Madras, Bangalore, Trivandrum & Bombay.

ರೂಪಾಯಿಗಳು!

ವಿಕ್ಟೋರಿಯಾ ರೂಪಾಯಿಗಳಾಗಲೀ, ಬೆಳ್ಳಿಯ ನಾಣ್ಯಗಳಾಗಲೀ ನಿಮ್ಮಲ್ಲಿದ್ದು ಅವುಗಳನ್ನು ಚಲಾಯಿಸಲಾಗುವುದಿಲ್ಲವಾದರೆ ನಮಗೆ ಬರೆಯಿರಿ. ರೂಪಾಯಿಗಳಿಗೆ ರೂಪಾಯಿಗಳನ್ನು ನಾವು ಕೊಡುತ್ತೇವೆ. ನಮ್ಮ ಸೇವೆಗಾಗಿ ಏನಾದರೊಂದಿಷ್ಟು ಕೊಡಿ.

ಬಡವರಬಂಧು ಆಫೀಸು,
ಮಂಗಳೂರು, ದ. ಕ.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ವಾರದ ವಿಶೇಷ ವಾರ್ತೆ

ಐಗುಪ್ತದಲ್ಲಿ ಹೊಸ ಮಂತ್ರಿಮಂಡಲ

ವಿಚಿ ಫ್ರಾನ್ಸಿನೊಡನೆ ಸಂಬಂಧ ಕಡಿಯುವಾಗ ತನ್ನೊಡನೊಂದು ಮಾತು ಕೇಳಿಲ್ಲೆಂದು ಐಗುಪ್ತದ ಅರಸ ಫರೂಕರು ಹಿಂದಿನ ಮಂತ್ರಿಮಂಡಲವನ್ನು ಅಧಿಕಾರದಿಂದ ಹೊರದಬ್ಬಿ, ಐಗುಪ್ತದ ನೇಶನಲಿಸ್ಟ ಪಕ್ಷವಾದ ವಾಫ್ದ್ ಪಕ್ಷದ ನಾಯಕ ನಾಹಸ್ ಪಾಶಾರವನ್ನು, ಹೊಸ ಮಂತ್ರಿಮಂಡಲಿಯನ್ನು ರಚಿಸಲು ಆಮಂತ್ರಿಸಿರುವರು. ಆ ಪ್ರಕಾರ ನಾಹಾಸ್ ಪಾಶಾರವರು ತನ್ನ ಪಕ್ಷದವರನ್ನೇ ಸೇರಿಸಿ ಹೊಸ ಮಂತ್ರಿಮಂಡಲವನ್ನು ಸ್ಥಾಪಿಸಿರುವರು. ಕಳೆದ ಚುನಾವಣೆಯಲ್ಲಿ ವಾಫ್ದ್ ಪಕ್ಷೀಯರು ಭಾಗವಹಿಸದುದರಿಂದ ಪಾರ್ಲಿಮೆಂಟಿನಲ್ಲಿ ಅವರ ಪಕ್ಷದ ಸದಸ್ಯರು ಬರೇ ಕಡಿಮೆ ಸಂಖ್ಯೆ ಇದ್ದಾರೆ. ಆದುದರಿಂದ ಅವರು ಈಗಿನ ಪಾರ್ಲಿಮೆಂಟನ್ನು ಕೊನೆಗೊಳಿಸಿ, ಮಾರ್ಚ ತಾ. 30ರೊಳಗೆ ಹೊಸ ಚುನಾವಣೆಯಾಗಿ ಹೊಸ ಪಾರ್ಲಿಮೆಂಟು ಕೂಡಬೇಕೆಂದು ಆಜ್ಞಾಪಿಸಿದ್ದಾರೆ. ನಾಹಾಸ್ ಪಾಷರವರು ಐಗುಪ್ತದ ಮಿಲಿಟರಿ ಗವರ್ನರರಾಗಿ ನೇಮಿಸಲ್ಪಟ್ಟಿರುತ್ತಾರೆ. ಇದರಿಂದ ಐಗುಪ್ತದ ಜನತೆಯಲ್ಲಿ ನವ ಉತ್ಸಾಹವುಂಟಾಗಿದೆ. ಚುನಾವಣೆಯಲ್ಲಿ ವಾಫ್ದ್ ಪಕ್ಷೀಯರು ಪ್ರಬಲ ಬಹುಪಕ್ಷ ಗಳಿಸುವರೆಂಬುದರಲ್ಲಿ ಸಂದೇಹವೇ ಇಲ್ಲ.

ಖಾನ್ ಅಬ್ದುಲ್ ಗಫಾರ್ ಖಾನರ ರಾಜಿನಾಮೆ.

[illegible] ಕುರಿತು ತನ್ನ ಮನೋಧರ್ಮವನ್ನು, ಕಾಂಗ್ರೆಸಿನ ನಿರ್ಣಯಕ್ಕೆ ಪ್ರತಿಕೂಲಿಸುವುದರಿಂದ ತನಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯನಾಗಿರಲು ಸಾಧ್ಯವಿಲ್ಲೆಂದು ಗಡಿನಾಡಿನ ಗಾಂಧಿಗಳಾದ ಖಾನ್ ಅಬ್ದುಲ್ ಗಫಾರ್ ಖಾನರು ರಾಜಿನಾಮೆಕೊಟ್ಟಿರುವರು. ಆದರೆ ಅವರು ವಾಯುವ್ಯ ಗಡಿನಾಡು ಪ್ರಾಂತದ ಕಾಂಗ್ರೆಸ್ ಕಮಿಟಿಗೆ ತನ್ನ ಸಲಹೆಯಿತ್ತು ಯಥಾಪ್ರಕಾರ ಅದರ ಮಾರ್ಗದರ್ಶಿಯಾಗಿ ನಡೆ[illegible]ಸುತ್ತದೆ.

ಕಾರ್ಕೋವನ್ನು ಆವರಿಸುವ ಯತ್ನ

ಲೆನಿನ್‌ಗ್ರಾಡ್ ರಣರಂಗದಲ್ಲಿ ರಷ್ಯನರು ಪ್ರಬಲ ಧಾಳಿಯನ್ನಾರಂಭಿಸಿ ಹಲವು ಹಳ್ಳಿಗಳನ್ನು ಗೆದ್ದಿರುತ್ತಾರೆ. ಜರ್ಮನರೂ ರಿಸರ್ವ್ ಸೇನೆ ತಂದು ರಷ್ಯನರನ್ನು ಪ್ರತಿಭಟಿಸುತ್ತಿದ್ದಾರೆ. ಮಧ್ಯ ಪ್ರದೇಶದಲ್ಲಿ ಯೂ ಮಾರ್ಶಲ್ ಟಿಮೋಶೆಂಕೋರವರ ಸೇನೆಯು ಮುಂದೊತ್ತುತ್ತಿದೆ. ಮಧ್ಯದಲ್ಲಿ ಹೆಚ್ಚಿನ ಸೇನೆಯನ್ನು ತಂದು ರಷ್ಯನರನ್ನು ಸೋಲಿಸಲಾಗಿದೆಯೆಂದು ಜರ್ಮನರು ಪ್ರಕಟಿಸಿರುತ್ತಾರೆ. ಕಳೆದ 3 ತಿಂಗಳುಗಳಲ್ಲಿ ಗೊರಿಲ್ಲ ಸಂಗಡಿಗರವರು 1425 ಜರ್ಮನ್ ಆಫೀಸರುಗಳು ಮತ್ತು ಸೈನಿಕರನ್ನು ಕೊಂದಿರುತ್ತಾರೆ. 10 ಸೇತುವೆಗಳನ್ನು ಮತ್ತು ಹಲವು ಮೈಲು ರೈಲ್ವೇ ಮತ್ತು ಇತರ ರಸ್ತೆಗಳನ್ನು ನಾಶಮಾಡಿರುತ್ತಾರೆ. ದಕ್ಷಿಣದಲ್ಲಿ ಕಾರ್ಕೋವಿನ ಬಳಿ ಅತಿ ದೊಡ್ಡ ಸಮರಗಳು ನಡೆಯುತ್ತಿವೆ. ಉಕ್ರೈನಿನ ಕೈಗಾರಿಕೋದ್ಯಮದ ಈ ಪಟ್ಟಣವನ್ನು ನಾಝಿಗಳು ರಕ್ಷಿಸಿಕೊಳ್ಳಲು ಪ್ರಬಲ ಯತ್ನ ಮಾಡುತ್ತಿದ್ದಾರೆ. ರಷ್ಯನರು ಕಾರ್ಕೋವನ್ನು ಆವರಿಸಿ ಗೆಲ್ಲುವ ಹಂಚಿಕೆ ನಡಿಸಿ ದಕ್ಷಿಣ ಮತ್ತು ಉತ್ತರದಿಂದ ಆವರಿಸುತ್ತಿದ್ದಾರೆ. 7 ಡಿಗ್ರಿ ವಷ್ಟ ಮಂಜಿನ ತೀವ್ರ ಚಳಿಗಾಲದ ಪರಿಸ್ಥಿತಿಯಲ್ಲಿ ಪ್ರಬಲ ಕದನ ನಡೆಯುತ್ತಿದೆ.

ಚೈನದಲ್ಲಿ ಜಾಪಾನರ ಧಾಳಿ.

ಜಾಪಾನರು ದಕ್ಷಿಣ ಚೈನದಲ್ಲಿ, ಪ್ರಬಲ ಧಾಳಿಯನ್ನಾರಂಭಿಸಿರುವಂತಿದೆ. ಚೀನೀಯರು ಗೆದ್ದಿರುವ ಪೈಜೋ ಬಂದರನ್ನು ಜಾಪಾನರು ಅದರಿಂದ ಪುನಃ ಗೆದ್ದಿರುತ್ತಾರೆ. ಪೋಕ್ಕೋ ಎಂಬ ಸಂದು ಕಟ್ಟಿನ ಪಟ್ಟಣವು ಕಳೆದ 2 ವಾರಗಳಲ್ಲಿ ಎರಡು ಸಲ ಕೈಬದಲಾವಣೆಯಾಗಿರುತ್ತದೆ.

ರಂಗೂನಿನ ಮೇಲೆ ಎಡೆಬಿಡದೆ ವಿಮಾನ ಧಾಳಿ.

ರಂಗೂನಿನ ಮೇಲೆ ಜಾಪಾನ ವಿಮಾನಗಳು ಎಡೆಬಿಡದೆ ಧಾಳಿಯನ್ನಾರಂಭಿಸಿರುತ್ತವೆ. ಬರ್ಮ ಯುದ್ಧದಲ್ಲಿ ಈ ವರೆಗೆ ಜಾಪಾನರ, 122 ವಿಮಾನಗಳನ್ನು ಕಳಕೊಂಡಿರುತ್ತಾರೆ. ಮಾರ್ಟಬಿನಿನ ಮೇಲೆ ಜಾಪಾನರು ಯುದ್ಧ ಹಡಗಗಳ ಮೂಲಕ ಧಾಳಿ ನಡಿಸುತ್ತಿದ್ದಾರೆ. ಚೈನದಿಂದ ಹೆಚ್ಚಿನ ಸೇನೆಯು ಬರ್ಮಕ್ಕೆ ಬಂದಿರುತ್ತದೆ. ಇನ್ನು ಮುಂದೆ ಬ್ರಿಟಿಷ್ ಅಥವಾ ಅಮೇರಿಕಾನ ಸೇನೆಯು ಎಷ್ಟು ಮಾತ್ರಕ್ಕೂ ಹಿಂದೆಸರಿಯದೆ ತೀವ್ರವಾಗಿ ಹೋರಾಡುವ ನಿರ್ಧಾರ ಮಾಡಿರುವಂತಿದೆ. ಆದುದರಿಂದ ಮುಂದೆ ಭೀಷಣ ಕದನಗಳು ನಡೆಯಲಿವೆ. ಬರ್ಮ ಯುದ್ಧವು ಈಗ ತಾನೆ ಆರಂಭವಾಗಿದೆ. ಸಿಂಗಪುರದ ಮೇಲೆ ಕೂಡಾ ಜಾಪಾನರು ಯುದ್ಧ ಹಡಗಗಳ ಮೂಲಕ ಎಡೆಬಿಡದೆ ಗುಂಡಿನ ಮಳೆಗರೆಯುತ್ತಿದ್ದಾರೆ. ಸಿಂಗಪುರದ ಪೂರ್ವದಲ್ಲಿ ಚಿಕ್ಕ ದ್ವೀಪವೊಂದರಲ್ಲಿ ಜಾಪಾನರು ಇಳಿದಿರುವರೆಂದು ತಿಳಿದುಬರುತ್ತದೆ. ಜಾಪಾನರ ಧಾಳಿಯನ್ನು ಪ್ರತಿಭಟಿಸಿ ಸಿಂಗಪುರವನ್ನು ರಕ್ಷಿಸಿಕೊಳ್ಳಬಹುದೆಂಬ ವಿಶ್ವಾಸವು ಅಲ್ಲಿಯ ಸೇನಾನಾಯಕರಲ್ಲಿದೆ. ಸಿಂಗಪುರಕ್ಕೆ ಹೆಚ್ಚಿನ ಸೇನಾಸಹಾಯವನ್ನು ಆದಷ್ಟು ಬೇಗ ಕಳುಹಿಸುವ ಪ್ರಯತ್ನ ನಡೆಯುತ್ತಿದೆ. ಬೋರ್ನಿಯೋ ಮತ್ತು ಫಿಲಿಪ್ಪಾಇನ್ ಜಾಪಾನರು ಹೆಚ್ಚಿಚ್ಚು ಸೇನೆ ಕಳುಹಿಸಿ ಮುಂದೊತ್ತುವ ಪ್ರಯತ್ನ ಮಾಡುತ್ತಿದ್ದಾರೆ.

NOTICE.

The Bombay Life Assurance Company, Limited.

Notice having been given of the loss of Policy No. 35374 on the life of Mr. H. Narayana Ramakrishna Pai, Merchant, Kanhangad, Hosdrug, S. K., a duplicate Policy will be issued unless objection is lodged with us within one month from this date.

Jyotendra L. Mehta,
Managing Director.
Bombay 9-2-1942.

Degrees. Books: Medicines

Free H L. M. S M B. H. M. D etc Free Homeo-Ayur-Unani-Naturo degree By post also—Practitioners also get soon Homeo Materiamedica, Rs 5. Homeo practice book Rs 4. Insanity Cure Pills Rs. 10 Enclose 2 annas stamp.—

Principal, Indian Homeopath Institute & Society (Govt. Regd.)
P.O Mahuva, (Kathiawar Dt, India.)

Sidha-Kalpa Kavach (Regd)

No. 3 Rs 3, No 2 Rs 5 No. 1 Rs 7 Special Rs 10, Extra Special Rs 17, for love marriage health wealth. Ask any six questions with M O Re 1/- and get correct answers by return post Life reading Rs 2 No V. P P Send M. O. Freed pamphlets. Prof. Dr. N. H. Chhatbar.
P. O Mahuva (Kathiawar India)

The Canara Banking Corporation Ltd.

(Incorporated in British India with limited liability)

ESTED: 1906.

OUR RATES OF INTEREST ON DEPOSITS

Current	1%	P. A.
Savings Bank	2½%	„
Short-term	1¼%	„
Fixed for 3 months	2%	„
6 „	2¼%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೧೫-೨-೧೯೪೦

ಇನ್ನಾದರೂ ಒಟ್ಟಾಗಬಾರದೇಕೆ?

ಕಾಂಗ್ರೆಸು ಮತ್ತು ಮುಸ್ಲಿಮು ಲೀಗುಗಳು ಒಟ್ಟಾಗಲು ಎಂದೂ ಸಾಧ್ಯವೇ ಇಲ್ಲೆಂದು ಬ್ರಿಟಿಷ್ ಸರಕಾರಕ್ಕೆ ಖಚಿತವಾಗಿರುವಂತಿದೆ. ಇಲ್ಲವಾದರೆ ಅದರ ಪ್ರತಿನಿಧಿಗಳು, ತಾವು ಹಿಂದು ದೇಶಕ್ಕೆ ಸ್ವಾತಂತ್ರ್ಯ ನೀಯಲು ಮುಂದಾಗಿದ್ದೇವೆ; ಆದರೆ ಯಾರಿಗೆ ಕೊಡುವುದೆಂದು ಗೊತ್ತಿಲ್ಲೆಂದು ಧೈರ್ಯದಿಂದ ಉದ್ಘೋಷಿಸುತ್ತಿದ್ದಿಲ್ಲ. ದೂರದೃಷ್ಟಿಯುಳ್ಳ ಮತ್ತು ಸುವಿಚಾರಿಗಳಾದ ಸರ್. ಸ್ಟಾಫೋರ್ಡ್ ಕ್ರಿಪ್ಸರಂತಹ ಮುತ್ಸದ್ದಿಗಳು ಯಾವ ಸದುಪದೇಶವಿತ್ತರೂ, ಡೈಲಿಹೆರಾಲ್ಡ್, ಮೆಂಚೆಸ್ಟರ್ ಗಾರ್ಡಿಯನ್ ಮೊದಲಾದ ಪತ್ರಿಕೆಗಳು ಎಂತಹ ವಿವೇಕಪರ ಸಲಹೆಯಿತ್ತರೂ, ಸರಕಾರದ ಹಿರಿಯ ಪ್ರತಿನಿಧಿಗಳದಕ್ಕೆ ಕಿವಿಗೊಡುವ ಹಾಗಿಲ್ಲೆಂಬುದನ್ನು, ಇತ್ತಲಾಗಿ ಲೋರ್ಡ್ಸ್ ಸಭೆಯಲ್ಲಿ ಹಿಂದೀ ಪ್ರಶ್ನೆಯ ಕುರಿತು ಇಂಡಿಯಾ ಅಂಡರ್ ಸೆಕ್ರೆಟರಿಗಳಾದ ಲೋರ್ಡ್ ಡಿವೋನ್ ಶಾಯರರು ಮಾಡಿದ ಭಾಷಣವು ಚಿತ್ತವೇಧಕವಾಗಿ ಮನಗಾಣಿಸುತ್ತದೆ. ಪೂರ್ವದ ವಿಷಮ ಪರಿಸ್ಥಿತಿಯು ಇನ್ನೂ ಆಳರಸರ ಕಣ್ಣು ತೆರೆಯಿಸಿರುವುದಿಲ್ಲ. ಒಂದಿಷ್ಟಾದರೂ ಬೇಸರವಿಲ್ಲದೆ ಅವರು ಹಾಡಿದ್ದನ್ನೇ ಮತ್ತೂ ಮತ್ತೂ ಹಾಡುತ್ತಿದ್ದಾರೆ.

ಹಿಂದೀಯರೊಳಗೆ ಭೇದದ ಬೀಜ ಬಿತ್ತಿಯೇ ಈ ವರೆಗೂ ಆಳರಸರು ತಮ್ಮ ಬೇಳೆ ಬೇಯಿಸಿಕೊಂಡು ಬಂದಿರುವುದು. ಅಂದ ಮೇಲೆ ಹಿಂದು ದೇಶದ ಪ್ರಮುಖ ರಾಜಕೀಯ ಪಕ್ಷಗಳವರು ತಮ್ಮೊಳಗೆ ಕಲಹ ಮಾಡಿಕೊಂಡು ಪ್ರಯೋಜನವಾದರೂ ಯಾರಿಗೆ? ಮಗ ಸತ್ತಾದರೂ ಸೊಸೆ ವಿಧವೆಯಾಗುವುದನ್ನು ನೋಡಬೇಕೆಂಬ ಅತ್ತೆಯ ಕ್ಷುದ್ರ ಮನೋವೃತ್ತಿಯನ್ನು ಲೀಗ್ ಮತ್ತು ಕಾಂಗ್ರೆಸ್ ಮುಖಂಡರು ಹಲವರು ಈ ವರೆಗೆ ತೋರಿಸುತ್ತಾ ಬಂದಿರುವರು. ಅದರಿಂದ ಬ್ರಿಟಿಷ್ ಸರಕಾರಕ್ಕೆ ಬಹಳ ಅನುಕೂಲವಾಗಿದೆ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗಣ ವೈಮನಸ್ಯವನ್ನೇ ಅದು ಭೂತಗನ್ನಡಿಯಲ್ಲಿ ಲೋಕಕ್ಕೆ ತೋರಿಸಿ, ಹಿಂದು ದೇಶಕ್ಕೆ ಸ್ವಾತಂತ್ರ್ಯವೀಯುವ ತಮ್ಮ ಅಕ್ಷೇಪವೇನೂ ಇರುವುದಿಲ್ಲೆಂಬ ಸಂಭಾವಿತತನದ ನಟನೆಯನ್ನು ಜಯಶೀಲನಾಗಿ ನಡಿಸುತ್ತದೆ. ಎಂತಹ ಶೋಚನೀಯ ಪರಿಸ್ಥಿತಿಯಿದು! ಕಾಂಗ್ರೆಸ್ ಮತ್ತು ಲೀಗುಗಳ ಕಲಹದಿಂದ ಇವೆರಡರಲ್ಲೊಂದಕ್ಕಾಗಲಿ, ದೇಶಕ್ಕಾಗಲಿ ದೊರೆತ ಪ್ರಯೋಜನವೇನು? ಹಿಂದೀ ರಾಜಕೀಯದ ಈ ದುರಂತ ದುರ್ಪರ್ಯತ್ವವನ್ನು ನಿವಾರಿಸಲು ಸಾಧ್ಯವಿಲ್ಲವೇ? ಕಾಂಗ್ರೆಸ್ ಮತ್ತು ಲೀಗುಗಳ ಕೆಲವಂದಿ ಮುಖಂಡರೊಟ್ಟುಗೂಡಿ ಮಾತುಕತೆ ನಡಿಸಿದರೆ ಅದು ಸಾಧ್ಯವೆಂದೂ, ಅದಕ್ಕೀಗ ಸುಮುಹೂರ್ತವು ಬಂದಿರುವುದೆಂದೂ ನಮಗನ್ನಿಸುತ್ತದೆ.

ರಾಜಾಜಿಯವರಂತಹ ಕಾಂಗ್ರೆಸ್ ಮುಖಂಡರು ಪ್ರಯತ್ನ ಮಾಡಿದರೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಮೈತ್ರಿಯು ಸಾಧ್ಯವಿದೆಯೆಂದು ಮುಸ್ಲಿಮ್ ಲೀಗಿನ ಮುಖ ಪತ್ರಿಕೆಯೇ ಅಭಿಪ್ರಾಯವಿತ್ತಿದೆ. ಕರಾಚಿಯಲ್ಲಿಯೂ, ಸಂಯುಕ್ತ ಪ್ರಾಂತದಲ್ಲಿಯೂ ಕೆಲವುಕಡೆಗೆ ಲೀಗ್ ಮತ್ತು ಕಾಂಗ್ರೆಸುಗಳು ಒಂದುಗೂಡಿ ನಡೆಯುವ ಪ್ರಯತ್ನ ನಡೆದಿರುತ್ತದೆ. ಕಾಂಗ್ರೆಸು ಮುಸ್ಲಿಮ್ ಲೀಗಿನೊಂದಿಗೆ ರಾಜಿಯ ಮಾತುಕತೆ ನಡಿಸಲು ಎಂದೂ ಹಿಂಜರಿಯಲಿಲ್ಲ. ಅದು ಹಲವು ಸಲ ಜಿನ್ನರೊಡನೆ ಆ ಪ್ರಯತ್ನ ಮಾಡಿದೆ. ಕಾಂಗ್ರೆಸ್ ಮತ್ತು ಲೀಗುಗಳ ಪರವಾಗಿ ಐವೈದು ಮಂದಿ ಪ್ರತಿನಿಧಿಗಳನ್ನಾರಿಸಿ ಅವರೊಟ್ಟು ಸೇರಿ ಮಾತುಕತೆ ನಡಿಸುವ ಸಿದ್ಧತೆಯಲ್ಲಾ ಹಿಂದೊಮ್ಮೆ ನಡೆದಿತ್ತು. ಆದರೆ ಆ ಮಿಸದಲಿನ ಕೆಲವು ತೊಡಕುಗಳಿಂದಾಗಿ ಅದು ಅಸಾಧ್ಯವಾಯಿತು. ಈ ಪ್ರತಿನಿಧಿಗಳು ಒಟ್ಟಾಗಿ ಮಾತುಕತೆ ನಡಿಸುತ್ತಿದ್ದರೆ ಏನಾದರೊಂದು ಇತ್ಯರ್ಥ ಆಗುತ್ತಿತ್ತೆಂದು ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಆಜಾದರು ಇದೇ ತಾ. 7ರಲ್ಲು ನ್ಯೂ ಡಿಲ್ಲಿಯಲ್ಲಿ ಹಿಂದು ಪತ್ರಿಕೆಯ ಪ್ರತಿನಿಧಿಯೊಡನೆ ತಿಳಿಸಿರುವರು. ಲೀಗಿನೊಡನೆ ಮಾತುಕತೆ ನಡಿಸಲು ಕಾಂಗ್ರೆಸು ಯಾವಾಗಲೂ ಸಿದ್ಧವಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಜಿನ್ನರು ಇಷ್ಟರ ವರೆಗೆ ಕಾಂಗ್ರೆಸಿನ ಮೇಲೆ ಹೇರಿ ಸಾಧಿಸುವ ಘೋಷಣೆಯುಳ್ಳವರಿದ್ದರೇ ವರ ತಪ್ಪಾಗಲಾರದು. ಅಂತಹ ಘೋಷಣೆಯು ಸ್ವಪರ ಘಾತುಕವಾದುದೆಂಬುದನ್ನವರು ಈಗ ಮನಗಂಡಿರಬೇಕು. ಕಾಂಗ್ರೆಸನ್ನು ಪ್ರತಿಭಟಿಸುವುದರಲ್ಲ. ಸರಕಾರವು ಅವರಿಗೆ ಒಂದಲ್ಲೊಂದು ರೀತಿಯ ಪ್ರೋತ್ಸಾಹವಿತ್ತಿರುವುದೆಂಬುದೇನೋ ನಿಜ. ಆದರೆ ಅವರ ಕೇಳಿಕೆಗಳನ್ನಾದರೂ ಮನ್ನಿಸಿರುವುದುಂಟೇ? ಅದೂ ಇಲ್ಲ. ಇಂದೀಗ ಮುಸ್ಲಿಮ್ ಲೀಗು ಕೂಡಾ ಸರಕಾರಕ್ಕೆ ಬದ್ಧವಿರುದ್ಧವಾಗಿದೆ. ಅಂದ ಮೇಲೆ ಕಾಂಗ್ರೆಸಿನೆದುರಾಗಿ ಸರಕಾರಕ್ಕೆ ಬೆಂಬಲನಿತ್ತುದರಿಂದ ಪ್ರಯೋಜನವಾದುದಾದರೂ ಏನು? ಸರಕಾರದ ಕುತಂತ್ರವನ್ನು ಲೀಗಿನ ಮುಖಂಡರು ಕೂಡಾ ಇಷ್ಟರಲ್ಲಿ ಮನಗಂಡಿರಬೇಕು. ಆದುದರಿಂದಲೇ ಅವರು ಕಾಂಗ್ರೆಸಿನೊಂದಿಗೆ ಸಹಕರಿಸುವುದು ಲೇಸೆಂಬ ಅಭಿಪ್ರಾಯದ ಕಡೆಗೆ ಒಲಿಯುತ್ತಿದ್ದಾರೆ. ಲೀಗಿನ ನಿರ್ಣಯಗಳಲ್ಲಿಯೂ ಮೊದಲಿನ ಬಿಸಿಯೇ ತೋರಿಬರುವುದಿಲ್ಲ. ಅದು ಕಾಂಗ್ರೆಸಿನೊಂದಿಗೆ ಕೂಡಿ ನಡೆಯಲು ಸಿದ್ಧವಿರುವಂತಿದೆ. ಇನ್ನಾದರೂ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳು ಒಟ್ಟಾಗಿ ಸರಕಾರವನ್ನು ಒರೆಗೆ ಹಚ್ಚುವ ಪ್ರಯತ್ನ ನಡೆಸಬಾರದೇಕೆ? ರಾಜಾಜಿಯವರಂತಹ ಕಾಂಗ್ರೆಸ್ ಮುಖಂಡರು ಈ ಕುರಿತು ಪ್ರಯತ್ನ ನಡಿಸಿದರೆ ಪ್ರಯೋಜನವಾದೀತೆಂದು ತೋರುತ್ತದೆ. ದೇಶದ ರಕ್ಷಣೆಗೆ ಇಂದು ದೊಡ್ಡ ಗಂಡಾಂತರವುಂಟಾಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಹಿಂದುದೇಶದ ಪ್ರಮುಖ ರಾಜಕೀಯ ಪಕ್ಷಗಳು ಒಂದುಗೂಡಿ ನಡೆಯುವುದು ಮತ್ತಷ್ಟು ಅವಶ್ಯವಲ್ಲವೇ? ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳ ಐಕ್ಯವೇ ಇಂದೀಗ ದೇಶದ ಪ್ರಥಮ ಅವಶ್ಯಕತೆಯೆಂದು ನಮ್ಮ ಅಭಿಪ್ರಾಯ. ಆದುದರಿಂದ ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸು ಅದಕ್ಕೆ ಮೊದಲಾಗಿ ಗಮನ ಕೊಟ್ಟು ಇನ್ನೊಮ್ಮೆ ಮುಸ್ಲಿಮ್ ಲೀಗಿನೊಡನೆ ರಾಜಿಪ್ರಸ್ತಾಪ ನಡೆಸಲೆತ್ನಿಸುವುದು ಇಂದಿನ ಕರ್ತವ್ಯವಿರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡಿನ ಮುಂದೆ ಉಡುಪಿ ಬೋರ್ಡು ಹೈಸ್ಕೂಲಿನ ಸಮಸ್ಯೆ.

ಉಡುಪಿ ಬೋರ್ಡ್ ಹೈಸ್ಕೂಲನ್ನು ಮುಚ್ಚಲಾಗುವುದೆಂಬ ಅರ್ಥನಾಗುವ ಡಿ. ಬೋರ್ಡಿನ ನಿರ್ಣಯದಿಂದ ಉಡುಪಿಯ ಮಹಾಜನರಲ್ಲಿ ಉಂಟಾಗಿರುವ ಕಳವಳವು ಪ್ರೆಸಿಡೆಂಡರ ಅವಗಾಹನೆಗೆ ಬಂದು ಜನತೆಯ ಅಂತಹ ಭಯವನ್ನು ನಿವಾರಿಸುವುದಕ್ಕಾಗಿ ಆ ನಿರ್ಣಯವನ್ನು ಮಾರ್ಪಡಿಸುವದೆ ಅವರು ಬೋರ್ಡಿನ ವಿಶೇಷಸಭೆಯನ್ನು ಕರೆದುದು ಸ್ತುತ್ಯವಿದೆ. ಡಿಸ್ಟ್ರಿಕ್ಟ್ ಬೋರ್ಡು ಆಳವಾಗಿ ಪರ್ಯಾಲೋಚಿಸಬೇಕಾಗಿರುವ ವಿಷಯವಿದು. ಎಂತಲೇ ನಾವು ಈ ಕುರಿತು ಬರೆಯಬೇಕಾಗಿದೆ.

ಈ ಶಾಲೆಯ ಪೂರ್ವೇತಿಹಾಸವನ್ನು ಬಿಡಮುಟ್ಟ ಪರಿಶೋಧಿಸಿದರೆ, ಉಡುಪಿಯ ಮಹಾಜನರು ಭಗೀರಥ ಪ್ರಯತ್ನ ಮಾಡಿ ಪಡೆದು ಆದರಿಸಿ ಆಶ್ರಯಿಸಿಕೊಂಡಿರುವ ಸಂಸ್ಥೆಯು ಇದೆಂದು ವ್ಯಕ್ತವಾಗುವುದು. ಅವರು ತಮಗೊಂದು ಸಾರ್ವಜನಿಕ ಹೈಸ್ಕೂಲು ಬೇಕೆಂದು ಸುಮಾರು 1908ರಿಂದ 1918ರ ವರೆಗೆ ಹತ್ತು ವರುಷಗಳ ಕಾಲ ನಿರಂತರ ವಿವಿಧ ಚಳುವಳಿಗಳನ್ನು ಹೂಡಿ ಸರಕಾರಕ್ಕೆ ಪದೇಪದೇ ಮನವಿಮಾಡಿ ಮೊರೆಯಿಟ್ಟು, ಧನ ಸಂಗ್ರಹ ಮಾಡಿಕೊಟ್ಟು, ಸರಕಾರದಿಂದ ಲಭಿಸಿಕೊಂಡ ಶಾಲೆಯಿದು. ಇದನ್ನು ನಡೆಯಿಸಿಕೊಂಡು ಹೋಗುವ ಕಾರ್ಯಭಾರವನ್ನು ಡಿ. ಬೋರ್ಡು ವಹಿಸಿಕೊಂಡಿತು. ಜನತೆಯ ಆವಶ್ಯಕತೆಯನ್ನೂ, ಆಗ್ರಹವನ್ನೂ ಮನಗಂಡ ಸರಕಾರವು ಶಾಲೆಯನ್ನು ತೆರೆವ ಹುಕುಮನ್ನು ಕೊಡುವಾಗಲೇ ಇದರ ಹೈಸ್ಕೂಲ್ ಡಿಪಾರ್ಟ್‍ಮೆಂಟಿನ ಖರ್ಚುವೆಚ್ಚಗಳನ್ನು ತಾನೇ ತೆರುತ್ತ ಬರುವುದಾಗಿ ವಿಶೇಷ ಹುಕುಮು (G. O) ಕೊಟ್ಟದೆಯಂತೆ. ಆದುಕಾರಣ ಡಿ. ಬೋರ್ಡಿಗೆ ಈ ಶಾಲೆಯ ದೆಸೆಯಿಂದ ನಷ್ಟವೇನೂ ಆಗಲಾರದೆಂಬುದು ನಿಶ್ಚಯ.

ಸರಕಾರವು ಡಿ. ಬೋ. ಸೆಕೆಂಡರೀ ಶಾಲೆಗಳಿಗೆ ಕೊಡುತ್ತಿರುವ ಸಬ್ಸಿಡಿಯ ಮೊತ್ತದಲ್ಲಿ ಅಧಿಕಾಂಶವು ಈ ಶಾಲೆಗಾಗಿಯೇ ವಿನಾಸಲಾಗಿ ಸರಕಾರದ ಲೆಕ್ಕದಲ್ಲಿರಬೇಕು. ಸರಕಾರವು ತೆರುತ್ತಿರುವ ಸಬ್ಸಿಡಿಯು ಡಿ. ಬೋರ್ಡಿನ ಆಡಳಿತೆಯಲ್ಲಿರುವ ಹೈಸ್ಕೂಲುಗಳ ವಾರ್ಷಿಕಾಯದಲ್ಲಿಲ್ಲವೆಂದೂ 1918ನೆಯ ಇಸವಿಯಲ್ಲಿ ತೆರೆಯಲ್ಪಟ್ಟ ಈ ಹೈಸ್ಕೂಲು ಮತ್ತು ಮೂಡಬಿದ್ರೆ ಮಿಡ್ಲ್ ಸ್ಕೂಲಿನ ಖರ್ಚುವೆಚ್ಚದ ಖಾತೆಗೇ ಅಧಿಕಾಂಶ ಸಬ್ಸಿಡಿ ಇರುವುದೆಂದೂ ಊಹಿಸಲಿಕ್ಕೆ ಆಧಾರ ಅವಕಾಶಗಳಿವೆ. ಅದು ಕಾರಣವೇ ಸರಕಾರವು ತಾನು ತೆರುತ್ತಿರುವ ಸುಮಾರು ಹದಿಮೂರು ಸಾವಿರ ರೂಪಾಯಿಯ ಸಬ್ಸಿಡಿಯಲ್ಲಿ ಮೂಡಬಿದಿರೆಯ ಚಿಕ್ಕದೊಂದು ಮಿಡ್ಲ್ ಸ್ಕೂಲು ಮುಚ್ಚಲ್ಪಟ್ಟೊಡನೆ ಮೂರುಸಾವಿರ ವಜಾ ಮಾಡಿದಿಯಂತೆ. ಒಂದು ವೇಳೆ ಈ ಹೈಸ್ಕೂಲು ಮುಚ್ಚಲ್ಪಟ್ಟರೆ ಮತ್ತೂ ಐದಾರುಸಾವಿರ ವಜಾ ಹೋಗಬಹುದು. ಆದುದರಿಂದ ಈ ಹೈಸ್ಕೂಲನ್ನು ಮುಚ್ಚಿಯೂ ಡಿ. ಬೋರ್ಡಿಗೆ ಗಣನೀಯವಾದ ಉಳಿತಾಯವಾಗಲೀ ಲಾಭವಾಗಲೀ ಆಗಲಾರದು. ಒದಲಾಗಿ ಚಿಕ್ಕಚಿಕ್ಕ ತಾಲೂಕುಗಳಿಗೂ ಒಂದೊಂದು ಸಾರ್ವಜನಿಕ ಹೈಸ್ಕೂಲನ್ನು ಕೊಡುವ ಔದಾರ್ಯವನ್ನು ತೋರುತ್ತಾ ಬಂದಿದ್ದ ಡಿಸ್ಟ್ರಿಕ್ಟ್ ಬೋರ್ಡು ಜಿಲ್ಲೆಯ ದ್ವಿತೀಯ ಪ್ರಧಾನ ಪಟ್ಟಣವಾದ ಉಡುಪಿಯ ಮಹಾಜನರ ಆವಶ್ಯಕತೆಯ ಪ್ರಾರ್ಥನೆ ಪ್ರಯತ್ನಗಳ ಪರಿಣಾಮವಾಗಿ ಸರಕಾರದಿಂದ ದೊರೆತು, ಹರಿಜನರಾದಿಯಾಗಿ ಸಮಸ್ತ ಜಾತಿಮತ ಪಂಗಡಗಳ ಮತೀಯ ಕ್ಲೇಶ ಆಕ್ಷೇಪಗಳಿಗೆ ಅವಕಾಶವಿಲ್ಲದ ಏಕಮಾತ್ರ ಸಾರ್ವಜನಿಕ ಶಾಲೆಯಾಗಿ ದಿನೇದಿನೇ ಅಭಿವೃದ್ಧಿಗೊಂಡು ಜನಪ್ರೀತವಾಗಿ ನಡೆದು ಬರುತ್ತಿರುವ, ಹಾಗೂ ಕಟ್ಟಡ ಮುಂತಾದುವುಗಳಿಗಾಗಿ ಡಿ. ಬೋರ್ಡು ಸುಮಾರು ಅರ್ಧ ಲಕ್ಷಕ್ಕೂ ಮಿಕ್ಕಿ ವೆಚ್ಚ ಮಾಡಿ ತನ್ಮೂಲಕ ಅದರ ಪಾಲಕತ್ವ ಮತ್ತು ಸ್ಥಿರತ್ವದ ವಿಷಯದಲ್ಲಿ ಜನತೆಗೊಂದು ಧೈರ್ಯವನ್ನಿತ್ತಿರುವ, ಈ ಶಾಲೆಯನ್ನು ಮುಚ್ಚಿ ಉಡುಪಿಯ ಮಹಾಜನರನ್ನು ಖಾಸಗೀ ಆಡಳಿತೆಯ ಹಾಗೂ ಜಾತೀಯ ವಾತಾವರಣಕ್ಕೊಳಗಾದ ಶಾಲೆಗಳಿಗೆ ಪುನಃ ಶರಣು ಹೋಗುವಂತೆ ಮಾಡಿತೆಂಬ ಅಪಯಶಸ್ಸು ಮಾತ್ರ ದೊರಕೀತು. ಈ ಹೈಸ್ಕೂಲು ಹಲವು ಖಾಸಗೀ ಶಾಲೆಗಳ ಸ್ಪರ್ಧೆಗೀಡಾಗಿರುವುದಾದರೂ ಅಂತಹ ಸ್ಪರ್ಧೆಗಳ ತೊಡಕು ತೊಂದರೆ ಘರ್ಷಣೆಗಳಿಲ್ಲದ ಇತರ ಡಿ. ಬೋರ್ಡು ಹೈಸ್ಕೂಲುಗಳಿಗಿಂತ ಮಕ್ಕಳ ಸಂಖ್ಯೆಯಲ್ಲಾಗಲೀ ಆರ್ಥಿಕ ಸ್ಥಿತಿಯಲ್ಲಾಗಲೀ ಖ್ಯಾತಿಯಲ್ಲಾಗಲೀ ಕಡಿಮೆಯಾಗದಿರುವುದೇ ಈ ಶಾಲೆಯ ಉತ್ಕೃಷ್ಟತೆಯನ್ನೂ- ಉಡುಪಿಯ ಮಹಾಜನರಿಗೆ ಇದರ ಆವಶ್ಯವಿದೆಯೆಂಬುದನ್ನೂ ನಿರ್ವಿವಾದವಾಗಿ ಸಾರುತ್ತದೆ.

ಇಂತು ಉಡುಪಿಗೆ ಸಾರ್ವಜನಿಕ ಶಾಲೆಯ ಆವಶ್ಯಕತೆ, ಅದಕ್ಕಾಗಿ ಅದು ಮಾಡಿದ ಪ್ರಯತ್ನ, ಸರಕಾರವು ಖರ್ಚುವೆಚ್ಚಗಳನ್ನು ಹೊರುವುದೆಂಬ ಆಶ್ವಾಸನಾಪತ್ರ, ಡಿ. ಬೋರ್ಡು ಈ ಪರ್ಯಂತರ ನಿರ್ವಹಿಸಿಕೊಂಡು ಬಂದಿರುವ ಪಾಲಕತ್ವದ ಹೊಣೆ, ಶಾಲೆಯು ಹೊಂದಿರುವ ಅಭಿವೃದ್ಧಿ, ಯಶಸ್ಸು ಮತ್ತು ಜನಾದರಣೆ ಮುಂತಾದ ಈ ಶಾಲೆಗೆ ಸಂಬಂಧಪಟ್ಟ ಪೂರ್ವೇತಿಹಾಸದ ಅಸ್ತಿವಾರವು ಸುಭದ್ರವಾಗಿರುತ್ತ ಇದನ್ನು ಡಿ. ಬೋರ್ಡು ಒಮ್ಮಿಂದೊಮ್ಮೆಗೇ ಮುಚ್ಚಲಾರದೆಂದೂ, ಮುಚ್ಚುವುದರಿಂದ ಹಣ ಉಳಿತಾಯವಾಗುವುದೆಂಬ ಭ್ರಮಾತ್ಮಕವಾದ ನಿರ್ಣಯವು ಬೋರ್ಡಿನ ಮುಂದೆ ಬಂದಲ್ಲಿ ಉಡುಪಿಯ ಆವಶ್ಯಕತೆಯನ್ನೂ, ಸರಕಾರದ G. O. ಮುಂತಾದ ಹಿಂದಿನ ರಿಕಾರ್ಡುಗಳನ್ನೂ ಮಾನ್ಯ ಅಧ್ಯಕ್ಷರು ಬೋರ್ಡಿನ ಪ

ಡಿಲ್ಲಿಯಲ್ಲಿ ಜನರಲ್ ಚ್ಯಾಂಗ್ ಕೈಶೆಕ್ಕರು.

ಚ್ಯಾಂಗ್ ವೈಸರಾಯ್ ಮಾತುಕತೆ.

ರಾಷ್ಟ್ರೀಯ ಚೈನದ ಮುಖ್ಯ ಸೇನಾನಾಯಕರಾದ ಜನರಲ್ ಚ್ಯಾಂಗ್ ಕೈಶೆಕ್ಕರು, ಮೆಡಮ್ ಚ್ಯಾಂಗ್ ಮತ್ತು ಇತರ ಕೆಲವು ಮುಖ್ಯಾಧಿಕಾರಿಗಳೊಂದಿಗೆ ಇದೇ ತಾ. 9ರಲ್ಲು ಡಿಲ್ಲಿಗೆ ಬಂದಿರುವರು. ಇವರು ವೈಸರಾಯರ ಅತಿಥಿಗಳಾಗಿ ಹಲವು ದಿನ ಹಿಂದು ದೇಶದಲ್ಲಿ ನಿಲ್ಲಲಿರುವರೆಂದು ತಿಳಿದು ಬರುತ್ತದೆ. ಹಿಂದು ದೇಶ ಮತ್ತು ಚೀನಕ್ಕೆ ಸಂಬಂಧಿಸುವ ಪ್ರಾಮುಖ್ಯವಾದ ಕೆಲವು ವಿಷಯಗಳನ್ನು ಇಂಡಿಯಾ ಸರಕಾರ ಮತ್ತು ಪ್ರಧಾನ ಹಿಂದೀ ಸೇನಾನಾಯಕರೊಡನೆ ಮಾತಾಡುವುದೇ ಚ್ಯಾಂಗರ ಈ ಸಂದರ್ಶನದ ಉದ್ದೇಶವಿರುತ್ತದೆ. ಈ ಸಂದರ್ಭದಲ್ಲಿವರು ಹಿಂದೀ ಮುಖಂಡರನ್ನು ಕಂಡು ಮಾತಾಡಬಹುದೆಂದು ನಂಬಲಾಗಿದೆ. ಚೀನೀ ರಿಪಬ್ಲಿಕಿನ ನಾಯಕರಾಗಿ ಜಾಪಾನರನ್ನು ಜಯಶೀಲವಾಗಿ ಪ್ರತಿಭಟಿಸಿ ಚೈನದ ಸ್ವಾತಂತ್ರ್ಯ ಧ್ವಜವನ್ನೆತ್ತಿ ಹಿಡಿದು ಲೋಕದ ಮೆಚ್ಚಿಗೆ ಪಡೆದಿರುವ ಜನರಲ್ ಚ್ಯಾಂಗರಿಗೆ ಹಿಂದೀಯರು ಉತ್ಸಾಹಪರ ಸ್ವಾಗತವೀಯುದಿರಲಾರರು. ಜನರಲ್ ಚ್ಯಾಂಗರು ಹಿಂದು ದೇಶದಲ್ಲಿ ಸಂಚರಿಸಿ ಪಂಡಿತ ನೆಹರುಗಳನ್ನು ಕಂಡು ಮಾತಾಡಲಿರುವರು. ಮಹಾತ್ಮ ಗಾಂಧಿಯವರನ್ನೂ ಕಾಣಬಹುದೆಂದು ನಂಬಲಾಗಿದೆ. ಹಿಂದೀ ಸೇನಾ ನಾಯಕ ಜನರಲ್ ವೇವೆಲರು ಇತ್ತಲಾಗಿ ಚುಂಕಿಂಗಿಗೆ

ಅಮೇರಿಯವರು ಹೋಗುವುದು ನಿಶ್ಚಯ.

ಸಿಂಗಪುರದ ಹೋರಾಟದ ಪರಿಸ್ಥಿತಿ.

ಹೋಗಿ ನಡಿಸಿದ ಮಾತುಕತೆಯನ್ನೇ ಜನರಲ್ ಚ್ಯಾಂಗರೊಂದಿಗೆ ಬಂದಿರುವ ಅಧಿಕಾರಿಗಳು ನಡಿಸಲಿರುವರೆಂದು ತಿಳಿದು ಬರುತ್ತದೆ. ಚೈನದ ಹಿಂದಿನ ಬ್ರಿಟಿಷ್ ರಾಯಭಾರಿಯಾಗಿದ್ದ ಸರ್. ಆರ್ಕಿಬಾಲ್ಡ್ ಕ್ಲಾರ್ಕ್ ಕೇರರೂ ಡಿಲ್ಲಿಗೆ ಬಂದಿರುವರು.

ಅಮೇರಿಯವರು ಹೋಗುವರು.

ಹಿಂದೀ ಪ್ರಶ್ನೆಯ ಕುರಿತು ಬ್ರಿಟನನಲ್ಲಿ ಪರದೆಯ ಹಿಂದ ದೊಡ್ಡ ಬಿರುಗಾಳಿಯು ಎದ್ದಿರುವಂತಿದೆ. ಇಂಡಿಯಾ ಸೆಕ್ರೆಟರಿಗಳಾದ ಅಮೇರಿಯವರು ಅಧಿಕಾರದಿಂದ ಹೋಗುವುದು ನಿಶ್ಚಯವೆಂದೇ ಹೇಳಬಹುದು. ಲೇಬರ್ ಪಕ್ಷದ ಮಂತ್ರಿಗಳು ಹಿಂದುಸ್ಥಾನದ ಪರಿಸ್ಥಿತಿಯ ಕುರಿತು ವ್ಯಾಕುಲುಗೊಂಡಿರುತ್ತಾರೆ. ಆದುದರಿಂದ ಅವರು ಹಿಂದೀ ಪ್ರಶ್ನೆಯ ಇತ್ಯರ್ಥಕ್ಕಾಗಿ ಒತ್ತಾಯಮಾಡಲೇ ಬೇಕಾಗಿದೆಯೆಂದು ರೈನಾಲ್ಡ್ಸ್ ನ್ಯೂಸ್ ಪತ್ರಿಕೆಯು ಪ್ರಕಟಿಸಿರುತ್ತದೆ.

ಸರ್. ಸ್ಟಾಫರ್ಡ್ ಕ್ರಿಪ್ಸರು ಕಳೆದ ಆದಿತ್ಯವಾರ ಬ್ರಿಸ್ಟಲಿನಲ್ಲಿ ಭಾಷಣ ಕೊಡುವಾಗ ತಾನಾದರೆ ಯುದ್ಧಾನಂತರ ಹಿಂದುದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವೀಯುವ 'ಗ್ಯಾರಂಟಿ' ಕೊಡುವೆನು. ಡೋಮಿನಿಯನ್ ಸ್ಟೇಟಸೆಂದರೆ, ಬ್ರಿಟಿಷ್ ಸಾಮ್ರಾಜ್ಯದೊಳಗಿರುವ ಅಥವಾ ಅದರಿಂದ ಹೊರಹೋಗುವ ಸ್ವಾತಂತ್ರ್ಯವು ಎಂದರೆ ಸಂಪೂರ್ಣ ಸ್ವಾತಂತ್ರ್ಯ ಸ್ಥಾಪನೆಯ ಹಕ್ಕು ಹಿಂದೂದೇಶಕ್ಕಿರುವುದೆಂಬುದನ್ನು ಬ್ರಿಟಿಷ್ ಸರಕಾರವು 1926ರಲ್ಲಿ ಲೋರ್ಡ್ ಬಾಲ್ಫೂರರು ಮಾಡಿದಂತೆ ಸ್ಪಷ್ಟಪಡಿಸಬೇಕು. ಈ ವಾಗ್ದಾನವನ್ನು ಹಿಂದೂ ದೇಶಕ್ಕೆ ಕೊಟ್ಟರೆ ಹಿಂದುಸ್ಥಾನದ ಈಗಿನ ಬಿಕ್ಕಟ್ಟನ್ನು ಪರಿಹರಿಸಬಹುದೆಂದು ತನ್ನ ನಂಬಿಕೆ. ಯಾವ ಸಂಕೋಚವೂ ಇಲ್ಲದೆ ಸ್ಪಷ್ಟವಾಗಿ ಈ ವಾಗ್ದಾನವು ಹಿಂದು ದೇಶಕ್ಕೆ ಕೊಡಲ್ಪಟ್ಟರೆ ಯುದ್ಧದಲ್ಲಿ ಅದು ಉತ್ಸಾಹಪರ ಸಹಾಯವೀಯುವುದು ನಿಶ್ಚಯವೆಂದು ತಾನು ನಂಬುತ್ತೇನೆಂದು ಕ್ರಿಪ್ಸರು ತನ್ನ ಬ್ರಿಸ್ಟಲಿನ ಹೇಳಿಕೆಯನ್ನು ರೈಟರ್ ಪ್ರತಿನಿಧಿಯೊಡನೆ ಮತ್ತಷ್ಟು ವಿವರಿಸಿರುವರು.

ಸಿಂಗಪುರದ ಯುದ್ಧ.

ಜಾಪಾನರು ಸಿಂಗಪುರದ ಪಶ್ಚಿಮ ತೀರದಲ್ಲಿಳಿದಿರುವರೆಂದು ತಿಳಿದು ಬರುತ್ತದೆ. ತೀವ್ರ ಹೋರಾಟವು ನಡೆಯುತ್ತಿದೆ. ಜಾಪಾನರು ಯುದ್ಧ ಹಡಗಗಳಿಂದ ಸಿಂಗಪುರದ ಮೇಲೆ ಪ್ರಬಲವಾಗಿ ಗುಂಡುಗಳ ಸುರಿಮಳೆ ಗರೆಯುತ್ತಿದ್ದಾರೆ. ಜಾಪಾನ ವಿಮಾನಗಳು ತೀವ್ರ ಧಾಳಿ ನಡಿಸುತ್ತಿವೆ. ಸಿಂಗಪುರದ ಉತ್ತರ ತೀರದ ನೌಕಾನೆಲೆಯನ್ನು ಖಾಲಿಮಾಡಿ ತೇಲುವ ಡಕ್ಕೆಯನ್ನು ಮುಳುಗಿಸಲಾಗಿದೆ. ಜಾಪಾನರು ಮೊದಲಾಗಿ ಸಿಂಗಪುರದಿಂದ ಸುಮಾರು ೩ ಮೈಲು ದೂರವಿರುವ ಪುಲಾವ್ ಯುಬಿನ್ ಎಂಬ ಚಿಕ್ಕ ದ್ವೀಪವನ್ನು ಹಿಡಿದು ಅಲ್ಲಿಂದ ಸಿಂಗಪುರದ ಮೇಲೇರಿ ಹೋಗುವ ಸಾಹಸ ಮಾಡಿರುವರು. ಈ ದ್ವೀಪವನ್ನು ಬ್ರಿಟಿಷರು ರಕ್ಷಿಸಿರಲಿಲ್ಲ.

ರಂಗೂನಿನ ರಕ್ಷಣೆ.

ರಂಗೂನನ್ನು ಎಂದಿಗೂ ಬಿಟ್ಟುಬಿಡಲಾಗುವುದಿಲ್ಲ, ಕಡೆತನಕವೂ ರಕ್ಷಿಸಲಾಗುವುದು. ಸರಕಾರವೂ ಅಲ್ಲಿಯೇ ಇರುವುದೆಂದು ಬರ್ಮದ ಗವರ್ನರರು ಇದೇ ತಾ. 9ರಲ್ಲು ಪ್ರಕಟಗೊಳಿಸಿರುವರು. ಹಲವು ವಾರಗಳ ಹಿಂದಿಗಿಂತ ಈಗಣ ತಮ್ಮ ಪರಿಸ್ಥಿತಿಯು ಉತ್ತಮವಾಗಿ ಜಾಪಾನರನ್ನೀಗ ಜಯಶೀಲವಾಗಿ ತಡೆಗಟ್ಟಬಹುದೆಂದು ಬರ್ಮದ ರಣರಂಗದ ಬ್ರಿಟಿಷ್ ಸೇನಾ ನಾಯಕ ಜನರಲ್ ಹಟನರು ಅಭಿಪ್ರಾಯಪಿಟ್ಟಿರುವರು. ಜಾಪಾನರು ರಂಗೂನಿನ ಮೇಲೆ ಎಡೆಬಿಡದೆ ವಿಮಾನ ಧಾಳಿ ನಡಿಸುತ್ತಿರುವರು. ಕಳೆದ ಶುಕ್ರವಾರ ರಾತ್ರಿ ಅತಿ ದೊಡ್ಡ ಧಾಳಿ ನಡಿಸಿರುವರು.

ಸೋವಿಯೆಟ್ ಸೇನೆಯ ವಿಜಯ.

ಸ್ಮೋಲೆಂಕ್ಸಿನ ಈಶಾನ್ಯದಲ್ಲಿ ಕಲಿನಿನ್ ರಣರಂಗದಲ್ಲಿ ಸೋವಿಯೆಟ್ ಸೈನಿಕರು ಜರ್ಮನರ ಸೇನಾವ್ಯೂಹವನ್ನು ಭೇದಿಸಿರುವರೆಂದು ತಿಳಿದುಬರುತ್ತದೆ. ಲೆನಿನ್‌ಗ್ರಾಡ್ ರಣರಂಗದಲ್ಲಿಯೂ ಜರ್ಮನರು ಹಿಂದಕ್ಕೊತ್ತಲ್ಪಟ್ಟಿರುತ್ತಾರೆ. ನೋವ್ಗೊರೊಡ್ ಪಟ್ಟಣವು ಸುತ್ತುವರಿಯಲ್ಪಟ್ಟು ಈಗ ಹಡಗ ಚಲಾವಣೆಯಾಗುತ್ತದೆ.

ಯಾಲೋಚನೆಗೆ ತಂದು ಶಾಲೆಯನ್ನು ಮುಚ್ಚುವುದರಿಂದ ಉಳಿತಾಯವಾಗಲೀ ಲಾಭವಾಗಲೀ ಆಗಲಾರದೆಂಬುದನ್ನು ಖಚಿತಗೊಳಿಸಿ ಶಾಲೆಯನ್ನು ಉಳಿಸಿಕೊಟ್ಟಾರೆಂದೂ ಉಡುಪಿಯ ಮಹಾಜನರು ನಂಬಿರುವುದರಿಂದಲೇ ಈ ವಿಷಯವಾಗಿ ಸಭೆ, ಠರಾವು, ಡೆಪ್ಯುಟೇಶನ್ ಮುಂತಾದ ಚಳುವಳಿಗಳಿಗೆ ಕೈಯಿಕ್ಕದೆ ಡಿ. ಬೋರ್ಡಿನ ನ್ಯಾಯಬುದ್ಧಿಯಲ್ಲೇ ವಿಶ್ವಾಸವಿಟ್ಟು ಕುಳಿತಿದ್ದಾರೆ.

ಹಾಗೆ ಕುಳಿತಿರುವ ಪ್ರಯುಕ್ತ ಶಾಲೆಯು ಮುಚ್ಚಲ್ಪಡುತ್ತದೆಂಬ ಸುದ್ದಿಯು ಪ್ರತಿಭಟನೆಯಿಲ್ಲದೆ ಹರಡುತ್ತಾ ಬಂದಿದೆ. ಮುಚ್ಚುವುದರಲ್ಲಿ ಸ್ವಕೀಯ ಹಿತವನ್ನು ಕಾಣುವ ವ್ಯಕ್ತಿಸಂಸ್ಥೆಗಳು ಈ ಸುದ್ದಿಗೆ ಬೃಹದಾಕಾರವನ್ನು ಕಲ್ಪಿಸಿ ಮಕ್ಕಳ ಪಾಲಕರನ್ನು ಕಳವಳಕ್ಕೀಡುಮಾಡಿವೆ. ಬರುವ ಜೂನ್ ತಿಂಗಳಲ್ಲಿ ತಮ್ಮ ಮಕ್ಕಳನ್ನು ಎಲ್ಲಿಗೆ ಕಳುಹಿಸುವುದೆಂಬ ಸಮಸ್ಯೆಯು ಹಲವರನ್ನು ಈಗಾಗಲೇ ಕಾಡತೊಡಗಿದೆ. ಹೀಗೆ ಅಕಾಲ ವಿಕಾಲ ರೂಪತಾಳಿ ಹಬ್ಬುತ್ತಿರುವ ಈ ಸುದ್ದಿಯನ್ನು ಡಿ. ಬೋರ್ಡು ತನ್ನ ಸುಸ್ಪಷ್ಟವಾದ ನಿರ್ಣಯದಿಂದ ತಡೆಗಟ್ಟಬೇಕೆಂಬ ಉದ್ದೇಶದಿಂದ ವಾತ್ಸ್ಯಾಯನ ಧ್ಯಕ್ಷರು ವಿಶೇಷ ಸಭೆಯನ್ನು ಕರೆದು ಉಡುಪಿಯ ಮಹಾಜನರು ಅವರಲ್ಲಿಟ್ಟಿರುವ ಗೌರವಾದರವಿಶ್ವಾಸಗಳಿಗೆ ತಕ್ಕುದಾಗಿದೆ. ಅಂತೆಯೇ ಸದಸ್ಯರೂ ಈ ಪ್ರಯುಕ್ತವನ್ನು ವಿವಿಧ ದೃಷ್ಟಿಕೋನದಿಂದ ನೋಡಿ ಇದರ ಮಹತ್ವವನ್ನು ಮನಗಂಡು ಈ ಶಾಲೆಯನ್ನು ಉಳಿಸಿ ಪಾಲಿಸಿಕೊಂಡು ಬರುವ ನಿರ್ಧಾರವನ್ನು ಮಾಡಿಯಾರೆಂದು ನಂಬುತ್ತೇವೆ.

GREETINGS.

The Directors, Officers and Staff of the Canara Bank Limited join in sending you this message of appreciation for your good will and patronage during the last year. We sincerely wish you a Happy and Prosperous New Year.

ESTD: 1906.

CANARA BANK LTD.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಲ್ಲಿ

ತಾ. 14—2—1942ರಿಂದ

ತಮಿಳು ಚಿತ್ರ ಪ್ರಪಂಚದಲ್ಲೊಂದು ನವೀನ

ಕ್ರಾಂತಿಯನ್ನೆಬ್ಬಿಸಿದ

ನವೀನ ವಿಕ್ರಮಾದಿತ್ಯ

N. S. ಕೃಷ್ಣನ್, ಟಿ.ಎ. ಮಧುರಮ್.

ಟಿ. ಎಸ್. ದೊರೈರಾಜ್.

ನೋಟೀಸು.

[illegible] ಮುನ್ಸೀಫ್ ಕೋರ್ಟಿನಲ್ಲಿ.

O. P. 19/1942.

ರಾಮಣ್ಣ ಸೆಟ್ಟಿ [illegible] — ಅರ್ಜಿದಾರರು,

ಮತ್ತು

ಮೀನಾಕ್ಷಿ ಸೆಟ್ಟಿ [illegible] — ಎದ್ರಿದು,

ಎದ್ರಿಹು:—

(1) ಮೀನಾಕ್ಷಿ ಸೆಟ್ಟಿ, [illegible] ಸೆಟ್ಟಿ ಸೆಡಿ, ಮಂಗಳೂರು [illegible] ಗ್ರಾಮದ [illegible].

(2) ಚಂದಯ್ಯ [illegible] ಸೆಟ್ಟಿ, [illegible], ಮಂಗಳೂರು [illegible] ಗ್ರಾಮದ [illegible].

[illegible]—

[illegible] 1942ನೇ [illegible] 7 [illegible] 10 [illegible]

K. Mahabala Hegde,

ಅರ್ಜಿದಾರರ ವಕೀಲ್.

[illegible], ತಾ. 9-2-1942.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ವರ್ಧಂತಿ—ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತಿಯು ನಿನ್ನೆಯ ದಿನ ಸಾಯಂಕಾಲ ಜಿಲ್ಲಾ ಜಡ್ಜರಾದ ಶ್ರೀ| ಎಲ್| ಎಸ್| ಪಾರ್ಥಸಾರಥಿ ಅಯ್ಯಂಗಾರರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾರ್ಥಿ ಭವನದ ಸಂಘದ ವರದಿಯನ್ನು ಶ್ರೀ| ಕೆ. ಶಿವರಾವ್ ಹೆಗ್ಗಡೆಯವರು ಓದಿದರು. ಎಸ್| ಆರ್| ಎಸ್| ವಿದ್ಯಾರ್ಥಿ ಭವನದ ವರದಿಯನ್ನು ಮಿಸ್| ಲಕ್ಷ್ಮೀಕುಟ್ಟಿ ಅಮ್ಮ ಇವರು ಓದಿ ವಿದ್ಯಾರ್ಥಿನಿ ಭವನಕ್ಕೆ ಸಹಾಯ ಮಾಡಿದವರನ್ನು ವಂದಿಸಿ ಧನ್ಯವಾದಗಳನ್ನರ್ಪಿಸಿ ಈ ಭವನವು ಊರ್ಜಿತವಾಗಿರುವಂತೆ ಬಂಟ ಸಮಾಜದ ಮುಖಂಡರನ್ನೂ ಮಹಾಜನರನ್ನೂ ಪ್ರಾರ್ಥಿಸಿದರು. ಇದಾದ ಮೇಲೆ ಅಡ್ವೋಕೇಟ್ ಶ್ರೀ| ಪಿ| ರಾಮಕೃಷ್ಣ ಮಲ್ಲಿಯವರು ಭವನದ ಅಭಿನಂದನಾ ಭಾಷಣವನ್ನಿತ್ತರು. ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ|ಯಂ ಮುತ್ತಯ್ಯ ಹೆಗ್ಗಡೆಯವರು ಉತ್ತರವನ್ನಿತ್ತರು. ಅನಂತರ ಹೈಸ್ಕೂಲುಗಳೆರಡರ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ ಬಹುಮಾನಗಳನ್ನು ಹಂಚಿದ ತರುವಾಯ ಅಧ್ಯಕ್ಷರು ಭವನದ ಕಾರ್ಯಕಲಾಪಗಳನ್ನು ಪ್ರಶಂಸಿಸಿ,ಎರಡು ಭವನಗಳಿಗೂ ಅಭಿವೃದ್ಧಿಯನ್ನು ಕೋರಿ ಭಾಷಣ ಮಾಡಿದರು. ವಿದ್ಯಾರ್ಥಿನಿಯರಿಂದ ನಾಟ್ಯ, ಇಂಗ್ಲಿಷ್ ನಾಟಕ, "ಹೂವಾಡಿಗನ" ನೃತ್ಯ, ಹರಿಶ್ಚಂದ್ರ ನಾಟಕ ಇವು ಪ್ರದರ್ಶಿಸಲ್ಪಟ್ಟವು. ವಿದ್ಯಾರ್ಥಿಗಳು ಮತ್ತೊಂದು ಇಂಗ್ಲಿಷ್ ನಾಟಕವನ್ನು ಪ್ರದರ್ಶಿಸಿದರು- ಅಭಿನಯಗಳು ಚೆನ್ನಾಗಿದ್ದುವು. ಮಧ್ಯ ಮಧ್ಯ ಸಂಗೀತವೂ ನಡೆಯಿತು. ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ದಸ್ತಗಿರಿ—ಮಂಗಳೂರಿನ ಪ್ರಸಿದ್ಧ ವ್ಯಾಪಾರ ಮುಂದಾಳುಗಳಾದ ಶ್ರೀ| ಎಸ್. ಎನ್. ಶೆಣೈಯವರು ಮೊನ್ನೆ ಶನಿವಾರ ದಸ್ತಗಿರಿ ಮಾಡಲ್ಪಟ್ಟು ಕಣ್ಣಾನೂರಿಗೆ ಸಾಗಿಸಲ್ಪಟ್ಟರು.

ಉಡುಪಿ.

ಹೋಸ್ಟೆಲ್ ಡೇ ಸಮಾರಂಭ:—ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತ್ಯುತ್ಸವವು ಇದೇ ತಾ. 13ನೇ ಶುಕ್ರವಾರ ಸಂಜೆ 5 ಘಂಟೆಗೆ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶ್ರೀ. ಬಿ. ಕೃಷ್ಣರಾಯ ಶೆಟ್ಟಿ ಬಿ. ಎ. ಎಲ್. ಟಿ.ಯವರು ಸ್ವಸ್ತಿ ವಾಚನ ಮಾಡಲಿರುವರು. ಸರ್ವರಿಗೂ ಸ್ವಾಗತವಿದೆ,ಎಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಹೊಸ ಇನ್ಸ್‌ಪೆಕ್ಟರು:– ಉಡುಪಿ ರೇಂಜಿನ ತಾಲೂಕ ಇನ್ಸ್‌ಪೆಕ್ಟರಾಗಿದ್ದ ಶ್ರೀ.ಬಿ.ಪಿ ರಮಾಕಾಂತನವರು 3ತಿಂಗಳ ರಜೆ ಪಡಕೊಂಡಿರುವುದರಿಂದ ಶ್ರೀ. ಕೆ. ಸಂಜೀವ ಭಟ್ಟರು ಅವರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟು ತಾ. 9ರಲ್ಲಿ ಚಾರ್ಜು ವಹಿಸಿರುವರೆಂದು ತಿಳಿದುಬರುತ್ತದೆ.

ಮಹಾ ಸಭೆ:–ಉಡುಪಿ ತಾಲೂಕು ಐಡೆಡ್ ಶಾಲಾ ಮೆನೇಜರ ಸಂಘದ ಮಹಾ ಸಭೆಯು ಡಾ| ಟಿ. ಮಾಧವ ಪೈ M.B.&B.S. ಇವರ ಅಧ್ಯಕ್ಷತೆಯಲ್ಲಿ ತಾ. 7-2-42ರಲ್ಲಿ ಜರಗಿ ಕಾರ್ಯದರ್ಶಿಯವರು ತಾ.21-12-41ರಲ್ಲಿ ಜರಗಿದ ಸಭೆಯ ವರದಿ, ಕಾರ್ಯದರ್ಶಿಯವರಿಗೆ ಬಂದ ಪತ್ರ ವ್ಯವಹಾರಗಳನ್ನು ಓದಿ ರಿಕಾರ್ಡು ಮಾಡಲಾಯಿತು. ಬಳಿಕ1942-43ಕ್ಕೆ11 ಮಂದಿ ಸದಸ್ಯರುಳ್ಳ ಹೊಸ ಕಾರ್ಯ ಕಾರಿ ಮಂಡಳಿಯ ಚುನಾವಣೆಯು ಜರಗಿತು. ಮಂಡಳಿಗೆ ಡಾ| ಟಿ. ಮಾಧವ ಪೈಗಳು ಅಧ್ಯಕ್ಷರಾಗಿಯೂ ರೆವರೆಂಡ್ ಫಾದರ್ ಡಬ್ಲ್ಯು ಡಿಸೋಜ ಮತ್ತು P. N. Madheva Rao ಇವರುಗಳು ಉಪಾಧ್ಯಕ್ಷರಾಗಿಯೂ, ಶ್ರೀ. ಸುಬ್ರಾಯ ಭಟ್ಟರು ಕಾರ್ಯದರ್ಶಿಯರು ಮತ್ತು ಖಜಾನ್ಜಿಯರಾಗಿಯೂ ಚುನಾಯಿಸಲ್ಪಟ್ಟಿರುವರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶ್ರೀ. ಸುಬ್ಬಯ್ಯನವರ ಅಕಾಲ ನಿಧನ.

ಬಿಲ್ಲವ ಸಮಾಜದ ವಿದ್ಯಾವಂತ, ಗುಣಾಢ್ಯ, ಗೌರವಾರ್ಹ ಸುಪುತ್ರರಾಗಿದ್ದ ಶ್ರೀ. ಯು. ಬಿ. ಸುಬ್ಬಯ್ಯ, ಎಂ. ಎ. ಎಲ್. ಟಿ., ಇವರು ಇದೇ ತಿಂಗಳ ತಾ. 1ರಲ್ಲಿ ಇಹಯಾತ್ರೆ ಮುಗಿಸಿದುದು ಶೋಚನೀಯವಿದೆ. ದಿವಂಗತರು ಮಂಗಳೂರು ರೇಂಜಿನ ಶಾಲಾ ಇನ್ಸ್‌ಪೆಕ್ಟರರಾಗಿದ್ದರು. ಕೆಲವು ತಿಂಗಳುಗಳಿಂದ ಪೀಡಿಸುತ್ತಿದ್ದ ಅನಾರೋಗ್ಯವು ಅವರನ್ನು ತಾರುಣ್ಯದಲ್ಲೇ ಬಲಿಗೊಂಡಿತು; ವಿಶೇಷ ಜನಮನ್ನಣೆ ಪಡೆದಿದ್ದ ಶ್ರೀಯುತರ ನಿಧನದಿಂದ ದ.ಕ. ಜಿಲ್ಲೆಗೆ ಮುಖ್ಯವಾಗಿ ಬಿಲ್ಲವ ಸಮಾಜಕ್ಕೆ ಅಪಾರ ನಷ್ಟವೊದಗಿದೆ. ವ್ಯಸನದ ಬಂಧು ಬಳಗದವರೊಡನೆ ಸಹ ಸಂತಾಪ ಸೂಚಿಸಿ, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ,

ಪುಂಗೇರ:– ಸ್ಥಳೀಯ ಹರಿ ಹರೇಶ್ವರ ದೇವಸ್ಥಾನದಲ್ಲಿ ರಥೋತ್ಸವದ ವೇಳೆ ಶ್ರೀ ಸೋಮನಾಥ ಗೋಖಲೆಯವರು ಇಂದಿನ ರಾಜಕೀಯ ಪರಿಸ್ಥಿತಿಯ ಕುರಿತಾಗಿಯೂ, ಶ್ರೀ| ನೀಲಕಂಠ ಪಾರಕರು ಹರಿಜನೋದ್ಧಾರದ ವಿಷಯವಾಗಿಯೂ, ಭಾಷಣವಿತ್ತರು

ಕಾರ್ಕಳ:– ಕಾರ್ಕಳ ಸಾಹಿತ್ಯ ಸಂಘದ ಉದ್ಘಾಟನೆಯು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿಯೂ, ಸ್ವಾತಂತ್ರ್ಯ ದಿನಾಚರಣೆಯು ಶ್ರೀ. ಯಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿಯೂ, ಉಪಾಧ್ಯಾಯಿನಿಯವರ ಕೇಂದ್ರ ಸಭೆಯು ಶ್ರೀಮತಿ ಪ್ರಿಟೋರವರ ಅಧ್ಯಕ್ಷತೆಯಲ್ಲಿಯೂ ಸಂದರ್ಭೋಚಿತ ಕಾರ್ಯ ಕ್ರಮದೊಂದಿಗೆ ಜರಗಿಸಲ್ಪಟ್ಟವು. ಹಿಂದುಸ್ಥಾನ ಸ್ಕೌಟ್ ಸಪ್ತಾಹವೂ ಆಚರಿಸಲ್ಪಟ್ಟಿದೆ.

ಬೋರ್ಡು ಹೈಸ್ಕೂಲಿನ ಯಸ್.ಯಸ್ ಎಲ್ ಸಿ ಪರೀಕ್ಷೆಗೆ ಈ ವರ್ಷದಲ್ಲಿ ಕಲಿಯುತ್ತಿರುವ ಎಲ್ಲಾ (46) ಮಂದಿಯನ್ನೂ ಕಳಿಸಿದ್ದಾರೆ. ಇದೇ ಎಪ್ರಿಲ್ 1ರಿಂದ ಕಾರ್ಕಳ ಪಂಚಾಯತ ಬೋರ್ಡ ಮನೆ ತೆರಿಗೆ ಹಾಕಲಿಕ್ಕಿದೆ. ಶ್ರೀ. ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿಯು ಇದೇ ತಾ 14ರ ದಿನ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗುವದು.

ಕುಂದಾಪುರ:– ತಾ. 1-1-42ರಲ್ಲಿ ಶ್ರೀ ಪ್ರಸಾದ ಪಿ. ಸಿ. ಎಸ್; ಇವರ ಅಧ್ಯಕ್ಷತೆಯಲ್ಲಿ "ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವು" ಜರಗಿತ. ಶ್ರೀ. ಶಂಕರ ಭಟ್ಟ, ವಿದ್ವಾನ್, ಕೋವಿದ ಇವರು ಹಿಂದೀ ಭಾಷೆಯ ಕುರಿತು ಭಾಷಣ ಮಾಡಿದರು ಅಧ್ಯಕ್ಷರ ಸರಸ ಭಾಷಣವಾದ ಮೇಲೆ ಹಿಂದೀ ನಾಟಕ, ಪ್ರಹಸನಗಳನ್ನು ವಿದ್ಯಾರ್ಥಿಗಳೂ ಇತರ ಹಿಂದೀ ಪ್ರೇಮೀಪುರ ಜನರೂ ಅಭಿನಯಿಸಿದ ನಂತರ ಮಂಡಲದ ಕಾರ್ಯದರ್ಶಿ ಶ್ರೀ. ಎಚ್. ಎಸ್. ಪೈ ಇವರು ಧನ್ಯವಾದಗಳನ್ನು ಸಮರ್ಪಿಸಿದರು.

ತಾ. 1-2-1942ರಲ್ಲಿ ಶ್ರೀ ಆರ್. ಪ್ರಸಾದ ಪಿ. ಸಿ ಯಸ್ ಇವರ ಅಧ್ಯಕ್ಷತೆಯಲ್ಲಿ ಮುಕಾಂಬಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ವಾರ್ಷಿಕೋತ್ಸವವು ಜರಗಿತು, ಸ್ವಾಗತ ಭಾಷಣವಾಗಿ ವರದಿ ಓದಿದ ನಂತರ ಶ್ರೀ B. A. Samak, B. A. B. T.ಇವರು ಸ್ವಸ್ತಿ ವಾಚನ ಮಾಡಿದರು.

The

Canara Industrial & Banking Syndicate Ltd.

(Incorporated in British India, Liability of Shareholders Limited)

HEAD OFFICE. UDIPI.

NOTICE.

The Register of Members and Transfer Books of the Syndicate will remain closed from Thursday the 19th February, 1942 to Friday the 20th March, 1942 both days inclusive.

(By order)

"Mukund Nivas", UDIPI. 10th Feb. 1942.

K. V. Shenoy, Ag. Secretary.

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,

ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ. 19-1-41ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸಹೊರಟಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.

(ಸಹಿ) ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್. ಚೇರ್‌ಮನ್

ದೇವಾಡಿಗ ಸುಧಾರಕ ಸಂಘ, ಮುಂಬಾಯಿ:–ಈ ಸಂಸ್ಥೆಯು ಸ್ಥಾಪನೆಯಾದಂದಿನಿಂದ ಇಂದಿನ ವರೆಗೂ ಅದರ ಅಭಿವೃದ್ಧಿಗೆ ಕಳೆದ 17 ವರ್ಷಗಳಿಂದ ತನು, ಮನ, ಧನಗಳನ್ನರ್ಪಿಸಿ ಎಡೆ ಬಿಡದೆ ಸೇವೆಯನ್ನು ಮಾಡಿದ ಹೆಜಮಾಡಿ ಕೇಸು ಆರ್. ಗುಜರನವರು ಕಾರಣಾಂತರಗಳಿಂದ ಮುಂಬಯಿ ನಗರವನ್ನು ಬಿಟ್ಟು ತನ್ನ ಸ್ವದೇಶಕ್ಕೆ ಹೋಗುವ ನಿಮಿತ್ತ ತಾ. 1-2-42ರಲ್ಲಿ ಅವರಿಗೆ ಒಂದು ಸತ್ಕಾರ ಕೂಟವು ಜರಗಿತು.

ಬೊಂಬಾಯಿ:–'ಪದ್ಮಶಾಲಿಗರ ಸಾಮಾಜಿಕ ಸಂಘ, ಮುಂಬಾಯಿ', ಇದರ ವಾರ್ಷಿಕೋತ್ಸವವು, ತಾ ೧-೧೯೪೨ರಲ್ಲಿ ಬ್ಯಾಕಬೇ ಹಿಂದು ಜ್ಯಮಖಾನೆಯಲ್ಲಿ ಶ್ರೀ ಕೆ. ಸಿ. ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರಿಂದ ಬಂದ ಸಂದೇಶ ತಂತಿ ಶುಭವಾರ್ತೆಯನ್ನು ಓದಿ, ವಂದನಾ ಚರಣ ದೊಡನೆ ಅಧ್ಯಕ್ಷರ,ಸಭಿಕರ ಸರಸ ಭಾರತ ಭಾಷಣದೊಂದಿಗೆ ಸಭೆಯು ಚಲೋರೀತಿಯಲ್ಲಿ ನೆರವೇರಿ, ಜಯ ಘೋಷಣೆಗಳಿಂದ ಫಲಹಾರದೊಂದಿಗೆ ಮುಕ್ತಾಯವಾಯಿತು,

ತಿದ್ದುಪಡಿ.

ಕಳೆದ ವಾರದ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ ಮೂಲ್ಕಿ ಬ್ಯಾಂಕಿನ ನೋಟೀಸಿನಲ್ಲಿ ಶ್ರೀ ಎಚ್. ರಾಮಣ್ಣ ಶೆಟ್ಟರ ಹೆಸರಿನಲ್ಲಿಯ ಶ್ಯಾರು ನಂಬ್ರ 236-246 ಎಂದು ತಪ್ಪಾಗಿ ಪ್ರಕಟವಾಗಿದೆ, ಅದು 206-246 ಎಂದಾಗ ಬೇಕು. ಹಾಗೆಯೇ 7ನೇ ಪುಟದಲ್ಲಿ ಪ್ರಕಟವಾಗಿರುವ ಡುಪ್ಲಿಕೇಟ್ ಶ್ಯಾರು ಸರ್ಟಿಫಿಕೇಟು ಕೊಡುವ ಕುರಿತು ಪ್ರಕಟವಾದ ನೋಟೀಸಿನಲ್ಲಿ ಶ್ರೀ. ಉಳ್ಳಾಲ ನಾರಾಯಣ ಕಿಣಿಯರ ಶ್ಯಾರು ನಂಬ್ರ 777-776 ಎಂದು ತಪ್ಪಾಗಿ ಪ್ರಕಟವಾಗಿದೆ, ಅದು 775-776 ಎಂದಾಗಬೇಕು. ಸಂ. ನ.

ಮೈಸೂರು ಪತ್ರ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ರಾಜಕೀಯ ಪರಿಸ್ಥಿತಿ:ಮೈಸೂರಿನಲ್ಲಿ ರಾಜಕೀಯ ಪರಿಸ್ಥಿತಿಯು ಬಹಳ ಬಿಗಡಾಯಿಸುತ್ತಿದೆ. ಸರ್ಕಾರದವರು ಇದ್ದಿದ್ದ ಹಾಗೆ ಕಾಂಗ್ರೆಸ್ ಮುಂದಾಳು ಶ್ರೀಗಳಾದ ದಾಸಪ್ಪ, ಟಿ ಸಿದ್ದಲಿಂಗಯ್ಯನವರುಗಳನ್ನು ಭಾರತ ರಕ್ಷಣಾ ಕಾನೂನುಗಳ ಪ್ರಕಾರ ದಸ್ತಗಿರಿ ಮಾಡಿರುತ್ತಾರೆ. ಮೈಸೂರು ನಗರದ ಮ್ಯಾಜಿಸ್ಟ್ರೇಟರು ಪೋಲೀಸ್ ಸೆಕ್ಷನ್ 45ರ ಪ್ರಕಾರ ಒಂದು ಆಜ್ಞೆ ಹೊರಡಿಸಿ ಮೆರವಣಿಗೆ ಸಭೆ ನಡೆಸಕೂಡದೆಂದು ತಿಳಿಸಿದ್ದಾರೆ, ಈ ಆಜ್ಞೆಗಳಿಂದಲೂ ಸರ್ಕಾರದ ದಬ್ಬಾಳಿಕೆಯಿಂದಲೂ ದೇಶದಲ್ಲಿ ಅಶಾಂತಿಗೆ ಮಾರ್ಗವಾಗುತ್ತಿರುವುದನ್ನು ಮುಖಂಡರುಗಳು ಹೇಳಿಕೆಗಳನ್ನು ಹೊರಡಿಸಿ, ಸಭೆಗಳನ್ನು ನಡೆಸಿ ಉಜ್ವಲ ಭಾಷಣಗಳನ್ನು ಮಾಡಿ, ಟೀಕಿಸಿ ಖಂಡಿಸುವ ನಿರ್ಣಯಗಳಾದುವು. ಮೈಸೂರು ಕಾಂಗ್ರೆಸಿಗೂ ಸರ್ಕಾರಕ್ಕೂ ಮತ್ತೆ ಹೋರಾಟ ಪ್ರಾರಂಭವಾಯ್ತೆಂದು ಪ್ರಮುಖ ಮಹನೀಯರು 'ನವಯುಗ' ಬಾತ್ಮೀದಾರರಿಗೆ ತಿಳಿಸಿದರು. ದಸ್ತಗಿರಿಯಾದವರ ವಿಚಾರಣೆ ನಡೆಯುತ್ತಿದೆ.

ನಾನಾ ಸಾರ್. ಭದ್ರಾವತಿ ಲೇಬರ್ ಪಂಚಾಯ್ತಿ ಬಗ್ಗೆ ವಿಚಾರಣೆಯಾಗುತ್ತಿದೆ. ಎ. ಆರ್. ಪಿ. ಕಾರ್ಯದ ಬಗ್ಗೆ ಸಂಸ್ಥಾನ ಅತ್ಯಂತ ಸರ್ಕಾರದವರು ವಿಶೇಷ ವ್ಯವಸ್ಥೆ ಕೈಕೊಳ್ಳುತ್ತಿದ್ದಾರೆ, ಬೆಂಗಳೂರು ಪೌರಸಭೆ ಮೀಟಿಂಗೊಂದು ನಡೆದು, ಬೆಳದಿಂಗಳ ಕಾಲದಲ್ಲಿ ರಾತ್ರಿ ಹೊತ್ತು ಬೀದಿ ದೀಪ ಆರಿಸುವ ಬಗ್ಗೆ ಚರ್ಚೆ ನಡೆಸಿದರು. ದಿವಾನರಾದ ರಾ|| ಕೃ|| ಮಾಧವ ರಾಯರು ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದರು. ಬೆಂಗಳೂರು ನಗರದಲ್ಲಿ ಜೀವನದ ಮಟ್ಟವನ್ನು ಸೂಚಿಸುವ ಪಟ್ಟಿಯನ್ನು ತಯಾರಿಸುವ ಕಮಿಟಿಯು ತನ್ನ ವರದಿ ಪೂರೈಸಿ ಸರ್ಕಾರಕ್ಕೆ ಕಳುಹಿಸಿದ್ದಾರೆ, ಕಾಟೇಜ್ ಇಂಡಸ್ಟ್ರೀಸ್ ಕಮಿಟಿ ಸಭೆ ಇದೇ ತಿಂಗಳ 19ರಲ್ಲು ಬನಸವಾಡಿಯಲ್ಲಿ ಸೇರುತ್ತ, ಕೈ ಮಗ್ಗ ಕೈಗಾರಿಕೆ ಸಮಿತಿ ತನ್ನ ವರದಿ ಪೂರೈಸಿ ಸರ್ಕಾರಕ್ಕೆ ಒಪ್ಪಿಸಲಿದ್ದಾರೆ, ಬೆಂಗಳೂರು ಲಾಲ್‌ಬಾಗ್‌ನಲ್ಲಿ ಸೊಗಸಾದ ಹೂಗಿಡ ಬಳ್ಳಿಗಳ ಪ್ರದರ್ಶನ ನಡೆಯಿತು, ಸಂಸ್ಥಾನದ ಅತ್ಯಂತ ವಿಮಾನ ಧಾಳಿಸುವಿಕೆ ಅದನ್ನು ತಡೆಗಟ್ಟಲು ಮೈ|| ಸ|| ರವರು ಸೊಗಸಾದ ಎ. ಆರ್. ಪಿ. ವ್ಯವಸ್ಥೆ ಕೈಗೊಂಡಿದ್ದಾರೆ, ಕಾಮರ್ಸ್ ಕಾಲೇಜೊಂದನ್ನು ಮೈಸೂರು ವಿಶ್ವವಿದ್ಯಾನಿಲಯದವರು ತೆರೆಯಲು ಸರ್ಕಾರ ಅನುಮತಿ ಇತ್ತಿದ್ದಾರೆಂದು ಹೇಳಲಾಗಿದೆ. ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಶ್ರೀ ಕೆ. ಎಚ್. ಕುಮಾರನ್‌ರ ದಸ್ತಗಿರಿಯಾಗಿದೆ.

ಹಿಟ್ಲರರು ಮಾಡಿರುವ 6 ವಿಷಮ ತಪ್ಪೆಣಿಕೆಗಳು.

ಜರ್ಮನ್ ಯುದ್ಧತಂತ್ರಜ್ಞರಲ್ಲಿ ಮತ್ತು ಜನತೆಯಲ್ಲಿ ನಿರುತ್ಸಾಹ.

ಹಿಟ್ಲರರು ತನ್ನ ದಂಡಯಾತ್ರೆಯನ್ನಾರಂಭಿಸಿ 9 ವರ್ಷಗಳಾದರೂ ನಿಜವಾದ ಯುದ್ಧದ 3ನೇ ವರ್ಷದಲ್ಲೀಗ ನಾವಿರುವೆವು. ಈ ಹೋರಾಟದ ಸಿಂಹಾವಲೋಕನ ಮಾಡಿದರೆ, ಹಿಟ್ಲರರು 1939ನೇ ಆಗೋಸ್ಟು ತಿಂಗಳಾರಭ್ಯ 6 ದೊಡ್ಡ ತಪ್ಪುಗಳನ್ನು ಮಾಡಿರುವರೆನ್ನಬಹುದು.

ರಷ್ಯೋ ಜರ್ಮನ್ ಒಪ್ಪಂದದ ಪರಿಣಾಮವಾಗಿ, ಇಂಗ್ಲೆಂಡು ಪೋಲೆಂಡಿನ ಸಹಾಯಕ್ಕೆ ಹೋಗದಂತಾಗುವುದೆಂಬ ಹಿಟ್ಲರರ ಕಲ್ಪನೆಯು ತಪ್ಪಾಯಿತು. ಪೋಲೆಂಡನ್ನು ಗೆದ್ದು ಪುಡಿ ಹಾರಿಸಿದ ಮೇಲೆ ಬ್ರಿಟನು ಒಪ್ಪಂದಕ್ಕೆ ಬರುವುದೆಂಬ ಅವರ ಎಣಿಕೆಯೂ ತಪ್ಪಾಗಿ ಬಿಟ್ಟಿತು. ಫ್ರಾನ್ಸಿನ ಪತನವಾದ ಮೇಲೆ ಇಂಗ್ಲೆಂಡನ್ನು ನೆಲಕ್ಕಪ್ಪಳಿಸಿಬಿಡಬಹುದೆಂದು ಮೂರನೇ ಸಲ ಅವರೆಣಿಸಿದುದೂ ತಪ್ಪಾಯಿತು. ಹೋರಾಟವೇನೂ ಇಲ್ಲದೆ ಬಾಲ್ಕನ್ ರಾಷ್ಟ್ರಗಳನ್ನು ಸ್ವಾಧೀನಪಡಿಸಿಕೊಂಡುಬಿಡಬಹುದೆಂಬ ಹಿಟ್ಲರರ ಕಲ್ಪನೆಯೂ ತಪ್ಪಾಗಿ ಅವರು ಅಮೂಲ್ಯವಾದ 6 ವಾರಗಳನ್ನು ಕಳಕೊಳ್ಳುವಂತಾಯಿತು. ಇದರಿಂದ ಅವರ ಆ ವರ್ಷದ ಯುದ್ಧದ ಕಾರ್ಯಕ್ರಮವು 6 ವಾರ ಹಿಂದೆ ಬಿದ್ದು ಬಹಳ ತೊಂದರೆಯಾಯಿತು. ಚಳಿಗಾಲ ಆರಂಭವಾಗುವ ಮೊದಲೇ ರಷ್ಯದ ಯುದ್ಧವನ್ನು ಮುಗಿಸಿ ಸೋವಿಯೆಟ್ ಸೇನೆಯನ್ನು ನಿರ್ನಾಮಗೊಳಿಸಬಹುದೆಂದವರು 5ನೇ ಸಲ ಎಣಿಸಿದುದೂ ತಪ್ಪಾಯಿತು. ಹಿಟ್ಲರರ 6ನೇ ತಪ್ಪುಕಲ್ಪನೆಯೆಂದರೆ, ತಾನು ಪೂರ್ವಾರ್ಧ ಗೋಳದಲ್ಲಿ ದಿಗ್ವಿಜಯಗೈದು ರಾಷ್ಟ್ರಗಳ ಸ್ವಾತಂತ್ರ್ಯವನ್ನು ಅಪಹರಿಸಿ, ನಾಝಿ ಶಾಹಿಯನ್ನು ಸ್ಥಾಪಿಸುವಾಗ ಅಮೇರಿಕವು ಕಣ್ಣು ಕಣ್ಣು ನೋಡುತ್ತಾ ತಣ್ಣಗಿರುವುದೆಂಬುದು ಇವರ ಆ ದೊಡ್ಡ ತಪ್ಪೆಣಿಕೆ. ಹಿಟ್ಲರರ ಈ 6 ತಪ್ಪೆಣಿಕೆಗಳ ಪರಿಣಾಮವಾಗಿ, ಇಂಗ್ಲೆಂಡು, ರಷ್ಯ ಮತ್ತು ಅಮೇರಿಕಗಳನ್ನು ತಮ್ಮ ಯುಕ್ತಿಯಂತೆ ಒಂದೊಂದಾಗಿ ಗೆಲ್ಲುವ ನಿರೀಕ್ಷೆಯುಂದಿದ್ದ ಜರ್ಮನರು ಇಂದು ಆ ಮೂರು ಮಹಾ ರಾಷ್ಟ್ರಗಳನ್ನು ಒಟ್ಟಿಗೆ ಎದುರಿಸುವ ಗಂಡಾಂತರವನ್ನೆದುರಿಸಬೇಕಾಗಿ ಬಂದಿದೆ.

ಅಮೇರಿಕವು ಯುದ್ಧಕ್ಕೆ ಸೇರಿದುದರಿಂದ, ಜರ್ಮನ್ ಸಮರ ತಂತ್ರಜ್ಞರಲ್ಲಿ ಮತ್ತು ಜನಸಾಮಾನ್ಯರಲ್ಲಿ ಬಹಳ ನಿರುತ್ಸಾಹವುಂಟಾಗಿದೆ. ಕಳೆದ ಮಹಾಯುದ್ಧದಂತೆಯೇ ಈ ಸಲವೂ ದೀರ್ಘಕಾಲ ಹೋರಾಟ ನಡೆದು ಕಟ್ಟಕಡೆಗೆ ಜರ್ಮನರು ಸೋಲುವಂತಾಗುವುದೆಂದವರು ಸಂದೇಹಗೊಳ್ಳುತ್ತಿರುತ್ತಾರೆ. ಎಂದೂ ತಪ್ಪು ಮಾಡದ ದೇವಾಂಶ ಸಂಭೂತರಿದ್ದಾರೆ ತಮ್ಮ ಫ್ಯೂರರೆಂದು ಹಿಂದೆ ಜರ್ಮನರಲ್ಲಿ ನೆಲೆಗೊಂಡಿದ್ದ ದೃಢವಿಶ್ವಾಸವು ಈಗ ಸಡಿಲಾಗಿ, ಅವರೂ ತಪ್ಪುಮಾಡುವ ಮಾನವರಾಗಿರುವರೆಂಬ ಜ್ಞಾನೋದಯವಾಗುತ್ತಿದೆ.

ಜರ್ಮನ್ ಸೈನಿಕರೂ ಹೋರಾಡಿ ಸೋತು ಹೋಗಿರುತ್ತಾರೆ. ಇಂದೀಗ ಮೂರು ನಾಲ್ಕು ವರ್ಷಗಳಾದುವು ಅವರು ತಮ್ಮ ಬಂಧುಬಳಗವನ್ನು ಕಾಣದೆ. ಒಂದಿಷ್ಟಾದರೂ ಬಿಡುವಿಲ್ಲದೆ ಒಂದು ರಣರಂಗದಿಂದಿನ್ನೊಂದಕ್ಕವರು ಕಳುಹಿಸಲ್ಪಟ್ಟಿರುವುದರಿಂದ ಅವರಲ್ಲಿ ಬೇಸರವುಂಟಾಗಿದೆ. ಇಷ್ಟು ಮಾತ್ರದಿಂದ ಶೀಘ್ರವಾಗಿ ಜರ್ಮನಿಯಲ್ಲಿ ನಾಝಿ ಆಳ್ವಿಕೆಯು ಪತನ ಹೊಂದುವುದೆನ್ನಲಾಗುವುದಿಲ್ಲ. ಆದರೆ ಹಿಟ್ಲರರಿಗೆ ಮೊದಲಿನಷ್ಟು ಉತ್ಸಾಹಪರ ಬೆಂಬಲವನ್ನೀಗ ಜರ್ಮನ್ ಜನಾಂಗವು ಕೊಡಲಾರದು. ಚಳಿಗಾಲ ದಾಟಿದ ಮೇಲೆ ರಷ್ಯದಲ್ಲಿ ಹಿಟ್ಲರರು ಆರಂಭಿಸಲಿರುವ ಪ್ರಚಂಡ ಧಾಳಿಯ ಪರಿಣಾಮದ ಮೇಲೆ ಹೊಂದಿಕೊಂಡಿದೆ ಅವರ ಅದೃಷ್ಟ.

ಇಂದೀಗ ಹಿಟ್ಲರರ ಪ್ರಚಂಡ ಪ್ರತಿಸ್ಪರ್ಧಿಯಾಗಿ ಅವರನ್ನು ನೆಲಕ್ಕಪ್ಪಳಿಸಲು ಮುಂದಾಗಿರುವ ಸ್ಟೆಲಿನರಿಗೆ ಸೋವಿಯಟ್ ರಷ್ಯದಲ್ಲಿ ಇನ್ನಷ್ಟು ಉತ್ಸಾಹಪರ ಬೆಂಬಲವು ದೊರೆಯುತ್ತಿದೆ. ಹೊಸ ಹೊಸ ಸೋವಿಯೆಟ್ ಸೇನೆಗಳು ಸರ್ವೋತ್ಸಾಹದಿಂದ ಹೋರಾಡಲು ಮುಂದೊತ್ತಿ ಬರುತ್ತಿವೆ. ಆದುದರಿಂದ ಹಿಟ್ಲರರ ಮುಂದಿನ ಎಂತಹ ಪ್ರಚಂಡ ಧಾಳಿಯನ್ನಾದರೂ ಸೋವಿಯೆಟ್ ಸೇನೆಯು ಪ್ರತಿಭಟಿಸುವ ಭರವಸೆ ತೋರುತ್ತದೆ. ಇನ್ನೂ ಸುಮಾರು 3 ತಿಂಗಳುಗಳಿವೆ ರಷ್ಯದ ಚಳಿಗಾಲ ದಾಟಲು. ಅಷ್ಟರೊಳಗೇನೇ ಸೋವಿಯೆಟ್ ಸೇನೆಯು ಜರ್ಮನರನ್ನು ಆದಷ್ಟು ಹಿಂದಕ್ಕೋಡಿಸಲು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡದಿರಲಾರದು. ಇಷ್ಟರಲ್ಲೇ ಆ ಕಾರ್ಯವನ್ನದು ಆರಂಭಿಸಿರುವುದು. ಜರ್ಮನ್ ಸೇನೆಯು ಇನ್ನು ಮುಂದೆ ಹಿಂದೆ ಸರಿಯಬಾರದೆಂದು ಹಿಟ್ಲರರು ಕಟ್ಟಪ್ಪಣೆಯಿತ್ತಿರುವರೆಂದು ತಿಳಿದುಬರುತ್ತದೆ. ಅಂದ ಮೇಲೆ ಚಳಿಗಾಲದಲ್ಲೇ ಹಲವೆಡೆ ತೀವ್ರ ಹೋರಾಟ ನಡೆಯದಿರಲಾರದು. ಅಂತೂ ಹಿಟ್ಲರರು ರಷ್ಯದ ಕರಡಿಯನ್ನು ವಶಪಡಿಸಿಕೊಂಡು ತನ್ನಿಚ್ಛೆಯಂತೆ ಕುಣಿಸಹೋಗಿ ತಾನೇ ಅದರ ಹಿಡಿತಕ್ಕೆ ಸಿಕ್ಕಿ ಬಸವಳಿಯುವಂತಾಗಿದೆ. ಜರ್ಮನಿಯ ಪೂರ್ವದ ಮಿತ್ರರಾಷ್ಟ್ರ ಜಪಾನೂ, ಚೈನದ ಯುದ್ಧಕ್ಕೆ ಕೈಹಾಕಿ ಹಿಟ್ಲರರಂತೆಯೇ ಸಿಕ್ಕಿಬಿದ್ದಿದೆ. ಈ ಪ್ರಮಾದಗಳಿಂದಲೇ ಜರ್ಮನಿ ಮತ್ತು ಜಪಾನುಗಳು ಕಟ್ಟಕಡೆಗೆ ಅಪಜಯ ಹೊಂದುವುದು ನಿಶ್ಚಯವೆಂಬಂತೆ ತೋರುತ್ತದೆ.

ಆಪತ್ತು ಸನ್ನಿಹಿತವಾದಾಗ ಯಾವ ಆಲೋಚನಾಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಅಕ್ಕಪಕ್ಕದವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಇತರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯತೆಯನ್ನು ಆಸ್ತಿಪಾಸ್ತಿಗಳನ್ನು ಭಾವಿ ಭವಿಷ್ಯತ್ತನ್ನು ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರುದಾಳಿಯನ್ನು ತಡೆಯಲು ನಿಮ್ಮ ರಕ್ಷಕರಿಗೆ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿ ೧೦ ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ
ರೂ ೩/೯/-
ಲಾಭ ಬರುವುದು

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

G1:79-Ka

Notice

It is hereby notified that the Hossangady bridge in 5/7 of Mudabidri– Guruvainakere Road is closed to all vehicular traffic for one month from 7th February 1942, as the bridge is under repairs and no person shall use the bridge for the period mentioned above, contrary to the terms of this notice.

Sd: K. Vittal Shetty.
President, Dt Board.
South Kanara Dt. Board Office,
Mangalore. Dated 5-2-42

ಫೆಸಿಸ್ಟ್ ಇಟೆಲಿಯ ಇಂದಿನ ದೈನ್ಯಾವಸ್ಥೆ

ನಾಝಿ 'ಲೆಬನ ಸ್ರೌಮ್'ನಲ್ಲಿ ಸೇರಿಸಲ್ಪಟ್ಟಿದೆ ಇಟೆಲಿ.

ಸೈನಿಕರಲ್ಲಿ ಯುದ್ಧೋತ್ಸಾಹವಿಲ್ಲ-ನಾಗರಿಕರು ಜರ್ಮನರನ್ನು ತೀವ್ರವಾಗಿ ದ್ವೇಷಿಸಿ, ಜರ್ಮನರನ್ನು ನಿವಾಳಿಸಿ ಬಿಡಬೇಕೆಂಬ ಕೂಗೆದ್ದಿದೆ.-ತಮ್ಮ ಮಕ್ಕಳು ಯುದ್ಧದಲ್ಲಿ ಸೆರೆಸಿಕ್ಕಬೇಕೆಂದು ತಾಯಂದಿರು ಆಶಿಸುತ್ತಿದ್ದಾರೆ.

ಇಟೆಲಿಯಲ್ಲಿ ಜರ್ಮನರ ಉಪಟಳವು ದಿನೇ ದಿನೇ ಅಧಿಕವಾಗಿ ಜನರು ಜುಗುಪ್ಸೆಗೊಳ್ಳುವಂತಾಯಿತು. ಆದುದರಿಂದ ಜರ್ಮನಿಯು ತನ್ನ ಧೋರಣೆಯನ್ನು ಬದಲಾಯಿಸಬೇಕಾಯಿತು. ಇಟೆಲಿಯಲ್ಲಿರುವ ಜರ್ಮನರು ಆದಷ್ಟು ಕಡಿಮೆಯಾಗಿ ಸಾರ್ವಜನಿಕರೊಂದಿಗೆ ಬೆರೆಯಬೇಕೆಂದು ಆಜ್ಞೆ ಕೊಡಲಾಯಿತು. ಈ ಸಂದರ್ಭದಲ್ಲಿ ನಾಝಿ ಪೋಲೀಸ್ ದಳದ ನಾಯಕ ಮತ್ತು ಹಿಟ್ಲರರ ಪರಮಾಪ್ತ ಹಿಮ್ಲರರು ರೋಮ್ ಪಟ್ಟಣವನ್ನು ಸಂದರ್ಶಿಸಿದರು. ಆ ಮೇಲೆ ಆರಂಭವಾಯಿತು ನೂರಾರು ಮಂದಿ ಅಧ್ಯಗೃಹಸ್ಥರನ್ನು ಗುಪ್ತ ಪೋಲೀಸರು ಅನುಸರಿಸಲಿಕ್ಕೆ. ನೂರಾರು ಮಂದಿ ಪ್ರತಿಷ್ಠಿತ ಇಟೆಲಿಯಾನರು ಅದೃಶ್ಯರಾಗ ಹತ್ತಿದರು. ಹಲವು ಮಂದಿ ವಿದೇಶೀಯರೂ ಕಾಣೆಯಾದರು.

ತಾವು ಗೆದ್ದು ಆಕ್ರಮಿಸಿರುವ ಇತರ ರಾಷ್ಟ್ರಗಳಂತೆಯೇ ಜರ್ಮನರೀಗ ಇಟೆಲಿಯನ್ನು ಕಾಣುತ್ತಿದ್ದಾರೆ. ಈಗ ಜರ್ಮನಿಗೆ, ಇಟೆಲಿಯ ಮೂಲಕ ಭೂಮಧ್ಯ ಸಾಗರಕ್ಕೆ ಪ್ರವೇಶ ದೊರೆತಿರುವುದರಿಂದ ಇಟೆಲಿಯು ನಾಝಿ 'ಲೆಬೆನ್ ಸ್ರೌಮ್'ನೊಳಗೆ ಸೇರಿಹೋಗಿದೆ. ಬರ್ಲಿನಿನಲ್ಲಿ ಇಟೆಲಿಯ ಗೆಳೆತನದ ಕುರಿತು ಮಾತಾಡುವವರೇ ಇಲ್ಲ. ನಾಝಿ ಆಳ್ವಿಕೆಯಲ್ಲಿ ಇಟೆಲಿಯ ಸ್ಥಾನದ ಕುರಿತು ಜರ್ಮನರು ಬಹಿರಂಗವಾಗಿಯೇ ಮಾತಾಡುತ್ತಾರೆ. ಅದು ಜರ್ಮನರ ವಿಶ್ರಾಮ ಮತ್ತು ವಿಹಾರ ಸ್ಥಳವಾಗಲಿದೆ.

ಇಟೆಲಿಯಲ್ಲಿ ಫೆಸಿಸ್ಟ್ ಆಳ್ವಿಕೆಯು ಪತನ ಹೊಂದಿದರೆ ಜರ್ಮನರು ಪ್ರತ್ಯಕ್ಷವಾಗಿ ಅದನ್ನಾಕ್ರಮಿಸಿ ವಶಪಡಿಸಿಕೊಳ್ಳುವರೆಂದು ಇಟೆಲಿಯಾನರಾದ ಕೌಂಟ್ ಸ್ಫೋರ್ಜಾರವರು ನ್ಯೂಯೋರ್ಕಿನಲ್ಲಿ ಹೇಳಿರುವರು. ಮಿಲ್ಯಗಟ್ಲೆ ಇಟೆಲಿಯಾನರು ಇದೇ ಮನೋನಿರ್ಧಾರವುಳ್ಳವರಿದ್ದಾರೆ. ಅಂತಹ ಗಂಡಾಂತರವನ್ನು ನಿವಾರಿಸುವುದಕ್ಕಾಗಿ ಅವರು ಯುದ್ಧಾಂತ್ಯದ ವರೆಗೆ ಈಗಣ ಆಳ್ವಿಕೆಯನ್ನೇ ಎತ್ತಿ ಹಿಡಿಯಲೇ ಬೇಕಾಗಿದೆ. ಆದುದರಿಂದಲೇ ಅವರು ಜರ್ಮನರ ಉಪಟಳದ ಅವಮಾನವನ್ನು ಅತ್ಯಂತ ತಾಳ್ಮೆಯಿಂದ ಸಹಿಸಿಕೊಳ್ಳುತ್ತಿದ್ದಾರೆ. ತಮ್ಮ ಮಟ್ಟಿಗೆ ಯುದ್ಧವನ್ನು ಕಳಕೊಂಡಂತೆಯೇ ಸರಿಯೆಂಬುದನ್ನವರು ಚೆನ್ನಾಗಿ ಬಲ್ಲರು.

"ಮೊಸಲೋನಿಯವರಿಗೀಗ ಇಟೆಲಿಯಾನ ಸೇನೆಯ ಉತ್ಸಾಹಪರ ಬೆಂಬಲವಿರುವುದಿಲ್ಲ. ನಾವು ಈ ಪೋಷಾಕನ್ನು ಮುಸಲೋನಿಯವರಿಗಾಗಿಯಲ್ಲ. ಅರಸರಿಗಾಗಿ ಧರಿಸಿಕೊಂಡಿರುವುದು. ಆದರೆ ಇಂದೀಗ ಅರಸರೂ ಯುದ್ಧ ಸಾರುವುದರಲ್ಲಿ ಭಾಗವಹಿಸಿ ನಮಗೆ ದ್ರೋಹ ಮಾಡಿ, ನಮ್ಮ ಪೂರ್ವಜರನ್ನು ಕೊಂದವರೊಂದಿಗೆ ಸೇರಿ ನಡೆಯಲು ಮುಂದಾಗಿದ್ದಾರೆ" ಎಂದು ಕೆಲಮಂದಿ ಇಟೆಲಿಯಾನ ಸೇನಾಧಿಕಾರಿಗಳೊಮ್ಮೆ ಮಾತಾಡಿಕೊಳ್ಳುತಿದ್ದರು.

ಕಳೆದ ವರ್ಷದ ಚಳಿಗಾಲದಲ್ಲೊಂದು ದಿನ ಕೆಲಮಂದಿ ಸೈನಿಕರು ಟ್ರೈನಿನಲ್ಲಿ ಆಲ್ಬಾನಿಯಕ್ಕೆ ಹೋಗುತ್ತಿದ್ದರು. ಅವರು, ದಕ್ಷಿಣ ಇಟೆಲಿಯ ಒಣಪ್ರದೇಶವಾದ ಕಲಿಬ್ರಿಯ ಪ್ರಾಂತದ ಒಕ್ಕಲಿಗರ ಮಕ್ಕಳಾಗಿದ್ದರು. "ಯುದ್ಧದ ಕುರಿತು ನಿನ್ನ ಅಭಿಪ್ರಾಯವೇನು?" ಕೇಳಿದ ಒಬ್ಬ ಇನ್ನೊಬ್ಬನೊಡನೆ "ನನಗೇನೂ ಗೊತ್ತಿಲ್ಲ. ತೆರಿಗೆ ತೆರುವುದಕ್ಕಾಗಿ ನಾನು ನನ್ನ ದನವನ್ನು ಮಾರಬೇಕಾಯಿತು. ಮನೆಯಲ್ಲಿ ಉಣ್ಣಲೇನೂ ಇರುವುದಿಲ್ಲ. ನಾನು ಗ್ರೀಕರೊಡನೆ ಹೋರಾಡುವುದಾಗಿ ನೆನಸಲಾಗಿದೆ. ಗ್ರೀಕರೆಂದರಾರು? ಅವರೇನೂ ನನ್ನ ದನವನ್ನೊಯ್ದಿಲ್ಲ" ಎಂದ ಎರಡನೆಯವ.

ಹೀಗೆ ತರುಣ ಇಟೆಲಿಯಾನ ರಿಸರ್ವ್ ಸೈನ್ಯಾಧಿಕಾರಿಗಳು, ತಮಗೆ ಏನೇನೂ ವಿಶ್ವಾಸವಿಲ್ಲದುದಕ್ಕಾಗಿ ಹೋರಾಡಲು ಸಾವಿರಗಟ್ಲೆಯಲ್ಲಿ ಹೋಗಿ ಬಹಳ ನೊಂದುಕೊಂಡು ಮಡಿಯುವರು. ತಮ್ಮ ಮನಸ್ಸೊಪ್ಪದುದಕ್ಕಾಗಿ, ತಮಗೇನೆಂದು ಸ್ಪಷ್ಟವಾಗಿ ತಿಳಿಯದುದಕ್ಕಾಗಿ ಅವರು ಪ್ರಾಣವನ್ನೀಯುವರು.

ಇಟೆಲಿಯಾನ ಸೇನೆಯು ಸರಿಯಾಗಿ ಸಂಘಟಿತವಾದುದಲ್ಲ. ಫೆಸಿಸ್ಟ್ ಪಕ್ಷ ಮತ್ತು ಸಮರತಜ್ಞ ಮಂಡಲಿಯ ಒಳಸಂಚುಗಳಿಂದ ತುಂಬಿರುವ ಸಮರ್ಥ ಸೇನಾನಾಯಕರ ಕೊರತೆಯಿಂದ, ನಾಕಷ್ಟು ಯುದ್ಧ ಸಾಮಗ್ರಿ ಮತ್ತು ಆಹಾರಗಳ ಅಭಾವದಿಂದ ಅದು ದುರ್ಬಲವಾಗಿರುವುದು. ಹೊರಗಣ ಬಡಾಯಿಯೇ ಹೆಚ್ಚಿದೆ ಒಳಗಣ ಶಕ್ತಿ ಕಡಿಮೆ. ಫೆಸಿಸ್ಟ್ ಸೇನೆಯಲ್ಲಿ. ಸೈನಿಕರು ಗಾಯಗೊಂಡರೆ ಸರಿಯಾದ ಚಿಕಿತ್ಸೆಯ ವ್ಯವಸ್ಥೆ ಕೂಡಾ ಇಲ್ಲದೆ ಅವರು ಬದುಕಿ ಉಳಿಯುವ ಸಂಭವವೇ ಕಡಿಮೆ

"ನಮಗೆ ವಿದ್ರೋಹವಾಗಿದೆ' ಎಂದು ಸೈನಿಕರು ಬಾಯ್ಬಿಟ್ಟು ಹೇಳುವರು.

ಅವರ ಕುಟುಂಬದವರು, ಅವರು ವೈರಿಗಳ ಕೈದಿಗಳಾಗಿ ಬದುಕಿಕೊಂಡಾದರೂ ಇರಬೇಕೆಂದು ಪ್ರಾರ್ಥಿಸುವರು. "ನನ್ನ ಮಗನು ಸೆರೆಹಿಡಿಯಲ್ಪಟ್ಟರೆ ಅವನು ಬ್ರಿಟಿಷರನ್ನು ಮಿತ್ರರಂತೆ ಸ್ವಾಗತಿಸಿ, ಫೆಸಿಸ್ಟ್ ನಾಶವಾಗಲೆಂದು ಘೋಷಿಸದಿರಲಾರನು" ಎಂದಳೊಬ್ಬ ಇಟೆಲಿಯಾನ ಸೈನಿಕನ ತಾಯಿ. ಟೊಬ್ರುಕಿನಲ್ಲಿ ತನ್ನ ಮಗನು ಬ್ರಿಟಿಷರಿಗೆ ಸೆರೆಯಾಗಿರುವನೆಂಬ ವಾರ್ತೆ ಕೇಳಿ ಇನ್ನೊಬ್ಬಳು "ಕಟ್ಟಕಡೆಗೆ ಅವನು ನಾಗರಿಕ ಜನರೊಂದಿಗೆ ಸೇರುವಂತಾಯಿತು" ಎಂದು ಉದ್ಗರಿಸಿದಳು. ರಣರಂಗದಲ್ಲಿ ಪ್ರಾಣವನ್ನು ಕಳಕೊಂಡಿದ್ದ ಇನ್ನೊಬ್ಬ ಇಟೆಲಿಯಾನ ಸೈನಿಕನು ತನ್ನ ತಾಯಿಗೆ ಈ ರೀತಿ ಬರೆದಿದ್ದನು. "ನಾನು ಕೊಲ್ಲಲ್ಪಟ್ಟರೆ ನಾನು ಫೆಸಿಸ್ಟಿಗಾಗಿ ಪ್ರಾಣವಿತ್ತಿರುವೆನೆಂದು ಹೇಳಬೇಡ. ಮುಸಲೋನಿಯು ಸತ್ತೇ ಹೋಗಲಿ! ಪ್ರಜಾಸತ್ತೆಯು ಚಿರಕಾಲ ಬಾಳಲಿ! ಎಂದು ಕೂಗುತ್ತಾ ಸತ್ತೆನೆಂದು ಹೇಳು".

ಇಟೆಲಿಯಾನ ಸೇನೆಯ ಪರಿಸ್ಥಿತಿಯು ಇಷ್ಟೊಂದು ಕೆಟ್ಟಿದ್ದರೂ ಕೆಲಮಂದಿ ತರುಣರು ಉತ್ಸಾಹದಿಂದ ರಣರಂಗಕ್ಕೆ ತೆರಳಲು ಮುಂದಾಗುವರು. "ಈಗಣ ಪರಿಸ್ಥಿತಿಯಲ್ಲಿ ಇಟೆಲಿಯಲ್ಲಿರುವುದಕ್ಕಿಂತ ಬೇರೇನು ಮಾಡುವುದಾದರೂ ಲೇಸು. ಫೆಸಿಸ್ಟ್ ಗುಪ್ತಚರರ ಕಾಟವಿಲ್ಲದ ಒಂದೇ ಒಂದು ಸ್ಥಳವೆಂದರೆ ರಣರಂಗ" ಎಂದ ತರುಣ ಇಟೆಲಿಯಾನನೊಬ್ಬ.

ತರುಣ ವಿದ್ಯಾರ್ಥಿಗಳಿಗೆ ಜರ್ಮನರ ಉಪಟಳ ಅಸಹನೀಯವಾಗಿ ಅವರು ಗಲಾಟೆಮಾಡಹತ್ತಿರುತ್ತಾರೆ. ರೋಮ್, ಮಿಲಾನ್, ಟ್ಯೂರಿನ್, ಮತ್ತು ಬೊಲೊಗ್ನಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಗಲಾಟೆಮಾಡಿರುವರು. ರೋಮ್ ಪಟ್ಟಣದಲ್ಲೇ ಇಬ್ಬರು ವಿದ್ಯಾರ್ಥಿಗಳು ಕೊಲ್ಲಲ್ಪಟ್ಟಿದ್ದರು. "ಜರ್ಮನರನ್ನು ಇಟೆಲಿಯಿಂದ ನಿವಾಳಿಸಬೇಕು" ಎಂಬ ಯುದ್ಧಘೋಷವು ಹಬ್ಬಹತ್ತಿರುವುದು.

ಪ್ರಕಟಣೆ.

ಶಿರ್ವ ಪಂಚಾಯತ್ ಬೋರ್ಡ್ ಪ್ರೆಸಿಡೆಂಟರಿಂದ-

1942ನೇ ಇಸ್ವಿ ಎಪ್ರಿಲ್ ತಿಂಗಳ ತಾರೀಖು 1 ರಿಂದ 1943ನೇ ಇಸ್ವಿ ಮಾರ್ಚ ತಿಂಗಳ ತಾರೀಖು 31ರ ವರೇಗೆ ಒಂದು ವರ್ಷದ ಅವಧಿ ಶಿರ್ವ ಪಂಚಾಯತ್ ಬೋರ್ಡಿಗೆ ಒಳಪಟ್ಟ ಶಿರ್ವ ಮಂಚಕಲ್ಲು ಪತ್ತಿಸಾರು ಮಾರ್ಕೆಟ್, ವ, ದಿನಚರಿ ಮಾರ್ಕೆಟುಗಳಲ್ಲಿ ವಸೂಲು ಮಾಡುವ ಮತ್ತು ಮಾರ್ಕೆಟ್ ಲೈನ್ ಕಟ್ಟೋಣಗಳು ಮತ್ತು ಎಡಿಶನಲ್ ಲೈನ್ ಕಟ್ಟೋಣದಲ್ಲಿ ವ್ಯಾಪಾರ ನಡ್ಸಿಕೊಂಡು ಬರುವ ಸ್ವತಂತ್ರವನ್ನು ಇದೇ 1942ನೇ ಇಸ್ವಿ ಫೆಬ್ರವರಿ ತಿಂಗಳ ತಾ. 28ನೇ ಶನಿವಾರ ದಿವ್ಸ ಅಪರಾಹ್ಣ ಗಂಟೆ 3ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಪ್ರೆಸಿಡೆಂಟರಿಂದ ವಾ ಇವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವದು. ಹೆಚ್ಚಿನ ವಿವರಗಳನ್ನು ಪಂಚಾಯತ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳನ್ನು ಓದಿ ತಿಳಕೊಳ್ಳಬಹುದು ಎಂಬದಾಗಿ ಉಮೇದ್ವಾರರಾಗಿ ಸಮಸ್ತ ಜನರಿಗೆ ತಿಳಿಸಲಾಗುತ್ತದೆ.

ಯಸ್. ಅಣ್ಣಯ್ಯ ಹೆಗ್ಡೆ.

ಪ್ರೆಸಿಡೆಂಟ್, ಪಂಚಾಯತ್ ಬೋರ್ಡ್, ಶಿರ್ವ ಬಿ.ಕೆ.
ಪಂಚಾಯತ್ ಬೋರ್ಡ್ ಆಫೀಸು.
ಶಿರ್ವ, ತಾ, 10-2-42.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಪ್ರಸಿದ್ಧಿ ಪತ್ರಿಕೆ.

ಶ್ರೀ. ಶಕೆ ೧೮೬೩ನೇ ವೃಷನಾಮ ಸಂವತ್ಸರದ ಪುಷ್ಯ ಬಹುಳ ೭ಮಿ. ಶುಕ್ರವಾರ ತಾರೀಖು ೯-೧-೪೨ನೇ ಇಸ್ವಿ ಶಿರ್ವ ಶ್ರೀ. ಮಾರಿಯಮ್ಮ ದೇವಸ್ಥಾನದ ಮೊಕ್ತೇಸರರ ಕಡೆಯಿಂದಾ ಪ್ರಕಟಪಡಿಸುವುದೇನೆಂದರೆ.

ದೇಶ ಕಲ್ಯಾಣಾರ್ಥವಾಗಿಯೂ ಶುಭಪ್ರಾರ್ಥನಾರ್ಥವಾಗಿಯೂ ಶ್ರೀ ಮಾರಿಯಮ್ಮ ದೇವರ ಜಾತ್ರೆಯನ್ನು ಮಾಡುವದಕ್ಕೆ ಶ್ರೀದೇವರ ಅಪ್ಪಣೆಯನ್ನು ಪಡೆಕೊಂಡು ಈ ಕಾರ್ಯವನ್ನು ಆರಂಭಿಸಿ ಇದೇ ಬರುವ ಫಾಲ್ಗುಣ ಶುಕ್ಲ ೨ ಮಂಗಳವಾರ (೧೭-೨-೧೯೪೨) ರಾತ್ರೆ ೮ ಘಂಟೆ [illegible] ಪೂಜಾ ವಿನಿಯೋಗಗಳು ನಡೆದು ಬುಧವಾರ ಬೆಳಗ್ಗೆ ಶ್ರೀ ದೇವರ ದರ್ಶನೋತ್ಸವವಾಗಿ ಅದೇ ದಿವಸ ಸಾಯಂಕಾಲ ೪ ಘಂಟೆಯಿಂದ ಬಲಿ [illegible] ನಡೆದು ನಂತರ ಗುರುವಾರ ಬೆಳಗಿನ ೮ ಘಂಟೆಯಿಂದ ಫಾಲ್ಗುಣ ಶು॥ ೯ ಮಂಗಳವಾರ ರಾತ್ರೆ ೧೦ ಘಂಟೆಯ ವರೆಗೆ ಪ್ರತಿನಿತ್ಯದಲ್ಲೂ ಸದರಿ ಘಂಟೆಗೆ ಸರಿಯಾಗಿ ಭಕ್ತ ಜನರಿಂದ ಬಂದ ಕಾಯಿ ಹಣ್ಣು ಚೀಪೆ ಉಡಿ, ತುಲಾಭಾರ ಕಾಣಿಕೆ ವಗೈರೆ ಹರಿಕೆಗಳನ್ನು ಒಪ್ಪಿಸುವರೇ ಸದರಿ ವೇಳೆಯನ್ನು ನಿಶ್ಚಯಿಸಿರುತ್ತದೆ.

ಪ್ರಯುಕ್ತ.- ಈ ಮಹೋತ್ಸವಕ್ಕೆ ಎಲ್ಲರೂ ದಯಮಾಡಿ ಬರಬೇಕೆಂತ ಅಪೇಕ್ಷಿಸುತ್ತೇವೆ.

ಈ ಶಿರ್ವ ತಾ. ೧೭-೨-೪೨ನೇ ಆಗುವ ಶ್ರೀ. ಮಾರಿಯಮ್ಮ ದೇವರ ಜಾತ್ರೆ ಸಂಬಂಧ ಮಾರಿ ಪೈಲಲ್ಲಿ ತಾ ೧೨-೨-೧೯೪೨ನೇ ಗುರುವಾರ ಬೆಳಗಿನ ೮ ಘಂಟೆಯಿಂದ ಅಂಗಡಿಗಳ ಬಗ್ಗೆ ಜಾಗೆಗಳನ್ನು ಗುತ್ತಿಗೆ ಮಾಡಿ ಕೊಡಲ್ಪಡುತ್ತದೆ. [illegible] ದಿವಸದಿಂದ ಮುಂದೆ ತಾ ೧೭-೨-೧೯೪೨ನೇ ಸೋಮವಾರದ ವರೆಗೆ ಕೊಡಲ್ಪಡುವದು.

ಹೀಗೆ [illegible], ಕೋಟ್ಯಾನ, [illegible], ಗಣೇಶರಾವ [illegible], ಶಿರ್ವ, 10-1-42.

Keep the enemy away

from India

Contribute AGAIN to the

Governer's war fund.

Buy MORE defence bonds

and savings certificats.

GIVE AND LEND

FOR

VICTORY.

ಈ ವಾರದ ಭವಿಷ್ಯ.

(೬ನೇ ಪುಟದಿಂದ ಮುಂದರಿದುದು.)

ದ ನಿಮಗೆ ಶತ್ರು ಜನರೂ ಆಗಾಗ ಪೀಡಿಸುವರು. ಬಹುಮುಖಗಳಾದ ಖರ್ಚುಗಳಿಷ್ಟರೂ ಖರ್ಚಿಗೆ ತಕ್ಕಷ್ಟು ಆದಾಯವೂ ಇರುವುದರಿಂದ ಹಣದ ತಾಪತ್ರಯವುಂಟಾಗಲಾರದು. ಅನಿರೀಕ್ಷಿತವಾಗಿ ಸಂಭವಿಸತಕ್ಕ ಆಪದನಿಷ್ಟಗಳು ಒಮ್ಮೆಗೆ ನಿಮ್ಮನ್ನು ಇತಿ ಕರ್ತವ್ಯತಾ ಮೂಢರನ್ನಾಗಿ ಮಾಡುವವು. ಸಮೀಚೀನವಾದ ಮಿತ್ರವರ್ಗವೂ ವಾತ್ಸಲ್ಯಯುತವಾದ ಬಂಧುವರ್ಗವೂ ನಿಮಗಿರುವುದರಿಂದ ನಿಮ್ಮ ಉದ್ಯಮಕ್ಕುಪಕ್ರಮದ ಹಾನಿಯೂ ಸಂಭವಿಸದು. ವಾರಾಂತ್ಯದ ದಿನಗಳೆಂದರೆ ನಿಮ್ಮ ಭಾಗಕ್ಕೆ ಮಾನ, ಧನ, ಸುಖದಾಯಿಗಳಾಗಿವೆ.

ವೃಶ್ಚಿಕ—"ಗಚ್ಛತಃ ಸ್ಖಲನಂ ಕ್ವಾಪಿ ಭವತ್ಯೇವ ಪ್ರಮಾದತಃ" ಎಂಬ ನ್ಯಾಯೋಕ್ತಿಯಂತೆ ಮನುಜ ಸಹಜವಾದ ಪ್ರಮಾದದಿಂದ ಯಾರೂ ಕೂಡ ಒಮ್ಮೊಮ್ಮೆ ತಪ್ಪುಗಳನ್ನು ಮಾಡುವರು. ಹಿಂತಹ ತಪ್ಪಿಗೆ ನೀನೀ ವಾರದಲ್ಲಿ ಸಿಲುಕಲಿರುವಿರಿ. ಇದರಿಂದ ನಿಮ್ಮ ಅಧಿಕಾರಿ ಜನರು ಒಮ್ಮೆಗೆ ಸಿಟ್ಟಾದರೂ ಅದು ಅಚಿರದಲ್ಲೇ ಮಾಯವಾಗಲಿದೆ. ನಿಮ್ಮ ಶೌರ್ಯೌದಾರ್ಯಾದಿ ಗುಣಗಳು ಈ ಕಾಲದಲ್ಲಿ ಪ್ರದರ್ಶನಕ್ಕೆ ಬರಲಿವೆ. ವಾಕ್ಚಾತುರ್ಯದಿಂದಾಗಿ ಇತರರಂತಿಂಲಿ, ವಿಪಕ್ಷೀಯರನ್ನೂ ಕೂಡ ಸ್ವಪಕ್ಷದವರನ್ನಾಗಿ ಪರಿವರ್ತಿಸಲು ಶಕ್ತರಿರುವ ನಿಮಗೆ ತಾ. 13-14 ಸಕಲ ವಿಷಯಗಳಿಗೂ ಅತ್ಯುತ್ತಮವಿದೆ.

ಧನು—ಭಾಗ್ಯ ಕರ್ಮಲಾಭ ಪತಿಗಳ ಅನುಗ್ರಹಕ್ಕೆ ನೀವೀವಾರದಲ್ಲಿ ಪಾತ್ರರಾಗುವಿರಿ. ಆದ ಕಾರಣ ನಿಮ್ಮ ಪರಿಶ್ರಮವು ಎಂದೂ ವ್ಯರ್ಥವಾಗದು. ಯತ್ನಕ್ಕೆ ತಕ್ಕುದಾದ ಫಲವನ್ನು ಅಲ್ಪಾವಧಿಯಲ್ಲೇ ಪಡೆಯುವಿರಿ. ಸ್ವಪರಿಶ್ರಮದಿಂದ ಯೋಗ್ಯತೆಗೆ ತಕ್ಕ ಸ್ಥಾನವನ್ನೂ ಕೂಡ ಹೊಂದಲು ಅರ್ಹರಿರುವಿರಿ. ನಿಮ್ಮ ಆರೋಗ್ಯದ ಭಾಗಕ್ಕೆ ಹೆಚ್ಚಿನ ನಿಗಾ ತೆಗೆದುಕೊಳ್ಳಿರಿ. ಮತ್ತು ಶತ್ರು ಜನರಿಂದಲೂ ನಿಮ್ಮ ಮನಸ್ಸಿಗೆ ದುಃಖವಾಗುವಂತಹ ಪ್ರಸಂಗಗಳೊದಗಲಿವೆ. ಭೃತ್ಯರಲ್ಲಿ ಮನಸ್ತಾಪವುಂಟಾಗುವ ಚಿಹ್ನೆಗಳಿರುವುದರಿಂದ ತಾ. 13.14. 18 19 ಈ ದಿನಗಳಲ್ಲಿ ಜಾಗರೂಕರಾಗಿ. ಮಾನಕ್ಕೂ ಕೂಡ ಹಾನಿಯೊದಗೀತು.

ಮಕರ—ಮುತ್ತು ಬಿದ್ದರೆ ಹೆಕ್ಕಬಹುದು, ಮಾತು ಬಿದ್ದರೆ ಹೆಕ್ಕಲಾಗದು ಎಂದು ಆರ್ಯರು ನುಡಿದಿರುವರು. ಇದರ ಪ್ರತ್ಯಕ್ಷಾನುಭವವನ್ನು ನಿಮಗೀ ವಾರದಲ್ಲಿ ಕಂಡುಬರಲಿದೆ. ಎತ್ತಿದ ಬಾಯಿಗೆ ಥಟ್ಟನೆ ಉತ್ತರವಿತ್ತು ಹಲವರೊಡನೆ ಕಲಹ ವೈರಗಳನ್ನು ಕಟ್ಟಿಕೊಳ್ಳುವಿರಿ. ಅಲ್ಪಾವಧಿಯ ನಂತರ ನೀವೀ ವಿಚಾರದಲ್ಲಿ ಪಶ್ಚಾತ್ತಾಪ ಪಡಲಿರುವಿರಿ. ಪುತ್ರ ಭೃತ್ಯ ಕಳತ್ರಾದಿ ಸಕಲ ಗೃಹಸುಖವಿದ್ದರೂ ನಿಮ್ಮ ಮನಸ್ಸಿಗೆ ದಿವಾರಾತ್ರಿಗಳಲ್ಲೂ ಸುಖವಿಲ್ಲವು. ಶತ್ರುಗಳು ಕೃತ್ರಿಮ ಮಿತ್ರನ ವೇಷದಿಂದ ನಿಮ್ಮನ್ನು ಮೋಸಪಡಿಸಲಿರುವರಾದ ಕಾರಣ ತಾ. 12. 15. 16. 17 ಈ ದಿನಗಳಲ್ಲಿ ಬಹಳ ಜಾಗರೂಕರಾಗಿರಬೇಕು.

ಕುಂಭ— ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿ ಜನರಿಗೂ ಇದು ಸಮಯವಲ್ಲವು. ಕೇವಲ ಕ್ರತು ಸಹಿಷ್ಣುಗಳಾದ ಸಾಹಸೀ ಜನವೃಂದಕ್ಕೆ ವಾತಾವರಣವು ಅತ್ಯನುಕೂಲವಿದೆ. ಬಂಧುವರ್ಗದವರನ್ನು ನಂಬಿ ಮೋಸ ಹೋಗಬೇಡಿರಿ. ಹಾವಿಗೆ ಕೊಟ್ಟ ಹಾಲು ವಿಷವಾಗಿ ಪರಿಣಮಿಸುವಂತೆ ಬಂಧುಗಳಿಗೆ ಮಾಡಿದ ಉಪಕಾರವು ಅಪಕಾರ ರೂಪದಿಂದ ಹಿಂದಿರುಗಲಿದೆ. ಪ್ರಬಲರಾದ ಶತ್ರುವರ್ಗದವರ ತಲೆ ತುಳಿದು ಮುಂದೊತ್ತುವ ಶಕ್ತಿ ನಿಮಗಿರುವುದರಿಂದ ನಿಮ್ಮಿಂದ ಅಸಾಧ್ಯವಾದ ಕಾರ್ಯವಾವುದೂ ಇರದು. ತಾ. 13, 14, 18, 19 ಈ ದಿನಗಳಲ್ಲಿ ಆರೋಗ್ಯ ಮತ್ತು ಆರ್ಥಿಕ ಭಾಗಕ್ಕೆ ಹಾನಿಯಿದೆ.

ಮೀನ—ಸೀವೆಷ್ಟೇ ದುಡಿದರೂ ಸಮುದ್ರಕ್ಕೆ ಇಂಗು ಕದಡಿದಂತೆ ನಿಮ್ಮ ಖರ್ಚಿನ ಸಮೂಹದಲ್ಲಿ ಉತ್ಪತ್ತಿಯು ಕಾಣಸಿಗದು. ಈ ಹಿಂದೆ ಸಂಗ್ರಹಿಸಿಟ್ಟ ಧನವನ್ನು ಈಗ ತೆಗೆದು ಖರ್ಚು ಮಾಡುವ ಪ್ರಸಂಗ ಬಂದೀತು. ಅನಾರೋಗ್ಯದಿಂದ ಸಾಹಸವು ಕುಂದುವುದಲ್ಲದೆ ಆಲಸ್ಯವೂ ಹೆಚ್ಚಲಿದೆ. ಕೋರ್ಟು ಕಛೇರಿಗಳಲ್ಲಿ ನಿಮ್ಮ ಸಂಕಲ್ಪವು ಸಿದ್ಧಿಸದು. ಮಾತ್ರವಲ್ಲ ಹೆಚ್ಚಿನ ಧನವೂ ವ್ಯಯವಾದೀತು. ತಾ. 15. 16. 17. ಈ ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ಇಷ್ಟಪ್ರಾಪ್ತಿ, ಮಿತ್ರ ಸಹ ಭೋಜನಾದಿಗಳು ನೆರವೇರಲಿವೆ.

ಆಚ್ಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—ಆಮಲಕೀ ತೈಲ.
ಆನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು—ಆಮಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ.
ನಾರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ-ಆಮಲಕೀ ತೈಲ.
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—ಆಮಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ.
ಭಾರತದ ಮಹಿಳೆಯರು ಪ್ರೀತಿಸುವದು—ಆಮಲಕೀ ತೈಲ.
ಬೆಳಗುವ ತಾರೆಯ-ಮಿದುಳಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
ಲಲನೆಯರು ಮೆಚ್ಚುವದು—ಆಮಲಕೀ ತೈಲ.
ವಾತಾದಿ ತ್ರಿದೋಷನಾಶಕವೇ—ಆಮಲಕೀ ತೈಲ.
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—ಆಮಲಕೀ ತೈಲ.
ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ.

ಆಮಲಕೀ ತೈಲ ವನ್ನೇ ಉಪಯೋಗಿಸಿರಿ.

2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು:-ನವಭಾರತ ಬುಕ್‌ಡಿಪೋ, ಉಡುಪಿ, ಗಣಪಯ್ಯ ಲಕ್ಷ್ಮಣ ನಾಯಕ್ ಬ್ರದರ್ಸ್, ಕೋಟ. ದಿ ಜನರಲ್ ಮರ್ಚೆಂಟ್ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ.

The Pangal Nayak Bank Limited.

(Incorporated in India in 1920.)

Notice under Section 37 of the Indian Companies Act, 1913

(As amended by Act XXII of 1936)

It is hereby notified that the Register of Members of the above Bank will be closed from Monday, the 23rd February 1942 to Saturday, the 14th March 1942, both days inclusive.

By order of the Board.

UDIPI, *28th January 1942.*

P. LAKSHMAN NAYAK, *Secretary & Treasurer.*

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಜುಮ್ಮುಗುಡುವಿಕೆ, ಮಲಬದ್ಧತೆ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನು, ಜೀರ್ಣ ಶಕ್ತಿಯನ್ನು ಹೆಚ್ಚಿಸುವುದು, ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು, ರಕ್ತಧಾತುವ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ದರ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1)ಹಿಂದೂಸ್ಥಾನ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12. (2) ಜನರಲ್ ಸ್ಟೋರ್ಸ್, ಪ. ವಿ. ಕಿ, ಮಾಟುಂಗಾ. (3) ಮಿಲ್ಲರ್ ಪಿಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಡೆವ್ಸಡ್‌ನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಪಿ. ಸುಬ್ಬಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ. (7) ಆರ್. ಶ್ರೀನಿವಾಸ. ಪೈ, ಪುತ್ತೂರು. (8) ಶಾಂತಾರಾಮ ಶಾಸ್ತ್ರೀ ಕಮ್ತಿ, ಬೆಳ್ತಂಗಡಿ. (9) ನವಭಾರತ ಬುಕ್ ಡಿಪೋ, ಕೋಟ ಪೇಟೆ, ಉಡುಪಿ. (10) ಕೃಷ್ಣ ಫಾರ್ಮಸಿ, ಕುಂದಾಪುರ. (11) ಕಾರ್ಕಳ ಗೋಮತಿ ಶ್ರೀ ರಾಮ ಸ್ಟೋರ್ಸ್ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ, ಅಂಗಡಿ ಪಕ್ಕ. (13) ಬಿ. ಯಸ್. ನರಸಿಂಗರಾವ್. ಮರ್ಚೆಂಟ್, ಚಿಕ್ಕಮಂಗಳೂರು.

ಪತ್ರಿಕಾ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್ ನಂಬ್ರ್ ಬದಲಾವಣೆ. —

ಜನ್ನರಿವರಿಗೆ ನಮ್ಮ

ವಿಲಿಯಮ್ಸ್ ಎಂಡ್ ಕೋ–ರವರ

ಬಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಗಳ ರಿಂಗ್‌ನಂಬ್ರ ಬದಲಾವಣೆ ಈ ಕೆಳಗಿನಂತೆ ವ್ಯತ್ಯಾಸವಾದವಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು, ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನ್ನಣೆಯನ್ನು ಗಳಿಸಿವೆ; ಮನನವನ್ನು ಸಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦		ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೨ ೦		ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦		ಅಮಾತ್ಯನಂದಿನಿ	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦		ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦		ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦		ಪಾಣಿಗ್ರಹಣ	೦ ೩ ೦

ಕೆಟಲಾಗ ಬರೆಯಿರಿ

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜೆಂಟರು–ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾಗಿದೆ

ಆಸೆ ಬಿಟ್ಟಿರುವ ನಿಮ್ಮ ಮಕ್ಕಳು

ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಸ್. ಪಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು:— ನವಭಾರತ ಬುಕ್ ಡಿಪೋ, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾನಾಸರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೇನೇಜರ್

ಸ್ಥಾಪನೆ 1926

ಕ್ರೌನ ರಬ್ಬರ್ ಸ್ಟಾಂಪು ವರ್ಕ್ಸ್

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಎನಾಮಲ ಬೇಜು, ಮೊನೊಗ್ರಾಮ್, ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore,

...fied by the Agent of the Govt. of India in Ceylon.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— **ಹಾಗಾದರೆ** —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೧ ರುಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದಕ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಸಿ. ಎ. ಶೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಮೇಲ್ತರಗತಿಯ ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ, ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,
ಮ್ಯಾನೇಜರ್.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618 | Estd. 1921 ಸ್ಥಾಪಿತ

ಸಾಹುಕಾರರಿಗೂ ವರ್ತಕರಿಗೂ ಬೇಕಾಗುವ ತರ ತರದ ಫಾರ್ಮ, ಊಳಿಗ ಪುಸ್ತಕಗಳೂ ಲೆಕ್ಕ ಪುಸ್ತಕಗಳೂ ಸುಲಭ ದರದಲ್ಲಿ ಸಾಜಾಕಾಗಿ ಮಾಡಿ ಕೊಡಲ್ಪಡುತ್ತವೆ. **ನವಯುಗ ಪ್ರೆಸ್, ಉಡುಪಿ**

ನವಯುಗ

1942ನೇ ಇಸವಿಯ 'ವರ್ಷ ಭವಿಷ್ಯ' ಬೆಲೆ 0—3—0 ಆಗಸ್ಟ ಓದಿರಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಪುಟ ೨೧ | ಸಂಪಾದಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ. | ಸಂಚಿಕೆ ೨೫

Vol. 21 | **NAVAYUGA WEEKLY** | No. 25

19-2-1942

THE VIJAYA BANK, LTD.

Head Office: Mangalore.

BRANCHES. [illegible]

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಕಾಲಿಯಾಗಿನ ಶೇಕಡಾ ೪ರ ದರದ [illegible] 1942ನೇ ಜುಲಾಯಿ 31ಕ್ಕೆ [illegible] ಎಲ್ಲಾ ಶಾಖೆಗಳಲ್ಲಿ [illegible].

ದಿ ವಿಜಯಾ ಬೇಂಕ, ಲಿಮಿಟೆಡ.

ಪ್ರಧಾನ ಕಾರ್ಯಾಲಯ-ಮಂಗಳೂರು.

ಶಾಖೆಗಳು:- ಕದ್ರಿ-ಮಂಗಳೂರು, ಹಂಪನಕಟ್ಟೆ-ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, [illegible].



ಹಿಂದೂದೇಶದ

ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಶೋತಿಕ್ಕೆ ಹುಣ್ಣು ಹಾಗು ರಕ್ತ [illegible], ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು **ಘಾಯವಾಗಿದ್ದರೆ**, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, [illegible] **ಆಗಿದ್ದರೆ**, ಮೂಲವ್ಯಾಧಿ, ಭಗೇಂದ್ರ, ಗಂಡಮಾಲೆ, ಕೈಕಾಲು ಶೂಲೆ, ಅರ್ಧಾಂಗ **ವಾಯು ನಡುನೋಯುವದು** ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ **ಕುಟು** ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ [illegible] **ದ್ದರೆ, ಮೂತ್ರ ಉರಿಯುತ್ತಿದ್ದರೆ**, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಬರು **ವದು. ಮೊದಲ ದಿವಸ** ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ [illegible] ತುಪ್ಪ **ದಲ್ಲಿ ತಕ್ಕೊಳ್ಳಬೇಕು.** ಮೊದಲ ದಿವಸ ಮಾತ್ರ [illegible] ಸಂಜೆ [illegible] **ತಕ್ಕೊಳ್ಳಬೇಕು.** ಮುಂದಿನ ದಿವಸ ಬೆಳಿಗ್ಗೆ [illegible] ದಿವಸ ಸೇವಿಸ **ಬೇಕು** ಈ ಔಷಧವನ್ನು ಜೇನಿಗೆಯಲ್ಲಿ ತುಪ್ಪದಲ್ಲಿ, [illegible] **ತುಪ್ಪದಲ್ಲಿ** ತಕ್ಕೊಳ್ಳಬೇಕು.

ಪಥ್ಯ: ಹೆಸಿಬಾರ, ಕುಂಬಳಕಾಯಿ, [illegible]

ಬಾಟ್ಲಿ ೧ಕ್ಕೆ ರೂ. ಪೋಸ್ಟ ಚಾರ್ಜ [illegible]

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲ **ಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, **ದಾವಣಗೇರಿ:**—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ [illegible]

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

ಹಿರಿಯ ವಯಸ್ಸಿನವರಿಗೆಲ್ಲ, ಏಜೆನ್ಸಿ ಪಡೆಯಲಿಚ್ಛಿಸುವವರಿಗೆಲ್ಲ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೇ ವಿಮೆ ತೆಗೆಯಬೇಕೆಂದಿದ್ದರೆ ನಮ್ಮೊಡನೆ ವಿಚಾರಿಸಿರಿ—

[illegible] ಎ. ಪೈ, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.

ಶ್ರೀ ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.

ಶ್ರೀ. ಕೆ ಗಣಪಯ್ಯ ಶೆಟ್ಟಿ, ಡಿಸ್ಟ್ರಿಕ್ಟ್ ಓರ್ಗನೈಜರ್. ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.

For further particulars and agency terms, please call at or write to

Branch Manager,

The Asian Assurance Co., Ltd., Mangalore.

— ಮಕ್ಕಳನ್ನು ಹಡೆಯುವದು ಸಾಕು—

ಅನೇಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ

ಮಾಲಕರು:—ಹಾಲಪ್ಪಾ, ಫಕೀರಪ್ಪಾ, ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪೂರ. ಟಿಕ್ಕೋಡಿಯಲ್ಲಿ—ಕುಂಬರವಾಡಿ ಸಪ್ಲೈರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ—ಎಚ್. ವಿರುಪಾಕ್ಷಪ್ಪ ಎ ಚೆಂಟ, ಬಳ್ಳಾರಿ. ಗೋಕಾಕ.—ಸಂಗಪ್ಪ ಶಿವಲಿಂಗಪ್ಪ ಅಂದಾನಿ,

DIAMONDS! **DIAMONDS!**

K. R. K. SHET.

Opposite Govt- College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನಾಯಿತ (first quality, selected)) ಎಮ್ಮಿಂದ ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೋಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತವೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**
24—ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಕು ೧೯—೨—೪೩ರಿಂದ ತಾರೀಕು ೨೬—೨—೪೩ರ ವರೆಗೆ

ಮೇಷ— ಭಾಗ್ಯಪತಿಯಾದ ಗುರು ಮಹಾರಾಜನ ಅನುಗ್ರಹದಿಂದ ನೀವೀ ವಾರವನ್ನು ಹಣದ ತಾಪತ್ರಯವಿಲ್ಲದೆ ಕಳೆಯುವಿರಿ. ಜನರು ಸರ್ವತ್ರ ನಿಮ್ಮನ್ನು ಪುರಸ್ಕರಿಸುವರು. ಆತ್ಮಬಲದಿಂದಲೇ ಶತ್ರುಗಳನ್ನು ನಿಗ್ರಹಿಸುವಿರಿ. ಸಾಂಸಾರಿಕ ತಾಪತ್ರಯಗಳೂ ಕಾಣಲಾರವು. ವ್ಯಾಪಾರೀ ವೃತ್ತಿಯವರಿಗೂ ಶ್ರಮಜೀವಿಗಳಿಗೂ ಸೇವಕ ವರ್ಗದವರಿಗೂ ಈ ವಾರವು ತೃಪ್ತಿಕರವಿರದು. ಕತ್ತಿ, ಚೂರಿ ವಗೈರೆಗಳಿಂದಲೂ ವೃಕ್ಷಾರೋಹಣಾದಿಗಳಿಂದಲೂ ದೇಹಕ್ಕೆ ಅಪಾಯ ಸಂಭವಿಸಲಿರುವುದರಿಂದ ತಾ. 19. 22. 23. 21 ರಲ್ಲಿ ಕೊಂಚ ಜಾಗ್ರತೆಯಿಂದಿರಿ.

ವೃಷಭ—ನಿಮ್ಮ ಪ್ರಯತ್ನವು ಸಾಕಷ್ಟು ಫಲಕಾರಿಯಾದರೂ ಅತಿವ್ಯಯಕ್ಕೆ ಬಲಿಯಾದ ನೀವು ದಿನನಿತ್ಯದ ಖರ್ಚು ಮತ್ತು ಆಕಸ್ಮಿಕಗಳಾದ ಅನರ್ಥ ನಿವೃತ್ತಿಯ ಬಗ್ಗೆ ಹೆರವರೊಡನೆ ಸಾಲಮಾಡಬೇಕಾದೀತು. ಪೂರ್ವಾಪರ ವಿಮರ್ಶೆ ಮಾಡದೆ ಕಾರ್ಯಪಥದಲ್ಲಿ ಮುಂದರಿದು ಮುಂದೆ ಪಶ್ಚಾತ್ತಾಪ ಪಡುವಿರಿ. ಹಲವರೊಡನೆ ಕಲಹವಾಗಬಹುದು. ಶತ್ರುಸಿ ಸ್ತ್ರೀಯರಿಂದ ಜಗಳವಾಗುವ ಸಂಭವವಿದೆ. ತಾ. 19. 22. 23. 21 ಈ ದಿನಗಳು ಇದ್ದುದರಲ್ಲಿ ಕಿಂಚಿನ್ಮಾತ್ರ ಮುನ್ನಿರುವುದರಿಂದ ಸುಹೃತ್ಸಮಾಗಮದಿಂದಲೂ ಧನಲಾಭದಿಂದಲೂ ಸಂತೋಷಚಿತ್ತರಾಗುವಿರಿ.

ಮಿಥುನ—ಮನದಿಷ್ಟಾರ್ಥವು ನಿಮ್ಮ ಅಭೀಷ್ಟದಂತೆ ಫಲದಾಯಿಯಾಗುವುದರಿಂದ ನಿಮ್ಮ ಮನೋರೋಗವು ದೂರವಾಗುವುದಾದರೂ ದೈಹಿಕಾಲಸ್ಯವು ಕಡಿಮೆಯಾಗುವ ಚಿಹ್ನಗಳು ತೋರಿಬರವು. ಬಹುವಿಧದಿಂದ ನೀವು ಧನವನ್ನು ಸಂಪಾದಿಸುವಿರಿ. ಪುಷ್ಪಗುಚ್ಛದಲ್ಲಿದ್ದ ಮಧುವಿನ ಆಸೆಗೆ ತುಂಬಿಗಳು ಸೇರುವಂತೆ ಹಲವರು ನಿಮ್ಮನ್ನು ಹಿಂಬಾಲಿಸುವರು. ಹುಟ್ಟಿನ ಧನವನ್ನು ಸತ್ಕ್ರಿಯಾ ರೂಪದಿಂದ ವ್ಯಯಿಸುವಿರಿ. ಹಲವೊಮ್ಮೆ ಸಿಟ್ಟಿಗೆ ಮನಗೊಟ್ಟು ವ್ಯರ್ಥ ನಿಷ್ಠುರ ಕಟ್ಟಿಕೊಳ್ಳುವಿರಿ. ತಾ. 22. 23. 24ರಲ್ಲಿ ಧನಾರೋಗ್ಯಗಳಿಗೆ ಹಾನಿಯಿದೆ

ಕರ್ಕಾಟಕ—ಕಡಿವಾಣವಿಲ್ಲದ ಕುದುರೆಯಂತೆ ನಿಮ್ಮ ಮನಸ್ಸು ನಿಮ್ಮನ್ನು ದುರ್ಮಾರ್ಗದತ್ತ ಸೆಳೆಯುವುದು. ಮಾತ್ರವಲ್ಲದೆ ಖರ್ಚಿಗೆ ಕಾಸಿಲ್ಲದುದರಿಂದ ಯಾವ ಕುಕರ್ಮವನ್ನು ಕೂಡ ಕೈಗೊಳ್ಳಲು ನಿಮ್ಮ ಮನಸ್ಸು ಹಿಂಜರಿಯದು. ಆದ ಕಾರಣ ನೀವು ಜನದೃಷ್ಟಿಯಲ್ಲಿ ದೋಷಿಗಳಾಗುವಿರಿ. ಆರೋಗ್ಯವೂ ಕೂಡ ನೆಟ್ಟಗಿರದು. ಸ್ತ್ರೀ ನಿಮಿತ್ತ ಕಲಹ, ಅನಿಷ್ಟ ಅವಮಾನಗಳಿಗೆ ಗುರಿಯಾಗಬೇಕಾದೀತು. ಆದರೂ ಸುರಗುರುಗಳ ಬೆಂಬಲದಿಂದ ತಾ. 20ರಿಂದ 21ರ ವರೆಗಿನ ದಿನಗಳನ್ನು ಇಷ್ಟಪ್ರಾಪ್ತಿಯಿಂದಲೂ ಧನಲಾಭದಿಂದಲೂ ಸುಖದಿಂದ ಕಳೆವಿರಿ.

ಸಿಂಹ— ಪ್ರಕೃತಿಯು ಕೆಡುವುದರಿಂದ ಸಕಲ ಭಾಗಗಳಲ್ಲೂ ಅನಾಸಕ್ತಿ ಹೆಚ್ಚುವುದು. ವಿರೋಧಿಗಳಿಂದ ಪರಾಭವ ಹೊಂದುವ ಯೋಗವಿದೆ. ವೃಥಾ ಪರ್ಯಟನದಿಂದ ಖರ್ಚು ಅತಿಯಾಗುವುದು. ದೈವ ದೇವರು, ಗುರುಗಳಲ್ಲೂ ಧರ್ಮ-ಕರ್ಮಗಳಲ್ಲೂ ತಿರಸ್ಕಾರ ಭಾವವು ಹೆಚ್ಚುವುದರಿಂದ ಗುರುಹಿರಿಯರ ಆಗ್ರಹಕ್ಕೆ ಪಾತ್ರರಾಗುವಿರಿ. ಧಾತು ದೌರ್ಬಲ್ಯದಿಂದ ದೇಹದಲ್ಲಿ ಅಶಕ್ತಿಯು ಹೆಚ್ಚಿ ನಿರುದ್ಯೋಗದಿಂದಲೇ ಕಾಲಕಳೆಯಲು ಹವಣಿಸುವಿರಿ. ವಾರಾಂತ್ಯದ ೩ ದಿನಗಳು ಇತರ ದಿನಗಳಿಗಿಂತ ಉತ್ತಮವಿರುವುದರಿಂದ ಹೆಚ್ಚಿನ ಗಂಡಾಂತರಗಳೊದಗಲಾರವು.

ಕನ್ಯಾ—ಗೃಹತಾಪತ್ರಯಗಳೂ ರೋಗ ಕಲಹವೂ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ನಿಮಗೆ ಸಂಸಾರದಲ್ಲಿ ವೈರಾಗ್ಯವು ತೋರಿಬರಬಹುದು. ನಿಮ್ಮ ಪತ್ನೀ ಪುತ್ರರೂ ನಿಮ್ಮ ಭಾಗಕ್ಕೆ ವಿರೋಧಿಗಳಾಗಿಯೇ ನಿಲ್ಲುವರು. ಆದರೂ ನಿಮ್ಮ ಬಂಧುವರ್ಗದವರೂ ಮತ್ತು ಮಿತ್ರವೃಂದವೂ ನಿಮಗೆ ಬಹಳ ಸಹಾಯಮಾಡುವುದರಿಂದ ಹಣದ ತಾಪತ್ರಯಗಳಿಲ್ಲದೆ ಗೃಹಕೃತ್ಯದ ಖರ್ಚುಗಳ ಗೊಡವೆಯಿಲ್ಲದೇ ಹೆಚ್ಚಿನ ದಿನಗಳನ್ನು ಕಳೆವಿರಿ. ತಾ. 19. 25. 26 ಉತ್ತಮವಿವೆ.

ತುಲಾ—ಲಗ್ನ ಮತ್ತು ಭಾಗ್ಯಪತಿಗಳಾದ ಬುಧ ಶುಕ್ರರು ನಿಮ್ಮ ಸುಖಸ್ಥಾನದಲ್ಲಿ ನಿಮಗನುಕೂಲರಾಗಿದ್ದರೂ ನಿಮ್ಮ ಸುಖಕ್ಕೆ ಬಹುತರದ ವಿಘ್ನಗಳು ಬರಲಿವೆ.

(೧೧ನೇ ಪುಟ ನೋಡಿರಿ).

BHUVANENDRA PRODUCTS LTD.,

Head Office and Factory: **Katapadi**, S. Kanara

Depots: 1 Maharatha Galli, Hubli
2. 57 Big street, Triplicane Madras.

"**ಭುವನೇಂದ್ರ**"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಕಿಣಿ ಕಡಿಯಾಳಿ.
(3) ಡಾಕ್ಟರ್ ಪಿ. ಜಿ. ಆಚಾರ್ಯ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಶೆಣೈ L. I. M.

ಚುಟುಕು ಟೀಕೆ-ಟಿಪ್ಪಣಿ

ಅತಿ ದೊಡ್ಡ ಅನಾಹುತ!

ಫ್ರಾನ್ಸಿನ ಮೆಜಿನೋ ಕೋಟೆಯಂತೆ ಬ್ರಿಟನಿನ ಪೂರ್ವದ ದುರ್ಭೇದ್ಯ ಕೋಟೆಯೆನಿಸಿ ನಿನ್ನೆ ತಲೆಯೆತ್ತಿ ನಿಂತಿದ್ದ ಸಿಂಗಾಪುರವು ಇಂದು ನಿರ್ನಾಮವಾಗಿದೆ. 60 ಮಿಲ್ಯ ಹಣವನ್ನು ವ್ಯಯಿಸಿ ಕಟ್ಟಲ್ಪಟ್ಟಿದ್ದ ಅತ್ಯಾಧುನಿಕ ರೀತಿಯ ನೌಕಾ ನಿಲಯವು ಮಣ್ಣುಪಾಲಾಗಿದೆ. ಮೆಜಿನೋ ಕೋಟೆಯಂತೆಯೇ ಜಪಾನರು ಹಿಂದಿನಿಂದ ಅದನ್ನು ಆವರಿಸಿ ಗೆದ್ದರು. ಜನರಲ್ ವೇವೆಲರಂದಂತೆ ಅದು ಇನ್ನೊಂದು ಟೊಬ್ರೂಕಾಗುವ ಬದಲಿಗೆ ಹೊಂಕೊಂಗಾಗಿ ಬಿಟ್ಟಿತು. ಎಲ್ಲೆಲ್ಲಿಯೂ ಜಪಾನ ಸೇನಾ ಮತ್ತು ನೌಕಾ ಬಲದ ಕೈಯೇ ಮೇಲಾಗಿ ಪೂರ್ವದಲ್ಲಿ ಬ್ರಿಟನು ನೆಲಕ್ಕುರುಳಿಸಲ್ಪಟ್ಟಿರುವುದು. ಸಿಂಗಪುರದ ಪತನವು ಅತಿದೊಡ್ಡ ಅನಾಹುತವೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಬ್ರಿಟನು ಜಪಾನನ್ನು ತಡೆಗಟ್ಟುವುದಾದರೂ ಎಲ್ಲಿ?

ಜಪಾನರ 'ಬ್ಲಿಟ್ಸ್‌ಕ್ರೀಗ್'

ಜಪಾನರ 'ಬ್ಲಿಟ್ಸ್‌ಕ್ರೀಗು' ಕೆಲವುಸಲ ಹಿಟ್ಲರರದಕ್ಕಿಂತಲೂ ಜಯಶೀಲವಾಗಿರುವುದೆನ್ನಬಹುದು. ಕ್ಷಣಮಾತ್ರದಲ್ಲೆಂಬಂತೆ ಅವರು, ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್ ಯುದ್ಧ ಹಡಗಗಳನ್ನು ಮುಳುಗಿಸಿ ಬ್ರಿಟನಿನ ಪೂರ್ವದ ನೌಕಾ ಬಲದ ಬೆನ್ನೆಲುಬನ್ನೇ ಮುರಿದುಬಿಟ್ಟರು. ಯುನೈಟೆಡ್ ಸ್ಟೇಟ್ಸಿನ ನೌಕಾನಿಲಯವಾದ ಪರ್ಲ್ ಹಾರ್ಬರಿನ ಮೇಲೆ ಹಠಾತ್ತದ ಧಾಳಿ ನಡಿಸಿ ಅನೇಕ ಹಡಗ ಮುಳುಗಿಸಿ ಪ್ರಬಲ ಹಾನಿಯನ್ನುಂಟುಮಾಡಿದರು. 5 ದಿಕ್ಕುಗಳಲ್ಲವರು ನಡಿಸಿರುವ ಯುದ್ಧದಲ್ಲೂ ಶೀಘ್ರ ವಿಜಯ ಪಡೆದಿರುವರು. ಸಿಂಗಪುರವನ್ನು ಗೆಲ್ಲುವ ಅವರ ಮುಖ್ಯೋದ್ದೇಶವನ್ನು ಕೂಡಾ ಅದೆಷ್ಟು ಶೀಘ್ರವಾಗಿ ಸಾಧಿಸಿಕೊಂಡಿರುವರು! ಬೋರ್ನಿಯೋವನ್ನು ಗೆಲ್ಲುವ ಅವರ ಎರಡನೇ ಉದ್ದೇಶವೂ ಬಲುಮಟ್ಟಿಗೆ ನೆರವೇರಿದೆ. ಸೆಲೆಬೆಸ್ ದ್ವೀಪಗಳನ್ನು ಗೆಲ್ಲುವುದ, ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳ ಮೇಲೆ ಧಾಳಿ ನಡಿಸುವುದು ಜಪಾನರ ಮೂರನೇ ಮತ್ತು ನಾಲ್ಕನೇ ಉದ್ದೇಶಗಳಿರುತ್ತವೆ. ಜಾವವನ್ನು ಗೆಲ್ಲುವುದು ಜಪಾನರ ಐದನೇ ಉದ್ದೇಶ. ಈ ಕೊನೆಯವುಗಳಿಗೆ ಪ್ರಯತ್ನ ನಡಿಸುತ್ತಿರುವರು.

ತಡೆಗಟ್ಟುವುದೆಲ್ಲಿ?

ಇಂಗ್ಲೆಂಡು ಮತ್ತು ಯುನೈಟೆಡ್ ಸ್ಟೇಟ್ಸುಗಳೊಂದುಗೂಡಿ ಜಪಾನನ್ನು ಪ್ರಬಲವಾಗಿ ಎದುರಿಸಿ ಅವರ ಮುನ್ನಡೆಯನ್ನು ತಡೆಗಟ್ಟುವುದಾದರೂ ಎಲ್ಲಿ? ಮತ್ತು ಯಾವಾಗ? ಪರಿಸ್ಥಿತಿಯು ಮಿಂಚಿನ ವೇಗದಿಂದ ಮಾರ್ಪಟ್ಟು ಕಾಲವು ಮೀರಿ ಹೋಗುತ್ತಿದೆ. ಬರ್ಮಾದಲ್ಲಿ ಕೂಡಾ ಬ್ರಿಟಿಷ್ ಸೇನೆಯು ಹಿಂದೆ ಸರಿಯುತ್ತಾ ಹೋಗುತ್ತಿದೆ. ಸಾಲ್ವೀನ್ ನದಿಯನ್ನು ಜಪಾನರು ದಾಟಿ ರಂಗೂನಿಂದ ಕೇವಲ100 ಮೈಲು ದೂರದಲ್ಲಿದ್ದಾರೆ. ಸಿಂಗಪುರವು ಈಗ ಪತನಹೊಂದಿರುವುದರಿಂದ ಜಪಾನರು ತಮ್ಮ ಸಂಪೂರ್ಣ ಬಲವನ್ನು ಉಪಯೋಗಿಸಿ ಬರ್ಮಾವನ್ನು ಶೀಘ್ರವಾಗಿ ಗೆದ್ದು ಮುಂದೊತ್ತುವರೆಂಬುದರಲ್ಲಿ ಸಂದೇಹವಿಲ್ಲ. ಬ್ರಿಟನು ಮತ್ತು ಅಮೆರಿಕಗಳು ಇನ್ನೂ ವಿಳಂಬಿಸಿದರೆ ಮತ್ತೆ ಪರಿಸ್ಥಿತಿಯು ಕೈಮೀರಿಹೋಗುವ ಗಂಡಾಂತರವೇ ಒದಗಿದೆ.

ಲಿಬಿಯದಲ್ಲಿಯೂ ಹಿನ್ನಡೆ.

ಪೂರ್ವದಲ್ಲಿ ಜಪಾನರು ಒಂದೇ ಸಮನೆ ಮುಂದೊತ್ತುತ್ತಿರುವಾಗ, ಮಧ್ಯ ಪ್ರಾಚ್ಯದ ಲಿಬಿಯದಲ್ಲಿ ಕೂಡಾ ಬ್ರಿಟಿಷ್ ಸೇನೆಯು, ಹಿಂದೆ ಸರಿಯುತ್ತಿರುವುದು ತಪ್ಪಣೆಗೊಳಿಸುವ ಸಂಗತಿಯಾಗಿದೆ. ಒಮ್ಮೆ ಗೆದ್ದು ವಶಪಡಿಸಿಕೊಂಡಿರುವ ಬೆಂಘಾಜಿ ಮತ್ತು ಡರ್ನಾಗಳನ್ನು ಬ್ರಿಟಿಷ್ ಸೇನೆಯು ಬಿಟ್ಟು ಹಿಂದೆ ಸರಿದಿರುವುದು. ಇದರಿಂದ ಜನರಲ್ ರೋಮ್ಮೆಲರು ಪ್ರಬಲ ಪ್ರತಿಧಾಳಿ ನಡಿಸಿ ಮುಂದೊತ್ತುತ್ತಿರುವರೆಂಬುದು ಸಿದ್ಧವಾಗುವುದು. ವಿಚಿಫ್ರಾನ್ಸು ಅವರಿಗೆ ಸಹಾಯವಿತ್ತಿರುವುದೆಂಬುದೀಗ ಸಿದ್ಧವಾಗಿದೆ ಕೃಕ್ಕತದ ಪ್ರತಿಕೂಲ ಪರಿಸ್ಥಿತಿಯಿಂದ ಉತ್ತೇಜಿತವಾಗಿ ವಿಚಿ ಫ್ರಾನ್ಸು ಜನರಲ್ ರೋಮ್ಮೆಲರಿಗೆ ಇನ್ನೂ ಹೆಚ್ಚಿನ ಸಹಾಯವಿತ್ತರೆ ಲಿಬಿಯದ ಯುದ್ಧದ ಪರಿಸ್ಥಿತಿಯು ಹೇಗೆ ನಿಲ್ಲುವುದೆನ್ನಲಾಗುವುದಿಲ್ಲ.

ಜರ್ಮನ್ ಯುದ್ಧ ಹಡಗಗಳ ಸಾಹಸ

ಕಳೆದ ಗುರುವಾರ3ಜರ್ಮನ್ ಯುದ್ಧ ಹಡಗಗಳು ಬ್ರೆಸ್ಟ್ ಬಂದರದಿಂದ, ಬ್ರಿಟಿಷ್ ಕಡಲ್ಗಾಲುವೆಯ ಡೋವರಿನ ಮಾರ್ಗವಾಗಿಯೇ ಜರ್ಮನಿಗೆ ಸುರಕ್ಷಿತವಾಗಿ ಹೋಗಿ ಸೇರಿಸುವ ಸಮಾಚಾರವು ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಸರ್ವದ ವಿಸ್ಮಯವನ್ನುಂಟುಮಾಡಿದೆ. 300 ಬ್ರಿಟಿಷ್ ಬೋಂಬರ್ ಮತ್ತು 300 ಫೈಟರ್ ವಿಮಾನಗಳು, ಡಿಸ್ಟ್ರೋಯರ್ ಮತ್ತು ಪಹರೆ ಹಡಗಗಳು ಈ ಜರ್ಮನ್ ಹಡಗಗಳನ್ನು ಮುಳುಗಿಸಲು ನಡಿಸಿದ ಪ್ರಯತ್ನವು ನಿಷ್ಫಲವಾಗಿದೆ. ವಿಮಾನ ಯುದ್ಧದಲ್ಲಿ 42 ಬ್ರಿಟಿಷ್ ವಿಮಾನಗಳು ನಾಶವಾಗಿವೆ. ನಾಶವಾಗಿರುವ ಜರ್ಮನ್ ವಿಮಾನಗಳು 18 ಮಾತ್ರ. ಈ ಜರ್ಮನ್ ಯುದ್ಧ ಹಡಗಗಳು ಪುನಹ ಸಕಲ ಸಿದ್ಧತೆಯನ್ನು ಪಡೆದು ಹೊರಟು ಅಟ್ಲಾಂಟಿಕ ಸಾಗರದಲ್ಲಿ ಹಾವಳಿ ಮಾಡದಿರಲಾರದವು. ಆದುದರಿಂದ ಈ ಘಟನೆಯು ಕೂಡಾ ಬ್ರಿಟನಿನ ದೊಡ್ಡದೊಂದು ದುರ್ದೈವವೆಂದೇ ಹೇಳಬಹುದು. ಈ ಕುರಿತು ಬ್ರಿಟಿಷ್ ಪತ್ರಿಕೆಗಳು ಸರಕಾರವನ್ನು ಕಠಿಣವಾಗಿ ಟೀಕಿಸಹತ್ತಿವೆ. ಚರ್ಚಿಲ್ಲರು ಇಷ್ಟೊಂದು ಬಿರುಸಾದ ಟೀಕೆಗೊಳಗಾದುದು ಇದೀಗ ಪ್ರಥಮಸಲ.

ಹಿಟ್ಲರರಿಗೆ ಸಹಾಯದ ಅಶ್ವಾಸನೆ.

ರಷ್ಯದಲ್ಲಿ ಹಿಟ್ಲರರಿಗೆ ಅಪಜಯವಾದರೆ ಕಮ್ಯೂನಿಸ್ಮಿನ ವಿರೋಧವಾಗಿ ಹೋರಾಡಲು ಒಂದು ಮಿಲ್ಯ ಸ್ಪೆನಿಶ್ ಸ್ವಯಂಸೇವಕ ಸೈನಿಕರು ಹಿಟ್ಲರರ ಸಹಾಯಕ್ಕೆ ಕಳುಹಿಸಲ್ಪಡುವರೆಂದು ಎದೆತಟ್ಟಿ ಭರವಸೆ ಕೊಟ್ಟಿರುತ್ತಾರೆ ಜನರಲ್ ಫ್ರೇಂಕೋರವರು. ಇಷ್ಟರಲ್ಲೇ ಹಿಟ್ಲರರಿಗೆ ರಷ್ಯದಲ್ಲಿ ಅಪಜಯಗಳಾಗಲಿಲ್ಲವೇ? ಮಾತ್ರವಲ್ಲದೆ ಸ್ಪೆನಿಶ್ ಸ್ವಯಂಸೇವಕ ಸೈನಿಕರು ಈ ಮೊದಲೇ ಜರ್ಮನರ ಸಹಾಯಕ್ಕೆ ಹೋಗಿರಲಿಲ್ಲವೇ? ಒಂದು ಮಿಲ್ಯ ಸೈನಿಕರನ್ನು ಜನರಲ್ ಫ್ರೇಂಕೋರವರು ಹಿಟ್ಲರರಿಗೊದಗಿಸುವುದೂ ರಷ್ಯದೊಡನೆ ಪ್ರತ್ಯಕ್ಷ ಯುದ್ಧ ಸಾರುವುದೂ ಒಂದೇ ಅಲ್ಲವೇ? ಆಗ ಬ್ರಿಟನು ಮತ್ತು ಅಮೆರಿಕಗಳು ಸ್ಪೈನಿನ ಕುರಿತಾದ ತಮ್ಮ ಧೋರಣೆಯನ್ನು ಬದಲಾಯಿಸದಿರುವವೇ?

ಒನೇ ಪುಟ ನೋಡಿರಿ.

— ನಮ್ಮ ಕನ್ನಡ ನಾಡು —

ರಾಗ: ಕುರಟಿ-ಏಕತಾಳ.

ನಮ್ಮ ಕನ್ನಡ ನಾಡಿದು
ನಾವು ಹುಟ್ಟಿದ ನಾಡಿದು
ಅನ್ನವೀಯುವ ನಾಡಿದು
ತಾಯಿ ನಾಡಿದು ನಮ್ಮದು
ನಮ್ಮ ಕನ್ನಡ ನಾಡಿದು
ಕಾಡುಮಲೆಗಳ ನಾಡಿದು
ನಮ್ಮ ಗಂಧದ ಗುಡಿಯಿದು
ನಮ್ಮ ಚಿನ್ನದ ಗನಿಯಿದು
ನಮ್ಮ ಲೋಹದ ಮನೆಯಿದು
ನಮ್ಮ ಬೆಡಗಿನ ನೆಲೆಯಿದು
ನಮ್ಮ ಕನ್ನಡ ನಾಡಿದು
ಬಸವ ಹುಟ್ಟಿದ ನಾಡಿದು
ಮಧ್ವ ಜನಿಸಿದ ನಾಡಿದು
ಅಕ್ಕ ಹುಟ್ಟಿದ ನಾಡಿದು
ದಾಸರುದಿಸಿದ ನಾಡಿದು
ವಚನ ಪೇಳಿದ ನಾಡಿದು
ನಮ್ಮ ಕನ್ನಡ ನಾಡಿದು
ವಿಶ್ವಮತಗಳ ನೆಲೆಯಿದು
ವಿಶ್ವಪ್ರೇಮದ ಬೀಡಿದು
ವಿಜಯ ತೋರುವ ನಾಡಿದು
ಜ್ಞಾನ ಬೀರುವ ನಾಡಿದು
ಶಾಂತಿ ಸಾರುವ ನಾಡಿದು

(ಶ್ರೀ ಘೋಗಿಕಟ್ಟೆ ಜಾಗಪ್ಪನವರ ಸೊಸೆ ಗಂಗಮ್ಮ ಇವರ ಕುಮಾರಿ ಇಂದಿರ, ೨ನೇ ಇವರ ಪ್ರೇಮ ವಿದ್ಯಾರ್ಥಿ ಕಾಣಿಕೆ.)

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 107/1941

ವೆಂಕಪ್ಪ ಶೆಟ್ಟಿ .. ಅರ್ಜಿದಾರರು,

ಅಪ್ಪು ಹೆಂಗ್ಸು-ದೇವು ಸ್ಕ್ಯಾರ್ಯ ಸೊಸೆ, ಮುಂಗ ... ಗ್ರಾಮ -- ಎದುರು.

ಅರ್ಜಿದಾರರು ತನ್ನ ಅರ್ಜಿಯಲ್ಲಿ ವಿವರಿಸಿರುವ ಪ್ರಕಾರ ಪಾಪರಾಗಿ ದಾವೆ ಹೂಡಲಿಕ್ಕೆ ಅನುಮತಿ ಬೇಡಿದ್ದಾರೆ. [illegible] ಫೀಸು ಸಲ್ಲಿಸುವರೆ ಅವರಿಗೆ ಶಕ್ತಿಯುಂಟೆಂಬವನ್ನು ವಿಚಾರಿಸಲಿಕ್ಕೆ ... ತಾ.19-2-1942ನೇ ತಾರೀಖಿಗೆ ನಿಶ್ಚಯಿಸಲ್ಪಟ್ಟಿದೆ ಎಂತ ಈ ಮೂಲಕ ಅರಿಯಪಡಿಸಲಾಗಿದೆ.

Puttur, 9-2-42. | P. CHIDANAND RAO, B.A.B.L. Pleader for Petitioner.

THE TROPICAL
INSURANCE COMPANY LTD.,
H. O. **NEW DELHI**

WANTED

Immediately Organisers in our rapid expansion scheme for the following Centres in the District of South Kanara. Well educated young local men with energy, push and Initiative willing to take to Life Insurance career are selected and trained as probationers. Initial Salary of Rs. 30/- per month **besides commission on personal business. No guarrantee of business.**

1. Mangalore/City, 2. Buntwal, 3. Puttur, 4. Kasaragod, 5. Karkala 6. Udipi, 7. Coondapoor.

Apply with credentials to:-

M. Sunderram Shetty,
BRANCH MANAGER,
THE TROPICAL INSURANCE CO. LTD.,
MANGALORE.

ಭಿಕ್ಷೆಯಿದೆ-ಉದ್ಯೋಗವಿಲ್ಲ!

ಒಂದು ದಿನ ಬೆಳಗ್ಗೆ ನಾನು ನನ್ನವಳಿಗೆ 'ಟೈಮ್ಸ್ ಇಲ್ಲಸ್ಟ್ರೇಟೆಡ್ ವೀಕ್ಲಿಯ' ಚಿತ್ರಗಳನ್ನು ತೋರಿಸುತ್ತಾ ವಿವರಿಸುತ್ತಿದ್ದೆ. ನಮ್ಮ ಚಿರಂಜೀವಿಗಳೂ ನಮ್ಮ ಬಳಿಯೇ ಇದ್ದು ಆಡುತ್ತಿದ್ದರು. ಅಷ್ಟರಲ್ಲಿ ಪ್ರತ್ಯಕ್ಷ ರುದ್ರನೇ, ಆತನ ಹೆಸರನ್ನೆಂದೂ ಎತ್ತದ ನಮ್ಮನ್ನು ದಂಡಿಸಲಿಳಿದು ಬಂದನೋ ಎಂಬಂತೆ, ಸನ್ಯಾಸಿಯೊಬ್ಬನು, ಗಜಲ್ಲನೆ ತನ್ನ ಕೈಯ ತ್ರಿಶೂಲವನ್ನು ನೆಲಕ್ಕೆ ಜಡಿದು ಗಂಭೀರವಾಗಿ ನಿಂತುಬಿಟ್ಟನು. ಲಂಗೋಟಿಯ ಹೊರತು ಆತನ ಮೈಯೆಲ್ಲಾ ಬರಿದಾಗಿತ್ತು. ಇಡೀ ದೇಹವು ಬೂದಿಯಿಂದ ಮುಚ್ಚಿಹೋಗಿತ್ತು. ತಲೆ ಕೂದಲು ಅಂದವಾಗಿ ನೆತ್ತಿಯ ಮೇಲೆ ಸುತ್ತಿ ಕಟ್ಟಲ್ಪಟ್ಟಿತ್ತು. ಕುತ್ತಿಗೆಯ ರುದ್ರಾಕ್ಷಿ ಮಾಲೆಯು ಕಣ್ಣಿಗೆ ಹೊಡೆಯುವಷ್ಟು ದೊಡ್ಡದಾಗಿತ್ತು. ಗಡ್ಡವು ಅತಿ ಉದ್ದವಾಗಿ ಇಳಿದು ಗಂಭೀರವಾಗಿತ್ತು. ಎಂಥವರ ಲಕ್ಷ್ಯವನ್ನಾದರೂ ಒಂದೊಮ್ಮೆ ಸೆಳೆದುಬಿಡುವಂತಿದ್ದಿತು ಸನ್ಯಾಸಿಯ ರೂಪ.

"ದಮ್ಮ ಇಲ್ಲ, ಹೋಗು" ಎಂದು ಪದ್ಧತಿಯಂತೆ ಕೂಗಿದ ನಮ್ಮ ಚಿಕ್ಕ ಹುಡುಗನು ಸನ್ಯಾಸಿಯನ್ನು ಕಂಡು ಹೆದರಿ ಓಡಿಬಂದು ನನ್ನ ತೊಡೆಯೇರಿ ಕೂತುಬಿಟ್ಟ. ಅಂಗವೆಲ್ಲಾ ಸರಿಯಿರುವ ಭಿಕ್ಷುಕರು ಬಂದಾಗಲೆಲ್ಲಾ ನನ್ನ ಕೆಲಸವನ್ನು ಅವನೇ ಮಾಡಿಬಿಡುತ್ತಿದ್ದ. ಅಂಗಹೀನರಾದವರಾರಾದರೂ ಬಂದರೆ, ತಾನು ಭಿಕ್ಷೆ ಕೊಡುವೆನೆಂದು ಒಳಗೋಡಿ ಬರುತ್ತಿದ್ದ. ನನ್ನ ತೊಡೆಯ ಮೇಲೆ ಕೂತ ಮೇಲೆ ನಿರ್ಭೀತಿಯಿಂದ, "ದಮ್ಮ ಇಲ್ಲಿ ಇಲ್ಲ; ಹೋಗು' ಎಂದು ಇನ್ನೊಮ್ಮೆ ಗಟ್ಟಿ ಕೂಗಿದ. ಸನ್ಯಾಸಿಯು ಮೌನಿಯೋ ಮೂಕನೋ ಎಂಬಂತೆ ಒಂದೇ ಒಂದು ಮಾತಾದರೂ ಆಡದೆ ಗಂಭೀರ ಮುಖಮುದ್ರೆಯಿಂದ, ಭಿಕ್ಷಾಪಾತ್ರವನ್ನು ಮುಂದೊಡ್ಡಿ ಮೂರ್ತಿಯಂತೆ ನಿಂತಿದ್ದ.

"ಯಾರೋ ನಿಜವಾದ ಸಾಧುವೆಂಬಂತೆ ತೋರುತ್ತದೆ. ನೀವನ್ನು ಆತನೊಡನೆ "ನಿನಗೆ ಕಾಲು ಕೈಯೆಲ್ಲಾ ಸಮ ಇದೆಯಲ್ಲ! ನೀನೇಕೆ ಏನಾದರೂ ಕೆಲಸ ಮಾಡಬಾರದು?" ಎಂಬ ವಾದಕ್ಕಾರಂಭಿಸದೆ ಸ್ವಲ್ಪ ಸುಮ್ಮನಿರಿ. ನಾನು ಆತನಿಗೊಂದು ಮುಕ್ಕಾಲು ಕೊಟ್ಟು ಕಳುಹಿಸಿಬಿಡುತ್ತೇನೆ" ಎಂದಳು ನನ್ನವಳು ಸನ್ಯಾಸಿಯ ಕುರಿತು ಭಯಭಕ್ತಿಯುಳ್ಳವಳಾಗಿ. ಪ್ರತಿ ಮಾತಾಡಲಿಕ್ಕೇನೇ ನನಗೆ ಆಸ್ಪದ ಕೊಡದೆ ಮುಕ್ಕಾಲು ತರಲು ಕೂಡಲೆ ಒಳನಡೆದಳು. ನಾನು ನಸುನಕ್ಕು ಈಸಿಚೇಯರಿನಿಂದೆದ್ದು ಸನ್ಯಾಸಿಯ ಸಮೀಪ ಹೋಗಿ ಆತನನ್ನು ಚೆನ್ನಾಗಿ ಪರೀಕ್ಷಿಸುತ್ತಾ ನಿಂತೆ. ಆತನೇಕೋ ನನ್ನಿಂದ ಸ್ವಲ್ಪ ದೂರ ಸರಿದು ನಿಂತ. ನಾನು ಮತ್ತೂ ಉತ್ಸುಕತೆಯಿಂದ ಆತನನ್ನು ಪರೀಕ್ಷಿಸ ತೊಡಗಿದೆ. ನನ್ನ ಬೆನ್ನು ಹಿಡಿದೇ ಬಂದಿದ್ದ ನನ್ನ ಹುಡುಗನು "ಇಲ್ಲ, ದಮ್ಮ ಇಲ್ಲ; ಹೋಗು— ಹೋಗು— ಹೋಗು" ಎಂದ ಪುನಹ. ಅಷ್ಟರಲ್ಲಿ ನನ್ನವಳು ಹೊರಗೆ ಬಂದು, "ಇದೊಂದು ಶನಿ ಎಲ್ಲಿಯಾದ್ರು! ಸುಮ್ಮನಿರುತ್ತೀಯೋ ಇಲ್ಲವೋ!" ಎಂದು ಹುಡುಗನ ಕಿವಿಹಿಂಡಿ ಸನ್ಯಾಸಿಗೆ ಮುಕ್ಕಾಲು ಕೊಡಲು ಮುಂದಾದಳು.

"ತಡೆ, ತಡೆ, ನಿಲ್ಲು. ಈ ಸನ್ಯಾಸಿಯನ್ನು ಸ್ವಲ್ಪ ಚೆನ್ನಾಗಿ ಪರೀಕ್ಷಿಸಿಕೊಳ್ಳುವ. ಇವನು ಸಾಮಾನ್ಯ ಸನ್ಯಾಸಿಯಂತೆ ತೋರುವುದಿಲ್ಲ" ಎಂದೆ ನನ್ನವಳ ಕೈ ತಡೆದೆ ನಾನು. "ಸಾಕು ಸಾಕು ನಿಮ್ಮ ಪರೀಕ್ಷೆ! ಅವನೊಮ್ಮೆ ಹೋಗಲಿ ಪಾಪ!" ಎನ್ನುತ್ತಾ ಧರ್ಮ ಹಾಕಲು ಮುಂದಾದಳವಳು. ನಾನವಳ ಕೈಯಿಂದ ಫಕ್ಕನೆ ಮುಕ್ಕಾಲು ಕಸಕೊಂಡೆ. "ಆಡಂಬರಕ್ಕೆ ಮರುಳಾಗಿ ಕ್ಷಣಮಾತ್ರದಲ್ಲಿ ಕಾಲುಬಿಟ್ಟು ತೇಲಿಹೋಗಿ ಬಿಡುವುದು ಸಾಮಾನ್ಯವಾಗಿ ಹೆಂಗಸರ ದೌರ್ಬಲ್ಯ. ನೀನೇನೂ ನಿನ್ನ ಜಾತಿಯ ದೋಷಕ್ಕೆ ಅಪವಾದವಲ್ಲ. ಈತನೆಂತಹ ಸನ್ಯಾಸಿಯೆಂಬುದನ್ನು ನಿನಗೀಗಲೆ ತೋರಿಸುತ್ತೇನೆ" ಎಂದು ನಾನು ಫಕ್ಕನೆ ಸನ್ಯಾಸಿಯ ಬಳಿಗೆ ಹೋಗಿ ಆತನ ಗಡ್ಡ ಹಿಡಿದೆಳೆದುಬಿಟ್ಟೆ. ಸ್ಪಿರಿಟ್ ಗಮ್ಮಿನಲ್ಲಿ ಗಟ್ಟಿಯಾಗಿ ಅಂಟಿಸಲ್ಪಟ್ಟಿದ್ದ ಅದರ ಉದ್ದದ ಭಾಗವು ಕಿತ್ತು ಬಂದುಬಿಟ್ಟಿತು. "ಅಯ್ಯೋ!" ಎಂದು ಒಮ್ಮೆಯೇ ಕೂಗಿ ನಮ್ಮ ಮನೆಗೇಟಿನ ಕಡೆಗೆ ಒಂದೇ ಸವನೆ ಓಡಿ ತಪ್ಪಿಸಿಕೊಳ್ಳಲೆತ್ನಿಸಿದ ಸನ್ಯಾಸಿ. ಆದರೆ ಆತನ ತ್ರಿಶೂಲವು, ಒಂದು ಬಾಗಿಲು ಮಾತ್ರ ತೆರೆಯಲ್ಪಟ್ಟಿದ್ದ ಗೇಟಿನ ಇನ್ನೊಂದು ಬಾಗಿಲಿಗೆ ಅಡ್ಡ ಸಿಕ್ಕಿ ಅವನನ್ನು ತಡೆಯಿತು. ಅವನ ಬೆನ್ನಟ್ಟಿ ಹೋಗಿದ್ದ ನಾನು, "ಹೆದರಬೇಡ, ನಾನು ನಿನಗೇನೂ ಮಾಡುವುದಿಲ್ಲ. ಸತ್ಯ ಸಂಗತಿಯನ್ನು ನನ್ನೊಡನೆ ಮರೆಮಾಜದೆ ತಿಳಿಸು" ಎನ್ನುತ್ತಾ ಠಕ್ಕು ಸನ್ಯಾಸಿಯ ರಟ್ಟೆ ಹಿಡಿದೆಳತಂದೆ. "ದಮ್ಮಯ್ಯ, ನನ್ನನ್ನೊಮ್ಮೆ ಹೋಗಬಿಡಿ! ನನ್ನ ಹೊಟ್ಟೆಗೆ ಪೆಟ್ಟು ಕೊಡಬೇಡಿ!" ಎಂದು ಕಣ್ಣೀರಿಡುತ್ತಾ ಸನ್ಯಾಸಿಯು ನನ್ನ ಕಾಲಿಗೆ ಬಿದ್ದ. ಅಷ್ಟರವರೆಗೆ ಅವಾಕ್ಕಾಗಿ ನಿಂತುಕೊಂಡಿದ್ದ ನನ್ನವಳು ನನ್ನ ಬಳಿಗೋಡಿ ಬಂದು, "ಬಿಡಿ, ಹೋಗಲಿ ಪಾಪ! ಅವನು ಠಕ್ಕನಾಗಲಿ, ಯಾರೇ ಆಗಲಿ, ನಮಗೇನು? ಹೇಗಾದರೂ ಹೊಟ್ಟೆ ಹೊರಕೊಂಡಿರಲಿ. ನಾವು ಬೇಕಾದರೆ ಧರ್ಮ ಹಾಕುವುದು ಬೇಡ" ಎಂದು ನನ್ನ ತೋಳು ಹಿಡಿದೆಳೆದಳು.

"ನಿನ್ನ ನಿಜ ವೃತ್ತಾಂತವನ್ನು ಒಂದಿಷ್ಟಾದರೂ ಮರೆಮಾಜದೆ ತಿಳಿಸಿದರೆ ಮಾತ್ರ ನಿನ್ನನ್ನು ಹಾಗೆಯೇ ಬಿಡುವೆನು. ಎಂದಿಗೂ ನಿನ್ನ ಹೊಟ್ಟೆಗೆ ನಾನು ಪೆಟ್ಟು ಕೊಡುವ ಹಾಗಿಲ್ಲ. ನನ್ನವಳಂತೂ ನಿನಗೋಸ್ಕರವಾಗಿ ನನ್ನೊಡನೆ ಕಾದಾಡುವುದಕ್ಕೇನೇ ಮುಂದಾಗಿದ್ದಾಳೆ" ಎಂದೆ ನಾನು ಸನ್ಯಾಸಿಯ ರಟ್ಟೆಬಿಟ್ಟು. ಎದ್ದು ನಿಂತಾಗ ಧಾರಾವಾಹಿಯಾಗಿ ಕಣ್ಣೀರು ಸುರಿದು ಬರುತ್ತಿತ್ತಾತನ ಕಣ್ಣುಗಳಿಂದ. ಉದ್ವೇಗದಿಂದ ಸ್ವಲ್ಪ ಹೊತ್ತು ಮಾತಾಡುವುದಕ್ಕೇನೇ ಆಗಲಿಲ್ಲ. ಅನಂತರ ಅವನು ಈ ರೀತಿ ತನ್ನ ಸಂಗತಿಯನ್ನೆಲ್ಲಾ ತಿಳಿಸಿದ.

"ಸ್ವಾಮಿ, ದಯಮಾಡಿ ನನ್ನನ್ನು ಕ್ಷಮಿಸಬೇಕು. ಗತ್ಯಂತರವಿಲ್ಲದೆ ನನ್ನ ಚಿಕ್ಕ ಮಕ್ಕಳ ಹೊಟ್ಟೆಪಾಡಿಗಾಗಿ ನಾನೀ ಠಕ್ಕು ವೃತ್ತಿಯನ್ನು ನಡಿಸುತ್ತಿರುವೆನು. ಅದಕ್ಕೆ ಸಮಾಜವೇ ಕಾರಣವಲ್ಲದೆ ನಾನಲ್ಲ. ನಾನು ಇದೇ ಪಟ್ಟಣದ ಸಮೀಪದ ಹಳ್ಳಿಯೊಂದರಲ್ಲಿ ಬೇಸಾಯ ಕಸುಬು ಮಾಡಿಕೊಂಡಿದ್ದೆ. ನಿಮ್ಮಂತೆಯೇ ನನಗೂ ಅತ್ಯಂತ ಪ್ರೀತಿಯ ಹೆಂಡತಿಯೊಬ್ಬಳಿದ್ದಳು. ಅವಳೂ ನಾನೂ ಚೆನ್ನಾಗಿ ದುಡಿದು ಸುಖವಾಗಿ ಸಂಸಾರ ನಡಿಸುತ್ತಿದ್ದೆವು. ಅವಳು ಹೆರಲಾರಂಭಿಸಿದಂದಿನಿಂದ ಆರಂಭವಾಯಿತು ನಮ್ಮ ದುರದೃಷ್ಟಕ್ಕೆ. ವರ್ಷಕ್ಕೊಂದರಂತೆ ಮಕ್ಕಳಾಗ ಹತ್ತಿದುವು. ಆರನೇ ಮಗುವನ್ನು ಹೆತ್ತು ನನ್ನನ್ನಗಲಿದಳು. ಅವಳ ಹಿಂದೆಯೇ ಆ ಮಗುವೂ ಹೋಯಿತು. ಇಷ್ಟರೊಳಗೆ ನಾನು ಸಾಲದಲ್ಲಿ ಮುಳುಗಿದ್ದೆ. ಮೂರು ವರ್ಷದ ಗೇಣಿ ಬಾಕಿಯಾಗಿತ್ತು ಧನಿಗಳಿಗೆ "ವಕ್ಕಲೆದ್ದು ಹೋಗು. ಬಾಕಿಯೆಲ್ಲಾ ಬಿಟ್ಟುಬಿಡುತ್ತೇನೆ" ಎಂದರವರು. ಸಾಲಿಗರ ಕಾಟವೂ ಅಸಹನೀಯವಾಗಿದ್ದುದರಿಂದ ನಾನು ಒಂದು ರಾತ್ರಿ, ಸಾಧ್ಯವಾದಷ್ಟು ಸಾಮಾನು ಹಿಡಕೊಂಡು ಮಕ್ಕಳನ್ನು ಕಟ್ಟಿಕೊಂಡು ಈ ಪಟ್ಟಣಕ್ಕೆ ಬಂದುಬಿಟ್ಟೆ. ಪಟ್ಟಣದಲ್ಲಿ ಏನಾದರೂ ಕೆಲಸ ಮಾಡಿ ಜೀವಿಸಬಹುದೆಂದು ಬಗೆದಿದ್ದೆ".

"ಆದರೆ ನನ್ನ ಆಶೆ ನಿರಾಶೆಯಾಯಿತು. ವಾಸಿಸುವುದಕ್ಕೊಂದು ಗುಡಿಸಲು ಸಿಗುವುದೇ ಕಷ್ಟವಾಯಿತಿಲ್ಲಿ. ಕಡೆಗೊಬ್ಬ ಹೆಂಗಸಿನೊಡನೆ ಬೇಡಿಕೊಂಡು ಅವಳ ಗುಡಿಸಲಿನ ಒಂದು ಕೋಣೆಯನ್ನು ವರ್ಷಕ್ಕೆ 3 ರೂಪಾಯಿ ಬಾಡಿಗೆಗೆ ಪಡೆಸಿಕೊಂಡೆ. ಆದರೆ ಎಲ್ಲೆಲ್ಲಿ ಹುಡುಕಿದರೂ ಕೆಲಸ ಸಿಗಲೇ ಇಲ್ಲ. ಅಲ್ಲಿ, ಇಲ್ಲಿ ಎಂಬಂತೆ ಏನಾದರೂ ಸ್ವಲ್ಪ ಕೆಲಸ ಮಾಡಿ ದೊರೆತ ಹಣವು ನಮಗೆ ದಿನಕ್ಕೊಂದು ಗಂಜಿಗೂ ಸಾಕಾಗುತ್ತಿದ್ದಿಲ್ಲ. ಮಕ್ಕಳೆಲ್ಲ ಉಪವಾಸ ಬಿದ್ದು ಸಾಯುವ ಪ್ರಸಂಗ ಬಂದೊದಗಿತು. ನಾನು ಕಂಗೆಟ್ಟುಹೋದೆ. ಹಳ್ಳಿಬಿಟ್ಟು ಪಟ್ಟಣಕ್ಕೆ ಬಂದುದೇ ದೊಡ್ಡ ತಪ್ಪಾಯಿತೆಂದು ನನಗೆ ತೋರಿತು. ಹಳ್ಳಿಯಲ್ಲಾದರೆ ನನಗೆ ಎಂದಿಗೂ ಆ ಗತಿಯಾಗುತ್ತಿದ್ದಿಲ್ಲ. ನನ್ನ ಮಕ್ಕಳು ಉಪವಾಸ ಬೀಳುವುದು ಅಲ್ಲಿಯ ಜನರಿಗೆ ಸಹನೀಯವಾಗುತ್ತಿದ್ದಿಲ್ಲ. ಆದರೆ ಪಟ್ಟಣದಲ್ಲಿ ಕೇಳುವವರಾರು! ಹಳ್ಳಿಯಲ್ಲಿ ಮಾನವತೆಯಿದೆ, ಮಾನವ ಮೌಲ್ಯವಿದೆ. ಆದರೆ ಪಟ್ಟಣದಲ್ಲಿ ದುಡ್ಡಿಗೆ ಮಾತ್ರ ಬೆಲೆ."

"ಮಕ್ಕಳು ಉಪವಾಸ ಬಿದ್ದು ಸಾಯುತ್ತಿವೆ, ಏನಾದರೂ ಕೆಲಸ ಕೊಡಿರೆಂದು ನಾನು ಗೋಳಿಡುತ್ತಾ ಹಲವರನ್ನು ಕೇಳಿಕೊಂಡರೂ ಯಾರೂ ಕೆಲಸ ಕೊಡಲಿಲ್ಲ. ಬದಲಿಗೆ ನಾನು ಹುಚ್ಚನೆಂದು ಕೆಲವರು ನನಗೆ ಪರಿಹಾಸ್ಯ ಮಾಡಹತ್ತಿದರು. ಕಟ್ಟಕಡೆಗೆ ನನ್ನ ಮಕ್ಕಳ ಹೃದ್ರಾವಕ ಪರಿಸ್ಥಿತಿಯು ನನ್ನನ್ನು ಅರೆಭ್ರಾಂತನನ್ನಾಗಿ ಮಾಡಿಬಿಟ್ಟಿತು. ಊಟವಿಲ್ಲದೆ ನನ್ನ ದೇಹವು ಶಕ್ತಿ ಕುಂದಿ ಎಲುಬಿನ ಗೂಡಿನಂತಾಗಿತ್ತು. ನಾನು ಒಂದೇ ಸವನೆ ಕಣ್ಣೀರಿಳಿಸುತ್ತಾ ಮನೆಮನೆ ಹೋಗಿ ಭಿಕ್ಷೆ ಬೇಡಹತ್ತಿದೆ. ಒಂದೇ ಒಂದು ಮಾತನ್ನಾದರೂ ಆಡಲು ನನಗೆ ಸಾಧ್ಯವಾಗುತ್ತಿದ್ದಿಲ್ಲ. ನನಗೆ ಬೇಕಾಗುವುದಕ್ಕಿಂತಲೂ ಹೆಚ್ಚು ಭಿಕ್ಷೆ ದೊರೆತುದರಿಂದ ನಾನು ಸಾನಂದ ವಿಸ್ಮಿತನಾದೆ. ಅನಂತರ ಅದೇ ವೃತ್ತಿಯನ್ನು ಮುಂದುವರಿಸಿದೆ. ನನ್ನ ಮಕ್ಕಳಿಗೆ ಉಣ್ಣಲು ತಿನ್ನಲು ಅನಾಯಾಸವಾಗಿ ಸಾಕಷ್ಟು ದೊರೆತ ಮೇಲೆ ಮುಂದೆ ಕಣ್ಣೀರೆಲ್ಲಿಂದ ಬರಬೇಕು? ನಾನೂ ಪುಷ್ಟಿಯಾಗಿ ಬೆಳೆಯಹತ್ತಿದೆ. ಆಗ ಬೇರೆಬೇರೆ ವೇಷಗಳಿಂದ ಭಿಕ್ಷೆ ಬೇಡಬೇಕಾಯಿತು. ಕಟ್ಟಕಡೆಗೆ ಇಂತಹ ಮಹಾನ ಹಾಗೂ ಗಂಭೀರ ಜೋಗಿ ವೇಷದಿಂದ ಜನರನ್ನು ಸುಲಭವಾಗಿ ವಂಚಿಸಿ ಹಣ ಪಡೆಯಬಹುದೆಂದು ಕಂಡುಕೊಂಡು ಹಾಗೆಯೇ ಮಾಡುತ್ತಿದ್ದೇನೆ".

"ನಿನಗೀಗ ದಿನಕ್ಕೆಷ್ಟು ಸಂಪಾದನೆಯಾಗುತ್ತದೆ? ನಿನ್ನ ಮಕ್ಕಳೇನು ಮಾಡುತ್ತಿರುವರು?" ಪ್ರಶ್ನಿಸಿದೆ ನಾನು.

"ದಿನಕ್ಕೆ ಒಂದರಿಂದ ಎರಡು ರೂಪಾಯಿಗಳವರೆಗೆ ಸಿಗುತ್ತದೆ. ನನ್ನ ಮಕ್ಕಳಲ್ಲಿ ದೊಡ್ಡವರು ಮೂವರು ಶಾಲೆಗೆ ಹೋಗುತ್ತಾರೆ. ಚಿಕ್ಕವರಿಬ್ಬರು ಮನೆಯಲ್ಲೇ ಇದ್ದಾರೆ", ಉತ್ತರವಿತ್ತ ಸನ್ಯಾಸಿ.

"ನೀನಿನ್ನು ಇನ್ನಾವುದಾದರೂ ಉದ್ಯೋಗ ಮಾಡಲು ತಯಾರಿರುವೆಯಾ?" ನಾನು ಕೇಳಿದೆ.

"ಇಲ್ಲ ಸ್ವಾಮಿ. ಈಗ ನನಗೆ ಎಲ್ಲಿಯಾದರೂ ಕೆಲಸ ಸಿಕ್ಕಿದರೂ ನಾನದನ್ನು ಮಾಡಲು ಸಿದ್ಧನಿಲ್ಲ. ನಾನು ರಕ್ತ ನೀರು ಮಾಡಿ ಸರಿ ದುಡಿದರೆ ದಿನವಹಿ ಹೆಚ್ಚೆಂದರೆ ನನಗೆ ನಾಲ್ಕೈದಾಣೆ ದೊರೆಯಬಹುದು. ಈಗ ಅನಾಯಾಸವಾಗಿ ದಿನವೊಂದರ ಕಡಿಮೆಯೆಂದರೆ ಒಂದು ರೂಪಾಯಿ ಸಿಗುತ್ತದೆ. ಅಂದ ಮೇಲೆ ನಾನೇಕೆ ಇತರ ಉದ್ಯೋಗ ಮಾಡಬೇಕು?" ಭಿಕ್ಷುಕ ಹೇಳಿದ.

"ಅಂದರೆ ನೀನು ತಿರುಪೆ ಎತ್ತಿದರೆ ಸಮಾಜವು ನಿನಗೆ ಬೇಕಷ್ಟು ಭಿಕ್ಷೆ ಕೊಡಲು ಸಿದ್ಧವಿದೆ. ಆದರೆ ರಕ್ತ ನೀರು ಮಾಡಿ ಸರಿ ದುಡಿದರೆ ದಿನದ ಪೋಷಣೆಗೆ ಸಾಕಷ್ಟು ಸಂಬಳ ಕೊಡಲು ಸಿದ್ಧವಿಲ್ಲವೇ!" ನಾನೆಂದೆ ತುಸು ಉದ್ವೇಗಗೊಂಡು.

"ರಕ್ತ ನೀರು ಮಾಡಿ ದುಡಿಯುವವರಿದ್ದರೂ ಕೆಲಸವನ್ನೇ ಕೊಡಲದು ಸಿದ್ಧವಿಲ್ಲ ಸ್ವಾಮಿ. ನನಗೆ ಆರಂಭದಲ್ಲೇ ಏನಾದರೂ ಕೆಲಸ ಸಿಗುತ್ತಿದ್ದರೆ ಆಗ ನಾನು ಅತ್ಯಂತ ತುಚ್ಛವೆಂದು ಭಾವಿಸಿದ್ದ ಭಿಕ್ಷಾವೃತ್ತಿಯನ್ನು ಅನುಸರಿಸುತ್ತಿದ್ದಿಲ್ಲ" ಭಿಕ್ಷುಕನೆಂದ ಮಾರ್ಮಿಕವಾಗಿ.

"ಭಿಕ್ಷೆಯಿದೆ — ಉದ್ಯೋಗವಿಲ್ಲ!!" ಎಂದು ಉದ್ಗರಿಸಿ, ನಾನು ಕಿತ್ತುಕೊಂಡ ಗಡ್ಡವನ್ನು ಹಿಂತಿರುಗಿ ಕೊಟ್ಟೆ. ಸನ್ಯಾಸಿಯು ಅದನ್ನು ತೆಗೆದುಕೊಂಡು ನಡೆದುಬಿಟ್ಟ.

—ವಿಹಾರಿ.

ರೂಪಾಯಿಗಳು!

ವಿಕ್ಟೋರಿಯಾ ರೂಪಾಯಿಗಳಾಗಲೀ, ಬೆಳ್ಳಿಯ ನಾಣ್ಯಗಳಾಗಲೀ ನಿಮ್ಮಲ್ಲಿದ್ದು ಅವುಗಳನ್ನು ಚಲಾಯಿಸಲಾಗುವುದಿಲ್ಲವಾದರೆ ನಮಗೆ ಬರೆಯಿರಿ. ರೂಪಾಯಿಗಳಿಗೆ ರೂಪಾಯಿಗಳನ್ನು ನಾವು ಕೊಡುತ್ತೇವೆ. ನಮ್ಮ ಸೇವೆಗಾಗಿ ಏನಾದರೊಂದಿಷ್ಟು ಕೊಡಿ.

ಬಡವರಬಂಧು ಆಫೀಸು,
ಮಂಗಳೂರು, ದ. ಕ.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills:	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

"Service of Mankind is Service of God"

The Bombay Life Assurance Company., Limited.

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including Indian States,

Udipi.

Also Offices at:—

Mangalore, Calicut, Madras,

Bangalore, Trivandrum & Bombay.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ವಾರದ ವಿಶೇಷ ವಾರ್ತೆ

ಪಲೆಮಂಗನ್ನು ಜಾಪಾನರು ಹಿಡಿದರು.

ಸುಮಾತ್ರದ ಆಗ್ನೇಯದಲ್ಲಿ, ಮಿತ್ರ ರಾಷ್ಟ್ರಗಳ ಪ್ರಾಮುಖ್ಯ ಎಣ್ಣೆ ಕೇಂದ್ರವಾದ ಪಲೆಮಂಗನ್ನು ಜಾಪಾನರು ಹಿಡಿದಿರುವರು. ಮೊದಲು ಇಲ್ಲಿಗೆ ಜಾಪಾನ ಪೆರಚೂಟ್ ಸೈನಿಕರಿಳಿದು ಬಂದಿದ್ದರು. ಪಲೆಮಂಗಿನಲ್ಲಿ ಪ್ರತಿವರ್ಷ 1½ ಮಿಲ್ಯ ಟನ್ ಎಣ್ಣೆ ತಯಾರಾಗುತ್ತಿತ್ತು. ಟರಕನ್ ಮತ್ತು ಬಲಿಕ್‌ಪಪೆನಿನ ಎಣ್ಣೆ ಕ್ಷೇತ್ರಗಳು ಜಾಪಾನರ ವಶವಾದ ಮೇಲೆ ಈ ಪ್ರದೇಶದಲ್ಲಿ ಉಳಿದಿದ್ದ ಏಕಮಾತ್ರ ಎಣ್ಣೆ ಕೇಂದ್ರವೇ ಪಲೆಮಂಗ್.

ಸಿಂಗಪುರದ ಭೀಷಣ ಯುದ್ಧ.

ಸಿಂಗಪುರದಲ್ಲಿ, ಹಿಂದೀ, ಆಸ್ಟ್ರೇಲಿಯನ್ ಮತ್ತು ಬ್ರಿಟಿಷ್ ಸೈನಿಕರು, ಮಾನವ ಸಹನಾತೀತವಾದ ಸಹನೆ ಮತ್ತು ವೀರಾವೇಶದಿಂದ ಕಾದಾಡಿರುವರೆಂಬುದನ್ನು ಜಾಪಾನರೇ ಒಪ್ಪಿರುವರು. ಯುದ್ಧೇತಿಹಾಸದಲ್ಲೇ ಅತ್ಯಂತ ಭೀಷಣ ಹೋರಾಟಗಳಲ್ಲೊಂದೆನ್ನಬಹುದು ಸಿಂಗಪುರದ ಸಮರವನ್ನು. ಸಿಂಗಪುರವು ಜೀವಂತ ನರಕವೇ ಆಗಿದ್ದಿತು. ರಸ್ತೆಗಳಲ್ಲಿ ಹೆಣಗಳು ರಾಶಿಬಿದ್ದಿದ್ದುವು. ಇಡೀ ದ್ವೀಪವು ಹೊತ್ತಿ ಉರಿಯುತ್ತಿದ್ದು ಅವಿರತವಾಗಿ ಕೆಲವು ಮೈಲುಗಳ ವರೆಗೆ ಯಾವುದೂ ತೋರದಂತಾಗಿತ್ತು. ಬ್ರಿಟಿಷ್ ಸೈನಿಕರು ಕಟ್ಟಕಡೆಯವರೆಗೂ ಅತ್ಯಂತ ವೀರಾವೇಶದಿಂದ ಕಾದಾಡಿರುವರು. ನೀರಿನ, ಮದ್ದುಗುಂಡು ಮತ್ತು ಇತರ ಯುದ್ಧೋಪಕರಣಗಳ ಕೊರತೆಯೇ ಬ್ರಿಟಿಷ್ ಸೈನಿಕರ ಪರಾಜಯಕ್ಕೆ ಕಾರಣವೆಂದು ಜನರಲ್ ವೇವೆಲರು ನಿದಿತಗೊಳಿಸಿರುತ್ತಾರೆ. ಈ ಯುದ್ಧದಲ್ಲಿ ಜಾಪಾನರಲ್ಲೂ ಅತಿ ಹೆಚ್ಚಿನ ಪ್ರಾಣಹಾನಿಯಾಗಿರುವುದು.

ಸೇಟ್ ಜಮುನಾಲಾಲ್ ಬಜಜರ ಮರಣ.

ಇದೇ [illegible]ರಲ್ಲಿ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಸೇಟ್ ಜಮುನಾಲಾಲ್ ಬಜಜರು, ಹೃದಯಸ್ತಂಭನದಿಂದ ವಾರ್ಧದ ತನ್ನ ನಿವಾಸದಲ್ಲಿ ಮೃತರಾಗಿರುವರು. ಲಕ್ಷಾಧೀಶರಾದ ಶ್ರೀ ಬಜಜರು 1920ರಲ್ಲೇ ಅಸಹಕಾರ ಚಳವಳಕ್ಕೆ ಸೇರಿ ತನ್ನ ರಾವ್‌ಬಹದೂರು ಬಿರುದನ್ನು ಬಿಟ್ಟುಕೊಟ್ಟಿದ್ದರು. ತಿಲಕ ಸ್ವರಾಜ್ಯ ಫಂಡಿಗವರು ಒಂದು ಲಕ್ಷ ರೂಪಾಯಿ ಕೊಟ್ಟಿದ್ದರು. ಅಂದಿನಿಂದ ಅವರು ಬೇರೆ ಬೇರೆ ರೀತಿಯಲ್ಲಿ ಮಾಡಿರುವ ದಾನವು ರೂ. 25 ಲಕ್ಷಕ್ಕೆ ಮುಟ್ಟಿರುವುದು. ವಾರ್ಧದಲ್ಲಿ ಗಾಂಧಿ ಸೇವಾ ಸಂಘವನ್ನು ಸ್ಥಾಪಿಸಿ ಮಹಾತ್ಮರ ವಾರ್ಧಾ ಆಶ್ರಮಕ್ಕೆ ಸರ್ವವಿಧದ ಅನುಕೂಲತೆಗಳನ್ನೊದಗಿಸಿ ಕೊಟ್ಟವರೇ ಶ್ರೀ ಬಜಜರು. ವಿಧಾಯಕ ಕಾರ್ಯಕ್ರಮದ ಜೀವಾಳವಾಗಿ ಕೆಲಸ ಮಾಡುತ್ತಾ ಬಂದವರು. ಉಜ್ವಲ ಸುಧಾರಕರಾಗಿ ವಾರ್ಧದಲ್ಲಿ 1928ರಲ್ಲಿ ಹರಿಜನರಿಗಾಗಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವನ್ನು ತೆರೆಸಿದ್ದರು. 1923ರಲ್ಲಿ ಶ್ರೀ ಬಜಜರು ಧ್ವಜ ಸತ್ಯಾಗ್ರಹ ಮಾಡಿ ಪ್ರಥಮ ಸಲ ಜೈಲಿಗೆ ಹೋಗಿ, ಅವರ ಮೇಲೆ ಹೊರಿಸಲ್ಪಟ್ಟ ರೂ. 3000 ಜುಲ್ಮಾನೆಯ ವಸೂಲಿಗಾಗಿ ಪೋಲೀಸರು ಅವರ ಮೋಟರ್ ಕಾರನ್ನು ಜಪ್ತಿಮಾಡಿ ಲಿಲಾವ್ ಹಾಕಿದಾಗ ಅದನ್ನು ತೆಗೆದುಕೊಳ್ಳಲು ವಾರ್ಧದಿಂದ ಯಾರೂ ಮುಂದೆ ಬರಲಿಲ್ಲ. ನಾಗಪುರದ ಧ್ವಜಸತ್ಯಾಗ್ರಹವನ್ನು ಜಯಶೀಲವಾಗಿ ನಡಿಸಿದವರೇ ಶ್ರೀ. ಬಜಜರು. 1930 ಮತ್ತು 32ರಲ್ಲಿ ಬಜಜರು ಪುನಹ ಕಾರಾಗ್ರಹವಾಸವನ್ನನುಭವಿಸಿದರು. ಕಾಂಗ್ರೆಸಿನ ಕೋಶಾಧಿಕಾರಿಯಾಗಿ ಹಲವು ವರ್ಷಗಳಿಂದ ದುಡಿದು ದೇಶಸೇವೆ ಸಲಿಸಿರುವರು. ಶ್ರೀಮಂತರು ಯಾವ ರೀತಿ ತಮ್ಮ ಹಣವನ್ನು ವಿನಿಯೋಗಿಸಬೇಕೆಂಬುದಕ್ಕೆ ಶ್ರೀ. ಬಜಜರು ಉಜ್ವಲ ಮಾದರಿಯಾಗಿ ಗಾಂಧಿಜಿಯವರ ಮೆಚ್ಚಿಗೆಗೊಳಗಾಗಿದ್ದರು. ಅವರ ಪತ್ನಿ ಶ್ರೀಮತಿ ಜಾನಕಿ ಬಾಯಿ ಬಜಜರೂ ಪತಿಯ ಮಾದರಿಯನ್ನೇ ಅನುಸರಿಸುವ ನಿರ್ಧಾರ ಮಾಡಿರುತ್ತಾರೆ.

ಮಾರ್ಶಲ್ ಚ್ಯಾಂಗರು.

ಮೆಡಮ್ ಚ್ಯಾಂಗ್ ಮತ್ತು ಇತರ ಕೆಲ ಮಂದಿ ಉಚ್ಚ ಅಧಿಕಾರಿಗಳೊಂದಿಗೆ ನ್ಯೂ ಡಿಲ್ಲಿಗೆ ಚಿತ್ತೈಸಿ ವೈಸರಾಯರ ಅತಿಥಿಯಾಗಿರುವರು. ಅವರು ತಾ. 10ರಲ್ಲಿ ವೈಸರಾಯ ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರೊಡನೆ, ಹಿಂದು ದೇಶದ ಯುದ್ಧ ಪ್ರಯತ್ನದ ಕುರಿತು ಮಾತಾಡಿರುವರು. ಪಂಡಿತ ಜವಾಹರ್‌ಲಾಲ್ ನೆಹರುಗಳು ತಾ. 10ರಲ್ಲಿ ಮಾರ್ಶಲ್ ಚ್ಯಾಂಗರನ್ನು ಕಂಡು 90ಮಿನಿಟುಗಳ ವರೆಗೆ ಮಾತಾಡಿದರು. ದೇಶದ ಹಲವು ಸಂಸ್ಥೆಗಳು ಮತ್ತು ವ್ಯಕ್ತಿಗಳು ಮಾರ್ಶಲ್ ಚ್ಯಾಂಗರನ್ನು ಸ್ವಾಗತಿಸಿರುತ್ತಾರೆ. ತಾ. 10ರಲ್ಲಿ ವೈಸರಾಯರು ಮಾರ್ಶಲ್ ಚ್ಯಾಂಗರ ಗೌರವಾರ್ಥವಾಗಿ ಸಂಭ್ರಮದ ಔತಣವಿತ್ತರು. ತಾ. 11ರಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನ ಆಜದರು ಪಂಡಿತ ನೆಹರುಗಳೊಂದಿಗೆ ಮಾರ್ಶಲ್ ಚ್ಯಾಂಗರನ್ನು ಕಂಡು 2 ಘಂಟೆಗಳ ವರೆಗೆ ಮಾತುಕತೆ ನಡಿಸಿದರು. ತಾ. 12ರಲ್ಲು ಪಂಡಿತ ನೆಹರುಗಳು ಮೂರನೇ ಸಲ ಚ್ಯಾಂಗರೊಡನೆ ಮಾತಾಡಿದರು. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಡಿಲ್ಲಿಗೆ ಹೋಗಿ, ಹಿಂದೀ ಸ್ತ್ರೀಯರ ಪರವಾಗಿ ಮೆಡಮ್ ಚ್ಯಾಂಗರನ್ನು ಸ್ವಾಗತಿಸಿದರು. ಅಖಿಲ ಭಾರತ ಮಹಿಳಾ ಪರಿಷತ್ತಿನವರು ಇದೇ ತಾ. 12ರಲ್ಲು ಸಭೆ ಸೇರಿ ಮೆಡಮ್ ಚ್ಯಾಂಗರಿಗೆ ಮಾನಪತ್ರವನ್ನೊಪ್ಪಿಸಿ ಗೌರವಿಸಿದರು. ತಾ. 13ರಲ್ಲಿ ಮಾರ್ಶಲ್ ಚ್ಯಾಂಗರು ವಾಯುವ್ಯ ಗಡಿನಾಡನ್ನು ಸಂದರ್ಶಿಸಿ ಅಲ್ಲಿಯ ರಕ್ಷಣಾ ವ್ಯವಸ್ಥೆಯನ್ನು ಪರೀಕ್ಷಿಸಿದರು. ಮೆಡಮ್ ಚ್ಯಾಂಗರು ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರೊಂದಿಗೆ ಆಗ್ರಕ್ಕೆ ಹೋಗಿ ತಾಜ ಮಹಲನ್ನು ಕಂಡರು. ಮಾರ್ಶಲ್ ಚ್ಯಾಂಗರೂ ಗಾಂಧಿಜಿಯವರೂ ಪರಸ್ಪರ ವಂದನೆಯನ್ನೊಪ್ಪಿಸಿಕೊಂಡಿರುವರು. ಆದರೆ ಚ್ಯಾಂಗರಿಗೆ ವಾರ್ಧಕ್ಕೆ ಹೋಗಲು ಅವಕಾಶವಿಲ್ಲದುದರಿಂದ ಗಾಂಧಿಜಿಯವರನ್ನು ಸ್ವತಹ ಕಾಣಲು ಅಸಾಧ್ಯವಾಗಿದೆ. ಅನಿರೀಕ್ಷಿತ ಕಾರಣಗಳಿಂದ ಗಾಂಧಿಜಿಯವರಿಗೆ ವಾರ್ಧ ಬಿಟ್ಟು ಹೋಗಲು ಸಾಧ್ಯವಾಗಿರುವುದಿಲ್ಲ. ತಾ. 14ರಲ್ಲಿ ಪಂಡಿತ ನೆಹರುಗಳು ನಾಲ್ಕನೇ ಸಲ ಚ್ಯಾಂಗರನ್ನು ಕಂಡು ಮಾತಾಡಿರುವರು. ಬ್ರಿಟಿಷ ಚಕ್ರವರ್ತಿಗಳು ಚ್ಯಾಂಗರಿಗೆ ಜನರಲ್ ನೈಟ್ ಗ್ರ್ಯಾಂಡ್ ಕ್ರೋಸೆಂಬ ಅತ್ಯುಚ್ಚ ಗೌರವದ ಲಾಂಛನವನ್ನಿತ್ತಿರುವರು.

The Canara Banking Corporation Ltd.

(Incorporated in British India with limited liability.)

ESTED 1906.

OUR RATES OF INTEREST ON DEPOSITS

Current	1%	P. A.
Savings Bank	2½%	„
Short-term	1½%	„
Fixed for 3 months	2%	„
6 „	2¼%	„
9 „	2½%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted

ನವಯುಗ

ಉಡುಪಿ, ಗುರುವಾರ, ೧೯-೨-೧೯೪೨

ಹಿಂದುದೇಶದ ರಕ್ಷಣೆಯ ಪ್ರಶ್ನೆ

ಬ್ರಿಟಿಷ್ ಸಾಮ್ರಾಜ್ಯ ಛತ್ರವಡಿಯಲ್ಲಿ ಹಿಂದುದೇಶವು ಸುರಕ್ಷಿತವಾಗಿರುವುದೆಂದು ಈ ತನಕ ಜನರಲ್ಲಿ ದೃಢವಿಶ್ವಾಸವಿದ್ದಿತು. ಬ್ರಿಟಿಷ್ ನೌಕಾಬಲವು ಇಡೀ ಲೋಕದಲ್ಲೇ ಅಜೇಯವಿರುವುದು; ಅದು ಹಿಂದುದೇಶಕ್ಕೆ ರಕ್ಷಣೆಯನ್ನೀಯುವ ಶಕ್ತಿಯುಳ್ಳುದಾಗಿರುವುದೆಂಬ ನಂಬಿಕೆ ಬೇರೂರಿದ್ದಿತು. ಯುರೋಪಿನಲ್ಲಿ ಹಿಟ್ಲರರು ಪಡೆದ ವಿಜಯ ಮತ್ತು ಅವರು ಬ್ರಿಟನಿನ ಬಲವನ್ನು ಮುರಿಯಲು ನಡಿಸುತ್ತಿದ್ದ ಪ್ರಯತ್ನದಿಂದಲೂ ಹಿಂದೀಯರೇನೂ ತಳಮಳಗೊಳ್ಳಲು ಕಾರಣವಿದ್ದಿಲ್ಲ. ಯಾಕೆಂದರೆ, ಜರ್ಮನರ ವಶ ದೊಡ್ಡ ನೌಕಾಬಲವೇನೂ ಇರುವುದಿಲ್ಲ. ಆದುದರಿಂದ ಬ್ರಿಟನನ್ನು ಗೆದ್ದು ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಪಡಿಸಲು ಅವರಿಂದ ಸಾಧ್ಯವಿಲ್ಲೆಂದು ಪೂರ್ವ ಮತ್ತು ಮಧ್ಯಪೂರ್ವದ ಸಾಮಂತ ರಾಷ್ಟ್ರಗಳು ನಿರ್ಭೀತಿಯಿಂದಿದ್ದುವು. ಒಂದು ವೇಳೆ ಹಿಟ್ಲರರು ರಷ್ಯದಲ್ಲಿ ವಿಜಯಿಯಾಗುತ್ತಿದ್ದರೆ, ಹಿಂದುದೇಶಕ್ಕೆ ನೆಲಮಾರ್ಗವಾಗಿ ಅಪಾಯವುಂಟಾಗುತ್ತಿತ್ತು. ರಷ್ಯವು ನಾಝಿ ಸೇನೆಯನ್ನು ಜಯಶೀಲವಾಗಿ ಪ್ರತಿಭಟಿಸಿ ಹಿಂದಕ್ಕಟ್ಟಿಹತ್ತಿರುವುದರಿಂದ ಆ ಭೀತಿಗೆ ಆಸ್ಪದವಿಲ್ಲದಂತಾಗಿದೆ.

ಆದರೆ ಈಗ ಹಠಾತ್ತಾಗಿ ಮತ್ತು ಅನಿರೀಕ್ಷಿತವಾಗಿ ಯುದ್ಧವು ಹಿಂದುದೇಶದ ಬಾಗಿಲಿಗೇನೇ ಬಂದು, ಅದರ ಸುರಕ್ಷಿತತೆಯ ಕುರಿತು ಎಲ್ಲರಲ್ಲಿಯೂ ತಳಮಳವುಂಟಾಗಿದೆ. ಹಿಂದುದೇಶಕ್ಕೇನೂ ಅಪಾಯವಿಲ್ಲ; ಜಪಾನರು ಅದರ ಮೇಲೆ ಧಾಳಿ ನಡಿಸುವ ಹಾಗಿಲ್ಲೆಂದು ಮದ್ರಾಸ್ ಗವರ್ನರರು ಸಾರುತ್ತಿರಬಹುದು. ಜಪಾನಿನ ನೌಕಾಬಲವನ್ನು ಬೇಗನೆ ಮುರಿದು ನಾಶಮಾಡಲಾಗುವುದೆಂದು ಇಂಡಿಯಾ ಸೆಕ್ರೆಟರಿಗಳು ಅಭಯವೀಯಬಹುದು. ಆದರೆ ಸಿಂಗಪುರದ ಪತನವಾದ ಮೇಲೆ,ಹಿಂದುದೇಶಕ್ಕೆ ಅಪಾಯವಿಲ್ಲ; ಜಪಾನಿನ ನೌಕಾಬಲವನ್ನು ಬೇಗನೆ ಮುರಿಯಲಾಗುವುದೆಂದು ಸಾರುವುದರಲ್ಲಿ ಏನು ಹುರುಳಿದೆ? ಇನ್ನು ಮುಂದೆ ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟನಿನ ಪ್ರಬಲ ನೌಕಾಪಡೆಗಳು ಒಟ್ಟುಗೂಡಿ ಜಪಾನರನ್ನೆದುರಿಸುವುದೇನೂ ಸುಲಭವಲ್ಲ. ಮಿಂಚಿನ ವೇಗದಿಂದ ಸಿಂಗಪುರವನ್ನು ಜಪಾನರು ಗೆದ್ದುಬಿಟ್ಟುದರಿಂದ, ಹಿಂದೀಯರೇ? ಏಕೆ, ಇಡೀ ಲೋಕವೇ ಒಂದೊಮ್ಮೆ ಚಕಿತವಾಗಿರುತ್ತದೆ.

ಜಪಾನರು ಮುಂದೇನು ಮಾಡುವರು? ಜಾವಸುಮಾತ್ರಗಳನ್ನು ಗೆದ್ದು, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಗಳ ಮೇಲೆ ಮೊದಲಾಗಿ ಧಾಳಿ ನಡಿಸುವರೇ? ಅಥವಾ ಆಸ್ಟ್ರೇಲಿಯವನ್ನು ಹಿಂದೆ ಬಿಟ್ಟು, ಬಂಗಾಳ ಕೊಲ್ಲಿ ಮತ್ತು ಹಿಂದೀ ಸಾಗರದಲ್ಲಿ ಮುಂದೊತ್ತಿ ಹಿಂದುದೇಶವನ್ನು ವಶಪಡಿಸಿಕೊಂಡು ಮಧ್ಯಪೂರ್ವದ ಕಡೆಗೆ ನಡೆಯಲೆತ್ನಿಸುವರೇ? ಎಂಬುದು ಇನ್ನು ಕೆಲವೇ ದಿನಗಳಲ್ಲಿ ಸ್ಪಷ್ಟವಾಗುವುದು. ಹಿಂದುದೇಶವನ್ನಾದರೂ- ಯಾವ ರೀತಿಯಲ್ಲಿ ಅವರು ವಶಪಡಿಸಿಕೊಳ್ಳಲೆತ್ನಿಸುವರೋ ತಿಳಿಯದು. ಪೂರ್ವಕರಾವಳಿಯ ಮೇಲೆ ಧಾಳಿಯಿಟ್ಟು ಮುಂದೊತ್ತುವರೋ! ಹಿಂದಿನಿಂದ, ಅಂದರೆ ಪಶ್ಚಿಮ ಕರಾವಳಿಯಿಂದ ಆವರಿಸಿ ಬ್ರಿಟನು ಮತ್ತು ಮಧ್ಯಪೂರ್ವದ ಸಂಬಂಧವನ್ನೇ ಕಡಿದು ಹಾಕಲೆತ್ನಿಸುವರೋ ಹೇಳಬರುವುದಿಲ್ಲ. ಆಕ್ಸಿಸ್ ರಾಷ್ಟ್ರಗಳಾದ ಜರ್ಮನಿ ಮತ್ತು ಇಟೆಲಿಗಳಿಗೆ ನೆರವಾಗುವುದಕ್ಕಾಗಿ ಜಪಾನರು ಆದಷ್ಟು ಬೇಗನೆ ಹಿಂದುದೇಶವನ್ನು ಹಿಡಿದು ಮಧ್ಯಪೂರ್ವದ ಕಡೆಗೆ ಮುನ್ನಡೆಯಲೆತ್ನಿಸಬಹುದೆಂದೇ ಹೇಳಬಹುದು. ಮಧ್ಯಪೂರ್ವದಲ್ಲಿಯೂ ಜರ್ಮನ್ ಸೇನೆಯ ಒತ್ತಾಟವು ಮುಂದೆ ಅಧಿಕವಾಗಬಹುದು.

ಜಪಾನರು ಹಿಂದುದೇಶವನ್ನು ಹಿಡಿಯಲೆತ್ನಿಸಿದರೆ ಅದರ ಪಾಡೇನು? ಅದರ ಉತ್ಕೃಷ್ಟ ಸೈನ್ಯವೆಲ್ಲಾ ಲಿಬಿಯ, ಮಲಯ, ಸಿಂಗಪುರ ಮತ್ತು ಬರ್ಮಗಳಲ್ಲಿ ಯುದ್ಧ ನಡಿಸಲು ಕಳುಹಿಸಲ್ಪಟ್ಟಿರುವುದು. ಇತ್ತೀಚೆಗೆ ಬ್ರಿಟಿಷ್ ಸರಕಾರವೇನೋ ಕಣ್ಣು ತೆರೆದು, ಸುಮಾರು ಒಂದು ಮಿಲ್ಯ ಸೈನಿಕರನ್ನು ಹೊಸತಾಗಿ ಸೇರಿಸಿ ತರಬೇತು ಮಾಡುತ್ತಿರುವುದೆಂದು ತಿಳಿದುಬರುತ್ತದೆ. ಮಲಯ ಮತ್ತು ಸಿಂಗಪುರದ ಸೈನಿಕರುಗಳಿಗೇನೇ ಬೇಕಷ್ಟು ಯುದ್ಧೋಪಕರಣ ಸಿದ್ಧತೆಯಿಲ್ಲದೆ ಜಪಾನರ ಪ್ರಬಲ ಧಾಳಿಯನ್ನೆದುರಿಸಲು ಅಸಾಧ್ಯವಾದರೆ, ಈಗ ತಾನೆ ತರಬೇತಿ ಹೊಂದುತ್ತಿರುವ ಹಿಂದೀ ಸೈನಿಕರಿಂದ ಎಂತಹ ಹೋರಾಟ ನಡಿಸಲು ಸಾಧ್ಯವಾದೀತು? ಹಿಂದುಸ್ಥಾನದಲ್ಲಿ ಪ್ರಬಲ ನೌಕಾಪಡೆಯಾಗಲಿ, ವಿಮಾನಪಡೆಯಾಗಲಿ ಇರುವುದಿಲ್ಲೆಂಬುದು ಸರ್ವ ವಿದಿತ ವಿಷಯ. ಅತ್ಯಂತ ವಿಶಾಲವಾದ ಸಮುದ್ರ ಕರಾವಳಿ ಮತ್ತು ಸಮಭೂಮಿಯುಳ್ಳ, ಅದೊಂದು ಭೂಖಂಡವೇ ಆಗಿರುವ ಹಿಂದುದೇಶವನ್ನು ಬ್ರಿಟನು ಹೇಗೆ ರಕ್ಷಿಸಿಕೊಳ್ಳುವುದೋ ತಿಳಿಯದು!

150 ವರ್ಷಗಳಿಂದ ಬ್ರಿಟನು ಹಿಂದುದೇಶದ ಮೇಲೆ ತನ್ನ ಅಧಿಕಾರ ಸ್ಥಾಪಿಸಿದೆ. ಕಳೆದ 50 ವರುಷಗಳಿಂದ ಅದನ್ನು ಕ್ರಮವಾಗಿ ಆಳುತ್ತಾ ಬಂದಿದೆ. ಶ್ರೀ| ರಾಜಗೋಪಾಲಾಚಾರ್ಯರೆಂದಂತೆ, ಕಳೆದ 3 ದಶಮಾನಗಳಿಂದ ಸೇನಾ ವೆಚ್ಚಕ್ಕಾಗಿ ಹಿಂದುದೇಶದಿಂದ 11 ಸಾವಿರ ಮಿಲ್ಯ ರೂಪಾಯಿಗಳನ್ನೊಯ್ದಿರುತ್ತದೆ. ಅವರ ಅದರ ರಕ್ಷಣೆಗಾಗಿ ಏನು ಮಾಡಿದ? ಇಂದೀಗ ಹಿಂದುದೇಶವನ್ನದು ಯಾವ ರೀತಿಯಲ್ಲಿ ರಕ್ಷಿಸುತ್ತದೆ? ನೆರೆಕರೆಯ ಹಾಗೂ ಒಂದೇ ಸಂಸ್ಕೃತಿ ಮತ್ತು ಧರ್ಮದ ಜಪಾನರ ಆಕ್ರಮಣವನ್ನು ವಿರೋಧಿಸಿ, ಸ್ವಾತಂತ್ರ್ಯಕ್ಕಾಗಿ ಜೀವನ್ಮರಣ ಹೋರಾಟದಲ್ಲಿ ನಿರತವಾಗಿರುವ ಚೈನಕ್ಕೆ ಮ ಬೇಕಾದ ಸಹಾಯಮಾಡಲು ಮುಂದಾಗಿದೆ. ಸ್ವತಂತ್ರ ಚೈನದ ಅಧಿಪತಿಯೂ, ಜಪಾನಿನ ಸೇನಾಶಕ್ತಿಯನ್ನು ಕಳೆದ 4½ ವರ್ಷಗಳಿಂದ ಜಯಶೀಲವಾಗಿ ಪ್ರತಿಭಟಿಸಿ ತಮ್ಮ ಸ್ವಾತಂತ್ರ್ಯ ಧ್ವಜವನ್ನೆತ್ತಿ ಹಿಡಿದಿರುವ ಚೀನೀಯರ ಧೀರ ಅಧಿನಾಯಕರೂ ಆದ ಮಾರ್ಶಲ್ ಚ್ಯಾಂಗರು ಇಂದೀಗ ಹಿಂದುದೇಶವನ್ನು ಸಂದರ್ಶಿಸಿರುವಾಗ, ಅವರಿಗೆ ಉತ್ಸಾಹಪರ ಸ್ವಾಗತವಿತ್ತು ಗೌರವಿಸಲು ವೈಸರಾಯರೂ, ಚಕ್ರವರ್ತಿಗಳೂ ಮುಂದಾಗಿದ್ದಾರೆ. ಆದರೆ ಧರ್ಮದಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ ಯಾವ ಸಂಬಂಧವೂ ಇಲ್ಲದ ಬೇರೆಯೇ ವರ್ಣೀಯರಾಗಿರುವ ಬ್ರಿಟಿಷರು 6000 ಮೈಲುಗಳ ದೂರದಿಂದ ಬಂದು ಹಿಂದುದೇಶದ ಸ್ವಾತಂತ್ರ್ಯವನ್ನಪಹರಿಸಿ, ಹಿಂದೀಯರು ಎಷ್ಟೊಂದು ಚಳವಳಿಸಿದರೂ ಅದನ್ನವರಿಗೆ ಕೊಡದಿರಲು ಯಾವ ನ್ಯಾಯವಿದೆಯೆಂಬುದರ ಗೊಡವೆಯೇ ಅವರಿಗಿರುವಂತಿಲ್ಲ. ಹಿಂದು ದೇಶದ ಸ್ವಾತಂತ್ರ್ಯಕ್ಕೇನೇ ದೊಡ್ಡ ಗಂಡಾಂತರವುಂಟಾಗಿರುವ ಈ ಸಂದರ್ಭದಲ್ಲೂ ಬ್ರಿಟಿಷ್ ಸರಕಾರವು ಹಿಂದೀಯರಿಗೆ ಸ್ವಾತಂತ್ರ್ಯವಿತ್ತು ಅವರ ಉತ್ಸಾಹಪರ ಸಹಕಾರ ಪಡೆದು ಜಪಾನಿನೊಡನೆ ಹೋರಾಡಲು ಸಿದ್ಧವಿಲ್ಲ. ಚೈನ ಮತ್ತು ಹಿಂದುದೇಶಗಳೊಳಗೆ ನಿಕಟ ಬಾಂಧವ್ಯವನ್ನು ಬೆಳಸಿ ಅದರಿಂದ ಅದಷ್ಟು ಹೆಚ್ಚಿನ ಸಹಾಯವನ್ನು ಪಡೆಯುವುದೇ ಮಾರ್ಶಲ್ ಚ್ಯಾಂಗರ ಸಂದರ್ಶನದ ಮುಖ್ಯೋದ್ದೇಶವಿರುವುದೆಂದು ತಿಳಿದುಬರುತ್ತದೆ. ಆದರೆ ಪಂಡಿತ ನೆಹರುಗಳ ಹಿಂದೀಯರ ಘೋರ ಸಮಸ್ಯೆಯನ್ನು ಸುಸ್ಪಷ್ಟಗೊಳಿಸಿದುತ್ತಾರೆ. ತಮ್ಮ ಕೈಗಳೇ ಕಟ್ಟಲ್ಪಟ್ಟಿರುವಾಗ ಇತರರಿಗೆ ತಾವೇನು ಸಹಾಯಮಾಡುವುದು? ತಮ್ಮ ದೇಶದ ಸ್ವಾತಂತ್ರ್ಯ ಸಾಧನೆಯೇ ಹಿಂದೀಯರ ಮುಂದಿರುವ ಪ್ರಥಮ ಪ್ರಶ್ನೆ. ಅದನ್ನು ಪಡೆಯದೆ ಇತರ ವಿಷಯಗಳಿಗವರು ಗಮನಕೊಡಲಾರರೆಂದು ಪರೋಕ್ಷವಾಗಿ ಅವರು ಹೇಳಿರುತ್ತಾರೆ. ಮಾರ್ಶಲ್ ಚ್ಯಾಂಗರು, ಹಿಂದೀಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸುತ್ತಿರುವಂತಿದೆ ಇಲ್ಲವಾದರೆ ಅಷ್ಟೊಂದು ಬಾರಿ ಅವರು ಪಂಡಿತ ನೆಹರುಗಳೊಡನೆ ಮಾತುಕತೆ ನಡಿಸುತ್ತಿದ್ದಿಲ್ಲ. ಕಲ್ಕತ್ತಕ್ಕೆ ಹೋಗಿ ಜಿನ್ನರೊಡನೆ ಮಾತಾಡುತ್ತಿದ್ದಿಲ್ಲ. ಆದರೆ ಅದರಿಂದ ಯಾವ ಪ್ರಯೋಜನವಾಗುವುದೋ?

ಹಿಂದುದೇಶದ ಪ್ರಕೃತದ ಅಸಹಾಯಕ ಪರಿಸ್ಥಿತಿಯು ಯಾರನ್ನಾದರೂ ವಿಸ್ಮಯಗೊಳಿಸದಿರಲಾರದು. ಮಾರ್ಶಲ್ ಚ್ಯಾಂಗರನ್ನು ವಾಯುವ್ಯ ಗಡಿನಾಡಿಗೆ ಕರದೊಯ್ದು ಅಲ್ಲಿಯ ರಕ್ಷಣಾವ್ಯವಸ್ಥೆಯನ್ನು ತೋರಿಸಿ ಫಲವೇನು? ಜಪಾನರು ಅಲ್ಲಿಂದ ಹಿಂದುದೇಶದ ಮೇಲೆ ಧಾಳಿ ನಡಿಸುವುದಿಲ್ಲವಷ್ಟೆ. 500 ಮಿಲ್ಯ ನಿಶ್ಶಸ್ತ್ರ ಅಸಹಾಯಕ ಚೀನೀಯರ ಸ್ವಾತಂತ್ರ್ಯ ಯುದ್ಧದಿಂದ ಬ್ರಿಟನೇನಾದರೂ ಪಾಠವನ್ನ ಕಲಿತಿರುವುದಾದರೆ, ಮಲಯದ ಯುದ್ಧವು ಅದರ ಕಣ್ಣು ತೆರೆಯಿಸಿರುವುದಾದರೆ, ಇನ್ನಾದರೂ ಶೀಘ್ರವಾಗಿ ಹಿಂದು ದೇಶಕ್ಕದು ಸ್ವಾತಂತ್ರ್ಯವಿತ್ತು, ಜಪಾನರನ್ನೆದುರಿಸಲು, ಮಾರ್ಶಲ್ ಚ್ಯಾಂಗರು ಚೀನೀ ಜನಸಾಮಾನ್ಯರ ಬೆಂಬಲ ಪಡೆದಂತೆಯೇ ಹಿಂದೀ ಜನತೆಯ ಉತ್ಸಾಹಪರ ಸಹಾಯವನ್ನು ಪಡಕೊಳ್ಳಬೇಕು. ಇಂದಿನದು ಸರ್ವತೋಮುಖವಾದ ಜನತಾ ಯುದ್ಧವಲ್ಲದೆ ಕೇವಲ ಸೈನಿಕ ಯುದ್ಧವಲ್ಲ. ಜನತೆಯ ಅಚಲಿತ ಧೈರ್ಯ ಸ್ಥೈರ್ಯವು ಎಂತಹ ಪ್ರಬಲ ಯುದ್ಧಶಕ್ತಿಯನ್ನಾದರೂ ಜಯಶೀಲವಾಗಿ ಪ್ರತಿಭಟಿಸಬಲ್ಲುದೆಂಬುದಕ್ಕೆ ರಾಷ್ಟ್ರೀಯ ಚೈನವೇ ಸಾಕ್ಷಿ. ಅಂತೆಯೇ ಈ ಸಂಧಿಕಾಲದಲ್ಲಾದರೂ ರಾಷ್ಟ್ರೀಯ ಹಿಂದುಸ್ಥಾನದ ಬೆಂಬಲವನ್ನು ಬ್ರಿಟಿಷ್ ಸರಕಾರವು ಪಡೆದರೆ ಮಾತ್ರ, ಜಪಾನರಿಗೆ ಚೈನದಂತೆಯೇ ಹಿಂದುದೇಶವನ್ನು ಗೆಲ್ಲಲು ಸಾಧ್ಯವಾಗಲಾರದು.

ಕೆನರಾ ಬೇಂಕಿನಲ್ಲಿ ಸಾಲದ ಬಡ್ಡಿ ದರ ಇಳಿತ

ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಂತೆ ಕೆನರಾ ಬೇಂಕಿನವರು ಸಾಲದ ಬಡ್ಡಿ ದರವನ್ನಿಳಿಸಿದುದರಿಂದ, ವ್ಯಾಪಾರ ವಹಿವಾಟುಗಳಿಗೆ ಹೆಚ್ಚಿನ ಸಹಾಯ ಮತ್ತು ಪ್ರೋತ್ಸಾಹ ದೊರೆಯುವಂತಾಗುವುದೆಂದು ನಾವು ನಂಬುತ್ತೇವೆ. ಅವರು ಕಡಿಮೆ ಮಾಡಿರುವ ಬಡ್ಡಿ ದರಗಳ ಪ್ರಮಾಣವು ನಿಜವಾಗಿಯೂ ಮೆಚ್ಚತಕ್ಕದಾಗಿದೆ.

ಈ ಬಡ್ಡಿ ದರಗಳನ್ನು ಕ್ರಮೇಣ ಇಳಿಸಲು ಕೆನರಾ ಬೇಂಕು ಹಲವು ವರ್ಷಗಳಿಂದ ಪ್ರಯತ್ನಿಸುತ್ತಿದ್ದಿತೆಂದು ನಾವು ತಿಳಿಯುತ್ತೇವೆ. ಆದರೆ ಇತ್ತೀಚೆಗಿನ ವರೆಗೂ, ಅಂದರೆ 1929ರಲ್ಲಿಯೂ ದಕ್ಷಿಣ ಕನ್ನಡದಲ್ಲಿ ಠೇವಣಾತಿ ದರವು ಸೇಕಡ 7ರಷ್ಟು ಅಧಿಕವಾಗಿತ್ತು. ಅಂದ ಮೇಲೆ ಸಾಲಗಳ ಮೇಲಿನ ಬಡ್ಡಿಯು ಸ್ವಾಭಾವಿಕವಾಗಿ ಸೇಕಡ 3ರಿಂದ 4ರಷ್ಟು ಹೆಚ್ಚಾಗಿರಬೇಕು. ಯಾಕೆಂದರೆ ಬೇಂಕು,ಠೇವಣಾತಿದಾರರಿಗೆ ಬಡ್ಡಿ ಕೊಡುವುದು ಮಾತ್ರವಲ್ಲದೆ, ಕಡಿಮೆಯೇನೂ ಅಲ್ಲದ ಆಡಳಿತ ವೆಚ್ಚವನ್ನು ವಹಿಸಿಕೊಳ್ಳತಕ್ಕದ್ದು. ಮತ್ತು ಪಾಲುಗಳ ಮೇಲೆ ಲಾಭಾಂಶವನ್ನೀಯಲು ಸಾಕಷ್ಟು ಮುನಾಫೆಯನ್ನೂ ಸಂಪಾದಿಸಬೇಕು.

ಆದರೂ ಕೆನರಾ ಬೇಂಕು, ಆದಷ್ಟು ಬೇಗನೆ, ಅಂದರೆ 1933ರಲ್ಲೇ ಸುಭದ್ರ ಠೇವಣಾತಿಗಳ ಮೇಲಿನ ಬಡ್ಡಿ ದರಗಳನ್ನಿಳಿಸಿತು. ಆದರೆ, ದೇಶದ ಸರ್ವಸಾಮಾನ್ಯ ಸಾಂಪತ್ತಿಕ ಸ್ಥಿತಿಯ ದೃಷ್ಟಿಯಿಂದ ಎಲ್ಲಾ ಸಾಲಗಳ ಮೇಲಿನ ಬಡ್ಡಿ ದರವನ್ನಿಳಿಸಲು ಸಾಧ್ಯವಾಗಲಿಲ್ಲ.

ಠೇವಣಾತಿ ದರಗಳನ್ನಂತೂ ಸ್ಥಿರವಾಗಿ ಇಳಿಸಿಕೊಂಡು ಬರಲಾಗಿದೆ. ಇದರ ಪರಿಣಾಮವಾಗಿ ಅಗ್ಗ ಬಡ್ಡಿಯ ಹಣದ ಪ್ರಯೋಜನವನ್ನು ವ್ಯಾಪಾರ ವಹಿವಾಟುದಾರರು ಪಡೆಯುವಂತೆ ಕೆನರಾ ಬೇಂಕು ನಿರಂತರವಾದ ಪ್ರಯತ್ನ ಮಾಡುತ್ತಾ ಬಂದಿರುವುದು. ಆದರೆ,1938ರಲ್ಲಿ ದಕ್ಷಿಣ ಹಿಂದುಸ್ಥಾನದಲ್ಲೆದ್ದ ಬೇಂಕು ಗಲಾಟೆ ಮತ್ತು ಯುರೋಪಿನ ಯುದ್ಧವು ಪುನಹ ತೊಡಕಾಗಿ ಬಂದುವು.

ಮಾರ್ಶಲ್ ಚ್ಯಾಂಗ್ ಮತ್ತು ಜಿನ್ನಾರ ಮಾತುಕತೆ.

ಸಿಂಗಪುರವು ಶರಣಾಗತವಾಯಿತು.

ಸೋವಿಯೆಟ್ ಸೇನೆಯ ವಿಜಯ

ಮಾರ್ಶಲ್ ಚ್ಯಾಂಗರು.

ಇದೇ ತಾ. 17ರಲ್ಲು ತನ್ನ ಪರಿವಾರ ಹೊಂದಿಗೆ ಸ್ಪೆಶಲ್ ಟ್ರೈನಿನಲ್ಲಿ ಡಿಲ್ಲಿಯಿಂದ ಕಲ್ಕತ್ತಕ್ಕೆ ಹೋಗಿರುವರು. ಪಂಡಿತ ನೆಹರುಗಳು ಈ ಮೊದಲೇ ಅಲ್ಲಿಗೆ ಹೋಗಿದ್ದರು. ಮಾರ್ಶಲ್ ಚ್ಯಾಂಗರು ಜಿನ್ನರೊಡನೆ ೩ ಘಂಟೆಗಳ ವರೆಗೆ ಮಾತುಕತೆ ನಡೆಸಿರುವರು. ಜಿನ್ನರು ಇನ್ನೊಮ್ಮೆ ಅವರೊಡನೆ ಮಾತಾಡಬಹುದೆಂದು ತಿಳಿದು ಬರುತ್ತದೆ. ಚ್ಯಾಂಗರು ಜಿನ್ನರನ್ನು ಚೈನಕ್ಕೆ ಆಮಂತ್ರಿಸಿರುವರು. ಈ ಆಮಂತ್ರಣವನ್ನು ಜಿನ್ನರು ಸ್ವೀಕರಿಸಬಹುದೆಂದು ನಂಬಲಾಗಿದೆ. ಮಹಾತ್ಮ ಗಾಂಧಿಯವರು ವಾರ್ಧದಿಂದ ಕಲ್ಕತ್ತಕ್ಕೆ ಹೋಗಿರುವರು. ಮಾರ್ಶಲ್ ಚ್ಯಾಂಗರನ್ನು ಕಂಡು ಮಾತಾಡುವುದಕ್ಕಾಗಿ ಅವರು ಕಲ್ಕತ್ತಕ್ಕೆ ತೆರಳಿದುದಾಗಿದೆ. ಮಾರ್ಶಲ್ ಚ್ಯಾಂಗರ ಈ ಭೇಟಿ ಮತ್ತು ಮಾತುಕತೆಗಳ ಉದ್ದೇಶವೇನಿರುವುದೆಂಬುದು ಈ ವರೆಗೆ ಸ್ಪಷ್ಟವಾಗಿ ತಿಳಿದಿಲ್ಲ. ಹಿಂದೀ ಬಿಕ್ಕಟ್ಟನ್ನು ನಿವಾರಿಸುವ ಪ್ರಯತ್ನವನ್ನವರು ಮಾಡುತ್ತಿರುವರೆಂದು ತಿಳಿದುಬರುತ್ತದೆ. ಮಾರ್ಶಲ್ ಚ್ಯಾಂಗರು ಕಲ್ಕತ್ತದಿಂದಲೇ ಚೈನಕ್ಕೆ ತೆರಳುವರು.

ಸೋವಿಯೆಟ್ ಸೇನೆಯ ವಿಜಯ.

ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಪ್ರಬಲ ಸೋವಿಯೆಟ್ ಮತ್ತು ಜರ್ಮನ ಸೇನೆಗಳೊಳಗೆ ಹೋರಾಟ ನಡೆದು, ಸೋವಿಯೆಟ್ ಸೈನಿಕರು ಜರ್ಮನರ ಸೇನಾವ್ಯೂಹವನ್ನು ಭೇದಿಸಿರುವರೆಂದು ಜರ್ಮನರೇ ಒಪ್ಪುತ್ತಾರೆ. ಕೆಂಪು ಸೇನೆಯನ್ನು ಎಲ್ಲಾ ಕಡೆಗಳಲ್ಲಿಯೂ ತಡೆಗಟ್ಟುವುದು ಸಾಧ್ಯವಿಲ್ಲೆಂದು ನಾಝಿ ಸೇನಾನಾಯಕರು ಸ್ವೀಕರಿಸಿಗಿತ್ತ ಹೇಳಿಕೆಯೊಂದರಿಂದ ವ್ಯಕ್ತವಾಗುವುದು. ಲೆನಿನ್‌ಗ್ರಾಡ್ ಪ್ರದೇಶದ ಜರ್ಮನರ ಮುತ್ತಿಗೆಯ ಒತ್ತಡವನ್ನು ಅವೆಷ್ಟು ಕಡಿಮೆ ಮಾಡುವ ಪ್ರಯತ್ನವನ್ನು ರಷ್ಯನರು ಮಾಡುತ್ತಿದ್ದಾರೆ. ಮಧ್ಯಭಾಗದ ರಣರಂಗದಲ್ಲಿಯೂ ಸೋವಿಯೆಟ್ ಸೈನಿಕರು ಸ್ಮೊಲೆಂಸ್ಕ್ ಪ್ರದೇಶಕ್ಕೆ ಪ್ರವೇಶಿಸಿರುತ್ತಾರೆ. ದಕ್ಷಿಣದಲ್ಲಿ ಮಾರ್ಶಲ್ ಟಿಮೋಶೆಂಕೋರವರು ಕಾರ್ಯವನ್ನು [illegible] ಮಾಡುತ್ತಿದ್ದಾರೆ.

ಸಿಂಗಪುರದ ಪತನ.

ಇದೇ ತಾ. 15ರಲ್ಲು ಸಿಂಗಪುರದಲ್ಲಿದ್ದ ಬ್ರಿಟಿಷ್ ಸೈನಿಕರು ಜಾಪಾನರಿಗೆ ಶರಣಾಗತರಾಗಿರುವರೆಂದು ತಿಳಿದುಬರುತ್ತದೆ. ಜಾಪಾನರು ಸಿಂಗಪುರದ ಸೇನೆಯನ್ನು ಸುತ್ತಲಿಂದಲೂ ಆವರಿಸಿ, ಹೋರಾಡುವುದು ಅಪ್ರಯೋಜಕವಾದಾಗ ಅದು ಶರಣಾಗತವಾಗಲೇ ಬೇಕಾಯಿತು. ಸಿಂಗಪುರದಲ್ಲಿ 15,000 ಬ್ರಿಟಿಷ್, 13,000 ಆಸ್ಟ್ರೇಲಿಯನ್ ಮತ್ತು 32,000 ಹಿಂದೀ ಸೈನಿಕರಿದ್ದರೆಂದು ಜಾಪಾನಿನ ಸುದ್ದಿ. ಜಾಪಾನರು ಸುಮಾತ್ರದ ಪ್ರಾಮುಖ್ಯ ಎಣ್ಣೆ ಕೇಂದ್ರವಾದ ಪಲೆಂಬಂಗನ್ನು ಹಿಡಿದು ಮುಂದೊತ್ತುತ್ತಿದ್ದಾರೆ. ಬರ್ಮದಲ್ಲಿ ಜಾಪಾನರು ಸಾಲ್ವೀನ್ ನದಿ ದಾಟಿ ಮುಂದೊತ್ತುತ್ತಿರುತ್ತಾರೆ.

ಹಿಂದುಸ್ಥಾನದ ಕುರಿತು ಬ್ರಿಟಿಷ್ ಸರಕಾರದ ಧೋರಣೆ.

ನಮ್ಮ ಕಮಿಟಿಯ ಸೂಚನೆಗಳ ಕುರಿತು ಬ್ರಿಟನ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರು ಬೇಗನೆ ಒಂದು ಹೇಳಿಕೆ ಕೊಡಲಿರುವರೆಂದು ತಿಳಿದುಬರುತ್ತದೆ. ವಾರ್ ಕೌನ್ಸಿಲ್ ಮತ್ತು ಇಂಪೀರಿಯಲ್ ಕೆಬಿನೆಟ್ ಗಳಲ್ಲಿ ಹಿಂದುಸ್ಥಾನಕ್ಕೆ ಸ್ಥಾನವಿತ್ತ ಕುರಿತು ಹಾಗೂ ಪ್ರಮುಖ ಕೆಲವು ರಿಯಾಯಿತಿಗಳ ಘೋಷಿಸಲಿರುವರೆಂದು ಸುದ್ದಿಯುಂಟಾಗಿದೆ.

ಚರ್ಚಿಲ್ಲರ ಭಾಷಣ.

ಸಿಂಗಪುರದ ಪತನವು ಬ್ರಿಟನಿಗೆ ಅತಿ ದೊಡ್ಡ ಮತ್ತು ಬಹಳ ಪರಿಣಾಮಕಾರಿ ಆಘಾತ.. ಇನ್ನೂ ಕೆಟ್ಟ ಅಪಾಯಗಳು ಭವಿಷ್ಯದಲ್ಲಿ ನಮ್ಮನ್ನೆದುರಿಸುತ್ತವೆ. ಈ ಮೊದಲೇ ನಾವು ಎದುರಿಸಿಕೊಂಡಿದ್ದ ಅಪಾಯಗಳೇನೂ ಕಡಿಮೆಯಾಗಿಲ್ಲ. ಇಂತಹ ಗಂಡಾಂತರಗಳನ್ನು ಬ್ರಿಟನರು ಸೈರಣೆ, ಶಿಸ್ತುಬದ್ಧತೆ ಮತ್ತು ದೃಢನಿರ್ಧಾರದಿಂದ ಎದುರಿಸಬಲ್ಲರೆಂಬುದನ್ನು ಪುನಹ ಲೋಕ ವಿದಿತಗೊಳಿಸಬೇಕು. ಇಡೀ ಲೋಕದ ಮುಕ್ಕಾಲು ಪಾಲು ಜನಸಂಖ್ಯೆಯು ಈಗ ಬ್ರಿಟನ ಪಕ್ಷವಹಿಸಿದೆ. ಇಷ್ಟರ ವರೆಗೆ ಇಂಗ್ಲೆಂಡು ಧೃತಿಗೆಟ್ಟು ತಲೆತಗ್ಗಿಸಲಿಲ್ಲ. ಈಗಲೂ ಅದೇ ರೀತಿ ತಲೆಯೆತ್ತಿ ಬಿರುಗಾಳಿಯ ಮೇಲಿನ ಬಿರುಗಾಳಿಯನ್ನಾದರೂ ಎದುರಿಸಿ ಮುನ್ನಡೆಯಬೇಕೆಂಬುದೇ ಚರ್ಚಿಲ್ಲರ ಭಾಷಣದ ಸಾರಾಂಶ.

ಇಂದೀಗ ಕೆನರಾ ಬೇಂಕು ಎಲ್ಲಾ ರೀತಿಯ ಸಾಲಗಳ ಮೇಲಿನ ಬಡ್ಡಿ ದರಗಳನ್ನು ಇಳಿಸಿರುವುದು ಅತ್ಯಂತ ಸ್ತುತ್ಯವಿದೆ. ವ್ಯಾಪಾರ ವಹಿವಾಟುಗಳಲ್ಲಿ ಸಿಗುವ ಸಾಮಾನ್ಯ ಲಾಭದ ಪ್ರಮಾಣವು ಬಹಳ ಕಡಿಮೆಯಾಗಿರುವ ಈ ವಿಪತ್ಕಾಲದಲ್ಲಿ ಕೆನರಾ ಬೇಂಕಿನ ಈ ಧೋರಣೆಯು ಬಹಳ ಪ್ರಯೋಜನಕಾರಿಯಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ.

(೧ನೇ ಪುಟದಿಂದ)

ದಾಸ್ಯವು ಮರಣಕ್ಕಿಂತ ಕೆಟ್ಟದು.

ಕಳೆದ ಗುರುವಾರ ಅಖಿಲ ಭಾರತ ಮಹಿಳಾ ಸಂಘದವರು ಡಿಲ್ಲಿಯಲ್ಲಿ ಸಭೆ ಸೇರಿ ಮೆಡಮ್ ಚ್ಯಾಂಗರಿಗೆ ಮಾನಪತ್ರವಿತ್ತಾಗ ಅವರು ಮಾಡಿದ ಭಾಷಣವು, ಅತ್ಯಂತ ಸ್ಫೂರ್ತಿದಾಯಕವೂ, ಭೋಧಪರವೂ, ಚಿತ್ತವೇಧಕವೂ ಆಗಿದ್ದಿತು. ಜಾಪಾನರನ್ನೆದುರಿಸಲು ಚೀನೀ ಜನಸಾಮಾನ್ಯರು ಎಂತಹ ತ್ಯಾಗ ಮಾಡುವುದಕ್ಕೂ, ಯಾವ ಸಂಕಷ್ಟವನ್ನು ಸಹಿಸಿಕೊಳ್ಳುವುದಕ್ಕೂ ಮುಂದಾಗಿರುವರು. ಯಾಕಂದರೆ ಸಂಕಷ್ಟ ಮತ್ತು ಮರಣವು ಎಷ್ಟು ಭಯಂಕರವಾದರೂ, ದೇಹ ಮತ್ತು ಆತ್ಮದ ದಾಸ್ಯವು ಅದಕ್ಕಿಂತಲೂ ಕೆಟ್ಟದೆಂಬುದನ್ನವರು ಮನಗಂಡಿರುವರು. ಯಾವ ಯೋಗ್ಯ ಉದ್ಯಮದಲ್ಲಾದರೂ ಜಯ ಹೊಂದಬೇಕಾದರೆ ಅದಕ್ಕಾಗಿ ತಮ್ಮ ಸರ್ವಸ್ವವನ್ನೂ ಅರ್ಪಣೆಮಾಡುವ ಜನರಿರಬೇಕು. ಅಂತಹ ಜನರು ಚೈನದಲ್ಲಿದ್ದಾರೆ. ತಾನಲ್ಲ, ತನ್ನ ಪತಿಯಲ್ಲ, ಚೈನದ ಜನಸಾಮಾನ್ಯರೇ ಆ ವೀರ ಜನರು. "ಒಬ್ಬನಿಗಾಗಿ ಸರ್ವರು; ಸರ್ವರಿಗಾಗಿ ಒಬ್ಬ" ಎಂಬುದೇ ಆಧುನಿಕ ಚೈನದ ಜೀವನ ತತ್ವ. ಇಂದಿನ ಭೀಷಣ ಸಂಕಷ್ಟದಲ್ಲಿ ಚೀನೀಯರೆಲ್ಲಾ ಒಂದಾಗಿರುವರು. ಅವರ ಪ್ರಯತ್ನವು ಜಯಯುತವಾಗುವುದು ನಿಶ್ಚಯವೆಂಬ ಮೆಡಮ್ ಚ್ಯಾಂಗರ ವಾಣಿಯು ಅವೆಷ್ಟು ಸ್ಫೂರ್ತಿದಾಯಕ ಮತ್ತು ಭೋಧಪರವಾದುದು!

ಜಾಪಾನರ ಪೈಶಾಚಿಕ ಕೃತ್ಯ.

ಜಾಪಾನರು ಮಾಡದೇ ಇರುವ ಅಕೃತ್ಯವೇನೂ ಇಲ್ಲ. ವಿಶ್ವಾಸ ಘಾತಕಿಗಳವರು. ಅವರನ್ನು ನಂಬಬೇಡಿ. ಹಿಂದುದೇಶದ ಬಾಗಿಲಿಗೀಗ ಅವರು ಬಂದಿದ್ದಾರೆ. ಹಿಂದೀಯರಿಗೆ ಸ್ವಾತಂತ್ರ್ಯ ಕೊಡುವೆವೆಂದು ಆಶೆ ತೋರಿಸಬಹುದು. ಆದರೆ ಮೋಸ ಮಾಡುವುದು ನಿಶ್ಚಯ. ಚೈನದ ನಾನ್ಕಿಂಗನಲ್ಲಿ ಅವರು ಚೀನೀಯರನ್ನು ಸಜೀವವಾಗಿ ಹೂಳುತಿರುವರು. ಸ್ತ್ರೀಯರ ಮೇಲೆ ಪೈಶಾಚಿಕ ಅತ್ಯಾಚಾರ ನಡೆಸಿರುವರು. ಚೀನೀ ಮಕ್ಕಳನ್ನು ಹಿಡಿದು ರಕ್ತವನ್ನು ತೆಗೆದು, ತಮ್ಮ ಗಾಯಗೊಂಡ ಸೈನಿಕರ ಚಿಕಿತ್ಸೆಗಾಗಿ ಒಯ್ಯುತಿರುವರು. ತರುಣ ಚೀನೀ ಹುಡುಗರನ್ನು ಜಾಪಾನಿಗೊಯ್ದು ಗುಪ್ತಚರರನ್ನಾಗಿ ತರಬೇತಿ ಮಾಡಿ ಚೈನದಲ್ಲಿ ತಮ್ಮ ಹಸ್ತಕರನ್ನಾಗಿ ಉಪಯೋಗಿಸಿರುವರು. ಇಂತಹ ಜನರನ್ನು ಎಂದಿಗೂ ನಂಬಬೇಡಿರೆಂದು ಮೆಡಮ್ ಚ್ಯಾಂಗರು ಚಿತ್ತವೇಧಕ ಘಟನೆಗಳನ್ನು ವಿವರಿಸಿ ಎಚ್ಚರಿಸಿರುವರು.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ
ತಾ 18–2–1942ರಿಂದ
ನಗೆಗಡಲ ನೌಕೆಯೊಂದಿದ್ದರೆ ಅದಕ್ಕರ್ಹನಾದ ನಾವಿಕನಾರು?
ಚಾರ್ಲಿ.
ಚಾರ್ಲಿಯು ನಟಿಸಿರುವ "ಮುಸಾಫಿರ್"
ಈತನೊಂದಿಗೆ ಈಶ್ವರಲಾಲ್, ವಾಸಂತಿ, ಕುರ್ಶಿದ್, ಇತರರು.
ತಾ. 23—2—42ರಿಂದ ಬೋಂಬೇ ಟೋಕೀಸ್‌ನವರ
'ಬಂಧನ್'
ಲೀಲಾಚಿಟ್ನೀಸ್, — ಅಶೋಕ ಕುಮಾರ್.

ಬ್ಯಾಂಕಿನ ಪಾಲುಗಳು
ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,
ಇದರ ಪಾಲುಗಳನ್ನು ಪಡಕೊಳ್ಳಿರಿ.
ಈ ಬ್ಯಾಂಕಿಂಗ್ ಸಂಸ್ಥೆಯು 1931ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.
ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಏಜೆಂಟರಾದ ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಆತ್ಮಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.
(ಸಹಿ) ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್. ಚೇರ್‌ಮೆನ್

Notice.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ
S. C. 18/1942.

ಸೂರ್ಯನಾರಾಯಣ ಭಟ್ಟ — ವಾದಿ.
ವೆಂಕಟಕೃಷ್ಣ ಜೋಶಿ — ಪ್ರತಿವಾದಿ.

ಸದ್ರಿ ದಾವೆಯ ಪ್ರತಿವಾದಿ ವೆಂಕಟಕೃಷ್ಣ ಜೋಶಿ, ರಘುನಾಥ ಜೋಶಿಯ ಮಗ, ಕುಂದಾಪುರ ತಾಲೂಕು ಬೀಜಾಡಿ ಗ್ರಾಮದಲ್ಲಿರುವವ. ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ,

ಪ್ರತಿವಾದಿಯು ವಾದಿಯ ತಂದೆ ಕೃಷ್ಣ ಭಟ್ಟರಿಂದ ರೂ. 200-0-0ನ್ನು ಕಡದು ಸದ್ರಿ ಕೃಷ್ಣ ಭಟ್ಟರಿಗೆ ತಾ. 11-1-36ರಲ್ಲು ಓ. ನೋಟು ಬರಕೊಟ್ಟಿರುತ್ತಾನೆ. ಸದ್ರಿ ಓ. ನೋಟಿನ ಬಾಬ್ತು ಅಸಲು ಬಡ್ಡಿ ಕೂಡಾ ರೂಪಾಯಿ 269-8-0ನ್ನು ಬರಮಾಡಿಕೊಳ್ಳುವರೆ ವಾದಿಯು ಹಾಕಿದ ಮೇಲಿನ ದಾವೆಯು ತಾ. 5-3-42ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ನೀವು ಅಂದು ಅಥವಾ ಅದಕ್ಕೆ ಬಳಿಕ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ವಾದಿಸತಕ್ಕದ್ದು; ತಪ್ಪಿದಲ್ಲಿ ಏಕಪಕ್ಷ ತೀರ್ಮಾನವಾಗುವುದೆಂದು ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah.
Advocate for Pleff.
Date 12-2-42. ವಕೀಲ್, ಕುಂದಾಪುರ.

Degrees: Books. Medicines
Free H. L. M. S. M. B. H. M. D. etc Free Homco-Ayur-Unani-Nature degree By post also—Practitioners also get soon Homeo Materiamedica, Rs 5. Homeo practice book Rs. 4. Insanity Cure Pills Rs. 10 Enclose 2 annas stamp:—
Principal, Indian Homeopath Institute & Society (Govt. Regd.)
P.O. Mahuva (Kathiawar Dt. India.)

Sidha-Kalpa Kavach (Regd.)
No 3 Rs. 2, No 2 Rs 5 No. 1. Rs 7 Special Rs. 10, Extra Special Rs. 17, for one marriage health. wealth. Ask any six questions with M. O. Re. 1/4 and get correct answers by return post Life reading Rs. 2 No V. P. P. Send M. O. Free pamphlets. Prof. Dr. N. H. Chhatbar,
P. O Mahuva (Kathiawar India.)

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ಕೊಸ್ಮೊಪೊಲಿಟನ್ ಕ್ಲಬ್ ನೇತೃತ್ವದಲ್ಲಿ— ಲೇಡೀಸ್ ಸಿಂಗಲ್ಸ್ ವಗೈರೆ ಟೆನಿಸ್ ಪಂದ್ಯಾಟಗಳು ಮಾರ್ಚ ತಾ. 1ರಲ್ಲಿ ಜರಗುವವು. ದಕ್ಷಿಣ ಹಿಂದುಸ್ಥಾನದ ಎಮೆಚೂರ್ ಆಟಗಾರರಿಗೆ ಮಾತ್ರ ಪ್ರವೇಶವಿದೆ. ಸಿಂಗಲ್ಸ್ ಮತ್ತು ಡಬ್ಬಲ್ಸ್ ಗಳಿಗೆ ರೂ. 3 ಮತ್ತು 5 ರಂತೆ ಪ್ರವೇಶಧನವನ್ನು ಕಮಿಟಿ ಸೆಕ್ರೆಟರಿಗಳಿಗೆ ತಾ. 23-2-42ರೊಳಗಾಗಿ ಕಳುಹಿಸಿಕೊಡತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕಾರ್ಯದರ್ಶಿಯರಿಂದ ಪಡೆಯಬಹುದು.

ಋಷಿಬೋಧೋತ್ಸವ— ಸ್ಥಳೀಯ ಆರ್ಯಸಮಾಜದಲ್ಲಿ ಶಿವರಾತ್ರಿ ಉತ್ಸವದ ದಿನ ಋಷಿ ಬೋಧೋತ್ಸವವು ಜಿಲ್ಲಾ ಜಡ್ಜರಾದ ಶ್ರೀ ಎಲ್. ಎಸ್. ಪಾರ್ಥಸಾರಥಿ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರದ್ಧಾನಂದ ಅನಾಥಾಶ್ರಮದ ವರ್ಧಂತಿಯೂ ಅಂದೇ ನಡೆಯಿತು. ಈ ಸಮಾರಂಭದಲ್ಲಿ ಶ್ರೀ ಗಳಾದ ಯಂ. ಮಾಧವ ರಾವ್, ಪಂಡಿತ ಸಿದ್ಧೇಶ್ವರ ಅನಂತ ಉಪಾಧ್ಯಾಯರು ಮತ್ತು ಶ್ರೀಮತಿ ರಾಂಭವಿ ಆರ್. ಪೂಂಜರು ಭಾಷಣ ಮಾಡಿದರು.

ಉದ್ಘಾಟನಾ ಸಮಾರಂಭ— ತಾ. 14ರಲ್ಲಿ ಈಶ್ವರಾನಂದ ಮಹಿಳಾ ಸೇವಾಶ್ರಮದ ಬಳಿಯಲ್ಲಿ ನೂತನವಾಗಿ ಕಟ್ಟಿಸಿದ (ಸೇವಾಶ್ರಮದ ಉಪಯೋಗಾರ್ಥವಾಗಿ) "ಡಿ. ಎನ್. ಶಿರಾಲಿ ಬ್ಲಾಕ್" ಇದರ ಉದ್ಘಾಟನಾ ಸಮಾರಂಭವು ರಾ. ಬ. ಡಾ| ಯಂ. ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಅಂದೇ ಆಶ್ರಮದ ನಿಧಿಯ ಬಗ್ಗೆ ಒಂದು ಫೇನ್ಸಿ ಸೇಲ್ ಸಹ ನಡೆಯಿತು. ತಾ. 15ರಲ್ಲಿ ಹೈಸ್ಕೂಲಿನಲ್ಲಿ ಸೇವಾಶ್ರಮದ ಉಪಯೋಗಾರ್ಥವಾಗಿ ನಿಧಿಕೂಡಿಸುವ ಬಗ್ಗೆ ವಿವಿಧ ವಿನೋದಾವಳಿಗಳು ಜರಗಿಸಲ್ಪಟ್ಟವು.

ಯೂನಿಯನ್ ದಿನಾಚರಣೆ—ಸೈ. ಎ. ಕಾಲೇಜ್ ಯೂನಿಯನ್‌ದಿನಾಚರಣೆಯು ತಾ. 14ನೇ ಸಾಯಂಕಾಲ ಜಿಲ್ಲಾ ಕಲೆಕ್ಟರರಾದ ಜನಾಬ್ ಯಂ ಕರಂತುಲ್ಲಾ ಸಾಹೇಬ್ ಬಹದ್ದೂರ್ ಐ. ಸಿ. ಎಸ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಯುವಕರು ದೇಶ ರಕ್ಷಣೆಯ ಕಾರ್ಯವನ್ನೆಸಗುವುದಕ್ಕೆ ಸಿದ್ಧರಾಗಬೇಕೆಂದೂ, ರಾಜಕೀಯ ವಿಷಯಗಳನ್ನು ವಿದ್ಯಾರ್ಥಿಗಳು ಚರ್ಚಿಸಬೇಕೆಂದೂ ಆದರೆ ಅದರಲ್ಲಿ ಭಾಗವಹಿಸಬಾರದೆಂದೂ ಹಿತೋಪದೇಶ ಮಾಡಿದರು.

ಚೈನಾ ದಿನಾಚರಣೆ— ಮಂಗಳೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಚೈನಾ ದಿನಾಚರಣೆಯು ನಿನ್ನೆ ಸಾಯಂಕಾಲ ಜರಗಿಸಲ್ಪಟ್ಟಿತು. ಸಾಯಂಕಾಲ ಮೆರವಣಿಗೆ ಸಭೆ ಜರಗಿದುವು. ಶ್ರೀ ಪಿ. ಕೆ. ರಂಕೆತನ್ ಅವರು ಅಗ್ರಾಸನ ವಹಿಸಿದ್ದರು. ಶ್ರೀಗಳಾದ ಕೆ. ಶಿವರಾವ್, ಕೆ. ಪದ್ಮನಾಭನ್, ಎಸ್. ಆರ್. ಭಟ್ ಮತ್ತು ಪಿ. ಜಿ. ಕಕ್ಕಿಲ್ಲಾಯರು ಭಾಷಣ ಮಾಡಿದರು.

S. K. S. ಹೋಮಿಸ ಹಳೆ ವಿದ್ಯಾರ್ಥಿಗಳ ಸಂಘ—ದ ಕಾರ್ಯಕಾರಿ ಸಭೆಯು ತಾ 8-2-42ರಲ್ಲಿ ಜರಗಿ ರಾವ್ ಬಹದ್ದೂರ್ ಕೆ. ಟಿ. ಆಳ್ವ, (ಅಧ್ಯಕ್ಷ) ಶ್ರೀ ಚಂದ್ರಶೇಖರ ಹೆಗ್ಡೆ, ಶ್ರೀ ಕೆ.ಕೆ. ರೈ, ಮತ್ತು ಶ್ರೀ ಎಚ್. ರಾಮಯ್ಯನಾಯ್ಕರಿಂದೊಡಗೂಡಿದ ಪ್ರೊಟೆಕ್ಟೊರಲ್ ಬೋರ್ಡನ್ನು, ಶ್ರೀಗಳಾದ ಪಿ. ಯಂ. ಹೆಗ್ಡೆ, ಎಂ. ಎಸ್. ಚೌಟ, ಮತ್ತು ಕುಂಬಳ ಶೆಟ್ಟರಿಂದೊಡಗೂಡಿದ ಇನ್‌ಫೋರ್ಮೇಶನ್ ಬ್ಯೂರೋವನ್ನೂ ರಚಿಸಲಾಯಿತೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಗೆಳೆಯರ ಕೂಟದ ವಾರ್ಷಿಕೋತ್ಸವ—ಬಾಬುಗುಡ್ಡೆ ಡಿ. ಸಿ. ಯಂ. ಶಾಲೆಯಲ್ಲಿ ಗೆಳೆಯರ ಕೂಟದ 4ನೇ ವಾರ್ಷಿಕೋತ್ಸವವು ನಿನ್ನೆಯ ದಿನ ಸಾಯಂಕಾಲ ಶ್ರೀಮಾನ್ ಎ. ಬಿ. ಶೆಟ್ಟಿ, ಯಂ. ಎಲ್. ಎ. ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಬಹುಮಾನ ವಿತರಣೆಗಳಾದ ತರುವಾಯ ಮಾನ್ಯ ಅಧ್ಯಕ್ಷರು ಹರಿಜನ ತರುಣರ ಏಳಿಗೆಗಾಗಿ ಗೆಳೆಯರ ಕೂಟದವರು ಮಾಡುತ್ತಿರುವ ಪ್ರಯತ್ನಗಳನ್ನು ಕೊಂಡಾಡಿ, ಗೆಳೆಯರ ಕೂಟಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು. ಅನಂತರ ಬಾಂಗಾ ಸ್ಕೌಟ್ ದಳದವರ ಚಟುವಟಿಕೆಗಳೂ ಶಿಬಿರಾಗ್ನಿಯೂ ನಡೆದುವು. ವಿವಿಧ ವಿನೋದಾವಳಿಗಳಾಗಿ ಸಮಾರಂಭವು ಮುಕ್ತಾಯವಾಯಿತು.

ಪಂದ್ಯಾಟ—'ಹ್ಯಾಮಿಲ್ಟನ್ ಟೂರ್ನಮೆಂಟ್'ನ ಆಶ್ರಯದಲ್ಲಿ ನಿನ್ನೆ ಫುಟ್‌ಬಾಲ್ ಪಂದ್ಯಾಟವು ಜಪ್ಪು ಚ್ಯಾಂಪ್ಯನ್ಸ್- ಪೋಲೀಸ್-ಇವರೊಳಗೆ ನಡೆದು ಮೊದಲನೆಯವರು ಎರಡನೆಯವರಿಗೆ ಒಂದು ಗೋಲ್ ಹೊಡೆದು ಜಯಶೀಲರಾದರು. ಪಾರಿತೋಷಕವು ಜನಾಬ್ ಅಬ್ದುಲ್ ರಹೀಂ ಅಹ್ಮದ್ ಬಿ. ಎ., ಬಿ. ಎಲ್. ಅವರಿಂದ ಹಂಚಲ್ಪಟ್ಟಿತು.

ಜಿಲ್ಲಾ ಬೋರ್ಡು ಸಭೆ—ದ. ಕನ್ನಡ ಜಿಲ್ಲಾಬೋರ್ಡು ಸಭೆಯು ತಾ. 12ನೇ ಫೆಬ್ರವರಿ ಮಂಗಳೂರಿನ ಜಿಲ್ಲಾಬೋರ್ಡು ಆಫೀಸಿನಲ್ಲಿ ಖಾನ್ ಡಾ| ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮಾನ್ಯ ಸಭೆಯು ಜರಗುವ ಪೂರ್ವದಲ್ಲಿ ಎರಡು ವಿಶೇಷ ಸಭೆಗಳು ಜರಗಿದುವು. ಉಡುಪಿ ಬೋರ್ಡ್‌ಹೈಸ್ಕೂಲಿನ ವಿಷಯದಲ್ಲಿ ಬೋರ್ಡು ಹಿಂದಿನ ಸಭೆಯಲ್ಲಿ ಮಾಡಿದ ನಿರ್ಧಾರದಿಂದ ಉಡುಪಿಯ ಜನರಲ್ಲಿ ಉಂಟಾದ ಭಯ, ವಿಷಾದಗಳನ್ನು ಗಮನಿಸಿ, ಬೋರ್ಡು ಈಗ ಸಂತೆಯ ಹೈಸ್ಕೂಲನ್ನು ನಡೆಸಿಕೊಂಡು ಬರಲು ಸಧ್ಯವಿದ್ದಷ್ಟು ಯತ್ನಮಾಡುವುದೆಂದೂ, ಸಾರ್ವಜನಿಕರ ಹಿತವಾಗುವಂತ ತಕ್ಕ ವ್ಯವಸ್ಥೆ ಮಾಡಲು ಪ್ರಯತ್ನಿಸುವುದೆಂದೂ ನಿರ್ಧಾರವಾಯಿತು. ಸಭೆಗಳಿಗೆ ಗೈರುಹಾಜರಾದ ತಮ್ಮ ಸ್ಥಾನಗಳನ್ನು ಕಳೆದುಕೊಂಡ ಸದಸ್ಯರ ಸ್ಥಾನಗಳನ್ನು ಊರ್ಜಿತಗೊಳಿಸಲಾಯಿತು. ಬೋರ್ಡಿನ ಸಾಮಾನ್ಯ ಸಭೆ ಸೇರಿದಾಗ ದಿವಂಗತ ಜಮ್ನಾಲಾಲ ಬಜಾಜರ ಅಕಾಲ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಚೈನದ ಮಾರ್ಶಲ್ ಚಿಯಾಂಗ್ ಕೈಶೇಕ್ ದಂಪತಿಗಳಿಗೆ ಸ್ವಾಗತ ಸೂಚಿಸಲಾಯಿತು. ಅನಂತರ ಆಶೇಕ ಸಾಮಾನ್ಯ ವಿಷಯಗಳ ಚರ್ಚೆಯಾಗಿ, ಗವರ್ನಮೆಂಟ್ ಆರ್ಡರುಗಳನ್ನು ರಿಕಾರ್ಡುಮಾಡಿ ಸಭೆಯು ಮುಕ್ತಾಯವಾಯಿತು.

ಉಡುಪಿ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತಿ-ಶ್ರೀಮಾನ್ ಎ. ಬಿ. ಶೆಟ್ಟಿ, ಎಂ| ಎಲ್| ಎ|, ಇವರ ಅಧ್ಯಕ್ಷತೆಯಲ್ಲಿ ತಾ| 13-2-42ರಲ್ಲಿ ಸಂಭ್ರಮದಲ್ಲಿ ಜರಗಿತು. ಬಾಲಕಿಯರಿಂದ ಪ್ರಾರ್ಥನೆಯಾದ ಮೇಲೆ ವಕೀಲ್ ಶ್ರೀ. ಕೆ| ಬಿ ಬಲ್ಲಾಳರು ಸೂಚಿಸಿ, ವಕೀಲ್ ಶ್ರೀ| ಬಿ| ಕೀನಪ್ಪಹೆಗ್ಡೆಯರು ಅನುಮೋದಿಸಿದಂತೆ ಶ್ರೀ| ಎ| ಬಿ| ಶೆಟ್ಟರು ಅಧ್ಯಕ್ಷತೆ ವಹಿಸಿ, ಪುಷ್ಪಮಾಲಾಲಂಕೃತರಾದರು. ವರದಿ ವಾಚನವಾದ ಮೇಲೆ, ಶ್ರೀ| ಬಿ| ರಾಮರಾಯಶೆಟ್ಟಿ, ಬಿ| ಎ| ಎಲ್| ಟಿಯವರು ಪ್ರೀತಿಯ ಸೂಚನೆ ಮಾಡಿದರು ಶ್ರೀ| ರಾಮರಾಯ ಶೆಟ್ಟರೂ ಶ್ರೀ| ಎ| ಬಿ| ಶೆಟ್ಟರ ಗುಣಸಂಪತ್ತಿಗಳನ್ನು ಪ್ರಾಸಂಗಿಕವಾಗಿ ನಿರೂಪಿಸಿ, ಭವನದ ಅಭಿವೃದ್ಧಿಯನ್ನು ಹಾರೈಸಿ, ಮನೋರಂಜಕ ಶೈಲಿಯಲ್ಲಿ ಭಾಷಣವಿತ್ತರು. ಭವನದ ಪೂರ್ವ ವಿದ್ಯಾರ್ಥಿಯು ಅದನ್ನು ಉತ್ತರಿಸಿದ ಮೇಲೆ ಅಧ್ಯಕ್ಷರಿಂದ ಬಹುಮಾನಗಳು ಹಂಚಲ್ಪಟ್ಟವು. ಅಧ್ಯಕ್ಷರ ಭಾಷಣವು ಬೋಧಪ್ರದವೂ, ಮಾರ್ಗದರ್ಶಕವೂ ಆಗಿತ್ತು. ಭವನದ ಮೇಲ್ವಿಚಾರಕರ ಹಾಗೂ ಹೆತ್ತವರ ಕರ್ತವ್ಯವನ್ನು ತಿಳಿಸಿ, ವಿದ್ಯಾರ್ಥಿಗಳ ಊಟ, ಆಟ ಮತ್ತು ಅಭ್ಯಾಸದ ಕಡೆಗೆ ಲಕ್ಷ್ಯವೀಯುವ ರೀತಿನೀತಿಗಳನ್ನು ಮಂದಟ್ಟಾಗುವಂತೆ ವಿವರಿಸಿದರು. ಸದ್ಯದ ಕಾಲ ಪ್ರಗತಿಗೆ ತಕ್ಕಂತೆ ಭವನವನ್ನು ಎಲ್ಲಾ ಜಾತಿಯವರಿಗೂ ತೆರೆದಿಡುವದುತ್ತಮವೆಂಬ ಸೂಚನೆಯಿತ್ತರು. ಆ ಮೇಲೆ ಬಾಲಕಿಯ ನರ್ತನ, ಬಾಲಕರಿಂದ 'ಗುರಿಕಾರ' ಎಂಬ ನಾಟಕ, ಹಾಗೂ 'ಜಾಂಬವತಿ ಕಲ್ಯಾಣ' ಎಂಬ ಯಕ್ಷಗಾನ ಪ್ರಸಂಗಗಳು ಅಭಿನಯಿಸಲ್ಪಟ್ಟವು. ಉತ್ತಮ ಅಭಿನಯಗಾರರಿಗೆ ಬಹುಮಾನಗಳು ಕೊಡಲ್ಪಟ್ಟ ಮೇಲೆ ಶ್ರೀ| ಕೆ| ಬಿ| ಬಲ್ಲಾಳರು ಧನ್ಯವಾದಗಳನ್ನಿತ್ತರು. ಆಡಳಿತ ಮಂಡಳಿಯ ಕಾರ್ಯದರ್ಶಿ ವಕೀಲ್ ಶ್ರೀ| ನಾರಾಯಣ ಶೆಟ್ಟರು ಈ ದಿನಾಚರಣೆಗಾಗಿ ಪರಿಶ್ರಮವಹಿಸಿದ್ದರು.

ಮಲ್ಪೆ- ಕೊಡವೂರು ಬಿಲ್ಲವ ಸಮಾಜದ ಮಹಾಸಭೆಯು ತಾ.8-2-42ರಲ್ಲಿ ಕಲ್ಮಾಡಿ ಗರಡಿಯ ಅಂಗಣದಲ್ಲಿ ಶ್ರೀಯುತ್, ಕಾಳಪ್ಪ ಪತ್ರನ್ನ ಬಿ ಎ., ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿ "ಕೊಡವೂರು ಬಿಲ್ಲವ ಜಾತಿ ಸಂಘ"ವು ಸ್ಥಾಪಿಸಲ್ಪಟ್ಟಿತು. ಸಭೆಕರಲ್ಲಿ ಶ್ರೀಗಳಾದ ಎ.ಂ. ದೇಜಪ್ಪ, ಯಂ ಕೆ. ಮಂಜಪ್ಪ, ಯಂ. ಕೆ. ರಾಮಪ್ಪ, ಮಂಜುನಾಥ ಉಪಾಧ್ಯಾಯ, ಶೇಸುಪೂಜಾರಿ, ಸಂಜೀವ ಬಂಗೇರ ಕೆ. ಗಂಗಾಧರ ಮೊದಲಾದವರು ಭಾಷಣಮಾಡಿದರು. ಅಧ್ಯಕ್ಷರ ಭಾಷಣವು ವಿಚಾರಪರವೂ, ಬೋಧಪರವೂ ಇತ್ತು. ತಾ. 12 2-42ರಲ್ಲಿ ಮೇಲಿನ ಸಂಘದ ಸಭೆ ಜರಗಿ ಶ್ರೀ| ಯಂ ಕೆ. ಮಂಜಪ್ಪನವರು ಅಧ್ಯಕ್ಷರಾಗಿ ಕಾರ್ಯಕಾರಿ ಮಂಡಳಿಯು ಆರಿಸಲ್ಪಟ್ಟಿತು.

ಮಹಿಳಾ ತರಬೇತಿ ಕೇಂದ್ರ—ಕೋಕನಾಡದಲ್ಲಿ ಸೇರಿದ ಅಖಿಲ ಭಾರತ ಮಹಿಳಾ ಪರಿಷತ್ತಿನ ನಿರ್ಣಯದಂತೆ, ಓದುಬರಹ, ಆರೋಗ್ಯ, ಕೈಗಾರಿಕೆ ಇತ್ಯಾದಿ ವಿಭಾಗಗಳಲ್ಲಿ ಕಾರ್ಯಂಕುಶಲ ಪಡೆದ ಬಲ್ಲ ಮಹಿಳಾ ಕೆಲಸಗಾರರ ತರಬೇತಿ ಕೇಂದ್ರವೊಂದು ಬೊಂಬಾಯಿ ಪ್ರಾಂತ್ಯದ ಸತಾರದಲ್ಲಿ ಮಾರ್ಚ 120ರಿಂದ ಜೂನ್‌30ರ ವರೆಗೆ ನಡೆಸಲ್ಪಡುವದು. ನೆರೆ ಮತ್ತು ಸಾಂಕ್ರಾಮಿಕ ರೋಗಗಳ ಶಮನ, ಆರೋಗ್ಯ ಹಾಗೂ ಸ್ವಾಸ್ಥ್ಯರಕ್ಷಣ, ಅರ್ಥಶಾಸ್ತ್ರ, ಸಾಮಾಜಿಕ, ದೈಹಿಕ, ನಾಗರಿಕ ಹಿತರಕ್ಷಣಾ ತರಬೇತಿ, ಕೈಗಾರಿಕೆ, ಈ ಜಾಟ ಸ್ಕೌಟ್ ಮತ್ತು ಕುದುರೆ ಸವಾರಿ ಇತ್ಯಾದಿಗಳಲ್ಲೆಲ್ಲಾ ತರಬೇತಿ ದೊರೆಯುವದು. ಈ ಶಿಬಿರದ ಉಮೇದ್ವಾರೀ ವಿದ್ಯಾರ್ಥಿನಿಯರು ತಮ್ಮ ವಿಳಾಸದೊಂದಿಗೆ ತಮ್ಮ ಖರ್ಚಿನ ಹಣವಾದ ರೂ. 105 ನ್ನು ಮಾರ್ಚ 1ರೊಳಗೆ ಅಹಮ್ಮದಾಬಾದಿನ ತನ್ನ ವಿಳಾಸಕ್ಕೆ ಕಳುಹಿಸಿಕೊಡತಕ್ಕದೆಂದು ಈ ತರಬೇತಿ ಶಾಲೆಯ ಕನ್ವೀನರ್ ಶ್ರೀಮತಿ ಕಮಲಾದೇವಿಯವರು ತಿಳಿಸುತ್ತಾರೆ.

ಮದ್ರಾಸು ಗವರ್ನರರ ಯುದ್ಧ ಫಂಡು.

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯಮಾಡಿದವರ ಹೆಸರಿನ ಪಟ್ಟಿ.

105-0-0 ಸಿ. ಎಲ್. ಲೋಬೋ, ಇಟ್ಟಂಪಾಡಿ ಮನೆ, ಮಂಜೇಶ್ವರ ಫಿರ್ಕಾಗ್ರಾಮ ಉದ್ಯೋಗಸ್ಥರು, ಮಿಸ್. ಮರಿಯಾಂಬಿಬಿ ಶಮ್ನಾಡ್. 101-0-0 ಚಂದ್ರಾಜಾ ಬ್ರದರ್ಸ್, ಅಬ್ದುಲ್ಲಾ ರಹಿಮಾನ್, ತಳಂಗೆರೆ ಮಮ್ಮುಂಞಿ, ಪಿ. ಮೊಯಿದಿನ್ ಕುಂಞಿ, ಕೊಟ್ಟಾರ್ ಮಮ್ಮುಮಾರು, ಪಿ ಕುಂಞಿರಾಮನ್ ನಾಯರ್, ವಾಸುದೇವ ಆಸ್ರ, ಕೆ. ಚಕ್ಕಪ್ಪ ರೈ, ಬಿ. ಸುಬ್ಬಣ್ಣ ಆಳ್ವ, ಡಾ. ಕೆ. ಪಿ. ಉಪೇಂದ್ರ ರಾವ್, ಕೆ. ನರಸಿಂಗ ನಾಯಕ್, ಟಿ. ಸಿ. ಕೇರಳವರ್ಮರಾಜಾ, ಕುಂಬಳೆ ಫಿರ್ಕಾಗ್ರಾಮ ಉದ್ಯೋಗಸ್ಥರು, ಹೊಸದುರ್ಗ ಫಿರ್ಕಾಗ್ರಾಮ ಉದ್ಯೋಗಸ್ಥರು, ನೀಲೇಶ್ವರ ಫಿರ್ಕಾಗ್ರಾಮ ಉದ್ಯೋಗಸ್ಥರು. 100-0-0 ಮಂಗಳೂರಿನ ಬರೋಡರು, ಗವರ್ನಮೆಂಟ್ ಟ್ರೇನಿಂಗ್‌ಸ್ಕೂಲಿನ ಶಿಬಂದಿ ಮತ್ತು ವಿದ್ಯಾರ್ಥಿಗಳು, ಕೆ. ಆರ್. ಕೃಷ್ಣಯ್ಯ ಚೆಟ್ಟಿ. 51-0-0 ಯು. ಎನ್. ಮಹಮುದ್ ಕುಂಞಿ, ಪಿ. ಕೆ. ಸಿ. ಮಹಮುದ್ ಕುಂಞಿ, ಟಿ. ಕುಂಞಿಕುಟ್ಟಿ ಅಲಿಹಾಜಿ, ಕೆ. ಅಬ್ದುಲ್ಲಾ, ವಿ. ಪಿ. ಕುಂಞಮಮದ್, ವಿ. ಪಿ. ಮಮುದ್ ಕುಂಞಿ ಹಾಜಿ, ಟಿ.ಮಮ್ಮುಟ್ಟಿ, ಕೆ. ಕೃಷ್ಣ ಮಲ್ಯ, ಕುದ್ದು ಸದಾಶಿವ ಪ್ರಾನ್ತ್ಯ ಭಾಗ್ಯ, ಎಂ. ಚಂದು ನಾಯರ್, ಕೆ. ರಾಮನ್ ಗುರಿಕ್ಕಳ್, ವಡಿಲ್ಲ ಕುಂಞಿರಾಮ ನಾಯರ್. ಕೃಷ್ಣ ಭಟ್ಟ, ಶಂಕರ ಕಡಂಬಳಿತ್ತಾಯ, ರಾವ್ ಸಾಹೇಬ್ ಎಲ್ ರಾಮಯ್ಯ ಆಳ್ವ, ಕಾಸರಗೋಡು ಶಿಪಾಯಿ, ಆಜಾಸೂರು, ಕಾಂಚಂಗಾಡ, ನೀಲೇಶ್ವರ ಫೀಲ್‌ಮ್ಯಾನ್ಸ್ ಕೋ ಓಪರೇಟಿವ್ ಸೊಸಾಯಿಟೀಸ್, ಸೆಕ್ರಾಜೆ ಗ್ರಾಮ ಉದ್ಯೋಗಸ್ಥರು, ಶಿರಿಬಾಗಿಲ ಗ್ರಾಮ ಉದ್ಯೋಗಸ್ಥರು, ಕಾಸರಗೋಡು ಗ್ರಾಮ ಉದ್ಯೋಗಸ್ಥರು, ತಳಂಗೆರೆ ಗ್ರಾಮ ಉದ್ಯೋಗಸ್ಥರು, ಬಂಗಳ ಗ್ರಾಮ ಉದ್ಯೋಗಸ್ಥರು, ಬಾಸೆಲ್‌ಮಿಶನ್ ಉಪಾಧ್ಯಾಯರು. 25-0-0 ಸೋಜಿರ್ ಐತಪ್ಪ ಆಳ್ವ,ಮದೋರೀ ರಾಮಕೃಷ್ಣಯ್ಯ. 20-0-0 ಕೊರಗ ಶ್ಯಾನುಭಾಗ. 15-0-0 ಬಾರಿಕಾಡಿ ಕೃಷ್ಣಯ್ಯ. 10-0-0 ಎ. ತಿಮ್ಮಪ್ಪ ಪೂಂಜ, ಪಿ ನಾರಾಯಣಯ್ಯ, ಬಿ. ಕೊರಗಪ್ಪ. 5 0-0 ಡಿ. ಆರ್. ವೆಂಕಟೇಶ ಅಯ್ಯರ್, ಚೆನ್ನಪ್ಪ ಶೆಟ್ಟಿ, ಜೆ.ಬಿ.ರೊಡ್ರಿಗ್ಸ್, ಚೆನ್ನಪ್ಪ ನಾಯಕ್ ಜ್ಯೋತಿ ವಾಮನ ಭಟ್, ವ್ಯಾಳಪ್ಪ ಶೆಟ್ಟಿ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ **"ಗೊನೊಕಿಲರ್"** ರಿಜಿಸ್ಟರ್ಡ

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗದೆ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer DR. D. N. JASANI, Vittalbhai Patel Road, BOMBAY 4.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಲಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ, ಇದರಲ್ಲಿ ಎಲ್ಲ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು,

ಕಾಮಕಿಗೆಯ ಸುಖವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಕ್ರೀಡೆಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜೀವಿತ ಟ್ರೇಡಿಂಗ್ ಕಂಪೆನಿ

260. ಮಿಂಟ್‌ಬಜಾರ್ ರೋಡ್, ಮದರಾಸ್.

ಸೋವಿಯೆಟ್ ರಸ್ಯದ ವಿಚಿತ್ರ ಪ್ರಗತಿ.

ಸೋವಿಯೆಟ್ ಸರಕಾರದ ದೂರದೃಷ್ಟಿ.

ಅಜ್ಞಾನದ ಕತ್ತಲೆಯಲ್ಲಿದ್ದ ಕೃಷಿಕ ದೇಶವಾದ ರಸ್ಯವನ್ನು ಕೆಲವೇ ವರ್ಷಗಳಲ್ಲಿ ಲೋಕದ ಅತಿದೊಡ್ಡ ಕೈಗಾರಿಕ ಮತ್ತು ವೈಜ್ಞಾನಿಕ ರಾಷ್ಟ್ರವಾಗಿ ಸಂಘಟಿಸಿ ವಿಚಿತ್ರ ಮಾರ್ಪಾಟನ್ನುಂಟುಮಾಡಿದ ಸೋವಿಯೆಟ್ ಸರಕಾರ. ಮಾತ್ರವಲ್ಲದೆ ಮುಂದೇನು ಸಂಭವಿಸಬಹುದೆಂಬ ದೂರದೃಷ್ಟಿ ಮತ್ತು ಮುಂಜಾಗ್ರತೆಯಿಂದ ರಸ್ಯವನ್ನದು ಸಿದ್ಧಗೊಳಿಸಿರುತ್ತದೆ.

ಇಡೀ ಲೋಕದಲ್ಲೇ ಅಭೂತ ಪೂರ್ವವೂ ವಿಶಿಷ್ಟವೂ ಕ್ರಾಂತಿಕಾರಕವೂ ಆದ ನವೀನ ಸಾಮಾಜಿಕ, ರಾಜಕೀಯ ಮತ್ತು ಸಾಂಪತ್ತಿಕ ಪದ್ಧತಿಯು ಸೋವಿಯೆಟ್ ರಸ್ಯದಲ್ಲಿ ಸ್ಥಾಪಿತವಾಗಿರುವುದು. ಇತ್ತಲಾಗಿನ ವರೆಗೆ ರಸ್ಯದ ಸಮತಾವಾದಿ ಸರಕಾರದ ಕುರಿತು ಇಡೀ ಲೋಕವೇ ವೈರವನ್ನು ಕಟ್ಟಿಕೊಂಡು ಅದರ ವಿನಾಶಕ್ಕಾಗಿ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡುತ್ತಿದ್ದಿತು. ಅದನ್ನು ಮನಗಂಡು ಸೋವಿಯೆಟ್ ಸರಕಾರವು, ಇಡೀ ಲೋಕವನ್ನಾದರೂ ಇದಿರಿಸಬೇಕಾಗುವ ಸಂಭವವನ್ನು ನಿರೀಕ್ಷಿಸಿ ಅದಕ್ಕಾಗಿ ಬೇಕಾದ ಸಿದ್ಧತೆಯನ್ನು ಮಾಡುತ್ತಾ ಬಂದಿರುವುದು. ಆದುದರಿಂದಲೇ ಅದು ಅಜೇಯವೆನಿಸಿರುವ ಪ್ರಚಂಡ ನಾಝಿ ಪಡೆಯ ಧಾಳಿಯನ್ನು 1500ಮೈಲು ರಣರಂಗದಲ್ಲಿ ಜಯಶೀಲವಾಗಿ ಪ್ರತಿಭಟಿಸುವ ಶಕ್ತಿಯುಳ್ಳದ್ದಾಗಿರುವುದು.

ಕೇವಲ 20ವರ್ಷಗಳಲ್ಲಿ ಸೋವಿಯೆಟ್ ರಸ್ಯದಲ್ಲಾಗಿರುವ ಸರ್ವತೋಮುಖವಾದ ಪ್ರಗತಿಯು ಲೋಕದ ಇತಿಹಾಸದಲ್ಲೇ ಅಪ್ರತಿಮವೂ ಆಶ್ಚರ್ಯಕರವೂ ಆಗಿದೆ. 1914ರಲ್ಲಿ ಝಾರ್ ಶಾಹಿಯ ಆಡಳಿತದಲ್ಲಿ ರಸ್ಯದಲ್ಲಿ ಯಾವ ಇಂಜಿನೀಯರಿಂಗ್ ಕೈಗಾರಿಕೆಗಳೂ ಇರಲಿಲ್ಲ. ಅದು ಕೇವಲ ಮೂರನೇ ತರಗತಿಯ ರಾಷ್ಟ್ರವಾಗಿತ್ತು. ಅದರ ಸೇಕಡ 90ರಷ್ಟು ಜನರು ನಿರಕ್ಷರ ಕುಕ್ಷಿಗಳಾಗಿದ್ದರು. ಅತಿ ಹೆಚ್ಚಿನ ಪ್ರಮಾಣದ ಜನತೆಯ ಮುಖ್ಯ ವೃತ್ತಿಯು ಬೇಸಾಯವಾಗಿತ್ತು.

ಆದರೆ ಇಂದೀಗ ಸೋವಿಯೆಟ್ ರಸ್ಯವು ಲೋಕದ ಪ್ರಥಮ ಸಾಲಿನ ಕೈಗಾರಿಕ ರಾಷ್ಟ್ರಗಳಲ್ಲೊಂದಾಗಿದೆ. ಅತ್ಯಂತ ವಿಶಾಲವಾದ ಸೋವಿಯೆಟ್ ರಿಪಬ್ಲಿಕಿನಲ್ಲಿ ಅಲ್ಲಲ್ಲಿ ಕೈಗಾರಿಕೋದ್ಯಮಗಳು ಸ್ಥಾಪಿಸಲ್ಪಟ್ಟಿವೆ. ಎಲ್ಲೆಲ್ಲಿಯೂ ರೈಲ್ವೆ ಮತ್ತು ಕಾಲುವೆಗಳು ಸ್ಥಾಪಿಸಲ್ಪಟ್ಟಿವೆ. ಝಾರ್ ಶಾಹಿಯ ಕಾಲದಲ್ಲಿ ರಸ್ಯವು ಪೆಟ್ರೋಲು ಮತ್ತು ಇದ್ದಲಿಗಾಗಿ ಒಂದೇ ಸ್ಥಳದ ಮೇಲೆ ಹೊಂದಿಕೊಂಡಿರಬೇಕಿತ್ತು. ಆದರೆ ಸೋವಿಯೆಟ್ ಸರಕಾರವು ಸ್ಥಾಪಿಸಲ್ಪಟ್ಟ ಮೇಲೆ ನೂರಾರು ವೈಜ್ಞಾನಿಕ ಶೋಧನಾ ಸಂಗಡಗಳವರು, ಯುರೋಪ್ ಮತ್ತು ಆಸ್ಯಾಖಂಡಗಳಲ್ಲಿ ವ್ಯಾಪಿಸಿರುವ ಸೋವಿಯೆಟ್ ರಿಪಬ್ಲಿಕಿನಲ್ಲೆಲ್ಲಾ ಹುಡುಕಾಡಿ ಪೆಟ್ರೋಲು ಮೊದಲಾದ ಖನಿಜ ಮತ್ತು ಲೋಹ ಸಂಪತ್ತನ್ನು ಇತರ ಕಡೆಗಳಲ್ಲಿಯೂ ಹೇರಳವಾಗಿ ಕಂಡುಕೊಂಡು ಸರಕಾರವು ಅದನ್ನು ಉಪಯೋಗಿಸಿಕೊಳ್ಳುವಂತಾಗಿದೆ.

ಆಸ್ಯಾ ಖಂಡದ ರಸ್ಯದ ಭಾಗವಾದ ಉರಾಲ್ಸಿನ ಮೆಗ್ನಿಟೊಗೊರ್‍ಸ್ಕ್ ಎಂಬಲ್ಲಿ ಸ್ಥಾಪಿಸಲ್ಪಟ್ಟಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಇಡೀ ಲೋಕದಲ್ಲೇ ಅತಿ ದೊಡ್ಡದಾದುವುಗಳು. ಉರಾಲ್ಸಿನ ನಿಝ್ನಿಟಜಿಲ್ ಎಂಬಲ್ಲಿ 1940ರಲ್ಲಿ ಹೊಸತಾದೊಂದು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ವರ್ಷಕ್ಕೆ 640,000 ಟನ್ ಉಕ್ಕನ್ನು ತಯಾರಾಗುತ್ತದೆ. ಸಂಪೂರ್ಣಗೊಳಿಸಲ್ಪಟ್ಟಾಗ ಇದರಲ್ಲಿ 2,000,000 ಟನ್ ಕಬ್ಬಿಣ ಮತ್ತು 1,500,000 ಟನ್ ಉಕ್ಕನ್ನು ತಯಾರಿಸಬಹುದಾಗಿದೆ. ಪಶ್ಚಿಮ ಸೈಬೀರಿಯದಲ್ಲಿ ಲೋಕದ ಅತಿ ದೊಡ್ಡ ಇದ್ದಲು ಕ್ಷೇತ್ರವು ಕಂಡುಹಿಡಿಯಲ್ಪಟ್ಟಿದೆ. ಈ ಕೈಗಾರಿಕೆಗಳಿಗೆ ಸಂಬಂಧಪಟ್ಟ ಇತರ ಹಲವು ಕೈಗಾರಿಕೆಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ.

ಅತ್ಯಂತ ದೂರದ ಪ್ರದೇಶಗಳಲ್ಲಿ ಪ್ರಮುಖ್ಯ ಹಾಗೂ ಮಹತ್ವಾದ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳೊಳಗೆ ರೈಲ್ವೇ ಸಂಬಂಧವನ್ನುಂಟುಮಾಡಿ ಅವಕ್ಕೆ ಸಂಬಂಧಪಟ್ಟ ಇಂಜಿನೀಯರಿಂಗ್ ಮತ್ತು ಇತರ ಎಲ್ಲಾ ವಿಧದ ಕೈಗಾರಿಕೋದ್ಯಮಗಳನ್ನು ಉದ್ದೇಶಪೂರ್ವಕವಾಗಿ ಸೋವಿಯೆಟ್ ಸರಕಾರವು ಸಂಘಟಿಸಿರುವುದು. ಅಷ್ಟು ಮಾತ್ರವಲ್ಲದೆ, ಒಂದು ಮಿಲ್ಯ ಸೇನೆಯು, ಆಧುನಿಕ ಯುದ್ಧೋಪಕರಣ ಸಿದ್ಧತೆಯಿಂದ, ಸಂದರ್ಭಾನುಸಾರ ಜಪಾನಿನೊಡನೆ ಹೋರಾಡಲು ಅವಶ್ಯವಾದ ಮದ್ದುಗುಂಡು ಮತ್ತು ಇತರ ಯುದ್ಧೋಪಕರಣ ಕೈಗಾರಿಕೆಗಳನ್ನೂ ಸ್ಥಾಪಿಸಿಕೊಂಡಿರುವುದು. ರಸ್ಯದ ಪೂರ್ವದ ಸೇನೆಯು ಸಂಪೂರ್ಣ ಸ್ವಾವಲಂಬಿಯಾಗಿ ಸ್ವತಂತ್ರವಾಗಿರುವುದು.

ಸೈನ್ಯಕ್ಕೆ ಬೇಕಾದ ಟೇಂಕು, ಸಶಸ್ತ್ರ ಮೋಟರ್ ಕಾರು, ಮೆಶಿನ್ ಗನ್ ಮತ್ತು ವಿಮಾನ ತಯಾರಿ ಕೈಗಾರಿಕೆಗಳು ಲೋಕದ ಇತರ ದೊಡ್ಡ ರಾಷ್ಟ್ರಗಳಿಗಿಂತ ಏನೂ ಹಿಂದಿಲ್ಲದೆ ಈಗ ಲೋಕವಿಖ್ಯಾತವಾಗಿರುವುದು. ಇದೇ ಪ್ರಕಾರ ಪವರ್ ಸ್ಟೇಶನು ಮತ್ತು ಹೈಡ್ರೋ ಇಲೆಕ್ಟ್ರಿಕ್ ಪ್ಲೇಂಟುಗಳ ವಿಷಯದಲ್ಲಿಯೂ ರಸ್ಯವು ಹಿಂದಿರುವುದಿಲ್ಲ. ರಸ್ಯದಲ್ಲಿ ನವೀನ ರೀತಿಯ 50 ದೊಡ್ಡ ಪವರ್ ಸ್ಟೇಶನುಗಳಿವೆ. ಈ ವಿಷಯದಲ್ಲಿ ಯುನೈಟೆಡ್ ಸ್ಟೇಟ್ಸು ಕೂಡಾ ರಸ್ಯಕ್ಕಿಂತ ಹಿಂದಿದೆ.

ರಸ್ಯದ ಟ್ರಾನ್ಸ್ ಸೈಬೀರಿಯನ್ ರೈಲ್ವೆಯು 'ಡಬ್ಲ್ ಲೈನ್' ಉಳ್ಳದಾಗಿದೆ. ಇತ್ತಲಾಗಿ ಸೋವಿಯೆಟ್ ಸರಕಾರವು ಹಲವು ರೈಲ್ವೆ ರಸ್ತೆಗಳನ್ನು ಸ್ಥಾಪಿಸಿರುವುದು. ತುರ್ಕಿಸ್ಥಾನದಿಂದ ಸೈಬೀರಿಯಕ್ಕೆ ಹೋಗುವ ರಸ್ತೆಯು ಲೋಕದಲ್ಲೇ ಅತಿ ದೊಡ್ಡದಾದ ಇನ್ನೊಂದು ಉದ್ಯಮವಾಗಿರುತ್ತದೆ. ರಸ್ಯವು ಅತಿ ವಿಶಾಲ ರಾಜ್ಯವಾದುದರಿಂದ ಒಂದೆಡೆಯಿಂದ ಇನ್ನೊಂದೆಡೆ ಹೋಗ-ಬರಲೂ, ಸಾಮಾನುಗಳ ಸ್ನೊಯ್ಯುವುದೂ ದೊಡ್ಡ ಸಮಸ್ಯೆಯಾಗಿತ್ತು. ಈಗ ಅದು ಬಲು ಮಟ್ಟಿಗೆ ನಿವಾರಿತವಾಗಿದೆ. ಮತ್ತು ಜಲಮಾರ್ಗದ ವಿಷಯದಲ್ಲಿ ರಸ್ಯವು ಲೋಕದಲ್ಲೇ ಅತ್ಯಂತ ಮುಂದುವರಿದ ರಾಷ್ಟ್ರವಾಗಿರುತ್ತದೆ. ಲೋಕದ ಅತಿ ದೊಡ್ಡ ನದಿಗಳಾದ [illegible] ಡೋನ್, ಮತ್ತು ನೀಪರ್‌ಗಳು ಕಾಲುವೆಗಳಿಂದ ಜೋಡಿಸಲ್ಪಟ್ಟಿವೆ.

ಸೋವಿಯೆಟ್ ಸರಕಾರವು ಪೂರ್ವದಲ್ಲಿ ಜಪಾನನ್ನು ಮತ್ತು ಪಶ್ಚಿಮದಲ್ಲಿ ಇಂಗ್ಲೆಂಡ್ ಸಮೇತವಾಗಿ ಇಡೀ ಯುರೋಪನ್ನು ಸಂದರ್ಭಾನುಸಾರ ವಿರೋಧಿಸಬೇಕಾಗುವದೆಂಬ ದೂರದೃಷ್ಟಿಯ ಮುಂಜಾಗ್ರತೆಯಿಂದ ಪ್ರಚಂಡ ಸಿದ್ಧತೆಮಾಡಿಕೊಂಡು ಬಂದಿರುವುದರಿಂದಲೇ, ಅದಕ್ಕೀಗ ಹಿಟ್ಲರರ ಪ್ರಚಂಡ ಧಾಳಿಯನ್ನು ಪ್ರತಿಭಟಿಸಲು ಸಾಧ್ಯವಾಗಿರುವುದು. ಹಿಂದಿನಂತೆ ಅದು ಕೇವಲ ಯುರೋಪಿಯನ್ ರಸ್ಯದ ಕೆಲವೇ ಕೈಗಾರಿಕೋದ್ಯಮಗಳ ಮೇಲೆಯೇ ಹೊಂದಿಕೊಂಡಿದ್ದರೆ ಇಷ್ಟರೊಳಗೆ ನಿಶ್ಚಯವಾಗಿಯೂ ಅದರ ಪತನವಾಗುತ್ತಿತ್ತು. ಆಸ್ಯಾಖಂಡದ ಪ್ರದೇಶಗಳಾದ ಉರಾಲ್ಸ್, ಸೈಬೀರಿಯ ಮತ್ತು ಕೆಸಪಿಯನ್ ಸಮುದ್ರ ಪ್ರದೇಶಗಳಲ್ಲಿ ಪ್ರಚಂಡ ಕೈಗಾರಿಕೋದ್ಯಮಗಳನ್ನದು ಮೊದಲೇ ಸ್ಥಾಪಿಸಿಕೊಂಡುದರಿಂದ ಉಕ್ರೈನ್ ಮತ್ತು ಡೋನ್ ನದಿ ಪ್ರದೇಶಗಳನ್ನದು ಕಳಕೊಂಡರೂ ಹಿಂದೆ ಸರಿದು, ಪ್ರಚಂಡ ಸೇನಾ ಸಂಘಟನೆಗಾವಶ್ಯಕವಾದ ಸಾಮಾಗ್ರಿಗಳನ್ನೆಲ್ಲಾ ಹಿಂದಿನಿಂದ ಪಡೆದು, ಇಂದೀಗ ಮುಂದೊತ್ತುವಂತಾಗಿದೆ. ರಸ್ಯದ ಈ ಶಕ್ತಿಯನ್ನು ಹಿಟ್ಲರರು ತಿಳಿಯದೆ ತಪ್ಪಿಬಿದ್ದಿರುತ್ತಾರೆ.

ನೋಟೀಸು

ಕುಂದಾಪುರ ದಿ|ಮು| ಕೋರ್ಟಿನಲ್ಲಿ

O. S. No. 547/1941.

ವಿಶ್ವೇಶ್ವರ ಅಡಿಗ — ವಾದಿ.

ಮತ್ತು

ನರಸಿಂಹ [illegible] — ಪ್ರತಿವಾದಿಯು.

ಕುಂದಾಪುರ [illegible] ಹಾರ್ದಳ್ಳಿ ಮಂಡಳ್ಳಿ ಗ್ರಾಮದ ಮಡಿಯಾರಲ್ಲಿದ್ದ ಸುಬ್ರಾಯ [illegible] ನರಸಿಂಹ [illegible] ತಿಳಿಯಪಡಿಸುವುದೇನೆಂದರೆ—

ವಾದಿಗೆ 1ನೇ ಪ್ರತಿವಾದಿಯು ತಾ. 16-6-1913ರಲ್ಲಿ ಬರಕೊಟ್ಟ [illegible] ಸಂವತ್ಸರದ [illegible] ವಗೈರೆ [illegible] ಮತ್ತು ಸದ್ರಿ [illegible] ಸ್ವಾಧೀನವನ್ನು [illegible] ದಾವೆಯು ತಾ. 24-2-'42ನೇ ದಿನ ವಿಚಾರಣೆಗೆ ಇಟ್ಟಿದೆ. [illegible] ವಕೀಲರ ಮುಖಾಂತರ [illegible] ಕೋರ್ಟಿನವರಿಗೆ ಯುಕ್ತಕಂಡ [illegible]

(By order)

ಕುಂದಾಪುರ, 9-2-42

K. S. Karanth,

Advocate for Plaintiff.

ವ್ಯಾಪಾರ ರಸ್ತೆಗಳ ಮಹಾಯುದ್ಧ.

ಸಿಂಗಪುರದ ದೊಡ್ಡ ಅನಾಹುತ!

ಇಂದೀಗ ಬ್ರಿಟನು ಮತ್ತು ಅಮೇರಿಕಗಳೊಡನೆ ಆಕ್ಸಿಸ್‌ರಾಷ್ಟ್ರಗಳು ನಡಿಸುತ್ತಿರುವ ಯುದ್ಧವು ಬಹು ಮಟ್ಟಿಗೆ ವ್ಯಾಪಾರಿ ರಸ್ತೆಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿದೆ. ಪ್ರಾಮುಖ್ಯ ಸಮುದ್ರ ವ್ಯಾಪಾರಮಾರ್ಗಗಳು ಯಾರ ಅಧೀನವಿರುವವೋ ಅವರೇ ಕಟ್ಟಕಡೆಗೆ ಜಯಶೀಲರಾಗುವರು.

ರಸ್ಯ ಮತ್ತು ಚೈನಗಳ ಯುದ್ಧಗಳನ್ನು ಬಿಟ್ಟರೆ, ಬ್ರಿಟನು ಅಮೇರಿಕ ಮತ್ತು ಆಕ್ಸಿಸ್ ರಾಷ್ಟ್ರಗಳೊಳಗೆ ಇಂದೀಗ ನಡೆಯುವ ಯುದ್ಧವು, ಪ್ರಾಮುಖ್ಯ ಸಮುದ್ರ ಮಾರ್ಗಗಳನ್ನು ವಶಪಡಿಸಿಕೊಳ್ಳುವ ಸ್ವರೂಪ ತಾಳಿರುವುದೆನ್ನಬಹುದು. ಆದುದರಿಂದಲೇ ಆಕ್ಸಿಸ್ ರಾಷ್ಟ್ರಗಳು, ಮಿತ್ರರಾಷ್ಟ್ರಗಳ ಹಡಗಗಳನ್ನು ಸಾಧ್ಯವಾದಷ್ಟು ಹೆಚ್ಚು ಮುಳುಗಿಸಲೆತ್ನಿಸುತ್ತಿವೆ. ಮಿತ್ರರಾಷ್ಟ್ರಗಳು ಅದಷ್ಟು ಹೆಚ್ಚು ಹಡಗಗಳನ್ನೊದಗಿಸಿಕೊಂಡು ತಮ್ಮ ಸಮುದ್ರ ವ್ಯಾಪಾರದ ಪ್ರಾಮುಖ್ಯ ರಸ್ತೆಗಳನ್ನು ಕಾಪಾಡಿಕೊಳ್ಳಲೆತ್ನಿಸುತ್ತಿವೆ. ಅಮೇರಿಕದ ಸಹಾಯದಿಂದ ಮಾತ್ರ ಇಂಗ್ಲೆಂಡಿಗೆ ಯುದ್ಧವನ್ನು ಮುನ್ನಡೆಸಲು ಸಾಧ್ಯವಾಗಿರುವುದರಿಂದ ಅಟ್ಲಾಂಟಿಕ ಯುದ್ಧವು ವ್ಯಾಪಾರಿ ರಸ್ತೆಗಳ ಯುದ್ಧವಾಗಿಯೇ ಪರಿಣಮಿಸಿರುತ್ತದೆ. ಅದರಲ್ಲಿ ಹಿಟ್ಲರರು ಅಷ್ಟೊಂದು ಜಯಶೀಲವಾಗಿರುವರೆಂದು ಹೇಳಬರುವುದಿಲ್ಲ. ಇತ್ತಲಾಗಿ ಹಿಟ್ಲರರು ಮಾಡಿದೊಂದು ಭಾಷಣದಲ್ಲಿ, ಇನ್ನುಮುಂದೆ ಸಾಗರಗಳಲ್ಲಿ ಸಬ್‌ಮೇರೀನ್ ಯುದ್ಧವನ್ನು ತೀವ್ರವಾಗಿ ನಡಿಸಲಾಗುವುದೆಂದು ಸೂಚಿಸಿರುವರು. ಭೂಮಧ್ಯ ಸಮುದ್ರ ಮತ್ತು ಕೆಂಪು ಸಮುದ್ರ ಜಲಮಾರ್ಗವು ಬ್ರಿಟನಿನ ಇನ್ನೊಂದು ರಕ್ತನಾಡಿಯಾಗಿರುತ್ತದೆ. ಅದನ್ನು ಕಡಿಯಲು ಹಿಟ್ಲರರು ಪ್ರಬಲ ಪ್ರಯತ್ನ ಮಾಡುವರೆಂಬುದರಲ್ಲಿ ಸಂದೇಹವೇ ಇಲ್ಲ. ಲಿಬಿಯದ ಯುದ್ಧವನ್ನು ಆ ಉದ್ದೇಶದಿಂದಲೇ ಅವರು ನಡಿಸುತ್ತಿರುವರೆಂದೇ ಹೇಳಬಹುದು. ಲಿಬಿಯದ ಮಾರ್ಗವಾಗಿ ಮುಂದೊತ್ತಿ ಐಗುಪ್ತವನ್ನು ಗೆದ್ದರೆ ಕೆಂಪು ಸಮುದ್ರವನ್ನು ಸುಲಭವಾಗಿ ವಶಪಡಿಸಿಕೊಂಡು ಭೂಮಧ್ಯ ಸಾಗರದ ಬಾಯಿಯನ್ನೇ ಬಂದು ಮಾಡಿಬಿಡಬಹುದು.

ಇಂದೀಗ ಜಪಾನು ಶಾಂತಸಾಗರದಲ್ಲಿ ಹೂಡಿರುವ ಯುದ್ಧವು ಕೂಡಾ ಸಮುದ್ರ ವ್ಯಾಪಾರರಸ್ತೆಗಳನ್ನು ಕಡಿಯಲಿಕ್ಕಾಗಿಯೇ. ಚೈನಕ್ಕೆ ಅಮೇರಿಕ ಮತ್ತು ಇಂಗ್ಲೆಂಡುಗಳಿಂದ ಸಾಮಾಗ್ರಿಗಳು ಹೋಗುವ ಜಲಮಾರ್ಗಗಳನ್ನು ವಶಪಡಿಸಿಕೊಂಡು ಆ ಮೇಲೆ ಹಿಂದೀ ಸಾಗರ ಮತ್ತು ಪರ್ಶಿಯಾ ಕೊಲ್ಲಿಗಳನ್ನು ಗೆದ್ದು ಇಂಗ್ಲೆಂಡಿನ ಪೂರ್ವದ ರಕ್ತನಾಡಿಯನ್ನು ಮಾತ್ರವಲ್ಲದೆ ರಸ್ಯಕ್ಕೆ ಸಹಾಯ ಹೋಗುವ ಮಾರ್ಗವನ್ನೂ ತಡೆಗಟ್ಟಬೇಕೆಂಬುದು ಜಪಾನರ ಮುಖ್ಯೋದ್ದೇಶಗಳಲ್ಲೊಂದಾಗಿರುತ್ತದೆ.

ಇಟಲಿಯ ದುರ್ಬಲತೆಯ ನಿಮಿತ್ತ ಭೂಮಧ್ಯಸಾಗರದ ವ್ಯಾಪಾರೀ ರಸ್ತೆಯನ್ನು ಬಂದುಮಾಡುವ ಹಿಟ್ಲರರ ಉದ್ದೇಶವು ಕೂಡಾ ನೆರವೇರುವುದಿಲ್ಲ. ಆದರೆ ಜಪಾನು, ಹೊಂಕೊಂಗ್ ಮತ್ತು ಸಿಂಗಪುರಗಳನ್ನು ಗೆದ್ದು ಮಿತ್ರರಾಷ್ಟ್ರಗಳಿಗೆ ಅತಿ ದೊಡ್ಡ ಆಘಾತವನ್ನುಂಟುಮಾಡಿರುತ್ತದೆ. ಸಿಂಗಪುರವು, ಜಿಬ್ರಾಲ್ಟರ್, ಸುವೆಜ್ ಮತ್ತು ಪನಾಮ ಕಾಲುವೆಗಳಷ್ಟೇ ಪ್ರಾಮುಖ್ಯ ನೌಕಾನಿಲಯ ಮತ್ತು ವ್ಯಾಪಾರ ರಕ್ಷಣಾ ಕೋಟೆಯಾಗಿದ್ದಿತು. ಅದನ್ನು ಪೂರ್ವದ ಜಿಬ್ರಾಲ್ಟರ್ ಎಂದು ಕರೆಯಲಾಗಿತ್ತು. ಬ್ರಿಟಿಷ್ ಸರಕಾರವು ಹಲವು ಮಿಲ್ಯ ಹಣವನ್ನು ವ್ಯಯಿಸಿ ಅದನ್ನೊಂದು ಮಹಾನೌಕಾ ನಿಲಯ ಮತ್ತು ಜಲಕೋಟೆಯಾಗಿ ಭದ್ರಗೊಳಿಸಿತ್ತು. ಲೋಕದ ಅತಿ ದೊಡ್ಡ ವ್ಯಾಪಾರೀ ಹಡಗಗಳು ಬಂದು ಹೋಗುವ ಬಂದರಾಗಿತ್ತು ಸಿಂಗಪುರ. ಲೋಕದ ಅತಿ ದೊಡ್ಡದಾದ ಹಲವು ಸಮುದ್ರ ವ್ಯಾಪಾರ ರಸ್ತೆಗಳ ಕೇಂದ್ರವಾಗಿತ್ತದು. ಯುರೋಪ್ ಮತ್ತು ಆಫ್ರಿಕದಿಂದ ಪೂರ್ವ ಆಸ್ಯಾ, ಆಸ್ಟ್ರೇಲಿಯ ಮತ್ತು ಅಮೇರಿಕದ ಕೆಲವು ಭಾಗಗಳಿಗೂ, ಶಾಂತಸಾಗರ ಪ್ರದೇಶಗಳಿಂದ ಹಿಂದೀ ಸಾಗರವು ಜೋಡಿಸುವ ಇತರ ರಾಷ್ಟ್ರಗಳಿಗೂ ನಡೆಯುವ ವ್ಯಾಪಾರ ವಹಿವಾಟನ್ನು ಎಚ್ಚರದಿಂದ ನೋಡುತ್ತಿರುವ ಕೋಟೆಯಾಗಿತ್ತು.

ಇಂದೀಗ ಸಿಂಗಪುರವು ಸಂಪೂರ್ಣ ನಾಶಗೊಳಿಸಲ್ಪಟ್ಟು 100 ವರ್ಷಗಳ ಬ್ರಿಟಿಷ್ ಸರಕಾರದ ಉದ್ಯಮ ಮತ್ತು ಶ್ರಮವೆಲ್ಲಾ ಕೆಲವೇ ದಿನಗಳಲ್ಲಿ ಮಣ್ಣುಪಾಲಾಗಿರುವುದು. ಸಿಂಗಪುರವು ಜಪಾನರ ವಶವಾಗಿರುವುದರಿಂದ ಶಾಂತಸಾಗರ, ಬಂಗಾಳ ಕೊಲ್ಲಿ ಮತ್ತು ಹಿಂದೀ ಸಾಗರದ ವ್ಯಾಪಾರಿ ರಸ್ತೆಗಳನ್ನೆಲ್ಲಾ ವಶಮಾಡಿಕೊಳ್ಳಲು ಅವರಿಗೆ ಅನುಕೂಲವಾಗಿರುವುದು. ಈ ಸಮುದ್ರಗಳಲ್ಲಿ ಬ್ರಿಟಿಷ್ ಮತ್ತು ಅಮೇರಿಕಾನ ಹಡಗಗಳ ಸಂಚಾರವು ಇನ್ನು ಮುಂದೆ ಬಹಳ ಅಪಾಯಕರವಾಗಿ ಪರಿಣಮಿಸಿರುವುದು.

ನೆಲ ಮತ್ತು ಆಕಾಶ ಪಡೆಯನ್ನೇ ಪ್ರಬಲ ನೌಕಾಪಡೆಯಿಲ್ಲದೆ ಹಿಟ್ಲರರಿಗೆ ಇಂಗ್ಲೆಂಡಿನ ಸಮುದ್ರ ವ್ಯಾಪಾರ ಮಾರ್ಗಗಳನ್ನು ಕಡಿಯಲು ಸಾಧ್ಯವಾಗಿರುವುದಿಲ್ಲ. ಇಂಗ್ಲೆಂಡೊಂದು ದ್ವೀಪವಾಗಿ ಲೋಕದ ಅತಿ ದೊಡ್ಡ ನೌಕಾ ಪಡೆಯನ್ನು ಹೊಂದಿರುವುದರಿಂದ ಮಾತ್ರ ಈ ವರೆಗೆ ಬದುಕಿರುವಂತಾಯಿತು. ಫ್ರೆಂಚ್ ನೌಕಾಪಡೆಯ ಸಹಾಯವನ್ನು ಪಡೆಕೊಳ್ಳಲು ಹಿಟ್ಲರರಿಗೆ ಸಾಧ್ಯವಾಗಲಿಲ್ಲ. ಇಟಲಿಯ ನೌಕಾಪಡೆಯಿಂದೇನೂ ಪ್ರಯೋಜನವಾಗಲಿಲ್ಲ. ಆದುದರಿಂದಲೇ ಅವರು ಅಟ್ಲಾಂಟಿಕ ಮತ್ತು ಭೂಮಧ್ಯ ಸಾಗರಗಳ ವ್ಯಾಪಾರ ರಸ್ತೆಗಳ ಯುದ್ಧದಲ್ಲಿ ಪರಾಜಿತರಾಗಿರುವರು. ಆದರೆ ಜಪಾನು ದೊಡ್ಡ ನೌಕಪಡೆಯುಳ್ಳುದಾಗಿದೆ ಜಪಾನರು ವಿಚಕ್ಷಣ ನಾವಿಕರೂ ಆಗಿದ್ದಾರೆ. ಜಪಾನಿನ ವಶ ಎಷ್ಟು ಯುದ್ಧ ಹಡಗಗಳಿರುವವೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದಲೇ ವ್ಯಾಪಾರ ರಸ್ತೆಗಳ ಯುದ್ಧದಲ್ಲಿ ಬ್ರಿಟನು ಮತ್ತು ಯುನೈಟೆಡ್ ಸ್ಟೇಟ್ಸ್‌ಗಳಿಗೆ ದೊಡ್ಡ ಅಪಜಯವನ್ನುಂಟುಮಾಡಲು ಅದಕ್ಕೆ ಸಾಧ್ಯವಾಗಿರುವುದು. ಇಂಗ್ಲೆಂಡು ಮತ್ತು ಯುನೈಟೆಡ್ ಸ್ಟೇಟ್ಸ್‌ಗಳು ಶಾಂತಸಾಗರದ ದೇಶಗಳಿಂದ ಅತಿ ದೂರವಿರುವುದು ಜಪಾನಿಗೆ ಅನುಕೂಲವಾಗಿರುತ್ತದೆ.

ಬ್ರಿಟನು ಮತ್ತು ಯುನೈಟೆಡ್ ಸ್ಟೇಟ್ಸ್‌ಗಳು ಅತ್ಯಂತ ಶೀಘ್ರವಾಗಿ ದೊಡ್ಡ ನೌಕಾಪಡೆ ಮತ್ತು ಸೈನ್ಯವನ್ನು ಪೂರ್ವಕ್ಕೆ ಕಳುಹಿಸಿ ಜಪಾನಿನ ನೌಕಾಬಲವನ್ನು ಮುರಿಯದಿದ್ದಲ್ಲಿ ಇನ್ನೂ ದೊಡ್ಡ ಅನಾಹುತವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಇನ್ನು ಸ್ವಲ್ಪ ಸಮಯದಲ್ಲಿಯೇ ಜಪಾನು, ಜಾವಾ ಸುಮಾತ್ರಗಳನ್ನು ಗೆದ್ದು ಹಿಂದುಸ್ಥಾನದ ಮೇಲೆ ಧಾಳಿ ನಡಿಸುವ ಗಂಡಾಂತರವೀಗ ಉಪಸ್ಥಿತವಾಗಿದೆ. ಆಸ್ಟ್ರೇಲಿಯದ ಅಸ್ತಿತ್ವಕ್ಕೂ ದೊಡ್ಡ ಅಪಾಯವುಂಟಾಗಿರುತ್ತದೆ. ಪೂರ್ವ ಆಸ್ಯಾ ಖಂಡದಲ್ಲಿ ತನ್ನ ಪ್ರಭಾವವನ್ನು ನೆಲೆಗೊಳಿಸಿ, ಬಿಳಿ ಜನರ ವ್ಯಾಪಾರ ವಹಿವಾಟನ್ನು ನಾಶಮಾಡುವ ಜಪಾನಿನ ಉದ್ದೇಶವು ಅದು ನಿರೀಕ್ಷಿಸಿದುದಕ್ಕಿಂತಲೂ ಬೇಗನೆ ನೆರವೇರುವ ಸಂಭವ ತೋರುತ್ತದೆ. ಮಾತ್ರವಲ್ಲದೆ ಅದು ಹಿಂದೀ ಸಾಗರ ಪರ್ಶಿಯಾ ಕೊಲ್ಲಿಗಳ ವರೆಗೂ ಮುಂದುವರಿಯುವಂತಾದರೆ ಮಧ್ಯಪೂರ್ವದಲ್ಲೂ ಅತ್ಯಂತ ಅಪಾಯಕರ ಪರಿಸ್ಥಿತಿಯುಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಬೇಕಾಗಿದ್ದಾರೆ.

ಉಡುಪಿ ತಾಲ್ಲೂಕು ಸಿಟ್ಟೂರು ಎಯಿಡೆಡ್ ಎಲಿಮೆಂಟ್ರಿ ಶಾಲೆಯಲ್ಲಿ ಕೆಲ್ಸಮಾಡಲು ಟ್ರೈನ್ಡಾದ ಸೆಕೆಂಡು ಗ್ರೇಡು ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ. ಸೇಕಡಾ ೫೫ಕ್ಕೆ ಕಡಿಮೆಯಾಗದಷ್ಟು ಎಸ್ಟೈಬ್ಲಿಶ್ ಗ್ರೇಂಟು ಕೊಡಲಾದೀತು. ಇಷ್ಟವುಳ್ಳವರು ಸ್ವತಹಾ ಅಥವಾ ಪತ್ರ ಮೂಲಕ ಮಾತಾಡಬಹುದು.

ಎಂ. ಶಂಕರಲ್, ಮೆನೇಜರ್,
ಸಿಟ್ಟೂರು ಎಯಿಡೆಡ್ ಎಲಿಮೆಂಟರಿ ಶಾಲೆ,
ಉಡುಪಿ.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಓಡದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ಸಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : ದ. ಭಾರತ.

The Canara Mutual Assurance Company, Limited,

UDIPI : : : S. INDIA.

ನೋಟೀಸು

ಕುಂದಾಪುರ ಡಿ। ಮು। ಕೋರ್ಟಿನಲ್ಲಿ.

O. S No 213/1938. R. I. A. No 1875/1941

ಅರ್ಜಿದಾರ— ಬಾಲಕೃಷ್ಣ ನಾಯಕ್,

ಎದ್ರಿರು—1. ಆದಮ್ ಸಾಹೇಬ,
2. ಇಸ್ಮಾಯಿಲ್ ಸಾಹೇಬ,
3. ಹಸನ್ ಕುಟ್ಟಿ ಬ್ಯಾರಿ.

ಎದ್ರಿರು—1. ಆದಮ್ ಸಾಹೇಬ, 2. ಇಸ್ಮಾಯಿಲ್ ಸಾಹೇಬ, ಅತ್ತರ ಬಾವಾ ಸಾಹೇಬರ ಮಗಂದಿರು. 1ನೇ ಎದ್ರಿ ಮಂಗಳೂರು ಸೋಳಕಟ್ಟೆ ಬಜಾರಿನಲ್ಲಿಯೂ, 2ನೇ ಎದ್ರಿ ಗಂಗೊಳ್ಳಿ ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ 1–2ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನು ನಿಮ್ಮ ಮೇಲೆ O. S. No 213/1938ನೇ ಡಿಕ್ರಿ ಪ್ರಕಾರ ಬರಾ ಬಾಕಿ ಹಣಗಳನ್ನು ವಸೂಲು ಮಾಡುವರೆ "ಪರ್ಸನಲ್" ಡಿಕ್ರಿ ಕೊಡಬೇಕಾಗಿ ಅರ್ಜಿ ಮಾಡಿರುವುದರಿಂದ ಸದ್ರಿ ಅರ್ಜಿಯನ್ನು ಇದೇ ತಾರೀಖು 28-2-1942ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರಾಗದಿದ್ದಲ್ಲಿ ತಪ್ಪಿದ್ರೆ ಏಕಪಕ್ಷವಾಗಿಯೇ ತೀರ್ಮಾನವಾದೀತು ಎಂತ ಈ ಮೂಲಕ ತಿಳಿಸಿರುತ್ತದೆ.

K. Vittaldas Shenai,
ADVOCATE.

ಕುಂದಾಪುರ, ತಾ. 12-2-1942.

Keep the enemy away
from India
Contribute AGAIN to the
Governer's war fund.
Buy MORE defence bonds
and savings certificats.

**GIVE AND LEND
FOR
VICTORY.**

ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು)

ಅಷ್ಟಮಸ್ಥ ಗುರುವು ನಿರೋಗಿಗಳಾಗಿರಲು ನಿಮ್ಮನ್ನೆಂದಿಗೂ ಬಿಡಲಾರನು. ಮನಸ್ಸಿಗೊಂದಲ್ಲೊಂದು ಚಿಂತೆಯು ಸದಾ ಅಂಟಿಕೊಂಡೇ ಇರುವದು. ಕ್ಷಣ ಕಾಲವೂ ನಿಂತಲ್ಲಿ ನಿಲ್ಲಲು ಅವಕಾಶ ಸಿಗದು. ಅರ್ಧಾಂಗಿಯು ಚಂಡಿಯೋಪಾದಿ ವರ್ತಿಸುವಳು. ಆದರೂ ನೀವು ಮಿತ್ರರ ನೆರವಿನಿಂದ ಹೆಚ್ಚಿನ ಸಮಯವನ್ನು ಸಂತೋಷದಿಂದ ಕಳೆವಿರಿ. ಆರ್ಥಿಕ ತಾಪತ್ರಯವು ಉಂಟಾಗದು. ವಾರಾದಿಯ 3 ದಿನಗಳಲ್ಲಿ ವ್ಯಾಪಾರದಿಂದ ಲಾಭ, ಶಯನವಸನಾದಿಗಳೂ ದೊರೆಯುವವು.

ವೃಶ್ಚಿಕ—ದೈವಬಲವು ನಿಮಗೆ ಅತ್ಯುತ್ತಮವಿದ್ದರೂ ಅನಿರೀಕ್ಷಿತ ಘಟನೆಯಿಂದ ನಿಮ್ಮ ಮಾನಕ್ಕೆ ಧಕ್ಕೆ ತಗಲಲಿದೆ. ಅತ್ಯಾವಶ್ಯಕವೆಂದೆನಿಸಿದ ವಸ್ತುವು ಸಕಾಲದಲ್ಲಿ ದೊರೆಯದೆ ಬಹಳ ಸಂಕಟಕ್ಕೀಡಾಗುವಿರಿ. ದಿನನಿತ್ಯದ ಖರ್ಚುಗಳನ್ನು ನಿರ್ವಹಿಸಿ ಆಪದ್ಧನವಾಗಿ ಸಂಗ್ರಹಿಸಿಡುವಷ್ಟು ಧನವು ನಿಮಗೆ ವಿದ್ಯಾವ್ಯಾಪಾರಗಳ ಮೂಲಕ ದೊರೆಯುವದು. ಗೃಹಪರಿವಾರವು ಪರಿಪೂರ್ಣ ವಿರುವುದರಿಂದಲೂ ಶತ್ರುನಾಶವಾಗುವುದರಿಂದಲೂ ನೀವೀವಾರವನ್ನು ಸುಖದಿಂದ ಕಳೆವಿರಿ. ತಾ. 20ರಿಂದ 21ರ ವರೆಗಿನ ದಿನಗಳು ಅತ್ಯುತ್ತಮವಿವೆ.

ಧನು— ಜನ್ಮ ಸುಖಪತಿಯಾದ ಗುರುವು ಪ್ರತಿಕೂಲನಿರುವುದರಿಂದಲೂ ಪಂಚಮದಲ್ಲಿ ಶನಿಯು ವಕ್ರನಾಗಿ ಪ್ರವೇಶಿಸಿರುವುದರಿಂದಲೂ ನಿಮ್ಮ ಗ್ರಹಸಂಪತ್ತು ಮತ್ತು ಆರ್ಥಿಕ ಸಂಪತ್ತು ಎಷ್ಟೇ ಉತ್ತಮವಿದ್ದರೂ ನಿಮಗೆ ಸ್ವಲ್ಪವಲ್ಲೂ ಸುಖವು ದೊರೆಯಲಾರದು. ಸಂಪಾದಿಸಿದ ಧನವು ದಿನಾಂತ್ಯದಲ್ಲಿ ಕಾಣಲೊಲ್ಲದು. ಶತ್ರುಜನರ ಮೋಸಜಾಲದಲ್ಲಿ ಸಿಲುಕಿ ಬಹಳ ಸಂಕಟಕ್ಕೊಳಗಾಗುವಿರಿ. ಆದರೂ ವಾರಾಂತ್ಯದ ದಿನಗಳು [illegible] ಉತ್ತಮವಿರುವುದರಿಂದ ಆರೋಗ್ಯ, ಧನ, ಲಾಭ, ಸುಖ, ಮಾನಾದಿಗಳು ಲಭಿಸುವವು.

ಮಕರ—ಷಷ್ಠ್ಯಾದಿ ಸಕಲಗ್ರಹಚಾರಗಳು ಅಪ್ರಸನ್ನವಾಗಿರುತವೆ. ಆಕಸ್ಮಿಕ ನಿಮಗೆ ಸಕಲ ಕಲಹಗಳಿಂದೊಡಗೂಡಿದ ಗೃಹಸುಖವು ದೊರೆಯದು. ನಿಮ್ಮ ಶತ್ರುವೃಂದವು ದಿನೇ ದಿನೇ ವೃದ್ಧಿಗೊಳ್ಳುತ್ತಿರುವುದರಿಂದ ನಿಮ್ಮ ಆಕಾಂಕ್ಷೆಗಳಿಗೆ ತುಂಬಾ ಹಾನಿಯಿದೆ. ಸಂಸರ್ಗದೋಷಕ್ಕೆ ಸಿಲುಕಿರುವಿರಿ. ಚಂಚಲ ಮನಸ್ಕರಾದ ನಿಮ್ಮ ಆರೋಗ್ಯವೂ ಉತ್ತಮವಿರದು. ತಾ 20ರಿಂದ 29ರವರೆಗಿನ ದಿವಸಗಳಲ್ಲಿ ಅತ್ಯರಲ್ಲಿ ಮನಸ್ತಾಪ, ಕಾರ್ಯವಿಘ್ನ, ಪ್ರವಾಸ ಕ್ಲೇಶಗಳು ಸಂಭವಿಸುವವು.

ಕುಂಭ—ಮುಂಗಿಸಿಯನ್ನು ನೋಡಿದ ಸರ್ಪದಂತೆ ನಿಮ್ಮ ಶತ್ರುವರ್ಗವು ಎಷ್ಟೇ ಬಲಶಾಲಿಯಿದ್ದರೂ ನಿಮ್ಮನ್ನು ನೋಡಿದೊಡನೆ ತಲೆತಗ್ಗಿಸುವದು. ಬಂಧುವರ್ಗದವರು ಕಾಲನ್ನ ತಪ್ಪುಂಟ ನಿಮ್ಮ ಮನೆಗೆ ಎಡತಾಕುವರಾದರೂ ನಿಮ್ಮ ಪ್ರಯತ್ನಗಳು ನಿರ್ವಿಘ್ನದಿಂದ ಕೊನೆಗೊಂಡುವವು. ಎಷ್ಟೇ ಧನ ದೊರೆತರೂ ದಿನಾಂತ್ಯದೊಳಗದನ್ನು ವ್ಯಯಿಸುವಿರಿ. ಸದಾ ಪ್ರವಾಸದಿಂದ ಸಕಾಲದಲ್ಲಿ ಅನ್ನಾಹಾರಾದಿಗಳು ದೊರೆಯದೆ ಉದರಶೂಲೆ, ತಲೆನೋವು ಮುಂತಾದ ಕಾಯಿಲೆಗಳು ತಲೆದೋರುವವು. ತಾ 21. 22. ಈ ಎರಡು ದಿನಗಳು ಈ ವಾರದಲ್ಲಿ ನಿಮಗೆ ಹೆಚ್ಚಿನ ಅನುಕೂಲಗಳಾಗಿವೆ.

ಮೀನ— ಮನಃಸಂಕಲ್ಪವು ನಿರೀಕ್ಷಿಸಿದಂತಾಗದು. ಸ್ಥಾನಮಾನಗಳಿಗೆ ಹಾನಿಯೊದಗುವ ಸಂಭವವಿದೆ. ರಾಜಕೀಯ ಸಂಬಂಧ ವಿಶೇಷ ಹಣವ್ಯಯವಾಗುವದಲ್ಲದೆ ಅಪ್ಯಾಶ್ರಯವೂ ಸಿದ್ಧಿಸದು. ಅನಾರೋಗ್ಯ ಮತ್ತು ರಾಜಭಯಗಳಿಗೊಳಗಾಗುವಿರಿ. ಮನಸ್ಸಿಗೆ ಸುಖಶಾಂತಿಗಳಿಲ್ಲದಿರುವುದರಿಂದ ಸದಾ ವಿಷಣ್ಣವದನರಾಗಿರುವಿರಿ. ಆದರೂ ಖರ್ಚಿನ ಸಲುವಾಗಿ ಪರರನ್ನಾಶ್ರಯಿಸಬೇಕಾಗಿಲ್ಲ. ಮಿತ್ರಮುಖದಿಂದ ಧನವೂ ಸಂತೋಷಕೂಟದಲ್ಲಿ ಭಾಗವೂ ಲಭಿಸುವದು. ತಾ 19. 22. [illegible]. ಭೋಗ ಮತ್ತು ಧನ ಸುಖದಾಯಿಯಾಗಿವೆ.

ಅಚ್ಚ, ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—**ಆಮಲಕೀ ತೈಲ.**
ಆನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು—**ಆಮಲಕೀ ತೈಲ.**
ತಂಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ.
ನಾರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ-ಆಮಲಕೀ ತೈಲ.
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—ಆಮಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ
ಭಾರತದ ಮಹಿಳೆಯರು ಪ್ರೀತಿಸುವರು—ಆಮಲಕೀ ತೈಲ.
ಬೆಳಗುವ ತಾರೆಯ-ಸುಮುಖನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
ಲಲನೆಯರು ಮೆಚ್ಚುವರು—ಆಮಲಕೀ ತೈಲ.
ವಾತಾದಿ ತ್ರಿದೋಷನಾಶಕವೇ—ಆಮಲಕೀ ತೈಲ.
ವಿಶೋಧಿತ ತಿಲತೈಲದಿಂದಲೇ ತಯಾರಿಸಿದ—ಆಮಲಕೀ ತೈಲ.
ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ

ಆಮಲಕೀ ತೈಲ ವನ್ನೇ ಉಪಯೋಗಿಸಿರಿ.

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ.
2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) **ಕುಂಬಳೆ**
ಸ್ಟಾಕಿಸ್ಟರು:-ನವಭಾರತ ಬುಕ್ ಡಿಪೋ, ಉಡುಪಿ, ಗಣಪಯ್ಯ ಶೆಟ್ಟಿ, ನಾಯಕ್ ಬ್ರದರ್ಸ್, ಕೋಟ.
ದಿ ಜನರಲ್ ವೆರೈಟಿ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ.

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(Incorporated in India in 1920.)
ಮುಖ್ಯ ಕಾರ್ಯಾಲಯ:—**ಕೋರ್ಟು ರಸ್ತೆ, ಉಡುಪಿ.**
ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಶಿರ್ವ, ದ. ಕನ್ನಡ.

ಶಿಕ್ತ ಮೂಲಧನ	...	...	ರೂ. 1,82,100.
ಕ್ಷೇಮ ನಿಧಿಗಳು	...	...	ರೂ. 1,82,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗಿ ಹೋಗುವಿಕೆ, ಸೊಂಟನೋವು, ಕೈ ಕಾಲು ಉರಿಯುವಿಕೆ, ಮಲಬದ್ಧತೆ, ಹಸಿವು ಇಲ್ಲದ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಒಳಗಿನ ಅಂಗಗಳನ್ನು ಬಲಪಡಿಸಿ, ಗರ್ಭಕೋಶವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್.
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ. 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1)ಮೈಸೂರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ನ ಪಾರೀಸಾಗ್ ರೋಡ್, ಕರೇಲ, ಮುಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜೆ. ಐ. ಪಿ. ಮಾಟುಂಗಾ, (3) ಮುಲ್ಲರ್ ಪೇಟನ್ಟ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಚಿನ್ನದಿಗನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ, (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ, (7) ಡಾ। ಶ್ರೀನಿವಾಸ. ವೈ, ಪುತ್ತೂರು, (8) ಕಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ, (9) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ. (10) ಕೃಷ್ಣಾಫಾರ್ಮಸಿ, ಕುಂದಾಪುರ, (11) ಕಾರ್ಕಳ ಗೋವಿಂದ ಶ್ರೀ ರಾಮ ಸ್ಟೇಷನರಿ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಕಿಣ್ಣಿ, ಶಿರ್ವ. (13) ವಿ. ಯಸ್, ಸಿಂಗರಾವ್, ಮರ್ಚೆಂಟ್, ಚಿಕ್ಕಮಗಳೂರು.

ಸ್ವಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್ ಪರ್ಮ್ ಮುಲಾಮು —

ಇನ್ನು ಲಿವಿಂಗ್ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರುಜು ಮತ್ತು ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕಳಗಿನಂತೆ ವ್ಯಾಖ್ಯಾನವಾದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

The Moolky Bank, Ltd.,

MOOLKY, S.K

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

== ಮೂಲ್ಕಿ, ದ ಕ ==

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗು ವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುತ್ತದೆ.

M. R. Punja,
President & Manager

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ವ ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಸುಖನಿವಾಸ

ಉಡುಪಿ. ಮಂಗಳೂರು

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ತಗಿನ ಅಭಿರುಚಿಗೆ ಒಪ್ಪುವ ಎಲ್ಲಾತರದ ಸೀರೆಗಳು ಒಗ ಬಗೆಯ ಒಣ್ಣಗಳಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ಮಾರಯುತ್ತವೆ ಬಿಡ್ಡುಬಾದಿ ಮತ್ತು ಮಿಲ್ ಬಟ್ಟೆಗಳೂ ದಾಸ್ತಾನುಂಟು

ಪಿ. ಎ. ಪೈ. ಬ್ರದರ್ಸ್,

ಬಸ್ತ್ರ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟಡ,

ಉಡುಪಿ

ವೆಜಿಟೇರಿಯನ್ ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶೇಷ ಅನುಕೂಲತೆಗಳಿವೆ ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್

ಮ್ಯಾನೇಜರ್

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲಾ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಕೌಟುಂಬಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ, ಮಾಸವನ್ನು ಸಹಿತ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	೨-೧-೮-೦	ಧನಂಜಯರ ಸೇಡು	೨-೧-೮-೦
ಭೀಷಣ ಸಾಹಸ	೭-೦-೧೨-೦	ಮೋಹಿನಿ	೨-೧-೮-೦
ಪರಿಣೀತ	೦-೩-೦-೦	ಅಮಾತ್ಯನಂದಿನಿ	೨-೧-೮-೦
ಭಗವಾನ್‌ದಾಸ	೨-೧-೦-೦	ಸ್ಕೂಲ ಮಿಸ್ಟ್ರೆಸ್	೨-೧-೪-೦
ಅವಿವಾಹಿತರ ಸಮಸ್ಯೆ	೧-೦-೦	ವೀರರಾಜ ವಿಜಯ	೦-೧೨-೦
ನನ್ನ ಗತಿ	೦-೪-೦	ಪಾಣಿಗ್ರಹಣ	೦-೩-೦

ಕಟಲಾಗಿಗೆ ಬರೆ ...

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-ನವಯುಗದ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ರಕ್ತವರ್ಧಕ ಔಷಧಿ.

ಆಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀವ ರಕ್ತವನ್ನು ಹೆಚ್ಚಿಸುತ್ತದೆ ಗಂಡು ರಕ್ತ ಕೊಂಡಿರುವ ಎಲುಬುಗಳ ಮದ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುರ ... ಅತಿ ಇಷ್ಟರುವ ನಿಮ್ಮ ಮಕ್ಕಳು ... ನಿಮ್ಮ ಕೈ ಹಿಡಿವುವು ... ಒಂದಕ್ಕೆ ೧೨ ಆಣೆ, ಟ ಪ. ೯ ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟ್ — ನವಭಾರತ ಬುಕ್ ಡಿಪೋ, ಉಡುಪಿ

ಸ್ಥಾಪನೆ



1926

13 ಬಲ್ಮಠ ರಸ್ತೆ, ಮಂಗಳೂರು



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳು ಸ್ಟೇನ್ಸಿಲ್ ಪ್ಲೇಟ್ ನೇಮ್ ಬೋರ್ಡ್ ಮೊನೊಗ್ರಾಮ್ ... ಇತ್ಯಾದಿ ತೃಪ್ತಿಕರವಾಗಿ ಮಾಡಿಕೊಡಲ್ಪಡುವುದು.

Crown Rubber Stamp Co 18 Balmat Road, MANGALORE

Approved firm by the Govt Mysore

... by the Agent of the Govt of India in Ceylon

ಮಧುಪ್ರಮೇಹ ಎಂಡ್ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಒಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೬ ಔನ್ಸಿನ ೨ ಬಾಟ್ಲಿಗಳು ಹುಟ್ಟು ಕಡಿಮೆ ಬಾಣಂತಿಯರಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೫ ಕೊಡಿಯಾಲಬೈಲು, ದಕ

EDITED BY K. K SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Rgd. No. M. 3518

Estd. 1921 ಸ್ಥಾಪಿತ

ಸಾಹುಕಾರರಿಗೂ ವರ್ಗ
ದಾರರಿಗೂ ಬೇಕಾಗುವ
ತರ ತರದ ವರ್ಗ,
ಲೂಳಿಗ ಪುಸ್ತಕಗಳೂ
ಲೆಕ್ಕ ಪುಸ್ತಕಗಳೂ
ಸುಲಭ ದರದಲ್ಲಿ
ಸಾಜೂಕಾಗಿ ಮಾಡಿ
ಕೊಡಲ್ಪಡುತ್ತವೆ.
ನವಯುಗ ಪ್ರೆಸ್,
ಉಡುಪಿ.

ನವಯುಗ

1942ನೇ ಇಸವಿಯ
'ವರ್ಷ ಭವಿಷ್ಯ'
ಬೆಲೆ.
0—3—0
ಅಗತ್ಯ ಓದಿರಿ.
ನವಭಾರತ ಪುಸ್ತಕ
ಭಂಡಾರ, ಉಡುಪಿ.

ಸಂಪುಟ ೨೧ | Vol 21

ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

26-2-1942

ಸಂಚಿಕೆ ೨೬ | No. 26

SEASON DEPOSITS

are now accepted at all our offices,
at 4% per annum, for 4 or more months,
maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಸೇಕಡಾ 4ರ ದರದಲ್ಲಿ, 4ಯಾ ಹೆಚ್ಚು ತಿಂಗಳುಗಳಿಗೆ
1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ
ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

ಮಗುವನ್ನು ಸಂತೋಷವಾಗಿಟ್ಟರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ (T) ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ
ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ
ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.

ತಯಾರಿಸುವವರು:

ಗೌರ್ನಮೆಂಟ್ [illegible] ಅಂಡ್ ಟೆಸ್ಟಿಂಗ್
ಲ್ಯಾಬೋರೇಟರಿ,

ಮಲ್ಲೇಶ್ವರಂ, ಬೆಂಗಳೂರು ಸಿಟಿ.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಒರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಧ್ಯಾಹ್ನ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.

For further particulars and agency terms, please call at or write to

Branch Manager,

The Asian Assurance Co., Ltd., Mangalore.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೮ ಆಣೆ.

ಮಾಲಕರು:— **ಹಾಲಪ್ಪಾ ಫಕೀರಪ್ಪಾ ದಾವಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ:—ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ. ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

DIAMONDS! **DIAMONDS!**

K. R. K. SHET.

Opposite Govt. College, Hampankatta MANGALORE.
SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected))ಎಮ್‌ಸ್ಪ್ರಿ ತಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತವೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತವೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತವೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**
೨೪—ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಖು ೨೬—೨—೪೨ರಿಂದ ತಾರೀಖು ೪—೩—೪೨ರ ವರೆಗೆ

ಮೇಷ – ನಿಮ್ಮ ಮನೆಯಲ್ಲಿದ್ದ ಕುಜ ಮತ್ತು ಶನೈಶ್ಚರನು ಈ ವಾರದಲ್ಲಿ ಮುಂದಿನ ರಾಶಿಗೆ ಹೋದುದರಿಂದ ನಿಮ್ಮ ಆರ್ಥಿಕಭಾಗಕ್ಕೂ ಕ್ರಿಯಾ ಕಲಾಪಗಳಿಗೂ ತುಂಬಾ ಅನುಕೂಲವಿದೆ. ಶಸ್ತ್ರಾಸ್ತ್ರಗಳ ಭಯದಿಂದಲೂ ವಾಹನಾದಿಗಳಲ್ಲಿನ ಅಪಘಾತಾದಿಗಳಿಂದಲೂ ನೀವು ಮುಕ್ತರಾದಿರೆನ್ನಬಹುದು. ಆದರೆ ತಲೆ ತಿರುಕು, ಬಾಯಿ ಹುಣ್ಣು ಮೊದಲಾದ ರೋಗಗಳು ಕಾಣಿಸಿಕೊಳ್ಳಲಿವೆ. ನಿಮ್ಮ ಖರ್ಚುಗಳ ಸಲುವಾಗಿ ಪರರ ಮುಖ ನೋಡಬೇಕಾಗಿಲ್ಲ. ವಿರೋಧಿಗಳ ಶಕ್ತಿಯು ಕುಗ್ಗುವುದರಿಂದ ಹೆಚ್ಚಿನ ನಿಮ್ಮ ಮನೋರಥಗಳು ಫಲಿಸಲಿವೆ. ತಾ. 27ರಿಂದ 3ರ ವರೆಗಿನ ದಿನಗಳಲ್ಲಿ ಮಿತ್ರಕಲಹ, ಉದರಶೂಲೆ, ಪ್ರವಾಸ ಇತ್ಯಾದಿಗಳು ಗಂಟುಬೀಳಲಿವೆ.

ವೃಷಭ— ನಿಮಗೆ ಈ ವಾರದಲ್ಲಿ ಸಂಭವಿಸತಕ್ಕ ಅಪಶ್ರುತಿಪರಂಪರೆಗಳಿಂದ ನಿಮ್ಮ ಮನಸ್ಸು ಅಲ್ಲೋಲ ಕಲ್ಲೋಲವಾಗಲಿದೆ. ಆತ್ಮೀಯರ ವಿರಹ, ಮಾರ್ಗಾತಿಕ್ರಮಣ ಮತ್ತು ದೈಹಿಕಾಲಸ್ಯ, ಅಧಿಕ ವ್ಯಯಾದಿಗಳಿಂದ ಸದಾ ದುಃಖಕ್ಕೊಳಗಾಗುವಿರಿ. ನೌಕರಿಭಾಗದಲ್ಲಿ ಮನಸ್ಸಮಾಧಾನವಿರದು. ಅಧ್ಯಯನ ಭಾಗಕ್ಕೆ ವಿದ್ಯಾರ್ಥಿಗಳಿಗೆ ತೊಡಕುತೊಂದರೆಗಳಧಿಕವಾಗಲಿವೆ. ಧನವು ಅಧಿಕ ವ್ಯಯವಾದರೂ ಕೈಗೊಂಡ ಕಾರ್ಯವು ನಿಮ್ಮ ಇಚ್ಛೆಯಂತೆ ಆಗಲಿದೆ. ತಾ. 27.28.1ರಲ್ಲಿ ವಿಜಯವೂ ಧನವಸನಗಳೂ ಲಭಿಸುವವು.

ಮಿಥುನ— ಇತ್ತೀಚೆಗೆ ಕೆಲವು ವಾರಗಳಿಂದ ನೀವು ಪಡೆದ ಶನಿಯ ಕಾಟದಿಂದ ಮುಕ್ತರಾಗಿದ್ದರೂ ಪುನಃ ಆತನ ಪೀಡೆಗೆ ಸಿಲುಕಲಿರುವಿರಿ. ವ್ಯಯಸ್ಥಾನದಲ್ಲಿ ಪ್ರಬಲರಾದ ಕುಜ ಗುರು ಶನಿಗಳಿರುವುದರಿಂದ ನಿಮ್ಮ ಉತ್ಪತ್ತಿಯ ಇಮ್ಮಡಿ ಖರ್ಚು ಆಗಲಿದೆ. ದೇಹ ಮನಸ್ಸುಗಳಿಗೆ ಸುಖವಿರದು. ಹಣದ ಸಲುವಾಗಿ ಹಲವರೊಡನೆ ಜಗಳವಾಗುವದು. ಅನಿರೀಕ್ಷಿತ ಅನರ್ಥಗಳೊದಗಿ ನಿಮ್ಮನ್ನು ತಲೆಯೆತ್ತದಂತೆ ಮಾಡಲಿವೆ. ವರ್ತಕ ಜನರೂ ವಿದ್ಯೋಪಜೀವಿಗಳೂ ಸ್ವಸ್ವವೃತ್ತಿಯಲ್ಲಿ ಕೃತಕೃತ್ಯರಾಗುವರು. ತಾ. 26. 2. 3. ಈ ದಿನಗಳಲ್ಲಿ ಮನಶ್ಶಾಂತಿ, ವಿಜಯ, ಗೃಹಸುಖಗಳು ಲಭಿಸುವವು.

ಕರ್ಕಾಟಕ— ಪ್ರಕೃತಿಯ ಆಲಸ್ಯ, ಗೃಹಕಲಹ, ಸ್ತ್ರೀಪೀಡೆ ಇತ್ಯಾದಿಗಳು ಈ ವಾರದಲ್ಲಿ ಬಹುಮಟ್ಟಿಗೆ ಕಡಿಮೆಯಾಗುವವು. ಶಕ್ತಿಯುತರಾದ ಗ್ರಹರಿಂದ ನಿಮ್ಮ ಲಾಭಸ್ಥಾನವು ಪೂರ್ಣವಾಗಿರುವುದರಿಂದ ಬಹು ವಿಧದಿಂದ ಧನಾಗಮವೂ ರಾಜಕೀಯದಲ್ಲಿ ವಿಜಯವೂ ಜನರಿಂದ ಗೌರವವೂ ಲಭಿಸಲಿದೆ. ಮಾನಸಿಕ ಚಿಂತೆಯು ದೂರವಾಗಲಿದೆ. ಯತ್ನಶೀಲರಿಗೆ ಯೋಗ್ಯತೆಗೆ ತಕ್ಕುದಾದ ಸ್ಥಾನಪ್ರಯೋಜನಗಳು ಲಭಿಸುವವು. ಇಷ್ಟಿದ್ದರೂ ತಾ. 26. 2. 3 ಈ ದಿನಗಳಲ್ಲಿ ದೇಹಾಲಸ್ಯ, ಧನವ್ಯಯ, ವಿಘ್ನಗಳು ಸ್ವಲ್ಪ ಹೆಚ್ಚಲಿವೆ.

ಸಿಂಹ— ನೀವು ಒಳ್ಳೆಯ ಕಾರ್ಯಸಾಧಕರೂ ಹಠವಾದಿಗಳೂ ಯತ್ನಶೀಲರೂ ಆಗಿರುವಿರಿ. ಆದರೆ ಈ ವಾರದಲ್ಲಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ದೊರೆಯುವಂತಿಲ್ಲ. ಶ್ರಮವು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾದೀತು. ಗೃಹತಾಪತ್ರಯಗಳಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ನಿಮ್ಮ ಮನಸ್ಸಿಗೆ ಕೊಂಚವೂ ಶಾಂತಿಯಿರದು. ದೇಹದಾರೋಗ್ಯವು ಕೊಂಚ ಉತ್ತಮವಾಗಲಿದೆಯಾದರೂ ವಿರೋಧಿಗಳ ಕಾಟವು ಸಹಿಸುವಂತಿಲ್ಲ. ತಾ. 27. 28. 1. 4. 5. ಇವಿಷ್ಟು ದಿನಗಳೂ ಅಪಾಯಕಾರಿಗಳಾಗಿವೆ

ಕನ್ಯಾ— ಅಷ್ಟಮಸ್ಥಾನದಲ್ಲಿದ್ದ ರವಿಯಂಗಾರಕರ ಪೀಡೆಯಿಂದ ನೀವೀಗ ಮುಕ್ತರಾದಿರಿ. ಶತ್ರು ಜನರು ಮಿತ್ರರಾಗುವರು. ಹೆಚ್ಚಿನ ಮನೋರಥಗಳು ಈಡೇರಲಿವೆ. ದುಡ್ಡಿನ ಅಡಚಣೆಯೂ ಉಂಟಾಗುವಂತಿಲ್ಲ. ಆದರೆ ನಿತ್ಯನೈಮಿತ್ತಿಕ ಕರ್ಮಗಳಿಗೆ ಲೋಪಬರುವಂತಿದೆ. ಗೃಹದ ಅವ್ಯವಸ್ಥೆ, ವಿನಾಕಾರಣ ಕಲಹ ಇತ್ಯಾದಿಗಳಿಂದ ವ್ಯಸನಿಗಳಾದ ನಿಮ್ಮ ದೇಹದಲ್ಲಿ ದಿನೇ ದಿನೇ ಶಕ್ತಿಹ್ರಾಸವಾದೀತು ತಾ. 1.2 3. ಈ ದಿನಗಳಲ್ಲಿ ಅಧಿಕ ಧನವ್ಯಯ, ದೇಹಾಲಸ್ಯಗಳು ಕಂಡುಬರಲಿವೆ.

ತುಲಾ— ಅನಿಷ್ಟಕಾರಿಯಾದ ಅಷ್ಟಮಸ್ಥಾನದಲ್ಲಿ ಕುಜ ಗುರು ಶನಿಗಳ ಯೋಗವಾಗುವುದರಿಂದ ಈ ವಾರದಲ್ಲಿ ನಿಮಗೆ ನಾನಾ ಕಷ್ಟನಷ್ಟಗಳು ಪ್ರಾಪ್ತವಾ

(೧೧ನೇ ಪುಟ ನೋಡಿರಿ.)

BHUVANENDRA PRODUCTS LTD.,

Head Office and Factory:
Katapadi, S. Kanara

Depots:
1. Maharath Galli, Hubli
2. 57 Big street, Triplicane Madras.

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ಸಾಯಿಸ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಕೆ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಕೇಶವ ಶೆಣೈ L. I. M.

ಬಂಟರ ಯಾನೆ ನಾಡವರ ಸಮಾಜದ ಉನ್ನತಿಯು ಬಗೆ ಹೇಗೆ?

ಲೇಖಕರು:- ಶ್ರೀ. ಪಿ ಚಂದ್ರಶೇಖರ ಹೆಗ್ಡೆ, ಬಿ. ಎ ಬಿ. ಎಲ್., ಮಂಗಳೂರು.

ದಕ್ಷಿಣ ಕನ್ನಡಾ ಜಿಲ್ಲೆಯ ಅನೇಕ ಜಾತಿ ಮತಗಳ ಪೈಕಿ ಬಂಟರ ಯಾನೆ ನಾಡವರದೊಂದು ಪ್ರಾಮುಖ್ಯ ಜಾತಿ. ಹೀಗಿದ್ದರೂ ಬಂಟರ ಸಮಾಜದಲ್ಲಿ ಅದರ ಪ್ರಾಮುಖ್ಯಕೆ ಸರಿಯಾದ ಒಕ್ಕಟ್ಟು, ಸಂಘಟನೆ, ಶಕ್ತಿ ಮತ್ತು ಪ್ರಭಾವವು ಕಾಣುವುದಿಲ್ಲವೆಂಬುದನ್ನು ಎಲ್ಲರೂ ಒಪ್ಪ ಬೇಕಾಗಿದೆ. ಈ ಅಭಿಪ್ರಾಯವನ್ನೆ ಕೆಲವರು 'ಬಂಟರಲ್ಲಿ ಒಕ್ಕಟ್ಟಿಲ್ಲ' 'ಬಂಟರಿಗೆ ದೊರೆಗಳಿಲ್ಲ' 'ಬಂಟರನ್ನು ಕೇಳುವವರಿಲ್ಲ' 'ಬಂಟರಿಗೆ ಗುರು ಮಠಗಳಿಲ್ಲ' ಎಂದೂ ಇನ್ನು ಕೆಲವರು "ಬಂಟ ಅಬ್ಬರ ಎಲ್ಲ ಗೊಬ್ಬರ" ಎಂದೂ ಉದ್ಗರಿಸಿ-ಯಾ-ಮೂದಲಿಸಿ ಹೇಳುವುದುಂಟು. ವಸ್ತುತಃ ಇಂಥಾ ಉದ್ಗಾರಗಳ ಅರ್ಥವು ತೀರ ವಿಪರೀತವೆಂದು ಹೇಳಲಿಕ್ಕೆ ಬರುವುದಿಲ್ಲ. ಬಲ್ಲವರಲ್ಲಿ ಕೆಲವರು ಹಲವು ವೇಳೆ ನಮ್ಮ ಸಮಾಜದ ದುರವಸ್ಥೆಯನ್ನು ಮನಸ್ಸಿಗೆ ತಂದು ಅದರ ಕಾರಣಗಳನ್ನು ವಿಮರ್ಶಿಸಿ ಸುಧಾರಿಸುವ ಬಗೆಯನ್ನು ಯೋಚಿಸದೆ ಇರಲಿಕ್ಕಿಲ್ಲ. ಹಲವರಿಗೆ ಹಲವು ಕಾರಣಗಳು ಕಂಡು ಬರಬಹುದು. ಆದರೆ ಅವುಗಳನ್ನು ಸ್ಥೂಲವಾಗಿ ಹೇಳುವುದಾದರೆ ನಮ್ಮಲ್ಲಿ ಬೇಕಾದ 'ಸಂಘ ಶಕ್ತಿ' ಮತ್ತು 'ವ್ಯಾಪಕ ದೃಷ್ಟಿ' ಇಲ್ಲದಿರುವುದೇ ನಮ್ಮ ಏಳಿಗೆಗೆ ಮುಖ್ಯ ಬಂಧಕಗಳಾಗಿವೆಯೆಂದು ಹೇಳಬಹುದು. 'Where there is no vision people perish and where there is no organization there is no salvation' ಎಂಬ ಇಂಗ್ಲಿಷ್ ಉಕ್ತಿಗಳ ಸಾರವಾದರೂ ಇಷ್ಟೆ. ಬಂಟರ ಯಾನೆ ನಾಡವ ಸಮಾಜಕ್ಕಿದು ಚೆನ್ನಾಗಿ ಅನ್ವಯಿಸುವುದೆನ್ನಬಹುದು. ನಮ್ಮ ಸಮಾಜದ ಏಳಿಗೆಯನ್ನು ಯಾವ ಸಾಧನೆಗಳಿಂದ ಸಂಪಾದಿಸಬಹುದು? ಯಾವ ವಿಧಾಯಕ ಕಾರ್ಯಕ್ರಮಗಳು ನಮ್ಮನ್ನು ಪ್ರಗತಿ ಪಥದಲ್ಲಿ ಮುನ್ನಡೆಸಬಹುದೆಂಬುದೀಗ ಪ್ರಶ್ನೆ.

ಈ ವಿಷಯವಾಗಿ ನಮ್ಮ ಪತ್ರಿಕೆಗಳಲ್ಲಿ ಅನೇಕ ಬಲ್ಲವರು ಬಗೆಬಗೆಯ ಸಲಹೆಗಳನ್ನು ಕೊಟ್ಟು ಲೇಖನಗಳನ್ನು ಬರೆದಿರಬಹುದು. ಅಂತು ನಾನೊಂದು ಇಲ್ಲಿ ಹೆಚ್ಚಿನ ಮಹತ್ವದ ವಿಷಯವನ್ನೇನೂ ಹೊರಗೆಡಹಲು ಈ ಲೇಖನ ಬರೆದುದಲ್ಲ. ಆದರೆ ವಾಸ್ತವವಾದ ಕೆಲವಂಶವನ್ನು ಎತ್ತಿ ಒತ್ತಿ ಹಲವು ಸಲ ಹೇಳುವುದರಿಂದ ಅದರ ಪ್ರಯೋಜನವನ್ನು ಚೆನ್ನಾಗಿ ಮನಗಾಣುವಂತಾಗುವುದು. ಅದುದರಿಂದ ನಮ್ಮ ಸಮಾಜದ ಪರಿಸ್ಥಿತಿಯನ್ನು ಸ್ವಲ್ಪ ವಿವೇಚಿಸುವ. ಒಂದು ವಿಧವಾಗಿ ಯೋಚಿಸಿದರೆ ಬಂಟರ ಜಾತಿಯ ಒಕ್ಕಟ್ಟನ್ನೂ ಉನ್ನತಿಯನ್ನೂ ಸಾಧಿಸುವುದು ಬಹಳ ಸುಲಭದ ಕೆಲಸವೆಂದು ಕಾಣುತ್ತದೆ. ಅಂದರೆ ಬಂಟರ ಜಾತಿಯು ಬರೀ ಒಂದು ಜಿಲ್ಲೆಯೊಳಗೆ ಮಾತ್ರ ಇರುವ, ಒಂದು ಕಟ್ಟನ್ನೂ ಒಂದು ವ್ಯಕ್ತಿಯನ್ನೂ ಒಂದು ಭಾಷೆಯನ್ನೂ ಆಡುವ ಒಂದು ಸಣ್ಣ ಸಂಘವಾಗಿದೆ. ಹೀಗಿರುವಲ್ಲಿ ಅನೇಕ ಜಾತಿ ವಿಜಾತಿಗಳಿರುವ ವಿಶಾಲ ಜನಪದ ಯಾ ದೇಶಗಳ ಐಕ್ಯತೆಯನ್ನು ನಮ್ಮ ಕಣ್ಣ ಮುಂದೆಯೇ ಆಯಾ ದೇಶಗಳ ಪ್ರಮುಖರು ಸಾಧಿಸಿರುವಲ್ಲಿ ಸಣ್ಣ ಸಂಗಡವಾಗಿರುವ ನಮ್ಮ ಸಮಾಜದ ಉನ್ನತೋನ್ನತಿಯನ್ನು ಸಾಧಿಸಿಕೊಳ್ಳುವದು ಹೆಚ್ಚಿನ ಕೆಲಸವಾಗುವುದೇ? ಇನ್ನೊಂದು ವಿಧದಿಂದ ಯೋಚಿಸಿದರೆ ಬಂಟರು ಒಂದು ಜಾತಿ ಕಟ್ಟಿಗೆ ಸೇರಿದ್ದರೂ, ಅವರಲ್ಲಿ ಮಿಕ್ಕ ಜಾತಿಗಳ ಹಾಗೆ ಜಾತೀಯತೆಯ ಸ್ವಕೀಯ ಭಾವನೆಯು ಕಡಿಮೆ. ಅವರು ಅವರವರ ಮಟ್ಟಿನಲ್ಲಿ ಸ್ವತಂತ್ರರು. ಅವರಲ್ಲಿ ಹೆಚ್ಚಿನ ವಿದ್ಯೆಯಿಲ್ಲ, ಅವರಿಗೆ ಗುರುಗಳಿಲ್ಲ, ಸ್ವಾಮಿಗಳಿಲ್ಲ. ಹಳ್ಳಿ ವಾಸಿಗರು ಕೆಲವು ಎಕ್ರೆ ಭೂಮಿಗಳನ್ನು ಹಿಡಕೊಂಡು ತಮ್ಮ ಮಟ್ಟಿಗೆ ತಾವೇ ದೊರೆಗಳೆಂದು ಎಣಿಸಿಕೊಂಡು ಅದರಲ್ಲಿಯೇ ಸೇತಾಡಿಕೊಂಡಿರುವ ಮನೋವೃತ್ತಿಯವರೇ ಹೆಚ್ಚು. ಹೀಗಿರುವಲ್ಲಿ ಒಕ್ಕಟ್ಟು ಸುಲಭ ಸಾಧ್ಯವಾದ ಕೆಲಸವೆಂದು ಹೇಳಲಿಕ್ಕೆ ಬರುವುದಿಲ್ಲ. ಈ ಅಭಿಪ್ರಾಯಗಳೆರಡೂ ತಪ್ಪು, ಎರಡೂ ನಿಜವೆಂದರೆ ಸ್ವಲ್ಪ ವಿನೋದವಾಗಿ ತೋರಬಹುದು. ಆಳವಾಗಿ ವಿಚಾರಿಸಿ ನೋಡಿದರೆ ನಮ್ಮ ಒಕ್ಕಟ್ಟೂ ಉನ್ನತಿಯೂ ಅಸಾಧ್ಯವಾದ ಕೆಲಸವಲ್ಲವೆಂದೂ, ಒಕ್ಕಟ್ಟನ್ನು ಸಾಧಿಸುವ ವಿಧಾನವನ್ನೂ ಮಹತ್ವವನ್ನೂ ಮಾತ್ರ ನಾವು ಸರಿಯಾಗಿ ತಿಳಿದಿಲ್ಲವೆಂದೂ ಹೇಳಬೇಕಾಗುತ್ತದೆ. ಸಂಘಶಕ್ತಿಯೇ ಒಕ್ಕಟ್ಟಿನ ಜೀವಾಳ. ಆ ಸಂಘ ಶಕ್ತಿಯು ಒಂದು ಸಮಾಜದಲ್ಲಿ ತನ್ನಷ್ಟಕ್ಕೆ ಮೊಳೆತು ಬರುವುದು ಅಪರೂಪ. ಬಂದರೂ ಅದು ಆಧುನಿಕ ವ್ಯವಹಾರಗಳ ಘರ್ಷಣೆಯ ಆಘಾತದಿಂದ ಶಿಥಿಲವಾಗಿ ಹೋಗಬಹುದು. ಹಾಗೂ ಈ ಸಂಘ ಶಕ್ತಿಯನ್ನು ನಾವು ನಮ್ಮ ಸಾಧನೆಯಿಂದ ಸಂಪಾದಿಸ ಬೇಕೆಂಬುದು ನಿಜ. ಮುಖ್ಯವಾಗಿ ಹೇಳುವುದಾದರೆ ನಮ್ಮ ಸಮಾಜದಲ್ಲಿ ನಮ್ಮೊಳಗೆ ಸಾಮುದಾಯಿಕ ಕಾರ್ಯ ಕಲಾಪಗಳನ್ನು ನಡೆಸುವ ಸಂಘಗಳೂ, ಸಂಸ್ಥೆಗಳೂ ಹೆಚ್ಚೆಚ್ಚಾಗಿ ಆರಂಭವಾಗುವುದು ಅವಶ್ಯ. ನಮ್ಮಲ್ಲಿ ರಾಜಕೀಯ, ಧಾರ್ಮಿಕ, ಆರ್ಥಿಕ, ವ್ಯವಹಾರಿಕ ಇವೇ ಮೊದಲಾದ ಸಮಾಜದ ಬಹುಮುಖ ಕಾರ್ಯಕಲಾಪಗಳನ್ನು ರೂಪಿಸಿ ಅದನ್ನು ಸಾಧಿಸುವ ಕಾರ್ಯಕ್ರಮಗಳು ಸುತ್ತಲೂ ಹೆಚ್ಚಬೇಕು. ಇಂಥಾ ಸಂಸ್ಥೆ-ಯಾ-ಸಂಘಗಳು ನಮ್ಮಲ್ಲಿ ತೀರಾ ಕಡಿಮೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಉದಾಹರಣೆಗಾಗಿ, ನಮ್ಮ ಜಿಲ್ಲೆಯ ಒಂದೆರಡು ಬೇರೆ ಜಾತಿಗಳ ಉದಾಹರಣೆಯನ್ನು ತೆಗೆದುಕೊಳ್ಳುವ. ಗೌಡಸಾರಸ್ವತ ಬ್ರಾಹ್ಮಣರ ಸಾಂಘಿಕ ಜೀವನವನ್ನೂ, ನಮ್ಮ ಸಮಾಜದ ಪಾಡನ್ನೂ ಹೋಲಿಸಿ ನೋಡಿದರೆ ನಾವು ಎಲ್ಲಿ ನಿಂತಿದ್ದೇವೆಂದು ಗೊತ್ತಾಗುವುದು. ಮಂಗಳೂರು ಪಟ್ಟಣವನ್ನೇ ಸುತ್ತಾಡಿ ನೋಡಿ. ಎಲ್ಲ ನೋಡಿದರೂ ಭವ್ಯವಾಗಿ ತೋರುವ ಅವರ ದೇವಸ್ಥಾನಗಳೂ ಅವುಗಳ ಸಂಪತ್ತೂ, ಬೇಂಕುಗಳೂ, ಹೈಸ್ಕೂಲುಗಳೂ, ದೊಡ್ಡದೊಡ್ಡ ಕಂಪೆನಿಗಳೂ, ಛಾಪಖಾನೆಗಳೂ, ಪತ್ರಿಕೆಗಳೂ ಇವೇ ನಮ್ಮ ಕಣ್ಣ ಮುಂದೆ ಹಾಯುತ್ತಿವೆ. ಅದೇ ರೀತಿಯಲ್ಲಿ ಇಲ್ಲಿಯ ಕ್ರೈಸ್ತ ಮತಸ್ಥರ ಸಾಂಘಿಕ ಜೀವನದ ಕಡೆಗೆ ಕಣ್ಣನ್ನು ಹೊರಳಿಸಿದರೆ ನಾಲ್ಕು ಕಡೆಗಳಲ್ಲಿಯೂ ಚರ್ಚುಗಳೂ, ಕಾಲೇಜುಗಳೂ, ಆಸ್ಪತ್ರೆಗಳೂ, ಬೇಂಕುಗಳೂ, ಕಂಪೆನಿಗಳೂ ಕಾಣುತ್ತಿವೆ. ಇವೆಲ್ಲ ಬರೀ ಕಲ್ಲು ಸುಣ್ಣದ ಗೋಡೆಗಳಲ್ಲ. ಚಂದಕ್ಕಾಗಿ ಕಟ್ಟಿದ ಗುಡಿಗೋಪುರಗಳ ಗಡಣ ಮಾತ್ರವಲ್ಲ. ಆಯಾ ಸಮಾಜದ ಸಾಂಘಿಕ ಕಾರ್ಯಕಲಾಪಗಳ ಹೆಗ್ಗುರುತುಗಳಾಗಿವೆ. ಇವುಗಳ ಹಿಂದೆ ಸಮಾಜದ ಅನೇಕ ವರ್ಷಗಳ ಸಾಧನೆಯು ಪರಂಪರೆಯು ನೆಲೆನಿಂತಿದೆ. ಯೋಚಿಸಿದರೆ, ವಿದ್ಯಾಪ್ರಚಾರದ ಉದಾರ ಸೇವಾಕ್ರಮವೆಂದು ಇಟ್ಟುಕೊಂಡು ದೊಡ್ಡ ದೊಡ್ಡ ಕಾಲೇಜು, ಹೈಸ್ಕೂಲುಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಸಮಾಜದ ಸಂಸ್ಕರಣ ಮತ್ತು ಉನ್ನತಿಯನ್ನು ಸಾಧಿಸುತ್ತ ತಮ್ಮ ಜಾತಿಯವರಿಗೆ ಬೇಕಾದ ಕೆಲಸಗಳನ್ನು ಒದಗಿಸಿಕೊಡುವ ಸಂಗತಿಯು ನಮ್ಮ ಕಣ್ಣಿಗೆ ಹೊಡೆಯುತ್ತದೆ. ಅಂದರೆ ಬಂಟರು ಕೂಡಲೇ ತಮ್ಮದೇ ಆದ ಒಂದು ದೇವಸ್ಥಾನವನ್ನಾಗಲಿ ಅಥವಾ ಒಂದು ಹೈಸ್ಕೂಲನ್ನಾಗಲಿ ಕಟ್ಟಿಕೊಳ್ಳಬೇಕೆಂದು ನಾನು ಹೇಳುವದಲ್ಲ. ಇವೆಲ್ಲ ಸಾಂಘಿಕ ಜೀವನದ ಶೃಂಖಲೆಯ [illegible]ನೊಂದು ಗೊಣಸು ಎಂದಷ್ಟೇ ಹೇಳುತ್ತೇನೆ.

ಇಂಥಾ ಸಾಂಘಿಕ ಜೀವನವನ್ನೂ ಅದರ ಪ್ರಯೋಜನವನ್ನೂ ನಮ್ಮ ಸಮಾಜದವರು ಹೆಚ್ಚೆಚ್ಚಾಗಿ ಮನಗಾಣಬೇಕು. ಇದೇ ಉನ್ನತಿಗೆ ಹೆದ್ದಾರಿ

ಕೆಲವು ವರುಷಗಳಿಂದ ನಮ್ಮಲ್ಲಿ ರಾಜಕೀಯ ಮತ್ತು, ಸಾಮಾಜಿಕ ಭಿನ್ನಾಭಿಪ್ರಾಯಗಳು ಹುಟ್ಟಿ, ಸಮಾಜದ ಪ್ರಗತಿಯು ಹೆಚ್ಚು ಮಟ್ಟಿಗೆ ಹೀನಾವಸ್ಥೆಗೆ ಬಂದು ನಿಂತಿತ್ತು. ಆದರೆ ಈಗ ವಾತಾವರಣವು ಬಲುಮಟ್ಟಿಗೆ ಒಳ್ಳೇದಾಗಿರುವುದೆನ್ನಬಹುದು. ಅದಲ್ಲದೆ ನಮ್ಮ ಸಮಾಜದ ಹಲವು ಮಂದಿ ವಿದ್ಯಾವಂತರು ಸಮಾಜದ ಮೇಲ್ಮೆಯನ್ನೂ ಅದರ ಸಂಪತ್ತನ್ನೂ ಸಾಧಿಸುವ ಬಗೆಯಲ್ಲಿ ಮನಸ್ಸನ್ನು ಹರಿಸುವುದು ತೋರುತ್ತಿದೆ. ಇದು ಶ್ಲಾಘನೀಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಇದೇ ಉತ್ಸಾಹ ಮತ್ತು ಉದ್ದೇಶದಿಂದ ಕೂಡಿದ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ನಿವಾಸಿಗಳ ಸಂಘದ ಕಾರ್ಯಕಾರಿ ಮಂಡಲವು ನೊನ್ನೆ ತಾ. 8-2-42 ರಲ್ಲಿ ಭವನದ ಹೊಸ್ಟೆಲ್ ಡೇ ಸಂದರ್ಭದಲ್ಲಿ ಕೂಡಿ ಕೆಲವು ಅಭಿಪ್ರಾಯಗಳನ್ನು ಚರ್ಚೆಮಾಡಿತು. ಶ್ರೀ. ಕೆ. ಕೆ. ರೈಗಳು ನಮ್ಮ ಬಂಟರ ಸಮಾಜವು ಹೆಚ್ಚೆಚ್ಚಾಗಿ ವ್ಯಾಪಾರಗಳಲ್ಲಿ ಕೈಹಾಕುವುದು ಒಳ್ಳೆಯದೆಂತಲೂ, ಆ ಬಗ್ಗೆ ಜನಸಾಮಾನ್ಯರಲ್ಲಿ ತಿಳುವಳಿಕೆ ಮತ್ತು ವಿಶ್ವಾಸವನ್ನು ಹುಟ್ಟಿಸುವರೆ ಮೊದಲನೆಯದಾಗಿ ಒಂದು ವಿದ್ಯಾಪ್ರಸಾರದ ಯೋಜನೆಯನ್ನು ಹೂಡಬೇಕೆಂದೂ ಸೂಚಿಸಿದರು. ಅದನ್ನು ಶ್ರೀ. ಕವಿರಾಜ ಮಹಾಬಲಶೆಟ್ಟರು ಅನುಮೋದಿಸಿದರು. ಶ್ರೀ. ಪಿ. ಯಸ್. ತಿಮ್ಮಪ್ಪ ಶೆಟ್ಟರು, "ನಮ್ಮ ಮುಖಂಡರಲ್ಲಿ ನಮಗೆ ವಿಶ್ವಾಸ ಇಲ್ಲದಿದ್ದರೆ ಇಂತಹ ಸಂಸ್ಥೆಗಳು ಜಯಶೀಲವಾಗಿ ನಡೆಯಲಿಕ್ಕಿಲ್ಲ' ವೆಂದು ಟೀಕಿಸಿದರು. ಕಡೆಗೆ ರಾವ್ ಬಹದ್ದೂರ್ ಶ್ರೀ. ಕೆ. ಟಿ ಆಳ್ವರು ತಮ್ಮ ಅನುಭವ ಯುಕ್ತವಾದ ಕೆಲವು ಅಭಿಪ್ರಾಯಗಳನ್ನು ಕೊಟ್ಟರು. ಅದರ ಸಾರಾಂಶವೇನೆಂದರೆ, ನಮ್ಮ ಕೈಕೊಂಡಿರುವ ಕಾರ್ಯಗಳನ್ನು ನಾವು ಬಲಪಡಿಸಿದರೆ ಅದರಿಂದ ಹೆಚ್ಚು ಪ್ರಯೋಜನವುಂಟು. ನಮ್ಮ ಸಮಾಜದಲ್ಲಿ ಈಗ ಸಾಧಾರಣವಾಗಿ ನೆಲೆನಿಂತಿರು[illegible] ಬೇಂಕನ್ನು ಇನ್ನೂ ಬಲಪಡಿ

(೫ನೇ ಪುಟ ನೋಡಿರಿ).

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts: ...	$7\frac{1}{2}$% p. a.
Usance Bills:	7 % p. a.
Trade Bills	6 % p. a.
Loans on Produce	$5\frac{1}{2}$% p. a.
Loans on Insurance Policies, Stocks & shares	5 % p. a.
Loans on Gold	$4\frac{1}{2}$ % p. a.

The above rates are for medium-sized loans The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.
ESTD. 1906

NOTICE.
In the Court of the District Munsiff of Mangalore
S. C. No. 891/1941.

BETWEEN
St. Ritas Electric Works by its proprietors G. C. Sequeira Brothers —Plaintiffs.
and
A. S. Krishna Rao—Defendant.

To
The defendant A. S. Krishna Rao, managing Secretary of the Bombay Cooperative Insurance Society, Ltd., Hampankatta, Mangalore.

Please take notice that the above named Plaintiff has filed a suit against you for a sum of Rs 58-14-1 due from you in respect of dealings Carried on by you on 7-4-'41 and the said suit stands posted to 4-3-1942 for final disposal.

You are herby informed that if you fail to appear in Court at 10-30 A. m. on that day, either in Person or by a duly authorised pleader, the suit will be decided exparte against you.

(By order of the Court)
K. P. Gopalkrishna Rao,
Vakil for Plaintiff
MANGALORE, 16-2-42.

ರಾಯರಿಗೆ ಹೆಂಡತಿ ಕಲಿಸಿದ ಪಾಠ!

ದೂರದ ಬೆಟ್ಟ ಮನೋಹರ. ಹತ್ತಿರದ ಎಷ್ಟೊಂದು ಸುಂದರ ಹೂದೋಟವಾದರೂ ಸಸಾರವೆಂಬುದಕ್ಕೆ ರಾಯರೊಂದು ಉದಾಹರಣೆಯಾಗಿದ್ದರು. ಅವರ ಪತ್ನಿಯು ಚೆಲುವೆ, ಚದುರೆ, ಸುಶೀಲೆ ಮತ್ತು ಯೌವನಸ್ಥೆ. ಅವರಲ್ಲದಿರುತ್ತಿದ್ದರೆ, ರಾಯರ ಗೃಹಾಡಳಿತವು ಕೂಡಾ, ಅವರ ಆಸ್ತಿ ಮೊದಲಾದುವುಗಳ ಆಡಳಿತದಂತೆಯೇ ಅವ್ಯವಸ್ಥೆಗೊಳಗಾಗುತ್ತಿತ್ತು. ಮನೆಗೆಲಸದ ಸಕಲ ಜವಾಬ್ದಾರಿಯನ್ನೂ ರಾಯರು ತನ್ನ ಚತುರ ಗೃಹಿಣಿಯ ಮೇಲೆ ಹೊರಿಸಿ, ಆ ಕುರಿತು ತಾನೇನೂ ಗಮನ ಕೊಡುತ್ತಿದ್ದಿಲ್ಲ. ರಾಯರ ಆಸ್ತಿ ಮೊದಲಾದುವುಗಳ ಆಡಳಿತವನ್ನೂ ಅವರ ಹೆಂಡತಿಯೇ ನಡಿಸುತ್ತಿದ್ದರೆ ಉತ್ತಮವಿತ್ತೆಂದು ಜನರು ಆಡಿಕೊಳ್ಳುವಷ್ಟು ದಕ್ಷತೆಯಿಂದ ಗೃಹಕೃತ್ಯವು ನಡೆದಿದ್ದಿತು.

ಆದರೆ ಮುಂಬೆಳಕು ಹರಿಯುವ ಮೊದಲಿದ್ದು ರಾತ್ರಿ ಎಂಟೊಂಭತ್ತು ಘಂಟೆಯವರೆಗೆ ಎಡೆಬಿಡದೆ ದುಡಿದು ಮನೆಗೆಲಸವನ್ನೆಲ್ಲಾ ಚಾಕಚಕ್ಯತೆಯಿಂದ ನಿರ್ವಹಿಸಿ ರಾಯರ ಕತ್ತೆಚಾಕರಿ ಮಾಡುವ ದಕ್ಷ ಸೇವಕಿ ಮಾತ್ರವಾಗಿದ್ದರು ಅವರ ಪತ್ನಿ. ರಾತ್ರಿ ಭೋಜನವಾದೊಡನೆಯೇ ಅವರ ಸೇವೆಯ ಜವಾಬ್ದಾರಿಯು ಕೊನೆಗೊಂಡುತ್ತಿತ್ತು. ಭೋಜನಾನಂತರ ವೀಳ್ಯ ಹಾಕುವುದಕ್ಕೇನೇ ಎಂಬಂತೆ ರಾಯರು, ಸುಮಾರು ಎರಡು ಮೈಲು ದೂರದ ಸೂಳೆಮನೆಗೆ ಹೋಗುತ್ತಿದ್ದರು. ಪ್ರತಿನಿತ್ಯ ರಾಯರು ಸುಮಾರು 9 ಘಂಟೆಗೆ ಸುಂದರ ರಾವಣನಂತೆ ಶೃಂಗಾರವಾಗಿ ಸ್ವಂತ ಕುದುರೆ ಗಾಡಿಯಲ್ಲಿ ಕೂತು ಸೂಳೆಮನೆಗೆ ಧಾವಿಸುತ್ತಿದ್ದರು. ಮುಂಜಾನೆ ಬೇಗ ಮನೆಗೆ ಹಿಂತಿರುಗುತ್ತಿದ್ದರು. ಆದುದರಿಂದ ಹೆಚ್ಚಿನ ಜನರಿಗೆ ರಾಯರ ರಾತ್ರಿಯ ಈ ಚಲನವಲನದ ಸಂಗತಿಯೇ ತಿಳಿಯಲು ಆಸ್ಪದವಿರಲಿಲ್ಲ.

★

ರೂಪವತಿ ಹೆಂಡಿರಿದ್ದರೆ ಗಂಡಂದಿರು ಸೂಳೆಗಾರಿಕೆ ಮಾಡಲಾಸ್ಪದವಿರುವುದಿಲ್ಲೆಂಬ ಹಲವರ ಭಾವನೆಯು ತಪ್ಪಾದುದು. "ಅಬ್ಬ! ಈ ಸ್ತ್ರೀಯೊಂದಿಗೆ ಸಂಸಾರಮಾಡುವ ಗಂಡಸಾದರೂ ಎಂಥವನಪ್ಪ!" ಎಂಬ ಉದ್ಗಾರವನ್ನೆಬ್ಬಿಸುವಷ್ಟು ಕುರೂಪಿಯಾಗಿರುವ ಸ್ತ್ರೀಯರೊಂದಿಗೆ ಸುಖವಾಗಿ ಸಂಸಾರಮಾಡುವ ಗಂಡಸರೆಷ್ಟು ಮಂದಿ ಇಲ್ಲ! ಅತ್ಯಂತ ಚೆಲುವೆಯರಾದ ಹೆಂಡಿರನ್ನು ಮನೆಯಲ್ಲಿ ಕೊರಗಿ, ಕರಗಿ, ಸೊರಗಬಿಟ್ಟು ಸೂಳೆಯರ ಸಹವಾಸದ ಕೊಳಕು ಕೂಪದಲ್ಲೇ ಬಿದ್ದು ನರಳುವವರೆಷ್ಟು ಮಂದಿ ಇಲ್ಲ! ರೂಪ ಹೇಗೂ ಇರಲಿ, ಗುಣವೇ ಪ್ರಾಮುಖ್ಯವೆಂದರೂ, ರಾಯರ ಹೆಂಡತಿಯಂತೆ ರೂಪ ಮತ್ತು ಗುಣಶೀಲರಾದ ಹೆಂಡಿರಿದ್ದರೂ ಅವರನ್ನು ಬಿಟ್ಟು ಸೂಳೆಯರಿಗೆ ಮನಸೋಲುವವರೆಷ್ಟೋ ಮಂದಿ ಇದ್ದಾರೆ. ಸ್ತ್ರೀಪುರುಷ ಸಂಬಂಧವು ಅದೊಂದು ನಿಗೂಢ ರಹಸ್ಯವೇ ಆಗಿದೆ. ಹೀಗೆಯೇ ಎಂದು ಕಾರಣ ಕೊಟ್ಟು ಅದನ್ನು ಸಿದ್ಧಾಂತೀಕರಿಸಲು ಸಾಧ್ಯವೇ ಇಲ್ಲ.

ಅದಂತಿರಲಿ, ರಾಯರು ಪ್ರತಿದಿನ ಹೆಂಡತಿಯನ್ನು ಬಿಟ್ಟು ಅವರೆದುರಲ್ಲೇ ಸಡಗರದಿಂದ ಸೂಳೆಮನೆಗೆ ಹೊರಟು ಹೋಗುವುದು ಎಂತಹ ಸ್ತ್ರೀಗೆ ತಾನೆ ಸಹನವಾದೀತು! ರಾಯರ ಹೆಂಡತಿಯಂತೂ ಬಹಳ ಸ್ವಾಭಿಮಾನಿ ಮತ್ತು ಒಳ್ಳೇ ಜ್ಞಾನವಂತೆ. ಭಾರತ ರಾಮಾಯಣವನ್ನೋದಿ ಸ್ವತಹ ಅರ್ಥ ಹೇಳಬಲ್ಲವರಿದ್ದರು. ಮಾತ್ರವಲ್ಲದೆ ಪತ್ರಿಕೆಗಳನ್ನೂ ಓದುತ್ತಿದ್ದುದರಿಂದ ಆಧುನಿಕ ವಿಚಾರಗಳನ್ನೂ ಅರಿತಿದ್ದರು. ಆದರೆ ಅತ್ಯಂತ ವಿನಯಶೀಲೆಯಾದುದರಿಂದ, ಮೊದ ಮೊದಲು ರಾಯರಿಗೆ ಬಾಯ್ಬಿಟ್ಟು ಬುದ್ಧಿವಾದ ಹೇಳಲು ಸಂಕೋಚಗೊಂಡರು. ಆ ಮೇಲೆ ಧೈರ್ಯಗೊಂಡು ಪ್ರೇಮ ಮತ್ತು ವಿನಯದಿಂದ ನೀತಿಬೋಧೆ ಮಾಡಹತ್ತಿದರು. ಅದರಿಂದ ರಾಯರ ಮೇಲೆ ಒಂದಿಷ್ಟಾದರೂ ಪರಿಣಾಮವಾಗದಿರಲು, ಅವರೊಡನೆ ಮಾತಾಡುವುದನ್ನೇ ಬಿಟ್ಟುಬಿಟ್ಟರು. ರಾಯರ ಚಾಕರಿಮಾಡುವ ತೊತ್ತಾಗಿರುವುದಕ್ಕಿಂತ ತಂದೆ ಮನೆಗಾದರೂ ಹೋಗಿ ಬಿಡಬಾರದೇಕೆಂದು ಹಲವು ಸಲ ಭಾವಿಸಿದ್ದರು. ತಂದೆಯು ಒಬ್ಬಳೇ ಹೆಣ್ಮಗಳವರು. ಅಲ್ಲಿ ಹೋದರೆ ಅವರಿಗೇನೂ ತೊಂದರೆಯೇ ಇರಲಾರದು. ಆದರೆ ಮದುವೆಯಾದ ಮೇಲೆ ಎಂತಹ ಕಷ್ಟವನ್ನಾದರೂ ತಾಳಿಕೊಂಡು ಗಂಡನ ಮನೆಯಲ್ಲಿರುವುದೇ ಗೌರವವೆಂಬ ಹಿಂದೂಪತ್ನಿಯ ಕರ್ತವ್ಯಬುದ್ಧಿಯು ಅವರನ್ನು ತಂದೆಮನೆಗೆ ಹೋಗಗೊಡಲಿಲ್ಲ. ಮನೆಗೆಲಸವನ್ನೇ ನಿಲ್ಲಿಸಿಬಿಟ್ಟು ಗಂಡನೊಂದಿಗೆ ಅಸಹಕಾರ ಮಾಡುವುದೆಂದು ಕೆಲವು ಸಲ ಆಲೋಚಿಸುತ್ತಿದ್ದರು. ಆದರೆ ಅದರಿಂದ ತನ್ನ ಗೃಹಿಣೀ ಧರ್ಮಕ್ಕೇನೇ ಕುಂದುಂಟಾಗುವುದು. ಮಾತ್ರವಲ್ಲದೆ ಪತಿಯನ್ನು ಮತ್ತಷ್ಟು ಕೆಣಕಿದಂತಾಗಿ ಅವರು ಹಗಲು ಕೂಡಾ ಮನೆಗೆ ಬರುವುದನ್ನು ನಿಲ್ಲಿಸಿಬಿಡಹುದೆಂದು ಹಿಂಜರಿದರು.

ಆದರೆ ರಾಯರು ಪ್ರತಿದಿನ ಊಟಮಾಡಿ ಸೂಳೆ ಮನೆಗೆ ಹೊರಟುಹೋಗಿ ತನ್ನನ್ನು ಇದ್ದಂತೆ ಕೊಲ್ಲುವ ಅನಾಚಾರವನ್ನು ನಿಲ್ಲಿಸುವುದಾದರೂ ಹೇಗೆ? ನಿಲ್ಲಿಸದಿದ್ದಲ್ಲಿ ತಾನು ಬಾಳಿಕೊಂಡಿದ್ದು ಫಲವೇನೆಂದು ರಾಯರ ಹೆಂಡತಿಯು ಅತ್ಯಂತ ಸಂತಪ್ತರಾಗಿ ಗಾಢವಿಚಾರ ಮಗ್ನರಾದರು. ತೀವ್ರ ಚಿಂತಾಕೀಟವು ಅವರ ಹೃದಯವನ್ನು ಕೊರೆದು ರಕ್ತವನ್ನು ಹೀರಿ ಕೊಬ್ಬಿ ಬೆಳೆಯಹತ್ತಿತು. ಸುದೃಢವಾಗಿದ್ದ ಅವರ ಶರೀರವು ದಿನೇ ದಿನೇ ಕ್ಷೀಣವಾಗತೊಡಗಿತು. ಕೆಂಪು ಬಿಳಿ ಪುಟಹಾರುತ್ತಿದ್ದ ಅವರ ಮುಖವು ರಕ್ತಹೀನವಾಗಿ ಬಿಳುಪೇರಿಹೋಯಿತು. ಯಾವ ಕೆಲಸದಲ್ಲಿಯೂ ಅವರಿಗೆ ಮೊದಲಿನ ಉತ್ಸಾಹವೇ ಇಲ್ಲದಾಯಿತು. ಅವರೂ ರಾಯರಿಗೆ ಅದರ ಗೋಷ್ಟಿಯೇ ಇರಲಿಲ್ಲ. ಹೆಂಡತಿಯ ಯೋಗಕ್ಷೇಮದ ವಿಚಾರವನ್ನೇ ಅವರು ತೆಗೆದುಕೊಳ್ಳುತ್ತಿದ್ದಿಲ್ಲ. ಮನೆಗೆಲಸವೆಲ್ಲಾ ಸರಿಯಾಗಿ ನಡೆದರಾಯಿತಲ್ಲವೇ ಅವರಿಗೆ?

೦೦ ೦೦ ೦೦

ಒಂದು ದಿನ ರಾತ್ರಿ ರಾಯರು ಎಂದಿಗಿಂತಲೂ ಬೇಗ ಬಡಿಸ ಹೇಳಿ ಭೋಜನ ತೀರಿಸಿದರು. ಕೂಡಲೇ ಕುದುರೆಗಾಡಿಯವನೊಡನೆ ಗಾಡಿ ಕಟ್ಟಲು ಹೇಳಿ, ಶೃಂಗಾರ ಮಾಡಿಕೊಳ್ಳಲು ಉಪ್ಪರಿಗೆಗೆ ಹೋದರು. ಅಷ್ಟರಲ್ಲಿ ರಾಯರ ಹೆಂಡತಿಯು ಅಂದು ಎಂದಿಗಿಂತಲೂ ಬಹಳವೇಗವಾಗಿ ಉಪ್ಪರಿಗೆಗೆ ಹೋಗಿ ರಾಯರು ಮತ್ತು ಅವರು ಮಲಗುವ ಹಾಸಿಗೆ ಬಿಡಿಸಿ ಸರಿಮಾಡಿದರು. "ಅದೇಕೆ ಆ ಹಾಸಿಗೆ ಬಿಡಿಸುವೆ? ಇವತ್ತೇನು ಇಷ್ಟು ಬೇಗ ಮಲಗುವೆ? ನನ್ನ ಕೆಲಸವೆಲ್ಲಾ ಆಯಿತೇ" ಪ್ರಶ್ನಿಸಿದರು ರಾಯರು ಉತ್ಸುಕತೆಯಿಂದ ಹೆಂಡತಿಯ ಮುಖ ನೋಡಿ. ಆದರೆ ಅವರು ಒಂದು ಶಬ್ದವನ್ನಾದರೂ ಆಡದೆ ತನ್ನ ಕೆಲಸ ಮುಗಿಸಿ ಉಪ್ಪರಿಗೆ ಮೆಟ್ಟಲಿಂದ ದಡದಡನೆ ಕೆಳಗಿಳಿದು ಬಂದರು. ರಾಯರು ಜರಿ ಮುಂಡಾಸು ಕಟ್ಟಿ, ರೇಷ್ಮೆ ಕೋಟಿನ ಮೇಲೆ ರೇಷ್ಮೆ ಶಾಲು ಹಾಕಿಕೊಂಡು, ಕನ್ನಡಕ ತೊಟ್ಟು, ಬೆತ್ತ ಹಿಡಿದುಕೊಂಡು, ರೇಶ್ಮೆಕರ ವಸ್ತ್ರಕ್ಕೆ ಸೆಂಟನ್ನು ತಾಗಿಸಿಕೊಂಡು ಘಮ ಘಮಿಸುತ್ತಾ ಸಂಭ್ರಮದಿಂದ ಉಪ್ಪರಿಗೆಯಿಂದ ಕೆಳಗಿಳಿದು ಬಂದರು. ಒಡನೆಯೇ ಗಟ್ಟಿಯಾಗಿ ಗಾಡಿಯವನನ್ನು ಕರೆದರು. ಅಷ್ಟರಲ್ಲಿ ಅವರ ಬರವನ್ನೇ ಕಾದು ನಿಂತಿ

(೯ನೇ ಪುಟ ನೋಡಿರಿ.)

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ರೂಪಾಯಿಗಳು!

ವಿಕ್ಟೋರಿಯಾ ರೂಪಾಯಿಗಳು ನಿಮ್ಮಲ್ಲಿದ್ದು ಅವುಗಳನ್ನು ಚಲಾಯಿಸಲಾಗುವುದಿಲ್ಲವಾದರೆ ನಮಗೆ ಬರೆಯಿರಿ.

ಬಡವರಬಂಧು ಆಫೀಸು,

ಮಂಗಳೂರು, ದ. ಕ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 56/1941.

1 ನಾಗಶೆಟ್ಟಿ, 2 ರಾಮಣ್ಣಶೆಟ್ಟಿ—ಅರ್ಜಿದಾರರು,

ಮತ್ತು

ಕೃಷ್ಣ ಬಾಳ್ಗ. ಶಿವರಾಯರ ಮಗ—ಉಡುಪಿ ತಾಲ್ಲೂಕು ಉಳಿಯಾರಗೋಳಿ ಗ್ರಾಮ — ಎದ್ರಿರು,

ಇವರೊಳಗೆ.

ಸದರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಎದ್ರಿಯು ತಂದೆ ಕೂಡಾ 2 ಜನರು, ಅರ್ಜಿದಾರರ ತಾಯಿ ಪುಟ್ಟಮ್ಮಶೆಡ್ತಿಯರಿಗೆ ಉಡುಪಿ ಸಬ್ ರಿಜಿಸ್ಟ್ರಾರ್ ಆಫೀಸು 1.339.177-181 ನಂಬ್ರ 1611/1924 ಕ್ಕೆ ಓ. ನಂ ತಾ. 25-10-1924ರಲ್ಲಿ ರೂ. 3500-0-0ಕ್ಕೆ ಬರಕೊಟ್ಟ ಕ್ರಯ ದಸ್ತಾವೇಜಿನಲ್ಲಿ ಅವರಾಕಾಗಿ ಯಿರಗೊಡಿಸಿದ ಏವಜಿನ ಪೈಕಿ ಎದ್ರಿಗೆ ಸಲ್ಲತಕ್ಕ ರೂಪಾ 400/—ನ್ನು ಕೋರ್ಟು ಡಿಪೋಸಿಟು ಮಾಡಿ, ಸದ್ರಿ ಕ್ರಯ ದಸ್ತಾವೇಜಿನ ಬಾಬ್ತು ಇನ್ನೇನೂ ಸಲ ವಂತಿಜ್ಜು ಬಾಕಿಯಿರುವುದಿಲ್ಲವೆಂತ ರಿಕಾರ್ಡು ಮಾಡಬೇಕಾಗಿ ವಗೈರೆ ಸಂಗ್ತಿ ಕಾಣಿಸಿ ಅರ್ಜಿದಾರರು ಕೊಟ್ಟಿರುವ ಮೇಲ್ಕಂಡ ಅರ್ಜಿಯು ತಾ. 11-3-1942ಕ್ಕೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪಯಿದ್ದಲ್ಲಿ ಈ ಕೋರ್ಟು ಮುಂದೆ ಸದ್ರಿ ತಾ. 11-3-1942ನೇ ದಿವಸ ಬೆಳಗ್ಗೆ 10 ಘಂಟೆಗೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜವಾಬು ಹೇಳಿಸಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದರೆ ಸದ್ರಿ ಅರ್ಜಿಯನ್ನು ನಿಮ್ಮ ಗೈರುಹಾಜರಿಯಲ್ಲಿ ತೀರ್ಪು ಮಾಡಲಾಗುವದು.

ಉಡುಪಿ, ತಾ. 19-2-42. | **P. V. Acharya,** Vakil for Petitioners.

ನೋಟೀಸು

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. No. 9/1942.

ಸೀತಮ್ಮ-ರಾಮಚಂದ್ರ ಭಟ್ರ ವಿಧವೆ, ಉಡುಪಿ ಕ್ಸಬಾ ಸೋದೆಮಠದ ಓಣಿ — ಅರ್ಜಿದಾರಳು,

ಮತ್ತು

1 ಯಜ್ಞನಾರಾಯಣ ಭಟ್ರ, 2 ವೆಂಕಟ್ರಮಣ ಭಟ್ರ—ರಾಮಚಂದ್ರ ಭಟ್ರ ಮಕ್ಕಳು - ಉಡುಪಿ ಕ್ಸಬಾ ಸೋದೆ ಮಠದ ಓಣಿ — ಎದ್ರಿರು

—ಇವರೊಳಗೆ

ಈ ಮೂಲಕ ಸರ್ವರಿಗೆ ತಿಳಿಯಪಡಿಸುವದೇನಂದ್ರೆ—

ಮೇಲೆ ಹೆಸರು ಕಾಣ್ಸಿದ ಅರ್ಜಿದಾರಳ ಸೊಸೆ ಮೃತ ಪಾರ್ವತಿಬಾಯಿಯ ಹಕ್ಕಿನ ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್ ಉಡುಪಿ, ಈ ಬೇಂಕಿನಲ್ಲಿ F. D. No. 66/41ಕ್ಕೆ ಇಡೋಣಾದ ರೂ. 127-8-0 ಮತ್ತು ಉಡುಪಿ ಪೋಸ್ಟಾಫೀಸಿನಲ್ಲಿ ಸೇವಿಂಗ್ಸ ಬೇಂಕಿನಲ್ಲಿರುವ ರೂ. 52-7-6ನ್ನು ಪಡಿಯಲು ತನ್ನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 7-3-1942ಕ್ಕೆ ಇಡೋಣಾಗಿಯದೆ. ಸದ್ರಿ ಅರ್ಜಿಗೆ ಆಕ್ಷೇಪ ಹೇಳತಕ್ಕವರು ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ಣ ಘಂಟೆ 10ಕ್ಕೆ ಹಾಜರಾಗಿ ಆಕ್ಷೇಪರು ಮಾಡತಕ್ಕದ್ದು ಯೆಂತ ಈ ಮೂಲಕ ತಿಳಿಸೋಣಾಗಿಯದೆ.

ಉಡುಪಿ, 18-2-1942. | **B. Vamanacharya,** Council for Petitioners.

ಚುಟುಕು ಟೀಕೆ-ಟಿಪ್ಪಣಿ

ಇಟೆಲಿಯ ಮೇಲೆ ಧಾಳಿ ಇಡಬೇಕು

ಲೋಕ ಪ್ರಸಿದ್ಧ ಗ್ರಂಥಕರ್ತರಾದ ಜೋರ್ಜ್ ಬರ್ನಾರ್ಡ್ ಶೋರು ಬ್ರಿಟಿಷ್ ಸರಕಾರದ ಪ್ರಕೃತದ ಯುದ್ಧ ಧೋರಣೆಯಿಂದ ತೃಪ್ತರಾಗಿಲ್ಲ. ೩೦ ಮಿಲ್ಯ ಹಿಂದೀ ಸೇನೆಯನ್ನು ಸಂಘಟಿಸಿ ಪೂರ್ವದಿಂದ ಜರ್ಮನರ ಮೇಲೇರಿ ಹೋಗಬೇಕು. ಇಲ್ಲವೆ ಇಟೆಲಿಯ ಮೇಲೆ ಧಾಳಿಯಿಟ್ಟು ಆಕ್ಸಿಸ್ ರಾಷ್ಟ್ರಗಳನ್ನು ಬಗ್ಗು ಬಡಿಯಬೇಕೆಂದವರು ಸೂಚಿಸಿರುವರು. ಯುರೋಪಿನಲ್ಲಿ ಇನ್ನೊಂದು ರಣರಂಗ ತೆರೆಯುವ ಸಾಹಸವನ್ನು ಇನ್ನಾದರೂ ಬ್ರಿಟನು ಮಾಡದಿದ್ದಲ್ಲಿ ರಸ್ಯವು ಒಂದೇಯಾಗಿ ಪ್ರಚಂಡ ನಾಝಿ ಪಡೆಯ ವಸಂತಋತುವಿನ ಧಾಳಿಯನ್ನೆದುರಿಸಬೇಕಾಗುವುದು.

ಜರ್ಮನಿಯ ಭಾರಿ ಸಿದ್ಧತೆ.

ಬರುವ ವಸಂತ ಋತುವಿನಲ್ಲಿ ರಸ್ಯದ ಮೇಲೆ ಒಮ್ಮೆಯೇ ಪ್ರಚಂಡ ಧಾಳಿ ನಡಿಸಿ ಅದನ್ನು 1942ನೇ ವರ್ಷದ ಅಂತ್ಯದೊಳಗೆ ನಿರ್ನಾಮಮಾಡಬೇಕೆಂಬ ಭೀಷ್ಮ ನಿರ್ಧಾರದಿಂದ ಜರ್ಮನರು ಭಾರಿ ಸಿದ್ಧತೆ ಮಾಡುತ್ತಿದ್ದಾರೆ. ಮುಂದಿನ ಆರೇಳು ತಿಂಗಳೊಳಗೆ ತಾವು ತಮ್ಮ ಉದ್ದೇಶ ಸಾಧಿಸಿಬಿಡಬೇಕು. ಇಲ್ಲವಾದರೆ ಸಾಧ್ಯವಾಗಲಾರದು. ಬ್ರಿಟನು ಮತ್ತು ಅಮೆರಿಕಗಳು ಯುದ್ಧೋಪಕರಣಗಳ ತಯಾರಿಯಲ್ಲಿ ಜರ್ಮನಿಯನ್ನು ಹಿಂದೆ ಹಾಕಿ ಬಿಟ್ಟರೆ ಮತ್ತೆ ನಮ್ಮ ಕಾರ್ಯ ಸಾಗದೆಂಬುದನ್ನು ಜರ್ಮನರು ಚೆನ್ನಾಗಿ ಮನಗಂಡಿರುವರು. ಆದುದರಿಂದಲೇ ಪ್ರತಿಯೊಬ್ಬ ಜರ್ಮನ್ ಕೆಲಸಗಾರನೂ ಯುದ್ಧೋಪಕರಣ ತಯಾರಿಯಲ್ಲಿ ನಿರತನಾಗಿರುವನು.

ರಸ್ಯವೇನೂ ಸುಮ್ಮನಿಲ್ಲ

ಜರ್ಮನಿಯು ಭಾರಿ ಸಿದ್ಧತೆ ಮಾಡುತ್ತಿರುವಾಗ ಸೋವಿಯೆಟ್ ರಸ್ಯವೇನೂ ಸುಮ್ಮನಿರುವುದಿಲ್ಲ. ಅದು ಕೂಡಾ ಜರ್ಮನಿಗೆ ಸರಿಮಿಗಿಲೆನಿಸುವ ಯುದ್ಧೋಪಕರಣಗಳನ್ನು ತಯಾರಿಸಿಕೊಳ್ಳುವುದಕ್ಕಾಗಿ ಅವಿಶ್ರಾಂತ ಪ್ರಯತ್ನಮಾಡುತ್ತಿದೆ. ಒಳಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಕಾರ್ಖಾನೆಗಳಲ್ಲೆಲ್ಲಾ ರಾತ್ರಿ ಹಗಲು ಕೆಲಸ ನಡಿಯುತ್ತಿದೆ. ಹಿಟ್ಲರರು ವಸಂತಋತುವಿನ ಧಾಳಿಯನ್ನಾರಂಭಿಸುವ ಮೊದಲೇ ನಾಝಿ ಸೇನೆಯನ್ನು ರಸ್ಯದಿಂದ ಹಿಂದಕ್ಕಟ್ಟಿಬಿಡುವ ಸಾಹಸವನ್ನೀಗ ಕೆಂಪುಸೇನೆಯು ನಡಿಸಿ ಕೆಲಮಟ್ಟಿನ ವಿಜಯ ಪಡೆದಿದೆ. ಲೆನಿನ್‌ಗ್ರಾಡ್ ರಣರಂಗದಲ್ಲಿ ಜರ್ಮನರ ಮೂರನೇ ಮತ್ತು ಕೊನೆಯ ರಕ್ಷಣಾವ್ಯೂಹವನ್ನು ಸೋವಿಯೆಟ್ ಸೇನೆಯು ಭೇದಿಸಿರುತ್ತದೆ. ಮಧ್ಯಭಾಗದಲ್ಲಿ ಸ್ಮೊಲೆಂಸ್ಕ್ ಪ್ರದೇಶಕ್ಕೆ ಪ್ರವೇಶಿಸಿ ಮುಂದೊತ್ತುತ್ತಿದೆ. ಉಕ್ರೈನಿನಲ್ಲಿ ಪ್ರಾಮುಖ್ಯ ಪಟ್ಟಣವಾದ ಕಾರ್ಖೋವನ್ನು ಸಮೀಪಿಸಿ ತೀವ್ರ ಹೋರಾಟ ನಡೆಯುತ್ತಿದೆ. ಕೆಂಪುಸೇನೆಯ ಇಂದಿನ ಚಳಿಗಾಲದ ಧಾಳಿಯು ಜಯಶೀಲವಾದರೆ ಹಿಟ್ಲರರ ಮುಂದಿನ ಧಾಳಿಗೆ ಮಹತ್ತಾದ ತಡೆಯಾಗದಿರಲಾರದು.

ಈಗ ಬಿಸಿತಾಗಿತೇ?

ಪೂರ್ವದಲ್ಲಿ ಜಾಪಾನರ ಧಾಳಿ ಮತ್ತು ಶೀಘ್ರ ವಿಜಯಗಳ ಬಿಸಿಯು ಬ್ರಿಟಿಷ್ ಸರಕಾರಕ್ಕೆ ಸರಿ ತಾಗಿರುವಂತಿದೆ. ಇಷ್ಟರವರೆಗೆ ಹಿಂದೀಯರು ಎಷ್ಟೊಂದು ಬೊಬ್ಬೆ ಹಾಕಿದರೂ ಕಿವಿಗೊಡದ ಚರ್ಚಿಲ್ಲರೀಗ ಯುದ್ಧ ಮಂತ್ರಿಮಂಡಲ ಮತ್ತು ಶಾಂತಸಾಗರದ ಯುದ್ಧ ಮಂಡಲಿಯಲ್ಲಿ ಹಿಂದುದೇಶಕ್ಕೆ ಸ್ಥಾನವನ್ನೀಯಲೊಪ್ಪಿದ್ದಾರೆ. ಸಪ್ರುವಿನಂತಿಗೆ ಈಗ ಉತ್ತರ ಕೊಡಲು ಮುಂದಾಗಿದ್ದಾರೆ ಇಂಗ್ಲೆಂಡಿನ ಇಂಡಿಯಾ ಆಫೀಸನ್ನೇ ತೆಗೆದುಹಾಕಿ ವೈಸರಾಯರಿಗೆ ಸಂಪೂರ್ಣ ಆಡಳಿತ ಸ್ವಾತಂತ್ರ್ಯವೀಯುವ ಆಲೋಚನೆ ನಡೆದಿದೆ ಆದರೆ ಇಷ್ಟು ಮಾತ್ರದಿಂದಲೇ ಹಿಂದೀಯರು ತೃಪ್ತರಾಗಲಾರರು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಟ್ಟು ನಿಜವಾದ ರಾಜಕೀಯ ಅಧಿಕಾರವು ಕೊಡಲ್ಪಟ್ಟರೆ ಮಾತ್ರ ಅವರು ಯುದ್ಧದಲ್ಲಿ ಉತ್ಸಾಹದಿಂದ ಭಾಗವಹಿಸಬಹುದು. ಅದಕ್ಕೆ ಚರ್ಚಿಲ್ಲರು ಸಿದ್ಧರಿರುವರೇ ನೋಡಬೇಕು.

ಹಿಂದುದೇಶಕ್ಕೆ ನಿಜವಾದ ಅಧಿಕಾರ ಕೊಡಬೇಕು.

ರಾಷ್ಟ್ರೀಯ ಚೈನದ ಧೈರ್ಯ ಸ್ಥೈರ್ಯ, ತ್ಯಾಗ ಮತ್ತು ನವಸ್ಫೂರ್ತಿಯ ಪ್ರತಿಮೂರ್ತಿಯಾಗಿ ಚೀನೀಯರೆಲ್ಲರ ಅಖಂಡ ಮುಖಂಡರಾಗಿರುವ ಮಾರ್ಶಲ್ ಚ್ಯಾಂಗರ, ಅವರ ಪ್ರಖ್ಯಾತ ಪತ್ನಿಯ ಹಿಂದುದೇಶದ ಸಂದರ್ಶನವು ಅದೊಂದು ಅಪೂರ್ವ ಯೋಗವೇ ಸರಿ. ಪ್ರೆಸಿಡೆಂಟ್ ರೂಸವೆಲ್ಟರಂತಹ ಮುತ್ಸದ್ದಿಯು ಮಾಡಲು ಹಿಂಜರಿದಿರುವ ಕೆಲಸವನ್ನು ಮಾರ್ಶಲ್ ಚ್ಯಾಂಗರು ಮಾಡಿ ಹಿಂದೀಯರೆಲ್ಲರ ಚಿರಕೃತಜ್ಞತೆಗೆ ಪಾತ್ರರಾಗಿರುವರು. "ಹಿಂದೀ ಜನತೆಯು ಯಾವ ಕೇಳಿಕೆಗಳಿಗಾಗಿಯೂ ಕಾದಿರದೆ, ಬ್ರಿಟನು ಆದಷ್ಟು ಬೇಗನೆ ಅವರಿಗೆ ನಿಜವಾದ ರಾಜಕೀಯ ಅಧಿಕಾರವೀಯಬೇಕು. ಅವರು ಅದರಿಂದ ತಮ್ಮ ಆತ್ಮಿಕ ಮತ್ತು ಸಾಂಪತ್ತಿಕ ಬಲವನ್ನು ವೃದ್ಧಿಗೊಳಿಸಿ, ತಾವು ಮಿತ್ರರಾಷ್ಟ್ರಗಳ ವಿಜಯಕ್ಕಾಗಿ ಮಾತ್ರವಲ್ಲದ, ತಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದಲೂ ಈ ಯುದ್ಧದಲ್ಲಿ ಭಾಗವಹಿಸುವುದೆಂಬುದನ್ನು ಮನಗಾಣುವಂತಾಗಬೇಕು. ಅದೇ ಬ್ರಿಟನು ವಹಿಸಬೇಕಾದ ಅತ್ಯಂತ ವಿವೇಕಪರ ಧೋರಣೆ. ಅದರಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಕೀರ್ತಿಯಿದೆ" ಎಂದು ಮಾರ್ಶಲ್ ಚ್ಯಾಂಗರು ಹಿಂದೀಜನತೆಗಿತ್ತಿರುವ ಸಂದೇಶದಲ್ಲಿ ಕಂಠೋಕ್ತವಾಗಿ ಹೇಳಿದುದು ಅವರ ವಿವೇಚನಾಶಕ್ತಿ, ದೂರದೃಷ್ಟಿ, ಮತ್ತು ಮನೋನಿರ್ಧಾರ ಶಕ್ತಿಯನ್ನು ಸಿದ್ಧಗೊಳಿಸುತ್ತದೆ ಮಾರ್ಶಲ್ ಚ್ಯಾಂಗರ ಈ ಬುದ್ಧಿವಾದವನ್ನು ಎಷ್ಟರ ಮಟ್ಟಿಗೆ ಬ್ರಿಟನು ಅನುಸರಿಸುವುದೋ ನೋಡಬೇಕು.

ಡಿಕ್ಟೇಟರ್ ಜಿನ್ನರ ಝೇಂಕಾರ!

ಜಿನ್ನರೀಗ ಮುಸ್ಲಿಮ್ ಲೀಗಿನ ಡಿಕ್ಟೇಟರರಂತೆಯೇ ವರ್ತಿಸುತ್ತಿದ್ದಾರೆ. ಬಂಗಾಳ ಪ್ರಾಂತೀಯ ಮುಸ್ಲಿಮ್ ಲೀಗ್ ಪರಿಷತ್ತಿನ ಭಾಷಣದಲ್ಲವರು, ಬಂಗಾಳ ಗವರ್ನರರಿಗೂ ವೈಸರಾಯರಿಗೂ 'ಅಲ್ಟಿಮೇಟಮ್' ಕೊಟ್ಟುಬಿಟ್ಟಿದ್ದಾರೆ. ಬಂಗಾಳ ಸರಕಾರವು ಅಲ್ಲಿಯ ಮುಸ್ಲಿಮ್ ಲೀಗನ್ನು ಇದೇ ಪ್ರಕಾರ ದಬಾಯಿಸುತ್ತಾ ಹೋದರೆ, ಇಡೀ ಹಿಂದುಸ್ಥಾನದಲ್ಲೇ ಈ ವರೆಗೆ ಎಂದೂ ಉಂಟಾಗದ ಪರಿಸ್ಥಿತಿಯು ಬಂಗಾಳದಲ್ಲುಂಟಾಗುವುದು. ಬಂಗಾಳ ಗವರ್ನರರೂ ವೈಸರಾಯರೂ ಆ ಕುರಿತು ಎಚ್ಚರಗೊಳ್ಳಬೇಕೆಂದವರು ಝೇಂಕರಿಸಿರುತ್ತಾರೆ ಒಂದು ಲಕ್ಷ ರೂಪಾಯಿ ಮಾನನಷ್ಟಕ್ಕೆ ದಾವೆ ತಂದು ಫಜ್ಲುಲ್ ಹಕ್ಕರೇ ಜಿನ್ನರಿಗೆ ಉತ್ತರವಿತ್ತಿರುತ್ತಾರೆ. ಜಿನ್ನರಂಥವರಿಗೆ ಫಜ್ಲುಲ್ ಹಕ್ಕರಂಥವರೇ ಬೇಕು. ಬುದ್ಧಿ ಕಲಿಸಲಿಕ್ಕೆ.

ಕಾಂಗ್ರೆಸ್ ಮತ್ತು ಲೀಗುಗಳೊಟ್ಟಾಗಬಾರದೇಕೆ?

ಶ್ರೀ| ರಾಜಗೋಪಾಲಾಚಾರ್ಯರಂಥವರು ಕಾಂಗ್ರೆಸಿನ ಅಧಿಕಾರ ಪಡೆದು ನಿಶ್ಚಿತ ಸೂಚನೆಗಳನ್ನು ಮುಸ್ಲಿಮ್ ಲೀಗಿನ ಮುಂದಿಡಲಿ, ಅವನ್ನದು ನಿರಾಕರಿಸಿದರೆ ಆ ಮೇಲೆ ಆಚಾರ್ಯರು ಲೀಗನ್ನು ಟೀಕಿಸಲೆಂದು ಜಿನ್ನಾ ಸಾಹೇಬರೊಂದು ಹೇಳಿಕೆ ಕೊಟ್ಟಿರುವರು. ರಾಜಾಜಿಯವರು ತಾಂಬರಮ್ ಭಾಷಣದಲ್ಲಿ "ಗಾಂಧಿಜಿಯವರೂ ಜಿನ್ನರೂ ಹಿಂದುಸ್ಥಾನದ ಎರಡು ಪ್ರಮುಖ ರಾಜಕೀಯ ಸಂಸ್ಥೆಗಳ ನಾಯಕರು. ಇಬ್ಬರೂ ಸಮಾನ ಪ್ರಖ್ಯಾತಿ ಪಡೆದವರು ಮತ್ತು ಪ್ರಚಂಡ ಜನಾದರ ಪಡೆದಿರುವವರು. ಇಬ್ಬರಿಗೂ ಅಂಧಾನುಯಾಯಿಗಳಿದ್ದಾರೆ. ಹಿಂದುಗಳ ಮತ್ತು ಮುಸಲ್ಮಾನರ ಪ್ರಚಂಡ ಹಾಗೂ ಜನಪ್ರಿಯವಾದ ಎರಡು ಸಂಸ್ಥೆಗಳೆಂದರೆ ಕಾಂಗ್ರೆಸು ಮತ್ತು ಮುಸ್ಲಿಮ್ ಲೀಗು. ಅವುಗಳೆರಡೂ ಸರಕಾರದೊಡನೆ ಹೋರಾಟದಲ್ಲಿ ನಿರತವಾಗಿವೆ." ಎಂದಿರುತ್ತಾರೆ. ಈ ಮಾತುಗಳಿಂದ ಜಿನ್ನರು ಬಹಳ ಸಂತೋಷಗೊಳ್ಳಲು ಕಾರಣಗಳಿವೆ. ಕಾಂಗ್ರೆಸು ಹಿಂದೂ ಸಂಸ್ಥೆಯೆಂಬ ಜಿನ್ನರ ಪ್ರತಿಪಾದನೆಯನ್ನು ರಾಜಾಜಿಯವರಂತಹ ಕಾಂಗ್ರೆಸ್ ಮುಖಂಡರೇ ಒಪ್ಪಿದಂತಾಯಿತು. ಗಾಂಧಿಜಿಯವರ ಸ್ಥಾನವನ್ನೇ ಅವರಿಗಿತ್ತು ಲೀಗು ಕಾಂಗ್ರೆಸುಗಳ ಸಮಾನತೆಯನ್ನು ಅಂಗೀಕರಿಸಿದಂತಾಯಿತು. ಇನ್ನಾದರೂ ಒಣಪ್ರತಿಷ್ಠೆ ಬಿಟ್ಟು ಕಾಂಗ್ರೆಸು ಮತ್ತು ಲೀಗುಗಳೊಟ್ಟಾಗಬಾರದೇ?

ಬಂಟರ ಯಾನೆ ನಾಡವ ಸಮಾಜದ ಉನ್ನತಿಯ ಬಗೆ ಹೇಗೆ?

(೩ನೇ ಪುಟದಿಂದ ಮುಂದರಿದುದು)

ಸಬೇಕು. ಸಮಾಜವನ್ನು ಉನ್ನತ ಸ್ಥಿತಿಗೆ ತರುವರೆ ಪ್ರಚಾರಕಾರ್ಯವು ಭರದಿಂದ ನಡೆಯಬೇಕು.

ಮೊದಲಾಗಿ ಇದ್ದ ಸಂಸ್ಥೆಗಳನ್ನು ನಾವು ಬಲಪಡಿಸಿಕೊಳ್ಳುತ್ತ ನಂತರ ಹೊಸ ಯೋಜನೆಗಳಲ್ಲಿ ಕೈ ಹಾಕುವುದರಲ್ಲಿ ವಿವೇಕವಿದೆ. ಅಂದರೆ ನಮ್ಮಲ್ಲಿ ಈಗ ಮೂರು ಸಂಸ್ಥೆಗಳು ತಮ್ಮ ಸಂಘಜೀವನವನ್ನು ಸ್ಥಾಪಿಸಿವೆ ಎಂದರೆ ತಪ್ಪಾಗದು. ರಾಮಕೃಷ್ಣ ವಿದ್ಯಾರ್ಥಿ ಭವನ, ನವಯುಗ ಪತ್ರಿಕೆ ಮತ್ತು ವಿಜಯ ಬೇಂಕು. ಈ ಮೂರು ಸಂಸ್ಥೆಗಳು ಮೂರು ವಿಧದಿಂದ ನಮ್ಮ ಸಮಾಜದ ಪ್ರಗತಿಯನ್ನು ಪಡೆಯಲು ದುಡಿಯುತ್ತಿವೆ. ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿಭವನವು ಜಿಲ್ಲೆಯ ವಿದ್ಯಾರ್ಥಿಗಳಿಗೆ ಆಶ್ರಯವಾಗಿ ನಮ್ಮ ಸಮಾಜದ ಸಾರ್ವಜನಿಕ ಕೆಲಸಗಳಿಗೆ ಕೇಂದ್ರ ಕಾರ್ಯಕ್ಷೇತ್ರವಾಗಿ ನಿಂತಿದೆ. ಇದೇ ರೀತಿಯಲ್ಲಿ ತಾಲೂಕು ಕೇಂದ್ರಗಳಲ್ಲಿರುವ ಭವನಗಳು ಆಯಾ ಕೇಂದ್ರಗಳಿಗೆ ಕಾರ್ಯಕ್ಷೇತ್ರಗಳಾಗಿ ಪರಿಣಮಿಸಬೇಕು. ಎರಡನೆಯದಾಗಿ ನಮ್ಮದೇ ಆದ ನವಯುಗ ಪತ್ರಿಕೆಯನ್ನು ಬಲಪಡಿಸುವುದು ಅಗತ್ಯ. ನವಯುಗವೆಂದರೆ ನಮ್ಮ ಸಮಾಜದಲ್ಲಿ ಎಲ್ಲೆಲ್ಲಿಯೂ ನವಜಾಗ್ರತಿಯನ್ನುಂಟುಮಾಡಿ ಪತ್ರಿಕೋದ್ಯಮದ ಹೆಗ್ಗುರುತಾಗಿ ನಿಂತಿದೆ, ಆ ಪತ್ರಿಕೆಯು ನಮ್ಮ ಸಮಾಜದಲ್ಲಿ ಎಲ್ಲೆಲ್ಲಿಯೂ ಹರಡುವಂತೆ ಪ್ರಚಾರ ಕಾರ್ಯವನ್ನು ಹೂಡಬೇಕು. ಮೂರನೆಯದಾಗಿ ವಿಜಯ ಬೇಂಕು. ನಮ್ಮ ಸಂಪದಭಿವೃದ್ಧಿಗೆ ಮುಖ್ಯ ಆಶಯವದು. ಅದು ಅಭಿವೃದ್ಧಿ ಹೊಂದುವಂತೆ ಎಲ್ಲರೂ ನೆರವಾಗಬೇಕು.

ಈ ಮೂರು ಕಾರ್ಯಕ್ರಮವನ್ನು ಕಿಂಚಿತ್ತಾದರೂ ಮರೆಯದೆ ಮುನ್ನಡೆಸಿ ಸಮಾಜದ ಸಂಪತ್ತನ್ನು ವೃದ್ಧಿಮಾಡುವ ಬೇರೆ ಯಾವುದಾದರೂ ವ್ಯಾಪಾರ ವ್ಯವಹಾರದ ಕಡೆ ದೃಷ್ಟಿ ಇಡುವದು ಇಂದಿನ ಪರಿಸ್ಥಿತಿಯಲ್ಲಿ ಕರ್ತವ್ಯವಾಗಿರುವುದು.

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,

ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು **1931**ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು, ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ವಿನಯದ ವಿನಂತಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.

ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್. ಚೇಯರ್‌ಮೆನ್

The Canara Banking Corporation Ltd.

(Incorporated in British India with limited liability.)

ESTED: 1906.

OUR RATES OF INTEREST ON DEPOSITS

Current	1%	P. A.
Savings Bank	2½%	„
Short-term	1½%	„
Fixed for 3 months	2%	„
6 „	2¼%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೨೬–೨–೧೯೪೨

ಹಿಂದುದೇಶಕ್ಕೆ ಯುದ್ಧದ ಅಪಾಯ.

ಕಳೆದ ಜೂನ್ ತಿಂಗಳಲ್ಲಿ ಹಿಂದುದೇಶಕ್ಕೆ ಪಶ್ಚಿಮದಿಂದ ಯುದ್ಧದ ಅಪಾಯವುಂಟಾಗುವಂತಿದ್ದಿತು. ನಾಝಿ ಪಡೆಯ ಪ್ರಚಂಡ ಧಾಳಿಯ ಒತ್ತಾಟವನ್ನು ಕೆಂಪು ಸೇನೆಗೆ ತಾಳಿಕೊಳ್ಳಲಾಗದೆ ಮೋಸ್ಕೋ ಮತ್ತು ಲೆನಿನ್‌ಗ್ರಾಡ್ ಪಟ್ಟಣಗಳು ಪತನವಾಗುವ ಗಂಡಾಂತರಗಳು ಸನ್ನಿಹಿತವಾಗಿತ್ತು. ರಶ್ಯವನ್ನು ಉತ್ತರ ಧ್ರುವಸಾಗರಕ್ಕೆ ಜೋಡಿಸುವ ಆರ್ಚೇಂಜಲ್ ರೈಲ್ವೆ ರಸ್ತೆಯು ಕಡಿಯಲ್ಪಡುವ ಅಪಾಯವುಂಟಾಗಿತ್ತು. ಕೊಕಸಸ್ ಎಣ್ಣೆ ಪ್ರದೇಶವನ್ನು ಶತ್ರುವು ಗೆದ್ದು, ಸೋವಿಯೆಟ್ ಸರಕಾರವು ಉರಾಲ್ ಪರ್ವತಗಳ ಪೂರ್ವಕ್ಕೆ ಹೋಗಬೇಕಾಗುವ ಸಂಭವವಿತ್ತು. ಇದರ ಪರಿಣಾಮವಾಗಿ ಮಧ್ಯಪೂರ್ವದ ಪರಿಸ್ಥಿತಿಯೇ ಮಾರ್ಪಟ್ಟು ಯುದ್ಧವು ಹಿಂದುದೇಶದ ಪಶ್ಚಿಮ ಗಡಿಗೇನೇ ಬರುವಂತಾಗಿತ್ತು. ಸಿರಿಯ, ಇರಾಕ್, ಇರಾನ್ ಮತ್ತು ಅಫಘಾನಿಸ್ಥಾನಗಳಲ್ಲಿ ಕೂಡಾ ಫೆಸಿಸ್ಟರು ಸೂತ್ರಚಾಲನೆ ನಡಿಸುತ್ತಿದ್ದರು. ಲಿಬಿಯದ ಯುದ್ಧದ ಜವಾಬ್ದಾರಿಯನ್ನು ಜರ್ಮನ್ ಸೇನೆಯು ವಹಿಸಲು ಮುಖ್ಯ ಕಾರಣವೇ, ಮಧ್ಯಪೂರ್ವದ ಬ್ರಿಟನಿನ ನಾಡಿಯನ್ನು ಕಡಿಯುವುದಕ್ಕಾಗಿ. ಸೋವಿಯೆಟ್ ರಶ್ಯದ ಧೈರ್ಯ, ಸ್ಥೈರ್ಯ, ತ್ಯಾಗ ಮತ್ತು ಪರಿಶ್ರಮದಿಂದಾಗಿ ಹಿಟ್ಲರರ ಪ್ಲೇನ್ ಹಾಳಾಗಿ ಹೋಯಿತು. ಜರ್ಮನ್ ಸೇನೆಯನ್ನು ಪ್ರತಿಭಟಿಸಿ ಅದು ಅಜೇಯವಲ್ಲೆಂಬುದನ್ನು ಪ್ರುತಪಡಿಸಿ, ಸಾಹಸಪರ ಪ್ರತಿಧಾಳಿಯಿಂದ ಸೋವಿಯೆಟ್ ಸೇನೆಯು ಇಂದು ಚಳಿಗಾಲದ ಸದುಪಯೋಗ ಪಡೆದು ವೈರಿ ಸೇನೆಯನ್ನು ಹಿಂದಕ್ಕಟ್ಟುತ್ತಿರುವುದು. ಲಿಬಿಯದಲ್ಲಿ ಪ್ರಬಲ ಧಾಳಿ ನಡಿಸಿ ಫೆಸಿಸ್ಟ್ ಪಡೆಯನ್ನು ಹಿಂದಕ್ಕೋಡಿಸಲು ಬ್ರಿಟನಿಗೆ ಅವಕಾಶ ದೊರೆಯಿತೆನ್ನಬಹುದು ರಶ್ಯನರ ಯುದ್ಧಶಕ್ತಿಯಿಂದಾಗಿ. ಬ್ರಿಟನು ಮುಂಜಾಗ್ರತೆಯಿಂದ, ಸಿರಿಯ, ಇರಾಕ್ ಮತ್ತು ಇರಾನುಗಳ ಒಳಸಂಚುಗಳನ್ನು ಮೊಳಕೆಯಲ್ಲೇ ಮುರಿದುಬಿಟ್ಟಿತು. ಇದರಿಂದ ಪಶ್ಚಿಮದಿಂದ ಹಿಂದುದೇಶವನ್ನು ಸಮೀಪಿಸುತ್ತಿದ್ದ ಯುದ್ಧಾಪಾಯವು ದೂರವಾಗುವಂತಾಯಿತು. ಜರ್ಮನಿಯು ರಶ್ಯವನ್ನು ಗೆಲ್ಲಲು ಶಕ್ತವಾಗುತ್ತಿದ್ದರೆ, ಅದರ ಮಧ್ಯಪೂರ್ವದ ಸೂತ್ರಚಾಲನೆಯೂ ಜಯಶೀಲವಾಗುತ್ತಿದ್ದರೆ ಇಷ್ಟರಲ್ಲೇ ಹಿಂದುದೇಶದ ಪಾಡೇನಾಗುತ್ತಿತ್ತೆಂದು ಹೇಳಬರುವುದಿಲ್ಲ.

ಪಶ್ಚಿಮದಿಂದ ಹಿಂದುದೇಶಕ್ಕೆ ಭಯವಿಲ್ಲೆಂದು ಉಸಿರು ಬಿಡುವಾಗಲೇ ಪೂರ್ವದಲ್ಲಿ ಜಾಪಾನರ ಧಾಳಿ ಮತ್ತು ಅವರು ಮಿಂಚಿನ ವೇಗದಿಂದೆಂಬಂತೆ ಪಡೆಯುತ್ತಿರುವ ವಿಜಯಗಳು ಹಿಂದುದೇಶವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನೇ ದಂಗುಗೊಳಿಸಿರುತ್ತವೆ. ಬ್ರಿಟನು ಮತ್ತು ಅಮೆರಿಕಗಳು ಪೂರ್ವದಲ್ಲಿ ಮಾಡಿರುವ ಯುದ್ಧ ಸಿದ್ಧತೆಯು ಏನೇನೂ ಸಾಲದೆಂಬುದೀಗ ಸಿದ್ಧವಾಗಿದೆ. ಪ್ರಾಯಶಃ ಅವುಗಳಿಗೆ ಜಾಪಾನರ ಯುದ್ಧಶಕ್ತಿಯ, ವಿಶೇಷವಾಗಿ ನೌಕಾಬಲದ ಪರಿಜ್ಞಾನವಿಲ್ಲದಿರಬೇಕು. ಇಲ್ಲವಾದರೆ ಇಂತಹ ದೊಡ್ಡ ಪ್ರಮಾದಗಳಿಗೆ ಅವು ಆಸ್ಪದವೀಯುತ್ತಿದ್ದಿಲ್ಲ. ಜಾಪಾನು ಅತಿ ತೀವ್ರಗತಿಯಿಂದ ಪಡೆದಿರುವ ವಿಜಯಗಳಿಂದಾಗಿ, ಯುದ್ಧವು ಹಿಂದುದೇಶಕ್ಕೇನೇ ಬಂದಿರುವುದೆನ್ನಬಹುದು. ಇಂಡೋಚೈನ, ಥೈಲೆಂಡ್, ಹೊಂಕೊಂಗ್, ಮಲಯ, ಸಿಂಗಪುರ ಮತ್ತು ಬರ್ಮದ ಟೆನ್ನಸೆರಿಮುಗಳೀಗ ಸಂಪೂರ್ಣವಾಗಿ ಜಾಪಾನರ ಅಧೀನವಾಗಿವೆ. ಫಿಲಿಪೈನ್ಸಿನ ಹೆಚ್ಚಿನ ಪ್ರದೇಶವನ್ನು ಮತ್ತು ಡಚ್ ಈಸ್ಟ್ ಇಂಡೀಸಿನ ಕೆಲವು ಭಾಗಗಳನ್ನು ಗೆದ್ದು ಈಗ ರಂಗೂನಿನ ಕಡೆಗೆ ಮುಂದೊತ್ತಿ ಅದಕ್ಕೆ ಅಪಾಯವನ್ನುಂಟುಮಾಡಿವೆ. ಇಷ್ಟರಲ್ಲೇ ಅವರ ಸಬ್‌ಮೆರೀನ್ ಮತ್ತು ಯುದ್ಧ ಹಡಗಗಳು ಹಿಂದುದೇಶದ ಪೂರ್ವ ಹಾಗೂ ಪಶ್ಚಿಮ ಕರಾವಳಿಗಳಲ್ಲಿ ಹಾವಳಿ ಮಾಡಲಾರಂಭಿಸಿರುತ್ತವೆ.

ಬರ್ಮವನ್ನು ಗೆದ್ದು ಚೈನಕ್ಕೆ ಯುದ್ಧ ಸಾಮಾಗ್ರಿಗಳನ್ನೊಯ್ಯುವ ಬರ್ಮ ರಸ್ತೆಯನ್ನು ಮೊದಲಾಗಿ ಕಡಿದು ಹಾಕುವ ಪ್ರಯತ್ನವನ್ನೀಗ ಜಾಪಾನು ನಡಿಸುತ್ತಿರುವುದು. ಆ ಮೇಲೆ ಚೈನವನ್ನು ಹಿಂದಿನಿಂದ ಆವರಿಸಿ ಗೆಲ್ಲುವ ಹಂಚಿಕೆ ಮಾಡಬಹುದು. ದಕ್ಷಿಣದಲ್ಲಿ ಜಾವ ಸುಮಾತ್ರಗಳನ್ನು ಆದಷ್ಟು ಶೀಘ್ರವಾಗಿ ವಶಪಡಿಸಿಕೊಳ್ಳುವ ಸಾಹಸವನ್ನದು ನಡಿಸುತ್ತಿರುವುದು. ಶಾಂತಸಾಗರದ ದಕ್ಷಿಣ ಪೂರ್ವ ಪ್ರದೇಶದಲ್ಲಿ ಸಂಪೂರ್ಣವಾಗಿ ತನ್ನ ನೌಕಾಧಿಕಾರವನ್ನು ಸ್ಥಾಪಿಸಲು ಮುಂದಾಗಿರುವುದು. ಆಸ್ಟ್ರೇಲಿಯ ಮತ್ತು ಡಚ್ ಈಸ್ಟ್ ಇಂಡೀಸ್‌ಗಳ ನಡುವೆ ಸಂದುಕಟ್ಟಿನ ಸ್ಥಳದಲ್ಲಿರುವ, ಪೋರ್ತುಗೀಸರಿಗೆ ಸೇರಿದ ಟೈಮೂರು ದ್ವೀಪವನ್ನು ಇಷ್ಟರಲ್ಲೇ ಜಾಪಾನು ಆಕ್ರಮಿಸಿರುವುದು. ಆಸ್ಟ್ರೇಲಿಯದ ಅತಿದೊಡ್ಡ ಬಂದರುಗಳಲ್ಲೊಂದಾದ ಡಾರ್ವಿನ್ ಬಂದರದ ಮೇಲೆ ಪ್ರಬಲ ವಿಮಾನ ಧಾಳಿ ನಡಿಸಿ ಹೆಚ್ಚಿನ ಹಾವಳಿ ಮಾಡಿರುವುದು. ಮುಂದೆ ಅದು ಆಸ್ಟ್ರೇಲಿಯದ ಮೇಲೆ ಕೂಡಾ ಧಾಳಿ ನಡಿಸುವುದೋ? ಅಥವಾ ಮಿತ್ರರಾಷ್ಟ್ರಗಳ ನೌಕಾಬಲ ಮತ್ತು ಸೇನಾಬಲವು ಒಟ್ಟು ಸೇರಲು ಅನುಕೂಲ ಹಾಗೂ ಸಂದುಕಟ್ಟಿನ ಸ್ಥಳ ದೊರೆಯದಂತೆ ಮುಂಜಾಗ್ರತೆ ಮಾತ್ರ ತೆಗೆದುಕೊಳ್ಳುತ್ತಿರುವುದೋ ಹೇಳಬರುವುದಿಲ್ಲ. ಬರ್ಮ ಮತ್ತು ಜಾವ ಸುಮಾತ್ರಗಳನ್ನದು ವಶಪಡಿಸಿಕೊಳ್ಳಲೆತ್ನಿಸುವುದಂತೂ ನಿಶ್ಚಯ. ಆ ಮೇಲೆ ಏನು ಮಾಡುವುದು? ಅದು ಪ್ರಕೃತ ಆಸ್ಟ್ರೇಲಿಯವನ್ನು ಗೆಲ್ಲುವ ಗೊಡವೆಗೆ ಹೋಗಲಾರದು. ಯಾಕೆಂದರೆ ಅದಕ್ಕೆ ಅದರಿಂದ ಹೆಚ್ಚಿನ ಸಾಂಪತ್ತಿಕ ಪ್ರಯೋಜನವೇನಾದರೂ ಶೀಘ್ರವಾಗಿ ದೊರೆಯಲಾರದು. ಬರ್ಮ, ಮತ್ತು ಜಾವ ಸುಮಾತ್ರಗಳನ್ನು ಶೀಘ್ರವಾಗಿ ಗೆಲ್ಲಲು ಸಾಧ್ಯವಾದರೆ ಜಾಪಾನು ಹಿಂದುದೇಶದ ಕಡೆಗೆ ದೃಷ್ಟಿಯಿಟ್ಟು ಮಧ್ಯ ಪೂರ್ವದ ವರೆಗೂ ಮುಂದೊತ್ತಿ ಆಕ್ಸಿಸ್ ರಾಷ್ಟ್ರಗಳ ಉದ್ದೇಶವು ಕೈಗೂಡುವಂತೆ ನೆರವಾಗಬಹುದು. ಆದುದರಿಂದ ಇನ್ನು ಸ್ವಲ್ಪ ಸಮಯದಲ್ಲೇ ಹಿಂದುದೇಶವು ಪ್ರತ್ಯಕ್ಷ ಯುದ್ಧದಲ್ಲೇ ನಿರತವಾಗಬಹುದೆಂದು ತೋರುತ್ತದೆ.

ಸಿಂಗಪುರದಿಂದ ಜಾಪಾನು 3500 ಮೈಲು ದೂರದಲ್ಲಿದೆ. ಹೋಂಗ್‌ಕೊಂಗ್ ಮತ್ತು ಸಿಂಗಪುರ ನೌಕಾ ನಿಲಯಗಳು ಸಂಪೂರ್ಣ ನಾಶಮಾಡಲ್ಪಟ್ಟಿರುವುದರಿಂದ ಅವುಗಳನ್ನು ಉಪಯೋಗಿಸುವರೆ ಜಾಪಾನಿಗೆ ಸಾಧ್ಯವಾಗಲಾರದು. ಆದುದರಿಂದ ಅದು ಜಾಪಾನಿನಿಂದಲೇ ಹಡಗಪಡೆಯನ್ನು ತಂದು ಯುದ್ಧ ಹಡಗಗಳು ನಾಶಾವರೆ ಸರಿಮಾಡಲು ಅಲ್ಲಿಗೇನೇ ಹಿಂದೆ ಕಳುಹಿಸಬೇಕಾಗುವುದು. ಮಾತ್ರವಲ್ಲದೆ ದೀರ್ಘವಾದ ಸಮುದ್ರ ಮಾರ್ಗವನ್ನದು ರಕ್ಷಿಸಿಕೊಳ್ಳಬೇಕಾಗಿದೆ. ಆದುದರಿಂದ ಅದಕ್ಕೆ ಹಿಂದುದೇಶದ ಮೇಲೆ ದೊಡ್ಡ ನೌಕಾ ಹಾಗೂ ಸೇನಾ ಧಾಳಿ ನಡಿಸಲು ಸಾಧ್ಯವಾಗಲಾರದು; ಆದುದರಿಂದ ಅದು ಹಿಂದುದೇಶದ ಮೇಲೆ ಚಿಕ್ಕ ಪುಟ್ಟ ಧಾಳಿಗಳನ್ನು ಮಾತ್ರ ನಡಿಸಿ ಜನತೆಯಲ್ಲಿ ದಿಗಿಲನ್ನುಂಟುಮಾಡಲೆತ್ನಿಸಬಹುದು. ಹಿಂದುದೇಶದ ವಿಶಾಲವಾದ ಪೂರ್ವ ಮತ್ತು ಪಶ್ಚಿಮ ಸಮುದ್ರ ಕರಾವಳಿಗಳಲ್ಲಿ ಜಾಪಾನ ಯುದ್ಧ ಹಡಗಗಳ ಮತ್ತು ವಿಮಾನ ವಾಹಕ ಹಡಗಗಳ ಧಾಳಿಯು ಮುಂದೆ ಅಧಿಕವಾಗಬಹುದೆಂಬ, ಹಿಂದೀ ಯುದ್ಧ ತಜ್ಞ ಮಂಡಲದ ಉಪನಾಯಕರಾದ ಮೇಜರ್ ಜನರಲ್ ಜಿ ಎಸ್. ಮೋಲ್ಸ್‌ವರ್ಥರ ಅಭಿಪ್ರಾಯವನ್ನು ನಾವು ಒಪ್ಪುವುದಿಲ್ಲ. ಚಿಕ್ಕ ಪುಟ್ಟ ನಿರರ್ಥಕ ಧಾಳಿಗಳನ್ನು ನಡಿಸಿ ವೃಥಾ ಶ್ರಮ ವ್ಯಯ ಮಾಡುವವರು ಜಾಪಾನರಲ್ಲ. ಮಾತ್ರವಲ್ಲದೆ, ಹೊಂಗ್‌ಕೊಂಗ್ ಮತ್ತು ಸಿಂಗಪುರ ನೌಕಾ ನಿಲಯಗಳನ್ನು ಆದಷ್ಟು ಬೇಗ ಸರಿಪಡಿಸಿ ಉಪಯೋಗಿಸಿಕೊಳ್ಳುವಷ್ಟರ ಚತುರತೆ ಮತ್ತು ಶಕ್ತಿಯು ಅವರಿಗಿದೆ. ಇಂದೀಗ ಸಿಂಗಪುರದ ದ್ವಾರವು ತೆರೆಯಲ್ಪಟ್ಟಿರುವುದರಿಂದ ಹಿಂದುದೇಶದ ಮೇಲೆ ಜಾಪಾನರು ದೊಡ್ಡ ಧಾಳಿ ನಡಿಸಲು ಹೆಚ್ಚಿನ ತೊಂದರೆಯೇನೂ ಇರುವುದಿಲ್ಲ. ರಂಗೂನನ್ನು ಗೆದ್ದ ಮೇಲಂತೂ ಅವರು ಹಿಂದುದೇಶದ ಎಲ್ಲಿಗೇನೇ ಬಂದೆಂತಾಗುವುದು. ಆದುದರಿಂದ ಇನ್ನು ಒಂದೆರಡು ತಿಂಗಳುಗಳಲ್ಲಿ ಪರಿಸ್ಥಿತಿಯು ಹೀಗೆಯೇ ನಿಲ್ಲುವುದೆಂದು ಹೇಳಲು ಸಾಧ್ಯವಿಲ್ಲ. ಜನರು ತಮ್ಮ ಹಿಂದಿನ ಶಾಂತಪರ ಸುರಕ್ಷಿತ ಭಾವನೆಯನ್ನು ಬಿಟ್ಟು ಯುದ್ಧದ ಗಂಡಾಂತರವನ್ನೆದುರಿಸಲು ಸಿದ್ಧರಾಗಬೇಕೆಂದು ನಮಗೆ ತೋರುತ್ತದೆ.

ಡಿ. ಬೋ. ಸೆಕೆಂಡರೀ ಶಾಲಾ ಹೆಡ್ಮಾಸ್ತರುಗಳ ಸಮ್ಮೇಳನ.

(ನಮ್ಮ ವಿಶೇಷ ಬಾತ್ಮೀದಾರರಿಂದ)

ಇದೇ ತಿಂಗಳ ೮೨ … ಡಿ. ಬೋ. … ಧೀಸಿನಲ್ಲಿ ಡಿ. ಬೋ. ಪ್ರೆಸಿಡೆಂಟ್ ಡಾ। ವಿಠಲಸಟ್ … ರವರುಗಳ ಅಧ್ಯಕ್ಷತೆಯಿಂದ ಬೋರ್ಡು ಸೆಕೆಂಡರೀ ಶಾಲಾ ಹೆಡ್‌ಮಾಸ್ತರುಗಳ ಸಮ್ಮೇಳನವು ಯಶಸ್ವಿಯಾಗಿ ಜರಗಿತು. ಕುಂದಾಪುರ ಹಾಯ್‌ಸ್ಕೂಲಿನ ಮುಖ್ಯೋಪಾಧ್ಯಾಯರ ಪ್ರತಿನಿಧಿಯಾಗಿ ಪ್ರಥಮ ಸಹಾಯಕ ಉಪಾಧ್ಯಾಯರೂ, ಇತರ ಎಲ್ಲ ಶಾಲೆಯ ಮುಖ್ಯೋಪಾಧ್ಯಾಯರೂ ಹಾಜರಿದ್ದರು. ಡಿ. ಬೋ. ಪ್ರೆಸಿಡೆಂಟರು ಇಂತಹ ಸಮ್ಮೇಳನವನ್ನು ಜರಗಿಸಿದುದು ಶ್ಲಾಘನೀಯವಿದೆ. ಪ್ರತಿಯೊಂದು ಶಾಲೆಯ ಅವಶ್ಯಕತೆಗಳ ಪೂರೈಕೆ, ಕುಂದುಕೊರತೆಗಳ ನಿವಾರಣೆ, ಶಿಕ್ಷಣದ ವಿಚಕ್ಷಣತೆ, ಮುಂತಾಗಿ ಶಾಲೆಯ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣಗಳಾದ ನೂರಾರು ವಿಷಯಗಳನ್ನು ಸಕ್ರಮವಾಗಿ … ವಾಗಿಲ್ಲವೇ ತಿಳಿದು ಅದರತ್ತ ನಡೆಯಿಸುವುದಕ್ಕಂ … ಈ ವಿದ್ಯಾಸಂಸ್ಥೆಗಳಿಗೆಲ್ಲ ಸಂಬಂಧಪಟ್ಟ ಸಮಾನ … ಮಾನ್ಯ ಸಂಗತಿಗಳನ್ನೂ ಆಯಾ ಸಂಸ್ಥೆಯ ಪ … ಸ್ಥಿತಿ ವೈಶಿಷ್ಟ್ಯದಿಂದ ಬರುವ ಸಮಸ್ಯೆಗಳನ್ನೂ ಮುಖ್ಯೋಪಾಧ್ಯಾಯರುಗಳ ಸಮ್ಮೇಳನದಲ್ಲಿ ಮುಖತಃ ಚರ್ಚಿಸಿ ವಿಚಾರ ವಿನಿಮಯ ಮಾಡಿ ನಿರ್ಧರಿಸುವುದ … ಎಷ್ಟೋ ಸುಗಮವೂ ಸಮರ್ಪಕವೂ ಪರಿಣಾಮಕಾರಿಯೂ ಆದ ಮಾರ್ಗವೆಂದು ತಿಳಿದು ಈ ಸಮ್ಮೇಳನವನ್ನು ಕರೆದ ಮಾನ್ಯ ಅಧ್ಯಕ್ಷರ ಧೋರಣೆಯೂ … ಕಾರ್ಯೋತ್ಸಾಹವೂ ವಿದ್ಯಾಪ್ರಚಾರಪ್ರೇಮವೂ ಅಭಿನಂದನೀಯವಿವೆ. ಒಂದೊಮ್ಮೆ ಸೆಕೆಂಡರೀ ಶಾಲೆಯ ಪ್ರಸಿದ್ಧ ಅಧ್ಯಾಪಕರಾಗಿದ್ದು ಶಿಕ್ಷಣದ ಧ್ಯೇಯ ಸಾಧನೆಗಳ ಸ್ವಾನುಭವ ಪರಿಪೂರ್ಣವುಳ್ಳ ಡಿ। ಬೋ। ಸೆಕ್ರೆಟರಿಗಳು ಈ ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಬೆರೆದು ಸಹಕರಿಸಿದುದು ಅದರ ಯಶಸ್ವೀ ಪರಿಣಾಮಕ್ಕೆ ವಿಶೇಷ ಅನುಕೂಲವಾಗಿತ್ತು.

ಮೊದಲಾಗಿ ಅಧ್ಯಕ್ಷರು ಸೆಕೆಂಡರೀ ಶಾಲೆಗಳ ಬಗ್ಗೆ ಡಿ. ಬೋರ್ಡು ವ್ಯಯಿಸುತ್ತಿರುವ ಮತ್ತು ವ್ಯಯಿಸಲಿಕ್ಕಿರುವ ಹಣದ ಇತಿ ಮಿತಿ ಮುಂತಾದ ಆರ್ಥಿಕ ಪರಿಸ್ಥಿತಿಯನ್ನು ಸಮ್ಮೇಳನದ ಗಮನಕ್ಕೆ ತಂದು ಆ ದೃಷ್ಟಿಯಿಂದ ವ್ಯವಹಾರ್ಯವಾದ ವಿಷಯಗಳ ವಿಚಾರ ವಿನಿಮಯವಾಗಬೇಕೆಂದು ಬಯಸಿದುದರಲ್ಲಿ ಅವರ ಕಾರ್ಯ ದಾಕ್ಷ್ಯವೂ ಮುಚ್ಚುಮರೆಯಿಲ್ಲದ ತರ್ಕ ವಿತರ್ಕಗಳಿಂದ ಪರಮಾವಧಿ ಪ್ರಯೋಜನಕೊಂಡೊಳ್ಳಬೇಕೆಂಬ ಅವರ ನಿಲುವೂ ವ್ಯಕ್ತವಾದುವು. ಶಾಲಾ ಕಟ್ಟೋಣಗಳ ವೈಶಾಲ್ಯ ಸಮರ್ಪಕತೆ, ಪಟಾಂಗಣಗಳ ಸೌಕರ್ಯ, ಶಿಕ್ಷಣದ ಉಪಕರಣಗಳ, ಪಠ್ಯ ಪುಸ್ತಕಗಳ … ಕಾರ್ಯ, ಪುಸ್ತಕ ಭಂಡಾರ, ವಾಚನಾಲಯ, ಆಟದ ಸ್ಥಳ ಮತ್ತು ಶಾರೀರಕ ಶಿಕ್ಷಣ ವ್ಯವಸ್ಥೆ, ಹೊಲಿಗೆ ಮತ್ತು ಸಂಗೀತ ಶಿಕ್ಷಣದ ಆವಶ್ಯಕತೆ, ಉಪಾಧ್ಯಾಯ ಸಂಖ್ಯೆ ಮತ್ತು ಪರಿಪೂರ್ಣತೆ, ಪರೀಕ್ಷಾ ಕ್ರಮ, ಸಂಬಳದ ರಿಯಾಯತಿಯ ರೀತಿ ನೀತಿ, ಶಿಸ್ತು ಆಡಳಿತೆ, ಮುಂತಾದ ಶಾಲಾ ವಿಷಯಕ ಹಲವು ಸಂಗತಿಗಳಲ್ಲಿ ಒಂದೊಂದಾಗಿ ಎತ್ತಲ್ಪಟ್ಟು ಆ ಕುರಿತು ಪ್ರತಿಯೊಂದು ಶಾಲೆಯ ಪರಿಸ್ಥಿತಿಯೂ ಆವಶ್ಯಕಗಳೂ ಸಮ್ಮೇಳನದ ವಿಚಾರ ಗೋಷ್ಠಿಗೆ ಬಂದವು. ಎಲ್ಲ ಶಾಲೆಗಳ ಆಡಳಿತೆ ಶಿಸ್ತು ಶಿಕ್ಷಣದ ರೀತಿ ನೀತಿ ಮುಂತಾದುವುಗಳಲ್ಲಿ ಒಂದು ಬಗೆಯ ಏಕತೆ ಹಾಗೂ ಸರ್ವಸಮಾನತೆ ಇರುವಂತೆಯೂ ಪ್ರತಿಯೊಂದು ಶಾಲೆಯ ಅನಿವಾರ್ಯವಾದ ಆವಶ್ಯಕಗಳು ಪೂರೈಕೆಯಾಗುವಂತೆಯೂ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ತರ್ಕ ವಿತರ್ಕಗಳು ನಡೆದುವು. ವಿದ್ಯಾಭಿಮಾನಿಗಳಾದ ಅಧ್ಯಕ್ಷರು ಸಮ್ಮೇಳನದ ಕಾರ್ಯಕಲಾಪಗಳನ್ನೆಲ್ಲ ಶೋಧಕ ದೃಷ್ಟಿಯಿಂದಲೂ ಸಹಾನುಭೂತಿ ಪರ ಹೃದಯದಿಂದಲೂ ವ್ಯಕ್ತಿ ಸ್ವಾತಂತ್ರ್ಯವನ್ನೀವ ಔದಾರ್ಯ ಮನೋವೃತ್ತಿಯಿಂದಲೂ ಪರಿಶೀಲಿಸುತ್ತ ಶಾಲಾ ಅವುಗಳ ವಿಚಾರ ವಿನಿಮಯಗಳಲ್ಲಿ ಕಲೆತು ಬೆರೆತು ಸಮ್ಮೇಳನದ ಉದ್ದೇಶವು ಸಾರ್ಥಕವಾಗುವಂತೆ ಪ್ರೋತ್ಸಾಹಿಸಿದರು. ಸಮ್ಮೇಳನದ ಮೂಲಕ ತನ್ನ ಅವಗಾಹನೆಗೆ ಬಂದ ವಿಷಯಗಳಿಗೆಲ್ಲ ತನ್ನ ವಿಚಾರದ ಪರಮಾವಧಿಯನ್ನೀಯುವೆನೆಂಬ ಆಶ್ವಾಸನೆಯನ್ನಿತ್ತರು.

ಅಪರಾಹ್ನ ೨-೩೦ರಿಂದ ೪-೩೦ರ ವರೆಗೆ ನಡೆದ ಈ ಸಮ್ಮೇಳನದ ಮಧ್ಯ ಅಲ್ಪವಿರಾಮ ಕಾಲದಲ್ಲಿ ಅತಿಥಿ ಅಭ್ಯಾಗತರಿಗೆಲ್ಲ ಅಧ್ಯಕ್ಷರ ಉದಾರತೆಯ ಉಪಹಾರ ಸತ್ಕಾರವಿತ್ತು. ಸಮ್ಮೇಳನಾಂತ್ಯದಲ್ಲಿ ಅವರ ಸಾರ್ಥಕ್ಯಕ್ಕೆ ಸಹಾಯಕರಾದ ಮುಖ್ಯೋಪಾಧ್ಯಾಯ ವೃಂದಕ್ಕೂ ಡಿ। ಬೋ। ಸೆಕ್ರೆಟರಿಯವರಿಗೂ ಈ ಕಾರ್ಯದಲ್ಲಿ ನೆರವಾದ ಡಿ। ಬೋ। ಆಫೀಸಿನ ನೌಕರ ವರ್ಗಕ್ಕೂ ಅಧ್ಯಕ್ಷರು ಉಪಕಾರೋಕ್ತಿಗಳನ್ನು ಸಲ್ಲಿಸಲು ಅವರಿಗೆ ಧನ್ಯವಾದಾರ್ಪಣೆಯೊಂದಿಗೆ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯವಾಯಿತು.

ಹಿಂದುದೇಶಕ್ಕೆ ಸಾಮಂತ ಸ್ವರಾಜ್ಯ ಕೊಡಲ್ಪಡುವುದೇ?

ದೊಡ್ಡ ಮಾರ್ಪಾಟುಗಳಾಗಲಿವೆ

ಬರುವ ಒಂದೆರಡು ವಾರಗಳೊಳಗೆ ಹಿಂದುದೇಶದ ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗಳಾಗಲಿವೆಯೆಂದು ನಂಬಲಾಗಿದೆ. ಬ್ರಿಟಿಷ್ ಮಂತ್ರಿಮಂಡಲದಲ್ಲಿ ಹಲವು ಬದಲಾವಣೆಗಳಾಗಿ, ಸರ್. ಸ್ಟಾಫೋರ್ಡ್ ಕ್ರಿಪ್ಸರಂತಹ ಹಿಂದುದೇಶದ ಸ್ವಾತಂತ್ರ್ಯವಾದಿಯು ಯುದ್ಧ ಮಂತ್ರಿಮಂಡಲಕ್ಕೆ ಸೇರಿರುವುದರಿಂದ ಹಿಂದುದೇಶಕ್ಕೆ ಹೆಚ್ಚಿನ ಸ್ವಾತಂತ್ರ್ಯವೀಯಲ್ಪಡುವುದು ನಿಶ್ಚಯವೆಂದು ಸುದ್ದಿಯುಂಟಾಗಿದೆ. ಇಂಡಿಯ ಆಫೀಸ್ ತೆಗೆದು ಹಾಕಲ್ಪಟ್ಟು ವೈಸರಾಯರೇ ನೆಟ್ಟಗೆ ಬ್ರಿಟಿಷ್ ಸರಕಾರಕ್ಕೆ ಜವಾಬ್ದಾರರಾಗುವಂತೆ ಏರ್ಪಾಡಾಗುವುದೆಂದೂ, ಹಿಂದೀ ಸರಕಾರದ ಕೇಂದ್ರದ ಆಡಳಿತದಲ್ಲಿ ಕೂಡಾ ಬದಲಾವಣೆಯಾಗಲಿರುವುದೆಂದೂ ವಾರ್ತೆ ಹಬ್ಬಿದೆ. ಹಿಂದುದೇಶಕ್ಕೆ ಬ್ರಿಟನಿನ ಇತರ ಸಾಮಂತ ರಾಜ್ಯಗಳ ಸ್ಥಾನವನ್ನೇ ಕೊಡುವ ಕುರಿತು ಬ್ರಿಟಿಷ್ ಮಂತ್ರಿಮಂಡಲದಲ್ಲಿ ಆಲೋಚನೆ ನಡೆದಿರುವಂತಿದೆ. ಸಪ್ರು ಕಮಿಟಿಯ ವಿನಂತಿಗೆ ಮಿ. ಚರ್ಚಿಲ್ಲರು ಬೇಗನೆ ಉತ್ತರವೀಯುವಾಗ ಅಥವಾ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಕುರಿತು ಚರ್ಚೆ ನಡೆಯುವಾಗ, ಹಿಂದುದೇಶದಲ್ಲಿ ಎಂತಹ ಬದಲಾವಣೆಗಳು ಮಾಡಲ್ಪಡುವವೆಂಬುದು ಸ್ಪಷ್ಟವಾಗುವುದೆಂದು ಊಹಿಸಲ್ಪಟ್ಟಿದೆ. ಲಿಬರಲ್ ಪಕ್ಷದ ಮುಖಂಡರಾದ ಸರ್ ಆರ್ಚಿಬಾಲ್ಡ್ ಸಿಂಕ್ಲೇರರು, ಅಮೆರಿಯವರ ಸ್ಥಾನದಲ್ಲಿ ನೇಮಿಸಲ್ಪಟ್ಟು ಅವರು ಆದಷ್ಟು ಬೇಗನೆ ಹಿಂದುದೇಶವನ್ನು ಸಂದರ್ಶಿಸಬಹುದೆಂದು ಇನ್ನೊಂದು ಸುದ್ದಿ.

ಹಿಂದುದೇಶದ ಸಂಬಂಧವಾದ ಬ್ರಿಟನಿನ ಧೋರಣೆಯು ಅನುಚಿತವಾದುದೆಂದು ಬ್ರಿಟಿಷ್ ಮತ್ತು ಅಮೆರಿಕಾದ ಪತ್ರಿಕೆಗಳು ಟೀಕಿಸಹತ್ತಿವೆ. ಬ್ರಿಟಿಷರು ತಮ್ಮ ಸಾಮಂತ ರಾಜ್ಯಗಳ ಜನತೆಯೊಡನೆ ಸಮಾನತೆಯಿಂದ ಹೊಕ್ಕು ಬಳೆದು ಆತ್ಮೀಯತೆಯನ್ನುಂಟುಮಾಡದೆ, ಬೆಕ್ಕಿಗೆ ಬೇರೆ ಬಿಡಾರವೆಂಬಂತೆ ಪ್ರತ್ಯೇಕವೇ ಇರುವ ಧೋರಣೆಯು ಹಾನಿಕರವಿರುವುದೆಂದೂ, ಆದುದರಿಂದಲೇ ಮಲಯ ಮೊದಲಾದ ರಾಜ್ಯಗಳಲ್ಲಿ ಜನತೆಗೆ ಬ್ರಿಟಿಷರ ಈ ಯುದ್ಧದಲ್ಲಿ ಉತ್ಸಾಹವಿಲ್ಲದಂತಾಗಿದೆ. ಡಚ್ ಈಸ್ಟ್ ಇಂಡೀಸಿನಲ್ಲಿ ಡಚ್ಚರು, ಜನತೆಯೊಂದಿಗೆ ಸಮಾನತೆಯಿಂದ ಹೊಕ್ಕು ಬಳೆದು, ಅಲ್ಲಿಯ ಸ್ತ್ರೀಯರನ್ನೇ ಮದುವೆಯಾಗಿ, ಭಾಷೆಯನ್ನು ಕಲಿತು, ಅಲ್ಲಿಯೇ ನಿರಂತರವಾಗಿ ವಾಸಿಸುತ್ತಿರುವುದರಿಂದ ಜನಸಾಮಾನ್ಯರು ಕೂಡಾ ಯುದ್ಧದಲ್ಲಿ ಉತ್ಸಾಹದಿಂದ ಭಾಗವಹಿಸುವಂತಾಗಿದೆಯೆಂದು ಲಂಡನ್ ಟೈಮ್ಸ್ ಪತ್ರಿಕೆಯಲ್ಲೇ ಲೇಖನವೊಂದು ಪ್ರಕಟವಾಗಿದೆ.

ಕೆಂಪು ಸೇನೆಯ ಸಾಹಸ

ಲೆನಿನ್‌ಗ್ರಾಡಿನ ಮೇಲಿನ ಜರ್ಮನರ ಮುತ್ತಿಗೆಯನ್ನು ಸೋವಿಯಟ್ ಸೈನಿಕರು ಭೇದಿಸಿರುತ್ತಾರೆ. ಇನ್ನು ಸ್ವಲ್ಪ ಸಮಯದಲ್ಲೇ ಲೆನಿನ್‌ಗ್ರಾಡು ಮುತ್ತಿಗೆಯಿಂದ ವಿಮುಕ್ತವಾಗುವುದು ನಿಶ್ಚಯವೆಂದು ತೋರುತ್ತದೆ. ಕೆಂಪುಸೇನೆಯ ಸಾಹಸದಿಂದಾಗಿ ನಾಝಿ ಸೇನೆಯು ಎಲ್ಲಾ ರಣರಂಗಗಳಲ್ಲಿಯೂ ಹಿಂದಕ್ಕೊತ್ತಲ್ಪಟ್ಟಿರುತ್ತದೆ. ಸ್ಮೋಲೆಂಕ್ಸ್ ಪ್ರದೇಶದಲ್ಲಿ ಸೋವಿಯಟ್ ಗೊರಿಲ್ಲಾಗಳ ಹಾವಳಿಯು ಪ್ರಬಲವಾಗಿದೆ. ಸೋವಿಯೆಟ್ ಸೇನೆಯೂ ಜರ್ಮನರನ್ನು ಹಿಂದಕ್ಕಟ್ಟಿ ಮುಂದೊತ್ತುತ್ತಿದೆ.

ಕೆಂಪು ಸೇನೆಯ ಯಶಸ್ವರ ಸಾಹಸ!

ಒಲಿಯ ಯುದ್ಧದಲ್ಲಿ ಜಾಪಾನರ ನೌಕಾ ನಷ್ಟ.

ಸ್ಟೈಲಿನರ ಭಾಷಣ

ಕೆಂಪುಸೇನೆಯ ಸ್ಥಾಪನೆಯ 24ನೇ ವಾರ್ಷಿಕೋತ್ಸವವು ಇದೇ ತಾ. 22ರಲ್ಲು ರಷ್ಯ ಮತ್ತು ಲಂಡನ್ ಮೊದಲಾದ ದೇಶಗಳಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಸ್ಟೈಲಿನರು ಭಾಷಣವೀಯುತ್ತಾ, "ಲೆನಿನ್‌ಗ್ರಾಡಿನ ದ್ವಾರದಿಂದ ನಾವು ವೈರಿಯನ್ನು ಹಿಂದಕ್ಕಟ್ಟುವೆವು. ಬಿಳಿ ರಷ್ಯ, ಉಕ್ರೈನ್ ಮತ್ತು ಕ್ರೈಮಿಯಗಳನ್ನು ಬಂಧವಿಮುಕ್ತಗೊಳಿಸಿ, ಮೊದಲು ಕೆಂಪು ಧ್ವಜವು ಹಾರಾಡುತ್ತಿದ್ದಲ್ಲೆಲ್ಲಾ ಪುನಹ ಅದನ್ನು ಸ್ಥಾಪಿಸುವೆವು" ಎಂಬ ದೃಢವಿಶ್ವಾಸ ಸೂಚಿಸಿರುವರು. ಹಿಟ್ಲರರು ಇಷ್ಟರಲ್ಲೇ ಜೈಸಲ್ಪಟ್ಟಿರುವರೆಂಬ ಭ್ರಾಂತಿಯನ್ನು ಯಾರೂ ಕಟ್ಟಿಕೊಳ್ಳಬಾರದು. ವೈರಿಯನ್ನು ಆಶ್ಚರ್ಯಗೊಳಿಸುವ ಶಕ್ತಿಯು ಜರ್ಮನ್ ಸೇನೆಯ ವಿಶಿಷ್ಟತೆ. ಸೋವಿಯೆಟ್ ಸೇನೆಯು ಈ ಗುಟ್ಟನ್ನು ಮೊದಲೇ ತಿಳಿದು ಜರ್ಮನರನ್ನೆದುರಿಸಲು ಬೇಕಾದ ಸಿದ್ಧತೆ ಮಾಡಿಕೊಂಡು ಬಂದಿದೆ. ಇನ್ನಾದರೂ ಘೋರ ಹೋರಾಟ ನಡೆಯಲಿದೆ. ಆದುದರಿಂದ ಹೊಸ ಸೇನೆಗಳು ರಣರಂಗಕ್ಕೆ ಕಳುಹಿಸಲ್ಪಡಬೇಕು. ಸೇನೆಯು ಹೆಚ್ಚೆಚ್ಚಾಗಿ, ಟೇಂಕು, ವಿಮಾನ, ಕೋವಿ, ತುಪಾಕಿ, ಮತ್ತು ಇತರ ಆಯುಧಗಳನ್ನು ಪಡೆಯಬೇಕು. ಹಿಟ್ಲರ್ ಶಾಹಿಯನ್ನು ನಾಶಗೊಳಿಸುವುದೇ ಸೋವಿಯೆಟ್ ಸರಕಾರದ ಉದ್ದೇಶವಲ್ಲದೆ ಜರ್ಮನ್ ರಾಷ್ಟ್ರ ಮತ್ತು ಜನತೆಯನ್ನಲ್ಲ. ಕೆಂಪುಸೇನೆಯು ಇಂದೀಗ ಧರ್ಮಯುದ್ಧವನ್ನು ನಡಿಸಿ ಅತ್ಯಂತ ಸಾಹಸದಿಂದ ವೈರಿಯನ್ನು ಹಲವು ಕಡೆಗಳಿಂದ ಹಿಂದಕ್ಕಟ್ಟಿದೆ. ಜರ್ಮನಿಯೊಂದಿಗೆ ಹೋರಾಡಲು ಮಿತ್ರರಾಷ್ಟ್ರಗಳಿರುತ್ತವೆ ಆದರೆ ಈ ವರೆಗೆ ರಷ್ಯಕ್ಕೆ ಅಂತಹ ಸ್ಥಿತಿಯೇನೂ ಇರುವುದಿಲ್ಲ. ಅದು ಏಕಾಂಗಿಯಾಗಿಯೇ ಹೋರಾಡಿ ತಡೆಯುತ್ತಿದೆ. ಕೆಂಪು ಸೇನೆಯು ಉದಾತ್ತ ಉದ್ದೇಶಕ್ಕಾಗಿ ಹೋರಾಡುತ್ತಿರುವುದರಿಂದಲೇ ನಾವಿರಾರು ಮಂದಿ ವೀರ ಪುರುಷರು ಮತ್ತು ಸ್ತ್ರೀಯರನ್ನದು ಉಂಟುಮಾಡಿದೆ. ಕೆಂಪು ಸೇನೆ, ಕೆಂಪು ನೌಕಾಪಡೆ, ಮತ್ತು ಗೊರಿಲ್ಲಾ ಪಂಗಡಿಗರು ಮಾಡಿರುವ ಸಾಹಸಪರ ಕೆಲಸಗಳು ಅತ್ಯಂತ ಸ್ತುತ್ಯವಿದೆಯೆಂಬುದೇ ಸ್ಟೈಲಿನರ ಭಾಷಣದ ಸಾರಾಂಶ.

ಡಚ್ ಈಸ್ಟ್ ಇಂಡೀಸಿನ ಯುದ್ಧ.

ಡಚ್ ಈಸ್ಟ್ ಇಂಡೀಸಿನ ದಕ್ಷಿಣ ಸುಮಾತ್ರ ಮತ್ತು ಬಲಿ ದ್ವೀಪಗಳಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ಬಲಿ ದ್ವೀಪದ ಸಮೀಪ ನಡೆದ ದೊಡ್ಡ ನೌಕಾಯುದ್ಧದಲ್ಲಿ ಜಾಪಾನರು ಅತಿ ದೊಡ್ಡ ನಷ್ಟವನ್ನು ಪಡೆದಿರುವರೆಂದು ತಿಳಿದುಬರುತ್ತದೆ. ಈ ಯುದ್ಧದಲ್ಲಿ ಅಮೆರಿಕಾದ ಮತ್ತು ಡಚ್ ಈಸ್ಟ್ ಇಂಡೀಸ್ ಯುದ್ಧ ಹಡಗಗಳು, ಜಾಪಾನರ 4 ಯುದ್ಧ ಹಡಗಗಳನ್ನು ಮುಳುಗಿಸಿ 14 ಯಾ 15ಕ್ಕೆ ಜಖಮ್ ಮಾಡಿವೆ. ಇದರಿಂದ ಜಾಪಾನರಿಗೆ ದೊಡ್ಡ ಪೆಟ್ಟಾಗಿರುವುದೆಂದು ನಂಬಲಾಗಿದೆ. ಬಲಿಯ ವಿಮಾನ ನಿಲಯವೊಂದನ್ನು ಜಾಪಾನರು ವಶಪಡಿಸಿಕೊಂಡಿರುತ್ತಾರೆ. ಸಿಂಗಪುರಕ್ಕೆ ದೊಡ್ಡ ಜಾಪಾನ ನೌಕಾಪಡೆಯೊಂದು ಇಷ್ಟರಲ್ಲೇ ಬಂದಿರುತ್ತದೆ. ಜಾವಕ್ಕೆ ಅಮೆರಿಕಾದ ಸೇನೆಯು ಬಂದಿರುತ್ತದೆ

ಬರ್ಮದಲ್ಲಿ ತೀವ್ರ ಹೋರಾಟ.

ಬರ್ಮದಲ್ಲಿ ಅತ್ಯಂತ ತೀವ್ರ ಹೋರಾಟವು ನಡೆಯುತ್ತಿದೆ. ಜಾಪಾನರು ಬಿಲಿನ್ ನದಿಯನ್ನು ದಾಟಿ ರಂಗೂನಿನಿಂದ 40 ಮೈಲು ದೂರವಿರುವ ಪೇಗುವನ್ನು ಗೆದ್ದಿರುವರೆಂಬುದು ಸುಳ್ಳೆಂದು ತಿಳಿದುಬರುತ್ತದೆ. ಚೀನೀಯರು ಥೈಲೆಂಡಿನ ಮೇಲೆ ನುಗ್ಗಿ ಹೋರಾಟ ಆರಂಭಿಸಿರುತ್ತಾರೆ. ಬಿಲಿನ ನದಿಯ ಪ್ರದೇಶದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ಜಾಪಾನರ ಪರ ಅತಿ ಹೆಚ್ಚಿನ ರಿಸರ್ವ್ ಸೇನೆ ಇರುವಾಗ, ಮಿತಸಂಖ್ಯೆಯ ಬ್ರಿಟಿಷ್ ಸೇನೆಗೆ ಅವರನ್ನೆದುರಿಸುವುದು ಬಹಳ ಕಷ್ಟವಾಗಿದೆ. ಬ್ರಿಟಿಷ್ ಮತ್ತು ಅಮೆರಿಕಾದ ಯುದ್ಧ ವಿಮಾನಗಳು ತೀವ್ರ ಧಾಳಿ ನಡೆಸುತ್ತಿವೆ. ಬಂಗಾಳಕೊಲ್ಲಿಯಲ್ಲಿ ಇಷ್ಟರಲ್ಲೇ ಜಾಪಾನ ಯುದ್ಧ ಹಡಗಗಳು ಚಲಿಸತೊಡಗಿವೆಯೆಂದು ತಿಳಿದುಬರುತ್ತದೆ.

ಬ್ರಹ್ಮಾವರ— ಕೊಸ್ಮೊ ಪೊಲಿಟನ್ ಹಯರ್ ಎಲಿಮೆಂಟರಿ ಶಾಲೆಯ ರಜತಮಹೋತ್ಸವವು ಇದೇ ತಾ. ೧೭ರಲ್ಲು ಕುಂದಾಪುರ ಸಬ್ ಕಲೆಕ್ಟರರಾದ ಶ್ರೀ ಆರ್. ಪ್ರಸಾದ, ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸಂಸ್ಥಾಪಕರೂ ವಾಜಿ ಮೆನೇಜರರೂ ಆಗಿದ್ದ ಡಾ| ಸೊರೇಸರವರ ತೈಲ ಚಿತ್ರ ಅನಾವರಣವನ್ನು ವಕೀಲ್ ಶ್ರೀ ಕೆ. ಜೆ. ಬಲ್ಲಾಳರು ನೆರವೇರಿಸಿದರು. ಹಳೆವಿದ್ಯಾರ್ಥಿ ಸಂಘದ ಉದ್ಘಾಟನೆಯೂ ಹಳೆವಿದ್ಯಾರ್ಥಿಗಳ ವಿನೋದಗೋಷ್ಠಿಯೂ ತಾ. ೧೮ರಲ್ಲು ಶಾಲಾ ಡಿ| ಇನ್ಸ್‌ಪೆಕ್ಟರ್ ಶ್ರೀ ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳು, ನಾಟಕ ಪ್ರದರ್ಶನಗಳಾಗಿ ಡಾ| ಪಿ. ಜಿ. ಕೋಟಿಯವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

IF Satisfaction is what you wish
cheap Price is your desire &
Best Quality your want.

Have All your School Requirements

Such as

Text Books, Library Books & Exercise Books
and all kinds of Stationery at Stunning Prices
from us.

WE ASK YOU TO PAY A VISIT AND VERIFY

NAVABHARAT BOOK DEPOT

Registered Publishers, Book sellers & Stationers.

Sri Ramanjaneya Buildings',
Koladapet Road, UDIPI

READ - - GOOD - - BOOKS.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಲ್ಲಿ

ತಾ. 22--2--1942ರಿಂದ

ಬೊಂಬೇ ಟಾಕೀಸ್‌ನವರ

ಬಂಧನ್.

ಲೀಲಾ ಚಿಟ್ನಿಸ್-- ಅಶೋಕ ಕುಮಾರ್

ಬರುವ ಚಿತ್ರಗಳು:- ಹಿಫಾಜತ್, ಪುಕಾರ್, ಡೈಮಂಡ್ ಕ್ವೀನ್--

ಅರ್ಜಿ ವಗೈರೆಗಳನ್ನು

ಟೈಪು

ಮಾಡಿಕೊಡಲಾಗುವುದು.

ನವಯುಗ ಆಫೀಸು.

ಕೋರ್ಟಿನ ಪೇಟೆ, ಉಡುಪಿ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಫ್ಯಾಸಿಸ್ಟ್ ವಿರೋಧ ದಿನಾಚರಣೆ ದ. ಕನ್ನಡ ವಿದ್ಯಾರ್ಥಿಗಳ ಫೆಡರೇಶನಿನ ಆಶ್ರಯದಲ್ಲಿ ಫ್ಯಾಸಿಸ್ಟ್ ವಿರೋಧ ದಿನಾಚರಣೆಯು ಕಳೆದ ತಾ. 19ರಲ್ಲಿ ಆಚರಿಸಲ್ಪಟ್ಟಿತು. ಅಂದು ಜರಗಿದ ಸಭೆಯಲ್ಲಿ ಶ್ರೀ| ಪಿ. ಕೆ. ಶಂಕರನ್ ಅವರು ಅಗ್ರಾಸನ ವಹಿಸಿದ್ದರು. ಶ್ರೀ| ಕೆ. ಪದ್ಮನಾಭನ್ ಮತ್ತು ಶ್ರೀ| ಬಿ. ವಿ. ಕಕ್ಕಿಲ್ಲಾಯರು ಫೇಸಿಸಮನ್ನು ಖಂಡಿಸಿ ಮಾತಾಡಿದಲ್ಲದೆ ಫೇಸಿಸ್ಟರ ವಿರೋಧವಾಗಿ ಹೋರಾಡುವವರಿಗೆ ಸಹಾಯ ಮಾಡಬೇಕೆಂದು ಹೇಳಿದರು.

ಜಿಲ್ಲಾ ಯುದ್ಧ ಸಮಿತಿಯ ಸಭೆ:- ಜಿಲ್ಲಾ ಯುದ್ಧ ಸಮಿತಿಯ ಸಭೆಯೊಂದು ಕಳೆದ ತಾ. 16ರಲ್ಲಿ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾ ಕಲೆಕ್ಟರರಾದ ಜನಾಬ್ ಯಂ. ಕರಂತುಲ್ಲಾ ಸಾಹೇಬ್ ಬಹದ್ದೂರ್ ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಸಮಿತಿಯನ್ನು ಆಗಾಗ ಸೇರಿಸುವುದು ಪ್ರಯಾಸದ ಕಾರ್ಯವೆಂದೂ, ಆದ್ದರಿಂದ ಈ ಸಮಿತಿಯ ಕಾರ್ಯಕಾರಿ ಸಮಿತಿಯೊಂದನ್ನೇರ್ಪಡಿಸುವುದರಿಂದ ಕಾರ್ಯ ಕಲಾಪಗಳನ್ನು ಬಹು ಬೇಗನೆ ನಿರ್ವಹಿಸಬಹುದೆಂದೂ ಸೂಚಿಸಿದರು. ಜಿಲ್ಲಾ ಕಲೆಕ್ಟರರ ಸೂಚನೆಯು ಅನುಮೋದಿಸಲ್ಪಟ್ಟಿತು. 18 ಮಂದಿ ಅಧಿಕಾರಿಗಳೂ ಸುಮಾರು 22 ಮಂದಿ ಅನಧಿಕಾರಿಗಳೂ ಕಾರ್ಯಕಾರಿ ಮಂಡಲಿಗೆ ಆರಿಸಲ್ಪಟ್ಟರು. ಈ ಸಮಿತಿಯ ಸದಸ್ಯರುಗಳು ಮಂಗಳೂರಿನಲ್ಲಿಯೇ ಇರುವುದರಿಂದ ಅವರುಗಳು ಆಗಾಗ್ಯೆ ಸೇರಿ ಸಮಿತಿಯ ಕಾರ್ಯಗಳನ್ನು ಕ್ಷಿಪ್ರವಾಗಿ ಜರಗಿಸುವರೆ ಅನುಕೂಲವಾಗುವುದು.

ಪಾರಿತೋಷಕ ಹಂಚೋಣ:— ಯುದ್ಧ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಎರಡನೆಯ ಸೋಡ್ತಿಯಲ್ಲಿ ಇನಾಮು ದೊರೆತವರಿಗೆ ಇನಾಮುಗಳನ್ನು ಹಂಚುವ ಸಮಾರಂಭವು ತಾ. 16ನೇ ಸಾಯಂಕಾಲ ಕಲೆಕ್ಟರರ ಆಫೀಸಿನಲ್ಲಿ ನಡೆಯಿತು. ಶ್ರೀ|| ಯಂ. ವೆಂಕಟೇಶ ಪೈಗಳವರು ಎರಡನೆಯ ಸೋಡ್ತಿಯಲ್ಲಿ 34 000 ರೂ.ಗಳಷ್ಟು ಸಂಗ್ರಹವಾಗಿದೆ ಎಂಬ ದನ್ನು ತಿಳಿಸಿದರು. ಮಿಸೆಸ್ ಫೌಲರರು ಪಾರಿತೋಷಕಗಳನ್ನು ಹಂಚಿದರು. ಮಿ| ಫೌಲರರು (ರಿಲೀಫ್ ಸಮಿತಿಯ ಅಧ್ಯಕ್ಷರು) ಈ ರಿಲೀಫಿನ ಟಿಕೇಟುಗಳನ್ನು ಮಾರಲು ಸಹಾಯ ಮಾಡಿದ ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ಶ್ರೀ|ಗಳಾದ ದೇವಪ್ಪ ಕೋಟ್ಯಣ್ಣ, ಡೋನಾತ್ ಡಿ'ಸೋಜ, ಮತ್ತು ಲಚ್ಚಣ್ಣ ಗೌಡ-ಇವರುಗಳಿಗೆ ಕ್ರಮವಾಗಿ 3100,1000 ಮತ್ತು 300 ರೂಗಳ ಮಂಡಲನೆಯ ದ್ವಿತೀಯ ಮತ್ತು ತೃತೀಯ ಬಹುಮಾನಗಳು ದೊರೆತ ವು.

ಉಡುಪಿ.

ಭಾವಚಿತ್ರ ಅನಾವರಣ

ಉಡುಪಿಯ ಅತ್ಯುತ್ಸಾಹೀ ಸೇವಕರ್ ಆಗಿದ್ದ ದಿವಂಗತ ಶ್ರೀ. ಮಾಧವ ರಾಯರ ಭಾವಚಿತ್ರ ಅನಾವರಣ ಸಮಾರಂಭವು ಉಡುಪಿಯ ಹಿಂದುಸ್ಥಾನೀ ಸ್ಕೌಟ್ ಎಸೋಸಿಯೇಶನಿನ ಆಶ್ರಯದಲ್ಲಿ ಇದೇ ತಾ. 20ರಲ್ಲಿ ಬೋರ್ಡು ಹೈಸ್ಕೂಲು ಪ್ರಾಂಗಣದಲ್ಲಿ ಜರಗಿತು. ದ| ಕಂದರರಾಮ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸ್ಕೌಟ್ ಕಮಿಷನರ್ ಶ್ರೀ ಎಮ್, ಎನ್, ಮಾಧವ ರಾಯರು ಚಿತ್ರವೇಧಕ ಭಾಷಣವಿತ್ತು ದಿವಂಗತರ ಆದರ್ಶವನ್ನನುಸರಿಸುವಂತೆ ಕೇಳಿಕೊಂಡರು. ಅಸಿಸ್ಟೆಂಟ್ ಕಮಿಶನರ್ ಶ್ರೀ ಬಿ. ಎಮ್, ಬಾಳಿಗರೂ ಇತರ ಕೆಲವು ಸ್ನೇಹಿತರೂ ಭಾಷಣವಿತ್ತ ಮೇಲೆ ಅಧ್ಯಕ್ಷರ ಭಾಷಣವಾಗಿ ಶ್ರೀ ಆರ್, ಆರ್, ಕುಂಜೂರರು ಧನ್ಯವಾದಗಳನ್ನಿತ್ತರು.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಭಾಷಣ— ರೆವೆನ್ಯೂ ಡಿವಿಜನಲ್ ಆಫಿಸರ್ ಶ್ರೀ ಜೂಗಪ್ಪನವರು ಇದೇ ತಾ, 20ರಲ್ಲಿ ಮೈನ್ ಶಾಲೆಯಲ್ಲಿ 'ಭಾರತೀಯ ಸಂಸ್ಕೃತಿ' ಎಂಬ ಕುರಿತು ವಿಚಾರ ಪ್ರಚೋದಕ ಭಾಷಣವಿತ್ತರು. ಶ್ರೀ ಅರೂರು ಲಕ್ಷ್ಮೀ ನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು.

ಮುಲ್ಕಿ— ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ವಾರ್ಷಿಕೆಯಂತೆ ಶ್ರೀ ಮಹಾಶಿವರಾತ್ರಿ ಸಂಬಂಧ ತಾ. 13-2-42ನೇ ರಾತ್ರಿ ವ್ಯಾಖ್ಯಾನ, ಭಜನೆ, ಪೂಜಾದಿಗಳು ಜರಗಿದುವು. ಸ್ಥಳೀಯ ಸೆಂಟರಿನ ಎಲಿಮೆಂಟರಿ ಶಾಲಾ ಅಧ್ಯಾಪಕರ ಸಾಮಾನ್ಯ ಮಾಸಿಕ ಸಭೆಯು ತಾ. 14-2-42ರಲ್ಲಿ ಶ್ರೀ. ಬಿ. ಭೋಜರಾಯರ ಅಧ್ಯಕ್ಷತೆಯಲ್ಲಿ ಹಳೆಯಂಗಡಿ ಬೋ| ಹಾ| ಎ| ಶಾಲೆಯಲ್ಲಿ ಜರಗಿತು. ಕೆಲಮಂದಿ ಊರ ಪ್ರಮುಖರು ಇದೇ ಕಳೆದ ತಾ. 15-2-42ರಲ್ಲಿ ಶ್ರೀ ಕೆ. ಯು. ಪೈ. ಬಿ. ಎ. ರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಇಲ್ಲಿ ಒಂದು ಚರ್ಖಾಸಂಘವನ್ನು ಸ್ಥಾಪಿಸಿರುವರು ಸ್ತುತ್ಯ.

ಬನ್ನಾಡಿ— ಇಲ್ಲಿಯ ಪರಮ ಹಂಸ ಶಾಲಾ ಗೃಹಪ್ರವೇಶೋತ್ಸವವು ತಾ 28-2-42ನೇ ಶನಿವಾರ ಅಪರಾಹ್ನ ಗಂಟೆ 4, 30ಕ್ಕೆ ಸರಿಯಾಗಿ ಉಡುಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ಭಟ್, ಎಂ, ಎ, ಎಲ್, ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವದು. ವಿದ್ಯಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ.

ನಿಂಜೂರು:- ತಾ. 21-2-42ರಲ್ಲಿ ಶ್ರೀ. ಮಾರ್ಕಳ ನಾಗಣ್ಣ ಹೆಗ್ಡೆಯರ ಅಧ್ಯಕ್ಷತೆಯಲ್ಲಿ S. V S ಸಂಘದವರು ನೈಜಪ್ರೇಮ ಎಂಬ ನಾಟಕವನ್ನು, ಭವ್ಯವಾಗಿ ಕಟ್ಟಿದ ಸ್ಟೇಜಿನಲ್ಲಿ ಆಡಿ ತೋರಿಸಿದರು.

ಸ್ವೀಕಾರ

ಶ್ರೀ ಕೃಷ್ಣ ಪರ್ಯಾಯ ಪ್ರಕಾಶಿನೀ— ಪ್ರಕೃತ ಪರ್ಯಾಯ ಪೀಠಾರೂಢರಾಗಿರುವ ಶ್ರೀ ಕೃಷ್ಣಾಪುರ ಮಠಾಧೀಶರ ಆಶ್ರಯದಿಂದ ಪ್ರಕಟವಾಗುತ್ತಿರುವ ಈ ಧಾರ್ಮಿಕ ಮಾಸ ಪತ್ರಿಕೆಯ 1 2.ನೇ ಸಂಚಿಕೆಗಳು ನಮ್ಮ ಕೈಸೇರಿವೆ. ಸಂಪಾದಕರು ಶ್ರೀ ಕೆ. ರಾಜಗೋಪಾಲಾಚಾರ್ಯ ಉಡುಪಿಯ ಅಷ್ಟ ಮಠಗಳಿಗೆ ಹಾಗೂ ಧರ್ಮಕ್ಕೆ ಸಂಬಂಧಪಟ್ಟ ಲೇಖನ ಶ್ಲೋಕ, ಕವಿತೆ ಇತ್ಯಾದಿಗಳಿಗಾಗಿ ಮೀಸಲಿಟ್ಟ ಪತ್ರಿಕೆಯಿದು. ಧರ್ಮಾಭಿಮಾನಿಗಳ ಪ್ರೋತ್ಸಾಹಕ್ಕೆ ಅರ್ಹವಿದೆ.

ಶ್ರೀ ಕೃಷ್ಣಾಪುರ ಮಠಂಶ ತುಳು ಲಾವಣಿ— ಶ್ರೀ ಕೆ. ನಾರಾಯಣ ತಂತ್ರಿಗಳಿಂದ ಬರೆಯಲ್ಪಟ್ಟ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥರ ಚರಿತ್ರೆಯ ತುಳುಲಾವಣಿಯಿದು. ಇದರಲ್ಲಿ ಈ ಶ್ರೀ ಪಾದಂಗಳವರನ್ನು ಬಹಳವಾಗಿ ಸ್ತುತಿಸಲಾಗಿದೆ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜೀವನ ಟ್ರೇಡಿಂಗ್ ಕಂಪೆನಿ

260. ಟ್ರಿಪ್ಲಿಕೇನ್ ಹೈರೋಡ್, ಮದರಾಸ್.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ "ಗೊನೊಕಿಲರ್" ರಿಜಿಸ್ಟರ್ಡ್

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ

ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ.

Sole Manufacturer DR. D. N. JASANI, Vittalbhai Patel Road, BOMBAY 4.

ಸಿಂಗಪುರವು ಮಿತ್ರ ರಾಷ್ಟ್ರಗಳಿಗೆ ಅತಿ ದೊಡ್ಡ ಪಾಠ ಕಲಿಸಿದೆ!

ಅವರ ಈ ವರೆಗಿನ ಯುದ್ಧದ ಧೋರಣೆಯು ಅನಾಹುತ ಕಾರಿಯಾಗಿದೆ.

ಹಿಂದಿನ ರಕ್ಷಣಾಯುದ್ಧಕ್ರಮವು ನಿರರ್ಥಕವಾಗಿದೆ-

ಮೇಲೇರಿ ಹೋಗಿ ಹೋರಾಡುವ ಸಾಹಸ ಇಂದು ಬೇಕಾಗಿದೆ.

ಸಿಂಗಪುರದ ಪತನವು ಬ್ರಿಟನನ್ನು ನಿದ್ರೆಯಿಂದ ಎಚ್ಚರಿಸಿಬಿಟ್ಟಿದೆ. ಅದರ ಪರಿಣಾಮವಾಗಿ ಬ್ರಿಟಿಷ್ ಮಂತ್ರಿಮಂಡಲವೇ ಬದಲಾವಣೆ ಹೊಂದಿಬಿಟ್ಟಿದೆ. ಅತ್ಯಂತ ತೀವ್ರಗಾಮಿಗಳಾಗಿದ್ದು ಇದ್ದುದನ್ನು ಇದ್ದಂತೆ ಹೇಳುವ ಕಡು ಯಥಾರ್ಥವಾದಿಯಾಗಿರುವ ಸರ್. ಸ್ಟಾಫೊರ್ಡ್ ಕ್ರಿಪ್ಸರು ಇಂದು ಯುದ್ಧ ಮಂತ್ರಿಮಂಡಲದಲ್ಲಿ ಸೇರಿಸಲ್ಪಟ್ಟಿರುತ್ತಾರೆ. ಕೆಲವೇ ದಿನಗಳ ಮೊದಲು ಇದಕ್ಕೆ ಚರ್ಚಿಲ್ಲರು ವಿರೋಧವಿದ್ದರು.

ಇನ್ನೂ ಒಂದು ಮಹತ್ವದ ಬದಲಾವಣೆಯೆಂದರೆ, ಯುದ್ಧ ಮಂತ್ರಿಮಂಡಲದಲ್ಲಿ ಚರ್ಚಿಲ್ಲರ ಬಲಗೈಯಂತಿದ್ದು, ಬ್ರಿಟನನ್ನು ಇದೊಂದು ದ್ವೀಪ ಕೋಟೆಯನ್ನಾಗಿ ಮಾಡಿ ಸುಭದ್ರಗೊಳಿಸುವ ಕಡೆಗೆ ಮಾತ್ರ ಸಂಪೂರ್ಣ ಗಮನ ಕೊಡುತ್ತಿದ್ದ ಲೋರ್ಡ್ ಬೀವರ್ ಬ್ರೂಕರು, ಹೊಸ ಮಂತ್ರಿಮಂಡಲದಲ್ಲೀ ಇರದೆ ಅಮೇರಿಕಕ್ಕೆ ಕಳುಹಿಸಲ್ಪಟ್ಟಿದು. ಇದಕ್ಕೆ ಅನಾರೋಗ್ಯವನ್ನು ಕಾರಣವಾಗಿ ಕೊಡಲಾಗಿದೆ. ಆದರೆ ಯುದ್ಧದ ಕುರಿತು ಬ್ರಿಟನು ತನ್ನ ಹಿಂದಿನ ಅನಾಹುತಕಾರಿ ಧೋರಣೆಯನ್ನು ಬದಲಾಯಿಸಲು ಮುಂದಾಗಿರುವುದೆಂಬುದನ್ನು ಈ ವಿದ್ಯಮಾನವು ವ್ಯಕ್ತಗೊಳಿಸುತ್ತದೆ. ಸಾಮ್ರಾಜ್ಯದ ಇತರ ರಾಜ್ಯಗಳ ಗೊಡವೆಯೇ ಇಲ್ಲದೆ, ಜರ್ಮನರು ಧೈರ್ಯವಿದ್ದರೆ ಬ್ರಿಟನಿನ ಮೇಲೆ ಧಾಳಿ ನಡಿಸಲಿ, ಅವರನ್ನೊಂದು ಕೈ ನೋಡಿಬಿಡುವ, ಎಂದು ವಿಮಾನ, ಟೇಂಕು ಮೊದಲಾದ ಯುದ್ಧೋಪಕರಣಗಳನ್ನು ಧಾರಾಳವಾಗಿ ಇಂಗ್ಲೆಂಡಿನಲ್ಲೇ ಸಂಗ್ರಹಿಸಿಟ್ಟು, ಹೊರಗೆ ಕಳುಹಿಸಲು ಲುಬ್ಧತನ ತೋರಿಸಿದ್ದವರೆಂದರೆ ಲೋರ್ಡ್ ಬೀವರ್ ಬ್ರೂಕರು. ಕಲ್ಕತ್ತದ ಸ್ಟೇಟ್ಸ್ ಮೆನ್ ಪತ್ರಿಕೆಯ ಸಂಪಾದಕರಾಗಿದ್ದ ಮಿ ಆರ್ಥರ್ ಮೂರರು ಈ ಮಹಾಶಯರ ಭೇಟಿ ಮಾಡಿ ಈ ಗಂಡಾಂತರದ ಸಂದರ್ಭದಲ್ಲಿ ಹಿಂದುದೇಶದಲ್ಲಿ ವಿಮಾನ ಮತ್ತು ಟೇಂಕುಗಳನ್ನೇಕೆ ತಯಾರಿಸುವ ವ್ಯವಸ್ಥೆ ಮಾಡಬಾರದು? ಮಿಲ್ಯಾಂತರ ಹಿಂದೀ ಸೇನೆಯನ್ನೇಕೆ ಸಂಘಟಿಸಬಾರದು? ಎಂದು ಪ್ರಶ್ನಿಸಿದಾಗ, "ನಾನು ಹುಚ್ಚನಲ್ಲ ! ಹಾಗೆ ಮಾಡಲಿಕ್ಕೆ!" ಎಂಬ 12 ಅಕ್ಷರಗಳುಳ್ಳ ಶಬ್ದಗಳಿಂದ ಉತ್ತರವಿತ್ತಿದ್ದರವರು ಇಂಗ್ಲೆಂಡನ್ನು ದುರ್ಭೇದ್ಯ ದ್ವೀಪಕೋಟೆಯನ್ನಾಗಿ ಮಾಡಿ ಹಿಟ್ಲರರನ್ನು 'ಚಲೆಂಜ್' ಮಾಡುವ ಮನೋವೃತ್ತಿಯವರಾಗಿದ್ದರವರು. ಇಂಥವರಿಗೆ ಬ್ರಿಟನಿನ ಹೊಸ ಯುದ್ಧ ಮಂತ್ರಿಮಂಡಲದಲ್ಲಿ ಸ್ಥಾನ ದೊರೆಯದುದು ಶುಭಸೂಚನೆಯೆಂದೇ ಹೇಳಬಹುದು. ಯಾಕೆಂದರೆ ಸಿಂಗಾಪುರ ಕೋಟೆಯಂತೆಯೇ ಇಂಗ್ಲೆಂಡು ಕೂಡಾ ಸುತ್ತಲಿಂದಲೂ ಆವರಿಸಲ್ಪಟ್ಟು ಅದರ ಸರಬರಾಯಿಗಳೆಲ್ಲಾ ಕಡಿಯಲ್ಪಟ್ಟರೆ, ಅದನ್ನೆಷ್ಟು ಅಭೇದ್ಯ ಕೋಟೆಯಾಗಿ ಮಾಡಿದರೂ ಫಲವೇನು? ಮಲಯ ಸಿಂಗಾಪುರಗಳಲ್ಲಿಯೂ, ಲಿಬಿಯದಲ್ಲಿಯೂ ಬ್ರಿಟಿಷ್ ಸೇನೆಯು ಪಡೆದಿರುವ ಅಪಜಯಗಳಿಗೆ ಬ್ರಿಟಿಷ್ ಮಂಡಲದ ಸಂಕುಚಿತ ಮತ್ತು ಬಹಳ ಜಾಗರೂಕತೆಯ ಅಂಜುಬುರುಕ ವರ್ತನೆಯೇ ಕಾರಣ. ಜರ್ಮನಿಯ ಆಕ್ರಮಣ ಧಾಳಿಯ ಭೀತಿಯಿಂದ ಬ್ರಿಟನು ಹೆಚ್ಚಿನ ಯುದ್ಧೋಪಕರಣ ಮತ್ತು ದೊಡ್ಡ ಸೇನೆಯನ್ನು ಇಂಗ್ಲೆಂಡಿನಲ್ಲೇ ಇಟ್ಟುಕೊಂಡು [illegible] ಹಣವನ್ನೆಲ್ಲಾ ಹುಗಿದಿಟ್ಟು ಸರ್ಪ ಕಾವಲು ನಡಿಸುವ ಲೋಭಿಯಂತೆ ವರ್ತಿಸಿ, ಪೂರ್ವದಲ್ಲಿ ವ್ಯರ್ಥ ಸೈನಿಕರನ್ನು ಬಲಿಕೊಟ್ಟು ಅವರಿಗೆ ವಿದ್ರೋಹ ಮಾಡಿರುತ್ತದೆ

ಹಳೆಯ ಅಪ್ರಾಗತಿಕ ಮನೋವೃತ್ತಿಗೇನೇ ಕಟ್ಟುಬಿದ್ದು ಈ ಯುದ್ಧಾರಂಭದಲ್ಲೇ ಬ್ರಿಟನು ದೊಡ್ಡ ತಪ್ಪುಮಾಡಿರುತ್ತದೆ ಸೋವಿಯೆಟ್ ರಶ್ಯದೊಂದಿಗೆ ಅತ್ಯವಸರದ ಸಂಘಮಾಡಿಕೊಳ್ಳಲು ಸಂದೇಹಗೊಂಡುದ ಎಂದು ಪ್ರಥಮದ ಮಾಡಿದ ಪ್ರಮಾದ. ಆ ಮೇಲೆ ಹಿಟ್ಲರರು ಪೋಲಂಡಿನೊಳಗೆ ಪ್ರಚಂಡ ಯುದ್ಧ ಸಿದ್ಧತೆ ಮಾಡಿ ಪೋಲಂಡಿನ ಮೇಲೇರಿ ಹೋಗುವನಕವೂ, ಫ್ರಾನ್ಸಿನ ಮೆಜಿನೋ ಕೋಟೆಯ ಹಿಂದೆ ತಣ್ಣಗಿದ್ದು ಬಿಟ್ಟುದು ಎರಡನೇ ದೊಡ್ಡ ತಪ್ಪು. ವೈರಿಯು ಬ್ಲಿಟ್ಸ್ ಕ್ರೈಗನ್ನು ಪ್ರತಿ ಬ್ಲಿಟ್ಸ್ ಕ್ರೈಗಿನಿಂದಲೇ ಪ್ರತಿಭಟಿಸಬೇಕಾದ ಆವಶ್ಯಕತೆ ಮತ್ತು ಹೊಸ ಯುದ್ಧಕ್ರಮಕ್ಕೆ ಬ್ರಿಟನು ಮತ್ತು ಫ್ರಾನ್ಸುಗಳು ಗಮನಕೊಡದೆ ಹಳೆಯ ರಕ್ಷಣಾ ಯುದ್ಧಕ್ರಮಕ್ಕೇನೇ ಕಟ್ಟುಬಿದ್ದು ಅನಾಹುತವಾಯಿತು. ಅನಂತರ ಸೋವಿಯೆಟ್ ರಶ್ಯ ಮತ್ತು ಜರ್ಮನಿಗಳೊಳಗೆ ಯುದ್ಧಾರಂಭವಾದ ಮೇಲೆ ಕೂಡಾ ಬ್ರಿಟನು ಜರ್ಮನಿಯ ಮೇಲೆ ವಿಮಾನಧಾಳಿ ನಡಿಸುವುದರಲ್ಲೇ ತೃಪ್ತಿಗೊಂಡು, ಯುರೋಪಿನಲ್ಲಿ ಇನ್ನೊಂದು ರಣರಂಗವನ್ನು ತರೆಯುವ ಸಾಹಸಮಾಡದುದು ಮೂರನೇ ತಪ್ಪು. ಆ ಸಾಹಸವನ್ನು ಬ್ರಿಟನು ಏನೂ ಮಾಡಲಾರದೆಂಬ ನಿಶ್ಚಯದಿಂದಲೇ ಹಿಟ್ಲರರು, ಒಮ್ಮಿಗೆ ತನ್ನ ಸರ್ವ ಸೇನಾ ಶಕ್ತಿಯನ್ನೂ ಪೂರ್ವದಲ್ಲಿ ಕೇಂದ್ರೀಕರಿಸಿ ರಶ್ಯದ ಮೇಲೇರಿ ಹೋದುದು. ಇನ್ನಾದರೂ ಬ್ರಿಟನು ಯುರೋಪ್ ಖಂಡದಲ್ಲಿ ಇನ್ನೊಂದು ರಣರಂಗವನ್ನು ತೆರೆದು ಹಿಟ್ಲರರ ಸೇನೆಯನ್ನು ವಿಭಾಗಿಸದಿದ್ದರೆ, ವಸಂತ ಋತು ಬಂದೊಡನೆಯೇ ಅವರು ತನ್ನ ಪ್ರಚಂಡ ಸೇನಾ ಶಕ್ತಿಯನ್ನೆಲ್ಲಾ ರಶ್ಯದ ಮೇಲೆ ಒಮ್ಮೆಯೇ ಹಾಕುವಂತಾಗುವುದು. ಇದರ ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ.

ಸೋವಿಯೆಟ್ ರಶ್ಯವು ನಡಿಸಿದ ಯುದ್ಧಕ್ರಮದಿಂದ ಮಿತ್ರರಾಷ್ಟ್ರಗಳು ಪಾ

ರಾಯರಿಗೆ ಹೆಂಡತಿ ಕಲಿಸಿದ ಪಾಠ!

(೪ನೇ ಪುಟದಿಂದ ಮುಂದರಿದುದು.)

ದ್ದ ರಾಯರ ಹೆಂಡತಿಯು, ಅಡಿಗೆ ಭಟ್ಟನನ್ನು ಗಟ್ಟಿಯಾಗಿ ಕರೆದು, "ರಾಯರು ಸೂಳೆ ಮನೆಗೆ ಹೋಗುತ್ತಾರೆ. ನಾನು ಉಪ್ಪರಿಗೆಯಲ್ಲಿ ಹಾಸಿಗೆ ಬಿಡಿಸಿ ಬಂದಿದ್ದೇನೆ. ಮಲಗುವ ಬಾ!" ಎಂದರು. ಒಮ್ಮೆಯೇ ಸಿಡಿಲು ಬಡಿದಂತಾಯಿತು ರಾಯರಿಗೆ! ಸ್ತಂಭಿತವಾಗಿ ನಿಂತಲ್ಲೇ ನಿಂತುಬಿಟ್ಟರವರು ಸ್ವಲ್ಪ ಹೊತ್ತು. ಆ ಮೇಲೆ ಗಾಡಿ ಹೊಡೆಯುವವನನ್ನು ಕರೆದು, "ಇವತ್ತು ಗಾಡಿ ಬೇಡ, ಹೋಗಿ ಮಲಗು" ಎಂದು ಥಟ್ಟನೆ ಉಪ್ಪರಿಗೆ ಹತ್ತಿಹೋದರು.

ವಜ್ರಾಯುಧವನ್ನೇನೋ ಉಪಯೋಗಿಸಿ ಬಿಟ್ಟಿದ್ದಾರೆ ರಾಯರ ಹೆಂಡತಿ. ಆದರೆ ಉದ್ವೇಗದಿಂದ ಅತ್ಯಂತ ಕ್ಷುಬ್ಧವಾಗಿತ್ತವರ ಮನಸ್ಸು. ಮೈಯೆಲ್ಲಾ ಬೆವರಿ ನೀರಿಳಿದು ಬರುತ್ತಿತ್ತು. ಪರಿಣಾಮವೇನಾಗುವುದೋ ಎಂದು ಭಯವಿಹ್ವಲರಾಗಿದ್ದರವರು. ಇಷ್ಟೊಂದು ಎಚ್ಚರಿಕೆಯುಳ್ಳ ಹಿಂದೂ ಪತ್ನಿಯರೆಷ್ಟು ಮಂದಿ ಇದ್ದಾರೆ! ಗಂಡಂದಿರೆಂತಹ ಕೃತ್ಯಮಾಡಿದರೂ ಅಸಾಧಾರಣ ತಾಳ್ಮೆಯಿಂದ ಸಹಿಸಿಕೊಂಡು ಕಣ್ಣೀರಿಡುವವರೇ ಹೆಚ್ಚು ಮಂದಿಯಲ್ಲವೇ? ಇಂತಹ ದುರ್ಬಲ ಮನೋವೃತ್ತಿಯೇ ಹೆಚ್ಚಿನ ಗಂಡಂದಿರು ಸ್ವೇಚ್ಛಾಚಾರಿಗಳಾಗಲು ಕಾರಣವಲ್ಲವೇ?

ಸ್ವಲ್ಪ ಹೊತ್ತಿನ ಮೇಲೆ ರಾಯರು ಹೆಂಡತಿಯ ಹೆಸರೆತ್ತಿ ಕರೆದರು. ಬಿರುಸುತನದ ಬದಲಿಗೆ ಮಧುರತೆಯಿತ್ತು ಆ ಕರೆಯಲ್ಲಿ. ಅಮೃತಪ್ರಾಯವಾಯಿತು. ರಾಯರ ಪತ್ನಿಯ ತಳಮಳಿಸುವ ಹೃದಯಕ್ಕದು. ಹೊಸ ಜೀವವೇ ಬಂದಂತಾಯಿತವರಿಗೆ. ಒಂದೇ ಸವನೆ ಉಪ್ಪರಿಗೆಗೋಡಿದರವರು. ಎಂದೂ ಜತೆಗೂಡದ ತೋಳು ತುಟಿಗಳೊಂದಾದುವು. ಅಂದಿನಿಂದ ರಾಯರ ರಾತ್ರಿ ಚಲನವಲನವು ನಿಂತೇ ಹೋಯಿತು.

—ವಿಟಾರಿ.

Degrees Books: Medicines
Free H. L. M. S M. B. H. M. D. etc. Free Homeo Ayur-Unani-Naturo degree by post also—Practitioners also get soon Homeo Materiamedica, Rs 5 Homeo Practice book Rs 4. Insanity Cure Pills Rs. 10 Enclose 2 annas stamps—
Principal, Indian Homeopath Institute & Society (Govt Regd.)
P.O. Mahuva, (Kathiawar Dt. India)

Sidha-Kalpa Kavach (Regd.)
No. 3 Rs 2. No 2 Rs 5 No. 1. Rs 7 Special Rs. 10. Extra Special Rs 17. for love marriage health, wealth. Ask any six questions with M. O. Re 1/4 and get correct answers by return post Life reading Rs 2 No V. P. P. Send M. O. Fred pamphlets. Prof. Dr. N. H. Chhotha...

"Service of Mankind is Service of God"

The Bombay Life Assurance Company., Limited.

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including
Indian States,
Udipi.

Also Offices at:

Mangalore, Calicut, Madras,
Bangalore, Trivandrum & Bombay.

NOTICE

Applications are invited from suitable Registered Medical Practitioners for appointment as Second Honorary Medical Officer in the Local Fund Hospital, Karkal, South Kanara District. No Honorarium or allowance will be paid to the above Honorary Medical Officer. For other rules regulating the appointment of Honorary Medical Officers please see G. O. No. 1997 P. H., dated 18-3-1940. Applications with the following details should be sent to the President, District Board, South Kanara, Mangalore so as to reach him by the 5th March 1942.

1. Full name and address.
2. Date of birth.
3. Religion community or caste.
4. Qualifications (both General and Medical.)
5. Date of registration of medical qualification under Madras Medical Registration Act.
6. Special training received if any.
7. Post Graduate course undertaken if any.
8. Previous appointments if any, held under Government, Local Board, Municipality or private bodies (Nature and dates of appointments should be specified)
9. Reasons for relinquishing appointments referred to in item 8
10. Periods spent on private practice and place of private practice.
11. General remarks.

NOTE.-Copies of testimonials not more than 3 in number including one, if available, from the Superintendent of Hospitals where the applicant has worked as House Surgeon and as House Physician may be sent along with the application

South Kanara District Board Office, Mangalore, Dated 18th February 1942.

K. VITTAL SHETTY,
PRESIDENT

ರಕಲಿತುಕೊಳ್ಳತಕ್ಕದ್ದು. ಅದು ಆರಂಭದಲ್ಲಿ ನಾಝಿ ಪಡೆಯನ್ನು ಪ್ರಚಂಡವಾಗಿ ವಿರೋಧಿಸಿ ಮೆಲ್ಲ ಮೆಲ್ಲನೆ ಹಿಂದ ಸರಿಯುತ್ತಾ ಬಂದು, ಈ ನಡುವೆ ಪ್ರಬಲ ಸೇನಾ ಸಿದ್ಧತೆಮಾಡಿ ಇಂದೀಗ ಸಂದರ್ಭ ಸಾಧಿಸಿ ಜರ್ಮನರ ಮೇಲೇರಿ ಹೋಗಿ ಅವರಿಗೆ ಹಲವು ಅಪಜಯಗಳನ್ನುಂಟುಮಾಡಿರುವುದು. ಆದರೆ ಮಿತ್ರ ರಾಷ್ಟ್ರಗಳವರು ಈ ವರೆಗೂ ರಕ್ಷಣಾಯುದ್ಧಕ್ರಮವನ್ನೇ ಅನುಸರಿಸುತ್ತಿರುವುದಲ್ಲದೆ ವೈರಿಯ ಮೇಲೆ ಬೀಳುವ ಸಾಹಸವನ್ನು ಒಮ್ಮೆಯೂ ಮಾಡಿರುವುದಿಲ್ಲ. ಹಿಟ್ಲರರು ಆದರ ಸದುಪಯೋಗ ಮಾಡುತ್ತಿದ್ದಾರೆ.

ಮಧ್ಯ ಪೂರ್ವದಲ್ಲಿ ಮಾತ್ರ ಬ್ರಿಟನು ಮೊದಲಾಗಿ ವೈರಿಯ ಮೇಲೆ ಬೀಳುವ ಸಾಹಸಮಾಡಿ ಎಲ್ಲೆಲ್ಲಿಯೂ ಜಯ ಪಡೆದಿವೆ. ಲಿಬಿಯದಲ್ಲಿ ಒಂದೊಮ್ಮೆ ಜಯ ಮತ್ತೊಮ್ಮೆ ಅಪಜಯವಾಗಿರುವುದಾದರೆ, ಲೋರ್ಡ್ ಬೀವರ್ ಬ್ರೂಕರಂದವರ ಘೋರಣೆಯೇ ಕಾರಣ. ಅಲ್ಲಿಗೆ ಬೇಕಷ್ಟು ಯುದ್ಧೋಪಕರಣ ಮತ್ತು ಸೇನೆಯು ಕಳುಹಿಸಲ್ಪಡಲಿಲ್ಲ. ಪೂರ್ವದಲ್ಲಿ ಜಾಪಾನು ಇಂಡೋ ಚೈನವನ್ನು ಆಕ್ರಮಿಸಿದಾಗಲೆ, ಬ್ರಿಟನು ಮತ್ತು ಅಮೆರಿಕಗಳು ಯುದ್ಧ ಸಾರಿ ಅದರ ಮೇಲೆ ಬೀಳಬೇಕಿತ್ತು. ಹಾಗೇನೂ ಮಾಡದೆ, ಅದು ಇಂಡೋ ಚೈನವನ್ನು ಆಕ್ರಮಿಸಿ ಥೈಲೆಂಡನ್ನು ತನ್ನ ಹಸ್ತಕವನ್ನಾಗಿ ಮಾಡಿ ಯುದ್ಧದ ಪೂರ್ವ ಸಿದ್ಧತೆಯನ್ನೆಲ್ಲಾ ಸರಿಯಾಗಿ ಮಾಡುವ ವರೆಗೆ ಮಿತ್ರ ರಾಷ್ಟ್ರಗಳು ತಣ್ಣಗಿದ್ದುದು ೧ನೇ ಮಹಾ ತಪ್ಪು. ಜಪಾನು ಪೂರ್ವದಲ್ಲಿ ಮಿಂಚು ಧಾಳಿ ನಡಿಸಿ, ಹೋಂಗ್‌ಕೋಂಗ್, ಪರ್ಲ್ ಹಾರ್ಬರ್ ಮತ್ತು ಸಿಂಗಪುರಗಳನ್ನು ವಶಪಡಿಸಿಕೊಂಡುದರಿಂದ, ಮಿತ್ರ ರಾಷ್ಟ್ರಗಳವರು ತಮ್ಮ ಮೆಜಿನೋ ಕೋಟೆಯ ಮನೋವೃತ್ತಿಯನ್ನು ಬಿಟ್ಟು ಒಮ್ಮೆಯೇ ಕಣ್ಣು ತೆರೆಯುವಂತಾಗಿದೆ. ಇನ್ನು ಮುಂದ ಸುಮ್ಮನಿದ್ದರೆ ಮತ್ತೂ ಹೆಚ್ಚಿನ ಅನರ್ಥವಾಗುವುದು ನಿಶ್ಚಯ. ಆದುದರಿಂದ ಕೇವಲ ರಕ್ಷಣಾಯುದ್ಧವನ್ನೇ ನಡಿಸುವುದರಲ್ಲಿ ನಿರತವಾಗದೆ ವೈರಿಯ ಮೇಲೇರಿ ಹೋಗುವ ಸಾಹಸ ಮಾಡಿ ಅವನನ್ನು ತಡೆಗಟ್ಟಬೇಕೆಂಬ ಮನೋವೃತ್ತಿಯು ಬೆಳೆಯುತ್ತಿದೆ. ಹೀಗೆ ಸಿಂಗಪುರವು ಮಿತ್ರ ರಾಷ್ಟ್ರಗಳಿಗೆ ದೊಡ್ಡ ಪಾಠವಾಗಿರುವುದೆಂದು ಹೇಳಬಹುದು. ಶತ್ರುವಿನ ಮೇಲೆ ಹೇಗೆ ಮತ್ತು ಎಲ್ಲಿ ಏರಿಹೋಗುವುದೆಂಬುದೀಗ ಸಮಸ್ಯೆಯಾಗಿದೆ. ರಷ್ಯದಂತೆಯೇ ಬ್ರಿಟನು ಮತ್ತು ಅಮೆರಿಕಗಳೂ, ಶತ್ರುವಿನ ಮೇಲೆ ಬಿದ್ದು ಹೋರಾಡುವ ಧೋರಣೆಯನ್ನು ತೀವ್ರವಾಗಿ ವಹಿಸದಿದ್ದರೆ ಇನ್ನೂ ಹೆಚ್ಚಿನ ಅನಾಹುತಗಳಾಗುವವೆಂಬುದರಲ್ಲಿ ಸಂದೇಹವೇ ಇಲ್ಲ.

ಹಿಟ್ಲರರು ಬ್ರಿಟನಿನ ಮೇಲೆ ಧಾಳಿ ನಡಿಸುವರೆಂಬ ಭೀತಿಯು ಅದೊಂದು ಕೇವಲ ಹೊಗೆ ಪರದೆಯೆಂದು ನಾವು ಈ ಮೊದಲೇ ಹಲವು ಸಲ ಬರೆದಿರುತ್ತೇವೆ. ಆತ್ಮರಕ್ಷಣೆಯ ಕುರಿತು ಬಹಳ ಜಾಗರೂಕತೆಯಿಂದಿರುವ ಬ್ರಿಟಿಷರನ್ನು ಮಾತ್ರ ಅದು ಭ್ರಾಂತಿಗೊಳಿಸಿ ವಂಚಿಸಿಬಿಟ್ಟಿದೆ. ಆದರಿಂದ ಹೆಚ್ಚಿನ ದುಷ್ಪರಿಣಾಮ ಮಾತ್ರವಲ್ಲದೆ ಅನಾಹುತವೇ ಆಗಿದೆ. ಬ್ರಿಟನು ಇನ್ನಾದರೂ ಈ ಭ್ರಾಂತಿಯ ಮುಸುಕನ್ನು ಹರಿದೊಗೆದು ಹೊರ ಬಂದು ಯುರೋಪಿನಲ್ಲಿ ಇನ್ನೊಂದು ರಣರಂಗವನ್ನು ಶೀಘ್ರವಾಗಿ ತೆರೆಯುವ ಸಾಹಸ ಮತ್ತು ಪೌರುಷವುಳ್ಳುದಾಗಬೇಕು. ಅಂತೆಯೇ ಪೂರ್ವದಲ್ಲಿ ಅಮೆರಿಕ ಮತ್ತು ಬ್ರಿಟಿಷ್ ನೌಕಾಪಡೆಗಳೊಂದಾಗಿ ತಮ್ಮ ಸಂಪೂರ್ಣ ಶಕ್ತಿಯನ್ನುಪಯೋಗಿಸಿ, ಶಾಂತಸಾಗರದಲ್ಲಿ ಸಂಪೂರ್ಣ ಅಧಿಕಾರ ಸ್ಥಾಪಿಸಿ ಬಿಟ್ಟಂತೆ ತೋರುವ ಜಪಾನಿನ ನೌಕಾ ಬಲವನ್ನೆದುರಿಸಿ ಬೆನ್ನಟ್ಟಿ ಸದೆಬಡಿಯಬೇಕು. ಆಗ ಮಾತ್ರ ಮಿತ್ರರಾಷ್ಟ್ರಗಳಿಗೆ ಜಯಶ್ರೀಯು ಒಲಿಯಬಹುದು

Notice

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ.

O. P No 6/1942.

(1) ಹಿರವೆಟ್ಟು ಮುತ್ತಕ್ಕ ಹೆಗ್ಗಡ್ತಿ ವೆಂಕಮ್ಮ ಹೆಗ್ಗಡ್ತಿಯ ಮಗಳು. ವ ಬಸ್ರೂರು ಹಿರಿಯ ಅಣ್ಣ ಸೆಟ್ರ ಹೆಂಡತಿ

(2) H. ಸೂರಪ್ಪ ಹೆಗ್ಗಡೆ
(3) H. ರಾಮಣ್ಣ ಹೆಗ್ಗಡೆ
(4) H. ಜಲಜಾಕ್ಷಿ ಹೆಗ್ಗಡ್ತಿ
} 1ನೇ ಯವರ ಮಕ್ಕಳು. ಅರ್ಜಿದಾರರು

ಅರ್ಜಿದಾರರು-ಉಡುಪಿ ತಾಲೂಕು ನಂಬ್ರ 80ನೇ ಬಡಗಬೆಟ್ಟು ಗ್ರಾಮದ ಕಾಯಮಾಡಿ ಯದ್ದರ ವರು.

1ನೇ ಅರ್ಜಿದಾರರ ವ ಗಂಡ ಮತ್ತು ಅರ್ಜಿದಾರರ ಸಹೋದರ H ಮಹಾಬಲ ಹೆಗ್ಗಡೆಯು ತಾರೀಕು 29-7-1941ರಲ್ಲಿ ಮೃತಪಟ್ಟಿರುವವರಿಂದ ಸದ್ರಿ ಮೃತನು ತನ್ನ ಜೀವಿತ ಕಾಲದಲ್ಲಿ-ಬೊಂಬೈಯ ದಿ. ಓರಿಯಂಟಲ್ Govt. ಸೆಕ್ಯೂರಿಟಿ ಲೈಫ್ ಇನ್ಶೂರೆನ್ಸ ಕಂಪೆನಿಯಲ್ಲಿ ಮಾಡಿರುವ ನಂಬ್ರ 719671ನೇ ಲೈಫ್ ಯಿನ್ಶೂರೆನ್ಸ ಪಾಲಿಸಿ ಪ್ರಕಾರ ಮೃತನ ವಾರೀಸ ದಾರರಾದ ಅರ್ಜಿದಾರರಿಗೆ ಸದ್ರಿ ಕಂಪೆನಿಯಿಂದ ಬಹಾ ರುಪಾಯಿ 1024-0-0ಷ್ಟು ವಸೂಲ್ ಪಡಿಯುವರೇ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿರುವ ಮೇಲ್ಕಾಣಿಸಿದ ಅರ್ಜಿಯು ತಾರೀಕು 4-3-1942ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪ ಉಳ್ಳವರು ಸದ್ರಿ ದಿವಸ ಪೂರ್ವಾಹ್ನ 11ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹಿರು ಮಾಡಿಕೊಳ್ಳತಕ್ಕದ್ದು.

ಅರ್ಜಿದಾರರ ಕಡೆ ವಕೀಲ್.

T. Venkappa Hegde

ಉಡುಪಿ, ತಾರೀಕು 18-2-1942.

ನವಯುಗಕ್ಕೆ

ಇಂದೇ ಚಂದಾದಾರರಾಗಿರಿ.

ಪ್ರಕಟಣೆ

ಶಿರ್ವ ಪಂಚಾಯತ್ ಬೋರ್ಡ್ ಪ್ರೆಸಿಡೆಂಟರಿಂದ

1942ನೇ ಇಸ್ವಿ ಎಪ್ರೀಲ್ ತಿಂಗಳ ತಾರೀಕು 1ರಿಂದ 1943ನೇ ಇಸ್ವಿ ಮಾರ್ಚ ತಿಂಗಳ ತಾರೀಕು 31ರ ವರೇಗೆ ಒಂದು ವರ್ಷದ ತನಕ ಶಿರ್ವ ಪಂಚಾಯತ್ ಬೋರ್ಡಿಗೆ ಒಳಪಟ್ಟ ಶಿರ್ವ ಮಂಚಕಲ್ಲು ಹಪ್ತೆಯುದು ಮಾರ್ಕೆಟ್, ವ ದಿನಚರಿ ಮಾರ್ಕೆಟುಗಳಲ್ಲಿ ವಂ ವಸೂಲು ಮಾಡುವ ಮತ್ತು ಮಾರ್ಕೆಟ್ ಲೈನ್ ಕಟ್ಟೋಣಗಳು ವಾ ಎಡಿಶನಲ್ ಲೈನ್ ಕಟ್ಟೋಣದಲ್ಲಿ ವ್ಯಾಪಾರ ನಡೆಸಿಕೊಂಡು ಬರುವ ಸ್ವತಂತ್ರವನ್ನು ಇದೇ 1942ನೇ ಯಿಸ್ವಿ ಫೆಬ್ರವರಿ ತಿಂಗಳ ತಾ. 28ನೇ ಶನಿವಾರ ದಿವಸ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಪ್ರೆಸಿಡೆಂಟರಿಂದ ವಾ ಇವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವದು. ಹೆಚ್ಚಿನ ವಿವರಗಳನ್ನು ಪಂಚಾಯತ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳನ್ನು ಓದಿ ತಿಳಕೊಳ್ಳಬಹುದು ಎಂಬದಾಗಿ ಉಮೇದ್ವಾರ ಹಾಗೂ ಸಮಸ್ತ ಜನರೀಗೆ ತಿಳಿಸೋಣಾಗುತ್ತದೆ.

ಯಸ್. ಅಣ್ಣಯ್ಯ ಹೆಗ್ಡೆ
ಪ್ರೆಸಿಡೆಂಟ್, ಪಂಚಾಯತ್ ಬೋರ್ಡ್, ಶಿರ್ವ ದ.ಕ

ಪಂಚಾಯತ್ ಬೋರ್ಡ್ ಆಫೀಸು.
ಶಿರ್ವ, ತಾ. 10-2-42.

' Keep the enemy away from India

Contribute AGAIN to the

Governor's war fund.

Buy MORE defence bonds and savings certificats.

GIVE AND LEND FOR VICTORY.

ಈ ವಾರದ ಭವಿಷ್ಯ.

(೬ನೇ ಪುಟದಿಂದ ಮುಂದರಿದುದು)

ಗುವವು. ವಿರೋಧಿಗಳ ಉಪಟಳದಿಂದ ಧನಮಾನಗಳಿಗೆ ಹೆಚ್ಚಿನ ಹಾನಿಯಿದೆ. ಸ್ತ್ರೀಕಾಲಸ್ಯ ಆಪ್ತೇಷ್ಟರ ವಿರಹಗಳಿಂದ ನಿತ್ಯ ದುಃಖಕ್ಕೆ ಗುರಿಯಾಗುವಿರಿ. ರಾಜಕೀಯ ಭಾಗದಲ್ಲಿ ಬಹಳ ಹಾನಿಯಿದೆ. ಸಂಪಾದನೆಗಿಂತ ದ್ವಿಗುಣ ವ್ಯಯವಿರುವುದರಿಂದ ನಿತ್ಯ ತಾಪತ್ರಯಕ್ಕೆ ಸಿಲುಕಲಿರುವಿರಿ. ಆದರೂ ಬಂಧುಮಿತ್ರರ ನೆರವಿನಿಂದ ಈ ಯಾವ ಚಿಂತೆಗಳನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ತಾ. 27ರಿಂದ ೩ರ ವರೆಗಿನ ದಿನಗಳನ್ನು ಸುಖದಿಂದ ಕಳೆವಿರಿ.

ವೃಶ್ಚಿಕ— ಗ್ರಹರ ಗತಿಯಿಂದಾಗಿ ನಿಮ್ಮ ಅದೃಷ್ಟವು ಈಗಲೀಗ ಬಹಳ ವಕ್ರವಾಗಿದೆ. ಈ ಮೊದಲು ನೀವು ಯಾರ್‍ರಿಂದ ಪೂಜಿಸಲ್ಪಡುತ್ತಿದ್ದಿರೋ ಅವರಿಗೆ ಈಗ ನಿಮ್ಮಲ್ಲಿ ತಿರಸ್ಕಾರ ಭಾವವು ಹುಟ್ಟಿದೆ. ನಿಮ್ಮ ಧನಾಗಮದ ಮಾರ್ಗಗಳು ಬಂದಾಗಿ ಹೋಗುವುದರಿಂದ ನಿತ್ಯ ಖರ್ಚಿಗೇ ಸಾಕಷ್ಟು ಧನ ದೊರೆಯದು. ದೇಹದಾರೋಗ್ಯವೂ ಕೆಡಲಿದೆ. ಅರ್ಧಾಂಗಿಯೊಡನೆ ನಿತ್ಯ ಕಲಹವಾದೀತು. ಆದರೆ ಗುರುಶುಕ್ರರ ಅನುಗ್ರಹವು ನಿಮಗಿರುವುದರಿಂದ ವಾರಾಂತ್ಯದ 1 ದಿನಗಳಲ್ಲಿ ಧನಲಾಭ, ಮಿತ್ರಭೇಟಿ, ಇಷ್ಟಸಿದ್ಧಿಯಿಂದಾಗಿ ಸಂತೃಪ್ತರಾಗುವಿರಿ.

ಧನು— ಭಾಗ್ಯವಂತರೆಂದರೆ ನೀವೇ ಸರಿ. ಇತರ ಎಲ್ಲಾ ರಾಶಿಯವರಿಗಿಂತಲೂ ನಿಮ್ಮ ಅದೃಷ್ಟವು ಅತ್ಯುತ್ತಮವಾಗಿರುವುದೀ ವಾರದಲ್ಲಿ. ಬೃಹಸ್ಪತ್ಯಾಚಾರ್ಯರೊಬ್ಬರಲ್ಲದೆ ಇತರ ಎಲ್ಲಾ ಗ್ರಹರೂ ನಿಮ್ಮ ಅಭಿವೃದ್ಧಿಗೆ ಸರ್ವತೋಮುಖದಿಂದ ಸಹಾಯ ಮಾಡುತ್ತಿರುವರು. ಅದಕಾರಣ 'ಮಾಡಿದ್ದೇ ಮನೆ ಹೂಡಿದ್ದೇ ಒಲೆ' ಎಂಬ ಗಾದೆಯಂತೆ ನಿಮ್ಮ ಸಕಲ ಕಾರ್ಯಕಲಾಪಗಳೂ ಎದುರು ತೊಡರುಗಳಿಲ್ಲದೆ ಅಲ್ಪಾವಕಾಶದಲ್ಲಿ ಸತ್ಫಲವನ್ನು ಕೊಡಲಿವೆ. ಆರೋಗ್ಯ ಭಾಗದಲ್ಲಾಗಲಿ ಆರ್ಥಿಕ ಸಂಪತ್ತಿನಲ್ಲಾಗಲಿ ಕಾರ್ಯ [illegible] ಇದಿಂದರೂ ಇರಲಾರದು. ತಾ. ೨೮. 1. 5 ಸರ್ವೋತ್ಕೃಷ್ಟ ದಿನಗಳು.

ಮಕರ— ಚಂಚಲವಾಗಿದ್ದ ನಿಮ್ಮ ಮನಸ್ಸು ಈ ವಾರದಲ್ಲಿ ಒಂದು ಸ್ತಿಮಿತಕ್ಕೆ ಬರಲಿದೆ. ದುರ್ಜನರ ಸಂಸರ್ಗದಿಂದ ದೂರವಾಗುವಿರಿ. ನಿಮ್ಮ ಮತ್ತು ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚಿನ ದೃಷ್ಟಿಯನ್ನಿಡಬೇಕಾಗುವದು. ಅಲ್ಪವಾದ ಮಾತುಗಳು ನಿಮ್ಮ ಗೌರವಕ್ಕೆ ಹಾನಿಕರವಿವೆ. ಪರಸ್ಪರ ತಂದೆಮಕ್ಕಳಲ್ಲೂ ಸ್ವಾಮಿಭೃತ್ಯರಲ್ಲೂ ಒಡಕುಂಟಾಗುವ ಸಂಭವವಿರುವುದರಿಂದ ಸ್ವಲ್ಪ ಜಾಗರೂಕತೆಯಿಂದ ವರ್ತಿಸಿರಿ. ಐಶ್ವರ್ಯೋಪಭೋಗಕ್ಕೆ ಬೇಕಾದ ಸಕಲ ಸೌಕರ್ಯಗಳೂ ನಿಮಗಿರುವುದರಿಂದ ವಾರಾದಿಯ 4 ದಿನಗಳನ್ನು ಸುಖದಿಂದ ಕಳೆವಿರಿ.

ಕುಂಭ— ಶುಕ್ರೇತರ ಸಕಲ ಗ್ರಹರೂ ನಿಮ್ಮ ಭಾಗಕ್ಕೆ ಪ್ರತಿಕೂಲರಾಗಿರುವುದರಿಂದ ಸದ್ಯದ ನಿಮ್ಮ ಪರಿಸ್ಥಿತಿಯು ಚಿಂತಾಜನಕವಿದೆಯೆಂದರೂ ತಪ್ಪಾಗಲಾರದು. ವಿಪಕ್ಷೀಯರ ಭಯಾಧಿಕವಾಗುವದು. ದುರ್ಜನರ ಮೈತ್ರಿಯು ಬೆಳೆವುದರಿಂದ ನಾನಾತರದ ಕಷ್ಟನಷ್ಟಗಳಿಗೆ ನಿಮ್ಮನ್ನವರು ಗುರಿಮಾಡಲಿರುವರು. ಮನಸ್ಸೂ ಕೂಡ ದುರ್ವಿಷಯಗಳಲ್ಲೇ ಸದಾ ಮಗ್ನವಾಗಿರುವುದು. ಆಪ್ತೇಷ್ಟರೂ ಬಂಧುಮಿತ್ರರೂ ಇವರೆಲ್ಲರಿಂದಲೂ ಪರಿತ್ಯಕ್ತರಾದ ನೀವು ಏಕಾಕಿಯಾಗಿ ದಿನಗಳೆಯಬೇಕಾದೀತು. ವಾರಾದಿಯ 4 ದಿನಗಳು ಶುಭಾಶುಭ ಮಿಶ್ರ ಫಲದಾಯಿಗಳಾಗಬಹುದು.

ಮೀನ— ದುರ್ವಿಧಿಯೆಂಬ ಕಾರ್ಗತ್ತಲೆಯಲ್ಲಿ ದಿಕ್ಕು ಕಾಣದೆ ಬಳಲುತ್ತಿದ್ದ ನಿಮಗೆ ಈ ವಾರದಲ್ಲಿ ಪ್ರಭಾತವಾದಂತಾಗಿರುವುದು. ಅನಾರೋಗ್ಯದಿಂದಲೂ ಆರ್ಥಿಕ ತಾಪತ್ರಯದಿಂದಲೂ ಮುಕ್ತರಾಗುವಿರಿ. ಯಾವ ಮಹತ್ವಾದ ಕೆಲಸವನ್ನು ಅನ್ಯಾಶ್ರಯವಿಲ್ಲದೆ ಮಾಡುವೆನೆಂಬ ಭರವಸೆಯು ನಿಮ್ಮಲ್ಲೀಗ ಉದಿತವಾಗಿದೆ. ಹೊಸ ಕಾರ್ಯವನ್ನು ನೀವೀ ವಾರದಲ್ಲೂ ಆರಂಭಿಸಲಿರುವಿರಿ, ನಿಮ್ಮ ಮಿತ್ರವರ್ಗದವರು ಸರ್ವ ವಿಧದಿಂದಲೂ ನಿಮಗೆ ನೆರವಾಗುವರು. ವಾರಾದಿಯ 4 ದಿನಗಳು ಪ್ರಶಸ್ತವಲ್ಲದುದರಿಂದ ಕಲಹ, ಪ್ರವಾಸಗಳಿಂದ ಶೋಕಕ್ಕೆ ಗುರಿಯಾಗಬೇಕಾದೀತು.

ಸ್ವದೇಶಿ ಔಷಧ ಭಂಡಾರ ಕುಂಜಾಲು,

--ಇವರ--

ಖ್ಯಾತ್ರಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ರಕ್ತವರ್ಧಕ)	0	12	0
ಆಮಲಕೀ ತೈಲ (ಸುವಾಸಿತ) ಸಣ್ಣದು	0	6	0
,, ,, ,, ದೊಡ್ಡದು	0	11	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಪಿಯೂಷಾಂಜನ (ಸಕಲ ನೋವುಗಳಿಗೆ)	0	1	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ೭ಿಕ್ಕೆ	0	7	0
,, ,, ,, ,, ಚಿಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ

Swadeshi Oushadhi Bhandar

KUNJAL P. O. S. I.

ಉಡುಪಿಯ ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

ಮುಖ್ಯ ಕಾರ್ಯಾಲಯ:— **ಕೋರ್ಟು ರಸ್ತೆ, ಉಡುಪಿ**

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ, ದ. ಕನ್ನಡ.

ತೆತ್ತ ಮೂಲಧನ	...	...	ರೂ. 1,82,100.
ಕ್ಷೇಮ ನಿಧಿಗಳು	...	..	ರೂ. 1,82,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಸ್ಖಲನ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 1 8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು, ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್.

ಅಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷದಿ ಸಿಕ್ಕುವ ಸ್ಥಳ— (1) ಪುಷ್ಕರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ನ ಪಾರಿಬಾಗ್ ರೋಡ್, ಪರೇಲ, ಮುಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ, (3) ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. (5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. (7) ಡಾ| ಶ್ರೀನಿವಾಸ. ಸ್ಟೆ, ಪುತ್ತೂರು. (8) ಕಾಂತಾವರ ವಾಸುದೇವ ಕಾಮ್ತ, ಬೆಳ್ತಂಗಡಿ. (9, ನವಭಾರತ ಬುಕ್ ಡಿಪ್ಪೋ, ಕೋಟೆದ ಪೇಟೆ, ಉಡುಪಿ. (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಕಾಸರಗೋಡು ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ,| ಶಿರ್ವಪಳ್ಳಿ. (13) ಎ. ಯಸ್. ನರಸಿಂಗರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಸರ್ವ್ ಮುಲಾಮು. —

ಇನ್ನುಮೇಲೆ ಇದಕ್ಕೆ ವಾರೀಸುದಾರರಾದ

ವಿಲಿಯಮ್ಸ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕ್‌ನ್ನು ರಿಂಗ್‌ಸರ್ವ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಟವಾಗಿ ಕನ್ನಡಿಗರ ಮನಮನ ಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ರಜೋಗೀ ರಜೋಗಿ	ಬೆ. ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೩ ೦ ೦	ಅಪಾತ್ಮನಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ (ಕೆಟ್ಟವರಿಗೆ ಬರೆದದ್ದು)	೦ ೪ ೦	ಪಾಣಿಗ್ರಹಣ	೨ ೩ ೦

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲ ಆನಂದವನ, ಹಾವೇರಿ

ಉಡುಪಿ ಏಜೆಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರಕ್ತ ಹೆಚ್ಚುವುದು. ಇದು ಮಧುವಾದ ಕಾರಣ ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು.

ಸೀಸೆ ಒಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು— ನವಭಾರತ ಬುಕ್ ಡಿಪೋ, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೇನೇಜರ್

ಕ್ರೌನ ರಬ್ಬರ ಸ್ಟಾಂಪ ಕಂಪೆನಿ — ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆವಶ್ಯಕವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್‌ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುತ್ತವೆ.

Crown Rubber Stamp Co. 18 Balmat Road, MANGALORE.

Approved firm by the Govt. Mysore

Certified by the Agent of the Govt. of India in Ceylon.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ಪ್ರದ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆತ್ತು ಕಡಿಮೆ ಆಲಿವಸಗಳಿಗೆ ಬರುವವು. ಅಂದರೆ ಕೇವಲ ಆರು ಪ್ಪಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲ ಅಂಚಿನಲ್ಲ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಮಲ್ಲರಗಾತಿಯ ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್

ಮ್ಯಾನೇಜರ್.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪಿತ.

ನವಯುಗ

ಸಂಪುಟ ೨೧ Vol. 21

ಸಂಪಾದಕರು —ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

5-3-1942

ಸಂಚಿಕೆ ೨೬ No. 26

ಸಾಹುಕಾರರಿಗೂ ವರ್ಗ ದಾರರಿಗೂ ಬೇಕಾಗುವ ತರ ತರದ ವರ್ಗ, ಊಳಿಗ ಪುಸ್ತಕಗಳೂ ಲೆಕ್ಕ ಪುಸ್ತಕಗಳೂ ಸುಲಭ ದರದಲ್ಲಿ ನಾಜೂಕಾಗಿ ಮಾಡಿ ಕೊಡಲ್ಪಡುತ್ತವೆ.
ನವಯುಗ ಪ್ರೆಸ್, ಉಡುಪಿ.

1942ನೇ ಇಸವಿಯ 'ವರ್ಷ ಭವಿಷ್ಯ' ಬೆಲೆ 0—3—0 ಅಗತ್ಯ ಓದಿರಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಸೇಕಡಾ ೪ರ ದರದಲ್ಲಿ, ೪ಯಾ ಹೆಚ್ಚು ತಿಂಗಳುಗಳಿಗೆ **1942**ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರನೆ ಹುಡಿ ಹಾಗು ಕತ್ತರಿಸುತ್ತಿದ್ದರ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಶೋಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರ ಹೊಟ್ಟಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸರ ತಕ್ಕೊಳ್ಳಬೇಕು ಮುಂದಿನ ದಿವಸ ಬೆಳಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು

ಪಥ್ಯ: ಹುಳಿಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ವಿಕೇಟರು:—ಗದಗ -ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ,ಬಾಗಲ **ಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ —ಧಾರವಾಡ ಫಾರ್ಮಸಿ. **ದಾವಣಗೇರಿ:**—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ

ವಿಮಾ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಜಿ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಆರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurance benefits
etc. etc. etc.

For further particulars and agency terms, please call at or write to

Branch Manager,

The Asian Assurance Co., Ltd., Mangalore.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : S. INDIA.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸಂಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,...ಮುಂತಾದ ದುಷ್ಪರಿಣಾಮಗಳನ್ನು ತೆಗೆದು ಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: 'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'

24-ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಕು ೫—೩—೪೩ರಿಂದ ತಾರೀಕು ೧೧—೩—೪೩ರ ವರೆಗೆ

ಮೇಷ—ನಿಮ್ಮ ಮನೆಯಿಂದ ಪಾಪಗ್ರಹಗಳು ತೊಲಗಿವರು. ಅಂತೆಯೇ ದುರ್ಜನರ ಒಡನಾಟದಿಂದಲೂ ನೀವು ಮುಕ್ತರಾದಿರೆನ್ನಲಡ್ಡಿಯಿಲ್ಲ. ಇಂದೀಗ ನಿಮಗೆ ಸುಖದುಃಖಗಳಲ್ಲಿ ಸಮಾನ ಭಾಗವಿರುವುದು. ಅಪವ್ಯಯಗಳನೇಕವಿರುವವಾದರೂ ಸಾಕಷ್ಟು ಧನವನ್ನು ನೀವು ದುಡಿಯುವಿರಿ. ನಿಮ್ಮ ದೈಹಿಕ ಅನಾರೋಗ್ಯವು ಮುಂಚಿಗಿಂತ ಸುಧಾರಿಸುವದು. ಹಗೆಯವರ ಪೀಡೆಗೆ ಕೊನೆಯಿಲ್ಲವಾದರೂ ಹಿಡಿದ ಕಾರ್ಯದಲ್ಲಿ ವಿಜಯಿಗಳಾಗುವಿರಿ. ವಾರಾಂತ್ಯದ ೨ ದಿನಗಳು ಸ್ವಲ್ಪ ಕೆಟ್ಟಿರುವುದರಿಂದ ವಿನಾಕಾರಣ ಜಗಳ, ಅಧಿಕಾರಿ ಜನರ ಭಯ, ಅನಿರೀಕ್ಷಿತ ಅನಿಷ್ಟಗಳಿಗೂ ಸಿಲುಕಬೇಕಾದೀತು.

ವೃಷಭ—ಕ್ಷಣಕಾಲವೂ ನಿಮ್ಮ ಕಾಲಿಗೂ ಮನಸ್ಸಿಗೂ ವಿರಾಮ ಸಿಗಲೊಲ್ಲದು. ನಿಮ್ಮ ಕಾರ್ಯಸಾಧನೆಗಾಗಿ ಕಾರ್ಯಾವಸಾನದ ಪರ್ಯಂತ ಶತ್ರುಗಳನ್ನು ಕೂಡ ಯಾಚಿಸಲು ನೀವು ಹಿಂಜರಿಯಲಾರಿರಿ. ನಿಮ್ಮ ದುಡಿತಕ್ಕಿಂತ ದ್ವಿಗುಣ ವ್ಯಯವಾಗುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕಿ ಬಹಳೇ ಪೇಚಾಡುವಿರಿ. ಶರೀರಕ್ಕೆ ಆಕಸ್ಮಿಕ ಅಪಾಯ ಸಂಭವವಿರುವುದರಿಂದ ಆತ್ಮರಕ್ಷಣೆಯಲ್ಲಿ ಎಲು ಜಾಗರೂಕರಾಗಿರಿ ತಾ. ೧೧ರಿಂದ ೧೨ರ ವರೆಗಿನ ದಿನಗಳಲ್ಲ ಇಚ್ಛೆಯಂತೆ ಫಲಪ್ರಾಪ್ತಿಯದೆ ಮತ್ತು ಸುಖಸಮಾನಾದಿಗಳೂ ಲಭಿಸುವವು

ಮಿಥುನ—ಭಾಗ್ಯ ಕರ್ಮಲಾಭಪತಿಗಳೆಂಬೀ ಮೂವರೂ ವ್ಯಯಸ್ಥಾನವನ್ನು ಹೊಂದಿರುವುದರಿಂದ ಈ ಕಾಲವು ನಿಮಗೆ ಅತೀವ ಬಿಕ್ಕಟ್ಟಿನದಾಗಿ ಪರಿಣಮಿಸಲಿದೆ. ಉತ್ಪತ್ತಿಯು ಬಹಳ ಕಡಿಮೆಯಿರುವುದರಿಂದ ಸಾಲಮಾಡಿಯಾದರೂ ಖರ್ಚನ್ನು ನಿರ್ವಹಿಸುವ ಪ್ರಸಂಗ ಬರಲಿದೆ ಪಿತ್ತ ವಿಕಾರದಿಂದ ದುಃಸ್ವಪ್ನ, ನೇತ್ರರೋಗಾದಿಗಳು ಕಂಡುಬರುವವು ಮನೋರೋಗವು ಸದಾ ನಿಮ್ಮನ್ನು ಪೀಡಿಸಲಿವೆ. ಆದರೂ ವಾರಾಂತ್ಯದ ೨ ದಿನಗಳಲ್ಲಿ ಸುಖ, ಮಾನ, ಸ್ತ್ರೀಮೂಲಕ ಧನ ಇತ್ಯಾದಿಗಳು ಲಭಿಸುವ ಯೋಗವಿದೆ.

ಕರ್ಕಾಟಕ—'ನಾರಿ ಮುನಿದರೆ ಮಾರಿ' ಎಂಬ ಲೋಕೋಕ್ತಿಯಂತೆ ಈ ವಾರದಲ್ಲಿ ಸ್ತ್ರೀಯರು ನಿಮ್ಮ ಭಾಗಕ್ಕೆ ಮಾರಿಯ ಅಪರಾವತಾರಿಗಳಾಗಿ ಕಾಣಬಹುದು. ಅವರಿಂದ ಬಹುವಿಧದ ಕಷ್ಟನಷ್ಟಗಳನ್ನು ನೀವು ಪಡೆಯಲಿರುವಿರಿ. ದೈವಾನುಗ್ರಹದಿಂದ ನಿಮಗೀಕಾಲದಲ್ಲಿ ಸಜ್ಜನರ ಸಹಾಯವೂ ಜನತೆಯ ಬೆಂಬಲವೂ ತುಂಬಾ ಇರುವುದರಿಂದ ಯಾವ ಕಾರ್ಯದಲ್ಲೂ ಪರಾಜಯವನ್ನು ಹೊಂದಲಾರಿರಿ. ಪುರುಷರು ನಿಮ್ಮನ್ನು ಅತೀವ ಗೌರವದಿಂದ ಕಾಣುವರು. ಸಂಪದಾರೋಗ್ಯಗಳಿಗೆ ಹೆಚ್ಚಿನ ಬಾಧಕವಿರದು. ತಾ. 5. 10. 11. 12 ಉತ್ತಮ.

ಸಿಂಹ—ರಾಮೇಶ್ವರಕ್ಕೆ ಹೋದರೂ ಶನೈಶ್ಚರನು ಬಿಡನೆಂಬ ಗಾದೆಯಂತೆ ದುರ್ದೈವಿಯಾದ ನರನು ಎಲ್ಲಿಗೆ ಹೋದರೂ ಆಪತ್ತುಗಳು ಅವನ ಬೆನ್ನಟ್ಟಿಕೊಂಡೇ ಬರುವವು ಸದ್ಯದ ಗ್ರಹಸ್ಥಿತಿಯು ನಿಮಗೆ ಬಹಳ ಪ್ರತಿಕೂಲವಿರುವುದರಿಂದ ಯಾವ ಉದ್ಯೋಗವನ್ನೇ ಮಾಡಲಿ-ರೂಪಾಯಿಗೆ ಹನ್ನೆರಡೇ ಆಣೆ ಎಂಬಂತೆ ಸರ್ವತ್ರ ನಷ್ಟಪ್ರಾಪ್ತಿಯಾಗಲಿದೆ. ಮನವಲ್ಲೊಂದು ವಿಧ ಮಾತಿನಲ್ಲೊಂದು ರೀತಿಯಾಗಿ ವರ್ತಿಸುವುದರಿಂದ ನಿಮ್ಮನ್ನಾರೂ ನಂಬುವವರು ಆದರೂ ತಾ. ೬. 7. ಈ ಎರಡು ದಿನಗಳ ಮಟ್ಟಿಗೆ ಸಂಕಲ್ಪ ಸಿದ್ಧಿ ಮತ್ತು ಗೃಹಸುಖದಿಂದ ತೃಪ್ತರಾಗಿರುವಿರಿ.

ಕನ್ಯಾ—ದೈವದೇವರುಗಳ ಗುರುತನ್ನರಿಯದವರೂ ಕೂಡ ಸಂಕಟ ಬಂದಾಗ ವೆಂಕಟರಮಣನೆಂಬ ನಾಣ್ಣುಡಿಯಂತೆ ಆಪತ್ತು ಬಂದಾಗ ದೇವರ ಮೇಲೆ ಹೊರೆಹಾಕುವರು ಇಂದೀಗ ನೀವೂ ಕೂಡ ಈ ಮಾತಿಗೆ ಅಪವಾದವಾಗಿಲ್ಲ. ದೇಹಾಲಸ್ಯವು ಬಹುವಾಗಿ ನಿಮ್ಮನ್ನು ಪೀಡಿಸುವದಾದರೂ ಹೆಂಡತಿ ಮಕ್ಕಳೂ ಕೂಡ ನಿಮ್ಮ ಸಹಾಯಕ್ಕೊದಗಲಾರರು. ಆದರೆ ಗುರುಹಿರಿಯರ ಕೃಪೆಯಿಂದ ನಿಮ್ಮ ಆಪ್ತ ಮಿತ್ರರು ಮತ್ತು ಬಂಧುಗಳು ಕೈಲಾದ ಸಹಾಯವನ್ನು ಮಾಡುವರು. ಹಣದ ತಾಪತ್ರಯವುಂಟಾಗದು. ತಾ. 5. 8. 9. ಈ ದಿನಗಳನ್ನು ಸುಖ ಭೋಗಗಳಿಂದ ಕಳೆವಿರಿ.

(೧೧ನೇ ಪುಟ ನೋಡಿರಿ.)

BHUVANENDRA PRODUCTS LTD.,

Head Office and Factory: **Katapadi**, S. Kanara

Depots: 1 Maharatha Galli, Hubli

2. 57 Big street, Triplicane Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:-- 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ**, (2) **ಶ್ರೀ. ಆರ್. ಎಸ್. ಶೆಣೈ ರಥಬೀದಿ.**
(3) **ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮೆಸಿ, ಡಾಕ್ಟರ್ ಕೆ. ಶೇಷಗಿರಿ ಪೈ** L. I. M.

ಚುಟುಕು ಟೀಕೆ-ಟಿಪ್ಪಣಿ

ಡಾಕ್ಟರ್ ಅಂಬೇಡ್ಕರರ ಸೂಚನೆ

ಯುದ್ಧ ಮುಗಿದು ಶಾಂತಿಯುಂಟಾದ 3 ವರ್ಷಗಳೊಳಗೆ ಹಿಂದುದೇಶವು ಡೊಮಿನಿಯನ್ ಸ್ಟೇಟಸ್ ಪಡೆಯಬೇಕು ರಾಷ್ಟ್ರಗಳು ಸಂಧಿಗೆ ಸಹಿಹಾಕಿದ ಒಂದು ವರ್ಷಗಡೊಳಗೆ, ಬೇರೆ ಬೇರೆ ಪಕ್ಷ ಮತ್ತು ಸಮಾಜಗಳ ಹಿಂದೀಯರು, ಸರ್ವ ಸಮ್ಮತಿಯ ರಾಜ್ಯಾಂಗ ಸೂತ್ರವೊಂದನ್ನು ತಯಾರಿಸಬೇಕು. ಅವರಿಂದದು ಅಸಾಧ್ಯವಾದರೆ ಬ್ರಿಟಿಷ್ ಸರಕಾರವು ಸದ್ರಿ ಕಲಹದ ಇತ್ಯರ್ಥವನ್ನು ಅಂತರ ರಾಷ್ಟ್ರೀಯ ನ್ಯಾಯಾಧೀಶರ ತೀರ್ಮಾನಕ್ಕೊಪ್ಪಿಸಬೇಕು ಅಂತಹ ತೀರ್ಮಾನವು ಕೊಡಲ್ಪಟ್ಟಾಗ ಬ್ರಿಟಿಷ್ ಸರಕಾರವು ಅದನ್ನು ಹಿಂದೀ ರಾಜ್ಯಾಂಗ ರಚನೆಯಲ್ಲಿ ಸೇರಿಸಿ ಜ್ಯಾರಿಗೆ ತರಬೇಕು ಹಿಂದೀ ರಾಜಕೀಯ ಬಿಕ್ಕಟ್ಟಿನ ನಿವಾರಣೆ ಬಗ್ಗೆ ಡಾಕ್ಟರ್ ಅಂಬೇಡ್ಕರರಿತ್ತಿರುವ ಈ ಸೂಚನೆಗಳು ಅತ್ಯಂತ ವ್ಯವಹಾರ್ಯವಾಗಿರುವವೆಂಬುದರಲ್ಲಿ ಸಂದೇಹವಿದೆಯೇ? ಕಾಂಗ್ರೆಸಿನವರೂ ಹಿಂದು ಮಹಾಸಭೆಯವರೂ ಅವುಗಳಿಗೊಪ್ಪದಿರಲಾರರು ಆದರೆ ಅಂಬೇಡ್ಕರರ ಹಿಂದಿನ ಪರಮಮಿತ್ರ ಜಿನ್ನಾ ಸಾಹೇಬರು. ಪಾಕಿಸ್ಥಾನ ಬಿಟ್ಟು ಅದಕ್ಕೊಪ್ಪಲು ಸಿದ್ಧರಿರುವರೇ?

ಚೀನೀ ಮುಸಲ್ಮಾನರ ಉದಾಹರಣೆ

ಚೈನದ ವಾಯುವ್ಯ ಪ್ರಾಂತಗಳಲ್ಲಿ ಮಿಲ್ಯಾಂತರ ಮುಸಲ್ಮಾನರಿದ್ದಾರೆ. ಅವರು ಕೂಡಾ ಹಿಂದೀ ಮುಸಲ್ಮಾನರಷ್ಟೇ ಶ್ರದ್ಧಾಳುಗಳಿದ್ದು ದಿನಕ್ಕೆ ೫ ಸಲ ನಮಾಜು ಮಾಡುವವರಿದ್ದಾರೆ. ಅವರಲ್ಲಿ ಭೇದದ ಬೀಜ ಬಿತ್ತಿ, ಪ್ರತ್ಯೇಕ ಮುಸಲ್ಮಾನ ಸಾಮ್ರಾಜ್ಯವೊಂದನ್ನು ಕಟ್ಟುವ ಆಶೆ ತೋರಿಸಿ ವಿದ್ರೋಹಕ್ಕವರನ್ನು ಎತ್ತಿ ಕಟ್ಟುವ ಜಾಪಾನರ ಕುತಂತ್ರವು ನಿಷ್ಫಲವಾಗಿರುವುದು. ಅವರು ಇತರರಷ್ಟೇ ಉತ್ಸಾಹದಿಂದ ಚೀನೀ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸುತ್ತಿದ್ದಾರೆ. ಹಲವು ಮಂದಿ ಮುಸಲ್ಮಾನ ಸೇನಾನಿಗಳು ಮಾರ್ಶಲ್ ಚ್ಯಾಂಗ್ ಕೈ ಶೆಕ್ಕರ ಒಲಗೈ ಬಂಟರಾಗಿ ಹೋರಾಟ ನಡಿಸುತ್ತಿದ್ದಾರೆ ಹಿಂದುದೇಶಕ್ಕೆ ಸ್ವಾತಂತ್ರ್ಯಕೊಡಬೇಕೆಂದು ಸಂದೇಶವಿತ್ತ ಮಾರ್ಶಲ್ ಚ್ಯಾಂಗರನ್ನು ಟೀಕಿಸುತ್ತಾ, ಈ ಸಂಧಿ ಕಾಲದಲ್ಲೂ ಪಾಕಿಸ್ಥಾನಕ್ಕೇನೇ ಕಟ್ಟುಬಿದ್ದಿರುವ ಬದಲಿಗೆ, ಚೀನಾ ಮುಸಲ್ಮಾನರ ಉದಾಹರಣೆಯು ಜಿನ್ನಾ ಸಾಹೇಬರಿಗೊಂದು ಪಾಠವಾಗುತ್ತಿದ್ದರೆ ಅದೆಷ್ಟು ಒಳ್ಳೇದಿತ್ತು!

ಚೈನದಿಂದಿನ್ನೊಂದು ರಸ್ತೆ!

ಜಾಪಾನರು ಬರ್ಮ ರಸ್ತೆಯನ್ನು ಕಡಿದುಹಾಕುವರೆಂಬುದನ್ನು ಚೀನೀ ರಾಷ್ಟ್ರೀಯ ಸರಕಾರವು ಅತ್ಯಂತ ದೂರದೃಷ್ಟಿಯಿಂದ ಮೊದಲೇ ಕಂಡುಕೊಂಡಿತ್ತು. ಅದು ಟಿಬೇಟಿನ ಮಾರ್ಗವಾಗಿ ಹಿಂದುದೇಶಕ್ಕೆ ಇನ್ನೊಂದು ರಸ್ತೆಯನ್ನು ಮಾಡುವ ಕೆಲಸವನ್ನು ಮೊದಲೇ ಕೈಕೊಂಡಿರುವುದು ಸುಮಾರು ಒಂದು ಲಕ್ಷ ಮಂದಿ ಚೀನೀಯರು ಅದಕ್ಕಾಗಿ ದುಡಿಯುತ್ತಿರುವರು ಇದು ಸಂಪೂರ್ಣಗೊಳಿಸಲ್ಪಟ್ಟರೆ ಹಿಂದೀ ಸಾಗರದಿಂದ ನೆಟ್ಟಗೆ ನೆಲಮಾರ್ಗವಾಗಿಯೇ ಸಾಮಗ್ರಿಗಳನ್ನು ಚೈನಕ್ಕೊಯ್ಯಲು ಸಾಧ್ಯವಾಗುವುದು ಚೀನೀಯರ ಭೀಷ್ಮ ನಿರ್ಧಾರ ಮತ್ತು ಭಗೀರಥ ಪ್ರಯತ್ನದೆದುರಲ್ಲಿ ಜಾಪಾನರ ರಾಕ್ಷಸಿ ಮಹತ್ವಾಕಾಂಕ್ಷೆಯು ಕಟ್ಟಕಡೆಗೆ ಮಣ್ಣುಗೂಡಲೇ ಬೇಕು

ಹಿಟ್ಲರರ ಶಪಥ.

ರಷ್ಯವನ್ನು ಸೋಲಿಸದೆ ಹಿಟ್ಲರರು ಪೂರ್ವ ರಣರಂಗದಿಂದಲೇ ಹಿಂದಿರುಗಲಾರೆನೆಂಬ ಶಪಥ ತೊಟ್ಟಂತಿದೆ ಈ ವರ್ಷದ ಮ್ಯುನಿಕ್ ಬೀರ್ ಹಾಲಿನ ಬಂಡಾಯದ ವಾರ್ಷಿಕೋತ್ಸವಕ್ಕೂ ಅವರು ಹೋಗದೆ ರಣರಂಗದಿಂದಲೆ ಸಂದೇಶ ಕಳುಹಿಸಿರುತ್ತಾರೆ ಚಳಿಯ ಉಬ್ಬರವಿಳಿದು ಹಿಮವು ಕರಗಿ ಅನುಕೂಲ ವಾತಾವರಣವುಂಟಾದಾಗ ನಾಝಿ ಪಡೆಯು ಪ್ರಚಂಡ ದಾಳಿ ನಡಿಸಿ ಕೆಂಪು ಸೇನೆಯನ್ನು ಸದೆಬಡಿಯುವ ಆಶ್ವಾಸನೆಯನ್ನವರು ಜರ್ಮನೀ ಜನತೆಗಿತ್ತಿರುತ್ತಾರೆ ಇತ್ತಲಾಗಿನ ಕೆಂಪು ಸೇನೆಯ ವಿಜಯಗಳಿಂದ ತಳಮಳಗೊಂಡಿರುವ ಹಿಟ್ಲರರು, ಪ್ರತಿ ವಿಜಯ ಪಡೆಯದೆ ಜರ್ಮನಿಗೆ ಹಿಂತಿರುಗಲಾರರೇ?

ಪರ್ವತ ಪ್ರಸವದಂತಾಗದಲ್ಲವೇ?

ಹಿಂದುದೇಶದ ಕುರಿತು ದೊಡ್ಡ ಮಾರ್ಪಾಟುಗಳಾಗಲಿರುವವೆಂಬ ಸುದ್ದಿಯು ದಟ್ಟವಾಗಿ ಹಬ್ಬಿ ಎಲ್ಲೆಲ್ಲಿಯೂ ಆಮೋದವುಂಟಾಗಿದೆ ಆ ಶರ್ತದಿಂದಲೇ ಸರ್ ಸ್ಟಾಫೋರ್ಡ್ ಕ್ರಿಪ್ಸರು ಬ್ರಿಟಿಷ್ ಮಂತ್ರಿಮಂಡಲಕ್ಕೆ ಸೇರಿರುವರೆಂದು ಕೇಡಾ ಊಹಿಸಲಾಗಿದೆ. ಆದರೆ ಹಿಂದುದೇಶಕ್ಕೆ ಸ್ವಾತಂತ್ರ್ಯವೀಯುವ ವಿಷಯದಲ್ಲಿ ಬ್ರಿಟಿಷ್ ಸರಕಾರವು ಅದೆಷ್ಟು ದೂರ ಹೋಗಲು ಸಿದ್ಧವಿದೆಯೋ ತಿಳಿಯದು ಈ ಸುದ್ದಿಗಳು ಸುಳಿದಾಟವೆಲ್ಲ ಪರ್ವತ ಪ್ರಸವದಂತಾಗದಿದ್ದರೆ ಹಿಂದುದೇಶದ ಭಾಗ್ಯೋದಯವನ್ನಬೇಕು. ಅದಕ್ಕಾದರೂ ಜಾಪಾನರ ಧಾಳಿಯ ಅಪಾಯವು ಸನ್ನಿಹಿತವಾಗಬೇಕಾಯಿತಷ್ಟೆ.

ಅರ್ಥರಹಿತ ಮೂರ್ಖ ಧೋರಣೆ

1936ರಿಂದ ಸರ್. ವಿಶ್ವೇಶ್ವರಯ್ಯನವರು ಹಿಂದುದೇಶದಲ್ಲೊಂದು ಮೋಟರ್ ಕಾರ್ಖಾನೆ ಸ್ಥಾಪಿಸುವ ಪ್ರಯತ್ನ ನಡಿಸುತ್ತಾ ಬಂದಿರುವರು ಆದರೆ ಅದಕ್ಕೆ ಸರಕಾರವು ಯಾವ ಆಶಯವನ್ನೂ ಕೊಡಲು ಸಿದ್ಧವಿರುವುದಿಲ್ಲ ಹೊರಗಣಿಂದ ಬರುವ ಮೋಟರ್ ವಾಹನಗಳ ಮೇಲೆ 10ವರ್ಷಗಳ ವರೆಗೆ ಆದೊಂದು ಪ್ರಮಾಣದಲ್ಲಿ ತೆರಿಗೆ ಹೊರಿಸಬೇಕು. ಹಿಂದೀ ಮೋಟರ್ ಕಾರ್ಖಾನೆಯಲ್ಲಿ ತಯಾರಾದ ವಾಹನಗಳನ್ನು ಸೇನಾ ಖಾತೆ ಮೊದಲಾದುವುಗಳಿಗೆ ತೆಗೆದುಕೊಳ್ಳಬೇಕೆಂದು ಮಾತ್ರ ಸರ್. ವಿಶ್ವೇಶ್ವರಯ್ಯನವರು ಇಂಡಿಯಾ ಸರಕಾರದೊಡನೆ ಕೇಳಿದ್ದರು. 1936ರಲ್ಲಿ ಸರಕಾರವು ಅಂತಹ ಸಹಾಯವೀಯಲು ಸಿದ್ಧವಿರಲಿಲ್ಲ. ಈಗ ಯುದ್ಧ ಪ್ರಯತ್ನಕ್ಕೆ ತೊಂದರೆಯಾಗುವುದೆಂಬ ನೆವನವನ್ನೊಡ್ಡಿ ಕಡೆಗಣಿಸಿರುತ್ತದೆ. ಆಸ್ಟ್ರೇಲಿಯ, ಕೆನಡಾ ಮೊದಲಾದ ಬ್ರಿಟಿಷ್ ಸಾಮಂತ ರಾಷ್ಟ್ರಗಳು ಈ ಸಂದರ್ಭದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು, ವಿಮಾನ ಟ್ಯಾಂಕ್ ಮೊದಲಾದುವುಗಳನ್ನು ಕೂಡಾ ತಯಾರಿಸುತ್ತಿರುವಾಗ ಹಿಂದುದೇಶದಲ್ಲೊಂದು ಮೋಟರ್ ಕಾರ್ಖಾನೆ ಸ್ಥಾಪಿಸುವುದಕ್ಕೂ ಸರಕಾರವು ಆಶ್ರಯ ಕೊಡಲು ಸಿದ್ಧವಿಲ್ಲೆಂದರೆ ಅದಕ್ಕಿಂತ ಅರ್ಥರಹಿತ ಹಾಗೂ ಮೂರ್ಖ ಧೋರಣೆ ಯಾದರೂ ಎನು?

ಇನ್ನೊಂದು ರಣರಂಗ ತೆರೆಯಬೇಕು

ರಷ್ಯದ ಬರುವ ವಸಂತ ಋತುವಿನ ಪ್ರಚಂಡ ಧಾಳಿಯ ಮೇಲೆ ಹೊಂದಿಕೊಂಡಿದೆ ಹಿಟ್ಲರರ ಪತನ ಅಥವಾ ಉತ್ಥಾನ. ಆದುದರಿಂದ ಅವರು ಕೆಂಪುಸೇನೆಯನ್ನು ಸದೆಬಡಿಯುವರೆಕೊನೆಯಮಹತ್ತಾದ ಪ್ರಯತ್ನ ನಡಿಸುವರೆಂಬುದರಲ್ಲಿ ಸಂದೇಹವೇ ಇಲ್ಲ. ಸ್ಟೈಲಿನರು ಕೂಡ ನಾಝಿ ಪಡೆಯನ್ನು ಹಿಂದಕ್ಕಟ್ಟಿ ಜರ್ಮನರು ಗೆದ್ದಿರುವ ಪ್ರದೇಶಗಳನ್ನು ಪುನಹ ಜೈಸಿ ಅಲ್ಲಿ ಕೆಂಪು ಪತಾಕೆ ಹಾರಿಸುವ ಭರವಸೆಯುಳ್ಳವರಿದ್ದಾರೆ.ಆದರೆ ರಷ್ಯವು ಒಂದೇ ಯಾಗಿ ವೈರಿಯನ್ನೆದುರಿಸಬೇಕಾಗಿದೆ ಎಂಬುದನ್ನವರು ತನ್ನ ಭಾಷಣದಲ್ಲಿ ಸೂಚಿಸಿರುತ್ತಾರೆ. ಈಗ 9 ತಿಂಗಳಿಂದ ಕೆಂಪು ಸೇನೆಯು ನಾಝಿ ಪಡೆಯ ಪ್ರಚಂಡ ಧಾಳಿಯನ್ನು ತಡಗಟ್ಟಿ, ಇಂದೀಗ ಪ್ರತಿಧಾಳಿ ನಡಿಸಿ ಕೆಲಮಟ್ಟಿನ ವಿಜಯ ಪಡೆದಿದೆ.ಅಮೆರಿಕದಲ್ಲಿ ಸೋವಿಯೆಟ್ ರಾಯಭಾರಿಯಾಗಿರುವ ಎಮ್. ಲಿಟ್ವಿನೊಫರು ಸೂಚಿಸಿರುವಂತೆ, ಇನ್ನು, ಒಂದು ಯಾ ಎರಡು ರಣರಂಗಗಳು ಪ್ರತ್ಯೇಕವಾಗಿ ತೆರೆಯಲ್ಪಡದಿದ್ದಲ್ಲಿ ಹಿಟ್ಲರರ ಶೀಘ್ರ ಹಾಗೂ ಸಂಪೂರ್ಣವಾದ ನಾಶವು ಸಾಧ್ಯವಿಲ್ಲ ಇನ್ನಾದರೂ ಮಿತ್ರರಾಷ್ಟ್ರಗಳ ಆ ಕುರಿತು ಗಮನಕೊಡಲು ಸಾಧ್ಯವಿಲ್ಲವೇ? ಎಷ್ಟರ ವರೆಗೆ ಕೇವಲ ಸಿದ್ಧತೆ ಮಾಡುತ್ತಾ ಕುಳಿತಿರುವುದು?

V • • • —

A. R. P. APPEAL

It has been decided to extend A. R. P. measures to the town of Mangalore. The approved scheme requires the voluntary services of a large number of Wardens. It is hoped that a large number of public-spirited gentlemen will come forward to offer their services for this noble and humanitarian service.

Persons physically fit and over 21 years of age are required for work as Wardens. They may either apply in person daily at 11 A. M. at the office of the District Magistrate or by post. The application should state age, profession and complete address with ward and house number. Applications by post should reach the District Magistrate by 28-2-42. Selected candidates will be given instruction by trained A. R. P. Instructors. Wardens will as far as possible be appointed to Air Raid Wardens' posts near their residences.

M. KARAMATULLAH,
District Magistrate

Keep the enemy away from India

Contribute AGAIN to the **Governor's war fund.**

Buy MORE defence bonds and savings certificats.

GIVE AND LEND FOR VICTORY.

ಹಗಲು ಹೊಲತಿ-ರಾತ್ರಿ?

ಶಾರದ ಕಥೆ

ಅಂದು ಸಂತೆಯ ದಿನ. ಸಾವುಕಾರ ಅಂತಪ್ಪನವರು ಗಿರಾಕಿಗಳಿಗೆ ಸಾಮಾನು ಕೊಡುವ ಅವಸರದಲ್ಲಿದ್ದರು. ಅಷ್ಟರಲ್ಲಿ ಸುಮಾರು ನಡುಪ್ರಾಯದ ರೂಪವತಿ ಹೊಲತಿಯೊಬ್ಬಳು ಬಂದು ಅಂಗಡಿ ಜಗಲಿ ಮೇಲೆ ಕೂತಳು. ಕಮ್ತಿಯರ ಮುಖ ನೋಡಿ ಹಲವು ಸಲ ಹಸುನಗೆ ಬೀರಿದಳು. ಆದರೆ ಅಂತಪ್ಪನವರು ಅವಳನ್ನು ನೋಡಿ ಪ್ರತಿನಗೆ ಬೀರಲಿಲ್ಲ. "ಬಾಯಿ ಸಪ್ಪೆಯಾಗುತ್ತದೆ. ವೀಳ್ಯ ಹಾಕಲಾದರೂ ಕೊಡಿ" ಎಂದಳು ಹೊಲತಿ ಕೂತು ಕೂತು ಸಾಕಾಗಿ. ಆಗ ಅಂತಪ್ಪನವರೊಮ್ಮೆ ಹೊಲತಿಯ ಕಡೆಗೆ ದೃಷ್ಟಿ ಹರಿಸಿದರು. ಆದರೆ ಅದರಲ್ಲಿ ಪ್ರಸನ್ನತೆ ಇರಲಿಲ್ಲ. ಇನ್ನೂ ಸ್ವಲ್ಪ ಕಾದು, "ನಾನು ಬಂದು ಬಹಳ ಹೊತ್ತಾಯಿತು. ಮನೆಯಲ್ಲಿ ಬಹಳ ಕೆಲಸವಿದೆ. ನನಗೂ ಬೇಗ ಸಾಮಾನು ಕೊಡುವಿರಾ?" ಎಂದಳು ಪುನಃ ಹೊಲತಿ ಗಟ್ಟಿಯಾಗಿ. ಅದಕ್ಕೂ ಅಂತಪ್ಪನವರ ಉತ್ತರವಿಲ್ಲ. ಈ ಸಲ ಅವರು ಹೊಲತಿಯನ್ನು ನೋಡಲೇ ಇಲ್ಲ. ಕಳ್ಳನ ಮನಸ್ಸು ಹುಳ್ಳಗೆಂಬಂತೆ ಅಂತಪ್ಪಯ್ಯನಿಗೆ ಹೊಲತಿ ಬಂದು ತನ್ನ ಅಂಗಡಿ ಜಗಲಿಯಲ್ಲಿ ಕೂತುದೇ ಅಸಮಾಧಾನಕರವಾಗಿತ್ತು. ಇಷ್ಟರಲ್ಲಿ ದೇವಸ್ಥಾನದ ಪೂಜೆಯ ಭಟ್ಟರು ಸಾಮಾನುಗಳಿಗಾಗಿ ಅಂತಪ್ಪನವರ ಅಂಗಡಿಗೆ ಬಂದರು. ಹೊಲತಿಯು ಅಂಗಡಿ ಜಗಲಿಯಲ್ಲಿ ಕೂತಿರುವುದನ್ನು ಕಂಡು ರಸ್ತೆಯಲ್ಲೇ ನಿಂತುಬಿಟ್ಟರು. "ಬನ್ನಿ ಶಾಸ್ತ್ರಿ, ಬನ್ನಿ! ಅದೇಕೆ ಅಲ್ಲೇ ನಿಂತಿರಿ?" ಎಂದು ಉಲ್ಲಾಸದ ಕರೆಯಿಂದ ಸ್ವಾಗತಿಸಿದರು ಕಮ್ತಿಯರು ಭಟ್ಟರನ್ನು. ಭಟ್ಟರು ಅಂತಪ್ಪನವರ ದೊಡ್ಡ ಗಿರಾಕಿಗಳಲ್ಲೊಬ್ಬರು. "ಹ್ಯಾಗೆ ಬರುವುದು ಅಂತಪ್ಪನವರೇ? ನಿಮಗೂ ಆ ಗಾಂಧಿ ಕಡೆಯವರಂತೆ ಸ್ಪರ್ಶಾಸ್ಪರ್ಶ ಭೇದವಿಲ್ಲವೇ? ಎಂದರು ಭಟ್ಟರು ಗಂಭೀರವಾಣಿಯಿಂದ. ಅಂಗಡಿ ಜಗಲಿಯಲ್ಲಿ ಎದುರು ಕೂತಿರುವ ಹೊಲತಿಯ ಮೇಲೆ ಮುಂದಾಗಿ ಅವರ ದೃಷ್ಟಿ ಬಿದ್ದಿತ್ತು. "ಅದೇಕೆ ಹಾಗೆನ್ನುವಿರಿ ಭಟ್ರೆ? ನಾನೇನು ಅಂತಹ ಕೆಲಸ ಮಾಡಿದ್ದು?" ಅಂತಪ್ಪನವರಂದರು ಆಶ್ಚರ್ಯ ಮುಖಮುದ್ರೆಯಿಂದ. "ಎದುರಲ್ಲೇ ಕೂತ್ರಿಸಿಕೊಂಡಿರುವಿರಲ್ಲ ಹೊಲತಿ ರಂಡೆಯನ್ನು! ಅಂದ ಮೇಲೆ ನಮ್ಮಂಥವರು ಹೇಗೆ ನಿಮ್ಮ ಅಂಗಡಿಗೆ ಪ್ರವೇಶಿಸುವದು?" ಎಂದರು ಭಟ್ಟರು ಸದರ್ಪವಾಗಿ. ಸಾಹುಕಾರರು ಒಂದು ಕ್ಷಣ ಅಪ್ರತಿಭರಾಗಿ ಹೋದರು. ತನ್ನ ರಹಸ್ಯವು ಭಟ್ಟರಿಗೆಲ್ಲಿ ಯಾವರೂ ತಿಳಿದಿರುವುದೋ ಎಂಬ ತಳಮಳವೇ ಇದಕ್ಕೆ ಕಾರಣವಾಗಿತ್ತು. ಉತ್ತರ ಕ್ಷಣದಲ್ಲೇ ಪ್ರಸಂಗಾವಧಾನತೆಯಿಂದ, "ಏ! ಏ! ಏಳಲ್ಲಿಂದ! ನಿನ್ನನ್ನು ಯಾರಲ್ಲಿ ಕೂಡ್ರು ಹೇಳಿದುದು?" ಗದರಿಸಿದರು ಕಮ್ತಿಯರು ಹೊಲತಿಯನ್ನು ದಿಟ್ಟಿಸಿ. "ನಾನು ಬಂದು ಬಹಳ ಹೊತ್ತಾಯಿತು. ನನಗೆ ಸ್ವಲ್ಪ ಸಾಮಾನು ಬೇಕು" ಎಂದಳು ಹೊಲತಿ ಕೂತಲ್ಲಿಂದಲೇ ಕಮ್ತಿಯರನ್ನು ಈಕ್ಷಿಸಿ! "ದೊಡ್ಡ ಅಜ್ಜಿ ನೀನು! ಸಾಮಾನು ಬೇಕಾದರೆ ಕೆಳಗೆ ರಸ್ತೆಯಲ್ಲಿ ನಿಂತು ಇನ್ನೂ ಸ್ವಲ್ಪ ಕಾಯಬೇಕು ಒಳ್ಳೇ ಮಾತಿನಿಂದ ಕೆಳಗಿಳಿಯುವೆಯೋ ಇಲ್ಲವೋ?" ಬೆದರಿಸಿದರು ಅಂತಪ್ಪನವರು. "ಹೊಂ, ಅಯ್ಯಪ್ಪ!" ಎಂದು ಉದ್ಗರಿಸಿ ಕೆಂಪಡರಿದ ಮುಖದಿಂದ ಜಗಲಿಯಿಂದ ರಸ್ತೆಗಿಳಿದಳು ಹೊಲತಿ. ಬಹಳ ಹೊತ್ತು ನಿಂತುಕೊಂಡಳಲ್ಲಿ. ಆದರೆ ಒಮ್ಮೆಯೂ ಕಮ್ತಿಯರವಳ ಮುಖ ನೋಡಲಿಲ್ಲ. "ಹೊಂ" ಎಂದು ನಿಟ್ಟುಸಿರಿಟ್ಟು ಅದೇನೋ ನಿರ್ಧಾರ ಮಾಡಿ ನಡೆದುಬಿಟ್ಟಳಲ್ಲಿಂದ ಸುಡುಮೋರೆಯಿಂದ.

೦೦ ೦೦ ೦೦

ಸುಮಾರು 11 ಘಂಟೆ ರಾತ್ರಿಯಾಗಬಹುದು. ಹೊಲತಿಯ ಗುಡಿಸಲ ಬಾಗಿಲ ಮೇಲೆ ಟಪ ಟಪ ಬಡಿದ ಶಬ್ದವಾಯಿತು. ಆದರೆ ಹೊಲತಿಯು ಬಾಗಿಲು ತೆರೆಯಲಿಲ್ಲ. ಕ್ರಮಶಃ ಬಡಿತವು ಜೋರು ಜೋರಾಗಹತ್ತಿತು. ಆದರೂ ಹೊಲತಿಯು ಬಾಗಿಲು ತೆರೆಯಲೇ ಇಲ್ಲ. "ದುರ್ಗಿ! ದುರ್ಗಿ!! ದುರ್ಗಿ!!!" ಎಂದು ಕಂಠದೊಳಗಿನ ಕಳ್ಳ ಸ್ವರದಿಂದ ಹೊಲತಿಯ ಹೆಸರೆತ್ತಿ ಕರೆಯಲಾಯಿತು. "ಯಾರದು?" ಎಂದಳು ದುರ್ಗಿ ಕಡು ಸಿಟ್ಟಿನಿಂದ. "ನಾನು, ಅಂತಪ್ಪನಲ್ಲವೇ? ನಿನಗೆ ಗೊತ್ತಿಲ್ಲವೇ? ಇಂದೇನು ಹೊಸ ಪರಿ ನಿನ್ನದು? ಬೇಗ ಬಾಗಿಲು ತೆರೆ. ತಡವಾಗುತ್ತದೆ ನನಗೆ. ಇವತ್ತು ಬರುವಾಗಲೆ ಬಹಳ ತಡವಾಗಿ ಹೋಯಿತು" ನಿಸುಗುಟ್ಟಿದರು ಅಂತಪ್ಪನವರು. "ನಾನು ಹೊಲತಿ ರಂಡೆ! ಹಗಲಲ್ಲಿ ನೀಚ ಅಸ್ಪರ್ಶಳಾಗಿ ನಿಮ್ಮ ಜಗಲಿ ಮೇಲೂ ಕೂತುಕೊಳ್ಳಲು ಅನರ್ಹಳಾದ ನಾನು ರಾತ್ರಿ ದೇವ ಕನ್ನಿಕೆಯಾಗಿ ಮಾರ್ಪಡುವೆನೇ? ಮೇಲ್ಜಾತಿಯವರಾದ ನೀವು ಕೀಳು ಹೊಲತಿಯ ಹೊಲೆ ಗುಡಿಸಲ ಬಳಿಗೇನೇ ನೋಕಬಾರದು! ಆ ಭಟ್ಟರೇನೆಂದಾರು ನಿಮಗೆ? ಈ ಅಪರ ರಾತ್ರಿಯಲ್ಲಿ ಗಲಾಟೆ ಮಾಡದೆ ನಡೆಯಿರಿಲ್ಲಿಂದೊಮ್ಮೆ" ಬಿರುನುಡಿದಳು ದುರ್ಗಿ.

ಸಾಹುಕಾರ ಅಂತಪ್ಪನವರಿಗೆ ದುರ್ಗಿಯ ಸಿಟ್ಟಿನ ಕಾರಣವೆಲ್ಲಾ ಒಮ್ಮೆಯೇ ಹೊಳೆದುಬಿಟ್ಟಿತು. ಹಗಲು ಅವಳಿಗವರು ಮಾಡಿದ ಅವಮಾನವು ಈ ಪರಿಣಾಮವನ್ನುಂಟುಮಾಡುವುದೆಂದವರು ಕನಸಿನಲ್ಲಿಯೂ ನೆನೆಸಲಿಲ್ಲ. ನೀಚ ಹೊಲೆಯರಲ್ಲಿ ಅಷ್ಟೊಂದು ಸ್ವಾಭಿಮಾನವೇ? ದುರ್ಗಿಯು ಬಾಗಿಲು ತೆರೆಯುವಳೋ ಎಂದು ಅಂತಪ್ಪನವರು ತುಸು ಹೊತ್ತು ಕಾದರು. ಆ ಮೇಲೆ ಪುನಃ ಅವಳನ್ನು ಕರೆದು, "ಬಹೋ, ಇವತ್ತು ಹಗಲಲ್ಲಿ ಅಂಗಡಿಯಲ್ಲಿ ನಡೆದ ಸಂಗತಿಯಿಂದ ನೊಂದುಕೊಂಡಿರುವಂತಿದೆಯಲ್ಲವೇ ದುರ್ಗಿ? ಅಂತಹ ಕಣ್ಣುಕಟ್ಟು ನಡಿಸದೆ ನಿರ್ವಾಹವಿದೆಯೇ ನನಗೆ? ನನ್ನ ವ್ಯಾಪಾರವೇ ನಿಂತು ಹೋಗಿ ನಮ್ಮಿಬ್ಬರ ಬಾಯಿಗೂ ಮಣ್ಣಾದೀತಲ್ಲವೇ ದುರ್ಗಿ?" ಸಮಾಧಾನಪಡಿಸಲೆತ್ನಿಸಿದರು ಕಮ್ತಿಯರು ದುರ್ಗಿಯನ್ನು.

"ನಿಮ್ಮ ಬುದ್ಧಿವಂತಿಕೆಯ ಮಾತುಗಳನ್ನೆಲ್ಲಾ ನನ್ನೊಡನೆ ಖರ್ಚುಮಾಡುವುದು ಬೇಡ! ಎಷ್ಟು ಮಾತ್ರಕ್ಕೂ ಇವತ್ತು ಬಾಗಿಲು ತೆರೆಯುವ ಹಾಗಿಲ್ಲ. ನನಗೆ ವೃಥಾ ಉಪದ್ರ ಕೊಡದ ಒಳ್ಳೇ ಮಾತಿನಿಂದ ಹೋದರಾಯಿತು!" ಹೇಳಿದಳು ದುರ್ಗಿ ನಿಷ್ಠುರವಾಗಿ.

ಅಂತಪ್ಪನವರು ಮುಖಭಂಗಿತರಾಗಿ ಮುಂದೇನು ಮಾಡುವುದೆಂದು ತಿಳಿಯದೆ ತುಸು ಆಲೋಚಿಸಿದರು. ಕಾಮೋದ್ವೇಗವು ಅವರನ್ನು ಮುಂದೂಡುತ್ತಿತ್ತೇ ಹೊರತು ಹಿಂಪಡೆಯಬಿಡಲಿಲ್ಲ. "ತಪ್ಪಾಯಿತು ಮಹಾರಾಯಿತಿ! ಇನ್ನು ಹಾಗೆ ಮಾಡುವುದಿಲ್ಲ ಆ ಭಟ್ಟ ನಮ್ಮ ಅಂಗಡಿಗೆ ಬಾರದಿದ್ದರೆ ಅಷ್ಟೇ ಹೋಯಿತು! ಅಂತಪ್ಪನವರಂದರು ಪಶ್ಚಾತ್ತಾಪ ಮತ್ತು ಸಂತಾಪದಿಂದ.

"ನೀವು ಏನು ಮಾಡಿದರೂ ನಾನಿಂದು ಬಾಗಿಲು ತೆರೆಯುವ ಹಾಗಿಲ್ಲ. ಮೇಲುಜಾತಿಯವರಾದ ನೀವು ಹೊಲತಿಯರ ಬಳಿಗೆ ಬರುವುದು ನೀತಿ ಧರ್ಮವಲ್ಲ. ಇನ್ನು ಮುಂದೆ ಎಂದಿಗೂ ನೀವು ನನ್ನ ಬಳಿ ಬರಕೂಡದು. ನಿಮ್ಮ ಮತ್ತು ನನ್ನ ಕೇವಲ ರಾತ್ರಿ ಸಂಬಂಧವು ಇಂದಿಗೆ ಕಡಿದುಹೋಗಿರುವುದು" ದುರ್ಗಿ ಹೇಳಿದಳು ದೃಢನಿರ್ಧಾರದಿಂದ.

(೯ನೇ ಪುಟ ನೋಡಿರಿ)

ನೋಟೀಸು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

ಕ್ರಮ ನಂಬ್ರ. 568/1941

ವಾದಿಳು– ನೇತ್ರಾವತಿ ಅಮ್ಮ. ವಿಶ್ವೇಶ್ವರಯ್ಯನವರ ವಿಧವೆ, ಕುಂದಾಪುರ ತಾಲೂಕು ಕುಂದಬಾರಂದಾಡಿ ಗ್ರಾಮದಲ್ಲಿರುವವಳು.

ಪ್ರತಿವಾದಿರು– ಗಣಪಯ್ಯ ಕೊಡಾ

7ನೇ ಪ್ರತಿವಾದಿ ಶ್ಯಾಮ ಬೋಳ್ಕರ. ಉಪ್ಪುಂದ ಮಹಾಲಿಂಗ ಜೋಯ್ಸರ ಮಗ. ಕುಂದಾಪುರ ತಾಲೂಕು ಎತ್ತರೆ ಗ್ರಾಮದಲ್ಲಿರುವವ.

ಇವರಿಗೆ--

ವಾದಿಳು ತನಗೆ ಬರಾ ಅಶನಾರ್ಥದ ಬಾಬ್ತು ಕೊಡಾಯ 2499 8-0ನ್ನು ಸಾತ ವಗೈರೆಗಾದ ಪರಾಧೀನಗಳ ಉಜೇರು ಶಿಮ್ಮ ಫ್ಲೈಂಟನಲ್ಲಿ ಕಾಣಿ ೨೮ ಆಸ್ತಿಗಳ ವಸೂಲಾತಿಯಿಂದ ಕೊಡಾ ತನಗೆ ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ದಾವೆಯನ್ನು ತಾ. 10-3-42ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ತಮ್ಮ ಉದಾಹರಣೆ ಇದ್ದರೆ ಅಲ್ಲಿ ಸಮಕ್ಷದಲ್ಲಿ ಕೋರ್ಟಿನಿಂದ ಹಾಜರು ಮಾಡಬೇಕಾಗಿ ಈ ಮುಖಾಂತರ ತಿಳಿಸಲಾಗಿದೆ.

25 2-42 ಕುಂದಾಪುರ } **M. N. Bhat** Advocate

"Service of Mankind is Service of God"

The Bombay Life Assurance Company., Limited.

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including Indian States, **Udipi.**

Also Offices at:-

Mangalore, Calicut, Madras, Bangalore, Trivandrum & Bombay.

ಮದ್ರಾಸು ಗವರ್ನರರ ಯುದ್ಧ ಫಂಡು.

ದ. ಕ. ಜಿಲ್ಲೆಯಲ್ಲಿ ಜನವರಿ ತಿಂಗಳಲ್ಲಿ ಸಹಾಯ ಮಾಡಿದವರ ಹೆಸರಿನ ಪಟ್ಟಿ

ಭಾಗ ೧.

66-0-0 ಎಂ. ಪಿ ಸುಬ್ರಹ್ಮಣ್ಯನ್. 50 0-0 ಡಬ್ಲ್ಯು. ಪೆರ್ರಿಸ್, ಡಬ್ಲ್ಯು. ಬಿ. ಜಾನ್ಸನ್, ಜೆ. ಎನ್. ಕೌಲ್. 20-0-0 ಎಂ. ಕೇಶವನ್ ಉಣ್ಣಿ ನಾಯರ್. 17 0 0 ಆರ್. ಪ್ರಸಾದ್. 12 0 0 ರಾವ್ ಸಾಹೇಬ್, ಬಿ. ಆನಂದ ಬಾಳಿಗ, 11-8-0 ರಾವ್ ಸಾಹೇಬ್, ಎಸ್. ಕೃಷ್ಣರಾಜ. 10-0-0 ಕ್ಯಾಪ್ಟನ್ ಸಿ. ಕೆ. ಮೇನನ್, ವಿಠ್ಠಲ ರವಿವರ್ಮ ಕೃಷ್ಣರಾಜ. 8-0-0 ರಾವ್ ಸಾಹೇಬ್ ಯು. ಮಂಜಪ್ಪ. ರಾವ್ ಬಹದೂರ್ ಡಾ. ಪಿ. ಪಿ. ಕಾಮತ್, ಎಚ್. ಶಂಕರ ರಾವ್. 7-0-0 ಖಾನ್ ಸಾಹೇಬ್ ಎಂ ಸುಲ್ತಾನ್, ಮೊಹಿಉದ್ದೀನ್ ಮಖ್ದೂಮಿ ಸಾಹೇಬ. 6-6-0 ರಾವ್ ಬಹದೂರ್ ಕೆ. ಶ್ರೀನಿವಾಸರಾವ್. 6 0 0 ಕೆ. ಎಸ್. ಭಟ್. 5-0 0 ಡಾ. ಕೆ. ಕೇಶವನ್, ಕೆ. ಅಚ್ಯುತನ್ ನಾಯರ್, ಪಿ. ರಾಘವೇಂದ್ರರಾವ್, ಎಂ. ವೆಂಕಟಪ್ಪ, ಖಾನ್ ಸಾಹೇಬ್ ಕೆ. ಸಿ. ಎಂ ಮಸ್ತಕಿಂಷಾ.

ಭಾಗ ೨.

600-0-0 ಕುಂದಾಪುರ ಸರಕಾರಿ ನೌಕರರ ಸಹಕಾರಿ, 400-0-0 ಜಿ. ಎ. ಸರ್ವಿಸ್, ಲೇಡೀಸ್ ಕ್ಲಬ್. 300-0 0 ಪಿ ಎಚ್. ಗನ್ 25-0-0 ಬಿ. ಸೀತಾರಾಮ ರಾವ್, ಬೊಂಬೇ ಕಂಪ್ನಿ ಕೊ. 10-0-0 ಬೆಳಿಯ ಗೌಡ, ಬಿರ್ಮಣ್ಣ ಗೌಡ. 5-8 0 ಎಸ್. ಸ್ವಾಮಿ ನಾಥನ್ 5 0-0 ಬಿ. ಎಸ್. ಕೊಳ್ಳಿ, ಶಿಕ್ಷಣಾಲಯ ಉಪಾಧ್ಯಾಯ, ಚನ್ನಪ್ಪ ಕುಮಾರಿ.

ಎಲ್ಲೆಲ್ಲಿಯೂ ಕೆಂಪುಸೇನೆಯ ವಿಜಯ.

ಲೆನಿನ್‌ಗ್ರಾಡಿನ ಬಳಿಯ ಸ್ಟಾರಯ ರುಸ್ಸ ಎಂಬಲ್ಲಿ ಕೆಂಪು ಸೇನೆಯು ದೊಡ್ಡ ವಿಜಯ ಪಡೆದು ೯೬,೦೦೦ ಜರ್ಮನ್ ಸೈನಿಕರು ಆವರಿಸಲ್ಪಟ್ಟಿರುವರು. ಈ ಯುದ್ಧದಲ್ಲಿ ೧೨,೦೦೦ ಜರ್ಮನರು ಕೊಲ್ಲಲ್ಪಟ್ಟಿರುವರು. ನೂರಾರು ಮಂದಿ ಸೆರೆಹಿಡಿಯಲ್ಪಟ್ಟಿರುವರು. ಖಾರ್ಕೋವಿನ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಸೋವಿಯೆಟ್ ಸೇನೆಯು ಜರ್ಮನ್ ಸೇನಾವ್ಯೂಹವನ್ನು ಭೇದಿಸಿರುವುದು. ಖಾರ್ಕೋವಿನ ಬಳಿ ನಡೆದ ತೀವ್ರ ಯುದ್ಧದಲ್ಲಿ ೩,೦೦೦ ಜರ್ಮನರು ಕೊಲ್ಲಲ್ಪಟ್ಟಿರುವರು. ಸೋವಿಯೆಟ್ ಗೊರಿಲ್ಲ ಪಂಗಡಿಗರು ಖಾರ್ಕೋವ್ ಒರೆಲ್ ಪಟ್ಟಣಗಳ ನಡುವೆ ಜರ್ಮನರಿಗೆ ಪೆಟ್ಟಿನ ಹಾವಳಿ ಮಾಡುತ್ತಿದ್ದಾರೆ. ಸ್ಮೊಲೆಂಕ್ಸ್ ಪ್ರದೇಶದಲ್ಲಿಯೂ ರಷ್ಯನರು ಮುಂದೊತ್ತುತ್ತಿದ್ದಾರೆ. ಜರ್ಮನರು ರಷ್ಯಾದಿಂದ ಸೇನೆಯನ್ನು ತರುತ್ತಿದ್ದಾರೆ. ಕಳೆದ ದಶಂಬರ ಮತ್ತು ಜನವರಿ ತಿಂಗಳುಗಳ ಯುದ್ಧದಲ್ಲಿ ಸುಮಾರು ೩,೫೦,೦೦೦ ಜರ್ಮನ್ ಸೇನಾಧಿಕಾರಿಗಳು ಮತ್ತು ಸೈನಿಕರು ಕೊಲ್ಲಲ್ಪಟ್ಟಿರುವರು. ೭೧೧೩ ಮಂದಿ ಸೆರೆಹಿಡಿಯಲ್ಪಟ್ಟಿರುವರು. ಇಲ್ಲವೆ ನಾಶ ಮಾಡಲ್ಪಟ್ಟಿರುವರು. ೩೫೦೭ ಟ್ರೆಂಚ್ ಮೋರ್ಟರ್, ೯೬೬೪ ಮೆಷೀನ್ ಗನ್, ೧೫,೧೪೭ ತೋಫು, ೧೮೪೭ ಬಂದೂಕು, ೭೯೫೯ ಟೇಂಕು, ೬೦೧೧ ನೂರಸ್ತ್ರ ಮೋಟರ್ ಕಾರು, ೪೩,೪೭೩ ಮೋಟರ್ ವಾಹನ ಮತ್ತು ೧೪೭೮ ವಿಮಾನಗಳನ್ನು ರಷ್ಯನರು ವಶಪಡಿಸಿಕೊಂಡಿರುವರು. ದಕ್ಷಿಣದಲ್ಲಿ ೭೫೦೦ ರುಮೇನಿಯನ್ ಸೈನಿಕರು ಕೊಲ್ಲಲ್ಪಟ್ಟಿರುವರು. ಕೆಂಪು ಸೇನೆಯು ಟಿಲೀವಿಯದಿಂದ ಕೇವಲ ೮೦ ಮೈಲು ದೂರದಲ್ಲಿರುವುದು.

ಆಕ್ಸಿಸ್ ರಾಷ್ಟ್ರಗಳು ಮುಂದೇನು ಮಾಡುವವು?

ಬರುವ ವಸಂತ ಋತುವಿನಲ್ಲಿ ಜಪಾನು, ಜರ್ಮನಿ ಮತ್ತು ಇಟೆಲಿಗಳೊಂದಿಗೆ ಕೂಡಿಕೊಂಡು ಯುದ್ಧವನ್ನು ಮುನ್ನಡೆಸಲಿರುವುದೆಂದು ಊಹಿಸಲಾಗಿದೆ. ಜರ್ಮನಿಯು ಒಂದೇ ಸವನೆ ಕೊಕಸಸಿನ ಕಡೆಗೆ ಮುನ್ನಡೆದು ಮಧ್ಯಪೂರ್ವದ ಪ್ರದೇಶಗಳನ್ನು ಗೆಲ್ಲಲೆತ್ನಿಸುವುದೆಂದೂ, ಆಗ ಜಪಾನು ಕೂಡಾ ಹಿಂದುದೇಶವನ್ನು ಗೆದ್ದು ಪರ್ಷಿಯಾ ಕೊಲ್ಲಿಯ ಕಡೆಗೆ ನಡೆದು ಜರ್ಮನಿಯೊಂದಿಗೆ ಸೇರಲೆತ್ನಿಸುವುದೆಂದೂ ಊಹಿಸಲಾಗಿದೆ. ಅಂತೂ ಬರುವ ವಸಂತ

ವಾರದ ವಿಶೇಷ ವಾರ್ತೆ

ಋತುವು ಯುದ್ಧೇತಿಹಾಸದಲ್ಲಿ ಬಹಳ ಸಂದಿಗ್ಧವಾದುದಿದೆ.

ಹಿಂದೀ ಬಜೆಟು

ಹಿಂದೀ ಸರಕಾರದ ಮುಂತಿವರ್ಷದ ಆಯವ್ಯಯ ಪಟ್ಟಿಯಲ್ಲಿ ರೂ ೧೭ಕೋಟಿ ಮತ್ತು ಬರುವ ವರ್ಷದ್ದರಲ್ಲಿ ರೂ ೩೬ ಕೋಟಿ ಕಡಿಮೆ ಬೀಳುವುದೆಂದು ಫೈನಾನ್ಸ್ ಮೆಂಬರರು ಕಳೆದ ಫೆಬ್ರವರಿ ೨೮ರಲ್ಲಿ ೧೯೪೨-೪೩ರ ಬಜೆಟನ್ನು ಕೇಂದ್ರ ಎಸೆಂಬ್ಲಿಯ ಮುಂದಿರಿಸುವಾಗ ಹೇಳಿದರು. ೧೯೪೧-೪೨ರ ತಿದ್ದುಪಡಿ ಮಾಡಲ್ಪಟ್ಟ ಸೇನಾ ವೆಚ್ಚವು ರೂ ೧೦೩ ಕೋಟಿಯಾಗಿರುವುದು ೧೯೪೨-೪೩ರಲ್ಲಿ ಈ ವೆಚ್ಚವು ೧೩೩ ಕೋಟಿಯಾಗುವುದೆಂದು ಅಂದಾಜುಮಾಡಲಾಗಿದೆ. ಸೇನೆ ಮತ್ತು ಯುದ್ಧೋಪಕರಣಗಳನ್ನು ಒದಗಿಸಿಕೊಟ್ಟ ನಿಮಿತ್ತ ಹಿಂದೀ ಸರಕಾರವು ಬ್ರಿಟಿಶ್ ಸರಕಾರದಿಂದ ೧೯೪೨-೪೩ರಲ್ಲಿ ರೂ ೩೦೦ ಕೋಟಿ ಪಡೆಯುವ ನಿರೀಕ್ಷೆಯುಳ್ಳದ್ದಿರುವುದು. ೧೯೪೨-೪೩ರಲ್ಲಿ ಇಂಡಿಯಾ ಸರಕಾರವು ಈ ಕೆಳಗಣ ಹೊಸ ಕರಗಳನ್ನು ಜ್ಯಾರಿಗೆ ತರಲಿರುವುದು. ಹೆಚ್ಚು ಪ್ರಮಾಣದ ಆದಾಯದ ಮೇಲಿನ ಕರವನ್ನು ಸೇಕಡ 33⅓ಯಿಂದ 50ಕ್ಕೇರಿಸಲಾಗುವದು. ರೂ ೧೦೦೦ದಿಂದ ೨೦೦೦ದ ವರೆಗಣ ಆದಾಯದ ಮೇಲೆ ರೂಪಾಯಿಗೆ ಅರ್ಧಾಣೆಯಂತೆ ಹೊಸ ಕರ ಹಾಕಲ್ಪಡುವುದು. ಕಚ್ಚಾ ಹತ್ತಿ, ಪೆಟ್ರೋಲು ಮತ್ತು ಉಪ್ಪಿನ ಹೊರತು ಇತರ ಆಮದುಗಳ ಮೇಲಿನ ಕಸ್ಟಮ್ಸ್ ತೇಗೆಯನ್ನು ಸೇಕಡ 20ರಷ್ಟು ಹೆಚ್ಚಿಗೆ ಮಾಡಲಾಗುವುದು. ಪೆಟ್ರೋಲ್ ತೆರಿಗೆಯು ಸೇಕಡ 25ರಷ್ಟು ಏರಿಸಲ್ಪಡುವುದು. ಫೋನ್ ಮತ್ತು ಟೆಲಿಗ್ರಾಮ್ ದರಗಳೂ ಏರಿಸಲ್ಪಡುವವು. ಈ ಹೊಸ ಕರಗಳಿಂದ ಒಟ್ಟು ರೂ ೧೨ ಕೋಟಿಗಳಷ್ಟರ ಆದಾಯ ದೊರೆಯುವುದೆಂದು ನಿರೀಕ್ಷಿಸಲಾಗಿದೆ. ಇವನ್ನು ಕಳೆದು ಮತ್ತೂ ಕಡಿಮೆ ಬೀಳುವ ರೂ. ೨೪ ಕೋಟಿಗಳಷ್ಟನ್ನು ಸಾಲ ಪಡೆದು ಭರ್ತಿ ಮಾಡಲಾಗುವುದು.

ಕಾಂಗ್ರೆಸ್ ಮತ್ತು ಲೀಗುಗಳೊಳಗೆ ಸಂಧಾನ

ಕಾಂಗ್ರೆಸು ಮತ್ತು ಮುಸ್ಲಿಮ್ ಲೀಗುಗಳೊಳಗೆ ಸಂಧಾನ ಮಾಡುವ ಪ್ರಯತ್ನವು ಪುನಹ ನಡೆದಿರುವುದೆಂದು ಒರಿಯಂಟ್ ಪ್ರೆಸ್ಸಿನವರು ಪ್ರಕಟಿಸಿರುತ್ತಾರೆ. ಇದು ಎಷ್ಟರ ಮಟ್ಟಿಗೆ ನಿಜವೆಂದು ಹೇಳಬರುವುದಿಲ್ಲ. ಕಾಂಗ್ರೆಸಿನ ಮತ್ತು ಲೀಗಿನ ಮುಂದಾಳುಗಳಿಬ್ಬರೊಳಗೆ ಆ ಕುರಿತು ಇಷ್ಟರೊಳಗೇನೇ ಮಾತುಕತೆ ನಡೆದಿರುವುದಂತೆ. ಈ ಕುರಿತು ಡಿಲ್ಲಿಯಲ್ಲಿ ಸೇರಿದ ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯವರು 2 ಘಂಟೆ ಚರ್ಚೆ ಮಾಡಿರುವರೆಂದು ತಿಳಿದುಬಂದಿದ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಸಂಧಾನ ಮಾಡುವರೆ ಶ್ರೀ. ರಾಜಗೋಪಾಲಾಚಾರ್ಯರು ಅತ್ಯಂತ ಅರ್ಹರಾದವರೆಂದು ಪರಿಗಣಿಸಲಾಗಿದೆ. ಮದ್ರಾಸಿನಲ್ಲಿ ಅವರು ಮಾಡಿರುವ ಭಾಷಣಗಳಿಂದ ಲೀಗಿನವರ ಮೇಲೆ ಒಳ್ಳೇ ಪರಿಣಾಮವಾಗಿದೆ.

ರಂಗೂನಿನ ಉತ್ಕಟ ಪರಿಸ್ಥಿತಿ.

ಬರ್ಮಾದ ಸಿಟಂಗ್ ನದಿಯ ಪಶ್ಚಿಮದಲ್ಲಿರುವ ಪೇಗು ರೈಲ್ವೆಯನ್ನು ಜಪಾನರು ಕಡಿದಿರುವರೆಂದು ತಿಳಿದುಬರುತ್ತದೆ. ಇದರಿಂದ ಅವರು ಸಿಟಂಗ್ ನದಿ ದಾಟಿರುವರೆಂದೇ ಹೇಳಬಹುದು. ಬ್ರಿಟಿಷ್ ಸೇನೆಯು ಸೇತುವೆಯನ್ನು ಸ್ಫೋಟಗೊಳಿಸಿ ಪಶ್ಚಿಮಕ್ಕೆ ಸರಿದಿರುವುದು. ಇದರಿಂದಾಗಿ ರಂಗೂನಿನ ಸುತ್ತ ಮುತ್ತಲಿನ ಪರಿಸ್ಥಿತಿಯು ಉತ್ಕಟವಾಗಿರುವುದು. ರಂಗೂನು ಪಟ್ಟಣದ ಮೇಲಿನ ಸರ್ವಾಧಿಕಾರವನ್ನು ಸೇನೆಗೊಪ್ಪಿಸಲಾಗಿದೆ. ಸಿಟಂಗ್ ನದಿ ಪ್ರದೇಶದಲ್ಲಿ ನಡೆದ ತೀವ್ರ ಯುದ್ಧದಲ್ಲಿ 2000 ಜಪಾನರು ಕೊಲ್ಲಲ್ಪಟ್ಟಿರುವರು.

ಜಾವದ ಮೇಲೆ ಜಪಾನರ ಧಾಳಿ

ಜಪಾನರು ಜಾವದ ಉತ್ತರ ಕರಾವಳಿಯಲ್ಲಿ 3 ಕಡೆಗಳಲ್ಲಿ ಬಂದಿಳಿದಿರುವರೆಂದು ತಿಳಿದುಬರುತ್ತದೆ. ಜಪಾನರು ಜಾವಕ್ಕೆ 50 ಹಡಗಗಳಲ್ಲಿ 1 ಡಿವಿಜನ್ ಸೇನೆಯನ್ನು ಕಳುಹಿಸಿರುವರೆಂದೂ, ಈ ಹಡಗಗಳಲ್ಲಿ 15 ಮುಳುಗಿಸಲ್ಪಟ್ಟಿರುವವೆಂದೂ ನಂಬಲಾಗಿದೆ. ಜಾವದ ಬಳಿ ನಡೆದ ದೊಡ್ಡ ಜಲಯುದ್ಧದಲ್ಲಿ ಒಂದು ದೊಡ್ಡ ಜಪಾನ ಕ್ರೂಸರ್ ಹಡಗವು ಮುಳುಗಿಸಲ್ಪಟ್ಟು ಎರಡಕ್ಕೆ ಜಖಮ್ ಆಗಿರುತ್ತದೆ. 6 ಡಿಸ್ಟ್ರೋಯರುಗಳು ಮುಳುಗಿಸಲ್ಪಟ್ಟಿವೆ. ಮಿತ್ರ ರಾಷ್ಟ್ರಗಳು ಕೂಡಾ ಎರಡು ಕ್ರೂಸರ್ ಮತ್ತು ಒಂದು ಡಿಸ್ಟ್ರೋಯರನ್ನು ಕಳಕೊಂಡಿರುತ್ತವೆ. ಜಾವವು ಜಪಾನರ ವಶವಾಗದಂತೆ ರಕ್ಷಿಸಲು ಸಾಧ್ಯವಾದ ಪ್ರಯತ್ನವೆಲ್ಲಾ ನಡಿಸಲ್ಪಡುತ್ತಿದೆ. ಬ್ರಿಟಿಷ್ ಅಮೆರಿಕಾದ ಸೈನ್ಯವು ಹೆಚ್ಚಾಗಿ ಜಾವಕ್ಕೆ ಕಳುಹಿಸಲ್ಪಡುತ್ತಿವೆ.

ನೋಟೀಸು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

S C 130/29. R E P 732 1941.

ಅರ್ಜಿದಾರ, ಬಿ ಶಿವರಾಮ ಹೊಳ್ಳ ಎದ್ರಿರು, ಹಟ್ಟಾ ಬಿ ರಾಮ ಮಯ್ಯ ಕೂಡಾ 5ನೇ ಎದ್ರಿ ನಾಗಪ್ಪ ಮಯ್ಯರಿಗೆ ತಿಳಿಸುವದೇನೆಂದರೆ—5ನೇ ಎದ್ರಿ, ನಾಗಪ್ಪ ಮಯ್ಯ, ಬಿಜೂರು ಸುಬ್ರಾಯ ಮಯ್ಯರ ಮಗ ಬಿಜೂರು ಗ್ರಾಮಸ್ಥ.

ಮೇಲೆ ಹೇಳಿರುವ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಕು 13-3-42ಕ್ಕೆ ನಿಶ್ಚಯಿಸಲಾಗಿಯದೆಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

B. Mahabala Holla
Advocate for Petitioner
ಕುಂದಾಪುರ ತಾರೀಕು 27-2-1942.

IF satisfaction is what you wish cheap Price is your desire & best Quality your want

Have All your School Requirements
Such as
Text Books, Library Books & Exercise Books and all kinds of Stationery at Stunning Prices from us.

WE ASK YOU TO PAY A VISIT AND VERIFY

NAVABHARAT BOOK DEPOT,
Registered Publishers, Book sellers & Stationers
Sri Ramanjaneya Buildings',
UDIPI

READ - - GOOD - - BOOKS.

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,
ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮೂಲ್ಕಿ ಮಂಜಯ ಭಂಡಾರಿಗಳವರು ಒದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.
ಬಿ. ಮಂಜಯ್ಯ ಹೆಗ್ಡೆ. ಬಿ. ಎ. ಬಿ ಎಲ್., ಚೇಯರ್‌ಮೆನ್

Degrees Books Medicines
Free H L M S M B, H M D etc Free Homeo Ayur Urani Naturo degree By post also—Practitioners also get soon Homeo Materiamedica, Rs 5. Homeo practice book Rs 4, Insanity Cure Pills Rs 10 Enclose 2 annas stamp —
Principal Indian Homeopath Institute & Society (Govt Regd)
P O Mahuva (Kathiawar Dt, India)

Sidha-Kalpa Kavach (Regd.)
No 3 Rs 3, No 2 Rs 5 No. 1. Rs 7 Special Rs 10, Extra Special Rs. 17, for love marriage health wealth. Ask any six questions with M O. Re 1/4 and get correct answers by return post Life reading Rs 2 No V. P. P. Send M. O Free pamphlet. Prof. Dr. N H, Chhatbar
P O Mahuva (Kathiawar India)

The Canara Banking Corporation Ltd.

(Incorporated in British India with limited liability)

ESTED 1906.

OUR RATES OF INTEREST ON DEPOSITS

Current	1%	P. A.
Savings Bank ...	2½%	„
Short-term ..	1½%	„
Fixed for 3 months	2%	„
6 „	2¼%	„
9 „	2½%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted

ಉಡುಪಿ, ಗುರುವಾರ, ೫-೩-೧೯೪೨

ಈಗ
ವೇಕೋದಯವಾಯಿತೇ?

ಪೂರ್ವದಲ್ಲಿ ಸಂಭವಿಸಿರುವ ವಿದ್ಯಮಾನಗಳಿಂದುಂಟಾಗಿರುವ ಮಹತ್ತ್ವದೊಂದು ಪರಿಣಾಮವೆಂದರೆ, ಆಸ್ಟ್ರೇಲಿಯಾ, ಚೈನಾ ಮೊದಲಾದ ರಾಜ್ಯಗಳ ಕುರಿತು ಬ್ರಿಟಿಷರ ಮನೋವೃತ್ತಿಯಲ್ಲುಂಟಾಗಿರುವ ಹಠಾತ್ತಾದ ಮಾರ್ಪಾಟು. ಆ ಆಘಾತಗಳಿಂದ ಪಾಠಗಳನ್ನು ಕಲಿತುಕೊಂಡು, ಹಿಂದಿನ ತನ್ನ ತಪ್ಪನ್ನು ಮನಗಂಡು ಹೊಸ ಮನೋವೃತ್ತಿ ಮತ್ತು ಧೋರಣೆ ವಹಿಸುವುದರಲ್ಲಿ ಹೆಚ್ಚುಗಾರಿಕೆಯಿದೆ. ಬ್ರಿಟನು ಇಂದು ಪ್ರಭಾವಶಾಲಿ ಮಹಾಶಕ್ತಿಯಾಗಿ ಉಳಿಯಬೇಕಾದರೆ, ಇಂದಿನ ಮಾರ್ಪಟಿತ ಪರಿಸ್ಥಿತಿಗಳಿಗನುಸಾರವಾಗಿ ಹೊಸ ದೃಷ್ಟಿ ಮತ್ತು ಧೋರಣೆ ವಹಿಸಲು ಮುಂದಾಗಬೇಕು. ಹಿಂದಿನ ಬ್ರಿಟನಿಗೆ ಮುಂದಿನ ರಚನೆಯಲ್ಲಿ ಸ್ಥಾನವಿಲ್ಲ. 20ನೇ ಶತಮಾನದ ಲೋಕಕ್ಕೆ ಅವಶ್ಯವಾದುದನ್ನು ಒದಗಿಸಬೇಕದು. ಈ ಕಾಲದಲ್ಲಿ ಆತ್ಮಶೋಧನೆ ಮಾಡಿ, ದೂರದೃಷ್ಟಿಯ ಸುಧಾರಣೆಗಳನ್ನು ಕೈಕೊಳ್ಳಬೇಕು. ಮುಖ್ಯವಾಗಿ ಆಸ್ಟ್ರೇಲಿಯಾ, ಚೈನ ಮತ್ತು ಹಿಂದು ದೇಶಗಳ ಕುರಿತಾದ ಹಿಂದಿನ ಬ್ರಿಟನಿನ ಧೋರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು. ...ಂದಿಂದು ಅಳಿದು ಹೋಗಿದೆ. ಹೊಸ ಜಗತ್ತೊಂದು ಉದಯವಾಗಿದೆ. ಬ್ರಿಟನು ಇದನ್ನು ಮನಗಂಡು ಅವಶ್ಯಗುಣವಾಗಿ ನಡೆಯಲು ಹಿಂಜರಿಯಬಾರದು.

ಬ್ರಿಟನು ಹಳೆಯ ಸಂಪ್ರದಾಯ ಮತ್ತು ಸ್ವಾರ್ಥಗಳಿಗೆ ಕಟ್ಟುಬಿದ್ದು, ಸಾಕಷ್ಟು ದೂರದೃಷ್ಟಿ ಮತ್ತು ವಿವೇಕವಿಲ್ಲದೆ, ಹಿಂದೆ ಪೂರ್ವದಲ್ಲಿ ದೊಡ್ಡ ಅನಾಹುತಕ್ಕೆ ಈಡಾಗಿರುತ್ತದೆ. ಇಂದಿನ ಕಾಲಸ್ಥಿತಿಯನ್ನು ಮುಂದಾಗಿ ಕಂಡು ತನ್ನ ಧೋರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಸಂಪೂರ್ಣ ಮನಸ್ಸಿನಿಂದ ಮಾಡುತ್ತಿದ್ದರೆ, ಪೂರ್ವದ ಸುಂಟರಗಾಳಿಯನ್ನೆದುರಿಸಲು ಅದು ಮೊದಲೇ ಸಿದ್ಧವಾಗಿರುತ್ತಿತ್ತು. ಏಕಪಕ್ಷೀಯವಾದ ವಿಶಿಷ್ಟ ಹಕ್ಕು ಬಾಧ್ಯತೆ ಮತ್ತು ಭಿನ್ನ ಭೇದಗಳನ್ನು ಇನ್ನಾದರೂ ಬ್ರಿಟಿಷರು ತ್ಯಜಿಸಲು ಸಿದ್ಧರಾಗಬೇಕು. ಶಾಂತಸಾಗರದ ರಾಷ್ಟ್ರಗಳಿಂದ ಸಮಾನತೆಯ ಸಹಕಾರ ಪಡೆಯಲು ಮುಂದಾಗಬೇಕು. ಚೈನ ಮತ್ತು ಹಿಂದು ದೇಶಗಳೊಳಗೆ ಇಂದು ನಿಕಟ ಬಾಂಧವ್ಯವುಂಟಾಗಿದೆ. ಅವುಗಳೆರಡೂ ಜಪಾನನ್ನೆದುರಿಸುವ ದೃಢನಿರ್ಧಾರವುಳ್ಳವಾಗಿವೆ. ಬ್ರಿಟನಿನ ಉದ್ದೇಶವೂ ಇದೇ. ಹಿಂದೀ ಸ್ವಾತಂತ್ರ್ಯ ಪ್ರಶ್ನೆಯನ್ನು ಇತ್ಯರ್ಥಪಡಿಸುವ ಹಲವು ಸಂದರ್ಭಗಳನ್ನು ಹಿಂದೆ ಕಳಕೊಳ್ಳಲಾಗಿದೆ. ಅತ್ಲಾಂತಿಕ ಘೋಷಣೆಯ ಸಂದರ್ಭದಲ್ಲೂ ಅದರ ಇತ್ಯರ್ಥ ಮಾಡಲಾಗಲಿಲ್ಲ. ಹಿಂದು ದೇಶದ ಅಂತರಿಕ ತೊಡಕುಗಳ ನೆವನಮಾಡಿಕೊಂಡು ಬ್ರಿಟನು ಕಾರ್ಯವೇನಾದರೂ ಮಾಡುವುದನ್ನು ಇನ್ನೂ ಮುಂದ ಹಾಕಿದರೆ ಪರಿಣಾಮವು ನೆಟ್ಟಗಾಗಲಾರದು.

ಮೇಲಿನವೇನೂ ನಮ್ಮ ಮಾತುಗಳಲ್ಲ. ಬ್ರಿಟಿಷ್ ಜನಾಂಗದ ಮುಖಪತ್ರಿಕೆಯೆಂತಿರುವ ಲಂಡನ್ ಟೈಮ್ಸ್ ಇತ್ತಲಾಗಿನ ಅಗ್ರಲೇಖವೊಂದರಲ್ಲಿ ಕೊಟ್ಟ ಅಭಿಪ್ರಾಯ. ಇಷ್ಟೊಂದು ವಿಳಂಬವಾಗಿಯಾದರೂ ಟೈಮ್ಸ್ ಪತ್ರಿಕೆಯು ಕಣ್ಣು ತೆರೆದು ಮಹಾಘಾತುಗಳ ಕುರಿತಾದ ಬ್ರಿಟಿಷರ ಧೋರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು. ಅವರು ಹೊಸ ಮನೋವೃತ್ತಿ ಮತ್ತು ಧೋರಣೆಯುಳ್ಳವರಾಗಬೇಕು. ಅಂತಹ ಜನರೇ ರಾಜ್ಯಭಾರ ನಡಿಸಲು ನೇಮಿಸಲ್ಪಡಬೇಕೆಂದು ಪ್ರತಿಪಾದಿಸಿದುದು ಅಭಿನಂದನೀಯ. ಆಂಗ್ಲೇಯರು ಪೂರ್ವದಲ್ಲಿ ದೊರೆಗಳಾಗಿ ಮೆರೆಯುತ್ತಿದ್ದರು. ಹೋದಲ್ಲೆಲ್ಲಾ ವಿಶಿಷ್ಟ ಹಕ್ಕು ಬಾಧ್ಯತೆ ಮತ್ತು ಅನುಕೂಲತೆಗಳನ್ನು ತಮ್ಮ ಹಕ್ಕಿನಪಾಗಿ ಪಡಕೊಳ್ಳುತ್ತಿದ್ದರೂ ಆಸ್ಟ್ರೇಲಿಯಾದ ಇತರ ಜನಾಂಗಗಳೊಡನೆ ಸಮಾನತೆಯಿಂದ ಹೊಕ್ಕು ಬಳೆದು ಅವರೊಂದಿಗೆ ಆತ್ಮೀಯ ಸಂಬಂಧವನ್ನೆಂದೂ ಬೆಳೆಸುತ್ತಿದ್ದಿಲ್ಲ. ತಾವು ಏಸ್ಯಾಖಂಡದ ಜನಾಂಗಗಳನ್ನು ಯಾವಾಗಲೂ ಅಧೀನವಿಟ್ಟುಕೊಂಡು ಆಳುವ ಶ್ರೇಷ್ಠ ಜನಾಂಗವೆಂಬ ಅಹಂಭಾವವು ಆಂಗ್ಲೇಯರಷ್ಟು ಇತರ ಯಾವ ಬಿಳಿ ಜನಾಂಗದವರಲ್ಲೂ ಇದ್ದಿರಲಿಲ್ಲ. ತಾವು ದೇವಾಂಶಸಂಭೂತರೆಂಬಂತಹ ಹೆಮ್ಮೆಯಿಂದ ನಡೆಯುತ್ತಿದ್ದರು ಈ ವರೆಗವರು ಪೂರ್ವದಲ್ಲಿ. ಆದುದರಿಂದಲೇ ಅವರಾಳುತ್ತಿದ್ದ ರಾಷ್ಟ್ರಗಳಲ್ಲಿ ಜನಸಾಮಾನ್ಯರ ನಿಜವಾದ ಪ್ರೀತಿ ಮತ್ತು ಬೆಂಬಲವು ಅವರಿಗಿದ್ದಿಲ್ಲ. ತಮ್ಮ ಅಧಿಕಾರದ ಹಿಡಿತವನ್ನು ಸಡಿಲಿಸಿ, ಜನತೆಗೆ ರಾಜಕೀಯ ಮತ್ತು ಸಾಂಪತ್ತಿಕ ಸ್ವಾತಂತ್ರ್ಯವನ್ನೀಯುವುದಕ್ಕೆ ಅವರು ಸಿದ್ಧರಿರಲಿಲ್ಲ. ಅವರ ರೀತಿ-ನೀತಿ ಮತ್ತು ಆಳ್ವಿಕೆಯ ಕುರಿತು ಜನತೆಯಲ್ಲಿ ಅತೃಪ್ತಿಯು ನೆಲೆಗೊಂಡಿದ್ದರಿಂದಲೇ ಮಲಯ ಮೊದಲಾದ ದೇಶಗಳಲ್ಲಿ ಜಾಪಾನರೆದುರಾಗಿ ಸೈನಿಕ ಯುದ್ಧ ಮಾತ್ರವೇ ನಡೆಸಲ್ಪಟ್ಟುದಲ್ಲದೆ ಜನತಾ ಹೋರಾಟ ನಡೆಯಲಿಲ್ಲ.

ಮಲಯದ ತೀವ್ರ ಅಪಜಯ, ಫಿಲಿಪ್ಪೈನ್ ಮತ್ತು ಡಚ್ ಈಸ್ಟ್ ಇಂಡೀಸ್‌ಗಳಲ್ಲಿನ ಪ್ರಬಲ ಹೋರಾಟಗಳು ಬ್ರಿಟಿಷರಲ್ಲಿ ವಿವೇಕೋದಯವನ್ನುಂಟುಮಾಡಿರುವಂತಿವೆ. ಟೈಮ್ಸ್ ಪತ್ರಿಕೆಯ ಅಗ್ರಲೇಖವೇ ಅದಕ್ಕೆ ಸಾಕ್ಷಿ. ಚಿಕ್ಕದಾದ ಫಿಲಿಪ್ಪೈನ್ ದ್ವೀಪವನ್ನು ಈ ವರೆಗೂ ಜಾಪಾನರಿಗೆ ಸಂಪೂರ್ಣವಾಗಿ ಗೆಲ್ಲಲು ಸಾಧ್ಯವಾಗಿರುವುದಿಲ್ಲ. ಅದೇಕೆ? ಫಿಲಿಪಿನೋ ಜನರು ಪ್ರಾಣದ ಹಂಗುದೊರೆದು ಕಾದಾಡುತ್ತಿದ್ದಾರೆ. ಅದವರ ಸ್ವಾತಂತ್ರ್ಯ ಯುದ್ಧವಾಗಿದೆ. ಸಂಬಳಕ್ಕಾಗಿ ಕಳುಹಿಸಲ್ಪಟ್ಟಲ್ಲಿಗೆ ಹೋಗಿ ಯಂತ್ರವಂತೆ ಹೋರಾಡುವ ಕೇವಲ ಸೈನಿಕರಲ್ಲ ಅಲ್ಲಿ ಯುದ್ಧ ನಡಿಸುತ್ತಿರುವುದು. ತಮ್ಮ ಮನೆಮಾರು, ಹೊಲಗದ್ದೆಗಳಿಗಾಗಿ, ರಾಜಕೀಯ ಮತ್ತು ಸ್ವಾತಂತ್ರ್ಯಕ್ಕಾಗಿ ಫಿಲಿಪಿನೋ ಜನತೆಯೇ ಜಾಪಾನರನ್ನು ಹೆಜ್ಜೆ ಹೆಜ್ಜೆಗೂ ತಡೆಗಟ್ಟಿ ಪ್ರತಿಭಟಿಸುತ್ತಿರುವುದು. ಡಚ್ ಈಸ್ಟ್ ಇಂಡೀಸಿನ ಪರಿಸ್ಥಿತಿಯು ಇನ್ನೊಂದು ರೀತಿಯದು. ಡಚ್ಚರಲ್ಲಿ ದೇಶೀಯರೊಂದಿಗೆ ಆತ್ಮೀಯ ಸಂಬಂಧ ಬೆಳೆಸಿ, ಪರಕೀಯರೆಂಬ ಭಾವನೆಯನ್ನೇ ಬಿಟ್ಟು ಜೀವಿಸಿಕೊಂಡು ಬಂದಿರುವರು. ಎಲ್ಲರೂ ದೇಶೀಯ ಭಾಷೆ ಕಲಿತು, ದೇಶೀಯ ಸ್ತ್ರೀಯರನ್ನು ಮದುವೆಮಾಡಿಕೊಂಡು ದೇಶೀಯರಂತೆಯೇ ಮನೆಮಾರುಗಳನ್ನು ಮಾಡಿಕೊಂಡಿರುವರು. ಅಲ್ಲಿಯೇ ಹುಟ್ಟಿ ಸಾಯುವ ಜನರಾಗಿ ಬದುಕುಮಾಡಿ ಜೀವಿಸಿರುವರು. ಆದುದರಿಂದಲೇ ಹೆಚ್ಚಿನ ಯುದ್ಧಾನುಕೂಲತೆಯೇನೂ ಇಲ್ಲದ ಚಿಕ್ಕದೊಂದು ವಸಾಹತಾದ ಡಚ್ ಈಸ್ಟ್ ಇಂಡೀಸಿಂದು ಜಾಪಾನರನ್ನೆದುರಿಸಿ ಪ್ರಬಲವಾಗಿ ಹೋರಾಟ ನಡಿಸುತ್ತಿದೆ. ಆದರೆ ಲೋಕದಲ್ಲೇ ಅತಿ ಪ್ರಬಲ ರಾಷ್ಟ್ರವಾಗಿದ್ದು, ಹೆಚ್ಚಿನ ಯುದ್ಧಾನುಕೂಲತೆ ಇದ್ದ ಬ್ರಿಟನು, ಕ್ಷಣಮಾತ್ರದಲ್ಲೆಂಬಂತೆ ಜಾಪಾನಿನಿಂದ ದೊಡ್ಡ ಅಪಜಯಗಳನ್ನು ಪಡೆದಿದೆ. ಇಂದೀಗ ಬರ್ಮದಲ್ಲಿ ಉತ್ಕಟ ಪರಿಸ್ಥಿತಿಯುಂಟಾಗಿದೆ. ಬರ್ಮದ ಯುದ್ಧದಲ್ಲಿ ಅಲ್ಲಿಯ ಜನರು ನಿಜವಾದ ಉತ್ಸಾಹದಿಂದ ಕಾದಾಡುತ್ತಿರುವರೋ ಎಂಬುದು ಸಂದೇಹಕರವಾಗಿದೆ. ಯುದ್ಧದ ಅಪಾಯ ಸನ್ನಿಹಿತವಾಯಿತೆಂದೊಡನೆಯೇ, ಪಟ್ಟಣಗಳನ್ನು ಬಿಟ್ಟು ಹೋಗುವುದಕ್ಕೇನೇ ಜನರು ಪ್ರಥಮವಾಗಿ ಗಮನಕೊಡುವರಲ್ಲವೆ, ವೈರಿಯ ವಶವಾಗದಂತೆ ಅದನ್ನು ಯಾವ ರೀತಿಯಲ್ಲಿ ರಕ್ಷಿಸುವುದೆಂಬ ಗೊಡವೆಗೇನೇ ಯಾರೂ ಹೋಗುವದಿಲ್ಲ. ಅದನ್ನು ಕೇವಲ ಕೆಲವೇ ಮಂದಿ ಸೈನಿಕರಿಗೆ ಬಿಟ್ಟುಬಿಡಲಾಗುತ್ತದೆ. ರಷ್ಯಾದ ಜನರಂತಹ ಹುರುಪು, ಉತ್ಸಾಹ, ತ್ಯಾಗ ಮತ್ತು ಧೈರ್ಯ ಸ್ಥೈರ್ಯವು ಮಲಯದ ಜನತೆಯಲ್ಲಿ ತೋರಿಬರಲಿಲ್ಲ. ಬರ್ಮದಲ್ಲಿ ತೋರುವುದಿಲ್ಲ. ಹಿಂದುಸ್ಥಾನದಲ್ಲಿಯೂ ಹುಟ್ಟಿಬರುವಹಾಗಿಲ್ಲ. ಇದಕ್ಕೆ ಸರಕಾರದ ಮನೋವೃತ್ತಿ ಮತ್ತು ಧೋರಣೆಯೇ ಕಾರಣ. ಅದನ್ನದು, ಇಷ್ಟೊಂದು ವಿಳಂಬವಾಗಿಯಾದರೂ ಶೀಘ್ರವಾಗಿ ಬದಲಾಯಿಸದಿದ್ದಲ್ಲಿ ಅದು ಇನ್ನೂ ದೊಡ್ಡ ಅನಾಹುತಗಳಿಗೊಳಗಾಗಲು ಸಿದ್ಧವಾಗಬೇಕೆಂಬುದರಲ್ಲಿ ಸಂದೇಹವಿಲ್ಲ.

ಮೈಸೂರು ಪತ್ರ.

ಚುಂಡು ಸುದ್ದಿಗಳು. ಮೈ॥ ಕಾಂಗ್ರೆಸಿನ ಐದನೇ ಅಧಿವೇಶನ ಇದೇ ತಿಂಗಳ ತಾ 27ರಿಂದ ಚನ್ನಪಟ್ಣ ತಾಲೂಕ್ ಶೆಟ್ಟಿಹಾರನಹಳ್ಳಿಯಲ್ಲಿ ಜವಾಹರ್ ನಗರದಲ್ಲಿ ಜರಗಲಿದೆ. ಬೆಂಗಳೂರು ಮತ್ತು ರಂಡಿನಲ್ಲಿ ಪರೀಕ್ಷಾರ್ಥ ವಿಮಾನ ಧಾಳಿ ಮುಂಜಾಗ್ರತೆ ಕಾರ್ಯ ಕ್ರಮ ಯಶಸ್ವಿಯಾಗಿ ನಡೆಸಿದರು. ಹಾಸನ ಪ್ಲೀಡರು ಶ್ರೀ ವೈ. ಧರ್ಮಪ್ಪನವರ ಮೇಲೆ ತರಲಾಗಿದ್ದ ಲೀಗಲ್ ಪ್ರಾಕ್ಟೀಶನರ್ಸ್ ಶಾಸನದ ಮೊಕದ್ದಮೆಯಲ್ಲಿ ಹೈಕೋರ್ಟಿನಲ್ಲಿ ವಿಚಾರಣೆ ನಡೆದು ಶ್ರೀಯುತರು ಆರು ತಿಂಗಳ ಕಾಲ ವಕೀಲಿ ವೃತ್ತಿ ಮಾಡ ಕೂಡದೆಂದೂ, ಕೋರ್ಟು ಖರ್ಚು ರೂ 400 ಕೊಡಬೇಕೆಂದೂ ತೀರ್ಮಾನಿಸಿತ್ತರು. ಚಾಮರಾಜ ಪೇಟೆಯಿಂದ ಬೆಂಗಳೂರು ಪೌರಸಭೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರತಿನಿಧಿ ಶ್ರೀ ಯು. ರಾಮಾಚಾರ್‌ರವರಿಗೆ ಸೋಲಾಗಿ, ಸ್ವತಂತ್ರ ಉಮೇದುವಾರರಾದ ಶ್ರೀ ಸಿ. ಎನ್. ನರಸಿಂಗ ರಾಯರಿಗೆ ವಿಜಯ ವಾಯ್ತು. ಮೈಸೂರು ಸಂಸ್ಥಾನದಲ್ಲಿ ವೃತ್ತಪತ್ರಿಕೆಗಳ ಹತೋಟಿಯು ಇದೇ ಮಾಹೆ ತಾ 1ರಿಂದ ಜಾರಿಗೆ ಬಂದಿದೆ. ಯುದ್ಧ ಸಂಬಂಧ ಮೈಸೂರು-ಬೆಂಗಳೂರು ನಗರಗಳಲ್ಲ 50ಜನ ಹೆಚ್ಚಿಗೆ ಸಿವಿಲ್ ಪೋಲಿಸ್ ಕಾನ್‌ಸ್ಟೇಬಲ್ಸ್‌ಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದ ಆಜ್ಞೆ. ಬೆಂಗಳೂರು ಜಟ್ಟಿಗಳು ಲಾಯರುಗಳು ಬೊಂಬಾಯಿಯ ಕ್ರಿಕೆಟ್ ಸ್ಪರ್ಧೆಗೆ ಹೊರಟಿದ್ದ ಮೈಸೂರು ಕ್ರಿಕೆಟ್ ಆಟಗಾರರಿಗೆ ಮುಂಬೈಗೆ ಹೋಗುವ ಮುನ್ನ ಒಂದು ಸತ್ಕಾರ ಕೊಟ್ಟವಿತ್ತರು. ಸರಸ ತನ್ನ ಎಂಬ 18ವರ್ಷದಯುವತಿ ತಮ್ಮ ಮನೆಯಲ್ಲಿ ಒಲೆಯ ಮೇಲಿದ್ದ ಹಾಲಿನ ಪಾತ್ರೆಯನ್ನು ಕೆಳಗಿಳಿಸಲು ಹೋದಾಗ ಅಕಸ್ಮಾತ್ ಸೀರೆಗೆ ಬೆಂಕಿಬಿದ್ದು ಮೈ ಸುಟ್ಟು ಮೃತರಾದರು. ಮೈ॥ ಮಹಿಳಾ ಸಮ್ಮೇಳನದಾಶ್ರಯದಲ್ಲಿ ಮೈ॥ ಮಹಿಳಾ ಸಮಾಜದವರು ನಡೆಸುತ್ತಿರುವ ಚೊಗಾದಿ ಸ್ತ್ರೀ ನೆರ ಬಾಲಾ ದಿನಾಚರಣೆ ಮಿಸೆಸ್ ಗೋಪಾಲರಾಜ ಅರಸ್‌ರಧ್ಯಕ್ಷತೆಯಲ್ಲಿ ನಡೆಯಿತು.

ನೋಟೀಸು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯ ಪಡಿಸುವುದೇನೆಂದರೆ:

ಉಡುಪಿ ತಾಲ್ಲೂಕು ಕಾಪು (ಪಡು) ಪಂಚ್ಯಾತ್ ಬೋರ್ಡಿಗೆ ಒಪ್ಪಿದ ಹಪ್ತೆವಾರುವ ದಿನವಹಿ ಮಾರ್ಕೆಟುಗಳಲ್ಲಿ ತಾ. 1-4-1942ರಿಂದ ತಾ 31-3-43ರ ವರೆಗಿನ ಒಂದು ವರ್ಷದ ವರಿ ವಸೂಲು ಮಾಡುವ ಮತ್ತು ಮಾರ್ಕೆಟು ಸ್ಟಾಲ್ಸುಗಳನ್ನು ಸ್ದು ಪ್ರೋಕ್ತ ವರ್ಷದಲ್ಲಿ ವ್ಯಾಪಾರಾದಿಗಳಿಗೆ ಉಪಯೋಗಿಸುವ ಸ್ವತಂತ್ರವನ್ನು ಇದೇ ಬರುವ ತಾ. 20-3-1942ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಪಂಚ್ಯಾತ್ ಬೋರ್ಡು ಆಫೀಸಿನಲ್ಲಿ ಪ್ರೆಸಿಡೆಂಟರಿಂದವ ಅವರು ಅಧಿಕೃತರನ್ನಾಗಿ ಮಾಡುವವರಿಂದ ಬಹಿರಂಗವಾದ ಯೇಲಂ ಮೂಲಕ ಮಾರಾಟ ಮಾಡಲ್ಪಡುವುದು. ಸದ್ರಿ ಯೇಲಂ ಶರ್ತಗಳ ಕುರಿತು ಅನುಭವವನ್ನು ಪಂಚ್ಯಾತ್ ಬೋರ್ಡು ಆಫೀಸಿನಲ್ಲಿ ಓದಿ ತಿಳಕೊಳ್ಳಬಹುದು ಯೆಂಬ ಸಂಗ್ರಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾಪು ಮಂಜುನಾಥ ಶೆಟ್ಟಿ,
ಪ್ರೆಸಿಡೆಂಟ್.

ಪಂಚ್ಯಾತ್ ಬೋರ್ಡ್, ಕಾಪು ದ. ಕ.
ಪಂಚ್ಯಾತ್ ಬೋರ್ಡು ಆಫೀಸು, ಕಾಪು. 3-3-42

ವೇವೆಲರು ಪುನಹ ಹಿಂದುಸ್ಥಾನದ ಸೇನಾನಾಯಕರಾದರು.

ಜನರಲ್ ವೇವೆಲರು

ಪೂರ್ವದ ಮಿತ್ರರಾಷ್ಟ್ರಗಳ ಸೇನೆಗಳ ಮುಖ್ಯ ಸೇನಾನಾಯಕರಾಗಿ ನೇಮಿಸಲ್ಪಟ್ಟಿದ್ದರಷ್ಟೆ. ಈಗ ಪುನಹ ಹಿಂದುಸ್ಥಾನದ ಪ್ರಧಾನ ಸೇನಾನಾಯಕರಾಗಿ ನೇಮಿಸಲ್ಪಟ್ಟಿರುತ್ತಾರೆ. ವೇವೆಲರು, ಕೊನೆಯ ವರೆಗೂ ಸಿಂಗಪುರದಲ್ಲಿದ್ದು, ಅದು ಜಾಪಾನರಿಗೆ ಶರಣಾಗತವಾಗುವುದಕ್ಕಿಂತ ೪೮ ಘಂಟೆಗಳ ಮೊದಲು ಅದನ್ನು ಬಿಟ್ಟು ವಿಮಾನ ಮೂಲಕ ಬರುವಾಗ, ವೈರಿಯ ಗುಂಡೊಂದು ಅದರ ಎದೆ ಎಲುಬಿಗೆ ತಾಗಿ ಪೆಟ್ಟಾಗಿರುವುದೆಂದು ತಿಳಿದುಬರುತ್ತದೆ. ಅವರು ಫಿಲಿಪ್ಪಾಯಿನಿಗೆ ಹೋಗಿ ಜನರಲ್ ಮೆಕ್ ಆರ್ಥರೊಂದಿಗೆ ಕೂಡಿ ಹೋರಾಟ ನಡಿಸಲು ಸಿದ್ಧರಿದ್ದರಂತೆ. ಅಂತಹ ಅಪಾಯಕ್ಕೊಳಗಾಗುವುದು ಯುಕ್ತವಲ್ಲೆಂದು ಜನರಲ್ ಮೆಕ್ ಆರ್ಥರರೇ ಅದಕ್ಕೊಪ್ಪಲಿಲ್ಲೆಂದು ತಿಳಿದುಬರುತ್ತದೆ.

ಆಸ್ಟ್ರೇಲಿಯದ ಮೇಲೆ ಪುನಹ ವಿಮಾನ ಧಾಳಿ

ಆಸ್ಟ್ರೇಲಿಯದ ಪ್ರಾಮುಖ್ಯವಾದ ಡಾರ್ವಿನ್ ಬಂದರದ ಮೇಲೆ ಈ ಮೊದಲೊಮ್ಮೆ ಜಾಪಾನರು ಧಾಳಿ ನಡಿಸಿ ಹಾವಳಿಯಾಗಿರುವುದಷ್ಟೆ. ನಿನ್ನೆ ಪುನಃ 17 ಜಾಪಾನ ವಿಮಾನಗಳು ಪಶ್ಚಿಮ ಆಸ್ಟ್ರೇಲಿಯದ ಮೇಲೇರಿ ಹೋಗಿ ಎರಡು ವಿಮಾನ ನಿಲಯಗಳ ಮೇಲೆ ಧಾಳಿ ನಡಿಸಿ ಹಾವಳಿ ಮಾಡಿರುತ್ತವೆ. ಇನ್ನು ಮುಂದೆ ಬ್ರಿಟನು ಮತ್ತು ಯುನೈಟೆಡ್ ಸ್ಟೇಟ್ಸುಗಳು ಒಟ್ಟಾಗಿ ಜಾಪಾನನ್ನು ವಿರೋಧಿಸಬಹುದಾದ ಏಕಮಾತ್ರ ದೇಶವೆಂದರೆ ಆಸ್ಟ್ರೇಲಿಯ. ಆದುದರಿಂದಲೇ ಜಾಪಾನರ ದೃಷ್ಟಿಯು ಅದರ ಕಡೆಗೆ ಹರಿದಿದೆ. ಜಾಪಾನ ವಿಮಾನಗಳು ಕಳೆದ ಫೆಬ್ರುವರಿ ತಾ 21 ಮತ್ತು 26ರಲ್ಲು ಅಂಡಮಾನಿನ ಬ್ಲೆರ್ ಬಂದರದ ಮೇಲೆ ಧಾಳಿ ನಡಿಸಿರುತ್ತವೆ.

ಜಾವದಲ್ಲಿ ತೀವ್ರ ಹೋರಾಟ

ಜಾವದಲ್ಲಿ ತೀವ್ರ ಜಲ, ನೆಲ ಮತ್ತು ಆಕಾಶ ಯುದ್ಧವು ನಡೆಯುತ್ತಿರುವುದು. ಜಾಪಾನರು ಹೆಚ್ಚಿಗೆ ಸೇನೆಯನ್ನು ತಂದು ಭರದಿಂದ ಮುಂದೊತ್ತಿರುವರು. ಡಚ್ ಸೈನಿಕರು ಜಾಪಾನರ ಮೇಲೇರಿ ಹೋಗಿ ಹೋರಾಟ ನಡಿಸಹತ್ತಿರುವರು. ಇದೇ ತಾ 1ರಲ್ಲು ಮಿತ್ರರಾಷ್ಟ್ರಗಳ ವಿಮಾನಗಳು ವಿಮಾನ ಧಾಳಿ ನಡಿಸಿ ಸೈನಿಕರನ್ನು ಒಯ್ಯುವ 17 ಜಾಪಾನ ಹಡಗಗಳಿಗೆ ಮತ್ತು ಮಧ್ಯಪ್ರಮಾಣದ 10 ಹಡಗಗಳಿಗೆ ಜಖಮ್ ಆಗಿರುವುದೆಂದು ತಿಳಿದುಬರುತ್ತದೆ. ೩ ಸೈನ್ಯವಾಹಕ ಹಡಗಗಳು ಮುಳುಗಿಸಲ್ಪಟ್ಟಿವೆ. ಒಂದು ಯುದ್ಧ ಹಡಗವು ಸುಟ್ಟುಹೋಗಿರುತ್ತದೆ. ಡಚ್ಚರು ಪೆಟ್ರೋಲು ತಯಾರಿಸುವ ಯಂತ್ರ ಮೊದಲಾದವುಗಳನ್ನು ನಾಶಪಡಿಸುತ್ತಿರುತ್ತಾರೆ. ಇನ್ನು ಹೆಚ್ಚು ದಿನಗಳ ವರೆಗೆ ಜಾವದ ಡಚ್ ಮತ್ತು ಮಿತ್ರರಾಷ್ಟ್ರಗಳ ಸೈನಿಕರಿಗೆ ಜಾಪಾನರನ್ನೆದುರಿಸಲು ಸಾಧ್ಯವಾಗುವ ಸಂಭವ ತೋರುವುದಿಲ್ಲ. ಆದಷ್ಟು ಹೆಚ್ಚು ದಿನಗಳ ವರೆಗೆ ಅವರನ್ನು ತಡೆಗಟ್ಟುವುದೇ ಜಾವದ ಯುದ್ಧದ ಉದ್ದೇಶವಿರುವಂತಿದೆ.

ರಂಗೂನಿನ ಯುದ್ಧವು

ರಂಗೂನು ಪಟ್ಟಣವನ್ನು ವಶಪಡಿಸಿಕೊಂಡು ಚೈನದ ರಕ್ತನಾಡಿಯಂತಿರುವ ಬರ್ಮಾ ರಸ್ತೆಯನ್ನು ಕಡಿದು ಹಾಕಲು ಜಾಪಾನರು ಪ್ರಯತ್ನಿಸುತ್ತಿರುವರು. ಬರ್ಮದ ಶಾಂತವಾಯು ಭತ್ತದ ಗದ್ದೆಗಳೆಂದು ಅತ್ಯಂತ ತೀವ್ರ ಹೋರಾಟದ ಕ್ಷೇತ್ರವಾಗಿ ಪರಿಣಮಿಸಿರುತ್ತವೆ. ರಂಗೂನಿನಲ್ಲಿ ಸೈನ್ಯಾಡಳಿತವು ಸ್ಥಾಪಿಸಲ್ಪಟ್ಟಿದೆ. ಜನರೆಲ್ಲಾ ಸಹಸ್ರಗಟ್ಟಲೆಯಲ್ಲಿ ಪಟ್ಟಣ ಬಿಟ್ಟು ಹೋಗುತ್ತಿದ್ದಾರೆ. ಟ್ರೈನುಗಳಲ್ಲಿ ಜಾಗ ಸಿಗುವುದೇ ಕಷ್ಟವಾದುದರಿಂದ ನೂರಾರು ಮಂದಿ ಬರಿಗಾಲು ನಡೆದು ಹೋಗುತ್ತಿದ್ದಾರೆ.

ಪಶ್ಚಿಮ ಆಸ್ಟ್ರೇಲಿಯದ ಮೇಲೆ ಜಾಪಾನರ ವಿಮಾನಧಾಳಿ.

ಜಾವದಲ್ಲಿ ಜಾಪಾನರು ಮುಂದುವರಿಯುತ್ತಿರುವರು.

ವ್ಲಾಡಿವೊಸ್ಟಕಿನ ಮೇಲೆ ಜಪಾನರು ಧಾಳಿ ನಡಿಸಬಹುದು

ವಸಂತ ಋತುವು ಒಂದಾಗ ಜಾಪಾನರು ರಷ್ಯದ ಪೂರ್ವದ ಸುಭದ್ರ ಕೋಟೆಯಾಗಿರುವ ವ್ಲಾಡಿವೊಸ್ಟಕಿನ ಮೇಲೆ ಧಾಳಿ ನಡಿಸಬಹುದೆಂಬ ಅಭಿಪ್ರಾಯವು ಅಮೇರಿಕದಲ್ಲಿ ಉಂಟಾಗಿರುತ್ತದೆ. ಸಖಲಿನ್ ಎಂಬ ಎಸ್ಸ ಕ್ಷೇತ್ರದ ದಕ್ಷಿಣ ಭಾಗವು ಜಾಪಾನರ ವಶವಿದೆ. ಅದರ ಉತ್ತರ ಭಾಗವು ಸೋವಿಯೆಟ್ ರಷ್ಯದ ಅಧೀನವಿದೆ. ಜಾಪಾನು ಉತ್ತರ ಸಖಲಿನಿನ ಮೇಲೇರಿ ಹೋಗಿ ವ್ಲಾಡಿವೊಸ್ಟಕ್ ಮತ್ತು ಸೈಬೀರಿಯದ ಕರಾವಳಿಯ ಮೇಲೆ ಧಾಳಿ ನಡಿಸಬಹುದೆಂದು ನಂಬಲಾಗಿದೆ. ಜಾಪಾನಿನ ಪಟ್ಟಣ ಮತ್ತು ನೌಕಾ ನಿಲಯಗಳ ಮೇಲೆ ವಿಮಾನ ಧಾಳಿ ನಡಿಸಲು ಸಾಧ್ಯವಿರುವ ಏಕಮಾತ್ರ ಪ್ರಾಮುಖ್ಯ ನೆಲೆಯೆಂದರೆ ವ್ಲಾಡಿವೊಸ್ಟಕು. ಅದು ಜಾಪಾನಿನೆಡೆಯ ಮೇಲಿಣ ಸಿಸ್ಟೋಲಿನಂತಿದೆ. ಅಲ್ಲಿ ರಸ್ಯಾನರು ರಾತ್ರಿ ಹಗಲು ಒಹಳ ಎಚ್ಚರದಿಂದ ಕಾಯುತ್ತಿದ್ದಾರೆ. ಆದುದರಿಂದ ಜಾಪಾನರಿಗೆ ಆಕಸ್ಮಿಕ ಧಾಳಿ ನಡಿಸಲೇನೂ ಸಾಧ್ಯವಿಲ್ಲ.

ಅತ್ಲಾಂತಿಕ ಸಾಗರದಲ್ಲಿ ಸಬ್‌ಮೆರೀನ್ ಯುದ್ಧ.

ಮಧ್ಯ ಅತ್ಲಾಂತಿಕ ಸಾಗರದಲ್ಲಿ 5 ಜರ್ಮನ್ ಯು. ಬೋಟುಗಳು, ಇಂಗ್ಲೆಂಡಿಗೆ ಸಾಮಾನು ತರುವ ಹಡಗಗಳನ್ನು ಮುಳುಗಿಸಲು ೩ ದಿನ ಎಡೆಬಿಡದೆ ಪ್ರಯತ್ನ ಮಾಡಿ 6ರಿಂದ 9 ವರೆಗಣ ಹಡಗಗಳು ಮುಳುಗಿಸಲ್ಪಟ್ಟಿರುವವೆಂದು ತಿಳಿದು ಬರುತ್ತದೆ.

ಫ್ರೆಂಚ್ ಕರಾವಳಿಯ ಮೇಲೆ ಬ್ರಿಟಿಷರ ಧಾಳಿ.

ಕಳೆದ ಶನಿವಾರ ಬ್ರಿಟಿಷ್ ವಿಮಾನಗಳು ಫ್ರೆಂಚ್ ಕರಾವಳಿಯ ಮೇಲೇರಿ ಹೋಗಿ, ಪೆರಚೂಟಿನ ಮೂಲಕ ಕೆಲವು ಮಂದಿ ಸೈನಿಕರನ್ನು ಕೆಳಗಿಳಿಸಿ, ಬ್ರೂನೆವಲ್ ಎಂಬಲ್ಲಿ ಜರ್ಮನರು ಸ್ಥಾಪಿಸಿದ್ದ ರೇಡಿಯೋ ಸ್ಟೇಶನನ್ನು ನಾಶಮಾಡಿರುವರು. ಈ ಸೈನಿಕರು ರೇಡಿಯೋ ಸ್ಟೇಶನನ್ನು ಕಾಯುತ್ತಿದ್ದ ಜರ್ಮನರನ್ನು ಕೊಂದು ಅದನ್ನು ನಾಶಮಾಡಿ ಕೂಡಲೆ ಸಮುದ್ರ ಕರಾವಳಿಯ ಕಡೆಗೆ ಧಾವಿಸಿದರು. ಅಲ್ಲಿ ತಮ್ಮನ್ನು ತಡೆದ ಜರ್ಮನರನ್ನು ಕೊಂದು ಶೀಘ್ರವಾಗಿ ತಮಗಾಗಿ ಕಾದಿದ್ದ ಬೋಟುಗಳಲ್ಲಿ ಸುರಕ್ಷಿತವಾಗಿ ಇಂಗ್ಲೆಂಡಿಗೆ ತೆರಳಿದರು. ಬ್ರಿಟಿಷ್ ಸೈನಿಕರ ಈ ಸಾಹಸವು ಜರ್ಮನರನ್ನು ಸಂಪೂರ್ಣವಾಗಿ ಆಶ್ಚರ್ಯಗೊಳಿಸಿರುವುದು. ಬ್ರಿಟಿಷ್ ಜನತೆಯು ಆದರಿಂದ ಉತ್ತೇಜಿತರಾಗಿರುವರು. ಅಂತಹ ಸಾಹಸವನ್ನು ಬ್ರಿಟಿಷ್ ಸೈನಿಕರು ಹೆಚ್ಚಿಚ್ಚಾಗಿ ಮಾಡಿ, ಹಿಟ್ಲರರು ಫ್ರಾನ್ಸ್ ಮೊದಲಾದ ದೇಶಗಳಲ್ಲಿರುವ ಸೇನೆಯನ್ನು ಪೂರ್ವ ರಣರಂಗಕ್ಕೊಯ್ಯದಂತೆ ಮಾಡಬೇಕೆಂದು ಸೂಚಿಸಲಾಗಿದೆ.

ಫಿಲಿಪ್ಪಾಯಿನ ಯುದ್ಧ

ಫಿಲಿಪ್ಪಾಯಿನಿನಲ್ಲೀಗ ಹೆಚ್ಚಿನ ಹೋರಾಟ ವೇನೂ ನಡೆಯುವುದಿಲ್ಲ. ಉತ್ತರ ಲುಜಾನಿನಲ್ಲಿ ಜಾಪಾನರು ಹಿಂದಕ್ಕಟ್ಟಲ್ಪಟ್ಟಿರುತ್ತಾರೆ. ಜನರಲ್ ಮೆಕ್ ಆರ್ಥರರ ಸೇನೆಯು ಜಾಪಾನರ ಮೇಲೆ ಬಿದ್ದು ಇತ್ತಲಾಗಿ ಗೆದ್ದ ಸ್ಥಳಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡಿರುವುದು. ಫಿಲಿಪ್ಪಾಯಿನಿನ ಪ್ರೆಸಿಡೆಂಟರಾದ ಕ್ವೆಝೂನರು, ಫಿಲಿಪೀನರ ಧೈರ್ಯದ ಕುರಿತು ಮೆಚ್ಚಿಗೆ ಸೂಚಿಸಿ, ವಿಜಯ ಸಾಧನೆಯ ವರೆಗೆ ಕಾದಾಡುವ ಸಂದೇಶವಿತ್ತಿರುವರು.

ಜಿನ್ನರಿಗೆ ಸಾವರ್ಕರರ ಆಹ್ವಾನ

ಜಿನ್ನರ ಪಾಕಿಸ್ಥಾನವು ಬರಿಯ ಕಲ್ಪನೆ ಮತ್ತು ಮನೋಭ್ರಾಂತಿಯಾಗಿರುವುದು. ಹಿಂದುಗಳು ಮುಸಲ್ಮಾನರ ಕೇಳಿಕೆಗೊಪ್ಪದಿದ್ದಲ್ಲಿ ಮುಸಲ್ಮಾನರು ಆಘೋರವಾದ ಒಂದಾಯುಧವನ್ನು ಬೆಳೆಸುವರೆಂಬ ಜಿನ್ನರ ಯುದ್ಧಾಹ್ವಾನವನ್ನು ಈಗಲೇ ಸ್ವೀಕರಿಸಲು ಹಿಂದುಗಳು ಸಿದ್ಧರಿದ್ದಾರೆ. ಅದಕ್ಕಿಂತಲೂ ದೊಡ್ಡ ಬೆದರಿಕೆಗಳನ್ನು ಹಿಂದುಗಳು ಹಿಂದೆ ಎದುರಿಸಿರುವರು. ಜಿನ್ನರು ತನ್ನ ಬೆದರಿಕೆಯ ಶಸ್ತ್ರವನ್ನು ಬತ್ತಳಿಕೆಯಲ್ಲೇ ಇಟ್ಟಿರುವುದೇಕೆ? ಅದನ್ನು ಈಗಲೇ ಹೊರಗೆ ತಂದು ಪ್ರಯೋಗಮಾಡಬಾರದೇಕೆ? ಹಿಂದುಗಳು ಮುಸಲ್ಮಾನರಿಗಿಂತ ೩ ಪಾಲು ಹೆಚ್ಚು ಮಂದಿ ಇದ್ದಾರೆ. ಮುಸಲ್ಮಾನರ ಶಸ್ತ್ರವೇ ಅವರಿಗೂ ಇದೆ. ಜಿನ್ನರ ಬರಿ ಬೆದರಿಕೆಗೆ ಯಾರೂ ಸೊಪ್ಪು ಹಾಕುವ ಹಾಗಿಲ್ಲೆಂದು ಹಿಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಸಾವರ್ಕರರು ಲಕ್ನೋದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿರುವರು.

ಹಿಂದೀ ಸಾಗರದ ಪ್ರಾಮುಖ್ಯತೆ

ಇಂದೀಗ ಹಿಂದೀ ಸಾಗರವು ಯುದ್ಧದ ಪ್ರಾಮುಖ್ಯವಾದೊಂದು ಕೇಂದ್ರವಾಗಿ ಪರಿಣಮಿಸುತ್ತದೆ. ದಕ್ಷಿಣ ಆಫ್ರಿಕ, ಬ್ರಿಟಿಷ್ ಪೂರ್ವ ಆಫ್ರಿಕ, ಮಧ್ಯಪೂರ್ವದಲ್ಲಿಯೂ, ರಶ್ಯ, ಹಿಂದುದೇಶ, ಬರ್ಮ, ಚೈನ ಮತ್ತು ಆಸ್ಟ್ರೇಲಿಯ ಸೇನೆಗೂ ಯುದ್ಧ ಸಾಮಾಗ್ರಿ ಮತ್ತು ಇತರ ಸಹಾಯಗಳೆಲ್ಲ ಹಿಂದೀ ಸಾಗರದ ಮೂಲಕವೇ ಹೋಗಬೇಕಾಗಿದೆ. ಆದುದರಿಂದಲೇ ಜಾಪಾನರೂ ಜರ್ಮನರೂ ಪರ್ಶಿಯಾ ಕೊಲ್ಲಿ ಮತ್ತು ಕೆಂಪು ಸಮುದ್ರದಲ್ಲಿ ಒಟ್ಟು ಸೇರದಂತೆ ನೋಡುವುದು ಅತ್ಯಗತ್ಯವಾಗಿರುತ್ತದೆ.

Navayuga Enterprise Limited.

NOTICE.

Notice is hereby given that the second Ordinary Annual Meeting of the shareholders of the Company will be held at the Registered Office of the Company on Saturday the 21st March 1942 at 5 P. M.

AGENDA

1. To receive and adopt the Balance sheet for the period ending 31st December, 1941 with the Auditor's Report the profit and Loss Account and Directors Annual Report
2. Fixing the rate of Dividend to be paid to the Shareholders
3. To elect new Director in the place of Sri Balkattabeedu Krishnaya Hegde, who retires under Article 71 and is eligible for re election.
4. To approve the audit fee paid for the year 1941.
5. To appoint an Auditor for the current year 1942 and to fix his remuneration.

(Last year' Auditor Sri P. M. Hegde is eligible for re election and is willing to accept the office)

It is requested that you will be good enough to attend the meeting in person If it should be inconvenient for you to attend the meeting, you may appoint a shareholder of this Company as your proxy. The proxy paper should be stamped with two one anna stamps and bear your signature across the same and should reach this office by 2 P. M on the 18th day of March 1942 at the latest

The register of members & share transfer books of the Company will remain closed from the 5th March 1942 to 30th March 1942 (both days inclusive)

(By order of the Board)

Office of the Company, KOLADAPET, UDIPI Date 24—2—1942.

K. Hom ayya Shetty
Managing Director

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ಕೊ-ಆಪರೇಟಿವ್ ಟೌನ್ ಬೇಂಕು— ಇದರ ರಜತ ಮಹೋತ್ಸವವು ಕಳೆದ ತಾ. 22ರಲ್ಲಿ ರಾ. ಬ. ಯಂ. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕಿನ ಉಪಾಧ್ಯಕ್ಷರಾದ ಡಾ॥ ಯು. ಆರ್. ಪೈಯವರು ಸ್ವಾಗತ ಭಾಷಣ ಮಾಡಿದರು. ಶ್ರೀ॥ ಕೆ. ವಿ. ಪೈಗಳು ಬೇಂಕಿನ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸಿದರು. ಬೇಂಕಿನ ಶ್ರೇಯಸ್ಸನ್ನು ಬಯಸಿ ಶ್ರೀಗಳಾದ ಕೆ. ಅಚ್ಯುತನ್ ನಾಯರ್, ಎಸ್. ನಾರಾಯಣಪ್ಪಯ್ಯ ಮತ್ತು ಎನ್. ಯಂ. ಪಿ. ಕಾಮತ್ ಇವರುಗಳು ಭಾಷಣ ಮಾಡಿದರು. ಅಂದೇ ಬೆಳಿಗ್ಗೆ ಶ್ರೀ॥ ಯು. ಶ್ರೀನಿವಾಸರಾಯರ ಭಾವಚಿತ್ರದ ಅನಾವರಣೋತ್ಸವವು ಶ್ರೀ॥ ಯಂ. ಗಿರಿಯಪ್ಪನವರಿಂದ ನೆರವೇರಿಸಲ್ಪಟ್ಟಿತು.

ಬೀಡಿ ಕೈಗಾರಿಕೆಯಲ್ಲಿ ತರಬೇತಿ— ಸ್ಥಳೀಯ ಹರಿಜನ ಲೇಬರ್ ಲೀಗಿನವರು ಹರಿಜನ ತರುಣರು ಕೆಲವರಿಗೆ ಬೀಡಿ ಕೈಗಾರಿಕೆಯನ್ನು ಕಲಿಸುವ ಏರ್ಪಾಡು ಮಾಡುವುದರಲ್ಲಿದ್ದಾರೆ. ಇದಕ್ಕಾಗಿ ಮಹಾಜನರ ಸಹಾಯವನ್ನೂ ಬೀಡಿ ಕಾರ್ಖಾನೆಗಳ ಮಾಲಕರ ಸಹಕಾರವನ್ನೂ ಕೋರುತ್ತಾರೆ.

ಯುದ್ಧನಿಧಿಗೆ ಆಟಪ್ರದರ್ಶನ— ಮದ್ರಾಸು ಗವರ್ನರರ ಯುದ್ಧನಿಧಿಗೆ ಹಣ ಸಂಗ್ರಹಿಸಲು ಕಟೀಲು ಮತ್ತು ಕದ್ರಿ ಮೇಳಗಳ ಜೋಡಾಟಗಳು ನಿನ್ನೆ ಮತ್ತು ಮೊನ್ನೆ ಮೈದಾನದಲ್ಲಿ ಜರಗಿಸಲ್ಪಟ್ಟವು.

ವಿದ್ಯಾರ್ಥಿಗಳ ಸಭೆ— ಸ್ಥಳೀಯ ವಿದ್ಯಾರ್ಥಿಗಳ ಕನ್ವೆನ್‌ಶನ್ ತಾ. 1ರಲ್ಲಿ ಮಿಶನ್ ಹೈಸ್ಕೂಲಿನಲ್ಲಿ ನಡೆಯುವಾಗ ಸಭಿಕರಲ್ಲಿ ಇಕ್ಕಂಡಗಳಾಗಿ ಸಭಾಕಾರ್ಯವು ನಡೆಯಲಿಲ್ಲ. ಎರಡು ತಂಡಗಳವರೂ ಬೇರೆಡೆಗಳಲ್ಲಿ ಬೇರೆ ಬೇರೆ ಸಭೆಗಳನ್ನು ಜರಗಿಸಿ ರಿಸೊಲ್ಯೂಶನ್‌ಗಳನ್ನು ಮಾಡಿದರು.

ಮುದ್ದಣ ವಾಚನಾಲಯ— ಮಿತ್ರಮಂಡಲಿಯ ಆಶ್ರಯದಲ್ಲಿ ಮುದ್ದಣ ವಾಚನಾಲಯವೆಂಬ ಪುಸ್ತಕ ಭಂಡಾರವು ಶ್ರೀ॥ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ॥ ಎಚ್. ಭೀಮರಾಯರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಶ್ರೀ॥ ಭೀಮರಾಯರು ತಮ್ಮ ಭಾಷಣದಲ್ಲಿ ಮುದ್ದಣ ಕವಿಯ ಹೆಸರನ್ನು ಚಿರಸ್ಥಾಯಿಗೊಳಿಸಲು ಮಿತ್ರಮಂಡಲಿಯವರು ಕೈಕೊಂಡ ಕಾರ್ಯವನ್ನು ಹೊಗಳಿದರು. ಈ ಸಂದರ್ಭದಲ್ಲಿ ಶ್ರೀಗಳಾದ ಜಿ. ವಾಮನ ಭಟ್ಟ, ಎಸ್. ಮುಕುಂದ ರಾವ್ ಇವರುಗಳ ಭಾಷಣಗಳೂ ಇದ್ದುವು.

ಹಳೆ ವಿದ್ಯಾರ್ಥಿಗಳ ಮತ್ತು ರಕ್ಷಕರ ಸಭೆಗಳ ಸ್ಥಾಪನೆ— ನಿನ್ನೆ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಶ್ರೀ॥ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕದ್ರಿ ಬಿ. ಜಿ. ಶಾಲೆಯ ಹಳೆ ವಿದ್ಯಾರ್ಥಿಗಳ ಮತ್ತು ಮಕ್ಕಳ ರಕ್ಷಕರ ಸಂಘಗಳ ಸ್ಥಾಪನೆಯ ಬಗ್ಗೆ ಒಂದು ಸಭೆ ಜರಗಿತು. ಅಧ್ಯಕ್ಷರೂ, ವಿದ್ವಾನ್ ಯಂ. ಆರ್. ಶಾಸ್ತ್ರಿಗಳೂ, ಶ್ರೀ॥ ಎ. ಗೋಪಾಲ ನಾಯಕರೂ, ಇಂತಹ ಸಂಘಗಳ ಉಪಯುಕ್ತತೆ ಹಾಗೂ ಆವಶ್ಯಕತೆಗಳನ್ನು ವಿವರಿಸಿದ ಮೇಲೆ ಎರಡು ಸಂಘಗಳೂ ಸ್ಥಾಪಿಸಲ್ಪಟ್ಟವು. ಸಭೆಗೆ ಬಂದವರಿಗೆಲ್ಲಾ ಶಾಲಾಧಿಕಾರಿಗಳು ಪಾನೀಯಗಳನ್ನಿತ್ತು ಸತ್ಕರಿಸಿದರು.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜನಿವ ಟ್ರೇಡಿಂಗ್ ಕಂಪೆನಿ

250. ಚೈನಾಬಜಾರ್ ರೋಡ್, ಮದರಾಸ್.

ಉಡುಪಿ.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನವರಿಗೆ ಅಪ್ಪೀಲು ಜಯ— ಶ್ರೀ॥ ಎ. ಎನ್. ಮಲ್ಲಾಪುರ ಎಂಬವರು ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇವರ ಮೇಲೆ ಪುಟ್ಟೂರು ಸಬ್ ಜಡ್ಜ ಕೋರ್ಟಿನಲ್ಲಿ ನಡೆಸಿದ L. C. ನಂಬ್ರ 257/1939ನೇ ವ್ಯಾಜ್ಯದ ತೀರ್ಪಿನ ಮೇಲೆ ಸಿಂಡಿಕೇಟಿನವರು, ಮಾಡಿದ ಅಪ್ಪೀಲಿನಲ್ಲಿ ಸಿಂಡಿಕೇಟಿನವರಿಗೆ ಪೂರ್ಣ ಜಯವಾಗಿದೆಯಂತಲೂ, ಮೂಲ ಕೋರ್ಟಿನ ತೀರ್ಪು ಸಂಪೂರ್ಣ ರದ್ದುಮಾಡಿ ಎರಡೂ ಕೋರ್ಟಿನಲ್ಲಿ ಈ ಸಂಬಂಧವಾಗಿ ನಡೆದ ವ್ಯವಹರಣೆಗಳ ಕೋರ್ಟು ಖರ್ಚುಕೂಡ ಬೇಂಕಿನವರಿಗೆ ಕೊಡುವಂತೆ ಧಾರವಾಡ 1ನೇ ಕ್ಲಾಸ್ ಸಬ್ ಜಡ್ಜ ಕೋರ್ಟಿನಲ್ಲಿ ತಾ. 25-2-1942 ರಲ್ಲಿ ತೀರ್ಮಾನವಾಗಿದೆಯೆಂದೂ ಖಾತ್ರಿಯಾಗಿ ತಿಳಿದು ಬರುತ್ತದೆ.

ಸತ್ಕಾರ ಕೂಟ— ಯುದ್ಧ ಪರಿಸ್ಥಿತಿ ನಿಮಿತ್ತ ಕಲ್ಕತ್ತೆಯಿಂದಾಗಮಿಸಿರುವ ಕನ್ನಡ ಬರೆಹಗಾತಿ ಶ್ರೀಮತಿ ವಸಂತಿ ಬಾಯಿ ಪಡುಕೋಣೆಯವರನ್ನು ಸನ್ಮಾನಿಸಲು ಕಿರಿಯರ ಪ್ರಪಂಚದ ಆಶ್ರಯದಲ್ಲಿ ಸತ್ಕಾರ ಕೂಟವೊಂದು ತಾ. 27-2-42ರಲ್ಲಿ ನವಯುಗ ಪ್ರೆಸ್ಸಿನ ಮಹಾಡಿಯಲ್ಲಿ ಜರಗಿತು. ಉಡುಪಿಯ ಬರೆಹಗಾತಿಯರೂ ಬರೆಹಗಾರರೂ ಆಗಮಿಸಿದ್ದರು. ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಅಧ್ಯಕ್ಷತೆ ವಹಿಸಿದ ಮೇಲೆ ಶ್ರೀ ಕೆ. ಹೊನ್ನಯ್ಯ ಸೆಟ್ಟರು ಶ್ರೀಮತಿಯವರ ಪರಿಚಯವನ್ನು ಸಭೆಗೂ ಸಭಿಕ ಲೇಖಕ ಲೇಖಕಿಯರ ಪರಿಚಯವನ್ನು ಶ್ರೀಮತಿಯವರಿಗೂ ಮಾಡಿಕೊಟ್ಟರು. ಶ್ರೀಮತಿ ವಸಂತೀಬಾಯಿಯವರು ಎರಡು ಮಾತುಗಳನ್ನಾಡಿದ ಮೇಲೆ ಶ್ರೀಗಳಾದ ಕೆ. ಹೈದರ್, ಕೆ. ಕೆ. ಸೆಟ್ಟಿ, ಇವರು ಅತಿಥಿ ಬರೆಹಗಾರ್ತಿಯನ್ನು ಶ್ಲಾಘಿಸಿ, ಸದ್ಯದ ಕನ್ನಡ ವಾಙ್ಮಯ, ಅದು ಅಭಿವೃದ್ಧಿ ಹೊಂದುವಂತೆ ಆಧುನಿಕ ಸಾಹಿತಿಗಳು ವಹಿಸಬೇಕಾದ ಧೋರಣೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಕ್ಷಿಣ ಕನ್ನಡದ ಸಾಹಿತಿಗಳಲ್ಲಿರುವ ಸಹಕಾರ ಸೌಹಾರ್ದದ ಅಭಾವ, ಸ್ವಾಭಿಮಾನವಿಲ್ಲದ ಪರಾವಲಂಬನ ಬುದ್ಧಿಯನ್ನು ಟೀಕಿಸಿ ಸ್ಥಳೀಯ ಬರೆಹಗಾರರಿಗೆ ಸನ್ಮಾನ, ಸಹಕಾರ, ಪ್ರೋತ್ಸಾಹವೀಯುವ ಅವಶ್ಯಕತೆಯನ್ನು ಮನಗಾಣಿಸಿದರು. ಶ್ರೀ. ಕೆ. ಹೊನ್ನಯ್ಯ ಸೆಟ್ಟರು ಧನ್ಯವಾದಗಳನ್ನೀಯುತ್ತಾ ಕಿರಿಯರ ಪ್ರಪಂಚದ ಈ ವರೆಗಿನ ಕಾರ್ಯಕಲಾಪ ಮತ್ತು ಮುಂದಿನ ಗೊತ್ತುಗುರಿಗಳನ್ನು ವರ್ಣಿಸಿದರು. ಸಭಿಕರಿಗೆಲ್ಲಾ ಉಪಹಾರವಿತ್ತು.

ಧಾರಣೆ— ತಾ. 28-2-42ರಲ್ಲಿ ಸೇರಿದ ತಾಲೂಕು ಧಾರಣೆ ನಿರ್ಣಯ ಸಮಿತಿಯವರು, ಮಸ್ತ ಅಕ್ಕಿ ಮುಡಿಗೆ 6-4-0, ಸೇರಿಗೆ 0-2-5, ಬೆಳ್ತಿಗೆ ಮುಡಿಗೆ 6-0-0, ಸೇರಿಗೆ 0-2-4, ಬೆಲ್ಲ ಮಣ (28 ತೊಲೆ) 1-12-0, ಸೇರಿಗೆ 0-0-8, ಉಪ್ಪು ಸೇರಿಗೆ 0-1-0, ಬಿಳಿ ಚಿಮಿಣಿಎಣ್ಣೆ ಟಿನ್ನಿಗೆ 4-7-0, ಬಾಟ್ಲಿಗೆ 0-2-10, ಕೆಂಪು ಚಿಮಿಣಿಎಣ್ಣೆ 3-12-9, ಬಾಟ್ಲಿಗೆ 0-2-6, ಧಾರಣೆ ನಿರ್ಣಯಿಸಿದ್ದಾರೆ.

ಬಹುಮಾನ

ಮದ್ರಾಸಿನ ಸ್ಕೂಲ್ ಬುಕ್ ಅಂಡ್ ಲಿಟರೇಚರ್ ಸೊಸೈಟಿಯವರ ವಾರ್ಷಿಕ ಅಧಿವೇಶನವು ಕಳೆದ ಫೆಬ್ರವರಿ ೨೪ರಲ್ಲಿ ನಡೆದು, ಈ ಕೆಳಗೆ ಕಂಡ ಎಂಟು ಕನ್ನಡ ಪುಸ್ತಕಗಳಿಗೆ ಒಟ್ಟು ೪೧೫ ರೂ. ಸಹಾಯ ದ್ರವ್ಯ ಕೊಡಲು ಗೊತ್ತಾಗಿದೆ.

ಗೀತಾಗಾಂಭೀರ್ಯ (ಪ್ರೊ॥ ಆರ್. ವಿ. ಜಹಗೀರುದಾರರು) ೧೦೦, ರೂ. ಜ್ಞಾನೋಪಾಸನೆ (ಸಂ. ಶ್ರೀ॥ ಬಾರ್ಲಿ ಬಿಂದು ಮಾಧವಾಚಾರ್ಯರು) ೭೫ ರೂ. ಪರಮಾಣು (ಶ್ರೀ॥ ಜಿ. ಆರ್. ರಂಗಸ್ವಾಮಿ.) ೭೫. ರೂ. ವಯ್ಯಾರಿ (ಶ್ರೀ॥ ಗೋರೂರು ರಾಮಸ್ವಾಮಿ ಅಯ್ಯಂಗಾರರು) ೫೦ ರೂ. ಕೂಪಾರ್ಶಲಿಯ ಆಚಾರ್ಯರು (ಶ್ರೀ॥ ಕಟ್ಟಿ ಶೇಷಾಚಾರ್ಯರು) ೩೫, ರೂ. ಶಕಕರ್ತೃ (ಆಸ್ಥಾನ ಮಹಾ ವಿದ್ವಾನ್ ಶಾಂತಿರಾಜ ಶಾಸ್ತ್ರಿಗಳು) ೩೦, ರೂ. ಶರೀರ ಶಿಕ್ಷಣ (ಶ್ರೀ॥ ನಾಡಿಗೇರ ಕೃಷ್ಣರಾವ್) ೨೫, ರೂ. ಅಷ್ಟಾಂಗ ಹೃದಯ ಸೂತ್ರಸ್ಥಾನ (ಶ್ರೀ॥ ಆದ್ಯ ಅನಂತಾಚಾರ್ಯರು) ೨೫, ರೂ. ಇದಲ್ಲದೆ ಈ ವರ್ಷದಲ್ಲಿ ಇಂಗ್ಲಿಷಿಗೆ ೪೦೦, ರೂ. ತಮಿಳಿಗೆ ೩೭೫, ರೂ. ಮಲೆಯಾಳಕ್ಕೆ ೨೧೦, ರೂ. ಮತ್ತು ತೆಲುಗಿಗೆ ೧೦೦, ರೂ. ಕೊಟ್ಟರುವರು. ಹೀಗೆ ಮಿಕ್ಕ ಎಲ್ಲಾ ಭಾಷೆಗಳಿಗಿಂತ ಕನ್ನಡಕ್ಕೆ ಹೆಚ್ಚು ಹಣ ಬಂದ ಹಾಗಾಯಿತು.

ಸೋಮೇಶ್ವರ— ದೀರ್ಘ ಕಾಲದಿಂದ ಆಗತ್ಯವೆನಿಸಿದ 'ಅಂಚೆ ಕಟ್ಟೆ' ಯನ್ನು ಮಾನ್ಯ ಇಲಾಖೆಯವರು ತಾರೀಕು 24-2-1942 ರಿಂದ ಇಲ್ಲಿ ಹೊಸತಾಗಿ ತೆರೆದಿರುವುದು ತುಂಬಾ ಸಂತೋಷ! ಸಾರ್ವಜನಿಕರು ಇದರ ಪ್ರಯೋಜನವನ್ನು ಹೊಂದಿ, ಅದು ಶೀಘ್ರದಲ್ಲೇ ಕಾಯಂ ಹೊಂದುವಂತೆ ಪ್ರೋತ್ಸಾಹವನ್ನೀಯುವರಾಗಿ ಆಶಿಸಲಾಗಿದೆ ಎಂದು ಬಾತ್ಮಿ.

ಮಿಯ್ಯಾರು— ಸ್ಥಳೀಯ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯತಕ್ಕ ದೀಪಾರಾಧನೆಯು ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ನೀಲಕಂಠ ಪಾರಕರು. ಇಂದಿನ ಯುದ್ಧ ಪರಿಸ್ಥಿತಿ ಹಾಗೂ ನಮ್ಮ ಕರ್ತವ್ಯದ ಕುರಿತಾಗಿಯೂ ಶ್ರೀ ಗೋಖಲೆಯವರು ತನ್ನ ಜೈಲು ಅನುಭವದ ಕುರಿತಾಗಿಯೂ ಭಾಷಣವಿತ್ತರು. ಹರಿಕೀರ್ತನೆಯೂ ಇತ್ತು.

ಬೆಳ್ಳೆ— ತಾ. 24-2-42ರಲ್ಲಿ ಶ್ರೀ ಬೆಳ್ಳೆ ಕೆಳಗಿನ ಮನೆ ಲೋಕಯ್ಯ ಸೆಟ್ರ ಮೊಮ್ಮಗಳು, ಬಿ. ಬಿ. ಪಿ. ಪ್ರಫುಲ್ಲಾ ಮಣಿಯ, ಸ್ಮಾರಕಾರ್ಥವಾಗಿ, ಕಟ್ಟಿಸಿದ ವೃಂದಾವನದ, ಮಂಟಪದ ಬಳಿ ನಮ್ಮ ಜಿಲ್ಲೆಯ ಬಡಗುತಿಟ್ಟಿನ ಯಕ್ಷಗಾನ ಕಲಾಭಿಮಾನಿಗಳಿಂದ, ರಾಜಸೂಯವೆಂಬ ಯಕ್ಷಗಾನ, ತಾಳಮದ್ದಳೆಯು ಯಶಸ್ವಿಯಾಗಿ ನಡೆಯಿತು.

ಕುಂದಾಪುರ— ಜಿಲ್ಲಾ ಹರಿಜನ ಸೇವಕರಾದ ಶ್ರೀ ನಾರಾಯಣ ಕಿಲ್ಲೆಯವರು ಕುಂದಾಪುರದಲ್ಲಿ ತಾ 24ನೇ ದಿನ ಕೆ. ಸಾ. ಸಂಘದ ಆಶ್ರಯದಲ್ಲಿ, "ಲೋಕದ ಇಂದಿನ ಸ್ಥಿತಿ" ಎಂಬುದರ ಕುರಿತಾಗಿಯೂ ತಾ 25, 26, ಮತ್ತು 27ನೇ ದಿನಗಳಲ್ಲಿ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ 'ಹಿಂದೂದೇಶದ ಇಂದಿನ ಪರಿಸ್ಥಿತಿ' 'ಹರಿಜನ ಸಮಸ್ಯೆ' ಮತ್ತು 'ಭಾರತದ ಕರ್ಣ' ಎಂಬ ವಿಷಯಗಳ ಕುರಿತಾಗಿಯೂ ಸ್ವಾರಸ್ಯ ಭಾಷಣವಿತ್ತರು.

ಕಾರ್ಯಕಲಾಪ.

ಕಳೆದ ತಾ 24ರಿಂದ ಇಂದಿಗೆ 4 ದಿನಗಳಲ್ಲಿ ನಾನು ಕುಂದಾಪುರ, ಗಂಗೊಳ್ಳಿ, ಮೊದಲಾದ ಕಡೆಗಳಲ್ಲಿ ಹರಿಜನ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದು ರೂ 141-0-0. ಸಂಗ್ರಹವಾಗಿರುತ್ತದೆ. ಮತ್ತು ರೂ. 2-4-0 ವಾಗ್ದಾನವಾಗಿರುತ್ತದೆ. ಈ ಸಂದರ್ಭದಲ್ಲಿ ನನ್ನೊಡನೆ ಸಹಕರಿಸಿದ ಶ್ರೀಗಳಾದ ವಕೀಲ್ ಕೆ. ಯಲ್ ಭಂಡಾರಿ, ಯನ್. ಶೇಷಗಿರಿ ರಾವ್, ಕೆ. ಸಂಜೀವ ಹೆಗ್ಡೆ, ಸರ್ವೋತ್ತಮ ಪೈ, ಮತ್ತು ಕೆ. ಮಹಾಬಲ ಶೆಟ್ಟಿ, ಇವರುಗಳನ್ನೂ, ಧನ ಸಹಾಯವಿತ್ತ ಎಲ್ಲವರುಗಳನ್ನೂ ಮನಃಪೂರ್ವಕವಾಗಿ ವಂದಿಸುತ್ತೇನೆ. ಅಲ್ಲದೆ ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರಾದ ಶ್ರೀ. ಆರ್. ಪ್ರಸಾದ್, ಐ. ಸಿ. ಯಸ್, ಇವರು ರೂ 25-0-0ರ ಧನ ಸಹಾಯವಿತ್ತದ್ದಲ್ಲದೆ ಅನೇಕ ಯೋಗ್ಯ ಸಲಹೆಗಳನ್ನೂ ಕೊಟ್ಟು, ಪೂರ್ಣ ಸಹಾನುಭೂತಿಯನ್ನು ತೋರಿಸಿದುದು ತುಂಬಾ ಶ್ಲಾಘನೀಯವು. ಅವರಿಗೂ ನನ್ನ ನಮ್ರವಂದನೆಗಳು.

ನಾರಾಯಣ ಕಿಲ್ಲೆ,

(ಜಿಲ್ಲಾ ಹರಿಜನ ಸೇವಕ)

ಉಡುಪಿ 28-2-42.

ಕಾಪು— ಇಲ್ಲಿಯ ಬೋರ್ಡು ಹಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ. 14-3-42ನೇ ಅಪರಾಹ್ನ 4-30ಕ್ಕೆ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ॥ ವಿಠಲ ಸೆಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಲಿದೆ. ಸರ್ವರಿಗೂ ಆಮಂತ್ರಣವಿದೆಯಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಪಾಣೆಮಂಗಳೂರು— ಮೊದಲನೇ ಪಾಣೆಮಂಗಳೂರು ಸರ್ಕಲ್ ರಾಜಕೀಯ ಪರಿಷತ್ತು ಎಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ನಡೆಯಲಿದೆ. ವಸ್ತು ಪ್ರದರ್ಶನ ಇತ್ಯಾದಿಗಳ ಏರ್ಪಾಡೂ ಇದೆ. ಈ ಸರ್ಕಲಿನ ತರುಣ ತರುಣಿಯರು ಸ್ವಯಂಸೇವಕ-ಸೇವಿಕೆಯರಾಗಿ ಸೇರಬೇಕು. ಎಲ್ಲರೂ ಸ್ವಾಗತ ಸಮಿತಿ ಸದಸ್ಯರಾಗಬೇಕು. ಸಾರ್ವಜನಿಕರು ಬೆಂಬಲವೀಯಬೇಕೆಂದು ಸ್ವಾಗತ ಸಮಿತಿಯವರು ವಿನಂತಿಸುತ್ತಾರೆ.

ಪಿವರ್ಾಳ— ತಾರೀಕು 27-2-42ನೇ ಶುಕ್ರವಾರ ಅಪರಾಹ್ನ ಸ್ಥಳೀಯ ಬೋ. ಹಾ. ಎ. ಶಾಲೆಯ ಹೆತ್ತವರ ಕೂಟದ ಮಾಸಿಕ ಸಭೆಯು ಸದ್ರಿ ಶಾಲೆಯ ಹಳೇ ವಿದ್ಯಾರ್ಥಿಯರಾದ ಶ್ರೀ. ಮ್ಯಾ. ರವಿರಾಜ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು.

ರಣಜಿತ್ ಮೂವಿಟೋನಿನವರ

ದುರ್ಗಾಖೋಟೆ, ರೋಸ್, ಪೃಥ್ವಿರಾಜ್, ಈಶ್ವರ್‌ಲಾಲ್ ಮೊದಲಾದವರು ನಟಿಸಿರುವ ಚಿತ್ರ

ಅಧುರಿಕಹಾನಿ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ತಾ. 6-3-1942ರಿಂದ

ನಡಿಯುವಚಿತ್ರ:- ಮಿನರ್ವಾ ಮೂವಿಟೋನಿನವರ ನಾಸೀಮ್ ಮತ್ತು ನವೀನಯಾಗ್ನಿಕ್ ನಟಿಸಿರುವ **ಮೈಹಾರಿ**

ಬರುವಚಿತ್ರ— ವಾಡಿಯಾ ಮೂವಿಟೋನಿನವರ ನಾಡಿಯಾ ನಟಿಸಿರುವ

ಡೈಮಂಡ್ ಕ್ವೀನ್

Notice.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O.S.No. 152/37, R.I.A. 748/1941, R. J. A. 173/42.

ಸರಾಫ ಶಾಂತಪ್ಪ ಸೆಟ್ಟಿ — ಅರ್ಜಿದಾರ (ವಾದಿ)

ಮತ್ತು

ಸರಾಫ ಸುಬ್ರಾಯ ಸೆಟ್ಟಿ ಕೂಡಾ—ಎದ್ರಿರು

(ಪ್ರತಿವಾದಿರು)

1ನೇ ಎದ್ರಿ— ಸರಾಫ ಸುಬ್ರಾಯ ಸೆಟ್ಟಿ, ಸರಾಫ ಅನಂತ ಸೆಟ್ರ ಮಗ— ಉಡುಪಿ ತಾಲ್ಲೂಕು ಶಿವಳ್ಳಿ ಕಸಬಾ ಗ್ರಾಮದ ಗುಂಡಿಬೈಲು ಪುತ್ತು ಸೆಟ್ರ ಮನೆಯಲ್ಲಿರುವವ — — 1ನೇ ಎದ್ರಿ.

ಅವರೊಳಗೆ

ಮೇಲ್ಕಂಡ ದಾವೆಯನ್ನು ಡಿಸ್‌ಮಿಸ್ ಮಾಡಿಕೊಟ್ಟ ಹುಕ್ಕುಂ ರದ್ದು ಪಡಿಸಿ ಸದ್ರಿ ವ್ಯಾಜ್ಯವನ್ನು ಪುನಹಾ ಫೈಲಿಗೆ ತೆಕ್ಕೊಂಡು ತನ್ನಿಯಿಂದ ತೀರ್ಮಾನಿಸಬೇಕಾಗಿ ವಗೈರೆ ಅಂಶಿಸಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 7-3-42ಕ್ಕೆ ವಿಚಾರಣೆಗೆ ಇಡುವದಾಗಿಯದೆ. ಈ ಕುರಿತು ನಿಮ್ಮ ಆಕ್ಷೇಪಣೆ ಏನಾದರೂ ಇದ್ದ, ಮೇಲ್ಕಂಡ ತಾರೀಕು 7-3-42ನೇ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ವ್ಯಾಹಿರು ಮಾಡಿಕೊಳ್ಳಕ್ಕೆ ತಪ್ಪಿದರೆ- ಸದ್ರಿ ಅರ್ಜಿಯು ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವದು.

ಉಡುಪಿ, ತಾ. 1-3-'42. } ಸರಾಫ್ U. ಶಾಂತಪ್ಪ ಸೆಟ್ಟಿ ರುಜು.

ಅರ್ಜಿದಾರ (ವಾದಿ).

ದಿವಂಗತ ಸೇಟ್ ಜಮುನಾಲಾಲ್ ಬಜಜರು.

ಅವರ ಉದಾತ್ತ, ಉಜ್ವಲ ಹಾಗೂ ತ್ಯಾಗಪೂರ್ಣ ಜೀವನ.

ಎಳೆ ವಯಸ್ಸಿನಲ್ಲೇ ಅವರು ತೋರಿಸಿದ ಸ್ವಾಭಿಮಾನ.

ಸೇಟ್ ಜಮುನಾಲಾಲ್ ಬಜಜರು ಆಗರ್ಭ ಶ್ರೀಮಂತರೇನೂ ಅಲ್ಲ. ಸಾರ್ಥದ ಶ್ರೀಮಂತ ವ್ಯಾಪಾರಿಯಾದ ಬಚ್‌ರಾಜ್ಜಿಯವರಿಂದ ದತ್ತಕ್ಕೆ ತೆಗೆದುಕೊಳ್ಳಲ್ಪಟ್ಟು ಧನವಂತರಾದವರು. ಜಯಪ್ಪುರ ಸಂಸ್ಥಾನದ ಸೀಕರಾಶಯ ಜಿಲ್ಲಾದ ವಲ್ಲಿಯೊಂದಲ್ಲಿ ಅಜ್ಞಾತನಾದೊಂದು ಕುಟುಂಬದಲ್ಲಿ ಜನ್ಮಿಸಿದವರು. ತಮ್ಮ ಹಳ್ಳಿಯಲ್ಲೇನು ಮಾಡಿ ತೋರಿಸುವ ವಾಗ್ದಾನವನ್ನು ಬಚ್‌ರಾಜ್ಜಿಯವರಿಂದ ಪಡೆದ ಮೇಲೆ ಮಾತ್ರ ಜಮುನಾಲಾಲರ ಬಡವರಾದ ತಂದೆತಾಯಿಗಳು ಅವರನ್ನು ದತ್ತವಾಗಿ ಕೊಡಲೊಪ್ಪಿದರು. ಹೀಗೆ ದತ್ತಪುತ್ರನಾಗಿ ತನ್ನ ಹುಟ್ಟೂರು ಬಿಟ್ಟು ಹೋಗುವಾಗಲೂ 'ಊರಿಗೆ ಒಳ್ಳೇದನ್ನೇ ಮಾಡಿ ಹೋದರವರು.

ಬಚ್‌ರಾಜ್ಜಿಯವರು, ಜಮುನಾಲಾಲರನ್ನು ಎರಡು ಮೂರು ವರ್ಷ ಹಿಂದೀ ಶಾಲೆಯೊಂದಕ್ಕೆ ಕಳುಹಿಸಿ, ಅನಂತರ ವ್ಯಾಪಾರದಲ್ಲಿ ತೊಡಗಿಸಿದರು. ತನ್ನ 17ನೇ ವಯಸ್ಸಿನಲ್ಲೊಮ್ಮೆ ಅವರು ಮುಂಗೋಪಿ ದತ್ತ ತಂದೆಯ ಸಿಟ್ಟಿಗೊಳಗಾದರು. ಆಗ ಶ್ರಮವೇನೂ ಇಲ್ಲದೆ ಅವರು ಪಡೆಯಬರುವ ಸಂಪತ್ತನ್ನು ಗಮನಕ್ಕೆ ತಂದುಕೊಳ್ಳಬೇಕೆಂದು ಹಂಗಿಸಿ ಮಾತಾಡಿದರು ದತ್ತ ತಂದೆ. ಅದರಿಂದ ಸಂತಪ್ತರಾದ ಜಮುನಾಲಾಲರು ಆ ಎಳೆ ವಯಸ್ಸಿನಲ್ಲೇ ದತ್ತ ತಂದೆಗೆ ಬರೆದ ಪತ್ರವು, ಬೆಳೆಯ ಗುಣವನ್ನು ಮೊಳೆಯೇ ತೋರಿಸುವಂತಹದಿರುವುದು.

"ನೀವು ಇಂದು ನನ್ನೊಡನೆ ಬಹಳ ಸಿಟ್ಟಾಗಿ ಬಿಟ್ಟಿರುವಿರಿ. ದೈವೇಚ್ಛೆಯಿಂದ ನನ್ನನ್ನು ನೀವು ದತ್ತಕ್ಕೆ ಸ್ವೀಕರಿಸಿದುದರಿಂದ ನಿಮಗೆ ಸಿಟ್ಟುಗೊಳ್ಳುವ ಹಕ್ಕಿರುತ್ತದೆ. ಅದು ನಿಮ್ಮ ತಪ್ಪಲ್ಲ. ನನ್ನನ್ನು ನಿಮಗೆ ದತ್ತವಾಗಿ ಕೊಟ್ಟವರ ತಪ್ಪು. ನಿಮ್ಮ ಸಂಪತ್ತೆಲ್ಲಾ ನಿಮ್ಮದೇ. ಅದನ್ನು ನೀವೇನು ಬೇಕಾದರೂ ಮಾಡಬಹುದು. ಇಷ್ಟರವರೆಗೆ ನೀವು ನನಗೋಸ್ಕರ ಮಾಡಿರುವ ವೆಚ್ಚಕ್ಕಾಗಿ ನಾನು ವಿಷಾದಪಡುತ್ತೇನೆ. ಆದರೆ ಈಕ್ಷಣದಿಂದ ನಿಮ್ಮ ಹಣದಿಂದ ನಾನೊಂದು ಪೈಯನ್ನೂ ಮುಟ್ಟಲಾರೆ. ನಿಮ್ಮ ಕುರಿತು ನನಗೆ ಯಾವ ತರದ ಹಕ್ಕೂ ಇರುವುದಿಲ್ಲ. ನನ್ನ ಕುರಿತು ನೀವು ಯಾವ ತರದ ಚಿಂತೆಯನ್ನೂ ಕಟ್ಟಿಕೊಳ್ಳಬಾರದೆಂದು ನಾನು ಬೇಡಿಕೊಳ್ಳುತ್ತೇನೆ. ದೇವರು ನಿಮಗೆ ಇನ್ನೂ ಹಲವು ವರ್ಷಗಳ ಆಯುಷ್ಯವನ್ನೀಯಲಿ. ನಾನೆಲ್ಲಿ ಹೋದರೂ ನಿಮ್ಮ ಕ್ಷೇಮಕ್ಕಾಗಿ ಸದಾ ಪ್ರಾರ್ಥಿಸುವೆನು. ನಿಮ್ಮನ್ನು ಸಿಟ್ಟಿಗೆಬ್ಬಿಸಿದುದಕ್ಕಾಗಿ ದಯಮಾಡಿ ನನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಳ್ಳುವೆನು. ನಿಮ್ಮ ಹಣದ ನಿಮಿತ್ತ ನಾನು ನಿಮ್ಮ ಸೇವೆ ಮಾಡುತ್ತಿರುವುದೆಂದು ನೀವು ನಂಬಿದ್ದಿರೆಂದು ನಾನೆಣಿಸುತ್ತೇನೆ. ನಿಮ್ಮಲ್ಲೆಂದಾದರೂ ಅಂತಹ ಭಾವನೆ ಬಂದಿದ್ದರೆ ಅದನ್ನು ದಯಮಾಡಿ ಬಿಟ್ಟುಬಿಡಿರಿ. ಸಂಪತ್ತನ್ನು ಲಕ್ಷಿಸುವವನು ನಾನಲ್ಲ. ದೇವರ ಸೇವೆ ನನ್ನೆಂದಿಗೂ ನಾನು ಮರೆಯದಂತಾಗಲೆಂದೇ ನನ್ನ ಪ್ರಾರ್ಥನೆ. ಯಾಕೆಂದರೆ ಇಹಪರಗಳೆರಡರಲ್ಲಿಯೂ ಆನಂದವನ್ನುಂಟುಮಾಡುವವನಾತ. ನಾನು ನಿಮ್ಮನ್ನಗಲಿ ಹೋಗುವ ಕುರಿತು ನೀವೇನೂ ಚಿಂತೆ ಪಡದೆ ಸಂತೋಷಪಡುತ್ತಿರಬೇಕೆಂದು ಪ್ರಾರ್ಥಿಸಿಕೊಳ್ಳುವೆನು. ಲೌಕಿಕ ಸಂಬಂಧವೆಲ್ಲಾ ನಶ್ವರವಾದುದು. ನೀವು ಲೌಕಿಕ ಸಂಪತ್ತಿನ ಪಾಲಕರೊಳಗಾಗಿರುವಿರಿ. ವಿನಾ ರಕಾರಿಯಾದ ಆ ಹಾರದಿಂದ ನನ್ನನ್ನೆಂದು ನೀವು ವಿಮುಕ್ತಗೊಳಿಸಿದುದು ನನ್ನ ಸುದೈವ. ನಿಮ್ಮ ಸಂಪತ್ತಿನಿಂದ ಒಂದು ಪೈಯನ್ನಾದರೂ ಪಡೆಯಲು ನಾನು ವ್ಯಾಜ್ಯಕ್ಕೇನಾದರೂ ಹೋಗುವೆನೆಂಬ ಭಯವೇನಾದರೂ ನಿಮಗೆ ಬೇಡವೇ ಬೇಡ. ಈ ಮೂಲಕ ನನ್ನನ್ನು ದತ್ತದ ಹಕ್ಕಿನಿಂದ ಕ್ರಮಪ್ರಕಾರ ತೆಗೆದು ಹಾಕಿದಂತೆಯೇ ಆಯಿತೆಂದು ತೆಗೆದುಕೊಳ್ಳಿರಿ. ಇನ್ನು ಮುಂದೆ ನನ್ನ ಕುರಿತು ನಿಮಗೆ ಯಾವ ಜವಾಬ್ದಾರಿಯೂ ಇರುವುದಿಲ್ಲ. ನಾನು ಮಾಡಿರುವ ಸಾಲವೇನೂ ಇರುವುದಿಲ್ಲ. ನಿಮ್ಮ ಹಣವನ್ನು ನೀವು ಧಾರ್ಮಿಕ ಕೆಲಸಗಳಿಗಾಗಿ ವಿನಿಯೋಗಿಸಿರಿ. ನಿಮ್ಮ ಪದ್ಧತಿಯಂತೆ ಸಾಧು ಸನ್ಯಾಸಿಗಳನ್ನು ಬೈದು ಭಂಗಿಸಿ ಕಳುಹಿಸದೆ ಅವರಿಗೇನಾದರೂ ಧರ್ಮ ಕೊಟ್ಟು ಸಂತೋಷ ಪಡಿಸಿರಿ. ಧರಿಸಿಕೊಂಡಿರುವ ವಸ್ತ್ರದ ಹೊರತು ನಾನು ಮನೆಯಿಂದ ಮತ್ತೇನನ್ನೂ ಒಯ್ಯುವುದಿಲ್ಲ"

ಈ ಪತ್ರವನ್ನೋದಿದ ದತ್ತ ತಂದೆಯು ತನ್ನ ವರ್ತನೆಗಾಗಿ ತೀವ್ರ ಸಂತಾಪಪಟ್ಟು, ಮಗನು ತನ್ನನ್ನು ಬಿಟ್ಟುಹೋಗಕೂಡದೆಂದು ಕಣ್ಣೀರಿಟ್ಟು ಕೇಳಿಕೊಂಡರು. ಜಮುನಾಲಾಲರು ಅದಕ್ಕೊಪ್ಪಿದರು. ವಿವೇಕ ಶಾಲಿತ್ವ ಮತ್ತು ವ್ಯವಹಾರ ಚಾತುರ್ಯದಿಂದ ಜಮುನಾಲಾಲರು, ಲಕ್ಷಗಟ್ಟಲೆಯಲ್ಲಿ ಹಣ ಸಂಪಾದಿಸಿ, ತಾನು ದತ್ತನಾಗಿ ಪಡೆದ ಹಣಕ್ಕಿಂತ ೯ ಪಾಲು ಹೆಚ್ಚಿನದನ್ನು ದಾನಧರ್ಮಗಳಿಗಾಗಿಯೇ ವಿನಿಯೋಗಿಸಿರುವರು. ತಾನು ತನ್ನ ದತ್ತ ತಂದೆಯ ಹಣದ ಟ್ರಸ್ಟಿಮಾತ್ರವೆಂಬ ಪಾಠವನ್ನು ಜಮುನಾಲಾಲರು ಎಳೆಪ್ರಾಯದಲ್ಲೇ ಕಲಿತಿದ್ದರು. ತಾನು ಸಂಪಾದಿಸಿದ ಹಣವನ್ನೂ ಅವರು ಅದೇ ರೀತಿ ಪರಿಗಣಿಸುತ್ತಿದ್ದರು.

ಜಮುನಾಲಾಲ ಬಜಜರು ನಿರ್ಭೀತ ಮನೋವೃತ್ತಿಯವರು. ಯಾವ ಸಂದರ್ಭದಲ್ಲೂ ತನ್ನ ಶಕ್ತಿ ಮತ್ತು ಮನೋನಿರ್ಧಾರದಂತೆ ನಡೆಯುವ ನೈತಿಕ ಧೈರ್ಯವಿದ್ದವರು. ಗವರ್ನರರ ಗೌರವಾರ್ಥವಾಗಿ ಅವರು ಕೊಟ್ಟಿದ್ದೊಂದು ಸತ್ಕಾರ ಕೂಟದಲ್ಲಿ ವ್ಯಾನನ್ನು ಉಪಯೋ

(೧೦ನೇ ಪುಟ ನೋಡಿರಿ)

ಹಗಲು ಹೊಲತಿ-ರಾತ್ರಿ?

(೪ನೇ ಪುಟದಿಂದ ಮುಂದರಿದುದು.)

"ನಾನು ಮಾಡಿದ ತಪ್ಪಿಗೆ ಏನು ಪ್ರಾಯಶ್ಚಿತ್ತಮಾಡಬೇಕು ಹೇಳು ದುರ್ಗಿ! ನಾಳೆ ನಿನಗೊಂದು ಹೊಸ ಸೀರೆ ತಂದುಕೊಡುವೆನು. ಬೇಕಾದರೆ ನೀನೇ ತೆಗೆದುಕೊ. ಇವತ್ತೇ ಹಣಕೊಡುತ್ತೇನೆ. ಒಮ್ಮೆ ಬಾಗಿಲು ತೆರೆ" ಬೇಡಿಕೊಂಡರು ಅಂತಪ್ಪನವರು ಪಶ್ಚಾತ್ತಾಪದ ನಟನೆಯಿಂದ. ಒಳಗಿಂದೊಳಗೆ ಸಿಟ್ಟೇರಿ ಬಂದಿತ್ತವರಲ್ಲಿ. 'ಹೊಲತಿ ರಂಡೆಗೂ ಇಷ್ಟೊಂದು ಅಭಿಮಾನವೆ?" ಎಂದವರು ಚೋದ್ಯಪಟ್ಟರು.

"ನೀವು ನನ್ನಂತಹ ಚಿನ್ನದ ಪಾಪೆ ಮಾಡಿಸಿಕೊಟ್ಟರೂ ನಾನದನ್ನು ತೆಗೆದುಕೊಳ್ಳುವ ಹಾಗಿಲ್ಲ. ಹೊಲೆಯರಾದ ನಮ್ಮನ್ನು ನೀವು ನಮ್ಮಷ್ಟಕ್ಕೆ ಇರಬಿಡಬಾರದೇಕೆ? ನಮ್ಮ ಸಂಪರ್ಕ ನಿಮಗೇಕೆ? ನೀವಿನ್ನು ಹೆಚ್ಚು ಮಾತಾಡದೆ ಒಂದೊಮ್ಮೆ ಹೋಗಿರಿ. ನನಗೆ ನಿದ್ದೆ ಬರುತ್ತದೆ" ತಿರಸ್ಕರಿಸಿ ಮಾತಾಡಿದಳು ದುರ್ಗಿ.

ಸಿಟ್ಟು ತಾಳಲಾರದಾಯಿತು ಅಂತಪ್ಪನವರಿಗೆ. "ರಂಡೆ, ಒಳ್ಳೇ ಮಾತಿನಿಂದ ಬಾಗಿಲು ತೆರೆಯುವೆಯೋ? ತುಳಿದು ಬಾಗಿಲೊಡೆಯುವುದೋ? ಏನು ನಿನ್ನ ಅಹಂಕಾರ! ನಾಯಿಗೆ ಸಲುಗೆ ಕೊಟ್ಟಂತಾಗಿದೆಯಲ್ಲ ನಿನಗೆ? ನಾಳೆ ನಿನ್ನ ಪಾಡೇನಾದೀತೆಂದು ವಿಚಾರಿಸಿಕೋ!" ಗಜರಿದರು ಕಮ್ತಿಯರು ರುದ್ರಾವತಾರಿಯಾಗಿ ತನ್ನ ದುಡ್ಡಿನ ಅಹಂಕಾರದಿಂದ.

ಅಷ್ಟರಲ್ಲಿ ಪಡಲ್ಲನೆ ದುರ್ಗಿಯ ಗುಡಿಸಲಿನ ಬಾಗಿಲು ತೆರೆಯಲ್ಪಟ್ಟಿತು. ಅಂತಪ್ಪನವರು ಕೈಯ ಬೆಟ್ಟರಿ ಲೈಟನ್ನು ಬಾಗಿಲ ಕಡೆಗೊಮ್ಮೆ ಚಮಕಿಸಿದರು. ಆದರೆ ನೋಡುವುದೇನನ್ನು! ಕೈಯಲ್ಲಿ ಕತ್ತಿ ಹಿಡಿದು ದುರ್ಗಾವತಾರಿಯಾಗಿ ನಿಂತಿದ್ದಳು ದುರ್ಗಿ! ಉತ್ತರ ಕ್ಷಣದಲ್ಲೇ ಅಂತಪ್ಪನವರ ಕೈಯ ಲೈಟು ಕತ್ತಲಾಗಿ ಅವರ ರುದ್ರಾವತಾರವು ಕೊನೆಗೊಂಡುಬಿಟ್ಟಿತು. ಅವರು ಬೆದರಿ ಹಿಂದೆ ಸರಿದರು. "ಇಲ್ಲಿಂದೀಗ ತೊಲಗದಿದ್ದರೆ ನಿಮ್ಮನ್ನೀ ಕತ್ತಿಯಿಂದಲೇ ಕಡಿದುಹಾಕುವೆನು! ನಮ್ಮ ಹೊಲೆಯರ ಸಂಗತಿ ಗೊತ್ತಿಲ್ಲ ನಿಮಗೆ! ಇನ್ನು ಮುಂದೆ ನನ್ನ ಗುಡಿಸಲಿಗೆ ನೀವು ಕಾಲಿಟ್ಟರೆ ಜಾಗ್ರತೆ!" ಗರ್ಜಿಸಿದಳು ದುರ್ಗಿ.

ಆದರೆ ಆ ಗರ್ಜನೆಯ ಆವಶ್ಯಕತೆಯೇ ಇದ್ದಿಲ್ಲ. ಆ ಮೊದಲೇ ಅಲ್ಲಿಂದ ಜಾರಿದ್ದರು ಅಂತಪ್ಪನವರು.

—ವಿಚಾರಿ

TOURISTS' ONLY IDEAL RESORT
CAFE' ROYAL
(REGISTERED)
SHIVALLI BRAHMINS'
High Class Boarding & Lodging House
HOSPITAL ROAD, UDIPI.
ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ
'ಕೆಫೆ ರೋಯಲ್'
ಆಸ್ಪತ್ರೆ ರಸ್ತೆ, ಉಡುಪಿ.

ರೂಪಾಯಿಗಳು!
ವಿಕ್ಟೋರಿಯಾ ರೂಪಾಯಿಗಳು ನಿಮ್ಮಲ್ಲಿದ್ದು ಅವುಗಳನ್ನು ಚಲಾಯಿಸಲಾಗುವುದಿಲ್ಲವಾದರೆ ನಮಗೆ ಬರೆಯಿರಿ.
ಬಡವರಬಂಧು ಆಫೀಸು,
ಮಂಗಳೂರು, ದ. ಕ.

ಹಿಟ್ಲರರ ಪೂರ್ವ ರಣರಂಗಕ್ಕಿಂತ ಮೂರು ಪಾಲು ದೊಡ್ಡದು ಜಾಪಾನರ ರಣರಂಗ!

ಯುದ್ಧಕ್ಕಾಗಿ ಜಾಪಾನರು ಮಾಡುತ್ತಿರುವ ಮಹತ್ತ್ವಾದತ್ಯಾಗ

ಹಲ್ಲುಗಳ ಹೊರತು ಜನರಲ್ಲಿರುವ ಬಾಕಿ ಚಿನ್ನವೆಲ್ಲಾ ಸರಕಾರಕ್ಕೊಪ್ಪಿಸಲ್ಪಟ್ಟಿದೆ.

ಸರ್ವಸಾಮಾನ್ಯ ಪೂರ್ವ ಏಶ್ಯದ ಪ್ರತಿಯೊಂದು ಮೂಲೆಯಲ್ಲಿಯೂ ಜಾಪಾನ ಸೈನಿಕರನ್ನೀಗ ಕಾಣಬಹುದು. ಕೊರಿಯ ಮಂಚೂಕೋ, ಚೈನ, ಇಂಡೋಚೈನಾ, ಥೈಲೆಂಡ್, ಮಲಯ, ಪೂರ್ವ ಬರ್ಮ, ಬೋರ್ನಿಯೋ, ಫಿಲಿಪ್ಪೈನ್, ಸುಮಾತ್ರ, ಜಾವಗಳ ಭಾಗಗಳಲ್ಲೆಲ್ಲಾ ಕುಳ್ಳ ಜಾಪಾನ ಸೈನಿಕರು, ತಮ್ಮ ಕೆಂಪು ಚುಕ್ಕೆಯ ಬಿಳುಪು ಬಾವುಟೆಯನ್ನು ಹಾರಾಡಿಸುತ್ತಿರುವರು.

ಜಾಪಾನಿನ ಇಂದಿನ ರಣರಂಗವು ಪೂರ್ವದಿಂದ ಪಶ್ಚಿಮಕ್ಕೆ ಸುಮಾರು ೩೦೦೦ ಮತ್ತು ಉತ್ತರದಿಂದ ದಕ್ಷಿಣಕ್ಕೆ ೪೦೦೦ ಮೈಲಿದ್ದು ೧೨ ಮಿಲ್ಯ ಚದರ ಮೈಲು ಭೂ ಮತ್ತು ಜಲ ಪ್ರದೇಶವನ್ನೊಳಗೊಂಡು ವಿಸ್ಮಯಕರ ವಿಶಾಲತೆಯುಳ್ಳದಾಗಿದೆ ಹಿಂದುದೇಶಕ್ಕಿಂತ ಸುಮಾರು ೬ಪಾಲು ಹೆಚ್ಚು ವಿಶಾಲವಾಗಿರುವುದು ಪೂರ್ವ ಏಶ್ಯದ ಸುಮಾರು ೧೦೦ ಮಿಲ್ಯ ಜನರನ್ನು ತಮ್ಮ ಅಧೀನಪಡಿಸಿ ಅಲ್ಲಿಯ ಹೇರಳವಾದ ಮತ್ತು ತಮಗೆ ಅತ್ಯಗತ್ಯವಾದ ಸಂಪತ್ತನ್ನು ಸೂರೆ ಮಾಡಲು ಜಾಪಾನರೀಗ ಮುಂದಾಗಿದ್ದಾರೆ. ಹಿಟ್ಲರರ ರಶ್ಯದ ರಣರಂಗಕ್ಕಿಂತ ಮೂರುಪಾಲು ಉದ್ದದ ರಣರಂಗದಲ್ಲಿ ೪ ಕಡೆಗಳಲ್ಲಿ ಜಾಪಾನಿಂದು ಹೋರಾಡುತ್ತಿದೆ. ನೆಲ, ಜಲ ಮತ್ತು ಆಕಾಶಗಳಲ್ಲಿ ಒಂದೇ ಸವನೆ ಪ್ರಬಲ ಹೋರಾಟಗಳನ್ನದು ನಡಿಸುತ್ತಿದೆ. ಜರ್ಮನರೆಂದೂ ನಡಿಸದ ದೊಡ್ಡ ಜಲ ಯುದ್ಧಗಳನ್ನದು ನಡಿಸಬೇಕಾಗಿದೆ.

ಜಾಪಾನಿಗೆ ಕಬ್ಬಿಣ, ಪೆಟ್ರೋಲು ಮತ್ತು ರಬ್ಬರ್ ಮೊದಲಾದ ಯುದ್ಧಕ್ಕೆ ಬೇಕಾದ ವಸ್ತುಗಳ ಕೊರತೆಯು ತುಂಬಾ ಇದ್ದಿತು. ಆದರೆ ಅದು ಈಗ ಗೆದ್ದಿರುವ ಪ್ರದೇಶಗಳನ್ನದು ಹೆಚ್ಚುಕಾಲ ಸ್ವಾಧೀನದಲ್ಲಿರಿಸಿಕೊಳ್ಳುವಂತಾದರೆ ಈ ಕೊರತೆಯು ಕೆಲಮಟ್ಟಿಗೆ ನಿವಾರಿತವಾಗಬಹುದು. ಆದುದರಿಂದ ಅದು ಶೀಘ್ರ ವಿಜಯ ಪಡೆದು ತನ್ನ ಸ್ಥಾನವನ್ನು ಬಲಪಡಿಸುವ ಹಂಚಿಕೆ ನಡಿಸಿರುವುದು. ಸಹಸ್ರಗಟ್ಲೆ ಸೈನಿಕರನ್ನು ರಣರಂಗಗಳಲ್ಲಿ ಬಲಿಕೊಟ್ಟು ತನ್ನ ಉದ್ದೇಶ ಸಾಧಿಸಿಕೊಳ್ಳುವ ಸಾಹಸ ಮಾಡಿ ಮುಂದೊತ್ತುತ್ತಿರುವುದು. ಸಂಯುಕ್ತ ರಾಷ್ಟ್ರಗಳು ಈಗ ತಾನೆ ಸೇನಾ ಸಂಗ್ರಹ ಮಾಡತೊಡಗಿವೆ. ಇನ್ನು ಮುಂದೆ ಮಾತ್ರವೆ ಅವು ಜಾಪಾನನ್ನು ಪ್ರಬಲವಾಗಿ ಎದುರಿಸಬೇಕಾಗಿದೆ. ಜಾಪಾನು ಇಷ್ಟರಲ್ಲೇ ವಿಸ್ಮಯಕರ ವಿಜಯಗಳನ್ನು ಪಡೆದು ಹೆಚ್ಚಿನ ಅನುಕೂಲತೆಗಳನ್ನು ಪಡೆದಿದೆ. ಇನ್ನು ಮುಂದೆ ಸಂಯುಕ್ತ ರಾಷ್ಟ್ರಗಳಿಗೆ ಅದನ್ನು ಗೆಲ್ಲಲು ಬಹಳ ಪ್ರಯಾಸವಿದೆ.

ಸೈನಿಕರು ಮಾತ್ರವಲ್ಲದೆ ಇಡೀ ಜಪಾನ ಜನಾಂಗವಿಂದು ಯುದ್ಧಕ್ಕಾಗಿ ಎಂತಹ ತ್ಯಾಗಕ್ಕಾದರೂ ಮುಂದಾಗಿದೆ. ಈ ಯುದ್ಧಾರಂಭವಾಗುವ ಮೊದಲೆ ಅದಕ್ಕೆ ಬೇಕಾದ ಸಿದ್ಧತೆಯು ನಡೆದಿತ್ತು. ಜನರು ಅನಾವಶ್ಯಕವಾದ ವಿನೋದ ವಿಲಾಸಗಳನ್ನೆಲ್ಲಾ ತ್ಯಜಿಸಿ ಅತ್ಯಂತ ಸರಳ ಜೀವನ ನಡಿಸಲಾರಂಭಿಸಿದ್ದರು. ಗೋಲ್ಫ ಆಟಗಾರರು ಮೋಟರು ಕಾರು ಮತ್ತು ಟೇಕ್ಸಿಗಳಲ್ಲಿ ತಮ್ಮ ಆಟರಂಗಕ್ಕೆ ಹೋಗಕೂಡದೆಂದು ನಿಷೇಧಿಸಲಾಗಿತ್ತು. ಪಂಡ್ಯಾಟಗಳೆಲ್ಲಾ ನಿಲ್ಲಿಸಲ್ಪಟ್ಟಿದ್ದುವು. ಚಿನ್ನದ ಮತ್ತು ಬೆಳ್ಳಿಯ ಪದಕ, ಬಟ್ಟಲು ಮೊದಲಾದುವನ್ನು ಪಡೆದಿದ್ದವರೆಲ್ಲಾ ಅದನ್ನು ಸರಕಾರಕ್ಕೊಪ್ಪಿಸಬೇಕಾಗಿರುವುದು. ಪೆಟ್ರೋಲ್ ಉಳಿಸಲಿಕ್ಕಾಗಿ ೪ ಜನ ಪ್ರಯಾಣಿಕರು ಬಾರದೆ ಒಂದು ಟೇಕ್ಸಿಯನ್ನು ಬಿಡಲಿಕ್ಕಿಲ್ಲ. ಜನರಲ್ಲಿರುವ ಚಿನ್ನದ ಮತ್ತು ಪ್ಲೇಟಿನಮ್ ಆಭರಣಗಳೆಲ್ಲಾ ಸರಕಾರಕ್ಕೊಪ್ಪಿಸಲ್ಪಟ್ಟಿವೆ. ಹಲ್ಲುಗಳಲ್ಲಿ ಹೊರತು ಜಾಪಾನರ ದೇಹದ ಇತರ ಯಾವ ಭಾಗದಲ್ಲಿಯೂ ಚಿನ್ನಾಭರಣವೇ ಇಲ್ಲದಂತಾಗಿದೆ. ಚಿನ್ನದ ಹಲ್ಲುಗಳನ್ನು ಚಮಕಿಸುವುದು ಜಾಪಾನರಲ್ಲಿ ಬಹಳ ಹೆಚ್ಚಾಗಿ ಚಾಲ್ತಿಯಲ್ಲಿದೆ. ಜಾಪಾನ ಸ್ತ್ರೀಯರು ಆಡಂಬರದ ಉಡುಗೆತೊಡಿಗೆಗಳನ್ನು ಹಾಕಿಕೊಳ್ಳಲಿಕ್ಕಿಲ್ಲ. ಅದು ದೇಶದ್ರೋಹಕಾರ್ಯವೆಂದು ಪರಿಗಣಿಸಲಾಗುತ್ತದೆ. ಅಂಥವರನ್ನು ಗುಪ್ತ ಪೋಲೀಸರು ಹಿಂಬಾಲಿಸಿ ಎಚ್ಚರವೀಯುತ್ತಾರೆ. ಜಾಪಾನಿನ ಸಾಮಾಜಿಕ ಜೀವನದ ಆವಶ್ಯಕತೆಗಳಲ್ಲೊಂದಾಗಿದ್ದ ಗೈಶಾ ಸ್ತ್ರೀಯರನ್ನು ಕೂಡಾ ನಿಷೇಧಿಸಿ ಅವರನ್ನು ಮನೆ ಅಥವಾ ಕಾರ್ಖಾನೆ ಕೆಲಸಕ್ಕೆ ಕಳುಹಿಸುವ ಪ್ರಯತ್ನ ನಡೆದಿರುತ್ತದೆ. ಕಾಗದದ ಕೊರತೆಯ ನಿಮಿತ್ತ ೧೯೩೦ರಲ್ಲಿ ೧೯೩ ಪುಸ್ತಕ ಪ್ರಕಟಣಾ ಕಂಪೆನಿಗಳು ತಮ್ಮ ಕಾರ್ಯಕಲಾಪಗಳನ್ನೇ ನಿಲ್ಲಿಸಿಬಿಟ್ಟಿವೆ.

ಜರ್ಮನರಂತೆಯೇ ಇಡೀ ಜಾಪಾನ ಜನಾಂಗವೇ ಇತ್ತಲಾಗಿ ಕೆಲಸಮಯದಿಂದ ಈ ಯುದ್ಧಕ್ಕಾಗಿ ಒಳಗಿಂದೊಳಗೆ ಪ್ರಬಲ ಸಿದ್ಧತೆ ಮಾಡಿಕೊಂಡು ಬಂದಿರುವುದು. ಇಲ್ಲವಾದರೆ ಅದರೊಡನೆ ಇಷ್ಟೊಂದು ವಿಮಾನ, ಟೇಂಕ್ ಮೊದಲಾದ ಅತ್ಯಾಧುನಿಕ ಯುದ್ಧೋಪಕರಣಗಳಿರಲು ಸಾಧ್ಯವೇ ಇಲ್ಲ. ಚೈನದಲ್ಲದು ತನ್ನ ಸಂಪೂರ್ಣ ಸೇನಾಶಕ್ತಿಯನ್ನು ಉಪಯೋಗಿಸದೆ, ಪೂರ್ವ ಏಶ್ಯಾ ಪ್ರದೇಶದ ಯುದ್ಧಕ್ಕಾಗಿ ಸಾಕಷ್ಟನ್ನು ಕಾದಿಟ್ಟಿದೆಂಬುವದರಲ್ಲಿ ಸಂದೇಹವೇ ಇಲ್ಲ. ಜಾಪಾನಿನ ನೌಕಾಬಲವು ಎಷ್ಟಿರುವುದೆಂಬುದು ಯಾರಿಗೂ ತಿಳಿಯದ ವಿಷಯ. ಕುಳ್ಳ ಜಾಪಾನರು ಕುಯುಕ್ತಿಯಿಂದ ಕಾರ್ಯ ಸಾಧಿಸಿ ವೈರಿಗಳನ್ನು ಹಿಂದೆ ಹಾಕಿಬಿಟ್ಟಿರುವರೆಂದು ಹೇಳಬಹುದು. ಅವರ ಅವರಿಗೆ ದೀರ್ಘಕಾಲದ ವರೆಗೆ ಸಂಯುಕ್ತ ರಾಷ್ಟ್ರಗಳನ್ನ ದುರಿಸಲು ಸಾಧ್ಯವಾಗುವುದೋ ನೋಡಬೇಕು. ಅದೀಗ ಪಡಕೊಂಡಿರುವ ಅನುಕೂಲತೆಗಳಿಂದ ಅದು ಕೂಡಾ ಸಾಧ್ಯವಾಗಬಹುದೆಂದೇ ಹೇಳಬಹುದು.

ದಿವಂಗತ ಸೇಟ್ ಜಮುನಾಲಾಲ್ — ಬಜಜರು —

(೯ನೇ ಪುಟದಿಂದ ಮುಂದರಿದುದು.)

ಗಿಸಲು ನಿರಾಕರಿಸಿದ್ದರು. ಟ್ರೈನಿನಲ್ಲಿ ಫಸ್ಟ್ ಮತ್ತು ಸೆಕೆಂಡ್ ಕ್ಲಾಸ್ ಸಂಚಾರ ಮಾಡುವಾಗ ದರ್ಪ ತೋರಿಸಿದ್ದ ಹಲವು ಮಂದಿ ಸೈನ್ಯಾಧಿಕಾರಿಗಳ ಬಾಯಿ ಮುಚ್ಚಿಸಿದ್ದರು. ಅವರು ಸ್ಥಾಪಿಸಿದ ಶಾಲೆಯೊಂದನ್ನು ತೆರೆಯಲು ಕಮಿಶನರರ ಮೂಲಕ ಚೀಫ್ ಕಮಿಶನರನ್ನೊಮ್ಮೆ ಜಮುನಾಲಾಲ ಬಜಜರು ಆಮಂತ್ರಿಸಹೋಗಿದ್ದರು. ಅವರು ಸರಕಾರಕ್ಕೆ ಹೆಚ್ಚು ವಿಧೇಯವಾಗಿ ನಡೆಯದಿದ್ದಲ್ಲಿ ಚೀಫ್ ಕಮಿಶನರು ಅದಕ್ಕೊಪ್ಪಲಾರರೆಂದರು ಕಮಿಶನರು. ಅಂತಹ ಬೆಲೆಯ ಗೌರವ ತನಗೆ ಬೇಡವೇ ಬೇಡವೆಂದು ಬಜಜರು ನಿರಾಕರಿಸಿಬಿಟ್ಟರು. ಒಮ್ಮೆ ಬಜಜರು ಪೋಲೀಸ್ ಸುಪರಿಂಟೆಂಡೆಂಟರೊಬ್ಬರೊಡನೆ ಮಾತಾಡುತ್ತಿದ್ದಾಗ ಅವರು "ತಿಲಕರನ್ನು ಇಂಗ್ಲೆಂಡಿಗೊಯ್ಯುವ ಹಡಗವೇ ಮುಳುಗಿ ಹೋಗುತ್ತಿದ್ದರೆಷ್ಟು ಒಳ್ಳೇದಿತ್ತು!" ಎಂದು ಉದ್ಗಾರವೆತ್ತಿದರು. "ಆ ಹಡಗದಲ್ಲಿ ಅನೇಕ ಮಂದಿ ಆಂಗ್ಲೇಯರಿರುವರೆಂಬುದನ್ನು ನೀವು ಮರೆತಿರುವಿರೇನು?" ಎಂದರು ಬಜಜರು ವ್ಯಂಗವಾಗಿ.

ಗಾಂಧಿಜಿಯವರ ನಾಯಕತ್ವದಲ್ಲಿ ಸಾರ್ವಜನಿಕ ಮತ್ತು ರಾಷ್ಟ್ರೀಯ ಸೇವಾ ದೀಕ್ಷೆ ವಹಿಸಿದ ಮೇಲಂತೂ ಬಜಜರು ತೋರಿಸಿರುವ ಧೈರ್ಯ, ಸ್ಥೈರ್ಯ ಮತ್ತು ತ್ಯಾಗವು ಅತ್ಯುಜ್ವಲವಾಗಿ ರಾಷ್ಟ್ರೀಯ ಇತಿಹಾಸದಲ್ಲಿ ಚಿರಸ್ಮರಣೀಯವಿರುವುದು. ಜಮುನಾಲಾಲ್ ಬಜಜರಷ್ಟು ಆಡಂಬರ ಮತ್ತು ಒಣ ಗೌರವರಹಿತ ಶ್ರೀಮಂತರೀ ಲೋಕದಲ್ಲಿ ಅತಿ ವಿರಳ. ತಾನೊಬ್ಬ ಧನಿಕ, ಮ್ಹಾಲಕನೆಂಬ ಭಾವನೆಯೇ ಅವರಲ್ಲಿದ್ದಿಲ್ಲ. ಜಾತೀಯತೆ ಮತ್ತು ಪ್ರಾಂತೀಯತೆಯ ಸಂಕುಚಿತತೆಯಿಂದ ಸಂಪೂರ್ಣ ವಿಮುಕ್ತರಾಗಿದ್ದರು. ಮಾನವ ಕರುಣಾಮೃತವು ಸದಾ ಉಕ್ಕಿ ಹರಿಯುತಿತ್ತವರಲ್ಲಿ. ತಮ್ಮ ಆಶೆ ಮತ್ತು ಪ್ರಲೋಭನಗಳನ್ನು ಉದಾತ್ತೀಕರಿಸಿ ಜೀವನವನ್ನು ಜನಸೇವೆಯ ಉಪಕರಣವಾಗಿ ಮಾಡಬಲ್ಲ ಕೆಲವೇ ಸತ್ಪುರುಷರಲ್ಲಿ ಜಮುನಾಲಾಲರೊಬ್ಬರು.

ನಿರುತ್ಸಾಹಜನಕ ವಾತಾವರಣದಲ್ಲಿ, ನಿರುತ್ಸಾಹಕರ ಪರಿಸ್ಥಿತಿಯಲ್ಲಿ ಮತ್ತಷ್ಟು ಹೆಚ್ಚಿನ ವಿಶ್ವಾಸ ಮತ್ತು ಉತ್ಸಾಹದಿಂದ ಕೆಲಸಮಾಡುವ ಸ್ವಭಾವ ಜಮುನಾಲಾಲರದ್ದು. ಗಾಂಧಿಜಿಯವರು ೬ ವರ್ಷಗಳ ಕಠಿಣ ಕಾರಾವಾಸಕ್ಕೊಳಗಾಗಿದ್ದಾಗಲೆ ಜಮುನಾಲಾಲ ಬಜಜರು, ರೂ. 2, ... ಲಕ್ಷ ದಾನವಿತ್ತು ಗಾಂಧಿ ಸೇವಾ ಸಂಘವನ್ನು ಸ್ಥಾಪಿಸಿದುದು. ಕಾಂಗ್ರೆಸಿನ ... ಧಾಯಕ ಕಾರ್ಯಕ್ರಮಕ್ಕೇನೇ ಬಜಜರು ಹೆಚ್ಚಾಗಿ ಲಕ್ಷ್ಯವೀಯುತ್ತಿದ್ದರು. ಬಡಿಗೆ ತನ್ನ ಸಂಪತ್ತು, ಶಕ್ತಿ ಮತ್ತು ಶ್ರಮವನ್ನವರು ಸಂಪೂರ್ಣವಾಗಿ ಕೊಟ್ಟಿದ್ದರು. ತನ್ನ ಸಮಾಜದವರು ವಿರೋಧಿಸಿದರು ಹಿಂದುಸ್ಥಾನದಲ್ಲೇ ಪ್ರಥಮವಾಗಿ ದೊಡ್ಡ ದೇವಸ್ಥಾನವೊಂದನ್ನು ಹರಿಜನರಿಗೆ ತೆರೆದು ಹಾಕಿದ್ದರು. ಇಂದೀಗ ಗಾಂಧಿಜಿಯವರ ನಿವಾಸವಾದ ಸೇವಾ ಗ್ರಾಮದ ... ದಾಯವನ್ನೆಲ್ಲಾ ಹರಿಜನೋದ್ಧಾರಕ್ಕಾಗಿ ಕೊಟ್ಟಿರುವರು. ಹಿಂದು - ಮುಸಲ್ಮಾನ ಐಕ್ಯಕ್ಕವರು ಪ್ರಾಣಾರ್ಪಣೆ ಮಾಡಲು ಸಿದ್ಧರಿದ್ದರು. ಒಂದು ಗಲಾಟೆಯಲ್ಲವರು ಸಂತೋಷದಿಂದ ಪೆಟ್ಟು ಕೂಡಾ ತಿಂದಿದ್ದರು. ಗ್ರಾಮ ಕೈಗಾರಿಕೋದ್ಧಾರಕ್ಕಾಗಿ ಸಾಧ್ಯವಾದಷ್ಟು ದುಡಿಯುತ್ತಿದ್ದರು. ಗೋರಕ್ಷಣಾ ಚಳವಳಿ ಪಂಚಪ್ರಾಣವೇ ಆಗಿದ್ದು ತನ್ನ ಕೊನೆಗಾಲದಲ್ಲಿ ಗೋಸೇವಾ ಸಂಘದ ಕೆಲಸದಲ್ಲಿ ನಿರತವಾಗಿದ್ದರು.

ದಿವಂಗತ ಬಜಜರ ಪತ್ನಿ ಶ್ರೀಮತಿ ಜಾನಕಿ ಬಾಯಿಯವರು ಪತಿಯೊಂದಿಗೆ ಸಹಗಮನ ಮಾಡಲು ಮುಂದಾಗಿದ್ದರನ್ನು ಗಾಂಧಿಜಿಯವರು ತಡೆದು ನಿಲ್ಲಿಸಿದ್ದು. ಪತಿಗೆ ತಕ್ಕ ಪತ್ನಿಯಾಗಿದ್ದರವರು ಇಂದೀಗ ಪತಿಯ ಕಾರ್ಯಗಳನ್ನು ಮುಂದರಿಸುವ ದೀಕ್ಷಾಬದ್ಧರಾಗಿರುವರವರು. ... ನ್ನ ಪಾಲಿನ ರೂ. 3½ಲಕ್ಷದಷ್ಟರ ಸಂಪತ್ತನ್ನು ಗೋಸೇವಾ ಸಂಘಕ್ಕಾಗಿ ಸಮರ್ಪಿಸಿ ತನ್ನ ಮುಂದಿನ ಜೀವನವನ್ನು ಗೋಸೇವಾ ಕಾರ್ಯದಲ್ಲಿ ಕಳೆದು ಪತಿಯ ... ತ ಪ್ರೀತಿಯ ಕಾರ್ಯವನ್ನು ಮುನ್ನಡೆಸುವ ನಿರ್ಧಾರ ಮಾಡಿರುವರು.

ನೋಟೀಸು.

ಕುಂದಾಪುರ ಡಿ. ಮುನ್ಸಿಫ ಕೋರ್ಟಿನಲ್ಲಿ.

O. S No. /1942.

ವಾದಿ—ನರಹರಿಕಿಣಿ ಈತನ ಜನರಲ್ ಪವರ್ ಒಫ್ ಎಟೋರ್ನಿ ಹೋಲ್ಡರ್, ಕೆ. ಗೋಪಾಲಕಿಣಿ. ಪ್ರತಿವಾದಿಯು - 1ಶ್ರೀನಿವಾಸ ಕಿಣಿ, ನರಸಿಂಹ ಕಿಣಿಯರ ಮಗ 2 ಸಾಂತೇರಿ ಅನ್ಯ. 1ನೇ ಪ್ರತಿವಾದಿ ಹೆಂಡ್ತಿ. ಕುಂದಾಪುರ ಕಸಬಾ ಗ್ರಾಮದ ಕೋಡಿಯಲ್ಲಿರುವವರು.

ಸದ್ರಿ ಪ್ರತಿವಾದಿರೀಗೆ, ವಾದಿಯು ಪ್ರತಿವಾದಿರ ಮೇಲೆ ಬಾಲಗೇಣಿ ಗೇಣಿ ಬಾಕಿಗೂ, ಅಸ್ತಿ ಸ್ವಾಧೀನತೆ ಬಗ್ಗೆಯೂ ಸಹಾ ಸದ್ರಿ ದಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ. 19-3-1942ನೇ ದಿವ್ಸ ಈ ಕೋರ್ಟಿನ ಮುಂದೆ ಹಗಲು 11ಗಂಟೆಗೆ ಹಾಜರಾಗಿ ಪ್ರಾತಿನಿಧ್ಯ ಮಾಡಿಕೊಳ್ಳತಕ್ಕದ್ದೆಂತ ಯಾ ಮೂಲಕ ತಿಳಿಸಲಾಗುತ್ತದೆ.

K. Narasimha kamath.
Pleader for Plaintiff.
Coondapoor 26-2-1942.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills:	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD 1906

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು)

ತುಲಾ—ಆಪತ್ತು ಬಂದಾಗ ಅತಿ ಧೈರ್ಯ ವೆಂಬಂತೆ ಕಷ್ಟ ಬಂದಾಗ ಧೈರ್ಯತಾಳಿ ಸಹನೆಯಿಂದ ಅದನ್ನು ಪಾರು ಗಾಣಿಸುವವನೇ ಜಾಣನು ಇಂದಿನ ನಿಮ್ಮ ಗ್ರಹಚಾರವನ್ನು ನೋಡಿದರೆ ಎಂತಹ ದೃಢಮತಿಯ ಮನಸ್ಸೂ ಕಳವಳಗೊಳ್ಳದಿರದು. ಅನಾರೋಗ್ಯ, ಶತ್ರುಗಳ ಪೀಡೆ, ಆರ್ಥಿಕ ತಗಾದೆ,ಕುಟುಂಬ ವಿರಹ ಇತ್ಯಾದ್ಯನಿಷ್ಟ ಪರಂಪರೆಗಳು ನಿಮ್ಮನ್ನಾವರಿಸಿದ ಸಾಲದುದಕ್ಕೆ ಮೇಲಿಂದ ಮೇಲೆ ಪ್ರವಾಸವೂ ಕೂಡ ಗಂಟುಬೀಳುವದು. ಆದರೂ ಸುಖಸ್ಥಾನಾಸೀನರಾದ ಬುಧ ಶುಕ್ರರು ತಾ ೬, 7, 10, 11, 12 ಈ ದಿನಗಳಲ್ಲಿ ಕೊಂಚ ನಿಮಗೆ ಧೈರ್ಯ ಸ್ಥೈರ್ಯ ಚಿತ್ತ ಶಾಂತಿಯನ್ನೊದಗಿಸಲಿರುವರು

ವೃಶ್ಚಿಕ—ನೀವು ಒಳ್ಳೆಯ ವಾಗ್ಮಿಗಳೂ ಜನಬಲಯುತರೂ ಆಗಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಪರಾಭವ ಹೊಂದುವ ಸಂಭವವಿದೆ. ಮಾತ್ರವಲ್ಲದೆ ಪ್ರತಿಕಕ್ಷಿಗಳಿಂದ ಮಾನಹಾನಿಯೂ ಕೂಡ ಉಂಟಾದೀತು ಅಧಿಕಾರಿಗಳ ಮನವೊಲಿಸಲು ಯತ್ನಿಸಿ ನಿಷ್ಫಲರಾಗುವಿರಿ. ಆದರೂ ನಿಮ್ಮ ನಿತ್ಯದ ಆಗಹೋಗಗಳಿಗೆ ಬೇಕಷ್ಟು ಸಲಕರಣೆಗೆ ಏನೂ ಕೊರತೆಯುಂಟಾಗದು ಶಿಲ್ಪ, ಕೃಷಿಕೆ, ವ್ಯಾಪಾರಾದ್ಯುದ್ಯಮಿಗಳಿಗೆ ಶ್ರಮಕ್ಕನುಗುಣವಾದ ಫಲಪ್ರಾಪ್ತಿಯಿದೆ ತಾ. ೬ 8 9 ಅನುಕೂಲ ದಿನಗಳು

ಧನು—ನಿಮ್ಮ ಭಾಗ್ಯ ರವಿಯು ಇಂದಿಗೆ ಉದಯಾಚಲವನ್ನು ಕೋಡಿಸುತ್ತಿರುವನು ನಿಮ್ಮ ಯಾವತ್ತು ಮನೋರಥಗಳು ಏನೊಂದೂ ವಿಘ್ನಾತಂಕಗಳಿಲ್ಲದ ಅಲ್ಪಾವಕಾಶದಲ್ಲಿ ನೆರವೇರಲಿವೆ. ಸಕಲ ವಿಧದ ಸುಖ ಸೌಭಾಗ್ಯಗಳೂ ಅನಾಯಾಸದಿಂದ ಲಭಿಸುವವು. ಮಹತ್ವಾಕಾಂಕ್ಷಿಗಳ ಅಭಿಲಷಿತಾರ್ಥವು ಸಿದ್ಧಿಸಲು ಇದೀಗ ಸುಸಂಧಿಯು ಸುಖಪತಿಯು ವಿಮುಖನಾಗಿದ್ದರೂ ನೀವು ತಾ 5 6 7 10 11, 12 ಈ ದಿನಗಳನ್ನು ನಿರೋಗದಿಂದಲೂ ನಿಶ್ಚಿಂತೆಯಿಂದಲೂ ಸುಖದಿಂದಲೂ ಕಳೆಯಲಿರುವಿರಿ

ಮಕರ— ಗೃಹೋಪಕರಣಗಳಿಗೂ ಉಪಭೋಗವಸ್ತುಗಳಿಗೂ ಏನೂ ಕೊರತೆಯಿಲ್ಲದಿರುವುದರಿಂದ ವಿಲಾಸಿ ಜನರು ನಿಶ್ಚಿಂತೆಯಿಂದ ಕಾಲಕಳೆವರು. ಆದರೆ ಮಕ್ಕಳ ನಿಮಿತ್ತ ಮನಸ್ಸಿಗೆ ಕೊಂಚ ದುಃಖವಾಗಲಿದೆ. ಮಾತಿನಲ್ಲೂ ಕೃತಿಯಲ್ಲೂ ಪೂರ್ವಾಪರ ವಿರೋಧವಾಗಿ ವರ್ತಿಸಿ ಜನರೊಡನೆ ಕಲಹವೈರಗಳನ್ನು ಕಟ್ಟಿಕೊಳ್ಳುವಿರಿ. ಪುರಸ್ಕಾರಕ್ಕಿಂತಲೂ ತಿರಸ್ಕಾರವೇ ಹಲವೆಡೆ ದೊರೆತೀತು. ಮನದಲ್ಲಿ ಧೈರ್ಯಕ್ಕೆಡೆಯಿಲ್ಲದಿರುವುದರಿಂದ ಹೆಚ್ಚಿನ ಸಮಯವನ್ನು ನಿರುದ್ಯೋಗದಿಂದಲೇ ಕಳೆವಿರಿ. ತಾ. ೬ರಿಂದ 9ರ ವರೆಗಿನ ದಿನಗಳು ಅಷ್ಟೊಂದು ಕೆಟ್ಟಿಲ್ಲವು.

ಕುಂಭ—'ಊರು ಬಿಟ್ಟು ಪರವೂರಿಗೆ ಹೋದರೆ ಪ್ರಾರಬ್ಧವು ಬೇರಾದೀತೇ' ಎಂಬ ದಾಸರ ಉಕ್ತಿಯಂತೆ ಪ್ರಾರಬ್ಧ ಕರ್ಮದಿಂದ ಪರಿತಪಿಸುತ್ತಿರುವ ನರನು ತನಗೆ ಇದ್ದ ಊರೇ ಒಳಿತಲ್ಲವೆಂದು ಬೇರೂರಿಗೆ ಹೋದರೂ ಅವನ ಅವಸ್ಥೆಯು ಬೇರೆ ತಪ್ಪಲಾರದು. ಸದ್ಯ ನಿಮ್ಮ ದುರ್ವಿಧಿಯಿಂದ ನಾನಾ ತರದ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿ ಬಂದಿದೆ. ಪ್ರಕೃತ ನಿಮಗೆ 'ನಾನಿದ್ದೇನೆ' ಎಂದು ಧೈರ್ಯ ಹೇಳುವವರಾರೂ ದೊರೆಯರು, ಕೆಟ್ಟ ಕೆಟ್ಟ ವಿಚಾರಗಳೇ ಮನದಲ್ಲಿ ಮೂಡುವವು. ಆದರೂ ವಾರಾಂತ್ಯದ ಏದಿನಗಳಲ್ಲಿ ಹಿಂದಿಗಿಂತ ಸ್ವಲ್ಪ ಸುಖ ಲಭಿಸೀತು

ಮೀನ—ಇನ್ನು ಸಾಮಾನ್ಯ 22ವರ್ಷಗಳ ಪರ್ಯಂತ ನಿಮಗೆ ಈ ಏಳೂವರೆ (ಸಾಡೇಸಾತ್) ಶನಿಯ ಕಾಟವಿರುವದು ನಿಮ್ಮ ಧನ, ಭಾಗ್ಯ ಮತ್ತು ಲಾಭ ಪತಿಗಳು ಈಗ ನಿಮಗೆ ಪೂರ್ಣ ಅನುಕೂಲರಿರುವುದರಿಂದ ನಿಮ್ಮ ಆಪತ್ತುಗಳಲ್ಲಿವೂ ಅಲ್ಲಲ್ಲಿಗೆ ಸಹಾಯವಾಗುವವು. ನಿಮ್ಮ ಶಕ್ತಿಗಿಂತ ಅಧಿಕ ದುಡಿಯುವಿರಿ ಮಾತ್ರವಲ್ಲ, ಕಳೆದುಹೋದ ದ್ರವ್ಯ,ವಸ್ತುಗಳು ಪುನಃ ಲಭಿಸುವುದರಿಂದ ನಿಮ್ಮ ಸಾಂಪತ್ತಿಕ ಭಾಗವು ಅತ್ಯುತ್ತಮಸ್ಥಿತಿಗೆ ಬರಲಿದೆ. ತಾ ೬ರಿಂದ 9ರ ವರೆಗಿನ ದಿನಗಳು ಸ್ವಲ್ಪ ಕೆಟ್ಟಿರುವುದರಿಂದ ಇಚ್ಛಾಪೂರ್ತಿಗೆ ಭಂಗ ಬರಲಿದೆ. ಸ್ವಲ್ಪದೇಹಾಲಸ್ಯವೂ ತೋರೀತು.

DIAMONDS! DIAMONDS!

K. R. K. SHET.

Opposite Govt College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!

ಉತ್ಕೃಷ್ಟ ತರಗತಿಯ ಚೆನ್ನಾಗಿ (First quality selected) ಆರಿಸಿದ ನಮ್ಮಲ್ಲಿಂದ ಬರುವ ವಜ್ರಗಳು ಯಾರುಗಳೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರು ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು ಹಂಪನಕಟ್ಟೆ, ಮಂಗಳೂರು

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರ ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟ ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು. ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಮುಟ್ಟಿನಲ್ಲಿ ಸೇವಿಸಬೇಕು.

ಪಥ್ಯ.—ಹೆರವಿಲ್ಲದೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೮ ಆಣೆ.

ಮಾಲಕರು.—ಹಾಲಪ್ಪ ಫಕೀರಪ್ಪ, ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ ... ಲಿಂಗಪ್ಪ ಧಾರವಾಡದ, ವಿಜಾಪೂರ ... ಬೆಂಗಳೂರ ... ಗೇರಿ — ದಾವಣಗೇರಿ ಪ್ರೆಸ್ಸ್. ... ಗೋಕಾಕ — ಸಂಗಪ್ಪ ಶಿವಲಿಂಗಪ್ಪ ಅಂಗಡಿ

ಸ್ವದೇಶಿ ಔಷಧ ಭಂಡಾರ ಕುಂಜಾಲು,

—ಇವರ—

ಖ್ಯಾತಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ಟಾನಿಕ್)	0	12	0
ಆಮಲಕೀ ತೈಲ (ಸುವಾಸಿತ) ಸಣ್ಣದು	0	6	0
,, ,, ,, ದೊಡ್ಡದು	0	1	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಪಿಯೂಷಾಂಜನ (ಸಕಲ ನೋವುಗಳಿಗೆ)	0	1	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ೨ಕ್ಕೆ	0	7	0
,, ,, ,, ,, ೮ಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ

Swadeshi Oushadhi Bhandar

KUNJAL P. O S. I.

ಉಡುಪಿಯ ಏಜಂಟರು.—

ನವಭಾರತ ಪುಸ್ತಕ ಭಂಡಾರ, ಉಡುಪಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

ಮುಖ್ಯ ಕಾರ್ಯಾಲಯ:—ಕೋರ್ಟ್ ರಸ್ತೆ, ಉಡುಪಿ

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕನ್ನಿಗೋಳಿ, ದ ಕನ್ನಡ

ಶೇರ್ತ ಮೂಲಧನ	... ...	ರೂ 1,82,100.
ಕ್ಷೇಮ ನಿಧಿಗಳು	... ...	ರೂ 1,82,100

ಕ್ಕೆ ಮಿಕ್ಕಿ ಇರುತ್ತದೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನು, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವುದು. ಬುಡ್ಡಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅವಶ್ಯಕವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗರ್ಭಕೋಶವನ್ನು ಶುದ್ಧಿಗೊಳಿಸಿ, ರಕ್ತಧಾತು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವ ದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1)ಪೀಪಲ್ಸ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ನ ಮರ್ಚೆಂಟ್ ರೋಡ್, ಹರೀಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜ. ಬಿ ಕಿ, ಮಾಡುಂಗಾ, (3) ಮಿಲ್ಲರ್ ಪೇಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ.(7) ಡಾ ಶ್ರೀನಿವಾಸ, ವೈ. ಪುತ್ತೂರು. (8) ಕಾಂತಾವರ ಮಾಧವ ಕಮ್ತಿ, ಬೆಳ್ತಂಗಡಿ. (9) ನವಭಾರತ ಬುಕ್ ಡಿಪ್ಪೋ, ಕೋಟದ ಪೇಟೆ, ಉಡುಪಿ. (10) ಕೃಷ್ಣಾ ಫಾರ್ಮಸಿ, ಕುಂದಾಪುರ, (11) ಕಾಸರಗೋಡು ಶ್ರೀ ರಾಮ ಸ್ಟೋರ್ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ, ಹಿರ್ಗಾಣ, (13) ಬಿ. ಯಸ್. ಸೀತಾರಾಮ್ ಮರ್ಚೆಂಟ್, ಚಿಕ್ಕಮಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಪ್ ಮುಲಾಮು. —

ಇಷ್ಟರವರೆಗೆ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager. **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನಿ,

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಸಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ.

ಉಡುಪಿ.

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ, ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,

ಪ್ರೊಪ್ರೈಟರ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನಸ್ಸನ್ನು ರಂಜಿಸಿವೆ; ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	**ಅಪಾತ್ರನಂದಿನಿ**	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕೆಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು—**ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರೂಕ ಹೆಚ್ಚುವುದು. ಇದು ಮಧುವಾಂಗಿದೆ

ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಅಣೆ;

ಟಿ. ಪಿ. ೯ ಅಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, **ಶಿವಮೊಗ್ಗಾ!**

ಉಡುಪಿ ಸ್ಟಾಕಿಸ್ಟರು— **ನವಭಾರತ ಬುಕ್ ಡಿಪೋ, ಉಡುಪಿ.**

ಸ್ಥಾಪನೆ ಕ್ರೌನ ರಬರ [illegible] 1926

18 ಬಲ್ಮಠ ರಸ್ತೆ, ಮಂಗಳೂರು

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt. Mysore.

[illegible] by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘ [illegible] ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವವು. ಅಂದರೆ ಕೇವಲ [illegible] ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 [illegible]

EDITED BY K. K. SHETTY. PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪಿತ.

ಅಂತರಂಗ
ಹೊಸ ಮಾದರಿಯ
ಸಚಿತ್ರ ವಾರಪತ್ರಿಕೆ
ವಾ. ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

Read and Advertise in
ANTARANGA
The All Karnataka Illustrated Weekly
Udipi - S. India

ಸಂಪುಟ ೨೧ | Vol. 21

ಸಂಪಾದಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

12-3-1942

ಸಂಚಿಕೆ ೨೭ | No. 27

ನೋಟೀಸು

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 391/1939
R. E. P. No 123/1941
R. E. A. No 112/1942.

ವಾದಿ—ಮಂಜುನಾಥ ಕಾರಂತ, ಕೋಟೇಶ್ವರ ಸುಬ್ರಾಯ ಕಾರಂತರ ಮಗ, ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದಲ್ಲಿರುವವ, ಪೋಸ್ಟ್-ಬಸ್ರೂರು

ಪ್ರತಿವಾದಿರು—5 ಗೋವಿಂದ. 6 ಪುಟ್ಟ, 7 ಶೀನ, ಗೋವಿಂದನ ಮಕ್ಕಳು. 8 ನಾರಾಯಣ, ಮಂಜುನಾಥನ ಮಗ

ಕುಂದಾಪುರ ತಾಲ್ಲೂಕು ಹಂಗಳೂರು ಗ್ರಾಮದಲ್ಲಿರುವವರು, ಪೋಸ್ಟ್ ಮಾಬುಕಳ.

11 ರಮಾನಂದ ರಾವ್, 12 ಗಣೇಶ ಸುಂದರ ರಾವ್, ರಾಮರಾಯನ ಮಕ್ಕಳು. ಕಾಸರಗೋಡು ಮುನ್ಸಿಫ್ ಕೋರ್ಟು ಚಕರಬಂದಿ, ಕಾಸರಗೋಡು ತಾಲ್ಲೂಕು ಕಾಸರಗೋಡು ಕಸಬಾದಲ್ಲಿರುವವರು,

ಪೋಸ್ಟ್-ಕಾಸರಗೋಡು,

14 ವೆಂಕಟ, ಮಂಜನ ಮಗ, 16 ಅಣ್ಣಪ್ಪ, ಕೂಡಿನ ಗದ್ದೆ ಶೇಷಿ ಹೆಂಗಸಿನ ಮಗ, ಕುಂದಾಪುರ ತಾಲ್ಲೂಕು ಕಿರಿಮಂಜೇಶ್ವರ ಗ್ರಾಮದಲ್ಲಿರುವವರು,

ಪೋಸ್ಟ್-ಬೈಂದೂರ.

20 ಮಂಜ, 15ನೇ ಪ್ರತಿವಾದಿ ನಾಗನ ಅಳಿಯ 21 ಶೇಷಿ ಹೆಂಗಸು, 15ನೇ ಪ್ರತಿವಾದಿ ನಾಗನ ಹೆಂಡತಿ, ಕುಂದಾಪುರ ತಾಲ್ಲೂಕು ಹೇರೂರು ಗ್ರಾಮದಲ್ಲಿರುವವರು,

ಪೋಸ್ಟ್-ಬೈಂದೂರು,

ಮೇಲ್ಕಂಡ ಅರ್ಜಿದಾರನು ಮೇಲ್ಕಂಡ ಡಿಕ್ರಿ ಸಮಾಧಾನದ ಬಗ್ಗೆ ನಡೆಸಿದ ನೀಲಾಮು ಅನುಲಾಗಾಯ್ತಿ ಇಸ್ತಾಹಿರಿನ ಶರ್ತ ನಿರ್ಣಯಿಸುವ ಬಗ್ಗೆ ಮ 15ನೇ ಎದ್ರಿ ಮೃತನಾಗನ ವಾರಿಸ್ದಾರನಾಗಿ 20-21ನೇ ಎದ್ರಿರನ್ನು ಸೇರಿಸಬೇಕಾಗಿ ಕೊಟ್ಟ R. E. A. 112/1942ನೇ ಅರ್ಜಿ ನಮೂ ತಾ. 23-3-1942ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಣೆಯಿದ್ದ ಪಕ್ಷದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ದ ಸದ್ರಿ ಎದ್ರಿರನ್ನು ಎಕ್ಸಪಾರ್ಟಿ ಮಾಡಿ ಅವರ ಗೈರುಹಾಜ್ರಿಯಲ್ಲಿ ಸದ್ರಿ ಅರ್ಜಿಗಳನ್ನು ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಿರುತ್ತನೆ.

(Sd) **M. Mahabala Hebbar**
Advocate for Petitioner.
ಮೊಕ್ಕಾಂ: ಕುಂದಾಪುರ. ತಾ. 2-3 1942.

Degrees: Books: Medicines

Free H. L. M. S. M B. H. M. D. etc Free Homeo Ayur Unani-Nature degr . Py post also—Practitioners also get soon Homeo Materiamedica, Rs. 5. Homeo practice book Rs. 4, Insanity Cure Pills Rs. 10 Enclose 2 annas stamp:—

Principal, Indian Homeopath Institute & Society (Govt. Regd.)
P.O. Mahuva, (Kathiawar Dt. India.)

Sidha-Kalpa Kavach (Regd.)

No. 3 Rs. 2, No 2 Rs. 5 No 1. Rs 7 Special Rs. 10, Extra Special Rs. 17, for love marriage health. wealth. Ask any six questions with M. O. Re. 1/4 and get correct answers by return post Life reading Rs. 2 No V. P. P. Send M. O. I red pamphlets. Prof. Dr. N. H. Chhatbar.
P. O. Mahuva (Kathiawar India.)

ASSURES SECURITY FOR OVER ONE MILLION PARTNERS

SUN LIFE of CANADA

INCORPORATED IN CANADA IN 1865 AS A LIMITED COMPANY.

APPRECIATION.

FROM

Mrs. Rukmini Shedthi,
W/O Late Mr. Korgi Venkappa Shetty,
Huyyar, P. O. Shankernarayana, S. Canara.

TO

THE BRANCH MANAGER.
Sun Life of Canada,
MADRAS.

DEAR SIR

Re. Pol No 3220512- K. V Shetty (Decd.)

I am in receipt of your cheque dated 22nd Jan. '42 for Rs. 2,856–9–0 (Rupees two thousand eight hundred fiftysix and annas nine) in full and final settlement of all the claims due to me under the above policy of my late husband.

Permit me to state here that I am struck with surprise at the speedy disposal of this claim, especially at this war-time.

Here I think that it will not be out of place to mention the services and attention rendered to me by your worthy agent, Sri **K. Shanker Shetty** of Basrur in completing and forwarding the claims papers to you.

I wish your Company & agent every prosperity.

You can use this letter as you deem fit mentioning my name and signature even.

Thanking you once again

Wit: M. R. Shetty — *Yours faithfully,*

Coondapoor, 29th Jan. 42. — Sd. Rukmini Shedthi.
Claimant

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. A. P. 700/41
In O. S 249/37

ಅರ್ಜಿದಾರರು- ದಿ- ಬೆಂಕ್ ಆಫ್ of ಮದ್ರಾಸು.

ಎದ್ರಿ- ಕೃಷ್ಣ ಜೈನ-

3ನೇ ನಾಗರಿಕದ ಹೊಂತಂಬ್ರಾ-ಕದವ ಈಶ್ವರ ಭಟ್ರ ಹೆಂಡ್ತಿ- ಪುತ್ತೂರು ತಾಲೂಕು, ಕೆದಿಲ ಗ್ರಾಮ, ಇವರಿಗೆ ಈ ಕೋರ್ಟು ಮೂಲಕ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಡಿಕ್ರಿ ಅನ್ವಯಾರಿಯಲ್ಲಿ ಅರ್ಜಿದಾರರು ಸದ್ರಿ O. S. 249/37ನೇ ಡಿಕ್ರಿಯನ್ನು ಜಪ್ತಿ ಮಾಡಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಮೇಲ್ಕಂಡ ಕೋರ್ಟು ಮುಂದೆ ತಾ. 31-3-42ನೇ ಹಗಲು 10 ಘಂಟೆಗೆ ತಪ್ಪದೇ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು.

(By order of the court)

B. Achuta Baliga

Puttur S. K. 4-3-2 — Pleader for Pet.

WANTED.

A trained teacher of the Secondary Grade to be the Headmaster of Posval Aided Ele. School, Mundkur village, Mangalore Taluk on Rs. 20/- per month. Free quarter—

Apply for particulars to—

K. P. Subbaya Shetty,
Manager.
Posval Aided Ele. School,
MUNDKUR,
Post Kadandale,
S. Kanara.

ಆಮಂತ್ರಣ ಪತ್ರಿಕೆಗಳು.

ಮದುವೆ, ಉಪನಯನ,

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,
ಕೋಳದ ಪೇಟೆ ರಸ್ತೆ,
ಉಡುಪಿ.

—o—

ಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ದೂಡಿದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ . . ದ. ಭಾರತ.

The Canara Mutual Assurance Company, Limited.

UDIPI : : S. INDIA.

ಈ ವಾರದ ಭವಿಷ್ಯ

ತಾರೀಖು ೧೨—೩—೪೦ರಿಂದ ತಾರೀಖು ೧೯—೩—೪೦ರ ವರೆಗೆ

ಮೇಷ—ಈ ವಾರದಲ್ಲಿ ನಿಮ್ಮ ಗ್ರಹಮಾನವು ವಿಶೇಷ ಪ್ರತಿಕೂಲವಿರುವುದು. ಆತ್ಮೀಯರೇ ವಿರೋಧವಾಗಿ ನಿಲ್ಲುವುದರಿಂದ ಮನಸ್ಸು ಯಾವಾಗಲೂ ಅಶಾಂತಿಯ ಬೀಡಾಗುವುದು. ಮಾತು ಮಾತಿಗೆ ಕಲಹ ಅವಮಾನಗಳು ಸಂಭವಿಸುವ ಪ್ರಸಕ್ತಿಯಿದೆ. ಸಂಪಾದನೆಗಿಂತ ಇಮ್ಮಡಿ ಖರ್ಚುಗಳು ಪ್ರಾಪ್ತವಾಗುವುದರಿಂದ ಹಣದ ಬಿಕ್ಕಟ್ಟು ಹೆಚ್ಚುವುದು. ರಾಜಕೀಯ ವಿಚಾರದಲ್ಲಿ ಸರ್ವತ್ರ ಪ್ರತಿಕೂಲ ಸ್ಥಿತಿಯೇ ಕಂಡುಬರುವುದು. ಆದರೂ ವಿದ್ಯೋಪಜೀವಿಗಳು ಹೆಚ್ಚಿನ ತಗಾದೆ, ತಾಪತ್ರಯಗಳಿಗೆ ಸಿಗುವ ಸಂಭವವಿಲ್ಲ. ತಾ. 12. 17. 16 ಈ 3 ದಿನಗಳು ರಾಜಭಯ, ದೇಹಾಲಸ್ಯ ಮತ್ತು ವ್ಯರ್ಥ ಧನನಾಶಕಾರಿಗಳಾಗಿವೆ.

ವೃಷಭ — ಇಂದಿನ ಗ್ರಹಸ್ಥಿತಿಯು ನಿಮ್ಮನ್ನು ಸಮತೂಕದಲ್ಲಿ ನಿಲ್ಲಿಸಿದೆ. ಖರ್ಚಿಗೆ ತಕ್ಕಷ್ಟು ಸ್ವಯಮೇವ ದುಡಿಯುವಿರಿ. ಸುಖದುಃಖಗಳು ಸಮಪ್ರಮಾಣವಾಗಿವೆ. ಪ್ರವಾಸಿಗರಿಗೆ ವಿಶೇಷ ಅಪಾಯಕಾರಿಯಾಗಿರುವದೀ ಕಾಲವು. ವಿಷಜಂತು ಪ್ರಾಣಿಗಳಿಂದಲೂ ಬೆಂಕಿಯಿಂದಲೂ ಭಯವಿದೆ. ಅವಿವೇಕದಿಂದಾಗಿ ಸ್ಥಾನಚ್ಯುತಿಯೂ ಕೂಡ ಸಂಘಟಿಸಬಹುದು. ಹಿಡಿದ ಕಾರ್ಯಗಳು ಶತ್ರುಗಳ ವಿಘ್ನಗಳೊಂದೂ ಇಲ್ಲದೆ ನಿರಾಯಾಸದಿಂದ ಕೊನೆಗೊಂಡುವವು. ವಿಶೇಷತಃ ಸ್ತ್ರೀಮುಖದಿಂದ ಲಾಭವಿದೆ. ತಾ 15ರಿಂದ 18ರ ವರೆಗಿನ ದಿನಗಳಲ್ಲಿ ಇಚ್ಛಾಪೂರ್ತಿ, ಸುಖ, ಮಿತ್ರ ಸಮಾಗಮದಿಂದ ಸಂತೋಷವೂ ಇದೆ.

ಮಿಥುನ— ದೇಹ ಸುಖಪತಿಯಾದ ಬುಧನು ಪ್ರತಿಕೂಲನಾಗಿರುವನು. ಲಾಭಪತಿಯು ವ್ಯಯವನ್ನಡರಿರುವನು. ಗುರ್ವನುಗ್ರಹವೂ ಕೂಡ ಇಲ್ಲವು. ಸಾಲದುದಕ್ಕೆ ಏಳೂವರೆ ಶನಿಯ ಕಾಟವೂ ಪುನಃ ಪ್ರಾರಂಭಿಸಿರುವದು. ಅಂದ ಮೇಲೆ ನಿಮ್ಮ ಪರಿಸ್ಥಿತಿಯು ಎಷ್ಟೊಂದು ಕಷ್ಟಸ್ಥಿತಿಯಲ್ಲಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಪ್ರಯತ್ನವು ಸಲಶೂನ್ಯವಾಗುವುದು. ಉತ್ಪತ್ತಿಯು ಸಾಕಷ್ಟು ದೊರೆಯದು. ದೇಹಕ್ಕೂ ಮನಸ್ಸಿಗೂ ಸುಖಶಾಂತಿಯೆಂಬುದು ಇಲ್ಲವಾಗುವುದು. ಆದರೂ ತಾ 12 17 18 19 ಈ 4 ದಿನಗಳಲ್ಲಿ ಕಿಂಚಿದ್ದೈವಬಲವಿರುವುದರಿಂದ ಕಾರ್ಯಸಿದ್ಧಿ, ವಿಜಯ, ಸಂಪನ್ನಸ್ತ್ರೀಯರಿಂದ ಲಾಭವೂ ಆಗಲಿದೆ.

ಕರ್ಕಾಟಕ—ಪ್ರಬಲರಾದ ಗ್ರಹತ್ರಯರು ಲಾಭಸ್ಥಾನವನ್ನಾಶ್ರಯಿಸಿರುವರು. ಈ ವಾರದಲ್ಲಿನ ಗ್ರಹಸ್ಥಿತಿಯು ಸಾಕಷ್ಟು ತೃಪ್ತಿಕರವಿರುವುದು. ಧನವು ನಿಮಗೆ ಅನಾಯಾಸದಿಂದ ದೊರೆಯಲಿದೆ. ಲಾಟ್ರಿ, ಸಟ್ಟಾ, ಜೂಜು ಮುಂತಾದ ನಾನಾ ಉದ್ಯಮಗಳಿಂದ ವಿಶೇಷ ಲಾಭವು ಲಭಿಸುವದು. ಆದರೆ ಇದೇ ಧನ ನಿಮಿತ್ತವಾಗಿ ಕಲಹವು ಪ್ರಾಪ್ತವಾಗುವಂತಿದೆ. ಸ್ತ್ರೀಯರಿಂದ ಆಪದನರ್ಥಗಳು ಅನಿವಾರ್ಯವೇ ಸರಿ. ತಾ. 12 13. 14. 19 ಈ 4 ದಿವಗಳಲ್ಲಿ ಸರ್ವತ್ರ ವಿಜಯ ಮಾನಾದಿಗಳು ಲಭಿಸುವವು.

ಸಿಂಹ— ಸಕಲ ಗ್ರಹಮಂಡಲವೇ (ತಾ. 13. 14.15 16ರಲ್ಲಿನ ಚಂದ್ರನನ್ನು ಬಿಟ್ಟು) ಈ ವಾರದಲ್ಲಿ ನಿಮಗೆ ಪ್ರತಿಕೂಲವಾಗಿ ನಿಂತಿರುವುದರಿಂದ ನಾನಾ ತರದ ಕಷ್ಟನಷ್ಟಗಳಿಗೂ ಆಪದನರ್ಥಗಳಿಗೂ ಗುರಿಯಾಗಲಿರುವಿರಿ. ಅಶಾಂತಿಯಿಂದ ತುಂಬಿದ ನಿಮ್ಮ ಮನದಲ್ಲಿ ನಾನಾ ದುರ್ವಿಚಾರಗಳು ಮೂಡುವವು. ಮೇಲಿಂದ ಮೇಲೆ ಶತ್ರುಗಳಿಂದ ಪರಾಭವ, ಮಾನಚ್ಯುತಿಗಳು ಸಂಭವಿಸಲಿವೆ. ಯಾರ ಗೋಜಿಗೂ ಹೋಗದೆ ಸುಮ್ಮನಿದ್ದರೂ ಅಪವಾದವು ಬೇರೆ ತಪ್ಪಿದ್ದಲ್ಲ. ಧನ, ಸ್ಥಾನಮಾನ ಆರೋಗ್ಯಾದಿಗಳಿಂದ ವಂಚಿತರಾದ ನಿಮಗೆ ತಾ 13ರಿಂದ 4 ದಿನಗಳವರೆಗೆ ಸುಖಲಾಭಗಳು ಕಿಂಚಿತ್ ಕಿಂಚಿತ್ ಕಾಣಿಸಿಕೊಳ್ಳಬಹುದು.

ಕನ್ಯಾ— ದೈವದೇವದುಗಳಲ್ಲಿಯೂ ಗುರುಹಿರಿಯರಲ್ಲಿಯೂ ಇರತಕ್ಕ ಭಕ್ತಿ ಪೂಜ್ಯ ಭಾವಾದಿಗಳು ಲೋಪವಾಗುವವು. ವ್ಯರ್ಥಾಟನ, ಧನವ್ಯಯಗಳಿಂದ ಚಿಂತಾಕುಲರಾದ ನಿಮ್ಮ ಆರೋಗ್ಯಕ್ಕೂ ಹಾನಿಯೊದಗಲಿದೆ. ಬಂಧುಮಿತ್ರರ ಅತುಲ ಬಲಯುತರಾದ ನಿಮಗೆ ಔದ್ಯೋಗಿಕ ಭಾಗದಲ್ಲೂ ವಾಣಿಜ್ಯ ವೃತ್ತಿಯಲ್ಲೂ ಯಶಃಪ್ರಾಪ್ತಿಯಿದೆ. ತತ್ರಾಪಿ ವಿದ್ಯೋಪಜೀವಿಗಳಿಗೆ ದಿನವು ಸುಖಮಯವಾಗಲಿದೆ. ತಾ- 15ರಿಂದ 18ರ ವರೆಗಿನ 4ದಿನ ಆರೋಗ್ಯ, ಆದರ, ಸುಖಮಾನ ಲಾಭಾದಿಗಳೂ ಲಭಿಸಲಿವೆ.

(೧೧ನೇ ಪುಟ ನೋಡಿರಿ)

ಎಚ್ಚರಿಕೆ.

ಹರಿಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನು ತೆಗೆದು ಹಾಕುತ್ತದೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24—ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

BHUVANENDRA PRODUCTS LTD.,

Head Office and Factory:

Katapadi, S. Kanara

Depots:

1 Maharatha Galli, Hubli.

2. 57 Big street, Triplicane. Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ,** (2) **ಶ್ರೀ. ಆರ್. ಎಸ್. ಶೆಣೈ ರಥಬೀದಿ.** (3) **ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ** L. I. M.

Keep the enemy away

from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND

FOR

VICTORY.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, : ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರಿಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**

ಆಯುರ್ವೇದ ಔಷಧಾಲಯ ಗದಗ.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurence benefits
etc. etc. etc.

For further particulars and agency terms, please call at or write to
Branch Manager,
The Asian Assurance Co., Ltd., Mangalore.

ಚುಟುಕು ಟೀಕೆ-ಟಿಪ್ಪಣಿ

ಆತ್ಮಘಾತುಕತನ!

ಜಪಾನಿನ ಧಾಳಿಯ ಬಿಸಿ ತಾಗಿ ಬ್ರಿಟಿಷ್ ಸರಕಾರವು ಹಿಂದು ದೇಶಕ್ಕೇನೋ ಸ್ವಲ್ಪ ರಾಜಕೀಯ ಸ್ವಾತಂತ್ರ್ಯವೀಯುವ ಆಲೋಚನೆ ಮಾಡುತ್ತಿದೆಯಷ್ಟೆ. ಇಷ್ಟರಲ್ಲೇ ಆರಂಭವಾಗಿದೆ ಹಿಂದೀಯರೊಳಗೆ ಕಚ್ಚಾಟಕ್ಕೆ ಕೊಟ್ಟಿಜೂರಿನ ಪಾಲಿಗಾಗಿ. ಪ್ರಧಾನಮಂತ್ರಿಗಳಿಗೆ ಕೇಬ್ಲ್‌ಗಳು ಹೋಗಲಾರಂಭಿಸಿವೆ. ಮುಸ್ಲಿಮ್ ಲೀಗಿನ ಸಮ್ಮತಿ ವಿನಹ ಏನಾದರೂ ಕೊಡಕೂಡದೆಂದು ಜಿನ್ನರ ಕೇಬ್ಲ್, ಕಾಂಗ್ರೆಸು ಹಿಂದುಗಳ ಪ್ರತಿನಿಧಿ ಸಂಸ್ಥೆಯೇನೂ ಅಲ್ಲ. ಆದುದರಿಂದ ಯಾವುದರಲ್ಲಾದರೂ ಹಿಂದೂ ಸಭೆಗೆ ತಕ್ಕ ಪಾಲು ದೊರೆಯಬೇಕೆಂದು ಸಾವರ್ಕರರ ಕೇಬ್ಲ್. ಇನ್ನು ಡಾಕ್ಟರ್ ಅಂಬೇಡ್ಕರ್, ರಾಮಸ್ವಾಮಿ ನಾಯ್ಕರೇ ಮೊದಲಾದವರೇನು ಕೇಬ್ಲ್ ಬಿಡಲಿರುವರೋ! ಮುಸ್ಲಿಮ್ ಲೀಗು, ಮುಸಲ್ಮಾನರೆಲ್ಲರ ಪ್ರಾತಿನಿಧ್ಯ ಪಡೆದಿಲ್ಲೆಂದು ಆಜದ್ ಮುಸ್ಲಿಮ್ ಪರಿಷತ್ತು ಮತ್ತು ಮೋಮಿನ್ ಮುಸಲ್ಮಾನರ ಪರವಾಗಿ ಮೊದಲೇ ಕೇಬ್ಲ್‌ಗಳು ಹೋಗಿರುತ್ತವೆ ಎಂತಹ ಉಪಹಾಸ್ಯಕರ ಆತ್ಮಘಾತುಕತನವಿದು!

ಜಕ್‌ಭಕ್ಸ್ ಹೇಳಿಕೆ

ಕಳೆದ ವಾರ ಡಿಲ್ಲಿಯಲ್ಲಿ ಸೇರಿದ ಆಜದ್ ಮುಸಲ್ಮಾನ ಪರಿಷತ್ತಿನ ಪರವಾಗಿ ಸಿಂಧ್ ಮತ್ತು ಬಂಗಾಳದ ಪ್ರಧಾನ ಮಂತ್ರಿಗಳೊಂದು ಹೇಳಿಕೆ ಹೊರಡಿಸಿ, ಮುಸಲ್ಮಾನರೆಲ್ಲರ ಏಕಮಾತ್ರ ಪ್ರತಿನಿಧಿ ಸಂಸ್ಥೆ ಮುಸ್ಲಿಮ್ ಲೀಗೆಂಬ ಜಿನ್ನರ ಅಭಿಪ್ರಾಯಕ್ಕೆ ದೊಡ್ಡ ಆಘಾತವನ್ನುಂಟು ಮಾಡಿರುವರು. ಹದಿನಾರಾಣೆ ಮುಸಲ್ಮಾನ ಪ್ರಾಂತವೆಂದರೆ ವಾಯುವ್ಯ ಗಡಿನಾಡು. ಅಲ್ಲಿ ಮುಸ್ಲಿಮ್ ಲೀಗಿಗೆ ಬೆಂಬಲವೇ ಇಲ್ಲ. ಪಂಜಾಬಿನ ಮಂತ್ರಿಮಂಡಲದಲ್ಲಿ ಎಲ್ಲಾ ಪಕ್ಷಗಳೂ ಸೇರಿರುತ್ತವೆ. ಅದು ಲೀಗ್ ಮಂತ್ರಿ ಮಂಡಳವಲ್ಲ ... ರೇ ಒಪ್ಪಿರುತ್ತಾರೆ. ಸಿಂಧಿನಲ್ಲಿ ಮುಸ್ಲಿಮ್ ಲೀಗಿಗೆ ಹೆಚ್ಚಿನ ಬೆಂಬಲವಿಲ್ಲ. ಬಂಗಾಳದಲ್ಲಿ ಲೀಗ್ ಮಂತ್ರಿಮಂಡಲವು ಅಧಿಕಾರ ಚ್ಯುತವಾಗಿದೆ. ಅಸ್ಸಾಮ್ ಮಂತ್ರಿ ಮಂಡಲದ ಗತಿಯೂ ಇದೇ ರೀತಿ ಆಗಿದೆ. ಇಂದ ಮೇಲೆ ಲೀಗಿಗೆ ಸಂಪೂರ್ಣ ಬೆಂಬಲವಿರುವುದಾದರೂ ಎಲ್ಲಿ?

ಹಿಟ್ಲರರು ಎಲ್ಲಿ ಧಾಳಿ ಇಡುವರು?

ಬರುವ ವಸಂತ ಋತುವಿನಲ್ಲಿ ಹಿಟ್ಲರರು ಎಲ್ಲಿ ಹಾರುವರೆಂಬುದೀಗ ಸಮಸ್ಯೆಯಾಗಿದೆ. ರಶ್ಯದಲ್ಲಿ ಚಳಿಗಾಲವು ತಮಗೆ ದೊಡ್ಡ ತಡೆಯಾಗಿದೆ. ವಸಂತ ಋತು ಆರಂಭವಾದೊಡನೆಯೇ ಸೋವಿಯಟ್ ಸೇನೆಯನ್ನು ಸದೆಬಡಿಯಲಾಗುವುದೆಂದು ಹಿಟ್ಲರರೇ ಜರ್ಮನ್ ಜನತೆಗೆ ಅಭಯವಿತ್ತಿರುತ್ತಾರೆ. ಆದರೆ ಆ ಪ್ರಕಾರವೇ ಅವರು ನಡೆಯುವರೇ? ಅಥವಾ ಒಂದನ್ನು ಹೇಳಿ ಇನ್ನೊಂದನ್ನು ಮಾಡುವರೇ? ಇಂದೀಗ ಜರ್ಮನಿಯ ದೊಡ್ಡ ವೈರಿಯೆಂದರೆ ಬ್ರಿಟನು. ಆದುದರಿಂದ ತನ್ನ ಸಂಪೂರ್ಣ ಶಕ್ತಿಯನ್ನು ಪಯೋಗಿಸಿ ಬ್ರಿಟನಿನ ಮೇಲೆ ಧಾಳಿ ನಡೆಸಬಹುದೆಂದು ಲೋರ್ಡ್ ಬೀವರ್ ಬ್ರೂಕರಂಥವರ ವಾದ. ಈ ವಾದದಲ್ಲಿ ಹುರುಳಿಲ್ಲ. ಹಿಟ್ಲರರು ಕಡೆಯವರೆಗೂ ಇಂಗ್ಲಂಡಿನ ಮೇಲೆ ಪ್ರತ್ಯಕ್ಷ ಧಾಳಿ ನಡೆಸುವ ಸಂಭವ ತೋರುವುದಿಲ್ಲ. 100 ಡಿವಿಜನು ಸೇನೆಯ ಮೂಲಕ ರಶ್ಯದ ಉತ್ತರ ಮತ್ತು ಮಧ್ಯ ರಣರಂಗಗಳಲ್ಲಿ ಸೋವಿಯೆಟ್ ಸೇನೆಯನ್ನು ತಡೆದಿಟ್ಟು ಟರ್ಕಿಯ ಮೂಲಕ ಒಂದೇ ಸವನೆ ಮಧ್ಯಪೂರ್ವಕ್ಕೆ ಧಾಳಿಯಿಟ್ಟು ಕೊಕಸಸನ್ನು ಆವರಿಸಬಹುದು. ಹಾಗೆಯೇ ಜಪಾನರೊಂದಿಗೆ ಸೇರುವ ಯತ್ನ ಕೂಡಾ ನಡೆಸಬಹುದೆಂದು ಇನ್ನೊಂದು ಊಹೆ. ಇದು ರಶ್ಯದ ಯುದ್ಧದ ಇನ್ನೊಂದು ಸ್ವರೂಪವಿರುವುದರಿಂದ ಸಂಭವನೀಯ. ಯಾಕೆಂದರೆ ಇನ್ನು 4 ತಿಂಗಳ ಯುದ್ಧಕ್ಕೆ ಸಾಕಷ್ಟು ಮಾತ್ರ ಪೆಟ್ರೋಲು ಜರ್ಮನರಲ್ಲಿರುವುದೆಂದು ಅಂದಾಜು ಮಾಡಲಾಗಿದೆ. ಆದುದರಿಂದ ಅವರು ಪೆಟ್ರೋಲಿಗಾಗಿ ಪ್ರಚಂಡ ಧಾಳಿ ನಡೆಸಬಹುದು.

7 ದಿನಗಳ ಧರ್ಮ

ಸೋವಿಯೆಟ್ ರಶ್ಯದಲ್ಲಿ ಧರ್ಮ ಹೇಗಿದೆಯೆಂದು ಸರ್ ಸ್ಟಾಫೋರ್ಡ್ ಕ್ರಿಪ್ಸರು ಪ್ರಶ್ನಿಸಲ್ಪಟ್ಟಾಗ ಅವರು ಕೊಟ್ಟ ಉತ್ತರ ಬಹಳ ಮಾರ್ಮಿಕವಾದುದಿದೆ. ಅಲ್ಲಿ 7 ದಿನಗಳ ಧರ್ಮವು ಆಚರಣೆಯಲ್ಲಿದೆ ಎಂಬುದೇ ಕ್ರಿಪ್ಸರು ಕೊಟ್ಟ ಉತ್ತರ. ಕೇವಲ ಆದಿತ್ಯವಾರ ದಿನ ಹೊಸ ಉಡುಗೆ ತೊಡುಗೆ ಧರಿಸಿ ಬೈಬಲು ಹಿಡಕೊಂಡು ದೇವಾಲಯಕ್ಕೆ ಹೋಗಿ ಧಾರ್ಮಿಕ ಪ್ರಸಂಗ ಕೇಳಿ ಮತ್ತೆ ಇಡೀ ದಿನವನ್ನು ವಿಹಾರ ವಿನೋದದಲ್ಲಿ ಕಳೆದರೆ ಅದು ನಿಜವಾದ ಧರ್ಮಾಚರಣೆಯಾಗುವ ಹಾಗಿಲ್ಲ. ರಶ್ಯನರ ಇಂದಿನ ಅನುನಿತ್ಯದ ಜೀವನದ ರೀತಿನೀತಿಗಳೇ ಉದಾತ್ತ ಧಾರ್ಮಿಕ ತತ್ವಗಳಿಗನುಗುಣವಾಗಿವೆ. ಧಾರ್ಮಿಕ ಆದರ್ಶವಾದಿಗಳ ದೇವ ರಾಜ್ಯದ ಕಲ್ಪನೆಗೆ ಲೋಕದಲ್ಲಿ ಕೆಲವಷ್ಟಾದರೂ ಹೋಲುವ ರಾಷ್ಟ್ರವೆಂದರೆ ರಶ್ಯ. ಆದುದರಿಂದಲೇ ಕ್ರಿಪ್ಸರು ಅಲ್ಲಿ 7 ದಿನಗಳ ಧರ್ಮವು ಆಚರಣೆಯಲ್ಲಿದೆಯೆಂದು ಹೇಳಲು ಕಾರಣ.

ಧಾಳಿಕಾರಕ ಹೋರಾಟ ನಡೆಸಲ್ಪಡುವುದೇ?

ಕಳಕೊಂಡ ಸಂದರ್ಭಗಳ ಯುದ್ಧವಿದು ಕರೆದಿದ್ದಾರೆ ಈ ಯುದ್ಧವನ್ನು ಡಚ್ ಈಸ್ಟ್ ಇಂಡೀಸಿನ ಗವರ್ನರ್ ಜನರಲರು. ಈ ಮಾತು ಅಕ್ಷರಶಃ ನಿಜ. ಸಂದರ್ಭ ... ಧಾಳಿ ನಡೆಸಲು ಹಿಂಜರಿದು ಯುರೋಪಿನಲ್ಲಿ ಹಿಟ್ಲರ್ ಮುಸಲೋನಿಯರನ್ನು ಬಗ್ಗು ಬಡಿಯುವ ಸಂದರ್ಭಗಳನ್ನು ಮಿತ್ರರಾಷ್ಟ್ರಗಳು ಕಳಕೊಂಡವು. ಜಪಾನು ಪ್ರಥಮವಾಗಿ ಆಕ್ರಮಣ ನಡೆಸುವಾಗಲೆ ಅದರ ಮೇಲೇರಿ ಹೋಗಿ ಹೋರಾಡಲು ಮುಂದಾಗದೆ ಪೂರ್ವದಲ್ಲಿ ದೊಡ್ಡ ಅಪಜಯಗಳುಂಟಾದುವು ಅಮೇರಿಕ ಇಂಗ್ಲೆಂಡುಗಳಿಗೆ. ಇನ್ನಾದರೂ ಧಾಳಿಕಾರಕ ಹೋರಾಟ ನಡೆಸಬೇಕೆಂದು ರಶ್ಯ, ಅಮೇರಿಕ, ಆಸ್ಟ್ರೇಲಿಯ, ಮತ್ತು ಚೈನಗಳಲ್ಲಿ ಅಭಿಪ್ರಾಯವು ಬಲವಾಗುತ್ತಿದೆ. ಪ್ರೆಸಿಡೆಂಟ್ ರುಸವೆಲ್ಟರು ಸೇನಾನಿಗಳೊಡನೆ ಮಾತುಕತೆ ನಡೆಸುತ್ತಿದ್ದಾರೆ. ಬ್ರಿಟನು ಅದಕ್ಕಾಗಿ ಸಿದ್ಧತೆ ಮಾಡುತ್ತಿರುವಂತಿದೆ. ಹಳೆಯ ಸೇನಾನಿಗಳು ನಿವೃತ್ತರಾಗಿ ಹೊಸಬರು ನೇಮಿಸಲ್ಪಡುತ್ತಿದ್ದಾರೆ. ಗಂಡಾಂತರದ ಕಾಲದಲ್ಲಿ ಮಿಲ್ಯಗಟ್ಟಲೆ ಸೇನೆ ಮತ್ತು ಹೆಚ್ಚಿನ ಯುದ್ಧ ಸಾಮಗ್ರಿ ಸಂಗ್ರಹಿಸಿಟ್ಟುಕೊಂಡು, ವೈರಿಯ ಧಾಳಿಯನ್ನೇ ಕಾದು ದೀರ್ಘಕಾಲ ಸುಮ್ಮನಿರುವ ಧೋರಣೆಯು ಅನಾಹುತಕಾರಿ ಇರುವುದು. ಫ್ರಾನ್ಸಿನ ಮೆಜಿನೋ ಕೋಟೆಯ ಪ್ರಮಾದದಂತಾಗಬಹುದದು. ಆದುದರಿಂದ ಬ್ರಿಟನು ಮತ್ತು ಅಮೆರಿಕಗಳೊಂದು ಗೂಡಿ ಧಾಳಿಕಾರಕ ಹೋರಾಟ ನಡೆಸುವ ನಿರ್ಧಾರವನ್ನು ಶೀಘ್ರವಾಗಿ ಮಾಡಿದರೆ ಮಾತ್ರ ವೈರಿಗಳನ್ನು ಬಗ್ಗು ಬಡಿಯಲು ಸಾಧ್ಯವಾಗಬಹುದು.

ಚೈನದ ನವಸ್ಫೂರ್ತಿ ಮತ್ತು ಶಕ್ತಿಯ ಪ್ರತಿಮೂರ್ತಿ

ಜನರಲಿಸ್ಸಿಮೋ ಚ್ಯಾಂಗ್--ಕೈ--ಶೆಕ್ಕರು

ಅವರ ಜೀವನದ ಸೂಕ್ಷ್ಮ ಪರಿಚಯ

ಚೈನದ ಕ್ರಾಂತಿಗಾಗಿಯೇ ಜನ್ಮಿಸಿದ ಮಹಾಪುರುಷನು ವಿದ್ವಾಂಸನಾಗುವುದಾದರೂ ಹೇಗೆ? ಚಿಕ್ಕಂದಿನಿಂದಲೇ ಅದೇ ಅವರ ಜೀವನಸ್ಫೂರ್ತಿಯಾಗಿತ್ತು. ಚೈನವು ಒಕ್ಕಟ್ಟಾಗಬೇಕು, ಪ್ರಭಾವಶಾಲಿ ರಾಷ್ಟ್ರವಾಗಬೇಕೆಂದವರು ಹಂಬಲಿಸುತ್ತಿದ್ದರು. ೨೦ನೇ ವಯಸ್ಸಿನಲ್ಲೇ ಬಂಡಾಯಗಾರರಾಗಿ ಮಂಚೂ ರಾಜ ಮನೆತನದ ಅಧಿಕಾರವನ್ನೇ ನಿರಾಕರಿಸಿಬಿಟ್ಟರು. ೨೩ನೇ ವಯಸ್ಸಿನಲ್ಲಿ, ಆಧುನಿಕ ಚೈನದ ನಿರ್ಮಾಣಕರ್ತರೂ, ಕ್ರಾಂತಿಯ ಪ್ರವಾದಿ ನಾಯಕರೂ ಆದ ಡಾಕ್ಟರ್ ಸನ್‌ಯಾಟ್ ಸೆನ್ನರ ಪ್ರಭಾವಕ್ಕೊಳಗಾಗಿ ಅವರ ವಿಧೇಯ ಅನುಯಾಯಿಯಾದರು. ಸನ್‌ಯಾಟ್ ಸೆನ್ನರು ಚೈನದ ಲೆನಿನರಾದರೆ ಚ್ಯಾಂಗ್ ಕೈ ಶೆಕ್ಕರು ಸ್ಟೆಲಿನರೆನ್ನಬಹುದು. ಆಧುನಿಕ ಚೈನದ ನಿರ್ಮಾಣಕ್ಕಾಗಿ ೪೦ ವರ್ಷಗಳವರೆಗೆ ದುಡಿದು, ತನ್ನ ಉದ್ದೇಶ ಸಾಧಿಸಲು ಕುಮಿಂಟಾಂಗ್ ಪಕ್ಷವನ್ನು ಸ್ಥಾಪಿಸಿ ಮಂಚೂ ರಾಜಮನೆತನವನ್ನು ತೆಗೆದು ಹಾಕಿ, ಚೀನೀ ರಿಪಬ್ಲಿಕನ್ನು ಸ್ಥಾಪಿಸಿ ಡಾಕ್ಟರ್ ಸನ್ನರು ೧೯೨೫ರಲ್ಲಿ ಮೃತರಾದರು. ಚ್ಯಾಂಗ್ ಕೈಶೆಕ್ಕರು ಅವರ ತತ್ವಗಳಿಗನುಸಾರವಾಗಿ ನಡೆದು ರಾಷ್ಟ್ರೀಯ ಚೈನದ ನಿರ್ಮಾಣ ಕಾರ್ಯವನ್ನು ಮುನ್ನಡೆಸಿದರು.

ಚ್ಯಾಂಗ್ ಕೈಶೆಕ್ಕರು ದಕ್ಷಿಣದ ಕಾಂಟನ್ ಪಟ್ಟಣದಲ್ಲಿ ಕುಮಿಂಟಾಂಗನ್ನು ಸ್ಥಾಪಿಸಿ ಸ್ವಲ್ಪ ಸಮಯ ಸೇನಾಸಿದ್ಧತೆ ಮಾಡಿದರು. ಅನಂತರ ೧೯೨೬ರಲ್ಲಿ ಒಂದೇಸವನೆ ಉತ್ತರಕ್ಕೆ ಧಾಳಿ ನಡಿಸಿ, ಚೈನದ ಒಕ್ಕಟ್ಟಿಗೆ ಕಂಟಕಪ್ರಾಯರಾದ, ವಾರ್ ಲೋರ್ಡ್ಸ್‌ರೆಂಬ ಸೇನಾನಿಗಳನ್ನೆಲ್ಲಾ ಗೆದ್ದು ಅಂಕೆಗೆ ತರುವ ಯತ್ನದಲ್ಲಿ ನಿರತರಾದರು. ೨ ವರ್ಷಗಳೊಳಗೆ ಅವರ ಸೇನೆಯು ೧೫೦೦ ಮೈಲು ವಿಶಾಲ ಪ್ರದೇಶವನ್ನೆಲ್ಲಾ ಗೆದ್ದು ಚೈನದ ಮೊದಲಿನ ಮುಖ್ಯ ಪಟ್ಟಣವಾದ ಪೆಕಿಂಗಿಗೆ ಮುಟ್ಟಿತು. ಚ್ಯಾಂಗರು ತನ್ನ ಸೇನಾನಾಯಕರುಗಳ ಸಭೆಯೊಂದನ್ನು ಕರೆದು, ಎಲ್ಲರೂ ಒಟ್ಟಿಗೆ ಪಿಯುನ್ಸ್ ಎಂಬ ಸನ್ಯಾಸಾಶ್ರಮಕ್ಕೆ ಹೋಗಿ, ಡಾಕ್ಟರ್ ಸನ್‌ಯಾಟ್ ಸೆನ್ನರ ಸ್ಮರಣಾರ್ಥವಾಗಿ ನಡೆದ ಸಮಾರಂಭವೊಂದರಲ್ಲಿ ಭಾಗವಹಿಸಿ, ರಾಷ್ಟ್ರೀಯ ಚೈನದ ಸ್ಥಿರವಾದ ಅಡಿಗಲ್ಲು ಹಾಕಿದರು.

ಅನಂತರ ಮಾರ್ಶಲ್ ಚ್ಯಾಂಗರು ೮ ವರ್ಷಗಳನಕ ಚೈನದ, ರಾಜಕೀಯ, ಸಾಮಾಜಿಕ ಮತ್ತು ಸಾಂಪತ್ತಿಕ ಜೀವನದ ಸಂಘಟನಾ ಕಾರ್ಯದಲ್ಲಿ ನಿರತರಾದರು. ಪರಮಾವಧಿಗಳನ್ನು ವರ್ಜಿಸಿ ಮಧ್ಯದ ಹಾದಿ ಹಿಡಿಯುವ ಮನೋವೃತ್ತಿಯವರು ಚ್ಯಾಂಗರು. ಬಲ ಮತ್ತು ಎಡಗಳ ತೀವ್ರಗಾಮಿಗಳು ಚ್ಯಾಂಗರನ್ನೆಷ್ಟು ವಿರೋಧಿಸಿದರೂ ಅವರು ಗಣ್ಯಮಾಡದೆ ನಿಶ್ಚಲವಾಗಿ ತನ್ನದೇ ಹಾದಿ ಹಿಡಿದು ಮುಂದುವರಿದಿರುವರು. ಜಪಾನಿನ ವಿರೋಧವಾಗಿ ರಷ್ಯದೊಡನೆಯೂ ಸೇರದೆ, ರಷ್ಯದಿಂದಾಗಿ ಜಪಾನಿ ಪಕ್ಷವನ್ನೂ ಹಿಡಿಯದೆ, ಚೈನದ ವ್ಯಕ್ತಿತ್ವವನ್ನೇ ಎತ್ತಿ ಹಿಡಿದು ಅದರ ಐಕ್ಯ, ಸಂಘಟನೆ ಮತ್ತು ಪ್ರಭಾವಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಾ ಬಂದಿರುವರು. ಚ್ಯಾಂಗರು ಚೀನೀ ಸರಕಾರವನ್ನು ಬಹಳವಾಗಿ ಸುಧಾರಿಸಿದರು. ಹೊಸ ಚೀನೀ ಸೇನೆಯನ್ನು ಸಂಘಟಿಸಿದರು. ವಿಮಾನ ಪಡೆಯನ್ನು ಸ್ಥಾಪಿಸಿದರು. ಅಫೀಮು ಸೇವನೆ, ಅಸಡ್ಡೆ, ಮೈಗಳ್ಳತನ, ಅಂಜುಬುರುಕತನ, ಅದೃಷ್ಟವಾದವೇ ಮೊದಲಾದ ದುರ್ಗುಣಗಳಿಂದಲ್ಲಾ ಚೀನೀಜನತೆಯನ್ನು ವಿಮುಕ್ತಗೊಳಿಸಿ ಅವರನ್ನು ತೇಜೋಶಾಲಿ ಜನಾಂಗವಾಗಿ ಮಾಡುವ ನವಜೀವನ ಚಳವಳವನ್ನು ಹೂಡಿ ಎಲ್ಲೆಲ್ಲಿಯೂ ನವಚೈತನ್ಯವನ್ನುಂಟುಮಾಡಿದರು.

೧೯೩೬ರಲ್ಲಿ ಚೀನೀ ಜನಾಂಗವು ಚ್ಯಾಂಗರ ೫೦ನೇ ವಾರ್ಷಿಕೋತ್ಸವವನ್ನು ಆಚರಿಸುವ ಮೊದಲು ಅವರು ತನ್ನ ಪತ್ನಿಯೊಂದಿಗೆ ಚೈನದ ಪ್ರತಿಯೊಂದು ಪ್ರಾಂತವನ್ನೂ ಸಂದರ್ಶಿಸಿ ಜನತೆಯಲ್ಲಿ ನವಜಾಗೃತಿಯನ್ನುಂಟುಮಾಡಿದರು. ಈ ಮೊದಲು ಯಾರೇ ಆಗಲಿ, ಚೈನದ ಎಲ್ಲಾ ಪ್ರಾಂತಗಳನ್ನೂ ಈ ರೀತಿ ಸಂದರ್ಶಿಸಿದವರಿಲ್ಲ. ಚೀನೀ ರಿಪಬ್ಲಿಕ್ ಸ್ಥಾಪನೆಯ ೩೦ನೇ ವಾರ್ಷಿಕೋತ್ಸವವು ೧೯೪೧ನೇ ಅಕ್ಟೋಬರ ತಾ. ೧೦ರಲ್ಲಿ

(೧೦ನೇ ಪುಟ ನೋಡಿರಿ).

ಚೈನ ಮತ್ತು ಹಿಂದುದೇಶಗಳ ಮೈತ್ರಿಯು ೩೦೦೦ ವರ್ಷಗಳಷ್ಟು ಪುರಾತನವಾದುದು. ಇಷ್ಟೊಂದು ದೀರ್ಘಕಾಲದ ಇತಿಹಾಸದಲ್ಲಿ ಅವುಗಳೊಳಗೆ ಒಮ್ಮೆಯೂ ಘರ್ಷಣ ಉಂಟಾದುದಿಲ್ಲ. ಅದೀಗ ನವೀಕರಿಸಲ್ಪಟ್ಟಿದೆ. ೧೯೩೯ರಲ್ಲಿ ಪಂಡಿತ ಜವಾಹರಲಾಲ ನೆಹರುಗಳು, ಹಿಂದೀ ಜನತೆಯ ರಾಯಭಾರಿಯಾಗಿ ಚುಂಕಿಂಗಿಗೆ ಹೋಗಿ ೧೩ ದಿವಸವಿದ್ದು ಚೀನೀ ಜನ ಮುಖಂಡರೊಡನೆ ನಿಕಟ ಬಾಂಧವ್ಯ ಬೆಳಸಿರುವರು. ಇಂದೀಗ ಮಾರ್ಶಲ್ ಚ್ಯಾಂಗರು ಹಿಂದುದೇಶವನ್ನು ಸಂದರ್ಶಿಸಿ ಆ ಬಾಂಧವ್ಯವನ್ನು ಮತ್ತಷ್ಟು ದೃಢಪಡಿಸಿರುವರು. ಇವರಿಂದ ಲೋಕದ ಸುಮಾರು ೮೦೦ ಮಿಲ್ಯ ಜನತೆಯು, ಹಿಂದಿನಂತೆ ಮುಂದೆಯೂ ಒಂದುಗೂಡಿ ನಡೆದು ಲೋಕದ ಭವಿಷ್ಯ ರಚನೆಯಲ್ಲಿ ಅವೆರಡೂ ಗಣನೀಯ ಸ್ಥಾನ ಪಡೆಯುವಂತಾಗುವುದೆಂಬುದರಲ್ಲಿ ಸಂದೇಹವಿರಲಾರದು.

ಇನ್ನೊಂದು ದೃಷ್ಟಿಯಿಂದಲೂ ಹಿಂದುದೇಶಕ್ಕೆ ಚ್ಯಾಂಗರ ಸಂದರ್ಶನವು ಐತಿಹಾಸಿಕ ಮತ್ತು ಚಿರಸ್ಮರಣೀಯವಾದುದು. ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯಬೇಕೆಂದು ನಿರ್ಭಯವಾಗಿ ಮತ್ತು ಕಂಠೋಕ್ತವಾಗಿ ಬ್ರಿಟಿಷ್ ಸರಕಾರಕ್ಕಿತ್ತ ಬೋಧನೆಯು ಪರಿಣಾಮವನ್ನುಂಟುಮಾಡಿರುವುದೆಂದೇ ಹೇಳಬಹುದು. ಬ್ರಿಟಿಷ್ ಸರಕಾರದ ಕಿವಿ ಹಿಂಡಿದಂತಾಗಿದೆ. ಅದರಿಂದ ಹಿಂದುದೇಶಕ್ಕೆ ಸ್ವಾತಂತ್ರ್ಯವೀಯುವ ಕುರಿತದು ಆಲೋಚಿಸತೊಡಗಿ ಶೀಘ್ರವಾಗಿ ನಿರ್ಧಾರಕ್ಕೆ ಬರುವ ಸಂಭವ ತೋರುತ್ತದೆ. ಇದಕ್ಕಾಗಿ ಚ್ಯಾಂಗರಿಗೆ ಹಿಂದೀಯರು ಚಿರಋಣಿಗಳೇ ಸರಿ.

ಚೈನದ ಅತ್ಯಂತ ಚಿಕ್ಕ ಪ್ರಾಂತವಾದ ಚಕ್ಯಾಂಗಿನ ಚಿಕ್ಕ ಹಳ್ಳಿಯೊಂದರಲ್ಲಿ, ಮಧ್ಯ ತರಗತಿಯ ಕುಟುಂಬದಲ್ಲಿ 1887ರಲ್ಲಿ ಚ್ಯಾಂಗರು ಜನ್ಮತಾಳಿದರು. ಚೀನೀ ಒಕ್ಕಲಿಗ ಹುಡುಗನೊಬ್ಬನು ಪಡೆಯುವ ವಿದ್ಯಾಭ್ಯಾಸ ಪಡೆದರು. ಚ್ಯಾಂಗರ 9ನೇ ವರ್ಷದಲ್ಲಿ ಅವರ ತಂದೆಯು ಮೃತರಾದರು. ದೊಡ್ಡ ಕುಟುಂಬ ಪೋಷಣೆಯ ಜವಾಬ್ದಾರಿಯನ್ನೆಲ್ಲಾ ತಾಯಿಯೇ ಸಂತೋಷದಿಂದ ಹೊತ್ತು, ಚ್ಯಾಂಗರಿಗೆ ಅತ್ಯುತ್ತಮ ವಿದ್ಯೆಯನ್ನಿತ್ತು ಅವರನ್ನು ವಿದ್ವಾಂಸರನ್ನಾಗಿ ಮಾಡಬೇಕೆಂಬ ಆಶೆ ಕಟ್ಟಿಕೊಂಡಿದ್ದರು. ಆದರೆ ಚ್ಯಾಂಗರು ವಿದ್ವಾಂಸನ ಬದಲಿಗೆ ಸೈನಿಕರಾದರು.

"Service of Mankind is Service of God"

The Bombay Life Assurance Company., Limited.

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including
Indian States,
Udipi.

Also Offices at:-

Mangalore, Calicut, Madras, Bangalore, Trivandrum & Bombay.

ಬಾಂಬೆ ಟಾಕೀಸ್‌ನವರ "ಝೂಲಾ" ಚಿತ್ರ:— ಇದರಲ್ಲಿ ಇಸ್ಲಾಮಿನ ಕುರಿತು ಆಕ್ಷೇಪಾರ್ಹವಾದ ಒಂದಂಶವಿತ್ತೆಂದು ಜನವರಿ ತಾ. ೨೩ರಂದು ಕೆಲವರು ಮುಂಬಯಿಯಲ್ಲಿ ಚಿತ್ರವು ಪ್ರದರ್ಶಿಸಲ್ಪಡುತ್ತಿದ್ದಾಗ ಗೊಂದಲವೆಬ್ಬಿಸಿದ್ದರು, ಆ ಗಲಭೆಯ ಹಿಂದೆ ಸ್ವಾರ್ಥಿಗಳು ಕೆಲವರ ಕೈವಾಡವಿತ್ತು. ಬಾಂಬೆ ಟಾಕೀಸಿನವರು ಆ ವಿಚಾರದಲ್ಲಿ ಈಗ ಒಂದು ಪ್ರಕಟಣೆ ಹೊರಡಿಸಿರುವರು. ಚಿತ್ರದಲ್ಲಿ ಮಿ| ಮುಮ್ತಾಜ್ ಅಲಿ ಮತ್ತು ಬೇಗಂ ಪತುಜಾದಿಯವರ ನೃತ್ಯ ಸಂಭಾಷಣಗೀತದಲ್ಲಿದ್ದ 'ಜುಲಾಹೇಕೆ ಚೋರಿ' ಎಂಬ ಶಬ್ದಗಳು ತಮಗೆ ಆಕ್ಷೇಪಕರವಾಗಿವೆಯೆಂದು ಮೋಮಿನ್ ಸಮಾಜದವರು ಬರೆದರು. ಅದರ ಮರುದಿನ ಗಲಭೆ ಸಂಭವಿಸಿತು. ಬಾಂಬೆ ಟಾಕೀಸಿನವರು ಮೋಮಿನ್ ಸಂಗಡಿಗರ ಅನುಭಾವಗಳನ್ನು ನೋಯಿಸಬಾರದೆಂಬ ಸದುದ್ದೇಶದಿಂದ ಆ ಶಬ್ದಗಳನ್ನು ಕೂಡಲೇ ತೆಗೆದು ಹಾಕಿದರು. ಇದಕ್ಕಾಗಿ ಮೋಮಿನ್ ಸಂಗಡಿಗರ ಪ್ರತಿನಿಧಿಗಳು ಬಾಂಬೇ ಟಾಕೀಸಿನವರನ್ನು ಭೇಟಿಯಾಗಿ ಅವರಿಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು.

'ಝೂಲಾ' ಚಿತ್ರವು ಈಗ ದೇಶದ ಹಲವೆಡೆಗಳಲ್ಲಿ ದಾಖಲೆಗಳನ್ನು ಮುರಿಯುತ್ತ ಜನಪ್ರೀತವಾಗುತ್ತಿದೆ.

ವಾರದ ವಿಶೇಷ ವಾರ್ತೆ

ಇಂದಿರಾ ನೆಹರುಗಳ ವಿವಾಹವು

ಫಿರೋಜ್ ಗಾಂಧಿಯೆಂಬ ಪಾರ್ಸಿ ತರುಣರೊಬ್ಬರೊಂದಿಗೆ ನಿಶ್ಚಯವಾಗಿ ಸದ್ಯದಲ್ಲೇ ಅಲಹಾಬಾದಿನಲ್ಲಿ ಜರಗಲಿರುವುದು. ಫಿರೋಜ್ ಗಾಂಧಿಯವರು ಯುರೋಪಿನಲ್ಲಿ ವಿಶಾಲವಾಗಿ ಸಂಚರಿಸಿ ಅನುಭವ ಪಡೆದಿರುವವರು. ಸ್ಪೈನಿನ ಅಂತರ್ಯುದ್ಧದ ಸಂದರ್ಭದಲ್ಲಿ ಅಲ್ಲಿದ್ದವರು. ಈ ಸಲದ ಯುದ್ಧದ ಪ್ರತ್ಯಕ್ಷ ಅನುಭವ ಪಡೆದಿದ್ದು ಕೆಲವೇ ತಿಂಗಳುಗಳ ಮೊದಲು ಹಿಂದೂದೇಶಕ್ಕೆ ಬಂದಿರುವರು. ಮಾತ್ರವಲ್ಲದೆ ಹಲವು ವರ್ಷಗಳಿಂದ ನೆಹರು ಕುಟುಂಬದ ಮಿತ್ರರಾಗಿ ಅವರೊಂದಿಗೆ ವಾಸಮಾಡಿಕೊಂಡಿದ್ದವರು. ದಿವಂಗತ ಕಮಲ ನೆಹರುಗಳ ಕಾಯಿಲೆಯ ಸಂದರ್ಭದಲ್ಲಿ ಮಗನೋಪಾದಿ ಅವರ ಆರೈಕೆ ಮಾಡಿದ್ದರು. ಯುರೋಪಿನಲ್ಲಿ ಇಂದಿರಾ ನೆಹರುಗಳು ಕಾಯಿಲೆಯಲ್ಲಿ ಬಿದ್ದಿದ್ದಾಗ ಅವರಿಗೆ ಬಹಳ ಸಹಾಯ ಮಾಡಿದ್ದರು. ಅವರೊಳಗೆ ನಿಕಟ ಬಾಂಧವ್ಯ ಬೆಳದು ಸಹಜವಾಗಿ ಅವರೀಗ ಮದುವೆಮಾಡಿಕೊಳ್ಳುವ ನಿರ್ಧಾರಮಾಡಿರುವರು. ಎರಡೂ ಕಡೆಯವರ ಕುಟುಂಬಗಳವರೂ, ಪಂಡಿತ ನೆಹರುಗಳು ಮತ್ತು ಗಾಂಧಿಯವರೂ ಈ ವಿವಾಹಕ್ಕೆ ಒಪ್ಪಿಗೆ ಇತ್ತಿರುವರು. ಗಾಂಧಿಯವರು, ಸೇವಾಗ್ರಾಮದಲ್ಲೇ ವಿವಾಹ ನಡಿಸಲು ಅಪೇಕ್ಷೆ ಪಟ್ಟಿದ್ದರು. ಆದರೆ ನೆಹರುಗಳ ಕುಟುಂಬಿಕರ ಇಚ್ಛೆಯಂತೆ ಅದು ಅಲಹಾಬಾದಿನಲ್ಲೇ ನಡೆಯಲಿರುವುದು. ಇಂದಿರಾ ನೆಹರುಗಳು ಪಾರ್ಸಿ ತರುಣನೊಬ್ಬನನ್ನು ವಿವಾಹವಾಗುವ ಕುರಿತು, ಸಂಕುಚಿತ ಬುದ್ಧಿಯ ಹಿಂದುಗಳು ಕೆಲವರು ರೇಗಿ ಬಿದ್ದು ಅದನ್ನು ನಿಷೇಧಿಸಿ ಗಾಂಧಿಯವರಿಗೆ ಪತ್ರ ಬರೆದಿದ್ದರು. ಆದರೆ ಅಂತಹ ವಿವಾಹಗಳು ಮುಂದೆ ಹೆಚ್ಚೆಚ್ಚಾಗಿ ನಡೆಯಲಿರುವವು ಮತ್ತು ಅವುಗಳಲ್ಲೇನೂ ತಪ್ಪಿಲ್ಲೆಂದು ಗಾಂಧಿಯವರು ಅಭಿಪ್ರಾಯಪಿತ್ತಿರುವರು.

ಜಾವವೂ ಜಪಾನರ ವಶವಾದಂತೆಯೇ ಸರಿ.

ಡಚ್ ಈಸ್ಟ್ ಇಂಡೀಸಿನ ಮುಖ್ಯ ಪಟ್ಟಣವಾದ ಬಟಾವಿಯವನ್ನು ಮೊದಲೇ ಡಚ್ಚರು ಬಿಟ್ಟುಹೋಗಿ ಬಂಡೋಯಂಗನ್ನು ಪ್ರಧಾನ ಪಟ್ಟಣವಾಗಿ ಮಾಡಿದ್ದರು. ಆದರೆ ಅದನ್ನೂ ಈಗ ಜಪಾನರು ಗೆದ್ದಿರುವಂತಿದೆ. ಅಲ್ಲಿಂದ ಯಾವ ಸಮಾಚಾರವೂ ಬಂದಿರುವುದಿಲ್ಲ. ಡಚ್ಚರು ಸೊರಬಾಯ ನೌಕಾನಿಲಯವನ್ನು ಸಂಪೂರ್ಣ ನಾಶಮಾಡಿರುತ್ತಾರೆ. ಡಚ್ ಸೈನಿಕರು ಮತ್ತು ನೌಕಾಪಡೆಯು ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯದಿಂದ ಜಪಾನರೊಡನೆ ಹೋರಾಡಿರುವುದು. ಆದರೆ ಪ್ರಬಲ ಜಪಾನ ವಿಮಾನ ಪಡೆ ಮತ್ತು ೫ ಪಾಲು ಹೆಚ್ಚಾದ ಸೇನೆಯ ಎದುರಲ್ಲಿ ಅವರ ಸಾಹಸವು ನಿರರ್ಥಕವಾಗಿರುವುದು. ಅಮೆರಿಕ ಮತ್ತು ಬ್ರಿಟನುಗಳು ಹೆಚ್ಚಿನ ಸೇನಾ ಸಹಾಯವನ್ನು ಕಳುಹಿಸುವವೆಂಬ ಡಚ್ಚರ ನಿರೀಕ್ಷೆಯು ನಿರರ್ಥಕವಾಗಿರುವುದು. ಆದುದರಿಂದ ಅವರು ಕಟ್ಟಕಡೆಗೀಗ ಜಪಾನರಿಗೆ ಶರಣಾಗತರಾಗಬೇಕಾಗಿರುವುದು.

ಹಿಟ್ಲರರ ತಲೆಶೂಲೆ

ಸ್ಟರಯರೂಸದಲ್ಲಿ ಸಿಕ್ಕಿಬಿದ್ದಿರುವ ಸುಮಾರು ಒಂದು ಲಕ್ಷ ಜರ್ಮನ್ ಸೇನೆಯ ಮೇಲೆ ರಸ್ಯಾನರ ಒತ್ತಾಟವು ದಿನೇ ದಿನೇ ಹೆಚ್ಚುತ್ತಿರುವುದು. ನಾಝಿ ಸೇನೆಯ ಹಿಂಭಾಗದಲ್ಲಿ ಗೊರಿಲ್ಲ ಪಂಗಡಗಳು ವಿಶಾಲ ಪ್ರದೇಶಗಳನ್ನು ವಶಪಡಿಸಿಕೊಂಡು ಬಹಳ ಕಾಟಕೊಡುತ್ತಿರುವವು. ಜರ್ಮನರೆಷ್ಟು ಪ್ರಯತ್ನಿಸಿದರೂ ಈ ಪಂಗಡಗಳನ್ನು ಅಣಗಿಸಲು ಅವರಿಗೆ ಸಾಧ್ಯವಾಗಿರುವುದಿಲ್ಲ. ಈ ವಿದ್ಯಮಾನಗಳು ಹಿಟ್ಲರರ ತಲೆಶೂಲೆಗೆ ಕಾರಣವಾಗಿರುವುದೆಂದು ನಂಬಲಾಗಿದೆ. ಎಲ್ಲಾ ರಣರಂಗಗಳಲ್ಲಿಯೂ ತೀವ್ರ ಹೋರಾಟ ನಡೆಯುತ್ತಿದ್ದು ರಸ್ಯಾನರು ಪ್ರತಿದಿನವೂ ಕೆಲವು ಪ್ರದೇಶಗಳನ್ನು ಗೆಲ್ಲುತ್ತಿರುವರು. ಹೋರಾಟದೊಂದಿಗೆ ಪುನರ್ಘಟನಾ ಕೆಲಸವನ್ನೂ ಸೋವಿಯೆಟ್ ಸರಕಾರವು ನಡಿಸುತ್ತಿರುವುದು. ಡೊನೆಜ್ ನದಿಪ್ರದೇಶ ಮತ್ತು ಮೋಸ್ಕೋ ಪಟ್ಟಣದ ಬಳಿ ಜರ್ಮನರಿಂದ ಗೆದ್ದ ಪ್ರದೇಶಗಳಲ್ಲಿನ 60 ಇದ್ದಲುಗನಿಗಳು ಪುನಹ ತೆರೆಯಲ್ಪಟ್ಟಿರುತ್ತವೆ. ರಸ್ಯಾನರನ್ನು ಹಿಂದಕ್ಕಟ್ಟಲು ಜರ್ಮನರು ನಡಿಸಿರುವ ಪ್ರತಿಧಾಳಿಯು ನಿಷ್ಫಲವಾಗಿರುವುದು. ಸ್ಮೊಲೆಂಕ್ಸ್ ಪಟ್ಟಣದಿಂದ 125 ಮೈಲು ಪೂರ್ವದ ಯುಖ್ನೋವನ್ನು ಸೋವಿಯೆಟ್ ಸೇನೆಯು ಗೆದ್ದು ದೊಡ್ಡ ವಿಜಯ ಪಡೆದಿರುವುದು. 7 ವಾರಗಳ ವರೆಗೆ ನಡೆದ ಈ ಯುದ್ಧದಲ್ಲಿ ಕೆಲವು ಸಹಸ್ರ ಮಂದಿ ಜರ್ಮನರು ಕೊಲ್ಲಲ್ಪಟ್ಟಿರುವರು. ದಕ್ಷಿಣದಲ್ಲಿ ಮಾರ್ಶಲ್ ಟಿಮೊಶೆಂಕೋರವರು ಖಾರ್ಕೊವ್, ನಿಪ್ರೊಪೆಟ್ರೋವಸ್ಕ್ ಮತ್ತು ಕ್ರೈಮಿಯದಲ್ಲಿ ಪ್ರಬಲ ಧಾಳಿಯನ್ನಾರಂಭಿಸಿ ಮುಂದೊತ್ತುತ್ತಿದ್ದಾರೆ.

ವೇವೆಲ್ ಚ್ಯಾಂಗ್ ಭೇಟಿ.

ಇದೇ ತಿಂಗಳ ಆರಂಭದಲ್ಲಿ ಮಾರ್ಶಲ್ ಚ್ಯಾಂಗರು, ಬರ್ಮದ ಎಲ್ಲೆಯ ಲಾಶಿಯೋ ಎಂಬಲ್ಲಿಗೆ ವಿಮಾನ ಮೂಲಕ ಹೋಗಿ ಜನರಲ್ ವೇವೆಲರನ್ನು ಸಂಧಿಸಿ ಮಾತಾಡಿರುವರು. ಜನರಲ್ ವೇವೆಲರೊಂದಿಗೆ ಬರ್ಮದ ಬ್ರಿಟಿಷ್ ಮತ್ತು ಚೀನೀ ಸೇನಾನಾಯಕರುಗಳೂ ಇದ್ದರು. ಬರ್ಮದ ಯುದ್ಧದ ಪರಿಸ್ಥಿತಿಯೇ ಈ ಮಾತುಕತೆಯ ಮುಖ್ಯ ವಿಷಯವಾಗಿತ್ತು. ಮಾರ್ಶಲ್ ಚ್ಯಾಂಗರೊಂದಿಗೆ ಮೆಡಮ್ ಚ್ಯಾಂಗರೂ ಹೋಗಿದ್ದರು. ಉತ್ತರ ಬರ್ಮದ ಯುದ್ಧದಲ್ಲಿ ಹೆಚ್ಚೆಚ್ಚಾಗಿ ಚೀನೀ ಸೇನೆಯು ಭಾಗವಹಿಸುವಂತಿದೆ.

ಹಿಂದೀ ಸ್ವಾತಂತ್ರ್ಯ ಪ್ರಶ್ನೆ.

ಹಿಂದೂ ದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವ ಗ್ಯಾರಂಟಿ ಕೊಡುವ ಮತ್ತು ಪ್ರಕೃತದ ಪ್ರಾಂತ ಮತ್ತು ಕೇಂದ್ರ ಆಡಳಿತದಲ್ಲಿ ಹೆಚ್ಚಿನ ಅಧಿಕಾರವನ್ನು ಪ್ರಜಾ ಪ್ರತಿನಿಧಿಗಳಿಗೀಯುವ ಸೂಚನೆಗಳನ್ನು ಬ್ರಿಟಿಷ್ ಸರಕಾರವು ತಯಾರಿಸಿರುವುದೆಂದು ತಿಳಿದುಬರುತ್ತದೆ. ಈ ಸೂಚನೆಗಳನ್ನು ಚರ್ಚಿಲ್ಲರು ಮುಂದಿನ ಪಾರ್ಲಿಮೆಂಟ್ ಅಧಿವೇಶನದ ಮುಂದಿಡುವರು.

ಹಿಂದೂ ದೇಶಕ್ಕೆ ಅಪಾಯ.

ಜಪಾನರು ಹಿಂದೂ ದೇಶದ ಮೇಲೆ ಬೇಗನೆ ಧಾಳಿ ನಡಿಸುವ ಸಂಭವವಿರುತ್ತದೆಂದು ಚೈನದ ಅಮೆರಿಕನ್ ಮಿಲಿಟರಿ ಮಿಶನಿನ ನಾಯಕರಾದ ಬ್ರಿಗೇಡಿಯರ್ ಜನರಲ್ ಮೆಕ್ರೂಡರರು ಎಚ್ಚರಿಸಿರುವರು. ಜಪಾನರು ಅರಣ್ಯ ಯುದ್ಧದಲ್ಲಿ ಬಲು ಚತುರರಿರುವುದರಿಂದ ಬರ್ಮದಲ್ಲಿ ವಿಜಯ ಪಡೆದಿರುವರು. ಚೀನೀ ಸೇನೆಯು ಅಷ್ಟೇ ಚಾತುರ್ಯದಿಂದ ಅವರನ್ನು ವಿರೋಧಿಸುವಂತಾದರೆ ಇನ್ನಾದರೂ ಉತ್ತರ ಬರ್ಮದ ಎಷ್ಟೋ ಪ್ರದೇಶವನ್ನು ರಕ್ಷಿಸಿಕೊಳ್ಳಬಹುದೆಂದು ಮೆಕ್ರೂಡರ ಅಭಿಮತ. ಹಿಂದುಸ್ಥಾನದ ರಕ್ಷಣೆಗಾಗಿ ಹೆಚ್ಚಿನ ಸೇನೆಯನ್ನೀಯಬೇಕೆಂದು ವೈಸರಾಯರು ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸಿರುವರೆಂದು ತಿಳಿದು ಬರುತ್ತದೆ. ಬರ್ಮದ ಹೆಚ್ಚಿನ ಸೇನೆಯು ಹೊರಗೆ ಹೋರಾಟ ನಡಿಸುತ್ತಿದೆ. ಸಿಂಗಪುರದಲ್ಲೇ 30,000 ಹಿಂದೀ ಸೈನಿಕರು ಸೆರೆಯಾಗಿರುತ್ತಾರೆ.

ಮಗುವನ್ನು ಸಂತೋಷವಾಗಿಟ್ಟಿರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.

ತಯಾರಿಸುವವರು:

ಗವರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ, ಬೆಂಗಳೂರು ಸಿಟಿ.

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಕಾಲಿಯಾದ ಸೇಕಡಾ 4ರ ದರದಲ್ಲಿ, 4ಯೂ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

THE VIJAYA BANK, LTD.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮಾರ್ಗಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮೊದಲಾದ ಶೃಂಗಾರ ರಹಸ್ಯ ಫೋಟೋಗಳು ಅದರಲ್ಲಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜೆನಿವ ಟ್ರೇಡಿಂಗ್ ಕಂಪೆನಿ

260. ಜೈನಾಬಜಾರ್ ರೋಡ್, ಮದರಾಸ್.

The Canara Banking Corporation Ltd.

(Incorporated in British India with limited liability.)

ESTED: 1906.

OUR RATES OF INTEREST ON DEPOSITS

Current	1%	P. A.
Savings Bank	2½%	,,
Short-term	1½%	,,
Fixed for 3 months	2%	,,
6 ,,	2¼%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted

ನವಯುಗ

ಉಡುಪಿ, ಗುರುವಾರ, ೧೯-೩-೧೯೪೨

ಚೈನಾ ದಿನಾಚರಣೆ.

ಇದೇ ತಾ. ೭ರಲ್ಲು ಇಡೀ ಹಿಂದುಸ್ಥಾನದಲ್ಲೆಲ್ಲಾ ಚೈನಾ ದಿನವು ಆಚರಿಸಲ್ಪಟ್ಟಿರುವುದು. ಸರಕಾರವೂ ಜನರೂ ಪ್ರಥಮವಾಗಿ ಎಂಬಂತೆ ಅದರಲ್ಲಿ ಸಹಕರಿಸಿ ನಡೆದಿರುವರು. ಇಂದೀಗ ಬ್ರಿಟನು ಮತ್ತು ಅಮೆರಿಕಗಳಿಗೆ ಒಟ್ಟಿಗೆ ಪ್ರತಿಭಟಿಸಲು ಅಸಾಧ್ಯವಾಗಿರುವ ಜಾಪಾನಿನೊಂದಿಗೆ ಚೈನವು ಕಳೆದ ಸುಮಾರು ೫ ವರ್ಷಗಳಿಂದ ಹೋರಾಟ ನಡಿಸುತ್ತಾ ಬಂದು, ದಿನೇ ದಿನೇ ತನ್ನ ವಿರೋಧವನ್ನು ಹೆಚ್ಚಿಸುತ್ತಿರುವುದೆಂದರೆ, ಅದೆಂತಹ ಸಾಹಸಪರ ಕಾರ್ಯವನ್ನು ಮಾಡಿರುವುದೆಂಬುದು ಸ್ಪಷ್ಟವಾಗುವುದು.

ಚೈನಾ ಜಾಪಾನುಗಳೊಳಗೆ ಪ್ರತ್ಯಕ್ಷ ವಿರೋಧವು ೧೯೩೭ನೇ ವರ್ಷದ ಜುಲೈ ತಾ. ೭ರಲ್ಲಿ ಆರಂಭವಾಯಿತು. ಅಂದೇ ಶಾಂತಸಾಗರದ ಯುದ್ಧದ ಬೀಜಾಂಕುರವಾಯಿತೆಂದು ಹೇಳಬಹುದು. ಈ ೫ ವರ್ಷಗಳ ಭೀಷಣ ಹೋರಾಟದಲ್ಲಿ ಎರಡು ರಾಷ್ಟ್ರಗಳೂ ಬಹಳ ಹಾಸಿಗೊಳಗಾಗಿರುತ್ತವೆ. ಕೊಲ್ಲಲ್ಪಟ್ಟ ಮತ್ತು ಗಾಯಗೊಂಡ ಚೀನೀಯರ ಸಂಖ್ಯೆಯು ೩೫ ಲಕ್ಷಕ್ಕೆ ಮುಟ್ಟಿದೆ. ಮಂಚೂರಿಯ ಕೂಡಿ ಸುಮಾರು ೯ ಲಕ್ಷ ಚದರ ಮೈಲು ವಿಸ್ತೀರ್ಣದ ರಾಜ್ಯವನ್ನು ಚೈನವು ಕಳಕೊಂಡಿದೆ. ಸುಮಾರು ೧೦ ಕೋಟಿ ಮಂದಿ ಚೀನೀಯರು ಮನೆಮಾರು ಕಳಕೊಂಡು ನಿರಾಶ್ರಿತರು ಮತ್ತು ನಿರ್ಗತಿಕರಾಗಿರುತ್ತಾರೆ. ಚೈನವು ಯುದ್ಧಕ್ಕಾಗಿ ಸುಮಾರು ೧೨೦೦ ಕೋಟಿ ರೂಪಾಯಿಗಳಷ್ಟು ವ್ಯಯಮಾಡಿದೆ. ಸೊತ್ತು, ಕೈಗಾರಿಕೋದ್ಯಮ ಮತ್ತು ವ್ಯಾಪಾರದಿಂದೆಲ್ಲಾ ಅದಕ್ಕೆ ಸುಮಾರು ರೂ.೧೦೦೦ ಕೋಟಿ ನಷ್ಟವುಂಟಾಗಿದೆ. ಹತರಾದ ಮತ್ತು ಗಾಯಗೊಂಡ ಜಾಪಾನರ ಸಂಖ್ಯೆ ೧೦ ಲಕ್ಷವಾಗಿದೆ. ಯುದ್ಧಕ್ಕಾಗಿ ಜಾಪಾನು ರೂ. ೧೬೦೦ ಕೋಟಿ ವ್ಯಯಮಾಡಿರುತ್ತದೆ. ವ್ಯಾಪಾರ ವಹಿವಾಟಿನಲ್ಲಿ ಅದಕ್ಕೆ ರೂ. ೧೦೦ ಕೋಟಿಯಷ್ಟರ ನಷ್ಟವಾಗಿದೆ.

ಇಂದೀಗ ಜಾಪಾನಿನ ಶಾಂತ ಸಾಗರದ ... ಯುದ್ಧ ... ಕಾರ್ಯದ ಪರಿಣಾಮವೆಂದೇ ಹೇಳಬಹುದು. ಅಮೆರಿಕ ಮತ್ತು ಇಂಗ್ಲೆಂಡುಗಳು, ಆರಂಭದಲ್ಲೇ ಚೈನಕ್ಕೆ ಬೇಕಷ್ಟು ಸಹಾಯವಿತ್ತು ಜಾಪಾನನ್ನು ವಿರೋಧಿಸುವ ಧೈರ್ಯ ಮತ್ತು ವಿವೇಕವುಳ್ಳವಾಗಿದ್ದರೆ ಇಂದು ಪೂರ್ವದಲ್ಲಿ ಇಂತಹ ದೊಡ್ಡ ಅನಾಹುತಕ್ಕವು ಒಳಗಾಗುತ್ತಿದ್ದಿಲ್ಲ. ಜಾಪಾನು ಚೈನಾಯುದ್ಧವನ್ನು ನಡಿಸುತ್ತಿರುವಾಗಲೆ, ಪೂರ್ವ ಆಸ್ಯಾಖಂಡ ಪ್ರದೇಶದ ಮೇಲೆ ತನ್ನ ಸಂಪೂರ್ಣ ಅಧಿಕಾರ ಸ್ಥಾಪಿಸುವ ಸಿದ್ಧತೆ ಮಾಡುತ್ತಿತ್ತೆಂಬುದು, ಜಾಪಾನಿನ 'ಟ್ಯನ್ ಕೆಂಘ್'ನಂತಿರುವ 'ತಾನಕ ಮೆಮೋರಿಯಲಿ'ನಿಂದ ಸಿದ್ಧವಾಗುವುದು. ಅದಕ್ಕಾಗಿ ಜಾಪಾನು ೫ ಮಿಲ್ಯ ಸೈನಿಕರನ್ನು ಸಂಘಟಿಸಿರುವುದು. ಸಂದರ್ಭ ಬಂದಾಗ ಆತ್ಮಘಾತಕ್ಕೆ ಮುಂದಾಗುವ 50,000 ವಿಶಿಷ್ಟ ಸೈನಿಕ ದಳವನ್ನು ತಯಾರುಮಾಡಿರುವುದು. ಅತ್ಯಾಧುನಿಕ ಹಾಗೂ ನವೀನ ಯುದ್ಧೋಪಕರಣಗಳನ್ನೊದಗಿಸಿಕೊಂಡಿರುವುದು. ಚೈನಾಯುದ್ಧದಲ್ಲಿ ನಿರತನಾಗಿರುವಾಗ ಅದನ್ನು ಮುಗಿಸದೆ ಶಾಂತ ಸಾಗರದಲ್ಲಿ ಯುದ್ಧವನ್ನಾರಂಭಿಸಲಾರದೆಂದು ಅಮೆರಿಕ ಮತ್ತು ಬ್ರಿಟನುಗಳೆಣಿಸಿದ್ದವು. ಮತ್ತು ಜಾಪಾನು ಅಷ್ಟೊಂದು ಬಲವುಳ್ಳದಾಗಿರುವುದೆಂದೂ ಅವರೆಣಿಸಿರಲಿಲ್ಲ. ಚೈನಾಯುದ್ಧವನ್ನು ಜಯಶೀಲವಾಗಿ ಕೊನೆಗೊಳಿಸಬೇಕಾದರೆ, ಶಾಂತ ಸಾಗರದ ಯುದ್ಧವನ್ನು ಮಾಡಿಯೇ ತೀರಬೇಕೆಂದು ಜಾಪಾನು ನಿಶ್ಚೈಯಿಸಿ ಅದಕ್ಕೆ ಮುಂದಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಚೈನವನ್ನು ಹಿಂದಿನಿಂದ ಆವರಿಸಿ, ಅದಕ್ಕೆ ಅಮೆರಿಕ ಮತ್ತು ಬ್ರಿಟನುಗಳಿಂದ ಬರುವ ಸಹಾಯಮಾರ್ಗಗಳನ್ನೇ ಬಂದುಮಾಡಿದರೇನೇ ಅದನ್ನು ಬಗ್ಗುಬಡಿಯಲು ಸಾಧ್ಯವೆಂದು ಜಾಪಾನು ಎಣಿಸುವುದು ಸ್ವಾಭಾವಿಕವಾಗಿದೆ. ಚೈನಕ್ಕೆ ಈ ಸಂಗತಿಯು ಮೊದಲೇ ತಿಳಿದಿತ್ತು. ಮತ್ತು ಅದು ಸಕಾಲದಲ್ಲಿ ಬ್ರಿಟನು ಮತ್ತು ಅಮೆರಿಕಗಳಿಗೆ ಎಚ್ಚರ ಕೂಡಾ ಕೊಟ್ಟಿತ್ತು. ಆದರೆ ಅವುಗಳು, ಹಿಟ್ಲರರನ್ನು ಸಮಜಾಯಿಸುವ ಪ್ರಯತ್ನ ಮಾಡಿದಂತೆಯೇ ಜಾಪಾನನ್ನೂ ಒಲಿಸಿಕೊಳ್ಳಲೆತ್ನಿಸಿದುವು. ಜಾಪಾನು ಅವುಗಳೊಡನೆ ಸಂದರ್ಭಾನುಸಾರ ಯುದ್ಧಮಾಡುವ ಸಿದ್ಧತೆ ಮಾಡುತ್ತಿದ್ದಾಗ ಅವು ಅಂತಹ ಸಿದ್ಧತೆಯನ್ನೇನೂ ಮಾಡದೆ ಸಂಧಾನವನ್ನೇ ಮಾಡಲು ಮುಂದಾಗಿದ್ದುವು. ಇದರ ಪರಿಣಾಮವಾಗಿ ಯುರೋಪಿನ ಇತಿಹಾಸವೇ ಪೂರ್ವ ಆಸ್ಯದಲ್ಲಿಯೂ ಪುನರಾವರ್ತಿತವಾಗಿದೆ. ಇಂದೀಗ ಪೂರ್ವವನ್ನು ಕವಿದಿರುವ ಕಾರ್ಮುಗಿಲಿನ ಒಂದೇ ಒಂದು ರಜತ ರೇಖೆಯೆಂದರೆ ಚೈನಾ. ಈಗ ಎಲ್ಲರ ದೃಷ್ಟಿಯೂ ಚೈನದ ಕಡೆಗೆ ಹರಿದಿದೆ. ಜಾಪಾನರನ್ನು ಪ್ರತಿಭಟಿಸಲು ಬ್ರಿಟನು ಅದರ ಸಹಾಯವನ್ನು ಪಡೆಯಬೇಕಾಗಿದೆ. ರಶ್ಯವು ಜರ್ಮನಿಗೆ ಹೇಗೋ ಹಾಗೆಯೇ ಚೈನವು ಇಂದು ಜಾಪಾನಿನ ಕುತ್ತಿಗೆಯ ಕೊರಡಾಗಿರುತ್ತದೆ. ಚೈನದ ಸಹಾಯದಿಂದ ಮಾತ್ರ ಜಾಪಾನನ್ನು ಬಗ್ಗುಬಡಿಯಲು ಸಾಧ್ಯವೆಂಬ ನಂಬಿಕೆಯು ಬಲವಾಗಿರುತ್ತದೆ. ಆದರೂ ಅಮೆರಿಕ ಮತ್ತು ಬ್ರಿಟನುಗಳ ಅದೂರ ದೃಷ್ಟಿಯ, ಅವಿವೇಕಪರ ಧೋರಣೆಯ ವಿಷಮ ಪರಿಣಾಮದ ಪಾಲನ್ನು ಚೈನವೂ ಇಂದು ಪಡೆದು, ಹಿಂದಿನಿಂದ ಆವರಿಸಲ್ಪಡುವ ಗಂಡಾಂತರಕ್ಕೊಳಗಾಗಬೇಕಾಗಿದೆ. ಚೈನದ ಸಲಹೆಯನ್ನು ಬ್ರಿಟನು ಮತ್ತು ಅಮೆರಿಕಗಳು ಮೊದಲೇ ಕೇಳುತ್ತಿದ್ದರೆ ಪೂರ್ವ ಆಸ್ಯದಲ್ಲಿ ಇಂತಹ ಗಂಡಾಂತರವುಂಟಾಗುತ್ತಿದ್ದಿಲ್ಲ.

ಅದಂತಿರಲಿ, ಚೈನ ಮತ್ತು ಹಿಂದೂ ದೇಶಗಳು ಪರಸ್ಪರ ಸಹಾನುಭೂತಿ ಮತ್ತು ಪ್ರೀತಿಯಿಂದ ಒಂದುಗೂಡಿ ನಡೆಯಬೇಕಾದುದು ಸ್ವಾಭಾವಿಕ. ಅತಿ ಪುರಾತನ ಕಾಲದಿಂದ ಅಚ್ಚಳಿಯದುಳಿದು ಬಂದಿರುವ ಮೈತ್ರಿಯದು. ಲೋಕದ ೫ರಲ್ಲಿ ಎರಡಂಶ ಜನಸಂಖ್ಯೆ ಇರುವ ಚೈನ ಮತ್ತು ಹಿಂದು ದೇಶಗಳು ಮುಂದಿನ ಲೋಕರಚನೆಯಲ್ಲಿ ಪ್ರಮುಖಸ್ಥಾನ ಪಡೆಯಲಿರುವವೆಂಬುದರಲ್ಲಿ ಸಂದೇಹವೇ ಇಲ್ಲ. ಯುದ್ಧದ ಒತ್ತಾಟದಿಂದಾಗಿ ಬ್ರಿಟನು ಮತ್ತು ಅಮೆರಿಕಗಳು ಚೈನಕ್ಕೆ ಇಂದು ಪ್ರಾಮುಖ್ಯತೆಯನ್ನಿತ್ತಿವೆ. ಆದರೆ ಹಿಂದೂ ದೇಶವು ಅಂತಹ ಸ್ವಾರ್ಥ ಅಥವಾ ಒತ್ತಾಟದ ಪ್ರೇರಣೆಯಿಂದ ಚೈನದ ಕುರಿತು ಸಹಾನುಭೂತಿ ತೋರಿಸುತ್ತಿರುವುದಲ್ಲ. ಅವುಗಳೊಳಗೆ ಸ್ವಾಭಾವಿಕ ಹಾಗೂ ನಿಕಟವಾದ ಬಾಂಧವ್ಯವಿರುತ್ತದೆ. ರಾಷ್ಟ್ರೀಯ ಹಿಂದುಸ್ಥಾನವು ಕೆಲವು ವರ್ಷಗಳ ಮೊದಲಿಂದಲೇ ರಾಷ್ಟ್ರೀಯ ಚೈನದ ಕುರಿತು ಸಹಾನುಭೂತಿ ತೋರಿಸುತ್ತಾ ಬಂದಿರುವುದು. ಅಲ್ಲಿಗೆ ಚಿಕಿತ್ಸಾಪಥಕವೊಂದನ್ನು ಕಳುಹಿಸಿರುವುದು. ೧೯೩೯ರಲ್ಲಿ ಪಂಡಿತ ಜವಾಹಿರಲಾಲರು ಚೈನವನ್ನು ಸಂದರ್ಶಿಸಿ ಮತ್ತಷ್ಟು ಸಮೀಪದ ಬಾಂಧವ್ಯ ಬೆಳೆಸಿರುವರು. ಕವಿ ರವೀಂದ್ರರು ಹಲವು ವರ್ಷಗಳ ಹಿಂದೆಯೇ ಚೈನದ ಸಾಂಸ್ಕೃತಿಕ ಸಂಬಂಧವನ್ನು ನವೀಕರಿಸಿ ಶಾಂತಿನಿಕೇತನದಲ್ಲಿ 'ಚೈನಾ ಭವನ' ಎಂಬುದನ್ನು ಸ್ಥಾಪಿಸಿದ್ದರು. ಮಾರ್ಶಲ್ ಚ್ಯಾಂಗರು ಇತ್ತಲಾಗಿ ಹಿಂದುದೇಶವನ್ನು ಸಂದರ್ಶಿಸಿ ಹಿಂದುದೇಶದ ಬಾಂಧವ್ಯವನ್ನು ಮತ್ತೂ ದೃಢಪಡಿಸಿದರು. ಇದರಿಂದ ಚೈನಾ ಮತ್ತು ಹಿಂದುದೇಶಗಳೊಳಗೆ ಸಮೀಪ ಹಾಗೂ ಸ್ಥಿರವಾದ ಸಂಬಂಧ ಸ್ಥಾಪಿಸುವ ಏರ್ಪಾಡುಗಳು ಅಧಿಕಾಧಿಕವಾಗಿ ನಡೆಯುವಂತಾಗಿದೆ. ಇಂತಹ ಸಂದರ್ಭದಲ್ಲಿ ಹಿಂದುದೇಶದಲ್ಲೆಲ್ಲಾ ಚೈನಾ ದಿನವನ್ನು ಆಚರಿಸುವ ವ್ಯವಸ್ಥೆಯನ್ನು ಸರಕಾರವು ಮಾಡಿದುದು ಸಂದರ್ಭೋಚಿತ ಮತ್ತು ಸ್ತುತ್ಯ ಕೆಲಸವಾಗಿದೆ. ಇಂದು ರಾಷ್ಟ್ರೀಯ ಚೈನದ ಕುರಿತು ಅಖಿಲ ಹಿಂದುಸ್ಥಾನವೇ ಏಕೆ, ಇಡೀ ಲೋಕವೇ ಮೆಚ್ಚಿಕೆ ಪಟ್ಟು ಅದನ್ನು ಅಭಿನಂದಿಸಲೇಬೇಕಾಗಿದೆ.

ಸೋವಿಯೆಟ್ ರಶ್ಯದಿಂದ ಕಲಿಯ ಬೇಕಾದ ಪಾಠ.

ಹೋರಾಟದ ವಿಷಯದಲ್ಲಿ ಮಿತ್ರರಾಷ್ಟ್ರಗಳು ಸೋವಿಯೆಟ್ ರಶ್ಯದಿಂದ ಪಾಠ ಕಲಿಯಬೇಕಾಗಿದೆ. ಹಿಟ್ಲರರು ಅಜೇಯರೆಂಬ ಕಲ್ಪನೆಯನ್ನು ಸುಳ್ಳುಮಾಡಿದ ಪ್ರಶಂಸೆಯು ಅದಕ್ಕೆ ಸಲ್ಲತಕ್ಕುದ್ದು. ಜರ್ಮನ್ ಸೇನೆಯನ್ನು ಸಾಧ್ಯವಾದಷ್ಟು ಪ್ರತಿಭಟಿಸಿ, ಸಂದರ್ಭ ದೊರಕಿದಾಗ ಅದರ ಮೇಲೇರಿ ಹೋಗಿ ಹೆಚ್ಚಿನ ನಷ್ಟಪಡಿಸಿ ಸೋವಿಯೆಟ್ ಸೇನೆಯು ಆರಂಭದಲ್ಲಿ ಹಿಂದೆ ಸರಿಯಿತು. ಆ ಮೇಲೆ ಸರಿಯಾದ ಸೇನಾ ಸಿದ್ಧತೆ ಮಾಡಿ, ಚಳಿಗಾಲದ ಅನುಕೂಲ ಪರಿಸ್ಥಿತಿಯಲ್ಲಿ ಜರ್ಮನರ ಮೇಲೆ ಪ್ರಚಂಡ ಧಾಳಿ ನಡಿಸಿ ದೊಡ್ಡ ವಿಜಯಗಳನ್ನು ಪಡೆದು ಅವರನ್ನು ದೊಡ್ಡ ಕಂಟಕಕ್ಕೀಡು ಮಾಡಿಯವದು. ಇಂದೀಗ ಸ್ಟರಯ ರೂಸ ಎಂಬಲ್ಲಿ ಸುಮಾರು ಒಂದು ಲಕ್ಷ ಜರ್ಮನ್ ಸೇನೆಯು ಸಿಕ್ಕಿ ಬಿದ್ದು ನಾಶಮಾಡಲ್ಪಡುವ ಗಂಡಾಂತರಕ್ಕೊಳಗಾಗಿದೆ. 36,000 ಮಂದಿ ಇಷ್ಟರಲ್ಲೇ ಹತರಾಗಿರುತ್ತಾರೆ. ಲೆನಿನ್‌ಗ್ರಾಡಿನ ಬಳಿಯ ಷ್ನಕೋವ್ ಮತ್ತು ಇಲ್‌ಮೆನ್ ಸರೋವರಗಳ ನಡುವೆ ಸೋವಿಯೆಟ್ ಸೈನಿಕರು ಮುನ್ನುಗ್ಗಿ ನಾಝಿ ಸರಬರಾಯಿ ಮಾರ್ಗವನ್ನು ಕಡಿದು ಹಾಕಲೆತ್ನಿಸುತ್ತಿದ್ದಾರೆ. ಅವರು ಜಯಶೀಲರಾದರೆ ಜರ್ಮನರು ಲೆನಿನ್‌ಗ್ರಾಡ್ ಪ್ರದೇಶವನ್ನೇ ಬಿಟ್ಟು ಎಸ್ಟೋನಿಯಕ್ಕೆ ಹಿಂದೆ ಸರಿಯಬೇಕಾಗುವುದು. ಮಧ್ಯ ರಣರಂಗದಲ್ಲಿ ಸೋವಿಯೆಟ್ ಸೇನೆಯು ಯಲ್ನಿಯದ ಕಡೆಗೆ ಮುಂದೊತ್ತುತ್ತಿದೆ. ಇನ್ನೂ ದಕ್ಷಿಣದಲ್ಲಿ ಒರೆಲ್ ಪಟ್ಟಣದಲ್ಲಿ ಜರ್ಮನರು ಆವರಿಸಲ್ಪಟ್ಟಿರುತ್ತಾರೆ. ಕ್ರೈಮಿಯದಲ್ಲಿ ಕೂಡಾ ತೀವ್ರ ಹೋರಾಟ ನಡೆಯುತ್ತಿದೆ. ಧಾಳಿಕಾರಕ ಯುದ್ಧದ ಪರಿಣಾಮವಿದು. ಹಿಟ್ಲರರ ವಸಂತ ಋತುವಿನ ಧಾಳಿಯನ್ನೇ ನಿರೀಕ್ಷಿಸಿಕೊಂಡು ಸ್ಟೆಲಿನರು ಸುಮ್ಮನಿರುತ್ತಿದ್ದರೆ ಈ ವಿಜಯಗಳು ಸಾಧ್ಯವಿದ್ದುವೇ?

ಐಗುಪ್ತದಲ್ಲಿ ವಾಫ್ದ್ ಪಕ್ಷದ ವಿಜಯ.

ಇದೇ ಬರುವ ತಾ. ೨೪ರಲ್ಲು ನಡೆಯಲಿರುವ ಐಗುಪ್ತದ ಚುನಾವಣೆಯಲ್ಲಿ ಅಲ್ಲಿಯ ಪಕ್ಷವಾದ ವಾಫ್ದಿನ ಸಂಪೂರ್ಣ ವಿಜಯವು ನಿಶ್ಚಯವೆಂಬುದರಲ್ಲಿ ಸಂದೇಹವೇ ಇಲ್ಲ. ೨೬೪ ಸ್ಥಾನಗಳಲ್ಲಿ ೧೦೦ ಸ್ಥಾನಗಳಿಗೆ ಚುನಾವಣೆಯೇ ಇಲ್ಲದೆ ವಾಫ್ದ್ ಪಕ್ಷೀಯರು ಇಷ್ಟರಲ್ಲೇ ಆರಿಸಿ ಬಂದಿರುವರು. ಇತರ ಸ್ಥಾನಗಳಿಗೂ ತೀವ್ರ ಸ್ಪರ್ಧೆಯೇನೂ ಇಲ್ಲದೆ ವಾಫ್ದ್ ಪಕ್ಷೀಯರೇ ಹೆಚ್ಚಾಗಿ ಆರಿಸಿ ಬರುವರೆಂಬುದು ನಿಶ್ಚಯ. ಅವರ ನಾಯಕ ನಹಾಸ್ ಪಾಶಾರವರು ಈಗ ಹೆಚ್ಚಿನ ಜನಾದರ ಪಡೆದಿರುತ್ತಾರೆ. ಸರಕಾರದ ಬೇಸಾಯ ಮತ್ತು ಇತರ ಕೆಲಸಗಾರರಿಗೆ ಕನಿಷ್ಠ ಮಜೂರಿಯನ್ನು ನಹಾಸ್ ಪಾಶಾರವರು ಇಷ್ಟರಲ್ಲೇ ಜ್ಯಾರಿಗೆ ತಂದು ಜನತಾಬೆಂಬಲ ಪಡೆದಿರುತ್ತಾರೆ. ಪ್ರಬಲ ಬಹುಪಕ್ಷದಿಂದ ಪಾರ್ಲಿಮೆಂಟಿಗೆ ಆರಿಸಿ ಬಂದ ಮೇಲೆ ಅವರು ಜನಹಿತ ಸಾಧಕವಾದ್ದ ಹೆಚ್ಚಿನ ಸುಧಾರಣೆಗಳನ್ನು ಮಾಡಲಿರುವರೆಂಬುದರಲ್ಲಿ ಸಂದೇಹವೇ ಇಲ್ಲ. ಜನತಾಪಕ್ಷವು ಅಧಿಕಾರಕ್ಕೆ ಬಂದಿರುವುದರಿಂದ ಐಗುಪ್ತದ ಜನರಲ್ಲಿ ನವೀನ ಉತ್ಸಾಹವುಂಟಾಗಿರುತ್ತದೆ. ಐಗುಪ್ತದಲ್ಲಿ ನವಯುಗವೊಂದರವೇ ಉಂಟಾಗುವ ಅರುಣೋದಯವಾಗಿದೆ.

ರಂಗೂನು ಜಾಪಾನರ ವಶವಾಯಿತು.

ಜಾವದಲ್ಲಿ ಇನ್ನೂ ಕೆಲವು ಕಡೆ ಹೋರಾಟ ನಡೆಯುತ್ತಿದೆ.

ನ್ಯೂಗಿನಿಯ ಮೇಲೆ ಜಾಪಾನರ ಧಾಳಿ.

ರಂಗೂನಿನ ಪತನ.

ಇಂಗ್ಲೆಂಡಿನಿಂದ ಟೇಂಕುಗಳು ಬಂದು ಜಾಪಾನರನ್ನು ಪ್ರತಿಭಟಿಸಲು ಎಷ್ಟೊಂದು ಪ್ರಯತ್ನಿಸಿದರೂ, ಅವರ ಸಂಖ್ಯಾ ಬಲದಿಂದಾಗಿ ಸಾಧ್ಯವಾಗದೆ ತಾ. ೧೦ರಲ್ಲಿ ರಂಗೂನು ವೈರಿಗಳ ವಶವಾಗಿರುವುದೆಂದು ತಿಳಿದುಬರುತ್ತದೆ. ಬ್ರಿಟಿಷ್ ಸೇನೆಯು ರಂಗೂನು ಬಿಟ್ಟು ಹೋಗಿರುತ್ತವೆ. ರಂಗೂನಿನ ಬಳಿ ನಡೆದ ತೀವ್ರ ಹೋರಾಟದಲ್ಲಿ ಇತ್ತಂಡದಲ್ಲಿಯೂ ಹೆಚ್ಚಿನ ಪ್ರಾಣಹಾನಿಯಾಗಿರುವುದು. ಬರ್ಮಕ್ಕೆ ಹೊಸ ಸೇನಾ ನಾಯಕರನ್ನು ನೇಮಿಸಲಾಗಿದೆ. ಮಧ್ಯ ಬರ್ಮದಲ್ಲಿ ಚೀನೀ ಸೇನೆಯ ಸಹಾಯ ಪಡೆದು ಜಾಪಾನರನ್ನೆದುರಿಸುವ ಪ್ರಯತ್ನ ಮಾಡಲಾಗುವುದೆಂದು ತಿಳಿದುಬರುತ್ತದೆ. ಆದರೆ ಅದೆಷ್ಟರ ಮಟ್ಟಿಗೆ ಸಾಧ್ಯವಾಗುವುದೋ? ಎಚ್. ಎಮ್. ಎಸ್. ಹಿಂದುಸ್ತಾನ್ ಎಂಬ ಬ್ರಿಟಿಷ್ ಯುದ್ಧ ಹಡಗವು ರಂಗೂನಿನ ಬಳಿ ಚಿಕ್ಕ ಜಾಪಾನ ಹಡಗವೊಂದನ್ನು ಹಿಡಿದಾಗ ಅವರಲ್ಲಿ ೧೫೦ರಲ್ಲಿ ದಂಗೆಯೆಬ್ಬಿಸಿದ್ದ ೫೦ಮಂದಿ ಬರ್ಮಾರ್ಯರಿದ್ದರೆಂದು ತಿಳಿದುಬರುತ್ತದೆ.

ಜಾವದಲ್ಲಿ ಹೋರಾಟ

ಸರಕಾರವು ಇತ್ತಲಾಗಿ ಮುಖ್ಯ ಪಟ್ಟಣವಾಗಿ ಮಾಡಿದ್ದ ಬಂದೋಯೆಂಗನ್ನು ಜಾಪಾನರು ಗೆದ್ದಿರುವರು. ಅಲ್ಲಿದ್ದ ಜಾಪಾನ ಸೇನೆಯು ಶರಣಾಗತವಾಗಿರುವುದೆಂದು ಜಾಪಾನರ ಪ್ರಕಟಣೆ. ಆದರೆ ಇದು ನಿಜವಲ್ಲೆಂದು ತಿಳಿದುಬರುತ್ತದೆ. ಬಂಡೊಯೆಂಗ್ ಮತ್ತು ಸೂರಬಾಯದ ಬಳಿ ಎರಡು ಕಡೆಗಳಲ್ಲಿ ಡಚ್ ಸೈನಿಕರು ಹೋರಾಟ ನಡೆಸುತ್ತಿದ್ದಾರೆ. ಆದರೆ ಅದರಿಂದೇನೂ ಪ್ರಯೋಜನವಾಗುವ ಹಾಗಿಲ್ಲ. ಜಾವದಲ್ಲಿ ಜಾಪಾನರು ತಮ್ಮ ಸರಕಾರವನ್ನು ಸ್ಥಾಪಿಸಿ ಸೇನಾ ನಾಯಕರೊಬ್ಬರನ್ನು ಗವರ್ನರ್ ಜನರಲರಾಗಿ ನೇಮಿಸಿರುತ್ತಾರೆ. ಡಚ್ಚರು ಗೊರಿಲ್ಲ ಯುದ್ಧ ನಡೆಸಬಹುದೆಂದು ನಂಬಲಾಗಿದೆ. ಚಿಕ್ಕ ಡಚ್ ಸೇನೆಯು ಜಾಪಾನರನ್ನೆದುರಿಸುವುದರಲ್ಲಿ ತೋರಿಸಿರುವ ಧೈರ್ಯ ಮತ್ತು ಸ್ಥೈರ್ಯದ ಕುರಿತು ಬ್ರಿಟಿಷ್ ಪತ್ರಿಕೆಗಳೆಲ್ಲಾ ಬಹಳ ಮೆಚ್ಚಿಗೆ ಸೂಚಿಸಿರುತ್ತವೆ.

ನ್ಯೂಗಿನಿಯ ಮೇಲೆ ಜಾಪಾನರ ಧಾಳಿ.

ಆಸ್ಟ್ರೇಲಿಯದ ಅಧೀನವಿರುವ ನ್ಯೂಗಿನಿಯ ಸಲಮೋ ಎಂಬ ಸ್ಥಳದ ಮೇಲೆ ಜಾಪಾನರು ಇದೇ ತಾ. ೯ರಲ್ಲಿ ಧಾಳಿಯಿಟ್ಟಿರುವರು. ಪ್ರಾಮುಖ್ಯವಾದ ಮೊರೆಸ್ಬಿ ಬಂದರದಿಂದ ಜಾಪಾನ ಸೇನೆಯು ಈಗ ೧೬೫ ಮೈಲು ದೂರದಲ್ಲಿರುವದು. ತಾ. ೬ರಲ್ಲಿ ಹಗಲಲ್ಲೇ ಮೊರೆಸ್ಬಿ ಬಂದರದ ಮೇಲೆ ಜಾಪಾನರು ಪ್ರಬಲ ವಿಮಾನ ಧಾಳಿ ನಡೆಸಿದ್ದರು. ನ್ಯೂಗಿನಿಯನ್ನು ಗೆದ್ದು ಅಲ್ಲಿ ವಿಮಾನ ನಿಲಯಗಳನ್ನು ಸ್ಥಾಪಿಸಿ, ಸೇನೆಯನ್ನು ಸಂಗ್ರಹಿಸಿ, ಆ ಮೇಲೆ ಜಾಪಾನರು ಆಸ್ಟ್ರೇಲಿಯದ ಮೇಲೇರಿ ಹೋಗುವರೆಂಬುದರಲ್ಲಿ ಸಂದೇಹವಿಲ್ಲ. ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ಸರಕಾರಗಳು, ಜಾಪಾನರ ಧಾಳಿಯನ್ನೆದುರಿಸಲು ಭರದಿಂದ ಸಿದ್ಧತೆ ನಡೆಸುತ್ತಿವೆ. ಜಾಪಾನರು ದುರ್ಬಲವಾದ ಆಸ್ಟ್ರೇಲಿಯದ ಉತ್ತರ ಭಾಗದ ಮೇಲೆ ಮೊದಲಾಗಿ ಧಾಳಿ ನಡೆಸಬಹುದೆಂದು, ಸಿಂಗಪುರದಿಂದ ತಪ್ಪಿಸಿಕೊಂಡು ಬಂದಿರುವ ಆಸ್ಟ್ರೇಲಿಯದ ಸೇನಾನಾಯಕ ಮೇಜರ್ ಜನರಲ್ ಬೆನ್ನೆಟರು ಎಚ್ಚರಿಸಿರುವರು.

ಜಾಪಾನ ಸೇನಾನಾಯಕನ ಆತ್ಮಹತ್ಯೆ

ಫಿಲಿಪ್ಪೈನಿನ ಜಾಪಾನ ಸೇನಾನಾಯಕನು ಆತ್ಮಹತ್ಯೆಮಾಡಿಕೊಂಡಿರುವನೆಂದು ತಿಳಿದುಬರುತ್ತದೆ. ಇತರ ಕಡೆಯ ಜಾಪಾನ ಸೇನಾನಾಯಕರುಗಳು ಜಯಶೀಲರಾಗಿರುವಾಗ ತಾನು ಅಂತಹ ವಿಜಯಗಳನ್ನು ಪಡೆಯದಿರುವುದೇ ಈ ಆತ್ಮಹತ್ಯೆಗೆ ಕಾರಣವೆಂದು ನಂಬಲಾಗಿದೆ. ಸಿಂಗಪುರದ ವಿಜಯಿ ಸೇನಾನಾಯಕರು ಫಿಲಿಪ್ಪೈನಿನ ಸೇನಾನಾಯಕರಾಗಿ ನೇಮಿಸಲ್ಪಟ್ಟಿರುತ್ತಾರೆ. ಅಲ್ಲಿಗೆ ಹೆಚ್ಚಿನ ಜಾಪಾನ ಸೇನೆಯು ಕಳುಹಿಸಲ್ಪಟ್ಟಿರುತ್ತದೆ.

ಹಿಂದೀ ರಾಜಕೀಯ ಪ್ರಶ್ನೆ

ಯನ್ನು ಇತ್ಯರ್ಥಗೊಳಿಸಬೇಕೆಂದು ಬ್ರಿಟಿಷ್ ಲೇಬರ್ ಪಕ್ಷದ ಒತ್ತಾಯವಿದೆ. ಆದರೆ ಕನ್ಸರ್ವೇಟಿವ್ ಪಕ್ಷದ ಪ್ರಬಲ ತಂಡವೊಂದು ಹಿಂದುದೇಶಕ್ಕೆ ಹೆಚ್ಚಿನ ಸ್ವಾತಂತ್ರ್ಯವೀಯುವುದಕ್ಕೆ ವಿರೋಧವಿದೆ. ಈಗ ಡೊಮಿನಿಯನ್ ಸ್ಟೇಟಸ್ ಕೊಟ್ಟರೆ ಮತ್ತೆ ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದೀಯರು ಕೇಳಬಹುದೆಂದು ಈ ತಂಡದವರ ಬೆದರಿಕೆ. ಬ್ರಿಟಿಷ್ ಮಂತ್ರಿಮಂಡಲವು ಕೊನೆಯ ನಿರ್ಧಾರವನ್ನು ಈ ವರೆಗೂ ಮಾಡಿರುವಂತಿಲ್ಲ. ಚರ್ಚಿಲ್ಲರು ಹಿಂದೀ ಬಿಕ್ಕಟ್ಟಿನ ಕುರಿತು ಪಾರ್ಲಿಮೆಂಟಿನಲ್ಲಿ ಯಾವಾಗ ಹೇಳಿಕೆ ಕೊಡುವರೆಂದು ನಿಶ್ಚಿತವಾಗಿ ತಿಳಿದಿಲ್ಲ. ಪ್ರಕೃತ ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಿಕೆಯ ಎಲ್ಲಾ ಸ್ಥಾನಗಳಿಗೂ ಹಿಂದೀಯರು ನೇಮಿಸಲ್ಪಡುವ ಮತ್ತು ಯುದ್ಧ ಮುಗಿದ ಮೇಲೆ ಸಾಮಂತ ಸ್ವರಾಜ್ಯವೀಯುವ ಆಲೋಚನೆಯನ್ನು ಮಾತ್ರ ಬ್ರಿಟಿಷ್ ಮಂತ್ರಿಮಂಡಲವು ಮಾಡಿರುವುದೆಂದು ನಂಬಲಾಗಿದೆ.

ಮಿತ್ರ ರಾಷ್ಟ್ರಗಳು ಮುಂದೇನು ಮಾಡುವವು?

ಆಸ್ಟ್ರೇಲಿಯ, ಸಿಲೋನು, ಮತ್ತು ಚೈನಗಳಿಗೆ ಹೆಚ್ಚೆಚ್ಚಾಗಿ ಸೇನಾ ಮತ್ತು ಯುದ್ಧೋಪಕರಣಗಳನ್ನು ಕಳುಹಿಸುವ ಹೊರತು ಇನ್ನು ಕೆಲವು ತಿಂಗಳುಗಳವರೆಗೆ ಪೂರ್ವದಲ್ಲಿ ಜಾಪಾನಿನ ಮೇಲೇರಿ ಹೋಗಿ ಹೋರಾಟ ನಡೆಸಲು ಅಮೆರಿಕ ಮತ್ತು ಇಂಗ್ಲೆಂಡುಗಳು ಸಿದ್ಧವಿಲ್ಲೆಂದು ನಂಬಲಾಗಿದೆ. ಜರ್ಮನಿಯೇ ತಮ್ಮ ಅತಿ ದೊಡ್ಡ ವೈರಿ. ಆದುದರಿಂದ ಮೊದಲಾಗಿ ಅದನ್ನು ಸೋಲಿಸುವ ಪ್ರಯತ್ನ ಮಾಡಬೇಕು. ಆ ಬಗ್ಗೆ ರಷ್ಯಕ್ಕೆ ಅತಿ ಹೆಚ್ಚಿನ ಸಹಾಯವೀಯಬೇಕು. ಮತ್ತು ಹಿಟ್ಲರರು ಮಧ್ಯಪೂರ್ವದಲ್ಲಿ ಮುಂದೊತ್ತದಂತೆ ತಡೆಗಟ್ಟಬೇಕು. ವಸಂತ ಋತುವಿನ ಹಿಟ್ಲರರ ಪ್ರಚಂಡ ಧಾಳಿಯು ಜಯಶೀಲವಾಗಿ ರಷ್ಯವು ಪರಾಜಿತವಾದರೆ ಮತ್ತೆ ಜರ್ಮನಿಯ ಮೇಲೆ ಧಾಳಿ ನಡೆಸಿ ಅದನ್ನು ಗೆಲ್ಲಲು ಸಾಧ್ಯವಿಲ್ಲ. ಆದುದರಿಂದ ಬರುವ ವಸಂತ ಋತುವಿನ ಮತ್ತು ಸಕೆಕಾಲದ ಯುದ್ಧವು ಸಂದಿಗ್ಧವಾಗಿದ್ದು ಹಿಟ್ಲರರ ಭವಿಷ್ಯವು ಅದರ ಪರಿಣಾಮದ ಮೇಲೆ ಹೊಂದಿದೆ. ಅವರ ಶೀಘ್ರವಾದ ಪತನ-ಕುರಿತು ಸಂಪೂರ್ಣ ಗಮನ ಕೊಡುವುದು ಇಂದೀಗ ಬ್ರಿಟನು ಮತ್ತು ಅಮೆರಿಕಗಳ ಮೊದಲ ಕರ್ತವ್ಯವೆಂದು ರುಸವೆಲ್ಟ್ ಮತ್ತು ಚರ್ಚಿಲ್ಲರುಗಳ ಅಭಿಮತವಿರುವಂತಿದೆ.

ಜರ್ಮನ್ ಸೇನೆಯ ನಾಶ ನಿಶ್ಚಯ.

ಸ್ಟರಯ ರೂಸದ ಬಳಿ ಸಿಕ್ಕಿಬಿದ್ದಿರುವ ಸುಮಾರು ಒಂದು ಲಕ್ಷ ಜರ್ಮನ್ ಸೇನೆಯ ನಾಶ ನಿಶ್ಚಯವೆಂದು ಇದೇ ತಾ. ೮ರಲ್ಲಿ ಮೋಸ್ಕೋ ರೇಡಿಯೋವು ಪ್ರಕಟಗೊಳಿಸಿರುವುದು. ಕ್ರೈಮಿಯದಲ್ಲಿ ರಷ್ಯನರು ಹೊಸ ಧಾಳಿಯನ್ನಾರಂಭಿಸಿರುತ್ತಾರೆ. ರಷ್ಯದ ಯುದ್ಧದಲ್ಲಿ ಹತರಾದ ಮತ್ತು ಗಾಯಗೊಂಡ ಜರ್ಮನ್ ಸೈನಿಕರು 1½ ಮಿಲ್ಯದಷ್ಟಾಗಿರುವರೆಂದು ಜರ್ಮನರೇ ಈಗ ಒಪ್ಪಿರುತ್ತಾರೆ. ಯುಖ್ನೊವನ್ನು ರಷ್ಯನರು ಗೆದ್ದಿರುವರೆಂಬುದನ್ನೂ ಒಪ್ಪಿರುತ್ತಾರೆ. ಲೆನಿನ್ ಗ್ರಾಡ್ ಪ್ರದೇಶದಲ್ಲಿ ಇತ್ತಲಾಗಿ 6000 ಮಂದಿ ಜರ್ಮನರು ಕೊಲ್ಲಲ್ಪಟ್ಟಿರುತ್ತಾರೆ. ಸ್ಮೋಲೆಂಸ್ಕ್ ಪ್ರದೇಶದಲ್ಲಿ 19 ಜಿಲ್ಲೆಗಳನ್ನು ಸೋವಿಯೆಟ್ ಸೇನೆಯು ಗೆದ್ದಿರುವುದು.

ಸರ್ದಾರ ಶಾರ್ದೂಲ ಸಿಂಘರ ದಸ್ತಗಿರಿ.

ಆಲ್ ಇಂಡಿಯಾ ಫೋರ್ವರ್ಡ್ ಬ್ಲೋಕಿನ ಅಧ್ಯಕ್ಷರಾದ ಸರ್ದಾರ ಶಾರ್ದೂಲ ಸಿಂಘರು ಇದೇ ತಾ. 9ರಲ್ಲಿ ಲಾಹೋರಿನಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ದಸ್ತಗಿರಿ ಮಾಡಲ್ಪಟ್ಟಿರುವರು.

ಕಡೆಕಾರು:– ನಿಡಂಬೂರು ಪಂಚಾಯ್ತಿ ಬೋರ್ಡಿನ ಸೋಮವಾರದ ಹೊಸ ಸಂತೆ ಮಾರ್ಕೆಟಿನ ಪ್ರಾರಂಭೋತ್ಸವವು ತಾ. 2-3-1942ನೆಯ ಬೆಳಗ್ಗೆ ವಿಜೃಂಭಣೆಯಿಂದ ನಡೆಯಿತು. ಜಿಲ್ಲಾ ಬೋರ್ಡು ಮೆಂಬರರಾದ ಡಾ| ಟಿ. ಜಿ. ಆಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ವಕೀಲ್ ಶ್ರೀ ಕೆ. ಜಿ. ಬಲ್ಲಾಳರಿಂದ ಈ ಸಂತೆಯ ಉದ್ಘಾಟನವು ನೆರವೇರಿತು. ಬೋರ್ಡಿನ ಪ್ರೆಸಿಡೆಂಟರ ಸ್ವಾಗತ, ಅಧ್ಯಕ್ಷರ ಆರಂಭ ಭಾಷಣವೂ, ಉದ್ಘಾಟಕರ ಉಪನ್ಯಾಸವೂ ಆಕರ್ಷಕವಾಗಿಯೂ ಚೊಕ್ಕವಾಗಿಯೂ ಮುಗಿದಮೇಲೆ ಊರಿನ ಬಲ್ಲಾಳರು ಉಚಿತ ವಚನಗಳಿಂದ ಸಂಸ್ಥೆಯನ್ನು ಆಶೀರ್ವದಿಸಿದರು.

ಶಿರ್ವ— ಅಲ್ಲಿಯ ಜನರಲ್ ಟೀಚರ್ಸ್ ಸಂಘದ ಫೆಬ್ರವರಿ ತಿಂಗಳ ಮಾಸಿಕ ಸಭೆಯು ತಾ. 28-2-42ನೇ ಶನಿವಾರ ದಿವಸ ಉತ್ಸಾಹದ ವಿದ್ಯಾದಾಯಿನಿ ಶಾಲೆಯಲ್ಲಿ ಶ್ರೀ ಕೆ. ವಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ಸಭಾವರದಿ ಓದಿದ ಬಳಿಕ ಶ್ರೀ ಎಸ್. ಭೋಜರಾಯರು, ಶ್ರೀ ಎಸ್ ರಾಮಶೆಟ್ಟಿ ಮಾದರಿ ಪಾಠಗಳನ್ನು ಕೊಟ್ಟರು. ಅಧಿಕಾರಿಗಳಿಂದ ಬಂದಿರುವ ಸುತ್ತೋಲೆಗಳನ್ನು ಓದಿ ಭಾಷಾಂತರಿಸಿದೊಡನೆ ಅಧ್ಯಕ್ಷರ ಭಾಷಣದಿಂದಲೂ ಫಲಹಾರವನ್ನು ಸ್ವೀಕರಿಸಿಯೂ ಸಭೆಯು ಮುಕ್ತಾಯವಾಯ್ತು.

ತಿದ್ದುಪಡಿ:– ಕಳೆದ ಸಂಚಿಕೆಯ ೧೦ನೇ ಪುಟದಲ್ಲಿ ಶ್ರೀ ಕೆ. ನರಸಿಂಹ ಕಾಮತರು, ಕ್ಯಾಶಿಯರ್ ಅವರ ಹೆಸರಲ್ಲಿ ಪ್ರಕಟವಾದ ಕುಂದಾಪುರ ಡಿ. ಮು. ಕೋರ್ಟಿನ ನೋಟೀಸಿನಲ್ಲಿ ನಂಬ್ರವು ಬಿಟ್ಟು ಹೋಗಿದೆ. ಅದನ್ನು O. S. ನಂಬ್ರ 42/1942. ಎಂದು ತಿದ್ದಿಕೊಳ್ಳಬೇಕಾಗಿದೆ.

ಸಂ. ಪ.

ಪಶ್ಚಾತ್ತಾಪ ಸೂಚನೆ.

ಕಳೆದ ವಾರದ ನವಯುಗದಲ್ಲಿ ಪ್ರಕಟವಾಗಿದ್ದ 'ಹಗಲು ಹೋಯಿತು-ರಾತ್ರಿ?' ಎಂಬ ಕಥೆಯಿಂದ ಕೆಲವರು ಮನನೊಂದುಕೊಂಡಿದ್ದಾರೆಂದು ತಿಳಿಯುತ್ತೇವೆ. ಈ ರೀತಿ ಕೆಲವರಿಗೆ ಆಘಾತವಾದ ಕಥೆಯು ನವಯುಗದಲ್ಲಿ ಪ್ರಕಟವಾದುದಕ್ಕಾಗಿ ವಿಷಾದಿಸುತ್ತೇವೆ.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ರಾಸ್, ಬ್ರಾಂಚ್ ಸಕ್ರೆಟರಿ, ಮಂಗಳೂರು, ದ. ಕ.

ಶ್ರೀ ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.

ಶ್ರೀ ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ತಾ. 14—3—1942ರಿಂದ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ನವಯುಗ ಚಿತ್ರಪಟದವರ

ಅರ್ಧಾಂಗಿ

ಅಥವಾ ಘರ್-ಕೀ-ರಾಣಿ

ಮೀನಾಕ್ಷಿ, ಲೀಲಾ ಚಿಟ್ನಿಸ್, ವಿನಾಯಕ್, ಮಲ್ಹಾರಿಕರ್ ಮೊದಲಾದವರು ನಟಿಸಿರುವರು.

ನಡೆಯುವ ಚಿತ್ರ. ವಾಡಿಯಾ ಮೂವಿಟೋನಿನವರ ನಾಡಿಯಾ ನಟಿಸಿರುವ **ಡೈಮಂಡ್ ಕ್ವೀನ್**

ಬರುವ ಚಿತ್ರ: **RKO** ರೇಡಿಯೋದವರ

ಡಬ್ಬಲ್ ಕ್ರೈಮ್ ಇನ್ ದಿ ಮೆಜಿನೋ ಲೈನ್.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಚೈನಾ ದಿನಾಚರಣೆ—ದಕ್ಷಿಣ ಜಿಲ್ಲಾ ಯುದ್ಧಸಮಿತಿಯ ಆಶ್ರಯದಲ್ಲಿ ತಾ. 7ರಲ್ಲಿ ಚೈನಾ ದಿನಾಚರಣೆಯು ಆಚರಿಸಲ್ಪಟ್ಟಿತು. ಅಂದು ಸಾಯಂಕಾಲ ಪ್ರೋಲೀಸ್ ಮೈದಾನದಲ್ಲಿ ಸಾರ್ವಜನಿಕ ಸಭೆಯು ಜಿಲ್ಲಾ ಜಡ್ಜರಾದ ಶ್ರೀ ಎಲ್. ಎಸ್. ಪಾರ್ಥಸಾರಥಿ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಲೆಕ್ಟರರೂ ಶ್ರೀ ಯಂ. ಎಸ್. ಮಾಧವ ರಾಯರೂ, ರಾವ್ ಸಾಹೇಬ್ ರಂಗನಾಥಪೂಂಜರೂ ಚೈನಕ್ಕೂ ಹಿಂದೂ ದೇಶಕ್ಕೂ ಇರತಕ್ಕ ಧಾರ್ಮಿಕ, ಸಾಂಸ್ಕೃತಿಕ ಸಂಬಂಧವನ್ನು ಸೂಚಿಸಿ ಹಿಂದುಸ್ಥಾನದವರು ಸರ್ವವಿಧದಿಂದಲೂ ಸಹಾಯ ನೀಡಬೇಕೆಂದು ಹೇಳಿದರು. ಅಧ್ಯಕ್ಷರು ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಶ್ರೀ ಯಂ. ವೆಂಕಟೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಟೌನ್ ಕಾಂಗ್ರೆಸ್ ಸಮಿತಿಯ ಸಭೆ—ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ಕೆ. ಈಶ್ವರನವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕೊಂಚಾಡಿ ಕೇಶವ ಶೆಣೈಯವರು ಅಧ್ಯಕ್ಷಸ್ಥಾನಕ್ಕೆ ಕೊಟ್ಟ ರಾಜೀನಾಮೆಯನ್ನು ಸಭೆಯು ಸ್ವೀಕರಿಸಿ, ಅಧ್ಯಕ್ಷಸ್ಥಾನಕ್ಕೆ ಶ್ರೀ ಕೆ. ಈಶ್ವರ ಯಂ. ಎಲ್. ಎ. ಅವರನ್ನು ಆರಿಸಿತು.

ಆರ್ತ ಚಿಕಿತ್ಸಾಭವನದ ವಾರ್ಷಿಕೋತ್ಸವ—ಡಾ। ಎನ್. ಡಿ. ಸುವರ್ಣರ ಕಳೆದ 24 ವರುಷಗಳಿಂದ ನಡೆಸಿಕೊಂಡು ಬರುತ್ತಿರುವ ಆರ್ತ ಚಿಕಿತ್ಸಾಭವನದ ವಾರ್ಷಿಕೋತ್ಸವವು ನಿನ್ನೆ ಸಾಯಂಕಾಲ ಶ್ರೀ ಕೆ. ಬಿ. ಜಿನರಾಜ ಹೆಗಡೆ ಯಂ. ಎಲ್. ಎ. (ಸೆಂಟ್ರಲ್) ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ। ಸುವರ್ಣರು ವರದಿಯನ್ನೋದಿದರು. ಶ್ರೀಗಳಾದ ರಾ. ಬ. ಎ. ಆನಂದರಾವ್, ಕೆ. ಕೃಷ್ಣರಾವ್ ಮತ್ತು ಎಚ್. ಭೀಮರಾವ್ ಇವರುಗಳು ಭವನದ ಶ್ರೇಯಸ್ಸನ್ನು ಕೋರಿ ಭಾಷಣಮಾಡಿದರು.

ಭಯಂಕರ ಕೊಲೆ-ಕಳೆದ ಶುಕ್ರವಾರ ಸಾಯಂಕಾಲ ಕಂಕನಾಡಿಯಿಂದ ಕೆಲವು ಮೈಲುಗಳ ದೂರದಲ್ಲಿ ಒಂದು ಕಾಡುದಾರಿಯಲ್ಲಿ ಓರ್ವ ಬಿಲ್ಲವ ಹೆಂಗಸು ಹೋಗುತ್ತಿದ್ದಾಗ ಯಾರೋ ದುರಾತ್ಮನೊಬ್ಬನು ಆಕೆಯ ಕಿವಿಗಳನ್ನು ಕೊಯಿದು ಕುತ್ತಿಗೆಯನ್ನು ಕತ್ತರಿಸಿ ಆವಳ ಆಭರಣಗಳನ್ನು ಹಿಡಿದುಕೊಂಡು ಓಡಿಹೋದನೆಂದ ತಿಳಿದುಬಂದಿದೆ. ಹೆಂಗಸಿನ ಮೃತದೇಹವು ಇಲ್ಲಿಯ ಆಸ್ಪತ್ರೆಗೆ ಪರೀಕ್ಷಾರ್ಥವಾಗಿ ತರಲಾಗಿತ್ತು. ಕೊಲೆಪಾತಕಿಯು ಸಿಕ್ಕಿದ್ದಾನೆಂದು ತಿಳಿದುಬಂದಿದೆ ತನಿಖೆ ನಡೆಯುತ್ತಿದೆ

ಉಡುಪಿ.

ನಗರ ಸಭೆ- ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯು ಇದೇ ತಾ. 5ರಲ್ಲಿ ಸೇರಿತು. ಚೆಯರ್‌ಮೆನ್ ಶ್ರೀ ಎ। ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು. ಪಟ್ಟಣದ ಜನಸಂಖ್ಯೆಯಲ್ಲಿ ಹೆಚ್ಚುಬರೋಣವಿರುವದರಿಂದ ಘೋಷಾ ಸ್ತ್ರೀಯರಿಗೂ ದಾಕು ಹಾಕುವ ಕೆಲಸ ವಿಶೇಷಕ್ಕಾಗಿ ಕಮೀಶನರರು ನೇಮಿಸಿದ್ದ ವಿಶೇಷ ಸ್ತ್ರೀ ವೆಕ್ಸಿನೇಟರರ ಸ್ಥಾನವನ್ನು ಮಂಜೂರು ಮಾಡಲಾಯಿತು. ನಗರ ಸಭೆಯು ಸರಕಾರದಿಂದ ಅಪೇಕ್ಷಿಸಿದ್ದ ಸಾಲವು 1942 43ನೇ ವರುಷಕ್ಕೆ ದೊರೆತರೆ ಸಾಕೆಂಬ ನಿರ್ಧಾರವಾಯಿತು

ನಾಟಕ-ಯುದ್ಧನಿಧಿಯ ಸಹಾಯಾರ್ಥವಾಗಿ ಇದೇ ತಾ. 7ರಲ್ಲಿ, ಕುಕ್ಕಾಡಿ ಶ್ರೀ ಲಕ್ಷ್ಮೀನರಸಿಂಹ ಎಮೆಚ್ಯೂರ್ಸ್ ಇವರಿಂದ 'ದೀಪಾವಳಿ' ಎಂಬ ನಾಟಕವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಅಭಿನಯಿಸಲ್ಪಟ್ಟಿತು. ಜನಸಂದಣಿಯು ವಿಶೇಷವಿದ್ದು ರೂ 500ಕ್ಕೆ ಮಿಕ್ಕಿ ಜಮೆಯಾಗಿರಬಹುದೆಂದು ಊಹಿಸಲಾಗಿದೆ

ಶೋಚನೀಯ ನಿಧನ — 1920ರ ಅಸಹಕಾರ ಚಳವಳದ ಕಾಲ ಹೈಸ್ಕೂಲು ತ್ಯಜಿಸಿ, ಚಳವಳದಲ್ಲಿ ಭಾಗವಹಿಸಿ ಆ ಮೇಲೆ ಸಾಂತ್ಯಾರು ರಾಷ್ಟ್ರೀಯ ವಿದ್ಯಾಲಯದ ಅಧ್ಯಾಪಕರಾಗಿದ್ದು ಹಲವು ವಿಧದಿಂದ ದೇಶಾಭಿಮಾನ ಪ್ರದರ್ಶಿಸಿದ್ದ ಕಟಪಾಡಿಯ ಶ್ರೀ ಕೆ। ದೇವಪ್ಪ ಸೆಟ್ಟರು ಇದೇ ತಾ 2ರಲ್ಲಿ ತನ್ನ ಪೂರ್ವ ವಯಸ್ಸಿನಲ್ಲೇ ಕಟಪಾಡಿಯಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ಶ್ರೀಯುತರು ಸತತ ಖಾದಿ ಧಾರಿಯೂ, ವಿನಯ ಸಂಪನ್ನರೂ, ಜನಪ್ರೀತರೂ ಆಗಿದ್ದರು.

ಬೊಂಬಾಯಿಯ ಸಂಸ್ಥೆಯೊಂದರಲ್ಲಿದ್ದ ಕಿಮ್ಮಿರಿನ ಶ್ರೀ ರಘುನಾಥ ಸೆಟ್ಟಿಯು ತನ್ನ ಎಳೇ ವಯಸ್ಸಿನಲ್ಲೇ ಕ್ಷಯಕ್ಕೆ ತುತ್ತಾಗಿ ಇದೇ ತಾ. 3ರಲ್ಲಿ ಬೊಂಬಾಯಿಯಲ್ಲಿ ನಿಧನ ಹೊಂದಿದುದು ಶೋಚನೀಯವಿದೆ.

ಬನ್ನಾಡಿ—ಇಲ್ಲಿಯ ಪರಮಹಂಸ ಶಾಲಾ ಪ್ರವೇಶೋತ್ಸವವು ತಾ 28—2—42ನೆ ಶನಿವಾರ ಅಪರಾಹ್ನ ಗಂಟೆ 4-30ಕ್ಕೆ ಸರಿಯಾಗಿ ಸಂಭ್ರಮದಿಂದ ಜರಗಿತು. ನಿಶ್ಚಿತ ಅಧ್ಯಕ್ಷರಾದ ಶ್ರೀ ಕೆ ಸಂಜೀವ ಭಟ್ ಎಂ. ಎ. ಎಲ್. ಟಿ. ಇವರಿಗೆ ಅನಿರೀಕ್ಷಿತವಾಗಿ ಜ್ವರ ಬಂದುದರಿಂದ ಶ್ರೀ ಎಚ್. ಆರ್. ಹಂದೆ, ಪಟೇಲ್ ಕೋಟ್ರಟ್ಟು- ಇವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಜನಸಂದಣಿಯು ಕಿಕ್ಕಿರಿದಿತ್ತು. ಅಧ್ಯಕ್ಷರ ಸ್ವಾಗತ ಮತ್ತು ಶಾಲಾ ಹೊಸಕಟ್ಟಡದ ಉದ್ಘಾಟನಾ ಸಮಾರಂಭಗಳಾದ ಮೇಲೆ ಕಾರ್ಯಕ್ರಮದಂತೆ ಲೇಜಿಮ್ ಆಟ, ಕೋಲಾಟ, ಯೋಗಾಸನ ಪ್ರದರ್ಶನ, ವಿವಿಧ ವಿನೋದಾವಳಿಗಳು ಜರಗಿದುವು. ಬಳಿಕ 'ಮಂಗಮಂಗ' ಎಂಬ ಕನ್ನಡ ಪ್ರಹಸನವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. 'ಭಕ್ತ ಬಂಧು' ಎಂಬ ಯಕ್ಷಗಾನ ನಾಟಕವನ್ನು ಕಂಡು ಸಭಿಕರು ಮನ ಮೆಚ್ಚಿದರು. ಸಭಿಕರಲ್ಲಿ ಹಲವರು ಮುಂದೆ ಬಂದು 'ಎರಡು ವರ್ಷಗಳ ಈ ಅಲ್ಪ ಅವಧಿಯಲ್ಲಿ ಏನೂ ಅರಿಯದ ಇಷ್ಟು ಚಿಕ್ಕ ಮಕ್ಕಳನ್ನು ಈ ರೀತಿ ತರಬೇತು ಮಾಡಿದವರನ್ನು ಶ್ಲಾಘಿಸಿ ವಿದ್ಯಾಧಿಕಾರಿಗಳು ಇದನ್ನು ಹಯರ್ ಎಲಿಮೆಂಟರಿ ಶಾಲೆಯಾಗುವಂತೆ ಮಾಡಿ ಸಾರ್ಥಕಗೊಳಿಸಲೆಂದು ಪಾರ್ಥಿಸಿದರು. ಅಧ್ಯಕ್ಷರು ತಮ್ಮ ಸ್ವರಸ ಭಾಷಣದಲ್ಲಿ 'ಪ್ರತಿದಿನ ಅಭಿವೃದ್ಧಿ ಪಥದಲ್ಲಿ ಮುನ್ನಡೆದು, ಜನಾದರಣೆಗೆ ಪಾತ್ರವಾದ ನಮ್ಮ ಜಿಲ್ಲೆಯ ಕೆಲವೇ ಶಾಲೆಗಳಲ್ಲಿ ಇದು ಒಂದು. ಈ ಸಭೆಯ ಹಲವರ ಬಯಕೆಯಂತೆ ಈ ಶಾಲೆಯನ್ನು ಹಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತಿಸಲು ವಿದ್ಯಾಧಿಕಾರಿಗಳು ಆದಷ್ಟು ಬೇಗ ಅನುಮತಿ ದಯಪಾಲಿಸಲೆಂದು ಕೋರುತ್ತೇನೆ' ಎಂದರು. ಧನ್ಯವಾದಗಳೊಡನೆ ಸಭೆಯು ಮುಕ್ತಾಯವಾಯಿತು.

ಕೋಟೆ—ತಾ 27—2—42ರಲ್ಲಿ ಗಿಳಿಯಾರು ಶ್ರೀ ರಾಘವೇಂದ್ರ ವಿದ್ಯಾದಾಯಿನೀ ಹಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಉಡುಪಿ ರೇಂಜಿನ ಶಾಲೆಗಳ ಸೀನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಶ್ರೀಯುತ ಕೆ. ಸಂಜೀವ ಭಟ್ಟ M. A. L. T. ಇವರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಜರಗಿತು. ಹೆತ್ತವರ ಹಾಗೂ ಪ್ರೇಕ್ಷಕರ ಸಂದಣಿಯು ಕಿಕ್ಕಿರಿದುಹೋಗಿತ್ತು. ಸಭಿಕರೆಲ್ಲಾ ಶಾಲಾ ಮಕ್ಕಳ ವಿವಿಧ ಚಟುವಟಿಕೆಗಳನ್ನು ಅಭಿನಯಯುಕ್ತವಾದ ಯಕ್ಷಗಾನ ಮತ್ತು ಸಂಗೀತ ನಾಟಕಗಳನ್ನು ನೋಡಿ ಆನಂದಪಟ್ಟರು. ಕೊನೆಗೆ ಅಧ್ಯಕ್ಷರು ಮಕ್ಕಳ ಹಾಗೂ ಶಾಲೆಯ ಯೋಗ್ಯತೆಯನ್ನು ತುಂಬಾ ಶ್ಲಾಘಿಸಿ, ಬಹುಮಾನಗಳನ್ನು ಹಂಚಿದ್ದಲ್ಲದೆ, ಶಾಲಾ ಸ್ಥಾಪಕರಾದ ದಿವಂಗತ ಶ್ರೀ ಶೇಷ ಕಾರಂತರ ಮತ್ತು ಅವರ ಮಕ್ಕಳ ಉದಾರಪೂರ್ವಕವಾದ ತ್ಯಾಗವನ್ನು ಕೊಂಡಾಡಿ, ಸುಮಾರು 350ಕ್ಕಿಂತ ಹೆಚ್ಚು ಮಕ್ಕಳಿಂದ ಕೂಡಿರುವ ಈ ಶಾಲೆಯು ಜಿಲ್ಲೆಯ ಪ್ರಥಮ ಶ್ರೇಣಿಯ ಹಾಯರ್ ಎಲಿಮೆಂಟರಿ ಶಾಲೆಗಳ ಪೈಕಿ ಒಂದು ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತರುವಾಯ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಸಮಾರಂಭವು ಅಂತ್ಯವಾಯಿತು.

ಬ್ರಹ್ಮಾವರ—ಬ್ರಹ್ಮಾವರ ಲೇಬರ್ ಶಾಲು ಮಕ್ಕಳ ಹೆತ್ತವರ ಸಭೆಯು ತಾ 1 3 42ರಲ್ಲು ಶಾಲಾ ವಠಾರದಲ್ಲಿ ಇಲ್ಲಿಯ ಸಬ್ ರಿಜಿಸ್ಟ್ರಾರ್ ಶ್ರೀ ಎಸ್. ಕೆ. ಜತ್ತನ್ನರವರ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ಶಾಲೆಯಲ್ಲಿ ಕಲಿಯುವ ಅತಿ ಗರೀಬ ಹರಿಜನರ 40 ಮಕ್ಕಳಿಗೆ ಮಧ್ಯಾಹ್ನ ಒಂದು ಗಂಜಿ ಊಟ ಹಾಕಿಸಿದ್ದಲ್ಲದೆ ಒಂದೊಂದು ಉಡುಪು ಒದಗಿಸಿಕೊಟ್ಟಿತು.

ಶ್ರೀ ರಜಕ ಸಂಘ ಮುಂಬಯಿ–ಈ ಸಂಘದ ಐದನೇ ವಾರ್ಷಿಕ ಮಹಾ ಸಭೆಯು ತಾ 22 2 1942ರಲ್ಲು ಮುಂಬಯಿ ಕೋಟೆಯೊಳಗಣ ಮೆಡೋ ರಸ್ತೆಯಲ್ಲಿರುವ "ಅಂಗ್ಲೊ ಬೆಂಬಲ್ಲಿನ" ಎರಡನೆ ಮಾಳಿಗೆಯ ವಠಾರದಲ್ಲಿ ಶ್ರೀಯುತ ಕಾಳಪ್ಪ, ಎ. ಸಾಲಿಯಾನರ ಅಧ್ಯಕ್ಷತೆಯೊಡನೆ ಜರಗಿತು

Government of Madras
Public Department
Press Communique

Dated Fort St George the 3rd March 1942

The Government have ordered the immediate construction of camps on the outskirts of Madras City to house subordinate Government staff and labour engaged on essential services in order that they may not be tempted in case of enemy attack to leave their work. These camps will also provide accommodation for the families of those who go to live there. The camps are being built as close as possible to railway stations so as to make transport between them and places of work as easy as possible. The object of these camps is to provide quarters for the personnel of all essential services at a reasonably safe distance from possible military targets in the event of an enemy attack.

The Government however realize that some of the persons for whom these camps are intended may prefer to send their families to their own villages or other places in inland districts and for these people the Government are prepared to give advances for this particular purpose. Advances will be admissible for all non-gazetted Government servants including those officiating in gazetted posts, employed in the Madras Fortress Area and in the towns of Vizagapatam, Cocanada and Cochin and will be limited to one month's pay or Rs 50 whichever is less and will also be free of interest. The order will be made applicable by Government to other places as and when they consider it desirable to do so. Repayment of these advances will be started in the fourth month after the date of grant and will be completely recovered in nine monthly instalments. A subordinate who has taken this advance but does not send his family away will render himself liable to disciplinary action. Persons who have sent their families away since the 1st of January 1942 will be eligible to the advance.

The Government wish once again to emphasize that there is still no necessity for people to leave Madras and they have decided to grant this advance purely to allay any feelings of disquiet which may be troubling members of the staff.

S V. Ramamurty,
Chief Secretary

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE —

Personal Loans & Overdrafts	7½% p. a.
Usance Bills	7 p. a.
Trade Bills	6 p. a.
Loans on Produce	5½ p. a.
Loans on Insurance Policies, Stocks & shares	5% p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.
ESTD. 1906

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. **UDPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ವಿಮಾನಗಳ ಧಾಳಿಯ ಕಾಲದಲ್ಲಿ ಮಾಡಬೇಕಾದ್ದೇನು?

ರಂಗೂನಿನ ಕಷ್ಟಗಳಿಂದ ಕಲಿತ ಪಾಠ.

ಕಹಳೆಯ ಶಬ್ದ ಕೇಳಿಸಿದೊಡನೆ ಮರೆ ಸೇರಬೇಕು.

(ಎಚ್. ಡಿ. ಲಿತೆಮರಿಂದ)

(ರಂಗೂನಿನಲ್ಲಿ ವಿಮಾನಗಳ ಧಾಳಿಯ ಕಾಲದಲ್ಲಿ ಯಾವ ಮುಂಜಾಗ್ರತೆ ಮಾಡಿದರು ಎಂದು ತಿಳಿಯುವ ಬಗ್ಗೆ ಇತ್ತೀಚೆಗೆ ರಂಗೂನಿಗೆ ಮಿ|| ಎಚ್. ಡಿ. ಲಿತೆಮರು ಪ್ರಯಾಣ ಬೆಳೆಸಿದ್ದರು. ಅಲ್ಲಿ ಪಡೆದ ಅನುಭವವನ್ನೇ ಈ ಪ್ರಕಟನಾಪತ್ರದಲ್ಲಿ ಕೊಟ್ಟಿದ್ದಾರೆ. ಧಾಳಿಯ ಕಾಲದಲ್ಲಿ ಜನರು ಕುಣಿಗಳ ಮರೆ ಸೇರಿ, ಜ್ವಲಿಸುವ ಸಿಡಿಮದ್ದಿನ ತೋಟೆಗಳನ್ನು, ಅವು ಕೆಳಗೆ ಬಿದ್ದ ಕ್ಷಣವೇ ನಾಶಪಡಿಸಬೇಕು)

ಜಪಾನಿನ ವಿಮಾನಗಳು ರಂಗೂನಿನಲ್ಲಿ ಸಿಡಿಮದ್ದಿನ ತೋಟೆಗಳನ್ನು ಚೆಲ್ಲುವ ಸಾಧಾರಣ ೨೫ ನಿಮಿಷಗಳ ಮೊದಲೇ ಡಿಸೆಂಬರ ೨೩ನೇ ತಾರೀಕಿಗೆ ಬೆಳಿಗ್ಗೆ ರಂಗೂನಿಗೆ ಸಮಾಚಾರ ತಲುಪಿತು. ಇಷ್ಟು ಮೊದಲೇ ಸಮಾಚಾರ ತಲುಪಿದರೂ, ಜನರು ಮಾಡಬೇಕಾದ ಮುಂಜಾಗ್ರತೆಯ ವಿಷಯದಲ್ಲಿ ಸಾಕಷ್ಟು ತಿಂಗಳ ಹಿಂದೆಯೇ ಅನುಭವ ಹೇಳಿಕೊಟ್ಟಿದ್ದರೂ ಅವನ್ನು ಲಕ್ಷಿಸದೆ ತೋಟೆಗಳು ಬೀಳುವುದಕ್ಕೆ ಆರಂಭಿಸಿದೊಡನೆ ಸಾವಿರಾರು ಜನರು ಬಯಲು ಸ್ಥಳಗಳಲ್ಲಿ ಸೇರಿದ್ದರು. ಈ ಮೊದಲ ಧಾಳಿಯಲ್ಲಿ ರಂಗೂನಿನ ಜನರು ಕುತೂಹಲಚಿತ್ತರಾಗಿ ಆತ್ಮರಕ್ಷಣೆಯ ಕಡೆಗೆ ಗಮನ ಇಲ್ಲದೆ ವರ್ತಿಸಬಹುದೆಂದು ತಂತ್ರಗಾರರಾದ ಜಪಾನಿಯರಿಗೆ ಗೊತ್ತು, ಆದ್ದರಿಂದ ಅವರು ಜನರ ಮೇಲೆ ಎಸೆಯತಕ್ಕ ತೋಟೆಗಳನ್ನು ಸಾಮಾನ್ಯ ಜನತೆಯ ಮೇಲೆ ನಿರ್ದಾಕ್ಷಿಣ್ಯದಿಂದ ಎಸೆದುಬಿಟ್ಟರು.

ಚಪಲತೆಯನ್ನು ತಗ್ಗಿಸಬೇಕು

ಜನರ ಮೇಲೆ ಎಸೆಯುವ ಈ ತೋಟೆಗಳು ಸ್ಫೋಟಿಸುವ ಮುಂಚೆ ಬಹಳ ಆಳಕ್ಕೆ ಪ್ರವೇಶಿಸುವುದಿಲ್ಲ; ಯಾವುದಕ್ಕೂ ಸ್ಪರ್ಶವಾದೊಡನೆ ಸ್ಫೋಟಿಸಿ ಅವುಗಳ ಚೂರುಗಳು ನೆಲಕ್ಕೆ ಸಮೀಪದಲ್ಲಿಯೇ ಬಹುತಗ್ಗಾಗಿ ಹರಡಿಕೊಳ್ಳುತ್ತವೆ. ಈ ಚೂರುಗಳು ಬಿದ್ದ ಹಲವೆಡೆಗಳನ್ನು ನಾನು ಪರೀಕ್ಷಿಸಿದೆನು. ಅವು ಬಿದ್ದ ಎಡೆಯಿಂದ ಈ ಚೂರುಗಳು ಎಷ್ಟು ತಗ್ಗಿನಲ್ಲಿ ಹರಡುತ್ತವೆ ಎಂದು ಖಚಿತವಾಯಿತು: ಕೆಳಗೆ ಬಿದ್ದು ಹರಡಿದ ಚೂರುಗಳ ದೆಸೆಯಿಂದ ಅವು ಮೊದಲು ಮಾಡಿದ ಕುಣಿಯಿಂದ ಬಹಳ ದೂರದ ವರೆಗೆ ನೆಲವು ಕರಟಿಹೋಗಿತ್ತು, ನೆಲಕ್ಕೆ ಹಾಸಿದ ಹಾಸುಕಲ್ಲುಗಳು ಚೂರುಚೂರಾಗಿದ್ದುವು; ಅಂಗಡಿಗಳ ಮತ್ತು ಮನೆಗಳ ನೆಲವು ಕರಟಿ ಒಡೆದು ಹೋಗಿತ್ತು. ನೂರಾರು ಅಡಿ ವಿಸ್ತಾರಕ್ಕೆ ಸುತ್ತಲಿರುವ ಗಾಜಿನ ತಗಡುಗಳು ನುಚ್ಚುನೂರಾಗಿದ್ದುವು. ಎರಡು ರಸ್ತೆಗಳು ಕೂಡುವ ಒಂದೇ ಸ್ಥಳದಲ್ಲಿ ಮರೆ ಸೇರದ ನೂರಾರು ಜನರು ಮಡಿದು ಬಿದ್ದಿದ್ದರು; ಸಿಡಿಮದ್ದಿನ ತೋಟೆಗಳು ಬರುವ ಶಬ್ದ ಕೇಳಿ ನೆಲದ ಮೇಲೆ ಅಂಗಾತನೆ ಬಿದ್ದ ಜನರು ಗಾಯ ಹೊಂದಿದ್ದರು ಅಥವಾ ಸತ್ತುಬಿದ್ದಿದ್ದರು.

ಈ ರೀತಿಯ ಅವಘಡದಿಂದ ರಂಗೂನಿನ ಜನರಿಗೆ ಕಹಳೆಯ ಶಬ್ದ ಕಿವಿಗೆ ಬಿದ್ದೊಡನೆ ಮರೆಸೇರಬೇಕೆಂದು ಪ್ರತ್ಯಕ್ಷ ಬೋಧನೆಯಾಯಿತು. ಮನುಷ್ಯನಲ್ಲಿ ಇರುವ ಸ್ವಾಭಾವಿಕ ಚಪಲತೆಯನ್ನು ಈ ಕಾಲದಲ್ಲಿ ಸರ್ವ ವಿಧದಲ್ಲಿಯೂ ತಗ್ಗಿಸಬೇಕು. ಸ್ಫೋಟಿಸುವ ಈ ತೋಟೆಗಳಲ್ಲದೆ ಅವುಗಳ ಹೊರಚಿಪ್ಪಿನ ಚೂರುಗಳು, ಮೆಶೀನ್ ಗನ್ನುಗಳಿಂದ ಎಸೆದ ತೋಟೆಗಳು, ಆಕಾಶದಲ್ಲಿ ಮುರಿದು ಕೆಳಗೆ ಕುಸಿದು ಬಿದ್ದ ವಿಮಾನಗಳ ಚೂರುಗಳು ಕೂಡಾ ಅಲ್ಲಿ ಹರಡಿರುತ್ತವೆ. ಆಕಾಶಕ್ಕೆ ಹೋಗುವ ವಸ್ತುಗಳೆಲ್ಲ ಕೆಳಗೆ ಬಿದ್ದೇ ತೀರಬೇಕು ಎಂಬುದನ್ನು ಮರೆಯದಿರಿ.

ಹೀಗಾಗಿ ರಂಗೂನಿನ ಧಾಳಿಯಿಂದ ಕಲಿತ ಪ್ರಥಮ ಮತ್ತು ಪ್ರಮುಖ ಪಾಠವು "ಮರೆ ಸೇರಬೇಕು" ಎಂಬದು.

ಬೇಗನೆ ಹಾಗೆ ಮಾಡಲಿಕ್ಕೆ ಸಾಧ್ಯವಿದ್ದರೆ ಇಟ್ಟಿಗೆ ಅಥವಾ ಕಲ್ಲಿನಿಂದ ಕಟ್ಟಿದ ಯಾವದೊಂದು ಕಟ್ಟೋಣದ ಆಶ್ರಯ ಸೇರಬೇಕು; ಅಂಥ ಕಟ್ಟಡವಿಲ್ಲದಿದ್ದರೆ ಬೇರೆ ಮರೆಯನ್ನಾಗಲಿ ಇದಕ್ಕಾಗಿಯೆ ತಯಾರಿಸಿದ ಕುಣಿಯನ್ನಾಗಲಿ ಸೇರಬೇಕು.

ಸಿಡಿಮದ್ದು ಮತ್ತು ಇಟ್ಟಿಗೆಯ ಕಟ್ಟಡ

ಈ ತೋಟೆಗಳ ಹಾವಳಿಯಿಂದ ಜನತೆಯು ಮರಣ ಹೊಂದಿದ ಹಲವೆಡೆಗಳಲ್ಲಿ ಅದರ ಪರಿಣಾಮವನ್ನು ನಾನು ಸ್ವತಃ ನೋಡಿದೆನು. ಸ್ಫೋಟಿಸಿದ ಚೂರುಗಳು ಇಟ್ಟಿಗೆಯ ಅಥವಾ ಕಲ್ಲಿನ ಗೋಡೆಗಳಿಗೆ ತಗುಲಿದ್ದಲ್ಲಿ ಆ ಇಟ್ಟಿಗೆಯ ಮೇಲೆ ಆಳವಾದ ಬರೆಗಳು ಹಲವು ಬಿದ್ದುದು ಕಂಡೆ; ಆದರೆ ಈ ಬರೆಗಳು ನಾಲ್ಕೈದು ಇಂಚುಗಳಷ್ಟು ಆಳವೂ ಇರಲಿಲ್ಲ; ಇಟ್ಟಿಗೆಯ ಮೇಲೆ ಈ ಸ್ಫೋಟನದ ಪರಿಣಾಮವು ಅತೀ ಕಡಿಮೆ ಎಂಬದೇ ಆಶ್ಚರ್ಯದ ಮಾತು. ಇಟ್ಟಿಗೆಯಿಂದ ಮಾಡಿದ ಹಲವು ಗೋಡೆಗಳ ಸಮೀಪದಲ್ಲಿ ಆದ ಸ್ಫೋಟನದ ಹೊಡೆತದ ಪರಿಣಾಮವನ್ನು ನಾನು ಪರಿಶೀಲಿಸಿದೆನು; ಆಗ ಇಟ್ಟಿಗೆಗಳು ಕರಟಿ ಹೋದದ್ದು ಮಾತ್ರ ಕಂಡು ಬಂತಲ್ಲದೆ ಇಟ್ಟಿಗೆಯೊಳಗೆ ಒಂದೇ ಒಂದು ಚೂರು ಪ್ರವೇಶಮಾಡಿದ್ದಿಲ್ಲ.

ನೇರವಾಗಿ ತಲೆಯ ಮೇಲೆ ಹಾರುವ ತೋಟೆಯಲ್ಲದಿದ್ದಲ್ಲಿ ಒಳ್ಳೆ ಮರೆಯಾಗಲಿ ಒಳ್ಳೆ ಕುಣಿಯಾಗಲಿ ಸುಮಾರು ಸಂಪೂರ್ಣ ಸಂರಕ್ಷಣೆ ಮಾಡಬಲ್ಲುದು. ಜಪಾನೀಯರ ಒಂದು ದೊಡ್ಡ ತೋಟೆಯು, ಮರದಿಂದ ರಚಿತವಾದ ಒಂದು ದೊಡ್ಡ ಬಂಗಲೆಯ ಮೇಲೆ ಸಿಡಿದು ಕಟ್ಟೋಣದ ಅರ್ಧಾಂಶವು ಸಂಪೂರ್ಣ ನಾಶವಾಗಿ ಅದರ ಸ್ಥಳದಲ್ಲಿ ೨೫ ಅಡಿ ವಿಸ್ತಾರದ ಒಂದು ದೊಡ್ಡ ಕುಣಿಯು ಬಿದ್ದಿತ್ತು. ಇದರಿಂದ ೧೦ ಗಜ ದೂರದಲ್ಲಿ ಆ ಬಂಗಲೆಯ ನಿವಾಸಿಕರು ಒಂದು ಕುಣಿಯಲ್ಲಿ ಮರೆ ಹೊಕ್ಕಿದ್ದರು. ಅದರ ಮೇಲ್ಮುಚ್ಚಿಗೆಯು ಹೆಚ್ಚು ದಪ್ಪವಿದ್ದಿಲ್ಲ. ಹೀಗಿದ್ದರೂ ಆ ತೋಟೆಯು ರಂಗೂನಿನ ಮೇಲೆ ಬಿದ್ದ ತೋಟೆಗಳಲ್ಲಿ ಒಂದು ದೊಡ್ಡ ತೋಟೆಯಾಗಿದ್ದರೂ ಆ ಜನರಿಗೆ ಸ್ವಲ್ಪವೂ ಅಪಾಯವು ತಟ್ಟಿದ್ದಿಲ್ಲ.

ನಾನು ಹಲವು ಸುಳ್ಳು ಸಮಾಚಾರಗಳನ್ನು ಕೇಳಿದ್ದೇನೆ. ಅವನ್ನು ದೇಶದ್ರೋಹಿಗಳು ಬಹುಶಃ ಹೊರಡಿಸಿರಬೇಕು. ಅವುಗಳ ಮೇರೆಗೆ ಉದ್ದ ದೊಡ್ಡ ಕುಣಿಗಳು ಅಷ್ಟು ಭದ್ರವಲ್ಲ. ಯಾಕಂದರೆ ಅವುಗಳಲ್ಲಿ ಸೇರಿದ ಜನರ ಮೇಲೆ ಜಪಾನೀಯರ ವಿಮಾನಗಳಿಂದ ಮೆಶೀನ್ ಗನ್ನುಗಳಿಂದ ಗುಂಡುಗಳನ್ನು ಹಾರಿಸುತ್ತಾರೆ ಎಂಬುದೇ ಈ ಸುಳ್ಳು ಸಮಾಚಾರಗಳು. ಜಪಾನೀಯ ವಿಮಾನಗಳು ೧೭,೦೦೦ ಅಡಿಗಿಂತ ತಗ್ಗಿಗೆ ಆಕಾಶದಲ್ಲಿ ಸುಳಿಯುವುದಿಲ್ಲ. ಈ ಆಶ್ರಯದ ಕುಣಿಗಳು ಓರೆಕೋರೆಯಾಗಿ ಅಗೆಯಲ್ಪಟ್ಟವುಗಳು. ತಾಸಿಗೆ ೩೦೦ ಮೈಲು ದೂರ ಪ್ರಯಾಣ ಮಾಡುವ ವಿಮಾನವು ಸರಿಯಾಗಿ ಗುರಿಯಿಟ್ಟು ಈ ಕುಣಿಗಳ ಮೇಲೆ ಗುಂಡುಗಳನ್ನು ಹಾರಿಸುವುದು ಸಾಧ್ಯವಲ್ಲ. ವಿಶ್ವಾಸಾರ್ಹವಾದ ಸರಕಾರಿ ವರ್ತಮಾನಗಳನ್ನು ಕೇಳಿದಾಗ ನೆಲದ ಮೇಲೆ ಚಲಿಸುವ ಜನಗಳ ಮೇಲೆ ಮೆಶಿನ್ ಗುಂಡುಗಳನ್ನು ಎಸೆದುದು ತೀರಾ ಕಡಿಮೆ ಎಂದು ತಿಳಿದುಬರುತ್ತದೆ. ಮರೆ ಸೇರದೆ ಅತ್ತಿತ್ತ ಸುಳಿಯುವ ಜನರ ಮೇಲೆಯೆ ತೋಟೆಗಳು ಸಿಡಿದು ಜನನಾಶವಾಯಿತೆನ್ನಬೇಕು.

ಶಾಂತಚಿತ್ತರಾಗಿರಿ.

ದುರದೃಷ್ಟದಿಂದ ಒಂದು ಉದ್ದ ಕುಣಿಯಲ್ಲಿ ಒಂದು ತೋಟೆಯು ಬಿದ್ದು ಕೆಲವು ಅನಾಹುತಗಳಾದುವು. ಇದರಿಂದ ಆ ಕುಣಿಯ ನೆರೆಯಲ್ಲಿರುವ ಕುಣಿಗಳಲ್ಲಿನ ಜನರು ಗಾಬರಿಯಾಗಿ ಅವರು ಶಾಂತಚಿತ್ತರಾಗುವ ಮತ್ತು ಮರೆಯಲ್ಲಿರುವ ಬದಲು ಕುಣಿಗಳಿಂದ ಹೊರಗೆ ಬರುವುದಕ್ಕೆ ಯತ್ನಿಸಿದರು. ಆಗ ಇನ್ನೊಂದು ತೋಟೆಯು ಸಿಡಿದು ಹೊರಗೆ ಬಂದವರ ಮೇಲೆ ಬಿದ್ದು ಬಹಳ ನಷ್ಟವಾಯಿತು. ಅವರು ತಟಸ್ಥರಾಗಿ ತಮ್ಮ ಕುಣಿಗಳ ಮರೆಯಲ್ಲಿಯೆ ಇದ್ದಿದ್ದರೆ ಬಹಳ ಕಡಿಮೆ ಜನರು ಸಾಯುತ್ತಿದ್ದರು. ಆದ್ದರಿಂದ ಇದರಿಂದ ಕಲಿಯುವ ಎರಡನೆ ಪಾಠವು 'ಶಾಂತಚಿತ್ತರಾಗಿರಿ' ಎಂದು.

ಕಟ್ಟೋಣಗಳ ಮರೆಸೇರುವಾಗ ಗಾಜಿನ ತಗಡಿರುವ ಕಿಟಕಿಗಳ ಸಮೀಪ ಹೋಗಬೇಡಿರಿ. ತೋಟೆಗಳು ಬಿದ್ದಲ್ಲೆಲ್ಲ ಗಾಜಿನ ಚೂರುಗಳು ನೂರಾರು ಅಡಿ ವಿಸ್ತಾರಕ್ಕೆ ಹಾರಿ ಭಯಂಕರ ಅಪಾಯವನ್ನು

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,
ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮಾಲ್ಕ ಮಂಜಯ ಭಂಡಾರಿಗಳವರು ಇದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು. — ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್., ಚೇಯರ್‌ಮನ್

ರೂಪಾಯಿಗಳು!

ವಿಕ್ಟೋರಿಯಾ ರೂಪಾಯಿಗಳು ನಿಮ್ಮಲ್ಲಿದ್ದು ಅವುಗಳನ್ನು ಚಲಾಯಿಸಲಾಗುವುದಿಲ್ಲವಾದರೆ ನಮಗೆ ಬರೆಯಿರಿ.

ಬಡವರಬಂಧು ಆಫೀಸು,
ಮಂಗಳೂರು, ದ. ಕ.

—ಚೈನದ ನವಸ್ಫೂರ್ತಿ ಮತ್ತು— ಶಕ್ತಿಯ ಪ್ರತಿಮೂರ್ತಿ

(೪ನೇ ಪುಟದಿಂದ ಮುಂದರಿದುದು.)

ನಡೆದಾಗ, ಜನತೆಯಲ್ಲಿ ರಾಷ್ಟ್ರೀಯ ಸ್ಫೂರ್ತಿ ಮತ್ತು ಉತ್ಸಾಹವು ತುಂಬಿ ತುಳುಕಾಡಹತ್ತಿತು. ಇದಾಗಿ ೨೧ ದಿನಗಳ ನಂತರ ಚೀನೀಯರು ಚ್ಯಾಂಗರ ೫೦ನೇ ವಾರ್ಷಿಕೋತ್ಸವವನ್ನಾಚರಿಸಿ ಆ ಸಂದರ್ಭದಲ್ಲಿ ಇಡೀ ಜನಾಂಗದ ಪರವಾಗಿ ೫೦ ವಿಮಾನಗಳನ್ನು ಪಾರಿತೋಷಕವಾಗಿ ಒಪ್ಪಿಸಿದರು.

ಡಾಕ್ಟರ್ ಸನ್ ಯಾಟ್ ಸೆನ್ನರ ಸಮತಾವಾದಿ ತತ್ವಗಳನ್ನೇನೂ ಚ್ಯಾಂಗರು ಜ್ಯಾರಿಗೆ ತರಲಿಲ್ಲೆಂದು ಕೆಲಮಂದಿ ಕ್ರಾಂತಿಕಾರರು, ಅವರಿಂದ ಬೇರೆಯಾಗಿ, ದೊಡ್ಡ ಜಮೀನ್ದಾರರ ಮತ್ತು ಸಾಲಿಗರ ಕಾಟದಿಂದ ಚೀನೀ ಒಕ್ಕಲಿಗರನ್ನು ವಿಮುಕ್ತಗೊಳಿಸುವ ಚಳವಳ ಹೂಡಿ ೧೯೩೧ರಲ್ಲಿ ಸೋವಿಯೆಟ್ ಚೈನವನ್ನು ಸ್ಥಾಪಿಸಿ ಕ್ರಮಶಃ ಕೆಲವು ಪ್ರಾಂತಗಳನ್ನೇ ತಮ್ಮ ವಶಪಡಿಸಿಕೊಂಡರು. ಇವರನ್ನಡಗಿಸಲು ಚ್ಯಾಂಗರು ೧೦ ವರ್ಷಗಳನಕ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಆದರೆ ಇಂದೀಗ ಚೀನೀ ಕಮ್ಯೂನಿಸ್ಟರೂ ಮಾರ್ಶಲ್ ಚ್ಯಾಂಗರೊಂದಿಗೆ ಸಹಕರಿಸುತ್ತಿರುವರು. ಅವರನ್ನು ಚೈನದ ಅಧಿನಾಯಕನಾಗಿ ಅಂಗೀಕರಿಸಿರುವರು.

ಚೈನವು ಸಂಘಟಿತವಾಗಿ ಬಲವಾಗುತ್ತಾ ಹೋಗುವುದು ಜಾಪಾನರಿಗೆ ಅಸಹನೀಯವಾಯಿತು. ಅದು ಚೈನವನ್ನು ಮುರಿಯಲು ಮುಂದಾಯಿತು. ಜಾಪಾನನ್ನು ವಿರೋಧಿಸಲು ಚೈನವು ಸಾಕಷ್ಟು ಸಿದ್ಧವಾಗಿಲ್ಲದುದರಿಂದ ಚ್ಯಾಂಗರು ಮೊದಮೊದಲು ಜಾಪಾನನ್ನು ಸಮಜಾಯಿಸಿ ಸಮಯಕಳೆಯುವ ಹಂಚಿಕೆ ಹೂಡಿದರು. ಈ ಸಂಗತಿಯನ್ನು ತಿಳಿಯದೆ, ಅವರು ಜಾಪಾನರನ್ನೊಲಿಸಿಕೊಳ್ಳಲೆತ್ನಿಸುವರೆಂಬ ತಪ್ಪು ಭಾವನೆಯಿಂದ ೧೯೩೬ನೇ ಡಿಸೆಂಬರ ತಿಂಗಳಲ್ಲಿ ಅವರನ್ನು, ಮಾರ್ಶಲ್ ಚಿಂಗ್ ಹುಸ್ಯೆಲಿಯಂಗ್ ಎಂಬ ತರುಣ ಸೇನಾನಿಯು ಕದ್ದೊಯ್ದು ಸೆರೆಯಲ್ಲಿರಿಸಿದನು. ಸುದೈವದಿಂದ ಆತನಲ್ಲಿ ಕಡೆಗೆ ವಿವೇಕೋದಯವಾಗಿ ಚ್ಯಾಂಗರು ಬಿಡುಗಡೆ ಹೊಂದಿ ಪ್ರಾಣಾಪಾಯದಿಂದ ಪಾರಾದರು.

ಇಂದೀಗ ೪½ ವರ್ಷಗಳ ಚೀನೀ ಜಾಪಾನ ಯುದ್ಧವು ಚ್ಯಾಂಗರನ್ನು ೪೫೦,೦೦೦,೦೦೦ ಚೀನೀಯರ ಅನಭಿಷಿಕ್ತ ಚಕ್ರವರ್ತಿಯನ್ನಾಗಿ ಮಾಡಿಬಿಟ್ಟಿರುವುದು. ಚೈನದ ಅದೃಷ್ಟನಾಯಕರಾಗಿರುವರವರು. ಎಲ್ಲಿ ವರೆಗೂ ಅವರನ್ನು ಅನುಸರಿಸಲು ಚೀನೀಯರಿಂದು ತಯಾರಿರುವರು. ೬ ತಿಂಗಳೊಳಗೆ ಯುದ್ಧವನ್ನು ಮುಗಿಸಿ ಬಿಡಬಹುದೆಂದು ಎಣಿಸಿದ್ದ ಜಾಪಾನರಿಂದು ಜಪರ್ವ ಸಹಿಸಿ... ಬಂದರೂ ಅದನ್ನು ಕೊನೆಗೊಳಿಸಲಾಗದೆ ಸಿಕ್ಕಿಬಿದ್ದಿರುವರು. ಕಟ್ಟಕಡೆಗೆ ಚ್ಯಾಂಗರು ಚೈನವನ್ನು ವಿಜಯದ ಗುರಿಮುಟ್ಟಿಸುವರೆಂಬ ದೃಢವಿಶ್ವಾಸವಿಂದು ಚೀನೀಯರಲ್ಲಿ ನೆಲೆಗೊಂಡಿರುವುದು.

ಚ್ಯಾಂಗರು ಜನ್ಮತಃ ಬೌದ್ಧ ಮತಾನುಯಾಯಿಯಾದರೂ ಅನಂತರ ಕ್ರೈಸ್ತಮತಾವಲಂಬಿಯಾದರು. ಇದಕ್ಕೆ ಕ್ರೈಸ್ತ ಮತೀಯರಾದ ಮೆಡಮ್ ಚ್ಯಾಂಗರೇ ಕಾರಣವೆನ್ನಬಹುದು. ಚ್ಯಾಂಗರು ಸಚ್ಚರಿತ ನಿಷ್ಠಾವಂತ ಜೀವನವುಳ್ಳವರು. ಕುಡಿಯುವುದಿಲ್ಲ, ಹೊಗೆಬತ್ತಿ ಸೇದುವುದಿಲ್ಲ. ಚೀನೀಯರ ಮುಖ್ಯ ಪಾನವಾದ ಚಾವನ್ನು ಕೂಡಾ ತೆಗೆದುಕೊಳ್ಳುವುದಿಲ್ಲ. ಸೂರ್ಯನೊಂದಿಗೆ ಮಲಗಿ ಆತನೊಂದಿಗೇ ಏಳುವ ಅಭ್ಯಾಸದವರು. ಜೀವನದಲ್ಲಿ ಒಳ್ಳೇ ಶಿಸ್ತುಳ್ಳವರು ಮತ್ತು ಚುರುಕುಬುದ್ಧಿಯವರು. ಇಂಗ್ಲೀಷು ಬಲ್ಲವರಲ್ಲದಿದ್ದರೂ ಅಂತರರಾಷ್ಟ್ರೀಯ ರಾಜಕೀಯದ ಸೂಕ್ಷ್ಮ ಜ್ಞಾನವುಳ್ಳವರಿರುವರು. ಇಂಗ್ಲೀಷ್ ಚೆನ್ನಾಗಿ ಬಲ್ಲ ಮೆಡಮ್ ಚ್ಯಾಂಗರು ಪ್ರತಿಯೊಂದು ಕಾರ್ಯದಲ್ಲಿಯೂ ಚ್ಯಾಂಗರ ಜೀವನ ಸಂಗಾತಿಯಾಗಿ ಅವರಿಗೆ ನೆರವಾಗುತ್ತಿರುವರು.

ಹೈದರಾಬಾದ (ದಕ್ಷಿಣ) ನೃಪತುಂಗ ಮಾಧ್ಯಮಿಕ ಶಾಲೆಯ ವಾರ್ಷಿಕೋತ್ಸವವು — ಫೆಬ್ರವರಿ ತಾ. ೨೨ರಲ್ಲು ನೈಜಾಂ ಸರಕಾರದ ನ್ಯಾಯಖಾತಾ ಸದಸ್ಯರಾದ ಶ್ರೀ. ಅಬ್ದುಲ್ ಅಜೀಜ್, ಬಾರ್. ಎಟ್ ಲಾ. ಅವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರ ಸ್ವಾಗತ, ಅಧ್ಯಕ್ಷರ ಭಾಷಣ, ವರದಿ ವಾಚನ, ಬಾಲಕ ಬಾಲಕಿಯರ ವ್ಯಾಯಾಮ ಹಾಗೂ ಆಟ ಪಾಟಗಳ ಪ್ರದರ್ಶನಗಳಾಗಿ ಊಟ ಉಪಚಾರಗಳು ಆದುವು. 'ಶನ್ನಾದಾಸಿ' ನಾಟಕಾಭಿನಯವು ಜರಗಿತ್ತು. ಈ ಸಂದರ್ಭದಲ್ಲಿ ಈ ಶಾಲೆಯ ಕುರಿತು ಎರಡು ಮಾತಗಳನ್ನು ಬರೆಯಬೇಕಾಗಿದೆ. ನಿಜಾಂ ಕರ್ನಾಟಕದಲ್ಲಿ ಲಕ್ಷಾಂತರ ಕನ್ನಡಿಗರಿದ್ದಾಗ್ಯೂ ಕನ್ನಡ ವಿದ್ಯಾಭ್ಯಾಸ ಹಾಗೂ ಕನ್ನಡದ ಬೆಳವಣಿಗೆಗೆ ಬೇಕಷ್ಟು ಶಾಲೆಗಳು ಇಲ್ಲದೆ ಹೋದುದನ್ನು ಮನಗಂಡ ಶ್ರೀ. ಬಿ. ಜ. ಚಮ್ಮಲ್ಲಗಿಯವರು ಕವ, ಮಿತ್ರರನೇಕರ ಸಹಕಾರದಿಂದ ಈ ಶಾಲೆಯನ್ನು ಹತ್ತು ಹದಿನಾಲ್ಕು ವರುಷಗಳ ಹಿಂದೆ ಸ್ಥಾಪಿಸಿದುದಾಗಿದೆ. ಈಗ ಎಷ್ಟೋ ಮಂದಿ ಕನ್ನಡಿಗರು ಈ ಶಾಲೆಯಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿರುವದು ಸಂತೋಷಕರ. ಆದರೆ ಶಾಲೆಗೆ ಸ್ವತಂತ್ರ ಕಟ್ಟಡದ ಅಭಾವವಿದೆ. ಇದನ್ನು ಆದಷ್ಟು ಬೇಗನೆ ಹೋಗಲಾಡಿಸಿ ಈ ಮಾಧ್ಯಮಿಕ ಶಾಲೆಯು ಹೈಸ್ಕೂಲು ಶಾಲೆಯಾಗಿ ಪರಿಣಮಿಸಲೆಂದು ಬಯಕೆ.

ನಾವು ರಕ್ಷಣೆಗೆ ಅರ್ಹರು ಅಪ್ಪಾ..... ಅದು ನಿನ್ನ ಕರ್ತವ್ಯ

ತರುತ್ತಿವೆ. ನಿಮ್ಮ ಸುತ್ತಲೂ ನಾಲ್ಕು ಬಲವಾದ ಗೋಡೆಗಳ ಮರೆ ಇರುವಂತೆ ನೋಡಿರಿ, ಅಥವಾ ತೆರೆದ ಕಿಟಕಿಗಳಿಂದ ದೂರವಾಗಿದ್ದು ಗಾಳಿಯು ಒಳಕ್ಕೆ ಪ್ರವೇಶಿಸದ ಒಂದು ಮೂಲೆಯಲ್ಲಿ, ಅಥವಾ ಕೋಣೆಯಲ್ಲಿ ಮೇಜಿನ ಕೆಳಗೆ ಅಥವಾ ಹಾಸಿಗೆಯ ಅಡಿಯಲ್ಲಿ ಮರೆಸೇರುವುದು ಉತ್ತಮ.

ಜ್ವಲನ ಶಕ್ತಿಯುಳ್ಳ ತೋಟಿಗಳು

ಜಪಾನಿಯರು ಸುಮಾರು ೪½ ರಾತ್ತಲ ತೂಕದ ಜ್ವಲನ ಶಕ್ತಿಯ ಕೆಲವು ಬೋಂಬುಗಳನ್ನು ಹಾರಿಸಿದ್ದರು. ಇವು ಯಾವುದೊಂದು ವಸ್ತುವಿಗೆ ಘರ್ಷಣವಾದೊಡನೆ ಸುತ್ತಲೂ ನಾಲ್ಕರಿಂದ ಆರು ಇಂಚು ಉದ್ದದ ನಳಿಗೆಯಾಕಾರದಲ್ಲಿ ಹೊರಡುತಿದ್ದುವು. ಇನ್ನೊಂದರಲ್ಲಿ ದುಂಡಗಾದ ಕಪ್ಪು ರಬ್ಬರ ಚೆಂಡುಗಳಿದ್ದುವು. ಇವು ಸಂದಿಮೂಲೆಗಳಿಗೆ ಹೊರಳಿ ಅಲ್ಲಿ ನಿಧಾನವಾಗಿ ಉರಿಯುತಿದ್ದು ಸಮೀಪದಲ್ಲಿ ಉರಿ ಹತ್ತುವ ಪದಾರ್ಥಗಳಿದ್ದರೆ ಅವಕ್ಕೆ ಬೆಂಕಿ ಹಿಡಿಸುತ್ತಿವೆ. ನೀರು ಹಂಗಾಮಿಯಾಗಿ ಈ ತೋಟಿ ಚೆಂಡುಗಳನ್ನು ನಂದಿಸುತ್ತದೆ. ಅವು ಒಣಗಿದೊಡನೆ ಪುನಃ ಉರಿಯತೊಡಗುತ್ತವೆ. ಒಮ್ಮೆ ನಂದಿಸಿದ ಬೆಂಕಿಯು ಪುನಃ ಉರಿಯೆದ್ದು ಕೆಲವು ಕಡೆಗಳಲ್ಲಿ ಬೆಂಕಿ ಹತ್ತಲಾರಂಭಿಸಿತು. ಆದ್ದರಿಂದ ಅವು ಬಿದ್ದಲ್ಲಿ ಚೆನ್ನಾಗಿ ಪರಿಶೋಧಿಸಿ ಅವುಗಳನ್ನು ನಾಶಮಾಡುವುದು ಒಳ್ಳೇದು. ಅವುಗಳ ಮೇಲೆ ಮೊಯಿಗೆ ಮುಚ್ಚಿ ಒಂದು ಹಾರೆ ಕೋಲಿನಿಂದ ಅವನ್ನು ಎತ್ತಿಕೊಳ್ಳಬಹುದು. ಆದರೆ ಅದನ್ನು ಆದಷ್ಟು ಬೇಗನೆ ಮಾಡಬೇಕು.

(ಮದ್ರಾಸಿನ ಪ್ರಾಂತಿಕ ಯುದ್ಧ ಕಮಿಟಿಯ ಪ್ರಕಟನೆ)

ಆಪತ್ತು ಸನ್ನಿಹಿತವಾದಾಗ ಯಾವ ಆಲೋಚನಾಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಆಪ್ತಬಾಂಧವರ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯವನ್ನು ಆಸ್ತಿಪಾಸ್ತಿಗಳನ್ನೂ ಶಾಂತಿ ಭದ್ರತೆಯನ್ನೂ ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರು ದಾಳಿಯನ್ನು ತಡೆಯಲು, ನಿಮ್ಮ ಶಕ್ತಿ ಮೀರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು.

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ **ರೂ ೩/೯/- ಲಾಭ ಬರುವುದು** ಹತ್ತು ವರುಷಗಳು ಪೂರ್ಣಗೊಂಡಾದ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ನೀವು ಕೊಡುವ ಪ್ರತಿಯೊಂದು ಬಿಡಿಯೂ ಹಿಂದೂಸ್ಥಾನದ ಸೈನಿಕ, ನೌಕ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

DIAMONDS! DIAMONDS!

K. R. K. SHET.

Opposite Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! — ವಜ್ರಗಳು — BEST BRILLIANCY!

ಉತ್ಕೃಷ್ಟ ತರಗತಿಯ ಚುನ್ನಿತ (first quality, selected) ವಜ್ರಗಳು ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ನ ಸರ್ಟಿಫಿಕೇಟು ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ನೋಡಿರಿ. ಇದರ ಷಾಪು ಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್. ಗವರ್ನ್‌ಮೆಂಟ್ ಕೋಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮೈನೆರೆಯುತ್ತಾರೆ. ಎಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಮೊದಲಾಗಿ ಸ್ತ್ರೀಯರು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿನ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಮುಟ್ಟಿನಲ್ಲಿ ಸೇವಿಸಬೇಕು.

ಪಥ್ಯ:— ಹರಣೆಯಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೩—೦—೦ ಪೋಸ್ಟ ಚಾರ್ಜು ಬೇರೆ.

ಮಾಲಕರು. ಹಾಲಸ್ವಾಮಿ ಫಕೀರಸ್ವಾಮಿ ದಾವಣಗೇರಿ

ಅಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ,— ಗಂಗೋಟಿ ಫಾರ್ಮಸಿ ... ಲಿಂಗಪ್ಪ ಧಾರವಾಡದ, ಬಿಜಾಪುರ ... ದಾವಣಗೇರಿ.— ದಾವಣಗೇರಿ ಪ್ರೆಸ್, ಬಳ್ಳಾರಿ— ... ಮರ್ಚಂಟ, ಬಳ್ಳಾರಿ. ಗೋಕಾಕ — ಸಂಗಪ್ಪ ಶಿವಲಿಂಗಪ್ಪ ...

ಸ್ವದೇಶಿ ಔಷಧ ಭಂಡಾರ ಕುಂಜಾಲು,

—ಇವರ—

ಖ್ಯಾತಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ಟಾನಿಕ್)	0	2	0
ಆಮಲಕೀ ತೈಲ (ಸುವಾಸನೆಯುಳ್ಳ) ಸಣ್ಣದು	0	6	0
,, ,, ದೊಡ್ಡದು	0	11	0
ಬ್ರಾಹ್ಮೀ ಹೇರ್ ಆಯಿಲ್ (ಶಿರೋರೋಗ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ನಿಯೂರಾಂಜನ (ಸಕಲ ನೇತ್ರರೋಗಗಳಿಗೆ)	0	4	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ೨೦ಕ್ಕೆ	0	7	0
,, ,, ,, ,, ೮ಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ.

Swadeshi Oushadhi Bhandar

KUNJAL P. O S. I.

ಉಡುಪಿಯ ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

ಮುಖ್ಯ ಕಾರ್ಯಾಲಯ.— ಕೋರ್ಟ ರಸ್ತೆ, ಉಡುಪಿ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾರ್ಕಳ, ಶಿರ್ವ ಮತ್ತು ಕಿನ್ನಿಗೋಳಿ, ಪ ಕನ್ನಡ

ಕೈತ್ತ ಮೂಲಧನ	... ..	ರೂ 1,82,100.
ಕ್ಷೇಮ ನಿಧಿಗಳು	... ..	ರೂ. 1,82,100
		ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(ಕಳೇ ಪುಟದಿಂದ ಮುಂದರಿದುದು)

ತುಲಾ—ಇಷ್ಟಕ್ಕಿಂತ ಅನಿಷ್ಟವು ನಿಮಗೀವಾರದಲ್ಲಿ ದ್ವಿಗುಣವಾಗಿ ಲಭಿಸಲಿದೆ. ಪಾಪಿಗಳಾದ ಕುಜಶನಿಗಳೂ ಸೌಮ್ಯರಾದ ಬುಧಗುರುಗಳೂ ನಿಮಗೆ ವಿಮುಖರಾಗಿರುವುದರಿಂದ ಆಧಿವ್ಯಾಧಿಗಳಧಿಕವಾಗುವವು. ಗೃಹದ ಅವ್ಯವಸ್ಥೆಯಿಂದಾಗಿ ನಿತ್ಯ ಕಲಹವೇಳುವದು. ಶತ್ರುಗಳ ಪೀಡೆಯು ಕ್ಷಣಕ್ಷಣಕ್ಕೂ ಹೆಚ್ಚಲಿದೆ. ಧನಮಾನಾದಿಗಳನ್ನು ಕಾಪಾಡಿಕೊಳ್ಳುವದು ಕಷ್ಟತರವಾದೀತು. ಆದರೂ ತಾ. 12. 17. 18. 19 ಈ 4 ದಿನಗಳಲ್ಲಿ ಪೈಪೋಟಿಯ ಸ್ವಲ್ಪ ಮಟ್ಟಿಗಿರುವುದರಿಂದ ಈ ದಿನಗಳಲ್ಲಿ ಸುಹೃದ್ವರ್ಗದವರ ಸಹಾಯದಿಂದ ಮನೋರೋಗ, ಶತ್ರುಪೀಡೆಗಳು ಕಡಿಮೆಯಾಗುವವು. ಗೃಹಸುಖ ಧನಲಾಭ, ವಿಜಯಗಳೂ ಲಭಿಸಲಿವೆ.

ವೃಶ್ಚಿಕ—ನಿಸರ್ಗತಃ ಶುಭರಾದ ಗ್ರಹರು ನಿಮಗೀಗ ಅನುಕೂಲರಿರುವುದರಿಂದ ನಿಮ್ಮ ದಿನಗಳು ಹೆಚ್ಚಾಗಿ ಸುಖದಿಂದಲೇ ಕಳೆಯಲಿವೆ. ಹಲವೆಡೆಗಳಲ್ಲಿ ನಿಮಗೆ ಮಾನ ಮರ್ಯಾದೆಗಳು ಲಭಿಸುವವು. ಆತ್ಮೋಪಭೋಗಕ್ಕೂ ಆರ್ಥಿಕ ಬಾಗಕ್ಕೂ ಕೊರತೆಯುಂಟಾಗದು. ವಿದ್ಯಾರ್ಥಿಗಳ ಮತ್ತು ವಿದ್ಯೋಪಜೀವಿಗಳ ಅಭ್ಯುದಯಕ್ಕೆ ಅನುವು ದೊರೆವುದು. ಅನಿರೀಕ್ಷಿತವಾಗಿ ಪರ್ಯಟನಮಾಡಬೇಕಾಗಿ ಬಂದೀತು. ಆರೋಗ್ಯಕ್ಕೆ ಕೆಂಚ ಹಾನಿಯಿದೆ. ತಾ. 12. 15. 16. 17. 18 ಈ 5 ದಿನಗಳಲ್ಲಿ ಮಿತ್ರಕಲಹ ಕಾರ್ಯವಿಘ್ನ, ದೇಹಾಲಸ್ಯ, ಅತಿವ್ಯಯಾದಿಗಳು ತೋರಿಬರಬಹುದು.

ಧನು—"ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ" ಎಂಬಂತೆ ಪ್ರಯತ್ನದಿಂದಲೇ ಕಾರ್ಯಸಾಧನೆಯಾಗಬೇಕಲ್ಲದೆ ಕೇವಲ ಸಂಕಲ್ಪಮಾತ್ರದಿಂದ ಯಾವ ಇಷ್ಟಾರ್ಥವೂ ಪೂರೈಸದು. ಸದ್ಯ ನಿಮಗೆ ಕಾರ್ಯಸಾಧನೆಗೆ ಬೇಕಾದ ಶಕ್ತಿಯುಕ್ತಿ ಜನಬೆಂಬಲ ಇತ್ಯಾದಿಗಳು ಸಾಕಷ್ಟಿರುವುದರಿಂದ ಅಭೀಷ್ಟವನ್ನು ಸಾಧಿಸಲಿಕ್ಕೆ ಸುಸಂಧಿಯಿದೆ. ಶತ್ರುಜನರ ಪೀಡೆಯು ದೀಪದ ಮೇಲೆ ಬೀಳುವ ಪತಂಗದಂತೆಯೇ ಸರಿ. ನೀವು ಆರೋಗ್ಯವಂತರಿದ್ದರೂ ಅಚಿಂತ್ಯವಾದ ಮನೋರೋಗವು ಸದಾ ನಿಮ್ಮನ್ನು ಬಾಧಿಸುತ್ತಿರುವದು. ತಾ. 13. 14. 17. 18. 19 ಈ ವಾರಗಳಲ್ಲಿ ಇಚ್ಛೆಯಂತೆ ಫಲಪ್ರಾಪ್ತಿಯಿರದು.

ಮಕರ—ಗ್ರಹಬಲವು ಸಾಕಷ್ಟು ಉತ್ತಮವಿರುವುದು. ನಿಮ್ಮ ಮನೋರಥಗಳು ನೆರವೇರುವ ಕಾಲವೀಗ ಬಂದಿದೆ. ನಿಮ್ಮ ಆರ್ಥಿಕ ಬಿಕ್ಕಟ್ಟು ನಿವಾರಿತವಾಗಿ ಕೈಯ್ಯಲ್ಲಿ ನಾಲ್ಕು ಕಾಸು ಓಡಾಡುವದು. ಹಲವರಿಗೆ ಬೇಕಾದವರೆನಿಸಿಕೊಳ್ಳುವಿರಿ. ಸಾಂಸಾರಿಕ ಸುಖದಿಂದ ಕೂಡಿದವರಾಗಿ ಬಂಧುಮಿತ್ರರಿಂದ ಕೂಡಿಕೊಂಡು ದಿನಗಳನ್ನು ಸಂತೋಷದಿಂದ ಕಳೆವಿರಿ. ಆದರೆ ಕುಜಶನಿಗಳು ಪ್ರತಿಕೂಲರಾಗಿರುವುದರಿಂದ ಪುತ್ರ ಭೃತ್ಯರಿಂದಾಗಿ ಮನಕ್ಲೇಶ, ನಿಷ್ಕಾರಣ ಕಲಹ, ಶೋಕಾದಿಗಳು ಸಂಭವಿಸಲಿವೆ. ತಾ. 12 15. 16. 19 ಪ್ರತಿಕೂಲವಿವೆ.

ಕುಂಭ—ನಿಮ್ಮ ದೇಹಾರೋಗ್ಯಕ್ಕೂ ಮಾನಸಿಕ ಸುಖಶಾಂತಿಗೂ ನಾನಾ ತರದ ಭಂಗಗಳು ಬರಲಿವೆ. ದುರ್ಜನರ ಸಹವಾಸದಿಂದ ಬಂಧುವರ್ಗದವರಲ್ಲಿ ಕಲಹವಾದೀತು. ಖರ್ಚುವೆಚ್ಚಗಳಿಗೆ ಇತಿಮಿತಿಯನ್ನಿಟ್ಟುಕೊಳ್ಳದೆ ಮನಬಂದಂತೆ ವರ್ತಿಸಿ ನಾನಾ ತರದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಆಪ್ತೇಷ್ಟರಿಂದ ದೂರೀಕರಿಸಲ್ಪಟ್ಟ ನಿಮಗೆ ಯಾರೊಬ್ಬರ ಸಹಾಯವೂ ದೊರೆಯದು. ಮಾತುಕೃತಿಗಳಲ್ಲಿ ನಿಷ್ಠುರ ವೈಷಮ್ಯಗಳೇ ಹೆಚ್ಚಲಿವೆ. ಶತ್ರುಗಳ ಪೀಡೆಯು ಅಸಹನೀಯವಿದ್ದರೂ ತಾ. 12. 15. 16. 19 ಈ ದಿನಗಳಲ್ಲಿ ಇಚ್ಛಾಪೂರ್ತಿ, ಭೋಗ, ಭೋಜನ, ಧನ ವಿಜಯಗಳನ್ನು ಪಡೆವಿರಿ.

ಮೀನ—ನಿಮ್ಮ ಯತ್ನಕ್ಕೆ ತಕ್ಕ ಫಲವು ದಿಟ್ಟಿಟ್ಟ ಗಂಟಿನಂತಿರುವುದು. ಹಲವರ ಪ್ರೀತ್ಯಾದರಗಳಿಗೆ ಪಾತ್ರರಾಗುವಿರಿ. ಗೃಹಪರಿವಾರಗಳಲ್ಲಿ ಅನಾವ ಭಾಗಕ್ಕೂ ಕೊರತೆಯಿರದು. ಎಂತಹ ಪ್ರಯತ್ನಸಾಧ್ಯವಾದ ಕಾರ್ಯವೇ ಇರಲಿ ನೀವು ಅದ್ವಿತೀಯರಾಗಿ ಪೂರೈಸಲು ಸಮರ್ಥರಿರುವಿರಿ. ಆದರೆ ಆಗಾಗ ನಿಮಗೆ ಸಂಭವಿಸುವ ಅಂಗಾಂಗಗಳಲ್ಲಿನ ನೋವು, ಉದರರೋಗ, ಪರ್ಯಟನ ಇತ್ಯಾದಿಗಳಿಂದ ನಿಮ್ಮ ಮಡಿತವು ಅಪವ್ಯಯವಾಗಲಿದೆ ... 16. 19 ಈ ದಿನಗಳನ್ನು ಬಿಟ್ಟು ಉಳಿದ ದಿನಗಳು ನಿಮಗೆ ಸಕಲ ವಿಧದಿಂದಲೂ ಸಹಾಯಕಾರಿಗಳಾಗಿವೆ.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವದು, ಮಲಬದ್ಧತೆ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನು ಹೆಚ್ಚಿಸುವದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1 ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ. (3) ಮುಲ್ಲರ್ ಪೆಟರ್ಸ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸಡೌನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ. (7) ಡಾ। ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಾಸ್ತೇವ ಕಮ್ತಿ, ಬೆಳ್ತಂಗಡಿ, (9) ನವಭಾರತ ಬುಕ್ ಡಿಪ್ಪೊ, ಕೋಟೆದ ಪೇಟೆ, ಉಡುಪಿ. (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಕಾಸರಗೋಡು। ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ। ತೀರ್ಥಹಳ್ಳಿ. (13) ಬಿ. ಯಸ್, ನರಸಿಂಗರಾವ್. ಮರ್ಚೆಂಟ್, ಚಿಕ್ಕಮಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್ ಪರ್ಪ್ ಮುಲಾಮು —
ಇಷ್ಟರವರೆಗೆ ನಮ್ಮ
ವಿಲಿಯಮ್ಸ್ ಎಂಡ್ ಕೋ–ರವರ
ಬಿಳಿ ಮತ್ತು ಹಳದಿ ಟ್ರೇಡ್‌ಮಾರ್ಕ್‌ಗಳುಳ್ಳ ರಿಂಗ್ ಪರ್ಪ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾಗಲಿಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿಯವರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ಪರ್ಯಾಯದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾವಿರಕ್ಕೆ ಮಿಕ್ಕ ಪುಟಗಳಲ್ಲಿ ಪ್ರಕಟಿಸುವ ಗ್ರಂಥಮಾಲೆ
ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕ, ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ಸ್ವಲ್ಪ ಬೆಲೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನು ಅಲಂಕರಿಸಿವೆ, ಸುಸಜ್ಜಿತವಾದವು

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಂಬೋಧ	ಬೆ ೧ ೮ ೦	ಭಯಂಕರ ನೋಡು	ಬೆ ೧ ೮ ೦
ಭೀಷಣ ಸಾಹಸ	ಬೆ ೧ ೪ ೦	ಮೋಹಿನಿ	ಬೆ ೧ ೮ ೦
ಕರಿನೀರು	ಬೆ ೨ ೦ ೦	ಅಮಾತ್ಯನಂದಿನಿ	ಬೆ ೧ ೮ ೦
ಭಗವಾನ್ ದಾಸ	ಬೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೩ ೦

ಕೆಟಲಾಗ ಬರೆ ಬಿರಿ —
ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ
ಉಡುಪಿ ಏಜಂಟರು–ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ಮಾರಲೂ ಕೊಳ್ಳಲೂ ಬೇಕಲ್ಲ ಸಾಮಾನುಗಳಿವೆ

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂದು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರೂಪ ಹೆಚ್ಚುವುದು ಇದು ಮದುವಾರಗಿದೆ
ಆಸೆ ಬಿಟ್ಟಿರುವ ನಿಮ್ಮ ಮಕ್ಕಳು
ತಿರುಗಿ ನಿಮ್ಮ ಕೈ ಸೇರುವುವು
ಸೀಸೆ ಒಕ್ಕೆ ೧೨ ಆಣೆ,
ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ
ಉಡುಪಿ ಸ್ಟಾಕಿಸ್ಟರು– ನವಭಾರತ ಬುಕ್ ಡಿಪೋ, ಉಡುಪಿ.

The Moolky Bank, Ltd.,

MOOLKY, S.K

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ ಕ

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929ರಲ್ಲಿ ಸ್ಥಾಪಿತವಾದದ್ದು**)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾಪರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M R. Punja, ಯಂ. ಆರ್ ಪೂಂಜ,
President & Manager ಪ್ರೆಸಿಡೆಂಟ್ ವ ಮೇನೇಜರ್

ಸ್ಥಾಪಿತ [illegible] 1926

18 ಬಲ್ಮಠ ರಸ್ತೆ, ಮಂಗಳೂರು

ಯಾವತ್ತು ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಸ್ಟಾಂಪುಗಳೂ ಸೈನ್ ಬೋರ್ಡ್, ಜರ್ಮನ್ ಬೆಳ್ಳಿ ಮೊನೋಗ್ರಾಮ್, ಇವೇ ಇತ್ಯಾದಿಗಳು ಸುಲಭ ಕ್ರಯಕ್ಕೆ ಮಾಡಿಕೊಡಲ್ಪಡುವುವು



Crown Rubber Stamp Co 18 Balmat Road, MANGALORE.
Approved [illegible]
[illegible] by the Agent of the Govt. of India in Ceylon.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ
ಸುಖನಿವಾಸ
ಉಡುಪಿ. · · ಮಂಗಳೂರು.



ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು
ರ ಬಿನ್ನಿಗಳ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳ ವರೆಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರಗಳ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ ವಿ ಶಾಸ್ತ್ರಿ ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ಮಂಗಳೂರು

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಒಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಮಧ್ಯೆ ಖಾದಿ ಮತ್ತು ನೂಲ್ ಬಟ್ಟೆಗಳೂ ವ್ಯಾಪಾರಮಾಡುತ್ತೇವೆ

ಪಿ. ಎ ಶೈ. ಬ್ರದರ್ಸ್,
ಅಸ್ಪತ್ರೆ ಬಳಿ, ಉಡುಪಿ.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ
ಉಡುಪಿ
ಮಿತ್ತರಿಂತಿಯ, ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳು.

ಎಚ್. ರಾಮಚಂದ್ರ ನಾಯಕ
ಮಾಲಕ

Regd. No. M. 3618

Estd. 1921 ಸ್ಥಾಪಿತ.

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ. ಚಂದಾ ರೂ. 3-6-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗ—
ಮೆನೇಜರ್,
ಅಂತರಂಗ, ಉಡುಪಿ

Read and Adverlise in
ANTARANGA
The All Karnataka humorous Weekly
Udipi - S. India

ಸಂಪುಟ ೨೧
Vol. 21

ಸಂಪಾದಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

19-3-1942

ಸಂಚಿಕೆ ೨೮
No. 28

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಸೇಕಡಾ 4ರ ದರದಲ್ಲಿ, 4ಯಾ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VJAYA BANK, LTD.

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರುಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹನಿದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ನಾವು, ಶರೀರದ ಕೂಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷದವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಹೂಳಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿನಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲಗಳಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ವಿಕೇಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್

ಮಾಲಕರ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ. ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ, ಆಯುರ್ವೇದ ಔಷಧಾಲಯ ಗದಗ.

"ASIAN"

Offers all that is best in Insurance

Low premium rates
Automatic nonforfeiture benefits
Easy revival facilities
Permanent disability benefits
Accident insurence benefits
etc etc. etc.

For further particulars and agency terms, please call at or write to
Branch Manager,
The Asian Assurance Co., Ltd , Mangalore.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರಿಟರಿ, ಮಂಗಳೂರು, ದ. ಕ.
ಶ್ರೀ. ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಎಚ್ಚರಿಕೆ.

ಜರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಒದಗುವ ಸ್ವಲ್ಪ ಸೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಸೂತ್ರಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುವಸ್ತುಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,-ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದುಹಾಕುತ್ತದೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24-ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಕು ೧೯—೩—೪೩ರಿಂದ ತಾರೀಕು ೨೫—೩—೪೩ರ ವರೆಗೆ

ಮೇಷ—ನಿಮ್ಮ ಆದಾಯಕ್ಕಿಂತ ವ್ಯಯವು ಹೆಚ್ಚುವುದರಿಂದ ಈ ವಾರದಲ್ಲಿ ನೀವು ಸ್ವಲ್ಪ ಆರ್ಥಿಕ ತಗಾದೆಗೆ ಗುರಿಯಾಗಲಿರುವಿರಿ. ಪಿತ್ತೋಷ್ಣ ವಿಕಾರದಿಂದ ದೇಹಾರೋಗ್ಯವೂ ಕೆಡಲಿದೆ. ರಾಜಕೀಯ ಕ್ಷೇತ್ರದಲ್ಲಿ ಪ್ರತಿಕೂಲ ಪರಿಸ್ಥಿತಿಗಳೇ ಅಧಿಕವಾದಾವು. ಕಷ್ಟನಿಷ್ಠುರಗಳಧಿಕವಾಗಿ ನಿಮ್ಮ ಸ್ಥಾನಮಾನಕ್ಕೆ ಕೊರತೆ ಬರುವ ಸಂಭವವಿದೆ. ಸದಾಚಾರ ನಿಷ್ಠರಾದ ಸಜ್ಜನವೃಂದಕ್ಕೆ ಈ ವಾರವು ಶುಭಾಶುಭಗಳಿಂದ ಮಿಶ್ರೀಭೂತವಾಗಲಿದೆ. ತಾ. ೨೨, ೨೩ ಬಿಟ್ಟುಳಿದ ದಿನಗಳು ಇದ್ದುದರಲ್ಲಿ ಉತ್ತಮಗಳೇ.

ವೃಷಭ—ಮನದಲ್ಲಿ ಸಾಕಷ್ಟು ಸ್ಫೂರ್ತಿಯೋತ್ಸಾಹಗಳಿರವು. ಆದರೂ ನಿಮ್ಮ ಅಲ್ಪ ಪ್ರಯತ್ನಕ್ಕೆ ತಕ್ಕುದಾದ ಫಲವು ದೊರೆತೇ ತೀರುವುದು. ಆಪ್ತೇಷ್ಟರ ವಿಯೋಗದಿಂದಲೂ, ಪ್ರವಾಸದಲ್ಲಿನ ಕಷ್ಟನಷ್ಟಾದಿಗಳಿಂದಲೂ ಮನಸ್ಸಿಗೆ ನೆಮ್ಮದಿಯಿರಲಾರದು. ಶ್ರಮಪಟ್ಟು ದುಡಿದ ಧನವನ್ನು ವಿಚಾರವಿಲ್ಲದೆ ವ್ಯಯಿಸುವಿರಿ. ನೌಕರಿ, ವ್ಯಾಪಾರ ಮತ್ತು ವೈದ್ಯಕೀಯ ಇತ್ಯಾದಿ ಭಾಗಗಳಲ್ಲಿ ತೃಪ್ತಿಕರವಾದ ಫಲಲಾಭವಿದೆ. ಕಾಯಕಷ್ಟ ಜೀವಿಗಳಿಗೂ, ಸೇವಕ ವರ್ಗದವರಿಗೂ ಶ್ರಮವಧಿಕವಾದೀತು. ತಾ. ೨೨ ೨೩. ವೃಷ್ಟಾನ್ನ ಲಾಭ, ಭೋಗದಾಯಿಯಾಗಿದೆ.

ಮಿಥುನ—ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಖರ್ಚಿಗೆ ಸಿಗತಕ್ಕ ಉತ್ಪತ್ತಿಯು ಸಮುದ್ರಕ್ಕೆ ತಂಗು ಕದಡಿದಂತೆಯೇ ಸರಿ. ಸಿಕ್ಕಸಿಕ್ಕವರೊಡನೆ ಸಾಲ, ಕಡಗಳನ್ನೂ ಮಾಡುವ ಪ್ರಸಂಗವೊದಗೀತು ಆಧಿವ್ಯಾಧಿಗಳು ನಿಮ್ಮನ್ನು ನೆಳಲಿನಂತೆ ಬೆನ್ನು ಹತ್ತಿರುವುದರಿಂದ ಸದಾ ನಿರುತ್ಸಾಹಿಗಳಾಗುವಿರಿ ಪ್ರವಾಸಿಗರಿಗೀ ವಾರವು ತುಂಬಾ ಕಷ್ಟನಷ್ಟಕಾರಿಯಾಗಿ ಪರಿಣಮಿಸಲಿದೆ. ವಿದ್ಯಾರ್ಥಿಗಳಿಗಂತೂ ಅಧ್ಯಯನ ಭಾಗಕ್ಕೆ ತುಂಬಾ ವಿಘ್ನಕಾರಿಯಾಗಿರುವುದು. ತಾ. ೧೯, ೨೦, ೨೧, ೨೪, ೨೫ ಈ ೫ ದಿನಗಳಲ್ಲಿ ಸುಹೃದ್ವರ್ಗದವರ ನೆರವಿನಿಂದ ವಿಜಯ, ಲಾಭಗಳಾಗುವವು.

ಕರ್ಕಾಟಕ—ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ನಿಮ್ಮ ಅದೃಷ್ಟವು ಅಭಿವೃದ್ಧಿಯನ್ನು ಹೊಂದುತ್ತಿರುವುದು ಏನೊಂದೂ ಪರಿಶ್ರಮವಿಲ್ಲದೆ ವಾಂಛಿತಾರ್ಥವನ್ನು ಪಡೆಯುವಿರಿ. ಧನಬಲವು ಜನಬಲವೂ ಬೇಕಷ್ಟಿರುವುದರಿಂದ ನೀವು ಹೋದ ಮಾರ್ಗದಲ್ಲಿ ಪರಾಜಯದ ಸುಳಿವೇ ಇರದು. ಸಮಾಜದಲ್ಲಿ ಕೀರ್ತಿಯನ್ನು ಸಂಪಾದಿಸುವಿರಿ. ಹಲವರು ನಿಮ್ಮನ್ನು ಸದಾ ಆಶ್ರಯಿಸುವರು. ಸ್ತ್ರೀ ಮೂಲಕವಾಗಿ ಕೆಲವೊಂದು ಅನಿಷ್ಟಾಪವಾದಗಳು ಸಂಭವಿಸುವ ಚಿಹ್ನೆಗಳಿರುವುದರಿಂದ ಆ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರಿ. ವಾರಾದಿಯ ೫ ದಿನಗಳು ಅತ್ಯುತ್ತಮವಿವೆ.

ಸಿಂಹ—ಸದ್ಯದ ನಿಮ್ಮ ಪರಿಸ್ಥಿತಿಯು ಬಹಳ ಚಿಂತಾಜನಕವಿದೆಯೆಂದರದು ಅತಿಶಯೋಕ್ತಿಯೆನಿಸದು. "ದೈವಹೀನಃ ಪುರುಷೋ ಯತ್ರ ಯಾತಿ ತತ್ರೈವ ಚಾಪದಃ" ಎಂಬ ನೀತಿಗನುಸಾರವಾಗಿ ಅದೃಷ್ಟಹೀನನಾದ ನರನು ಎಲ್ಲಿ ಹೋದರೂ ಆಪತ್ತುಗಳು ಅವನನ್ನು ಹಿಂಬಾಲಿಸಿಕೊಂಡೇ ಹೋಗುವವು. ದಸ್ತಾವೇಜು ವ್ಯವಹಾರಗಳಲ್ಲಿ ಮನಸು ಹಿಡುವದು. ಸ್ಥಾನ ಮಾನಗಳಿಗೂ ಆರೋಗ್ಯಕ್ಕೂ ಹಾನಿ ಸಂಭವಿಸಲಿದೆ ಶತ್ರು ಜನರ ಪೀಡೆ, ಆರ್ಥಿಕೋಪದ್ರವವೂ ಅಧಿಕವಾಗುವುದು. ತಾ. 22. 23 21. 25 ಮಿಕ್ಕುಳಿದ ದಿನಗಳಿಗಿಂತ ಸ್ವಲ್ಪ ಉತ್ತಮವಿದ್ದೀತು.

ಕನ್ಯಾ—ನಿಮ್ಮ ಔದ್ಯೋಗಿಕ ಭಾಗದಲ್ಲಿ ದಿನೇ ದಿನೇ ಅಭಿವೃದ್ಧಿಯ ಚಿಹ್ನೆಗಳು ಕಂಡುಬರುತ್ತಿವೆ. ಸುವಿಚಾರಿಗಳಾದ ನೀವು ಉಪಾಯದಿಂದಲೇ ಕಾರ್ಯವನ್ನು ಸಾಧಿಸುವಿರಿ. ಗೃಹತಾಪತ್ರಯಗಳೆಲ್ಲವೂ ನ್ಯಾಯವಾಗುವವು. ದೇಹಾಲಸ್ಯ ಮತ್ತು ಪ್ರವಾಸ ನಿಮಿತ್ತ ಅಧಿಕ ಧನವ್ಯಯವಾಗಲಿದೆಯಾದರೂ ಹಣದ ತಾಪತ್ರಯವುಂಟಾಗಲಾರದು. ಮನೋರೋಗವೂ ಕೂಡ ಆಗಾಗ ಉಪದ್ರವಿಸಲಿದೆ. ತಾ. 24. 25. 26. ಕಾರ್ಯಜಯ ಮತ್ತು ಸುಖದಾಯಿಗಳಾಗಿವೆ.

(೧೧ನೇ ಪುಟ ನೋಡಿರಿ)

BHUVANENDRA PRODUCTS LTD.,

Head Office and Factory: **Katapadi,** S. Kanara

Depots: 1 Maharatha Galli, Hubli
2. 57 Big street, Triplicane. Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ಸಾಯಿಲ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ,** (2) **ಶ್ರೀ. ಆರ್. ಎಸ್. ಶೆಣೈ ರಥಬೀದಿ.** (3) **ಡಾಕ್ಟರ್ ಪಿ. ಜಿ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಕೇಶವರಾಯ ಶೈ** L. I. M.

ಚುಟುಕು ಟೀಕೆ-ಟಿಪ್ಪಣಿ

ಹಿಟ್ಲರ್ ನೆಪೋಲಿಯಾನರೊಳಗಣ ಅಭ್ಯಂತರ!

ನೆಪ್ಪೋಲಿಯನರಂತೆ ತಾನೂ ಮೋಸ್ಕೋವನ್ನು ಗೆದ್ದುಬಿಡುವೆನೆಂದು ಹಿಟ್ಲರರು ಜಂಭ ಹೊಡೆಯುತ್ತಿದ್ದರು. ಅವರ ಅವರಿಬ್ಬರೊಳಗಣ ವ್ಯತ್ಯಾಸವಿಷ್ಟೆ. ನೆಪ್ಪೋಲಿಯಾನರು ಮೋಸ್ಕೋವಿಗೆ ಮುಟ್ಟಿ ಅದನ್ನೊಮ್ಮೆ ಪ್ರತ್ಯಕ್ಷವಾದರೂ ಕಂಡಿದ್ದರು. ಆದರೆ ಹಿಟ್ಲರರು ಅದರ ಫೋಟೋದಿಂದ ಮಾತ್ರ ತೃಪ್ತರಾಗಬೇಕು. ಮೋಸ್ಕೋವಿನ ದಾರಿಯು ಬಹು ದೂರವಿದೆ. ಗೊಬ್ಬೆಲ್ಸರ ಬಾಯಿಬಡುಕತನಕ್ಕೆ ಲೊಸೊವ್‌ಸ್ಕಿಯವರಿತ್ತ ಕಟುಕಶಾಯವಿದು. ಹಿಟ್ಲರರೆಷ್ಟು ಸಂತಪ್ತರಾಗುವರೋ ಲೊಸೊವ್‌ಸ್ಕಿಯವರ ಮಾರ್ಮಿಕ ಇರಿತದಿಂದ!

ಚೈನದಲ್ಲಿ ಪಾಕಿಸ್ಥಾನಕ್ಕೆಡೆ ಇಲ್ಲ!

ಚೈನದಲ್ಲಿ ೫೦ ಮಿಲ್ಯ ಮುಸಲ್ಮಾನರಿದ್ದಾರೆ. ಹಿಂದೀ ಮುಸಲ್ಮಾನರಷ್ಟೇ ಇಚ್ಛೆ ಇಸ್ಲಾಮ್ ಧರ್ಮಾನುಯಾಯಿಗಳವರು. ಅವರಲ್ಲಿ ಭೇದದ ಬೀಜ ಬಿತ್ತಿ ಚೈನದಲ್ಲಿಯೂ ಪಾಕಿಸ್ಥಾನದ ಒಡಕನ್ನೆಬ್ಬಿಸುವ ಸೂತ್ರಚಾಲನ ಮಾಡಿತು ಜಪಾನು. ಆದರೆ ಅದರ ಬೇಳೆ ಬೇಯಲಿಲ್ಲ. ಚೀನೀ ಮುಸಲ್ಮಾನರು ಇತರ ಚೀನೀಯರಷ್ಟೇ ಸ್ವಾತಂತ್ರ್ಯ ಪ್ರೇಮಿಗಳಾಗಿ ಸ್ವಾತಂತ್ರ್ಯ ಸಮರದಲ್ಲಿ ಪ್ರಮುಖ ಭಾಗ ವಹಿಸುತ್ತಿರುವರು. ದೊಡ್ಡ ಸೈನ್ಯಾಧಿಕಾರಿಗಳಾಗಿ ಹೋರಾಟ ನಡಿಸುತ್ತಿರುವರು. ರಾಜ್ಯಾಡಳಿತದಲ್ಲಿಯೂ ತಕ್ಕ ಸ್ಥಾನ ಪಡೆದಿರುವರು." ಜಿನ್ನರೇನನ್ನುವರಿದಕ್ಕೆ?

ಜಪಾನು ಮುಂದೇನು ಮಾಡುವುದು?

ತನ್ನ ಬಲವನ್ನೆಲ್ಲಾ ಒಮ್ಮೆಯೇ ಆಸ್ಟ್ರೇಲಿಯದ ಮೇಲೆ ಉಪಯೋಗಿಸಿ ಅದನ್ನು ಶೀಘ್ರವಾಗಿ ಗೆಲ್ಲಲೆತ್ನಿಸುವುದೋ? ಜಲ ಮತ್ತು ನೆಲ ಮಾರ್ಗಗಳೆರಡರ ಮೂಲಕವೂ ಹಿಂದುದೇಶದ ಮೇಲೆ ಧಾಳಿ ನಡಿಸುವುದೋ? ಚೈನವನ್ನು ಹಿಂದಿನಿಂದ ಆವರಿಸಿ, ಹೆಚ್ಚಿನ ಬಲವನ್ನುಪಯೋಗಿಸಿ ಬಗ್ಗು ಬಡಿಯಲೆತ್ನಿಸುವುದೋ? ಹಿಟ್ಲರರ ವಸಂತ ಋತುವಿನ ಧಾಳಿಯ ಸಂದರ್ಭದಲ್ಲೇ ಪೂರ್ವದಿಂದ ರಷ್ಯದ ಮೇಲೆ ಧಾಳಿ ನಡಿಸುವುದೋ? ಅಥವಾ ನುಂಗಿದಷ್ಟರಿಂದ ತೃಪ್ತಿಗೊಂಡು ಅದನ್ನು ಜೀರ್ಣಿಸಿಕೊಳ್ಳುವ ಕುರಿತು ಗಮನ ಕೊಡುವುದೋ? ಜಪಾನಿಗಿನ್ನು ಮುಂದೆ ಸುಮ್ಮನಿರಲು ಸಾಧ್ಯವಿಲ್ಲ. ರಷ್ಯದ ಮೇಲೆ ಕೂಡಾ ಅದು ಧಾಳಿ ನಡಿಸುವ ಸಂಭವವಿಲ್ಲ. ಚೈನದ ಯುದ್ಧವನ್ನದಕ್ಕೆ ಥಕ್ಕನೆ ಕೊನೆಗೊಳಿಸಲು ಸಾಧ್ಯವಿಲ್ಲ. ಆದುದರಿಂದ ಇದೀಗ ಪ್ರಥಮವಾಗಿ, ಮಿತ್ರ ರಾಷ್ಟ್ರಗಳು ಆಸ್ಟ್ರೇಲಿಯವನ್ನು ಕೇಂದ್ರವಾಗಿ ಮಾಡಿ ತನ್ನನ್ನು ಘಾತಿಸದಂತೆ ಮುಂಜಾಗ್ರತೆ ತೆಗೆದುಕೊಳ್ಳುವುದು. ಆಸ್ಟ್ರೇಲಿಯದ ಮೇಲೆಯೇ ಧಾಳಿ ನಡಿಸುವ ಪೂರ್ವ ಸಿದ್ಧತೆ ನಡಿಸುತ್ತಿರುವುದೆಂದು ಊಹಿಸಲಾಗಿದೆ.

Degrees Books Medicines

Free H L M, S.M. B H, M D etc Free Homeo Ayur-Unani-Naturo degree By post also—Practitioners also get soon Homeo Materiamedica Rs 5 Homeo practice book Rs. 4. Insanity Cure Pills Rs. 10 Enclose 2 annas stamp —

Principal Indian Homeopath Institute & Society (Govt Regd)
P.O. Mahuva, (Kathiawar Dt. India.)

Sidha-Kalpa Kavach (Regd.)
No 3 Rs 2, No. 2 Rs 5. No 1 Rs. 7. Special Rs. 10, Extra Special Rs, 17, for ve marriage health, wealth. Ask any ix questions with M O. Re 1/4 and get orrect answers by return post Life rea g Rs. 2 No V. P. P. Send M O Free amphlets, Prof. Dr. N. H. Chhathar, P. O. Mahuva (Kathiawar India.)

ಕ್ರಿಪ್ಸರ ಇನ್ನೊಂದು ಸಾಹಸ!

ಸಂಧಿ ಕಾಲದಲ್ಲಿ ಬ್ರಿಟನು ಮತ್ತು ರಷ್ಯಗಳನ್ನೊಂದುಗೂಡಿಸುವ ಮಹತ್ಕಾರ್ಯವನ್ನು ಸಾಧಿಸಿ ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರು ಇಂಗ್ಲೆಂಡಿಗೆ ಮಾತ್ರವಲ್ಲದೆ ಇಡೀ ಲೋಕಕ್ಕೇನೇ ಮಹದುಪಕಾರ ಮಾಡಿರುವರೆನ್ನಬಹುದು. ಇಂದೀಗ ಪೂರ್ವದಲ್ಲಿ ಮತ್ತೊಂದು ದೊಡ್ಡ ಗಂಡಾಂತರಕ್ಕೊಳಗಾಗಿದೆ ಬ್ರಿಟನು. ಈ ಸಂಧಿ ಕಾಲದಲ್ಲಿಯೂ ಪುನಹ ಕ್ರಿಪ್ಸರೇ ಹಿಂದೀ ಬಿಕ್ಕಟ್ಟನ್ನು ನಿವಾರಿಸುವ ಸಾಹಸಕ್ಕೆ ಮುಂದಾಗಿದ್ದಾರೆ. "ಹೋಗಲು ಹೇಳಲ್ಪಟ್ಟರೆ ನಾನು ಹಿಂದೂ ದೇಶಕ್ಕೆ ಹೋಗುವೆನು. ಹಿಂದು ದೇಶದ ಕುರಿತಾದ ಹಿಂದಿನ ಧೋರಣೆಯನ್ನು ಬ್ರಿಟನು ಬದಲಾಯಿಸಿ ಹೊಸ ನಿರ್ಧಾರ ಮಾಡಬೇಕಾಗಿದೆ. ಇಷ್ಟರವರೆಗೆ ನಿರೂಪಿತವಾದುದಕ್ಕಿಂತ ಅದು ಬೇರೆಯಾಗಿರಬೇಕು" ಎಂದಿದ್ದರು ಕ್ರಿಪ್ಸರು. ಮೋಸ್ಕೋ ಪಟ್ಟಣದಿಂದ ಹಿಂದಿರುಗಿದ ಕೂಡಲೆ ಅದೀಗ ನಿಜವಾಯಿತು. ಬ್ರಿಟಿಷ್ ಸರಕಾರವು ತನ್ನ ಧೋರಣೆಯನ್ನು ಎಷ್ಟರಮಟ್ಟಿಗೆ ಬದಲಾಯಿಸಿರುವುದೆಂದು ಮಾತ್ರ ಮುಂದೆ ನೋಡಬೇಕು. ಅಂತೂ ಕ್ರಿಪ್ಸರು ಹಿಂದು ದೇಶಕ್ಕೆ ಬರುವುದು ಶುಭಚಿನ್ಹೆಯೆಂದೇ ಹೇಳಬಹುದು.

ಮತ್ತೊಂದು ಮಿಶನು!

ರೋಜರ್ ಮಿಶನೊಂದು ಹಿಂದು ದೇಶಕ್ಕೆ ಬಂದು ಮಾಡಿದ ಮಹತ್ಕಾರ್ಯವೇನೋ ತಿಳಿಯದು! ಹಿಂದು ದೇಶದಲ್ಲಿ ಯಾವ ದೊಡ್ಡ ಕೈಗಾರಿಕೆಯ ಸ್ಥಾಪನೆಗೂ ಅದರಿಂದೇನೂ ಪ್ರಯೋಜನವಾಗಿರುವುದಿಲ್ಲ. ಈಗ ಅಮೇರಿಕದ ಕೈಗಾರಿಕ ತಜ್ಞರ ಮತ್ತೊಂದು ಮಿಶನು ಹಿಂದುಸ್ಥಾನಕ್ಕೆ ಬರಲಿರುವುದೆಂದು ತಿಳಿದು ಬರುತ್ತದೆ. ಅದರ ನಿಜವಾದ ಉದ್ದೇಶವೇನೋ ತಿಳಿಯದು. ಹಿಂದುದೇಶದಲ್ಲಿ ಮೋಟರ್ ಕೈಗಾರಿಕೆ ಸ್ಥಾಪಿಸಲು ಸರ್. ವಿಶ್ವೇಶ್ವರಯ್ಯನವರು ಮಾಡಿದ ಪ್ರಯತ್ನವು ಅದೊಂದು ವಿಷಾದಾಂತ ನಾಟಕವೇ ಆಗಿದೆ. ಆದರೆ, ಮೋಟರ್ ವಾಹನಗಳ ಭಾಗಗಳನ್ನು ಹಿಂದುದೇಶಕ್ಕೆ ತಂದು ವಾಹನಗಳನ್ನು ಮಾಡಲು ಸರಕಾರವು ಅಮೇರಿಕಾದ ಕಂಪೆನಿಯೊಂದಕ್ಕೆ ಗುಪ್ತವಾಗಿ ಸಮ್ಮತಿಕೊಟ್ಟಿರುವುದೆಂದು ತಿಳಿದು ಬಂದಿದೆ. ಇನ್ನೂ ಬಿಳಿ ಜನರ ಸ್ವಾರ್ಥಸಾಧನಾ ದೃಷ್ಟಿಯೇ!

ಒ'ಡ್ವಯರ್- ಡೈಯರ್ ಮಾದರಿ!

ಲಾಹೋರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ. ಕೆ. ಎಚ್. ಹೆಂಡರ್ಸನರು, ಪಂಜಾಬು ಅತ್ಯಾಚಾರ ಖ್ಯಾತಿಯ ಒ'ಡ್ವಯರ್ ಮತ್ತು ಡಯರ್ ಪರಂಪರೆಯವರಿರುವಂತಿದೆ. ಅಲ್ಲಿಯ ಸೇಲ್ಸ್ ಟೇಕ್ಸ್ ಮಸೂದೆಗೆ ವಿರುದ್ಧವಾಗಿ ವ್ಯಾಪಾರಿ ಮಂಡಲದವರು ನಡಿಸಿದ ಸತ್ಯಾಗ್ರಹದ ಸಂಬಂಧವಾಗಿ, ಮಂತ್ರಿಮಂಡಲದೊಡನೆ ಒಂದು ಮಾತು ಕೂಡಾ ಕೇಳದೆ ಏಕಾಏಕಿ ಎಸೆಂಬ್ಲಿಯ 7 ಮಂದಿ ಸದಸ್ಯರನ್ನವರು ಕೈದು ಮಾಡಿದರು. ಮಾತ್ರವಲ್ಲದ "ನನ್ನ ಅಧಿಕಾರವಿಲ್ಲದ್ದರೆ ಈ ಎಸೆಂಬ್ಲಿಯನ್ನು ಒಂದೇ ದಿನದಲ್ಲಿ ಮುಗಿಸಿಬಿಡುತ್ತಿದ್ದೆ!" ಎಂದು ಗರ್ಜಿಸಿಬಿಟ್ಟರು. ಅವರ ತಲೆಗೇರಿದ್ದ ಪಿತ್ತವು ಇಳಿದಾಗ ತಾನೆಲ್ಲಿರುವೆನೆಂಬುದರ ಪರಿವೆಯಾಯಿತವರಿಗೆ. ತಾನು ಎಸೆಂಬ್ಲಿಯನ್ನಲ್ಲ; ಹರತಾಳವನ್ನು ಕೊನೆಗೊಳಿಸುತ್ತಿದ್ದೆನೆಂದುದೆಂದು ಮುಖ್ಯ ಮಂತ್ರಿಗಳು ಉದಾಹರಣೆ ಕೇಳುವಾಗ ಉತ್ತರವಿತ್ತಿರುವರು. ಈ ಕಾಲದಲ್ಲಿಯೂ ಇಂತಹ ಒರಟು ಜಂತುಗಳಿರುವವೆಂಬುದು ದೊಡ್ಡ ಸೋಜಿಗ!

Keep the enemy away
from India
Contribute AGAIN to the
Governor's war fund.
Buy MORE defence bonds
and savings certificates.

**GIVE AND LEND
FOR
VICTORY.**

ವರ್ಣಭೇದ ಹೋಗಬೇಕು!

ವರ್ಣಭೇದದ ಪರಿಣಾಮವಾಗಿ ದೊಡ್ಡ ಅನಾಹುತವಾಗಿದೆ. ಸಯಮನ್ನು ಬ್ರಿಟನು ಕಳಕೊಳ್ಳಲು ಅದೇ ಕಾರಣ. ಬರ್ಮದಲ್ಲಿ ಇನ್ನೆಂತಹ ಪರಿಣಾಮವಾಗುವುದೋ? ಇನ್ನಾದರೂ ಬ್ರಿಟಿಷರು ವಿವೇಕಿಗಳಾಗಿ ಮಿಲ್ಯಾಂತರ ಹಿಂದೀಯರ ಕುರಿತು ಹೊಸ ಧೋರಣೆ ವಹಿಸಬೇಕೆಂದು ಪ್ರಖ್ಯಾತ ಆಂಗ್ಲೇಯ ಪತ್ರಿಕಾ ವ್ಯವಸಾಯಿ ಮಿ. ಹನ್ನೆನ್ ಸ್ವಾಫರರು ಆಗ್ರಹಪೂರ್ವಕ ವಿನಂತಿ ಮಾಡಿಕೊಂಡಿರುತ್ತಾರೆ. ಏಸ್ಯಾ ಖಂಡವು ಏಸ್ಯಾನರಿಗೆಂಬ ಜಪಾನರ ಘೋಷಣೆಗೆ ಬೆಂಬಲ ದೊರೆಯಲು ಪೂರ್ವದಲ್ಲಿ ಬಿಳಿ ಜನರು ತೋರಿಸಿಕೊಂಡು ಬಂದಿರುವ ಶ್ರೇಷ್ಠತಾ ಭಾವ, ಪ್ರತಿಷ್ಠೆ ಮತ್ತು ವರ್ಣಭೇದವೇ ಕಾರಣ. ಇಂದೀಗ ಜಪಾನು ಈ ಶ್ವೇತವರ್ಣೀಯರಿಗೆ ದೊಡ್ಡ ಪಾಠ ಕಲಿಸಿರುವುದೆಂಬುದಕ್ಕೆ ಸಂದೇಹವೇ ಇಲ್ಲ.

1943ರಲ್ಲಿ ನಾಝಿಗಳ ಪತನ ನಿಶ್ಚಯ!

ಜರ್ಮನಿಯು ಜಯಶೀಲವಾಗಬೇಕಾದರೆ ಏನಾದರೊಂದು ಅದ್ಭುತ ನಡೆಯಬೇಕೆಂದು ಜರ್ಮನ್ ಸೈನ್ಯಾಧಿಕಾರಿಗಳೇ ಅಭಿಪ್ರಾಯಪಡುತ್ತಿದ್ದಾರೆಂದು ತನಗೆ ಬರ್ಲಿನಿನಿಂದ ಖಾತ್ರಿಯಾಗಿ ತಿಳಿದುಬಂದಿದೆ. 1943ನೇ ಇಸ್ವಿಯ ವಸಂತ ಋತುವಿನೊಳಗೆ ಜರ್ಮನಿಯಲ್ಲಿ ನಾಝಿಗಳ ರಾಜಕೀಯ ಮತ್ತು ಸೇನಾ ಪತನವುಂಟಾಗುವುದೆಂಬುದು ನಿಶ್ಚಯ. ಜರ್ಮನಿಯು ಸೋವಿಯಟ್ [illegible] ನನ್ನು ಗೆಲ್ಲುವುದೇನೂ ಕಷ್ಟವೇ ಅಲ್ಲೆಂದು ಜೆಕೊಸ್ಲೊವೆಕಿಯದ ಮಾಜಿ ಪ್ರೆಸಿಡೆಂಟರಾದ ಬೆನೆಯವರು ಪ್ರಕಟಗೊಳಿಸಿರುವರು. ಬೆನೆಯವರ ಈ ಭವಿಷ್ಯವು ನಿಜವಾಗಬಹುದು. ಯಾಕಂದರೆ ರಷ್ಯದಲ್ಲಿ ಜರ್ಮನಿಯು ದೊಡ್ಡ ಆಪತ್ತಿಗೊಳಗಾಗಿದೆಯೆಂದು ಹಿಟ್ಲರರೇ ಒಪ್ಪುತ್ತಿರುವಂತಿದೆ.

ಫಾಶಿ ಶಿಕ್ಷೆ ರದ್ದುಮಾಡಬೇಕು.

ಮಲಬಾರಿನ ಮೊರಾಝು ಎಂಬಲ್ಲಿ ನಡೆದ ಪೋಲೀಸ್ ಸಬ್ ಇನ್‌ಸ್ಪೆಕ್ಟರರ ಕೊಲೆಯ ಖಟ್ಲೆಯಲ್ಲಿ ಹೈ ಕೋರ್ಟಿನವರು ಫಾಶಿ ಶಿಕ್ಷೆ ಕಾಯಮ್ ಮಾಡಿರುವ ಶ್ರೀ ಕೆ. ಪಿ. ಆರ್. ಗೋಪಾಲನ್ ನಂಬಿಯಾರರ ವಿಷಯದಲ್ಲಿ ಗವರ್ನರರು ತನ್ನ ವಿಶೇಷಾಧಿಕಾರ ತೋರಿಸಿ ಫಾಶಿ ಶಿಕ್ಷೆ ರದ್ದುಪಡಿಸುವುದು ಆವಶ್ಯವೆಂದು ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಈ ವಿಷಯದಲ್ಲಿ ಮಲಬಾರಿನ ಸಹಸ್ರ ಗಟ್ಲೆ ಜನರು ಸಹಿ ಹಾಕಿ ಗವರ್ನರರಿಗೆ ಅರ್ಜಿ ಕಳುಹಿಸುತ್ತಿದ್ದಾರೆ. ಗವರ್ನರರು ಜನಮತವನ್ನು ಮನ್ನಿಸಿ ಉಗ್ರ ದೇಶಾಭಿಮಾನಿ ತರುಣನೊಬ್ಬನಿಗೆ ಜೀವದಾನ ಮಾಡುವ ಉದಾರತೆ ತೋರಿಸುವರೋ ನೋಡಬೇಕು.

ಒಂದೆಡೆ ಮದುವೆ—ಆದರೆ ಇನ್ನೊಂದೆಡೆ?

ಅಳಿಯ ಸಂತಾನ ಬೀಲನ್ನು ಮುರಿದು, ಅಳಿದುಹೋಗಲಿದ್ದ ಅಳಿಯಕಟ್ಟನ್ನು ಉಳಿಸಲು ಮುಖ್ಯ ಕಾರಣರಾದವರಲ್ಲಿ ತಾನೊಬ್ಬನೆಂಬ ಹೆಮ್ಮೆಪಡುತ್ತಿದ್ದವರಲ್ಲಿ ಶ್ರೀ. ರೈಗಳೊಬ್ಬರಿದ್ದರು. ಸಂದರ್ಭಗಳನ್ನು ಮಾಡಿಕೊಂಡಾದರೂ ಆ ಹೆಗ್ಗಳಿಕೆಯನ್ನವರು ಜನರ ಮುಂದೆಲ್ಲಾ ಕೊಚ್ಚಿಕೊಳ್ಳುತ್ತಿದ್ದರು. ಅವರ ಜೀವಮಾನದ ಮಹತ್ಕಾರ್ಯಗಳಲ್ಲೊಂದಾಗಿತ್ತದು.

oo oo oo

ರೈಗಳ ಮಗಳು ರಾದು 13ರ ಎಳವಯಸ್ಸಿನಲ್ಲೇ ಋತುಮತಿಯಾದಳು. ಒಡನೆಯೇ ಅವಳಿಗೆ ಗಂಡ ಹುಡುಕಲಾರಂಭಿಸಿದರು ರೈಗಳು. "ಇಷ್ಟೊಂದು ಅವಸರವೇನು ರೈಗಳೇ? ಕೆಲವು ವರ್ಷ ಹೋಗಲಿ. ಇನ್ನೂ ಚಿಕ್ಕವಳಲ್ಲವೇ ನಿಮ್ಮ ಮಗಳು!" ಎಂದು ಯಾರಾದರೂ ಹೇಳಿದರೆ, "ಋತುವಾದ ಮೇಲೆ ಹುಡುಗಿಯರನ್ನು ಮನೆಯಲ್ಲಿಟ್ಟುಕೊಳ್ಳುವುದು ದೊಡ್ಡ ತಪ್ಪು ನೋಡಿ ಬರುವ ವರ್ಷದೊಳಗೆ ನನ್ನ ಮಗಳಿಗೆ ಮದುವೆಯಾಗದೆ ನಿರ್ವಾಹವೇ ಇಲ್ಲ." ಎನ್ನುತ್ತಿದ್ದರವರು. ಮನೆಗೆ ಬಂದವರೊಡನೆಲ್ಲಾ ತನ್ನ ಮಗಳ ಮದುವೆಯ ಪಲ್ಲವಿಯನ್ನೇ ಹಾಡುತ್ತಿದ್ದರು. ಅದಕ್ಕಾಗಿ ಬೇಕಾದ ಪೂರ್ವ ಸಿದ್ಧತೆಗಳನ್ನೆಲ್ಲಾ ಮಾಡುತ್ತಿದ್ದರು. ಹುಡುಗನಿಗಾಗಿ ಸಿಕ್ಕವರೊಡನೆಲ್ಲಾ ಹೇಳಿ ಎಲ್ಲೆಲ್ಲೂ ಓಡಾಡುತ್ತಿದ್ದರು.

oo oo oo

ರೈಗಳ ಅಕ್ಕ ಅಕ್ಕಮ್ಮನ ಗಂಡ ಸತ್ತು ಮನೆಗೆ ಬಂದು ಏಳೆಂಟು ವರ್ಷಗಳಾಗಿದ್ದುವು. ಅವಳ ಒಬ್ಬಳೇ ಮಗಳು ರುಗ್ಮಿಣಿಗೆ ಮದುವೆಯ ಪ್ರಾಯ ಮೀರಿ ಹೋಗಿತ್ತು. ತಂದೆ ಸಾಯುವ ಎರಡು ಮೂರು ವರ್ಷಗಳ ಮೊದಲೇ ಋತುವಾಗಿದ್ದಳವಳು. ತನ್ನ ಒಬ್ಬಳೇ ಮಗಳನ್ನು ಅಳಿಯನಿಗೇನೇ ಕೊಟ್ಟು ಮದುವೆಯಾಗಬೇಕೆಂದು ಅಕ್ಕಮ್ಮನ ಗಂಡ ನಿಶ್ಚೈಸಿದ್ದರು. ಆ ಉದ್ದೇಶದಿಂದಲೇ ಅಳಿಯನೊಬ್ಬನಿಗೆ ಬಿ. ಎ. ವರೆಗೆ ಕಲಿಸುತ್ತಿದ್ದರು. ಆದರೆ ಅವರು ಅಕಸ್ಮಾತ್ತಾಗಿ ತೀರಿಕೊಂಡುದರಿಂದ ರುಗ್ಮಿಣಿಯ ಮದುವೆಗೆ ವಿಘ್ನವುಂಟಾಯಿತು. ಕಡಿಮೆಯೆಂದರೆ 2 ಸಾವಿರ ರೂಪಾಯಿಯಾದರೂ ವರದಕ್ಷಿಣೆ ಕೊಡದೆ ಮದುವೆಮಾಡಿಕೊಳ್ಳಲು ಸಾಧ್ಯವೇ ಇಲ್ಲೆಂದು ಹೇಳಿಬಿಟ್ಟ ತಂದೆಯ ಅಳಿಯ. ಅವನಿಗೆ ಬೇರೆಯವರು 1 ಸಾವಿರ ವರದಕ್ಷಿಣೆ ಕೊಡಲು ಮುಂದಾಗಿದ್ದರು. "ತನ್ನ ಆಭರಣಗಳನ್ನೆಲ್ಲಾ ಮಾರಿ ಹೇಗಾದರೂ ಒಂದು ಸಾವಿರ ರೂಪಾಯಿಗಳನ್ನು ತಾನೊದಗಿಸಿಕೊಡುತ್ತೇನೆ. 'ಇನ್ನೊಂದು ಸಾವಿರವನ್ನು ನೀನು ಕೊಟ್ಟು ಸಹಾಯ ಮಾಡಬೇಕು ಎನ್ನು ಮಾತ್ರಕ್ಕೂ ನೆಂಟಸ್ತಿಕೆ ಬಿಡಬಾರದೆ' ಎಂದು ಅಕ್ಕಮ್ಮನು ಸಂದರ್ಭ ದೊರೆತಾಗಲೆಲ್ಲಾ ರೈಗಳೊಡನೆ ಕಣ್ಣೀರಿಟ್ಟು ಗೋಳಿಟ್ಟರೂ ಅವರು ಕಿವಿಕೊಡದೆ ಕಣ್ಣು ಕೆರಳಿಸಿ ಗದರಿಸಿ ಬೆದರಿಸಿಬಿಡುತ್ತಿದ್ದರು.

oo oo oo

ಬಿ. ಎಲ್. ಕಲಿತ ಹುಡುಗನೊಬ್ಬನೊಡನೆ ರಾದುವಿನ ಮದುವೆ ನಿಶ್ಚಯವಾಗಿತ್ತು. ವಕೀಲನೊಬ್ಬನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂಬ ತನ್ನ ಮನೋರಥವು ಸಿದ್ಧಿಸಿದುದರಿಂದ ರೈಗಳ ಸಂತೋಷವೇ ಸಂತೋಷ! 5 ಸಾವಿರ ರೂಪಾಯಿ ವರದಕ್ಷಿಣೆ ಕೊಡಲೊಪ್ಪಿದ್ದರವರು. ಐದಲ್ಲ ಇನ್ನೊಂದು ಸಾವಿರ ಹೆಚ್ಚಾದರೂ ಹುಡುಗನನ್ನು ತಾನು ಬಿಡುವ ಹಾಗಿದ್ದಿಲ್ಲ. ಅಷ್ಟು ಒಳ್ಳೇ ನೆಂಟಸ್ತಿಕೆ; ಬಹಳ ಒಳ್ಳೇ ಹುಡುಗನೆಂದು ಹೊಗಳಲು ಬಾಯಿಯೇ ಸಾಲದಾಗಿತ್ತು ರೈಗಳಿಗೆ. ಮದುವೆಯ ಸಿದ್ಧತೆಯೂ ಭರದಿಂದ ನಡೆಯುತ್ತಿತ್ತು. ನಡುವೆ ಒಂದು ದಿನ ಅಕ್ಕಮ್ಮನು, "ನಿನ್ನ ಮಗಳೊಂದಿಗೇನೇ ನನ್ನ ಮಗಳ ಮದುವೆಯೂ ಆದರೆ ಒಳ್ಳೆದಲ್ಲವೇ? ಒಂದೇ ಖರ್ಚಿನಲ್ಲಾಗುವುದಿಲ್ಲವೇ? ಯಾರಾದರೊಬ್ಬ ಹುಡುಗನನ್ನು ನೋಡಬಾರದೇ? ಈ ವರ್ಷ ಆಗದಿದ್ದರೆ ಮತ್ತೆ ಯಾವಾಗ? ಒಂದು ಸಾವಿರ ವರದಕ್ಷಿಣೆಗೆ ತಕ್ಕ ಯಾರಾದರೊಬ್ಬ ಹುಡುಗನನ್ನು ನೋಡು. ಹೇಗಾದರೂ ಅವಳನ್ನೊಮ್ಮೆ ಹೊರಹಾಕುವ ಈ ಸಲವೇ. ಇನ್ನೂ ಇಟ್ಟುಕೊಳ್ಳುವುದು ನಮ್ಮ ಮರ್ಯಾದೆಗೆ ಕುಂದಲ್ಲವೇ? ವರದಕ್ಷಿಣೆ ಹಣ ನಾನು ಕೊಡುತ್ತೇನೆ." ಅಂಗಲಾಚಿ ಬೇಡಿಕೊಳ್ಳುವಂತೆ ಹೇಳಿದರು ತಮ್ಮನೊಡನೆ, "ನಿನ್ನ ಮಗಳಿಗೆ ಹುಡುಗನನ್ನು ನಾನೇನು ಮಾಡಿ ತರುವುದೇ? ಈಗ ಎಲ್ಲಿ ಸಿಕ್ಕುತ್ತಾರೆ ಹುಡುಗರು? ನನ್ನ ಮಗಳ ಮದುವೆ ದಿನ ನಿಶ್ಚಯವಾಗಿ ಹೋಗಿದೆ. ಇನ್ನು ನನಗೆ ಇತರ ಯಾವ ಗೊಡವೆಯನ್ನೂ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಹುಡುಗ ಸಿಕ್ಕಿದರೆ ಬರುವ ವರ್ಷ ನೋಡುವ. ಎಲ್ಲಿಯಾದರೂ ದೇವಸ್ಥಾನದಲ್ಲಿ ಮದುವೆ ಮಾಡುವ. ನನಗಿನ್ನು ನೀನು ಆ ಕುರಿತು ರಗಳೆಮಾಡಬಾರದು." ಎಂದರು ರೈಗಳು ಮುಖ ಕೆಂಪುಮಾಡಿ.

ರಾದುವಿನ ಮದುವೆಯ ದಿನ. ರೈಗಳ ಮನೆಯಲ್ಲಿ ಗದ್ದಲವೇ ಗದ್ದಲ! ಅಂತರ ಚಪ್ಪರ ಮತ್ತು ಜಾರಿ ಮಂಟಪಕ್ಕೇನೇ ರೂ. 200 ತಾಗಿತ್ತು. 3000 ಜನರ ಭೋಜನದ ವ್ಯವಸ್ಥೆ ನಡೆದಿತ್ತು. ಇನ್ನು ಇಷ್ಟಿಲ್ಲೆಂಬಂತೆ ತನ್ನ ಮಗಳ ಮದುವೆ ಮಾಡಿ ದಾಖಲೆ ಮಾಡಿಬಿಡಬೇಕೆಂಬ ಆಕಾಂಕ್ಷೆಯುಳ್ಳವರಿದ್ದರು ರೈಗಳು. ಅದಕ್ಕನುಗುಣವಾಗಿ ವರನ ದಿಬ್ಬಣವೂ ಬಹಳ ವಿಜೃಂಭಣೆಯಿಂದ ಬಂದಿತ್ತು. ರೈಗಳು ಆನಂದ ತುಂದಿಲಾಂತರಂಗರಾಗಿ ಒಂದು ನಿಮಿಷವಾದರೂ ಒಂತಲ್ಲಿ ನಿಲ್ಲದೆ ವಿಪರೀತ ಗಾಳಿತುಂಬಿದ ಕಾಲುಚೆಂಡಿನಂತೆ ಪುಟಿಸುತ್ತಿದ್ದರು. ಊಟಉಪಚಾರವೆಲ್ಲಾ ಸಂಭ್ರಮದಿಂದ ನಡೆದು ಗೋಧೂಳಿ ಲಗ್ನದಲ್ಲ ದಾರೆಗೆ ಸಿದ್ಧವಾಯಿತು. ರಾದುವಿನ ತಲೆಬಾಚಿ ಶೃಂಗರಿಸಲು ತಾನು ಮುಂದೆ ತಾನು ಮುಂದೆಂದು ಹೆಂಗಸರು ಮುಂದಾದರು. ಆದರೆ ಯಾರು ತಲೆಬಾಚಿ ಕಟ್ಟಿದರೂ ರಾದುವಿಗದು ಸರಿಯಾಗಲೇ ಇಲ್ಲ. ಹಲವು ಸಲ ಕಟ್ಟಿ ಬಿಚ್ಚಿದುದಾಯಿತು. ರೈಗಳು ಆಗಾಗ ಬಂದು, ಸಮಯವಾಯಿತೆಂದು ಅವಸರ ಮಾಡುತ್ತಿದ್ದರು. ಆಗ ರಾದುವು, "ಬಿಡಿ ನೀವೆಲ್ಲ! ನಾನು ಅಕ್ಕನಿಂದ ತಲೆಕಟ್ಟಿಸಿಕೊಂಡು ಬರುತ್ತೇನೆ" ಎಂದು ನಿಡುಕಿ ದಡದಡನೆ ಉಪ್ಪರಿಗೆಯಿಂದಿಳಿದು ಹೋದಳು. "ಅಕ್ಕಾ! ಅಕ್ಕಾ!" ಎಂದು ಚಾವಡಿ, ನಡಸಾಲೆ, ಕೋಣೆಗಳಲ್ಲೆಲ್ಲಾ ರುಗ್ಮಿಣಿಯನ್ನು ಹುಡುಕಿ ಕಡೆಗೊಂದು ಮೂಲೆಯಲ್ಲಿ ತಾಯಿ ಮಗಳು ಒಟ್ಟಿಗೆ ಮಾತಾಡಿಕೊಂಡಿರುವುದನ್ನು ಕಂಡಳು.

ಕೂಡಲೆ ಅಲ್ಲಿಗೆ ಓಡಿ, "ಅಕ್ಕಾ, ಅವರಾರೂ ನನ್ನ ತಲೆ ಬಾಚಿ ಕಟ್ಟಿದರೂ ಸರಿಯಾಗುವುದಿಲ್ಲ. ನೀವು ಸ್ವಲ್ಪ ಬಾಚಿ ಕಟ್ಟಿ" ಎಂದಳು. ಆ ಅವಸರದಲ್ಲಿ, ರುಗ್ಮಿಣಿಯು ಕಣ್ಣೀರಿಡುತ್ತಿರುವುದನ್ನವಳು ನೋಡಲೇ ಇಲ್ಲ. ಒಡನೆಯೇ ಸೆರಗಿಂದ ಕಣ್ಣೀರೊರಸಿಕೊಂಡಳು ರುಗ್ಮಿಣಿ. ರಾದುವಿನಿಂದ ಬಾಚಣಿಗೆ ಸೆಗೆದುಕೊಂಡು ಚಂದ ಮಾಡಿ ಅವಳ ತಲೆಬಾಚಿ ಕಟ್ಟಿದಳು. "ಅಹ! ಈಗೆಷ್ಟು ಚಂದವಾಯಿತು! ನೀವೇ ನನಗೆ ಸೀರೆ ಉಡಿಸಿ ಹೂ ಮುಡಿಸಿ ಶೃಂಗಾರ ಮಾಡಬೇಕಕ್ಕ" ಎಂದಳು ರಾದು. ಕೂಡಲೆ ಉಪ್ಪರಿಗೆಗೋಡಿ, ಹೂ, ಸೀರೆ, ಕುಪ್ಪಸಗಳನ್ನೆಲ್ಲಾ ಕೆಳಗೆ ತಂದುಬಿಟ್ಟಳು. ರುಗ್ಮಿಣಿಯು ರಾದುವಿಗೆ ಮನೋಹರವಾಗಿ ಸೀರೆ ಉಡಿಸಿದಳು. ಸೊಗಸಾಗಿ ಜಾಜಹೂ ಮುಡಿಸಿದಳು. ಹೂಮುಡಿಸುವಾಗ ಒಂದೇ ಸವನೆ ಕಣ್ಣೀರಿಳಿದು ರಾದುವಿನ ಕುತ್ತಿಗೆಯ ಮೇಲೆ ಕೆಲವು ಬಿಂದುಗಳು ಬಿದ್ದುವು. "ಇದೇನಕ್ಕ ನೀರು?" ಪ್ರಶ್ನಿಸಿದಳು ರಾದು. "ಹೂವಿಗೆ ಹಾಕಿದ ನೀರದು ರಾದು" ಎಂದು ಸೆರಗಿಂದೊರಸಿದಳು ರುಗ್ಮಿಣಿ. ಅಷ್ಟರಲ್ಲಿ ರೈಗಳು ಸಿಟ್ಟುಗೊಂಡು ರಾದುವನ್ನು ಕರೆಯುತ್ತಾ ಬಂದುದರಿಂದ, "ಬಂದೆ ಬಂದೆ" ಎಂದು ನಡೆದುಬಿಟ್ಟಳು ಹೊರಗೆ ಮದುಮಗಳು ರಾದು. ಅವಳಿಗೆ ಮುಡಿಸಿ ಉಳಿದ ಜಾಜಿಹೂ ಅಲ್ಲಿಯೇ ಇದ್ದಿತು. ರುಗ್ಮಿಣಿಯು ಅದನ್ನು ತೆಗೆದು ಕಂಗಳಿಗೊತ್ತಿಟ್ಟುಕೊಂಡು ಎಷ್ಟೋ ಕಣ್ಣೀರಿಟ್ಟಳು. ಅವಳಿಗೆ ಹೂ ಮುಡಿಯುವ ಸುಯೋಗವಾದರೂ ಎಂದು?

oo oo oo

"ಅಕ್ಕ ಎಲ್ಲಿ? ಎಲ್ಲಿ ಹೋದರು ಅಕ್ಕ! ನನಗವರ ಕಾಲು ಹಿಡಿಯಬೇಕು. ಅಕ್ಕಾ! ಅಕ್ಕಾ!!" ಎಂದು ಕೂಗುತ್ತಾ ರುಗ್ಮಿಣಿಯನ್ನು ಹುಡುಕಹತ್ತಿದಳು ರಾದು ದಾರೆಯಾದ ಮೇಲೆ. ಆದರೆ ಮನೆಯಲ್ಲಿ ಎಲ್ಲಿಯೂ ರುಗ್ಮಿಣಿಯ ಪತ್ತೆಯಿಲ್ಲ. ಎಲ್ಲರೂ ದಾರೆಯ ಸಂಭ್ರಮ ಮತ್ತು ಗದ್ದಲದಲ್ಲಿ ನಿರತರಾಗಿದ್ದರು. ತಮ್ಮನಿಗೆಲ್ಲಿ ಸಿಟ್ಟಾಗುವುದೋ ಎಂದು, ಅಕ್ಕಮ್ಮನು ಕೂಡಾ, ರಾದುವು ರುಗ್ಮಿಣಿಯ ಬಳಿಗೆ ಬಂದೊಡನೆಯೇ ಹೊರಗೆ ಹೋಗಿ ಕೈಕಾಲು ಮುಖ ತೊಳೆದು ಹೊಸಸೀರೆಯುಟ್ಟು ಮದುವೆ ಚಪ್ಪರಕ್ಕೆ ಹೋಗಿದ್ದಳು. ರುಗ್ಮಿಣಿಯು ಎಲ್ಲಿರುವಳೆಂದು ಯಾರಿಗೂ ತಿಳಿಯದು. "ರುಗ್ಮಿಣಿ ಎಲ್ಲಿ? ರುಗ್ಮಿಣಿ ಎಲ್ಲಿ?" ಎಂದು ಮನೆಯ ಹೆಂಗಸರೆಲ್ಲಾ ಹುಡುಕಹತ್ತಿದರು. ರುಗ್ಮಿಣಿ ಇಲ್ಲೆಂದೊಡನೆಯೇ ಚಪ್ಪರದಲ್ಲಿದ್ದ ಅಕ್ಕಮ್ಮನ ಎದೆ ಧಸ್ಸೆಂದಿತು. ಅವಳು ಬಾಯ್ಬಿಟ್ಟು ಅಳುತ್ತಾ ಹುಡುಕಹತ್ತಿದಳು ಮಗಳನ್ನು. ಮನೆಯಲ್ಲೆಲ್ಲಾ ಹುಡುಕಿ ಬಚ್ಚಲಿಗೆ ಹೋದಳು. ಅಲ್ಲಿಂದ ಹಟ್ಟಿಗೆ ನಡೆದಳು. ಆ ಮೇಲೆ ಅದಕ್ಕೆ ತಾಗಿರುವ ಕೊಟ್ಟಿಗೆಯೊಳಕ್ಕೆ ಹೋದಳು. ಅಗ ರುಗ್ಮಿಣಿ ಒಂದು ಮೂಲೆಯಲ್ಲಿ ಗೋಡೆಗೊರಗಿ ನಿಂತುಕೊಂಡಿದ್ದಂತೆ ಭಾಸವಾಯಿತವಳಿಗೆ. "ಮಗು, ಇಲ್ಲೇಕೆ ನಿಂತಿರುವೆ? ರಾದು ನಿನ್ನನ್ನು ಕರೆಯುತ್ತಿದ್ದಾಳೆ ಕಾಲುಹಿಡಿಯಲಿಕ್ಕೆ. ಏನು ಮಾಡುವುದಿನ್ನು ನಮ್ಮ ಅದೃಷ್ಟ!" ಎಂದು ತಬ್ಬಿ ಹಿಡಿಯಹೋದಳು ಅಕ್ಕಮ್ಮ ತನ್ನ ಏಕಮಾತ್ರ ಪುತ್ರಿಯನ್ನು. ಆದರೆ ರುಗ್ಮಿಣಿಯ ಶವವು ತೂಗಾಡುತ್ತಿತ್ತು!

—ವಿಜಾ

"Service of Mankind is Service of God"

The Bombay Life Assurance Company., Limited.

has to its credit such service for about 33 years.

Take a Policy now and avail for our free advice based on 32 years' experience:-

KOCHIKAR BROTHERS, LTD.,

Chief Agents for South India including
Indian States,
Udipi.

Also Offices at:—

Mangalore, Calicut, Madras, Bangalore, Trivandrum & Bombay.

ವಾರದ ವಿಶೇಷ ವಾರ್ತೆ

ರಷ್ಯದಲ್ಲಿ ನಾಝಿಗಳ ನಷ್ಟ.

ರಷ್ಯದ ಸೈನ್ಯವು ರಷ್ಯದಲ್ಲಿ ಜರ್ಮನ್ ಸೇನೆಯು ಸಿಕ್ಕಿ ಬಿದ್ದ ಸಂಗತಿಯು ಪ್ರಥಮವಾಗಿ ಫೆಬ್ರುವರಿ ತಾ 27ರಲ್ಲಿ ಪ್ರಕಟವಾಯಿತು ಆಗಲೇ 12,000 ಮಂದಿ ಜರ್ಮನ್ ಸೈನಿಕರು ಕೊಲ್ಲಲ್ಪಟ್ಟಿದ್ದರು. ಈ ಸೇನೆಗೆ ವಿಮಾನ ಮೂಲಕ ಸಹಾಯ ಮಾಡುವ ಜರ್ಮನರ ಪ್ರಯತ್ನ ನಿರರ್ಥಕವಾಗಿರುತ್ತದೆ ಇದೇ ತಾ. 11ರಲ್ಲಿ ಪುನಃ 11,000 ಕೊಲ್ಲಲ್ಪಟ್ಟಿರುವರೆಂದು ಪ್ರಕಟವಾಗಿದೆ ಮಾರ್ಚ ತಾ 7ರಿಂದ 12 ರೊಳಗೆ ದಕ್ಷಿಣ ಪಶ್ಚಿಮ ರಣರಂಗಗಳಲ್ಲಿ 10,000 ಜರ್ಮನ್ ಸೈನ್ಯಾಧಿಕಾರಿಗಳು ಮತ್ತು ಸೈನಿಕರು ಕೊಲ್ಲಲ್ಪಟ್ಟಿರುತ್ತಾರೆ ವೈರಿಯ ಅತಿ ಹೆಚ್ಚಿನ ಯುದ್ಧೋಪಕರಣಗಳು ರಷ್ಯನರ ವಶವಾಗಿರುತ್ತವೆ. 12 ಫಿರಂಗಿ, 394 ಮಿಶನ್ ತೋಪು, 1485 ರೈಫ್ಲ್, 20,0000 ದೊಡ್ಡ ಗುಂಡುಗಳು, 1 ಮಿಲ್ಯ ರೈಫ್ಲ್ ಗುಂಡು, 1000 ಹೇಂಡ್ ಗ್ರೆನೇಡ್, 22,500ನೆಲ ತೋಟೆಗಳಲ್ಲದೆ 19 ಮದ್ದು ಗುಂಡು ಸಂಗ್ರಹಾಲಯಗಳೂ, 12 ವಸ್ತ್ರ ಸ್ಟೋರುಗಳೂ, 14 ಆಹಾರ ಡಿಪೋಗಳೂ ರಷ್ಯಾನರ ವಶವಾಗಿವೆಯೆಂದು ಸೋವಿಯೆಟ್ ಸರಕಾರವು ಪ್ರಕಟಿಸಿರುತ್ತದೆ ಸ್ಟಾಲಿನ್‌ಸ್ಕ್ ಮತ್ತು ವ್ಯಾಜ ಪ್ರದೇಶದಲ್ಲಿ ದೊಡ್ಡ ಜರ್ಮನ್ ಸೇನೆಯು ಅಪಾಯದಲ್ಲಿರುವ ಉಪಾಯಕ್ಕೊಳಗಾಗಿರುತ್ತದೆ

ಜಾವದ ಭೀಷಣ ಜಲ ಯುದ್ಧ

ಕಳೆದ ಫೆಬ್ರುವರಿ ತಾ. 27ರಲ್ಲಿ ಮತ್ತು ಅನಂತರದ ದಿನಗಳಲ್ಲಿ ಜಾವದ ಬಳಿ ಬ್ರಿಟಿಷ್, ಅಮೆರಿಕನ್ ಡಚ್ ಆಸ್ಟ್ರೇಲಿಯನ್ ಮತ್ತು ಜಪಾನ ಯುದ್ಧ ಹಡಗುಗಳೊಳಗೆ ನಡೆದಿದ್ದ ಭೀಷಣ ಜಲ ಯುದ್ಧದ ವಿವರವು ಈಗ ಪ್ರಕಟವಾಗಿದ ಎದರಿಂದ ಜಪಾನರು ಬಲು ಸಮರ್ಥ ನಾವಿಕರು ಮತ್ತು ವೈಮಾನಿಕರಿರುವರೆಂಬುದು ಸಿದ್ಧವಾಗಿರುತ್ತದೆ ಈ ಯುದ್ಧದಲ್ಲಿ ಜಪಾನರಿಗಿಂತಲೂ, ಮಿತ್ರ ರಾಷ್ಟ್ರಗಳೇ ಹೆಚ್ಚಿನ ಹಡಗ ನಷ್ಟ ಹೊಂದಿರುತ್ತಾರೆ ಮಿತ್ರ ರಾಷ್ಟ್ರಗಳ ಕ್ರೂಯ್ಸರ್ ಯುದ್ಧ ಹಡಗಗಳೇ 5 ಮುಳುಗಿಸಲ್ಪಟ್ಟಿರುತ್ತವೆ ಆದರೆ ಜಪಾನು ಕಳಕೊಂಡುದು ಎರಡು ಕ್ರೂಯ್ಸರುಗಳನ್ನು ಮಾತ್ರ. ಇತ್ತಂಡದಲ್ಲಿಯೂ ಕೆಲವು ಡಿಸ್ಟ್ರೋಯರುಗಳು ಕೂಡಾ ಮುಳುಗಿ ಹೋಗಿರುತ್ತವೆ ಈ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ನೌಕಾಪಡೆಯ ನಾಯಕರಾಗಿದ್ದ ರಿಯರ್ ಎಡ್ಮಿರಲ್ ಡೂರ್ಮನರು ಕೊಲ್ಲಲ್ಪಟ್ಟಿರುವರೆಂದು ಊಹಿಸಲಾಗಿದೆ ಈ ನೌಕಾ ಯುದ್ಧಗಳ ಪರಿಣಾಮವಾಗಿ ಶಾಂತ ಸಾಗರದ ಮಿತ್ರ ರಾಷ್ಟ್ರಗಳ ಹಡಗ ಪಡೆಯ ಬಲವು ಬಹಳ ಕಡಿಮೆಯಾಗಿ ಹೋಗುವಂತಾಗಿದೆ

ಬರ್ಮಾದಲ್ಲಿ ಜಾಪಾನಿನ ಉದ್ದೇಶ

ಇಂದೀಗ ರಂಗೂನದಿಯ ಮುಖ ಪ್ರದೇಶವು ಜಾಪಾನರ ವಶವಾಗಿದೆ ರಂಗೂನಿನ ಬ್ರಿಟಿಷ್ ಸೇನೆಯು ಮಧ್ಯ ಬರ್ಮಕ್ಕೆ ಹೋಗಿ ಚೀನೀ ಸೇನೆಯೊಂದಿಗೆ ಸೇರಿ ಜಾಪಾನರನ್ನು ಪ್ರಬಲವಾಗಿ ವಿರೋಧಿಸ ಲಾರಂಭಿಸಿದೆ. ಜಾಪಾನನ್ನು ಬರ್ಮದಲ್ಲಿ ತಡೆಗಟ್ಟಬಹುದೆಂದು ಚೀನೀ ಸೇನಾಧಿಕಾರಿಗಳಲ್ಲಿ ಭರವಸೆಯಿದೆ. ಆದರೆ ಆದಷ್ಟು ಬೇಗನೆ, ಬರ್ಮದ ಎಲ್ಲೆಯ ಪ್ರಮುಖ್ಯ ಪಟ್ಟಣವಾದ ಲಾಶಿಯೋವಿಗೆ ಮುಟ್ಟಿ ಚೈನಕ್ಕೆ ಕಳುಹಿಸಲು ಅಲ್ಲಿ ಸಂಗ್ರಹಿಸಲ್ಪಟ್ಟಿರುವ ಅಮೆರಿಕದ ಯುದ್ಧ ಸಾಮಾಗ್ರಿಗಳನ್ನು ವಶಪಡಿಸಿಕೊಳ್ಳ ಬೇಕೆಂಬುದು ಜಾಪಾನಿನ ಉದ್ದೇಶವಿರುತ್ತದೆ

90 ಡಿವಿಜನು ಸೇನೆಯ ಉಪಯೋಗ

ರಷ್ಯನರು ಚಳಿಗಾಲದ ತಮ್ಮ ದಾಳಿಯನ್ನು ಭರದಿಂದ ಮುನ್ನಡೆಸುತ್ತಿರುವರು ಖಾರ್ಕೋವ್ ಸ್ಟಾಲಿನೋ ಪ್ರದೇಶದಲ್ಲಿ ಮತ್ತು ಟಗನ್ರೋಗಿನಲ್ಲಿ ರಷ್ಯನರು 90 ಡಿವಿಜನು ಸೇನೆಯನ್ನು ಉಪಯೋಗಿಸಿ ದೊಡ್ಡ ದಾಳಿಯನ್ನಾರಂಭಿಸಿರುತ್ತಾರೆ. ಖಾರ್ಕೋವಿನ ಉತ್ತರ ಪೂರ್ವ ಮತ್ತು ದಕ್ಷಿಣದಲ್ಲಿ ತೀವ್ರ ಹೋರಾಟ ನಡೆಯುತ್ತಿದ

ಗೋಳಿಬಾರಿನಿಂದ ೩ ಮಂದಿ ಸತ್ತರು

ಇದೇ ತಾ 12ರಲ್ಲಿ ಮದ್ರಾಸಿನ ಬಕ್ಕಿಂಗ್ಹೇಮ್ ಮತ್ತು ಕರ್ನಾಟಕ ಗಿರಣಿಗಳಲ್ಲಿ ಮುಷ್ಕರ ಹಿಡಿದಿದ್ದ ಕೆಲಸಗಾರರು ಗಲಾಟೆ ನಡೆಸಿದುದರಿಂದ ಪೋಲೀಸರು ಗುಂಡು ಹಾರಿಸಿ 3ಮಂದಿ ಕೊಲ್ಲಲ್ಪಟ್ಟಿರುತ್ತಾರೆ 1 ಮಂದಿಗೆ ಹೆಚ್ಚಿನ ಪೆಟ್ಟಾಗಿದೆ 17 ಮಂದಿಗೆ ಸ್ವಲ್ಪ ಪೆಟ್ಟಾಗಿರುತ್ತದೆ ಈ ಗೋಳಿ ಬಾರಿನ ಕುರಿತು ವಿಚಾರಣೆ ನಡೆಯ ಬೇಕೆಂದು ಜನರ ಚಳವಳಿ ನಡೆಯುತ್ತದೆ.

ಚೈನದಲ್ಲಿ ಹಿಂದೀ ದಿನಾಚರಣೆ.

ಇದೇ 17ನೇ ತಾರೀಕನ್ನು ಚೈನದಲ್ಲೆಲ್ಲ ಹಿಂದೀ ದಿನವಾಗಿ ಆಚರಿಸಲಾಗಿದೆ. ಹಿಂದೂ ದೇಶ ಮತ್ತು ಚೈನಗಳೊಳಗೆ ನಿಕಟ ಬಾಂಧವ್ಯ ಬೆಳೆಸುವುದೇ ಈ ದಿನಾಚರಣೆಯ ಉದ್ದೇಶವಾಗಿದ್ದಿತು. ಈ ಸಂದರ್ಭದಲ್ಲಿ ಹಿಂದು ದೇಶದ ಕುರಿತು ಭಾಷಣಗಳು ಕೊಡಲ್ಪಟ್ಟಿದ್ದವು ಮಾರ್ಶಲ್ ಚ್ಯಾಂಗರು ಮತ್ತು ಅವರ ಸಹ ಧರ್ಮಿಣಿಯು ಹಿಂದೂ ದೇಶವನ್ನು ಸಂದರ್ಶಿಸಿದಾಗ ತೆಗೆದ ಛಾಯ ಚಿತ್ರಗಳು ಪ್ರದರ್ಶಿಸಲ್ಪಟ್ಟಿದ್ದವು.

ದಿನಕ್ಕೆ 11½ ಮಿಲ್ಯ ಪವನು ವೆಚ್ಚ.

ಕಳೆದ 6 ವಾರಗಳಲ್ಲಿ ಇಂಗ್ಲೆಂಡಿನ ರಾಷ್ಟ್ರೀಯ ವೆಚ್ಚವು ದಿನವಹಿ 14½ಮಿಲ್ಯ ಪವನಾಗಿರುವುದು. ಮುಂದಿನ ವಾರಗಳಲ್ಲಿ ಇನ್ನೂ ಹೆಚ್ಚಾಗಲಿರುವುದೆಂದು ನಿರೀಕ್ಷಿಸಲಾಗಿದೆ. ಬ್ರಿಟನಿನ ಕೇವಲ ಯುದ್ಧ ವೆಚ್ಚವು ದಿನವಹಿ 12 ಮಿಲ್ಯ ಪವನಾಗಿರುತ್ತದ. ಮಾರ್ಚ್ ತಿಂಗಳ ಅಂತ್ಯದ ವರೆಗೆ ಯುದ್ಧ ವೆಚ್ಚಕ್ಕಾಗಿ 4000 ಮಿಲ್ಯ ಪವನು ಸಾಕೆಂದು ಅರ್ಥ ಸಚಿವರು ಅಂದಾಜುಮಾಡಿದ್ದರು ಆದರೆ ಈಗ ಇನ್ನೂ 280 ಮಿಲ್ಯ ಪವನು ಹೆಚ್ಚಿಗೆ ಬೇಕಾಗಿದೆ. ಅಂದರೆ ಚಾಲ್ತಿ ವರ್ಷದ ಒಟ್ಟು ಯುದ್ಧ ವೆಚ್ಚ 4280 ಮಿಲ್ಯ ಪವನುಗಳಾದುವು. ಕಳೆದ ಯುದ್ಧದಲ್ಲಿ ಅತಿ ಹೆಚ್ಚೆಂದರೆ 1918ನೇ ವರ್ಷದಲ್ಲಿ 2500 ಮಿಲ್ಯ ಪವನು ವ್ಯಯಿಸಲ್ಪಟ್ಟಿತ್ತು.

ಅಸ್ಸಾಮು ಚೈನಾ ರಸ್ತೆ.

ಈ ರಸ್ತೆಯ ಕೆಲಸವೀಗ ಆದಷ್ಟು ತ್ವರೆಯಾಗಿ ನಡೆಸಲ್ಪಡುತ್ತಿದೆ. ಈ ಹೊಸ ಮಾರ್ಗವಾಗಿ ಅಮೆರಿಕದಿಂದ ಸಾಮಾನುಗಳನ್ನು ಚೈನಕ್ಕೊಯ್ಯುವ ಏರ್ಪಾಡು ಇಷ್ಟರಲ್ಲೇ ನಡೆದಿರುತ್ತದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಈ ಹೊಸ ಮಾರ್ಗದ ಮೂಲಕ ಹೆಚ್ಚಿನ ಸಾಮಾನುಗಳನ್ನು ಚೈನಕ್ಕೊಯ್ಯಲು ಸಾಧ್ಯವಾಗುವುದೆಂದು ಚೈನದ ವಿದೇಶ ಮಂತ್ರಿ ಡಾಕ್ಟರ್ ಟಿ. ವಿ. ಸೂಂಗರು ವಾಶಿಂಗ್ಟನಿನಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿರುವರು.

ಚಾಂಟುಂಗಿನ ಎಲ್ಲೆಯಲ್ಲಿ ದೊಡ್ಡ ಯುದ್ಧ

ಚೈನದ ಚಾಂಟುಂಗಿನ ಎಲ್ಲೆಯಲ್ಲಿ ಜಾಪಾನರು ದೊಡ್ಡ ಯುದ್ಧವನ್ನಾರಂಭಿಸಿರುತ್ತಾರೆ. ಈ ಭಾಗದಲ್ಲಿರುವ ಚೀನೀ ಸೇನೆಯನ್ನು ನಾಶಗೊಳಿಸಬೇಕೆಂಬುದೇ ಜಾಪಾನರ ಉದ್ದೇಶವಿರುವಂತಿದೆ. ಅವರು ಈ ಹೋರಾಟದಲ್ಲಿ 30,000 ಸೈನಿಕರನ್ನುಪಯೋಗಿಸಿರುತ್ತಾರೆ. ಪರಿಣಾಮವೇನೆಂಬುದು ಈ ವರೆಗೆ ತಿಳಿದಿರುವುದಿಲ್ಲ.

ನರ್ತನದಿಂದ ವಿವಾಹಕ್ಕೆ.

ಕಳೆದ ಆದಿತ್ಯವಾರ ಹಿಮಾಲಯದ ತಪ್ಪಲಿನ ಆಲ್ಮೊರದಲ್ಲಿ ಅತ್ಯಂತ ಮನೋಹರ ದೃಶ್ಯಗಳ ನಡುವೆ ಲೋಕ ಪ್ರಖ್ಯಾತ ಹಿಂದೀ ನರ್ತಕ ಶ್ರೀ. ಉದಯ ಶಂಕರರು, ಹೆಸರಾಂತ ನರ್ತಕಿ ಶ್ರೀಮತಿ ಅಮಲ ನಂದಿನಿಯನ್ನು ವಿವಾಹ ಮಾಡಿಕೊಂಡರು. ಹಲವು ವರ್ಷಗಳ ಹಿಂದೆ ಲಂಡನಿನಲ್ಲಿ ನಡೆದ ಎಂಪ್ಲ ಪ್ರದರ್ಶನಕ್ಕೆ ತಂದೆಯೊಂದಿಗೆ ಅಮಲ ನಂದಿಯವರೂ ಹೋಗಿದ್ದರು. ಅಲ್ಲಿ ಉದಯ ಶಂಕರರೊಡನೆ ಅವರ ಪ್ರಥಮ ಪರಿಚಯವಾಯಿತು. ಅಮಲನಂದಿಯವರು ಹಿಂದು ದೇಶಕ್ಕೆ ಹಿಂತಿರುಗಿ ಬಿ.ಎ ಕಲಿತು ಉದಯ ಶಂಕರರ ಆಲ್ಮೊರದ ಕಲಾ ಕೇಂದ್ರಕ್ಕೆ ಸೇರಿದರು. ಅವರೊಳಗೆ ಪರಸ್ಪರ ಪ್ರಣಯವುಂಟಾಯಿತು ಉದಯ ಶಂಕರರ ತಮ್ಮ ಶ್ರೀ ರಾಜೇಂದ್ರ ಶಂಕರರೂ ಅಣ್ಣನೊಂದಿಗೆ ಇನ್ನೊಬ್ಬ ನರ್ತಕಿಯನ್ನು ವರಿಸಿರುವರು. ಈ ವಧುವು ಮದ್ರಾಸಿನ ಪ್ರಸಿದ್ಧ ಶ್ರೀ. ಆರ್. ವಿ. ಶಾಸ್ತ್ರಿಯವರ ಪುತ್ರಿ ಶ್ರೀಮತಿ ಲಕ್ಷ್ಮೀ ಶಾಸ್ತ್ರಿ. ಇವರೂ ನರ್ತನ ಕಲಿಯಲಿಕ್ಕಾಗಿ ಆಲ್ಮೊರಕ್ಕೆ ಹೋಗಿದ್ದರು.

ರುಮೇನಿಯ ಬಲ್ಗೇರಿಯಗಳಲ್ಲಿ ಅತೃಪ್ತಿ.

ಹಿಟ್ಲರರು ತಮ್ಮ ವಸಂತ ಋತುವಿನ ಧಾಳಿಗಾಗಿ ತಮ್ಮ ಆಧೀನ ರಾಷ್ಟ್ರಗಳಿಂದಲ್ಲ ಸಾಧ್ಯವಾದಷ್ಟು ಹೆಚ್ಚಿನ ಸೇನೆಯನ್ನು ಪಡೆಯುವ ಪ್ರಯತ್ನ ಮಾಡುತ್ತಿದ್ದಾರೆ ರುಮೇನಿಯವು 4 ಲಕ್ಷ ಸೇನೆಯನ್ನೀಯಬೇಕೆಂದು ಕೇಳಿರುತ್ತಾರೆ. ಜನರದಕ್ಕೆ ಒಪ್ಪುವಹಾಗಿಲ್ಲೆಂದು ಜನರಲ್ ಅಂಟೊನೆಸ್ಕುರವರು ಹಿಟ್ಲರರಿಗೆ ತಿಳಿಸಿರುವರೆಂದು ಸುದ್ದಿಯುಂಟಾಗಿದೆ. ಜನರಲ್ ಅಂಟೊನೆಸ್ಕುರವರ ಕುರಿತು ಜನ ವಿರೋಧವು ಹೆಚ್ಚುತ್ತಿದೆ. ಅವರನ್ನು ನಿಷೇಧಿಸಿ ಪ್ರಕಟಣೆಗಳು ಹೊರಬೀಳಹತ್ತಿವೆ. ರಷ್ಯದ ಯುದ್ಧದಿಂದ ರುಮೇನಿಯವು ಜುಗುಪ್ಸೆಗೊಂಡಿದೆ ಬಲ್ಗೇರಿಯದಿಂದಲೂ ಹೆಚ್ಚಿನ ಸೇನೆಯನ್ನು ಹಿಟ್ಲರರು ಕೇಳಿರುತ್ತಾರೆ ಅದಕ್ಕೊಪ್ಪಲು ಸಾಧ್ಯವಿಲ್ಲೆಂದು ಅಲ್ಲಿಯ ಪ್ರಧಾನ ಮಂತ್ರಿಗಳು ರಾಜಿನಾಮೆ ಕೊಟ್ಟಿರುತ್ತಾರೆ.

ರಂಗೂನಿನಲ್ಲಿ ನಡೆದ ವಿನಾಶ ಕಾರ್ಯ.

ಬ್ರಿಟಿಷ್ ಸೇನೆಯು ರಂಗೂನು ಬಿಟ್ಟು ಹೋಗುವಾಗ ಸಾಧ್ಯವಾದುದಕ್ಕೆಲ್ಲಾ ಬೆಂಕಿಕೊಟ್ಟು ಎದ್ದ ಜ್ವಾಲೆಯು 40 ಮೈಲುಗಳ ದೂರದಿಂದಲೂ ತೋರಿಬರುತ್ತಿತ್ತೆಂದು ತಿಳಿದುಬರುತ್ತದೆ. ರಂಗೂನಿನಲ್ಲಿ ರಷ್ಯಾನರ ಮಾದರಿಯ ವಿನಾಶ ಕಾರ್ಯವನ್ನು ನಡೆಸಲಾಗಿದೆ. ದೊಡ್ಡ ಕಟ್ಟೋಣಗಳು, ದಕ್ಕೆ, ಭಂಡಸಾಲೆ, ಟೆಲಿಫೋನು ಮತ್ತು ಟೆಲಿಗ್ರಾಫ್ ಸ್ಟೇಶನು, ಪವರ್ ಸ್ಟೇಶನು ಮತ್ತು ಬೆಳಕಿನ ವ್ಯವಸ್ಥೆಯಲ್ಲಾ ನಾಶಮಾಡಲ್ಪಟ್ಟಿರುತ್ತವೆ. ರಂಗೂನ್ ನದಿಯ ಬಳಿ ಸಿರಿಯಮ್ ಎಂಬಲ್ಲಿರುವ ಪೆಟ್ರೋಲು ಶುದ್ಧೀಕರಣ ಕಾರ್ಖಾನೆಯು ಸಂಪೂರ್ಣ ನಾಶಮಾಡಲ್ಪಟ್ಟಿದೆ.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE —

Personal Loans & Overdrafts	7½% p. a.
Demand Bills ...	7 % p. a.
Time Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.
ESTD. 1906

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'
High Class Boarding & Lodging House
HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಉತ್ಕೃಷ್ಟತಮ ವಿಶ್ರಾಂತಿ ಗೃಹ
'ಕೆಫೆ ರೋಯಲ್'
ಆಸ್ಪತ್ರೆ ರಸ್ತೆ, ಉಡುಪಿ.

The Canara Banking Corporation Ltd.

(Incorporated in British India with limited liability)

ESTD· 1906·

will now receive

SEASON DEPOSITS

for a period of 4 months

at 3% p. a.

AT ALL ITS BRANCHES.

ಉಡುಪಿ, ಗುರುವಾರ, ೧೯-೩-೧೯೪೨

ವಿವೇಕಪರ ಹೆಜ್ಜೆ

ಇಂದು ಪೂರ್ವದಲ್ಲುಂಟಾಗಿರುವ ಗಂಡಾಂತರದ ಪರಿಸ್ಥಿತಿಯು ಒಮ್ಮೆಯೇ ಬ್ರಿಟಿಷ್ ಸರಕಾರವನ್ನು ಕಣ್ಣು ತೆರೆವಂತೆ ಮಾಡಿದೆ. ಈ ವರೆಗಿನ ಅವರ ಅವಿವೇಕಪರ ಧೋರಣೆಯ ತಪ್ಪನ್ನದು ಈಗ ಮನಗಂಡಿದೆ. ಹಿಂದುಸ್ಥಾನಕ್ಕೆ ಕೂಡಲೆ ಸ್ವಾತಂತ್ರ್ಯವೀಯಬೇಕೆಂಬ ಕೂಗು ಹಠಾತ್ತಾಗಿ ಇಂಗ್ಲೆಂಡಿನಲ್ಲೆಲ್ಲಾ ಎದ್ದು ಪ್ರತಿಧ್ವನಿಸುತ್ತಿದೆ. ಅನಿರೀಕ್ಷಿತ ಪರಿಸ್ಥಿತಿಯ ಒತ್ತಾಟದ ತೀವ್ರ ಪರಿಣಾಮವಿದು. ಇನ್ನೂ ಇನ್ನೂ ತಮ್ಮ ಹಿಂದಿನ ಸ್ವಾರ್ಥಪರ ಸಾಮ್ರಾಜ್ಯವಾದಿ ಧೋರಣೆಗೇನೇ ಕಟ್ಟುಬಿದ್ದು, ನಿಶ್ಚಿತವಾಗಿ ಏನನ್ನೂ ಹೇಳದೆ ಮತ್ತು ಮಾಡದೆ, ಹಿಂದೀಯರ ಅನೈಕ್ಯದ ಸಮುಪಯೋಗ ಪಡೆದು ತಪ್ಪನ್ನೆಲ್ಲಾ ಅವರ ಮೇಲೆಯೇ ಹೊರಿಸಿ ಪ್ರವಾಹದಲ್ಲಿ ತೇಲಿಬಿಟ್ಟರೆ ದೊಡ್ಡ ಅನಾಹುತವಾಗುವುದೆಂಬುದನ್ನು ಬ್ರಿಟಿಷ್ ಸರಕಾರವು ಇಂದೀಗ ಸಕ್ತಾನೆ ಮನಗಂಡಿದೆ. ಆದುದರಿಂದ ಕೂಡಲೆ ಹಿಂದೀ ಬಿಕ್ಕಟ್ಟನ್ನು ನಿವಾರಿಸಲು ಮುಂದಾಗಿದೆ.

ಹಿಂದುದೇಶದ ಕುರಿತಾದ ಸರಕಾರದ ಧೋರಣೆಯನ್ನು ಚರ್ಚಿಲ್ಲರು ತನ್ನ ಭಾಷಣದಲ್ಲಿ ನಿಶ್ಚಿತವಾಗಿ ಘೋಷಿಸುವರೆಂಬ ತೀವ್ರ ಆತುರವು ಎಲ್ಲೆಲ್ಲಿಯೂ ಹಬ್ಬಿದ್ದಿತು. ಆದರೆ ಅವರು ಹಾಗೇನೂ ಮಾಡಿರುವುದಿಲ್ಲ. ಬ್ರಿಟಿಷ್ ಮಂತ್ರಿಮಂಡಲವು ಕೂಲಂಕುಷವಾಗಿ ವಿಚಾರಿಸಿ ಹಿಂದುದೇಶದ ಸ್ವಾತಂತ್ರ್ಯದ ಕುರಿತು ವಹಿಸಬೇಕಾದ ಧೋರಣೆಯನ್ನು ಒಮ್ಮತದಿಂದ ನಿಶ್ಚೈಸಿರುವುದೆಂದು ತಿಳಿದು ಬರುತ್ತದೆ. ಆದರೆ ಅದನ್ನು ಒಮ್ಮೆಲೆಯೇ ಪ್ರಕಟಿಸಿ ಬಿಟ್ಟಲ್ಲಿ, ಹಿಂದುದೇಶದ ಭಿನ್ನ ಭಿನ್ನ ಪಕ್ಷಗಳಲ್ಲಿ ಎಂತಹ ಪರಿಣಾಮವುಂಟಾಗುವುದೆಂದು ಹೇಳಬರುವುದಿಲ್ಲ. ಆದುದರಿಂದ ಆ ಕುರಿತು ಖಾಸಗಿಯಿಂದ ಹಿಂದೀ ರಾಜಕೀಯ ಮುಖಂಡರ ಅಭಿಮತವನ್ನು ಪಡೆದು, ಅವರೆಲ್ಲರ ಬೆಂಬಲ ಪಡೆಯುವ ಪ್ರಯತ್ನ ಮಾಡಿ, ಆ ಮೇಲೆ ಅದನ್ನು ಪ್ರಕಟಿಸುವ ಚರ್ಚಿಲ್ಲರ ನಿರವ್ವಥಾ ವಿವೇಕಪರ ಹೆಜ್ಜೆಯಾಗಿರುತ್ತದೆ. ಹಿಂದೀಯರ ಅಭಿಮತವನ್ನು ಪಡೆದು ಅವರ ಬೆಂಬಲ ಪಡೆಯಲು ಸರ್. ಸ್ಟಾಫೋರ್ಡ್ ಕ್ರಿಪ್ಸರಂತಹ ಉದಾರ ಹಾಗೂ ಪ್ರಥಮ ಶ್ರೇಣಿಯ ಬ್ರಿಟಿಷ್ ಮುತ್ಸದ್ದಿಯು ಈ ಸಂದರ್ಭದಲ್ಲಿ ದೊರೆತುದು ಸುಯೋಗವೆಂದೇ ಹೇಳಬೇಕು. ಯಾಕೆಂದರೆ ಮೊದಲಿಂದಲೂ ಹಿಂದೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಾ ಬಂದವರವರು. ಯುದ್ಧ ಆರಂಭವಾಗುವ ಸ್ವಲ್ಪ ಸಮಯದ ಮೊದಲು ಹಿಂದುದೇಶಕ್ಕೆ ಬಂದು ಎಲ್ಲಾ ಪಕ್ಷ ಮತ್ತು ಸಮಾಜಗಳ ಮುಖಂಡರೊಡನೆ ಅಭಿಪ್ರಾಯ ವಿನಿಮಯ ಮಾಡಿ ಜೆನ್ನಾಗಿ ಪರಿಸ್ಥಿತಿಯ ಪರಿಚಯವುಳ್ಳವರು. ಆದುದರಿಂದ ದೀರ್ಘ ಕಾಲದಿಂದ ದೊಡ್ಡ ಸಮಸ್ಯೆಯಾಗಿ ನಿಂತು ಯಾರಿಂದಲೂ ಬಗೆಹರಿಸಲಾಗದುದನ್ನು ಸರ್. ಸ್ಟಾಫೋರ್ಡರು, ತನ್ನ ಪ್ರತಿಭೆ, ಅನುಭವ, ಚಾತುರ್ಯ ಮತ್ತು ಉದಾರತೆಯಿಂದ ಪರಿಹರಿಸಬಹುದೆಂಬ ಆಶೋದಯವು ಎಲ್ಲೆಲ್ಲಿಯೂ ಉಂಟಾಗಿರುವುದು ಸ್ವಾಭಾವಿಕವಾಗಿದೆ.

ಬ್ರಿಟಿಷ್ ಮಂತ್ರಿಮಂಡಲವು, ಮುಂದ ಸ್ವಲ್ಪವೂ ಬದಲಾವಣೆ ಮಾಡಲಾಗದ ನಿರ್ಧಾರಕ್ಕೆ ಬಂದು ಅದಕ್ಕೇನೇ ಹಿಂದೀಯರ ಬೆಂಬಲ ಪಡೆಯುವ ನಿರ್ಬಂಧ ಹಾಕಿ ಸರ್ ಸ್ಟಾಫೋರ್ಡರನ್ನು ಹಿಂದುದೇಶಕ್ಕೆ ಕಳುಹಿಸಿರುವದೆಂದು ನಂಬಲು ಸಾಧ್ಯವಿಲ್ಲ. ಅಂತಹ ಜವಾಬ್ದಾರಿಯನ್ನು ಅವರಂಥವರು ಎಂದೂ ವಹಿಸಲಾರರು. ಬ್ರಿಟಿಷ್ ಸರಕಾರವು ತನ್ನ ಹಿಂದಿನ ಧೋರಣೆಯನ್ನು ಬಿಟ್ಟು ಹೊಸ ಧೋರಣೆ ವಹಿಸಿದುದೆಂಬುದರಲ್ಲಿ ಸಂದೇಹವೇ ಇಲ್ಲ. ಸರ್. ಸ್ಟಾಫೋರ್ಡರ ಸಲಹೆಯ ಮೇರೆಗೆ ಅದು ತನ್ನ ನಿರ್ಧಾರದಲ್ಲಿ ಬೇಕಾದ ಬದಲಾವಣೆಯನ್ನೂ ಮುಂದೆ ಮಾಡಲು ಪ್ರಕೃತದ ಪರಿಸ್ಥಿತಿಯಲ್ಲಿ ಸಿದ್ಧವಾಗಿಯೇ ಇರುವುದೆಂಬುದೂ ನಿಶ್ಚಯವೇ! ಬ್ರಿಟಿಷ್ ಸರಕಾರವು ಅಧಿಕಾರವನ್ನು ಸಂಪೂರ್ಣವಾಗಿ ಹಿಂದೀಯರಿಗೆ ಬಿಟ್ಟುಕೊಡಲು ಮುಂದಾದರೆ ಹಿಂದೀ ಬಿಕ್ಕಟ್ಟನ್ನು ಪರಿಹರಿಸಲೇನೂ ಕಷ್ಟವಾಗಲಾರದು. "ನೀವು ನಿಮ್ಮ ಕರ್ತವ್ಯ ಮಾಡಿ, ಅಧಿಕಾರವನ್ನು ಬಿಟ್ಟುಕೊಡಲು ಮುಂದಾಗಿರಿ. ಆಗ ಹಿಂದು ಮುಸಲ್ಮಾನರೊಳಗಿನ ಭಿನ್ನಭೇದಗಳು ತನ್ನಂತೆ ಮಾಯವಾಗುವವು" ಎಂದು ಮೌಲಾನ ಜಾಫರಾಲಿ ಖಾನರಂತಹ ಉಗ್ರ ಮುಸ್ಲಿಮ್ ಲೀಗ್ ವಾದಿಯು ಕೇಂದ್ರ ಎಸೆಂಬ್ಲಿಯಲ್ಲಿ ಸ್ಪಷ್ಟವಾಗಿ ಹೇಳಿರುವರು. ಶ್ರೀ. ರಾಜಗೋಪಾಲಾಚಾರ್ಯರ ಇತ್ತಲಾಗಿನ ಭಾಷಣಗಳ ಏಕಮಾತ್ರ ಪಲ್ಲವಿಯೇ ಅದು. ಬ್ರಿಟಿಷ್ ಸರಕಾರವು ಹಿಂದುದೇಶಕ್ಕೆ ಸಂಪೂರ್ಣ ಅಧಿಕಾರ ಕೊಡುವ ನಿರ್ಧಾರ ಮಾಡಿದ್ದು, ಅದಕ್ಕೆ ಹಿಂದೀಯರೆಲ್ಲರ ಬೆಂಬಲ ಪಡೆಯುವ ಉದ್ದೇಶದಿಂದ ಸರ್. ಸ್ಟಾಫೋರ್ಡರನ್ನು ಹಿಂದುದೇಶಕ್ಕೆ ಕಳುಹಿಸಿರುವುದಾದರೆ ಅವರ ಪ್ರಯತ್ನವು ಫಲಕಾರಿಯಾಗಬಹುದೆಂದೇ ಹೇಳಬಹುದು.

ಈ ಸಂಧಿಕಾಲದಲ್ಲಿ ಹಿಂದೀ ಮುಖಂಡರು ತಮ್ಮ ಕರ್ತವ್ಯಬಾಹಿರರಾಗಬಾರದು. ಹಿಂದುದೇಶಕ್ಕೆ ಶೀಘ್ರವಾಗಿ ವಿಮಾನ ಮೂಲಕ ಬಂದು, ಆದಷ್ಟು ಬೇಗ ಹಿಂದೀ ಬಿಕ್ಕಟ್ಟನ್ನು ಪರಿಹರಿಸಬೇಕೆಂದು ಹಾತೊರೆಯುತ್ತಿರುವ ಸರ್ ಸ್ಟಾಫೋರ್ಡ್ ಕ್ರಿಪ್ಸರು, ದೀರ್ಘ ಕಾಲ ಹಿಂದೀ ಮುಖಂಡರನ್ನು ಸಮಾಧಾನ ಪಡಿಸಿ ಒಮ್ಮತಕ್ಕೆ ತರುವುದರಲ್ಲಿಯೇ ಕಾಲಕಳೆಯುವಂತಾಗಬಾರದು. ಸರ್. ಸಿಕಂದರ್ ಹಾಯತ್ ಖಾನರಂದಂತೆ, ಆ ಮೊದಲೇ ಹಿಂದೀ ಮುಖಂಡರು ತಮ್ಮೊಳಗಣ ಭಿನ್ನ ಭೇದಗಳನ್ನು ನಿವಾರಿಸಿ ಒಮ್ಮತದ ತೀರ್ಮಾನಕ್ಕೆ ಬರುವ ಪ್ರಯತ್ನ ಮಾಡಬೇಕು. ಭಿನ್ನಭೇದವನ್ನೇ ಭೂತಗನ್ನಡಿಯಲ್ಲಿಟ್ಟು ಸದಾ ನೋಡುತ್ತಿರುವ ಮನೋವೃತ್ತಿಯನ್ನು ಬಿಟ್ಟುಬಿಡಬೇಕು. ವಿಶಾಲ ರಾಷ್ಟ್ರದ ಮತ್ತು ಲೋಕಹಿತ ಸಾಧನೆಯ ದೃಷ್ಟಿಯಿಂದ ತಮ್ಮ ಆಗ್ರಹಗಳನ್ನು ಬಿಟ್ಟು ವ್ಯಾಪಕ ಹಾಗೂ ವಿವೇಕಪರ ಧೋರಣೆಯುಳ್ಳವರಾಗಬೇಕು. ಆಗ ಕಾಂಗ್ರೆಸು, ಮುಸ್ಲಿಮ್ ಲೀಗ್ ಮತ್ತು ಹಿಂದು ಮಹಾಸಭೆಗಳೊಳಗೆ ಒಡಂಬಡಿಕೆಯು ಅಸಾಧ್ಯವಾಗಲಾರದು. ಸರ್. ಸ್ಟಾಫೋರ್ಡರಂತಹ ತೇಜೋಶಾಲಿ ಹಾಗೂ ವಿವೇಕಪರ ಅಂತರರಾಷ್ಟ್ರೀಯ ಮುತ್ಸದ್ದಿಯ ಮಧ್ಯಸ್ತಿಕೆಯಿಂದಾದರೂ ಹಿಂದೀ ಮುಖಂಡರು ಒಂದುಗೂಡಿ ನಡೆಯುವಂತಾಗಿ ದೇಶವು ಸ್ವಾತಂತ್ರ್ಯ ಪಡೆದು, ಇಂದು ಲೋಕವನ್ನೆ ಉರಿಸುತ್ತಿರುವ ಅನಾಹುತದಿಂದವನ್ನು ಪಾರುಮಾಡುವುದರಲ್ಲಿ ಅಗ್ರಗಣ್ಯ ಭಾಗ ವಹಿಸುವಂತಾದರೆ ಹಿಂದೀಯರ ಭಾಗ್ಯೋದಯವೇ ಸರಿ. ಹಾಗಾಗುವುದೆಂದೇ ನಮ್ಮ ಆಶೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ್ ಬೇಂಕ್ ಲಿಮಿಟೆಡ್.

ತೊಂದರೆ ತೊಡಕುಗಳೇನೂ ಇಲ್ಲದ ಅನುಕೂಲ ಪರಿಸ್ಥಿತಿಯಲ್ಲಲ್ಲ ವ್ಯಕ್ತಿ ಮತ್ತು ಸಂಸ್ಥೆಗಳ ಸತ್ವಪರೀಕ್ಷೆಯಾಗುವುದಲ್ಲ; ಆಪತ್ಪರಂಪರೆಗಳ ಪ್ರತಿಕೂಲ ವಿದ್ಯಮಾನಗಳಲ್ಲಿ. ವಿಪತ್ಕಾಲದಲ್ಲಿ ಎಂದಿನಂತೆ ಮಾತ್ರವಲ್ಲದೆ ಅದಕ್ಕಿಂತಲೂ ಹೆಚ್ಚಾಗಿ ಶಕ್ತಿ ಸಾಮರ್ಥ್ಯ ತೋರಿಸಿ ಮುನ್ನಡೆಯುವುದರಲ್ಲಿದೆ ನಿಜವಾದ ಅಂತಶ್ಶಕ್ತಿ. ಈ ದೃಷ್ಟಿಯಿಂದಲೇ ನಾವು ಸಿಂಡಿಕೇಟ್ ಬೇಂಕಿನ 16ನೇ ವರ್ಷದ ಆಡಳಿತ ವರದಿಯನ್ನು ಸ್ವೀಕರಿಸಲು ಅತ್ಯಾನಂದ ಪಡುವುದು. ಯುದ್ಧದ ದಿಗಿಲಿನ ಅತ್ಯಂತ ಅಸ್ಥಿರ ಹಾಗೂ ಗೊಂದಲಮಯವಾದ ಇಂದಿನ ವಿದ್ಯಮಾನಗಳಲ್ಲಿಯೇ ಸಿಂಡಿಕೇಟು, ಎಲ್ಲಾ ವಿಧದಲ್ಲಿಯೂ ಹಿಂದಿಗಿಂತ ಹೆಚ್ಚಿನ ಅಭಿವೃದ್ಧಿ ಪಡೆದಿರುವುದು ಅದರ ಹೆಮ್ಮೆಯ ವಿಶಿಷ್ಟತೆಯಾಗಿರುತ್ತದೆ. ಇದಕ್ಕಾಗಿ ನಾವು ಅದರ ಆಡಳಿತಗಾರರನ್ನು ಅಭಿನಂದಿಸುತ್ತೇವೆ.

ವರದಿಯ ವರ್ಷದಲ್ಲಿ ಸಿಂಡಿಕೇಟಿನ ಪಾಲು ಭಂಡವಾಳವು ರೂ. 12,81,880ರಿಂದ ರೂ. 14,17,570ಕ್ಕೇರಿದೆ. ಪಾಲು ಹಣ ತೆತ್ತ ಭಂಡವಾಳವು ರೂ. 5,20,711ರಿಂದ 6,10,230 ಆಗಿದೆ. ಇದೇ ಮೇರೆಗೆ ಠೇವಣಾತಿ ಕೂಡಾ ರೂ. 23,14,339ರಿಂದ ರೂ. 38,82,235ರಷ್ಟು ಅಂದರೆ ರೂ. 10ಲಕ್ಷಕ್ಕೂ ಮಿಕ್ಕಿ ಅಧಿಕವಾಗಿರುತ್ತದೆ. ಈ ಬೇಂಕಿನ ಮೇಲಿನ ಸ್ಥಿರವಾದ ಜನವಿಶ್ವಾಸದ ಮುಖ್ಯ ಸೂಚನೆಯಿದು. ಇಂಡಿಯಾ ಸರಕಾರದ ಮತ್ತು ಇತರ ಸುಭದ್ರ ಭದ್ರತೆಗಳ ಮೇಲೆ ಬೇಂಕು ವಿನಿಯೋಗಿಸಿರುವ ಹಣವು ರೂ. 6,45,853ರಿಂದ 14,54,168ಕ್ಕೆ ಅಂದರೆ ಎರಡು ಪಾಲಿಗಿಂತಲೂ ಅಧಿಕವಾಗಿದೆ. ನಗದು ಮತ್ತು ಬೇಂಕು ಶಿಲ್ಕುಗಳೂ ರೂ. 3,82,600ರಿಂದ 5,92,000ಕ್ಕೇರಿವೆ. ಬೇಂಕಿನ ಭದ್ರತೆಯು ಹೆಚ್ಚಿದಂತೆ ಅದರ ಮೇಲಿನ ಜನವಿಶ್ವಾಸವು ಅಧಿಕವಾಗುವುದು ಸ್ವಾಭಾವಿಕ. ಸಿಂಡಿಕೇಟಿನದೇ ಆದ ಈ ವರ್ಷದ ಪ್ರತ್ಯೇಕವಾದೊಂದು ಲಕ್ಷಣವೆಂದರೆ, ಹಣ ಪಡೆದು ಶೇಖರಿಸಲು ಅವರು ಪಡೆದಿರುವ ಬೀಲುಗಳ ಹಣವು ಹೋದ ವರ್ಷ ರೂ. 1,60,402 ಇದ್ದುದು ಈ ವರ್ಷ ಒಮ್ಮೆಯೇ ರೂ. 5,03,615ಕ್ಕೇರಿದುದು. ವ್ಯಾಪಾರ ವಹಿವಾಟುದಾರರಲ್ಲಿ ಅದರ ಜನಾದರತೆಯ ಹೆಗ್ಗುರುತಿದು. ವರದಿಯ ವರ್ಷದಲ್ಲಿ ಸಿಂಡಿಕೇಟು, ಹೊಸ ಶಾಖೆಗಳನ್ನು ತೆರೆಯಲಿವೆಗೊಂಡಿರುವುದು ಮಾತ್ರವಲ್ಲದೆ, ಅವನ್ನು ತೆರೆಯುವ ಪೂರ್ವಭಾವಿ ವೆಚ್ಚವೆಲ್ಲಾ ಅದೇ ವರ್ಷದ ಲೆಕ್ಕದಲ್ಲಿ ವಜಾ ಮಾಡುವಂತಾಗಿರುವುದು ಆಡಳಿತದ ವಿಚಕ್ಷಣತೆಯನ್ನು ತೋರಿಸುವುದು.

ಫನ್‌ಫೇರ್ ಪ್ರದರ್ಶನ.

ಈ ಕುರಿತು ನಾವು ಹಿಂದೊಮ್ಮೆ ಲೇಖನ ಪ್ರಕಟಿಸಿ, ಅದರಿಂದಾಗುವ ಹಾವಳಿಯನ್ನು ಬಯಲಿಗೆಳೆದಿದ್ದೇವೆ. ಅದು ಲೈಸೆನ್ಸ್ ಪಡೆದಿರುವ ಜುಗಾರಿಯೆಂಬುದನ್ನು ನಿಚ್ಚಗೊಳಿಸಿರುತ್ತೇವೆ. ಅನಂತರ ಅದು ಕೊನೆಗೊಂಡು, ಅದರ ಚಪ್ಪರ ಮೊದಲಾದುವು ತೆಗೆಯಲ್ಪಟ್ಟವು. ಆಗ, ಉಡುಪಿ ಪಟ್ಟಣಕ್ಕೆ ಬಂದ ಅದೊಂದು ಅಂಟುರೋಗವೇ ದೂರವಾಯಿತೆಂದು ನಾವು ನೆನಸಿಕೊಂಡಿದ್ದೆವು. ಆದರೆ ಅದು ಕೇವಲ ನಮ್ಮ ನೆನಸು ಮಾತ್ರ. ಲೈಸೆನ್ಸನ್ನು ನವೀಕರಿಸಿ ಫನ್‌ಫೇರಿನವರು ಪುನಹ ತಮ್ಮ ಪ್ರದರ್ಶನ ನಡಿಸಲು ಹೊಸತಾಗಿ ಚಪ್ಪರ ಹಾಕಿರುತ್ತಾರೆ. ಅಂದ ಮೇಲೆ ಇನ್ನು ಎಷ್ಟು ಸಮಯದ ವರೆಗೆ ಉಡುಪಿಯಂತಹ ಬಡ ಪಟ್ಟಣವು ಅದರ ಹಾವಳಿಗೊಳಗಾಗಬೇಕಾಗುವುದೋ ತಿಳಿಯದು!

ಫನ್‌ಫೇರಿಗೆ ಲೈಸೆನ್ಸ್ ಕೊಡುವ ವಿಷಯದಲ್ಲಿ ನಾವು ಮುನ್ಸಿಪಲ್ ಕಮಿಶನರೊಡನೆ ಮಾತಾಡಿ ಅದರಿಂದಾಗುವ ಹಾವಳಿಯನ್ನು ಅವರ ಮನಗಾಣಿಸಿದೆವು. "ಇನ್ನೊಂದು ತಿಂಗಳು ಲೈಸೆನ್ಸ್ ಕೊಡುವ ವಾಗ್ದಾನವನ್ನವರಿಗೆ ಇಷ್ಟರಲ್ಲೇ ಕೊಟ್ಟಿರುವುದರಿಂದ ಇನ್ನೇನೂ ಮಾಡಲು ಸಾಧ್ಯವಿಲ್ಲ. ಆದರೆ ಲೈಸೆನ್ಸಿನ ಅವಧಿಯನ್ನು ಆದಷ್ಟು ಕಡಿಮೆಮಾಡಲೆತ್ನಿಸುತ್ತೇನೆ. ಮುಂದೆ ಲೈಸೆನ್ಸನ್ನು ನವೀಕರಿಸುವುದಿಲ್ಲ" ಎಂದವರು ಹೇಳಿದರು. ಪಟ್ಟಣದ ಆರೋಗ್ಯ ಪಾಲನೆಯ ದೃಷ್ಟಿಯಿಂದಾದರೂ ಈ ಫನ್‌ಫೇರು ಆದಷ್ಟು ಬೇಗನೆ ಉಡುಪಿಯಿಂದ ಹೋಗುವಂತೆ ಮಾಡುವುದು ಅವಶ್ಯವಿದೆ. ಪಟ್ಟಣದ ಕೆಲವೆಡೆ ಸಿಡುಬು

★ ನಾಝಿಗಳ ಅಪಜಯದ ಕುರಿತು ಹಿಟ್ಲರರ ಅಭಿಮತ. ★

ನಾಝಿ ಅಪಜಯದ ಕಾರಣಗಳು

ಕಳೆದ ಮತ್ತು ಈ ಸಲದ ಯುದ್ಧದಲ್ಲಿ ಕೊಲ್ಲಲ್ಪಟ್ಟವರ ಸ್ಮಾರಕವಾಗಿ ನಡೆದೊಂದು ಸಮಾರಂಭದಲ್ಲಿ ಹಿಟ್ಲರರು ಕೊಟ್ಟ ಭಾಷಣದ ಸಾರಾಂಶವು ಹೀಗಿರುತ್ತದೆ. "ನಮ್ಮ ವೈರಿಗಳು ಎಂತಹ ಯುದ್ಧ ಸಿದ್ಧತೆ ಮಾಡಿರುವರೆಂಬುದನ್ನು ರಷ್ಯದ ಯುದ್ಧವು ಸಿದ್ಧಗೊಳಿಸುತ್ತದೆ. ಜರ್ಮನರು ಎಷ್ಟೊಂದು ರಷ್ಯಾನ ಸೈನಿಕರನ್ನು ಕೊಂದರೂ ಮತ್ತೂ ಹೊಸ ಸೇನೆಗಳು ಮುಂದೆ ಬರುತ್ತಲೇ ಇವೆ. ಇತಿಹಾಸದಲ್ಲೇ ಅಭೂತಪೂರ್ವ ಹೋರಾಟವೀಗ ರಷ್ಯದಲ್ಲಿ ನಡೆಯುತ್ತಿರುವುದು. ಈ ವರ್ಷ ಹಲವು ಹಪ್ತೆಗಳ ಮೊದಲೇ ಚಳಿಗಾಲ ಬಂದು ರಷ್ಯಕ್ಕೆ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಿತು. ಅದರಿಂದಾಗಿ ಜರ್ಮನ್ ಸೇನೆಗೆ ನೆಪೋಲಿಯಾನರ ಪಾಡನ್ನೇ ಉಂಟು ಮಾಡುವ ಆಸೆಯು ಸೋವಿಯೆಟರಲ್ಲಿ ಹುಟ್ಟಿದೆ. ಅಭೂತಪೂರ್ವ ಚಳಿಗಾಲದ ನಿಮಿತ್ತ ಉಂಟಾದ ಭೀಕರ ಅಗ್ನಿ ಪರೀಕ್ಷೆಯಿಂದ ಜರ್ಮನ್ ಸೇನೆಯು ಪಾರಾಗುತ್ತದೆ. ಮುಂದೆ ಸಕೆಕಾಲದಲ್ಲಿ ಸೋವಿಯೆಟ್ ಸೇನೆಯ ನಾಶ ನಿಶ್ಚಯ.

ಇಂದೀಗ ನವೀನವಾದೊಂದು ಲೋಕದ ರಚನೆಯಾಗುತ್ತಿದ ಯುರೋಪಿನ ಪ್ರಜೆಗಳ ಸ್ವಾತಂತ್ರ್ಯಕ್ಕಾಗಿ ತಳಹದಿಯು ತಯಾರಾಗುತ್ತಿದೆ. ಸ್ಥಿರವಾದ ಶಾಂತಿ ಸ್ಥಾಪಿತವಾಗುವವರೆಗೆ ಜರ್ಮನಿಯು ಹೋರಾಟ ನಡಿಸಿ ಅದರ ವೈರಿಗಳನ್ನು ಸದೆಬಡಿಯಲೇ ಬೇಕು. ಲೋಕದ ಇತರ ಭಾಗಗಳ ಗೊಡವೆ ನಮಗಿಲ್ಲ ಇತರಗಳಾದರೂ ಯುರೋಪಿನ ವಿಷಯದಲ್ಲಿ ಕೈ ಹಾಕಲು ಜರ್ಮನಿಯು ಬಿಡಲಿಕ್ಕಿಲ್ಲ. ಬೋಲ್ಶೆವಿಸಂನಂತಹ ಸರ್ವನಾಶಕಾರಕ ಗಂಡಾಂತರವನ್ನು ಪ್ರತಿಭಟಿಸುವ ಶಕ್ತಿಯು ಜರ್ಮನಿಗಿದೆ. ಜರ್ಮನಿಯು ಅದಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧವಿರಬೇಕಾಗಿದೆ. ನಝೀ ವಾದವನ್ನು ಸ್ಥಿರವಾಗಿ ನಡಿಗೊಳಿಸಿ ಯುರೋಪಿನಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕಾಗಿ ಅದು ಅತ್ಯಗತ್ಯವಿದೆ.

ಮದ್ರಾಸ್ ಬಜೆಟು

ಮದ್ರಾಸ್ ಪ್ರಾಂತದ 1942-43ರ ಬಜಟು ಪ್ರಕಟವಾಗಿದೆ. ಆ ಪ್ರಕಾರ ಆದಾಯವು ರೂ. 18,97,37,000 ಮತ್ತು ವ್ಯಯವು 18,94,28,000 ಆಗಿರುತ್ತ-

ರೋಗವುಂಟಾಗಿದೆ. ಜನತೆಯು ಅಪರಾತ್ರಿಯ ವರೆಗೆ ನಿದ್ದೆಗೆಟ್ಟು ಹಸಿಯಲ್ಲಿ ತಿರುಗಾಡುವುದರಿಂದ ಈ ಸಂದರ್ಭದಲ್ಲಿ ಸಿಡುಬು **ರೋಗ** ಹಬ್ಬಲು ಅನುಕೂಲ ಪರಿಸ್ಥಿತಿಯನ್ನು ಉಂಟುಮಾಡಿದಂತಾಗು ವುದೆಂದರೆ ತಪ್ಪಾಗಲಾರದು ಫನ್‌ಫೇರನವರು ವಾರ್ ಫಂಡಿಗಾಗಲಿ, ಆಥವಾ ಇನ್ನಾವುದಕ್ಕಾಗಲೀ ಉದಾರ ಸಹಾಯ ಮಾಡುವ ವಾಗ್ದಾನ ಮಾಡಿದ ಪಕ್ಷದಲ್ಲಿ ಅದೇ ಜುಗಾರಿಯಿಂದ ಜನತೆಗುಗುವ ಹಾನಿಯೇನಾದರೂ ಕಡಿಮೆಯಾಗುವುದೇನು? ಆದುದರಿಂದ ಮುನಿಸಿಪಾಲಿಟಿಯವರೂ ಸರಕಾರವೂ ಈ ಫನ್‌ಫೇರಿಗೆ ಅವಕಾಶವೀಯದೆ, ಅದು ಆದಷ್ಟು ಬೇಗನೆ ಉಡುಪಿ ಪಟ್ಟಣ ಬಿಟ್ಟು ಹೋಗುವಂತೆ ಮಾಡುವುದು ಅವರ ಕರ್ತವ್ಯವಿರುತ್ತದೆ.

— **ಮದ್ರಾಸ್ ಪ್ರಾಂತದ ಬಜೆಟು.** —

ಬರ್ಮದ ಯುದ್ಧದ ಪರಿಸ್ಥಿತಿ.

ದೆ. ಉಳಿತಾಯ ರೂ. 3,?9,000 ಮಾತ್ರ. ಬರುವ ವರ್ಷದ ಪರಿಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಬರುವುದಿಲ್ಲವಾದುದರಿಂದ ಸರಕಾರವು ಯಾವ ತೆರಿಗೆಯನ್ನಾದರೂ ಕಡಿಮೆ ಮಾಡುವ ಗೊಡವೆಗೆ ಹೋಗಿರುವುದಿಲ್ಲ. ಹಿಂದೆ ಕೊಡಲ್ಪಟ್ಟಿರುವ ಭೂಕಂದಾಯ ರಿಯಾಯಿತಿಯನ್ನು ಅದೇ ರೀತಿ ಕೊಡಲಾಗಿದೆ. ಬಜಟಿನ ವರ್ಷದಲ್ಲಿ ಆದಾಯ ತೆರಿಗೆಯಿಂದ ದೊರಿಯುವ ಹಣವು ರೂ. 19,20,00ದಷ್ಟು ಹೆಚ್ಚಾಗಬಹುದೆಂದೂ, ಅಬ್ಕಾರಿ ಆದಾಯವು ರೂ. 29,08,000 ಕಡಿಮೆಯಾಗಬಹುದೆಂದೂ ಅಂದಾಜು ಮಾಡಲಾಗಿದೆ. ಮೋಟರ್ ವಾಹನ ಮತ್ತು ಪೆಟ್ರೋಲಿನಿಂದ ದೊರೆವ ಆದಾಯವು ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ ರೂ. 22,57,000ದಷ್ಟರ ಟೋಲ್ ಟೇಕ್ಸ್ ನ್ನ ಪ್ರತಿಫಲವನ್ನು ಜಿಲ್ಲಾ ಬೋರ್ಡುಗಳಿಗೆ ಹೆಚ್ಚಿಗೆಯಾಗಿ ಕೊಡುವ ನಿರ್ಧಾರ ಮಾಡಲಾಗಿದೆ. ಕೈಮಗ್ಗ ಕೆಲಸಗಾರರ ಮತ್ತು ನೆಲಗಡಲೆ ವ್ಯವಸಾಯಗಾರರ ಸಹಾಯಕ್ಕಾಗಿ ಅನುಕ್ರಮವಾಗಿ ರೂ. 15 ಲಕ್ಷ ಮತ್ತು 5,76,000 ಉಪಯೋಗಿಸಲಾಗುತ್ತದೆ. ವಿಮಾನ ಧಾಳಿಯ ಮೊದಲಾದ ಹಾವಳಿ ನಿವಾರಣಾ ಕಾರ್ಯಕ್ಕಾಗಿ ರೂ. 60,10,000 ವಿನಿಯೋಗಿಸಲ್ಪಡುತ್ತದೆ ಹೊಸ ಸ್ಕೀಮುಗಳಿಗಾಗಿ 16 ಲಕ್ಷ ವಿನಿಯೋಗಿಸಲಾಗುತ್ತದೆ

ಬರ್ಮದ ಯುದ್ಧ

ರಂಗೂನಿನಿಂದ ಸುಮಾರು 100ಮೈಲು ಉತ್ತರ ಪೂರ್ವದಲ್ಲಿರುವ ಪೈಗೀನ್ ಎಂಬ ಚಿಕ್ಕ ಪಟ್ಟಣ ಬ್ರಿಟಿಷ್ ಸೈನಿಕರು ಜಪಾನರಿಂದ ಗೆದ್ದಿರುತ್ತಾರೆ. ಹಿಂದೀ ಹವಿಲ್ದಾರನೊಬ್ಬನು ಕಾಲಿಯ ಮೇಲೆ ಹಾಕಿಕೊಂಡು, ಜಪಾನರಿಗಾಗಿ ಕಂದಕ ತೋಡುವವರೊಂದಿಗೆ ಬೆರೆತು ಅವರಿಂದ ಜಪಾನರ ಪ್ರಾಮುಖ್ಯ ಪ್ಲೇನನ್ನು ನಡೆದ ಪರಿಣಾಮವಾಗಿ ಪೈಗೀನ್ ಗೆಲ್ಲಲ್ಪಟ್ಟಿರುವುದೆಂದು ತಿಳಿದು ಬರುತ್ತದೆ. ಬರ್ಮದಲ್ಲಿ ಬ್ರಿಟಿಷ್ ಸೇನೆಯು ದೊಡ್ಡ ಯುದ್ಧವನ್ನಾರಂಭಿಸಿರುತ್ತದೆ

ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರು.

ವಿಮಾನ ಮೂಲಕ ಹಿಂದುದೇಶಕ್ಕೆ ಹೊರಟಿರುತ್ತಾರೆ. ಅವರೊಂದಿಗೆ ಅವರ ಸಕ್ರಟರಿ ಮತ್ತು ಪತ್ನಿಯು ಬಂದಿರುತ್ತಾರೆ

ಆಸ್ಟ್ರೇಲಿಯದ ಹೊಸ ಸೇನಾ ನಾಯಕರು.

ಫಿಲಿಪ್ಪೈನಿನ ವೀರರಾದ ಜನರಲ್ ಮೆಕ್ ಆರ್ಥರರು ಆಸ್ಟ್ರೇಲಿಯದ ಸೇನಾ ನಾಯಕರಾಗಿ ನೇಮಿಸಲ್ಪಟ್ಟಿರುತ್ತಾರೆ. ಇದರಿಂದ ಆಸ್ಟ್ರೇಲಿಯದ ಯುದ್ಧದ ಜವಾಬ್ದಾರಿಯನ್ನು ಅಮೆರಿಕವು ವಹಿಸಿರುವುದೆನ್ನಬಹುದು. ಜಪಾನರು ಆಸ್ಟ್ರೇಲಿಯದ ಡಾರ್ವಿನ್ ಬಂದರದ ಮೇಲೆ ಪುನಹ ವಿಮಾನಧಾಳಿ ನಡಿಸಿರುವರು.

ಕುನ್ಮಿಂಗಿನಲ್ಲಿ ವಿಮಾನ ಅಪಘಾತ.

ಇದೇ ತಾ. 11ರಲ್ಲು ಚೈನದ ಕುನ್ಮಿಂಗಿನಲ್ಲಿ ವಿಮಾನವೊಂದರ ಅಪಘಾತದಲ್ಲಿ 12 ಮಂದಿ ಕೊಲ್ಲಲ್ಪಟ್ಟಿರುವರು. ಅದರಲ್ಲಿ ಬ್ರಿಟಿಷ್ ಮಿಲಿಟರಿ ಮಿಶನಿನ ಮೇಜರ್ ಜನರಲ್ ಡೆನಿಸರೊಬ್ಬರು.

ಸಿಲೋನಿನ ರಕ್ಷಣೆ.

ಇದರ ಸರ್ವ ಜವಾಬ್ದಾರಿಯನ್ನೂ ಎಡ್ಮಿರಲ್ ಲೈಟನರಿಗೊಪ್ಪಿಸಲಾಗಿದೆ. ಸಿಲೋನಿನಲ್ಲಿರುವ ಹಿಂದೀಯರೆಲ್ಲಾ ಅದನ್ನು ಬಿಟ್ಟು ಬರುತ್ತಿದ್ದಾರೆ.

1 ಜಪಾನ ಹಡಗಗಳು ಮುಳುಗಿಸಲ್ಪಟ್ಟವು.

ಇದೇ ತಾ 12ರಲ್ಲು ಯುನೈಟೆಡ್ ಸ್ಟೇಟ್ಸಿನ ಸಬ್ ಮೆರೀನೊಂದು ಜಪಾನಿನ ಒಟ್ಟು ಹೈರ ಹಡಗಗಳನ್ನು ಮುಳುಗಿಸಿರುವುದೆಂದು ತಿಳಿದುಬರುತ್ತದೆ. ಇವುಗಳಲ್ಲಿ 4 ಸಾಮಾನೊಯ್ಯುವವು. ಒಂದು ಪ್ರಯಾಣಿಕ ಹಡಗು.

ಡಚ್ ಈಸ್ಟ್ ಇಂಡೀಸಿನಲ್ಲಿ ಹೋರಾಟ ನಡೆಯುತ್ತಿದೆ.

ಡಚ್ ಈಸ್ಟ್ ಇಂಡೀಸಿನಲ್ಲಿ - - ಕಡೆಗಳಲ್ಲಿ ಇನ್ನೂ ಹೋರಾಟವು ನಡೆಯುತ್ತಲೇ ಇದೆ. ಉತ್ತರ ಮತ್ತು ಮಧ್ಯ ಸುಮಾತ್ರದಲ್ಲಿಯೂ ಜಾವದಲ್ಲಿ ಕಲವು ಕಡೆಗಳಲ್ಲಿಯೂ ಡಚ್ ಸೈನಿಕರು ಜಪಾನರೊಡನೆ ಹೋರಾಟ ನಡಿಸುತ್ತಲೇ ಇದ್ದಾರೆ. ಅವರೆಲ್ಲಾ ಶರಣಾಗತರಾಗಿರುವರೆಂದು ಜಾ ಪಾ ನ ರು ಪ್ರಕಟಿಸಿರುವ ವಾರ್ತೆ ನಿಜವಲ್ಲ.

ಜರ್ಮನಿಯ ಮೇಲೆ ವಿಮಾನ ಧಾಳಿ

ಈಗ ಪ್ರಬಲವಾಗಿ ಆರಂಭವಾಗಿರುತ್ತದೆ ಪ್ರತಿ ದಿನವೂ ರೋಯಲ್ ಏರ್ ಫೋರ್ಸಿನ ವಿಮಾನಗಳು ಜರ್ಮನಿಯ ಪ್ರಾಮುಖ್ಯ ಬಂದರು ಮತ್ತು ಪಟ್ಟಣಗಳ ಮೇಲೇರಿ ಹೋಗಿ ತೀವ್ರ ವಿಮಾನಧಾಳಿಯನ್ನಾರಂಭಿಸತೊಡಗಿವೆ. ಇಂಗ್ಲೆಂಡಿನ ಮೇಲೆ ಜರ್ಮನ್ ವಿಮಾನ ಧಾಳಿಯು ಹೆಚ್ಚೇನೂ ನಡೆಯುತ್ತಿರುವುದಿಲ್ಲ.

ಮಲಯಾದಲ್ಲಿ ಆಸ್ಟ್ರೇಲಿಕ್ಕಾಗಿರುವ ಸೇನಾ ನಷ್ಟ.

ಮಧ್ಯಪೂರ್ವದಲ್ಲಿ ಕ್ರೀಟ್, ಗ್ರೀಸ್, ಸೀರಿಯ ಮತ್ತು ಲಿಬಿಯದಲ್ಲಿ ಆಸ್ಟ್ರೇಲಿಯವು ಒಟ್ಟಿಗೆ ಪಡೆದ ಸೈನ್ಯಕರಿಗಿಂತಲೂ ಹೆಚ್ಚಿನ ನಷ್ಟವನ್ನು ಅದು ಮಲಯ ಮತ್ತು ಸಿಂಗಪುರಗಳಲ್ಲಿ ಪಡೆದಿರುವುದು. ಸೆರೆಯಾದವರು ಕೂಡಿ ಮಲಯ ಮತ್ತು ಸಿಂಗಪುರಗಳಲ್ಲಿ ಒಟ್ಟಿಗಾದ ಸೈನಿಕನಷ್ಟ 17,031. ಮಧ್ಯಪೂರ್ವದಲ್ಲಿ ಒಟ್ಟಿಗಾದ ನಷ್ಟ 9,355

ಯಕ್ಷಗಾನ:— ಇದೇ ತಾ. 21-3-42ನೇ ಶನಿವಾರ ರಾತ್ರಿ ಗಂಟೆ 9-30ಕ್ಕೆ ಪಿಂಟ್ ಬಂಡ್ ಪೇಟೆಯ ಮೈದಾನಿನಲ್ಲಿ ಕರ್ನಾಟಕ ಥಿಯೇಟರ್ಸ್‌ನವರ ಆಶ್ರಯದಿಂದ "ಕೃಷ್ಣ ಸಂಧಾನ" ಎಂಬ ಪ್ರಸಂಗವನ್ನು ದಕ್ಷಿಣ ಕನ್ನಡದ ಸುಪ್ರಸಿದ್ಧ ಅರ್ಥಗಾರರ ಸಮ್ಮಿಲನದಿಂದ ಯಕ್ಷಗಾನ (ತಾಳಮದ್ದಳೆ) ಜರಗಲಿಕ್ಕಿರುವುದರಿಂದ, ಸರ್ವ ಮಹನೀಯರಿಗೂ ಸುಸ್ವಾಗತವಿದೆ ಎಂದು ಥಿಯೇಟರ್ಸ್‌ನ ಓರ್ಗನೈಝರರು ತಿಳಿಸುತ್ತಾರೆ.

ಫರಂಗಿ ಪೇಟೆ-ಇಲ್ಲಿಯ ಶ್ರೀ ರಾಮ ಠಾಕೂರ್ ಎಲಿಮೆಂಟ್ರಿ ಶಾಲೆಯ ವರ್ಧಂತಿಯು ತಾ. 26-3 42ನೇ ಗುರುವಾರ ಶ್ರೀ ಎಚ್. ರಾಮರಾವ್, ಎಂ. ಎ ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ, ಸಕಲರಿಗೂ ಸ್ವಾಗತವಿದೆಯೆಂದೂ ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಮುಂದಿನ **ಚಂದಾ ಹಣವನ್ನು** ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯ ಕನ್ಯೆಗಳು ಪಾಲಿಸುವ ರಹಸ್ಯಗಳು,



ಹಾಸಿಗೆಯ ಸುಖವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ವಶಪಡಿಸುವ ವಿಧಗಳು, ಕನ್ಯೆಗಳ ಪ್ರೀತಿ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯನ್ನು ಮುತ್ತಿಡುವ, ಮಲಗುವ ವಿನಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜೆನಿವ ಟ್ರೇಡಿಂಗ್ ಕಂಪೆನಿ

260 ಚೈನಾಬಜಾರ್ ರೋಡ್, ಮದರಾಸ್.

ತಾ. 19-3-1942ರಿಂದ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ಮಿತ್ರ ರಾಷ್ಟ್ರದವರ ಸಿಂಹ ಗರ್ಜನೆಯ ಬೇಡೆನಿಸಿದ ಮೆಜನೊಲೈನ್‌ನಲ್ಲಿ ಜರ್ಮನಿಯ ಗುಪ್ತ ಸಂಚಾಲಕರ ಒಳಸಂಚು ನೋಡಿರಿ. **RKO** ರೇಡಿಯೋದವರ

ಡಬ್ಬಲ್ ಕ್ರೈಮ್ ಇನ್ ದಿ ಮೆಜಿನೊಲೈನ್

ಬರುವ ಚಿತ್ರ:- ಫಿಲ್ಮ್ ಕೋರ್ಪರೇಶನ್‌ನವರ ಮೇತಾಬ್ & ನಾಂದ್ರೇಕಾರ್ ನಟಿಸಿರುವ **ಚಿತ್ರಲೇಖಾ.**

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ಜನ್ಮ ಟಾಪು ಶಿಕ್ಷೆ- ಮಂಗಳೂರಿನ ಸೆಷನ್ಸ್ ಜಡ್ಜರಾದ ಶ್ರೀ| ಎಲ್ ಎಸ್ ಪಾರ್ಥಸಾರಥಿ ಅಯ್ಯರ್ ಅವರು, ಕಾರ್ಕಳ ತಾಲೂಕಿಗೆ ಸೇರಿದ ಕಾಂಜಾರು ಗ್ರಾಮದ ಸಂಜೀವಶೆಟ್ಟಿ ಎಂಬವನಿಗೆ ಜನ್ಮ ಟಾಪು ಶಿಕ್ಷೆ ವಿಧಿಸಿದರು ಸಂಜೀವ ಶೆಟ್ಟಿಯು ಮನೆಯಲ್ಲಿ ಯಾವ ಕೆಲಸವನ್ನೂ ಮಾಡದೆ ಸೋಮಾರಿಯಾಗಿ ವರ್ತಿಸುತ್ತಿದ್ದುದರಿಂದ ಅತನ ತಂದೆ ಗ್ರಾಮದ ಪಟೇಲರಲ್ಲಿ ದೂರು ಹೇಳಲಾಗಿ, ಸಂಜೀವಶೆಟ್ಟಿಯು ಬಹು ಅವಿಧೇಯನಾಗಿ ವರ್ತಿಸತೊಡಗಿದನು ಅತನ ತಂದೆಯು ಅವಿಧೇಯನಾದ ಮಗನಿಗೆ ಅನ್ನ ಹಾಕುವುದಿಲ್ಲವೆಂದು ಹೇಳಲಾಗಿ ಸಂಜೀವಶೆಟ್ಟಿಯು ಸಿಟ್ಟಿನಿಂದ ತಂದೆಯನ್ನು ಚೂರಿಯಿಂದ ತಿವಿದನೆಂದು ಅತನ ಮೇಲಿನ ಆರೋಪ ಸಂಜೀವಶೆಟ್ಟಿಯು ತಾನು ಮಾಡಿದ ತಪ್ಪನ್ನು ಒಪ್ಪಿದ್ದನು ಈ ರೀತಿ ತಂದೆಗೆ ತಿವಿದಾಗ ಅತನಿಗೆ ತಲೆ ಸರಿಯಿರಲಿಲ್ಲವಾಗಿ ವಾದ ನಡಿಯಿತ ಅದಕ್ಕೆ ಅಸೆಸರರೆಲ್ಲರೂ ಆತಿಯು ತಪ್ಪುಗಾರನೆಂದು ಅಭಿಪ್ರಾಯ ಪಟ್ಟುದನ್ನು ಮಾನ್ಯ ಜಡ್ಜರು ಒಪ್ಪಿ ರಿನ್ನ ಮೇಲಿನ ರೀತಿಯಾಗಿ ಶಿಕ್ಷೆ ವಿಧಿಸಿದರು ಆತಿಯ ಕಡೆಯಿಂದ ಕೋರ್ಟಿನಿಂದ ನೇಮಕ ಹೊಂದಿದ ಶ್ರೀ| ಕೆ| ಪಿ| ಯಸ್| ರಾವ್ ಅವರು ವ್ಯವಹರಿಸಿದ್ದರು

ಶಾಲಾ ವರ್ಧಂತಿ ಮ್ಯುನಿಸಿಪಲ ಮಹಮ್ಮದನ್ ಶಾಲಾ ವರ್ಧಂತಿಯು ದಕ್ಷಿಣ ಕನ್ನಡ ನ್ಯಾಯಂವಾಲ ಜಿಲ್ಲಾ ಕಲೆಕ್ಟರರಾದ ವಿ| ಯು| ಕರಂತ್ ಐ ಸಿ ಯಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು

'ರೋಯಲ್ ಇಂಡಿಯನ್ ನೇವಿ' ಇದರಲ್ಲಿ ತರಬೇತಿಗಾಗಿ ಹುಡುಗರನ್ನು ಆರಿಸಲು 3 4 42ರಿಂದ ಸ್ಟೇಟ್ ಎಲಿಮೆಂಟರಿ ತರಬೇತಿಯಲ್ಲಿ ರಿಕ್ರೂಟಿಂಗ್ ಆಫೀಸರರು ರಿಕ್ರೂಟ ಮಾಡಲಿರುವರು ಇವರಲ್ಲಿಗೆ ಎಚ್| ಎಮ್| ಐ| ಎಸ್| 'ದಿಲ್ವಾರ್' ಮತ್ತು ಎಚ್| ಎಮ್| ಐ| ಎಸ್| 'ಬಹದ್ದೂರ್' ಗಳು ಬರಲಿರುವವು 'ದಿಲ್ವಾರ್'ನಲ್ಲಿ 14ರಿಂದ 15½ ವಯಸ್ಸಿನ ವರೆಗಿನವರನ್ನು ತೆಗೆದುಕೊಂಡು ಒಂದು ವರುಷ ತರಬೇತಿ ಕೊಟ್ಟು ಆ ಮೇಲೆ 'ಬಹದ್ದೂರ್'ನ ತರಬೇತಿಗೆ ಕಳುಹಿಸಲಾಗುವುದು 'ಬಹದ್ದೂರ್'ಗೆ 15ರಿಂದ 17 ವರುಷದೊಳಗಿನವರನು ಸೇರಿಸಿಕೊಂಡು ಒಂದು ವರುಷ ತರಬೇತಿನ ನಂತರ ಸಮುದ್ರ ಕಾರ್ಯಕ್ಕೆ ಉಪಯೋಗಿಸಲಾಗುವುದು ತರಬೇತಿಯಲ್ಲಿರುವಾಗ ಊಟ, ವಸ್ತ್ರ ಬಿಟ್ಟು ರೂ 15 ಸಂಬಳ ದೊರೆಯುವದು, ಆ ಮೇಲೆ ವಿವಿದ ತರಗತಿಯ ವೇತನದ್ಯವಸ್ಥೆ ಮಾಡಿದೆ, ಎಂದು ಜಿಲ್ಲಾ ಕಲೆಕ್ಟರ್ ಕೆ ಕರಮತುಲ್ಲಾ ಎಸ್ಕ್ವಾಯರ್, ಐ ಸಿ ಯಸ್ ಇವರು ತಿಳಿಸುತ್ತಾರೆ

ಮೂಲ್ಕಿ- ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಚಾಲ್ತಿ ವರ್ಷದ ಕಡೇ ಸಭೆಯು ತಾ 14 3 42ರಲ್ಲಿ ಶ್ರೀ| ಕೆ| ಸಿ| ಕಾಮತ್‌ರವರ ಸಭಾಧ್ಯಕ್ಷತೆಯಲ್ಲಿ ಜರಗಿತು ವರದಿ, ಉಪನ್ಯಾಸ ವಾಚನ, ವಿವಿಧ ರೀತಿಯ ನಾಟ್ಯಗಳು, ಕಾರ್ಯಕಾರಿ ಮಂಡಳಿಯ ನೇಮಕ, ಸಭಾಧ್ಯಕ್ಷರ ಭಾಷಣಗಳಿಂದ ಸಭಾಂತ್ಯವಾಯಿತು

ಸ್ಥಳೀಕ ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಮಹೋತ್ಸವವು ತಾ 1 4 42ರಿಂದ 7 4 45ರ ವರೆಗೆ ಜರಗಲಿರುವುದು

ಸ್ಥಳೀಕ ಶ್ರೀ ವೆಂಕಟ್ರಮಣ ದೇವಳದಲ್ಲಿ ಜರಗತಕ್ಕ ವರ್ಷಾವಧಿ ರಥೋತ್ಸವವು ಇದೇ ಬರುವ ತಾ, 26-3 42ನೇ ಗುರುವಾರ ಶ್ರೀ ರಾಮನವಮಿ ದಿನ ಜರಗಲಿರುವುದು

ಸ್ಥಳೀಕ ಬೋರ್ಡು ಹುಡುಗಿಯರ ಶಾಲೆಯ ಕೆಲಮಂದಿ ಉಪಾಧ್ಯಾಯಿನಿಯರು ಸುಮಾರು 60 ಹೆಮ್ಮಕ್ಕಳನ್ನು ಕೂಡಿಕೊಂಡು ತಾ 6 3 42 ರಲ್ಲಿ ಪಲಿಮಾರಿಗೆ ಪರ್ಯಟನಕ್ಕೆ ತೆರಳಿರಲು, ಶ್ರೀ ಫಲಿಮಾರು ಮಠದಲ್ಲಿ ಅವರೆಲ್ಲರಿಗೂ ಊಟೋಪಚಾರಗಳನ್ನು ಮಾಡಿಸಿ, ಅವರೆಲ್ಲರನ್ನು ಅತ್ಯಾದರದಿಂದ ಸತ್ಕರಿಸಿದ ಶ್ರೀ ಫಲಿಮಾರು ಮಠಾಧಿಪತಿಗಳ ಔದಾರ್ಯವು ಪ್ರಶಂಸನೀಯವಾಗಿದೆ

ಪ್ರಕಟಣೆ

ಮೂಡಬಿದ್ರೆ, ಗುರುಪಾಯೇನಕೆರೆ ರಸ್ತೆಯ 5/7 ಮೈಲಿನಲ್ಲಿರುವ ಹೊಸಂಗಡಿ ಸೇತುವೆಯ ದುರಸ್ತಿ ಕಾರ್ಯವು ಪೂರ್ಣವಾಗುವ ವರೆಗೆ (ಸುಮಾರು 1942ನೇ ಮಾರ್ಚ 31ರ ವರೆಗೆ) ಅದನ್ನು ಹಾದುಹೋಗ ಮಾಗ ಬಸ್ಸುಗಳು ಎಲ್ಲಾ ಪ್ರಕಾರದ ವಾಹನಗಳು ಘಂಟೆಗೆ 5 ಮೈಲಿನ ವೇಗಕ್ಕೆ ಮೀರದಂತೆ ಹೋಗತಕ್ಕದ್ದೆಂದು ಸಾರ್ವಜನಿಕರ ಅವಗಾಹನ ಬಗ್ಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ವಿಠ್ಠಲ ಸೆಟ್ಟಿರ ಪ್ರಕಟಣೆಯಿದೆ

ಕಾಪು - ತಾ 14 3 42ರಲ್ಲಿ ಕಾಪು ಬೋರ್ಡು ಹಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾಕ್ಟರ್ ಕೆ| ವಿಠ್ಠಲ ಸೆಟ್ಟಿ ಅಧ್ಯಕ್ಷತೆಯಲಿ ಬಹು ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿತು ಅಧ್ಯಕ್ಷರ ಸ್ವಾಗತ, ಮಾನ್ಯ ಅಧ್ಯಕ್ಷರಿಂದ ಶಾಲಾ ಹೊಸ ಕಟ್ಟೋಣದ ಪ್ರವೇಶೋತ್ಸವವಾದ ಬಳಿಕ, ಶ್ರೀ ಕೆ ಕೃಷ್ಣಾಚಾರ್ಯರಿಂದ ಸ್ವಾಗತ ಭಾಷಣವಾಯಿತು ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿ ವಾಚನ ಮಾಡಿದರು ಅನಂತರ ಅಧ್ಯಕ್ಷರು ಶಾಲಾ ಏಳಿಗೆ ಮತ್ತು ಇನ್ನಿತರ ಹಲವು ರಸವತ್ತಾದ ವಿಷಯವನ್ನೊಳಗೊಂಡ ಸುರಸ ಮತ್ತು ಅರ್ಥಗರ್ಭಿತವಾದ ಭಾಷಣವನ್ನು ಮಾಡಿದರು ಶಾಲಾ ಬಾಲಕಿಯರಿಂದ "ದಾನ ಶೂರ ಕರ್ಣ"ವೆಂಬ ನಾಟಕವು ಬಹಳ ಸುರಸವಾಗಿ ಪ್ರದರ್ಶಿಸಲ್ಪಟ್ಟಿತು ಶಾಲಾ ಹುಡುಗರಿಂದ ದ್ರೌಪದಿ ಪ್ರತಾಪವೆಂಬ ಯಕ್ಷಗಾನ ಆಟವೂ, ಶಾಲಾ ಹಳೆ ವಿದ್ಯಾರ್ಥಿಗಳಿಂದ "ವಿದ್ಯೆದ ತಾದಿ" ಎಂಬ ತುಳು ನಾಟಕವೂ ಅಭಿನಯಿಸಲ್ಪಟ್ಟಿತು ವಿವಿಧ ವಿನೋದಾವಳಿ ಮನೋಹರವಾದ ಮನೋರಂಜಕ ಕಾರ್ಯಕ್ರಮಗಳು ಚಿತ್ತಾಕರ್ಷಕವಾಗಿ ನೆರವೇರಿ ಪ್ರೇಕ್ಷಕರನ್ನು ಆಹ್ಲಾದಗೊಳಿಸಿದವು

ಮೂರೂರು —ಕಾರ್ಕಳ ತಾಲೂಕಿನ ಮಿಯ್ಯಾರು ಗ್ರಾಮದ ದೇವಸ್ಥಾನದ ವರ್ಷಾವಧಿ ಉತ್ಸವವು ಇದೇ ೨ 21ರಿಂದ 27ರ ವರೆಗೆ ಜರಗಲಿರುವದೆಂದೂ ಎಲ್ಲರಿಗೂ ಸ್ವಾಗತವಿರುವದೆಂದೂ ಹೊಸ ಮೊಕ್ತೇಸರ್ ಶ್ರೀ ಕೆ ಸುಬ್ಬಯ ಸೆಟ್ಟರು ತಿಳಿಸುತ್ತಾರೆ

ಕಡಂದಲೆ-ಸ್ಥಳೀಯ ಮಕ್ಕಳ ಪಂಚಾಯತ್ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ತಾ 7-3 12ನೇ ಶನಿವಾರ ಡಿಸ್ಟ್ರಿಕ್ಟ್ ಪಂಚಾಯತ್ ಆಫೀಸರ್ ಶ್ರೀ| M ಲಿಂಗನ್ B A ಯವರ ಅಧ್ಯಕ್ಷತೆಯಲ್ಲಿ ಜರಗಿತು ಬೆಳಿಗ್ಗೆ ಗಂಟೆ 9 30ಕ್ಕೆ ಶ್ರೀ| ಕೆ| ಸದಾಶಿವ ಶೆಟ್ಟಿ ಅಧ್ಯಕ್ಷತೆಯಲ್ಲಿ ರಸ್ತೆ ಪ್ರದರ್ಶನವಾಗಿ ಮಕ್ಕಳ ಪಂದ್ಯಾಟಗಳು, ತಿಂಡಿತೀರ್ಥ ಇತ್ಯಾದಿ ಕ್ರಮದ ನಡೆಯಿತು ಅಪರಾಹ್ನ ಗಂಟೆ 4-30ಕ್ಕೆ ಅಧ್ಯಕ್ಷರನ್ನು ಸ್ವಾಗತೀಕರಿಸಿದ ನಂತರ, ಸಭಿಕರ ಸ್ವಾಗತ ಭಾಷಣಗಳಾದ ಬಳಿಕ, ಅಧ್ಯಕ್ಷರ ಅರ್ಥಗರ್ಭಿತ ಭಾಷಣವಾಯ್ತು ಹುಡುಗರಿಂದ ಆದ್ಯ ಎಂಬ ನಾಟಕವೂ, ಹೆಮ್ಮಕ್ಕಳಿಂದ ಭರತನಾಟ್ಯ ಸ್ಕೇಚಿನ ಒಂದು ದೃಶ್ಯವೂ, 'ವಿದ್ಯೆ ಬೊಳ್ಪು' ಎಂಬ ತುಳು ನಾಟಕವೂ, ಇನ್ನಿತರ ವಿನೋದಾವಳಿಗಳೂ ಇದ್ದವು

ಶಿರ್ವ ಬಂಟಕಲ್- ತಾ 27 3 ಪ್ರಾತಃ ಘಂಟೆ 6 33ಕ್ಕೆ ಉಡುಪಿ ತಾಲೂಕ ಶಿರ್ವಗ್ರಾಮದ ಬಂಟಕಲ್ಲಿನಲ್ಲಿ ರಾಜಾಪುರ ಸಾರಸ್ವತ ಬ್ರಾಹ್ಮಣ ಸ್ವಂತದ ಮಹಾಜನರುಗಳು ಹೊಸದಾಗಿ ನಿರ್ಮಿಸಿದ ದೇವಾಲಯದಲ್ಲಿ ಶ್ರೀ ದುರ್ಗಾ ಪರಮೇಶ್ವರೀ ದೇವಿಯನ್ನು ಪ್ರತಿಷ್ಠೆ ಮಾಡುವದೆಂದು ನಿಷ್ಕರ್ಷಿಸಿಯದೆ ಶ್ರೀ ಭಗವದನುಗ್ರಹದಿಂದಲೂ ಶ್ರೀ ದೇವಿಯ ಕೃಪಾಬಲದಿಂದಲೂ ನಡಿಯಲಿರುವ ಈ ಪ್ರತಿಷ್ಠಾ ಮಹೋತ್ಸವ ಸಮಾರಂಭಕ್ಕೆ ತಾವು ಸರ್ವರೂ ದಯಮಾಡಿಸಿ ಈ ಮಹೋತ್ಸವ ಕಾರ್ಯಗಳನ್ನು ಸಾಂಗಗೊಳಿಸಿ ಶ್ರೀ ದೇವಿಯ ಕರುಣಾ ಕಟಾಕ್ಷ ಪೂರಿತವಾದ ಶ್ರೀಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ ತನ್ಮೂಲಕ ನಮ್ಮಗಳನ್ನು ಕೃತಾರ್ಥರನ್ನಾಗಿ ಮಾಡಬೇಕಾಗಿ ಪ್ರಾರ್ಥನೆ ಎಂದು ಶ್ರೀ ನೀರೆ ತ್ರಿವಿಕ್ರಮನಾಯಕ, ಪುಟ್ಟ ಸೋಮನಾಯಕ, ವಗೈರೆ ಕಾರ್ಯನಿರ್ವಾಹಕರು ತಿಳಿಸುತ್ತಾರೆ

ಹರಿಜನ ಲೇಬರ್ ಲೀಗ್- ಈ ಸಂಘದ ಪರವಾಗಿ ಸದ್ಯದಲ್ಲಿಯೇ ತೆರೆಯಬೇಕೆಂದಿರುವ ಕೈಗಾರಿಕೆಗೆ ಬಡ ಹರಿಜನರಿಗೋಸ್ಕರವಾಗಿ ಪ್ರತಿಯೊಬ್ಬರೂ ತಮ್ಮಿಂದ ಕೂಡಿದ ಸಹಾಯಮಾಡಬೇಕಾಗಿ ವಿನಂತಿ

ಈ ಕಾರ್ಯಕ್ಕೆ ಬೇಕಾಗಿ, ಧನ ಸಂಗ್ರಹಿಸಲಿಕ್ಕೆ ಸಂಘದ ಮೆಂಬರರು ಸಂಪೂರ್ಣ ಅಧಿಕಾರವನ್ನು ಸಂಘದ ಕಾರ್ಯದರ್ಶಿಯ ವರೆಗೆ ಮಾತ್ರ ಬಿಟ್ಟುಕೊಟ್ಟಿರುತ್ತೇವೆ ಮತ್ತು ಯಾವನೊಬ್ಬ ವ್ಯಕ್ತಿಗೂ ಬಿಟ್ಟುಕೊಡಲಿಲ್ಲ ಶ್ರೀ| ಕೆ| ಈಶ್ವರನವರು ಬರುವ ವಾರದಿಂದ ಇದೇ ಪೇಟೆಯಲ್ಲಿ ತಿರುಗಾಡುತ್ತಿರುವರೆಂದು ತಿಳಿಸುತ್ತಾರೆ

THE

CANARA INDUSTRIAL & BANKING SYNDICATE LTD.,

(Incorporated in British India Liability of Shareholders Limited)

Head Office, UDIPI S India.

Estd] **[1925**

STATEMENT OF AFFAIRS AS ON 31ST DECEMBER 1941

Liabilities

	Rs	As	Ps
Paid up Capital	6,10,230	0	0
Reserve Funds	2,10,000	0	0
Deposits	[illegible],82,235	7	7
Due to banks	[illegible],95,329	1	1
Bills for collection	5,63,515	0	10
Sundries including branch adjustments	4,29,831	11	[illegible]
Net Profits for the Year including balance carried forward	52,118	15	9
Total Rs	**38,46,563**	**7**	**8**

Assets

	Rs	As	Ps
Cash on hand and with Bankers	[illegible],92,149	12	10
Investments on Govt Securities	11,51,167	15	[illegible]
Investments on shares of other Banks & Companies	1,00,331	8	0
Fully Secured Advances	11,82,290	0	6
Other Advances, Bills discounted etc	11,87,608	4	[illegible]
Landed properties etc, Office premises, Safes Furniture & Fittings	3,24,071	14	0
Bills for collection (as per contra)	5,63,515	0	10
Sundries etc	1,12,292	15	11
Total Rs	**38,46,563**	**7**	**8**

'Mukund Nivas'
Udipi S. K.
29th January, 1942

T M A Pai,
Managing Director

ಜರ್ಮನಿಯ ಮೇಲೆ ಧಾಳಿ ನಡಿಸುವ 4 ಮಾರ್ಗಗಳು.

ಆಕ್ಸಿಸ್ ರಾಷ್ಟ್ರಗಳಿಗೆ ಇನ್ನೂ ದೀರ್ಘ ಕಾಲದ ಯುದ್ಧ ನಡಿಸಲು ಸಾಧ್ಯವಿಲ್ಲ. ಜರ್ಮನ್ ಸೈನಿಕರೂ, ಜನಾಂಗವೂ ಯುದ್ಧಗ ಕುರಿತೀಗ ಬೇಸತ್ತಿರುವರೆಂದು ತಿಳಿದುಬರುತ್ತದೆ ಇದು ಯುದ್ಧದ ಕೊನೆಯ ವರ್ಷವೆಂದು ಪ್ರತಿ ವರ್ಷವೂ ಹಿಟ್ಲರರು ಹೇಳುತ್ತಾ ಬಂದಿರುತ್ತಾರೆ. ಆದುದರಿಂದ ಈ ವರ್ಷ ಅವರಿಗದನ್ನು ಕೊನೆಗೊಳಿಸದೆ ನಿರ್ವಾಹವೇ ಇಲ್ಲ. ಆ ಕಾರಣದಿಂದಲೇ ಅವರು, ವಸಂತ ಋತುವಿನಲ್ಲಿ ರಷ್ಯದ ಮೇಲೆ ಪ್ರಚಂಡ ಧಾಳಿ ನಡಿಸಿ ಅದನ್ನು ಸದೆಬಡಿದು ಯುದ್ಧವನ್ನು ಹೆಚ್ಚಿನ ಮಟ್ಟಿಗೆ ಕೊನೆಗೊಳಿಸಲು ಮುಂದಾಗಿರುತ್ತಾರೆ. ಅದಕ್ಕಾಗಿ ಒಳಗಿಂದೊಳಗೆ ಭಾರಿ ಸಿದ್ಧತೆ ಮಾಡುತ್ತಿದ್ದಾರೆ ಆದುದರಿಂದ ಈ ವರ್ಷವು ಸಂದಿಗ್ಧವಾದುದಿದೆ. ಹಿಟ್ಲರರ ಭವಿಷ್ಯವು ಈ ವರ್ಷದ ಯುದ್ಧದ ಪರಿಣಾಮದ ಮೇಲೆ ಹೊಂದಿಕೊಂಡಿದೆ. ಅವರು ಜೀವನ್ಮರಣ ಹೋರಾಟ ನಡೆಸುವರೆಂಬುದರಲ್ಲಿ ಸಂದೇಹವೇ ಇಲ್ಲ

ಇಷ್ಟರ ವರೆಗೆ ಮಿತ್ರರಾಷ್ಟ್ರಗಳು, ರಕ್ಷಣಾ ಯುದ್ಧದಲ್ಲೇ ನಿರತವಾಗಿ, ವೈರಿಯ ಮೇಲೇರಿ ಹೋಗುವ ಸಾಹಸದ ಧಾಳಿಕಾರ ಹೋರಾಟವನ್ನೇನೂ ನಡಿಸಿರುವುದಿಲ್ಲ. ಇಂದಿನ ಯುದ್ಧ ವಿಧಾನದಲ್ಲಿ, ಸಾಹಸಪರ ಧಾಳಿಕಾರ ಯುದ್ಧದಿಂದಲೇ ಹೆಚ್ಚಿನ ಅನುಕೂಲತೆಗಳಿವೆಯೆಂಬುದೀಗ ಸಿದ್ಧವಾಗಿದೆ. ಮಿತ್ರ ರಾಷ್ಟ್ರಗಳೂ, 1943-41 ನೇ ವರ್ಷಗಳ ತಯಾರಿಯ ಕಾರ್ಯಕ್ರಮವನ್ನು ಕೈಕೊಂಡು ಈ ಸಂದಿಗ್ಧ ವರ್ಷದಲ್ಲಿ ಬಣ್ಣಾಗಿರುವುದು ಅಸಾಹುತಕರವೆಂಬ ಅಭಿಮತವೀಗ ಬಲಗೊಳ್ಳುತ್ತಿದೆ ಆದುದರಿಂದ ಮಿತ್ರ ರಾಷ್ಟ್ರಗಳೂ, ಜರ್ಮನಿಯ ಮೇಲೆ ಧಾಳಿ ನಡಿಸುವ ಕುರಿತೀಗ ಒಳಗಿಂದೊಳಗೆ ಆಲೋಚನೆಮಾಡುತ್ತಿದ್ದುವಂತಿದೆ. ಜರ್ಮನಿಯ ಮೇಲೆ ಯಾವ ಮಾರ್ಗವಾಗಿ ಧಾಳಿ ನಡಸಬಹುದೆಂಬ ಪರಿಶೀಲನೆಯು ಈ ಸಂದರ್ಭದಲ್ಲಿ ಅಪ್ರಾಸಂಗಿಕವಾಗಲಾರದು.

ಹಿಟ್ಲರರು ಇಂಗ್ಲೆಂಡಿನ ಮೇಲೆ ಧಾಳಿ ನಡಿಸುವರೆಂಬುದು ಕೇವಲ ಬರಿದೊಂದು ಹೊಗೆ ಪರದೆಯಾಗಿದೆ. ಅದಕ್ಕೆ ಬೇಕಾದ ನೌಕಾ ಸಿದ್ಧತೆಯು ಅವರಲ್ಲಿರುವುದಿಲ್ಲ ಮಾತ್ರವಲ್ಲದೆ ಅಂತಹ ಆತ್ಮಘಾತುಕ ಸಾಹಸ ಮಾಡುವಷ್ಟರ ಅವಿವೇಕ ಅವರಲ್ಲಿ. ಆದುದರಿಂದ ಬ್ರಿಟನು ಮಿಲ್ಯಗಟ್ಲೆ ಸುಸಂಘಟಿತ ಸೇನೆ ಮತ್ತು ಅಪಾರ ಯುದ್ಧೋ

ಆಮಂತ್ರಣ ಪತ್ರಿಕೆಗಳು.

ಮದುವೆ, ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು.

ನ ವ ಯು ಗ ಪ್ರೆಸ್,

ಕೋಳದ ಪೇಟೆ ರಸ್ತೆ,

ಉ ಡು ಪಿ.

1942ನೇ ವರ್ಷವು ಸಂದಿಗ್ಧವಾದುದಿದೆ.

ಜರ್ಮನಿಯು ಇಂಗ್ಲೆಂಡಿನ ಮೇಲೆ ಧಾಳಿ ನಡಿಸಬಲ್ಲವಾದರೆ ಇಂಗ್ಲೆಂಡಿಗೂ ಅದೀಗ ಸಾಧ್ಯವಿದೆ.

ಪಕರಣಗಳನ್ನು ಇಂಗ್ಲೆಂಡಿನಲ್ಲಿ ಅಣಿಮಾಡಿಟ್ಟು ವೈರಿಯ ಧಾಳಿಗಾಗಿ ಕಾಯ್ದುಕೊಂಡಿರುವುದು ಯುಕ್ತವಲ್ಲ. ಇಂತಹ ಮೆಜಿನೋ ಕೋಟೆಯ ಮನೋವೃತ್ತಿಯಿಂದ ದೊಡ್ಡ ಅನಾಹುತವಾಗಬಹುದು. ಮಿತ್ರ ರಾಷ್ಟ್ರಗಳು 4 ಮಾರ್ಗಗಳ ಮೂಲಕ ಜರ್ಮನಿಯ ಮೇಲೆ ಧಾಳಿ ಇಡಬಹುದು. ಆದರೆ ಅವುಗಳವುದೂ ಸುಲಭವಾಗಿರದೆ ಬಹಳ ಕಷ್ಟಕರವಾಗಿವೆ. ಆದರೂ ಅವುಗಳಲ್ಲಿ ಯಾವುದಾದರೊಂದು ಮಾರ್ಗದ ಮೂಲಕ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೇರಿ ಹೋಗಲೇ ಬೇಕು. (1) ಉತ್ತರದಲ್ಲಿ ಡೆನ್ಮಾರ್ಕಿನ ಮೂಲಕ (2) ಗ್ರೀಸಿನ ಸಲೋನಿಕದ ಮಾರ್ಗವಾಗಿ (3) ಇಟಲಿಯ ಮೇಲೇರಿ ಹೋಗಿ (4) ಹೊಲೆಂಡ್ ಮತ್ತು ಬೆಲ್‌ಜಿಯಮುಗಳ ಮುಖಾಂತರ

ತನ್ನ ಮೇಲೆ ಧಾಳಿ ನಡಿಸಲ್ಪಡದಂತೆ ಜರ್ಮನಿಯು ಹೆಚ್ಚಿನ ಏರ್ಪಾಡುಗಳನ್ನು ಮಾಡಿಕೊಂಡಿದೆ. ತನ್ನ ಗಡಿಗಿಂತ ಬಹಳ ದೂರದ ರಾಜ್ಯಗಳನ್ನೆಲ್ಲಾ ಗೆದ್ದು ಮಾದಾಕ್ರಾಂತವನ್ನಾಗಿ ಮಾಡಿ ಸಂದುಕಟ್ಟಿನ ಹಲವು ಸ್ಥಳಗಳಲ್ಲಿ ಕೋಟೆಕೊತ್ತಳಗಳನ್ನು ಕಟ್ಟಿ ಸುಭದ್ರಗೊಳಿಸಿರುತ್ತದೆ. ಗೆದ್ದ ರಾಷ್ಟ್ರಗಳ ಸಮುದ್ರ ಕರಾವಳಿಯ ಬಂದರುಗಳಲ್ಲೆಲ್ಲಾ ಜಲತೋಪುಗಳನ್ನು ಹರಡಿದೆ. ಇಂತಹ ಪರಿಸ್ಥಿತಿಯಲ್ಲಿ ಜರ್ಮನಿಯ ಮೇಲೆ ಧಾಳಿ ನಡಿಸುವುದು ಅಸಾಧ್ಯವೆನಿಸುವುದು. ಆದರೆ ಸಾಹಸದಿಂದ ಸಾಧಿಸಿಕೊಳ್ಳಲಸದಳವಾದ ಅಸಾಧ್ಯ ಕೆಲಸವಾದರೂ ಯಾವುದು?

ಹಿಟ್ಲರರು ಗೆದ್ದಿರುವ ರಾಷ್ಟ್ರಗಳ ಜನತೆಯಲ್ಲಿ ತೀವ್ರ ಅತೃಪ್ತಿಯು ನೆಲೆಗೊಂಡಿರುವುದೆಂಬುದು ಮಿತ್ರ ರಾಷ್ಟ್ರಗಳಿಗೊಂದು ಅನುಕೂಲ ಪರಿಸ್ಥಿತಿ. ಆದರೆ ಆರಂಭದಲ್ಲೀಗ ಅದರಿಂದ ಹೆಚ್ಚಿನ ಪ್ರಯೋಜನವೇನೂ ದೊರೆಯಲಾರದಾದರೂ, ಮಿತ್ರ ರಾಷ್ಟ್ರಗಳಿಗೆ, ಯುರೋಪಿನ ಯಾವುದಾದರೊಂದು ರಾಜ್ಯದಲ್ಲಿ ಕಾಲೂರಲು ಸಾಧ್ಯವಾಯಿತೆಂದರೆ, ಈ ಜನತೆಯು ಎಲ್ಲೆಲ್ಲಿಯೂ ಬಂಡಾಯವೆಬ್ಬಿಸಲು ಮುಂದಾಗದಿರಲಾರದು. ಡಚ್, ಬೆಲ್‌ಜಿಯನ್, ಗ್ರೀಸ್, ಫ್ರೆಂಚ್, ಯುಗಸ್ಲಾವರೇ ಮೊದಲಾದವರನ್ನು ಇಂದಿನ ದೈನ್ಯಾವಸ್ಥೆಯಲ್ಲಿ ಜರ್ಮನಿಗೆ ಸಂಪೂರ್ಣ ಅಣಗಿಸಲು ಅಸಾಧ್ಯವಾಗಿರುವಾಗ, ಮಿತ್ರ ರಾಷ್ಟ್ರಗಳ ಜಯಶೀಲ ಧಾಳಿಯ ಸಂದರ್ಭದಲ್ಲಂತೂ ಸಾಧ್ಯವೇ ಇಲ್ಲ. ಈಗ ಹೊಗೆಯಾಡುತ್ತಿರುವ ಸ್ವಾತಂತ್ರ್ಯ ಜ್ವಾಲೆಯು ಆಗ ಒಮ್ಮೆಯೇ ಜ್ವಲಿಸದಿರಲಾರದು. ಆ ಸಂದರ್ಭದಲ್ಲಿ ಜರ್ಮನಿಯೂ ಕಂಗೆಡುವಂತಾಗಿ ಮಿತ್ರ ರಾಷ್ಟ್ರಗಳಿಗೆ ಅದರಿಂದ ಹೆಚ್ಚಿನ ಪ್ರಯೋಜನವಾಗಬಹುದು.

ಇಟಲಿಯ ಪರಿಸ್ಥಿತಿಯು ಭಿನ್ನವಾದುದು. ತೋರಿಕೆಗೆ ಅದು ಜರ್ಮನಿಯ ಮಿತ್ರ ರಾಷ್ಟ್ರವಾಗಿದ. ಆದರೆ ಇತ್ತಿತ್ತಲಾಗಿ ಅದರ ಪರಿಸ್ಥಿತಿಯು ಸಂಪೂರ್ಣ ಬದಲಾವಣೆ ಹೊಂದಿದೆ. ಈದೀಗ ಜರ್ಮನಿಯ ಒಂದು ಅಧೀನ ರಾಷ್ಟ್ರದಂತಾಗಿದೆ. ಈ ದೈನ್ಯಾವಸ್ಥೆಯು ಅನೇಕ ಮಂದಿ ಇಟಲಿಯನ ಸ್ವಾಭಿಮಾನಿಗಳಿಗೆ ಅಸಹನೀಯವಾಗಿರುತ್ತದೆ; ಇಟಲಿಯಲ್ಲಿ ಫೆಸಿಸ್ಟ ಪಕ್ಷವು ಇನ್ನೂ 'ಅಧಿಕಾರದಲ್ಲಿರುವದಾದರೂ ಆ ಪಕ್ಷ ಜನತಾ ಬೆಂಬಲವಿರುವುದಿಲ್ಲ. ಉತ್ತರ ಇಟಲಿಯಲ್ಲಿ ಅನೇಕರು ಜರ್ಮನರನ್ನು ದ್ವೇಷಿಸುತ್ತಾರೆ. ಬ್ರಿಟನಿನೊಂದಿಗೆ ಹೋರಾಡಲವರು ವಿರೋಧರಿದ್ದಾರೆ. ಬ್ರೆನ್ನರ್ ಕಣಿವೆಯೇ ಇಟಲಿಯಿಂದ ಜರ್ಮನಿಗೆ ಹೋಗುವ ಮಹಾದ್ವಾರ 793ರಿಂದ 1402ನೇ ಇಸ್ವಿಯ ವರೆಗೆ ಈ ಪ್ರದೇಶದಲ್ಲಿ ಹಲವು ಭೀಷಣ ಯುದ್ಧಗಳು ನಡೆದಿವೆ. 66 ಸಲ ಬ್ರೆನ್ನರ್ ಕಣಿವೆಯು ಅತ್ತಿತ್ತ ದಾಟಲ್ಪಟ್ಟಿದ. ಈ ಕಣಿವೆಯ ರೈಲು ರಸ್ತೆಯು 174½ ಮೈಲುದ್ದವಿದೆ. ಕಣಿವೆಯು 4495 ಅಡಿ ಎತ್ತರವಿದೆ. ಅದರ ತುದಿಯಿಂದ ಜರ್ಮನಿಯ ಇನ್ಸ್‌ಬ್ರುಕಿಗೆ 25 ಮೈಲು ದೂರವಿದೆ. ಇಟಲಿಯ ಮೇಲೆ ಧಾಳಿ ನಡಿಸಿ ಬ್ರೆನ್ನರ್ ಕಣಿವೆಯನ್ನು ದಾಟಿ ಮುಂದೊತ್ತಿದರೆ ಹಿಂದಿನ ಇತಿಹಾಸವು ಪುನರಾವರ್ತಿತವಾಗುವುದು.

ಗ್ರೀಸಿನ ಸಲೋನಿಕವನ್ನು ಮಿತ್ರ ರಾಷ್ಟ್ರಗಳು ಕಳಕೊಂಡುದು ದೊಡ್ಡ ನಷ್ಟವಾಯಿತು. ಅದನ್ನು ಪುನಃ ಸುಲಭವಾಗಿ ಗೆಲ್ಲಲು ಸಾಧ್ಯವಿಲ್ಲ. ಜರ್ಮನಿಯು ಅದನ್ನು ಇಷ್ಟರಲ್ಲೇ ಭದ್ರಗೊಳಿಸಿರಬಹುದು ಆದರೂ ಸಲೋನಿಕದ ಮೇಲೆ ಧಾಳಿ ಇಟ್ಟು ಜರ್ಮನಿಯ ಎಲ್ಲೆಯೊಳಗೆ ಮುನ್ನುಗ್ಗಬಹುದೆಂದು ಸೂಚಿಸಲಾಗಿದೆ. ಕಳೆದ ಯುದ್ಧದಲ್ಲಿ, ಹಲವು ಅಪಜಯಗಳ ನಂತರ ಮಿತ್ರ ರಾಷ್ಟ್ರಗಳು ಮುಂದೊತ್ತಿ ಜರ್ಮನಿಯ ಸಹಾಯಕ ರಾಷ್ಟ್ರವಾದ ಬಲ್ಗೇರಿಯವನ್ನು ಗೆದ್ದು ಮುಂದೊತ್ತಿದುದು ಸಲೋನಿಕದ ಮಾರ್ಗವಾಗಿಯೇ. ಇದರಿಂದ ಹಲವು ರಾಷ್ಟ್ರಗಳು ಶರಣಾಗತವಾಗುವಂತಾಗಿ ಕಟ್ಟ ಕಡೆಗೆ ಜರ್ಮನಿಯ ಪತನಕ್ಕೆ ಪ್ರಾಮುಖ್ಯವಾದೊಂದು ಕಾರಣವಾಯಿತು. ಡೆನ್ಮಾರ್ಕಿನ ಮೂಲಕ ಜರ್ಮನಿಯ ಮೇಲೆ ಧಾಳಿ ನಡಿಸುವುದು ಕೂಡಾ ಕಷ್ಟ. ಅಲ್ಲಿ ನೆದರ್ಲೆಂಡ್ ಮತ್ತು ಬಾಲ್ಕನ್ನಿನಷ್ಟು ಅತೃಪ್ತಿಯು ಹೊಗೆಯಾಡುತ್ತಿರುವುದಿಲ್ಲ. ಆದರೆ ಸಮುದ್ರ ಮೂಲಕ ಡೆನ್ಮಾರ್ಕು ಇಂಗ್ಲೆಂಡಿಗೆ ಬಹಳ ಸಮೀಪವಿದೆ. ಮತ್ತು ಆ ಮೂಲಕ ಜರ್ಮನಿಯ ಮಧ್ಯ ಪ್ರದೇಶಕ್ಕೇನೇ ಏರಿ ಹೋಗಬಹುದು.

ಆದರೆ ಫ್ರಾಂಸ್ ಮತ್ತು ಬೆಲ್‌ಜಿಯಮಿನ ಮಾರ್ಗವು ಅತ್ಯುತ್ತಮವಾದುದೆಂದು ಸರ್ವ ಸಾಮಾನ್ಯ ಅಭಿಪ್ರಾಯವಿರುವಂತಿದೆ. ಇಂಗ್ಲೆಂಡಿನಿಂದ ಈ ದೇಶಗಳಿಗೆ ಸುಮಾರು 120 ಮೈಲು ದೂರವಿದೆ. ಇಂದೀಗ ಇಂಗ್ಲೆಂಡಿನ ಮೇಲೆ ಜರ್ಮನಿಗೆ ಧಾಳಿ ನಡಿಸುವುದಕ್ಕಿಂತಲೂ ಹೆಚ್ಚಿನ ಅನುಕೂಲತೆಯು ಮಿತ್ರ ರಾಷ್ಟ್ರಗಳಿಗಿರುವುದೆಂದು ಹೇಳಬಹುದು. ಜರ್ಮನಿಯು ಇಂದು ರಷ್ಯದ ಯುದ್ಧದಲ್ಲಿ ಸಿಕ್ಕಿಬಿದ್ದಿರುವುದು. ಅದರಲ್ಲದು ಅತಿ ಹೆಚ್ಚಿನ ಸೇನೆಯನ್ನು ಪಯೋಗಿಸಬೇಕಾಗಿ ಹೆಚ್ಚಿನ ನಷ್ಟಹೊಂದಿರುವುದು. ಮಿತ್ರರಾಷ್ಟ್ರಗಳಿಗೆ ಅತಿ ಹೆಚ್ಚಿನ ನೌಕಾ ಪಡೆಯ ಅನುಕೂಲತೆ ಇರುವುದು. ವಿಮಾನ ಪಡೆಯಲ್ಲಿಯೂ ಅವೀಗ ಜರ್ಮನಿಗಿಂತ ಹಿಂದಿಲ್ಲ. ಮಿಲ್ಯಗಟ್ಲೆ ಬ್ರಿಟಿಷ್ ಸೇನೆಯು ದೀರ್ಘ ಕಾಲದ ತರಬೇತಿಯಿಂದ ಸಂಘಟಿತವಾಗಿರುತ್ತದೆ. ಯಾಂತ್ರಿಕ ಯುದ್ಧೋಪಕರಣಗಳ ಸಂಗ್ರಹವು ಅತುಲವಾಗಿ ಹೆಚ್ಚುತ್ತಿದೆ. ಆದುದರಿಂದ ಈ ಸಂಧಿಕಾಲದಲ್ಲಿ ಮಿತ್ರರಾಷ್ಟ್ರಗಳು ಜರ್ಮನಿಯ ಮೇಲೇರಿ ಹೋಗುವ ಸಾಹಸ ಮಾಡಿದರೆ ಹಿಟ್ಲರನ ಪ್ರಚಂಡ ಧಾಳಿಯ ಹಾಯಿಯ ಗಾಳಿಯುನ್ನೇ ತಿರುಗಿಸಿಬಿಡುವಂತಾಗುವುದು.

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,

ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ.

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ. ಮೂಲ್ಕಿ ಮಂಜಯ್ಯ ಭಂಡಾರಿಗಳವರು ಇದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿ ಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು.	ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್. ಚೇಯರ್‌ಮೆನ್

ಸಮಾಚಾರ ಸಂಗ್ರಹ

ಹೆಸ್ಸರ ಪುಸ್ತಕ ಪ್ರಕಟಣೆ

ಹೆಸ್ಸರು ಬರೆದಿರುವ ಪುಸ್ತಕವೊಂದನ್ನು ಬ್ರಿಟಿಷ್ ಸರಕಾರವು ಪ್ರಕಟಿಸುವ ನಿರ್ಧಾರ ಮಾಡಿರುವುದು. ಇದರಿಂದ ನಾಝಿಗಳು ತಳಮಳಗೊಂಡಂತಿರುವುದು. ಹೆಸ್ಸರ ಸ್ಮರಣಾಶಕ್ತಿಯು ವಿಚಿತ್ರವಿರುವುದು. ಗತ ಸ್ಮೃತಿಯನ್ನು ಬರೆಯುವುದರಲ್ಲವರಿಗೆ ವಿಶೇಷ ಆಸಕ್ತಿ. ಹೆಸ್ಸರು ಇಂಗ್ಲೆಂಡಿನಲ್ಲಿ ಬಂದಿಯಾದಂದಿನಿಂದ ದೊಡ್ಡ ಪುಸ್ತಕವೊಂದನ್ನು ಬರೆಯುವುದರಲ್ಲಿ ನಿರತರಾಗಿರುವರು. ಈ ಪುಸ್ತಕವು ಪ್ರಕಟಿಸಲ್ಪಟ್ಟರೆ, ಅದು ಮಿತ್ರ ರಾಷ್ಟ್ರಗಳಲ್ಲಿ ಹಿಟ್ಲರರ ಆತ್ಮವೃತ್ತಕ್ಕಿಂತಲೂ ಹೆಚ್ಚಾಗಿ ವಿಕ್ರಯಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ.

ಮಾತಾಡುವಾಗಲೇ ಸ್ಫೋಟಿಸುವ ತೋಟೆಗಳು.

ಜರ್ಮನರು ಗೆದ್ದಿರುವ ಪ್ರದೇಶಗಳಲ್ಲಿ ಅವರ ಜೀವನವನ್ನು, ವಿಚಿತ್ರ ವಿಧಾನಗಳಿಂದ ರಷ್ಯನರು ಅಸಹನೀಯಗೊಳಿಸುತ್ತಿದ್ದಾರೆ. ಗಟ್ಟಿ ಮಾತಾಡುವಾಗಲೇ ಸ್ಫೋಟವಾಗುವ ತೋಟೆಗಳಿಂದಾಗಿ ಜರ್ಮನರು ಮೆಲ್ಲಗೆ ಮಾತಾಡಬೇಕಾಗಿದೆ. ಕೇವಲ ಬಾಗಿಲು ತೆರೆದ ಮಾತ್ರಕ್ಕೆ, ಇಲ್ಲವೆ ಬಾಗಿಲಿನ ಕೈಯನ್ನು ತಿರುಗಿಸಿದಾಕ್ಷಣ ಅಥವಾ ಬೆಂಕಿ ಹೊತ್ತಿಸಿದ ಕೂಡಲೆ ಸ್ಫೋಟವಾಗುವ ತೋಟೆಗಳಿರುತ್ತವೆ. ಇದರಿಂದಾಗಿ ಜರ್ಮನರು ಬೆದರಿ ಹೋಗಿರುತ್ತಾರೆ. ಅನಿವಾರ್ಯವಾಗಿ ಹೊರತು ಗೆದ್ದ ಪಟ್ಟಣಗಳಿಗವರು ಪ್ರವೇಶಿಸುವುದೇ ಇಲ್ಲ.

13 ವರ್ಷದ ವೀರ ರಷ್ಯನ ಹುಡುಗಿ.

ಮನ್ಯ ಎಂಬ 13 ವರ್ಷದ ಹುಡುಗಿಯ ಹಳ್ಳಿಯನ್ನು ಜರ್ಮನರು ಗೆದ್ದಾಗ ಅವಳ ತಂದೆಯು ತಲೆತಪ್ಪಿಸಿಕೊಂಡು ಹೋಗಿ ಗೊರಿಲ್ಲ ಪಂಗಡಕ್ಕೆ ಸೇರಿದನು. ತಾಯಿಯು ಮನ್ಯಳೆದುರಲ್ಲೇ ಫಾಶಿ ಕಂಭಕ್ಕೇರಿಸಲ್ಪಟ್ಟಳು. ಜರ್ಮನ್ ಸೇನಾನಾಯಕನು ಮನ್ಯಳಿಗೆ ತಿನ್ನಲು ಮಿಠಾಯಿ ಕೊಟ್ಟು, ಬೆದರಬೇಡೆಂದು ಹೇಳಿ, ಅವಳ ತಂದೆ ಎಲ್ಲಿರುವನೆಂದು ತಿಳಿಸಬೇಕೆಂದು ಕೇಳಿದನು. ಮನ್ಯಳು ಸೈನ್ಯಾಧಿಕಾರಿಯ ಬಳಿ ಕೂತು, ಬರೆಯುವಳೋ ಎಂಬಂತೆ ಪೆನ್ಸಿಲನ್ನು ಕೈಯಲ್ಲಿ ಅಲ್ಲಾಡಿಸುತ್ತಾ ಫಕ್ಕನೆ ಹತ್ತಿರದ ಚೂರಿ ತೆಗೆದು ಅವನನ್ನು ತಿವಿದಳು. ಇದರ ಪರಿಣಾಮವಾಗಿ ಅವಳು ಗಲ್ಲಗೇರಿಸಲ್ಪಟ್ಟಳು. ರಷ್ಯನರು ಈ ಹಳ್ಳಿಯನ್ನು ಪುನಹ ಗೆದ್ದಾಗ, ಮನ್ಯಳ ಕತೆಯನ್ನು ಕೇಳಿದರು. ಅವಳಿಗಾಗಿ ಆ ಹಳ್ಳಿಯಲ್ಲೊಂದು ಸ್ಮಾರಕವನ್ನೇರ್ಪಡಿಸಿದರು.

ಗುಂಡುಸೂಜಿಯಷ್ಟು ಹಗುರ ಗುಂಡುಗಳು.

ಜಾಪಾನರ ಯುದ್ಧೋಪಕರಣಗಳೆಲ್ಲಾ ಬಹಳ ಹಗುರವಾಗಿರುವುದರಿಂದಲೇ ಮಲಯದಲ್ಲಿ ಅವರು ಅಷ್ಟು ವೇಗ ಮುಂದೊತ್ತಲು ಕಾರಣವೆಂದು ನಂಬಲಾಗಿದೆ. ಅವರು ಗುಂಡುಸೂಜಿಯಷ್ಟು ಹಗುರವಾದ ವಿಚಿತ್ರ ಗುಂಡುಗಳನ್ನು ಹಾರಿಸುತ್ತಾರೆಂದು ತಿಳಿದುಬಂದಿದೆ. ಅವರ ಟ್ಯಾಂಕು ತೋಪುಗಳೆಲ್ಲಾ ಅತ್ಯಂತ ಹಗುರವಾದವು. ತಮಗೆ ಬೇಕಾದ ಆಹಾರ ಸಾಮಾಗ್ರಿಗಳನ್ನೂ ಅವರು ಬುತ್ತಿ ಕಟ್ಟಿಕೊಂಡು ಹೋಗುತ್ತಾರೆ ಎಷ್ಟು ಮಂದಿಯಾದರೂ ಕೊಲ್ಲಲ್ಪಡಲವರು ಸಿದ್ಧರೇ ಇದ್ದಾರೆ 200 ಮಂದಿಯಲ್ಲಿ 150 ಮಂದಿ ಕೊಲ್ಲಲ್ಪಟ್ಟರೂ ಅವರು ಗಣ್ಯಮಾಡುವುದಿಲ್ಲ.

ಕಲ್ಕತ್ತದ ಸಿನೆಮ ನಟನಟಿಯರು ಬೊಂಬಾಯಿಗೆ?

ಕಲ್ಕತ್ತದ ಪ್ರಮುಖ ಸಿನೆಮ ನಟನಟಿಯರು ಮತ್ತು ದಿಗ್ದರ್ಶಕರು ಆ ಪಟ್ಟಣ ಬಿಟ್ಟು ಬೊಂಬಾಯಿಗೆ ಬರುವರೆಂಬ ಸುದ್ದಿಯುಂಟಾಗಿದೆ. ಶ್ರೀ. ಪಹರಿ ಸನ್ಯಾಲರು ಚಿತ್ರ ಪಿಕ್ಚರ್‍ಸಿಗೆ ಸೇರಿದ್ದಾರೆ. ಶ್ರೀಗಳಾದ ದೇವಕಿ ಭೋಸ್, ಮಧು ಭೋಸ್ ಮತ್ತು ಸಾಧನಾ ಭೋಸರು ಲಕ್ಷ್ಮಿ ಪ್ರೊಡಕ್ಷನ್ಸಿಗೆ ಸೇರಿರುತ್ತಾರೆ. ಶ್ರೀಮತಿ ಪ್ರತಿಮಾ ದಾಸ ಗುಪ್ತರು ಮೊದಲೇ ಬೊಂಬಾಯಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಗ್ರಗಣ್ಯ ನಟನಟಿಯರಾದ ಸೈಗಲ್ ಮತ್ತು ಕನನ್ ಬಾಲರನ್ನು ರಂಜಿತ್‌ನವರು ಕರೆದಿರುವರೆಂದು ಸುದ್ದಿಯುಂಟಾಗಿದೆ. ಹೀಗಾದ ಪಕ್ಷದಲ್ಲಿ ನ್ಯೂ ಥಿಯೇಟರ್‍ಸಿನ ಗತಿಯೇನೋ ತಿಳಿಯದು!

ಮಿಲ್ಯಾಂತರ ಚೀನೀ ಕೆಲಸಗಾರರು ಮಂಚೂರಿಯಕ್ಕೆ.

ಉತ್ತರ ಚೈನದ 10 ಮಿಲ್ಯಕ್ಕಿಂತಲೂ ಮಿಕ್ಕಿದ ಚೀನೀ ಕೆಲಸಗಾರರು ತಮ್ಮ ಕುಟುಂಬ ಸಮೇತ ಮಂಚೂರಿಯಕ್ಕೆ ಹೋಗಿ ವಾಸಿಸಿ ಅಲ್ಲಿ ಜಾಪಾನ ಕೈಗಾರಿಕೋದ್ಯಮಗಳಲ್ಲಿ ದುಡಿಯುವಂತೆ ಜಾಪಾನರು ನಿರ್ಬಂಧಿಸಿರುತ್ತಾರೆಂದು ಚೀನೀಯರ ಆಪಾದು. ಚೀನೀ ಕೆಲಸಗಾರರನ್ನು ಕಡ್ಡಾಯವಾಗಿ ಸೇರಿಸಲಾಗುತ್ತಿದೆಯೆಂಬುದನ್ನು ಜಾಪಾನರೇ ಒಪ್ಪಿರುತ್ತಾರೆ. ಉತ್ತರ ಚೈನದಲ್ಲಿ ಜೀವಿತ ಸ್ಥಿತಿಯು ಬಹಳ ಕೆಟ್ಟುಹೋಗಿದೆ. ಟೀನ್‌ಸ್ಟ್ರೈನ್ ಒಂದೇ ಪಟ್ಟಣದಲ್ಲಿ ಸುಮಾರು ಒಂದು ಲಕ್ಷ ಮಂದಿ ನಿರ್ಗತಿಕರಿರುತ್ತಾರೆ

ಹೊಂಕೋಂಗಿನ ಸೆರೆಯಾಳುಗಳು

ಫೆಬ್ರವರಿ ಅಂತ್ಯದಲ್ಲಿ ಹೋಂಕೋಂಗಿನಲ್ಲಿ 5072 ಬ್ರಿಟಿಷ್, 1689 ಕೆನಾಡಿಯನ್ಸ್, 3829 ಇಂಡಿಯನ್ಸ್ ಮತ್ತು 357ಮಂದಿ ಇತರರು ಇದ್ದರೆಂದು ಜಾಪಾನರು ಪ್ರಕಟಿಸಿರುತ್ತಾರೆ ಈ ಸೆರೆಯಾಳುಗಳನ್ನವರು ಬರ್ಬರವಾಗಿ ಕಂಡು ಅಮಾನುಷ ಅತ್ಯಾಚಾರ ನಡೆಸಿರುವರೆಂದು ಬ್ರಿಟಿಷ್ ವಿದೇಶ ಮಂತ್ರಿ ಮಿ. ಎಡೆನರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ 50 ಮಂದಿ ಬ್ರಿಟಿಷ್ ಸೈನ್ಯಾಧಿಕಾರಿಗಳು ಮತ್ತು ಸೈನಿಕರನ್ನು ಕೈಕಾಲು ಕಟ್ಟಿ ತಿವಿದು ಕೊಲ್ಲಲಾಗಿವೆ. ಹೊಂಕೊಂಗ್ ಪತನವಾದ 10 ದಿನಗಳ ವರೆಗೆ ಗಾಯಗೊಂಡವರನ್ನು ಒಟ್ಟಾಗಿ ಸೇರಿಸುವ ಕೆಲಸ ನಡೆಯುತ್ತಿತ್ತು. ಶವಗಳನ್ನು ಹೂಳಲು ಅಪ್ಪಣೆ ದೊರೆಯುತ್ತಿದ್ದಿಲ್ಲ. ಏಷ್ಯಾನ ಮತ್ತು ಯುರೋಪಿಯಾನ ಸ್ತ್ರೀಯರ ಮೇಲೆಲ್ಲಾ ಜಾಪಾನ ಸೈನಿಕರು ಅಮಾನುಷ ಅತ್ಯಾಚಾರ ಮಾಡಿ ಕೊಲೆಮಾಡುತ್ತಿದ್ದರು. ಇಡೀ ಚೀನೀ ನಿವಾಸ ಪ್ರದೇಶವೇ ಸೂಳೆಗೇರಿಯಾಗಿ ಮಾಡಲ್ಪಟ್ಟಿತೆಂಬ ವಿಷಯಗಳನ್ನು ಎಡೆನರು ಅಧಿಕಾರಿಕವಾಗಿ ವಿದಿತಗೊಳಿಸಿರುವರು.

DIAMONDS! DIAMONDS!

K. R. K. SHET.

Opposite Govt College, Hampankatta MANGALORE

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!

ಉತ್ಕೃಷ್ಟ ತರಗತಿಯ ಜುನ್ನತ (First quality selected) ವಜ್ರಗಳು ... ದಮ್ಮಿನಿಂದ ಬರುವ ವಜ್ರಗಳು ... ಕೊಂಡು ಕೊಳ್ಳುವವರಿಗೆ ... ವಿಕ್ರಯಿಸಲ್ಪಡುತ್ತವೆ ... ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು

— ಮಕ್ಕಳನ್ನು ಹಡೆಯುವದು ಸಾಕೆ—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವಿಸಿದರೆ ... ಮಕ್ಕಳಾಗುವದಿಲ್ಲ ... ಸ್ತ್ರೀಯರ ಬಿಳಿಸೆರಗು ಪ್ರದರರೋಗ, ... ಯಾಗುವದಿಲ್ಲ ಈ ಔಷಧವನ್ನು ... ಮಧ್ಯಾಹ್ನಕ್ಕೆ ... ಸಂಜೆಗೆ ... ಬೇಕು. ಏಳು ದಿವಸ ಈ ಔಷಧವನ್ನು ... ಸೇವಿಸಬೇಕು

ಪಥ್ಯ.— ಹರವೀಸಲ್ಲ ಬಿಡಬೇಕು ... ದಿವಸ ... ಔಷಧದ ಕಿಮ್ಮತ್ತು ರೂಪಾಯಿ. ...

ಮಾಲಿಕರು — ಹಾಲಪ್ಪಾ ಫಕೀರಪ್ಪಾ ಬಾಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ ... ಲಿಂಗಪ್ಪ ಧಾರವಾಡದ, ವಿಜಾಪುರ ... ಗೇರಿ — ದಾವಣಗೇರಿ ... ಗೋಕಾಕ — ಸಂಗಪ್ಪ ಶಿವಲಿಂಗಪ್ಪ ...

ಸ್ವದೇಶಿ ಔಷಧ ಭಂಡಾರ ಕುಂಜಾಲು,

—ಇವರ—

ಖ್ಯಾತಿಯಾದ ಕಲ್ಪ ಔಷಧಗಳು

ಬಾಲಾಮೃತ (ಮಕ್ಕಳ ...)	[illegible]
ಆಮಲಕೀ ತೈಲ (ಸುವಾಸಿತ) ...	[illegible]
„ „ „ ...	[illegible]
ಬ್ರಾಹ್ಮಿ (ಹೇರ್ ಆಯಿಲ್ ...)	[illegible]
ರಿಂಗ್‌ವರ್ಮ್ ಬಾಮ್ (ಹುಳಕಡ್ಡಿ)	[illegible]
ಶಂಕರ ವಟಿ (ಸರ್ವ ಜ್ವರಗಳ)	[illegible]
ನಿಯಮಾಂಜನ (ಸಕಲ ನೇತ್ರರೋಗ)	[illegible]
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ದೊಡ್ಡ	0 7 0
„ „ „ ಚಿಕ್ಕ	[illegible]

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ

Swadeshi Oushadhi Bhandar

KUNJAL P. O S. I

ಉಡುಪಿಯ ಏಜಂಟರು —

ನವಭಾರತ ಪುಸ್ತಕ ಭಂಡಾರ, ಉಡುಪಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

ಮುಖ್ಯ ಕಾರ್ಯಾಲಯ — ಕೋರ್ಟು ರಸ್ತೆ, ಉಡುಪಿ

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಶಿರ್ವ ... ಕನ್ನದ

ತೆತ್ತ ಮೂಲಧನ	ರೂ 1,92,100
ಕ್ಷೇಮ ನಿಧಿಗಳು	ರೂ 1,92,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು)

ತುಲಾ—ಇಂದಿನ ದಿನಗಳೊಂದೊಂದು ನಿಮಗೆ ವರ್ಷದಂತೆ ಕಾಣಿಸಲಿವೆ. ಬಲೀಯರಾದ ಗ್ರಹರು ಪ್ರತಿಕೂಲರಾಗಿರುವುದರಿಂದ ವಿಪಕ್ಷೀಯರ ಕಾಟವು ದಿನೇ ದಿನೇ ಹೆಚ್ಚುತ್ತ ಧನಮಾನಗಳಿಗೆ ಚ್ಯುತಿ ಬರಲಿದೆ. ಆಪ್ತೇಷ್ಟರ ವಿರಹವುಂಟಾಗುವುದಲ್ಲದ ದೇಹದಾರೋಗ್ಯವೂ ಕೆಡಲಿದೆ. ಗೃಹಕಲಹದಿಂದ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರದು. ಆದರೂ ವಾರಾದಿಯ ... ದಿನಗಳು ಕೊಂಚ ಉತ್ತಮವಿರುವುದರಿಂದ ಕೆಲವೊಂದು ಇಷ್ಟಾರ್ಥಗಳು ಸಿದ್ಧಿಸುವವಲ್ಲದೆ ಆಧಿವ್ಯಾಧಿಗಳು ಕೊಂಚ ಕಡಿಮೆಯಾಗುವವು.

ವೃಶ್ಚಿಕ—ಧನಲಾಭಾಧಿಪತಿಗಳ ಅನುಗ್ರಹವು ಪರಿಪೂರ್ಣವಿರುವುದರಿಂದ ದ್ರವ್ಯ ನಿಮಗೆ ಹಣದ ಅಡಚಣೆಯುಂಟಾಗಲಿಕ್ಕಿಲ್ಲ. ವಿದ್ಯಾರ್ಥಿಗಳು ವ್ಯಾಪಾರಿಗಳು ವಿದ್ಯೋಪಜೀವಿಗಳು ಮತ್ತು ಕ್ರೀಡಾದಿ ಕಲಾಕುಶಲರು ಹೆಚ್ಚಿನ ಸಮಯವನ್ನು ನಿಶ್ಚಿಂತೆಯಿಂದಲೂ ಸುಖಸಂತೋಷದಿಂದಲೂ ಕಳೆವರು. ನೇತ್ರೋದರ ರೋಗ ಮತ್ತು ಅನಿರೀಕ್ಷಿತ ಪರ್ಯಟನಗಳಿಂದ ಕೊಂಚ ಹಣ ಅಪವ್ಯಯವಾಗಬಹುದು. ವಾರಾಂತ್ಯದ 3 ದಿನಗಳಲ್ಲಿ ಅನಿರೀಕ್ಷಿತ ಘಟನೆಗಳೊದಗಿ ಸ್ವಲ್ಪ ಕಷ್ಟಕ್ಕೀಡಾಗಲಿರುವಿರಿ.

ಧನು—ನಿಮ್ಮ ಪ್ರಯತ್ನಕ್ಕಿಂತ ಅಧಿಕವಾದ ಸುಲಾಭವು ಕಟ್ಟಿಟ್ಟ ಗಂಟೆನಂತಿರುವುದು. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದೆ ವಿಜಯಿಗಳಾಗಿ ಮೆರೆಯುವಿರಿ. ಸಮಾಜದಲ್ಲಿ ಒಳ್ಳೆಯ ಹೆಸರಿಡೆ ಮನಃಕಲಹವು ನಿವೃತ್ತಿ ಹೊಂದಿ ಪರಸ್ಪರ ವೈರದಿಂದ ಮುಕ್ತರಾಗುವಿರಿ. ಗೃಹದಿ ... ಉದರ ... ನಿಮ್ಮ ... ವಾರದ ... ಪರಿಹಾರವು ಕಾಣದು ... ದಿನಗಳು ... ಚೆನ್ನಾಗಿಲ್ಲವು.

ಮಕರ—ಕೆಲಸವಿಲ್ಲದೆ ಅಲೆಯುವ ಪ್ರಸಂಗ ಬರಲಾರದು. ಖರ್ಚಿಗಿಂತ ದ್ವಿಗುಣವಾಗಿ ಧನಸಂಪಾದಿಸುವಿರಿ. ಔದ್ಯೋಗಿಕ ಭಾಗದಲ್ಲಿ ಒಳ್ಳೇ ಕೀರ್ತಿಯನ್ನು ಗಳಿಸುವಿರಿ. ಶತ್ರು ಜನರೂ ಕೂಡ ಮಿತ್ರರಾಗುವರು. ಪತ್ನೀಪುತ್ರ ಮಿತ್ರಾದಿ ಪರಿಜನರಿಂದ ಕೂಡಿದ ನಿಮ್ಮ ಗೃಹಕೃತ್ಯದಲ್ಲಿ ಎಳ್ಳಷ್ಟೂ ಚಿಂತೆಗವಕಾಶವಿರದು. ಆದರೆ ಪಂಚಮದಲ್ಲಿದ್ದ ಕುಜಶನಿಗಳು ಮಾತ್ರ ನಿಮ್ಮನ್ನು ನೆಮ್ಮದಿಯಿಂದ ಕುಳಿತಿರಲು ಬಿಡಲಾರರು. ತಂದೆಮಕ್ಕಳಲ್ಲಾ ಸೇವಕ ಯಜಮಾನರೊಳಗೂ ಸ್ವಲ್ಪ ಮನಸ್ತಾಪವನ್ನುಂಟುಮಾಡಲಿರುವರು. ವಾರಾದಿಯ 5 ದಿನಗಳಲ್ಲಿ ದೇಹಾಲಸ್ಯ, ಪ್ರವಾಸ ಮತ್ತು ಶೋಕಕ್ಕೆಡೆಯಿದೆ.

ಕುಂಭ—ಶುಕ್ರಾಚಾರ್ಯರನ್ನು ಬಿಟ್ಟರೆ ಮತ್ತಾರೂ ನಿಮ್ಮ ಹಿತಕಾಂಕ್ಷಿಗಳಿರರು. ವಾಕ್ಸಂಬಂಧ ನಿಷ್ಠುರ, ಕಲಹಗಳಾಗುವವು. ಈ ಮುಂಚೆ ನಿಮಗೆಲ್ಲಿ ಪುರಸ್ಕಾರವು ಸಿಗುತ್ತಿತ್ತೋ ಅಲ್ಲೇ ನೀವು ತಿರಸ್ಕೃತರಾಗುವ ಕಾಲ ಬಂದಿದೆ. ಆಪ್ತೇಷ್ಟರೂ ಬಂಧುಮಿತ್ರರೂ ನಿಮ್ಮ ಮೇಲೆ ಎರಡೆಂಟೆಣಿಸುವರು. ಮಾಡಿದ ಉಪಕಾರವನ್ನು ಮರೆತು ಎಲ್ಲರೂ ಕೃತಘ್ನರಂತೆ ವರ್ತಿಸುವರು. ತಾ 19 20, 21 ಈ 3 ದಿನಗಳಲ್ಲಿ ಹಣದ ಅಡಚಣೆಯುಂಟಾಗದು. ಹಿಡಿದ ಕಾರ್ಯದಲ್ಲಿ ಜಯಲಾಭವಿದೆ.

ಮೀನ—ಶುಭಾಶುಭ ಗ್ರಹರಲ್ಲಿ ಸಾಮ್ಯವಿದ್ದರೂ ಇಷ್ಟ ಗ್ರಹರ ಬಲವೇ ಅಧಿಕವಿರುವುದರಿಂದ ನಿಮ್ಮ ಸಂಕಲ್ಪಗಳು ನಿರರ್ಗಳವಾಗಿ ಕೈಗೂಡುವವು. ಕನ್ಯಾ ಕಾಕರೇ ನೋಡಲಾದ ನೀಚ ಜನರಿಂದಲೂ ಅಪತ್ಯ ವರ್ಗದಿಂದಲೂ ಧನಲಭಿಸಲಿದ. ಕಳೆದು ಹೋದ ವಸ್ತು ಒಡವೆಗಳು ತಾವಾಗಿ ಕೈಸೇರುವವು. ಶತ್ರು ವರ್ಗದವರು ಮುಂಗುಸಿಯನ್ನು ನೋಡಿದ ಸರ್ಪದಂತೆ ಅಲ್ಲಲ್ಲೇ ಅಸ್ತಂಗತರಾಗುವರು. ಆರೋಗ್ಯವು ಅಷ್ಟೊಂದು ... ಅವಿಚಾರದಿಂದ ಕಾರ್ಯ ಹಾನಿಯಾದೀತು. ತಾ. 19, 20 21 25, 27 ರಲ್ಲಿ ಜಾಗ್ರತರಾಗಿರಿ.

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ಕ್ಕೆ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ಕ್ಕೆ ರೂ 1-6-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಫೋಕ್ಯಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ ಐ ಪಿ, ಮಾಟುಂಗಾ (3) ವೆಲ್ಲರ್ ಪೇಟೆಂಟ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಅಶೋಕ ಬಜಾರ್, ಮೈಸೂರು (5) ಮಂಗಳೂರು ಸ್ಟೋರ್ಸ್, ಮಡಿಕೇರಿ (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ (7) ಶ್ರೀನಿವಾಸ ಶೆಣೈ, ಪುತ್ತೂರು (8) ಕುಂತಿಪುರ ವಾಸುದೇವ ಕಮ್ತಿ, ಬೆಳ್ತಂಗಡಿ (9) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ (10) ಕೃಷ್ಣ ಫಾರ್ಮಸಿ, ಕುಂದಾಪುರ (11) ಕಾಸರಗೋಡು ಶ್ರೀ ರಾಮ ಸ್ಟೇಷನರಿ ಹೌಸ್, ಶ್ರೀ ರಾಮ ಪೇಟೆ (12) ಕೆ. ಶ್ರೀನಿವಾಸ ಶೆಟ್ಟಿ ಅಜ್ಜರಹಳ್ಳಿ (13) ಬಿ. ಯಸ್, ನರಸಿಂಗರಾವ್, ಮರ್ಚೆಂಟ್, ಚಿಕ್ಕಮಂಗಳೂರು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್ ಪವರ್ ಮುಲಾಮು —

ಇಷ್ಟರವರೆಗಣ ನಮ್ಮ

ವಿಲಿಯಮ್ ಎಂಡ್ ಕೋ-ರವರ

ಬಣ್ಣ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ಪವರ್
ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾದಲ್ಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು, ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿ, ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೨ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅಮಾತ್ಯನಂದಿನಿ	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು ಇದು ಮದುವಾರಗಿವೆ

ಆಶೆ ಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ,

ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು — ನವಭಾರತ ಬುಕ್ ಡಿಪೋ, ಉಡುಪಿ

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್ ಪೂಂಜ,
ಪ್ರೆಸಿಡೆಂಟ್ ವ ಮ್ಯಾನೇಜರ್

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪಿತ 1926

18 ಬಲ್ಮಠ ರಸ್ತೆ, ಮಂಗಳೂರು



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ನೈಮ್ ಬೋರ್ಡ್ ಜವಾನರ ಬೇಜು ಮೊನೋಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE

Approved firm by the Govt. Mysore

... the Agent of the Govt. of India in Ceylon

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ

ಇವಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಸುಖನಿವಾಸ

ಉಡುಪಿ. ಮಂಗಳೂರು

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು, ಅಂದರೆ ಕೇವಲ ೩ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೫ **ಕೊಡಿಯಾಲಬೈಲು, ದ.ಕ**

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನ ನಮೂನೆಯಲ್ಲಿ ದೊರೆಯುತ್ತವೆ. ಖದ್ದರಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ

ಸಿ. ಎ. ಶೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟಡ.

ಉಡುಪಿ

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್.

ಪ್ರೊಪ್ರೈಟರ್

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI

Regd. No. M. 3618

Estd. 1921 ಸ್ಥಾಪಿತ

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ. ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

Read and Advertise in
ANTARANGA
The All Karnataka humorous Weekly
Udipi - S. India

ಸಂಪುಟ ೨೧
Vol. 21

ಸಂಸ್ಥಾಪಕರು:—ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

26-3-1942

ಸಂಚಿಕೆ ೨೯
No. 29

SEASON DEPOSITS

ear now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ಸಾಲಿಯಾನ ಸೇಕಡಾ 4ರ ದರದಲ್ಲಿ, 4ಯಾ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು

ದಿ ವಿಜಯಾ ಬ್ಯಾಂಕ್, ಲಿಮಿಟೆಡ್

THE VJAYA BANK, LTD.

ಮಗುವನ್ನು ಸಂತೋಷವಾಗಿಟ್ಟಿರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ (ITL) ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.

ತಯಾರಿಸುವವರು:

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ, **ಬೆಂಗಳೂರು ಸಿಟಿ.**

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹುಣ್ಣು ಆಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ; ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುಸೋಯುವದು ಸ್ತ್ರೀಯಂಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ-ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ನಸಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ. ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ವಿಕೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ASIAN POLICIES

Cover war risk on civiliana without any extra premiums.

Figures that speaks the strength and stability of the company, as on 31—12—1941.

Assets exceed	....	Rs. 1,10,00,000
Life Fund exceeds	....	,, 92,00,000
Business in force	....	,, 4,28,00,000
Claims paid over	....	,, 56,00,000

For further particulars and agency terms, please apply to
Branch Manager,
The Asian Assurance Co., Ltd., Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದಂಮ ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿ ನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . : ದ. ಭಾರತ.

The Canara Mutual Assurance Company, Limited.

UDIPI : : . S. INDIA.

ಈ ವಾರದ ಭವಿಷ್ಯ

ತಾರೀಕು ೨೬—೩—೪೭ರಿಂದ ತಾರೀಕು ೨—೪—೪೭ರ ವರೆಗೆ

ಮೇಷ—ಅನ್ಯ ಮಾರ್ಗಾವಲಂಬಿಗಳಾಗದೆ ಸ್ವಾಚಾರ ಧರ್ಮನಿರತರಾದವರಿಗೆ ಈ ವಾರವು ತಕ್ಕ ಮಟ್ಟಿಗೆ ಉತ್ತಮ ಫಲದಾಯಿಯಾಗಿರುವದು. ಇಲ್ಲಸಲ್ಲದ ಖರ್ಚುಗಳು ಬಹುವಾಗಿದ್ದರೂ ನಿಮ್ಮ ಆದಾಯವನ್ನದು ಮೀರಲಾರದು. ಲೇಖಕ ವರ್ಗದವರೂ ನೌಕರ ವ್ಯಾಪಾರೀ ಜನರೂ ಹೆಚ್ಚಿನ ಸಮಯವನ್ನು ಆನಂದದಿಂದಲೇ ಕಳೆವರೆನ್ನಲಡ್ಡಿಯಿಲ್ಲ. ಪಿತ್ತೋಷ್ಣ ಸಂಬಂಧವಾದ ಕಾಹಿಲೆಯಿಂದ ನಿದ್ರಾಭಾವವೂ ದುಃಸ್ವಪ್ನಗಳೂ ಸಂಭವಿಸಲಿವೆ. ತಾ 27ರಿಂದ 30ರ ವರೆಗಿನ ದಿನಗಳು ಕೊಂಚ ಹಾನಿಕರಗಳಾಗಿರುವುದರಿಂದ ಶತ್ರುಭಯ,ರಾಜಪೀಡೆ,ಪ್ರವಾಸದಲ್ಲಿ ಅನಿಷ್ಟಗಳೂ ಸಂಭವಿಸಬಹುದು.

ವೃಷಭ— ಮಿತಭಾಷಿಯಾಗಿದ್ದರೂ ವಿನಾ ಕಾರಣ ಕಲಹಗಳು ಗಂಟುಬಿದ್ದು ತನ್ಮೂಲಕ ಮಾನಕ್ಕೆ ಹಾನಿಯೊದಗೀತು. ಅನಿರೀಕ್ಷಿತವಾಗಿ ಪ್ರವಾಸವನ್ನು ಮಾಡಬೇಕಾಗಿ ಬರುವದು. ವಾಹನಾದಿಗಳಲ್ಲಿನ ಸಂಚಾರ ಕಾಲಕ್ಕೆ ಅಪಘಾತಾದಿಗಳು ಘಟಿಸುವ ಸಂಭವವಿದೆ. ವಿಷಜಂತುಗಳ ಭಯವಿದೆ. ಸ್ವಜನವಿಯೋಗದಿಂದ ಮನಶ್ಶಾಂತಿಗೆ ಭಂಗವುಂಟಾದೀತು. ಗುರುಜನರ ಆಗ್ರಹಕ್ಕೆ ಪಾತ್ರರಾದ ನಿಮಗೆ ತಾ. 27.28. ಈ 2 ದಿನಗಳಲ್ಲಿ ವಿಜಯ, ಆರೋಗ್ಯ ಧನ ಮಾನಾದಿಗಳ ಲಾಭವಿದೆ

ಮಿಥುನ—ನಿಮ್ಮ ವ್ಯಯಸ್ಥಾನಗತರಾದ ಗ್ರಹತ್ರಯರು ನಿಮ್ಮನ್ನು ವಿಶೇಷವಾದ ಹಣದ ತಾಪತ್ರಯಕ್ಕೆ ಸಿಲುಕಿಸಲಿರುವರು. ಕ್ಷಣಕಾಲವೂ ನೀವು ನೆಮ್ಮದಿಯಿಂದಿರಲಾರಿರಿ ಪಿತ್ಥ ಸಂಬಂಧ ಕಾಹಿಲೆ, ನೇತ್ರರೋಗಗಳಿಂದ ಪೀಡಿತರಾಗುವಿ. ಸ್ತ್ರೀಯರೊಡನೆ ಕಲಹವಾದೀತು ಆರಂಭಿಸಿದ ಕಾರ್ಯಗಳು ಶತ್ರುಜನರ ಕುತಂತ್ರದಿಂದ ಕೊನೆಗಾಣಲಾರವು. ಆದರೂ ರವಿ ಶುಕ್ರರ ಅನುಗ್ರಹಯುತರಾದ ನಿಮಗೆ ತಾ. 26. 29. 30 ಈ ಮೂರು ದಿನಗಳಲ್ಲಿ ಇಷ್ಟಪ್ರಾಪ್ತಿ, ವಿಜಯ, ಸ್ತ್ರೀ ಧನ ಮತ್ತು ಸುಖಗಳು ದೊರೆಯಲಿವೆ.

ಕರ್ಕಾಟಕ—ತೇಜೋ ಗ್ರಹ[ದ]ಸ್ವೈಕೆ ರವಿಯೋರ್ವನ ಅನುಗ್ರಹವು ನಿಮಗಿಲ್ಲವು. ಮಿಕ್ಕುಳಿದ ಎಲ್ಲಾ ಗ್ರಹರು ನಿಮ್ಮ ಕಲ್ಯಾಣವನ್ನು ಬಯಸುತ್ತಿರುವುದರಿಂದ ನಾನಾ ವಿಧಾನದಿಂದ ಧನವು ನಿಮ್ಮ ಕೈಸೇರಲಿದೆ ಮನಃಸಂಕಲ್ಪವು ಕಾರ್ಯರೂಪಕ್ಕೆ ಬರುವುದು. ಹೋ[ದ]ಲ್ಲೆಲ್ಲಾ ಸ್ಥಾನಮಾನಾದರಗಳು ಲಭಿಸುವವು ,ಯಾವ ಕಾರ್ಯದಲ್ಲೂ ಕೂಡ ಪರಾವಲಂಬಿಗಳಾಗಬೇಕಾಗಿಲ್ಲ ಸ್ತ್ರೀ ಧನವು ಲಭಿಸುವ ಯೋಗವಿದೆ. ಲೇವಾದೇವಿ ನಿಮಿತ್ತ ಕಲಹವಾದೀತು. ತಾ. 27, 28 30 1 ಈ ದಿನಗಳು ಅತ್ಯುತ್ತಮವಿವೆ.

ಸಿಂಹ—ನೀವೀಗ ದುರ್ದೈವದ ಪರಾಕಾಷ್ಠೆಗೆ ಮುಟ್ಟಿರುವಿರಿ. ಇಂತಹ ಬಿಕ್ಕಟ್ಟಿನ ಸಮಯವು ಇನ್ನು ನಿಮಗೆ ಬಾರಲಾರದು ಬರುವ ವಾರದಿಂದ ನಿಮ್ಮ ಭಾಗ್ಯಚಕ್ರವು ಪರಿವರ್ತಿತವಾಗಲಿದೆ ಮನಸ್ಸು ಕಡಿವಾಣವಿಲ್ಲದ ಕುದುರೆಯಂತಾಗಿ ಅನ್ಯಾಯ ಅನಾಚಾರಗಳಲ್ಲಿ ಪ್ರವರ್ತಿಸಿ ಜನನಿಂದೆಗೆ ಗುರಿಮಾಡುವದು ದೇಹಾಲಸ್ಯ, ಅರ್ಥಕೋಪದ್ರವ, ಸ್ಥಾನಚ್ಯುತಿ, ಮಾನಹಾನಿ ಇತ್ಯಾದ್ಯನಿಷ್ಟ ಪರಂಪರೆಗಳು ಮೇಲಿಂದ ಮೇಲೆ ಪ್ರಾಪ್ತವಾಗುವವು. ಆದರೂ ತಾ 26. 29. 30 2 ಈ 4 ದಿನಗಳಲ್ಲಿ ಮೇಲ್ಕಂಡ ಅನಿಷ್ಟಗಳು ಕಡಿಮೆಯಾಗುವವಲ್ಲದೆ ಸುಹೃದ್ಭೇಟಿ, ಸುಖಭೋಜನ, ಧನ ವಸನಾದಿಗಳೂ ಲಭಿಸುವವು.

ಕನ್ಯಾ—ಶತ್ರುಕೃತ ಪರಾಭವದಿಂದುಂಟಾದ ಮನೋರೋಗವು ನಿಮ್ಮ ಆರೋಗ್ಯವನ್ನಪಹರಿಸುವುದು. ನೀವು ಒಳ್ಳೇ ನಿಪುಣರಿದ್ದರೂ ಖರ್ಚಿಗೆ ಬೇಕಾದಷ್ಟು ಸಂಪಾದಿಸಲು ಶಕ್ತರಾಗಲಾರಿರಿ ಗೃಹಕೃತ್ಯದ ಖರ್ಚಿಗೆ ಬೇಕಾದ ದವಸ ಧಾನ್ಯಗಳೂ ಕಡಿಮೆಯಿರಲಾರವು [ಉ]ದ್ಯೋಗಜೀವಿಗಳಿಗೂ ವಿದ್ಯಾರ್ಥಿ ಜನರಿಗೂ ಈ ವಾರವು ಸುಖದಿಂದ ಕಳೆದೀತು. ಉದರ ರೋಗ ಅಟಿಸಾರಾದಿಗಳಿಂದ ಪೀಡಿತರಾದ ನಿಮಗೆ ತಾ 26. 27.28 31. 1 ಸ್ವಲ್ಪ ಸುಖದಾಯಿಯಾಗಲಿದೆ

(೧೧ನೇ ಪುಟ ನೋಡಿರಿ),

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. **ಬುದ್ಧಿಬಲ, ಸ್ಮರಣಶಕ್ತಿ,** ಕೆಲಸದಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24–ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

BHUVANENDRA PRODUCTS LTD.,

Head Office and Factory:
Katapadi, S. Kanara

Depots:
1. Mahratha Galli, Hubli
2. 57 Big street, Triplicane . Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— **1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಕೆ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಶೈ** L. I. M. **ಡಾಕ್ಟರ್ ವೆಂಕಟ ರಾವ್, ಕೊರಡ್ಕಲ್**

ಅಶುಭ ಸೂಚನೆಯೇ?

1812–13ನೇ ವರ್ಷದ ನಂತರ ರಶ್ಯದಲ್ಲಿ ಇಷ್ಟೊಂದು ತೀವ್ರ ಚಳಿಗಾಲವೇ ಬಂದಿಲ್ಲವಂತೆ. ಆ ವರ್ಷ ರಶ್ಯದ ಮೇಲೆ ಧಾಳಿ ನಡಿಸಿದ್ದ ನೆಪೋಲಿಯನರು ಪರಾಜಿತರಾಗಿದ್ದರು. ಈ ವರ್ಷ ಹಿಟ್ಲರರು ಪರಾಜಿತರಾಗುವರೇ? ಅಂತೂ ಜರ್ಮನರಿಗೆ ಈ ವರ್ಷದ ಚಳಿಗಾಲವು ಅಶುಭ ಸೂಚಕವಾಗಿರುತ್ತದೆಂಬುದರಲ್ಲಿ ಸಂದೇಹವಿಲ್ಲ.

ಬರ್ಮದಲ್ಲಿಯೂ ಪಂಚಮಾಂಗ

ಬರ್ಮದಲ್ಲಿಯೂ ಪಂಚಮಾಂಗವು ಒಳಸಂಚು ನಡಿಸಿ ಜಾಪಾನರಿಗೆ ಬಹಳ ಸಹಾಯ ಮಾಡಿರುವುದೆಂಬುದರಲ್ಲಿ ಸಂದೇಹ ಇಲ್ಲ. ಅದಕ್ಕೆ ಬ್ರಿಟನಿನ ಸಾಮ್ರಾಜ್ಯ ಸ್ವಾರ್ಥವೇ ಕಾರಣ. ಆಸು ಬರ್ಮಕ್ಕೆ ಸಕಾಲದಲ್ಲಿ ಸ್ವತಂತ್ರ ಸ್ವರಾಜ್ಯ ನೀಡಿಯುತ್ತಿದ್ದರೆ ಬರ್ಮೀಯರು ಜಾಪಾನರೊಂದಿಗೆ ಸೇರುವ ಬದಲಿಗೆ ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಬಲವಾಗಿ ಹೋರಾಡುತ್ತಿದ್ದಿಲ್ಲವೇ?

ಕ್ಷುದ್ರ ವರ್ಣಭೇದ

ಮಲಯ ಮತ್ತು ಸಿಂಗಪುರದಲ್ಲಿದ್ದ ಹಿಂದೀಯರನ್ನು ಅವರ ನಾಡಿಗೇನೋ ಬಿಡಲಾಗಿತ್ತು. ಹಡಗಗಳೆಲ್ಲಾ ಬಿಳಿ ಜನರನ್ನೊಯ್ಯಲು ಉಪಯೋಗಿಸಲ್ಪಡುತ್ತಿದ್ದವು. ಆದರೆ ಹಿಂದೀಯರನ್ನೊಯ್ಯಲು ಹಡಗಗಳೇ ದೊರೆಯಲಿಲ್ಲ. ಸಿಂಗಪುರದಿಂದ ಕೆಲಮಂದಿ ಹಿಂದೀಯರನ್ನೊಯ್ಯಲು ಕಟ್ಟಕಡೆಗೊಂದು ಹಡಗ ಕೊಡಲ್ಪಟ್ಟಿತು. ಆದರೆ ಅದರ ಪ್ರಯಾಣವೆಚ್ಚವನ್ನು ಹಿಂದೀಯರೇ ಕೊಡಬೇಕಾಯಿತು. ಈ ಹಡಗದಲ್ಲಿದ್ದ ಹಿಂದೀಯರನ್ನು ಜಾವದಲ್ಲಾಗಲಿ, ಸಿಲೋನಿನಲ್ಲಾಗಲಿ ಇಳಿಯಲು ಅಲ್ಲಿಯ ಅಧಿಕಾರಿಗಳು ಬಿಡಲಿಲ್ಲ. ಆಹಾರದ ತೀವ್ರ ಕೊರತೆಗೊಳಗಾಗಿ ಬಹಳ ಕಷ್ಟಪಟ್ಟು ಈ ಹಿಂದೀಯರು ಕಡೆಗೆ ಹೇಗಾದರೂ ತುತ್ತುಕುಡಿಗೆ ಬಂದು ಮುಟ್ಟಿದ ಕರುಣ ಕತೆಯನ್ನು ಸಿಂಗಪುರದ ಹಿಂದೀ ವ್ಯಾಪಾರಿ ಸಂಘದ ಅಧ್ಯಕ್ಷ ಶ್ರೀ. ಜಮುನಾ ಭಾಯಿಯವರು ಪ್ರಕಟಿಸಿರುವರು. ಬಿಳಿ ಜನರಿಗೆ ಸಾಧ್ಯವಾದ ಅನುಕೂಲತೆಗಳನ್ನೆಲ್ಲಾ ಒದಗಿಸಲಾಗಿತ್ತು. ಅವರು ಎಲ್ಲಿ ಬೇಕಾದರೂ ಇಳಿದು ಸಹಾಯ ಪಡೆಯುವ ಏರ್ಪಾಡು ಇದೆವಿತ್ತು. ಮಲಯ, ಪೆನಂಗ್ ಮತ್ತು ಬರ್ಮದ ಹಿಂದೀಯರ ಅವಸ್ಥೆಯೂ ಇದೇ. ಆಪತ್ತಿನಲ್ಲಿಯೂ ಹೀಗೆ ಬಿಳಿ

ಚುಟುಕು ಟೀಕೆ–ಟಿಪ್ಪಣಿ

ಕರಿ ಜನರೆಂಬ ಕ್ಷುದ್ರ ಭೇದ ಮಾಡಿದರೆ ಸರ್ವ ಸಾಮಾನ್ಯ ಪರಿಸ್ಥಿತಿಯಲ್ಲಿ ಹೇಗೆ? ಬಿಳಿ ಜನರ ಕುರಿತು ಜಾಪಾನರು ಭೇದ ತೋರಿಸಿ ಕ್ರೂರಿನಾಗಿ ಕಂಡರೆ ತಪ್ಪೇನು ಪುದೇಕ?

ಅಮೆರಿಕದ ಕಡೆ ಕತ್ತು ನೀಡಿದೆ ಆಸ್ಟ್ರೇಲಿಯ

ಆಸ್ಟ್ರೇಲಿಯವು ಇಂದು ಇಂಗ್ಲಂಡಿನ ಬದಲಿಗೆ ಹೆಚ್ಚಾಗಿ ಅಮೆರಿಕದ ಕಡೆಗೆ ಕತ್ತು ನೀಡಹತ್ತಿದೆ. ಅಮೆರಿಕದಿಂದಲೇ ಸೇನಾ ಸಹಾಯವನ್ನದು ನಿರೀಕ್ಷಿಸುತ್ತದೆ ಅಮೆರಿಕಾನರಾದ ಜನರಲ್ ಮೆಕ್ ಆರ್ಥರರೇ ಅದರ ಸೇನಾನಾಯಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಮೆರಿಕದ ಆಸ್ಟ್ರೇಲಿಯಾನ ರಾಯಭಾರಿ ಮಿ। ಕಾಸೆಯವರು ಮಧ್ಯಪೂರ್ವದ ಬ್ರಿಟಿಷ್ ಮಂತ್ರಿಯಾಗಿ ನೇಮಿಸಲ್ಪಟ್ಟುದರಿಂದ ಬ್ರಿಟಿಷ್ ಮತ್ತು ಆಸ್ಟ್ರೇಲಿಯಾನ ಸರಕಾರಗಳೊಳಗೆ ಮನಸ್ತಾಪವುಂಟಾಗಿದೆ. ಆಸ್ಟ್ರೇಲಿಯದ ಪ್ರಧಾನ ಮಂತ್ರಿ ಮಿ॥ ಕರ್ಟಿನರು ಎಲ್ಲಾ ವಿಷಯದಲ್ಲಿಯೂ ತನ್ನ ದೇಶಕ್ಕೆ ಸರಿಸಮಾನ ಸ್ಥಾನ ದೊರೆಯಬೇಕೆಂಬ ಛಲ ಹಿಡಿದಿರುತ್ತಾರೆ. ಇಂಗ್ಲಂಡಿಗೆ ಆಸ್ಟ್ರೇಲಿಯವನ್ನು ರಕ್ಷಿಸಿಕೊಳ್ಳಲು ಅಸಾಧ್ಯವಾಗಿರುವಾಗ ಮತ್ತೇನು ಮಾಡುವುದು ಆಸ್ಟ್ರೇಲಿಯ?

ಜಾಪಾನು ಮುಂದೇನು ಮಾಡುವುದು?

ಬರ್ಮವನ್ನು ಆದಷ್ಟು ಬೇಗ ಸಂಪೂರ್ಣವಾಗಿ ಗೆಲ್ಲಲು ಜಾಪಾನು ಪ್ರಯತ್ನಿಸುವುದೆಂಬುದರಲ್ಲಿ ಸಂದೇಹವಿಲ್ಲ. ಇಲ್ಲವಾದರೆ ಅಪಾಯವಿದೆ. ಅದೇ ಕಾಲದಲ್ಲಿ ಆಸ್ಟ್ರೇಲಿಯವನ್ನು ಅದರ ವೈರಿಗಳು ಆಶಯವಾಗಿ ಮಾಡಿಕೊಳ್ಳದಂತೆ ತಡೆಗಟ್ಟುವ ಪ್ರಯತ್ನ ಕೂಡಾ ಅದು ಮಾಡಿರುವುದು. ಆಸ್ಟ್ರೇಲಿಯವನ್ನದು ಗೆದ್ದು ವಶಮಾಡಿಕೊಂಡರೆ ಆ ಮೇಲೆ ದಕ್ಷಿಣ ಪಶ್ಚಿಮ ಶಾಂತ ಸಾಗರ ಪ್ರದೇಶದಲ್ಲಿ ವೈರಿಗಳ ಸೇನಾ ಸಂಗ್ರಹಕ್ಕೆ ಆಶಯ ದೊರೆಯದಂತಾಗುವುದು. ಆದುದರಿಂದ ಹಿಂದುದೇಶಕ್ಕಿಂತ ಮೊದಲು ಆಸ್ಟ್ರೇಲಿಯವನ್ನೇ ಗೆಲ್ಲಲು ಜಾಪಾನು ಯತ್ನಿಸುವುದೆಂದು ಹೇಳಬಹುದು.

ಜಾಪಾನು ರಶ್ಯದ ಮೇಲೇರಿ ಹೋಗುವುದೇ?

ಅತ್ತ ಹಿಟ್ಲರರು ಪಶ್ಚಿಮದಲ್ಲಿ ರಶ್ಯದ ಮೇಲೆ ಪ್ರಚಂಡ ಧಾಳಿ ನಡಿಸುವಾಗ ಇತ್ತ ಜಾಪಾನು ಪೂರ್ವದಲ್ಲಿ ಅದರ ಮೇಲೇರಿ ಹೋಗುವುದು. ಅದಕ್ಕೆ ಬೇಕಾದ ಸೇನಾ ಸಂಗ್ರಹವನ್ನು ಒಳಗಿಂದೊಳಗೆ ಮಾಡುತ್ತಿರುವುದೆಂದು ಸುದ್ದಿಯುಂಟಾಗಿದೆ. ಹಾಗೆ ಮಾಡಲು ಹಿಟ್ಲರರು ಜಪಾನನ್ನು ಒತ್ತಾಯ ಪಡಿಸಬಹುದು. ಆದರೆ ಇಟಲಿಯಂತೆ ಅವರ ಕೈಗೊಂಬೆಯಾಗಿ ನಡೆಯಲು ಜಾಪಾನು ಸಿದ್ಧವಿರುವಂತಿಲ್ಲ. ಅದು ತನ್ನದೇ ಆದ ದಾರಿ ಹಿಡಿದು ಮುಂದುವರಿಯುತ್ತಿದೆ. ರಶ್ಯ ಮತ್ತು ಜಪಾನುಗಳೊಳಗೆ ಒಂದಲ್ಲೊಂದು ದಿನ ಘರ್ಷಣ ಸಿದ್ಧವಾದರೂ ಪ್ರಕೃತ ಜಾಪಾನು ಅದಕ್ಕೆ ಮುಂದಾಗಲಾರದು.

ಜರ್ಮನ್ [illegible] ಪಂಚಮಾಂಗದ ಭೀತಿ

ಕಳೆದ 6 ತಿಂಗಳಲ್ಲಿ, ಜರ್ಮನಿಯು ಆಕ್ರಮಿಸಿರುವ ಫ್ರಾನ್ಸಿನಲ್ಲಿ ಗುಂಡು ಮತ್ತು ಬೋಂಬೆಸೆತದ 300 ಪ್ರಕರಣಗಳು ನಡೆದಿರುತ್ತವೆ. ಫ್ರಾನ್ಸಿನಲ್ಲೀಗ ಹೆಚ್ಚಿನ ಜರ್ಮನ್ ಸೇನೆಯು ಇರುವುದಿಲ್ಲ. ಈ ಸಂದರ್ಭದಲ್ಲಿ ಬ್ರಿಟನು ಮತ್ತು ಅಮೇರಿಕಗಳು ಧಾಳಿ ನಡಿಸಬಹುದು. ಒಳಗಿಂದೊಳಗೆ ಹೊಗೆಯಾಡುತ್ತಿರುವ ಪಂಚಮಾಂಗದ ಬಂಡಾಯವು ಆಗ ಒಮ್ಮೆಯೇ ಜ್ವಲಿಸಬಹುದೆಂದು ಜರ್ಮನರು ಭೀತಿಗೊಂಡಿರುವರೆಂದು ತಿಳಿದು ಬರುತ್ತದೆ. ಬ್ರಿಟನು ಮತ್ತು ಅಮೆರಿಕಗಳು ಸೇನಾ ಧಾಳಿಯ ಸಾಹಸ ಮಾಡಬೇಕಲ್ಲವೇ?

Keep the enemy away

from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND

FOR

VICTORY.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares } ...	5 % p. a.
Loans on Gold	4½% p. a.

The above rates are for medium sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

ಆಮಂತ್ರಣ ಪತ್ರಿಕೆಗಳು.

ಮದುವೆ, ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್ ಬೈಂಡಿಂಗ್ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,

ಕೋಳದ ಪೇಟೆ ರಸ್ತೆ,

ಉಡುಪಿ.

ಬಡಾ ಪಂಚಾಯತ್ ಬೋರ್ಡ್

ನೋಟೀಸು.

ಬಡಾಗ್ರಾಮದ ಬಡಾ ಪಂಚಾಯತ ಬೋರ್ಡಿಗೆ ಸೇರಿದ ಉಚ್ಚಿಲ ಮಾರಕಟ್ಟೆಯು 1942 43ನೇ ಇಸ್ವಿ ಬಗ್ಗೆ ಇದೇ ತಿಂಗಳ ತಾರೀಖು 30 3–42ನೇ ಸೋಮವಾರ (ಸಂತೆ ದಿವಸ) ಉಚ್ಚಿಲದಲ್ಲಿರುವ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ವ್ಯಾ. ಮುದ್ದು ಶೆಟ್ಟಿ,

ಪ್ರೆಸಿಡೆಂಟ್, ಬಡಾ ಪಂಚಾಯತ್ ಬೋರ್ಡ್

ಯಾರ ಅತ್ಯಾಚಾರ? ಯಾರು ಹೊಣೆ?

ಸುಮಾರು 7½ ಘಂಟೆ ರಾತ್ರಿಯಾಗಬಹುದು. ಬೊಂಬಾಯಿಯ ಬೋರ ಬಜಾರಿನ 167/8ನೇ ಕಟ್ಟಡದ ಎರಡನೇ ಮಾಳಿಗೆಯ ಕೋಣೆಯೊಂದರಿಂದ ಸುಮಾರು 25ವರ್ಷ ಪ್ರಾಯದ ದುಂಡು ಶರೀರದ ಸುಂದರ ಸ್ತ್ರೀಯೋರ್ವಳು ಮೆಟ್ಟಲಿಂದ ಕೆಳಗಿಳಿದು ಬಂದಳು. ಕಡೆಯ ಮೆಟ್ಟಲಲ್ಲಿ ತುಸು ಹೊತ್ತು ನಿಂತು ಯೋಚಿಸಿದಳು. ಅವಳ ಕಂಗಳಿಂದ ಒಂದೇ ಸವನೆ ನೀರಿಳಿದು ಬರುತ್ತಿತ್ತು. ಉನ್ನತವಾದೆದೆಯು ಉದ್ವೇಗದಿಂದ ಏರಿಳಿಯುತ್ತಿತ್ತು. ಒಡನೆಯೇ ಅವಳು ಪುನಃ ಕೋಣೆಗೇರಿ ಹೋದಳು. ಸುಮಾರು 4ವರ್ಷದ ಅಂದ ಚಂದದ ಗಂಡು ಮಗುವೊಂದನ್ನು ಒಮ್ಮೆಯೇ ಎತ್ತಿ ಮುದ್ದಾಡಿದಳು. ಅದರ ಮುಖವನ್ನು ಕಣ್ಣೀರಿಂದ ಒದ್ದೆ ಮಾಡಿದಳು. "ಅಮ್ಮ ಹೋಗಬೇಡಮ್ಮ! ನನಗೆ ನೀನು ಬೇಕು". ಎಂದು ಬಿಗಿದಪ್ಪಿತವಳನ್ನು ಮಗು. ತಾಯಿಯು ಮಾತಾಡದಾದಳು. ಕೆಲ ಸಮಯದ ನಂತರ ಮನಸ್ಸನ್ನು ಕಲ್ಲು ಮಾಡಿ ಕಠಿಣ ನಿರ್ಧಾರ ಮಾಡಿದಳು. "ಪಪ್ಪ ಈಗ ಬರುವರು ಜೋಸೆಫ್. ಇನ್ನು ಮುಂದೆ ನಿನ್ನ ಅಮ್ಮನೂ ಅವರೇ. ನಾನು ನಿನ್ನ ಕಿಸೆಯಲ್ಲಿ ಹಾಕಿದ ಕಾಗದವನ್ನವರಿಗೆ ಕೊಡಲು ಮರೆಯಬೇಡ. ಕಳಂಕಿತೆಯಾದ ನಾನಿನ್ನು ನಿನ್ನ ತಾಯಿಯಾಗಲು, ನಿನ್ನ ಪಪ್ಪನ ಪತ್ನಿಯಾಗಲು ಅರ್ಹಳಲ್ಲ. ಭಗವಂತನು ನಿನಗೆ ಒಳ್ಳೇದು ಮಾಡಲಿ!" ಎಂದು ಆಶೀರ್ವದಿಸಿ ಹೊರಬಿದ್ದಳು ತಾಯಿ.

oo oo oo

ಮೇಲಿನ ಸಂಗತಿ ನಡೆದು ಸುಮಾರು ಒಂದು ಘಂಟೆ ಹೊತ್ತಿನಲ್ಲಿ 30-35ವರ್ಷದ ಗಂಡಸೊಬ್ಬನು ಮೇಲಿನ ಕೋಣೆಗೆ ಪ್ರವೇಶಿಸಿದನು. ಅಷ್ಟರಲ್ಲಿ ಸುಮಾರು 12ವರ್ಷದ ಕೆಲಸದ ಹುಡುಗಿಯೊಂದಿಗೆ ಅಡಿಗೆಕೋಣೆಯಲ್ಲಿದ್ದ ಜೋಸೆಫನು ಓಡಿ ಬಂದು, "ಪಪ್ಪ! ಪಪ್ಪ! ಅಮ್ಮ ಹೋದಳು. ನಾನು ಬೇಡವೆಂದರೂ ಕೇಳಲಿಲ್ಲ. ಇಗೊಳ್ಳಿ, ಈ ಕಾಗದ ಕೊಟ್ಟು ಹೋದಳು". ಎಂದು ಕಿಸೆಯಿಂದ ಕಾಗದವೊಂದನ್ನು ತೆಗೆದುಕೊಟ್ಟನು. "ಪಪ್ಪ, ಅಮ್ಮ ಇನ್ನು ಬರುವುದಿಲ್ಲವೇ? ಅವಳು ಎಲ್ಲಿ ಹೋದುದು?" ಎಂದು ತಂದೆಯೊಡನೆ ಪ್ರಶ್ನಿಸಿದನು. ತಂದೆಯು ಎದೆ ಧಸ್ಸೆಂದಿತು. ಅವನು ಆತ್ಮವಸರದಿಂದ ಪತ್ರವನ್ನೋದಿದನು. ಸಿಡಿಲು ಬಡಿದಂತಾಯಿತವನಿಗೆ. ಏನು ಮಾಡುವುದೆಂದು ತೋಚದೆ ತುಸು ಹೊತ್ತು ಸ್ತಂಭಿತನಾಗಿ ನಿಂತುಬಿಟ್ಟನು. ಆ ಮೇಲೆ ಕೈಯಲ್ಲಿದ್ದ ಪುಸ್ತಕವೊಂದನ್ನು ಹತ್ತಿರದ ಮೇಜಿನ ಮೇಲಕ್ಕೆಸೆದು ದಡದಡನೆ ಕೆಳಗಿಳಿದು ಹೋದನು. ಹುಚ್ಚನಂತೆ ರಸ್ತೆಯಲ್ಲಿ ತುಸು ದೂರ ಓಡಿ ಅಷ್ಟರಲ್ಲಿ ಸಿಕ್ಕಿದ ಟೇಕ್ಸಿಯೊಂದನ್ನು ನಿಲ್ಲಿಸಿ ಅದರಲ್ಲಿ ಕುಳಿತು ಸಮುದ್ರದ ಕಡೆಗೆ ಧಾವಿಸಿದನು.

ಟೇಕ್ಸಿ ಬಿಟ್ಟು ರಿಕ್ಲಮೇಶನ್ ಗ್ರೌಂಡಿನ ಸಂಧ್ಯಾ ವಿಹಾರದ ಸಮುದ್ರ ತಟದಲ್ಲೆಲ್ಲಾ ಅತ್ಯವಸರದಿಂದ ಹುಡುಕುತ್ತಾ ನಡೆದು ಹೋದನು. ತಂಗಾಳಿಯು ಜೋರಿನಿಂದ ಬೀಸಿ ಅವನ ವೇಗವನ್ನು ತಡೆಯುತ್ತಿದ್ದಂತೆ ತೋರುತ್ತಿತ್ತು. ವಿಹಾರ ಸ್ಥಳದ ಬೊಂಬಾಯಿಯ ನಾಗರಿಕ ಸ್ತ್ರೀ ಪುರುಷರ ವಿವಿಧ ದೃಶ್ಯಗಳಾವವೂ ಆತನ ಕಣ್ಣಿಗೆ ತೋರುತ್ತಿರಲಿಲ್ಲ. ಅವೊಂದು ಸ್ತ್ರೀಯ ಮುಖವೆಲ್ಲ ತೋರಿಬಂದೀತೆಂಬ ಉತ್ಕಂಠತೆಯಿಂದ, ಹತ್ತಿರದ ಸಮುದ್ರದ ನೀರಿನಂತೆ ಅಲ್ಲೋಲಕಲ್ಲೋಲನಾಗುತ್ತಿತ್ತಾತ ಹೃದಯ. ರಿಕ್ಲಮೇಶನ್ ಗ್ರೌಂಡಿನ ಕಲ್ಲಿನ ಗೋಡೆಯ ತಡೆಯನ್ನಪ್ಪಳಿಸಿ ಒಡೆದು ಮುನ್ನುಗ್ಗಲು ಆತುರಗೊಂಡ ತೆರೆಗಳು ತರ್ಜಿಸಿ ಗರ್ಜಿಸುವಂತೆ ಆತನ ಆತ್ಮವು ಶರೀರದ ಬಂಧನವನ್ನು ಹರಿದೊಗೆದು ಅತಿವೇಗದಿಂದ ಮುಂದೆ ಮುಂದಕ್ಕೆ ತೀವ್ರಗತಿಯಿಂದ ಧಾವಿಸಲು ಹಾತೊರೆಯುತ್ತಿತ್ತು. ಆದಷ್ಟು ವೇಗದಿಂದ ಮುಂದೆಮುಂದೆ ನಡೆದು ಹೋದನವನು.

oo oo oo

"ಪ್ರಿಯಕರ, ಕೊಳೆ ಪದಾರ್ಥಗಳ ಸರ್ವಸಾಮಾನ್ಯ ಆಶಯವಾದ ಸಮುದ್ರ ಪಾಲಾಗುವ ಈ ಕೊಳಕು ದೇಹವನ್ನು ನೀವೇಕೆ ಇಲ್ಲಿಗೆ ತಂದಿರಿ? ನಿಮ್ಮ ಹೆಸರಿಗೆ ಕಳಂಕವನ್ನು ಹಚ್ಚಿಕೊಳ್ಳಲೆಂದೇ? ನಮ್ಮ ಮುದ್ದು ಕುವರನ ನಿರ್ದುಷ್ಟ ಜೀವನಕ್ಕೂ ಕೊಳೆಯು ತಾಗಲೆಂದೇ?"

'ಏನಾಯಿತೆಂದು ಹೇಳಬಾರದೆ ಸೋಫಿ? ಅದೇಕೆ ನನ್ನಿಂದ ಎಲ್ಲವನ್ನೂ ಮರೆ ಮಾಡುತ್ತಿರುವೆ?"

"ಏನೆಂದು ಹೇಳಲಿ ಪ್ರಿಯ! ನಾನು ಕಳಂಕಿತೆಯೆಂದಿಷ್ಟು ಹೇಳಿದರೆ ಮಾತ್ರ ಸಾಲದೆ ನಿಮಗೆ?"

"ಸಾಲದು, ಸಾಲದು ಸೋಫಿ! ಸಂಗತಿಯನ್ನೆಲ್ಲಾ ಮನಬಿಚ್ಚಿ ವಿವರವಾಗಿ ತಿಳಿಸು. ಆ ಕುರಿತಾದ ತೀರ್ಮಾನದ ಜವಾಬ್ದಾರಿಯನ್ನು ನನಗೆ ಬಿಡು'.

"ಹೇಳಲೇಬೇಕೆ ಪ್ರಿಯ? ನೀವದನ್ನು ಕೇಳಿ ಸಹಿಸಿಕೊಳ್ಳ ಬಲ್ಲಿರಾ?" ಧರಧರನೆ ಕಣ್ಣೀರಿಳಿದು ಬರುವುದು ಸೋಪಿಯ ಕಣ್ಣುಗಳಿಂದ.

"ಬಲ್ಲೆ ಬಲ್ಲೆ ಸೋಫಿ. ನನ್ನ ಹೃದಯವು ನಡೆದ ಸಂಗತಿಯನ್ನೆಲ್ಲಾ ತಿಳಿಯುವ ಆತುರದಿಂದ ತಪ್ತವಾಗಿರುವುದು ನೀನು ನಡೆದುದನ್ನೆಲ್ಲಾ ನಡೆದಂತೆ ತಿಳಿಸುವುದರಿಂದ ಮಾತ್ರ ಅದು ತಣ್ಣಗಾಗಬಲ್ಲುದು"

"ಹಾಗಾದರೆ ಕೇಳಿರಿ. ನಮ್ಮ ಮಗುವಿನ ಮುಖದಲ್ಲೊಂದೆಡೆ ಹುಳ ಮೇಯುವ ಚಿಹ್ನೆಯನ್ನು ಇಂದು ಬೆಳಿಗ್ಗೆ ಮೀಯಿಸುವಾಗ ಕಂಡೆ. ಅದಕ್ಕೆ ಕುಚ್ಚಿಕಾರ ಮುಲಾಮು ಹಚ್ಚಬೇಕೆಂದು ಕೆಂಪ್ ಎಂಡ್ ಕೋದಿಂದ ಅರ್ಧ ಡಬ್ಬಿ ತರಲು ಅಲ್ಲಿಗೆ ಹೋದೆ. ನಾನು ತೆಗೆದುಕೊಂಡು ರಸ್ತೆಗೆ ಬರುವಷ್ಟರಲ್ಲಿ ಇಬ್ಬರು ಬಿಳಿ ಸೈನಿಕರು ನನ್ನ ಬೆನ್ನು ಹಿಡಿದರು. ನಾನು ಹೆದರಿ ಜೋರಿನಿಂದ ನಡೆದು ಬಂದೆ. ಅವರು ಓಡಿಬಂದು ನನ್ನನ್ನು ಹಿಡಿದರು. ಟೇಕ್ಸಿಯೊಂದನ್ನು ಕರೆದು ನನ್ನನ್ನೆತ್ತಿ ಅದರೊಳಗೆ ಹಾಕಿದರು" ಕಂಠವು ರುದ್ಧವಾಗಿ ಮುಂದೆ ಮಾತಾಡಲಾರದಾದಳು ಸೋಫಿ. ಧಾರಾಪ್ರವಾಹಿಯಾಗಿ ಇಳಿದು ಬರುತ್ತಿತ್ತು ಅಶ್ರು.

ವಿಲಿಯಮ್ಸನಿಗೆಲ್ಲವೂ ತಿಳಿದುಹೋಯಿತು. ಅವನ ಮುಖವು ವಿವರ್ಣವಾಯಿತ್ತು. ಕಿಡಿ ಕಿಡಿಯಾಗಿ ಔಡುಗಚ್ಚಿದನು. ಆ ಮೇಲೆ ಸ್ವಲ್ಪ ಸಮಯದ ನಂತರ ನವೀನ ವಿಚಾರೋದಯವಾದಂತೆ ಸುಪ್ರಸನ್ನ ಶಾಂತತೆಯ ಮಂದ ಪ್ರಕಾಶವು ಆತನ ಮುಖವನ್ನಾವರಿಸಿತು- "ಯಾರ ಅತ್ಯಾಚಾರಕ್ಕೆ ಯಾರು ಹೊಣೆ ಸೋಫಿ?. ಸಾಯಬೇಕಾದುದು ನೀನಲ್ಲ, ಆ ನರರಾಕ್ಷಸ ಬಿಳಿ ಸೈನಿಕರು, ಪ್ರಿಯೆ! ನಿನ್ನ ಭೌತಿಕ ಶರೀರದ ಮೇಲೆ ಆ ಪಶುಗಳು ಬಲಾತ್ಕಾರದಿಂದ ಅತ್ಯಾಚಾರ ಮಾಡಿರಬಹುದು. ಆದರೆ ಮನಸಾ, ಆತ್ಮನಾ, ನನ್ನವಳೇ ಆಗಿರುವೆ ನೀನು. ನಿನ್ನ ವರ್ತನೆಯಿಂದದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿರುವುದು. ನಿನಗೆ ಈ ಅತ್ಯಾಚಾರದ ಸಂಗತಿಗಳನ್ನೆಲ್ಲಾ ಗುಟ್ಟನಲ್ಲಿಡಲು ಸಾಧ್ಯವಿತ್ತು. ಬಲಾತ್ಕಾರದಿಂದ ತನ್ನ ಮೇಲೆ ನಡೆದ ಅತ್ಯಾಚಾರಕ್ಕೆ ತಾನು ಜವಾಬ್ದಾರಳಲ್ಲೆಂದು ವಾದಿಸಬಹುದಿತ್ತು ನೀನು. ಹಾಗೆ ಮಾಡಿದ್ದರೆ ನೀನು ನನ್ನವಳಾಗಿರಲು ಅರ್ಹಳಾಗುತ್ತಿದ್ದಿಲ್ಲ. ನಿನ್ನ ವರ್ತನೆಯು, ನಿನ್ನ ಶರೀರದ ಮೇಲೆ-ಅತ್ಯಾಚಾರ ನಡೆಸಲ್ಪಟ್ಟರೂ, ಮನಸ್ಸೆಷ್ಟು ಶುದ್ಧವಿರುವುದೆಂಬುದನ್ನು ಪ್ರತಿಗೊಳಿಸಿರುವುದು. ಮುಖ್ಯವಾಗಿ ಮಾನಸಿಕ ಮತ್ತು ಆತ್ಮಿಕ ಸಂಬಂಧ ನಮ್ಮದು. ಆದುದರಿಂದ ಎಂದಿಗಿಂತಲೂ ನೀನು ನನಗೆ ಹೆಚ್ಚಿನ ಪ್ರಿಯತಮಳಾಗಿರುವೆ ಸೋಫಿ" ಎಂದು ಬಿಗಿದಪ್ಪಲು ಮುಂದಾದನು ಸೋಫಿಯನ್ನು ವಿಲಿಯಮ್. ವಿಸ್ಮಯ,ಮತ್ತು ಪ್ರೇಮೋದ್ವೇಗದಿಂದ ದೊಪ್ಪನೆ ಬಿದ್ದುಬಿಟ್ಟಳು ಸೋಪಿ ವಿಲಿಯಮನ ಕಾಲಿಗೆ. ಸೋಫಿಯನ್ನೆತ್ತಿ ಹಿಡಿದು ಚುಂಬಿಸಿ ನವ ಜೀವನವನ್ನಿತ್ತನವಳಿಗೆ ವಿಲಿಯಮ್.

—ವಿಚಾರಿ,

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಲಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ರಿ ಗಂಭೀರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಗಳು ಪ್ರೀತಿಸುವ ರಹಸ್ಯಗಳು, ವಶಿಸುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಖೋಗಕಾಲದ ಮರ್ಮಗಳು, ಇನ್ನೂ ಅನೇಕ ಕ್ರೀಡೆಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜನತಾ ಟ್ರೇಡಿಂಗ್ ಕಂಪೆನಿ

260. ಕೃಷ್ಣಬಜಾರ್ ರೋಡ್, ಮದ್ರಾಸ್.

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಪಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

NOTICE.

THE BOMBAY LIFE ASSURANCE COMPANY, LTD.

Notice having been given of the loss of Policy No. 86598 on the life of Mr. P. Varad Rao, a duplicate policy will be issued unless objection is lodged with us within one month from this date.

(Sd) Jyotendra L. Mehta
Managing Director.

Bombay, 19-3-1942.

ಸಮಾಚಾರ ಸಂಗ್ರಹ

ಖಾರ್ಕೋವಿನ ಮೇಲೆ ಒತ್ತಾಟ.

ರಷ್ಯನರು ಹೆಚ್ಚಿನ ಸೇನೆ ಮತ್ತು ಪ್ರಬಲ ಟ್ಯಾಂಕು ದಳವನ್ನು ಪಯೋಗಿಸಿ ಉಕ್ರೈನಿನ ಮುಖ್ಯ ಪಟ್ಟಣವಾದ ಖಾರ್ಕೋವಿನ ಹೊರ ಸುತ್ತಿನ ಕೋಟೆಯನ್ನು ಉತ್ತರದಲ್ಲಿ ಭೇದಿಸಿರುವರು. ಟಗನ್ರೋಗಿನ ಉತ್ತರದಲ್ಲಿ ಭೀಷಣ ಹೋರಾಟ ನಡೆಯುತ್ತಿದೆ. ಖಾರ್ಕೋವಿನಲ್ಲಿರುವ ೧೦ ಡಿವಿಜನು ಜರ್ಮನ್ ಸೇನೆಗೆ ಸಾಮಾಗ್ರಿಗಳು ಪೋಲ್ಟಾವದ ಮೂಲಕ ಹೋಗಬೇಕು. ಆದರೆ ಅದನ್ನು ಸೋವಿಯೆಟ್ ಸೈನಿಕರು ಆವರಿಸಿರುತ್ತಾರೆ. ಮಧ್ಯ ರಣರಂಗದಲ್ಲಿಯೂ ಘೋರ ಕದನ ನಡೆಯುತ್ತಿದೆ. ಕೆಲಿನಿನ್ ಪ್ರದೇಶದಲ್ಲಿ ಸೋವಿಯೆಟ್ ಸೇನೆಯು ಕೆಲವು ಹಳ್ಳಿಗಳನ್ನು ಗದ್ದಿರುತ್ತದೆ. ಸ್ಟರಯ ರೂಸದಲ್ಲಿ ಸಿಕ್ಕಿಬಿದ್ದಿರುವ 16 ನೇ ಜರ್ಮನ್ ಸೇನೆಯ ಪರಿಸ್ಥಿತಿಯು ನಿರಾಶಾಜನಕವಾಗಿದೆ. ಅಲ್ಲಿ ಹೆಚ್ಚೆಚ್ಚಾಗಿ ಜರ್ಮನ್ ಸೈನಿಕರು ಶರಣಾಗತರಾಗುತ್ತಿದ್ದಾರೆ.

ಹಿಟ್ಲರರು ಮತ್ತು ನಾಝಿ ಸೇನಾನಿಗಳು.

ರಷ್ಯದ ಯುದ್ಧದ ಭಯಂಕರ ಪರಿಣಾಮದಿಂದ ಜರ್ಮನ್ ಸೈನ್ಯಾಧಿಕಾರಿಗಳು ಮತ್ತು ಹಿಟ್ಲರರೊಳಗೆ ವೈಮನಸ್ಯವು ಹೊಗೆಯಾಡಹತ್ತಿರುವುದೆಂದು ತಿಳಿದುಬರುತ್ತದೆ. ಪ್ರಧಾನ ಜರ್ಮನ್ ಸೇನಾನಾಯಕರಾದ ಜನರಲ್ ಬ್ರೌಕಿಚರೇ ಮೊದಲಾದವರು ರಷ್ಯದ ಯುದ್ಧಕ್ಕೆ ಪ್ರತಿಕೂಲವಿದ್ದರು. ಆದರೆ ಹಿಟ್ಲರರು ಅವರ ಅಭಿಪ್ರಾಯವನ್ನು ಗಣ್ಯಮಾಡದೆ ಯುದ್ಧ ಹೂಡಿದರು. ಆ ಮೇಲೆ ಕೂಡಾ ಹಿಟ್ಲರರು ಬ್ರೌಕಿಚರ ಸಲಹೆಯನ್ನು ತಿರಸ್ಕರಿಸಿ ಜಾಗ್ರತೆ ಮಾಡದೆ ರಷ್ಯದಲ್ಲಿ ಮುಂದೊತ್ತಿದುದರಿಂದ ಇಂದು ಸೋವಿಯೆಟ್ ಸೇನೆಯ ಪ್ರತಿ ಧಾಳಿಗೆ ಜರ್ಮನ್ ಸೇನೆಯು ಸಿಕ್ಕಿ ಹಣ್ಣಾಗುವಂತಾಗಿದೆ. ಇಂದು ಆರಂಭದ ಜರ್ಮನ್ ಸೇನೆಯ ಛಾಯೆ ಮಾತ್ರ ಇದೆ. ಆದುದರಿಂದ ಹಿಟ್ಲರರನ್ನು ಅಧಿಕಾರದಿಂದ ತಳ್ಳಿಹಾಕಬೇಕೆಂದು ರಷ್ಯನರಿಗೆ ಸೆರೆಸಿಕ್ಕಿರುವ ಜರ್ಮನ್ ಸೈನ್ಯಾಧಿಕಾರಿಗಳು ಕೆಲವರು ವಿನಂತಿಮಾಡಿಕೊಂಡಿರುತ್ತಾರೆ. ಒಮ್ಮೆ ಅಧಿಕಾರದಿಂದ ತೆಗೆದು ಹಾಕಲ್ಪಟ್ಟಿರುವ ಜನರಲ್ ಬ್ರೌಕಿಚ್ ಮತ್ತು ಜನರಲ್ ರುಂಡ್ಸ್ಟೆಡ್ಟರನ್ನು ಹಿಟ್ಲರರು ವಸಂತಋತುವಿನ ಧಾಳಿಗಾಗಿ ಪುನಃ ಕರೆದಿರುವರೆಂದು ತಿಳಿದುಬರುತ್ತದೆ.

ಚೈನದೊಡನೆ ಶಾಂತಿಯ ಪ್ರಯತ್ನ

ಚೈನದೊಡನೆ ಶಾಂತಿ ಸ್ಥಾಪಿಸುವ ಕುರಿತು ಜಪಾನು ನಿಶ್ಚಿತ ಸೂಚನೆಗಳನ್ನು ಮಾಡಲಿರುವುದೆಂದು ಸುದ್ದಿಯುಂಟಾಗಿದೆ. (1) ಜಪಾನಿನ ಆಶ್ರಯದ ನವ ರಚನೆಯಲ್ಲಿ ಸಹಕರಿಸುವ ಶರತ್ತಿನಿಂದ ಮಾರ್ಶಲ್ ಚ್ಯಾಂಗ್ ಕೈಶೆಕ್ಕರ ಸರಕಾರವನ್ನು ಅಂಗೀಕರಿಸುವುದು. (2) ಕೆಲವು ಬಂದರುಗಳ ಹೊರತು ಉಳಿದ ಆಕ್ರಮಿತ ಪ್ರದೇಶವನ್ನೆಲ್ಲಾ ಬಿಟ್ಟುಕೊಡುವುದು. (3) ಎಲ್ಲಾ ಕೈದಿಗಳನ್ನೂ ಬಿಡುವುದು. (4) ಯುದ್ಧದ ಸಂಬಂಧವಾಗಿ ಇತ್ತಂಡದವರೂ ಪರಿಹಾರ ದ್ರವ್ಯವನ್ನೇನೂ ಕೊಡಲಿಕ್ಕಿಲ್ಲ. (5) ಕಸ್ಟಮ್ಸ್ ಕರದ ಕುರಿತು ಒಂದುಗೂಡಿ ನಡೆಯುವುದು. (6) ಚೈನಾ ಮತ್ತು ಜಪಾನುಗಳೊಳಗೆ ಫೆಡರೇಶನ್ ಸ್ಥಾಪಿಸಲ್ಪಟ್ಟು ಚೈನಕ್ಕೆ ರಂಗೂನಿನಲ್ಲಿ ಸ್ಥಳ ಕೊಡುವುದು. ಪ್ರತಿಯಾಗಿ ಚೈನವು ಅಮೆರಿಕ ಮತ್ತು ಇಂಗ್ಲೆಂಡುಗಳ ಸಂಬಂಧ ಕಡಿದು ರಷ್ಯದೊಡನೆ ಜಪಾನು ಯುದ್ಧ ಹೂಡಿದರೆ ಮೈತ್ರಿಯ ತಾಟಸ್ಥ್ಯವ ವಹಿಸಬೇಕು. ಚೈನದಲ್ಲಿ ಫೆಡರೇಶನನ್ನು ಸ್ಥಾಪಿಸಬೇಕೆಂಬುದು ಜಪಾನಿನ ಸೂಚನೆಗಳೆಂದೂ, ಅವುಗಳನ್ನು ಚೈನವು ಚರ್ಚಿಸಲು ಕೂಡಾ ಸಿದ್ಧವಿರಲಾರದೆಂದೂ ನಂಬಲಾಗಿದೆ.

ಜನರಲ್ ಮೆಕ್ ಆರ್ಥರರು

ಇದೇ ತಾ. 20ರಲ್ಲಿ ಫಿಲಿಪ್ಪೈನ್ಸಿನಿಂದ ಆಸ್ಟ್ರೇಲಿಯಕ್ಕೆ ಹೋಗಿ ಅಲ್ಲಿಯ ಸರಕಾರ ಮತ್ತು ಜನತೆಯಿಂದ ಅತ್ಯುತ್ಸಾಹದ ಸ್ವಾಗತ ಪಡೆದಿರುವರು. ಜಪಾನಿನ ವಿರೋಧವಾಗಿ ಅಮೆರಿಕದ ಧಾಳಿಯನ್ನು ಆಸ್ಟ್ರೇಲಿಯದ ಮೂಲಕ ನಡಿಸುವ ಕುರಿತು ವಿಚಾರಿಸುವುದಕ್ಕೋಸ್ಕರ ಮೆಕ್ ಆರ್ಥರರು ಆಸ್ಟ್ರೇಲಿಯಕ್ಕೆ ಹೋದುದಾಗಿದೆ. ಅವರು ಆಸ್ಟ್ರೇಲಿಯದಿಂದ ಬೇಗನೆ ಫಿಲಿಪ್ಪೈನಿಗೆ ಹಿಂದಿರುಗಲಿರುವರು. ಜಪಾನರಿಂದಾಗಿ ಫಿಲಿಪ್ಪೈನನ್ನು ರಕ್ಷಿಸಿಕೊಬಹುದೆಂದು ಅವರ ದೃಢ ವಿಶ್ವಾಸ.

ಜಪಾನಿನ ನೌಕಾನಷ್ಟ

ನ್ಯೂಗಿನಿಯ ಕರಾವಳಿಯಲ್ಲಿ ಮಿತ್ರರಾಷ್ಟ್ರಗಳ ವಿಮಾನಗಳು ಜಪಾನ ಹಡಗಗಳ ಮೇಲೆ ಪ್ರಬಲ ಧಾಳಿ ನಡಿಸಿ 23 ಜಪಾನ ಹಡಗಗಳು ನಷ್ಟಹೊಂದಿವೆಯೆಂದು ತಿಳಿದುಬರುತ್ತದೆ. ಟೈಮೂರಿನ ಬಳಿ ಎರಡು ಜಪಾನ ಕ್ರೂಸರ್ ಹಡಗಗಳು ಮುಳುಗಿಸಲ್ಪಟ್ಟಿವೆ. ಇಷ್ಟರ ವರೆಗೆ ಜಪಾನು ತನ್ನ ನೌಕಾಪಡೆಯ ಐದನೇ ಒಂದಂಶವನ್ನು ಕಳಕೊಂಡಿರುವುದೆಂದು ನಂಬಲಾಗಿದೆ. ಹೆಚ್ಚೆಚ್ಚಾಗಿ ಜಪಾನ ಬೋಂಬರ್ ವಿಮಾನಗಳು ಆಸ್ಟ್ರೇಲಿಯಕ್ಕೆ ಒದಗಿ[illegible] ಪೂರ್ವದಲ್ಲಿ ಮಿತ್ರ ರಾಷ್ಟ್ರಗಳ ಬಲವು ದಿನೇ ದಿನೇ [illegible]ಗುತ್ತಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ತಾ 1[illegible]ರಲ್ಲಿ ನಡೆಯಿತು. ಶೇಟ ಜಮುನಾಲಾಲ್ ಬಜಾಜರ ನಿಧನದ ಕುರಿತು ದುಃಖ ಸೂಚಿಸಲಾಯಿತು. ಕಾಂಗ್ರೆಸ್ ಸ್ವಯಂಸೇವಕ ದಳದ ಸಂಘಟನೆಯ ಕುರಿತು ಬೇರೆ ಬೇರೆ ಪ್ರಾಂತಗಳಿಂದ ಬಂದ ವರದಿಯನ್ನು ಪರಿಶೀಲಿಸಲಾಯಿತು. ನಾಗರಿಕ ಸಂರಕ್ಷಣೆಯ ಕುರಿತು ಕಾಂಗ್ರೆಸು ಮಾಡುತ್ತಿರುವ ಕೆಲಸದ ಕುರಿತು ಸರಕಾರವು ವಹಿಸಿರುವ ಧೋರಣೆಯನ್ನು ಪರ್ಯಾಲೋಚಿಸಿ ಪ್ರಾಂತಿಕ ಕಮಿಟಿಗಳಿಗೆ ಹೊಸ ಸೂಚನೆಗಳನ್ನೀಯುವ ನಿರ್ಧಾರ ಮಾಡಲಾಯಿತು. ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರನ್ನು ಕಂಡು ಮಾತಾಡಲು ಕಾಂಗ್ರೆಸ್ ಪ್ರೆಸಿಡಂಟರು, ಪಂಡಿತ ನೆಹರು, ರಾಜಾಜಿ ಮೊದಲಾದ ೬ ಮಂದಿಯನ್ನು ಆರಿಸಲಾಯಿತು. ಆದರೆ ಈ ಆರು ಮಂದಿ ಕ್ರಿಪ್ಸರನ್ನು ಕಾಣುವ ಮೊದಲು ಕಾಂಗ್ರೆಸ್ ಪ್ರೆಸಿಡೆಂಟರೊಬ್ಬರೇ ಕಂಡು ಮಾತಾಡಿಕೊಳ್ಳಬೇಕೆಂದು ನಿಶ್ಚೈಸಲಾಯಿತು. ವರ್ಕಿಂಗ್ ಕಮಿಟಿಯ ಅಪರಾಹ್ನದ ಸಭೆಗೆ ಮಹಾತ್ಮ ಗಾಂಧಿಯವರೂ ಬಂದಿದ್ದರು.

ಕಾಂಗ್ರೆಸು ಮತ್ತು ಲೀಗುಗಳ ರಾಜಿಯ ಯತ್ನ

ಕಾಂಗ್ರೆಸು ಮತ್ತು ಮುಸ್ಲಿಮು ಲೀಗುಗಳೊಳಗೆ ರಾಜಿ ಮಾಡುವ ಕುರಿತು ಪಂಜಾಬಿನ ಪ್ರಧಾನ ಮಂತ್ರಿಗಳು ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸುತ್ತಿದ್ದು ಅದು ಸಂಭವನೀಯವೆಂಬ ವಿಶ್ವಾಸವುಳ್ಳವರಿರುತ್ತಾರೆ. ಅವರು ಡಿಲ್ಲಿಗೆ ಹೋಗಿ ತನ್ನ ಪ್ರಯತ್ನವನ್ನು ಮುನ್ನಡೆಸುತ್ತಿದ್ದಾರೆ. ಸರ್ ಸಿಕಂದರರು, ಇಷ್ಟರಲ್ಲೇ ಕಾಂಗ್ರೆಸ್ ಮತ್ತು ಲೀಗಿನ ಮುಖಂಡರೊಡನೆ ಸಂಪರ್ಕ ಬೆಳಸಿ ಮಾತುಕತೆ ನಡಿಸಿರುತ್ತಾರೆ. ಅವರ ಪ್ರಯತ್ನವು ಫಲಕಾರಿಯಾದ ಪಕ್ಷದಲ್ಲಿ, ಕಾಂಗ್ರೆಸ್ ಮತ್ತು ಲೀಗುಗಳ ಒಮ್ಮತದ ಕೇಳಿಕೆಗಳನ್ನು ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರ ಮುಂದಿಡಲಾಗುವುದೆಂದು ನಂಬಲಾಗಿದೆ.

ಹುಡುಗರು

ರಾಯಲ್ ಇಂಡಿಯನ್ ನೇವಿಗೋಸ್ಕರ

ಭಾರತದ ನೌಕಾಬಲಕ್ಕೆ ಹುಡುಗರನ್ನು ಚುನಾಯಿಸುವುದಕ್ಕಾಗಿ ನೌಕಾದಳದ ರಿಕ್ರೂಟಿಂಗ್ ಪಾರ್ಟಿಯೊಂದು ಕೆಳಗೆ ಕಂಡ ಸ್ಥಳಗಳಿಗೆ ಈ ತಾರೀಕುಗಳಲ್ಲಿ ಬರುವದು.

14ರಿಂದ 15½ ವರ್ಷದ ಹುಡುಗರು ಎಚ್. ಎಮ್. ಐ. ಎಸ್. 'ದಿಲಾವರ್' ನಲ್ಲಿ ಶಿಕ್ಷಣವನ್ನು ಪ್ರಾರಂಭಿಸುವರು.

15ರಿಂದ 17 ವರ್ಷದ ಹುಡುಗರು ಶಿಕ್ಷಣಕ್ಕಾಗಿ ನೆಟ್ಟಗೆ ಎಚ್. ಎಮ್. ಐ. ಎಸ್. 'ಬಹದ್ದೂರ್'ಗೆ ಸಾಗುವರು.

ಇದಕ್ಕೆ ಬೇಕಾದ ವಿದ್ಯಾಭ್ಯಾಸ

ಎಚ್ ಎಮ್ ಐ ಎಸ್. 'ದಿಲಾವರ್':-ಕನಿಷ್ಟಪಕ್ಷ IV ಫಾರ್ಮ್ ವರೆಗೆ ಓದಿರಬೇಕು.
ಎಚ್. ಎಮ್. ಐ. ಎಸ್. 'ಬಹದ್ದೂರ್'.-ಕನಿಷ್ಟಪಕ್ಷ V ಫಾರ್ಮ್ ವರೆಗೆ ಓದಿರಬೇಕು.

ಮುಖ್ಯ ಸೂಚನೆ:-ಹುಡುಗರು ತಂದೆಯಿಂದಾಗಲೀ, ತಂದೆಯಿಲ್ಲದಿದ್ದರೆ ತಾಯಿಯಿಂದಾಗಲೀ, ತಂದೆತಾಯಿ ಇಬ್ಬರೂ ಇಲ್ಲದಿದ್ದರೆ ಕಾಯಿದೆಗನುಸಾರವಾಗಿ ಒಪ್ಪಿಸಲ್ಪಟ್ಟ ಪಾಲಕರಿಂದಾಗಲೀ, ಹುಡುಗನು ನೌಕಾಬಲಕ್ಕೆ ಸೇರುವುದಕ್ಕೆ ಒಪ್ಪಿಗೆಯನ್ನು ಬರವಣಿಗೆಯಲ್ಲಿ ತರಬೇಕು. ಈ ಬರವಣಿಗೆಗೆ ಗೌರವಸ್ಥರಾದ ಯಾರಾದರೂ ಸಾಕ್ಷಿ ಹಾಕಬೇಕು. ಚುನಾಯಿಸಲ್ಪಟ್ಟ ಹುಡುಗರು 1942ನೇ ಜೂಲೈ 1ನೇ ತಾರೀಕಿನ ದಿವಸ ಕರಾಚಿಗೆ ಶಿಕ್ಷಣಕ್ಕಾಗಿ ಬಂದು ಸೇರಬೇಕು. ರೈಲ್ವೇ ವಾರಂಟುಗಳೂ ಮತ್ತು ಇತರ ಆಜ್ಞೆಗಳೂ ಅವರಿಗೆ ಜಾಹೀರು ಮಾಡಲ್ಪಡುವುದು.

ಸೇರುವಾಗ ಸಂಬಳ

ಎಚ್. ಎಮ್. ಐ. ಎಸ್. 'ದಿಲಾವರ್':-ತಿಂಗಳಿಗೆ 10 ರೂಪಾಯಿ.
ಎಚ್ ಎಮ್ ಐ. ಎಸ್. 'ಬಹದ್ದೂರ್':-ತಿಂಗಳಿಗೆ 15 ರೂಪಾಯಿ.

ಆಹಾರ ಮತ್ತು ಬಟ್ಟೆಬರೆಗಳು ಪುಕ್ಕಟೆ

ಎಚ್. ಎಮ್. ಐ. ಎಸ್. 'ದಿಲಾವರ್' ಮತ್ತು ಎಚ್. ಎಮ್ ಐ ಎಸ್. 'ಬಹದ್ದೂರ್'ನಲ್ಲಿ ಅತ್ಯುತ್ತಮವಾದ ಶಿಕ್ಷಣವು ದೊರಕುವುದು ಮತ್ತು ಶಿಕ್ಷಣ ಪಡೆದವರಿಗೆ ರಾಯಲ್ ಇಂಡಿಯನ್ ನೌಕಾಬಲದಲ್ಲಿ ಒಳ್ಳೇ ನೌಕರಿ ಸಿಕ್ಕುವ ಸಂಭವನೆಯುಂಟು

[illegible] ಚುನಾಯಿಸುವುದಕ್ಕಾಗಿ ರಿಕ್ರೂಟಿಂಗ್ ಪಾರ್ಟಿಯವರು ಈ ಜಿಲ್ಲೆಗಳಿಗೆ ಕೆಳಗೆ ಕಂಡ ತಾರೀಕುಗಳಲ್ಲಿ ಬರುವರು.

ತಲಪುವ ತಾರೀಕು ಮತ್ತು ವೇಳೆ	ಚುನಾವಣೆ ನಡೆಯುವ ಸ್ಥಳ ಮತ್ತು ತಾರೀಕು	ಅಲ್ಲಿಂದ ಹೊರಡುವ ವೇಳೆ
ಮಾರ್ಚ 12/ 17 40	ಮದರಾಸ್ 13/14 ಮಾರ್ಚ	ಮಾರ್ಚ 15/ 20 45
,, 16 05-48	ತಿರುಚಿನಾಪಳ್ಳಿ 16/ ಮಾರ್ಚ	ಮಾರ್ಚ 17/07-20
,, 17 11 27	ಮದುರೆ 18/ ಮಾರ್ಚ	ಮಾರ್ಚ 19/ 11-45
,, 19 16-13	ತಿನ್ನವೆಲ್ಲಿ 20/ ಮಾರ್ಚ	ಮಾರ್ಚ 21/ 08-33
,, 21 18 50	ತಿರುವನಂತಪುರಂ 23/ ಮಾರ್ಚ	ಮಾರ್ಚ 23/ 18-52
,, 23/ 21 27	ಕ್ವಿಲೋನ್ 24/ ಮಾರ್ಚ	ಮಾರ್ಚ 25/ 09-00
,, 25 14 00	ಎರ್ನಾಕುಲಂ 26/ ಮಾರ್ಚ	ಮಾರ್ಚ 27/ 13-41
,, 27/ 16 01	ತಿರುಚ್ಚೂರ್ 28/ ಮಾರ್ಚ	ಮಾರ್ಚ 29/ 11-56
,, 29/ 17 07	ಕ್ಯಾಲಿಕಟ್ 30/ ಮಾರ್ಚ	ಮಾರ್ಚ 31/ 11-37
,, 31/ 13 38	ಕ್ಯಾನನೂರ್ 1/ ಎಪ್ರಿಲ್	ಎಪ್ರಿಲ್ 2/ 10 34
ಎಪ್ರಿಲ್ 2/ 14 55	ಮಂಗಳೂರ್ 3/ ಎಪ್ರಿಲ್	ಎಪ್ರಿಲ್ 4/ 09-06
,, 4/ 17-00	ಮರ್ಕಾರ 6/ ಎಪ್ರಿಲ್	ಎಪ್ರಿಲ್ 7/ 07-00
,, 7/ 19 01	ಪಾಲ್ಘಾಟ್ 8/ ಎಪ್ರಿಲ್	ಎಪ್ರಿಲ್ 9/ 10 00
,, 9/ 12 56	ಕೊಯಂಬತ್ತೂರ್ 10/ ಎಪ್ರಿಲ್	ಎಪ್ರಿಲ್ 12/ 07-21
,, 12/ 12 24	ಸೇಲಮ್ 13/ ಎಪ್ರಿಲ್	ಎಪ್ರಿಲ್ 14/ 06-30
,, 14 13-40	ಬೆಂಗಳೂರ್ 15/ ಎಪ್ರಿಲ್	ಎಪ್ರಿಲ್ 16/

ಮೇಲೆ ಹೇಳಿರುವ ತಲಪುವ ವೇಳೆ ಮತ್ತು ಹೊರಡುವ ವೇಳೆ ಇವೆಲ್ಲಾ ಸರಾಸರಿ ಮತ್ತು ಬದಲಾವಣೆ ಹೊಂದಬಹುದು. ಚುನಾವಣೆಯ ವಿಷಯವಾಗಿ ಎಲ್ಲಾ ವಿವರಗಳನ್ನೂ ಶಾಲೆಯ ಮುಖ್ಯೋಪಾಧ್ಯಾಯರಿಂದಾಗಲೀ ಅಥವಾ ಶಾಲೆಗಳ ಜಿಲ್ಲಾ ಇನ್ಸ್ಪೆಕ್ಟರ್‌ಗಳಿಂದಾಗಲೀ ಕೇಳಿ ತಿಳಿದುಕೊಳ್ಳಬಹುದು. ವಿದ್ಯಾಭ್ಯಾಸದ ಪರೀಕ್ಷೆಗಳೂ ಮತ್ತು ಡಾಕ್ಟರ್ ಪರೀಕ್ಷೆಗಳೂ ಮೇಲೆ ಹೇಳಿದ ಸ್ಥಳಗಳಲ್ಲಿ ಆಯಾಯಾ ತಾರೀಕಿನಲ್ಲಿ ನಿಮ್ಮೂರಿನ ವಿದ್ಯಾಭ್ಯಾಸದ ಇಲಾಖೆಯವರು ಪ್ರಸಿದ್ಧಪಡಿಸಿದ ಜಾಗದಲ್ಲಿ 9 ಘಂಟೆಗೆ ನಡೆಯುವುದು. ಅರ್ಜಿದಾರರಿಲ್ಲಿ ಬೇಗ್ಗೆ ಬರುವದೇ ಉತ್ತಮ. ಯಾಕೆಂದರೆ ಮಧ್ಯಾಹ್ನದ ವೇಳೆಯಲ್ಲಿ ಪರೀಕ್ಷೆಗಳು ನಡೆಯದೇ ಇರಬಹುದು.

The Canara Banking Corporation Ltd.
(Incorporated in British India with limited liability)
ESTD 1906.
will now receive
SEASON DEPOSITS
for a period of 4 months
at 3% p. a.
AT ALL ITS BRANCHES.

ಉಡುಪಿ, ಗುರುವಾರ, ೨೬-೩-೧೯೪೨

ಕ್ರಿಪ್ಸರು ಜಯಶೀಲರಾಗುವರೇ?

ಬ್ರಿಟಿಷ್ ಮಂತ್ರಿಮಂಡಲವು ನಿಶ್ಚಯಿಸಿರುವ ಪ್ಲೇನನ್ನು ಹಿಂದೀ ರಾಜಕೀಯ ಮುಖಂಡರ ಮುಂದಿಟ್ಟು ಆ ಕುರಿತು ಅವರ ಅಭಿಪ್ರಾಯ ಕೇಳಿ, ಹಿಂದೀ ಬಿಕ್ಕಟ್ಟನ್ನು ಆದಷ್ಟು ಶೀಘ್ರವಾಗಿ ನಿವಾರಿಸುವ ಪ್ರಯತ್ನ ಮಾಡಲು ಸರ್, ಸ್ಟ್ಯಾಫೋರ್ಡ್ ಕ್ರಿಪ್ಸರು ಬ್ರಿಟಿಷ್ ಸರಕಾರದ ಪರವಾಗಿ ಹಿಂದುದೇಶಕ್ಕೆ ಬಂದಿರುವರಷ್ಟೆ. ಅವರು ಯಾವ ರೀತಿಯಲ್ಲಿ ಹಿಂದೀ ಮುಖಂಡರ ಅಭಿಪ್ರಾಯ ಪಡೆಯುವರು? ಮತ್ತು ಭಿನ್ನ ಭಿನ್ನ ಅಭಿಪ್ರಾಯಗಳುಳ್ಳ ಹಿಂದುದೇಶದ ರಾಜಕೀಯ ಮತ್ತು ಜಾತೀಯ ಪಕ್ಷಗಳ ಮುಖಂಡರನ್ನು ಹೇಗೆ ಒಮ್ಮತಕ್ಕೆ ತರುವರೋ ತಿಳಿಯದು! ಇಷ್ಟರಲ್ಲೇ ತಮ್ಮನ್ನು ಆಮಂತ್ರಿಸಲಿಲ್ಲ; ತಮಗೆ ಪ್ರಾತಿನಿಧ್ಯ ದೊರೆತಿಲ್ಲೆಂದೆಲ್ಲಾ ಕೆಲವರು ಕೂಗೆಬ್ಬಿಸಲಾರಂಭಿಸಿರುತ್ತಾರೆ. ಯುದ್ಧವು ಹಿಂದುದೇಶದ ದ್ವಾರಕ್ಕೆ ಬಂದಿರುವ ಗಂಡಾಂತರದ ಸಂದರ್ಭದಲ್ಲೂ ಹಿಂದೀಯರನೇಕರು ಕಣ್ಣು ತೆರೆದಿಲ್ಲ. ಈ ಸಂಧಿಕಾಲದಲ್ಲಾದರೂ ಹಿಂದೀಯರೆಲ್ಲಾ ಒಕ್ಕಟ್ಟಾಗಿ ನಡೆದು ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂಬ ಆತುರವು ಅವರಲ್ಲುಂಟಾಗಿರುವುದಿಲ್ಲೆಂಬುದು ಮಹೋದಾಶ್ಚರ್ಯದ ವಿಷಯ. ಇಂತಹ ಮನೋವೃತ್ತಿಯ ಜನರನ್ನು ಸಂಪೂರ್ಣವಾಗಿ ಅಲಕ್ಷ್ಯಿಸಿ ಕೆಲಸ ಮಾಡಿದರೆ ಮಾತ್ರ ಕ್ರಿಪ್ಸರಿಗೆ ಹಿಂದೀ ಬಿಕ್ಕಟ್ಟನ್ನು ನಿವಾರಿಸಲು ಸಾಧ್ಯವಾಗಬಹುದು. ಅವರನ್ನು ಸಮಾಧಾನಪಡಿಸುವ ಪ್ರಯತ್ನವನ್ನವರು ಮಾಡಿದರೆ, ನಿರಾಶೆಗೊಳ್ಳಬೇಕಾಗುವುದು.

ಸರ್ವಸಾಮಾನ್ಯವಾಗಿ ನ್ಯಾಯವಾದೊಂದು ಮಾರ್ಗವನ್ನು ಕ್ರಿಪ್ಸರು ಹಿಡಿದು, ಅದಕ್ಕೆ ಎಲ್ಲಾ ಪಕ್ಷ ಮತ್ತು ಜಾತಿಗಳವರ ಸಮ್ಮತಿಯನ್ನು ಪಡೆಯುವ ಪ್ರಯತ್ನವನ್ನು ಮಾಡಿದರೆ ಮತ್ತು ಅದಕ್ಕೆ ಬ್ರಿಟಿಷ್ ಸರಕಾರದ ಬೆಂಬಲದ ಭಾರವಿದ್ದರೆ ಮಾತ್ರ, ಇಷ್ಟರವರೆಗೆ ಯಾರಿಂದಲೂ ಬಿಡಿಸಲಾಗದ ಸಮಸ್ಯೆಯನ್ನವರಿಗೆ ಬಗೆಹರಿಸಲು ಸಾಧ್ಯವಾಗಬಹುದು. ಬದಲಿಗೆ ಅವರು, ಈ ಮೊದಲು ವೈಸರಾಯರು ಮಾಡಿದಂತೆ ಎಲ್ಲವರ ಅಭಿಮತವನ್ನು ಪಡೆದು ಸರ್ವರನ್ನೂ ಸಮಾಧಾನಪಡಿಸುವ ಪ್ರಯತ್ನ ಮಾಡಿದರೆ ಫಲ ದೊರೆಯಲಾರದು. ಸಂಕುಚಿತ ಜಾತೀಯ ವಾದಿಗಳನ್ನು ಸಮಾಧಾನಪಡಿಸಿ ಕೆಲಸ ಮಾಡಲು ಸಾಧ್ಯವೇ ಇಲ್ಲ. ವಿಶೇಷ ಸಲುಗೆ ಕೊಟ್ಟು, ಹೆಗಲ ಮೇಲೆ ಹೊತ್ತುಕೊಂಡು ಕೆಡಿಸಲ್ಪಟ್ಟಿರುವ ಮಕ್ಕಳಂತಾಗಿದ್ದಾರೆ ಈ ಜಾತೀಯ ವಾದಿಗಳು. ತನ್ನ ಬೇಳೆ ಬೇಯಿಸಲೆಂದು ಸರಕಾರವೇ ಎಬ್ಬಿಸಿದ ಪ್ರೇತಗಳವು. ಅವನ್ನೀಗ ಅದೇ ಉಚ್ಚಾಟನೆ ಮಾಡಬೇಕೇ ಹೊರತು ಅನ್ಯರಿಂದ ಸಾಧ್ಯವಿಲ್ಲ. ಸರಕಾರವು ನಿಶ್ಚಿತ ಘೋಷಣೆ ಮಾಡಿ ಅದನ್ನು ಶೀಘ್ರವಾಗಿ ಜ್ಯಾರಿಗೆ ತರುವ ದೃಢ ನಿರ್ಧಾರ ಮಾಡಿ, ಅದಕ್ಕೆ ಜಾತೀಯ ವಾದಿಗಳೂ, ದೇಶೀಯ ರಾಜರುಗಳೇ ಮೊದಲಾದವರೂ ಒಪ್ಪಲೇ ಬೇಕೆಂದು ಒತ್ತಾಯ ಮಾಡಿದರೆ ಹಿಂದೀ ರಾಜಕೀಯ ಬಿಕ್ಕಟ್ಟು ಬಿಡಿಸಲ್ಪಡುವ ಸಂಭವ ತೋರುತ್ತದೆ. ಇಲ್ಲವಾದರೆ ಹಳೆಯ ಇತಿಹಾಸವೇ ಪುನರಾವರ್ತಿತವಾಗಬಹುದು. ಕ್ರಿಪ್ಸರು ಹಿಂದುದೇಶದ ಪರಿಸ್ಥಿತಿಯನ್ನು ಮೊದಲೇ ಚೆನ್ನಾಗಿ ತಿಳಿದವರಾದುದರಿಂದ, ಮತ್ತು ಪ್ರಕೃತದ ಸಂದಿಗ್ಧ ಪರಿಸ್ಥಿತಿಯಲ್ಲಿ ವ್ಯರ್ಥ ಮಾತುಕತೆ ಮತ್ತು ಚರ್ಚೆಯಲ್ಲಿ ಕಾಲ ಕಳೆಯುವುದು ಮೂರ್ಖತನವಾದುದರಿಂದ ಹಿಂದೀಯರೆಲ್ಲರ ಅಭಿಮತವನ್ನವರು ತಿಳಿಕೊಂಡು ತನಗೆ ತೋರಿದ ತೀರ್ಮಾನಕ್ಕೆ ಬರುವಂತಾದರೆ ಮಾತ್ರ ಅವರ ಪ್ರಯತ್ನವು ಸಾರ್ಥಕವಾಗಬಹುದು.

ಕ್ರಿಪ್ಸರು ಹಿಂದು ದೇಶಕ್ಕೆ ಬರುವ ಮೊದಲೇ, ಹಿಂದೀ ಮುಖಂಡರು, ತಮ್ಮ ದೇಶಕ್ಕುಂಟಾಗಿರುವ ಗಂಡಾಂತರವನ್ನು ಮನಗಂಡು ಸ್ವದೇಶ ರಕ್ಷಣೆಗಾಗಿ ಒಂದುಗೂಡಿ ನಡೆಯುವ ಪ್ರಯತ್ನ ಮಾಡುತ್ತಿದ್ದರೆ ಅದೆಷ್ಟು ಯಶಸ್ಕರವಿತ್ತು! ದೇಶದ ಎಲ್ಲಾ ರಾಜಕೀಯ ಮತ್ತು ಜಾತೀಯ ಪಕ್ಷಗಳವರೂ, ಹೊರಗಣ ಆಕ್ರಮಣವನ್ನು ವಿರೋಧಿಸುವ ನಿರ್ಧಾರವುಳ್ಳವರಿರುವರು. ಅಂದ ಮೇಲೆ ವಿರೋಧಿಸುವ ಬಗೆ ಯಾವುದು? ಹೇಗೆ? ಬ್ರಿಟಿಷ್ ಸರಕಾರವು ಅದಕ್ಕೇನು ಮಾಡಬೇಕೆಂಬುದನ್ನು ಒಮ್ಮತದಿಂದ ಅವಕ್ಕೆ ಹಿಂದೀಯರು ತಿಳಿಸುವಂತಾಗುತ್ತಿದ್ದರೆ, ಈ ಸಂದರ್ಭದಲ್ಲಿ ಆ ರೀತಿ ನಡೆಯದೆ ಬ್ರಿಟನಿಗೆ ಗತ್ಯಂತರವಿರುತ್ತಿದ್ದಿಲ್ಲ. ಇನ್ನಾದರೂ ಅದು ಅಸಾಧ್ಯವಲ್ಲ. ಕ್ರಿಪ್ಸರ ಸಮ್ಮುಖದಲ್ಲಿಯೇ ಹಿಂದೀ ಪ್ರತಿನಿಧಿಗಳೆಲ್ಲರೂ ಒಟ್ಟು ಸೇರಿ ಒಮ್ಮತದ ಕೇಳಿಕೆಗಳನ್ನು ಅವರ ಮುಂದಿರಿಸಬಹುದು. ಸರ್. ಸಿಕಂದರ್ ಹಯಾತ್ ಖಾನರು, ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಐಕ್ಯಸ್ಥಾಪನೆಯ ಪ್ರಯತ್ನವನ್ನು ಮಾಡುತ್ತಿರುವರೆಂಬುದು ಶುಭಸೂಚನೆಯಾಗಿದೆ. ಅವರ ಪರಿಣಾಮವು ಇನ್ನು ಎರಡು ಮೂರು ದಿನಗಳಲ್ಲಿ ತಿಳಿಯುವುದೆಂದವರು ಹೇಳಿರುತ್ತಾರೆ. ಕಾಂಗ್ರೆಸು ಮತ್ತು ಮುಸ್ಲಿಮ್ ಲೀಗುಗಳೊಂದುಗೂಡಿ ನಡೆಯುವಂತಾದರೆ, ಉಳಿದ ಪಕ್ಷಗಳನ್ನು ಸಮಾಧಾನಪಡಿಸುವುದೇನೂ ಕಷ್ಟವಾಗಲಾರದು. ಜಿನ್ನರು ತನ್ನ ಛಲ ಬಿಟ್ಟು ಸ್ವಲ್ಪ ವಿವೇಕಪರ ಧೋರಣೆ ವಹಿಸಿದರೆ ಕಾಂಗ್ರೆಸು ಮತ್ತು ಲೀಗುಗಳೊಳಗೆ ಒಪ್ಪಂದವು ಸಾಧ್ಯವಿದೆ ಮತ್ತು ಅದಕ್ಕೆ ಇದೇ ಕೊನೆಯ ಸುಸಂಧಿಯೆಂದು ನಮಗೆ ತೋರುತ್ತದೆ. ಅದನ್ನೂ ಹಠಮಾರಿತನದಿಂದ, ಸಂಕುಚಿತ ಸ್ವಾರ್ಥಸಾಧಕಬುದ್ಧಿಯಿಂದ ಕಳಕೊಂಡರೆ ಅದಕ್ಕಿಂತ ದೊಡ್ಡ ದುರ್ದೈವವಿನ್ನೇನು?

ಹಿಂದೀ ರಾಜಕೀಯ ಸ್ವಾತಂತ್ರ್ಯದ ಕುರಿತು ಬ್ರಿಟಿಷ್ ಸರಕಾರವು ನ್ಯಾಯೋಚಿತವಾಗಿ ಕೆಲವು ಸೂಚನೆಗಳನ್ನಿತ್ತಿರುವುದೇ ಹೊರತು ಇನ್ನೂ ಕೊನೆಯ ನಿರ್ಧಾರವನ್ನೇನೂ ಮಾಡಿರುವುದಿಲ್ಲ. ಆ ಕುರಿತು ಕ್ರಿಪ್ಸರಿಗೆ ಹೆಚ್ಚಿನ ಸ್ವಾತಂತ್ರ್ಯವೀಯಲಾಗಿದೆಯೆಂಬುದು ಸಂತೋಷದ ಸುದ್ದಿ. ಪ್ರಕೃತದ ಉತ್ಕಟ ಪರಿಸ್ಥಿತಿಯಲ್ಲೂ ಬ್ರಿಟನು ತನ್ನ ಅಗೋಚರ ಕೇಳಿಕೆಯ ಮಂಗಮುಷ್ಟಿಯನ್ನು ಬಿಡಲು ಸಿದ್ಧವಿರದಿದ್ದರೆ, ಕ್ರಿಪ್ಸರನ್ನು ಹಿಂದು ದೇಶಕ್ಕೆ ಕಳುಹಿಸಿ ಪ್ರಯೋಜನವೇ ಇಲ್ಲ. ಹಿಂದು ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವೀಯಲದು ಸಿದ್ಧವಾಗಬೇಕು. ಈಗಲೇ ಆಡಳಿತ ಜವಾಬ್ದಾರಿಯನ್ನೆಲ್ಲಾ ಹಿಂದೀಯರಿಗೆ ಬಿಟ್ಟು ಕೊಡಬೇಕು. ಒಂದಲ್ಲೊಂದು ರೀತಿಯಲ್ಲಿ ತಮ್ಮ ಹಿಡಿತವು ಇದ್ದೇ ತೀರಬೇಕೆಂಬ ಮನೋವೃತ್ತಿಯು ಬ್ರಿಟಿಷ್ ಸರಕಾರಕ್ಕಿದ್ದರೆ ಹಿಂದೀ ಬಿಕ್ಕಟ್ಟನ್ನು ಪರಿಹರಿಸಲು ಒಬ್ಬರಲ್ಲ, 10 ಮಂದಿ ಕ್ರಿಪ್ಸರಿಂದ ಕೂಡಾ ಸಾಧ್ಯವಾಗಲಾರದು. ಜಪಾನಿನ ಯುದ್ಧದಿಂದ ಬ್ರಿಟನು ಚೆನ್ನಾಗಿ ಪಾಠ ಕಲಿತಿರುವುದೆಂದು ನಾವು ನಂಬುತ್ತೇವೆ.

ದೇಶೀಯ ಸಂಸ್ಥಾನಗಳ ಭವಿಷ್ಯ.

ಜಾತೀಯ ಪ್ರಶ್ನೆಯಷ್ಟೇ ತೊಡಕಿನದಾಗಿದೆ ಹಿಂದೀ ದೇಶೀಯ ಸಂಸ್ಥಾನಗಳ ಪ್ರಶ್ನೆ. ಪರಂಪರಾಗತವಾದ ತಮ್ಮ ಪ್ರಭುತ್ವದ ಹಕ್ಕುಗಳನ್ನು ಈ ದೇಶೀಯ ಸಂಸ್ಥಾನಾಧೀಶರು ಬಿಟ್ಟುಕೊಡಲು ಸಿದ್ಧರಿಲ್ಲ. ಬ್ರಿಟಿಷ್ ಸರಕಾರವೂ, ಪವಿತ್ರವೆಂಬಂತೆ ಅವನ್ನೆತ್ತಿ ಹಿಡಿದು, ಅಖಂಡ ಹಿಂದುಸ್ಥಾನದ ಸ್ವಾತಂತ್ರ್ಯಕ್ಕೆ ದೇಶೀಯ ರಾಜರುಗಳ ಪ್ರಶ್ನೆಯನ್ನು ಮತ್ತೊಂದು ತೊಡಕಾಗಿ ಮಾಡಿದೆ. ಆದರೆ ತನಗೆ ಬೇಕಾದಾಗಲೆಲ್ಲಾ ಅದು ಹಿಂದೀ ರಾಜರುಗಳ ಪ್ರಭುತ್ವದ ಹಕ್ಕುಗಳನ್ನು ಮೂಲೆಗೊತ್ತಿ ತನ್ನಿಚ್ಛಾನುಸಾರ ನಡೆಯಲು ಹಿಂಜರಿದಿರುವುದಿಲ್ಲ. ಆ ಸಂದರ್ಭದಲ್ಲಿ ಪರಂಪರಾಗತ ಅವರ ಪವಿತ್ರ ಕರಾರು ಮತ್ತು ಹಕ್ಕುಗಳಿಗದು ಗಣ್ಯಮಾಡಿರುವುದಿಲ್ಲ. ಆದರೆ ಅಖಂಡ ಹಿಂದುಸ್ಥಾನದ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ ಮಾತ್ರ, ದೇಶೀಯ ರಾಜರುಗಳೊಂದಿಗೆ ಹಿಂದೆ ಮಾಡಿಕೊಂಡಿದ್ದ ಕರಾರುಗಳು ಪವಿತ್ರವೆಂಬಂತೆ ಪ್ರತಿಪಾದಿಸುತ್ತಾ ಬಂದಿರುತ್ತದೆ.

ಇಂದೀಗ ಹಿಂದಿನ ಪರಿಸ್ಥಿತಿಯು ಸಂಪೂರ್ಣ ಬದಲಾವಣೆ ಹೊಂದಿರುತ್ತದೆ. ಪ್ರಮಗೂ ತಮ್ಮ ಪ್ರಜೆಗಳು ಮತ್ತು ಹಿಂದುಸ್ಥಾನದ ಇತರ ಭಾಗಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಬ್ರಿಟಿಷ್ ಚಕ್ರವರ್ತಿಗಳ ಅಧೀನದಲ್ಲಿ ಇಚ್ಛೆ ತೋರಿದಂತೆ ಆಳುವ ಹಕ್ಕು ತಮ್ಮದೆಂಬ ಮನೋವೃತ್ತಿಯನ್ನು ದೇಶೀಯ ರಾಜರುಗಳು ಕಟ್ಟಿಕೊಳ್ಳುವುದರಲ್ಲಿ ಅರ್ಥವಿಲ್ಲ. ಪ್ರಕೃತದ ಗಂಡಾಂತರದಲ್ಲಿ ಮತ್ತು ಇನ್ನು ಮುಂದೆ ಕೂಡಾ ಬ್ರಿಟನಿಗೆ ಹಿಂದುದೇಶದ ರಕ್ಷಣೆಯ ಜವಾಬ್ದಾರಿ ವಹಿಸಲು ಸಾಧ್ಯವಿಲ್ಲೆಂಬುದೀಗ ಸಿದ್ಧವಾಗಿದೆ. ಹಿಂದುದೇಶವು ತನ್ನ ರಕ್ಷಣೆಯ ಜವಾಬ್ದಾರಿಯನ್ನು ತಾನೇ ವಹಿಸತಕ್ಕದ್ದು. ಅದು ಬೇಗನೆ ಸ್ವತಂತ್ರವಾಗುವ ಸಂಭವವಿರುವುದರಿಂದ, ಅದಕ್ಕೂ ಇಂಗ್ಲೆಂಡಿಗೂ ಇರುವ ಸಂಬಂಧವು ನಾಮಮಾತ್ರವಾಗುವ ದಿನಗಳು ದೂರವಿರಲಾರವು. ಅಂದ ಮೇಲೆ ದೇಶೀಯ ರಾಜರುಗಳು, ಇನ್ನು ಮುಂದೆಯೂ ಇಂಗ್ಲೆಂಡಿನ ಕಡೆಗೇ ಕತ್ತು ನೀಡಿಕೊಂಡು, ಅದರಿಂದ ರಕ್ಷಣೆ ಪಡೆದು ತಮ್ಮ ಅಸ್ತಿತ್ವವನ್ನು ಸಿರಂತರವಾಗಿ ಇದ್ದಕ್ಕಿದ್ದಂತೆ ಕಾಪಾಡಿಕೊಳ್ಳುವ ಆಶೆ ಕಟ್ಟಿಕೊಳ್ಳುವುದು ಅವಿವೇಕವೆಂಬುದರಲ್ಲಿ ಸಂದೇಹವೇ ಇಲ್ಲ. ದೇಶೀಯ ಸಂಸ್ಥಾನಗಳು ಹಿಂದುದೇಶದ ಪ್ರಾಮುಖ್ಯವಾದೊಂದು ಅಂಗವಿದ್ದು, ಅಖಂಡ ಹಿಂದುಸ್ಥಾನದ ಭವಿಷ್ಯದ ಮೇಲೆಯೇ ಅವುಗಳ ಭವಿಷ್ಯವೂ ಹೊಂದಿಕೊಂಡಿರುವುದರಿಂದ ದೇಶೀಯ ರಾಜರುಗಳು ತಮ್ಮ ದೃಷ್ಟಿಯನ್ನು ಇಂದಿನ ಪರಿಸ್ಥಿತಿಗನುಗುಣವಾಗಿ ಬದಲಾಯಿಸಿ, ಹಿಂದುಸ್ಥಾನದ ಇತರ ಭಾಗಗಳೊಂದಿಗೆ ಸೇರಿ ನಡೆಯಲು ಸಿದ್ಧರಾಗಬೇಕು. ಅಖಂಡ ಹಿಂದುಸ್ಥಾನದ ರಕ್ಷಣೆ, ಭವಿಷ್ಯ ರಚನೆ ಮತ್ತು ಅಭ್ಯುದಯದಲ್ಲಿ ಪ್ರಾಮುಖ್ಯ ಭಾಗವಹಿಸಿ ಸಹಕರಿಸುವ ದೇಶಾಭಿಮಾನಿಗಳಾಗಬೇಕು. ಬ್ರಿಟಿಷ್ ಪ್ರಭುತ್ವದ ಮಾದರಿಯನ್ನನುಸರಿಸಿ, ತಮ್ಮ ಪ್ರಜೆಗಳಿಗೆ ಸಂಪೂರ್ಣ ಆಡಳಿತ ಸ್ವಾತಂತ್ರ್ಯವನ್ನಿತ್ತು ತಾವು ಕೇವಲ ಸೂತ್ರಬದ್ಧ ಪ್ರಭುಗಳಾಗಿರಲು ಮುಂದಾಗಬೇಕು. ಆಗ ಮಾತ್ರ ಅವರಿಗೆ ಭಾವಿ ಹಿಂದುಸ್ಥಾನದಲ್ಲಿ ಸ್ಥಾನ ದೊರೆಯಬಹುದು. ಕಾಲಧರ್ಮಕ್ಕನುಗುಣವಾಗಿ ಅವರು ತಮ್ಮ ರೀತಿನೀತಿಗಳನ್ನು ಬದಲಾಯಿಸಿದರೆ ಮಾತ್ರ ಅವರಿಗೆ ಭವಿಷ್ಯವಿರಬಹುದು.

ಚೀನೀ ಮುಸಲ್ಮಾನರ ಅನುಕರಣೀಯ ಮಾದರಿ

ಚೈನದಲ್ಲಿ 50 ಮಿಲ್ಯ ಮುಸಲ್ಮಾನರಿರುತ್ತಾರೆ. ಅವರು ಹೆಚ್ಚಾಗಿ ಪಶ್ಚಿಮ ಸಿಕಾಂಗ್, ಚೆಕುವನ್, ಕಾನ್ಸು ಮತ್ತು ಯುನ್ನಾನ್ ಪ್ರಾಂತಗಳಲ್ಲಿ ವಾಸಿಸುತ್ತಿದ್ದಾರೆ. ಚೀನೀ ಮುಸಲ್ಮಾನರಲ್ಲಾ ಹೆಚ್ಚಾಗಿ ಸುನ್ನಿಗಳು. ಈ ಮುಸಲ್ಮಾನರೆಲ್ಲರೂ ಅಖಂಡ ಚೈನದ ಸ್ವಾತಂತ್ರ್ಯಾಭಿಮಾನಿಗಳಾಗಿ ಮಾರ್ಶಲ್ ಚ್ಯಾಂಗ್ ಕೈಶಕ್ಕರಿಗೆ ವಿಧೇಯರಾಗಿ ನಡೆಯುತ್ತಿದ್ದಾರೆ. ಚೀನೀ ಮುಸಲ್ಮಾನರನ್ನೆತ್ತಿ ಕಟ್ಟಿ ಚೈನದಲ್ಲಿಯೂ ಪಾಕಿಸ್ಥಾನದ ಒಡಕನ್ನುಂಟು ಮಾಡಬೇಕೆಂಬ ಜಪಾನರ ಕುತಂತ್ರವು ಫಲಕಾರಿಯಾಗಲಿಲ್ಲ. ವಿಶೇಷವಾಗಿ ತರುಣ ಮುಸಲ್ಮಾನರು ಮಾರ್ಶಲ್ ಚ್ಯಾಂಗರ ಕುರಿತು ಅಭಿಮಾನವುಳ್ಳವರಾಗಿ, ಚೀನೀ ರಾಷ್ಟ್ರೀಯ ಪಕ್ಷವಾದ ಕುಮಿಂಟಾಂಗಿನೊಳಗೆ ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡಿರುತ್ತಾರೆ. ಈ ಸಂಘದವರು ಮುಸಲ್ಮಾನ ತರುಣರನ್ನು ಮುಂದಿನ ರಾಷ್ಟ್ರೀಯ ಮುಖಂಡರಾಗಿ ತರಬೇತಿ ಮಾಡು

ಮೌಲಾನ ಅಜದ್ ಮತ್ತು ಸರ್ ಸಿಕಂದರರ ಮಾತುಕತೆ

ಆಜದ್ ಸಿಕಂಧರ್ ಭೇಟಿ

ಇದೇ ತಾ ೨೧ನೇ ಬೆಳಿಗ್ಗೆ ಸರ್ ಸಿಕಂದರ್ ಹಾಯತ್‌ಖಾನರು, ಲಾಹೋರಿನಲ್ಲಿ ಮಿಯಾನ್ ಇಫ್ತಿಖರ್-ಉದ್ದೀನರ ಮನೆಯಲ್ಲಿ ಮೌಲಾನ ಅಬುಲ್ ಕಲಾಮ್ ಅಜದರೊಡನೆ ಒಂದು ಘಂಟೆಯ ವರೆಗೆ ಮಾತುಕತೆ ನಡಿಸಿದರು ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸುಗಳೊಳಗೆ ರಾಜಿಯನ್ನುಂಟುಮಾಡುವುದೇ ಈ ಮಾತುಕತೆಯ ಉದ್ದೇಶವಿರುತ್ತದೆ. ಮೌಲಾನ ಅಜದರು ಇಂದು ಅಪರಾಹ್ನ ಸರ್ ಸಿಕಂದರರ ನಿವಾಸಕ್ಕೆ ಹೋಗಿ ಅವರೊಡನೆ ಮಾತಾಡಿದರು. ಮೌಲಾನ ಅಜದರು ತಾ. ೨೧ನೇ ಸಂಜೆ ಅಹಲಾಬಾದಿಗೆ ತೆರಳಿರುವರು ಸರ್ ಸಿಕಂದರ್ ಹಾಯತ್ ಖಾನರು ನಡಿಸುವ ಮಾತುಕತೆಗೆ ಜಿನ್ನರ ಸಮ್ಮತಿ ಇರುವುದೋ ಇಲ್ಲವೋ ಎಂಬುದು ತಿಳಿದಿಲ್ಲ. ಮತ್ತು ಲೀಗಿನಲ್ಲಿ ಸರ್ ಸಿಕಂದರರ ಅಭಿಪ್ರಾಯಕ್ಕೆ ಎಷ್ಟರ ಮಟ್ಟಿನ ಬೆಂಬಲ ದೊರೆಯುವುದೋ ತಿಳಿಯದು. ಸರ್ ಸಿಕಂದರರ ಪ್ರಯತ್ನವು ಜಯಶೀಲವಾಗಿ ಕಾಂಗ್ರೆಸು ಮತ್ತು ಲೀಗುಗಳು ಒಮ್ಮತವಾದ ಕ್ರಿಪ್ಸರನ್ನು ಕಾಣುವಂತಾದರೆ ದೇಶಕ್ಕೆ ಸುಖದಾಯಕವಾಗ ಮಾಡುವಂತಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ

— ರಷ್ಯದಲ್ಲಿ ಜರ್ಮನ್ ಸೇನೆಯ ದುರವಸ್ಥೆ —

ಜಪಾನು ನ್ಯೂಗಿನಿಯ ಮೇಲೆ ಧಾಳಿ ನಡಿಸಲು ಕಾರಣವೇನು?

ನ್ಯೂಗಿನಿಯದ ಮೇಲೆ ಧಾಳಿ ನಡಿಸಲು ಕಾರಣವೇನು?

ಜಪಾನರು ಡಾರ್ವಿನ್ ಬಂದರದ ಮೂಲಕ ಆಸ್ಟ್ರೇಲಿಯದ ಮೇಲೆ ಧಾಳಿ ನಡಿಸಹೋಗದೆ ನ್ಯೂಗಿನಿಯ ಮೂಲಕ ಏಕೆ ಮುಂದರಿದು ಹೋಗಿ ಡಾರ್ವಿನನ್ನು ಬಿಟ್ಟ ಹಾಗೆ ಮುಂದೊತ್ತುವ ಪ್ರಯತ್ನದಿಂದಿರುವರೆಂಬುದೀಗ ಸ್ಪಷ್ಟವಿದೆ. ಡಾರ್ವಿನನ್ನು ಗದ್ದು ಮುಂದೊತ್ತುವರ. ಅಲ್ಲಿಂದ ನೂರಾರು ಮೈಲು ಮರಳುಗಾಡಿನಲ್ಲಿ ಭೀಷಣ ಹೋರಾಟ ನಡಿಸಬೇಕೆಂಬುದನ್ನು ಜಪಾನರು ಬಲ್ಲರು. ಆದರ ನ್ಯೂಗಿನಿಯ ಮೂಲಕ ಮುಂದೊತ್ತುತ್ತಿದರೆ, ಸಂಶಯವಿರುವ ಫಲವತ್ತಾದ ಮತ್ತು ಕೈಗಾರಿಕೆ ಸಂಪತ್ತಿನ ಆಸ್ಟ್ರೇಲಿಯದ ಪೂರ್ವ ಸಮುದ್ರ ಕರಾವಳಿಯ ಮೇಲೇರಿ ಹೋಗಬಹುದು. ಇವನ್ನು ಗೆದ್ದ ಮೇಲೆ, ಡಾರ್ವಿನ್ ಬಂದರದ ಪ್ರಾಮುಖ್ಯತೆ ಹೋಗಿದ ಆದರೆ ನ್ಯೂಗಿನಿಯದು ಹೆಚ್ಚಿದ. ಜಪಾನು ಜೈತ್ರದಿಂದ ಹೆಚ್ಚಿನ ಸೇನೆಯನ್ನು ತಂದು ಒಮ್ಮೆ ಮತ್ತು ಆಸ್ಟ್ರೇಲಿಯಗಳಿಗೆ ಕಳುಹಿಸುತ್ತಿದ ನಬ್ ಮರೀನ ಘಳಿಯ. ಮೂಲಕ ಯುನೈಟಡ್ ಸ್ಟೇಟ್ಸ್, ಜಪಾನಿನ ಬೆನ್ನೆಲು ಬಿಸಂತಿರುವ ನೌಕಾಬಲವನ್ನು ಮುರಿಯುವ ಪ್ರಯತ್ನ ಮಾಡಿರುವುದೆಂದು ತಿಳಿದು ಬಂದಿದ. ದಕ್ಷಿಣ ಶಾಂತ ಸಾಗರದ ಯುದ್ಧದಲ್ಲಿ ನ್ಯೂಗಿನಿಯು ಮುಖ್ಯವಾದೊಂದು ಯುದ್ಧ ಕೇಂದ್ರವಾಗಿ ಪರಿಣಮಿಸಿದ

ಸರ್ ಕ್ರಿಪ್ಸಿನ ಕುರಿತು ಹಿಟ್ಲರರ ಕೋಪ

ಹಿಟ್ಲರರ ಪ್ರೇರಣೆ ಮೇರೆಗೆ ಫ್ರಾನ್ಸಿನ ಮೊದಲಿನ ಮಂತ್ರಿಗಳು ಮತ್ತು ಜನರಲ ಗಮೆಲಿನರೇ ಮೊದಲಾದವರು ವಿಚಾರಣೆಗೀಡುಮಾಡಲ್ಪಟ್ಟಿರುವರಷ್ಟೆ ಈ ವಿಚಾರಣೆಯ ಪರಿಣಾಮವಾಗಿ, ಇಂಗ್ಲೆಂಡಿನ ಒತ್ತಾಯದ ಮೇರೆಗೆ ಫ್ರಾನ್ಸು ಜರ್ಮನಿಯ ಮೇಲೆ ಯುದ್ಧ ಹೂಡಿದುದೆಂಬುದನ್ನು ಸಿದ್ಧ ಪಡಿಸುವ ಉದ್ದೇಶವಿತ್ತು ಹಿಟ್ಲರರದು ಆದರೆ ಅದು ನೆರವೇರಲಿಲ್ಲ ಫ್ರೆಂಚ್ ಸೇನೆಗೆ ಜರ್ಮನನ್ನೆದುರಿಸಲು ಸಾಧ್ಯವಿತ್ತು. ನೇತಾರನಿಗಳ ತಪ್ಪಿನಿಂದದು ಸಾಧ್ಯವಾಗಲಿಲ್ಲೆಂಬ ದಲಡಿಯರರೇ ಮೊದಲಾದವರ ಹೇಳಿಕೆಯಿಂದ ಹಿಟ್ಲರರು ಸಿಟ್ಟುಗೊಂಡಿರುತ್ತಾರೆ ಈ ವಿಚಾರಣೆಯಿಂದ ತನ್ನ ಉದ್ದೇಶವು ನೆರವೇರುವದಾಗಿಲ್ಲದುದರಿಂದ ಹಿಟ್ಲರರು ಕ್ರಿಪ್ಸರನ್ನು ಮತ್ತು ಮಾರ್ಶಲ್ ಪೇಟೈನರ ಮೇಲೆ ಮುನಿದು ಬಿದ್ದಿರುವಂತಿದೆ

ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರು

ಇದೇ ತಾ ೨೨ರಲ್ಲು ಕರಾಚಿಗೆ ಬಂದು ಅಲ್ಲಿಂದ ವಿಮಾನ ಮೂಲಕ ತಾ ೨೩ರಲ್ಲು ಡಿಲ್ಲಿಗೆ ಮುಟ್ಟಿ ವೈಸರಾಯರೊಡನೆ ಭೋಜನ ಮಾಡಿ ಮಾತಾಡಿದರು ಇದೇ ತಾ ೨೧ರಲ್ಲು ಡಿಲ್ಲಿಯಲ್ಲಿ ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲರೊಡನೆಯೂ ಆ ಮೇಲೆ ಬಂಗಾಳ, ಮದ್ರಾಸು, ಮತ್ತು ಬೊಂಬಾಯಿ ಗವರ್ನರರುಗಳೊಡನೆಯೂ ಮಾತುಕತೆ ನಡಿಸಿದರು. ಅನಂತರ ಪುನಹ ಎಗ್ಸಿಕ್ಯೂಟಿವ್ ಕೌನ್ಸಿಲರನ್ನು ಕಂಡರು ತಾ. ೨೫ರಲ್ಲು ಹಿಂದೀ ಮುಖಂಡರನ್ನು ಕಾಣಲಿರುವರೆಂದು ತಿಳಿದುಬರುತ್ತದೆ ಜನರಲ್ ವೇವೆಲರು ತಾ. ೨೩ರಲ್ಲು ಕ್ರಿಪ್ಸರನ್ನು ಕಂಡು ಮಾತಾಡಿರುವರು.

ಜರ್ಮನ್ ಸೇನೆಯ ದುರವಸ್ಥೆ.

ರಷ್ಯದ ಸ್ವರಯ ರೂಸದಲ್ಲಿ ಸಿಕ್ಕಿಬಿದ್ದಿರುವ ಸೇನೆಯು ಬಹಳ ನಷ್ಟಹೊಂದುತ್ತಿದೆ. ವಿಮಾನ ಮೂಲಕ ಅದಕ್ಕೆ ಯುದ್ಧೋಪಕರಣ ಮತ್ತು ಆಹಾರ ಸಾಮಾಗ್ರಿಗಳನ್ನೊದಗಿಸಲು ಜರ್ಮನರು ನಡಿಸುತ್ತಿರುವ ಪ್ರಯತ್ನವು ನಿರರ್ಥಕವಾಗಿದೆ. ತಾ ೨೪ರಲ್ಲು ಸಾಮಾಗ್ರಿ ತರುತ್ತಿದ್ದ 10 ಜರ್ಮನ್ ವಿಮಾನಗಳು ನಾಶಮಾಡಲ್ಪಟ್ಟಿವೆ. ಇಷ್ಟೇ ಮಂದಿ ಜರ್ಮನ್ ಸೈನಿಕರು ಸತ್ತಿರುವರೆಂಬುದು ರಷ್ಯಾನರಿಗೆ ತಿಳಿಯದಂತೆ ಜರ್ಮನರು ಸೈನಿಕರ ಶವಗಳನ್ನು ಸುಟ್ಟುಹಾಕುತಿದ್ದಾರೆ. ಎಲ್ಲಾ ರಣರಂಗಗಳಲ್ಲಿಯೂ ತೀವ್ರ ಹೋರಾಟ ನಡೆಯುತ್ತಿದ. ಮಾರ್ಚಿ 11ರಿಂದ 21ರ ವರೆಗೆ ಕಲಿನಿನ್ ರಣರಂಗದಲ್ಲಿ 12,000 ಜರ್ಮನ್ ಸೈನಿಕರು ಕೊಲ್ಲಲ್ಪಟ್ಟಿರುತ್ತಾರೆ ಲೆನಿನ್‌ಗ್ರಾಡ್ ಮತ್ತು ಕ್ರೈಮಿಯದಲ್ಲಿಯೂ ಸೋವಿಯೆಟ್ ಸೈನಿಕರು ವಿಜಯ ಹೊಂದಿರುತ್ತಾರೆ ಜರ್ಮನ್ ಸೈನಿಕರಲ್ಲಿ ಯುದ್ಧದ ಬೇಸರವು ತೋರಬರ ಹತ್ತಿದ

210 ಜರ್ಮನ್ ವಿಮಾನ ನಾಶ

ಕೇವಲ ಒಂದೇ ವಾರದಲ್ಲಿ ರಷ್ಯದಲ್ಲಿ 240 ಜರ್ಮನ್ ವಿಮಾನಗಳು ನಾಶಮಾಡಲ್ಪಟ್ಟಿವೆ. ನಾಶವಾದ ಸೋವಿಯೆಟ್ ವಿಮಾನಗಳು 70 ಮಾತ್ರ. ಜರ್ಮನ್ ವಿಮಾನಗಳು ಹೆಚ್ಚಾಗಿ ಮಧ್ಯ ಪೂರ್ವಕ್ಕೆ ಕಳುಹಿಸಲ್ಪಟ್ಟಿರುವುದರಿಂದ ರಷ್ಯದ ವೈಮಾನಿಕ ಪ್ರಾಬಲ್ಯವು ಸಾಧ್ಯವಾಗಿರುವುದೆಂದು ಬ್ರಿಟಿಷರ ಅಭಿಪ್ರಾಯ ಪೂರ್ವದಲ್ಲಿ ಜಪಾನು ಶೀಘ್ರವಾಗಿ ಮುಂದೊತ್ತುತ್ತಿರುವುದರಿಂದ ಮಧ್ಯ ಪೂರ್ವದ ಯುದ್ಧವನ್ನು ಪ್ರಬಲವಾಗಿ ನಡಿಸಿ ಮುನ್ನಡೆಯುವ ಕುರಿತು ಹಿಟ್ಲರರು ಗಮನ ಕೊಡುತ್ತಿರುವಂತಿದ

ಆಸ್ಟ್ರೇಲಿಯದ ಯುದ್ಧ

ಡಾರ್ವಿನ್ ಮತ್ತು ಮೊರೆಸ್ಬಿ ಬಂದರುಗಳ ಮೇಲೆ ಜಪಾನ ವಿಮಾನಗಳು ಧಾಳಿ ನಡಿಸಿದುತ್ತವೆ ಮೊರೆಸ್ಬಿ ಬಂದರನ್ನು ಜಪಾನರು ಹಿಡಿದಿರುವರೆಂಬ ಸುದ್ದಿಯು ಸುಳ್ಳೆಂದು ನಂಬಲಾಗಿದ. ಆಸ್ಟ್ರೇಲಿಯದ ಆಶಯ ಪಡೆದು ಜಪಾನನ್ನೆದುರಿಸುವ ಸಿದ್ಧತೆಯನ್ನು ಯುನೈಟೆಡ್ ಸ್ಟೇಟ್ಸಿನವರಿಂದ ನಡಿಸುತ್ತಿದೆ

ಬರ್ಮಾದ ಯುದ್ಧ.

ಬರ್ಮಾದಲ್ಲಿ ಜಪಾನ ಸೇನೆಯು ಥ-ರಾವದಿಯನ್ನು ಸಮೀಪಿಸುತ್ತಿದೆ ಚೀನೀ ಮತ್ತು ಬ್ರಿಟಿಷ್ ಸೇನೆಯು ಅವರನ್ನು ಪ್ರಬಲವಾಗಿ ವಿರೋಧಿಸುತ್ತಿದ. ಅಮೆರಿಕಾನ ವಿಮಾನಗಳು ಜಪಾನರಿಗೆ ಹೆಚ್ಚಿನ ಬಾಧಕವಾಡಿರುತ್ತವೆ. ಸಯಮಿನಿಂದಲೂ ಬರ್ಮಾದ ಮೇಲೆ ಧಾಳಿ ನಡಿಸುವ ಸಿದ್ಧತೆಯನ್ನು ಜಪಾನರು ಮಾಡುತ್ತಿದ್ದಾರೆ.

ತ್ತಾರೆ. ೮೦,೦೦೦ ಉತ್ಕೃಷ್ಟ ಮುಸಲ್ಮಾನ ಸೈನಿಕರು, ನಾಲ್ಕು ಘಂಗ ಎಂಬ ನಾಯಕರ ಕೈಕೆಳಗೆ ಜಪಾನರೊಂದಿಗೆ ಹೋರಾಡಿ ಹೆಚ್ಚಿನ ಹಾನಿ ಮಾಡಿರುತ್ತಾರೆ ಚೀನೀ ಸೇನಾತಜ್ಞ ಮಂಡಲದ ಉಪನಾಯಕರಾದ ಜನರಲ್ ಪೈಚುಂಗ್ ಸಿಯವರು ಮುಸಲ್ಮಾನರಿರುತ್ತಾರೆ. ಬರ್ಮಾ ರಸ್ತೆಯನ್ನು ಮಾಡಿದ ಕೆಲಸಗಾರರಲ್ಲಿ ಅನೇಕ ಮಂದಿ ಮುಸಲ್ಮಾನರಿರುತ್ತಾರೆ ರಾಷ್ಟ್ರದ ಪ್ರತಿಯೊಂದು ಕೆಲಸದಲ್ಲಿಯೂ ಚೀನೀ ಮುಸಲ್ಮಾನರು ತಕ್ಕ ಸ್ಥಾನವನ್ನು ಪಡೆದಿರುತ್ತಾರೆ. ಹಿಂದೀ ಮುಸಲ್ಮಾನರಂತೆಯೇ ಅವರು ಧಾರ್ಮಿಕ ಶ್ರದ್ಧೆಯುಳ್ಳವರು. ಮಕ್ಕಕ್ಕೆ ಪ್ರತಿ ವರ್ಷ ನೂರಾರು ಮಂದಿ ಚೀನೀಯರು ಯಾತ್ರಿಕರಾಗಿ ಹೋಗುತ್ತಾರೆ ಆದರೆ ರಾಜಕೀಯ ವಿಷಯದಲ್ಲಿ ಅವರು ಇತರ ಚೀನೀಯರಿಗೆ ಭುಜ ಭುಜ ಕೊಟ್ಟು ನಡೆಯುತ್ತಿದ್ದಾರೆ ಪಾಕಿಸ್ಥಾನವೇ ಸರ್ವಸ್ವವೆಂದು ಛಲಹಿಡಿದಿರುವ ಹಿಂದೀ ಮುಸಲ್ಮಾನರು ಚೈನದ ತಮ್ಮ ಸಹಧರ್ಮೀಯರಿಂದ ಪಾಠಕಲಿತು ಅವರ ಮಾದರಿಯನ್ನನುಸರಿಸಿದರೆ ಹಿಂದು ದೇಶದ ಸ್ವಾತಂತ್ರ್ಯ ಸಾಧನೆಯು ಅಷ್ಟು ಸುಲಭವಾದೀತು!

THE
CANARA INDUSTRIAL & BANKING SYNDICATE LTD.
PUBLIC NOTICE.

Notice is hereby given that goods coming under the following class will be sold by auction on and from the ... March, 1942 between 9 A. M. and ... P. M. at Mukunda Nivas Udipi

Cutlery, Stationery Glass and lampware Enamelware, China and Earthenware Novelties Confectionery Hardware Provisions Clocks Time-pieces, Watches, Fountainpens Hosiery and Leather goods

Enquiries and details about the goods, conditions of auction and payment can be ascertained from the Head Office of the Syndicate. Interested parties are requested to attend the auction and bid for their requirements.

Udipi,
23rd March 1942

M S Bhandary,
Recovery Officer

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ
ತಾ. 27—3—1942ರಿಂದ

ಸಾಹಸ ಚಿತ್ರಗಳಲ್ಲಿ ಶ್ರೇಷ್ಠ ವರ್ಗದ, ನೊಂದ ಹೃದಯಕ್ಕೆ ಆನಂದದಾಯಕ, ಪುರುಷರ ಪೌರುಷದ, ಸ್ತ್ರೀಯರ ಸ್ಥೈರ್ಯದ

ಪಂಜಾಬ್ ಮೈಲ್ (ವಾಡಿಯಾ)

ಜೋನ್ ಕವಾಸ್ ನಾಡಿಯಾ, ಪಂಜಾಬ್ ಕಾ ಬೇಟಾ, ರೋಲ್ಸ್ ರಾಯ್ಸ್, ಕೀ ಬೇಟಿ – ಇತರರು.

ತಾ. 1–4–42ರಿಂದ ಶೋಭನಾ, ಸ್ನೇಹಪ್ರಭಾ, ಖುರ್ಷಿದ್ ನಟಿಸಿದ

ಸರ್‌ಡೇಸಿ

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಹಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ನಗರ ಸಭೆ— ಮಂಗಳೂರು ನಗರ ಸಭೆಯು ಕಳೆದ ತಾ 16ರಲ್ಲಿ ಶ್ರೀ ಬಿ. ಪಿ. ಜಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು. ರೈಲ್ವೆ ಸ್ಥಳದ ಮೇಲೆ ಕರವನ್ನು ಹೇರುವುದಕ್ಕೂ, ಸೆಂಟ್ಲೆಂಡ್ ಪೇಟೆಯಲ್ಲಿರುವ ವ್ಯಾಯಾಮ ಶಾಲೆಗೆ ರೂ. 1000ದ ಗ್ರಾಂಟು ಕೊಡುವುದಕ್ಕೂ ಅನುಮತಿ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳಬೇಕೆಂದು ನಿರ್ಧಾರವಾಯಿತು. ತೋಟಗಳ ವಸತಿಗೆ ರೂ 990 ವ್ಯಯಿಸಬೇಕೆಂದಾಯಿತು

ಜಿ. ಕಾ. ಸಮಿತಿಯ ಸಭೆ—ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಶ್ರೀ ಯು. ಎಸ್. ಮಲ್ಯರು ಅಧ್ಯಕ್ಷರಾಗಿಯೂ, ಶ್ರೀ ಯಂ. ಡಿ ಅಧಿಕಾರಿಗಳು ಉಪಾಧ್ಯಕ್ಷರಾಗಿಯೂ, ಶ್ರೀ ಕುಡ್ಪಿ ವಾಸುದೇವ ಶೆಣೈಯವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಸುಬ್ಬಣ್ಣ ಸೆಟ್ಟಿ, ಮತ್ತು ಕೆ. ಕೆ. ನ. ರಾವು ಪುದುವಾಳ್ ಅವರು ಜತೆ ಕಾರ್ಯದರ್ಶಿಗಳಾಗಿಯೂ ಶ್ರೀ ವೆಂಕಟೇಶ ಪ್ರಭುಗಳು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು. ಕಾಂಗ್ರೆಸ್ ಸಮಿತಿಯ ಮಹಾ ಸಭೆಯಲ್ಲಿ ಶ್ರೀ ಕೆ. ಪಿ. ಕರ್ ಅವರಿಗೆ ಜೀವದಾನ ಮಾಡಬೇಕೆಂದು ಗವರ್ನರರನ್ನು ಕೇಳಿಕೊಳ್ಳುವ ಠರಾವು ಮಂಜೂರಾಯಿತೆಂದು ತಿಳಿದುಬರುತ್ತದೆ

ಯುದ್ಧ ಪ್ರಚಾರ ಸಮಿತಿ — ಜಿಲ್ಲಾ ಯುದ್ಧ ಪ್ರಚಾರದ ಉಪಸಮಿತಿಯ ಸಭೆಯು ತಾ 16ರಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕೆನರಾ ಕ್ಲಬ್ಬಿನಲ್ಲಿ ನಡೆಯಿತು

ಉಡುಪಿ.

ದ. ಕ ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನಿನ ವಸಂತ ಕಾಲದ ತರಬೇತಿ ಶಿಬಿರಗಳು-

ಈ ಕೆಳಗೆ ಕಾಣಿಸಿದಂತೆ ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿಗಳನ್ನು ಆಯಾ ಶಿಬಿರಗಳ ಕೆಳಗೆ ಬ್ರಾಕೆಟನಲ್ಲಿ ಹೆಸರು ಕಾಣಿಸಿದವರಿಗೆ ಆದಷ್ಟು ಬೇಗನೆ ಕಳುಹಿಸತಕ್ಕದೆಂದು ಜಿಲ್ಲಾ ಎಸೋಸಿಯೇಶನಿನ ಕಾರ್ಯದರ್ಶಿ ಶ್ರೀ ಎಮ್. ಮಾಧವ ರಾಯರು ತಿಳಿಸುತ್ತಾರೆ

ಎಪ್ರಿಲ್ 3-5 ಕ್ಲಬ್ ಮಾಸ್ಟರರ ತರಬೇತಿ ಕೋರ್ಸ್. ಮಂಗಳೂರು, ಕೊಂಬಾಡಿ (ಜಿಲ್ಲಾ ಮಾಟ್ರಿಕುಲೇಶನ್, ಮಂಗಳೂರು) ಎಪ್ರಿಲ 16 19 ಕಬ್ ಮಾಸ್ಟರರ ತರಬೇತಿ ಶಿಬಿರ, ಕುಂದಾಪುರ (ಬಿ ಜಿ. ಶರ್ಮ, ಕುಂದಾಪುರ) ಎಪ್ರಿಲ್ 21-24, ಮಹಿಳಾ ಸ್ಕೌಟ್ ಮಾಸ್ಟರರ ಟ್ರೈನಿಂಗ್ ಕೋರ್ಸ್, ಉಡುಪಿ (ಶ್ರೀಮತಿ ಎಮ್. ಲೀಲಾ ಬಾಯಿ, ಪಿ.ಡಬ್ಲ್ಯು.ಡಿ ರೋಡ್, ಅಥವಾ ಶ್ರೀಮತಿ ಲಕ್ಷ್ಮೀ ಕಿಫ ರೋಡ್, ಉಡುಪಿ) ಮೇ 9 13 ರೋವರ್ ಲೀಡರ್ಸ್ ಟ್ರೈನಿಂಗ್ ಕೋರ್ಸ್, ಕಾರ್ಕಳ (ಶ್ರೀ ಕೆ.ಪಿ. ರಾಘವೇಂದ್ರ ರಾವ್, ಕಾರ್ಕಳ)

ಶಾಂತಿದಲ

ಸ್ವಯಂಸೇವಕರಾಗಿ ಸೇರಿರಿ
ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಜಿಲ್ಲೆಯೊಳಗಿನ ಎಲ್ಲ ಫರ್ಕಾಗಳಲ್ಲಿ ಕಾಂಗ್ರೆಸ್ ಕಮಿಟಿಯಿಂದ ಸ್ವಯಂಸೇವಕ ದಳಗಳನ್ನು ರಚಿಸುವುದೆಂದು ನಿರ್ಧಾರವಾಗಿರುತ್ತದೆ. ೧೮ ವರ್ಷ ಪ್ರಾಯಕ್ಕೆ ಮಿಕ್ಕಿದ ಮತ್ತು ದಳದ ಪ್ರತಿಜ್ಞೆಗೆ ಸಹಿಮಾಡುವ ಎಲ್ಲ ಸ್ತ್ರೀಪುರುಷರು ಈದಳದ ಸದಸ್ಯರಾಗಬಹುದು. ಇವರು ಕಾಂಗ್ರೆಸ್ ಸದಸ್ಯರಿರಬೇಕು, ಅಥವಾ ಖಾದಿಧಾರಿಗಳಿರಬೇಕು, ಎಂಬ ನಿರ್ಬಂಧವಿಲ್ಲ. ಆದರೆ, ಈದಳದಲ್ಲಿ ಕೆಲಸಮಾಡುವಾಗ ಮಾತ್ರ ಅಹಿಂಸಾತತ್ವದಿಂದಲೇ ನಡೆಯಬೇಕು. ದಳದ ಕರ್ತವ್ಯಗಳು ಈ ಕೆಳಗಿನಂತೆ ಇವೆ —

೧. ಜನತೆಯೊಡನೆ ಸಂಬಂಧವನ್ನು ಶಕ್ಯವಿದ್ದಷ್ಟು ಹೆಚ್ಚು ಬೆಳೆಸಬೇಕು ೨. ವಿಮಾನಧಾಳಿಯು ಆದಕ್ಕೆ ಜನರು ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ಶಿಕ್ಷಣ ಕೊಡುವುದು, ಮತ್ತು ಆ ಕಾಲದಲ್ಲಿ ಮಾರ್ಗದರ್ಶನ ಮಾಡುವುದು ೩. ಧಾಳಿಯ ನಂತರ ಜನರ ಸ್ವಾವಲಂಬಿ ಗಳ ಸಂರಕ್ಷಣೆಗಾಗಿ ಅವಶ್ಯವಾದ ಪ್ರಥಮೋಪಚಾರ ಮುಂತಾದ ಕಾರ್ಯಗಳನ್ನು ಮಾಡುವುದು ೪. ಗಾಬರಿಗೊಳಿಸುವ ಸುಳ್ಳುಸುದ್ದಿಗಳನ್ನು ಪ್ರತೀಕರಿಸಿ ಜನರಿಗೆ ನಿಜಸ್ಥಿತಿಯನ್ನು ತಿಳಿಸುವುದು ೫. ಜನತೆಗೆ ವೈಯುಕ್ತಿಕ ಹಾಗೂ ಸಾಮಾಜಿಕ ರಕ್ಷಣೆಯ ಯೋಗ್ಯ ಅರಿವನ್ನುಂಟುಮಾಡುವ ಮತ್ತು ಸಂಕಟಸಮಯದಲ್ಲಿ ಗಾಬರಿಗೊಳ್ಳದೆ ಶಾಂತತೆಯಿಂದಲೂ, ಧೈರ್ಯದಿಂದಲೂ ಪ್ರಸಂಗವನ್ನೆದುರಿಸುವುದಕ್ಕೆ ಬೇಕಾದ ಶಿಕ್ಷಣವನ್ನು ಕೊಡುವುದು, ೬. ಜನತೆಗೆ ಬೇಕಾದ ಆಹಾರಸಾಮಗ್ರಿಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಪೂರೈಕೆಯ ಬಗ್ಗೆ ಹೆಚ್ಚಿನ ಜಾಗ್ರತೆಕೊಡುವುದು. ೭. ದಂಗೆ, ಕಳವು, ಸುಲಿಗೆ, ಮುಂತಾದುವು ಆಗದಂತೆ ಮುಂಜಾಗ್ರತೆಯ ಉಪಾಯಗಳನ್ನು ಕೈಕೊಳ್ಳುವುದು. ೮. ಗ್ರಾಮೋದ್ಯೋಗಗಳನ್ನು ಬೆಳೆಸಿ ಜನರಿಗೆ ಹೆಚ್ಚಿನ ಸ್ವಾವಲಂಬನ ಶಿಕ್ಷಣ ಕೊಡತಕ್ಕದು, ೯. ಸದ್ಯದ ಯುದ್ಧವನ್ನು ಸುಲಕ್ಷಿಸಿ ಅವಶ್ಯವೆನಿಸುವ ಎಲ್ಲ ಶಕ್ಯವಿದ್ದ ಮುಂಜಾಗ್ರತೆಯನ್ನೂ (Precautions) ಮತ್ತು ಪರಿಹಾರಕಾರ್ಯಗಳನ್ನು (Relief Measures) ಕೈಕೊಳ್ಳುವುದು. ಸದ್ರಿಯ ದುಸ್ಥಿತಿಯು ಮುಂಬಯಿ ಕಡೆ, ವಾಸಸ್ಥಳಗಳನ್ನು ಬಿಟ್ಟು ಬಂದವರಿಗೂ ಶಕ್ಯವಿದ್ದ ಸಹಾಯ ಮಾಡುವುದು

ಸ್ವಯಂಸೇವಕರಾಗಲಿಚ್ಛಿಸುವವರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬರೆದು ತಿಳಿಸಬಹುದು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ - ನಮ್ಮ ಜಿಲ್ಲೆಯೊಳಗೆ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕಾರ್ಯದ ಮತ್ತು ಫರ್ಕಾ ಕಾಂಗ್ರೆಸ್ ಕಮಿಟಿಗಳ ಪುನರ್ಘಟನೆಯ ಸಂಬಂಧವಾಗಿ ಶ್ರೀ ಕೆ. ಕೆ. ಪಿ. ರಾಮ ಪೊತುವಾಳ್, ಜಾಯಿಂಟ್ ಸೆಕ್ರೆಟರಿ ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಇವರು ಸದ್ಯದಲ್ಲಿ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಕೈಕೊಳ್ಳಲಿಂದ್ದಾರೆ. ಆಯಾ ಫರ್ಕಾದ ಕಾಂಗ್ರೆಸ್ ಕಾರ್ಯಕರ್ತರು ಅವರಿಗೆ ಅವಶ್ಯವಿರುವ ಮಾಹಿತಿಯನ್ನು ಕೊಟ್ಟು, ಸಹಕರಿಸಬೇಕಾಗಿ ವಿನಂತಿ.

ಕುಡ್ಪಿ ವಾಸುದೇವ ಶೆಣೈ,
ಜನರಲ್‌ಸೆಕ್ರೆಟರಿ ದ.ಕ ಜಿಲ್ಲಾ ಕಾಂಗ್ರೆಸ್‌ಕಮಿಟಿ

ಎಡಪಾಡಿ:— ತಾ 9 3 42ರಲ್ಲಿ ಬಡಗ್ರಾಮದ ಶಲಿಯಾರಿ ಶ್ರೀ ಮಹಮ್ಮದ್ ಖಾನ್ ಸಾಹೇಬರು ನಿಮೋನಿಯಾ ಬಾಧೆಯಿಂದ ತನ್ನ 43 ನೇ ವಯಸ್ಸಿನಲ್ಲಿ ಮೃತ ಪಟ್ಟಿರುತ್ತಾರೆ. ಮೃತರ ಸೌಹಾರ್ದ್ರ ಹೃದಯ, ರಾಜಕೀಯ ಭಕ್ತಿ ಮತ್ತು ಜನತಾ ವಾತ್ಸಲ್ಯ ಇವು ಆದರ್ಶನೀಯವಾಗಿದ್ದವು.

ಡಾ! ನಾ ಸು ಹರ್ಡಿಕರರು ಬರಲಿರುವರು.— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂ ಸೇವಕ ದಳಗಳನ್ನು ಸ್ಥಾಪಿಸುವ ಬಗ್ಗೆ ಸ್ವಯಂಸೇವಕ ತರಬೇತಿ ಶಿಬಿರವೊಂದನ್ನು ಕಟಪಾಡಿಯಲ್ಲಿ ಬರುವ ಎಪ್ರಿಲ್ ತಿಂಗಳ ತಾ. 15ರ ಸುಮಾರಿಗೆ ತೆರೆವುದೆಂದು ನಿರ್ಧಾರವಾಗಿದೆ. ತರಬೇತಿ ಬಗ್ಗೆ ಡಾ! ನಾ! ಸು. ಹರ್ಡಿಕರ ಇವರು ಆಗಮಿಸುವವರಿದ್ದಾರೆ. ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕ, ಇವರು ಈ ಶಿಬಿರದ ಮೇಲ್ವಿಚಾರಕ್ಕಾಗಿ, ಕಾಂಗ್ರೆಸ್ ಕಮಿಟಿಯಿಂದ ನೇಮಿಸಲ್ಪಟ್ಟಿರುವರು. ಜಿಲ್ಲೆಯ ಎಲ್ಲ ಫರ್ಕಾಗಳ ಕಾರ್ಯಕರ್ತರೂ ಮಹಾ ಜನರೂ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರಿಗೆ ಯಾವತ್ತೂ ಸಹಾಯ ಸಹಕಾರಗಳನ್ನಿತ್ತು, ಶಿಬಿರವು ಯಶಸ್ವಿಯಾಗುವಂತೆ ಸಾಧಿಸಿಕೊಡಬೇಕೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯವರ ವಿನಂತಿಯಿದೆ.

"ಬಂಟರ ಯುವಕ ಸಂಘ, ಮುಂಬಾಯಿ:— ಇದರ ಪ್ರಥಮ ವಾರ್ಷಿಕ ಮಹಾ ಸಭೆಯು ತಾ 15 3 42ರಲ್ಲಿ ಕೋಟೆಯೊಳಗಣ ದಾವರ್ ಕಾಲೇಜಿನ ಆವಾರದಲ್ಲಿ ಶ್ರೀ ಶಂಭು ಯಸ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಧಾರಣೆ ನಿರ್ಣಯ.

ಕುಂದಾಪುರ ತಾಲೂಕು ಆಹಾರ ಸಾಮಗ್ರಿಗಳ ಧಾರಣೆ ಎಡ್ವೈಸರಿ ಕಮಿಟಿಯವರು ತಾ 11-3-42ರಲ್ಲಿ ಜರುಗಿಸಿದ ಮಿಟಿಂಗಿನಲ್ಲಿ ನಿರ್ಣಯಿಸಿದ ಆಹಾರ ಸಾಮಗ್ರಿ ಧಾರಣೆ ಪಟ್ಟಿ –

ಕುಂದಾಪುರ, ಗಂಗೊಳ್ಳಿ— ಅಕ್ಕಿ-ಸಣ್ಣಕ್ಕಿ ಮುಡಿ 1ರ ರೂ 8 0 0, ಸೇರು 1ರ 0-3-1, ದಪ್ಪರೆ—ರೂ. 7-8 0, 0-2 11 ಕುಂದಾಪುರ, ಗಂಗೊಳ್ಳಿ, ಮಕ್ಕಿ ಮುಡಿ 1ರ 6 0 0, ಸೇರು1ರ 0 2 3-ತೊಗಸಲು ಮುಡಿ1ರ 5-13- 0 ಸೇರು1ರ 0 2-2 ಎಡ್ತರೆ ತೊಗಸಲು ಮುಡಿ1ರ 5 10 0, ಸೇರು 1ರ 0 2 2

ಕುಂದಾಪುರ:— ಕುಂದಾಪುರ ತಾಲೂಕು ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನ ಆಶ್ರಯದಲ್ಲಿ ಇದೇ ಬರುವ ಎಪ್ರಿಲ್ ತಾ ೯ರಿಂದ ೧೬ರ ವರೆಗೆ ಆನೆಗುಡ್ಡೆ (ಕುಂಭಾಸಿ)ಯಲ್ಲಿ ಶಿಶುವೀರ ನಾಯಕ (ಕಬ್ ಮಾಸ್ತರ)ರ ಶಿಕ್ಷಣ ಶಿಬಿರವೊಂದನ್ನು ನಡೆಸಲು ನಿಶ್ಚಯಿಸಲಾಗಿದೆ. ತರಬೇತಿಯ ಬಗ್ಗೆ ಪ್ರಾಂತಿಯ ಸಹಾಯಕ ಕಮಿಶನರಾದ ಶ್ರೀ ಎಂ! ರಾಜಗೋಪಾಲನ್ ಇವರು ಬರುವವರಿದ್ದಾರೆ. ಈ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ಅಧ್ಯಾಪಕರಿಗೆ ಆ ದಿನಗಳನ್ನು ಡ್ಯೂಟಿಯೆಂದು ಪರಿಗಣಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. ಶಿಬಿರಕ್ಕೆ ಸೇರಬಿಚ್ಛಿಸುವ ಪ್ರತಿಯೊಬ್ಬರೂ 2-8-0 ಶಿಬಿರ ಶುಲ್ಕವನ್ನು ಮುಂಗಡವಾಗಿ ತೆರಬೇಕಾಗುವುದು

ಈ ಶಿಬಿರಕ್ಕೆ ಸೇರಲಿಚ್ಛಿಸುವವರು ಎಪ್ರಿಲ್ ೫ ನೇ ತಾರೀಖಿನೊಳಗೆ ಕಾರ್ಯದರ್ಶಿಗಳಿಗೆ ಅರ್ಜಿಗಳನ್ನು ಕಳುಹಿಸಿ ಕೊಡಬೇಕಾಗಿಯೂ ಇಡೀ ಜಿಲ್ಲೆಯ ಮುಖ್ಯತಃ ಕುಂದಾಪುರ ತಾಲೂಕಿನ ಅಧ್ಯಾಪಕರು ಹೆಚ್ಚಿನ ಸಂಖ್ಯೆಯಿಂದ ಈ ಶಿಬಿರದಲ್ಲಿ ಭಾಗವಹಿಸಿ ಈ ಶಿಬಿರದ ಲಾಭವನ್ನು ಪಡೆಯಬೇಕಾಗಿಯೂ ವಿನಂತಿ. ಕಟೀಲ್ ಗಣಪತಿ ಶರ್ಮಾ, ಗೌ! ಕಾರ್ಯದರ್ಶಿ, ಹಿಂದುಸ್ಥಾನ್ ಸ್ಕೌಟ್ ಅಸೋಸಿಯೇಶನ್, ಕುಂದಾಪುರ. ಎಂ! ಎಸ್! ಮಾಧವ ರಾವ್, ಜಿಲ್ಲಾ ಸ್ಕೌಟ್ ಕಮಿಶನರ್.

South Kanara District Board.

Applications are invited from qualified allopathic medical practitioners to be appointed as Rural Medical Practitioners in leave and other short vacancies in rural dispensaries under the South Kanara District Board.

Applications with true copies of diplomas and other certificates if any regarding their experience etc. should reach the President, District Board by the 15th April 1942. The date of birth should also be specified in the application.

MANGALORE
21-3-1942

(Sd) **K. VITTAL SHETTY,**
President, Dt Board
South Kanara.

HOPE AND CHEER

ARE THE SHEET ANCHORS OF LIFE.

This simple yet inspiring message of life is all the more needed in these dark days of war and World crisis

Our

Antaranga Yugadi Special

will serve this need.

Date of Publication - 14th April' 42

Our **YUGADI SPECIAL** will be really a special fare of hope and cheer, placed before the Karnataka public to read and enjoy.

OUR ADVERTISEMENT RATES

Full page	Rs 25
Half „	Rs 15
One fourth page...	Rs 8.
One eighth „	Rs. 5
One column inch	Re 1.

Front page Rs 100 (booked) Back page Rs 75-0-0
Inside cover pages Rs 50 each

Several pages are already booked. Rush in for flash advertisement lest you should be too late. All the advertising orders should be booked by the 5th April, 1942

The Advt Manager,
ANTARANGA, UDIPI.

ವಾಡಿಕೆಯಂತೆ ಈ ವರ್ಷವೂ

ಅಂತರಂಗದ ಯುಗಾದಿ ಸಂಚಿಕೆ.

ವಿಶಿಷ್ಟ ರೀತಿಯಲ್ಲಿ
ತಾ. 14-4-42ಕ್ಕೆ
ಪ್ರಕಟವಾಗುವುದು
ನೂರಾರು ಪುಟಗಳು.
ಹಲವಾರು ಚಿತ್ರವಿಚಿತ್ರಗಳು.
ಬೆಲೆ: 0-4-0

★ ಸರ್ ಸ್ಟಾಫೋರ್ಡ್ ಕ್ರಿಪ್ಸರ ಸೂಕ್ಷ್ಮ ಪರಿಚಯ ★

ಇಂದೀಗ ಭೇತಾಳ ಸಮಸ್ಯೆಯಾಗಿರುವ ಹಿಂದೀ ರಾಜಕೀಯ ಬಿಕ್ಕಟ್ಟನ್ನು ಆದಷ್ಟು ಬೇಗನೆ ಬಿಡಿಸಲು ಸರ್. ಸ್ಟಾಫೋರ್ಡ್ ಕ್ರಿಪ್ಸರು ವಿಮಾನ ಮೂಲಕ ಕಳೆದ ಶನಿವಾರ ಕರಾಚಿಗೆ ಬಂದಿಳಿದಿರುವರು ಅವರು ಪ್ರಥಮವಾಗಿ ವೈಸರಾಯರೊಡನೆಯೂ, ಅವರ ಎಗ್ಜಿಕ್ಯೂಟಿವ್ ಕೌನ್ಸಿಲಿನೊಡನೆಯೂ ಮಾತಾಡಿ ಆ ಮೇಲೆ ಹಿಂದೀ ರಾಜಕೀಯ ಮುಖಂಡರೊಡನೆ ಮಾತುಕತೆ ನಡಿಸಲಿರುವರು ಅವರೊಡನೆ ಮಾತಾಡಲಿಕ್ಕಾಗಿ ಕಾಂಗ್ರೆಸ್, ಮುಸ್ಲಿಮ್ ಲೀಗ್, ಹಿಂದು ಮಹಾಸಭೆ, ಮತ್ತು ಹರಿಜನ ಪ್ರತಿನಿಧಿಗಳೂ, ಲಿಬರಲರಾದ ಸಪ್ರು ಜಯಕರರೇ ಮೊದಲಾದವರೂ, ಖಾನ್ ಬಹದೂರು ಅಲ್ಲಾ ಬಕ್ಸ್ ಮತ್ತು ಮಿ. ಹಕ್ಕರೂ ಆಮಂತ್ರಿಸಲ್ಪಟ್ಟಿರುವರು. ಕ್ರಿಪ್ಸರು ಹಿಂದಿ ಪ್ರತಿನಿಧಿಗಳನ್ನೆಲ್ಲಾ ಒಟ್ಟುಗೂಡಿಸಿ ಮಾತಾಡುವರೋ- ಅಥವಾ ಪ್ರತ್ಯಪ್ರತ್ಯೇಕವಾಗಿ ಅಭಿಪ್ರಾಯ ಕೇಳಿ ತಿಳಕೊಳ್ಳುವರೋ ತಿಳಿಯದು ಅವರ ಮಧ್ಯಸ್ಥಿಕೆಯಿಂದ ಹಿಂದೀ ರಾಜಕೀಯ ಪ್ರಶ್ನೆಯು ತೀರ್ಮಾನ ಹೊಂದುವುದೆಂದು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಕ್ರಿಪ್ಸರ ಸೂಕ್ಷ್ಮ ಪರಿಚಯವು ಸಂದರ್ಭೋಚಿತವಾದುದು ಅವರಿಗೂ ಪಂಡಿತ ನೆಹರುಗಳಿಗೂ ಕೆಲ ಮಟ್ಟಿನ ಸರಿಹೋಲಿಕೆಯಿದೆ ಪರಸ್ಪರ ವಿರುದ್ಧ ಗುಣಗಳವರಲ್ಲಿ ಒಂದುಗೂಡಿವೆ. ಇಂಗ್ಲೆಂಡಿನ ಆಗರ್ಭ ಶ್ರೀಮಂತ (ಲೋರ್ಡ್) ಕುಟುಂಬದಲ್ಲಿ ಹುಟ್ಟಿದವರವರು ಆದರೆ ಶ್ರೀಮಂತ ಸಭೆಯಾದ ಹೌಸ್ ಆಫ್ ಲೋರ್ಡ್ ಅಪ್ರಯೋಜಕವೆಂದು ಅದನ್ನು ತೆಗೆದುಹಾಕಬೇಕೆನ್ನುವವರು. ಬಹಳ ಧನಿಕರಾಗಿದ್ದರೂ ಉಗ್ರ ಸಮತಾವಾದಿ. ಪ್ರಖ್ಯಾತ ವಕೀಲರು ಮತ್ತು 'ಕಿಂಗ್ ಕೌನ್ಸೆಲ'ರಾದರೂ ಬೇಕಾಯಿದೆಶೀರ ರಾಜಕೀಯ ಆಂದೋಲನಗಳಲ್ಲಿ ಆಸಕ್ತರಿರುವರು. ಅವರ ... ಕ್ಕೊಳಗಾಗುವ ಯೋಗವು ಅವರಿಗೆ ಈ ವರೆಗೆ ಬಂದಿಲ್ಲ

ಆಗರ್ಭ ಶ್ರೀಮಂತ—ಉಗ್ರ ಸಮತಾವಾದಿ
ಅಗ್ರಗಣ್ಯ ವಕೀಲ—ಅಂತರರಾಷ್ಟ್ರೀಯ ಮುತ್ಸದ್ದಿ

ಕ್ರಿಪ್ಸರು ವಕೀಲರಾಗಿ ವರ್ಷಕ್ಕೆ ೩೦,೦೦೦ ಪವನು ಸಂಪಾದಿಸುತ್ತಿದ್ದರು. "ವಕೀಲನಾಗಿ ನಾನು ಆಳುವ ವರ್ಗದ ಜನತೆಯ ಸಂಪರ್ಕ ಪಡೆಯುತ್ತೇನೆ. ಕಾಯಿದೆಯ ತೊಡಕಿನಿಂದ ಅವರನ್ನು ಬಿಡಿಸಲು ನನಗವರು ಹೇರಳ ಹಣಕೊಡುತ್ತಾರೆ ಆದರೆ ಇಂಗ್ಲಂಡಿನ ಕೆಲಸಗಾರ ವರ್ಗವು, ಈ ಆಳುವ ವರ್ಗಕ್ಕಿಂತ ಒಳ್ಳೇ ರೀತಿಯಲ್ಲಿ ಆಳುವ ಶಕ್ತಿಯುಳ್ಳದಾಗಿರುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ" ಎನ್ನುವ ಕ್ರಿಪ್ಸರಿಂದ ವಿಚಾರಪೂರ್ಣ ಮಾತಿನ ತನ್ನ ವರ್ಗದ ಕುರಿತು ಅವರಿಗೆ ತೀರಾ ತಿರಸ್ಕಾರವಿದೆ

"ನಮ್ಮ ತಲೆಯನ್ನು ನಾಚಿಕೆಯಿಂದ ಮುಚ್ಚಿಕೊಳ್ಳಬೇಕಾದರೆ, ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸದ ಪುಟಗಳನ್ನು ನೋಡಿದರೆ ಸಾಕು!" ಯಾರ ಮಾತುಗಳಿವು? ಪಂಡಿತ ನೆಹರುಗಳದ್ದಲ್ಲ— ಸರ್ ಸ್ಟಾಫೋರ್ಡ್ ಕ್ರಿಪ್ಸರದು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಬದ್ಧ ದ್ವೇಷಿ ಅವರು. ಆದರೂ ಇಂದು ಅದೇ ಸಾಮ್ರಾಜ್ಯದ ಪ್ರತಿನಿಧಿಯಾಗಿ ಹಿಂದುದೇಶಕ್ಕೆ ಬಂದಿರುವರು. ಸರ್ ಪದವಿ ಪಡೆದು ಬ್ರಿಟಿಷ್ ಸರಕಾರದ 'ಲೋರ್ಡ್ ಪ್ರಿವಿ ಸೀಲ'ರಾಗಿರುವರು. ಬ್ರಿಟನು ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ಬಿಟ್ಟು, ತನ್ನ ಅಧೀನವಿರುವ ಎಲ್ಲಾ ರಾಷ್ಟ್ರಗಳ ಕೋಮನ್‌ವೆಲ್ತನ್ನು ಸ್ಥಾಪಿಸಬೇಕು. ಜರ್ಜರಿತವಾಗಿರುವ ಹಳೆಯ ಸಾಮಾಜಿಕ ಹಾಗೂ ಸಾಂಪತ್ತಿಕ ಪದ್ಧತಿಯನ್ನು ತ್ಯಜಿಸಿ ನವೀನ ಸಮಾಜವಾದವನ್ನು ಸ್ವೀಕರಿಸಬೇಕೆಂದು ಕ್ರಿಪ್ಸರು ಉಗ್ರವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಪ್ರತಿಪಾದಿಸುತ್ತಾ ಬಂದಿರುವರು. ಹಿಂದೀ ಆಕಾಂಕ್ಷೆಗಳ ಕುರಿತು ತುಂಬಾ ಸಹಾನುಭೂತಿಯುಳ್ಳವರಿದ್ದು ಪಂಡಿತ ನೆಹರುಗಳೇ ಮೊದಲಾದ ಕಾಂಗ್ರೆಸ್ ಮುಖಂಡರ ಮಿತ್ರರಿರುವರು. ೩ ವರ್ಷಗಳ ಹಿಂದ ಹಿಂದುದೇಶವನ್ನು ಸಂದರ್ಶಿಸಿ, ಹಿಂದೀ ಮುಖಂಡರನ್ನೆಲ್ಲಾ ಕಂಡು ಮಾತಾಡಿ ಹಿಂದೀ ಪ್ರಶ್ನೆಯ ಪರಿಚಯವುಳ್ಳವರಿರುವರು

1931ರಲ್ಲಿ ಕ್ರಿಪ್ಸರು, ಈಸ್ಟ್ ಬ್ರಿಸ್ಟಲಿನ ಲೇಬರ್ ಪಕ್ಷದ ಉಮೇದ್ವಾರಿಯಾಗಿ ಆರಿಸಲ್ಪಟ್ಟರು ಅಂದಿನಿಂದ ಅವರು ಪಾರ್ಲಿಮೆಂಟ್ ಮೆಂಬರರಾಗಿರುವರು. ಲೇಬರ್ ಪಕ್ಷದ ಪ್ರಥಮ ಮಂತ್ರಿ ಮಂಡಲದಲ್ಲಿ ಸೊಲಿಸಿಟರ್ ಜನರಲರಾಗಿದ್ದರು ಲೇಬರ್ ಪಕ್ಷದ ತೀವ್ರಗಾಮಿ ಮುಖಂಡರಾಗಿ, ಆ ಪಕ್ಷವು ರಷ್ಯದ ಕಮ್ಯೂನಿಸ್ಟರೊಂದಿಗೆ ಸೇರಿ ನಡೆಯಬೇಕೆಂದು ಪ್ರತಿಪಾದಿಸಿದ್ದರು 1937ರಲ್ಲಿ ನಡೆದ ಲೇಬರ್ ಪಕ್ಷದ ಪರಿಷತ್ತಿನಲ್ಲಿ ಕ್ರಿಪ್ಸರ ಸೂಚನೆಯು ತೆಗೆದು ಹಾಕಲ್ಪಟ್ಟಿತು. ಆಕ್ಸಿಸ್ ರಾಷ್ಟ್ರಗಳ ವಿರುದ್ಧವಾಗಿ, ಬ್ರಿಟನಿನ ಲೇಬರ್ ಲಿಬರಲ್, ಕಮ್ಯೂನಿಸ್ಟ್ ಮತ್ತು ಅತೃಪ್ತ ಕನ್‌ಸರ್ವೇಟಿವ್ ಪಕ್ಷೀಯರೆಲ್ಲಾ ಒಂದುಗೂಡಿ ನಡೆಯಬೇಕೆಂದು ಪ್ರತಿಪಾದಿಸಿದ ದೂರ ದೃಷ್ಟಿಗಾಗಿ ಕ್ರಿಪ್ಸರು ಪಡೆದ ಪಾರಿತೋಷಕವೆಂದರೆ ಲೇಬರ್ ಪಕ್ಷದಿಂದ ಗಡೀಪಾರು ಹೀಗೆ 1939ರಲ್ಲಿ ತನ್ನ ಪಕ್ಷದಿಂದ ಹೊರ ಹಾಕಲ್ಪಟ್ಟಿದ್ದರು

ಆದರೆ ಇಂದು ಇಂಗ್ಲೆಂಡಿನ ಮುಂದಿನ ಪ್ರಧಾನ ಮಂತ್ರಿಗಳಾಗಬಹುದೆಂಬಷ್ಟು ಪ್ರಾಮುಖ್ಯತೆಯನ್ನವರು ಪಡೆದಿರುವರು. ಸೋವಿಯೆಟ್ ರಷ್ಯ ಮತ್ತು ಬ್ರಿಟನುಗಳು ಒಂದಗೂಡಿ ನಡೆಯಬೇಕೆಂದು ಮೊದಲಿಂದಲೇ ಕ್ರಿಪ್ಸರ ಪ್ರತಿಪಾದನೆಯಾಗಿತ್ತು. ರಷ್ಯವು ಫಿನ್ಲೆಂಡಿನ ಮೇಲೆ ನಡಿಸಿದ ಧಾಳಿಯು ಅನ್ಯಾಯವಲ್ಲೆಂದವರು ಧೈರ್ಯದಿಂದ ಹೇಳಿದ್ದರು ರಷ್ಯದ ಬ್ರಿಟಿಷ್ ರಾಯಭಾರಿಯಾಗಿ ಅವರು ಮಾಡಿದ ಕೆಲಸವು ಐತಿಹಾಸಿಕವಿರುವುದು ಸೋವಿಯೆಟ್ ರಷ್ಯ ಮತ್ತು ಬ್ರಿಟನುಗಳೊಳಗೆ ಬಾಂಧವ್ಯ ಬೆಳೆಸಲು ಕ್ರಿಪ್ಸರೇ ಮುಖ್ಯ ಕಾರಣ. ಹಿಂದೀ ರಾಜಕೀಯ ಬಿಕ್ಕಟ್ಟನ್ನು ಅವರು ಜಯಶೀಲರಾಗಿ ಬಿಡಿಸಲು ಶಕ್ತರಾದರೆ ಅವರ ಯಶಸ್ಸು ಮತ್ತು ಪ್ರಾಮುಖ್ಯತೆಯು ಮತ್ತಷ್ಟು ಹೆಚ್ಚುವುದೆಂಬುದರಲ್ಲಿ ಸಂದೇಹವೇ ಇಲ್ಲ.

ಕ್ರಿಪ್ಸರು ಯಥಾರ್ಥವಾದಿ. ಪರಿಣಾಮದ ಗೊಡವೆಗೆ ಹೋಗದೆ ತನ್ನ ಮನೋನಿರ್ಧಾರದಂತೆ ನಡೆಯುವ ನೈತಿಕ ಧೈರ್ಯವುಳ್ಳವರು ಆಡಂಬರ ರಹಿತ ಸರಳ ಜೀವನ ನಡಿಸುವವರು. ಬಹಳ ದೂರ ದೃಷ್ಟಿಯುಳ್ಳ ವ್ಯಾಪಕ ಬುದ್ಧಿಯುಳ್ಳವರು ಅಸಾಧಾರಣ ಮೇಧಾವಿ ಮತ್ತು ಉಜ್ವಲ ವಿಚಾರವಾದಿ. ಪದ್ಧತಿಯ ರೀತಿನೀತಿಗಳನ್ನು ಮೆಚ್ಚದೆ ಅವುಗಳ ಕುರಿತು ಬಂಡಾಯವೆಬ್ಬಿಸಿರುವ ಕ್ರಾಂತಿಕಾರ ಸೋವಿಯೆಟ್ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಯ ಕುರಿತು ಬಹಳ ಮೆಚ್ಚಿಕೆಯುಳ್ಳವರಿದ್ದರೂ, ಆ ಕುರಿತು ಅಂಧ ವಿಶ್ವಾಸವುಳ್ಳವರಿರುವುದಿಲ್ಲ. ಅದರಲ್ಲೂ ದೋಷಗಳಿವೆಯೆಂದು ಹೇಳುವವರು ಪಂಡಿತ ನೆಹರುಗಳಂತೆಯೇ ವಿಶಿಷ್ಟ ಹಾಗೂ ಅತ್ಯುಜ್ವಲವಾದ ವ್ಯಕ್ತಿತ್ವ ಕ್ರಿಪ್ಸರದು.

ಪ್ರಕಟಣೆ

ಉಡುಪಿ ಡಿ ಮು ಕೋರ್ಟಿನಲ್ಲಿ.

O P. No. 15/1942

ಮುತ್ತಕ್ಕ ಶೆಡ್ತಿ- ಅರ್ಜದಾರಳು

ಮತ್ತು

ದುಗ್ಗಪ್ಪ ಶೆಟ್ಟಿ— ಯದ್ರಿ

ಇವರೊಳಗೆ

ಸದ್ರಿ ಯದ್ರಿಗೆ ಮತ್ತು ಸಮಸ್ತ ಜನರ ಅವಗಾಹನೆಗೆ-

ಮೇಲ್ಕಂಡ ಅರ್ಜದಾರಳು ತನ್ನ ಗಂಡ ಮೃತ ಶಿರೂರು ಮುತ್ತಯ್ಯ ಶೆಟ್ರು ತಾ 28-4-1937ರಲ್ಲು ರಿ. ನಿ ಬರದಿಟ್ಟ ಮೀಲುನಾಮೆ ಮೇರೆಗೆ ಅವರ ಬಾಬ್ತು ಈ ಕೋರ್ಟು S C. No 190/37ನೇ ಡಿಕ್ರಿ ಹಣ ವಗೈರೆ ವಸೂಲು ಮಾಡುವರೆ ತಾನು ಹಕ್ಕುದಾರಳೆಂತಲೂ, ಆ ಬಗ್ಗೆ ತನಗೆ ವಾರಿಸು ಸರ್ಟಿಫಿಕೇಟು (Succession certificate) ಕೊಡಿಸಬೇಕಾಗಿಯೂ ಮೇಲ್ಕಂಡ ಅರ್ಜಿ ಕೊಟ್ಟಿರುತ್ತಾಳೆ. ಸದ್ರಿ ಅರ್ಜಿಯು ತಾ 8-4 1942ಕ್ಕೆ ಚಿನ್ನಿಗೆ ಇಟ್ಟಿರುವುದರಿಂದ ಆ ಬಾಬ್ತಿನಲ್ಲಿ ಆಕ್ಷೇಪ ಹೇಳುವವರು ಇದ್ದರೆ ಸದ್ರಿ ದಿವಸ ಬೆಳಗ್ಗೆ 10ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ತಕ್ರಾರು ಮಾಡಿಕೊಳ್ಳತಕ್ಕದ್ದೆಂತಲೂ ತಪ್ಪಿದ್ರೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನವಾಗುತ್ತದೆಂತಲೂ ಈ ಮೂಲಕ ತಿಳಿಸೋಣಾಗಿದೆ.

Thonse Ganapaya Shetty.

Udipi
Dated 16 3 42 } Vakil for Petitioner

ಬ್ಯಾಂಕಿನ ಪಾಲುಗಳು

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.,
ಇದರ ಪಾಲುಗಳನ್ನು ಪಡಕೊಳ್ಳಿರಿ.

ಈ ಬ್ಯಾಂಕಿಂಗ್ ಸಂಸ್ಥೆಯು 1931ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ದಿನೇ ದಿನೇ ಅಭಿವೃದ್ಧಿಗೊಂಡು ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ಕಾಪು, ಕುಂದಾಪುರ, ಕಾರ್ಕಳ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಎಲ್ಲಾ ಜನರ ಪ್ರೋತ್ಸಾಹಕ್ಕೂ ಆದರಕ್ಕೂ ಪಾತ್ರವಾಗಿದೆ

ಬ್ಯಾಂಕಿನ ಪಾಲುಗಳನ್ನು ಸಂಗ್ರಹಿಸಲು ನಮ್ಮ ಓರ್ಗನೈಜರರಾದ ಶ್ರೀ ಮೂಲ್ಕಿ ಮಂಜಯ ಭಂಡಾರಿಗಳವರು ಇದೇ ತಾ. 19-1-42ರಿಂದ ಸ್ವಜಾತೀಯ ಮಹನೀಯರನ್ನು ಸಂದರ್ಶಿಸತೊಡಗಿರುವರು. ಅವರಿಗೆ ಮಹಾಜನರು ಅತ್ಯಧಿಕ ಪ್ರೋತ್ಸಾಹ ಕೊಟ್ಟು ಉತ್ಸಾಹದಿಂದ ಬ್ಯಾಂಕಿನ ಪಾಲುಗಳನ್ನು ಪಡೆದು ನಮ್ಮ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗಿ ಎಲ್ಲರಲ್ಲಿಯೂ ನಮ್ಮ ಸವಿನಯ ವಿನಂತಿ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್., ಮಂಗಳೂರು. } ಬಿ ಮಂಜಯ್ಯ ಹೆಗ್ಡೆ ಬಿ ಎ. ಬಿ ಎಲ್. ಚೇಯರ್‌ಮೆನ್

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS

High Class Boarding & Lodging House

HOSPITAL ROAD. UIDPI.

ಶಿವಳ್ಳಿ ಬ್ರಾಹ್ಮಣರ ಉತ್ಕೃಷ್ಟ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ

Degrees Books Medicines

Free H, L M, S.M. B H. M D, etc Free Homeo Ayur Unani-Naturo degree By post also—Practitioners also get soon Homeo Materiamedica Rs 5 Homeo Practice book Rs. 4 Insanity Cure Pills Rs 10 Enclose 2 annas stamp —

Principal Indian Homeopath Institute & Society (Govt. Regd)

P O Mahuva (Kathiawar Dt, India)

Sidha-Kalpa Kavach (Regd.)

No 3 Rs 2 No 2 Rs. 5 No 1 Rs. 7. Special Rs 10 Extra Special Rs 17. for ove marriage health, wealth. Ask any six questions with M O. Re 1/- and get correct answers by return post Life reas Rs pble No V P. P Send M O. Ltd P. O ts Prof. Dr N H Chhatbar. 2ngam Mahuva (Kathiawar India)

ಹಿಟ್ಲರರ ವಸಂತ ಋತುವಿನ ಪ್ರಚಂಡ ಧಾಳಿ

ಸ್ಟೆಲಿನರ ಚಳಿಗಾಲದ ಧಾಳಿಯು ಅವರ ಬಲವನ್ನು — ಮುರಿದಿದೆ —

ರಸ್ಯವು ಆತ್ಮ ವಿಶ್ವಾಸದಿಂದದನ್ನು ನಿರೀಕ್ಷಿಸುತ್ತಿದೆ

ಇದೇ ತಾ. 21ಕ್ಕೆ ಚಳಿಗಾಲವು ಮುಗಿದು ವಸಂತ ಋತುವು ಆರಂಭವಾಗಿರುವುದು. ಆದರೆ ರಸ್ಯದಲ್ಲಿ ಇನ್ನೂ ಕೆಲವು ವಾರ ಚಳಿಗಾಲದ ಪರಿಸ್ಥಿತಿಯೇ ಇರುವುದರಿಂದ ಹಿಟ್ಲರರ ವಸಂತ ಋತುವಿನ ಪ್ರಚಂಡ ಧಾಳಿಗೆ ಇನ್ನೂ ಕೆಲವು ವಾರಗಳಿರುವವೆನ್ನಬಹುದು. ಬರುವ ಚಳಿಗಾಲದೊಳಗೆ ಹಿಟ್ಲರರು ರಸ್ಯವನ್ನು ಸದೆಬಡಿಯದಿದ್ದ ಪಕ್ಷದಲ್ಲಿ ಮತ್ತೆ ಸಾಧ್ಯವೇ ಇಲ್ಲ. ಆದುದರಿಂದ ಅವರು ತಮ್ಮ ಸೇನಾಶಕ್ತಿಯನ್ನೆಲ್ಲಾ ಒಮ್ಮೆಯೇ ಸೋವಿಯೆಟ್ ರಸ್ಯದ ಮೇಲೆ ಪ್ರಯೋಗಿಸಿ ಅದನ್ನು ಬೇಗನೆ ಪ್ರಚಂಡ ಧಾಳಿ ನಡಿಸುವ ಸಿದ್ಧತೆಯಲ್ಲಿರುವರೆಂಬುದರಲ್ಲಿ ಸಂದೇಹವಿಲ್ಲ. ಕಳೆದ ವರ್ಷ ಪ್ರಧಾನ ಸೇನಾನಾಯಕಸ್ಥಾನದಿಂದ ತೆಗೆದುಹಾಕಲ್ಪಟ್ಟಿದ್ದ ಮಾರ್ಶಲ್ ವಾನ್‌ಬ್ರೋಕಿಶರು ಪುನಃ ಮುಖ್ಯ ಸೇನಾಧಿಪತಿಗಳಾಗಿ ನೇಮಿಸಲ್ಪಟ್ಟು, ಖಾರ್ಕೋವಿನ ಕಡೆಗೆ ಮುಂದೊತ್ತುತ್ತಿರುವ ಮಾರ್ಶಲ್ ಟಿಮೊಶೆಂಕೋರವರ ಸೇನೆಯನ್ನು ಪ್ರತಿಭಟಿಸಲು ಕಳುಹಿಸಲ್ಪಟ್ಟಿರುವರೆಂದು ತಿಳಿದುಬಂದಿದೆ.

ಸ್ಟೆಲಿನರು, ಹಿಟ್ಲರರ ವಸಂತ ಋತುವಿನ ಧಾಳಿಯನ್ನು ನಿರೀಕ್ಷಿಸುತ್ತಾ, ಅದನ್ನು ಪ್ರತಿಭಟಿಸಲು ತಕ್ಕ ಸಿದ್ಧತೆ ಮಾಡಿಕೊಂಡು ತಣ್ಣಗೆ ಕೂತುಕೊಂಡಿರಲಿಲ್ಲ. ಆ ಮೊದಲು ತಾನೇ ಚಳಿಗಾಲದ ಧಾಳಿ ನಡಿಸಿ ಕಳೆದ ಅಕ್ಟೋಬರದಿಂದ ಜರ್ಮನರಿಗೆ ಸ್ವಲ್ಪವೂ ವಿಶ್ರಾಂತಿ ದೊರೆಯದಂತೆ ಮಾಡಿರುವರು. ಮಾತ್ರವಲ್ಲದೆ ಹಲವು ಪ್ರಾಮುಖ್ಯ ಹಾಗೂ ಸಂದುಕಟ್ಟಿನ ಸ್ಥಳಗಳಿಂದ ಜರ್ಮನರು ಹಿಂದಕಟ್ಟಲ್ಪಟ್ಟು ಹೆಚ್ಚಿನ ಹಾನಿ ಹೊಂದಿರುವರು. ಆದುದರಿಂದ ಹಿಟ್ಲರರು ವಸಂತ ಋತುವಿನ ಧಾಳಿಗೆಂದು ಸಂಗ್ರಹಿಸಿದ್ದ ಹಲವು ಡಿವಿಜನು ಸೇನೆಗಳನ್ನು ಇಷ್ಟರಲ್ಲೇ ರಣರಂಗಕ್ಕೆ ಕಳುಹಿಸಬೇಕಾಗಿದೆ ರಸ್ಯಾನರ ಧಾಳಿಯ ನಿಮಿತ್ತ, ಬಿಡುವಿಲ್ಲದೆ ಹೋರಾಡಬೇಕಾಗಿರುವ ಜರ್ಮನ್ ಸೈನಿಕರಲ್ಲಿ, ವಸಂತ ಋತುವಿನ ಧಾಳಿಯ ಕುರಿತು ಹಿಂದಿನಂತೆ ವಿಜಯದುಬ್ಬಿನ ಉತ್ಸಾಹವೇ ಇಲ್ಲದಂತಾಗಿದೆ. ಇದರ ಪರಿಣಾಮವಾಗಿ ಹಿಟ್ಲರರಿಗೆ ವಸಂತ ಋತುವಿನಲ್ಲಿ ಪ್ರಚಂಡ ಧಾಳಿ ನಡಿಸುವಷ್ಟರ ಶಕ್ತಿಯು ಇರುವುದೇ ಎಂಬ ಸಂದೇಹಕ್ಕಾಸ್ಪದವುಂಟಾಗಿರುತ್ತದೆ. ಈ ಧಾಳಿಗೆ ಅತ್ಯಾವಶ್ಯಕವಾದ ಕೆಲವು ಪ್ರಾಮುಖ್ಯ ಸ್ಥಳಗಳನ್ನು ಹಿಟ್ಲರರು ಕಳಕೊಂಡಿರುತ್ತಾರೆ. ಕೊಕೆಸಸಿನ ಧಾಳಿಗೆ ಅಗತ್ಯಕವಾದ ಖಾರ್ಕೋವು ಪಟ್ಟಣವೇ ರಸ್ಯಾನರ ವಶವಾಗುವ ಅಪಾಯವುಂಟಾಗಿರುತ್ತದೆ. ತಾನು ಸಂಗ್ರಹಿಸಿಟ್ಟಿದ್ದ, ಕಡಿಮೆ ಪಕ್ಷ ಮೂರರಲ್ಲೊಂದಂಶ ಸೇನೆಯನ್ನವರು, ಸ್ಟೆಲಿನರ ಧಾಳಿಯನ್ನು ತಡೆಗಟ್ಟಲು ಮುಂದಾಗಿ ಯುದ್ಧಕ್ಕೆ ಕಳುಹಿಸಬೇಕಾಗಿದೆ. ಸ್ಟೆಲಿನರ ಯುದ್ಧತಂತ್ರದಿಂದಾಗಿ, ಪ್ರಚಂಡ ಧಾಳಿಯ ಸಿದ್ಧತೆಗೆ ಬೇಕಾದ ವಿಶ್ರಾಂತಿ ಮತ್ತು ವಿರಾಮವು ಜರ್ಮನ್ ಸೇನೆಗೆ ದೊರೆಯದಂತಾಗಿದೆ. ಆದುದರಿಂದ ಹಿಟ್ಲರರು ಈ ವರೆಗೆ ಜಂಭ ಹೊಡೆಯುತ್ತಾ ಬಂದಿರುವ ಧಾಳಿಯನ್ನೇನೋ ನಡಿಸುವರು. ಆದರೆ ಆ ಹಾಯಿಯ ಗಾಳಿಯನ್ನು ಸ್ಟೆಲಿನರು ಮೊದಲೇ ತೆಗೆದು ಬಿಟ್ಟಿದ್ದಾರೆ. ಆದುದರಿಂದ ಸೋವಿಯೆಟ್ ಸೇನೆಯನ್ನು ಆದರಿಂದ ಸದೆಬಡಿಯಲು ಸಾಧ್ಯವಾಗಲಾರದೆಂದು ಅಮೆರಿಕದಲ್ಲಿ ಅಭಿಪ್ರಾಯವುಂಟಾಗಿದೆ.

ಹಿಟ್ಲರರ ವಸಂತ ಋತುವಿನ ಧಾಳಿಯನ್ನು ಪ್ರತಿಭಟಿಸುವ ಸಿದ್ಧತೆಯನ್ನು ಸ್ಟೆಲಿನರು ಮಾಡಿರುತ್ತಾರೆ. ರಸ್ಯ ಕೂಡಾ ರಿಸರ್ವ್ ಸೇನೆಯನ್ನು ಸಂಗ್ರಹಿಸಿಕೊಂಡಿದೆ. ಕೆಂಪು ಸೇನೆಯು ಅತ್ಯುತ್ಸಾಹದಿಂದ ಯುದ್ಧಕ್ಕೆ ಮುಂದಾಗಿದೆ. ಸೋವಿಯಟ್ ಸರಕಾರವು ದೃಢ ವಿಶ್ವಾಸದಿಂದ ಹಿಟ್ಲರರ ಧಾಳಿಯನ್ನು ನಿರೀಕ್ಷಿಸುತ್ತಿದೆ. ನಾಝಿ ಪಡೆಯ ಪ್ರಚಂಡ ಧಾಳಿಯ ಅಗ್ನಿ ಪರೀಕ್ಷೆಯಿಂದ ರಸ್ಯವು ಇಂದು ಜಯಶೀಲವಾಗಿ ಪಾರಾಗಿದೆ. ಕಳೆದ ಅಕ್ಟೋಬರ ತಿಂಗಳು ಅತ್ಯಂತ ಕಂಟಕದ್ದಾಗಿದ್ದಿತು. ಆಗ ರಸ್ಯವು ಪತನ ಹೊಂದಬೇಕಿತ್ತು. ಆದರೆ ಹಾಗಾಗಿಲ್ಲ. ಇನ್ನು ಮುಂದ ಅದೆಂದೂ ಸಾಧ್ಯವಿಲ್ಲ.

ಕೆಂಪು ಸೇನೆಯು ಇಂದು ಜರ್ಮನರೊಡನೆ ಹೋರಾಟದ ಅನುಭವವುಳ್ಳದಾಗಿರುವುದು. ರಸ್ಯಾನದ ಸೈನಿಕರೂ, ಯುದ್ಧೋಪಕರಣವೂ ಜರ್ಮನಿಯದಕ್ಕೆ ಸರಿ ಮಿಗಿಲೆನಿಸುವುವೆಂಬುದನ್ನು ಚಳಿಗಾಲದ ಯುದ್ಧವು ಸಿದ್ಧಗೊಳಿಸಿದೆ. ಯುದ್ಧ ಯಂತ್ರರಹಿತ ಜರ್ಮನ್ ಸೈನಿಕನು ರಸ್ಯಾನನಿಗಿಂತ ಒಷ್ಟೊಂದು ಕಳತೆಯೆಂಬುದೀಗ ವೇದ್ಯವಾಗಿದೆ.

ಚಳಿಗಾಲದ ಭೀಕರ ಹಾಗೂ ತೀವ್ರ ಹೋರಾಟವು ಜರ್ಮನ್ ಸೈನಿಕರನ್ನು ಧೃತಿಗೆಡಿಸಿರುತ್ತದೆ. ಎಷ್ಟೊಂದು ಮಂದಿ ಜರ್ಮನರು ರಸ್ಯದ ಹಿಮದಡಿಯಲ್ಲಿ ಬಿದ್ದು ಸತ್ತಿರುವರೆಂಬುದು ಹಿಮ ಕರಗಿದಾಗ ಮಾತ್ರ ತಿಳಿದೀತು. ಹಿಮ ಕಡಿತದಿಂದ ಸತ್ತವರ ಸಂಖ್ಯೆಯು ವಿಸ್ಮಯಕರವಿರುವುದು. ಬಯಲು ಪ್ರದೇಶಗಳಲ್ಲಿ ಇದ್ದಕ್ಕಿದ್ದಂತೆ ಎಷ್ಟೋ ಮಂದಿ ಜರ್ಮನರು ಸತ್ತು ಬಿದ್ದಿರುತ್ತಾರೆ.

ತಮ್ಮ ಟೇಂಕುಗಳು ಜರ್ಮನರದಕ್ಕಿಂತ ಉತ್ತಮವಾದುವುಗಳೆಂದು ರಸ್ಯಾನರ ಅಭಿಮತ. ಜರ್ಮನ್ ವಿಮಾನ ಪಡೆಗೂ ರಸ್ಯದಲ್ಲಿ ಹೆಚ್ಚಿನ ಹಾವಳಿ ಮಾಡಲು ಸಾಧ್ಯವಾಗಿರುವುದಿಲ್ಲ. ರಸ್ಯಾನ ವಿಮಾನ ಪಡೆಯು ಪ್ರಬಲವಾಗಿರುತ್ತದೆ. ಜರ್ಮನಿಗಿರುವ ಇನ್ನೊಂದು ದೊಡ್ಡ ಅನಾನುಕೂಲತೆಯೆಂದರೆ ಸಾಕಷ್ಟು ಪೆಟ್ರೋಲಿನ ಅಭಾವ. ಅದರ ಪ್ರಕೃತದ ಸಂಗ್ರಹವು ಪ್ರಾಯಶಃ ಇತಿಂಗಳ ಪ್ರಚಂಡ ಧಾಳಿಗೆ ಮಾತ್ರ ಸಾಕು. ಆದುದರಿಂದ ಜರ್ಮನಿ ಪೆಟ್ರೋಲಿನ ವಿಷಯದಲ್ಲಿ ಬಹಳ ಜಾಗ್ರತೆತೆಗೆದುಕೊಳ್ಳಬೇಕಾಗಿದೆ. ಹಿಂದಿನಂತೆ ಎಷ್ಟು ಪೆಟ್ರೋಲನ್ನಾದರೂ ಉಪಯೋಗಿಸುವ ಮಡುಕಿಗದು ಹೋಗಲು ಸಾಧ್ಯವಿಲ್ಲ.



ಆಪತ್ತು ಸನ್ನಿಹಿತವಾದಾಗ ಯಾವ ಆಲೋಚನಪರ ವ್ಯಕ್ತಿಯೂ ತನಗೆ ಅತ್ಯಂತ ಪ್ರಿಯತಮವಾದ ವಸ್ತುಗಳನ್ನು ಸಂರಕ್ಷಿಸಲು ಹಿಂಜರಿಯುವುದಿಲ್ಲ. ಯುದ್ಧವು ನಿಮ್ಮ ಅನ್ನಭಾಂಡದ ಹತ್ತಿರಕ್ಕೆ ಬರುತ್ತದೆ. ನಿಮ್ಮ ಸೌಖ್ಯವನ್ನು ಮತ್ತು ಅವರ ಸೌಖ್ಯವನ್ನು ಅಪಾಯಕ್ಕೀಡುಮಾಡಿ, ಸ್ವಾತಂತ್ರ್ಯವನ್ನು ಅಸ್ತಿವಾಸ್ತಿಗಳನ್ನು ಭಾವಿ ಭದ್ರತೆಯನ್ನು ಧ್ವಂಸಗೊಳಿಸಲು ಸಿದ್ಧವಾಗಿದೆ. ಶತ್ರುವಿನ ಧಾಳಿಯನ್ನು ತಡೆಯಲು ನಿಮ್ಮ ರಕ್ಷಣೆ ವೀರರಿ ನಿಮ್ಮ ದೇಶಕ್ಕೆ ಸಹಾಯ ಮಾಡಲು ಈಗಲೇ ನೀವು ಕಾರ್ಯೋನ್ಮುಖರಾಗಬೇಕು

ಪ್ರತಿ ೧೦ ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟಿಗೂ
ರೂ ೩/೯/-
ಲಾಭ ಬರುವುದು
ಹತ್ತು ವರುಷಗಳು ಮುಗಿದನಂತರ

ಕೊಳ್ಳಿರಿ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ನೀವು ಕೊಡುವ ಪ್ರತಿಯೊಂದು ಆಣೆಯೂ ಹಿಂದೂಸ್ಥಾನದ ಸೈನಿಕ, ನಾವಿಕ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುವುದು.

DIAMONDS! DIAMONDS!

K. R. K. SHET.

Opposite Govt College, Hampankatta MANGALORE
SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!

ಉತ್ಕೃಷ್ಟ ತರಗತಿಯ ಚುನ್ನಿತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಖರ್ಚು ೮ ಆಣೆ

ಮಾಲಕರು—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಎ ಗಂಗೂಕೋಟಿ ಫಾರಮಸಿ, ವಿಜಾಪೂರ—ದಾನವ ಸಿದ್ಧಲಿಂಗಪ್ಪ ಧಾರವಾಡದ ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ದಾವಣಗೇರಿ.—ದಾವಣಗೇರಿ ಫ್ರೆಂಡ್ಸ್ ಬಳ್ಳಾರಿ—ಎಚ್ ವಿರುಪಾಕ್ಷಪ್ಪ ವರ್ತಕರು, ಬಳ್ಳಾರಿ, ಗೋಕಾಕ—ಸಂಗಪ್ಪ ಶಿವಲಿಂಗಪ್ಪ ಅಂಗಡಿ

ಆಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—ಆಮಲಕೀ ತೈಲ
ಆನಂದ ಉತ್ಸಾಹ ಪಿಚಾರಶಕ್ತಿ ಹೆಚ್ಚಿಸಲು-ಆಮಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ
ನಾರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ ಆಮಲಕೀ ತೈಲ
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—ಆಮಲಕೀ ತೈಲ
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ
ಭಾರತದ ಮಹಿಳೆಯರು ಪ್ರೀತಿಸುವ—ಆಮಲಕೀ ತೈಲ
ಬೆಳಗುವ ತಾರೆಯೇ ಮಿದುಳಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ
ಬಲನೆಯರು ಮೆಚ್ಚುವರು ಆಮಲಕೀ ತೈಲ
ವಾತಾದಿ ತ್ರಿದೋಷನಾಶಕವೇ—ಆಮಲಕೀ ತೈಲ
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—ಆಮಲಕೀ ತೈಲ
ಸರ್ವಶಿರೋರೋಗನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ

ಆಮಲಕೀ ತೈಲ ವನ್ನೇ ಉಪಯೋಗಿಸಿರಿ.

2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು ನವಭಾರತ ಬುಕ್‌ಡಿಪೋ, ಉಡುಪಿ, ಗಣಪತ್ಯ ಒಕ್ಕೈ ನಾಯಕ್ ಬ್ರದರ್ಸ್, ಕೋಟ ದಿ ನೇಶನಲ್ ಮೆಡಿಕಲ್ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

ಮುಖ್ಯ ಕಾರ್ಯಾಲಯ —**ಕೋರ್ಟು ರಸ್ತೆ, ಉಡುಪಿ.**

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಪುತ್ತೂರು, ಕಿನ್ನಿಗೋಳಿ, ದ ಕನ್ನಡ

ತೆತ್ತ ಮೂಲಧನ .	ರೂ 1,82,100.
ಕ್ಷೇಮ ನಿಧಿಗಳು . .	ರೂ. 1,82,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ನಡಿವಳಿಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು)

ತುಲಾ:—ಶತ್ರು ಜನರ ಪೀಡೆಯೂ ದೈಹಿಕಾಲಸ್ಯವೂ ಮಾನಸಿಕ **ಚಿಂತೆಯೂ** ಈ ವಾರದಲ್ಲಿ ಬಹು ಮಟ್ಟಿಗೆ ಕಡಿಮೆಯಾಗಲಿದೆ ಆರ್ಥಿಕ ಬಿಕ್ಕಟ್ಟು ಮಾತ್ರ ಎಂದಿನಂತೆಯೇ ಇದ್ದೀತು. ಗೃಹ ಕಲಹದಿಂದ ಅಶಾಂತಿಯುಕ್ತವಾದ ನಿಮ್ಮ ಮನಸ್ಸಿಗೆ ಬಂಧು ಮಿತ್ರರ ಅವಲಂಬನವು ಸುಖದಾಯಿಯಾದೀತು ಶಸ್ತ್ರಾದಿಗಳಿಂದ ಗಾಯಾದಿಗಳು ಆಗಬಹುದು ದೇಹದಲ್ಲಿ ಕಜ್ಜಿ ಹುಣ್ಣು ವಗೈರೆ ಚರ್ಮ ರೋಗಗಳೂ ಕಾಣಿಸಿಕೊಳ್ಳಲಿವೆ. ವಿದ್ಯಾರ್ಥಿಗಳಿಗೆ ಈ ವಾರವು ಅನಿಷ್ಟದಾಯಿಯಾಗಿದೆ. ತಾ. 26 27 1 ಈ ೩ದಿನಗಳಲ್ಲಿ ರಾಜಭಯ, ಉದರ ರೋಗ, ಅತಿವ್ಯಯಗಳು ಪ್ರಾಪ್ತವಾದಾವು.

ವೃಶ್ಚಿಕ.—ನಿಮ್ಮ ಭಾಗಕ್ಕೆ ಈ ವಾರವು ಸುಖ ದುಃಖ ಮತ್ತು ಇಷ್ಟಾನಿಷ್ಟಗಳಿಂದ ಸಮ್ಮಿಶ್ರವಾಗಿದೆ. ಒಳ್ಳೆ ವಾಚಾಲರಾದ ನೀವು ಯಾರೊಡನೆಯೂ ನಿಷ್ಠುರ ಕಟ್ಟಿಕೊಳ್ಳಲಾರಿರಿ ಆತಏವ ಯಾರೂ ನಿಮ್ಮೆದುರಿನಲ್ಲಿ ನಿಮ್ಮನ್ನು ದೂಷಿಸರು ಹಾಸಿಗೆ ಇದ್ದಷ್ಟೇ ಕಾಲು ಚಾಚ ಬೇಕೆನ್ನುವ ನಿಯಮವನ್ನು ಸಂಪೂರ್ಣ ಪಾಲಿಸುವಿರಿ ರಾಜಕೀಯ ರಂಗದಲ್ಲಿ ವಿಪಕ್ಷೀಯರ ಕೈವಾಡವೇ ಮೇಲಾಗಲಿದೆ. ನಿಮ್ಮ ಆಜ್ಞೆಯನ್ನು ಅರ್ಧಾಂಗಿಯು ಪಾಲಿಸಲಾರಳು ತಾ 29ರಿಂದ 1ರ ವರೆಗಿನ ದಿನಗಳಲ್ಲಿ ಮಿತ್ರರ ಪತ್ರ, ಭೇಟಿ, ಇಷ್ಟಸಿದ್ಧಿ, ಲಾಭಗಳು ಲಭಿಸುವವು

ಧನು—ಮನದಲ್ಲೊಂದು ರೀತಿ, ಬಾಯಿಯಲ್ಲೊಂದು ವಿಧ, ಕೃತಿಯಲ್ಲೊಂದು ರೀತಿಯನ್ನನುಸರಿಸಿ ಗುರು ಜನರ ಮತ್ತು ಅಧಿಕಾರಿ ವರ್ಗದವರ ಆಗ್ರಹಕ್ಕೆ ಗುರಿಯಾಗಲಿರುವಿರಿ ನಿಮ್ಮ ಪರಾಕ್ರಮದ ಮುಂದೆ ಶತ್ರು ಜನರ ಆಟವೇನೂ ಸಾಗದು ಗೃಹ ಸುಖವು ಉತ್ತಮವಾಗಿ ಲಭಿಸುವದು. ದೇಹಾರೋಗ್ಯವು ಮುಂಚಿಗಿಂತ ಉತ್ತ[illegible] ವಾರಾದಿಯ ೨ ದಿನಗಳು ಸ್ವಲ್ಪ ಪ್ರತಿಕೂಲವಿರುವುದರಿಂದ ಸಕಲ ಕಾರ್ಯಗಳಿಗೂ ಮುಂದಿನ ದಿನಗಳೇ ಲೇಸು

ಮಕರ:—ಕಷ್ಟ ಕಾಲವು ಕಳೆಯಿತಾದರೂ ಶನ್ಯಂಗಾರಕರು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರರು. ಗೃಹಕೃತ್ಯ ಸಂಬಂಧವಾದ ಚಿಂತೆಯಿಂದ ಸದಾ ವಿಷಣ್ಣ ವದನರಾಗಿರುವಿರಿ. ಆದರೂ ನಿಮ್ಮ ಉದ್ಯಮವು ನಿರರ್ಗಲವಾಗಿ ಮುಂದೆ ಸಾಗುವುದರಿಂದಲೂ ಗುರು ಜನರ ಮತ್ತು ಆಪ್ತೇಷ್ಟರ ಬಲವತ್ತರವಾದ ಸಹಕಾರವಿರುವುದರಿಂದಲೂ ದಿನಗಳು ಕಳೆದುದೇ ತಿಳಿಯಲೊಲ್ಲವು. ತಾ. 26.27. 28 ಮತ್ತು 2 ಈ 4ದಿನಗಳಲ್ಲಿ ಸ್ತ್ರೀ ಮೂಲಕ ಧನ ಪ್ರಾಪ್ತಿ, ಪ್ರವಾಸ, ಮಾನ ಪೂಜಾದಿಗಳೂ ಲಭಿಸಬಹುದು.

ಕುಂಭ:—ಸ್ವಭಾವತಃ ಚಂಚಲವಾದ ಮನಸ್ಸು ಇಂದೀಗ ನಿಮ್ಮ ಹತೋಟಿಯಿಂದ ತಪ್ಪಿ ಹೋಗುವದು ದುಷ್ಕರ್ಮ ದುರಾಚಾರಗಳಿಗೇ ಮನಸ್ಸು ಓಡುವದು. ಯಾರೊಬ್ಬರಲ್ಲೂ ವಿಶ್ವಾಸವಿಲ್ಲದಂತಾಗುವದು ಇದಕ್ಕೆ ಸರಿಯಾಗಿ ದುರ್ಜನರ ಸಹವಾಸ ಸ್ನೇಹಗಳೂ ಗಂಟು ಬೀಳುವವು. ಶತ್ರು ಜನರು ಪ್ರತಿಕ್ರಿಯೆಯಿಂದ ಕತ್ತ ಕೃತ್ಯರಾಗುವರು. ಮಾತಿನಲ್ಲೂ ಕೃತಿಯಲ್ಲೂ ಸ್ವಪ್ರಾಯರ್ಥವು ಹೆಚ್ಚುವುದರಿಂದ ಹಲವರೊಡನೆ ಕಲಹವಾದೀತು ವಿಲಾಸೀ ಜನರಿಗೆ ಈ ವಾರವು ಅನುಕೂಲವಿದೆ. ತಾ 27ರಿಂದ 30ರ ವರೆಗಿನ ದಿನಗಳು ಕೊಂಚ ಸುಪ್ರೇಷ್ಟ ಸಿದ್ಧಿದಾಯಿಗಳಾಗಿವೆ

ಮೀನ—ಕೈಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯು ಇಂದೀಗ ನಿಮ್ಮ ಕೃತಿಯಿಂದಲೇ ವ್ಯಕ್ತವಾಗುತ್ತಲಿದೆ. ಅದ್ವಿತೀಯ ಸಾಹಸಿಗರಾದ ನಿಮಗೆ ಪ್ರಯತ್ನಾನುಗುಣವಾದ ಫಲವು ಸಿಕ್ಕಿಯೇ ತೀರುವದು. ಪಶುಭೃತ್ಯಾದಿ ಪರಿಜನರಿಂದ ಕೂಡಿದ ಸಂಸಾರವು ನಿರಾಮಯವಾಗಿ ನಿಶ್ಚಿಂತೆಯಿಂದಿರುವುದು. ಮಧ್ಯಮಧ್ಯ, ಅಂಗಕ್ಲೇಶ, ಉದರರೋಗ ಪರ್ಯಟನ ಮೊದಲಾದವುಗಳ ಯೋಗವಿದೆ ತಾ. 29ರಿಂದ 1ರ ವರೆಗಿನ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಾನಸಿಕ ದೌರ್ಬಲ್ಯ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುತ್ತದೆ ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅವಶ್ಯವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ದೊರಕಿಸುವುದು, ರಕ್ತದಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವ ದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ದರ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧ ಸಿಕ್ಕುವ ಸ್ಥಳ— (1) ಫ್ರೊಕ್ಸರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್ 183 ಸುಪಾರಿಬಾಗ್ ರೋಡ್, ಪರೇಲ ಮುಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ (3) ವಿಜಯ್ ಬಿಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸಡೌನ ಬಜಾರ್, ಮೈಸೂರು (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಎ. ಸುಬ್ಬಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ, (7) ಡಾ। ಶ್ರೀನಿವಾಸ ಪೈ, ಪುತ್ತೂರು (8) ಕಾಂತಾವರ ವಾಸುದೇವ ಕಮ್ತಿ, ಬೆಳ್ತಂಗಡಿ, (9) ನವಭಾರತ ಬುಕ್ ಡಿಪೊ, ಕೋಳದ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ, (11) ಕಾಸರಗೋಡು। ಶ್ರೀ ರಾಮ ಸ್ಟೋರ್ಸ ಹೌಸ್, ಶ್ರೀ ರಾಮ ಪೇಟೆ (12) ಕೆ. ಶ್ರೀನಿವಾಸ ಹೆಗ್ಡೆ। ಅರ್ಕುಳ. (13) ಬಿ ಯಸ್, ಸೋಂಗರಾವ್. ಮರ್ಚೆಂಟ್, ಚಿಕ್ಕಮಂಗ್ಳೂರು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು. —

ಅಷ್ಟುರವರೆಗೂ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾದಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಚೊಕ್ಕದ ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ. ಪಾನ.

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,
ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ತಾಳೀಮರದ ಕಟ್ಟೋಣ.

ಉಡುಪಿ.

ಮೇಲ್ದರ್ಜೆಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,
ವ್ಯಾಪಾಲಕ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನ ಅಲಂಕರಿಸಿ, ಮನಸನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೦ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅಮಾತ್ಯನಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೨ ೦

ಕೆಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರೂಪ ಹೆಚ್ಚುವುದು. ಇದು ಮಧುವಾರಗಿದೆ ಆಶೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ;

ಟ. ವಿ. ೯ ಆಣೆ.

ಎಸ್. ಪಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪೋ, ಉಡುಪಿ.**

ಸ್ಥಾಪನೆ [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳು, ಸೈನ್ ಬೋರ್ಡ್ ವಿಸಿಟಿಂಗ್ ಕಾರ್ಡು, ಮೊನೋಗ್ರಾಮ್, ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವುವು.

Crown Rubber Stamp Co. 18 Balmat Road, MANGALORE.
Approved firm by the Govt. Mysore
(ntitled) by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅತ್ಯಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಸಂ.೫ **ಕೊಡಿಯಾಲಬೈಲು, ದ.**

EDITED BY K. K. SHETTY. PRINTED & PUBLISHED BY K. H. SHETTY AT THE NAVAYUGA PRESS, UDIPI

Regd. No. M. 3618 | Estd. 1921 ಸ್ಥಾಪಿತ

ಅಂತರಂಗ
ಹೊಸ ಸ್ವಾದರಿಯ
ವಿನೋದ ವಾರಪತ್ರಿಕೆ
ವಾ. ಚಂದಾ ರೂ. 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

Read and Advertise in
ANTARANGA
The All Karnataka humorous Weekly
Udipi - S. India

ಸಂಪುಟ ೨೧ / Vol. 21
ಸಂಪಾದಕರು—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.
NAVAYUGA WEEKLY
2-4-1942
ಸಂಚಿಕೆ ೩೦ / No. 30

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವಿಕೆ, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 1-8-0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅವಶ್ಯವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಒಟ್ಟುಗೂಡಿಸಿ, ಗರ್ಭಕೋಶವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-6-0

ಎಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಖದೇವಿಬಾಗ್ ರೋಡ್, ಪರೇಲ್, ಮುಂಬಯಿ, ನಂಬ್ರ 12. (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ. (3) ಪಂಢರ್ ಪವರ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಅನ್ನದಾನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. (7) ದ. ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಸ್ತುಭಂಡಾರ, ಬೆಳ್ತಂಗಡಿ. (9) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ. (10) ಕರ್ನಾಟಕ ಫಾರ್ಮಸಿ, ಕುಂದಾಪುರ. (11) ಕಾಸರಗೋಡು ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. (12) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. (13) ಬಿ. ಯಸ್. ನರಸಿಂಗರಾವ್. ಮರ್ಚೆಂಟ್, ಚಿಕ್ಕಮಗಳೂರು

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು
ಮೈಸೂರು ಸ್ಯಾಂಡಲ್ ಸೋಪ್
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಲ್ಲಿ ಹಳದೀ ನಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ; ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಎಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆನೆ**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಫ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಮಾಲಕರ ವಿಳಾಸ: **ರೇವಣಸಿದ್ಧಪ್ಪ** ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941.

Assets exceed	Rs. 1,10,00,000
Life Fund exceeds	„ 92,00,000
Business in force	„ 4,28,00,000
Claims paid over	„ 56,00,000

For further particulars and agency terms, please apply to
Branch Manager,
The Asian Assurance Co., Ltd , Mangalore. S. K.

ವಿಮೆ ಮಾಡಲಿಕ್ಕಾಗಲೀ, **ಏಜೆನ್ಸಿ ಪಡೆಯಲಿಕ್ಕಾಗಲೀ**
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—
ಡಿ. ಎ. ಪ್ರಭು, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಸೂರೆನ್ಸ್ ಕೊ., **ಲಿಮಿಟೆಡ್, ಮದ್ರಾಸು.**
ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ **ಮುಗ್ಗರಿಸುವಾಗ,**-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, **ಮುಖದಲ್ಲಿ** ನಗೆಯನ್ನು ನಲಿಸಬಲ್ಲ, ಜೀವನದ ಜೆಂಗೋಲಿನಂತಿರುವ ವಿಮೆಯು ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ **ಅನುಭವಿಸಲಾಶಿಸದವರು** ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, **ಮನೆಯಲ್ಲಿ** ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು **ಕೊಂಡೊಡನೆ** ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . ದ. ಭಾರತ.

The Canara Mutual Assurance Company, Limited.

UDIPI : . S. INDIA.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ, —ಮುಂತಾದ ದುಷ್ಪರಿಣಾಮಗಳನ್ನು ತಗೆದು ಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ **ಬೆಲೆ ರೂ ೨—೮—೦**

ವಿಳಾಸ: 'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'

24-ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ಈ ವಾರದ ಭವಿಷ್ಯ

ತಾರೀಕು ೨-೪-೪೨ರಿಂದ ತಾರೀಕು ೯-೪-೪೨ರ ವರೆಗೆ

ಮೇಷ—"ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂಬ ನೀತಿ ವಚನದಂತೆ ಯಾವ ಧರ್ಮ ಕರ್ಮಗಳನ್ನು ಸಾಧಿಸಬೇಕಾದರೂ ದೇಹದಾರ್ಢ್ಯವೂ ಆರೋಗ್ಯವೂ ಮುಖ್ಯವಾದುದು ಆದಕಾರಣ ನೀವೀ ವಾರದಲ್ಲಿ ನಿಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ದೃಷ್ಟಿಯಿಟ್ಟಿರಿ. ನೀವು ದುಡಿದ ಧನವು ದಿನಾಂತ್ಯದಲ್ಲಿ ಸ್ವಲ್ಪವೂ ನಿಮ್ಮ ಕೈಯಲ್ಲಿ ಉಳಿಯಲೊಲ್ಲದು ಆದರೂ ಹಣದ ಮುಗ್ಗಟ್ಟುಂಟಾಗಲಾರದು ಸನ್ಮಿತ್ರರ ಸಹವಾಸ ಬಲದಿಂದ ನೀವು ಕೈಗೊಂಡ ಕಾರ್ಯಗಳಲ್ಲಿ ಹೆಚ್ಚಿನವು ಫಲಕಾರಿಯಾಗಲಿವೆ. ಸೇವಾ ಜೀವಿಗಳಿಗೀ ವಾರವು ಸ್ವಲ್ಪ ಕಷ್ಟದಾಯಿಯಾಗಿ ಕಂಡುಬಂದರೂ ಮುಂದಿನ ವಾರದಲ್ಲಿ ಸುಖವನ್ನು ಪಡೆಯಲಿರುವರು ತಾ 2, 1 ಮತ್ತು 9 ಈ ದಿನಗಳಲ್ಲಿ ಗೃಹಸುಖ, ಇಷ್ಟಸಿದ್ಧಿ, ಮತ್ತು ಸ್ತ್ರೀ ಧನವೂ ಲಭಿಸುವ ಯೋಗವಿದೆ.

ವೃಷಭ—ಗ್ರಹಬಲವು ಬಹಳ ಕಡಿಮೆಯಿರುವುದಾದರೂ ಧನ ಸುಖಪತಿಗಳಾದ ರವಿ ಬುಧರ ಏಕ ದಶಸ್ಥಾನವನ್ನು ಹೊಂದಿರುವುದರಿಂದ ಕಷ್ಟದ ಮಧ್ಯದಲ್ಲೂ ನೀವು ಸುಖವನ್ನನುಭವಿಸಲಿರುವಿರಿ. ಎಲ್ಲೆಲ್ಲೂ ವಿರೋಧಿ ಜನವು ಹೆಚ್ಚುತ್ತಿರುವುದರಿಂದ ನಿಮ್ಮ ಕಾರ್ಯ ಕಲಾಪಗಳು ಮಧ್ಯ ಮಧ್ಯ ತಡೆದು ನಿಂತು ಸ್ವಲ್ಪ ನಷ್ಟಕ್ಕೆ ಗುರಿಯಾಗಲಿರುವಿರಿ. ಮಾತು ಬಲ್ಲವನಿಗೆ ಜಗಳವಿಲ್ಲವೆಂದು ಲೋಕೋಕ್ತಿಯಿದ್ದರೂ ನಿಮ್ಮ ಭಾಗಕ್ಕದು ಹುಸಿಯಾಗಿ ಕಾಣಬಹುದು ವ್ಯರ್ಥ ಅಲೆತ, ಪ್ರಿಯ ಜನರ ವಿರಹಾದಿಗಳಿಂದ ಸಂತಪ್ತಚಿತ್ತರಾದ ನಿಮಗೆ ವಾರಾಂತ್ಯದ ? ದಿನಗಳಲ್ಲಿ ಮಿತ್ರ ಮುಖದಿಂದ ಸಂತಸ ವಾರ್ತೆ, ಆರೋಗ್ಯ, ಕಾರ್ಯಸಿದ್ಧಿ ಇತ್ಯಾದಿಗಳಿಂದ ತೃಪ್ತಿಯುಂಟಾಗುವದು

ಮಿಥುನ—ರಾತ್ರಿ ದ ಗ ಲು ಗ ಳು ಹೇಗೆ ಪರಿವರ್ತನವಾಗುತ್ತಿವೆಯೋ ಅಂತೆಯೇ ಮನುಷ್ಯನಿಗೆ ಸುಖದುಃಖಗಳೂ ಒಂದರಮೇಲೊಂದರಂತೆ ಕ್ರಮದಿಂದ ಲಭಿಸುವವು ಇಂದೀಗ ನಿಮ್ಮ ಗ್ರಹಬಲವು ಮಧ್ಯ ಸ್ಥಿತಿಯಲ್ಲಿ ನಿಂತಿರುವುದರಿಂದ ಸುಖದುಃಖಗಳಲ್ಲಿ ಯಾವುದಕ್ಕೂ ಆಧಿಕ್ಯ ಕಂಡುಬರಲಾರದು. ಈ ವಾರದಲ್ಲಿ ನಿವಗೆ ನಿಮಗಿಂತಲೂ ಪ್ರಬಲರಾದವರೊಡನೆ ವೈರ ಕಟ್ಟಕೊಳ್ಳಬೇಕಾದ ಪ್ರಸಂಗವೊದಗುವದು ಯಾವ ಕಾಲದಲ್ಲಿ ಯಾವ ವಿಧಾನದಿಂದ ನಿಮಗವರು ಹಾನಿ ಮಾಡುವರೆಂದೂಹಿಸಲು ಬರುವಂತಿಲ್ಲ ಆದಕಾರಣ ನೀವು ತಾ 2, 4 9 ಈ ದಿನಗಳಲ್ಲಿ ವಿರೋಧಿ ವರ್ಗದ ಮೇಲೂ ವ್ಯಯದ ಮೇಲೂ ಸೂಕ್ಷ್ಮವಾದ ದೃಷ್ಟಿಯನ್ನಿಡುವುದು ಶ್ರೇಯಸ್ಕರ

ಕರ್ಕಾಟಕ—"ಸುಖಂಹಿ ದುಃಖಾನ್ಯನುಭೂಯ ಶೋಭತೇ" ಎಂಬಂತೆ ಸುಖದ ಪೂರ್ಣ ಆಸ್ವಾದನವಾಗಬೇಕಾದರೆ ದುಃಖದ ಅರಿವು ಮುಂಚಿತವಾಗಿರಬೇಕು ಈ ಕಾಲದಲ್ಲಿ ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮವಿರುವುದರಿಂದ ನಿಮ್ಮ ಮನಸ್ಸಿಗೆ ಖೇದವಾಗುವಂತಹ ಪ್ರಸಂಗವಾವುದೂ ಸಂಭವಿಸಲಾರದು. ತಾನಾಗಿ ಒಲಿದು ಬಂದ ಸ್ತ್ರೀಯು ಹೇಗೆ ಪುರುಷನನ್ನು ಸೇರುವಳೋ ಅಂತೆಯೇ ಲಕ್ಷ್ಮಿಯೂ ನಿಮ್ಮನ್ನು ತಾನಾಗಿ ಬಂದು ಸೇರುವಳು ವಾರಾದಿಯ ೫ ದಿನಗಳಲ್ಲಿ ಪ್ರಬಲ ಶತ್ರು ಜನರ ಉಪದ್ರವವು ಕಂಡುಬಂದರೂ ಮುಂದಿನ ದಿನಗಳು ಸರ್ವೋತ್ಕೃಷ್ಟಗಳಾಗಿವೆ

ಸಿಂಹ—ಈಜಾಡಲು ತಿಳಿಯದೆ ನದಿಯ ಮಧ್ಯದಲ್ಲಿ ಬಿದ್ದು ಮುಳುಗೇಳುವವನಿಗೆ ಆಲಂಬನವು ದೊರೆತಂತೆ ನಿಮಗೀ ವಾರದಲ್ಲಿ ಸ್ವಲ್ಪ ಚೇತರಿಸಿಕೊಳ್ಳುವ ಸ್ಥಿತಿಬರುವದು ನಿಮ್ಮ ಅಪ್ತೇಷ್ಟರು ಕೊಡುವ ವಚನವ್ರಷ್ಟರಾದರೂ ಅಪರಿಚಿತ ವ್ಯಕ್ತಿಯಿಂದ ಸಹಾಯ ದೊರೆಯುವದು ನೌಕರಿ ಜನರಿಗೆ ಈ ವಾರವು ಕೊಂಚ ಉತ್ಸಾಹಜನಕವಿರುವದು ಮನಸ್ಸು ನಿಮ್ಮ ಆಧೀನದಿಂದ ತಪ್ಪುವದರಿಂದ ನಿಂದೆಯಗಳಿಗೆ ಸಿಲುಕಿ ಕಷ್ಟ ನಷ್ಟವನ್ನು ಹೊಂದುವ ಪ್ರಸಂಗವಿದೆ. ವಿಶೇಷ ಸ್ತ್ರೀಯರಿಂದ, ತತ್ರಾಪಿ ನಿಮ್ಮಾಕೆಯಿಂದ ನಿಮ್ಮ ಮನಸ್ಸಿಗೆ ನೆಮ್ಮದಿಯಿರದು. ತಾ 2 3 4. 9 ಸ್ವಲ್ಪ ಸಂತೋಷದ ದಿನಗಳಾಗಿವೆ

(೧೧ನೇ ಪುಟ ನೋಡಿರಿ.)

BHUVANENDRA PRODUCTS LTD.,

Head Office and Factory.
Katapadi, S. Kanara

Depots:
1 Mahratha Galli, Hubli
2. 57 Big street, Triplicane Madras

"BHUVANENDRA"

Danthadavan Choorna

Economical in use. Cheapest in value Genuine in quality and choiced by all. Antiseptic, astringent, aromatic. Usfeul in Pyorrhoea Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ,** (2) **ಶ್ರೀ. ಆರ್. ಎಸ್ ಶೆಣೈ ರಥಬೀದಿ.**
(3) **ಡಾಕ್ಟರ್ ಪಿ. ಜಿ. ಆಚಾರ್ಯ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ** L. I. M. **ಡಾಕ್ಟರ್ ವೆಂಕಟ ರಾವ್, ಕೊರಡ್ಕಲ್**

ಚುಟುಕು ಟೀಕೆ-ಟಿಪ್ಪಣಿ

ಎಲ್ಲರೂ ಹಿಂದೀಯರ ವಿರೋಧಿಗಳು!

ಹಿಂದೀ ವ್ಯಾಪಾರಿಯೊಬ್ಬನು ಇಂಗ್ಲೆಂಡಿನ ಪಶ್ಚಿಮದಲ್ಲಿ ಸಂಚರಿಸುತ್ತಿದ್ದು ಕೋರ್ನಿಶ್ ಎಂಬ ಚಿಕ್ಕ ಪಟ್ಟಣವೊಂದಕ್ಕೆ ಹೋದ. ಅವನಿಗೆ ಒಂದು ರಾತ್ರಿ ಉಳಿಯಲೊಂದು ಕೋಣೆಯು ಎಲ್ಲಿಯೂ ಸಿಗಲಿಲ್ಲ. ಹಿಂದೀಯರನ್ನು ಬರಮಾಡಿಕೊಳ್ಳಲು ಯಾರೂ ಸಿದ್ಧವಿರಲಿಲ್ಲ. ಇಲ್ಲಿ ಎಲ್ಲರೂ ಹಿಂದೀಯರ ವಿರೋಧಿಗಳೇ. ಅದು ಅಲ್ಲಿಯ ಕ್ರೈಸ್ತ ಉಪದೇಶಿಗಳು. ಕಡೆಗೆ ಹಿಂದೀ ವ್ಯಾಪಾರಿಯು ರೈಲ್ವೇ ಸ್ಟೇಶನಿನಲ್ಲೇ ಮಲಗಬೇಕಾಯಿತು. ಕರಿಯ ಹಿಂದೀಯರಿಂದ ಯುದ್ಧಕ್ಕೆ ಸಹಾಯ ಕೇಳುವವಂತಹ ಉದ್ಧಟತನವೆಂದು ಪ್ರಸಿದ್ಧ ಆಂಗ್ಲೇಯ ಪತ್ರಿಕಾ ವ್ಯವಸಾಯಿ ಮಿ. ಹನ್ನೆನ್ ಸ್ವಾಫರರ ಪ್ರಶ್ನೆ. ಒಬ್ಬ ಹಿಂದೀ ವ್ಯಾಪಾರಿಯು ವಿಷಯವಂತಿರಲಿ, ಲಂಡನಿನಲ್ಲಿಯೇ ಸರ್. ಹರಿಸಿಂಘ ಗೌರರಂಥವರಿಗೆ ನಿವಾಸವು ನಿರಾಕರಿಸಲ್ಪಟ್ಟು ಸರಕಾರದ ವರೆಗೂ ಆ ದೂರು ಹೋಗಲಿಲ್ಲವೇ? ಸರಕಾರವಾದರೂ ಕಣ್ಣು ಕಟ್ಟಿನ ಕೆಲವು ಮಾತುಗಳನ್ನಾಡಿ ಸುಮ್ಮನಾಗಲಿಲ್ಲವೆ?

ಹೆಸರಿನಿಂದೇನು?

ಜಾಪಾನರು ಪೆನಾಂಗಿಗೆ ಟೋಗೋ ದ್ವೀಪವೆಂಬ ಹೆಸರಿಟ್ಟಿದ್ದಾರೆ. ಸಿಂಗಪುರಕ್ಕೆ "ನಾಂಕೋ' ಅಂದರೆ 'ದಕ್ಷಿಣ ದ್ವಾರ'ವೆಂಬ ಹೆಸರುಕೊಟ್ಟಿದ್ದಾರೆ. ಆಸ್ಯಾ ಖಂಡದ ಹಿತಸಾಧಕರೆನಿಸುವ ಜಾಪಾನರು, ಹಳೆಯ ಮಲಯಾನ ಹೆಸರುಗಳನ್ನು ಬದಲಾಯಿಸಿದುದೇಕೆ? ಸಂಪೂರ್ಣ ಜಾಪಾನೀಕರಣವೇ ಜಾಪಾನರ ಉದ್ದೇಶವೆಂಬುದು ಇದರಿಂದ ಸಿದ್ಧವಾಗುವುದಿಲ್ಲವೇ? ಎಂದು ಕಲ್ಕತ್ತದ ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ಜೋರ್ಜ್ ಡೊನೋವನೆಂಬವರು ಪ್ರಕಟಿಸಿರುತ್ತಾರೆ. ಹೆಸರಿನಿಂದೇನು? ಬ್ರಿಟಿಷರು ಹಳೆಯ ಮಲಯಾನ ಹೆಸರುಗಳನ್ನೇ ಇಟ್ಟು ಮಲಯಾನರಿಗೆ ರಾಜಕೀಯ ಮತ್ತು ಸಾಂಪತ್ತಿಕ ಸ್ವಾತಂತ್ರ್ಯವಿತ್ತಿದ್ದರೇನು? ಜಾಪಾನರ ಆಳ್ವಿಕೆಯ ರೀತಿನೀತಿಯನ್ನು ನೋಡಬೇಕಿನ್ನು.

ಯಾರು ಜವಾಬ್ದಾರರು?

"ವರ್ಷಕ್ಕೆ ಸುಮಾರು ರೂ. 600 ಕೋಟಿಯಷ್ಟರ ವಿದೇಶಿ ವ್ಯಾಪಾರವನ್ನು ಹಿಂದುದೇಶವು ನಡಿಸುತ್ತಿದೆ. ನೌಕಾಪಡೆಯ ಮೇಲೆ ಅವಲಂಬಿಸಿಕೊಂಡಿರದ ರಾಷ್ಟ್ರವೇ ಯಾವುದೂ ಇರುವುದಿಲ್ಲ. ಬಹಳ ಕಾಲದ ಹಿಂದೆಯೇ ಹಿಂದುದೇಶವು ನೌಕಾಪಡೆಯೊಂದನ್ನು ಪಡೆಯಬೇಕಿತ್ತು" ಇದು ಹಿಂದೀ ಮುಖಂಡರ ಟೀಕೆಯಲ್ಲ. ಹಿಂದೀ ನೌಕಾಪಡೆಯ ವೈಸ್ ಎಡ್ಮಿರಲ್ ಸರ್. ಹರ್ಬರ್ಟರಿಂದ ಮಾತು. ಹಿಂದೀ ನೌಕಾಪಡೆಯ ರಚನೆಯ ಕುರಿತು ಬ್ರಿಟಿಷ್ ಸರಕಾರದ ಧೋರಣೆಯ ನಿಷೇಧವನ್ನೇ ಮಾಡಿರುತ್ತಾರೆ ಸರ್ ಹರ್ಬರ್ಟರು. ಹಿಂದೀಯರು ಯಾವ ರೀತಿಯಲ್ಲಿಯೂ ಇದಕ್ಕೆ ಜವಾಬ್ದಾರರಲ್ಲ. ಹಿಂದೀ ನೌಕಾಪಡೆಯ ರಚನೆಯಂತಿರಲಿ, ವ್ಯಾಪಾರಿ ಹಡಗ ಕಂಪೆನಿಗಳನ್ನೂ ಸರಕಾರವು ವಕ್ರ ದೃಷ್ಟಿಯಿಂದ ನೋಡುತ್ತಿತ್ತು. ಹಿಂದುದೇಶದ ಕರಾವಳಿಯ ವ್ಯಾಪಾರವನ್ನು ಹಿಂದೀ ಹಡಗಗಳಿಗಾಗಿ ರಿಸರ್ವ್‌ಮಾಡಲು ಸರಕಾರವು ಸಿದ್ಧವಿರಲಿಲ್ಲ. ಹಿಂದೀ ಹಡಗ ಕೈಗಾರಿಕೆಗೆ ಸರಕಾರವು ಯಾವ ರೀತಿಯ ಪ್ರೋತ್ಸಾಹವನ್ನೂ ಕೊಟ್ಟಿರುವುದಿಲ್ಲ. ಇಂದ ಮೇಲೆ ಹಿಂದೀಯರಾದರೂ ಮಾಡುವುದೇನು?

ಚರ್ಚಿಲ್ಲರೇಕೆ ಮೋಸ್ಕೋವಿಗೆ ಹೋಗಬಾರದು?

ಚರ್ಚಿಲ್ಲರು ಆಟ್ಲಾಂಟಿಕ ಸಾಗರ ಮಧ್ಯೆ ಮತ್ತು ಮತ್ತೊಮ್ಮೆ ಆ ಸಾಗರ ದಾಟಿ ಹೋಗಿ ಪ್ರೆಸಿಡೆಂಟ್ ರುಜವೆಲ್ಟರನ್ನು ಕಂಡು ಮಾತಾಡಿದರು. ಇದರ ಪರಿಣಾಮವಾಗಿ ಆಟ್ಲಾಂಟಿಕ ಘೋಷಣೆ ಮತ್ತು ಪ್ರಧಾನ ಯುದ್ಧ ಕೂಟದ ಸ್ಥಾಪನೆಗಳಾದುವು. ಆದರೆ ಅವರೇಕೆ ಒಮ್ಮೆಯೂ ಮೋಸ್ಕೋವಿಗೆ ಹೋಗಿಲ್ಲ? ಇಂದು ಇಂಗ್ಲೆಂಡು ಮತ್ತು ಅಮೆರಿಕಗಳ ಪ್ರತ್ಯಕ್ಷ ಯುದ್ಧ ನಡೆಯುವುದು ರಷ್ಯದಲ್ಲಿಲ್ಲವೇ? ಆ ಮೇಲೆ ಸ್ಟೆಲಿನರು ಇಂಗ್ಲೆಂಡನ್ನು ಸಂದರ್ಶಿಸಬಹುದು ಅಥವಾ ರುಜವೆಲ್ಟ್ ಚರ್ಚಿಲ್ ಮತ್ತು ಸ್ಟೆಲಿನರೊಟ್ಟು ಗೂಡುವಂತಾಗಬಹುದು. ಇದರಿಂದ ಹಳೆಯ ಅಪನಂಬಿಕೆ ಸಂಕೋಚಗಳೆಲ್ಲಾ ದೂರವಾಗಿ ಇಂದಿನ ಹೋರಾಟ ಮತ್ತು ಮುಂದಿನ ನವರಚನೆಗೆ ಬಹಳ ಪ್ರಯೋಜನವಾಗಬಹುದು.

ಜರ್ಮನ್ ಸ್ತ್ರೀಯರ ಸತ್ಯಾಗ್ರಹ

ಬರ್ಲಿನಿನ ಅನ್‌ಹಾಲ್ಟರ್ ರೈಲ್ವೇ ಸ್ಟೇಶನಿನಿಂದ ಜರ್ಮನ್ ಸೈನಿಕರು ಎರಡು ಟ್ರೈನುಗಳಲ್ಲಿ ರಷ್ಯಕ್ಕೆ ಕಳುಹಿಸಲ್ಪಡಲಿದ್ದರು. ಆಗ ಬರ್ಲಿನಿನ ನೂರಾರು ಮಂದಿ ಸ್ತ್ರೀಯರು ರೈಲ್ವೇ ರಸ್ತೆಗಳಲ್ಲಿ ಅಡ್ಡವಾಗಿ ಕೂತು ಏಳಲು ಕೇಳಲಿಲ್ಲ. ಪೋಲೀಸರಿಗೂ ಸೈನಿಕರಿಗೂ ಅವರನ್ನೆಬ್ಬಿಸಲು ಸಾಧ್ಯವಾಗಲಿಲ್ಲ. ಆಗ ಹಿಟ್ಲರರ ಸ್ಟೋರ್ಮ್ ಟ್ರೂಪ್ ದಳದವರು ಹೋಗಿ ಮೊದಲು ಸ್ತ್ರೀಯರ ತಲೆಯ ಮೇಲೆ ಗುಂಡು ಹಾರಿಸಿ ಬೆದರಿಸಿದರು. ಸ್ತ್ರೀಯರು ಕದಲಲಿಲ್ಲ, ಆ ಮೇಲೆ ಸಿಟ್ಟಿಗೆ ಅವರ ಮೇಲೆ ಗುಂಡೆಸೆದು ಹಲವು ಮಂದಿ ಸ್ತ್ರೀಯರು ತೀವ್ರ ಗಾಯಗೊಂಡರೆಂದು ತಿಳಿದುಬರುತ್ತದೆ. ಇಷ್ಟರಲ್ಲೇ ಜರ್ಮನಿಯ ಪ್ರತಿಯೊಂದು ಮನೆಯಿಂದ ಒಬ್ಬೊಬ್ಬರಂತೆ ಜರ್ಮನ್ ಸೈನಿಕರು ರಷ್ಯದಲ್ಲಿ ಪ್ರಾಣಕೊಟ್ಟಿರುವರು. ಹೆತ್ತ ಕರುಳಲ್ಲವೆ? 16–18 ವರ್ಷದ ತರುಣರು ರಣದೇವತೆಗೆ ಬಲಿಯಾಗಿ ಕಳುಹಿಸಲ್ಪಡುವಾಗ ಹೇಗೆ ಸಹಿಸಿಕೊಂಡೀತು!

ಸಾರ್ವಜನಿಕ ಉದ್ಯಾನವನದಲ್ಲೂ ಕೂತುಕೊಳ್ಳಲಿಕ್ಕಿಲ್ಲ!

ದಕ್ಷಿಣ ಆಫ್ರಿಕದ ದರ್ಬಾನ್ ಪಟ್ಟಣದಲ್ಲಿ ಮೆಡ್‌ವುಡ್ ಗಾರ್ಡನ್ ಎಂಬುದು ಸುಂದರವಾದ ಸಾರ್ವಜನಿಕ ಉದ್ಯಾನವನ. ಅದಕ್ಕೆ ಅಲ್ಲಿಯ ಹಿಂದೀಯರಿಗೆ ಪ್ರವೇಶಿಸಲಿಕ್ಕಿಲ್ಲ. ಪ್ರವೇಶಿಸಿದರೆ ಪೋಲೀಸರವರನ್ನು ಹೊರಗಟ್ಟುತ್ತಾರೆ. ನೇಟಾಲ್ ಇಂಡಿಯನ್ ಕಾಂಗ್ರೆಸಿನವರು ಈ ಅನ್ಯಾಯ ಮತ್ತು ಅಪಮಾನವನ್ನು ನಿಷೇಧಿಸಿರುವರು. ಬಿಳಿ ಜನರ ವರ್ಣಭೇದವು ಇಷ್ಟರಮಟ್ಟಿಗಿದೆ. ಬೊಂಬಾಯಿಯ ಹೇಂಗಿಂಗ್ ಗಾರ್ಡನಿಗೆ ಬಿಳಿ ಜನರಾರೂ ಪ್ರವೇಶಿಸದಂತೆ ಮಾಡಿದರೆ ಅವರಿಗದು ಸಹನೀಯವಾದೀತೇ? ಸರಕಾರವು ಅದನ್ನು ಕಡೆಗಣಿಸೀತೆ?

ಜಪಾನಿನ ಮೇಲೆ ವಿಮಾನಧಾಳಿ ನಡಿಸಬೇಕು.

ಅಮೆರಿಕದ ಡಗ್ಲಸ್ B 19 ಮತ್ತು ಗೆನ್ ಮಾರ್ಟಿನ ವಿಮಾನಗಳು 18 ಟನ್ ಬೋಂಬನ್ನೊಯ್ದು 8000 ಮೈಲು ದೂರ ಹಾರಾಡಬಲ್ಲುವು. ಅವು ಅಲಾಸ್ಕದಿಂದ 3000 ಮೈಲು ದೂರವಿರುವ ಜಾಪಾನಿಗೆ [illegible] ಯಬಲ್ಲುವೆಂದು ವೈಮಾನಿಕತಜ್ಞ ಮೇಜರ್ ಅಲೆಗ್ಸಾಂಡರರು ಅಭಿಪ್ರಾಯಪಡುತ್ತಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಕೂಡಲೆ ಜಾಪಾನಿನ ಮೇಲೆ ಬೋಂಬೆಸೆತಕ್ಕಾರಂಭಿಸಬೇಕು. ಒಸಾಕ ಮತ್ತು ಟೋಕಿಯೋ ಪಟ್ಟಣಗಳ ಮದ್ದುಗುಂಡು ಕಾರ್ಖಾನೆಗಳ ಮೇಲೆ ಕೆಲವು ವಿಮಾನ ಧಾಳಿ ನಡಿಸಿ 1000 ಬೋಂಬುಗಳನ್ನೆಸೆದರೆ ಜಾಪಾನು ಕಂಗೆಡುವಂತಾಗುವುದೆಂದು ಸೆನೆಟರ್ ಎಲ್ಬರ್ಟ್ ಥೋಮಸರು ಒತ್ತಾಯಪಡಿಸಿರುವರು. ಜಾಪಾನು ಹಾಗೇನೂ ಕಂಗೆಡಲಾರದು. ವಿಮಾನ ಧಾಳಿಯನ್ನದು ಮೊದಲೇ ನಿರೀಕ್ಷಿಸಿ ಅದನ್ನು ಪ್ರತಿಭಟಿಸುವ ಏರ್ಪಾಡು ಮಾಡಿದೆ. ಯುನೈಟೆಡ್ ಸ್ಟೇಟ್ಸೇ ವಿಮಾನಧಾಳಿಗೆ ಸಿದ್ಧವಿರುವಂತಿಲ್ಲ.

Keep the enemy away from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND FOR VICTORY.

NOTICE

ಶ್ರೀ ತೀರ್ಥಹಳ್ಳಿ ಡಿ. ಮು. ಕೋರ್ಟಿನಲ್ಲಿ.

R. E. P- 39/42.

ಬಕ್ಷಿರಾಜ ಭಂಗ. ಅರ್ಜಿದಾರ.

ಸಿದ್ಧಂನ ಹೆಂಗಸು ಕೂಡಾ ಎದ್ರಿರು.

ಸದ್ರಿ ಅಮ್ಮಜ್ಜ್ಯಾರಿಯ 3ನೇ ಎದ್ರಿ ಮರು ದೇವಿ. ನೇ ದೇವ ರಾಜ ಪೂವಣಿ 8ನೇ ನಾಭಿರಾಜ ಪೂವಣಿ, ಕೂಡಾ ಈ ಮೂರು ಜನರಿಗೆ.

ಮೇಲ್ಕಂಡ ಅಮ್ಮಜ್ಜ್ಯಾರಿಯಲ್ಲಿ ಏಲಂ ಇಸ್ತಿಹಾರಿನ ಶರತುಗಳನ್ನು ನಕ್ಕೈಸುವ ಬಗ್ಗೆ ತಾ. 0 4-42ಕ್ಕೆ ಇಟ್ಟಿದೆ. ಅದ್ರಲ್ಲಿ ಆಕ್ಷೇಪಣೆಗಳೇನಾದ್ರು ಇದ್ದರೆ ಆ ದಿವ್ಸ 10 ಗಂಟೆಗೆ ಸರಿಯಾಗಿ ಸ್ವತಹಾ ಅಗ್ಲಿ ವಕೀಲರ ಮುಖಾಂತ್ರವಾಗ್ಲೀ ಹಾಜ್ರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವದು. ತಿಳಿದಿರಲಿ.

ತೀರ್ಥಹಳ್ಳಿ, 23-3-42 } **C. S. Shastry.** Vakil for Pet

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.



(ದ್ವಿತೀಯ ಮುದ್ರಣ)

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

THE MODERN BOOK Co.,

No 28, Avadhanum Paper 2nd Lane (N Y) Choolai, MADRAS

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

1939 ಮತ್ತು 1942ರ ಸರ್. ಸ್ಟಾಫೋರ್ಡ್ ಕ್ರಿಪ್ಸರು

ಅಂದಿನ ಕೇವಲ ವೈಯುಕ್ತಿಕ ಸಂದರ್ಶಕರು ಇಂದು ಬ್ರಿಟಿಷ್ ಸರಕಾರದ ಅಧಿಕೃತ ರಾಯಭಾರಿ.

ಅಂದು ಏನು ಹೇಳಿದ್ದರು? ಇಂದು ಏನು ಮಾಡುವರು?

ಸರ್. ಸ್ಟಾಫೋರ್ಡ್ ಕ್ರಿಪ್ಸರು ...ರ್ಡ್ ಪರ್ಮೂರರ ಕಿರಿಯ ಮಗನಾ... 1889ನೇ ಇಸ್ವಿಯಲ್ಲಿ ಹುಟ್ಟಿದವರು. ...ಮಂತರ ಮಕ್ಕಳು ಪಡೆಯುವ ಉ...ಕೃಷ್ಟ ಶಿಕ್ಷಣ ಪಡೆದು 22ನೇ ವಯ...ನಲ್ಲಿ ವಿವಾಹವಾದರು. 24ನೇ ವಯ...ನಲ್ಲೇ ವಕೀಲತನ್ನಾರಂಭಿಸಿ ಪ್ರಸಿದ್ಧ ...ಕೀಲರಾದರು. 1914ರ ಯುದ್ಧದಲ್ಲಿ ...ಕ್ರಾಸ್ ಚಿಕಿತ್ಸಕ ದಳದಲ್ಲಿ ಕೆಲಸ ಮಾಡಿದ್ದರು. 1915ರಲ್ಲಿ ಯುದ್ಧ ಕಾ...ರ್ಖಾನೆಯ ಮೇಲ್ವಿಚಾರಕರಾದರು. ...ಯುದ್ಧ ಮುಗಿದ ಮೇಲೆ ಪುನಹ ವಕೀ...ಲನ್ನಾರಂಭಿಸಿ 1927ರಲ್ಲಿ ಕಿಂಗ್ಸ್ ಕೌ...ಲರಾಗಿ ನೇಮಿಸಲ್ಪಟ್ಟು 1930ರಲ್ಲಿ ...ರ್. ಪದವಿ ಪಡೆದರು.

ಸರ್. ಸ್ಟಾಫೋರ್ಡ್ ಕ್ರಿಪ್ಸರು ಅಸಂ...ರ ಸಮತಾವಾದಿಯಾಗಿ ಬ್ರಿಟಿಷ್ ಲೇ...ಬರ್ ಪಕ್ಷಕ್ಕೆ ಸೇರಿದರು. ಅದರ ಪರ...ಗಿ ಚುನಾವಣೆಗೆ ನಿಂತು ಪಾರ್ಲಿಮೆಂ...ಟ್ ಸದಸ್ಯರಾಗಿ ಆರಿಸಿಬಂದರು. ಮೆಕ್...ಡೊನಾಲ್ಡರ ಪ್ರಥಮ ಲೇಬರ್ ಮಂತ್ರಿ...ಮಂಡಲದಲ್ಲಿ ಸೊಲಿಸಿಟರ್ ಜನರಲರಾ...ಗಿದ್ದರು. ಆರಂಭದಿಂದಲೇ ಹಿಟ್ಲರರ ...ದ್ದ ವಿರೋಧಿಯಾಗಿದ್ದ ಕ್ರಿಪ್ಸರು, ಅವ...ರನ್ನು ವಿರೋಧಿಸಲು ಇಂಗ್ಲೆಂಡಿನ ಎಲ್ಲಾ ...ಕ್ಷಗಳೂ ಒಂದು ಸೇರಿ ನಡೆಯಬೇಕೆಂ...ದು ಪ್ರತಿಪಾದಿಸಿದರು. ಕಮ್ಯೂನಿಸ್ಟ...ರನ್ನೂ ಒಟ್ಟು ಸೇರಿಸಿಕೊಳ್ಳಬೇಕೆಂಬ ...ವರ ಪ್ರತಿಪಾದನೆಗೆ ಲೇಬರ್ ಪಕ್ಷದಲ್ಲಿ ...ಬೆಂಬಲ ದೊರೆಯದೆ ಆ ಪಕ್ಷದಿಂದಲೇ ...ವರು ಹೊರಹಾಕಲ್ಪಟ್ಟರು.

ಕ್ರಿಪ್ಸರು ಉಗ್ರ ಯಥಾರ್ಥವಾದಿ. ...ದ್ದುದನ್ನು ಇದ್ದ ಹಾಗೆ ಹೇಳುವವರು. ...ರಿಣಾಮದ ಗೊಡವೆಯಿಲ್ಲದೆ ಮನೋ...ಧರ್ಮದಂತೆ ನಡೆದುಬಿಡುವವರು. ಬ್ರಿಟಿ...ಷ್ ತನ್ನ ಅರಸು ಪಟ್ಟಾಭಿಷೇಕಾದಿಗಳನ್ನೆ...ಲ್ಲ ಕಣ್ಣುಕಟ್ಟು ಮತ್ತು ನಟನೆಯೆಂದು ...ಖಂಡಿಸಿದ ಉಗ್ರವಾದಿ. ಸಾಮ್ರಾಜ್ಯ ಶಾ...ಹಿಯ ಮತ್ತು ಶ್ರೀಮಂತ ವರ್ಗದ ಬದ್ಧ ...ವಿರೋಧಿ. ಅವರ ಜೀವನವು ಅತ್ಯಂತ ...ಸರಳವಾದುದು. ಅವರು ಮದ್ಯಸೇವನೆ ...ಮಾಡುವುದಿಲ್ಲ; ಶಾಕಾಹಾರಿ. ಹೊಗೆ...ಬತ್ತಿ ಮಾತ್ರ ಸೇದುತ್ತಾರೆ. ಟ್ರಿಬ್ಯೂನ್ ...ಎಂಬ ಸಾಪ್ತಾಹಿಕ ಪತ್ರಿಕೆಯನ್ನವರು ...ಪ್ರಕಟಿಸುತ್ತಿರುವರು. "ಸಮತಾವಾದ ...ಏಕೆ?" ಎಂಬುದೇ ಮೊದಲಾದ ಕೆಲವು ...ಪುಸ್ತಕಗಳನ್ನು ಬರೆದಿರುವರು. ಇದಿಷ್ಟು ...ಕ್ರಿಪ್ಸರ ಸೂಕ್ಷ್ಮ ಪರಿಚಯ

1939ನೇ ಇಸ್ವಿ ದಶಂಬರ ತಾ. 7...ರಲ್ಲಿ ಕ್ರಿಪ್ಸರು ವಿಮಾನ ಮೂಲಕ ಕರಾ...ಚಿಗೆ ಬಂದಿಳಿದಾಗ ಸ್ಥಳೀಯ ಕಾಂಗ್ರೆಸ್ ...ಮತ್ತು ಮಜೂರ ಮುಖಂಡರು ಅವರ...ನ್ನೆದುರ್ಗೊಳ್ಳಲು ಹೋಗಿದ್ದರು. ಬ್ರಿಟಿ...ನು ಮತ್ತು ಹಿಂದುದೇಶಗಳೊಳಗೆ ಒಡಂ...ಬಡಿಕೆಯು ಆಗಲೇ ಬೇಕು. ಹಿಂದುಸ್ಥಾ...ನ, ರಷ್ಯ ಮತ್ತು ಚೈನಗಳಿಗೆ ಉಜ್ವಲ ...ಭವಿಷ್ಯವಿದೆಯೆಂಬ ಭವಿಷ್ಯವಾಣಿಯನ್ನು ...ಕ್ರಿಪ್ಸರು ಕರಾಚಿಯಲ್ಲಿದ್ದಾಗಲೆ ಹೇಳಿ...ದ್ದರು. ಆಗ ಅಪಹಾಸ್ಯಕರವಾಗಿ ಕಂಡು...ಬಂದಿದ್ದ ಈ ಹೇಳಿಕೆಯು ಈಗ ಅಕ್ಷರಶಃ ...ನಿಜವಾಗಿ ತೋರುವದು.

ಬ್ರಿಟಿಷ್ ಸರಕಾರವು ಘೋಷಿಸಿರುವ ಯುದ್ಧೋದ್ದೇಶವಾದ, ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯದ ರಕ್ಷಣೆಯು ಯುರೋಪಿಯನ್ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸಲು ಸಾಧ್ಯವಿಲ್ಲ. ಸ್ವಾಭಾವಿಕವಾಗಿ ಲೋಕದ ಸಮಸ್ತ ರಾಷ್ಟ್ರಗಳಿಗೂ ಅದು ಅನ್ವಯಿಸತಕ್ಕದ್ದು. ಒಂದು ರಾಷ್ಟ್ರವು ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯವುಳ್ಳದಾದರೆ, ತನಗೆ ಬೇಕಾದ ರೀತಿಯ ಸರಕಾರವನ್ನೂ, ಇತರ ರಾಷ್ಟ್ರಗಳ ಕುರಿತಾದ ತನ್ನ ಸಂಬಂಧವನ್ನೂ ನಿಶ್ಚೈಸುವ ಹಕ್ಕು ಅದಕ್ಕಿರಬೇಕು. ಈ ಮೇರೆಗೆ, ಸ್ವತಂತ್ರ ರಾಜ್ಯಭಾರ ನಡಿಸಬಲ್ಲ ಹಿಂದು ದೇಶದಂತಹ ರಾಷ್ಟ್ರಗಳು ತಮ್ಮ ಇಚ್ಛೆಯನ್ನು ಸ್ಪಷ್ಟವಾಗಿ ನಿರೂಪಿಸುವ ವಿಧಾನವನ್ನೇನಾದರೂ ರೂಪಿಸಬೇಕು. ಇದೇ ಆಧಾರದಿಂದ, ಹಿಂದುದೇಶದಲ್ಲಿ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಸ್ಥಾಪಿಸಿ ಆ ಮೂಲಕ ರಾಜ್ಯಾಂಗ ರಚನೆಯನ್ನು ನಿಶ್ಚೈಸಬೇಕೆಂದು ಒಳಕೊಳ್ಳಲಾಗುತ್ತದೆ. ಒಂದಲ್ಲೊಂದು ರೀತಿಯಲ್ಲಿ ಬ್ರಿಟಿಷ್ ಸರಕಾರವು ಹಿಂದೀ ಜನತೆಯ ಕೇಳಿಕೆಗಳನ್ನು ನೆರವೇರಿಸಲೇ ಬೇಕು. ಬ್ರಿಟಿಷ್ ಸರಕಾರ ಆ ರೀತಿ ಮಾತು ಕೊಡುತ್ತಾ ಬಂದಿರುವುದೆಂದು ಕ್ರಿಪ್ಸರು 1929ರಲ್ಲಿ ಅಲಹಾಬಾದಿನಲ್ಲಿ ಬೊಂಬಾಯಿ ಕ್ರೋನಿಕ್ಲ್ ಪತ್ರಿಕೆಯ ಪ್ರತಿನಿಧಿಯೊಡನೆ ಹೇಳಿದ್ದರು.

ಹಿಂದೀ ಸ್ವಾತಂತ್ರ್ಯದ ಕುರಿತು ಇಷ್ಟೊಂದು ಸ್ಪಷ್ಟವಾದಿಯಾದ ಕ್ರಿಪ್ಸರು ದಶಂಬರ ತಾ. 15ರಲ್ಲು ಬೊಂಬಾಯಿಗೆ ಬಂದಾಗ ಅವರನ್ನೆದುರ್ಗೊಳ್ಳಲು ಯುರೋಪಿಯನರಾರೂ ಸ್ಟೇಶನಿಗೆ ಹೋಗದುದರಲ್ಲಿ ಆಶ್ಚರ್ಯವೇನು? ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಟ್ರೇಡ್ ಯೂನಿಯನ್ ಕಾಂಗ್ರೆಸ್, ಗಿರಿಣಿ ಕಾಮಗಾರ ಸಂಘದವರೇ ಮೊದಲಾದವರು ಆಗ ಕ್ರಿಪ್ಸರಿಗೆ ಸಂಭ್ರಮದ ಸ್ವಾಗತವಿತ್ತಿದ್ದರು. ಕ್ರಿಪ್ಸರು 19 ದಿನಗಳ ವರೆಗೆ ಹಿಂದು ದೇಶದಲ್ಲಿದ್ದು ಅಲಹಾಬಾದ್, ಲಾಹೋರು, ಡಿಲ್ಲಿ, ಬರೋಡ, ಬೊಂಬಾಯಿ, ಹೈದರಾಬಾದ್, ವಾರ್ಧ ಮತ್ತು ಕಲ್ಕತ್ತೆಗಳನ್ನು ಸಂದರ್ಶಿಸಿ ಪ್ರಮುಖ ಹಿಂದೀ ಮುಖಂಡರನ್ನು ಕಂಡು ಮಾತಾಡಿದ್ದರು. ಜಿನ್ನಾ, ಮತ್ತು ಡಾಕ್ಟರ್ ಅಂಬೇಡ್ಕರರೊಡನೆ ದೀರ್ಘ ಮಾತುಕತೆ ನಡಿಸಿದ್ದರು. ಸರ್. ಅಕ್ಬರ್ ಹೈದರಿ, ಮತ್ತು ಸರ್. ಸಿಕಂದರ್ ಹಯತ್ ಖಾನರ ಅಭಿಪ್ರಾಯ ಕೇಳಿದ್ದರು. ಪಂಡಿತ ನೆಹರು ಮತ್ತು ಸರೋಜಿನಿ ದೇವಿಯರೊಂದಿಗೆ ಕೂತು ಹಿಂದೀಕ್ರಮದಲ್ಲಿ ಭೋಜನ ಮಾಡಿದ್ದರು. ಸೇವಾಗ್ರಾಮಕ್ಕೆ ಹೋಗಿ ಗಾಂಧಿಯವರ ಅತಿಥಿಯಾಗಿದ್ದರು. ಪೂನದಲ್ಲಿ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಸಿಂಗಲ್ ಚಹಾ ಕೂಟಕ್ಕೆ ಹೋಗಿ ಮಾತನಾಡಿದ್ದರು.

ಆ ಸಂದರ್ಭದಲ್ಲಿ ಕ್ರಿಪ್ಸರಿಗೆ ಕೇಳಲ್ಪಟ್ಟ ಕೆಲವು ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರಗಳನ್ನು ಈ ಕೆಳಗೆ ಕೊಡಲಾಗಿದೆ:—

ಪ್ರಶ್ನೆ:—ಸಮಾಜವಾದಿಗಳು ತಮ್ಮ ಉದ್ದೇಶದ ಸಾಧನೆ ಮತ್ತು ದೇಶದ ಉತ್ಕೃಷ್ಟ ಸೇವೆ ಮಾಡುವ ಬಗೆ ಹೇಗೆ?

ಉತ್ತರ:—ನನಗೆ ತೋರುವಂತೆ, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟವನ್ನು ಜಯಶೀಲವಾಗಿ ನಡಿಸುವುದೇ ಸಮಾಜವಾದದ ಉದ್ದೇಶ ಸಾಧಿಸುವ ಪ್ರಥಮ ಹೆಜ್ಜೆ. ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆಗೆ ಅತ್ಯಂತ ಜಯಶೀಲ ಕೇಳಿಕೆಯುಂಟಾಗುವಂತೆ ಹಿಂದುದೇಶದ ಬೇರೆ ಬೇರೆ ಜಾತಿಗಳಲ್ಲಿ ಅತ್ಯಂತ ಹೆಚ್ಚಿನ ಒಕ್ಕಟ್ಟನ್ನು ಸಾಧಿಸುವ ಕುರಿತು ಸಂಪೂರ್ಣ ಗಮನ ಕೊಡುವುದೇ ಸಮಾಜವಾದಿಗಳ ಕರ್ತವ್ಯವೆಂದು ನನ್ನ ಅಭಿಮತ.

ಪ್ರಶ್ನೆ:—ಬ್ರಿಟಿಷರು ಹಿಂದುದೇಶದಲ್ಲಿರುವನಕ ಜಾತೀಯ ಪ್ರಶ್ನೆಯು ಇತ್ಯರ್ಥ ಹೊಂದುವ ಹಾಗಿಲ್ಲ. ಮತ್ತು ಪ್ರಸ್ತುತದ ದೇಶದ ಪರಿಸ್ಥಿತಿಯಲ್ಲಿ ಸಮಾಜವಾದಿಗಳಾಗಿ ಫಲವಿಲ್ಲೆಂಬ ಅಭಿಪ್ರಾಯದ ಕುರಿತು ನೀವೇನು ಹೇಳುವಿರಿ?

ಉತ್ತರ: ಅದು ತಪ್ಪೆಂದು ನನ್ನೆಣಿಕೆ. ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಾ ಜಾತಿ ಮತ್ತು ವರ್ಗಗಳವರೂ ಸೇರಿ ಹಿಂದೀಯರು ಸ್ವಾತಂತ್ರ್ಯ ಸಾಧಿಸಿದ ಪಕ್ಷದಲ್ಲಿ ಆ ಮೇಲೆ ತಲೆದೋರುವ ಭಿನ್ನ ಭೇದಗಳು ಜಾತೀಯವಾಗದೆ ವರ್ಗೀಯವಾಗುವವು.

ಪ್ರಶ್ನೆ:—ಬ್ರಿಟಿಷರು ಹಿಂದುದೇಶದಲ್ಲಿರುವನಕ ಜಾತೀಯ ಸಮಸ್ಯೆಯು ಬಿಡಿಸಲ್ಪಡುವುದು ಸಾಧ್ಯವೇ?

ಉತ್ತರ:—ಬ್ರಿಟಿಷರ ಅಧೀನತೆಯಿಂದ ವಿಮುಕ್ತವಾಗಿ ಹಿಂದುದೇಶದ ಸ್ವಾತಂತ್ರ್ಯ ಸಾಧನೆ ಮಾಡುವುದೇ ಪ್ರಥಮ ಹೆಜ್ಜೆಯೆಂದು ನನ್ನ ಅಭಿಮತ.

ಪ್ರಶ್ನೆ:—ನೀವು ಇಂಡಿಯ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಲ್ಲಿ ಹಿಂದುದೇಶದ ಕುರಿತಾದ ನಿಮ್ಮ ಅಭಿಪ್ರಾಯವನ್ನು ಬದಲಾಯಿಸದಿರುವಿರಾ? ಇನ್ನೊಬ್ಬ ಮೆಕ್‌ಡೊನಾಲ್ಡರಾಗಲಾರಿರೆಂಬ ಭರವಸೆ ನಿಮಗಿದೆಯೇ?

ಉತ್ತರ:—ನಾನು ತನ್ನ ಅಭಿಪ್ರಾಯವನ್ನು ತಾನೆಂದೂ ಬದಲಾಯಿಸಲಾರೆನೆಂದು ಹೃತ್ಪೂರ್ವಕವಾಗಿ ಹೇಳಬಲ್ಲವನನ್ನು ನಾನೀವರೆಗೆ ಕಂಡಿಲ್ಲ. ಪರಂತು, ನಾನು ನನ್ನ ಮೂಲಭೂತ ಅಭಿಪ್ರಾಯಗಳನ್ನು ನಾನು ಬದಲಾಯಿಸಲಾರೆನೆಂಬ ಆಶ್ವಾಸನೆ ಕೊಡಬಲ್ಲೆ.

ಕಾಲವು ಕ್ರಿಪ್ಸರನ್ನು ಇಂಗ್ಲೆಂಡಿನ ಅದೃಷ್ಟ ಪುರುಷರನ್ನಾಗಿ ಆರಿಸಿರುವಂತೆ ತೋರುತ್ತದೆ. ಸೋವಿಯೆಟ್ ರಷ್ಯವು ಫಿನ್ಲೆಂಡಿನ ಮೇಲೆ ಮಾಡಿದ ಧಾಳಿಯನ್ನು ಪ್ರತಿಪಾದಿಸಿ ರಷ್ಯದ ಪಕ್ಷ ಹಿಡಿದ ಒಬ್ಬನೇ ಒಬ್ಬ ಬ್ರಿಟಿಷ್ ರಾಜನೀತಿಜ್ಞರೆಂದರೆ ಕ್ರಿಪ್ಸರು. ಆದುದರಿಂದ ರಷ್ಯದೊಡನೆ ಮೈತ್ರಿಯನ್ನು ಬೆಳಸಲು 1939ನೇ ಮೇ ತಿಂಗಳ ಅಂತ್ಯದಲ್ಲಿ ಕ್ರಿಪ್ಸರೇ ಕಳುಹಿಸಲ್ಪಟ್ಟು ರಷ್ಯವನ್ನು ಇಂಗ್ಲೆಂಡಿನ ಕಡೆ

(೧೦ನೇ ಪುಟ ನೋಡಿರಿ)

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

ಜಾಪಾನರ ಯುದ್ಧದ ರೀತಿ

ಜಾಪಾನ ಕೊಲೆಗಡುಕರ ಪೈಶಾಚಿಕ ಸ್ಪರ್ಧೆ

ಅತಿ ಹೆಚ್ಚು ಮಂದಿ ಚೀನೀಯರನ್ನು ಕೊಲ್ಲುವವರಿಗೆ ದೊಡ್ಡ ಇನಾಮು ಕೊಡಲಾಗುವುದೆಂದು ಪ್ರಕಟಿಸಲಾಗಿತ್ತು. ಅದುದರಿಂದ ಜಾಪಾನ ಸೈನಿಕರು ಹಲವರು ಸ್ಪರ್ಧೆಗೆ ತೊಡಗಿದರು. ಚೀನೀ ಸ್ತ್ರೀಯರು, ಮಕ್ಕಳು, ಮುದುಕರನ್ನೆಲ್ಲಾ ಸಿಕ್ಕ ಸಿಕ್ಕಲ್ಲಿ ಕೊಲ್ಲಹತ್ತಿದರು. ಕಟ್ಟಕಡೆಗೆ ಮೂವರೊಳಗೆ ತೀವ್ರ ಸ್ಪರ್ಧೆಯುಂಟಾಯಿತು. ಆಮೇಲೆ ಅವರಲ್ಲೊಬ್ಬ ಕೊಲ್ಲಲ್ಪಟ್ಟ. ಕಡೆಗೆ ಫೂಜಿ ಮತ್ತು ಕಾಟೋ ಎಂಬ ಸಾರ್ಜಂಟರಿಬ್ಬರು ಪೈಶಾಚಿಕ ಸ್ಪರ್ಧೆಯಲ್ಲಿ ನಿರತರಾದರು. 4 ತಿಂಗಳುಗಳಲ್ಲಿ ಕಾಟೋವು 107ಮಂದಿಯನ್ನು ಕೊಲೆ ಮಾಡಿದ್ದಾಗ ಫೂಜಿಯ ಸಂಖ್ಯೆ 117ಆಗಿತ್ತು. ಸ್ಪರ್ಧೆಯ ಅವಧಿಗೆ ಮತ್ತೆ 2ತಿಂಗಳು ಮಾತ್ರ ಇತ್ತು. ಸ್ಪರ್ಧೆಯಲ್ಲಿ ತಾನೇ ಗೆಲ್ಲಬೇಕೆಂಬ ಆತುರದಿಂದ ಕಾಟೋವು ಉನ್ಮತ್ತನಂತೆ ಗಾಯಗೊಂಡ ಚೀನಿಯರನ್ನೂ ಸಿಕ್ಕಸಿಕ್ಕಲ್ಲೆಲ್ಲ ಕೊಲೆ ಮಾಡಹತ್ತಿದ. ಕಾಟೋ ಮತ್ತು ಫೂಜಿಗಳ ಪಕ್ಷ ಹಿಡಿದು ನೂರಾರು ಮಂದಿ ಜಾಪಾನ ಸೈನಿಕರು ಪಂಥ ಹಾಕಿಕೊಂಡು ಅಮೋಘ ದೊಡ್ಡ ಜೂಜೀ ನಡೆದಿತ್ತು. ಇಬ್ಬರ ಕೊನೆಯ ಸಂಖ್ಯೆಯು 300ಕ್ಕೆ ಮುಟ್ಟಿದಾಗ ಕಾಟೋವಿನ ಪಕ್ಷ ಪಾತಿಯೊಬ್ಬನ್ನು80ವರ್ಷದ ತಿಮ್ಮಂದಿ ಮುದುಕ ಚೀನೀಯರನ್ನು3ಮೈಲು ಎಳೆದುಕೊಂಡುಬಂದುಕೊಲ್ಲಿಂದನು.ಕಾಟೋವು ಕೊಲೆ ಮಾಡಿದನು. ಸ್ಪರ್ಧೆಯ ಅವಧಿಗೆ ಒಂದೇ ಒಂದು ದಿನವಿತ್ತು. ಚೀನೀಯರನ್ನು ಹುಡುಕುತ್ತಾ ಕಾಟೋ ಮತ್ತು ಫೂಜಿಯು ನಿರ್ಜನ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸ ಹತ್ತಿದರು. ಒಂದು ಹಳ್ಳಿಯಲ್ಲಿ ಅವರು 3ಗುಡಿಸಲುಗಳನ್ನು ಕಂಡರು. ಎರಡರಲ್ಲಿ ಯಾರೂ ಇರಲಿಲ್ಲ. ಮೂರನೇದರಲ್ಲಿ ವೃದ್ಧ ಚೀನೀಯನೊಬ್ಬನೂ ಆತನ ಹೆಂಡತಿಯೂ ಮಲಗಿದ್ದರು. ಅವರಿಗೆ ಓಡಿಹೋಗಲು ಸಾಧ್ಯವಿರಲಿಲ್ಲ. ಫೂಜಿಯು ಪ್ರಥಮವಾಗಿ ಗುಡಿಸಲಿಗೆ ಹೋಗಿ ಮುದುಕನನ್ನು ಕೊಲ್ಲಲು ಖಡ್ಗ ಹಿರಿಯುವಷ್ಟರಲ್ಲಿ ಕಾಟೋವು ಥಕ್ಕನೆ ಮುನ್ನುಗ್ಗಿ ಅವನನ್ನು ಕೊಂದುಬಿಟ್ಟ. ತಾನು ಮುಂದೆ ಬಂದುದು. ತನ್ನ ಪಾಲಿಸವರಿವರೆಂದ ಫೂಜಿ. ತನ್ನ ಪಾಲಿನವರೆಂದು ಫೂಜಿಯನ್ನು ದೂಡಿ ಮುದುಕಿಯನ್ನು ಕೊಲ್ಲಲು ಮುಂದೆ ಬಂದ ಕಾಟೋ.ಆಗ ಫೂಜಿಯು ಆತನನ್ನು ತಿವಿದುಕೊಂಡು ಹಾಕಿದ.ಅಷ್ಟರಲ್ಲಿ ಪಿಸ್ತೂಲೊಂದು ಹಾರಿಸಲ್ಪಟ್ಟಿತು.ಫೂಜಿಯು ಮುಗ್ಗರಿಸಿ ಸತ್ತುಬಿದ್ದ.ಮುದುಕಿಯ ಹಳೆಯ ಪಿಸ್ತೂಲೊಂದನ್ನು ಫೂಜಿಯ ಮೇಲೆ ಪ್ರಯೋಗಿಸಿದ್ದಳು. ಅವಳನ್ನು ಕೊಲ್ಲಲು ನುಗ್ಗಿದರು ಜಾಪಾನ ಸೈನಿಕರು ಆದರೆ ಅವಳ ಪ್ರಾಣವು ಮೊದಲೇ ಹಾರಿ ಹೋಗಿತ್ತು. ಸ್ಪರ್ಧೆಯಲ್ಲಿ ಕಾಟೋವು ಗೆದ್ದುದರಿಂದ ಆತನ ಪಕ್ಷೀಯರು ತಾವು ಪಂಥದಲ್ಲಿ ಗೆದ್ದೆವೆಂದು ಹಣ ಕೇಳಹತ್ತಿದರು. ಫೂಜಿಯ ಕಡೆಯವರು ತಾವು ಗೆದ್ದೆವೆಂದು ವಾದಿಸಿದರು. ಸೈನಿಕರೊಳಗೆ ಜಗಳವೆದ್ದು ರಕ್ತ ಪಾತವು ಆಯಿತು. ಇಷ್ಟರಲ್ಲಿ, ಗಾಯಗೊಂಡು ಮರಣೋನ್ಮುಖರಾಗಿದ್ದ ಚೀನೀ ಸೈನಿಕರ ಒಂದು ಟ್ರೈನನ್ನೇ ಕಂಡು ಅವರನ್ನೆಲ್ಲಾ ಕೊಂದು ತನ್ನ ಕೊಲೆಯ ಸಂಖ್ಯೆಯು 500ಆಗಿರುವುದೆಂದು ಜಾಪಾನ ಸೈನಿಕನೊಬ್ಬನು ಇನಾಮು ಕೇಳಿದನು ಕಡೆಗೆ ಇನಾಮು ಈ ಸೈನಿಕನಿಗೆ ಸಿಕ್ಕಿತು.

ಜಾಪಾನರು ಯುದ್ಧ ನಡಿಸುವ ರೀತಿ ಇದು! ಯುದ್ಧದಲ್ಲಿ ಜಾಪಾನರು ಬರ್ಬರ ರಕ್ತ ಪಿಪಾಸಿಗಳಂತೆ ನಡೆಯುವರು ಅವರಿಗೆ ಹೃದಯವೆಂಬುದೇ ಇಲ್ಲ. ತಾವು ನಿರ್ಘೃಣವಾಗಿ ಕೊಲೆ ಮಾಡುವಷ್ಟೇ ಅಂಥ ವಿಶ್ವಾಸದಿಂದವರು ಸಾಯಬಲ್ಲರು. ಆದರೆ ಹಾಂಕಾಂಗ್ ಮೊದಲಾದ ಸ್ಥಳಗಳಲ್ಲಿ ನಡಿಸಿರುವ ಅತ್ಯಾಚಾರಗಳು ಪ್ರಕಟಿಸಲ್ಪಟ್ಟಿರುವವು.ಆದರೆ ಲಂಡನಿನ‘ಸೀನ್ಸ್’ ಪತ್ರಿಕೆಯು ಪ್ರಕಟಿಸಿರುವ ಮೇಲಿನ ಸಂಗತಿಯು ಆದೆಷ್ಟು ಅಮಾನುಷವಿರುವುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಅಮೇರಿಕದ ಬರ್ಮಾ ರಸ್ತೆ.

ಅಮೇರಿಕದ ಪೂರ್ವ ಮತ್ತು ಮಧ್ಯ ಪ್ರದೇಶಗಳನ್ನು ಒಂದುಗೂಡಿಸುವ, ಜಾಪಾನು ಮತ್ತು ರಷ್ಯಗಳ ಬಹಳ ಸಮೀಪಕ್ಕೆ ಹೋಗುವ ಅಲಾಸ್ಕರ ಸೈನಿಕ ರಸ್ತೆಯೊಂದನ್ನು ಸ್ಥಾಪಿಸುವ ಯೋಜನೆಯನ್ನು ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡದ ಸರಕಾರಗಳು ಕೈಗೊಂಡಿವೆ. ಅದನ್ನು ಅಮೇರಿಕದ ಬರ್ಮಾರಸ್ತೆಯೆಂದು ಕರೆಯಲಾಗಿದೆ. ಜಾಪಾನಿನ ಯುದ್ಧದಲ್ಲಿ ಈ ರಸ್ತೆಯು ಪ್ರಾಮುಖ್ಯವಾಗಿರುತ್ತದೆ. ಟೋಕಿಯೋ ಮತ್ತು ಅಮೇರಿಕೆಗಳೊಳಗಣ ದೂರವು ಇದರಿಂದ ಸುಮಾರು ಅರೆವಾಸಿ ಕಡಿಮೆಯಾಗುವಂತಾಗುತ್ತದೆ. ರಷ್ಯಕ್ಕೂ ಅದು ಬಹಳ ಹತ್ತಿರದ ರಸ್ತೆಯಾಗಿರುತ್ತದೆ. ಅಲಾಸ್ಕದಿಂದ ಸೈಬೀರಿಯಕ್ಕೆ ಹೆಚ್ಚೇನೂ ದೂರವಿರುವುದಿಲ್ಲ. ರಷ್ಯಕ್ಕೆ ಪಾಂತ ಸಾಗರದ ಮೂಲಕ ಅಥವಾ ಗುಡ್‌ಹೋಪ್ ಭೂಶಿರದ ಸುತ್ತಲಿನ ಸಮುದ್ರ ಮಾರ್ಗವು ಬಹಳ ದೂರ ಮತ್ತು ಅಪಾಯಕರವಿರುತ್ತದೆ. ಯುದ್ಧದ ಸತ್ಪರಿಣಾಮಗಳಲ್ಲೊಂದಿದು.

ಜರ್ಮನಿಯ ಸೈನಿಕ ಮತ್ತು ಸಾಂಪತ್ತಿಕ ಸ್ಥಿತಿ.

ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿಲ್ಲೆಂಬುದರಲ್ಲಿ ಸಂದೇಹವೇ ಇಲ್ಲ. ಸರಕಾರವು ಜನತೆಯ ಮೇಲೆ ಇನ್ನೂ ಹೆಚ್ಚಿನ ನಿರ್ಬಂಧಗಳನ್ನು ಹಾಕುತ್ತದೆ. ಆಹಾರ ಸಾಮಗ್ರಿಗಳ ಮೇಲಣ ನಿರ್ಬಂಧವನ್ನು ಮತ್ತಷ್ಟು ಕಠಿಣಗೊಳಿಸಲಾಗಿದೆ. ವಸಂತದ ಧಾಳಿಗೆ 3,000,000 ಸೇನೆಯನ್ನು ಹೆಚ್ಚಿಗೆಯಾಗಿ ಸೇರಿಸಿಕೊಳ್ಳಲು ಹಿಟ್ಲರು ನಡಿಸಿದ ಪ್ರಯತ್ನವು ಈ ವರೆಗೆ ಫಲಿಸಿದಂತಿಲ್ಲ ಇನ್ನೂ 1,500,000 ಜನರವರೆಗೆ ಸೇನೆಗೇನೇ ಬೇಕಾಗಿದ್ದಾರೆ ಅದುದರಿಂದಲೇ ಅವನು ಹಂಗೇರಿ, ರುಮೇನಿಯ ಬಲ್ಗೇರಿಯ ಮತ್ತು ಫಿನ್ಲೆಂಡುಗಳು ಹೆಚ್ಚಿನ ಸೇನೆ ಕಳುಹಿಸಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ಜರ್ಮನ್ ಸೇನೆ, ಜನತೆ ಮತ್ತು ಕೈಗಾರಿಕೆ ಯಂತ್ರವು ಪರಮಾವಧಿಯ ಪ್ರಯತ್ನ ಮಾಡಿ ಬೇಸತ್ತಿದೆ. ಇನ್ನಾರು ತಿಂಗಳುಗಳೊಳಗೆ ಹಿಟ್ಲರ ಪ್ರಚಂಡ ಯತ್ನವು ಜಯಶೀಲವಾಗದಿದ್ದರೆ ಅವರ ಪತನ ನಿಶ್ಚಯವೆಂದು ನಂಬಲಾಗಿದೆ. ಇದು ಮಿತ್ರರಾಷ್ಟ್ರೀಯರ ಮನಸಿನ ಮಂಡಿಗೆಯಲ್ಲವಷ್ಟೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್, ಉಡುಪಿ.

ಇದರ 36ನೇ ವರ್ಷದ ಡೈರೆಕ್ಟರರ ವರದಿಯೂ ತಾ. 31-12-41ರ ಕಾಲ ಮೂಲಗಳ ತಖ್ತೆ ಮೊದಲಾದುವೂ ನಮ್ಮ ಹಸ್ತಗತವಾಗಿವೆ. ವರದಿಯ ವರ್ಷದಲ್ಲಿ ಬ್ಯಾಂಕು ಸರ್ವ ವಿಧದಲ್ಲೂ ಅಭಿವೃದ್ಧಿಯನ್ನು ಹೊಂದಿದೆ ಎಂಬುದಕ್ಕೆ ಕೆಳಗಿನ ಅಂಕೆಗಳನ್ನು ಪರಿಶೀಲಿಸಿದರೆ ಸ್ವಯಂವೇದ್ಯವಾಗುವುದು.

ತಾ. 31-12-40ರಲ್ಲಿದ್ದ ತೆತ್ತ ಪಾಲು ಭಂಡವಾಳ ರೂ. 4,35,060. ತಾ. 31-12-41ಕ್ಕೆ ರೂ. 5,15,820ಕ್ಕೇರಿರುವುದು. ಠೇವಣಾತಿಗಳು ರೂ. 24,72,399ರಿಂದ ರೂ. 30,93,750ಕ್ಕೂ, ಒಟ್ಟು ಭಂಡವಾಳ ರೂ. 35,73,887ರಿಂದ ರೂ. 45,18,178ಕ್ಕೂ ಐನ್ ಮುನಾಫೆ ರೂ. 30,077ರಿಂದ ರೂ. 33,10ಕ್ಕೂ ಏರಿರುವುದು.

ಬ್ಯಾಂಕರುಗಳಿಂದ ಪಡೆದ ಸಾಲದಲ್ಲಿ ಏನೂ ಹೊರ ಬಾಕಿ ಇಲ್ಲದೆ ಕೈಯಲ್ಲಿ ಮತ್ತು ಚಾಲ್ತಿ ಠೇವಣಾತಿಗಳಲ್ಲಿ ಒಟ್ಟು ರೂ. 9,07340 ಶಿಲ್ಕು ಇತ್ತು. ಗತವರ್ಷದಂತೆ ಈ ವರ್ಷವೂ ಆಡಳಿತ ಮಂಡಳಿಯ ಸದಸ್ಯರ ಮೇಲೆ ಹೊರಬಾಕಿ ಸಾಲಗಳೇ ಇಲ್ಲವೆಂಬುದು ಪ್ರಶಂಸನೀಯವಿದೆ. ವರದಿ ವರ್ಷದಲ್ಲಿ ಠೇವಣಾತಿಗಳ ಬಡ್ಡಿದರವನ್ನು ಇಳಿಸಿದಾಗ್ಯೂ ಠೇವಣಾತಿಗಳು ಜಾಸ್ತಿಯಾಗಿರುವುದು ಜನತೆಗೆ ಈ ಬ್ಯಾಂಕಿನ ಮೇಲೆ ಇರುವ ದೃಢ ವಿಶ್ವಾಸವನ್ನು ಸೂಚಿಸುತ್ತದೆ.

ಒಟ್ಟು ಹೊರಬಾಕಿಯಿರುವ ಸಾಲಗಳ ಮೊತ್ತವು ರೂ. 16,76991ರಿಂದ 22,51,958ಕ್ಕೆ ಹೆಚ್ಚಿದೆ. ಇದರಿಂದ ಹೆಚ್ಚು ಗಿರಾಕಿಗಳಿಗೆ ತುಂಬಾ ಸೌಲಭ್ಯಗಳು ಒದಗಿಸಲ್ಪಟ್ಟ[illegible]ಕಾಗಿದೆ.

ಕಾರ್ಯಕುಶಲ ಆಡಳಿತ ಮಂಡಳಿಯ ನೇತೃತ್ವದಲ್ಲಿ ವಿಶಾಲ ಧೋರಣೆಯಿಂದ ಬ್ಯಾಂಕು ಪ್ರಗತಿಪಥದಲ್ಲಿ ಮುಂದುವರಿದು ಅದರ ವ್ಯವಹಾರ ಕ್ಷೇತ್ರವು ಇನ್ನಷ್ಟು ವಿಸ್ತರಿಸಲೆಂದೂ ತನ್ಮೂಲಕ ಹೆಚ್ಚು ಜನಸೇವೆ ಮಾಡುವಂತಾಗಲೆಂದೂ ಹಾರೈಕೆ.

ತಿದ್ದುಪಡಿ--ತಾ. 5-3-42ನೇ ಸಂಚಿಕೆಯ 1ನೇ ಪುಟದಲ್ಲಿ ಪ್ರಕಟವಾದ ಕುಂದಾಪುರ ಡಿ| ಮು| ಕೋರ್ಟಿನ ಕ್ರಿ ಮಿ ನಂಬ್ರ 568/41ನೇ ಶ್ರೀ ನೇತ್ರಾವತಿ ಅಮ್ಮ-ವಿಶ್ವೇಶ್ವರಯ್ಯನವರ ವಿಧವೆ, ವಾದಿಯಾಗಿರುವ ವ್ಯಾಜ್ಯದ ನೋಟೀಸಿನಲ್ಲಿ ಎಡ್ವೋಕೇಟ್ ಶ್ರೀ M. N. Bhat ಎಂದು ತಪ್ಪಾಗಿ ಪ್ರಕಟವಾಗಿದೆ. ಅದನ್ನು ಶ್ರೀ M. M. Ural ಎಂದು ತಿದ್ದಿ ಓದಬೇಕಾಗಿ ವಿನಂತಿ.

ಸಂ. ಸ.

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 125/1941.
R. I. A 258/1942.

ಅಲಂಗಾರು ರಾಮ ಭಟ್ಟ ಕೂಡಾ. ವಾದಿದು.

Petitioners.

ಗಣಪತಿ ಭಟ್ಟ- ಈಶ್ವರ ಭಟ್ಟ ಮಗ. ಏಟ್ಕ ಪಡ್ನೂರು ಗ್ರಾಮದ ತಿಗಳ. ಹಾಲಿ ಪೆರುವಜೆ ಗ್ರಾಮದ ನೆಕ್ಕರಜೆ— ಪ್ರತಿವಾದಿ

Respondent.

ಸದ್ರಿ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ದಾವಾ ಆಸ್ತಿ ಮಾರಾಟದಿಂದ ಲೈನಬು ವಸೂಲು ಹೊಂದುವಂತೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಸದ್ರಿ ಅರ್ಜಿದಾರರು ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ತನಿಖೆ ವ್ಯಾದೆ ತಾ.8-4-42ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ವ್ಯಾದೆಗೆ ಎದ್ರಿಯು ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ 10ಘಂಟೆಗೆ ಕೋರ್ಟಿಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು, ತಪ್ಪಿದರೆ ಆತನನ್ನು ಶಿವಾಯಿ ಎಂತ ಮಾಡಿ ಈ ವ್ಯವಹರಣೆಯನ್ನು ತೀರ್ಮಾನಿಸಲಾಗುವುದು ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. Ramachandra Rao.
Pleader for Plaintiffs

ತಾ. 26-3-42.
ಮೊಕ್ಕಾಂ ಪುತ್ತೂರು, ದ ಕ.

ಕನ್ನಡ ಪತ್ರಿಕಾ ಪ್ರಪಂಚದಲ್ಲೊಂದು ಕ್ರಾಂತಿ!

ಅಂತರಂಗದ

ಯುಗಾದಿ ಸಂಚಿಕೆ

ಅಖಿಲ ಕನ್ನಡಿಗರಿಗೆ
ಯುಗಾದಿಯ ಔತಣ

ಯುದ್ಧದ ದಿಗಿಲಿನಲ್ಲೂ ಮಿಗಿಲಾದ ಸಾಹಸ!

ಪ್ರಕಟಣೆ: ತಾ. 14-4-'42 :: ಬೆಲೆ: ನಾಲ್ಕಾಣೆ.

READ AND ADVERTISE IN
ANTARANGA
YUGADI SPECIAL

ಅರ್ಜಿ ವಗೈರೆಗಳನ್ನು

ಟೈಪು

ಮಾಡಿಕೊಡಲಾಗುವುದು.
ನವಯುಗ ಆಫೀಸು.
ಕೋಟೆದ ಪೇಟೆ, ಉಡುಪಿ.

The Canara Banking Corporation Ltd.

(Incorporated in British India with limited liability)

ESTD' 1906.

will now receive

SEASON DEPOSITS

for a period of 4 months

at 3% p. a.

AT ALL ITS BRANCHES.

ನವಯುಗ

ಉಡುಪಿ, | ಗುರುವಾರ, ೨-೪-೧೯೪೨

ಬ್ರಿಟಿಷ್ ಮಂತ್ರಿಮಂಡಲದ 'ಪ್ಲೇನು'

ಹಿಂದೀ ಸ್ವಾತಂತ್ರ್ಯದ ಕುರಿತು ಬ್ರಿಟಿಷ್ ಮಂತ್ರಿ ಮಂಡಲವು ಸರ್. ಸ್ಟಾಫೋರ್ಡ್ ಕ್ರಿಪ್ಸರ ಮೂಲಕ ಹಿಂದೀಯರ ಮುಂದಿಟ್ಟಿರುವ ಪ್ಲೇನನ್ನು ನಾವು ಇನ್ನೊಂದೆಡೆ ಪ್ರಕಟಿಸಿರುತ್ತೇವೆ. ಯುದ್ಧ ಪರಿಸ್ಥಿತಿಯ ಒತ್ತಾಯದಿಂದಾದರೂ, ಬ್ರಿಟಿಷ್ ಮಂತ್ರಿ ಮಂಡಲವು ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯದ ಹಕ್ಕನ್ನೊಪ್ಪಿರುವುದು ಸಂತೋಷಕರ. ಇತ್ತೀಚೆಗೆ ಬ್ರಿಟಿಷ್ ಕಾಮನ್‌ವೆಲ್ತಿನಿಂದ ಪ್ರತ್ಯೇಕವಾಗುವ ಸ್ವಾತಂತ್ರ್ಯವನ್ನೂ ಅಂಗೀಕರಿಸಲಾಗಿದೆ. ಈಗಿನ ಹೋರಾಟವು ನಿಂತ ಕೂಡಲೆ, ಅಂದರೆ ಒಂದೆರಡು ವರ್ಷಗಳೊಳಗೆ ಅಧಿಕಾರವನ್ನು ಸಂಪೂರ್ಣವಾಗಿ ಹಿಂದೀಯರಿಗೆ ಬಿಟ್ಟುಕೊಡಲು ಬ್ರಿಟಿಷ್ ಸರಕಾರವು ಸಿದ್ಧವಿರುವುದೆಂಬುದನ್ನು ಕ್ರಿಪ್ಸರು ಸ್ಪಷ್ಟವಾಗಿ ಹೇಳಿರುತ್ತಾರೆ.

ದೇಶದ ಮುಂದಿನ ರಾಜ್ಯಾಂಗ ರಚನೆಯನ್ನು ತಯಾರಿಸಿ, ಅಧಿಕಾರ ಬದಲಾವಣೆಯ ಕುರಿತು ಬ್ರಿಟಿಷ್ ಸರಕಾರದೊಡನೆ ಒಡಂಬಡಿಕೆ ಮಾಡಿಕೊಳ್ಳುವ ಜವಾಬ್ದಾರಿಯನ್ನು, ಯುದ್ಧ ಮುಗಿದೊಡನೆಯೇ ಚುನಾವಣೆ ನಡೆದು ರಚಿಸಲ್ಪಡುವ ಪ್ರಾಂತಿಕ ಎಸೆಂಬ್ಲಿಗಳಿಂದ ಆರಿಸಲ್ಪಡುವ ಪ್ರತಿನಿಧಿಗಳಿಂದ ಕೂಡಿದ "ಕನ್‌ಸ್ಟಿಟ್ಯುವೆಂಟ್" ಎಸೆಂಬ್ಲಿಗೀಯಲಾಗಿದೆ. ಈ ಎಸೆಂಬ್ಲಿಯು ಬಹು ಪಕ್ಷದಿಂದ ರಾಜ್ಯಾಂಗ ರಚನೆಯ ಪ್ರಕ್ರಿಯನ್ನು ಇತ್ಯರ್ಥಪಡಿಸತಕ್ಕದ್ದು. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳಿಗೂ ಪ್ರಾತಿನಿಧ್ಯವೀಯಲಾಗುವುದು. ಪ್ರತಿ ಪ್ರಾಂತದ ಎಸೆಂಬ್ಲಿಯ ಸದಸ್ಯರ ಸಂಖ್ಯೆಯ ಹತ್ತರಲ್ಲೊಂದಂಶ ಸದಸ್ಯರನ್ನು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ಆರಿಸತಕ್ಕದ್ದು. ಅದರಲ್ಲಿ ಎಲ್ಲಾ ಪಕ್ಷದ ಸದಸ್ಯರಿಗೂ ಸಂಖ್ಯಾ ಪ್ರಮಾಣದಲ್ಲಿ ಪ್ರಾತಿನಿಧ್ಯ ದೊರೆಯುವ ಏರ್ಪಾಡು ಮಾಡಲಾಗುವುದು. ಇದರಿಂದ ಬ್ರಿಟಿಷ್ ಮಂತ್ರಿ ಮಂಡಲವು, ಕಾಂಗ್ರೆಸಿನ ಪ್ರಾಮುಖ್ಯವಾದೊಂದು ಕೇಳಿಕೆಗೊಪ್ಪಿದಂತಾಗಿದೆ. ಪ್ರಾಯಸ್ಥರೆಲ್ಲರ ಮತದಾನದಿಂದ ಆರಿಸಲ್ಪಡುವ ಪ್ರತಿನಿಧಿಗಳಿಂದ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯು ರಚಿತವಾಗಬೇಕೆಂದು ಕಾಂಗ್ರೆಸಿನ ಕೇಳಿಕೆಯಾಗಿರುವುದು. ಆದರೆ ಬ್ರಿಟಿಷ್ ಮಂತ್ರಿಮಂಡಲವು ಈಗಣ ಎಸೆಂಬ್ಲಿಯ ಮತದಾರರನ್ನೇ ಅದಕ್ಕೆ ಆಧಾರವಾಗಿ ತೆಗೆದುಕೊಂಡಿರುವುದು. ಈ ಅಭ್ಯಂತರದಿಂದ ಹೆಚ್ಚಿನ ತೊಡಕೇನೂ ಆಗಲಾರದು.

ಅಖಿಲಭಾರತ ಯೂನಿಯನಿನೊಂದಿಗೆ ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯವನ್ನು ಪ್ರತಿ ಪ್ರಾಂತಕ್ಕೆ ಕೊಡಲಾಗಿದೆ. ಒಂದು ಪ್ರಾಂತದ ಸೇಕಡ 60ರಷ್ಟರ ಶಾಸನ ಸಭೆ ಕೌನ್ಸಿಲು ಮೆಂಬರರು, ಅಖಿಲ ಭಾರತದ ಯೂನಿಯನಿಗೆ ಸೇರಲೊಪ್ಪದಿದ್ದಲ್ಲಿ, ಪ್ರಾಯಸ್ಥರೆಲ್ಲರ ಮತದ ಮೂಲಕ ಅದನ್ನು ನಿಶ್ಚೈಸುವ ಹಕ್ಕು ಅಲ್ಪಸಂಖ್ಯಾಕರಿಗಿರುವುದು. ದುರ್ದೈವದ ಪರಿಣಾಮ ಕಳೆದ 10 ವರ್ಷಗಳಿಂದ ಹಿಂದೀಯರು ಒಕ್ಕಟ್ಟಾಗಿ ಹಿಂದೀ ಸ್ವಾತಂತ್ರ್ಯದ ಕುರಿತು ಯಾವ ಯೋಜನೆಯನ್ನೂ ಸರಕಾರದ ಮುಂದಿರಿಸಿರುವುದಿಲ್ಲ. ಹಿಂದೀಯರೊಳಗಣ ಭೇದವನ್ನೆತ್ತಿ ಹಿಡಿದು ಅಖಿಲ ಭಾರತ ಒಕ್ಕಟ್ಟಿಗೆ ತೊಡಕನ್ನುಂಟುಮಾಡುವ ಉದ್ದೇಶವು ಬ್ರಿಟನಿಗಿರುವುದಿಲ್ಲ. ಅಖಿಲ ಭಾರತ ಯೂನಿಯನನ್ನು ಸ್ಥಾಪಿಸುವುದು ಬ್ರಿಟನಿನ ಉದ್ದೇಶವಿದ್ದು ಪಾಕಿಸ್ಥಾನಕ್ಕೆ ಇದರಿಂದೂ ಪ್ರೋತ್ಸಾಹವೀಯಲಾರದೆಂದು ಕ್ರಿಪ್ಸರು ಕಂಠೋಕ್ತವಾಗಿ ಹೇಳಿರುತ್ತಾರೆ. ಪಂಜಾಬಿನ ಹೊರತು ಇನ್ನಾವ ಪ್ರಾಂತ್ಯದಲ್ಲಿಯೂ ಮುಸ್ಲಿಮ್ ಲೀಗಿನವರಿಗೆ ಹೆಚ್ಚಿನ ಬೆಂಬಲವಿರುವುದಿಲ್ಲ. ಪಂಜಾಬಿನಲ್ಲಿ ಕೂಡಾ ಹೆಚ್ಚಿನ ಜನಬೆಂಬಲ ಪಡೆದಿರುವುದು ಸರ್. ಸಿಕಂದರ್ ಹಾಯತ್ ಖಾನರ ಯೂನಿಯನಿಸ್ಟ್ ಪಕ್ಷವಲ್ಲದೆ ಮುಸ್ಲಿಮ್ ಲೀಗಲ್ಲ. ಸರ್. ಸಿಕಂದರರು ಅಖಿಲ ಭಾರತ ಯೂನಿಯನಿಗೆ ಸೇರುವುದಕ್ಕೇನೇ ಮುಂದಾಗಬಹುದು. ಆದುದರಿಂದ ಪಾಕಿಸ್ಥಾನ ವಾದಿಗಳ ಬೇಳೆಯು ಯಾವ ಪ್ರಾಂತದಲ್ಲಿಯೂ ಬೇಯುವ ಸಂಭವ ತೋರುವುದಿಲ್ಲ. ಮಾತ್ರವಲ್ಲದೆ ಪ್ರತ್ಯೇಕವಿರಲು ಅಥವಾ ಅಖಿಲ ಭಾರತ ಯೂನಿಯನು ಬಿಟ್ಟು ಬೇರೆಯೇ ಒಂದು ಯೂನಿಯನನ್ನು ಮಾಡಲು ಬ್ರಿಟಿಷ್ ಸರಕಾರದ ಆಶಯವೇನೂ ದೊರೆಯಲಾರದೆಂದೂ, ಪ್ರತ್ಯೇಕವಿರಲೆಳಸುವ ಪ್ರಾಂತಗಳ ಆರ್ಥಿಕ ಪರಿಸ್ಥಿತಿಯು ಚೆನ್ನಾಗಿರದಿದ್ದಲ್ಲಿ ಬ್ರಿಟಿಷ್ ಸರಕಾರವೇನೂ ಸಹಾಯ ಮಾಡಲಾರದೆಂದೂ ಕ್ರಿಪ್ಸರು ವಿಶದಪಡಿಸಿರುತ್ತಾರೆ. ಆದುದರಿಂದ ಬ್ರಿಟಿಷ್ ಮಂತ್ರಿ ಮಂಡಲದ ಈ ಸೂಚನೆಯ ವಿಷಯದಲ್ಲಿ ವಿಶೇಷ ತಳಮಳಗೊಳ್ಳಲು ಕಾರಣವಿಲ್ಲ. ಇದರಿಂದ ಹಿಂದೂದೇಶದ ವಿಭಜನೆಯಾಗುವುದೆಂಬ ಕೂಗಿಗೆ ಅಷ್ಟೇನೂ ಆಧಾರವಿರುವಂತಿಲ್ಲ.

ಬ್ರಿಟಿಷ್ ಮಂತ್ರಿಮಂಡಲದ ಸೂಚನೆಯ ಮೇರೆಗೆ ಅಖಿಲಭಾರತ ಯೂನಿಯನಿಗೆ ದೊಡ್ಡ ತೊಡಕೆಂದರೆ ಹಿಂದೀ ದೇಶೀಯ ಸಂಸ್ಥಾನಗಳು. ಈ ದೇಶೀಯ ಸಂಸ್ಥಾನಗಳ ರಾಜರುಗಳಿಂದ ಆರಿಸಲ್ಪಡುವ ಪ್ರತಿನಿಧಿಗಳು ಮಾತ್ರವೆ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯಲ್ಲಿ ಭಾಗವಹಿಸುವುದಲ್ಲದೆ ಅವುಗಳ ಪ್ರಜೆಗಳ ನಿಜವಾದ ಪ್ರತಿನಿಧಿಗಳಿಗೆ ಸ್ಥಾನವು ಕೊಡಲ್ಪಟ್ಟಿರುವುದಿಲ್ಲೆಂಬುದು ದೊಡ್ಡದಾದೊಂದು ದೋಷ. ಈ ಸಂಸ್ಥಾನಗಳು ಅಖಿಲಭಾರತ ಯೂನಿಯನಿನೊಂದಿಗೆ ಸೇರಲೇಬೇಕೆಂಬ ಯಾವ ನಿರ್ಬಂಧವೂ ಇರುವುದಿಲ್ಲ. ಕಾಶ್ಮೀರದ ಮಹಾರಾಜರಂತಹ ಕೆಲವೇ ಮಂದಿ ಪ್ರಗತಿಪರ ಮನೋವೃತ್ತಿಯ ಅರಸರು ಒಂದು ವೇಳೆ ಅಖಿಲಭಾರತ ಯೂನಿಯನಿನೊಂದಿಗೆ ಸೇರಲು ಸಿದ್ಧರಿರಬಹುದಾದರೂ, ಹೆಚ್ಚಿನವರು ಅದಕ್ಕೊಪ್ಪಲಾರರು. ಹಳೆಯ ಕವಲುಗಳ ಮೇರೆಗಿನ ಅವರ ಹಕ್ಕುಗಳು, ಹೊಸ ರಾಜ್ಯಾಂಗ ರಚನೆಯ ಮೇರೆಗೆ ಕೆಲಮಟ್ಟಿನ ಬದಲಾವಣೆಯಾಗಬೇಕಾಗಿರುವುದೆಂದು ಮಾತ್ರ ಸೂಚಿಸಲಾಗಿದೆ. ಬ್ರಿಟಿಷ್ ಇಂಡಿಯವು ಸಂಪೂರ್ಣ ಸ್ವಾತಂತ್ರ್ಯ ಪಡೆದು ಮುಂದುವರಿಯುವಾಗ, ದೇಶದ ನಾಲ್ಕರಲ್ಲೊಂದು ಭಾಗವಾಗಿರುವ ಹೆಚ್ಚಿನ ಈ ದೇಶೀಯ ಸಂಸ್ಥಾನಗಳು ಮಧ್ಯಕಾಲೀನವಾಗಿಯೇ ಉಳಿಯುವುದು ದೊಡ್ಡದಾದೊಂದು ಕೊರತೆ. ಬ್ರಿಟಿಷ್ ಅರಸು ಪಟ್ಟವನ್ನೇ ನಿಷೇಧಿಸುವಷ್ಟು ಮುಂದುವರಿದಿದ್ದ ಕ್ರಿಪ್ಸರು ಇಂತಹ ಅಸಮಂಜಸತೆಯನ್ನು ಪ್ರತಿಪಾದಿಸುವುದು ಆಶ್ಚರ್ಯ. ಹಿಂದೀ ದೇಶೀಯ ಸಂಸ್ಥಾನಗಳ ಪ್ರಜೆಗಳೂ, ಬ್ರಿಟಿಷ್ ಹಿಂದೀಯರಷ್ಟೇ ಸ್ವಾತಂತ್ರ್ಯ ಪ್ರೇಮಿಗಳಾಗಿ ಪ್ರಜಾ ಜವಾಬ್ದಾರಿ ರಾಜ್ಯಭಾರಕ್ಕಾಗಿ ಎಡೆಬಿಡದೆ ಚಳವಳ ನಡಿಸಿಕೊಂಡು ಬಂದಿರುತ್ತಾರೆ. ಅಂದಮೇಲೆ ಅವರ ಹಕ್ಕುಗಳನ್ನು ಬ್ರಿಟಿಷ್ ಮಂತ್ರಿಮಂಡಲವು ಅಂಗೀಕರಿಸದಿರಲು ಕಾರಣವೇನೋ ತಿಳಿಯದು. ಹಿಂದೀ ದೇಶೀಯ ಸಂಸ್ಥಾನಗಳಲ್ಲೆಲ್ಲಾ ನಿಜವಾದ ಪ್ರಜಾಪ್ರತಿನಿಧಿ ಸರಕಾರವು ಸ್ಥಾಪಿಸಲ್ಪಡುವ ಜವಾಬ್ದಾರಿಯನ್ನಾದರೂ ಚಕ್ರವರ್ತಿ ಸರಕಾರವು ವಹಿಸದಿದ್ದಲ್ಲಿ ಅವುಗಳ ಪ್ರಜೆಗಳಿಗೆ ದೊಡ್ಡ ಅನ್ಯಾಯವಾಗುವುದು. ಅಖಂಡ ಭಾರತದ ಸರ್ವಾಂಗೀಣ ಪ್ರಗತಿಗೆ ಬಾಧಕವುಂಟಾಗುವುದು.

ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯು ರಚಿತವಾಗಿ ಹೊಸ ರಾಜಕೀಯ ಘಟನೆಯನ್ನದು ತಯಾರಿಸಿ, ಬ್ರಿಟಿಷ್ ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡು ಸಂಪೂರ್ಣ ಅಧಿಕಾರವನ್ನು ಪಡೆಯುವ ಅಂತರದಲ್ಲಿ ಯಾವ ರೀತಿಯ ರಾಜ್ಯಭಾರವು ನಡೆಸಲ್ಪಡುವುದೆಂಬುದನ್ನು ಬ್ರಿಟಿಷ್ ಮಂತ್ರಿಮಂಡಲವು ಸ್ಪಷ್ಟಪಡಿಸದಿರುವುದು ಇನ್ನೊಂದು ದೋಷ. ಆ ಕುರಿತು ಸರ್ವ ಜವಾಬ್ದಾರಿಯು ವೈಸರಾಯರದು. ಅವರು ಆ ಸಂಬಂಧವಾಗಿ ತಕ್ಕ ವ್ಯವಸ್ಥೆ ಮಾಡುವರು. ಪ್ರಕೃತದ ಪರಿಸ್ಥಿತಿಯಲ್ಲಿ ದೇಶ ಸಂರಕ್ಷಣಾ ಖಾತೆಯನ್ನು ಮಾತ್ರ ಬ್ರಿಟಿಷ್ ಸರಕಾರವೇ ಇಟ್ಟುಕೊಳ್ಳಬೇಕಾಗಿರುವುದು. ಅದನ್ನೂ ಈ ಸಂದರ್ಭದಲ್ಲಿ ಹಿಂದೀಯರಿಗೊಪ್ಪಿಸಿದರೆ ಗೊಂದಲವುಂಟಾಗಬಹುದು. ಇಡೀ ಲೋಕದಲ್ಲಿ ಯುದ್ಧವನ್ನು ಮುನ್ನಡೆಸುವ ದೃಷ್ಟಿಯಿಂದ ಹಿಂದುಸ್ಥಾನದ ರಕ್ಷಣಾ ವಿಷಯವನ್ನು ಬ್ರಿಟಿಷ್ ಸರಕಾರವೇ ತನ್ನಾಧೀನವಿರಿಸಿಕೊಳ್ಳಬೇಕಾಗಿದೆ. ದೇಶದ ಮಂತ್ರಾಲೋಚನೆಯಲ್ಲೆಲ್ಲಾ ಹಿಂದೀಯರ ಸಂಪೂರ್ಣ ಸಹಕಾರ ಪಡೆಯುವ ಪ್ರಯತ್ನ ಮಾಡಲಾಗುವುದು. ದೇಶ ರಕ್ಷಣಾ ಖಾತೆಯ ಜವಾಬ್ದಾರಿಗಿಂತಲೂ, ಬ್ರಿಟಿಷ್ ಯುದ್ಧ ಮಂತ್ರಿ ಮಂಡಲದಲ್ಲಿ ಮತ್ತು ಸಂಯುಕ್ತ ರಾಷ್ಟ್ರಗಳ ಸಮರ ಕೂಟಗಳಲ್ಲಿ ಹಿಂದೀಯರ ನಿಜವಾದ ಪ್ರತಿನಿಧಿಗಳಿಗೆ ಸ್ಥಾನದೊರೆಯುವುದು ಪ್ರಾಮುಖ್ಯವಾದುದು. ಜನತೆಯ ಉತ್ಸಾಹಪರ ಸಹಕಾರ ಪಡೆದೇ ದೇಶ ರಕ್ಷಣಾ ವ್ಯವಸ್ಥೆಯನ್ನು ಮಾಡಲಾಗುವುದು. ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿಗೆ ಹೆಚ್ಚಿನ ಪ್ರಜಾ ಪ್ರತಿನಿಧಿಗಳನ್ನು ಸೇರಿಸಿಕೊಂಡು ಅವರಿಗೆ ನಿಜವಾದ ಜವಾಬ್ದಾರಿ ಕೊಡಬಾಗುವುದೆಂದೆಲ್ಲಾ ಸರ್. ಸ್ಟಾಫೋರ್ಡ್ ಕ್ರಿಪ್ಸರು ಹೇಳಿದುವರು. ಆದರೆ ಕೇಂದ್ರದಲ್ಲಿ ಕೂಡಲೆ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಪ್ರಾಮುಖ್ಯ ಪ್ರಶ್ನೆಗೆ ಬ್ರಿಟಿಷ್ ಮಂತ್ರಿ ಮಂಡಲವು ಗಮನ ಕೊಡದುದು ವಿಷಾದಕರ. ಇದರಿಂದ ಅದು ಪ್ರಕೃತ ಹೆಚ್ಚಿನ ಅಧಿಕಾರವನ್ನೇನೂ ಬಿಟ್ಟುಕೊಡಲು ಸಿದ್ಧವಿಲ್ಲೆಂಬಂತೆ ತೋರುವುದು. ಕೇಂದ್ರ ಎಸೆಂಬ್ಲಿಗೆ ಜವಾಬ್ದಾರಿಯಾಗಿರುವ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಟ್ಟು, ಅದೇ ದೇಶ ರಕ್ಷಣಾ ಜವಾಬ್ದಾರಿಯನ್ನೂ ವಹಿಸಿಕೊಳ್ಳುವಂತಾಗದಿದ್ದಲ್ಲಿ, ಸರಕಾರದ ಯುದ್ಧ ಪ್ರಯತ್ನದಲ್ಲಿ ಜನತೆಯು ಉತ್ಸಾಹದಿಂದ ಸಹಕರಿಸಲು ಮುಂದಾಗಲಾರದು. ಸೇನೆಯ ಆಡಳಿತವು ಸಂಪೂರ್ಣವಾಗಿ ಪ್ರಧಾನ ಸೈನ್ಯಾಧಿಕಾರಿಗಳ ಅಧೀನವಿರಬಹುದಾದರೂ, ದೇಶ ರಕ್ಷಣಾ ಖಾತೆಯ ಆಡಳಿತವನ್ನು ಜನ ಪ್ರತಿನಿಧಿಗಳಿಗೊಪ್ಪಿಸುವುದರಿಂದ ಉಂಟಾಗುವ ಗೊಂದಲವೇನೋ ನಮಗೆ ತಿಳಿಯದು.

ಬ್ರಿಟಿಷ್ ಮಂತ್ರಿಮಂಡಲದ ಪ್ಲೇನಿನಲ್ಲಿ ಕೆಲಮಟ್ಟಿನ ಬದಲಾವಣೆಯು ಮಾಡಲ್ಪಡುವುದೆಂಬುದು ಕ್ರಿಪ್ಸರ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ. ಆಗತ್ಯವಾದ ಕೆಲವು ಬದಲಾವಣೆಗಳನ್ನು ಮಾಡಿ, ಅದನ್ನು ಪ್ರಾಮುಖ್ಯವಾದ ಎಲ್ಲಾ ಹಿಂದೀ ಪಕ್ಷಗಳವರೂ ಸ್ವೀಕರಿಸುವಂತೆ ಕ್ರಿಪ್ಸರು ನಡಿಸುತ್ತಿರುವ ಪ್ರಯತ್ನವು ಪ್ರಶಂಸನೀಯವಾದುದು. ಅವರಲ್ಲಿ ಯಾವ ತರದ ಅಧಿಕಾರದ ಒಣ ಪ್ರತಿಷ್ಠೆಯಾಗಲಿ, ರಾಜ್ಯತಾಂತ್ರಿಕ ಯುಕ್ತಿ ಚಾತುರ್ಯವಾಗಲಿ, ಸಂಪ್ರದಾಯಬದ್ಧ ಯಾಂತ್ರಿಕ ಮನೋವೃತ್ತಿಯಾಗಲಿ ಇರುವುದಿಲ್ಲ. ಸರಳ, ಸ್ವಾಭಾವಿಕ ಹಾಗೂ ಮಾನವೀಯ ವರ್ತನೆ ಅವರದು. ಅವರ ಕುರಿತು ಎಲ್ಲರೂ ಪ್ರೀತ್ಯಾದರವುಳ್ಳವರಿರುವರೆಂಬುದರಲ್ಲಿ ಸಂದೇಹವೇ ಇಲ್ಲ. ಬ್ರಿಟಿಷ್ ಮಂತ್ರಿಮಂಡಲದ ಪ್ಲೇನನ್ನು ಹಿಂದೀಯರು ಸ್ವೀಕರಿಸುವಂತೆ ಮಾಡುವ ವಿಷಯದಲ್ಲಿ ಕ್ರಿಪ್ಸರ ವೈಯಕ್ತಿಕತೆ ಮತ್ತು ಅವರ ಯಥಾರ್ಥ ಹಾಗೂ ಹೃದಯಸ್ಪರ್ಶಿಯಾದ ಅಭಿಪ್ರಾಯ ವಿನಿಮಯವು ಹೆಚ್ಚಿನ ಪರಿಣಾಮವನ್ನುಂಟುಮಾಡಬಹುದು.

ಸುಭಾಸ ಚಂದ್ರಭೋಸರು ಕೊಲ್ಲಲ್ಪಟ್ಟಿರುವರೇ?

ಶ್ರೀ. ಸುಭಾಸಚಂದ್ರ ಭೋಸರು.

ಜಪಾನಿನ ಮುಖ್ಯ ಪಟ್ಟಣವಾದ ಟೋಕಿಯೋ ಪಟ್ಟಣಕ್ಕೆ ಇನ್ನು ಕೆಲ ಮಂದಿ ಹಿಂದೀ ಮುಖಂಡರೊಂದಿಗೆ ಸ್ವತಂತ್ರ ಹಿಂದುಸ್ಥಾನ ಕಾಂಗ್ರೆಸಿನಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಕರಾವಳಿಯಲ್ಲಿ ವಿಮಾನ ಮುರಿದು ಬಿದ್ದು ಕೊಲ್ಲಲ್ಪಟ್ಟರು ಎಂದು ಟೋಕಿಯೋದಿಂದ ವರ್ತಮಾನ ಬಂದಿರುತ್ತದೆ. ಮಾರ್ಚ 27ರ ಟೋಕಿಯೋ ವಾರ್ತೆಯು ಮೇರೆಗೆ, ವಿಮಾನ ಅಪಘಡದಲ್ಲಿ ಒಟ್ಟು 11 ಮಂದಿ ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಇವರಲ್ಲಿ 1 ಮಂದಿ ಮಲಯದಿಂದ ಜಪಾನಿನೊಂದಿಗೆ ಸೌಹಾರ್ದ ಬೆಳೆಸುವುದಕ್ಕಾಗಿ ಹೋಗುವವರಿದ್ದರು. ಆದರೆ ಸಯಾಮಿನಿಂದ ಬಂದ ವಾರ್ತೆಯ ಮೇರೆಗೆ ಇಬ್ಬರು ಹಿಂದೀ ಮುಖಂಡರು ಕೊಲ್ಲಲ್ಪಟ್ಟಿದ್ದಾಗಿದೆ. ಯಾರೆಂದು ಸ್ಪಷ್ಟವಾಗಿ ತಿಳಿಸಲಿಲ್ಲ. ವಿಮಾನ ಅಪಘಾತದ ಕುರಿತು ಜಪಾನಿನಿಂದ ಬಂದ ವಾರ್ತೆಯಲ್ಲಿ ಶ್ರೀ ಭೋಸರ ಹೆಸರಿದ್ದಿಲ್ಲ. ವಿಚಿಫ್ರೆಂಚ್ ರೇಡಿಯೋದಲ್ಲಿ ಸುಭಾಸ್ ಭೋಸರು ಕೊಲ್ಲಲ್ಪಟ್ಟ ವರ್ತಮಾನವು ಪ್ರಥಮವಾಗಿ ಪ್ರಕಟವಾದುದು. ಬರ್ಲಿನ್ ರೇಡಿಯೋದಲ್ಲಿ ಶ್ರೀ ಭೋಸರ ಸಂಗತಿಯೇನೂ ಪ್ರಕಟವಾಗಿರುವುದಿಲ್ಲ. ಸುಭಾಸ್ ಭೋಸರು ಬರ್ಲಿನಲ್ಲಿದ್ದರು. ಶ್ರೀ ರಾಶ್ ಬಿಹಾರಿ ಬೋಸರು ಟೋಕಿಯೋದಲ್ಲಿದ್ದರು. ಇದರಲ್ಲಿ ಯಾರು ವಿಮಾನ ಅಪಘಾತಕ್ಕೆ ಸಿಕ್ಕಿದುದೆಂದು ಕೂಡಾ ಸ್ಪಷ್ಟವಾಗಿ ತಿಳಿದಿಲ್ಲ. ಆದುದರಿಂದ ಈ ಸುಭಾಸ ಚಂದ್ರ ಬೋಸರ ಮರಣದ ವಾರ್ತೆಯು ನಿಜವೆಂದು ಹೇಳಲು ಬರುವುದಿಲ್ಲ.

ಶ್ರೀ ಭೋಸರು ತಾ. 26-1-41ರಲ್ಲಿ ವಿಚಿತ್ರವಾಗಿ ತನ್ನ ನಿವಾಸದಿಂದ ಅದೃಶ್ಯರಾಗಿದ್ದರು. ಫಾರ್ವರ್ಡ್ ಬ್ಲೋಕಿನ ಸಾಪ್ತಾಹಿಕ ಪತ್ರಿಕೆಯಲ್ಲಿ ಲೇಖನವೊಂದನ್ನು ಪ್ರಕಟಿಸಿದುದಕ್ಕಾಗಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಅವರ ಮೇಲೆ ಖಟ್ಲೆ ನಡೆದಿತ್ತು. 1940ನೇ ದಶಂಬರ ಮೊದಲನೇ ವಾರದಲ್ಲಿ ಅವರು ಕಾರಾಗೃಹದಿಂದ ಬಿಡುಗಡೆ ಹೊಂದಿದ್ದರು. ಅದೃಶ್ಯರಾಗುವ ಮೊದಲು ಶ್ರೀ ಭೋಸರು ಮೌನ ಧಾರಣೆ ಮಾಡಿ ಏಕಾಂತದಲ್ಲಿ ಕಾಲ ಕಳೆಯುತ್ತಿದ್ದರು. ಯಾರನ್ನೂ ನೋಡುತ್ತಿರಲಿಲ್ಲ. ಅವರು ಅದೃಶ್ಯರಾದ ವಿಷಯವು ತಿಳಿದುದು ಜನವರಿ ತಾ. 27ರಲ್ಲಿ. ಅವರು ಬರ್ಲಿನಿಗೆ ಹೋಗಿ ಹಿಂದೀ ಸ್ವಾತಂತ್ರ್ಯದ ಕುರಿತು ಒಪ್ಪಂದವನ್ನು ಮಾಡಿರುವರೆಂಬ ಸುದ್ದಿಯು ಪ್ರಕಟವಾಗಿತ್ತು. ಬರ್ಲಿನ್ ರೋಮ್ ರೇಡಿಯೋದಲ್ಲಿಯೂ ಅವರು ಹಿಂದೀಯರಿಗೆ ಭಾಷಣ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

ಶ್ರೀ ಭೋಸರು ಕೊಲ್ಲಲ್ಪಟ್ಟಿದುದು ನಿಜವೆಂದು ಮಹಾತ್ಮಾ ಗಾಂಧಿಯವರು ಅವರ ತಾಯಿಗೆ ದುಃಖ ಸೂಚಕ ಸಂದೇಶ ಕಳುಹಿಸಿರುವರು. ಮೌಲಾನ ಆಜದ್ ಶ್ರೀ ಭೂಲಭಾಯಿ ದೇಸಾಯಿಗಳೇ ಮೊದಲಾದವರು ದುಃಖ ಸೂಚಿಸಿರುವರು. ಕೆಲವೆಡೆ ಹರತಾಳಗಳು ನಡೆದಿರುತ್ತವೆ.

ಸೈಂಟ್ ನಜಾರಿಯ ಮೇಲೆ ಬ್ರಿಟಿಷರ ಧಾಳಿ.

ಸೈಂಟ್ ನಜಾರೆ ಎಂಬುದು ಯುರೋ[illegible]

ರಸ್ಯದಲ್ಲಿ ತೀವ್ರ ಹೋರಾಟ ಆರಂಭವಾಗಿದೆ

ಕ್ರಿಪ್ಸರ ಮಾತುಕತೆಯ ಪರಿಣಾಮ

ಅದು ಲಂಡನಿನಿಂದ ವಿಮಾನ ಮಾರ್ಗ 300 ಮೈಲು ದೂರವಿದೆ. ಆದರೆ ಸಮುದ್ರ ಮಾರ್ಗವು ಸುಮಾರು 600 ಮೈಲಿದೆ. ಇಲ್ಲಿ ಜರ್ಮನರು ದೊಡ್ಡ ನೌಕಾ ನಿಲಯವೊಂದನ್ನು ಸ್ಥಾಪಿಸಿದ್ದರು. ಮಾರ್ಚ ತಾ. 23ನೇ ರಾತ್ರಿ ಘಂಟೆ 1-34ಕ್ಕೆ ಬ್ರಿಟಿಷ್ ವಿಮಾನಗಳು, ನಾವಿಕರು ಮತ್ತು ಯುದ್ಧ ಹಡಗುಗಳು ಸೈಂಟ್ ನಜಾರಿಯ ಮೇಲೆ ಧಾಳಿ ನಡಿಸಿ ಅವರ ದಕ್ಕೆಗಳು ನಾಶಮಾಡಲ್ಪಟ್ಟವು. ಎಚ್. ಎಮ್. ಎಸ್. ಕೇಂಬೆಲ್ ಯುದ್ಧ ಹಡಗದ ಮೂಲಕ ಮುಖ್ಯ ದಕ್ಕೆಯನ್ನು ಭೇದಿಸಲಾಯಿತು. ನಾವಿಕರು ಲೋಂಚುಗಳಲ್ಲಿ ಇಳಿದು ಹೋಗಿ ದಕ್ಕೆಗಳಲ್ಲಿ ಬೋಂಬುಗಳನ್ನಿಟ್ಟು ಬಂದು, ಅವರು ಹಿಂತಿರುಗಿದ ಮೇಲೆ ಅವು ಸ್ಫೋಟಿಸಿದವು. ಬ್ರಿಟಿಷ್ ವಿಮಾನಗಳು, ಬ್ರಿಟಿಷ್ ಯುದ್ಧ ಹಡಗ ಮತ್ತು ನಾವಿಕರಿಗೆ ಧಾಳಿಯ ಸಂದರ್ಭದಲ್ಲಿ ರಕ್ಷಣೆಯಿತ್ತು ಜರ್ಮನ್ ವಿಮಾನಗಳನ್ನು ತಡೆಗಟ್ಟಿದುವು.

ರಸ್ಯದಲ್ಲಿ ತೀವ್ರ ಹೋರಾಟ

ರಸ್ಯದ ಇಡೀ ರಣರಂಗದಲ್ಲೆಲ್ಲಾ ತೀವ್ರ ಹೋರಾಟವು ಆರಂಭವಾಗಿದೆ. ಸ್ಮೋಲೆಂಸ್ಕ ಮತ್ತು ಖಾರ್ಕೋವುಗಳ ಬಳಿ ಭೀಷಣ ಕದನ ನಡೆಯುತ್ತಿದೆ. ಹೊಸ ಜರ್ಮನ್ ಸೇನೆಯು ರಣರಂಗಕ್ಕೆ ಕಳುಹಿಸಲ್ಪಟ್ಟಿದೆ. ರಸ್ಯಾನರು ಟೇಂಕು ಮತ್ತು ತೋಪುಗಳ ಸಹಾಯದಿಂದ ಜರ್ಮನರನ್ನು ಪ್ರತಿಭಟಿಸಿ ಮುಂದೊತ್ತುತ್ತಿದ್ದಾರೆ. ಒರೆಲ್, ರಜೆವ್ ಮತ್ತು ಸ್ಟರಯ ರೂಸಗಳಲ್ಲಿ ಜರ್ಮನ್ ಸೈನಿಕರು ಬಹಳ ಕಷ್ಟಕ್ಕೊಳಗಾಗಿದ್ದಾರೆ. ಈ ಸ್ಥಳಗಳಲ್ಲಿ ಆವರಿಸಲ್ಪಟ್ಟಿರುವ ಜರ್ಮನ್ ಸೇನೆಗಳು, ವಿಮಾನ ಮೂಲಕ ಬರುವ ಸಾಮಾಗ್ರಿಗಳ ಮೇಲೆ ಮಾತ್ರ ಅವಲಂಬಿಸಬೇಕಾಗಿದೆ. ಕಲಿನಿನ್ ರಣರಂಗದಲ್ಲಿ ನಡೆಯುತ್ತಿದ್ದ 5 ದಿವಸಗಳ ಭೀಷಣ ಯುದ್ಧದ ಪರಿಣಾಮವಾಗಿ ಜರ್ಮನರು ಪರಾಜಿತರಾಗಿರುತ್ತಾರೆ. ಸುಮಾರು 2400 ಮಂದಿ ಕೊಲ್ಲಲ್ಪಟ್ಟು ಅನೇಕರು ಗಾಯಗೊಂಡಿರುತ್ತಾರೆ. ಲೆನಿನ್‌ಗ್ರಾಡ್ ಮತ್ತು ಕಲಿನಿನ ನಡುವಿನ ಪ್ರಾಮುಖ್ಯ ಸ್ಥಳವೊಂದನ್ನು ರಸ್ಯಾನರು ಗೆದ್ದಿರುವರು.

ಸ್ಟರಯರೂಸದಲ್ಲಿ ಜಯಾಪಜಯ ನಿರ್ಧಾರಕವಾದ ಕೊನೆಯ ಹೋರಾಟವು ನಡೆಯುತ್ತಿದೆ. ಇಂದೀಗ ಹಿಮವು ಕರಗಹತ್ತಿರುವುದರಿಂದ ಜರ್ಮನರು ಹೊಸ ಸ್ಥಳಗಳಲ್ಲಿ ವಿಮಾನ ಮತ್ತು ಸೇನಾ ನಿಲಯಗಳನ್ನು ಮಾಡಿಕೊಳ್ಳಬೇಕಾಗಿದೆ. ಕಳೆದ 5 ತಿಂಗಳುಗಳಿಂದ ಹಿಮದ ಬಲದೊಳಗೆ ನಾನಾ ಪೀಡೆಗೊಳಗಾಗಿ ವಾಸಿಸಿಕೊಂಡಿದ್ದ ಜರ್ಮನ್ ಸೈನಿಕರು ಈಗ ಹೊರಬರಲು ಸಂತೋಷಗೊಂಡಿದ್ದಾರೆ. ಡೋನೆಟ್ಸ್ ನದಿ ಪ್ರದೇಶದಲ್ಲಿಯೂ, ದಕ್ಷಿಣದಲ್ಲಿಯೂ ಜರ್ಮನರು ಹಿಂದಕ್ಕಟ್ಟಲ್ಪಡುತ್ತಿದ್ದಾರೆ. ಸ್ಮೋಲೆಂಸ್ಕ ಪ್ರದೇಶದಲ್ಲಿ ರಸ್ಯಾನರು ಮುಂದುವರಿಯುತ್ತಿದ್ದಾರೆ.

ಕ್ರಿಪ್ಸರ ಮಾತುಕತೆ

ಸರ್. ಸ್ಟಾಫೋರ್ಡ್ ಕ್ರಿಪ್ಸರು ಮಾರ್ಚ ತಾ 31ರಲ್ಲಿ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್, ಬರೋಡದ ದಿವಾನರಾದ ಸರ್. ಕೃಷ್ಣಮ್ಮಾಚಾರಿ, ಕಾಶ್ಮೀರದ ದಿವಾನರಾದ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರನ್ನು ಕಂಡು ಮಾತಾಡಿದರು. ಆ ಮೇಲೆ ಸರ್. ಸಾದುಲ್ಲ ಮತ್ತು ದೇಶೀಯ ಸಂಸ್ಥಾನಗಳ ಪ್ರಜೆಗಳ ಪರವಾಗಿ ಶ್ರೀ. ಪಟ್ಟಾಭಿ ಸೀತಾರಾಮಯ್ಯನವರೊಡನೆ ಮಾತುಕತೆ ನಡಿಸಿದರು. ಇದೇ ತಾ 1 ರೊಳಗೆ ಹಿಂದೀ ಮುಖಂಡರ ಅಭಿಪ್ರಾಯವನ್ನು ಪಡೆದು ಅನಂತರ ತನ್ನ ಕಾರ್ಯಕ್ರಮವನ್ನು ಹೇಳುವೆನೆಂದು ಕ್ರಿಪ್ಸರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿರುತ್ತಾರೆ. ತಾ 2ರಲ್ಲಿ ಪುನಃ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡಲಿರುವರು.

ಜಪಾನರ ಯುದ್ಧವು

ಜೊಬಲಿಯನ್ನು ಭರದಿಂದ ಈಗ [illegible]ಯುವುದಿಲ್ಲ. ಬರ್ಮದಲ್ಲಿ ಅವರು, ಮಂಡಲೆಯ ಮಾರ್ಗದಲ್ಲಿರುವ ಟುಂಗೂ ಎಂಬ ಪ್ರಾಮುಖ್ಯ ಪಟ್ಟಣವನ್ನು ಹಲವು ದಿನಗಳ ತೀವ್ರಹೋರಾಟದ ನಂತರ ಹಿಡಿದಿರುತ್ತಾರೆ. ಇಲ್ಲಿ ಚೀನೀ ಸೈನಿಕರು ಪೀರುಷದಿಂದ ಕಾದಾಡಿರುವರೆಂದೂ ಜಪಾನರು ವಿಷವಾಯುವನ್ನು ಪ್ರಯೋಗಿಸಿರುವರೆಂದೂ ಪ್ರಕಟವಾಗಿದೆ. ಫಿಲಿಪ್ಪೈನಿನ ಬಟಾನಿನಲ್ಲಿ ಪ್ರಬಲ ಹೋರಾಟ ನಡೆಯುತ್ತಿದೆ. ಆದರೆ ಜಪಾನರಿಗೆ ಹೆಚ್ಚಿನ ವಿಜಯವೇನೂ ದೊರೆತಿಲ್ಲ. ಆಸ್ಟ್ರೇಲಿಯದ ನ್ಯೂಗಿನಿಯಲ್ಲಿಯೂ ಜಪಾನರು ಅಷ್ಟೇನೂ ಮುಂದೊತ್ತಿರುವುದಿಲ್ಲ. ಮಿತ್ರರಾಷ್ಟ್ರಗಳ ಪ್ರಬಲ ವಿಮಾನ ಧಾಳಿಯು ಅವರಿಗೆ ತಡೆಯಾಗಿದೆ. ಕಳೆದವಾರ ಅಂಡಮಾನ್ ದ್ವೀಪವನ್ನು ಹಿಡಿದ ಮೇಲೆ ಜಪಾನರು ಸುಮ್ಮನಾಗಿರುತ್ತಾರೆ. ಅವರು ಸಿಲೋನನ್ನು ಹಿಡಿಯಲೆತ್ನಿಸಿ ಆ ಮೇಲೆ ಹಿಂದೀ ಸಾಗರದ ವಿಚಿ ಫ್ರಾನ್ಸಿನ ಅಧೀನವಿರುವ ಮೆಡಗಾಸ್ಕರನ್ನು ಆಕ್ರಮಿಸಿ ಹಿಂದೂಸ್ಥಾನವನ್ನು ಆವರಿಸಬಹುದೆಂದು ನಂಬಲಾಗಿದೆ. ಮಧ್ಯ ಚೈನದ ಶಾನ್ಸಿ ಮತ್ತು ಕಿಯಾಂಗ್ಸಿ ಪ್ರದೇಶಗಳಲ್ಲಿ ಜಪಾನ ಮತ್ತು ಚೀನೀ ಸೈನಿಕರೊಳಗೆ ತೀವ್ರ ಹೋರಾಟ ನಡೆಯುತ್ತಿದೆ. ಚೀನೀಯರು ಜಪಾನರನ್ನು ಪ್ರಬಲವಾಗಿ ವಿರೋಧಿಸುವ ಸಿದ್ಧತೆಮಾಡುತ್ತಿದ್ದಾರೆ.

ಹೆಚ್ಚಿಗೆಯಾಗಿ ೩೦೦೭೦ ವಿಮಾನ ತಯಾರಿ

ಆಕ್ಸಿಸ್ ರಾಷ್ಟ್ರಗಳ ವಿರುದ್ಧವಾಗಿ ಯುದ್ಧದಲ್ಲಿ ನಿರತವಾಗಿರುವ ಸಂಯುಕ್ತ ರಾಷ್ಟ್ರಗಳಿಗೆ ಒದಗಿಸುವರೆ ಹೆಚ್ಚಿಗೆಯಾಗಿ 30,070 ವಿಮಾನಗಳನ್ನು ತಯಾರಿಸುವ ಯೋಜನೆಯನ್ನು ಯುನೈಟೆಡ್ ಸ್ಟೇಟ್ಸ್ ಕೈಕೊಂಡಿರುವುದು.

ಲಾವಲರನ್ನು ಅಧಿಕಾರಕ್ಕೆ ತರುವ ಯತ್ನ

ಪೆರಿಸನ್ನು ಬಿಟ್ಟು ಕೊಡುವ ಮತ್ತು ಫ್ರೆಂಚ್ ಸೈನಿಕ ಕೈದಿಗಳನ್ನು ಬಿಡುವ ಮೋಹ ತೋರಿಸಿ ನಾಝಿಗಳು ಲಾವಲರನ್ನು ಅಧಿಕಾರಕ್ಕೆ ತರುವ ಪ್ರಯತ್ನ ನಡಿಸುತ್ತಿರುವರು. ಎಡ್ಮಿರಲ್ ಡಾರ್ಲೆನರಿಂದ ಅವರು ತೃಪ್ತರಾಗಿಲ್ಲ. ಲಾವಲರನ್ನು ಅಧಿಕಾರಕ್ಕೆ ತಂದು ವಿಚಿ ಫ್ರಾನ್ಸಿನಿಂದ ಹೆಚ್ಚಿನ ಸಹಕಾರ ಪಡೆಯಬೇಕೆಂದೇ ಹಿಟ್ಲರರ ಎಣಿಕೆಯಿರುವಂತಿದೆ. ಮುಖ್ಯವಾಗಿ ಅವರಿಗೆ ಫ್ರೆಂಚ್ ನೌಕಾ ಪಡೆಯು ಈಗ ಬೇಕಾಗಿದೆ.

[illegible]ಗಿಕೋಟೆ—ಶ್ರೀ ರಾಮಾ ಹಾ। ಎ। ಶಾಲೆಯು 25ನೇ ವರ್ಷೋತ್ಸವವು ಕೆನರಾ ಹ್ಯಾಸ್ಕೂಲಿನ ಅಧ್ಯಾಪಕ ಶ್ರೀ। ಜಿ। ವಾಸುದೇವ ಪೈ B. A. L. T. ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಭಜನೆ, ಉಪಹಾರ, ಪಂದ್ಯಾಟಗಳು ನಡೆದವು. ಸಾಯಂಕಾಲ ಗಂಟೆ 6ಕ್ಕೆ ಅಧ್ಯಕ್ಷರನ್ನು ಸ್ವಾಗತಿಸಿದ ಬಳಿಕ ಶ್ರೀ। ಎ। ಗೋವಿಂದರಾವ್ ಮತ್ತು ಮಗೌಲಾನ ಡಾ। ಎಫ್। ಎಚ। ಪಡಿಯಾರ್‌ರವರು ದಿವಂಗತ ಶ್ರೀ। ಸಂಜೀವ ಪದ್ಮನಾಭ ನಾಯ್ಕರವರ ಚರಿತೆಯ ಗುಣಕಥನವನ್ನು ಮಾಡಿದ ಬಳಿಕ, ಅವರ ಛಾಯಾಚಿತ್ರವು ಅಧ್ಯಕ್ಷರಿಂದ ಅನಾವರಣ ಮಾಡಲ್ಪಟ್ಟಿತು. ಶ್ರೀ। ಎ। ಕೆ। ಸದಾಶಿವ ಶೆಣೈಯವರು ಶಾಲಾ ಅಭಿವಂದನೆಯನ್ನು ಮಾಡಿದ ನಂತರ ಶಾಲಾ ರಿಪೋರ್ಟ್ ಹೆಡ್ ಮಾಸ್ತರರಿಂದ ಓದಲ್ಪಟ್ಟಿತು. ಇನಾಮುಗಳನ್ನು ಹಂಚಿದ ಬಳಿಕ-ಅಧ್ಯಕ್ಷರ ಭಾಷಣವಾಯಿತು. ಧನ್ಯವಾದಗಳನ್ನು ಅರ್ಪಿಸಿದ ಬಳಿಕ 'ಪ್ರತೀಕಾರ' ಎಂಬ ಸಂಗೀತ ಕನ್ನಡ ನಾಟಕ, 'ದಾಳಿಂಬೆ' ಎಂಬ ಪ್ರಹಸನ, 'ವಿಷ್ಣುಗುಪ್ತ' ಎಂಬ ತುಳು ನಾಟಕ ಅಭಿನಯಿಸಲ್ಪಟ್ಟವು.

ಮನೋಹರ ಗ್ರಂಥಮಾಲೆಯ

ಸಾಹಿತ್ಯೋತ್ಸವ—ಈ ಗ್ರಂಥಮಾಲೆಯು ಕನ್ನಡ-ಸಾಹಿತ್ಯ-ದೇವಿಗೆ-ಕನ್ನಡ ನಾಡಿನ ಸಾಹಿತ್ಯ-ಚಕ್ರವರ್ತಿಗಳ ಕೃತಿ-ಕುಸುಮಗಳ ಮಾಲೆಯೊಂದನ್ನು ಅರ್ಪಿಸುವುದರ ಸವಿನೆನಪಿಗಾಗಿ ಗದಗಿನಲ್ಲಿ ಸಾಹಿತ್ಯೋತ್ಸವವು ಮೇ ತಾ ೧, ೨, ೩ರಲ್ಲಿ ನಡೆಯುವುದು. ಈ ಸಮಯದಲ್ಲಿ ಬರಹಗಾರರ ಸಮ್ಮೇಳನವೂ, ವಿವಿಧ ಸ್ಪರ್ಧೆಗಳೂ ನಡೆಯಲಿರುವವು.

ತಾ. 31—3—1942ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ.

ನಿಮ್ಮೆಲ್ಲರ ಅಚ್ಚುಮೆಚ್ಚಿನ ನಟನಟಿಯರು.

ಮೋತಿಲಾಲ್, ಖುರ್ಶಿಡ್, ಸ್ನೇಹಪ್ರಭಾ, ಕಾಂತಿಲಾಲ್ ಇವರ

"ಪರದೇಸಿ"

(ರಣಜಿತ್ ಚಿತ್ರ)

ನಿರೀಕ್ಷಿಸಿರಿ:- ತಾ. 7-4-42ರಿಂದ ಮಿನರ್ವಾ ಚಿತ್ರದವರ

ಚಂದ್ರಮೋಹನ್, ನಾಸೀಮ್, ಸೋರಾಬ್, ಮೋದಿ ನಟಿಸಿದ

'ಸ್ವಿಕಾರ್'

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ನಾಟ್ಯ ಪ್ರದರ್ಶನ—ನಾಟ್ಯದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು, ಶ್ರೀ। ಉದಯಶಂಕರರ ಅಲ್ಮೋರಾ ನೃತ್ಯಕಲಾ ಕೇಂದ್ರಕ್ಕೆ ತೆರಳಲಿರುವ ಶ್ರೀ। ಕೆ। ಕೆ। ಶೆಟ್ಟರು ತಾ. 22-3-42ರಲ್ಲಿ ಸ್ಥಳೀಯ ಬೆಸೆಂಟ್ ಗರ್ಲ್ಸ್ ಶಾಲೆಯಲ್ಲಿ, ಊರಿನ ಸದ್ಗೃಹಸ್ಥರನ್ನೂ, ತಮ್ಮ ಅನೇಕ ಮಿತ್ರರನ್ನೂ ಆಹ್ವಾನಿಸಿ, ನಾಟ್ಯ ಪ್ರದರ್ಶನಕೊಟ್ಟರು. ಕಥಕ್, ಕಥಕ್ಕಳಿ, ಮಣಿಪುರಿ ನೃತ್ಯ ಇವುಗಳಲ್ಲದೆ ಒಂದೆರಡು ಚಿಕ್ಕ ವಿನೋದಗಳೂ, ಶ್ರೀ। ಶ್ರೀನಿವಾಸ ಅವರ ವೀಣಾವಾದನವೂ, ಶ್ರೀ। ರಘುನಾಥ ಕಿಣಿಯವರ ಸತಾರ್‌ವಾದನವೂ, ಶ್ರೀ। ನಾರಾಯಣರಾಯರ ತಬಲಾ ವಾದನವೂ, ಶ್ರೀ। ಉಡುಪರ ವೀಣಾವಾದನವೂ ಇದ್ದುವು. ಕುಮಾರಿ ಪದ್ಮಿನಿ ಮತ್ತು ಕುಮುದಾ ಇವರ ನೃತ್ಯಗಳೂ ಮನೋಹರವಾಗಿದ್ದುವು. ಶ್ರೀ। ರಮಾನಂದ ಚೌಯರ ವಿನೋದ ನರ್ತನವು ಲಘು ಹಾಸ್ಯವನ್ನೊಳಗೊಂಡು ಮನೋರಂಜಕವಾಯಿತು. ಶ್ರೀ। ಕೆ। ಕೆ। ಶೆಟ್ಟರು 'ಜಲಗಾರ', 'ಅರ್ಚಕೀಯ' ಈ ನೃತ್ಯಗಳನ್ನು ಮನೋಹರವಾಗಿ ಮಾಡಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ರಾವ್ ಬಹದೂರ್ ಡಾ। ಎಂ। ಕೇಶವ ಪೈ, ಓ। ಬಿ। ಇ। ಎಮ್। ಬಿ। ಅವರು ಸಭಾಧ್ಯಕ್ಷರಾಗಿದ್ದರು.

ಶ್ರೀ। ಬಲ್ಲಾಳರಲ್ಲಿ ಸತ್ಕಾರ—ಜಿಲ್ಲೆಯ ಸುಪ್ರಸಿದ್ಧ ಶ್ರೀಮಂತರಾದ ಶ್ರೀ। ಕಟ್ಟೆಮಾರ್ ರಘುಚಂದ್ರ ಬಲ್ಲಾಳರವರ ಚಿರಂಜೀವಿಗೆ ಧರ್ಮಸ್ಥಳ ಶ್ರೀ। ಮಂಜಯ್ಯ ಹೆಗ್ಗಡೆ ಇವರ ಪುತ್ರಿಯನ್ನು ಕೊಟ್ಟು ಇದೇ ಕಳೆದ ತಾ. ೨೩ರಲ್ಲಿ ವಿವಾಹ ನಡೆದ ಸಂಬಂಧವಾಗಿ, ಶ್ರೀ। ಬಲ್ಲಾಳರವರು ತಾ. 29-5-42ರಲ್ಲು ತಮ್ಮ ಹಲವು ಮಿತ್ರರನ್ನು ಆಹ್ವಾನಿಸಿ, ಒಂದು ಉಪಾಹಾರ ಸತ್ಕಾರವಿತ್ತರು. ಮೈಸೂರಿನಿಂದ ದಯಮಾಡಿಸಿರುವ ಆಸ್ಥಾನ ಸಂಗೀತ ವಿದ್ವಾನ್ ದೇವೇಂದ್ರಪ್ಪನವರ ಗಾಯನ ಕಚೇರಿಯೂ, ವಿದ್ವಾನ್ ಬಿ। ಕೇಶವನ್ ಅವರ ವೀಣಾವಾದನವೂ, ಆಸ್ಥಾನ ವಿದ್ವಾನ್ ಹಿ। ಶೇಷಪ್ಪನವರ ತಬಲಾ ವಾದನವೂ ಇದ್ದವು.

ಕಾಂಗ್ರೆಸ್ ಸದಸ್ಯರಾಗಿ ಸೇರಿರಿ.

ಜಿಲ್ಲೆಯ ಮಹಾಜನರಲ್ಲಿ ವಿನಂತಿ.

ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾರ್ಯವು ನಡೆದಿದೆ, ಪ್ರತಿಯೊರ್ವ ದೇಶಾಭಿಮಾನಿಯು ಪ್ರಾಥಮಿಕ ಸದಸ್ಯನಾಗಿ ಸೇರುವನೆಂದು ನಂಬಲಾಗಿದೆ. ಹೊಸತಾಗಿ ಪ್ರಾಥಮಿಕ ಸದಸ್ಯರಾಗಿ ಸೇರುವವರು ನಾಲ್ಕಾಣೆ ತೆತ್ತು ಸದಸ್ಯರಾಗಬಹುದು. ಈ ಮೊದಲು ಸದಸ್ಯರಾಗಿದ್ದು, ಕಳೆದ ವರ್ಷ ಮಾತ್ರ ತಮ್ಮ ಸದಸ್ಯತನವನ್ನು ಮುಂದುವರಿಸದೆ ಇದ್ದವರು, ಕಳೆದ ವರ್ಷದ(೧೯೪೧) ಸದಸ್ಯತನದ ವರ್ಗಣಿ 0-4-0 ಮತ್ತು ಈ ವರ್ಷದ (೧೯೪೨) ವರ್ಗಣಿ 0-4-0 ಹೀಗೆ ಎಂಟಾಣೆ ತೆತ್ತು ಸದಸ್ಯರಾಗಬೇಕಾಗಿದೆ, ಹೀಗೆ ಎರಡು ವರ್ಷಕ್ಕೆ ವರ್ಗಣಿ ತೆತ್ತ ಬಗ್ಗೆ ಅವರಿಗೆ ಒಂದೇ ರಶೀದಿ ಕೊಡಲ್ಪಡುವುದು,

ಸದಸ್ಯರನ್ನು ಸೇರಿಸುವ ಅವಧಿಯು ಇದೇ ಜೂನ್ ತಿಂಗಳಿಗೆ ಮುಗಿಯುವುದು, ಆದ ಕಾರಣ, ಸದಸ್ಯರನ್ನು ಸೇರಿಸುವವರು ತ್ವರೆಯಿಂದ ಕಾರ್ಯ ಸಾಧಿಸಬೇಕಾಗಿದೆ, ಸದಸ್ಯರಾಗಿ ಸೇರುವವರೂ ವಿಲಂಬಿಸದೆ, ಕಾಂಗ್ರೆಸ್ ಕಾರ್ಯಕರ್ತರು ತಮ್ಮಲ್ಲಿಗೆ ಬಂದಾಗ, ಕೂಡಲೇ ಸದಸ್ಯರಾಗಿ ಸೇರಬೇಕೆಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಅಲಿಗೆ ಮರಣ ದಂಡನೆ- ಕಾಸರಗೋಡು ತಾಲೂಕು ಮೈಗೆ ಗ್ರಾಮದ ಬಟಿಯಪ್ಪ ರೈಗೆ ಮಂಗಳೂರು ಸೆಷನ್ಸ್ ಜಡ್ಜರು ಇ। ಪಿ। ಕೋಡಿನ ೩೦೨ನೇ ಕಲಂ ಪ್ರಕಾರ ಮರಣ ದಂಡನೆಯನ್ನು ವಿಧಿಸಿದರು. ತಾ. 19-10 41ರಲ್ಲಿ ಆತನು ಮೃತ ರಾಮು ಶೆಟ್ಟಿಯನ್ನು ಹೊಡೆದು ಸಾಯಿಸಿದ್ದಾಗಿ ಆತನ ಮೇಲಿನ ಮೊಕದ್ದಮೆಯಾಗಿತ್ತು. ಅಲಿಯು ಕುರುಡನೆಂತಲೂ, ಕಣ್ಣಿನ ಅಡಚಣೆಯುಳ್ಳವನೆಂತಲೂ ಹುಡ ಆಳಿಯಿಂದ ವ್ಯಕ್ತನನ್ನು ಕೊಂದನೆಂತಲೂ ಹೇಳಲಾಗಿತ್ತು. ತನ್ನ ದ್ವೇಷಿಗಳು ನಿರಪರಾಧಿಯಾದ ತನ್ನನ್ನು ಈ ಕೇಸಿನಲ್ಲಿ ಸೇರಿಸಿದ್ದಾಗಿ ಅಲಿಯ ಹೇಳಿಕೆಯಾಗಿತ್ತು. ಇಬ್ಬರು ಎಸೆಸರು ಅಲಿಯು ತಪ್ಪುಗಾರನಲ್ಲವೆಂತಲೂ ಒಬ್ಬ ಎಸೆಸರು ಅಲಿಯು ತಪ್ಪುಗಾರನೆಂತಲೂ ಅಭಿಪ್ರಾಯ ಕೊಟ್ಟಿದ್ದರು, ಜಡ್ಜರು ಅಲಿಯು ತಪ್ಪುಗಾರನೆಂತ ವಿಧಿಸಿ ಆತನಿಗೆ ಮರಣ ದಂಡನೆಯನ್ನು ವಿಧಿಸಿದರು. ಅಲಿಯ ಕಡೆಯಿಂದ ಶ್ರೀ। ಬಿ। ಅಚಂತ ರಾಯರು ಕೋರ್ಟಿನಿಂದ ನೇಮಿಸಲ್ಪಟ್ಟು ವಾದಿಸಿದ್ದರು.

ಅ. ಸೆಷನ್ ಜಡ್ಜರಾದ ಶ್ರೀ।- ಟಿ, ಡಿ, ರಾಮಯ್ಯ ಪಂತಲು ಅವರ ಕೋರ್ಟಿನಲ್ಲಿ ರೈಮಂಡ್ ಸೋಜಾ ಮತ್ತು ಮಂಕ ನಾರ್ಣರ ಇವರ ಮೇಲೆ 7-1-42ರಲ್ಲಿ ರಾತ್ರಿ ಗೋಲ್ಟರ ಕೇರಿಯಲ್ಲಿರುವ ಅಬ್ದುಲ್ ರಹಿಮಾನ್ ಸಾಹೇಬರ ಅಂಗಡಿ ಮುರಿದು ಸಾಮಾನುಗಳನ್ನು ಕಳವು ಮಾಡಿದರೆಂದೂ, 6-1-42ನೇ ರಾತ್ರಿ ಇನ್‌ಸ್ಪೆಕ್ಟರ್ ಆಫ್ ಮಿಶನ್‌ಸ್ಕೂಲ್ಸ್, ರೆ. ಕರ್ಬಾಳರರ ಬಲ್ಮಠ ಮಿಶನ್ ಕಂಪೌಂಡ್‌ನಲ್ಲಿರುವ ಬಂಗ್ಲೆಯಿಂದ ಉಡುಪುಗಳನ್ನು ಕಳವು ಮಾಡಿದರೆಂದೂ ಮತ್ತು 14-1-42ನೇ ರಾತ್ರಿ ತಾಲೂಕು ಕಚೇರಿಯ ಮುಂದಿರುವ ಮಾಧವನ ಗೂಡಿನಂಗಡಿಯನ್ನು ಮುರಿದು ಕಳವು ಮಾಡಿದರೆಂದೂ ಐ. ಪಿ. ಸಿ. 380ನೇ ಪ್ರಕರಣದ ಮೇರೆಗೆ ಮೂರು ಚಾರ್ಜುಗಳು (ಮೇಲಿನ ತಕ್ಸೀರುಗಳ ನಿಮಿತ್ತ ಪ್ರತ್ಯ ಪ್ರತ್ಯೇಕ ಚಾರ್ಜುಗಳಾಗಿ, ವ್ಯವಹರಣೆ ನಡೆದು ಅವರು ತಪ್ಪಿತಸ್ಥರೆಂದು ಎಲ್ಲಾ ಚಾರ್ಜುಗಳ ಮೇಲೂ ಜೂರಿಯವರು ಒಮ್ಮತದ ನಿರ್ಧಾರ ಮಾಡಿದರು. ಜಡ್ಜರು ಈ ಅಭಿಪ್ರಾಯವನ್ನು ಸ್ವೀಕರಿಸಿ ತಪ್ಪಿತಸ್ಥರ ಪೈಕಿ 1ನೇ ಆಲಿಗೆ ಪ್ರತಿಯೊಂದು ಚಾರ್ಜಿನ ಮೇಲೆ 2 ವರ್ಷ 2ನೇ ಆಲಿಗೆ ಪ್ರತಿಯೊಂದು ಚಾರ್ಜಿನ ಮೇಲೆ 3 ವರ್ಷ ಸಜೆ ಮತ್ತು ಮೂರು ವರ್ಷ ಪೋಲೀಸರ ವಿಚಾರಣೆಗೆ ಒಳಪಟ್ಟಿರಬೇಕೆಂದೂ ವಿಧಿಸಿದರು, ಶಿಕ್ಷೆಯು ಏಕಕಾಲದಲ್ಲಿ ಚಾಲಿಯಾಗತಕ್ಕದ್ದು. ಶ್ರೀ। ಜೆ। ಕೆ। ಗೋವಿಂದ ಭಟ್ಟರು ಪ್ರಾಸಿಕ್ಯೂಶನ್ ನಡೆಸಿದರು.

ಮದ್ರಾಸು ಗವರ್ನರರ ಯುದ್ಧ ಫಂಡು

ದ.ಕ.ಜಿಲ್ಲೆಯಲ್ಲಿ ಫೆಬ್ರವರಿ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ.

ಭಾಗ ೧.

ರೂ. 307-1-4-0 ಮಂಗಳೂರು ಕ್ಲಬ್. 50-0-0ಡಬ್ಲ್ಯು ಚೆಸ್ಲಿಸ್,ಡಬ್ಲ್ಯುಬಿ ಜಾನ್ಸನ್, ಜೆ. ಎನ್ ಕಾನ,17-0-0 ಆರ್. ಪ್ರಸಾದ್, 15-5-0 ಮಿಸ್, ಎನ್. ಝಕಾರಿಯಸ್, 12-0-0 ರಾವ್ ಸಾಹೇಬ್ ಬಿ, ಅನಂತ ಬಾಳಿಗಾ 11-8 0. ರಾವ್ ಸಾಹೇಬ್ ಎಕ್ಸ್. ಕೊಲಾಸೊ 10-0-0. ಕ್ಯಾಪ್ಟನ್ ಸಿ. ಕೆ. ಮೇನನ್, ಬಿ. ಕೊರಗಪ್ಪ, 8-0-0 ರಾವ್ ಸಾಹೇಬ್ ಯು. ಮಂಜಪ್ಪ,ರಾವ್ ಬಹದೂರ್ ಡಾ। ಪಿ. ಪಿ. ಕಾಮತ್; 7-0-0. ಖಾನ್ ಸಾಹೇಬ್ ಎಂ। ಸುಲ್ತಾನ್, ಮಾಹಿ ಉದ್ದೀನ್ ಮಖ್ಬಾರಿ ಸಾಹೇಬ್, 6-8-0;ರಾವ್ ಬಹದೂರ್ ಕೆ।ಶ್ರೀನಿವಾಸರಾವ್, 6-0-0ಕೆ। ಎಸ್। ಭಟ್, 5-8-0. ಬಿ. ಗಣೇಶ, 5-0-0. ಡಾ। ಕೆ। ಪ್ರೇತನ್, ಕೆ। ಅಚ್ಯುತನ್ ನಾಯರ್, ಎ। ರಾಘವೇಂದ್ರರಾವ್, ಎಂ।ವೆಂಕಪ್ಪ ಟಿಕ್ಕಾ, ರೈ ಸಾಹೇಬ್ ಪಿ.ಸಿ.ಯಂ ವೆಂಕಟೇಂಜಸ್.

ಭಾಗ ೨.

200-0:0 ಹಂಡ್ಯಾನಾ ಬ್ರದರ್ಸ್, 100-0-0 ದೇವ ಪ್ರಿಯ ಕೊಟ್ಯಾನ್, 25-0-0, ಬ್ಯಾಮಿಸ್ಸ್ ಡಿಕೋಜಾ; ಸೇಮ ಪೂವಣ್ಣೆ. 15-0-0 ಕೆ. ಪದ್ಮರಾಜ ಶೆಟ್ಟಿ, ಮೊಯಿದಿನಬ್ಬ ಬ್ಯಾರಿ, ಪಿ। ಪದ್ಮಯ್ಯ, 12-0-0. ಎಚ್। ಶ್ಯಾಮ ಭಟ್,10-0-0 ಕೆ. ಪಿ. ಶೇಷಗಿರಿ ಪ್ರಭು, ಎ। ಜಿ। ರೇಗೊ, ಕೋಚು ಬ್ಯಾರಿ, ಪದ್ಮರಾಜ ರೈ, ರಾಮಕೃಷ್ಣ ಕಲ್ಲೂರಾಯ, ಎಂ, ಸುಬ್ರಾಯ ಭಟ್, 8-0-0. ಮಡಪಾಡಿ ಮಹಾಬಲ ಭಟ್ಟ, 6-0 0. ಕೆ। ಶಂಕರ ಭಂಟ, 5-0-0, ಬಿ. ಪದ್ಮನಾಭ ಹೊಳ್ಳ, ಓ. ಕೆ. ಮಾರನ್, ಮೊಯಿದಿನ್ ಬ್ಯಾರಿ, ವೆಂಕಪ್ಪ ಭಟ್ಟ, ಅಡ್ಕಂಜ, ಧರಣಮ್ಮ, ಎಂ। ಕೃಷ್ಣ ಭಟ್, ನೇಮಿರಾಜ ಅಟ್ಟ, ಅಕ್ಕಾರಿ ಬಂಟ, ಮಾಲಿಂಗ ಭಟ್ಟ, ಮಹಾಲಿಂಗ ಕಾಮತ್; ಪದ್ಮಮ್ಮ, ಎಂ। ತಿಮ್ಮಪ್ಪ ಭಟ್, ಸಿದ್ಧಪ್ಪ ಮಲ್ಲ ಪರಮೇಶ್ವರ ಭಟ್ಟ, ನಾರಾಯಣ ಭಟ್ ಬ್ರದರ್ಸ್, ಎಸ್। ಬಸಪ್ಪ, ಎಚ್। ಸಂಕಣ್ಣ ಭಟ್ಟ, ಬಿ। ತಿಮ್ಮಪ್ಪ ಮಲ್ಲಿ, ಕೆ। ತ್ಯಾಂಪ ಆಳ್ವ, ಎಸ್। ಪದ್ಮರಾಜ ರೈ, ರಾಮಸ ಬ್ಯಾರಿ

ಉಡುಪಿ.

ಮನರಂಜನೆ– ಸ್ಥಳೀಯ ಶ್ರೀಲಕ್ಷ್ಮೀಕೃಷ್ಣ ಥಿಯೇಟರಿನಲ್ಲಿ ತಾ. 31-3-42ರಿಂದ ರಣಜಿತ್‌ನವರ "ಪರದೇಶಿ" ಎಂಬ ಅಪೂರ್ವ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದಾದ ಮೇಲೆ ಮಿನರ್ವಾದ "ಪುಕಾರ್" ಎಂಬ ಅತ್ಯುಜ್ವಲ ಚಿತ್ರ ಬರಲಿರುವುದು

ಪೇಟೆ ಧಾರಣೆ— ತಾ. 30-3-42ರಲ್ಲಿ ಕೊಡಿದ ಉಡುಪಿ ತಾಲೂಕು ಎಗ್ರಿಕಲ್ಚರಿ ಕಮಿಟಿಯವರು ಈ ಕೆಳಗಿನಂತೆ ಧಾರಣೆ ನಿಶ್ಚಯಿಸಿರುವರು–

ಮಸ್ಕತಿ ಅಕ್ಕಿ ಮುಡಿಗೆ ರೂ. 6-4--0; 6-0 0, ಸೇರಿಗೆ 0-2-5, 0-2-4. ಗುಡ್ಡು ರೂ. 5-14-0, 0 2-4, ತೆಳ್ಳಲು (ಪ್ಲಾಟ್) ರೂ. 5-12-0, ಊರಿಪ್ಪು 5-14-0, ಸೇರಿಗೆ 0-2-3, 0 2 4, ಸುಗ್ಗಿ ರೂ. 5-12 0, ಸೇರಿಗೆ 0-2-3, ಚಿಟ್ಟಿಗೆ 6-4-0ರಿಂದ 7-8-0, ಸೇರಿಗೆ 0-2-5ರಿಂದ 0-2-9, ಬೆಲ್ಲ ಮಣಕ್ಕೆ ರೂ. 2 9-0ರಿಂದ 2-8-0, ಸೇರಿಗೆ 0-0-9ರಿಂದ 0-0-11. ಸಕ್ಕರೆಗೆ ಮಣಕ್ಕೆ ರೂ. 5-0-0, ಸೇರಿಗೆ 0-1-9, ಉಪ್ಪು ಸೇರಿಗೆ 0-1-0, ಚಿಮಿಣಿ ಎಣ್ಣೆ ಟಿನ್‌ಗೆ ರೂ. 4-10-6, ಬಾಟ್ಲಿಗೆ 0-3-0, ತೆಂಗಿನಕಾಯಿ 100ಕ್ಕೆ ರೂ. 3ರಿಂದ 4. 1ಕ್ಕೆ 0-0-6, 0 0-8, ತೆಂಗಿನಎಣ್ಣೆ ಕುಪ್ಪಿಗೆ 0-1-2. ಬೆಂಕಿಪೆಟ್ಟಿಗೆ 0-0-5ರಿಂದ 10 ಪೈ, ಗೋಧಿಹಿಟ್ಟು ಸೇರಿಗೆ 0-2 0, 0-1-10.

ಹವಾಮಾನ— ಸಾಮಾನ್ಯವಾಗಿ ಮೇ ತಿಂಗಳಲ್ಲಿ ತೋರಿಬರುವ ವಿಪರೀತ ಸೆಖೆಯು ಮಾರ್ಚಿಯಿಂದಲೇ ಪ್ರಾರಂಭವಾಗಿದೆ, ಕಳೆದ ವರ್ಷ ಸಾಕಷ್ಟು ಮಳೆಯಿಲ್ಲದುದರಿಂದ ಕೆಲವು ಬಾವಿಗಳು ಈಗಾಗಲೇ ಒಣಗಿ ನೀರಿಗಾಗಿ ಜನರು ಪೇಚಾಡಬೇಕಾಗಿರುತ್ತದೆ. ಮುನ್ಸಿಪಾಲಿಟಿಯವರು ಕೆಲವು ರಸ್ತೆಗಳಿಗೆ ನೀರು ಹಾಕುವುದನ್ನು ಕಡಿಮೆಮಾಡಿದ್ದಾರೆ,

ಮಾನಪತ್ರ—ಕ್ರಿಶ್ಚಿಯನ್ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ. S. J. ಕೌಂಡಿನ್ಯರು ನಿವೃತ್ತಿ ಹೊಂದಲಿರುವ ಕಾರಣ ವಿದ್ಯಾರ್ಥಿಗಳು ತಾರೀಕು 19-3-42ರಲ್ಲಿ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ವಿದಾಯಕೂಟವೊಂದನ್ನು ಏರ್ಪಡಿಸಿದ್ದರು ಈ ಸಂದರ್ಭದಲ್ಲಿ ಶ್ರೀ. ಕೌಂಡಿನ್ಯರ ಮತ್ತು ಮಾಜಿ ಹೆಡ್ಮಾಸ್ತರ್ ಶ್ರೀ. ಸಾಲಿನ್ಸನವರ ಭಾವಚಿತ್ರಗಳ ಅನಾವರಣವೂ ನಡೆಯಿತು.

ಈ ಶಾಲೆಗೆ ಈಗ ಕಾಸರಗೋಡಲ್ಲಿರುವ ಶ್ರೀ. A. S. ಕಾರೆಟರು ಹೆಡ್ಮಾಸ್ತರರಾಗಿ ಬರಲಿರುವರು,

ನಗರಸಭೆ:– ತಾ 26-3-42ರಲ್ಲಿ ಜರಗಿ ಜಿಲ್ಲಾ ವಸ್ತು ಪ್ರದರ್ಶನಕ್ಕೆ ಸಹಾಯ ಮಾಡಬೇಕೆಂಬ ಕಲೆಕ್ಟರರ ಸೂಚನೆಗೆ ವಿವಾದ ಸೂಚಿಸಲಾಯಿತು, ಮುನ್ಸಿಪಲ್ ನೌಕರರ ಪ್ರೊವಿಡೆಂಟ್ ಫಂಡನ್ನು ಮದ್ರಾಸ್ ಸೆಂಟ್ರಲ್ ಕೋ-ಅಪರೇಟಿವ್ ಲೇಂಡ್ ಮೋರ್ಗೇಜ್ ಬ್ಯಾಂಕಿನ ಡಿಬೆಂಚರುಗಳಲ್ಲಿ ವಿನಿಯೋಗಿಸಬೇಕೆಂದಾಯಿತು,

ಹಿಂದೂ ಮಹಾಸಭೆ:- ದ, ಕ. ಜಿಲ್ಲಾ ಹಿಂದೂ ಮಹಾಸಭೆಯ ವರ್ಷಾವಧಿ ಸಭೆಯು ತಾ, 29-3-42ರಲ್ಲಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ। ಬಿ। ವಿ। ಮಾಧವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು, ವರದಿ ವಾಚನ, ಚಾಲ್ತಿ ವರ್ಷದ ಕಾರ್ಯಕಾರಿ ಮಂಡಳಿ ರಚನೆಯಾಗಿ ಕೆಲವು ಠರಾವುಗಳು ಪಾಸಾದುವು, ಉಪಾಹಾರದೊಂದಿಗೆ ಸಭಾಂತ್ಯವಾಯಿತು. ಶ್ರೀಗಳಾದ ವಾಮನಾಚಾರ್, ಬಿ, ವಿ, ಮಾಧವ ರಾವ್, ಎಂ, ಗೋಪಾಲ ರಾವ್, ಎಂ, ವಾಮನ ಭಟ್, ವಿ, ಶೀನಪ್ಪಯ್ಯ ಮೊದಲಾದವರು ಕಮಿಟಿಯಲ್ಲಿರುವರು,

ಕಾರ್ಕಳ— ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಸಂಚಾಲಕರಾಗಿರುವ ಶ್ರೀ. ಅಣ್ಣಾಜೀಷ ಯಂ. ಎ. ಯವರು ಇಲ್ಲಿ ತಮ್ಮ ಸಂಘದ ಪ್ರಚಾರಮಾಡಿ ಹೋದರು, ಎಪ್ರಿಲ್ ತಿಂಗಳಿಂದಾರಂಭಿಸಿ ಸಂಘದ ಒಂದು ಕೇಂದ್ರವು ಇಲ್ಲಿ ತೆರೆಯಲ್ಪಡುವುದಾಗಿ ತಿಳಿಯುತ್ತದೆ

ಬಳುವಾಯಿ ಮತ್ತು ಮೂಡಬಿದರೆಗಳಲ್ಲಿ ಈ ಸಂಬಂಧವಾದ ಎರಡು ಸಾರ್ವಜನಿಕ ಸಭೆಗಳು ಕೂಡಿ ಕುಂದಾಪುರ ಕಲೆಕ್ಟರ ಶ್ರೀ. ಆರ್. ಪ್ರಸಾದ ಮತ್ತು ಜಿಲ್ಲಾ ಕಲೆಕ್ಟರ ಮಿ. ಯಂ. ಕೇಮ್ಸ್ ತುಲಾನ್ಸರವರು ಬ್ರಿಟಿಶರ ಯುದ್ಧಪ್ರಯತ್ನಗಳಿಗೆ ಜನತೆಯ ಸಹಾಯವನ್ನು ಕೋರಿ ಭಾಷಣಮಾಡಿದರು.

ಅಂಕಿಚಾರ್ತೀಯ ವಿಧವಾವಿವಾಹಿತರಾದ ವಿಜಯ ಶ್ರೀ. ಗಣೇಶ ಮತ್ತು ಶ್ರೀಮತಿ ಶಾಂತಾಬಾಯಿಯವರನ್ನು ಅಭಿನಂದಿಸುವ ಒಂದು ಸಭೆಯು ಶ್ರೀ. ಕೆ. ಕೃಷ್ಣಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ವಕೀಲ ಕೆ. ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಟೀಚಾದಿನ. ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಕೇಂದ್ರ ದಿನಾಚರಣೆ, ಶ್ರೀಮತಿ ಜಲಜಾಬಾಯಿಯವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯಿನಿಯರ ತಿಂಗಳಸಭೆ, ಶ್ರೀಮತಿ ಯಂ. ಬ್ರಿಟೋರವರ ಅಧ್ಯಕ್ಷತೆಯಲ್ಲಿ ಹಿಂದೂ ಬಾಲಿಕಾಪಾಠಶಾಲೆಯ ವಾರ್ಷಿಕೋತ್ಸವ ಮೊದಲಾದವು ಬಹು ವಿಜೃಂಭಣೆಯಿಂದ ನಡೆದಿವೆ.

ಮುಂಡ್ಕೂರು— ಶ್ರೀ ಉಡುಪಿ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರು ತಮ್ಮ ಸಂಸ್ಥಾನದ ಆರಾಧ್ಯದೇವತೆ ಶ್ರೀ ರಾಮಚಂದ್ರ ದೇವರ ವಾರ್ಷಿಕ ಶ್ರೀ ರಾಮನವಮಿ ಉತ್ಸವವನ್ನು ಮುಂಡ್ಕೂರಲ್ಲಿ ಕಳೆದ ತಾ. 26-3-42ನೇ ಗುರುವಾರ ಜರಗಿಸಿದರು, ಮಧ್ಯಾಹ್ನ ೫೦೦ ಜನರ ಅನ್ನಸಂತರ್ಪಣೆಯೂ ಪಂಚಾಮೃತ ಮಹಾಭಿಷೇಕವೂ ನದಿಯಲ್ಲಿ ಅವಭೃತ ಸ್ನಾನವೂ ಜರಗಿ ರಾತ್ರಿ ರಜತಸಾಲಕೀ ಉತ್ಸವವು ಹೂ, ತೇರು, ತೋರಣಗಳಿಂದ ಸಂಭ್ರಮದಿಂದ ಜರಗಿತು, ಕಾರ್ಕಳ ಡಿ, ಮುನ್ಸಿಫ್ ಶ್ರೀಯುತ K. R. ಕೃಷ್ಣಶೆಟ್ಟರವರೂ ಇನ್ನಿತರ ವಕೀಲರುಗಳೂ ಉತ್ಸವ ಸಂದರ್ಶನಾದಿಗಳಿಗೆ ಚಿತ್ತೈಸಿರುವರು ಆ ದಿನದ ಸಕಲ ಖರ್ಚುವೆಚ್ಚಗಳನ್ನು ಶ್ರೀ. ಶಟ್ಟರ ಮಹಾಲಿಂಗ ಸೆಟ್ಟರು ವಹಿಸಿಕೊಂಡು ಕಾಣಿಕೆ ಸಮರ್ಪಿಸಿ ಧನ್ಯರಾದರು ಇನ್ನಿತರರಾದ ಶ್ರೀ ಮುಂಡ್ಕೂರ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮೊಕ್ತೇಸರರಾದ ಶ್ರೀ. ರಾಜುಶೆಟ್ಟರು ಪಗ್ಗೆರೆ ಊರವರಲ್ಲಿ ತಮ್ಮ ತನುಮನಧನ ಸಹಾಯಗಳಿಂದ ಯಶಸ್ವಿಯಾಗಿ ಜರಗುವಂತೆ ಮಾಡಿದರು. ಶ್ರೀಗಳವರು ಈಗ ಉಡುಪಿಗೆ ತೆರಳಿರುವರು,

ಉಳಿಯಾರಗೋಳಿ ಪಂಚಾಯತ ಬೋರ್ಡು— ಎರಡು ಮೂರು ತಿಂಗಳಿಗೊಮ್ಮೆಯಂತೆ ಈ ಬೋರ್ಡಿನ ಸಭೆ ನಡೆಯುತ್ತದೆ. ಅದರಲ್ಲಿ ಪಾಸಾದ ಠರಾವುಗಳೂ ಕಾಗದದಲ್ಲೇ. ಈ ಗ್ರಾಮದಲ್ಲಿ ಒಂದೆರಡು ಕಾಲುದಾರಿ ಮತ್ತು ಬಾವಿಗಳು ಅತ್ಯಗತ್ಯ. ಹಾಗಿಂತ ಬೋರ್ಡಿನಲ್ಲಿ ಹಣವಿಲ್ಲೆಂದೇನೂ ಇಲ್ಲ. ಇದ್ದ ಹಣವನ್ನು ಉಪಯೋಗಿಸುವ ಮನಸ್ಸಿಲ್ಲದಂತಹ ಪರಿಸ್ಥಿತಿಯುಂಟಾಗಿದೆ. ಸಾಧ್ಯವಾದ ಮಟ್ಟಿಗೆ ಹಳ್ಳಿಗರ ಹಿತಕ್ಕಾಗಿ ಮಡಿಯಬೇಕಾಗಿರುವುದು ಬೋರ್ಡಿನ ಕರ್ತವ್ಯ.ಹಳ್ಳಿಯ ಈ ಸಂಸ್ಥೆಯೇ ಬಳಭ್ಯಾನ ಮಾಡುತ್ತಾ ಕುಳಿತರೆ ಹೇಗೆ? ಇನ್ನಾದರೂ ಈ ಬೋರ್ಡಿನವರು ಎಚ್ಚತ್ತು, ವಿಶೇಷವಾಗಿ ಅದರ ಪ್ರೆಸಿಡೆಂಟರು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿ ಹಳ್ಳಿಯ ಹಿತ ಸಾಧಿಸಲು ಮುಂದಾಗಲಿವರೇ? ಎಂದೊಂದು ಬಾತ್ಮಿ.

ಧರ್ಮಸ್ಥಳ—ಇದೇ ತಾ. 22ರ ಆಗಾಯ್ತು ನಾಲ್ಕು ದಿನ ಧರ್ಮಸ್ಥಳದಲ್ಲಿ ಶ್ರೀಮಾನ್ ಹೆಗ್ಗಡೆಯವರ ಸುಪುತ್ರಿಯವರ ವಿವಾಹ ಮಂಗಳಕಾರ್ಯವು ಕಟ್ಟೆಮಾರು ರಘುಚಂದ್ರ ಬಲ್ಲಾಳರ ಸುಪುತ್ರರೊಡನೆ ಮಹಾವೈಭವದಿಂದ ನೆರವೇರಿತು. ನಾಲ್ಕು ದಿನ ಸುಪ್ರಸಿದ್ಧ ವಿದ್ವಾಂಸರ ಗಾಯನ ಕಚೇರಿ ನಡೆಯಿತು. ಮೈಸೂರು ಆಸ್ಥಾನ ವಿದ್ವಾನ್ ದೇವೇಂದ್ರಪ್ಪನವರೂ, ಉಡುಪಿ ಲಕ್ಷ್ಮೀಬಾಯಿಯವರೂ, ಅನಂತ ಉಪಾಧ್ಯಾಯರೂ ಪಾರ್ಟಿ ಸಹಿತ ಬಂದು ಅಮೋಘ ಸಂಗೀತ ಕಚೇರಿ ನಡೆಸಿದರು. ವಿದ್ವಾನ್ ಶಿರ್ಕಳ ನಾರಾಯಣರೂ ಪಾರ್ಟಿ ಸಹಿತ ಬಂದು ನುಡಿಸಿದರು. ತಾ. 24. 25ರಲ್ಲಿ ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಕೂಟದ ಮಂಬರುಗಳ ಕೂಡುವಿಕೆಯಿಂದ ಯಕ್ಷಗಾನ ಸಭೆಯು ಯಶಸ್ವಿಯಾಗಿ ನೆರವೇರಿತು, ಈ ಸಂದರ್ಭದಲ್ಲಿ ಹೆಗ್ಗಡೆಯವರು ಸ್ತ್ರೀ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ನೂ,ನ್ನೂರು ರೂಪಾಯಿ ದಾನಮಾಡಿದರು

1942ನೇ ಚಳಿಗಾಲದೊಳಗೆ ಯುದ್ಧದ ಭವಿಷ್ಯ ನಿಶ್ಚಯ.

ಯಾವಾಗಲೂ ವಸಂತ ಋತುವು ಧಾಳಿ ನಡಿಸುವ ಸಮಯ. ಈ ಯುದ್ಧದ ಅತಿ ದೊಡ್ಡ ಸಮರಗಳು ಈ ವಸಂತ ಮತ್ತು ಶೀತಕಾಲಗಳಲ್ಲಿ ನಡೆಯುವುವೆಂಬುದರಲ್ಲಿ ಸಂದೇಹವಿಲ್ಲ. ಇತ್ತಂಡದವರಿಗೂ ಈಗಣ ರೀತಿಯ ಯಾಂತ್ರಿಕ ಯುದ್ಧವನ್ನು ದೀರ್ಘಕಾಲ ನಡಿಸಲು ಸಾಧ್ಯವಿಲ್ಲ. ಜರ್ಮನಿಗೆ ಪೆಟ್ರೋಲಿನ ಆಶಯವು ಕಡಿಮೆಯಾಗಿರುವುದರಿಂದ ಅದು ಈ ವರ್ಷದ ಚಳಿಗಾಲದೊಳಗೆ ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನ ಮಾಡುವುದೆಂಬುದು ನಿಶ್ಚಯ. ಮೂರು ನಾಲ್ಕು ವರ್ಷಗಳ ಯುದ್ಧದ ಪರಿಸ್ಥಿತಿಯಿಂದ ವಿಜಯಿ ಜರ್ಮನ್ ಜನಾಂಗ ಮತ್ತು ಸೇನೆಯು ಕೂಡಾ ಬೇಸರಗೊಂಡು ಅದನ್ನು ಆದಷ್ಟು ಬೇಗನೆ ಕೊನೆಗೊಳಿಸಲು ಹಾತೊರೆಯುತ್ತಿದೆ. ಆದುದರಿಂದ ಹಿಟ್ಲರರ ವಸಂತದ ಧಾಳಿ ಮತ್ತು ಶೀತಕಾಲದ ಪ್ರಚಂಡ ಸಮರದಿಂದಲೇ ಈ ಯುದ್ಧದ ಭವಿಷ್ಯವು ನಿಶ್ಚಯವಾಗುವುದೆಂದು ಹೇಳಬಹುದು.

ಪೂರ್ವ ರಣರಂಗದಲ್ಲಿ, ಸ್ಟೆಲಿನರು ಹಿಟ್ಲರರ ವಸಂತದ ಧಾಳಿಯನ್ನು ನಿರೀಕ್ಷಿಸುತ್ತಾ ಕೂತುಕೊಳ್ಳದೆ ಚಳಿಗಾಲದಲ್ಲೇ ಪ್ರತಿಧಾಳಿ ನಡಿಸಿದ ಪರಿಣಾಮವಾಗಿ ಜರ್ಮನ್ ಸೇನೆಯು ಸುಮಾರು 200 ಮೈಲು ಹಿಂದಕ್ಕಟ್ಟಲ್ಪಟ್ಟಿರುವುದು. ಕರಗುವ ಹಿಮದಲ್ಲಿ ಹೋರಾಟವು ಬಹಳ ಕಷ್ಟವಾದರೂ ಕೆಂಪು ಸೇನೆಯು ಎಡೆಬಿಡದೆ ಪ್ರಬಲ ಹೋರಾಟ ನಡಿಸಿ ನಾಝಿ ಸೇನೆಯನ್ನು ಬಗ್ಗು ಬಡಿಯುವ ಪ್ರಯತ್ನ ಮಾಡುತ್ತಿರುವುದು. ಹಿಟ್ಲರರು ತನ್ನ ವಸಂತದ ಧಾಳಿಯ ಸರಬರಾಯಿ ಕೇಂದ್ರವಾಗಿ ತಯಾರುಮಾಡಿದ್ದ ಉಕ್ರೈನಿನ ಪ್ರಾಮುಖ್ಯ ಪಟ್ಟಣವಾದ ಸ್ಟೆಲಿನೋಪಲ್ ಸೋವಿಯೆಟ್ ಸೈನಿಕರು ಹೋರಾಟ ನಡಿಸುತ್ತಿರುವರು ವ್ಯಾಸ್ಮದಲ್ಲಿ ದೊಡ್ಡ ಜರ್ಮನ್ ಸೇನೆಯು ಆವರಿಸಲ್ಪಟ್ಟಿದೆ. ಅದಕ್ಕೆ ಸ್ಮೊಲೆಂಕ್ಸಿನ ಒಂದೇ ಒಂದು ರೈಲ್ವೇ ಮಾರ್ಗದ ಸಂಬಂಧ ಮಾತ್ರ ಇರುತ್ತದೆ. ಹಿಟ್ಲರರು ರಿಸರ್ವ್ ಸೇನೆಯನ್ನು ಅತ್ಯವಸರದಿಂದ ರಣರಂಗಕ್ಕೆ ಕಳುಹಿಸಬೇಕಾಗಿ ಬಂದಿದೆ. ಇಂದೀಗ ಮರ್ಮಾಂಕ್ಸಿನಿಂದ ಕ್ರೈಮಿಯದ ವರೆಗಿನ 2000

ಮಿತ್ರರಾಷ್ಟ್ರಗಳು ಗೆಲ್ಲಬೇಕಾದರೆ ಯುದ್ಧಕ್ರಮವನ್ನು ಬದಲಿಸಬೇಕು

ವಸಂತಋತುವಿನಲ್ಲಿ ಜರ್ಮನಿಯ ಮೇಲೆ ಪಶ್ಚಿಮದಿಂದ ಧಾಳಿ ನಡಿಸಲ್ಪಡುವುದೇ?

ಮೈಲುದ್ದ ರಣರಂಗದಲ್ಲಿಯೂ ಭೀಷಣ ಹೋರಾಟ ಆರಂಭವಾಗಿದೆ. ಜರ್ಮನ್ ವಿಮಾನ ಪಡೆಯು ಕೂಡಾ ಪ್ರಬಲ ಹೋರಾಟವನ್ನಾರಂಭಿಸಿದೆ. ಆದರೆ ಇಷ್ಟರ ವರೆಗಣ ಹೋರಾಟಗಳಲ್ಲಿ ಕೆಂಪು ಸೇನೆಯ ಕೈಯೇ ಮೇಲಾಗಿದೆ.

ಜರ್ಮನ್ ರಿಸರ್ವ್ ಸೇನೆಗಳೇನೂ ಅಮಿತವಾಗಿರುವುದಿಲ್ಲ. ರುಮೇನಿಯ, ಹಂಗೇರಿ ಮತ್ತು ಬಲ್ಗೇರಿಯಗಳು ದೊಡ್ಡ ಸೇನೆಗಳನ್ನು ಕಳುಹಿಸಬೇಕೆಂದು ಹಿಟ್ಲರರು ಒತ್ತಾಯಮಾಡುತ್ತಿದ್ದಾರೆ. ಆದರೆ ರುಮೇನಿಯ ಮತ್ತು ಹಂಗೇರಿಗಳು ಟ್ರಾನ್ಸಿಲ್ವಾನಿಯದ ಕುರಿತು ತಮ್ಮ ಹಳೆಯ ಕಲಹವನ್ನಾರಂಭಿಸಿವೆ. ತಾವು ಹಂಗೇರಿಗಿಂತಲೂ ಹೆಚ್ಚಿನ ಸೇನೆ ಕಳುಹಿಸಿರುವೆವೆಂದು ರುಮೇನಿಯನರು ವಾದಿಸತೊಡಗಿರುತ್ತಾರೆ. ರುಮೇನಿಯದ ಸರ್ವಾಧಿಕಾರಿ ಜನರಲ್ ಅಂಟೊನೆಸ್ಕೋವರ ಕುರಿತು ಜನವಿರೋಧವು ಬೆಳೆಯಹತ್ತಿದೆ. ಹಂಗೇರಿಯು ಬರಗಾಲದ ಭೀತಿಯಿಂದ ತಲ್ಲಣಗೊಂಡಿರುತ್ತದೆ. ಬಲ್ಗೇರಿಯವು ರಷ್ಯದಲ್ಲಿ ಹೋರಾಟ ನಡಿಸಲು ಸೇನೆ ಕಳುಹಿಸಲು ಸಿದ್ಧವಿಲ್ಲ. ಆದುದರಿಂದಲೇ ಹಿಟ್ಲರರು ಬಲ್ಗೇರಿಯದ ಅರಸ ಬೋರಿಸರನ್ನು ಬರ್ಲಿನಿಗೆ ಕರೆದಿರುತ್ತಾರೆ. ಹಿಟ್ಲರರು ರಷ್ಯದ ಮೇಲೆ ಧಾಳಿ ನಡಿಸುವಾಗಲೇ ಮಧ್ಯಪೂರ್ವದಲ್ಲೂ ಮುಂದೊತ್ತುವರೋ ಎಂಬ ಸಂದೇಹಕ್ಕಾಸ್ಪದವಾಗಿದೆ. ಜನರಲ್ ರೊಮ್ಮೆಲರು ಹೆಚ್ಚಿನ ಸೇನಾ ಸಹಾಯ ಪಡೆಯುತ್ತಿದ್ದಾರೆ. ಮಾಲ್ಟದ ಮೇಲೆ ಎಡೆಬಿಡದೆ ವಿಮಾನಧಾಳಿ ನಡೆಯುತ್ತಿದೆ. ರೊಮ್ಮೆಲರು ಐಗುಪ್ತ ಕಡೆಗೆ ಮುಂದೊತ್ತಲೆತ್ನಿಸುವಾಗ ಹಿಟ್ಲರರು ... ಮತ್ತು ಸಿರಿಯಗಳ ಮೇಲೆ ಧಾಳಿ ನಡಿಸಬಹುದೆಂಬ ಅನುಮಾನಕ್ಕಾಸ್ಪದವಾಗಿದೆ. ಪೂರ್ವದಿಂದ ಜಪಾನರು ಶೀಘ್ರವಾಗಿ ಮುಂದೊತ್ತುವಾಗ ಹಿಟ್ಲರರು ಕೂಡಾ ಮಧ್ಯ ಪೂರ್ವದಲ್ಲಿ ಭರದಿಂದ ಮುನ್ನಡೆದು ಅವರೊಂದಿಗೆ ಸೇರುವ ಪ್ರಯತ್ನ ನಡಿಸಬಹುದೆಂದು ಊಹಿಸಲಾಗಿದೆ. ಇದರಿಂದ ಬ್ರಿಟನರ ಮಧ್ಯಪೂರ್ವದ ರಕ್ಷಣಾಪಡೆಯು ಕಡಿಯಲ್ಪಡುವಂತಾಗಿ ಮಧ್ಯಪೂರ್ವದ ಮತ್ತು ಕೊಕಸಸಿನ ಎಣ್ಣೆ ಗಣಿಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುವುದು. ಮಾತ್ರವಲ್ಲದೆ ಅಮೇರಿಕದಿಂದ ರಷ್ಯಕ್ಕೆ ಮತ್ತು ಹಿಂದುಸ್ಥಾನ ಮತ್ತು ಚೈನಗಳಿಗೆ ಸಾಮಾಗ್ರಿಗಳು ಬರುವ ಪ್ರಾಮುಖ್ಯ ರಸ್ತೆಗಳು ಕಡಿದುಹಾಕಲ್ಪಡುವವು. ಆದರೆ ಈ ಮಾರ್ಗದಲ್ಲಿ ಟರ್ಕಿಯು ಹಿಟ್ಲರರಿಗೆ ದೊಡ್ಡ ಆತಂಕವಾಗಿರುತ್ತದೆ.

ಹಿಟ್ಲರರ ಮಧ್ಯ ಪೂರ್ವದ ಧಾಳಿಯ ಊಹಾಪೋಹಗಳಂತಿರಲಿ. ತನ್ನ ಹೆಚ್ಚಿನ ಸೇನಾಶಕ್ತಿಯನ್ನುಪಯೋಗಿಸಿ ಅವರು ರಷ್ಯದ ಮೇಲೇರಿ ಹೋಗುವರೆಂಬುದರಲ್ಲಿ ಸಂದೇಹವೇ ಇಲ್ಲ. ಈ ಸಂಧಿಕಾಲದಲ್ಲಿ ಬ್ರಿಟನು ಮತ್ತು ಅಮೇರಿಕಗಳಿಂದ ರಷ್ಯವು ಎಂದಿಗಿಂತಲೂ ಹೆಚ್ಚಿನ ಸಹಾಯವನ್ನು ನಿರೀಕ್ಷಿಸುತ್ತಿರುವುದು. ಅವು ಪಶ್ಚಿಮದಲ್ಲಿ ಇನ್ನೊಂದು ರಣರಂಗವನ್ನು ತೆರೆಯುವ ಕಾಲವೀಗ ಬಂದಿದೆ. ಆಗ ಮಾತ್ರ ಹಿಟ್ಲರರ ಶೀಘ್ರ ಪತನವು ಸಾಧ್ಯವಿದೆಯೆಂದು ಸ್ಟೆಲಿನ್, ಲಿಟ್ವಿನೊಫ್ ಮತ್ತು ಮೈಸ್ಕಿಯವರು ಸ್ಪಷ್ಟವಾಗಿ ಎಚ್ಚರಿಸಿರುವರು.

"ಯುದ್ಧದಲ್ಲಿ ಗೆಲ್ಲಲು, ಮೊದಲಾಗಿ ಮೇಲೇರಿ ಹೋಗಿ ಹೋರಾಟ ನಡಿಸುವ ಶಕ್ತಿಯು ಅತ್ಯಗತ್ಯ. ಇನ್ನೂ ಅದು ವೈರಿಯದೇ ಆಗಿರುವುದು. ಇನ್ನಾದರೂ ಮಿತ್ರರಾಷ್ಟ್ರಗಳು ತಮ್ಮ ಯುದ್ಧದ ಕ್ರಮವನ್ನು ಬದಲಾಯಿಸುವುದು ಅತ್ಯಾವಶ್ಯಕ" ಎಂದು ಪೋಲಂಡಿನ ಪ್ರಧಾನ ಮಂತ್ರಿ ಜನರಲ್ ಸಿಕೊರ್‍ಸ್ಕಿಯವರು ಅಮೇರಿಕದಲ್ಲಿ ಹೇಳಿರುವರು. ಜರ್ಮನರು ವಿಜಯ ಹೊಂದಬೇಕಾದರೆ ಕೊಕಸಸಿನ ಎಣ್ಣೆ ಪ್ರದೇಶವನ್ನು ಪಡೆಯುವುದು ಅಗತ್ಯವಾಗಿದೆ. ಅದಕ್ಕಾಗಿ ಅವರೀಗ ದಕ್ಷಿಣದಲ್ಲಿ ಹೆಚ್ಚಿನ ಸೇನೆಯನ್ನು ಸಂಗ್ರಹಿಸಿರಬಹುದು. ಈ ಸಂದರ್ಭದಲ್ಲಿ ಇಂಗ್ಲೆಂಡು ಮತ್ತು ಅಮೇರಿಕಗಳು ಎರಡನೇ ರಣರಂಗ ತೆರೆದು ರಷ್ಯಕ್ಕೆ ನೆರವಾಗಬೇಕು. ರಷ್ಯಕ್ಕೆ ಯಥಾರ್ಥವಾದ ಸಹಾಯಮಾಡಬೇಕೆಂದು ಕೂಡಾ ಜನರಲ್ ಸಿಕೊರ್‍ಸ್ಕಿಯವರು ಎಚ್ಚರಿಸಿರುವರು.

ರಕ್ಷಣೆಯೇ ಅತ್ಯುತ್ತಮ ಯುದ್ಧತಂತ್ರವೆಂಬ ಹಳೆಯ ಯುದ್ಧಕ್ರಮವು, ಇಂದಿನ ಯಾಂತ್ರಿಕ ಮಿಂಚು ಯುದ್ಧವೆದುರಲ್ಲಿ ನಿರರ್ಥಕವಾಗಿದೆ. ಮಿಂಚು ಧಾಳಿಯನ್ನು ಪ್ರತಿಧಾಳಿಯಿಂದ ಮಾತ್ರ ಪ್ರತಿಭಟಿಸಲು ಸಾಧ್ಯವಿದೆ. ಪ್ರಥಮವಾಗಿ ಧಾಳಿ ನಡಿಸುವುದರಿಂದ ಇಂದಿನ ಯುದ್ಧಕ್ರಮದಲ್ಲಿ ಕೆಲವು ಪ್ರಾಮುಖ್ಯ ಅನುಕೂಲತೆಗಳಿವೆ. ಮಿತ್ರರಾಷ್ಟ್ರಗಳು ಹಿಂದಿನ ಯುದ್ಧಕ್ರಮಗಳಿಗೇನೇ ಕಟ್ಟುಬಿದ್ದಿರುವಾಗ, ಜರ್ಮನಿ ಮತ್ತು ಜಪಾನುಗಳು ಧಾಳಿಕಾರಕ ನವೀನ ಹೋರಾಟದಿಂದ ಶೀಘ್ರ ವಿಜಯಗಳನ್ನು ಪಡೆದಿರುತ್ತವೆ. ಆದರೆ ಮಿತ್ರರಾಷ್ಟ್ರಗಳು ಈ ವರೆಗೂ ಅಂತಹ ಸಾಹಸಮಾಡಿದುವುದಿಲ್ಲ. ಅವುಗಳು ಇನ್ನಾದರೂ ತಮ್ಮ ಹಿಂದಿನ ಯುದ್ಧಕ್ರಮವನ್ನು ಬಿಟ್ಟು ಶೀಘ್ರ ಧಾಳಿಕಾರಕ ಯುದ್ಧ ನಡಿಸುವ ಸಾಹಸಕ್ಕೆ ಮುಂದಾಗದಿದ್ದರೆ ಅವು ಬೇಗನೆ ಜಯ ಹೊಂದುವ ಸಂಭವ ತೋರುವುದಿಲ್ಲ.

ಉತ್ತರದಲ್ಲಿ ನೋರ್ವೇಯಿಂದ ದಕ್ಷಿಣದಲ್ಲಿ ಪೈರೆನಿಸಿನ ವರೆಗೆ ಬ್ರಿಟನಿಗೆ ಧಾಳಿ ನಡಿಸಲು ಸಾಧ್ಯವಿದೆ ಮತ್ತು ಅನುಕೂಲತೆಯಿದೆ. ರಷ್ಯ, ಇಂಗ್ಲೆಂಡು ಮತ್ತು ಅಮೇರಿಕಗಳು ಯುದ್ಧದ ವಿಷಯದಲ್ಲಿ ಇನ್ನೂ ಹೆಚ್ಚಿನ ಸಹಕಾರ ಪಡೆಯುವ ಅವಶ್ಯವಿದೆ. ಅವುಗಳು ಸಂಯುಕ್ತ ಯುದ್ಧಕೂಟವೊಂದನ್ನು ಸ್ಥಾಪಿಸಿ ಹೋರಾಟದ ರೀತಿನೀತಿಯನ್ನು ನಿಶ್ಚೈಸತಕ್ಕದ್ದು. ಇಂಗ್ಲೆಂಡಿನಲ್ಲೀಗ ಚೆನ್ನಾಗಿ ತರಬೇತಾಗಿರುವ ಪ್ರಬಲ ವಿಮಾನ ಪಡೆಯಿದೆ; ಸುಸಂಘಟಿತವಾದ ದೊಡ್ಡ ಸೇನೆಯಿದೆ. ಹೋರಾಟವೇನೂ ಮಾಡದೆ ಅದನ್ನು ಹಾಗೆಯೇ ಇರಿಸುವುದರಿಂದ ಅದರ ಯುದ್ಧೋತ್ಸಾಹ ಮತ್ತು ಶಕ್ತಿಯು ಹೆಚ್ಚುವ ಹಾಗಿಲ್ಲ, ಮಾತ್ರವಲ್ಲದೆ ಚಳಿಗಾಲದ ಧಾಳಿಯಿಂದ ರಷ್ಯವು ಹೆಚ್ಚಿನ ಸೇನಾನಷ್ಟವನ್ನು ಹೊಂದಿದೆ. ಈ ಸಂದರ್ಭದಲ್ಲಿ ಪಶ್ಚಿಮದಲ್ಲಿ ಎರಡನೇ ರಣರಂಗವೊಂದನ್ನು ತೆರೆಯುವುದರಿಂದ ಮಾತ್ರ ... ಸಹಾಯವಾಗಿ ಹಿಟ್ಲರರಜೀವನ್ಮರಣ ಧಾಳಿಯ ಪ್ರಚಂಡ ಶಕ್ತಿಯನ್ನು ಕಡಿಮೆಮಾಡಿದಂತಾಗುವುದು. ಬ್ರಿಟನು ಸುಮ್ಮನಿರದೆ ಜರ್ಮನಿಯ ಮೇಲೆ ಸೇನಾಧಾಳಿಯ ಸಾಹಸ ನಡಿಸಬೇಕೆಂಬ ಅಭಿಪ್ರಾಯವು ಇಂಗ್ಲೆಂಡಿನಲ್ಲಿ ಬಲವಾಗುತ್ತಿದೆ. ಬ್ರಿಟಿಷ್ ಸರಕಾರವು ಆ ಕುರಿತು ಮೌನಧಾರಣೆ ಮಾಡಿರುವುದಾದರೂ ಒಳಗಿಂದೊಳಗೆ ಅದಕ್ಕಾಗಿ ಸಿದ್ಧತೆ ಮಾಡುತ್ತಿರುವಂತಿದೆ. ವಸಂತದಲ್ಲಿ ಹಲವು ಆಶ್ಚರ್ಯಗಳನ್ನು ನಿರೀಕ್ಷಿಸಬಹುದಾಗಿದೆ. ವೈರಿಯಿಂದ ಮಾತ್ರವಲ್ಲದೆ ಮಿತ್ರರಾಷ್ಟ್ರಗಳಿಂದಲೂ ಅವನ್ನು ನಿರೀಕ್ಷಿಸಬಹುದೆಂದು ಆಶಿಸಬಹುದೇ?

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವಾತ್ಸ್ಯಾಯನರು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ಬಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 400 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

ಜೀವನ ಟ್ರೇಡಿಂಗ್ ಕಂಪೆನಿ

260. ತೈನಾಲಜಾರ್ ರೋಡ್, ಮದರಾಸ್.

SEASON DEPOSITS

are now accepted at all our offices, at 4% per annum, for 4 or more months, maturing on 31st July, 1942.

ತಾತ್ಕಾಲಿಕ ಠೇವಣಾತಿಗಳು

ವಾರ್ಷಿಕ ಸೇಕಡಾ 4ರ ದರದಲ್ಲಿ, 4ಯಾ ಹೆಚ್ಚು ತಿಂಗಳುಗಳಿಗೆ 1942ನೇ ಜುಲಾಯಿ 31ಕ್ಕೆ ಅವಧಿಯಾಗುವಂತೆ ನಮ್ಮ ಎಲ್ಲಾ ಶಾಖೆಗಳಲ್ಲೂ ಸ್ವೀಕರಿಸಲ್ಪಡುವವು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

Degrees Books. Medicines

Free H. L. M. S, M. B. H. M. D. etc Free Homeo-Ayur-Unani-Naturo degree By post also—Practitioners also get soon Homeo Materiamedica Rs. 5 Homeo practice book Rs. 4, Insanity Cure Pills Rs. 10 Enclose 2 annas stamp —

Principal Indian Homeopath Institute & Society (Govt. Regd.)

P.O. Mahuva, (Kathiawar Dt. India.)

Sidha-Kalpa Kavach (Regd.)

No 3 Rs 2. No 2 Rs 5. No 1 Rs. 7. Special Rs. 10, Extra Special Rs 17, for love marriage health, wealth, Ask any six questions with M. O. Re. 1/- and get correct answers by return post Life reas Rs. phle No V. P. P. Send M. O Fred P. O.ts. Prof. Dr N. H. Chhathar Jnanpath Mahuva (Kathiawar India.)

★ ಬ್ರಿಟಿಷ್ ಮಂತ್ರಿ ಮಂಡಲದ ಸೂಚನೆಗಳು ★

ಸರ್. ಸ್ಟಾಫೋರ್ಡ್ ಕ್ರಿಪ್ಸರು ಹಿಂದೀ ಬಿಕ್ಕಟ್ಟನ್ನು ನಿವಾರಿಸುವ ಬಗ್ಗೆ ತನ್ನೊಂದಿಗೆ ತಂದಿರುವ ಬ್ರಿಟಿಷ್ ಸರಕಾರದ ಸೂಚನೆಗಳ ಮುಖ್ಯಾಂಶಗಳು ಈ ಕೆಳಗಣಂತಿರುತ್ತವೆ.

1. ಯುದ್ಧಾಂತ್ಯದಲ್ಲಿ ಹಿಂದುಸ್ಥಾನವು, ಸ್ವತಂತ್ರ ಸರಕಾರವುಳ್ಳ ಬ್ರಿಟಿಷ್ ಸಾಮಂತ ರಾಜ್ಯಗಳಷ್ಟು ಅಥವಾ ಗ್ರೇಟ್ ಬ್ರಿಟನಿನಷ್ಟೇ ಅಧಿಕಾರ ಮತ್ತು ಸ್ಥಾನವಿರುವ ರಾಜ್ಯವಾಗತಕ್ಕದ್ದು. ಇಚ್ಛೆಪಟ್ಟಲ್ಲಿ ಬ್ರಿಟನಿನಿಂದ ಬೇರೆಯಾಗುವ ಹಕ್ಕು ಕೂಡಾ ಅದಕ್ಕಿರುವುದು.

2. ಯುದ್ಧಾನಂತರ, ಪ್ರಾಂತಗಳ ಪ್ರಕೃತದ ಮತದಾರ ಪಟ್ಟಿಯ ಆಧಾರದಿಂದ ಸರ್ವ ಸಾಮಾನ್ಯ ಚುನಾವಣೆಯು ನಡಿಸಲ್ಪಡುವುದು.

3. ಪ್ರಾಂತಿಕ ಶಾಸನಸಭೆಯ ಕೌನ್ಸಿಲುಗಳ ಸದಸ್ಯರು ಮತ್ತು ಹಿಂದೀ ಸಂಸ್ಥಾನಗಳ ಕೆಲ ಮಂದಿ ಪ್ರತಿನಿಧಿಗಳು ಸೇರಿ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯು ರಚಿಸಲ್ಪಡುವುದು. ರಾಜ್ಯಾಂಗ ರಚನೆಯ ತಯಾರಿಯ ಬಗ್ಗೆ ಈ ಸದಸ್ಯರುಗಳು ಮತದಾರರಾಗಿ, ಪ್ರಾಂತಿಕ ಎಸೆಂಬ್ಲಿ ಸದಸ್ಯರ ಸಂಖ್ಯೆಯ ಹತ್ತನೇ ಒಂದಂಶ ಮಂದಿಯನ್ನು ಆರಿಸತಕ್ಕದ್ದು. ಇದರಲ್ಲಿ ಹಿಂದೀ ಸಂಸ್ಥಾನಗಳಿಗೆ ಅವುಗಳ ಜನ ಸಂಖ್ಯೆಯ ಪ್ರಮಾಣದಲ್ಲಿ ಪ್ರಾತಿನಿಧ್ಯ ಕೊಡಲಾಗುವುದು. ಆದರೆ ಅವರಿಂದ ಅವರು ಫೆಡರಲ್ ಡೊಮಿನಿಯನಿಗೆ ಸೇರಲೇ ಬೇಕೆಂದೇನೂ ಇಲ್ಲ. ಪ್ರಾಂತಿಕ ಎಸೆಂಬ್ಲಿಗಳು, ರಾಜ್ಯಾಂಗ ರಚನೆಯ ಬಗ್ಗೆ ಪ್ರತಿನಿಧಿಗಳನ್ನಾರಿಸುವ ಸಂಬಂಧವಾಗಿ ಗಣನೀಯವಾದ ವಿಷಯವೆಂದರೆ, ಆಯಾ ಸಮಾಜದ ಮೇರೆಗೆ ಪ್ರಾತಿನಿಧ್ಯವು ದೊರೆಯತಕ್ಕದ್ದು. ಹೀಗೆ ಅದರಲ್ಲಿ ಎಲ್ಲಾ ಪಕ್ಷಗಳವರಿಗೂ ಪ್ರಾತಿನಿಧ್ಯ ದೊರೆಯುವಂತಾಗಬೇಕು.

4. ಈ ಪ್ರತಿನಿಧಿಗಳು ಹಿಂದುಸ್ಥಾನದ ಮುಂದಿನ ರಾಜ್ಯಾಂಗ ರಚನೆಯನ್ನು ನಿಶ್ಚೈಸಬೇಕು

5. ಬಹುಪಕ್ಷೀಯ ಮತದಿಂದ ರಾಜ್ಯಾಂಗ ರಚನೆಯು ನಿಶ್ಚೈಸಲ್ಪಟ್ಟ ಮೇಲೆ, ಯಾವುದಾದರೊಂದು ಪ್ರಾಂತ ಯಾ ಪ್ರಾಂತಿಕ ಶಾಸನಸಭೆ ಕೌನ್ಸಿಲುಗಳಿಗೆ ಅದು ಅಸ್ವೀಕಾರ್ಯವೆಂದು ತೋರಿದರೆ ಆಗ ಆ ಪ್ರಾಂತವು ಸಂಪೂರ್ಣ ಸ್ವಾಯತ್ತತೆಯಿಂದ ಪ್ರತ್ಯೇಕವಾಗಿಯೇ ಇರಬಹುದು.

6 ಹೀಗೆ ಪ್ರತ್ಯೇಕವಾಗಿರಬಿಚ್ಛಿಸುವ ಪ್ರಾಂತಗಳು ಒಟ್ಟು ಸೇರಿ ನಡೆಯುವ ಆಲೋಚನೆ ಮಾಡಿದ ಪಕ್ಷದಲ್ಲಿ ಅದಕ್ಕಾಗಿ ಪ್ರತ್ಯೇಕ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ರಚಿಸಿ ರಾಜ್ಯಾಂಗ ರಚನೆಯನ್ನು ನಿಶ್ಚೈಸುವ ವಿಧಾನವು, ಅಖಿಲ ಭಾರತ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯಂತೆಯೇ ಆಗಿರುತ್ತದೆ.

7. ಕನ್‌ಸ್ಟಿಟ್ಯುವೆಂಟ್. ಎಸೆಂಬ್ಲಿ ಮತ್ತು ಚಕ್ರವರ್ತಿ ಸರಕಾರಗಳೊಳಗಣ ಒಪ್ಪಂದದ ಮೂಲಕ ಅವುಗಳೊಳಗಣ ಕೆಲವು ವಿಷಯಗಳು ನಿಯತಗೊಳಿಸಲ್ಪಡುವವು.

8. ಬೇರೆಯಾಗಿ ಹೋಗುವ ಪ್ರಾಂತಗಳು ಬೇಕಾದಾಗಲಾದರೂ ಪುನಹ ಬಂದು ಸೇರಬಹುದು. ಆದರೆ ಒಮ್ಮೆ ಸೇರಿದ ಪ್ರಾಂತಗಳಿಗೆ ಅನಂತರ ಪ್ರತ್ಯೇಕವಾಗುವ ಹಕ್ಕಿರುವುದಿಲ್ಲ.

9. ದೇಶ ರಕ್ಷಣೆಯ ಜವಾಬ್ದಾರಿಯು ಚಕ್ರವರ್ತಿ ಸರಕಾರದ್ದಾಗಿರುತ್ತದೆ. ಸರಕಾರದ ಈ ಘೋಷಣೆಯು ಸ್ವೀಕರಿಸಲ್ಪಟ್ಟಲ್ಲಿ ವೈಸರಾಯರದ್ದಾಗುವುದು.

10, ವೈಸರಾಯರ ಅಭಿಮತ ಪಡೆದು ದೇಶದೊಳಗಣ ವ್ಯವಸ್ಥೆಯಾಗತಕ್ಕದ್ದು

11, ಈ ಸೂಚನೆಗಳನ್ನು ಹಿಂದೀಯರು ಸ್ವೀಕರಿಸಿದ ಪಕ್ಷದಲ್ಲಿ ಅವರು ಯುದ್ಧ ಸಮಯದಲ್ಲಿ ದೇಶದ ಮಂತ್ರಾಲೋಚನೆಯಲ್ಲಿ ಮತ್ತು ಬ್ರಿಟಿಷ್ ಯುದ್ಧ ಮಂತ್ರಿ ಮಂಡಲದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಕೊನೆಯ ಭಾಗದಲ್ಲಿ ಈ ಅಂತರದ ಏರ್ಪಾಡಿನ ಕುರಿತು ಸೂಚಿಸಲಾಗಿದೆ. ಈಗ ಹಿಂದು ದೇಶವನ್ನೆದುರಿಸುತ್ತಿರುವ ಸಂದಿಗ್ಧ ಕಾಲದಲ್ಲಿ ಮತ್ತು ಹೊಸ ರಾಜ್ಯಾಂಗ ರಚನೆಯು ನಿಶ್ಚಿತವಾಗುವ ವರೆಗೆ, ಹಿಂದುಸ್ಥಾನದ ರಕ್ಷಣೆಯ ಸಂಪೂರ್ಣ ಜವಾಬ್ದಾರಿಯನ್ನು ಚಕ್ರವರ್ತಿ ಸರಕಾರವು ವಹಿಸಿಕೊಳ್ಳತಕ್ಕದ್ದು. ದೇಶದ, ಬ್ರಿಟಿಷ್ ಕೋಮನ್‌ವೆಲ್ತಿನ ಮತ್ತು ಸಂಯುಕ್ತ ರಾಷ್ಟ್ರಗಳ ಮಂತ್ರಾಲೋಚನೆಯಲ್ಲಿ ಹಿಂದೀ ಜನತೆಯ ಪ್ರಾಮುಖ್ಯ ಪಕ್ಷಗಳ ಮುಖಂಡರ ಶೀಘ್ರವಾದ ಮತ್ತು ಫಲಕಾರಿಯಾದ ಸಹಕಾರ ಪಡೆಯಬೇಕೆಂದು ಚಕ್ರವರ್ತಿ ಸರಕಾರವು ಅಪೇಕ್ಷಿಸುತ್ತದೆ ಮತ್ತು ಅವರನ್ನು ಆಮಂತ್ರಿಸುತ್ತದೆ. ಅದರಿಂದ ಹಿಂದುಸ್ಥಾನದ ಭಾವಿಸ್ವಾತಂತ್ರ್ಯಕ್ಕೆ ಅತ್ಯಗತ್ಯ ಮತ್ತು ಪ್ರಾಮುಖ್ಯವಾದ ಕರ್ತವ್ಯ ನಿರ್ವಹಣದಲ್ಲಿ ಹಿಂದೀ ಮುಖಂಡರು ತಮ್ಮ ಆಸಕ್ತಿಯ ಮತ್ತು ವಿಧಾಯಕ ಸಹಾಯವನ್ನೀಯುವಂತಾಗುವುದು

ರಾಜ್ಯಾಂಗ ರಚನೆ ತಯಾರಿಯ ಬಗ್ಗೆ ನಿರ್ಮಿಸಲ್ಪಡುವ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿ ಮತ್ತು ಅದಕ್ಕೆ ಪ್ರತಿನಿಧಿಗಳನ್ನಾರಿಸುವ ಮತದಾರ ವರ್ಗದಲ್ಲಿ ಹಿಂದೀ ಸಂಸ್ಥಾನಗಳೂ ಭಾಗವಹಿಸುವ ಏರ್ಪಾಡು ಮಾಡಲಾಗುವುದು. ಅದು ಹೊರತು, ಹಿಂದೀ ರಾಜ್ಯಾಂಗ ರಚನೆಗೆ ಒಂದು ದೇಶೀಯ ಸಂಸ್ಥಾನವು ಸೇರಿ ನಡೆಯಲಿ ನಡೆಯದಿರಲಿ, ಹೊಸ ರಾಜ್ಯಾಂಗ ರಚನೆಯಂತೆ ಅಗತ್ಯವಾಗುವ ಬದಲಾವಣೆಗಳನ್ನು ತಮ್ಮ ಒಪ್ಪಂದ ಕರಾರುಗಳಲ್ಲಿ ಮಾಡಲು ಅದು ಸಿದ್ಧವಿರಬೇಕು. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳಿಗೆ, ಬ್ರಿಟಿಷ್ ಇಂಡಿಯಾದ ಪ್ರತಿನಿಧಿಗಳಷ್ಟೇ ಅಧಿಕಾರವಿರುವುದು.

ಸಂಪೂರ್ಣ ಆಡಳಿತ ಜವಾಬ್ದಾರಿಯನ್ನು ಬ್ರಿಟಿಷರಿಂದ ಹಿಂದೀಯರಿಗೆ ಬದಲಾಯಿಸುವ ಸಂದರ್ಭದಲ್ಲಿ ಅಗತ್ಯವಿರುವ ಎಲ್ಲಾ ವಿಷಯಗಳೂ, ಹಿಂದೀ ರಾಜ್ಯಾಂಗ ರಚನೆಯನ್ನು ನಿಶ್ಚೈಸುವ ಸಭೆ ಮತ್ತು ಬ್ರಿಟಿಷ್ ಸರಕಾರಗಳೊಳಗಣ ಒಪ್ಪಂದದ ಸೂಚನೆಯಲ್ಲಿ ಸೇರಿರುತ್ತವೆ. ಜನಾಂಗಿಕ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರ ಕುರಿತು ಬ್ರಿಟಿಷ್ ಸರಕಾರವು ಕೊಟ್ಟಿರುವ ವಾಗ್ದಾನಗಳ ಮೇರೆಗೆ ಆ ಒಪ್ಪಂದದಲ್ಲಿ ತಕ್ಕ ವ್ಯವಸ್ಥೆ ಮಾಡಲಾಗುವುದು.

ಸರ್. ಸ್ಟಾಫೋರ್ಡ್ ಕ್ರಿಪ್ಸರು ಈ ಸೂಚನೆಗಳನ್ನು ಕಾಂಗ್ರೆಸ್, ಮುಸ್ಲಿಮ್ ಲೀಗ್, ಹಿಂದು ಮಹಾಸಭೆ ಮತ್ತು ಇತರ ಪಕ್ಷ ಹಾಗೂ ಜಾತಿಗಳ ಮುಖಂಡರಿಗೆ ತಿಳಿಸಿ ಅವರೊಡನೆ ಮಾತುಕತೆ ನಡಿಸಿರುವರು. ಬೇರೆ ಬೇರೆ ಪ್ರಾಂತ್ಯಗಳ ಹಿಂದಿನ ಮತ್ತು ಇಂದಿನ ಪ್ರಧಾನ ಮಂತ್ರಿಗಳೊಡನೆಯೂ ಮಾತಾಡಿರುವರು. ಮಹಾತ್ಮ ಗಾಂಧಿಯವರೊಡನೆ ದೀರ್ಘವಾಗಿ ಚರ್ಚಿಸಿರುವರು. ಕಾಂಗ್ರೆಸ್, ಮುಸ್ಲಿಮ್ ಲೀಗ್ ಮತ್ತು ಹಿಂದು ಮಹಾಸಭೆಗಳ ವರ್ಕಿಂಗ್ ಕಮಿಟಿಗಳು ಡಿಲ್ಲಿಯಲ್ಲಿ ಸೇರಿ ಕ್ರಿಪ್ಸರ ಸೂಚನೆಗಳನ್ನು ಪರಿಶೀಲಿಸುತ್ತಿವೆ. ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳನ್ನೂ ಕ್ರಿಪ್ಸರು ಕಂಡಿರುವರು. ಹಿಂದು ಮಹಾಸಭೆಯವರು, ಹಿಂದುದೇಶದ ವಿಭಜನೆಯ ಅಂಶಕ್ಕೆ ಬದ್ಧ ವಿರೋಧವಿರುವಂತಿದೆ. ಕಾಂಗ್ರೆಸಿನವರು ಕೂಡ್ಯ ಕ್ರಿಪ್ಸರ ಸೂಚನೆಗಳನ್ನು ಇದ್ದಕ್ಕಿದ್ದಂತೆ ಒಪ್ಪುವ ಸಂಭವ ತೋರುವುದಿಲ್ಲ.

1939 ಮತ್ತು 1942ರ ಸರ್. ಸ್ಟಾಫೋರ್ಡ್ ಕ್ರಿಪ್ಸರು.

(೪ನೇ ಪುಟದಿಂದ ಮುಂದರಿದುದು).

ಗೊಳಿಸಿಕೊಳ್ಳುವದರಲ್ಲಿ ಜಯಶೀಲರಾಗಿ ಬಾಲಚುಕ್ಕೆಯಂತೆ ಒಮ್ಮೆಯೇ ಬ್ರಿಟನಿನ ರಾಜಕೀಯದಲ್ಲಿ ಬೆಳಗಲಾರಂಭಿಸಿದರು. ರಷ್ಯ ಮತ್ತು ಜರ್ಮನಿಗಳೊಳಗೆ ಯುದ್ಧವಾದ ಮೇಲಂತೂ ಅವರ ಖ್ಯಾತಿ ಮತ್ತು ವರ್ಚಸ್ಸು ಮತ್ತಷ್ಟು ಹೆಚ್ಚಿತು. ಇಂದು ಹಿಂದುದೇಶವನ್ನೊಲಿಸಿಕೊಳ್ಳುವುದು ಬ್ರಿಟನಿಗೆ ಅತ್ಯಗತ್ಯವಾಗಿರುವಾಗ, ಅದಕ್ಕಾಗಿ ಮೊದಲೇ ತಯಾರಿಮಾಡಿರುವ ಕ್ರಿಪ್ಸರೇ ಬ್ರಿಟನ್ ರಾಯಭಾರಿಯಾಗಿ ಇಲ್ಲಿಗೆ ಕಳುಹಿಸಲ್ಪಟ್ಟಿರುವರು. ಕಾಲಚಕ್ರದ ಉರುಳಾಟವು ಕ್ಷಣಮಾತ್ರದಲ್ಲೆಂಬಂತೆ ಎಂತಹ ಅದ್ಭುತ ಮಾರ್ಪಾಟುಗಳನ್ನು ಮಾಡಿಬಿಡುವುದು! ಅಂದು ಕ್ರಿಪ್ಸರನ್ನು ಗಣ್ಯಮಾಡದ ಬಿಳಿ ಜನರು, ಸರಕಾರದ ಅಧಿಕಾರಿಗಳೇ ಮೊದಲಾದವರು ಇಂದವರ ಸ್ವಾಗತ ಮತ್ತು ಭೇಟಿಗಾಗಿ ಹಾತೊರೆಯುವಂತಾಗಿದೆ. ಇಂದು ಹಿಂದೀ ಸ್ವಾತಂತ್ರ್ಯದ ಕುರಿತು ಬ್ರಿಟಿಷ್ ಸರಕಾರದ ನಿಶ್ಚಿತ ಸೂಚನೆಗಳ ವಾಹಕರಾಗಿರುವ ಕ್ರಿಪ್ಸರು ತನ್ನ ಹಿಂದಿನ ಸಂದರ್ಶನ ಮತ್ತು ಆ ಸಂದರ್ಭದಲ್ಲಿ ಮಾಡಿರುವ ಹೇಳಿಕೆಗಳನ್ನು ಮರೆಯಲಾರರೆಂದು ಎಣಿಸಬಹುದೇ? ಅವರು ಅಂದು, ನಿರೂಪಿಸಿರುವ ಮೂಲ ಭೂತ ತತ್ವಗಳನ್ನಾದರೂ ಇಂದು ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಪಾಲಿಸುವಂತೆ ಹೃತ್ಪೂರ್ವಕ ಪ್ರಯತ್ನ ಮಾಡಿದರೆ ಹಿಂದುದೇಶಕ್ಕೆ ಸ್ವಾತಂತ್ರ್ಯದ ಯೋಗವು ಬಂದಿರುವುದೆಂದೇ ಹೇಳಬಹುದು. ಕ್ರಿಪ್ಸರಂತಹ ಉಜ್ವಲ ಯಥಾರ್ಥವಾದಿ, ಆದರ್ಶವಾದಿ ಮತ್ತು ತೀವ್ರಗಾಮಿಯನ್ನು, ಲೋಕದ ಎಂತಹ ಅಧಿಕಾರವಾದರೂ ಸ್ವಭಾವಸುಕ ಆತ್ಮವಂಚಕ ಪಾಲನೆಯಾದರೂ ಧೋರಣೆ ವಹಿಸುವಂತೆ ಮಾಡಲಾರದೆಂದು ನಿರೀಕ್ಷಿಸಲಾಗಿದೆ.

ಆಮಂತ್ರಣ ಪತ್ರಿಕೆಗಳು.

ಮದುವೆ, ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್ ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,

ಕೋಳದ ಪೇಟೆ ರಸ್ತೆ,

ಉಡುಪಿ.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE.—

Personal Loans & Overdrafts:	....	$7\frac{1}{2}$% p. a.
Usance Bills:	....	7 % p. a.
Trade Bills	....	6 % p. a.
Loans on Produce	....	$5\frac{1}{2}$% p. a.
Loans on Insurance Policies Stocks & shares	...	5 % p. a.
Loans on Gold	....	$4\frac{1}{2}$% p. a.

The above rates are for medium-sized loans The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

DIAMONDS! DIAMONDS!

K. R. K. SHET.

Opposite Govt College Hampankatta MANGALORE

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚಸ್ಸೃತ (first quality selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವ ಗಳೂ ವಿಕ್ರಯಿಸಲ್ಪಡುತ್ತವೆ ಕೊಂಡು ಕೊಳ್ಳುವವರಿಗೆ ಬಜಾರ ದಾರಣಗಿಂತ ೨ ಪರ್ಸೆಂಟಿಗೆ ಕಡಿಮೆಯಾಗುವಂತೆ ಸಪ್ಲೈ ಮಾಡಲು ಏರ್ಪಡಿಸಲ್ಪಡುತ್ತವೆ ಇದನ್ನು ಒಪ್ಪಿ ಸ್ವತಃ ಬಂದು ತಿಳಿಯಿರಿ ಇದರ ಶಾಪ ಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟೆ, ಮಂಗಳೂರು

— ಮಕ್ಕಳನ್ನು ಪಡೆಯ ಬೇಕೆ? ನೋಡಿ —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಮೂರು ವರ್ಷದವರೆಗೆ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿಒಂದು ವರ್ಷಕ್ಕೆ ಸರಿಯಾಗಿ ಹಡೆಯುತ್ತಾರೆ ಇಂಥ ಸ್ತ್ರೀಯರ ಬಿಳಿಸೆರಗು ಪ್ರದರರೋಗ, ಹೊಟ್ಟೆನೋವು ಮುಂತಾದ ರೋಗ ಗ್ರಸ್ತ ಸ್ತ್ರೀಯರು ಗರ್ಭಿಣಿಯಾಗುವದಿಲ್ಲ ಈ ಔಷಧವು ಸ್ತ್ರೀಯರಿಗೆ ಯಾವ ತರದ ಅಪಾಯವನ್ನುಂಟು ಮಾಡುವದಿಲ್ಲ ಮಧ್ಯಾಹ್ನಕ್ಕೆ ಊಟದ ಬಳಿಕ ತೆಗೆದುಕೊಳ್ಳಬೇಕು ಏಳು ದಿವಸ ಈ ಔಷಧವನ್ನು ತಪ್ಪದೆ ಸೇವಿಸಬೇಕು

ಪಥ್ಯ — ಹುಳಿ ಖಾರ ಬಿಡಬೇಕು ೭ ದಿನದ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೧—೦—೦ ಪೋಸ್ಟ್ ಚಾರ್ಜು ಬೇರೆ

ಮಾಲಕರು — ಹಾಲಪ್ಪ ಮಹೇಶಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧವು ಸಿಕ್ಕುತ್ತದೆ

ಹುಬ್ಬಳ್ಳಿ ಧಾರವಾಡ — ಹುಬ್ಬಳ್ಳಿ ಗದಗ ... ಲಿಂಗಪ್ಪ ಧ ರವ ಡ ... ದಾವಣಗೇರಿ — ದಾವಣಗೇರಿ ... ಬಳ್ಳಾರಿ ... ಗೋಕಾಕ — ಸಂಗಪ್ಪ ಶಿವಲಿಂಗಪ್ಪ ಆಂದ

ಸ್ವದೇಶಿ ಔಷಧ ಭಂಡಾರ ಕುಂಜಾಲು,

ಇವರ —

ಖ್ಯಾತಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ಔಷಧ)	0	12	0
ಆಮಲಕೀ ತೈಲ (ಸುಖನಿದ್ರೆಗೆ) ಸಣ್ಣದು	0	6	0
,, ದೊಡ್ಡದು	0	11	0
ಬ್ರಾಹ್ಮೀ ಹೇರ್ ಆಯಿಲ (ಪರಿಮಳ)	0	6	1
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	5	0
ಪಿಯೂಶಾ ಜನ (ಸಕಲ ಸ್ತ್ರೀರೋಗಗಳಿಗೆ)	1	4	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ದೊಡ್ಡದು	0	7	0
,, ,, ,, ಚಿಕ್ಕದು	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ

Swadeshi Oushadhi Bhandar

KUNJAL P. O S I

ಉಡುಪಿಯ ಏಜಂಟರು —

ನವಭಾರತ ಪುಸ್ತಕ ಭಂಡಾರ, ಉಡುಪಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

ಮುಖ್ಯ ಕಾರ್ಯಾಲಯ — ಕೋರ್ಟು ರಸ್ತೆ, ಉಡುಪಿ

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ ಶಿರ್ವಾ, ಕಾರ್ಕಳ, ಮತ್ತು ಕಿನ್ನಿಗೋಳಿ, ದ ಕನ್ನಡ

ತೆತ್ತ ಮೂಲಧನ	ರೂ 1,82,100
ಕ್ಷೇಮ ನಿಧಿಗಳು	ರೂ 1,82,100

ಕ್ಕೆ ಮೀರುತ್ತವೆ

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(ಹಿಂದಿನ ಪುಟದಿಂದ ಮುಂದುವರಿದುದು)

ಕನ್ಯಾ—ಇತರ ಎಲ್ಲಾ ಗ್ರಹರೂ ನಿಮ್ಮ ಕೈಬಿಟ್ಟರೂ ಗುರುವೊಬ್ಬನ ಬಲ ಮಾತ್ರ ಆಧಾರಸ್ತಂಭವಂತಿರುವುದರಿಂದ ನಿಮಗೆ ಕಷ್ಟವು ಸ್ಪಷ್ಟವಾಗಿ ಕೈಯಿಂದ ಬಿಡದು ದೇಹಾಲಸ್ಯದ ದೆಸೆಯಿಂದ ಶತ್ರುವರ್ಗದವರ ಪೀಡೆಯಿಂದಲೂ ನಿಮ್ಮ ಕಾರ್ಯೋತ್ಸಾಹವು ಭಂಗವಾಗುವದು ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪರಾಜಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯು ಕೊಡಲ್ಪಡುವದು ಆಯಕ್ಕಿಂತ ವ್ಯಯವು ಅಧಿಕವಿರುವುದರಿಂದ ಆ ದಿನವೂ ಬಡಜಣ ತಪ್ಪದು ವ್ಯಾಪಾರದಲ್ಲಿ ನಷ್ಟವಾದೀತು ಸಾಂಸಾರಿಕತೆ ಪತ್ರಯೋಗಗಳು ದಿನಹೋದಂತೆ ಹೆಚ್ಚಲಿದೆ ೧೦ ಈ ೨ ದಿನಗಳು ಗುರುಗ್ರಹದಿಂದ ವಿಜಯ ಲಾಭಕಾರಿಗಳಾಗಲಿವೆ

ತುಲಾ—ಬಹಳ ಸಮಯದಿಂದ ಕಷ್ಟ ನಷ್ಟಗಳಲ್ಲಿ ಸಿಲುಕಿದ್ದ ನೀವು ಈ ವಾರದಲ್ಲಿ ಒಂದು ರೀತಿಗೆ ಬಂದಿರುವಿರಿ ಖರ್ಚನ್ನು ಕಡಿಮೆಮಾಡಿ ಆದಾಯದ ಮಟ್ಟಕ್ಕೆ ತಂದು ನಿಲ್ಲಿಸುವಿರಿ ದೇಹಗತ ವ್ಯಾಧಿಗಳಿಗೂ ಪತ್ಯಕ್ಕನುಸಾರ ಉಪಚಾರಕ್ಕೂ ತಕ್ಕ ಪ್ರತಿಕ್ರಿಯೆಯನ್ನು ಮಾಡಲು ಶಕ್ತರಾಗುವಿರಿ ಉದ್ಯೋಗದಲ್ಲಿನ ನಿಮ್ಮ ಯತ್ನವು ನಿಷ್ಫಲವಾಗಲಾರದು ನೌಕರಿ ಜನರಿಗೆ ದಿನದಿಂದ ದಿನಕ್ಕೆ ಉತ್ಸಾಹವಧಿಕವಾದೀತು ತಾ ೨ ೬ ಮತ್ತು ೯ ಈ ಮೂರು ದಿನಗಳಲ್ಲಿ ವಸ್ತುಗಳಿಗೆ ಹಾನಿಯೂ ವಿಶ್ವಾಸಿಗರಲ್ಲಿ ಮನಸ್ತಾಪವೂ ಉಂಟಾಗುವ

ವೃಶ್ಚಿಕ—ಗಾಂಗಾಂತರ ರೋಗಗಳ ಕಲಹದಿಂದ ಗೃಹಕೃತ್ಯದಲ್ಲಿ ಅವ್ಯವಸ್ಥೆಯುಂಟಾದೀತು ಪತ್ನೀಪುತ್ರರೂ ಕೂಡ ನಿಮ್ಮ ತಂಟೆಗೆ ಸಿಕ್ಕರಾರರು ಇದರಿಂದ ಇಷ್ಟರಲ್ಲ್ಯೇ ಮನಸ್ಸು ಮಲಿನವಾದೀತು ಎಂಬಂತೆ ನಿಮ್ಮ ವಿರೋಧಿ ಜನರಿಗೆ ಎಡಕೊಟ್ಟಂತೆ ಆಗುವದು ಕೋರ್ಟು ಕಛೇರಿಗಳಲ್ಲಿನ ಕ್ಷ ಕಷ್ಟ ನಷ್ಟಗಳಿಗೆ ನಿಮ್ಮನ್ನು ಗುರಿಮಾಡುವವಲ್ಲದೆ ವಿಪರೀತ ಸಾಲಗಾರರಾಗಲಿರುವ ಎಷ್ಟಾದರೂ ಸ್ವರ ಗುರುಗ್ರಹದ ಅನುಗ್ರಹವು ಪೂರ್ಣವಿರುವುದರಿಂದ ತಾ ೬ ೯ ಈ ದಿನಗಳು ಕಾರ್ಯಜಯ, ಸುಖ ಭೋಜನ ಸ್ತ್ರೀಸುಖ, ಲಾಭಾದಿಗಳನ್ನು ಹೊಂದುವಿರಿ

ಧನು—ನಿಮ್ಮ ಅದೃಷ್ಟವು ಗತ ಸ್ಥಿತಿಗೆ ಬಂದಿದೆ ಮಾತ್ರವಲ್ಲ ನಿಮ್ಮಲ್ಲಿ ಶಕ್ತಿ ಸ್ಫೂರ್ತಿಗಳೂ ದಿನದಿಂದ ದಿನಕ್ಕೆ ಅಧಿಕವಾಗುತ್ತಲಿವೆ ಸದ್ಯ ಅಸಾಧ್ಯವೆಂಬ ಶಬ್ದವೇ ನಿಮ್ಮ ಹತ್ತಿರ ಬರಲೊಲ್ಲದು. ನಿಮ್ಮ ಶೌರ್ಯೌದಾರ್ಯಾದಿಗುಣವಿಶೇಷಗಳಿಗೆ ಮರುಳಾಗಿ ಶತ್ರು ಜನರೂ ಕೂಡ ತಮ್ಮಲ್ಲಿರುವ ಮನ ಕಲಹವನ್ನು ತ್ಯಜಿಸಿ ನಿಮ್ಮ ಅನುಗ್ರಹವನ್ನು ಕೋರುವರು. ದೇಹ ಮನಸ್ಸುಗಳಿಗೆ ಸದಾ ಸುಖನೆಮ್ಮದಿಗಳು ಲಭಿಸುವವು ಗೃಹತಾಪತ್ರಯಗಳಾವವೂ ಕಂಡುಬರಲಾರವು. ಆದರೂ ತಾ ೨, ೬, ೯ ಈ ೩ ದಿನಗಳಲ್ಲಿ ಅತಿವ್ಯಯ, ಈಪ್ಸಿತ ವಸ್ತುಗಳ ಅಭಾವದಿಂದ ಕೊಂಚ ದುಃಖವಾದೀತು

ಮಕರ—ಸುಖಲಾಭ ಪತಿಯಾದ ಅಂಗಾರಕನೂ ಜನ್ಮ ಪತಿಯಾದ ಶನೈಶ್ಚರನೂ ಈ ವಾರದಲ್ಲಿ ನಿಮಗೆ ಪ್ರತಿಕೂಲರಿರುವುದರಿಂದ ಯಾವ ಭಾಗದಲ್ಲೂ ನಿಮಗೆ ಕೊರತೆಯಿಲ್ಲವಾದರೂ ನಿಮ್ಮ ದೇಹ ಮನಸ್ಸುಗಳಿಗೆ ಮಾತ್ರ ಸುಖಶಾಂತಿಯಿರದು. ಸ್ವಭಾವತಃ ನಿಮ್ಮ ಯತ್ನಕ್ಕಿಂತ ಅಧಿಕವಾದ ಫಲವನ್ನು ನೀವು ಪಡೆಯುವಿರಿ ವ್ಯಾಪಾರ, ನೌಕರಿ ವೈದ್ಯಕೀಯ ಮತ್ತು ಲೇಖನಾದಿ ವಿಭಾಗಗಳಲ್ಲಿ ಒಳ್ಳೇ ಹೆಸರನ್ನು ಗಳಿಸುವಿರಲ್ಲದೆ ಜನ ಮೆಚ್ಚುಗೆಗೆ ಪಾತ್ರರಾಗುವಿರಿ ಆದರೆ ಪುತ್ರ ವರ್ಗದವರ ವಿಷಯ ಚಿಂತೆ, ಭೃತ್ಯ ವರ್ಗದವರ ಧಾರ್ಷ್ಟ್ಯ ಮೊದಲಾದವುಗಳಿಂದ ಮನಸ್ಸಿಗೆ ಆಘಾತವಾಗಲಿದೆ.

ಕುಂಭ—ಕಳೆದ ವಾರಕ್ಕಿಂತ ಈ ವಾರವು ನಿಮಗೆ ಉತ್ತಮವಿದೆ ನಿಮ್ಮ ಹಣದ ತಾಪತ್ರಯವು ಬಹುಮಟ್ಟಿಗೆ ಕಡಿಮೆಯಾಗಲಿದೆ ಗೃಹಸುಖವು ಉತ್ತಮ ರೀತಿಯಲ್ಲಿ ದೊರೆವುದು ಆದರೆ ವಿರೋಧಿ ವರ್ಗದವರಂತಿರಲಿ, ನಿಮ್ಮಿಂದ ವಿಶೇಷವಾಗಿ ಉಪಕೃತರಾದವರೇ ನಿಮ್ಮ ಮೇಲೆ ಅಪವಾದ ಹೊರಿಸುವದರಿಂದ ನಿಮಗೆ ಯಾರಲ್ಲೂ ನಂಬಿಗೆ ಇಲ್ಲದಂತಾಗುವದು ದುಷ್ಕರ್ಮಗಳಲ್ಲೇ ಅತಿಯಾಗಿ ಸಂಚರಿಸುತ್ತಿರುವ ಮನಸ್ಸನ್ನು ಹತೋಟಿಗೆ ತರುವದು ಬಹಳ ಕಷ್ಟವಾದೀತು ತಾ ೫ ರಿಂದ ೮ರ ವರೆಗಿನ ದಿನಗಳ ಮಿತ್ರ ಭೇಟಿ, ಪತ್ರ, ಇಚ್ಛಾಪ್ರದ ಸುಖಲಾಭದಾಯಿಗಳಾಗಿವೆ

ಮೀನ—ಇಷ್ಟಾನಿಷ್ಟ ಗ್ರಹರು ಸಮನಾಗಿದ್ದರೂ ಶುಭಗ್ರಹರು ಅಧಿಕ ಬಲರಿರುವದರಿಂದ ನಿಮ್ಮ ಯಾವತ್ತೂ ಸಂಕಲ್ಪಗಳನ್ನು ಅನ್ಯಾಪೇಕ್ಷೆಯಿಲ್ಲದೆ ನಿರ್ವಹಿಸುವಿರಿ ನಿಮ್ಮ ಪ್ರಯತ್ನಕ್ಕಿಂತ ಇಮ್ಮಡಿ ಫಲವು ಲಭಿಸುವದರಿಂದ ಅಧಿಕ ತಗಾದೆಯಿಂದ ಮುಕ್ತರಾಗುವಿರಿ ಕೇವಲ ವಾಗ್ವಾದದ ನಿಮಿತ್ತ ಕಲಹವಾಗಲಿದೆ ಶಿರೋವೇದನ ಉದರ ರೋಗಾದಿಗಳು ಆಗಾಗ ಪೀಡಿಸುವವು ಗೃಹಸುಖವು ಪರಿಪೂರ್ಣವಿರುವದು ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ತುಂಬಾ ವಿಘ್ನಗಳುಂಟಾಗುವವು ವಾರಾದಿಯ ೨ ದಿನಗಳು ಉತ್ತಮವಿಲ್ಲ

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS

High Class Boarding & Lodging House

HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ನ್ ಮುಲಾಮು. —

ಇಷ್ಟರವರೆಗಣ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ನ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತೆ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನು ಅಲಂಕರಿಸಿವೆ, ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೩ ೦ ೦	ಅಮಾತ್ಯನಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೩ ೦

ಕೆಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ರಕ್ತವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ, ಮಕ್ಕಳ ಜೀರ್ಣ ರಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರೂಪ ಹೆಚ್ಚುವುದು. ಇದು ಮಧುವಾದ್ದರಿಂದ ಆಶೆ ಬಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ;

ಟಿ. ಪಿ. ೯ ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು:— ನವಭಾರತ ಬುಕ್ ಡಿಪೋ, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager. — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೇನೇಜರ್

ಶ್ರೀಪಸ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೆನ್ಸಿಲ್ ಬೋರ್ಡ್ ಹಿತ್ತಾಳೆ ಪೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು.

Crown Rubber Stamp Co 18 Balmat Road, MANGALORE.

Approved firm by the Govt. Mysore

Certified by the Agent of the Govt. of India in Ceylon

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯಂತ ಸುಖಕರವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ಪರೀಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ಒಂದೊಂದು ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದಕ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಒಗೆ ಒಗೆಯ ಒಣ್ಣಗಳಲ್ಲಿ ಅಂಚಿನಲ್ಲಿ ನಮ್ಮೂನೆಯಲ್ಲಿ ದೊರೆಯುತ್ತವೆ. ಶುಭ್ರಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಸಿ. ಎ. ಪೈ. ಬ್ರದರ್ಸ್‌

ಆಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಮೇಲ್ದರಗತಿಯ ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್. ವ್ಯವಸ್ಥಾಪಕ.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪಿತ

ನವಯುಗ

ಸಂಪುಟ ೨೧
Vol 21

ಸಂಸ್ಥಾಪಕರು:— ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

9-4-1942

ಸಂಚಿಕೆ ೩೧
No. 31

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ. ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

Read and Advertise in
ANTARANGA
The All Karnataka humorous Weekly
Udipi - S. India

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಿಸಿಯಾಗುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುತ್ತದೆ. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು. ರಕ್ತ ಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಸ್ವಸ್ಥ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1 8 0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪ್ರೊವಿನ್ಶಿಯಲ್ ಸ್ಟೋರ್ಸ್, ಕೆಮಿಸ್ಟ್ಸ್ ಅಂಡ್ ಜನರಲ್ ಮರ್ಚೆಂಟ್ಸ್, 183 ನ ಪಾರಿವಾಗ್ ರೋಡ್. ಪರೇಲ, ಮುಂಬಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. (3) ಮುಲ್ಲರ್ ಪಟನಾಗ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಅಗ್ರಹಾರ ಬಜಾರ್, ಮೈಸೂರು (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. (7) ದ. ಶ್ರೀನಿವಾಸ. ಪೈ, ಪುತ್ತೂರು (8) ಶಂಕರನಾರಾಯಣ ಶಾಸ್ತ್ರೀ ಕಂ., ಬೆಳ್ತಂಗಡಿ (9) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಎಸ. ಗೋಪಾಲ ಶ್ರೀ ರಾಮ ಸ್ಟೋರ್‌ ಹೌಸ್, ಶ್ರೀ ರಾಮ ಪೇಟೆ (12) ಕೆ. ಶ್ರೀನಿವಾಸ ಶೆಟ್ಟಿ, ತೀರ್ಥಹಳ್ಳಿ. (13) ಬಿ. ಯಸ್, ನರಸಿಂಗರಾವ್, ಮರ್ಚೆಂಟ್, ಚಿಕ್ಕಮಗಳೂರು.

ಮಗುವನ್ನು ಸಂತೋಷವಾಗಿಟ್ಟಿರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ GTL ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಸಂಕಟಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ

ತಯಾರಿಸುವವರು.

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ — **ಬೆಂಗಳೂರು ಸಿಟಿ.**

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941.

Assets exceed	.	.	Rs.	1,10,00,000
Life Fund exceeds	.	....	,,	92,00,000
Business in force	....	. .	,,	1,28,00,000
Claims paid over	....	...	,,	56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರವಾದ ಸಂದೀ ವಾಯು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ; ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಸಡುಸೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಮೊರಕುಟು ಗರ್ಭದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೪ ಆಣೆ.**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, **ಬಾಗಲಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, **ದಾವಣಗೇರಿ:**—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವಿಮೆ ಮಾಡಲಿಕ್ಕಾಗಲೀ, **ಏಜೆನ್ಸಿ ಪಡೆಯಲಿಕ್ಕಾಗಲೀ**

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಬಿ ಎ ಪ್ರಭು, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯು ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಈ ವಾರದ ಭವಿಷ್ಯ

ತಾರೀಕು ೯—೪—೪೭ರಿಂದ ತಾರೀಕು ೧೬—೪—೪೭ರ ವರೆಗೆ

ಮೇಷ—ನಿಮ್ಮ ಗೃಹಪತಿಯಾದ ಅಂಗಾರಕನು ಈ ವಾರದಲ್ಲಿ ಅನುಕೂಲ ಸ್ಥಾನವನ್ನಾಶ್ರೈಸುವುದರಿಂದ ನಿಮ್ಮ ಅನೇಕ ಮನೋರಥಗಳು ಕೈಗೂಡುವ ಸಂದರ್ಭವಿದೆ. ದೈವದೊಲುಮೆಯೂ ಸಾಕಷ್ಟಿರುವುದರಿಂದ ಆರೋಗ್ಯ ಮತ್ತು ಆರ್ಥಿಕ ಭಾಗಕ್ಕೆ ಹಾನಿಯಿಲ್ಲವು. ಅರ್ಧಮರ್ಧವಾಗಿದ್ದ ಕಾರ್ಯಗಳೂ ಅಚಿರೇಣ ಕೊನೆಗೊಳ್ಳುವವು. ನಷ್ಟವಾಗಿದ್ದ ವಸ್ತು ಒಡವೆಗಳೂ ಪುನಃ ಲಭಿಸುವವು. ಆದರೆ ಕೆಲವೊಮ್ಮೆ ನಿಮ್ಮ ರೋಕ್ತಿಯಿಂದ ವೃಥಾ ಕಲಹವಾಗಲಿದೆ. ತಾ. 13, 14, 15 ಈ ದಿನಗಳಲ್ಲಿ ಕಲಹ ನಿಮಿತ್ತ ಧನ ವ್ಯಯ, ಚಿಂತಾಕುಲಾದಿಗಳಿಗೆ ಗುರಿಯಾದಿರಿ.

ವೃಷಭ:—ನಿಮ್ಮ ಲಾಭದಲ್ಲಿದ್ದ ರವಿ ಬುಧರೂ ವಾರಾಂತ್ಯದಲ್ಲಿ ವ್ಯಯವನ್ನು ಪ್ರವೇಶಿಸುವರು. ಅದೇ ಕಾರಣ ಸಕಲ ಗ್ರಹರೂ ನಿಮ್ಮ ಮೇಲೆ ಪ್ರತಿಕೂಲರಾಗುವುದರಿಂದ ನಾನಾತರದ ಕಷ್ಟ ನಷ್ಟಗಳಿಗೆ ಗುರಿಯಾಗುವ ಸಂಭವವಿದೆ. ವಿವಾಗ್ನಿ ಮತ್ತು ಪಿತ್ಥ ವಿಕಾರ ಸಂಬಂಧವಾದ ಕಾಹಿಲೆಗಳು ತಲೆದೋರಬಹುದು, ಉತ್ಪತ್ತಿಯು ಶೂನ್ಯವಾಗಿ ಖರ್ಚುಗಳು ಸರ್ವತೋಮುಖದಿಂದ ವೃದ್ಧಿಯನ್ನೈದುವವು. ಮೌನಿಗೂ ಕೂಡ ಕಲಹಭೀತಿ ತಪ್ಪದು. ಅಧಿ ವ್ಯಾಧಿಗಳಿಂದ ಪೀಡಿತರಾದ ನಿಮಗೆ ತಾ. 11ರಿಂದ ೩ ದಿನಗಳು ಕಿಂಚಿತ್ಸುಖಕಾರಿಗಳೆನ್ನಬಹುದು.

ಮಿಥುನ:—ಈ ವಾರದಲ್ಲಿ ನಿಮ್ಮ ಖರ್ಚು ಸ್ವಲ್ಪ ಕಡಿಮೆಯಾಗುವುದರಿಂದ ಸಂಪಾದನೆಯಲ್ಲಿ ಕೆಲವಂಶ ಉಳಿತಾಯವಾದೀತು. ಪ್ರಯಾಣಿಕರಿಗೆ ಮಾತ್ರ ಕಾಲವು ಬಹಳ ಪ್ರತಿಕೂಲವಿರುವದು. ಆಕಸ್ಮಿಕ ಅವಘಡಾದಿಗಳಿಗೆ ಗುರಿಯಾಗಬಹುದು. ದೇಹಾಲಸ್ಯವೂ ಮನೋರೋಗವೂ ಕೆಲವೊಮ್ಮೆ ಶಾಂತವಾಗಲಿವೆ. ವ್ಯಾಪಾರ ಭಾಗದಲ್ಲಿ ಒಳ್ಳೇ ಶ್ರೇಯಸ್ಸಿರುವುದು. ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಜನತೆಯ ಬೆಂಬಲವು ಸಾಕಷ್ಟಿರುವುದು. ಆದರೂ ವಾರಾದಿಯ 4 ದಿನಗಳಲ್ಲಿ ಆಕಸ್ಮಿಕ ಅನರ್ಥ ರಾಜಭಯಾದ್ಯನಿಷ್ಟಗಳು ಪ್ರಾಪ್ತವಾದಾವು.

ಕರ್ಕಾಟಕ:— ಅಂಗಾರಕನು ವ್ಯಯ ಸ್ಥಾನಕ್ಕೆ ಬಂದರೂ ಇತರ ಎಲ್ಲಾ ಗ್ರಹರೂ ನಿಮಗನುಕೂಲವಿರುವುದರಿಂದ "ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ" ಚಂದ್ರನ ಕಿರಣಗಳ ನಡುವೆ ಅವನಲ್ಲಿರತಕ್ಕ ಕಳಂಕವು ಹೇಗೆ ಅಚ್ಛಾದಿತವಾಗುವುದೋ ಅಂತೆಯೇ ನಿಮಗಾತನಿಂದ ಅಪಾಯವೇನೂ ಒದಗಲಾರದು. ಶುಕ್ಲಪಕ್ಷದ ಚಂದ್ರನಂತೆ ನಿಮ್ಮ ಆರೋಗ್ಯ ಭಾಗ್ಯ ಆರ್ಥಿಕ ಸಂಪತ್ತು ಮತ್ತು ಸಕಲ ಕಾರ್ಯಕಲಾಪಗಳೂ ಅನುಕೂಲವಾಗಿ ಪರಿಣಮಿಸಲಿವೆ. ತಾ. 9.10.16 ಸರ್ವಾಭೀಷ್ಟ ದಿನಗಳು.

ಸಿಂಹ: ನಿಮ್ಮ ಸುಖ ಭಾಗ್ಯಪನಾದ ಅಂಗಾರಕನ ಕೃಪೆಯು ನಿಮಗೀವಾರದಲ್ಲಿ ಲಭಿಸಲಿರುವುದು. ತಾಪತ್ರಯಗಳ ಸಮೂಹದಲ್ಲಿ ಸಿಲುಕಿಬಿದ್ದ ನಿಮಗೆ ಸುಖದ ಸುದಿನಗಳನ್ನು ಕಾಣುವ ಸುಯೋಗವೀಗ ಒದಗಿ ಬಂದಿದೆ. ಜನ ಬೆಂಬಲವು ನಿಮಗೆ ಲಭಿಸಲಿದೆ. ಪ್ರಯತ್ನಾನುಗುಣವಾದ ಫಲ ಲಾಭವಾಗಲಿದೆ. ದೇಹ ಮನಸ್ಸುಗಳಿಗೂ ಸ್ವಲ್ಪ ಸುಖ ದೊರೆಯುವದು. ಸ್ತ್ರೀ ನಿಮಿತ್ತ ಕಲಹ, ಅನರ್ಥ, ಶತ್ರುಗಳ ಉಪದ್ರವಗಳಿಂದ ಪೀಡಿತರಾದ ನಿಮಗೆ ವಾರಾಂತ್ಯದ 1 ದಿನಗಳಲಿ ಕೆಟ್ಟ ಮಾತುಗಳನ್ನು ಕೇಳುವ ಯೋಗವಿದೆ.

ಕನ್ಯಾ:— ನಿಮ್ಮ ದೇಹಾಲಸ್ಯವೂ ಮನೋರೋಗವೂ ಮುಂಚಿಗಿಂತ ಕೊಂಚ ಶಾಂತವಾಗಲಿದೆ. ವೈದ್ಯ ವ್ಯಾಪಾರಾದ್ಯುದ್ಯಮಗಳಲ್ಲೂ ಔದ್ಯೋಗಿಕ ಭಾಗದಲ್ಲೂ ನಷ್ಟ ನಿರಾಶೆಯ ಭಾವನೆಗಳೇ ತೋರಿಬರಲಿವೆ. ಗೃಹ ಕಲಹಗಳು ಮೊಳೆತು ಚಿತ್ತ ದುಃಖಕ್ಕೀಡು ಮಾಡಲಿದೆ. ಹೃದ್ರೋಗದಿಂದ ಪೀಡಿಸಲ್ಪಡುವಿರಿ. ಆದರೂ ಗುರು ಮಹಾರಾಯನ ಅನುಗ್ರಹದಿಂದ

(೧೧ನೇ ಪುಟ ನೋಡಿರಿ).

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ, —ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

೨೩—ಕನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS LTD.,

Head Office and Factory: Katapadi, S. Kanara

Depots: 1 Mahratha Galli, Hubli
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea. Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಶೆಣೈ L. I. M. ಡಾಕ್ಟರ್ ವೆಂಕಟ ರಾವ್, ಕೂರಕ್ಕಾಲ್

ಸಮಾಚಾರ ಸಂಗ್ರಹ

ಚೀನೀ ಗೊರಿಲ್ಲಪಂಗಡಿಗರ ಹಾವಳಿ

೧೯೪೧ರಲ್ಲಿ ಚೀನೀ ಗೊರಿಲ್ಲ ಪಂಗಡಗ ಳ ಹಾವಳಿಗೊಳಗಾಗಿ ಹತರಾದ ಮತ್ತು ಗಾಯಗೊಂಡ ಜಾಪಾನ ಸೈನಿಕರ ಸಂಖ್ಯೆ ೧೫೦,೦೦೦,ಗೊರಿಲ್ಲ ಪಂಗಡಿಗರು ಜಾಪಾನರಿಂದ ೧೪,೮೧೭ ರೈಫಲ್ಸ್ ೫೪೦ ಸಣ್ಣ ಮತ್ತು ದೊಡ್ಡ ಮಿಶನ್ ತೋಪು, ಮತ್ತು ೧೨ ಟೇಂಕುಗಳನ್ನು ವಶಮಾಡಿಕೊಂಡಿರುತ್ತಾರೆ. ಅವರ ಪ್ರಾಬಲ್ಯವು ದಿನೇ ದಿನೇ ಹೆಚ್ಚುತ್ತಿದೆ. ಶಾಂಘಾಯಿ ಮತ್ತು ಸೂಚೋ ಪ್ರದೇಶಗಳ ಚೀನೀ ಗೊರಿಲ್ಲ ಪಂಗಡಿಗರನ್ನು ಸಂಪೂರ್ಣ ನಿರ್ಮೂಲ ಗೊಳಿಸಲಾಗಿದೆಯೆಂದು ಟೋಕಿಯೋ ರೇಡಿಯೋವು ಪ್ರಕಟಿಸಿರುತ್ತದೆ.

ಕೊರಿಯದ ಸ್ವಾತಂತ್ರ್ಯ

ಕೊರಿಯವನ್ನು ಜಾ ಪಾ ನು ಗೆದ್ದು ದಬಾಯಿಸಿ ತನ್ನ ಅಧೀನಪಡಿಸಿಕೊಂಡಿದೆ. ಆದರೆ ಸ್ವಾತಂತ್ರ್ಯ ಸಾಧನೆಗಾಗಿ ತಾತ್ಕಾಲಿಕ ಸರಕಾರವೊಂದು ಚುಂಕಿಂಗಿನಲ್ಲಿ ಸ್ಥಾಪಿಸಲ್ಪಟ್ಟು ಅದನ್ನು ಚೈನ, ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟನು ಬೇಗನೆ ಅಂಗೀಕರಿಸಲಿವೆ. ಸುಮಾರು ೨೦,೦೦೦ ಕೊರಿಯದ ಸೈನಿಕರು, ಹೆಚ್ಚಾಗಿ ಮಂಚೂರಿಯದಲ್ಲಿ ಜಾಪಾನರ ವಿರುದ್ಧವಾಗಿ ಗೊರಿಲ್ಲ ಯುದ್ಧ ನಡಿಸುತ್ತಿದ್ದಾರೆ. ಕೊರಿಯ ಸ್ವಾತಂತ್ರ್ಯಸಾಧನಾ ಪಕ್ಷದ ಸದಸ್ಯರಾಗಿ ಆಸಕ್ತಿಯಿಂದ ಕೆಲಸ ಮಾಡುವ ೬೦ ೦೦೦ ಮಂದಿ ಕೊರಿಯಾನರಿದ್ದಾರೆ. ಇವರಿಗೆ ಬಹು ಪಕ್ಷೀಯ ಕೊರಿಯಾನರ ಬೆಂಬಲವಿದೆ.

ಅಮೇರಿಕದ ಪ್ರಚಂಡ ತಯಾರಿ

ಕಳೆದ ೨೪೫ ದಿನಗಳಲ್ಲಿ ಅಮೇರಿಕವು ೨೦,೦೦೦ ವಿಮಾನ ನಿರೋಧಕ ತೋಪು, ೧೫,೦೦೦ ಟೇಂಕು ಮತ್ತು ೬೨,೦೦೦ ವಿಮಾನಗಳನ್ನು ತಯಾರಿಸಿರುವುದು. ಅಮೇರಿಕವು ೧೯೪೦ರಲ್ಲಿ ತಿಂಗಳೊಂದರ ೭೦೦ ವಿಮಾನಗಳನ್ನು ತಯಾರಿಸುತಿದ್ದು ೧೯೪೧ನೇ ದಶಂಬರದಲ್ಲಿ ತಿಂಗಳೊಂದರ ೨,೦೦೦ ವಿಮಾನ ತಯಾರಿಸಿತು. ೧೯೪೧ರಲ್ಲಿ ಒಂದು ಮಿಲ್ಯ ಟನ್‌ಗಳಿಗಿಂತಲೂ ಹೆಚ್ಚಿನ ಹಡಗಗಳನ್ನು ಹೊಸತಾಗಿ ತಯಾರಿಸಿರುವುದು. ಜಾಪಾನರು ಅಮೇರಿಕದ ಪರ್ಲ್ ಹಾರ್ಬರಿನ ಮೇಲೆ ಧಾಳಿ ಇಟ್ಟ ಅನಂತರ ೩ ತಿಂಗಳುಗಳಲ್ಲಿ ವಿಮಾನ ತಯಾರಿಯು ಸೇಕಡ ೫೦ರಷ್ಟು ಅಧಿಕವಾಗಿರುತ್ತದೆ ಅಂದರೆ ಈಗ ತಿಂಗಳಿಗೆ ೩,೦೦೦ಕ್ಕಿಂತಲೂ ಮಿಕ್ಕಿದ ವಿಮಾನಗಳನ್ನು ತಯಾರಿಸುತ್ತಿವೆ. ೧೯೪೧ರಲ್ಲಿ ಒಟ್ಟು ೫೦೦೦ ಟೇಂಕುಗಳು ಮಾಡಲ್ಪಟ್ಟಿದ್ದುವು. ಈಗ ವರ್ಷಕ್ಕೆ ೨೬,೦೦೦ ಅಂದರೆ ಹಪ್ತೆಗೆ ೫೦೦ ತಯಾರಾಗುತ್ತಿವೆ.

ಚೈನಕ್ಕೆ ಹಿಂದುಸ್ಥಾನದ ಸಾಮಾನುಗಳು

ಚೈನವು ಹಿಂದುದೇಶದಿಂದ ರೂ. 1,50,00,000ಕ್ಕಿಂತಲೂ ಮಿಕ್ಕಿದ ಸಾಮಗ್ರಿಗಳನ್ನು ಪಡಕೊಳ್ಳುವ ವ್ಯವಸ್ಥೆ ಮಾಡಿರುವುದು. ಸೈನಿಕ ಪೋಷಾಕುಗಳಿಗಾಗಿ ಹಲವು ಮಿಲ್ಯ ಯಾರ್ಡು ವಸ್ತ್ರ ಮತ್ತು ನೂಲನ್ನದು ಪ್ರಾಮುಖ್ಯವಾಗಿ ಕೆಗೆದುಕೊಳ್ಳಲಿರುವುದು. ವೈದ್ಯಕೀಯ ಸಾಮಗ್ರಿ, ಕೈಗಾರಿಕೋಪಕರಣಗಳು, ಇಲೆಕ್ಟ್ರಿಕ್ ಸಾಮಾನುಗಳೇ ಮೊದಲಾದುವನ್ನು ಅದು ಕೆಗೆದುಕೊಳ್ಳಲಿರುವುದು. ಚೀನೀ ಸರಕಾರವು ಕ್ರಮದಿಂದ ಹೆಚ್ಚೆಚ್ಚಾಗಿ ಸಾಮಗ್ರಿಗಳನ್ನು ಹಿಂದುದೇಶದಿಂದ ಪಡೆಯಲಿರುವುದು.

ಪೋಲೆಂಡಿನ ಗುಪ್ತ ಪತ್ರಿಕೆಗಳು

ಪೋಲಂಡಿನಲ್ಲಿ ಮೊದಲು 2200 ಪತ್ರಿಕೆಗಳಿದ್ದುವು. ಅವುಗಳಲ್ಲಿ 190 ದೈನಿಕಗಳು. ಆದರೆ ಈಗ ಇಡೀ ಪೋಲಂಡಿನಲ್ಲಿ 16 ಪತ್ರಿಕೆಗಳು ಮಾತ್ರ ಇರುತ್ತವೆ. ಅವನ್ನು ಪ್ರಕಟಿಸುವವರೂ ನಾಝಿಗಳು. ಆದರೆ ನಾಝಿ ಆಳ್ವಿಕೆಯ ವಿರೋಧಿಗಳಾದ ಜನರು ಗುಪ್ತವಾಗಿ ಸುಮಾರು 28ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ಬಿ. ಬಿ. ಸಿ ಯ ವರ್ತಮಾನ ಕೊಡುವ ವರ್ತಮಾನ ಪತ್ರಗಳು ಪ್ರತಿದಿನ ಬಹಳ ರಹಸ್ಯವಾಗಿ ಪ್ರಕಟಿಸಲ್ಪಟ್ಟು ಜನರೆಲ್ಲಾ ಅವನ್ನು ಬಹಳ ಆತುರದಿಂದೋದುತ್ತಾರೆ. ಆದರೆ ಈ ಪತ್ರಿಕೆಗಳು ಕಲ್ಲಚ್ಚಿಯಲ್ಲಿ ತಯಾರಾಗುತ್ತವೆ. ವಾರಪತ್ರಿಕೆಗಳು ಛಾಪಿಸಲ್ಪಡುತ್ತವೆ. ಛಾಪಖಾನೆಗಳು ಹೆಚ್ಚಾಗಿ ಕಾಡುಗುಡ್ಡಗಳಲ್ಲಿದ್ದು ಅಲ್ಲಿಯೇ ಛಾಪೆಯ ಕೆಲಸ ನಡೆಯುತ್ತದೆ. ಸಿಕ್ಕಿಬಿದ್ದವರಿಗೆ ಮರಣ ಶಿಕ್ಷೆಯೇ ಸರಿ. ಆದರೂ ಜರ್ಮನ್ ಗೆಸ್ಟೇಪೋ ಪೋಲೀಸರಿಗೆ ಈ ಛಾಪಖಾನೆಗಳನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ.

ಯುಗೊಸ್ಲಾವಿಯದಲ್ಲಿ ಸಂಘಟಿತ ಬಂಡಾಯ

ಯುಗೊಸ್ಲಾವಿಯದಲ್ಲಿ ಜರ್ಮನರೆದುರಾಗಿ ದೊಡ್ಡ ಬಂಡಾಯವೇ ಎದ್ದಿದೆ ಜನರಲ್ ಡ್ರಾಜಾಮಿಹೈಲೋವಿಕರೆಂಬ 41 ವರ್ಷದ ಸೈನ್ಯಾಧಿಕಾರಿಯೇ ಅದರ ನಾಯಕರು. ಪರ್ವತ ಪ್ರದೇಶಗಳಲ್ಲಿ ಗುಪ್ತವಾಗಿ ಮಿಕಹಿಲೋವಿಚರು 100,000 ಸೈನ್ಯವನ್ನು ಸಂಘಟಿಸಿ ಜರ್ಮನರೊಂದಿಗೆ ಹೋರಾಟ ನಡಿಸುತ್ತಿದ್ದಾರೆ. ಈ ಸೈನಿಕರು ಪ್ರಾಣಕೊಡುವರೇ ಹೊರತು ಎಂದಿಗೂ ಶರಣಾಗತರಾಗಲಾರರು. ಈ ಸೈನ್ಯದ ವಶ ಚಿಕ್ಕದೊಂದು ವಿಮಾನಪಡೆಯೂ ಯಾಂತ್ರಿಕದಳವೂ ಇರುತ್ತದೆ. ಇಂದು ಹಳೆಯ ಸರ್ವಿಯದ ಕೆಲವು ಪ್ರದೇಶಗಳು ಮಿಕಹಿಲೋವಿಕರ ಅಧೀನವಿರುತ್ತವೆ. ಜರ್ಮನರು ಎಷ್ಟು ಪ್ರಯತ್ನಿಸಿದರೂ ಈ ಬಂಡಾಯವನ್ನಡಗಿಸಲು ಅವರಿಗೆ ಸಾಧ್ಯವಾಗಿರುವುದಿಲ್ಲ.

ಜರ್ಮನರ ಘೋರ ಅತ್ಯಾಚಾರ

ಯುಗೊಸ್ಲಾವಿಯನರ ಪ್ರಬಲ ವಿರೋಧದಿಂದ ತಲೆಗೆಟ್ಟ ಜರ್ಮನರು ಅಲ್ಲಿಯ ಜನತೆಯ ಮೇಲೆ ಪೈಶಾಚಿಕ ಅತ್ಯಾಚಾರ ನಡಿಸುತ್ತಿದ್ದಾರೆ. ಕೊಲ್ಲಲ್ಪಡುವ ಪ್ರತಿಯೊಬ್ಬ ಜರ್ಮನ್ ಸೈನಿಕನಿಗೆ 100 ಮತ್ತು ಗಾಯಗೊಂಡ ಪ್ರತಿಯೊಬ್ಬನಿಗೆ 50ಮಂದಿಯನ್ನು ಕೊಲ್ಲಲಾಗುವುದೆಂದು ಎಚ್ಚರವಿತ್ತಿದ್ದಾರೆ. ಮನೆಗಳಲ್ಲಿ ಅವಿತುಕೊಂಡು ಯಾರಾದರೂ ಗುಂಡು ಹಾರಿಸಿದರೆ 15 ವರ್ಷ ಮೇಲ್ಪಟ್ಟ ಅವುಗಳ ನಿವಾಸಿಗಳನ್ನೆಲ್ಲಾ ಕೊಂದು ಹಾಕುತ್ತಾರೆ. ಮನೆಗಳನ್ನು ಸುಟ್ಟು ಬಿಡುತ್ತಾರೆ. ಹೀಗೆ ಒಂದೇ ಒಂದು ಪಟ್ಟಣದಲ್ಲಿ 7000ಜನರು ಕೊಲ್ಲಲ್ಪಟ್ಟಿರುತ್ತಾರೆ. ಜರ್ಮನ್ ಸೈನಿಕರು ಶಾಲಾ ಮಕ್ಕಳನ್ನೂ ಕೊಂದು ಹಾಕಿಸುತ್ತಾರೆ.

Keep the enemy away
from India
Contribute AGAIN to the
Governor's war fund.
Buy MORE defence bonds
and savings certificates.

**GIVE AND LEND
FOR
VICTORY.**

ಜರ್ಮನಿಯ ಕುರಿತು ಇಟೆಲಿಯಾನರ ಅತೃಪ್ತಿ

ಲಿಬಿಯದಲ್ಲಿ ಹೋರಾಡುವ ಇಟೆಲಿಯಾನ ಮತ್ತು ಜರ್ಮನ್ ಸೈನಿಕರೊಳಗೆ ಮನಸ್ತಾಪವುಂಟಾಗಿರುವುದೆಂದು ಖಾತ್ರಿಯಾಗಿ ತಿಳಿದು ಬಂದಿರುತ್ತದೆ. ಜರ್ಮನ್ ಸೈನಿಕರಿಗೆ ಉತ್ತಮ ಆಹಾರವು ಬೇಕಷ್ಟು ದೊರೆಯುವಾಗ ಇಟೆಲಿಯವರು ಅಳತೆಯ ಆಹಾರವನ್ನು ಸ್ವಲ್ಪ ಮಾತ್ರ ಪಡೆಯುತ್ತಾರೆ. ಕೈದಿಗಳು ಪಡೆಯುವಷ್ಟು ಆಹಾರ ಕೂಡ ಇಟೆಲಿಯಾನ ಸೈನಿಕರಿಗೆ ಕೊಡಲ್ಪಡುವುದಿಲ್ಲ. ಜರ್ಮನ್ ಮತ್ತು ಇಟೆಲಿಯಾನ ಸೈನಿಕರೊಳಗೆ ಹಲವು ವೇಳೆ ಕಲಹವಾಗಿ ಹೊಡೆದಾಟ ನಡೆದಿದೆ. ಈ ದ್ವೇಷದಿಂದಾಗಿ ಇಟೆಲಿಯಾನ ಸೈನಿಕರಿಗೆ ಯುದ್ಧದ ಉತ್ಸಾಹವೇ ಇಲ್ಲದೆ ಅವರಲ್ಲಿ ಹಲವರು ಹೋರಾಡದೇನೇ ಶರಣಾಗತರಾಗಿ ಬಿಡುತ್ತಾರೆ.

ವಿಮಾನದ ಕಪ್ತಾನನ ತ್ಯಾಗ.

ರೋಯಲ್ ವಿಮಾನ ಪಡೆಯ ವಿಮಾನವೊಂದು ಸಮುದ್ರಕ್ಕೆ ಮುರಿದು ಬಿತ್ತು. ಆದರ ೫ಮಂದಿ ಚಾಲಕರು ಚಿಕ್ಕ ರಬ್ಬರ್ ದೋಣಿಯೊಂದರಲ್ಲಿ ಕೂತು ಆಲೋಚಿಸಿದರು. ನೆಲಕ್ಕೆ ಮುಟ್ಟಲು ಕಡಿಮೆಯೆಂದರೆ 7ದಿನಗಳು ತಾಗೀತು. ಆದರೆ 4ಮಂದಿ ಜೀವದಿಂದಿರಲು ಬೇಕಷ್ಟು ಆಹಾರ ಮತ್ತು ನೀರು ಮಾತ್ರ ಅದರಲ್ಲಿತ್ತು. ಏನು ಮಾಡುವುದೆಂಬುದೇ ಅವರ ಪ್ರಶ್ನೆಯಾಗಿತ್ತು. ವಿಮಾನದ ಕಪ್ತಾನನು ಈ ಸಮಸ್ಯೆಯನ್ನು ಸುಲಭವಾಗಿ ತೀರ್ಮಾನಿಸಿಬಿಟ್ಟ. ಎರಡನೇ ದಿನ ರಾತ್ರಿ ಮೆಲ್ಲಗೆ ಅವನು ದೋಣಿಯಿಂದ ಸಮುದ್ರಕ್ಕಿಳಿದು ಮುಳುಗಿಹೋದ. 7ನೇ ದಿನ ದೋಣಿಯು ನೆಲಮುಟ್ಟಿತು. ಅದರಲ್ಲಿದ್ದ 4ಮಂದಿಗೂ ಬೋಧ ತಪ್ಪಿಹೋಗಿತ್ತಾದರೂ ಅವರು ಬದುಕಿದರು.

ನಾಝಿಗಳ ಸುಲಿಗೆ.

ನಾಝಿಗಳಿಂದು ಯುದ್ಧಕ್ಕಾಗಿ ಬಹುತೇಕ ಇಡೀ ಯುರೋಪ್ ಖಂಡದ ಸುಲಿಗೆ ನಿರ್ದಯರಹಿತವಾಗಿ ನಡಿಸುತ್ತಿರುವರು. ಫ್ರಾನ್ಸನ್ನು ಆಕ್ರಮಿಸಿದ 3ತಿಂಗಳಲ್ಲೇ 1800 ಟನ್ ಗೋದಿಯನ್ನವರು ಒಯ್ದಿದ್ದರು ಅನಂತರ 4ವಾರಗಳಲ್ಲಿ 116ಟನ್ ಅಕ್ಕಿ, 125ಟನ್ ಎಣ್ಣೆ, 70 ಟನ್ ಹದಮಾಡಿದ ಚರ್ಮ, ಮತ್ತು ಪ್ರಾಕ್ತಿ ಬೆಳೆಯನ್ನೆಲ್ಲಾ ಒಯ್ದಿದ್ದರು. ಮಾತ್ರವಲ್ಲದೆ ಫ್ರಾನ್ಸು ಪ್ರತಿವರ್ಷ ಜರ್ಮನಿಗೆ 827,000,000 ಪವನು ಕೊಡಬೇಕಾಗಿದೆ. ಕಳೆದ ಯುದ್ಧದಲ್ಲಿ ಜರ್ಮನಿಯು ಮಿತ್ರ ರಾಷ್ಟ್ರಗಳಿಗೆ ಕೊಡಬೇಕಾಗಿದ್ದುದಕ್ಕಿಂತ ನೂರು ಪಾಲು ಹೆಚ್ಚಾಗಿರುವುದು.

ಬೇಕಾಗಿದ್ದಾರೆ

ಬೆಳ್ಳೆ ಚರ್ಚ್ ಹಾಯರ್ ಎಲಿಮೆಂಟರಿ ಶಾಲೆಗೆ ತರಬೇತಾದ ಸೆಕೆಂಡರಿ ಗ್ರೇಡಿನ ಉಪಾಧ್ಯಾಯ ವ ಉಪಾಧ್ಯಾಯಿನಿಯರೂ ಮತ್ತು ಹೈಯ್ಯರ್ ಗ್ರೇಡ್ ತರಬೇತಾದ ಉಪಾಧ್ಯಾಯಿನಿಯರೂ ಬೇಕಾಗಿದ್ದಾರೆ. ಯೋಗ್ಯ ಸಂಬಳ ಕೊಡಲ್ಪಡುವುದು.

Manager
Ch. H E School, Belle.
Moodubelle P o. S. K

ನಮ್ಮ ಗಂಗಾಯಾತ್ರೆ

(ಶ್ರೀ| S. L. ಸುಬ್ರಹ್ಮಣ್ಯಂ ಕೊಡಗನೂರು.)

...ಾರದ ಕತೆ.

ಹಡಗನ್ನು ಕಟ್ಟಿದ್ದ ಹಗ್ಗವನ್ನು ಬಿ...ಟ್ಟಿತ್ತಲೇ, ಅದರ ಭೀಮಾಕಾರದ ಚಕ್ರಗ...ು ಜಲವನ್ನು ಭೇದಿಸುತ್ತಾ, ಗಂಗೆಯ ...ಧ್ಯದಲ್ಲಿ ಹೊರಟಿತು. ಪಟ್ಟಣ ದೇವ... ಈ ಕಬ್ಬಿಣದ ವಿಮಾನದಲ್ಲಿ ನಾವು ...ಪ್ರವಾಸ ಮಾಡಿದುದು ಇದೇ ಮೊದಲನೆ ...ಸಾರಿ. ಈ ಕಾರಣದಿಂದಲೂ, ಮತ್ತು ...ಗಂಗಾಮೇಳವನ್ನು ನೋಡಬೇಕೆಂಬ ಕು...ತೂಹಲದಿಂದಲೂ ನನ್ನ ಮನಸ್ಸಿನಲ್ಲಿ ಆ...ತುರತೆ ಇದ್ದಿತು. ಆದರೆ ಮಾರ್ಗದಲ್ಲಿ ...ಅನುಭವಿಸಬೇಕಾದ ದುರ್ಘಟನೆಗಳ ಕ...ಲ್ಪನೆಯಿಂದ, ಈ ಆತುರತೆಯು, ಆಗಾಗ್ಗೆ ...ಆತಂಕವಾಗಿ ಪರಿಣಮಿಸುತ್ತಿತ್ತು.

ನಮ್ಮ ಜೊತೆಯಲ್ಲಿ ಸೇವಕನೊಬ್ಬನಿ...ದ್ದನು. ಅವನಿಗೆ ಸರ್ವೋಪದಿ ಒಂದು ...ಹಳ ಭಯ, ಗಂಗಾ ಯಾತ್ರೆಯಿಂದ ...ಹಿಂದಿರುಗುವೆನೋ ಇಲ್ಲವೋ ಎಂದು. ಹ...ಡಗಿನಲ್ಲಿದ್ದ ಅನೇಕರು ನಮ್ಮ ಸೇವಕನಂ...ತೆಯೇ ಭಯಪಟ್ಟವರೆಂದು ತಿಳಿಯಿತು. ...ಯಾತ್ರೆಯನ್ನು ಮುಗಿಸಿಕೊಂಡು ಸಕುಶ...ಲರಾಗಿ ಹಿಂದಿರುಗಿದರೆ, ಹಣ ಮಂತ ...ದೇವರಿಗೆ ಕೆಲವರು, ಕಾಳಿಮಾತೆಗೆ ಕೆಲ...ವರು ಹರಕೆಹೊತ್ತಿದ್ದರು. ತಮ್ಮ ತಮ್ಮ ...ಇಷ್ಟದೇವತೆಯ ಸ್ಮರಣೆಯಲ್ಲಿ ಎಲ್ಲರ ನಾ...ಲಿಗೆಗಳೂ ಅಲ್ಲಾಡುತ್ತಿದ್ದವು.

ಕ್ಯಾಬಿನ್ನಿನಲ್ಲಿ ಕುಳಿತು ನಾವು ನಮ್ಮ ...ನಮ್ಮ ವಿಚಾರಗಳಲ್ಲಿ ಮಗ್ನರಾಗಿದ್ದಾಗ, ...ಯಾರೋ ರೋದಿಸುತ್ತಿದ್ದ ಕರ್ಕಶ ಧ್ವನಿ...ಯು, ನಮ್ಮ ತನ್ಮಯತೆಯನ್ನು ಭಂಗ...ಗೊಳಿಸಿತು. ಹೊರಗೆ ನೋಡಲು, ಒಬ್ಬ...ಳು ಒಬ್ಬ ಬಡ ಮುದುಕಿಯನ್ನು ಬಿಲವಾ...ಗಿ ಪ್ರಹರಿಸುತ್ತಿದ್ದುದು ಕಂಡುಬಂದಿತು. ...ಮುದುಕಿಯು ಮೊದಲನೆ ತರಗತಿಯ ಸ...ಾ... ವಿಶಾಲವಾದ ಆವರಣದಲ್ಲಿ ಪ್ರವೇಶಿಸಿ...ದ್ದುದೇ ಆಕೆಯು ಮಾಡಿದ ಅಪರಾಧ. ...ಸ್ತ್ರೀಯ ಒಬ್ಬ ವರ ಪುತ್ರನು ನಾಸಿದ್ದ ...ಕ್ಯಾಬಿನ್ನನ್ನು ಬಿಟ್ಟು, ಉಳಿದೆಲ್ಲವ...ನ್ನು ರಿಜರ್ವ್ ಮಾಡಿಸಿಕೊಂಡಿದ್ದನ...ಕಂದ ಮೇಲೆ ಆ ಬಡ ಮುದುಕಿಯು ಆ ...ಆವರಣದಲ್ಲಿ ಪ್ರವೇಶ ಮಾಡಬಹುದೇ?

ಹತ್ತು ಘಂಟೆಗೆ ಹಡಗು ತೀರದಿಂದ ...ಒಂದು ಮೈಲು ದೂರದಲ್ಲಿ ನಿಂತಿತು. ...ಯಾತ್ರಿಕರನ್ನು ಕರೆದೊಯ್ಯಲು, ಅನೇಕ...ರು ತಮ್ಮ ತಮ್ಮ ನಾವೆಗಳನ್ನು ತಂದು, ...ಹಡಗನ್ನು ಎಲ್ಲ ಕಡೆಗಳಲ್ಲಿಯೂ ಸುತ್ತು...ವರಿದಿದ್ದರು. ಮಿಂಚುಗಳಂತೆ ಈ ನಾವೆಗ...ಳು ಅಲ್ಲಿ ಹರಿದಾಡುತ್ತಿದ್ದುವು. ಅವರು ...ಯಾತ್ರಿಕರನ್ನು ಆದಷ್ಟು ಹೆಚ್ಚು ಸಂಖ್ಯೆ...ಯಲ್ಲಿ ಕರೆದೊಯ್ಯಬೇಕೆಂದು ಆತುರಪ...ಡುತ್ತಿದ್ದರು. ನಾವು ಕೂಡ ಬೇಗ ಇಳಿ...ಯಬೇಕೆಂದು ತವಕಪಡುತ್ತಿದ್ದೆವು. ಆದ...ರೆ ಹಡಗಿನ ಕ್ಯಾಪ್ಟನ್ನನು ಮಾತ್ರ, ಪೊ...ಲೀಸರು ಬರುವ ವರೆಗೆ ಹಡಗಿನ ಬಾಗಿಲ...ನ್ನು ತೆರೆಯುವುದಿಲ್ಲವೆಂದು ಹೇಳಿ, ಒಳ...ಗೆ ಇದ್ದುಬಿಟ್ಟನು! ಎರಡು ಘಂಟೆಗಳ ...ನಂತರ ಪೋಲೀಸಿನವರ ದರ್ಶನವಾಯಿ...ತು. ನಮ್ಮ ಯಾತ್ರಿಕರೆಲ್ಲ ಗಡಿಬಿಡಿಯಿಂ...ದ ನಾವೆಗಳಲ್ಲಿ ಕುಳಿತು, ಮೇಳದ ಕಡೆ ...ಹೊರಟರು.

ರಾತ್ರಿ ಬಹಳ ಹೊತ್ತಾಗಿದ್ದಿತು. ಬೆ...ಳಗ್ಗೆ ಎದ್ದು ಮೇಳವನ್ನು ನೋಡೋಣ...ವೆಂದು ನಿಶ್ಚಯಿಸಿ, ಡೇರೆಗಳಲ್ಲಿ ಮಲಗಿದೆ...ವು. ಆದರೆ ಅಲ್ಲಿ ಪಕ್ಕದವರ ಕೀರ್ತನೆಗಳ ...ನಾದದಿಂದ ನಿದ್ರಾದೇವಿಯು ನಮ್ಮಿಂದ ದೂರವಾಗೇ ಇರುತ್ತಿದ್ದಳು. ಹಿಂದುಗಡೆಯಿಂದ ಮಕ್ಕಳು ಒಂದಾದ ಮೇಲೊಂದರಂತೆ ಅಳುತ್ತಲೇ ಇದ್ದುವು. ಬೆಳಗಿನ ಝಾಮದಲ್ಲಿ ಎಲ್ಲಿಯೋ ಸ್ವಲ್ಪ ನಿದ್ದೆ ಹತ್ತಿತು.

ಬೆಳಗಾದ ನಂತರ ನಾವು ಸಂಗಮ ತೀರ್ಥದಲ್ಲಿ ಸ್ನಾನಮಾಡಲು ಹೊರಟೆವು. ಸಮುದ್ರ ತಟವು ಅತ್ಯಂತ ಅಸಹನೀಯವಾದ ದುರ್ಗಂಧದಿಂದ ಕೂಡಿದ್ದಿತು. ಕಾಲಿಡುವುದಕ್ಕೆ ಸ್ಥಳವಿರಲಿಲ್ಲ. ತೀರ್ಥಯಾತ್ರಿಗಳು ಪವಿತ್ರ ಸ್ನಾನದಲ್ಲಿ ಗಂಗಾಮಾತೆಯ ಸಾಕ್ಷಿಯಲ್ಲಿ ಮನಸ್ಸು ಮತ್ತು ದೇಹದ ಒಟ್ಟು ಕೊಳೆಯನ್ನು ಹೊರಗೆ ಹಾಕಿದ್ದರು! ಹೇಗೋ, ಸ್ನಾನ ಮಾಡಿ ಹೊರಟೆವು. ಸಮುದ್ರ ತೀರದಲ್ಲಿ ನೋಡಿದ ಎಲ್ಲಕ್ಕಿಂತ ಸೊಗಸಾದ ವಿಷಯವೇನೆಂದರೆ, ಒಂದೊಂದು ಬಿಲ್ಲೆಗೆ (೩ಕಾಸು) ಗೋದಾನದ ಪುಣ್ಯವು ಮಾರಾಟವಾಗುತ್ತಿತ್ತು. ಕೆಲವರು ಚಂದನಗಳನ್ನು ಧರಿಸಿ, ಕರುಗಳ ಬಾಲವನ್ನು ಹಿಡಿದಿರುತ್ತಿದ್ದರು. ಕಣ್ಣು ಮುಚ್ಚಿಕೊಂಡವರ್ಯಾರಾದರೂ ವೇದಮಂತ್ರಗಳ ಉಚ್ಚಾರಣೆಮಾಡಿ, ದುಡ್ಡು ಕೊಟ್ಟವರಿಗೆ ಗೋದಾನದ ಪುಣ್ಯವನ್ನು ಹಂಚಿಬಿಡುತ್ತಿದ್ದರು! ಇಂತಹ ಅಗ್ಗವಾದ ಪುಣ್ಯವನ್ನು ಯಾರೇ ಆಗಲಿ, ಬೇಡವೆನ್ನುವರೇ? ಆಕಳಿನವರನ್ನು ಯಾತ್ರಿಕರು ಸುತ್ತುವರಿದು ನಿಂತಿರುತ್ತಿದ್ದರು. ಜನರು ಒಬ್ಬರಾದ ಮೇಲೊಬ್ಬರಂತೆ, ಗೋದಾನದ ಪುಣ್ಯವನ್ನು ಸೂರೆಗೊಳ್ಳುತ್ತಿದ್ದರು!

ಸಂಗಮ ತೀರ್ಥದಲ್ಲಿ ಸ್ನಾನಮಾಡಿದ ನಂತರ, ನಾವು ಕಪಿಲ ಮುನಿಯ ದರ್ಶನವನ್ನು ಮಾಡಿದೆವು. ರೈಲ್ವೆ ಮತ್ತು ಹಡಗು ಕಂಪನಿಗಳ ಪ್ರಕಟನೆಗಳನ್ನು ನೋಡಿ, ನಾವು ಅಲ್ಲಿ ದೊಡ್ಡ ದೊಡ್ಡ ಮಂದಿರಗಳಿರಬಹುದೆಂದೂ, ಇತರ ತೀರ್ಥ ಸ್ನಾನಗಳಂತೆ ಅಲ್ಲಿಯೂ ಪ್ರಾಚೀನತೆಯ ಅಸ್ತಿತ್ವವಿರುವುದೆಂದೂ ಭಾವಿಸಿದ್ದೆವು. ಆದರೆ ಅಲ್ಲಿಗೆ ಹೋಗಿ ನೋಡಿದರೆ, ನಮ್ಮ ಆಶ್ಚರ್ಯಕ್ಕೆ ಎಣೆಯೇ ಇರಲಿಲ್ಲ. ನಾವು ಹಿಂದೆ ಎಂದೂ ಇಂತಹ ಆಶ್ಚರ್ಯ ಜನಕ ತೀರ್ಥಕ್ಷೇತ್ರವನ್ನು ನೋಡಿರಲಿಲ್ಲ. ತಗಡಿನ ಚಪ್ಪರವೊಂದರಲ್ಲಿ ಸಿಂಧೂರದಿಂದ ಬಳಿಯಲ್ಪಟ್ಟಿದ್ದ ಮೂರು ಮೂರ್ತಿಗಳು ಅಸ್ಥಾಯೀ ರೂಪದಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಲ್ಪಟ್ಟಿದ್ದುವು. ಆ ಮೂರ್ತಿಗಳ ರಚನೆಯನ್ನು ನೋಡಿದರೆ ಅವುಗಳು ಯಾವ ಯುಗದಲ್ಲಿ ನಿರ್ಮಿತವಾದುವೆಂಬುದನ್ನು ಹೇಳುವುದಕ್ಕೆ ಸಾಧ್ಯವಿರಲಿಲ್ಲ. ಕಪಿಲ ಮುನಿಯ ಮಂದಿರವೂ ತಗಡು ಮತ್ತು ಬಿದಿರಿನಿಂದಲೇ ಆಗಿದ್ದಿತು. ಈ ತಗಡನ್ನು ಮತ್ತು ಬಿದಿರು ಬೊಂಬುಗಳನ್ನು ಸಹ ಪ್ರಾಯಶಃ ಬಾಡಿಗೆ ಕೊಟ್ಟು ತಂದಿರಬಹುದು! ಅಥವಾ ಕೇವಲ ಯಾತ್ರಿಗಳ ಆಗಮನವನ್ನು ಸಾರ್ಥಕಮಾಡಲು ಆತುರಾತುರವಾಗಿ ಆ ವಿಚಿತ್ರವಾದ ಮಂದಿರವನ್ನು ನಿರ್ಮಿಸಿದ್ದಿರಬಹುದು! ಮೂರ್ತಿಗಳ ಬಳಿ ಒಬ್ಬ ಪೂಜಾರಿಯೂ ಒಬ್ಬ ಸ್ವಯಂಸೇವಕನೂ ಯಾತ್ರಿಗಳಿಂದ ಪೂಜಾ ಸಾಮಗ್ರಿಗಳನ್ನು ತೆಗೆದುಕೊಳ್ಳುತ್ತಿದ್ದರು. ಸ್ತ್ರೀ ಪುರುಷರಿಗೆ ಪ್ರತ್ಯೇಕ ಸ್ಥಳಗಳ ಮೂಲಕ ಪ್ರವೇಶವಿತ್ತು. ಸ್ವಯಂಸೇವಕರಲ್ಲದೆ, ಪೋಲೀಸಿನ ಉಚ್ಚ ಅಧಿಕಾರಿಗಳು ಸಹ ಮಂದಿರಗಳಲ್ಲಿ ಯಾತ್ರಿಕರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು.

ಮಧ್ಯಾಹ್ನ ನಾವು ಹೊಟ್ಟೆಯ ಪೂಜೆಯನ್ನು ಮುಗಿಸಿಕೊಂಡು, ಮೇಳವನ್ನು ನೋಡಲು ಹೊರಟೆವು. ಮೇಳದ ಮಧ್ಯದಲ್ಲಿ ಸರಿಯಾಗಿ ಒಂದು ವೇದಿಕೆಯು ನಿರ್ಮಿಸಲ್ಪಟ್ಟು, ಅದರ ಮೇಲೆ ಒಬ್ಬ ಸ್ವಯಂಸೇವಕನು ನಿಂತು ಎಲ್ಲವನ್ನೂ ನೋಡುತ್ತಿದ್ದನು. ನಾವೂ ಆ ವೇದಿಕೆಯ ಮೇಲೆ ಹತ್ತಿ ನೋಡಿದೆವು. ಸುಮಾರು 40 ಸಾವಿರ ಯಾತ್ರಿಗಳು ಛಳಿಯಲ್ಲಿ ನಡುಗುತ್ತಿದ್ದರು. ಒಂದು ಮೂಲೆಯಲ್ಲಿ ಒಂದು ಕಟ್ಟೆಯನ್ನು ಕಟ್ಟಿ, ಬಂದವರಿಗೆ ನೀರನ್ನು ಒದಗಿಸುತ್ತಿದ್ದರು. ಅಲ್ಲಲ್ಲೇ ಸ್ನಾನಗೃಹಗಳೂ ಇದ್ದುವು. ಒಂದು ತಾತ್ಕಾಲಿಕ ಆಸ್ಪತ್ರೆಯೂ ಇತ್ತು.

ನಮಗೆ ಅನೇಕ ಸ್ವಾರಸ್ಯವಾದ ದೃಶ್ಯಗಳು ಗೋಚರವಾದುವು. ಒಂದು ಕಡೆಯಲ್ಲಿ ಒಬ್ಬ ಸಾಧು ಬಾಬನು ಬಿದಿರಿಗೆ ಕಾಲುಗಳನ್ನು ಕಟ್ಟಿಕೊಂಡು ಮುಖವನ್ನು ಕೆಳಗೆಮಾಡಿ ಮಲಗಿದ್ದನು. ಪಕ್ಕದಲ್ಲೇ ಹಾಸಿದ್ದ ಒಟ್ಟೆಯ ಮೇಲೆ, ದುಡ್ಡು ರಾಶಿಯಾಗಿ ಬಿದ್ದಿತ್ತು. ಇನ್ನೊಂದು ಕಡೆ ಇನ್ನೊಬ್ಬನು, ಕುತ್ತಿಗೆಯವರೆಗೆ ಮಣ್ಣು ಮುಚ್ಚಿಕೊಂಡು, ಅಂಗಾತವಾಗಿ ಮಲಗಿದ್ದನು. ಅವನ ಸಹಾಯಕನೊಬ್ಬನು ಯಾತ್ರಿಕರನ್ನು ತನ್ನ ಕಡೆಗೆ ಆಕರ್ಷಿಸುತ್ತ, ಬಿಲ್ಲೆಗಳನ್ನು ಪಡೆಯುತ್ತಿದ್ದನು. ಇನ್ನೊಂದು ಕಡೆ ಮಹಾ

(೧೧ನೇ ಪುಟ ನೋಡಿರಿ.)

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ
ಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಿನ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, **ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು** ಮತ್ತು **ಬೊಂಬಾಯಿ.**

Notice.

In the Court of the Dt. Munsiff of Mangalore

R. E. P. No 831/1941
(O. S. No. 4/1939)

Between

Lingamma — Execution Petitioner (DH)

and

Bhagi Hengsu & Others-Respondents (J. DS)

To the Respondents 4 to 7

4. Yamuna- daughter of Laxmi
5. Laxmi
6. Umanath
7. Vittal

} Minors by guardian and their mother Yamuna 4th Respondenta

All residing in Kolambe village, Mangalore Taluk.

Take notice that the above execution petition filed by the petitioner for sale of the mortgaged properties is posted to 11 A. m. 2-6-1942 for settlement of the terms of the sale proclamation and in default of your appearance on the said date either in person or by pleader, it will be proceeded with exparte.

(By order of the Court)

Mangalore } B. Srinivasa Pai
6-4-1942. } Vakil for petitioner

ರೂ. ಅರ್ಧ ಲಕ್ಷ ಮಾನನಷ್ಟ-
ಂಗ್ಲೇಯರು, ವಿಶೇಷವಾಗಿ ಸೈನ್ಯಾಧಿ ಾರಿಗಳು, ಹಿಂದೀ ರೈಲ್ವೇ ಗಾಡಿಗಳಲ್ಲಿ ೇ ಹಿಂದೀಯರಿಗೆ ಮಾಡುತ್ತಿರುವ ಅಪ ಾನದ ಸಿದ್ಧಮಾನಗಳು ಇತ್ತಲಾಗಿ ಧಿಕವಾಗುತ್ತಿವೆ. ಕಾಂಗ್ರೆಸ್ ಪ್ರೆಸಿಡೆಂ ರಾದ ಮೌಲಾನಾ ಆಜಾದ್ ಮತ್ತು ಸಿಂ ನ ಪ್ರಧಾನ ಮಂತ್ರಿಗಳಾದ ಮಿ. ಅಲ್ಲಾ ಕ್ಷರೇ ಫೆಬ್ರವರಿ ತಾ. 17ರಲ್ಲಿ ಲಾಹೋ ನಲ್ಲಿ ಇಂತಹ ಅಪಮಾನಕ್ಕೀಡಾಗಿರುವ ಂದರೆ ಉಳಿದವರ ಪಾಡೇನು? ಇವರು ಸರ್ವ್ ಮಾಡಲ್ಪಡದ ಫಸ್ಟ್‌ಕ್ಲಾಸ್ ಟುಗಳಲ್ಲಿ ಕುಳಿತಿದ್ದರು. ಆಗ ಸೈನ್ಯಾ ಕಾರಿಗಳೊಬ್ಬರು, ರೈಲ್ವೇ ಅಧಿಕಾರಿಗಳ ಮೂಲಕ ಅವರನ್ನೆಬ್ಬಿಸಿದರು. ಅವರೆಷ್ಟು ರೋಧಿಸಿದರೂ ಪ್ರಯೋಜನವಾಗಲಿಲ್ಲ. ಈಗ ಮಿ. ಅಲ್ಲಾ ಭಕ್ಷರು ರೂ. 50,000 ಮಾನನಷ್ಟಕ್ಕಾಗಿ, ನೋರ್ತ್‌ವೆಸ್ಟರ್ನ್ ರೈಲ್ವೇ ವಿಚಾರದ ಮೂಲಕ ಇಂಡಿಯಾ ಕ್ರೆಟರಿಗಳ ಮೇಲೆ ದಾವೆಮಾಡಿರುವರು. ಳಿ ಜನರ ಈ ವರ್ಣದ್ವೇಷ ಮತ್ತು ರ್ವದ ಪ್ರತಿಫಲವನ್ನೇ ಅವರೀಗ ಎರ ು ಕೈಗಳಿಂದ ತಿನ್ನಬೇಕಾಗಿದೆ.

ಅಷ್ಟಾಗಿ ಬರುವಹಾಗಿಲ್ಲ.

ಹಿಂದೀ ಸಂಸ್ಥಾನಾಧಿಪತಿಗಳು ಹಲವ ಲ್ಲಿಂದು ವಿವೇಕೋದಯವಾಗಿರುವುದು ಸಂತೋಷ ವಿಷಯ. ಕಾಶ್ಮೀರದ ಮಹಾ ಾಜರು ಅಖಿಲ ಭಾರತ ಯೂನಿಯನ್ ನೊಂದಿಗೆ ಸೇರಲು ಮುಂದಾಗಿರುವರು. ಬ್ರಿಟಿಷ್ ಸರಕಾರವು ಹಿಂದುದೇಶಕ್ಕೆ ರಾಜ ಕೀಯ ಸ್ವಾತಂತ್ರ್ಯವೀಯುವುದಾದರೆ ದೇಶೀಯ ಸಂಸ್ಥಾನಾಧಿಪತಿಗಳು ಅದಕ್ಕೆ ಅಡ್ಡ ಬರುವ ಹಾಗಿಲ್ಲೆಂದು ನವನಗರದ ಜಾಮ್ ಸಾಹೇಬರು ಹೇಳಿರುವರು.

ಮಗನಿಗೆ ತಂದೆ ವಿರುದ್ಧ

ರುಮೇನಿಯದ ಮಾಜಿ ಅರಸ ಕೆರೋಲ ಂದು ಸ್ವತಂತ್ರ ರುಮೇನಿಯ ಕಮಿಟಿಯ ಧ್ಯಕ್ಷರಾಗಿ ಕೆಲಸಮಾಡಲೊಪ್ಪಿ, ಈಗ ರುಮೇನಿಯ ಸರಕಾರದ ವಿರುದ್ಧವಾಗಿ ತ್ರ ರಾಷ್ಟ್ರಗಳಿಗೆ ನೆರವಾಗಲು ಮುಂದಾ ರುತ್ತಾರೆ. ಅವರ ಪುತ್ರರೇ ರುಮೇನಿ ಯದ ಈಗಿನ ಅರಸರಾಗಿರುತ್ತಾರೆ. ಮಗ ನ ವಿರುದ್ಧವಾಗಿಯಾದರೂ ಕೆಲಸನಾಡ ು ತಂದೆಯು ಸಿದ್ಧರೇ ಇರುತ್ತಾರೆಂದು ಪ್ರಕಟವಾಗಿದೆ. ಮಗನು ಜನರಲ್ ಅಂಟೊ ನೆಸ್ಕುರವರ ಕೈಗೊಂಬೆ ಮಾತ್ರವಲ್ಲದೆ ಅವ ಜವಾಬ್ದಾರಿ ಏನಿದೆ?

ಲಜೊನಿನ ನೆಪೋಲಿಯನರು!

ಜನರಲ್ ಮೆಕ್ ಆರ್ಥರರು ಪಡೆದ ೆಸರಿದು. ಫಿಲಿಪ್ಪಾಯಿನ ಲಜೊನಿನಲ್ಲಿ ಜಾಪಾನರನ್ನು ಅವರು ಮುಂದುವರಿಯ ದಡೆ ಜಯಶೀಲವಾಗಿ ತಡೆಗಟ್ಟಿ ಇಂದೀ ಗ ಲೋಕಪ್ರಸಿದ್ಧರಾಗಿರುವರು ಫಿಲಿ ಪ್ಪಾನನ್ನು ಯುನೈಟೆಡ್ ಸ್ಟೇಟ್ಸಿಗೆ ರಕ್ಷಿ ಸಿಕೊಳ್ಳಲು ಸಾಧ್ಯವಾಗಲಾರದೆಂದು

ಚುಟುಕು ಟೀಕೆ-ಟಿಪ್ಪಣಿ

ಹೆಚ್ಚಿನ ಸೇನಾನಿಗಳು 1937ರಲ್ಲೇ ಅಭಿ ಪ್ರಾಯಪಟ್ಟಿದ್ದರು. ಆಗ ಜನರಲ್ ಮೆಕ್ ಆರ್ಥರರೊಬ್ಬರೇ ಅದು ಸಾಧ್ಯವೆಂದು ಪ್ರತಿಪಾದಿಸಿ, ಆದರ್ಶ ಸ್ಫೂರ್ತಿ, ಆತ್ಮ ವಿಶ್ವಾಸ ಮತ್ತು ಉತ್ಸಾಹದಿಂದ ಫಿಲಿ ಪೀನೋ ಸೇನೆಯನ್ನು ಸಂಘಟಿಸತೊಡಗಿ ದರು. ಫಿಲಿಪ್ಪಾಯಿನ ಜನರನ್ನು ವೀರ ಸೈ ನಿಕರಾಗಿ ಸಂಘಟಿಸಿದರು. ಇಂದೀಗ ಆವ ರ ವಿಶ್ವಾಸ ಮತ್ತು ಉತ್ಸಾಹವು ಸಾರ್ಥ ಕವಾಗಿರುವುದು. ದಕ್ಷಿಣ ಪಶ್ಚಿಮ ಶಾಂತ ಸಾಗರವನ್ನಾವರಿಸಿರುವ ಕಾರ್ಮುಗಿಲಿನ ಬಿರುಕಿನಲ್ಲಿ ಬೆಳಗುವ ಜ್ಯೋತಿಯೆಂದರೆ ಅವರೊಬ್ಬರೇ.

ಮಾರ್ಶಲ್ ಪೆಟೈನರೇನುಮಾಡು ವರು?

ಹಣ್ಣು ಮುದುಕ ಮಾರ್ಶಲ್ ಪೆಟೈನ ರಿಂದು ದೊಡ್ಡ ಉಭಯ ಸಂಕಟದಲ್ಲಿ ಬಿದ್ದಿರುವಂತಿದೆ. ನಾಝಿಗಳು ಪುನಃ ಎಮ್. ಲಾವಲರನ್ನೆತ್ತಿಕಟ್ಟಿ, ಅವರನ್ನು ವಿಶಿಫ್ರಾನ್ಸಿನ ಪ್ರಧಾನ ಮಂತ್ರಿಗಳನ್ನಾಗಿ ಮಾಡಿ ತಮ್ಮ ಹಸ್ತಕರನ್ನಾಗಿ ಉಪಯೋ ಗಿಸಲು ಮುಂದಾಗಿರುವಂತಿದೆ. ಮಾರ್ಶ ಲ್ ಪೆಟೈನ್ ಮತ್ತು ಲಾವಲರೊಳಗೆ ಮಾತುಕತೆ ನಡೆದಿರುವರು ಸಂಗಾಮ ವೇನೆಂದು ತಿಳಿದಿಲ್ಲ. ಎಮ್. ಲಾವಲರು ಪ್ರಧಾನ ಮಂತ್ರಿಗಳಾದರೆ, ವಿಶಿ ಫ್ರಾನ್ಸು ಜರ್ಮನರೊಂದಿಗೆ ಸಂಪೂರ್ಣವಾಗಿ ಸಹ ಕರಿಸಿ ಹಡಗುಗಳನ್ನು ಒಪ್ಪಿಸುವಂತಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆಗ ಯುನೈಟೆಡ್ ಸ್ಟೇಟ್ಸು ಅದಕ್ಕೆ ವಿರುದ್ಧವಾಗುವುದೆಂಬು ದು ನಿಶ್ಚಯ. ಆದರೆ ಯುನೈಟೆಡ್ ಸ್ಟೇಟ್ಸಿನ ಸಹಾನುಭೂತಿ ಮತ್ತು ಸಹಾ ಯವನ್ನು ಕಳಕೊಳ್ಳಲು ಪೆಟೈನರು ಸಿದ್ಧ ರಿರುವಂತಿಲ್ಲ. ಅವರು ನಾಝಿ ಒತ್ತಾಯ ವನ್ನು ಹೇಗೆ ಪ್ರತಿಭಟಿಸುವರೋ?

ಟರ್ಕಿಯ ಗತಿಯೇನಾಗುವುದು?

ಆಕ್ಸಿಸ್ ಮತ್ತು ಮಿತ್ರರಾಷ್ಟ್ರಗಳೊಳಗೆ ಮೈತ್ರಿಯ ತಕ್ಕಡಿಯನ್ನು ಸಮತೂಕವಾ ಗಿರಿಸಿ ತನ್ನ ಅಸ್ತಿತ್ವವನ್ನುಳಿಸಿಕೊಳ್ಳಲು ಸಾಧ್ಯವಾಗಿರುವ ಯುರೋಪಿನ ಒಂದೇ ಒಂದು ಚಿಕ್ಕ ರಾಷ್ಟ್ರವೆಂದರೆ ಟರ್ಕಿ. ಆದ ರೆ ಮುಂದೆ ಅದರ ಗತಿಯೇನಾಗುವುದೋ ತಿಳಿಯದು! ಜರ್ಮನಿಯು ಅದನ್ನು ತನ್ನ ಗಡೆಗೊಲಿಸಿಕೊಳ್ಳಲು ನಾನಾ ರೀತಿಯ ಆಶೆ ತೋರಿಸಿ ಸಾಧ್ಯವಾದ ಪ್ರಯತ್ನ ಮಾಡುತ್ತಿದೆ. ಆದರೆ ಟರ್ಕಿಯು, ಬ್ರಿಟ ನ್ ಮತ್ತು ರಷ್ಯಗಳೊಡನೆ ನಿಜವಾದ ಗೆಳೆತನವಿಂದಿರುವ ಮನಸ್ಸುಳ್ಳದ್ದಿರುವದು. ಟರ್ಕಿಯ ವಿದೇಶ ಮಂತ್ರಿ ಎಮ್. ಸರ ಜೊಗ್ಲುರವರು ಇತ್ತಲಾಗಿ ಬ್ರಿಟಿಷ್ ಮತ್ತು ಸೋವಿಯೆಟ್ ರಾಯಭಾರಿಗಳೊಂ ದಿಗೆ ಹೆಚ್ಚಿನ ಸಂಪರ್ಕ ಬೆಳೆಸಿರುವರು. ಬ್ರಿಟಿಷ್ ಬೋಂಬರ್ ಮತ್ತು ಫೈಟರ್ ವಿಮಾನಗಳೂ, ಡಿಸ್ಟ್ರೋಯರ್ ಹಡಗ ಗಳೂ ಇತ್ತಲಾಗಿ ಟರ್ಕಿಯಲ್ಲಿ ಬಂದಿಳಿ ದಿರುವವು. ಜರ್ಮನರ ಕಣ್ಣಿಗೆ ಸುಣ್ಣ ವಾಗುವ ಸಂಗತಿಗಳಿವು. ಟರ್ಕಿಯು ಸಂ ದುಕಟ್ಟಿನಲ್ಲಿ ಪ್ರಬಲ ಸೇನಾ ಸಿದ್ಧತೆಯಿಂ ದ ಗಟ್ಟಿಯಾಗಿ ನಿಂತಿರುವುದರಿಂದ ಹಿಟ್ಲ ರರು ಅದನ್ನು ಕೆಣಕಲು ಹಿಂಜರಿಯುತ್ತಿ ರುವರು. ಆದರೆ ಮಧ್ಯಪೂರ್ವದ ಮತ್ತು ಕೊಕಸಸಿನ ಮೇಲೆ ಅವರು ಜಯಶೀಲ ವಾಗಿ ಧಾಳಿ ನಡೆಸಬೇಕಾದರೆ, ಒಂದೋ ಟರ್ಕಿಯನ್ನು ಹಸ್ತಕವಾಗಿ ಮಾಡಿಕೊಳ್ಳ ಬೇಕು; ಇಲ್ಲವೆ ಅದನ್ನು ಆಕ್ರಮಿಸಿ ಅಧೀ ನಪಡಿಸಿಕೊಳ್ಳಬೇಕು. ಹಸ್ತಕವಾಗಲು ಟರ್ಕಿಯು ಸಿದ್ಧವಿರುವಂತಿಲ್ಲ. ಟರ್ಕಿಯ ಆಕ್ರಮಣವು ಅತ್ಯಗತ್ಯವಾಗುವಾಗ ಹಿಟ್ಲ ರರದಕ್ಕೂ ಮುಂದಾಗಬಹುದೆಂದೇ ಹೇಳ ಬಹುದು.

ಜರ್ಮನಿಯ ಕೈಗಾರಿಕಾ ಹೃದಯ:

ರ್‌ಹ್ರ್ ಪ್ರದೇಶವು ಬರ್ಲಿನಿಗಿಂತ ಎರ ಡುಪಾಲಷ್ಟು ಮಾತ್ರ ವಿಸ್ತೀರ್ಣ ಪ್ರದೇಶ. ಆದರೆ ಜರ್ಮನಿಯ ಸೇಕಡಾ 75 ರಷ್ಟರ ಇದ್ದಲು, ಸೇಕಡ 70ರಷ್ಟರ ಕಚ್ಚಾ ಕಬ್ಬಿ ಣ ಮತ್ತು ಉಕ್ಕು, ಸರಬರಾಯಿ ಆಗುವು ದು ರ್‌ಹ್ರ್‌ಲಾರಿಸಿಂದ. ಜರ್ಮನಿಯ ಶಕ್ತಿ ಯ ಆಶ್ರಯವದು. ಅದರ ಪ್ರಾಮುಖ್ಯ ವಾದೊಂದು ರಕ್ತನಾಡಿ. ಯುರೋಪಿನ ಅತಿ ದೊಡ್ಡ 'ವರ್ಕ್ ಶೋಪ್' ರ್‌ಹ್ರ್. ಜರ್ಮನಿಯ ಕೈಗಾರಿಕ ಹೃದಯದಂತಿರು ವ ರ್‌ಹ್ರಿನ ಮೇಲೆ ಬ್ರಿಟಿಷ್ ವಿಮಾನಗ ಳು ಪ್ರಬಲವಾಗಿ ಮತ್ತು ಎಡೆಬಿಡದೆ ಧಾ ಳಿ ನಡೆಸುತ್ತಿವೆ. ಇದರಿಂದ ಜರ್ಮನಿ ಯು ತಲ್ಲಣಗೊಳ್ಳುವಂತಾಗುವುದೆಂಬುದ ರಲ್ಲಿ ಸಂದೇಹವಿಲ್ಲ.

10 ಮಂದಿ ಜರ್ಮನರಿಗಾಗಿ 4000 ಸರ್ವಿಯನರ ಕೊಲೆ!

ಯುರೋಪಿನಲ್ಲಿ ನಾಝಿಗಳು ಆಕ್ರಮಿ ಸಿರುವ ರಾಜ್ಯಗಳಲ್ಲಿ ಜನವಿರೋಧವು ಹೆ ಚ್ಚುತ್ತಿರುವುದು. ಅದೇ ಮೇರೆಗೆ ಹೃದ ಯ ರಹಿತ ನಾಝಿಗಳ ಪೈಶಾಚಿಕ ಹಿಂಸೆ ಮತ್ತು ಕೊಲೆಗಳೂ ಅಧಿಕವಾಗುತ್ತಿರುವ ವು. ಯುಗೊಸ್ಲಾವಿಯದ ಕ್ರಗುಯೆವಚ್ ಎಂಬಲ್ಲಿ 10 ಮಂದಿ ಜರ್ಮನರಿಗಾಗಿ ಸು ಮಾರು 4000 ಸರ್ವಿಯನರು ಕೊಲೆಮಾ ಡಲ್ಪಟ್ಟಿರುವ ಪ್ರಕರಣವು ಅಮಾನುಷವಿ ರುವುದು. ಈ ಪಟ್ಟಣದ ಬಳಿ ಇದ್ದ ಜ ರ್ಮನ್ ಸೈನಿಕ ಸಂಗಡದ ಮೇಲೆ ಕ ಮ್ಯೂನಿಸ್ಟರು ಬಿದ್ದು 10 ಮಂದಿಯನ್ನು ಕೊಂದು 26ಮಂದಿಯನ್ನು ಗಾಯಗೊಳ ಸಿದರು. ಕೊಲ್ಲಲ್ಪಡುವ ಪ್ರತಿಯೊಬ್ಬ ಜ ರ್ಮನ್ ಸೈನಿಕನಿಗೆ 100, ಮತ್ತು ಗಾಯ ಗೊಳ್ಳುವ ಪ್ರತಿಯೋರ್ವನಿಗೆ 50 ಮಂದಿ ಸರ್ವಿಯನರನ್ನು ಕೊಲ್ಲಬೇಕೆಂದು ಹಿಟ್ಲ ರರ ಆಜ್ಞೆಯಂತೆ. ಆ ಪ್ರಕಾರ ಜರ್ಮ ನ್ ಸೈನಿಕರು,ಸ್ತ್ರೀಯರು,ಮಕ್ಕಳು ವೃದ್ಧ ರೆನ್ನದೆ ಕ್ರಗುಯೆವೆಚಿನ ಸುಮಾರು 7000 ಮಂದಿಯನ್ನು ಬಲಾತ್ಕಾರದಿಂದೊಂದೆಡೆ ಸೇರಿಸಿ ಮಿಶನ್ ತೋಪು ಮೂಲಕ ಅವರ ಮೇಲೆ ಗುಂಡುಹಾರಿಸಿ ಸುಮಾರು 4000 ಮಂದಿಯನ್ನು ಕೊಂದು ಹಾಕಿರುವರೆಂ ದು ತಿಳಿದು ಬಂದಿದೆ. ನಾಗರಿಕ ಬರ್ಬರ ತೆಯ ಪರಮಾವಧಿಯಿದಲ್ಲವೇ ಇದು!

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮೊ ತ್ತ, ಹಾಲಿ, ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇ ಕ್ಷಿಸಲಾಗುತ್ತದೆ.

ಮೆನೇಜರ್.

FIXED DEPOSITS

are now accepted at all our offices, at attractive rates of interest.
For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವುವು. ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

ಕನ್ನಡ ಪತ್ರಿಕಾ ಪ್ರಪಂಚದಲ್ಲೊಂದು ಕ್ರಾಂತಿ!

ಅಂತರಂಗದ ಯುಗಾದಿ ಸಂಚಿಕೆ

ಅಖಿಲ ಕನ್ನಡಿಗರಿಗೆ ಯುಗಾದಿಯ ಔತಣ

ಯುದ್ಧದ ದಿಗಿಲಿನಲ್ಲೂ ಮಿಗಿಲಾದ ಸಾಹಸ!

ಪ್ರಕಟಣೆ: ತಾ. 14-4-'42 :: **ಬೆಲೆ:** ನಾಲ್ಕಾಣೆ.

ಐದಾಣೆ ಸ್ಟಾಂಪು ಕಳಿಸಿದವರಿಗೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ಮೆನೇಜರ್, ಅಂತರಂಗ, ಉಡುಪಿ.

The Canara Banking Corporation Ltd.
(Incorporated in British India with limited liability)
ESTD 1906
will now receive
SEASON DEPOSITS
for a period of 4 months
at 3% p a
AT ALL ITS BRANCHES

ಉಡುಪಿ, ಗುರುವಾರ, ೯-೪-೧೯೪೨

ವಸಂತದ ಮಹಾ ಯುದ್ಧ.

ಇಂದೀಗ ವಸಂತ ಋತುವು ಆರಂಭವಾಗಿರುವುದು ರಷ್ಯದಲ್ಲಿ ಗಟ್ಟಿ ಕಟ್ಟಿದ್ದ ಹಿಮವು ಕರಗಹತ್ತಿರುವುದು. ಇನ್ನೂ ಕೆಲವು ವಾರಗಳು ಬೇಕು ಹಿಮವು ಸಂಪೂರ್ಣ ಕರಗಿ ಪ್ರಚಂಡ ಹೋರಾಟಕ್ಕೆ ಅನುಕೂಲ ಪರಿಸ್ಥಿತಿಯುಂಟಾಗುವುದಕ್ಕೆ. ರಷ್ಯದ ತನ್ನ ಅಪಜಯಕ್ಕೆ ಹಿಟ್ಲರರು, ಅಭೂತಪೂರ್ವ ತೀವ್ರ ಚಳಿಗಾಲವು ಕಾರಣವೆಂದು ಹೇಳಿದ್ದಾರೆ ವಸಂತವು ಬಂದೊಡನೆಯೇ ಜರ್ಮನ್ ಸೇನೆಯು ತನ್ನ ಸಾಮರ್ಥ್ಯ ತೋರಿಸಿ ಕೆಂಪು ಸೇನೆಯನ್ನು ಸದೆಬಡಿಯುವ ದೃಢ ವಿಶ್ವಾಸ ಸೂಚಿಸಿದ್ದಾರೆ ಲೋಕದಲ್ಲೆಲ್ಲಾ ಆತುರ ಮತ್ತು ತಲ್ಲಣವನ್ನುಂಟುಮಾಡಿರುವ ಹಿಟ್ಲರರ ವಸಂತ ದಾಳಿಯು ಇಂದೀಗ ಆರಂಭವಾಗಿರುವುದು. ಇದಕ್ಕಾಗಿ 4 ಮಿಲ್ಯ ಸೇನ ಮತ್ತು ಅತಿ ಹೆಚ್ಚಿನ ಯುದ್ಧೋಪಕರಣಗಳ ಸ್ಟಾಕು ಸಂಗ್ರಹಿಸಿರುವರೆಂದು ತಿಳಿದುಬಂದಿದೆ. ಬಾಲ್ಟಿಕ್‌ನಿಂದ ಕಪ್ಪು ಸಮುದ್ರದವರೆಗಿನ ರಣರಂಗದಲ್ಲಿವರು ಒಂದೇ ಸವನೆ ಪ್ರಚಂಡ ದಾಳಿಯನ್ನಾರಂಭಿಸಿ ರಷ್ಯವನ್ನು ಅವಷ್ಟು ಶೀಘ್ರವಾಗಿ ಬಗ್ಗುಬಡಿಯಲು ಮಾತೆಂದರೆ ತ್ರಿವಾರ ಉತ್ತರದ ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಹೆಚ್ಚಿನ ಜರ್ಮನ್ ವಿಮಾನಪಡೆಯು ಸಂಗ್ರಹಿಸಲ್ಪಟ್ಟಿದೆ ಮಧ್ಯಭಾಗದಲ್ಲಿ ಮೋಸ್ಕೋ ಪಟ್ಟಣದ ಎದುರೀ ಸೇನೆಯು ಸೇರಿಸಲ್ಪಟ್ಟಿದೆ ಹಿಟ್ಲರರು ಕೊನೆಯಲ್ಲಿ ಸೋವಿಯೆಟ್ ರಷ್ಯವನ್ನು ಸೋಲಿಸುವ ಕಡೆಗೇನೇ ಸಂಪೂರ್ಣ ಲಕ್ಷ್ಯ ಕೊಟ್ಟರೆ ರಷ್ಯದ ರಣರಂಗದಲ್ಲೇ ತಮ್ಮ ಸೇನ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ದಾಳಿ ನಡೆಸುವರೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಇನ್ನು ಕೆಲವು ವಾರಗಳಲ್ಲಿ ರಷ್ಯದಲ್ಲಿ ಹಿಂದೆಂದೂ ನಡೆಯದ ಘೋರ ಕದನಗಳು ನಡೆಯಲಿರುವವು. ಲೋಕದ ಭವಿಷ್ಯವು ಅವುಗಳ ಪರಿಣಾಮದ ಮೇಲೆ ಹೊಂದಿಕೊಂಡಿರುವುದು. ಆದುದರಿಂದ ರಷ್ಯದ ಯುದ್ಧರಂಗವು ನಿಜವಾಗಿಯೂ ಲೋಕದ ರಣರಂಗವಾಗಿ ಪರಿಣಮಿಸಿ ಇಡೀ ಲೋಕದ ದೃಷ್ಟಿಯು ಆ ಕಡೆಗೆ ಹರಿದಿರುತ್ತದೆ

ರಷ್ಯವು ಪ್ರತಿಭಟಿಸಬಲ್ಲುದೇ?

ಕಳೆದ ವರ್ಷ ಸೆಕೆಕಾಲದಲ್ಲಿ ಹಿಟ್ಲರರು ಅನಿರೀಕ್ಷಿತವಾಗಿ ಥಕ್ಕನೆ ರಷ್ಯವನ್ನು ಹಿಂದಿನಿಂದ ತಿವಿದರು ಯುರೋಪಿನ ಹಲವು ರಣರಂಗಗಳ ನವೀನರೀತಿಯ ಯುದ್ಧದ ಅನುಭವ ಮತ್ತು ವಿಜಯ ದುಬ್ಬಿನಿಂದ ತುಂಬಿದ್ದ ನಾಝೀ ಸೇನೆಯು, ಕೆಂಪು ಸೇನೆಯನ್ನು ಕೆಲವೇ ವಾರಗಳಲ್ಲಿ ನಾಶಮಾಡಿಬಿಡಬಹುದೆಂಬ ದೃಢ ಭರವಸೆ ಮತ್ತು ಉತ್ಸಾಹದಿಂದ ರಷ್ಯದ ಮೇಲೆ ಬಿದ್ದಿತು. ಈ ನಾಝಿ ಪಡೆಯ ಪ್ರಚಂಡ ಧಾಳಿಯನ್ನು ಕೂಡಲೆ ಪ್ರತಿಭಟಿಸಲಾರದೆ ಸೋವಿಯೆಟ್ ಸೇನೆಯು ಹೆಜ್ಜೆ ಹೆಜ್ಜೆಗೂ ಘನಘೋರ ಸಂಗ್ರಾಮ ನಡಿಸುತ್ತಾ ಹಿಂದೆ ಸರಿಯಿತು ಜರ್ಮನರು ಫಲವತ್ತಾದ ಉಕ್ರೈನನ್ನು ಗೆದ್ದರು ದೊಡ್ಡ ಕೈಗಾರಿಕಾ ಕೇಂದ್ರಗಳನ್ನು ವಶಪಡಿಸಿಕೊಂಡರು ಲೆನಿನ್‌ಗ್ರಾಡ್ ಮತ್ತು ಮೋಸ್ಕೋಗಳು ಅವರ ವಶವಾಗುವುದು ನಿಶ್ಚಯವೆಂಬಂತಿತ್ತು ಈ ಕಂಟಕದ ಸಂಧಿಕಾಲದಲ್ಲಿ ಸೋವಿಯೆಟ್ ಸರಕಾರವು ವಿಚಿತ್ರ ಸಾಮರ್ಥ್ಯದಿಂದ ಅದೊಂದು ಅದ್ಭುತವನ್ನೇ ಮಾಡಿ ಬಿಟ್ಟಿತು ನವೀನವಾಗಿ ನಿರ್ಮಿತವಾಗಿರುವ ತನ್ನ ಶಕ್ತಿ ಸರ್ವಸ್ವವನ್ನೂ ಶೇಖರಿಸಿ ಕೇಂದ್ರೀಕರಿಸಿ ನಾಝಿ ಪಡೆಯ ಮುನ್ನಡೆಯನ್ನದು ತಡಯಿತು ಚಳಿಗಾಲ ಬರುವ ಮೊದಲು ಲೆನಿನ್‌ಗ್ರಾಡ್ ಮತ್ತು ಮೋಸ್ಕೋಗಳನ್ನು ಗೆದ್ದುಬಿಡಬೇಕೆಂದು ಹಿಟ್ಲರರು ಮಾಡಿದ ಪ್ರಯತ್ನವು ಅಸ್ಪಿಷ್ಟಲ್ಲ ಆದರೆ ಕೆಂಪು ಸೇನೆಯ ಮತ್ತು ಸೋವಿಯೆಟ್ ಜನಾಂಗದ ಧೈರ್ಯ, ಸ್ಥೈರ್ಯ, ಉತ್ಸಾಹ ತ್ಯಾಗ ಮತ್ತು ಶಕ್ತಿಯ ಮುಂದದು ನಿರರ್ಥಕವಾಯಿತು ಸೋವಿಯೆಟ್ ರಷ್ಯವು ಆತನಕ ಅಜೇಯವೆನಿಸಿಕೊಂಡಿದ್ದ ನಾಝಿ ಸೇನೆಯನ್ನು ಜಯಶೀಲವಾಗಿ ಪ್ರತಿಭಟಿಸಿ ನಿರಾಶಾಮಯ ಕತ್ತಲು ಕವಿದಿದ್ದ ವಾತಾವರಣದಲ್ಲಿ ಆಶೋದಯದ ಸುಪ್ರಭಾತದ ಮುಂದ ಪ್ರಕಾಶ ಬೀರಿತು ಹಿಟ್ಲರರ ಸುಮಾರು ೯ ತಿಂಗಳುಗಳ ಭೀಕರ ಹಾಗೂ ಪ್ರಚಂಡ ಧಾಳಿಯಿಂದ ರಷ್ಯವು ತತ್ತರಿಸಿತು. ಆ ಕಾಲದಲ್ಲದು ಪಡೆದ ನಷ್ಟಕಷ್ಟಗಳಾದರೂ ಎಷ್ಟು! ಆದರೂ ಅದು ಧೃತಿಗೆಡದೆ, ಉತ್ಸಾಹ ಕುಂದದೆ ಯಾವ ಪ್ರಕಾರ ಹೋರಾಟ ನಡಿಸಿ ಹೊಸ ಇತಿಹಾಸವನ್ನೇ ಮಾಡಿಬಿಟ್ಟಿತು ಅದರ ಸಮತಾವಾದಿ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಯಿಂದ ಮಾತ್ರ ಅದು ಸಾಧ್ಯವಾಯಿತೆಂದು ಧೈರ್ಯವಾಗಿ ಹೇಳಬಹುದು. ಚಳಿಗಾಲ ಆರಂಭವಾದೊಡನೆಯೇ ಜರ್ಮನರ ಯುದ್ಧೋತ್ಸಾಹವು ಕುಂದಿಹೋಯಿತು ಕಾದಿ ಕಾದಿ ಸೋತು ಹೋದರವರು. ರಷ್ಯದ ತೀವ್ರ ಚಳಿಗಾಲದ ಕಷ್ಟಗಳವರನ್ನು ಧೃತಿಗೆಡಿಸಿಬಿಟ್ಟವು. ಈ ಸಂದರ್ಭ ಸಾಧಿಸಿಕೊಂಡು, ನವೀನವಾಗಿ ಸಂಘಟಿಸಲ್ಪಟ್ಟ ಪ್ರಚಂಡ ಸೇನೆಯನ್ನುಪಯೋಗಿಸಿ ಸೋವಿಯೆಟ್ ಸರಕಾರವು ಚಳಿಗಾಲದ ಪ್ರಬಲ ಧಾಳಿಯನ್ನಾರಂಭಿಸಿತು ಜರ್ಮನರನ್ನು ಕಂಗೆಡಿಸಿತು. ಕೆಂಪು ಸೇನೆಯ ಬಲವನ್ನು ಹಿಟ್ಲರರೇ ಅಂಗೀಕರಿಸಿ ಪ್ರಶಂಸಿಸುವಂತೆ ಮಾಡಿಬಿಟ್ಟಿತು ಹಿಟ್ಲರರ ವಸಂತದ ಪ್ರಚಂಡಧಾಳಿಯ ಪ್ಲೇನೇ ತಪ್ಪಿಹೋಯಿತು ಜರ್ಮನ್ ಸೈನಿಕರಿಗೆ ರಷ್ಯದ ಯುದ್ಧವು ಸಾಕುಸಾಕೆನಿಸುವಂತಾಯಿತು. ಇಂದೀಗ ರಷ್ಯವು ಮಿತ್ರರಾಷ್ಟ್ರಗಳ ಆಶಾಜ್ಯೋತಿಯಾಗಿ ಪ್ರಕಾಶಿಸುತ್ತಿರುವುದು. ಕಳೆದ ಮೂರು ತಿಂಗಳುಗಳಲ್ಲಿ ಪಡೆದ ವಿಜಯಗಳಿಂದ ನವೀನ ಉತ್ಸಾಹದಿಂದ ತುಂಬಿ ತುಳುಕುತ್ತಿರುವುದು ನಾಝಿ ಜರ್ಮನಿಯನ್ನು ಸದೆಬಡಿಯಬಹುದೆಂಬ ದೃಢ ವಿಶ್ವಾಸವೂ ಅದಕ್ಕಿರುವುದು.

ರಷ್ಯವನ್ನು ಗೆಲ್ಲಲು ಸಾಧ್ಯವಾಗಲಾರದು

ಇಂದಿನ ಯುದ್ಧದ ವಿಷಯದಲ್ಲಿ ನಿಶ್ಚಿತವಾದ ಭವಿಷ್ಯ ಹೇಳುವುದೊಂದು ಎಡೆಗಾರಿಕೆ ಯಾಕೆಂದರೆ ಪರಿಸ್ಥಿತಿಯು ಮಿಂಚಿನವೇಗದಿಂದ ಬದಲಾವಣೆ ಹೊಂದಿಬಿಡುವದು. ಆದರೂ ಜರ್ಮನಿಗೆ ರಷ್ಯವನ್ನು ಗೆಲ್ಲಲು ಸಾಧ್ಯವಾಗಲಾರದೆಂದು ಧೈರ್ಯದಿಂದ ಹೇಳಬಹುದು ಹಿಟ್ಲರರು ಒಮ್ಮೆ ಪ್ರಚಂಡ ಧಾಳಿ ನಡಿಸಿ ಕೆಲವಷ್ಟಿನ ವಿಜಯಗಳನ್ನು ಪಡೆಯಬಹುದು ಆದರೆ ಅದನ್ನು ತಡಕೊಳ್ಳುವಷ್ಟರ ಶಕ್ತಿಯು ರಷ್ಯಕ್ಕಿದೆ ಅಲ್ಲದೇನೂ ಸುಮ್ಮನಿರಲಿಲ್ಲ ಹೋರಾಟ ನಡಿಸುತ್ತಿದ್ದಂತೆಯೇ ಹೊಸ ಹೊಸ ಸೈನಿಕ ದಳಗಳನ್ನು ಸಂಘಟಿಸುತ್ತಾ ಬಂದಿರುವುದು ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪಿಸಿ ಬಹದಿಂದ ಯುದ್ಧೋಪಕರಣಗಳನ್ನು ತಯಾರಿಸಿರುವುದು ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟನುಗಳು ಅದಕ್ಕೆ ಸಾಧ್ಯವಾದಷ್ಟು ಯುದ್ಧೋಪಕರಣಗಳನ್ನೊದಗಿಸಿವೆ. ಆದುದರಿಂದ ಜರ್ಮನಿಯು ಎಂತಹ ಪ್ರಚಂಡ ಧಾಳಿಯನ್ನಾದರೂ ಪ್ರತಿಭಟಿಸಲು ರಷ್ಯಕ್ಕೆ ಸಾಧ್ಯವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ ಹಿಟ್ಲರರು ಎಷ್ಟೆಂದು ಹುರಿದುಂಬಿಸಿದರೂ ಜರ್ಮನ್ ಸೇನೆಯು ಮೊದಲಿನಷ್ಟು ಶಕ್ತಿ ಮತ್ತು ಉತ್ಸಾಹದಿಂದಿರುವುದಿಲ್ಲೆಂದು ಹೇಳಬಹುದು. ರಷ್ಯದ ಯುದ್ಧದಲ್ಲದು ಅತಿ ಹೆಚ್ಚಿನ ನಷ್ಟ ಹೊಂದಿರುತ್ತದೆ ಅದಕ್ಕೆ ಹೆಚ್ಚಿನ ಸೇನಾಸಹಾಯ ಬೇಕೆಂದು ಹಿಟ್ಲರರು ರುಮೇನಿಯ, ಹಂಗೇರಿ ಮತ್ತು ಬಲ್ಗೇರಿಯಗಳನ್ನು ಒತ್ತಾಯಪಡಿಸಿರುವರು ಆದರೆ ಅವುಗಳಿಗೆ ಹಾಗೆ ಮಾಡಲು ಸಾಧ್ಯವಾಗಿರುವುದಿಲ್ಲ ಟ್ರಾನ್ಸಿಲ್ವಾನಿಯದ ಕುರಿತು ರುಮೇನಿಯ ಮತ್ತು ಹಂಗೇರಿಗಳೊಳಗೆ ವೈಷಮ್ಯವೆದ್ದಿದೆ ರುಮೇನಿಯನರಲ್ಲಿ ರಷ್ಯದ ಯುದ್ಧದ ಕುರಿತು ಬೇಸರವುಂಟಾಗಿದೆ, ಬಲ್ಗೇರಿಯದ ಸೈನಿಕರಲ್ಲಿ ಕೂಡಾ ಹೆಚ್ಚಿನವರು ರಷ್ಯದ ಕುರಿತು ಸಹಾನುಭೂತಿಯುಳ್ಳವರಿರುತ್ತಾರೆ. ಇಟಲಿಯು ಬಲಿಯುತ್ತ ಹೆಚ್ಚಿಚ್ಚಾಗಿ ಸೇನೆ ಕಳುಹಿಸಶಕ್ತವಾಗಿದೆ ಯುಗೊಸ್ಲಾವಿಯ, ಗ್ರೀಸ್, ನೋರ್ವೆ, ಹೊಲೆಂಡ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಜರ್ಮನರೆದುರಾಗಿ ಜನರು ಹೆಚ್ಚುಹೆಚ್ಚಾಗಿ ಬಂಡಾಯವೆಬ್ಬಿಸಹತ್ತಿರುವುದರಿಂದ ಅಲ್ಲಿ ಹೆಚ್ಚು ಮಂದಿ ಜರ್ಮನ್ ಸೈನಿಕರನ್ನಿರಿಸಲೇಬೇಕಾಗಿದೆ. ಬ್ರಿಟನು ಪಶ್ಚಿಮದಿಂದ ಅಕಸ್ಮಾತ್ತಾಗಿ ಧಾಳಿ ನಡಿಸಬಹುದೆಂಬ ಬೆದರಿಕೆಯಿರುವುದರಿಂದ ಅಲ್ಲಿಯೂ ಹಿಟ್ಲರರು ಸಾಕಷ್ಟು ಸೇನೆಯನ್ನಿರಿಸಿ ಎಚ್ಚರದಿಂದಿರಬೇಕಾಗಿದೆ ಆದುದರಿಂದ ಅವರ ವಸಂತದ ಧಾಳಿಯು ಎಷ್ಟೊಂದರೂ ಪ್ರಚಂಡವಾಗಿರಲಾರದೆಂದು ಊಹಿಸಲಾಗಿದೆ

ಜರ್ಮನಿಯ ಶೀಘ್ರ ಅಪಜಯವು ಸಾಧ್ಯವೇ?

ಜರ್ಮನಿಗೆ ರಷ್ಯವನ್ನು ಗೆಲ್ಲಲು ಸಾಧ್ಯವಾಗಲಾರದು ಜರ್ಮನಿಯ ಪರಾಜಯವು ಸಾಧ್ಯವೇ? ಅದು ಮಿತ್ರರಾಷ್ಟ್ರಗಳ ಸಹಕಾರ ರೀತಿ ಹೊಂದಿಕೊಂಡಿರುವುದು. ಇಷ್ಟರ ವರೆಗೆ ಮಿತ್ರರಾಷ್ಟ್ರಗಳೇ ಶತ್ರುಗಳ ವೈರಿಗಳ ಧಾಳಿಗೊಳಗಾದವಲ್ಲದೆ ತಾವು ತಾವಾಗಿ ಧಾಳಿ ನಡಿಸುವ ಶಕ್ತಿ ಮುಂದಾಗಿರುವುದಿಲ್ಲ ಇಷ್ಟರಲ್ಲೇ ಅವುಗಳು ಪಶ್ಚಿಮದಿಂದ ಜರ್ಮನಿಯ ಮೇಲೇರಿ ಹೋಗುವ ಸಾಹಸ ಮಾಡುತ್ತಿದ್ದರೆ ಯುದ್ಧದ ಪರಿಸ್ಥಿತಿಯೇ ಬದಲಾಗುತ್ತಿತ್ತು ಇನ್ನಾದರೂ ಸಂದರ್ಭ ನೋಡಿಸಿ, ಹಿಟ್ಲರರು ರಷ್ಯದ ಮೇಲೆ ಪ್ರಚಂಡ ದಾಳಿ ನಡಿಸಿ ಮಹಾ ಸಂಗ್ರಾಮದಲ್ಲಿ ನಿರತರಾಗಿರುವಾಗಲೆ, ಬ್ರಿಟನು ಮತ್ತು ಅಮೇರಿಕಗಳು, ಸುಮಾರು ಒಂದು ಮಿಲ್ಯ ಸೇನೆಯನ್ನಾದರೂ ಬಲಿಕೊಡುವ ಧೀಸ್ತು ನಿರ್ಧಾರಮಾಡಿ ಪಶ್ಚಿಮದಿಂದ ಜರ್ಮನಿಯ ಮೇಲೆ ಬಿದ್ದರೆ ಮಾತ್ರ ಹಿಟ್ಲರರ ಶೀಘ್ರವಾದ ಪತನವು ಸಾಧ್ಯವಿದೆ ಆಗ ಯುದ್ಧದ ಭವಿಷ್ಯವು ಕೂಡಾ ಈ ವರ್ಷಾಂತ್ಯದೊಳಗೇನೇ ನಿಶ್ಚಯವಾಗಬಹುದು ಇಲ್ಲವಾದರೆ ಇನ್ನೂ ದೀರ್ಘಕಾಲ ಯುದ್ಧ ನಡೆಯಬೇಕಾಗುವುದು. ಪೂರ್ವದಿಂದ ಜಪಾನು ಭರದಿಂದ ಮುಂದೊತ್ತುತ್ತಿರುವಾಗ, ಆದಷ್ಟು ಬೇಗನೆ ಹಿಟ್ಲರರನ್ನು ಸೋಲಿಸುವಂತೆ ನೋಡುವುದು ಮಿತ್ರರಾಷ್ಟ್ರಗಳ ಮೊದಲಿನ ಮತ್ತು ಶೀಘ್ರವಾದ ಕರ್ತವ್ಯವಿದೆ ಜಪಾನು ಜರ್ಮನಿಗಳು ಒಂದು ಸೇರುವರ ಅವಕಾಶ ಕೊಟ್ಟರೆ ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ ಹಿಂದಿನಿಂದ ಮಿತ್ರರಾಷ್ಟ್ರಗಳು 1913-14ನೇ ಇಸ್ವಿಯ ಕಾರ್ಯಕ್ರಮಕ್ಕೆ ಕಟ್ಟುಬಿದ್ದು ಕಾಲಹರಣ ಮಾಡದೆ ಶೀಘ್ರವಾಗಿ ಹಿಟ್ಲರರ ಮೇಲೆ ಪಶ್ಚಿಮದಿಂದ ಧಾಳಿ ನಡಿಸಿದರೆ ಮಾತ್ರ ಯುದ್ಧದ ಪರಿಸ್ಥಿತಿಯು ಮಿಂಚಿನ ವೇಗದಿಂದ ಬದಲಾಗಬಹುದು. ಇನ್ನಾದರೂ ಅವಕ್ಕದು ಸಿದ್ಧವಿರುವದೇ?

ಉಪಾಧ್ಯಾಯರು ಬೇಕು

ಕುಂಜಾಲ್ ಏಯಿಡೆಡ್ ಎಲಿಮೆಂಟರಿ ಶಾಲೆಗೆ ಟ್ರೈಯಂಡ್‌ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದೆ ಅಪೇಕ್ಷೆಯುಳ್ಳವರು ಕೂಡಲೇ ಮುಖತಃ ಮಾತನಾಡುವುದು.

Aroor Annayya Alias Laxmana Shetty.
Manager,
Kunjal Aided Ele School,
Post Kunjal Udipi Taluk.
S. Kanara,

★ಕ್ರಿಪ್ಸರ ಪ್ರಯತ್ನವು ಜಯಶೀಲವಾಗುವುದೇ?★

ಕ್ರಿಪ್ಸರ ಪ್ರಯತ್ನ

ಬ್ರಿಟಿಷ್ ಮಂತ್ರಿ ಮಂಡಲದ ಸೂಚನೆಗಳನ್ನು ಹಿಂದೀ ಮುಖಂಡರು, ಮುಖ್ಯವಾಗಿ ಕಾಂಗ್ರೆಸ್ಸಿನವರು ಸ್ವೀಕರಿಸುವಂತೆ ಸರ್ ಸ್ಟಾಫರ್ಡ್ ಕ್ರಿಪ್ಸರು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡುತ್ತಿರುವರು ದೇಶ ರಕ್ಷಣಾ ಖಾತೆಯನ್ನು ಹಿಂದೀಯರಿಗೊಪ್ಪಿಸುವ ಪ್ರಶ್ನೆಯ ಕುರಿತೇ ಹೆಚ್ಚಿನ ಆಕ್ಷೇಪ ಬಂದುದರಿಂದ ಆ ಸಂಬಂಧವಾಗಿ ಇದೇ ತಾ 4ರಲ್ಲಿ ಮೌಲಾನಾ ಆಜಾದ್ ಮತ್ತು ಪಂಡಿತ ಜವಾಹರಲಾಲರು, ಜನರಲ್ ವೇವೆಲರ ... ಸೈನ್ಯಾಧಿಕಾರಿಗಳನ್ನು ಕಂಡು ಮಾತುಕತೆ ನಡೆಸಿದವರು ಮಿ ಜಿನ್ನಾ ... ಕಂಡನೆ ಮಾತ್ರ ... ಕ್ರಿಪ್ಸರ ಸೂಚನೆಗಳ ಕುರಿತು ಕಾಂಗ್ರೆಸ ವರ್ಕಿಂಗ ಕಮಿಟಿಯು ... ವರೆಗೂ ಪ್ರಕಟವಾಗಿ ... ಕ್ರಿಪ್ಸರು ಬ್ರಿಟಿಷ ಮಂತ್ರಿಮಂಡಲಕ್ಕೆ ತಿಳಿಸಿ ಪ್ರತ್ಯುತ್ತರವನ್ನು ... ತಾ 7ರಲ್ಲಿ ಕಾಂಗ್ರೆಸ್ ಪ್ರಸಿಡೆಂಟರಾದವರ ... ಸಂಬಂಧವಾಗಿ ಮೌಲಾನಾ ಆಜಾದ ಮತ್ತು ನೆಹರುಗಳು ಇದೇ ತಾ 7ರಲ್ಲಿ ಕ್ರಿಪ್ಸರನ್ನು ಕಂಡು ಅರ್ಧ ಘಂಟೆ ಮಾತನಾಡಿದವರು ಕಾಂಗ್ರೆಸ್ ವರ್ಕಿಂಗ ಕಮಿಟಿಯು ಇನ್ನೂ ನಿರ್ಧಾರವನ್ನು ... ರಕ್ಷಣೆ ಬಂದಿರುವುದಿಲ್ಲ ... ದೇಶ ರಕ್ಷಣಾ ಖಾತೆಯನ್ನು ಹಿಂದೀಯರಿಗೊಪ್ಪಿಸುವ ಕುರಿತು ಬ್ರಿಟಿಷ್ ಸರಕಾರವು ತನ್ನ ... ದಿನ ಧೋರಣೆಯನ್ನು ಒದಲಾಯಿಸಿ, ಸಂಧಾನವನ್ನು ಜಯಶೀಲವಾಗಿ ಕೊನೆಗೊಳಿಸುವ ಸ್ವಾತಂತ್ರ್ಯವನ್ನು ಕ್ರಿಪ್ಸರಿಗೆ ಕೊಟ್ಟಿರುವಂತಿರುವುದರಿಂದ ಏನಾದರೊಂದು ರೀತಿಯ ರಾಜಿ ಏರ್ಪಡಬಹುದೆಂಬ ಆಶೋದಯವುಂಟಾಗಿದೆ ಮೌಲಾನಾ ಆಜಾದ್ ಮತ್ತು ಪಂಡಿತ ನೆಹರುಗಳ, ತಮ್ಮ ಮಾತುಕತೆಯ ವಿಷಯವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ವಿವರವಾಗಿ ತಿಳಿಸಿರುವರು

ಪ್ರೆಸಿಡೆಂಟ್ ರುಸವೆಲ್ಟರ ಪ್ರತಿನಿಧಿ ಕರ್ನಲ್ ಜೋನ್ಸನರು ದಿಲ್ಲಿಗೆ ಬಂದು ಪಂಡಿತ ನೆಹರುಗಳೊಡನೆ 3 ಘಂಟೆ ಮಾತುಕತೆ ನಡೆಸಿರುವರು.

ಪ್ರಚಂಡ ಸೇನಾ ಸಂಗ್ರಹ

ರಶ್ಯದ ರಣರಂಗದಲ್ಲಿ ಎಂದೂ ಕಡದಿರುವಷ್ಟು ವಸಂತ ಋತುವಿನ ... ಪ್ರಚಂಡ ಸೇನಾ ಸಂಗ್ರಹ ಮಾಡಿರುವರು ಹಿಟ್ಲರರು 4 ಮಿಲ್ಯ ಸೇನೆಯನ್ನು ಕೂಡಿಸಿರುವರು. ಇದರಲ್ಲಿ ಸುಮಾರು ... ಮೋಸ್ಕೋ ಪಟ್ಟಣದ ಒಳಕೊಂಡಿಲ್ಲ ... ರಶ್ಯದ ಮೇಲೆ ಪ್ರಯೋಗ ... ನಡೆಸಿ ಅವಷ್ಟು ಬೇಗನೆ ಅದನ್ನು ಸದೆಬಡಿದು ಆಮೇಲೆ ಮಧ್ಯಪೂರ್ವದ ಕಡೆಗೆ ಲಕ್ಷ್ಯವಿತ್ತು ಜಪಾನಿನೊಂದಿಗೆ ಒಟ್ಟು ಸೇರುವುದೇ ಹಿಟ್ಲರರ ಪ್ಲೇನಾಗಿದೆ ರಶ್ಯವನ್ನು ಗೆದ್ದರೆ ಮಧ್ಯಪೂರ್ವದ ... ದಕ್ಕೆ ಬಹಳ ಅನುಕೂಲವಾಗಿರುವುದರಿಂದ ಹಿಟ್ಲರರು ಅದನ್ನು ಗೆಲ್ಲುವ ಕುರಿತು ಸಂಪೂರ್ಣ ಗಮನವಿತ್ತಿರುವರು ಅವರಿಗೆ ಈಗ ಪೆಟ್ರೋಲಿನ ಕೊರತೆಯುಂಟಾಗಿದೆ. ರಶ್ಯವನ್ನು ಗೆದ್ದು ಕೊಕಸಸಿನ ಎಣ್ಣೆ ಪ್ರದೇಶವನ್ನು ವಶಪಡಿಸಿಕೊಳ್ಳುವ ... ಮಾತ ಅವರು ಇದನ್ನ

ವಸಂತದ ಮಹಾ ಯುದ್ಧಕ್ಕೆ ಪ್ರಚಂಡ ಸೇನಾ ಸಂಗ್ರಹ
ಕೊಲಂಬೊದ ಮೇಲೆ ದೊಡ್ಡ ವಿಮಾನ ಧಾಳಿ

ಮತ್ತು ಇರಕುಗಳ ಎಣ್ಣೆ ಪ್ರದೇಶವನ್ನು ಗೆಲ್ಲುವ ಕಡೆಗೆ ದೃಷ್ಟಿ ಇಡಬಹುದೆಂದು ನಂಬಲಾಗಿದೆ ಪ್ರಕೃತದ ಪರಿಸ್ಥಿತಿಯಲ್ಲಿ ಜಾಪಾನು ಸೈಬೀರಿಯದ ಮೇಲೆ ಧಾಳಿ ನಡೆಸಲು ಹಿಂಜರಿಯುತ್ತಿದೆ ಆದ ದರಿಂದ ರಶ್ಯವು ಕೂಡಾ ತನ್ನ ಸಂಪೂರ್ಣ ಸೇನಾ ಶಕ್ತಿಯನ್ನು ಕೇಂದ್ರೀಕರಿಸಿ ನಾಝಿ ಪಡೆಯನ್ನು ವಿರೋಧಿಸುವಂತಾಗಿದೆ ಸೋವಿಯೆಟ್ ರಶ್ಯವೂ ಕಳೆದ 6 ತಿಂಗಳುಗಳಲ್ಲಿ ಸಾರ್ವತ್ರಿಕ ಸೈನಿಕ ತರಬೇತಿಯನ್ನು

ಜ್ಯಾರಿಗೆ ತಂದು ಮಿಲ್ಯಗಟ್ಲೆ ಹೊಸ ಸೈನಿಕರನ್ನೂ ಸವಾರರನ್ನೂ, ಯಾಂತ್ರಿಕ ಪಡೆಗಳನ್ನೂ ತಯಾರಿಸಿ ಜರ್ಮನರನ್ನು ಪ್ರತಿಭಟಿಸಿ ಪರಾಜಯಗೊಳಿಸಲು ರಣರಂಗದಲ್ಲಿ ಅಣಿಗೊಳಿಸಿರುವುದು ಜರ್ಮನ್ ಸೇನೆಯು ಇಷ್ಟರಲ್ಲೇ ಉತ್ತರದಲ್ಲಿ ವಸಂತ ಋತುವಿನ ಹೋರಾಟವನ್ನಾರಂಭಿಸಿದೆ ಹೊಸತಾಗಿ ತಯಾರಿಸಲ್ಪಟ್ಟಿರುವ 1942ರ ಹೆಸರು ... ಟೇಂಕುಗಳನ್ನುಪಯೋಗಿಸಿ ಕೆಲಿನಿನ್ ರಣರಂಗದಲ್ಲಿ ತೀವ್ರ ಕದನ ಹೂಡಿದ ಆದರ ಕೆಂಪು ಸೇನೆಯು ವೈರಿಯನ್ನು ಜಯಶೀಲವಾಗಿ ಪ್ರತಿಭಟಿಸಿರುವುದು ಮಾತ್ರವಲ್ಲದೆ ಹಿಂದಕ್ಕಟ್ಟಿ ಕೆಲವು ಸ್ಥಳಗಳನ್ನು ವಶಪಡಿಸಿಕೊಂಡಿವೆ. ಸ್ಮೋಲೆನ್ಸ್ಕ ಪ್ರದೇಶದಲ್ಲಿಯೂ ಸೋವಿಯೆಟ್ ಸೇನೆಯು ... ಸ್ಥಳಗಳನ್ನು ಗೆದ್ದಿರುತ್ತದೆ ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಜರ್ಮನರ ಧಾಳಿಯನ್ನು ಜಯಶೀಲವಾಗಿ ಪ್ರತಿಭಟಿಸಲಾಗಿದೆ

ಕೊಲಂಬೊದ ಮೇಲೆ ದೊಡ್ಡ ವಿಮಾನ ಧಾಳಿ

ಇದೇ ತಾ 5ನೇ ಬೆಳಿಗ್ಗೆ ಸಿಲೋನಿನ ಮುಖ್ಯ ಪಟ್ಟಣದ ಮೇಲೆ 75 ವಿಮಾನಗಳು ಪ್ರಬಲ ವಿಮಾನ ಧಾಳಿ ನಡೆಸಿರುವವು ... ಡೈವ್ ಬೋಂಬರ್ ವಿಮಾನಗಳ ಮೂಲಕ ಬಹಳ ಕೆಳಗಿಳಿದು ಹೋಗಿ ಮಿಶನ್ ಕೋವಿಗಳಿಂದ ಗುಂಡು ಹಾರಿಸಿರುವರು ಬ್ರಿಟಿಷ್ ಫೈಟರ ವಿಮಾನಗಳು ಕೂಡಲೆ ಮೇಲಕ್ಕೇರಿ ಹೋರಾಡಿ 27 ವೈರಿ ವಿಮಾನಗಳನ್ನು ನಾಶಮಾಡಿರುತ್ತವೆ ... ಗಾಯಗೊಂಡವರ ಸಂಖ್ಯೆ ಅಧಿಕವಿಲ್ಲ ... ಹೆಚ್ಚಿನ ಹಾನಿಯುಂಟಾಗಿರುವುದಿಲ್ಲ ... ಮತ್ತೆ ... ಅನ್ನುತ್ತದೆ

ಮದ್ರಾಸಿನಲ್ಲಿ ವಿಮಾನ ಧಾಳಿಯ ಎಚ್ಚರ

ಇದೇ ತಾ 7ರಲ್ಲಿ ಮದ್ರಾಸಿನ ... ಮೇಲೆ ಜಪಾನ ವಿಮಾನಗಳು ಹಾರಿಬಂದುದರಿಂದ ... ಕೊಡಲ್ಪಟ್ಟಿರುವುದು ಆದರೆ ... ಎಸೆಯಲ್ಪಟ್ಟಿರುವುದಿಲ್ಲ ... ಗಳಿಂದ ಮೊದಲು ... ಮೇಲೆ ... ಹಡಗುಗಳ ... ದು ತಿಳಿದ ... ತು ... ಧಾಳಿಯು ...

The Canara Industrial & Banking Syndicate, Limited.

(Incorporated in British India Liability of Share Holders limited)

Head Office UDIPI

Announcement Re: 5% Cumulative Preference Shares

15th April 1942 will be the last date for receiving applications for the 5% Cumulative Preference Shares at the present premium rates at all our offices Thereafter the Issue will be withdrawn and the shares will not be available for subscription except at revised rates of premium stated herebelow and until they are so reissued under New Prospectus in May 1942

Premium rates

(A) On an application for	10 to 19 shares	a premium of	Re 1/
	20 to 29 shares	„	Rs 2/
	30 to 39 shares	„	Rs 3/
	40 to 49 shares	„	Rs 4
	50 to 59 shares	„	Rs 5/
	60 to 69 shares	„	Rs 6/
	70 to 79 shares	„	Rs. 7/
	80 to 89 shares	„	Rs 8/
	90 to 99 shares	„	Rs 9/

(B) In the case of an application for such number of shares which is a multiple of 100, premium thereon will be at Rs 5 per 100 shares

(C) Where in the case of an application for more than 100 shares, the number of shares applied for is not a multiple of 100, the premium will be calculated for the first complete multiple of 100 at the rate mentioned under (B) above and for the remaining fraction of 100 will be added the premium calculated on such fraction at rates mentioned under (A) above

"Mukund Nivas"
UDIPI.
7th April, 1942

T. M. A. Pai.
Managing Director

ಕ್ರೂರ ಮೃಗಗಳ ನಡುವೆ ಮಾನವರ ಮುಂದಾಳು
ವಿಶ್ವವನ್ನೇ ವಿಸ್ಮಯಗೊಳಿಸುವ ವಿಕಟ ಪ್ರಾಣಿಗಳ ಸಂದರ್ಶನ
ಸಾಹಸ ಕಾರ್ಯಗಳ ಸನ್ನಿವೇಶಗಳು ಅನೇಕ

ಕನಸು ಮನಸ್ಸುಗಳಲ್ಲೂ ಮರೆಯದ ಮಹತ್ವದ
ಚಿತ್ರ

ಜಂಗಲ್ ಕಿಂಗ್

(ವಾಡಿಯಾ)

ಜೋನ್ ಕೆವಾಸ್, ಪ್ರವಿಲಾ

ತಾ 12—4—1942ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

Madras Provincial
War Committee.

The Entertainment Group of the Finance Sub-Committee of the Provincial War Committee has ceased to function Promoters and organisers of Entertainments in aid of His Excellency the Governor's War Fund are requested to apply to the Secretary, Madras Provincial War Committee, 'Victory House' Mount Road Madras for the several concessions and facilities available for such entertainments Enquiries relating to production of films in aid of the Governor's War Fund by Film Stars and Producers may also be made to the

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತೀದಾರರಿಂದ)

ಜಿಲ್ಲಾ ಬೋರ್ಡು ಸಭೆ— ಕಳೆದ ತಾ- ೨ರಂದು ಪೂರ್ವಾಹ್ನ ೧೦ ಘಂಟೆಗೆ ಬೋರ್ಡ ಅಧ್ಯಕ್ಷರಾದ ಡಾ| ಕೆ- ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರವು ಹೊರಿಸಿದ ನಿರ್ಬಂಧದಿಂದಾಗಿ ಸಭೆಗೆ ದೀರ್ಘಕಾಲದಿಂದ ಬರಲಾಗದಿದ್ದ ಶ್ರೀ| ಕೆ- ರಾಘವನ್ ನಂಬಿಯಾರರ ಸದಸ್ಯತ್ವವನ್ನು ಶ್ರೀ| ಎಂ. ಮಹಾಲಿಂಗ ಶೆಟ್ಟರದನ್ನು ಊರ್ಜಿತಗೊಳಿಸುವುದೆಂದೂ ಘಟ್ಟದತ್ತಣಿಂದ ಈ ಜಿಲ್ಲೆಗೆ ಪ್ಲೇಗ್ ಬಾರದಂತೆ ತಾತ್ಕಾಲಿಕ ಶಿಬ್ಬಂದಿಯೊಂದನ್ನು ಏರ್ಪಡಿಸಬೇಕೆಂದೂ ಉಡುಪಿ ಬೋ. ಹೈಸ್ಕೂಲಿನ ಕುರಿತು ಸರಕಾರಕ್ಕೆ ಬರೆಯಬೇಕೆಂದೂ ನಿರ್ಧಾರವಾಯಿತು. ತಮ್ಮ ತಂದೆಯ ಸ್ಮಾರಕವಾಗಿ ಬಡ್ಡಿಯ ಅಂಶದಿಂದ ಒಂದು ವಿದ್ಯಾರ್ಥಿ ವೇತನಕ್ಕಾಗಿ ಕಾರ್ಕಳದ ಶ್ರೀ| ಎಸ್- ರಾಮಪ್ಪನವರು ದಾನಮಾಡಿದ ರೂ. ೧೦೦೦ ನ್ನು ಸ್ವೀಕರಿಸಲಾಯಿತು. ಪಂಜ, ಸುಳ್ಯ, ಗುತ್ತಿಗಾರು, ಪಡ್ನೆ, ಹಾ. ಎ- ಶಾಲೆಗಳಲ್ಲಿ ಸ್ವಲ್ಪ ಹೊತ್ತು ಕೈಗಾರಿಕೆ ಕಲಿಸುವ ಅಧ್ಯಾಪಕರನ್ನು ಮೂಲ್ಕಿ, ಉಡುಪಿ ಬೋ| ಹೈಸ್ಕೂಲುಗಳಲ್ಲಿ ಕಸೂತಿ ಕಲಿಸಲು ಅಧ್ಯಾಪಿಕೆಯರನ್ನು ನೇಮಿಸುವ ನಿರ್ಣಯವಾಯಿತು. ತರಿಗೆ ಅಪೀಲ್ ಕಮಿಟಿಯ ಕೋರವನ್ನು ಎರಡಕ್ಕೆ ಇಳಿಸಿ ಕುಂದಾಪುರ ಕಾರ್ಕಳಗಳ ಹೊರತಾದ ಇತರ ಕಮಿಟಿಗಳಿಗೆ ಸದಸ್ಯರನ್ನು ಆರಿಸಲಾಯಿತು.

ನಗರ ಸಭೆಯು— ಕಳೆದ ತಾ- ೩೧ರಂದು ಸಭಾಧ್ಯಕ್ಷ ಶ್ರೀ| ಬಿ. ಪಿ. ಬಾಳಿಗ, ಎಂ. ಎಲ್. ಎ- ಅವರ ಅಧ್ಯಕ್ಷತೆಯಲ್ಲಿ ಸೇರಿತು. ೪೦೦೦ ಚದರ ಅಡಿಗಳಿಗೆ ಅರ್ಧ ವರ್ಷಕ್ಕೆ ೩ ಪೈಯಂತೆ ಮತ್ತು ವ್ಯವಸಾಯದ ಸ್ಥಳಗಳಿಗೆ ಅರ್ಧ ವರುಷದ ಕಂದಾಯದ ಮೇಲೆ ಶೇಕಡ ೫||ಯಂತೆ ಲೈಟಿಂಗ್ ತೆರಿಗೆಯನ್ನೂ ೪೦೦೦ ಚದರ ಅಡಿಗಳಿಗೆ ಬಂಜರು ಸ್ಥಳಗಳಿಗೆ ಅರ್ಧ ವರುಷಕ್ಕೆ ೨ ಪೈಗಳಂತೆ ಮತ್ತು ವ್ಯವಸಾಯದ ಸ್ಥಳಗಳಿಗೆ ಭೂಕಂದಾಯದ ಮೇಲೆ ಅರ್ಧ ವರುಷಕ್ಕೆ ಶೇಕಡ ೨ರಂತೆ ವಿದ್ಯಾಭ್ಯಾಸ ತೆರಿಗೆಯೆತ್ತುವುದೆಂದಾಯಿತು. ಎಪ್ರಿಲ್ ತಾ- ೧ರಿಂದ ಲೈಟಿಂಗ್ ತೆರಿಗೆಯನ್ನು ಹೆಚ್ಚಿಸದಿದ್ದರೆ ಕಟ್ಟಡ ತೆರಿಗೆಯನ್ನು ಅರ್ಧ ವರುಷಕ್ಕೆ ಶೇ. ೧೦ರಂತೆ ನಗರ ಸಭೆಯ ಕ್ಷೇತ್ರಕ್ಕೆ ಒಳಗಿರುವ ನೆಲ ಮತ್ತು ಕಟ್ಟಡಗಳ ವಾರ್ಷಿಕ ಮೌಲ್ಯದ ಶೇ. ಅರ್ಧಕ್ಕೆ ಇಳಿಸುವುದಕ್ಕೂ ನಿರ್ಣಯವಾಯಿತು. ದ್ವಿತೀಯ ಕ್ಲಾಸ್ ಅಧ್ಯಾಪಕ ಶಿಕ್ಷಣಕ್ಕೆ ೮ ಮ್ಯುನಿಸಿಪಲ್ ಅಧ್ಯಾಪಕರನ್ನು ಕಳುಹಿಸಬೇಕೆಂಬ ಸೂಚನೆಯನ್ನು, ಹಿಂದೂಸ್ಥಾನ್ ಸ್ಕೌಟ್ ಸಂಸ್ಥೆಯವರು ರಾಜಭಕ್ತಿ ಪ್ರಮಾಣ ಮಾಡುತ್ತಿಲ್ಲವೆಂಬ ಕಾರಣದಿಂದ ಶ್ರೀ| ಸಿ- ಎಲ್- ಲೋಬೋರವರು ವಿರೋಧಿಸಿದರು. ಆದರೆ ಆ ಸೂಚನೆಯು ಸ್ವೀಕೃತವಾಯಿತು ಶ್ರೀ| ಲೋಬೋರವರೊಬ್ಬರೇ ಅದನ್ನು ವಿರೋಧಿಸಿದರು.

ಮುಹಮ್ಮದ್ ಪೈಗಂಬರರ ದಿನಾಚರಣೆ— ಯು ಗ-ಕಾಲೇಜಿನಲ್ಲಿ ತಾ ೩೧ರಂದು ಸಂಜೆ ರೆವಿನ್ಯೂ ಡಿವಿಜನಲ್ ಆಫೀಸರಾದ ಶ್ರೀ| ಬಿ. ವೆಂಕಪ್ಪ, ಎಂ-ಎ- ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಕೆ ನಾರಾಯಣರಾವ್ ಜನಾಬ್‌ಗಳಾದ ಜ ಎ., ಹಾರೂನ್ ಮತ್ತು ಯು ಹಮ್ಮಬ್ಬ, ಪೈಗಂಬರರ ಸಂದೇಶವನ್ನು ವಿವರಿಸಿ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದ ಕೊನೆಯಲ್ಲಿ ಮಹಾತ್ಮರ ಮತ ಸಹಿಷ್ಣುತೆಯಿಂದ ಮತಗಳ ಶಾಸ್ತ್ರ ಗ್ರಂಥಗಳನ್ನಭ್ಯಸಿಸಬೇಕೆಂದೂ ಸಹೋದರ ಮೈತ್ರಿ ಭಾವದಿಂದ ಬಾಳಬೇಕೆಂದೂ ಹೇಳಿದರು, ದಿನಾಚರಣೆಯನ್ನು ಮಾಡಿದ ಸೀರತ್ ಸಮಿತಿಯ ಅಧ್ಯಕ್ಷರಾದ ಜನಾಬ್ ಅಬ್ದುಲ್ ರಹಿಮ ಅಹ್ಮದ್ ಅವರು ಧನ್ಯವಾದಗಳನ್ನರ್ಪಿಸಿದರು,

ಉಡುಪಿ.

ಆರಾಧನೆ.

ಶ್ರೀ ಕೃಷ್ಣಮಠದಲ್ಲಿ ಪರ್ಯಾಯ ಶ್ರೀ ವಿದ್ಯಾರತ್ನ ಸ್ವಾಮಿಗಳವರು ತಮ್ಮ ಗುರುಗಳಾದ ಶ್ರೀ ವಿದ್ಯಾಪೂರ್ಣತೀರ್ಥ ಶ್ರೀಪಾದಂಗಳವರ ಗುರುಗಳ ಆರಾಧನೆಯನ್ನು ಇದೇ ತಾ. 2ರಲ್ಲಿ ಸಾಂಗವಾಗಿ ನೆರವೇರಿಸಿದರು. ಆ ದಿನ ಸಂಜೆ ಶೀರೂರ ಸ್ವಾಮಿಗಳವರ ಭಾವಚಿತ್ರ ಸಹಿತ ನಗರ ಮೆರವಣಿಗೆಯಾಯಿತು.

ಉತ್ತರಾದಿ ಮಠದ ಸ್ವಾಮಿಗಳವರ ನೇತೃತ್ವದಲ್ಲಿ ಧಾರ್ಮಿಕ ವಿದ್ಯಾಭ್ಯಾಸಂಗವನ್ನು ಮಾಡಿದ ಶ್ರೀ. ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರು ತಮ್ಮ ಗುರುಗಳು ವೈಕುಂಠ ಯಾತ್ರೆಯನ್ನು ಮಾಡಿದ ಹನ್ನೆರಡನೆ ದಿನ(ತಾ 4ರಲ್ಲಿ) ತಮ್ಮ ಮಠದಲ್ಲಿ ಮಧ್ಯಾಹ್ನ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಸಿದರು. ಸಂಜೆ ದುಃಖಸೂಚಕ ಸಭೆಯು ಜರಗಿ ಪಂಡಿತರುಗಳ ಶೋಕೋಚಿತ ಭಾಷಣಗಳಾದುವು.

ಹೆತ್ತವರ ಸಂಘ.

ಇದೇ ತಿಂಗಳ ತಾರೀಖು 5-4-42ನೇ ಆದಿತ್ಯವಾರ ಅಪರಾಹ್ನ ಘಂಟೆ 5ಕ್ಕೆ ಉಡುಪಿ ಮುನಿಸಿಪಲ್ ಹಿಂದುಸ್ಥಾನಿ ಶಾಲಾ ವಿದ್ಯಾರ್ಥಿಗಳ ಹೆತ್ತವರ ಮಹಾಸಭೆಯು ಜನಾಬ್ ಮುಹಮ್ಮದ್ ಉಸ್ಮಾನ್ ಸಾಹೇಬ್ B. A. LL. B. ಯವರ ಅಧ್ಯಕ್ಷತೆಯಲ್ಲಿ ಜರಗಿ 15 ಮಂದಿ ಮಹನೀಯರ ಆಡಳಿತ ಮಂಡಳಿಯನ್ನು ಸ್ಥಾಪಿಸಲಾಯಿತು. ಸಭೆಯಲ್ಲಿ ಜನಾಬ್ ಕೆ ಯಂ, ಇಸ್ಮಾಯಿಲ್ ಸಾಹೇಬರು ಸಂಘದ ಉದ್ದೇಶವನ್ನು ತಿಳಿಸಿದ ಮೇಲೆ ಮುನ್ಸಿಪಲ್ ಕಮಿಶನರ್ ಮತ್ತು ಮುನಿಸಿಪಲ್ ಆಫೀಸ್ ಮೆನೇಜರು ಸೂಕ್ತವಾದ ಭಾಷಣವಿತ್ತರು. ಆ ಮೇಲೆ ಸಭಾಧ್ಯಕ್ಷರ ಬೋಧಪ್ರದ ಭಾಷಣವಾಗಿ ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಸಮ್ಬಂಧಪಟ್ಟವರು ಸಂಶಯ ನಿವಾರಣೆಗೊಳಿಸುವರೇ?— ಬಾರಕೂರು ಪಂಚಾಯತ ಬೋರ್ಡಿನವರು ಬಾರಕೂರಿನ ಪೇಟೆಯಲ್ಲಿಂದು ದಿನಚರಿ ಮಾರ್ಕೆಟನ್ನು ತಾ- 1-4-42ರಂದು ತೆರೆದಿರುವರು. ಯಾವೊಂದು ಪಂಚಾಯತ ಬೋರ್ಡಿನವರಾದರೂ ಹೊಸತಾಗಿ ಒಂದು ಮಾರ್ಕೆಟು ತೆರೆಯಬೇಕಾದರೂ ಲೋಕಲ್ ಬೋರ್ಡು ಇನ್ಸಪೆಕ್ಟರರ ಮಂಜೂರಾತಿ ಪಡೆದೇ ತೆರೆಯಬೇಕೆಂದೂ ಲೋಕಲ್ ಬೋರ್ಡ್ ಇನ್ಸಪೆಕ್ಟರರ ಮಂಜೂರಾತಿ ಪಡೆಯದೆ ತೆರೆಯುವುದು ನ್ಯಾಯಕ್ಕೂ ಕಾನೂನಿಗೂ ವಿರೋಧವೆಂದೂ ಕೇಳುತ್ತೇನೆ. ಆದರೆ ಈ ರೂಲು ಬಾರಕೂರು ಪಂಚಾಯತ ಬೋರ್ಡಿಗೆ ಸಮ್ಬಂಧಪಟ್ಟದಲ್ಲವೆ? ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಆಫೀಸರವರು ಲೋಕಲ್ ಬೋರ್ಡ್ ಇನ್ಸಪೆಕ್ಟರರ ಮಂಜೂರಾತಿ ಹುಕುಂ ಪಡೆಯದೆ ಹೊಸ ದಿನಚರಿ ಮಾರ್ಕೆಟನ್ನು ತೆರೆಯಬಾರದೆಂದೂ, ಹಾಗೆ ತೆರೆಯುವುದು ಕಾನೂನಿಗೆ ವಿರೋಧವೆಂದೂ ಹುಕುಂ ಕೊಟ್ಟಿದ್ದಾರೆಂದೂ, ಆದರೆ ಬಾರಕೂರು ಪಂಚಾಯತ ಬೋರ್ಡಿನವರು ಜಿಲ್ಲಾ ಪಂಚಾಯತ್ ಆಫೀಸರವರ ಹುಕುಂ ಧಿಕ್ಕರಿಸಿ ಲೋಕಲ್ ಬೋರ್ಡ್ ಇನ್ಸಪೆಕ್ಟರರ ಮಂಜೂರಾತಿ ಹುಕುಂ ಪಡೆಯದೇನೇ ತಾ- 1-4-42ರಂದ ಮಾರ್ಕೆಟನ್ನು ತೆರೆದರೆಂದೂ ತಿಳಿಯುತ್ತೇನೆ. ಸಂಬಂಧಪಟ್ಟವರು ಮೇಲಿನ ವಿಚಾರದಲ್ಲಿ ನಿಜಸಂಗತಿಯನ್ನು ಪ್ರಕಟಿಸಿ ಸಂಶಯ ನಿವಾರಣೆ ಮಾಡುವರಾಗಿ ನಂಬುತ್ತೇನೆ.''

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗ್

—ಇತ್ತೀಚೆಗೆ ಈ ಸಂಘದ ಆಶ್ರಯದಲ್ಲಿ ತೆರೆಯುವ ಬೀಡಿ ಕೈಗಾರಿಕೆಗೆ ಮಾರ್ಚ ತಿಂಗಳ ಅಂತ್ಯದ ತನಕ ಧನಸಹಾಯಮಾಡಿದ ಮಹನೀಯರ ಹೆಸರು ಮತ್ತು ಅವರುಕೊಟ್ಟ ಧನಸಹಾಯವು ಈ ಕೆಳಗಿನಂತಿದೆ—

ಶ್ರೀ| ಪಿ. ಮಾಧವ ಪಟಿಯಾರ್ ರೂಪಾಯಿ 25 ಪಾಣೆಮಂಗಳೂರು, ಶ್ರೀ| ಎನ್. ಉಪೇಂದ್ರ ನಾಯಕ್, ರೂ. 5. ಪಾಣೆಮಂಗಳೂರು ಶ್ರೀ| ಜಾರಪ್ಪ ರೂ. 5. ಮಂಗಳೂರು ಶ್ರೀ| ಎ ಬಿ ಶೆಟ್ಟಿ, ಎಮ್ ಎಲ್. ಎ, ರೂ 2. ಶ್ರೀ| ನಾಹುಕಾರ್ ವೆಂಕಟೇಶ ಪೈ, ರೂ- 2- ಶ್ರೀ| ಎಫ್- ಎಸ್- ಅಲ್ಬುಕರ್ಕ, ಮುನಿಸಿಪಾಲ್ ಕೌನ್ಸಿಲರ್ ರೂ- 3- ಶ್ರೀ- ಬಿ. ವೈಕುಂಠ ಬಾಳಿಗ, ಬಿ. ಎ ಬಿ. ಎಲ್. ರೂಪಾಯಿ 2- ಶ್ರೀ| ಎಮ್- ಡಿ. ಅಧಿಕಾರಿ ರೂ- 2-0-0- ಕಾರ್ಕಳ ಶ್ರೀ| ಕೆ. ಎಸ್- ಹೆಗ್ಗಡೆ- ಬಿ- ಎ- ಬಿ- ಎಲ್- ರೂ- 1-0-0 ಶ್ರೀ| ಎಲ್- ಎಸ್- ಪಾಯ್ಸ್, ಬಿ- ಎ- ಬಿ- ಎಲ್ ರೂಪಾಯಿ 1-0-0- ಶ್ರೀ| ಪಂಡಿತ್ ಗಣಪತಿ ರಾವ್, ಮುನ್ಸಿಪಾಲ್ ಕೌನ್ಸಿಲರ್, ರೂ- 1-0-0 ಶ್ರೀ| ಎಲ್- ತಿಮ್ಮಪ್ಪ, ಪಂಡಿತ್, ರೂ- 1-0-0 ಶ್ರೀ| ಎ- ಎ- ದಾಮೋದರ ಪೈ, ರೂ- 1-0-0 ಶ್ರೀ| ಎಮ್- ಮಾಧವ ರಾವ್, ಬಿ. ಎ. ಬಿ. ಎಲ್ ರೂ- 1-0-0- ಶ್ರೀ| ಆರ್- ಡಿ. ಸಿ. ಅಂದ್ರಜೆ, ಮುನ್ಸಿಪಾಲ್ ಕೌನ್ಸಿಲರ್, ರೂ- 1-0-0 ಶ್ರೀಮತಿ ಲೀಲಾಬಾಯಿ ಪಳಂಬರರಾವ್, ರೂ-1 ಶ್ರೀ| ಜೆ- ಪಿ- ರೇಗೋ, ಮುನ್ಸಿಪಾಲ್ ಕೌನ್ಸಿಲರ್, ರೂಪಾಯಿ 1-0-0 ಶ್ರೀಮಾನ್ ಕೆ. ಶಿವರಾವ್, ಆಣೆ 0-8-0-

ಜಿಲ್ಲಾ ಹರಿಜನ ಸೇವಕ ಸಂಘ:-

ತಾ, 20-3-'42ನೇ ರಾತ್ರಿ ಮೂಡಬಿದ್ರೆಯಲ್ಲಿ ನಡೆದ ಯಕ್ಷಗಾನ ಬಯಲಾಟದ ಕುರಿತು ನಮಗೆ ಕೆಲವು ಪ್ರಶ್ನೆಗಳು ಬಂದಿವೆ, ಆ ಬಯಲಾಟವು ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ನಡೆದಲ್ಲ. ಮತ್ತು ಅದರ ಉತ್ಪನ್ನವು ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ಬಂದದ್ದೂ ಇಲ್ಲ. ಮೂಡುಬಿದ್ರೆಯಲ್ಲಿಯೇ ರಚಿತವಾದ ಒಂದು ಸ್ಥಳೀಕ ಕಮಿಟಿಯು ಸದ್ರೀ ಬಯಲಾಟವನ್ನು ಜರಗಿಸಿರುವುದೂ ಮತ್ತು ಅದರ ಆಶ್ರಯದಲ್ಲಿಯೇ ಸ್ಥಾಪಿತವಾಗಲಿರುವ ಒಂದು ಹರಿಜನ ವಸತಿಗಾಗಿ ಆ ಉತ್ಪನ್ನವನ್ನು ಉಪಯೋಗಿಸಲಾಗುವುದೆಂದೂ ನಾವು ಕೇಳುತ್ತೇವೆ.

ಎನ್. ಎಸ್. ಕಿಲ್ಲೆ,
(ಹರಿಜನ ಸೇವಕ)

ಬ್ರಹ್ಮಾವರ:- ತಾ, 28-3-42ರಲ್ಲಿ ಬ್ರಹ್ಮಾವರ ಬೋರ್ಡು ಎಲಿಮೆಂಟರಿ ಶಾಲಾ ಹೆತ್ತವರ ಕೂಟದ ಮಹಾಸಭೆಯು, ಜಿಲ್ಲಾ ರಿಜಿಸ್ಟ್ರಾರಾದ ಶ್ರೀ| ಯಮ್| ರಾಮಪ್ಪ B. A. ಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಹೆತ್ತವರ ಸಮೂಹದಿಂದ ಶಾಲಾ ಭವನವು ಕಿಕ್ಕಿರಿದಿತ್ತು. ಅಧ್ಯಕ್ಷರು ಆಸನ ಸ್ವೀಕರಿಸಿದಮೇಲೆ ಕಾರ್ಯದರ್ಶಿಗಳಾದ ಶ್ರೀ| H. ಸುಬ್ಬಣ್ಣ ಶೆಟ್ಟರು ಹೆತ್ತವರ ಕೂಟದ ಕರ್ತವ್ಯವನ್ನೂ, ಶಾಲೆಯಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಒದಗಿರುವ ಸ್ಥಳದ ಅಭಾವವನ್ನೂ ವ್ಯಕ್ತಪಡಿಸಿದರು. ಸಭಿಕರಲ್ಲಿ ಡಾ| ಕೆ. ನಾರಾಯಣ ಪೈಗಳು ಸಂಘದ ಅಧ್ಯಕ್ಷರು, ಶ್ರೀ| ಬಿ, ತಿಮ್ಮಣ್ಣಾಚಾರ್ಯ, ಶ್ರೀ| ಬಿ, ವಿಠಲ ಶೆಟ್ಟಿ, ಶ್ರೀ| ಪಿ. ವೈ- ರಾಮನ್ ಗುರುಕಳ್ ಮುಂತಾದವರು ಶಾಲೆಯನ್ನು ಹರಸಿ ಮಾತನಾಡಿದರು. ಆಮೇಲೆ ಶ್ರೀಮತಿ ಬಿ, ಕೃಷ್ಣಾ ಬಾಯಿಯವರು ತರಬೇತಿಗೊಳಿಸಿದ ಶಾಲಾ ಚಿಕ್ಕ ಪ್ರಾಯದ ಮಕ್ಕಳು ತಮ್ಮ ವಿವಿಧ ವಿನೋದಗಳಿಂದಲೂ 'ಧ್ರುವಕುಮಾರ' ಎಂಬ ಸಂಗೀತ ಸಹಿತವಾದ ಚಿಕ್ಕ ಪ್ರಹಸನದಿಂದಲೂ, ಸಭಿಕರನ್ನು ಸಂತೋಷಗೊಳಿಸಿದರು. ಸಂಘದ ಮೆಂಬರರಲ್ಲೊಬ್ಬರಾದ ಶ್ರೀ| P. Y. ರಾಮನ್ ಗುರುಕಳ್‌ರವರು, ಅಭಿನಯಿಸಿದ ಎಲ್ಲಾ ಮಕ್ಕಳಿಗೆ, ಸ್ವಂತ ಖರ್ಚಿನಿಂದ, ಅಧ್ಯಕ್ಷರ ಹಸ್ತದಿಂದ ಪಾರಿತೋಷಕ ಹಂಚಿಸಿದರು. ಅಧ್ಯಕ್ಷರು, ಚಿಕ್ಕ ಬಾಲಕಿಯರ ಚಟುವಟಿಕೆಗಳನ್ನು ನೋಡಿ, ತನ್ನ ಸಂತೋಷವನ್ನು ವ್ಯಕ್ತಪಡಿಸಿ, ಶಾಲೆಯ ಕಡೆಗೆ ಇರಬೇಕಾದ ಹೆತ್ತವರ ಕರ್ತವ್ಯವನ್ನೂ, ಶಾಲಾ ಸ್ಥಳವನ್ನು ಹೆಚ್ಚಿಸುವ ಅಗತ್ಯವನ್ನೂ ಒತ್ತಿ ಹೇಳಿ, ಭಾಷಣ ಮಾಡಿದರು. ಕಾರ್ಯದರ್ಶಿಗಳ ಧನ್ಯವಾದದೊಡನೆ ಸಭಾಂತ್ಯವಾಯಿತು,

ವಿದಾಯ ಸತ್ಕಾರ:- ಯುದ್ಧೋದ್ಯೋಗ ಹೊಂದಿ ತೆರಳಲಿರುವ ಶ್ರೀ| ಸುಬ್ಬಯ್ಯ ಎ| ಸುಚಿತ್ರರಿಗೆ ತಾ 1-4-42ರಲ್ಲಿ ಐಡಿಯಲ್ ಕಾಲೇಜ್ ಓಫ್ ಕಾಮರ್ಸಿನಲ್ಲಿ ವಿದಾಯ ಕೂಟವು ಶ್ರೀ ಎಸ್| ಎನ್| ಮಧ್ಯಸ್ಥರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಆಯ್ಕೆ, ಉಪಾಹಾರ ನಡೆದು, ಅಧ್ಯಕ್ಷರ ಪ್ರಥಮ ಭಾಷಣವಾದಮೇಲೆ ವಿದ್ಯಾರ್ಥಿಗಳ ಪರವಾಗಿ ಶ್ರೀ| ಎಚ್. ಬಿ. ಸಿ. ಸೈಮನ್ನರು ಮಾನಪತ್ರವರ್ಪಿಸಿದರು. ಆಮೇಲೆ ಶ್ರೀಗಳಾದ ಬಿ. ನುಮುಕೃಷ್ಣಾಚಾರ್, ಎಮ್. ವಿ. ಹೆಗ್ಡೆ ಎನ್. ಎಚ್. ಕ್ಲಿಯರ್, ಕೆ. ಎಸ್. ಭಟ್ಟರು ಶ್ರೀ ಸುಚಿತ್ರರ ಗುಣಕಥನ ಮಾಡಿ ಭಾಷಣವಿತ್ತರು, ಶ್ರೀ| ಸುಚಿತ್ರರು ಉತ್ತರವೀಯುತ್ತಾ ಯುದ್ಧ ಸೇವೆಯ ತನ್ನ ಉತ್ಸಾಹವನ್ನು ತೋರಿಸಿದರು, ಧನ್ಯವಾದಾರ್ಪಣೆ, ರಾಷ್ಟ್ರೀಯಗೀತದೊಂದಿಗೆ ಸಭಾಂತ್ಯವಾಯಿತು. ಶ್ರೀ ಸುಚಿತ್ರರು ಐಡಿಯಲ್ ಕೊಲೆಜ್ ಆಫ್ ಕಮರ್ಸಿನ ಚಾಲಕರಾಗಿದ್ದರು.

NOTICE.

The Pangal Nayak Bank Limited Katapadi S. K.

ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳಿಗೆ ಕೊಟ್ಟ ರಿಜಿಸ್ಟ್ರ ನೋಟೀಸುಗಳು ಜ್ಯಾರಿಯಾದರೂ ಈ ತನಕ ಬಡ್ಡಿ ಕೊಡದೆ ಇರುವುದರಿಂದ ಸದ್ರಿ ಆಸಾಮಿಗಳು ಈ ಬೇಂಕಿನಿಂದ ಪಡೆದ ಲೋನುಗಳಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾ. 16ನೇ ಗುರುವಾರ ದಿವಸ ಮಧ್ಯಾಹ್ನ ಎರಡು ಗಂಟೆಗೆ ಅಥವಾ ಬೇಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುವುದು- ತಿಳಿದಿರಲಿ.

ಲೋನು ನಂಬ್ರ.	ಹೆಸರು ಮತ್ತು ವಿಳಾಸ.	ಅಸಲು ರೂಪಾ.
629/39 95/40	ಶ್ರೀ| ಪಿ. ಸುಬ್ರಾಯ ಭಟ್, ನಾರಾಯಣ ಭಟ್ಟರ ಮಗ, ಟೀಚರ್, ಮಟ್ಟು ಬೋರ್ಡು ಶಾಲೆ ಕಟಪಾಡಿ, ಪೋಸ್ಟ್ ದ. ಕ. - ದಿ -	60/= 170/=
640/39	ಶ್ರೀ| ಕೆ. ಟ್ಯ. ಶಿವರಾಯ, ಇವೆಂಜಲಿಸ್ಟ ಬಿ. ಇ. ಎಂ. ಉಚ್ಚಿಲ ಪೋಸ್ಟ್, ದ, ಕ.	14/=

ಬೇಂಕಿನ ಆಫೀಸು. }
ಕಟಪಾಡಿ 2-4-1942. }

K. G. Kudva,
ಏಜಂಟ್.

TENDER NOTICE.

Sealed tenders will be received by the president, District Board, South Canara, at the District Board Office, Mangalore, up to 5 P. M. on monday the 20th April 1942 for the supply of all books and maps required for the use of Board Secondary and Elementary Schools under the Board for the school year 1942-43.

2. Further particulars regarding terms and conditions can be had from the District Board Office, Mangalore.

(Sd) **K. Vittal Shetty,**
President, Dt. Board.

◎ ತರುಣರೆಲ್ಲಾ ಯುದ್ಧ ತರಬೇತಿಗೆ ಮುಂದಾಗಬೇಕು ◎

ಈ ಉತ್ಕಟ ಪರಿಸ್ಥಿತಿಯಲ್ಲೂ ಅದರಿಂದ ಪ್ರಯೋಜನವಿದೆ.

ಲೇಖಕರು: ಶ್ರೀ. ಪಿ. ಚಂದ್ರಶೇಖರ ಹೆಗ್ಡೆ, ಬಿ. ಎ., ಬಿ. ಎಲ್.

ಯುದ್ಧವು ಅನಿವಾರ್ಯವಾಗಿ ಒದಗಿಸಿಕೊಡುವ ಸಂದರ್ಭಗಳಿಂದ ಪಾಠ ಕಲಿತು ಅವನ್ನು ನಮ್ಮ ದೇಶದ ಮುಂದಿನ ಸ್ವಾತಂತ್ರ್ಯಕ್ಕಾಗಿ ಸಾರ್ಥಕಗೊಳಿಸಬೇಕು. ಈಗ ನಮ್ಮ ದೇಶಕ್ಕೆ ಎಷ್ಟರಮಟ್ಟಿನ ಸ್ವಾತಂತ್ರ್ಯ ಉಂಟೆಂದೂ ಎಷ್ಟರ ಮಟ್ಟಿನ ಸ್ವರಕ್ಷಣಾ ಬಲವು ಉಂಟೆಂದೂ ಎಲ್ಲರಿಗೂ ಗೊತ್ತಿದೆ. ಇಂಗ್ಲೆಂಡಿನ ಕಾಲಿಗೆ ಕಟ್ಟಿದ ಕಡಗದಂತಿದ್ದೇವೆ ಇಲ್ಲಿ. ಅವರ ಹೆಜ್ಜೆಯಂತೆ ನಾವು ಧ್ವನಿಸಿಕೊಡಬೇಕು. ನಮಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಯುದ್ಧ ತರಬೇತಿಯಿಲ್ಲ; ಯುದ್ಧ ಮಾಡುವ ಕ್ರಮವೇ ಗೊತ್ತಿಲ್ಲ. ಈ ತರದ ಅನುಕೂಲತೆಯಾ ತರಬೇತಿಯನ್ನು ಕೊಟ್ಟರೆ ಅದರಿಂದ ತಮ್ಮ ಸಾಮ್ರಾಜ್ಯಕ್ಕೆ ಗಂಡಾಂತರ ಉಂಟೆಂದು ಬ್ರಿಟಿಷ್ ಮುತ್ಸದ್ದಿಗಳ ಮುಂಚಿನ ಘೋಷಣೆ. ತಮ್ಮ ಅಸಮಾನ ನೌಕಾಬಲವು ಹಿಂದೂದೇಶವನ್ನೂ ಇನ್ನಿತರ ಸಾಮ್ರಾಜ್ಯವನ್ನೂ ಶತ್ರುವಿನ ಭೀತಿಯಿಂದ ಸಂರಕ್ಷಿಸಬಲ್ಲುದು ಎಂಬ ಧೈರ್ಯವಿತ್ತು ಅವರಿಗೆ. ಆದರೆ ಇವೆಲ್ಲ ಬಯಲು ಭ್ರಾಂತಿಯಾಗಿ ಬಿಟ್ಟಿದೆ. ಇಂದು ಬ್ರಿಟಿಷ್ ಸಾಮ್ರಾಜ್ಯದ ಗುಡಿಕಟ್ಟು ಶಿಥಿಲ ಬಿದ್ದಿದೆ. ಸಮುದ್ರದ ರಾಣಿಯು ಇಂದು ಕಂಗೆಟ್ಟು ಕಾಂತಿಹೀನಳಾಗಿರುವಳು. ಶಕ್ತಿಯಿದ್ದರೂ ಆಯಾ ದೇಶದ ಜನರ ಸಹಕಾರವಿಲ್ಲದೆ ಒಳಗೆ ನುಗ್ಗುತ್ತಿರುವ ಶತ್ರುವನ್ನು ಜಯಿಸುವುದು ಕಷ್ಟ ಸಾಧ್ಯವೆಂಬ ಪಾಠವನ್ನು ನಮ್ಮ ಅರಸರು ಇಂದೀಗ ಸರಿಯಾಗಿ ಅರಿತಿರಬೇಕು.

ಈ ಹೊಸ ಪಾಠದ ದೆಸೆಯಿಂದಲೋ ಎಂಬಂತೆ ಇಂದು ನಮ್ಮ ಸರಕಾರವು ಹಿಂದೀಯರ ಸಹಾಯವನ್ನು ಈ ಯುದ್ಧದಲ್ಲಿ ಹೆಚ್ಚೆಚ್ಚಾಗಿ ಕಾಡುತ್ತಿದೆ. ಹಿಂದೂದೇಶವು ಮುಂದಿನ ಯುದ್ಧರಂಗದ ಕಾರ್ಯಕ್ಷೇತ್ರವಾಗಿ ನಿಲ್ಲುವ ಸಂಭವ ತೋರುವುದು. ಹೀಗಿರುತ್ತ ಅಸಮಾನ ಜನ ಬಲವಿರುವ ನಮ್ಮ ದೇಶದ ಜನಸಂಪತ್ತನ್ನು ಈ ಯುದ್ಧಕ್ಕೆ ಸಂಧಿಸಿಕೊಳ್ಳುವ ಆವಶ್ಯಕತೆಯನ್ನು ನಮ್ಮ ಸರಕಾರವು ಹೆಚ್ಚೆಚ್ಚಾಗಿ ಮನಗಂಡಿರುವುದು. ಜನಪ್ರೀತ ಸಂಸ್ಥೆಗಳಾದ ಕಾಂಗ್ರೆಸ್ಸು, ಲೀಗು ಮೊದಲಾದುವುಗಳು ಇದಕ್ಕೆ ಇಷ್ಟರ ವರೆಗೆ ತಮ್ಮ ಸಹಕಾರವನ್ನು ಕೊಡಲಿಲ್ಲ. ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡದಿದ್ದರೆ ಈ ಯುದ್ಧದಲ್ಲಿ ಭಾಗ ವಹಿಸಲು ಹಿಂದೀಯರಿಗೆ ಮನಸ್ಸಿಲ್ಲವೆಂಬುದನ್ನು ಅವರು ವ್ಯಕ್ತಗೊಳಿಸಿರುತ್ತಾರೆ. ಈ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಸರ್. ಸ್ಟೇಫೋರ್ಡ್ ಕ್ರಿಪ್ಸರು ಇಂದೀಗ ದಿಲ್ಲಿಗೆ ಬಂದು ಹಿಂದೀ ಮುಖಂಡರೊಡನೆ ಮಾತುಕಥೆಗಳನ್ನು ನಡೆಸುವವರಾಗಿದೆ.

ಹಿಂದೂದೇಶಕ್ಕೆ ಕೂಡಲೇ ಪೂರ್ಣ ಸ್ವಾತಂತ್ರ್ಯ ಸಿಕ್ಕಲಿ ಎಂದು ನಾವು ಹಾರೈಸುತ್ತ ಮುಂದಿನ ಕಡೆ ದೃಷ್ಟಿಯಿಟ್ಟು ಇಂದಿನ ಕಾರ್ಯವನ್ನು ವಿವೇಚಿಸಬೇಕು. ನಮಗೆ ಯುದ್ಧದ ನಂತರ ಕೂಡಲೇ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಲಿ, ಸಿಕ್ಕದಿರಲಿ, ಇಂದಿನ ಯುದ್ಧವು ಹಿಂದೀಯರಿಗೆ ಕೆಲವು ಅನುಕೂಲ ಸಂದರ್ಭಗಳನ್ನು ಅನಿವಾರ್ಯವಾಗಿ ದೊರಕಿಸಿರುವುದೆಂಬುದು ನಿರ್ವಿವಾದ. ಆ ಶುಭ ಸಂದರ್ಭಗಳ್ಯಾವುವೆಂಬುದನ್ನು ತಿಳಿದು ಅವನ್ನು ಬಿಡದೆ ನಮ್ಮ ಪ್ರಯೋಜನಕ್ಕೂ ದೇಶದ ಅಭ್ಯುದಯಕ್ಕೂ ಸಂಧಿಸಿಕೊಳ್ಳುವುದು ನಮ್ಮ ಕರ್ತವ್ಯವು. ಇಂಥಹ ಅನುಕೂಲ ಸಂದರ್ಭಗಳ ಪೈಕಿ ಮಿಲಿಟರಿ, ನೇವಲ್, ಮತ್ತು ಏರಿಯಲ್ ತರಬೇತಿಗಳು ನಮ್ಮ ರಾಷ್ಟ್ರೀಯತೆಯ ಭಾವೀದೃಷ್ಟಿಯಿಂದ ಅತಿ ಮಹತ್ವವುಳ್ಳದ್ದಾಗಿ ಅವನ್ನು ಅವಶ್ಯವಾಗಿ ನಮ್ಮ ಯುವಕರು ಪಡೆಯಬೇಕೆಂದು ನಮಗನ್ನಿಸುತ್ತದೆ. ಒಂದು ಜನಾಂಗದ ಸ್ವಾತಂತ್ರ್ಯವನ್ನು ರಕ್ಷಿಸಬೇಕಾದರೆ ಅಧುನಿಕ ಯುದ್ಧ ಕ್ರಮದಲ್ಲಿ ಭೂಸೇನೆಯೂ, ನೌಕಾಸೇನೆಯೂ, ವಾಯುಬಲವೂ ಆ ಜನಾಂಗಕ್ಕೆ ಅತ್ಯಗತ್ಯ. ಅಂಥಹ ಬಲವು ದೇಶಾಭಿಮಾನವುಳ್ಳ ಸ್ವದೇಶಿಯರೇ ಸೇರಿ ಅವರಿಂದಲೇ ನಾಯಕತ್ವವುಳ್ಳದ್ದಾಗಿರಬೇಕು. ಈ ಸೇನೆಯನ್ನು ಮಾಡುವದಕ್ಕೆ ಇಂದಿನ ಯುದ್ಧ ಸಂದರ್ಭವೇ ವಿಶೇಷ ಅನುಕೂಲವಾಗಿ ಇರುವುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದುದರಿಂದ ನಮ್ಮ ಯುವಕರು ಈ ಸಂದರ್ಭಗಳು ಎಲ್ಲಿ ಬರುವವೆಂಬುದನ್ನು ಕಾದು ತಿಳಿದು ಅದಷ್ಟು ಮಟ್ಟಿಗೆ ಅದರಿಂದ ಪ್ರಯೋಜನ ಹೊಂದುವದನ್ನು ಹಾರೈಸಬೇಕು.

ಈ ತರದ ಯುದ್ಧ ತರಬೇತಿಯ ಪೈಕಿ ನೌಕಾ ತರಬೇತಿಯಲ್ಲಿ ನಮ್ಮ ಯೋಗ್ಯ ತರುಣರಿಗೆ ಶಿಕ್ಷಣವನ್ನು ಕೊಡುವ ಒಂದು ಯೋಜನೆಯನ್ನು ಸರಕಾರದವರು ಈಗಲೇ ಕೈಕೊಂಡಿರುವರು. ಯೋಗ್ಯರಾದ ಹುಡುಗರನ್ನು ಸೇರಿಸಿಕೊಳ್ಳುವರೆ ನೇವಲ್ ರಿಕ್ರೂಟಿಂಗ್ ಆಫೀಸರರು (Naval Recruiting Officer) ದೇಶವನ್ನು ಸಂಚರಿಸುತ್ತಲಿದ್ದಾರೆಂದು ಅವರ ಕಾರ್ಯಕ್ರಮದಿಂದ ತಿಳಿಯುತ್ತದೆ. ಸುಮಾರು ೧೪ರಿಂದ ೧೭ರ ವರೆಗಿನ ಪ್ರಾಯದ ಮತ್ತು ಕನಿಷ್ಟ IV ಫಾರ್ಮಿನ ವಿದ್ಯಾಭ್ಯಾಸವುಳ್ಳ ಹುಡುಗರು ಇದಕ್ಕೆ ಸೇರಬಹುದು. ತರಬೇತಿಯು ೧೫ರಿಂದ ೧೮ ತಿಂಗಳ ವರೆಗೆ ಇರುವುದು. 'ದಿಲಾವರ್' ಮತ್ತು 'ಬಹದ್ದೂರ್' ಎಂಬ ಶಾಲೆಯಲ್ಲಿರುವ ನೌಕಾ ತರಬೇತಿಯ ಕೇಂದ್ರಗಳಿಗೆ ಆರಿಸಲ್ಪಟ್ಟ ಹುಡುಗರನ್ನು ಕೂಡಲೇ ಕಳುಹಿಸಲಾಗುವುದು. ತರಬೇತಿಯ ಸಮಯ, ಎಲ್ಲಾ ಖರ್ಚು ಹೊರತು ಹುಡುಗರಿಗೆ ತಿಂಗಳಿಗೆ ೧೦ರಿಂದ ೧೫ ರೂಪಾಯಿ ವರೆಗೆ ಸಂಬಳ ಕೊಡಲಾಗುವುದು. ಯೋಗ್ಯರಾದ ಹುಡುಗರು ಸ್ವಲ್ಪ ವರ್ಷಗಳಲ್ಲಿಯೇ ಸರ್ಟಿಫಿಕೇಟುಗಳನ್ನು ಪಡೆದು ಕಮ್ಮಿಷನ್ ಕೆಲಸಗಳಿಗೆ ಸೇರಲು ಅರ್ಹರಾಗುವರು. ಇವುಗಳಿಗೆ ತಿಂಗಳಿಗೆ ರೂಪಾಯಿ ೨೫೦/-ರ ವರೆಗೆ ಸಂಬಳವಿದೆ.

ನಮ್ಮ ಹುಡುಗರು ತಮ್ಮ ಪಾಠ ಪುಸ್ತಕಗಳಲ್ಲಿ ಯುದ್ಧ ಹಡಗು, ಯುದ್ಧ ನಾವೆ, ಜಲಾಂತರ್ಗಾಮಿ ಇವೇ ಮೊದಲಾದುವುಗಳ ವಿಚಿತ್ರ ವ್ಯಾಪಾರವನ್ನು ಓದಿ ತಿಳಿದು ಆಶ್ಚರ್ಯಪಟ್ಟಿರಬೇಕು. ಬ್ರಿಟಿಷ್, ಫ್ರೆಂಚ್, ಅಮೆರಿಕನ್, ಜಪಾನ, ಮೊದಲಾದ ಜನಾಂಗದ ಹೆಚ್ಚಿನ ಯುವಕರಿಗೆ ನೌಕಾ ಜೀವನವೆಂದರೆ ಪ್ರತಿ ಒಬ್ಬನೂ ಅನುಭವಿಸಿ ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ. ನಮ್ಮ ಹುಡುಗರೂ ಈ ತರದ ತರಬೇತಿಯನ್ನು ರುಚಿಸಿದರೆ ಅದರಲ್ಲಿ ಹೆಚ್ಚಿನ ಉತ್ಸಾಹವನ್ನು ತೋರುವುದರಲ್ಲಿ ಸಂಶಯವಿಲ್ಲ. ಆದರೇನು, ಹುಟ್ಟು ಕಸುಬೆಂದು ನಮ್ಮ ಸಮಾಜಗಳು ಉತ್ತು ಬಿತ್ತುವ ಬಾಳಿನಲ್ಲಿಯೇ ಕಟ್ಟು ಬಿದ್ದು ಅದರ ನೀರಸ ಜೀವನದಲ್ಲಿಯೇ ಸಂದು ಹೋಗುವ ಮನೋವೃತ್ತಿಯನ್ನು ಸ್ವಲ್ಪವೂ ಬದಲಿಕ್ಕೆ ಕಷ್ಟ ಪಡುತ್ತವೆ. ಅಂಥವರೂ ಸಮಾಜದ ಮುಖಂಡರು ಎಂದೆನ್ನಿಸಿಕೊಳ್ಳುವವರೂ ಸಮಾಜದ ಈ ಗೊಡ್ಡು ಅವಸ್ಥೆಯನ್ನು ಸುಧಾರಿಸುವ ಬಗೆಯನ್ನು ಇದೊಂದು ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಮಾಡಬಹುದಲ್ಲವೇ? ಯುದ್ಧದ ಪ್ರಕೃತ ಸಂದರ್ಭಗಳು ಈ ತರದ ಜಳ್ಳು ಜೀವನವನ್ನು ತೊಲಗಲಾಡಿಸಿ ಗುಡುಗಾಡುವ ನರಗಲಿಗಳ ಜವ್ವನವನ್ನು ದೊರಕಿಸಿಕೊಡುವುದರಲ್ಲಿ ಮೊದಲನೆಯ ಮೆಟ್ಟಲೆಂದೆನ್ನಬೇಕು.

ಅವರೆ ಬಂಟರ ಯಾನೆ ನಾಡವರು ಅದೊಂದು ವೀರ ಸಂಗಡಕ್ಕೆ (Semi martial) ಸೇರಿದವರೆಂದು ಹೇಳುವುದಕ್ಕೆ ಆಧಾರಗಳಿವೆ. ಅವರು ಈ ಸಾಹಸದ ಉದ್ಯೋಗಗಳಲ್ಲಿ ಮುಂದಾಗಿ ಸೇರುವುದರಿಂದ ಈ ಜಿಲ್ಲೆಯಲ್ಲಿ ಮುಕ್ಕವರಿಗೆ ಆದರ್ಶನಾಗಿ ನಿಲ್ಲಬಹುದು. ಅಂತು ಈ ವಿಧಾನದಿಂದ ಪಡೆದ ತರಬೇತಿಯ ಅನುಭವಗಳನ್ನು ವೀರಮಾತೆಯ ಸ್ವಾತಂತ್ರ್ಯವನ್ನು ರಕ್ಷಿಸುವ ಹಂಬಲದಲ್ಲಿ ಅರ್ಹಿಯ ಪಾದ ಕಾಣಿಕೆಯಾಗಿ ಮುಂದೆ ಒಪ್ಪಿಸಬಹುದಷ್ಟೆ.

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 22/1942

ಬಾಲಕೃಷ್ಣ ರಾವ್ ಬಿ. ಬೋಳ ನಾಗೇಶ ರಾಯರ ಮಗ, Textile chemist at Bombay—

ಅರ್ಜಿದಾರ.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ—

ತಾ. 5-2-1936ರಲ್ಲು ವ್ಯಾತಪಟ್ಟ ಪಿ. ಗೋವಿಂದ ನಾಯಕರಿಗೆ ವರಭಾರ ಹಕ್ಕಿನಿಂದ ಬಂದ ಮೊಬಲಗು ಅರ್ಜಿಯಲ್ಲಿ ಕಾಣಿಸಿರುವ ಮೂರು ಶೇರುಗಳನ್ನು ಮೃತನ ವಾರೀಸುದಾರ, ರಕ್ತದ ಮಗ ಪಿ. ವೆಂಕಟ್ರಾಯ ನಾಯಕರಿಂದ ಎಕ್ಸ್‌ಚೇಂಜು ಮೂಲಕ ಅರ್ಜಿದಾರನು ಪಡೆದಿರುವುದರಿಂದ ಸದ್ರಿ ಮೂರು ಶೇರುಗಳ ಬಾಬಿನಲ್ಲಿ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರನು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 3-6-42ಕ್ಕೆ ವಿಚಾರಣೆಗಿದೆ. ಆಕ್ಷೇಪ ಹೇಳಲುಳ್ಳವರು ಸದ್ರಿ ತಾ. 3-6-42ರಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಬೆಳಗ್ಗೆ ಘಂಟೆ 10ಕ್ಕೆ ಹಾಜರಾಗಿ ಆಕ್ಷೇಪ ಹೇಳು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಉಡುಪಿ. } P. V. Acharya.

ತಾ. 4-4-42 } Vakil for 1st pet.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills:	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

SELF ENGLISH KANNADA TUTOR.

ಸ್ವಯಂ ಇಂಗ್ಲೀಷ ಬೋಧಿನಿ.

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

(ಪ್ರತಿಯ ಮಾದರಿ)

ಕನ್ನಡ ಓದಲಿಕ್ಕೆ ತಿಳಿದವನು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

THE MODERN BOOK Co.,

No. 28, Ayadhanam Lane 2nd Lane (N. V.) Chools, MADRAS.

Degrees: Books: Medicines

Free H. L. M. S. M. B. H. M. D. etc Free Homeo-Ayur-Unani-Nature degree By post also—Practitioners also get seen Homeo Materiamedica Rs. 5. Homeo practice book Rs 4. Insanity Cure Pills Rs. 10 Enclose 2 annas stamp—

Principal Indian Homeopath Institute & Society (Govt. Regd.)

P.O. Mahuva, (Kathiawar Dt, India.)

Sidha-Kalpa Kavach (Regd.)

No 3 Rs 2. No 2 Rs 5 No 1 Rs. 7. Special Rs 10, Extra Special Rs. 17. for our marriage health, wealth. Ask any six questions with M. O. Re. 1/- and get correct answers by return post Life reas Rs. phle No V. P. P. Send M. O. Fred P. O ts Prof. Dr N. N. Chhatbar

ನಮ್ಮ ಗಂಗಾಯಾತ್ರೆ

(೮ನೇ ಪುಟದಿಂದ ಮುಂದುವರಿದುದು.)

ತ್ಯರೊಬ್ಬರು ಮುಳ್ಳುಗಳ ಮೇಲೆ ಮಲಗಿ ಗಾಂಜವನ್ನು ಸೇದುತ್ತಿದ್ದರು. ಒಂದು ಕಡೆ ಒಬ್ಬ ಸಾಧುವಿಗೆ ಚಿಕಿತ್ಸೆಯನ್ನು ಮಾಡುತ್ತಿದ್ದರು. ಮೈಮೇಲೆಲ್ಲಾ ಗಾಯಗಳಾಗಿದ್ದುವು. ಆ ಸಾಧುವು ಯಾಹೋ ಒಬ್ಬ ಸ್ವಯಂ ಸೇವಕನನ್ನು ಬೈದನಂತೆ, ತರಿ, ಅವನ ಮೈಮೇಲೆಲ್ಲಾ ಗಾಯಗಳಾದುವು!

ಇನ್ನೊಂದು ದೃಶ್ಯವು ಇದಕ್ಕಿಂತ, ಮನೋರಂಜಕವಾಗಿದ್ದಿತು. ಒಬ್ಬ ಲಕ್ಷ್ಮೀಶ್ವರರು ಬಡವರಿಗೆ ಕಂಬಳಿಗಳನ್ನು ದಾನಮಾಡಲು ತಂದಿದ್ದರು. ಜನರ ಗುಂಪಿನ ಕಾಟದಿಂದ ದೂರವಾಗಲು, ಅವರು ಕಂಬಳಿಗಳನ್ನು ಸೇವಾ ಸಮಿತಿಗೆ ಕೊಟ್ಟು ಕಳುಹಿಸಿದರು. ಬಡವರು ಸಮಿತಿಯ ಕಛೇರಿಯ ಮುಂದೆ ಸೇರಿದರು. ಕ್ಯಾಪ್ಟನ್ ಸಾಹೇಬರು ಅವುಗಳನ್ನು ಹಂಚುವುದಕ್ಕೆ ಬದಲಾಗಿ, (ಸ್ಟೋರ್ ರೂಂ) ಉಗ್ರಾಣದಲ್ಲಿ ಇಟ್ಟುಬಿಟ್ಟರು. ಭಿಕ್ಷುಕರು ಗದ್ದಲಮಾಡಲು, ಸ್ವಯಂಸೇವಕರು ಅವರಿಗೆ ಸರಿಯಾಗಿ ಬುದ್ಧಿ ಕಲಿಸಿದರು! ಮುಂದೆ, ಒಬ್ಬ ಭಿಕ್ಷುಕನು ತನ್ನ ಭಿಕ್ಷಾಪಾತ್ರೆಯಲ್ಲಿದ್ದ ಅಕ್ಕಿಯನ್ನು ಸೇರಿಗೆ ೧ ಪೈನಂತೆ ಮಾರುತ್ತಿದ್ದನು. ಇನ್ನೊಂದು ಅಂಗಡಿಯ ಮುಂದೆ ಒಬ್ಬ ಜಟಾಧಾರಿಯು, ತನ್ನ ಬಳಿ ಇದ್ದ ಹೊಸದೊಂದು ಚಾದರನ್ನು ೨ ಆಣೆಗೆ ಮಾರುವುದಾಗಿ ಹೇಳುತ್ತಿದ್ದನು. ಇದೆಲ್ಲವನ್ನೂ ನೋಡಿ ನಾವು ಮುಂದೆ ಬರುತ್ತಿರುವಾಗ, ಮಧ್ಯದಲ್ಲಿ ಜನರ ಗುಂಪು ಇತ್ತು. ಒಳಗೆ ಹೋಗಿ ನೋಡಲು, ವೃದ್ಧಳೊಬ್ಬಳು ತನ್ನ 7 ವರ್ಷದ ಮೊಮ್ಮಗಳು ಬೆಳಗಿನಿಂದ ಮಾಯವಾಗಿರುವುದು ಹೇಳಿ ರೋದಿಸುತ್ತಾ ಕುಳಿತಿದ್ದಳು.

ಸಾಯಂಕಾಲವಾಗಲು ನಾವು ಮಲ ವಿಸರ್ಜನೆಗೆ ಹೊರಟೆವು. ಎಲ್ಲಿ ಹೋದರೂ ತಡೆಯಲಾರದಷ್ಟು ದುರ್ಗಂಧವು ವ್ಯಾಪಿಸಿತ್ತು. ಎಲ್ಲಿಯೂ ಕಾಲಿಡುವುದಕ್ಕೆ ಸಹ ಸ್ಥಳವಿರಲಿಲ್ಲ. ಹೇಗೋ ಮಾಡಿ ಗುಡಾರವನ್ನು ಪ್ರವೇಶಿಸಿದೆವು. ಆಗ ಒಬ್ಬ ಪಂಡಿತರು ಕೈಯಲ್ಲಿ ಲೋಟವನ್ನು ಹಿಡಿದುಕೊಂಡು, ಕಿವಿಯಲ್ಲಿ ಯಜ್ಞೋಪವೀತವನ್ನು ಧರಿಸಿ ಈ ರೀತಿ ಹೇಳುತ್ತ ಒಳಗೆ ಬಂದರು, "ನಾನು ಲಘುಶಂಕೆಯ ನಿಮಿತ್ತವಾಗಿ ಈ ಕಡೆ ಬರುತ್ತಿದ್ದೆ. ಹರಿಭಜನೆಯ, ಮಧುರಗಾನವು ಕಿವಿಯಲ್ಲಿ ಬೀಳಲು, ಅದರ ಆಕರ್ಷಣೆಯಿಂದ ಇಲ್ಲಿ ಬಂದೆನು" ಅವರು ಬಹಳ ಹೊತ್ತಿನ ವರೆಗೆ ನಮ್ಮೊಡನೆ, ಯಾವ ಯಾವುದೋ ವಿಷಯಗಳನ್ನು ಚರ್ಚಿಸಿ ಹೊರಟು ಹೋದರು.

ಮಾರನೆಯ ದಿನ ಹೊರಡಲು ಸಿದ್ಧರಾದೆವು. ಆಗ ಒಂದು ವಿಶೇಷ ಘಟನೆಯಾಯಿತು. ನಮ್ಮೊಡನೆ ಬಂದಿದ್ದ ಒಬ್ಬ ಧನಿಕನ ಪತ್ನಿಯ ಬೆಲೆಬಾಳುವ ಸೀರೆಯು ಕಳವಾಯಿತು. ಆ ಸೀರೆಯ ಸೆರಗಿನಲ್ಲಿ ಎರಡು ಬೆಲೆಬಾಳುವ ವಜ್ರದುಂಗುರಗಳೂ ಇದ್ದುವಂತೆ. ಪತಿದೇವರು ಬಹಳ ಚಿಂತೆಗೊಳಗಾಗಿದ್ದರು. ಉಂಗುರಗಳನ್ನು ತಂದುಕೊಟ್ಟವರಿಗೆ ಅವರು 500 ರೂ.ಗಳ ಬಹುಮಾನವನ್ನು ಕೊಡಲು ಸಿದ್ಧರಿದ್ದರು.

ಮಧ್ಯಾಹ್ನ ಸುಮಾರು ಒಂದು ಗಂಟೆಗೆ ನಾವು ಅಲ್ಲಿಂದ ಹೊರಟು ಬಂದ, ಹಡಗನ್ನು ಹತ್ತಿದೆವು

(ಹಿಂದಿಯಿಂದ)

ಬೇಕಾಗಿದ್ದಾರೆ

ಉಡುಪಿ ತಾಲೂಕು ಮಣಿಪುರ ಗ್ರಾಮದ ಮರ್ಸಿ ಎಯಿಡೆಡ್ ಎಲಿಮೆಂಟರಿ ಶಾಲೆಗೆ ಹಾಯರ್ ಗ್ರೇಡ್ ಟ್ರೈನಿಂಗ್ ಪಾಸಾದ ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ. ಸಂಬಳ ಎಸ್ಟ್ಯಾಂಡ್ ಗ್ರ್ಯಾಂಟಿನ 85% ಕೊಡಲಾಗುವುದು. ಅಪೇಕ್ಷೆಯುಳ್ಳವರು ತಾ. 30-4-42 ರೊಳಗೆ ಮುಖತಃ ಯಾ ಪತ್ರಮೂಲಕ ಹೆಚ್ಚಿನ ಮಾಹಿತಿಯನ್ನು ತಿಳಿಯಬಹುದು.

ಕೆ. ದಾಮೋದರ ನಾಯಕ್,
ಮೆನೇಜರ್
ಮರ್ಸಿ ಎಯಿಡೆಡ್ ಎಲಿಮೆಂಟ್ರಿ ಶಾಲೆ,
ಪೋಸ್ಟ್ ಕುಕ್ಕೆಹಳ್ಳಿ.
ಮಣಿಪುರ 2-4-42

ಅಂಗಾರವಾದ ಪುಸ್ತಕ!

ಮೂರನೇ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಚಿತ್ರಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲರೂ ಪುರುಷರು ಕನ್ಯೆಗಳು ಬಯಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ಬಿಗಿಯಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ವಶವಾಗುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಖ ಕಾಲದ ಮರ್ಮಗಳು, [illegible] ವತ್ತುವ, ಮಲಗುವ ಮಾಡಿಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೀವನ ಟ್ರೇಡಿಂಗ್ ಕಂಪೆನಿ

೦. ಪೈನಾಪುರ್ ರೋಡ್, ಮದರಾಸ್.

ವ್ಯವಹಾರವಿವೇಕಕ್ಕೆ ಒಂದು ವಿನಂತಿ

ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾ ದೇಶವು ಬಲಿಷ್ಠವಾಗಬೇಕು.... ಪ್ರತಿಯೊಬ್ಬ ವ್ಯಕ್ತಿಯೂ ...



ಇವನ್ನು ರಕ್ಷಿಸಿಕೊಳ್ಳಬೇಕು

ಈಗಲೇ ಆ ಕೆಲಸವನ್ನು ಕೈಗೊಳ್ಳಿರಿ! ನಿಮ್ಮ ನೀವೇ ಯೋಚಿಸಿನೋಡಿರಿ. ನಿಮ್ಮ ರಕ್ಷಣೆಗಾಗಿ ನೀವೇ ಸಹಾಯ ಮಾಡಿರಿ.

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಅದಕ್ಕಾಗಿ ನಾವು ವಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನೌಕೆ, ವಿಮಾನದಳಗಳ ರಚನೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಬೆಳೆಸುತ್ತದೆ.

G.I.Kn.Ad No. 43-A

ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ.

DIAMONDS! DIAMONDS!

K. R. K. SHET.

Opposite Govt-College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected)) ಎಮ್ಸ್ಟ್ರಿ ತಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟೆಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‍ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‍ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ - ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಬಳ್ಳಾರಿ ಎಚ್. ನಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ. ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಆಂದಾನಿ.

ಅಚ್ಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳಸುವದು—ಆಮಲಕೀ ತೈಲ.
ಆನಂದ ಉತ್ಸಾಹ ನಿಜಾರವಕ್ಕೆ ಹೆಚ್ಚಿಸಲು—ಆಮಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು—ಆಮಲಕೀ ತೈಲ.
ನಾರೀಮಣಿಗಳ ಸೌಂದರ್ಯವೇ—ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ—ಆಮಲಕೀ ತೈಲ.
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—ಆಮಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—ಆಮಲಕೀ ತೈಲ.
ಭಾರತದ ಮಹಿಳೆಯರು ಪ್ರೀತಿಸುವರು—ಆಮಲಕೀ ತೈಲ.
ಬೆಳಗುವ ತಾರೆಯೇ-ಮದುಳಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
ಲಲನೆಯರು ಮೆಚ್ಚುವರು—ಆಮಲಕೀ ತೈಲ.
ವಾತಾದಿ ತ್ರಿದೋಷನಾಶಕವೇ—ಆಮಲಕೀ ತೈಲ.
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—ಆಮಲಕೀ ತೈಲ
ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ

ಆ ಮ ಲ ಕೀ ತೈಲ ವನ್ನೇ ಉಪ ಯೋಗಿ ಸಿರಿ.

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—ಆಮಲಕೀ ತೈಲ.
2 ಔನ್ಸಿನ ಸೀಸ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು:-ನವಭಾರತ ಬುಕ್‍ಡಿಪೋ, ಉಡುಪಿ. ಗಣಪಯ್ಯ ಲಕ್ಷ್ಮಣ ನಾಯಕ್ ಬ್ರದರ್ಸ್, ಕೋಟ. ದಿ ಕೆನರಾ ಮೆಡಿಕಲ್ ಸ್ಟೋರ್ಸ್ ನ ಬ್ರಹ್ಮಣ್ಯ, ದ. ಕ.

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(Incorporated in India in 1920.)

ಮುಖ್ಯ ಕಾರ್ಯಾಲಯ:—**ಕೋರ್ಟ ರಸ್ತೆ, ಉಡುಪಿ.**

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಶಾಂತಾಂಗಾಂಚ್ ಮತ್ತು ಚಿಕ್ಕಿಗೋಳಿ, ದ. ಕನ್ನಡ.

ಕ್ಷೇತ್ರ ಮೂಲಧನ	.. ...	ರೂ. 1,82,100.
ಕ್ಷೇಮ ನಿಧಿಗಳು	... ...	ರೂ. 1,82,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ಮ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿಸಿದುದು).

ನಿಮ್ಮ ಶಾಪತ್ರಯಗಳು ಬಹು ಮಟ್ಟಿಗೆ ಕಡಿಮೆಯಾಗಲಿವೆ. ತಾ. 9. 10. 16 ಪ್ರತಿಕೂಲಗಳಿವೆ.

ತುಲಾ:—ನಿಮ್ಮ ಆರೋಗ್ಯಕ್ಕೆ ಈ ವಾರದಲ್ಲಿ ಹೆಚ್ಚಿನ ಹಾನಿಯಿದೆ. ಪರ್ಯಟನಾಧಿಕ್ಯದಿಂದ ನಿಮಗೆ ಕ್ಷಣ ಕಾಲವೂ ವಿಶ್ರಮಿಸಲು ಅವಕಾಶ ಸಿಗುವಂತಿಲ್ಲ. ಆದರೂ ಹಗೆಯವರ ಪೀಡೆಯಿಂದ ಬಹು ಮಟ್ಟಿಗೆ ಮುಕ್ತರಾದಿರೆನ್ನಬಹುದು. ರಾಜಕೀಯ ಭಾಗದಲ್ಲೂ ಸಾಮಾಜಿಕ ವ್ಯವಹಾರಗಳಲ್ಲೂ ವಿಘ್ನ ವಿದ್ರೋಹಗಳು ಹೆಚ್ಚಲಿವೆ. ಆರ್ಥಿಕ ತಗಾದೆಯು ಮುಂಚಿಗಿಂತ ಸ್ವಲ್ಪ ಅಧಿಕವಾದೀತು. ಬಂಧು ಮಿತ್ರರ ಸಹಾಯ ಸೌಲಭ್ಯಗಳು ಸಕಾಲದಲ್ಲೊದಗುವುದರಿಂದ ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

ವೃಶ್ಚಿಕ—ಗೃಹತಾಪತ್ರಯಾದಿಗಳು ಹೆಚ್ಚಿನಂಶ ಶಾಂತವಾಗುವವಾದರೂ ಶತ್ರು ಜನರ ಉಪಟಳದಿಂದ ಧನಮಾನಾದಿಗಳಿಗೆ ಹಾನಿಯೊದಗಲಿದೆ. ಆರೋಗ್ಯವು ಸುಧಾರಿಸುವದು. ಖರ್ಚಿಗಿಂತ ಅಧಿಕವಾಗಿ ಧನ ಸಂಪಾದನೆಯಿರುವುದರಿಂದ ಕೈಯಲ್ಲಿ ಸದಾ ನಾಲ್ಕು ಕಾಸು ಉಳಿಯಲಿದೆ. ಸಮಾಜದಲ್ಲಿ ಮಾನಮರ್ಯಾದೆಗಳು ಲಭಿಸುವವಲ್ಲದೆ ಭೋಜ್ಯ ಭೋಗಾದಿಗಳಿಗೂ ಕೊರತೆಯುಂಟಾಗದು. ತಾ. 11ರಿಂದ 15ರ ವರೆಗಿನ ದಿನಗಳಲ್ಲಿ ಮಿತ್ರರಲ್ಲಿ ಮನಸ್ತಾಪ, ಕಾರ್ಯಹಾನಿಗಳಿಂದ ಕೊಂಚ ವ್ಯಾಕುಲಚಿತ್ತರಾಗುವಿರಿ.

ಧನು—ವಿಕ್ರಮಕಾರಿಯಾದ ಕುಜನು ಈ ವಾರದಲ್ಲಿ ಪ್ರತಿಕೂಲನಾಗುವುದರಿಂದ ನಿಮ್ಮ ದೈವವು ಕೊಂಚ ಹಿಂಗಲಿದೆ. ಹಿಡಿದ ಕಾರ್ಯಗಳು ನಿರ್ವಿಘ್ನದಿಂದ ಕೊನೆಮುಟ್ಟಲಾರವು. ನೇತ್ರೋದರ ರೋಗಗಳೂ ಬಗ್ಗೆ ಕಾಣಿಸಿಕೊಳ್ಳುವವು. ಮನಿಯಾರ್‍... ನಿಲಹವಾಗುವ ಪ್ರಸಕ್ತಿಯಿದೆ. ರಾಜಕೀಯ ರಂಗದಲ್ಲಿ ವಿಪಕ್ಷೀಯರ ಕೈಯೇ ಸ್ವಲ್ಪ ಮೇಲಾಗಲಿದೆ. ಮನಸ್ಸು ಸ್ಥಿರವಾಗಿ ನಿಲ್ಲಲಾರದು. ಆದರೂ ನಿತ್ಯದ ಖರ್ಚುವೆಚ್ಚಗಳಿಗೆ ಸಾಕಷ್ಟು ದುಡಿಯುವಿರಾದ ಕಾರಣ ಆರ್ಥಿಕ ತಾಪತ್ರಯವಿರದು. ತಾ. 11. 12 ಈ ದಿನಗಳಲ್ಲಿ ವಿಜಯ, ಧನ, ಸ್ತ್ರೀಸುಖಗಳು ಲಭಿಸುವವು.

ಮಕರ—ನಿಮ್ಮ ಜೀವನ ಪರಿಸ್ಥಿತಿ ಈ ವಾರದಿಲ್ಲ ಸ್ವಲ್ಪ ಮಟ್ಟಿಗೆ ಉತ್ತಮವಾಗಲಿದೆ. ಸಾಂಸಾರಿಕ ತಾಪತ್ರಯಗಳು ಸ್ವಲ್ಪ ಕಡಿಮೆಯಾಗುವುದರಿಂದ ಮನಸ್ಸಿಗೆ ನೆಮ್ಮದಿಯಿದೆ. ಶುಕ್ರಲಾಭಪನ ಅನುಗ್ರಹವು ದೊರೆಯುವುದರಿಂದ ಉಳಿತಾಯವು ವೃದ್ಧಿಗೊಳ್ಳುವದಲ್ಲದೆ ಮನಸ್ಸುಗಳಿಗೆ ಸುಖಶಾಂತಿಯು ದೊರೆತೀತು. ಉದ್ಯೋಗ ಭಾಗದಲ್ಲಿ ಕ್ರಮಾಧಿಕ ಫಲ ಲಭಿಸುವದು. ತಾ. 11. 12. 16 ಈ ಮೂರು ದಿನಗಳು ಶಿಂಚಕೃತಿಕೂಲಗಳಿರುವುದರಿಂದ ಕುಕ್ಷಿ ರೋಗ ಅಪಮೃತ್ಯು ಎಥ್ಯಾದಿಗಳು ಕಾಣಿಸಿಕೊಳ್ಳಲಿವೆ.

ಕುಂಭ—ಹೆಲಗಾಣದೆ ಬಹಳವಾಗಿ ಪೇಚಾಡುತ್ತಿರತಕ್ಕ ನಿಮಗೀಗ ಆಲಂಬನವು ದೊರೆತಿರುವುದರಿಂದ ಮನಸ್ಸಿಗೆ ಸ್ವಲ್ಪ ಸಮಾಧಾನವಾದೀತು. ಆಯವ್ಯಯಗಳು ಏಕಹೋಕದಲ್ಲಿ ನಿಲ್ಲಲಿರುವುದರಿಂದ ಹಣದ ಮುಗ್ಗಟ್ಟಿನಿಂದ ಪಾರಾಗುವಿರಿ. ಯತ್ನಶೀಲರಿಗೆ ಉತ್ತಮ ಸ್ಥಾನಪ್ರಾಪ್ತಿಯ ಯೋಗವಿದೆ. ಆದರೆ ಸಂಸಾರದ ಸಲುವಾಗಿ ಬರತಕ್ಕ ಅನಿಷ್ಟ ಪರಂಪರೆಗಳಿಂದ ದುಃಖಿತರಾದ ನಿಮಗೆ ತಾ. 11, 12, 16 ಈ ದಿನಗಳಲ್ಲಿ ಸುಖಭೋಗ ವಿಜಯಗಳು ದೊರೆವವು.

ಮೀನ—ದುರ್ಜನರ ಸಹವಾಸದಿಂದ ದುಷ್ಕಾರ್ಯ ಪ್ರವೃತ್ತರಾಗಿ ಧನಮಾನಗಳಿಗೆ ಹಾನಿತಂದುಕೊಳ್ಳಲಿರುವಿರಿ. ಜನಾಪವಾದವೂ ಕೂಡ ನಿಮ್ಮ ಬೆನ್ನು ಹಿಡಿಯಲಿದೆ. ಆತ್ಮ ವಿಶ್ವಾಸದಿಂದ ವಂಚಿತರಾದ ನಿಮಗೆ ಆಪ್ತ ಜನರೇ ಇಲ್ಲದಂತಾಗುವರು ಉದರಪೀಡೆ, ರಕ್ತದೋಷದಿಂದುಂಟಾದ ಕಜ್ಜಿ ಹುಣ್ಣು ವಗೈರೆಗಳಿಗೆ ತುತ್ತಾಗುವ ಸಂಭವವಿದೆ. ಎಷ್ಟೇ ಧನವಿದ್ದರೂ ಕ್ಷಣಕಾಲದಲ್ಲಿ ರಿಕ್ತಹಸ್ತರಾಗುವಿರಿ. ತಾ. ೨. 10. 13. 14. 15 ಈ 5 ದಿನ ಸುಖ ಭೋಜನ ವಿಜಯ, ಭೋಗಾದಿಗಳು ಲಭಿಸುವವು.

ಆಮಂತ್ರಣ ಪತ್ರಿಕೆಗಳು.
ಮದುವೆ, ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭದರದಲ್ಲಿ ಜಾಗ್ರತೆಯಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್ ಬೈಂಡಿಂಗ್ ಕೆಲಸಗಳನ್ನು ಶೀಘ್ರವಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,
ಕೋಳದ ಪೇಟೆ ರಸ್ತೆ,
ಉಡುಪಿ.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'
High Class Boarding & Lodging House
HOSPITAL ROAD. UDIPI.

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು. —

ಇಷ್ಟರವರೆಗಣ ನಮ್ಮ

ವಿಲಿಯಮ್ಸ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿಸರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ಬಿಡದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಬೆಳೆಯುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ವ ವ್ಯ. ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಉತ್ತಮ ಅನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಸುಖನಿವಾಸ

ಉಡುಪಿ. ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಒಳ್ಳೆ ನಮೂನೆಯ ಸೀರೆಗಳು ಒಗೆ ಒಗೆಯ ಬಣ್ಣದಲ್ಲಿ ಬಿಂಚಿ ನವ ನಮೂನೆಯಲ್ಲಿ ದೊರೆಯುತ್ತವೆ ಖದ್ದರಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ

ಪಿ. ಎ. ಶೈ. ಬ್ರದರ್ಸ್,

ಆಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಪೀಮರದ ಕಟ್ಟೋಣ.

ಉಡುಪಿ

ಮಿಲ್ಟ್ರರಹಿತಯ, ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್, ಮಾಲಕ

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ ಪತ್ತೇದಾರಿ ಮೌಲಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ, ಮನೆಮನೆ ಸೇರಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	೨-೧-೮-೦	**ಜಯಂಕರ ಸೇಡು**	೨-೧-೮-೦
ಭೀಷಣ ಸಾಹಸ	೨-೧-೧೨-೦	**ಮೋಹಿನಿ**	೨-೧-೮-೦
ಕರಿನೀರು	೨-[illegible]	**ಅಪೂರ್ವನಂದಿನಿ**	೨-೧-೮-೦
ಭಗವಾನ್‌ದಾಸ	೨-೧-೦-೦	**ಸ್ಕೂಲ ಮಿಸ್ಟ್ರೆಸ್**	೨-೧-೪-೦
ಅವಿವಾಹಿತರ ಸಮಸ್ಯೆ	೧-೦-೦	**ವೀರರಾಜ ವಿಜಯ**	೦-೧೨-೦
ನನ್ನ ಗತಿ	೦-೪-೦	**ಪಾಣಿಗ್ರಹಣ**	೦-[illegible]-೦

ಕಟಲಾಗ್ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು- ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಹಿಮಾರಿಗಳೆ ಅದೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ;

ಟ ಖ. ೯ ಆಣೆ.

ಎಸ್. ವಿ. ಪ್ರಸಾದಿಕ್ಸ್ ಔಷಧಾಲಯ. ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು — ನವಭಾರತ ಬುಕ್ ಡಿಪೋ, ಉಡುಪಿ

ಸ್ಥಾಪನೆ  1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೀಲ್ ಬೋರ್ಡ್ ಚಪಾಸರ ಬೇಜು, ಮನೋಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt. Mysore

Certified by the Agent of the Govt. of India in Ceylon

ನವಜೀವಾತು ಎಂಬ ಸೂತಿಕಾರಸಾಯನ



(ಇದು ಬಹಿಷ್ಕಾರು ಮಾಡಲ್ಪಟ್ಟದೆ)

ಬಾಣಂತಿಯರ ಬಲುವಾಗಿಯೇ ದೇಹ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ಸಿಸ್ಟೈರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಬಿಸ್ಸನ ೩ ಬಾಟ್ಲಿಗಳು ಮೆತ್ತು ಕಡಿಮೆ ೬೦ ದಿವಸಗಳಿಗೆ ಬರುವವು. ಅಂದರೆ ಕೇವಲ ೬ ರೂಪಾಯಿಗಳೆ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದಕ

EDITED BY K. K. SHETTY, PRINTED & PUBLISHED BY K. T. SHETTY AT THE NAVAYUGA PRESS, UDIPI

Regd. No. M. 3618

Estd. 1921 ಸ್ಥಾಪಕ

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ

Read and Advertise in
ANTARANGA
The All Karnataka humorous Weekly
Udipi - S. India

ಸಂಪುಟ ೨೧ | Vol 21

ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ

NAVAYUGA WEEKLY

16-4-1942

ಸಂಚಿಕೆ ೩೨ | No. 32

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವದು, ಮಲಬದ್ಧತೆ, ಒಳ ಜ್ವರ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅವಶ್ಯವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು, ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಔಷಧಿ ಸಿಕ್ಕುವ ಸ್ಥಳ—(1)ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಸಾರಿಬಾಗ್ ರೋಡ್, ದರೇಲ, ಒಂಬಾಯಿ ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ ಪಿ, ಮಾಟುಂಗಾ. (3) ಮುಲ್ಲರ್ ಪಟೇಲ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲಿಪ್ಸದೌನ ಬಜಾರ್, ಮೈಸೂರು (5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ(7) ಡಾ। ಶ್ರೀನಿವಾಸ ಪೈ, ಪುತ್ತೂರು (8) ಕಾಂತಾವರ ವಾಸ್ತೇವ ಶೆ , ಬೆಳಂಗಡಿ, (9) ನವಭಾರತ ಬುಕ್ ಡಿಪ್ಪೋ, ಕೋಳದ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ. (11) ಶಾನಭಾಗರ ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ (12) ಕೆ. ಶ್ರೀನಿವಾಸ ಹೆಗ್ಡೆ ತೀರ್ಥಹಳ್ಳಿ (13) ಬಿ. ಯಸ್, ನರಸಿಂಗರಾವ್. ಮರ್ಚೆಂಟ್ ಚಿಕ್ಕಮಂಗ್ಳೂರು

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಾದೀ ಡಾಗು ಪತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರ, ಮೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ. ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು

ಪಥ್ಯ: ಹಸಿಮೆಣಸು, ಕುಂಬಳಕಾಯಿ., ಒಕ್ಕಣ್ಣ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ **ಪೋಸ್ಟ ಚಾರ್ಜ ೫ ಆಣೆ-**

ಏಜೆಂಟರು—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್

ಮಾಲೀಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕು ವಿನಂತಿ,

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**

ಆಯುರ್ವೇದ ಔಷಧಾಲಯ ಗದಗ.

ಹಿಂದೂದೇಶದ



ಮೈಸೂರು ಸ್ಯಾಂಡಲ್ ಸೋಪ್

ಗೌರ್ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941

Assets exceed	.	Rs. 1,10,00,000
Life Fund exceeds	,,	92,00,000
Business in force	,,	4,28,00,000
Claims paid over ...	,,	56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ವಿಮ ಮಾಡಲಿಚ್ಛಿಸುವವರಿಗೆ, ಏಜೆಂಟರಾಗಲಿಚ್ಛಿಸುವವರಿಗೆ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ ಎ **ಪ್ಯಾಸ್**, ಬ್ರಾಂಚ್ ಸೆಕ್ರಿಟರಿ, ಮಂಗಳೂರು, ದ. ಕ.

ಶ್ರೀ ಕೆ **ನಾರಾಯಣ ರಾವ್**, ಸೀನಿಯರ್ ಇನ್ಸ್ಪೆಕ್ಟರ್, ಕಾರ್ಕಳ, ದ. ಕ

ಶ್ರೀ. ಕೆ. **ಗಣಪಯ್ಯ ಶೆಟ್ಟಿ**, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು

ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಚಂಗೋಲಿ ನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಈ ವಾರದ ಭವಿಷ್ಯ

ತಾರೀಕು ೧೬—೪—೪೩ರಿಂದ ತಾರೀಕು ೨೩—೪—೪೩ರ ವರೆಗೆ

ಮೇಷ—ಕಳೆದ ವಾರಕ್ಕಿಂತ ಈ ವಾರವು ನಿಮ್ಮ ಭಾಗಕ್ಕೆ ಎಷ್ಟೋ ಉತ್ತಮವಿದೆ. ಶಕ್ತಿಯುಕ್ತಿಗಳಿಂದ ದುಃಶಕ್ಯಗಳಾದ ಕಾರ್ಯಗಳನ್ನು ಸಾಧಿಸುವಿರಿ. ಸನ್ಮಿತ್ರರ ಮತ್ತು ಗುರುಹಿರಿಯರ ಕೃಪಾಬಲವು ನಿಮಗೆ ರಕ್ಷಾಕವಚದಂತಿರುವದರಿಂದ ಶತ್ರುಜನರಿಂದ ನಿಮಗೇನೂ ಅಪಾಯ ಸಂಭವಿಸಲಾರದು. ಅನಾರೋಗ್ಯದ ಭಯವು ಸ್ವಲ್ಪ ಮಟ್ಟಿಗಿರುವುದು. ಮಾತಿನಲ್ಲಿ ಬಿರುಸುತನವು ಅಧಿಕವಾಗುವುದರಿಂದ ಹಲವರೊಡನೆ ಕಲಹವಾದೀತು. ತಾ. 18. 19. 23 ಈ ದಿನಗಳಲ್ಲಿ ಧನಮಾನಗಳಿಗೆ ಹಾನಿಯೊದಗೀತು. ಮಿತ್ರರಲ್ಲೂ ಕಲಹವಾದೀತು.

ವೃಷಭ—ತಾ. 18. 19. 23 ಈ ದಿನಗಳಲ್ಲಿ ಚಂದ್ರನನ್ನು ಬಿಟ್ಟು ಇತರ ಸಕಲ ಗ್ರಹಮಂಡಲವೇ ನಿಮಗೆ ಪ್ರತಿಕೂಲವಾಗಿ ನಿಂತಿರುವುದರಿಂದ ಯಾವಾಗ ಯಾರಿಂದ ಏನು ಅಪಾಯ ಸಂಭವಿಸೀತೆಂದೂ ಊಹಿಸುವುದಶಕ್ಯವೇ ಸರಿ. ನಿಮ್ಮ ಪ್ರಯತ್ನವೆಲ್ಲವೂ ಅರಣ್ಯರೋದನದಂತೆ ವ್ಯರ್ಥವಾಗುವುದು. ಯಾವ ಉದ್ಯೋಗದಲ್ಲೂ ಫಲಿತಾಂಶವು ಒಳ್ಳೆಯದಿರದು. ಪಿತ್ತೋಷ್ಣ ಸಂಬಂಧಗಳಾದ ಕಾಹಿಲೆಗಳುದಯಿಸುವವು. ಗೃಹತಾಪತ್ರಯವೂ ಶತ್ರುಪೀಡೆಯೂ ಭರತದ ನೀರಿನಂತೆ ಏರಲಿವೆ. ತಾ. 16. 17. 20. 21. 22 ಈ ದಿನಗಳು ಅತೀವ ಹಾನಿಕರಗಳಿವೆ.

ಮಿಥುನ— ನಿಮ್ಮ ಅಧಿವ್ಯಾಧಿಗಳು ಕೆಲಮಟ್ಟಿಗೆ ಶಾಂತವಾಗಲಿವೆ. ಹಿಡಿದ ಕಾರ್ಯದಲ್ಲಿ ವಿಜಯಲಾಭವಾಗುವುದು. ನೌಕರಿ ವ್ಯಾಪಾರೋದ್ಯಮಗಳಲ್ಲಿ ಯಶಸ್ವಿಯಾಗುವಿರಿ. ಜನತೆಯಲ್ಲಿ ಸ್ಥಾನಮಾನಗಳು ಲಭಿಸುವವು. ಪಿತ್ಥವಿಕಾರದಿಂದ ನೇತ್ರರೋಗವು ಪ್ರಾದುರ್ಭವಿಸಲಿರುವುದರಿಂದ ತದ್ವಿಚಾರದಲ್ಲಿ ಜಾಗರೂಕರಾಗಿರುವುದುತ್ತಮ. ನಿಷ್ಕಾರಣವಾಗಿ ಸ್ತ್ರೀಯರೊಡನೆ ಕಲಹವಾದೀತು. ಪ್ರವಾಸದಿಂದ ಮಹಾಜನರ ಭೆಟ್ಟಿಯೂ ಕ್ಷೇತ್ರ ಸಂದರ್ಶನ ಪುಣ್ಯವೂ ಲಭಿಸಲಿದೆ. ತಾ. 18. 19. 23 ಈ 3 ದಿನಗಳಲ್ಲಿ ಅತಿವ್ಯಯ ಆಲಸ್ಯಗಳು ತೋರಿಬರಬಹುದು.

ಕರ್ಕಾಟಕ— ಅಂಗಾರಕೇತರ ಸಕಲ ಗ್ರಹರೂ ನಿಮಗನುಕೂಲರಿರುವುದರಿಂದ ನೀವೀವಾರವನ್ನು ಬಹುಸುಖದಿಂದ ಕಳೆಯುವಿರಿ. ಉದ್ಯೋಗದಲ್ಲಿ ಔದಾಸೀನ್ಯವು ಹೆಚ್ಚುವುದಾದರೂ ಫಲವೇನೋ ಅತ್ಯುತ್ತಮವಾಗಿಯೇ ಲಭಿಸುವುದು. ಸಂಪನ್ನ ಸ್ತ್ರೀಯಳ ಮೈತ್ರಿ ಸಹಾಯಗಳು ಲಭಿಸುವವು. ಗೃಹೋಪಕರಣಗಳಲ್ಲಾಗಲಿ, ಔದ್ಯೋಗಿಕ ವಿಭಾಗದಲ್ಲಾಗಲಿ ಯಾವುದಕ್ಕೂ ಕೊರತೆಯಿರದು. ತಾ. 20. 21. 22ರಲ್ಲಿ ಮಿತಿತಪ್ಪಿ ಖರ್ಚು ಮಾಡಲಿರುವಿರಿ.

ಸಿಂಹ—ನಿಮ್ಮ ಲಾಭಸ್ಥಾನಕ್ಕೆ ಪ್ರವೇಶಿಸಿದ ಅಂಗಾರಕನನ್ನು ಬಿಟ್ಟರೆ ಮತ್ತಾವ ಗ್ರಹನ ಅನುಗ್ರಹವೂ ನಿಮಗಿಲ್ಲವು. ವಿಕ್ರಮಶಾಲಿಯಾದೀತನು ಬಹುವಿಧೋದ್ಯಮಗಳಲ್ಲಿ ನಿಮ್ಮನ್ನು ಪ್ರೇರಿಸಿ ತಕ್ಕ ಫಲವನ್ನು ಕೊಡಲರ್ಹನಿರುವನು. ಕೆಲವೊಂದು ಜನರೂ ಕೂಡ ನಿಮ್ಮ ಬೆಂಬಲಕ್ಕೆ ನಿಲ್ಲುವರು. ವ್ಯವಹಾರಾಭಿಜ್ಞರೂ ಕೂಡ ಲೇವಾದೇವಿ ಸಂಬಂಧ ಕಲಹವಗೈರೆಗಳಿಗೆ ಗುರಿಯಾಗಲಿರುವಿರಾದ ಕಾರಣ ತಾ. 16. 17. 23 ಈ ದಿನಗಳಲ್ಲಿ ರಾಜಭಯ, ಅನಾರೋಗ್ಯ ಮತ್ತು ಅತಿವ್ಯಯಕ್ಕೆ ಪಾತ್ರರಾಗಲಿರುವರು.

ಕನ್ಯಾ—ಕಳೆದ ದಿನಗಳಿಗಿಂತ ಈ ವಾರವು ನಿಮಗೆ ಸ್ವಲ್ಪ ಸುಖದಾಯಿಯಾಗಿ ಕಾಣಬಹುದು. ಆಕಸ್ಮಿಕವಾಗಿ ಸಟ್ಟಾ ಜೂಜು ವಗೈರೆಗಳಿಂದ ಧನ ಲಭಿಸುವ ಯೋಗವಿದೆ. ಆರೋಗ್ಯವು ಮುಂಚೆಗಿಂತ ಸುಧಾರಿಸುವುದಾದರೂ ಹೃದ್ರೋಗವು ಮಾತ್ರ ನಿವಾರಿತವಾಗಲೊಲ್ಲದು. ಶತ್ರುವರ್ಗದವರಿಂದ ಕೆಲವು ಕಾರ್ಯಗಳಲ್ಲಿ ಪರಾಭವ ಹೊಂದುವಿರಿ ಆದರೂ ವಾರಾಂತ್ಯದ 4 ದಿನಗಳಲ್ಲಿ ಇಷ್ಟ ಪ್ರಾಪ್ತಿಯಿಂದ ಧನಸುಖಗಳು ಲಭಿಸುವವು. ಮಿತ್ರರ ಸಂದರ್ಶನವಾದೀತು.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ—ಮುಂತಾದ ಮುಪ್ಪಿನ ಚಿಹ್ನೆಗಳನ್ನೆಲ್ಲ ತೆಗೆದು ಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24—ಕನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS LTD.,

Head Office and Factory:

Katapadi, S. Kanara

Depots:

1 Mahratha Galli, Hubli

2. 57 Big street, Triplicane. Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಬಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ L. I. M. ಡಾಕ್ಟರ್ ವೆಂಕಟರಾವ್, ಕೊರಡ್ಕಲ್

ಪುನಃ ನೇಗಿಲಿಗೆ!

18ನೇ ಶತಮಾನದ ಮೊದಲು ಕೃಷಿಪ್ರಧಾನ ದೇಶವಾಗಿತ್ತು ಇಂಗ್ಲೆಂಡು. ಅನಂತರ ಕೈಗಾರಿಕ ಕ್ರಾಂತಿಯುಂಟಾಯಿತು. ಸಂಪೂರ್ಣ ಕೈಗಾರಿಕ ದೇಶವಾಗಿ ಮಾರ್ಪಟ್ಟಿತು ಬ್ರಿಟನು. ಈಗಿನ ಯುದ್ಧಾರಂಭವಾದಂದಿನಿಂದ ಅಲ್ಲಿ ಕಾರ್ಖಾನೆಯಷ್ಟೇ ಪ್ರಾಮುಖ್ಯವಾಗಿದೆ ಹೊಲವು ಕೂಡಾ. ಬ್ರಿಟಿಷರು ಪುನಹ ನೇಗಿಲು ಹಿಡಿಯತೊಡಗಿ ಸಾಧ್ಯವಾದಷ್ಟು ಹೆಚ್ಚಿನ ಭೂವ್ಯವಸಾಯ ಮಾಡಲಾರಂಭಿಸಿರುತ್ತಾರೆ. ಪಟ್ಟಣಗಳ ಸ್ತ್ರೀಪುರುಷರು ಹಳ್ಳಿಗಳ ಹೊಲಗೇರಿಗಳಲ್ಲಿ ದುಡಿಯ ಹತ್ತಿರುತ್ತಾರೆ. ಪರಿಣಾಮವಾಗಿ ಬ್ರಿಟನಿಗೆ ಬೇಕಾದ ಮುಕ್ಕಾಲುವಾಸಿ ಆಹಾರವಸ್ತುಗಳನ್ನಿಂದು ಅದೇ ಬೆಳೆಸುತ್ತದೆ.

ಅಜೇಯ ಮಾಲ್ಟ

ಭೂಮಧ್ಯಸಾಗರದಲ್ಲಿ ಇಟಲಿಯ ಎಡೆಯ ಸಿಸಿಲಿಯೆಂತಿರುವ ಈ ಬ್ರಿಟಿಷ್ ನೌಕಾಸಿಲಯವಿರುವುದು 17 ಮೈಲುದ್ದ 9 ಮೈಲು ಅಗಲವಾದ ಚಿಕ್ಕ ದ್ವೀಪದಲ್ಲಿ. 1940ನೇ ಇಸ್ವಿ ಜೂನ್ ತಾ. 11ರಿಂದ ಆರಂಭವಾಗಿದೆ. ಇಟಲಿಯಾನ ಮತ್ತು ಜರ್ಮನ್ ವಿಮಾನಗಳ ಧಾಳಿ ಅದರ ಮೇಲೆ. ಇಂದೀಗ 2000ಕ್ಕಿಂತಲೂ ಮಿಕ್ಕಿದ ವಿಮಾನಧಾಳಿಗಳನ್ನದು ತಡಹೆಸಿಕೊಂಡು ತಲೆಯೆತ್ತಿ ನಿಂತಿದೆ! ಕಳೆದ ವಾರ 300 ಜರ್ಮನ್ ವಿಮಾನಗಳು ಅದರ ಮೇಲೇರಿ ಹೋಗಿ ಮಾಲ್ಟದ ಮೇಲೆ ಪ್ರಚಂಡ ಧಾಳಿನಡಿಸಿದುವು. ಅದರ 250,000 ಜನರು ತಮ್ಮ ಧೈರ್ಯ ಸ್ಥೈರ್ಯಕ್ಕೆ ಮೊದಲೇ ಪ್ರಖ್ಯಾತಿ ಪಡೆದವರು. ಇಂದೀಗ ಲೋಕ ವಿಖ್ಯಾತರಾಗಿರುವರು. ವೈರಿಗಳನ್ನು ಧಿಕ್ಕರಿಸಿ ಅವರ ಮಾರ್ಗದಲ್ಲಿ ಅತಿದೊಡ್ಡ ತಡೆಯಾಗಿ ಅಚಲವಾಗಿ ನಿಂತಿರುವ ಮಾಲ್ಟಕ್ಕೆ ಯಾರಾದರೂ ಮೆಚ್ಚಿ ವಂದಿಸಲೇ ಬೇಕು.

ನಾಝಿಗಳ ಬೇಳೆ ಬೇಯುವುದಿಲ್ಲ.

ಹಿಟ್ಲರರ ಮಧ್ಯಪ್ರಾಚ್ಯದ ಮುನ್ನಡೆಗೆ ಅತಿ ದೊಡ್ಡದಾದೊಂದು ತಡೆಯೆಂದರೆ ಟರ್ಕಿ. ಜರ್ಮನಿಯ ಟರ್ಕಿಶ್ ರಾಯಭಾರಿ ಹರ್ ವಾನ್ ಪಪೆನರು ಎಂತಹ ಸೂತ್ರಚಾಲನೆಮಾಡಿದರೂ ಟರ್ಕಿಯು ನಾಝಿಗಳ ಬಲೆಯಲ್ಲಿ ಸಿಕ್ಕಿಬೀಳಲು ಸಿದ್ಧವಿಲ್ಲ. ಸೋವಿಯೆಟ್ ರಷ್ಯದ ಅಪಾಯದ ಬೆದರಿಕೆ ಹಾಕಲಾಯಿತು. ಮಧ್ಯ ಪ್ರಾಚ್ಯದ ಕೆಲವು ಪ್ರದೇಶಗಳನ್ನೀಯುವ ಮೋಹ ಬೀರಲಾಯಿತು. ಆದರೂ ಟರ್ಕಿಯು ಆಕ್ಸಿಸ್ ರಾಷ್ಟ್ರಗಳಿಗನುಕೂಲವಾಗಿಲ್ಲ. ಬ್ರಿಟನ್ ಮತ್ತು ರಷ್ಯಗಳೊಂದಿಗೆ ಬಹಳ ಮೈತ್ರಿಯುಂದಿದೆ. ಸುಮಾರು 1½ ಮಿಲ್ಯ ಸುಸಂಘಟಿತ ಸೇನಾಸಿದ್ಧತೆಯಿಂದ ಆಕ್ರಮಣಕಾರಿಗಳನ್ನು ರಷ್ಯದಷ್ಟೇ ಭೀಷಣವಾಗಿ ಎದುರಿಸಲು ಟೊಂಟಕಟ್ಟಿ ನಿಂತಿದೆ. ಆದುದರಿಂದ ಅವರೊಂದಿಗೆ ನಾಝಿಗಳ ಬೇಳೆಯೇನೂ ಬೇಯುವಹಾಗಿಲ್ಲ.

"ಜಾಪಾನರಲ್ಲಿರುವುದು ನಮ್ಮಲ್ಲೇನಿಲ್ಲ?"

ಜಾಪಾನಿನ ಯುದ್ಧಾರಂಭವಲ್ಲೇ ಬ್ರಿಟನಿನ ಅತಿ ದೊಡ್ಡ ಹಾಗೂ ಅತ್ಯಾಧುನಿಕ ಯುದ್ಧ ಹಡಗಗಳೆರಡು ಮುಳುಗಿಸಲ್ಪಟ್ಟವು. ಈ ನಷ್ಟದಿಂದ ಬ್ರಿಟನಿನ ಪೂರ್ವದ ನೌಕಾಬಲವೇ ಕುಂಠಿತವಾಗಿ ಹೋಯಿತು. ಕಳೆದ ವಾರ ಹಿಂದೀ ಸಾಗರದಲ್ಲಿ ಬ್ರಿಟನಿನ ಎರಡು ದೊಡ್ಡ ಮತ್ತು ಪ್ರಬಲ ಕ್ರೂಯಿಸರ್ ಹಡಗಗಳನ್ನು ಜಾಪಾನರು ಮುಳುಗಿಸಿಬಿಟ್ಟರು. ಇನ್ನೊಂದು ವಿಮಾನ ವಾಹಕ ಹಡಗವು ಸಿಲೋನಿನ ಬಳಿ ಮುಳುಗಿಸಲ್ಪಟ್ಟಿತು. ಇದರಿಂದ ಬ್ರಿಟಿಷ್ ಪತ್ರಿಕೆಗಳು ತಳಮಳಗೊಂಡು, "ಹೀಗೆ ನಮ್ಮ ಹಡಗಗಳು ಮುಳುಗಿ ಹೋಗುವುದಕ್ಕೆ ಜಾಪಾನರಲ್ಲಿರುವುದು ನಮ್ಮಲ್ಲೇನಿರುವುದಿಲ್ಲ?" ಎಂದು ಪ್ರಶ್ನಿಸಹತ್ತಿವೆ. ಜಾಪಾನರ ಚಾತುರ್ಯವು ನಿಜವಾಗಿಯೂ ಆಶ್ಚರ್ಯಕರವಿದೆ.

ಚುಟುಕು ಟೀಕೆ-ಟಿಪ್ಪಣಿ

ಜರ್ಮನಿಯ ಅಪಜಯ ನಿಶ್ಚಯ.

1942ರಲ್ಲಿ ಜರ್ಮನಿಯ ಅಪಜಯ ನಿಶ್ಚಯವೆಂದು ಬಹಳ ಭರವಸೆಯಿಂದ ಉದ್ಘೋಷಿಸಿದ್ದಾರೆ ಸೋವಿಯೆಟ್ ಪ್ರಕಟಣಾ ಶಾಖಾಮಂತ್ರಿ ಎಮ್. ಲಾಜೋವ್ಸ್ಕಿಯವರು. ಕೆಂಪುಸೇನೆಯೇ ಜರ್ಮನರನ್ನು ಈ ವರ್ಷಾಂತ್ಯದೊಳಗೆ ಜೈಸುವುದೆಂದವರ ಭವಿಷ್ಯ. ಈ ವರ್ಷಾಂತ್ಯದೊಳಗೆ ಯುದ್ಧವು ಕೊನೆಗೊಳಿಸಲ್ಪಡುವುದೆಂದು ನಾಝಿಗಳ ಆಶ್ವಾಸನೆ. ಯಾವುದು ನಿಜವಾಗುವುದೋ ನೋಡಬೇಕು. ಅಂತೂ ಜರ್ಮನಿಯು ಈ ವರ್ಷಾಂತ್ಯದೊಳಗೆ ಸೋಲಿಸಲ್ಪಡದೆ ಜಾಪಾನು ಮತ್ತು ಅದು ಮಧ್ಯಪ್ರಾಚ್ಯದಲ್ಲೊಂದು ಗೂಡುವಂತಾದರೆ ಮತ್ತೆ ಮಿತ್ರರಾಷ್ಟ್ರಗಳು ಅವನ್ನು ಗೆಲ್ಲುವುದು ಸಾಧ್ಯವೆಂದರೂ ತಪ್ಪಾಗಲಾರದು.

ಬಟಾನಿನ ಯುದ್ಧ ಮುಗಿಯಿತು

ಫಿಲಿಪ್ಪೈನಿನ ಬಟಾನ್ ಅರ್ಧದ್ವೀಪದಲ್ಲಿ ಕೇವಲ 36,000 ವೀರ ಫಿಲಿಪೀನೋ ಮತ್ತು ಅಮೆರಿಕಾನ ಸೈನಿಕರನಾಯಕರಾಗಿ ಜನರಲ್ ಮೆಕ್ ಆರ್ಥರರು ಒಂಬು ಲಕ್ಷಕ್ಕಿಂತಲೂ ಮಿಕ್ಕಿದ ಜಾಪಾನ ಸೇನೆಯನ್ನು [illegible] ತಿಂಗಳು ತಡೆದು ಲೋಕ ಪ್ರಖ್ಯಾತಿ ಪಡೆದರು. ಜನರಲ್ ಮೆಕ್ ಆರ್ಥರರು ಆಸ್ಟ್ರೇಲಿಯದ ಸೇನಾ ನಾಯಕರಾಗಿ ನೇಮಿಸಲ್ಪಟ್ಟ ಮೇಲೆ ಜನರಲ್ ವೈನ್‌ರೈಟರ ಮೇಲೆ ಆ ಜವಾಬ್ದಾರಿ ಬಿತ್ತು. ಜಾಪಾನರು ಕಳೆದ ವಾರ ಸುಮಾರು 2 ಲಕ್ಷ ಸೇನಾಬಲದಿಂದ ಬಟಾನಿನ ಸೇನಾವ್ಯೂಹವನ್ನು ಭೇದಿಸಿದರು. ಹೆಚ್ಚಿನ ಸೇನಾ ಸಹಾಯವಿಲ್ಲದೆ, ಆಹಾರ ಸಾಮಾಗ್ರಿಗಳ ಸರಬರಾಯಿಯೂ ಸರಿಯಾಗಿ ದೊರೆಯದೆ ವಿಮಾನ ಪಡೆಯ ಸಹಾಯವೂ ಇಲ್ಲದೆ ಕಾದು ಕಾದು ಸೋತು ಸುಣ್ಣವಾಗಿ ಕಟ್ಟಕಡೆಗೆ ಶಸ್ತ್ರವನ್ನಿಳಿಸಬೇಕಾಯಿತು ಬಟಾನಿನ ವೀರರಕ್ಷಕರು. ಆದರೆ ಅವರು 3 ತಿಂಗಳ ಕಾಲ ಜಾಪಾನರನ್ನು ತಡೆದಿಟ್ಟುದರಿಂದ, ಆಸ್ಟ್ರೇಲಿಯದ ಮತ್ತು ಹಿಂದೂದೇಶದ ರಕ್ಷಣಾ ಸಿದ್ಧತೆಗೆ ಸ್ವಲ್ಪವಾದರೂ ಅವಕಾಶ ದೊರೆಯಿತು. ಇಲ್ಲವಾದರೆ ಇಷ್ಟರಲ್ಲೇ ಆ ದೇಶಗಳ ಗತಿ ಏನಾಗುತ್ತಿತ್ತೋ!

ನಾಝಿಪಡೆಯ ಧಾಳಿ.

ಸೋವಿಯೆಟ್ ರಷ್ಯದೊಡನೆ ಜೀವನ್ಮರಣ ಹೋರಾಟಕ್ಕಾಗಿ ಪ್ರಚಂಡ ನಾಝಿ ಪಡೆಯು ಪೂರ್ವ ರಣರಂಗದಲ್ಲಿ ಶೇಖರಿಸಲ್ಪಡುತ್ತಿದೆ ಅದೇ ಕಾಲದಲ್ಲಿ ಐಗುಪ್ತದ ಮೇಲೆ ಧಾಳಿ ನಡಿಸಿ ಮುಂದೊತ್ತುವ ತಯಾರಿಯೂ ನಡೆಯುತ್ತಿರುವಂತಿದೆ. ಮಾಲ್ಟದ ಮೇಲೆ ಎಡೆಬಿಡದೆ ಭೀಕರ ವಿಮಾನ ಧಾಳಿ ನಡೆಯಲು ಇದೇ ಕಾರಣವೆಂದು ನಂಬಲಾಗಿದೆ. ಜಾಪಾನರು ಭರದಿಂದ ಮುಂದೊತ್ತುವಾಗ ಜರ್ಮನರು ಕೂಡಾ ಅದನ್ನು ಬೇಗನೆ ಮುನ್ನಡೆಯಲೇಬೇಕಲ್ಲವೇ? ಜನರಲ್ ರೊಮ್ಮೆಲರೂ ಸನ್ಯದಲ್ಲೇ ಪ್ರಬಲಧಾಳಿ ನಡೆಸುವಂತಿದೆ.

ಮಿತ್ರರಾಷ್ಟ್ರಗಳೇನು ಮಾಡುವವು?

ಇನ್ನೂ ತಣ್ಣಗಿದ್ದರೆ ಅನಾಹುತವಾಗ್ಯವುದೆಂದು ಬ್ರಿಟನ್ ಮತ್ತು ಅಮೆರಿಕಗಳೂ ಜರ್ಮನಿಯ ಮೇಲೇರಿ ಹೋಗುವ ಆಲೋಚನೆ ಮಾಡುತ್ತಿರುವಂತಿದೆ ಅಮೆರಿಕದ ಯುದ್ಧ ತಂತ್ರಜ್ಞ ಮಂಡಲದ ಅಧಿನಾಯಕ ಜನರಲ್ ಮಾರ್ಶಲರು ಇದೇ ಉದ್ದೇಶದಿಂದ ಲಂಡನಿಗೆ ಬಂದಿರುವುದೆಂದು ನಂಬಲಾಗಿದೆ. ಮಿತ್ರರಾಷ್ಟ್ರಗಳ ಧಾಳಿಯು ಯಾವ ಸ್ವರೂಪ ತಾಳುವುದೆಂದು ಹೇಳಬರುವುದಿಲ್ಲ. ಅವುಗಳು ಯುರೋಪಿನಲ್ಲಿ ಶೀಘ್ರವಾಗಿ ಇನ್ನೊಂದು ರಣರಂಗ ತೆರೆಯುವ ಸಾಹಸವಮಾಡದಿದ್ದರೆ ಜನತೆಯಲ್ಲಿ [illegible] ನಿರಾಶೆ ಮತ್ತು ನಿರುತ್ಸಾಹವು ನೆಲೆಗೊಳ್ಳುವಂತಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಉತ್ಸಾಹ ಕುಂದಿದ ಜರ್ಮನ್ ಸೇನೆ!

ಜರ್ಮನ್ ಜನತೆ ಮತ್ತು ಸೇನೆಯ ಮನೋಸ್ಥಿತಿಯನ್ನಿಂದು ತಿಳಿದುಕೊಳ್ಳುವುದು ಕಷ್ಟ. ಆದರೆ ರಷ್ಯದ ರಣರಂಗಗಳಲ್ಲಿ ಮಡಿದ ಮತ್ತು ಗಾಯಗೊಂಡ ಸೈನಿಕರ ಹಸ್ತವಿದ್ದ ಪತ್ರಗಳಿಂದದನ್ನು ಬಹುಮಟ್ಟಿಗೆ ಊಹಿಸಬಹುದಾಗಿದೆ. ಇಂತಹ 16,000 ಪತ್ರಗಳನ್ನು ಪರಿಶೀಲಿಸಿದಾಗ, ಕಳೆದ ಜೂನ್ ಮತ್ತು ಆಗೋಸ್ತು ತಿಂಗಳಲ್ಲಿ ಬರೆಯಲ್ಪಟ್ಟ ನೇಕಡ 18 ರಷ್ಟು ಪತ್ರಗಳು ಮಾತ್ರ ರಷ್ಯದ ಯುದ್ಧದ ಕುರಿತು ಅತೃಪ್ತಿ ಸೂಚಿಸಿದ್ದುವು. ಆದರೆ ಅನಂತರದ ಎರಡು ತಿಂಗಳುಗಳಲ್ಲಿ ಈ ಪ್ರಮಾಣವು ನೇಕಡ 43ಕ್ಕೇರಿತು. ನವಂಬರ ದಶಂಬರಗಳಲ್ಲಿ ನೇಕಡ 75 ಕ್ಕೂ ಜನವರಿಯಲ್ಲಿ ನೇಕಡ 77ಕ್ಕೂ ಏರಿರುವುದು. ದಿನಹೋದಂತೆ ಜರ್ಮನ್ ಸೈನಿಕರ ಮನೋವೃತ್ತಿಯು ಹೇಗೆ ಬದಲಾಗಿರುವುದೆಂಬುದು ಇದರಿಂದ ಸಿದ್ಧವಾಗುವುದು. ಉತ್ಸಾಹ ಕುಂದಿ ಬೇಸರಗೊಂಡಿರುವ ಜರ್ಮನ್ ಸೇನೆಯು ಇಂದು ನವಹುರುಪು ಮತ್ತು ದೃಢ ನಿಶ್ಚಯದಿಂದಿರುವ ಸೋವಿಯೆಟ್ ಸೇನೆಯನ್ನೆದುರಿಸಬೇಕಾಗಿದೆ. ಉತ್ಸಾಹ ಮತ್ತು ದೃಢ ನಿರ್ಧಾರವಿಲ್ಲದ ಎಷ್ಟು ದೊಡ್ಡ ಸೇನೆಯಿದ್ದರೂ ಫಲವಿಲ್ಲ.

ನೋಟೀಸು.

ಕಾರ್ಕಳ ಡಿ. ಮ. ಕೋರ್ಟಿನಲ್ಲಿ.

O. P. No. 12/1942

ಸಿದ್ದು ಶೆಟ್ಟಿ- ಅರ್ಜಿದಾರ.

ಮತ್ತು

ಪೂವು ಶೆಂಗ್ಸ್- ಕೊರಗ ಶೆಟ್ಟಿ ಸೊಸೆ, ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದಲ್ಲಿರುವವಳು.

—ಎದ್ರಿಲು

ಈ ಮೂಲಕ ಎದ್ರಿಳಿಗೆ ತಿಳಿಯಪಡಿಸುವುದೇನೆಂದ್ರೆ-

ನಿಮ್ಮ ಮ ಅರ್ಜಿದಾರನ ಸಹೋದರನ ಮೃತ ಮುದ್ದ ಯಾನೆ ರಾಮ ಶೆಟ್ಟಿ ಹೆಸರಿನ ಬೊಂಬಾಯಿ ಲೈಫ್, ಇನ್ಶೂರೆನ್ಸ್ ಕಂಪೆನಿಯ ಪೋಲಿಸಿ ನಂಬ್ರ 32499ರ ಹ್ಣವಸೂಲಿಗೆ ತನಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿ ನಿಮ್ಮ ಹಾಜರ್ಾತಿ ಬಗ್ಗೆ ಸದ್ರಿ ಕೋರ್ಟಿನಲ್ಲಿ ತಾ 8 6 42ಕ್ಕೆ ಇಟ್ಟಿದೆ, ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲುದ್ವಾರಾ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ತೀರ್ಮಾನಿಸಲಾಗುವುದು.

By order of the Court

N. Mohandas Adyanthaya

Advocate for Petitioner.

Camp Karkala }
Date 2-4-1942 }

Keep the enemy away from India

Contribute AGAIN to the **Governor's war fund.**

Buy MORE defence bonds and savings certificates.

GIVE AND LEND FOR VICTORY.

ಒಂದು ದಿನ ನಾನೂ, ಶೀನೂ, ಡಾ| ಸಿಂಹಂ ಮೊದಲಾದವರೂ ಸೇರಿ ಪಾತ ನಾಡುತ್ತ ಮಾತನಾಡುತ್ತ ಮೈದಾನಕ್ಕೆ ಬಂದು ತಲುಪಿದೆವು. ನಮ್ಮ ಮಾತಿನ ನಡುವೆ ಅನೇಕ ವಿಷಯಗಳು ತೀರ್ಮಾನ ವಾಗುತಲಿದ್ದುವು. ನಾವು ಮಾತನಾಡುತ್ತ ಕುಳಿತಿರುವಾಗಲೆ ರಸ್ತೆಯ ತುದಿಯಲ್ಲಿ ಒಂದು ಗುಂಪು ಕಾಣಿಸಿತು. ಅದು ಏನಾಗಿರಬಹುದು ಎಂದು ಆಲೋಚಿಸುತ್ತಿರುವಾಗಲೆ ಗುಂಪು ನಮ್ಮ ಮುಂದಾಗಿಯೆ ಸಾಗಿಹೋಯಿತು. ಹೊಟ್ಟೆಯ ಹಿಟ್ಟಿನ ಕೊರತೆಯಿಂದಾಗಿ ಕಂಗೆಟ್ಟ ಬಡವರು ಸಮುದಾಯವಾಗಿ ಸೇರಿ, ನಾನಾ ಕೂಗುಗಳನ್ನೆಬ್ಬಿಸುತ್ತಾ ನಗರದ ಬೀದಿಗಳನ್ನೆಲ್ಲ ಹಾದು ಮೈದಾನಕ್ಕೆ ಬಂದು ಸೇರಿದರು. ಬಹುಶಃ ಇಲ್ಲಿ ಸಭೆಯು ಏರ್ಪಾಡಾಗಿರಬೇಕು ಎಂತಲೆ ಅಲ್ಲಿ ಬಹಳ ಮಂದಿ ಸೇರಿದ್ದಾರೆ. ನಮ್ಮ ಮುಂದೆ ಕುಳಿತವರೊಬ್ಬರು ಹೇಳಿದರು:- "ಸಂಚಯವಾಗಿಟ್ಟಿರುವ ಆಹಾರ ಪದಾರ್ಥಗಳನ್ನು ಬಡವರಿಗೆ ಹಂಚಬೇಕು ಎನ್ನುವುದರ ಕುರಿತು ಸಾರ್ವಜನಿಕ ಸಭೆಯಾಗುವುದಂತೆ. ಬರೋಣ ವಿಶ್ಲೇಸ್ರಿ!" ಎಂದು. ನಾವು ಮಾತ್ರ ಸಭೆಗೆ ಹೋಗದೆಯೆ ನಮ್ಮ ಮಾತಿನ ಹೊಳೆಯನ್ನು ಮುಂದಕ್ಕೆ ಹರಿಯಿಸಿದೆವು. ಹೊಸ ಹೊಸ ವಿಷಯಗಳನ್ನು ಹೇಳುವುದರಲ್ಲಿಯೂ- ಹೇಳುವ ವಿಷಯವನ್ನು ಕೇಳುವ ಜನಕ್ಕೆ ಪರಿಣಾಮಕಾರಿಯಾಗುವಂತೆ ಹೇಳುವುದರಲ್ಲಿಯೂ ಡಾ| ಸಿಂಹಮ್ ಎತ್ತಿದ ಕೈ! ಎಂತಲೆ ನಾವೆಲ್ಲ ಅವನ ಮಾತಿನ ಧಾಟಿ- ಧೋರಣೆಗೆ ಮೆಚ್ಚಿ ಬೆರಗಾಗಿ ಕೇಳುತ್ತಿದ್ದೆವು. ಎದುರಿಗೆ ಸರಿದುಹೋದ ಸಂಗಡವನ್ನು ಕಂಡಮೇಲಂತೂ ಸಿಂಹನ ವಾಗ್ಧೋರಣೆಗೆ ಹೊಸ ಜೀವ ಕಳೆಯೆ ಬಂದಿತು ಎನ್ನಬೇಕು. "ನೋಡಿರಿ! ಈಗ ನಮ್ಮ ಮುಂದೆ ನಿತ್ತಿರುವ ದೊಡ್ಡ ಪ್ರಶ್ನೆಯೆಂದರೆ ಬಡವರ ಹೊಟ್ಟೆಯ ಸಮಸ್ಯೆ" ಎಂದು ಎಲ್ಲಿಯೋ ಆರಂಭವಾದ ಮಾತು ಈ ತರ್ಕ ಸರಣಿಗೆ ಇಳಿಯಿತು.

—"ಹಸಿವೆ ತಣಿಯದಿದ್ದರೆ ಕಿಚ್ಚು ಹೊತ್ತಿಕೊಳ್ಳುತ್ತದೆ. ಹಾಗೆ ಹುಟ್ಟಿದ ಕಿಚ್ಚು ಹತ್ತಿಕೊಂಡಿತೆಂದರೆ ಅದರ ಮುಂದೆ ಎಲ್ಲಾ ಶಕ್ತಿಗಳೂ ಹುಲ್ಲುಕಡ್ಡಿಯಂತೆ ಸ್ಪಷ್ಟ!

ಕೇಳುವವರು ದಿಗಿಲಾಗುವಂತೆ ಸಿಂಹಂ ಉಪನ್ಯಾಸ ಕೊಡುತಲಿದ್ದ. ನಾವು 'ಅಸಿ ಮೇಸರಾಗಿ ಕೇಳುತಿದ್ದೆವು.

—"ಲೋಕದಲ್ಲಿ ಸದಾ ಶಾಂತಿಯಿರಬೇಕಾದರೆ ಊಟಕ್ಕೆ ಯಾವ ಬಗೆಯ ಚಿಂತೆಯೂ ಇರಬಾರದು. ಹೊಟ್ಟೆಗೆ ಬೇಡುವ ಜನ ಹೆಚ್ಚಿದಂತೆಲ್ಲ ಲೋಕದ ಪೀಡೆ-ವಿಪತ್ತು ಹೆಚ್ಚಿತು ಎಂದೆ ಅರ್ಥ!

Degrees' Books Medicines

Free H. L. M. S. M. B. H. M. D etc Free Homeo Ayur-Unani-Naturo degree Py post also—Practitioners also get soon Homeo Materiamedica Rs. 5 Homeo bractice book Rs 4 Insanity Cure Pills Rs. 10 Enclose 2 annas stamp:—

Principal Indian Homeopath Institute & Society (Govt. Regd.)

P.O. Mahuva. (Kathiawar Dt. India.)

Sidha-Kalpa Kavach (Regd.)

No. 3 Rs 2. No 2 Rs. 5. No. 1 Rs. 7. Special Rs 10. Extra Special Rs. 17. for ove marriage health. wealth. Ask any six questions with M. O. Re. 1/- and get correct answers by return post Life reas Rs phle No V. P. P. Send M. O. Fred P. O.ts. **Prof. Dr N. H. Chhatbar** 2ngpam Mahuva (Kathiawar India.)

ಈ ವಾರದ ಕತೆ.

ವ್ಯಥಿತ ಜೀವಿ

ಬರೆದವರು: ಶ್ರೀ. ಬನ್ನಂಜೆ ರಾಮಾಚಾರ್ಯರು.
ಸಂಪಾದಕರು "ಧುರೀಣ" ಉಡುಪಿ.

ಹಾಗುಗದಂತೆ ನೋಡಿಕೊಳ್ಳುವುದರಲ್ಲಿಯೆ ವಿವೇಕವಿದೆ. ಕೆಲವರ ದೃಷ್ಟಿಯಲ್ಲಿ ಇದೊಂದು ಸಣ್ಣ ಪ್ರಶ್ನೆ. ಆದರೆ ಕಾಲಾನುಭಾಗ ಇದಕ್ಕಾಗಿ ಉಂಟಾಗುವ ಚಳವಳದ ಉಗ್ರತೆ ಲೋಕದ ಎದೆಯನ್ನು ನಡುಗಿಸಬಲ್ಲುದು!"

ಈ ವಾದಧಾರೆಗೆ ತರ್ಕಹೂಡುವಂತೆಯೆ, ಇಲ್ಲಿ ಅಷ್ಟು ತರ್ಕಶುದ್ಧಿಯಿಂದ ಮಾತನಾಡುತ್ತಿದ್ದಾನೆ ಸಿಂಹಂ. ನಾವೆಲ್ಲ ಬೆರಗಾಗಿ ಕೇಳುತಿದ್ದೆವು. ಅವನ ಮಾತು ಕವಲೊಡೆಯಿತು:-

—"ಸಣ್ಣದೊಂದು ಉದಾಹರಣೆಯನ್ನು ಕೊಡುವೆ. ನಂಬಿದರೆ ನಂಬಿ; ಬಿಟ್ಟರೆ ಬಿಡಿ. ನಿಜವಾಗಿ ನಡೆದ ಕತೆಯಿದು"

ಸಿಂಹಂ ಹೀಗೆ ಹೇಳುತ್ತಾಲೆ ನಮ್ಮ ಕುತೂಹಲ ಎದ್ದು ನಿತ್ತಿತು. ಕಿವಿ ನಿಮಿರಿಸಿಕೊಂಡು ಮುಂದಿನ ಕತೆಯನ್ನು ಕೇಳಲು ಸಜ್ಜಾದೆವು. ಸಿಂಹವಾಣಿ ಮುಂದುವರಿಯಿತು.

—"ನನ್ನ ಮಾವ ಕಲ್ಲಿಕೋಟೆಯಲ್ಲಿದ್ದಾರೆ. ಕಳೆದ ಬೇಸಗೆಯ ರಜಾಕ್ಕೆ ನಾನು ಅಲ್ಲಿಗೆ ಹೋಗಿದ್ದೆ. ಆಗ ಅವರು ಈ ಕತೆಯನ್ನು ನನಗೆ ಹೇಳಿದರು. ಕಲ್ಲಿಕೋಟೆ ಸಮುದ್ರಕಿನಾರೆಯ ಸುಂದರವಾದ ನಗರ. ಮಾಧವ ನಾಯರು ಅಲ್ಲಿಯ ಒಬ್ಬ ಶ್ರೀಮಂತರು. ಕಲ್ಲಿಕೋಟೆಯ ರಾಜ ಎನ್ನುವಷ್ಟು ಸಿರಿವಂತರು. ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರು ಕೂಡಾ ಆಗಿದ್ದಾರೆ. ಎಲ್ಲ ಸರಿಯೆ! ಆದರೆ ಉದಾರಿಯಲ್ಲ. ಬಡವರು- ಬಗ್ಗರು ಎಂದಾಗ ಅವರಿಗೆ ಎಲ್ಲಿಲ್ಲದ ಸಿಟ್ಟು. ಈ ಪಾಪಿಗಳು ಸತ್ತಷ್ಟೂ ಊರಿಗೆ ಕಲ್ಯಾಣ ಎಂದು ಕಲ್ಪನೆ ಅವರದು. ಯಾರಿಗೂ ಒಂದು ಚಿಕ್ಕಾಸನ್ನಾದರೂ ದಾನವಾಡಿದವರಲ್ಲ. ತಾನು ಮಾತ್ರ ಬಹಳ ಸೊಗಸಾದ- ಸವಿಯಾದ ಜೀವನವನ್ನು ಸಾಗಿಸಬೇಕೆಂದು ಯತ್ನಿಸುತ್ತಿದ್ದರು. ಕೊಚ್ಚಿಯ ಕ್ಯಾಪ್ಟನ್ ದಂಡಪಾಣಿಯ ಮಗಳು ತ್ರಿಲೋಕಸುಂದರಿಯೆಂದು ಹೆಸರಾಗಿದ್ದಳು. ಆಕೆಯನ್ನು ಮದಿವೆಯಾಗಲು ಅವರು ಪಟ್ಟಶ್ರಮ ಅಸಾಧ್ಯವಂತೆ. ಅದಿರಲಿ. ಮದಿವೆಯಾಗುತ್ಲೂ ಅವರು ಪೇಟೆಯ ನಡುವಿನಲ್ಲಿದ್ದ ತನ್ನ ಮನೆಯನ್ನು ಬಿಟ್ಟು ಪೇಟೆಗೆ ಮೂರು ಮೈಲು ದೂರದಲ್ಲಿ- ಕಡಲತಡಿಯಲ್ಲಿ ಸುಂದರವಾದ ಒಂದು ಬಂಗಲೆಯನ್ನು ಕಟ್ಟಿಸಿ- ಅಲ್ಲಿಯೆ ವಾಸಿಸಹತ್ತಿದರು. ಅವರ ಬಂಗಲೆಯ ಹತ್ತಿರವೆ ಶಂಕರ ಎಂಬ ಒಬ್ಬ ವ್ಯಥಿತ ಜೀವಿ ವಾಸಿಸುತ್ತಿದ್ದ. ಆತ ಬಹುಕಾಲದಿಂದ ಅಲ್ಲಿಯೆ- ಆ ತಾಳೀ ಮರದ ಮುರುಕು ಗುಡಿಸಲಿನಲ್ಲಿಯೆ ವಾಸವಾಗಿದ್ದ. ಅರ್ಧ ಮೈಲು ಆಚೀಚೆ ಯಾರೂ ಇದ್ದಿಲ್ಲ. ಈಗ ಈ ಗುಡಿಸಲಿನ ಸನಿಯದಲ್ಲಿಯೆ ಮಾಧವ ನಾಯರು ಮಹಲು ಕಟ್ಟಿಸಿದ್ದು. ಬಂಗಲೆಯೋ- ಎಲ್ಲ ಆಧುನಿಕ! ವಿದ್ಯುತ್ತಿನ ದೀಪವನ್ನು ಇರಿಸಿದ್ದರು. ರೇಡಿಯೋ ಇಟ್ಟಿದ್ದರು. ಕೆಲಸಕ್ಕೆ- ಚಾಕರಿಗೆ ಆಳುಗಳು ಪೇಟೆಗೆ ಹೋಗಬೇಕಾದರೆ ಮೋಟರ್ ಕಾರು.

ಶಂಕರನ ಸಮಾಧಿಗೆ ಇದರಿಂದ ಭಂಗವಾಯಿತು ಅವನೊಬ್ಬ ವ್ಯಥಿತ ಜೀವಿ ಎಂದೆನಲ್ಲವೆ? ಹೌದು! ಆತನ ಪ್ರಾಣ ಪಾತ್ರೆ ಬರಿದಾಗಿದೆ. ಒಂದು ಕಾಲದಲ್ಲಿ ಆತ ಭಾರೀ ಕಾರುಬಾರಿನ ಮನುಷ್ಯನೆ ಆಗಿದ್ದ. ಕಾಲನ ಕೈವಾಡದ ಮುಂದೆ ಯಾರದೇನು ಆಟ? ಎಲ್ಲ ಕಡೆಗೂ ಸೋಲು- ಎಲ್ಲ ಕಡೆಗೂ ವಿಪತ್ತು ಬಂದು ಆತನ ಬದುಕನ್ನು ಮುತ್ತಿದುವು. ಅವನ ಜೀವನದ ಸರ್ವಸ್ವ- ಬಾಳಿನ ಬೆಳಕು- ಎನಿಸಿದ್ದ ಹೆಂಡತಿ ತೀರಿಕೊಂಡಳು. ಇದ್ದ ಒಂದೇ ಒಂದು ಕೂಸು ಹೊಟ್ಟೆಗಿಲ್ಲದೆಯೆ ಸತ್ತಿತು. ಅಂದಿನಿಂದ ಜಗತ್ತಿನಲ್ಲಿ ಅವನೊಬ್ಬನೆಯೆ ಉಳಿದಿದ್ದಾನೆ. ಹೃದಯ ವಿಕ್ಷುಬ್ಧವಾಗಿತ್ತು. ಅವನ ದನಿಯರು- ಅವನ ತಂದೆಯ ಬಾಕಿಗಾಗಿ ದಾವೆಮಾಡದಿರುತ್ತಿದ್ದರೆ ಇಂದು ಇಂತಹ ದುರ್ದಿನ ಬರುತ್ತಾಲೆ ಇರಲಿಲ್ಲ. ಶ್ರೀಮಂತರೆನಿಸುವವರು ಬಡವರ ಬಾಳಿನ ಗೋಳನ್ನು ಕಂಡು ಮೌನವಾಗಿರುವುದನ್ನು ನೆನೆನೆನೆದು ಅವನ ಆತ್ಮ ಕುದಿಯುತಲಿತ್ತು. ಆದರೆ ಅಸಹಾಯ. ಏನೂ ಮಾಡಲಾರ. ತಾನು ಕಳಕೊಂಡ ಮನದನ್ನೆಯೆ- ಕೂಸು-ಇವರನ್ನೆಲ್ಲ ಸ್ಮರಿಸಿ- ಸ್ಮರಿಸಿ- ಕೊರಗುತಿದ್ದ ಧನಿಕರ ವೈಭವದ ವೈಖರಿ ಹೆಚ್ಚಿದಂತೆಲ್ಲ ತನ್ನಂತೆಯೆ ಕೊರಗುವವರ ಸಂಖ್ಯೆ ವೃದ್ಧಿಯಾಗುವುದಲ್ಲಾ- ಭಗವಂತನಿಗಿದು ಸಮ್ಮತವೋ? ಎಂದು ಹಲುಬುತ್ತ ಕಾಲಯಾಪನೆ ಮಾಡುತಿದ್ದ. ಮಾಧವ ನಾಯರ ಮನೆ ಬಂದಮೇಲಂತೂ ಅವನನ್ನು ಕೆಣಕಿ ಕೆದಕಿದಂತಾಯ್ತು. ತಾನೊಬ್ಬನೆ ಮೌನವಾಗಿ ಕುಳ್ಳಿರುವುದನ್ನಷ್ಟೆ ಆತ ಮೆಚ್ಚುತಿದ್ದ. ಏನಾದರೂ ಜೇಡಿದಲ್ಲಿ ಒಂದು ಹಿಡಿ ಅಕ್ಕಿ ದೊರೆತರೆ ಗಂಜಿ ಕುದಿದು ಮಲಗುತಿದ್ದ ಇಲ್ಲವಾದರೆ ಬರಿ ಹೊಟ್ಟೆಯಲ್ಲಿಯೆ ಮಲಗುತಿದ್ದ. ಅಂತೂ ಆ ನೀರವ ವಾತಾವರಣವೆ ಅವನಿಗೆ ಸೊಗಸಿತ್ತು. ಯಾರೋ ದಯಾಳುಗಳೊಬ್ಬರು ಅವನಿಗೆ ಅಲ್ಲಿರಲು ಅನುಕೂಲಿಸಿದ್ದರು. ಆ ಜಾಗವನ್ನು ಅವನೂ ಸೊಗಸಿದ್ದನು. ಈಗ ಆ ನೀರವತೆ ಮಾಯವಾಗಿದೆ. ಯಾವಾಗ ನೋಡಿದರೂ ರೇಡಿಯೋ ಗಾನ! ಯಾವಾಗಲೂ ಸಂತೋಷ ಮತ್ತು ನಗುವ ಅಟ್ಟಹಾಸ! ಇದನ್ನು ಕೇಳಿದಾಗಲೆಲ್ಲ ಅವನ ಹೊಟ್ಟೆಯಲ್ಲಿ ಜ್ವಾಲಾಮುಖಿ ಹೊತ್ತಿಕೊಳ್ಳುತ್ತಿತ್ತು.

ಚಿಂತಿತ್ತಿಸುರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಒಂದುದ್ದೇಶವಲ್ಲ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್
ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಇವರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಮನೇಜರ್.

ಆಗ ನಮ್ಮ ಎದುರಿಗಿನ ಸಭೆಯಲ್ಲಿ ಕೈ ಚಪ್ಪಾಳೆ ಕೇಳಿಸಿತು. ಇನ್ನೊಂದು ಬದಿಯಲ್ಲಿ ನಗರ ಸಭೆಯವರು ಇಡಿಸಿರುವ ರೇಡಿಯೋ ಹಾಡುತಿತ್ತು. ಯಾವುದೂ ನಮ್ಮ ಮನಸ್ಸನ್ನು ಸೆಳೆಯಲಿಲ್ಲ. ಎಲ್ಲಕ್ಕಿಂತಲೂ ಡಾ! ಸಿಂಹಂ ಹೇಳುವ ಕತೆಯೆ ನಮಗೆ ರುಚಿಸಿತು. ಅವನು ಮುಂದುವರಿಸಿದ.

—"ಒಂದು ದಿನ ಸಂಜೆ, ಮಾಳಿಗೆಯಲ್ಲಿ ನಾಯರು ಕುಳಿತಿದ್ದಾರೆ. ಅವರ ಪಕ್ಕದಲ್ಲಿಯೆ ಅವರ ಪತ್ನಿ ಕುಳಿತಿದ್ದಾಳೆ. ಇಬ್ಬರ ಮುಖದಲ್ಲಿಯೂ, ಪೂರ್ಣ ಪ್ರಸನ್ನತೆ. ರೇಡಿಯೋ ಚೆಲುವಾಗಿ ಹಾಡುತ್ತಿತ್ತು. ಇಂದ್ರ ವೈಭವ! ನಾಯರಿಗೆ ಬೇರೆ ಸ್ವರ್ಗವಿದೆಯೆಂಬುದು ಸುಳ್ಳೆನಿಸಿತು. ಆ ಸಂಜೆ ಅವರ ಕಣ್ಣಿಗೆ ಹೇಗೆ ಕಂಡಿತು"

"ಪ್ರಕೃತಿಯು ಇಡಿಯ ಜಗತ್ತಿಗೆಯೆ ಆನಂದ ಸಂದೇಶವನ್ನು ಬೀರುತ್ತಿದ್ದಾಳೆ. ವಿಶ್ವದಲ್ಲಿಯೆ ಹೊಸಬಗೆಯ ಚೆಲುವೊಂದು ಹೆಚ್ಚತೊಡಗಿದೆ. ತೀಡುವ ತೆಳುಗಾಳಿ ಸಂತೃಪ್ತ ಜೀವನನ್ನು ಚೇತನಗೊಳಿಸುತ್ತಿದೆ. ಈ ಅಲೌಕಿಕ ಸನ್ನಿವೇಶದಲ್ಲಿ ನಾಯರ ಬಗೆ ಸೊಗಗೊಳದಲ್ಲಿ ತೇಲುತ್ತಿತ್ತು"

"ಅದೇ ಸಂಜೆ. ಅದೇ ತಾಳೇಮರದ ಬುಡದಲ್ಲಿ ಶಂಕರ ಕುಳಿತಿದ್ದಾನೆ. ಅವನ ಪಕ್ಕದಲ್ಲಿಯೆ ಒಂದು ನಾಯಿ ಹಸಿವೆಯಿಂದ ಕಂಗೆಟ್ಟು ಮಲಗಿದೆ. ಅದೂ ಒಂದು ಪ್ರಾರಬ್ಧವೆ! ಏನು ಋಣಾನುಬಂಧವೊ! ಇವನಿಗೆಯೆ ಊಟಕ್ಕೆ ಗತಿಯಿಲ್ಲ. ಇದೊಂದು ಗಂಟು ಬಿದ್ದಿದೆ. ಅವನ್ನು ಸಾವಿರ ನೊಣಗಳು ಬಂದು ಕಚ್ಚಿ ಉಪದ್ರವಿಸುತ್ತಲಿದ್ದುವು. ಸ್ವಸ್ಥವಾಗಿ ಮಲಗಲಿಕ್ಕಾದರೂ ಇದೆಯೆ? ಏಕೋಣವೆಂದರೆ ನಿಶ್ಶಕ್ತಿ. ಆದರೂ ಅವುಗಳೊಡನೆ ಜಗಳಾಡುತ್ತ ಮಲಗಿಕೊಂಡಿವೆ. ಅವನ ಎದುರಿಗೆ ಪತಿತೆಯ—ದುಃಖಿನಿಯ—ಕಳೇಬರದಂತೆ ಅವನ ಶೂನ್ಯ ಕುಟೀರ! ಆ ದಿವಸ ಅವನಿಗೆ ಹೊಟ್ಟೆ ತುಂಬ ಗಂಜಿಕೂಡ ದೊರೆತಿರಲಿಲ್ಲ. ಬಗೆಗೊಳ ಕದಡಿತ್ತು. ಮುಖದಲ್ಲಿ ಅಶಾಂತಿಯ ಕುರುಹಿತ್ತು. ಬೇರೆ ನರಕವೆ ಇಲ್ಲವೆಂದು ಅವನ ಭಾವನೆ."

"ಅದೇ ಸಂಜೆ ಅವನ ಕಣ್ಣಿಗೆ ಹೇಗೆ ಕಂಡಿತು"

"ಪ್ರಕೃತಿಯು ಇಡಿಯ ಜಗತ್ತಿಗೆಯೆ ಮುಂಬರುವ ಕತ್ತಲೆಯ ಅಮಂಗಲ ಸಂದೇಶವನ್ನು ಬೀರುತ್ತಿದ್ದಾಳೆ. ವಿಶ್ವದಲ್ಲಿಯೆ ಮಬ್ಬು ಕವಿಯುತಿದೆ. ತೀಡುವ ತೆಳುಗಾಳಿ ಅಂತರ್ವಹ್ನಿಯನ್ನು ಉರಿಸುತಿದೆ. ಅರಳಿದ ಹೂಗಳ ನಲ್ಲಂಪು ಜಡ ಮೂರ್ಛೆಯನ್ನು ತರುತಿದೆ. ಪ್ರಕೃತಿಯೆ ವಿಕೃತಿಯಾಗಿ ತನ್ನೆದುರು ಹೀಗೆ ದಿಗಂಬರಳಾಗಿ ನಿಂತು ಕೆಣಕುತ್ತಿರುವ ಈ ಭೀಷಣ ಸನ್ನಿವೇಶದಲ್ಲಿ ಅವನ ಜೀವ ತಳಮಳಿಸಿ ಹೋಯಿತು!"

"ನಾಯರ ಮನೆಯ ರೇಡಿಯೋದ ಗದ್ದಲ ಹೆಚ್ಚಾಯಿತು. ಅವರು ಮಾಳಿಗೆಯಲ್ಲಿ ನಿಂತು ಸಂಧ್ಯಾ ಸಂಭ್ರಮದ ಸೃಷ್ಟಿಯ ಚೆಲುವನ್ನು ಹೀರುತ್ತಿದ್ದರು. ಅವರ ಬೆನ್ನಿಗೆ ಅತುಕೊಂಡು ಚಿನ್ನದ ಸರಿಗೆ-ಅಲ್ಲಿ ಅವರ ಪತ್ನಿ ನಿಂತಿದ್ದಳು. ದೂರದ ತಡಿಯಲ್ಲಿ ಸೂರ್ಯನ ಮುಳುಗು ನೋಡಿ ಅವರಿಗೆ ಹೆಚ್ಚು ಆಪ್ಯಾಯನವಾಗಿರಬೇಕು. ಅವರ ಎದುರಿಗೆಯೆ ಒಂದು ಸಣ್ಣ ಜೀವಜ್ಯೋತಿ ಬಿರುಗಾಳಿಗೆಸಿಕ್ಕಿ ನರಳುತ್ತಿರುವುದು ಈ ಸಂಭ್ರಮದಲ್ಲಿ ಕಾಣಬೇಕು ಹೇಗೆ?"

"ಈ ನೋಟವನ್ನು ನೋಡಿ ಶಂಕರನ ತಲೆ ತಿರುಗಿತು. ಹೊಟ್ಟೆಯಲ್ಲಿ ಅಸೂಯೆಯುಂಟಾಯಿತು. ತನ್ನ ಹಿಂದಿನ ದಿನದ ನೆನಪು ಎದೆಯಲ್ಲಿ ಚೇಳಿನಂತೆ ಚುಚ್ಚಿತು! ಈಗಿನ ದಾರುಣ ಸ್ಥಿತಿಗಾಗಿ ಮರುಗಿದನು. ಆಗ ಕೈಯಲ್ಲಿ ಕಾಸಿತ್ತು. ಮೈಯಲ್ಲಿ ಬಲವಿತ್ತು. ಜೀವದ ಸಂತೃಪ್ತಿಗಾಗಿ ಮನೆಯಲ್ಲಿ ನಂದಾದೀಪವಿತ್ತು. ಈಗ ಅವೆಲ್ಲ ಕಳೆದು ಹೋಗಿವೆ. ಜಗತ್ತಿನ ಕಣ್ಣಿಗೆ ಅವನೊಬ್ಬ ಕ್ಷುದ್ರ ಜೀವಿ! ಹೊಟ್ಟೆಗೆ ಗತಿಯಿಲ್ಲವೆಂದಾದೊಡನೆಯೆ ಮನುಷ್ಯನ ಯೋಗ್ಯತೆ ಕ್ಷುದ್ರತ್ವಕ್ಕಿಳಿಯುತ್ತಿದೆಯೆ? ಅಷ್ಟು ಲಘುವಾಗಿ ಬಿಡುವುದೆ? ಎಂದು ಅವನಿಗೆ ಹಿಡಿಸಲಾರದ ಆಶ್ಚರ್ಯ! ಹಿಂದಿನದನ್ನೆಲ್ಲ ನೆನೆಯುತ್ತಲೂ ಶಂಕರನ ಸರ್ವಾಂಗ ನಡುಗಿಹೋಯಿತು. ರೋಷ ವಿದ್ಯುತ್ ಮೈತುಂಬ ಚಲಿಸಿತು. ಒಳಗಿನ ಜೀವಕ್ಕೆ ಎಲ್ಲಿಂದಲೋ ಸತ್ವ ಬಂದಂತಾಗಿ ರೇಂಕರಿಸಿತು! "ಜಗತ್ತಿಗೆ ಬೇಕಾದ್ದು ದುಡ್ಡು. ದುಡ್ಡಿಗಾಗಿ ಎಂತಹ ಅನ್ಯಾಯಗಳ ನಡೆಯುತ್ತಿವೆ. ಈ ದುಡ್ಡುಳ್ಳವರ ದುರ್ಬುದ್ಧಿಯಿಂದ ಲೋಕದ ಹೊಟ್ಟೆಗೆ ಬೆಂಕಿ ಬಿದ್ದಿದೆ. ಈ ಚಂಡಾಲರಿಂದ ಸತ್ಯ-ನೀತಿ-ಧರ್ಮ-ಗಳು ಅವಮಾನಿಸಲ್ಪಟ್ಟಿವೆ. ಯಾರೂ ಇವರಿಗೆ ಶಿಕ್ಷೆ ಕೊಡುವವರಿಲ್ಲವೊ?" ಎಂದು ತನ್ನಲ್ಲಿಯೆ ಕಿರುಚಿಕೊಂಡ."

"ಮೊದಲೆ ವಿಕೃತ ವೇಷ. ತಲೆಯೆಲ್ಲ ಜಡೆಗಟ್ಟಿ ಹೋಗಿದೆ. ಕ್ಷೌರಗತ್ತಿ ಕಾಣದೆ ವರ್ಷಗಳೆ ಉರುಳಿವೆ. ಆಹಾರದ ಅಭಾವದಿಂದ ಮೈ ಕೈ ಒಣಗಿ ವಿಕಾರವಾಗಿದೆ. ಕಣ್ಣು ಯಾತನೆಯನ್ನನುಭವಿಸಿ ಕ್ರೂರವಾಗಿವೆ. ಮುಖ ಭೀಷಣವಾಗಿದೆ. ನೋಡುವಾಗಲೆ ಭೀತಿಯಾಗುವಂತಹ ಆಕೃತಿ! ಕುಳಿಯಲ್ಲಿಂದಲೆ ಪ್ರಪಂಚದ ತಿರುವುಮುರುವಾದ ಧೋರಣೆಯನ್ನು ನೆನೆದು ಹಲ್ಕಿರಿದು ನಕ್ಕನು. ಹಾಗೆಯೆ ಎದ್ದು ನಿಂತು ನಾಯರ ಮಾಳಿಗೆಯ ಕಡೆಗೆ ಮುಖಮಾಡಿ ಸದ್ದಾಗುವ ಹಾಗೆ ನಕ್ಕುಬಿಟ್ಟನು. ಇದನ್ನು ಕಂಡು ನಾಯರ ಹೃದಯೇಶ್ವರಿಗೆ ವಿಚಿತ್ರವಾಗಿ ಕಂಡಿರಬೇಕು. ಆಕೆ ಬಿದ್ದು ಬಿದ್ದು ನಕ್ಕುಬಿಟ್ಟಳು. ಇದನ್ನ ನೋಡುತ್ತಲೆ ಶಂಕರನು ಉರಿದು ಹೋದ ಎಲ್ಲಿಂದಲೋ ಅಸುರೀ ಶಕ್ತಿಯೊಂದು ಅ ವನಲ್ಲಿ ನೆಲೆ ನಿಂತಿತು! ನೇರವಾಗಿ ಧಾವಿ ನಾಯರ ಮನೆಯ ಮುಂಗಡೆ ನಿಂತು ಹೇ ಳಿದ:- "ಆ ರೇಡಿಯೋವನ್ನು ನಿಲ್ಲಿಸಿ!" ಅಲ್ಲಿಯ ಆಳುಗಳೆಲ್ಲ-ಇವನೊಬ್ಬ ಹುಚ್ಚ- ಎಂದು ಕೊಂಡು ಗದರಿಸಿದರು. ಅವನು ಅತ್ತಿತ್ತ ಸರಿಯದೆ ಪುನಃ ಕೂಗಿ ಹೇಳಿ ದ:- "ನನಗೆ ಹಸಿವೆಯಾಗುತ್ತಿದೆ. ನಿಮ್ಮ ರೇಡಿಯೋದಿಂದ ನನ್ನ ಹೊಟ್ಟೆ ತುಂಬ ಲಾರದು. ರೇಡಿಯೋವನ್ನು ಬೇಗನೆ ಬಂ ದುಮಾಡಿ!" ಆಳುಗಳೆಲ್ಲ ಒಂದಾಗಿ ಬಂದು "ನಡೆಯೋ ಆಚೆ!" ಎಂದು ಮುಷ್ಟಿ ತೋ ರಿಸಿದರು. ಸರಿಯೋ ಅಲ್ಲವೋ! ಅಲ್ಲಿಯೆ ಬಿದ್ದಿದ್ದ ಹೊಣ್ಣೆಯೊಂದನ್ನು ಎತ್ತಿಕೊಂ ಡ ಶಂಕರ ಭೈರವನಂತೆ ಅವರ ಮೇಲೆಲ್ಲ ಎರಿಹೋಗಿ ಎಲ್ಲರಿಗೂ ಚೆನ್ನಾಗಿ ಥಳಿಸಿದ. ಎಲ್ಲರೂ ಗಾಬರಿಯಾದರು. ಅಷ್ಟರಲ್ಲಿ ಅ

(೧೦ನೇ ಪುಟ ನೋಡಿರಿ)

ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ಶತ್ರುವಿನೊಂದಿಗೆ ಕಾದಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ. ಯೋಧನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ಮತ್ತು ನಿಮ್ಮ ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಆಣೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟ್ಯಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಜಯಗೊಳ್ಳಲು ಸಹಾಯಕರಾಗಬಹುದು.

ಒಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೩/೮/- ಲಾಭ ಕೊಡುತ್ತೆ
ಪೋಸ್ಟ್ ಆಫೀಸ್‌ನಲ್ಲಿ ವಿವರಗಳನ್ನು ತಿಳಿಯಿರಿ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

GI-49-Kn.

The Canara Banking Corporation Ltd.

(Incorporated in British India with limited liability)

ESTD: 1906.

will now receive

SEASON DEPOSITS

for a period of 4 months

at 3% p. a.

AT ALL ITS BRANCHES.

ನವಯುಗ

ಉಡುಪಿ, ಗುರುವಾರ, ೧೬-೪-೧೯೪೨

ತಪ್ಪು ಯಾರದು?

ಬ್ರಿಟಿಷ್ ಸರಕಾರದ ಪ್ರತಿನಿಧಿ ಸರ್. ಸ್ಟಾಫೋರ್ಡ್ ಕ್ರಿಪ್ಸ್ ಮತ್ತು ಹಿಂದೀ ಮುಖಂಡರೊಳಗೆ ನಡೆದ ಸುದೀರ್ಘ ಮಾತುಕತೆಯು, ಫಲಕಾರಿಯಾಗುವುದೆಂಬ ಆಶೋದಯವು ದೇಶದಲ್ಲುಂಟಾದ ಉತ್ತರಕ್ಷಣದಲ್ಲೇ ಫಕ್ಕನೆ ಅದು ಮುರಿದು ಹೋಗಿ ಮೊದಲಿನ ಪರಿಸ್ಥಿತಿಯೇ ದೇಶದಲ್ಲಿರುವಂತಾದುದು ಮಹತ್ತಾದ ದುರ್ದೈವ. ಬ್ರಿಟಿಷ್ ಸರಕಾರದವರು ಅತ್ಯಂತ ಅವಸರದಿಂದ ತಮ್ಮ ಸೂಚನೆಗಳನ್ನೆಲ್ಲಾ ಹಿಂದೆಗೆದು ಹಿಂದು ದೇಶದಲ್ಲಿ ಹಿಂದಿನ ನಿರಂಕುಶ ರಾಜ್ಯಭಾರವೇ ಯಥಾ ಪ್ರಕಾರ ಇರುವಂತಾಗಿರುವದು ಬಹಳ ಖೇದಕರ. ಮಾತುಕತೆಯು ಫಕ್ಕನೆ ಮುರಿದು ಹೋಗಲು ಕಾರಣವೇನು? ಅದರಲ್ಲಿ **ತಪ್ಪು** ಯಾರದು? ಎಂಬುದನ್ನು ಈ ಸಂದರ್ಭದಲ್ಲಿ ನಿಷ್ಪಕ್ಷಪಾತ ದೃಷ್ಟಿಯಿಂದ ಮತ್ತು ಆಗ್ರಹರಹಿತ ಮನೋವೃತ್ತಿಯಿಂದ ಪರಿಶೀಲಿಸೋಣ.

ಕಾಂಗ್ರೆಸ್ಸಿನ ಮೇಲೆ ಕ್ರಿಪ್ಸರ ಆರೋಪ

ಬ್ರಿಟಿಷ್ ಸರಕಾರದ ಹಿಂದಿನ ಘೋರ ಶಂಕಾಕಾರಿತ್ವದ ಅಪನಂಬಿಕೆಯು, ತಾನು ನಡೆಸಿದ ಮಾತುಕತೆಯು ಜಯಶೀಲವಾಗದಿರಲೊಂದು ಕಾರಣವೆಂದು ಸರ್. ಸ್ಟಾಫೋರ್ಡರು ಹೇಳಿರುವರು. ಆದರೆ ಅದೇ ಕಾಲದಲ್ಲಿ ಅದರ ಮುಖ್ಯ ಜವಾಬ್ದಾರಿಯನ್ನು ಕಾಂಗ್ರೆಸಿನ ಮೇಲೆ ಹಾಕಿರುವರು. ಕಾಂಗ್ರೆಸಿನವರು ಮಾತುಕತೆಯ ಕೊನೆಯಲ್ಲಿ ಅನಿರೀಕ್ಷಿತವಾಗಿ ಕೇಂದ್ರಾಡಳಿತದ ಸಂಪೂರ್ಣ ಜವಾಬ್ದಾರಿ ಮತ್ತು ಅಧಿಕಾರವನ್ನು ಕೇಳಿದರು. ಇಂಡಿಯಾ ಆಕ್ಟಿನಲ್ಲೇ ಬದಲಾವಣೆಯಾಗದೆ ಹಾಗೆ ಮಾಡಲಾಗುವುದಿಲ್ಲ. ಯುದ್ಧವು ಹಿಂದು ದೇಶದ ದ್ವಾರಕ್ಕೆ ಬಂದಿರುವ ಉತ್ಕಟ ಪರಿಸ್ಥಿತಿಯಲ್ಲಿ ಅಂತಹ ರಾಜ್ಯಾಂಗ ರಚನಾ ಬದಲಾವಣೆಯು ಅಸಾಧ್ಯ. ಯುದ್ಧಪ್ರಯತ್ನವನ್ನು ಸಂಘಟಿತವಾಗಿ ಮತ್ತು ಜಯಶೀಲವಾಗಿ ನಡೆಸುವ ದೃಷ್ಟಿಯಿಂದ ದೇಶರಕ್ಷಣಾ ಖಾತೆಯಲ್ಲಿ ಪ್ರಕೃತ ಹೆಚ್ಚಿನ ಬದಲಾವಣೆ ಮಾಡುವುದು ಅನುಚಿತ ಆದರೂ ಬ್ರಿಟಿಷ್ ಸರಕಾರವು ಸಾಧ್ಯವಾದ ಬದಲಾವಣೆ ಮಾಡಿ, ದೇಶೀಯ ಹಿಂದೀ ಸೇನೆಯ ಮೇಲ್ವಿಚಾರದ ವಿಷಯವನ್ನು ಕೂಡಾ ಹಿಂದೀಯರ ಆಡಳಿತದಲ್ಲಿರಿಸಲೊಪ್ಪಿತು. ಇತರ ಎಲ್ಲಾ ಖಾತೆಗಳನ್ನೂ ವೈಸರಾಯರ ಹಿಂದೀ ಎಗ್ಜಿಕ್ಯೂಟಿವ್ ಕೌನ್ಸಿಲರರ ಅಧೀನ ಕೊಡಲು ತಯಾರಾಗಿತ್ತು. ಆದರೆ ಕಾಂಗ್ರೆಸಿನವರು ಅಷ್ಟರಿಂದ ತೃಪ್ತರಾಗಲಿಲ್ಲ. ಬಹು ಪಕ್ಷೀಯರ ನಿರಂತರವಾದ ನಿರಂಕುಶ ಪ್ರಭುತ್ವ ಸ್ಥಾಪಿಸುವ ಆಗ್ರಹಪಟ್ಟರು. ಆದರಿಂದ ಬ್ರಿಟಿಷ್ ಸರಕಾರವು ಅಲ್ಪಸಂಖ್ಯಾಕರಿಗಿತ್ತಿರುವ ವಾಗ್ದಾನಗಳಿಗೆ ಭಂಗವುಂಟಾಗುವಂತಾಗುವುದು. ಆದುದರಿಂದ ಸರಕಾರಕ್ಕೆ ಕಾಂಗ್ರೆಸಿನ ಕೇಳಿಕೆಗಳಿಗೊಪ್ಪಲು ಸಾಧ್ಯವಾಗಲಿಲ್ಲ. ಹಿಂದುದೇಶದ ರಕ್ಷಣೆಯು ಇಂದು ಬ್ರಿಟಿಷ್ ಸರಕಾರದ ಜವಾಬ್ದಾರಿಯಾಗಿದೆ. ಆ ಸಂಬಂಧವಾಗಿ ಅಮೇರಿಕವೂ ಅತ್ಯಾಸಕ್ತಿಯಿಂದ ಸಹಕರಿಸುತ್ತಿದೆ. ಅಂದ ಮೇಲೆ ಈ ಸಂಧಿಕಾಲದಲ್ಲಿ ರಕ್ಷಣಾ ಖಾತೆಯ ಆಡಳಿತದಲ್ಲೇನಾದರೂ ಬದಲಾವಣೆ ಮಾಡುವುದರಿಂದ ಯುದ್ಧ ಪ್ರಯತ್ನಕ್ಕೇನೇ ತೊಡಕು ಮಾಡಿದಂತಾಗುವುದು. ಹಿಂದುದೇಶದ ಜಯಶೀಲ ರಕ್ಷಣೆಯ ದೃಷ್ಟಿಯಿಂದಲೇ ಅದರ ಸೇನಾಡಳಿತ ವಿಷಯವನ್ನು ಈಗಣಂತೆ ಇರಿಸುವುದು ಯುಕ್ತವಾದುದೆಂದೇ ಕ್ರಿಪ್ಸರ ವಾದ. ತನ್ನ ಮಾತುಕತೆಯು ಫಲಕಾರಿಯಾಗದುದು ಅತ್ಯಂತ ವಿಷಾದಕರ. ಆದರೆ ಹಿಂದೀ ಮುಖಂಡರೆಲ್ಲರೂ ಜಾಪಾನರ ಆಕ್ರಮಣಕ್ಕೆ ಬದ್ಧ ವಿರೋಧವಿರುವರೆಂಬುದು ಸಂತೋಷಕರ. ಈ ಗಂಡಾಂತರದ ಸಂದರ್ಭದಲ್ಲಿ ಹಿಂದೀಯರೆಲ್ಲರೂ ಒಮ್ಮತದಿಂದ ದೇಶರಕ್ಷಣೆಗೆ ಸಿದ್ಧರಾಗಿ ಫೆಸಿಸ್ಟರ ಬರ್ಬರ ಆಳ್ವಿಕೆಯನ್ನು ನಾಶಪಡಿಸಿ ಪ್ರಜಾಸತ್ತೆಯನ್ನೆತ್ತಿ ಹಿಡಿಯಬೇಕೆಂದು ಕ್ರಿಪ್ಸರು ಬಹಳ ಕಳಕಳಿಯಿಂದ ವಿನಂತಿಮಾಡಿಕೊಂಡಿರುತ್ತಾರೆ.

ಕಾಂಗ್ರೆಸಿನ ಸ್ಪಷ್ಟ ಧೋರಣೆ

ಇನ್ನಾದರೂ ಹಿಂದೀಯರ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಅಧಿಕಾರವನ್ನು ಅವರಿಗೆ ಬಿಟ್ಟುಕೊಡುವ ಮನಸ್ಸು ಬ್ರಿಟಿಷ್ ಸರಕಾರಕ್ಕಿರುವುದಿಲ್ಲ. ಯುದ್ಧದ ಪರಿಸ್ಥಿತಿಯಲ್ಲಿ ದೇಶ ರಕ್ಷಣಾ ಖಾತೆಯೇ ಪ್ರಾಮುಖ್ಯವಾದುದು. ಅದೇ ಸರ್ವಸ್ವವೆಂದು ಕೂಡಾ ಹೇಳಬಹುದು. ಆ ಕುರಿತು ಹೆಚ್ಚಿನ ಜವಾಬ್ದಾರಿಯನ್ನೇನೂ ಸರಕಾರವು ಹಿಂದೀಯರಿಗೆ ಬಿಟ್ಟುಕೊಡಲು ಸಿದ್ಧವಿರುವುದಿಲ್ಲ. ಕೇಂದ್ರದಲ್ಲಿ ನಿಜವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಯೋಚನೆಯೇ ಅದಕ್ಕಿಲ್ಲ. ಆ ಜವಾಬ್ದಾರಿಯನ್ನೆಲ್ಲಾ ವೈಸರಾಯರಿಗೆ ಬಿಟ್ಟುಕೊಡಲಾಗಿದೆ. ವೈಸರಾಯರ ಎಗ್ಜಿಕ್ಯೂಟಿವ್ ಕೌನ್ಸಿಲಿಗೆ ಹೆಚ್ಚಿನ ಹಿಂದೀಯರನ್ನು ನೇಮಿಸಿ ಅವರಿಗೆ ಕೆಲವೊಂದು ಖಾತೆಗಳ ಆಡಳಿತವನ್ನೊಪ್ಪಿಸಿದಾಕ್ಷಣ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿದಂತಾಗಲಿಲ್ಲ. ಮೊದಲಿನ ವೈಸರಾಯರ ನಿರಂಕುಶತೆಯನ್ನು ಅಚ್ಚಳಿಯದುಳಿಸಿ ಆಡಳಿತದಲ್ಲಿ ಕೆಲಮಟ್ಟಿನ ಬದಲಾವಣೆ ಮಾಡಲು ಮಾತ್ರ ಸರಕಾರವು ಸಿದ್ಧವಿರುವುದೆಂಬುದು ಕ್ರಿಪ್ಸರ ಮಾತುಕತೆಯ ಕೊನೆಯಲ್ಲಿ ಮಾತ್ರ ತಿಳಿದುಬರುವಂತಾಯಿತು. ಪ್ರಕೃತದ ಯುದ್ಧದ ಪರಿಸ್ಥಿತಿಯಲ್ಲಿ ಮುಂದಿನ ಹಿಂದೀ ರಾಜ್ಯಾಂಗ ರಚನೆಯ ಪ್ರಶ್ನೆಯನ್ನು ಬದಿಗೊತ್ತಲು ಕಾಂಗ್ರೆಸು ಸಿದ್ಧವಿತ್ತು. ಹಿಂದೀ ಜನತೆಯು ಉತ್ಸಾಹದಿಂದ ಯುದ್ಧಪ್ರಯತ್ನದಲ್ಲಿ ಭಾಗವಹಿಸಬೇಕಾದರೆ ಕೇಂದ್ರದಲ್ಲಿ ಜನತಾಪರವಾದ ರಾಷ್ಟ್ರೀಯ-ಸರಕಾರವು ಸ್ಥಾಪಿಸಲ್ಪಡುವದು ಅತ್ಯಗತ್ಯವಾಗಿರುವುದು. ಕ್ರಿಪ್ಸರು ತನ್ನ ಮಾತುಕತೆಯ ಆರಂಭದಲ್ಲಿ ಕೇಂದ್ರದಲ್ಲಿ, ಬ್ರಿಟಿಷ್ ಚಕ್ರವರ್ತಿಗಳಿಗೆ ನೆಟ್ಟಗೆ ಜವಾಬ್ದಾರಿಯಾಗಿರುವ ಮಂತ್ರಿಮಂಡಲವನ್ನು ವೈಸರಾಯರ ಕೈಕೆಳಗೆ ಸ್ಥಾಪಿಸುವ ತತ್ವಕ್ಕೊಪ್ಪಿದಂತೆ ತೋರುತ್ತಿತ್ತು. ಆದುದರಿಂದಲೇ ಕಾಂಗ್ರೆಸು ಮಾತುಕತೆಯನ್ನು ಮುನ್ನಡೆಸುವ ಮನಸ್ಸು ಮಾಡಿತು. ಕೇಂದ್ರದಲ್ಲಿ ಎಲ್ಲಾ ಪಕ್ಷಗಳ ಪ್ರಾತಿನಿಧ್ಯವುಳ್ಳ ನಿಜವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಕಾಂಗ್ರೆಸು ಅಪೇಕ್ಷೆಪಟ್ಟುದೇ ಹೊರತು ತನ್ನ ನಿರಂಕುಶ ಅಧಿಕಾರ ಸ್ಥಾಪಿಸಲು ಎಂದೂ ಯತ್ನಿಸಿರುವುದಿಲ್ಲ. ಇಂಡಿಯಾ ಆಕ್ಟಿನಲ್ಲಿ ಬದಲಾವಣೆಯೇನೂ ಮಾಡದೆ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ರೂಢಿಯನ್ನು ಜ್ಯಾರಿಗೆ ತರಲು ಸಾಧ್ಯವಿದೆ. ಅದನ್ನೇ ಕಾಂಗ್ರೆಸು ಅಪೇಕ್ಷಿಸಿದುದು. ಆದರೆ ಮಾತುಕತೆಯ ಕೊನೆಯಲ್ಲಿ ಕ್ರಿಪ್ಸರ ಧೋರಣೆಯೇ ಬದಲಾಗಿಬಿಟ್ಟಿತು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸುವ ಕಾಂಗ್ರೆಸಿನ ಸೂಚನೆಗೇನೇ ಅವರು ವಿಪರೀತಾರ್ಥ ಮಾಡಿಕೊಂಡು ಒಡನೆಯೇ ರಾಜಿ ಪ್ರಸ್ತಾಪವನ್ನು ಮುರಿದುಬಿಟ್ಟರು. ಇಂಡಿಯಾ ಆಫೀಸನ್ನೂ ತೆಗೆದುಹಾಕುವ ಸೂಚನೆಗವರು ಒಪ್ಪಲಿಲ್ಲ. ವೈಸರಾಯರ ನಿರಂಕುಶ ಅಧಿಕಾರವನ್ನು ಕಡಿಮೆಮಾಡಲು ಸಿದ್ಧರಿಲ್ಲ. ಬ್ರಿಟಿಷ್ ಸರಕಾರವು ಹಿಂದೀಯರಿಗೆ ಅಧಿಕಾರ ಬಿಟ್ಟುಕೊಡಲು ಇನ್ನಾದರೂ ಸಿದ್ಧವಿಲ್ಲೆಂಬುದು ಇದರಿಂದ ಸ್ಪಷ್ಟವಾಗುವುದೆಂದೇ ಕಾಂಗ್ರೆಸಿನ ಪ್ರತಿಪಾದನೆ.

ಹಿಂದುದೇಶದ ಮಹತ್ತಾದ ಗಂಡಾಂತರ.

ಇಂದೀಗ ಹಿಂದುದೇಶವು ಎಂತಹ ಗಂಡಾಂತರಕ್ಕೊಳಗಾಗಿರುವುದೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಿದೆ. ಜಪಾನರ ಆಕ್ರಮಣದಿಂದ ಅದನ್ನು ರಕ್ಷಿಸುವ ಬಗೆ ಹೇಗೆಂಬುದು ದೊಡ್ಡ ಸಮಸ್ಯೆಯಾಗಿದೆ. ಅವರ ಮುನ್ನಡೆಯನ್ನು ಎಲ್ಲಿಯಾದರೂ ತಡೆಗಟ್ಟಲು ಬ್ರಿಟನ್ ಮತ್ತು ಅಮೇರಿಕಗಳಿಗೆ ಈ ವರೆಗೆ ಸಾಧ್ಯವಾಗಿಲ್ಲ. ಅದು ಒಂದೇ ಸವನೆ ಮುಂದುವರಿಯುತ್ತಾ ಹಿಂದುದೇಶವನ್ನು ಸಮುದ್ರ ಮೂಲಕ ಆವರಿಸುವುದರಲ್ಲಿರುವುದೆಂದೇ ಹೇಳಬಹುದು. ಜಾಪಾನಿಗೆ ಭಾರತದ ಮೇಲೆ ಕಣ್ಣಿಲ್ಲ. ಭಾರತವು ಸ್ವಾತಂತ್ರ್ಯವಾಗಬೇಕೆಂದೇ ಜಾಪಾನಿನ ಹಾರೈಕೆ. ಭಾರತೀಯರಿಗೆ ಸ್ವಾತಂತ್ರ್ಯ ಗಳಿಸಿಕೊಡುವಷ್ಟು ಶಕ್ತಿ ಜಾಪಾನಿಗಿದೆ. ಬ್ರಿಟನ್ ಮತ್ತು ಅಮೇರಿಕಗಳನ್ನು ಮುರಿಯಬೇಕೆಂಬುದೇ ಜಾಪಾನರ ಸ್ಥಿರಸಂಕಲ್ಪ. ಹಿಂದುದೇಶದ ಸೈನ್ಯಾಧಿಕಾರವನ್ನು ಬ್ರಿಟಿಷರು ಪಡೆದಿರುವುದಾದರೆ, ಬ್ರಿಟಿಷರನ್ನು ತಾವು ಮುರಿಯುವಾಗ ಹಿಂದುದೇಶವು ಮಹಾ ವಿಪತ್ತಿಗೊಳಗಾಗಬಹುದು. ಇಂದೀಗ ಹಿಂದೀಯರಿಗೆ ಸ್ವಾತಂತ್ರ್ಯ ಗಳಿಸುವ ಸುಯೋಗ ದೊರಕಿದೆ. ಅವರು ತಮ್ಮ ಇಷ್ಟಾರ್ಥ ಸಿದ್ಧಿಯನ್ನು ಪಡೆಯಬಹುದು. ಬ್ರಿಟಿಷರ ಕಣ್ಣುಕಟ್ಟಿಗೆ ಬಲಿಬೀಳದೆ ಅವರೊಡನೆ ಯಾವ ರಾಜಿಯನ್ನೂ ಮಾಡಿಕೊಳ್ಳಕೂಡದೆಂದು ಜಾಪಾನ ಪ್ರಧಾನ ಮಂತ್ರಿ ಜನರಲ್ ಟೋಜೋರವರೇ ಉದ್ಘೋಷಿಸಿರುತ್ತಾರೆ. ಮಾತ್ರವಲ್ಲದೆ ಆಕ್ಸಿಸ್ ರಾಷ್ಟ್ರಗಳೇನೂ ಹಿಂದುದೇಶದ ಸ್ವಾತಂತ್ರ್ಯಹರಣಮಾಡುವ ಹಾಗಿಲ್ಲ. ಅವರ ಮನೋವೃತ್ತಿಯನ್ನು ತಾನು ಚೆನ್ನಾಗಿ ಬಲ್ಲೆ. ಅವರ ಮೂಲಕವೇ ಹಿಂದೀಯರು ಸ್ವಾತಂತ್ರ್ಯ ಗಳಿಸಿಕೊಳ್ಳಬಹುದು. ಆದುದರಿಂದ ಬ್ರಿಟಿಷರ ಮೋಸದ ಬಲೆಗೆ ಬೀಳದೆ ಹಿಂದೀಯರು ತಟಸ್ಥರಿರಬೇಕು. ಅವರೊಂದಿಗೆ ಯಾವ ಸಂಧಾನವನ್ನೂ ಮಾಡಿಕೊಳ್ಳಬಾರದೆಂದು ಶ್ರೀ ಸುಭಾಷಬೋಸರಂತಹ ಉಜ್ವಲ ರಾಷ್ಟ್ರೀಯ ಮುಖಂಡರು ಸಾರಿ ಎಚ್ಚರಿಸಿರುತ್ತಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಬ್ರಿಟನಿನೊಂದಿಗೆ ರಾಜಿ ಪ್ರಸ್ತಾಪಕ್ಕೆ ಕಾಂಗ್ರೆಸು ಮುಂದಾಗಿರುವುದೇ ಅದೊಂದು ಧಿಟ್ಟತನ. ಅದರೂ ಅದು ಕ್ರಿಪ್ಸರೊಡನೆ ಮಾತುಕತೆ ನಡಿಸಲು ಮುಂದಾಗಿರುವುದೇ ಅದರ ಮನೋವೃತ್ತಿಯು ಎಂತಹದಿರುವುದೆಂಬುದನ್ನು ಲೋಕವಿಖ್ಯಾತಗೊಳಿಸುವುದು. ಫೇಸಿಸ್ಟರ ಬದ್ಧವಿರೋಧಿ ಸಂಸ್ಥೆ ಕಾಂಗ್ರೆಸು. ಬ್ರಿಟಿಷ್ ಸರಕಾರವು ಕಣ್ಣುತೆರೆಯುವ ಮೊದಲೇ ಅದು ಫೆಸಿಸ್ಟರಿಂದ ಲೋಕಕ್ಕಾಗುವ ಅನಾಹುತವನ್ನು ಮನಗಂಡು ಆ ರಾಷ್ಟ್ರಗಳ ಅನ್ಯಾಯವಾದ ಆಕ್ರಮಣಗಳನ್ನು ನಿಷೇಧಿಸುತ್ತಾ ಬಂದಿರುವುದು. ಫೆಸಿಸ್ಟ್ ರಾಷ್ಟ್ರಗಳನ್ನು ಸಮಜಾಯಿಸುವ ಬ್ರಿಟನಿನ ದುರ್ಬಲ ನೀತಿಯನ್ನು ಕೂಡಾ ಖಂಡಿಸಿರುವುದು. ಇಂದು ಕೂಡಾ ಹೊರಗಣ ಆಕ್ರಮಣಕ್ಕದು ಬದ್ಧ ವಿರೋಧವಿರುವುದು. ಇಂದೀಗ ಕಾಂಗ್ರೆಸಿನ ಅಧಿನಾಯಕರಾಗಿರುವ ಪಂಡಿತ ನೆಹರುಗಳು, ಜಾಪಾನಿನ ಆಕ್ರಮಣವನ್ನು ವಿರೋಧಿಸುವುದೇ ಹಿಂದೀಯರ ಕರ್ತವ್ಯವೆಂದು ಕಂಠೋಕ್ತವಾಗಿ ಹೇಳಿರುತ್ತಾರೆ. ಆದರೂ ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸಿನ ಮೇಲೆ ನಂಬಿಕೆಯಿಲ್ಲ. ಹಿಂದುದೇಶದ ರಕ್ಷಣೆಗೇನೇ ಮಹತ್ತಾದ ಅಪಾಯವುಂಟಾಗಿರುವ ಪರಿಸ್ಥಿತಿಯಲ್ಲಿ ಕೂಡಾ ಅದು ದೇಶರಕ್ಷಣೆಯ ಜವಾಬ್ದಾರಿಯನ್ನು ಜನಮುಖಂಡರಿಗಿತ್ತು ಅವರಿಂದ ಉತ್ಸಾಹಪರ ಬೆಂಬಲ ಪಡೆಯಲು ತಯಾರಿಲ್ಲ. ಇನ್ನೂ ಅದು ಕೇವೇ ಮುಂದಿ ಸೈನಿಕರ ಮೇಲೆ ದೇಶರಕ್ಷಣೆಯ ಸಂಪೂರ್ಣ ಜವಾಬ್ದಾರಿ ಹಾಕಿ ಅವಲಂಬಿಸಿಕೊಂಡಿರುವ ಮನೋವೃತ್ತಿ

ಯುಳ್ಳದ್ದಿರುವುದು ಸರ್ವೇದಾಶ್ಚರ್ಯ ವಿಷಯ. ಅವರ ರಾಜನೀತಿಜ್ಞರು ಮತ್ತು ಸೈನ್ಯಾಧಿಕಾರಿಗಳು ತಮ್ಮ ಹಿಂದಿನ ಸಾಮ್ರಾಜ್ಯಶಾಹಿ ಮನೋವೃತ್ತಿಯನ್ನು ಬದಲಾಯಿಸಿರುವುದಿಲ್ಲ. ಹಿಂದಿನಷ್ಟೇ ಯಾಂತ್ರಿಕವಾಗಿ ಮತ್ತು ಹೃದಯರಹಿತವಾಗಿ ಅವರು ಈಗಲೂ ನಡೆಯುತ್ತಿರುವಂತಿದೆ. ಆದುದರಿಂದಲೇ ಕ್ರಿಪ್ಸರ ಮಾತುಕತೆಯು ಮುರಿದುಹೋಗಿ ದೇಶದಲ್ಲಿ ಹಾಗೂ ಪ್ರಜಾಶಾಹಿ ರಾಷ್ಟ್ರಗಳಲ್ಲೆಲ್ಲಾ ನಿರಾಶೆ ಮತ್ತು ನಿರುತ್ಸಾಹವುಂಟಾಗುವಂತಾಗಿದೆ.

ಬಿಸಿಲ್ಗುದುರೆಯ ಬೆನ್ನು ಹಿಡಿಯಲು ಸಿದ್ಧರಿಲ್ಲ.

ಮತ್ತೊಂದು ಆಶ್ಚರ್ಯ ಹಾಗೂ ವಿಷಾದಕರ ಸಂಗತಿಯೆಂದರೆ, ಸಾಮ್ರಾಜ್ಯಶಾಹಿಯ ಅಧಿಕಾರ ಪ್ರತಿಷ್ಠಿತರಾದ ಸರ್. ಸ್ಟಾಫೋರ್ಡ್ ಕ್ರಿಪ್ಸರೂ ಅದರೊಂದು ಅಂಗವಾಗಿ ಪರಿಣಮಿಸಿರುವದು. ೧೯೩೯ರ ಕ್ರಿಪ್ಸರಿಗೂ ಈಗಿನ ಸರ್. ಸ್ಟಾಫೋರ್ಡರಿಗೂ ಎಂತಹ ಅಭ್ಯಂತರ! ಮೊದಲು ಸಾಮ್ರಾಜ್ಯಶಾಹಿಯ ಪ್ರಬಲ ವಿರೋಧಿಯಾಗಿದ್ದ ಕ್ರಿಪ್ಸರು ಇಂದದರ ಸಮರ್ಥಕರಾಗಿ ಬಿಟ್ಟಂತಿದೆ. ಕ್ರಿಪ್ಸರಂಥವರು ಕಾಂಗ್ರೆಸಿನ ಉದ್ದೇಶದ ಕುರಿತು ತಪ್ಪು ಅಭಿಪ್ರಾಯ ಮಾಡಿಕೊಂಡು ಅಪಪ್ರಚಾರಮಾಡುವುದೆಂದರೆ ಉಳಿದವರ ಪಾಡೇನು? ಅಲ್ಪಸಂಖ್ಯಾಕರ ರಕ್ಷಣೆಯ ಬ್ರಿಟಿಷ್ ಸರಕಾರದ ಜವಾಬ್ದಾರಿಯ ಕುರಿತಾಗ ಕ್ರಿಪ್ಸರ ವಾದವು ಉಗ್ರಸಾಮ್ರಾಜ್ಯವಾದಿಗಳದೇ ಆಗಿದೆ. ಸೈಸಂಸ್ಥೆಯರ ನಿರಂಕುಶ ಅಧಿಕಾರಕ್ಕೊಪ್ಪುವುದು ಅಸಾಧ್ಯವಾದರೆ ರಾಜಿನಾಮೆ ಕೊಡಬಹುದೆಂದೇ ಕ್ರಿಪ್ಸರು ಹೇಳಿರುವ ಸಮಾಧಾನ. ಅಂದ ಮೇಲೆ ಪ್ರಜಾಸತ್ತೆ ಎಲ್ಲುಳಿಯಿತು! ಹಿಂದೀಯರು ಕಷ್ಟಡಿಯೊಳಗಿನ ಗಂಟೆಗೆ ಮುಳಾಗುವ ದಿನವು ಎಂದೋ ಸಂದು ಹೋಗಿರುವುದು. ಮುಂದೆ ಎಂತಹ ಪರಿಸ್ಥಿತಿಯುಂಟಾಗುವುದೆಂದು ಯಾರು ಬಲ್ಲರು? ಬ್ರಿಟನು ಇಂದು ಹಿಂದೀಯರಿಗೆ ಎಷ್ಟರ ಮಟ್ಟಿನ ಆಡಳಿತಾಧಿಕಾರವೀಯಲು ಸಿದ್ಧವಿರುವುದೆಂಬುದರಿಂದಲೇ ಅದರ ಪರೀಕ್ಷೆಯಾಗುವುದು. ಆ ಪರೀಕ್ಷೆಯಲ್ಲದರ ಹಿತ್ತಾಳಿಯು ಹೊರಬಿದ್ದಿರುತ್ತದೆ. ಅದು ಪ್ರಸ್ತುತ ನಿಜವಾದ ಅಧಿಕಾರವನ್ನೇನೂ ಬಿಟ್ಟುಕೊಡಲು ಸಿದ್ಧವಿಲ್ಲ. ಇಂದು ನಿಜವಾದ ಅಧಿಕಾರ ಪಡೆಯದೆ ಮುಂದಿನ ಸ್ವಾತಂತ್ರ್ಯದ ಬಿಸಿಲ್ಗುದುರೆಯ ಬೆನ್ನು ಹಿಡಿದು ಹೋಗಿ ಬ್ರಿಟನಿಗಾಗಿ ಪ್ರಾಣಾರ್ಪಣೆಗಾದರೂ ಮುಂದಾಗಲು ಹಿಂದೀಯರು ತಯಾರಿಲ್ಲ. ಸಾಮ್ರಾಜ್ಯ ಸ್ವಾರ್ಥವು ಮತ್ತು ಅಧಿಕಾರಲಾಲಸೆಯನ್ನು ಸಂಪೂರ್ಣ ತೊರೆದುಬಿಟ್ಟು ಈಗಲೇ ಹಿಂದೀಯರಿಗೆ ಬೇಕಷ್ಟು ಅಧಿಕಾರ ಬಿಟ್ಟುಕೊಟ್ಟು ದೇಶದ ಸಂಪೂರ್ಣ ಬೆಂಬಲ ಪಡೆದು ಯುದ್ಧ ನಡಿಸಲು ಬ್ರಿಟಿಷ್ ಸರಕಾರವೂ, ಅದಕ ಹಿಂದು ದೇಶದ ಪ್ರತಿನಿಧಿಗಳೂ ಸಿದ್ಧರಿಲ್ಲ. ಅಂದ ಮೇಲೆ ಸಂಧಾನವು ಹೇಗೆ ಸಾಧ್ಯ?

"INDIAN AIR FORCE"
Recruitment on 20-4-1942,
at the Collector's Office
at 9 A. M.

WANTED

Mechanics, Wireless operators, Nursing Orderlies-Clerks, Equipment Assistants Electricians and Motor Drivers.

For particulars call at the Collector's Office.

M. Karamatullah, I. C. S.
Collector of South Kanara.

ಲಾವಲರಿಗೆ ಪುನಹ ಮಂತ್ರಿ ಪದವಿ

ಮದ್ರಾಸ್ ಪಟ್ಟಣಕ್ಕೆ ಅಪಾಯ ಹೆಚ್ಚಿರುತ್ತದೆ.

ಕೆಂಪು ಸೇನೆಯ ವಿಜಯ.

ವಿಚಿ ಮಂತ್ರಿಮಂಡಲದಲ್ಲಿ ಬದಲಾವಣೆ

ವಿಚಿ ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಿ ಎಮ್. ಲಾವಲರನ್ನು ಪುನಃ ಅಧಿಕಾರಕ್ಕೆ ತರಬೇಕೆಂದು ನಾಝಿಗಳು ದೀರ್ಘ ಸಮಯದಿಂದ ನಡಿಸುತ್ತಿದ್ದ ಪ್ರಯತ್ನವು ಜಯಶೀಲವಾಗಿದೆ. ಇದೇ ತಾ. 14ರಲ್ಲು ಮಾರ್ಶಲ್ ಪೆಟೈನರು ವಿಚಿ ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಿ ಲಾವಲರನ್ನು ಉಪ ಪ್ರಧಾನ ಮಂತ್ರಿಗಳಾಗಿ ನೇಮಿಸಿರುವರು. ಲಾವಲರು ಪುನಹ ಅಧಿಕಾರಕ್ಕೆ ಬಂದಿರುವುದರಿಂದ ವಿಚಿ ಫ್ರಾನ್ಸು ಇನ್ನುಮುಂದೆ ಜರ್ಮನಿಯೊಂದಿಗೆ ಸಹಕರಿಸಿ ನಡೆಯುವಂತಾಗುವುದೆಂದು ನಿರೀಕ್ಷಿಸಲಾಗಿದೆ. ನಾಝಿಗಳ ಒತ್ತಾಯದ ಮೇರೆಗೆ, ಫ್ರಾನ್ಸಿನ ಮಾಜಿ ಮಂತ್ರಿ ಡೆಲಡಿಯರ್, ಸೇನಾನಾಯಕ ಗೆಮಲಿನರ ಮೇಲಿನ ಖಟ್ಲೆಯ ವಿಚಾರಣೆಯು ನಿಲ್ಲಿಸಲ್ಪಟ್ಟಿದೆ. ಯುದ್ಧ ಹೂಡಿದ ಅಪವಾದವನ್ನು ಮೊದಲಿನ ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರದ ಮೇಲೆ ಹೊರಿಸುವ ಜರ್ಮನರ ಉದ್ದೇಶವು ಅದರಿಂದ ನೆರವೇರದುದೇ ಇದಕ್ಕೆ ಕಾರಣವೆಂದು ನಂಬಲಾಗಿದೆ.

ಮದ್ರಾಸಿಗೆ ಹೆಚ್ಚಿನ ಅಪಾಯ

ಮದ್ರಾಸಿಗೆ, ಜಪಾನ ಯುದ್ಧ ಹಡಗ ಮತ್ತು ವಿಮಾನ ಧಾಳಿಯ ಅಪಾಯವು ಈಗ ಹೆಚ್ಚಿರುವುದೆಂದು ಸರಕಾರವು ಕೆಲಸವಿಲ್ಲದವರೆಲ್ಲಾ ಅದನ್ನು ಬಿಟ್ಟುಹೋಗಬೇಕೆಂದು ಆಜ್ಞೆ ಇತ್ತಿದೆ. ಕಳೆದ ಮಂಗಳವಾರದ ವರೆಗೆ ಒಂದು ವಾರದಲ್ಲಿ 1,36,000 ಮಂದಿ ಮದ್ರಾಸ್ ಬಿಟ್ಟು ಹೋಗಿರುತ್ತಾರೆ. ರಜಾ ಕಾಲದಲ್ಲಿನ ಹ್ಯಾಕೋರ್ಟು ಕೆಲಸವು ಕೊಯಮುತ್ತೂರಿನಲ್ಲಿ ನಡೆಸಲ್ಪಡುತ್ತದೆ. ಮದ್ರಾಸ್ ಫ್ಹೋರ್ಟಿನ ಸರಕಾರಿ ; ಅಧಿಕಾರಿಗಳೂ ಅದನ್ನು ಬಿಟ್ಟುಹೋಗಿರುತ್ತಾರೆ. ಯಾರಾದರೂ ಸಂಬಂಧಿಕರಿಲ್ಲದವರನ್ನು ಸರಕಾರವೇ ಹಳ್ಳಿಪ್ರದೇಶಗಳಿಗೊಯ್ದು ಅಲ್ಲಿ ಶಿಬಿರಗಳಲ್ಲಿ ಇರಿಸುವ ಏರ್ಪಾಡುಮಾಡಿರುತ್ತದೆ.

ಸೋವಿಯೆಟ್ ಸೇನೆಯ ವಿಜಯ.

ನಾಝಿಗಳು ಹೆಚ್ಚಿನ ಸೇನಾ ಸಂಗ್ರಹ ಮಾಡಿ ಸೋವಿಯೆಟ್ ಸೇನೆಯ ಮೇಲೆ ಕೆಲವು ರಣರಂಗಗಳಲ್ಲಿ ಪ್ರತಿಧಾಳಿ ನಡಿಸಿದರೂ ಕೆಂಪು ಸೈನಿಕರದನ್ನು ಜಯಶೀಲವಾಗಿ ಪ್ರತಿಭಟಿಸಿರುವರು. ಲೆನಿನ್‌ಗ್ರಾಡ್ ರಣರಂಗದಲ್ಲಿ 9000 ಮಂದಿ ಜರ್ಮನರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ ಫಿನ್ಲೆಂಡಿನ ರಣರಂಗದಲ್ಲಿಯೂ ಸೋವಿಯೆಟ್ ಸೈನಿಕರು ಪ್ರಬಲ ಹೋರಾಟವನ್ನಾರಂಭಿಸಿದ್ದಾರೆ. ಕಲಿನಿನ್, ಸ್ಮೊಲೆಂಕ್ಸ್, ಖಾರ್ಕೋವ್ ಮತ್ತು ಕ್ರೈಮಿಯದ ರಣರಂಗಗಳಲ್ಲಿಯೂ ಸೋವಿಯೆಟ್ ಸೈನಿಕರು ಮುಂದೊತ್ತುತ್ತಿದ್ದಾರೆ. ಸೋವಿಯೆಟ್ ಗೊರಿಲ್ಲ ಸಂಗಡದ ಉಪಟಳವು ಪ್ರಬಲವಾಗಿದೆ. ಸೋವಿಯೆಟ್ ವಿಮಾನ ಪಡೆಯ ಬಲವೂ ಹೆಚ್ಚಿರುತ್ತದೆ

ನವಯುಗಕ್ಕೆ ಇಂದೇ
ಚಂದಾದಾರರಾಗಿರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ.
ತಾ. 17—4—1942ರಿಂದ
ಸಾಗರ್ ಮೂವಿಟೋನಿನವರ
ಏಕ್-ಹಿ-ರಸ್ತಾ ಅಥವಾ
ONLY WAY
ಹರೀಶ್, ಶೇಕ್ ಮುಕ್ತಾರ್, ಜ್ಯೋತಿ, ಮೊದಲಾದವರು
ನಟಿಸಿರುವ ಚಿತ್ರ
ಅನಂತರ: ಸುಬ್ಬಯ್ಯ ನ್ಯಾಡು, ಲಕ್ಷ್ಮೀ ಬಾಯಿ, ನಾಗೇಂದ್ರ ರಾವ್
ಮೊದಲಾದವರು ನಟಿಸಿರುವ ಭೂಕೈಲಾಸ್ (ತೆಲುಗು)
ತಾ. 20-4-1942ರಿಂದ

ಹೆಂಡ್ತಿ—ನೀವು ನಿಮ್ಮ ಯಜಮಾನರು ಎಳೆಯುವ ಚುಟ್ಟವನ್ನೇ ಎಳೆಯುತ್ತೀರಾ?
ಗಂಡ—ಹೌದು. ಮೊದಲಿನ ಅರ್ಧವನ್ನು ಅವರು ಎಳೆಯುತ್ತಾರೆ.

ಇದೀಗ ಹೊರಟಿದೆ-
ವಿಶೇಷ ರೀತಿಯಲ್ಲಿ
ಹೊಸ ಮಾದರಿಯಲ್ಲಿ-
ಅಂತರಂಗ
ಯುಗಾದಿ ಸಂಚಿಕೆ.
ವ್ಯಂಗ್ಯ ಚಿತ್ರಗಳು, ಏಕವರ್ಣ ಚಿತ್ರಗಳು,
ತ್ರಿವರ್ಣ ಚಿತ್ರಗಳು-
ಕಥೆಗಳು, ನಗೆ ಬರೆಹಗಳು ಹರಟೆಗಳು, ಏಕಾಂಕ ನಾಟಕಗಳು,
ಕವನಗಳು, ವಿಚಾರಪರ ಲೇಖನಗಳು.
ಲೇಖನಗಳ ವೈವಿಧ್ಯಕ್ಕಾಗಿ **ಅಂತರಂಗ**
ಯುಗಾದಿ ಸಂಚಿಕೆಯನ್ನೋದಿರಿ.
ಹಿರಿಯರಾದ ಶಿವರಾಮಕಾರಂತ, ಎ. ಬಿ. ಶೆಟ್ಟಿ ಎಮ್. ಎಲ್. ಎ., ಪಿ. ವಿ. **ಉಪಾಧ್ಯಾಯ ವಕೀಲ್, ಎಸ್. ಎಮ್. ಕುಲಕರ್ಣಿ,** ಎಂ. ಎ., **ಹನುಮಂತ ರಾವ್ ಮಾಂಜೇಶ್ವರ**, ಬಿ. ಎ. ಬಿ. ಟಿ., **ಕೆ. ವಿಠಲ ಶೆಣೈ** ಬಿ. ಎ. ಎಲ್. ಟಿ., **ಕೆ. ಕೆ. ಶೆಟ್ಟಿ, ಮೊದಲಾದವರ ಲೇಖನಗಳಿವೆ.**
ನೂರು ಪುಟಗಳು - ಬೆಲೆ 0-4-0
ನಾಲ್ಕುವರೆ ಆಣೆ ಸ್ಟಾಂಪು ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು
ಮೆನೇಜರ್,
"ಅಂತರಂಗ" ಉಡುಪಿ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ ಪ್ರೇಷಿತ)

ಶಾಂತಿ ದಲ ಸಮಿತಿಯ ಸಭೆ-ಇದೇ ೧ 5 4-1942ರಲ್ಲಿ ಶ್ರೀ ಎ ಬಿ. ಶೆಟ್ಟಿ, ಎಮ್. ಎಲ್ ಎ, ಇವರ ಅಧ್ಯಕ್ಷತೆಯಲ್ಲಿ ಸೇರಿದ ಶಾಂತಿ ದಲ ಸಮಿತಿಯ ಪ್ರಥಮ ಸಭೆಯಲ್ಲಿ ಒಂದು ಕಾರ್ಯ ಯೋಜನೆಯನ್ನು ತಯಾರಿಸಬೇಕೆಂದು ನಿರ್ಣಯವಾಗಿ, ಆ ಸಮಿತಿಗೆ ಈ ಕೆಳಗಿನ ಮಹನೀಯರು ಆರಿಸಲ್ಪಟ್ಟಿದ್ದಾರು [೧]ಶ್ರೀ ಎ ಬಿ. ಶೆಟ್ಟಿ, ಎಮ್. ಎಲ್ ಎ — (ಅಧ್ಯಕ್ಷರು) [೨]ಶ್ರೀ ಕೆ. ಆರ್. ಕಾರಂತ, ಎಮ್ ಎಲ್ ಎ. [೩]ಶ್ರೀ ಎಲ್. ಸಿ. ಪಾಯಸ್ [೪], ಶ್ರೀ ಎಮ್ ಬಿ ಅಧಿಕಾರಿ— ಕಾರ್ಯದರ್ಶಿ) [೫] ಶ್ರೀ ಮಂಗೇಶ ಅಗ್ಗ್ರಸ್ಥ ನಾಯ್ಕರು-(ಕೋಶಾಧ್ಯಕ್ಷ-) [೬] ಶ್ರೀಮತಿ ಲೀಲಾಬಾಯಿ ಏಕಾಂಬರ ರಾವ್. [೭] ಶ್ರೀ ಯು ಶ್ರೀನಿವಾಸ ಮಲ್ಯ [೮] ಡಾ। ಕೆ ಆರ್. ತಣ್, ಎಮ್. ಬಿ ಬಿ. ಎಸ್. ಈ ಸಮಿತಿಯ ಸಭೆಯು ೨-8-4 12ನೆ ಕಾರ್ಯಕಾರಿ ಕಾಂಗ್ರೆಸ್ ಕಛೇರಿಯಲ್ಲಿ ಸೇರಿ ಈ ಕೆಳಗಿನ ಕಾರ್ಯ ಯೋಜನೆಗಳನ್ನು ಕೈಕೊಳ್ಳಬೇಕೆಂದು ತೀರ್ಮಾನಿಸಿದೆ. ೧- ದಲದ ಸ್ವಯಂಸೇವಕರಿಗೆ ದಲದ ಕಾರ್ಯ ಮಾಡುವದಕ್ಕಾಗಿ ಬೇಕಾಗುವ ಶಿಕ್ಷಣ ಕೊಡುವುದು- ೨ ಆಹಾರ ಸಾಮಗ್ರಿಗಳೇ ಮೊದಲಾದ ಜೀವನಾವಶ್ಯಕ ವಸ್ತುಗಳ ಬೆಲೆಯೇರದಂತೆ ಪ್ರಚಾರ ಮೂಲಕ ತಿಳಿಸುವುದು ಮತ್ತು ಅವಶ್ಯವಿದ್ದಲ್ಲಿ ಡಿಪೋಗಳನ್ನು ತೆರೆದು, ಕಡಿಮೆ ಧಾರಣೆಗಳಲ್ಲಿ ಜನರುಗಳಿಗೆ ಒದಗಿಸುವುದು. ೩. ವಿಮಾನ ಧಾಳಿಯ ಕಾಲದಲ್ಲಿ ಜನರು ಹೇಗೆ ವರ್ತಿಸಬೇಕೆಂಬ ಬಗ್ಗೆ ಕರಪತ್ರಗಳ ಮೂಲಕವೂ, ಪತ್ರಿಕೆ ಹಾಗೂ ಭಾಷಣಗಳ ಮೂಲಕವೂ ಶಿಕ್ಷಣ ಕೊಡುವುದು, ಮತ್ತು ಆ ಕಾಲದಲ್ಲಿ ಮಾರ್ಗದರ್ಶನ ಮಾಡುವುದು- ಈ ಬಗ್ಗೆ ಒಂದು ಉಪ ಸಮಿತಿಯನ್ನು ರಚಿಸುವುದು- ೪- ಗಾಬರಿಗೊಳಿಸುವ ಸುಳ್ಳುಸುದ್ದಿಗಳನ್ನು ಪ್ರತೀಕರಿಸಿ ಜನರಿಗೆ ನಿಜಸ್ಥಿತಿಯನ್ನು ತಿಳಿಸುವುದು- ೫ ಡಾಕ್ಟರರ ಸಹಕಾರ ಪಡೆದು, ಅವಶ್ಯವಿದ್ದಾಗ ಪ್ರಥಮ ಚಿಕಿತ್ಸೆ ಒದಗಿಸುವುದು- ೬- ಯುದ್ಧ ಪರಿಸ್ಥಿತಿಯಿಂದ ತಮ್ಮ ವಾಸಸ್ಥಲಗಳನ್ನು ಬಿಟ್ಟುಬಂದವರಿಗೂ ಹೋಗುವವರಿಗೂ ಶಕ್ಯವಿದ್ದ ಸಹಾಯ ಮಾಡುವುದು ಈ ಮೇಲಿನ ಕಾರ್ಯಗಳಿಗೆ (ಡಿಪೋ ವಿಷಯ ವನ್ನುಳಿದು ಕನಿಷ್ಠ ರೂ ೧೦೦೦/- ಬೇಕಾಗಬಹುದು ಇದನ್ನು ಸಾರ್ವಜನಿಕರಲ್ಲಿ ವಿನಂತಿಸಿ ಸಂಗ್ರಹಿಸಬೇಕಾಗಿ ನಿಶ್ಚಯವಾಯಿತು- ಈ ಕಾರ್ಯ ಯೋಜನೆಯನ್ನು ಶಾಂತಿ ದಲ ಸಮಿತಿಯ ಮಹಾಸಭೆಯು ಮಂಜೂರಿ ಚರ್ಚಿಸಿ ನಿರ್ಣಯ ಮಾಡಲು ದಲದ ಸಮಿತಿಯ ಮಹಾ ಸಭೆಯು ತಾ. 15-4 42 ರಲ್ಲಿ ಪುನಃ ಸೇರಿತ

ಉಡುಪಿ.

ದವಸ ಧಾನ್ಯಗಳ ಬೆಲೆ- ತಾ, 5-4 12ರಲ್ಲಿ ಕಡಿದ ಉಡುಪಿ ತಾಲೂಕು ಆಫೀಸ್ ಕರಿ ಕವಿ ಟಿಯು ನಿರ್ಣಯದಲ್ಲಿ ದವಸ ಧಾನ್ಯಗಳ ಬೆಲೆ ಈ ರೀತಿ ಗೊತ್ತುಪಡಿಸಲ್ಪಟ್ಟಿದೆ, ಮುಕ್ತಿ ಅಕ್ಕಿ ಮುಡಿ 1ರ 6 8-0, ಸೇರಿಗೆ 0-2 6, ಗುಡ್ಡು ಮುಡಿ 6 4 0, ಸೇರಿಗೆ 0 2-5, ತೊಳ್ಳು ಮುಡಿ 1ರ 6-2-0, ಸೇರಿಗೆ 0-2 5, ಸಣ್ಣ ಮುಡಿ 6 0-0, ಸೇರಿಗೆ 0 2 4; ಬೆಲ್ತಿಗೆ ಮುಡಿ 1ರ 6 4 0ರಿಂದ 7-8 0, ಸೇರಿಗೆ 0-2 5ರಿಂದ 0 2-9, ಬೆಲ್ಲ ಮಣ 1ರ 2 4 0ರಿಂದ 2-6-0 ಸೇರಿಗೆ 0 0 9ಪೈಯಿಂದ 0 0-10, ಉಂಡೆ ಬೆಲ್ಲ ಮಣ 1ರ 2 14 0ರಿಂದ 3-2-0, ಸೇರಿಗೆ 0-1 0ಯಿಂದ 0-1-1 ಸಕ್ರೆ ಮಣ 1ರ 5 0 0 ಸೇರಿಗೆ 0 1-9, ಉದ್ದು ಮುಡಿ 1ರ 6-0-0 ಸೇರಿಗೆ 0 2-4; ಕಡ್ಲೆ ಮುಡಿ 1ರ 6-8 0ಯಿಂದ 8 0 0, ಸೇರಿಗೆ 0-2-6ರಿಂದ 0-3-2, ತೊಗರಿ ಬೇಳೆ ಮುಡಿ 1ರ 7-0-0ರಿಂದ 11 0-0, ಸೇರಿಗೆ 0 2 8ರಿಂದ 0-4-3, ಹುರುಳಿ ಮುಡಿ 1ರ 4-4 0, ಸೇರಿಗೆ 0-1-8, ಹೆಸ್ರು ಮುಡಿ 1ರ 6-8-0, ಸೇರಿಗೆ 0-2-5, ಉಪ್ಪು ಸೇರಿಗೆ 0-1-0 ಚಮಣಿ ಎಣ್ಣೆ ಬೀ ಡಬ್ಬಿಗೆ 4-10-6, ಬಾಟ್ಲಿಗೆ 0-3-0, ಕಂಡು ಎಣ್ಣೆ ಡಬ್ಬಿಗೆ 4-2-6, ಬಾಟ್ಲಿಗೆ 0-2 8, ರಾಗಿ ಮುಡಿಗೆ 3 8 0, ಸೇರಿಗೆ 0-1-5 ತೆಂಗಿನ ಕಾಯಿ 1ರ ಆಧಾರಣೆಯ ಎಂದು ಪೈ ವರೆಗೆ, ತೆಂಗಿನ ಎಣ್ಣೆ ಕುಡ್ತೆಗೆ 0-1 2, ಎಳ್ಳೆಣ್ಣೆ ಕುಡ್ತೆಗೆ 0-1-2, ಬೆಂಕಿ ಪೆಟ್ಟಿಗೆ 40 ಕಡ್ಡಿದ್ದಕ್ಕೆ 5ಪೈ, 50 ಕಡ್ಡಿದಕ್ಕೆ 6ಪೈ, 60ಕಡ್ಡಿದ್ದಕ್ಕೆ 7 ಪೈ, 80 ಕಡ್ಡಿದ್ದಕ್ಕೆ 10ಪೈ, ಗೋದಿಹಿಟ್ಟು ಊರದ್ದು ಸೇರಿಗೆ 0-2-0 ಬೊಂಬಾಯಿ ಹಿಟ್ಟು ಸೇರಿಗೆ 0-2-2. ಸಜ್ಜಿಗೆ ಸೇರಿಗೆ 0-3-4ರಿಂದ 0-4-0, ಮಸಿಕೆಂಡ ಟೀಲ 1ರ 1 4 0 (ಬೀಲದ ಕ್ರಯ ಹೊರತು)

ಪರಪೂರಿಗೆ ಹೋಗುವುದನ್ನು ನಿಲ್ಲಿಸಿರಿ— ದಕ್ಷಿಣ ಕನ್ನಡ ಜಿಲ್ಲೆಯಿಂದ ಅಕ್ಕಿ ಮೊದಲಾದ ಪದಾರ್ಥಗಳನ್ನು ಜೀವನ ಸಾಮಗ್ರಿಗಳು ಪರಪೂರುಗಳಿಗೆ ಹೋಗುತ್ತಲಿವೆಯೆಂದು ಮನಗಂಡ ಉಡುಪಿಯ ಹಲ ಕೆಲವರು ಹಾಗೆ ಹೋಗುವದನ್ನು ತಡೆಗಟ್ಟಬೇಕಾಗಿ ಜಿಲ್ಲಾ ಕಲೆಕ್ಟರರಿಗೆ ವಿನಂತಿ ಮಾಡಿರುವರು.

ಎಳೆ ಶಾಲಾ ಮಕ್ಕಳಿಂದ ಶೀರೆಳೆ ಸುವುದು ಅಪಾಯಕರ-ತಾ. 8-4-42 ರಲ್ಲಿ ಸೇರಿದ ಮೊಡರ್ನ್ ಹಾ। ಎ। ಶಾಲೆಯ ಹಕ್ಷೇತ್ರದ ಸಂಘದ ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ ಶಾಲೆಯ-ಬಾಲಕರಿಂದ ಬಾವಿಯ ನೀರೆಳೆಸುವಂತಾದ್ದು ಅಪಾಯಕರವಾದುದರಿಂದ ಅದನ್ನು ನಿಲ್ಲಿಸಬೇಕಾಗಿ ಶ್ರೀ. ಎಮ್. ವಾಮನ ಭಟ್ಟರು ಕಂಡ ಸೂಚನೆಗೆ 14 ವರುಷದ ಕೆಳಗಿನ ಬಾಲಕರಿಂದ ಎಂಟ ತಿದ್ದುಪಡಿಯಾಗಿ ಸದ್ರಿ ಸೂಚನೆಯು ನಿರ್ಣಯ ರೂಪದಲ್ಲಿ ಮಂಜೂರಾಯಿತು, ಶ್ರೀ. ಪಿ. ನಾರಾಯಣ ಪ್ರಭುಗಳ ಅಧ್ಯಕ್ಷತೆವಹಿಸಿದ್ದರು

ಪ್ಲೇಗ್: ಸಿಟ್-ಇದೇ ತಾ. 12ರಿಂದ ಸಂಪೂರ್ಣ 'ಪ್ಲೇಗ್ ಸಿಟ್' ಜ್ಯಾರಿಗೆ ಬಂದಿರುತ್ತದೆ.

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್, ದ. ಕ.— ಸೋರಿನ ಸಂಸ್ಥೆಯ ಎರಡನೇ ವಾರ್ಷಿಕ ದಿನಾಚರಣೆಯು ಇದೇ ತಾ. 26 ರಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನ ಪಠಾರದಲ್ಲಿ ನೆರೆಯಲಿದೆ. ಸ್ಕೌಟ್ ರೇಲಿ, ಮತ್ತು ಪ್ರದರ್ಶನಗಳು ಜರಗಲಿವೆ. ಇದಕ್ಕಾಗಿ ಎಲ್ಲಾ ಹುಡುಗ/ಹುಡುಗಿ-ಸ್ಕೌಟರು ತಮ್ಮಿಂದ ರಚಿಸಲ್ಪಟ್ಟ ವಸ್ತುಗಳನ್ನು ತಾ.24ರೊಳಗೆ ಪ್ರದರ್ಶನಕ್ಕಾಗಿ ಕಳುಹಿಸಬಹುದು.

ಅದೇ ದಿನ ಅಪರಾಹ್ನ 3 ಘಂಟೆಗೆ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ಸಂಘದ ವಾರ್ಷಿಕ ಮಹಾ ಸಭೆ ಜರಗುವದು, ಎಂದು ಜಿಲ್ಲಾ ಸಹಾಯಕ ಸ್ಕೌಟ್ ಕಮಿಶನರಾದ ಶ್ರೀ. ಬಿ. ಎಮ್. ಬಾಳಿಗರು ತಿಳಿಸುತ್ತಾರೆ.

ಉತ್ಸವ— ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ವಾಡಿಕೆಯ ನರಸಿಂಹ ಜಯಂತಿ ಮಹೋತ್ಸವವು ತಾ. 29-4-42ರಿಂದ ತಾ 1-5 42ರ ವರೆಗೆ ನಡೆಯಲಿರುವದು,

ಸಾರತ್ಕಲ್—ತಾ, 18-4-42ನೇ ಶನಿವಾರ ಮಧ್ಯಾಹ್ನ 2-30ಕ್ಕೆ ಇಲ್ಲಿ ವಿದ್ಯಾದಾಯಿನಿ ಶಾಲೆಯಲ್ಲಿ ಯುದ್ಧ ಫಂಡಿನ ಸಹಾಯಾರ್ಥವಾಗಿ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಡುವವು.

ಬೈಲೂರು— ತಾ, 13-4-42ರಲ್ಲಿ ರಾಷ್ಟ್ರೀಯ ವಾರದ ಕೊನೇ ದಿನಾಚರಣೆಯು ಸಲುವಾಗಿ ಇಲ್ಲಿಯ ಕಾಂಗ್ರೆಸ್ ಕಛೇರಿ ಬಳಿಯಿಂದ ರಾಷ್ಟ್ರೀಯ ಗೀತೆಯೊಂದಿಗೆ ಸಾರ್ವಜನಿಕ ಮೆರವಣಿಗೆ ಹೊರಟು ಮೈದಾನದಲ್ಲಿ ಶ್ರೀಯುತ ಜಿ, ನಾಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಭಾಷಣಗಳಾದುವು,

ಕಲಿಮಾರು- ಸ್ಥಳೀಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲಾ ತರ್ಕ ಸಂಘದ ವರ್ಧಂತ್ಯುತ್ಸವವೂ E. S. L. C. ಕ್ಲಾಸಿನ ವಿದ್ಯಾರ್ಥಿಗಳ ವಿದಾಯ ಸಮಾರಂಭವೂ ಇದೇ ಕಳೆದ ತಾ. 2-4-42ನೇ ಗುರುವಾರ ಅಪರಾಹ್ನ ಘಂಟೆ 4-30ಕ್ಕೆ ಉಡ್ಪಿ ಟ್ರೇನಿಂಗ ಡಿ. ಇ. ಓದ ಶ್ರೀ ಕೆ। ಸಂಜೀವ ಭಟ್ M. A. L. T, ಯವರ ಅಧ್ಯಕ್ಷತೆಯಲ್ಲಿ ನೆರವೇರಿತು, ವಿವಿಧ ಕಾರ್ಯಕ್ರಮಗಳು ಜರಗಿದ ಬಳಿಕ ಹಿಂದಿನ ಭಾಷಣದಲ್ಲಿ ಅಧ್ಯಕ್ಷರು ಹಿತೋಪದೇಶವೀಯಲು ಭಾವಚಿತ್ರ, ಉಪಾಹಾರ ಕೊಡುಗೆಗಳೊಂದಿಗೆ ಸಭೆಯು ಕೊನೆಗೊಂಡಿತು,

ಅಂದಿನ ರಾತ್ರಿ ಶ್ರೀ। ರಾಮಾಂಜನೇಯ ಬಾಲ ವೀರ ದಳದ ಶಿಬಿರಾಗ್ನಿಯೂ ಹೆತ್ತವರ ಕೂಟದ ಸಾಮಾನ್ಯ ಸಭೆಯೂ ಮಾಸ್ಟರ್ ಡಿ. ಇ. ಯವರ ನೇತೃತ್ವದಲ್ಲಿಯೇ ಜರಗಿತು, ಊರವರ ಸಹಕಾರವನ್ನು ಪ್ರಶಂಸಿಸಿ ಅಧ್ಯಕ್ಷರು ಮಾತನಾಡಲು ಧನ್ಯವಾದದೊಂದಿಗೆ ಸಭೆಯು ಚದರಿತು

ಹಿರಿಯಡ್ಕ— ಇಲ್ಲಿಯ ವೀರಭದ್ರ ದೇವಸ್ಥಾನದ ಉತ್ಸವಗಳು ತಾ, 30-4-42ರಿಂದ ತಾ 4-5 42ರ ವರೆಗೆ ಜರಗಲಿವೆ, ತಾ 3 5-42ನೆ ರವಿವಾರ ಶ್ರೀವ ನ್ಯಹಾರಥೋತ್ಸವ ಮತ್ತು ಎಲ್ಲರಿಗೂ ಸ್ವಾಗತವಿದೆಯೆಂದು ಆಡಳಿತ ಮೊಕ್ತೇಸರ್ ಶ್ರೀ ಮಂಜಯ್ಯ ತಿಮ್ಮಪ್ಪ ಹೆಗಡೆಯವರು ತಿಳಿಸುತ್ತಾರೆ.

ನೋಟೀಸು.

The Vijaya Bank Limited, Kaup.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು ಮರುಪಾವತಿಮಾಡದೆ ಬಡ್ಡಿ ಸಹಾ ಹೆಚ್ಚು ಸಮಯ ಕೊಡದೆ ಬಾಕಿಮಾಡಿಕೊಂಡಿರುವ್ರದರಿಂದ ಸದ್ರಿಯವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಪಡಿಸುವ್ರದೇನೆಂದರೆ—

ಸದ್ರಿ ನಗಗಳನ್ನು 25-4-42ನೇ ಶನಿವಾರ ಮಧ್ಯಾಹ್ನ ಘಂಟೆ 11ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಆದೇ ದಿವಸ ಸಂಪೂರ್ಣ ಆಗದೆಯಿದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವುದು.

ಸಾಲದ ನಂಬ್ರ	ಆಸಾಮಿಯ ಹೆಸರು.	ಸಾಲದ ಮೊಬಲಗು
457/38	ಅಚ್ಚಣ್ಣ ಶೆಟ್ಟಿ, ತೋಮ ಶೆಟ್ರ ಮೊಮ್ಮಗ, ಪಾಲಾಡಿ ಗುತ್ತು, ಎಲ್ಲೂರು ಗ್ರಾಮ, ಪೋಸ್ಟು ಎಲ್ಲೂರು.	5-0-0
538/38	ಮನ್ನ ಶೇರಿಗಾರ, ಅಪ್ಪಣ್ಣ ಶೇರಿಗಾರನ ಅಳಿಯ, ಮಲ್ಲಾರು ಗ್ರಾಮ, ಪೋಸ್ಟು ಕಾಪು.	6-0-0
647/38	ಬಾಬು ಶೆಟ್ಟಿ, ಸಿದ್ದು ಶೆಟ್ರ ಅಳಿಯ, ಕೊಪ್ಪಲ, ಪಡುಗ್ರಾಮ, ಪೋಸ್ಟು ಕಾಪು.	5-0-0
362/39	ಅಚ್ಚಣ್ಣ ಶೆಟ್ಟಿ, ತೋಮ ಶೆಟ್ರ ಮೊಮ್ಮಗ, ಪಾಲಾಡಿ ಗುತ್ತು, ಎಲ್ಲೂರು ಗ್ರಾಮ, ಪೋಸ್ಟು ಎಲ್ಲೂರು.	55-0-0
597/39	ಅಚ್ಚಣ್ಣ ಶೆಟ್ಟಿ, ತೋಮಶೆಟ್ರ ಮೊಮ್ಮಗ, ಪಾಲಾಡಿ ಗುತ್ತು, ಎಲ್ಲೂರು ಗ್ರಾಮ, ಪೋಸ್ಟು ಎಲ್ಲೂರು.	5-0-0
528 40	ಅಬ್ದುಲ್ ಖಾದ್ರಿ ಬ್ಯಾರಿ, ಅಬ್ದುಲ್ಲ ಶಲ್ ಬ್ಯಾರಿಗಳ ಮಗ, ಮಲ್ಲಾರು ದರ್ಕಾಸ್ತು, ಪೋಸ್ಟು ಕಾಪು.	25-0-0
349/39	ಶೇಕ್ ಅಹಮ್ಮದ್ ಬ್ಯಾರಿ, ಚಯ್ಯಿ ಬ್ಯಾರಿಗಳ ಮಗ, ಮಲ್ಲಾರು ಗ್ರಾಮ, ಪೋಸ್ಟು ಕಾಪು.	5-0-0

Office of the Bank,
Kaup.
Date 9-4-1942

K. Sitaram Shetty,
Agent.

ARE YOU MARRIED?

Remember the Saying:

Insure your life & Assure your wife.

An Insurance Policy is the best form of Stridhan.

Take out a Policy under Tables I to XI.

For further information and details apply to-

M. SUNDERRAM SHETTY.
Branch Manager.

The Tropical Insurance Co., Ltd.,
MANGALORE.

ಮೈಸೂರು ಕಾಂಗ್ರೆಸಿನ ಐದನೇ ಮಹಾಧಿವೇಶನ

ನೆಹ್ರೂ ನಗರದ ಸಮಾರಂಭ ಮರೆಯಲಾರದ ದೃಶ್ಯಗಳು.

ಅಖಿಲ ಮೈಸೂರು ಮಹಿಳಾ ಸಮ್ಮೇಳನ

ಸ್ವದೇಶಿ ವಸ್ತು ಪ್ರದರ್ಶನ

ಮೈಸೂರು ಕಾಂಗ್ರೆಸ್ ಐದನೇ ಮಹಾಧಿವೇಶನವು ಬೆಂಗಳೂರು ಮೈಸೂರು ರಸ್ತೆ ಚೆನ್ನಪಟ್ಟದ ಬಳಿ ಕಿಟ್ಟನಾರನಹಳ್ಳಿಯಲ್ಲಿ ರಚಿತವಾಗಿದ್ದ ನೆಹ್ರೂನಗರದಲ್ಲಿ ಜರಗಿತು.

ಅಧಿವೇಶನವು ನಡೆದ ಪ್ರದೇಶಕ್ಕೆ ಪಂಡಿತ ಜವಹಿರಲಾಲರ ನಾಮಾಂಕಿತವನ್ನಿಡಲಾಗಿತ್ತು. ಹೆಬ್ಬಾಗಿಲುಗಳನ್ನು ರಚಿಸಿ ಅನೇಕ ಪ್ರಮುಖ ಮುಂದಾಳುಗಳ ಹೆಸರನ್ನಿಡಲಾಗಿತ್ತು. ಪ್ರದೇಶವನ್ನು ರಮಣೀಯವನ್ನಾಗಿ ಮಾಡಿದ್ದುದರಿಂದ ಒಂದು ಚಿಕ್ಕ ನಗರವೇ ನಿರ್ಮಾಣವಾಗಿತ್ತೆನ್ನಬಹುದು.

ನಿರ್ದಿಷ್ಟ ದಿನದ ಹೊತ್ತಿಗೆ ಸಂಸ್ಥಾನದ ಆದ್ಯಂತದಿಂದ ಸಾವಿರಾರು ಪ್ರಜೆಗಳು ಆಗಮಿಸಿ ಅಲ್ಲಲ್ಲೇ ಬಿಡಾರ ಮಾಡಿದ್ದರು.

ಕಾಂಗ್ರೆಸ್ ಅಧ್ಯಕ್ಷರಾದ ತುಮಕೂರಿನ ಶ್ರೀ ಟಿ ಸುಬ್ರಹ್ಮಣ್ಯಂರವರು ಸೊಗಸಾದ ಎತ್ತಿನ ಗಾಡಿಯಲ್ಲಿ ಮೆರವಣಿಗೆಯಲ್ಲಿ ಹೊರಟರು. ಒಂದು ಮೈಲುದ್ದವಿದ್ದ ಈ ಮೆರವಣಿಗೆಯು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯನ್ನು ಹೋಲುತ್ತಿತ್ತು. ಮೆರವಣಿಗೆಯ ಉಭಯ ಪಾರ್ಶ್ವಗಳಲ್ಲೂ ಕಾಂಗ್ರೆಸ್ ಮುಂದಾಳುಗಳೂ, ಇತರರೂ ಒಟ್ಟಿಗೆ ಸೇರಿ ಜಯಕಾರವೆಬ್ಬಿಸುತ್ತಿದ್ದರು.

ಕಾಂಗ್ರೆಸ್ ಅಧ್ಯಕ್ಷರು ಮೆರವಣಿಗೆ ಮುಗಿಸಿ ಬಿಡಾರಕ್ಕೆ ಆಗಮಿಸಲು ಸುಮಂಗಲೆಯರು ಆರತಿ ಬೆಳಗಿದರು.

ಕಾಂಗ್ರೆಸ್ ಅಧ್ಯಕ್ಷ ಮೆರವಣಿಗೆ ಮುಗಿದನಂತರ ಕಾಂಗ್ರೆಸ್ ವರ್ಕಿಂಗ್ ಸಮಿತಿ ಸಭೆ ಸೇರಿ ಅನೇಕ ವಿಷಯ ಚರ್ಚಿಸಿತು. ಮರುದಿನ ಮುಂಜಾನೆ ಸಾವಿರಾರು ಪ್ರಜೆಗಳು ಹಾಜರಾಗಿದ್ದಾಗ, ನೆಹ್ರೂ ನಗರದ ಮಧ್ಯ ಭಾಗದಲ್ಲಿ ನೆಡಲಾಗಿದ್ದ ಎತ್ತರವಾದ ಎರಡು ಕಂಬಗಳ ಮೇಲ್ಭಾಗದಲ್ಲಿ ಅಖಿಲಭಾರತ ಕಾಂಗ್ರೆಸ್ ತ್ರಿವರ್ಣ ಮತ್ತು ಮೈಸೂರು ಗಂಡಭೇರುಂಡ ಧ್ವಜಗಳನ್ನು ಹಾರಿಸಲಾಯ್ತು. ಆಗ ಅಲ್ಲಿ ನೆರದಿದ್ದವರೆಲ್ಲರೂ ವಂದೇ ಮಾತರಂ ಹಾಡಿ, ರಾಷ್ಟ್ರೀಯ ಗೀತೆ ನುಡಿಸಿ, ಜೈಕಾರ ಮಾಡಿದ್ದು ಎಲ್ಲರಲ್ಲೂ ರೋಮಾಂಚವನ್ನುಂಟುಮಾಡಿತು.

ನೆಹ್ರೂನಗರದ ಒಂದು ಪಾರ್ಶ್ವದಲ್ಲಿ ಸೊಗಸಾದ ಎತ್ತರವಾದ ವೇದಿಕೆಯನ್ನು ರಚಿಸಿ ಬಣ್ಣಬಣ್ಣ ಬಾವುಟಗಳಿಂದಲಂಕರಿಸಿ ಮೈಕ್ರೊಫೋನನ್ನು ಇಡಲಾಗಿತ್ತು.

ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂರವರು ವೇದಿಕೆಯ ಮೇಲೆ ಆಗಮಿಸಿ ಮುಗಳ್ನಗೆಯಿಂದ ಒಂದು ಬಾರಿ ಸರ್ವರಿಗೂ ಕೈಮುಗಿಯಲು ಅಲ್ಲಿ ನೆರದಿದ್ದ ಜನಸಮೂಹವು ಪ್ರಚಂಡ ಜೈಕಾರವೆಬ್ಬಿಸಿತು.

ಕಾಂಗ್ರೆಸ್ ಅಧ್ಯಕ್ಷರು ತಮಗಾಗಿ ರಚಿತವಾಗಿದ್ದ ಪೀಠದ ಮೇಲೆ ಕುಳಿತರು. ಇವರ ಉಭಯ ಪಾರ್ಶ್ವಗಳಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರುಗಳೂ, ಇತರ ಅನೇಕ ಪ್ರಮುಖರೂ ಕುಳಿತರು.

ಅಧಿವೇಶನವು ರಾಷ್ಟ್ರಗೀತೆಯೊಡನೆ ಪ್ರಾರಂಭವಾಯ್ತು. ಅನಂತರ ಸ್ವಾಗತ ಸಮಿತಿಯ ಅಧ್ಯಕ್ಷರು ಸರ್ವರಿಗೂ ಸ್ವಾಗತ ನೀಡಿ ಸೊಗಸಾದ ಸ್ವಾಗತಾಧ್ಯಕ್ಷ ಭಾಷಣ ಮಾಡಿದರು. ಆ ಮೇಲೆ ಕಾಂಗ್ರೆಸ್ ಕಾರ್ಯದರ್ಶಿಗಳು ಪುಟ್ಟ ವರದಿಯೊಂದನ್ನು ಓದಿ ಅಧಿವೇಶನದಲ್ಲಿ ಓದಿ ಕಾಂಗ್ರೆಸ್ ಅಧಿವೇಶನಕ್ಕೆ ಸಹಾಯವಿತ್ತ ಎಲ್ಲರನ್ನೂ ವಂದಿಸಿದರು. ಆ ಮೇಲೆ ಅಧಿವೇಶನವು ಯಶಸ್ವಿಯಾಗಿ ನಡೆಯಲೆಂದು ಹಾರೈಸಿ, ಶುಭ ಕೋರಿ ಅಖಿಲಭಾರತ ಕಾಂಗ್ರೆಸ್ ಮತ್ತು ಇತರ ಮುಂದಾಳುಗಳು ಕಳುಹಿಸಿಕೊಟ್ಟಿದ್ದ ಸಂದೇಶಗಳನ್ನೋದಲಾಯಿತು. ನಂತರ ಹಳೆಯ ಅಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯನವರು, ನೂತನ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂ ರವರಿಗೆ ಕಾಂಗ್ರೆಸ್ ಅಧ್ಯಕ್ಷ ಪಟ್ಟವನ್ನು ವಹಿಸಿಕೊಡುವ ಸಮಾರಂಭ ನಡೆಯಿತು.

ಅಧ್ಯಕ್ಷರು ವೇದಿಕೆಯಿಂದ ಮುಂದೆಬಂದು ಮೈಕ್ರೋಫೋನಿನ ಮುಂದೆ ಸ್ಪಷ್ಟವಾಣಿಯಲ್ಲಿ ಅಧ್ಯಕ್ಷ ಭಾಷಣವನ್ನು ಎರಡು ಗಂಟೆಗಳ ಕಾಲ ಮಾಡಿದರು. ಅಧ್ಯಕ್ಷ ಭಾಷಣದಲ್ಲಿ ಅನೇಕ ಪ್ರಾಮುಖ್ಯ ಅಂಶಗಳಿವೆ. ಮೈ। ಸರ್ಕಾರದವರು ಮಾಡಿರುವ ಕಾಂಗ್ರೆಸ್ ಮುಂದಾಳುಗಳ ದಸ್ತಗಿರಿ, ಅನೇಕ ಕಡೆ ಹಾಕಲಾಗಿದ್ದ ಪ್ರತಿಬಂಧಕಾಜ್ಞೆಗಳು ಮತ್ತು ಇತರ ಕಾರ್ಯಗಳನ್ನೂ ತಿಳಿಸಿ ಸರ್ಕಾರಕ್ಕೂ ಕಾಂಗ್ರೆಸಿಗೂ ಅನೇಕ ವೇಳೆ ವೈಮನಸ್ಸು ಉಂಟಾಯಿತೆಂದು ಹೇಳಿ ಸರ್ಕಾರದ ದಬ್ಬಾಳಿಕೆ ಮತ್ತು ಅಧಿಕಾರ ದರ್ಪವನ್ನು ಖಂಡಿಸಿ ಮಾತನಾಡಿದರು. ಸರ್ವರೂ ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಧ್ವಜದಡಿಯಲ್ಲಿ ಸೇವೆ ಸಲ್ಲಿಸಿ, ಶ್ರೀಮಾನ್ ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಸಹಾಯಮಾಡಿ ರಚನಾತ್ಮಕ ಕಾರ್ಯದಲ್ಲಿ ನಿರತರಾಗಬೇಕೆಂದು ಬಿನ್ನವಿಸಿದಾಗ ಎಲ್ಲರೂ ಜೈಕಾರಮಾಡಿದರು.

ಬಹಿರಂಗ ಅಧಿವೇಶನದಲ್ಲಿ ಅನೇಕ ಠರಾವುಗಳನ್ನು ಪಾಸ್‌ಮಾಡಲಾಯ್ತು. ಅಧಿವೇಶನವು ಮೂರುದಿನಗಳು ನಡೆಯಿತು. ಪ್ರತಿದಿನ ಬೆಳಗ್ಗೆ ಧ್ವಜಾರೋಹಣ ನಡೆಯಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಸಭೆಗಳು ನಡೆದು ಅನೇಕ ನಿರ್ಣಯಗಳನ್ನು ಮಂಜೂರು ಮಾಡಲಾಯಿತು. ಶ್ರೀಮಾನ್ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಸರ್ವರೂ ಸಹಾಯಮಾಡಬೇಕೆಂಬ, ಸರ್ಕಾರದ ದಬ್ಬಾಳಿಕೆಯನ್ನು ನಿಷೇಧಿಸುವ ಮತ್ತು ಅ। ಭಾ। ಕಾಂಗ್ರೆಸ್ ಟ್ರೆಜರರ್ ಶ್ರೀ ಸೇಟ್ ಜಮ್ನಾಲಾಲ್ ಬಜಾಜರ ನಿಧನ ಬಗ್ಗೆ ಸಂತಾಪ ಸೂಚಿಸುವ ಠರಾವುಗಳೂ ಇತರ ಅನೇಕ ಪ್ರಾಮುಖ್ಯ ನಿರ್ಣಯಗಳೂ ಆದುವು.

ಈ ಅಧಿವೇಶನದ ಅಂಗವಾಗಿ ಗ್ರಾಮ ಕೈಗಾರಿಕೆ, ಸ್ವದೇಶಿ ಮತ್ತು ಖಾದಿ ವಸ್ತು ಪ್ರದರ್ಶನ ಒಂದನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಸರ್ಕಾರದವರು ಸಹಾ ಭಾಗ ವಹಿಸಿ ತಮ್ಮ ವಸ್ತುಗಳನ್ನು ಪ್ರದರ್ಶಿಸಿದ್ದರು. ಗ್ರಾಮಕೈಗಾರಿಕೆ, ಕಾಗದ ಮಾಡುವುದು ಎಣ್ಣೆ ಗಾಣ, ಬಳೆ ತಯಾರಿಕೆ ಮತ್ತು ಇತರ ಸ್ವದೇಶಿ ವಸ್ತುಗಳ ಪ್ರದರ್ಶನಗಳು ಅಂದವಾಗಿದ್ದವು.

ಮೈ॥ ಕಾಂ॥ ಅಧಿವೇಶನ ಅಂಗವಾಗಿ ಅಖಿಲ ಮೈಸೂರು ಮಹಿಳಾ ಸಮ್ಮೇಳನವೊಂದು ನಡೆಯಿತು. ಸಂಸ್ಥಾನ ಆದ್ಯಂತ್ಯದಿಂದ ಮಹಿಳೆಯರು ಆಗಮಿಸಿದ್ದರು. ಶ್ರೀಮತಿ ಯಶೋದಮ್ಮ ಎ. ವೆಂಕಟಪ್ಪನವರು ಸರ್ವರನ್ನೂ ಸ್ವಾಗತಿಸಿ ವಿಸ್ತಾರವಾದ ಸ್ವಾಗತ ಭಾಷಣ ಮಾಡಿದರು. ಅಖಿಲ ಕರ್ನಾಟಕ ಕಾಂಗ್ರೆಸ್ ಮುಂದಾಳು ಸ್ತ್ರೀ ಶ್ರೇಷ್ಠ ಮಹಿಳಾಮಣಿ ಶ್ರೀಮತಿ ಉಮಾ ಬಾಯಿ ಕುಂದಾಪುರ ಇವರು ಸಮ್ಮೇಳನದ ಆರಂಭೋತ್ಸವ ನಡೆಸಿ ಭಾಷಣ ಮಾಡಿದರು. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಅಧ್ಯಕ್ಷತೆ ವಹಿಸಿ ಅಧ್ಯಕ್ಷ ಭಾಷಣಮಾಡಿ ಮೈಸೂರು ಮಹಿಳೆಯರು ಕಾಂ. ಗ. ಕೊಂಡಾಡಿ, ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮೈಸೂರು ಮಹಿಳೆಯರು ಸಹಾಯಕ್ಕೆ ಸಿದ್ಧರಾಗಿರಬೇಕೆಂದರು.

ಸಮ್ಮೇಳನದಲ್ಲಿ ಅನೇಕ ಪ್ರಾಮುಖ್ಯ ವಿಷಯಗಳನ್ನು ಚರ್ಚಿಸಿ, ನಿರ್ಣಯಗಳನ್ನು ಪಾಸ್ ಮಾಡಲಾಯ್ತು.

ಮೈಸೂರು ಕಾಂಗ್ರೆಸ್ ಐದನೇ ಅಧಿವೇಶನವು ಯಶಸ್ವಿಯಾಗಿ ಜರಗಿತು. ವಾಲಂಟಿಯರುಗಳೂ, ವೀರ ಸೇವಕಿಯರೂ, ಕಾಂಗ್ರೆಸ್ ಮುಂದಾಳುಗಳಾದ ಶ್ರೀಯುತರುಗಳಾದ ಕೆ. ಟಿ. ಭಾಷ್ಯಂ, ಕೆ. ಚೆಂಗಲರಾಯ ರೆಡ್ಡಿ, ಕೆ. ಸಿ. ರಾಮಸ್ವಾಮಿ, ಹೆಚ್. ಸಿದ್ದಯ್ಯ, ಎಸ್. ಚೆನ್ನಯ್ಯ ಮತ್ತು ಇತರರು. ಬಹಳ ಸಾಹಸಪಟ್ಟು ಅಧಿವೇಶನವನ್ನು ಕೀರ್ತಿದಾಯವನ್ನಾಗಿ ಮಾಡಿದ್ದು ಪ್ರಶಂಸನಾರ್ಹವಾದುದು.

ಮೈಸೂರು ಕಾಂಗ್ರೆಸ್ ಚಿರಕಾಲ ಬಾಳಲಿ. ಮೈಸೂರು ಪ್ರಜೆಗಳಿಗೆ ಶೀಘ್ರವಾಗಿ ಜವಾಬ್ದಾರಿ ಸರ್ಕಾರ ಲಭಿಸಲಿ ಎಂಬುದಾಗಿ ಪ್ರಮುಖರೊಬ್ಬರು 'ನವಯುಗ'ದ ಮೈಸೂರು ಸಂಸ್ಥಾನ ಬಾತ್ಮೀದಾರರೊಡನೆ ಮಾತನಾಡುತ್ತ ತಿಳಿಸಿದುದು ಎಂದಿಗೂ ಮರೆಯುವಂತಿಲ್ಲ.

ಆಮಂತ್ರಣ ಪತ್ರಿಕೆಗಳು.

ಮದುವೆ, ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಅಚ್ಚಿನ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನೂ ನಾಜೂಕಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,

ಕೋಳದ ಪೇಟೆ ರಸ್ತೆ,

ಉಡುಪಿ.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills:	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನು, ಮಾತಾಡುವುದನ್ನು, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನು, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪುಟಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ. ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

(ದ್ವಿತೀಯ ಮುದ್ರಣವು)

THE MODERN BOOK Co.,

No. 28, Avadhanam Papier 2nd Lane (N. Y.) Choolai, MADRAS.

ಸಮಾಚಾರ ಸಂಗ್ರಹ

ಬಂಗಾಳಕೊಲ್ಲಿಯಲ್ಲಿ ಹಡಗನಾಶ

ಕಳೆದವಾರ ಬಂಗಾಳಕೊಲ್ಲಿಯಲ್ಲಿ ಹಲವು ವ್ಯಾಪಾರಿ ಹಡಗಗಳು ಮುಳುಗಿಸಲ್ಪಟ್ಟಿರುವವೆಂದು ತಿಳಿದು ಬರುತ್ತದೆ. ಒರಿಸ್ಸದ ಕರಾವಳಿಯಲ್ಲಿ 6 ಹಡಗಗಳ ಮೇಲೆ ಮೊದಲಾಗಿ ಎಚ್ಚರಿಸದೆ, ಒಂದೇ ಸವನೆ ಫಿರಂಗಿ ಗುಂಡುಗಳ ಸುರಿಮಳೆಗರೆದು ಮುಳುಗಿಸುತ್ತಾರೆ. ಈ ಹಡಗಗಳ ಅಳಿಯುಳಿದ ಸುಮಾರು 500ಮಂದಿ ನಾವಿಕರು ಪ್ರಾಣರಕ್ಷಣಾ ದೋಣಿಗಳ ಮೂಲಕ ಮತ್ತು ಈಜಾಡಿ ದಡಕ್ಕೆ ಸೇರಿ ಕಟ್ಟಕಡೆಯ ಆಶೆಯ ಪಡೆದಿದ್ದರು. ಅವರಲ್ಲಿ 80 ಮಂದಿ ಗಾಯಗೊಂಡವರಿದ್ದರು, 40ಮಂದಿ ದಡಕ್ಕೆ ಸೇರುವ ಮೊದಲು ಮುಳುಗಿ ಹೋದರು. ಜಾಪಾನರು ನಾವಿಕರ ಮೇಲೆ ಮಶಿನ್ ತೋಪುಗಳ ಮೂಲಕ ಗುಂಡಿನೆಸೆದು ಗಾಯಗೊಳಿಸಿದುದರ ಪರಿಣಾಮವಾಗಿ ಸುಮಾರು 200ಮಂದಿ ಮುಳುಗಿ ಹೋಗಿರುವರೆಂದು ತಿಳಿದುಬರುತ್ತದೆ.

ವ್ಯಥಿತ ಜೀವಿ.

(ಹಿಂದಿನ ಪುಟದಿಂದ ಮುಂದರಿದುದು),

...ಕ್ಕೊಂದು 'ಫಳಾರ್' ಎಂದು ಏಟುಕೊಟ್ಟ. ರೇಡಿಯೋ ಯಂತ್ರವು ಚೂರು ಚೂರಾಗಿ ಸಿಡಿಯಿತು! ಈ ಅನಾರ್ಥಕ್ಕೆ ನಾವೂ ಆವರ ಪತ್ನಿಯೂ ಕಂಗಾಲಾಗಿ ಹೋಗಿಬಿಟ್ಟೆವು. ಅಷ್ಟರಲ್ಲಿ ಆವರಿಗೂ ಒಂದೇಟು ಬಿದ್ದಿತ್ತು. ಹೊತ್ತಿಗೆ ಸರಿಯಾಗಿ ನೆರೆಯವರುಗಳೆಲ್ಲ ಮೇಲೆಬಂದು ಅವನನ್ನು ಹಿಡಿದು ಪರಿಸ್ಥಿತಿಯನ್ನು ಶಾಂತಗೊಳಿಸಿದರು."

ಕತೆಯನ್ನು ಕೇಳಿ ನಾವೆಲ್ಲ ಭ್ರಾಂತರಾಗಿದ್ದೆವು. ಸಿಂಹಂ ಮುಂದಿನ ಕಥಾಭಾಗವನ್ನು ಹೀಗೆ ಮುಗಿಸಿದ:- "ಶಂಕರನನ್ನು ಪೋಲೀಸ್ ಠಾಣ್ಯಕ್ಕೊಯಿದರು. ಅಲ್ಲಿ ಅವನಿಗೆ ಛಡಿಯೇಟೂ- ಒದೆತವೂ ಬೇಕಷ್ಟು ಸಂಭಾವನೆಯಾಗಿ ದೊರೆತವು. ಕೊನೆಗೆ 'ಮತಿಭ್ರಂಶ'ವೆಂದು ತೀರ್ಮಾನಿಸಿ ಬಿಟ್ಟು ಬಿಟ್ಟರಂತೆ. ನಾಯರು ಆತನ ಭೀತಿಯಿಂದ ಈಗ ಆ ಬಂಗಲೆಯನ್ನೆ ಬಿಟ್ಟು ಎಲ್ಲಿಯೋ ಬೇರೆಕಡೆ ವಾಸವಾಗಿರುವರಂತೆ."

ಸಿಂಹಂ ಮತ್ತೂ ತನ್ನ ತತ್ವದ ಸಮರ್ಥನೆಗೆ ತೊಡಗಿ ಹೇಳಿದ:-

"ನೋಡಿರಿ. ಇಲ್ಲಿಯ ವಿಷಯ ಸಣ್ಣದೇನೂ ಅಲ್ಲ. ವ್ಯಥಿತ ಜೀವಿಯೊಂದನ್ನು ಕಡೆಗಣಿಸಿ ಬಿಟ್ಟುದರಿಂದಲೆ ಅಂತಹ ಪ್ರಬಲವಾದ ಪ್ರತೀಕಾರಾಗ್ನಿಯೊಂದು ಹುಟ್ಟಿ ಆ ವಾಲಿಗೆಗೆ ನುಗ್ಗಿ ರೇಡಿಯೋ ಯಂತ್ರಕೊಂಡಿತು. ಶಂಕರ ಮಾಡಿದ್ದು ನ್ಯಾಯವೇನೂ ಅಲ್ಲ. ಅವನ ಹುಚ್ಚಾಟವನ್ನು ಯಾರೂ ಕೊಂಡಾಡಲಾರರೆಂಬುದೂ ನಿಜ. ಆದರೆ ಅವನ ಹಸಿವೆಯ ಕಾವು ಹಾಗೆ ಮಾಡಿಸಿತು. ನಮ್ಮ ದೇಶದಲ್ಲಿ ಈಗ ಇಂತಹ ವ್ಯಥಿತ ಜೀವಿಗಳ ಸಂಖ್ಯೆ ದೊಡ್ಡದಿದೆ. ಅವರನ್ನೆಲ್ಲ ಅಲಕ್ಷಿಸಿದರೆ ಒಂದುದಿನ ಇಂತಹ ಗಂಡಾಂತರ ಕಟ್ಟಿಟ್ಟ ಮಾತು! ನಾವೆಲ್ಲ ಮುಂಜಾಗ್ರತೆಯನ್ನು ವಹಿಸಿದರೆ ಹಾಗಾಗದಂತೆ ತಡೆಯಬಹುದು" ಎಂದು ಅವನು ತನ್ನ ಮಾತು ಮುಗಿಸಿದ. ಆಗ ಒಂದುಕಡೆ ಸಭೆಯೂ ಚೆದುರಿತ್ತು. ನಮ್ಮ ಸಭೆಯಲ್ಲಿಯೆ ಅದಕ್ಕೂ ಮಿಗಿಲಾಗಿ ನಡೆದಿತ್ತು. ಆವೇಳೆಗೆ ಸರಿಯಾಗಿ ಸಾರ್ವಜನಿಕ ರೇಡಿಯೋದಲ್ಲಿ ಕನ್ನಡದಲ್ಲಿಯೆ ಅಂದಿನ ಯುದ್ಧ ಸಮಾಚಾರ ಹೇಳಲ್ಪಡುತ್ತಿತ್ತು. ನಾವೆಲ್ಲ ನಮ್ಮ ನಮ್ಮ ಮಾತುಗಳನ್ನು ನಿಲ್ಲಿಸಿ ಅದನ್ನು ಕೇಳಲು ಅನುವಾದೆವು.

ತಿಂಗಳಿಗೆ 3300 ವಿಮಾನಗಳು

ಯುನ್ಯಾಟೆಡ್ ಸ್ಟೇಟ್ಸಿನಲ್ಲಿ ಈಗ ತಿಂಗಳಿಗೆ 3300ಕ್ಕಿಂತಲೂ ಮಿಕ್ಕಿದ ವಿಮಾನಗಳು ತಯಾರಾಗುತ್ತಿವೆ ಪ್ರತಿ ನಿತ್ಯ ನೂರಾರು ಟೇಂಕುಗಳು ತಯಾರಿಸಲ್ಪಡುತ್ತಿವೆ. ವೈರಿ ರಾಷ್ಟ್ರಗಳೆಲ್ಲವುಗಳಿಗಿಂತ $3\frac{1}{2}$ ಪಾಲಷ್ಟು ಹೆಚ್ಚಿನ ವಿಮಾನಗಳನ್ನು ಯುನ್ಯಾಟೆಡ್ ಸ್ಟೇಟ್ಸ್ ಮತ್ತು ಮಿತ್ರ ರಾಷ್ಟ್ರಗಳು ತಯಾರಿಸಲಿವೆಯೆಂದು ಯುನ್ಯಾಟೆಡ್ ಸ್ಟೇಟ್ಸಿನ ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರು ಪ್ರಕಟಗೊಳಿಸಿರುವರು.

ಬಟನಿನ ಪತನ.

ಫಿಲಿಪ್ಪೈನ್ ದ್ವೀಪದ ಬಟನ್ ಅರ್ಧದ್ವೀಪದಲ್ಲಿದ್ದ ಸುಮಾರು 36,000 ಮಂದಿ ಫಿಲಿಪ್ಪೈನ್ ಮತ್ತು ಅಮೆರಿಕಾನ ಸೈನಿಕರಲ್ಲಿ ಅನೇಕರು ಚಿಕ್ಕ ದೋಣಿಗಳ ಮೂಲಕ ಮತ್ತು ಈಜಾಡಿಕೊಂಡು ಮನಿಲಾಕೊಲ್ಲಿಯ ದ್ವಾರದಲ್ಲಿರುವ ಕೊರ್ರಿಜಿಡೊರಿಗೆ ಬಂದಿರುವರು. ಜಾಪಾನರು ಅವರ ಮೇಲೆ ವಿಮಾನಧಾಳಿ ನಡಿಸಿ ಮಿಶನ್ ತೋಪು ಮೂಲಕ ಗುಂಡುಹಾರಿಸಿದರು. ಈ ಸೈನಿಕರು ಮತ್ತು ನರ್ಸುಗಳು ಅನ್ನಾಹಾರ ಮತ್ತು ನಿದ್ರೆಯಿಲ್ಲದೆ ತೀರಾ ಸೋತುಹೋಗಿದ್ದರು. ಕೊರ್ರಿಜಿಡೊರಿಗೆ ಮುಟ್ಟಿದೊಡನೆಯೇ ಕೆಲವರಿಗೆ ಬೋಧತಪ್ಪಿಹೋಯಿತು. ಬಟನಿನ ಪತನದಿಂದ ಯುನ್ಯಾಟೆಡ್ ಸ್ಟೇಟ್ಸಿನಲ್ಲಿ ಬಹಳ ದುಃಖವುಂಟಾಗಿರುತ್ತದೆ. ಬಟನಿನಲ್ಲಿದ್ದ ಹಡಗ, ದಕ್ಕೆ ಮೊದಲಾದುವುಗಳನ್ನೆಲ್ಲಾ ನಾಶಮಾಡಲಾಗಿದೆ. ಫಿಲಿಪ್ಪೈನಿನ ಯುದ್ಧದಲ್ಲಿ ಸುಮಾರು 20,000 ಮಂದಿ ಜಾಪಾನರು ಕೊಲ್ಲಲ್ಪಟ್ಟು 100ಕ್ಕಿಂತಲೂ ಮಿಕ್ಕಿದ ಜಾಪಾನ ವಿಮಾನಗಳು ನಾಶಹೊಂದಿವೆಯೆಂದು ತಿಳಿದುಬರುತ್ತದೆ.

FIXED DEPOSITS

are now accepted at all our offices, at attractive rates of interest. For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು. ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

ನೋಟೀಸು

ThePangalNayakBankLtd., Udipi.

ದಿ ಪಾಂಗಾಳ ನಾಯಕ್ ಬೇಂಕ್

ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣದ ಅಡವಿನ ಮೇಲೆ ಪಡೆದ ಸಾಲಗಳ ಅಸ್ಲುಮತ್ತುಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ವ್ಯಾದಿಗೆ ವಸೂಲು ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಪ್ಪಾಲು ನೋಟೀಸುಗಳು "ಸದ್ರಿಯವರ ವಿಳಾಸ ಗೊತ್ತಿಲ್ಲ" ಎಂಬ ಸಬಬಿನಿಂದ ಹಿಂತಿರುಗಿ ಬಂದಿರುವದರಿಂದಲೂ, ಈ ಮೂಲಕ ಪ್ರಕಟಿಸೋಣಾಗುವದೇನೆಂದ್ರೆ–ಸದ್ರಿ ಸಾಲಗಳ ಬಾಬ್ತು ಬಹಾ ಸಮಸ್ತ ಅಸ್ಲು ಬಡ್ಡಿ ಐವೇಜುಗಳನ್ನು ನೋಟೀಸುಗಳ ಖರ್ಚು ಸಹಿತ ತಾರೀಕು 30–4–1942 ನೇ ಗುರುವಾರ ಅಪರಾಹ್ನ ಘಂಟೆ 3ರ ಒಳಗೆ ಬೇಂಕಿಗೆ ಝಾಡಾ ವಸೂಲು ಬಾರದೆ ಇದ್ದರೆ, ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆ ಇಟ್ಟ ನಗಗಳನ್ನು ತಾರೀಕು 1-5-1942ನೇ ಶುಕ್ರವಾರ ಮಧ್ಯಾಹ್ನ 12 ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡಬಾದೀತು. ಏಲಂ ಅದೇ ದಿವಸ ಪೂರ್ಣವಾಗದೆ ಇದ್ದರೆ, ನಂತರ ಬೇಂಕಿಗೆ ಯುಕ್ತ ತೋರುವ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಮುಂದುವರಿಸಲಾದೀತು.

1. ಸಾಲದ ನಂಬ್ರ 195/38	ಕುಂಜೂರು ವಾಸುದೇವ ರಾವ್, ಕೆ. ಶ್ರೀನಿವಾಸ ರಾಯರ ಮಗ, ಎಲ್ಲೂರು, ಕಾಪು, ದ. ಕ. ಸಾಲದ ಅಸಲು ರೂಪಾಯಿ 60/- ಬಡ್ಡಿ ಬಾಕಿಯಾದ ತಾರೀಕು 5-12-1941.
2. ಸಾಲದ ನಂಬ್ರ 138/39	ಕುಂಜೂರು ವಾಸುದೇವ ರಾವ್, ಕೆ. ಶ್ರೀನಿವಾಸ ರಾಯರ ಮಗ. ಎಲ್ಲೂರು ಗ್ರಾಮ, ಕಾಪು, ದ. ಕ. ಸಾಲದ ಅಸಲು ರೂಪಾಯಿ 35/- ಬಡ್ಡಿ ಬಾಕಿಯಾದ ತಾರೀಕು 1-9-1940.

ಬೇಂಕಿನ ಆಫೀಸು, ಉಡುಪಿ. ತಾ. 11-4-1942.

P. V. Nayak, Agent.

ಸರಕಾರವು ಹೊಟೆಲು ನಡಿಸುತ್ತದೆ.

ಮದ್ರಾಸ್ ಪಟ್ಟಣದ ಮೂರರಲ್ಲಿ ಎರಡಂಶಕ್ಕಿಂತಲೂ ಮಿಕ್ಕಿದ ಜನರು ಹೊರಟುಹೋಗಿರುತ್ತಾರೆ. ಅಲ್ಲಿರುವವರೂ ತಮ್ಮ ಹೆಂಡಿರು ಮಕ್ಕಳನ್ನು ಕಳುಹಿಸಿರುತ್ತಾರೆ. ಕಳೆದ ತಾ. 10ರಲ್ಲು ಒಂದೇ ದಿನ 24,000ಮಂದಿ ಮದ್ರಾಸ್ ಬಿಟ್ಟುಹೋಗಿರುತ್ತಾರೆ. ಮದ್ರಾಸಿನ ಹೆಚ್ಚಿನ ಊಟದ ಹೊಟೆಲುಗಳೆಲ್ಲಾ ಮುಚ್ಚಲ್ಪಟ್ಟಿರುವುದರಿಂದ ಅಲ್ಲಿರುವವರಿಗೆ ಊಟ ಸಿಗುವುದೇ ಕಷ್ಟವಾಗಿದೆ. ಆದುದರಿಂದ ಹೊಟೆಲು ಮ್ಹಾಲಕರು ತಮ್ಮ ಹೊಟೆಲುಗಳನ್ನು ಮುಚ್ಚಿಹೋಗಬಾರದೆಂದು ಸರಕಾರವು ಕೇಳಿಕೊಂಡಿದೆ. ಮತ್ತು ಹೊಟೆಲುಗಳಿಲ್ಲದೆ ಜನರಿಗೆ ಊಟಕ್ಕೆ ತೊಂದರೆಯಾದಲ್ಲಿ ಸರಕಾರವೇ ಹೊಟೆಲುಗಳನ್ನು ನಡಿಸುವ ನಿರ್ಧಾರಮಾಡಿರುತ್ತದೆ.

ಟೋಕ್ಯೋದ ಮೇಲೆ ಬೋಂಬೆಸೆಯಲಾಗುವುದು.

ಈ ವರ್ಷಾಂತ್ಯದೊಳಗೆ ಸಂಯುಕ್ತ ರಾಷ್ಟ್ರಗಳು ಎಲ್ಲಾ ರಣರಂಗಗಳಲ್ಲಿಯೂ ಧಾಳಿಯನ್ನಾರಂಭಿಸುವ ಪರಿಸ್ಥಿತಿಗೆ ಮುಟ್ಟುವವು. ಯುನ್ಯಾಟೆಡ್ ಸ್ಟೇಟ್ಸಿನ ವಿಮಾನಗಳು ಜಾಪಾನಿನ ಮುಖ್ಯ ಪಟ್ಟಣವಾದ ಟೋಕ್ಯೋದಮೇಲೆ ವಿಮಾನ ಧಾಳಿ ನಡಿಸಲು ಹೆಚ್ಚು ಸಮಯ ಹೋಗಲಾರದೆಂದು ಯುನ್ಯಾಟೆಡ್ ಸ್ಟೇಟ್ಸಿನ ಸೇನಾದಳಿತ ಕಮಿಟಿಯ ಚೇಯರ್ಮೆನರು ಅಭಿಪ್ರಾಯಪಿತ್ತಿರುತ್ತಾರೆ. ಅಮೆರಿಕವು ಯುದ್ಧೋಪಕರಣ ತಯಾರಿಯನ್ನು ಒಂದೆರಡು ಪಾಲಷ್ಟು ಹೆಚ್ಚಿಸಿರುತ್ತದೆ.

ಜರ್ಮನಿಯ ಮೇಲೆ ಪ್ರಬಲ ಧಾಳಿ.

ಜರ್ಮನಿಯ ರೂರ್, ರ್ಹೈನ್ ಲೆಂಡ್ ಮೊದಲಾದ ಪ್ರಾಮುಖ್ಯ ಕೈಗಾರಿಕ ಪ್ರದೇಶಗಳ ಮೇಲೆಯೂ, ನಾಝಿ ಆಕ್ರಮಿತ ಫ್ರಾನ್ಸಿನ ಮೇಲೆಯೂ ಬ್ರಿಟನ ವಿಮಾನಗಳು ಪ್ರಬಲ ಧಾಳಿಯನ್ನಾರಂಭಿಸಿರುತ್ತವೆ. ಇದೇ ತಾ. 5ನೇ ರಾತ್ರಿ 300ಕ್ಕಿಂತಲೂ ಮಿಕ್ಕಿದ ವಿಮಾನಗಳು ರ್ಹೈನ್ ಲೇಂಡ್ ಮತ್ತು ನಾಝಿ ಆಕ್ರಮಿತ ಫ್ರಾನ್ಸಿನ ಮೇಲೇರಿ ಹೋಗಿ ಕೊಲೋನ್ ಮೊದಲಾದ ಪಟ್ಟಣಗಳ ಮೇಲೂ, ಪೆರಿಸಿನ ಬಳಿಯ ಕಾರ್ಖಾನೆಗಳ ಮೇಲೂ ಪ್ರಚಂಡ ಧಾಳಿ ನಡಿಸಿರುತ್ತವೆ.

ಆಸ್ಟ್ರೇಲಿಯದ ಸಿದ್ಧತೆ.

ಯುನ್ಯಾಟೆಡ್ ಸ್ಟೇಟ್ಸಿನಿಂದ ಯುದ್ಧೋಪಕರಣ ಮತ್ತು ವಿಮಾನ ಸಹಾಯ ಪಡೆದು ಆಸ್ಟ್ರೇಲಿಯವು ಜಾಪಾನರನ್ನೆದುರಿಸಲು ಭರದಿಂದ ಸಿದ್ಧತೆ ಮಾಡುತ್ತಿದೆ. ಅದಕ್ಕಾಗಿ ದಿನವಹಿ ಒಂದು ಮಿಲ್ಯ ಆಸ್ಟ್ರೇಲಿಯನ್ ಪೌನು ವ್ಯಯಮಾಡುತ್ತಿದೆ. ಆಸ್ಟ್ರೇಲಿಯಾನ ಮತ್ತು ಯುನ್ಯಾಟೆಡ್ ಸ್ಟೇಟ್ಸಿನ ವಿಮಾನಗಳು ನ್ಯೂಗಿನಿಯ ರೊಬಲಿನ ಮತ್ತು ಲೇಯ ಮೇಲೆ ಪ್ರಬಲ ವಿಮಾನಧಾಳಿ ನಡಿಸಿ ವಿಮಾನ ನಿಲಯ ಮತ್ತು ಹಡಗಗಳ ಮೇಲೆ ಬೋಂಬು ಎಸೆದರು.

DIAMONDS! DIAMONDS!

K. R. K. SHET.

Opposite Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality. selected)) ಎನ್ನಿಸ್ವ ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:— **ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡದ, ವಿಜಾಪುರ. ಚಿಕ್ಕೋಡಿಯಲ್ಲಿ —ಕುಂಬಾರವಾದಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ—ಎಚ್. ನಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ.—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಸ್ವದೇಶಿ ಔಷಧ ಭಂಡಾರ, ಕುಂಜಾಲು,

—ಇವರ—

ಖಾತ್ರಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ಶಕ್ತಿವರ್ಧಕ)	0	12	0
ಆಮಲಕೀ ತೈಲ (ಸುಖನಿದ್ರೆಗೆ) ಸಣ್ಣದು.	0	6	0
,, ,, ,, ದೊಡ್ಡದು.	0	11	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಪಿಯೂಷಾಂಜನ (ಸಕಲ ನೋವುಗಳಿಗೆ)	0	1	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) 25ಕ್ಕೆ	0	7	0
,, ,, ,, ,, 6ಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

Swadeshi Oushadhi Bhandar

KUNJAL P. O. S. I.

ಉಡುಪಿಯ ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

ಮುಖ್ಯ ಕಾರ್ಯಾಲಯ:—**ಕೋರ್ಟ ರಸ್ತೆ, ಉಡುಪಿ.**

ಶಾಖೆಗಳು.— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ, ವ ಕನ್ನಡ.

ಕೆತ್ತ ಮೂಲಧನ	.. ..	ರೂ. 1,82,100.
ಕ್ಷೇಮ ನಿಧಿಗಳು	... ...	ರೂ. 1,82,100

ಕ್ಕೆ ಮಿಕ್ಕಿ ಇರುತ್ತವೆ.

ವರ್ತಕರಿಗೂ ಇತರರಿಗೂ ಚಿಕ್ಕ ವ ದೊಡ್ಡ ಸಾಲಗಳು ವ ಇತರ ಸೌಕರ್ಯಗಳು ಈ ಸಂಸ್ಥೆಯಿಂದ ಸುಲಭ ದರಗಳಲ್ಲಿ ದೊರಕುತ್ತವೆ.

ಅತ್ಯಾಧುನಿಕ ವಿಧದ ಬೇಂಕಿನ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಈ ವಾರದ ಭವಿಷ್ಯ.

(ಏಪ್ರಿಲ ೧೫ನೇ ತಾರೀಖಿನಿಂದ ...)

ತುಲಾ—ಒಮ್ಮೆಲೆ ನಿಮ್ಮ ಪರಿಸ್ಥಿತಿಯಲ್ಲಿ ಕೆಲವೊಂದು ಬದಲಾವಣೆಗಳು ಕಾಣಿಸಿಕೊಳ್ಳಲಿವೆ. ಕೈಕೊಂಡ ಕಾರ್ಯಗಳನ್ನು ಅರ್ಧಮರ್ಧದಲ್ಲೇ ಕೈಬಿಡುವ ಪ್ರಸಂಗಗಳೊದಗಲಿವೆ. ನೌಕರಿ ನಿಮಿತ್ತಗಳಲ್ಲಿ ನಿರಾಶೆ ಉಂಟಾದೀತು. ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ಸೋಲಾಗುವ ಬಹಳ ತೀರಳು. ಈ ಎಲ್ಲಾ ವಿಚಾರಗಳಿಂದ ವ್ಯಸನಕ್ಕೀಡಾದ ನಿಮ್ಮ ಆರೋಗ್ಯವೂ ಹೆಚ್ಚು ನಂತ ಕೆಡಲಿದೆ. ಆದರೆ ಬಂಧುಮಿತ್ರರ ಸಹಾಯ ಸಂಪನ್ನರಾದ ನೀವ ತಾ. 16. 17. 23 ಈ ದಿನಗಳನ್ನು ಸ್ವಲ್ಪ ಸುಖದಿಂದಲೇ ಕಳೆವಿರಿ.

ವೃಶ್ಚಿಕ—ಶ್ರಮಜೀವಿಗಳಿಗಿದು ಯುಕ್ತವಾದ ಕಾಲವಲ್ಲವಾದರೂ ಇತರ ಜನವರ್ಗಕ್ಕೀ ವಾರವು ಬಹು ಪ್ರಶಸ್ತವಿರುವುದು. ಖರ್ಚಿಗಿಂತ ದ್ವಿಗುಣವಾಗಿ ದುಡಿಯುವಿರಿ ದೇಹಾಲಸ್ಯದಿಂದಲೂ ಮನೋರೋಗದಿಂದಲೂ ಮುಕ್ತರಾದ ನಿಮಗೆ ಉದ್ಯೋಗದಲ್ಲಿ ಉನ್ನತ ಸ್ಥಾನ ಪ್ರಾಪ್ತಿಯು ಅರ್ಹತೆಯಿದೆ. ಒಳ್ಳೇ ನಾಕೃತಿಗಳಿಂದ ನೀವು ವಿರೋಧಿಗಳನ್ನೂ ಮಿತ್ರರನ್ನಾಗಿ ಪರಿವರ್ತಿಸಿಕೊಳ್ಳುವಿರಿ. ಆಕಸ್ಮಿಕವಾಗಿ ಜೋರಿ ಕತ್ತಿ ವಗ್ಗೆರೆ ಶಸ್ತ್ರಗಳಿಂದ ದೇಹಕ್ಕೆ ಅಪಾಯ ಸಂಭವಿಸುವಂತಿದೆಯಾದ ಕಾರಣ ವಾರಾಂತ್ಯದ ದಿನಗಳಲ್ಲಿ ಬಹು ಜಾಗರೂಕರಾಗಿರಿ.

ಧನು—ನಿಮ್ಮ ಕಳಂಕವಾದ ನಿಮ್ಮ ಗೃಹಕೃತ್ಯದಲ್ಲಿ ಕಲಹಾಂಕುರವು ಮೊಳೆಯಲಿದೆ. ತಂದೆಮಕ್ಕಳಲ್ಲೂ ಗಂಡಹೆಂಡಿರಲ್ಲೂ ಒಡಕುಂಟಾಗಿ ಸಂಸಾರ ರಥವು ಸುಖದಿಂದ ಮುಂದೆ ಸಾಗಬಲ್ಲುದುಂಟಾಗುವದು ಮಾತ್ರವಲ್ಲದೆ ಆರೋಗ್ಯವೂ ಕೆಡಲಿದೆ. ವಿದ್ಯಾರ್ಥಿಗಳಿಗೆ ವಿದ್ಯೋಪಜೀವಿಗಳಿಗೂ ಇಷ್ಟವಂತ ಫಲಪ್ರಾಪ್ತಿಯಿಲ್ಲದ ಮಾನಸಿಕ ಭಯ ಚಿಂತೆಗಳಗೊಳಗಾದ ನಿಮಗೆ ತಾ. 1... 22ರ ವರೆಗಿನ ದಿನಗಳಲ್ಲಿ ರತ್ನಾಭಯ ಸ.ರ. ಮಾನಾದ, ಸ್ತ್ರೀಸಹಿತ ಧನಲಾಭವೂ ಆಗಲಿದೆ.

ಮಕರ—ಇದಿ ದಿನಗಳನ್ನೆಲ್ಲ ಮಿಕ್ಕಲ್ಲಾ ಗೃಹದ ಕೃಪೆಗೊಳಗಾದ ನಿಮಗೆ ಈ ವಾರದಲ್ಲಿ ಬಂಧುವರ್ಗದವರಿಂದಲೂ ಮಿತ್ರಕುಟುಂಬಿಕರಿಂದಲೂ ಹಲವು ವಿಧದ ಸಹಾಯಗಳು ದೊರೆಯುವವು. ಹಲವು ಕಾಲದಿಂದಿದ್ದ ವೈರವು ನಾಶವಾಗಿ ಪರಸ್ಪರ ಏಕೀಭೂತರಾಗುವಿರಿ. ಸಕಲ ಗೃಹೋಪಕರಣಗಳೂ ಅನ್ಯೂನವಾಗಿದ್ದು ಪೂರ್ಣ ಗೃಹಸುಖಕ್ಕೆ ನೀವು ಭಾಗಿಗಳಾಗುವ ಸಂಭವವಿದೆ. ಕೆಲವೊಮ್ಮೆ ತಂದೆಮಕ್ಕಳಲ್ಲೂ ಸೇವ್ಯ ಸೇವಕರಲ್ಲೂ ಮನಸ್ತಾಪವುಂಟಾಗುವಂತಿರುವುದರಿಂದ ವಾರಾದಿಯ 4 ದಿನಗಳಲ್ಲಿ ಸಿಟ್ಟಿಗೆಡೆಕೊಡದಿರಿ.

ಕುಂಭ—ಮನಸ್ಸನ್ನು ಬಿಗಿಹಿಡಿಯಬೇಕಾಗ ನೀವು ಕೆಲವೊಂದು ಬಾರಿ ಉದ್ಧಟತನಕ್ಕೆ ಮನಗೊಟ್ಟು ಗುರುಹಿರಿಯರ ಮತ್ತು ಅಧಿಕಾರಿವರ್ಗದವರ ಕೋಪಕ್ಕೆ ತುತ್ತಾಗಲಿರುವಿರಿ. ಶತ್ರುಜನರಿಂದಲೂ ಬಂಧುವರ್ಗದವರಿಂದಲೂ ಒಂದಲ್ಲೊಂದು ಕಿರುಕುಳವು ನಿಮಗೆ ತಪ್ಪಲಾರದು. ಸಂಪಾದನೆಗಿಂತ ಖರ್ಚು ಇಮ್ಮಡಿಯಿರುವುದರಿಂದ ಸದಾ ಹಣದ ತಾಪತ್ರಯವಿರುವುದು. ಆದರೂ ತಾ.6. 17. ಮತ್ತು 24 ಈ ದಿನಗಳಲ್ಲಿ ಸಾಕಷ್ಟು ಧನವಿಜಯಗಳನ್ನು ಸಂಪಾದಿಸಿ ಸುಖದಿಂದಿರುವಿರಿ.

ಮೀನ—ನಿಮ್ಮ ಸುಖಸ್ಥಾನಕ್ಕೆ ಅಂಗಾರಕನು ಪ್ರವೇಶಿಸಿರುವುದರಿಂದ ಸದಾ ದೇಹ ಮನಸ್ಸುಗಳಿಗೆ ನೆಮ್ಮದಿಯಿಲ್ಲವಾದರೂ ಅನುದಿನದ ಆಗುಹೋಗುಗಳಿಗಾಗಿ ನೀವು ಚಿಂತಿಸು ವಕಾರಣವಿಲ್ಲ. ಪ್ರಬಲರಾದ ವಿರೋಧಿಗಳನ್ನೂ ತೃಣಪ್ರಾಯವಾಗಿ ಎಣಿಸುವಿರಿ. ಆದರೂ ಅವರು ನಿಮ್ಮನ್ನು ಮೋಸದಿಂದ ಪರಾಭವಗೊಳಿಸಲಿರುವರು, ಜಾಗ್ರತೆ. ರಾಜಕೀಯ ಭಾಗದಲ್ಲಿ ಪ್ರವೇಶಿಸಲಿದು ಸಮಯವಲ್ಲ. ಆರೋಗ್ಯಕ್ಕೂ ಸ್ವಲ್ಪ ಹಾನಿಯಿದೆ. ತಾ. 18. 19 ಬಿಟ್ಟು ಉಳಿದ ದಿನಗಳು ಪ್ರತಿಕೂಲವಿವೆ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಘಟನೆಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ಶೀಘ್ರ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹುಸಿಗಿಯ ಸುಖವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶದ ಳ ವ್ಯಭಿಚಾರಿಗಳ ಪ್ರೀತಿಯ ರಹಸ್ಯಗಳು, ಮತ್ತು ರತಿಯ ನರಗಳ, ಕನ್ಯೆಗಳ ಪ್ರೇಮ ಮತ್ತು ಸುಯೋಗಗಳ ಮರ್ಮಗಳು, ಇದಲ್ಲದೆ ಅನೇಕ ಸ್ತ್ರೀಚಿತ್ರ, ಮತ್ತು ಮದನ ವ ಮದನ ವಿನೋದ ಶೃಂಗಾರ ರಹಸ್ಯ ಫೋಟೋಗಳು. ಅದರಲ್ಲಿ 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೆನಿವ ಟ್ರೇಡಿಂಗ್ ಕಂಪೆನಿ

260. ಬೈನಾಬಜಾರ್ ರೋಡ್ಡ್, ಮದರಾಸ್.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. **UDPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ದಿಫೋವಿನ ರಿಂಗ್‌ವರ್ಮ್ ಮುಲಾಮು. —

ಇಷ್ಟರವರೆಗೆ ನಮ್ಮ

ವಿಲಿಯಮ್ಸ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾದಲಾಗಿದೆ.

ಅಮೃತಾಂಜನ ದಿಫೋವಿನ ತ್ರಿವರ್ಣದ "ಕ್ರಿಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡೀಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ಸಹಾಯದಿ 1920ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager.

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಹಲವು ಬಗೆಯ ಜನ್ನದಲ್ಲ ಅಂಚಿನಲ್ಲಿ ನಮ್ಮಲ್ಲಿ ದೊರೆಯುತ್ತವೆ. ರುಮಾಲು ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ

ಸಿ. ಎ. ಶೈ. ಬ್ರದರ್ಸ್,

ಅಶ್ವತ್ಥ ಬಳಿ, ಉಡುಪಿ.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ

ಉಡುಪಿ

ಮೊಲ್ಲರಗತಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್.

ಪ್ರಾಲಕ

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನಸ್ಸನ್ನಲಂಕರಿಸಿ, ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆ. ೧ ೮ ೦	ಭಯಂಕರ ಸೇಡು	ಬೆ. ೧ ೭ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೩ ೦ ೦	ಅನಾಥನಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೩ ೦

ಕೆಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮದುಮಾರಿಗೆ ಆಶೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ;

ಟ ೩. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು— ನವಭಾರತ ಬುಕ್ ಡಿಪೋ, ಉಡುಪಿ

ಸ್ಥಾಪನೆ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪನಿ 1920

18 ಬಲ್ಮಠ ರಸ್ತೆ, ಮಂಗಳೂರು

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt Mysore

Certified by the Agent of the Govt of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅನೇಕ ವಿಧಾನ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೯ ಕೊಡಿಯಾಲಬೈಲು, ಮಂಗಳೂರು

EDITED BY K. K. SHETTY. PRINTED & PUBLISHED BY K. H. SHETTY AT THE NAVAYUGA PRESS, UDIPI

Regd. No. M. 3618

Estd. 1921 ಸ್ಥಾಪಿತ

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

Read and Advertise in
ANTARANGA
The All Karnataka humorous Weekly
Udipi - S. India

ಸಂಪುಟ ೨೧
Vol. 21

ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

23-4-1942

ಸಂಚಿಕೆ ೩೩
No. 33

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ 1ರ ದರ ರೂ. 1-8-0.

ಕಸ್ತೂರಿ ಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗರ್ಭಕೋಶವನ್ನು ಪುನಃ ಕುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ. (3) ಮಲ್ಲರ್ ಪಟ್ನಾ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಿಲ್ಡಿಂಗ, ಮೈಸೂರು 5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಸುಬ್ಬಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ (7) ಡಾ| ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಾಸ್ತೇವ ಕಮ್ತಿ, ಬೆಳ್ತಂಗಡಿ, (9) ನವಭಾರತ ಬುಕ್ ಡಿಪೋ, ಕೊಳದ ಪೇಟೆ, ಉಡುಪಿ (10) ಕೃಷ್ಣಾ ಫಾರ್ಮಸಿ, ಕುಂದಾಪುರ, (11) ಕಾರ್ಗೋಡು ಶ್ರೀ ರಾಮಾ ಸ್ಟೋರನ್ ಹೌಸ್, ಶ್ರೀ ರಾಮ ಪೇಟೆ (12) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. (13) ಬಿ. ಯಸ್. ನರಸಿಂಗರಾವ್, ಮರ್ಚಂಟ್, ಚಿಕ್ಕಮಗಳೂರು

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಾದಿ ಮಾಡುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರಿಗೆ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ತಿನ್ನಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಎಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**

ಆಯುರ್ವೇದ ಔಷದಾಲಯ ಗದಗ

ಮಗುವನ್ನು ಸಂತೋಷವಾಗಿಟ್ಟರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ (ITL) ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.

ತಯಾರಿಸುವವರು:

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ,

ಮಲ್ಲೇಶ್ವರಂ — ಬೆಂಗಳೂರು ಸಿಟಿ.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941.

Assets exceed	...	....	Rs 1,10,00,000
Life Fund exceeds	...	....	,, 92,00,000
Business in force	....	....	,, 4,25,00,000
Claims paid over	...	...	,, 56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿ—

ಇ. ಎ. ಪ್ರಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖವಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಈ ವಾರದ ಭವಿಷ್ಯ

ತಾರೀಖು ೨೩—೪—೪೨ರಿಂದ ತಾರೀಖು ೩೦—೪—೪೨ರ ವರೆಗೆ

ಮೇಷ— "ಪ್ರಯತ್ನ ಮೇಕವುಗ್ರತೋ ನಿಧಾಯ ಭೂತಿವಮಾಪ್ನುಹಿ" ಎಂಬ ಆರ್ಯೋಕ್ತಿಯಂತೆ ನೀವು ಈಗ ಸ್ವಸಾಮರ್ಥ್ಯದಿಂದಲೇ ಯಾವ ಮಹಕಾರ್ಯವನ್ನೂ ಕೂಡ ಸಾಧಿಸಲು ಶಕ್ತರಿರುವಿರಿ. ಇದರಿಂದ ನಿಮ್ಮ ಸಂಪದ್ಭಾಗವು ಅಭಿವೃದ್ಧಿ ಹೊಂದಲಿದೆ. ಸದ್ಯ ನಿಮಗೆ ವಿರೋಧಿಗಳಿಂದ ಕಿಂಚಿತ್ತೂ ಬಾಧೆಯಿರದು. ಜನತೆಯಲ್ಲಿ ನಿಮಗೆ ತುಂಬಾ ಗೌರವ ದೊರೆವದಾದರೂ ವಾಕ್‌ದೋಷದಿಂದ ವ್ಯರ್ಥ ನಿಷ್ಠುರಕ್ಕೆ ಗುರಿಯಾಗಲಿರುವಿರಿ. ಸನ್ಮಿತ್ರರ ಸಹಕಾರವು ಉತ್ತಮವಿರುವದು ಆರೋಗ್ಯ ಭಾಗದಲ್ಲಿ ತೃಪ್ತಿಯಿರಲಾರದು. ಉತ್ಪತ್ತಿಗೆ ತಕ್ಕ ಖರ್ಚು ಅನಿವಾರ್ಯವಿದೆ. ತಾ.28. 29. 30 ಉತ್ತಮ.

ವೃಷಭ—ಪ್ರಕೃತದ ದಿನಗಳು ನಿಮ್ಮ ಭಾಗಕ್ಕೆ ಸಂಪೂರ್ಣ ಹಾನಿಕರಗಳಾಗಿವೆ. ಸಕಲ ಗ್ರಹರ ಪ್ರಕೋಪಕ್ಕೆ ಗುರಿಯಾದ ನಿಮಗೆ ಹಲವಾರು ತಾಪತ್ರಯಗಳು ಸಮುದ್ರದ ಅಲೆಗಳಂತೆ ಮೇಲಿಂದ ಮೇಲೆ ಬರುವವು. ದೇಹಾಲಸ್ಯ, ಮನೋರೋಗ, ಗೃಹ ತಾಪತ್ರಯಗಳಿಂದ ನಿಮಗೆ ಸ್ವಲ್ಪವೂ ಸುಖಶಾಂತಿಯು ಲಭಿಸಲಾರದು. ರಾಜಕೀಯ ಭಾಗದಲ್ಲಿ ತುಂಬಾ ಕಷ್ಟ ನಷ್ಟಗಳೊದಗಬಹುದು. ವ್ಯರ್ಥಾ ಪರ್ಯಟನ ಮತ್ತು ಆರ್ಥಿಕ ಬಿಕ್ಕಟ್ಟು ಇವುಗಳಿಗೊಳಗಾದ ನಿಮಗೆ ತಾ. 23. 24 ಮತ್ತು 30 ಈ 3 ದಿನಗಳಲ್ಲಿ ಬಂಧುಗಳ ಸಹಾಯ ಮತ್ತು ಶ್ರಮಕ್ಕೆ ತಕ್ಕ ಫಲ ದೊರೆತೀತು.

ಮಿಥುನ—ಆಪತ್ತುಗಳು ಸನ್ನಿಹಿತವಾಗುತ್ತಿವೆ. ವಿವೇಕಿಗಳು ಅರ್ಧಮರ್ಧವಾದ ತಮ್ಮ ಕಾರ್ಯ ಕಲಾಪಗಳನ್ನು ಈವಾರದಲ್ಲೇ ಕೊನೆಗೊಳಿಸುವದುತ್ತಮ. ಪ್ರವಾಸಿಗಳಿಗೆ ಅಪಘಾತದ ಭಯವಿದೆ. ದೈನಂದಿನದ ಖರ್ಚುಗಳಿಗೆ ಸಾಕಷ್ಟು ಉತ್ಪತ್ತಿಯಿರುವದಾದರೂ ಅನಿರೀಕ್ಷಿತವಾಗಿ ಪ್ರಾಪ್ತವಾಗುವ ಅನರ್ಥಗಳಿಂದ ನಿಮ್ಮ ಮನಸ್ಸಿಗೆ ಯಾವಾಗಲೂ ನೆಮ್ಮದಿಯಿರದು. ಸಂಸಾರಿಗಳಿಗೆ ಗೃಹ ಸುಖಕ್ಕೆ ಹಾನಿಯುಂಟಾಗಲಾರದು. ತಾ. 25.26 27 ಇವುಗಳನ್ನು ಬಿಟ್ಟರೆ ಉಳಿದ ದಿನಗಳು ಧನಮಾನಗಳಿಗೆ ಹಾನಿಕಾರಗಳೂ ಕಲಹ ಶೋಕದಾಯಿಗಳೂ ಆಗಿವೆ.

ಕರ್ಕಾಟಕ—"ಅನುಕೂಲೇ ಸತಿಧಾತರಿ ಭವತ್ಯನಿಷ್ಟಾದಪೀಷ್ಟಮವಿಲಂಬಂ" ಲೋಕೋಕ್ತಿಯಂತೆ ದೈವಾನುಕೂಲವಿರುವಾಗ ಪ್ರಹ್ಲಾದನಿಗೆ ತಾಯಿ ಕೊಟ್ಟ ವಿಷ ಅಮೃತವಾಗಿ ಪರಿಣಮಿಸಿದಂತೆ ಅನಿಷ್ಟದಿಂದಲೂ ಕೂಡಾ ಇಷ್ಟ ಪೂರ್ತಿಯಾಗುವದು. ಪ್ರಕೃತ ನಿಮಗೆ ಅಂಗಾರಕನೊಬ್ಬನು ಪ್ರತಿಕೂಲನಿದ್ದರೂ ಇತರ ಗ್ರಹರ ಬಲದಿದಿರು ಸೂರ್ಯನ ಮುಂದಿಟ್ಟ ದೀಪದಂತೆ ವ್ಯರ್ಥವಾದೀತು. ಸ್ಥಾನ ಮಾನಗಳನ್ನೂ ಸ್ವಕೀರ್ತಿಯನ್ನೂ ಗಳಿಸುವಿರಿ. ತಾ. 23. 24. 28. 29 ಭೋಗ ಭೋಜ್ಯಗಳಿಂದ ನಿಮ್ಮನ್ನು ಸುಖ ಸಂತೃಪ್ತರನ್ನಾಗಿ ಮಾಡಲಿವೆ.

ಸಿಂಹ—"ಜೀವನ್ನರೋ ಭದ್ರ ಶತಾನಿ ಪಶ್ಯೇತ್" ಎಂಬ ಆರ್ಯೋಕ್ತಿಯನ್ನು ನೀವೀಗ ಸ್ಮರಿಸುವ ದಿನ ಸಮೀಪಿಸುತ್ತಿದೆ. ಅನೇಕ ಕಾಲದಿಂದ ಬಹು ವಿಧವಾದ ಕಷ್ಟ ನಷ್ಟಗಳನ್ನು ಅನುಭವಿಸಿ ಅಗ್ನಿ ಪರೀಕ್ಷೆಗೊಳಗಾದ ನಿಮಗೆ ಸದ್ಯವೇ ಸುಕಾಲವು ಪ್ರಾಪ್ತವಾಗುವದು. ನಿಮ್ಮ ಅದೃಷ್ಟನಿಂದೀಗ ಚಂದ್ರೋದಯವನ್ನು ನೋಡಿದ ಶರಧಿಯಂತೆ ಕ್ಷಣೇ ಕ್ಷಣೇ ಉಕ್ಕೇರುತ್ತಿರುವದು. ಹಗೆಯುವರೂ ಮಿತ್ರರಾಗಲಿರುವರು. ತಾ. 25. 26. 27. 30 ಇವುಗಳು ಇಷ್ಟಾರ್ಥಸಿದ್ಧಿ ದಿನಗಳು.

ಕನ್ಯಾ—ಇಷ್ಟಕ್ಕಿಂತ ದ್ವಿಗುಣ ಅನಿಷ್ಟವು ಕಂಡು ಬರುತ್ತಿದೆ. ನಿಮ್ಮ ಪರಮಾಪ್ತರಿಂದಿದ್ದವರಲ್ಲೂ ಕೂಡ ಮನಸ್ತಾಪಕ್ಕೆಡೆಯುಂಟಾಗುವದು. ಶತ್ರು ಜನರು ಮೇಲಿಂದ ಮೇಲೆ ಉಪದ್ರವಿಸುವರಾದರೂ ಸದ್ಯ ನೀವವರನ್ನು ಎದುರಿಸಲು ಶಕ್ತರಿರುವಿರಿ. ಅನುದಿನದ ಖರ್ಚಿಗೆ ತಕ್ಕಷ್ಟು ಉತ್ಪತ್ತಿಯಿರುವುದರಿಂದ ಹಣದ ತಡಚಣೆಯುಂಟಾಗದು. ಹೃದ್ರೋಗ,ಗ್ರ

(೧೧ನೇ ಪುಟ ನೋಡಿರಿ).

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲಾ ತೆಗೆದು ಹಾಕುತ್ತವೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳಸುತ್ತದೆ. **ಬೆಲೆ ರೂ ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24—ಕನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS LTD.,

Head Office and Factory: Katapadi, S Kanara

Depots: 1 Mahratha Galli, Hubli. 2. 57 Big street, Triplicane Madras

"ಭುವನೇಂದ್ರ"

Danthadavan Choorna

Economical in use. Cheapest in value. Genuine 'n quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ. (3) ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಪೈ L. I. M. ಡಾಕ್ಟರ್ ಪಂಡಿತ್ ರಾವ್, ಕೊಡವೂರು

ಚುಟುಕು ಟೀಕೆ-ಟಿಪ್ಪಣಿ

ರಷ್ಯದ ಪ್ರಚಂಡ ಸೇನಾಬಲ.

1939-40ರಲ್ಲಿ ಫಿನ್ಲೆಂಡಿನೊಡನೆ ಕಾದಾಡಲು ಕಳುಹಿಸಲ್ಪಟ್ಟ ಸೋವಿಯಟ್ ಸೇನೆಯು ಉತ್ತಮತರಗತಿಯದಲ್ಲೆಂಬುದನ್ನು ಫಿನ್ಲೆಂಡ್ ಈಗ ಒಪ್ಪುತ್ತಾರೆ. ಇಂದೀಗ ಸಂಘಟಿತವಾದ ಮತ್ತು ತರಬೇತಾದ ಸುಮಾರು 17ಮಿಲ್ಯ ಸೇನೆಯು ರಷ್ಯದ ಅಧೀನವಿದೆ. ಅಗತ್ಯಬಿದ್ದ ಪಕ್ಷದಲ್ಲಿ ಅದನ್ನು ಸೇಕಡ 30ರಷ್ಟು ಹೆಚ್ಚಿಸಬಹುದಾಗಿದೆ. ಸೋವಿಯಟ್ ಸೇನೆಯ ಹೋರಾಟ ಶಕ್ತಿಯು ಎಂತಹದೆಂಬುದೀಗ ಲೋಕವಿಶ್ರುತವಾಗಿದೆ. ನವೀನ ಉತ್ಸಾಹ ಮತ್ತು ದೃಢವಿಶ್ವಾಸದಿಂದ ಕೆಂಪು ಸೇನೆಯು ಇಂದು ನಾಝಿಪಡೆಯೊಡನೆ, ಇತಿಹಾಸದಲ್ಲೇ ಅಭೂತಪೂರ್ವ ಭೀಕರ ಮತ್ತು ಮಹತ್ವಾದ ಕದನಕ್ಕೆ ಕಂಕಣಬದ್ಧವಾಗಿದ. ವಿಮಾನ, ಟೇಂಕ್, ತೋಪು ಮೊದಲಾದ ಯುದ್ಧೋಪಕರಣಗಳ ಸಂಖ್ಯೆ ಮತ್ತು ಉತ್ಕೃಷ್ಟತೆಯಲ್ಲಿಯೂ ರಷ್ಯವು ಜರ್ಮನಿಗೆ ಸರಿಮಿಗಿಲೆನಿಸಿದೆ.ಅಂದ ಮೇಲೆ ಹಿಟ್ಲರರ ಬ್ಲಿಸ್‌ಕ್ರೈಗೇನೂ ಕೆಂಪು ಸೇನೆಯ ಮುಂದೆ ನಡೆವ ಹಾಗಿಲ್ಲ.

ನಾಝಿಗಳ ಪ್ಲೇನು ತಪ್ಪಿಹೋಗಿದೆ:

ಕೆಂಪು ಸೇನೆಯ ಚಳಿಗಾಲದ ಪ್ರಬಲ ಧಾಳಿಯನ್ನು ತಡೆಗಟ್ಟಲು ನಾಝಿಗಳು ಒಂದು ತಿಂಗಳ ಮೊದಲು ಪಶ್ಚಿಮದಿಂದ ಸೇನೆಯನ್ನು ಪೂರ್ವಕ್ಕೊಯ್ದಿದ್ದರು. ಆದರೆ ಈಗ ಪುನಹ ಫ್ರಾನ್ಸ್, ನೋರ್ವೆ ಮೊದಲಾದ ಆಕ್ರಮಿತ ರಾಜ್ಯಗಳಿಗೆ ಅವರು ಹೆಚ್ಚಿಚ್ಚಾಗಿ ಸೇನೆ ಕಳುಹಿಸಬೇಕಾಗಿ ಬಂದಿದೆ. ಪಶ್ಚಿಮದಿಂದ ಮಿತ್ರರಾಷ್ಟ್ರಗಳಲ್ಲಿ ಧಾಳಿ ನಡೆಯುವವೋ ಎಂಬ ಭೀತಿಯು ಅವರಲ್ಲುಂಟಾಗಿದೆ ಬ್ರಿಟಿಷ್ ಕಮಾಂಡೋ ಸೈನಿಕರು ಯುರೋಪಿನ ಮೇಲೆ ನಡೆಸಿದ ಧಾಳಿ, ಮತ್ತು ಬ್ರಿಟಿಷ್ ರೋಯಲ್ ವಿಮಾನ ಪಡೆಯ ಭೀಕರ ಬೋಂಬೆಸೆತಗಳಿಂದ ನಾಝಿಗಳು ತಳಮಳಗೊಂಡಿರುವಂತಿದೆ. ಇಷ್ಟರಲ್ಲೇ ಸುಮಾರು ಒಂದು ಲಕ್ಷ ಸೇನೆಯು ಪೂರ್ವದಿಂದ ಪಶ್ಚಿಮಕ್ಕೆ ಕಳುಹಿಸಲ್ಪಟ್ಟಿವೆ. ನಾಝಿಗಳ ಯುದ್ಧದ ಪ್ಲೇನೇ ತಪ್ಪಿಹೋಗಿದೆ. ಎರಡು ರಣರಂಗಗಳಲ್ಲಿ ಹೋರಾಡುವಂತಾದರೆ ಅವರು ಕಂಗೆಡುವಂತಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ.

ಶೃಂಗಾರವಾದ ಪುಸ್ತಕ!

ಮೂರ್ದ್ವಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲ ದೇಶದ ಪತ್ನಿ ಕನ್ಯೆಗಳು ಮೋಹಿಸುವ ರಹಸ್ಯಗಳು,



ಮಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ಸ್ತ್ರೀಯರುಗಳು ಪ್ರೀತಿಸುವ ರಹಸ್ಯಗಳು, ಮೋಹಿಸುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತು ಮುದ್ದು, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೆಮಿನಿ ಟ್ರೇಡಿಂಗ್ ಕಂಪೆನಿ

250. ಕೃಷ್ಣಾಯಲ್ ರೋಡ್, ಮದರಾಸ್

1917 ಪುನರಾವರ್ತಿತವಾಗುವುದೇ?

ಕಳೆದ ಮಹಾ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಹೋರಾಡಿ ಸೋತಾಗ 1917ರಲ್ಲಿ ಅಮೆರಿಕವು ಫ್ರಾನ್ಸಿಗೆ ಪ್ರಬಲ ಸೇನೆ ಕಳುಹಿಸಿ ಜಯಶೀಲ ಹೋರಾಟ ನಡಿಸಿ ವಿಜಯಿ ಧ್ವಜ ಹಾರಿಸಿತು. ಅದೇ ರೀತಿ ಈ ಸಲವೂ ಅಮೆರಿಕಾನ ಸೇನೆಯು ಬ್ರಿಟಿಷ್ ಸೇನೆಯೊಂದಿಗೆ ಫ್ರಾನ್ಸಿನ ಮೇಲೆ ಧಾಳಿ ನಡಿಸಿ ಜರ್ಮನಿಯನ್ನು ಬಗ್ಗುಬಡಿಯುವುದೆಂಬ ಆಶೆಯನ್ನು ಮಿಲ್ಯಾಂತರ ಸ್ವಾತಂತ್ರ್ಯ ಪ್ರೇಮಿ ಫ್ರೆಂಚರು ಕಟ್ಟಿಕೊಂಡು ಅದನ್ನು ನಿರೀಕ್ಷಿಸುತ್ತಿದ್ದಾರೆಂದು ತಿಳಿದು ಬಂದಿದೆ. ನಾಝಿಗಳು ಫ್ರೆಂಚರನ್ನೊಲಿಸಿ ಕೊಳ್ಳಲು ಭಗೀರಥಯತ್ನ ನಡಿಸುತ್ತಿದ್ದಾರೆ. 80,000,000 ಫ್ರೇಂಕು ಲಂಚ ಕೊಟ್ಟು, ಫ್ರೆಂಚ್‌ಪೋಪ್ಯುಲರ್ ಪಾರ್ಟಿಯ ನಾಯಕರಾದ ಜಾಕೆ ಡೊರಿಯೋರವರ ಸಹಾಯಪಡೆದು ಅವರ ಮೂಲಕ ಪ್ರಚಾರ ನಡಿಸುತ್ತಿದ್ದಾರೆ ಆದರೂ ಫ್ರಾನ್ಸಿನಲ್ಲಿ ಪ್ರಜಾಶಕ್ತಿಯು ಇನ್ನೂ ಚೈತನ್ಯಶಾಲಿಯಾಗಿಯೇ ಇದೆ. ಇಂದೀಗ ಎಮ್. ಲಾವಲರು ಅಧಿಕಾರಕ್ಕೆ ಬಂದು ವಿಚಿಫ್ರಾನ್ಸು ಜರ್ಮನಿಯೊಂದಿಗೆ ಸಹಕರಿಸಲು ಮುಂದಾಗಿರುವುದರಿಂದ ಉರಿವ ಬೆಂಕಿಗೆ ತುಪ್ಪಹೊಯ್ದಂತಾಗಿದೆ.

ಪಶ್ಚಿಮದಿಂದ ಜರ್ಮನಿಯ ಮೇಲೆ ಧಾಳಿ ನಿಶ್ಚಯ.

ರಷ್ಯ ಒಂದಕ್ಕೇನೇ ಹಿಟ್ಲರರನ್ನು ಪ್ರತಿಭಟಿಸಿ ಸೋಲಿಸಲು ಸಾಧ್ಯವಾಗಲಾರದು. ಆದುದರಿಂದ ಮಿತ್ರ ರಾಷ್ಟ್ರಗಳು ಬರುವ ಸೆಕೆಕಾಲದೊಳಗೆ ಪಶ್ಚಿಮದಿಂದ ಯುರೋಪಿನ ಮೇಲೆ ಧಾಳಿ ನಡಿಸಬೇಕು. ರಷ್ಯವು ಸೋಲಿಸಲ್ಪಟ್ಟರೆ ಸರ್ವ ನಾಶವಾಗುವುದೆಂಬ ಅಮೆರಿಕ ಮತ್ತು ಇಂಗ್ಲೆಂಡುಗಳಲ್ಲಿ ಜನ ಮತದ ಒತ್ತಾಯವು ದಿನೇ ದಿನೇ ಅಧಿಕವಾಗುತ್ತಿರುವುದು ಜರ್ಮನಿಯ ಮೇಲೆ ಪಶ್ಚಿಮದಿಂದ ಧಾಳಿ ನಡಿಸಬೇಕೆಂಬ ಅಭಿಪ್ರಾಯವನ್ನು ಅಮೆರಿಕ ಯುದ್ಧ ತಂತ್ರಜ್ಞ ಮಂಡಲದ ಅಧಿನಾಯಕ ಜನರಲ್ ಮಾರ್ಷಲರು ಮೊದಲೇ ಕೊಟ್ಟಿದ್ದರು. ಅವರೇ ಈಗ ಮಿ. ಹೇರಿ ಹೊಪ್ಕಿನ್ಸರೊಂದಿಗೆ ಲಂಡನಿಗೆ ಬಂದು ಬ್ರಿಟಿಷ್ ಸೇನಾನಾಯಕರು ಮತ್ತು ಮಂತ್ರಿಗಳೊಡನೆ ದೀರ್ಘ ಮಾತುಕತೆ ನಡಿಸಿ ಹಿಂತಿರುಗಿರುತ್ತಾರೆ. ಈ ಮಾತುಕತೆಯ ಪರಿಣಾಮವಾಗಿ ಜರ್ಮನಿಯ ಮೇಲೆ ಪಶ್ಚಿಮದಿಂದ ಧಾಳಿಯು ಆದಷ್ಟು ಬೇಗನೆ ನಡಿಸಲ್ಪಡುವುದೆಂಬುದು ನಿಶ್ಚಯನೆಂದೇ ಹೇಳಬಹುದು ಈ ಬಗ್ಗೆ ಅಮೆರಿಕವು ಇಂಗ್ಲೆಂಡಿಗೆ ಸಾಧ್ಯವಾದ ಸೇನೆ, ಹಡಗ ಮತ್ತು ವಿಮಾನಗಳನ್ನೊದಗಿಸಿಕೊಡುವುದು. ಅಮೆರಿಕ ಮತ್ತು ಇಂಗ್ಲೆಂಡುಗಳೊಟ್ಟು ಸೇರಿ ಪಶ್ಚಿಮದಿಂದ ಧಾಳಿ ನಡಿಸುವವೆಂಬುವದನ್ನು ಜರ್ಮನಿಯು ಮೊದಲೇ ತಿಳಿದುಕೊಂಡು ಕರಾವಳಿಯ ಭದ್ರತೆಯ ವ್ಯವಸ್ಥೆಯನ್ನು ಭರದಿಂದ ನಡಿಸಲಾರಂಭಿಸಿದೆ. ಹೀಗೆ ಹಿಟ್ಲರರ ದೃಷ್ಟಿಯು ಎರಡು ಕಡೆಗಳಿಗೆ ಬಿದ್ದು ಎರಡು ರಣರಂಗಗಳಲ್ಲಿ ಹೋರಾಡಬೇಕಾಗುವಂತಾದರೆ ಅವರ ಬ್ಲಿಸ್‌ಕ್ರೈಗಿನಿಂದ ಥಕ್ಕನೆ ಅನಾಹುತಕಾರಿ ಪರಿಣಾಮವಾಗಲು ಅನ್ನದವಿಲ್ಲ. ದೀರ್ಘಕಾಲದ ಹೋರಾಟದಲ್ಲಿ ಮಿತ್ರ ರಾಷ್ಟ್ರಗಳ ಕೈಮೇಲಾಗುವ ಸಂಭವವೇ ಹೆಚ್ಚು.

Keep the enemy away

from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND

FOR

VICTORY.

ಜಾಪಾನರೇನು ಮಾಡುತ್ತಿರುವರು?

ಕೆಲ ದಿನಗಳ ಮೊದಲು ಜಾಪಾನರು ಕೂಡಲೆ ಸಿಲೋನು ಮತ್ತು ದಕ್ಷಿಣ ಹಿಂದುಸ್ಥಾನದ ಮೇಲೆ ಬೀಳುವಂತೆ ತೋರುತ್ತಿತ್ತು. ಈ ಉದ್ದೇಶದಿಂದಲೇ ಬಂಗಾಳಕೊಲ್ಲಿ ಮತ್ತು ಹಿಂದೀ ಸಾಗರದಲ್ಲಿ ಪ್ರಬಲ ಜಾಪಾನ ನೌಕಾ ಪಡೆಗಳ ಚಲನವಲನ ಆರಂಭವಾಗಿದ್ದಿತೆಂದು ನಂಬುವಂತಾಗಿತ್ತು. ಆದರೆ ಇತ್ತಲಾಗಿ ಜಾಪಾನರ ಸುದ್ದಿಯೇ ಇಲ್ಲ. ಸಿಲೋನು ದಾಟಿ ಮುಂದುವರಿಯುತ್ತಿದ್ದ ದೊಡ್ಡ ಜಾಪಾನ ನೌಕಾಪಡೆಯು ಎಲ್ಲಿ ಹೋಯಿತೆಂದು ಹೇಳ ಬರುವುದಿಲ್ಲ. ಬಂಗಾಳಕೊಲ್ಲಿಯು ಈಗ ಬಹುಮಟ್ಟಿಗೆ ಜಾಪಾನರ ಸರೋವರದಂತಾಗಿ ಹೋಗಿದೆ ಅದೇ ರೀತಿ ಹಿಂದೀ ಸಾಗರವನ್ನೂ ಆವರಿಸಿ ಹಿಂದು ದೇಶದ ಪಶ್ಚಿಮದ ಸಮುದ್ರ ಸಂಬಂಧವನ್ನೂ ಜಾಪಾನರು ಕಡಿದು ಹಾಕಲೆತ್ನಿಸುವರೆಂಬುದರಲ್ಲಿ ಸಂದೇಹವಿಲ್ಲ ಅದಕ್ಕಾಗಿ ಅವರು ಒಳಗಿಂದೊಳಗೆ ಪ್ರಬಲ ಸಿದ್ಧತೆ ಮಾಡುತ್ತಿರಬಹುದು ಆದರೆ ಸದ್ಯ ನೆಲಧಾಳಿಗೇನೂ ಅವರು ಹೆಚ್ಚಿನ ಗಮನ ಕೊಡುವಂತೆ ತೋರುವುದಿಲ್ಲ ಕ್ರಿಪ್ಸರ ಸಂಧಿಯ ಯತ್ನವು ಮುರಿದುದೂ ಅದಕ್ಕೊಂದು ಕಾರಣವಾಗಿರಬಹುದು. ಹಿಂದೀ ಸಾಗರದಲ್ಲಿ ದೊಡ್ಡ ನೌಕಾ ಯುದ್ಧ ನಡಿಯುವದೆಂಬುವದರಲ್ಲಿ ಸಂದೇಹವೇ ಇಲ್ಲ. ಬಿರುಗಾಳಿಯ ಪೂರ್ವದ ಶಾಂತತೆಯಿದು ಹಿಂದೀಸಾಗರದ ಸಂಬಂಧವನ್ನು ರಕ್ಷಿಸಿಕೊಳ್ಳಲು ಬ್ರಿಟನು ಮತ್ತು ಅಮೆರಿಕಗಳು ಶಕ್ತಿಮೀರಿ ಸಾಧ್ಯವಾದ ಯತ್ನ ಮಾಡದಿರಲಾರವು ಆದುದರಿಂದಲೇ ಟ್ರೆಫಲ್ಗಾರಿನಂತಹ ಇನ್ನೊಂದು ಮಹಾ ಸಮುದ್ರ ಯುದ್ಧವು ಹಿಂದೀ ಸಾಗರದಲ್ಲಿ ನಡೆಯುವುದೆಂದು ನಿರೀಕ್ಷಿಸಲಾಗಿದೆ.

ಹಿಟ್ಲರರ ಸಿದ್ಧತೆ.

ಸಂದರ್ಭಾನುಸಾರ ಇಂಗ್ಲೆಂಡಿನ ಮೇಲೆ ಧಾಳಿ ನಡಿಸಲು ಹಿಟ್ಲರರೂ ಒಳಗಿಂದೊಳಗೆ ಸಿದ್ಧತೆ ಮಾಡುತ್ತಿರುವಂತಿದೆ. ಈ ಉದ್ದೇಶದಿಂದಲೇ ಜನರಲ್ ವಾನ್ ರನ್‌ಸ್ಟೆಡರು ಆಕ್ರಮಿತ ಫ್ರಾನ್ಸಿನ ಜರ್ಮನ್ ಸೇನಾ ನಾಯಕರಾಗಿ ನೇಮಿಸಲ್ಪಟ್ಟಿರುವುದೆಂದು ಊಹಿಸಲಾಗಿದೆ. ಹಿಟ್ಲರರ ಒತ್ತಾಯದಿಂದ ಅವರ ಹಸ್ತಕಂತ ಎಮ್ ಲಾವಲರೀಗ ಪುನಹ ಅಧಿಕಾರಕ್ಕೆ ಬಂದಿರುವುದರಿಂದ ವಿಚಿ ಫ್ರಾನ್ಸು ಕೂಡಾ ಜರ್ಮನಿಯೊಂದಿಗೆ ಸಹಕರಿಸುವಂತಾಗುವುದೆಂಬುವದರಲ್ಲಿ ಸಂದೇಹವಿಲ್ಲ. ಇಷ್ಟರಲ್ಲೇ ಹಲವು ಫ್ರೆಂಚ ಯುದ್ಧ ಹಡಗಗಳು ಜರ್ಮನಿಗೊಪ್ಪಿಸಲ್ಪಟ್ಟಿರುವುವೆಂಬ ಸುದ್ದಿಯುಂಟಾಗಿದೆ. ಲಾವಲರ ಸರಕಾರವು ಸದ್ಯದಲ್ಲೇ ಪೇರಿಸಿನಲ್ಲಿ ಸ್ಥಾಪಿತವಾಗುವ ಸಂಭವ ತೋರುತ್ತದೆ. ಉತ್ತರ ಆಫ್ರಿಕದ ಫ್ರೆಂಚ್ ವಸಾಹತುಗಳಲ್ಲಿ ಕೆಲವು ನೌಕಾ ನಿಲಯಗಳನ್ನೂ ಹಿಟ್ಲರರ ಉಪಯೋಗಕ್ಕೆ ಬಿಟ್ಟು ಕೊಡಲಾಗುವುದೆಂದು ನಂಬಲಾಗಿದೆ. ಫ್ರಾನ್ಸು ಹಿಟ್ಲರರೊಂದಿಗೆ ಸಹಕರಿಸಿದರೆ ಲಿಬಿಯದ ಯುದ್ಧವನ್ನು ನಡೆಸಲು ಹೆಚ್ಚಿನ ಅನುಕೂಲತೆ ದೊರೆಯುವುದು. ಇಂಗ್ಲೆಂಡಿನ ಮೇಲೆ ಧಾಳಿ ನಡಿಸಲಿಕ್ಕಿಲ್ಲವಾದರೂ, ಬ್ರಿಟನು ಮತ್ತು ಅಮೆರಿಕಗಳು ಧಾಳಿ ನಡಿಸಿದರೆ ಅವನ್ನು ತಡಗಟ್ಟುವ ಸಿದ್ಧತೆಯನ್ನು ಹಿಟ್ಲರರು ಭರದಿಂದ ನಡಿಸುತ್ತಿರುವರು.

ಜ್ಯೋತಿಷ್ಯದಲ್ಲೇನಾದರೂ ಸತ್ಯಾಂಶವಿದೆಯೇ?

ಲೇಖಕರು: ಪ್ರೊ. ಎ. ಬಿ. ಶೆಟ್ಟಿ, ಎಮ್. ಎಲ್. ಎ.

ಮದುವೆ ಮುಂಜಿಗಳ ಸಮಯವಿದು. ಜನರು ನೆಂಟಸ್ತಿಕೆ ಮಾಡುವುದಕ್ಕಾಗಿ ಹುಡುಗ ಹುಡುಗಿಯರ ಜಾತಕ, ಹಿಡ ಕೊಂಡು ಜೋಯಿಸರುಗಳ ಬಳಿಗೆ ಓಡಾಡಿ ಅವು ಜತೆಗೊಡುವವೋ ಎಂದು ನೋಡ ಬೇಕಾಗಿರುತ್ತಾರೆ. ಜಾತಕ ಮತ್ತು ಜ್ಯೋತಿಷಗಳಲ್ಲಿ ನಂಬಿಕೆ ಇಲ್ಲದವರು ಕೂಡಾ, ನಮ್ಮ ಹಳೆಯ ವೃದ್ಧರುಗಳು ಸಂಬಂಧಿಕರ ತೃಪ್ತಿಗಾಗಿ ಜಾತಕ ಘಟನೆಯಾಗುವುದೋ ಎಂದು ನೋಡುವ ಮತ್ತು ದಿನ ಮುಹೂರ್ತಾದಿಗಳನ್ನು ಕೇಳುವ ಸಂಪ್ರದಾಯವನ್ನು ನಡೆಸಲೇ ಬೇಕಾಗಿದೆ. ಪಂಚಾಂಗವು ಒಂದೇ ಪ್ರಕಾರವಿರುವುದಿಲ್ಲ. ಹಬ್ಬ ಹುಣ್ಣಿಮೆಗಳ ದಿನ ನಿಶ್ಚಯದ ವಿಷಯದಲ್ಲಿ ಪುಗಕೊಳಗೇನೇ ಭಿನ್ನಾಭಿಪ್ರಾಯವಿರುತ್ತದೆ. ಆದರೂ ಯಾವುದಾದರೊಂದು ಪಂಚಾಂಗದಲ್ಲಿ ನಿಶ್ಚಯಿಸಿದ ದಿನ ಮತ್ತು ಮುಹೂರ್ತದಲ್ಲಿ ಶುಭಶೋಭನಾದಿಗಳನ್ನು ನಡಿಸಬೇಕಾಗಿದೆ. ಅಂತಹ ವಿಷಯಗಳಲ್ಲಿ ಜನಸಾಮಾನ್ಯರ ನಂಬಿಕೆ ಮತ್ತು ಅನುಷ್ಠಾನಕ್ಕೆ ವಿರುದ್ಧವಾಗಿ ನಡೆಯುವ ಎದೆಗಾರಿಕೆಯು ನಮ್ಮಲ್ಲಿ ಎಷ್ಟು ಮಂದಿಗಿದೆ?

ನಂಬಿಗೆಯು ವ್ಯಾಪಕವಾಗಿ ಹಬ್ಬಿದೆ, ಆದರೆ ಎಂದೂ ಸಿದ್ಧಗೊಳಿಸಲ್ಪಟ್ಟಿಲ್ಲ

ನಮ್ಮ ದೇಶದ ಹಿಂದು ಜನರಲ್ಲೆಲ್ಲಾ ಜ್ಯೋತಿಷ್ಯದ ಕುರಿತು ನಂಬಿಕೆಯು ಬಹಳ ವ್ಯಾಪಕವಾಗಿ ಹಬ್ಬಿರುತ್ತದೆ. ಕಾಯಿಲೆಯುಂಟಾದಾಗ, ಏನಾದರೂ ಹೊಸ ಕೆಲಸ ಆರಂಭಿಸುವಾಗ ಮತ್ತು ಇತರ ಪ್ರಾಮುಖ್ಯ ಸಂದರ್ಭಗಳಲ್ಲೆಲ್ಲಾ ಮೊದಲು ಮಾಡತಕ್ಕ ಕೆಲಸವೆಂದರೆ ಜೋಯಿಸರನ್ನು ಕೇಳುವುದು. ರಾಜಮಹಾರಾಜರುಗಳೂ ವರ್ತಕರೂ ಬೇಸಾಯಗಾರರೂ, ಅವಿದ್ಯಾವಂತ ಜನ ಜಂಗುಳಿಯೂ, ಅನೇಕ ಮಂದಿ ವಿದ್ಯಾವಂತ ಜನರೂ ಜೋಯಿಸರ ಅಭಿಪ್ರಾಯ ಕೇಳದೆ ಯಾವ ಪ್ರಾಮುಖ್ಯ ಕೆಲಸವನ್ನೂ ಮಾಡಲಾರರು. ನಮ್ಮ ಕನ್ನಡ ಪತ್ರಿಕೆಗಳಲ್ಲಿ ಪ್ರಾಮುಖ್ಯವಾಗಿ ವಾರ ವಾರ ಪ್ರಕಟವಾಗುವ ರಾಶಿ ಭವಿಷ್ಯಗಳನ್ನೇ ನೋಡಿದರೆ ಸಾಲದೇ? ಅದೆಷ್ಟು ಮಂದಿ ವಿದ್ಯಾವಂತರಾದ ವಾಚಕರು ಅವನ್ನೇ ಮೊದಲಾಗಿ ಹುಡುಕಿ ನೋಡಲು ಆತುರಪಡುವದಿಲ್ಲ! ಜ್ಯೋತಿಷದ ಕುರಿತು ನಂಬಿಗೆಯು ಇನ್ನೊಂದು ಸರ್ವಸಾಮಾನ್ಯವಾಗಿ ಹಬ್ಬಿರುವ ದೇಶದಲ್ಲಿ ವಾಸಿಸುತ್ತಿರುವ ಮುಸಲ್ಮಾನ ಮತ್ತು ಕ್ರೈಸ್ತ ಧರ್ಮೀಯರೇ ಮೊದಲಾದವರೂ, ಅದರಲ್ಲಿ ಏನಾದರೂ ಸತ್ಯಾಂಶವಿರಬೇಕೆಂಬ ನಂಬಿಕೆಯುಳ್ಳವರಾಗುವುದೇನೂ ಆಶ್ಚರ್ಯವಲ್ಲ. ತಮಿಳು ಜಿಲ್ಲೆಗಳಲ್ಲಿ ದೀರ್ಘಕಾಲದಿಂದ ವಾಸಿಸಿಕೊಂಡು ಬಂದಿರುವ ಕೆಲವು ಯುರೋಪಿಯನರು ಕೂಡಾ, ರಾಹು ಕಾಲದಲ್ಲಿ ಪ್ರಾಮುಖ್ಯ ಕೆಲಸವನ್ನೇನೂ ಮಾಡುವದಿಲ್ಲ. ಕೆಲಸವಾದರೆ ಒಳ್ಳೇದಾಗಲಾರದೆಂಬ ನಂಬಿಗೆಯು ತಮಿಳು ಜನರ ನಂಬಿಕೆಯುದ್ದು ದಕ್ಷಿಣ ಹಿಂದು ಸ್ಥಾನದಲ್ಲಿ ಮಾತ್ರ ಅದು ಕಂಡುಬರುತ್ತದೆ. ಭರಣಿ ಕೃತ್ತಿಕೆಯಲ್ಲಿ ಯಾವ ಒಳ್ಳೇ ಕೆಲಸವನ್ನೂ ಮಾಡಕೂಡದೆಂಬುದು ಹಿಂದುಗಳ ಸರ್ವಸಾಮಾನ್ಯ ನಂಬಿಕೆಯಾಗಿರುತ್ತದೆ.

ಜ್ಯೋತಿಷದ ಕುರಿತು ಯಾರಾದರೊಬ್ಬನಿಗೆ ಯಥಾರ್ಥವಾದ ಅಪನಂಬಿಕೆಯಿದ್ದು ಅದರ ಸತ್ಯತೆಯ ಕುರಿತು ಆತನು ಪ್ರಶ್ನೆ ಕಲೆದೆಗೊಂಡನಾದರೆ, ಕೂಡಲೆ ಅವನು ಪಾದ್ರಿ ಅಥವಾ ತಲೆಹೋಕನೆಂದಾಗುವನು. ಆದರೆ ಸ್ವಲ್ಪ ವಿಚಾರ ದೃಷ್ಟಿಯಿಂದ ನೋಡಿದ ಪಕ್ಷದಲ್ಲಿ ಇತರ ಹಲವು ರೂಢಮೂಲ ಮೂಢನಂಬಿಕೆಗಳಂತೆ ಜೋತಿಷದ ಕುರಿತಾದ ದೃಢನಂಬಿಕೆ ಕೂಡಾ ಗತಾನುಗತಿಕವಾಗಿ ಬಂದಂಥಾದ್ದಿದ್ದು, ಅದನ್ನು ಜನರು ಮೂಢವಿಶ್ವಾಸದಿಂದ ಸ್ವೀಕರಿಸಿರುವರೆಂಬುದು ಸ್ಪಷ್ಟವಾಗುವುದು. ಎಂದೂ ಅದನ್ನು ವಿಚಾರದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಗೊಡವೆಗೆ ಯಾರೂ ಹೋಗುವುದಿಲ್ಲ. ವಿಜ್ಞಾನದ ಶೋಧನೆಯ ಬೆಳಕನ್ನು ಆ ಕಡೆಗೆ ಬೀರುವವರಿಲ್ಲ.

ವೇದಗಳಲ್ಲಿ ಜ್ಯೋತಿಷದ ಪ್ರಸ್ತಾಪವಿಲ್ಲ.

ಜೋತಿಷದ ಪೂರ್ವೇತಿಹಾಸವನ್ನು ಶೋಧಿಸಿರುವ ವಿದ್ವಾಂಸರ ಅಭಿಪ್ರಾಯದ ಮೇರೆಗೆ ಅದು ಸುಮಾರು 2000 ವರ್ಷಗಳ ಹಿಂದೆ ಗ್ರೀಸಿನಿಂದ ಹಿಂದೂದೇಶಕ್ಕೆ ಬಂದುದಾಗಿರುತ್ತದೆ. ಪುರಾತನ ವೇದ ಮತ್ತು ಶ್ರುತಿಗಳಲ್ಲಿ, ಜ್ಯೋತಿಷದ ವಿಚಾರವಾಗಲಿ, ಮಾನವನ ಅದೃಷ್ಟದ ಮೇಲೆ ಗ್ರಹಗಳ ಪ್ರಭಾವದ ವಿಷಯವಾಗಲಿ ಇರುವುದಿಲ್ಲ. ಹಿಂದೆ ಪಾಶ್ಚಾತ್ಯ ದೇಶಗಳಲ್ಲಿ ತುಂಬಾ ಜೋಯಿಸರಿದ್ದರು. ಕ್ರಿ. ಶ. ೧೭ನೇ ಶತಮಾನದ ವರೆಗೆ ಅವರು ವೃದ್ಧಿಹೊಂದುತಿದ್ದರು. ಆದರೆ ಯುರೋಪಿನಲ್ಲಿ ವಿಚಾರ ಮತ್ತು ವೈಜ್ಞಾನಿಕ ಜ್ಞಾನವು ಹೆಚ್ಚಿದಂತೆ ಜೋತಿಷದ ಮೇಲೆ ಜನರ ನಂಬಿಕೆಯು ಕಡಿಮೆಯಾಗುತ್ತಾ ಬಂದಿರುವುದು. ಹಿಂದೂಸ್ಥಾನದಲ್ಲಿ, ಮಾತ್ರ ಆಧುನಿಕ ಶಿಕ್ಷಣದ ಪ್ರತಿಬಂಧಕ ಪ್ರಭಾವವೂ ಅದರ ಬಲವನ್ನು ಕುಂದಿಸಿರುವುದಿಲ್ಲ. ಅದು ಎಂದಿನಂತೆ ತಲೆಯೆತ್ತಿಕೊಂಡಿರುವುದು.

ಜ್ಯೋತಿಷ ಬೇರೆ, ಜ್ಯೋತಿಶ್ಶಾಸ್ತ್ರ ಬೇರೆ.

ಫಲ ಜ್ಯೋತಿಷ ಮತ್ತು ಜ್ಯೋತಿಶ್ಶಾಸ್ತ್ರವು ಒಂದೇ ಎಂಬ ತಪ್ಪು ಭಾವನೆಯಿಂದ 'ಜ್ಯೋತಿಷ' ಶಬ್ದವು ಹಿಂದು ದೇಶದಲ್ಲಿ ಅಸಡ್ಡೆಯಿಂದ ಉಪಯೋಗಿಸಲ್ಪಡುತ್ತದೆ. ಸೂರ್ಯ, ಚಂದ್ರ, ನಕ್ಷತ್ರ ಮತ್ತು ಗ್ರಹ ಮೊದಲಾದ ಖಗೋಲ ಜ್ಯೋತಿಗಳ ಕುರಿತಾದ ಶಾಸ್ತ್ರವೇ ಜ್ಯೋತಿಶ್ಶಾಸ್ತ್ರ. ಜ್ಯೋತಿಶ್ಶಾಸ್ತ್ರದ ಆಧಾರದಿಂದಲೇ ಪಂಚಾಂಗಗಳು ಮಾಡಲ್ಪಡುವುದು ಗ್ರಹಣಗಳನ್ನು ಮುಂದಾಗಿ ಹೇಳುವುದು. ಈ ಶಾಸ್ತ್ರದಲ್ಲಿ ಪಾಶ್ಚಾತ್ಯ ಜ್ಯೋತಿಶ್ಶಾಸ್ತ್ರಜ್ಞರು ನಮ್ಮ ಪಂಡಿತರುಗಳಿಗಿಂತ ಚತುರರಿರುತ್ತಾರೆ. ಗ್ರಹಣ, ಧೂಮಕೇತುಗಳ ಉದಯವೇ ಮೊದಲಾದ ವಿಷಯಗಳನ್ನವರು ಪಂಡಿತರಿಗಿಂತ ಸರಿಯಾಗಿ ಹೇಳಬಲ್ಲರು.

ಜ್ಯೋತಿಶ್ಶಾಸ್ತ್ರವು ಸತ್ಯವಾದುದು. ಫಲಜ್ಯೋತಿಷವು ಅದರ ಮೇಲೆ ಆಧರಿಸಿರುವುದರಿಂದ ಅದು ಕೂಡಾ ಸತ್ಯವೆಂದು ಸಾಧಿಸುವ ಪ್ರಯತ್ನವು ಹಲವು ವೇಳೆ ನಡೆಸಲ್ಪಡುತ್ತದೆ. ಭೂಮಿಯ ಮೇಲೆ ಸೂರ್ಯನಿಂದ ಪರಿಣಾಮವಾಗುವುದಾದರೆ, ಚಂದ್ರನಿಂದ ಇಳಿತ ಭರತವಾಗುವುದಾದರೆ, ಮಾನವ ಅದೃಷ್ಟವು ಗ್ರಹಗಳ ಯೋಗಾಯೋಗಗಳ ಮೇಲೆ ಹೊಂದಿಕೊಂಡಿರಬೇಕೆಂದು ವಾದಿಸಲಾಗುತ್ತದೆ. ಭೂಮಿಯ ಮೇಲೆ ಪರಿಣಾಮವನ್ನುಂಟುಮಾಡುವ ಗ್ರಹಗಳು, ಅದರಲ್ಲಿ ವಾಸಿಸುವ ಮಾನವ ಜೀವಿಗಳ ಮೇಲೆ ಕೂಡಾ ಪ್ರಭಾವವನ್ನುಂಟುಮಾಡಲು ಸಾಧ್ಯವಿದೆಯೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಯಾಕೆಂದರೆ ಇಡೀ ವಿಶ್ವವು ಪರಸ್ಪರ ಸಂಬಂಧವುಳ್ಳದಾಗಿರುತ್ತದೆ. ಆದರೆ ಅದನ್ನೊಪ್ಪಿದಾಕ್ಷಣ, ಮಾನವನೊಬ್ಬನ ಜನ್ಮ ಕಾಲದ ಗ್ರಹವೊಂದರ ಸ್ಥಾನದಿಂದ ಆವನ ಇಡೀ ಜೀವಮಾನವು ನಿಶ್ಚಿತವಾಗುವುದೆಂಬ ಅಭಿಮತಕ್ಕೊಮ್ಮೆಯೇ ಹಾರಬಿಡಲು ಸಾಧ್ಯವಿಲ್ಲ. ಗ್ರಹಗಳು ಬೇರೆ ಬೇರೆ ಸಮಯಗಳಲ್ಲಿ ಸಮ್ಮೆಲ್ಲವರ ಮೇಲೆ ಒಂದೇರೀತಿಯಾಗಿ ಒಳ್ಳೆಯ ಅಥವಾ ಕೆಟ್ಟಪರಿಣಾಮವನ್ನುಂಟುಮಾಡುವುವು. ಆದರೆ ಅಷ್ಟು ಮಾತ್ರದಿಂದ ಅವು ಇವತ್ತು ಹುಟ್ಟಿದವನ ಮೇಲೆ ಒಂದುರೀತಿ ಮತ್ತು ನಾಳೆ ಹುಟ್ಟುವವನಮೇಲೆ ಇನ್ನೊಂದುರೀತಿ ಪರಿಣಾಮವನ್ನುಂಟುಮಾಡುವವೆಂದು ಗ್ರಹಿಸುವಷ್ಟು ಮುಂದುವರಿಯುವುದು ಯುಕ್ತವಾಗಲಾರದು. ನಿನ್ನೆ ಮತ್ತು ಇವತ್ತು ಅಗೆಯಲ್ಪಟ್ಟ ಎರಡು ಬಾವಿಗಳಮೇಲೆ ಒಂದೇ ರೀತಿಯಾಗಿ ಬೀಳುವ ಸೂರ್ಯಪ್ರಕಾಶದಿಂದ ಅವುಗಳ ನೀರಿನ ಉಷ್ಣವು ಬೇರೆ ಬೇರೆಯಾಗಿರಲು ಸಾಧ್ಯವಿಲ್ಲ. ಅದೇ ರೀತಿ ಎಲ್ಲವರ ಮೇಲೂ ಒಂದೇ ಪ್ರಕಾರ ಪ್ರಭಾವವನ್ನುಂಟುಮಾಡುವ ಗಗನಜ್ಯೋತಿಗಳೇ, ಒಂದೇ ದಿನ ಬೆಳಿಗ್ಗೆ ಮತ್ತು ಸಂಜೆ ಹುಟ್ಟುವ ಎರಡು ಕೂಸುಗಳ ಮೇಲೆ ಭಿನ್ನ ಭಿನ್ನ ಪರಿಣಾಮವನ್ನುಂಟುಮಾಡುವುದು ಹೇಗೆ ಸಾಧ್ಯ? ಆದರೂ ಜ್ಯೋತಿಷದ ಮೇರೆಗೆ, ಒಂದು ಲಗ್ನದಲ್ಲಿ ಒಂದು ಗ್ರಹವು ಇರುವ ಸ್ಥಾನದ ಮೇಲೆ ಅದರ ಪ್ರಭಾವವು ಹೊಂದಿಕೊಂಡಿರುವುದೆಂದು ಹೇಳಲಾಗುತ್ತದೆ. ಜನನದ ಸಮಯದಲ್ಲಿ ಕೆಲವೇ ನಿಮಿಷಗಳ ವ್ಯತ್ಯಾಸದಿಂದ ಲಗ್ನವೇ ಬದಲಾಗಿ ಪರಿಣಾಮವು ಸಂಪೂರ್ಣ ಬೇರೆಯೇ ಆಗಬಹುದು.

(೯ನೇ ಪುಟ ನೋಡಿರಿ).

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂಟೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಿನ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

ಮದುವೆ ಉಪನಯನ

ಮೊದಲಾದವುಗಳ ಆಮಂತ್ರಣ ಪತ್ರಿಕೆ

ಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚೊಕ್ಕವಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನು ಶಾಘ್ರವಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,

ಕೋಳದ ಪೇಟೆ ರಸ್ತೆ, ಉಡುಪಿ.

ಸಮಾಚಾರ ಸಂಗ್ರಹ

ರಷ್ಯಾ-ಜರ್ಮನ್ ಯುದ್ಧ.

ಪೂರ್ವ ರಣರಂಗದಲ್ಲಿ ಪ್ರಚಂಡ ಹೋರಾಟ ಆರಂಭವಾಗಲು ಇನ್ನೂ 6 ವಾರವಾಗಬೇಕು. ಈಗ ಹಿಮವು ಕರಗಲಾರಂಭವಾಗಿದೆಯಷ್ಟೆ. ಎರಡು ಕಡೆಯವರೂ ಈ ಜೀವನ್ಮರಣ ಹೋರಾಟಕ್ಕಾಗಿ ಭರದಿಂದ ಭಾರಿ ಸಿದ್ಧತೆ ಮಾಡುತ್ತಿದ್ದಾರೆ. ಈ ಅಂತರದಲ್ಲಿ ಆದಷ್ಟು ಹೆಚ್ಚಿನ ಸ್ಥಳಗಳನ್ನು ಜರ್ಮನರಿಂದ ಗೆದ್ದು ಅವರನ್ನು ಬಗ್ಗು ಬಡಿಯಬೇಕೆಂದು ಕೆಂಪು ಸೇನೆಯು ಸಾಹಸಪರ ಧಾಳಿನಡಿಸಿ ಕಲಿನಿನ್, ಬ್ರಿಯಂಸ್ಕ್ ಮತ್ತು ಲೆನಿನ್‌ಗ್ರಾಡುಗಳಲ್ಲಿ ವಿಜಯಗಳನ್ನುಪಡೆದಿದೆ. ಸೋವಿಯೆಟ್ ಸೈನಿಕರು ಸ್ಮೊಲೆಂಸ್ಕ್ ಪಟ್ಟಣವನ್ನು ಸಮೀಪಿಸುತ್ತಿದ್ದಾರೆ. ದಕ್ಷಿಣದಲ್ಲಿ ರಷ್ಯದ ಅತ್ಯುತ್ತಮ ಸೇನಾಧಿ ಮಾರ್ಶಲ್ ಟಿಮೊಶೆಂಕೋರವರು, ಪ್ರಬಲ ಸೇನಾಸಿದ್ಧತೆಯಿಂದ ಖಾರ್ಕೋವನ್ನು ಹಿಡಿಯುವ ಸಾಹಸದಲ್ಲಿ ನಿರತರಾಗಿರುತ್ತಾರೆ. ಕ್ರೈಮಿಯದಲ್ಲಿಯೂ ರಷ್ಯಾನರು ಜರ್ಮನರನ್ನು ಹಿಮ್ಮೆಟ್ಟಿಸಿರುತ್ತಾರೆ. ಟಗನ್ರೊಗಿನ ಮೇಲೆ ನೌಕಾ ಧಾಳಿ ನಡಿಸಿರುತ್ತಾರೆ. ಫಿನ್ನಿಶ್ ರಣರಂಗದಲ್ಲಿ ಕೂಡಾ ಕೆಂಪು ಸೇನೆಯು ಫಿನ್ನರ ಸೇನಾವ್ಯೂಹವನ್ನು ಭೇದಿಸಿ ಮುಂದೊತ್ತಿರುತ್ತದೆ. ಕೆಂಪು ಸೇನೆಯನ್ನು ತಡೆಯಲು ಜರ್ಮನರು ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸಿ ಭೀಷಣವಾಗಿ ಹೋರಾಡುತ್ತಿದ್ದಾರೆ. ಹೆಚ್ಚೆಚ್ಚು ವಿಮಾನಗಳನ್ನು ಉಪಯೋಗಿಸಹತ್ತಿದ್ದಾರೆ. ಆದರೂ ಹೆಚ್ಚಿನ ಪ್ರಯೋಜನವಾಗಿರುವುದಿಲ್ಲ. ಜರ್ಮನರ ಹಿಂದುಗಡೆಯಿಂದ ಸಂಘಟಿತ ಗೊರಿಲ್ಲ ಪಂಗಡಿಗರು ಕೊಡುವ ಹಾವಳಿಯು ಈಗ ತೀವ್ರ ಸ್ವರೂಪ ತಾಳಿದೆ.

ಪಂಡಿತ ನೆಹರುಗಳು.

ಬಂಗಾಳ ಮತ್ತು ಅಸ್ಸಾಮುಗಳನ್ನು ಸಂದರ್ಶಿಸುವ ಕಾರ್ಯಕ್ರಮವನ್ನು ಕೈಕೊಂಡು ಇದೇ ತಾ. 18ರಲ್ಲು ಕಲ್ಕತ್ತಕ್ಕೆ ಹೋಗಿ ಕಾಂಗ್ರೆಸ್ ಕೆಲಸಗಾರರ ಸಭೆ ನಡಿಸಿ, 'ಜಾಪಾನಿನ ಆಕ್ರಮಣವನ್ನು ಹಿಂದೀಯರು ವಿರೋಧಿಸತಕ್ಕದ್ದು. ಅವರಿಗೆ ಸಾಧ್ಯವಾದ ರೀತಿಯಲ್ಲೆಲ್ಲಾ ತೊಂದರೆ ಕೊಡತಕ್ಕದ್ದು. ಕಾಂಗ್ರೆಸು ಆಕ್ಸಿಸ್ ರಾಷ್ಟ್ರಗಳಿಗೆ ಬದ್ಧ ವಿರೋಧವಿರುವುದೆಂಬುದನ್ನು ಮೊದಲೇ ಸ್ಪಷ್ಟಪಡಿಸಿರುವುದು. ಆಕ್ಸಿಸ್ ರಾಷ್ಟ್ರಗಳು ಜಯಹೊಂದಿದರೆ ಗುಲಾಮಗಿರಿಯು ನಿರಂತರವಾಗಿ ಉಳಿಯುವಂತಾಗುವುದೆ'ಂದು ಅಭಿಪ್ರಾಯಪಟ್ಟಿರುವರು.

ಬರ್ಮಾದ ಯುದ್ಧ.

ಬರ್ಮದ ಅತಿದೊಡ್ಡ ಎಣ್ಣೆ ಕ್ಷೇತ್ರವನ್ನು ಬ್ರಿಟಿಷ್ ಸೈನಿಕರು ಜಯಶೀಲವಾಗಿ ನಾಶಪಡಿಸಿ ಹಿಂದೆ ಸರಿದಿರುವರು. ಕಳೆದ ತಾ. 16ನೇ ರಾತ್ರಿ ಅಮೆರಿಕಾನ ಬೋಂಬರ್ ವಿಮಾನಗಳು ರಂಗೂನ್ ಬಂದರಿನ ಮೇಲೆ ಪ್ರಬಲ ಧಾಳಿ ನಡಿಸಿರುತ್ತವೆ. ತಿಂಗಳಿಗೆ ಒಂದು ಮಿಲ್ಯ ಗೆಲನು ಪೆಟ್ರೋಲು ದೊರೆಯುತ್ತಿದ್ದು ಚೈನ ಮತ್ತು ಬ್ರಿಟನಿಗೆ ಬಹಳ ಪ್ರಯೋಜನಕರವಾಗಿದ್ದ ಯನಂಗ್ ಯೋಂಗ್ ಎಣ್ಣೆ ಕ್ಷೇತ್ರವನ್ನು ಸಂಪೂರ್ಣವಾಗಿ ನಾಶ ಮಾಡಲಾಗಿದೆ. ಚೀನೀ ಸೈನಿಕರು ಅತ್ಯಂತ ಧೈರ್ಯ ಮತ್ತು ಸ್ಥೈರ್ಯದಿಂದ ಹೋರಾಡಿ ಜಾಪಾನರಿಗೆ ಹೆಚ್ಚಿನ ನಷ್ಟವನ್ನುಂಟುಮಾಡಿರುತ್ತಾರೆ. ಬರ್ಮದಲ್ಲಿ, ಇರಾವದಿ ನದಿಯ ಮಾಗ್ವೆ ಎಂಬಲ್ಲಿ, ಮೈಯ್ಟೋಲದ ಬಳಿ ಬರ್ಮಾ ರೈಲ್ವೇ ರಸ್ತೆಯಲ್ಲಿ ಮತ್ತು ಪೌಂಜಿಯ ಹತ್ತಿರ ಸಾಲ್ವೀನ್ ನದಿ ಪ್ರದೇಶದಲ್ಲಿ, ಹೀಗೆ ಮೂರು ಕಡೆಗಳಲ್ಲಿ ಹೋರಾಟ ನಡೆಯುತ್ತಿದೆ. ಪೌಂಜಿ ಪ್ರದೇಶದಲ್ಲಿ ಜಾಪಾನರು ದೊಡ್ಡ ಯುದ್ಧ ನಡಿಸಿ ಮಂಡಲೆ ಲಾಶಿಯೋ ರಸ್ತೆಯನ್ನು ಕಡಿದು ಹಾಕಲೆತ್ನ ಮಾಡುತ್ತಿದ್ದಾರೆ.

ಹಿಂದುದೇಶದ ರಕ್ಷಣೆಯ ಪ್ರಶ್ನೆ.

ಕ್ರಿಪ್ಸರ ಸಂಧಿಯ ಪ್ರಯತ್ನವು ನಿಷ್ಫಲವಾದುದರಿಂದ ಅಮೆರಿಕ ಮತ್ತು ಇಂಗ್ಲೆಂಡುಗಳಲ್ಲಿ ತಳಮಳವುಂಟಾಗಿದೆ. ಅಮೆರಿಕವು ಹಿಂದು ದೇಶದ ರಕ್ಷಣೆಗಾಗಿ ಹೆಚ್ಚಿನ ಸಹಾಯವಮಾಡುತ್ತಿದೆ. ಯುದ್ಧಾಂತ್ಯದಲ್ಲಿ ಹಿಂದು ದೇಶವು ಸ್ವಾತಂತ್ರ್ಯ ಪಡೆಯುವುದು ನಿಶ್ಚಯ. ಅತ್ಲಾಂತಿಕ ಘೋಷಣೆಯು ಲೋಕದ ಎಲ್ಲಾ ರಾಷ್ಟ್ರಗಳಿಗೂ ಅನ್ವಯಿಸುವುದೆಂದು ಪ್ರೆಸಿಡೆಂಟ್ ರುಸವೆಲ್ಟರ ಅಭಿಮತ. ಆದುದರಿಂದ ಹಿಂದೀಯರು ತಮ್ಮ ದೇಶ ರಕ್ಷಣೆಯಲ್ಲಿ ಉತ್ಸಾಹದಿಂದ ಭಾಗವಹಿಸಬೇಕು. ಪ್ರೆಸಿಡೆಂಟ್ ರುಸವೆಲ್ಟರು ಮಧ್ಯಸ್ತಿಕೆ ಮಾಡಿಯಾದರೂ ಹಿಂದೀ ಬಿಕ್ಕಟ್ಟನ್ನು ನಿವಾರಿಸಬೇಕೆಂದು ಅಮೆರಿಕಾನರ ಅಭಿಪ್ರಾಯವಿರುತ್ತದೆ. ಬರ್ಮದಲ್ಲಿ ಜಾಪಾನರ ಶೀಘ್ರವಾದ ಮುನ್ನಡೆ ಮತ್ತು ಹಿಂದೀಸಾಗರದಲ್ಲಿ ಬ್ರಿಟನು ಪಡೆದಿರುವ ಹಡಗ ನಷ್ಟದಿಂದ ಬ್ರಿಟಿಷರು ತಲ್ಲಣಗೊಂಡಿರುತ್ತಾರೆ. ಕಟ್ಟಕಟ್ಟಳೆಯ ಧೋರಣೆಯನ್ನು ಬಿಟ್ಟು ಹಿಂದೀ ಸ್ವಾತಂತ್ರ್ಯ ಪ್ರಶ್ನೆಯನ್ನು ಬ್ರಿಟನು ಶೀಘ್ರವಾಗಿ ಬಿಡಿಸಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ದೇಶರಕ್ಷಣೆಯ ಜವಾಬ್ದಾರಿಯನ್ನು ಹಿಂದೀಯರಿಗೊಪ್ಪಿಸಬೇಕೆಂದು ನ್ಯೂಸ್ಟೇಟ್ಸ್‌ಮೆನ್ ಮೊದಲಾದ ಪತ್ರಿಕೆಗಳು ಒತ್ತಾಯಪಡಿಸಿರುತ್ತವೆ. ಹಿಂದೀ ರಾಜಕೀಯ ಮುಖಂಡರೊಡನೆ ಪುನಃ ಸಂಧಿಪ್ರಸ್ತಾಪವು ನಡೆಸಲ್ಪಡುವುದೆಂಬ ನಂಬಿಕೆಯು ಬ್ರಿಟಿಷರಲ್ಲಿ ನೆಲೆಗೊಂಡಿರುತ್ತದೆ

ಜರ್ಮನರ ವಸಂತ ಧಾಳಿಯು

ಮುಂದುವರಿಸಲ್ಪಡಬಹುದೆಂದೂ, ಜರ್ಮನರು ಜರ್ಮನಿಯ ಸೇನಾನಾಯಕರ ಮೇಲೆ ವಿಶ್ವಾಸವಿಟ್ಟು ತಾಳ್ಮೆಯಿಂದಿರಬೇಕೆಂದೂ ನಾಝಿ ಪತ್ರಿಕೆಗಳೇ ಎಚ್ಚರಿಸಹತ್ತಿವೆ. ವಸಂತ ಧಾಳಿ ನಡಿಸುವ ವಿಷಯದಲ್ಲಿ ಹಿಟ್ಲರ್ ಮತ್ತು ಇತರ ಸೇನಾನಿಗಳೊಳಗೆ ಭಿನ್ನಾಭಿಪ್ರಾಯವುಂಟಾಗಿರುವುದೆಂದು ಸುದ್ದಿಯುಂಟಾಗಿದೆ. ರಷ್ಯದ ಮೇಲೆ ಆದಷ್ಟು ಬೇಗನೆ ಧಾಳಿನಡಿಸಬೇಕೆಂದು ಹಿಟ್ಲರರ ಆತುರ. ಆದರೆ ಜರ್ಮನ್ ಸೇನಾನಾಯಕರು ಆ ಕುರಿತು ಅವಸರಮಾಡುವುದು ಸರಿಯಲ್ಲೆಂಬ ಅಭಿಪ್ರಾಯವುಳ್ಳವರಿರುತ್ತಾರೆ. ಚಿಕ್ಕ ರಣರಂಗಗಳಲ್ಲಿ ತೀವ್ರ ಹೋರಾಟ ನಡೆಯಬಹುದಾದರೂ 'ಜೂನ್ ತಿಂಗಳ ಮೊದಲು ಪ್ರಚಂಡ ಧಾಳಿಯು ಆರಂಭವಾಗುವ ಸಂಭವ ತೋರುವುದಿಲ್ಲ. ಆ ಮೊದಲು ಎಲ್ಲಾ ಕಡೆಗಳಲ್ಲಿಯೂ ಹವಾಗುಣವು ಅನುಕೂಲವಾಗಿರುವುದಿಲ್ಲ. ಉತ್ತರದಲ್ಲಿ ಹಿಮವು ಸರಿಯಾಗಿ ಕರಗಲು ಇನ್ನೂ ಒಂದು ತಿಂಗಳು ಬೇಕು.

೨೦೦ ಸಬ್ ಮೆರೀನುಗಳು ಕಟ್ಟಲ್ಪಡುವವು.

೨೦೦,೦೦೦ ಟನ್ ಸಬ್ ಮೆರೀನ್ ಅಂದರೆ ೧೦೦ಕ್ಕಿಂತಲೂ ಮಿಕ್ಕಿದ ಸಬ್ ಮೆರೀನುಗಳನ್ನು ಕಟ್ಟುವರೆ ಬೇಕಾದ ಹಣವನ್ನು ಯುನೈಟೆಡ್ ಸ್ಟೇಟ್ಸಿನ ಸೆನೆಟು ಮಂಜೂರು ಮಾಡಿರುವುದು. ಆದಷ್ಟು ಹೆಚ್ಚಿನ ಸಬ್ ಮೆರೀನುಗಳನ್ನು ಶೀಘ್ರವಾಗಿ ಕಟ್ಟುವ ಪ್ರಯತ್ನವನ್ನು ಯುನೈಟೆಡ್ ಸ್ಟೇಟ್ಸು ಮಾಡುತ್ತಿರುವುದು.

ಮಧ್ಯ ಪೂರ್ವದ ರಣರಂಗ

ಮಧ್ಯಪೂರ್ವದ ಪ್ರಧಾನ ಬ್ರಿಟಿಷ್ ಸೇನಾನಾಯಕರಾದ ಜನರಲ್ ಅಚಿನ್ಲೆಕರು, ಇತ್ತಲಾಗಿ ವಿಮಾನಮೂಲಕ ಇರಕ್, ಇರಾನ್, ಸಿರಿಯ, ಟ್ರಾನ್ಸ್‌ಜೋರ್ಡನ್ ಮತ್ತು ಪೆಲೆಸ್ತಿನ್‌ಗಳನ್ನು ಸಂದರ್ಶಿಸಿ ಅಲ್ಲಿಯ ಸೇನೆಗಳನ್ನು ಪರೀಕ್ಷಿಸಿ ಸೇನಾನಾಯಕರುಗಳೊಂದಿಗೆ ಮಾತುಕತೆ ನಡಿಸಿದರು. ಮಧ್ಯಪೂರ್ವದ ಮುಸಲ್ಮಾನರಾಜ್ಯಗಳನ್ನು ಬ್ರಿಟನಿನ ಎದುರಾಗಿ ಎತ್ತಿಕಟ್ಟಲು ಆಕ್ಸಿಸ್ ರಾಷ್ಟ್ರಗಳು ಮಾಡುತ್ತಿರುವ ನಾನಾಪ್ರಚಾರದಿಂದ ಹೆಚ್ಚಿನ ಪರಿಣಾಮವೇನೂ ಆಗಿರುವುದಿಲ್ಲ. ಈ ರಾಜ್ಯಗಳ ಮುಸಲ್ಮಾನರೆಲ್ಲಾ ಹೆಚ್ಚಾಗಿ ಬ್ರಿಟನಿನ ಪಕ್ಷಪಾತಿಗಳಿರುತ್ತಾರೆ. ಆಕ್ಸಿಸ್ ರಾಷ್ಟ್ರಗಳ ರೀತಿ ನೀತಿಗಳು ಅವರಲ್ಲಿ ಜಿಗುಪ್ಸೆಯನ್ನುಂಟುಮಾಡಿವೆ

ಜನರಲ್ ವಾಂಗನ ಬಂಡಾಯ

ಜಾಪಾನಿನ ಪಕ್ಷಪಾತಿಯಾದ ಎಂಟು ಡಿವಿಜನು ಚೀನೀ ಸೇನೆಯ ನಾಯಕರಾದ ಜನರಲ್ ವಾಂಗ್ ಕಿನ್ ವ್ಯೂ ಎಂಬವರು, ಜಾಪಾನಿ ಅಧಿಕಾರಿಗಳನ್ನು ಕೊಂದು ಬಂಡಾಯವೆಬ್ಬಿಸಿ ರಾಷ್ಟ್ರೀಯ ಚೀನೀ ಸೈನಿಕರೊಂದಿಗೆ ಸೇರಿರುವರೆಂದು ತಿಳಿದು ಬರುತ್ತದೆ.

ಸರ್. ಸ್ಟಾಫೋರ್ಡ್ ಕ್ರಿಪ್ಸರು.

ಇದೇ ತಾ.15ರಲ್ಲು ಕೈರೋಪಟ್ಟಣಕ್ಕೆ ಮುಟ್ಟಿರುತ್ತಾರೆ. ಟೆಹಾರಾನಿನಲ್ಲಿದ್ದ ಅವರ ಪುತ್ರಿಯು ಕೈರೋಗೆಹೋಗಿ ಅವರೊಂದಿಗೆ ಸೇರಿರುತ್ತಾರೆ. ಹಿಂದುದೇಶದ ಸೇನಾಪರಿಸ್ಥಿತಿಯ ಕುರಿತು ತೃಪ್ತಿಗೊಂಡಿರುವೆನೆಂದು ಕ್ರಿಪ್ಸರು ಹೇಳಿರುತ್ತಾರೆ. ತಾನು ನಡಿಸಿದ ಸಂಧಿ ಪ್ರಸ್ತಾಪದ ಕುರಿತು ಅವರು ವರದಿಯನ್ನು ಇಷ್ಟರಲ್ಲೇ ಬ್ರಿಟಿಷ್ ಸರಕಾರಕ್ಕೊಪ್ಪಿಸಿರುತ್ತಾರೆ. ಇಂಗ್ಲೆಂಡಿಗೆ ಹೋದ ಮೇಲೆ ಆ ಕುರಿತು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡಲಿದ್ದಾರೆ.

ಜನರಲ್ ಮೆಕ್ ಆರ್ಥರರು.

ಆಸ್ಟ್ರೇಲಿಯದ ಎಲ್ಲಾ ಸೇನೆಗಳ ಅಧಿನಾಯಕರಾಗಿ ನೇಮಿಸಲ್ಪಟ್ಟಿರುವರೆಂದು ಆಸ್ಟ್ರೇಲಿಯದ ಪ್ರಧಾನ ಮಂತ್ರಿ ಮಿ. ಕರ್ಟಿನರು ಸ್ಪಷ್ಟಪಡಿಸಿರುತ್ತಾರೆ. ಆಸ್ಟ್ರೇಲಿಯದ ಎಲ್ಲಾ ಸೇನೆಗಳ ನಾಯಕರುಗಳೂ ಅವರಿಗೆ ಅಧೀನರಾಗಿ ನಡೆಯಬೇಕಾಗಿದೆ.

ಜಾಪಾನಿನ ಮೇಲೆ ವಿಮಾನ ಧಾಳಿ!

ಕಳೆದ ಶನಿವಾರ ಅಮೆರಿಕಾನ ವಿಮಾನಗಳು ಜಾಪಾನಿನ ಮುಖ್ಯ ಪಟ್ಟಣವಾದ, ಟೋಕಿಯೋ, ಅತಿ ದೊಡ್ಡ ಕೈಗಾರಿಕ ಕೇಂದ್ರವಾದ ಬಸಾಕ, ಯೋಕಹಾಮ ಮೊದಲಾದ ಪಟ್ಟಣಗಳ ಮೇಲೆ ವಿಮಾನ ಧಾಳಿ ನಡಿಸಿ ಹೆಚ್ಚಿನ ಹಾವಳಿಯಾಗಿರುವುದೆಂದು ಜಾಪಾನರೇ ಮೊದಲಾಗಿ ಪ್ರಕಟಿಸಿರುತ್ತಾರೆ ಜಾಪಾನಿನ ಕರಾವಳಿಯ ಬಳಿ ಅಮೆರಿಕಾನ ಯುದ್ಧ ಹಡಗ ಮತ್ತು ವಿಮಾನ ವಾಹಕ ಹಡಗಗಳು ಕಂಡುಹಿಡಿಯಲ್ಪಟ್ಟಿವೆಯೆಂದೂ, ಅವುಗಳಿಂದಲೇ ವಿಮಾನಗಳು ಹಾರಿಬಂದು ಧಾಳಿ ನಡಿಸಿದುವೆಂದೂ ಜಾಪಾನರ ಹೇಳಿಕೆ. ಆದರೆ ಅಮೆರಿಕವಾಗಲಿ ಇಂಗ್ಲೆಂಡಾಗಲಿ ಈ ಸುದ್ದಿಯು ನಿಜವೆಂಬ ವಿವರವನ್ನು ಪ್ರಕಟಿಸಿರುವುದಿಲ್ಲ. ಈ ವಿಮಾನ ಧಾಳಿಯಿಂದ ಜಾಪಾನ ಸರಕಾರವು ತಳಮಳಗೊಂಡಿದೆ. ಮುಖ್ಯ ಮಂತ್ರಿ ನಿವೇರ ಮಂತ್ರಿಗಳೇ ಮೊದಲಾದವರು ಚಕ್ರವರ್ತಿಗಳನ್ನು ಕಂಡು ಮಾತಾಡಿರುತ್ತಾರೆ. ತಾ. 15ಮತ್ತು 16ರಲ್ಲು ಅಮೆರಿಕಾನ ವಿಮಾನಗಳು ಫಿಲಿಪ್ಪೈನಿನ ಮೇಲೆ ಪ್ರಬಲ ಧಾಳಿ ನಡಿಸಿ ಹೆಚ್ಚಿನ ಹಾವಳಿ ನಡಿಸಿದುದರಿಂದಲೂ ಜಾಪಾನರು ತಲ್ಲಣಗೊಳ್ಳುವಂತಾಗಿದೆ. ಅಮೆರಿಕಾನ ವಿಮಾನಗಳ ಧಾಳಿಯು ದಿನೇ ದಿನೇ ಅಧಿಕವಾಗುತ್ತಿರುವುದರಿಂದ ಜಾಪಾನರು ಅಂಜಿಹೋಗಿರುವಂತಿದೆ. 3 ತಿಂಗಳಾಯಿತು ಜಾಪಾನರು ನ್ಯೂಗಿನಿಯ ಕೆಲವು ಭಾಗಗಳನ್ನು ಹಿಡಿದು. ಆ ಮೇಲೆ ಅವರಿಗೆ ಹೆಚ್ಚಿಗೆ ಮುಂದೊತ್ತಲು ಸಾಧ್ಯವಾಗಿರುವುದಿಲ್ಲ. ಆಸ್ಟ್ರೇಲಿಯದ ಮೂಲಕ ಜಾಪಾನರ ಮೇಲೆ ಪ್ರಬಲ ಧಾಳಿ ನಡಿಸಲು ಅಮೆರಿಕವು ಶೀಘ್ರ ಸಿದ್ಧತೆ ನಡಿಸುತ್ತಿದೆ. ಕೆಲವೇ ತಿಂಗಳುಗಳ ಅವಕಾಶ ದೊರೆತರೆ ಜಾಪಾನನ್ನು ಜಯಶೀಲವಾಗಿ ಪ್ರತಿಭಟಿಸಲು ಅಮೆರಿಕಕ್ಕೆ ಸಾಧ್ಯವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ANNOUNCEMENT

We have great pleasure in announcing an all round reduction in rates of interest on advances.

OUR PRESENT RATES ARE:—

Personal Loans & Overdrafts:	7½% p. a.
Usance Bills.	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK LTD.

ESTD. 1906.

The Canara Banking Corporation Ltd.
(Incorporated in British India with limited liability)
ESTD 1906.
will now receive
SEASON DEPOSITS
for a period of 4 months
at 3% p. a.
AT ALL ITS BRANCHES.

ಉಡುಪಿ, ಗುರುವಾರ, ೨೩-೪-೧೯೪೨

ಸುದ್ದಿಗಳ ಸುಳಿದಾಟದಿಂದಾಗುವ ಹಾನಿ.

ಈಗ ಜನರು ಡಿಲ್ಲಿ ರೇಡಿಯೋ ಮತ್ತು ಬಿ. ಬಿ. ಸಿ.ಯ ವಾರ್ತೆಯನ್ನು ಮಾತ್ರವಲ್ಲದೆ ಬರ್ಲಿನ್, ರೋಮ್ ಮತ್ತು ಟೋಕಿಯೋ ರೇಡಿಯೋಗಳನ್ನೂ ಗುಪ್ತವಾಗಿ ಕೇಳಬಹುದಾದ್ದರಿಂದ ಯುದ್ಧದ ಸಂಬಂಧವಾಗಿ ನಾನಾ ಸುದ್ದಿಗಳು ಜನತೆಯಲ್ಲಿ ಹಬ್ಬಲು ಹೆಚ್ಚಿನ ಆಸ್ಪದವುಂಟಾಗಿರುತ್ತದೆ. ಆದುದರಿಂದ ಯಾವುದಾದರೊಂದು ಪ್ರಾಮುಖ್ಯ ಘಟನೆಯ ಕುರಿತು ಪತ್ರಿಕೆಗಳಲ್ಲಿ ಅಥವಾ ಸರಕಾರವು ಅಧಿಕಾರಿಕವಾಗಿ ವೃತ್ತಾಂತವನ್ನು ಪ್ರಕಟಿಸುವ ಮೊದಲೇ ಜನರಲ್ಲಿ ಆ ಕುರಿತು ನಾನಾ ಸುದ್ದಿಗಳು ವ್ಯಾಪಕವಾಗಿ ಹಬ್ಬಿ ಆ ಕುರಿತು ಜನರು ನಾನಾ ಊಹಾಪೋಹೆಗಳನ್ನು ಮಾಡುತ್ತಾರೆ. ಸರಕಾರವು ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಕಾಲದಲ್ಲಿ ನಿಜ ಸಂಗತಿಗಳನ್ನು ಪ್ರಕಟಿಸದೆ ಬಚ್ಚಿಡುವುದರಿಂದ ಈ ಸುದ್ದಿಗಳನ್ನು ಜನರು ನಿಜವೆಂದು ನಂಬುವಂತಾಗಿದೆ. ಸರಕಾರದ ಇಂತಹ ಧೋರಣೆಯಿಂದಾಗಿ ಅವರು ಪ್ರಕಟಿಸುವ ನಿಜ ಸಂಗತಿಗಳನ್ನೂ ಹಲವು ಸಲ ಜನರು ನಂಬದಂತಾಗಿದೆ. ಈ ಮನೋಸ್ಥಿತಿಯು ಜನಸಾಮಾನ್ಯರಲ್ಲೀಗ ಹಬ್ಬಿ ಬಲಗೊಳ್ಳುತ್ತಿರುವದೆಂಬುದು ಸಾರ್ವಜನಿಕ ಶಾಂತಿ ಮತ್ತು ಸ್ವಾಸ್ಥ್ಯ ರಕ್ಷಣೆಗೆ [illegible] ಹಾನಿಯಾಗಿರುತ್ತದೆ. ಈ ಹಾನಿಯನ್ನು ಸರಕಾರವು ಇನ್ನೂ ಮನಗಂಡಿರುವುದಿಲ್ಲವೆಂಬುದು ಖೇದಕರ ವಿಷಯ.

ಸಿಂಗಪ್ಪೂರ ಮತ್ತು ರಂಗೂನುಗಳ ಪತನದ ವಾರ್ತೆಯನ್ನು ಸರಕಾರವು ಅಧಿಕಾರಿಕವಾಗಿ ಪ್ರಕಟಿಸುವ ಕೆಲವು ದಿನಗಳ ಮೊದಲೇ ಆ ಸುದ್ದಿಯು ಜನರಲ್ಲಿ ಹಬ್ಬಿ ಹೋಗಿದ್ದಿತು. ಅಂಡಮಾನನ್ನು ಜಾಪಾನರು ವಶಪಡಿಸಿಕೊಂಡ ವಾರ್ತೆಯನ್ನು ಡಿಲ್ಲಿ ರೇಡಿಯೋಗಿಂತಲೂ ಮೊದಲಾಗಿ ಪ್ರಕಟಿಸಿದುದು ಬಿ. ಬಿ. ಸಿ. ಇನ್ನು ಹಲವು ಪ್ರಾಮುಖ್ಯ ವಾರ್ತೆಗಳನ್ನು ಡಿಲ್ಲಿ ರೇಡಿಯೋ ಅಥವಾ ಬಿ. ಬಿ. ಸಿ.ಯು ಪ್ರಕಟಿಸುವ ಮೊದಲೇ ಬರ್ಲಿನ್ ಇಲ್ಲವೆ ಟೋಕಿಯೋ ರೇಡಿಯೋಗಳು ಪ್ರಕಟಿಸಿ ಬಿಡುವವು. ಕೆಲ ದಿನಗಳ ನಂತರ ಅವುಗಳನ್ನು ಡಿಲ್ಲಿ ರೇಡಿಯೋ ಮತ್ತು ಬಿ. ಬಿ. ಸಿ. ಗಳೊಪ್ಪಿದುದಿದೆ. ಇದರಿಂದಾಗಿ ಜನತೆಯು ಮೊದಲಾಗಿ ಮತ್ತು ಪ್ರಯತ್ನಪೂರ್ವಕವಾಗಿ ಬರ್ಲಿನ್ ಮತ್ತು ಟೋಕಿಯೋ ರೇಡಿಯೋಗಳನ್ನು ಕೇಳುವ ಉತ್ಸುಕತೆಯುಳ್ಳವರಾಗುವುದು ಸ್ವಾಭಾವಿಕ. ಈ ರೇಡಿಯೋಗಳನ್ನು ರಹಸ್ಯವಾಗಿ ಕೇಳಿ ಅವು ಕೋರುವ ವಾರ್ತೆಗಳನ್ನು ಸುದ್ದಿಗಳಾಗಿ ಮಾತ್ರ ಸುಳಿದಾಡಿಸಲು ಸಾಧ್ಯವಾಗಿರುವುದರಿಂದ ಈಗಿನ ವಾತಾವರಣದಲ್ಲಿ ನಾನಾ ಸುದ್ದಿಗಳು ಬಲುದಟ್ಟವಾಗಿ ಹಬ್ಬಿ ಹೋಗುವಂತಾಗಿದೆ. ಈ ಸುದ್ದಿಗಳು ಕಿವಿಯಿಂದ ಕಿವಿಗೆ ಹಬ್ಬುವಾಗ ಅವುಗಳಿಗೆ ಸ್ವೇಚ್ಛಾನುಸಾರ ಉಪ್ಪುಕಾರ ಮತ್ತು ಬಣ್ಣ ಹಚ್ಚಲಾಗುತ್ತದೆ. ಪರಿಣಾಮವಾಗಿ ವಾರ್ತೆಯೊಂದು, ಸುದ್ದಿಯು ಬೇರೊಂದೇ ಆಗಿ ಬಿಡುವುದುಂಟು. ಬಂಗಾಳಕೊಲ್ಲಿಯಲ್ಲಿ ಇಂತಿಷ್ಟೇ ವ್ಯಾಪಾರಿ ಹಡಗಗಳನ್ನು ಜಾಪಾನರು ಮುಳುಗಿಸಿರುವರೆಂದು ಸರಕಾರವು ಪ್ರಕಟಿಸಿರುವುದಿಲ್ಲ. ಹಲವು ಹಡಗಗಳು ಮುಳುಗಿಸಲ್ಪಟ್ಟಿರುವವೆಂದು ಪ್ರಕಟಿಸಿರುತ್ತದೆ. 16 ಹಡಗಗಳನ್ನು ಮುಳುಗಿಸಲಾಗಿದೆಯೆಂದು ಜಾಪಾನರು ಉದ್ಘೋಷಿಸಿರುತ್ತಾರೆ. ಹಲವು ದಿನಗಳ ಮೇಲೆ ಸರಕಾರವು ಜಾಪಾನರು ಹೇಳುವಷ್ಟು ಹಡಗಗಳೇನೂ ಮುಳುಗಿಸಲ್ಪಟ್ಟಿಲ್ಲೆಂದು ಹೇಳಿರುವುದೇ ಹೊರತು ಮುಳುಗಿ ಹೋದ ಹಡಗಗಳು ಇಂತಿಷ್ಟೇ ಎಂದೇನೂ ಸ್ಪಷ್ಟವಾಗಿ ಪ್ರಕಟಿಸಿರುವುದಿಲ್ಲ. ಅಂದಮೇಲೆ ಸ್ವಾಭಾವಿಕವಾಗಿ ಜಾಪಾನರ ವಾರ್ತೆಯನ್ನೇ ಜನರು ನಂಬುವಂತಾಗಿದೆ. ಅಂಡಮಾನವನ್ನು ಜಾಪಾನರು ಆಕ್ರಮಿಸಿ ಕೆಲವು ದಿನಗಳಾದ ಮೇಲೆ, ಅದನ್ನು ತಾವು ಮೊದಲೇ ಬಿಟ್ಟು ಬಂದಿದ್ದೆವೆಂದು ಪ್ರಕಟಿಸಿತು. ಆದರೆ ಅನಂತರ ಅಂಡಮಾನಿನ ಕಮಿಶನರರು ಜಾಪಾನರಿಗೆ ಸೆರೆ ಸಿಕ್ಕಿರುವರೆಂದು ಪ್ರಕಟಿಸಲಾಯಿತು. ಮೊದಲೇ ಅಂಡಮಾನವನ್ನು ಬಿಟ್ಟು ಬಿಡಲಾಗಿದ್ದರೆ ಅದರ ಪ್ರಾಮುಖ್ಯಾಧಿಕಾರಿಗಳೇ ಸೆರೆಯಾಗುವುದು ಹೇಗೆ? ಕೊಲಂಬೊದ ವಿಮಾನ ಧಾಳಿಯಲ್ಲ ಇಷ್ಟೇ ಹಾನಿಯಾಗಿರುವುದೆಂದು ಸರಕಾರವೇನೂ ಪ್ರಕಟಿಸಿರುವುದಿಲ್ಲ. ಹೆಚ್ಚೇನೂ ಪ್ರಾಣ ಹಾನಿಯಾಗಿಲ್ಲೆಂದು ಮಾತ್ರ ಪ್ರಕಟಿಸಿದೆ. ಅಂದಮೇಲೆ ಜನರು ಜಾಪಾನರ ವಾರ್ತೆಯನ್ನೇ ನಂಬುವಂತಾಗುವುದಿಲ್ಲವೇ?

ತಣ್ಣಗಿದ್ದ ಮದ್ರಾಸ್ ಸರಕಾರವು ಕೆಲ ದಿನಗಳ ಮೊದಲು ಥಟ್ಟನೆ ದಿಗಿಲುಗೊಂಡು, ಅನಾವಶ್ಯವಾಗಿರುವ ಜನರೆಲ್ಲಾ ಮದ್ರಾಸನ್ನು ಕೂಡಲೆ ಬಿಟ್ಟು ಹೋಗಬೇಕೆಂದು ಆಜ್ಞೆ ಹೊರಡಿಸಿತು. ಸರಕಾರದ ಖಾತೆಗಳನ್ನು ಬೇರೆ ಬೇರೆ ಕಡೆಗಳಿಗೆ ವರ್ಗಾಯಿಸಿತು. ಈ ದಿಗಿಲಿಗೆ ಕಾರಣವೇನೆಂಬುದೇ ಈ ವರೆಗೆ ತಿಳಿದಿಲ್ಲ. ಸರಕಾರವು ಆಜ್ಞೆ ಹೊರಡಿಸಿ ಈಗ ಹಲವು ದಿನಗಳಾದರೂ ಮದ್ರಾಸಿಗೇನೂ ಅಪಾಯ ಸಂಭವಿಸಿರುವಂತೆ ತೋರುವುದಿಲ್ಲ. ಮಂಗಳೂರಿನ ಅಧಿಕಾರಿಗಳೂ ಇದೇ ರೀತಿ ದಿಗಿಲುಗೊಂಡಿರುವರೆಂದೂ ನಾನಾ ಸುದ್ದಿಗಳು ದಟ್ಟವಾಗಿ ಹಬ್ಬಿರುತ್ತವೆ. ಆದರೆ ಅದಕ್ಕೆ ನಿಜವಾದ ಕಾರಣವೇನೋ ತಿಳಿಯದು. ಸರಕಾರವು ಜನರನ್ನಂತಿರಲಿ, ಪತ್ರಿಕೆಗಳನ್ನೂ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ನಿಜಸ್ಥಿತಿಯನ್ನು ಇದಕ್ಕಿದ್ದಂತೆ ತಿಳಿಸುವುದಿಲ್ಲ. ಪಶ್ಚಿಮ ಕರಾವಳಿಯಲ್ಲಿ ಈಗ ದಿನನಿತ್ಯವೆಂಬಂತೆ ವಿಮಾನಗಳು ಅತ್ತಿತ್ತ ಹಾರಾಡಿಹೋಗುತ್ತವೆ. ಆ ಕುರಿತು ಜನರಲ್ಲಿ ನಾನಾ ಆಧಾರರಹಿತ ಸುದ್ದಿಗಳು ಹಬ್ಬುವಂತಾಗಿದೆ. ಈ ವಿಮಾನಗಳೆಲ್ಲವೂ ಸರಕಾರದವೇ ಆಗಿರುವವೆಂಬುದರಲ್ಲಿ ಸಂದೇಹವೇ ಇಲ್ಲವಾಗಲು ಸರಕಾರವು ಅದನ್ನು ಪ್ರಕಟಿಸಿ ಜನತೆಗೆ ಆ ಕುರಿತು ನಿಜವಾದ ತಿಳುವಳಿಕೆಯನ್ನೀಯುವ ಪ್ರಯತ್ನವೇನೂ ನಡಿಸಲ್ಪಡುವುದಿಲ್ಲ. ಕರಾವಳಿಯಲ್ಲಿ ಬ್ಲೇಕ್‌ಔಟಿನ ನಿಯಮಗಳನ್ನು ವಿವೇಕರಹಿತ ಕಠಿಣತೆಯಿಂದ ಮತ್ತು ಯಾಂತ್ರಿಕ ಮನೋವೃತ್ತಿಯಿಂದ ಜ್ಯಾರಿಗೆ ತರಲಾಗಿದೆಯೆಂದು ನಮಗೆ ತೋರುತ್ತದೆ. ಆದರೆ ಜಾಪಾನರ ಆಕ್ರಮಣದ ಕುರಿತು ಜನರಲ್ಲಿ ಪ್ರಬಲವಾಗಿ ಹೆಚ್ಚುತ್ತಿರುವ ದಿಗಿಲನ್ನು ಪ್ರತಿಭಟಿಸಿ, ಹಿಂದುಸ್ಥಾನದ ಕರಾವಳಿಯ ರಕ್ಷಣೆಯ ಕುರಿತು ಎಂತಹ ಏರ್ಪಾಡು ಮಾಡಲಾಗಿದೆಯೆಂಬುದನ್ನು ತಿಳಿಸಿ ಜನರಲ್ಲಿ ನಿರ್ಭಯ ಮತ್ತು ಶಾಂತ ಮನೋವೃತ್ತಿಯನ್ನುಂಟು ಮಾಡುವ ಪ್ರಯತ್ನವೇ ನಡೆದಿಲ್ಲ.

ಇನ್ನಾದರೂ ಸರಕಾರವು ತನ್ನ ಅರ್ಥರಹಿತವಾದ ಗುಟ್ಟಿನ ಧೋರಣೆ ಮತ್ತು ರೀತಿ ನೀತಿಯನ್ನು ಬಿಟ್ಟು ಜನತೆಯನ್ನು ಸಂಪೂರ್ಣವಾಗಿ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಯುದ್ಧದ ಪರಿಸ್ಥಿತಿಯನ್ನು ಇದ್ದಕ್ಕಿದ್ದಂತೆ ಜನತೆಗೆ ಕೂಡಲೇ ತಿಳಿಸಬೇಕು. ಈ ವಿಷಯದಲ್ಲಿ ಸೋವಿಯಟ್ ಹಾಕಿಕೊಟ್ಟಿರುವ ಮಾದರಿಯು ಅನುಕರಣೀಯವಿದೆ. ಅದು ಜನತೆಯಿಂದ ಎಂತಹ ಉತ್ಕಟ ಪರಿಸ್ಥಿತಿಯನ್ನಾದರೂ ಮರೆಯಲ್ಲಿರಿಸಿದುದಿಲ್ಲ. ಸಂಗತಿಯನ್ನೆಲ್ಲಾ ಯಥಾರ್ಥವಾಗಿ ಜನಸಾಮಾನ್ಯರಿಗೆ ತಿಳಿಸಿ ಅವರ ವಿಶ್ವಾಸ, ಮತ್ತು ಬೆಂಬಲ ಪಡೆದೇ ಯುದ್ಧವನ್ನು ಬಹಳ ಜಯಶೀಲವಾಗಿ ನಡಿಸಿರುವುದು. ಅದೇ ಪ್ರಕಾರ ಯಾವ ಸಂಗತಿಯನ್ನಾದರೂ, ಬರ್ಲಿನ್ ಮತ್ತು ಟೋಕಿಯೋ ರೇಡಿಯೋಗಳು ಪ್ರಕಟಿಸುವ ಮೊದಲೇ ಸರಕಾರವು ಇದ್ದಕ್ಕಿದ್ದಂತೆ ತಿಳಿಸಿಬಿಡಬೇಕು. ತಾನು ಕೈಕೊಳ್ಳುವ ಧೋರಣೆ ಮತ್ತು ಕಾರ್ಯಾಚರಣೆಯ ಕಾರಣವನ್ನು ಆಮೂಲಾಗ್ರವಾಗಿ ಜನತೆಗೆ ತಿಳಿಸಲು ಮುಂದಾಗಬೇಕು. ಬರ್ಲಿನ್ ಮತ್ತು ಟೋಕಿಯೋಗಳು ಕೊಡುವ ವರ್ತಮಾನಗಳನ್ನು ತಾನಾಗಿ ಪ್ರಕಟಿಸಿ ಅವೆಷ್ಟು ಆಧಾರಯುಕ್ತವಾದುದೆಂಬುದನ್ನು ಪ್ರಕಟಪಡಿಸಬೇಕು. ಈಗಣ ಯುದ್ಧವೆಂಬುದು ಕೇವಲ ಕೆಲವೇ ಮಂದಿ ಸೈನಿಕರಿಗೆ ಮತ್ತು ಸರಕಾರಿ ಅಧಿಕಾರಿಗಳಿಗೆ ಮಾತ್ರ ಸಂಬಂಧಿಸುವಂತಹದಲ್ಲ. ಇಡೀ ಜನಾಂಗಕ್ಕೆ ನಿಕಟ ಸಂಬಂಧವಿರುವಂತಹದದು. ಆದುದರಿಂದ ಪ್ರತಿಯೊಂದು ವಿಷಯದಲ್ಲಿಯೂ ಜನಸಾಮಾನ್ಯರಿಗೆ ಸಂಗತಿಯನ್ನೆಲ್ಲಾ ಸರಿಯಾಗಿ ತಿಳಿಸಿ ಅವರ ನಂಬಿಕೆ ಪಡೆದು ನಡೆವದೇನೇ ಸರಕಾರಕ್ಕೆ ಜನಬೆಂಬಲವು ದೊರೆತು ಸುದ್ದಿಗಳ ಸುಳಿದಾಟದಿಂದಾಗುವ ಹಾನಿಯು ತಡೆಗಟ್ಟಲ್ಪಡಬಹುದು.

ಹಿಟ್ಲರರು ಮತ್ತವರ ಸೇನಾನಾಯಕರು.

ರಷ್ಯದ ಭೀಕರ ಯುದ್ಧವು ಹಿಟ್ಲರ್ ಮತ್ತು ಪ್ರಮುಖ ಜರ್ಮನ್ ಸೇನಾನಾಯಕರುಗಳೊಳಗೆ ಭೇದವನ್ನುಂಟುಮಾಡಿರುವಂತಿದೆ. ಇಷ್ಟರವರೆಗಣ ಹಿಟ್ಲರರ ಯುದ್ಧಗಳಲ್ಲೆಲ್ಲಾ ನಾಝಿ ಸೇನೆಯ ಜಯಶೀಲ ಸೈನ್ಯಾಧಿಕಾರಿಗಳಾಗಿದ್ದ ಜನರಲ್ ಬ್ರೋಖಿಸ್ಚ್, ಜನರಲ್ ರುನ್ಸ್ಟೆಟ್ ಮತ್ತು ಜನರಲ್ ವಾನ್ ಬೋಕರನ್ನು ರಷ್ಯದ ಸೇನಾನಾಯಕತ್ವದಿಂದ ವಿಮುಕ್ತಗೊಳಿಸಿ ತಾನೇ ಸರ್ವಾಧಿನಾಯಕರಾಗಿ ಯುದ್ಧವನ್ನು ನಡಿಸುವ ಜವಾಬ್ದಾರಿಯನ್ನು ಕೆಲಸಮಯದ ಹಿಂದೆ ವಹಿಸಿದ್ದರು. ಇಂದೀಗ ಲೆನಿನ್‌ಗ್ರಾಡ್ ಪ್ರದೇಶದ ಸೇನಾನಾಯಕ ಜನರಲ್ ವಾನ್‌ಲೀಬರನ್ನು ತೆಗೆದು ಹಾಕಿ ಅವರ ಬದಲಿಗೆ ಜನರಲ್ ವಾನ್ ಕುಯೆಕ್ಲರನ್ನು ನೇಮಿಸಿರುವರು. ಪೂರ್ವ ರಣರಂಗದ ಪ್ರಧಾನ ಸೇನಾನಾಯಕರಾಗಿದ್ದ ಜನರಲ್ ಬ್ರೌಖಿಸ್ಚರು ಕಳೆದ ದಶಂಬರದಲ್ಲಿ ತನ್ನ ನಾಯಕತ್ವವನ್ನೂ ಕಳಕೊಂಡಿದ್ದರು. ಪೋಲಂಡಿನ ಯುದ್ಧದಲ್ಲಿ ದಕ್ಷಿಣ ಮತ್ತು ಉತ್ತರದ ಜರ್ಮನ್ ಸೇನೆಗಳ ನಾಯಕರಾಗಿ ವಿಜಯಿಗಳಾದವರು ರುನ್ಸ್ಟೆಟ್ ಮತ್ತು ಬೋಕರು. ಫ್ರಾನ್ಸಿನಲ್ಲಿ ಸೆಡಾನಿನಲ್ಲಿ ಪ್ರಬಲ ಫ್ರೆಂಚ್ ಸೇನೆಯನ್ನು ಭೇದಿಸಿದವರು ರುನ್ಸ್ಟೆಟರು. ಜನರಲ್ ಬೋಕರು ಉತ್ತರದ ಮತ್ತು ಲೀಬರು ದಕ್ಷಿಣದ ಜರ್ಮನ್ ಸೇನಾನಾಯಕರಾಗಿದ್ದರು. ರಷ್ಯದಲ್ಲಿ ಲೆನಿನ್‌ಗ್ರಾಡ್, ಮೋಸ್ಕೋ ಮತ್ತು ದಕ್ಷಿಣ ರಣರಂಗಗಳ ಜರ್ಮನ್ ಸೈನ್ಯಗಳಿಗೆ ಅನುಕ್ರಮವಾಗಿ ಲೀಬ್, ಬೋಕ್ ಮತ್ತು ರುನ್ಸ್ಟೆಟರು ನಾಯಕರಾಗಿದ್ದರು. ಆರಂಭದ ಪ್ರಚಂಡ ವಿಜಯಗಳ ನಂತರ ಈ ಸೇನಾಧಿಪತಿಗಳು ಜಯಶೀಲವಾಗಿ ಪ್ರತಿಭಟಿಸಲ್ಪಟ್ಟು ಹಿಟ್ಲರರ ಬ್ಲಿಟ್ಸ್ ಕ್ರೈಗಿನ ಮೊನೆ ಮುರಿದು ಅದು ಮೊಂಡಾಗುವಂತಾಯಿತು. ದೀರ್ಘಕಾಲದ ಭೀಷಣ ಹೋರಾಟದಿಂದ ಜರ್ಮನ್ ಸೇನೆಯು ಅಪಾರ ನಷ್ಟ ಹೊಂದಿತು. ಹಿಟ್ಲರರಿಗದು ಅಸಹನೀಯವಾಯಿತು. ಆ ವರೆಗೆ ಜರ್ಮನ್ ಸೇನೆಯ ಬೆನ್ನೆಲುಬಿನಂತಿದ್ದ ಈ ಸೇನಾನಾಯಕರು ಮತ್ತು ಹಿಟ್ಲರರೊಳಗೆ ಭಿನ್ನಾಭಿಪ್ರಾಯವುಂಟಾಗಿ ಅವರು ಪದಚ್ಯುತರಾದರು. ಆದರೆ ಹಿಟ್ಲರರು ರಷ್ಯದ ಸೇನಾನಾಯಕತ್ವ ವಹಿಸಿದ ಮೇಲೂ ಜರ್ಮನ್ ಸೇನೆಯು ಮೊದಲಿಗಿಂತಲೂ ಹೆಚ್ಚಿನ ಪರಾಜಯ ಹೊಂದಿತು. ಹಿಟ್ಲರರು ಇಂದೀಗ ತಮ್ಮ ತಪ್ಪನ್ನು ಮನಗಂಡು ಈ ಪ್ರಮುಖ

❖ ಫ್ರಾನ್ಸಿನಲ್ಲಿ ಬರ್ಬರ ದಬ್ಬಾಳಿಕೆ! ❖

ಫ್ರಾನ್ಸಿನಲ್ಲಿ ದಬ್ಬಾಳಿಕೆ.

ಫ್ರಾನ್ಸಿನಲ್ಲಿ ಎಮ್. ಲಾವಲರು ಅಧಿಕಾರಕ್ಕೆ ಬಂದ ಕೂಡಲೆ ಬರ್ಬರ ದಬ್ಬಾಳಿಕೆಯು ಆರಂಭವಾಗಿರುವುದು. ಜರ್ಮನ್ ಸೈನಿಕರ ಮೇಲೆ ಗುಂಡು ಹಾರಿಸಿದ ಆರೋಪ ಹಾಕಿ 40ಮಂದಿ ಕಮ್ಯೂನಿಸ್ಟರ ತಲೆ ಕಡಿಯಲಾಗಿದೆ. ಜರ್ಮನ್ ಸೈನಿಕ ಟ್ರೈನೊಂದನ್ನು ಉರುಳಿಸಿ ಹಾಕಿದುದಕ್ಕಾಗಿ 30ಮಂದಿ ಫ್ರೆಂಚರು ಗುಡಿಗೆ ಬಲಿಯಾಗಿರುವರು. ಅಪರಾಧಿಗಳನ್ನು ಹಿಡಿದುಕೊಡದಿದ್ದಲ್ಲಿ ಇನ್ನೂ 80 ಮಂದಿಯನ್ನು ಕೊಲ್ಲುವ ಬೆದರಿಕೆ ಹಾಕಲಾಗಿದೆ. ಜರ್ಮನ್ ಸೈನಿಕರನ್ನೊಯ್ಯುವ ಟ್ರೈನು ಕಂಬಿ ತಪ್ಪಿಬಿದ್ದು ಅನೇಕರ ಪ್ರಾಣ ಹಾನಿಯಾಗಿರುವುದು. ಇನ್ನು ಮುಂದೆ ಜರ್ಮನ್ ಸೈನಿಕರನ್ನೊಯ್ಯುವ ಟ್ರೈನುಗಳಲ್ಲಿ ಫ್ರೆಂಚ್ ನಾಗರಿಕರನ್ನೊಯ್ಯಲಾಗುವುದು

ಇದೇ ತಾ. 19ರಲ್ಲು ಮಾರ್ಶಲ್ ಪೇಟಾರವರು ಫ್ರೆಂಚ್ ಜನಾಂಗವನ್ನುದ್ದೇಶಿಸಿ ಕೊಟ್ಟ ಭಾಷಣದಲ್ಲಿ, ಎಡ್ಮಿರಲ್ ಡಾರ್ಲಾರವರು ತನ್ನ ಉತ್ತರಾಧಿಕಾರಿಗಳಾಗಿ ಮತ್ತು ಎಲ್ಲಾ ಫ್ರೆಂಚ್ ಸೇನೆಗಳ ಅಧಿನಾಯಕರಾಗಿ ಫ್ರಾನ್ಸಿನ ಮತ್ತು ಅವರ ಸಾಮ್ರಾಜ್ಯದ ರಕ್ಷಣಾ ಜವಾಬ್ದಾರಿಯುಳ್ಳವರಿರುವರೆಂದೂ ಎಮ್. ಲಾವಲರು ತನ್ನ ಕೈಕೆಳಗೆ— ಫ್ರಾನ್ಸಿನ ಅಂತರಿಕ ಮತ್ತು ವಿದೇಶಾಂಗ ವ್ಯಾಯತೆ ಬಡಳಿತಕ್ಕೆ ಜವಾಬ್ದಾರರಿರುವರೆಂದೂ ಹೇಳಿರುವರು. ಫ್ರಾನ್ಸಿನ ಅನಾಹುತದ ಈ ದುಃಖದ ದಿನಗಳಲ್ಲಿ ಲಾವಲರ ಸಹಕಾರದಿಂದ ಅದರ ಪುನರ್ಘಟನೆಯನ್ನು ತಾನು ಮಾಡಲು ಮುಂದಾಗಿರುವೆನು ಯುರೋಪಿನಪುನರ್ಘಟನೆಯನ್ನು ಅವರ ಸಹಕಾರದಿಂದ ಸಾಧಿಸಬೇಕಾಗಿದೆ. ಹೊಸ ಸರಕಾರದೊಂದಿಗೆ ಫ್ರೆಂಚರೆಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡಿಕೊಂಡಿರುವರು. ಬೇಗನೆ ಲಾವಲರ ಸರಕಾರವು ಪೆರಿಸಿನಲ್ಲಿ ಸ್ಥಾಪಿತವಾಗಲಿರುವುದು. ಲಾವಲರು ಜರ್ಮನಿಯೊಂದಿಗೆ ಸಂಪೂರ್ಣ ಸಹಕಾರದ ಧೋರಣೆ ವಹಿಸಿ ಅದರ ಸರ್ವನಾಶ ಮಾಡಲಿರುವರೆಂದು ಊಹಿಸಲಾಗಿದೆ. ಯುನೈಟೆಡ್ ಸ್ಟೇಟ್ಸು ಫ್ರಾನ್ಸಿನೊಂದಿಗಿನ ಸಂಬಂಧವನ್ನು ಕಡಿದು ಹಾಕುವುದು ನಿಶ್ಚಯವೆಂಬಂತೆ ತೋರುತ್ತದೆ.

ಕ್ರಿಪ್ಸರು ಪುನಹ ಬರಬಹುದು.

ಬರುವ ಕೆಲವು ದಿನಗಳಲ್ಲಿ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸಬಹು

ಕ್ರಿಪ್ಸರು ಪುನಹ ಹಿಂದುದೇಶಕ್ಕೆ ಬರಬಹುದು.

ಭಾರತೀಯರಿಗೆ ಪಂಡಿತ ನೆಹರುಗಳ ಕರೆ.

ದು. ಮತ್ತು ಹೊಸ ಸೂಚನೆಗಳನ್ನು ಹಿಡಕೊಂಡು ಕ್ರಿಪ್ಸರು ಪುನಹ ಹಿಂದುದೇಶಕ್ಕೆ ಬರಬಹುದೆಂದು ಸ್ವದೇಶ ಮಿತ್ರನ್ ಪತ್ರಿಕೆಯ ಸಂಪಾದಕರಾದ ಶ್ರೀ.ಸಿ.ಆರ್. ಶ್ರೀನಿವಾಸನರು ಇದೇ ತಾ. 19ರಲ್ಲು ಕುಂಭಕೋಣದಲ್ಲಿ ಭಾಷಣ ಕೊಡುವಾಗ ಹೇಳಿರುವರು. ಇಂಗ್ಲೆಂಡಿನಲ್ಲಿಯೂ ಇದೇ ಅಭಿಪ್ರಾಯ ಉಂಟಾಗಿರುತ್ತದೆ. ಹಿಂದೀ ಬಿಕ್ಕಟ್ಟನ್ನು ಯಾವ ರೀತಿಯಿಂದಾದರೂ ಅತ್ಯಂತ ಶೀಘ್ರವಾಗಿ ಪರಿಹರಿಸಬೇಕೆಂಬ ಅಭಿಪ್ರಾಯವು ಅಮೇರಿಕ ಮತ್ತು ಚೈನ ಮೊದಲಾದ ರಾಷ್ಟ್ರಗಳಲ್ಲಿ ಬಲವಾಗುತ್ತಿದೆ. ಆಕ್ಸಿಸ್ ರಾಷ್ಟ್ರಗಳನ್ನು ನಿಷೇಧಿಸಿ ಮತ್ತು ಹಿಂದೀಯರ ಕರ್ತವ್ಯವನ್ನು ಸ್ಪಷ್ಟೀಕರಿಸಿ ಪಂಡಿತ ನೆಹರು, ಶ್ರೀ ರಾಜಗೋಪಾಲಾಚಾರ್ಯರ್, ಬಾಬು ರಾಜೇಂದ್ರ ಪ್ರಸಾದರೇ ಮೊದಲಾದ ಕಾಂಗ್ರೆಸ್ ಮುಖಂಡರು ಕೊಟ್ಟಿರುವ ಭಾಷಣಗಳಿಂದ ಬ್ರಿಟನ್ ಮತ್ತು ಅಮೆರಿಕಗಳ ಜನತೆಯ ಮೇಲೆ ಸತ್ಪರಿಣಾಮವನ್ನುಂಟುಮಾಡಿ

ಕಾಂಗ್ರೆಸಿನ ಕುರಿತಾದ ಮೊದಲಿನ ಸಂ[illegible] ಯ ಮತ್ತು ಟೀಕಾತ್ಮಕ ಮನೋವೃತ್ತಿಯು ದೂರವಾಗುತ್ತಿದೆ. ಬ್ರಿಟಿಷ್ ಸರಕಾರವು ವೈಸರಾಯರ ಮೂಲಕವಾಗಲಿ ಇನ್ನೊಮ್ಮೆ ಕ್ರಿಪ್ಸರನ್ನು ಕಳುಹಿಸಿ ಆಗಲಿ ಹಿಂದೀಯರೊಂದಿಗೆ ಪುನಹ ಸಂಧಿ ಪ್ರಸ್ತಾಪ ನಡಿಸಬಹುದೆಂದು ನಂಬಲಾಗಿದೆ

ರಾಷ್ಟ್ರಕ್ಕೆ ನೆಹರುಗಳ ಕರೆ.

ದೇಶವು ಮಹತ್ತಾದ ಗಂಡಾಂತರಕ್ಕೊಳಗಾಗಿರುವಾಗ ಹಿಂದೀಯರು ಅಸಡ್ಡೆಯಿಂದ ತಣ್ಣಗಿರುವುದು ದೊಡ್ಡ ತಪ್ಪು. ಅವರು ತಮಗುಂಟಾಗಿರುವ ಅಪಾಯದ ಕುರಿತು ಸಂಪೂರ್ಣ ಜಾಗ್ರತರಾಗಿ ಆಕ್ರಮಣಕಾರಿಗಳನ್ನು ವಿರೋಧಿಸುವ ಶಕ್ತಿ ಮತ್ತು ಸ್ಫೂರ್ತಿಯುಳ್ಳವರಾಗಬೇಕೆಂದು ಪಂಡಿತ ನೆಹರುಗಳು ಇದೇ ತಾ. 19ರಲ್ಲು ಕಲ್ಕತ್ತದ ಪತ್ರಿಕ ವ್ಯವಸಾಯಿಗಳು ಅವರ ಸನ್ಮಾನಾರ್ಥವಾಗಿ ಕೊಟ್ಟ ಸ್ವಾಗತದ ಸಂದರ್ಭದಲ್ಲಿ ಹೇಳಿರುವರು. ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರದ ಯುದ್ಧ ಪ್ರಯತ್ನಕ್ಕೆ ಯಾವ ರೀತಿಯ ತೊಡಕನ್ನೂ ಉಂಟುಮಾಡಕೂಡದು. ಅದರಿಂದ ವೈರಿಗೆ ಸಹಾಯವಾದಂತಾಗುವುದು ಯಾವ ಆಕ್ರಮಣಕಾರಿಗಾದರೂ ಹಿಂದಿಯರು ಶರಣಾಗತರಾಗಬಾರದು. ವಿದೇಶಿಯರಾದರೂ ಹಿಂದುದೇಶಕ್ಕೆ ಸ್ವಾತಂತ್ರ್ಯವೀಯಲು ಸಾಧ್ಯವಿಲ್ಲ ಯಾವ [illegible] ದೇಶಿ ಸೇನೆಯಾದರೂ ಒಮ್ಮೆ ಬಂದು ಹಿಂದುದೇಶದಲ್ಲಿ ನೆಲೆಸಿಲ್ಲವಂತಾದರೆ ಮತ್ತದನ್ನು ನಿವಾಳಿಸುವುದು ಬಹು ಕಷ್ಟ. ವಿದೇಶಿ ಸೇನೆಯು ತಮಗೆ ಸ್ವಾತಂತ್ರ್ಯವೀಯುವುದೆಂಬುದು ಬಯಲುಭ್ರಾಂತಿ. ಅದು ಗುಲಾಮಿ ಮನೋವೃತ್ತಿ.

ಯುದ್ಧದಲ್ಲಿ ಸರಕಾರದೊಂದಿಗೆ ಪ್ರತ್ಯಕ್ಷ ಸಹಕರಿಸಲು ಜನತೆಗೆ ಸಾಧ್ಯವಿಲ್ಲ ಯಾಕೆಂದರೆ ಅದೇನೂ ಜನತೆಯ ಯುದ್ಧವಲ್ಲ. ಸರಿಯಾದ ತರಬೇತಿಯಿಲ್ಲದೆ ಗೊರಿಲ ಯುದ್ಧವನ್ನೂ ಹಿಂದೀಯರಿಗೆ ನಡಿಸ[illegible] [illegible] ಆಕ್ರಮಣಕಾರಿಗೆ ಯಾವ ಸಹಾಯವನ್ನೂ ಕೊಡದೆ ಆತನನ್ನು ಸಾಧ್ಯವಾದ ರೀತಿಯಲ್ಲೆಲ್ಲಾ ವಿರೋಧಿಸುವ ಉಗ್ರ ಮನೋವೃತ್ತಿಯುಳ್ಳವರಾಗಬೇಕು ಅವರು ಜನತೆಯನ್ನಿಂದು ಆತ್ಮರಕ್ಷಣೆ ಮತ್ತು ಆತ್ಮಾವಲಂಬನೆಗಾಗಿ ತಯಾರು ಮಾಡುವುದು ಕಾಂಗ್ರೆಸಿನ ಕರ್ತವ್ಯವಿದೆಯೆಂಬುದೇ ನೆಹರುಗಳ ದೀರ್ಘಭಾಷಣದ ಸಾರಾಂಶ.

ಬರ್ಮಾದ ಯುದ್ಧ

ಕಳೆದ ಎರಡು ಮೂರು ದಿನಗಳಲ್ಲಿ ಬರ್ಮಾದಲ್ಲಿ ಜಾಪಾನರೇನೂ ಮುಂದುವರಿದಿರುವುದಿಲ್ಲ. ಚಿಕ್ಕ ಬ್ರಿಟಿಷ್ ಮತ್ತು ಹಿಂದೀ ಸೇನೆಯು ಅತ್ಯಂತ ಸಾಹಸದಿಂದ ಜಾಪಾನ ಸೇನೆಯ ಮುತ್ತಿಗೆಯನ್ನು ಭೇದಿಸಿ ಹೊರಗಿನ ಸೇನೆಯೊಂದಿಗೆ ಸೇರಿ ತೀವ್ರ ಹೋರಾಟವನ್ನಾರಂಭಿಸಿರುವುದು.

ನಾನಾಯಕರನ್ನು ಬೇರೆ ಬೇರೆ ರಣರಂಗಗಳ ನಾಯಕರನ್ನಾಗಿ ನೇಮಿಸಲಾರಂಭಿಸಿರುತ್ತಾರೆ. ರಷ್ಯಕ್ಕೆ ಪುನಃ ಹೋಗಲು ಅವರೇ ಒಪ್ಪದಿರಬಹುದು. ಹೀಗೆ ಜನರಲ್ ಬೊಖಿಸ್ಕರು ಗ್ರೀಸಿಗೆ ಕಳುಹಿಸಲ್ಪಟ್ಟಿರುವರೆಂದು ಸುದ್ದಿಯುಂಟಾಗಿದೆ. ಪೂರ್ವ ರಣರಂಗದ ಸಲಹೆಗಾರರಾಗಿಯೂ ಅವರನ್ನು ನೇಮಿಸಲಾಗಿದೆಯಂತೆ. ಜನರಲ್ ರುಂಡ್ಸ್ಟೆಟರು ಫ್ರಾನ್ಸಿನ ಜರ್ಮನ್ ಸೇನಾನಾಯಕರಾಗಿರುತ್ತಾರೆ. ಬೋಕ್ ಮತ್ತು ಲೀಬರೂ ಬೇರೆ ಕಡೆಗಳಿಗೆ ಕಳುಹಿಸಲ್ಪಡಬಹುದು. ಇದರಿಂದ ಹಿಟ್ಲರರು ಪಶ್ಚಿಮ, ದಕ್ಷಿಣ ಪಶ್ಚಿಮ ಮತ್ತು ಮಧ್ಯಪೂರ್ವದಲ್ಲಿ ಪ್ರಬಲ ಹೋರಾಟ ಸಿದ್ಧತೆ ಮಾಡುತ್ತಿರುವರೆಂಬ ಊಹೆಗೂ ಆಸ್ಪದವಾಗಿದೆ.

ಸ್ವೀಕಾರ

ಮಂಗಳೂರಿನ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ 1941ನೇ ದಶಂಬ್ರ 31ಕ್ಕೆ ಅಂತ್ಯವಾಗುವ 12ನೇ ವರ್ಷದ ವರದಿಯೂ, ಮುಲ್ಕಿಪಾಲ ಹಿಂದೂ ಅನಾಥಾಲಯದ ಲೆಕ್ಕಪತ್ರಗಳ ವರದಿಯೂ ಬೊಂಬಾಯಿಯ ಬಂದರ ಯುವಕ ಸಂಘದ ಪ್ರಥಮ ಮಾಸಿಕ ವರದಿಯೂ ನಮ್ಮ ಹಸ್ತಗತವಾಗಿವೆ. ವಿಮರ್ಶೆ ಬರುವ ವಾರ.

ಸಂ. ನ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ.

ತಾ. 20—4—1942ರಿಂದ

ಪ್ರಗತಿ ಪಿಕ್ಚರ್ಸ್‌ನವರ

ಸುಬ್ಬಯ್ಯ ನಾಯ್ಡು & ಲಕ್ಷ್ಮೀಬಾಯಿ ನಟಿಸಿರುವ

ಭೂ ಕೈಲಾಸ್ ★

ಬರುತ್ತದೆ - - - - ಬರುತ್ತದೆ

ಕನ್ನಡ

★ ವಸಂತಸೇನಾ

ನೋಟೀಸು.

The Canara Industrial & Banking Syndicate Ltd , Udipi.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಒಡೆ[illegible] ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡದೆ ಬಡ್ಡಿ ಸಹಾ ಹೆಚ್ಚು ಸಮಯ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ:—

ಸದ್ರಿ ನಗಗಳನ್ನು 28-4-42ನೇ ಮಂಗಳವಾರ ಮಧ್ಯಾಹ್ನ ಘಂಟೆ 3-30ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂ ಅದೇ ದಿವಸ ಸಂಪೂರ್ಣ ಆಗದೆಯಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರಲಿ.

ಲೋನು ನಂಬ್ರ ಮತ್ತು ತಾರೀಖು	ಹೆಸರು ಯಾ ವಿಳಾಸ	ಅಸಲು ಐವೇಜು
J. L. 71/38 20-12 38.	ದೇವಪ್ರಸಾದ ಸೀನ್ಸ್, ದಾಮೋದರಕೋನ್ನರ ಮಗ ಬಡಗ ಕೆಲಸಗಾರ, ವಾಗೆಮಾಳ ಪೇಟೆಯು.	ರೂ. 10/-
J. L. 45/39 11-8-39.	ಯುರ್ಗತ್ತರು ಗೋಪಾಲ ನಾರಾಯಣ ಶೆಣೈ, ವ್ಯಾಪಾರಿ, ದೊಂಡರಂಗಡಿ, ಪೆರ್ಡೂರು ಪೇಟೆ	ರೂ. 15/-
J. L. 58/39 14-10-39.	Do Do	ರೂ. 10/-

Office of the Bank, UDIPI. Date 22-4-1942.

U. S. Shenoy,
Agent, Udipi.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ನಗರ ಸಭೆ—ಮಂಗಳೂರು ನಗರ ಸಭೆಯು ಈ ದಿನ ಸಾಯಂಕಾಲ ನಗರಸಭಾ ಭವನದಲ್ಲಿ ನಡೆಯಿತು.

ನಾಟಕ, ನೃತ್ಯ, ಪ್ರದರ್ಶನ—ಕದ್ರಿ ವಿದ್ಯಾಬೋಧಿನಿ ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ ನಿನ್ನೆ ಸಾಯಂಕಾಲ ಸೆಂಟ್ರಲ್ ಹೈಸ್ಕೂಲಿನ ಹಾಲಿನಲ್ಲಿ ವಿವಿಧ ವಿನೋದಾವಳಿ, ನಾಟಕ, ಭರತನಾಟ್ಯ ಮೊದಲಾದ ಪ್ರದರ್ಶನಗಳು ಯಶಸ್ವಿಯಾಗಿ ಜರಗಿಸಲ್ಪಟ್ಟವು. ಮಹಾಜನರ ಪ್ರೋತ್ಸಾಹವು ಚೆನ್ನಾಗಿತ್ತು.

ಕೇರಳೀಯ ಜ್ಞಾನೋದಯ ಸಮಾಜ—ಇದರ ವಾರ್ಷಿಕ ಪರಿಷತ್ತು ಕಳೆದ ತಾ. 12ರಲ್ಲಿ ಶ್ರೀ| ಕೇಳಪ್ಪನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಯಂ. ಪಿ. ದಾಮೋದರನ್‌ರವರು ಪರಿಷತ್ತಿನ ಉದ್ಘಾಟನೆ ಮಾಡಿದರು. ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಗಳೂರಿನ ಮಲೆಯಾಳಿಗಳು ತಮ್ಮ ಜನ್ಮಭೂಮಿಯ ಸಂಸ್ಕೃತಿಯನ್ನು ಮರೆಯಬಾರದೆಂದೂ, ಮಂಗಳೂರಿನ ಜನರೊಡನೆ ಸರ್ವವಿಧದಿಂದಲೂ ಬೆರೆತು ನಡೆಯಬೇಕೆಂದೂ ಹೇಳಿದರು. ನಗರ ಸಭೆಯವರು ಮಲೆಯಾಳಿಗಳು ಸ್ಥಾಪಿಸಿದ ಎಲಿಮೆಂಟರಿ ಶಾಲೆಗೆ ಗ್ರಾಂಟು ಕೊಡುವಂತೆ ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತು.

ಡಿ. ಸಿ. ಯಂ ಸಂದರ್ಶನ—ಶ್ರೀ| ಕೇಳಪ್ಪನ್ ಅವರು ಸ್ಥಳೀಯ ಡಿ. ಸಿ. ಯಂ. ಶಾಲೆಯನ್ನು ತಾ. 12ರಲ್ಲಿ ಸಂದರ್ಶಿಸಿದರು. ಅವರ ಪರಿಚಯ ಮಾಡಿಕೊಟ್ಟರು ಹರಿಜನೋದ್ಧಾರದ ಕುರಿತು ಶ್ರೀ| ಕೇಳಪ್ಪನ್‌ರವರು ಭಾಷಣಮಾಡಿದರು. ಶ್ರೀ. ಯ. ಗೋವಿಂದ ರಾಯರು ಅವರ ಭಾಷಣವನ್ನು ಕನ್ನಡಕ್ಕೆ ಪರಿವರ್ತನೆ ಮಾಡಿದರು.

ರಾಷ್ಟ್ರೀಯ ಸಪ್ತಾಹದ ಕೊನೆಯ ದಿನ—ಶ್ರೀ. ಬಿ. ದಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಜಾಲಿಯನ್‌ವಾಲಾ ದಿನಾಚರಣೆಯು ಕಳೆದ ತಾ. 13ರಲ್ಲಿ ನಡೆಯಿತು. ಈ ಸಂದರ್ಭಗಳಲ್ಲಿ ಶ್ರೀಗಳಾದ ವಿ. ಸಿ. ಸುವರ್ಣ, ಬಿ. ವಿ. ಕಕ್ಕಿಲ್ಲಾಯ, ಮತ್ತು ಕೆ. ಶಿವರಾವ್ ಇವರುಗಳು ಭಾಷಣಮಾಡಿದರು. ಮಾನ್ಯ ಅಧ್ಯಕ್ಷರು ಇಂದಿನ ರಾಜಕೀಯ ವಿಷಯಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ| ಬಿ. ರಾಮಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ.

ಶಾಂತಿ ದಳದ ಸ್ಥಾಪನೆ—ತಾ. 14-4-42ರಲ್ಲಿ ನಾಗರಿಕರನೇಕರ ಸಭೆಯೊಂದು ಶ್ರೀ| ಎಂ| ವಿಟ್ಠಲಕಾಮತರ ಅಧ್ಯಕ್ಷತೆಯಲ್ಲಿ ಜರಗಿ ಪಟ್ಟಣದಲ್ಲಿ ಯುದ್ಧ ಪರಿಸ್ಥಿತಿಯಿಂದುಂಟಾಗುವ ಅಶಾಂತಿ, ವಿಪತ್ತುಗಳಿಂದ ರಕ್ಷಿಸಿ ಶಾಂತಿ ಸ್ಥಾಪಿಸುವ ಸಲುವಾಗಿ ಶಾಂತಿ ದಳವೊಂದನ್ನು ಸ್ಥಾಪಿಸಬೇಕೆಂದು ನಿರ್ಧಾರವಾಯಿತು. ಈ ದಳಕ್ಕೆ ಶ್ರೀಗಳಾದ ಎಂ| ವಿಟ್ಠಲಕಾಮತರು ಅಧ್ಯಕ್ಷ, ಕಾರ್ನಾಡ ಕೃಷ್ಣರಾಯರು ಉಪಾಧ್ಯಕ್ಷ, ವಕೀಲ್ ವಾಮನಾಚಾರ್ಯ ಮತ್ತು ಯಂ| ವಾಮನಭಟ್ಟ ಜತೆಕಾರ್ಯದರ್ಶಿಗಳು, ವಿ| ನಾರಾಯಣಪ್ರಭುಗಳು ಖಜಾಂಚಿಗಳು, ವಕೀಲ್ ಪದ್ಮನಾಭ ಕಾಮತ್, ಡಾ| ಸುಂದರರಾವ್ ಪೈ, ಡಾ| ಮಾಧವಪೈ, ವಕೀಲ್ ಕೆ| ಜಿ| ಬಲ್ಲಾಳ, ಕೊಟ್ಟಿಕಾರ್ ಅನಂತ ಪದ್ಮನಾಭಪೈ, ಕುರ್ನಾಡು ಮಂಗೇಶರಾವ್, ಆರ್| ಯಂ| ಅಂದ್ರಾಡೆ, ವಕೀಲ್ ಉಸ್ಮಾನ್‌ಸಾಹೇಬ್, ಯು| ಶಿವರಾಯಸೇಟ್, ಆರೂರು ಲಕ್ಷ್ಮೀನಾರಾಯಣರಾವ್, ಪಿ| ಉಪೇಂದ್ರ ಶ್ರೀನಿವಾಸನಾಯಕ, ಫೈನಾನ್ಸ್ ಕಮಿಟಿ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ. ಸ್ವಯಂಸೇವಕರನ್ನು ಸೇರಿಸುವ ಬಗ್ಗೆ ಆಯಾಯ ವಾರ್ಡುಗಳಿಗೆ ಬೇರೆ ಬೇರೆ ಮುಖಂಡರನ್ನು ಆರಿಸಲಾಗಿದೆ.

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್—ಇದರ ದ್ವಿತೀಯ ವಾರ್ಷಿಕ ಸಭೆಯು ತಾ 26-4-42ಕ್ಕೆ ಬೋರ್ಡು ಹೈಸ್ಕೂಲಲ್ಲಿ ಜರಗುವುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಾರ್ಕಳ—ಕಾರ್ಕಳದಲ್ಲಿಯೂ ತಾ 13-4-42ರಿಂದ ಬ್ಲೇಕ್‌ಔಟು ಜ್ಯಾರಿಗೆ ಬಂದಿರುತ್ತದೆ.

ಸ್ಥಳೀಯ ಶ್ರೀ| ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ರಥೋತ್ಸವವು ಈ ವರ್ಷ ತಾ. 20-4-42ರಲ್ಲಿ ಜರಗಿದೆ.

ಯುದ್ಧನಿಧಿಯ ಬಗ್ಗೆ ಬೆಳ್ತಂಗಡಿಯಲ್ಲಿ ಜೋಡಾಟದಿಂದ ರೂ. 500-0-0 ಉತ್ಪತ್ತಿಯಾಗಿದೆಯೆಂದು ತಿಳಿದುಬರುತ್ತದೆ.

ಬೆಳ್ತಂಗಡಿ-ಇಲ್ಲಿ ತಾ. 23, 24-3-42ರಲ್ಲಿ ಯುದ್ಧಫಂಡಿನ ಸಹಾಯಾರ್ಥ ನಡೆದ ಯಕ್ಷಗಾನ ಬಯಲಾಟದ ಖರ್ಚು ಕಳೆದು ಉಳಿದ ರೂ. 669-5-0ರಲ್ಲಿ ರೂ. 600/-ನ್ನು ಟ್ರೆಜರಿಗೆ ಕಳಿಸಲಾಗಿದೆ. ಲೆಕ್ಕವನ್ನು ಪರಿಶೋಧಿಸಲು ಬೆಳ್ತಂಗಡಿ ಸಬ್ ತಾಲೂಕು ವಾರ್ ಕಮಿಟಿ ಸಭೆಯೊಂದು ತಾ. 6-4-42ರಲ್ಲಿ ಜರಗಿತೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮೂಲ್ಕಿ-ಮಂಗಳೂರು ತಾಲೂಕು ಬೋರ್ಡು ಎಲಿಮೆಂಟರಿ ಶಾಲಾಧ್ಯಾಪಕರ ಯೂನಿಯನ್ನಿನ ಕಾರ್ಯಕಾರಿ ಮಂಡಳದ ಸಭೆಯು 12-4-42ರಲ್ಲಿ ಕಿನ್ನಿಕಂಬಳ ಬೋರ್ಡ್ ಹಾ| ಎ| ಶಾಲೆಯಲ್ಲಿ ಶ್ರೀ| ಬಾಗ್ಲೋಡಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ, ಅಧ್ಯಾಪಕರಿಗೆ ಯುದ್ಧಬತ್ತೆ ಕೊಡಬೇಕೆನ್ನುವ, ವರ್ಗಾವರ್ಗಿ ಮಾಡುವಾಗ ಅಧ್ಯಾಪಕರ ಅನುಕೂಲತೆಯನ್ನು ಗಮನಿಸಿಕೊಳ್ಳಬೇಕೆನ್ನುವ, ಬಾಲ್ಯ ರಜಾಪಟ್ಟಿಯಲ್ಲಿ ತೋರುವ ಹೆಚ್ಚಿಗೆ 3½ ದಿವಸವನ್ನು ಸ್ಥಳೀಯ ರಜೆಯಾಗಿ ಉಪಯೋಗಿಸಲು ಒಪ್ಪಿಗೆ ಕೊಡಬೇಕೆನ್ನುವ, 15ದಿನ ಕೆಜುವಲ್ ರಜೆ ಬೇಕೆನ್ನುವ ಇತ್ಯಾದಿ ಅಧ್ಯಾಪಕ ಹಿತಸಾಧಕ ಠರಾವುಗಳಾದವು.

ಶಿರ್ವ—ತಾ. 26-4-42ನೇ ಆದಿತ್ಯವಾರ ಸಾಯಂಕಾಲ ಘಂಟೆ 4-5ಕ್ಕೆ ಇಲ್ಲಿಯ ಬೋರ್ಡು ಆಸ್ಪತ್ರೆಯ ಒಳರೋಗಿಗಳ ಗೃಹವನ್ನು (ಇನ್‌ಪೇಶಂಟ್ ವಾರ್ಡ್) ತೆರೆಯುವ ಸಮಾರಂಭವು ಜರಗುವುದು. ಶ್ರೀ| ಎ ಬಿ. ಶೆಟ್ಟಿ, ಎಂ. ಎಲ್. ಎ ಯವರು ತೆರೆವ ಸಮಾರಂಭವನ್ನು ನಡೆಸುವರು. ಶ್ರೀ| ವೈಕುಂಠ ಬಾಳಿಗ, ಬಿ. ಎ., ಬಿ. ಎಲ್., ಇವರು ಆ ಸಮಾರಂಭದ ಅಧ್ಯಕ್ಷಸ್ಥಾನ ವಹಿಸುವರು.

ಪಾಣೆ ಮಂಗಳೂರು-ಯುದ್ಧ ಪರಿಸ್ಥಿತಿಯಿಂದ ವಾಹನಾದಿಗಳ ಸೌಕರ್ಯವು ಬೇಕಾದಷ್ಟು ಒದಗುವುದು ದುರ್ಲಭವಿರುವ ಕಾರಣ ಪಾಣೆ ಮಂಗಳೂರು ಸರ್ಕಲ್ ಪ್ರಥಮ ರಾಜಕೀಯ ಪರಿಷತ್ತಿನ ಸಂದರ್ಭದಲ್ಲಿ ನೆರವೇರಿಸಬೇಕೆಂದಿದ್ದ ವಸ್ತು ಪ್ರದರ್ಶನದ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಈ ಸರ್ಕಲಿನ ರಾಜಕೀಯ ಪರಿಷತ್ತು ತಾ. 25, 26ಕ್ಕೆ ಶ್ರೀ. ರಂಗನಾಥ ದಿವಾಕರರ ಅಧ್ಯಕ್ಷತೆಯಲ್ಲಿ ಜರಗುವುದೆಂದು ತಿಳಿದುಬರುತ್ತದೆ.

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಶಾಲೆಯ ವರ್ಧಂತಿಯು ತಾ. 1-5-42ನೇ ಶುಕ್ರವಾರ ಸಾಯಂ ಘಂಟೆ 3ಕ್ಕೆ ಶ್ರೀ| ಯು.| ಸತ್ಯನಾರಾಯಣ ಯಮ್. ಎ., ಎಲ್. ಟಿ., ದ. ಕ. ಜಿಲ್ಲಾ ಎಜ್ಯುಕೇಶನಲ್ ಆಫೀಸರರು-ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಹೆಬ್ರಿ-ಸ್ಥಳೀಯ ಬೋ| ಹಾ| ಎ| ಶಾಲಾ ವರ್ಧಂತಿ ಉತ್ಸವವು ಕಳೆದ ತಾ. 11-4-42ರಲ್ಲಿ ಶ್ರೀ| ಎ| ಬಿ| ಶೆಟ್ಟಿ, M. L. A. ಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ| ವಿಟ್ಠಲ ಶೆಟ್ಟರೇ ಮೊದಲಾದ ಎಂಟುನೂರಕ್ಕೂ ಮಿಕ್ಕಿದ ಸಭಿಕರ ಸಮಕ್ಷಮ ಸಂಭ್ರಮದಿಂದ ಜರಗಿ, ಹೆಡ್‌ಮಾಸ್ಟರ್ ಶ್ರೀ| ಎ| ಪಿ| ಶೆಣೈಯವರಿಂದ ಪ್ರಗತಿಪರ ವರದಿವಾಚನ, ಪುರಸ್ಕಾರ ವಿತರಣ, ಬೋಧಪರ ಅಧ್ಯಕ್ಷರ ಭಾಷಣವಾದ ಮೇಲೆ, ವಿವಿಧ ವಿನೋದಾವಳಿಗಳೂ, "ವೀರ ಅಭಿಮನ್ಯು" ಎಂಬ ಸಂಗೀತ ನಾಟಕವೂ ಚೆಲೋ ರೀತಿಯಲ್ಲಿ ಅಭಿನಯಿಸಲ್ಪಟ್ಟ ಬಳಿಕ ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಬ್ರಹ್ಮಾವರ—ಬೋರ್ಡು ಪ್ರಾಥಮಿಕ ಶಾಲಾ ವರ್ಧಂತಿಯು ತಾ. 28-4-42ನೇ ಮಂಗಳವಾರ ಸಂಜೆ 5-30ಕ್ಕೆ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ| ವಿಟ್ಠಲಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉಡುಪಿ.

ಮನರಂಜನೆ—ತಾ. 20ರಿಂದ ರಾಮಕೃಷ್ಣ ಥಿಯೇಟರಿನಲ್ಲಿ ಪ್ರಗತಿ ಪಿಕ್ಚರ್‍ಸ್‌ನವರ ಭೂಕೈಲಾಸ (ತೆಲುಗು ಚಿತ್ರ)ವು ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಕನ್ನಡ ನಟರಾದ ಶ್ರೀ. ಸುಬ್ಬಯ್ಯ ನಾಯ್ಡು, ಶ್ರೀ. ನಾಗೇಂದ್ರ ರಾವ್, ಶ್ರೀಮತಿ ಲಕ್ಷ್ಮೀಬಾಯಿ ಮೊದಲಾದವರು ಭಾಗ ವಹಿಸಿದ್ದಾರೆ. ಇದಾದ ಮೇಲೆ ತಾ. 27ರಿಂದ ಕನ್ನಡದ ಉನ್ನತ ಚಿತ್ರ ಪಟ "ವಸಂತಸೇನೆ"ಯು ಪ್ರದರ್ಶಿಸಲ್ಪಡಲಿರುವುದು. ಈ ವರೆಗೆ ತಯಾರಾದ ಕನ್ನಡ ಚಿತ್ರಗಳಲ್ಲಿ ಇದೇ ಶ್ರೇಷ್ಠವಾದುದೆಂದು ಎಲ್ಲೆಲ್ಲೂ ಹೆಸರು ಪಡೆದಿರುತ್ತದೆ. ಇದರಲ್ಲಿ ಮೇಲಿನ ನಟನಟಿಯರೇ ಪಾತ್ರ ವಹಿಸಿದ್ದಾರೆ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

ಕ್ರಮನಂಬ್ರ 499|1941

ಬಾಪ್ತಿಸ್ ನೊರೋಞ ವಾದಿ.

ಮತ್ತು

ಸಿಲ್ವೆಸ್ಟರ್ ನೊರೋಞ ಕೂಡಾ 22 ಜನರು.

ಪ್ರತಿವಾದಿಗಳು,

4ನೇ ಪ್ರತಿವಾದಿಳು ಕಣ್ಮಿನಾಸೋಜಾ ಬಾಯಿ ಶೆರ್ಪಿನಾ ನೊರೋಞ ಬಾಯಿ ಮಗಳು, ಮೈಸೂರು ಸ್ಟೇಟ್, ಕಡೂರು ಜಿಲ್ಲಾ, ಬೇಲೂರು ತಾಲೂಕು, ಚಂದಪುರ ಕಾಫಿ ತೋಟದಲ್ಲಿರುವವಳು.

5ನೇ ಪ್ರತಿವಾದಿ- Antoni Souza, son of Sherpina Naronha Bai, residing in Byculla Sath Road No 9, Bombay.

6ನೇ ಪ್ರತಿವಾದಿಳು-Reetu Souza Bai daughter of Sherpina Naronha Bai, residing in Matarpodi, Majagaon, No 10, Bombay.

ಈ ಮೇಲಿನ ಜನರಿಗೆ ಕೋರ್ಟು ಹುಕುಂ ಪ್ರಕಾರ ಕೊಡುವ ನೋಟೀಸು ಮೃತಪಟ್ಟ ಪೆರ್ಮನಾಮನೆಲ್ ನೊರೋಞ ಕಾರ್ಕಳ ಸಹಕಾರ ಸಂಘದಲ್ಲಿ ನಡೆಯುತ್ತಿರುವಾಗ ಇಟ್ಟಿದ್ದ ಪಾಲಿನ ಬಾಬ್ತು ಸೊಸೈಟಿ ರೆಜಿಸ್ಟ್ರಾರವರಿಂದ ಸಾಲದ ಸರ್ಟಿಫಿಕೇಟು ಪಡೆದು ಸದ್ರಿ ಸಂಘದವರು ವಾದಿಗೆ ಬರತಕ್ಕ ದ್ರಾಗೀಶ ರೂ. 110 13 9ನ್ನು ಕೊಡತಕ್ಕದ್ದೆಂದು ಮಾಡಿದ ಸದರಿ ದಾವೆಯ ಸದರಿ 4.5-6ನೇ ಪ್ರತಿವಾದಿಗಳ ಹಾಜರಾತಿ ಬಗ್ಗೆ ತಾ. 26-5-42ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದಲ್ಲಿ ಸದರಿ ತಾ. 26-5-42ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಸದರಿ ಕೋರ್ಟಿನಲ್ಲಿ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅವರ ಪರೋಕ್ಷದಲ್ಲಿ ಸದರಿ ದಾವೆಯು ತೀರ್ಮಾನಿಸಲ್ಪಡುತ್ತದೆ.

D. Venkatesh Bhat.

ಕಾರ್ಕಳ, ತಾ. 5-4-42 } ವಾದಿಯ ಕಡೆ ವಕೀಲ್.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಶಿರ್ವ ಗ್ರಾಮದ ಭೂತ ಬೆಟ್ಟು ಬಸವ ಶೆಟ್ಟಿ ಮಗ ಮೃತ ಅಣ್ಣು ಬಸಪ್ಪ ಶೆಟ್ಟಿ ಸಹಿತ ಮತ್ತು ನೆಟ್ಟಿಗನ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಬೊಂಬಾಯಿಯ ಟುಡ್ಯಾಡಿಯಲ್ಲಿ 448 ಗಿರ್ಗಾಂವ್ ರಸ್ತೆಯಲ್ಲಿರುವ ಗಣೇಶ ಭವನವೆಂಬ ಹೆಸರಿನಿಂದಿರುವ ಟೀ ಹೊಟೇಲನ್ನು ತಾ. 27-4-1942ನೇ ದಿನ ಪೂರ್ವಾಹ್ನ ಘಂಟೆ 11ಕ್ಕೆ ಸಾರ್ವಜನಿಕ ಲಿಲಾವು ಕರಾರ ಮೇರೆಗೆ ಸ್ವಾಧೀನ ಪಡಿಸಿಕೊಳ್ಳತಕ್ಕದ್ದು. ಮೃತ ಅಣ್ಣು ಬಸಪ್ಪ ಶೆಟ್ಟಿ ತಮ್ಮ ನಾರಾಯಣ ಬಸಪ್ಪ ಶೆಟ್ಟಿ ಒಪ್ಪಿಗೆ ಮೇರೆಗೆ ಮೇಲಿನ ಟೀ ಹೊಟೆಲನ್ನು ತಾ. 27-2-42ರಿಂದ ನಡೆಸಿಕೊಂಡು ಬರುವ ಕೃಷ್ಣ ಕಾಳಪ್ಪ ಶೆಟ್ಟಿಗೆ ಹೊಟೆಲಿನ ಸಂಬಂಧವಾಗಿ ಬರತಕ್ಕ ಮತ್ತು ಕೊಡಬೇಕಾದ ಎಲ್ಲಾ ಸಾಲಗಳನ್ನೂ ತೆರತಕ್ಕದ್ದು. ತಪ್ಪಿದರೆ 30-4-42ರಲ್ಲು ಸದ್ರಿ ಹೊಟೆಲನ್ನು ಅದರ ಬಾಬ್ತು ಬರತಕ್ಕ ಸಾಲಕ್ಕಾಗಿ ಅದರ ಮೇಲಿನ ಇತರ ಎಲ್ಲಾ ಹಕ್ಕುಗಳಿಂದ ಹೊರತುಪಡಿಸಿ ಮಾರಲಾಗುವುದು. ಮಾರಿಬರುವ ಹಣದಿಂದ ಮೊದಲಾಗಿ ಸಾಲವನ್ನು ಕೊಟ್ಟು ಹೆಚ್ಚಿಗೆ ಉಳಿದುದೇನಾದರೂ ಇದ್ದರೆ ಅದನ್ನು ವಾರಿಸುದಾರರಿಗೆ ಕೊಡಲಾಗುತ್ತದೆ.

ಎಸ್. ನರಸಿಂಹಯ್ಯ.

ಕೃಷ್ಣ ಕಾಳಪ್ಪ ಶೆಟ್ರ ಕಡೆ ವಕೀಲ, ಬೊಂಬಾಯಿ.

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಅದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ARE YOU MARRIED?

Remember the Saying:

Insure your life & Assure your wife.

An Insurance Policy is the best form of Stridhan.

Take out a Policy under Tables I to XI.

For further information and details apply to:-

M. SUNDERRAM SHETTY.

Branch Manager:

The Tropical Insurance Co., Ltd.,

MANGALORE.

ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯ (ಪರಿಷತ್ತಿನ ಅವಶ್ಯಕತೆ)

ಮಹಾರಾಷ್ಟ್ರ ವಿಶ್ವವಿದ್ಯಾಲಯದ ಸಮಸ್ಯೆಯನ್ನು ವಿಚಾರಮಾಡುವ ಕುರಿತು ಮುಂಬಯಿ ಸರಕಾರದವರು ಸಾ. ಜಯಕರರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ. ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯವು ಅವಶ್ಯಕವಾಗಿದೆ ಎಂಬುದನ್ನು ನಾವು ಮರೆಯಲಾಗದು. ಮುಂಬಯಿ ಮದ್ರಾಸ ವಿಶ್ವವಿದ್ಯಾನಿಲಯಗಳ ಕೇಂದ್ರ ಸ್ಥಳಗಳಿಂದ ಕನ್ನಡನಾಡು ಬಹು ದೂರ ವಿರುವದರಿಂದ ಇಲ್ಲಿಯ ಭಾಷೆ, ಸಾಹಿತ್ಯ, ಉದ್ಯೋಗ ವ್ಯವಹಾರಗಳನ್ನು ವೃದ್ಧಿಗೊಳಿಸುವಂತಹ ಶಿಕ್ಷಣದ ಏರ್ಪಾಟನ್ನು ಆ ವಿಶ್ವವಿದ್ಯಾನಿಲಯಗಳು ಅಷ್ಟೊಂದು ಆಸ್ಥೆಯಿಂದ ಕೈಕೊಳ್ಳಲಾರವು. ಕನ್ನಡ ನಾಡಿನಲ್ಲಿಯ ಕೆಲವೊಂದು ಶಿಕ್ಷಣ ಕಾಲೇಜಗಳನ್ನು ಮಾತ್ರ ತಮ್ಮ ಕ್ಷೇತ್ರದಲ್ಲಿ ಆ ವಿಶ್ವವಿದ್ಯಾನಿಲಯಗಳು ಸೇರಿಸಿಕೊಂಡಿವೆ. ಇದಕ್ಕಿಂತ ಹೆಚ್ಚಿನ ಯಾವದೇ ಲಾಭವು ಆ ವಿಶ್ವವಿದ್ಯಾನಿಲಯಗಳಿಂದ ಈ ವರೆಗೆ ನಮಗೆ ಉಂಟಾಗಿಲ್ಲ. ಅಲ್ಲಿ ನಮಗೆ ಪ್ರಾತಿನಿಧ್ಯವು ಸಾಕಷ್ಟಿಲ್ಲ. ಆದುದರಿಂದ ನಮ್ಮ ಸಮಸ್ಯೆಗಳಾದರೂ ಅಲ್ಲಿ ವಿಚಾರಣೆಗೆ ಬರುವದಿಲ್ಲ.

ಕರ್ನಾಟಕಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಕನ್ನಡ ನಾಡಿನ ವಿಶ್ವವಿದ್ಯಾಲಯದಿಂದಲೇ ಬಗೆಹರಿಯಬೇಕಾಗಿವೆ. ಕನ್ನಡ ನಾಡಿನ ಗ್ರಾಮೋದ್ಯೋಗಗಳು, ಔದ್ಯೋಗಿಕ ಮತ್ತು ಆರ್ಥಿಕ ಬೆಳವಣಿಗೆ, ಅರಣ್ಯ ಮತ್ತು ಖನಿಜ ಸಂಪತ್ತು ಇವುಗಳ ಬಗ್ಗೆ ಸಂಶೋಧನೆಯ ಕಾರ್ಯವು ಕರ್ನಾಟಕ ವಿಶ್ವವಿದ್ಯಾಲಯದಿಂದಲೇ ಮುಂದುವರಿಯುವದು. ಕನ್ನಡನಾಡಿನ ಉನ್ನತಿಗೆ ಪ್ರತ್ಯೇಕ ವಿಶ್ವವಿದ್ಯಾಲಯವು ಅತ್ಯಂತ ಅವಶ್ಯವಾಗಿದೆ.

ಮೇಲ್ಕಾಣಿಸಿದ ಕಾರಣಗಳ ಮೂಲಕ ಕರ್ನಾಟಕ ವಿಶ್ವವಿದ್ಯಾಲಯವನ್ನು ಆದಷ್ಟು ಬೇಗನೆ ಸ್ಥಾಪಿಸುವದಕ್ಕೆ ಪ್ರಯತ್ನಗಳನ್ನು ಕೈಕೊಳ್ಳಲು ಇದೀಗ ಯೋಗ್ಯ ಕಾಲವು ಒದಗಿದೆ. ಈ ವಿಷಯದಲ್ಲಿ ಕನ್ನಡಿಗರಿಂದ ಸುಸಂಘಟಿತವಾದ ಕಾರ್ಯವು ಕೂಡಲೇ ನಡೆಯಬೇಕಾಗಿದೆ. ಈ ಬಗ್ಗೆ ಜನಜಾಗೃತಿಯನ್ನುಂಟುಮಾಡಿ ನಮಗೊಂದು ಪ್ರತ್ಯೇಕ ವಿಶ್ವವಿದ್ಯಾಲಯವು ಬೇಕೆಂಬ ಮಾತನ್ನು ಸರಕಾರಕ್ಕೆ ಸ್ಪಷ್ಟವಾಗಿ ತೋರಿಸಿಕೊಡಬೇಕಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಏಕಕಾಲಕ್ಕೆ ಸ್ಥಾಪನೆಯಾಗುವದು ಅವಶ್ಯವಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಪ್ರಯತ್ನಗಳನ್ನು ಸಾಗಿಸುವದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯ ಸಂಘವೆಂಬ ಸಂಸ್ಥೆಯನ್ನು ಏರ್ಪಡಿಸಿ ಆ ಸಂಸ್ಥೆಯ ಮುಖಾಂತರ ನಮ್ಮ ಚಟುವಟಿಕೆಗಳನ್ನು ಸಾಗಿಸಬೇಕು. ಈ ಎಲ್ಲ ವಿಷಯಗಳನ್ನು ವಿಚಾರಮಾಡುವದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತೊಂದನ್ನು ಬೆಳಗಾವಿಯಲ್ಲಿ ಬೇಗನೆ ಕರೆಯಬೇಕೆಂದು ತಾ|| ೭-೪-೪೩ನೆಯ ದಿನ ಬೆಳಗಾವಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ನಿರ್ಣಯವಾಗಿದೆ. ನಿಶ್ಚಿತವಾದ ವೇಳೆ ಮತ್ತು ಕಾರ್ಯಕ್ರಮವನ್ನು ಆಮೇಲೆ ತಿಳಿಸಲಾಗುವದು. ಕರ್ನಾಟಕರೆಲ್ಲರೂ ಈ ಕಾರ್ಯದಲ್ಲಿ ತನುಮನ ಧನದಿಂದ ಸಹಾಯವನ್ನೀಯುವರೆಂದು ಆಶಿಸಲಾಗಿದೆ.

ಜೋಶಿ ನಾರಾಯಣರಾಯರು,
ಅಧ್ಯಕ್ಷ
ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು.
ಬೆಳಗಾವಿ, ೧೦-೪-೧೯೪೩.

ಬೇಕಾಗಿದ್ದಾರೆ.

ಎಡನೀರು ಎಲಿಮೆಂಟರಿ ಶಾಲೆಗೆ ಒಬ್ಬ ಹಾಯರ್ ಗ್ರೇಡ್ ತರಬೇತಿ ಹೊಂದಿದ ಅಧ್ಯಾಪಕರು ಬೇಕಾಗಿದ್ದಾರೆ. ತಲಬು ಎಸ್ಟ್ಯಾಂಡ್ ಗ್ರೇಂಟಿನ 85% ಕೊಡಲ್ಪಡುವುದು. ಉಮೇದ್ವಾರರು ಕೂಡಲೇ ಕೆಳಗಿನವರನ್ನು ವಿಚಾರಿಸುವುದು.

K. Somaya Shetty,
Manager,
Yedaneer Ele. School,
P. O. UDIPI, S. K.

ಜ್ಯೋತಿಷ್ಯದಲ್ಲೇನಾದರೂ ಸತ್ಯಾಂಶವಿದೆಯೋ?

(೪ನೇ ಪುಟದಿಂದ ಮುಂದರಿದುದು.)

ಜೋಯಿಸರುಗಳಿಗೆ ಆಹ್ವಾನ.

ಜೋಯಿಸರುಗಳು ಮಾಡುವ ಭವಿಷ್ಯಗಳು ಹಲವು ವೇಳೆ ತಪ್ಪಾಗುವವೆಂಬುದು ಎಲ್ಲರೂ ಒಪ್ಪುವ ಸಂಗತಿ. ಜನ್ಮಕಾಲವನ್ನು ಸರಿಯಾಗಿ ಬರೆದಿಡದಿರುವುದರಿಂದ ಅಥವಾ ಜೋಯಿಸನು ಬಲ್ಲವನಾಗದಿದ್ದ ಪಕ್ಷದಲ್ಲಿ ಇಂತಹ ತಪ್ಪುಗಳಾಗುವವೆಂದು ವಿಶ್ವಾಸಿಗಳ ವಾದ. ಜ್ಯೋತಿಷವು ಅತಿ ಪುರಾತನ ಮತ್ತು ಪವಿತ್ರ ಶಾಸ್ತ್ರ. ಅದನ್ನು ಉಪಯೋಗಿಸುವವರ ತಪ್ಪುಗಳಿಂದ ಅದರ ಯೋಗ್ಯತೆ ಮತ್ತು ಸತ್ಯತೆಗೆ ಕುಂದುಂಟಾಗಲಾರದೆಂದು ಅವರ ಅಭಿಮತ. ಆದರೆ ಜೋಯಿಸರುಗಳ ಅಭಿಪ್ರಾಯದಂತೆಯೇ ಅದೊಂದು ಪರಿಮಿತಿಯುಳ್ಳದಾಗಿದೆ. ಅದರ ಆಧಾರದಿಂದ ಭವಿಷ್ಯದ ವಿದ್ಯಮಾನವೊಂದರ ಸರಿಯಾದ ದಿನ ಮತ್ತು ಸಮಯವನ್ನು ಹೇಳಲು ಸಾಧ್ಯವಾಗುವುದಿಲ್ಲ. ಬೇರೆಯಾವ ರೀತಿಯಿಂದಲೂ ಗುಣಿಸಿ ಹೇಳಲಸಾಧ್ಯವಾದ ಭವಿಷ್ಯದ ಸಂಗತಿಯೊಂದು ನಡೆಯುವ ದಿನ ಮತ್ತು ಸಮಯವನ್ನು ನಿಶ್ಚಯವಾಗಿ ಹೇಳಬೇಕೆಂದು ನಾವು ಯಾವ ಜೋಯಿಸನನ್ನಾದರೂ ಪಂಥಕ್ಕೆ ಕರೆಯಬಹುದು. ವಿವೇಕಿಯಾದ ಜೋಯಿಸನಾದರೂ ಆ ಕರೆಯನ್ನು ಸ್ವೀಕರಿಸಲಾರನು. ಗಂಡು ಮತ್ತು ಹೆಣ್ಣು ಜಾತಕಗಳನ್ನು ಹೇಗೆ ಗುರುತು ಹಚ್ಚುವುದೆಂದು ದಿವಂಗತ ಸರ್. ಟಿ. ಮಾಧವ ರಾಯರು ಜೋಯಿಸರೊಡನೆ ಪಂಥ ಹಾಕುತ್ತಿದ್ದರು. ಆದರೆ ಯಾರೂ ಅದಕ್ಕೆ ಸಿದ್ಧವಿರಲಿಲ್ಲ.

(ಮುಂದುವರಿಯುವುದು).

ಬೇಕಾಗಿದ್ದಾರೆ.

ಪಡು ಅಲೆವೂರು ಎಲಿಮೆಂಟರಿ ಶಾಲೆಗೆ ಒಬ್ಬ ಸೆಕೆಂಡರಿ ಗ್ರೇಡ್ ಇಲ್ಲವೆ ಹಾಯರ್ ಗ್ರೇಡ್ ಟ್ರೈಂಡು ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ತಲಬು ಎಸ್ಟ್ಯಾಂಡ್ ಗ್ರಾಂಟಿನ 85% ಕೊಡಲಾಗುವುದು. ಉಮೇದ್ವಾರರು ತ್ವರೆಯಲ್ಲಿ ಕೆಳಗಿನವರನ್ನು ಕಾಣುವುದು.

M. Achanna Shetty,
Manager.
Padu Alevoor **Ele. School,**
P. O. UDIPI, S. K.



ಣಬೆದರಿಕೆಗಳಿಂದ ಪ್ರಯೋಜನವೇ
ಧೈರ್ಯವಿದ್ದರೆ ಜಾಪಾನು ಪೂರ್ವ
ದ ರಶ್ಯದ ಮೇಲೇರಿ ಬರಬೇಕು. ಅದ
ರ ಜಾಪಾನೇ ದೊಡ್ಡ ಹಾಸಿಗೊಳಗಾ
ಗ್ರದಲ್ಲದೆ ಸೋವಿಯೆಟ್ ರಶ್ಯವೇನೂ
ಕ್ಕೆ ಸೊಪ್ಪು ಹಾಕಲಾರವೆಂದು ಇತ್ತ
ಗಿ ಸೋವಿಯೆಟ್ ಸರಕಾರದ ಪ್ರತಿನಿಧಿ
ಬ್ಬರು ಜಾಪಾನರನ್ನು ಕೆಣಕಿ ಮಾ
ತಲೆದೆಗೊಂಡಿರುವರು. ಅದೇನೂ ಬ್ರಿ
ರೀತಿ ಮಾತಿನ ಜಂಭವಲ್ಲ. ಕಳೆದ 9
ರ್ಷಗಳಲ್ಲಿ ಸೈಬೀರಿಯದಲ್ಲಿ ಅದೊಂದು
ತವೇ ನಡೆದಿರುವುದು. ಸ್ಟೆಲಿನರು
ದ ಪೂರ್ವಭಾಗವನ್ನು ರಕ್ಷಿಸಲು ನಡೆ
ದ ಏರ್ಪಾಡಿನಿಂದಾಗಿ ಜಾಪಾನು ಅಂ
ಗಿರುವುದು. ಆದುದರಿಂದಲೇ, ಹಿ
ರು ಎಷ್ಟೊಂದು ಒತ್ತಾಯಪಡಿಸಿದ
ಜಾಪಾನಿಗೆ ರಶ್ಯದ ಮೇಲೆ ಬೀಳುವ
ರ್ಯವಿರುವುದಿಲ್ಲ.

ಸೋವಿಯೆಟ್ ರಶ್ಯದ ವಿಚಿತ್ರ ಹಾಗೂ
ದೂರ ದೃಷ್ಟಿಯ ಕೈಗಾರಿಕಾಭಿವೃದ್ಧಿ
ನನೆಯು ಸ್ಟೆಲಿನರ ನಂಬ್ರ ಒಂದನೇ
ತವೆಂಬುದೀಗ ಜನಾಜನಿತ ವಿಷಯ.
ಲಿನರು ಈ ಕೈಗಾರಿಕೋದ್ಯಮಗಳನ್ನು
ಸ್ಕೋ ಮತ್ತು ಲೆನಿನ್‌ಗ್ರಾಡ್‌ಗಳಲ್ಲಿ
ತ್ರ ಕೇಂದ್ರೀಕರಿಸದೆ, 1000 ಮೈಲು
ರ್ವ ಉನ್ನತ ಉರಾಲ್ ಪರ್ವತಗಳ
ಲೆಯಲ್ಲಿ ಅಲ್ಲಲ್ಲಿ ಸ್ಥಾಪಿಸಿದುದರಿಂದ
ಇಂದು ರಶ್ಯವು ಅಸ್ತಿತ್ವದಲ್ಲಿರುವಂತಾ
ತು. ಪಶ್ಚಿಮದ ಕೈಗಾರಿಕಾ ಕೇಂದ್ರಗ
ಜರ್ಮನರು ಆಕ್ರಮಿಸಿ ವಶಪಡಿಸಿ
ಂಡಾಗ ಕೆಂಪು ಸೇನೆಯು ಹಿಂದೆ ಸರಿ
, ತನಗೆ ಬೇಕಾದ ಯುದ್ಧೋಪಕರಣ
ತ್ತು ಇತರ ಸಾಮಾಗ್ರಿಗಳನ್ನು ಹಿಂದಿ
ನ ಧಾರಾಳವಾಗಿ ಪಡೆದು ಪುನರ್ಘಟಿ
ಗಿ ಸಂದರ್ಭ ಸಾಧಿಸಿ ಮುಂಪೊತ್ತು
ತಾಯಿತು. ಇಲ್ಲವಾದರೆ ಹಿಟ್ಲರರ ಪ್ರ
ಂಡ ಹಾಗೂ ಆಕಸ್ಮಿಕ ಧಾಳಿಯನ್ನು
ಹರಿಸಿಕೊಳ್ಳಲಾರದೆ, ಯುರೋಪಿನ
ತರ ರಾಷ್ಟ್ರಗಳಂತೆ ಸೋವಿಯೆಟ್ ರಶ್ಯ
ಪತನ ಹೊಂದಲೇ ಬೇಕಾಗಿತ್ತು.

ಆದರೆ ಸ್ಟೆಲಿನರ ನಂಬ್ರ ಎರಡನೇ ಅ
ತವು ಹೆಚ್ಚಿನವರಿಗೆ ತಿಳಿದಿರುವುದಿಲ್ಲ ಜಾ
ನು ಪೂರ್ವದಿಂದ ರಶ್ಯದ ಮೇಲೆ ಬರು
ದ್ದರೆ ಅದು ಲೋಕಕ್ಕೆ ತಿಳಿಯುವಂತಾ
ತ್ತಿತ್ತು. ಆದರೆ ಜಾಪಾನಿಗೆ ಆ ಧೈರ್ಯ
ರುವಂತಿಲ್ಲ. ಆದುದರಿಂದ ಸ್ಟೆಲಿನರ ಎರ
ನೇ ಅದ್ಭುತವು ಬೆಳಕಿಗೆ ಬಂದಿರುವುದಿಲ್ಲ.
ಅದ್ಭುತವನ್ನು ಕಾಣಬೇಕಾದರೆ ರಶ್ಯದ
ರಾಲ್ ಪರ್ವತ ಪ್ರದೇಶದಿಂದ 2,000
ಮೈಲು ಪೂರ್ವಕ್ಕೆ, ಒಂದೇ ಕಾಲದಲ್ಲಿ
ಹೋಗುವ ಮತ್ತು ಬರುವ ರೈಲ್ವೇ ರಸ್ತೆ
ಹಿರುವ ಟ್ರಾನ್ಸ್ ಸೈಬೀರಿಯನ್ ರೈಲ್ವೆ
ನ ಮೂಲಕ ಸಂಚರಿಸಿ, ಮಧ್ಯ ಸೈಬೀರಿ
ದ ದೊಡ್ಡದಾದ ಬೈಕಲ್ ಸರೋವರ

★ ಸ್ಟೆಲಿನರ ಎರಡನೆಯ ಅದ್ಭುತ! ★

ಜಾಪಾನರನ್ನು ಪ್ರತಿಭಟಿಸಲು ಸೈಬೀರಿಯದ ವಿಚಿತ್ರ ರಕ್ಷಣಾ ವ್ಯವಸ್ಥೆ.

ಜಾಪಾನು ರಶ್ಯದ ಮೇಲೆ ಬೀಳಲು ಹಿಂಜರಿಯುತ್ತಿರುವುದೇಕೆ?

ಪ್ರದೇಶಕ್ಕೆ ಹೋಗಿ ನೋಡ ಬೇಕು. 400 ಮೈಲುದ್ದವಾದ ಈ ಸರೋವರದ ಸುತ್ತಲೆಲ್ಲಾ ನಗರಗಳು ತಲೆಯೆತ್ತಿ ಹೊಸ ಹೊಸ ಕೈಗಾರಿಕೋದ್ಯಮಗಳ ಜೇನುಗೂಡುಗಳಂತಿರುತ್ತವೆ. ಅದ್ಭುತದ ಮೊದಲಿನರ್ಧವಿದು. ಉಳಿದರ್ಧವನ್ನು ನೋಡಬೇಕಾದರೆ ಬೈಕಲ್ ಸರೋವರದಿಂದ ಇನ್ನೂ 2000ಮೈಲು ಪೂರ್ವಕ್ಕೆ ವ್ಲಾಡಿವೊಸ್ಟಕಿಗೆ ಹೋಗಬೇಕು. ಪೂರ್ವದಲ್ಲಿ ಯುದ್ಧದ ದಾವಾಗ್ನಿಯು ಮೊದಲಾಗಿ ಏಳುವುದೆಂದರೆ ಈ ಪ್ರದೇಶದಲ್ಲಿ.

ಹಿಮಾವರಿತವಾದ ಬಂಜರು ಪರ್ವತ ಪ್ರದೇಶವನ್ನು, ಅತಿ ದೊಡ್ಡ ಸೇನೆಯ ಮಹತ್ತಾದ ಆಶಯವಾಗಿ ಮಾರ್ಪಡಿಸಿರುವ ಸಾಹಸವು ನಿಜವಾಗಿಯೂ ಅದೊಂದು ಅದ್ಭುತವೇ ಸರಿ. ವ್ಲಾಡಿವೊಸ್ಟಕಿನಿಂದ 1000 ಮೈಲುಗಳಿಗಿಂತಲೂ ಮೀರಿದ, ಮಂಚೂಕು ರಾಜ್ಯದ ಎಲ್ಲೆಯು ತೋಪು ಮತ್ತು ಕೋಟೆಕೊತ್ತಳಗಳಿಂದ ತುಂಬಿದೆ. ಇಲ್ಲಿ 1941 ರಿಂದ ಸುಮಾರು 800,000ಸೋವಿಯೆಟ್ ಸೇನೆಯು ಯುದ್ಧ ಸನ್ನದ್ಧವಾಗಿ ಕಾಯುತ್ತಾ ನಿಂತಿರುತ್ತದೆ. ಅಷ್ಟೇ ದೊಡ್ಡ ಜಾಪಾನ ಸೇನೆಯು ಕೂಡಾ ಕೆಂಪು ಸೇನೆಯ ಚಲನವಲನವನ್ನು ಎಚ್ಚರದಿಂದ ನೋಡುತ್ತಿದೆ.

ರಶ್ಯದ ಸೈಬೀರಿಯದ ಸೇನೆಯು ಪ್ರತಿಯೊಂದು ವಿಷಯದಲ್ಲಿಯೂ ಸ್ವತಂತ್ರನಾದುದಿದೆ. ಪಶ್ಚಿಮದಿಂದ ಯಾವ ಸಹಾಯವೂ ಇಲ್ಲದೆ ಅದು ಹೋರಾಟ ನಡೆಸುವ ಶಕ್ತಿಯುಳ್ಳದಾಗಿದೆ. ಆಧುನಿಕ ಯುದ್ಧಕ್ಕೆ ಆವಶ್ಯಕವಾಗಿ ಬೇಕಾದ ವಿಮಾನ ನಿಲಯ, ನೌಕಾ ನಿಲಯ, ಯುದ್ಧೋಪಕರಣ ತಯಾರಿ ಕಾರ್ಖಾನೆಗಳು, ರೈಲ್ವೇ ವರ್ಕ್ ಶೋಪ್ ಮತ್ತು ಆಹಾರ ಸರಬರಾಯಿ ಕೇಂದ್ರಗಳನ್ನು ಸ್ಟೆಲಿನರು ಸೈಬೀರಿಯದಲ್ಲಿಯೇ ಸ್ಥಾಪಿಸಿರುವರು. ಸಾಮುದಾಯಿಕ ಬೇಸಾಯ ಪದ್ಧತಿಯು ಅತ್ಯಾಧುನಿಕ ಯಂತ್ರೋಪಕರಣಗಳ ಮೂಲಕ ಬಹಳ ಜಯಶೀಲವಾಗಿ ನಡೆಸಲ್ಪಟ್ಟಿದೆ. ಒಂದು ಪಕ್ಕಕ್ಕೆ ವ್ಲಾಡಿವೊಸ್ಟಕು ಸ್ಪೆಂಗಳ ಪಕವಾದರೂ, 5000ರಿಂದ 1000 ಮೈಲುಗಳ ಪಶ್ಚಿಮದ ಸೋವಿಯೆಟ್ ಸೇನೆಯ ಹೃದಯವಾದ ಈ ಪ್ರದೇಶಕ್ಕೇನೂ ಹಾನಿಯುಂಟಾಗಲಾರದು. ಹೀಗೆ ಉರಾಲ್ ಪರ್ವತ ಪ್ರದೇಶದ ಅದ್ಭುತಕ್ಕಿಂತಲೂ ದೊಡ್ಡ ಅದ್ಭುತವನ್ನು ಸ್ಟೆಲಿನರು ಸೈಬೀರಿಯದಲ್ಲಿ, ಭಯಂಕರ ವಿರುದ್ಧ ಹವಾಗುಣ ಮತ್ತು ಪರಿಸ್ಥಿತಿಯಲ್ಲಿ ಸಾಧಿಸಿರುವರು.

ಅಮೂರು ನದಿಯಲ್ಲಿರುವ ಕೊಮ್ಸ ಮೊಲ್‌ಸ್ಕ್ ಎಂಬುದು ಸ್ಟೆಲಿನರು ಹೊಸತಾಗಿ ನಿರ್ಮಿಸಿರುವ ಯುದ್ಧ ಸಾಮಾಗ್ರಿ ಸರಬರಾಯಿ ಕೇಂದ್ರ. 1926ರಲ್ಲಿ ಈ ಸ್ಥಳದ ಹೆಸರು ಕೂಡಾ ಯಾರಿಗೂ ತಿಳಿದಿರಲಿಲ್ಲ. ಅದೊಂದು ಅಜ್ಞಾತ ಹಳ್ಳಿಯಾಗಿತ್ತು. ಈಗ 71000ಕ್ಕಿಂತಲೂ ಹೆಚ್ಚಿನ ಕೆಲಸಗಾರರಲ್ಲಿ ದುಡಿಯುತ್ತಿದ್ದಾರೆ. ಅವರಲ್ಲಿ ಅನೇಕರು ತರುಣ ಇಂಜಿನೀಯರರು. ಅಲ್ಲಿಯೇ ದೊರೆಯುವ ಕಬ್ಬಿಣ ಮತ್ತು ಉಕ್ಕಿನಿಂದ ಈ ಇಂಜಿನೀಯರರು ಯಾಂತ್ರಿಕ ಉಪಕರಣಗಳನ್ನೂ ತಯಾರಿಸುತ್ತಾರೆ. ಇದಕ್ಕಿಂತಲೂ ದೊಡ್ಡ ಲೋಹ ತಯಾರಿ ಕೇಂದ್ರವಾದ ಖಬರೊವಸ್ಕಿನ ಜನಸಂಖ್ಯೆಯು 1926ರಲ್ಲಿ 52,000 ಇದ್ದುದು 1939ರಲ್ಲಿ 199,000ಕ್ಕೇರಿದೆ. ಇಲ್ಲಿ ದೊಡ್ಡದಾದೊಂದು ಪೆಟ್ರೋಲ್ ಶುದ್ಧೀಕರಣ ಯಂತ್ರವೂ ಇದೆ. ಈ ಪಟ್ಟಣಗಳಿಗೆ ಬೇಕಾದ ಇದ್ದಲು ಕೂಡಾ ಹೊಸದಾಗಿ ಕಂಡು ಹಿಡಿಯಲ್ಪಟ್ಟಿರುವ ಸ್ಥಳೀಯ ಇದ್ದಲುಗಣಿಗಳಿಂದ ದೊರೆಯುತ್ತದೆ. ಕೊಮ್ಸೊಮೊಲ್‌ಸ್ಕಿನ ಪೂರ್ವದಲ್ಲಿ ಸೋವಿಯೆಟ್ ಸ್ಕೇಯಿಯ ಎಂಬ ಹೊಸ ಬಂದರು ಸ್ಥಾಪಿಸಲ್ಪಟ್ಟಿರುತ್ತದೆ. 9ವರ್ಷಗಳ ಅದ್ಭುತವಿದು. 1933ರಲ್ಲಿ ಹಿಟ್ಲರರು ಅಧಿಕಾರಕ್ಕೆ ಬಂದ ಮೇಲೆ ಸ್ಟೆಲಿನರು, ಎರಡು ರಣರಂಗಗಳ ಯುದ್ಧ ಸಿದ್ಧತೆಗಾಗಿ ಮಾಡಿದ ಪ್ರಾಮುಖ್ಯವಾದೊಂದು ಏರ್ಪಾಡಿದು.

ಸೋವಿಯೆಟ್‌ಸ್ಕೇಯಿಯದ ಪೂರ್ವದ
ಲ್ಲಿ 150ಮೈಲು ಸಮುದ್ರ ಪ್ರದೇಶವು
ಮೀನುಗಾರಿಕೆಗೆ ಬಹಳ ಒಳ್ಳೇ ಸ್ಥ
ವಾಗಿದೆ. ಈ ಸಮುದ್ರ ಪ್ರದೇಶದಾಚೆಗಿ
ಸಖಲಿನ್ ದ್ವೀಪವು ಪೆಟ್ರೋಲ್ ದೊ
ಯುವ ದೊಡ್ಡ ಕ್ಷೇತ್ರವಾಗಿದೆ. ಈ ದ್ವಿ
ದ ದಕ್ಷಿಣ ಭಾಗವು ಜಾಪಾನರ ಅಧಿ
ನವಿದೆ ಆದರೆ ಎಣ್ಣೆಯಿರುವ ಉತ್ತರ ಭಾ
ಗವು ರಶ್ಯಕ್ಕೆ ಸೇರಿರುತ್ತದೆ. ಸಖಲಿನಿ
ಎಣ್ಣೆ, ಸೈಬೀರಿಯದ ಮೀನು, ಮತ್ತು
ವ್ಲಾಡಿವೊಸ್ಟಕಿನ ವಿಮಾನ ಧಾಳಿಯ ಅಪಾ
ಯದ ಕುರಿತು ಜಾಪಾನರ ದೃಷ್ಟಿ ಬಿದ್ದಿದೆ
ಆದುದರಿಂದಲೇ ರಶ್ಯವನ್ನವರು ತಮ್ಮ
ದೊಡ್ಡ ವೈರಿಯಾಗಿ ಪರಿಗಣಿಸುತ್ತಾರೆ. ಆ
ದರೆ ಜಾಪಾನರು ಪಶ್ಚಿಮ ಮಂಚೂಕೊ
ಮತ್ತು ಔಟರ್ ಮಂಗೋಲಿಯದ ಮೂಲ
ಕ ವಾಯುವ್ಯಕ್ಕೆ ಮುಂದೊತ್ತಿದರೆ, ಸ್ಟೆ
ನರ ಸೈಬೀರಿಯದ ಅದ್ಭುತದ ಪ್ರಥಮ
ಭಾಗವನ್ನು ಅಂದರೆ ಬೈಕಲ್ ಸರೋವ
ದ ಸುತ್ತಲಿನ ಕೈಗಾರಿಕ ಪಟ್ಟಣಗಳನ್ನ
ವಶಪಡಿಸಿಕೊಳ್ಳಲು ಅವರು ಪ್ರಯತ್ನಿಸ
ಹುದು. ಈ ಸರೋವರದ ಪೂರ್ವದ
ಯಾಂತ್ರಿಕೋಪಕರಣ ತಯಾರಿ ಕೇಂದ್ರ
ವಾದ ಉಲಾನ್ ಉಡೆ ಎಂಬ ಪಟ್ಟಣ
ದೆ. ಬುರ್ಯಟ್ ಮಂಗೋಲಿಯನರಿಂ
ಜನರ ಸ್ವತಂತ್ರ ಸಂಸ್ಥಾನದ ಮುಖ್ಯ
ಪಟ್ಟಣವದು. 1939ರಿಂದ ಸೋ
ಯೆಟ್ ಸರಕಾರವು ಈ ಜನತೆಯೊಡ
ಒಪ್ಪಂದ ಮಾಡಿಕೊಂಡಿದೆ. ಬುರ್ಯಟ್
ಸೈನಿಕರು ಕೆಂಪು ಸೈನಿಕರೊಂದಿಗೆ ಕೂ
ಹೋರಾಡಲು ಸಿದ್ಧರಾಗಿರುತ್ತಾರೆ.

ಬೈಕಲ್ ಸರೋವರದ ಪಶ್ಚಿಮದಲ್ಲಿ
ವ ಇರ್ಕುಟ್‌ಸ್ಕ್ ಎಂಬಲ್ಲಿ ಸೈಬೀರಿಯ
ಅತಿದೊಡ್ಡ ವಿಮಾನ ತಯಾರಿ ಕಾರ್ಖಾ
ಮತ್ತು ಯಾಂತ್ರಿಕೋಪಕರಣ ತಯಾ
ಫ್ಯಾಕ್ಟರಿಗಳಿರುತ್ತವೆ. ಅನತಿ ದೂರದಲ್ಲಿ
ದೊಡ್ಡದಾದ ಬೈಕಲ್ ಇಲೆಕ್ಟ್ರಿಕ್ ಅ
ಕಟ್ಟಿದೆ. ಸೈಬೀರಿಯದ ಕೈಗಾರಿಕ ಕೇಂ
ಗಳಿಗೆಲ್ಲಾ ವಿದ್ಯುಚ್ಛಕ್ತಿಯು ಸರಬರಾ
ಮಾಡುವ ಈ ಅಣೆಕಟ್ಟು, ರಶ್ಯಾನರು
ರ್ಮನರ ವಶವಾಗಬಾರದೆಂದು ನಾ
ಮಾಡಿರುವ ನೀಪರ್ ಅಣೆಕಟ್ಟಿನಷ್ಟೇ ದ
ಡ್ಡದು ಮತ್ತು ಪ್ರಸಿದ್ಧವಾದುದು.

ಯುದ್ಧೋಪಕರಣ ತಯಾರಿಗೆ ಅಗ
ವಾದ ಇದ್ದಲು, ಕೃತಕರಬ್ಬರು, ತಾಮ
ಅಲ್ಯುಮಿನಿಯಮ್ ಮೊದಲಾದುವು
ಲ್ಲಾ ಸೈಬೀರಿಯದಲ್ಲೇ ದೊರಕುತ್ತ
ಸಾಮೂಹಿಕ ವ್ಯವಸಾಯದಿಂದಾಗಿ ಇ
ಲಾಗಿ ಕೆಲವು ವರ್ಷಗಳಲ್ಲಿ ಸೈಬೀ
ಯದ ದವಸಧಾನ್ಯ ಉತ್ಪತ್ತಿಯು ಮ
ರಷ್ಟು ಹೆಚ್ಚಿದೆ. ಹಿಮಾವರಿತವಾಗಿ
ಜರು ಬಿದ್ದಿದ್ದ ವಿಶಾಲ ಪ್ರದೇಶಗಳೀ
ಫಲವತ್ತಾದ ಹೊಲಗಳಾಗಿ ಮಾರ್ಪಟ್ಟಿ
ಸೋವಿಯೆಟ್ ಸರಕಾರದ ಉದಾರ ಪ್ರೋ
ತ್ಸಾಹ ಮತ್ತು ಸೋವಿಯೆಟ್ ನವ
ರ್ಮಾಣದ ಸ್ಫೂರ್ತಿಯಿಂದ ಉದ್ದೀ
ರಾದ ಸಾಹಸಿಗರು ಸೈಬೀರಿಯದಲ್ಲಿ
ದು ನೆಲಸಿ ಈ ಅದ್ಭುತವನ್ನು ಮಾ
ತ್ತಾರೆ.

FIXED DEPOSITS

are now accepted at all our offices,
at attractive rates of interest.
For further particulars please apply
to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇರೆ ಬೇರೆ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು. ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

Degrees: Books: Medicines

Free H L M S, M B H M D etc free Homoeo-Ayur-Unani-Nature degree by post also—Practitioners also get soon Homeo Materiamedica Rs. 5 Homeo Practice book Rs 4 Insanity Cure Pills Rs. 10 Enclose 2 annas stamp:—
Principal Indian Homeopath Institute & Society (Govt. Regd.)
P.O Mahuva, (Kathiawar Dt, India.)

Sidha-Kalpa Kavach (Regd.)
No 3 Rs 2, No 2 Rs 5 No 1 Rs. 7, Special Rs. 10, Extra Special Rs 17, for love marriage health, wealth. Ask any six questions with M. O. Re 1|- and get correct answers by return post Life reas Rs [illegible] No V P P Send M O Fred P. O ts Prof. Dr N H. Chhatbar, Jogpain Mahuva (Kathiawar India.)

DIAMONDS! **DIAMONDS!**

K. R. K. SHET.

Opposite Govt College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality selected) ಎಮ್‌ಸ್ಟರ್‌ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೨ ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೋಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಸೂತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಸ್ನಾನ ಮಾಡುತ್ತಾರೆ. ಇಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿಸೀರಿನಲ್ಲಿ ಸೇವಿಸಬೇಕು

ಪಥ್ಯ:— ಹರಿಷೇಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೯—0—0 ಪೋಸ್ಟ ಚಾರ್ಜು ೮ ಆಣೆ

ಮಾಲಕರು — ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ಬಾಸಪ್ಪ ಸಿದ್ದಲಿಂಗಪ್ಪ ಧಾರವಾಡದ ವಿಜಾಪೂರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ ದಾವಣಗೇರಿ,—ದಾವಣಗೇರಿ ಪ್ರೆಸ್ಸ್. ಬಳ್ಳಾರಿ —ಎಚ್. ನಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ —ಸಂಗಪ್ಪ ಶಿವಲಿಂಗಪ್ಪ ಅಂದಾನಿ

ಅಚ್ಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು—**ಆಮಲಕೀ ತೈಲ.**
ಆನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು- **ಆಮಲಕೀ ತೈಲ.**
ತಂಪಾದ ನೇತ್ರಗಳನ್ನು ಹೊಂದಲು—**ಆಮಲಕೀ ತೈಲ**
ನಾರೀಮಣಿಗಳ ಸೌಂದರ್ಯವೇ—**ಆಮಲಕೀ ತೈಲ**
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ-**ಆಮಲಕೀ ತೈಲ.**
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—**ಆಮಲಕೀ ತೈಲ**
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾಮದೇ—**ಆಮಲಕೀ ತೈಲ.**
ಭಾರತದ ಮಹಿಳೆಯರು ಪ್ರೀತಿಸುವರು—**ಆಮಲಕೀ ತೈಲ.**
ಬೆಳಗುವ ತಾರೆಯೇ-ಮದುಮಗಳ ಸ್ವಾಸ್ಥ್ಯಕ್ಕೆ—**ಆಮಲಕೀ ತೈಲ**
ಲಲನೆಯರು ಮೆಚ್ಚುವರು—**ಆಮಲಕೀ ತೈಲ**
ವಾತಾದಿ ತ್ರಿದೋಷನಾಶಕವೇ—**ಆಮಲಕೀ ತೈಲ.**
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—**ಆಮಲಕೀ ತೈಲ.**
ಸರ್ವಶಿರೋರೋಗನಿವಾರಕ ಅತ್ಯಂತ ಹಿತಾವಹ-**ಆಮಲಕೀ ತೈಲ**
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ —**ಆಮಲಕೀ ತೈಲ**

ಆಮಲಕೀ ತೈಲ ವನ್ನೇ ಉಪಯೋಗಿಸಿರಿ.

2 ಔನ್ಸಿನ ಸೀಸೆ ೧ರ ಕ್ರಯ 0-6-0 4 ಔನ್ಸಿನ ಸೀಸೆ ೧ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ) **ಕುಂಜಾಲು**

ಸ್ಟಾಕಿಸ್ಟರು:-ನವಭಾರತ ಬುಕ್‌ಡಿಪೋ, ಉಡುಪಿ. ಗಣಪಯ್ಯ ಲಕ್ಷ್ಮಣನಾಯಕ್ ಬ್ರದರ್ಸ, ಕೋಟ ದಿ ಹೆರಿಕಲ್ ಮೆಡಿಕಲ್ ಸ್ಟೋರ್ಸ್ ಸ ಬ್ರಹ್ಮಣ್ಯ, ದ. ಕ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಮುಖ್ಯ ಕಾರ್ಯಾಲಯ — **ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ.

ಶಿಕ್ತ ಮೂಲಧನ .. ರೂ. 1,82,100

ಕ್ಷೇಮ ನಿಧಿಗಳು .. . ರೂ 17,18,98-2-11

ಶಾಖೆಗಳು — **ಉಡುಪಿ, ಮಂಗಳೂರು, ಕಟಪಾಡಿ, ಶಿರ್ವ, ಕಾರ್ಕಳ**

ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ

ವ್ಯಾಪಾರಕ್ಕೆ ಯುಕ್ತವಾದ ಜವಗಳ, ಚಿನ್ನಾಭರಣಗಳ ಸಮಾಧಾನಕರವಾದ ಇತರ ಭದ್ರತೆಗಳ ಮೇಲೂ ಓವರ್‌ಡ್ರಾಫ್ಟ್ ಸೌಲಭ್ಯಗಳು ಹುಂಡಿಗಳ ಮೇಲೂ ಚೆಕ್ಕ ಡಿಪೋಸಿಟ್ ಸಾಲಗಳು ಓವರ್ ಡ್ರಾಫ್ಟು, ಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ಕೊಡಲ್ಪಡುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ

ಹೆಚ್ಚಿನ ಮಾಹಿತಿಗೆ ನೇರವಾಗಿ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ವಿಚಾರಿಸಿ.

UDIPI, 16th April

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು)

ಹ ಕಲಹಾದಿಗಳಿಂದ ಪೀಡಿತರಾದ ನಿಮಗೆ **ತಾ.** 23. 24. 28. 29 ಈ 4ದಿನಗಳು ಶುಭದಾಯಿಗಳು

ತುಲಾ—ಪ್ರಯತ್ನಕ್ಕೆ ತಕ್ಕುದಾದ ಫಲಪ್ರಾಪ್ತಿಯಿಲ್ಲದಿರುವುದರಿಂದ ನಿಮಗೆ ಸಧ್ಯದ ದಿನಗಳು ತೃಪ್ತಿಕರವಾಗಿರವು ವ್ಯರ್ಥಾಟನದಿಂದಲೂ ದೇಹಾಲಸ್ಯ ಮತ್ತು ಮನೋರೋಗದಿಂದಲೂ ನಿಮಗೆ ಸ್ವಪ್ನದಲ್ಲೂ ಸುಖವು ದುರ್ಲಭವೆನಿಸೀತು ಹಿತ ಶತ್ರುಗಳ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿರುವದಾದರೂ ಪ್ರತಿಕ್ರಿಯಾ ವಿಚಾರದಲ್ಲಿ ನೀವು ಒಳ್ಳೇ ತಜ್ಞರಿರುವಿರಿ. ಪತ್ನೀಪುತ್ರರಿಂದ ವಿರಹವುಂಟಾದೀತು. ತಾ.28.29 ಈ 2ದಿನಗಳಲ್ಲಿ ಧನ ಮತ್ತು ಆರೋಗ್ಯಭಾಗಕ್ಕೆ ಬಹಳ ಹಾನಿಯಿದೆ

ವೃಶ್ಚಿಕ—ದೇಹ ಮತ್ತು ಸುಖಸತಿಗಳಾದ ಶನ್ಯಂಗಾರಕರು ಪ್ರತಿಕೂಲರಿರುವುದರಿಂದ ನಿಮಗೀವಾರದಲ್ಲಿ ದೈಹಿಕ ಸುಖಕ್ಕೆ ವಿಶೇಷ ಹಾನಿಯಿದೆ. ಜಾಗರೂಕರಾಗಿರತಕ್ಕವರಿಗೂ ಕೂಡ ದೇಹಾಪಾಯವು ತಪ್ಪಿದ್ದಲ್ಲ ಶತ್ರುಜನರ ದಮನದಿಂದಲೂ ಕಲ್ಪಿತ ವಸ್ತು ಲಾಭದಿಂದಲೂ ನಿಮ್ಮ ಅಂತರಂಗಕ್ಕೆ ಸುಖವಿದೆ ಸಮಾಜದಲ್ಲಿ ಮರ್ಯಾದಾರ್ಹರಾಗುವಿರಿ ಆಗ ಭೋಗಗಳಿಗೇನೂ ಕೊರತೆಯುಂಟಾಗದು ತಾ 25ರಿಂದ 29ರ ವರೆಗಿನ ದಿನಗಳು ಸುಖೇಷ್ಟ ಸಾಧಕಗಳಾಗಿವೆ.

ಧನು—ಧನಲಾಭಪರರಾದ ಶನಿ ಶುಕ್ರರು ಮಾತ್ರ ಈ ವಾರದಲ್ಲಿ ಅನುಕೂಲರಿರುವುದರಿಂದ ನಿಮ್ಮ ಆರ್ಥಿಕಭಾಗವು ಉತ್ತಮವಿರುವುದು. ತನುಮನಸ್ಸುಗಳಿಗೆ ಉಲ್ಲಾಸವಿರುವುದು. ಆದರೆ ಮನೆಯ ಜನರಲ್ಲಿ ಪರಸ್ಪರ ಒಡಕುಂಟಾಗುವ ಸಂಭವವಿದೆ. ತಂದೆ ಮಕ್ಕಳಲ್ಲೂ ವಿಶೇಷತಃ ಪತಿಪತ್ನಿಗಳಲ್ಲೂ ಕಲಹವಾಗುವದು. ಮನೋಧೈರ್ಯವು ಕೆಡಲಿದೆ. ಸಾಮಾಜಿಕ ಕ್ಷೇತ್ರದಲ್ಲಿ ಗೌರವವನ್ನುಳಿಸಿಕೊಳ್ಳುವದು ದುಸ್ಸಾಧ್ಯವಾದೀತು. ವಾರಾದಿಯ ೫ದಿನಗಳು ಅನಿರೀಕ್ಷಿತ ಆಪತ್ತು ಮತ್ತು ರಾಜಭಯಕಾರಿಗಳಾಗಿವೆ.

ಮಕರ— ಗುರ್ವನುಗ್ರಹದಿಂದ ಸದ್ಯ ನಿಮ್ಮ ಕಾರ್ಯಕಲಾಪಗಳು **ನಿರ್ವಿಘ್ನ**ದಿಂದ ನೆರವೇರಲಿವೆ. ಇತರರ ಸಹಾಯವನ್ನು ನೀವು ಬಯಸಲಾರಿರಿ. ರಾಮೇಶ್ವರಕ್ಕೆ ಹೋದರೂ ಶನೈಶ್ಚರನು ಬಿಡನೆಂಬಗಾದೆಯಂತೆ ಶನಿಯ ಕಾಟ ಮಾತ್ರ ತಪ್ಪುವಂತಿಲ್ಲ ಸೇವಕಾಧಿಕಾರಿಗಳಲ್ಲಿ ಕಲಹವಾದೀತು. ತಂದೆ ಮಕ್ಕಳೊಳು ಮನಸ್ಸಮಾಧಾನವಿರದು. ಆದರೂ ಬಂಧುಬಳಗದವರ ಸಹಾಯವು ಪರಿಪೂರ್ಣವಿರುವುದರಿಂದಲೂ ಶತ್ರು ಜನರು ಮಿತ್ರರಾಗುವುದರಿಂದಲೂ ತಾ 23. 24. 30 ಈ ದಿನಗಳನ್ನು ಸುಖದಿಂದ ಕಳೆವಿರಿ.

ಕುಂಭ—ನಿಮ್ಮ ಆರ್ಥಿಕಮುಗ್ಗಟ್ಟು ಈ ವಾರದಲ್ಲ ಪರಿಹಾರವಾಗುವದು ಗೃಹಸುಖವು ಉತ್ಕೃಷ್ಟವಿರುವುದು. ಖರ್ಚು ಅಧಿಕವಾಗಿದ್ದರೂ ಭಾಗ್ಯಪನ ಅನುಗ್ರಹದಿಂದ ಚಿಂತೆಗಾಸ್ಪದವಿಲ್ಲವು ವೈದ್ಯವೃತ್ತಿಯವರಿಗೂ ವ್ಯಾಪಾರೀ ಜನರಿಗೂ ಯಶೋಲಾಭವಿದೆ. ಚಂಚಲವಾದ ನಿಮ್ಮ ಮನಸ್ಸು ನಿಮ್ಮನ್ನು ಅಡ್ಡದಾರಿಗೆಳೆಯಲಿರುವದು ಪುತ್ರ ವಿಷಯಕವಾದ ದುಃಖವು ಸಂಭವಿಸಲಿದೆ. ವಾರಾದಿಯ ೨ದಿನಗಳು ಸುಖಲಾಭಾದಿಗಳಿಂದ ಕಳೆದು ಹೋಳಿಯಲೊಲ್ಲವು.

ಮೀನ—ಸುಖಕಷ್ಟ ಲಾಭನಷ್ಟಗಳ ವಿಚಾರದಲ್ಲಿ ನಿಮಗೀವಾರವು ಸಮಬಲವುಳ್ಳದಾಗಿದೆ ಶತ್ರುಜನರು ಮಿತ್ರರ ಸೋಗು ಹಾಕಿಕೊಂಡು ನಿಮ್ಮನ್ನು ವಂಚಿಸಲಿರುವರು. ವಿಚಾರಾಭಾವದಿಂದ ಕಾರ್ಯಹಾನಿ ಗೈವಿರಿ. ಆರೋಗ್ಯವು ನೆಟ್ಟಗಿರದು. ಎಂತಹ **ಆಪತ್ತು** ಬಂದರೂ ಇತರರಿಗೆ ತಲೆ ಬಗ್ಗಿಸಲಾರೆವೆಂಬ ನಿಮ್ಮ ಮನೋನಿರ್ಧಾರಕ್ಕೆ ಹಾನಿಯುಂಟಾಗುವಂತಿಲ್ಲ. **ತಾ.** 25 ರಿಂದ 29ರ ವರೆಗಿನ ದಿನಗಳು ಇಷ್ಟಸಾಧಕಗಳಾಗಿವೆ.

SELF ENGLISH KANNADA TUTOR

ಸ್ವಯಂ ಇಂಗ್ಲೀಷ ಬೋಧಿನಿ.

ನವೀನ ವಿಷಯಗಳು ಸೇರಿಸಲ್ಪಟ್ಟವೆ



ಕನ್ನಡ ಓದಲಿಕ್ಕೆ ತಿಳಿದವನು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

(ದ್ವಿತೀಯ ಆವೃತ್ತಿ)

THE MODERN BOOK Co.,

No 28, Avadhanam Papier 2nd Line (N Y) Choolai, MADR

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'**ಕೆಫೆ ರೋಯಲ್**'

ಆಸ್ಪತ್ರೆ ರಸ್ತೆ, ಉಡುಪಿ

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋದಿನ ರಿಂಗ್‌ವರ್ಮ್ ಮುಲಾಮು. —

ಇಷ್ಟರವರೆಗಣ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪ್ಪೋದಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂದು ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ದಾರ್ಶನಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ‿ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ‿ ೦ ೦	**ಅಮಾತ್ಯನಂದಿನಿ**	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯು**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲಾ ಆನಂದವನ, ಹಾವೇರಿ

ಉಡುಪಿ ಏಜಂಟರು— **ನವಭಾರತ ಪುಸ್ತಕ ಭಂಡಾರ, ಉಡುಪಿ.**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.



ಬಾಲಾರ್ಕ ಮಧು

ಚಿಕ್ಕ ಮಕ್ಕಳ ರಕ್ತವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾಗಿದೆ

ಅರೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ;

೬ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪ್ಪೋ, ಉಡುಪಿ.**

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಬಾಕಸರ ಬೇಜು, ಮೊನೋಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಲಕ್ಷ ಸುಖದಿಂದ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿವ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ **೪ ರೂಪಾಯಿಗಳೇ** ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ **ಬರೆಯಿರಿ.**

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಸಂ.ನ **ಕೊಡಿಂಗಾಲಬೈಲು, ದಕ.**

ಸೀರೆಗಳು

ಸ್ವದೇಶೀ ಮಿಲ್ಲುಗಳಿಂದ ನಮ್ಮ ಜನರಿಂದಲೇ ತಯಾರಾಗುವ ಹಗಿನ ಅಂಚಿಂಗೆ ಒಪ್ಪುವ ಎಲ್ಲಾ ತರದ ರಂಗು ರಂಗಿನ ಸೀರೆಗಳು ಒಪ್ಪವಲ್ಲಿ ಅಂಚಿನ ಸರಿ ಸಮಾನ ದರದಲ್ಲಿ ದೊರೆಯುತ್ತವೆ. ಖಾದಿ ಮತ್ತು ಸಿಲ್ಕ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್

ಆಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ.

ಉಡುಪಿ.

ಮಿಲ್ಟ್ರರಗತಿಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್.

ಮ್ಯಾನೇಜರ್

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618 | Estd. 1921 ಸ್ಥಾಪಿತ.

ಅಂತರಂಗ
ಹೊಸ ಮಾದರಿಯ ವಿನೋದವಾರಪತ್ರಿಕೆ
ವಾ. ಚಂದಾ ರೂ. 3-0-0
ಬಿಡಿಪ್ರತಿಗೆ 0-1-0
ಮಾದರಿ ಪ್ರತಿಗೆ—
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

Read and Advertise in
ANTARANGA
The All Karnataka humorous Weekly
Udipi - S. India

ಸಂಪುಟ ೨೧ | Vol. 21
ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ
NAVAYUGA WEEKLY
30-4-1942
ಸಂಚಿಕೆ ೩೪ | No. 34

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು, ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1)ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಆಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಮುಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ, (3) ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ದನ್ವಂತರಿ ವೈದ್ಯಶಾಲ, ಲಿನ್ಸಡೌನ ಬಜಾರ್, ಮೈಸೂರು. (5) ಮಂಗ್ಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ.(7) ಡಾ ಶ್ರೀನಿವಾಸ. ಷೈ, ಪುತ್ತೂರು (8) ಕಾಂತಾವರ ಶಾಸ್ತ್ರೀವ ಕಮ್ತಿ, ಬೆಳ್ತಂಗಡಿ, (9) ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ. (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ (13) ಕೆ. ಶ್ರೀನಿವಾಸಹೆಗ್ಡೆ, ತೀರ್ಥಹಳ್ಳಿ (14) ಬಿ. ಯಸ್. ನರಸಿಂಗರಾವ್. ಮರ್ಚೆಂಟ್, ಚಿಕ್ಕಮಂಗ್ಳೂರು

ಹಿಂದೂದೇಶದ



ಅಪ್ಪಟ
ಗಂಧದ ಸಾಬೂನು
ಮೈಸೂರು ಸ್ಯಾಂಡಲ್ ಸೋಪ್
ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಜ್ವರ ದೀ ಹಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಭಿಣಿಯಿಂದ ಗರ್ಭಕೋಶ ಸಾರಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನನ್ನ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆವರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ASIAN POLICIES

Cover war risk on civilians without any extra premiums.

Figures that speaks the strength and stability of the company. as on 31—12—1941

Assets exceed	...	....	Rs. 1,10,00,000
Life Fund exceeds	....	....	, 92,00,000
Business in force	....	....	,, 4,28,00,000
Claims paid over	....	....	,, 56,00,000

For further particulars and agency terms, please apply to
Branch Manager,
The Asian Assurance Co., Ltd , Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿದ್ದರೆ ಈ ಕೆಳಗಿನವರಿಗೆ ಬರೆಯಿರಿ. —

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಗ-?

ತಾರುಣ್ಯವು ತೋರಿದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯು ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S. INDIA.

ಈ ವಾರದ ಭವಿಷ್ಯ

ತಾರೀಕು ೩೦—೪—೪೨ರಿಂದ ತಾರೀಕು ೬—೫—೪೨ರ ವರೆಗೆ

ಮೇಷ—ಲಗ್ನಪನೂ ವಿಕ್ರಮಕಾರಕನೂ ಆದ ಅಂಗಾರಕನು ಮತ್ತು ಇತರ ಸೌಮ್ಯ ಗ್ರಹರ ಅನುಗ್ರಹವು ನಿಮಗೆ ಈ ವಾರದಲ್ಲಿ ಲಭಿಸಿರುವುದು. ಆದಕಾರಣ ನಿಮ್ಮ ಅಲ್ಪ ಯತ್ನವೂ ಕೂಡ ಮಹತ್ಫಲದಾಯಕವಾಗಿ ಪರಿಣಮಿಸಲಿದೆ. ನಿಮ್ಮ ಸಂಪಾದನೆಯು ಅಧಿಕವಿದ್ದರೂ ದಿನಾಂತ್ಯದಲ್ಲಿ ಕೈ ಬರಿದಾದೀತು. ವಿದ್ಯೋಪಜೀವಿಗಳೂ ವ್ಯಾಪಾರಿಗಳೂ ಆದ ತರುಣ ಜನವರ್ಗಕ್ಕೆ ಈ ವಾರವು ಉತ್ತಮವಿದೆ. ವಿದ್ಯಾರ್ಥಿಗಳ ಮನೋಭೀಷ್ಟವು ಅನಾಯಾಸದಿಂದ ನೆರವೇರುವುದು. ತಾ 2.3.4. 5 ಈ ದಿನಗಳಲ್ಲಿ ಅನಿರೀಕ್ಷಿತ ಕಲಹ, ವಿಘ್ನ, ಶೋಕಗಳು ಸಂಘಟಿಸಬಹುದು

ವೃಷಭ— ಎಲ್ಲಾ ಗ್ರಹರೂ ಪ್ರತಿಕೂಲರಾಗಿದ್ದರೂ ಲಾಭಸ್ಥ ಉಚ್ಚ ಶುಕ್ರನ ಪ್ರಬಲ ಆಧಾರವು ನಿಮಗಿರುವುದರಿಂದ ಬೇಕಾದಂತೆ ಸಹಾಯ ಸೌಕರ್ಯಗಳನ್ನೊದಗಿಸುವ ಸನ್ಮಿತ್ರ ವರ್ಗವು ನಿಮಗೆ ಲಭಿಸುವುದು. ಆದರೆ ಕಾರ್ಯಾಕಾರ್ಯ ವಿಚಾರಶಕ್ತಿಯು ನಿಮ್ಮಲ್ಲಿ ಸಾಕಷ್ಟಿಲ್ಲದ ಪ್ರಯುಕ್ತ ಮತ್ತು ಕೇವಲ ದುಡುಕು ಸ್ವಭಾವ, ನಿಷ್ಠುರ ಭಾಷಣ ಇತ್ಯಾದಿಗಳಿಂದ ಹಲವರ ಆಗ್ರಹಕ್ಕೆ ಗುರಿಯಾಗುವಿರಲ್ಲದೆ ಕಾರ್ಯಹಾನಿಯೂ ಸಂಭವಿಸೀತು. ವಾರಾದಿಯ 4 ದಿನಗಳು ಇಷ್ಟಸಾಧಕಗಳಾಗಿವೆ.

ಮಿಥುನ—ವಿಕ್ರಮಸ್ಥಾನಪನಾದ ರವಿಯೊಬ್ಬನು ನಿಮಗೀ ವಾರದಲ್ಲಿ ಅನುಕೂಲನಾಗಿರುವನು ಆತನು ಸ್ಥಾನಬಲದಿಂದ ಕೂಡಿರುವುದರಿಂದ ನೀವು ನಿಮ್ಮ ಸ್ವಪರಾಕ್ರಮದಿಂದ ಸ್ಥಾನಮಾನಗಳನ್ನು ಗಳಿಸುವಿರಿ. ಆದರೆ ಜನತೆಯು ಸಂಪೂರ್ಣ ನಿಮಗೆ ಪ್ರತಿಕೂಲವಿರುವುದು. ನೀವು ಮಾನಿಗಳಾಗಿದ್ದರೂ ಕೆಲವರು ಬೇಕೆಂದೇ ನಿಮ್ಮನ್ನು ರಣಕಣಕ್ಕೆ ಳೆವರು ನಿಮ್ಮ ಶಕ್ತಿಗನುಸರಿಸಿ ದುಡಿಯುವಿರಾದರೂ ಖರ್ಚು ದ್ವಿಗುಣವಿರುವುದರಿಂದ ಹಣದ ಅಡಚಣೆ ತಪ್ಪದು. ತಾ. ೨ರಿಂದ ೫ರ ವರೆಗಿನ ದಿನಗಳು ಇದ್ದುದರಲ್ಲಿ ಉತ್ತಮವಿವೆ.

ಕರ್ಕಾಟಕ—ಭಾಗ್ಯದಲ್ಲಿ ಲಾಭಪತಿಯಾದ ಶುಕ್ರನು ಉಚ್ಚನಿರುವನು. ಧನಪತಿಯಾದ ರವಿಯು ಕರ್ಮದಲ್ಲಿ ಉಚ್ಚನಾಗಿರುವನು. ಲಾಭ ಸ್ಥಾನದಲ್ಲಿ ಗುರು, ಬುಧ, ಶನಿಗಳ ಯೋಗವಿರುವುದು. ಇತರ ಗ್ರಹರ ಪೂರ್ಣ ಅನುಗ್ರಹವು ನಿಮಗಿರುವುದರಿಂದ ನೀವು ಯಾವ ಕಾರ್ಯವನ್ನೂ ಸಾಧಿಸಲು ಶಕ್ತರಾಗುವಿರಿ. ನಿಮ್ಮ ಶ್ರಮವೂ ಮಹತ್ಫಲದಾಯಿಯಾಗುವುದು. ಅಪದ್ಧನವಾಗಿಯಾದರೂ ಕೂಡ ಸಾಕಷ್ಟು ಧನಲಭಿಸುವುದು. ತನುಮನಗಳಿಗೆ ನೆಮ್ಮದಿಯಿರುವದು. ಆದರೆ ಕುಜನು ವ್ಯಯಗತನಿರುವುದರಿಂದ ವಾರಾದಿಯ 4 ದಿನಗಳಲ್ಲಿ ಪ್ರವಾಸ, ಸ್ತ್ರೀ ಕಲಹಾದಿಗಳು ಸಂಭವಿಸಬಹುದು.

ಸಿಂಹ— ರಾತ್ರಿಯ ಅವಸಾನದಲ್ಲಿ ಹೇಗೆ ಪ್ರಭಾತವಾಗುವದೋ ಅಂತೆಯೇ ನಿಮ್ಮ ದುರ್ದೈವದ ಅವಧಿಯು ಈಗ ತಾನೇ ಮುಗಿದಿರುವುದರಿಂದ ಜೀವನದಲ್ಲಿ ನವೋದಯವಾಗಲಿದೆ ನೌಕರಿ, ವ್ಯಾಪಾರ ಇತ್ಯಾದಿ ಮಾರ್ಗಗಳಲ್ಲಿ ಕ್ರಮಾಧಿಕ ಫಲ ಲಭಿಸುವುದು ಜನ ಸಹಾಯವೂ ನಿಮಗೆ ದೊರೆಯುವದು. ಅನಾರೋಗ್ಯ ಮತ್ತು ಮನೋದೌರ್ಬಲ್ಯ ಇವುಗಳಿಂದ ನಿಮ್ಮಲ್ಲಿ ಆಲಸ್ಯವು ಹೆಚ್ಚಲಿದೆ. ಮಾನಸಿಕ ಚಿಂತೆಯಿಂದ ಸದಾ ವ್ಯಸನಿಗಳಾಗುವಿರಿ. ತಾ. ೨ರಿಂದ 5ರ ವರೆಗಿನ ದಿನಗಳು ಅನಿಷ್ಟಕಾರಿಗಳಿವೆ.

ಕನ್ಯಾ— "ದುರ್ದೈವಃ ಪುರುಷೋ ಯತ್ರ ಯಾತಿ ತತ್ರೈವ ಚಾಪದಃ ಎಂಬಂತೆ ಅದೃಷ್ಟಹೀನನಾದವನು ಎಲ್ಲಿಗೆ ಹೋದರೂ ಅವನನ್ನು ಅಪತ್ಪರಂಪರೆಗಳು ಬಿಡದೆ ಬೆನ್ನಟ್ಟುವವು. ಉದರ ರೋಗ, ಶತ್ರುಪೀಡೆ ಇವುಗಳಿಂದ ಬಹು ಧನವ್ಯಯವಾಗುವುದು. ಸ್ತ್ರೀ ವರ್ಗವು ನಿಮ್ಮ ಮೇಲೆ ಪ್ರತಿಕ್ರಿಯೆಯನ್ನು ಮಾಡಲು ಮುಂದಾಗುವದು. ತಥಾಪಿ ಧರ್ಮಾಂಗಿಯು ನಿಮ್ಮ ಮಾತನ್ನತಿಕ್ರಮಿಸಲಿರುವಳು. ಆದರೂ ಗುರುವೊಬ್ಬನ

(೧೧ನೇ ಪುಟ ನೋಡಿರಿ).

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ವಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದುಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ವಿಕ್ರಂ ಡಿಸ್ಟ್ರಿಬ್ಯೂಟರ್ಸ್'**

೨೧—ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS LTD.,

Head Office and Factory:

Katapadi, S. Kanara

Depots:

1 Mahratha Galli, Hubli

2. 57 Big street, Triplicane Madras.

"ಭುವನೇಂದ್ರ"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಟ್ಟಿ ರಥಬೀದಿ. (3) ಡಾಕ್ಟರ್ ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಶೀನಪ್ಪ ಶೆಟ್ಟಿ L. I. M. ಡಾಕ್ಟರ್ ವೆಂಕಟ ರಾವ್, ಕೊರಡ್ಕಲ್

ಚುಟುಕು ಟೀಕೆ-ಟಿಪ್ಪಣಿ

ವಿಜಯದ ಭರವಸೆಯಿಲ್ಲ

ಹಿಟ್ಲರರು ಜರ್ಮನಿಯ ವೈರಿಗಳನ್ನೆಲ್ಲಾ ಸದೆಬಡಿದು ವಿಜಯ ಧ್ವಜವನ್ನು ಹಾರಿಸುವರೆಂಬ ಭರವಸೆಯಿಂದ ತುಂಬಿದ್ದರು ನಾಝಿ ಮುಖಂಡರು 1941ರಲ್ಲಿ. ಆದರೆ 1942ರಲ್ಲಿ ಆ ಭರವಸೆಯ ಬದಲಿಗೆ ಅಪನಂಬಿಕೆ ತೋರಿಬರುತ್ತದೆ ಅವರಲ್ಲಿ. ಜರ್ಮನ್ ಜನಾಂಗವು ಫ್ಯೂರರ ಮೇಲೆ ಸಂಪೂರ್ಣ ಭರವಸೆಯಿಡಬೇಕು. ಅತಿ ಹೆಚ್ಚಿನ ತ್ಯಾಗಕ್ಕೆ ಮುಂದಾಗಬೇಕು ಜರ್ಮನಿಯು ಪರಾಜಿತವಾದರೆ ಅದರ ಸರ್ವನಾಶವಾಗುವುದು ಫ್ಯೂರರರು ಈವರೆಗೆ ಸಾಧಿಸಿರುವ ಅಭೂತಪೂರ್ವ ಇತಿಹಾಸಿಕ ವಿಜಯಗಳು ನಿರರ್ಥಕವಾಗುವವೆಂದು ಜರ್ಮನ್ ಪತ್ರಿಕೆಗಳೂ, ಗೋರಿಂಗ್ ಗೊಬೆಲ್ಸರೇ ಮೊದಲಾದವರೂ ಎಚ್ಚರಿಸತೊಡಗಿರುತ್ತಾರೆ. ಹಿಟ್ಲರರ 52ನೇ ಜನದಿನಾಚರಣೆಯ ಸಂದರ್ಭದಲ್ಲಿ ನಾಝಿ ಮುಖಂಡರಿತ್ತ ಭಾಷಣಗಳಲ್ಲಿ ಕೂಡಾ ಹಿಂದಿನ ವಿಜಯದುಬ್ಬಿನ ಜಂಭದ ಬದಲಿಗೆ ಅಪಜಯದ ಸಂದೇಹವೇ ತೋರಿ ಬರುತ್ತವೆ.

ಪಶ್ಚಿಮ ರಣರಂಗ ನಿಶ್ಚಯ

ಮಿತ್ರ ರಾಷ್ಟ್ರಗಳು ಶೀಘ್ರವಾಗಿ ಪಶ್ಚಿಮ ರಣರಂಗ ತೆರೆಯಬೇಕು. ಹಿಟ್ಲರರನ್ನು ಸದೆಬಡಿಯುವ ಸುಸಂದರ್ಭವಿದು. ನಾಝಿ ಪಡೆಯನ್ನು ಜಯಶೀಲವಾಗಿ ಪ್ರತಿಭಟಿಸಿ, ಪರಾಜಯಗೊಳಿಸಿ ಸೋವಿಯೆಟ್ ಸೇನೆಯು ಇಡೀ ಲೋಕಕ್ಕೇನೇ ಮಹದುಪಕಾರ ಮಾಡಿರುವುದು. ಸ್ಟೈಲಿನರ ಕಾರ್ಯದಕ್ಷತೆ, ದೂರ ದೃಷ್ಟಿ ಮತ್ತು ಯುದ್ಧ ತಂತ್ರವು ಅತ್ಯಂತ ಪ್ರಶಂಸನೀಯವಿರುವುದು. ರಷ್ಯವು ಪರಾಜಿತವಾಯಿತೆಂದರೆ ಸರ್ವನಾಶವಾಗುವುದೆಂದು ಲೋರ್ಡ್ ಬೀವರ್ ಬ್ರುಕರಂಥವರು ಕೂಡ ಎಚ್ಚರಿಸಿತ್ತಿರುವರು. ಸ್ಟೈಲಿನರೂ, ಬ್ರಿಟಿಷ್ ಮತ್ತು ಅಮೆರಿಕದ ರಾಯಭಾರಿಗಳಾದ ಮೈಸ್ಕಿ ಮತ್ತು ಲಿಟ್ವಿನೋಫರೂ ಮೊದಲೇ ಈ ಸೂಚನೆ ಮಾಡಿರುವರು. ಬ್ರಿಟಿಷ್ ಮತ್ತು ಅಮೆರಿಕಾದ ಸೇನಾನಿಗಳೀಗ ಪಶ್ಚಿಮ ರಣರಂಗ ತೆರೆಯುವ ಕುರಿತು ಮಂತ್ರಾಲೋಚನೆ ನಡಿಸಿರುತ್ತಾರೆ. ಅಮೆರಿಕವು ಅದಕ್ಕಾಗಿ ಸೈನಿಕರು, ಹಡಗ ಮತ್ತು ವಿಮಾನಗಳನ್ನಿತ್ತು ನೆರವಾಗಲು ಸಿದ್ಧವಿದೆ. ಬ್ರಿಟಿಷ್ ಕಮಾಂಡೋ ಸೈನಿಕರು ಆ ಕಡೆಗಳಲ್ಲಿ ಪ್ರಾಯೋಗಿಕ ಧಾಳಿಗಳನ್ನು ಜಯಶೀಲವಾಗಿ ನಡಿಸಿರುತ್ತಾರೆ. ಆದುದರಿಂದ ಸ್ವಲ್ಪ ಸಮಯದಲ್ಲೇ ಬ್ರಿಟನು ಮತ್ತು ಅಮೆರಿಕಗಳೊಂದುಗೂಡಿ ಪಶ್ಚಿಮದಲ್ಲಿ ಇನ್ನೊಂದು ರಣರಂಗ ತೆರೆಯುವುದು ನಿಶ್ಚಯ.

ಹಿಟ್ಲರರ ಅವಸರದ ಸಿದ್ಧತೆ.

ಮಿತ್ರ ರಾಷ್ಟ್ರಗಳು ನೋರ್ವೆಯ ಮೇಲೆ ಧಾಳಿ ನಡಿಸುವವೆಂಬ ಊಹನೆಯಿಂದ ಹಿಟ್ಲರರಲ್ಲಿಗೆ ಅವಸರದಿಂದ ಪ್ರಬಲ ಸೇನೆಯನ್ನು ಕಳುಹಿಸುತ್ತಿದ್ದಾರೆ. ಅದೇ ಉದ್ದೇಶದಿಂದಲೇ ಅವರು ಫ್ರಾನ್ಸಿನಲ್ಲಿ ಲಾವಲರನ್ನು ಅಧಿಕಾರಕ್ಕೆ ತಂದುದೆಂದೂ, ಜನರಲ್ ರುನ್ಸ್ಟೆಡಟರನ್ನು ಫ್ರಾನ್ಸಿನ ಜರ್ಮನ್ ಸೇನಾನಾಯಕರಾಗಿ ನೇಮಿಸಿದುದೆಂದೂ ನಂಬಲಾಗಿದೆ. ಹಿಟ್ಲರರೀಗ ಎರಡು ರಣರಂಗಗಳ ಕಡೆಗೆ ಗಮನವನ್ನೀಯಬೇಕಾಗಿದೆ. ಪೂರ್ವದಲ್ಲಿ ಸಂಗ್ರಹಿಸಿದ್ದ ಸಹಸ್ರಗಟ್ಲೆ ಸೇನೆಯನ್ನು ಅತ್ಯವಸರದಿಂದ ಪಶ್ಚಿಮಕ್ಕೆ ಕಳುಹಿಸಬೇಕಾಗಿದೆ. ರಷ್ಯದ ವಸಂತ ಧಾಳಿಯು ಹಿಂದೆ ಬಿದ್ದು ಬೇಸಗೆ ಧಾಳಿಯಾಗಿ ಪರಿಣಮಿಸಿದೆ.

ಹಿಟ್ಲರರ ಅವಿವೇಕದ ಪರಿಣಾಮ

ಡಂಕರ್ಕಿನ ಪ್ರಕರಣದ ಬೆನ್ನಲ್ಲಿಯೇ ಇಂಗ್ಲೆಂಡಿನ ಮೇಲೆ ನೆಲಧಾಳಿ ನಡಿಸಬೇಕೆಂದು ಜರ್ಮನ್ ಯುದ್ಧ ತಜ್ಞರ ಅಭಿಮತವಾಗಿತ್ತು. ಆದರೆ ಹಿಟ್ಲರರದಕ್ಕೊಪ್ಪಲಿಲ್ಲ. ಆಗ ಬ್ರಿಟನಿನ ಮೇಲೆ ನೆಲಧಾಳಿ ನಡಿಸುತಿದ್ದರೆ ಒಂದು ವೇಳೆ ಜಯಶೀಲವಾಗುವ ಸಂಭವವಿತ್ತೆಂಬುದನ್ನು ಲೋರ್ಡ್ ಹೆಲಿಫೆಕ್ಸರಂತಹ ಬ್ರಿಟಿಷ್ ಮುತ್ಸದ್ದಿಗಳೇ ಒಪ್ಪಿರುವರು. ಆದರೆ ಹಿಟ್ಲರರು ರಷ್ಯದ ಮೇಲೇರಿ ಹೋಗುವ ಮಹತ್ತಾದ ಜುಗಾರಾಡಿದರು. ಅದಕ್ಕೆ ಜರ್ಮನ್ ಸೇನಾನಿಗಳು ವಿರುದ್ಧವಿದ್ದರು. ಈ ಅವಿವೇಕದ ಪರಿಣಾಮವನ್ನೀಗ ಜರ್ಮನಿಯು ಅನುಭವಿಸಬೇಕಾಗಿದೆ. ಜರ್ಮನ್ ಸೇನಾನಿಗಳಿಗೆ ಇಷ್ಟರಲ್ಲೇ ಅಪಜಯದ ಭೀತಿಯುಂಟಾಗಿದೆ. ವಿಜಯೀ ಕೆಂಪು ಸೇನೆಯು ಜರ್ಮನಿಯ ಮೇಲೇರಿ ಬರಬಹುದೆಂದವರು ನಿರೀಕ್ಷಿಸಿ ಪೋಲೆಂಡಿನ ಎಲ್ಲೆಯಲ್ಲಿ 500 ಮೈಲುದ್ದಕ್ಕೆ ಕೋಟೆಕೊತ್ತಳಗಳನ್ನು ಕಟ್ಟಿಸಲಾರಂಭಿಸಿರುವರೆಂದು ತಿಳಿದು ಬರುತ್ತದೆ- ಸಿಗ್‌ಫ್ರಿಡ್ ಮತ್ತು ಮೆಗಿನೋ ಕೋಟೆಗಳೆರಡರ ರಹಸ್ಯಗಳನ್ನೂ ಒಂದುಗೂಡಿಸಿ ಈ ಕೋಟೆಗಳು ರಚಿಸಲ್ಪಡುತ್ತಿರುವವಂತೆ. ಯುರೋಪಿನ ಪಶ್ಚಿಮ ಕರಾವಳಿಯಲ್ಲಿಯೂ ಕೋಟೆ ಕೊತ್ತಳಗಳು ಭರದಿಂದ ಕಟ್ಟಲ್ಪಡುತ್ತಿವೆಯೆಂದು ತಿಳಿದು ಬಂದಿದೆ. ಮಿತ್ರ ರಾಷ್ಟ್ರಗಳು ಶೀಘ್ರವಾಗಿ ಕೆಲಸಮಾಡಿದರೆ ಮಾತ್ರ ಹಿಟ್ಲರರನ್ನವರಿಗೆ ಗೆಲ್ಲಲು ಸಾಧ್ಯವಾಗಬಹುದು. ಇಲ್ಲವಾದರೆ ಕೋಟೆಕೊತ್ತಳ ಕಟ್ಟಿಸಿ ತನ್ನ ಸ್ಥಾನವನ್ನವರು ಸುಭದ್ರಗೊಳಿಸಿ ಅಜೇಯರಾಗಿಬಿಡಬಹುದು

ಚೈನದ ಗುಪ್ತ ಶಸ್ತ್ರವೇನು?

೫ ವರ್ಷಗಳ ಮೊದಲು ಜಪಾನು ಚೈನದ ಮೇಲೆ ಬಿದ್ದಾಗ ಹಿಂದೂದೇಶಕ್ಕಿಂತಲೂ ಕಳತೆಯ ಸ್ಥಿತಿಯಲ್ಲಿದ್ದಿತದು. ಅತ್ಯಾಧುನಿಕ ಯುದ್ಧೋಪಕರಣ ಸಿದ್ಧ ರಾಷ್ಟ್ರವಾದ ಜಪಾನನ್ನದು ಈಗ ೫ ವರ್ಷಗಳಿಂದ ಜಯಶೀಲವಾಗಿ ಪ್ರತಿಭಟಿಸಿಕೊಂಡು ಬಂದಿರುವ ರಹಸ್ಯವೇನು? ಚೀನೀ ಸೈನಿಕರ ಸ್ಫೂರ್ತಿ, ಧೈರ್ಯ ಮತ್ತು ಸ್ಥೈರ್ಯವೇ ಚೈನದ ಗುಪ್ತಶಸ್ತ್ರ ಎನ್ನಬಹುದು ಆಯುಧ ಸಿದ್ಧತೆಯಿದ್ದರೂ ಸೈನಿಕರಲ್ಲಿ ಧೈರ್ಯ ಉತ್ಸಾಹ ಮತ್ತು ನಿಷ್ಠೆ ಇಲ್ಲದಿದ್ದರೆ ಫಲವಿಲ್ಲ. ಉಜ್ವಲ ದೇಶಾಭಿಮಾನವೇ ಆ ಧೈರ್ಯ ಸ್ಥೈರ್ಯದ ಬುಗ್ಗೆ. ಚೀನೀ ಜನತೆಯು ಕೂಡಾ ದೇಶಾಭಿಮಾನ ಸ್ಫೂರ್ತಿಯಿಂದ ಎಂತಹ ತ್ಯಾಗಕ್ಕಾದರೂ ಮುಂದಾಗಿರುವರು. ಸೋವಿಯೆಟ್ ರಷ್ಯದ ಜಯಶೀಲ ಯುದ್ಧದ ಗುಟ್ಟೂ ಇದೇ. ಜನತೆಯಲ್ಲಿ ಅಂತಹ ಸ್ಫೂರ್ತಿ ಮತ್ತು ನಿಷ್ಠೆ ಇಲ್ಲದೆ ಮಲಯ ಮತ್ತು ಬರ್ಮಗಳಲ್ಲಿ ಬ್ರಿಟಿಷರು ಶೀಘ್ರವಾಗಿ ಪರಾಜಯ ಹೊಂದಿದರು ಜನರೆಲ್ಲಾ ವಿದ್ರೋಹಿಗಳಿಗೆ ನೆರವಾಗಿ ವೈರಿಗಳಿಗೆ ಬೆಂಬಲವಿತ್ತರು. ಚೀನೀಯರಂತೆಯೇ ಮಿಲ್ಯಾಂತರ ಹಿಂದೀಯರೂ ಹೋರಾಡಬಲ್ಲರು ಅವರಲ್ಲಿ ಆ ಸ್ಫೂರ್ತಿ ಮತ್ತು ಉತ್ಸಾಹವನ್ನು ಮಾತ್ರ ಸರಕಾರವು ಉಂಟು ಮಾಡಬೇಕೆಂದು ಮೇಡಮ್ ಚ್ಯಾಂಗರೊಂದು ಲೇಖನ ಬರೆದಿರುವರು ಕಾಂಗ್ರೆಸಿನ ಕೇಳಿಕೆ ಕೂಡಾ ಇದೇ. ಆಕ್ರಮಣಕಾರಿಗಳನ್ನು ವಿರೋಧಿಸಲು ಹಿಂದೀಯರು ಹಾತೊರೆಯುತ್ತಿರುವರು. ಆದರೆ ಇಂಗ್ಲೆಂಡು ಅಧಿಕಾರವನ್ನು ಹಿಂದೀಯರಿಗೆ ಬಿಟ್ಟುಕೊಡಲು ಮುಂದಾಗಬೇಕು.

ಸಹಕಾರ ಪಡೆಯುವ ಬಗೆ ಹೇಗೆ?

ಪ್ರೆಸಿಡೆಂಟ್ ರುಸುವೆಲ್ಟರ ಹಿಂದೂದೇಶದ ಪ್ರತಿನಿಧಿಯಾದ ಮಿ. ಕರ್ನಲ್ ಲೂವಿಸ್ ಜೋನ್ಸನರು ಇದೇ ತಾ. 2? ರಲ್ಲು ಕೊಟ್ಟ ಅಮೇರಿಕದ ರೇಡಿಯೋ ಭಾಷಣದಿಂದ ಎಂತಹ ಹಿಂದೀಯನ ಹೃದಯವಾದರೂ ಒಂದೊಮ್ಮೆ ಚಲನವಾಗದಿರಲಾರದು. ವೈರಿಗಳನ್ನು ಎಲ್ಲಾ ರಣರಂಗಗಳಲ್ಲಿ ಎದುರಿಸುವ ಉದ್ದೇಶದಿಂದ ಅಮೇರಿಕವು ಹಿಂದೂದೇಶವನ್ನೊಂದು ಹೋರಾಟದನೆಲೆಯಾಗಿ ಮಾಡಿರುವುದು. ಅದಕ್ಕೆ ಮತ್ತಾವ ಸ್ವಾರ್ಥವೂ ಇರುವುದಿಲ್ಲ. ಲೋಕಕಂಟಕರಾದ ಫೆಸಿಸ್ಟರನ್ನು ಜೈಸಿ ಲೋಕದಲ್ಲಿ ಸುಖ ಸುಭಿಕ್ಷೆಯನ್ನುಂಟುಮಾಡುವುದೇ ಅಮೇರಿಕದ ಉದ್ದೇಶ. ಅದಕ್ಕಾಗಿ ಅಮೇರಿಕಾದ ಸೇನೆಯು ಹಿಂದೂದೇಶಕ್ಕೆ ಬಂದಿದೆ. ಹಿಂದೀಯರು ಅವರಿಗೆ ಹಾರ್ದಿಕ ಸಹಕಾರವೀಯಬೇಕು. ಯುದ್ಧದಲ್ಲಿ ಉತ್ಸಾಹದಿಂದ ಭಾಗವಹಿಸಲು ಮುಂದಾಗಬೇಕೆಂದು ಜೋನ್ಸನರು ಆಗ್ರಹದ ವಿನಂತಿ ಮಾಡಿಕೊಂಡಿರುತ್ತಾರೆ. ಅಮೇರಿಕದ ಕುರಿತು ಹಿಂದೀಯರಿಗೆ ತುಂಬಾ ಪ್ರೀತಿ ಮತ್ತು ವಿಶ್ವಾಸವಿದೆ. ಆದರೆ ಬ್ರಿಟನಿನ ಸ್ವಾರ್ಥಸಾಧಕ ಧೋರಣೆಯು ಹಿಂದೀಯರನ್ನು ಸಂತಪ್ತಗೊಳಿಸಿ ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸದಂತೆ ತಡೆಗಟ್ಟಿದೆ. ಹಿಂದೀಯರ ನಿಜವಾದ ಸಹಕಾರಕ್ಕಾಗಿ ಅಮೇರಿಕವು ಹಾತೊರೆಯುವುದಾದರೆ, ಬ್ರಿಟನು ತನ್ನ ಧೋರಣೆ ಬದಲಾಯಿಸುವಂತೆ ಅದು ಒತ್ತಾಯಪಡಿಸಬೇಕು. ಅಮೇರಿಕಕ್ಕದು ಸಾಧ್ಯವಿದೆ. ಆಗ ಹಿಂದೀಯರೆಲ್ಲರ ಅತ್ಯಂತ ಕೃತಜ್ಞತಾಪೂರ್ವಕ ಹಾಗೂ ಅತಿ ಉತ್ಸಾಹದ ಸಹಕಾರವನ್ನು ಅಮೇರಿಕವು ಸ್ವಾಭಾವಿಕವಾಗಿ ಪಡೆಯುವುದು.

Keep the enemy away

from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND

FOR

VICTORY.

NOTICE.

Evacuees from Burma and Malaya looking out for jobs may register their names with the District Labour Officer, South Kanara, Mangalore.

ಬೇಕಾಗಿದ್ದಾರೆ

ಹಿರೆಬೆಟ್ಟು ಎಲಿಮೆಂಟರಿ ಶಾಲೆಗೆ ಒಬ್ಬ ಸೆಕೆಂಡರಿ ಗ್ರೇಡ್ ಅಥವಾ ಫೈನಲ್ ಗ್ರೇಡ್ ಟ್ರೈಂಡು ಉಪಾಧ್ಯಾಯರು ಬೇಕಾಗಿದ್ದಾರೆ ತಿಂಗಳು ಎಸ್ಟ್ಯಾಬ್ ಗ್ರಾಂಟಿನ 85% ಕೊಡಲಾಗುವುದು ಉಮೇದ್ವಾರರು ಕೂಡಲೇ ಕೆಳಗಿನವರನ್ನು ಕಾಣುವುದು

B Sanjeeva Hegde,
manager
Hirebettu Aided Ele. School,
Post Hiriadka.

ಜ್ಯೋತಿಷ್ಯದಲ್ಲೇನಾದರೂ ಸತ್ಯಾಂಶವಿದೆಯೇ?

ಲೇಖಕರು: ಶ್ರೀ. ಎ. ಬಿ. ಶೆಟ್ಟಿ, ಎಮ್. ಎಲ್. ಎ.

ಹೋದ ಸಂಚಿಕೆಯಿಂದ (ಮುಂದುವರಿದುದು)

ಕೆಲವು ಭವಿಷ್ಯಗಳು ನಿಜವಾಗುವುದು ಹೇಗೆ?

ಭವಿಷ್ಯದ ವಿದ್ಯಮಾನಗಳನ್ನು ತಿಳಿಯಲು ಜನರು ಬಹಳ ಉತ್ಸುಕತೆ ಪಡುತ್ತಾರೆ. ಮುಂದೆ ಸಂಭವಿಸಬಹುದಾದ ವಿದ್ಯಮಾನಗಳ ಮುಂಗುರುತಾದ ಶುಭ ಅಥವಾ ಅಶುಭ ಚಿಹ್ನೆಗಳೆಂದು ಕ್ಷುಲ್ಲಕ ಸಂಗತಿಗಳಿಗೆ ಅರ್ಥ ಕೊಡುವುದು ಸರ್ವಸಾಮಾನ್ಯ ರೂಢಿ. ಒಬ್ಬ ಮನುಷ್ಯನ ಅಂಗೈಯಲ್ಲಿರುವ ಗೆರೆಗಳು ಅವನ ಅದೃಷ್ಟವನ್ನು ಸೂಚಿಸುತ್ತವೆಂಬ ನಂಬಿಕೆಯಿಂದಾಗಿ ಹಸ್ತಲಕ್ಷಣ ಅಥವಾ ಸಾಮುದ್ರಿಕ ಶಾಸ್ತ್ರ ಉಂಟಾಗಿರುತ್ತದೆ. ದೈವವಾಹನಗಳೆನಿಸಲ್ಪಡುವ ಪಾತ್ರಿಗಳೊಡನೆ ಜನರು ತಮ್ಮ ಸುಖಕಷ್ಟಗಳ ಕುರಿತು ಕೇಳುವುದು ಇನ್ನೊಂದು ನಂಬಿಕೆಯಾಗಿದೆ. ಇದರಿಂದ ದೇವರುಗಳಿಗೊಪ್ಪಿಸಲ್ಪಡುವ ಹರಕೆ ಕಾಣಿಕೆಗಳು ಹೆಚ್ಚಿ ಹಲವು ದೇವಸ್ಥಾನಗಳು ಬಹಳ ಆದಾಯ ಪಡೆಯುತ್ತವೆ. ಬಹುಸಂಖ್ಯಾಕ ಜನರು ವಿಚಾರಮಾಡದೆ ಎಂತಹದನ್ನಾದರೂ ನಂಬಿಬಿಡುವ ಭೋಳೇ ಸ್ವಭಾವದವರು. ಚತುರರಾದವರು ಜನತೆಯ ಈ ಸ್ವಭಾವದ ಉಪಯೋಗ ಪಡೆದು ಅದನ್ನೊಂದು ವ್ಯಾಪಾರವಾಗಿಯೇ ಮಾಡುತ್ತಾರೆ.

ಅಧಿಕಾರಿಕ ಗ್ರಂಥಗಳ ಆಧಾರದಿಂದ ಭವಿಷ್ಯಹೇಳುವ ಗೌರವ ವೃತ್ತಿಯೇ ಜ್ಯೋತಿಷವೆಂದು ಪರಿಗಣಿಸಲಾಗಿದೆ. ಆದೊಂದು ನಿಶ್ಚಿತ ಸಮಯದಲ್ಲಿ ಗ್ರಹಗಳ ಯೋಗಾಯೋಗಗಳಿಂದಾಗುವ ಪರಿಣಾಮಕ್ಕನುಗುಣವಾಗಿ ಅದು ವರ್ತಮಾನ ಅಥವಾ ಭವಿಷ್ಯದ ಪ್ರವೃತ್ತಿಯನ್ನು ಸೂಚಿಸುತ್ತದೆ. ಮುಂದೆ ನಡೆವ ವಿದ್ಯಮಾನಗಳ ಕುರಿತು ಜೋಯಿಸರು ನಿಶ್ಚಿತ ಭವಿಷ್ಯ ಹೇಳುತ್ತಾರೆ. ಪರೀಕ್ಷೆಯ ಫಲಿತಾಂಶ, ವ್ಯಾಜ್ಯದ ಗುಣಾವಗುಣದ ಪ್ರಶ್ನೆ, ಹುಟ್ಟುವ ಮಗುವು ಗಂಡೋ ಹೆಣ್ಣೋ ಎಂಬುದೇ ಮೊದಲಾದ ವಿಷಯಗಳ ಕುರಿತು ಮಾಡುವ ಭವಿಷ್ಯಗಳು ಶೇಕಡ ೫೦ರಷ್ಟು ನಿಜವಾಗುವ ಸಂಭವವಿರುತ್ತದೆ. ಅಂತಹ ಭವಿಷ್ಯಗಳು, ಹಣ್ಣಿಗೆ ನೋಟ ಹಿಡಿದು ಕಲ್ಲು ಹೊಡೆಯುವಂತೆಯೇ ಸರಿ. ತಾಗಿದ ಪೆಟ್ಟುಗಳನ್ನು ಮಾತ್ರ ಜನರು ಗಮನಿಸಿ ತಪ್ಪಿಹೋದುವುಗಳನ್ನು ಮರೆತುಬಿಡುತ್ತಾರೆ. ಹೀಗೆ ಜೋಯಿಸನು ಹೇಳಿದ ಭವಿಷ್ಯಗಳು ಕೆಲವು ಮಾತ್ರ ಸತ್ಯವಾದರೂ ಅವನ್ನೇ ಜನರು ದೊಡ್ಡದು ಮಾಡಿ ಪ್ರಚಾರ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಜೋಯಿಸನು ಹೇಳುವ ಭವಿಷ್ಯವೇ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿ ಫಲಕಾರಿಯಾಗುತ್ತದೆ. ಉದಾಹರಣೆಗಾಗಿ, ಒಂದು ರೋಗವು ವಾಸಿಯಾಗುವ ಕುರಿತು ಮಾಡಲ್ಪಡುವ ಭವಿಷ್ಯವು ರೋಗಿಯ ಮನಸ್ಸಿನ ಮೇಲೆ ಪ್ರಭಾವವನ್ನುಂಟುಮಾಡಿ ತಕ್ಕ ಫಲಿತಾಂಶವನ್ನುಂಟುಮಾಡದಿರಲಾರದು.

ಚಾತುರ್ಯವಿದ್ದಲ್ಲಿ, ಜ್ಯೋತಿಷದ ಸಹಾಯವೇ ಇಲ್ಲದೆ ಭವಿಷ್ಯಗಳನ್ನು ಹೇಳಬಹುದು. ಅವುಗಳಲ್ಲಿ ಕೆಲವು ಸತ್ಯವಾಗುವವು. ಬುದ್ಧಿವಂತಿಕೆಯನ್ನೇ ಹೆಚ್ಚಾಗಿ ಉಪಯೋಗಿಸಿ ಭವಿಷ್ಯ ಹೇಳಲಾಗುತ್ತದೆ. ಎಷ್ಟೊಂದು ಚತುರ ಜೋಯಿಸನಾದರೂ ಹೇಳುವ ಭವಿಷ್ಯವೆಲ್ಲಾ ಸತ್ಯವಾಗುವುದಿಲ್ಲೆಂಬುದು ಜನರಿಗೆ ಗೊತ್ತಿದೆ. ಕೆಲವು ಮಾತ್ರ ಸತ್ಯವಾಗಿ ಉಳಿದವು ಫಲಿಸುವುದಿಲ್ಲ. ಮಾತ್ರವಲ್ಲದೆ ಹಲವು ವೇಳೆ ಸಂಪೂರ್ಣ ಅನಿರೀಕ್ಷಿತವಾದುದೇ ನಡೆದುಬಿಡುತ್ತದೆ. ಭವಿಷ್ಯ ಹೇಳಲು ಜ್ಯೋತಿಷ ಕಲಿತವನೇ ಆಗಬೇಕಾಗಿಲ್ಲ ಅಥವಾ ಭವಿಷ್ಯ ಹೇಳುವವರೆಲ್ಲಾ ನಿಜವಾದ ಜೋಯಿಸರೆನ್ನಲಾಗುವುದಿಲ್ಲ. ಸರ್ವಸಾಮಾನ್ಯ ಮನುಷ್ಯನೊಬ್ಬನು ಸ್ವಲ್ಪ ಬುದ್ಧಿವಂತಿಕೆಯನ್ನುಪಯೋಗಿಸಿ ಭವಿಷ್ಯ ಹೇಳಬಹುದು. ಅವನು ಭವಿಷ್ಯ ಹೇಳುವುದನ್ನೇ ವ್ಯಾಪ್ತಿಯಾಗಿ ಮಾಡಿ, ಜೋಯಿಸನೊಬ್ಬನು ಸರ್ವಸಾಮಾನ್ಯವಾಗಿ ಮಾಡುವಂತೆಯೇ ಅಲ್ಪ ಮತ್ತು ದೊಡ್ಡ ಸಂಗತಿಗಳ ಮತ್ತು ಎಲ್ಲಾ ತರದ ಜನರ ಕುರಿತು ಧೈರ್ಯದಿಂದ ಭವಿಷ್ಯ ಹೇಳುತ್ತಾ ಬರಬೇಕು. ಅವನು ಜಾಣನಾದ ಪಕ್ಷದಲ್ಲಿ ಅವನ ಭವಿಷ್ಯಗಳಲ್ಲಿ ಕೆಲವು ಸತ್ಯವಾಗಲೇಬೇಕು. ಆದರೆ ಜೋಯಿಸನೊಬ್ಬನು ಇದೇ ರೀತಿ ಮಾಡಿದ ಪಕ್ಷದಲ್ಲಿ ಅದರಿಂದಾಗುವ ಜಯಶೀಲ ಫಲಿತಾಂಶಕ್ಕೆ ಜ್ಯೋತಿಷವೇ ಕಾರಣವೆಂದು ಹೇಳಲಾಗುತ್ತದೆ.

ಭವಿಷ್ಯ ಹೇಳುವುದರಲ್ಲಿ ಸದಸದ್ವಿವೇಚನೆಯ ಉಪಯೋಗ.

ಜ್ಯೋತಿಷ ಗ್ರಂಥಗಳ ಮೇರೆಗೇನೇ ಒಬ್ಬ ಜೋಯಿಸನು ತನ್ನ ಭವಿಷ್ಯಗಳಲ್ಲಿ ಸದಸದ್ವಿವೇಚನೆಯನ್ನು ಚೆನ್ನಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಸ್ತ್ರೀಸಂಬಂಧವಾಗಿ ಹೇಳತಕ್ಕದ್ದನ್ನು ಪುರುಷನ ವಿಷಯವಾಗಿಯೂ, ಭಿಕ್ಷುಕನಿಗೆ ಹೇಳತಕ್ಕದ್ದನ್ನು ಅರಸನಿಗೂ ಹೇಳದಂತೆ ನೋಡಿಕೊಳ್ಳತಕ್ಕದ್ದು. ಏಕಕಾಲದಲ್ಲಿ ಶ್ರೀಮಂತ ಹಾಗೂ ವಿದ್ಯಾವಂತ ಕುಟುಂಬದಲ್ಲಿ ಹುಟ್ಟಿದ ಒಂದು ಮಗುವಿನ, ಮತ್ತು ಬಡ ಅಶಿಕ್ಷಿತರಲ್ಲಿ ಜನ್ಮಿಸಿದ ಇನ್ನೊಂದು ಮಗುವಿನ ಜಾತಕಗಳನ್ನು ಜೋಯಿಸನಿಗೆ ಕೊಟ್ಟಲ್ಲಿ, ಅವನು ಪ್ರತಿಯೊಂದು ಮಗುವಿನ ಹೆತ್ತವರು ಮತ್ತು ಅವರ ಪರಿಸ್ಥಿತಿಯನ್ನು ಪರಿಗಣಿಸಿಕೊಂಡು ಅವುಗಳ ಜಾತಕವನ್ನು ತಯಾರಿಸುವನು. ಆತನ ವಿದ್ಯೆಯ ಮೇರೆಗೇನೇ ಅದು ಯುಕ್ತವಾದುದು. ಸಂಪೂರ್ಣ ಅಪರಿಚಿತನೊಬ್ಬನು ಜೋಯಿಸನ ಬಳಿಗೆ ಬಂದರೆ ಹಲವು ವೇಳೆ ಅವನು ಆತನ ಪರಿಚಯ ಪಡೆಯಲೆತ್ನಿಸುವನು. ಹೀಗೆ ಮಾನವ ಬುದ್ಧಿವಂತಿಕೆಯಿಂದ, ಭವಿಷ್ಯ ಕೇಳುವವರ ಕುರಿತು ತಿಳಿದಿರುವ ಅಥವಾ ಸಂಗ್ರಹಿಸಿರುವ ಸಂಗತಿಗಳ ಆಧಾರದಿಂದ ಮಾಡಲ್ಪಡುವ ಊಹನಾ ಚಾತುರ್ಯವು ಪಡೆಯತಕ್ಕ ಪ್ರಶಂಸೆಯನ್ನು ಜ್ಯೋತಿಷವು ಪಡೆಯುತ್ತದೆ. ಪ್ರವಾದಿಗಳು ಮಾನವ ಮಾನಸಶಾಸ್ತ್ರ ಪಾರಂಗತರಿರಬೇಕು. ಅವರ ಭವಿಷ್ಯಗಳು ಜನರ ಅಪೇಕ್ಷೆಗಳ ದಾರಿಹಿಡಿದು ಹೋಗಬೇಕು. ಆಗ ಮಾತ್ರ ಅವರ ವ್ಯಾಪಾರವು ಚೆನ್ನಾಗಿ ನಡೆದು ಲಾಭಕಾರಿಯಾಗಬಹುದು. ಪ್ರಕೃತದ ಲೋಕಯುದ್ಧಾರಂಭವಾಗುವ ಮೊದಲು ಕಲ್ಕಿ ಅವತಾರವು ಬರುವ ಕುರಿತು ಭವಿಷ್ಯ ಹೇಳುವವರಾರೂ ಇಲ್ಲ. ಈಗ ಯುದ್ಧದ ಪ್ರಳಯವು ಭೀಕರವಾಗಿ ನಡೆಯುತ್ತಿರುವಾಗ ಕಲ್ಕಿ ಅವತಾರದ ಭವಿಷ್ಯವು ಹೇಳಲ್ಪಟ್ಟು ಜನರದನ್ನು ನಂಬುವಂತಾಗಿದೆ. ಸೆರೆಮನೆಗಳಲ್ಲಿದ್ದ ಸತ್ಯಾಗ್ರಹಿಗಳು, ರಾಜಕೀಯ ಇತ್ಯರ್ಥ ಮತ್ತು ತಮ್ಮ ಬಿಡುಗಡೆಯ ಕುರಿತಾದ ಭವಿಷ್ಯಗಳನ್ನು ಆತುರದಿಂದ ಕೇಳುತ್ತಾರೆ.

ವಿಶ್ವಾಸಿಗಳ ಭೋಳೇತನ.

ಜ್ಯೋತಿಷದಲ್ಲಿ ಆಸಕ್ತರಿರುವ ಸರ್ವಸಾಮಾನ್ಯ ಜನರು ಬಹಳ ಭೋಳೇ ಸ

(೯ನೇ ಪುಟ ನೋಡಿರಿ.)

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಕಲುವಾಗಿ ಪೊಲಿಸಿಯನ್ನು

ದಿ ಬೊಂಬೇ ಲೈಫ್

ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

[illegible] ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ಹೆಣ್ಣು ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಪ್ತ್ಯಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮಿತ್ರಭೇದ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮೈತ್ರಿಯ, ಮೋಹಿಸುವ [illegible] ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜನಿವ ಟ್ರೇಡಿಂಗ್ ಕಂಪೆನಿ

260 ಚೈನಾಬಜಾರ್ ರೋಡ್, ಮದರಾಸ್

ಮದುವೆ

ಉಪನಯನ

ಮೊದಲಾದವುಗಳ

ಆಮಂತ್ರಣ ಪತ್ರಿಕೆ

ಗಳನ್ನು ಬೇಕಾದ ನಮೂನೆಯಲ್ಲಿ ಸುಲಭದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರಹ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್

ಕೋಳದ ಪೇಟೆ ರಸ್ತೆ,

ಉಡುಪಿ.

ಸಮಾಚಾರ ಸಂಗ್ರಹ

ವರ್ಷಕ್ಕೆ 45,000 ಟೇಂಕುಗಳು

16 ತಿಂಗಳ ಮೊದಲು ಅಮೇರಿಕದಲ್ಲಿ ಟೇಂಕುಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆಯಾಗಲಿ ಕೆಲಸಗಾರರಾಗಲಿ ಇದ್ದಿಲ್ಲ. ಈಗ ಪ್ರೆಸಿಡೆಂಟ್ ರೂಸುವೆಲ್ಟರ ಹೇಳಿಕೆ ಮೇರೆಗೆ 1942ರಲ್ಲಿ 45,000 ಮತ್ತು 1943ರಲ್ಲಿ 75,000 ಟೇಂಕುಗಳು ಹೊಸತಾಗಿ ತಯಾರಿಸಲ್ಪಡುವುವು.

4 ವಾರಗಳೊಳಗೆ ನಾಝಿಗಳ ಧಾಳಿ

ವಸಂತ ಧಾಳಿಯ ಪ್ರಚಂಡಸಿದ್ಧತೆಯನ್ನೀಗ ಹಿಟ್ಲರರು ಮಾಡಿರುವರು ಇನ್ನು 4 ವಾರಗಳೊಳಗೆ ಧಾಳಿ ನಡಿಸಲ್ಪಡುವುದು ನಿಶ್ಚಯವೆಂದು ತೋರುತ್ತದೆ ನಾಶೋರ್ ಪಟ್ಟಣದ ಮೂಲಕ ಟ್ರೈನುಗಳಲ್ಲಿ ನೂರಾರು ಟೇಂಕುಗಳು ಪೂರ್ವ ರಣರಂಗಕ್ಕೊಯ್ಯಲ್ಪಡುತ್ತವೆ 2 ತಿಂಗಳ ಮೊದಲು ರಿಪೇರಿಗಾಗಿ ಹಿಂದೆಗೆಯಲ್ಪಟ್ಟಿದ್ದ 1500ರ ವರೆಗಣ ವಿಮಾನಗಳು ಪುನಹ ಕಳುಹಿಸಲ್ಪಟ್ಟು ಧಾಳಿಯನ್ನಾರಂಭಿಸಿವೆ ನಾಝಿ ಸೇನೆಯು. ಮೊದಲಾಗಿ ದಕ್ಷಿಣದ ರೋಸ್ಟೋವ್ ಮತ್ತು ಕರ್ಚ್ ಅರ್ಧದ್ವೀಪದ ಮೇಲೆ ಧಾಳಿ ನಡಿಸಿರುವುದೆಂದೂ, ಅನೇಲೆ ಕ್ರಮಶ. ಮುವರ್ಮಾಂಸ್ಕ್, ಲೆನಿನ್‌ಗ್ರಾಡ್ ಮತ್ತು ಮೋಸ್ಕೋಗಳನ್ನು ಗೆಲ್ಲುವಯತ್ನ ನಡೆಯುವುದೆಂದೂ ನಂಬಲಾಗಿದೆ

ಬ್ರಿಟಿಷ್ ವಿಮಾನಧಾಳಿಯ ಪರಿಣಾಮ.

ಸುಮಾರು 2 ವರ್ಷಗಳಿಂದೀಗ ಬ್ರಿಟನು ಜರ್ಮನಿಯ ಮೇಲೆ ಎಡೆಬಿಡದೆ ವಿಮಾನ ಧಾಳಿ ನಡಿಸಿ, ಹೆಚ್ಚಿನ ಹಾವಳಿ ಮಾಡಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಈ ವಿಮಾನ ಧಾಳಿ ನಿರೋಧಕ ಕಾರ್ಯಗಳಲ್ಲಿ ಸುಮಾರು 1½ ಮಿಲ್ಯ ಜನರು ನಿರತರಾಗಿರುತ್ತಾರೆಂದು ಅಂದಾಜು ಮಾಡಲಾಗಿದೆ

ಫ್ರೆಂಚ್ ನಾವಿಕರು ಒಪ್ಪಲಾರರು

ಇಂದೀಗ ಮಾರ್ಶೆಲ್ ಪೆಟಾರವರು ನಾಮ ಮಾತ್ರ ಅಧಿಕಾರದಲ್ಲಿದ್ದು ಲಾವಲರೇ ಸರ್ವಾಧಿಕಾರಿಗಳಾಗಿರುವರು 'ವಿಶಿ' ಸರಕಾರವು ಫ್ರೆಂಚ್ ನೌಕಾಪಡೆಯನ್ನು ಜರ್ಮನಿಗೊಪ್ಪಿಸಲು ಮುಂದಾದರೂ ಫ್ರೆಂಚ್ ನಾವಿಕರು, ಹಡಗಗಳನ್ನು ನಾಶಗೊಳಿಸಬಹುದೇ ಹೊರತು ಜರ್ಮನಿಗೆ ಸಹಾಯಕರಾಗಲೊಪ್ಪಲಾರರೆಂದು ಬಂದಿನ ಫ್ರೆಂಚ್ ಎಡ್ಮಿರಲ್ ಆಬ್ರ್ಯೊನೋರವರು ಅಭಿಪ್ರಾಯಪಡುತ್ತಿರುವರು.

ಫ್ರಾನ್ಸಿನ ದೈನ್ಯಾವಸ್ಥೆ

1300,000 ಫ್ರೆಂಚ್ ಸೈನಿಕರು ಇಂದೀಗ ಸುಮಾರು 2 ವರ್ಷಗಳಿಂದ ಬಂಧನದಲ್ಲಿ ನರಳುತ್ತಿರುವರು. ವಿಶಿ ಫ್ರಾನ್ಸು ಜರ್ಮನಿಗೆ ಪ್ರತಿನಿತ್ಯ 300,000,000 ಫ್ರೆಂಕುಗಳನ್ನು ತೆರಬೇಕಾಗಿರುವುದು ಸಾವಿರಾರು ಜನರು ಅನ್ನ ವಸ್ತ್ರವಿಲ್ಲದೆ ಅಸಹನೀಯ ಸಂಕಷ್ಟಕ್ಕೊಳಗಾಗಿರುವರು ಲಾವಲರು ಹೆಚ್ಚಾಗಿ ಫ್ರೆಂಚ್ ಸೈನಿಕರನ್ನು ಸೆರೆಯಿಂದ ಬಿಡುಗಡೆ ಮಾಡಿಸಿ, ಫ್ರಾನ್ಸ್ ಜರ್ಮನಿಗೆ ಕೊಡತಕ್ಕ ಹಣವನ್ನಿಳಿಸಿ ಫ್ರೆಂಚರೊನ್ನೊಲಿಸಿಕೊಳ್ಳುವ ಪ್ರಯತ್ನ ನಡಿಸಬಹುದು ಮಾರ್ಶೆಲ್ ಪೇಟಾರನ್ನು ಇವರು ತನ್ನ ಕೈಗೊಂಬೆಯಾಗಿ ಮಾಡಿಕೊಳ್ಳಬಹುದು ಆದರೆ ಫ್ರೆಂಚ್ ಜನರಿಂದಿಗೂ ಅವರ ಮೇಲೆ ವಿಶ್ವಾಸವಿಡಲಾರರೆಂದು ನಂಬಲಾಗಿದೆ.

ಜಾಪಾನಿನ ಮರದ ಹಡಗಗಳು

ಜಪಾನು ಹೆಚ್ಚಿನ ಹಡಗ ನಷ್ಟ ಹೊಂದಿರುವುದೆಂಬುದರಲ್ಲಿ ಸಂದೇಹವಿಲ್ಲ ಆದೀಗ ಕಚ್ಚಾ ಮಾಲುಗಳನ್ನು ಹೊರಗಣಿಂದ ತರಿಸುವುದಕ್ಕಾಗಿ ಮರದಿಂದ ಮಾಡಲ್ಪಟ್ಟಿರುವ ಚಿಕ್ಕ ಹಡಗಗಳನ್ನು ಉಪಯೋಗಿಸುತ್ತಿರುವುದೆಂದು ತಿಳಿದು ಬಂದಿದೆ.

ರಶ್ಯದ ಮೇಲಿನ ಹಿಟ್ಲರರ ಧಾಳಿ

ಹಿಟ್ಲರರು ಶೀಘ್ರವಾಗಿ ದಕ್ಷಿಣದಲ್ಲಿ ಮಾರ್ಶಲ್ ಟಿಮೊಶೆಂಕೋರವರ ಸೇನೆಯ ಮೇಲೇರಿ ಹೋಗಬಹುದೆಂದು ನಂಬಲಾಗಿದೆ. ಉಕ್ರೈನಿನಲ್ಲಿ ಹಿಮವು ಕರಗಿ ಹೋಗಿ ನೆಲವು ಒಣಗುತ್ತಿದೆ ಸೇನಾ ಧಾಳಿಗೆ ಪೂರ್ವಭಾವಿಯಾಗಿ ಪ್ರಬಲ ವಿಮಾನ ಧಾಳಿಯನ್ನು ಜರ್ಮನ್ ವಿಮಾನ ಪಡೆಯು ಆರಂಭಿಸಿರುತ್ತದೆ ಹಿಟ್ಲರರು ಈ ಸಲ ತನ್ನ ಸಂಪೂರ್ಣ ಬಲವನ್ನು ಉಪಯೋಗಿಸಿ ಕೆಂಪು ಸೇನೆಯನ್ನು ಸದೆ ಬಡಿಯಲೆತ್ನಿಸುವರೆಂಬುದರಲ್ಲಿ ಸಂದೇಹವಿಲ್ಲ ದಕ್ಷಿಣದ ರೋಸ್ಟವ್ ಮತ್ತು ಖಾರ್ಕೋವ್ ರಣರಂಗಗಳ ಮೂಲಕ ಜರ್ಮನರು ಒಮ್ಮೆಯೇ ಮುಂದೊತ್ತಿ ಕೆಂಪು ಸೇನೆಯ ಕೋಕಸಸಿನ ಎಣ್ಣೆ ಕ್ಷೇತ್ರದ ಸಂಬಂಧವನ್ನು ಕಡಿದು ಹಾಕಲೆತ್ನಿಸುವರೆಂದು ನಂಬಲಾಗಿದೆ ನಾಝಿಗಳು ಆರಂಭದಲ್ಲಿ ಕಲವುಟ್ಟಿಗೆ ವಿಜಯಿಗಳಾಗಬಹುದಾದರೂ, ಕಟ್ಟ ಕಡೆಗೆ ರಶ್ಯವು ಅವರನ್ನು ತಡೆಗಟ್ಟುವ ಶಕ್ತಿಯುಳ್ಳದ್ದಾಗಿರುವುದೆಂದು ನಂಬಲಾಗಿದೆ

ಜಾಪಾನಿನ ನೌಕಾ ನಷ್ಟ

ಕಳೆದ ದಶಂಬರ ತಾ 7ರಿಂದ ಎಪ್ರಿಲ್ ತಾ. 17ರ ವರೆಗೆ 228 ಜಾಪಾನ ಹಡಗಗಳು ಮುಳುಗಿಸಲ್ಪಟ್ಟು 117 ಜಖಮ್ ಹೊಂದಿರುವವೆಂದು ಅಮೇರಿಕವು ಪ್ರಕಟಿಸಿರುತ್ತದೆ ಯುನೈಟೆಡ್ ಸ್ಟೇಟ್ಸ್ ಒಂದೇ 214 ಜಾಪಾನ ಹಡಗಗಳನ್ನು ಮುಳುಗಿಸಿರುವುದು

ಜರ್ಮನಿಯ ಮೇಲೆ ಧಾಳಿ

ಬ್ರಿಟನು ಜರ್ಮನಿಯ ಮೇಲೆ ಇಷ್ಟರಲ್ಲೇ ಪ್ರಬಲ ವಿಮಾನ ಧಾಳಿಯನ್ನು ಎಡೆಬಿಡದ ನಡಿಸಿಕೊಂಡು ಬಂದಿದ ಹಿಟ್ಲರರ ಯುದ್ಧ ಸಿದ್ಧತೆಗೆ ಅದರಿಂದ ಬಹಳ ತೊಡಕಾಗಿವೆ ಸುಮಾರು ಅರೆವಾಸಿಯಷ್ಟರ ಜರ್ಮನ್ ವಿಮಾನಗಳನ್ನು ಪಶ್ಚಿಮದಲ್ಲೇ ಇರಿಸಬೇಕಾಗಿ ಬಂದಿದೆ ಬ್ರಿಟನ್ ಮತ್ತು ಅಮೇರಿಕಗಳೊಂದುಗೂಡಿ ಪಶ್ಚಿಮದಲ್ಲಿ ಪ್ರಾಯಶಃ ನೋರ್ವೆಯ ಮೇಲೆ ಧಾಳಿ ನಡಿಸಬಹುದೆಂದು ಜರ್ಮನರು ಭೀತಿಗೊಂಡಿದ್ದಾರೆ ಸುಮಾರು ಒಂದು ಮಿಲ್ಯ ಜರ್ಮನ್ ಸೇನೆಯು ಪಶ್ಚಿಮಕ್ಕೆ ಕಳುಹಿಸಲ್ಪಡಬಹುದೆಂದು ನಂಬಲಾಗಿದೆ ನೋರ್ವೆಯಲ್ಲಿ, ಅತ್ಯಂತ ಚತುರ ಜರ್ಮನ್ ಸೇನಾ ನಾಯಕ ಜನರಲ್ ಲಿಸ್ಟರು ಕೋಟೆ ಕೊತ್ತಳ ಕಟ್ಟಿಸಿ ಬಲದಿಂದ ಸಿದ್ಧತನಮಾಡುತ್ತಿದ್ದಾರೆ ಬೆಲ್‌ಜಿಯಮಿನ ಸಮುದ್ರ ಕರಾವಳಿಯ ಜನರನ್ನೆಲ್ಲಾ ಖಾಲಿಮಾಡಿ ರಕ್ಷಣಾ ಸಿದ್ಧತೆಯು ಭರದಿಂದ ನಡೆಯುತ್ತಿದೆ

ಫಿನ್ಲೆಂಡಿನಲ್ಲಿ ಜರ್ಮನ್ ಸೇನೆ

ರಶ್ಯದ ಉತ್ತರದಲ್ಲಿ ಲಡೋಗ ಮತ್ತು ಒನೋಗಾ ಸರೋವರಗಳ ನಡುವೆ ಸ್ವಿರ್ ನದಿ ಪ್ರದೇಶದಲ್ಲಿ ಜರ್ಮನರು ಫಿನ್ಲೆಂಡಿಗೆ ಸೇರಿ ಇದೀಗ ಪ್ರಬಲ ಹೋರಾಟ ನಡಿಸ ತೊಡಗಿರುವರು ಈ ರಣರಂಗದಲ್ಲಿ ಕೆಂಪು ಸೇನೆಯು ವಿಜಯ ಪಡೆದಿರುವುದು ಬ್ರಿಟಿಷರ ಧಾಳಿಯ ನಿಮಿತ್ತ ಫಿನ್ಲೆಂಡಿಗೆ ಹೆಚ್ಚಿನ ಸೇನೆ ಕಳುಹಿಸುವ ಜರ್ಮನರ ಯತ್ನವು ತಡೆಗಟ್ಟಲ್ಪಟ್ಟಿರುವುದೆಂದು ತಿಳಿದು ಬರುತ್ತದೆ

ವಿಚಿತ್ರ ವಿಮಾನ ಧಾಳಿ

ಟೋಕಿಯೋ ಪಟ್ಟಣದ ಮೇಲೆ ವಿಮಾನ ಧಾಳಿನಡಿಸಲ್ಪಟ್ಟಿರುವುದೆಂದು ಜಾಪಾನೇ ಪ್ರಕಟಿಸಿರುವುದಲ್ಲದೆ ಅಮೇರಿಕವಾಗಲೀ ಬ್ರಿಟನಾಗಲೀ ಆ ಕುರಿತು ಈವರೆಗೆ ಯಾವ ವಿವರವನ್ನೂ ಪ್ರಕಟಿಸಿರುವುದಿಲ್ಲ ಎಲ್ಲಿಂದ ಮತ್ತು ಹೇಗೆ ದಾಳಿ ನಡಿಸಲ್ಪಡುವುದೆಂಬುದೇ ವಿಚಿತ್ರವಾಗಿದೆ ಧಾಳಿ ನಡೆಸಿದುದು ಅಮೇರಿಕಾದ ವಿಮಾನಗಳೆಂದೇ ನೋ ನಿಜ ಆದರೆ ಅವು ಎಲ್ಲಿಂದ ... ಒಂದವು ... ಅಲಸ್ಕ ... ಸಮುದ್ರ ಮಧ್ಯದ ವಿಮಾನ ... ಹಡಗಗಳಿಂದಲೋ? ಎಂಬುದು ... ರಹಸ್ಯವಾಗಿಯೇ ಉಳಿದಿರುತ್ತದೆ ... ನರು ಈ ಧಾಳಿಯಿಂದ ... ರುವರೆಂಬುದರಲ್ಲಿ ಸಂದೇಹವಿಲ್ಲ

ಆಜೇಯ ಮಾಲ್ಟ!

ಮಾಲ್ಟವನ್ನು ... ಮಾತ್ರವೇ ಗೆಲ್ಲ ... ಯು ಜರ್ಮನರಲ್ಲುಂಟಾಗಿದೆ ದಿನವಹಿ 10–12 ಸಲ ಭೀಕರ ವಿಮಾನ ಧಾಳಿಗೊಳಗಾದರೂ ಮಾಲ್ಟ ಅಜೇಯವಾಗಿದೆ ಜನರಲ್ ರೊಮೆಲರಿಗೆ ಲಿಬಿಯಕ್ಕೆ ಹೆಚ್ಚಿನ ಸೇನೆ ಕಳುಹಿಸುವ ಮಾರ್ಗದಲ್ಲಿ ಮಾಲ್ಟವು ಅತಿದೊಡ್ಡ ತಡೆಯಾಗಿರುತ್ತದೆ ಆದುದರಿಂದ ಅದನ್ನು ನಾಶಮಾಡಬೇಕೆಂದು ಹಿಟ್ಲರರು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ ಆದರೆ ಮಾಲ್ಟವು ಭಯಂಕರ ನಾಶದ ಅಗ್ನಿಪರೀಕ್ಷೆಗೊಳಗಾದರೂ ಧೃತಿಗೆಡದೆ ತಲೆಯೆತ್ತಿ ನಿಂತಿದೆ ಇಷ್ಟೊಂದು ಭೀಕರ ವಿಮಾನ ಧಾಳಿಗೊಳಗಾದ ಸ್ಥಳವು ಲೋಕದಲ್ಲಿ ಇನ್ನೊಂದಿರಲಾರದು ಆದರೂ ಮಾಲ್ಟೀಸರು ವಿಚಿತ್ರ ಧೈರ್ಯ ಮತ್ತು ಸ್ಥೈರ್ಯದಿಂದದನ್ನು ತಾಳಿಕೊಂಡು ಇಡೀ ಲೋಕದ ಮೆಚ್ಚುಗೆಗೆ ಪಾತ್ರರಾಗಿರುವರು.

ಜಾಪಾನಿನ ಪಕ್ಷಪಾತಿಗಳಾದರೆ ಮಾತ್ರ!

ಇಡೀ ಏಸ್ಯಾ ಖಂಡವನ್ನು ಬಿಳಿಜನರ ಅಧಿಕಾರ ಮತ್ತು ಸೂರೆಯಿಂದ ವಿಮುಕ್ತಗೊಳಿಸಲು ತಾವು ಹೋರಾಟ ನಡಿಸುತ್ತಿರುವುದು ಏಸ್ಯಾ ಖಂಡವು ಏಸ್ಯಾನರದೇ ಆಗಿರಬೇಕು ಬಿಳಿಜನರಿಗಲ್ಲಿ ಸ್ಥಾನವಿರಲಾರದೆಂಬ ಕೂಗನ್ನೆಬ್ಬಿಸಿ ಏಸ್ಯಾ ಖಂಡದ ಜನರನ್ನೊಲಿಸಿಕೊಳ್ಳಲು ಜಪಾನು ಪ್ರಯತ್ನಿಸುತ್ತಿದೆ ಆದರೆ ಜಾಪಾನರ ಪಕ್ಷಪಾತಿಗಳಾಗಿರುವವರು ಮಾತ್ರ ನಿಜವಾದ ಏಸ್ಯನರು ವಿರುದ್ಧವಿರುವವರು ಏಸ್ಯಾನರಲ್ಲೆಂದು ಕೂಡಾ ಜಾಪಾನರೇ ಹೇಳುತ್ತಿದ್ದಾರೆ ಇದರಿಂದ ಅವರ ಸ್ವಾರ್ಥವು ಬಟ್ಟ ಬಯಲಾಗುವಂತಾಗಿದೆ

ರಶ್ಯೋ ಜರ್ಮನ್ ಯುದ್ಧ.

ಇಷ್ಟರ ವರೆಗೂ ದಾಳಿಕಾರಕ ಯುದ್ಧವನ್ನು ಕೆಂಪುಸೇನೆಯೇ ನಡಿಸುತ್ತಿದೆ ಕೆಲವೇ ಜರ್ಮನರ ಪ್ರತಿ ದಾಳಿಯು ನಿಷ್ಪ್ರಯೋಜನವಾಗಿದೆ. ಲೆನಿನ್‌ಗ್ರಾಡಿನ ... ಸಂಪೂರ್ಣವಾಗಿ ಜರ್ಮನರು ... ರುವುದಿಲ್ಲ ... ರು ... ಸುತ್ತುವರಿಸಲ್ಪಟ್ಟಿರುವ 16 ನೇ ಜರ್ಮನ್ ದಳವು ಇನ್ನೂ ಹೋರಾಟ ನಡಿಸುತ್ತಲೇ ಇದೆ ಮೋಸ್ಕೋದ ಉತ್ತರ ಮತ್ತು ದಕ್ಷಿಣಭಾಗಗಳಲ್ಲಿ ಕೆಂಪುಸೇನೆಯ ಒತ್ತಾಟವು ಅಧಿಕವಾಗಿದ್ದು ಬ್ರಿಯಾನಸ್ಕ ಮತ್ತು ಸ್ಮೊಲೆಂಸ್ಕಗಳ ನಡುವೆ ರಶ್ಯನರು ಮುಂದೊತ್ತಿರುತ್ತಾರೆ. ದಕ್ಷಿಣದಲ್ಲಿ ಮಾರ್ಶಲ್ ಟಿಮೊಶೆಂಕೋರವರ ಸೇನೆಯು ಪ್ರಬಲ ಹೋರಾಟ ನಡಿಸಿ ಖಾರ್ಕೋವ್ ಪಟ್ಟಣದ ಕೆಲವು ಭಾಗಗಳನ್ನು ಆವರಿಸಿರುವುದು ಕ್ರಿಮಿಯದಲ್ಲಿ ಕರ್ಚ್ ಅರ್ಧದ್ವೀಪಕ್ಕೆ ಹೆಚ್ಚಿನ ಸೇನೆಯನ್ನೊಯ್ಯಲಾಗಿದೆ ಸಬಸ್ತಪೋಲಿನ ಸೇನೆಯು ಆಗಾಗ ಪ್ರಬಲ ದಾಳಿ ನಡಿಸಿರುವುದು. ಕ್ರಿಮಿಯದಲ್ಲಿ ರಶ್ಯನರೇ ಜರ್ಮನರ ಮೇಲೆಬಿದ್ದು ಪ್ರಬಲ ಹೋರಾಟ ನಡಿಸಬಹುದು

ANNOUNCEMENT

We have great pleasure in announcing an all round reduction in rates of interest on advances

OUR PRESENT RATES ARE —

Personal Loans & Overdrafts	7½% p. a.
Usance Bills	7 % p. a.
Trade Bills	6 % p. a.
Loans on Produce	5½% p. a.
Loans on Insurance Policies, Stocks & shares	5 % p. a.
Loans on Gold	4½% p. a.

The above rates are for medium-sized loans The rates for small loans will however be slightly higher since the cost of time, labour and stationery consumed in such cases is proportionately higher

CANARA BANK LTD.

ESTD 1906

ತಿದ್ದುಪಡಿ:– ಕಳೆದ ಸಂಚಿಕೆಯ ಉಪ್ಪಿ ಮಾರ್ಚದ ೨೦ರ ದಲ್ಲಿ ಫ್ರಾನ್ಸಿಸ್ ಕಮಿಟಿ ಮೆಂಬರ ಹೆಸರುಗಳಲ್ಲಿ ವಕೀಲ ಪದ್ಮನಾಭ ರಾವ್ ಎಂಬುದು ಪದ್ಮನಾಭ ರಾವ್ ಎಂದೂ ಕೊಟ್ಟಾರ್ ಅನಂತ ಪದ್ಮನಾಭ ಪೈ ಎಂಬುದು ಕೊಟ್ಟಾರ್ ಪದ್ಮನಾಭ ಪೈ ಎಂದೂ ಆಗಬೇಕಾಗಿದೆ

ಸಂ ಪ

The Canara Banking Corporation Ltd.
(Incorporated in British India with limited liability)
ESTD 1906.
will now receive
SEASON DEPOSITS
for a period of 4 months
at 3% p a
AT ALL ITS BRANCHES

ಉಡುಪಿ, ಗುರುವಾರ, ೩೦-೪-೧೯೪೨

ಯುದ್ಧದ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕಾದ ಜಾಗರೂಕತೆ.

ಇಂದೀಗ ಇಡೀ ಲೋಕದಲ್ಲೇ ಯುದ್ಧದ ಪ್ರಲಯವುಂಟಾಗಿ ಮುಂದೆ ಎಂತಹ ಪರಿಸ್ಥಿತಿಯುಂಟಾಗುವುದೆಂದು ಹೇಳಬರುವದಿಲ್ಲ. ಯುದ್ಧ ಮುಗಿದ ಮೇಲೂ ಕೆಲ ಸಮಯದ ವರೆಗೆ ಜನರು ಹೆಚ್ಚಿನ ಸಂಕಷ್ಟಗಳನ್ನು ತಾಳಿಕೊಳ್ಳಲೇ ಬೇಕಾಗಿದೆ ಅದುದರಿಂದ ಜನರು ಇಂದಿನ ವಿಶಿಷ್ಟ ಪರಿಸ್ಥಿತಿಗನುಸಾರವಾಗಿ ತಮ್ಮ ಜೀವನ ಕ್ರಮವನ್ನು ಬದಲಾಯಿಸಿ, ಈ ಮಹಾ ವಿಪತ್ತಿನಿಂದ ಪಾರಾಗಲು ವೈಯಕ್ತಿಕ ಮತ್ತು ಸಾಮೂಹಿಕವಾಗಿ ಪ್ರಯತ್ನ ಮಾಡತಕ್ಕದ್ದು.

ದುಂದುವೆಚ್ಚ ನಿಲ್ಲಿಸಬೇಕು

ಎಲ್ಲಾ ವಿಧದ ದುಂದುವೆಚ್ಚವನ್ನು ನಿಲ್ಲಿಸುವುದು ಪ್ರತಿಯೊಬ್ಬನ ಮೊದಲ ಕರ್ತವ್ಯವಿರುತ್ತದೆ ಶ್ರೀಮಂತರು ಮತ್ತು ವಿದ್ಯಾವಂತರಾದವರು ಈ ಸಂದರ್ಭದಲ್ಲಿ ಏಕಾಂತ ಸರಳ ಜೀವನ ನಡಿಸಿ ಜನಸಾಮಾನ್ಯರಿಗೆ ಮಾದರಿ ಹಾಕಿಕೊಡಬೇಕು ಜೀವನ ನಿರ್ವಾಹಕ್ಕೆ ಅತ್ಯಾವಶ್ಯಕವಾದ ವಸ್ತುಗಳ ಅಭಾವವಿರುವಲ್ಲಿ ಹಣವುಂಟೆಂದು ಅವನ್ನು ಇಚ್ಛಾನುಸಾರ ಉಪಯೋಗಿಸುವುದು ಸಾಮಾಜಿಕ ದುಷ್ಕೃತ್ಯವಾಗುವುದು ಕೆಲವು ದೇಶಗಳಲ್ಲಿಂದು ಅಂತಹ ವರ್ತನೆಯು ದ್ರೋಹವಾಗಿ ಶಿಕ್ಷಾರ್ಹವಾಗಿರುತ್ತದೆ. ಸಾರಾಯಿ, ಮದ್ಯ, ಹೊಗೆ ಸೊಪ್ಪು ಮುಂತಾದವುಗಳಿಗಾಗಿ ಮಾಡುವ ವ್ಯಯವು ಅನಿಷ್ಟವೆಂದು ಹೇಳಲು ಕಾರಣವಿಲ್ಲ! ಅದಕ್ಕೆ ವಿಶೇಷವಾಗಿ ಕಠಿಣದ ಕಡಿವಾಣವನ್ನು ನಿರ್ದಾಕ್ಷಿಣ್ಯವಾಗಿ ಹಾಕಬೇಕು ಶ್ರೀಮಂತರು ಮತ್ತು ಮಧ್ಯಮತರಗತಿಯವರು ಬೇಕಾಗುವುದಕ್ಕಿಂತಲೂ ಹೆಚ್ಚು ಧವಸಧಾನ್ಯಗಳನ್ನು ಉಪಯೋಗಿಸಿ ಹಾಳುಮಾಡುವುದುಂಟು ಆದರಿಂದ ತಾವು ಸಾಮಾಜಿಕ ಪಾಪವನ್ನು ಮಾಡುತ್ತಿರುವೆವೆಂಬುದನ್ನವರು ಮನಗಂಡುಗೊಳ್ಳಬೇಕು. ಆಧುನಿಕ ಜೀವನದ ಮೋಹಕ್ಕೆ ಬಿದ್ದು ಆಲಂಕಾರ ಆಡಂಬರಗಳಿಗಾಗಿ ದುಂದುವೆಚ್ಚ ಮಾಡುವ ಚಟವಿರುವವರು ಪ್ರಸಂಗಕ್ಕೆ ತಕ್ಕಂತೆ ನಡೆಯುವ ಅಭ್ಯಾಸಮಾಡಬೇಕು. ಅನಾವಶ್ಯಕವಾದ ವೆಚ್ಚಗಳನ್ನೆಲ್ಲಾ ನಿಲ್ಲಿಸಿಬಿಡುವ ಅಚಲ ನಿರ್ಧಾರ ಮಾಡಬೇಕು.

ಸಾಧ್ಯವಾದಷ್ಟು ಮಟ್ಟಿಗೆ ಸ್ವಾವಲಂಬಿಗಳಾಗಬೇಕು.

ಯುದ್ಧದ ನಿಮಿತ್ತ ಪರದೇಶಗಳಿಂದ ಬರುವ ಸಾಮಾನುಗಳೆಲ್ಲಾ ನಿಂತುಹೋಗಿವೆ ಆದುದರಿಂದ ಪ್ರತಿಯೊಂದು ದೇಶದವರೂ, ಪ್ರದೇಶದವರೂ ಸ್ವಾವಲಂಬಿಗಳಾಗಿ ನಡೆಯಬೇಕಾಗಿದೆ ಈ ವಿಷಯದಲ್ಲಿ ಬ್ರಿಟಿಷರ ಮಾದರಿಯು ಅನುಕರಣೀಯವಿದೆ ಅವರು ಪ್ರಸಂಗಕ್ಕೆ ತಕ್ಕ ಉಪಾಯವನ್ನು ಕೈಕೊಂಡು ತಮ್ಮ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿರುತ್ತಾರೆ ಮನೆಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಊಟ ತಯಾರಿಸುವುದನ್ನು ಕೂಡಾ ಅವರು ನಿಲ್ಲಿಸಬೇಕಾಗಿ ಬಂದಿದೆ. ಎಲ್ಲೆಲ್ಲಿಯೂ ಸಾಮೂಹಿಕ ಭೋಜನಾಲಯಗಳು ಸ್ಥಾಪಿಸಲ್ಪಟ್ಟಿವೆ ಇಂಗ್ಲೆಂಡೆಂದರೆ ಕೇವಲ ಇದ್ದಲು, ಕಬ್ಬಿಣ, ಯಂತ್ರ ಮತ್ತು ಯಂತ್ರಜನ್ಯ ವಸ್ತುಗಳನ್ನು ಹುಟ್ಟಿಸುವ ದೇಶವಾಗಿದ್ದಿತು ಆಹಾರಕ್ಕಾಗಿ ಅದು ಪರದೇಶಗಳ ಮೇಲೆ ಹೊಂದಿಕೊಂಡಿತ್ತು ಆದರೆ ಕಳೆದ ಎರಡು ಮೂರು ವರ್ಷಗಳ ಯುದ್ಧದ ಪರಿಸ್ಥಿತಿಯು ಇಂಗ್ಲೆಂಡನ್ನು ಕೃಷಿ ಪ್ರಧಾನ ದೇಶವಾಗಿ ಮಾಡಿದ ತನಗ ಬೇಕಾದ ಮುಕ್ಕಾಲುಪಾಲು ಧವಸಧಾನ್ಯಗಳನ್ನು ಇಂದದು ತಾನೇ ಬೆಳೆಸುತ್ತಿದೆ. ಜನರು ಪಟ್ಟಣಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಿ ವಾಸಿಸಿ, ತಮ್ಮ ಅಜ್ಜ ಎಜ್ಜಂದಿರು ಬಿಟ್ಟುಬಂದಿದ್ದ ಹೊಲಗಳಲ್ಲಿ ಪುನಹ ಕೆಲಸಮಾಡಹತ್ತಿರುತ್ತಾರೆ ಒಣಗೌರವ ಬಿಟ್ಟು ಪಟ್ಟಣ ಜೀವನ ಕ್ರಮವನ್ನೇ ಬದಲಾಯಿಸಿ ಒಕ್ಕಲಿಗರ ಸರಳ ಜೀವನ ನಡಿಸಿ ಬೇಸಾಯವೃತ್ತಿಯನ್ನು ಕೈಗೊಂಡಿದ್ದಾರ ಎಷ್ಟೋ ಮಂದಿ ಶ್ರೀಮಂತ ಸ್ತ್ರೀಯರು ಹೊಲಗಳಲ್ಲಿ ದುಡಿಯಹತ್ತಿದ್ದಾರೆ. ಕೃಷಿ ಕೆಲಸವನ್ನು ಉತ್ತಮ ರೀತಿಯಿಂದ ಸಾಗಿಸುತ್ತಿದ್ದಾರೆ ಜನರು ಹೊಸತಾಗಿ ಕೃಷಿಯ ಕಡೆಗೆ ಗಮನವಿತ್ತುದರಿಂದ ಇಂಗ್ಲೆಂಡಿನಲ್ಲಿ ಮೊದಲಿಗಿಂತ 10ಲಕ್ಷ ಎಕ್ರೆ ಭೂಮಿಯು ಹೆಚ್ಚಾಗಿ ಸಾಗುವಳಿಮಾಡಲ್ಪಟ್ಟಿದೆ. ಆದುದರಿಂದ 1941-12ರ ಬೆಳೆಯು ಬಹಳ ಉತ್ತಮವಾಗಿರುತ್ತದೆ ಕೇವಲ ಪಟ್ಟಣಗಳಲ್ಲಿಯ ಜೀವನದ ಅಭ್ಯಾಸವಿದ್ದವರು ಅದರ ಮೋಹಬಿಟ್ಟು ಹಳ್ಳಿಗಳಿಗೆ ಸೇರಿ ಯಾವ ತರದ ಆಡಂಬರವೂ ಇಲ್ಲದೆ ಒಕ್ಕಲಿಗರೊಂದಿಗೆ ಹೊಕ್ಕು ಬಳೆದು ಮೈಮುರಿದು ದುಡಿದು ಹೊಟ್ಟೆತುಂಬಿಸಿಕೊಳ್ಳಲು ಸ್ವಸಂತೋಷದಿಂದ ಮುಂದಾಗಿದ್ದಾರೆ ಇದರ ಪರಿಣಾಮವಾಗಿ ಇಂಗ್ಲೆಂಡಿನಲ್ಲೊಂದು ವ್ಯವಸಾಯಿಕ ಕ್ರಾಂತಿಯೇ ಆಗಿದೆ. ಸುಶಿಕ್ಷಿತ, ಸುಸಂಸ್ಕೃತ, ಕೃಷಿಕ ವರ್ಗವು ಹುಟ್ಟಿತೊಡಗಿದೆ.

ಹೆಚ್ಚು ಬೆಳೆಸಿ ಸಂಗ್ರಹಿಸಬೇಕು.

ಬ್ರಿಟಿಷರ ಈ ಉಜ್ವಲ ಮಾದರಿಯು ಅನುಸರಣೀಯವಿದೆ. ಯುದ್ಧದ ನಿಮಿತ್ತ ಬೇರೆ ಬೇರೆ ಪಟ್ಟಣಗಳನ್ನು ಬಿಟ್ಟು ಬಂದಿರುವ ಜನರು ಹಳ್ಳಿಗಳಿಗೆ ಸೇರಿ ಅಲ್ಲಿ ಬೇರೆ ಬೇರೆ ಕಸುಬುಗಳಲ್ಲಿ ನಿರತರಾಗಬೇಕು ಹಳ್ಳಿ ಉದ್ಯೋಗಗಳನ್ನು ಸುಧಾರಿತ ರೀತಿಯಲ್ಲಿ ನಡಿಸಲೆತ್ನಿಸಬೇಕು. ಬೇರೆಯವರ ಮೇಲೆ ಅವಲಂಬಿಸದೆ ಸಾಧ್ಯವಾದಷ್ಟು ಮಟ್ಟಿಗೆ ಸ್ವಾವಲಂಬಿ ಜೀವನ ನಡಿಸಲೆತ್ನಿಸಬೇಕು. ಧವಸಧಾನ್ಯ, ಹಣ್ಣುಹಂಪಲು, ತರಕಾರಿ ಮೊದಲಾದುವುಗಳನ್ನೆಲ್ಲಾ ಆದಷ್ಟು ಹೆಚ್ಚು ಬೆಳೆಸಿ ಸಂಗ್ರಹಿಸಿಕೊಳ್ಳಬೇಕು ನಮಗೆ ಬೇಕಾದ ಎಲ್ಲಾ ಆವಶ್ಯಕ ವಸ್ತುಗಳನ್ನು ಸಾಧ್ಯವಾದ ಮಟ್ಟಿಗೆ ನಾವೇ ನಮ್ಮಲ್ಲಿ ಹುಟ್ಟಿಸಿಕೊಳ್ಳಲು ಕಟಿಬದ್ಧರಾಗಬೇಕು ಅನಾವಶ್ಯಕ ವಸ್ತುಗಳನ್ನು ಬೆಳೆಸುವುದನ್ನು ನಿಲ್ಲಿಸಬೇಕು ಪ್ರಸಂಗಕ್ಕೆ ತಕ್ಕ ಉಪಾಯವನ್ನು ಕಂಡುಹಿಡಿದು ಮುಂದೆ ಸಾಗಲು ಕಲಿಯದವರು ಹಿಂದೆ ಬಿದ್ದು ನರಳಬೇಕಾಗುವುದು

ಸರಕಾರದ ಕರ್ತವ್ಯ

ಯುದ್ಧದ ಪರಿಸ್ಥಿತಿಯಿಂದಾಗಿ ಅನಿರೀಕ್ಷಿತ ಸಂಕಷ್ಟಗಳಿಗೊಳಗಾಗುವ ಜನತೆಗೆ ಆಗತ್ಯವಾದ ಸಹಾಯ ಮಾಡುವುದು ಸರಕಾರದ ಕರ್ತವ್ಯವಿದೆ. ಅದು ಕಟ್ಟುಕಟ್ಟಳೆಯಂತೆ ಕೇವಲ ಯಾಂತ್ರಿಕವಾಗಿ ನಡೆಯದೆ ಜನತೆಯ ನಿಕಟ ಸಂಪರ್ಕ ಪಡೆದು ಅವರ ಸುಖದುಃಖದಲ್ಲಿ ಭಾಗಿಯಾಗಬೇಕು ಜೀವನದ ಅತ್ಯಾವಶ್ಯಕ ವಸ್ತುಗಳನ್ನು ಆದಷ್ಟು ಹೆಚ್ಚು ಒದಗಿಸಿ ಸಂಗ್ರಹಿಸುವುದರಲ್ಲಿ ಸರಕಾರದ ಜವಾಬ್ದಾರಿಯು ಹೆಚ್ಚಿನದಿದೆ ಜನಸಾಮಾನ್ಯರು ತೀವ್ರ ಸಂಕಷ್ಟಕ್ಕೊಳಗಾದಲ್ಲಿ, ಅತ್ಯಂತ ಸಹಾನುಭೂತಿಯಿಂದ ಅದನ್ನು ಕೂಡಲೆ ನಿವಾರಿಸಲು ಅಥವಾ ಕಡಿಮೆ ಮಾಡಲು ಸರಕಾರವು ಪ್ರಯತ್ನ ಮಾಡದಿದ್ದಲ್ಲಿ ಸಮಾಜ ಕ್ಷೋಭೆಯುಂಟಾಗುವ ಸಂಭವವಿದೆ. ಹಿಡಿ ಮದ್ದು ಮೊದಲೇ ಸಂಗ್ರಹಿಸಲ್ಪಟ್ಟಿರುವಲ್ಲಿ ಕಿಡಿಹಾರಿ ಭಯಂಕರ ಸ್ಫೋಟವುಂಟಾಗಲೇನೂ ಕಷ್ಟವಿಲ್ಲ ಆದುದರಿಂದ ಸರಕಾರವು ಅತ್ಯಂತ ಎಚ್ಚರದಿಂದಿರಬೇಕು ಜನತೆಯ ನಾಡಿಯನ್ನದು ಆಗಾಗ ಪರೀಕ್ಷಿಸಿ ತಿಳಿದುಕೊಂಡು ಏನಾದರೂ ಹೆಚ್ಚುಕಡಿಮೆ ತೋರಿಬಂದರೆ ಕೂಡಲೆ ಅದಕ್ಕೆ ಬೇಕಾದ ಉಪಶಮನ ಮಾಡಿ ಸಮಾಜ ಕ್ಷೇಮವನ್ನು ಪಾಲಿಸಬೇಕು ಮುಖ್ಯವಾಗಿ ಆಹಾರ ಸಾಮಾಗ್ರಿಗಳ ತೀವ್ರ ಅಭಾವದಿಂದ ಜನತೆಯು ಸಂಕಷ್ಟಕ್ಕೊಳಗಾಗದಂತೆ ತಕ್ಕ ವ್ಯವಸ್ಥೆ ಮಾಡಬೇಕು. ಅವಶ್ಯಬಂದಲ್ಲಿ ದಲ್ಲಾಳಿಗಳ ಕಾಟವನ್ನು ನಿಲ್ಲಿಸಿ, ತಾನೇ ಧವಸಧಾನ್ಯಗಳನ್ನು ಸಂಗ್ರಹಿಸಿ ಜನಸಾಮಾನ್ಯರಿಗೆ ಹಂಚುವ ಏರ್ಪಾಡು ಮಾಡಬೇಕು

ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ.

ಅಕ್ಕಿಯ ಬೆಲೆಯು ಅತಿ ಹೆಚ್ಚೇನೂ ಏರುತ್ತಿರುವುದಿಲ್ಲವಾದುದರಿಂದ ಅದರ ಮೇಲೆ ಸದ್ಯ ಕಂಟ್ರೋಲ್ ಹಾಕುವುದೇನೂ ಆವಶ್ಯವಿಲ್ಲೆಂದು ಕೇಂದ್ರ ಸರಕಾರವು ನಿರ್ಧರಿಸಿರುವುದು ಪ್ರಕೃತ ಅಕ್ಕಿಯ ಬೆಲೆಯು ವಿಪರೀತ ಹೆಚ್ಚಿರುವುದಿಲ್ಲೆಂಬುದು ನಿಜ ಆದರೆ ಮುಂದೆ ಪರಿಸ್ಥಿತಿ ಹೇಗೆ ನಿಲ್ಲುವದೆಂದು ಹೇಳಬರುವುದಿಲ್ಲ. ಅಕ್ಕಿಯ ಕೊರತೆಯುಂಟಾದರೆ ಅದರ ಬೆಲೆ ಏರುವುದು ಸ್ವಾಭಾವಿಕ ದಕ್ಷಿಣಕನ್ನಡ ಜಿಲ್ಲೆಯು ಕಳೆದ ವರ್ಷದ ಅಕ್ಕಿ ಬೆಳೆಯು ಅಷ್ಟೇನೂ ಒಳ್ಳೇದಿರಲಿಲ್ಲ. ರಂಗೂನು ಮೊದಲಾದ ಸ್ಥಳಗಳಿಂದ ಇನ್ನು ಮುಂದೆ ಆಮದು ಆಮದಾಗುವುದೂ ಸಾಧ್ಯವಿಲ್ಲ. ಇದರಲ್ಲೇ ಜಿಲ್ಲೆಯಿಂದ ಕೆಲವು ಸಾವಿರ ಮುಡಿ ಅಕ್ಕಿ ಗೋವೆ ಮೊದಲಾದ ಸ್ಥಳಗಳಿಗೆ ಕಳುಹಿಸಲ್ಪಟ್ಟಿರುವುದೆಂದು ತಿಳಿದುಬರುತ್ತದೆ. ಅದಕ್ಕೆ ಸರಕಾರವು ಏಕೆ ತಡೆಹಾಕುವುದಿಲ್ಲವೋ ತಿಳಿಯದು. ಜಿಲ್ಲೆಯ ಅಕ್ಕಿಯು ಹೊರಗೆಹೋಗದಿದ್ದರೆ ಇಷ್ಟು ಹೆಚ್ಚಿನ ಮಟ್ಟಿಗೆ ಅಕ್ಕಿಯ ಕೊರತೆಯಾಗಲಾರದು ಆಗ ಅದರ ಬೆಲೆ ಕೂಡ ಮಿತವಾಗಿರುವಂತಾಗುವುದು. ಘಟ್ಟದ ಮೇಲಿಂದ ದಕ್ಷಿಣ ಕನ್ನಡಕ್ಕೆ ಬರುವ ಬತ್ತವು ಸಂಪೂರ್ಣ ನಿಲ್ಲಿಸಲ್ಪಟ್ಟಿದೆ ಆದರೆ ದಕ್ಷಿಣಕನ್ನಡದಿಂದ ಅಕ್ಕಿಯು ಹೊರಗೆ ಹೋಗುತ್ತಲೇ ಇದೆ ಆದುದರಿಂದ ಈ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಅಕ್ಕಿಯ ಕೊರತೆಯುಂಟಾಗಿ ಬೆಲೆಯು ಏರುವ ಸಂಭವ ತೋರುತ್ತದೆ ಈ ಕುರಿತು ಸರಕಾರವು ಕೂಡಲೆ ಗಮನವಿತ್ತು ಜಿಲ್ಲೆಗೆ ಬೇಕಷ್ಟು ಅಕ್ಕಿ ಸಂಗ್ರಹಿಸಲ್ಪಡುವಂತೆ ನೋಡತಕ್ಕದ್ದು.

ದಿವಂಗತ ಉಳ್ಳಾಲ ಮಂಗೇಶ ರಾಯರು.

ಶ್ರೀಮಾನ್ ಉಳ್ಳಾಲ ಮಂಗೇಶ ರಾಯರು ದಿವಂಗತರಾದರೆನ್ನಲು ನಾವು ವಿಷಾದಪಡುತ್ತೇವೆ ಇವರು ಜಿಲ್ಲೆಯವರಿಗೆಲ್ಲಾ ಸುಪರಿಚಿತರೇ. ಆದುದರಿಂದ ಇವರ ಕುರಿತು ನಾವೇನೂ ಹೆಚ್ಚಿಗೆ ಬರೆಯಬೇಕಾಗಿಲ್ಲ. 'ಮೂರ್ತಿ ಸಣ್ಣದಾದರು ಕೀರ್ತಿ ದೊಡ್ಡದು' ಎಂಬಂತೆ ಇವರು ನೋಡಲು ಸಣ್ಣ ಜೀವ, ಆದರೂ ಇವರ ಕೀರ್ತಿ ವಿಶೇಷವಾಗಿತ್ತು ದಕ್ಷ ಉಪಾಧ್ಯಾಯರಾಗಿ, ಪ್ರಭಾವಶಾಲಿ ಇನ್ಸ್‌ಪೆಕ್ಟರರಾಗಿ, ಟ್ರೈನಿಂಗ್ ಶಾಲೆಯ ಸಮರ್ಥ ಮುಖ್ಯ ಶಿಕ್ಷಕರಾಗಿ ಇವರು ತಮ್ಮ ಶಕ್ತಿ ಪ್ರಭಾವಗಳನ್ನು ಜಿಲ್ಲೆಯಲ್ಲೆಲ್ಲಾ ಬೀರಿದ್ದರು ಶಿಕ್ಷಣ ರಂಗದಲ್ಲಿ ಇವರದು ಪಗಿದ ಕೈ ಸಹಕಾರಿ ಚಳವಳದಲ್ಲಿಯೂ ಇವರು ಮುಂದಾಳಾಗಿದ್ದರು ಕನ್ನಡದಲ್ಲಿ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. 1927ರಲ್ಲಿ ಮಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜರಗಲಿಕ್ಕೆ ತಾನೇ ಕಾರಣರಾಗಿ ಅದರ ಸರ್ವ ಭಾರವನ್ನು ತಾನೇ ವಹಿಸಿದ್ದರು. 1928ರಲ್ಲಿ ಮಂಗಳೂರಲ್ಲಿ ಜರಗಿದ ಶಿಕ್ಷಣ ಪರಿಷತ್ತಿನಲ್ಲೂ ಇವರ ಕೈವಾಡವಿತ್ತು ಯಕ್ಷಗಾನ ಕಲಾಭಿಮಾನಿಗಳಾಗಿದ್ದು ಅದನ್ನು ಸುಧಾರಿಸಲು ಹಲವು ವಿಧದಿಂದ ನೆರವಾಗಿದ್ದರು. ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ಬರೆದು ಬರೆಯಿಸಿಯೂ ಬಾಲಸಾಹಿತ್ಯ ಬೆಳವಣಿಗೆಗೆ ತುಂಬ ದುಡಿದಿದ್ದಾರೆ. ಶ್ರೀಯುತರು ಸತತೋದ್ಯೋಗಿಗಳು. ನಿವೃತ್ತರಾದ ಮೇಲೂ ಅವರು ಬೇರೆ ಬೇರೆ ವಿಧದಿಂದ ಉಪಾಧ್ಯಾಯರ ಸೇವೆ ಮಾಡುತ್ತಿದ್ದರು.

ಜರ್ಮನ್ ರಿಖ್‌ಸ್ಟೇಗಿನಲ್ಲಿ ಹಿಟ್ಲರರ ಭಾಷಣ

ಜರ್ಮನಿಯ ಮೇಲೆ ಪ್ರಚಂಡ ವಿಮಾನ ಧಾಳಿ

ಹಿಟ್ಲರರ ಭಾಷಣ

ಇದೇ ತಾ. 26ರಲ್ಲು ಹಿಟ್ಲರರು ಜರ್ಮನ್ ಪಾರ್ಲಿಮೆಂಟಿನಲ್ಲಿ ಪ್ರಾಮುಖ್ಯವಾದೊಂದು ಭಾಷಣವಿತ್ತು, ಯುದ್ಧದ ಪರಿಸ್ಥಿತಿಯ ವಿಮರ್ಶೆ ಮಾಡಿದರು. ಅವರ ಭಾಷಣದ ಸಾರಾಂಶವು ಈ ಕೆಳಗಿನಂತಿರುತ್ತದೆ. ಯುರೋಪಿನ ಹಳೆಯ ರಾಷ್ಟ್ರಗಳು ಶಕ್ತಿಕುಂದಿ ನಿರ್ಜೀವಾವಸ್ಥೆಯಲ್ಲಿದ್ದವು. ಅವುಗಳನ್ನು ಹಿಡಿದು ಹಾಕಿ ಇಂಗ್ಲೆಂಡು ತನ್ನ ಬೇಳೆ ಬೇಯಿಸುತ್ತಿದ್ದಿತು. ಜರ್ಮನಿಯ ಪ್ರಭಾವಕ್ಕೆ ಬ್ರಿಟನಿನ ಸಾಮ್ರಾಜ್ಯ ಸ್ವಾರ್ಥಕ್ಕೆ ಹಾನಿಕರವಾಗಿತ್ತು. ಆದುದರಿಂದಲೇ ಅದು 1914ರಲ್ಲಿ ಯುರೋಪಿನ ಕೆಲವು ರಾಷ್ಟ್ರಗಳನ್ನು ಎತ್ತಿಕಟ್ಟಿ ಜರ್ಮನಿಯ ಮೇಲೆ ಯುದ್ಧ ಹೂಡಿತು. ಆದರೆ ಆ ಯುದ್ಧದ ಪರಿಣಾಮವಾಗಿ ಜರ್ಮನಿಯು ಕೆಲಕಾಲ ಬಂಧನದಲ್ಲಿ ಬೀಳುವಂತಾದರೂ ಜಪಾನು ಮತ್ತು ಅಮೆರಿಕಗಳು ಪ್ರಭಾವ ಪಡೆದು ತಲೆಯೆತ್ತಿದುವು. ಇಂದೀಗ ಕೇವಲ ನೆವನಕ್ಕಾಗಿ ಪೋಲಂಡಿನ ಪಕ್ಷ ಹಿಡಿದು ಫ್ರಾನ್ಸನ್ನು ಎತ್ತಿ ಕಟ್ಟಿ ಇಂಗ್ಲೆಂಡು ಜರ್ಮನಿಯ ಮೇಲೆ ಯುದ್ಧ ಹೂಡಿರುವುದು. ಈ ಯುದ್ಧಾಂತ್ಯದಲ್ಲಿ ಇಂಗ್ಲೆಂಡು ಮತ್ತಷ್ಟು ಬಲಕುಂದಿ ಅದರ ಮಿತ್ರರಾಷ್ಟ್ರಗಳು ಪ್ರಭಾವ ಪಡೆಯದಿರಲಾರವು.

ಪ್ರಥಮ ಲೋಕ ಯುದ್ಧಕ್ಕೆ ಕಾರಣವೆ ಯಹೂದ್ಯರು. ಜರ್ಮನಿಯ ಶಕ್ತಿ ಕುಂದಿಸಿದವರೂ ಅವರೇ. ಅವರೇ ಬೋಲ್ಶೆವಿಕ್ ಅಂಟುರೋಗವನ್ನು ಹಬ್ಬಿಸಿದವರು. ಯುದ್ಧವನ್ನೆಬ್ಬಿಸುವವರೇ ಅವರು. ಅಮೆರಿಕವನ್ನು ಯುದ್ಧಕ್ಕೆಳೆದವರೂ ಯೆಹೂದ್ಯರು. ಬೋಲ್ಶೆವಿಕ್ ಪ್ಲೇಗಿನ ಹಿಂದಿನಲ್ಲಿ ಅಧಿಕಾರ ನಡೆಸುವ ಸಟಿಂಗರೂ ಯೆಹೂದ್ಯರು.

ಫಸಿಸ್ಮಿನ ಪ್ರಾದುರ್ಭಾವದಿಂದ ಮಾತ್ರವೆ ಯುರೋಪಿಂದು ರಕ್ಷಿಸಲ್ಪಟ್ಟಿದೆ. ಬೋಲ್ಶೆವಿಸ್ಟರು ಮತ್ತು ಮಾರ್ಕ್ಸ್‌ವಾದಿಗಳು ಪರಾಜಿತರಾಗಿದ್ದಾರ. ಸ್ಪೈನಿನಲ್ಲಿ ಅವರು ನೆಲಕ್ಕುರುಳಿಸಲ್ಪಟ್ಟಿರುವರು. ರಷ್ಯದ ಬೋಲ್ಶೆವಿಸ್ಮನ್ನು ನಾಶಮಾಡುವ ಪೂರ್ವದ ಯುದ್ಧವು, 140 ವರ್ಷಗಳಿಂದ ಎಂದೂ ಬಾರದ ತೀಕ್ಷ್ಣ ಚಳಿಗಾಲದಿಂದ ಮಾತ್ರ ನಿಲ್ಲಿಸಲ್ಪಟ್ಟಿತು. ಲಡೋಗ ಸರೋವರ ಮತ್ತು ಟಗನ್ರೋಗಿನ ವರೆಗಿನ ಜರ್ಮನ್ ಲೈನನ್ನು ಬಹಳ ಪ್ರಯಾಸಪಟ್ಟು ಕಾಪಾಡಿಕೊಳ್ಳಲಾಗಿದೆ. ಜರ್ಮನ್ ಸೈನಿಕರು ದೊಡ್ಡ ಅನಾಹುತಕ್ಕೊಳಗಾಗುವ ಅಪಾಯವು ಈಗ ನಿವಾರಿಸಲ್ಪಟ್ಟಿದೆ. ಆದುದರಿಂದಲೇ ತಾನು ಸೈನಿಕರೊಂದಿಗಿದ್ದು ಅವರ ಅದೃಷ್ಟದಲ್ಲಿ ಭಾಗಿಯಾಗಲು ಮುಂದಾದುದು. ಜರ್ಮನ್ ಸೈನಿಕರು ಅಸಾಧಾರಣ ಧೈರ್ಯ ಸ್ಥೈರ್ಯ, ಮಾನವಾತೀತ ಸಹನಾಶಕ್ತಿಯಿಂದ ತಮ್ಮ ಸ್ಥಾನವನ್ನು ರಕ್ಷಿಸಿಕೊಂಡಿರುವರು. ತೀವ್ರ ಚಳಿಗಾಲದಲ್ಲಿ ರೈಲು ಬಂಡಿ ಮತ್ತು ಟೇಂಕುಗಳು ಚಲಿಸದಾಗ ಸೈನಿಕರಿಗೆ ಸಾಮಗ್ರಿಗಳ ಸರಬರಾಯಿಯು ಅತಿ ದೊಡ್ಡ ಸಮಸ್ಯೆಯಾಗಿದ್ದಿತು. ಇಂತಹ ಸಂಧಿಕಾಲದಲ್ಲಿ ತಾನು ಒಚಲ ನಿರ್ಧಾರದಿಂದ ಕೈಹಾಕಿ ದೊಡ್ಡ ಅನಾಹುತದಿಂದ ಜರ್ಮನ್ ಸೈನಿಕರನ್ನು ಪಾರುಮಾಡಿದೆನು.

ಒರುವ ಚಳಿಗಾಲವನ್ನು ಜರ್ಮನಿಯು ಉತ್ತಮ ಸಿದ್ಧತೆಯಿಂದೆದುರಿಸುವುದು. ಆದರೆ ರಾಷ್ಟ್ರವು ಗಂಡಾಂತರಕ್ಕೊಳಗಾದಾಗ ತನಗೆ ತೋರಿದಂತೆ ನಡೆಯುವ ಸಂಪೂರ್ಣ ಅಧಿಕಾರವನ್ನು ಜರ್ಮನ್ ಪಾರ್ಲಿಮೆಂಟು ತನಗೀಯಬೇಕು. ಪ್ರತಿಯೊಬ್ಬನೂ ತನ್ನ ಕರ್ತವ್ಯ ಮಾಡುವಂತೆ ಒತ್ತಾಯಮಾಡುವ ಅಧಿಕಾರವನ್ನು ತನಗೆ ಕೊಡಬೇಕು. ತನ್ನ ಅಭಿಪ್ರಾಯದ ಮೇರೆಗೆ ಯಾರಾದರೂ ತನ್ನ ಕರ್ತವ್ಯ ಮಾಡುವುದಿಲ್ಲವೆಂದಾದರ, ಅತನು ಯಾವನೇ ಇರಲಿ, ಅವನನ್ನು ತಳ್ಳಿಹಾಕುವ ಅಧಿಕಾರವು ತನಗಿರಬೇಕು.

1933ನೇ ಇಸ್ವಿಯಿಂದ ತನಗೆ 3 ದಿನಗಳ ರಜೆಯೂ ಇದ್ದಿಲ್ಲ. ಆದುದರಿಂದ ಇನ್ನು ಕೆಲವು ತಿಂಗಳುಗಳವರೆಗೆ ಸೈನಿಕರಿಗೆ ರಜೆಸಿಗಲಿಕ್ಕಿಲ್ಲ. ಜರ್ಮನಿಯ ಹಿತವಿಘಾತುಕರಾಗಿ ನಡೆಯುವವರಿಗೆ ಉಗ್ರ ರೀತಿಯಲ್ಲಿ ದಂಡಿಸಲ್ಪಡುತ್ತಿದ್ದಾರೆ. ಅಂತಹ ಉದಾರ ಶಿಕ್ಷೆ ಕೊಡುವ ನ್ಯಾಯಾಧೀಶರನ್ನು ಅಧಿಕಾರದಿಂದ ತೆಗೆದು ಹಾಕಲಾಗುವುದು.

ಚಳಿಗಾಲದ ನಿಷ್ಕ್ರಿಯೆಯಿಂದ ಘೋರ ಒಂದು ಪ್ರಚಂಡ ಹೋರಾಟ ನಡಿಸಿ ವಿಜಯವನ್ನು ನಿಶ್ಚೈಸುವ ಸಮಯವೀಗ ಬಂದಿದೆ. ಜರ್ಮನಿಯು ಎಂತಹ ತೃಪ್ತಿಕರ ಸಿದ್ಧತೆ ಮಾಡಿರುವುದೆಂಬುದನ್ನು ಭವಿಷ್ಯವು ವ್ಯಕ್ತಗೊಳಿಸುವುದು. ರಷ್ಯವು ನಾಶವಾಗುವವರೆಗೆ ಪೂರ್ವದ ಯುದ್ಧವು ನಡಿಸಲ್ಪಡುವುದು. ಜರ್ಮನ್ ಯು ಬೋಟುಗಳ ಹಾವಳಿಯು ವರ್ಷ ವರ್ಷ ಅಧಿಕವಾಗುತ್ತಿರುವುದೆಂಬುದನ್ನು ಇಂಗ್ಲೆಂಡು ಕಂಡುಕೊಳ್ಳುವಂತಾಗುವುದು. ಈ ಯುದ್ಧದಲ್ಲಿ ಜರ್ಮನಿಯು ಚಿಕ್ಕ ಹಡಗಪಡೆಯಿಂದ ಕಳೆದ ಯುದ್ಧಕ್ಕಿಂತಲೂ ಹೆಚ್ಚಿನದನ್ನು ಸಾಧಿಸಿರುವುದು. ಈ ಯುದ್ಧದಲ್ಲಿ ಸತ್ಯವು ಜಯಹೊಂದುವುದು. ಸತ್ಯವು ನಮ್ಮ ಕಡೆಗಿರುವುದು. ತನ್ನ ಜೀವನ ಸರ್ವಸ್ವವೂ ಜರ್ಮನ್ ಜನತೆಯ ಅದೃಷ್ಟದೊಂದಿಗೆ ಏರಕವಾಗಿರುವುದು. ಜರ್ಮನ್ ಜನತೆಯ ಅದೃಷ್ಟಕಾರಕ ಈ ಹೋರಾಟದಲ್ಲಿ ತಾನು ಎಷ್ಟು ಕಾಲ ಬದುಕುವ ಅವಶ್ಯವಿದೆಯೆಂದು ಭಗವಂತನಿಚ್ಛೆ ಇದೆಯೋ ಅಷ್ಟು ಕಾಲ ತಾನು ಬಾಳಿ ಜರ್ಮನ್ ಜನಾಂಗವು ಆತನ ಕೃಪೆಗೊಳಗಾಗುವಂತಾಗಲೆಂಬುದೊಂದೇ ತನ್ನಿಚ್ಛೆ.

ಜರ್ಮನಿಯ ಮೇಲೆ ಪ್ರಚಂಡ ವಿಮಾನಧಾಳಿ

ಇದೇ ತಾ 28ರಲ್ಲು ಜರ್ಮನಿಯ ಮೇಲೆ ಅತ್ಯಂತ ಪ್ರಚಂಡ ವಿಮಾನ ಧಾಳಿಯು ನಡಿಸಲ್ಪಟ್ಟು ಅತಿ ಹೆಚ್ಚಿನ ಹಾವಳಿಯಾಗಿರುವುದು. ರೂಸ್ಟೋಕ್ ಪಟ್ಟಣದ ಮೇಲೆ ಐದನೇ ಸಲ ಪ್ರಬಲ ಧಾಳಿ ನಡಿಸಲ್ಪಟ್ಟು ಬಹಳ ಹಾವಳಿಯಾಗಿರುವುದು. ಕೊಲೋನು ಪಟ್ಟಣವೂ ಎಡೆಬಿಡದ ವಿಮಾನಧಾಳಿಗೊಳಗಾಗಿರುವುದು. ತಾ. 28ರಲ್ಲಿ ವಿಮಾನಧಾಳಿ ನಡಿಸ ಹೋದ 17 ಬ್ರಿಟಿಷ್ ವಿಮಾನಗಳು ಹಿಂದೆ ಬಂದಿರುವುದಿಲ್ಲ. ರೂಸ್ಟೋಕ್, ಕೊಲೋನ್ ಮೊದಲಾದ ಪಟ್ಟಣಗಳಿಗೆ ಬಹಳ ಹಾವಳಿಯಾಗಿರುವುದೆಂಬುದನ್ನು ಜರ್ಮನರೇ ಒಪ್ಪಿರುತ್ತಾರೆ.

ಲವು ಇತರ ಸಾರ್ವಜನಿಕ ಕೆಲಸಕ್ಕೂ ಧುಮುಕುತ್ತಿದ್ದರು. ಯಾವ ಕೆಲಸಕ್ಕಾದರೂ ಧೈರ್ಯದಿಂದ ಕೈಹಾಕಿ ಅದನ್ನು ಸಾಧಿಸುತ್ತಿದ್ದರು. ಇವರದು ಸರಳ ಜೀವನ, ನಿರ್ಭೀತ ವರ್ತನೆ, ಸ್ಪಷ್ಟ ಧೋರಣೆ, ನಿರ್ದಾಕ್ಷಿಣ್ಯ ಅಭಿಪ್ರಾಯ. ಇವರ ನಿಧನದಿಂದ ಉಪಾಧ್ಯಾಯ ವರ್ಗಕ್ಕೆ, ಜಿಲ್ಲೆಗೆ, ಕನ್ನಡಿಗರಿಗೆ ಅಪಾರ ನಷ್ಟವಿದೆ.

ರಾಜಾಜಿಯವರ ಬೋಂಬು

ಡಿಕ್ಟೇಟರತನ ತೋರಿಸುವ ಚಟವು ರಾಜಾಜಿಯವರಲ್ಲಿ ಪ್ರಬಲವಾಗಿರುತ್ತದೆ. ಕಳೆದ ವಾರ ನಡೆದ ಮದ್ರಾಸ್ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಸಭೆಯಲ್ಲವರು ತನ್ನ ಡಿಕ್ಟೇಟರತನವನ್ನೇ ತೋರಿಸಿ ಬಿಟ್ಟಿರುವರೆಂದು ಹೇಳಬಹುದು. ಮುಸ್ಲಿಂಲೀಗಿನೊಂದಿಗೆ ಹೇಗಾದರೂ ರಾಜಿಮಾಡಿಕೊಳ್ಳಬೇಕೆಂಬ ಮನೋವೃತ್ತಿಯು ಅವರಲ್ಲಿದ್ದಿತೆಂಬುದು ಕೆಲವು ತಿಂಗಳ ಮೊದಲು ಅವರಿತ್ತ ಭಾಷಣಗಳಿಂದ ಸ್ಪಷ್ಟವಾಗುವುದು. ಕಾಂಗ್ರೆಸನ್ನು ಹಿಂದುಗಳ ಸಂಸ್ಥೆ, ಮುಸ್ಲಿಂಲೀಗನ್ನು ಮುಸಲ್ಮಾನರ ಸಂಸ್ಥೆಯೆಂದವರು ಒಪ್ಪಿ ಜಿನ್ನರ ವಾದವನ್ನು ಅಂಗೀಕರಿಸಿದ್ದರು. ಜಿನ್ನರನ್ನು ಗಾಂಧಿಯವರ ಪಟ್ಟಕ್ಕೇರಿಸಿಬಿಟ್ಟಿದ್ದರು. ಆದರೆ ಅಷ್ಟುಮಾತ್ರದಿಂದ ಪಾಕಿಸ್ಥಾನವನ್ನೊಪ್ಪುವಷ್ಟು ಕೂಡಾ ಅವರು ಮುಂದುವರಿದು ಬಿಡುವರೆಂದು ಯಾರೂ ನೆನೆಸಲಿಲ್ಲ. ಅವರು ತನ್ನ ವೈಯುಕ್ತಿಕ ಅಭಿಪ್ರಾಯವನ್ನು ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಮೇಲೆ ಹೊರಿಸಿ ಅದನ್ನದು ಒಪ್ಪುವಂತೆ ಒತ್ತಾಯಪಡಿಸಲು ಕಾರಣವೇನೋ ತಿಳಿಯದು! ಕ್ರಿಪ್ಸರ ಸಂಧಿ ಪ್ರಸ್ತಾಪನೆ ನಡೆಯುವಾಗಲೆ ಶ್ರೀ ಭೂಲಭಾಯಿ ದೇಸಾಯಿ ಮತ್ತು ರಾಜಾಜಿಯವರು ಜಿನ್ನರೊಡನೆ ರಾಜಿ ಪ್ರಸ್ತಾಪ ಮಾಡುವ ಮನಸ್ಸುಳ್ಳವರಿದ್ದು ಪಾಕಿಸ್ಥಾನವನ್ನು ಕೂಡಾ ಅಂಗೀಕರಿಸಲು ಸಿದ್ಧರಿದ್ದರೆಂದು ಸುದ್ದಿಯುಂಟಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರುಗಳಾದ ಇವರು ಅದರ ಪ್ರಾಮುಖ್ಯವಾದ ನಿರ್ಣಯಕ್ಕೆ ವಿರುದ್ಧವಾಗಿ ನಡೆಯಬಹುದೇ? ಶ್ರೀ ಭೋಸರ ಮೇಲೆ ಬಿದ್ದ ಶಿಸ್ತಿನ ಗದೆಯ ಪೆಟ್ಟು ರಾಜಾಜಿಯವರ ಮೇಲೂ ಬೀಳುವುದೋ ನೋಡಬೇಕು. ಎಂತಹ ದೊಡ್ಡ ಕಾಂಗ್ರೆಸ್ ಮುಂದಾಳು ಏನೇ ವಿಷಯದಲ್ಲಾದರೂ ತಾನು ತನ್ನ ಕರ್ತವ್ಯ ಮಾಡದಿರಲಾರೆನೆಂದು ಕಾಂಗ್ರೆಸ್ ಪ್ರೆಸಿಡೆಂಟರು ವಿದಿತಗೊಳಿಸಿರುವರು. ಈ ಕರ್ತವ್ಯವು ಯಾವ ರೂಪ ತಾಳುವುದೆಂದು ಮಾತ್ರ ನೋಡಬೇಕು.

ಶ್ರೀ ಗಳಗನಾಥರವರ ನಿಧನ — ಸುಪ್ರಸಿದ್ಧ ಕನ್ನಡ ಕಾದಂಬರಿಕಾರರೂ, ಉತ್ತರ ಕರ್ನಾಟಕದ ಆಗಡಿಯ ಆನಂದ ವನದ ಅಧ್ಯಕ್ಷರೂ ಆದ ವೆಂಕಟೇಶ ತಿರಕೋ ಗಳಗನಾಥರು ತಾ. 22 4 42ರಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 73ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಉಪಾಧ್ಯಾಯರಾಗಿದ್ದು ನಿವೃತ್ತರಾದ ಮೇಲೂ ಬಹಳ [illegible] ದಿಂದ ಸಾಹಿತ್ಯ ಸೇವೆ ಮಾಡುತ್ತಿದ್ದರು. ಪ್ರಸಿದ್ಧ ಕಾದಂಬರಿಕಾರ ದಿವಂಗತ [illegible] [illegible]

ಜಿಲ್ಲಾ ಹರಿಜನ ಸೇವಕ ಸಂಘ-ದಿಂದ ಹರಿಜನ ವಿದ್ಯಾರ್ಥಿ ದ [illegible] ವಾಗಿ ತಾ 7 4 42ರಿಂದ 12-4 42ರ ವರೆಗೆ ಕೋಟೇಶ್ವರ, [illegible], ಹಾಲಾಡಿ, ಸಿದ್ದಾಪುರ, ವಂಡ [illegible], ಕೆರ್ಗಾಲ್, ಕೊಗ್ರೆ, [illegible], ಕಂದಾವರ, ಸಾಲಿಗ್ರಾಮ, [illegible], ಬಸ್ರೂರು, ಕೋಟ, [illegible] ರಿಯಾಪ ಅಲ್ತಾರ, [illegible], [illegible] ಕಟ್ಟೆ ಮತ್ತು ಬ್ರಹ್ಮಾವರ ನೊದಲಾದ ಕಡೆಗಳಲ್ಲಿ [illegible] ಸಂಗ್ರಹದ ಕೆಲಸವು ಹರಿಜನೋದ್ಧಾರ ಕಾರ್ಯ [illegible] ವಾಗಿ ಪ್ರಚಾರವೂ ನಡೆದಿತ್ತು. [illegible] [illegible] ಯುವೆಲ್ಲಾ ತೆ [illegible] ಪ್ರೋತ್ಸಾಹವಿತ್ತಿರುವರು. [illegible] [illegible] ರೂ.212 [illegible] ಸಂಗ್ರಹವಾಗಬಹುದು.

ಇದೇ ಸಂದರ್ಭದಲ್ಲಿ ನಾಹೇಬ್ರು ಕಟ್ಟೆಯಲ್ಲಿ ಒಂದು ನೂತನ ಯಕ್ಷಗಾನ ಸಮಾರಂಭವು ಜರಗಿತ್ತು. ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾಕೋವಿದರು ಭಾಗವಹಿಸಿದ್ದರು. ಶ್ರೀ ಎ ಬಿ ಶೆಟ್ಟಿ M L A ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ [illegible] ಶೆಟ್ಟಿ ಕಟ್ಟು ಅಭಿಮಾನ ಮಾಡಿದ್ದರು.

ಈ ಪುಣ್ಯ ಕಾರ್ಯದಲ್ಲಿ [illegible] ಒಗೆಯಿಂದ ಸಹಾಯವಿತ್ತ ಶ್ರೀ [illegible] ಶೆಟ್ಟಿಯವರಿಗೂ ಕೆಳ್ಳಿಪ್ಪಲು ಮನೆತನದವರಿಗೂ, ವ್ಯವಸ್ಥಾಪಕರುಗಳಾದ ಶ್ರೀ ರಾಮಣ್ಣ ಹೆಗ್ಡೆಯವರಿಗೂ ಶ್ರೀ [illegible] ಶೆಟ್ರಿಗೂ, ಯಕ್ಷಗಾನದಲ್ಲಿ ಭಾಗವಹಿಸಿದ ಸಾಹಸಿಯರಿಗೂ, ಊರ ಮಹಾ ಜನರಿಗೂ, ಜಿಲ್ಲಾ ಹರಿಜನ ಸೇವಕ ಸಂಘವು ತುಂಬಾ ಆಭಾರಿಯಾಗುತ್ತದೆ.

ಮಂಗಳೂರು. } ಎನ್ ಎಸ್. ಶೆಟ್ಟಿ,
24-4 '42 } ಹರಿಜನ ಸೇವಕ.

ತಾ. 27—4—1942ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ.

ಮುಂದಾಗಿ ಹೇಳಿಲ್ಲವೆನ್ನಬೇಡಿ ಇಂದೇ ಬಂದು ನೋಡಿ.

ಅಂದವಾದ ಚಿತ್ರ:

ದಿನ ದಿನಕ್ಕೂ ಟಿಕೇಟು ಸಿಗದೆ ಹಿಂದಿರುಗುತ್ತಿರುವರು

ಪ್ರಗತಿ ಪಿಕ್ಚರ್ಸಿನವರ

ವಸಂತಸೇನಾ

ಕನ್ನಡ

ಮುಂದಿನ ಚಿತ್ರಗಳು — **ರಂಗಿಲಾ ಮಜದೂರ್, ಶಾದಿ, ಸುಮಂಗಲ ಬ್ರಹ್ಮಚಾರಿ** ಇತ್ಯಾದಿ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ನಗರಸಭೆ—ಮಂಗಳೂರು ನಗರ ಸಭೆಯು ಕಳೆದ ತಾ 20ನೇ ಸಾಯಂಕಾಲ 5, 30ಕ್ಕೆ ಶ್ರೀ ಬಿ. ವಿ. ಬಾಳಿಗ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀರಂಗಕ್ಕೆ ವರ್ಗಾಯಿಸಲ್ಪಟ್ಟ ಕಮಿಶನರ್ ಶ್ರೀ. ಎಂ. ನಾರಾಯಣ ಶೆಣ್ಯೆಯವರು ಮಂಗಳೂರಿಗೆ ಸಲಿಸಿದ ಸೇವೆಯನ್ನು ಪ್ರಶಂಸಿಸಿ ಠರಾವಾಯಿತು. ಹೂ ಮಾರ್ಕೇಟನ್ನು ದುರಸ್ತಿ ಮಾಡಿಸುವ ಬಗ್ಗೆ ರೂ.3,975 ಮಂಜೂರಾಯಿತು. ಇತರ ಕೆಲವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನವಾದ ಮೇಲೆ ಸಭಾಂತ್ಯವಾಯಿತು.

ಎರಡು ಕೋಟಿ ದಿನಾಚರಣೆ—ಮದ್ರಾಸ್ ಗವರ್ನರರ ಯುದ್ಧ ನಿಧಿಗೆ ರೂ. ೨ಕೋಟಿ ಸೇರಿದ ಬಗ್ಗೆ ತಾ 20ರಂದು ೨ ಕೋಟಿ ದಿನಾಚರಣೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿಸಲ್ಪಟ್ಟಿತು.

ಹಿಂದೂ ಮಹಾಸಭೆಯ ಪ್ರಚಾರ—ಕಳೆದ ತಾ. ೨೩ನೇ ಸಾಯಂಕಾಲ ಮಂಗಳೂರ ಮೈದಾನದಲ್ಲಿ ಹಿಂದೂ ಮಹಾಸಭೆಯ ಸಭೆಯೊಂದು ಶ್ರೀ ಯು. ಗೋಪಾಲ ನಾಯಕರ ಅಧ್ಯಕ್ಷತೆಯಲ್ಲಿ ನಡೆದು ಹಿಂ. ಮ. ಸಭೆ, ಹಿಂದೂ ಸಂಘಟನೆ ಮೊದಲಾದ ವಿಚಾರದಲ್ಲಿ ತೀರ್ಥಹಳ್ಳಿಯ ಶ್ರೀ ಜ್ಞಾನೇಂದ್ರ ಪ್ರಭು ಮೊದಲಾದವರು ಭಾಷಣ ಮಾಡಿದರು.

ವಿಮಾನ ಧಾಳಿಯಿಂದ ರಕ್ಷಣೆ—60,000 ಜನಸಂಖ್ಯೆಯುಳ್ಳ ಮಂಗಳೂರು ನಗರವನ್ನು ಬೇರೆ ಬೇರೆ ಮಾರ್ಗಗಳಾಗಿ ವಿಭಾಗಿಸಿ ಅವುಗಳಿಗೆ ಎ. ಆರ್. ಪಿ. ವಾರ್ಡನ್ ಅವರುಗಳನ್ನು ನೇಮಿಸಿದ್ದಾರೆ.

ಪಾಣೆಮಂಗಳೂರಿನ ಪ್ರಥಮ ರಾಜಕೀಯ ಪರಿಷತ್ತು.

ಶ್ರೀ ದಿವಾಕರರ ಅಧ್ಯಕ್ಷ ಭಾಷಣ.

ಮದ್ರಾಸ್ ಕಾಂಗ್ರೆಸ್ ನ್ಯಾಯವಿಧಾಯಕರ ಠರಾವಿನ ಖಂಡನೆ.

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ಪಾಣೆಮಂಗಳೂರು ಸರ್ಕಲಿನ ಪ್ರಥಮ ರಾಜಕೀಯ ಪರಿಷತ್ತು ಸ್ಥಳೀಯ ಬಿನ ಜರಗಬೇಕಾಗಿದ್ದರೂ ವಿಳಂಬ ವಾಗಿ ಇದೇ ತಿಂಗಳ ೨೩ರಂದು ಜರಗಿತು. ಅಧ್ಯಕ್ಷರ ಮೆರವಣಿಗೆಯಾದ ಮೇಲೆ ಶ್ರೀ ಚನ್ನಪ್ಪ ಆಳ್ವ (ಕ್ಯಾಪ್ಟನ್ ಶಾಲೆ, ಸಿಂಗಾರ ಸಮಿತಿಯ ಕಾರ್ಯದರ್ಶಿಗಳು) ಯವರು ರಾಷ್ಟ್ರ ಧ್ವಜಾರೋಹಣ ಮಾಡಿ ಅದರ ಮಹತ್ವವನ್ನು ವಿವರಿಸಿ, ಅದರ ಗೌರವವನ್ನು ಉಳಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವೆಂದರು. ಶ್ರೀ ಎನ್. ಆರ್. ಬಿಲ್ಲಿಂಗ್ಟನ್ ರವರು ವಂದೇ ಮಾತರಂ ಗೀತೆಯನ್ನು ಸುಸ್ವರವಾಗಿ ಹಾಡಿದರು.

ಅನಂತರ ಶ್ರೀ ಕೆ. ಆರ್. ಕಾರಂತ್ ಎಂ. ಎಲ್. ಎ. ಅವರು ಪರಿಷತ್ತಿನ ಉದ್ಘಾಟನೆಯನ್ನು ಮಾಡುತ್ತಾ ಇಂದಿನ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪರಿಸ್ಥಿತಿಗಳನ್ನು ವಿವರಿಸಿದರು. ಮದ್ರಾಸಿನಲ್ಲಿ ನಡೆದ ಕಾಂಗ್ರೆಸ್ ನ್ಯಾಯವಿಧಾಯಕರ ಸಭೆಯಲ್ಲಿ ಭಾಗವಹಿಸಿದ್ದ ತಾನು ಅಲ್ಲಿ ನಡೆದ ಚರ್ಚೆಗಳನ್ನು ವಿವರಿಸಿ ಅಲ್ಲಿ ಅದ ನಿರ್ಣಯಗಳನ್ನು ಖಂಡಿಸಿದರು. ಮತ್ತು ಶ್ರೀ ರಾಜಗೋಪಾಲಾಚಾರ್ಯರ ಪ್ರಸ್ತಾಪವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಥಮ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಧಿಕ್ಕರಿಸಿ ಸಭಾಧ್ಯಕ್ಷರಾದರು ಈಗ ಮದ್ರಾಸಿನಲ್ಲಿ ಮಂಜೂರಾದ ಠರಾವು ಬಹಳ ಮುಖ್ಯವೆಂದೂ ಭಾರತದ ಭವಿಷ್ಯತ್ತು ಅದನ್ನು ಹೊಂದಿಕೊಂಡಿದೆಯೆಂದೂ ಹೇಳಿದರು.

ಸ್ವಾಗತ ಭಾಷಣ—ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ. ಮಾಧವ ಶಡಿಯಾರರು ಅಧ್ಯಕ್ಷರನ್ನೂ, ಪ್ರತಿನಿಧಿಗಳನ್ನೂ ಆದರದಿಂದ ಸ್ವಾಗತಿಸುತ್ತಾ ಈ ಕಷ್ಟಕಾಲದಲ್ಲಿ ಪರಿಷತ್ತನ್ನು ಜರಗಿಸಿದ ಕಾರಣವನ್ನು ಹೇಳಿದರು. ಭಾರತದ ಗುರಿಯು ಸಂಪೂರ್ಣ ಸ್ವಾತಂತ್ರ್ಯವೆಂದೂ ಆ ಧ್ಯೇಯದ ಕಡೆಗೆ ನಾವೆಲ್ಲ ಸಾಗುತ್ತಿದ್ದೇವೆಂದೂ ಹೇಳಿದರು. ಪ್ರಕೃತ ದೇಶದ ಮುಂದಿರುವ ಸಮಸ್ಯೆಗಳನ್ನು ವಿವರಿಸಿ ನಾವು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬುದನ್ನು ನಿರೂಪಿಸಿದರು. ಕೊನೆಯದಾಗಿ ಕರ್ನಾಟಕ ಪ್ರಾಂತರಚನೆಯಾಗುವ ಆವಶ್ಯತೆಯನ್ನೂ ಒತ್ತಿ ಹೇಳಿದರು.

ಅಧ್ಯಕ್ಷರ ಭಾಷಣ—ಅನಂತರ ಪರಿಷದಧ್ಯಕ್ಷರಾದ ಶ್ರೀ ರಂಗನಾಥ ರಾವ್ ಚಂದ್ರ ದಿವಾಕರರು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡಿದರು. ಅದರಲ್ಲಿ ಹಿಂದುಸ್ಥಾನದ ಈಗಿನ ಸ್ಥಿತಿಯನ್ನು ವಿವರಿಸಿ, ಸರ್. ಕ್ರಿಪ್ಸರು ಬಂದ ಉದ್ದೇಶ, ಅವರ ಕಾರ್ಯದಲ್ಲಿ ಅವರು ಅಯಶಸ್ವಿತೆಯನ್ನು ಹೊಂದಿದ ವಿಷಯ ಮೊದಲಾದ ಸಂಗತಿಗಳನ್ನು ಸೂಚಿಸಿದರು. ಪ್ರಕೃತದಲ್ಲಿ ದೇಶದ ರಕ್ಷಣೆಯ ಅಧಿಕಾರವನ್ನು ಹಿಂದೀಯರಿಗೆ ಕೊಡದ ವಿಷಯದಲ್ಲಿ ತಮ್ಮ ಅಸಮಾಧಾನವನ್ನು ಸೂಚಿಸಿದರು. ಮತ್ತು ಹಿಂದೂದೇಶವನ್ನು ಆಕ್ರಮಿಸಲು ಬರುವ ಶತ್ರುಗಳನ್ನು ಹಿಂದೀಯರು ಒಂದಾಗಿ ವಿರೋಧಿಸುವುದು ಎಷ್ಟರ ಮಟ್ಟಿನ ಅಗತ್ಯವಿದೆಯೆಂಬುದನ್ನು ವಿವರಿಸಿ, ಹಿಂದುಸ್ಥಾನದ ವಿಭಜನೆಗೆ ಪ್ರಯತ್ನಿಸುವವರ ವರ್ತನೆಯನ್ನು ಖಂಡಿಸಿದರು. ದೇಶೀಯ ಸಂಸ್ಥಾನಗಳ ಪ್ರಜೆಗಳ ಹಕ್ಕುಗಳ ವಿಷಯವಾಗಿಯೂ, ಕರ್ನಾಟಕಪ್ರಾಂತ್ಯ ರಚನೆಯ ಆವಶ್ಯತೆಯ ವಿಚಾರವಾಗಿಯೂ, ಹೇಳಿದರು. ಬೇರೆ ಬೇರೆ ಪ್ರಾಂತಗಳು ಆಗುವುದರಿಂದ ರಾಷ್ಟ್ರಕ್ಕೆ ಕೊರತೆಯಿಲ್ಲವೆಂದೂ ಇವುಗಳು ಒಂದು ದೇಹದ ಅಂಗಗಳಂತೆ ಇರತಕ್ಕವುಗಳೆಂದೂ ಹೇಳಿದರು. ಕೊನೆಯದಾಗಿ ಭಾರತವು ಹೇಗೆ ತನ್ನ ಧ್ಯೇಯ ಸಾಧನೆಗೆ ದುಡಿಯಬೇಕೆಂಬುದನ್ನು ವಿವರಿಸಿದರು. ಮತ್ತು ದೇಶದ ಈಗಿನ ಸ್ಥಿತಿಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಮುಂದರಿಸುವ ಆವಶ್ಯತೆಯನ್ನು ಒತ್ತಿ ಹೇಳಿದರು.

ಠರಾವುಗಳು—ಪರಿಷತ್ತು ಡಾ| ವಾಗೋಲ್, ಶ್ರೀ ಬಜಾಜ್ ಮತ್ತು ಶ್ರೀ ಶ್ರೀನಿವಾಸಯ್ಯ- ಅವರುಗಳ ನಿಧನಕ್ಕಾಗಿ ವ್ಯಸನ ಸೂಚಿಸಿತು.

ಮದ್ರಾಸ್ ಲೆಜಿಸ್ಲೇಟರ್ ಕಾಂಗ್ರೆಸ್ ಪಕ್ಷದವರು ಮಂಜೂರು ಮಾಡಿದ ಠರಾವನ್ನು ನಿಷೇಧಿಸಿ ಡಾ| ಒಡೆಯರ್‌ರವರು ತಂದ ಸೂಚನೆಯ ಮೇಲೆ ಸುದೀರ್ಘ ಚರ್ಚೆ ನಡೆಯಿತು. ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರು ರಾಜಗೋಪಾಲಾಚಾರ್ಯರನ್ನು ಸಮರ್ಥಿಸಿದರು. ಮತ ತೆಗೆಯಲಾಗಿ 27 ಮಂದಿ ಠರಾವಿನ ಪರವಾಗಿಯೂ 5 ಮಂದಿ ವಿರೋಧವಾಗಿಯೂ ಮತದಾನ ಮಾಡಿದರು. (2) ಕ್ರಿಪ್ಸರ ಸೂಚನೆಗಳು ತಿರಸ್ಕರಿಸಲ್ಪಟ್ಟ ಬಗ್ಗೆ ಸಂತೋಷ ಸೂಚನೆ; (3) ಈಗಿನ ಸ್ಥಿತಿಯಲ್ಲಿ ಆಕ್ರಮಣವನ್ನು ಎದುರಿಸಲು ಅಹಿಂಸೆಯೊಂದೇ ಆಯುಧ; ಮಹಾತ್ಮರಲ್ಲಿ ವಿಶ್ವಾಸ ಮತ್ತು ಅವರು ರಾಷ್ಟ್ರ ಸಭೆಯ ಮುಂದಾಳುತನವನ್ನು ವಹಿಸಬೇಕೆಂಬ ಠರಾವು ಸರ್ವಾನುಮತಿಯಿಂದ ಮಂಜೂರಾಯಿತು. ಇತರ ಠರಾವುಗಳು:- ರಾಜಕೀಯ ಕೈದಿಗಳ ಬಿಡುಗಡೆಗೆ ಸೂಚನೆ; ಕಮ್ಯೂನಿಸ್ಟರನ್ನು ಬಿಡುಗಡೆ ಮಾಡಬೇಕೆಂಬ ಸೂಚನೆ, ನೌಕರರ ಬಿಡುಗಡೆಯ ಬಗ್ಗೆ ಸೂಚನೆ, ರಕ್ಷಣಾರ್ಥವಾಗಿ ಬಂದ ಹಿಂದೀಯರಿಗೆ ಸಹಾಯ ನೀಡುವ ಆವಶ್ಯತೆ, ಸುಳ್ಳುವಾರ್ತೆಗಳನ್ನು ತಡೆಗಟ್ಟುವುದು- ಇವೇ ಮೊದಲಾದ ಠರಾವುಗಳು ಮಂಜೂರಾದುವು.

ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಪರಿಷತ್ತಿನಲ್ಲಿ ಆದ ನಿರ್ಣಯಗಳಂತೆ ನಡೆಸುಕೊಳ್ಳಲು ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಶ್ರೀ ಪಿ. ಬದಾಸ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹಿಂದೂಸ್ಥಾನೀ ಸ್ಪರ್ಧೆ:—ದ. ಭಾ. ಹಿಂದೀ ಪ್ರಚಾರ ಸಭೆಯವರು ನಡೆಸಿದ ಹಿಂದೂಸ್ಥಾನೀ ಸ್ಪರ್ಧೆಯಲ್ಲಿ ಈ ವರ್ಷ ಕನರಾ ಹೈಸ್ಕೂಲಿನ 111 ಫಾರ್ಮಿನಲ್ಲಿ ಕಲಿಯುತ್ತಿರುವ ಶ್ರೀ ಜಿ. ಮರ್ತಿ ಭಟ್ಟ ಮದ್ರಾಸ್ ಪ್ರಾಂತ್ಯದಲ್ಲಿಯೇ ಪ್ರಥಮ ಬಂದು ತೃತೀಯ ಬಹುಮಾನವನ್ನು ಪಡೆದಿರುವರು ಎಂದು ತಿಳಿದು ಬರುತ್ತದೆ. ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ಯಾರಿಗೂ ಕೊಡಲಾಗಲಿಲ್ಲ. ಇದೇ ಶಾಲೆಯಿಂದ ಎಚ್. ಉಪೇಂದ್ರ ಶೆಣೈ ಮತ್ತು ಅಬ್ದುಲ್ ರಶೀದ್ ಇವರಿಗೂ ಬಹುಮಾನಗಳು ಕೊಡಲ್ಪಟ್ಟಿವೆ.

ಉಡುಪಿ.

ತಾ. 23-4-42ರಲ್ಲಿ ಉಡುಪಿ ಪಟ್ಟಣದ ಜಿಲ್ಲಾ ಅಕ್ಕಿ ಸಾಹುಕಾರರು ಶ್ರೀ ವಕೀಲ್ ವಿಠಲ ಕಾಮತರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಕ್ಕಿ ದರವು ದಿನೇ ದಿನೇ ಏರುವ ಈ ಸಮಯದಲ್ಲಿ ಬಡವರ ಬಗ್ಗೆ ಚಿಲ್ಲರೆ ಮಾರಾಟ ದರವನ್ನು ಸೇರು 1ಕ್ಕೆ 0-2-6ಗೆ ನಿಶ್ಚಯದಂತೆ ಇದೇ ಬರುವ ಸಪ್ಟಂಬರ ಅಂತ್ಯದ ವರೆಗೆ ಎಲ್ಲರೂ ಒಂದೇ ದರದಿಂದ ಮಾರಾಟ ಮಾಡಬೇಕಾಗಿ ಠರಾಯಿಸಿರುವರಲ್ಲದೆ ಅದನ್ನು ವ್ಯವಸ್ಥೆಗೊಳಿಸುವ ಬಗ್ಗೆ ಹಾಗೂ ಇನ್ನು ಮುಂದೆ ಆಗಾಗ್ಗೆ ಸಭೆ ಸೇರಿ ಅಕ್ಕಿ ದರವನ್ನು ನಿಗದಿಗೊಳಿಸುವ ಬಗ್ಗೆ ಸಹ ಒಂದು ವರ್ಕಿಂಗ್ ಕಮಿಟಿಯೂ ಏರ್ಪಟ್ಟಿದೆ. ಸದರಿ ಕಮಿಟಿಗೆ ಶ್ರೀ ಕೊಡ M. ವಿಠಲ ಕಾಮತರು ಅಧ್ಯಕ್ಷರಾಗಿಯೂ ಕಾರ್ನಾಡ್ ಕೃಷ್ಣ ರಾವ್ ಮತ್ತು ಅಮ್ಮುಂಜೆ ನಾರಾಯಣ ನಾಯಕರು ಕಾರ್ಯದರ್ಶಿಗಳಾಗಿಯೂ ಕಲ್ಯಾಣಪುರ ಶ್ರೀನಿವಾಸ ಪೈ, ಕಟಪಾಡಿ ಮಾಧವ ಶ್ಯಾನುಭಾಗ, ಮತ್ತು ಗೋಪಾಲ ನಾಯಕರ ಮೆಂಬರರಾಗಿಯೂ ಆರಿಸಲ್ಪಟ್ಟಿದ್ದಾರೆ.

ಕಾರ್ಕಳ:—ಕಾರ್ಕಳ ತಾಲೂಕಿನ ಹಿಂದೀ ಪ್ರಚಾರಕರಿಗೆ ದ್ರವ್ಯ ಸಹಾಯದ ಮೂಲಕ ಪ್ರೋತ್ಸಾಹಿಸಿ ಹಿಂದೀ ಪ್ರಚಾರವನ್ನು ಸುವ್ಯವಸ್ಥೆಗೆ ತರುವ ಸಂಕಲ್ಪದಿಂದ ಕ್ಷೇತ್ರಗಳಾದ ವಕೀಲ ಡಿ.ವೆಂಕಟೇಶ ಭಟ್ಟರು ಅಧ್ಯಕ್ಷ, ಕೆ. ವೆಂಕಟೇಶ ಪ್ರಭುಗಳು ಉಪಾಧ್ಯಕ್ಷ ಮತ್ತು ಕಟಪಾಡಿ ಶ್ರೀನಿವಾಸ ಶೆಣೈಯವರು ಕಾರ್ಯದರ್ಶಿಯರಾಗಿ ಜನಾಬ್ ಎಚ್. ಎಸ್. ಹುಸ್ಸೇನ, ಶ್ರೀ ಎಂ. ಡಿ. ಅಧಿಕಾರಿ ಮೊದಲಾದ 11ಮಂದಿಯ ಕಾರ್ಯಕಾರಿ ಸಮಿತಿಯುಳ್ಳ "ಕಾರ್ಕಳ ತಾಲೂಕು ರಾಷ್ಟ್ರ ಭಾಷಾ ಪ್ರಚಾರ ಸಂಘ"ವು ಇಲ್ಲಿ ಸ್ಥಾಪಿತವಾಗಿದೆ. ಈ ಸಂಘದಿಂದ ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಯವರಿಂದ ಪಡೆಯಬಹುದು.

ಗವರ್ನರರ ಯುದ್ಧ ನಿಧಿಗೆ ಎರಡು ಕೋಟಿ ರೂಪಾಯಿಗಳು ಸಂಗ್ರಹವಾದ ಬಗ್ಗೆ ವಾಯ್ಸರಾಯರ ಅಭಿವಂದನೆ ಮತ್ತು ಗವರ್ನರರ ಕೃತಜ್ಞತೆಯನ್ನು ಸೂಚಿಸಲಿಕ್ಕೆ ಇಲ್ಲಿ ತಾ. 20ನೇ ದಿನ ಶ್ರೀ ವಕೀಲ ಕೆ. ಸದಾಶಿವ ಭಟ್ಟರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೂಡಿತು. ಬಳುವಾಯಿ. ಮೂಡಬಿದರೆ ಮೊದಲಾದ ಕಡೆಗಳಲ್ಲಿಯೂ ಸಭೆಗಳಾಗಿ ಜಿಲ್ಲಾ ಕಲೆಕ್ಟರರೂ ಕುಂದಾಪುರ ಸಬ್ ಕಲೆಕ್ಟರರೂ ಯುದ್ಧ ಪರಿಸ್ಥಿತಿ ಮತ್ತು ಜನರ ಕರ್ತವ್ಯಗಳ ಕುರಿತು ಭಾಷಣಗಳನ್ನಿತ್ತರು. ಬೆಳುವಾಯಿಯಲ್ಲಿ ಯುದ್ಧ ಸಹಾಯಕ್ಕೆ ಜೋಡಾಟ ನಡೆಸಿ 500 ರೂಗಳನ್ನು ಸಂಗ್ರಹವಾಗಿದೆ

ಕಳೆದ ಫೆಬ್ರುವರಿ ತಿಂಗಳ ಹಿಂದೀ ಪರೀಕ್ಷೆಗಳಲ್ಲಿ ಈ ಕೇಂದ್ರದಿಂದ ೪೦ರಲ್ಲಿ 37 ಮಂದಿ ಉತ್ತೀರ್ಣರಾಗಿದ್ದಾರೆ ತಾಳಿಕಲ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವ ತಿಂಗಳ ಸಭೆ ರಾಷ್ಟ್ರೀಯ ವಾರ ಮೊದಲಾದವು ಸಂದರ್ಭೋಚಿತ ಕಾರ್ಯಕ್ರಮ ದೊಂದಿಗೆ ನಡೆದುವು. ನೂಲುವದು ಮತ್ತು ಖದ್ದರಿನ ಪ್ರಚಾರ ಮಾಡುವ ಉದ್ದೇಶದಿಂದ ಶ್ರೀ ಕೆ. ವೆಂಕಟೇಶ ಪ್ರಭುಗಳು ಅಧ್ಯಕ್ಷ ಮತ್ತು ಶ್ರೀ ಕೆ. ಜಿ. ಕಾಮತರು ಕಾರ್ಯದರ್ಶಿಯರಾಗಿ ಇಲ್ಲೊಂದು ಚರಕ ಸಂಘವು ಸ್ಥಾಪಿತವಾಗಿ ಉತ್ತಮ ಕೆಲಸವನ್ನು ಆರಂಭಿಸಿದೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಒಂದು ಕೇಂದ್ರವು ಇಲ್ಲಿ ತೆರೆಯಲ್ಪಟ್ಟಿದ್ದು ಅದರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿರುವರು.

ಮೂಲ್ಕಿ:—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ದಿವಂಗತ ಕಾರ್ನಾಡು ಸಂಜೀವ ರಾಯರ" ಭಾವ ಚಿತ್ರ ಅನಾವರಣ ಸಮಾರಂಭವು ಇದೇ ಕಳೆದ ತಾ.19.4-1942ರಲ್ಲಿ ಶ್ರೀ H H, ನಾಲ ಕಾಮತರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಭೋಜ ರಾವ್, ಎಂ. ರಾಮ ರಾವ್ ಕಾಮತ್, ಡಾ| ಎಂ. ಆರ್. ಕಾಮತ್, ಕೆ. ಮಾಧವ ಪೈ, ಬಿ. ಸಂಜೀವ ಆಚಾರ್, ವೈ. ಕೆ. ಸುವರ್ಣ, ಬಿ, ಅಣ್ಣು ಪೂಜಾರಿ, ಮೊದಲಾದವರ ಸಂದರ್ಭೋಚಿತ ಭಾಷಣಗಳಿದ್ದವು. ಗಾಯನ, ವ್ಯಾಯಾಮ, ಪ್ರದರ್ಶನಗಳೂ ಇದ್ದವು.

ಶ್ರೀ. ಉಳ್ಳಾಲ ಮಂಗೇಶ ರಾಯರ ನಿಧನ.

ಗ| ಹಾ| ಎ. ಟ್ರೈನಿಂಗ್ ಶಾಲೆಯ ನಿವೃತ್ತ ಉಪಾಧ್ಯಾಯರೂ ಕನ್ನಡ ಸಾಹಿತ್ಯ ಮತ್ತು ಸಹಕಾರ ಕ್ಷೇತ್ರಗಳಲ್ಲಿ ತಂಬ ದುಡಿದವರೂ ಆದ ಶ್ರೀ ಉಳ್ಳಾಲ ಮಂಗೇಶ ರಾವ್, ಬಿ. ಎ. ಎಲ್. ಟಿ. ಯವರು ತಾ. 23-4-42ರಲ್ಲಿ ಮಧ್ಯಾಹ್ನ 11-30ಕ್ಕೆ ತಮ್ಮ 65ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ಆಕಸ್ಮಾತ್ತಾಗಿ ವ್ಯಾಕರಿಸಿರು ದಿವಂಗತರು 'ಸಹಕಾರಿ'ಯ ಸಂಪಾದಕರಾಗಿದ್ದರು. ಶ್ರೀ. ಪಂಜೆ ಮಂಗೇಶ ರಾಯರೊಡನೆ 'ಕುವಾಸಿ'ಯನ್ನೂ ಬರೆಸಿದ್ದರು. 'ವಿಧಿಯ ವೃಚಿತ್ರ' 'ಶಿಕ್ಷಣ' 'ಶತಿಕಾಂತನ ವಿಜಿಲ' 'ಸಮಾಜ ದ್ರೋಹಿ' ಮೊದಲಾದ ಪುಸ್ತಕಗಳನ್ನು ಬರೆದಿದ್ದಾರೆ. ಶಂಬ 'ಬಾಲ ಸಾಹಿತ್ಯ'ವನ್ನು ರಚಿಸಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಇರಲಿ

ಜ್ಯೋತಿಷ್ಯದಲ್ಲೇನಾದರೂ ಸತ್ಯಾಂಶವಿದೆಯೇ?

(೪ನೇ ಪುಟದಿಂದ ಮುಂದರಿದುದು)

ಭಾವದವರಿರುತ್ತಾರೆ. ಹೊರಗೆ ಎಸಳೆಂಬಂತೆ ಒಂದು ಭವಿಷ್ಯವನ್ನು ಛಾಯಾಮಾತ್ರವಾಗಿ ಹೋಲುವ ವಿದ್ಯಮಾನವೇನಾದರೂ ನಡೆದಲ್ಲಿ ಈ ಜನರದನ್ನು ಭವಿಷ್ಯದ ಸಾರ್ಥಕತೆಯಾಗಿ ತೆಗೆದುಕೊಂಡು ಬರುತ್ತಾರೆ. ಉದಾಹರಣೆಗಾಗಿ ಅಗ್ನಿಯಿಂದ ನಾಶವುಂಟಾಗುವುದೆಂಬ ಭವಿಷ್ಯ ಹೇಳಲ್ಪಟ್ಟಿರುವುದೆಂದು ತೆಗೆದುಕೊಳ್ಳುವ. ಸ್ವಲ್ಪವೇನಾದರೂ ಸುಟ್ಟರೆ ಅದು ಭವಿಷ್ಯದ ಸತ್ಯತೆಯೆಂದು ತೆಗೆದುಕೊಳ್ಳಲಾಗುತ್ತದೆ. ಹೆಚ್ಚಿನ ಧನಹಾನಿಯಾಗುವುದೆಂಬ ಭವಿಷ್ಯ ಹೇಳಲಾಗಿದ್ದರೆ, ಒಂದಲ್ಲೊಂದು ರೀತಿಯಲ್ಲಿ ಏನಾದರೂ ಸ್ವಲ್ಪ ಹಣ ನಷ್ಟವಾದರೆ ಅದು ನಿಜವೆಂದಾಯಿತು. ನಿಜವಾಗುವ ಕೆಲವೇ ಭವಿಷ್ಯಗಳು ಮನಸ್ಸಿನ ಮೇಲೆ ಮಹತ್ವದ ಪರಿಣಾಮವನ್ನುಂಟುಮಾಡಿ ಅದನ್ನು ಜನರು ದೀರ್ಘಕಾಲ ನೆನಪಿನಲ್ಲಿಟ್ಟುಕೊಂಡು, ಜ್ಯೋತಿಷದ ಸತ್ಯತೆಯನ್ನು ಸಿದ್ಧಗೊಳಿಸುವುದಕ್ಕಾಗಿ ಅದನ್ನು ಆಗಾಗ ಎತ್ತಿ ಹೇಳಲಾಗುತ್ತದೆ. ಆದರೆ ನಿಜವಾಗದ ಹಲವು ಭವಿಷ್ಯಗಳನ್ನು ಗಮನಿಸುವವರೇ ಕಡಿಮೆ. ಅಥವಾ ಅವುಗಳಿಗೆ ಬೇರೆಯೇ ಕಾರಣಗಳನ್ನೀಯಲಾಗುತ್ತದೆ.

ಪರಿಹಾರಗಳ ಠಕ್ಕುತನ.

ಜೋಯಿಸರ ಭವಿಷ್ಯಗಳು ಹಲವು ವೇಳೆ ಬಹಳ ಚಿಂತೆಗೆ ಕಾರಣವಾಗುತ್ತವೆ ಅವುಗಳಿಂದ ಜನರು ಆತುರ ಮತ್ತು ಸಂದೇಹಗಳಿಂದ ತಲ್ಲಣಗೊಂಡಿರುವಂತಾಗುತ್ತದೆ. ದಿನದ ದುಃಖವೇ ದಿನಕ್ಕೆ ಸಾಕಷ್ಟಿರುವಾಗ ಪ್ರಾಮಾಣಿಕನಾರೂ ನಿಶ್ಚಯವಾಗಿ ಹೇಳಲಿದೆಗೊಳ್ಳದ ಭವಿಷ್ಯದ ಚಿಂತೆಯನ್ನು ಕಟ್ಟಿಕೊಳ್ಳುವ ಗೊಡವೆಯಾದರೂ ಮಾನವನಿಗೇಕೆ? ಮಾತ್ರವಲ್ಲದೆ ಜ್ಯೋತಿಷವು ಜನತೆಯನ್ನು ತಪ್ಪುದಾರಿ ಹಿಡಿಸಿ, ಸಂಗತಿಗಳನ್ನು ತಪ್ಪು ದೃಷ್ಟಿಯಿಂದ ನೋಡುವಂತೆ ಮಾಡುವುದು. ಉದಾಹರಣೆಗಾಗಿ, ಒಬ್ಬನ ರೋಗದ ವಿಷಯದಲ್ಲಿ ಅದರ ನಿಜವಾದ ಕಾರಣವೇನೂ ಕಂಡುಹಿಡಿಯಲ್ಪಡುವುದಿಲ್ಲ. ಅದವನ ಗ್ರಹಚಾರವೆಂದು ಭಾವಿಸಲಾಗುತ್ತದೆ ಮತ್ತು ಅದಕ್ಕೇನಾದರೂ ಔಷಧೋಪಚಾರ ಮಾಡುವ ಬದಲಿಗೆ ಗ್ರಹಚಾರ ಪರಿಹಾರಕ್ಕಾಗಿ ಹೆಚ್ಚಿನ ಹಣವು ವ್ಯಯಿಸಲ್ಪಡುವುದು. ಒಬ್ಬನ ಗ್ರಹಗಳು ನೀಚಸ್ಥಾನದಲ್ಲಿದ್ದು ಪ್ರತಿಕೂಲವಿರುವುದರಿಂದಲೇ ಅವನು ದುಃಖಿ ಮತ್ತು ಸಂಕಷ್ಟಕ್ಕೀಡಾಗಿರುವನೆಂದು ನೆನಸಿದರೂ, ಹೋಮ ದಾನಾದಿಗಳಿಂದ ಗ್ರಹಗಳನ್ನು ಸಂತೋಷಪಡಿಸಿ ದುರದೃಷ್ಟವನ್ನು ದೂರ ಮಾಡಬಹುದೆಂದು ಭಾವಿಸುವುದೆಂತಹ ವಿಪರ್ಯಾಸ! ಆದರಿಂದ ಕೆಟ್ಟ ಭವಿಷ್ಯಗಳ ನಿಮಿತ್ತ ನಿರುತ್ಸಾಹಗೊಂಡಿರುವ ಮನಸ್ಸು ಸ್ವಲ್ಪ ಸಂತೋಷ ಮತ್ತು ಉತ್ಸಾಹಗೊಳ್ಳುವಂತಾಗಬಹುದು. ಪರಿಹಾರಗಳಿಂದ ಪುರೋಹಿತನಿಗೆ ಹೇಗೂ ಲಾಭವಾಗುವುದು. ಆದುದರಿಂದ ಅಂತಹ ನಂಬುಗೆಯನ್ನು ಪ್ರೋತ್ಸಾಹಿಸಿ ಜನರು ಹೆಚ್ಚೆಚ್ಚಾಗಿ ಪರಿಹಾರಗಳನ್ನು ಮಾಡುವಂತೆ ಮಾಡುವುದು ಅವನ ಕೆಲಸ.

ಜ್ಯೋತಿಷದಿಂದ ಜನತೆಗೇನೂ ಉಪಕಾರವಾಗಿಲ್ಲ.

ಜ್ಯೋತಿಷದಿಂದ ಜೀವನಕ್ಕೆ ನಿಜವಾದ ಸಹಾಯವೇನೂ ಆಗಿರುವುದಿಲ್ಲ. ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಜ್ಯೋತಿಷ್ಯೋಕ್ತಿಯನ್ನೇ ಕೇಳಿ ಅದರಂತೆಯೇ ಅತ್ಯಂತ ನಿಷ್ಠೆಯಿಂದ ನಡೆಯುವವರಿದ್ದಾರೆ. ಅಂಥವರ ಜೀವನವು, ತಮ್ಮ ಪ್ರಯತ್ನದ ಮೇಲೆಯೇ ವಿಶ್ವಾಸವಿಟ್ಟು ಮುಂದ ಸಂಭವಿಸತಕ್ಕ ಯಾವ ಅದೃಷ್ಟದ ಕುರಿತಾದರೂ ಯೋಚನೆಯನ್ನೇ ಮಾಡದವರ ಜೀವನಕ್ಕಿಂತ ಯಾವ ರೀತಿಯಲ್ಲಿಯೂ ಉತ್ತಮವಾಗಿರುವುದಿಲ್ಲ. ದುರ್ದೈವವು ಅಥವಾ ಮರಣವು ತಮಗೆ ಯಾವಾಗ ಬರುವುದೋ ಎಂದು ಯಾವಾಗಲೂ ಚಿಂತಿಸುತ್ತಿರುವ ಜನರಿಗೆ ಅದೆಂತಹ ಮನೋಶಾಂತಿ ದೊರೆತೀತು! ಜ್ಯೋತಿಷದ ಮೇಲೆ ದೃಢವಿಶ್ವಾಸವಿರುವವರಾದ ನಾವು ಅದೃಷ್ಟದ ಗೊಡವೆಯನ್ನೇ ಕಟ್ಟಿಕೊಳ್ಳದ ಪೌರುಷವಂತರಾದ ಅತಿ ಚಿಕ್ಕದಾದೊಂದು ಜನಾಂಗದ ಗುಲಾಮರಾಗಿ ನರಳುತ್ತಿದ್ದೇವೆ. ನಮ್ಮ ದುರ್ಗ್ರಹಚಾರ ದೋಷವೇನೂ ಅಲ್ಲ. ನಮ್ಮ ದೋಷದಿಂದಲೇ ನಾವು ಪರಕೀಯರ ದಾಸರಾಗಿದ್ದೇವೆ. ಯುರೋಪು ಖಂಡವು ಜ್ಯೋತಿಷವನ್ನು ಬಹಳ ಕಾಲದ ಹಿಂದೆಯೇ ತೊರೆದುಬಿಟ್ಟಿರುವುದು. ಶಾಸ್ತ್ರವೆನಿಸಲ್ಪಡುವ ಜ್ಯೋತಿಷದ ಅನರ್ಥವನ್ನು ಕಂಡುಕೊಂಡು ಅದರ ಮೇಲೆ ವಿಶ್ವಾಸವಿಡುವ ನಿರರ್ಥಕತೆಯನ್ನು ಹಿಂದುಗಳೇ ಎಂದು ಮನಗಾಣುವುದೋ ಆದೆಂದು ಪೌರುಷದಿಂದ ಕೃತಕೃತ್ಯರಾಗಿ ತಲೆಯೆತ್ತಿ ನಿಲ್ಲುವುದೋ?

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.



ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ಶತ್ರುವಿನೊಂದಿಗೆ ಕಾದಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ. ಯೋಧನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ಮತ್ತು ನಿನ್ನ ತಂದೆ ಮತ್ತು ತಾಯಿ, ಸಹೋದರರು ಮತ್ತು ಸಹೋದರಿಯರು ನಿಮ್ಮ ಆಣೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಜಯಗೊಳ್ಳಲು ಸಹಾಯಕರಾಗಬಹುದು.



ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

61 40 Kv.

Degrees: Books: Medicines

Free H. L. M. S. M. B. H. M. D. etc Free Homeo-Ayur-Unani-Naturo degree by post also—Practitioners also get soon Homeo Materiamedica Rs. 5. Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopath Institute & Society (Govt. Regd.)
P.O. Mahuva, (Kathiawar Dt. India.)

Sidha-Kalpa Kavach (Regd.)

No. 3 Rs 2, No. 2 Rs. 5. No. 1 Rs. 7. Special Rs. 10, Extra Special Rs 17. for ove marriage health, wealth. Ask any six questions with M. O. Re. 1/- and get correct answers by return post Life reas Rs. phle No V. P. P. Send M. O. Fred

P. O.ts. Prof. Dr N. H. Chhatbar. 2ogpam Mahuva (Kathiawar India.)

ಜಾಪಾನು ಏನು ಮಾಡುತ್ತಿರುವುದು?

ಕೆಲದಿನಗಳ ಹಿಂದಿನ ಸಂಸ್ಥಿತಿಯನ್ನು ನೋಡಿದರೆ, ಜಾಪಾನು ಬೇಗನೆ ಹಿಂದು ದೇಶದ ಮೇಲೆ ಪ್ರಬಲ ಧಾಳಿ ನಡಿಸಿ ಅದನ್ನು ಗೆಲ್ಲುವ ಯತ್ನಮಾಡುವುದೆಂಬಂತೆ ತೋರುತ್ತಿತ್ತು. ಸರಕಾರವೇ ಆ ನಿರೀಕ್ಷೆಯಿಂದ ದಿಗಿಲುಗೊಂಡಿತ್ತು. ಜನತೆಯಲ್ಲಿ ಆ ಕುರಿತು ನಾನಾ ಸುದ್ದಿಗಳು ಹಬ್ಬಿಬಿಟ್ಟಿದ್ದುವು. ಮದ್ರಾಸಿನ ಸಮೀಪದ ಹಡಗಪಡೆಯೊಂದರ ಚಲನವನ್ನು ಕಂಡೊಡನೆಯೇ ದಿಗಿಲುಗೊಂಡ ಸರಕಾರವು ಜನತೆಗೆ ಕೊಟ್ಟ ಎಚ್ಚರದಿಂದಾಗಿ ಲಕ್ಷಗಟ್ಲೆ ಜನರು ಅದನ್ನು ಬಿಟ್ಟು ಹೋಗುವಂತಾಯಿತು. ಸಿಲೋನಿನ ಮುಖ್ಯ ಪಟ್ಟಣವಾದ ಕೊಲಂಬೊ ಮತ್ತು ನೌಕಾನಿಲಯವಾದ ಟ್ರಿಂಕೊಮಲೀಗೆ ವಿಮಾನಧಾಳಿ ನಡೆದ ಮೇಲೆ, ಹಿಂದೀ ಸಾಗರದಲ್ಲಿ ಜಾಪಾನರ ದೊಡ್ಡ ನೌಕಾಪಡೆಯೊಂದು ಸಿಲೋನಿನ ಹತ್ತಿರದಿಂದ ಮುಂದೆ ಚಲಿಸುತ್ತಿದ್ದಿತೆಂದು ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರೇ ಪಾರ್ಲಿಮೆಂಟಿನಲ್ಲಿ ಹೇಳಿದ ಮೇಲಂತೂ ಜಾಪಾನರು, ಹಿಂದು ದೇಶದ ಪಶ್ಚಿಮದ ಸಮುದ್ರ ಸಂಬಂಧವನ್ನೇ ಕಡಿಯಲೆತ್ನಿಸುವುದು ನಿಶ್ಚಯವೆಂದು ನಂಬಲಾಗಿತ್ತು. ದೊಡ್ಡ ನೌಕಾಪಡೆಯಲ್ಲಿ ೩ ಯುದ್ಧ ಹಡಗ, ೫ ವಿಮಾನ ವಾಹಕ ಹಡಗ, ಹಲವು ಹಗುರ ಮತ್ತು ಭಾರವಾದ ಕ್ರೂಯಿಸರ್ ಹಡಗಗಳು ಮತ್ತು ಅನೇಕ ಡಿಸ್ಟ್ರೋಯರ್ ಹಡಗಗಳಿದ್ದುವೆಂಬ ವಿವರವನ್ನು ಕೂಡಾ ಚರ್ಚಿಲ್ಲರು ಹೇಳಿದ್ದರು. ಆದರೆ ಅನಂತರ ಈಗ ಎರಡು ಮೂರು ವಾರಗಳಿಂದ ಹಿಂದು ದೇಶದಲ್ಲಿ ಜಾಪಾನರ ಸುದ್ದಿಯೇ ಇಲ್ಲ. ಕೊಲಂಬೊ ಮತ್ತು ಟ್ರಿಂಕೊಮಲೀಗೆ ಒಮ್ಮೆ ಮಾತ್ರ ವಿಮಾನ ಧಾಳಿ ನಡಿಸಿ ಆ ಮೇಲೆ ಸುಮ್ಮಗಾದುದೇಕೆ? ವಿಶಾಖ ಪಟ್ಟಣ ಮತ್ತು ಕೋಕನಾಡಗಳ ಮೇಲೆ ಬೋಂಬೆಸೆದವರು ಮದ್ರಾಸನ್ನು ಹಾಗೆಯೇ ಬಿಡಲು ಕಾರಣವೇನು? ಮದ್ರಾಸಿನ ಮತ್ತು ಸಿಲೋನಿನ ಬಳಿ ತೋರಿದ ದೊಡ್ಡ ಹಡಗುಪಡೆಗಳೆಲ್ಲಿ ಮಾಯವಾದುವು? ಮಳೆಗಾಲವು ಸಮೀಪಿಸುತ್ತಿರುವುದರಿಂದ ಜಾಪಾನು ಹಿಂದು ದೇಶದ ಮೇಲಿನ ಧಾಳಿಯ ಕುರಿತು ವಿಳಂಬವಾದ ಅನುಕೂಲ ಸಂದರ್ಭವನ್ನು ಕಳಕೊಳ್ಳಲು ಕಾರಣವೇನು? ಎಂಬೀ ಪ್ರಶ್ನೆಗಳೆಲ್ಲಾ ಜನತೆಯನ್ನು ವಿಸ್ಮಯಗೊಳಿಸಿದ್ದುವು. ಈ ಕುರಿತು ಬ್ರಿಟಿಷ್ ಅಥವಾ ಹಿಂದೀ ಸರಕಾರಗಳೇನನ್ನೂ ಪ್ರಕಟಪಡಿಸಿದ್ದಿಲ್ಲ. ಹಿಂದೀ ಸಾಗರದಲ್ಲಿ ಜಾಪಾನ್ ಬ್ರಿಟನ್ನರ ನೌಕಾಯುದ್ಧದಂತಹ ದೊಡ್ಡ ಸಮರ ನಡೆಯುತ್ತಿರುವುದು. ಹಿಂದೀ ಸಾಗರದ ಅತಿ ಪ್ರಮುಖ್ಯ ಸಮುದ್ರ ಮಾರ್ಗಗಳಲ್ಲಿ ಜಾಪಾನು ಕಡಿದು ಮುಂದೊತ್ತದಂತೆ ಬ್ರಿಟನು ಮತ್ತು ಅಮೇರಿಕಗಳು ತಡೆಗಟ್ಟಿವೆ. ಆದುದರಿಂದ ದೊಡ್ಡ ಸಮುದ್ರ ಯುದ್ಧವೊಂದು ಅಲ್ಲಿ ಸಮುದ್ರದಲ್ಲಿ ನಡೆಯುತ್ತಿರುವುದೆಂದು ನಿಶ್ಚಯ ಸರಕಾರವು ನಿರೀಕ್ಷಿಸಿರುವುದು.

ಜಾಪಾನಿನ ಶಕ್ತಿ ಕುಂದಿರುವುದೇ?

ಜಾಪಾನು ಈಗ ಮೊದಲಿನಷ್ಟು ಭರದಿಂದ ಯುದ್ಧ ನಡಿಸುತ್ತಿರುವಂತೆ ತೋರುವುದಿಲ್ಲ. ೩ ತಿಂಗಳು ವಿರಾಂತು ನ್ಯೂಗಿನಿಯ ಕೆಲವು ಪ್ರದೇಶಗಳನ್ನದು ಆಕ್ರಮಿಸಿ. ಆಮೇಲೇನೂ ಮುಂದೊತ್ತಿರುವುದಿಲ್ಲ. ಬರ್ಮದಲ್ಲಿಯೂ ಅದು ಹೆಜ್ಜೆ ಹೆಜ್ಜೆಗೂ ಪ್ರಬಲ ವಿರೋಧವನ್ನು ಪಡೆದು ನಿಧಾನವಾಗಿ ಮುಂದುವರಿಯುತ್ತದೆ. ಚೀನೀ ಸೇನೆಯ ಬಲವನ್ನು ಮುರಿಯುವ ಬದಲಿಗೆ ಅದರಿಂದಲೇ ಅಪಜಯಗಳನ್ನು ಪಡೆಯ ಹತ್ತಿರುತ್ತದೆ. ಟೋಕಿಯೋ ಮತ್ತು ಯೋಕಹಾಮು ಮೊದಲಾದ ಜಾಪಾನ ಪಟ್ಟಣಗಳ ಮೇಲೆ ಅಮೇರಿಕಾನ ವಿಮಾನಗಳು ನಡಿಸಿದ ಧಾಳಿಯಿಂದ ಜಾಪಾನರು ಬಹಳ ತಳಮಳಗೊಂಡಿರುವಂತಿದೆ. ಜಾಪಾನರು ಜೀರ್ಣಿಸಿಕೊಳ್ಳಲಾರದಷ್ಟು ಒಮ್ಮೆ ನುಂಗಿಬಿಟ್ಟಿರುವಂತೆ ತೋರುತ್ತದೆ. ಪ್ರಬಲ ಅಮೇರಿಕಾನ ನೌಕಾಪಡೆಯು ತಮ್ಮನ್ನು ಹಿಂದಿನಿಂದ ಆವರಿಸಿ ತಮ್ಮ ಸಮುದ್ರ ಮಾರ್ಗವನ್ನು ಕಡಿದು ಸರ್ವನಾಶ ಮಾಡಿಬಿಡುವುದೇ ಎಂದವರು ತಳಮಳಗೊಂಡಿರುವಂತಿದೆ. ಆದುದರಿಂದಲೇ ಅವರು ತಮ್ಮ ನೌಕಾಪಡೆಗಳನ್ನೆಲ್ಲಾ ಹಿಂದಕ್ಕೊಯ್ಯುವರೆಂದು ಊಹಿಸಬಹುದಾಗಿದೆ. ದಿನೇ ದಿನೇ ಹೆಚ್ಚುತ್ತಿರುವ ಸಂಯುಕ್ತ ರಾಷ್ಟ್ರಗಳ ವಿಮಾನ ಪಡೆಗಳ ಧಾಳಿಗಳನ್ನು ಪ್ರತಿಭಟಿಸುವ ಶಕ್ತಿಯೂ ಜಾಪಾನರಿಗಿರುವಂತೆ ತೋರುವುದಿಲ್ಲ. ಅವರ ಧಾಳಿಕಾರಕ ಶಕ್ತಿಯು ಕುಂದುತ್ತಿರುವುದೆಂದು ಊಹಿಸುವಂತಾಗಿದೆ. ಗೆದ್ದ ರಾಜ್ಯಗಳನ್ನು ರಕ್ಷಿಸಿಕೊಳ್ಳುವ ಮತ್ತು ಆತ್ಮ ರಕ್ಷಣೆಯ ಕಡೆಗದು ಹೆಚ್ಚಿನ ಗಮನ ಕೊಡಬೇಕಾಗಿ ಬಂದಿದೆ. ಆದುದರಿಂದಲೇ ಅದು ಪ್ರಕೃತ ಹಿಂದುದೇಶದ ಮೇಲಿನ ಧಾಳಿಯ ಕಡೆಗೆ ಗಮನ ಕೊಡದಂತಾಗಿರುವುದೆಂದು ಹೇಳಬಹುದು. ಸಂಯುಕ್ತ ರಾಷ್ಟ್ರಗಳ, ವಿಶೇಷವಾಗಿ ಅಮೇರಿಕದ ಶೀಘ್ರ ಸಿದ್ಧತೆ ಮತ್ತು ಸಾಹಸವೇ ಅದಕ್ಕೆ ಕಾರಣ.

ಪ್ರಕೃತ ತಣ್ಣಗಿರುವ ಅಂತರ್ಯವೇನು?

ಹಿಂದುದೇಶದ ಮೇಲಿದು ಧಾಳಿ ನಡಿಸುವುದೇ?

ಜಾಪಾನು ಹಿಂದು ದೇಶದ ಮೇಲೆ ಧಾಳಿ ನಡಿಸುವದಾಗಿದ್ದರೆ ಇಷ್ಟರೊಳಗೇನೇ ಸಿಲೋನನ್ನು ಹಿಡಿದು ಮುಂದುವರಿಯಬೇಕಿತ್ತು. ಆದರೆ ಅದು ಈವರೆಗೂ ಸಿಲೋನನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಮಾತ್ರವಲ್ಲದೆ ಕೊಲಂಬೊದ ಮೇಲೆ ಒಮ್ಮೆ ಮಾತ್ರ ವಿಮಾನ ಧಾಳಿ ನಡಿಸಿ ಹೆಚ್ಚಿನ ನಷ್ಟ ಪಡೆದು ಬೆದರಿ ಹೋಗಿರುವಂತಿದೆ. ಇನ್ನು ಮುಂದೆ ಬೇಗನೆ ಮುಂಗಾರು ಮಳೆಯ ಗಾಳಿಯೆದ್ದು ಮಳೆ ಕೂಡಾ ಆರಂಭವಾಗಲಿರುವುದರಿಂದ ಅನಂತರ ಮೂರು ನಾಲ್ಕು ತಿಂಗಳು ಹಿಂದು ದೇಶದ ಹೆಚ್ಚಿನ ಕರಾವಳಿಯ ಮೇಲೆ ಯಾವ ಧಾಳಿಯೂ ಸಾಧ್ಯವಿಲ್ಲ. ಆದುದರಿಂದ ಹಿಂದು ದೇಶದ ಮೇಲೆ ಪ್ರಕೃತ ಧಾಳಿ ನಡಿಸುವ ಆಲೋಚನೆಯು ಜಾಪಾನರಿಗಿರುವಂತೆ ತೋರುವುದಿಲ್ಲ. ಜನರು ಆ ಸಂಬಂಧವಾದ ನಾನಾರೀತಿಯ ಸುದ್ದಿಗಳಿಂದ ದಿಗಿಲುಗೊಳ್ಳಲು ಬಲವಾದ ಕಾರಣಗಳಿರುವಂತೆ ತೋರುವುದಿಲ್ಲ. ಮಳೆಗಾಲವು ಹಿಂದು ದೇಶದ ಹೆಚ್ಚಿನ ಭಾಗಕ್ಕೆ ಕೆಲವು ತಿಂಗಳುಗಳ ಶಾಂತಿ ಮತ್ತು ರಕ್ಷಣೆಯನ್ನೀಯುವುದು. ಹಿಂದು ದೇಶವನ್ನು ಮುಖ್ಯ ನೆಲೆಯಾಗಿ ಮಾಡಿಕೊಂಡು ಜಾಪಾನರ ಮೇಲೆ ಯುದ್ಧ ನಡಿಸುವ ಏರ್ಪಾಡನ್ನು ಬ್ರಿಟನು ಮತ್ತು ಅಮೇರಿಕಗಳೀಗ ಭರದಿಂದ ನಡಿಸುತ್ತಿವೆ. ಮಳೆಗಾಲದ ದೈವದತ್ತ ಅವಕಾಶದ ಸದುಪಯೋಗ ಪಡೆದು ಹಿಂದು ದೇಶದ ರಕ್ಷಣೆಯ ವ್ಯವಸ್ಥೆಯು ನಡೆಸಲ್ಪಡುವುದೆಂದು ನಿರೀಕ್ಷಿಸಬಹುದೇ?

ದಶಂಬರದೊಳಗೆ ಹಿಟ್ಲರರ ಪತನ!

ಜಾಪಾನ ಯುದ್ಧ ಸ್ವಲ್ಪ ದೀರ್ಘಕಾಲ ನಡೆಯಬಹುದು.

(ಒಂದು ರಾಜಕೀಯ ಭವಿಷ್ಯ.)

ಜಾಪಾನರು ಇನ್ನು ಸ್ವಲ್ಪ ಸಮಯದಲ್ಲಿಯೇ ಹಿಂದುದೇಶವನ್ನು ಗೆದ್ದು ಮುಂದೊತ್ತುವರು. ಜರ್ಮನರು ರಶ್ಯವನ್ನು ಗೆದ್ದು ಮಧ್ಯಪೂರ್ವಕ್ಕೆ ಮುಂದುವರಿದು ಜಾಪಾನಿನೊಂದಿಗೆ ಸೇರಿದಾಗ ಮಿತ್ರ ರಾಷ್ಟ್ರಗಳ ಸೋಲು ನಿಶ್ಚಯವೆಂಬ ನಾನಾ ಊಹಾಪೋಹಗಳು ಇಂದೀಗ ಹೆಚ್ಚಿನ ಜನರಲ್ಲಿ ಹಬ್ಬಿ ನೆಲೆನಿಂತಿವೆ. ಜರ್ಮನಿಯ ವಿಜಯವು ನಿಶ್ಚಯವೆಂದು ಅನೇಕರ ಮನೋನಿರ್ಧಾರವಿರುತ್ತದೆ. ಹಿಟ್ಲರರನ್ನು ಇನ್ನು ಯಾರಿಂದಲೂ ಗೆಲ್ಲಲು ಸಾಧ್ಯವಿಲ್ಲೆಂಬ ಅಭಿಪ್ರಾಯವೇ ನೆಲೆನಿಂತಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಿತ್ರ ರಾಷ್ಟ್ರಗಳು ಜಯಹೊಂದುವವು. ದಶಂಬರದೊಳಗೆ ಹಿಟ್ಲರರ ಪತನವಾಗುವುದು. ಆಮೇಲೆ ಕೆಲವು ತಿಂಗಳುಗಳೊಳಗೆ ಜಾಪಾನು ಪರಾಜಯ ಹೊಂದಿ ಶರಣು ಹೊಡೆಯುವುದೆಂದು ಭವಿಷ್ಯ ಹೇಳುವುದು ಹುಚ್ಚುತನವೇ ಸರಿ.

ಸೂಕ್ಷ್ಮ ಬುದ್ಧಿಯಿಂದ ಗಾಳಿ ಬರುವ ದಿಕ್ಕು ನೋಡಿಕೊಂಡು ಆ ಮೇರೆಗೆ ಅನಿಶ್ಚಿತ ರೀತಿಯಲ್ಲಿ ಭವಿಷ್ಯ ಹೇಳುವುದು ಸುಲಭ. ಆದರೆ ಪರಿಸ್ಥಿತಿಯು ಪ್ರತಿಕೂಲವಿರುವಾಗ, ಮುಂದೆ ಅದು ಸಂಪೂರ್ಣ ಬದಲಾಗಿ ಸಮ-ಸಾಮಾನ್ಯ ನಿರೀಕ್ಷೆಗಿಂತ ಬೇರೆಯೇ ಆದೊಂದು ಪರಿಣಾಮವುಂಟಾಗುವುದೆಂದು ನಿಶ್ಚಯವಾಗಿ ಹೇಳುವುದು ಬಹಳ ದಿಟ್ಟತನದ ಕೆಲಸ. ಅಂತಹ ದಿಟ್ಟತನವು ಈ ರಾಜಕೀಯ ಭವಿಷ್ಯದಲ್ಲಿದೆ.

ಇನ್ನು ಕೆಲವೇ ವಾರಗಳೊಳಗೆ ಇಂಗ್ಲೆಂಡು ಮತ್ತು ಅಮೇರಿಕಗಳೊಂದಾಗಿ ಫ್ರಾನ್ಸಿನ ಕರಾವಳಿಯ ಮೇಲೆ ಪ್ರಚಂಡ ನೆಲಧಾಳಿ ನಡಿಸುವವು. ಆಗ ಹಿಟ್ಲರರು ರಶ್ಯದ ಮೇಲಿನ ತನ್ನ ಪ್ರಚಂಡ ಧಾಳಿಯನ್ನು ಆರಂಭಿಸಿದ್ದು ಕೂಡಲೆ ಅತಿ ಹೆಚ್ಚಿನ ಸೇನೆಯನ್ನು ಪಶ್ಚಿಮ ರಣರಂಗಕ್ಕೆ ಕಳುಹಿಸಬೇಕಾಗಿ ಬರುವುದು. ಪಶ್ಚಿಮದಲ್ಲಿ ಭೀಷಣ ಹೋರಾಟ ನಡೆಯುವುದು. ಫ್ರಾನ್ಸಿನಲ್ಲಿ ಪ್ರಬಲ ಬಂಡಾಯಗಳೇಳುವವು. ಎರಡು ರಣರಂಗಗಳಲ್ಲಿಯೂ ಪ್ರಚಂಡ ಹೋರಾಟ ನಡಿಸಬೇಕಾಗಿ ಬಂದು ನಾಝಿ ಸೇನೆಯು ಧೃತಿಗೆಡುವುದು. ಈ ಸಂದರ್ಭದಲ್ಲಿ ಕೆಂಪು ಸೇನೆಯು ಒಂದೇ ಸಮನೆ ಜರ್ಮನರ ಮೇಲೇರಿ ಹೋಗಿ ಅವರನ್ನು ಪರಾಜಯಗೊಳಿಸಿ ಹಿಂದಕ್ಕಟ್ಟುವುದು. ಪಶ್ಚಿಮದಿಂದ ಬ್ರಿಟಿಷ್ ಮತ್ತು ಅಮೇರಿಕಾನ ಸೇನೆಗಳೂ ದೊಡ್ಡ ವಿಜಯಗಳನ್ನು ಪಡೆದು ಮುಂದೊತ್ತುವವು. ಆಗ ನಾಝಿ ಶಾಹಿಯು ಮುಗ್ಗುರಿಸಿಬಿದ್ದು ಹಿಟ್ಲರರ ಪತನವಾಗುವುದು. ಬರುವ ದಶಂಬರದೊಳಗೆ ನಾಝಿಗಳ ವಿನಾಶ ನಿಶ್ಚಯ. ಹಿಟ್ಲರರು ಆತ್ಮಹತ್ಯೆಮಾಡಿಕೊಳ್ಳಬಹುದು. ಇಟೆಲಿಯಲ್ಲಿ ಮುಸಲೋನಿಯವರಿಗೆ ವಿರುದ್ಧವಾಗಿ ಬಂಡಾಯವೆದ್ದು ಫೆಸಿಸ್ಟ ಆಳ್ವಿಕೆಯು ಪತನಹೊಂದುವುದು.

ಆದರೆ ಜಾಪಾನನ್ನು ಮಾತ್ರ ಕೂಡಲೆ ಗೆಲ್ಲಲು ಸಾಧ್ಯವಾಗಲಾರದು. ಮತ್ತೂ ಕೆಲಸಮಯದ ವರೆಗೆ ಪೂರ್ವದಲ್ಲಿ ಪ್ರಬಲ ಹೋರಾಟಗಳು ನಡೆಯುವವು. ಕಟ್ಟಕಡೆಗೆ ಜಾಪಾನು ಪರಾಜಿತವಾಗಿ ಶರಣಾಗತನಾಗುವುದು 1943ನೇ ವರ್ಷಾಂತ್ಯದೊಳಗೆ ಲೋಕದ ಎಲ್ಲಾ ಭಾಗಗಳಲ್ಲಿಯೂ ಯುದ್ಧವು ಕೊನೆಗೊಂಡು ನವನಿರ್ಮಾಣದ ಕೆಲಸವು ಆರಂಭವಾಗುವುದು. ಅದರಲ್ಲಿ ರಶ್ಯ ಮತ್ತು ಯುನೈಟೆಡ್ ಸ್ಟೇಟ್ಸುಗಳು ಅಗ್ರಭಾಗ ವಹಿಸುವವು.

FIXED DEPOSITS

are now accepted at all our offices, at attractive rates of interest. For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು. ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

DIAMONDS! DIAMONDS;

K. R. K. SHET.

Opposite, Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected)) ಎವರ್‌ಸ್ಟ್ರ ಕಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರಮೇಪಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—೦—೦ ಪೋಸ್ಟ ಚಾರ್ಜು ೮ ಆಣೆ

ಮಾಲಕರು:— **ಹಾಲಪ್ಪ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ–ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ್, ಬಳ್ಳಾರಿ— ಎಚ್, ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, **ಗೋಕಾಕ:**— ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಸ್ವದೇಶಿ ಔಷಧ ಭಂಡಾರ ಕುಂಜಾಲು,

—ಇವರ—

ಖಾತ್ರಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ರಕ್ತವರ್ಧಕ)	0	12	0
ಆಮಲಕೀ ತೈಲ (ಸುಖನಿದ್ರೆಗೆ) ಸಣ್ಣದು.	0	6	0
,, ,, ,, ದೊಡ್ಡದು.	0	11	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	4	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಸಿಯೂಕಾಂಜನ (ಸಕಲ ನೋವುಗಳಿಗೆ)	0	4	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) 25ಕ್ಕೆ	0	7	0
,, ,, ,, ,, 6ಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

Swadeshi Oushadhi Bhandar

KUNJAL P. O. S. I.

ಉಡುಪಿಯ ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— **ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ.

ಶಿಕ್ತ ಮೂಲಧನ	... ...	ರೂ.	1,82,100-0-0
ಕ್ಷೇಮ ನಿಧಿಗಳು	... ...	ರೂ	17,18,98-2-11

ಶಾಖೆಗಳು.— **ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಚಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.**

ಮಾರಾಟಕ್ಕೆ ಯುಕ್ತವಾದ ದವಸಗಳ, ಚಿನ್ನಾಭರಣಗಳ, ಸಮಾಧಾನಕರವಾದ ಇತರ ಭದ್ರತೆಗಳ ಮೇಲೂ ಪ್ರಾಮಿಸರಿ ನೋಟುಗಳ, ಬೆಲೆ ಹುಂಡಿಗಳ ಮೇಲೂ ಚಳ್ಳವ ಮೊತ್ತ ಸಾಲಗಳು ವ ಓವರ್ ಡ್ರಾಫ್ಟುಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ಕೊಡಲ್ಪಡುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ,

UDIPI, 16th April

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು.)

ಪ್ರಕೃತ ನಿಮಗನುಕೂಲಸಿರುವುದರಿಂದ ತಾ. 2. 3. ಈ ದಿನಗಳ ಮಟ್ಟಿಗೆ ವಿಜಯ, ಧನಲಾಭಗಳಿವೆ.

ತುಲಾ—ಕಷ್ಟದ ದಿನಗಳು ಕಳೆಯುತ್ತಾ ಬಂದುವು. ಆರ್ಥಿಕ ತಗಾದೆ, ಪ್ರತಿಸ್ಪರ್ಧಿಗಳ ಉಪಟಳ. ಗೃಹ ತಾಪತ್ರಯ ಇತ್ಯಾದಿ ಹಲವಾರು ಅನಿಷ್ಟಗಳಿಂದ ಮನೋರೋಗಕ್ಕೆ ಗುರಿಯಾದ ನಿಮಗೆ ನಿದ್ರಾಹಾರಾದಿಗಳು ಸಮಯಕ್ಕೆ ಸರಿಯಾಗಿ ಲಭಿಸದೆ ಅನಾರೋಗ್ಯಕ್ಕೆ ಗುರಿಯಾಗುವಿರಿ. ವ್ಯಾಪಾರ ವ್ಯವಹಾರಾದ್ಯುದ್ಯಮಗಳಲ್ಲಿ ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ಫಲವು ವಿಪರೀತದಲ್ಲಿ ಪರ್ಯವಸಾನ ಹೊಂದುವದು. ಆದರೂ ತಾ. 30. 1. 4. 5 ಈ ದಿನಗಳಲ್ಲಿ ಭೋಗ್ಯ ವಸ್ತುಗಳೂ ಶ್ರಮಕ್ಕೆ ತಕ್ಕ ಫಲವೂ ಲಭಿಸುವ ಚಿಹ್ನೆಗಳಿವೆ.

ವೃಶ್ಚಿಕ—ಇಷ್ಟಾನಿಷ್ಟ ಗ್ರಹರ ಪೈಕಿ ನಷ್ಟ ಗ್ರಹರ ಬಲವೇ ಅಧಿಕವಿರುವುದರಿಂದ ನಿಮಗೀವಾರದಲ್ಲಿ ಕೊಂಚ ಉತ್ತಮ ಫಲವೇ ಅಧಿಕವಾಗಲಿದೆ. ಪ್ರಬಲರಾದ ಶತ್ರುವರ್ಗದವರ ಪೀಡೆಯು ಅನವರತವೂ ಇರುವದಾದರೂ ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಹೂಡಿ ಆತ್ಮತೃಪ್ತರಾಗುವಿರಿ. ಬಂಧು ಮಿತ್ರರ ಬೆಂಬಲವು ಚೆನ್ನಾಗಿರುವುದು. ದೇಹಾಲಸ್ಯದಿಂದ ಮುಕ್ತರಾಗುವಿರಿ. ತಾ. 30. 1. ಮತ್ತು 4. 5 ಈ ದಿನಗಳಲ್ಲಿ ಕೊಂಚ ದೈವವು ವಿಮುಖವಿರುವುದರಿಂದ ಧನಮಾನಗಳಿಗೆ ಹಾನಿಯುಂಟಾದೀತು.

ಧನು—ಲಾಭಪನಾದ ಶುಕ್ರನು ಸುಖ ಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವುದರಿಂದ ನಿಮ್ಮ ಆದಾಯಕ್ಕಾಗಲಿ ದೇಹಸುಖಕ್ಕಾಗಲಿ ಯಾವರೀತಿಯ ಅಡ್ಡಿ ಆತಂಕಗಳೂ ಬರಲಾರವು. ಧನದ ಸುಖವನ್ನು ಪೂರ್ಣ ಪಡೆವಿರಿ. ವನಿತಾ ಸುಖವು ಉತ್ತಮವಿರುವುದು. ಆರೋಗ್ಯಕ್ಕೆ ಹಾನಿಯಿಲ್ಲ. ಆದರೆ ಪತ್ನೀ ಸಂಬಂಧವಾಗಿ ಕಷ್ಟ ನಷ್ಟವನ್ನನುಭವಿಸಬೇಕಾಗಿ ಬರುವದು. ಕೋರ್ಟು ಕಚೇರಿಗಳ ಕಾರ್ಯದಲ್ಲೂ ಯಶಸ್ಸಿಗದು. ತಾ. 2. 3. 6. ಧನವ್ಯಯ, ಕಾರ್ಯ ವಿಘ್ನಕಾರಿಗಳಿವೆ.

ಮಕರ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಹ್ರಾಸವಾಗುತ್ತಾ ಬಂದಿರುತ್ತದೆ. ಅನಾಮಯವಾಗಿದ್ದ ಸಂಸಾರದಲ್ಲಿ ರೋಗವು ತಲೆದೋರುವುದು. ತಂದೆ ಮಕ್ಕಳಲ್ಲೂ ಸತಿಪತಿಗಳಲ್ಲೂ ಕಲಹ ಬೆಳೆಯಲಿದೆ. ಅತ್ಯಾವಶ್ಯಕಗಳೆಂದೆನಿಸಿದ ವಸ್ತುಗಳು ಸಕಾಲಕ್ಕೆ ದೊರೆಯದೆ ಪಶ್ಚಾತ್ತಾಪಕ್ಕೆ ಗುರಿಯಾಗುವಿರಿ. ಆದರೂ ಸುವಿಕ್ರಮಿಗಳಾದ ನೀವು ಸ್ವೀಯ ಕಾರ್ಯಕ್ಕೆ ಸ್ವರ ಹೆರವರಿಗೆ ಮಣಿಯಲಾರಿರಿ. ಆಯವ್ಯಯಗಳು ಸಮ ತೂಕದಲ್ಲಿ ನಿಲ್ಲಲಿವೆ. ತಾ. 4. 5. ಈ ಎರಡು ದಿನಗಳಲ್ಲಿ ಅತಿವ್ಯಯ ಅನಾರೋಗ್ಯ ಕ್ಲೇಶಗಳು ಸಂಭವಿಸುವವು.

ಕುಂಭ—ಧನ ಧಾನ್ಯ ಮೊದಲಾದ ಸಾಧನ ಸಂಪತ್ತಿಗಳು ಬೇಕಷ್ಟಿದ್ದರೂ ನಿಮ್ಮ ಮನಸ್ಸಿಗೆ ಮಾತ್ರ ಸ್ವಲ್ಪವೂ ಸುಖವಿರಲಾರದು. ಆತ್ಮೀಯರೆಂದಿದ್ದವರೂ ಕೂಡ ನಿಮ್ಮ ಮೇಲೆ ಎರಡೆಂಟ ಬಗೆಯುವರು. ಇಂದ್ರಿಯ ಪರವಶರಾದ ನೀವು ಬಹು ವಿಧದ ಕಷ್ಟ ನಷ್ಟಗಳಿಗೆ ಗುರಿಯಾಗಬಹುದು. ಪತ್ನೀ ಪುತ್ರರ ವಿರಹವುಂಟಾಗಲಿದೆ. ದೇಹಾರೋಗ್ಯ, ಸ್ಥಾನಮಾನಗಳಿಗೇನೂ ಕೊರತೆ ಬಾರದು. ತಾ. 2ರಿಂದ ೫ರವರೆಗಿನ ದಿನಗಳಲ್ಲಿ ಮಿತ್ರ ಸಮಾಗಮ, ಇಷ್ಟಕಾರ್ಯ ಸಿದ್ಧಿಯಿಂದಾಗಿ ಸುಖಲಾಭಗಳಿವೆ.

ಮೀನ:—ನೀವು ವಿಲಾಸಿಗಳಾಗಿದ್ದರೂ ಶ್ರಮಸಹಿಷ್ಣುಗಳಾಗುವಿರಿ. ಅತಏವ ನಿಮ್ಮ ಸುಖ ಸಾಧನಗಳನ್ನು ಸ್ವಯಂ ಸಂಪಾದಿಸುವಿರಿ. ಪರರಲ್ಲಿ ನಿಮಗೆ ಎಳ್ಳಷ್ಟೂ ವಿಶ್ವಾಸವಿರದು. ಕುಜನರ ಮೈತ್ರಿಯಿಂದ ನಿರಪರಾಧಿಗಳೂ ಕೂಡಾ ಸಾಪರಾಧಿಗಳಾಗಿ ಎಣಿಸಲ್ಪಡುವರು. ಅವಯವಗಳಲ್ಲಿನ ನೋವು, ಉರಿಜ್ವರ, ಉದರರೋಗ ಇತ್ಯಾದಿ ಕಾಹಿಲೆಗಳಿಗೆ ಗುರಿಯಾಗಲಿರುವಿರಿ. ನೌಕರ ಜನರು ಮೇಲಧಿಕಾರಿಗಳ ಆಗ್ರಹಕ್ಕೆ ಗುರಿಯಾಗುವ ಸಂಭವವಿರುವುದರಿಂದ ವಾರಾದಿಯ ೪ ದಿನಗಳಲ್ಲಿ ಸ್ವಲ್ಪ ಜಾಗ್ರತರಾಗಿರಿ.

SELF ENGLISH KANNADA TUTOR.



ಸ್ವಯಂ ಇಂಗ್ಲೀಷ ಬೋಧಿನಿ.

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಬಟ್ಟರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

(ದ್ವಿತೀಯ ಮುದ್ರಣವು)

THE MODERN BOOK Co.,

No 26, Avadhanam Papier 2nd Lane (N. Y.) Choolai, MADRAS

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager. — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯು ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು, ಬಗೆ ಬಗೆಯ ಒಪ್ಪವುಳ್ಳ ಚಿಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಖಾದ್ಯಾದಿ ಮತ್ತು ಸಿಲ್ಕ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,

ಆಸ್ಪತ್ರೆ ಬಳಿ, ಉಡುಪಿ.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್, ಮ್ಯಾನೇಜರ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನವನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	**ಅಮಾತ್ಯನಂದಿನಿ**	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ಸನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕೆಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ, ಆನಂದವನ, ಹಾವೇರಿ

ಉಡುಪಿ ಏಜಂಟರು- **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ರೂಕ ಹೆಚ್ಚುವುದು. ಇದು ಮಧುಕಾರಗಿದೆ ಆಶೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪೋ, ಉಡುಪಿ.**

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೨೧ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದಕ.**

EDITED BY K. K SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI,

Regd. No. M. 3618

Estd. 1921 ಸ್ಥಾಪಿತ.

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ. ಚಂದಾ ರೂ. 3-0-0
ಬಿಡಿಪ್ರತಿಗೆ 0-1-0
ಜಾಹೀರಾತಿಗೆ
ಉತ್ತಮ ಸಾಧನ.
ಅಂತರಂಗ, ಉಡುಪಿ.

ANTARANGA
The only Leading Kannada Weekly of wit & Humour.
Udipi - S. India

ಸಂಪುಟ ೨೧
Vol. 21

ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

7-5-1942

ಸಂಚಿಕೆ ೩೫
No. 35

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವಿದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನು ಉಂಟುಮಾಡುವದು ಬಾಟ್ಲಿ 1ರ ದರ ರೂ. 2-8 0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಕ್ವಶಾಯವು. ಇದು ಪ್ರಸವದ ಅಶಕ್ತತೆಯನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸಿ ಕೊಡುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ್ಯಾಂಡರ್ಸ್ಟ್ ರೋಡ್, ಕರೀಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ, (3) ಮಿಲ್ಲರ್ ಪೆಟರ್ಸನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಲಿನ್ಸ್‌ಡೌನ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ (7) ದಾ| ಶ್ರೀನಿವಾಸ. ಪೈ, ಪುತ್ತೂರು. (8) ಕಾಂತಾವರ ವಾಸ್ತೇವ ಕಮ್ತಿ, ಬೆಳ್ತಂಗಡಿ, (9) ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪೋ, ಕೋಳದ ಪೇಟೆ, ಉಡುಪಿ. (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಸರಗೋಡು ಶ್ರೀ ರಾಮ ಸ್ಟೇಷನರಿ ಹೌಸ್, ಶ್ರೀ ರಾಮ ಪೇಟೆ (13) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ (14) ಬಿ. ಯಸ್. ನರಸಿಂಗರಾವ್, ಮರ್ಚೆಂಟ್, ಚಿಕ್ಕ ಮಂಗಳೂರು

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ** ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ಮಗುವನ್ನು ಸಂತೋಷವಾಗಿಟ್ಟರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ (T) ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ.

ತಯಾರಿಸುವವರು:

ಗೌರ್ನಮೆಂಟ್ ಇಂಡಸ್ಟ್ರಿಯಲ್ ಎಂಡ್ ಟೆಸ್ಟಿಂಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ, ಬೆಂಗಳೂರು ಸಿಟಿ

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941.

Assets exceed	...	....	Rs.	1,10,00,000
Life Fund exceeds	...	....	,,	92,00,000
Business in force	....	....	,,	1,28,00,000
Claims paid over	....	...	,,	56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. **ಪ್ಯಾಸ್**, ಬ್ರಾಂಚ್ ಸಕ್ರಿಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ...

ಅಮೃತಾಂಜನ

ತಲೆವೇದನೆ, ಶಿರೋವೇದನೆ. ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೩ ೨ ೦	**ಅನಾಥನಂದಿನಿ**	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯು**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕೆಟಲಾಗಿಗೆ ಬರೆಯಿರಿ:—

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾರಗಿದೆ ಆರೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ;

ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪೋ, ಉಡುಪಿ.**

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್

ಸ್ಥಾಪನೆ ಕ್ರೌನ್ [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೋಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸವೊರೆಯ ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ. : : : : ಮಂಗಳೂರು:

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಡಿನ್ನಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ **ರೂಪಾಯಿಗಳೇ** ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ **ಬರೆಯಿರಿ.**

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದಕ.**

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಒಳ್ಳೇ ತರದ ಸೀರೆಗಳು ಎಲ್ಲಾ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮ್ಮ ನೇಯಿಗೆಯಲ್ಲಿ ಮಾರುತ್ತೇವೆ. ಶುದ್ಧ ಖಾದಿ ಮತ್ತು ಶಾಲ್ ಬಟ್ಟೆಗಳೂ ಮಾರಲ್ಪಡುತ್ತವೆ

ಪಿ. ಎ. ಪೈ. ಬ್ರದರ್ಸ್:

ಆಸ್ಪತ್ರೆ ಬಳಿ, ಉಡುಪಿ.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ.

ಹೋಟ್ಲುದರಗತಿಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,
ಮ್ಯಾನೇಜರ್.

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618 Estd. 1921 ಸ್ಥಾಪಿತ.

ಅಂತರಂಗ
ಹೊಸ ನಮೂನೆಯ ವಿನೋದವಾರಪತ್ರಿಕೆ
ವಾ. ಚಂದಾ ರೂ.3-0-0
ಬಿಡಿಪ್ರತಿಗೆ 0-1-0
ಜಾಹೀರಾತಿಗೆ ಉತ್ತಮ ಸಾಧನ.
ಅಂತರಂಗ, ಉಡುಪಿ.

ANTARANGA
The only Leading Kannada Weekly of wit & Humour.
Udipi - S. India

ಸಂಪುಟ ೨೧ Vol. 21

ಸಂಸ್ಥಾಪಕರು:—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

7-5-1942

ಸಂಚಿಕೆ ೩೫ No. 35

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪುಷ್ಕಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಮುಂಬಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಹ. ಪ. ಶಿ, ಮಾಟುಂಗಾ. (3) ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. (5) ಮಂಗಳೂರು ಸಪ್ಲೈರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ. (7) ದಾ| ಶ್ರೀನಿವಾಸ, ಪೈ, ಪುತ್ತೂರು. (8) ಶಾಂತಾ ವಾಸ್ತೇವ ಕಮ್ತಿ, ಬೆಳ್ತಂಗಡಿ. (9) ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪ್ಪೋ, ಕೋಳದ ಪೇಟೆ, ಉಡುಪಿ (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಸರಗೋಡು ಶ್ರೀ ರಾಮಾ ಸ್ಟೇಷನರಿ ಹೌಸ್, ಶ್ರೀ ರಾಮ ಪೇಟೆ. (13) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ (14) ಬಿ. ಯಸ್. ನರಸಿಂಗರಾವ್. ಮರ್ಚೆಂಟ್, ಚಿಕ್ಕಮಂಗಳೂರು

ಮಗುವನ್ನು ಸಂತೋಷವಾಗಿಟ್ಟಿರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ TL ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ

ತಯಾರಿಸುವವರು:

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ,

ಮಲ್ಲೇಶ್ವರಂ, ಬೆಂಗಳೂರು ಸಿಟಿ

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟಿ ಬಿದ್ದಿದ್ದರ, ಉಷ್ಣದಿಂದ ಚೇರು ಇಳಿದಿದ್ದರೆ, ಉಡಾಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಸುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31-12-1941.

Assets exceed	....	...	Rs. 1,10,00,000
Life Fund exceeds	....	....	„ 92,00,000
Business in force	....	...	„ 1,28,00,000
Claims paid over	....	....	„ 56,00,000

For further particulars and agency terms, please apply to

Branch Manager,

The Asian Assurance Co., Ltd., Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : ದ. ಭಾರತ.

The Canara Mutual Assurance Company, Limited.

UDIPI : : : : : S. INDIA.

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ, —ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ ಬುದ್ಧಿಬಲ, ಸ್ಮರಣಶಕ್ತಿ, ಕೆಲಸದ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

೨೪–ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

ವಾರ ಭವಿಷ್ಯ

ತಾ. ೭-೫-೪೨ರಿಂದ ೧೪-೫-೪೨ರ ವರೆಗೆ.

ಮೇಷ—ನಿಮ್ಮ ನಿಮ್ಮ ಖರ್ಚಿಗೆ ತಕ್ಕಷ್ಟು ಧನವಸನಾದಿಗಳು ನಿಮಗೆ ಲಭಿಸುವವು. **ಈ ಸಲುವಾಗಿ** ನೀವಾರನ್ನೂ ಆಶ್ರಯಿಸಬೇಕಾಗಿಲ್ಲವು. ಈ ಮುಂಬಿನ ಸೌಕರ್ಯಗಳು ನಿಮಗೀವಾರದಲ್ಲಿ ದೊರೆಯಲಾರವು. ಎಣಿಕೆಯಂತೆ ಕೈಗೊಂಡ ಎಲ್ಲಾ ಕಾರ್ಯಗಳೂ ಕೈಗೂಡಲೊಲ್ಲವು. ಆದರೆ ಸ್ಥಾನಮಾನಗಳಿಗೇನೂ ಕೊರತೆಯಿಲ್ಲವು. ಅನಾರೋಗ್ಯ ನಿಮಿತ್ತ ಅಶಕ್ತಿಯು ಹೆಚ್ಚುವ ಸಂಭವವಿರುವುದರಿಂದ ಆಹಾರ ಭಾಗದಲ್ಲಿ ಜಾಗರೂಕರಾಗಿದ್ದಷ್ಟೂ ಒಳ್ಳಿತು. ತಾ 11. 12 ಈ 2 ದಿನಗಳನ್ನು ಬಿಟ್ಟರೆ ಮಿಕ್ಕುಳಿದ ಎಲ್ಲಾ ದಿನಗಳೂ ನಿಮ್ಮ ಭಾಗಕ್ಕೆ ಶ್ರೇಯೋದಾಯಿಗಳಾಗಿವೆ.

ವೃಷಭ—ದುರ್ವಿಧಿಯ ಬಾಯಿಯಿಂದ ಮುಕ್ತರಾದಿರಿ. ಸುರಗುರುಗಳ ಕೃಪಾಛತ್ರದಡಿಯಲ್ಲಿ ನೀವೀಗ ಬಹುತೇಕ ನೆಮ್ಮದಿಯಿಂದ ಮುಂದೆ ಸಾಗುವಿರಿ. ಹಣದ ಅಡಚಣಿಯಿಂದ ಪಾರಾದ ನಿಮಗೆ ಸಾಂಸಾರಿಕ ತಾಪತ್ರಯಗಳಾವವೂ ಸದ್ಯ ಬಾಧಿಸುವಂತಿಲ್ಲ. ವಿಷಜಂತುಗಳ ಮತ್ತು ಅಗ್ನಿಯ ಭಯವಿರುವುದರಿಂದ ಈ ಭಾಗದಲ್ಲಿ ಸ್ವಲ್ಪ ಜಾಗರೂಕರಾಗುವುದೊಳ್ಳಿತು. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ವ್ಯರ್ಥ ಧನವ್ಯಯವಲ್ಲದೆ ಇಷ್ಟಾರ್ಥವು ಸಿದ್ಧಿಸಲಾರದು. ಮಿತಹಾರಿಗಳಿಗೂ ಅನಾರೋಗ್ಯದ ಭಯವಿದೆ. ತಾ. 8ರಿಂದ 12ರ ವರೆಗಿನ ದಿನಗಳಲ್ಲಿ ಕೈಗೊಂಡ ಕಾರ್ಯಗಳಲ್ಲಿ ವಿಜಯ, ಸುಖ, ಲಾಭಗಳಿವೆ.

ಮಿಥುನ—"ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ' ಶೌರ್ಯ ಸಾಹಸಗಳಾಗಲಿ ಪಾಂಡಿತ್ಯವಾಗಲಿ ಎಷ್ಟಿದ್ದರೇನು ಭಾಗ್ಯಹೀನನಾದ ನರನಿಗೆ? ಪ್ರಕೃತ ದೈವವು ನಿಮಗೆ ಹೆಚ್ಚಿನಂಶ ಪ್ರತಿಕೂಲವಿರುವುದರಿಂದ ನಿಮ್ಮ ಪ್ರಯತ್ನ ಪರಾಕ್ರಮಗಳು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವವು. ರಾಜಸ್ಥಾನದಲ್ಲಿ ನಿಮಗೆ ಸ್ವಲ್ಪ ಮಟ್ಟಿಗೆ ಸ್ಥಾನಮಾನಗಳು ದೊರೆತರೂ ಸಮಾಜದಲ್ಲಿ ಎಳ್ಳಷ್ಟೂ ಗೌರವಾದರಗಳು ದೊರೆಯಲೊಲ್ಲವು. ಜನತೆಯಲ್ಲಿ ಕಲಹ, ಆಕಸ್ಮಿಕ ಖರ್ಚು, ಅನಾರೋಗ್ಯ ಇತ್ಯಾದಿ ಆಪದನಿಷ್ಟಗಳು ಮೇಲಿಂದ ಮೇಲೆ ಬರುವುದರಿಂದ ವಾರಾದಿಯ 4 ದಿನಗಳಲ್ಲಿ ಬಹಳ ಎಚ್ಚರಿಕೆಯಿಂದಿರಿ.

ಕರ್ಕಾಟಕ—ಈ ವಾರದಲ್ಲಿ ನಿಮಗೆ ವಿನಾಕಾರಣ ಗುರುಹಿರಿಯರೊಡನೆ ಮನಸ್ತಾಪವುಂಟಾಗುವದು. ಪ್ರವಾಸಿಗರಿಗೆ ಕಷ್ಟನಷ್ಟಗಳು ಅಧಿಕವಾಗುವವು. ವೈದ್ಯ ಜನರೂ ವ್ಯಾಪಾರೀ ವರ್ಗದವರೂ ಸ್ವೀಯ ಉದ್ಯಮಗಳಲ್ಲಿ ಒಳ್ಳೇ ಶ್ರೇಯಸ್ಸನ್ನು ಪಡೆವರು. ಸ್ತ್ರೀಯರ ಮುಖದಿಂದ ಧನ ಲಭಿಸುವ ಯೋಗವಿದೆ. ನಿಮ್ಮ ಪ್ರಯತ್ನವು ಎಳ್ಳಷ್ಟೂ ವಿಫಲವಾಗಲಾರದು. ಖರ್ಚಿಗಿಂತ ದ್ವಿಗುಣವಾಗಿ ಉತ್ಪತ್ತಿಯಿರುವುದರಿಂದ ನಿಶ್ಚಿಂತೆಯಿಂದ ದಿನ ಕಳೆವಿರಿ. ತಾ. 7 13. 14 ಈ 3 ದಿನಗಳಲ್ಲಿ ನಿಮ್ಮ ಮನೋರಥಗಳು ಸುಲಭದಿಂದ ಕೈಗೂಡಲಿವೆ.

ಸಿಂಹ—ನಿಮ್ಮ ಆರ್ಥಿಕ ಸಂಪತ್ತು ಈವಾರದಲ್ಲಿ ಅತ್ಯುತ್ತಮ ಸ್ಥಿತಿಯನ್ನೈದುವುದಾದರೂ ಯುಕ್ತಾಯುಕ್ತ ವಿಚಾರಾಭಾವದಿಂದಲೂ ಕೋರ್ಟು ವಗೈರೆಗಳ ಮುಖಾಂತರದಿಂದಲೂ ವ್ಯರ್ಥ ಖರ್ಚು ಮಾಡುವಿರಿ. ಮನೋನಿಗ್ರಹ ಶಕ್ತಿಯು ಸಾಕಷ್ಟಿಲ್ಲದಿರುವುದರಿಂದ ಜನಾಪವಾದಕ್ಕೆ ಗುರಿಯಾಗುವ ಕಾರ್ಯದಲ್ಲಿ ಪ್ರವರ್ತಿಸುವಿರಿ. ಆರೋಗ್ಯವು ಉತ್ತಮ ಸ್ಥಿತಿಗೆ ಬರಲಿದೆ. ಸ್ವೀಯ ಶಕ್ತಿಯಿಂದ ಸಮಾಜದಲ್ಲಿ ಗಣನೀಯಸ್ಥಾನವನ್ನು ಗಳಿಸುವಿರಿ. ವಾರಾದಿಯ 4 ದಿನಗಳು ಇದ್ದುದರಲ್ಲಿ ಶ್ರೇಯೋದಾಯಿಗಳಾಗಿವೆ.

ಕನ್ಯಾ—"ದೈವೇ ದುರ್ಬಲತಾಂ ಗತೇ ತೃಣಮಪಿ ಪ್ರಾಯೇಣ ವಜ್ರಾಯತೇ" ದುರ್ದೈವಿಯಾದ ನರನಿಗೆ ತೃಣವೂ ಕೂಡ ವಜ್ರದಂತೆ ಕಠಿಣವಾಗಿ ಪರಿಣಮಿಸುವದು. ಸದ್ಯ ನಿಮಗೆ ಸ್ವಲ್ಪವೂ ದೈವಬಲವಿಲ್ಲದಿರುವುದರಿಂದ ಯಾವ ಕಾರ್ಯದಲ್ಲೂ ಇಷ್ಟದಂತೆ ಫಲ ಲಭಿಸದು. ಮಾತ್ರವಲ್ಲ ಸ್ತ್ರೀಪುರುಷರಾದಿ

(೧೧ನೇ ಪುಟ ನೋಡಿರಿ).

BHUVANENDRA PRODUCTS Ltd.,

Head Office and Factory: Katapadi, S. Kanara

Depots: 1 Mahrath Galli, Hubli
2. 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಟ್ಟಿ ರಥಬೀದಿ.**
(3) **ಡಾಕ್ಟರ್ ಪಿ. ಜಿ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಶೈ** L. I. M. **ಡಾಕ್ಟರ್ ವೆಂಕಟ ರಾವ್, ಕೊರಕ್ಕಲ್**

ಸಮಾಚಾರ ಸಂಗ್ರಹ

ಇಟೆಲಿಯಾನರ ಬಲಿ.

ನಾಝಿಗಳು ಇಟೆಲಿಯಾನರನ್ನು ಮೊದಲಾಗಿ ರಷ್ಯದ ರಣರಂಗಕ್ಕೆ ಕಳುಹಿಸಿ ಕೊಡುತ್ತಿರುವರೆಂದು ತಿಳಿದುಬರುತ್ತದೆ. 180,000 ಸೈನಿಕರಿರುವ 12 ಇಟೆಲಿಯಾನ ಡಿವಿಜನುಗಳು ಇಷ್ಟರಲ್ಲೇ ಪೂರ್ವ ರಣರಂಗಕ್ಕೆ ಕಳುಹಿಸಲ್ಪಟ್ಟಿವೆ. ಹಿಟ್ಲರರ ವಸಂತದ ಧಾಳಿಯಲ್ಲಿ ಇವರನ್ನು ಮುಂದಾಗಿ ಬಲಿಕೊಡಲಾಗುವುದೆಂದು ನಿರೀಕ್ಷಿಸಲಾಗಿದೆ.

ಫಿನ್ಲೆಂಡಿನ ಮೇಲೆ ನಾಝಿಗಳ ಅಧಿಕಾರ

ಫಿನ್ಲೆಂಡಿನ ಮೇಲೆ ಕೂಡಾ ನಾಝಿಗಳೀಗ ಸಂಪೂರ್ಣವಾಗಿ ತಮ್ಮ ಅಧಿಕಾರ ಸ್ಥಾಪಿಸಿರುತ್ತಾರೆ. ಫಿನ್ಲೆಂಡಿಗೆ ಯುದ್ಧ ಸಾಕು ಸಾಕೆನಿಸಿದರೂ ಅದನ್ನು ನಿಲ್ಲಿಸುವ ಸ್ವಾತಂತ್ರ್ಯ ಅವರಿಗಿರುವುದಿಲ್ಲ. ಹಲವು ಫಿನ್ನಿಶ್ ಪಟ್ಟಣಗಳು ಜರ್ಮನ್ ಪೋಲೀಸರ ಅಧಿಕಾರಕ್ಕೊಳಗಾಗಿವೆ. ಫಿನ್ಲೆಂಡಿನಲ್ಲೆಲ್ಲಾ ಗೆಸ್ಟೇಪೋ ಗುಪ್ತ ಪೋಲೀಸರು ಸಂಚರಿಸಹತ್ತಿರುತ್ತಾರೆ. ಫಿನ್ನಿಸ್ ಮತ್ತು ಜರ್ಮನ್ ಸೈನಿಕರೊಳಗೆ ವೈಷಮ್ಯವುಂಟಾಗಿ ಕಲಹಗಳು ನಡೆಯುತ್ತಿವೆ.

ಜರ್ಮನಿಯ ಈಗಿನ ವಿಮಾನಬಲ

ಇಂದೀಗ ನಾಝಿ ವಿಮಾನಪಡೆಯಲ್ಲಿ ಪ್ರಥಮ ಶ್ರೇಣಿಯ ಸುಮಾರು 4000 ವಿಮಾನಗಳಿರುತ್ತವೆಂದು ನಂಬಲಾಗಿದೆ. ಅವುಗಳಲ್ಲಿ ಅರೆವಾಸಿ ಪೂರ್ವ ರಣರಂಗದಲ್ಲಿ ಉಪಯೋಗಿಸಲ್ಪಡುತ್ತವೆ. ಪಶ್ಚಿಮದಲ್ಲಿ ನೋರ್ವೇಯಿಂದ ಬೊರ್ಡೋದ ವರೆಗೆ 1000 ವಿಮಾನಗಳಿರಿಸಲ್ಪಟ್ಟಿವೆ. ಭೂಮಧ್ಯ ಸಾಗರದಲ್ಲಿ 700ರಿಂದ 800ರ ವರೆಗೆ ಇರುತ್ತವೆ. ಹಿಟ್ಲರರು ರಷ್ಯದ ಮೇಲೆ ಪ್ರಥಮವಾಗಿ ಧಾಳಿ ನಡಿಸಿದಾಗ ಇದ್ದಷ್ಟು ವಿಮಾನಗಳು ಈಗ ಜರ್ಮನರ ವಶವಿರುವುದಿಲ್ಲೆಂದು ನಂಬಲಾಗಿದೆ. ವಿಮಾನ ಚಾಲಕರ ಸಂಖ್ಯೆಯೂ ಮೊದಲಿಗಿಂತ ಬಹಳ ಕಡಿಮೆಯಾಗಿ ಹೋಗಿರುತ್ತದೆ.

ಸಂಯುಕ್ತ ರಾಷ್ಟ್ರಗಳ ಬಲ

ಬ್ರಿಟನೊಂದರ ವಿಮಾನಬಲವೇ ಈಗ ನಾಝಿಗಳದಕ್ಕಿಂತ ಅಧಿಕವಾಗಿರುವುದೇ ಹೊರತು ಕಡಿಮೆಯಿರುವುದಿಲ್ಲ. ಸಂಯುಕ್ತ ರಾಷ್ಟ್ರಗಳ ಒಟ್ಟು ವಿಮಾನಬಲವು ಇತಿಹಾಸದಲ್ಲಿ ಹಿಂದೆಂದೂ ಇಲ್ಲದಷ್ಟು ಅಧಿಕವಾಗಿರುವುದು. ಯುನ್ಯಾಟೆಡ್ ಸ್ಟೇಟ್ಸಿನ ವಿಮಾನ ಮತ್ತು ಹಡಗಬಲವು ಅದ್ಭುತವಾಗಿ ಹೆಚ್ಚುತ್ತಿರುವುದು. ಪ್ರಕೃತ 3,500,000 ತರಬೇತಾದ ಸೈನಿಕರು ಅದರ ವಶವಿರುವರು. ಸೋವಿಯೆಟ್ ರಷ್ಯದಲ್ಲೀಗ 12,000,000 ಸೈನಿಕರು ಹೋರಾಡಲು ಸಿದ್ಧರಾಗಿರುವರು. 10,000,000 ರಿಸರ್ವ್ ಸೇನೆಯು ಪ್ರತ್ಯೇಕವಿರುವುದು. ಬ್ರಿಟನಿನಲ್ಲಿ 1,000,000 ಚೆನ್ನಾಗಿ ತರಬೇತಾದ ಸೇನೆಯಿರುವುದು. ಚೈನದ ಸೇನೆಯು ಮಿಲ್ಯಗಟ್ಲೆ ಇರುವುದು. ಈ ಸೇನಾಬಲವು ದಿನೇ ದಿನೇ ಮಿಂಚಿನ ವೇಗದಿಂದ ಅಧಿಕವಾಗುತ್ತಿರುವುದು

ಧಾಳಿಯ ಭೀತಿ

ಪಶ್ಚಿಮದಲ್ಲಿ ಕರ್ಕನೆಸಿನಿಂದ ಹೆಂಡಾಯಿಯ ವರೆಗಿನ ಅಟ್ಲಾಂಟಿಕ ಸಾಗರ ಕರಾವಳಿಯನ್ನು ನಾಝಿಗಳು ಭದ್ರಗೊಳಿಸಿರುವರೆ. ಆದುದರಿಂದ ಅಲ್ಲಿ ಬ್ರಿಟಿಸ್ ಧಾಳಿಯ ಕುರಿತು ಹೆಚ್ಚಿನ ಭೀತಿಯು ಅವರಿಗಿರುವುದಿಲ್ಲ. ಆದರೆ ನೋರ್ವೇಯ ಮೇಲೆ ಬ್ರಿಟನು ಮತ್ತು ಅಮೇರಿಕಗಳೆಲ್ಲಿ ಧಾಳಿ ನಡಿಸಿ ಬಿಡುವವೋ ಎಂದವರು ತಳಮಳಗೊಳ್ಳಹತ್ತಿದ್ದಾರೆ. ನೋರ್ವೆಯ ಸಮುದ್ರ ಕರಾವಳಿಯು ಅತಿ ದೀರ್ಘವಾಗಿ, ದ್ವೀಪಗಳಿಂದ ತುಂಬಿದ್ದು ಅದನ್ನು ರಕ್ಷಿಸುವುದು ಬಹಳ ಪ್ರಯಾಸ. ಮಾತ್ರವಲ್ಲದೆ ನೋರ್ವೆಯ ಹಿಂದಿನಲ್ಲೇ ತಟಸ್ಥ ಸ್ವೀಡನಿರುತ್ತದೆ ಐಸ್‌ಲೇಂಡಿನಲ್ಲೀಗ ಸಂಗ್ರಹಿಸಲ್ಪಟ್ಟಿರುವ ಹೆಚ್ಚಿನ ಅಮೇರಿಕಾನ ಸೇನೆಯ ಸಹಾಯದಿಂದ ಬ್ರಿಟನು ಸಂದರ್ಭ ನೋಡಿ ನೋರ್ವೆಯ ಮೇಲೆಯೇ ಧಾಳಿನಡಿಸಬಹುದೆಂದು ಜರ್ಮನರು ನಿರೀಕ್ಷಿಸುತ್ತಿದ್ದಾರೆ.

ಜರ್ಮನ್ ಮತ್ತು ಬ್ರಿಟಿಷ್ ವಿಮಾನ ಧಾಳಿ.

ಜರ್ಮನಿ ಮತ್ತು ನಾಝಿ ಆಕ್ರಮಿತ ಪ್ರದೇಶಗಳ ಮೇಲೆ ಬ್ರಿಟನು ಎಡೆಬಿಡದೀಗ ನಡಿಸುತ್ತಿರುವ ಪ್ರಬಲ ವಿಮಾನ ಧಾಳಿಗಳು ವೈರಿಗೆ ತಲೆಶೂಲೆಯನ್ನುಂಟುಮಾಡಿರುತ್ತವೆ. ಇಂಗ್ಲೆಂಡಿನ ಮೇಲೆ ನಾಝಿ ವಿಮಾನ ಧಾಳಿಯು ನಾಮಮಾತ್ರವಾಗಿ ಮಾತ್ರ ನಡಿಸಲ್ಪಡುತ್ತಿರುವಂತಿದೆ. ಇತ್ತಲಾಗಿ ಮಾತ್ರ ಅದು ಸ್ವಲ್ಪ ತೀವ್ರತೆ ತಳೆದಿದೆ. ಕಳೆದ ಮಾರ್ಚಿ 20ರಿಂದ ಎಪ್ರಿಲ್ ತಾ. 20ರ ವರೆಗೆ 200ಕ್ಕಿಂತ ಕಡಿಮೆ ವೈರಿವಿಮಾನಗಳು ಬ್ರಿಟನಿನ ಒಂದು ಪ್ರದೇಶದ ಮೇಲೆ 300 ಟನ್ ಬೋಂಬೆಸೆದಿರುತ್ತವೆ. ಆದರೆ ಈ ದಿನಗಳಲ್ಲೊಂದೇ ರಾತ್ರಿಯಲ್ಲಿ 300 ಬ್ರಿಟಿಸ್ ವಿಮಾನಗಳು ಜರ್ಮನಿಯ ಮೇಲೆ ಹಾರಿ 300 ಟನ್ ಬೋಂಬೆಸೆದಿರುತ್ತವೆ. ಒಂದು ವಾರದಲ್ಲಿ 1000 ಟನ್ ಬೋಂಬೆಸೆದಿರುತ್ತವೆ. ಆಕ್ರಮಿತ ಫ್ರಾನ್ಸಿನ ಮೇಲೆ ಕೂಡಾ ಬ್ರಿಟಿಷ್ ಬೋಂಬರ್ ಮತ್ತು ಫೈಟರ್ ವಿಮಾನಗಳು ಪ್ರತಿದಿನ ಹಾರಿ ಹೋಗಿ ನಾಝಿ ವಿಮಾನನಿಲಯ ಮತ್ತು ಕಾರ್ಖಾನೆಗಳನ್ನು ನಾಶಮಾಡಿರುತ್ತವೆ. ಬ್ರಿಟನಿನ ವಸಂತದ ಈ ಪ್ರಬಲ ವಿಮಾನಧಾಳಿಯಿಂದ ಜರ್ಮನರು ಚಿಂತೆಗೀಡಾಗಿರುವಂತಾಗಿದೆ.

ಬ್ರಿಟಿಷ್ ತೆರಿಗೆದಾರರ ಮೇಲಿನ ಹೊರೆ.

1942-43ನೇ ಇಸ್ವಿಯ ಬ್ರಿಟನಿನ ಒಟ್ಟು ವೆಚ್ಚವು 5,286,000,000 ಪವನುಗಳಾಗುವವೆಂದು ಅಂದಾಜು ಮಾಡಲಾಗಿದೆ. ಇದು ಕಳೆದ ವರ್ಷಕ್ಕಿಂತ 700,000,000 ಪವನು ಅಧಿಕವಾಗಿದೆ. ಈ ವರ್ಷ ಬ್ರಿಟನು ಕಳೆದ ವರ್ಷಕ್ಕಿಂತ ದಿನವಹಿ 2,000,000 ಪವನು ಹೆಚ್ಚು ವೆಚ್ಚಮಾಡಿದಂತಾಗುತ್ತದೆ. ! ಈ ಅಪಾರ ವೆಚ್ಚದಲ್ಲಿ 4,500,000,000 ಪವನು ನೆಟ್ಟಗೆ ಬ್ರಿಟಿಷ್ ತೆರಿಗೆದಾರರ ಮೇಲೆ ಬೀಳುತ್ತದೆ.

ಸೈಪ್ರಸಿನ ಸಿದ್ಧತೆ.

ಭೂಮಧ್ಯ ಸಾಗರದಲ್ಲಿ ಸಿರಿಯದ ಕರಾವಳಿಯಿಂದ 150 ಮೈಲು ದೂರದಲ್ಲಿರುವ ಸೈಪ್ರಸ್ ದ್ವೀಪವು, ಆಕ್ಸಿಸ್ ರಾಷ್ಟ್ರಗಳ ಆಸ್ಯಾಖಂಡದ ಧಾಳಿಗೆ ದೊಡ್ಡ ತೊಡಕಾಗಿರುತ್ತದೆ. ಜರ್ಮನಿಯು ಸಿರಿಯದ ಮೇಲೇರಿ ಹೋಗಬೇಕಾದರೆ ಮೊದಲಾಗಿ ಸೈಪ್ರಸನ್ನು ಗೆಲ್ಲಬೇಕಾಗುವುದು. ವೈರಿಯನ್ನೆದುರಿಸಲು; ಕ್ರೀಟ್ ದ್ವೀಪಗಿಂತ ಎಷ್ಟೋ ಹೆಚ್ಚಿನ ರಕ್ಷಣಾ ಸಿದ್ಧತೆಯು ಸೈಪ್ರಸಿನಲ್ಲಿ ನಡೆದಿರುತ್ತದೆ. ಮಾಲ್ಟದಂತೆಯೇ ಸೈಪ್ರಸ್ ಕೂಡಾ ವೈರಿಗಳನ್ನೆದುರಿಸುವಶಕ್ತಿಯುಳ್ಳದಿರುವುದೆಂದು ನಿರೀಕ್ಷಿಸಲಾಗಿದೆ. ಅಲ್ಲಿ ಹಿಂದೀಮುಸಲ್ಮಾನ ಸೈನಿಕರು ಹೆಚ್ಚಾಗಿ ಇರಿಸಲ್ಪಟ್ಟಿರುತ್ತಾರೆ.

ನಾಝಿಗಳ ಜನ ಸಂಖ್ಯೆ ಬೆಳೆಸುವ ಪ್ರಯತ್ನ.

ನಾಝಿಗಳೀಗ ಯಾವ ರೀತಿಯಲ್ಲಾದರೂ, ಯುದ್ಧದಲ್ಲಿ ಹೊಂದಿದ ಜನನಷ್ಟವನ್ನು ಭರ್ತಿಮಾಡುವ ಪ್ರಯತ್ನದಲ್ಲಿ ನಿರತರಿರುವರೆಂದಿದೆ ಅವರೀಗ ತಮ್ಮ ಜನಾಂಗ ಶುದ್ಧತೆಯ ಭಾವನೆಗಳನ್ನು ಬದಿಗೊತ್ತಿ ಪೋಲಿಶ್ ತರುಣಿಯರನ್ನು ಸಹಸ್ರಗಟ್ಲೆಯಲ್ಲಿ ಹಿಡಿದುಕೊಂಡು ಹೋಗಿ ಜರ್ಮನರೊಂದಿಗಿರಿಸಿ ಅವರಿಂದ ಆದಷ್ಟು ಹೆಚ್ಚಿನ ಮಕ್ಕಳನ್ನುಂಟುಮಾಡುವ ಏರ್ಪಾಡು ಮಾಡುತ್ತಿದ್ದಾರೆ. ಇದಕ್ಕಾಗಿ ಪ್ರತ್ಯೇಕ ಕ್ಯಾಂಪ್‌ಗಳೇ ಸ್ಥಾಪಿಸಲ್ಪಟ್ಟಿವೆ. ಪೋಲಂಡಿನ ಹಲವು ಪಟ್ಟಣಗಳಿಂದ ಪೋಲಿಶ್ ತರುಣಿಯರೆಲ್ಲಾ ಮಾಯವಾಗಹತ್ತಿರುವರೆಂದು ತಿಳಿದುಬರುತ್ತದೆ.

ಯುನ್ಯಾಟೆಡ್ ಸ್ಟೇಟ್ಸಿನ ಪ್ರಚಂಡ ಸಿದ್ಧತೆ.

ಇಂದೀಗ ಯುನ್ಯಾಟೆಡ್ ಸ್ಟೇಟ್ಸ್, ಸಂಯುಕ್ತ ರಾಷ್ಟ್ರಗಳ ಯುದ್ಧೋಪಕರಣ ಮತ್ತು ಆಹಾರ ಸರಬರಾಯಿ ಕೇಂದ್ರದಂತಾಗಿದೆ. ಆ ಬಗ್ಗೆ ಅದು ಪ್ರಚಂಡ ತಯಾರಿ ಮಾಡುವುದರಲ್ಲಿ ನಿರತವಾಗಿದೆ. ಈ ವರ್ಷಾಂತ್ಯದೊಳಗೆ ಯುನ್ಯಾಟೆಡ್ ಸ್ಟೇಟ್ಸಿನ ಸುಮಾರು ಅರೆವಾಸಿ ಪುರುಷರು, ಸೇನೆ, ಯುದ್ಧೋಪಕರಣ ಕಾರ್ಖಾನೆ, ಮತ್ತು ಆಹಾರ ಸಾಮಾಗ್ರಿ ತಯಾರಿ ಉದ್ಯಮಗಳಲ್ಲಿ ದುಡಿಯುವಂತಾಗುವುದು. ಬರುವ ಜನವರಿ ತಿಂಗಳೊಳಗೆ 13,000,000 ಗಂಡಸರು ಮತ್ತು ಹಲವು ಮಿಲ್ಯ ಸ್ತ್ರೀಯರು, ಯುದ್ಧ ಕೈಗಾರಿಕೆ ಮತ್ತು ಬೇಸಾಯ ಕೆಲಸದಲ್ಲಿ ನಿರತರಾಗುವರು.

4 ತಿಂಗಳಲ್ಲಿ ಒಂದು ವರ್ಷದ ಉತ್ಪತ್ತಿ

ಯುನ್ಯಾಟೆಡ್ ಸ್ಟೇಟ್ಸ್ ಈ ವರ್ಷ ಇಷ್ಟರಲ್ಲೇ 90ಕ್ಕಿಂತಲೂ ವಿಶಿಷ್ಟ ಬೇರೆ ಬೇರೆ ರೀತಿಯ ಹಡಗಗಳನ್ನು ಹೊಸತಾಗಿ ತಯಾರಿಸಿಕೊಂಡಿರುವುದು. ಇದರಿಂದ ಒಂದು ವರ್ಷದ ಕೆಲಸವನ್ನು ಕೇವಲ 4 ತಿಂಗಳುಗಳಲ್ಲಿ ಮುಗಿಸಿದಂತಾಗಿರುತ್ತದೆ. ಅಮೆರಿಕದ ಹಡಗ ಯಾರ್ಡುಗಳು ಮೊದಲು ಕಟ್ಟಲು 6 ತಿಂಗಳು ಹಿಡಿಯುತ್ತಿದ್ದ ಹಡಗಗಳನ್ನು ಈಗ 105 ದಿನಗಳಲ್ಲಿ ಕಟ್ಟಿ ಮುಗಿಸುತ್ತಿವೆ. 30,000,000 ಟನ್ ಹಡಗಗಳನ್ನು ತಯಾರಿಸುವ ಪ್ರಚಂಡ ಕಾರ್ಯಕ್ರಮವನ್ನು ಯುನ್ಯಾಟೆಡ್ ಸ್ಟೇಟ್ಸ್ ಕೈಕೊಂಡಿದೆ. ಎನ್ನೆಯನ್ನೊಯ್ಯಲು 300ಕ್ಕಿಂತಲೂ ಹೆಚ್ಚಿನ ಟೇಂಕರುಗಳನ್ನದು ಮೊದಲಾಗಿ ತಯಾರಿಸಿಕೊಂಡಿದೆ. ಈ ತಿಂಗಳ ಮಧ್ಯದಿಂದ ಅಮೆರಿಕವು ದಿನಪ್ರತಿಂದರ ಎರಡು ಹಡಗಗಳನ್ನು ತಯಾರಿಸಲಿರುವುದು. 1943ರಲ್ಲಿ 15,000,000 ಟನ್ ಹಡಗ ತಯಾರಿಸುವ ಪ್ರೆಸಿಡೆಂಟ್ ರುಸವೆಲ್ಟರ ಕಾರ್ಯಕ್ರಮವು ಜಯಶೀಲವಾಗಿ ನಡಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ.

ಖಾನ್ ಅಬ್ದುಲ್ ಗಾಫರ್ ಖಾನರು

ರಾಜಕೀಯಕ್ಕೆ ಸೇರುವ ಮೊದಲು ಸರ್ವಸಾಮಾನ್ಯ ಪಠಾಣ ಒಕ್ಕಲಿಗನ ಜೀವನವನ್ನೇ ನಡಿಸುತ್ತಿದ್ದರು. ಅವರಿಗೆ 4 ಎತ್ತುಗಳು, ಇಬ್ಬರು ಸೇವಕರು ಮತ್ತು 70 ಎಕ್ರೆ ಜಮೀನಿದ್ದಿತು. ಈ ಜಮೀನನ್ನವರು ಸ್ವತಹ ಸಾಗುಮಾಡುತ್ತಿದ್ದರು. ಇತರ ಒಕ್ಕಲಿಗರಂತೆಯೇ ಮುಂಬೆಳಕು ಹರಿಯುವ ಮೊದಲೇ ಖಾನ್ ಅಬ್ದುಲ್ ಗಫರ್ ಖಾನರು ಉತ್ಮನ್ ಝಾಯಿಯ ತಮ್ಮ ಮನೆಬಿಟ್ಟು ಹೊಲಕ್ಕೆ ಹೋಗಿ, ಒಂದು ಮೈಲು ದೂರದ ಕಾಲುವೆಯೊಂದರಲ್ಲಿ ಸ್ನಾನ ಮಾಡಿ ಸೂರ್ಯೋದಯಕ್ಕಿಂತ ಒಂದು ಘಂಟೆ ಮೊದಲೇ ಹೊಲಕೆಲಸ ಆರಂಭಿಸುತ್ತಿದ್ದರು. ಮಧ್ಯಾಹ್ನದ ವರೆಗೆ ದುಡಿದು ಮಧ್ಯಾಹ್ನ ಊಟ ತರಲ್ಪಟ್ಟಾಗ ಕೆಲಸ ಮುಗಿಸಿ ಎತ್ತುಗಳನ್ನು ನೆರಳಿನ ಸ್ಥಳಕ್ಕೊಯ್ದು ಬಿಟ್ಟು ತಾನು ಊಟಮಾಡಿ ಒಂದೆರಡು ಘಂಟೆ ವಿಶ್ರಮಿಸಿ ಅನೇಲೆ ಪುನಹ ಹೊಲಕೆಲಸ ಆರಂಭಿಸುತ್ತಿದ್ದರು ಈ ಪ್ರಕಾರ ಅವರು ಹೊಲ ಕೆಲಸದ ಕುರಿತ ಪರಿಪಕ್ವ ಅನುಭವ ನಡೆದಿರುವರು.

FIXED DEPOSITS

are now accepted at all our offices, at attractive rates of interest. For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು. ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್. ಲಿಮಿಟೆಡ್.

THE VIJAYA BANK, LTD.

ಅಕ್ಕಿಯನ್ನು ಕಂಟ್ರೋಲ್ ಮಾಡುವ ಆವಶ್ಯಕತೆ.

ಹಿಂದುದೇಶದಲ್ಲಿ ಅತಿ ಹೆಚ್ಚಾಗಿ ಬೆಳೆಸುವ ಧಾನ್ಯವೆಂದರೆ ಅಕ್ಕಿ. ಹೆಚ್ಚಿನ ಹಿಂದೀಯರ ಮುಖ್ಯ ಆಹಾರವೂ ಅದೇ. 1936-37ನೇ ಇಸ್ವಿಯ ಬೆಳೆಗಳ ಸಂಬಂಧವಾದ ವರದಿಯ ಮೇರೆಗೆ, 76,260,000 ಎಕ್ರೆ ಸ್ಥಳದಲ್ಲಿ ಅಕ್ಕಿಯು ಬೆಳೆಸಲ್ಪಡುವುದು. ಸಾಗು ಆಗುವ ಭೂಮಿಯ ಸೇಕಡ 18ರ ಪ್ರಮಾಣವನ್ನು ಅಕ್ಕಿಯು ಪಡೆದಿದೆ. ಆಹಾರ ಪದಾರ್ಥಗಳು ಬೆಳೆಸಲ್ಪಡುವ ಭೂಮಿಯ ಸೇಕಡ 36ರಷ್ಟರಲ್ಲಿ ಅಕ್ಕಿಯನ್ನು ಬೆಳೆಸಲಾಗುತ್ತದೆ. ಅಕ್ಕಿ ಬೆಳೆ ಮತ್ತು ಉಪಯೋಗದ ವಿಷಯದಲ್ಲಿ ಚೈನದ ನಂತರ ಎರಡನೇ ಸ್ಥಾನವನ್ನು ಹಿಂದುದೇಶವು ಪಡೆಯುತ್ತದೆ. ಚೈನವು ವರ್ಷಕ್ಕೆ 31 ಮಿಲ್ಯ ಟನ್ ಅಕ್ಕಿ ಬೆಳೆಸುತ್ತದೆ. ಹಿಂದುದೇಶದ ಮುಖ್ಯ ಬೆಳೆ ಮತ್ತು ಆಹಾರ ಪದಾರ್ಥವು ಅಕ್ಕಿಯಾದರೂ ಅದರ ಉತ್ಪತ್ತಿ ಮತ್ತು ಮಾರ್ಕೆಟನ್ನು ಕಂಟ್ರೋಲ್ ಮಾಡುವ ಕುರಿತು ಈ ವರೆಗೂ ಸರಕಾರವು ಗಮನ ಕೊಟ್ಟಿರುವುದಿಲ್ಲ. ಗೋಧಿಯ ಕುರಿತು ಲಗುಬಗೆಯಿಂದ ಎಲ್ಲಾ ವ್ಯವಸ್ಥೆಯು ನಡೆದಿರುತ್ತದೆ- ಪ್ರಾಯಶಃ ಸರಕಾರದ ಮುಖ್ಯ ಪಟ್ಟಣವಾದ ಡಿಲ್ಲಿಯು ಗೋಧಿ ಹೆಚ್ಚಿಗೆ ಬೆಳೆಸುವ ಮತ್ತು ಉಪಯೋಗಿಸುವ ಕೇಂದ್ರದಲ್ಲಿರುವುದೇ ಇದಕ್ಕೆ ಕಾರಣವಿರಬಹುದು.

ಹಿಂದುದೇಶದಲ್ಲಿ ಅಕ್ಕಿಯು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲ್ಪಡುವುದಾದರೂ ವರ್ಷಾವಧಿ ರೂ. 13½ ಕೋಟಿ ಬೆಲೆಯ 1,8000,00 ಟನ್ ಅಕ್ಕಿಯು ಇಲ್ಲಿಗೆ ಆಮದಾಗುತ್ತದೆ. ಅದರಲ್ಲಿ ಸೇಕಡ 92 ರಷ್ಟು ಬರ್ಮದಿಂದಲೂ ಉಳಿದುದು ಇಂಡೋ ಚೈನಾ, ಮತ್ತು ಸಯಾಮಿನಿಂದಲೂ ಬರುತ್ತದೆ. ಸೇಕಡ 6ರಷ್ಟರ ಅಕ್ಕಿಯನ್ನು ಹಿಂದುದೇಶವು ಹೊಂದೇಶಗಳಿಂದ ತರಿಸುತ್ತದೆ. ಮತ್ತು ಸೇಕಡ 1ರಷ್ಟು ಅಂದರೆ ವರ್ಷಕ್ಕೆ ಸುಮಾರು ರೂ. 2½ ಕೋಟಿ ಬೆಲೆಯಷ್ಟರದನ್ನು ಅದು ಮೋರಿಶಸ್, ಮತ್ತು ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ಹಿಂದೀಯರ ಉಪಯೋಗಕ್ಕಾಗಿ ರಫ್ತು ಮಾಡುತ್ತದೆ.

ಇಡೀ ದೇಶದ ಮತ್ತು ಮದ್ರಾಸ್ ಪ್ರಾಂತದ ಅಕ್ಕಿ ಬೆಳೆಯ ಪರಿಸ್ಥಿತಿ

ಅಕ್ಕಿ ಬೆಳೆಯನ್ನು ಹೆಚ್ಚಿಸುವ ಬಗೆ ಹೇಗೆ?

ಅಕ್ಕಿಯ ಬೆಳೆಯು ಹಿಂದುದೇಶದಲ್ಲಿ ಅತ್ಯಂತ ಕಳತೆಯದಾಗಿದೆ. ಆದರೂ ವರ್ಷಕ್ಕೆ ಸುಮಾರು ರೂ. 270 ಕೋಟಿ ಬೆಲೆಯಷ್ಟನ್ನನು ಬೆಳೆಸುತ್ತದೆ. ಹಿಂದೀಯರು ವರ್ಷಕ್ಕೆ ತಲೆಯೊಂದರ ಸರಾಸರಿ 181 ರಾತ್ತಲ ಅಕ್ಕಿ ಉಪಯೋಗ ಮಾಡುತ್ತಾರೆ. ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಇನ್ನಾವ ಆಹಾರ ಪದಾರ್ಥವೂ ಉಪಯೋಗಿಸಲ್ಪಡುವದಿಲ್ಲ. ಭತ್ತ ಬೆಳೆಸುವವರು ಉತ್ಪತ್ತಿಯ ಸುಮಾರು ಸೇಕಡ 60 ರಷ್ಟನ್ನು ತಾವೇ ಇಟ್ಟುಕೊಂಡು ಉಳಿದುದನ್ನು ಮಾರಾಟಮಾಡುತ್ತಾರೆ. ಇದರಿಂದಾಗಿ ರೂ. 130 ಕೋಟಿ ಬೆಲೆಯ 11,500,000ಟನ್ ಅಕ್ಕಿ ಮಾತ್ರ ಮಾರಾಟಕ್ಕೆ ಸಿಗುತ್ತದೆ. ಈ ಅಕ್ಕಿಯನ್ನು ಕಂಟ್ರೋಲ್ ಮಾಡಿ ಅದರ ಬೆಲೆಯನ್ನು ನಿಯತಗೊಳಿಸುವುದು ಅತ್ಯಾವಶ್ಯಕವಿರುತ್ತದೆ. ದಲ್ಲಾಲಿಗಳ ಸೂತ್ರಚಾಲನೆಯಿಂದ ಇಂದು ಬೇಸಾಯಗಾರರೂ ಅಕ್ಕಿ ಉಪಯೋಗಿಸುವವರೂ ಬಹಳ ತೊಂದರೆ ಮತ್ತು ನಷ್ಟಕ್ಕೊಳಗಾಗುವಂತಾಗಿದೆ. ಉತ್ಪತ್ತಿ ಮತ್ತು ಉಪಯೋಗದ ಪರಿಸ್ಥಿತಿಗಳನ್ನು ನಿಯತಗೊಳಿಸುವ ಪ್ಲೇನಿನಿಂದ ಈ ತೊಂದರೆ ಮತ್ತು ನಷ್ಟವನ್ನು ನಿವಾರಿಸಬಹುದು. ಇಲ್ಲವೆ ಬಹಳ ಕಡಿಮೆ ಮಾಡಬಹುದು. ಅಕ್ಕಿಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುವ ವಿಷಯದಲ್ಲಿಯೂ ಕಂಟ್ರೋಲ್ ಅಗತ್ಯವಿರುತ್ತದೆ. ಅಕ್ಕಿಯ ಉತ್ಪತ್ತಿಯನ್ನೆಲ್ಲಾ ಸರಕಾರವಾಗಲಿ, ಅದರ ಅಧೀನವಿರುವ ಖಾಸಗಿ ಸಂಸ್ಥೆಯಾಗಲಿ ನ್ಯಾಯವಾದ ಬೆಲೆಗೆ ತೆಗೆದುಕೊಂಡು ಬೇರೆ ಬೇರೆ ಸ್ಥಳಗಳಿಗೊಯ್ದು ಮಿತವಾದ ದರದಲ್ಲದನ್ನು ಮಾರಿದರೆ ಬೇಸಾಯಗಾರನಿಗೂ ಉಪಯೋಗಿಸುವವನಿಗೂ ಹೆಚ್ಚಿನ ನಷ್ಟವಾಗಲು ಆಸ್ಪದವಿಲ್ಲದಂತಾಗುವುದು. ಈ ಕುರಿತು ಕೇಂದ್ರ ಸರಕಾರವು ಕೂಡಲೆ ಗಮನವಿತ್ತು ಅದಕ್ಕಾಗಿ ಕೇಂದ್ರ ಕಮಿಟಿಯೊಂದನ್ನು ಪ್ರತ್ಯೇಕ ಸ್ಥಾಪಿಸಿ ವ್ಯವಸ್ಥೆಗೊಳಿಸತಕ್ಕದ್ದು. ಹಿಂದುದೇಶಕ್ಕೆ ಹೊರಗಿಂದ ಬರುವ ಅಕ್ಕಿಯು ಸಂಪೂರ್ಣವಾಗಿ ನಿಂತುಹೋಗಿರುವಾಗ, ದೇಶದಲ್ಲೇ ಹೆಚ್ಚಿನ ಅಕ್ಕಿಯು ಬೆಳೆಸಲ್ಪಟ್ಟು ಅದು ನ್ಯಾಯವಾದ ರೀತಿಯಲ್ಲಿ ಹಂಚಲ್ಪಡುವಂತೆ ನೋಡುವುದು ಸರಕಾರದ ಕರ್ತವ್ಯವಿರುತ್ತದೆ.

ಮದ್ರಾಸ್ ಪ್ರಾಂತ್ಯದಲ್ಲಿ ಆಹಾರ ಪದಾರ್ಥಗಳು 2ಕೋಟಿ 75ಲಕ್ಷ ಎಕ್ರೆಗಳಲ್ಲಿ ಬೆಳೆಸಲ್ಪಡುತ್ತವೆ. ಅದರಲ್ಲಿ ಒಂದು ಕೋಟಿ ಎಕ್ರೆಗಿಂತಲೂ ಹೆಚ್ಚಿನ ಸ್ಥಳದಲ್ಲಿ ಅಕ್ಕಿ ಬೆಳೆಯುತ್ತದೆ. ಅನುಕೂಲ ಪರಿಸ್ಥಿತಿಯಲ್ಲಿ ಮದ್ರಾಸ್ ಪ್ರಾಂತದಲ್ಲಿ ವರ್ಷಕ್ಕೆ ಸುಮಾರು 50ಲಕ್ಷ ಟನ್ ಅಕ್ಕಿ ಬೆಳೆಯುತ್ತದೆ. ಕಳೆದ7ವರ್ಷಗಳ ಈ ಸರಾಸರಿಯು ಸುಮಾರು 48ಲಕ್ಷ ಟನ್ ಆಗಿರುತ್ತದೆ. ಮದ್ರಾಸ್ ಪ್ರಾಂತವೇ ವರ್ಷ 1ಕ್ಕೆ 2ರಿಂದ 3ಲಕ್ಷ ಟನ್ ವರೆಗಿನ ಅಕ್ಕಿಯನ್ನು ಹೊರಗಿಂದ ತರಿಸುತ್ತದೆ. ಮದ್ರಾಸ್ ಪ್ರಾಂತದಿಂದ ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳಿಗೆ ಪ್ರತಿ ವರ್ಷ 3½ ಲಕ್ಷ ಟನ್ ಅಕ್ಕಿ ಹೋಗುತ್ತದೆ. ಅಕ್ಕಿಯ ವಿಷಯದಲ್ಲಿ ಮದ್ರಾಸ್ ಪ್ರಾಂತವು ಸ್ವಾವಲಂಬಿಯಾಗಬೇಕಾದರೆ ವರ್ಷಕ್ಕೆ ಕಡಿಮೆಯೆಂದರೆ 56 ಲಕ್ಷ ಟನ್ ಅಕ್ಕಿ ಬೆಳೆಸಬೇಕಾಗಿದೆ.

ಬೇಸಾಯಗಾರರು ಆಹಾರ ಪದಾರ್ಥಗಳನ್ನೇ ಹೆಚ್ಚುಹೆಚ್ಚಾಗಿ ಬೆಳೆಸುವಂತೆ ಯುದ್ಧಾರಂಭವಾದಂದಿನಿಂದ ಸರಕಾರವು ಪ್ರಯತ್ನ ಮಾಡುತ್ತಾ ಬಂದಿರುವುದು. ಪರಿಣಾಮವಾಗಿ ಕಳೆದ 2ವರ್ಷಗಳಲ್ಲಿ ಉತ್ಪತ್ತಿಯು ಐದಾರು ಲಕ್ಷ ಟನ್ ಹೆಚ್ಚಾಗಿರುವುದೆಂದು ನಂಬಲಾಗಿದೆ. ಸಾಗು ಆಗದೆ ಹಾಗೆಯೇ ಉಳಿದಿರುವ ಸ್ಥಳಗಳನ್ನು ಕೂಡಲೆ ಸಾಗು ಮಾಡುವ ಪ್ರಯತ್ನ ನಡೆಯಬೇಕು. ನೀರಾಶಯವನ್ನು ಆದಷ್ಟು ಹೆಚ್ಚಿಸಿ ನಂಜ ಸ್ಥಳಗಳನ್ನು ಹೆಚ್ಚಿಸಬೇಕು. ಕಬ್ಬು ಮೊದಲಾದ ಇತರ ಬೆಳೆಗಳನ್ನು ಆದಷ್ಟು ಕಡಿಮೆ ಬೆಳಸಿ ಭತ್ತವನ್ನೇ ಹೆಚ್ಚಾಗಿ ಬೆಳೆಸುವ ಕುರಿತು ಗಮನ ಕೊಡಬೇಕು ಬೆಳೆಯನ್ನು ಸಾಧ್ಯವಾದಷ್ಟು ಉತ್ತಮಗೊಳಿಸಲು ಪ್ರಯತ್ನಿಸಬೇಕು. ಸರಕಾರದ ವಶವಿರುವ ಖಾಲಿ ಸ್ಥಳಗಳನ್ನು ಸಾಗು ಮಾಡಲು ಜನರಿಗೆ ಉದಾರ ಶರ್ತಗಳಿಂದ ಕೊಡಬೇಕು. ಹೆಚ್ಚಿನ ಪರಂಬೋಕ್ ಸ್ಥಳಗಳಲ್ಲಿ ಕೂಡಾ ಭತ್ತ ಬೆಳೆಸುವಂತೆ ವ್ಯವಸ್ಥೆ ಮಾಡಬೇಕು ಈ ಕುರಿತೆಲ್ಲಾ ಸರಕಾರದ ಜವಾಬ್ದಾರಿಯು ಅತಿ ಹೆಚ್ಚಿನದಿರುತ್ತದೆ. ಅದು ತನ್ನ ಜಿಲ್ಲಾಧಿಕಾರಿಗಳು ಮತ್ತು ಕೃಷಿ ಇಲಾಖಾ ಇನ್ಸ್‌ಪೆಕ್ಟರರುಗಳ ಮೂಲಕ ನಿಶ್ಚಿತವಾದೊಂದು ಯೋಜನೆಯನ್ನೇ ಜ್ಯಾರಿಗೆ ತರುವ ಪ್ರಯತ್ನ ಮಾಡತಕ್ಕದ್ದು. ಇಲ್ಲವಾದರೆ ಆಹಾರ ಪದಾರ್ಥಗಳ ಅಭಾವದಿಂದ ಜನರು ಸಂಕಷ್ಟಕ್ಕೊಳಗಾಗಿ ಯುದ್ಧ ನಿಮಿತ್ತವಾದ ಕ್ಷೋಭೆಯು ಮತ್ತಷ್ಟು ಅಧಿಕವಾಗುವ ಅಪಾಯವಿರುತ್ತದೆ.

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ. ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,
ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಕೊಳ್ಳಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು **ಬೊಂಬಾಯಿ.**

ಮದುವೆ
ಉಪನಯನ

ಮೊದಲಾದವುಗಳ

ಆಮಂತ್ರಣ ಪತ್ರಿಕೆ

ಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇದರ ಎಲ್ಲಾ ತರದ ಜಾಬ್ ಮತ್ತು ಬುಕ್ ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು.

ನ ವ ಯು ಗ ಪ್ರೆ ಸ್,
ಕೋಳದ ಪೇಟೆ ರಸ್ತೆ,
ಉ ಡು ಪಿ.

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಹಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ

ಮೆನೇಜರ್.

ಚುಟುಕು ಟೀಕೆ-ಟಿಪ್ಪಣಿ

ಸಾಮ್ರಾಜ್ಯ ಸ್ವಾರ್ಥವಿಲ್ಲದ ಸಾಮ್ರಾಜ್ಯ!

ಬ್ರಿಟಿಷರಿಗೇನೂ ಸಾಮ್ರಾಜ್ಯ ಶಾಹಿ ಮನೋವೃತ್ತಿ ಇರುವುದಿಲ್ಲ. ಸಾಮ್ರಾಜ್ಯ ಸ್ವಾರ್ಥವಿಲ್ಲದ ಸಾಮ್ರಾಜ್ಯವದು. ಬ್ರಿಟಿಷರ ಈ ಉದಾರ ಮನೋವೃತ್ತಿಯಿಂದಲೇ ಅದರ ಅಧೀನ ರಾಷ್ಟ್ರಗಳು ಕೂಡಲೆ ಅದರೊಂದಿಗೆ ಯುದ್ಧಕ್ಕೆ ಸೇರಿ ನೆರವಾಗಿವೆಯೆಂದು ಅಮೆರಿಕದ ಟೈಮ್ಸ್ ಮೆಗಜಿನು ಮಹತ್ವದ ಲೇಖನ ಬರೆದಿರುವುದೆಂದು ಇಂಗ್ಲೆಂಡಿನ ಡೈಲಿ ಎಕ್ಸ್ಪ್ರೆಸ್ ಪತ್ರಿಕೆಯು ಅದನ್ನುಲ್ಲೇಖಿಸಿರುತ್ತದೆ. ಬ್ರಿಟನಿನ ನೆರೆಯ ಐರ್ಲೆಂಡೇಕೆ ಈ ವರೆಗೂ ತಟಸ್ಥವಾಗಿರುತ್ತದೆ? ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಬ್ರಿಟನೇಕೆ ಹಿಂಜರಿಯುತ್ತಿರುವುದು? ಇಂತಹ ನಟನೆಯಿಂದ ಬ್ರಿಟಿಷರು ಆತ್ಮ ಸಮಾಧಾನ ಮಾಡಿಕೊಳ್ಳಬಹುದು. ಆದರೆ ಅದರಿಂದ ಇತರರಾರೂ ವಂಚಿತರಾಗಲಾರರು.

ಈಗ ಜ್ಞಾನೋದಯವಾಯಿತು!

ಲೋಕದ ಅತಿ ಶ್ರೇಷ್ಠ ಸೈನಿಕರು ಚೀನೀಯರು. ಸಾಕಷ್ಟು ಯುದ್ಧೋಪಕರಣ, ವಿಮಾನಪಡೆ ಮತ್ತು ತೋಪು ಟೇಂಕುಗಳಿದ್ದರೆ ಚೀನೀಯರಿಗೆ ಜಾಪಾನರು ಸರಿಸಾಟಿಯಲ್ಲೆಂದು ಅಮೆರಿಕಾನ ಸೈನ್ಯಾಧಿಕಾರಿಯೊಬ್ಬರು ಪ್ರಶಂಸಿಸಿರುವರು. ಇದೇ ರೀತಿ ಹಿಂದೀ ಸೈನಿಕರೂ ತಮ್ಮ ಶ್ರೇಷ್ಠತೆಯನ್ನು ಸಿದ್ಧಗೊಳಿಸಿ ಬ್ರಿಟಿಷ್ ಸೈನ್ಯಾಧಿಕಾರಿಗಳ ಹೊಗಳಿಕೆ ಪಡೆದಿರುವರು. ಬ್ರಿಟನ್ ಮತ್ತು ಅಮೆರಿಕಾನರಲ್ಲಿ ಕೆಲವು ವರ್ಷಗಳ ಮೊದಲು ಈ ಜ್ಞಾನೋದಯವಾಗಿದ್ದರೆ ಇಂದು ಪೂರ್ವದಲ್ಲಿ ಅವರು ಈ ಅವಸ್ಥೆಗೊಳಗಾಗುತ್ತಿದ್ದಿಲ್ಲ. ಚೈನ ಮತ್ತು ಹಿಂದುಸ್ಥಾನದಲ್ಲಿ ಮಿಲ್ಯಾಂತರ ಸೇನೆಯನ್ನು ಆತ್ಯಾಧುನಿಕ ರೀತಿಯಲ್ಲಿ ಸಂಘಟಿಸಿ ಸಿದ್ಧಪಡಿಸುವ ಕಡೆಗವರು ಈಗಿನಂತೆ ಮೂರು ನಾಲ್ಕು ವರ್ಷಗಳ ಮೊದಲು ಗಮನವಿತ್ತಿದ್ದರೆ ಜಾಪಾನು ಯುದ್ಧ ಹೂಡಲೆದೆಗೊಳ್ಳುತ್ತಿದ್ದೇ ಇಲ್ಲ.

ವಿಮಾನಧಾಳಿಯ ಭೀತಿ.

1923ರಲ್ಲಿ ಟೋಕ್ಯೋದಲ್ಲುಂಟಾದ ಭೂಕಂಪದಷ್ಟೇ ಜಾಪಾನರು ಇತ್ತಲಾಗಿ ನಡೆಸಲ್ಪಟ್ಟ ವಿಮಾನಧಾಳಿಯ ಕುರಿತು ಬೆದರಿ ಹೋಗಿರುವರೆಂದು ತಿಳಿದುಬರುತ್ತದೆ. "ಈಗ ಎರಡು ವರ್ಷಕ್ಕಿಂತಲೂ ಹೆಚ್ಚಿನ ಸಮಯದಿಂದ ಬ್ರಿಟಿಷರು ವಿಮಾನ ಧಾಳಿಯ ಪ್ರಲಯವನ್ನೇ ತಾಳಿಕೊಂಡಿದ್ದಾರೆ. ನಾವು ಕೇವಲ ಒಂದು ಧಾಳಿಯಿಂದ ಧೃತಿಗೆಟ್ಟರೆ ಬ್ರಿಟಿಷ್ ಮತ್ತು ಅಮೇರಿಕಾನರು ನಮ್ಮ ಕುರಿತು ಕೈತಟ್ಟಿ ನಗಾಡಿಯಾರು. ಬ್ರಿಟನಿನ ಮೇಲಿನ ಜರ್ಮನ್ ಧಾಳಿಯ ಎದುರಲ್ಲಿ ಇದು ಹೆಸರೆತ್ತಿ ಹೇಳುವಂಥಾದ್ದು ಕೂಡಾ ಅಲ್ಲ. ಎಷ್ಟೊಂದು ಜಾಗ್ರತೆ ತೆಗೆದುಕೊಂಡರೂ ವಿಮಾನಧಾಳಿಯನ್ನು ನಿವಾರಿಸಲು ಸಾಧ್ಯವಿಲ್ಲ. ಆದರಿಂದ ಕಂಗೆಟ್ಟರೆ ವೈರಿಯ ಉದ್ದೇಶ ಸಾಧನೆಯಾಗುವದು. ಆದುದರಿಂದ ಜಾಪಾನರು ಧೃತಿಗೆಡಬಾರದೆಂ"ದು ಸರಕಾರವು ಜನತೆಯನ್ನು ಸಮಾಧಾನಪಡಿಸಲೆತ್ನಿಸಿರುವುದು. ಜಾಪಾನರು ಬೇಗನೆ ಕ್ಷೋಭೆಗೊಳ್ಳುವ ಜನರು. ಮಾತ್ರವಲ್ಲದೆ ಟೋಕಿಯೋ ಮೊಳಾದ ಪಟ್ಟಣಗಳ ಹೆಚ್ಚಿನ ಕಟ್ಟಡಗಳೆಲ್ಲಾ ಮರದಿಂದ ಕಟ್ಟಲ್ಪಟ್ಟವು. ಆದುದರಿಂದ ಜಾಪಾನಿನ ಮೇಲೆ ಎಡೆಬಿಡದೆ ಪ್ರಬಲ ವಿಮಾನಧಾಳಿ ನಡೆಸಲ್ಪಟ್ಟರೆ ಜನತೆಯು ದಿಗಿಲುಗೊಂಡು ಕಂಗೆಡುವರೆಂಬುದಕ್ಕೆ ಸಂದೇಹವೇ ಇಲ್ಲ.

ಜಾಪಾನರ 20 ವರ್ಷಗಳ ಸಿದ್ಧತೆ.

ಜಾಪಾನರು 20 ವರ್ಷಗಳ ಮೊದಲೇ ಇಂದಿನ ಯುದ್ಧಕ್ಕಾಗಿ ಒಳಗಿಂದೊಳಗೆ ತಯಾರುಮಾಡುತ್ತಿದ್ದರು. ಹೈನಾನ್ ದ್ವೀಪಕ್ಕೆ ಗುಪ್ತವಾಗಿ ಸೈನಿಕರನ್ನು ಕಳುಹಿಸಿ ಮಲಯದ ಪರಿಸ್ಥಿತಿ ಮತ್ತು ಹವಾಗುಣದಲ್ಲಿ ಯುದ್ಧ ನಡಿಸುವ ಕುರಿತು ಕವಾತುಗಳನ್ನು ಮಾಡಿ ತರಬೇತುಮಾಡುತ್ತಿದ್ದರು. ಭತ್ತದ ಗದ್ದೆ ಮತ್ತು ಜವುಗು ಪ್ರದೇಶಗಳಲ್ಲಿ ಹಗುರವಾದ ತೋಪು ಮತ್ತು ಟೇಂಕು ದಳಗಳನ್ನೊಯ್ಯುವ ತರಬೇತಿಯೂ ಹೈನಾನಿನಲ್ಲಿ ನಡೆದಿತ್ತು. ಫಿಲಿಪ್ಪೈನ್ ದ್ವೀಪದ ಪರಿಸ್ಥಿತಿಯಲ್ಲಿ ಥಕ್ಕನೆ ಸಮುದ್ರಧಾಳಿ ನಡಿಸಿ ಪ್ರಬಲ ಸೇನೆಯನ್ನು ನೆಲಕ್ಕಿಳಿಸುವ ತರಬೇತಿಯು ಫೋರ್ಮೋಸ ದ್ವೀಪದಲ್ಲಿ ನಡೆದಿತ್ತು. 1937ರ ಮೊದಲೇ ಸಮುದ್ರಧಾಳಿಗಾಗಿ, ಸಕಲ ಯುದ್ಧ ಸಿದ್ಧತೆಯುಳ್ಳ 120 ಮಂದಿ ಸೈನಿಕರನ್ನೊಯ್ಯುವ ದೊಡ್ಡ ದೋಣಿಗಳು ಕಟ್ಟಲ್ಪಟ್ಟಿದ್ದುವು. 15 ದಿವಸಗಳ ವರೆಗಿನ ಆಹಾರ ಮತ್ತು ಇತರ ಹಗುರವಾದ ಯುದ್ಧೋಪಕರಣಗಳನ್ನು ಸ್ವತಹ ಹಿಡಿದುಕೊಂಡು ಕಾಡುಪ್ರದೇಶದೊಳಕ್ಕೆ ಒಮ್ಮೆಯೇ ನುಗ್ಗಿ ಹೋರಾಟ ನಡಿಸಲು ಜಾಪಾನ ಸೈನಿಕರು ಚೆನ್ನಾಗಿ ತರಬೇತಿ ಹೊಂದಿದ್ದರು. ಆದುದರಿಂದಲೇ ಪೂರ್ವದಲ್ಲವರು ಇಡೀ ಲೋಕವನ್ನೇ ದಂಗುಗೊಳಿಸುವ ವಿಜಯಗಳನ್ನು ಪಡೆದಿರುವರು.

ಢಕ್ಕದಲ್ಲಿ ಹಿಂದು ಮುಸಲ್ಮಾನ ಬಾಂಧವ್ಯ

ಬಂಗಾಳದ ಪ್ರಧಾನ ಮಂತ್ರಿಗಳಾದ ಹಕ್ಕುರೂ, ಇತರ ಸಚಿವರುಗಳಾದ ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿ ಮತ್ತು ಢಕ್ಕದ ನವಾಬ ಬಹದೂರರೂ ಇತ್ತಲಾಗಿ ಢಕ್ಕವನ್ನು ಸಂದರ್ಶಿಸಿದಾಗ ಸಹಸ್ರಗಟ್ಲೆಯಲ್ಲಿ ಹಿಂದು ಮುಸಲ್ಮಾನರು ರೈಲ್ವೇ ಸ್ಟೇಶನಿನಲ್ಲಿ ಸೇರಿ ಅವರನ್ನು ಸ್ವಾಗತಿಸಿದರು. ಆ ಮೇಲೆ ವಿಜೃಂಭಣೆಯ ಮೆರವಣಿಗೆ ನಡಿಸಿದರು. ಈ ಸಂದರ್ಭದಲ್ಲಿ ಹಿಂದುಗಳು ಅಲ್ಲಾ ಹೋ ಅಕ್ಬರೆಂದೂ, ಮುಸಲ್ಮಾನರು ವಂದೇ ಮಾತರಮ್ ಎಂದೂ ಉದ್ಘೋಷಿಸಿ ಪರಸ್ಪರ ಬಾಂಧವ್ಯ ತೋರಿಸಿದರು. ಅನಂತರ ನಡೆದ ಸಾರ್ವಜನಿಕ ಸಭೆಗೆ ಸುಮಾರು 50,000 ಹಿಂದು ಮುಸಲ್ಮಾನರು ನೆರೆದುಬಂದಿದ್ದರು. ಕೆಲಸಮಯದ ಮೊದಲು ಹಿಂದು ಮುಸಲ್ಮಾನರ, ಒಬ್ಬರೊಬ್ಬರ ತಲೆ ಒಡೆಯುವ ಭೀಕರ ಹಾಗೂ ಜುಗುಪ್ಸೆಯನ್ನುಂಟುಮಾಡುವ ದೃಶ್ಯಗಳ ರಂಗಭೂಮಿಯಾಗಿತ್ತು ಢಕ್ಕಾ. ಸಾವಿರಾರು ಮಂದಿ ಹಿಂದುಗಳು ಅದನ್ನು ಬಿಟ್ಟು ಹೋಗಿದ್ದರು. ಅದೇ ಢಕ್ಕದಲ್ಲೇ ಇಂದೀಗ ಸ್ವಲ್ಪ ಸಮಯದಲ್ಲೇ ಹಿಂದು ಮುಸಲ್ಮಾನ ಬಂಧುತ್ವದ ದೃಶ್ಯಗಳನ್ನು ಕಾಣುವಂತಾಗಿದೆ. ಈ ಸಮಾಜಗಳ ಮುಖಂಡರೊಂದುಗೂಡಿ ನಡೆದರೆ ಹಿಂದು ಮುಸಲ್ಮಾನ ಐಕ್ಯ ಸ್ಥಾಪನೆಯು ಅದೆಷ್ಟು ಸುಲಭವೆಂಬುದನ್ನು ಢಕ್ಕವು ಸಿದ್ಧಗೊಳಿಸುವುದು.

ಹಿಟ್ಲರ್ ಮತ್ತು ಸ್ಟಲಿನರ ಭಾಷಣಗಳು

ಹಿಟ್ಲರರ ಜರ್ಮನ್ ರಿಕ್‌ಸ್ಟೇಗಿನ ಭಾಷಣದಲ್ಲಿ ನಿರಾಶೆಯು ತೋರಿಬರುತ್ತದೆ. ಮೊದಲಿನಷ್ಟು ಭರವಸೆ ಮತ್ತು ಉತ್ಸಾಹವು ಹಿಟ್ಲರರಲ್ಲಿರುವಂತೆ ತೋರುವುದಿಲ್ಲ. ಮುಂದೆ ಸಂಭವಿಸದಹುದಾದ ಅನಾಹುತದ ಛಾಯೆಯನ್ನದರಲ್ಲಿ ಕಾಣಬಹುದು. ಯುದ್ಧದ ಕುರಿತು ಜರ್ಮನರಲ್ಲಿ ಮೊದಲಿನಷ್ಟು ಉತ್ಸಾಹವಿರುವುದಿಲ್ಲ ಮಾತ್ರವಲ್ಲದೆ ಅತೃಪ್ತಿಯು ತಲೆದೋರಹತ್ತಿರುವುದೆಂದು ಹಿಟ್ಲ[illegible] ಬಹುದಾಗಿದೆ. ಇಲ್ಲವಾದರೆ ಈ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಅಧಿಕಾರವಾದರೂ ಯಾಕೆ? ತನ್ನ ಘೋರನೆಯ ವಿರೋಧಿಗಳನ್ನು ತನ್ನಿಚ್ಛಾನುಸಾರ ಅಣಗಿಸಲಿಕ್ಕಿಲ್ಲವೇ? ಆದರೆ ಸ್ಟಲಿನರ ಮೇದಿನಾಚರಣೆಯ ಸಂದರ್ಭದ ಭಾಷಣವು ಆಶೆ ಮತ್ತು ಭರವಸೆಯನ್ನು ತೋರಿಸುವಂತಹದಾಗಿದೆ. ಅವರು ಈ ವರ್ಷಾಂತ್ಯದೊಳಗೇನೇ ಹಿಟ್ಲರರನ್ನು ನಾಶಗೊಳಿಸುವ ನಿರೀಕ್ಷೆಯಿಂದಿರುತ್ತಾರೆ. ಅವರ ಭಾಷಣದಲ್ಲಿ ನವೀನ ಉತ್ಸಾಹವು ತೋರಿಬರುತ್ತದೆ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ಪಕ್ವ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುಟ್ಟುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ವಿಷಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೀವನ ಪ್ರಿಂಟಿಂಗ್ ಕಂಪೆನಿ

260. ತ್ರಿಪ್ಲಿಕೇನ್ ರೋಡ್, ಮದರಾಸ್

Keep the enemy away

from India

Contribute AGAIN to the

Governor's war fund.

Buy MORE defence bonds

and savings certificates.

GIVE AND LEND

FOR

VICTORY.

ಬೇಕಾಗಿದ್ದಾರೆ

ನಮ್ಮ ಸೂಡ ಕುಂಜ ಎಲಿಮೆಂಟರಿ ಶಾಲೆಗೆ ಒಬ್ಬ ಹಾಯರ್ ಎಲಿಮೆಂಟರಿ ಟ್ರೈಂಡ್ ಉಪಾಧ್ಯಾಯರು ಬೇಕಾಗಿದ್ದಾರೆ. ಸಂಬಳ ಎಸ್ಟ್ಯಾಂಡ್ ಗ್ರಾಂಟಿನ 85% ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

The Manager,

Sooda Kunja Ele. School,

Karkal Taluk,

P. O. Sooda. S. K.

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability)

ESTD: 1906.

ಉಡುಪಿ, ಗುರುವಾರ, ೭-೫-೧೯೪೧

ಹಿಟ್ಲರ್ ಮುಸಲೋನಿ ಮಾತುಕತೆಯ ಉದ್ದೇಶವೇನು?

ಕಳೆದ ವಾರ ಸಾಲ್ಜ್‌ಬರ್ಗನಲ್ಲಿ ಹಿಟ್ಲರ್ ಮುಸಲೋನಿಗಳೊಳಗೆ ನಡೆದ ಮಾತುಕತೆಯು ಸಂಪೂರ್ಣ ಒಡಂಬಡಿಕೆಯಲ್ಲಿ ಕೊನೆಗೊಂಡಿರುವುದೆಂದು ಪ್ರಕಟವಾಗಿದೆ. ಆದರೆ ಈ ಮಾತುಕತೆಯ ವಿಷಯವೇನೆಂಬುದು ತಿಳಿದುಬಂದಿಲ್ಲ. ಯುರೋಪಿನ ಕಳೆದ ಹಲವು ತಿಂಗಳುಗಳ ವಿದ್ಯಮಾನಗಳ ದೃಷ್ಟಿಯಿಂದ ಸಾಲ್ಜ್‌ಬರ್ಗ್ ಮಾತುಕತೆಯ ಉದ್ದೇಶವೇನೆಂದು ಊಹಿಸುವುದೇನೂ ಕಷ್ಟವಲ್ಲ.

ಆಕ್ಸಿಸ್ ರಾಷ್ಟ್ರಗಳಿಂದು ತಮ್ಮ ಯುದ್ಧ ತಂತ್ರವನ್ನು ಜಯಶೀಲವಾಗಿ ಮುಂದೊತ್ತಬೇಕಾದರೆ ಫ್ರಾನ್ಸಿನ ಸಹಕಾರವು ಅತ್ಯಗತ್ಯವಿರುತ್ತದೆ. ಆದಕ್ಕಾಗಿಯೇ ಹಿಟ್ಲರರು ಎಮ್. ಲಾವಲರನ್ನು ಅಧಿಕಾರಕ್ಕೆ ತಂದುದಾಗಿದೆ. ಜರ್ಮನಿ ಮತ್ತು ಇಟೆಲಿಗಳೊಂದಿಗೆ ಅನುಕೂಲವಾದ ಸಂಧಿ ಮಾಡಿಕೊಳ್ಳುವ,ಫ್ರಾನ್ಸ್'ಮತ್ತು ಫ್ರೆಂಚ್ ಸಾಮ್ರಾಜ್ಯದ ಅಖಂಡತೆಯನ್ನು ಕಾಪಾಡಿಕೊಳ್ಳುವ ಆಶ್ವಾಸನೆಯಿಂದ ಎಮ್. ಲಾವಲರು ಫ್ರೆಂಚರ ವಿಶ್ವಾಸ ಪಡೆಯಲು ಮುಂದಾಗಿದ್ದಾರೆ. ಆದರೆ ಲಾವಲರ ಕೇಳಿಕೆಗಳು ಇಟೆಲಿಯ ಆಕಾಂಕ್ಷೆ ಮತ್ತು ಉದ್ದೇಶಕ್ಕೆ ವಿರುದ್ಧವಿರುತ್ತವೆ. ಈ ಸಂಧಿಕಾಲದಲ್ಲಿ ಯುದ್ಧವನ್ನು ಜಯಶೀಲವಾಗಿ ಮುನ್ನಡೆಸಲು ಫ್ರಾನ್ಸಿನ ಸಹಕಾರವಿಲ್ಲದೆ ಗತ್ಯಂತರವಿಲ್ಲದುದರಿಂದ ಇಟೆಲಿಯು ಫ್ರಾನ್ಸಿನ ಸಂಬಂಧವಾದ ತನ್ನ ಕೇಳಿಕೆಗಳನ್ನು ಮುಂದೊತ್ತದಂತೆ ಮುಸಲೋನಿಯವರನ್ನು ಸಮಾಧಾನಪಡಿಸುವುದೇ ಹಿಟ್ಲರ್ ಮುಸಲೋನಿ ಮಾತುಕತೆಯ ಮುಖ್ಯ ಉದ್ದೇಶವೆಂದು ಹೇಳಬಹುದು.

ಸಂಯುಕ್ತ ರಾಷ್ಟ್ರಗಳ ಸಮುದ್ರ ಬಲವನ್ನು ಮುರಿದು, ರಷ್ಯ, ಆಫ್ರಿಕ, ಇಂಡಿಯ, ಬರ್ಮ, ಚೈನಾ ಮತ್ತು ಆಸ್ಟ್ರೇಲಿಯದ ರಣರಂಗಗಳ ಸೇನೆಗೆ ಯುದ್ಧ ಮತ್ತು ಆಹಾರ ಸಾಮಾಗ್ರಿ ಸರಬರಾಯಿಯ ಮಾರ್ಗಗಳನ್ನೇ ಕಡಿದುಹಾಕುವುದು ಆಕ್ಸಿಸ್ ರಾಷ್ಟ್ರಗಳ ಪ್ರಾಮುಖ್ಯವಾದೊಂದು ಯುದ್ಧತಂತ್ರವಿರುತ್ತದೆ. ಈ ಉದ್ದೇಶದಿಂದಲೇ ಅವು ಭೂಮಧ್ಯ ಸಾಗರವನ್ನು ತಮ್ಮ ಕೊಳವಾಗಿ ಮಾಡಲು ಪ್ರಯತ್ನ ನಡೆಸುತ್ತಾ ಬಂದಿವೆ. ಅದರಿಂದ ಲಿಬಿಯದ ಇಟೆಲಿಯಾನ ಮತ್ತು ಜರ್ಮನ್ ಸೇನೆಗೆ ನಿರಾತಂಕವಾಗಿ ಸಹಾಯ ಕಳುಹಿಸಲು ಸಾಧ್ಯವಾಗುವುದು ಮಾತ್ರವಲ್ಲದೆ ಮಧ್ಯ ಪೂರ್ವ ಮತ್ತು ಕೊಕಸಸಿನ ಮೇಲೇರಿ ಹೋಗುವುದಕ್ಕೂ ಬಹಳ ಅನುಕೂಲವಾಗುವುದು. ಆದರೆ ಅದಕ್ಕೆ ಮಾಲ್ಟವು ದೊಡ್ಡ ತೊಡಕಾಗಿ ಪರಿಣಮಿಸಿದೆ. ಅದನ್ನು ತಮ್ಮ ನೆಲೆಯಾಗಿ ಮಾಡಿಕೊಂಡು ಬ್ರಿಟಿಷ್ ವಿಮಾನ ಮತ್ತು ಯುದ್ಧ ಹಡಗಗಳು, ಸೇನೆ ಮತ್ತು ಸಾಮಾಗ್ರಿಗಳನ್ನೊಯ್ಯುವ ಆಕ್ಸಿಸ್ ಹಡಗಗಳನ್ನು ಮುಳುಗಿಸಿ ಹೆಚ್ಚಿನ ನಷ್ಟವನ್ನುಂಟುಮಾಡಿರುತ್ತವೆ. ಭೀಷಣ ಹಾಗೂ ನಿರಂತರವಾದ ವಿಮಾನಧಾಳಿಯಿಂದ ಮಾಲ್ಟವನ್ನು ನಾಶಮಾಡುವ ಪ್ರಯತ್ನವು ನಿಷ್ಫಲವಾಗಿರುತ್ತವೆ. ಫ್ರಾನ್ಸಿನ ಸಹಕಾರವಿಲ್ಲದೆ ಭೂಮಧ್ಯ ಸಾಗರದ ಮೇಲೆ ಅಧಿಕಾರ ಸ್ಥಾಪಿಸಲು ಸಾಧ್ಯವಿಲ್ಲೆಂದೀಗ ಆಕ್ಸಿಸ್ ರಾಷ್ಟ್ರಗಳು ಮನಗಂಡಿರುತ್ತವೆ. ಅವುಗಳ ಸಬ್ ಮೆರೀನ್ ಧಾಳಿಯು ಸಂಯುಕ್ತ ರಾಷ್ಟ್ರಗಳಿಗೆ ಕೆಲಮಟ್ಟಿನ ನಷ್ಟವನ್ನುಂಟುಮಾಡಿ, ಕೆಲವು ಸಮುದ್ರ ಮಾರ್ಗಗಳು ಅಪಾಯಕರವಾಗಿ ಮಾಡಲ್ಪಟ್ಟಿರುವನಾದರೂ ಬ್ರಿಟಿಷ್ ಮತ್ತು ಅಮೆರಿಕಾದ ಹಡಗಗಳು ಇತರ ಸುರಕ್ಷಿತ ಮಾರ್ಗಗಳಿಂದ ಸಾಮಾಗ್ರಿಗಳನ್ನು ಯಥಾಪ್ರಕಾರ ಒಯ್ಯುತ್ತಿವೆ. ಭೂಮಧ್ಯ ಸಾಗರದ ಮಾರ್ಗವು ಮುಚ್ಚಲ್ಪಟ್ಟರೂ ಬ್ರಿಟಿಷ್ ಹಡಗಗಳು ಸುತ್ತಾಗಿ ಗುಡ್ ಹೋಪ್ ಭೂಶಿರದ ಮಾರ್ಗವಾಗಿ ಹೋಗುತ್ತಿವೆ. ಇದೇ ರೀತಿ ಯುನೈಟೆಡ್ ಸ್ಟೇಟ್ಸಿನಿಂದ ಆಸ್ಟ್ರೇಲಿಯಕ್ಕೆ ಹೋಗುವ ಹಡಗಗಳು ಹತ್ತಿರದ ಅಟ್ಲಾಂಟಿಕ ಸಾಗರ ಮಾರ್ಗ ಬಿಟ್ಟು ದೂರದ ಶಾಂತಸಾಗರ ಮಾರ್ಗ ಹಿಡಿಯಬೇಕಾಗಿವೆ ಈ ಮಾರ್ಗಗಳನ್ನು ಅಪಾಯಕರವಾಗಿ ಮಾಡಲು ಆಕ್ಸಿಸ್ ರಾಷ್ಟ್ರಗಳಿಗೆ ಸಾಧ್ಯವಾಗಿರುವುದಿಲ್ಲ. ಫ್ರಾನ್ಸು ಸಹಕಾರವಿತ್ತರೆ ಮಾತ್ರ ಅದು ಸಾಧ್ಯವಾಗಬಹುದಾಗಿದೆ. ಆಗ ಆಕ್ಸಿಸ್ ಸಬ್‌ಮೆರೀನುಗಳು ಮಿತ್ರರಾಷ್ಟ್ರಗಳ ಈ ಗಣ ಸಮುದ್ರ ಮಾರ್ಗಗಳ ಸಮೀಪದ ಸಂಡುಕಟ್ಟಿನ ಸ್ಥಳಗಳ ಆಶ್ರಯ ಪಡೆದು ಅವುಗಳ ಹಡಗ ಸಂಚಾರವನ್ನು ತಡೆಗಟ್ಟಬಹುದು. ಹಿಂದೀ ಸಾಗರದ ಹಡಗ ಸಂಚಾರ ಮಾರ್ಗದ ಪೂರ್ವ ಪಾರ್ಶ್ವದಲ್ಲೇ ಇರುವ ಮಡಗಾಸ್ಕರ್ ದ್ವೀಪ ಮತ್ತು ಯುರೋಪ್, ಮಧ್ಯಪೂರ್ವ, ಮತ್ತು ಇಂಡಿಯಾಗಳಿಗೆ ಅಮೆರಿಕದಿಂದ ಸಾಮಾಗ್ರಿ ಬರುವ ಪ್ರಾಮುಖ್ಯವಾದ ಅತ್ಲಾಂಟಿಕ ಸಾಗರ ಮಾರ್ಗದ ನಡುವಿನಲ್ಲೇ ಇರುವ ಡಾಕಾರ್ ಬಂದರದ ಆಶ್ರಯವು ಆಕ್ಸಿಸ್ ಸಬ್ ಮೆರೀನ್ ಮತ್ತು ಸಮುದ್ರ ವಿಮಾನಗಳಿಗೆ ದೊರೆತಲ್ಲಿ ಮಿತ್ರ ರಾಷ್ಟ್ರಗಳಿಗೆ ದೊಡ್ಡ ಹಾನಿಯಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಫ್ರಾನ್ಸಿನ ಸಹಕಾರವನ್ನು ಹೇಗೆ ಪಡೆಯುವುದೆಂಬುದನ್ನೇ ಹಿಟ್ಲರ್ ಮುಸಲೋನಿಗಳು ಒಟ್ಟು ಸೇರಿ ಆಲೋಚಿಸಿರುವುದೆಂದು ನಂಬಬಹುದಾಗಿದೆ.

ಯುದ್ಧವನ್ನು ಬೇಗನೆ ಕೊನೆಗೊಳಿಸಲು ಸಾಧ್ಯವಿಲ್ಲೆಂಬುದನ್ನೀಗ ಹಿಟ್ಲರ್ ಮುಸಲೋನಿಗಳು ಮನಗಂಡಿರುತ್ತಾರೆ. ದೀರ್ಘಕಾಲದ ಯುದ್ಧ ನಡಿಸಲು ಪೆಟ್ರೋಲಿನ ಕೊರತೆಯು ಅವರಿಗೆ ದೊಡ್ಡ ತೊಂದರೆಯಾಗಿದೆ. ಆದುದರಿಂದಲೇ ಹಿಟ್ಲರರು, ಮಧ್ಯಪೂರ್ವ ಮತ್ತು ಕೊಕಸಸಿನ ಮೇಲೆ ಪ್ರಚಂಡಧಾಳಿ ನಡಿಸುವ ಆಲೋಚನೆಯಿಂದಿರುವರೆಂದು ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ಲಿಬಿಯದ ಯುದ್ಧವನ್ನೂ ಭರದಿಂದ ಮುನ್ನಡೆಸಲೇ ಬೇಕಾಗಿದೆ. ಫ್ರಾನ್ಸು ಸಹಕರಿಸಿದರೆ ಈ ಯುದ್ಧಗಳನ್ನು ನಡಿಸಲು ಬಹಳ ಅನುಕೂಲವಾಗುವುದು ಮಧ್ಯ ಪೂರ್ವದ ಧಾಳಿಯನ್ನು ಯಾವ ರೀತಿಯಲ್ಲಿ ನಡಿಸುವುದೆಂಬುದೂ ಹಿಟ್ಲರ್ ಮುಸಲೋನಿ ಮಾತುಕತೆಯು ಇನ್ನೊಂದು ವಿಷಯವಿರಬಹುದು.

ಲಾವಲರ ಒಳಸಂಚಿನಿಂದಾಗಿ ಫ್ರಾನ್ಸು ಕ್ರಮೇಣ ಆಕ್ಸಿಸ್ ರಾಷ್ಟ್ರಗಳೊಂದಿಗೆ ಸಹಕರಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ. ಬ್ರಿಟಿಷ್ ವಿಮಾನಗಳು ಪರಿಸಿನ ಮೇಲೆ ಧಾಳಿ ನಡಿಸಲಾರಂಭಿಸಿದುದೂ, ಮಡಗಾಸ್ಕರ್ ದ್ವೀಪವನ್ನು ಬ್ರಿಟಿಷ್ ಸೈನಿಕರು ಆಕ್ರಮಿಸಿದುದೂ ಲಾವಲರಿಗೆ ಆಕ್ಸಿಸ್ ರಾಷ್ಟ್ರಗಳೊಂದಿಗೆ ಸಹಕರಿಸಲು ಕಾರಣಗಳಾಗಬಹುದು. ಇನ್ನು ಕೆಲವೇ ವಾರಗಳು ಬಹಳ ಸಂದಿಗ್ಧವಾದುವು. ಯುರೋಪಿನ ಮತ್ತು ಯುದ್ಧದ ಭವಿಷ್ಯವು ಈ ವಾರಗಳಲ್ಲಿ ನಡೆಯುವ ವಿದ್ಯಮಾನಗಳಿಂದ ನಿರ್ಧರಿಸಲ್ಪಡುವುದೆಂದು ಹೇಳಬಹುದು.

ಹಿಂದು ದೇಶದ ನೌಕಾರಕ್ಷಣೆ

ಹಿಂದುದೇಶಕ್ಕೆ 100 ಮೈಲು ವಿಶಾಲವಾದ ಸಮುದ್ರ ಕರಾವಳಿಯಿದೆ. ಯುದ್ಧಾರಂಭವಾದ ಮೇಲೆ ಎರಡು ಪಾಲು ಹೆಚ್ಚಿಸಲ್ಪಟ್ಟಿರುವ ಹಿಂದೀ ನೌಕಾಪಡೆಯು ಇಷ್ಟೊಂದು ವಿಶಾಲ ಸಮುದ್ರ ಕರಾವಳಿಯ ರಕ್ಷಣೆಗೆ ಏನೇನೂ ಸಾಲದು. ಸಿಂಗಪುರದ ಪತನವಾದ ಮೇಲೆ ಹಿಂದುಸ್ಥಾನದ ಸಮುದ್ರ ಕರಾವಳಿಯು ಮಹತ್ತರ ಅಪಾಯಕ್ಕೊಳಗಾಗಿದೆ. ಆದರೂ ಸರಕಾರವು ಹಿಂದೀಯರನ್ನು ನೌಕಾಧಿಕಾರಿಗಳನ್ನಾಗಿ ತರಬೇತಿ ಮಾಡಲು ಇನ್ನೂ ಹಿಂಜರಿಯುತ್ತಿದೆ. ಹಿಂದೀ ಕಲಾಸಿಗಳು ಮತ್ತು ಇತರ ಕೆಳನೌಕರರು ಬೇಕಷ್ಟು ಮಂದಿ ಇದ್ದಾರೆ. ಬ್ರಿಟಿಷ್ ನೌಕಾಪಡೆಯಲ್ಲೇ ಹಿಂದೀ ಕಲಾಸಿಗಳ ಮತ್ತು ಇತರ ಕೆಳ ನೌಕರರ ಸಂಖ್ಯೆಯು ಸೇಕಡ ೨೫ ರಷ್ಟಿದೆ. ಹಿಂದೀ ನೌಕಾ ಕೆಲಸಗಾರರು ಅಟ್ಲಾಂಟಿಕ್, ಪೆಸಿಫಿಕ್, ಹಿಂದೀ ಮತ್ತು ಭೂಮಧ್ಯ ಸಾಗರಗಳಲ್ಲಿ ಸಂಚರಿಸುವ ಸರಬರಾಯಿ ಹಡಗಗಳಲ್ಲೆಲ್ಲಾ ಅತ್ಯಂತ ಅಪಾಯಕರ ಕೆಲಸಗಳನ್ನು ಬಹಳ ಎಚ್ಚರಿಕೆ ಮತ್ತು ಚತುರತೆಯಿಂದ ನಡಿಸಿ ಮೇಲಧಿಕಾರಿಗಳ ಮೆಚ್ಚಿಗೆ ಪಡೆದಿರುತ್ತಾರೆ. ಆದರೆ ನೌಕಾಧಿಕಾರಿಗಳಾಗಲು ಮಾತ್ರ ಹಿಂದೀಯರು ಅರ್ಹರಾಗಿರುವುದಿಲ್ಲೆಂಬುದು ಸಖೇದಾಶ್ಚರ್ಯ ಸಂಗತಿಯಲ್ಲವೆ? ಹಿಂದೀ ನೌಕಾಪಡೆಯಲ್ಲೇ ೯ ಮಂದಿ ಬ್ರಿಟಿಷರಿಗೆ ೫ ಮಂದಿ ಹಿಂದೀಯರ ಪ್ರಮಾಣದಲ್ಲಿ ನೌಕಾಧಿಕಾರಿಗಳು ತರಬೇತಿ ಹೊಂದುತ್ತಿದ್ದಾರೆ ತಮ್ಮ ದೇಶದ ನೌಕಾಪಡೆಯಲ್ಲೇ ಹಿಂದೀಯರು ಹೆಚ್ಚಾಗಿ ಅಧಿಕಾರಿಗಳಾಗಲು ಆಸ್ಪದವಿರುವುದಿಲ್ಲ. ಅಂದ ಮೇಲೆ ಬ್ರಿಟಿಷ್ ನೌಕಪಡೆಯ ಮಾತೇಕೆ?

ಪ್ರತಿವರ್ಷ ಡಫರಿನ ಹಿಂದೀ ನೌಕಾಪಡೆಯ ತರಬೇತಿಗೆ ಹೆಚ್ಚೆಚ್ಚು ಹಿಂದೀಯರು ಬರುತ್ತಿದ್ದರು. ಆದರೆ ಅದೊಂದು ನಿಯಮಿತ ಪ್ರಮಾಣದಲ್ಲಿ ಮಾತ್ರ ಅವರನ್ನು ತೆಗೆದುಕೊಳ್ಳಲಾಗುತ್ತಿತ್ತು. ಹಿಂದೀ ನೌಕಾಧಿಕಾರಿಗಳ ತರಬೇತಿಗೆ ಕೆಲವೇ ಮಂದಿ ಮಾತ್ರ ತೆಗೆದುಕೊಳ್ಳಲ್ಪಡುತ್ತಾರೆ. ಇನ್ನಾದರೂ ಸರಕಾರವು ಕಣ್ಣು ತೆರೆದು ಹಿಂದೀ ನೌಕಾ ಪಡೆಗೆ ಹೆಚ್ಚಾಗಿ ಹಿಂದೀಯರನ್ನೇ ಅಧಿಕಾರಿಗಳನ್ನಾಗಿ ತರಬೇತಿ ಮಾಡಬೇಕು. ನಾವಿಕ ತರಬೇತಿ ಕೇಂದ್ರಗಳನ್ನು ಹಿಂದುದೇಶದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಅಲ್ಲಲ್ಲಿ ಸ್ಥಾಪಿಸಿ ಸಹಸ್ರಗಟ್ಟಲೆಯಲ್ಲಿ ನಾವಿಕರನ್ನು ತರಬೇತಿ ಮಾಡಬೇಕು. ಈ ತರಬೇತಿಗೆ ಬರುವವರ ಪ್ರಾಯದ ಮತ್ತು ಯೋಗ್ಯತೆಯ ಪ್ರಮಾಣವನ್ನು ತಗ್ಗಿಸಬೇಕು. ಹಿಂದೀ ವ್ಯಾಪಾರಿ ಹಡಗಪಡೆಯನ್ನು ಹೆಚ್ಚಿಸುವ ಕುರಿತು ಸರಕಾರವು ಹೆಚ್ಚಿನ ಗಮನಕೊಡಬೇಕು ಹಡಗಗಳನ್ನು ಹೆಚ್ಚೆಚ್ಚಾಗಿ ಕಟ್ಟಲು ಸಮುದ್ರ ಕರಾವಳಿಯಲ್ಲಿ ಅಲ್ಲಲ್ಲಿ ಯಾರ್ಡುಗಳು ಸ್ಥಾಪಿಸಲ್ಪಡಬೇಕು. ಹಿಂದೀ ಯುದ್ಧ ಹಡಗಪಡೆ ಮತ್ತು ವ್ಯಾಪಾರಿ ಹಡಗಪಡೆಗಳನ್ನು ಶೀಘ್ರವಾಗಿ ಹೆಚ್ಚಿಸಿ ಸಂಘಟಿಸದಿದ್ದರೆ ಹಿಂದುಸ್ಥಾನದ ಸಮುದ್ರ ಕರಾವಳಿಯ ರಕ್ಷಣೆಯು ಸಾಧ್ಯವೇ ಇಲ್ಲ.

ಕ್ರಿಪ್ಸರ ಕುಯುಕ್ತಿ!

ಅಲಹಾಬಾದಿನಲ್ಲಿ ನಡೆದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನ ಅಜಾದರು, ಕ್ರಿಪ್ಸರ ಸಂಧಾನವು ಮುರಿದು ಹೋಗಲು ಮುಖ್ಯ ಕಾರಣವೇನೆಂಬುದನ್ನು ವಿದಿತಗೊಳಿಸಿರುವರು. ಕೇಂದ್ರದಲ್ಲಿ ಕೂಡಲೆ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ, ಪ್ರಜಾಜವಾಬ್ದಾರಿ ಮಂತ್ರಿ ಮಂಡಲಕ್ಕೆ ಆಡಳಿತವನ್ನೊಪ್ಪಿಸುವ ತತ್ವವನ್ನು ಕ್ರಿಪ್ಸರು ತನ್ನ ಮಾತುಕತೆಯ ಆರಂಭದಲ್ಲಿ ಒಪ್ಪಿದ್ದರು. ಈ ಮಂತ್ರಿ ಮಂಡಲವು ಬ್ರಿಟಿಷ್ ಮಂತ್ರಿ ಮಂಡಲದಂತಹ ಜವಾಬ್ದಾರಿಯುಳ್ಳದಾಗಿದ್ದು ವೈಸರಾಯರು ಬ್ರಿಟಿಷ್ ಚಕ್ರವರ್ತಿಗಳಂತೆಯೇ ಸೂತ್ರ ಬದ್ಧ ಮೇಲಧಿಕಾರಿಯಾಗಲಿರುವರೆಂದು ಹೇಳುವಷ್ಟು ಮುಂದುವರಿದಿದ್ದರು ಕ್ರಿಪ್ಸರು. ಕಾಂಗ್ರೆಸು ತನಗೇನೇ ಆಡಳಿತಾಧಿಕಾರವೆಲ್ಲಾ ದೊರೆಯಬೇಕೆಂದೇನೂ ವಾದಿಸಲಿಲ್ಲ. ಎಲ್ಲಾ ಪಕ್ಷಗಳೊಂದಿಗೆ ಸಹಕರಿಸಿ ಮಂತ್ರಿ ಮಂಡಲ ಸ್ಥಾಪಿಸಿ ಆಡಳಿತ ನಡಿಸಲು ಸಿದ್ಧವಿದ್ದಿತು. ಬ್ರಿಟಿಷ್ ಸರಕಾರವು

★ ಮೆಡಗಾಸ್ಕರನ್ನು ಬ್ರಿಟಿಷರು ಆಕ್ರಮಿಸಿದರು ★

ಮೆಡಗಾಸ್ಕರಿನ ಆಕ್ರಮಣ.

ಇದೇ ತಾ. 3ರಲ್ಲು ಬ್ರಿಟಿಷ್ ನೌಕಾ ಮತ್ತು ಭೂಸೈನಿಕರು, ಹಿಂದೀಸಾಗರದ ಫ್ರೆಂಚ್ ದ್ವೀಪವಾದ ಮೆಡಗಾಸ್ಕರಿನ ಮೇಲೆ ಧಾಳಿನಡಿಸಿ ಅದನ್ನು ಸಂಪೂರ್ಣವಾಗಿ ಆಕ್ರಮಿಸುವ ಪ್ರಯತ್ನಮಾಡುತ್ತಿರುವರು. ಡೀಗೋ ಸುವಾರೆಸ್ ಎಂಬ ಮೆಡಗಾಸ್ಕರಿನ ನೌಕಾನಿಲಯವನ್ನು ಬ್ರಿಟಿಷ್ ಸೈನಿಕರು ವಶಪಡಿಸಿಕೊಂಡು ಮುಂದೊತ್ತಿರುವರು. ಅವರಿಗೆ ಹೆಚ್ಚಿನ ವಿರೋಧವು ಇಷ್ಟರವರೆಗೆ ಇರುವುದಿಲ್ಲ. ಮೆಡಗಾಸ್ಕರ್ ದ್ವೀಪವು, ಹಿಂದೀಸಾಗರದ ಪ್ರಾಮುಖ್ಯ ಹಡಗ ಸಂಚಾರ ಮಾರ್ಗಗಳ ಸಂಮುಕಟ್ಟಿನ ಸ್ಥಳದಲ್ಲಿರುತ್ತದೆ. ಅದನ್ನು ಜಪಾನರು ವಶಪಡಿಸಿ ಕೊಳ್ಳುವರೆಂಬ ಸುದ್ದಿಯು ಇತ್ತಲಾಗಿ ದಟ್ಟವಾಗಿ ಹಬ್ಬಿತು.

ಅದಕ್ಕೆ ಸಿದ್ಧವಿದ್ದಿದ್ದರೆ ಜಾತೀಯ ಪ್ರಶ್ನೆಯನ್ನು ಕೂಡಲೆ ಇತ್ಯರ್ಥ ಪಡಿಸಲು ಸಾಧ್ಯವಾಗುತ್ತಿತ್ತು. ಕ್ರಿಪ್ಸರು ರಾಷ್ಟ್ರೀಯ ಸರಕಾರ ಸ್ಥಾಪಿಸುವ ತತ್ವವನ್ನೊಪ್ಪಿದುದರಿಂದಲೇ ತಾನು ಸಂಧಾನ ನಡಿಸಲೊಪ್ಪಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಭೆ ಕರೆದುದು. ಆದರೆ ಮಾತುಕತೆಯ ಕೊನೆಯಲ್ಲಿ ಕ್ರಿಪ್ಸರ ಧೋರಣೆಯೇ ಬದಲಾಯಿತು. ಅವರು ಹಿಂದೆ ತಾನೊಪ್ಪಿದ ವಿಷಯವನ್ನೇ ಕಡೆಗಣಿಸಿ ಈಗಣ ಎಗ್ಸಿಕ್ಯೂಟಿವ್ ಕೌನ್ಸಿಲನ್ನೇ ಸ್ವಲ್ಪ ಮಾತ್ರ ಬದಲಾಯಿಸಲು ಸಿದ್ಧರಿದ್ದರು. ಅದಕ್ಕೆ ಕಾಂಗ್ರೆಸು ತಯಾರಿಲ್ಲವೆಂದು ಮೌಲಾನ ಆಜದರು ಸಂಧಾನದ ವಿದ್ಯಮಾನಗಳನ್ನೆಲ್ಲಾ ವಿವರವಾಗಿ ತಿಳಿಸಿದರು. ಆದರೆ ಕ್ರಿಪ್ಸರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮತ್ತು ಅನಂತರ ಏಪ್ರಿಲ್ ತಾ. 29ರಲ್ಲು ರೇಡಿಯೋ ಮೂಲಕ ಕೊಟ್ಟ ಭಾಷಣದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ತತ್ವವನ್ನು ತಾನೊಪ್ಪಿದ ವಿಷಯವನ್ನೇ ಹೇಳಿರುವುದಿಲ್ಲ. ಯುದ್ಧ ಮುಗಿದ ಕೂಡಲೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವೀಯಲು ಬ್ರಿಟನು ಸಿದ್ಧವಿದೆ. ಹಿಂದುದೇಶದ ಮುಂದಿನ ರಾಜ್ಯಾಂಗ ರಚನೆಯ ಜವಾಬ್ದಾರಿಯನ್ನೂ ಹಿಂದೀಯರಿಗೆ ಬಿಟ್ಟುಕೊಡಲದು ತಯಾರಿದೆ. ಆದರೆ ಆ ಮೊದಲು ಅಂತರದಲ್ಲಿ ಯಾವ ರೀತಿಯ ಆಡಳಿತವಿರಬೇಕೆಂಬ ಕುರಿತು ಭಿನ್ನಾಭಿಪ್ರಾಯವುಂಟಾಗಿ ರಾಜಿ ಪ್ರಸ್ತಾಪವು ಮುರಿದುಹೋಯಿತು. ಪ್ರಕೃತ ರಾಜ್ಯಾಂಗ ರಚನೆಯಲ್ಲಿ ಹೆಚ್ಚಿನ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದರೆ ಬಹುಸಂಖ್ಯಾಕ ಸಮಾಜವು ಅಂತಹ ಬದಲಾವಣೆಯನ್ನಪೇಕ್ಷಿಸಿ, ಅಧಿಕಾರವನ್ನೆಲ್ಲಾ ತಾನೇ ಕೈವಶಮಾಡಿಕೊಳ್ಳುವ ಛಲ ಹಿಡಿಯಿತು. ಆದುದರಿಂದಲೇ ಸಂಧಿಯು ಮುರಿಯಿತೆಂದೇ ಕ್ರಿಪ್ಸರ ಭಾಷಣಗಳ ಸಾರಾಂಶ. ಮೌಲಾನ ಆಜದ್ ಮತ್ತು ಕ್ರಿಪ್ಸರ ಅಭಿಪ್ರಾಯಗಳೊಳಗೆ ಎಷ್ಟೊಂದು ಅಂತರವಿದೆ? ಸಂಧಿ ಪ್ರಸ್ತಾಪದ ಸಂದರ್ಭದಲ್ಲಿಯೂ, ಅನಂತರ ಆ ಕುರಿತಾದ ವಿದ್ಯಮಾನಗಳನ್ನು ಲೋಕದ ಮುಂದಿರಿಸುವಾಗಲೂ ಕ್ರಿಪ್ಸರು ಕುಯುಕ್ತಿ ನಡಿಸಿದುವರೆಂಬುದು ಇದರಿಂದ ಸ್ಪಷ್ಟವಾಗುವುದು.

ಬರ್ಮಾದ ಸಂದಿಗ್ಧ ಪರಿಸ್ಥಿತಿ-
ಮೆಡಗಾಸ್ಕರಿನ ಆಕ್ರಮಣ

ಮೆಡಗಾಸ್ಕರು ವೈರಿಗಳ ದೇಶವಾದರೆ ಹಿಂದೀಸಾಗರದ ಪ್ರಾಮುಖ್ಯ ಸಮುದ್ರ ಮಾರ್ಗಗಳಿಗೆ ದೊಡ್ಡ ಅಪಾಯ ಉಂಟಾಗುವುದು. ಆದುದರಿಂದ ಅದನ್ನು ಮೊದಲಾಗಿ ಬ್ರಿಟನೇ ವಶಪಡಿಸಿ ಕೊಳ್ಳಬೇಕೆಂದು ಇತ್ತೀಚೆಗೆ ಚಳವಳ ನಡೆದಿತ್ತು. ಮೆಡಗಾಸ್ಕರಿನ ಆಕ್ರಮಣದಲ್ಲಿ ಅಮೆರಿಕ, ದಕ್ಷಿಣ ಆಫ್ರಿಕ ಮತ್ತು ಸ್ವತಂತ್ರ ಫ್ರೆಂಚ್ ಸೈನಿಕರು ಭಾಗವಹಿಸಿರುವುದಿಲ್ಲ. ಬ್ರಿಟಿಷ್ ನಾವಿಕರು ಮತ್ತು ಸೈನಿಕರೇ ಆಕ್ರಮಣ ನಡಿಸಿದುದಾಗಿದೆ. ಈ ಆಕ್ರಮಣವು ಯುಕ್ತವಾದುದೆಂದೂ, ಅಗತ್ಯಬಂದಲ್ಲಿ ಅಮೆರಿಕನ್ನೂ ಆ ಬಗ್ಗೆ ಸಹಾಯವೀಯಲು ಸಿದ್ಧವಿರುವುದೆಂದೂ ಪ್ರೆಸಿಡೆಂಟ್ ರುಸುವೆಲ್ಟರು ಹೇಳಿರುವರು. ಅಮೆರಿಕಾದ ಪತ್ರಿಕೆಗಳೆಲ್ಲಾ ಮೆಡಗಾಸ್ಕರನ್ನು ವಶಪಡಿಸಿಕೊಳ್ಳುವುದು ಅತ್ಯಗತ್ಯವೆಂದು ಬ್ರಿಟನಿನ ವರ್ತನೆಯನ್ನು ಸಮರ್ಥಿಸಿರುವವು. ಆದರೆ ಈ ಕುರಿತು ವಿಶಿಫ್ರಾನ್ಸ್ ಎಂತಹ ಧೋರಣೆವಹಿಸುವುದೆಂದು ಹೇಳಬರುವುದಿಲ್ಲ. ಮೆಡಗಾಸ್ಕರಿನಲ್ಲಿ ಸೇನಾಸಿದ್ಧತೆಯು ನಡಯುತ್ತಿರುವುದು. ಇದೇ ತಾ. 6ರಲ್ಲಿ ವಿಶಿಮಂತ್ರಿ ಮಂಡಲದ ಸಭೆ ನಡೆದಿದೆ. ಜಾಪಾನ ರಾಯಭಾರಿಗಳಾದ ಎಡ್ಮಿರಲ್ ನೋಮೂರಾರವರು ವಿಶಿಸರಕಾರದೊಡನೆ ಮಾತುಕತೆ ನಡೆಸಿರುವರು. ಮೆಡಿಗಾಸ್ಕರಿನ ಆಕ್ರಮಣದಿಂದ ಹಿಂದೂದೇಶದ ಪಶ್ಚಿಮಕರಾವಳಿಯ ಸುರಕ್ಷಿತತೆಗೆ ಹೆಚ್ಚಿನ ಪ್ರಯೋಜನ ವಾದಂತಾಯಿತು.

ಬರ್ಮಾದ ನಿರಾಶಾ ಜನಕ ಪರಿಸ್ಥಿತಿ

ಬರ್ಮಾದ ಎರಡನೇ ಪಟ್ಟಣವಾದ ಮಂಡಲೆಗೆ ಜಾಪಾನರು ಇದೇ ತಾ 3ರಲ್ಲಿ ಪ್ರವೇಶಿಸಿರುವರೆಂಬುದರಲ್ಲಿ ಸಂದೇಹ ವಿಲ್ಲ. ಅಲ್ಲಿದ್ದ ಬ್ರಿಟಿಷ್ ಸೇನೆಯ ಪರಿಸ್ಥಿತಿಯು ಉತ್ಕಟವಾಗಿದೆ. ಜಾಪಾನರು ಅವರ ಹಿಂದೆ ಸರಿವಮಾರ್ಗಗಳನ್ನೆಲ್ಲಾ ಕಡಿದು ಅವರನ್ನಾವರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಚೀನೀ ಸೇನೆಯನ್ನೂ ಇದೇ ರೀತಿ ಆವರಿಸ ಲೆತ್ನಿಸುತ್ತಿದ್ದಾರೆ. ಬರ್ಮಾದಲ್ಲಿನ್ನು ಜಾಪಾನರೆದುರಾಗಿ ಪ್ರಬಲ ಹೋರಾಟ ನಡಿಸಲು ಸಾಧ್ಯವಾಗುವಂತೆ ತೋರುವುದಿಲ್ಲ. ಪರಿಸ್ಥಿತಿಯು ನಿರಾಶಾ ಜನಕವಾಗಿರುತ್ತದೆ. ಅಮೆರಿಕನ ವಿಮಾನಗಳು ರಂಗೂನಿನ ಮೇಲೆ ಪ್ರಬಲ ವಿಮಾನ ಧಾಳಿನಡಿಸಿ ದಕ್ಕೆಗಳನ್ನು ನಾಶಪಡಿಸಿರುತ್ತವೆ. ಜಾಪಾನರು ಅದನ್ನು ತಡೆಯಲೆತ್ನಿಸುತ್ತದಿಲ್ಲ. ಲಾಶಿಯೋ ಮತ್ತು ಅಖ್ಯಾನ್‌ಗಳ ಮೇಲೂ ಅಮೆರಿಕನ ವಿಮಾನಗಳು ಧಾಳಿನಡಿಸಿರುತ್ತವೆ.

ಪ್ರವಾಹವು ತಿರುಗಿದೆ.

"ಲಿಬಿಯ ಮತ್ತು ಇಂಡಿಯಗಳ ಹೊರತು ಇತರ-ರಣರಂಗಗಳನ್ನೂ ಯುಕ್ತ ಸಮಯದಲ್ಲಿ ತೆರೆಯಲು ನಾವು ಸಿದ್ಧತೆ ಮಾಡುತ್ತಿದ್ದೇವೆ. ಪ್ರವಾಹವು ಈಗ ತಿರುಗಿದೆ. ನಾವೀಗ ವೈರಿಗಿಂತ ಹೆಚ್ಚಿನ ಸಿದ್ಧತೆಯುಳ್ಳವರಿದ್ದು ನಮ್ಮ ಪ್ಲೇನುಗಳನ್ನು ಮುಂದುವರಿಸ ಬಹುದಾಗಿದೆ. ಯಾವಾಗ ಹೇಗೆ ಮತ್ತು ಎಲ್ಲಿ ಧಾಳಿಕಾರಕ ಹೋರಾಟ ನಡಿಸುವುದೆಂದು ನಾವೀಗ ನಿರ್ಧರಿಸಬಹುದು. ಅದನ್ನು ಜಯವೀಗೊಳಿಸಲು ನಾವುನಮ್ಮ ಕೆಲಸವನ್ನು ಬಹಳ ದಕ್ಷತೆಯಿಂದ ನಡಿಸ ಬೇಕಾಗಿದೆ" ಎಂದು ಬ್ರಿಟಿಷ್ ಯುದ್ಧ ಮಂತ್ರಿ ಮಂಡಲದ ಸದಸ್ಯರಾದ ಮಿ. ಅರ್ನೆಸ್ಟ್ ಬೆವಿನರು ಇದೇ ತಾ. 3ರಲ್ಲಿ ಹೇಳಿರುವರು. ವೈರಿಯ ಮೇಲೆ ಬೀಳುವ ಸಮಯ ಈಗ ಬಂದಿದೆಯೆಂದು, ಸರ್ ಸ್ಟಾಫೋರ್ಡ್ ಕ್ರಿಪ್ಸರು ಪೋಲೆಂಡಿನ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪೋಲರಿಗೆ ಸಂದೇಶವೀಯುವಾಗ ಹೇಳಿರುವರು. ಮಿತ್ರರಾಷ್ಟ್ರಗಳು ಜರ್ಮನಿಯ ಮೇಲೇರಿ ಹೋಗಬೇಕೆಂಬ ಅಭಿಪ್ರಾಯವು ಇಂಗ್ಲೆಂಡಿನಲ್ಲಿಯೂ ಅಮೆರಿಕದಲ್ಲಿಯೂ ಬಲವಾಗುತ್ತಿರುವುದು. ಇಂಗ್ಲೆಂಡಿನಲ್ಲಿ ನಡೆದ ಪಾರ್ಲಿಮೆಂಟಿನ ಎರಡು ಉಪಚುನಾವಣೆಯ ಫಲಿತಾಂಶದಿಂದ ಬ್ರಿಟಿಷ್ ಜನಮತವು ತಿಳಿಯುವಂತಾಗಿದೆ. ಎರಡರಲ್ಲೂ ಸರಕಾರದ ಪರವಾಗಿ ನಿಂತ ಅಭ್ಯರ್ಥಿಗಳು ಪರಾಜಿತರಾಗಿ, ಯುದ್ಧವನ್ನು ಜೋರಿನಿಂದ ನಡಿಸಬೇಕೆಂದು ಪ್ರತಿಪಾದಿಸಿದ ಸ್ವತಂತ್ರ ಉಮೇದ್ವಾರರುಗಳು ಜಯಶೀಲರಾಗಿರುವರು.

ಎರಡನೇಯ ವಾರ
ತಾ. 27—4—1942ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ.
ಮುಂದಾಗಿ ಹೇಳಿಲ್ಲವೆನ್ನಬೇಡಿ ಇಂದೇ ಬಂದು ನೋಡಿ.
ಅಂದವಾದ ಚಿತ್ರ:
ದಿನ ದಿನಕ್ಕೂ ಟಿಕೇಟು ಸಿಗದೆ ಹಿಂದಿರುಗುತ್ತಿರುವರು.
ಪ್ರಗತಿ ಪಿಕ್ಚರ್ಸಿನವರ
ವಸಂತಸೇನಾ
ಕನ್ನಡ
ಮುಂದಿನ ಚಿತ್ರಗಳು– ರಂಗಿಲಾಮಜದೂರ್, ಶಾದಿ, ಸುಮಂಗಲ ಬ್ರಹ್ಮಚಾರಿ ಇತ್ಯಾದಿ.

ವ್ಯಾಯಾಮ ಶಿಕ್ಷಣ ತರಬೇತಿಯ ಶಿಬಿರ, ಉಡುಪಿ-ದಕ್ಷಿಣಕನ್ನಡ ಜಿಲ್ಲೆಯ ವಿದ್ಯಾಧಿಕಾರಿಗಳಿಂದ ಮಂಜೂರು ಆಗಲ್ಪಟ್ಟು ಜಿಲ್ಲೆಯ ಹಾಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಬಗ್ಗೆ ಒಂದು ವ್ಯಾಯಾಮ ಶಿಕ್ಷಣ ಶಿಬಿರವು ಇದೇ ತಿಂಗಳ ತಾ. 12ರಿಂದ 25ರ ತನಕ ಉಡುಪಿ ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ಜರಗಲಿರುವುದು. ಯೋಗ್ಯ ಅನುಭವಸ್ಥ ವ್ಯಾಯಾಮ ಶಿಕ್ಷಕರ ಸಂಚಾಲಕತ್ವದಲ್ಲಿ ಮತ್ತು ಪ್ರಾಥಮಿಕ ವಿದ್ಯಾಖಾತೆಯ ವ್ಯಾಯಾಮ ಶಿಕ್ಷಣದ ನೂತನ ಪಾಠಪಟ್ಟಿಗನುಸಾರವಾಗಿ ತರಬೇತಿಯು ನಡೆಯುವುದು. ಶಾಲಾ ಮಕ್ಕಳಿಗೆ ವ್ಯಾಯಾಮಶಿಕ್ಷಣವು ಆಕರ್ಷಣೀಯವಾಗುವಂತೆ ಸಹಾಯಕವಾಗುವ ಲಾಠಿ, ಲೆಜಿಮ್, ಸ್ವೆನ್ಸಿ ಡ್ರಿಲ್ ಮತ್ತು ಇತರ ವಿವಿಧ ಆಟ, ಕುಣಿತ, ಕ್ರಾಮುಗಳನ್ನೂ ಕಲಿಸಲಾಗುವುದು. ತರಬೇತಿಯ ಉದ್ಘಾಟನಾ ಸಮಾರಂಭವು ಮೇ 11ನೇ ಸಾಯಂಕಾಲ 6 ಘಂಟೆಗೆ ಸರಿಯಾಗಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎ. ಲಕ್ಷ್ಮನಾರಾಯಣಗಾರು, ಎಮ್.ಎ., ಎಲ್.ಟಿ ಇವರಿಂದ ನಡೆಯುವದು. ಸೇರಲಿಚ್ಛಿಸುವವರು ಅಂದು ಸಾಯಂಕಾಲ ತಪ್ಪದೆ ಹಾಜರಾಗತಕ್ಕದ್ದು ಮತ್ತು ಶಿಬಿರದ ಎಲ್ಲಾ ನಿಯಮಗಳನ್ನು ಪರಿಪಾಲಿಸ ತಕ್ಕದ್ದು. ಹೆಚ್ಚಿನ ವಿವರಗಳನ್ನು ಅಸಿಸ್ಟಾಂಟ್ ಡಿ-ಕಮಿಶನರಾದ ಶ್ರೀ ಬಿ-ಬಂ-ಬಾಳಿಗ, ಉಡುಪಿ ಇವರಿಂದ ತಿಳಿಯಬಹುದು.

ಭಾಷಣ:—ಶ್ರೀ. ಆರ್. ಆರ್. ದಿವಾಕರರು ಶ್ರೀ. ಚೆನ್ನಬಸಪ್ಪ ಅಂಬಲಿ ಮತ್ತು ಶ್ರೀ. ಎ. ಬಿ. ಶೆಟ್ಟಿ ಮೊದಲಾದವರೊಂದಿಗೆ ದ. ಕನ್ನಡ ಸಂಚಾರವನ್ನು ಕೈಗೊಂಡಿದ್ದು ವಾಯಲ್ಲಿ ಕಟಪಾಡಿಯಲ್ಲಿ ಸಾರ್ವಜನಿಕ ಸಭೆಜರಗಿಸಿ, ತಾ. 2-5-42ನೇ ಸಂಜೆ ಉಡುಪಿಗೆ ಬಂದು ಅಜ್ಜರಕಾಡು ಮೈದಾನದಲ್ಲಿ ಪ್ರೊ. ಪಿ. ಎ. ಸೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಸ್ಫೂರ್ತಿದಾಯಕ ಭಾಷಣಮಾಡಿದರು. ರಾತ್ರಿ ಉಡುಪಿಯಲ್ಲಿದ್ದ ಮರುದಿನ ಕುಂದಾಪುರಕ್ಕೆ ತೆರಳಿದರು.

ಪುತ್ತೂರು:—ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ತಾ. 11-5-'42ನೇ ಸೋಮವಾರ ರಾತ್ರಿ ಘಂಟೆ 9 30ಕ್ಕೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯಲ್ಲಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಉತ್ತಮ ಯಕ್ಷಗಾನ ಸಮಾರಂಭವು ಜರಗಲಿದೆ.

ಪ್ರಕಟಣೆ.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್ ಉಡುಪಿ.

1941ನೇ ಇಸವಿಯ ಲಾಭಾಂಶದ ಬಗ್ಗೆ ಪಾಲುದಾರರಿಗೆ ಡಿವಿಡೆಂಟ್ ವಾರಂಟನ್ನು ಈಗಾಗಲೇ ಕಳಿಸಿರುತ್ತದೆ. ಅದರ ಅಡಿಯ ತುಂಡಿನ ಹಿಂಬದಿಯಲ್ಲಿ ಸಹಿಮಾಡಿ ಆತುಂಡನ್ನು ಮಾತ್ರ ರಿಜಿಸ್ಟರ್ಡ್ ಆಫೀಸಿಗೆ ಕಳಿಸಿದೊಡನೆ ಡಿವಿಡೆಂಡನ್ನು ಕಳಿಸಲಾಗುತ್ತದೆ.

ಮೆನೇಜಿಂಗ್ ಡೈರೆಕ್ಟರ್.

ಬೇಕಾಗಿದ್ದಾರೆ

ಜೂನಿಯರ್ ಗ್ರೇಡ್ ತರಬೇತಾದ ಇಬ್ಬರು ಉಪಾಧ್ಯಾಯರು ವ ಒಬ್ಬರು ಅಧ್ಯಾಪಕರು ಮತ್ತೊಬ್ಬರು ಅಭ್ಯಾಸಕಿಯರು ಬೇಕಾಗಿದ್ದಾರೆ. ತಳಿಟು ಎಸ್ಟ್ರಂಡ್ ಗ್ರೇಂಟಿನ ಸೇಕಡಾ 85 ಕೊಡಲಾಗುವುದು. ಇಷ್ಟವುಳ್ಳವರು ಕೇಗಿನವರೊಡನೆ ಸ್ವತಹ ಬಂದು ಮಾತನಾಡುವದು.

ನೈ ನಂದ್ಯಪ್ಪ ಹೆಗ್ಡೆ.
ಮೆನೇಜರ್
ಶ್ರೀ ದುರ್ಗಾ ಪರಮೇಶ್ವರಿ ಪ್ರಾಥಮಿಕ ಶಾಲೆ, ಪಣಿಯೂರು
ಪೋಸ್ಟ್ ಕಟಪಾಡಿ.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ನಗರ ಸಭೆ–ಮಂಗಳೂರು ನಗರ ಸಭೆಯು ಈದಿನ ಸಾಯಂಕಾಲ ನಡೆಯಲಿದೆ.

ಭಾಷಣ– ಜಿಲ್ಲಾ ಜಡ್ಜರಾದ ಶ್ರೀ| ಪಾರ್ಥಸಾರಥಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಥಿಯೊಸಾಫಿಕಲ್ ಲಾಜಿನಲ್ಲಿ ಶ್ರೀ. ಎಚ್. ವೆಂಕಟ ರಾವ್, ಎಂ. ಎ., ಎಲ್. ಟಿ. ಅವರು ಸ್ವಾಮಿ ಬಾಬಾರವರ ಜೀವನದ ಕುರಿತು ಉಪನ್ಯಾಸ ಮಾಡಿದರು.

ಶ್ರೀ ರಾಮಕೃಷ್ಣ ಪರಮ ಹಂಸ ಜನ್ಮ ದಿನಾಚರಣೆ– ಭಗವಾನ್ ಶ್ರೀ ರಾಮಕೃಷ್ಣ ಪರಮ ಹಂಸರ ಜನ್ಮ ದಿನಾಚರಣೆಯನ್ನು ಕೆನರಾ ಹೈಸ್ಕೂಲ್ ಕೃಷ್ಣ ಮಂದಿರದಲ್ಲಿ ಕಳೆದ ತಾ. 30ರಲ್ಲಿ ಶ್ರೀ ವಿವೇಕಾನಂದ ಸಭೆಯವರು ಜರಗಿಸಿದರು. ಶ್ರೀ ಸ್ವಾಮಿ ಸುವಿಚಾರಾನಂದಜೀಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅಡ್ವೊಕೇಟ್ ಪ್ರಹ್ಲಾದ ಹೆಗ್ಡೆಯವರೂ, ಶ್ರೀ| ಕೆ. ವೆಂಕಟ ರಾಯರೂ ಶ್ರೀ| ರಾಮಕೃಷ್ಣರ ಜೀವನ ಚರಿತ್ರೆಯ ವಿಷಯ ಉಪನ್ಯಾಸ ಮಾಡಿದರು. ಶ್ರೀ| ಜಿ. ಉಪೇಂದ್ರ ರಾಯರು ಮಂಗಳ ಶ್ಲೋಕಗಳನ್ನು ಹಾಡಿದರು. ಅಂದು ಬೆಳಗ್ಗೆ ಭಜನೆ, ಪೂಜೆ, ಮೊದಲಾದ ಸಮಾರಂಭಗಳು ನೆರವೇರಿದುವು.

ಸಾರ್ವಜನಿಕ ಸಭೆ–ಶ್ರೀ| ರಂಗನಾಥ ರಾಮಚಂದ್ರ ದಿವಾಕರರು ಕಳೆದ ತಾ. 27ರಲ್ಲಿ ಮೈದಾನದಲ್ಲಿ ಶ್ರೀ| ಬಿ. ವಿ. ಬಾಳಿಗ ಎಂ. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಒಂದು ಉಪನ್ಯಾಸ ಮಾಡಿದರು. ಶ್ರೀ| ಚಿನ್ನಬಸಪ್ಪ ಅಂಬಲಿಯವರು ಮಾತಾಡುತ್ತಾ ದೇಶ ರಕ್ಷಣೆಯನ್ನು ಈ ಕಷ್ಟ ಕಾಲದಲ್ಲಿ ಮಾಡುವುದು ಅಗತ್ಯವೆಂದು ಹೇಳಿದರು. ಶ್ರೀ| ದಿವಾಕರರು ಮಾತಾಡುತ್ತಾ ಮದ್ರಾಸ್ ಲೆಜಿಸ್ಲೇಟಿವ್ ಕಾಂಗ್ರೆಸ್ ಪಕ್ಷದವರು ಮಾಡಿದ ಠರಾವನ್ನು ಮಂಡಿಸಿದ್ದಲ್ಲದೆ ಕ್ರಿಪ್ಸರ ಸಂಧಾನವು ಮುರಿದು ಹೋದ ವಿಚಾರವಾಗಿಯೂ ಹೇಳಿದರು. ಮಾ ಅಧ್ಯಕ್ಷರು ಭಾಷಣಕಾರರ ಅಭಿಪ್ರಾಯಗಳನ್ನು ಸಮರ್ಥಿಸಿ ಅವರು ಕೊಟ್ಟ ಹಿತ ಸೂಚನೆಗಳಂತೆ ನಡೆದುಕೊಳ್ಳಬೇಕೆಂದರು. ಶ್ರೀ| ಕೆ. ಈಶ್ವರ ಎಂ. ಎಲ್. ಎ. ಅವರು ಧನ್ಯವಾದಗಳನ್ನರ್ಪಿಸಿದರು.

ಶ್ರೀ| ದಿವಾಕರರಿಗೆ ಸತ್ಕಾರ— ಕಳೆದ ತಾ 28ರಲ್ಲಿ ಶ್ರೀ| ಕೆ. ಬಿ. ಜಿನರಾಜ ಹೆಗಡೆ ಎಂ| ಎಲ್| ಎ| (ಕೇಂದ್ರ)ಇವರು ತಮ್ಮ ನಿವಾಸದಲ್ಲಿ ಶ್ರೀ ದಿವಾಕರರಿಗೆ ಒಂದು ಟೀಪಾರ್ಟಿಯನಿತ್ತು ಗೌರವಿಸಿದರು. ನಗರದ ಅನೇಕ ಕಾಂಗ್ರೆಸ್ ಕೆಲಸಗಾರರು ಆಮಂತ್ರಿತರಾಗಿದ್ದರು.

ವಿ ಶ್ವ ಮಂಡಲ, ಕಲ್ಚರಲ್ ಎಸೋಸಿಯೇಶನ್ ಪ್ರಕಾಶ ಸಮಿತಿ, ಹಿಂದೀ ಸಭೆ- ಈ ಸಂಸ್ಥೆಗಳು ತಾ 29ರಲ್ಲಿ ಶ್ರೀ ದಿವಾಕರರಿಗೆ ಒಂದು ಸತ್ಕಾರವನ್ನಿತ್ತವು. ಶ್ರೀ ಮುಕುಂದ ರಾಯರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ| ದಿವಾಕರರು ಮಾತನಾಡುತ್ತಾ ಕನ್ನಡ ಲಿಪಿಯಲ್ಲಿ ಸುಧಾರಣೆಯಾಗುವುದು ಅಗತ್ಯವೆಂದೂ, ಈಗ ಕಂಡು ಹಿಡಿಯಲ್ಪಟ್ಟ ಹೊಸ ಲಿಪಿಯಿಂದ ಕನ್ನಡ ಮುದ್ರಣದಲ್ಲಿ ದೊಡ್ಡ ಬದಲಾವಣೆಯಾಗುವ ಸಂಭವವಿದೆಯೆಂದೂ ಹೇಳಿದರು. ಶ್ರೀ| ಎಸ್. ಪಿ. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಸಂತಾಪ ಸೂಚಕ ಸಭೆಗಳು:— ಕಳೆದ ತಾ. 27ರಲ್ಲಿ ಶ್ರೀ| ಎಸ್| ಸರ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ಸಹಕಾರಿಗಳ ಸಭೆಯಲ್ಲಿ ಶ್ರೀ| ಉಳ್ಳಾಲ ಮಂಗೇಶ ರಾಯರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮಂಜೂರು ಮಾಡಲ್ಪಟ್ಟಿತು. ಶ್ರೀಗಳಾದ ಮುಳಿಯ ತಿಮ್ಮಪ್ಪಯ್ಯನವರೂ, ಉಡುಪಿ ಗೋವಿಂದ ರಾಯರೂ ದಿವಂಗತರ ಗುಣಕಥನ ಮಾಡಿದರು. ತಾ. 28ರಲ್ಲಿ, ಪದವಿನಲ್ಲಿ ವಿದ್ವಾನ್ ಬಿ. ವೆಂಕಟ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ತೌಳವ ಕಲಾ ಮಂಡಲದ ಕಾರ್ಯಕಾರಿ ಸಮಿತಿಯಲ್ಲಿ ಶ್ರೀ| ಉಳ್ಳಾಲ ಮಂಗೇಶ ರಾಯರ ನಿಧನದ ಕುರಿತು ಸಂತಾಪ ಸೂಚಿಸಿ ಠರಾವಾಯಿತು. ನಾಟ್ಯಾಚಾರ್ಯ ವಿಜಯ ಕುಮಾರರು ದಿವಂಗತರ ಗುಣಕಥನ ಮಾಡಿದರು.

ತಾ. 29ರಲ್ಲಿ ಕದ್ರಿಯಲ್ಲಿ ಕರ್ನಾಟಕ ಮಕ್ಕಳ ಕೂಟದ ಕಾರ್ಯಕಾರಿ ಮಂಡಲಿಯ ಸಭೆಯು ಶ್ರೀ| ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿ ಸಂತಾಪ ಸೂಚಕ ಠರಾವು ಮಂಜೂರು ಮಾಡಲಾಯಿತು. ಮಾಸ್ಟರ್ ಕೊಳ್ಯೂರ್‌ಕರರು ದಿವಂಗತರ ಜೀವನ ಚರಿತ್ರೆಯನ್ನು ವಿವರಿಸಿದರು.

ಮೇ ದಿನಾಚರಣೆ— ಮಾ| ಡಾ| ಎನ್. ಎಚ್. ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ. 1ರಲ್ಲಿ ಮೇ ದಿನಾಚರಣೆಯು ನಡೆಯಿತು. ಅಂದು ಸಾಯಂಕಾಲ ಮಜೂರರ ಮೆರವಣಿಗೆ ಧ್ವಜ ವಂದನೆಗಳು ನಡೆದುವು. ಮೇ ದಿನಾಚರಣೆಯ ಮಹತ್ವದ ವಿಚಾರವಾಗಿ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಕೇಶವ ಕಾಮತ್ ಮತ್ತು ಕೊಳ್ಯೂರುಕರ್ ಅವರುಗಳು ಮಾತಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

ಉಡುಪಿ.

ಉಡುಪಿ ತಾಲೂಕು ಎಡ್ವೈಸರಿ ಕಮಿಟಿಯವರು ತಾ.28-4-42ರಲ್ಲು ನಿಶ್ಚಯಿಸಿದ ಪ್ರಕಾರ ದವಸ ಧಾನ್ಯಗಳ ಬೆಲೆ—

ಉತ್ತಮ ಮಸ್ಕತಿ ಅಕ್ಕಿ, ಮುಡಿ1ಕ್ಕೆ 6-14-0, ಸೇರು 1ಕ್ಕೆ 0-2-8. ಸಾಧಾರಣ 6-10-0, ಸೇರು 1ಕ್ಕೆ 0-2-7. ಗಡ್ಡ ,, 6-10-0, ಸೇರು 1ಕ್ಕೆ 0 2-7. ಕೋಳಸ್ಲ 6 8 0, ಸೇರು 1ಕ್ಕೆ 0-2-6. ಸಗ್ಗಿ 6 4 0, ಸೇರು 1ಕ್ಕೆ 0-2-5. ಬೆಳ್ತಿಗೆ 7-0 0 ರಿಂದ 8 0-0, ಸೇರಿಗೆ 0 2-8 ಯಿಂದ 0-3-2ವರೆಗೆ. ಬೆಲ್ಲ ಮಣ 1ಕ್ಕೆ (28ರಾತ್ತಲ) ಪಾತ್ರೆಯ ಬೆಲ್ಲ (ಸೇರು) 1ನೇ ತರಗತಿ 2-8-0, ಸೇರಿಗೆ 0-0-10 2ನೇ ತರಗತಿ 2-4-0, ಸೇರಿಗೆ 0 0 9. ಉಂಡೆ ಬೆಲ್ಲ 1ನೇ ತರಗತಿ 3-4-0, ಸೇರಿಗೆ 0-1-2. 2ನೇ ತರಗತಿ 3-0-0 ಸೇರಿಗೆ 0-1 0. ಸಕ್ಕರೆ ಮಣ 1ಕ್ಕೆ 5-2-0, ಸೇರಿಗೆ 0-1-9 ಉದ್ದು ಮುಡಿ 1ಕ್ಕೆ 6-8-0, ಸೇರಿಗೆ 0-2-6. ಕಡಲೆ ಮುಡಿ 1ಕ್ಕೆ (ಸಣ್ಣದು) 6-8-0, ಸೇರಿಗೆ 0-2-6. ದೊಡ್ಡದು 8-0-0, ಸೇರಿಗೆ 0 3-0. ತೊಗರಿಬೇಳೆ 1ನೇ ತರಗತಿ 11-0-0, ಸೇರಿಗೆ 0-4-3. 2ನೇ ತರಗತಿ 9-0 0 ಸೇರಿಗೆ 0-3-6. 3ನೇ ತರಗತಿ 7-0 0, ಸೇರಿಗೆ 0-2-8. ಹುರುಳಿ ಮುಡಿ 1ಕ್ಕೆ 4-4-0, ಸೇರಿಗೆ 0-1-8. ಹೆಸ್ರು 7-0-0, ಸೇರು 1ಕ್ಕೆ 0 2-8 ಉಪ್ಪು ಸೇರಿಗೆ 0-1 0. ಚಿಮಣಿ ಎಣ್ಣೆ ಡಬ್ಬಿ ಬೆಳ, 1ಕ್ಕೆ 5-1-0, ಬಾಟ್ಲಿ 1ಕ್ಕೆ 0-3-3. ಕೆಂಪು 4-8-6, ಬಾಟ್ಲಿಗೆ 0-2-11. ರಾಗಿ ಮುಡಿಗೆ 3-12-0, ಸೇರು 1ಕ್ಕೆ 0-1-6. ಊರ ಮೆಣಸು ಮಣಕ್ಕೆ 5-8-0, ಸೇರಿಗೆ 0-1-11. ಘಾಟ ಮೆಣಸು 5-0-0, ಸೇರಿಗೆ 0-1-9. ತೆಂಗಿನಕಾಯಿ ನೂರಕ್ಕೆ (ಉತ್ತಮ) 4-8-0, 1ಕ್ಕೆ 0-0-10. ಸಾಧಾರಣ 4-0 0, 1ಕ್ಕೆ 0-0-9. ತೆಂಗಿನೆಣ್ಣೆ ಕುಡ್ತೆ 1ಕ್ಕೆ 0-1 4. ಎಳ್ಳೆಣ್ಣೆ ಕುಡ್ತೆ 1ಕ್ಕೆ 0-1-2. ಬೆಂಕಿಪೆಟ್ಟಿಗೆ (ವಿಮ್ಕೊ) 80 ಕಡ್ಡಿಯ ಡಜನಿಗೆ 0-9-3, ಒಂದಕ್ಕೆ 0-0-10. 60ಕಡ್ಡಿ ಡಜನಿಗೆ 0 6-6, 1ಕ್ಕೆ 0-0-7. 50ಕಡ್ಡಿ ಡಜನಿಗೆ 0-5-9, 1ಕ್ಕೆ 0-0-6. 40ಕಡ್ಡಿ ಡಜನಿಗೆ 0-4-9, 1ಕ್ಕೆ 0-0-5. ಉತ್ತಮ ಬೊಂಬಾಯಿ ಗೋದಿ ಹಿಟ್ಟು ಸೇರಿಗೆ 0-2-2. ಊರ ಉತ್ತಮ 0-2-0. ಗೋದಿ ಹಿಟ್ಟು ದೊರಗು (1ನೇ ತರಗತಿ) 0-4-0. ಎರಡನೇ ತರಗತಿ 0-3-4. ಮಸಿ ಗೋಣಿ 1ಕ್ಕೆ 1-0-0.

ಸ್ಪರ್ಧೆ:— ಶ್ರೀ ವಾಮನ ಸುಬ್ರಾಯ ಕಾಕಾಮತ್ ಇವರಿಂದ ದಾನ ಮಾಡಲ್ಪಟ್ಟ 'ನಾರಾಯಣಿ ಬಾಯಿ' ಕಪ್ ಗೋಸ್ಕರ ವರ್ಷಂಪ್ರತಿ ನಡೆಯುವ ಮುನಿಸಿಪಲ್ ಶಾಲೆಯ ಮಕ್ಕಳ ಪಂದ್ಯಾಟವು ಕಳೆದ ತಾ. ೨೭ಕ್ಕೆ ಕೊನೆಗೊಂಡು, ಬಾಲಕರ ಕಪ್ಪನ್ನು ಉಡುಪಿ ನೋರ್ತ್ ಶಾಲೆಯವರೂ, ಪ್ರತ್ಯೇಕ ಬಾಲಕಿಯರಿಗೆಂದು ಮುನಿಸಿಪಲ್ ಆಫೀಸ್ ಮೆನೇಜರ್ ಶ್ರೀ ರಾಘವೇಂದ್ರ ಕಾಮತರು ಈ ವರ್ಷ ದಾನ ಮಾಡಿದ 'ಚಂದ್ರಾವತಿ ಕಪ್' ಇದನ್ನು ಮುನಿಸಿಪಲ್ ಸೌತ್ ಹುಡುಗಿಯರ ಶಾಲೆಯವರೂ ಗೆದ್ದರು. ಸದರೀ ಬಹುಮಾನ ವಿತರಣ ಸಮಾರಂಭವು ಮುನಿಸಿಪಲ್ ನೌಕರರ ಎಸೋಸಿಯೇಶನಿನ ಆಶ್ರಯದಲ್ಲಿ ತಾ. ೧೮ರಲ್ಲು ಮುನ್ಸಿಪಲ್ ಆಫೀಸಿನಲ್ಲಿ ಶ್ರೀ. ಡಿ. ವಿಶ್ವನಾಥ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅದೇ ಸಂದರ್ಭದಲ್ಲಿ, ಉಡುಪಿ ಮುನ್ಸಿಪಾಲಿಟಿಯ ತೆರಿಗೆ ವಸೂಲಿಯಲ್ಲಿ ಕೇಕಡಾ ಅತಿ ಹೆಚ್ಚು ವಸೂಲು ಮಾಡಿದ ಇಬ್ರಾಹಿಮ್ ಸಾಹೇಬ್ ಮತ್ತು ಶ್ರೀ ಉಮಾನಾಥಾಚಾರ್ಯರಿಗೆ ಬಹುಮಾನ ಕೊಡಲ್ಪಟ್ಟವು. ಮುನ್ಸಿಪಲ್ ಶಾಲೆಗಳ Common Examinationನಲ್ಲಿ ಅತ್ಯುತ್ತಮ ಫಲಿತಾಂಶವನ್ನು ಪಡೆದ ಶಾಲೆಗೆ 'ಸರಸ್ವತಿಯ ಷೀಲ್ಡ್'ನ್ನು ದಾನ ಮಾಡಲು ಮುನಿಸಿಪಲ್ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ದೇವೇಂದ್ರ ಶೆಣೈಯವರು ಒಪ್ಪಿರುವರೆಂದು ತಿಳಿದು ಬರುತ್ತದೆ. ಅಧ್ಯಕ್ಷರ ಭಾಷಣ, ಕಾರ್ಯದರ್ಶಿ ಶ್ರೀ| ಸುಬ್ಬಣ್ಣ ಭಟ್ಟರಿಂದ ಧನ್ಯವಾದ ಸಮರ್ಪಣೆಯಾಗಿ ಸಭಾಂತ್ಯವಾಯಿತು.

ಕಡಬ–ದ. ಕನ್ನಡದ ಗೌಡರ ಪರಿಷತ್ತು ಮತ್ತು ವಾರ್ಷಿಕ ಸಭೆಯು ತಾ.26-4-42ರಲ್ಲಿ ದ. ಕ. ಜಿಲ್ಲಾ ಗೌಡ ವಿದ್ಯಾ ಸಂಘದ ಆಶ್ರಯದಲ್ಲಿ ಕೊಯಮುತ್ತೂರಿನ ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ| ಕೆ. ನಂಜುಂಡಯ್ಯ ಬಿ. ಎ. ಬಿ. ಕೋಮ್, ಬಿ ಎಲ್. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ದ. ಕನ್ನಡದ ಗೌಡ ವೃಂದವೂ, ಕೊಡಗಿನ ಪ್ರಮುಖ ಗೌಡರ ನೇಕರೂ ಪರಿಷತ್ತಿಗೆ ಬಂದಿದ್ದರು. ಮಡಿಕೇರಿಯ ಜಿಲ್ಲಾ ಮತ್ತು ಸೆಶ್ಶನ್ ಜಡ್ಜರಾದ ಶ್ರೀ| ಎನ್| ಮುದ್ದಪ್ಪನವರೂ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರು ಗೌಡ ಸಮಾಜದಲ್ಲಿ ಆಗಬೇಕಾದ ವಿದ್ಯಾ ಪ್ರಚಾರ, ವ್ಯಾಪಾರಾಭಿವೃದ್ಧಿ, ಸಮಾಜೋನ್ನತಿಯ ಕುರಿತು ವಿಚಾರಪರ ಭಾಷಣ ಮಾಡಿದರು.

ಸ್ವೀಕಾರ ವಿಮರ್ಶೆ

ದಿ. ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು- ದಕ್ಷ ಆಡಳಿತ ಮಂಡಳಿಯಿಂದೊಡಗೂಡಿ ಜನಾದರಣೀಯವಾದ ಈ ಕಂಪೆನಿಯ 1941ನೇ ಡಿಶಂಬರ 31ಕ್ಕೆ ಅಂತ್ಯವಾಗುವ 12ನೆಯ ವರ್ಷದ ಅಭಿವೃದ್ಧಿಪರ ವರದಿಯನ್ನು ಪರಿಶೀಲಿಸಲು ಆನಂದವಾಗುತ್ತದೆ. ವರದಿಯ ವರ್ಷದಲ್ಲಿ ರೂ.9,12,500ರ ಪ್ರೊಪೋಸಲುಗಳು ಬಂದಿದ್ದು, ರೂ. 7,51 850ರ 517 ಪೋಲಿಸಿಗಳು ಕೊಡಲ್ಪಟ್ಟವೆ. ಈ ಹೊಸ ವ್ಯವಹಾರವು ಕಳೆದ ವರ್ಷಕ್ಕಿಂತ ರೂ. 1,07,675ರಷ್ಟು ಹೆಚ್ಚಿಗೆಯೆಂದು ತಿಳಿದು ಬರುತ್ತದೆ. ಪ್ರೀಮಿಯಂ, ಬಡ್ಡಿ ಮತ್ತು ಇತರ ಆಯವು ಒಟ್ಟು ರೂ. 1,08,659 8-2. ವ್ಯಯವು ಇಳಿಸಲ್ಪಟ್ಟಿದೆ. ಆಡಳಿತ ವೆಚ್ಚವು ಪ್ರೀಮಿಯಂ ಆದಾಯದ 48 9%ರಷ್ಟಿದೆ. ಇದು 1940ರ ವೆಚ್ಚದ 23%ರಷ್ಟು ಕಡಿಮೆಯಾಗಿದೆ. ಅಂತಿಯೋ ರಿನ್ಯುವಲ್ ಪ್ರೀಮಿಯಂ ಕಮಿಷನ್, ಲೈಫ್ ಫಂಡು ರೂ. 35,600-1-10ರಷ್ಟು ಹೆಚ್ಚಿದ್ದು, ಅದೀಗ ರೂ.2,30,954-11-9 ಆಗಿದೆ. ವರ್ಷದ ಕ್ಲೈಮುಗಳ ಮೊಬಲಗು ರೂ. 16,183-8-0; 1941ನೇ ವರ್ಷವು ಅಂತರ್ರಾಷ್ಟ್ರೀಯ ಪರಿಸ್ಥಿತಿಯ ದೆಸೆಯಿಂದ ವ್ಯವಹಾರಕ್ಕೆ ನಿಕೃಷ್ಟವಾಗಿದ್ದರೂ ಈ ಕಂಪೆನಿಯು ಉತ್ಕೃಷ್ಟ ಅಭಿವೃದ್ಧಿಯನ್ನು ತೋರಿಸಿದೆ. ಹೊಸ ವ್ಯವಹಾರವು ಹೆಚ್ಚಿ ವ್ಯಯವು ತಗ್ಗಿ ಭಾವೀ ಪ್ರಗತಿಯನ್ನು ಕಂಪೆನಿಯು ವ್ಯಕ್ತಪಡಿಸುತ್ತದೆ. ವ್ಯವಹಾರ ಕ್ಷೇತ್ರವು ವಿಸ್ತರಿಸಲ್ಪಟ್ಟು ಮೆಸರ್ಸ್ ಜಿ ಎನ್. ಮಡಿಮಾನ್ ಮತ್ತು ಸನ್ಸ್ ಇವರನ್ನು ಕರ್ನಾಟಕದ ಮುಖ್ಯ ಏಜಂಟರನ್ನಾಗಿ ನಿಯಮಿಸಲಾಗಿದೆ. ವಿಚಕ್ಷಣ ಡೈರೆಕ್ಟರ ಮಂಡಳಿ-ಮುಖ್ಯವಾಗಿ ವ್ಯವಹಾರ ಚತುರರಾದ ಮೆನೇಜಿಂಗ್ ಡೈರೆಕ್ಟರ್ ಶ್ರೀ. ಬೋಳಾರ ವಿಠ್ಠಲ ರಾಯರು, ಈ ಕಂಪೆನಿಯನ್ನು ಇನ್ನಷ್ಟು ಪ್ರಗತಿಪಥದಲ್ಲಿ ಕೊಂಡೊಯ್ಯುವರೆಂದೂ ಅವರ ಕೀರ್ತಿಯು ಕರ್ನಾಟಕದಲ್ಲೆಲ್ಲಾ ಹಬ್ಬುವಂತಾಗಲೆಂದೂ ನಿರೀಕ್ಷಿಸಲಾಗಿದೆ.

ಬಂಟರ ಯೂನೆ ನಾಡವರ ಸಂಘ, ಬೊಂಬಾಯಿ—ಇದರ 1941ರ ಪ್ರಥಮ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಈ ಸಂಘವು ತಾ.15-4-1940ರಲ್ಲಿ ಸ್ಥಾಪನೆಯಾಗಿ, ಸ್ವಯಂ ಸೇವಕ ದಳ, ಹಸ್ತಲಿಖಿತ ಪತ್ರಿಕೆ, ಮೊದಲಾದ ಕಾರ್ಯಕ್ರಮಗಳನ್ನು ಕೈಕೊಂಡು, ಆಗಾಗ್ಗೆ ಸಭೆಗಳನ್ನು ಜರಗಿಸುತ್ತಿದ್ದು ಯುವಕರಲ್ಲಿ ಜಾಗ್ರತಿಯನ್ನುಂಟುಮಾಡುತ್ತಿದೆ. ವರದಿಯ ವರ್ಷದಲ್ಲಿ ವರ್ಗಣಿ ರೂಪದಲ್ಲಿ ರೂ. 239-12-0ಜಮಾ ಆಗಿದ್ದು, ಖರ್ಚು ಕಳೆದು ರೂ199-14-0ಉಳಿತಾಯವಾಗಿದೆ. ಯುವಕರಲ್ಲಿ ಅತ್ಯಾವಶ್ಯಕವಾದ ಬಂಧುತ್ವವನ್ನು ಬೆಳಸಿ, ಐಕ್ಯ ಸಾಧನೆ,ವಿದ್ಯಾಭಿವೃದ್ಧಿಗಾಗಿ ಜನ್ಮ ತಾಳಿದ ಈ ಸಂಸ್ಥೆಯು ಅಭಿವೃದ್ಧಿಗೊಂಡು, ಚಿರಕಾಲ ಬಾಳಿ, ಜನಸೇವೆ ಮಾಡುವಂತಾಗಲಿ.

ಹಿಂದೂ ಅನಾಥಾಲಯ, ಮುಲ್ಕಿ ಶಾಲ—1941ನೆ ದಶಂಬ್ರ 31ಕ್ಕೆ ಅಂತ್ಯವಾಗುವ, ಪರಿಶೋಧಿಸಲ್ಪಟ್ಟಿರುವ ಲೆಕ್ಕಪತ್ರವು ನಮ್ಮ ಕೈ ಸೇರಿದೆ. ವರದಿಯ ವರ್ಷದಲ್ಲಿ ಅನಾಥಾಲಯದ ಚಟುವಟಿಕೆಗಳು ಸಾರ್ವಜನಿಕರ ಗಮನಕ್ಕೆ ವಿಶೇಷವಾಗಿ ಬಂದು, ಹಲವರು ಇದನ್ನು ಸಂದರ್ಶಿಸುವಂತಾಗಿದೆ. ಮಾತ್ರವಲ್ಲ, ಉದಾರ ಸಹಾಯ ಮಾಡುವಂತಾಗಿದೆ. ಒಟ್ಟು ರೂ862/-ಸಹಾಯ ಧನ ದೊರೆತಿದೆ. ಈ ಬಗ್ಗೆ ಡಾ. ಟಿ. ಮಾಧವ ಶೆಣೈಗಳ ಪ್ರಯತ್ನವು ಸ್ತುತ್ಯವಿದೆ. ಸಧ್ಯ ಅನಾಥಾಲಯದಲ್ಲಿ 13ಅನಾಥರೂ, ಶಾಲೆಯಲ್ಲಿ 71 ಮಕ್ಕಳೂ ಇದ್ದಾರೆ. ಊಟ, ವಸತಿಯ ವ್ಯವಸ್ಥೆಗಾಗಿ ಭರದಿಂದ ಕೆಲಸವು ಜರಗುತ್ತಿದೆ. ಈ ವ್ಯವಸ್ಥೆಯಾದೊಡನೆ ಇನ್ನು ಕೆಲವು ಅನಾಥರನ್ನು ಸೇರಿಸಿಕೊಳ್ಳಲಾಗುತ್ತದೆಂದೂ ವರದಿಯಿಂದ ತಿಳಿದು ಬರುತ್ತದೆ. ವರದಿಯ ವರ್ಷದಲ್ಲಿ ಸರಕಾರದಿಂದ ರೂ 484-1 0ಗ್ರಾಂಟೂ ದೊರೆತಿದೆ. ವರದಿಯೊಡನೆ ತಾ1-1-41ರಿಂದ1-3-42ರ ತನಕ ಸಹಾಯ ಮಾಡಿದವರ ಹೆಸರುಗಳನ್ನೂ ಪ್ರಕಟಿಸಲಾಗಿದೆ.

Degrees. Books Medicines

Free H. L M S, M B H. M. D. etc Free Homeo Ayur-Unani-Naturo degree by post also—Practitioners also get soon Homeo Materiamedica Rs. 5 Homeo Practice book Rs 1 Insanity Cure Pills Rs 10 Enclose 2 annas stamp —

Principal Indian Homeopath Institute & Society (Govt. Regd.)
P. O. Mahuva, (Kathiawar Dt. India.)

Sidha-Kalpa Kavach (Regd)
No 3 Rs 2 No 2 Rs. 5. No 1 Rs. 7. Special Rs 10, Extra Special Rs 17 for one marriage health wealth Ask any six questions with M O for 1/4 and get correct answers by return post Life readings split No V. P. P. Send M O. Freed P. O ts Prof. Dr N H. Chhatbar
Sinpam Mahuva (Kathiawar India)

FURTHER REDUCTIONS IN LENDING RATES.

The busy trade season is coming to a close. Lending rates are naturally tending to be reduced. Even at the begining of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue.

CANARA BANK LIMITED.

Estd. 1906.

ಶ್ರೀ. ಎ. ಬಿ. ಶೆಟ್ರ ಲೇಖನದ ಕುರಿತು ಆಕ್ಷೇಪ.

ನವಯುಗದ ಈ ಹೊದಲಿನೆರಡು ಸಂಚಿಕೆಗಳಲ್ಲಿ, 'ಜ್ಯೋತಿಷವು ಸತ್ಯವೇ?' ಎಂಬ ಕುರಿತು ಶ್ರೀ ಎ. ಬಿ ಶೆಟ್ರು ಬರೆದಿರುವ ಲೇಖನಗಳ ಕುರಿತು ನಾನು ಈ ಕೆಳಗಣ ಕೆಲವು ಅಭಿಪ್ರಾಯಭೇದಗಳನ್ನು ತಿಳಿಸುತ್ತೇನೆ

1 ಶ್ರೀ ಶೆಟ್ರು ತನ್ನ ಲೇಖನದಲ್ಲಿ ಪ್ರತಿಪಾದಿಸಿರುವಂತೆ ಜ್ಯೋತಿಷವು ವೇದಗಳಲ್ಲಿ ಸ್ಥಾನ ಪಡೆದಿರುವುದಿಲ್ಲೆಂಬುದು ತಪ್ಪು. ವೇದಗಳಲ್ಲಿಯೂ ಜ್ಯೋತಿಷದ ಕುರಿತು 60 ಮೂಲಭಾವನೆಗಳು ನಿರ್ದೇಶಿಸಲ್ಪಟ್ಟಿವೆ. ಈ ಮೂಲಭಾವನೆಗಳನ್ನು ವಸಿಷ್ಠ, ನಾರದ, ಭೃಗು, ಪರಾಶರ ಮೊದಲಾದ 18 ಮಂದಿ ಋಷಿಗಳು ಬೆಳೆಸಿ ವಿವರಿಸಿ ವ್ಯಾಪಕಗೊಳಿಸಿದರು. ಈ ಋಷಿಗಳೇ ಜ್ಯೋತಿಷದ ಸ್ಥಾಪಕರೆನಿಸಲ್ಪಡುತ್ತಾರೆ. ಈ ಋಷಿಗಳ ಕೆಲಸಗಳ ಕುರಿತು ಓಕ ಒರೆದು ಮತ್ತಷ್ಟು ಬೆಳೆಸಿದವರೆಂದರೆ ವರಾಹ ಮಿಹಿರಾಚಾರ್ಯ, ಮಂದಿರಾಜ ಮೊದಲಾದವರು. ಆದುದರಿಂದ ಜ್ಯೋತಿಷವು ವೇದದಲ್ಲಿ ಸ್ಥಾನ ಪಡೆದಿಲ್ಲೆಂದು ಹೇಳುವುದು ಶಾಸ್ತ್ರವಲ್ಲ. ಜ್ಯೋತಿಷವು ಹೇಗೆ ಹುಟ್ಟಿ ಬೆಳೆಯಿತೆಂಬ ಕುರಿತು ದೊಡ್ಡ ಸಾಹಿತ್ಯವೇ ಇದ್ದು ಅದು ವಿಚಿತ್ರ ರೀತಿಯ ಸ್ತ್ರೀಯತೆ ಪಡೆದಿರುತ್ತದೆ.

2. ಜ್ಯೋತಿಷವು ಹಿಂದುದೇಶಕ್ಕೆ ಗ್ರೀಸಿನಿಂದ ಬಂದಂಥಾದ್ದೆಂದು ಶ್ರೀ ಶೆಟ್ರು ತನ್ನ ಲೇಖನದಲ್ಲಿ ಹೇಳುತ್ತಾರೆ. ಇದು ಶುದ್ಧ ತಪ್ಪು ಸುಮಾರು 2000 ವರ್ಷಗಳ ಮೊದಲು ಗ್ರೀಸಿನಲ್ಲೇ ಜ್ಯೋತಿಷವು ಇದ್ದಿಲ್ಲ. ಆದರೆ ಹಿಂದುದೇಶದಲ್ಲಿದು ಅದಕ್ಕಿಂತ ಬಹಳ ಹಿಂದಿನಿಂದಲೇ ಪ್ರಚಾರದಲ್ಲಿತ್ತು. ಪುರಾತನ ವೈದಿಕ ಕಾಲದಲ್ಲೇ ಅದು ಪ್ರಚಾರದಲ್ಲಿದ್ದಿತು ಗ್ರೀಸ್ ಮತ್ತು ಹಿಂದು ಸಿದ್ಧಾಂತಗಳಲ್ಲಿ ಯಾವುದು ಸರಿಯಾದುದೆಂಬ ಕುರಿತು ಕೆಲವು ಶತಮಾನಗಳ ಮೊದಲು ದೀರ್ಘ ಸಮಯ ಚರ್ಚೆ ನಡೆದಿದ್ದಿತು. ಗ್ರೀಕ್ ಸಿದ್ಧಾಂತದ ಮೇರೆಗೆ ಎಲ್ಲಾ ಗ್ರಹಗಳ ದೆಸೆಗಳ ಅವಧಿಯು 100 ವರ್ಷ ಮಾತ್ರವೆಂದು ಪರಿಗಣಿಸಲಾಗಿತ್ತು. ಆದರೆ ಹಿಂದು ಸಿದ್ಧಾಂತದ ಮೇರೆಗದು 120 ವರ್ಷವಾಗಿತ್ತು. ಕಟ್ಟಕಡೆಗೆ ಫಲದ ಪರೀಕ್ಷೆಯಿಂದ ಹಿಂದು ಸಿದ್ಧಾಂತವೇ ಸರಿಯಾದುದೆಂಬುದು ಸಿದ್ಧವಾಯಿತು. ಕೊನೆಗೆ ಗ್ರೀಸ್ ಮತ್ತು ಯುರೋಪಿನ ಇತರ ದೇಶಗಳವರು ಹಿಂದು ಸಿದ್ಧಾಂತವನ್ನೇ ಕ್ರಮಶಃ ಅನುಸರಿಸಹತ್ತಿದರು. ಹಿಂದು ಜ್ಯೋತಿಷ ಸಂಬಂಧವಾದ ಕೆಲವು ಶಾಸ್ತ್ರೀಯ ವಿಷಯಗಳನ್ನ

ಬಿ. ಹಿರಿಯಣ್ಣ ಹೆಗ್ಡೆ,
ಉಡುಪಿ, ವಕೀಲ್.

ಮೈಸೂರು ಪತ್ರ.

(ನಮ್ಮ ಸ್ವಂತ ವಾರ್ತಾದಾತರಿಂದ)

ಶ್ರೀಮಾನ್ ಮಹಾರಾಜರ ದ್ವಿತೀಯ ವಿವಾಹ

ಮೈಸೂರು ಯುವರಾಜ ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ... ನಂಜರಾಜೇ ಅರಸರವರ ಪುತ್ರಿಯಾದ ಶ್ರೀ ತ್ರಿಪುರ ಸುಂದರಮ್ಮಣ್ಣಿಯವರನ್ನು ಈ ದಿನ (7 5 42) ಗುರುವಾರ ವಿವಾಹವಾದರು. ಶ್ರೀಮಾನ್ ಮಹಾರಾಜರಿಗೆ ಕೇವಲ 23 ನೇ ವರ್ಷದಲ್ಲಿ ದ್ವಿತೀಯ ವಿವಾಹ ನೆರವೇರಿದೆ. ಪ್ರಥಮ ಧರ್ಮಪತ್ನಿ ಶ್ರೀಮಾನ್ ಮಹಾರಾಣಿ ಶ್ರೀ ಸತ್ಯಪ್ರೇಮಾದೇವಿಯವರು ಇರುವರು. ವಿವಾಹವು ರಾಜಧಾನಿಯ ಶ್ರೀ ... ಅರಮನೆ, ಸೊಗಸಾದ ಕಲ್ಯಾಣ ಮಂಟಪದಲ್ಲಿ ಯಾವ ಆಡಂಬರವೂ ಇಲ್ಲದೆ ಜರುಗಿದೆ

ವಿಶೇಷ ವಾರ್ತೆಗಳು— ಶ್ರೀಗಳಾದ M. ನರಸಿಂಹ ರಾವ್, ಸಿ ಜಿ ರಾಂದೇವ್, ಜಯತೀರ್ಥ ರಾವ್, ಮಾಲುವ ಡಿ ನಾಯ್ಡು ಮತ್ತು ಪಿ ದೇಶಾಯ ಅರಸರವರುಗಳನ್ನು ಶ್ರೀಮಾನ್ ಮಹಾರಾಜರು ಮೈ|| ಸ್ಟೇಟ್ ಟ್ರೂಪ್ಸಿನಲ್ಲಿ ಕೇಡೆಟ್‌ಗಳನ್ನಾಗಿ ನೇಮಿಸಬೇಕೆಂದಿದ್ದಾರೆ. ಮೈಸೂರು ಸಂ|| ಅಸೋಸಿಯೇಷನಲ್ ... ಸ್ಥಾಪಿಸಲು ಒಂದು ಸಭೆ ಬೆಂಗಳೂರಲ್ಲಿ ... ಭವನದಲ್ಲಿ ಜರಗಿತು. ... ಚಂದ್ರಶೇಖರಯ್ಯರ್ ಅಧ್ಯಕ್ಷರ ವಹಿಸಿದರು. ಶ್ರೀಮಾನ್ ಮಹಾರಾಜರು ... ಕಳುಹಿಸಿದ್ದರು.

ಇಂದೇ ನವಯುಗಕ್ಕೆ
ಚಂದಾದಾರರಾಗಿರಿ.

ವ್ಯವಹಾರವಿವೇಕಕ್ಕೆ ಒಂದು ವಿನಂತಿ

ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾ ದೇಶವು ಬಲಿಷ್ಠವಾಗಬೇಕು. ಪ್ರತಿಯೊಬ್ಬವ್ಯಕ್ತಿಯೂ ...ತನ್ನ ಪ್ರಾಣ



ಇವನ್ನು ರಕ್ಷಿಸಿಕೊಳ್ಳಬೇಕು
ಈಗಲೇ ಆ ಕಲಸವನ್ನು ಕೈಗೊಳ್ಳಿರಿ! ನಿಮ್ಮಲ್ಲಿ ನೀವೇ ಯೋಚಿಸಿನೋಡಿರಿ. ನಿಮ್ಮ ರಕ್ಷಣೆಗಾಗಿ ನೀವೇ ಸಹಾಯ ಮಾಡಿರಿ.

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಗಳನ್ನು

ಅದಕ್ಕಾಗಿ ನಾವು ವಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನೌಕೆ, ವಿಮಾನದಳಗಳ ರಚನೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಬೆಳೆಸುತ್ತದೆ.

G.I Kn Ad No. 43-A ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ.

ವಾರದ ವಿಶೇಷ ವಾರ್ತೆ

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಹುಮತ ಪಡೆಯುವ ತಾನ. ಏಕ.ಏಕಿ ಪಾಕಿಸ್ಥಾನವನ್ನು ಅಂಗೀಕರಿಸುವ ಮತ್ತು ಮುಸ್ಲಿಮ್ ಲೀಗಿನ ಸಹಕಾರದಿಂದ ಅಧಿಕಾರ ಸ್ವೀಕರಿಸುವ ಸೂಚನೆಯನ್ನು ಮದ್ರಾಸ್ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಮುಂದೆ ತಂದು ಮಂಜೂರು ಮಾಡಿಸಿದುದು ತಪ್ಪೆಂದು ಶ್ರೀ. ಸಿ. ರಾಜಗೋಪಾಲಾಚಾರ್ಯರು ಒಪ್ಪಿ ಆ ಕುರಿತು ಕಾಂಗ್ರೆಸ್ ಪ್ರೆಸಿಡೆಂಟರೊಡನೆ ಕ್ಷಮೆ ಕೇಳಿರುವರು. ಮತ್ತು ತನ್ನ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವರು. ಬ್ರಿಟಿಷ್ ಸರಕಾರದ ಸಾಮ್ರಾಜ್ಯ ಸ್ವಾರ್ಥವನ್ನು ನಿಷೇಧಿಸಿ, ಆದರ ಯುದ್ಧದ ಕುರಿತು ಅಹಿಂಸಾತ್ಮಕ ಅಸಹಕಾರವೇ ಕಾಂಗ್ರೆಸಿನ ಧೋರಣೆಯೆಂದು ಸ್ಪಷ್ಟಪಡಿಸುವ, ಹಿಂದುದೇಶವು ತನ್ನ ಸ್ವಂತ ಶಕ್ತಿಯಿಂದಲೇ ಸ್ವಾತಂತ್ರ್ಯ ಪಡೆಯಬೇಕಲ್ಲದೆ ಬೇರೆ ಹೊರಗಣವರ ಆಕ್ರಮಣದಿಂದ ಅದಕ್ಕೆ ಸ್ವಾತಂತ್ರ್ಯ ಸಿಗಬಹುದೆಂಬ ಮನೋವೃತ್ತಿಯನ್ನು ಖಂಡಿಸುವ ಮತ್ತು ಕಾಂಗ್ರೆಸು ಆರಂಭದಿಂದಲೂ ವಿರೋಧಿಸುತ್ತಾ ಬಂದಿರುವ ಫೆಸಿಸ್ಟ್ ಆಕ್ರಮಣಕಾರಿಗಳಿಗೆ ಯಾವ ಸಹಾಯವನ್ನೂ ಮಾಡದೆ ಅಸಹಕರಿಸುವ ಕಾಂಗ್ರೆಸಿನ ಮುಖ್ಯ ಧೋರಣೆಯನ್ನು ಪಂಡಿತಗಳಿಂದ ವಲ್ಲಭಭಾಯಿ ಇವರು ಇದೇ ತಾ. ೧ರಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯ ಮುಂದೆ ತಂದು 180 ಅನುಕೂಲ ಮತ್ತು 1 ಪ್ರತಿಕೂಲ ಮತಗಳಿಂದ ಅದು ಮಂಜೂರಾಯಿತು. ಈ ಠರಾವಿನ ಕುರಿತು ತರಲ್ಪಟ್ಟ ತಿದ್ದುಪಡಿ ಸೂಚನೆಗಳಿಗೂ ಏನೂ ಬೆಂಬಲ ದೊರೆಯಲಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹಲವು ಸಭೆ ಸೇರಿ ಈ ನಿರ್ಣಯವನ್ನು ತಯಾರಿಸಿದ್ದರು. ಅನಂತರ ಶ್ರೀ ರಾಜಗೋಪಾಲಾಚಾರ್ಯರು ಪಾಕಿಸ್ಥಾನವನ್ನು ಅಂಗೀಕರಿಸುವ ತನ್ನ ನಿರ್ಣಯವನ್ನು ತಂದಾಗ ಅದು ಕ್ರಮಾತೀತವಾದುದೆಂದು ಲಾಲಾ ದೇಶಬಂಧು ಗುಪ್ತರು ಪ್ರತಿವಾದಿಸಿದರು. ಕ್ರಮಬದ್ಧವಾದುದೆಂದು ರಾಜಾಜಿಯವರು ಸಾಧಿಸಿದ ಮೇಲೆ ಪ್ರೆಸಿಡೆಂಟರು ಅದನ್ನು ಸಭೆಯ ಮುಂದಿಡಲು ಸಮ್ಮತಿಸಿದರು. 120 ಪ್ರತಿಕೂಲ ಮತ್ತು 15 ಅನುಕೂಲ ಮತಗಳಿಂದ ರಾಜಾಜಿಯವರ ಸೂಚನೆಯು ಬಿದ್ದು ಹೋಯಿತು. ಮಾತ್ರವಲ್ಲದೆ, ಹಿಂದುದೇಶವನ್ನು ವಿಭಾಗಿಸಿ ಅದರ ಅಖಂಡತೆಗೆ ಭಂಗವನ್ನುಂಟುಮಾಡುವ ಯಾವ ಸೂಚನೆಗಾದರೂ ಕಾಂಗ್ರೆಸು ಒಪ್ಪಲಾರದೆಂದು ಶ್ರೀ ಜಗತ್ ನಾರಾಯಣಲಾಲರು ತಂದ ಸೂಚನೆ 92 ಅನುಕೂಲ ಮತ್ತು 17 ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಬಾಬು ರಾಜೇಂದ್ರ ಪ್ರಸಾದ್ ಮತ್ತು ಪಂಡಿತ ನೆಹರೂಗಳು ರಾಜಾಜಿಯವರ ಸೂಚನೆಯನ್ನು ಪ್ರಬಲವಾಗಿ ವಿರೋಧಿಸಿದರು. ಕಾಂಗ್ರೆಸ್ ನಾಯಕರುಗಳೂ ಮುಸ್ಲಿಮ್ ಲೀಗಿನೊಡನೆ ರಾಜಿ ಪ್ರಸ್ತಾಪ ನಡೆಸಲು ಸಿದ್ಧರೇ ಇದ್ದರು. ಮುಸ್ಲಿಮ್ ಲೀಗಿನ ನಿರಾಕರಣದಿಂದ ಅದು ಸಾಧ್ಯವಾಗಲಿಲ್ಲ. ಈಗಲೂ ಅದು ಲೀಗಿನೊಂದಿಗೆ ರಾಜಿ ಪ್ರಸ್ತಾಪ ನಡೆಸಲು 5 ಮಂದಿ ಪ್ರತಿನಿಧಿಗಳನ್ನು ಕಳುಹಿಸಲು ಸಿದ್ಧವಿರುವುದು. ಲೀಗಿನವರು ತಮ್ಮ 5 ಮಂದಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬಹುದೆಂದು ಸ್ಪಷ್ಟವಾಗಿ ಹೇಳಿದರು. ಮದ್ರಾಸಿನಲ್ಲಿ ಸಂಯುಕ್ತ ಮಂತ್ರಿಮಂಡಲ ಸ್ಥಾಪಿಸುವ ಸೂಚನೆಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮುಂದೆ ತರುವರೆ ಸಮಯವಿರಲಿಲ್ಲ. ಆದರೆ ಅವರ ತತ್ವವನ್ನು ತಾನು ಬಿಡುವ ಹಾಗಿಲ್ಲ. ಮದ್ರಾಸು ಹಿಂದುದೇಶದ ಇತರ ಭಾಗದಿಂದ ಕಡಿದು ಬೇರೆಯಾಗುವ ದಿನವು ಬರಬಹುದು. ಆಗ ಸರ್ವಸಾಮಾನ್ಯ ಅಖಿಲ ಭಾರತ ಧೋರಣೆಯನ್ನು ಇರಿಸಿಕೊಳ್ಳಲು ಕಾಂಗ್ರೆಸಿಗೆ ಅಸಾಧ್ಯವಾಗಬಹುದೆಂದು ರಾಜಾಜಿಯವರು ಎಚ್ಚರಿಸಿದರು. ಚರ್ಚೆ ಇಲ್ಲದೇನೇ ರಾಜಾಜಿಯವರ ಸೂಚನೆಯ ಕುರಿತು ಓಟು ತೆಗೆಯಬೇಕೆಂಬ ಶ್ರೀ ಸತ್ಯಮೂರ್ತಿಗಳ ಸೂಚನೆಗಾರೂ ಕಿವಿಕೊಡದೆ ಸಭಿಕರು ಎದ್ದು ಹೋಗಿ ಸಭೆಯು ಮುಕ್ತಾಯವಾಯಿತು. ರಾಜಾಜಿಯವರು ಅಲಹಾಬಾದಿನಿಂದ ಡಿಲ್ಲಿಗೆ ಹೋದಾಗ ಹಿಂದು ಮಹಾ ಸಭೆಯವರು ಅವರ ವಿರುದ್ಧ ಪ್ರದರ್ಶನ ಮಾಡಿದರು.

ಸದ್ಯ ಧಾಳಿಯ ಭೀತಿಯಿಲ್ಲ.

ಜಾಪಾನ ನೌಕಾಪಡೆಯು ಸಿಂಗಾಪುರದಿಂದ ಪೂರ್ವಕ್ಕೆ ಹೋಗಿರುತ್ತದೆ. ಅದು ಪಶ್ಚಿಮ ಸಮುದ್ರಕ್ಕೆ ಪೂರ್ವ ಕರಾವಳಿಯ ಮೇಲೆ ಜಾಪಾನ ದಾಳಿಯ ಅಪಾಯವಿಲ್ಲವೆಂದು ಸಿಲೋನ್ ಪಟ್ಟಣದ ಕಲೆಕ್ಟರರು ಪ್ರಕಟಗೊಳಿಸಿರುತ್ತಾರೆ. ಇದರಿಂದ ಜಾಪಾನು ತನ್ನ ನೌಕಾ ಪಡೆಯನ್ನು ಹಿಂದೆ ಕರೆದಿರುವನೆಂಬುದು ಸ್ಪಷ್ಟವಾಗುವುದು. ಅದಕ್ಕೆ ಕಾರಣವೇನು? ಪ್ರಾಯಶಃ ಜಾಪಾನರು ತಮ್ಮ ದೇಶದ ಹತ್ತಿರದ ಸಮುದ್ರಭಾಗದಲ್ಲಿ ದೊಡ್ಡ ನೌಕಾ ಪಡೆಯನ್ನೇನೂ ಇರಿಸದೆ ಇದ್ದುದರಿಂದಲೇ ಹೊರಗಣ ಯುದ್ಧಕ್ಕೆ ಕಳುಹಿಸಿರಬೇಕು. ಅಮೇರಿಕಾದ ವಿಮಾನಗಳು, ವಿಮಾನವಾಹಕ ಹಡಗುಗಳ ಮೂಲಕ ಜಾಪಾನ್ ಸಮುದ್ರತೀರಕ್ಕೆ ಬಂದು ಟೋಕಿಯೋ ಮೊದಲಾದ ಪಟ್ಟಣಗಳ ಮೇಲೆ ಪ್ರಬಲ ವಿಮಾನ ಧಾಳಿ ನಡೆಸಿದುದರಿಂದ ತಲ್ಲಣಗೊಂಡ ಜಾಪಾನರು ಕೂಡಲೆ ಹಿಂದುಸ್ಥಾನದ ಸಮುದ್ರ ಪ್ರದೇಶದಿಂದ ಹಡಗುಗಳನ್ನು ಹಿಂದೆ ಕರೆದಿರಬೇಕು. ಅಮೇರಿಕದ ದೊಡ್ಡ ಹಡಗುಪಡೆಯ ಧಾಳಿಯನ್ನೂ ಅವರು ನಿರೀಕ್ಷಿಸಿರಬೇಕು.

ಬರ್ಮಾದ ಯುದ್ಧ

ಬರ್ಮಾದಲ್ಲಿನ ಬ್ರಿಟಿಷ್ ಮತ್ತು ಚೀನೀ ಸೇನೆಗೆ ಜಾಪಾನರನ್ನು ಮುರಿಸಲು ಸಾಧ್ಯವಾಗುವ ಹಾಗಿಲ್ಲ. ಜಾಪಾನರು ಚೀನೀ ಎಲ್ಲೆಯಲ್ಲಿ ಬರ್ಮಾ ರಸ್ತೆಯ ಪ್ರಾಮುಖ್ಯ ಪಟ್ಟಣವಾದ ಲಾಶಿಯೋವನ್ನು ಗೆದ್ದು ಮುಂದೊತ್ತಿರುವರು. ಬರ್ಮಾದ ಹಳೆಯ ಮುಖ್ಯಪಟ್ಟಣವಾದ ಮಂಡಲೆಯನ್ನು ಅವರು ಗೆದ್ದಿರುವರೆಂದು ತಿಳಿದು ಬಂದಿದೆ. ಟೋಂಗ್ವಿಯಲ್ಲಿ ಚೀನೀಯರು ಇನ್ನೂ ಹೋರಾಟ ನಡೆಸುತ್ತಿದ್ದಾರೆ. ಆದರೆ ಜಾಪಾನರನ್ನು ಜಯಶೀಲವಾಗಿ ಪ್ರತಿಭಟಿಸುವಷ್ಟು ಶಕ್ತಿಯು ಅವರಿಗಿರುವುದೋ ಎಂಬುದು ಸಂದೇಹಕರವಿದೆ. ಟೋಂಗ್ವಿಯುದ್ಧದಲ್ಲಿ 1350 ಮಂದಿ ಜಾಪಾನರು ಕೊಲ್ಲಲ್ಪಟ್ಟಿರುವರೆಂದು ಚೀನೀಯರು ಪ್ರಕಟಿಸಿರುತ್ತಾರೆ. ಯೆನನ್ ಜಾಂಗಿನ ಸುಪ್ರಸಿದ್ಧ ಎಣ್ಣೆ ಕ್ಷೇತ್ರವನ್ನು ಬ್ರಿಟಿಷರು ಸಂಪೂರ್ಣವಾಗಿ ನಾಶವಮಾಡಿರುವರು. ಈ ಎಣ್ಣೆ ಕ್ಷೇತ್ರದಿಂದ ವರ್ಷಕ್ಕೆ ಒಂದುಮಿಲ್ಯ ಟನ್ ಎಣ್ಣೆ ದೊರೆಯುತ್ತಿತ್ತು. ಈ ನಷ್ಟದಿಂದ ಬ್ರಿಟನಿಗೆ ದೊಡ್ಡ ಆಘಾತವುಂಟಾಗಿದೆ. ಕಳೆದ ಕೆಲವು ತಿಂಗಳುಗಳಿಂದ ತಜ್ಞರು ಈ ಎಣ್ಣೆ ಕ್ಷೇತ್ರಗಳ ವಿನಾಶ ಸಿದ್ಧತೆ ಮಾಡುತ್ತಿದ್ದು ಸೋವಿಯೆಟ್ ಸರಕಾರದಂತೆಯೇ ಎಲ್ಲವನ್ನೂ ನಾಶಮಾಡಿರುವರು.

ಹಿಟ್ಲರ್ ಮುಸಲೋನಿ ಭೇಟಿ

ಎಪ್ರಿಲ್ ತಾ. 29ರಲ್ಲಿ ಹಿಟ್ಲರ್ ಮತ್ತು ಮುಸಲೋನಿಯವರು ಸಾಲ್ಸ್‌ಬರ್ಗ್ ಎಂಬಲ್ಲಿ ಒಟ್ಟು ಸೇರಿ ಮಾತುಕತೆ ನಡಿಸಿದರು. ರಿಬೆಂಟ್ರಪ್ ಮತ್ತು ಸಿಯಾನೋರವರೂ ಫೀಲ್ಡ್ ಮಾರ್ಶಲ್ ಕೆಟ್ಟೆಲ್ ಮತ್ತು ಜನರಲ್ ಕವಲ್ಲೇರೋರವರೂ ಈ ಸಂದರ್ಭದಲ್ಲಿ ಹಾಜರಿದ್ದರು. ಜರ್ಮನ್ ಮತ್ತು ಇಟಲಿಯಾನ ರಾಯಭಾರಿಗಳೂ ಇದ್ದರು. ಈ ಮಾತುಕತೆಯ ಉದ್ದೇಶವೇನೆಂದು ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಅದರ ಪರಿಣಾಮವಾಗಿ ಇನ್ನೂ ಹೆಚ್ಚಿನ ಇಟಲಿಯಾನ ಸೈನಿಕರು ಪೂರ್ವ ರಣರಂಗಕ್ಕೆ ಕಳುಹಿಸಲ್ಪಡಬಹುದೆಂದೂ, ಫ್ರಾನ್ಸಿನ ಪ್ರಶ್ನೆಯು ಮಾತುಕತೆಯ ಮುಖ್ಯವಿಷಯವಾಗಿದ್ದಿತೆಂದೂ ಸುದ್ದಿಯುಂಟಾಗಿದೆ. ಈ ಸಂದರ್ಭದಲ್ಲಿ ಫ್ರಾನ್ಸಿನ ವಸಾಹತುಗಳನ್ನು ಇದ್ದಂತೆಯೇ ಇರಿಸಲು ಹಿಟ್ಲರರು ಆತುರ ಪಡುತ್ತಿದ್ದಾರೆ. ಆ ಸಂಬಂಧವಾಗಿ ಮುಸಲೋನಿಯವರನ್ನವರು ಸಮಾಧಾನ ಪಡಿಸುವುದು ಮಾತುಕತೆಯ ಒಂದು ಉದ್ದೇಶವೆಂದು ನಂಬಲಾಗಿದೆ. ಹಿಟ್ಲರರು ಮೇ ತಿಂಗಳ ಅಂತ್ಯದೊಳಗೆ ಮಧ್ಯ ಪೂರ್ವದಲ್ಲಿ ಪ್ರಚಂಡ ಧಾಳಿಯನ್ನಾರಂಭಿಸುವ ಸಂಭವವಿದೆ.

ಬ್ರಿಟಿಷ್ ವ್ಯಾಪಾರೀ ದೋಣಿಗಳ ಸಾಹಸ.



ಬ್ರಿಟನ್ ವ್ಯಾಪಾರಿ ಹಡಗ ಪಡೆಯ ಚಿಕ್ಕ ಹಡಗುಗಳು ಕೆಂಪು ನಿಶಾನೆಯನ್ನು ಹಾರಿಸುತ್ತಾ, ಅನೇಕ ಅಪಾಯಗಳನ್ನೆದುರಿಸಿ ಒಂದು ಬ್ರಿಟಿಷ್ ಬಂದರದಿಂದ ಇನ್ನೊಂದಕ್ಕೆ ಅಮೂಲ್ಯ ಸಾಮಾನುಗಳನ್ನೊಯ್ಯುವ ಸಾಹಸ ಮಾಡುತ್ತಿವೆ. ಅವುಗಳಿಗೇನೂ ಯುದ್ಧ ಹಡಗುಗಳ ರಕ್ಷಣೆ ಇರುವುದಿಲ್ಲ. ಅಂದಮೇಲೆ ಹಕ್ಕನೆ ಧಾಳಿ ನಡಿಸಿ ಬೋಂಬುಗಳನ್ನು ಸುರಿದೋಡಿ ಬಿಡುವ ಜರ್ಮನ್ ಬೋಂಬರ್ ವಿಮಾನಗಳಿಗವು ಸುಲಭವಾಗಿ ಬಲಿಯಾಗಬಹುದು. ಆದರೆ ಅವು ಯಾವಾಗಲೂ ಸುಮ್ಮನೆ ಬಿಡದೆ ಪ್ರಬಲ ಹೋರಾಟ ನಡೆಸುತ್ತವೆ. ಆದರಿಂದಾಗಿ ಹಲವು ವೇಳೆ ಧಾಳಿಗಾರನೇ ಪರಾಭವ ಹೊಂದುತ್ತಾನೆ. ಇತ್ತೀಚಿಗೆ ಅಂತಹ ಘಟನೆಯೊಂದು ನಡೆದಿದ್ದು ಅದರ ದೃಶ್ಯವು ಮೇಲೆ ಚಿತ್ರಿಸಲಾಗಿದೆ. ಸ್ಯೆಂಟ್ ಯುನಾನ್ ಎಂಬ ಚಿಕ್ಕ ಕರಾವಳಿ ಹಡಗವನ್ನು ಜರ್ಮನ್ ಬೋಂಬರ್ ವಿಮಾನವೊಂದು ಹುಡುಕಿ ಹಿಡಿದು ಧಾಳಿ ನಡೆಸಿತು. ಹಡಗದ ಕಪ್ತಾನ ಸಿ. ಎಚ್. ರೊಬರ್ಟ್ಸರು, ಜರ್ಮನ್ ವಿಮಾನವು ತನ್ನ ಹಡಗದ ಬಳಿಗೆ ಬಂದು ಸುಮಾರು 1000 ಅಡಿ ದೂರದಲ್ಲಿ ಅದನ್ನು ಸುತ್ತ ಪ್ರಜ್ವಲಿಸುವ ತೋಪುಗಳಿಂದ ಧಾಳಿ ನಡಿಸಲು ಇಳಿದು ಬರುವುದನ್ನು ಕಂಡರು. ಬೋಂಬರ್ ವಿಮಾನವು ಹೆಚ್ಚು ಕಡಿಮೆ ಹಡಗದ ಮೇಲ್ಭಾಗಕ್ಕೆ ಬರುವನಕ ಅವರು ಗುಂಡು ಹಾರಿಸುತ್ತಲೇ ಇದ್ದರು. ಅನಂತರ ತನ್ನ ಜಂಟಿ ಲೂಯಿಸ್ ತೋಪುಗಳನ್ನು ಗುರಿಯಿಟ್ಟು ಹಾರಿಸಿದರು. ಜರ್ಮನ್ ವಿಮಾನಕ್ಕೆ ಬೆಂಕಿ ಹಿಡಿದು ಅದು ಸಮುದ್ರಕ್ಕೆ ಮುರಿದು ಬಿತ್ತು. ಚಿಕ್ಕ ಹಡಗವು ಜಖಮೇನೂ ಇಲ್ಲದೆ ತಪ್ಪಿಸಿಕೊಂಡಿತು.

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.



(ದ್ವಿತೀಯ ಮುದ್ರಣವು)

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

THE MODERN BOOK Co.,

No 28, Avadhanam Paper 2nd Lane (N Y) Choolai, MADRAS

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದುದು.)

ಯಾಗಿ ಎಲ್ಲರೂ ನಿಮ್ಮ ಮೇಲೆ ದ್ವೇಷ ಸಾಧಿಸುವರು. ಕಾಸಿನ ಉತ್ಪತ್ತಿ ಇಲ್ಲದೆ ಇದ್ದು ಖರ್ಚು ಮಾತ್ರ ಸುತ್ತಲಿಂದಲೂ ಪ್ರಾಪ್ತವಾಗುವುದರಿಂದ ಕಂಡಕಂಡವರೊಡನೆ ಸಾಲಕಡಗಳನ್ನು ಮಾಡುವಿರಿ. ತಾ. 7. 13. 14 ಈ 3 ದಿನಗಳಲ್ಲಿ ಪ್ರವಾಸ, ಶೋಕ, ಅಪಘಾತಾದ್ಯನಿಷ್ಟಗಳು ಸಂಭವಿಸುವವು.

ತುಲಾ—ಸಾಮಾನ್ಯ ಜನವೃಂದಕ್ಕೆ ಕಾಲವು ಹಿತಕರವಲ್ಲವಾದರೂ ವಿದ್ಯಾರ್ಥಿಗಳಿಗೂ ನೌಕರ ಜೀವಿಗಳಿಗೂ ಮನದಿಷ್ಟವು ಸಿದ್ಧಿಸುವದು. ದೈಹಿಕಾಲಸ್ಯವೂ ಶತ್ರುವರ್ಗದವರ ಉಪಟಳವೂ ಮುಂಚಿಗಿಂತ ಕಡಿಮೆಯಾಗಲಿದೆ. ಆಯವ್ಯಯಗಳು ಸಮತೂಕದಲ್ಲಿ ನಿಲ್ಲುವುದರಿಂದ ಹಣದ ಅಡಚಣೆಯಿಂದ ಮುಕ್ತರಾದ ನಿಮ್ಮ ಮನಸ್ಸಿಗೆ ಕೊಂಚ ವಿಶ್ರಾಂತಿ ಸಿಗುವದು. ಕಷ್ಟ ಜೀವಿಗಳಿಗೂ ವರ್ತಕ ಜನರಿಗೂ ದಿನವು ಸ್ವಲ್ಪ ಕಷ್ಟದಾಯಿಯಾಗಿಯೇ ತೋರುವುದಾದರೂ ವಾರಾಂತ್ಯದ 1 ದಿನಗಳಲ್ಲಿ ಸಂಪದಾರೋಗ್ಯ ಸುಖಗಳು ತೃಪ್ತಿಕರವಿರುವವು.

ವೃಶ್ಚಿಕ— ವ್ಯರ್ಥಾಟನದಿಂದುಂಟಾದ ನಿದ್ರಾಹಾರಾದಿಗಳ ಅಸ್ತವ್ಯಸ್ತತೆಯಿಂದ ನಿಮ್ಮ ಆರೋಗ್ಯವು ಸರಿಯಾಗಿರಲಾರದು. ಹಗೆಯವರ ಕುಟಿಲ ತಂತ್ರಗಳಿಂದ ನಿಮ್ಮ ಧನಮಾನಾದಿಗಳಿಗೆ ಹಾನಿಯೊದಗುವದಾದರೂ "ಕೃತೇ ಚ ಪ್ರತಿಕರ್ತವ್ಯಮೇಷ ಧರ್ಮಸ್ಸನಾತನಃ" ಎಂಬ ಲೋಕೋಕ್ತಿಯಂತೆ ಅಪಕೃತಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡಿಯೇ ತೀರುವಿರಿ. ಕಜ್ಜಿ ಹುಣ್ಣು ವಗೈರೆ ಚರ್ಮ ಸಂಬಂಧ ರೋಗಗಳು ತಲೆದೋರಲಿವೆ. ತಾ. 7. 13. 14. ಈ 3 ದಿನಗಳಲ್ಲಿ ನಿಮ್ಮ ಪ್ರಯತ್ನವು ಸಫಲವಾಗುವದು. ದೇಹ ಮನಸ್ಸುಗಳಿಗೆ ಸುಖಶಾಂತಿಯು ಸಿಗಲಿವೆ

ಧನು—ಈ ವಾರ ನೋಡಲ್ಕೊಂಡು ನಿಮ್ಮ ಪರಿಸ್ಥಿತಿಯು ಶುಕ್ಲಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನೇ ಹೊಂದುತ್ತಾ ಬರುವುದು. ಪ್ರಭಾತವಾದೊಡನೆ ಕತ್ತಲೆಯು ಮಾಯವಾಗುವಂತೆ ನಿಮ್ಮ ತಾಪತ್ರಯಗಳಲ್ಲವೂ ತೊಲಗುವವು. ಮುಂಗುಸಿಯನ್ನು ನೋಡಿದ ಸರ್ಪದಂತೆ ಶತ್ರುವರ್ಗವು ಮೆತ್ತಗಾಗುವುದು. ಉದ್ಯೋಗಿಕ ಭಾಗದಲ್ಲಿರುವವರಿಗೆ ಉನ್ನತ ಸ್ಥಾನಪ್ರಾಪ್ತಿಯ ಯೋಗವಿದೆ. ತಾ. 7. 11. 12. 13. 14 ಈ ದಿನಗಳಲ್ಲಿ ಕಿಂಚಿತ್ ದೇಹಾಲಸ್ಯ ಮತ್ತು ಪತಿಪತಿಗಳಲ್ಲಿ ಕಲಹವೂ ಉಂಟಾದೀತು.

ಮಕರ—ದೇಹಾಲಸ್ಯ ಮತ್ತು ಶತ್ರು ಪೀಡೆ ನಿಮಿತ್ತ ನಿಮ್ಮ ಮನೋರೋಗವಧಿಕವಾಗಲಿದೆ. ಕಂದಮಕ್ಕಳಲ್ಲೂ ಗಂಡಹೆಂಡಿರಲ್ಲೂ ಮನಸ್ಸಮಾಧಾನವಿಲ್ಲದ ಕಾರಣ ಗೃಹದ ಅವ್ಯವಸ್ಥೆಯು ಬೀಡಾಗುವದು. ಸೇವಕ ಜನರೂ ಕೂಡ ಸ್ವೇಚ್ಛೆಯುಂದಿದ್ದು ಅಧಿಕಾರಿಯ ಕೋಪಕ್ಕೆ ಗುರಿಯಾಗುವರು. ಆದರೂ ನಿಮ್ಮ ದೈನಿಕ ಖರ್ಚುವೆಚ್ಚಗಳಿಗೆ ಸಾಕಷ್ಟು ಧನವನ್ನು ಸ್ವಯಂ ದುಡಿಯಲು ನೀವು ಶಕ್ತರಿರುವುದರಿಂದ ದಿನಯಾಪನೆಯು ಕಷ್ಟವಾಗಲೊಲ್ಲದು. ತಾ. 7. 11. 12 ಈ 3 ದಿನಗಳಲ್ಲಿ ಭೋಗ ಭೋಜ್ಯಗಳೂ ಧನ ವಸನಗಳೂ ಅಲ್ಪಾಯಾಸದಿಂದ ಲಭಿಸುವವು.

ಕುಂಭ—ಅನೇಕ ಸಮಯದಿಂದ ನಿಮಗೂ ನಿಮ್ಮ ಬಂಧುವರ್ಗದವರಿಗೂ ಇದ್ದ ಮನಸ್ತಾಪವು ಈ ವಾರದಲ್ಲಿ ಮೂರನೆಯವರ ಮಧ್ಯಸ್ಥಿಕೆಯಿಂದ ನಿವೃತ್ತವಾಗಿ ಪರಸ್ಪರ ಸೌಹಾರ್ದಭಾವದಿಂದಿರುವಿರಿ. ಯಾವೊಂದು ಚಿಂತೆಗೂ ನಿಮ್ಮ ಮನದಲ್ಲೆಡೆಯಿಲ್ಲದ ಕಾರಣ ದಿನಗಳು ಸುಖದಿಂದಲೇ ಕಳೆವವು. ನೀವು ಒಳ್ಳೆಯ ಸಂಯಮಿಗಳಿದ್ದರೂ ಕೆಲವೊಮ್ಮೆ ನಿಮ್ಮ ಮನಸ್ಸು ಅಂಕೆಯಿಲ್ಲದ ಕಪಿಯಂತಾಗುವದು. ತಾ. 8. 9. 10. 13. 14 ಈ ದಿನಗಳಲ್ಲಿ ಸುಖಭೋಜನ, ನಿಜಯಲಾಭ, ಸ್ತ್ರೀಸುಖಗಳೂ ಲಭಿಸುವವು.

ಮೀನ—ಹಗೆಜನರ ಪೀಡೆಯು ಸಹನೀಯವಿದ್ದರೂ ಆತ್ಮೀಯರ ಅಪಕೃತಿಯು ಸಹಿಸಲಶಕ್ಯವೇ ಸರಿ. ಈ ವಾರದಲ್ಲಿ ನಿಮಗಿದರ ಅನುಭವವಾಗಲಿದೆ. ದುರ್ಜನರ ಸಹವಾಸದಿಂದ ಅನೇಕ ತೆರನಾದ ಕಷ್ಟನಷ್ಟಗಳಿಗೆ ಪಾತ್ರರಾಗುವಿರಿ. ಉದರಶೂಲೆಯು ಪದೇ ಪದೇ ನಿಮ್ಮನ್ನು ಬಾಧಿಸೀತು. ಉತ್ಪತ್ತಿಗೆ ತಕ್ಕಷ್ಟೇ ಖರ್ಚು ಇರುವದರಿಂದ ಹಣದ ತಾಪತ್ರಯವಿಲ್ಲ. ವಿದ್ಯೋಪಜೀವಿಗಳಿಗೆ ಹೆಚ್ಚಿನ ಸುಖವಿಲ್ಲ. ತಾ. 7. 11 12 ಈ 3 ದಿನಗಳು ಉತ್ತಮವಿರುವುದರಿಂದ ಸಕಲೋಪಸ್ಕರಗಳಿಂದೊಡಗೂಡಿದ ಶಯ್ಯಾಸುಖ, ಮೃಷ್ಟಾನ್ನಭೋಜನವೂ ದೊರೆಯಲಿದೆ.

DIAMONDS! **DIAMONDS!**

K. R. K. SHET.

Opposite Govt-College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೩—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ -ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪುರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ್ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಬಳ್ಳಾರಿ. —ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ.—ಸಂಗಪ್ಪ ಶಿವಲಿಂಗಪ್ಪ ಆಂಡ ಸ.

ಅಚ್ಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು —**ಆಮಲಕೀ ತೈಲ.**

ಆನಂದ ಉತ್ಸಾಹ ವಿಚಾರಶಕ್ತಿ ಹೆಚ್ಚಿಸಲು- -**ಆಮಲಕೀ ತೈಲ.**

ತಂಪಾದ ನೇತ್ರಗಳನ್ನು ಹೊಂದಲು—**ಆಮಲಕೀ ತೈಲ.**

ನಾರೀಮಣಿಗಳ ಸೌಂದರ್ಯವೇ—**ಆಮಲಕೀ ತೈಲ**

ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ-**ಆಮಲಕೀ ತೈಲ.**

ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ—**ಆಮಲಕೀ ತೈಲ.**

ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ—**ಆಮಲಕೀ ತೈಲ.**

ಭಾರತದ ಮಹಿಳೆಯರು ಪ್ರೀತಿಸುವದು—**ಆಮಲಕೀ ತೈಲ.**

ಬೆಳಗುವ ತಾರೆಯೇ-ಸ್ವಮುಖದ ಸ್ವಾಸ್ಥ್ಯಕ್ಕೆ—**ಆಮಲಕೀ ತೈಲ.**

ಲಲನೆಯರು ಮೆಚ್ಚುವದು—**ಆಮಲಕೀ ತೈಲ.**

ವಾತಾದಿ ತ್ರಿದೋಷನಾಶಕವೇ—**ಆಮಲಕೀ ತೈಲ.**

ವಿಶೋಧಿತ ತಿಲತೈಲದಿಂದಲೆ ತಯಾರಿಸಿದ—**ಆಮಲಕೀ ತೈಲ.**

ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-**ಆಮಲಕೀ ತೈಲ**

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ—**ಆಮಲಕೀ ತೈಲ.**

ಆ ಮ ಲ ಕೀ ತೈಲ ವನ್ನೇ ಉಪಯೋಗಿಸಿರಿ.

2 ಔನ್ಸಿನ ಸೀಸೆ 1ರ ಕ್ರಯ 0 6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) **ಕುಂಜಾಲು**

ಸ್ಟಾಕಿಸ್ಟರು..ನವಭಾರತ ಬುಕ್ ಡಿಪೋ, ಉಡುಪಿ, ಗಣಪತ್ಯ್ಯಲಕ್ಷ್ಮೀ ನಾಯಕ್ ಬ್ರದರ್ಸ್, ಕೋಟ ದಿ ಸೆಂಟ್ರಲ್ ಮೆಡಿಕಲ್ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—**ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ.

ತೆತ್ತ ಮೂಲಧನ ... ... ರೂ. 1,82,100-0- 0

ಕ್ಷೇಮ ನಿಧಿಗಳು ... ... ರೂ. 17,18,98-2-11

ಶಾಖೆಗಳು:— **ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್**

ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ

ಮಾರಾಟಕ್ಕೆ ಯುಕ್ತವಾದ ದವಸಗಳ, ಚಿನ್ನಾಭರಣಗಳ, ಸಮಾಧಾನಕರವಾದ ಇತರ ಭದ್ರತೆಗಳ ಮೇಲೂ ಡಿಮೊಂಡ್ ನೋಟುಗಳ. ಬೇಲು ಪತ್ರಗಳ ಮೇಲೂ ಚಿಕ್ಕ ಮತ್ತು ದೊಡ್ಡ ಸಾಲಗಳು ಮ ಓವರ್ ಡ್ರಾಫ್ಟುಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ದೊರೆಯುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೇರವಾಗಿ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

UDIPI, 16th April.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಸಕ್ಷವಾತ, ಸೊಂಡಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager. — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೇನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ, : : : ಮಂಗಳೂರು.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾತರದ ಸೀರೆಗಳು, ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಹಿಂದ್ ಖಾದಿ ಮತ್ತು ಇಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಸಿ. ಎ. ಶೈ. ಬ್ರದರ್ಸ್

ಆಸ್ಪತ್ರೆ ಬಳಿ, **ಉಡುಪಿ.**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟಡ,

ಉಡುಪಿ.

ಮೊಲ್ಪರಿಗಳಿಯ, ಉಪಹಾರ ಮತ್ತು ಭೋಜನಗೃಹ, ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಚ್. ರಾಮಚಂದ್ರ ನಾಯಕ್,

ಪ್ರೊಪ್ರೈಟರ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನೆಯನ್ನು ನೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೩ ೦ ೦	**ಅನಾಥ್ಯನಂದಿನಿ**	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕೆಟಲಾಗಿಗೆ ಬರೆಯಿರಿ—

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು-**ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು



ಚಿಕ್ಕ 'ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾರಗಿದ ಆಶೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ;

ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ

ಉಡುಪಿ ಸ್ಟಾಕಿಸ್ಟರು:— **ನವಭಾರತ ಬುಕ್ ಡಿಪೋ, ಉಡುಪಿ.**

ಸ್ಥಾಪನೆ **ಕ್ರಾನ್ ರಬ್ಬರ್ ಸ್ಟಾಂಪು ಕಂಪೆನಿ** 1920

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೮೦ ದಿವಸಗಳಿಗೆ ಬರುವವು. ಅಂದರೆ ಕೇವಲ **ಆರು ರೂಪಾಯಿಗಳೇ** ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ **ಬರೆಯಿರಿ.**

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಂಬಾಳ ಬೈಲು, ಡಕ್.**

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪಿತ

ಅಂತರಂಗ
ಹೊಸ ಮಾದರಿಯ
ವಿನೋದಪಾರಪತ್ರಿಕೆ
ವಾ. ಚಂದಾ ರೂ. 3-6-0
ಬಿಡಿಪ್ರತಿಗೆ 0-1-0
ಜಾಹೀರಾತಿಗೆ
ಉತ್ತಮ ಸಾಧನ.
ಅಂತರಂಗ, ಉಡುಪಿ.

ANTARANGA
The only Leading Kannada Weekly of wit & Humour.
Udipi - S. India

ಸಂಪುಟ ೨೧
Vol. 21

ಸಂಸ್ಥಾಪಕರು:—ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

14-5-1942

ಸಂಚಿಕೆ ೩೬
No. 36

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲ 1ರ ದರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಲಿಕ್ಕೆ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲ 1ರ ರೂ 1-8-0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—(1) ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ, ಮಾಟುಂಗಾ. (3) ಮುಲ್ಲರ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. (4) ಧನ್ವಂತರಿ ವೈದ್ಯಶಾಲೆ, ಚಿನ್ನದೊಸ ಬಜಾರ್, ಮೈಸೂರು. (5) ಮಂಗಳೂರು ಸ್ಟೋರ್ಸ್, ಮಡಿಕೇರಿ. (6) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ.(7) ಡಾ| ಶ್ರೀನಿವಾಸ. ಪೈ, ಪುತ್ತೂರು (8) ಕಾಂತಾವರ ವಾಸ್ತೇವ ಶೆಟ್ಟಿ, ಬೆಳ್ತಂಗಡಿ, (9) ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪ್ಪೊ, ಕೋಳದ ಪೇಟೆ, ಉಡುಪಿ. (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಸರಗೋಡ ಶ್ರೀ ರಾಮ ಸ್ಟೇಷನರಿ ಸ್ಟೋರ್ಸ್, ಶ್ರೀ ರಾಮ ಪೇಟೆ. (13) ಕೆ. ಶ್ರೀನಿವಾಸ ಶೆಣೈ, ತೀರ್ಥಹಳ್ಳಿ (14) ಬಿ. ಯಸ್. ನರಸಿಂಗರಾವ್. ಮರ್ಚೆಂಟ್, ಚಿಕ್ಕಮಂಗಳೂರು

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941.

Assets exceed	...	....	Rs. 1,10,00,000
Life Fund exceeds	....	....	,, 92,00,000
Business in force	...	...	,, 4,28,00,000
Claims paid over	....	....	,, 56,00,000

For further particulars and agency terms, please apply to
Branch Manager,
The Asian Assurance Co., Ltd., Mangalore. S. K.

ನಿಮ್ಮ ಮಾದಲಿಕ್ಕಾಗಲೀ, ಏಜಂಟ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರಿಟರಿ, ಮಂಗಳೂರು, ದ. ಕ.
ಶ್ರೀ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೂಡಲೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : . : ದ. ಭಾರತ.

The Canara Mutual Assurance Company, Limited.

UDIPI : : : : : S. INDIA

ವಾರ ಭವಿಷ್ಯ

ತಾ. ೧೪-೫-೪೭ರಿಂದ ೨೧-೫-೪೭ರ ವರೆಗೆ.

ಮೇಷ—ನಿಮ್ಮ ಯೋಗ್ಯತೆಗೆ ತಕ್ಕುದಾದ ಧನ ಪ್ರಾಪ್ತಿಯು ಇರುವುದಾದರೂ ನಿಮಗೆ ಅಡಚಣೆಯು ಬೀರ ತಪ್ಪಲಾರದು. ಸ್ಥಾನ ಚಲನೆಯ ಯೋಗವೂ ಕಂಡು ಬರುವದು. ಯಾವ ಕಾರ್ಯವನ್ನೂ ಅನಾಯಾಸದಿಂದ ಪೂರ್ತಿಗೊಳಿಸಲು ನೀವು ಶಕ್ತರಿರುವಿರಾದರೂ ಆಕಸ್ಮಿಕ ವಿಘ್ನಗಳಿಂದ ಕಾರ್ಯ ಹಾನಿಯಾಗಲೂ ಬಹುದು. ಮೈ ಕೈ ಮತ್ತು ಕಣ್ಣುಗಳಲ್ಲಿ ನೋವು ಕಂಡುಬರಲಿದೆ. ತಾ. 14. 18. 19 ಈ ೩ದಿನಗಳಲ್ಲಿ ಗೃಹಸುಖ, ಧನಲಾಭ, ವಿಜಯ ಪ್ರಾಪ್ತಿಯೂ ಆಗುವಂತಿದೆ.

ವೃಷಭ—ಆರೋಗ್ಯ ವಿಚಾರದಲ್ಲಿ ಎಷ್ಟೇ ಜಾಗರೂಕರಾಗಿದ್ದರೂ ಕೂಡ ಕಾಹಿಲೆಗೆ ಗುರಿಯಾಗುವ ಸಂಭವವಿದೆ. ಈ ವಾರದಲ್ಲಿ ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ಮನೋರಥವು ವಿಫಲವಾಗುವದು. ವಿನಾಕಾರಣದಿಂದ ಹಲವರೊಡನೆ ಕಲಹವಾದೀತು. ಪರ್ಯಟನದಲ್ಲೇ ಹೆಚ್ಚಿನ ಸಮಯವನ್ನು ಕಳೆವಿರಿ. ನಿಮ್ಮ ಖರ್ಚಿಗೆ ತಕ್ಕಷ್ಟು ಸಂಪಾದನೆಯೂ ಇರುವುದರಿಂದ ಹಣದ ತಾಪತ್ರಯವಿರಲಾರದು. ಸಜ್ಜನರ ಮೈತ್ರಿಯೂ ಸಹಾಯವೂ ದೊರೆಯಲಿದೆ. ಗೃಹಸುಖ ತೃಪ್ತಿಕರವಿದ್ದರೂ ತಾ 14. 18. 19ರಲ್ಲಿ ಗೃಹತಾಪತ್ರಯ, ಅಮಿತ ವ್ಯಯಗಳಿಂದ ಮನಸ್ಸಮಾಧಾನವಿರದು

ಮಿಥುನ—ನಿಮ್ಮ ನಿಮ್ಮ ದುರ್ದೈವವು ಪೂರ್ತಿಮತ್ತಾಗಿ ಬಂದು ನಿಮ್ಮನ್ನು ಕಾಡುತ್ತಿರುವುದೆಂದರೂ ತಪ್ಪಾಗಲಾರದು. ಸಕಲ ಗ್ರಹನಿಕರವೇ ಅನಿಷ್ಟ ಸ್ಥಾನವನ್ನಾಶ್ರೈಸಿರುವುದರಿಂದ ಶತ್ರು ಜನರಿಂದ ಪರಾಭವ, ಮಿತ್ರರೊಳು ಮನಸ್ತಾಪ, ನಾತನಾಡಿದವರೊಡನೆ ಕಲಹ, ದೇಹಾಲಸ್ಯ, ಆರ್ಥಿಕ ತಗಾದೆ ಇತ್ಯಾದಿ ಸತತ ಶೋಕದಾಯಿಯಾದ ಅನರ್ಥ ಪರಂಪರೆಗಳಿಂದ ಪೀಡಿತರಾದ ನಿಮಗೆ ತಾ. 14 18. 19. ಈ ದಿನಗಳಲ್ಲಿ ಕೊಂಚ ದೈವ ಸಹಾಯವು ದೊರೆವುದರಿಂದ ಕಿಂಚಿತ್ಸುಖವನ್ನು ಕಾಣಲಿರುವಿರಿ

ಕರ್ಕಾಟಕ—ಕುಜ, ಗುರುಗಳು ವ್ಯಯಸ್ಥಾನವನ್ನು ಹೊಂದಿದ್ದರೂ ಇತರ ಗ್ರಹರ ಸಂಪೂರ್ಣ ಬಲವು ನಿಮಗಿರುವುದರಿಂದ ನಿಮ್ಮ ಖರ್ಚಿಗಿಂತ ಇಮ್ಮಡಿಯಾದ ಧನಪ್ರಾಪ್ತಿಯು ನಿಮಗಿರುವುದು. ಧರ್ಮ-ಕರ್ಮಗಳು ವಿಶೇಷವಾಗಿ ಜರಗಲಿವೆ. ಗೃಹಸ್ಥಾಶ್ರಮಿಗಳಿಗೆ ಗೃಹಸುಖವೂ ವನಿತಾ ಸಂಬಂಧ ಧನವೂ ಲಭಿಸುವ ಯೋಗವಿದೆ ಆದರೆ ಪಿತ್ಥಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯುಂಟಾಗಬಹುದು. ಆಕಸ್ಮಿಕ ಪ್ರವಾಸ ಸಂಭವಿಸಲಿದೆ. ತಾ. 18. 19. ಪ್ರತಿಕೂಲಗಳಾಗಿವೆ.

ಸಿಂಹ—ಇಂದೀಗ ನೀವು ಮುದ್ಧವದ ಸಂಕಷ್ಟಸೆಗೇರಿರುವಿರಿ. ಶನೈಶ್ಚರನೊಬ್ಬನು ಪ್ರತಿಕೂಲನಾಗಿರುವುದರಿಂದ ಮನಸ್ಸನ್ನು ಸ್ಥಿರವಾಗಿಡಲು ಬಿಡಲಾರನು. ನಿಷ್ಕಾರಣವಾಗಿ ಜನಾಪವಾದಕ್ಕೆ ಗುರಿ ಮಾಡಲಿರುವನು. ಆದರೆ ನಿಮ್ಮ ಕೆಲಸಕ್ಕಿಂತ ಅಧಿಕವಾದ ಫಲಪ್ರಾಪ್ತಿಯಾಗುವುದರಿಂದ ಕಾರ್ಯೋತ್ಸಾಹವು ದಿನೇ ದಿನೇ ಹೆಚ್ಚಲಿದೆ. ಸಮಾಜದಲ್ಲಿ ಗಣನೀಯ ಸ್ಥಾನವನ್ನೂ ಪಡೆಯುವಿರಿ. ತನು ಮನೋರೋಗಗಳಿಂದ ಮುಕ್ತರಾದ ನಿಮಗೆ ತಾ. 14. 20. 21 ಈ ದಿನಗಳು ಉತ್ತಮವಿರಲಾರವು

ಕನ್ಯಾ—ಈ ವಾರವು ನಿಮಗೆ ಬಹಳ ಕೆಟ್ಟದ್ದಿರುವುದು. ಪುಷ್ಪಗುಚ್ಛದಲ್ಲಿ ಮಧುವಿರುವನಕ ತುಂಬಿಗಳು ಅದನ್ನು ಮುತ್ತುತ್ತಿದ್ದು ತದನಂತರ ಹೇಗೆ ದೂರೀಕರಿಸುವವೋ ಅಂತೆಯೇ ನಿಮ್ಮಲ್ಲಿ ಸಾಕಷ್ಟು ಧನಬಲವಿರುವನಕ ಎಲ್ಲರೂ ನಿಮ್ಮನ್ನು ಸೇರಿಕೊಂಡಿದ್ದು ಈಗ ಎಲ್ಲರೂ ತಾವಾಗಿ ದೂರ ಸಾಗುತ್ತಲಿರುವರು. ಆರೋಗ್ಯವು ಸ್ವಲ್ಪವೂ ಚೆನ್ನಾಗಿರದು. ಮನಸ್ಸಿಗೆ ಅಸಮಾಧಾನವನ್ನುಂಟುಮಾಡುವಂತಹ ಕಾರ್ಯಗಳು ತೀವ್ರವಾಗಿ ಜರಗಿ ಹೋಗುವವು. ಕಾಸಿನ ಉತ್ಪತ್ತಿಯಾಗಲಾರದು. ಸ್ತ್ರೀಜನರಿಂದ ಅನೇಕ ಅನಿಷ್ಟ ಅವಮಾನಗಳಿಗೆ ಗುರಿಯಾಗುವಿರಿ. ವಾರಾದಿಯ ೪ ದಿನಗಳು ವಿಶೇಷ ದುಃಖದಾಯಿಗಳಿವೆ.

(೧೧ನೇ ಪುಟ ನೋಡಿರಿ.)

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ. ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24—ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli
2. 57 Big street, Triplicane. Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea. Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು.— 1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ರಥಬೀದಿ.** (3) **ಡಾಕ್ಟರ್ ಸಿ. ಜಿ. ಆಚಾರ್ಸ್ ಫಾರ್ಮಸಿ, ಡಾಕ್ಟರ್ ಕೆ. ಕೇಶವ ಶೆಣೈ** L. I. M. **ಡಾಕ್ಟರ್ ವೆಂಕಟ ರಾವ್, ಸೂರತ್ಕಲ್**

ಕೊನೆಯ ಸಂದರ್ಭ

ಹಿಂದೂದೇಶದ ಸ್ವಾತಂತ್ರ್ಯ ಮಾರ್ಗದಲ್ಲಿನ ಅತಿ ದೊಡ್ಡ ತಡೆಯೆಂದರೆ ಹಿಂದು ಮುಸಲ್ಮಾನ ಬಿಕ್ಕಟ್ಟು ಈ ಸಂಧಿ ಕಾಲದಲ್ಲಾದರೂ ಅದನ್ನು ನಿವಾರಿಸಿ ಹಿಂದು ಮುಸಲ್ಮಾನರೊಂದುಗೂಡಿ ನಡೆಯುವ ಕೊನೆಯ ಸಂದರ್ಭವೀಗ ಬಂದಿರುವುದು. ರಾಜಾಜಿಯವರ ಘೋಷಣೆಯು ಸತ್ಪರಿಣಾಮವಿತ್ತೆನ್ನಬಹುದು. ಹಿಂದು ಮುಸಲ್ಮಾನ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸಿ ಲೀಗಿನವರು ಉಪಮಂತ್ರಿ ಪ್ರತಿನಿಧಿಗಳನ್ನು ಕಾಂಗ್ರೆಸಿನವರಾಗಿ ನೇಮಿಸಲು ತಾನು ಸಿದ್ಧನಿದ್ದೇನೆ. ಆದೇ ರೀತಿ ಲೀಗಿನವರುಪಮಂತ್ರಿಯನ್ನು ನೇಮಿಸಬಹುದೆಂದು ಕಾಂಗ್ರೆಸ್ ಅಧ್ಯಕ್ಷರು ಹೇಳಿರುವರು ಹಿಂದುಸ್ಥಾನದ ಸ್ವಾತಂತ್ರ್ಯ ಸಾಧನೆಯೇ ಲೀಗಿನ ಮುಖ್ಯ ಗುರಿಯಾಗಿದ್ದರೆ ಅವರೊಂದಿಗೆ ಸಂಧಾನ ಮಾಡಿಕೊಳ್ಳಲು ತಾನು ಸರ್ವ ಪ್ರಯತ್ನ ಮಾಡುವೆನೆಂದು ಪಂಡಿತ ನೆಹರುಗಳೆಂದಿರುವರು. ಆದರೆ ಜಿನ್ನಾ ಸಾಹೇಬರು ಈ ಸಂದರ್ಭವನ್ನುಪಯೋಗಿಸಿಕೊಳ್ಳಲು ಸಿದ್ಧರಿರುವರೇ ಎಂಬುದು ಪ್ರಶ್ನೆ. ಅವರು ಯಥಾ ಪ್ರಕಾರ ತನ್ನ ಹಟಕ್ಕೇನೇ ಕಟ್ಟುಬಿದ್ದು ಕಾಂಗ್ರೆಸಿನೊಂದಿಗೆ ಯಾವ ರೀತಿಯ ಸಂಧಿಯನ್ನೂ ಮಾಡಲು ಸಿದ್ಧರಿರದಿದ್ದರೆ ಭಾರತದ ಸ್ವಾತಂತ್ರ್ಯಕ್ಕೆ ಅವರೇ ದೊಡ್ಡ ಕಂಟಕವಾಗಿ ಪರಿಣಮಿಸುವರೆಂಬುದರಲ್ಲಿ ಸಂದೇಹವೇ ಇಲ್ಲ

ತಿರುವಾಂಕೂರಿನ ಮಾರ್ಗದರ್ಶಿತ್ವ

ಉಚ್ಚ ಸರಕಾರಿ ನೌಕರರು ಆಂಗ್ಲೇಯ ಉಡುಗೆ ತೊಡಿಗೆಗಳನ್ನು ಹಾಕಿಕೊಳ್ಳುವುದೊಂದು ಗುಲಾಮಿ ಪದ್ಧತಿಯಾಗಿರುತ್ತದೆ ಆದರೆ ತಿರುವಾಂಕೂರು ಸರಕಾರವು ಅದನ್ನು ತೆಗೆದುಹಾಕಿ ದೇಶಕ್ಕೆ ಮಾರ್ಗದರ್ಶಿಯಾಗಿದೆ. ಅಲ್ಲಿಯ ಅಧಿಕಾರಿಗಳು ಅದೊಂದು ಬಂಧನವಾಗಿದ್ದ ಹಿಂದಿನ ಕೋಟು, ಕೊರಳು ಪಟ್ಟಿ, ಇಜಾರು, ಕಾಲು ಚೀಲ ಮತ್ತು ಬೂಟ್ಸುಗಳ ಬದಲಿಗೆ ದೇಶೀಯವಾದ ಧೋತಿ ಮತ್ತು ಜುಬ್ಬ ಹಾಕಿಕೊಂಡು ಆಫೀಸಿಗೆ ಬರಬಹುದಾಗಿದೆ ಇದೀಗ ಸುಧಾರಣೆಯ ಮಾದರಿಯಾಗಿದೆ. ಇತರ ದೇಶೀಯ ಸಂಸ್ಥಾನಗಳವರೆಲ್ಲಾ ತಿರುವಾಂಕೂರಿನ ಮಾದರಿಯನ್ನನುಸರಿಸಿದ ಪಕ್ಷದಲ್ಲಿ ಉಡುಗೆ ತೊಡಿಗೆಯ ವಿಷಯದಲ್ಲಿಯೂ ಪಾಶ್ಚಾತ್ಯರನ್ನನುಸರಿಸುವ ದಾಸ್ಯ ಮನೋವೃತ್ತಿ, ಮತ್ತು ಗೌರವ ಹಾಗೂ ಪ್ರತಿಷ್ಠೆ ಪಡೆಯಬೇಕಾದರೆ ಹಾಗೆ ಮಾಡಬೇಕೆಂಬ ತಪ್ಪು ಭಾವನೆಯು ಬುಡಕ್ಕೇನೇ ಕೊಡಲಿ ಹಾಕಿದಂತಾಗುವುದು

ಮೈಸೂರು ಮಹಾರಾಜರ ಎರಡನೇ ವಿವಾಹ

ಮೈಸೂರು ಮಹಾರಾಜರು, ತನ್ನ [illegible] ಜಮನೆತನಕ್ಕೇನೇ ಸೇರಿದ ತರುಣಿಯೋರ್ವಳನ್ನು ಎರಡನೇ ಸಲ ಮದುವೆಯಾದ ವಾರ್ತೆಯು ನಾನಾ ಪತ್ರಿಕೆಗಳಿಗೆ ಆಹಾರವಿತ್ತಿರುವುದು ಮಹಾರಾಜರು ತನ್ನ ಮೊದಲಿನ ಪತ್ನಿಯನ್ನು ತ್ಯಜಿಸಿರುವರೇ? ಅವರ ಪಾಡೇನು? ಎರಡನೇ ಸಲ ಮದುವೆಮಾಡಿಕೊಳ್ಳಲು ಕಾರಣವೇನು? ಎಂಬೀ ಕುರಿತೆಲ್ಲಾ ಮೈಸೂರು ಸರಕಾರವಾಗಲಿ, ಪತ್ರಿಕೆಗಳಾಗಲಿ ಯಾವ ವಾರ್ತೆಯನ್ನೂ ಪ್ರಕಟಿಸಿರುವುದಿಲ್ಲ ಆದರೆ ಜನತೆಯಲ್ಲಿ ನಾನಾ ಸುದ್ದಿಗಳು ಹಬ್ಬಿರುತ್ತವೆ

ಚುಟುಕು ಟೀಕೆ-ಟಿಪ್ಪಣಿ

ಮಹಾರಾಜರು ರೆಸಿಡೆಂಟರ ಮಧ್ಯಸ್ಥಿಕೆಯಿಂದ ತನ್ನ ಪಟ್ಟದ ರಾಣಿಯನ್ನು ತಿಂಗಳೊಂದರ ರೂ. 5000 ಜೀವನವೆಚ್ಚವಿತ್ತು ತ್ಯಜಿಸಿಬಿಟ್ಟಿರುವರೆಂದು ಒಂದು ಸುದ್ದಿ. ನಿರ್ದೋಷಿಗಳಾದ ಸತ್ಯಪ್ರೇಮಾದೇವಿಯರು ರಾಣೀವಾಸದ ಒಳಸಂಚಿನ ಪರಿಣಾಮವಾಗಿ ಪತಿಯನ್ನಗಲಬೇಕಾಗಿರುವುದೆಂದು ಇನ್ನೊಂದು ಸುದ್ದಿ. ಇದೇ ರೀತಿ ಇನ್ನೂ ಹಲವು ಸುದ್ದಿಗಳು ಜನತೆಯಲ್ಲಿ ದಟ್ಟವಾಗಿ ಹಬ್ಬಿರುತ್ತವೆ. ಈ ಕುರಿತು ಅಧಿಕಾರಿಕವಾದ ವಾರ್ತೆಯು ಸಕಾಲದಲ್ಲಿ ಪ್ರಕಟವಾಗುತ್ತಿದ್ದರೆ ಇಂತಹ ಸುದ್ದಿಗಳ ಸುಳಿದಾಟಕ್ಕೆ ಆಸ್ಪದವಿದ್ದಿತ್ತೇ? ಮೈಸೂರು ಸರಕಾರದ ಪ್ರಕಟಣಾ ಶಾಖೆಯವರೂ, ಮೈಸೂರಿನ ಪತ್ರಿಕೆಗಳೂ ಈ ಮಹತ್ವದ ವಿಷಯದ ಕುರಿತು ತಮ್ಮ ಕರ್ತವ್ಯ ಮಾಡಿಲ್ಲವೆಂದೇ ಹೇಳಬಹುದು

ಜಪಾನರು ನೆಲಧಾಳಿ ನಡಿಸುವರೇ?

ದಕ್ಷಿಣ ಹಿಂದುಸ್ಥಾನದ ಕರಾವಳಿಯ ಮೇಲೆ ನೌಕಾಧಾಳಿ ನಡಿಸಿ ಅದನ್ನು ಹಿಡಿಯುವ ಪ್ರಯತ್ನವನ್ನು ಜಪಾನರು ಪ್ರಸ್ತುತ ಬಿಟ್ಟುಬಿಟ್ಟಿರುವಂತೆ ತೋರುತ್ತದೆ. ಬರ್ಮವನ್ನು ಅವರೀಗ ಸಂಪೂರ್ಣ ಗೆದ್ದಂತೆಯೇ ಸರಿ ಅವರು ಬರ್ಮದಿಂದ ನೆಲಮಾರ್ಗವಾಗಿ ಅಸ್ಸಾಮ್ ಮತ್ತು ಬಂಗಾಳದ ಮೇಲೇರಿ ಬಂದು ಹಾಗೆಯೇ ಮುಂದೊತ್ತುವ ಪ್ರಯತ್ನ ಮಾಡುವರೇ ಎಂಬ ಸಂದೇಹಕ್ಕೀಗ ಆಸ್ಪದವಾಗಿದೆ ಅವರು ಅಕ್ಯಾಬ್ ಬಂದರವನ್ನು ಹಿಡಿದು ಅದರ ಹತ್ತಿರದ ಚಿತ್ತಗೋಂಗಿನ ಮೇಲೆ ಎರಡು ಸಲ ವಿಮಾನಧಾಳಿ ನಡಿಸಿರುತ್ತಾರೆ ಆದರೆ ಬಂಗಾಳ ಮತ್ತು ಅಸ್ಸಾಮಿನ ಇನ್ನು ಕೆಲವೇ ವಾರಗಳಲ್ಲಿ ಮಳೆಗಾಲ ಆರಂಭವಾಗಿ ಹವಾಗುಣವು ಯುದ್ಧಕ್ಕೆ ಪ್ರತಿಕೂಲವಾಗುತ್ತದೆ ಆದುದರಿಂದ ಜಪಾನರು ಮಳೆಗಾಲವು ಬರುವ ತನಕ ಬರ್ಮದಲ್ಲೇ ತಮ್ಮ ಸ್ಥಾನವನ್ನು ಬಲಗೊಳಿಸಿ, ಚೈನಾವನ್ನು ಸಂಪೂರ್ಣವಾಗಿ ಅಪಹರಿಸುವ ಪ್ರಯತ್ನದಲ್ಲಿ ನಿರತರಾಗಬಹುದು. ಆ ಮೇಲೆ ನೆಲಮಾರ್ಗವಾಗಿ ಪಶ್ಚಿಮಕ್ಕೆ ಮುಂದೊತ್ತಬಹುದೆಂದು ನಿರೀಕ್ಷಿಸಬಹುದು ಬದಲು ಸಾಹಸಿ ಜಪಾನರು ಎಂತಹ ಹವಾಗುಣದಲ್ಲಿಯೂ ಯುದ್ಧಮಾಡಲು ಸಿದ್ಧರಾಗಬಹುದ ಬ್ರಿಟನ್ ಮತ್ತು ಅಮೆರಿಕೆಗಳು ಹಿಂದುಸ್ಥಾನದಲ್ಲಿ ಸರಿಯಾದ ಸೇನಾಸಿದ್ಧತೆಮಾಡುವ ಮೊದಲೇ ಜಪಾನರು, ಮಳೆಗಾಲವನ್ನು ಲೆಕ್ಕಿಸದೆ ಪಶ್ಚಿಮಕ್ಕೆ ಮುಂದೊತ್ತಲೂ ಬಹುದು ಇನ್ನು ಕೆಲವೇ ದಿನಗಳಲ್ಲಿ ಅವರ ಉದ್ದೇಶವೇನೆಂಬುದು ಸ್ಪಷ್ಟವಾಗುವುದು

ಲಿಬಿಯದಲ್ಲಿ ವಸಂತ ಧಾಳಿಯಿಲ್ಲ

ಹಿಟ್ಲರರು ಇನ್ನಷ್ಟು ವಸಂತ ಧಾಳಿ ನಡಿಸಿದರೂ ಲಿಬಿಯದಲ್ಲಿ ಇನ್ನು ಮುಂದದು ಸಾಧ್ಯವಿಲ್ಲ ಅಲ್ಲಿ ವಸಂತ ಕಾಲವು ಇಷ್ಟರಲ್ಲೇ ಮುಗಿದು ಸೆಕೆಕಾಲ ಆರಂಭವಾಗಿರುವುದು ಮರುಭೂಮಿಯಲ್ಲಿ ಸೆಕೆಯ ಕಾಲದಲ್ಲಿ ಧಾಳಿ ನಡಿಸುವುದು ಬಹುಮಟ್ಟಿಗೆ ಅಸಾಧ್ಯ. ಕಳೆದ ವರ್ಷ ಸೆಕೆಕಾಲದಲ್ಲೇ ಜನರಲ್ ರೊಮ್ಮೆಲರು ಟೊಬ್ರೂಕನ್ನು ಗೆಲ್ಲಲೆತ್ನಿಸಿ ಹತಾಶರಾದರು ಅದಾಗಿ 6 ವಾರಗಳ ನಂತರ ಬಾರ್ಡಿಯದ ಮೇಲೆ ಧಾಳಿಯಿಟ್ಟು ಭಗ್ನ ಮನೋರಥರಾದರು. ಸೆಕೆಕಾಲದ ಹೋರಾಟಕ್ಕೆ ಅತಿ ದೊಡ್ಡ ತೊಡಕೆಂದರೆ ನೀರಿನ ತೀವ್ರ ಕೊರತೆ, ಜನರಲ್ ರೊಮ್ಮೆಲರು ಇತ್ತಲಾಗಿ ಹೆಚ್ಚಿನ ಸೇನೆ ಮತ್ತು ಯುದ್ಧೋಪಕರಣ ಸಹಾಯ ಪಡೆಯುತ್ತಿರುವುದು ಧಾಳಿಗಾಗಿಯಲ್ಲ, ರಕ್ಷಣಾ ಯುದ್ಧಕ್ಕಾಗಿಯೆಂದು ನಂಬಲಾಗಿದೆ ಚಳಿಗಾಲದ ಯುದ್ಧದಲ್ಲಿ ಅವರು ತನ್ನ ಪ್ರಾಮುಖ್ಯ ಸೇನೆಯ ಅರ್ಧಾಂಶವನ್ನೇ ಕಳಕೊಂಡಿರುವರು ಅದನ್ನು ಭರ್ತಿಮಾಡಲು ಲಿಬಿಯಕ್ಕೆ ಅಧಿಕವಾಗಿ ಸೇನೆಯು ಕಳುಹಿಸಲ್ಪಡುತ್ತಿರುವುದೇ ಹೊರತು ಲಿಬಿಯದಲ್ಲಿ ಬೇಗನೆ ಇನ್ನು ದೊಡ್ಡ ಹೋರಾಟವೇನೂ ನಡೆಯುವ ಹಾಗಿಲ್ಲೆಂದು ಊಹಿಸಲಾಗಿದೆ.

ಇಟೆಲಿಯಾನರಲ್ಲಿ ತೀವ್ರ ನಿರಾಶೆ.

ತಮ್ಮ ಅವಸ್ಥೆಯ ಕುರಿತು ಇಟೆಲಿಯಾನರಲ್ಲಿ ತೀವ್ರ ನಿರಾಶೆಯುಂಟಾಗಿರುವುದು ಆದರೆ ಇಟೆಲಿಯು ಕೂಡಾ ನಾಝಿ ಆಕ್ರಮಿತ ರಾಷ್ಟ್ರದಂತೆಯೇ ಆಗಿ ಹೋಗಿರುವುದರಿಂದ ಇಟೆಲಿಯಾನರು ಎಲ್ಲವನ್ನೂ ನುಂಗಿಕೊಂಡು ಸುಮ್ಮಗಿರಬೇಕಾಗಿದೆ. ಫ್ರಾನ್ಸಿನಲ್ಲಿ ಲಾವಲರು ಅಧಿಕಾರಕ್ಕೆ ಬಂದುದು ಇಟೆಲಿಯಾನರಲ್ಲಿ ಮತ್ತಷ್ಟು ನಿರಾಶೆಗೆ ಕಾರಣವಾಗಿದೆ ಫ್ರಾನ್ಸಿನಿಂದ ಕೆಲವು ಪ್ರದೇಶಗಳನ್ನು ಪಡೆಯುವ ಇಟೆಲಿಯಾನರ ಆಕಾಂಕ್ಷೆಯು ಆದರಿಂದ ಮಣ್ಣುಗೂಡುವಂತಾಗಿದೆ. ಮಾತ್ರವಲ್ಲದೆ ಮುಂದೆ ಫ್ರಾನ್ಸಿಗೇನೇ ಹಿಟ್ಲರರು ಪ್ರಾಮುಖ್ಯತೆಯಿತ್ತು ಇಟೆಲಿಯು ಎರಡನೇ ಸ್ಥಾನ ಪಡೆಯುವದೆಂದು ನಂಬಲಾಗಿದೆ. ಅತ್ತ ಜಪಾನೂ ಹಿಟ್ಲರರ ಮೆಚ್ಚಿಗೆಗೊಳಗಾಗಿದೆ ಆದುದರಿಂದ ತಮ್ಮ ಭವಿಷ್ಯವೇ ಹಾಳಾಗಿ ಹೋದಂತೆಯೇ ಸರಿಯೆಂದು ಇಟೆಲಿಯಾನರೂ ಸಂತಪ್ತರಾಗಿರುತ್ತಾರೆ. ಅವರು ತಮ್ಮ ವಸಾಹತುಗಳನ್ನೆಲ್ಲಾ ಕಳಕೊಂಡಿರುತ್ತಾರೆ ಅವರ ನೌಕಾಪಡೆಯ ಅತಿ ದೊಡ್ಡ ಅಂಶವು ನಷ್ಟ ಹೊಂದಿದೆ. ಅವರಿಂದು ಯಾವ ರೀತಿಯ ಸಾಂಪತ್ತಿಕ ಸ್ವಾತಂತ್ರ್ಯ ಕೂಡಾ ಇಲ್ಲದೆ ಸ್ವಾಭಿಮಾನ ಕಳಕೊಂಡು ಜರ್ಮನಿಯು ಕಡೆಗೆ ಕತ್ತು ಸಿಂಡಿಕೊಂಡಿರಬೇಕಾಗಿದ ನಾಝಿಗಳಿಗಾಗಿ ಅವರ ಹೊಲಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ದುಡಿಯಬೇಕಾಗಿದೆ, ರಣರಂಗಗಳಲ್ಲಿ ಹೋರಾಡಿ ಪ್ರಾಣ ಕೊಡಬೇಕಾಗಿದೆ.

Keep the enemy away
from India
Contribute AGAIN to the
Governor's war fund
Buy MORE defence bonds
and savings certificates.

**GIVE AND LEND
FOR
VICTORY.**

ಮದುವೆ
ಉಪನಯನ
ಮೊದಲಾದವುಗಳ
ಆಮಂತ್ರಣ ಪತ್ರಿಕೆ
ಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು ಇತರ ಎಲ್ಲಾ ತರದ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನೂ ನಾಜೂಕಾಗಿ ಮಾಡಿ ಕೊಡಲಾಗುವುದು.

ನವಯುಗ ಪ್ರೆಸ್,
ಕೋಳದ ಪೇಟೆ ರಸ್ತೆ,
ಉಡುಪಿ.

ಉತ್ಪತ್ತಿಯ ಯುದ್ಧದಲ್ಲಿ ಪರಾಜಯ ಹೊಂದುತ್ತಿದೆ ಜರ್ಮನಿ.

ರಸ್ಯದ ಯುದ್ಧದಲ್ಲಾಗಿರುವ ಅಪಾರ ನಷ್ಟವನ್ನು ತುಂಬಿಸಲು ಅಸಾಧ್ಯವಾಗಿದೆ ಅದಕ್ಕೆ. ಯುದ್ಧೋಪಕರಣ ತಯಾರಿಯಲ್ಲಿ ಅಮೆರಿಕ ಮತ್ತು ಇಂಗ್ಲಂಡುಗಳು ಜರ್ಮನಿಯನ್ನು ಹಿಂದೆ ಹಾಕುತ್ತಿವೆ.

ಸಮರ ಸಾಹಿತ್ಯ ಸಿದ್ಧತೆಯ ಪ್ರಮುಖ್ಯ ಹೋರಾಟದಲ್ಲಿ ಜರ್ಮನಿಯು ಸೋಲು ಜಿತವಾಗುತ್ತಿದೆ. ಯುರೋಪಿನಲ್ಲಿ ನಾಝಿಗಳ ನವರಚನಾಯಂತ್ರವು ಸರಿಯಾಗಿ ಕೆಲಸಮಾಡಲು ಹಲವು ತೊಡಕುಗಳುಂಟಾಗಿವೆ. ಪ್ರಚಂಡ ನಾಝಿ ಸೇನೆಯ ಬೆನ್ನೆಲುಬಿನಂತಿದ್ದು ಅದರ ಶಕ್ತಿ ಮತ್ತು ಸನ್ನದ್ಧತೆಗೆ ಮೂಲಕಾರಣವಾಗಿರುವ ಔದ್ಯೋಗಿಕ ಯಂತ್ರವು ಬಿರುಕು ಬಿಟ್ಟು ಮುರಿದು ಹೋಗುವುದರಲ್ಲಿದೆ

ನಾಝಿ ಆಕ್ರಮಿತ ರಾಷ್ಟ್ರಗಳಲ್ಲಿ ಒಳಸಂಚುಗಳು ಹೆಚ್ಚುತ್ತಿದ್ದು ಕಾರ್ಖಾನೆಗಳಲ್ಲಿನ ಗುಪ್ತ ವಿನಾಶ ಕಾರ್ಯವು ಬಹಳ ತೊಂದರೆಯನ್ನುಂಟುಮಾಡುತ್ತಿದೆ. ನಿಯಮಿತ ಪ್ರಮಾಣದಲ್ಲಿ ಯುದ್ಧೋಪಕರಣ ಒದಗಿಸಿ ಕೊಡದ ಕಾರ್ಖಾನೆಗಳ ಮುಖ್ಯಸ್ಥರನ್ನು ಹಿಟ್ಲರರು ಕೆಲಸದಿಂದ ತಳ್ಳಿಹಾಕಿ ಸೆರೆಮನೆಯಲ್ಲಿರಿಸತೊಡಗಿರುವರೆಂದು ತಿಳಿದುಬರುತ್ತದೆ. ಜರ್ಮನಿಯಲ್ಲಿಯೂ ಅತೃಪ್ತಿಯ ಚಿನ್ಹೆಗಳು ತೋರಿಬರಹತ್ತಿವೆ ಅಲ್ಲಲ್ಲಿ ಹಿಟ್ಲರರಿಗೆ ವಿರೋಧವು ತಲೆದೋರಹತ್ತಿದೆ. ಜರ್ಮನ್ ಸೇನೆಯಲ್ಲಿಯೇ ಹಿಟ್ಲರರ ವಿರುದ್ಧ ಸಾಧೊಂದು ತಂಡವು ಇರುವಂತಿದೆ ಇದರಿಂದ ಶೀಘ್ರವಾಗಿ ಜರ್ಮನಿಯ ಔದ್ಯೋಗಿಕ ಪತನವುಂಟಾಗುವುದೆಂದು ತಿಳಿಕೊಳ್ಳಲು ಸಾಧ್ಯವಿಲ್ಲ ಆದರೆ ಹಿಟ್ಲರರು ಜನಸಾಮಾನ್ಯರಿಂದಲೂ ಯುದ್ಧೋಪಕರಣ ತಯಾರಿ ಕಾರ್ಖಾನೆ ಕೆಲಸಗಾರರಿಂದಲೂ ಮೊದಲಿನಷ್ಟು ಉತ್ಸಾಹಪರ ಬೆಂಬಲವನ್ನು ಪಡೆಯುವುದಿಲ್ಲ ಆದುದರಿಂದ ಅವರ ಸೇನಾಶಕ್ತಿಯು ಕುಂಠಿತವಾಗಿದೆಯೆಂದು ಹೇಳಬಹುದು

ಮನುಷ್ಯ ಶಕ್ತಿಯ ಕೊರತೆ.

ರಸ್ಯಾದಲ್ಲಿ ೬ ತಿಂಗಳ ಚಳಿಗಾಲದ ಯುದ್ಧವು ಹಿಟ್ಲರರ ಅದೃಷ್ಟವನ್ನೇ ಬದಲಾಯಿಸಿ ಅವರ ಪತನವು ನಿಶ್ಚಯವೆಂಬಂತಾಗಿದೆ ಈ ಯುದ್ಧದಲ್ಲಿ 12 ನಾಝಿ ಡಿವಿಜನುಗಳು ನಾಶಮಾಡಲ್ಪಟ್ಟಿವೆ ಇನ್ನೂ ಹಲವು ಹೆಚ್ಚಿನ ನಷ್ಟ ಹೊಂದಿವೆ ಜರ್ಮನರು ತಮ್ಮ ವಸಂತದ ಧಾಳಿಗಾಗಿ ಸಂಗ್ರಹಿಸಿಟ್ಟಿದ್ದ ಮದ್ದು ಗುಂಡು, ಆಹಾರ ಸಾಮಗ್ರಿ ಮೊದಲಾದವುಗಳೆಲ್ಲಾ ಚಳಿಗಾಲದ ಯುದ್ಧದಲ್ಲೇ ಬರಿದಾಗಿವೆ. ೬ ತಿಂಗಳ ಚಳಿಗಾಲದ ಭೀಷಣ ಯುದ್ಧದಲ್ಲಿ 300,000ಕ್ಕಿಂತಲೂ ಹೆಚ್ಚಿನ ಮೋಟಾರ್ ವಾಹನಗಳು ಸಂಪೂರ್ಣ ನಾಶಗೊಳಿಸಲ್ಪಟ್ಟಿವೆ. ಕಡಿಮೆ ಪಕ್ಷ ಆಷ್ಟೇ ಹಾಳಾಗಿ ಈಗ ರಿಪೇರ್ ಮಾಡಲ್ಪಡುತ್ತಿವೆ. ರಸ್ಯದ ಚಳಿಗಾಲದ ಯುದ್ಧವು ಅನಾಹುತಕಾರಿ ಇರುವುದೆಂಬುದು ಹಿಟ್ಲರರ ಭಾಷಣದಿಂದಲೇ ಸ್ಪಷ್ಟವಾಗುತ್ತದೆ. ಈ ನಷ್ಟವನ್ನು ಭರ್ತಿಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದಲೇ ಹಿಟ್ಲರರ ವಸಂತ ಧಾಳಿಯು ನೆಕ ಕಾಲಕ್ಕೆ ಮುಂದುವರಿಯುವಂತೆ ತೋರುತ್ತದೆ ಈ ಧಾಳಿಗೆ ಮಾನವಶಕ್ತಿಯ ಕೊರತೆಯು ದೊಡ್ಡ ತೊಡಕಾಗಿ ನಿಂತಿರುವುದೆಂದು ತಿಳಿದುಬರುತ್ತದೆ ತಮ್ಮ ಮಾನವಶಕ್ತಿಯು ಬಹಳ ವ್ಯಯವಾಗಿ ಹೋಗಿರುವುದರಿಂದ ನಾಝಿ ಏಜೆಂಟರು, ಇತರ ಆಕ್ರಮಿತ ರಾಷ್ಟ್ರಗಳಿಂದ, ಹುಡುಗರು, ಮುದುಕರು, ಹುಡುಗಿಯರು ಮತ್ತು ಮುದುಕಿಯರನ್ನು ಬಲಾತ್ಕಾರದಿಂದ ಕರೆದೊಯ್ದು ಕೆಲಸಮಾಡಿಸಹತ್ತಿದ್ದಾರೆ ಜರ್ಮನಿಯ ಕೈಗಾರಿಕ ಕೆಲಸಗಾರ ಸೇನೆಯೂ, ಹೋರಾಡುವ ಸೇನೆಯೂ ಬಹಳವಾಗಿ ದಣಿದು ಆಯಾಸಗೊಂಡಿದೆ. ಜರ್ಮನಿಯಲ್ಲಿ ಕಡಿಮೆಯೆಂದರೆ 24,000,000 ಜನರು ಯುದ್ಧೋಪಕರಣ ತಯಾರಿ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆಂದೂ, 10 ಮಿಲ್ಯ ಮಂದಿ ಯುದ್ಧಸಿದ್ಧರಿರುವರೆಂದೂ ತಿಳಿದುಬರುತ್ತದೆ

ವಿಶ್ರಾಂತಿಗೆ ಅವಕಾಶವಿಲ್ಲ

ಚಳಿಗಾಲದಲ್ಲಿ 2 ಅಥವಾ 3 ಮಿಲ್ಯ ಜರ್ಮನ್ ಸೈನಿಕರನ್ನು ವಿಶ್ರಾಂತಿಗೆಂದು ರಣರಂಗದಿಂದ ಹಿಂದೆ ಕರೆದು ಅವರಿಂದ ಔದ್ಯೋಗಿಕ ಕೆಲಸ ಮಾಡಿಸುವ ಜರ್ಮನರ ಕ್ರಮವನ್ನು ಈ ಚಳಿಗಾಲದಲ್ಲಿ ಜ್ಯಾರಿಗೆ ತರಲು ಸಾಧ್ಯವಾಗಿರುವುದಿಲ್ಲ. 3,500,000 ಮಂದಿ ಸೈನಿಕರಿರುವ 200 ನಾಝಿ ಡಿವಿಜನುಗಳು ಚಳಿಗಾಲದಲ್ಲಿ ಕೂಡಾ ಹೋರಾಟ ನಡಿಸುತ್ತಾ ಪೂರ್ವ ರಣರಂಗದಲ್ಲಿಯೇ ಇರಬೇಕಾಗಿದ್ದಿತು. ಈ ಸೇನೆಗೆ ರಸ್ಯದ ಚಳಿಗಾಲದ ಭೀಕರ ಪರಿಸ್ಥಿತಿಯಲ್ಲಿ ಆಹಾರ ಮತ್ತು ಯುದ್ಧೋಪಕರಣವನ್ನೊದಗಿಸಿಕೊಡುವುದು ಮಹತ್ವಾದೊಂದು ಸಮಸ್ಯೆಯಾಗಿ ಲಕ್ಷಗಟ್ಲೆ ಜನರು ಹಿಟ್ಲರರ ನೇತೃತ್ವದಲ್ಲಿಯೇ ಪ್ರಾಣದ ಹಂಗು ತೊರೆದು ದುಡಿಯಬೇಕಾಯಿತು. ನಾಝಿ ಸೇನೆಯು ತಿರುಗಿದ್ದ ಒಂದು ಮಿಲ್ಯ ಸೈನಿಕರು ರಸ್ಯದ ರಣರಂಗಗಳಲ್ಲಿ ಮಡಿದಿರುವರು. ಗಾಯಗೊಂಡವರ ಮತ್ತು ಕಾಣೆಯಾದವರ ಸಂಖ್ಯೆಯನ್ನು ಇದಕ್ಕೆ ಸೇರಿಸಿದ ಪಕ್ಷದಲ್ಲಿ 2500000 ಆಗುವುದು.

ಹೆಚ್ಚಿನ ಸೇನಾಸಂಗ್ರಹದ ಯತ್ನ.

ರಸ್ಯದ ವಸಂತ ಧಾಳಿಗಾಗಿ ಬಾಲ್ಕನ್ ರಾಷ್ಟ್ರಗಳು ಹೆಚ್ಚಿನ ಸೇನೆಯನ್ನೊದಗಿಸಿಕೊಡಲೇ ಬೇಕಾಗಿದೆ. ಫ್ರಾನ್ಸಿನಿಂದ ಈ ಧಾಳಿಯಲ್ಲಿ ಭಾಗವಹಿಸಲು ಸಿಕ್ಕಿದವರು ಕೇವಲ 5000 ಮಂದಿ ಸ್ಪೈನು ರಸ್ಯಕ್ಕೆ ಆದೊಂದು ವಿಶಿಷ್ಟ ಡಿವಿಜನನ್ನು ಕಳುಹಿಸಿರುವುದು ಆದರ ನಾಝಿ ಬಕಾಸುರನಿಗೆ ಎಷ್ಟಿದ್ದರೂ ಸಾಲದು. ರುಮೇನಿಯ, ಹಂಗೇರಿ, ಬಲ್ಗೇರಿಯ, ಇಟಲಿ ಮೊದಲಾದವುಗಳಿಂದ ಹಿಟ್ಲರರು ಸಾಧ್ಯವಾದಷ್ಟು ಹೆಚ್ಚಿನ ಸೇನೆ ಪಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ರಸ್ಯದ ಮೇಲಿನ

(೯ನೇ ಪುಟ ನೋಡಿರಿ)

ಬೇರೆ ಬೇರೆ ಬಂದರಗಳ ನಡುವಿನ ಅಂತರ

		ಮೈಲುಗಳು
ಮದ್ರಾಸಿನಿಂದ ಕೊಲಂಬೋವಿಗೆ		೫೮೫
,,	ಪಾಂಡಿಚೇರಿಗೆ	೮೯
,,	ನೆಗಪಟಾಮಿಗೆ	೧೪೩
,,	ಪೆನಾಂಗಿಗೆ	೧೩೦[illegible]
,,	ಕಲ್ಕತ್ತೆಗೆ	೭೬೨
,,	ರಂಗೂನಿಗೆ	೧೦೨೦
,,	ಕೋಕನಾಡಕ್ಕೆ	೪೦೦
,,	ವಿಶಾಖಪಟ್ಟಣಕ್ಕೆ	೪೯೦
,,	ಅಂಡಮಾನಕ್ಕೆ	೭೦೦
ಕಲ್ಕತ್ತದಿಂದ ರಂಗೂನಿಗೆ		೭೫೦
,,	ಸಿಂಗಾಪುರಕ್ಕೆ	೧೬೫೦
,,	ಚಿತಗಾಂಗಿಗೆ	[illegible]
,,	ಅಂಡಮಾನಕ್ಕೆ	[illegible]
ಚಿತ್ತಗಾಂಗದಿಂದ ಅಕ್ಯಾಬಕ್ಕೆ		[illegible]
ಅಕ್ಯಾಬದಿಂದ ರಂಗೂನಿಗೆ		[illegible]
ಕೊಲಂಬೋದಿಂದ ಪೆನಾಂಗಕ್ಕೆ		[illegible]
,,	ರಂಗೂನಿಗೆ	[illegible]
	ಕಲ್ಕತ್ತೆಗೆ	[illegible]
,,	ಟ್ರಿಂಕೋಮಲಿಗೆ	೧೫೦
,,	ಕೊಚಿಂಗೆ	[illegible]
	ನೆಗಪಟಾಮಿಗೆ	[illegible]
,,	ಪೋರ್ಟ್‌ಸೈಯದಕ್ಕೆ	[illegible]
,,	ಲಂಡನಕ್ಕೆ	[illegible]
	ಪಾಂಡಿಚೇರಿಗೆ	[illegible]
,,	ಮುಂಬಯಿಗೆ	೮೮೩
,,	ಏಡನ್ನಿಗೆ	೨೧೦೩
,,	ಫ್ರಿಮ್ಯಾಂಟಲಿಗೆ	೩೧೨೦
,,	ಮೊರಿಶಸ್ಸಿಗೆ	[illegible]
,,	ಕೇಪ್‌ಟೌನಿಗೆ	[illegible]
,,	ಪಡಾಂಗಕ್ಕೆ	೧೩೪೪
,,	ಸಿಂಗಾಪುರ	[illegible]
[illegible]		[illegible]
[illegible]		[illegible]
[illegible]		[illegible]
[illegible]		[illegible]
[illegible]		[illegible]
,,	[illegible]	೫೦೦
,,	[illegible]	[illegible]
,,	[illegible] (ಆಫ್ರಿಕ)	[illegible]
,,	ಮೊರಿಶಸ್ಸಿಗೆ	[illegible]
,,	[illegible]	[illegible]
[illegible] H. G.		[illegible]

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ ಹಿಂದುದೇಶದಲ್ಲಿ ವಿಮಾನ ದಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪಾಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪಾಲಿಸಿಯನ್ನು

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು **ಬೊಂಬಾಯಿ.**

ನೋಟೀಸು

ಮಂಗ್ಳೂರು ದಿ ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 53/42

ವಿಟ್ಠಲ ಶಾಂತಾರಾಮ ಕುಲಕರ್ಣೀ—ವಾದಿ,

ಮತ್ತು

ಮಾಣೆಲ, ಯಾನೆ ಕೆ. ಗಣೇಶ ರಾವ್—ಪ್ರತಿವಾದಿ.

ಕುಶಾಲ್ತಿ ತಾಲ್ಲೂಕು ಮಾಣೆಲ ಗ್ರಾಮದಲ್ಲಿರುವ ಟ್ರೇಡರ್ ಮತ್ತು ಟೀಚರ್, ಮಾಣೆಲ, ಯಾನೆ, ಕೆ. ಗಣೇಶ ರಾವ್ ಇವರಿಗೆ

ಸದ್ರಿ ವಾದಿಯು ನಿಮ್ಮ ಮೇಲೆ ನಡಿಸಿದ ಸದ್ರಿ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ತಾ. 3-6-42ರಲ್ಲು ಇಟ್ಟಿರುತ್ತದೆ. ಸದ್ರಿ ದಾವೆಗೆ ನಿಮ್ಮ ಆಕ್ಷೇಪವಿದ್ದರೆ ನೀವು ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾ 3 6 42ನೇ ಹಗಲು ಗಂಟೆ 10½ಗೆ ಹಾಜರಾಗಿ ವ್ಯಾಜ್ಯ ಹೂಡಬೇಕಾಗಿದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ದಾವೆಯು ತನಿಖೆ ಮಾಡಲಾಗುವುದು

ಮಂಗ್ಳೂರು, 19-4-1942 } G. Upendra Prabhu, Vakil for Plaintiff.

ಮನೆಯನ್ನೆ ಸುಡಲು ನೋಡಿದ ಕಡೆಗಣಿಸಿದೊಂದು ಕಿಡಿ!

ಸ್ಟಾಲಿನ್ ದೂರದರ್ಶಿಯಂತೆ ವರ್ತಿಸಿದ;
ಟ್ರಾಟ್ಸ್ಕಿ ಒಡನೆಯೇ ಜಗತ್‍ಕ್ರಾಂತಿಬೇಕು-ಎಂದ-

[ಬರೆದುದು — ಶ್ರೀ ಕು ಶಿ. ರಾಯರು, ಮಂಗಳೂರು]

ಎಂತಹ ಸೇನೆ ಬೇಕಾದುದು-

ಕಳೆದ ಘೋರ ಯುದ್ಧದ ನಡುವೆ, ೧೯೧೭ರಲ್ಲಿ, ರಷ್ಯದ ದಲಿತ ಜನಾಂಗ, ಆಳುವ ಅರಸರ ವಿರುದ್ಧ ದಂಗೆಯೆದ್ದು, ತನ್ನ ಅಧಿಕಾರವನ್ನು ಸ್ಥಾಪಿಸಿತು ಆಗ ಜಗತ್ತಿನ ವಿವಿಧ ರಾಷ್ಟ್ರಗಳ ಜನರು, ರಷ್ಯದ ಕುರಿತು ಇಲ್ಲದ-ಸಲ್ಲದ ತಪ್ಪು ಭಾವನೆಗಳನ್ನು ಹರಡಿ ರಷ್ಯನರೆಂದರೆ ಇತರರ ರಕ್ತ ಹೀರಲು ಹಾತೊರೆಯುವ ಅನಾಗರಿಕರು ಎಂಬ ಅಭಿಪ್ರಾಯವು ಬೇರೂರುವಂತೆ ಮಾಡಿದರು. ರಷ್ಯದಲ್ಲಿ ಸ್ಥಾಪಿತವಾಗಿದ್ದ ಪ್ರಜಾ ಸರಕಾರವನ್ನು ಹೊಡೆದೋಡಿಸುವುದಕ್ಕೂ ಇತರ ರಾಜ್ಯಗಳು ಸಿದ್ಧವಾದುವು

ಆಗ ರಷ್ಯ ಎಣಿಸಿತು. ತನಗೊಂದು ಪ್ರಬಲವಾದ ಕೆಂಪು ಸೇನೆ ತನ್ನ ರಕ್ಷಣೆಗಾಗಿಯೇ ಇರಬೇಕು ಎಂದು. ಸೇನೆಯನ್ನು ರಚಿಸುವುದಕ್ಕೆ ಮೊದಲಾಯಿತು.

ಯುದ್ಧಾವಸಾನವಾಗಿ ಕೆಲವು ವರ್ಷಗಳುರುಳಿದವು. ಇತರ ರಾಷ್ಟ್ರಗಳು ರಷ್ಯವನ್ನು ಅಸ್ಪೃಶ್ಯನಂತೆ- ಬಹಿಷ್ಕೃತನಂತೆ ಕಂಡುವು. ಅವುಗಳೆಲ್ಲ ಒಂದಾಗಿ ರಷ್ಯದ ಮೇಲೆ ಯಾವ ಹೊತ್ತೂ ಬೀಳುವುದು ಸಂಭವನೀಯ.

ಈ ಎಡೆಯಲ್ಲಿ ಕ್ರಾಂತಿ ಪೂಜಾರಿ ಲೆನಿನ್ ತೀರಿಕೊಂಡ.

ಉಳಿದವರಲ್ಲಿಬ್ಬರು ವೀರ ನಾಯಕರು- ಸ್ಟಾಲಿನ್ ಮತ್ತು ಟ್ರಾಟ್ಸ್ಕಿ ಪರಸ್ಪರ ಕೇಳಿಕೊಂಡರು. "ನಮಗೆಂತಹ ಸೇನೆಬೇಕಾದುದು?"

"ಜಗತ್ಕ್ರಾಂತಿಯಾಗಬೇಕು"

ಟ್ರಾಟ್ಸ್ಕಿ ಹೇಳಿದ- "ದೊಡ್ಡದೊಂದು ಕೆಂಪು ಸೇನೆ ರಚಿಸೋಣ. ಸೇನೆಯ ಸಹಾಯದಿಂದ ಸುತ್ತು ಮುತ್ತಲಿನ ಮತ್ತು ಇತರ ರಾಷ್ಟ್ರಗಳಲ್ಲಿ ಸಮತಾವಾದಿ ಸರಕಾರಗಳನ್ನು ಸ್ಥಾಪಿಸೋಣ, ರಷ್ಯದಲ್ಲಿ ಮಾತ್ರ ಸಮತಾವಾದ ನೆಲೆಸಿದರೆ ಸಾಲದು, ಕೂಡಲೇ ಜಗತ್ಕ್ರಾಂತಿಯಾಗಬೇಕು!

ಸ್ಟಾಲಿನ್ ನಕ್ಕು, ನುಡಿದ. "ಒಳ್ಳೆಯ ಕೆಲಸ! ಈಗಾಗಲೇ ನಮ್ಮ ಕತ್ತು ಹಿಡಿದು ಹಿಚುಕಲು ಎಲ್ಲರೂ ಸಿದ್ಧರಾಗಿದ್ದಾರೆ. ಕಾರಣ ಹುಡುಕುತ್ತಾ ಇದ್ದಾರೆ ಸಮತಾವಾದವನ್ನು ಸ್ಥಾಪಿಸುವ ಹೆಸರಿನಲ್ಲಿ ಆಗ್ರೇಸರ ಪ್ರವೃತ್ತಿ ಕೈಗೊಳ್ಳುವುದೆ? . ಅದು ಆತ್ಮಘಾತ ಮಾಡಿಕೊಂಡಂತೆ ಮೊದಲು ಇಲ್ಲಿ ಸಮತಾವಾದವನ್ನು ಯಶಸ್ವಿಗೊಳಿಸೋಣ .. ನಮ್ಮ ದೇಶದ ರಕ್ಷಣೆಗಾಗಿಯೇ ಬಲವಾದ ಒಂದು ಕೆಂಪು ಸೇನೆಯನ್ನು ನಿರ್ಮಿಸೋಣ"

ಅವರ ವ್ಯಕ್ತಿತ್ವ

ಟ್ರಾಟ್ಸ್ಕಿ ನಿಸ್ಸಂಶಯವಾಗಿಯೂ ದೊಡ್ಡ ಮನುಷ್ಯ, ಮಹಾನಾಯಕ. ತುಂಬ ವಿದ್ಯಾ ಸಂಪತ್ತಿತ್ತು. ಚೆನ್ನಾದ ಭಾಷಣಗಾರ; ನುರಿತ ಬರೆಹಗಾರ. ಅವರ ಕೆಂಪು ಸೇನೆಯ ನಾಯಕನ ನೆಲೆಯಲ್ಲಿ ಅವನು ತೀರ ನಿಪುಣ ಯೋಜಕನೆಂಬುದನ್ನು ತೋರಿಸಿಕೊಟ್ಟ.

ಆದರೆ, ಸ್ಟಾಲಿನ್, ಜಾರ್ಜಿಯದ ರೈತ, ಟ್ರಾಟ್ಸ್ಕಿಯ ಚಟುವಟಿಕೆಗಳನ್ನು ಸಂಶಯಪೂರ್ಣ ದೃಷ್ಟಿಯಿಂದ ನೋಡುತ್ತಲೇ ಇದ್ದ. ಬರಿಯ ಆಸೆಯಷ್ಟೇ ಸಾಕಾಗಬಹುದಾದರೆ ಒಮ್ಮೆಲೆ ಜಗತ್ಕ್ರಾಂತಿ ಬೇಡವೆಂದು ಹೇಳಿದವರಾರು? ಒಂದೇ ದಿನದಲ್ಲಿ ಅಪಾರ ಹೊಲಗಳನ್ನೆಲ್ಲಾ ಫಲವತ್ತಾದ ಪ್ರದೇಶಗಳನ್ನಾಗಿ ಮಾಡಲು ಅವನು ಸಿದ್ಧನೇ ಇದ್ದ. ಆದರೆ ಲೋಕದ ಪರಿಸ್ಥಿತಿಯು ಕ್ರೂರ ಸತ್ಯ ಸ್ಪಷ್ಟ-ಸುಸ್ಪಷ್ಟವಾಗಿ ಕಂಡು ಬರುವಾಗ ಕಣ್ಣು ಮುಚ್ಚಿ ಕುಳಿತುಕೊಳ್ಳಲಾಗುತ್ತದೆಯೆ? ರಷ್ಯ ತನ್ನ ಹೊಲದ ಮೇಲೆಯೇ ಬಲವಾದ ಕಾಲುಗಳಲ್ಲಿ ಮೊದಲು ನಿಲ್ಲಬೇಕು. ಬಳಿಕ ಬೇರೆ ವಿಚಾರ.

ಕಡೆಗಣಿಸಿದ ಕಿಡಿ.

ಸ್ಟಾಲಿನ್-ಟ್ರಾಟ್ಸ್ಕಿಯರೊಳಗಿನ ಈ ವ್ಯತ್ಯಾಸವನ್ನು ಕಡೆಗಣಿಸಿದ ಕಿಡಿಯಾಗಿ ಭಾವಿಸುವುದೆ? ಅದು ಅಂದಿನ ಬಹುಮಂದಿ ಚರ್ಚಿಸುತ್ತಿದ್ದ ಪ್ರಶ್ನೆ. ಆ ಕಿಡಿ ಹಾಗೆಯೇ ಇದ್ದುದಾದರೆ ಬಹು ಕಷ್ಟದಿಂದ ನಿರ್ಮಿಸುತ್ತಿರುವ ಮನೆಯನ್ನು ಅದು ಸುಡಬಹುದು!

ಟ್ರಾಟ್ಸ್ಕಿ ತನ್ನ ವರ್ತನೆಯನ್ನು ಬದಲಿಸುವ ಯೋಚನೆಯನ್ನೇ ಮಾಡಲಿಲ್ಲ ಸ್ಟಾಲಿನ್ ಮುಂದೆ ಒದಗಲಿರುವ ಗಂಡಾಂತರವನ್ನು ಎಣಿಸಿ ತಪ್ಪನಾದ.

ಅದಾಗಲೇ ಅವರಿಬ್ಬರೂ ಆಜನ್ಮ ವೈರಿಗಳಾಗಿದ್ದರು!

ಆಗ ಅಧಿಕಾರದಲ್ಲಿದ್ದ ಹಿರಿಯ ಸಂಸ್ಥೆ ಟ್ರಾಟ್ಸ್ಕಿಯನ್ನು ಹೊರಕ್ಕಟ್ಟುವುದಕ್ಕೆ ನಿರ್ಧರಿಸಿತು ರಷ್ಯದಲ್ಲಿ ಜೀವ ಸಹಿತ ಉಳಿಯಬೇಕಾದರೆ ಇತರ ಜನಸ್ತೋಮದೊಡನೆ ಸೇರಿಕೊಂಡು, ಮರು ಕ್ರಾಂತಿಯ ಆಸೆಯನ್ನು ಬಿಟ್ಟು ಟ್ರಾಟ್ಸ್ಕಿ ಜೀವಿಸಬೇಕು.

ಅದಕ್ಕೆ ಟ್ರಾಟ್ಸ್ಕಿ ಒಪ್ಪಲಿಲ್ಲ. ಎಣಿಸಿದುದನ್ನು ಕೊನೆಗಾಣಿಸುವ ಹುಚ್ಚು ಅವನದು. ಅವನು ರಷ್ಯವನ್ನು ಬಿಟ್ಟು ಹೊರಟು ಹೋದ ರಷ್ಯದ ಪ್ರಜೆಯೆಂಬ ಹೆಸರನ್ನೂ ಕಳೆದುಕೊಂಡ.

ಹಲವು ವರ್ಷಗಳ ಪರದೇಶ ವಾಸ; ಕೊಲೆಗಾರನ ಕೊಡಲಿ ಬೇರೆ ೧೯೪೦ರಲ್ಲಿ ಅವನನ್ನು ಇದಿಗೊಂಡಿತು.

ಅದರಲ್ಲಿದ್ದಂತೆಯೇ ಆಯಿತು

"ಕಳೆದ ವರ್ಷ ನಾನು ನಿಮ್ಮ ವರ್ಷ ಭವಿಷ್ಯವನ್ನು ತರಿಸಿರುವುದು ಸರಿಯಷ್ಟೆ! ವೃಶ್ಚಿಕ ರಾಶಿಯವನಾದ ನನಗೆ ಅದರಲ್ಲಿ ಬರೆದ ಫಲಾಫಲಗಳೇ ಪ್ರಾಪ್ತವಾಗಿವೆ. ಈ ವರ್ಷವೂ ನನಗೆ ಒಂದು ಪ್ರತಿಯನ್ನು ಕೂಡಲೇ ರವಾನಿಸಿರಿ"

Hubli **R.N Kulkarni.**

"ನೀವು ಸಕಾಲದಲ್ಲಿ ಕಳುಹಿಸಿಕೊಟ್ಟಿರುವ 1912ನೇ ಇಸವಿಯ ವರ್ಷಭವಿಷ್ಯವು ಮುಟ್ಟಿರುತ್ತದೆ ಅದನ್ನು ನನ್ನ ಸ್ನೇಹಿತರಿಗೆ ಓದಲಿಕ್ಕೆ ಕೊಟ್ಟು ಕೊಟ್ಟು ಸಾಕಾಯಿತು. ಆದರೆ ಈಗ ಅದನ್ನು ಯಾರು ಕೊಂಡು ಹೋಗಿದ್ದಾರೆಂದೇ ತಿಳಿಯುವುದಿಲ್ಲ.ಒಂದು ತಿಂಗಳಾದರೂ ಅದರ ಪತ್ತೆಯೇ ಇಲ್ಲ. ಆದ್ದರಿಂದ ಅದು ಇನ್ನು ಕಳೆದು ಹೋದಂತೆಯೇ ಸರಿ ಜನವರಿ ಫೆಬ್ರವರಿ ತಿಂಗಳಲ್ಲಿ ನನಗೆ ಅದರಲ್ಲಿ ಬರೆದಿದ್ದಂತೆಯೇ ಆಗಿದೆ. ಮುಂದೇನಾಗುವುದೆಂದು ತಿಳಿಯಲು ಇನ್ನೊಂದು ಪ್ರತಿ ಕಳುಹಿಸಿ. 0-3-6 ಸ್ಟಾಂಪು ಲಗ್ತೀಕರಿಸಿದ್ದೇನೆ."

ಸಿ.ಕೆ.ಶೆಟ್ಟಿ, ಬೊಂಬಾಯಿ.

ಪ್ರತಿಗಳು ಅಂತರಂಗದ ಏಜಂಟರಲ್ಲೆಲ್ಲಾ ಸಿಗುತ್ತವೆ ಅಲ್ಲಿ ಸಿಗದಿದ್ದರೆ 0-3-9 ಸ್ಟಾಂಪಿನೊಂದಿಗೆ ಬರೆಯಿರಿ.

ಅಂತರಂಗ ಆಫೀಸು **ಉಡುಪಿ.**	ನವಭಾರತ ಪುಸ್ತಕ ಭಂಡಾರ, ಉಡುಪಿ

ನರಳಾಡುತ್ತಿರುವುದೇಕೆ?

ಅಭಿನಯಿಸಲು ಒಳ್ಳೆಯ ನಾಟಕವಿಲ್ಲವೆಂದು ನರಳಾಡುತ್ತಿರುವುದೇಕೆ? ಆಧುನಿಕ ಮನೋವೃತ್ತಿಗೊಪ್ಪುವ ಸಾಮಾಜಿಕ ಅಥವಾ ಪೌರಾಣಿಕ ನಾಟಕಗಳು ಬೇಕಾದರೆ ನಮಗೆ ಬರೆಯಿರಿ.

ಇತ್ತೀಚೆಗೆ ಪ್ರಕಟವಾದ ಎರಡು ಉತ್ತಮ ನಾಟಕಗಳು

"ಪವಿತ್ರ ಪ್ರೇಮಕ್ಕೆ ಜಾತಿಮತಗಳ ವಿಷ್ನತೆಯೊಂದು ತಡೆಯಾಗಲಾರದು, ತಡೆಯಾಗಿ ನಿಂತಲ್ಲಿ ಅದು ಪ್ರೇಮ [illegible] ನಿಜ ತಪ್ಪುತ್ತವೆ' ಎಂಬುದನ್ನು ಮನಗಾಣಿಸುವ ಉಜ್ವಲ ಸಾಮಾಜಿಕ ನಾಟಕ—

◎ ಪ್ರೇಮವಿಜಯ ◎

(ಬರೆದವರು ಶ್ರೀ ಕೆ ಕೆ ಶೆಟ್ಟಿ)

ಬೆಲೆ 0—12—0. ● ಟ ಖ 0—1—6

ಜನರಲ್ಲಿ ಒಂದು ಹೊಸ ಹುರುಪು ಹುಟ್ಟಿ ಅದು ವ್ಯಕ್ತಿಕ ಅಯೋಗ್ಯತೆಯಿಂದಾಗಿ ಸಲಕಾರಿಯಾಗದ ವಿನಾಶಕ್ಕೆ ಹೇತುವಾಗುವುದು. ಅವರಿಂದಾಗಿ ಹಲವು ಸಂಸ್ಥೆಗಳು ಗಳಿಗೆಗೊಂದರಂತೆ ಆವಿರ್ಭವಿಸಿ, ಅಂತೆಯೆ ಅಂತರ್ಧಾನವಾಗುತ್ತಿರುವವು. ಈ ತತ್ವದ ಸೂಕ್ಷ್ಮ ಪರಿಶೀಲನೆಯನ್ನು ಮನಗಾಣಿಸುವ ನಾಟಕ.

||| 'ರಂಗಭೂಮಿ' |||

(ಬರೆದವರು: ಶ್ರೀ ಎಸ . ವೆಂಕಟರಾಜರು.)

ನಾಟಕ ಕಂಪೆನಿಯವರ ನೈಜಜೀವನವನ್ನು ವಿಶೇಷವಾಗಿ ಚಿತ್ರಿಸುವ ನಾಟಕವಿದು,

ಬೆಲೆ: 0—8—0. ● ಟ. ಖ 0—1—0.

ಎರಡೂ ಪುಸ್ತಕ ತರಿಸಿಕೊಳ್ಳುವವರಿಗೆ ಟ.ಖ ಮಾಫು. ರೂ. 1-1-0ರ ಸ್ಟಾಂಪು ಕಳಿಸಿದರೆ ಯಾ ಮನಿಯಾರ್ಡರು ಮಾಡಿದರೆ ಎರಡುಪುಸ್ತಕಗಳನ್ನೂ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

WANTED.

A Secondary or Higher Grade Trained teacher. Pay 75 % of the grants; and free quarters. For more particulars apply to—

The Manager

Gulvadi Sowkoor Aided Ele School,
POST KANDLUR,
Coondapoor Taluk.

ಪ್ರಕಟಣೆ

ಹಯರ್ ಗ್ರೇಡ್ ತರಬೇತಾದ ಇಬ್ಬರು ಉಪಾಧ್ಯಾಯರು ಅಥವಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ತಿಂಗಳೊಂದರ ರೂ. 14-0-0 (ಹದಿನಾಲ್ಕು) ಸಂಬಳ ಕೊಡಲಾಗುತ್ತದೆ ಎಂತ ಸದರಿ ಶಾಲಾ ಹೆಡ್‌ಮಾಸ್ಟರ್ ಟಿ ಗೋಪಾಲ ಶೆಟ್ಟಿಯವರು ತಿಳಿಸುತ್ತಾರೆ ಇಷ್ಟಪಟ್ಟವರು ಈ ಕೆಳಗಿನವರನ್ನು ಕೂಡಲೇ ಕಂಡು ಮಾತಾಡಿ ಕೆಲಸಕ್ಕೆ ಹಾಜರಾಗಬಹುದು

M. Bhakthimathi,
W/o Dr K R Bontra
Manager
Sural Aided Elementary School,
Post Kokkerne.
Udipi Taluk, S K.

ART PHOTOS

9 Art photos of beautiful girls in charming poses sent against 6 postage stamps Limited stocks available.

ART PUBLISHERS,
Block No. 5.
Ramanjaneya Buildings,
UDIPI.

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability)

ESTD: 1906.

ನವಯುಗ

ಉಡುಪಿ, ಗುರುವಾರ, ೧೪-೫-೧೯೪೨

ಹೇಳುವುದೊಂದು— ಮಾಡುವುದೊಂದು

ಇಂದೀಗ ಪ್ರತಿಯೊಂದು ಸಾಮ್ರಾಜ್ಯವಾಹಿ ರಾಷ್ಟ್ರವೂ ಮುಂದಿನ ಲೋಕದ ನವರಚನೆಯ ಉದಾತ್ತ ತತ್ವವನ್ನು ಜನತೆಯ ಮುಂದೆ ಉದ್ಘೋಷಿಸಿ ಅವರ ಮನಸ್ಸನ್ನೊಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ನಾಝಿಗಳು ಯುರೋಪಿನ ಹಾಗೂ ಇಡೀ ಲೋಕದ ನವನಿರ್ಮಾಣದ ತಮ್ಮದೇ ಆದ ನವೀನ ತತ್ವವನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ ಅವರು ಆಕ್ರಮಿಸಿರುವ ಯುರೋಪಿನ ರಾಷ್ಟ್ರಗಳಲ್ಲಿ ಈ ನವನಿರ್ಮಾಣವು ಯಾವ ಸ್ವರೂಪ ತಾಳಿರುವುದೆಂಬುದನ್ನು ಪರ್ಯಾಲೋಚಿಸಿದರೆ ಅದು ನಾಗರಿಕ ಬರ್ಬರತೆಯೆಂದೇ ಸ್ಪಷ್ಟವಾಗಿ ಹೇಳುವಂತಾಗಿದೆ. ಏಸ್ಯಾಖಂಡವು ಏಸ್ಯಾನರದಾಗಿಯೇ ಇರಬೇಕು. ಇಡೀ ಏಸ್ಯಾಖಂಡವು ಜಾಪಾನಿನ ನೇತೃತ್ವದಲ್ಲಿ ಬಿಳಿಜನರ ಸ್ವಾರ್ಥಪರ ಗೋರೆಯಿಂದ ವಿಮುಕ್ತವಾಗಿ ಉನ್ನತಿಪಥದಲ್ಲಿ ಮುನ್ನಡೆಯುವಂತೆ ಮಾಡುವುದೇ ತಮ್ಮ ಉದ್ದೇಶವೆಂದು ಜಾಪಾನರು ಸಾರುತ್ತಿದ್ದಾರೆ. ಏಸ್ಯಾನರ ಬಂಧುತ್ವ ಮತ್ತು ಅಭಿವೃದ್ಧಿ ಸಾಧನೆಯು ಚೈನದಲ್ಲಿ ಹೇಗೆ ಸಾಧಿಸಲ್ಪಡುತ್ತದೆಂಬುದನ್ನು ನೋಡಿದರೆ ತೀವ್ರ ಜಿಗುಪ್ಸೆಯುಂಟಾಗುತ್ತದೆ. ಇನ್ನು ಬ್ರಿಟನು ಅತ್ಲಾಂತಿಕ ಚಾರ್ಟರನ್ನು ಉದ್ಘೋಷಿಸಿ ಈ ಯುದ್ಧದಲ್ಲಿ ತನಗೇನೂ ಸ್ವಾರ್ಥವಿಲ್ಲ. ಲೋಕದಲ್ಲಿ ಪ್ರಜಾ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯು ನೆಲೆಗೊಂಡು ಸುಖ ಸುಭಿಕ್ಷೆಯು ನೆಲೆಗೊಳ್ಳುವಂತೆ ಮಾಡುವುದೇ ತನ್ನ ಉದ್ದೇಶವೆಂದು ಯುನೈಟೆಡ್ ಸ್ಟೇಟ್ಸನೊಂದಿಗೆ ಸೇರಿ ಉದ್ಘೋಷಿಸಿರುತ್ತದೆ. ಈ ಘೋಷಣೆಯನ್ನು ಬ್ರಿಟನ್ ಮತ್ತು ಅಬಿಸೀನಿಯದ ಚಕ್ರವರ್ತಿಗಳೊಳಗಾಗಿರುವ ಒಪ್ಪಂದದ ಬೆಳಕಿಗೆ ಹಿಡಿದು ನೋಡಿದರೆ ಅದರ ಹುಳುಕು ಕಾಣಬರುವುದು. "ನಮ್ಮ ಮೇಲೆ ವಿಶ್ವಾಸವಿಟ್ಟು ನಮಗೆ ಸಹಾಯವಮಾಡಿರಿ. ಈ ಘೋಷಣಾ ಯುದ್ಧದ [illegible] ನಿಮ್ಮ ರಾಷ್ಟ್ರವನ್ನು ನಮ್ಮ ಹೇಗೆ [illegible] ಸ್ವಾತಂತ್ರ್ಯವಿಯುನೆವೆಂಬುವನ್ನು ಮನಗಾಣುವಿರಿ." ಎಂದು ಬ್ರಿಟನು ಮತ್ತು ಅಮೆರಿಕಗಳು ವಿನಂತಿ ಮಾಡಿಕೊಂಡು ಲೋಕದ ರಾಷ್ಟ್ರಗಳ ಬೆಂಬಲ ಪಡೆಯಲೆತ್ನಿಸುತ್ತಿವೆ. ಗೆದ್ದ ರಾಜ್ಯಗಳನ್ನು ತಮ್ಮ ಗುಲಾಮಗಿರಿಯಲ್ಲಿರಿಸುವ ಆಕ್ಸಿಸ್ ರಾಷ್ಟ್ರಗಳ ನವರಚನೆಯ ಮೋಸದ ಬಲೆಗಿಂತ ಅಟ್ಲಾಂಟಿಕ ಘೋಷಣೆಯು ಎಷ್ಟೋ ಉತ್ತಮವಿರುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಬ್ರಿಟನು ಇನ್ನೂ ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ಸಿದ್ಧವಿರುವುದಿಲ್ಲೆಂಬುದು, ಅತ್ಲಾಂತಿಕ ಘೋಷಣೆಯನ್ನು ಹಿಂದೂದೇಶಕ್ಕೆ ಅನ್ವಯಿಸಲಿಕ್ಕದು ಒಪ್ಪದಿರುವುದರಿಂದ ಸ್ಫುಟವಾಗುವುದು. ಅಬಿಸೀನಿಯ ಚಕ್ರವರ್ತಿಗಳೊಂದಿಗೆ ಅದು ಮಾಡಿಕೊಂಡಿರುವ ಒಪ್ಪಂದವು ಅದು ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ಮಾತ್ರವಲ್ಲದೆ ಬಿಳಿಜನರ ವಿಶಿಷ್ಟ ಹಕ್ಕುಗಳನ್ನು ಕೂಡಾ ಬಿಟ್ಟು ಕೊಡಲು ಸಿದ್ಧವಿಲ್ಲೆಂಬುದು ಸಿದ್ಧವಾಗುವುದು.

ಬ್ರಿಟನ್ ಮತ್ತು ಅಬಿಸೀನಿಯ ಸರಕಾರಗಳೊಳಗಾಗಿರುವ ಒಪ್ಪಂದದ ಕೆಲವು ಶರ್ತಗಳನ್ನು ವಿಚಾರಪರ ದೂರದರ್ಶಿಗಳಾದ ಬ್ರಿಟಿಷ್ ರಾಜನೀತಿಜ್ಞರೇ ಕಠೋರವಾಗಿ ಖಂಡಿಸಿರುವರು. ಈ ಒಪ್ಪಂದದ ೧ನೇ ಶರ್ತದ ಮೇರೆಗೆ, ವೈರಿಯ ಅಂದರೆ ಇಟೆಲಿಯಾನರ ಖಾಸಗಿ ಸೊತ್ತನ್ನು ಅಂತರರಾಷ್ಟ್ರೀಯ ಶಾಸನದ ಮೇರೆಗೆ ಕಾಯುವ ಜವಾಬ್ದಾರಿಯನ್ನು ಅಬಿಸೀನಿಯದ ಚಕ್ರವರ್ತಿಗಳು ವಹಿಸಬೇಕಾಗಿದೆ. ಈ ಖಾಸಗಿ ಸೊತ್ತೆಂದರೆ ಇಟೆಲಿಯು ಅಬಿಸೀನಿಯವನ್ನು ಗೆದ್ದ ಮೇಲೆ ತಮ್ಮವರಿಗಿತ್ತಿರುವ ನಿವಾಸ ಸಂಬಂಧವಾದ ಹೆಚ್ಚಿನ ರಿಯಾಯಿತಿಗಳಾಗಿರುತ್ತವೆ. ಈ ಮೇರೆಗೆ ಇಟೆಲಿಯಾನರು ಅಬಿಸೀನಿಯವನ್ನು ಗೆದ್ದು ಅಲ್ಲಿ ಸ್ಥಾಪಿಸಿರುವ ವಸಾಹಾತುಗಳ ಹಕ್ಕನ್ನು ಬ್ರಿಟನು ಅಂಗೀಕರಿಸಿದಂತಾಗಿದೆ. ಅಬಿಸೀನಿಯದಲ್ಲಿ ತಮ್ಮ ಒದ್ದ ವೈರಿಗಳಾದ ಇಟೆಲಿಯಾನರು ವಸಾಹತುಗಳನ್ನು ಸ್ಥಾಪಿಸಿ ಮುಂದೆ ಅವುಗಳಲ್ಲಿ ವಾಸಿಸಲು ಬ್ರಿಟನಿನ ಆಕ್ಷೇಪವೇನೂ ಇಲ್ಲವೆಂದಾಯಿತು. ಇದು ಕೇವಲ ಬಿಳಿಯರ ಸಂಕುಚಿತ ಸ್ವಾರ್ಥ ಸಾಧನೆಯಲ್ಲದೆ ಮತ್ತೇನು? ಇಟೆಲಿಯು ಅಬಿಸೀನಿಯವನ್ನು ಗೆದ್ದು ರಾಜ್ಯಭಾರ ಸ್ಥಾಪಿಸಿದುದನ್ನು ಹೈಲ್ ಸೆಲಾಸಿಯವರು ಕೊನೆಯವರೆಗೂ ಅಂಗೀಕರಿಸದೆ ನಿಷೇಧಿಸುತ್ತಾ ಬಂದಿರುವರು. ಆ ಸಂಬಂಧವಾಗಿ ಇಟೆಲಿಯಾನರು ಮಾಡಿದ ಪ್ರಯತ್ನವು ನಿರರ್ಥಕವಾಗಿದ್ದಿತು. ಅಂಥ ಮೇಲೆ ಇಟೆಲಿಯಾನರು ಅಬಿಸೀನಿಯದಲ್ಲಿ ಪಡೆದಿರುವ ರಿಯಾಯಿತಿಗಳನ್ನು ಚಕ್ರವರ್ತಿಗಳು ಅಂಗೀಕರಿಸಬೇಕೆಂಬುದನ್ನು ಬ್ರಿಟನು ಒಪ್ಪಂದದ ಒಂದು ಶರ್ತವಾಗಿ ಮಾಡಪಡೆಂಬರೆ ಅರ್ಥವೇನು? ಒಪ್ಪಂದದ ಆಕ್ಷೇಪಣೆಯ ಇನ್ನೊಂದು ವಿಷಯವೆಂದರೆ ಅಬಿಸೀನಿಯದ ಆಡಳಿತದ ಹಲವು ಶಾಖೆಗಳಿಗೆ ಚಕ್ರವರ್ತಿಗಳು ಬ್ರಿಟಿಷರನ್ನು ಮುಖ್ಯ ಸಲಹೆಗಾರರಾಗಿ ನೇಮಿಸತಕ್ಕದ್ದು. ಮಾತ್ರವಲ್ಲದೆ ಬ್ರಿಟಿಷ್ ಸರಕಾರದ ಅಭಿಮತ ಪಡೆಯದೆ ಆ ಒಂದು ನಿಯಮಿತ ಸಂಖ್ಯೆಗಿಂತ ಹೆಚ್ಚುಮಂದಿ ಸಲಹೆಗಾರರನ್ನು ನೇಮಿಸಿಕೊಳ್ಳುವ ಸ್ವಾತಂತ್ರ್ಯ ಅವರಿಗಿರುವುದಿಲ್ಲ. ಐಗುಪ್ತ ಮೊದಲಾದ ರಾಷ್ಟ್ರಗಳಂತೆ ಅಬಿಸೀನಿಯದ ಮೇಲೂ ಬ್ರಿಟನು ತನ್ನ ಅಧಿಕಾರವನ್ನು ಸ್ಥಾಪಿಸಿದುದೆಂಬುದು ಇದರಿಂದ ಸ್ಪಷ್ಟವಾಗುವುದು. ಇಂದೀಗ ಅಬಿಸೀನಿಯದಲ್ಲಿ ದೊಡ್ಡದಾದೊಂದು ಬ್ರಿಟಿಷ್ ಸೇನೆಯು ಶಾಂತಿ ಮತ್ತು ಸುವ್ಯವಸ್ಥೆಯನ್ನು ನೆಲೆಗೊಳಿಸಲು ಇರಿಸಲ್ಪಟ್ಟಿರುವುದು. ಅದು ಯಾವಾಗ ಅಬಿಸೀನಿಯ ಬಿಟ್ಟು ಹೋಗುವುದೋ ತಿಳಿಯದು. ಅದಕ್ಕೇನೂ ಕಾಲಾವಧಿ ಇರುವುದಿಲ್ಲ. ಅಬಿಸೀನಿಯದಲ್ಲಿರುವ ಅತಿ ಹೆಚ್ಚಿನ ಪ್ರಮಾಣದ ಇಟೆಲಿಯಾನರ ವಿಶಿಷ್ಟ ಹಕ್ಕುಬಾಧ್ಯತೆಗಳನ್ನು ಈ ಒಪ್ಪಂದದಲ್ಲಿ ಅಂಗೀಕರಿಸಿರುವುದು ಅತ್ಯಂತ ಆಕ್ಷೇಪಕರ ವಿಷಯವಾಗುತ್ತದೆ. ಇದರಿಂದೆಲ್ಲಾ ಬ್ರಿಟನು ಇನ್ನೂ ಸಾಮ್ರಾಜ್ಯ ಮತ್ತು ಬಿಳಿಜನರ ಸ್ವಾರ್ಥವನ್ನು ಬಿಟ್ಟು ಬಿಡಲು ಸಿದ್ಧವಿಲ್ಲೆಂಬುದು ಸ್ಪಷ್ಟವಾಗುವುದಿಲ್ಲವೇ?

ಮೆಡಗಾಸ್ಕರಿನ ಆಕ್ರಮಣ

ನ್ಯೂ ಕೆಲೆಡೋನಿಯವನ್ನು ಅಮೆರಿಕವು ವಶಪಡಿಸಿಕೊಂಡ ಎರಡನೇ ವಾರದಲ್ಲೇ ಬ್ರಿಟನು ಮೆಡಗಾಸ್ಕರನ್ನು ಆಕ್ರಮಿಸುವ ಸಾಹಸ ಮಾಡಿರುವುದು. ಹಿಂದೀ ಸಾಗರದ ಸಂದುಕಟ್ಟಿನ ಸ್ಥಳದಲ್ಲಿರುವ ಈ ದ್ವೀಪದ ಮೇಲೆ ಜಾಪಾನರು ಕಣ್ಣಿಟ್ಟಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ. ಸುಮಾರು 2 ತಿಂಗಳುಗಳ ಹಿಂದೆ ಜಾಪಾನ ನೌಕಾ ಮತ್ತು ವೈಮಾನಿಕ ಮಿಶನೊಂದು ಮೆಡಗಾಸ್ಕರನ್ನು ಸಂದರ್ಶಿಸಿ ಪರಿಶೀಲಿಸಿದ್ದಿತು. ಈ ದ್ವೀಪವನ್ನು ಜಾಪಾನರು ವಶಪಡಿಸಿಕೊಳ್ಳುವಂತಾಗುತ್ತಿದ್ದರೆ ಸಂಯುಕ್ತ ರಾಷ್ಟ್ರಗಳಿಗೆ ಇನ್ನೊಂದು ದೊಡ್ಡ ಅನಾಹುತವಾಗುತ್ತಿದ್ದಿತು. ಅದರ ಸ್ವಾತಂತ್ರ್ಯವನ್ನು ಕಾಪಾಡಲಾಗುವುದೆಂಬ ವಿಚಿ ಸರಕಾರದ ಭರವಸೆಯನ್ನು ನಂಬಲು ಸಾಧ್ಯವೇ ಇಲ್ಲ. ಯಾಕೆಂದರೆ ಇಂಡೋಚೈನವನ್ನದು ಜಾಪಾನರಿಗೆ ಬಿಟ್ಟುಕೊಟ್ಟು ಶಾಂತಸಾಗರದ ಯುದ್ಧದಲ್ಲಿ ಜಾಪಾನಿಗೆ ದೊಡ್ಡ ಸಹಾಯಮಾಡಿಲ್ಲವೇ? ಅಂತೆಯೇ ಮೆಡಗಾಸ್ಕರಿನ ಗತಿಯೂ ಆಗುತ್ತಿತ್ತು. ವಿಚಿ ಸರಕಾರಕ್ಕೆ ಯಾವುದನ್ನಾದರೂ ಕಾಪಾಡಿಕೊಳ್ಳುವ ಸ್ವಾತಂತ್ರ್ಯವೇನಿದೆ? ಅದು ಹಿಟ್ಲರರ ಸೂತ್ರದ ಗೊಂಬೆಯಂತೆ ನಡೆಯದೆ ಗತ್ಯಂತರವಿದೆಯೇ? ಬ್ರಿಟನ್ ಮತ್ತು ಅಮೆರಿಕಗಳು ಹಿಂದೀ ಸಾಗರದಲ್ಲಿ ಜಾಪಾನರನ್ನು ಪ್ರಬಲವಾಗಿ ವಿರೋಧಿಸುವ ನಿರ್ಧಾರ ಮಾಡಿದ್ದರು. ಆದುದರಿಂದ ಟ್ರಾಫಲ್ಗಾರಿನಂತಹ ದೊಡ್ಡ ಜಲ ಯುದ್ಧವು ಹಿಂದೀ ಸಾಗರದಲ್ಲಿ ನಡೆಯುವುದೆಂದು ನಿರೀಕ್ಷಿಸಲಾಗಿತ್ತು. ಯಾಕೆಂದರೆ ಹಿಂದೀ ಸಾಗರದ ಹಡಗ ಸಂಚಾರ ಮಾರ್ಗಗಳು ಸಂಯುಕ್ತ ರಾಷ್ಟ್ರಗಳಿಗೆ ಅತಿ ಪ್ರಾಮುಖ್ಯವಾಗಿರುತ್ತವೆ. ಹಿಂದೂದೇಶ, ರಷ್ಯ ಮತ್ತು ಮಧ್ಯ ಪೂರ್ವಕ್ಕೆ ಸೇನೆ ಮತ್ತು ಯುದ್ಧ ಸಾಮಗ್ರಿಗಳನ್ನೊಯ್ಯಲು ಹಿಂದೀ ಸಾಗರದ ಮಾರ್ಗಗಳು ಅತ್ಯಗತ್ಯವಿರುತ್ತವೆ. ಮೆಡಗಾಸ್ಕರಿನ ನೌಕಾ ನಿಲಯವನ್ನು ಜಾಪಾನು ವಶಪಡಿಸಿಕೊಂಡಲ್ಲಿ ಈ ಮಾರ್ಗಗಳಿಗೆ ಅತಿ ದೊಡ್ಡ ಅಪಾಯವುಂಟಾಗುವುದು. ಆದುದರಿಂದ ಬ್ರಿಟನು ಮೆಡಗಾಸ್ಕರನ್ನು ವಶಪಡಿಸಿಕೊಂಡು ಹಿಂದೀ ಸಾಗರದಲ್ಲಿ ಸಂಯುಕ್ತ ರಾಷ್ಟ್ರಗಳ ಸ್ಥಾನವನ್ನು ಬಲಪಡಿಸಲು ಮುಂದಾಗಿರುವುದು. ಅದಕ್ಕೆ ಯುನೈಟೆಡ್ ಸ್ಟೇಟ್ಸ್ ಸಂಪೂರ್ಣ ಬೆಂಬಲವಿತ್ತಿರುವುದು. ಇಷ್ಟರವರೆಗೆ ಅದು ವಿಚಿ ಫ್ರಾನ್ಸನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಬಂದಿರುವುದು. ಡಿ. ಗೋಲರ ಸ್ವತಂತ್ರ ಫ್ರೆಂಚ್ ಸರಕಾರವನ್ನು ಅಂಗೀಕರಿಸದೆ ಬಹಳ ಜಾಗ್ರತೆಯಿಂದ ವರ್ತಿಸಿರುವುದು. ಉತ್ತರ ಆಫ್ರಿಕದ ಫ್ರೆಂಚ್ ವಸಾಹತುಗಳಿಗೆ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಕಳುಹಿಸಿರುವುದು. ವಿಚಿ ಸರಕಾರದೊಡನೆ ರಾಜ್ಯ ತಾಂತ್ರಿಕ ಸಂಬಂಧವನ್ನೇನೂ ಕಡಿದುಹಾಕಿರುವುದಿಲ್ಲ. ಆದರೆ ಇಂದೀಗ ಲಾವಲರು ಅಧಿಕಾರಕ್ಕೆ ಬಂದಿರುವುದರಿಂದ ಯುನೈಟೆಡ್ ಸ್ಟೇಟ್ಸ್ ಕೂಡಾ ನಿರಾಶಗೊಂಡು, ವಿಚಿ ಫ್ರಾನ್ಸು ಜರ್ಮನಿಯೊಂದಿಗೆ ಸಹಕರಿಸುವದು ನಿಶ್ಚಯವೆಂಬ ನಿರ್ಧಾರಕ್ಕೆ ಬಂದಿರುವುದು. ಆದುದರಿಂದಲೇ ಅದು ಮೆಡಗಾಸ್ಕರಿನ ಆಕ್ರಮಣದ ವಿಷಯದಲ್ಲಿ ಬ್ರಿಟನಿಗೆ ಸಂಪೂರ್ಣ ಬೆಂಬಲವಿತ್ತಿರುವುದು.

ಹಿಟ್ಲರರಿಗೆ ಬಂಡಾಯದ ಭೀತಿ.

ನಾಝಿ ಆಕ್ರಮಿತ ದೇಶಗಳಲ್ಲಿ ಮಾತ್ರವಲ್ಲದೆ ಜರ್ಮನಿಯಲ್ಲಿ ಕೂಡಾ ಜನತೆಯು ತನ್ನ ವಿರುದ್ಧವಾಗಿ ಬಂಡಾಯವೇಳುವರೋ ಎಂಬ ಭೀತಿಯು ಹಿಟ್ಲರರಲ್ಲುಂಟಾಗಿರುವಂತಿದೆ. ಇಲ್ಲವಾದರೆ, ಜನರನ್ನು ತನಗಿಚ್ಛೆಬಂದಂತೆ ಹಿಡಿದು ಶಿಕ್ಷಿಸುವ ವಿಶೇಷಾಧಿಕಾರದ ಆವಶ್ಯವಾದರೂ ಅವರಿಗೇನು? ಬೇಗನೆ ಯುದ್ಧವನ್ನು ಮುಗಿಸಿಬಿಡುವ ಅವರ ಆಶೆಯು ಬಟ್ಟಬಯಲಾಗಿದೆ. ಇನ್ನೊಂದು ಚಳಿಗಾಲದ ಯುದ್ಧಸಿದ್ಧತೆಯ ಕುರಿತು ಅವರು ತನ್ನ ಭಾಷಣದಲ್ಲೇ ಪ್ರಸ್ತಾಪಿಸಿರುತ್ತಾರೆ. ದೀರ್ಘ ಕಾಲದ ಭೀಷಣ ಹೋರಾಟವು, ಜನತೆಯಲ್ಲಿ ಅತೃಪ್ತಿ ಮತ್ತು ಅಶಾಂತಿಯ ಪ್ರವಾಹದ ಕಟ್ಟನ್ನೊಡೆದು ಬಿಡುವುದೆಂಬುದರಲ್ಲಿ ಸಂದೇಹವೇ ಇಲ್ಲ. ನಾಝಿ ಆಕ್ರಮಿತ ರಾಷ್ಟ್ರಗಳಲ್ಲಿ ಇಷ್ಟರಲ್ಲೇ ಹಲವು ಬಂಡಾಯಗಳೆದ್ದಿರುವವು. ನಾಝಿಗಳು ಬರ್ಬರ ದಬ್ಬಾಳಿಕೆ ಮತ್ತು ಅತ್ಯಾಚಾರಗಳಿಂದ ಅವನ್ನು ಅಣಗಿಸಲೆತ್ನಿಸುತ್ತಿದ್ದಾರೆ. ಜನತೆಯ ಬಂಡಾಯಗಾರ ಮನೋವೃತ್ತಿಯನ್ನೇ ನಿರ್ಮೂಲಿಸಿ ಭಯ ಚಕಿತತೆಯನ್ನುಂಟು ಮಾಡುಲು ಸಾವಿರಾರು ಗಂಡಸರು, ಹೆಂಗಸರು, ಮತ್ತು ಮಕ್ಕಳನ್ನು ಕೊಂದು ಹಾಕುವುದಕ್ಕೆ ಕೂಡಾ ಹಿಂಜರಿಯಲಾಗದೆಂದು ಹಿಟ್ಲರರು ಅನುಜ್ಞೆ ಇತ್ತಿರುವರೆಂದು ತಿಳಿದು ಬರುತ್ತದೆ. ಯುಗೊಸ್ಲಾವಿಯದ ಪ್ರಬಲ ಗೊರಿಲ್ಲಯುದ್ಧವು ನಿಲ್ಲಿಸಲ್ಪಡದಿದ್ದರೆ ಅದರ ಪ್ರತೀಕಾರಾರ್ಥವಾಗಿ 16,000 ಮಂದಿಯನ್ನು ಕೂಡಲೇ ಕೊಲೆಮಾಡ ಬೇಕೆಂದು ಹಿಟ್ಲರರು ಜಾಹೀರುನಾಮೆ ಹೊರಡಿಸಿರುವರು. ಪೋಲೆಂಡಿನಲ್ಲಿ ಯಾರೊಡನಾದರೂ ಕೋವಿಯು ಕಂಡು ಹಿಡಿಯಲ್ಪಟ್ಟರೆ ಕೂಡಲೆ ಕೊಲೆಮಾಡುವ ಹೊಸ ಶಾಸನ ಮಾಡಲಾಗಿದೆ. ಆದರೂ ನಾಝಿ ಆಕ್ರಮಿತ ರಾಷ್ಟ್ರಗಳಲ್ಲೆಲ್ಲಾ ಜನರ ವಿರೋಧವು ಪ್ರಬಲವಾಗಿ ಮೆರೆಯುತ್ತಿದೆ.

★ ಜರ್ಮನಿಗೆ ಚರ್ಚಿಲ್ಲರ ಎಚ್ಚರ ★

ಚರ್ಚಿಲ್ಲರ ಎಚ್ಚರಿಕೆ

ಇದೇ ತಾ. 10ನೇ ರಾತ್ರಿ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರು ಇಡೀ ರಾಷ್ಟ್ರಕ್ಕೆ ರೇಡಿಯೋ ಮೂಲಕ ಭಾಷಣವೀಯುತ್ತಾ, ಹಿಟ್ಲರರು ರಷ್ಯದಲ್ಲಿ ವಿಷವಾಯುವನ್ನು ಪ್ರಯೋಗಿಸಿದ ಪಕ್ಷದಲ್ಲಿ, ಬ್ರಿಟನು ದಿನೇ ದಿನೇ ಪ್ರಬಲ ಹೊಂದುತ್ತಿರುವ ವಿಮಾನಗಳ ಮೂಲಕ ಜರ್ಮನಿಯ ಸೇನಾ ಕೇಂದ್ರಗಳ ಮೇಲೆ ಅತಿ ದೊಡ್ಡ ಪ್ರಮಾಣದಲ್ಲಿ ವಿಷವಾಯು ಧಾಳಿ ನಡಿಸುವುದೆಂದು ಎಚ್ಚರಿಸಿತ್ತಿರುವರು. ರಷ್ಯದ ಮೇಲಿನ ವಿಷವಾಯು ಪ್ರಯೋಗವನ್ನು ಬ್ರಿಟನಿನ ಮೇಲೆ ಮಾಡಿದಂತೆಯೇ ಎಂದು ಬ್ರಿಟಿಷ ಸರಕಾರವು ಪರಿಗಣಿಸಿ ಅದಕ್ಕೆ ತಕ್ಕ ಪ್ರತೀಕಾರ ಮಾಡುವುದು. ಆದುದರಿಂದ ವಿಮಾನ ಯುದ್ಧಕ್ಕೆ ಈ ಭೀಕರತೆಯನ್ನು ಸೇರಿಸುವ ಇಚ್ಛೆಯು ಹಿಟ್ಲರರಿಗಿದ್ದಲ್ಲಿ ಅವರು ರಷ್ಯದ ಮೇಲೆ ವಿಷವಾಯು ಪ್ರಯೋಗಮಾಡಬಹುದು. 1914—1918 ಯುದ್ಧದಲ್ಲಿ ಕೊಲ್ಲಲ್ಪಟ್ಟ ಒಟ್ಟು ಸೈನಿಕರಿಗಿಂತ ಹೆಚ್ಚಿನವರು ರಷ್ಯದ ಯುದ್ಧದಲ್ಲಿ ಮತ್ತು ಹಿಮದಲ್ಲಿ ಹತರಾಗಿರುವರು. ಕಳೆದ ಯುದ್ಧದಲ್ಲಿ ಕೊಲ್ಲಲ್ಪಟ್ಟ ಜರ್ಮನ್ ಸೈನಿಕರು 2 ಮಿಲ್ಯ ಮಂದಿಯೆಂದು ಜರ್ಮನರೇ ಒಪ್ಪಿರುವರು. ರಷ್ಯದ ಈ ವರೆಗಣ ಯುದ್ಧದಲ್ಲೇ ಈ ಸಂಖ್ಯೆಗಿಂತ ಹೆಚ್ಚಿನವರು ಹತರಾಗಿರುವರು. ಜರ್ಮನಿಯ ಮೇಲೆ ಬ್ರಿಟಿಷ್ ಮತ್ತು ಅಮೆರಿಕಾನ ಬೋಂಬುಧಾಳಿಯು ಈ ವರ್ಷದ ಯುದ್ಧದ ಪ್ರಾಮುಖ್ಯ ಸ್ವರೂಪವಾಗುವುದು. ರಷ್ಯದ ಮೇಲಿನ ಪ್ರಚಂಡ ಧಾಳಿಯ ಬೆನ್ನೆಲುಬೆಂದರೆ ಜರ್ಮನಿಯ ಜನತೆಯ ಮಹತ್ತ್ವದ ಬೆಂಬಲ. ಈ ಬೆಂಬಲದ ಮೇಲೆ ಹೆಚ್ಚೆಚ್ಚಾಗಿ ಕಠಿಣ ಹಾಗೂ ಎಡೆಬಿಡದ ವಿಮಾನ ಧಾಳಿ ನಡಿಸಿ ಅದನ್ನು ಕುಗ್ಗ ಬಡಿಯುವ ಸಮಯವೀಗ ಬಂದಿರುತ್ತದೆಂಬುದು ಚರ್ಚಿಲ್ಲರ ಭಾಷಣದ ಸಾರಾಂಶ.

ಮಂಡಲೆಯ ಮೇಲೆ ಧಾಳಿ

ಬರ್ಮದಲ್ಲಿರುವ ಚೀನೀ ಸೈನಿಕರು ಇದೇ ತಾ 10ರಲ್ಲಿ ಮಂಡಲೆಯ ಮೇಲೆ ಧಾಳಿ ನಡಿಸಿರುವರು. ಜಪಾನರ ಪ್ರಬಲ ಪ್ರತಿ ಧಾಳಿಯನ್ನು ಗಣ್ಯ ಮಾಡದೆ ಅವರು ಪೂರ್ವ ಮತ್ತು ಉತ್ತರದಿಂದ ಮಂಡಲೆಯ ಹೊರವಲಯವನ್ನು ಸಮೀಪಿಸುತ್ತಿರುವರು. ಚೈನಾ ಬರ್ಮ ಎಲ್ಲೆಯಲ್ಲಿ 25 ಮೈಲುಗಳ ಪ್ರದೇಶದಲ್ಲಿರುವ ಚೆಫಂಗ್ ಎಂಬ ಸ್ಥಳವನ್ನು ಚೀನೀಯರು ಗೆದ್ದಿರುವರು. ಚೆಫಂಗಿನ ಉತ್ತರ ಪೂರ್ವದಲ್ಲಿ 500 ಮಂದಿ ಜಪಾನ ಸೈನಿಕರು ಆವರಿಸಲ್ಪಟ್ಟಿರುವರು. ಬರ್ಮದ ಗವರ್ನರರು ಮಂತ್ರಿಗಳ ಸಮೇತ ಹಿಂದುಸ್ಥಾನಕ್ಕೆ ಬಂದಿರುವರು. ಚಿಂದ್ವಿನ್ ನದಿ ಪ್ರದೇಶಕ್ಕೆ ಹಿಂದೆ ಸರಿಯುತ್ತಿರುವ ಬ್ರಿಟಿಷ್ ಸೇನೆಯನ್ನು ಕಡಿಯಲು ಜಪಾನರು ಪ್ರಯತ್ನಮಾಡುತ್ತಿರು. ವರಾದರೂ ಜಯಶೀಲವಾಗಿಲ್ಲವೆಂದು ತಿಳಿದುಬರುತ್ತದೆ.

ಚೀನೀಯರು ಮಂಡಲೆಗೆ ಸಮೀಪಿಸಿರುವರು

ಬ್ರಿಟಿಷರು ಕೂಡಲೆ ಹಿಂದುಸ್ಥಾನ ಬಿಟ್ಟು ಹೋಗಬೇಕು.

ಬ್ರಿಟಿಷರು ಹಿಂದುಸ್ಥಾನ ಬಿಟ್ಟುಹೋಗಬೇಕು

ಆಂಗ್ಲೇಯ ಮಿತ್ರರೊಬ್ಬರ ವಿಚಾರಕರ ಪತ್ರಕ್ಕೆ ಮಹಾತ್ಮ ಗಾಂಧಿಯವರು ಉತ್ತರವೀಯುತ್ತಾ, ನಾನು ಬ್ರಿಟಿಷರ ಕುರಿತು ಯಥಾಪ್ರಕಾರವಾದ ಪ್ರೀತಿಯನ್ನಿಟ್ಟುಕೊಂಡಿರುತ್ತೇನೆ. ಆದರೆ ಜನಸಾಮಾನ್ಯರಲ್ಲಿ ಅವರ ಕುರಿತು ದ್ವೇಷವು ಬೆಳೆಯುತ್ತಿರುವುದು. ಬಿಳಿ ಜನರ ವರ್ಣಶ್ರೇಷ್ಠತೆಯು ಕರಿಜನರಲ್ಲಿ ತೀವ್ರ ಸಂತಾಪವನ್ನುಂಟುಮಾಡಿರುವುದು. ಇಂತಹ ವಿಷಾದಕರ ಪರಿಸ್ಥಿತಿಯನ್ನು ನಿವಾರಿಸಬೇಕಾದರೆ ಬ್ರಿಟಿಷರು ಕೂಡಲೆ ಹಿಂದುಸ್ಥಾನವನ್ನು ಬಿಟ್ಟುಹೋಗಬೇಕು. ತೀವ್ರ ರೋಗಕ್ಕೆ ತೀವ್ರ ಚಿಕಿತ್ಸೆ ಬೇಕಾಗಿದ. ಬ್ರಿಟಿಷರು ಹಿಂದುದೇಶವನ್ನು ಬಿಟ್ಟು ಹೋಗುವುದು ಅವರ ಅತಿ ಧೈರ್ಯದ ಮತ್ತು ಶುದ್ಧ ಮನಸ್ಸಿನ ಕೆಲಸವಾಗುವುದು. ಆಗ ಸಾಮ್ರಾಜ್ಯ ಶಾಹಿಯು ನಿರ್ನಾಮವಾಗಿ ಅದರೊಂದಿಗೆ ಫೇಸಿಸ್ಟ್ ಮತ್ತು ನಾಝಿ ಶಾಹಿಯೂ ಅಂತಗೊಳ್ಳುವ ಸಂಭವವಿರುವುದು. ಯಾಕೆಂದರೆ ಇವೆರಡೂ ಸಾಮ್ರಾಜ್ಯ ಶಾಹಿಯಿಂದ ಹುಟ್ಟಿದ ಪ್ರಗಳಾಗಿವೆಯೆಂದು ಮಹಾತ್ಮಾ ಗಾಂಧಿಯವರು ಹರಿಜನದಲ್ಲೊಂದು ಲೇಖನ ಬರದಿರುವರು.

ಪಂಡಿತ ನೆಹರುಗಳು.

ಇದೇ ತಾ 9ರಲ್ಲಿ ತನ್ನ ಪುತ್ರಿಯೊಂದಿಗೆ ಡಿಲ್ಲಿಗೆ ಹೋಗಿ, ರೂಸವೆಲ್ಟರ ಪ್ರತಿನಿಧಿಯಾದ ಕರ್ನೆಲ್ ಜೋನ್ಸನರೊಡನೆ ಮಾತಾಡಿ ಇದೇ ತಾ 10ರಲ್ಲಿ ಲಖ್ನೋಗೆ ಮುಟ್ಟಿರುವರು. ತಾ 11ರಲ್ಲಿ ಪಂಜಾಬಿನ ಎಸಂಬ್ಲಿ ಕಾಂಗ್ರೆಸ್ ಪಕ್ಷೀಯರೊಡನೆ ಮಾತುಕತೆ ನಡಿಸಿರುವರು.

ಮಿತ್ರ ರಾಷ್ಟ್ರಗಳ ಸರ್ತಿ ಈಗ ಬಂದಿದೆ

ಮಿತ್ರರಾಷ್ಟ್ರಗಳ ಸರ್ತಿ ಈಗ ಬಂದಿದ ನಿಶ್ಚಿತ ಕಾಲದಲ್ಲಿ ಅವರು ಜರ್ಮನಿಯ ಮೇಲೆ ಬೀಳಲಿರುವರು. ಅದಕ್ಕಾಗಿ ದೊಡ್ಡ ಸೇನೆಯು ಬ್ರಿಟನಿನಲ್ಲಿ ಸಂಘಟಿತವಾಗುತ್ತಿದೆ. ಅದು ಅಜೇಯವಾಗಿ ಮುನ್ನುಗ್ಗಿ ಯುರೋಪಿನ ರಾಷ್ಟ್ರಗಳ ಬಂಧನವನ್ನು ಮುರಿದು ಹಾಕುವುದೆಂದು, ಜರ್ಮನಿಯು ನೋರ್ವೆ, ಹೋಲ್ಲೆಂಡ್ ಮೊದಲಾದ ರಾಷ್ಟ್ರಗಳನ್ನು ಆಕ್ರಮಿಸಿದ ಎರಡನೆ ವಾರ್ಷಿಕ ದಿನಾಚರಣೆಯ ಸಂದರ್ಭದಲ್ಲಿ ಲೋರ್ಡ್ ಹೆಲಿಫೆಕ್ಸರು ಹೇಳಿರುವರು.

ರಾಜಾಜಿಯವರಿಗೆ ಜಾಕ್ಸಾರರ ಸ್ವಾಗತ

ಇದೇ ತಾ 11ರಲ್ಲಿ ರಾಜಾಜಿಯವರು ವಾರ್ಧದಿಂದ ಮದ್ರಾಸಿಗೆ ಬಂದಾಗ ಸುಮಾರು 300 ಮಂದಿ ಖಾಕ್ಸಾರರು ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಹಿಂದೂ ಮಹಾ ಸಭೆಯವರು ವಿರುದ್ಧ ಪ್ರದರ್ಶನ ಮಾಡಿದರು. "ನಾವು ರಾಷ್ಟ್ರೀಯ ರಣರಂಗವನ್ನು ನಿರ್ಮಿಸಬೇಕು. ಹಿಂದುಸ್ಥಾನದಲ್ಲಿ ನಿಜವಾದ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕು, ಮತ್ತು ಮಿಲ್ಯಾಂತರ ಹಿಂದೀಯರನ್ನು ದೇಶ ರಕ್ಷಣೆಗಾಗಿ ಸಿದ್ಧಗೊಳಿಸಬೇಕು. ಕಾಂಗ್ರೆಸ್ ವಾದಿಗಳು ತಮ್ಮ ಸಾಧನಗಳನ್ನು ಕಡೆಗಣಿಸಿ ಇಡೀ ದೇಶವನ್ನು ತಮ್ಮ ದೃಷ್ಟಿ ಪಥದಲ್ಲಿರಿಸುವ ಸಂದರ್ಭವೀಗ ಒದಗಿರುತ್ತದೆಂದು ಶ್ರೀ ರಾಜಗೋಪಾಲಾಚಾರ್ಯರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿರುವರು.

ಅಮೆರಿಕಾದ ವಿಮಾನಗಳು ಧಾಳಿ ನಡಿಸಿದುದು

ಟೋಕಿಯೋ ಯೋಕಹಾಮ ನಗೋಯ ಮೊದಲಾದ ಜಪಾನ ಪಟ್ಟಣಗಳ ಮೇಲೆ ಕೆಲದಿನಗಳ ಮೊದಲು ವಿಮಾನ ದಾಳಿ ನಡಿಸಿದುದು ಯುನೈಟೆಡ್ ಸ್ಟೇಟ್ಸ ಸೇನಾ ವಿಮಾನಗಳೆಂದೀಗ ಪ್ರಕಟವಾಗಿದೆ. ಈ ವಿಮಾನ ಧಾಳಿಯಿಂದ ಹೆಚ್ಚಿನ ಹಾನಿಯುಂಟಾಗಿ ಕೊಲ್ಲಲ್ಪಟ್ಟ ಮತ್ತು ಗಾಯಗೊಂಡವರ ಸಂಖ್ಯೆ 1000 ಆಗಿರುವುದೆಂದು ತಿಳಿದುಬರುತ್ತದೆ.

ಜಪಾನಿನಲ್ಲಿ ಜ್ವಾಲಾಮುಖಿ ಹಾವಳಿ

ಜಪಾನಿನ ದಕ್ಷಿಣ ಭಾಗದಲ್ಲಿರುವ ಅಸಮಾ ಜ್ವಾಲಾಮುಖಿಯು ಭಯಂಕರವಾಗಿ ಸ್ಫೋಟಿಸಿ ಭೂಕಂಪವುಂಟಾಗಿ ಹೆಚ್ಚಿನ ಹಾನಿಯುಂಟಾಗಿರುವುದೆಂದು ತಿಳಿದುಬರುತ್ತದೆ. ಹಲವು ಮೈಲುಗಳ ವರೆಗಿನ ಪ್ರದೇಶವಾಗಿ ಬೂದಿಯು ಮಳೆ ಬಿದ್ದಿರುವುದು.

ತಾ 14--5--1942ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಹುರಿದುಂಬಿಸುವ ಉತ್ಸಾಹಕ್ಕೆ ಅನುದಿನದ ಆನಂದಕ್ಕೆ, ಅಪ್ರತಿಮ ಚಿತ್ರ ಸಾಹಸ ಚಿತ್ರಗಳಲ್ಲಿ, ಶ್ರೇಷ್ಠತರಗತಿಯ

ರಂಗಿಲಾ ಮಜದೂರ್.

(ವಾಡಿಯಾ)

ಹರಿಶ್ಚಂದ್ರರಾವ್ ಗುಲ್ಶನಾ, ಉಸ್ತಾದ್ ಅಬ್ದುಲ್‌ಹಕ್ ಮೊದಲಾದವರು.

ಮೆಡಗಾಸ್ಕರಿನ ಯುದ್ಧ

ಬ್ರಿಟಿಷ್ ಸೇನೆಯು ಮೆಡಗಾಸ್ಕರಿನ ಡೀಗೋ ಸೊರೆಟ್ ಎಂಬ ಪ್ರಾಮುಖ್ಯ ನೌಕಾ ನಿಲಯವನ್ನು ವಶಪಡಿಸಿಕೊಂಡಿರುವರು. ಅಲ್ಲಿಯ ಫ್ರೆಂಚ್ ಸೇನಾನಾಯಕರು ಶರಣಾಗತರಾಗಿರುವರು. ಇಷ್ಟರ ವರೆಗೆ ಮೆಡಗಾಸ್ಕರಿನ ಯುದ್ಧದಲ್ಲಿ ಕೊಲ್ಲಲ್ಪಟ್ಟ ಮತ್ತು ಗಾಯಗೊಂಡ ಬ್ರಿಟಿಷ್ ಸೈನಿಕರ ಸಂಖ್ಯೆಯು 500ಕ್ಕಿಂತ ಮಿಕ್ಕಿಲ್ಲೆಂದು ತಿಳಿದುಬರುತ್ತದೆ

ಬಿಸಿ ಬಿಸಿ ಸುದ್ದಿ.

ಜಪಾನರು ಹಿಂದಕ್ಕಟ್ಟಲ್ಪಟ್ಟರು.

ಜರ್ಮದ ಎಲ್ಲೆಯ ಪಟ್ಟಣವಾದ ವಾಶಿಯೋವನ್ನು ಹಿಡಿದು ಮುಂದೊತ್ತಿರುವ ಜಪಾನರನ್ನು ಚೀನೀಯರನ್ನು ಜಯಶೀಲವಾಗಿ ಪ್ರತಿಭಟಿಸಿ 30 ಮೈಲು ಹಿಂದಕ್ಕಟ್ಟಿರುವರೆಂದು ಚುಂಕಿಂಗಿನಿಂದ ವಾರ್ತೆ ಬಂದಿರುತ್ತದೆ

ಜನರಲ್ ವೇವೆಲರು.

ಪಶ್ಚಿಮ ಪ್ರದೇಶದ ಸೇನಾನಾಯಕರೊಂದಿಗೆ ಅತ್ಯವಸರದಿಂದ ವಾಯುವ್ಯ ಗಡಿನಾಡನ್ನು ಸಂದರ್ಶಿಸಿ ಅಲ್ಲಿಯ ರಕ್ಷಣಾ ವ್ಯವಸ್ಥೆಯನ್ನು ಪರೀಕ್ಷಿಸಿರುವರು ಇದರ ಕಾರಣವೇನೋ ತಿಳಿಯದು

ಪೂರ್ವ ರಣರಂಗದಲ್ಲಿ ಯುದ್ಧ

ಪೂರ್ವ ರಣರಂಗದಲ್ಲೆಲ್ಲಾ ಪ್ರಬಲ ಹೋರಾಟವು ಆರಂಭವಾಗಿರುತ್ತದೆ ಕ್ರಿಮಿಯದಲ್ಲಿ ಜರ್ಮನರು ಮುಂದೊತ್ತಿರುವರೆಂದು ತಿಳಿದು ಬರುತ್ತದೆ.

ಪೆರಿಸಿನಲ್ಲಿ ಬೋಂಬಿನ ಸ್ಫೋಟ.

ಪೆರಿಸಿನ ಮುಖ್ಯ ಜರ್ಮನ್ ಆಡಳಿತ ಕೇಂದ್ರದ ಬಳಿ ಬೋಂಬೊಂದು ಸ್ಫೋಟವಾಗಿರುವುದು ಹೆಚ್ಚಿನ ಹಾವಳಿಯೇನೂ ಆಗಿರುವುದಿಲ್ಲ. ಪೆರಿಸಿನ ಪೋಲೀಸರೂ ಜರ್ಮನ್ ಗೆಸ್ಟೇಪೋ ಗುಪ್ತ ಪೋಲೀಸರೂ ಈ ಅತ್ಯಾಚಾರಿಗಳನ್ನು ಪತ್ತೆಹಚ್ಚುವುದರಲ್ಲಿ ನಿರತರಾಗಿರುತ್ತಾರೆ.

3 ಡಿಸ್ಟ್ರೋಯರುಗಳು ಮುಳುಗಿಸಲ್ಪಟ್ಟವು

ಭೂಮಧ್ಯ ಸಾಗರದಲ್ಲಿ ಜರ್ಮನ್ ವಿಮಾನಗಳು ಧಾಳಿ ನಡಿಸಿ 3 ಬ್ರಿಟಿಷ್ ಡಿಸ್ಟ್ರೋಯರ್ ಹಡಗಗಳನ್ನು ಮುಳುಗಿಸಿರುವವೆಂದು ತಿಳಿದುಬರುತ್ತದೆ

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಬೆಳಗಾವಿ

—ಇದೇ ಮೇ ತಿಂಗಳಲ್ಲಿ ಬೆಳಗಾವಿಯಲ್ಲಿ ಕೂಡಲಿರುವ ಕರ್ನಾಟಕ ವಿಶ್ವ ವಿದ್ಯಾಲಯ ಪರಿಷತ್ತಿಗೆ ಮುಂಬಯಿಯ ಸುಪ್ರಸಿದ್ಧ ಕನ್ನಡಿಗರೂ ಶಿಕ್ಷಣಾಭಿಮಾನಿಗಳೂ ಆದ ಶ್ರೀಮಾನ್ ರಂಗಾಚಾರ್ಯ ಜಹಾಗೀರದಾರ ಎಂ. ಎ ಎಲ್ ಎಲ್ ಬಿ ಗವರ್ನಮೆಂಟ್ ಪ್ಲೀಡರ ಮುಂಬಯಿ ಹಾಯಕೋರ್ಟ್ ಅವರು ಅಧ್ಯಕ್ಷರಾಗಿರು. ಪ್ರಾದೇಶಿಕ ವಿಶ್ವ ವಿದ್ಯಾಲಯ ಉಪಯುಕ್ತತೆ ಮತ್ತು ಆವಶ್ಯಕತೆ, ಕರ್ನಾಟಕ ವಿಶ್ವ ವಿದ್ಯಾಲಯದ ಸ್ವರೂಪ, ಕರ್ನಾಟಕ ವಿಶ್ವ ವಿದ್ಯಾಲಯದ ಸ್ಥಾಪನೆಗಾಗಿ ಕೈಗೊಳ್ಳಬೇಕಾದ ಪ್ರಯತ್ನಗಳು ಕರ್ನಾಟಕ ವಿಶ್ವ ವಿದ್ಯಾಲಯದ ವಿಸ್ತಾರ ಮತ್ತು ಕ್ಷೇತ್ರ, ಇವೇ ಮೊದಲಾದ ವಿಷಯಗಳ ಬಗ್ಗೆ ತಜ್ಞರು ತಮ್ಮ ಸಲಹೆ ಸೂಚನೆಗಳನ್ನು ನಮ್ಮೆಡೆಗೆ ತಿಳಿಸಬೇಕಾಗಿ ಪ್ರಾರ್ಥನೆ. ಅಲ್ಲದೆ ಪರಿಷತ್ತಿನ ಕಾಲಕ್ಕೆ ಮೊಲ್ಗೊಂಡು ಮತ್ತು ಇನ್ನಿತರ ವಿಷಯಗಳ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರೆಂದು ನಂಬಿದ್ದೇವೆ

ಎಂ ಪಿ ಪಾಟೀಲ, ಎಂ. ಎ.
ಜಿ. ಬಿ ಸಾತ್ವಿಕ
ಕಾರ್ಯದರ್ಶಿಗಳು
ಕರ್ನಾಟಕ ವಿಶ್ವ ವಿದ್ಯಾಲಯ ಪರಿಷತ್ತು, ಬೆಳಗಾವಿ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸಂತೆಯಲ್ಲಿ ದಾರಿಂದ)

ನಗರಸಭೆ—ತಾ ೪ನೇ ಸಂಜೆ ಸಭಾ ಭವನದಲ್ಲಿ ಅಧ್ಯಕ್ಷ ಶ್ರೀ ಬಿ ವೆಂಕಟಪ್ಪಯ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿ ಪೋರ್ಟ ಕನ್ಸರ್ವೆನ್ಸಿ ವಿಭಾಗದಲ್ಲಿ ಈಗಾಗಲೇ ನಗರ ಸಭೆಯ ಮೂವರು ಸದಸ್ಯರಿರುವುದರಿಂದ ನಮ್ಮ ಪ್ರತಿನಿಧಿಗೆ ಅವಕಾಶವಿಲ್ಲವೆಂದು ಸರಕಾರವು ತಿಳಿಸಿದುದನ್ನು ವಿಮರ್ಶಿಸಿ, ಸರ್ಕಾರದ ವೈಯುಕ್ತಿಕ ನೆಲೆಯಲ್ಲಿ ಕನ್ಸರ್ವೆನ್ಸಿ ಬೋರ್ಡಿನಲ್ಲಿರುವರೆಂದೂ ನಗರಸಭೆಯ ಪ್ರತಿನಿಧಿ ಒಬ್ಬರ ಆವಶ್ಯಕತೆಯಿದೆಯೆಂದೂ ಆ ಕುರಿತು ಸರಕಾರಕ್ಕೆ ಬರೆಯಬೇಕೆಂದೂ ನಿರ್ಧರಿಸಲಾಯಿತು. ಮಣ್ಣಗುಡ್ಡೆ ಹಂಪನಕಟ್ಟೆಯ ಶಾಲೆಯ ಜಗಲಿಸಾರಿಗೆ ಗೂ ... ಕಟ್ಟುತ್ತಲು ಟ್ರೆಂಚ್ ಸ್ಥಳದಲ್ಲಿ ತಾತ್ಕಾಲಿಕ ಶೆಡ್ಡು ಕಟ್ಟಿಸುವುದಕ್ಕೂ ಪಬ್ಲಿಕ್ ಲಂಡ್ ಪೇಟೆಯಲ್ಲಿ ಒಂದು ವ್ಯಾಯಾಮ ಮಂದಿರವನ್ನು ತೆರೆಯುವುದಕ್ಕೂ ರೂ ... ಮತ್ತು ...ಗಳನ್ನು ಪತ್ಯೆ ಪ್ರತ್ಯೇಕವಾಗಿ ಮಂಜೂರ ಮಾಡಲಾಯಿತು. ಸರಕಾರದ ಅಪೇಕ್ಷೆಗೆ ಉತ್ತರವಾಗಿ ಅಂಗಡಿಗೆ ಸಂಬಂಧಪಟ್ಟ ಕಾನೂನು ಅತ್ತಾವರ ಬಿ ... ಬೋಳೂರು ಬಿ ಕನ್ನಾರ್ವಾನ್ನಿಲಿಂಗ್ಸ್, ಕೂಳೂರು, ಕಾವೂರ ಪೆರ್ಮಿನ್ನೂರು ಕದ್ರಿ ಬ ಪದವು, ಕೂಡಿಯಾಲಬೈಲು, ಮರೋಳಿ ಅಳಪೆ, ಕಣ್ಣೂರು, ಕಂಕನಾಡಿ ಬಿ ಬಜಾಲ್ ಜಪ್ಪಿನ ಮೊಗರು, ಬಿ ಉಳ್ಳಾಲ, ತೆಲಿಗುಡ್ಡಾ ಮತ್ತು ಮಣ್ಣಾಗು ... ಗಳಲ್ಲಿ ಜಾರಿಗೆ ಬರುವುದೆಂದು ವಿಧಿ ಸ್ಥಿರೀಕರಿಸಲಾಯಿತು. ದ ಕ್ಷಣ ಕಾರ್ಯಕ್ರಮಗಳಿಗಾಗಿ ನಗರ ಸಭೆಯವರು ತಮ್ಮ ಆರು ಲಾರಿಗಳನ್ನು ಬಿಟ್ಟುಕೊಡಬೇಕೆಂಬ ಜಿಲ್ಲಾ ಮ್ಯಾಜಿಸ್ಟ್ರೇಟರ ಪತ್ರವನ್ನೋದಿ ಸಭೆಯು ಈಗ ಇರುವ ಏಳು ಲಾರಿಗಳಲ್ಲಿ ನಾಲ್ಕನ್ನಾದರೂ ತನ್ನಾಧೀನದಲ್ಲಿ, ಅಗತ್ಯ ಬಿದ್ದಾಗ ಕೊಡುವ ಒಪ್ಪಂದದ ಮೇಲೆ ಇಟ್ಟುಕೊಳ್ಳುವುದು ಆವಶ್ಯ ... ಬಯಲಾಯಿತು.

ಸೀರೇಶ್ವಾಲ್ ಆರ್ಯ ಭಜನಾ ಮಂಡಲಿ—ಇದರ ಹದಿನೇಳನೆಯ ವಾರ್ಷಿಕೋತ್ಸವವು ತಾ ೩ರಂದು ಸಂಜೆ ಸೀರೇಶ್ವಾಲ್ಪದಲ್ಲಿ ಜುಮಗರ ... ಶ್ರೀ ಕೆ ಬಿ ಚಿನ್ನಪ್ಪ ಹೆಗ್ಡೆ, ಎಂ ಎಲ್ ಎ (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕ ವರದಿಯು ಸ್ವೀಕೃತವಾದ ಬಳಿಕ ಶ್ರೀಯುತರು ಎಸ್, ನರಸಪ್ಪಯ್ಯ ಮತ್ತು ಮಂಗಳೂರು ಜಾರಪ್ಪ ಇವರು ಮಾತನಾಡಿದರು. ಅಧ್ಯಕ್ಷರ ವಂದನೆಯ ಕಾರ್ಯ ವಹ್ಯಕತೆಯನ್ನು ಕೊಂಡಾಡಿದರು. ತಾ, ೫ರಂದು ಪ್ರಭಾತ ... ಧ್ವಜ ರೋಹಣ ಮತ್ತು ಹರಿಕಥೆ ಗಳಿದ್ದುವು.

ಸ್ಟೇಂಟ್ ಜಾನ್ ಆಂಬುಲೆನ್ಸ್ ಎಸೋಸಿಯೇಶನ್ —ದಕ್ಷಿಣ ಕನ್ನಡ ಜಿಲ್ಲಾ ... ಸಂಘದ ... ಅಧ್ಯಯದಲ್ಲಿ, ಅತ್ತಾವರ ... ಕಟ್ಟೆಯಲ್ಲಿ ಪ್ರಥಮ ಚಿಕಿತ್ಸಾ ತರಗತಿಯೊಂದು ಡಾ ಕೆ. ಬಾಲಪ್ಪ ಶೆಟ್ಟಿರಿಂದ ತೆರೆಯಲ್ಪಟ್ಟಿದೆ ಡಾ ... ಶೆಟ್ಟರು ಈ ತರಗತಿಯನ್ನು ನಡೆಸುವರು.

ಅತ್ತಾವರ ಮುನಿಸಿಪಲ್ ಶಾಲಾ ವರ್ಧಂತಿ —ಈ ಶಾಲಾ ವರ್ಧಂತಿಯು ಪ್ರಸಿದ್ಧ ಕಳೆದ ಆದಿತ್ಯವಾರ ಸಂಜೆ ಶ್ರೀ ಎಂ ಜಾರಪ್ಪ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಪ್ರಾರ್ಥನೆ, ಶಾಲಾ ಹೆಡ್ಮಾಸ್ತರರಾದ ಶ್ರೀ ಕೆ ಅಪ್ಪುಜಿರಾಯರಿಂದ ಶಾಲಾ ವರದಿ ವಾಚನ (ಈ ಶಾಲೆ ೪೫ ವರ್ಷಗಳ ಹಿಂದೆ ಒಬ್ಬ ಉಪಾಧ್ಯಾಯರಿಂದ ಆರಂಭಗೊಂಡು ಈಗ ೮ ಮಂದಿ ಉಪಾಧ್ಯಾಯರಿಂದಲೂ ೩೦೦ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಂದಲೂ ಕೂಡಿದೆ) ಶ್ರೀ ಜನಾರ್ದನ ಸುವರ್ಣರಿಂದ ಶಾಲಾಸ್ತ್ರೀಯ ಪ್ರಾರ್ಥನೆ, ಅಧ್ಯಕ್ಷರಿಂದ ಬಹುಮಾನ ವಿನಿಯೋಗ, ಶ್ರೀ ಎಂ ಆರ್, ರಾವ್ ಅವರ ಹಿತೋಕ್ತಿಯ ಭಾಷಣ, ಅಧ್ಯಕ್ಷರ ಉಪನ್ಯಾಸ ಮತ್ತು ಹೆಡ್ಮಾಸ್ತರರ ವಂದನೋಕ್ತಿಗಳಾದ ಬಳಿಕ, ವಿವಿಧ ವಿನೋದಗಳು ಪ್ರದರ್ಶಿಸಲ್ಪಟ್ಟವು.

ಬಾಲಿಕಾಶ್ರಮದ ನೂತನ ಮಂದಿರ ಭಾಗದ ಪ್ರವೇಶೋತ್ಸವ —ಸ್ಥಳೀಯ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘ ಕಂಕನಾಡಿ ಬಾಲಿಕಾಶ್ರಮದ 'ತುಳಸಿ ಬಾಯಿ ವೇದಾವತಿ ಪೈ'ಯವರ ಹೊಸ ಮಂದಿರ ಭಾಗದ ಪ್ರವೇಶೋತ್ಸವವು ನಮ್ಮ ಜಿಲ್ಲಾ ಜಡ್ಜರಾದ ಶ್ರೀ ಎಲ್ ಎಸ್ ಪಾರ್ಥಸಾರಥಿ ಅಯ್ಯರರ ಹಸ್ತದಿಂದ ಕಳೆದ ಬುಧವಾರ ಸಂಜೆ ನೆರವೇರಿತು. ಸೇವಾಶ್ರಮದ ಕಾರ್ಯದರ್ಶಿಗಳಾದ ಶ್ರೀ ಎನ ರಾಮರಾಯರ ಸಂಘದ ೨೨ ವರ್ಷದ ಚಟುವಟಿಕೆಗಳನ್ನು ವಿವರಿಸಿ ತಮ್ಮ ಮಾತೋಶ್ರೀಯವರ ಸ್ಮಾರಕವಾಗಿ ಈ ಮಂದಿರವನ್ನು ಕಟ್ಟಿಸಿ ದಾನಮಾಡಿದ ಡಾ। ಎಂ ಕೇಶವ ಪೈಯವರು ಸಂಘಕ್ಕೆ ನಗದಿಯಾಗಿಯೂ ... ಸಾವಿರ ರೂಪಾಯಿಗಳನ್ನು ಅನುಗ್ರಹಿಸಿರುವರೆಂದೂ ತಿಳಿಸಿದರು.

ಉಡುಪಿ.

ಬ್ಲೇಕ್ ಔಟ್—ತಾ ೪ರಿಂದ ಸಂಪೂರ್ಣ ಬ್ಲೇಕ್ಔಟ್ ನಿಯಮವು ತೆಗೆದು ಹಾಕಲ್ಪಟ್ಟು, ಅರೆ ಬ್ಲೇಕ್ಔಟ್ ಮಾತ್ರ ಇದೆ.

ಧಾರಣೆಗಳು— ತಾ ೬ 5 42ರಲ್ಲಿ ತಾಲೂಕು ಎಡ್ವೈಸರಿ ಕಮಿಟಿಯ ಸಭೆ ಸೇರಿ ಈ ಕೆಳಗಿನಂತೆ ಧಾರಣೆ ನಿಶ್ಚೈಸಲಾಗಿದೆ. ಅಕ್ಕಿ ಮಸ್ಸತ್ತು ಮುಡಿಗೆ ರೂ. 6-12 0, ಸೇರಿಗೆ 0-2-6, ತೊಗರಿಬೇಳೆ 6 6 0, ಸೇರಿಗೆ 0-2 6 ಬೆಲ್ಲಗೆ ರೂ 7 0 0, ರೂ 8 0 0. ಸೇರಿಗೆ 0 2 8ರಿಂದ 0 3 2, ಬೆಲ್ಲ ಮಣಕ್ಕೆ 2 0 0 ರಿಂದ ರೂ 3 4 0, ಸೇರಿಗೆ 0 0 9ಯಿಂದ 0- 1- 2 ಸಕ್ಕರೆ ಮಣಕ್ಕೆ ರೂ 1 8 0ಸೇರಿಗೆ 0 1- 6,ಚಿಮುಣಿ ಎಣ್ಣೆ ಡಬ್ಬಿಗೆ ರೂ 5-1 0, ಬಾಟ್ಲಿಗೆ 0 3 4. ತೆಂಗಿನ ಕಾಯಿ 100ಕ್ಕೆ ರೂ 4ರಿಂದ 5, 1ಕ್ಕೆ 0 0 8ಯಿಂದ 0 0 10 ಬೆಂಕಿ ಪೆಟ್ಟಿಗೆ 0- 0 5ನ್ನಯಿಂದ 0- 0 10

ಬನ್ನಾಡಿ—ಇಲ್ಲಿಯ ಪರಮಹಂಸ ಯಕ್ಷಗಾನ ಸಮಿತಿಯ ಆಶ್ರಯದಲ್ಲಿ, ಶ್ರೀ. ಕಟೀಲ್ ಗಣಪತಿ ಶರ್ಮ, ವಿದ್ವಾನ್ ಹಿಂದೀ ವಿಶಾರದ, ಸಾಹಿತ್ಯಾಲಂಕಾರ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಯಕ್ಷಗಾನ ಗೋಷ್ಠಿಯೊಂದು ಯಶಸ್ವಿಯಾಗಿ ಜರಗಿತು. ಪರಮ ಹಂಸ ಯಕ್ಷಗಾನ ಸಮಿತಿ, ತೆಕ್ಕಟ್ಟೆಯ ಯಕ್ಷಗಾನ ಸಂಘ ಮತ್ತು ಪರಮಹಂಸ ಶಾಲಾ ವಿದ್ಯಾರ್ಥಿಗಳು ಗೋಷ್ಠಿಯಲ್ಲಿ ಪ್ರಾಮುಖ್ಯ ಭಾಗ ವಹಿಸಿದರು. ಪರಮಹಂಸ ಶಾಲಾ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಪಡೆದರು. ಯಕ್ಷಗಾನ ಕಲೆ, ಮಹತ್ವ ಮತ್ತು ಸುಧಾರಣೆ- ಈ ಕುರಿತು ಕ್ರಮವಾಗಿ ಶ್ರೀಗಳಾದ ಸುಬ್ಬಣ್ಣ ಹೆಗ್ಡೆ, ಬನ್ನಾಡಿ, ಅಣ್ಣಪ್ಪ ಕಾರಂತ್, ಕೋಣಿ ಮತ್ತು ನರಸಿಂಹ ಅಡಿಗ, ಮಾಡಿಯಾರ್ ಇವರ ಸುಶ್ರಾವ್ಯ ಭಾಷಣಗಳಿದ್ದುವು. ಅಧ್ಯಕ್ಷರು ತಮ್ಮ ವಿಚಾರ ಪರಿಪ್ಲುತ ಭಾಷಣದಲ್ಲಿ ಅಲಕಾವತಿಯ ಕುಬೇರನ ಕಾಲದಿಂದ ತೊಡಗಿ ಈ ಗಳಿಗೆಯ ವರೆಗಿನ ಯಕ್ಷಗಾನ ಕಲೆಯ ತುಲನಾತ್ಮಕ ವಿಮರ್ಶೆ ಮಾಡಿದರು. ಪದ್ಧತಿಯ ಧನ್ಯವಾದ ಸಮರ್ಪಣೆ, ಮಂಗಳಗೀತೆಗಳೊಂದಿಗೆ ಗೋಷ್ಠಿಯು ಮುಗಿಯಿತು.

ಸುರತ್ಕಲ್—ಇಲ್ಲಿಯ ಇಪ್ಪ ವಿದ್ಯಾದಾಯಿನೀ ಶಾಲೆಯ ವರ್ಧಂತ್ಯುತ್ಸವವು ತಾ. 1 5 42ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಶಾಲಾಭಿನಂದನವನ್ನು ಮಂಗಳೂರು ಗಣಪತಿ ಹೈಸ್ಕೂಲಿನ ಅಧ್ಯಾಪಕ ಶ್ರೀ ಯಂ ವಾಸುದೇವರಾವ್ ಯಂ ಎ ಎಲ್ ಟಿ ಇವರು ನಡೆಸಿದರು. ಬಳಿಕ ಶಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳು ಶಾಲಾ ವರದಿ, ಬಹುಮಾನ ವಿತರಣ, ಅಧ್ಯಕ್ಷರ ಭಾಷಣ, ಧನ್ಯವಾದಗಳು ವಗೈರೆ ಕಾರ್ಯಕ್ರಮಗಳು ನಡೆದು, ರಾತ್ರಿ ಘಂಟೆ 9 30ಕ್ಕೆ ಸರಿಯಾಗಿ ಭಾಗವತ ಶ್ರೀ ಯಸ್ ಮಾಧವರಾವ್ ಮತ್ತು ಇವರ ಶಿಷ್ಯವರ್ಗ "ಸಂಗೀತ"ವೂ "ಶ್ರೀ ಕೃಷ್ಣ ಸಂಧಾನ"ವೆಂಬ ಯಕ್ಷಗಾನ ನಾಟಕವೂ ಬಹು ಯಶಸ್ವೀಯಾಗಿ ಜರಗಿದವು.

ಶಂಕರ ನಾರಾಯಣ —ಇಲ್ಲಿಯ ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘ ಒಂದು ಇತ್ತೀಚೆಗೆ ಶ್ರೀ. ಜ್ಞಾ. ಆನಂದ ರಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಸಂಘದ ಪ್ರಥಮ ವರ್ಧಂತ್ಯುತ್ಸವವನ್ನು ತಾ 1 5 42ರಲ್ಲಿ ಜನಾಬ್ ಶೇಖ್ ಉಮ್ಮರ್ ಸಾಹೇಬ್ B A, ಸಬ್ ರಿಜಿಸ್ಟ್ರಾರ್ ಇವರ ಅಧ್ಯಕ್ಷತೆಯಲ್ಲಿ ಬಹು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ಕಾರ್ಯಕ್ರಮದಂತೆ ಉಪಹಾರ ಕೂಟ, ಸಾರ್ವಜನಿಕ ಸಭೆ, ವಿವಿಧ ವಿನೋದಗಳು, ರಾತ್ರಿ ಊಟವಾದ ತರುವಾಯ ಶ್ರೀ ಕೆ ಕೆ ಶೆಟ್ಟರಿಂದ ವಿರಚಿತವಾದ 'ವ್ಯಭಿಚಾರಿಣಿ' ಯಾನೆ.... ' ಎಂಬ ನಾಟಕ ಇತ್ಯಾದಿಗಳಾದವು.

ಇದರ ಮುಂಚಿನ ... 30 4 42ರಲ್ಲಿ ಯೂನಿಯನ್ ನಿಧಿಗೆ ಸಹಾಯಾರ್ಥವಾಗಿ ಶಾಲಾ ವಠಾರದಿಂದ ... ನಾಟಕವ ಪ್ರದರ್ಶಿಸಿದ್ದು ರುಪ್ಯ 700ಕ್ಕೂ ಮಿಕ್ಕ ಉತ್ಪತ್ತಿಯಾಗಿರುತ್ತದೆ.

ಅಜೆಕಾರು ಸ್ಥಳೀಯ ಶಾಲೆ ಬೋರ್ಡಿನ ಎಲ್ಲೆ ಹೊಳೆಯ ಹೊಸ ಶಾಲಾ ಮಂದಿರದ ಪ್ರವೇಶೋತ್ಸವವು ಇದೇ ಕಳೆದ ತಾ 7 5 42ನೇ ಗುರುವಾರ, ಕಾರ್ಕಳ ರೇಂಜಿನ ಡಿ ಇ ಆದ ಶ್ರೀ ಯು ಕೃಷ್ಣ ರಾವ್, B A L T ಯವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿ ಶಾಲಾ ವರದಿ ವಾಚನ, ಪ್ರೆಸಿಡೆಂಟ್ ರೆ. ಫಾ. ಎಸ್. ಡಿಸೋಜ, ರೆಸಿಡೆಂಟ್ ಇನ್ಸ್ಪೆಕ್ಟರ್ ಶ್ರೀ ಪಿ ಎನ್. ನಾಯರ್ ಮತ್ತು ಶ್ರೀವಂ ಉಜಾನಾಥ ನ್ಯಾ ಕರೀ ಮೊದಲಾದವರು ಮಾತಾಡಿದ ಮೇಲೆ ಸಭಾಧ್ಯಕ್ಷರು ೨ ಅಡಿ ಎಳೆಗೆಯ ಹಿತ ಸೂಚನೆಗಳ ಸುರಸ ಭಾಷಣವಿತ್ತ ಬಳಿಕ, ನೆರೆದ ಸಕಲರಿಗೂ ತಿಂಡಿ ಅರ್ಪಿಸಲ್ಪಟ್ಟಿತು. ಸಭೆಯ "ಗಾಡ್ ಸೇವ್ ದಿ ಕಿಂಗ್" ಗೀತೆಯಾಯಿತು ಯಿಂದ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿರುವುದು ತಾ 8 5 42ನೇ ಶುಕ್ರವಾರ ಸ್ಥಳೀಯ ಶಾಲಾ ವಠಾರದಲ್ಲಿ ಯುದ್ಧ ಪ್ರಚಾರ ಕಮಿಟಿಯವರಿಂದ ಟೂರಿಂಗ್ ಸಿನೇಮಾ ಪ್ರದರ್ಶನವು ಪ್ರೇಕ್ಷಕರಿಂದ ಒಪ್ಪಿಗೆಯಾಗಿ ಸಾಕ್ಷಿತ್ತು.

ಪಡುತೋನ್ಸೆ ಕೆಮ್ಮಣ್ಣು:- ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಮಂಡಳಿಯವರು, ಸಂಘದ ವರ್ಧಂತ್ಯುತ್ಸವವು ಇದೇ 16 5-42ನೇ ಶನಿವಾರ, ಅಪರಾಹ್ನ ಗಂಟೆ 5ಕ್ಕೆ ಸಂಜೀವ ಭಟ್, ಎಮ್ ಎ ಎಲ್. ಟಿ, ಡಿಸ್ಟ್ರಿಕ್ಟ ಇನ್ಸ್ಪೆಕ್ಟರ್ ಆಫ್ ಸ್ಕೂಲ್ಸ್, ಉಡುಪಿ, ಇವರ ಅಧ್ಯಕ್ಷತೆಯಲ್ಲಿ ಶಾಲೆಯ ವಠಾರದಲ್ಲಿ ಜರಗುವುದು.

ದೇವಾಡಿಗ ಸುಧಾರಕ ಸಂಘ ಮುಂಬಯಿ:- ಇದರ ವಿಶೇಷ ಮಹಾಸಭೆಯು ತಾ 26-4-42ರಲ್ಲಿ ಜರಗಿ, 1942ನೇ ಇಸವಿಯ ಕಾರ್ಯ ನಿರ್ವಾಹಕ ಸಮಿತಿಯನ್ನು ಈ ಕೆಳಗಿನಂತೆ ಚುನಾಯಿಸಲಾಗಿದೆ. ಶ್ರೀ ಲಕ್ಷ್ಮಣ್ ಬಿ. ಉಳ್ಳಾಲ್, (ಅಧ್ಯಕ್ಷ) ಬಾಬು ಪಿ ಶ್ರೀಯಾನ್, (ಉಪಾಧ್ಯಕ್ಷ) ಕಲ್ಯಾಣಪುರ ಶ್ರೀನಿವಾಸ್, ಹಳೆಯಂಗಡಿ, ಶ್ರೀನಿವಾಸ್, (ಗೌ। ಜತೆ ಕಾರ್ಯದರ್ಶಿ) ಕೃಷ್ಣ ಕೆ ಸೋಮನಾಥ್, ಬಾಬು ಕೆ, ಶ್ರೀಯಾನ್, (ಕೋಶಾಧಿಕಾರಿಗಳು) ಚಂದು ಎ ಶ್ರೀಯಾನ್. ದಳವೂ

ಕಂಡ್ಲೂರು:- ತಾ 29 4 42 ರಲ್ಲಿ ಕುಂದಾಪುರ ತಾಲೂಕು ಕಂಡ್ಲೂರು ಎಯಿಡೆಡ್ ಶಾಲೆಯ ಅಭಿವೃದ್ಧಿಗೋಸ್ಕರ ಹಿಂದಿನ ತಾಲೂಕು ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಐ ಸಿ ಭಂಡಾರಿಗಳವರ ಅಧ್ಯಕ್ಷತೆಯಲ್ಲಿ "ಕೃಷ್ಣ ಸಂಧಾನ"ವೆಂಬ ಒಂದು ಯಕ್ಷಗಾನ ನಾಟಕವು ಊರ ಮಹನೀಯರ ಪ್ರೋತ್ಸಾಹದಿಂದ ಸದ್ರಿ ಶಾಲೆಯಲ್ಲಿ ಜರಗಿಸಲ್ಪಟ್ಟಿತು.

ಬ್ರಹ್ಮಾವರ —ತಾ 28-4-42ರಲ್ಲು ಇಲ್ಲಿಯ ಬೋರ್ಡ್ ಪ್ರಾಥಮಿಕ ಶಾಲಾ ವರ್ಧಂತ್ಯುತ್ಸವವು ಮಾನ್ಯ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀಮಾನ್ ಕೆ. ವಿಠಲ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಂದೋಪಾಧ್ಯಾಯರು ಪ್ರಗತಿ ಪರವರದಿ ವಾಚಿಯನ್ನು ಓದಿದಾದಮೇಲೆ ಶ್ರೀ H. ಕೃಷ್ಣಪ್ಪ B Sc (Hons) ... ಯವರು ಉಪನ್ಯಾಸ ಮಾಡಿದರು. ಸಭಿಕರಲ್ಲಿ ಶ್ರೀ ಬಿ. ತಿಮ್ಮಣ್ಣಾಚಾರ್ಯ, ಶ್ರೀ ಬಿ. ವಿಠಲ ಶೆಟ್ಟಿ, ಶ್ರೀ. ಬಿ ಸಂಜೀವ ಶೈ ಶ್ರೀ ಬಿ ಯಲ್ ಅಡಿಗ ಮುಂತಾದವರು ಶಾಲೆಯ ಪ್ರಗತಿಗಾಗಿ ದುಡಿಯುವ ಮುಖ್ಯೋಪಾಧ್ಯಾಯರನ್ನು ಪ್ರಶಂಸಿಯಾಕಿ, ಈ ಶಾಲೆಯ ಕಟ್ಟೋಣದ ವಿಸ್ತಾರ ಮತ್ತು ಹಾಯರ್ ಎಲಿಮೆಂಟರಿ ಶಾಲೆಯಾಗಬೇಕಾದ ಅಗತ್ಯವನ್ನು ಕುರಿತು ಒತ್ತಿ ಮಾತನಾಡಿದರು. ಅಧ್ಯಕ್ಷರು "ಬ್ರಹ್ಮಾವರವು ಉತ್ತಮ ಕೇಂದ್ರವಾಗಿರುತ್ತದೆ. ಇದರ ಸುತ್ತುಮುತ್ತ ಬಹಳ ಶಾಲೆಗಳಿವೆ. ಇಲ್ಲಿ ಒಂದು ಬೋ ತಾ ಎಲಿಮೆಂಟರಿ ಶಾಲೆಯು ಬೇಕೆಂದು ಕೇಳುವುದರಲ್ಲಿ ಯಾವ ತಪ್ಪೂ ಇರಲಾರದು. ಸಾರ್ವಜನಿಕರು, 1,000ರೂಪಾಯಿ ಒದಗಿಸಿ ಕೊಟ್ಟರೆ, ಜಿಲ್ಲಾ ಬೋರ್ಡಿನವರು ಉಳಿದ ಹಣದಿಂದ ಉತ್ತಮ ಕಟ್ಟೋಣ ಕಟ್ಟಿಸುವಂತೆ ನಾನು ಪ್ರಯತ್ನಿಸುತ್ತೇನೆ" ಎಂದರು. 'ಭಕ್ತ ವಿಜಯ' ಎಂಬ ನಾಟಕ, ವಿವಿಧ ವಿನೋದಗಳು, ಮತ್ತು ಧನ್ಯವಾದಗಳೊಡನೆ ಸಭಾಂತ್ಯವಾಯಿತು.

ಧನ್ಯವಾದಗಳು

ದಿವಂಗತ ಗಂಗಯ ಶೆಟ್ಟಿಗಾರರ ಹೆಸರು ಚಿರಸ್ಮರಣೀಯವಾಗಿರುವಂತೆ, ಸ್ಥಾಪಿತ ಗಂಗಯ ಸ್ಮಾರಕ "ಫಂಡಿಗೆ ಧನ ಸಹಾಯವಿತ್ತ ಎಲ್ಲ ಮಹನೀಯರಿಗೂ, ಧನ್ಯವಾದಗಳೊಂದಿಗೆ ಅವರ ಹೆಸರು ಮತ್ತು ಸಹಾಯ ಮಾಡಿದ ವರದಿಯು ಸದ್ಯದಲ್ಲೇ ಪ್ರಕಟವಾಗುವುದೆಂದು ಶ್ರೀ. ಎಚ್. ಲಕ್ಷ್ಮೀಶ ಶೈ ಸುವರ್ಣರು ಬೊಂಬಾಯಿ ಇವರು ತಿಳಿಸುತ್ತಾರೆ.

WANTED

Wanted a Sec grade and one Higher Elementary grade trained teachers for the Kannur Aided Elementary School Post Kannur Applications with the minimum pay expected must reach the undersigned before 31st May, 1942.

Sd. H. Santha Alva,
Manager

KANNUR
Dated 5—5—1942

FURTHER REDUCTIONS IN LENDING RATES.

The busy trade season is coming to a close Lending rates are naturally tending to be reduced Even at the begining of the season we had lowered our rates on loans and advances as our contribution to better business A further reduction in accordance with seasonal conditions will be made early if the present conditions continue.

CANARA BANK LIMITED.

Estd. 1906

ಉತ್ಪತ್ತಿಯ ಯುದ್ಧದಲ್ಲಿ ಪರಾಜಯ ಹೊಂದುತ್ತಿದೆ ಜರ್ಮನಿ

●

(೪ನೇ ಪುಟದಿಂದ ಮುಂದರಿದುದು)

ಪ್ರಚಂಡ ಧಾಳಿಯ ಸಿದ್ಧತೆ ಮಾಡುವಾಗಲೆ ಪಶ್ಚಿಮದಲ್ಲಿ ಇನ್ನೊಂದು ರಣರಂಗವನ್ನೆದುರಿಸುವ ಗಂಡಾಂತರವುಂಟಾಗಿ ಅದಕ್ಕವರು ಭರದಿಂದ ಸಿದ್ಧತೆ ಮಾಡಬೇಕಾಗಿ ಬಂದಿದೆ. ಇಷ್ಟರಲ್ಲೇ ಸುಮಾರು ಒಂದು ಮಿಲ್ಯ ಜರ್ಮನ್ ಸೇನೆಯು ಪೂರ್ವದಿಂದ ಪಶ್ಚಿಮಕ್ಕೆ ಅತ್ಯವಸರದಿಂದ ಕಳುಹಿಸಲ್ಪಟ್ಟಿರುವುದೆಂದು ತಿಳಿದು ಬಂದಿದೆ. ಪಶ್ಚಿಮದ ವಿಶಾಲ ಸಮುದ್ರ ಕರಾವಳಿಯಲ್ಲಿ ಕೋಟೆ ಕೊತ್ತಳ ಕಟ್ಟುವ ದಕ್ಕೆ ಸಾವಿರಾರು ಮಂದಿ ಕೆಲಸಗಾರರನ್ನು ಕಳುಹಿಸಬೇಕಾಗಿದೆ. ಬ್ರಿಟಿಷ್ ವಿಮಾನಗಳ ಎಡಬಿಡದ ಪ್ರಬಲ ಧಾಳಿಗಳು ನಾಝಿಗಳ ತಲೆಶೂಲೆಯಾಗಿ ಪರಿಣಮಿಸಿವೆ. ಹಲವು ಪ್ರಾಮುಖ್ಯ ಕೈಗಾರಿಕಾ ಪಟ್ಟಣಗಳು ಈ ವಿಮಾನ ಧಾಳಿಯಿಂದ ಭೀಷಣ ಹಾವಳಿಗೊಳಗಾಗಿವೆ.

ಪ್ರಾಮುಖ್ಯ ವಸ್ತುಗಳ ಅಭಾವ

ಪೆಟ್ರೋಲು, ರಬ್ಬರು, ಹತ್ತಿ, ಉಣ್ಣೆ, ತರಕಾರಿ, ಚರ್ಬಿ, ತಾಮ್ರ, ನಿಕ್ಕಲ್, ಟಂಗ್‌ಸ್ಟನ್ ಮತ್ತು ಕ್ರೋಮ್ಯಾಟ್‌ಗಳ ಅಭಾವದಿಂದ ಜರ್ಮನಿಯು ತೊಂದರೆಗೊಳಗಾಗಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಜೆಕೊಸ್ಲೋವೇಕಿಯ ಪೋಲೆಂಡ್ ಮತ್ತು ಫ್ರಾನ್ಸುಗಳಂತೆ ರಷ್ಯದಲ್ಲಿ ನಾಝಿಗಳಿಗೆ ದಬಾಯಿಸಲೇನೂ ದೊರೆತಿರುವುದಿಲ್ಲ. ಮೆಶೀನ್‌ಗಳಿಗೆ ಬೇಕಾದ ಎಣ್ಣೆ ಮತ್ತು ಇಲೆಕ್ಟ್ರಿಕ್ ಶಕ್ತಿಯ ಕೊರತೆಯು ಜರ್ಮನಿಗೆ ಅತಿ ದೊಡ್ಡ ತೊಡಕಾಗುವ ಸಂಭವ ತೋರುತ್ತದೆ. ಪ್ರಕೃತ ಜರ್ಮನಿಯ ಎಣ್ಣೆ ಉತ್ಪತ್ತಿಯು ಅವರ ಉಪಯೋಗಕ್ಕೆ ಸಾಕಾಗುವಷ್ಟು ಮಾತ್ರವಿದೆ. ಫ್ರಾನ್ಸಿನ ಪತನವಾದಾಗ ಆ ದೇಶದಿಂದ ಜರ್ಮನಿಯು 240,000 ಲೋರಿ ಮತ್ತು 2500 ರೈಲ್ವೇ ಇಂಜನುಗಳನ್ನೊಯ್ದಿರುವುದು. ಅನಂತರ ಇನ್ನೂ ಹೆಚ್ಚು ಒಯ್ಯಲ್ಪಟ್ಟಿರುತ್ತದೆ. ಇವುಗಳನ್ನೂ, ಪ್ರಚಂಡ ಯುದ್ಧಯಂತ್ರವನ್ನೂ ನಡಿಸಲು ಎಣ್ಣೆಯು ಅತ್ಯಾವಶ್ಯಕ. ರಷ್ಯದ ಚಳಿಗಾಲದ ಯುದ್ಧದಲ್ಲಿ ಸೇನೆಗೆ ಆಹಾರ ಸಾಮಾಗ್ರಿ ಮತ್ತು ಯುದ್ಧೋಪಕರಣ ಸರಬರಾಯಿಯು ಜರ್ಮನಿಗೆ ಎಷ್ಟು ಕಷ್ಟವಾಗಿದ್ದಿತೆಂಬುದನ್ನು ಹಿಟ್ಲರರು ತನ್ನ ಭಾಷಣದಲ್ಲೇ ವ್ಯಕ್ತಪಡಿಸಿರುವರು. ಅದಕ್ಕಿಂತಲೂ ಹೆಚ್ಚಿನ ಕಷ್ಟವನ್ನು ಮುಂದೆ ಜರ್ಮನಿಯು ಎದುರಿಸಬೇಕಾಗಿದೆ. ಸಾಧ್ಯವಾದಷ್ಟು ಹೆಚ್ಚು ಮನುಷ್ಯ ಮತ್ತು ಯಂತ್ರಶಕ್ತಿಯನ್ನು ಸಂಗ್ರಹಿಸಿ ಯುದ್ಧವನ್ನು ಈ ವರ್ಷಾಂತ್ಯದೊಳಗೆ ಕೊನೆಗೊಳಿಸಬೇಕೆಂದು ಹಿಟ್ಲರರು ಪ್ರಯತ್ನಿಸುತ್ತಿದ್ದಾರೆ. ಆದರೆ ಅನಿರೀಕ್ಷಿತ ಸಾಧ್ಯವಾಗಲಾರದು. ಭರದಿಂದ ಬೆಳೆಯುತ್ತಿರುವ ರಷ್ಯದ ಸೇನಾ ಮತ್ತು ಕೈಗಾರಿಕಾಶಕ್ತಿಯನ್ನು ಮುರಿಯುವುದೇನೂ ಸಾಮಾನ್ಯ ಕೆಲಸವಲ್ಲ.

ಕೈಗಾರಿಕೋದ್ಯಮ ಮತ್ತು ಕಚ್ಚಾ ಮಾಲುಗಳ ಅನುಕೂಲತೆಯಲ್ಲಿ ಇಡೀ ಲೋಕದಲ್ಲೇ ಪ್ರಥಮವಾಗಿರುವ ಅಮೆರಿಕದ ಸಹಾಯದಿಂದ ಇಂಗ್ಲೆಂಡಿಗೆ ಯುದ್ಧೋಪಕರಣ ಸಿದ್ಧತೆಯಲ್ಲಿ ಜರ್ಮನಿಯನ್ನು ಹಿಂದೆ ಹಾಕುತ್ತಿರುವುದು. ದಿನೇ ದಿನೇ ಮಿತ್ರರಾಷ್ಟ್ರಗಳ ಯುದ್ಧಶಕ್ತಿಯು ತೀವ್ರ ಗತಿಯಿಂದ ಬೆಳೆಯುತ್ತಿರುವುದು. ವಿಮಾನದಾಳಿಯ ಬೆದರಿಕೆಯೇ ಇಲ್ಲದ ಅಮೆರಿಕವು ಒಂದೇಸಮನೆ ಯುದ್ಧೋಪಕರಣ ತಯಾರಿಸುವುದರಲ್ಲಿ ನಿರತವಾಗಿ ಮಿತ್ರರಾಷ್ಟ್ರಗಳ ಆಯುಧ ಶಾಲೆಯಂತಾಗಿರುವುದು. ಇಂಗ್ಲೆಂಡಿನ ಮೇಲೂ ಈಗ ನಾಝಿ ವಿಮಾನ ಧಾಳಿಯ ಬಹಳ ಕಡಿಮೆಯಾಗಿರುವುದರಿಂದ ಇತ್ತಲಾಗಿ ಅದರ ಕೈಗಾರಿಕೆಗಳೂ ಹೆಚ್ಚಿನ ತೊಂದರೆಯಿಲ್ಲದೆ ರಾತ್ರಿ ಹಗಲು ಕೆಲಸಮಾಡುತ್ತಿವೆ. ಎಂದ ಮೇಲೆ ಹಿಟ್ಲರರ ಹಿಂದಿನ 'ಬ್ಲಿಟ್ಸ್' ಕ್ರಮಗಳು ನಡೆಯುವಂತಿಲ್ಲ. ಯುದ್ಧವು ದೀರ್ಘಕಾಲ ನಡೆಯುವಂತಾದರೆ ಜರ್ಮನಿಯ ಸೋಲು ನಿಶ್ಚಯ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆ ಕನ್ಯೆಗಳು ಮೋಹಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಲಾಸಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮೋಹಿಸುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಸ್ತ್ರೀಯರು, ಪತ್ತಿ ಮತ್ತು ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜನಿವ ಟ್ರೇಡಿಂಗ್ ಕಂಪೆನಿ

260 ಬೈನಾಬಜಾರ್ ರೋಡ್, ಮದರಾಸ್

Degrees Books Medicines

Free H L M S M B H, M, D (I.. Free Homeo Ayur Unani-Naturo degree by post also—Practitioners also get soon Homeo Materiamedica Rs 5 Homeo Practice book Rs 4 Insanity Cure Pills Rs. 10 Enclose 2 annas stamps—

Principal Indian Homeopath Institute & Society (Govt Regd)

P.O. Mahuva, (Kathiawar Dt, India)

Sidha-Kalpa Kavach (Regd)

No 3 Rs 2 No 2 Rs 5 No 1 Rs ' Special Rs 10, Extra Special Rs 17 for love marriage health, wealth Ask any six questions with M. O Re 1/4 and get correct answers by return post Life reas Rs. pble No V. P. P. Send M O Fred

P. O.ts, Prof. Dr N H Chhatbar

2 agam Mahuva (Kathiawar India)

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ

ಮೆನೇಜರ್

ಸ್ವೀಕಾರ ವಿಮರ್ಶೆ.

ಸ್ಕೌಟರ ಚಿಕ್ಕ ಕೈಪಿಡಿ-(Scout's Little Manual) ಇದು ಮಂಗಳೂರು ಮಿಲಾಗ್ರಿಸ್ ಸೆಕೆಂಡರಿ ಸ್ಕೂಲಿನ ಕಬ್ ಮಾಸ್ಟರ್ ಶ್ರೀ ಎಚ್ ವಿ ನಾಯಕ್ ಮತ್ತು ಸ್ಕೌಟರ್ ಶ್ರೀ ಎಂ ಮಾಯನ್ ಇವರಿಂದ ಇಂಗ್ಲಿಷಿನಲ್ಲಿ ಬರೆಯಲ್ಪಟ್ಟು ಶ್ರೀ ಎಚ್ ಸಿ ನಾಯಕ್ ಮತ್ತು ಶ್ರೀಮತಿ ಪಾರ್ವತಿ ಬಾಯಿ ವಿದ್ವಾನ್ ಇವರಿಂದ ಕನ್ನಡಿಸಲ್ಪಟ್ಟು ಪ್ರಕಟವಾಗಿದೆ. ಇಂಗ್ಲಿಷ್ ಮೂಲವೂ ಜತೆಗೆ ಕೂಡ ಛಾಪಿಸಿದೆ. ಸ್ಕೌಟು ಸಂಸ್ಥೆಯ ಸ್ಥಾಪಕರಾದ ಲಾರ್ಡ್ ರೋಬರ್ಟ್ ಸ್ಟೀವನ್ ಸನ್ ಸ್ಮಿತ್ ಬೇಡನ್ ಪಾವೆಲ್ ಜೀವನ ಚರಿತ್ರೆಯು ಅವರ ಅಂತ್ಯಕಾಲದ ಸಂದೇಶವು ಸೇರಿಸಲ್ಪಟ್ಟಿದೆ. ಈ ಪುಸ್ತಕವು ಸ್ಕೌಟುಗಳಿಗೂ ಸ್ಕೌಟು ಮಾಸ್ಟರರಿಗೂ ಅತ್ಯಂತ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಶಾಂತಿಯ ಪ್ರವಾದಿ ಅಥವಾ ಶ್ರೀ ನಾರಾಯಣ ಗುರುದೇವ— ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಎಂಬ ಪರಮ ತತ್ವವನ್ನು ಸಾರಿದ ಶ್ರೀ ಗುರು ನಾರಾಯಣ ದೇವರ ಜೀವನ ಚರಿತ್ರೆಯಿದು. ಸ್ವಾಮಿ ಧರ್ಮತೀರ್ಥರ್ ಬಿ. ಎ. ಎಲ್ ಎಲ್ ಬಿ ಯವರು ಆಂಗ್ಲ ಭಾಷೆಯಲ್ಲಿ ಬರೆದ 'Prophet of peace' ಎಂಬ ಪುಸ್ತಕದ ಕನ್ನಡ ಅನುವಾದವಿದು. ಅನುವಾದಕರು ಶ್ರೀ ಎ. ಪಿ ಆಚಾರ್ಯರು. ಪ್ರಕಾಶಕರು, ಮುಂಬಯಿಯ ಬಿಲ್ಲವರ ಎಸೋಸಿಯೇಶನಿನವರು. ಬೊಂಬೇ ಕ್ರಾನಿಕಲ್ ಪತ್ರಿಕೆಯ ಸಹಾಯಕ ಸಂಪಾದಕರಾದ ಶ್ರೀ ಆರ್ ಕೆ ಪ್ರಭುಗಳು ಇದಕ್ಕೆ ಮುನ್ನುಡಿ ಬರೆದಿದ್ದಾರೆ. 120 ಪುಟಗಳ ಸಚಿತ್ರವಾದ ಈ ಪುಸ್ತಕದ ಬೆಲೆ ಬರೇ ರೂ. 0-8-0 ಮಾತ್ರ. ಪ್ರತಿಯೊಬ್ಬ ಹಿಂದು ಮುಖ್ಯವಾಗಿ ಬಿಲ್ಲವ ಸಮಾಜದ ಪ್ರತಿಯೊಬ್ಬನೂ ಈ ಪುಸ್ತಕವನ್ನು ಓದಿ ಅವರ ತತ್ವವನ್ನರಿತು ಪ್ರಯೋಜನ ಪಡೆಯಬೇಕೆಂದು ಹಾರೈಸುತ್ತೇವೆ. ಕಡಿಮೆ ಬೆಲೆಯ ಈ ಪುಸ್ತಕವನ್ನು ಒದಗಿಸಿಕೊಟ್ಟ ಬಿಲ್ಲವರ ಎಸೋಸಿಯೇಶನಿನ ಕಾರ್ಯವು ಸ್ತುತ್ಯವಾಗಿದೆ.

ಶ್ರೀ ಮಾನಸ ಸ್ಮೃತಿಯು-ಮೈಸೂರಿನ ಲೇಖಕರು ನುಡ್ಯೆಜೀ ವೆಂಕಟರಾಮಾಚಾರ್ಯರು (ಶ್ರೀ ವ್ಯಾಸ ತತ್ವಜ್ಞ ತೀರ್ಥ) ಪ್ರಕಾಶಕರು ಶ್ರೀ ಆರ್ ಎನ್ ಶೇಷಗಿರಿರಾಯರು. ಪ್ರಕಾಶಕರು ಶ್ರೀ ಹೊಕ್ಕಾನಪಲ್ ಜಹಗೀರದಾರ್ ಸಿ ಕೃಷ್ಣರಾಯರು. ಅದರಾಸಿ ಬೆಲೆ 0-1-0 ಶ್ರೀ ವ್ಯಾಸ ತತ್ವಜ್ಞ ತೀರ್ಥರು ಈ ಚಿಕ್ಕ ಪುಸ್ತಕವನ್ನು ತಮ್ಮ ಪೂರ್ವಾಶ್ರಮದಲ್ಲಿಯೇ ಬರೆದರೆಂಬುದು. ಅವರ ಮೂಲಗ್ರಂಥದಿಂದ ತಿಳಿಯುತ್ತದೆ. ಇದರಲ್ಲಿ ಮಾನಸ ಸ್ನಾನ ಆಸನ, ಮರಣದ ಕಾಲವನ್ನು ತಿಳಿಯುವ ಸುಲಭೋಪಾಯ, ಸ್ತ್ರೀಸಂಗ, ಗಾಯತ್ರಿ ವಿಷಯ, ಮಾನಸ ಪೂಜಾವಿಧಿ ಮೊದಲಾದವು ವರ್ಣಿಸಲ್ಪಟ್ಟಿವೆ. ಇದನ್ನೋದಿ ಉಪಾಸಿಸುವವರಿಗೆ ಶ್ರೀಶನ ಅವರೋಕ್ಷ ಜ್ಞಾನವಾಗುವುದೆಂದು ಮುನ್ನುಡಿಕಾರರು ಹೇಳಿದ್ದಾರೆ.

ವಿದ್ಯಾದಾಯಿನಿ ಸಭಾ, ಮುಂಬಯಿ—1920ರಲ್ಲಿ ಸ್ಥಾಪಿತವಾಗಿ ಔದ್ಯೋಗಿಕ ಮತ್ತು ವಿದ್ಯಾ ವಿಷಯಗಳಲ್ಲಿ ಬಿಲ್ಲವ ಸಮಾಜದ ಸೇವೆ ಮಾಡುತ್ತಿರುವ ಈ ಸಂಸ್ಥೆಯ 21ನೇ ವರ್ಷದ ವರದಿಯು ನಮ್ಮ ಬಳಿಗೆ ಬಂದಿದೆ. ಸದಸ್ಯರ ಸಂಖ್ಯೆಯು 125ರಿಂದ 250ಕ್ಕೆ ಏರಿರುವುದು ಶುಭ ಚಿಹ್ನೆ. ವರದಿ ವರ್ಷದಲ್ಲಿ ರೂ. 803-12-5 ಜಮಾ ಆಗಿದ್ದು, ವೆಚ್ಚ ಹೋಗಿ ರೂ. 208-4-4 ಉಳಿದಿದೆ. ಸಂಘವು ವರ್ಷಂಪ್ರತಿ ವಿದ್ಯಾರ್ಥಿ ವೇತನವನ್ನು ಕೊಡುತ್ತಿದೆ. ವಿದ್ಯಾದಾಯಿನಿ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕಾಲಯವನ್ನು ನಡೆಸುತ್ತಿದೆ. ಸದಸ್ಯರ ಸಹಾಯಾರ್ಥ ಮ್ಯೂಚುವಲ್ ಬೆನಿಫಿಟ್ ಸೊಸೈಟಿಯ ವ್ಯವಸ್ಥೆಯೂ ಇದೆ. ಬೊಂಬಾಯಿಯಂಥ ದೂರದ ಪ್ರಾಂತದಲ್ಲಿದ್ದರೂ ದ. ಕನ್ನಡದ ಬಿಲ್ಲವರು ಇಂತಹ ಸಂಘವನ್ನು ಸ್ಥಾಪಿಸಿ, ಜಾತಿಯ ಸೇವಾ ನಿರತರಾಗಿರುವುದು ಸ್ತುತ್ಯವಾಗಿದೆ. ಇದಕ್ಕೆ ಬೊಂಬಾಯಿಯ ಪ್ರತಿಯೊಬ್ಬ ಬಿಲ್ಲವನೂ ಮೆಂಬರನಾಗುವುದು ಅಗತ್ಯವಿದೆ.

ಈಶ್ವರಾನಂದ ಮಹಿಳಾ ಸೇವಾಶ್ರಮ ಸೊಸೈಟಿ, ಮಂಗಳೂರು— ಇದರ 1941ನೇ ವರ್ಷದ ವರದಿ ನಮ್ಮೆಡೆಗೆ ಬಂದಿದೆ. ಇದು ಸ್ಥಾಪನೆಯಾಗಿ 13 ವರ್ಷಗಳಾದುವು. ಇದು ಒಂದು ಹೋಸ್ಟೆಲನ್ನೂ ಒಂದು ಅನಾಥಾಲಯವನ್ನೂ ನಡೆಸುತ್ತಿದೆ. ನಡುವೆ ಸೇರಿಸಲ್ಪಟ್ಟ 6 ನಿವಾಸಿಕರು ಕೂಡಿ ವರ್ಷಾಂತ್ಯದಲ್ಲಿ 35 ನಿವಾಸಿಕರು ಹೊಸ್ಟಲಿನಲ್ಲಿದ್ದರು. ವರ್ಷಾದಿಯಲ್ಲಿದ್ದ 10 ಮಂದಿ ನೋನ್‌ಸ್ಟೇಯಿಂಗ್ ಅನಾಥ ನಿವಾಸಿಕರಲ್ಲಿ 5 ಮಂದಿ ಹಿಂದೆಗೆಯಲ್ಪಟ್ಟು 8 ಮಂದಿ ಸೇರಿಸಲ್ಪಟ್ಟಿದ್ದಾರೆ. ಇವರಲ್ಲಿ 3 ಜನರು ಮಿಡ್‌ವೈಫರಿ ತರಬೇತಿಯನ್ನೂ ಇಬ್ಬರು ಉಪಾಧ್ಯಾಯಿನಿ ತರಬೇತಿಯನ್ನೂ ಹೊಂದುತ್ತಿದ್ದಾರೆ. ಉಳಿದವರು ಬೇರೆ ಬೇರೆ ಶಾಲೆಗೆ ಹೋಗುತ್ತಿದ್ದಾರೆ. ವರದಿ ವರ್ಷದಲ್ಲಿ ಒಂದು ನೀಡಲ್ ವರ್ಕ್ ಕ್ಲಾಸು ತೆರೆಯಲ್ಪಟ್ಟಿದೆ. ಜನತೆಯ ಸಹಕಾರ ಸಹಾಯಾದಿಗಳಿಂದಲೇ ನಡೆಯತಕ್ಕ ಈ ಸಂಸ್ಥೆಗೆ ಪ್ರತಿಯೊಬ್ಬರೂ ಕೈಲಾದ ಬೆಂಬಲವನ್ನು ಕೊಡಬೇಕಾಗಿ ಹಾರೈಸುತ್ತೇವೆ.

ಡಿಪ್ರೆಸ್ಡ್ ಕ್ಲಾಸ್ ಮಿಶ್ಯನ್, ಮಂಗಳೂರು—ಇದರ 1940-41ರ ವರದಿಯು ನಮ್ಮ ಹಸ್ತಗತವಾಗಿದೆ. 1897ರಲ್ಲಿ ದಿವಂಗತ ಶ್ರೀ ಈಶ್ವರಾನಂದ ಸನ್ಯಾಸಿಗಳಿಂದ (ಕೆ ರಂಗರಾವ್) ಸ್ಥಾಪನೆಯಾದ ಈ ಸಂಸ್ಥೆಗೆ 43 ವರ್ಷಗಳಾದುವು. ಇದೀಗ ಕಾಂಟೋನ್ಮೆಂಟ್ ಹಾಯರ್ ಎಲಿಮೆಂಟರಿ ಶಾಲೆ, ಅತ್ತಾವರ ಎಲಿಮೆಂಟರಿ ಶಾಲೆ, ನೇರಿಬೈಲು ಎಲಿಮೆಂಟರಿಶಾಲೆ, ಈಶ್ವರಾನಂದ ವಿದ್ಯಾಲಯ, ಪುತ್ತೂರು. ಕಾರ್ನಾಡ್ಸ್ ಬೋರ್ಡಿಂಗ್ಸ್ ಹೋಂ ಮತ್ತು ಅನಾಥಾಲಯ, ಕೊರಗ ಕೊಲೊನಿ, ಪುತ್ತೂರು. ಕೋರ್ಟುಹಿಲ್ ಕೋಪರೇಟಿವ್ ಸೊಸೈಟಿ ಮೊದಲಾದ ಹತ್ತು ಸಂಸ್ಥೆಗಳನ್ನು ನಡೆಸುತ್ತಿದೆ. ಈ ಮಿಶ್ಯನ್ ದಕ್ಷಿಣ ಭಾರತದಲ್ಲಿ ಹರಿಜನೋದ್ಧಾರಕ್ಕಾಗಿ ಪ್ರಥಮವಾಗಿ ಸ್ಥಾಪಿತವಾದುದು. 1922ರಿಂದ ಇದು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯಿಂದ ನಡೆಸಲ್ಪಡುತ್ತಿದೆ. ಆದರೆ ಇದನ್ನು ಇನ್ನಷ್ಟು ಊರ್ಜಿತಾವಸ್ಥೆಗೆ ತಂದು ಉತ್ತಮ ರೀತಿಯಲ್ಲಿ ನಡೆಸಲು ಇದಕ್ಕೆ ಹೆಚ್ಚಿನ ಧನಸಂಗ್ರಹವು ಅತ್ಯಾವಶ್ಯಕವಾಗಿದೆ. ಆದ್ದರಿಂದ ಸೊಸೈಟಿಯವರು ರೂ 5000ದ ಫಂಡನ್ನು ಶೇಖರಿಸಲು ವಿನಂತಿ ಹೊರಡಿಸಿದ್ದಾರೆ. ಪ್ರತಿಯೊಬ್ಬರೂ ಇದಕ್ಕೆ ಕೈಲಾದಷ್ಟು ಸಹಾಯಮಾಡುವರೆಂದು ನಿರೀಕ್ಷಿಸಲಾಗಿದೆ.

ವಾರದ ವಿಶೇಷ ವಾರ್ತೆ

ಜಾಪಾನರ ದೊಡ್ಡ ಅಪಜಯ

ಆಸ್ಟ್ರೇಲಿಯದ ಮೇಲೆ ಧಾಳಿ ಇಡಲು ಅದರ ಉತ್ತರಪೂರ್ವದಲ್ಲಿ ಸಂಗ್ರಹಿಸಲ್ಪಟ್ಟಿದ್ದ ದೊಡ್ಡ ಜಾಪಾನ ಪಡಗ ಪಡೆಗೂ ಅಮೇರಿಕಾದ ಮತ್ತು ಬ್ರಿಟಿಷ್ ನೌಕಾಪಡೆಗೂ ಇದೇ ಕಳೆದ ತಾ. ३ರಿಂದ ೪ರ ವರೆಗೆ ಭೀಷಣ ಜಲ ಮತ್ತು ಆಕಾಶ ಯುದ್ಧ ನಡೆದು ಜಾಪಾನರು ದೊಡ್ಡ ಅಪಜಯ ಪಡೆದಿರುವರೆಂದು ತಿಳಿದುಬರುತ್ತದೆ. ಈ ಯುದ್ಧದಲ್ಲಿ ಒಟ್ಟು 9 ಜಾಪಾನ ಡಿಸ್ಟ್ರೋಯರ್ ಹಡಗಗಳು ಮುಳುಗಿಸಲ್ಪಟ್ಟಿರುತ್ತವೆ. ಇದು ಹೊರತು ಒಂದು ವಿಮಾನ ವಾಹಕ ಹಡಗ, ಒಂದು ಹಗುರ ಕ್ರೂಸರ್ ಹಡಗ 4 ಗನ್‌ಬೋಟು ಮತ್ತು 2 ಸೇನಾವಾಹಕ ಹಡಗಗಳನ್ನು ಮುಳುಗಿಸಲ್ಪಟ್ಟಿರುತ್ತವೆ. ಒಂದು ವಿಮಾನವಾಹಕ ಹಡಗ, ಒಂದು ಭಾರ ಮತ್ತು ಇನ್ನೊಂದು ಹಗುರ ಕ್ರೂಸರ್ ಹಡಗ, ಒಂದು ಸಮುದ್ರಯಾನ ಸಹಾಯಕ ಹಡಗ 2 ಸೇನಾವಾಹಕ ಹಡಗಗಳು ಜಖಮ್ ಹೊಂದಿರುತ್ತವೆ. ಬ್ರಿಟಿಷ್ ಮತ್ತು ಅಮೇರಿಕಾದ ನೌಕಾಪಡೆಗೆ ಹೆಚ್ಚೇನೂ ನಷ್ಟವಾಗಿಲ್ಲೆಂದು ನಂಬಲಾಗಿದೆ. ಅಮೇರಿಕದ 33,000ಟನ್ ತೂಕದ ಅತಿ ದೊಡ್ಡ ವಿಮಾನವಾಹಕ ಹಡಗವು ಮುಳುಗಿಸಲ್ಪಟ್ಟಿರುವುದೆಂಬ ಜಾಪಾನರ ವಾರ್ತೆಯು ನಿಜವಲ್ಲವೆಂದು ತಿಳಿದು ಬಂದಿದೆ. ಜಾಪಾನ ನೌಕಾಪಡೆಯು ದೊಡ್ಡ ಅಪಜಯ ಪಡೆದು ಹಿಂದಕ್ಕೋಡಿರುವುದರಿಂದ ಇನ್ನು ಕೆಲಸಮಯ ಆಸ್ಟ್ರೇಲಿಯದ ಮೇಲೆ ಧಾಳಿಯ ಅಪಾಯವಿರುವುದಿಲ್ಲೆಂದು ನಿರೀಕ್ಷಿಸಲಾಗಿದೆ.

ಜರ್ಮನರು ವಿಷವಾಯು ಪ್ರಯೋಗಿಸಿರುವರು

ಜರ್ಮನರು ರಶ್ಯದ ಅತ್ಯಂತ ದಕ್ಷಿಣದ ಕ್ರೈಮಿಯದಲ್ಲಿ ದೊಡ್ಡ ಯುದ್ಧವನ್ನಾರಂಭಿಸಿರುವಂತಿದೆ. ಅಲ್ಲಿ ಅವರು ವಿಷವಾಯುವನ್ನುಪಯೋಗಿಸಿರುವರೆಂದು ಸೋವಿಯೆಟ್ ಸರಕಾರವು ಪ್ರಕಟಿಸಿರುತ್ತದೆ ಅದರಿಂದಾಗಿ ಸೋವಿಯೆಟ್ ಸೈನಿಕರ ಶ್ವಾಸಕೋಶಕ್ಕೆ ಹಾನಿಯುಂಟಾಗಿರುವುದೆಂದು ತಿಳಿದುಬಂದಿದೆ

ಮಂಚೂರಿಯದಲ್ಲಿ ಅವಸರದ ಸಿದ್ಧತೆ!

ಜಾಪಾನರು ಉತ್ತರ ಚೈನದಿಂದ ಮಂಚೂರಿಯಕ್ಕೆ ಅತ್ಯವಸರದಿಂದ ಸೇನೆಯನ್ನೊಯ್ದು ಸಂಗ್ರಹಿಸುತ್ತಿದ್ದಾರೆ. ಅವರು ಬರುವ ತಿಂಗಳಲ್ಲಿ ಸೈಬೀರಿಯದ ಮೇಲೇರಿ ಹೋಗಬಹುದೆಂದು ಚುಂಕಿಂಗ್‌ನಿಂದ ವಾರ್ತೆ ಬಂದಿರುತ್ತದೆ. ಸಾಲ್ಸ್‌ಬರ್ಗಿನಲ್ಲಿ ಹಿಟ್ಲರ್ ಮತ್ತು ಮುಸಲೋನಿಗಳೊಳಗೆ ನಡೆದ ಮಾತು ಕತೆಯಲ್ಲಿದು ನಿಶ್ಚಯಿಸಲ್ಪಟ್ಟಿರುವುದೆಂದು ನಂಬಲಾಗಿದೆ.

ಬರ್ಮದಲ್ಲಿ ಚೀನೀ ಸೈನಿಕರ ಸಾಹಸ

ಮಧ್ಯ ಬರ್ಮದಲ್ಲಿರುವ ಬ್ರಿಟಿಷ ಸೇನೆಯು ಚಿಂಡ್ವಿನ್ ನದಿಯ ಸಂಯುಕ್ತ ಸ್ಥಾನವಾದ ಕಲಿವಕ್ಕೆ ಹಿಂದೆ ಸರಿಯುತ್ತದೆ. ಜಾಪಾನರೂ ಈ ಸ್ಥಳವನ್ನಾಕ್ರಮಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಆದರೆ ಅದು ಸಾಧ್ಯವಾಗಿಲ್ಲೆಂದು ತಿಳಿದು ಬಂದಿದೆ ಚೀನೀ ಸೈನಿಕರು ಬರ್ಮದಲ್ಲಿ ಸಾಹಸದಿಂದ ಕಾದಾಡಿ, ಮಂಡಲೆ ಮತ್ತು ಲಾಶಿಯೋ ರೈಲ್ವೇ ರಸ್ತೆಯ ನಡುವಿನ ಮೇಮಿಯೋ ಎಂಬ ಪ್ರಾಮುಖ್ಯ ಸ್ಥಳವನ್ನು ಗೆದ್ದು ಲಾಶಿಯೋ ಪಟ್ಟಣದ ಕಡೆಗೆ ಮುಂದುವರಿಯುತ್ತಿರುವರೆಂದು ತಿಳಿದು ಬರುತ್ತದೆ. ಇದರಿಂದ ಲಾಶಿಯೋ ಪಟ್ಟಣದ ಜಾಪಾನ ಸೇನೆಯನ್ನು ಹಿಂದಿನಿಂದ ಆವರಿಸಿದಂತಾಗಿರುತ್ತದೆ.

ಮಧ್ಯ ಚೈನದಲ್ಲಿ ಪ್ರಬಲ ಹೋರಾಟ

10,000 ಜಾಪಾನ ಸೈನಿಕರು ಮಧ್ಯ ಚೈನದಲ್ಲಿ ಹೊಸ ಹೋರಾಟ ಆರಂಭಿಸಿರುವರು. ಹೇಂಕೋ ಪಟ್ಟಣದ ಪಶ್ಚಿಮ ಪಶ್ಚಿಮದ ಪೈನ್‌ಯಂಗ್ ಎಂಬಲ್ಲಿ ಪ್ರಬಲ ಹೋರಾಟ ನಡೆಯುತ್ತಿದೆ. ಚೀನೀಯರು ಜಾಪಾನರನ್ನು ಜಯಶೀಲವಾಗಿ ಪ್ರತಿಭಟಿಸಿರುವರು ಉತ್ತರ ಹೊನಾನಿನ ಯುದ್ಧದಲ್ಲಿ ಜಾಪಾನರು ವಿಷವಾಯು ಪ್ರಯೋಗ ಮಾಡಿರುವರೆಂದು ಚೀನೀ ಸರಕಾರವು ಪ್ರಕಟಿಸಿರುತ್ತದೆ

ರಶ್ಯದ ಯುದ್ಧದ ಪರಿಸ್ಥಿತಿ

ಹಿಟ್ಲರರು ಪೂರ್ವ ರಣಾಂಗದಲ್ಲಿ ಇನ್ನೂ ವಸಂತದ ಪ್ರಚಂಡ ಧಾಳಿಯನ್ನಾರಂಭಿಸಿರುವುದಿಲ್ಲ. ಕಳೆದ ಮಾರ್ಚ ಮತ್ತು ಎಪ್ರಿಲ್ ತಿಂಗಳುಗಳಲ್ಲಿ ಲೆನಿನ್‌ಗ್ರಾಡ್ ರಣರಂಗದಲ್ಲಿ ಕೊಲ್ಲಲ್ಪಟ್ಟಿರುವ ಮತ್ತು ಗಾಯಗೊಂಡಿರುವ ಜರ್ಮನರ ಸಂಖ್ಯೆ 60,000ವಾಗಿರುವುದೆಂದು ನಂಬಲಾಗಿದೆ ಇತ್ತಲಾಗಿ ಪೂರ್ವ ರಣರಂಗದಲ್ಲಿ ಹೆಚ್ಚಿನ ಹೋರಾಟವೇನೂ ನಡೆಯದೆ ಎರಡು ಕಡೆಯವರೂ ಪ್ರಚಂಡ ಯುದ್ಧಕ್ಕೆ ಭೀಕರದಿಂದ ತಯಾರು ಮಾಡುತ್ತಿರುವಂತಿದೆ. ಮುರ್ಮಾಂಕ್ಸಿನಲ್ಲಿ ಸೋವಿಯೆಟ್ ಮತ್ತು ನಾಝಿ ವಿಮಾನಗಳೊಳಗೆ ದೊಡ್ಡ ಹೋರಾಟ ನಡೆದು ರಶ್ಯನರು ಜಯಶೀಲರಾಗಿರುವರೆಂದು ತಿಳಿದು ಬಂದಿದೆ. ಮುರ್ಮಾಂಕ್ಸ್ ರಸ್ತೆಯನ್ನು ಕಡಿಯಬೇಕೆಂದು ಜರ್ಮನರು ಮತ್ತು ಫಿನ್ನರು ಕಳೆದ ೪ವಾರಗಳಿಂದ ನಡಿಸುತ್ತಿದ್ದ ಪ್ರಯತ್ನವು ನಿರರ್ಥಕವಾಗುತ್ತಿದೆ.

ಬ್ರಿಟನಿನ ಹೋರಾಟದ ಪ್ಲೇನು

ಜರ್ಮನ್ ವಿಮಾನಪಡೆಯನ್ನು ಮೊದಲಾಗಿ ನಾಶಪಡಿಸಿ ಆ ಮೇಲೆ ಯುರೋಪಿನ ಮೇಲೆ ಸೇನಾ ಧಾಳಿ ನಡಿಸುವುದೇ ಬ್ರಿಟನಿನ ಹೋರಾಟದ ಪ್ಲೇನೆಂದು ಬ್ರಿಟನ್ ವೈಮಾನಿಕ ಖಾತೆಯ ಮಂತ್ರಿ ಸರ್. ಆರ್ಚಿಬಾಲ್ಡ್ ಸಿಂಕ್ಲೇರರು, ಇದೇ ತಾ. 8ರಲ್ಲಿ ಕೊಟ್ಟೊಂದು ಭಾಷಣದಲ್ಲಿ ಹೇಳಿರುವರು ಭಯಂಕರ ಸಿಕೆಕಾಲವನ್ನು ಜರ್ಮನ್ ವಿಮಾನಪಡೆಯು ಎದುರಿಸಬೇಕಾಗುವುದು. ಅದರ ಶಕ್ತಿಯು ಈಗ ಕುಂದುತ್ತಿರುವುದು. ಒಂದಿಷ್ಟೂ ವಿಶ್ರಾಂತಿಯನ್ನೀಯದೆ ಎಡೆಬಿಡದ ಧಾಳಿಯಿಂದ ಅದನ್ನು ಬಗ್ಗುಬಡಿದು ವಿರೂಪಗೊಳಿಸಿ ಆ ಮೇಲೆ ಯುರೋಪಿನ ಮೇಲೆ ಸೇನಾ ಧಾಳಿ ನಡಿಸಬೇಕು. ಆದಕ್ಕೆಷ್ಟು ಸಮಯ ತಾಗುವುದೆಂದು ಹೇಳಬರುವುದಿಲ್ಲ. ಆದರೆ ಸೇನಾಧಾಳಿ ನಡಿಸಲ್ಪಡುವುದು ನಿಶ್ಚಯ. ಇಂದೀಗ ವೈಮಾನಿಕ ಧಾಳಿಯ ಶಕ್ತಿಯು ಜರ್ಮನಿಯಿಂದ ಸಂಯುಕ್ತ ರಾಷ್ಟ್ರಗಳ ವಶವಾಗುತ್ತಿದೆ. ಹಿಟ್ಲರರು ಇಂದೀಗ ಪ್ರಥಮವಾಗಿ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಬೇಕಾಗಿದೆಯೆಂದೇ ಸಿಂಕ್ಲೇರರ ಭಾಷಣದ ಸಾರಾಂಶ.

ಚಿತ್ತಗೋಂಗಿನ ಮೇಲೆ ಎರಡು ಸಲ ವಿಮಾನ ಧಾಳಿ.

ಇದೇ ತಾ. 8ನೇ ಅಪರಾಹ್ನ ಬಂಗಾಳ ಮತ್ತು ಬರ್ಮದ ಎಲ್ಲೆಯ ಸಮುದ್ರತೀರ ಪಟ್ಟಣವಾದ ಚಿತ್ತಗೋಂಗಿನ ಮೇಲೆ ಜಾಪಾನರು ಪ್ರಥಮ ಸಲ ವಿಮಾನ ಧಾಳಿ ನಡಿಸಿದರು. ಬೋಂಬೆಸೆದುದು ಮಾತ್ರವಲ್ಲದೆ ಮಿಶನ್ ತೋಪು ಮೂಲಕ ಗುಂಡುಹಾರಿಸಿರುವರೆಂದು ತಿಳಿದುಬರುತ್ತದೆ ತಾ. 9ನೇ ಬೆಳಗ್ಗೆ ಎರಡನೇ ಸಲ ವಿಮಾನ ಧಾಳಿ ನಡೆಯಿತು. ಹೆಚ್ಚಿನ ಹಾವಳಿಯಾಗಿಲ್ಲೆಂದು ಪ್ರಕಟಿಸಲಾಗಿದೆ. ಬರ್ಮದ ಅಕ್ಯಾಬಿನಿಂದ ಈ ಧಾಳಿಗಳು ನಡಿಸಲ್ಪಟ್ಟಿರುವವೆಂದು ನಂಬಲಾಗಿದೆ.

ರಶ್ಯಕ್ಕೆ ಬ್ರಿಟನಿನ ಸಹಾಯ

ಉತ್ತರ ಧ್ರುವ ಸಾಗರದ ಮೂಲಕ ಬ್ರಿಟನು ರಶ್ಯಕ್ಕೆ ಸಹಾಯ ಕಳುಹಿಸುತ್ತಿರುವುದಷ್ಟೆ. ಈ ಹಡಗಗಳ ಮೇಲೆ ಜರ್ಮನ್ ಯುದ್ಧ ಹಡಗಗಳೂ ಸಬ್‌ಮರೀನ್ ಮತ್ತು ವಿಮಾನಗಳೂ ಹಲವು ದಿನಗಳ ವರೆಗೆ ಧಾಳಿ ನಡಿಸಿ ಎಡಿನ್‌ಬರ್ಗ್ ಎಂಬ ಒಂದು ರಕ್ಷಕ ಯುದ್ಧ ಹಡಗ ಮತ್ತು ಸಾಮಾನೊಯ್ಯುವ 3 ಹಡಗಗಳು ಮುಳುಗಿಸಲ್ಪಟ್ಟಿರುತ್ತವೆ. ಜರ್ಮನರ ಡಿಸ್ಟ್ರೋಯರ್ ಹಡಗವು ಮುಳುಗಿಹೋಗಿದೆ. ನೇಕಡ ೯೦ರಷ್ಟರ ಸಾಮಾನೊಯ್ಯುವ ಹಡಗಗಳು ಸುರಕ್ಷಿತವಾಗಿ ರಶ್ಯಕ್ಕೆ ಮುಟ್ಟಿರುತ್ತವೆ

ಚೈನವನ್ನು ಗೆಲ್ಲುವ ಸರ್ವತೋಮುಖ ಯತ್ನ.

ಜಾಪಾನು ಹಿಂದೂದೇಶದ ಮೇಲೆ ಪ್ರಕೃತ ಧಾಳಿ ನಡಿಸುವ ಸಂಭವವಿಲ್ಲ. ಚೈನದ ಮೇಲೆ ಸರ್ವತೋಮುಖವಾದ ಧಾಳಿ ನಡಿಸಿ ಅದನ್ನು ಗೆಲ್ಲುವ ಪ್ರಯತ್ನವಲ್ಲಿ ಇನ್ನು ಮುಂದೆ ನಿರತವಾಗಬಹುದೆಂದು ಚುಂಕಿಂಗಿನಲ್ಲಿ ನಂಬಲಾಗಿದೆ. ಅವರು ಈ ವರೆಗೆ ಗೆದ್ದ ಪ್ರದೇಶಗಳನ್ನು ಗಟ್ಟಿಮಾಡುವ ಯತ್ನದಲ್ಲಿ ನಿರತರಾಗುವರೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಚೀನೀಯರೇನೂ ನಿರಾಶಾವಾದಿಗಳಾಗಿರುವುದಿಲ್ಲ. ಬರುವ ಸೆಪ್ಟಂಬರ ತಿಂಗಳೊಳಗೆ ಶಾಂತಸಾಗರದ ಯುದ್ಧದ ಪರಿಸ್ಥಿತಿಯು ಬದಲಾವಣೆ ಹೊಂದಿ ಜಾಪಾನರ ಶಕ್ತಿ ಕುಂದುವ ಸಂಭವವಿರುವುದು. ಆಗ ಸಂಯುಕ್ತರಾಷ್ಟ್ರಗಳು ಜಾಪಾನಿನ ಮೇಲೇರಿ ಹೋಗಿ ಅದನ್ನು ಬಗ್ಗುಬಡಿಯಬಹುದೆಂದು ಚೀನಿಯರ ವಿಶ್ವಾಸವಿರುವುದು.

ನೋಟೀಸು.

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನೆಂದ್ರೆ-

ನನ್ನ ಗಂಡನಾಗಿದ್ದ ಕಳ್ತೂರು ಯಿಬ್ರಾಹಿಂ ಬ್ಯಾರಿಗಳು ನಾನು ಅವರ ಮನೆಯಲ್ಲಿ ವಾಸ್ತವಿಸಿಕೊಂಡಿರುತ್ತಿದ್ದ ಸಮಯದಲ್ಲಿ ತಲಾಕ್ ಮುಖಾಂತ್ರ ನನ್ನನ್ನು ತ್ಯಜಿಸಿದ್ದಾರಾಗಿ ನಾನು ತಿಳಿಯುತ್ತೇನೆ ಸದ್ರೀ ಯಿಬ್ರಾಹಿಂ ಬ್ಯಾರಿಗಳಿಂದ ನನ್ನ ಗತ ಅಶನಾರ್ಥದ ಬಾಬ್ತು ರೂಪಾಯಿ 135/- ನನ್ನ ಮಹರ್ ಐವೇಜಿನ ಬಾಬ್ತು ರೂ. 44 - ಮತ್ತು ನನಗೆ ಮದುವೆಯಾಗಿ ಬರುವಾಗ ನನ್ನ ತಂದೆಯವರು ಹಾಕಿ ಕಳುಹಿಸಿದ ಚಿನ್ನದ ಕಾಪ್ಪು ಜೊತೆ 1. ಕಿವಿಯ ಅಲಿಕತುಗಳು 2 ಬೆಳ್ಳಿಯ ಉಡುದಾರ 1. ಕೂಡಾ ಅವುಗಳನ್ನು ಸದ್ರೀ ಯಿಬ್ರಾಹಿಂ ಬ್ಯಾರಿಗಳು ತನ್ನ ಗರ್ಜಿನ ಒಗ್ಗೆ ಈ ಮುಂಚೆಯೇ ದುರುಪಯೋಗ ಪಡಿಸಿದ್ದರಿಂದ ಸದ್ರಿ ಚಿನ್ನಾಭರಣಗಳ ಪವನು 2¼ರ ಕ್ರಯ ರೂ 75/- ಬೆಳ್ಳಿಯ ಉಡುದಾರದ ನೇರು ೨ರ ಬಾಬ್ತು ಕ್ರಯ ರೂಪಾಯಿ 15, ಕೂಡಾ ರೂಪಾಯಿ 269/ ನನಗೆ ಸದ್ರೀ ಯಿಬ್ರಾಹಿಂ ಬ್ಯಾರಿಗಳಿಂದ ಬರತಕ್ಕದ್ದು ಇರುತ್ತದೆ. ಸದ್ರೀ ನನಗೆ ಬರತಕ್ಕ ಹಣಕ್ಕೆ ಮೋಸಕೊಡಬೇಕೆಂಬ ದುರುದ್ದೇಶದಿಂದ ಸದ್ರೀ ಯಿಬ್ರಾಹಿಂ ಬ್ಯಾರಿಗಳು ತನ್ನ ವಶ್ಕಿನ ಬಾಬ್ತು ನಂಬ್ರ 108ನೇ ಕಳ್ತೂರು ಗ್ರಾಮದ ಪಟ್ಟಾ ನಂಬ್ರ 45ಕ್ಕೆ ಸೇರಿದ ಸ. ನಂಬ್ರ 32 2 113 ಪುಂಜ ಸೆಂಟ್ಸ್ 110ರ ಆಸ್ತಿ, ಯದ್ರಲ್ಲಿರುವ ಕಟ್ಟೋಣ ಮರಮಟ್ಟು ವಗೈರೆಯನ್ನು ಪರಾಧೀನ ಮಾಡುವ ಯಾಥಿಯಲ್ಲಿದ್ದಾರಾಗಿ ನಾನು ತಿಳಿಯುತ್ತೇನೆ. ನಾನು ಸರ್ವಜನರಿಗೂ ತಿಳಿಸುವದೇನೆಂದ್ರೆ ನನಗೆ ಬರತಕ್ಕ ಸದ್ರೀ ಐವೇಜನ್ನು ವಸೂಲು ಪಡಿಸದೆ ಸದ್ರೀ ಆಸ್ತಿಯನ್ನು ಯಾರಾದ್ರೂ ಪರಾಧೀನ ಪಡ್ಸಿಕೊಂಡ್ರೆ ಅಂಥಾ ಪರಾಧೀನವು ನನ್ನ ಹಕ್ಕಿಗೆ ಬಾಧಿಸತಕ್ಕದಲ್ಲ, ವ ನನ್ನ ಹಕ್ಕಿಗೆ ವಿರೋಧವಾಗಿ ಸಿಂಧವಾಗತಕ್ಕದ್ದೂ ಅಲ್ಲ, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತೇನೆ.

●॥ ಈ ಎಡ ಅಂಗುಷ್ಠ ಚಿಹ್ನೆ ಸದ್ರಿ ಆಮಿನಾಬಿ ರುಜು.

ಕಳ್ತೂರು, 11-5-42

FIXED DEPOSITS

are now accepted at all our offices,
at attractive rates of interest.
For further particulars please apply
to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು ಹೆಚ್ಚಿನ ವಿವರಗಳನ್ನು ನಮ್ಮ ಯಾವನೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

DIAMONDS! DIAMONDS!

K. R. K. SHET.

Opposite Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (First quality, selected) ಎಮ್ಸ್ಟ್ರ ಡಮ್ನಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೨ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒನ್ನೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಋತುಸ್ನಾನದಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—೦—೦ ಪೋಸ್ಟ ಚಾರ್ಜು ೮ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಬೆಟಗೇರಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಜನಗಲಕೋಟ ಧಾರವಾಡ, ವಿಜಾಪೂರ—ದಾವಪ್ಪ ಸಿದ್ಧಲಿಂಗಪ್ಪ ಧಾರವಾಡದ್ದ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಡಿಕರವಾಡ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ.—ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಸ್ವದೇಶಿ ಔಷಧ ಭಂಡಾರ ಕುಂಜಾಲು,

—ಇವರ—

ಖಾತ್ರಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ಶಕ್ತಿವರ್ಧಕ)	0	12	0
ಆಮಲಕೀ ತೈಲ (ಸುಖನಿದ್ರೆಗೆ) ಸಣ್ಣದು.	0	6	0
,, ,, ,, ದೊಡ್ಡದು.	0	11	0
ಬ್ರಾಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0	6	0
ರಿಂಗೋಬಾಮ್ (ರಿಂಗ್‌ವರ್ಮಿಗೆ)	0	1	0
ಶಂಕರ ವಟಿ (ಸರ್ವ ಜ್ವರಗಳಿಗೆ)	0	8	0
ಸಿಯೂಶಾಂಜನ (ಸಕಲ ನೋವುಗಳಿಗೆ)	0	4	0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) 25ಕ್ಕೆ	0	7	0
,, ,, ,, ,, 6ಕ್ಕೆ	0	2	0

ಎಲ್ಲಾ ತರದ ಔಷಧಗಳೂ ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

Swadeshi Oushadhi Bhandar

KUNJAL P. O. S. I.

ಉಡುಪಿಯ ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

The Pangal Nayak Bank Limited.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— **ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ.

ಶಿಕ್ತ ಮೂಲಧನ	ರೂ.	1,82,100-0-0
ಕ್ಷೇಮ ನಿಧಿಗಳು	ರೂ.	17,18,98-2-11

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್

ಮತ್ತು ಶಿರ್ವ, ದಕ್ಷಿಣ ಕನ್ನಡ ಜಿಲ್ಲಾ.

ಮಾರಾಟಕ್ಕೆ ಯುಕ್ತ ವಾದ ಬೆಲೆಗಳ, ಚಿನ್ನಾಭರಣಗಳ, ಸಮಾಧಾನಕರವಾದ ಇತರ ಭದ್ರತೆಗಳ ಮೇಲೂ ಡಿಮಾಂಡ್ ನೋಟುಗಳ, ಬೀಲು ಹುಂಡಿಗಳ ಮೇಲೂ ಚಿಕ್ಕ ವ ದೊಡ್ಡ ಸಾಲಗಳು ವ ಓವರ್ ಡ್ರಾಫ್ಟು ಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಿಂದಲೂ ಕೊಡಲ್ಪಡುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೆನೇಜರ ಅಥವಾ ಏಜೆಂಟರ ದ್ವಾರಾ ಸವಿಸ್ತಾರ ತಿಳಿದುಕೊಳ್ಳಬಹುದು.

UDIPI, 16th April.

ಈ ವಾರದ ಭವಿಷ್ಯ.

(ಏಪ್ರೀಲ್ ೧೪ರಿಂದ ೨೦ರ ವರೆಗೆ)

ತುಲಾ—ನಿಮ್ಮ ಜೀವನದಲ್ಲಿ ಬದಲಾವಣೆಯಾಗಿದ್ದರೂ ಹೆಚ್ಚಿನ ಸುಧಾರಣೆಯೇನೂ ಕಂಡುಬರಲಾರದು ನಿಮ್ಮ ವಿದ್ಯಾಬುದ್ಧಿಯ ಬಲದಿಂದ ದಿನಯಾಪನೆಗೆ ತಕ್ಕಷ್ಟು ಧನವನ್ನು ದುಡಿಯುವಿರಿ. ಆದರೆ ಅನಾರೋಗ್ಯ ದೆಸೆಯಿಂದ ನಿಮ್ಮ ಕಾರ್ಯಕಲಾಪಗಳು ಸಾಕಷ್ಟು ಮುಂದುವರಿಯಲಾರವು. ಶತ್ರು ಜನರ ಉಪಟಳದಿಂದ ಮುಕ್ತರಾಗಲಾರಿರಿ. ಕೈಗಾರಿಕಾದಿ ಕುಶಲವಿದ್ಯೋಪಜೀವಿಗಳಿಗೂ ಕಾಯಕಷ್ಟ ಜೀವಿಗಳಿಗೂ ಈ ವಾರವು ಸುಖದಾಯಿಯಾಗಲಾರದು. ತಾ. 15ರಿಂದ 19ರ ವರೆಗಿನ ದಿನಗಳು ರಾಜಭಯ,ಆಕಸ್ಮಿಕ ಅಪಘಾತ ಮೊದಲಾದ ಅನಿಷ್ಟಗಳಿಗೆ ನಿಮ್ಮನ್ನು ಗುರಿಮಾಡೀತು.

ವೃಶ್ಚಿಕ—ಶುಕ್ರೇತರ ಸಕಲ ಗ್ರಹರೂ ನಿಮಗೆ ಪ್ರತಿಕೂಲರಿರುವುದರಿಂದ ಈ ವಾರವು ನಿಮಗೆ ಕಷ್ಟದಾಯಿಯಾಗುವುದರಲ್ಲಿ ಸಂದೇಹವಿಲ್ಲ. ಕಾಸು ಇಲ್ಲದ ನರ ಕಲ್ಲಿಗೆ ಸಮನೆಂಬ ಗಾದೆಯಂತೆ ನಿಮ್ಮ ಆರ್ಥಿಕ ಭಾಗವು ಬಹಳೇ ಕೆಟ್ಟಿರುವುದರಿಂದ ಸಕಲರೂ ನಿಮ್ಮನ್ನು ತಾತ್ಸಾರದೃಷ್ಟಿಯಿಂದ ನೋಡುವರು. ಶತ್ರು ಜನರ ಬಾಧೆಯಿಂದ ಕಾರ್ಯರಂಗದಲ್ಲಿ ಒಂದು ಹೆಜ್ಜೆ ಕೂಡ ಮುಂದರಿಯಲಾರಿರಿ. ದೇಹಾಲಸ್ಯ, ಮನೋರೋಗಗಳಿಂದ ನಿಮ್ಮ ನಿದ್ರಾವಿಹಾರಾದಿಗಳಿಗೆ ಭಂಗ ಬರುವುದು. ಆದರೂ ವಾರಾದಿಯ 4 ದಿನಗಳಲ್ಲಿ ಕಿಂಚಿದಾರೋಗ್ಯ, ಸ್ತ್ರೀ ಧನ, ಸುಖಗಳು ಲಭಿಸಬಹುದು.

ಧನು—"ಚಿಂತೆಯೇ ಮುಪ್ಪು ಸಂತೋಷವೇ ಯೌವನ" ಎಂಬ ಜನವಾಣಿಯಂತೆ ವಯಸ್ಸಾದ ಮುದುಕರಾದವರೂ ಕೂಡ ಈ ವಾರದಲ್ಲಿ ನಡುಹರೆಯದ ಹುಡುಗರಂತೆ ಸಂತಸದಿಂದ ನಲಿದಾಡುವರು. ದೈವವು ನಿಮ್ಮ ಮೇಲೆ ಪೂರ್ಣ ಅನುಗ್ರಹವನ್ನಿಟ್ಟಿರುವುದರಿಂದ ನಿಮಗೆ ಯಾವ ಭಾಗದಲ್ಲೂ ಕೊರತೆಯು ತೋರಿಬರಲಾರದು. ಆರೋಗ್ಯ ಭಾಗ್ಯವೂ ಆರ್ಥಿಕ ಸಂಪತ್ತೂ ನಿಮ್ಮ ಮನಸ್ಸಿಗೆ ಸುಖಶಾಂತಿಯನ್ನೀಯುವವು. ತಾ. 15ರಿಂದ 19ರ ವರೆಗಿನ ದಿನಗಳು ಅತ್ಯುತ್ತಮವಿವೆ.

ಮಕರ—ದುಡಿದ ಧನದಲ್ಲಿ ಬಹು ಭಾಗವನ್ನು ಸ್ವಂತ ಉಪಭೋಗಕ್ಕಾಗಿ ವ್ಯಯಿಸುವಿರಿ. ಸಂಸಾರದಲ್ಲಿ ಕಲಹವು ಬೆಳೆವುದರಿಂದ ಪರಸ್ಪರ ಈರ್ಷ್ಯಾಸೂಯೆಗಳು ಅಧಿಕವಾಗುವದಲ್ಲದೆ ಗೃಹವು ಅವ್ಯವಸ್ಥೆಯ ಬೀಡೆನಿಸುವದು. ಯುಕ್ತಿಯು ಸಾಕಷ್ಟಿಲ್ಲದಿದ್ದರೂ ಸಾಹಸದಲ್ಲಿ ಅದ್ವಿತೀಯರಿರುವುದರಿಂದ ಶತ್ರು ಜನರ ಪೀಡೆಯು ಅಧಿಕವಾಗಿದ್ದರೂ ಮಂಗಮುಷ್ಟಿಯಂತೆ ಹಿಡಿದ ಕಾರ್ಯವನ್ನು ಮಧ್ಯೆ ಕೈಬಿಡಲಾರಿರಿ. ವಾರಾಂತ್ಯದ 4 ದಿನಗಳು ಪ್ರಮೋಚಿತ ಫಲದಾಯಿಗಳಿವೆ.

ಕುಂಭ— ಅನೇಕ ಸಮಯದಿಂದ ಧನಲಾಭಪನಾದ ಗುರ್ವನುಗ್ರಹದಿಂದ ವಂಚಿತರಾಗಿದ್ದ ನಿಮಗೆ ಈಗ ಆತನ ಪೂರ್ಣ ಅನುಗ್ರಹವು ದೊರಕಿದೆ. ಮತ್ತು ಸುಖಪತಿಯಾದ ಶುಕ್ರನು ಧನಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವುದರಿಂದ ನಿಮ್ಮ ಹಣದ ತಾಪತ್ರಯಗಳು ನಿವೃತ್ತಿಯಾಗುವವಲ್ಲದೆ ಸಾಕಷ್ಟು ಆಪದ್ಧನವನ್ನು ಸಂಗ್ರಹಿಸುವಿರಿ. ವೈದ್ಯ ಜನರಿಗೂ ಶ್ರಮಜೀವಿಗಳಿಗೂ ಈ ವಾರವು ಹೆಚ್ಚಿನ ಅನುಕೂಲವಾಗಿ ಪರಿಣಮಿಸದಿದ್ದರೂ ತಾ 14, 20, 21. ಈ 3 ದಿನಗಳಲ್ಲಿ ವಿಜಯ, ಧನ ವಸನ ಸ್ತ್ರೀ ಸುಖಾದಿಗಳು ದೊರೆವವು.

ಮೀನ—'ಕುಲಕ್ಕೆ ಮೃತ್ಯು ಕೊಡಲೀ ಕಾವು' ಎಂಬಂತೆ ನಿಮ್ಮವರೇ ನಿಮಗೆ ವಿರೋಧಿಗಳಾಗಿ ಪರಿಣಮಿಸಲಿರುವರು. ಆದರೂ ನೀವು ಯಾರಿಗೂ ತಲೆಬಾಗಲಾರಿರಿ. ಮಾತ್ರವಲ್ಲದೆ ಸನ್ಮಿತ್ರರ ಪೂರ್ಣ ಬೆಂಬಲದಿಂದ ಕೂಡಿಕೊಂಡಿರುವುದರಿಂದ ನಿಮಗಿಂತ ಶಕ್ತಿಧನಾದಿಗಳಲ್ಲಿ ಅಧಿಕನಾಗಿದ್ದ ಪ್ರತಿಕಕ್ಷಿಯನ್ನೂ ಪರಾಭವಗೊಳಿಸುವಿರಿ ಈ ಕಾಲದಲ್ಲಿ ಹೊಸಬರೊಡನೆ ಮತ್ತು ಅಪರಿಚಿತ ವ್ಯಕ್ತಿಗಳೊಡನೆ ಮೈತ್ರಿಯನ್ನು ಬೆಳೆಸದಿರಿ. ಗೃಹೋಪಕರಣಗಳು ಪುರ್ತಿಯಾಗಿರುವುದರಿಂದಲೂ ನಿಶ್ಚಿಂತ ಮನಸ್ಕರಿರುವುದರಿಂದಲೂ ಗೃಹಸುಖಕ್ಕೆ ಏನೂ ಅಪಾಯವಿರದು. ತಾ. 15. 16. 17. ಉತ್ತಮ.

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.

(ದ್ವಿತೀಯ ಮುದ್ರಣವು)

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಬೇರೆ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡಿಸುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು. 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ, ಬೇಗನೆ ಬರೆಯಿರಿ, ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

THE MODERN BOOK Co.,

No 25, Avadhanam Paper 2nd Lane (N. Y.) Cheolai, MADRAS.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷದ

REGD

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳ ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನೆಯನಲಂಕರಿಸಿವೆ; ಮನವನ್ನು ಸೆಳೆದಿವೆ.

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	**ಭಯಂಕರ ಸೇಡು**	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	**ಮೋಹಿನಿ**	ಬೆಲೆ ೧ ೮ ೦
ಕರಿನೀರು	ಬೆಲೆ ೩ ೦ ೦	**ಅನಾತ್ಮನಂದಿನಿ**	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	**ಸ್ಕೂಲ ಮಿಸ್ಟ್ರೆಸ್**	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	**ವೀರರಾಜ ವಿಜಯ**	೦ ೧೨ ೦
ನನ್ನ ಗತಿ	೦ ೪ ೦	**ಪಾಣಿಗ್ರಹಣ**	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು— **ನವಭಾರತ ಪುಸ್ತಕ ಭಂಡಾರ, ಉಡುಪಿ.**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಬಾಲಾರ್ಕ ಮಧು

ಚಿಕ್ಕ 'ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮದುವಾರಗಿದೆ ಆಶೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ೧ಕ್ಕೆ ೧೨ ಆಣೆ,

ಟಿ ಖ. ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು — **ನವಭಾರತ ಬುಕ್ ಡಿಪೋ, ಉಡುಪಿ.**

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager.

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪಿತ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾಸರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved by the Govt Mysore.

Certified by the Agent of the Govt of India in Ceylon

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ, ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಸುಖನಿವಾಸ.

ಉಡುಪಿ. ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ **ಎರಡು ಬಾಟ್ಲಿಗಳು** ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ **ಬರೆಯಿರಿ.**

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೯ **ಕೊಡಿಯಾಲಬೈಲು, ಮಂಗಳೂರು.**

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಒಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ರುದ್ಧಖಾದಿ ಮತ್ತು ಸಿಲ್ಕ್ ಬಟ್ಟೆಗಳೂ ಮಾರಲ್ಪಡುತ್ತವೆ

ಪಿ. ಎ. ಷೈ. ಬ್ರದರ್ಸ್,

ಆಸ್ಪತ್ರೆ ಬಳಿ, **ಉಡುಪಿ**

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ

ಮೇಲ್ತರಗತಿಯ, ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ, ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ,

ಎಚ್. ರಾಮಚಂದ್ರ ನಾಯಕ್.

ಪ್ರೊಪ್ರೈಟರ್.

EDITED BY K. K SHETTY, PRINTED & PUBLISHED BY K H. SHETTY AT THE NAVAYUGA PRESS, UDIPI

Regd. No. M. 3618

Estd. 1921 ಸ್ಥಾಪಿತ.

ಅಂತರಂಗ
ಹೊಸ ನಮೂನೆಯ
ವಿನೋದವಾರಪತ್ರಿಕೆ
ವಾ. ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಜಾಹೀರಾತಿಗ
ಉತ್ತಮ ಸಾಧನ,
ಅಂತರಂಗ, ಉಡುಪಿ.



ANTARANGA
The only Leading
Kannada Weekly
of wit & Humour
Udipi - S India

ಸಂಪುಟ ೨೧
Vol. 21

ಸಂಸ್ಥಾಪಕರು—ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

21-5-1942

ಸಂಚಿಕೆ ೩೭
No. 37

ಧಾತುಪುಷ್ಟಿಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಸ್ಖಲನ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೋಮಾರೋಗ, ಮೈ ಕೈ ಉರಿ, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನು, ವೀರ್ಯ ಶಕ್ತಿಯನ್ನು ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ಶರೀರ ವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ 1ರ ಬೆಲೆ ರೂ 2-8-0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಪೇಕ್ಷಣೀಯವಾದ ಶಕ್ತಿವರ್ಧಕ. ಪ್ರಸವಕಾಲದ ಆಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಸರಿಪಡಿಸಿ, ಗರ್ಭಕೋಶವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರಿಗೆ ಪುಷ್ಟಿ ಹೊಂದುವುದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ಬೆಲೆ 1-8-0

ಎಂ. "ಗಣಪಯ್ಯ" ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ಅಂಚೆ ಪೆಟ್ಟಿಗೆ ನಂಬ್ರ 10 ಮಂಗಳೂರು

ಔಷಧಿ ಸಿಕ್ಕುವ ಸ್ಥಳ— (1) ಹೆಸ್ಸ್ಟೋರ್ ಸ್ಟೋರ್ಸ್, ಡಬ್ಲ್ಯು ಆರ್ ಜನರಲ್ ಮರ್ಚೆಂಟ್ಸ್, 183 ಸರ್ದಾರ್ ಬಾಗ್ ರೋಡ್ ... ಬೆಂಗಳೂರು, ನಂಬ್ರ 12 (2) ... ಸ್ಟೋರ್ಸ್, ಜಿ. ಪಿ. ಪಿ. ಮಾರ್ಕೆಟ್ (3) ... 91 ... ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ... ಬಜಾರ್ ... (5) ಮಂಗಳೂರು ... ಸ್ಟೋರ್ಸ್, ಮಡಿಕೇರಿ (6) ಬಿ. ಪ್ರಭು ... ಎಂಡ್ ಸನ್ಸ್, ... (7) ಶ್ರೀನಿವಾಸ ... ಪುತ್ತೂರು (8) ... ಬೆಳ್ತಂಗಡಿ (9) ... ಸ್ಟೋರ್ಸ್ ಮುಲ್ಕಿ. (10) ನವಭಾರತ ಬುಕ್ ಡಿಪೋ, ... ಉಡುಪಿ (11) ... ಫಾರ್ಮಸಿ, ಕುಂದಾಪುರ. (12) ... ಸ್ಟೋರ್ ... ಶ್ರೀ ... (13) ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ (14) ಬಿ. ಯಸ್. ... ಮರ್ಚೆಂಟ್, ಚಿಕ್ಕಮಗಳೂರು.

ಮಗುವನ್ನು ಸಂತೋಷವಾಗಿಟ್ಟಿರಿ

ಅದಕ್ಕೆ **ಗ್ರೈಪ್ ಸಿರಪ್** ಕೊಡಿ

ಟ್ರೇಡ್ ... ಮಾರ್ಕ್

ಮಕ್ಕಳಿಗೆ ಅತ್ಯುತ್ತಮವಾದ ಔಷಧಿ

ಆಹಾರದಲ್ಲಿನ ದೋಷದೋಷಗಳನ್ನು ಸರಿಪಡಿಸಿ, ಹೊಟ್ಟೆ ನುಲಿತವನ್ನೂ, ಹಲ್ಲು ಬರುವ ಕಾಲದಲ್ಲಿನ ತೊಂದರೆ ಮುಂತಾದುವುಗಳನ್ನೂ ಹೋಗಲಾಡಿಸುವುದು.

ಬಹು ರುಚಿಯಾಗಿದೆ
ಮಾದಕ ಪದಾರ್ಥಗಳು ಸೇರಿಲ್ಲ
ಸುರಕ್ಷಿತವಾಗಿ ಕೊಡಬಹುದು
ಹಾಗೂ ಗುಣಕಾರಿ

ತಯಾರಕರು:

ನಾರ್ತ್ ಕೆಂಪ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ,

... ಬೆಂಗಳೂರು ಸಿಟಿ

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲಿನ -ಔಷಧ-

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವುದು ಗ್ಯಾರಂಟಿ

ಶರೀರದಿಂದ ತೀವ್ರ ಜ್ವರ ಬರುತ್ತಿದ್ದರೆ, ಧಾತುವಿನೊಡನೆ ಕೀವು ... ಶರೀರದಿಂದ ಬಾವು, ಶರೀರದ ಮೊಗಲು ಹಿಂದಕ್ಕೆ ಸರಿಯುತ್ತಿದ್ದರೆ, ಶರೀರದ ... ಘಾಯವಾಗಿದ್ದರೆ, .. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚರ್ಮ ಇಳಿದಿದ್ದರೆ, ... ಆಗಿದ್ದರೆ, ಮೂಲವ್ಯಾಧಿ ಭಗಂದರ, ಗಂಡಮಾಲೆ, ಕ್ಷಯ ... ಶೂಲೆ, ... ವಾಯು ನಡುನೋಯುವದು ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ... ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ... ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ಔಷಧ ... ವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ... ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ರಾತ್ರಿ ... ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ... ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಬದನೆ ... ವರ್ಜ್ಯ.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ... ಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ—... ದಾವಣಗೇರಿ:—ದಾವಣಗೇರಿ ಸ್ಟೋರ್ಸ್

ಮಾಲಕರ ವಿಳಾಸ. ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ

ಅಯುರ್ವೇದ ಔಷಧಾಲಯ ಗದಗ.

ASIAN POLICIES

Cover war risk on civilians without any extra premiums.

Figures that speaks the strength and stability of the company as on 31—12—1941

Assets exceed	. .	Rs. 1,10,00,000
Life Fund exceeds	,	92,00,000
Business in force	. ,,	4,28,00,000
Claims paid over	,,	56,00,000

For further particulars and agency terms, please apply to

Branch Manager,

The Asian Assurance Co., Ltd , Mangalore S. K.

ವಿಮಾ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದಂದು ನೀವು ಯೋಚಿಸುತ್ತಿರುವುದಾದರೆ ಸಮ್ಮೊದನೆ ವಿಚಾರಿಸಿರಿ—

ಇ. ಎ. ಪ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಶ್ರೀ ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್ಪೆಕ್ಟರ್, ಕಾರ್ಕಳ, ದ. ಕ.
ಶ್ರೀ ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಸೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್

★ ಆತ್ಮವಿಶ್ವಾಸವೇ ವಿಜಯದ ಬೀಗದ ಕೈ. ★

ತನ್ನಿಂದ ಯಾವ ಕೆಲಸವೂ ಸಾಧ್ಯವೆಂಬ ದೃಢ ನಿರ್ಧಾರದಿಂದ ಅದ್ಭುತವೆನಿಸುವುದನ್ನೂ ಸಾಧಿಸಬಹುದು.

ಲೋಕದ ಪ್ರತಿಯೊಂದು ಸಂಸ್ಥೆಯ ಮೂಲ ಕರ್ತನೆಂದರೆ ಒಬ್ಬೊಬ್ಬ ವ್ಯಕ್ತಿ.

"ನಾನೊಬ್ಬನೇ ಏನುಮಾಡಬಲ್ಲೆ?" ಸಾಧಾರಣವಾಗಿ ಇಂತಹ ಮಾತುಗಳನ್ನು ಆತ್ಮವಿಶ್ವಾಸವಿಲ್ಲದವರು, ಸ್ವಾವಲಂಬನದ ಭಾವವುಳ್ಳವರು ಆಡುತ್ತಿರುತ್ತಾರೆ. ಈ ಅಂಜುಬುರುಕರು ತಮ್ಮನ್ನು ತಾವು ಅಶಕ್ತರೆಂದು ಭಾವಿಸಿಕೊಂಡಿರುತ್ತಾರೆ. ಆದರೆ ತಮ್ಮಲ್ಲಿ ಸಹ ಇತರರಲ್ಲಿರುವಂತೆ ದಿವ್ಯ ಶಕ್ತಿಯು ತುಂಬಿದೆಯೆಂಬುದನ್ನು ಅವರು ಅರಿಯರು. ಒಂದು ಸಾರಿ ಅವರು ತಮ್ಮ ವ್ಯಕ್ತಿತ್ವದಲ್ಲಿ ಅಡಗಿರುವ ಈ ಮಹಾಶಕ್ತಿಯನ್ನರಿತರೆ, ಜಗತ್ತಿನ ರೂಪುರೇಷೆಗಳನ್ನು ಬದಲಾಯಿಸಿಬಿಡಬಲ್ಲರು.

ಫ್ಲಾರೆನ್ಸ್ ನೈಟಿಂಗೇಲಳು ಏನಾಗಿದ್ದಳು? ಸಾಧಾರಣ ಸ್ತ್ರೀ. ಆದರೆ ಆಕೆಯ ಸತತ ಪ್ರಯತ್ನದ ಫಲವೇ ರೆಡ್‌ಕ್ರಾಸ್ ಸಂಸ್ಥೆಯ ರೂಪಿನಲ್ಲಿ ನಮ್ಮೆದುರಿನಲ್ಲಿದೆ. ಒಂದು ವೇಳೆ ಇವಳು ಮನೆಯ ಒಂದು ಮೂಲೆಯಲ್ಲಿ "ನಾನೊಬ್ಬ ಅಬಲೆ, ನನ್ನಿಂದೇನು ತಾನೇ ಸಾಧ್ಯ? ಎಂದು ಕುಳಿತುಬಿಟ್ಟಿದ್ದರೆ, ಮಹಾಯುದ್ಧದಲ್ಲಿ ಲಕ್ಷಾಂತರ ಮಂದಿ ಗಾಯಗೊಂಡ ಸೈನಿಕರು ಆಕೆಯ ಮಹತ್ತರವಾದ ಸೇವೆಯಿಂದ ವಂಚಿತರಾಗಿ ಹೋಗುತ್ತಿದ್ದರು. ಅಲ್ಲದೆ, ಈ ಸಂಸ್ಥೆಯ ಸೇವೆಯಿಂದ ಜಗತ್ತಿನ ಮನುಷ್ಯಗಳಿಗೆ ಈಗ ಆಗುತ್ತಿರುವ ಪ್ರಯೋಜನವು ಕೂಡ ಆಗುತ್ತಿರಲಿಲ್ಲ. ತನ್ನ ಪತಿಯು ಮೃತಪಟ್ಟ ನಂತರ "ಅಯ್ಯೋ, ನಾನೊಬ್ಬ ಅಬಲೆ, ಸ್ತ್ರೀ," ಎಂದು ವ್ಯಸನಪಟ್ಟುಕೊಂಡು ಕುಳಿತಿದ್ದರೆ, ನಮಗೆ ಈ ದಿನ ಮ್ಯಾಡಂ ಕ್ಯೂರಿಯ ರೇಡಿಯಂನ ಆಶ್ಚರ್ಯಕರವಾದ ಚಮತ್ಕಾರಗಳು ದೊರೆಯುತ್ತಿದ್ದುವೇ?

ಇಂತಹ ಎಲ್ಲೋ ಒಂದೆರಡು ವ್ಯಕ್ತಿಗಳಿದ್ದ ಮಾತ್ರಕ್ಕೇನಾಯಿತು? ಎಂದು ನೀವು ಪ್ರಶ್ನಿಸಬಹುದು. ಆದರೆ ಹಾಗಲ್ಲ. ನೈಟಿಂಗೇಲಳು "ನನ್ನಲ್ಲಿ ಆತ್ಮ ವಿಶ್ವಾಸವಿದೆ, ಇದೇ ನನ್ನ ಸರ್ವಸ್ವ" ಎನ್ನುತ್ತಿದ್ದಳು. ಮ್ಯಾಡಂ ಕ್ಯೂರಿಯು "ನನ್ನಲ್ಲಿರುವ ನಿಧಿ ಎಂದರೆ ಆತ್ಮ ವಿಶ್ವಾಸವೊಂದೇ, ಅದರ ಹೊರತು ಮತ್ತೇನೂ ಇಲ್ಲ." ಎನ್ನುತ್ತಿದ್ದಳು. ಇವರಿಬ್ಬರೂ ತಮ್ಮ ಸಮಸ್ತ ಆತ್ಮವಿಶ್ವಾಸ ಮತ್ತು ಅಂತರ್ಭಾವನೆಗಳನ್ನು ಸದ್ವಿನಿಯೋಗಪಡಿಸಿಕೊಂಡರು.

ಒಬ್ಬ ಸ್ತ್ರೀಯು ತನ್ನ ಮಗನನ್ನು ಶಾಲೆಗೆ ಕಳುಹಿಸಿದಳು. ಆದರೆ ಆರು ವರ್ಷದ ಆ ಬಾಲಕನು ತೀರ ದಡ್ಡನೆಂದೂ, ಅವನಿಗೆ ಏನನ್ನೂ ಸಹ ಕಲಿಸುವುದು ಸಾಧ್ಯವಿಲ್ಲವೆಂದೂ ಶಾಲೆಯ ಅಧ್ಯಾಪಕರು ಮನೆಗೆ ಕಳುಹಿಸಿಬಿಟ್ಟರು. ಆಗ ತಾಯಿಯು "ಇಲ್ಲ, ಇಲ್ಲ, ನನ್ನ ಮಗನು ಎಂದಿಗೂ ದಡ್ಡನಲ್ಲ. ನಾನೇ ಅವನಿಗೆ ಶಿಕ್ಷಣ ಕೊಡುವೆನು" ಎಂದು ಹೇಳಿ ಕಲಿಸಲಾರಂಭಿಸಿದಳು. ಅವಳ ಪ್ರಯತ್ನದ ಫಲವೇ ಥಾಮಸ್ ಎಡಿಸನ್— ಜಗತ್ತನ್ನೇ ತನ್ನ ಬುದ್ಧಿಶಕ್ತಿಯಿಂದ ವಿಸ್ಮಿತಗೊಳಿಸಿದ ಥಾಮಸ್ ಎಡಿಸನ್! ಈ ತಾಯಿಯೂ ಕೂಡ ಎಲ್ಲೋ ಒಂದೆರಡು ವ್ಯಕ್ತಿಗಳ ಪೈಕಿ ಒಬ್ಬಳಾಗಿದ್ದಳೇ?

ಸಾಧಾರಣವಾಗಿ ಸ್ತ್ರೀಯರು "ಅಯ್ಯೋ, ನಮಗೆ ಮನೆ ಕೆಲಸಗಳಿಗೇ ವಿರಾಮ ದೊರೆಯುವುದಿಲ್ಲ." ಎಂಬ ಉದ್ಗಾರವನ್ನು ತೆಗೆಯುತ್ತಿರುವರು. ಆದರೆ ಅವರಿಗೇನು ಗೊತ್ತು? ಅಮೆರಿಕದ ರಾಷ್ಟ್ರಪತಿಯಾಗಿದ್ದ ಏಬ್ರಹಾಂ ಲಿಂಕನ್ನನ ಮಲತಾಯಿಗೆ ಸಹ ಮನೆಕೆಲಸಗಳು ಬೇಕಾದಷ್ಟಿದ್ದುವು. ಆದರೆ ಆಕೆಯು ತನ್ನ ಹೊಟ್ಟೆಯಲ್ಲಿ ಸಹ ಹುಟ್ಟದೆ, ತನ್ನ ಪತಿಯ ಮಗನಿಗೆ ಉತ್ತಮ ಶಿಕ್ಷಣವನ್ನು ಕೊಟ್ಟಳು; ಸೊಗಸಾದ ಉತ್ತಮವಾದ ವಿಚಾರಗಳನ್ನು ತುಂಬಿದಳು; ಮತ್ತು ಒಂದು ರಾಷ್ಟ್ರಕ್ಕೆ ರಾಷ್ಟ್ರವೇ ಉದ್ಧಾರವಾದಂತಹ ಒಂದು ಆದರ್ಶ ಜ್ಯೋತಿಯನ್ನು ತನ್ನ ಮಗನ ಮುಂದಿಟ್ಟಳು. ಒಂದು ಸಾರಿ ಲಿಂಕನ್ನರು "ನಾನು ಅಧ್ಯಯನ ಮಾಡಿದ ಮಹಾ ಗ್ರಂಥವೆಂದರೆ, ನನ್ನ ತಾಯಿಯೇ' ಎಂದು ಒರೆದಿದ್ದನು.

ಅಷ್ಟು ದೂರ ಏಕೆ ಹೋಗಬೇಕು? ನಮ್ಮ ದೇಶದಲ್ಲಿಯೇ ಪೂಜ್ಯ ಮಾತೆ ಜೀಜಾಬಾಯನ್ನೇ ನೋಡಿರಿ. ಶಿವಾಜಿ ಮಹಾರಾಜರು ಸಾಧಿಸಿದ ಮಹತ್ಕಾರ್ಯಗಳಲ್ಲಿ ಅವರ ತಾಯಿಯ ಪ್ರಭಾವವೇ ಬಹಳವಾಗಿದ್ದುದು. ಜೀಜಾಬಾಯಿಯು ಶಿವಾಜಿಗೆ ಬಾಲ್ಯದಲ್ಲಿ ಪ್ರಾಚೀನ ಆರ್ಯವೀರರ ಮತ್ತು ಮಹಾ ಪುರುಷರ ಆದರ್ಶವನ್ನು ಉಪದೇಶಿಸಿ, ಪ್ರೇರಣೆ ಮಾಡಿದುದರ ಫಲವಾಗಿಯೇ ಅವರು ಮಹಾ ವ್ಯಕ್ತಿಗಳಾದುದು. ಪತಿಯಿಂದ ನಿರಾದರವನ್ನು ಹೊಂದಿ, ಜೀಜಾಬಾಯಿಯು ಎಲ್ಲ ಸ್ತ್ರೀಯರಂತೆ ಸಿಂಹಕೆ, ಮತ್ತು ದುಃಖಗಳಲ್ಲಿ ಮುಳುಗಿ ತನ್ನ ಪುತ್ರನ ಚಾರಿತ್ರ್ಯದ ಬಗ್ಗೆ ಪ್ರಯತ್ನ ಪಡದೇ ಹೋಗಿದ್ದಲ್ಲಿ, ಮಹಾ ರಾಷ್ಟ್ರದ ಇತಿಹಾಸವೇ ಬೇರೆಯಾಗಿ ಹೋಗುತ್ತಿತ್ತು.

ಹೌಟ್, ಎಲ್, ಮೋಡಿಯವರ ಪತ್ನಿಗೂ ಸಹ ಗೃಹಕೃತ್ಯದ ತೊಂದರೆ ಇದ್ದೇ ಇತ್ತು. ಆದರೆ ಆಕೆಯು ತನ್ನ ಪತಿಗೆ ಓದುಬರಹವನ್ನು ಕಲಿಸಿ, ಆತನ ಹೃದಯದಲ್ಲಿ ಪರಮಾತ್ಮ ಮತ್ತು ಮನುಷ್ಯ ಪ್ರಾಣಿಗಳ ಪ್ರೇಮದ ಭಾವನೆಯನ್ನು ತುಂಬಿ, ಆತನನ್ನು ಒಬ್ಬ ಮಹಾ ಧರ್ಮಪ್ರಚಾರಕನನ್ನಾಗಿ, ಮಾಡಿದಳು.

ಸಂಸ್ಕೃತದ ಸುಪ್ರಸಿದ್ಧ ಕವಿಯಾದ ಕಾಳಿದಾಸನು ಒಬ್ಬ ಕುರುಬನೆಂದು ಹೇಳುತ್ತಾರೆ. ಅವನಿಗೆ ಓದುಬರಹ ಏನೂ ಬರದೆ, ಅರಣ್ಯದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದನು. ಕಾರಣಾಂತರದಿಂದ ಆ ದೇಶದ ರಾಜನು ತನ್ನ ಮಗಳನ್ನು ಇವನಿಗೆ ಕೊಟ್ಟು ವಿವಾಹವಾಡಿದನು. ರಾಜಕುಮಾರಿಗೆ ಈ ಮೋಸ ಕೃತ್ಯವು ತಿಳಿಯಲು ಅವಳು ಗಾಬರಿಗೊಳ್ಳಲಿಲ್ಲ. ಅವಳು ತನ್ನ ಪತಿಯಾದ ಆ ಕುರುಬನಿಗೆ ಓದುಬರಹವನ್ನು ಕಲಿಸಿದಳು. ಆಕೆಯ ಪ್ರಯತ್ನದ ಫಲವಾಗಿಯೇ ನಮಗೆ ಕವಿತಿಲಕ, ಸಂಸ್ಕೃತದ ಅಮರ ಕವಿಯಾದ ಕಾಳಿದಾಸನು ದೊರೆತದ್ದು. ಶಕುಂತಳೆದಂತಹ ನಾಟಕ ರತ್ನವು ಪ್ರಾಪ್ತವಾದುದು. ಆ ರಾಜಪುತ್ರಿಯು ತನ್ನ ಹಣೆಬರಹವನ್ನು ನಿಂದಿಸುತ್ತ ತಾನು ಒಬ್ಬ ಕೆಲಸಕ್ಕೆ ಬಾರದ ವಸ್ತುವೆಂದು ತಿಳಿದು ಸುಮ್ಮನೆ ಕುಳಿತಿದ್ದರೆ, ತನ್ನ ಜೀವನವು ದುಃಖಮಯವಾಗುತ್ತಿದ್ದುದರ ಜೊತೆಗೆ, ಜಗತ್ತು ಸಹ ಕಾಳಿದಾಸನ ಅಮರಕೃತಿಗಳಿಂದ ವಂಚಿತವಾಗಿ ಹೋಗುತ್ತಿತ್ತು.

ಒಬ್ಬ ಸ್ತ್ರೀಯ ಪತಿಯು ಪರದೇಶಕ್ಕೆ ಹೋದನು. ಮಗನ ರಕ್ಷಣೆಯು ಆಕೆಯ ಮೇಲೇ ಬಿದ್ದಿತು. ತಾಯಿಯು ನಿರಾಶಳಾಗದೆ, ಪತಿಯ ಜವಾಬ್ದಾರಿಯನ್ನು ತಾನೇ ಹೊತ್ತಳು. ಆಕೆಯು ಆ ಮಗುವಿಗೆ ಮಹಾ ಪುರುಷರ ಸಫಲತೆಯ ಕತೆಗಳನ್ನು ತಿಳಿಸಿ, ಅವನಲ್ಲಿ ಧೈರ್ಯೋತ್ಸಾಹಗಳನ್ನು ತುಂಬಿದಳು. ನೈತಿಕತೆಯ ಉತ್ಕೃಷ್ಟ ಆದರ್ಶವನ್ನು ಅವನಿಗೆ ಕಲಿಸಿದಳು. ಅವಳು ವರ್ಷಗಟ್ಟಲೆ ತನ್ನ ಸಂಸಾರ ತಾಪತ್ರಯಗಳಲ್ಲಿ ಮುಳುಗಿದ್ದರೂ ಕೂಡ, ಈ ಕೆಲಸವನ್ನು ಮಾಡುತ್ತಲೇ ಇದ್ದಳು. ಇದರ ಫಲವಾಗಿ ಜಗತ್ತಿಗೆ ರಾಬರ್ಟ್ ಈ. ಲೀ. ಎಂಬ ಮಹಾ ಪುರುಷನು ದೊರೆತನು.

ಜಗತ್ತಿನ ದೊಡ್ಡ ದೊಡ್ಡ ಕೆಲಸಗಳು ಯಾವಾಗಲೂ ಒಬ್ಬ ವ್ಯಕ್ತಿಯಿಂದಲೇ ಪ್ರಾರಂಭಿಸಲ್ಪಡುತ್ತವೆಂಬುದನ್ನು ನಾವು ಪ್ರಾಯಶಃ ಮರೆತುಬಿಡುತ್ತೇವೆ. ಈ ಭಾವನೆಯನ್ನು ಮಹಾತ್ಮ ಎಮರ್ಸನ್ ಎಂಬವರು ಒಂದೇ ಒಂದು ಸಣ್ಣ ವಾಕ್ಯದಲ್ಲಿ ಈ ರೀತಿ ವ್ಯಕ್ತಗೊಳಿಸಿದ್ದಾರೆ "ಯಾವ ದೊಡ್ಡ ಸಂಸ್ಥೆಯೇ ಆಗಲಿ, ಒಂದೇ ವ್ಯಕ್ತಿಯಿಂದ ಮುಂದೆ ತರಲ್ಪಟ್ಟಿರುವ ಒಂದೇ

(೧೩ನೇ ಪುಟ ನೋಡಿರಿ)

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಆಗಲಿ, ಜನತೆಯ ಮೇಲೆ ವೈರಿಯ ಯಾವ ರೀತಿಯ ಕಾರ್ಯಾಚರಣೆಯಿಂದಾಗಲಿ, ಹಿಂದುದೇಶದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಪ್ರೀತಿಸುವವರ ಸಲುವಾಗಿ ಪೋಲಿಸಿಯನ್ನು

ದಿ ಬೊಂಬೇ ಲೈಫ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ.

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಒಂದೇ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಣ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು ಬೊಂಬಾಯಿ.

Degrees Books Medicines

Free H. M. S. M. B. H. M. D. etc. Free Homeo Ayur Unani-Naturo degree by post also—Practitioners also get soon Home Materiamedica Rs 5 Homeo Practice book Rs 4 Insanity Cure Pills Rs 10 Enclose 2 annas stamp —

Principal Indian Homeopath. Institute & Society (Govt Regd.)
P O Mahova (Kathiawar Dt. India.)

Sidha Kalpa Kavach (Regd.)
No 3 Rs 2 No 2 Rs 5 No 1 Rs. 7 Special Rs 10 Extra Special Rs. 17 for the marriage health wealth Ask any 17 questions with M. O. Re 1/4 and get correct answers by return post Life reading ... No ... V. P. P. Send M. O. Tred P. O is Prof. Dr N H Chhatbar ... Mahuva (Kathiawar India)

ART PHOTOS

Art photos of beautiful girls in charming poses sent against As. 6 postage stamps. Limited stocks available.

ART PUBLISHERS,
- Block No. 5.
Ramanjaneya Buildings,
UDIPI.

ಚುಟುಕು ಟೀಕೆ-ಟಿಪ್ಪಣಿ

ಅಧಿಕಾರವಿದೆ!

"ಆಫ್ರಿಕಾ ಮತ್ತು ಏಸ್ಯಾದಿಂದ ತಮ್ಮ ಅಧಿಕಾರ ಹಾಗೂ ಪ್ರಭಾವವನ್ನು ಹಿಂದೆ ಗೆದು ವರ್ಣ ದ್ವೇಷವನ್ನು ನಿರ್ಮೂಲಿಸುವ ಮೂಲಕ ತಮ್ಮ ಮನೆಯ ವ್ಯವಸ್ಥೆಯನ್ನು ತಾವು ಸರಿಪಡಿಸದಿದ್ದಲ್ಲಿ ಇಂಗ್ಲಾಂಡಾಗಲೀ ಅಮೆರಿಕವಾಗಲಿ ಈ ಯುದ್ಧ ಕಾಲನೆಯುಲ್ಲೊಂದು ನೈತಿಕ ಅಸ್ತಿವಾರ ಇಟ್ಟುಕೊಂಡಿರುವವೆನ್ನಲಾಗದು. ಬಿಳೀ ಚರ್ಮೀಯರು ಮೇಲೆನ್ನುವ ಭಾವನೆ ಸಮೂಲಾಗ್ರವಾಗಿ ನಾಶವಾಗದೆ ಪ್ರಜಾಸತ್ತೆ, ನಾಗರಿಕತೆ, ಮಾನವ ಸ್ವಾತಂತ್ರ್ಯಗಳ ರಕ್ಷಣೆಯು ಮಾತಿನ್ತಲು ಅವುಗಳಿಗಧಿಕಾರವಿಲ್ಲ"- ಎಂದು ಮಹಾತ್ಮಾ ಗಾಂಧಿಯವರು ಹೇಳಿಕೆಯಿತ್ತಿದ್ದಾರೆ. ಇಂತಹ ಕಟು ವಿಮರ್ಶೆ ಮಾಡುವದು ಯುದ್ಧೋದ್ಯಮಕ್ಕೆ ಹಾನಿಕರವೆಂಬ ಕಾರಣ ಕೊಟ್ಟು ಮಹಾತ್ಮಾ ಗಾಂಧಿಯವರನ್ನು ಮಾತನಾಡದಂತೆ ಮಾಡುವ ಅಧಿಕಾರ ಬ್ರಿಟಿಷರಿಗಿದೆ. ಇಂದ ಮೇಲೆ ಅವರಿಗಧಿಕಾರವಿಲ್ಲವೆನ್ನುವದಾದರೂ ಹೇಗೆ?

ಇತ್ತಂಡಕ್ಕೂ ಇಲ್ಲ.

"ಈಗ ಯುದ್ಧ ಪ್ರವೃತ್ತವಾಗಿರುವ ಎರಡು ಶಕ್ತಿಗಳ ಪೈಕಿ ಯಾವ ಪಕ್ಷಕ್ಕೆ ಭಾರತವು ತನ್ನ ನೈತಿಕ ಬೆಂಬಲವೀಯಬೇಕು?"- ಎಂಬ ಪ್ರಶ್ನೆಗೆ ಮಹಾತ್ಮಾ ಗಾಂಧಿಯವರು "ನನ್ನ ವ್ಯಕ್ತಿಗತ ಅಭಿಪ್ರಾಯವು ಸುಪ್ರಸಿದ್ಧವಿದೆ. ನನ್ನ ಅಭಿಪ್ರಾಯಕ್ಕೆ ಅಖಿಲ ಭಾರತವನ್ನು ಮತಾಂತರಗೊಳಿಸಲು ಶಕ್ತನಾದರೆ, ಎರಡು ಪಕ್ಷಕ್ಕೂ ಬೆಂಬಲ ಅಥವಾ ಸಹಾಯ ದೊರೆಯುವಂತಿಲ್ಲ. ಆದರೆ ನನ್ನ ಸಹಾನುಭೂತಿಯು ನಿಸ್ಸಂಶಯವಾಗಿಯೂ ಚೀನಾ ಮತ್ತು ರಶ್ಯದ ಕಡೆಗಿದೆ," ಎಂದರು. "ಬ್ರಿಟನಿನ ಸಂಬಂಧದಲ್ಲಿ ಹೇಗೆ?"- ಎಂಬ ಮರು ಪ್ರಶ್ನೆ ಬಂತು. "ನನ್ನ ನೈತಿಕ ಬೆಂಬಲವು ಬ್ರಿಟನಿಗಿದೆ ಎಂದು ನಾನು ಹೇಳುತ್ತಾ ಬಂದಿದ್ದೇನೆ. ಈದಿನ ಆ ನೈತಿಕ ಬೆಂಬಲವೀಯಲು ಕೂಡಾ ನನ್ನ ಮನಸ್ಸು ಒಪ್ಪುವದಿಲ್ಲವೆನ್ನಲು ನಾನು ವಿಷಾದಿಸುತ್ತೇನೆ. ಭಾರತದ ಕಡೆಗಿನ ಬ್ರಿಟಿಷ ಧೋರಣೆ ನನ್ನಲ್ಲಿ ವೇದನೆಯನ್ನು ತುಂಬಿಸಿದೆ'- ಎಂದು ಗಾಂಧಿಯವರಂದಿದ್ದಾರೆ.

ಬ್ರಿಟಿಷರ ವರ್ತನೆಯಿಂದ ಮಹಾತ್ಮಾ ಗಾಂಧಿಯವರು ಈ ರೀತಿ ಪೂರ್ತಿ ನಿರಾಶೆಗೊಂಡಿರುವಾಗ ಅವರ ಪಟ್ಟಶಿಷ್ಯರಾದ ರಾಜಾಜಿಯವರಲ್ಲಿ ಹೊಸ ಆಶೆಯುದಯವಾಗಿದೆ. ಈ ಕುರಿತು ಗಾಂಧಿಯವರೇಕೆ ಅಭಿಪ್ರಾಯ ಸೂಚಿಸುವುದಿಲ್ಲ?

'ಅಡಿಯ ಹಿಂದಿದೆ ಸ್ವರ್ಗ'?

ಬರ್ಮಾದಲ್ಲಿ ಬ್ರಿಟಿಷ್ ಸೇನೆ ಹೋರಾಟ ಕೊಡುತ್ತಾ ಹಿಂದೆಗೆಯಲ್ಪಡುತ್ತಿದೆ. ಸಗ್ಗಿ ಎಂಬ ಭಾರತದ ಗಡಿಯ ಸ್ಥಳದ ತನಗೂ ಅದು ಹಿಂಜರಿದಿದೆ. ಆದರೆ ಇದರಿಂದಾಗಿ ಬ್ರಿಟಿಷರು ಭಾರತದೊಳಗೆ ಹಿಂಜರಿದು ನಿಲ್ಲುವರೆಂದು ಊಹಿಸಲಾಗದೆಂದೂ ಮಂಡಲೆ ಕ್ಷೇತ್ರದಲ್ಲಿ ಈಗಲೂ ಚೀನೀ ಸೇನೆಗಳಿರುವವೆಂದೂ ಸಮಾಧಾನ ಕೊಡಲಾಗಿದೆ. ಇಂತಹ ಸಮಾಧಾನಗಳು ಸದ್ಯದ ಉತ್ಕಟ ಪರಿಸ್ಥಿತಿಯ ಕುರಿತಿದ್ದ ಆತುರವನ್ನು ಶಮನಗೊಳಿಸಲಾರವು. ಮಂಡಲೆಯಲ್ಲಿರುವ ಚೀನೀ ಸೇನೆಗೆ ಕ್ಷೇತ್ರವನ್ನು ತೆರವುಮಾಡಿಕೊಡುವುದಕ್ಕಾಗಿ ಬ್ರಿಟಿಷ್ ದಂಡುಗಳು ಹಿಂದೆಗೆದಿದ್ದರೆ ತೃಪ್ತಿಪಡಬಹುದಿತ್ತು. ಹಾಗಾಗಿಲ್ಲ. ಜಪಾನರ ಉತ್ಸಾಹದಿಂದಾಗಿ ಅವು ಮುಂದೊತ್ತುವ ಬದಲು ಹಿಂದೊತ್ತಹತ್ತಿವೆ.

ಹೀಗೆ ಹಿಂದೆ ಹೆಜ್ಜೆಯಿಡುತ್ತಿರುವುದನ್ನೂ ಹೆಗ್ಗಳಿಕೆಯಿಂದ ವರ್ಣನೆ ಮಾಡುವವರನ್ನು ಕಾಣುವಾಗ 'ಅಡಿಯ ಹಿಂದಿದೆ ಸ್ವರ್ಗ. ಅಡಿಯ ಮುಂದಿದೆ ನರಕ' ಎನ್ನುವ ಕಾಲ ಬಂತೆಂದು ಊಹಿಸಬಹುದೆ?

ಕರಾಚೀ ಬಳಿಯ ಅಪಘಾತ.

ತಾ. 17ನೇ ನಡು ರಾತ್ರಿ ಕರಾಚಿಯಿಂದ 150 ಮೈಲು ದೂರದಲ್ಲಿದ್ದ ಮೈಲುಬಂಡಿಯನ್ನು ಹಳಿ ತಪ್ಪಿಸಿ ಘಾತಿಸಿ ನಡೆಸಿರುವ ವಾರ್ತೆ ಬಂದಿದೆ. ಇಂಜಿನು ಸಮೇತ ಕೆಲವು ಗಾಡಿಗಳು ಚೂರು ಚೂರಾಗಿರುವವೆಂದೂ 22 ಮಂದಿ ಕೊಲ್ಲಲ್ಪಟ್ಟು 26 ಮಂದಿ ಜಖಂ ಹೊಂದಿರುವರೆಂದೂ ತಿಳಿದು ಬರುತ್ತದೆ. ಇದು ಭಯೋತ್ಪಾದಕ ವಾರ್ತೆಯೇ ಸರಿ. ಈ ಯುದ್ಧಕಾಲದಲ್ಲಿ ಲೂಟಿ, ದರೋಡೆ, ಅಪಘಾತಗಳಾಗುವ ಸಂಭವವಿರುವದರಿಂದಲೇ ಸರಕಾರವೂ ಜನತೆಯೂ ಮುಂಜಾಗ್ರತೆ ತೆಗೆದುಕೊಳ್ಳಹತ್ತಿವೆ. ಮೇಲಿನ ಅಪಘಾತವು ಯುದ್ಧಕ್ಷೇತ್ರಗಳಲ್ಲಿನ ಗೋರಿಲ್ಲಾ ಹಾವಳಿಯನ್ನು ಜ್ಞಾಪಕಕ್ಕೆ ತರುವಂತಹದಿರುವುದರಿಂದ ಸರಕಾರವು ಈ ಕುರಿತು ಸರಿಯಾದ ಲಕ್ಷ್ಯವಿತ್ತು ವಿಚಾರಣೆ ನಡೆಸುವದೆಂದು ಊಹಿಸಬಹುದೆ?

'ವಾಹನಾನುಕೂಲತೆಗಳು ತಡೆಗಟ್ಟಲ್ಪಡಬಹುದು' ಎಂಬ ಭಯವಿದ್ದಿರುವ ಜತೆಯಲ್ಲೇ ಇಂತಹ ಅಪಘಾತಗಳಾಗಹತ್ತಿದರೆ ಜನತೆಯ ಸುರಕ್ಷಿತತಾ ಭಾವನೆಯು ಬರಿಯ ಉತ್ತೇಜಕ ವಾಣಿಯಿಂದ ನಿಂತಿರಲು ಸಾಧ್ಯವೆ?

ರಶ್ಯಾ ಯುದ್ಧದ ಏರು ತಗ್ಗು.

ಕ್ರೈಮಿಯದ ಕೆರ್ಚ್ ವಿಭಾಗದಲ್ಲಿ ಪ್ರಬಲ ಧಾಳಿಯನ್ನಾರಂಭಿಸಿ ಕೆರ್ಚನ್ನು ಜರ್ಮನರು ವಶಪಡಿಸಿಕೊಂಡಾಗಲೇ, ಆ ಅಪಜಯವನ್ನು ಮರೆಯಿಸಿಬಿಡುವ ಪ್ರಬಲ ವಿಜಯವನ್ನು ರಶ್ಯನರು ಕ್ರೈಮಿಯದ ಖಾರ್ಕೋವ್ ಸಮರಾಂಗಣದಲ್ಲಿ ಸಂಪಾದಿಸಿರುವರು. ಮಾರ್ಶಲ್ ಟಿಮೊಶೆಂಕೋರವರ ಸೇನೆಯು ದುರ್ದಮನೀಯ ರಣೋತ್ಸಾಹದಿಂದ ಪ್ರಬಲ ನಾಜೀ ಟ್ಯಾಂಕ್ ಬಲವನ್ನು ನಿಪಾತಗೊಳಿಸಿ ಖಾರ್ಕೋವ್ ನಗರವನ್ನು ಸಮೀಪಿಸಿರುವದು. "ಈ ಯುದ್ಧದ ಪ್ರಾಮುಖ್ಯ ಹೋರಾಟಗಳಲ್ಲೊಂದು ಈಗ ಖಾರ್ಕೋವ್ ಸರಹದ್ದಿನಲ್ಲಿ ನಡೆಯುತ್ತಿದೆ. ಆದ್ದರಿಂದ ಸೈಬೇರಿಯದ ಮೇಲೆ ಧಾಳಿಯಿಡುವಂತೆ ಟೋಕಿಯೋವನ್ನು ಬರ್ಲಿನು ಒತ್ತಾಯಪಡಿಸುತ್ತಿರುವದೆಂಬ ವಾರ್ತೆಯನ್ನು ನಂಬಲವಕಾಶವಿದೆ" ಎಂದು ಅಮೆರಿಕಾದ ಪತ್ರಿಕೆಗಳು ಅಭಿಪ್ರಾಯಪಟ್ಟಿವೆ.

ವಿಜಯೋನ್ಮಾದವೇರಿದವರ ದರ್ಪವಿಳಿಸುವ ಸುಯೋಗವು ಈ ಯುದ್ಧದಲ್ಲಿ ರಶ್ಯವೊಂದಕ್ಕೇನೇ ಒದಗಿರುವಂತಿದೆ. ಯುರೋಪನ್ನು ಪಾದಾಕ್ರಾಂತ ಮಾಡಿಕೊಂಡ ಹೆಮ್ಮೆಯಿಂದ ರಶ್ಯದ ಮೇಲೂ ಬಿದ್ದ ಹಿಟ್ಲರರು ಬುದ್ಧಿ ಕಲಿತರು. ಶಾಂತ ಸಾಗರವನ್ನು ಗೆದ್ದ ಮದದಿಂದ ರಶ್ಯವನ್ನು ಕೆಣಕಿ ಇನ್ನು ಜಪಾನು ಪಾಠ ಕಲಿಯುವದೊಂದು ಬಾಕಿಯಿದೆ!

Keep the enemy away
from India
Contribute AGAIN to the
Governor's war fund.
Buy MORE defence bonds
and savings certificates.

**GIVE AND LEND
FOR
VICTORY.**

ಪ್ರಕಟನೆ.

ಎಪ್ರಿಲ್ ತಾರೀಕು 28ರ ಸಾಯಂಕಾಲದಿಂದ ಬ್ಲ್ಯಾಕ್ ಔಟ್ ನಿರ್ಬಂಧಗಳ ಬದಲು ಸ್ವಲ್ಪ ಮಟ್ಟಿಗೆ ಬ್ರೌನ್ ಔಟ್ ನಿರ್ಬಂಧಗಳು ಪುನಃ ಪ್ರಾರಂಭಿಸುವವು. ರಸ್ತೆಗಳಲ್ಲಿನ ದೀಪಗಳೂ, ಕಟ್ಟೋಣಗಳಲ್ಲಿನ ದೀಪಗಳೂ, ಈಗ ಜಾರಿಯಲ್ಲಿರುವ ಬ್ರೌನ್ ಔಟ್ ನಿಯಮಗಳಿಗನುಸಾರವಾಗಿ ಪ್ರತಿ ರಾತ್ರಿ ಒಂದು ನಿಯಮಿತ ಘಂಟೆಯ ವರೆಗೆ ಅಂದರೆ ರಾತ್ರಿ 10 ಘಂಟೆಗೆ ಮೀರದೆ ಉರಿಯಲು ಬಿಡಲ್ಪಡುವವು. ಆ ಘಂಟೆಗಿಂತಲೂ ಮುಂಚಿತವಾಗಿ ಸಂಪೂರ್ಣ ಬ್ಲ್ಯಾಕ್ ಔಟ್ ನಿಯಮಗಳನ್ನು ಅನುಸರಿಸಬೇಕಾದ ಸೂಚನೆಯೆಂದರೆ ರಸ್ತೆಗಳಲ್ಲಿನ ದೀಪಗಳನ್ನು ಆರಿಸುವದು. ಯಾ ಕತ್ತಲೆಗಿಂತಲೂ ಮುಂಚಿತವಾಗಿ ಸೈರೈನಿದಲ್ಲಿ ರಸ್ತೆಗಳಲ್ಲಿನ ದೀಪಗಳನ್ನು ಬೆಳಗಿಸದೆ ಇರುವದು.

ಆದುದರಿಂದ ಎಲ್ಲಾ ಕಾಲಗಳಲ್ಲೂ ಪೋಲೀಸು ಮತ್ತು ಎ. ಆರ್. ಪಿ. ವಾರ್ಡನರುಗಳಿಗೆ ಸಹಕರಿಸುವ ರಸ್ತೆಗಳಲ್ಲಿನ ದೀಪಗಳಿಗನುಸಾರವಾಗಿ ನಡೆಯುವದೇ ಸಾಮಾನ್ಯ ಜನತೆಯ ಕರ್ತವ್ಯವಾಗಿರುತ್ತದೆ. ಅಲ್ಲದೆ ಯುದ್ಧ ಪ್ರಯತ್ನಗಳಿಗೆ ಸಂಪೂರ್ಣ ಸಹಕಾರ ನೀಡಲೋಸುಗವಾಗಿ ಸಂಪೂರ್ಣ ಬ್ಲ್ಯಾಕ್ ಔಟ್ ಶರ್ತಗಳಿಗನುಸಾರವಾಗಿ ಅತ್ಯಗತ್ಯದ ಕಾರ್ಯಗಳನ್ನು ಮುಂದುವರಿಸಲು ಸಾಧ್ಯವಾಗದ ಸಾರ್ವಜನಿಕ ಸೇವೆಯವರೂ, ಸಂಸ್ಥೆಗಳೂ ರಾತ್ರಿ ಕಾಲದಲ್ಲಿ ನಿರ್ಬಂಧಿತ ಬ್ರೌನ್ ಔಟ್ ಶರ್ತಗಳ ಮೇರೆಗೆ ತಮ್ಮ ಕಾರ್ಯವನ್ನು ಮುಂದರಿಸಲು ಜಿಲ್ಲಾ ಮಾಜಿಸ್ಟ್ರೇಟರಿಗೆ ಬರೆಕೊಳ್ಳಬಹುದು.

ಈ ಶರ್ತಗಳಿಗೆ ಅತ್ಯಾವಶ್ಯಕವಾದುದೇ ಹರೆ ಎಲ್ಲಾ ದೀಪಗಳೂ ಅಗತ್ಯ ಬಿದ್ದಲ್ಲಿ ಒಡನೆಯೇ ಆರಿಸಲ್ಪಡಬೇಕು. ಇದನ್ನು ಮಾಡಲೋಸುಗವಾಗಿ ಟೆಲಿಫೋನಿನ ಒಳಿಯಲ್ಲ ಇಂಗ್ಲೀಷನ್ನು ಮಾತನಾಡಬಲ್ಲ ಒಬ್ಬ ಜವಾಬ್ದಾರೀ ಮನುಷ್ಯನಿರಬೇಕು. ಮತ್ತು ದೀಪಗಳನ್ನು ಆರಿಸಲು ತ್ವರಿತದ ವಿಧಾನವಿರಬೇಕು. ಈ ಮೇಲಿನವುಗಳನ್ನನುಸರಿಸುವ ವಿವರಗಳನ್ನು ಜಿಲ್ಲಾ ಮಾಜಿಸ್ಟ್ರೇಟರವರಿಗೆ ಮಾಡುವ ಅರ್ಜಿಯಲ್ಲಿ ಕಾಣಿಸಿದಲ್ಲಿ ಅವರು ಸ್ಥಳದ ತನಿಖೆ ನಡೆಸಲೂ, ಯೋಜನೆಯನ್ನು ಪರೀಕ್ಷಿಸಿ ನೋಡಲೂ ಮತ್ತು ಸಾಮಾನ್ಯವಾಗಿ ದೀಪಗಳನ್ನು ಉರಿಸಲು ಅನುಮತಿ ಕೊಡಲೂ ಒಬ್ಬ ಅಫೀಸರನಿಗೆ ಕಳುಹಿಸುವರು.

ಅರ್ಜಿಗಳಲ್ಲಿ ಯಾವ ಯಾವ ಘಂಟೆಗಳ ವರೆಗೆ ಬ್ರೌನ್ ಔಟ್ ಶರ್ತಗಳಿಗನುಸಾರವಾಗಿ ಕೆಲಸ ಮಾಡುವ ಆವಶ್ಯಕತೆಯಿದೆಯೆಂದು ತೋರಿಸತಕ್ಕದ್ದು. ಸಂಬಂಧಪಟ್ಟ ಪ್ರತಿಯೊಬ್ಬನಿಗೂ ಎಚ್ಚರಿಸುವದೇನೆಂದರೆ ಬ್ರೌನ್ ಔಟ್ ಶರ್ತಗಳಿಗನುಸಾರವಾಗಿ ಕೂಡ ಯಾವದೇ ತರದ ದೀಪವಾಗಲೀ, ದೀಪದ ಛಾಯೆಯಾಗಲೀ, ಸಮುದ್ರದಲ್ಲಿ ಪ್ರಕಾಶಿಸುವಂತೆ ಮಾಡಬಾರದು. ಈ ಬ್ರೌನ್ ಔಟ್ ಶರ್ತಗಳನ್ನು ಜಾರಿಗೆ ತಂದಿರುವಂಥಾದು ಯಾವ ವಿಧಾನದಲ್ಲಿಯೂ ಮೋಟಾರು ಮತ್ತಿತರ ವಾಹನಗಳ ದೀಪಗಳ ಸಂಬಂಧವಾಗಿ ಹಾಲಿ ಜಾರಿಯಲ್ಲಿರುವ ನಿಯಮಗಳನ್ನು ಬದಲಾಯಿಸುವುದಿಲ್ಲ.

ಎಮ್. ಕರಮತುಲ್ಲಾ.
ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್.

ದ ಕ ಜಿಲ್ಲಾ ಕಲೆಕ್ಟರ್ ...

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability.)

ESTD: 1906.

ನಡುಪಿ, ಗುರುವಾರ, ೨೧-೫-೧೯೪೨

ಪ್ರಕೃತದ ಪರಿಸ್ಥಿತಿಯ ಕುರಿತು ಗಾಂಧಿಜಿಯರ ಅಭಿಮತ.

ಇದೇ ಕಳೆದ ತಾ. 1೮ರಲ್ಲಿ ಮಹಾತ್ಮ ಗಾಂಧಿಯವರು ಬೊಂಬಾಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಒಂದು ಘಂಟೆಯವರೆಗೆ ನಡಿಸಿದ ಮಾತುಕತೆಯಲ್ಲಿ, ಪ್ರಕೃತದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯ ಕುರಿತು ತನ್ನ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಿರುವರು. ಈ ಯುದ್ಧದಲ್ಲಿ ಚೈನ ಮತ್ತು ರಸ್ಯಗಳ ಕುರಿತು ಮಾತ್ರ ಗಾಂಧಿಯವರು ಸಂಪೂರ್ಣ ಸಹಾನುಭೂತಿಯುಳ್ಳವರಿರುತ್ತಾರೆ. ಇಂದೀಗ ನಿಜವಾದ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಗಾಗಿ ಅಪಾರ ತ್ಯಾಗಮಾಡಿ ಜೀವನ್ಮರಣ ಹೋರಾಟದಲ್ಲಿ ನಿರತರಿರುವವರೆಂದರೆ ಚೀನೀಯರು ಮತ್ತು ರಸ್ಯನರು. ಆ ಹೋರಾಟದಲ್ಲಿ ಕಣ್ಣುಕಟ್ಟಿಲ್ಲ; ಯುಕ್ತಿ ತಂತ್ರಗಳಿಲ್ಲ; ಸ್ವಾರ್ಥ ಮತ್ತು ಅಧಿಕಾರಲಾಲಸೆಯು ಸ್ವಲ್ಪವೂ ಇರುವುದಿಲ್ಲ. ಆದುದರಿಂದ ಮಹಾತ್ಮರಂತಹ ಅಹಿಂಸಾವಾದಿಯೂ ಆ ಹಿಂಸಾತ್ಮಕ ಹೋರಾಟದ ಕುರಿತು ಸಹಾನುಭೂತಿಯುಳ್ಳವರಾಗಿರುವರು. ಆದರೆ ಬ್ರಿಟನಿನ ಕುರಿತು ಗಾಂಧಿಜಿಯವರು ಹಿಂದೆ ತೋರಿಸುತ್ತಿದ್ದ ಸ್ನೇಹ [illegible] ಸಹಾನುಭೂತಿಯನ್ನು ಕೂಡಾ [illegible]. ತನ್ನ ವರ್ತನೆಯಿಂದ ಕಳಕೊಂಡಿರುವುದು. ಹಿಂದುದೇಶದ ಕುರಿತಾದ ಬ್ರಿಟನಿನ ಇತ್ತಲಾಗಿನ ವರ್ತನೆಯಿಂದ [illegible] ಬಹಳವಾಗಿ ನೊಂದು [illegible] ನೈತಿಕ ಬೆಂಬಲವನ್ನೀಯಲು [illegible] ಸಿದ್ಧರಿರುವುದು. ಬ್ರಿ[illegible] ನ್ಯಾಯನೀತಿ [illegible] ತೋರುವುದಿಲ್ಲ. ಆದರ [illegible] ತಾನು [illegible] ಅದಕ್ಕೆ ತನ್ನ ನೈತಿಕ [illegible] ಮಹಾತ್ಮ[illegible] [illegible] ಹಿಂದುದೇಶವು ಈ ಯುದ್ಧದಲ್ಲಿ [illegible] ಸ್ಪಷ್ಟವಾಗಿ ಹೇಳಿರುವರು. ಹೇಳುವುದು ಶಾಸ್ತ್ರ, ಇಕ್ಕುವುದು ಗಾಳವೆಂಬ ಹಿಂದುದೇಶದ ಕುರಿತಾದ ಬ್ರಿಟನಿನ ಸಾಮ್ರಾಜ್ಯ ಸ್ವಾರ್ಥ, ಮತ್ತು ಅಧಿಕಾರ ಲಾಲಸೆಯು ಹಿಂದೀಯರನ್ನು ಸಂತಪ್ತಗೊಳಿಸಿರುವುದು. ಕ್ರಿಪ್ಸ್ ಸಂಧಾನದ ವಿದ್ಯಮಾನಗಳು ಮತ್ತು ಅನಂತರ ಇಂಡಿಯಾ ಸೆಕ್ರಿಟರಿಗಳಿತ್ತಿರುವ ಭಾಷಣಗಳು, ಬ್ರಿಟನಿನ ಕುರಿತಾದ ಅತೃಪ್ತಿಯನ್ನು ಮತ್ತಷ್ಟು ಹೆಚ್ಚಿಸಿರುವವು. ಬ್ರಿಟನಿನ ಯುದ್ಧಕ್ಕೆ ಬೆಂಬಲವೀಯುವ ಮನಸ್ಸು ಮತ್ತು ಉತ್ಸಾಹವೇ ಹಿಂದೀಯರಿಗಿರುವುದಿಲ್ಲ. ಅಂದಮೇಲೆ ಅವರು ತಟಸ್ಥವಾಗಿರುವುದೇ ಈ ಸಂದರ್ಭದಲ್ಲಿ ಯುಕ್ತವೆಂಬುವದರಲ್ಲಿ ಸಂದೇಹವೇ ಇಲ್ಲ.

ಯುನೈಟೆಡ್ ಸ್ಟೇಟ್ಸು ಯುದ್ಧಕ್ಕೆ ಸೇರಬಾರದಿತ್ತು!

ಅಮೇರಿಕವು ಈ ಯುದ್ಧದಲ್ಲಿ ಭಾಗವಹಿಸಬಾರದಿತ್ತು. ಲೋಕದ ಶಾಂತಿ ಸ್ಥಾಪನೆಗೂ ಅದರಿಂದ ವಿಘಾತವಾಯಿತು. ಮನಸ್ಸಿದ್ದರೆ ಶಾಂತಿಯನ್ನುಂಟು ಮಾಡಲು ಅಮೇರಿಕಕ್ಕೆ ಸಾಧ್ಯವಿತ್ತು. ಆದರೆ ತನ್ನ ಅಪಾರ ಸಂಪತ್ತಿನ ಅಮಲೇರಿ ಹೋಗಿದೆ ಅದಕ್ಕೆ. ಕುಬೇರನ ಉಪಾಸಕರು ಅಮೇರಿಕನರು. ಬೇರೆಯವರ ಮಾತನ್ನು ಕೇಳುವವರಲ್ಲೆಂದು ಗಾಂಧಿಯವರ ಅಭಿಮತ. ಈ ಅಭಿಪ್ರಾಯವನ್ನು ನಾವು ಒಪ್ಪುವ ಹಾಗಿಲ್ಲ. ಯುದ್ಧಾರಂಭದಲ್ಲಿಯೂ ಅನಂತರವೂ ಪ್ರೆಸಿಡೆಂಟ್ ರುಸವೆಲ್ಟರು ಶಾಂತಿಗಾಗಿ ಎಷ್ಟೊಂದು ಪ್ರಯತ್ನ ಮಾಡಿಲ್ಲ! ಅವರು ಆಕ್ಸಿಸ್ ರಾಷ್ಟ್ರಗಳ ವಿರೋಧವಾಗಿ ಹೋರಾಡುವ ಬ್ರಿಟನ್ ಮೊದಲಾದ ರಾಷ್ಟ್ರಗಳಿಗೆ ಯುದ್ಧೋಪಕರಣ ಮತ್ತು ಇತರ ಸಾಂಪತ್ತಿಕ ಸಹಾಯವೀಯದಿರುತ್ತಿದ್ದರೆ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ವಿರೋಧಿಗಳಿದ್ದು ಲೋಕ ಕಂಟಕವಾಗಿರುವ ಫೆಸಿಸ್ಟ್ ರಾಷ್ಟ್ರಗಳು ಇಡೀ ಲೋಕದಲ್ಲೇ ತಮ್ಮ ಅಧಿಕಾರ ಸ್ಥಾಪಿಸಿ ತಮಗೆ ಬೇಕಾದಂತಹ ವ್ಯವಸ್ಥೆ ಮಾಡುವ ಪರಿಸ್ಥಿತಿಯು ಇಷ್ಟರಲ್ಲೇ ಉಂಟಾಗುತ್ತಿತ್ತು. ಆಗ ಅಮೇರಿಕವೂ ಆಕ್ಸಿಸ್ ರಾಷ್ಟ್ರಗಳಿಗೆ ತಲೆ ಬಗ್ಗಿಸಬೇಕಾಗುತ್ತಿತ್ತು. ಪ್ರೆಸಿಡೆಂಟ್ ರುಸವೆಲ್ಟರು ತನ್ನ ವಿವೇಕಪರ ಘೋಷಣೆಯಿಂದ ಅಂತಹ ಅನಾಹುತವನ್ನು ದೂರ ಮಾಡಿರುವರೆನ್ನಬಹುದು. ಜಪಾನು ವಿಶ್ವಾಸಘಾತುಕ ಮಾಡಿ ಹಿಂದಿನಿಂದ ತಿವಿದಾಗ ಮತ್ತು ಇತರ ಆಕ್ಸಿಸ್ ರಾಷ್ಟ್ರಗಳದರ ಪಕ್ಷ ಹಿಡಿದು ಯುದ್ಧ ಸಾರಿದಾಗ ಮಾತ್ರ ಅಮೇರಿಕವು ನಿರ್ವಾಹವಿಲ್ಲದೆ ಯುದ್ಧಕ್ಕಿಳಿದುದು. ಅಂದಮೇಲೆ ಯುದ್ಧದಲ್ಲಿ ಭಾಗವಹಿಸದಿರುವ ಸ್ವಾತಂತ್ರ್ಯವಾದರೂ ಅದಕ್ಕೆಲ್ಲಿಂದ?

ಬಿಳಿ ಜನರ ಸ್ವಾರ್ಥ

ಬಿಳಿ ಜನರ ಸ್ವಾರ್ಥ ಮತ್ತು ಶ್ರೇಷ್ಠತಾಭಾವವೇ ಭಯಂಕರವಾದೀ ಪ್ರಲಯಕ್ಕೆ ಮೂಲಕಾರಣವೆನ್ನಬಹುದು. ಬ್ರಿಟನ್ ಮತ್ತು ಅಮೇರಿಕಗಳ ಸಾಮ್ರಾಜ್ಯ ಮತ್ತು ಸಾಂಪತ್ತಿಕ ಸ್ವಾರ್ಥವು ಇಂದು ಲೋಕದಲ್ಲೆಲ್ಲಾ ಹಬ್ಬಿರುವ ದಾವಾಗ್ನಿಗೆ ಕಿಡಿಯಾಗಿ ಪರಿಣಮಿಸಿರುವುದೆಂದರೆ ತಪ್ಪಾಗಲಾರದು. ಮತ್ತು ಇಂದಾದರೂ ಬ್ರಿಟನ್ ಮತ್ತು ಅಮೇರಿಕಗಳು ಬಿಟ್ಟುಬಿಡಲು ತಯಾರಿಲ್ಲದ ಬಿಳಿ ಜನರ ಶ್ರೇಷ್ಠತೆಯ ಅಹಂಭಾವವು, ಆಸ್ಯಾ ಮತ್ತು ಆಫ್ರಿಕಾ ಖಂಡದ ಜನರಲ್ಲಿ ತೀವ್ರ ಜುಗುಪ್ಸೆಯನ್ನುಂಟುಮಾಡಿರುತ್ತದೆ. ಆದುದರಿಂದಲೇ ಬ್ರಿಟನ್ ಮತ್ತು ಅಮೇರಿಕಗಳಿಗೆ ಈ ಯುದ್ಧದಲ್ಲಿ ಭಾಗವಹಿಸಲು ನೈತಿಕ ಬಲವಿಲ್ಲೆಂದು ಗಾಂಧಿಜಿಯವರು ಹೇಳುತ್ತಿರುವುದು. ಈ ಬಿಳಿ ಕರಿ ಜನರೆಂಬ ಭೇದವು ಭಯಂಕರ ಹಾನಿಯನ್ನುಂಟುಮಾಡಿ ವಿಪರೀತದಂತೆ ಬ್ರಿಟನ್ ಮತ್ತು ಅಮೇರಿಕಗಳ ಬಲ ಕುಂದಿರಿಸಿರುವುದು. ಜಪಾನಿನ ವಿಜಯದ ಕುರಿತು ಜನಸಾಮಾನ್ಯರು ಉತ್ಸಾಹ ತೋರಿಸಲು ಮುಖ್ಯವಾದೊಂದು ಕಾರಣವದು. "ಬ್ರಿಟನ್ ಮತ್ತು ಅಮೇರಿಕಗಳು ಮೊದಲಾಗಿ ತಮ್ಮ ಮನೆಯ ಸುವ್ಯವಸ್ಥೆಯ ಕಡೆಗೆ ಗಮನಕೊಡಬೇಕು. ಆಫ್ರಿಕ ಮತ್ತು ಆಸ್ಯಾಖಂಡಗಳ ಮೇಲಿನ ತಮ್ಮ ಪ್ರಭಾವ ಮತ್ತು ಅಧಿಕಾರವನ್ನು ಹಿಂತೆಗೆದು ವರ್ಣಭೇದವನ್ನು ನಿರ್ಮೂಲಿಸಬೇಕು. ಶ್ವೇತವರ್ಣೀಯರ ಶ್ರೇಷ್ಠತೆಯ ವಿಪರೀತವನ್ನು ಸಂಪೂರ್ಣ ನಾಶ ಮಾಡುವ ತನಕ ಅವುಗಳಿಗೆ ಪ್ರಜಾಸತ್ತೆ, ನಾಗರಿಕತೆ ಮತ್ತು ಮಾನವ ಸ್ವಾತಂತ್ರ್ಯ ರಕ್ಷಣೆಯ ಕುರಿತು ಮಾತಾಡುವ ಹಕ್ಕಿರುವುದಿಲ್ಲ" ಎಂಬ ಗಾಂಧಿಜಿಯವರ ಖಂಡನೆಯು ಅತ್ಯಂತ ಸಂದರ್ಭೋಚಿತ ಮತ್ತು ಯುಕ್ತವಾದುದು.

ಸ್ವಾತಂತ್ರ್ಯ ಮತ್ತು ಜಾತೀಯ ಐಕ್ಯ.

ಏನಾದರೂ ತಮಗೆ ಬೇಕೇ ಬೇಕೆಂದು ಮುಸಲ್ಮಾನರು ಛಲ ಹಿಡಿದರೆ ಅದನ್ನು ನಿರಾಕರಿಸಲು ಯಾರಿಂದಲೂ ಸಾಧ್ಯವಿಲ್ಲ. ಹಿಂದುಗಳದನ್ನು ವಿರೋಧಿಸಲು ಸೊಂಟಕಟ್ಟಿದರೆ ಜಗಳ ನಿಶ್ಚಯ. ಒಂದಲ್ಲೊಂದು ದಿನ ಎಲ್ಲರಲ್ಲಿಯೂ ವಿವೇಕೋದಯವಾಗಿ, ತಮ್ಮ ತಮ್ಮ ಛಲವನ್ನೇ ಸಾಧಿಸುವ ಮನೋವೃತ್ತಿಯು ಅಳಿದು, ಮೂರನೇಯವರ ಮಧ್ಯಸ್ಥಿಕೆಯಿಂದ ಕಲಹಗಳನ್ನು ಇತ್ಯರ್ಥಮಾಡಿಕೊಳ್ಳುವ ನಾಗರಿಕ ರೀತಿಯು ಅನುಸರಿಸಲ್ಪಡುವುದೆಂದು ಗಾಂಧಿಜಿಯವರ ವಿಶ್ವಾಸ. ಆದರೆ ಹಿಂದುದೇಶವು ಸಂಪೂರ್ಣ ಸ್ವಾತಂತ್ರ್ಯ ಪಡೆಯದೆ ದೇಶದ ಬೇರೆ ಬೇರೆ ಸಮಾಜಗಳೊಳಗೆ ನಿಜವಾದ ಐಕ್ಯವು ಸಾಧ್ಯವಿಲ್ಲೆಂದೇ ಮಹಾತ್ಮರ ಮನೋನಿರ್ಧಾರ. ಎಲ್ಲದಕ್ಕೂ ಮೂರನೇದಾದೊಂದು ಅಧಿಕಾರದ ಕಡೆಗೆ ಕತ್ತು ನೀಡಬೇಕಾದ ಪರಿಸ್ಥಿತಿಯು ಇರುವವರೆಗೆ ಹಿಂದುದೇಶಗಳಲ್ಲಿ ನಿಜವಾದ ಜಾತೀಯ ಐಕ್ಯವು ಅಸಾಧ್ಯವೇ. ಸರಿ. ಬ್ರಿಟಿಷ್ ಸರಕಾರವನ್ನೊಲಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಬಹುದೆಂಬ ಮನೋವೃತ್ತಿಯೇ ಹಿಂದು ಮುಸಲ್ಮಾನ ಮತ್ತು ಇತರ ಜಾತಿಗಳೊಳಗಣ ಐಕ್ಯಕ್ಕೆ ಅತಿ ದೊಡ್ಡ ತೊಡಕಾಗಿರುತ್ತದೆ. ಬ್ರಿಟಿಷ್ ಸರಕಾರದ ಆಶ್ರಯವಿಲ್ಲದಿದ್ದರೆ ಮುಸ್ಲಿಮ್ ಲೀಗಿನವರು ಈ ರೀತಿಯ ಘೋಷಣೆ ಮಾಡುತ್ತಿದ್ದಿಲ್ಲ. ಹಿಂದು ಮಹಾಸಭೆಯವರು ಕಾಂಗ್ರೆಸನ್ನು ಪ್ರಕೃತದಂತೆ ವಿರೋಧಿಸಲೆದೆಗೊಳ್ಳುತ್ತಿದ್ದಿಲ್ಲ. ಆದುದರಿಂದ ಸ್ವಾತಂತ್ರ್ಯ ಸಾಧನೆಯೇ ಕಾಂಗ್ರೆಸಿನ ಪ್ರಥಮ ಗುರಿಯೆಂಬುದು ಗಾಂಧಿಜಿಯವರ ಅಭಿಪ್ರಾಯದಂತೆಯೇ ಯುಕ್ತವಾದುದು. ಮುಸ್ಲಿಮ್ ಲೀಗಿನ ಕೇಳಿಕೆಗಳನ್ನೊಪ್ಪಿ ಒಕ್ಕಟ್ಟನ್ನು ಸಾಧಿಸಿ ಬ್ರಿಟಿಷ್ ಸರಕಾರದಿಂದ ರಾಷ್ಟ್ರೀಯ ಸರಕಾರವನ್ನು ಕಿತ್ತುಕೊಳ್ಳುವುದೇ ಪ್ರಕೃತದ ಕರ್ತವ್ಯ. ಆ ಮೇಲೆ ಹಿಂದೀಯರೆಲ್ಲರೂ ಒಂದಾಗಿ ಹೊರಗಣ ಆಕ್ರಮಣವನ್ನು ಪ್ರತಿಭಟಿಸಲು ಬದ್ಧಕಂಕಣರಾಗಬೇಕು. ಯಾಕೆಂದರೆ ಬ್ರಿಟನು ಈಗ ಹೂಡಿರುವ ಯುದ್ಧವು ಹಿಂದೀಯರ ಯುದ್ಧವೂ ಆಗಿರುವುದೆಂಬ ಶ್ರೀ. ರಾಜಗೋಪಾಲಾಚಾರ್ಯರೇ ಮೊದಲಾದವರ ನೂತನ ವಾದವು ಕಾರ್ಯರೂಪದಲ್ಲಿ ಹೇಗೆ ಪರಿಣಮಿಸುವುದೋ? ಎಂತಹ ಗೊಂದಲವನ್ನೆಬ್ಬಿಸುವುದೋ? ಅದರ ಬದಲಿಗೆ ಮಹಾತ್ಮ ಗಾಂಧಿಯವರು ಸೂಚಿಸುವಂತೆ ಹಿಂದೀ ಸ್ವಾತಂತ್ರ್ಯ ಮತ್ತು ಜಾತೀಯ ಪ್ರಶ್ನೆಯ ಕುರಿತು, ಎರಡೂ ಕಡೆಯ ವಿಶ್ವಾಸವಿರುವ ಪ್ರೆಸಿಡೆಂಟ್ ರುಸವೆಲ್ಟರಂತಹ ಅಂತರರಾಷ್ಟ್ರೀಯ ಮುತ್ಸದ್ದಿಯು ಮಧ್ಯಸ್ಥಿಕೆ ಮಾಡಿ ತೀರ್ಮಾನಿಸಬೇಕೆಂದು ಕಾಂಗ್ರೆಸು ತೀವ್ರ ಚಳವಳ ಹೂಡುವುದರಿಂದ ಸತ್ಪರಿಣಾಮವಾಗಬಹುದೆಂದು ನಮ್ಮ ನಂಬಿಕೆ.

ಅಹಿಂಸಾತ್ಮಕ ವಿರೋಧ.

ಅಖಂಡ ಹಿಂದುಸ್ಥಾನವು ಒಕ್ಕಟ್ಟಿನಿಂದ ಮತ್ತು ಉತ್ಸಾಹದಿಂದ ಜಪಾನರ ಆಕ್ರಮಣವನ್ನು ಅಹಿಂಸಾತ್ಮಕ ಅಸಹಕಾರ ಚಳವಳದಿಂದ ವಿರೋಧಿಸಲು ಮುಂದಾದರೆ, ಒಂದೇ ಒಂದು ಬೊಟ್ಟು ರಕ್ತವನ್ನು ಕೂಡಾ ಸುರಿಸದೆ ಜಪಾನಿನ ಸೇನಾ ಶಕ್ತಿಯನ್ನು ನಿರರ್ಥಕಗೊಳಿಸಲು ಸಾಧ್ಯವಿದೆ. ಆದರೆ ಅದಕ್ಕೆ ಮಿಲ್ಯಾಂತರ ಜನರು ಪ್ರಾಣ ಬಲಿದಾನವೀಯಬೇಕಾಗುವುದು. ರಸ್ಯ, ಚೈನಾ ಮತ್ತು ಬ್ರಿಟನುಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಎಂತಹ ತ್ಯಾಗ ಮತ್ತು ಕಷ್ಟ ಸಹನೆಗಾದರೂ ಮುಂದಾಗಿರುವಂತೆ ಹಿಂದು ದೇಶವೂ ತಯಾರಾಗಬೇಕು. ಹಿಂಸಾತ್ಮಕ ಯುದ್ಧದಿಂದ ಜಪಾನರನ್ನು ಪ್ರತಿಭಟಿಸಲು ಹಿಂದೀಯರಿಗೆ ಸಾಧ್ಯವಾಗಲಾರದು. ಅಂದಮೇಲೆ ಉಳಿದೊಂದೇ ಮಾರ್ಗವೆಂದರೆ ಅಹಿಂಸಾತ್ಮಕ ಅಸಹಕಾರ. ಅದನ್ನು ಜಯಶೀಲವಾಗಿ ಹೂಡಿದರೆ ಚಿರ ಕೀರ್ತಿಯನ್ನದು ಗಳಿಸುವಂತಾಗುವುದೆಂದೇ ಗಾಂಧಿಜಿಯವರ ಅಭಿಪ್ರಾಯ. ಪ್ರಥಮವಾಗಿ ಬ್ರಿಟಿಷರ ಘೋಷಣೆಯಿಂದಾಗಿ ಹಿಂದು ದೇಶದಲ್ಲಿ ಒಕ್ಕಟ್ಟಿರುವುದು ಸಾಧ್ಯವೇ ಇಲ್ಲ. ಮಾತ್ರವಲ್ಲ ಹಿಂದೀಯರೇನು ನಿರ್ಧಾರ ಮಾಡಿದರೂ ಬ್ರಿಟಿಷ್ ಸರಕಾರವು ಅಮೇರಿಕದ ಸಹಾಯದಿಂದ ಜಪಾನಿನೊಡನೆ ಯುದ್ಧ ಹೂಡಿ ಹಿಂದುಸ್ಥಾನವನ್ನು ಹಿಂಸಾತ್ಮಕ ರಣರಂಗವಾಗಿ ಮಾಡಿಯೇ ಮಾಡುವುದ[illegible] ಬ್ರಿಟಿಷ್ ಸರಕಾರದ ಧೋರಣೆಯಿಂದ ತೀ[illegible] ಅತೃಪ್ತಿಗೊಂಡು ಪ್ರತೀಕಾರ ಬುದ್ಧಿಯಿಂದ ಜಪಾನರನ್ನು ಸ್ವಾಗತಿಸುವ ಮನೋ[illegible]

★ ಎರಡನೇ ರಣರಂಗ ತೆರೆಯುವ ಆವಶ್ಯಕತೆ. ★

ಯುರೋಪಿನಲ್ಲಿ ಎರಡನೇ ರಣರಂಗ

ಇದೇ ತಾ. 17ರಲ್ಲು ಸರ್. ಸ್ಟಾಫೋರ್ಡ್ ಕ್ರಿಪ್ಸರು ತಾನು ಪಾರ್ಲಿಮೆಂಟಿಗೆ ಆರಿಸಿ ಬಂದಿದ್ದ ಬ್ರಿಸ್ಟಲಿನಲ್ಲಿ ಪ್ರಾಮುಖ್ಯವಾದೊಂದು ಭಾಷಣವಿತ್ತು, ಬ್ರಿಟನು, ಯುರೋಪಿನಲ್ಲಿ ಇನ್ನೊಂದು ರಣರಂಗ ತೆರೆಯುವುದು ನಿಶ್ಚಯವೆಂದೂ, ಆ ಕುರಿತು ಜನತೆಯಷ್ಟೇ ಸರಕಾರವೂ ಆತುರಗೊಂಡಿರುವುದೆಂದೂ ಹೇಳಿರುವರು. ಯಾವಾಗ ಎಲ್ಲಿ ಈ ರಣರಂಗ ತೆರೆಯಲ್ಪಡುವುದೆಂಬುದನ್ನು ತಿಳಿಸಲು ಸಾಧ್ಯವಿಲ್ಲವಾದರೆ ತೆರೆಯುವುದು ನಿಶ್ಚಯ. ಆ ಕುರಿತು ಇಷ್ಟರಲ್ಲೇ ಜರ್ಮನರು ಚಿಂತೆಗೊಂಡಿರುವರು. ಬ್ರಿಟನ್ ಅಮೆರಿಕ ಮತ್ತು ಇಂಗ್ಲೆಂಡುಗಳು ತಮ್ಮ ನಿರ್ಧಾರವನ್ನು ಕಾರ್ಯಕ್ಕೆ ಹಚ್ಚುವಾಗ ಜರ್ಮನರು ಧೃತಿಗೆಡುವಂತಾಗುವುದೆಂದ ಕ್ರಿಪ್ಸರ ಅಭಿಮತ. ರಸ್ಯನರು ಮಾಡಿರುವ ಅಪಾರ ತ್ಯಾಗಕ್ಕೆ ತಕ್ಕ ಸ್ಮೃತಿ ಸಲುವನ್ನೀಯುವಂತಹ ಎಂತಹ ಕೆಲಸವನ್ನಾದರೂ ಮಾಡಲು ಬ್ರಿಟನು ಮತ್ತು ಅಮೆರಿಕಗಳು ಸಿದ್ಧವಾಗಿರುತ್ತವೆಂದು ಕ್ರಿಪ್ಸರು ಆಶ್ವಾಸನೆಯಿತ್ತು, ಈ ಯುದ್ಧಾನಂತರ ಬಡತನ, ಅನಾರೋಗ್ಯ, ನಿರುದ್ಯೋಗಾದಿಗಳನ್ನು ಹಿಟ್ಲರ್ ಮುಸಲೋನಿಗಳಷ್ಟೇ ಪ್ರಬಲವಾಗಿ ವಿರೋಧಿಸುವ ಜನರು ಬಹಳ ಮಂದಿ ಇರುವರೆಂದು ಹೇಳಿದರು

ಖಾರ್ಕೋವ್ ಯುದ್ಧ.

ಹಿಟ್ಲರರು ವಸಂತದ ಧಾಳಿಯನ್ನಾರಂಭಿಸುವ ಮೊದಲೇ ಮಾರ್ಷಲ್ ಟಿಮೋಶೆಂಕೋರವರು ಅವರ ಪ್ರಾಮುಖ್ಯವಾದೊಂದು ಸೇನಾನೆಲೆಯಾದ ಖಾರ್ಕೋವಿನ ಮೇಲೆ ಪ್ರಬಲ ಧಾಳಿ ನಡಿಸಿ 100 ಮೈಲು ರಣರಂಗದಲ್ಲಿ ಘೋರ ಕದನ ಹೂಡಿ, ಜರ್ಮನರ ಪ್ರಬಲ ವಿರೋಧವನ್ನು ಮುರಿದು ಹಾಕಿ ಒಂದೇ ಸಮನೆ ಮುಂದೊತ್ತುತ್ತಿರುವರು ಇದರಿಂದ ಜರ್ಮನರು ಕಳವಳಗೊಂಡಿರುವರು ಕೆಂಪುಸೇನೆಯು ಕಟ್ಟೊಡೆದು ಹರಿಯುವ ಪ್ರವಾಹದಂತೆ ರಭಸದಿಂದ ಮುನ್ನಡೆದು ಖಾರ್ಕೋವನ್ನು ಸಮೀಪಿಸಿರುವುದು ವಿಮಾನ, ಟ್ಯಾಂಕ್, ತೋಪು ಮೊದಲಾದ ಪ್ರತಿಯೊಂದು ಯುದ್ಧದಲ್ಲಿಯೂ ರಸ್ಯನರ ಕೈ ಮೇಲಾಗಿರುವುದು. ಜರ್ಮನರು ಪರಾಜಯ ಹೊಂದಿ ಚಿಕ್ಕಾಬಿಕ್ಕಿಯಾಗಿ ಓಡಿರುವರಲ್ಲದೆ ಅನೇಕ ಮಂದಿ ಸೆರೆ ಸಿಕ್ಕಿರುವರು ರಸ್ಯನರಿಗೆ ಅತಿ ಹೆಚ್ಚಿನ ಕೊಳ್ಳೆ ದೊರೆತಿರುವುದು. "ಇದೀಗ ನಮ್ಮ ವಸಂತ"ವೆಂಬ ಅತ್ಯುತ್ಸಾಹಪರ ಉದ್ಘೋಷದಿಂದ ಕೆಂಪು ಸೈನಿಕರು ಹೋರಾಡುತ್ತಿರುವರು ಅವರಲ್ಲಿ ನವಸ್ಫೂರ್ತಿಯುಂಟಾಗಿರುವುದು ದೊಡ್ಡದಾದ 3 ಟ್ಯಾಂಕು ಯುದ್ಧಗಳಲ್ಲಿ ಜರ್ಮನರು ಪರಾಜಿತರಾಗಿ ಬಹಳ ನಷ್ಟ ಹೊಂದಿರುವರು

ಪಂಚಮಾಂಗವು ಹಿಂದುದೇಶದಲ್ಲಿ ಇದ್ದೇ ಇರುವುದೆಂಬುದನ್ನು ಕಡೆಗಣಿಸಲು ಸಾಧ್ಯವೇ ಇಲ್ಲ ಮತ್ತೊಂದು ಪ್ರಾಮುಖ್ಯ ಸಂಗತಿಯೆಂದರೆ, ಅಹಿಂಸಾತ್ಮಕ ವಿರೋಧದ ಕುರಿತು ಕಾಂಗ್ರೆಸಿನೊಳಗೇನೇ ತೀವ್ರ ಭಿನ್ನಾಭಿಪ್ರಾಯವಿರುತ್ತದೆ ಶ್ರೀ ರಾಜಗೋಪಾಲಾಚಾರ್ಯರು ತನ್ನದೇ ಆದೊಂದು ಹೊಸ ಹಾದಿ ಹಿಡಿದು ಹಿಂಸಾತ್ಮಕ ಯುದ್ಧವನ್ನು ಪ್ರತಿಪಾದಿಸಹತ್ತಿರುತ್ತಾರೆ. ಪಂಡಿತ ನೆಹರುಗಳೂ ಗಾಂಧಿಯವರ ಮಾರ್ಗವನ್ನನುಸರಿಸಲು ಸಿದ್ಧರಿಲ್ಲ ಇಂತಹ ಪರಿಸ್ಥಿತಿಯಲ್ಲಿ ಅಹಿಂಸಾತ್ಮಕ ಅಸಹಕಾರವೆಂಬುದು ಮನಸಿನ ಮಂಡಿಗೆಯಲ್ಲದೆ ಮತ್ತೇನು?

ಖಾರ್ಕೋವ್ ರಣರಂಗದಲ್ಲಿ ಕೆಂಪು ಸೇನೆಯ ಮಹತ್ತಾದ ವಿಜಯ.

ಸಿಂಧೂ ದೇಶದ ಟ್ರೈನ್ ಅವಘಡದ ಪ್ರಕರಣ

ಸಿಂಧಿನ ಟ್ರೈನ್ ಅವಘಡ

ಇದೇ ಕಳೆದ ತಾ. 16ನೇ ರಾತ್ರಿ 10-30ಕ್ಕೆ ಕರಾಚಿಯಿಂದ 150 ಮೈಲು ದೂರದಲ್ಲಿ ಡಕಾಯಿತರು ಪಂಜಾಬ ಮೈಲ್ ಟ್ರೈನನ್ನು ಉರುಳಿಸಿ ಹಾಕಿದ ಪರಿಣಾಮವಾಗಿ 21 ಮಂದಿ ಕೊಲ್ಲಲ್ಪಟ್ಟು 30 ಮಂದಿಗೆ ಹೆಚ್ಚಿನ ಪೆಟ್ಟಾಗಿರುವುದು ಸಿಂಧಿನ ಮಂತ್ರಿಗಳಾದ ಸರ್ ಗುಲಾಮ್ ಹುಸೇನರ ಮಗ ಮಿ. ಮುನ್ವಾರರು ಕೊಲ್ಲಲ್ಪಟ್ಟವರಲ್ಲೊಬ್ಬರು. ಟ್ರೈನು ಉರುಳಿ ಬಿದ್ದ ಮೇಲೆ ನೂರಕ್ಕಿಂತಲೂ ಮಿಕ್ಕಿದ ಡಕಾಯಿತರು ಪ್ರಯಾಣಿಕರ ಮೇಲೆ ಬಿದ್ದು ಜನರಲ್ಲಿದ್ದ ಹಣ ಮತ್ತು ಸಾಮಾನುಗಳನ್ನು ಲೂಟಿಮಾಡಿಸಿರುವರು ಆದರೆ ಟಪ್ಪಾಲು ಗಾಡಿಯನ್ನು ಒಡೆಯಲವರಿಗೆ ಸಾಧ್ಯವಾಗಲಿಲ್ಲ ಸಿಂಧಿನ ರೆವಿನ್ಯೂ ಮಂತ್ರಿಗಳಾದ ನಿಚಲ್ದಾಸ್ ವಝೀರಾನಿಯವರು ತನ್ನ ಆಸನದ ಅಡಿಯಲ್ಲಿ ಅವಿತುಕೊಂಡು ಪ್ರಾಣವುಳಿಸಿಕೊಂಡರೆಂದು ತಿಳಿದುಬರುತ್ತದೆ. ಈ ಅತ್ಯಾಚಾರ ಮಾಡಿದವರು ಹುರ್ ಎಂಬ ಪಂಗಡದವರು ಇವರು ಈ ಮೊದಲೂ ಹಲವು ಅತ್ಯಾಚಾರ ಮಾಡಿರುವರು ಸಿಂಧ್ ಎಸೆಂಬ್ಲಿ ಸದಸ್ಯರಲ್ಲೊಬ್ಬರನ್ನು ಕೊಂದುಹಾಕಿದ್ದರು. ಈ ಡಕಾಯಿತರು ಮೊದಲು ರೈಲ್ ರಸ್ತೆಯ ಕಂಬಿಗಳನ್ನು ಕಿತ್ತು ಹಾಕಿ ಟ್ರೈನು ಉರುಳಿ ಬೀಳುವಂತೆ ಮಾಡಿದರು ಅನೇಕ ಪ್ರಯಾಣಿಕರ ಮೇಲೆ ಗುಂಡು ಹಾರಿಸಿ, ಕೆಲವರನ್ನು ಕೊಂದು ಲೂಟಿಮಾಡಿದರು ಈ ಅತ್ಯಾಚಾರದಿಂದ ಸಿಂಧ್ ಪ್ರಾಂತದಲ್ಲೆಲ್ಲಾ ಉದ್ವೇಗ ಉಂಟಾಗಿದೆ ಸಿಂಧಿನಲ್ಲಿ ರಾತ್ರಿ ಟ್ರೈನ್ ಸಂಚಾರವೇ ನಿಲ್ಲಿಸಲ್ಪಟ್ಟಿದೆ.

ಮಹಾತ್ಮಾ ಗಾಂಧಿಯವರು

ಬೊಂಬಾಯಿಗೆ ಹೋಗಿ ದೀನ ಬಂಧು ಆಂಡ್ರೂಸರ ಸ್ಮಾರಕ ನಿಧಿಗೆ ರೂ 5 ಲಕ್ಷ ಸಂಗ್ರಹಿಸಿ ಇದೇ ತಾ 17ರಲ್ಲು ವಾರ್ಧಕ್ಕೆ ಹಿಂತಿರುಗಿರುವರು

ಪಂಡಿತ ನೆಹರುಗಳು

ಒಬ್ಬರೇ ದಕ್ಷಿಣ ಹಿಂದುಸ್ಥಾನದಲ್ಲಿ ಬರುವ ತಿಂಗಳ ಪ್ರವಾಸ ಕಾಲದಲ್ಲಿ ಸಂಚರಿಸಲಿರುವರೆಂದೂ, ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಆಜಾದರು ಅವರೊಂದಿಗೆ ಬರುವುದಿಲ್ಲೆಂದೂ ತಿಳಿದುಬರುತ್ತದೆ

ಚೀನೀ ಸೇನೆಯ ಹೋರಾಟ

ಉತ್ತರ ಪೂರ್ವ ಬರ್ಮಾದಲ್ಲಿ ಚೀನೀ ಸೇನೆಯು ಜಪಾನ ಸೇನೆಯ ಒಂದು ಭಾಗವನ್ನು ನಾಶಮಾಡಿರುವುದು.

ಬಿಸಿ ಬಿಸಿ ಸುದ್ದಿ.

ರಸ್ಯದಲ್ಲಿ ಮಾರ್ಷಲ್ ಟಿಮೊಶೆಂಕೋರವರ ಸೇನೆಯನ್ನು ಜರ್ಮನರಿಗೆ ಈ ವರೆಗೂ ತಡೆಗಟ್ಟಲು ಸಾಧ್ಯವಾಗಿರುವುದಿಲ್ಲ. ಅದು ಯಥಾಪ್ರಕಾರ ಮುಂದುವರಿಯುತ್ತಿರುವುದು ರಸ್ಯನರಿಗೆ ಖಾರ್ಕೋವನ್ನು ಗೆಲ್ಲಲು ಸಾಧ್ಯವಾದರೆ ಹಿಟ್ಲರರ ಧಾಳಿಯ ಮುಖ್ಯವಾದೊಂದು ನೆಲೆಯನ್ನೇ ಅವರು ಕಳಕೊಳ್ಳುವಂತಾಗುವುದೆಂದು ನಂಬಲಾಗಿದೆ.

ಕ್ರೈಮಿಯ ಮತ್ತು ಕೊಕಸಸನ್ನು ಜೋಡಿಸುವ ಕರ್ಚ್ ಅರ್ಧ ದ್ವೀಪವನ್ನು ಜರ್ಮನ್ ಮತ್ತು ರುಮೇನಿಯನ್ ಸೈನಿಕರು ಸಂಪೂರ್ಣವಾಗಿ ಗೆದ್ದು ಅಲ್ಲಿ ಹೋರಾಟ ನಿಂತಿರುವುದೆಂದು ಜರ್ಮನರ ಸುದ್ದಿ ಆದರೆ ರಸ್ಯಾನರು ಅದನ್ನೊಪ್ಪುವುದಿಲ್ಲ ಹಿಟ್ಲರರು ಕ್ರೈಮಿಯವನ್ನು ನೆಲೆಯಾಗಿ ಮಾಡಿಕೊಂಡು ಕೊಕಸಸಿನ ಮೇಲೆ ವಿಮಾನವಾಹಕ ಸೇನೆಯ ಮೂಲಕ ದಾಳಿ ನಡಿಸಬಹುದೆಂದು ಊಹಿಸಲಾಗಿದೆ. ಸ್ಟಾಲಿನರು ಕೊಕಸಸನ್ನು ಕೋಟೆ ಕೊತ್ತಳ ಮೂಲಕ ಬಹಳ ಭದ್ರಪಡಿಸಿರುವರೆಂದೂ ಜರ್ಮನರು ಕ್ರೈಮಿಯದಲ್ಲಿ ಹೆಚ್ಚಿನ ನಷ್ಟ ಹೊಂದಿರುವುದರಿಂದ ಅಲ್ಲಿಂದ ಕೊಕಸಸಿನ ಮೇಲೆ ಫಕ್ಕನೆ ಧಾಳಿ ನಡಿಸಲು ಸಾಧ್ಯವಿಲ್ಲೆಂದೂ ಇನ್ನೊಂದು ಊಹೆ

ಕೊಕಸಸಿನ ಮೇಲೆ ಧಾಳಿ ನಡಿಸುವ ಮೊದಲು ಜರ್ಮನರು ರೊಸ್ಟೋವ್ ಎಂಬ ದಕ್ಷಿಣದ ಸಂಡುಕಟ್ಟಿನ ಪಟ್ಟಣವನ್ನು ವಶಪಡಿಸಿಕೊಳ್ಳತಕ್ಕದ್ದು ಅದನ್ನು ಮೊದಲೊಮ್ಮೆ ಜರ್ಮನರು ಗೆದ್ದಿದ್ದರೂ ಅನಂತರ ಸ್ವಲ್ಪ ಸಮಯದಲ್ಲೇ ರಸ್ಯನರು ವಶಪಡಿಸಿಕೊಂಡರು. ಈಗ ಪುನಃ ಹಿಟ್ಲರರು ಅದನ್ನು ಗೆಲ್ಲುವ ಪ್ರಯತ್ನ ಮಾಡುತ್ತಿರುವಂತಿದೆ. ರೊಸ್ಟೋವಿನ 18 ಮೈಲು ಪೂರ್ವದಿಂದ ಜರ್ಮನರು ಧಾಳಿಯನ್ನಾರಂಭಿಸಿರುತ್ತಾರೆ

ಫ್ರಾನ್ಸಿನ ಉತ್ತರ ಆಫ್ರಿಕದ ವಸಾಹತಾದ ಅಲ್ಜಿಯರ್ಸಿನ ಸಮುದ್ರ ತೀರದಲ್ಲಿ ವಿಚಿ ಮತ್ತು ಬ್ರಿಟಿಷ್ ವಿಮಾನಗಳೊಳಗೆ ಹೋರಾಟ ನಡೆದು ಒಂದು ವಿಚಿ ಮತ್ತು 2 ಬ್ರಿಟಿಷ್ ವಿಮಾನಗಳು ನಾಶವಾಗಿರುವವೆಂದು ವಿಚಿಯ ವಾರ್ತೆ ಬ್ರಿಟಿಷರು ಫ್ರೆಂಚರ ಹಕ್ಕಿನ ಸಮುದ್ರ ಭಾಗಕ್ಕೆ ಪ್ರವೇಶಿಸಿದ್ದರಿಂದ ಈ ಹೋರಾಟ ನಡೆಯಿತೆಂದು ತಿಳಿದುಬರುತ್ತದೆ

ಸಂದರ್ಭ ಸಾಧಿಸಿ ಬ್ರಿಟನು ಮತ್ತು ಅಮೆರಿಕಗಳು ಯುರೋಪಿನಲ್ಲಿ ಎರಡನೇ ರಣರಂಗ ತೆರೆಯುವುದು ನಿಶ್ಚಯವೆಂದೇ ಹೇಳಬಹುದು ಆ ಕುರಿತು ಜನಾಭಿಮತವು ದಿನೇ ದಿನೇ ಬಲಗೊಳ್ಳುತ್ತಿರುವುದು ಸಾವಿರಾರು ಮಂದಿ ಸೈನಿಕರು, ಟ್ಯಾಂಕು ಮತ್ತು ತೋಪುಗಳು ಬ್ರಿಟಿಷ್ ದ್ವೀಪಗಳಿಗೆ ಅಪಾಯವೇನೂ ಇಲ್ಲದೆ ಸುರಕ್ಷಿತವಾಗಿ ಮುಟ್ಟಿರುತ್ತವೆ.

ಮಾಲ್ಟಾ ಮೇಲೆ ವಿಮಾನಧಾಳಿ ಆರಂಭವಾದಂದಿನಿಂದ ಒಟ್ಟು 723 ಆಕ್ಸಿಸ್ ವಿಮಾನಗಳು ನಾಶಮಾಡಲ್ಪಟ್ಟಿರುವವೆಂದೂ ಕಳೆದ ತಿಂಗಳಲ್ಲಿ 100 ವಿಮಾನಗಳನ್ನು ನಾಶಮಾಡಲಾಗಿವೆಯೆಂದೂ ಪ್ರಕಟಿಸಲಾಗಿದೆ.

ಟೋಕಿಯೋ ಪಟ್ಟಣದ ಮೇಲೆ ಜಯಶೀಲ ದಾಳಿ ನಡಿಸಿದ 70 ಮಂದಿ ಅಮೆರಿಕಾನ ವೈಮಾನಿಕರನ್ನು ಗೌರವಿಸಲಾಗಿದೆ.

WANTED.

Ordinary Shares of

THE CANARA INDUSTRIAL & BANKING SYNDICATE, Ltd.,

Quotation solicited with full particulars of the number of shares available for sale and relative paid-up value

The General Investment & Commercial Corporation, Ltd,

UDIPI, S. Kanara

SELF ENGLISH KANNADA TUTOR

ಸ್ವಯಂ ಇಂಗ್ಲೀಷ ಬೋಧಿನಿ

ನವೀನ ವಿಷಯಗಳು ಸೇರಿಸಲ್ಪಟ್ಟಿವೆ

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಶೀಘ್ರದಲ್ಲಿ ಕಲಿತುಕೊಳ್ಳಬಹುದು 81 [illegible] ಪ್ರತಿಗಳು ಮಾತ್ರ [illegible] ಕ್ರಯ ಪುಸ್ತಕ ಒಂದಕ್ಕೆ ರೂ 2-2-0

(ದ್ವಿತೀಯ ಮುದ್ರಣ)

THE MODERN BOOK Co.

No 28, Avadhanam Paper 2nd Lane (N Y) Choolai, MADRAS

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ವರ್ಗ—ಕುಂದಾಪುರ ತಹಸಿಲ್ದಾರರಾಗಿದ್ದ ಶ್ರೀ ಎ. ಬಿ. ಶಂಕರರಾವ್, ಬಿ. ಎ. ಅವರು ಕೊಯಮುತ್ತೂರು ಪ್ರಾಂತದ ಡೆಪ್ಯುಟಿ ಕಲೆಕ್ಟರರಾಗಿ ವರ್ಗಹೊಂದಿ, ಇಷ್ಟರಲ್ಲೇ ತಮ್ಮ ಆ ಸ್ಥಾನದ ಚಾರ್ಜು ವಹಿಸಲು ತೆರಳಿರುವರೆಂದು ಸುದ್ದಿ.

ರೆ. ಬೋರ್ಡು ಮೆಂಬರರ ಆಗಮನ—ಕೆಲವು ಸಮಯದ ಹಿಂದೆ ಇದೇ ಜಿಲ್ಲೆಯ ಕಲೆಕ್ಟರರಾಗಿದ್ದ ಹಾಲಿ ಕಮರ್ಶಿಯಲ್ ಟ್ಯಾಕ್ಸ್ ಕಮಿಶನರರೂ, ರೆವಿನ್ಯೂ ಬೋರ್ಡು ಮೆಂಬರರೂ ಆಗಿರುವ ಮಿ| ಇ. ಎಂ. ಗೋನ್ ಐ. ಸಿ. ಎಸ್., ಸಿ. ಐ. ಇ. ಅವರು ಮಂಗಳೂರಿಗೆ ದಯಮಾಡಿಸಿ ಒಂದೆರಡು ದಿನ ಇಲ್ಲಿರುವರೆಂದು ತಿಳಿದು ಬಂದಿದೆ.

ಬಿಡುಗಡೆ—ಸುಮಾರು ೨೧ ತಿಂಗಳುಗಳಿಂದ ತನಿಖೆಯಿಲ್ಲದೆ ಬಂಧಿತರಾಗಿದ್ದ ಶ್ರೀ. ಎನ್. ಎಲ್. ಉಪಾಧ್ಯಾಯರನ್ನು ಇಂಡಿಯಾ ಸರಕಾರದವರು ನಾಸಿಕರೋಡ್ ಸೆಂಟ್ರಲ್ ಜೈಲಿನಿಂದ ತಾ. ೮-೫-೪೨ರಂದು ಬಿಡುಗಡೆ ಮಾಡಿದ್ದಾರೆ. ಇವರ ತಮ್ಮ ಶ್ರೀ| ಎನ್. ಕೆ. ಉಪಾಧ್ಯಾಯರನ್ನು ತಾ. ೧-೫-೪೨ರಂದು ಬಿಡುಗಡೆ ಮಾಡಿದ್ದಾರೆ. ಇವರಿಬ್ಬರೂ ನಮ್ಮ ಜಿಲ್ಲೆಯವರು.

ಜಿಲ್ಲಾ ಬೋರ್ಡು—ವಿಶೇಷ ಸಭೆಯೊಂದು ತಾ. ೨೭ರಂದು ಪೂರ್ವಾಹ್ನ ೧-೩೦ಘಂಟೆಗೆ ಜರಗುವುದು.

ಶ್ರೀ| ಸಿ. ರಾಜಗೋಪಾಲಾಚಾರ್ಯರು— ತಾ. ೨೫ನೇ ಸೋಮವಾರ ಮಂಗಳೂರಿಗೆ ಬರುವರು.

ಅದರಲ್ಲಿದ್ದಂತೆಯೇ ಆಯಿತು.

"ಕಳೆದ ವರ್ಷ ನಾನು ನಿಮ್ಮ ವರ್ಷ ಭವಿಷ್ಯವನ್ನು ತರಿಸಿರುವುದು ಸರಿಯಷ್ಟೆ! ವೃಶ್ಚಿಕ ರಾಶಿಯವನಾದ ನನಗೆ ಅದರಲ್ಲಿ ಬರೆದ ಫಲಾಫಲಗಳೇ ಪ್ರಾಪ್ತವಾಗಿವೆ. ಈ ವರ್ಷವೂ ನನಗೆ ಒಂದು ಪತ್ರಿಯನ್ನು ಕೂಡಲೇ ರವಾನಿಸಿರಿ."

Hubli **R. N. Kulkarni.**

"ನೀವು ಸಕಾಲದಲ್ಲಿ ಕಳುಹಿಸಿಕೊಟ್ಟಿರುವ 1942ನೇ ಇಸವಿಯ ವರ್ಷಭವಿಷ್ಯವು ಮುಟ್ಟಿರುತ್ತದೆ. ಅದನ್ನು ನನ್ನ ಸ್ನೇಹಿತರಿಗೆ ಓದಲಿಕ್ಕೆ ಕೊಟ್ಟು ಕೊಟ್ಟು ಸಾಕಾಯಿತು. ಆದರೆ ಈಗ ಅದನ್ನು ಯಾರು ಕೊಂಡು ಹೋಗಿದ್ದಾರೆಂದೇ ತಿಳಿಯುವುದಿಲ್ಲ ಒಂದು ತಿಂಗಳಾದರೂ ಅದರ ಪತ್ತೆಯೇ ಇಲ್ಲ. ಆದ್ದರಿಂದ ಅದು ಇನ್ನು ಕಳೆದು ಹೋದಂತೆಯೇ ಸರಿ. ಜನವರಿ ಫೆಬ್ರುವರಿ ತಿಂಗಳಲ್ಲಿ ನನಗೆ ಅದರಲ್ಲಿ ಬರೆದಿದ್ದಂತೆಯೇ ಆಗಿದೆ. ಮುಂದೇನಾಗುವುದೆಂದು ತಿಳಿಯಲು ಇನ್ನೊಂದು ಪ್ರತಿ ಕಳುಹಿಸಿ. 0–3–9 ಸ್ಟ್ಯಾಂಪು ಲಗ್ತೀಕರಿಸಿದ್ದೇನೆ."

ಸಿ. ಕೆ. ಶೆಟ್ಟಿ, ಬೊಂಬಾಯಿ.

1942ನೇ ಇಸವಿಯ ವರ್ಷಭವಿಷ್ಯ ಇದರ ಪ್ರತಿಗಳು ಅಂತರಂಗದ ಏಜಂಟರಲ್ಲೆಲ್ಲಾ ಸಿಗುತ್ತವೆ. ಅಲ್ಲಿ ಸಿಗದಿದ್ದರೆ 0–3–9 ಸ್ಟ್ಯಾಂಪಿನೊಂದಿಗೆ ಬರೆಯಿರಿ.

ಅಂತರಂಗ ಆಫೀಸು ಉಡುಪಿ. | ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಪಾನ್ ವಿರುದ್ಧ ದಿನಾಚರಣೆ—ಕಳೆದ ಆದಿತ್ಯವಾರ ಸಂಜೆ ಮೈದಾನಿನಲ್ಲಿ ಸ್ಥಳೀಯ ಮಜೂರ ಸಂಘದ ಆಶ್ರಯದಲ್ಲಿ "ಜಪಾನಿನ ವಿರುದ್ಧ ದಿನಾಚರಣೆ"ಗಾಗಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಮಾಸ್ಟರ್ ವೆಂಕಣ್ಣರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ| ಕೆ ಬಿ ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಶ್ರೀಗಳಾದ ಕಕ್ಕಿಲ್ಲಾಯ, ಕೇಶವ ಕಾಮತ್ ಮೊದಲಾದವರು ಮಾತಾಡಿದರು. ಅಧ್ಯಕ್ಷರ ಭಾಷಣ ಹಾಗೂ ಭದ್ರಾವತಿಯಲ್ಲಿ ನಡೆದ ಪೋಲೀಸರ ಗೋಳಿಬಾರಿನ ಸ್ವತಂತ್ರ ವಿಚಾರಣೆಯಾಗಬೇಕೆಂಬ ಠರಾವುಗಳೊಡನೆ ಸಭೆ ಮುಗಿಯಿತು.

ಹೊಸ ಮಂದಿರ.

ಕೆನರಾ ಹ್ಯಾಸ್ಕೂಲಿನ ಶ್ರೀ. ಕೃಷ್ಣ ಮಂದಿರ ದೇವಸ್ಥಾನದ ಶಂಕುಸ್ಥಾಪನೆ ಸಮಾರಂಭವು ತಾ. ೮ನೇ ಶುಕ್ರವಾರ ಬೆಳಿಗ್ಗೆ 7-45ಕ್ಕೆ ಸುವಿಚಾರಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಅದರ ಶಂಕುಸ್ಥಾಪನೆಯಾದ ಮೇಲೆ ಶಾಲೆಯ ಮೆನೇಜರ್ ಎಮ್. ಮಾಧವರಾಯರು ಹಿಂದೂ ಶಾಲೆಗಳಲ್ಲಿ ಪ್ರಾರ್ಥನಾಮಂದಿರದ ಆಗತ್ಯವನ್ನೂ, ಶಾಲಾ ಬಾಲಕರಿಗೆ ಧರ್ಮದ ಮೇಲೆ ಶ್ರದ್ಧೆಯನ್ನು ಹುಟ್ಟಿಸಲಿಕ್ಕೆ ಈ ದೇವಸ್ಥಾನವು ಹೇಗೆ ಸಹಾಯಕವಾಗುವುದೆಂಬುದನ್ನೂ ವಿವರಿಸಿ ಎಲ್ಲರೂ ಜಾತಿಭೇದವಿಲ್ಲದೆ ಹರಿಜನರು ಸಮೇತ ಈ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡಬಹುದೆಂದು ಇಂತಹ ದೇವಸ್ಥಾನವು ನಮ್ಮ ಜಿಲ್ಲೆಯಲ್ಲಿ ಪ್ರಥಮದಾಗುವುದೆಂದು ಹೇಳಿ ಈ ದೇವಸ್ಥಾನವನ್ನು ಕಟ್ಟಿಸಲಿಕ್ಕೆ ಪೂರ್ಣ ಖರ್ಚನ್ನು ಕೊಡಲು ಒಪ್ಪಿದ ಶ್ರೀ| ಮಿಜಾರ ಕೃಷ್ಣಸ್ವಾಮಿ ಸಹೋದರರಿಗೆ ಶಾಲಾ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಉಡುಪಿ.

ಕಿನ್ನಿಮೂಲ್ಕಿಯ ಪದ್ಮಶಾಲಿ ವೈಶ್ಯ ಸಮಾಜ ಸೇವಾ ಸಂಘದ ದ್ವಿತೀಯ ವಾರ್ಷಿಕೋತ್ಸವವು ಇದೇ ಮೇ ತಿಂಗಳ ತಾ. 30ನೇ ಶನಿವಾರ ಹಗಲು ಘಂಟೆ 12ಕ್ಕೆ ಕಿನ್ನಿಮೂಲ್ಕಿ ಶ್ರೀ ವೀರಭದ್ರ ದೇವರ ಸನ್ನಿಧಿಯಲ್ಲಿ ಮಂಗಳೂರು ಬೊಂಬೈ ಬಿಜಿನೆಸ್ಸಿನ ಶ್ರೀಯುತ ಎಂ. ಎಸ್. ಟಿ. ಯಸ್. ಮಾಸ್ಟರ್ ಸೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕರ್ನಾಟಕ ವಿಶ್ವ ವಿದ್ಯಾಲಯ ಪರಿಷತ್ತು— ಶ್ರೀ| ಆರ್. ಎ. ಜಹಾಗೀರದಾರ, ಎಂ. ಎ. ಎಲ್ ಎಲ್. ಬಿ. ಸರಕಾರೀ ವಕೀಲ ಮುಂಬಾಯಿ ಹಾಯ್ ಕೋರ್ಟು, ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ 30 ಹಾಗೂ 31ನೇ ತಾರೀಕಿಗೆ ಬೆಳಗಾವಿಯಲ್ಲಿ ಕೂಡುವದು. ಪರಿಷತ್ತಿನ ಸಿದ್ಧತೆಯು ಭರದಿಂದ ಸಾಗಿದೆ. ಪ್ರತಿನಿಧಿಗಳಿಗೆ ಉಳಕೊಳ್ಳುವ ಹಾಗೂ ಊಟದ ವ್ಯವಸ್ಥೆ ಮಾಡಲಾಗುವದು. ಕರ್ನಾಟಕದ ಎಲ್ಲ ಭಾಗಗಳಿಂದ ಪ್ರತಿನಿಧಿಗಳು ಬಂದು ಪರಿಷತ್ತಿನಲ್ಲಿ ಭಾಗವಹಿಸಿ ಅದನ್ನು ಯಶಸ್ವಿ ಮಾಡಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಕಾರ್ಕಳ

ಕಾಂಗ್ರೆಸ್ ಪ್ರಚಾರ— ಶ್ರೀ| ರಂಗನಾಥ ರಾಮಚಂದ್ರ ದಿವಾಕರ ಮತ್ತು ಶ್ರೀ ಚೆನ್ನಬಸಪ್ಪಾ ಅಂಬಲಿಯವರು ತಾ. ೧೨ ದಿನ ಕಾರ್ಕಳವನ್ನು ಸಂದರ್ಶಿಸಿ, ಸರ್ಕಲ್ ಕಾಂಗ್ರೆಸ್ ಕಮಿಟಿಯ ಆದರಾತಿಥ್ಯಗಳನ್ನು ಸ್ವೀಕರಿಸಿ, ಸಾಯಂಕಾಲ ಶ್ರೀ| ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ಪರವಾಗಿ ಶ್ರೀ| ಡಿ. ಎ. ಭಟ್ಟರು ಅರ್ಪಿಸಿದ ಮಾನಪತ್ರವನ್ನು ಪಡೆದು, ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮ ಮತ್ತು ರಾಷ್ಟ್ರಭಾಷಾ ಪ್ರಚಾರದ ಅಗತ್ಯ ಹಾಗೂ ಯುದ್ಧದಲ್ಲಿ ಶತ್ರುಪಕ್ಷವನ್ನು ಅಹಿಂಸಾತ್ಮಕ ಅಸಹಕಾರದ ಮೂಲಕ ಎದುರಿಸುವ ಕುರಿತು ಭಾಷಣಗಳನ್ನು ಕೊಟ್ಟರು.

ಕೈ. ವಾ. ಇಡ್ಯ ವಾಸುದೇವಯ್ಯನವರ ಸ್ಮಾರಕಮಂದಿರದ ಉದ್ಘಾಟನೆ:- ತಾ ೯ನೇ ಸಾಯಂಕಾಲ ಶ್ರೀ ಸುಬ್ರಹ್ಮಣ್ಯದಲ್ಲಿ, ದಿವಂಗತ ಇಡ್ಯ ವಾಸುದೇವಯ್ಯನವರ ಸ್ಮಾರಕ ಮಂದಿರದ ಉದ್ಘಾಟನಾ ಸಮಾರಂಭವು ಶ್ರೀ ಕಾರ್ಕಳ ಸದಾಶಿವರಾವ್ ಯಂ. ಯಲ್. ಅವರಿಂದ ನೆರವೇರಿಸಲ್ಪಟ್ಟಿತು. ಮಂಗಳೂರು ನಗರ ಸಭಾಧ್ಯಕ್ಷರಾದ ಶ್ರೀ| ಬಿ. ವಿ ಬಾಳಿಗ, ಯಂ. ಎಲ್. ಎ. ಅವರು ಅಗ್ರಾಸನ ವಹಿಸಿದ್ದರು.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಅಂಜನೇಯಸ್ವಾಮಿ ದೇವಸ್ಥಾನದಲ್ಲಿ ಮುಖ್ಯಪ್ರಾಣ ದೇವರ ಪ್ರತಿಷ್ಠೆ

(ನಮ್ಮ ವಿಶೇಷ ಬಾತ್ಮೀದಾರರಿಂದ)

ಮದ್ರಾಸ್ ಸೋಡರ್ನ್ ಕೆಫೆಯ ಮಾಲಕರಾದ ಶ್ರೀ| ಕೆ ಸೀತಾರಾಮರಾಯರು ತಮ್ಮ ತಂದೆ ದಿವಂಗತ ಬ್ರ| ಶ್ರೀ| ಕೆ. ಗೋವಿಂದದಾಸರ ಸ್ಮಾರಕವಾಗಿ ಶ್ರೀ ಸುಬ್ರಹ್ಮಣ್ಯದಲ್ಲಿ ಕಟ್ಟಿಸಿರುವ ಶ್ರೀ ಅಂಜನೇಯ ದೇವಸ್ಥಾನದಲ್ಲಿ, ಶ್ರೀ ಅಂಜನೇಯ ಸ್ವಾಮಿಯ ಪ್ರತಿಷ್ಠಾ ಸಮಾರಂಭವು ನಿನ್ನೆಯ ದಿನ ಪೂರ್ವಾಹ್ನ ೯ಘಂಟೆಯ ಸುಮಾರಿಗೆ ನಡೆಯಿತು. ಉಡುಪಿಯ ಶ್ರೀ ಫಲಿಮಾರು ಮಠದ ಶ್ರೀ ಮದ್ರಘುಮಾನ್ಯ ತೀರ್ಥ ಶ್ರೀ ಪಾದಂಗಳವರು ವೈದಿಕ ಲೌಕಿಕ ಮಹಾ ಜನರ ಸಮ್ಮುಖದಲ್ಲಿ ಪ್ರತಿಷ್ಠಾ ಕಾರ್ಯವನ್ನು ನೆರವೇರಿಸಿದರು. ಹೊಸದೇವಸ್ಥಾನದಲ್ಲಿ ಶ್ರೀ ಫಲಿಮಾರು ಮಠದ ಶ್ರೀಗಳವರಿಗೂ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಪಾದಂಗಳವರಿಗೂ ಪಾದ ಪೂಜೆ ನಡೆಸಲ್ಪಟ್ಟಿತು. ಶ್ರೀ ಫಲಿಮಾರು ಮಠದ ಶ್ರೀಗಳವರಿಗೆ, ಭಿಕ್ಷೆಯೂ, ಅದೇ ಸಂದರ್ಭದಲ್ಲಿ ಬ್ರಾಹ್ಮಣಾರಾಧನೆಯೂ ಶ್ರೀ ಅಂಜನೇಯ ದೇವಸ್ಥಾನದಲ್ಲಿ ನಡೆದುವು. ವಿಶೇಷ ಉತ್ಸವಗಳೂ ಇದ್ದುವು.

ಮೈಸೂರು ಮಹಾರಾಜರ ತೈಲಚಿತ್ರ ಅನಾವರಣ:—ನಿನ್ನೆಯ ದಿನ ಶ್ರೀ| ಭಾಗಮಂಡಲ ಶ್ರೀಪತಿರಾಯರ ಛತ್ರದಲ್ಲಿ, ಮಾನ್ಯ ರಾ| ಯ್ಯ, ರಾವ್‌ರಾಯರ ಅಧ್ಯಕ್ಷತೆಯಲ್ಲಿ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಒಡೆಯರ ಮತ್ತು ರಾ. ಬ. ಬಿ. ಶ್ರೀಪತಿರಾಯರ ಭಾವಚಿತ್ರಗಳ ಅನಾವರಣ ಕಾರ್ಯಗಳು ಕ್ರಮವಾಗಿ ಶ್ರೀ. ಟಿ. ಯಂ. ಶ್ರೀಕಂಠಯ್ಯನವರಿಂದಲೂ ಶ್ರೀ| ಸಿ. ಯಂ. ರಾಮರಾಯರಿಂದಲೂ ನೆರವೇರಿಸಲ್ಪಟ್ಟುವು.

ರಾ. ಬ ಶ್ರೀಪತಿರಾಯರ ಭಾವಚಿತ್ರ ಅನಾವರಣ:—ಕೊಡಗಿನ ವಿದ್ಯಾಧಿಕಾರಿಗಳಾದ ಶ್ರೀ| ಸಿ. ಯಂ ರಾಮರಾಯರು ರಾ. ಬ. ಶ್ರೀಪತಿರಾಯರ ಭಾವಚಿತ್ರವನ್ನು ಅನಾವರಣ ಮಾಡುವ ಸಂದರ್ಭದಲ್ಲಿ, ಶ್ರೀ| ರಾಯರ ಸರಳ ಜೀವನ, ಪಾಂಡಿತ್ಯ, ಜನತಾ ಸೇವೆಯಲ್ಲಿ ಅವರಿಗಿರುವ ಆಸಕ್ತಿ, ಉತ್ಸಾಹ, ಇವೇ ಮೊದಲಾದ ವಿಷಯಗಳನ್ನು ಎತ್ತಿ ಹೇಳಿ, ಅವರಿಗೆ ಸರಕಾರದವರಿತ್ತ ರಾ. ಬ. ಬಿರುದು ನ್ಯಾಯವಾಗಿ ಸಲ್ಲತಕ್ಕದ್ದೆಂದು ಹೇಳಿ, ಭಾವಚಿತ್ರವನ್ನು ಅನಾವರಣ ಮಾಡಿದರು. ದೇವಳದ ಪರವಾಗಿ ಶ್ರೀ| ಕೆ. ಆರ್. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ಶ್ರೀ| ಬಿ. ರಾಮಚಂದ್ರ ರಾಯರು ಮಾನ್ಯ ಅಧ್ಯಕ್ಷರಿಗೆ ವಂದನಾರ್ಪಣೆ ಮಾಡಿದರು.

ರೂರಲ್ ಡಿಸ್ಪೆನ್ಸರಿಯ ಉದ್ಘಾಟನೆ:—ಅದೇ ಹೊತ್ತಿನಲ್ಲಿ ಸುಬ್ರಹ್ಮಣ್ಯ ರೂರಲ್ ಡಿಸ್ಪೆನ್ಸರಿಯ ಆರಂಭೋತ್ಸವವು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಮಾನ್ಯ ರಾ| ವಿಟ್ಠಲ ಶೆಟ್ಟರ ಹಸ್ತದಿಂದ ನೆರವೇರಿತು. ಅಧ್ಯಕ್ಷರ ಸಮಯೋಚಿತ ಭಾಷಣ, ಧನ್ಯವಾದಾರ್ಪಣೆ, ಉಪಾಹಾರ, ಭಾವಚಿತ್ರಗಳಿಗಾಗಿ ಸಮಾರಂಭವು ಕೊನೆಗೊಂಡಿತು. ಮೇಲಿನ ಎಲ್ಲ ಕಾರ್ಯಕಲಾಪಗಳಲ್ಲಿಯೂ ಶ್ರೀ ಫಲಿಮಾರು ಮತ್ತು ಶ್ರೀ ಸುಬ್ರಹ್ಮಣ್ಯ ಮಠಗಳ ಶ್ರೀ ಶ್ರೀಗಳವರು ಭಾಗವಹಿಸಿ ಶಿಷ್ಯ ವರ್ಗದವರನ್ನು ಅಭಿನಂದಿಸಿದುದು ಎತ್ತಿ ಹೇಳತಕ್ಕ ವಿಷಯವಾಗಿದೆ.

ಬೈಂದೂರು—ಶ್ರೀ| ಎಡ್ತರೆ ಕೃಷ್ಣಪ್ಪ ಶೆಟ್ಟಿ ಮಾತೃ ಶ್ರೀಯವರು ಇದೇ ತಾ 12-5-42ರಲ್ಲಿ ತಮ್ಮ ಅಪರ ವಯಸ್ಸಿನಲ್ಲಿ ದಿವಂಗತರಾದರು. ಸುಪ್ರಸಿದ್ಧ ಬಂಟ ಮನೆತನದ ಶ್ರೀಮಂತೆಯರಾದ ಇವರು ಪರೋಪಕಾರ, ದಾನಧರ್ಮ, ಸನಾತನ ಸಂಪ್ರದಾಯಗಳಿಗೆ ಆಕರೆಯಲ್ಲೆಲ್ಲಾ ಅತ್ಯಂತ ಹೆಸರುವಾಸಿಯಾಗಿದ್ದರು. ಬಡವರಲ್ಲಿ ದಯೆ, ಸದಾ ಪರಿಶ್ರಮ, ಶ್ರೀಮಂತರಲ್ಲಿ ಅಪರೂಪವಾಗಿರುವ ಇವರಲ್ಲಿರುವ ಅಮೂಲ್ಯ ಗುಣಗಳು ಈ ವೃದ್ಧ ನಾರಿಯಲ್ಲಿದ್ದುವು. ತಾಯಿ ಹಾಗೂ ಅವರ ಪರಿಮನ್ನ ಕುಮಾರರು ನೆರಳಾಗಿರಬಹುದು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ಪೇಚಾಡುತ್ತಿರುವುದೇಕೆ?

ಅಭಿನಯಿಸಲು ಒಳ್ಳೆಯ ನಾಟಕವಿಲ್ಲವೆಂದು ಪೇಚಾಡುತ್ತಿರುವುದೇಕೆ? ಆಧುನಿಕ ಮನೋವೃತ್ತಿಗೊಪ್ಪುವ ಸಾಮಾಜಿಕ ಅಥವಾ ಪೌರಾಣಿಕ ನಾಟಕಗಳು ಬೇಕಾದರೆ ನಮಗೆ ಬರೆಯಿರಿ.

ಇತ್ತೀಚೆಗೆ ಪ್ರಕಟವಾದ ಎರಡು ಉತ್ತಮ ನಾಟಕಗಳು.

"ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳೆತಕ್ಕೆ ಸಿಕ್ಕಿ ನೆಲೆ ತಪ್ಪುತ್ತದೆ" ಎಂಬುದನ್ನು ಮನಗಾಣಿಸುವ **ಉಜ್ವಲ ಸಾಮಾಜಿಕ ನಾಟಕ**

◎ ಪ್ರೇಮವಿಜಯ ◎

(ಬರೆದವರು: ಶ್ರೀ| ಕೆ. ಕೆ ಶೆಟ್ಟಿ)

ಬೆಲೆ. 0—12—0. ● ಟ. ಖ. 0—1—6.

ಜನರಲ್ಲಿ ಒಂದು ಹೊಸ ಹುರುಪು ಹುಟ್ಟಿ ಅದು ವೈಯಕ್ತಿಕ ಅಯೋಗ್ಯತೆಯಿಂದಾಗಿ ಫಲಕಾರಿಯಾಗದೆ ವಿನಾಶಕ್ಕೆ ಹೇತುವಾಗುವುದು. ಅದರಿಂದಾಗಿ ಹಲವು ಸಂಸ್ಥೆಗಳು ಗಳಿಗೆಗೊಂದರಂತೆ ಆವಿರ್ಭವಿಸಿ, ಅಂತೆಯೆ ಅಂತರ್ಧಾನವಾಗುತ್ತಿರುವವು. ಈ ತತ್ವದ ಸೂಕ್ಷ್ಮ ಪರಿಶೀಲನೆಯನ್ನು ಮನಗಾಣಿಸುವ ನಾಟಕ.

||| 'ರಂಗಭೂಮಿ' |||

(ಬರೆದವರು: ಶ್ರೀ| ಎಸ್. ವೆಂಕಟರಾಜರು.)

●

ನಾಟಕ ಕಂಪೆನಿಯವರ ನೈಜಜೀವನವನ್ನು ವಿನೋದವಾಗಿ ಚಿತ್ರಿಸಿರುವ ನಾಟಕವಿದು.

ಬೆಲೆ 0—8—0. ● ಟ. ಖ. 0—1—6.

ಎರಡೂ ಪುಸ್ತಕ ತರಿಸಿಕೊಳ್ಳುವವರಿಗೆ ಟ. ಖ ಮುಫತ್ತು. ರೂ. 1—4—0ರ ಸ್ಟ್ಯಾಂಪು ಕಳಿಸಿದರೆ ಯಾ ಮನಿಯಾರ್ಡರು ಮಾಡಿದರೆ ಎರಡು ಪುಸ್ತಕಗಳನ್ನೂ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಒಂದು ಚಿತ್ರಮಾತ್ರವಾಗಿರುತ್ತದೆ." ಸಭೆಗಳು, ಸಂಸ್ಥೆಗಳಿಂದ ಬೇಸರಹೊಂದಿದ ಒಬ್ಬ ವ್ಯಕ್ತಿಯು ಈ ಮಹತ್ವದ ಸತ್ಯವನ್ನು ಈ ರೀತಿ ವ್ಯಕ್ತಪಡಿಸಿದ್ದಾನೆ. "ಆದರ್ಶ ಸಭೆ ಯಾವುದು ಗೊತ್ತೆ? ಅದಕ್ಕೆ ಕೇವಲ ಮೂರು ಮಂದಿ ಸದಸ್ಯರಿರಬೇಕು; ಅವರ ಪೈಕಿ ಇಬ್ಬರು ಯಾವಾಗಲೂ ರೋಗಗ್ರಸ್ತರಾಗಿರಬೇಕು" ತನ್ನ ದೇಶವನ್ನು ಉತ್ಕೃಷ್ಟ ಸ್ಥಿತಿಗೆ ತರಲು ಸಹಾಯಮಾಡಿರುವ ಪ್ರತಿಯೊಂದು ಸಂಸ್ಥೆಯೂ ಸಹ ಒಂದೇ ವ್ಯಕ್ತಿಯ ಶ್ರಮ ಮತ್ತು ಧೈರ್ಯೋತ್ಸಾಹಗಳ ಫಲವೇ ಆಗಿದೆ.

ನಾವು ಒಂಟಿಯಾಗಿ ಏನನ್ನೂ ಮಾಡಲಾರೆವು, ಕೇವಲ ಸಂಘಟನೆಯಿಂದ ಏನಾದರೂ ಮಾಡಬಹುದು, ಎಂಬ ದುರಭಿಪ್ರಾಯವು ಪ್ರಾಯಶಃ ಎಲ್ಲರಲ್ಲಿಯೂ ನೆಲೆನಿಂತುಕೊಂಡಿರುತ್ತದೆ. ನಾವು ಈ ಸಂಘಟನೆಯನ್ನು ಗಮನಿಸಿದರೆ, ಅದರ ರಚನಾತ್ಮಕ ಕಾರ್ಯದ ತಳಹದಿಯು ಒಂದೇ ವ್ಯಕ್ತಿಯಿಂದ ಇಡಲ್ಪಟ್ಟಿರುವುದೆಂಬುದು ವ್ಯಕ್ತವಾಗುವುದು. ಆಗಲೂ ಜನರು "ಆ ಸಂಸ್ಥೆಯ ಪ್ರಾಣವು ಇಂತಹ ವ್ಯಕ್ತಿಯೇನೋ ಹೌದು. ಆದರೆ ಆ ವ್ಯಕ್ತಿಯು ನಮ್ಮೆಲ್ಲರಿಗಿಂತ ಬಹಳ ದೊಡ್ಡವರು" ಎನ್ನುವರು. ಇದಕ್ಕೆ ವಿಪರೀತವಾಗಿ ಎಮರ್ಸನ್ನರು ಹೇಳುವುದನ್ನು ಕೇಳಿ, "ಜಗತ್ತಿನಲ್ಲಿ ಯಾರೂ ದೊಡ್ಡವರಿಲ್ಲ, ಯಾರೂ ಸಣ್ಣವರಿಲ್ಲ. ನಾವು ಇತರರನ್ನು ದೊಡ್ಡವರೆಂದು ಕರೆಯುವ ಕಾರಣವೇನೆಂದರೆ, ಅವರಲ್ಲಿರುವ ದೈವೀಜ್ಯೋತಿಯನ್ನು ಅವರು ಪ್ರಕಾಶಗೊಳಿಸುವರು, ನಾವು ಅದನ್ನು ಉಪಯೋಗಿಸಿಕೊಳ್ಳುವುದಿಲ್ಲ. ಅಷ್ಟೇ, ನಾವು ನಮ್ಮನ್ನು ಬಹಳ ತುಚ್ಛರೆಂದು ಎಣಿಸಲಾರಂಭಿಸುತ್ತೇವೆ, ಆದುದರಿಂದಲೇ ನಮಗೆ ಸಫಲತೆಯುಂಟಾಗುವುದಿಲ್ಲ ನಾವು ನಮ್ಮಲ್ಲಿರುವ ಶಕ್ತಿಯ ಮಹತ್ವವನ್ನು ಅರಿಯಲು, ಅದರ ಸದುಪಯೋಗ ಮಾಡಿಕೊಳ್ಳಲು ಪ್ರಯತ್ನಮಾಡುವುದೇ ಇಲ್ಲ."

ಒಬ್ಬ ಅಧ್ಯಾಪಕಿ ಇದ್ದಳು. ತಾನೊಬ್ಬ ಕೆಲಸಕ್ಕೆ ಬಾರದ "[illegible] ಮಿಸ್ಟ್ರೆಸ್" ಎಂದು ಆಕೆಯು ಭಾವಿಸಿದ್ದಳು. ಮಕ್ಕಳ ಜೀವನವನ್ನು ತಿದ್ದಿ ರೂಪುಗೊಳಿಸಿ, ಅದು ಪ್ರಭಾವಶಾಲಿಯಾದುದನ್ನಾಗಿ ಮಾಡುವುದರಲ್ಲಿ ಅಧ್ಯಾಪಕಿಯ ಸ್ಥಾನವು ತಾಯಿಗೆ ಎರಡನೆಯದಾಗಿದೆ. ಆದರೆ ಆಕೆಯು ತನ್ನ ಈ ಮಹಾಶಕ್ತಿಯನ್ನು ಮರೆತುಬಿಟ್ಟಳು. ಒಂದುಸಾರಿ, ಇದ್ದಕ್ಕಿದ್ದಂತೆ ಅವಳಿಗೆ ತನ್ನಲ್ಲಿದ್ದ ಗುಪ್ತಶಕ್ತಿಯ ಜ್ಞಾನವುಂಟಾಯಿತು. ಆ ದಿನದಿಂದಲೇ ಆ ಶಾಲೆಯ ಕೆಲಸ ಕಾರ್ಯಗಳಲ್ಲಿ, ಅತ್ಯಂತ ಗಮನಾರ್ಹವಾದ ಪರಿವರ್ತನೆಗಳುಂಟಾದುವು. ಆಕೆಯು ಮಕ್ಕಳನ್ನು ತೀರ ಹೊಸದಾದ ದೃಷ್ಟಿಯಿಂದ ನೋಡಲಾರಂಭಿಸಿದಳು. ಜಗದೀಶ್ವರನು ಎಲ್ಲರಿಗೂ ಕೊಟ್ಟಿರುವ ಶ್ರೇಷ್ಠವಾದ ಆತ್ಮವಿಶ್ವಾಸವು ಅವಳಲ್ಲಿ ಜಾಗೃತಗೊಂಡಿತು ಆಕೆಯಲ್ಲಿ ದಿವ್ಯ ಜ್ಯೋತಿಯು ಪ್ರಜ್ವಲಿತವಾಯಿತು. ಪರಿಣಾಮವಾಗಿ ಕೇವಲ 18 ತಿಂಗಳಲ್ಲೇ ಆಕೆಯು ಆ ಶಾಲೆಯ ಪ್ರಧಾನಾಧ್ಯಾಪಕಿಯಾದಳು. ಈ ದೇವಿಯು, ಪ್ರತಿವರ್ಷವೂ ಸಾವಿರಾರು ನಿಜವಾದ ದೇಶಭಕ್ತರನ್ನು ತನ್ನ ಶಾಲೆಯಲ್ಲಿ ಉತ್ಪ

ಆತ್ಮ ವಿಶ್ವಾಸವೇ ವಿಜಯದ ಬೀಗದ ಕೈ

(೪ನೇ ಪುಟದಿಂದ ಮುಂದರಿದುದು).

ವರು. ನೋಡಿದಿರಾ! ಎಂತಹ, ಅನುಪಮವಾದ ಸೇವೆ! ಕೇವಲ ಆತ್ಮವಿಶ್ವಾಸವು ಸ್ಫುರಿತವಾದ ಪರಿಣಾಮದಿಂದಲ್ಲವೇ?

ಸಮಸ್ತ ತೊಂದರೆಗಳ ಮೂಲವೂ ನಮ್ಮ ಈ ಕ್ಲೈಬ್ಯತನವೇ ಆಗಿದೆ. ಮೊದಲು ನಮ್ಮಲ್ಲಿ ಆತ್ಮವಿಶ್ವಾಸವಂತೂ ಇಲ್ಲವೇ ಇಲ್ಲ. ಅಲ್ಪ ಸ್ವಲ್ಪ ಇದ್ದರೂ ತೀರ ಅಗಣ್ಯವಾದುದಾಗಿದೆ.

ಮಹಾತ್ಮಾ ಏಸು ಕ್ರಿಸ್ತರು ಎಂತಹ ಉತ್ತಮವಾದ ಉಪದೇಶವನ್ನು ಕೊಟ್ಟಿರುವರು? ನೋಡಿ-ನಿಮ್ಮಲ್ಲಿ ಸಾಸುವೆ ಕಾಳಿನಷ್ಟಾದರೂ ಆತ್ಮವಿಶ್ವಾಸವಿದ್ದಲ್ಲಿ, ನಿಮಗೆ ಯಾವ ಕೆಲಸವೂ ಅಸಾಧ್ಯವಾಗಲಾರದು.

ನಮ್ಮಿಂದ ಆ ಕೆಲಸ ಸಾಧ್ಯವೇ ಇಲ್ಲ ಎಂದು ಹೇಳುತ್ತ ಚಿಂತಿಸುತ್ತಿರುವ ಯುವಕರನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಈ ರೀತಿಯ ವಿಚಾರದಲ್ಲಿಯೇ ಅವರು ಸಮಯವನ್ನೆಲ್ಲ ನಷ್ಟಮಾಡಿಕೊಳ್ಳುವರು. ಭಗವಂತನು ತಮ್ಮನ್ನು ಯಾವ ಉದ್ದೇಶಕ್ಕಾಗಿ ಕಳುಹಿಸಿರುವನೆಂಬುದನ್ನು ಅವರು ಮರೆಯುವರು. ಒಂದು ವೇಳೆ ಅವರು ತಮ್ಮ ಉದ್ದೇಶವೇನೆಂಬುದನ್ನು ಗಮನಿಸಿದರೆ, ಖಂಡಿತವಾಗಿಯೂ ಕಾರ್ಯತತ್ಪರರಾಗುವರು. ಪ್ರಯತ್ನಮಾಡುವುದು, ಮತ್ತು ಈ ಪ್ರಯತ್ನಕ್ಕೆ ತನ್ನ ಸರ್ವ ಶಕ್ತಿಯನ್ನು ವಿನಿಯೋಗಿಸುವುದೇ ತಮ್ಮ ಕರ್ತವ್ಯ ಅದೇ ತಮ್ಮ ಧರ್ಮ ಎಂದು ಭಾವಿಸಬೇಕು.

ಆತ್ಮವಿಶ್ವಾಸವಿಲ್ಲದವರು "ನಾನು ಕೈಲಾಗದವನು" ಎನ್ನುತ್ತ ಕುಳಿತಿರುವನು; ವಿವೇಕಿಯಾದವನು "ನಾನು ಸರ್ವ ಶಕ್ತನು" ಎಂದು ತಿಳಿದು ಆ ತತ್ವವನ್ನು ಸತ್ಯಮಾಡಿ ತೋರಿಸುವನು.

ನೆಪೋಲಿಯನ್ನನು ಈ ಸಿದ್ಧಾಂತವನ್ನು ಚೆನ್ನಾಗಿ ತಿಳಿದಿದ್ದನು. ಅವನು ಈ ರೀತಿ ಹೇಳುತ್ತಿದ್ದನು—

"ಪರಿಸ್ಥಿತಿ ಎಂದರೇನು? ಗೊತ್ತೆ? ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳುವವನು ಸ್ವಯಂ ನಾನೇ"

ಇದು ಕೆಲಸಕ್ಕೆ ಬಾರದ ಮಾತಲ್ಲ; ಒಬ್ಬ ನಿಜವಾದ ಕರ್ಮಯೋಗಿಯ ಅಮೂಲ್ಯ ವಚನ!

ಚಂದಾದಾರರಲ್ಲಿ-

ಚಂದಾ ಹಣ ಬಾಕಿ ಇರುವ ಚಂದಾದಾರರೆಲ್ಲರೂ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮ್ಯಾನೇಜರ್.



ಜರ್ಮನರ ಬರ್ಬರ ಅತ್ಯಾಚಾರ

ಸಾಮುದಾಯಿಕ ಕೊಲೆ ಮತ್ತು ಪೈಶಾಚಿಕ ಹಿಂಸೆ

ನಾಝಿ ರಾಕ್ಷಸರ ಅಮಾನುಷ ಕೃತ್ಯಗಳು

ತಾವು ಗೆದ್ದಿರುವ ರಷ್ಯದ ಪ್ರದೇಶಗಳಲ್ಲಿ ಜರ್ಮನ್ ಸೈನಿಕರು ನಡಿಸುತ್ತಿರುವ ಅತ್ಯಾಚಾರಗಳು ಅಮಾನುಷವಾಗಿರುತ್ತವೆ. ಆ ಕುರಿತು ಜನರು ಸೈನ್ಯಾಧಿಕಾರಿಗಳಿಗೆ ದೂರು ಕೊಂಡುಹೋದ ಪಕ್ಷದಲ್ಲಿ ಅವರೇ ಕೊಲ್ಲಲ್ಪಡುವ ಸಂಭವವೇ ಹೆಚ್ಚು.

ನೋಸ್ಕೋ ಪ್ರದೇಶದಲ್ಲಿ ಯುಸ್ಕಿನೋವ್ ಎಂಬ ಸ್ತ್ರೀಯೋರ್ವಳು 5 ಮಕ್ಕಳ ತಾಯಿ. ಅವಳ ಮಕ್ಕಳ ವಸ್ತ್ರಗಳನ್ನೆಲ್ಲ ಜರ್ಮನ್ ಸೈನಿಕರು ಕಸಕೊಂಡು ಹೋಗಿದ್ದರು. ಉಡಲು ವಸ್ತ್ರವಿಲ್ಲದೆ ಯುಸ್ಕಿನೋವಳ ಮಕ್ಕಳಿಗೆ ತೀವ್ರ ಚಳಿಯಲ್ಲಿ ಶೀತವುಂಟಾಯಿತು. ಅವಳು ಜರ್ಮನ್ ಸೈನ್ಯಾಧಿಕಾರಿಯ ಬಳಿಗೆ ಹೋಗಿ ತನ್ನ ಮಕ್ಕಳ ವಸ್ತ್ರಗಳನ್ನು ಹಿಂದ ಕೊಡಬೇಕೆಂದು ಕೇಳಿಕೊಂಡಳು. ಅವಳನ್ನು ಓರ್ವ ಜರ್ಮನ್ ಅಧಿಕಾರಿಯೇ ಕೂಡಲೆ ಗುಂಡು ಹೊಡೆದು ಕೊಂದು ಹಾಕಿದನು. ಆ ಮೇಲೆ ಅವಳ ಮಕ್ಕಳ ಗತಿಯೇನಾಗಿರಬೇಕೆಂದು ಪ್ರತ್ಯೇಕ ಹೇಳಬೇಕಿಲ್ಲವಷ್ಟೆ.

ಜರ್ಮನ್ ಸೈನಿಕರು ಸೆರೆಯಾಳುಗಳಿಗೆ ಕೊಡುವ ಹಿಂಸೆಯು ಅವರ್ಣನೀಯವಾಗಿರುವುದು. ಮಂಜುಬಿದ್ದಿದ್ದ ಅಸಹನೀಯ ಚಳಿಗಾಲದ ಒಂದು ದಿನದಲ್ಲಿ ಕೆಲಮಂದಿ ಸೆರೆಯಾಳುಗಳ ಮೇಲೆ ಹಿಮ ಹೊಯ್ದು ಅವರನ್ನು ಹಿಮಕಂಬಗಳಾಗಿ ಮಾರ್ಪಡಿಸಲಾಯಿತು. ಚಿತ್ರಹಿಂಸೆಯು ಸರ್ವಸಾಮಾನ್ಯವಾದುದು. ಶರೀರವನ್ನೆಲ್ಲಾ ಕ್ಷತವಿಕ್ಷತಗೊಳಿಸಿ ರಕ್ತದಿಂದ ತೋಯ್ದು ಹೋಗುವಂತೆ ಮಾಡಲಾಗುವುದು.

ನಾಝಿಗಳು ಕೆಂಪು ಸೈನಿಕರಿಂದ ಹಿಂದಕ್ಕಟ್ಟಲ್ಪಟ್ಟಾಗ ಅವರು ಹಳ್ಳಿ, ಪಟ್ಟಣಗಳನ್ನೆಲ್ಲಾ ಸುಟ್ಟು ಹಾಕಿ ಅವುಗಳ ಜನರನ್ನು ಪಶುಗಳಂತೆ ಗದ್ದೆಗಳಿಗೋಡಿಸಿ ಬಿಡುವುದು ಸರ್ವಸಾಮಾನ್ಯ ಕ್ರಮ. ಹೀಗೆ ಓಡಿಸಲ್ಪಟ್ಟ ಸಾವಿರಾರು ಮಂದಿ ಸ್ತ್ರೀಯರು, ಮಕ್ಕಳು ಮತ್ತು ಮುದುಕರು ಅನ್ನ ವಸ್ತ್ರವಿಲ್ಲದೆ ಚಳಿಯಲ್ಲಿ ಮೃತರಾಗಿರುವರು. ಲೆಕ್ಕವಿಲ್ಲದಷ್ಟು ಸಾಮುದಾಯಿಕ ಕೊಲೆಗಳು ನಡೆಯುತ್ತಿವೆ. ಹಿಂಸೆ ಮತ್ತು ಕೊಲೆಗಳು ಭಯಂಕರವಾಗಿ ನಡಿಸಲ್ಪಡುತ್ತಿವೆ. ಸ್ತ್ರೀ ಮಕ್ಕಳೆದುರಲ್ಲಿ ಹೆತ್ತವರನ್ನೂ, ಹೆತ್ತವರೆದುರಲ್ಲಿ ಮಕ್ಕಳನ್ನೂ ಹೃದಯರಹಿತವಾಗಿ ಪೀಡಿಸಲಾಗುತ್ತದೆ. ಮನೆ ಮನೆ ಹುಡುಕಿ ಮನುಷ್ಯರನ್ನು ಹಿಡಿದು ಗುಂಪಾಗಿ ಸೇರಿಸಿ ಮಿಶನ್‌ತೋಪು ಅಥವಾ ಗ್ರೆನೇಡುಗಳ ಮೂಲಕ ಅವರನ್ನೊಮ್ಮೆಯೇ ಕೊಂದು ಹಾಕಲಾಗುತ್ತದೆ. ಗೂಟಗಳಿಗೆ ಕಟ್ಟಿ ಸುಡುವ ಮತ್ತು ಸಜೀವವಾಗಿ ಹೂಳಿಡುವ ಪೈಶಾಚಿಕ ಕೊಲೆಗಳು ಕೂಡಾ ನಡಿಸಲ್ಪಟ್ಟಿವೆ.

ತಾ. 7-1-42ರಲ್ಲಿ ಸ್ಮೋಲೆಂಕ್ಸ್ ಪ್ರದೇಶದ ಪೊಬುರ್ಝ್ ಎಂಬ ಹಳ್ಳಿಯ 9 ಮಂದಿ ಮುದುಕರು, 51 ಸ್ತ್ರೀಯರು ಮತ್ತು 50 ಮಕ್ಕಳು ಭೀಕರ ಮರಣಕ್ಕೊಳಗಾಗಿರುವರು. ನಾಝಿ ರಾಕ್ಷಸರು ಅವರನ್ನು ಕತ್ತಿಗಳಿಂದ ಕಡಿದು, ಬೊಯನೆಟ್ಟುಗಳಿಂದ ತಿವಿದು, ಅವರ ಮೇಲೆ ಗ್ರೆನೇಡುಗಳನ್ನೆಸೆದು, ಮಿಶನ್‌ತೋಪು ಮತ್ತು ರೈಫ್ಲುಗಳ ಮೂಲಕ ಗುಂಡೆಸೆದು ಕೊಂದು ಹಾಕಿದರು. ಒರೆಲ್ ಪ್ರದೇಶದ ಕುಟ್ರೊವ್ ಎಂಬ ಹಳ್ಳಿಯ 730 ಮಂದಿ ಬಡಹಳ್ಳಿಗರನ್ನೆಲ್ಲಾ ಹಿಂದೆ ಸರಿವ ನಾಝಿಗಳು ಇದೇ ರೀತಿ ಇಚ್ಛಾನುಸಾರ ಕೊಂದುಹಾಕಿ ಕಡೆಗೆ 50 ಮಂದಿ ಮಾತ್ರ ಬದುಕಿದ್ದರು. ನೋಸ್ಕೋ ಪ್ರದೇಶದ ವೊಟೊಪೆನೋ ಎಂಬಲ್ಲಿ ಸೋವಿಯೆಟ್ ಸಾಮೂಹಿಕ ಬೇಸಾಯಗಾರರ 13 ಕುಟುಂಬಗಳ ಮನೆಗಳಿಗೇ ಬೆಂಕಿಕೊಟ್ಟು ಸಜೀವವಾಗಿ ಸುಟ್ಟುಹಾಕಿರುವರು. 153 ಮಂದಿ ಗಂಡಸರು ಮತ್ತು ಹೆಂಗಸರನ್ನು ನೇತುಹಾಕಿ ಕೊಂದಿರುವರು. 567 ಸ್ತ್ರೀಯರು ಮಕ್ಕಳನ್ನು ಗುಂಡೆಸೆದು ಕೊಲೆಮಾಡಿರುವರು. ನಪೊಜಿಬ್‌ಕೊವ್ ಎಂಬೊಂದು ಪಟ್ಟಣದಲ್ಲಿ ಒಂದು ರಾತ್ರಿಯಲ್ಲೇ 1000 ಮಂದಿ ಮುದುಕರು, ಸ್ತ್ರೀಯರು, ಹುಡುಗ ಹುಡುಗಿಯರನ್ನು ಕೊಂದುಹಾಕಿರುವರು. ಹಲವು ಮಂದಿ ಮಕ್ಕಳನ್ನು ಸಜೀವವಾಗಿ ಸುಟ್ಟುಹಾಕಿರುವರು. ಪೊಲ್ಟವ ಪ್ರದೇಶದ ಗದ್ಯಾಚ್ ಮತ್ತು ಝೆಂಕೋವೊ ಎಂಬಲ್ಲಿ 280 ಮಂದಿ ನಾಗರಿಕ ಶರೀರಗಳನ್ನು ಒಂದು ಹೊಂಡದಲ್ಲಿ ಹಾಕಿ ಮುಚ್ಚಲಾಯಿತು. ನಾಝಿಗಳು ಕೊಲ್ಲಲ್ಪಟ್ಟ ಹೆತ್ತವರ ಶವಗಳೊಂದಿಗೆ ಸಜೀವ ಮಕ್ಕಳನ್ನು ಹೊಂಡಕ್ಕೆಸೆದಿದ್ದರು.

ಗೊರಿಲ್ಲ ಸಂಗಡಿಗರ ಹಾವಳಿಗೆ ಪ್ರತೀಕಾರಾರ್ಥವಾಗಿ ಶಾಂತಪರ ನಾಗರಿಕರನ್ನು ನೂರುಗಟ್ಟಲೆಯಲ್ಲಿ ನಾಝಿಗಳು ಕೊಂದುಹಾಕಿರುವರು. ಹೀಗೆ ಖಾರ್ಕೊವ್ ಪಟ್ಟಣದಲ್ಲಿ ಜನವರಿ ತಿಂಗಳೊಂದರಲ್ಲೇ 370 ಮಂದಿ ಕೊಲ್ಲಲ್ಪಟ್ಟರು. ಕ್ರೈಮಿಯದ ಫಿಯೊಡೋಸಿಯಾ ಎಂಬಲ್ಲಿ 1000 ಮಂದಿಯನ್ನು ಕೊಲೆಮಾಡಿದ ರೀತಿಯು ಅತ್ಯಂತ ಬರ್ಬರವಿರುವುದು. ಶಿಶುಗಳ ಸಹಿತ ತಾಯಂದಿರನ್ನೂ, ಬಾಣಂತಿ ಮತ್ತು ಗರ್ಭಿಣಿ ಸ್ತ್ರೀಯರನ್ನೂ, ಮುದುಕರನ್ನು ಲಾರಿಗಳಲ್ಲಿ ಹಾಕಿಕೊಂಡು ಪಟ್ಟಣದ ಹೊರ ಪ್ರದೇಶಕ್ಕೊಯ್ದು ಅನಂತರ ಆ ನಿರ್ದೋಷಿಗಳನ್ನೆಲ್ಲಾ ಗುಂಪುಗುಂಪಾಗಿ ಒಂದು ಕಣಿಯ ಬದಿಯಲ್ಲಿ ನಿಲ್ಲಿಸಿ ಅವರ ಮೇಲೆ ಮಿಶನ್ ತೋಪಿನ ಗುಂಡು ಹಾರಿಸಲಾಯಿತು ಮತ್ತೂ ಸಾಯದಿರುವ ಸ್ತ್ರೀಯರು ಮಕ್ಕಳನ್ನು ಹಾಗೆಯೇ ಹೂಳಲಾಯಿತು.

ತಾ 27-10-41ರ ಒಂದೇ ದಿನದಲ್ಲಿ ಟಗನ್ರೋಗಿನಲ್ಲಿ 3000 ಮಂದಿ ನಾಗರಿಕರನ್ನು ನಾಝಿಗಳು ಕೊಲೆಮಾಡಿರುವರು. ಜರ್ಮನ್ ಸೈನ್ಯಾಧಿಕಾರಿಗಳ ಅನುಜ್ಞೆಯ ಮೇರೆಗೆ ಈ ಜನರು ಏದಿನಕ್ಕೆ ಬೇಕಾದ ಆಹಾರಸಾಮಾಗ್ರಿಗಳನ್ನು ಹಿಡಿದುಕೊಂಡು ಶಾಲು ಕಟ್ಟಡವೊಂದಕ್ಕೆ ಹೋದರು. ನಾಝಿಗಳು ಅವರ ಆಹಾರ ಸಾಮಾಗ್ರಿಗಳನ್ನೆಲ್ಲಾ ಕಸಕೊಂಡು, ನೂರು ನೂರು ಮಂದಿಯನ್ನೇ ದೂರಕ್ಕೆ ಕರೆದೊಯ್ದು ರೈಫ್ಲುಗಳ ಮೂಲಕ ಗುಂಡೆಸೆದು ಕೊಂದುಹಾಕಿದರು. ಸೋವಿಯೆಟ್ ಗೊರಿಲ್ಲ ಸಂಗಡಿಗರ ಹಾವಳಿಯು ಅಧಿಕವಾಗುತ್ತಿರುವುದನ್ನು ನಾಝಿಗಳು ಸಹಿಸಿಕೊಳ್ಳಲಾರದೆ ಪ್ರತೀಕಾರಾರ್ಥವಾಗಿ ನಿರ್ದೋಷಿ ನಾಗರಿಕರನ್ನು ಇಚ್ಛಾನುಸಾರ ಕೊಲೆಮಾಡುವ ಅಮಾನುಷ ಕೃತ್ಯಗಳು ದಿನೇ ದಿನೇ ಹೆಚ್ಚುತ್ತಿವೆ.

NOTICE.

Notice is hereby given that the following assets of the company or their rights in the following possessions of the company are available for sale lease or hire

1 The company's premises and factory buildings at Kalianpur or any portion thereof

2. If any reasonable offers for purchase or lease of the above are not received, the roof material consisting of corrugated sheets, purlins trusses, beams etc. or one building with a floor space of about 65' by 90' is offered for sale.

3 Company's farms at Kokkarne in No 17 Pejamangur village.

Offers are invited for purchase or lease of the above and should be communicated to the undersigned so as to reach the undersigned on or before 20-5-1942. Offer may be accepted or rejected without assigning any reasons

Further particulars will be supplied by the undersigned when applied for

V. S KUDVA,
Director

The Kalyanpur Sugar Mills Ltd.,
MANGALORE

Mangalore 2-5-1942

FIXED DEPOSITS

are now accepted at all our offices, at attractive rates of interest.
For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD. **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆ ಕನ್ಯೆಗಳು ನಡೆಯಿಸುವ ರಹಸ್ಯಗಳು,

ಹಾಸಿಗೆಯ ಸುಖ ವಿಧಾನಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶದ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ರಾತ್ರಿ ಸುಖ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಜೀವನ ಟ್ರೇಡಿಂಗ್ ಕಂಪೆನಿ

260. ಪೈಕುಬಜಾರ್ ರೋಡ್, ಮದ್ರಾಸ್

DIAMONDS! DIAMONDS!

K. R. K. SHET.

Opposite Govt- College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! — ವಜ್ರಗಳು — BEST BRILLIANCY!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್‌ಟ್ರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಪ್ಪಿ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಋತುಸಮಯದಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:— ಹಾಲಪ್ಪಾ ಶಿವೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟ, ಧಾರವಾಡ, ವಿಜಾಪೂರ — ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪೂರ ಚಿಕ್ಕೋಡಿಯಲ್ಲಿ — ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್. ಬಳ್ಳಾರಿ— ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ:— ಸಂಗಪ್ಪ ಶಿವಲಿಂಗಪ್ಪ ಅಂದಾನಿ.

ಅಚ್ಚ ಕಪ್ಪಾದ ಕೂದಲನ್ನು ನಿಬಿಡವಾಗಿ ಬೆಳೆಸುವದು — ಆಮಲಕೀ ತೈಲ.
ಆನಂದ ಉತ್ಸಾಹ ಮನೋರಕ್ತಿ ಹೆಚ್ಚಿಸಲು — ಆಮಲಕೀ ತೈಲ.
ತಂಪಾದ ನೇತ್ರಗಳನ್ನು ಹೊಂದಲು — ಆಮಲಕೀ ತೈಲ.
ನಾರೀಮಣಿಗಳ ಸೌಂದರ್ಯವೇ — ಆಮಲಕೀ ತೈಲ
ಪುಷ್ಪಗಂಧಾಮೋದಿತ, ಪುಷ್ಪಗಳ ಉದ್ಯಾನವೇ ಆಮಲಕೀ ತೈಲ
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಬೇಕಾದುದೇ — ಆಮಲಕೀ ತೈಲ.
ಪ್ರೌಢ ಸ್ತ್ರೀ-ಪುರುಷರಿಗೆ ಬೇಕಾದುದೇ — ಆಮಲಕೀ ತೈಲ.
ಭಾರತದ ಮಹಿಳೆಯರು ಪ್ರೀತಿಸುವದು — ಆಮಲಕೀ ತೈಲ.
ಬೆಳಗುವ ... ಸ್ವಾಸ್ಥ್ಯಕ್ಕೆ — ಆಮಲಕೀ ತೈಲ.
ಬಲನೆಯರು ಮೆಚ್ಚುವದು — ಆಮಲಕೀ ತೈಲ.
ವಾತಾದಿ ತ್ರಿದೋಷನಾಶಕವೇ — ಆಮಲಕೀ ತೈಲ
ವಿಶೋಧಿತ ತಿಲತೈಲದಿಂದಲೆ ತಯಾರಿಸಿದ — ಆಮಲಕೀ ತೈಲ
ಸರ್ವಶಿರೋದೋಷನಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಬೇಕಿರುವ — ಆಮಲಕೀ ತೈಲ

ಆಮಲಕೀ ತೈಲವನ್ನೇ ಉಪಯೋಗಿಸಿರಿ

2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು

ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ. ಗಣೇಶ ವ್ಯಂಕಟ್ರಮಣನಾಯಕ್ ಬ್ರದರ್ಸ್, ಕಾರ್ಕಳ. ದಿ ನೇಶನಲ್ ಜನರಲ್ ಸ್ಟೋರ್ಸ್ ಸುಬ್ರಹ್ಮಣ್ಯ, ದ. ಕ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— **ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ

ತೆತ್ತ ಮೂಲಧನ	... ...	ರೂ. 1,92,100-0-0
ಕ್ಷೇಮ ನಿಧಿಗಳು	... ...	ರೂ. 17,18,98-2-11

ಶಾಖೆಗಳು.— **ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಪಣ್ಣಿಗೋಳಿ, ದಕ್ಷಿಣ ಕನ್ನಡ ಜಿಲ್ಲಾ.**

ವ್ಯಾಪಾರಕ್ಕೆ ಯುಕ್ತವಾದ ದವಸಗಳು, ಚಿನ್ನಾಭರಣಗಳು, ಸರಕಾರದವರದಾದ ಇತರ ಪತ್ರಗಳ ಮೇಲೂ ಡಿಮಾಂಡ್ ನೋಟುಗಳು, ಬೆಲೆ ಹುಂಡಿಗಳ ಮೇಲೂ ಚಿಕ್ಕ ದೊಡ್ಡ ಸಾಲಗಳು ಹಾಗೂ ಓವರ್ ಡ್ರಾಫ್ಟುಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ದೊರಕುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೇರವಾಗಿ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

UDIPI, 16th April.

ಈ ವಾರದ ಭವಿಷ್ಯ.

(೨೧ನೇ ಮೇ ಯಿಂದ ಪ್ರಾರಂಭಿಸಿ)

ಕನ್ಯಾ— ಉಳಿದೆಲ್ಲಾ ಗ್ರಹರ ಅನುಗ್ರಹಕ್ಕೆ ನೀವು ಗುರಿಯಾಗಿದ್ದರೂ ನಿಮ್ಮ ಜನ್ಮ ಕರ್ಮಪತಿಯು ಈ ವಾರದಲ್ಲಿ ಷಷ್ಠಸ್ಥಾನಕ್ಕೆ ಪ್ರವೇಶಿಸುವುದರಿಂದ ಅವನೊಬ್ಬನ ಕೃಪೆಯು ನಿಮಗೆ ಲಭಿಸಲಿದೆ. ಆದಕಾರಣ ನಿಮ್ಮ ದೇಹಾಲಸ್ಯವು ಕೊಂಚ ಸುಧಾರಿಸುವುದಲ್ಲದೆ ಉದ್ಯೋಗದಲ್ಲೂ ಪ್ರವೃತ್ತರಾಗುವಿರಿ. ದುಡಿಮೆಗೆ ತಕ್ಕಷ್ಟು ಫಲ ಸಿಕ್ಕದಿದ್ದರೂ ಪೂರ್ಣ ವ್ಯರ್ಥವಾಗಲಾರದು. ಹಣದ ಬಿಕ್ಕಟ್ಟು ಹೆಚ್ಚಲಿದೆ. ಸ್ಥಾನಮಾನಗಳು ಸುಂಚಿನಂತೆ ದೊರೆಯಲಾರವು. ಧನ ನಿಮಿತ್ತವಾಗಿ ಕೋರ್ಟು ವ್ಯವಹರಣೆಯುಂಟಾಗಬಹುದು. ಸ್ತ್ರೀ ಜನರಿಂದ ಪೀಡಾನಿಷ್ಟಗಳು ಪ್ರಾಪ್ತವಾಗಲಿವೆಯಾದ ಕಾರಣ ತಾ. 23ರಿಂದ 26ರ ವರೆಗಿನ ದಿನಗಳು ಕೊಂಚ ಉತ್ತಮವಿವೆ.

ತುಲಾ— ವಿಪಕ್ಷದವರು ಹೆಚ್ಚುವುದರಿಂದ ನಿಮ್ಮ ಕಾರ್ಯ ಕಲಾಪಗಳು ನಿರ್ವಿಘ್ನದಿಂದ ಮುಂದುವರಿಯುವಂತಿಲ್ಲ. ಪತ್ನೀ ಪುತ್ರರಿಂದಲೂ ಆಪ್ತೇಷ್ಟವರ್ಗದವರಿಂದಲೂ ವಿರಸವುಂಟಾದೀತು. ನೌಕರ ಜನರಿಗೂ ವೈದ್ಯ ವ್ಯಾಪಾರಿಗಳಿಗೂ ಕಾಯ ಕಷ್ಟದಿಂದ ಜೀವಿಸತಕ್ಕವರಿಗೂ ಯತ್ನಕ್ಕೆತಕ್ಕ ಫಲ ಸಿಗುವಂತಿಲ್ಲವಾದುದರಿಂದ ಕಾಲಯಾಪನೆಯು ಕಷ್ಟಕರವಾದೀತು. ಲೇಖಕ ಜನವೃಂದಕ್ಕೀ ವಾರವು ಶುಭದಾಯಕವಾಗಿದೆ. ದೇಹಾಲಸ್ಯವು ಕೊಂಚ ಶಾಂತವಾದರೂ ಪೂರ್ಣ ತೃಪ್ತಿಕರವಿರದು ತಾ. 25. 26. ಈ 2ದಿನಗಳಲ್ಲಿ ಇಲ್ಲ ಸಲ್ಲದ ಖರ್ಚು, ಮಾನಸಿಕ ಚಿಂತೆ, ಇತ್ಯಾದ್ಯಾಪತ್ತುಗಳು ಕಾಣಿಸಿಕೊಳ್ಳಲಿವೆ.

ವೃಶ್ಚಿಕ— ಕಷ್ಟದಾಯಿಯಾದ ಅಷ್ಟಮಸ್ಥಾನದಲ್ಲಿ ಗುರು ಶುಕ್ರರು ನಿಂತುದರಿಂದ ನಿಮ್ಮ ಆರೋಗ್ಯಕ್ಕೆ ಹೆಚ್ಚಿನ ಅಪಾಯವಿದೆ. ಹಠಸನ್ನಿಪಾತದ ಜ್ವರವೂ ಕೂಡ ಕೆಲವೊಮ್ಮೆ ತೋರಿಬರಬಹುದು. ಪ್ರವಾಸಿಗರಿಗೆ ಕಷ್ಟ ನಷ್ಟಗಳು ನೀರೆಂದ ಮೇಲೆ ಸ್ಪಷ್ಟವಾಗುವವು. ವಿರೋಧಿ ವರ್ಗದವರ ಕಾಠ ಸ್ಥಾನಕ್ಕೆ ಬಲಿಬಿದ್ದು ಧನ ಮಾನಗಳನ್ನು ರಕ್ಷಿಸಿಕೊಳ್ಳುವದು ದುಸ್ತರವೆನಿಸುವದು. ಆದರೂ ಸದ್ಬಂಧುಗಳ ಮತ್ತು ಸನ್ಮಿತ್ರರ ಪೂರ್ಣ ಸಹಕಾರವು ನಿಮಗಿರುವುದರಿಂದ ನಿಮ್ಮನ್ನೀ ಕಾಲದಲ್ಲವರೇ ಕೈ ಹಿಡಿದೆತ್ತಲಿರುವರು. ತಾ. 23ರಿಂದ 26ರ ವರೆಗಿನ ದಿನಗಳು ಕೊಂಚ ಉತ್ತಮವಿವೆ.

ಧನು— ಉದ್ಯಮವು ನಿರಾತಂಕವಾಗಿ ಸಾಗುವದು. ವಾದ ವಿವಾದಗಳಲ್ಲಿ ಪ್ರತಿಪಕ್ಷಿಗಳನ್ನು ಗೆಲ್ಲುವಿರಿ. ಮನಸ್ಸಿಗೆ ಸಮಸುಖಾನಂದಗಳು ಲಭಿಸುವವು. ಖರ್ಚುಗಳು ಅತ್ಯಲ್ಪವಿದ್ದು ಸಂಪಾದನೆಯು ಬಹು ಮುಖದಿಂದಾಗುವುದರಿಂದ ಸದಾ ಕೈಯಲ್ಲಿ ಹಣವಿದ್ದೇ ಇರುವುದು. ನಿಮ್ಮ ಮಾತನ್ನಾರೂ ಅತಿಕ್ರಮಿಸಲಾರರು. ಸಮಾಜದಲ್ಲಿ ನಿಮಗೊಂದು ಯೋಗ್ಯ ಸ್ಥಾನವಿದೆ. ಗೃಹಸುಖವನ್ನು ಮನಸ್ವೀ ಹೊಂದುವಿರಿ. ಮಧ್ಯೆ ಮಧ್ಯೆ ಸ್ವಲ್ಪ ದೇಹದಲ್ಲಿ ಆಯಾಸ ಕಂಡುಬಂದರೂ ವಾರಾಂತ್ಯದ 1 ದಿನಗಳಲ್ಲಿ ಸಂಕಲ್ಪಸಿದ್ಧಿಯಿಂದಲೂ ವಿಜಯ ಲಾಭದಿಂದಲೂ ಪೂರ್ಣ ಮುಕ್ತರಾಗುವಿರಿ.

ಮಕರ— ಶಕ್ತಿಯುಕ್ತಿಗಳ ಜೋಡಣೆಯಿಂದ ನೀವೀಗ ನಿಮ್ಮ ಕಾರ್ಯವನ್ನು ಸಾಧಿಸಲು ಶಕ್ತರಾಗಿರುವಿರಿ. ಮೇಲಧಿಕಾರಿಗಳ ಕೃಪಾಕವಚವು ಸರ್ವ ವಿಧವಾದ ಆಪತ್ತುಗಳಿಂದಲೂ ನಿಮ್ಮನ್ನು ರಕ್ಷಿಸುವದು. ನಿಮ್ಮ ಕಾರ್ಯದಕ್ಷತೆಯು ಅಸದೃಶವಿರುವುದು. ಆಯವ್ಯಯಗಳು ಸಮಪ್ರಮಾಣದಲ್ಲಿರುವುದರಿಂದ ಹಣದ ತಾಪತ್ರಯ ನಿಮಗಿರದು. ಸೇವಕ ಜನರೂ ಪುತ್ರರೂ ನಿಮ್ಮನ್ನು ತಾತ್ಸಾರ ದೃಷ್ಟಿಯಿಂದ ನೋಡುವುದರಿಂದ ಮನಸ್ಸು ಅಸಮಾಧಾನದಿಂದಿದ್ದೀತು. ತಾ. 22. ಮತ್ತು 27, 28 ಈ 4 ದಿನಗಳಲ್ಲಿ ನಿಮ್ಮ ಉದ್ಯಮವು ನಿರರ್ಗಲವಾಗಿರುವುದು.

ಕುಂಭ— ಈ ವಾರವು ನಿಮಗೆ ಅಷ್ಟೊಂದು ಹಿತಕಾರಿಯಾಗಲಾರದು. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ಫಲವು ವಿಪರೀತವಾಗುವುದಲ್ಲದೆ ಮಾನಹಾನಿಯ ಪ್ರಸಂಗಗಳೂ ಒದಗಬಹುದು. ಮನೋನಿಗ್ರಹವನ್ನು ಮಾಡಲು ನೀವು ಅಸಮರ್ಥರಿರುವುದರಿಂದ ವಿಷಯಗಳ ದಾಸರಾಗಿ ಆರೋಗ್ಯವನ್ನು ಕೆಡಿಸಿಕೊಳ್ಳಲಿರುವಿರಿ. ಮನೆಯ ಜನರೊಳು ಕಲಹವಾದೀತು. ಪತ್ನೀ ಪುತ್ರರೂ ನಿಮ್ಮ ಭಾಗಕ್ಕೆ ಸೇರಲಾರರು. ಆದರೂ ಗುರುಶುಕ್ರರ ಬೆಂಬಲವು ನಿಮಗಿರುವುದರಿಂದ ಆರ್ಥಿಕ ತಗಾದೆಯಿರದು. ಗೃಹೋಪಕರಣಗಳಾದವೂ ಅಪೂರ್ಣವಾಗಿರಲಾರವು. ವಾರಾದಿಯ 4 ದಿನಗಳು ಸುಖವಾಗಿಯೇ ಕಳೆವವು.

ಮೀನ— ಜೌಲೀ ವ್ಯಾಗಕ್ಕೆ ಆದರ ಜಾಲವೇ ಅನಾಯಕ್ಕೆ ಹೇತುವಾದಂತೆ ನಮ್ಮ ನಿಮ್ಮ ಆಪ್ತೇಷ್ಟ ಬಂಧುಗಳಿಂದಿದ್ದವರೇ ನಿಮಗೆ ಹಾನಿಯನ್ನು ಬಯಸುತ್ತಿರುವರು. ಆತ್ಮೀಯರೆಂಬ ಅಭಿಮಾನದಿಂದ ಯಾವ ತರದ ಜವಾಬ್ದಾರಿ ಕಾರ್ಯಗಳನ್ನು ಅವರ ಮೇಲೆ ಹೊರಿಸದಿರಿ. ಸೀಮಾತೀತ ಸಹಾಯವನ್ನು ಅಪೇಕ್ಷಿಸದೆ ಸ್ವಯಂ ಯಾವ ಮಹತ್ಕಾರ್ಯವನ್ನಾದರೂ ಕೊನೆಗೊಳಿಸುವಷ್ಟು ಶಕ್ತರಾಗಿರುವಿರಿ. ನಿಮ್ಮ ಆರ್ಥಿಕ ಸ್ಥಿತಿಯು ಉತ್ತಮವಾಗುವುದು. ದೇಹ ಮನಸ್ಸುಗಳಿಗೆ ಸ್ವಲ್ಪವೂ ಕಷ್ಟವಾಗಲಿ, ದುಃಖವಾಗಲಿ ಆಗುವಂತಿಲ್ಲ. ತಾ. 23ರಿಂದ 26ರ ವರೆಗಿನ ದಿನಗಳಲ್ಲಿ ಧನಲಾಭ, ಆರೋಗ್ಯ, ಸುಖ, ಸ್ತ್ರೀಸಹಿತ ಧನಮಾನಾದಿಗಳು ಲಭಿಸುವವು.

ಮದುವೆ

ಉಪನಯನ

ಮೊದಲಾದವುಗಳ

ಆಮಂತ್ರಣ ಪತ್ರಿಕೆ

ಗಳನ್ನು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಚಲೋದಾಗಿ ಮುದ್ರಿಸಿ ಕೊಡಲಾಗುವುದು. ಇತರ ಎಲ್ಲಾ ತರದ ಛಾಪಾ ಮತ್ತು ಬುಕ್‌ಬೈಂಡಿಂಗ್ ಕೆಲಸಗಳನ್ನು ನಾಜೂಕಾಗಿ ಮಾಡಿ ಕೊಡಲಾಗುವುದು

ನವಯುಗ ಪ್ರೆಸ್.

ಕೋರ್ಟ ಪೇಟೆ ರಸ್ತೆ,

ಉಡುಪಿ.

ಅಮೃತಾಂಜನ

ತಲೆನೋವು, ಎದೆನೋವು, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಶೀಘ್ರವಾಗಿ ಗುಣ ಕೊಡುವುದು, ಚೇಳು ವಿಷ ಮುಂತಾದ ಜ್ವರ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

RGD

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಷ್ಣವು, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತ

ಉಡುಪಿಗೆ ಬಂದಾಗ

... ವಿಗ್ರಹ ಯಾವತ್ತೂ ... ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳು ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ಪ್ರಾಣಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೇಳಲೂ ಬೇಕಾದ್ದು ಸಾಮಾನುಗಳಿವೆ

The Moolky Bank, Ltd.,

MOOLKY, S K

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾಲವಾಗಿ ಕೊಡುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಕಾರ್ಯದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, ಎಂ. ಆರ್ ಪೂಂಜ,
President & Manager ಪ್ರೆಸಿಡೆಂಟ್ ಮತ್ತು ಮ್ಯಾನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸವೊದಗಿಯು ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿಯುಚಿಯಾದ ಭೋಜನ, ಬಿಸಿಬಿಸಿ ತಿಂಡಿ ... ವಿದ್ಯುದ್ದೀಪಾಲಂಕೃತ ಕೋಣೆ.

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಸುಖನಿವಾಸ.

ಉಡುಪಿ. ಮಂಗಳೂರು.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಸಾಲಿಯಲ್ಲೇ ತಯಾರಾಗುವ ಈಗಿನ ಫ್ಯಾಷನಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಒಗೆ ಬಗೆಯ ... ಒಂದೇ ... ದೊರೆಯುತ್ತವೆ ... ಮತ್ತು ... ಬಟ್ಟೆಗಳು ಮಾರಲ್ಪಡುತ್ತವೆ

ಸಿ. ಎ ಶೈ. ಬ್ರದರ್ಸ್,

ಆಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ,

ಉಡುಪಿ

ಶುಚಿತ್ವ, ರುಚಿ, ಉಪಚಾರ ಮತ್ತು ಭೋಜನಕ್ಕಾಗಿ ಪ್ರಸಿದ್ಧವೆ ಕ್ಕಾಗಿ ವಿಶಿಷ್ಟ ಅನುಕೂಲತೆಗಳಿವೆ ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್,

ಮಾಲಕ.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಕಾದಂಬರಿ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನಸ್ಸನ್ನು ಆಕರ್ಷಿಸಿ, ಮನರಂಜಿಸುವವು

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆ. ೧ ೮ ೦	ಭಯಂಕರ ಸೇಡು	ಬೆ. ೧ ೮ ೦
ಭೀಷಣ ಸಾಹಸ	ಬೆ. ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿಬೀರು	ಬೆ. ೨ ೦ ೦	ಅನಾಥ ನಂದಿನಿ	ಬೆಲೆ ೧ ೮ ೦
ಭಗವಾನ್ ದಾಸ	೦ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೪ ೦	ಪಾಣಿಗ್ರಹಣ	೦ ೬ ೦

ಕೆಟಲಾಗ್ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು—ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮದ್ದು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ

ಅನೇಕ ಜಾತ ಮಕ್ಕಳ ವ್ಯಾಧಿಗಳನ್ನು ನಿವಾರಿಸಿ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ದೇಹ ಹೆಚ್ಚುವುದು ಇದು ಮೃದುವಾಗಿದ ... ನಿಮ್ಮ ಮಕ್ಕಳ ... ನಿಮ್ಮ ಕೈ ಸೇರುವುವು

ಸೀಸೆ ಒಕ್ಕೆ ೧೨ ಆಣೆ,

ಟ. ಖ. ೯ ಆಣೆ

ಎಮ್. ಸಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ

ಉಡುಪಿ ಸ್ಟಾಕಿಸ್ಟರು— ನವಭಾರತ ಬುಕ್ ಡಿಪೋ, ಉಡುಪಿ

ಸ್ಥಾಪಿತ  1926

18 ಬಲ್ಮಟ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳು ಬ್ರಾಸ್ ಬೋರ್ಡ್ ... ಬಿಲ್ಲೆ ... ಮುಂತಾದ್ದು ಬಹಳ ... ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmatt Road, MANGALORE.

Approved firm by the Govt Mysore

and the Agent of ... Ceylon

ನವಜೀವಾಮೃತ ಎಂಬ ಸೂತಿಕಾ ರಸಾಯನ

(ಇದ ... ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ಸಿದ್ಧಗೊಳಿಸಿ, ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಆರೋಗ್ಯವಾದ** ಮಧುರ ಪ್ರಿಯ ರಸಾಯನ ಇದು ಸೇವನೆಯಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿದೆ.

... ಬಾಣಂತಿ ... ಹೆಚ್ಚು ಕಡಿಮೆ ... ವಿಗಳಿಗೆ ಬಿಗುವು, ... ಕೇವಲ ... ಪ್ರಸ್ತಾಪಗಳೆ ... ಬಗ್ಗೆ ... ಕೇಳಿರಿ ... ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ವೈದ್ಯ, ನಂ 5 ಕೊಡಿಯಾಲಬೈಲು, ದಕ

EDITED BY K. K SHETTY, PRINTED & PUBLISHED BY K H. SHETTY AT THE NAVAYUGA PRESS UDIPI

Regd. No. M 3618 **Estd. 1921 ಸ್ಥಾಪಿತ**

ಅಂತರಂಗ
ಹೊಸ ಮಾದರಿಯ
ವಿನೋದವಾರಪತ್ರಿಕೆ
ವಾ. ಚಂದಾ ರೂ 3-0-0
ಬಿಡಿಪ್ರತಿಗೆ 0-1-0
ಜಾಹೀರಾತಿಗೆ
ಉತ್ತಮ ಸಾಧನ.
ಅಂತರಂಗ, ಉಡುಪಿ

ANTARANGA
The only Leading
Kannada Weekly
of wit & Humour.
Udipi - S. India

ಸಂಪುಟ ೨೧ | Vol. 21

ಸಂಪಾದಕರು:—ಶ್ರೀ ಎ ಬಿ. ಶೆಟ್ಟರು, ಎಂ. ಎಲ್. ಎ.

NAVAYUGA WEEKLY

ಸಂಚಿಕೆ ೩೮ | No. 38

28-5-1942

ಧಾತುಪುಷ್ಟಿಲೇಹ

ಇದ ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನನಷ್ಟ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈ ಕಾಲು ಬಚ್ಚುವದು, ಮಲಬದ್ಧತೆ, ಒಳ ಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ಬೆಲೆ ರೂ. 2 8-0.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಒಳಪಡಿಸಿ, ಗರ್ಭಕೋಶವನ್ನು ಪುನಃ ಕುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1 8 0

ಎಂ. ಗಣಪಯ್ಯ ಎಂಡ್ ಸನ್ಸ್.

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ— (1) ಪುಷ್ಕರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸ ಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ (3) ವಲ್ಲರ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ (4) ಧನ್ವಂತರಿ ವೈದ್ಯಶಾಲೆ, ಲಕ್ಷ್ಮೀರಮಣ ಬಜಾರ್, ಮೈಸೂರು (5) ಮಂಗಳೂರು ಸ್ಟೋರ್ಸ್, ಮಡಿಕೇರಿ (6) ಬಿ. ಸಟ್ಟಯ್ಯ ಶೆಟ್ಟಿ ಎಂಡ್ ಸಂನ್ಸ್, ಸೋಮವಾರ ಪೇಟೆ, (7) ಡಾ| ಶ್ರೀನಿವಾಸ ಪೈ, ಪುತ್ತೂರು (8) ಕಾಂಚಾಣ ವಾಸ್ತೇವ ಕಮ್ತಿ, ಬೆಳ್ತಂಗಡಿ, (9) ಮಾಲ್ಪೆ ಮೆಡಿಕಲ್ ಸ್ಟೋರ್ಸ್, ಮುಲ್ಕಿ. (10) ನವಭಾರತ ಬುಕ್ ಡಿಪ್ಪೊ, ಕೋಳದ ಪೇಟೆ, ಉಡುಪಿ (11) ಕೃಷ್ಣಾ ಫಾರ್ಮಸಿ, ಕುಂದಾಪುರ. (12) ಕಾಸರಗೋಡು ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ (13) ಕೆ. ಶ್ರೀನಿವಾಸ ಶೆಣೈ, ತೀರ್ಥಹಳ್ಳಿ (14) ಬಿ. ಎ. ನರಸಿಂಹ ನಾಯಕ್ ಮರ್ಚೆಂಟ್, ಚಿಕ್ಕಮಗಳೂರು.



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ.

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಬಣ್ಣ ಬರುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಬಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**

ಆಯುರ್ವೇದ ಔಷಧಾಲಯ ಗದಗ.

ASIAN POLICIES

Cover war risk on civilians without any extra premiums.

Figures that speaks the strength and stability of the company, as on 31—12—1941

Assets exceed	..	Rs.	1,10,00,000
Life Fund exceeds	..	,,	92,00,000
Business in force	..	,,	1,28,00,000
Claims paid over	....	,,	56,00,000

For further particulars and agency terms, please apply to

Branch Manager,

The Asian Assurance Co., Ltd. Mangalore. S. K.

ವಿಮೆ ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. **ಪ್ರಾನ್ಸಿಸ್**, ಬ್ರಾಂಚ್ ಸಕ್ರೆಟರಿ, ಮಂಗಳೂರು, ದ. ಕ.
ಶ್ರೀ ಕೆ ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಶ್ರೀ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಓರ್ಗನೈಜರ್, ಕಟಪಾಡಿ, ದ. ಕ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ, ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : : : S. India

ವಾರ ಭವಿಷ್ಯ

ತಾ. ೨೮-೫-೪೨ರಿಂದ ೪-೬-೪೨ರ ವರೆಗೆ.

ಮೇಷ—ನಿಮ್ಮ ಜನ್ಮಪತಿಯಾದ ಅಂಗಾರಕನು ಈ ವಾರಾಂತ್ಯದಲ್ಲಿ ಪ್ರತಿಕೂಲನಾಗುವನು ಆದಕಾರಣ ನಿಮಗೀ ವಾರವು ಕಳೆದ ದಿನಗಳಿಗಿಂತ ಹೆಚ್ಚಿನ ತ್ರಾಸದಾಯಿಯಾಗಲಿದೆ. ಆದಾಯವು ಅತ್ಯಲ್ಪವಿದ್ದು ಖರ್ಚು ಅಧಿಕವಾಗುವುದರಿಂದ ನೀವು ಆಪದ್ಧನವಾಗಿ ಸಂಗ್ರಹಿಸಿಟ್ಟ ಹಣವೂ ವ್ಯಯವಾದೀತು. ಅಧಿಕಾರಿ ಜನರ ಆಗ್ರಹಕ್ಕೊಳಗಾಗುವುದರಿಂದ ಸ್ಥಾನಾಂತರ ಪ್ರಾಪ್ತಿಯ ಪ್ರಸಂಗವೂ ಒದಗಬಹುದು. ದೈಹಿಕಾಲಸ್ಯ, ಮಾನಸಿಕ ದೌರ್ಬಲ್ಯ ಇವುಗಳಿಂದ ನಿಮಗಾವ ಕಾರ್ಯವನ್ನೂ ಸಾಧಿಸಲು ಶಕ್ತಿ ಸಾಲದಾಗುವದು. ದುರ್ಜನರ ಬಲೆಗೆ ಸಿಲುಕಿ ನಾನಾ ಆಪತ್ತಿಗೆ ಗುರಿಯಾಗುವಿರಿ. ತಾ. 28. 3 4 ಈ ದಿನಗಳು ಇದ್ದುದರಲ್ಲಿ ಕೊಂಚ ಉತ್ತಮವೆನಿಸುವವು.

ವೃಷಭ—ನಿಮ್ಮ ಮನೆಯನ್ನಾಕ್ರಮಿಸಿರುವ ರವಿ ಶನಿಗಳು ಹೊರತಾಗಿ ಮಿಕ್ಕ ಎಲ್ಲಾ ಗ್ರಹರ ಬಲವೂ ನಿಮಗಿರುವುದರಿಂದ ಸದ್ಯದ ದಿನಗಳು ನಿಮಗೆ ಹೆಚ್ಚಿನ ಸುಖಸಾಧಕಗಳಾಗುವವು. ಉದ್ಯೋಗಿಗಳಿಗೆ ಉತ್ತಮ ಸ್ಥಾನವು ಲಭಿಸುವದು. ಅತಿಯಾಗಿ ವ್ಯಯಿಸಿದರೂ ಹಣದ ಕೊರತೆಯುಂಟಾಗದು. ಗೃಹತಾಪತ್ರಯಗಳೂ ದೇಹಗತ ವ್ಯಾಧಿಗಳೂ ಶಾಂತವಾಗುವವು. ನಷ್ಟವಾದ ದ್ರವ್ಯವೂ ಪುನಃ ಲಭಿಸಲಿದೆ. ಅನಿರೀಕ್ಷಿತ ಅಟನ, ಅಪ್ತೇಷ್ಟರ ವಿರಹ ಮತ್ತು ವಿಷಜಂತುಗಳಿಂದ ಭಯವು ನಿಮಗಿರುವುದರಿಂದ ವಾರಾಂತ್ಯದ 4 ದಿನಗಳಲ್ಲಿ ಅತೀವ ಜಾಗರೂಕರಾಗಿರಿ.

ಮಿಥುನ—ನಿಮ್ಮ ಲಾಭಸ್ಥಾನದಲ್ಲಿರುವ ಶುಕ್ರಾಚಾರ್ಯರನ್ನು ಹೊರತಾಗಿ ಇತರ ಯಾವ ಗ್ರಹರ ಅನುಗ್ರಹವೂ ನಿಮಗಿಲ್ಲದಿರುವುದರಿಂದ ಆಪದನಿಷ್ಟಗಳು ಬಹುಮುಖದಿಂದ ನಿಮಗೆ ಪ್ರಾಪ್ತವಾಗಲಿವೆ. ಹಣದ ತಾಪತ್ರಯವು ಅಧಿಕವಾಗುವುದಲ್ಲದೆ ಇಲ್ಲದ ಸಲ್ಲದ ಖರ್ಚುಗಳು ಪ್ರಾಪ್ತವಾಗುವುದರಿಂದ ನಿತ್ಯ ದುಃಖಕ್ಕೆ ಗುರಿಯಾಗುವಿರಿ. ನಿಮ್ಮಲ್ಲಿದ್ದ ಧೈರ್ಯ ಸ್ಥೈರ್ಯಾದಿಗಳು ಮಾಯವಾಗುವವು. ಹೋದ ಕಡೆಗಳಲ್ಲಿ ತಿರಸ್ಕೃತರಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಬಹಳ ನಷ್ಟವಾದೀತು. ಆದರೂ ತಾ. 29, 30, 31, 1 ಈ 4 ದಿನಗಳಲ್ಲಿ ಶುಕ್ರಾಚಾರ್ಯರ ಅನುಗ್ರಹದಿಂದ ಧನ ವಸನ ಸುಖಾದಿಗಳನ್ನು ಪಡೆವಿರಿ.

ಕರ್ಕಟಕ—ಈ ವಾರದಲ್ಲಿ ನಿಮ್ಮ ರಾಶಿಗೆ ಅಂಗಾರಕನು ಪ್ರವೇಶಿಸುವುದರಿಂದ ದೇಹದಲ್ಲಿ ಉಷ್ಣ ಸಂಬಂಧವಾದ ಕಾಹಿಲೆಯು ತಲೆದೋರೀತು. ಆಕಸ್ಮಿಕ ಅಪಘಾತಾದಿಗಳಿಗೂ ಕೂಡ ಗುರಿಯಾಗುವ ಸಂಭವವಿದೆ. ವ್ಯಾಪಾರೀ ಭಾಗದಲ್ಲಿ ವಿಶೇಷ ನಷ್ಟವಾಗುವ ಸಂಭವವಿದೆ. ವಾದದಲ್ಲಿ ಪರಾಜಯ, ಜನತೆಯೊಡನೆ ಕಲಹ ನಿಮ್ಮರ ಅವಮಾನವೂ ಕೂಡ ಸಂಭವಿಸುವ ಯೋಗವಿರುವುದರಿಂದ ವ್ಯವಹಾರದಲ್ಲಿ ಬಹಳ ಜಾಗರೂಕರಾಗಿರತಕ್ಕದ್ದು. ಆರ್ಥಿಕ ಭಾಗದಲ್ಲಿ ನಿಶ್ಚಿಂತರಿದ್ದರೂ ಮನಸ್ಸಿಗೆ ನೆಮ್ಮದಿಯಿರದು. ವಾರಾಂತ್ಯದ 5 ದಿನಗಳು ಕೊಂಚ ಉತ್ತಮವಿರುವುದರಿಂದ ಸ್ತ್ರೀಸಹಿತ ಧನಲಾಭ, ಆರೋಗ್ಯ, ಸುಖಗಳು ಲಭಿಸುವವು.

ಸಿಂಹ—ನಿಮ್ಮ ಸುಖಭಾಗ್ಯಪನಾದ ಕುಜನು ಈ ವಾರದಲ್ಲಿ ವ್ಯಯಕ್ಕೇರಾಲಿರುವುದರಿಂದ ಅನಿರೀಕ್ಷಿತ ಖರ್ಚುಗಳು ಪ್ರಾಪ್ತವಾಗಲಿವೆ. ಸುಖ ಸಾಮ್ರಾಜ್ಯದಲ್ಲಿರುವಾಗ ಥಟ್ಟನೆ ದುಃಖವೊದಗುವದು. ವಿದ್ಯೆಗೂ ಕೀರ್ತಿಗೂ ಕಳಂಕವುಂಟಾಗಲಿದೆ. ಆರೋಗ್ಯವೂ ಸಾಕಷ್ಟು ಉತ್ತಮವಾಗಿಯೇ ಇದ್ದೀತು. ಸಾಂಸಾರಿಕ ಸುಖಕ್ಕೆ ಹಾನಿಯುಂಟಾಗಲಾರದು. ಸ್ವರ್ಣ ಕರ್ಮಗಳ ಸಲುವಾಗಿ ಹೆಚ್ಚಿನ ಧನ ವ್ಯಯಿಸುವಿರಿ. ಕೈಗೊಂಡ ಕಾರ್ಯಗಳು ಅಲ್ಪಾಯಾಸದಿಂದ ಕೊನೆಗೊಳ್ಳಲಿವೆ. ಬಂಧುಮಿತ್ರರ ನೆರವು ಉತ್ತಮವಿರುವುದರಿಂದ ದಿನಗಳು ಹೆಚ್ಚಾಗಿ ಸುಖಮಯವಾಗಲಿವೆ. ತಾ. 26. 3. ಮತ್ತು 4 ಈ ದಿನಗಳಲ್ಲಿ ವನಿತಾ ಸುಖ, ವಿಜಯ, ಧನಲಾಭವಾಗುವದು

(೧೧ನೇ ಪುಟ ನೋಡಿರಿ.)

ಎಚ್ಚರಿಕೆ.

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ? ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ ಹಾಳಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತುನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ದುರ್ಬಲತೆ,—ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದುಹಾಕುತ್ತದೆ. ಬುದ್ಧಿಬಲ ಸ್ಮರಣಶಕ್ತಿ, ಕೆಲಸದಲ್ಲ ಹುರುಪು ಇವುಗಳನ್ನು ಬೆಳೆಸುತ್ತದೆ. **ಬೆಲೆ ರೂ ೨—೮—೦**

ವಿಳಾಸ: **'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್'**

24—ಕಾನಕಾನಹಳ್ಳಿ ರೋಡ್, ಬಸವನಗುಡಿ, **ಬೆಂಗಳೂರು**

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1. **Mahrath: Galli, Hubli**
2. **57 Big street, Triplicane, Madras.**

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ಶಾಯರ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಟ್ಟಿ ರಥಬೀದಿ. (3) ಡಾಕ್ಟರ್ ಬಿ. ಜಿ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಶೇಷಗಿರಿ ಶೈ L. I. M. ಡಾಕ್ಟರ್ ವೆಂಕಟ ರಾವ್, ಕೊಡವೂರ್

ಚುಟುಕು ಟೀಕೆ-ಟಿಪ್ಪಣಿ

ಆಕ್ರಮಣವು ಸಿದ್ಧವಾಗಿದೆ!

ನೆಲ ಅಥವಾ ವಿಮಾನ ಧಾಳಿಯನ್ನು ಪ್ರತಿಭಟಿಸಲು ಅಸ್ಸಾಮು ತಯಾರಾಗಿದೆ. ಅಸ್ಸಾಮನ್ನು ಮಾತ್ರವಲ್ಲದೆ ಇಡೀ ಹಿಂದು ದೇಶವನ್ನು ರಕ್ಷಿಸಲು ಸಿದ್ಧತೆ ಮಾಡುತ್ತಿದೆ. ಇತ್ತಲಾಗಿ ಕೆಲವು ವಾರಗಳಲ್ಲಿ ಅಲ್ಲಿ ಗುಪ್ತ ಸೇನಾ ಸಿದ್ಧತೆಯು ಭರದಿಂದ ಸಾಗಿದೆಯೆಂದು ಪ್ರಕಟವಾಗಿದೆ. ಮಲಯಾ, ಸಿಂಗಪುರ ಮತ್ತು ಬರ್ಮಾದ ಸಿದ್ಧತೆಯಂತೆಯೇ ಈ ಸಿದ್ಧತೆಯಲ್ಲವಷ್ಟೆ?

ಕಾಂಗ್ರೆಸ್ ಪ್ರೆಸಿಡೆಂಟರೇನು ಮಾಡುವರು?

ಕಾಂಗ್ರೆಸಿನ ವಿರುದ್ಧವಾಗಿ ತಾನೇನೂ ಬಂಡಾಯವೆಬ್ಬಿಸಿರುವುದಿಲ್ಲ. ತನ್ನ ಅಭಿಪ್ರಾಯವನ್ನದು ಒಪ್ಪುವಂತೆ ಪ್ರಚಾರ ಮಾಡುತ್ತಿದ್ದೇನೆಂದು ಹೇಳುತ್ತಿದ್ದಾರೆ ರಾಜಾಜಿಯವರು. ಆದರೆ ನೆಹರುಗಳದ ಕೊಳ್ಳುವುದಿಲ್ಲ. ಕಳೆದ 20 ವರ್ಷಗಳಿಂದ ಕಾಂಗ್ರೆಸು ಕಟ್ಟಿಕೊಂಡು ಬಂದುದನ್ನು ರಾಜಾಜಿಯವರಿಂದು ಮುರಿದುಹಾಕಲು ಮುಂದಾಗಿದ್ದಾರೆ, ಹಿಂದುಸ್ಥಾನದ ವಿಭಜನೆಯ ತತ್ವವನ್ನು ತಾನೆಷ್ಟುಕ್ಕೂ ಒಪ್ಪಲಾರೆನು. ರಾಜಾಜಿಯವರ ಮೇಲೆ ಶಿಸ್ತು ಜ್ಯಾರಿ ಮಾಡುವ ಜವಾಬ್ದಾರಿ ಕಾಂಗ್ರೆಸ್ ಪ್ರೆಸಿಡೆಂಟರದೆಂದಿರುವರು ಪಂಡಿತ ನೆಹರುಗಳು. ಗಾಂಧಿಜಿಯವರು ಅದೇಕೋ ಕಠಿಣ ಮೌನಧಾರಣೆ ಮಾಡಿರುವರು ತನ್ನ ಬಲಗೈ ಬಂಟನ ವರ್ತನೆಯ ವಿಷಯದಲ್ಲಿ. ಕಾಂಗ್ರೆಸ್ ಪ್ರೆಸಿಡೆಂಟರೇನು ಮಾಡುವರೋ ನೋಡಬೇಕು. ಖರೆ, ಶರಿಮನ್, ಭೋಸ್ ಮೊದಲಾದವರ ಸಂಬಂಧವಾಗಿ ನಿರ್ದಾಕ್ಷಿಣ್ಯವಾಗಿ ಪ್ರವರಿಸಲು ಮುಂದಾದ ಶಿಸ್ತು ಜ್ಯಾರಿ ಗದೆಯು ರಾಜಾಜಿಯವರ ವಿಷಯದಲ್ಲಿ ಹಿಂಜರಿಯುತ್ತಿರುವಂತೆ ತೋರುವುದಿಲ್ಲವೇ?

ದ್ವಾರವು ಮುಚ್ಚಲ್ಪಟ್ಟಿರುವುದಿಲ್ಲ!

ಸರ್. ಸ್ಟಾಫೋರ್ಡ್ ಕ್ರಿಪ್ಸರಿಗೆ ತನ್ನ ಅಧಿಕಾರದ ಸಂಪ್ರದಾಯದಂತೆಯೇ ನಡೆಯಲು ಚೆನ್ನಾಗಿ ಕಲಿತುಬಿಟ್ಟಿರುವಂತಿದೆ. ... ಪಸದ ಆರೋಪ್ಸು ನಿರೂಪಣೆಯ ಪಲ್ಲವಿಯನ್ನೇ ಹಾಡಿ, ಬ್ರಿಟಿಷ್ ಸರಕಾರವು ಸಂಧಾನದ ದ್ವಾರವನ್ನು ತೆರೆದೇ ಇಟ್ಟಿದೆ ಎಂಬುದು ಮಿ. ಅಮೆರಿಯವರ ರಾಗವಾಗಿತ್ತು. ಈಗ ಕ್ರಿಪ್ಸರೂ ಅದೇ ರಾಗ ಎಳೆಯುತ್ತಿದ್ದಾರೆ. ತಾನು ಬ್ರಿಟಿಷ್ ಸರಕಾರವೆ ಪರವಾಗಿ ಹಿಂದುದೇಶ ಕ್ಕೊಯ್ದ ಸೂಚನೆಗಳೇ ಅತ್ಯುತ್ತಮವಾದುವು. ಅದನ್ನು ಹಿಂದೀಯರು ನಿರಾಕರಿಸಿರುವಾಗ ಸರಕಾರವು ಇನ್ನು ಮುಂದೆ ತಾನಾಗಿ ಸಂಧಿಮಾಡಲು ಮುಂದಾಗಲಿಕ್ಕಿಲ್ಲ. ಆದರೆ ಆ ದ್ವಾರವು ಮುಚ್ಚಲ್ಪಟ್ಟಿಲ್ಲೆಂದು ಅವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ. ಅಧಿಕಾರಕ್ಕೆ ಎಂತಹ ಅದ್ಭುತ ಮಂತ್ರಶಕ್ತಿಯಿದೆ!

ಅಮೆರಿಕದ ಯುದ್ಧೋಪಕರಣ ಸಹಾಯ

ಅಮೆರಿಕವು ವಾಗ್ದಾನ ಮಾಡಿದಂತೆ 1000 ವಿಮಾನಗಳನ್ನು ಜಾವಕ್ಕೆ ಸಕಾಲದಲ್ಲಿ ಕಳುಹಿಸುತ್ತಿದ್ದರೆ ಅದು ಪತನಹೊಂದುತ್ತಿದ್ದಿಲ್ಲೆಂದೀಗ ತಿಳಿದುಬಂದಿದೆ. ಬ್ರಿಟನು, ಚೈನ, ಗ್ರೀಸು, ರಷ್ಯ ಮತ್ತು ಆಸ್ಟ್ರೇಲಿಯಗಳಿಂದಲೂ ಇದೇ ದೂರು ಕೇಳಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಮೆರಿಕವು ಯುದ್ಧೋಪಕರಣ ತಯಾರಿಯಲ್ಲಿ ಆಕ್ಸಿಸ್ ರಾಷ್ಟ್ರಗಳಿಗಿಂತ 5 ವರ್ಷ ಹಿಂದೆ ಬಿದ್ದಿದ್ದಿತು. ಆದುದರಿಂದಲೇ ಪ್ರೆಸಿಡೆಂಟ್ ರುಸವೆಲ್ಟರು ಜಾಪಾನಿನೊಡನೆ ಸಂಧಿ ಪ್ರಸ್ತಾಪ ನಡಿಸುತ್ತಾ, ಕಾಲಸಮಯ ಕಳೆಯುವ ಪ್ರಯತ್ನ ಮಾಡಿದುದಾಗಿದೆ. ಆದರೆ ಜಾಪಾನಿಗೆ ಆ ಗುಟ್ಟು ತಿಳಿದು ಅದು ಅಮೆರಿಕದ ಪ್ರಾಮುಖ್ಯ ನೌಕಾನೆಲೆಯಾದ ಪರ್ಲ್ ಹಾರ್ಬರಿನ ಮೇಲೆ ಧಾಳಿ ನಡಿಸಿಬಿಟ್ಟಿತು. ಅಮೆರಿಕದಲ್ಲಿ ಬೇಕಷ್ಟು ಯುದ್ಧೋಪಕರಣ ಸಿದ್ಧತೆ ಇದ್ದಿಲ್ಲ. ಮಾತ್ರವಲ್ಲದೆ ಇದ್ದುದನ್ನು ಒಯ್ಯುವುದೊಂದು ಮಹತ್ವಾದ ಸಮಸ್ಯೆಯಾಗಿತ್ತು. ಆದುದರಿಂದಲೇ ಸಿಂಗಪುರ, ಜಾವ ಮತ್ತು ಬರ್ಮಾಗಳಲ್ಲಿ ದೊಡ್ಡ ಅಪಜಯಗಳ ಅನಾಹುತವುಂಟಾಗಿರುವುದು. ಇಂದೀಗ ಅಮೆರಿಕದಲ್ಲಿ ಎಲ್ಲಾ ತರದ ಯುದ್ಧೋಪಕರಣಗಳೂ ಮೊದಲಿಗಿಂತ ಎರಡು ಮೂರು ಪಾಲಷ್ಟು ಹೆಚ್ಚು ತಯಾರಾಗುತ್ತಿವೆ. ಆದುದರಿಂದಲೇ ಮಿತ್ರ ರಾಷ್ಟ್ರಗಳಿಂದು ಆಕ್ಸಿಸ್ ರಾಷ್ಟ್ರಗಳ ಮೇಲೆ ಬಿದ್ದು ಹೋರಾಡಲು ಮುಂದಾಗಿವೆ. ಪೂರ್ವದಲ್ಲಿ ಕೂಡಾ ಜಾಪಾನು ಗೆದ್ದಿರುವ ರಾಜ್ಯಗಳನ್ನು ಬೇಗನೆ ಅದರಿಂದ ಕಸಕೊಳ್ಳದಿದ್ದಲ್ಲಿ ಅದು ಬೇಕಷ್ಟು ಕಚ್ಚಾ ಮಾಲು ಪಡೆದು ತನ್ನ ಸ್ಥಾನವನ್ನು ಸುಭದ್ರಗೊಳಿಸುವ ಅಪಾಯವಿದೆ.

ಅಮೆರಿಕಾನರು ವಿಚಾರಿಸಹತ್ತಿದ್ದಾರೆ

ಹಲವು ಸಹಸ್ರ ಮೈಲು ದೂರವಿರುವ ಏಶ್ಯಾ ಖಂಡವನ್ನು ರಕ್ಷಿಸಲು ತಾವು ಹೋರಾಡಬೇಕೇಕೆ? ಅಮೆರಿಕದಿಂದೇಕೆ ಅಲ್ಲಿ ಸೈನ್ಯ, ಮತ್ತು ಯುದ್ಧೋಪಕರಣಗಳು ಕಳುಹಿಸಲ್ಪಡುವುದೆಂಬ ಪ್ರಶ್ನೆಗಳಿಂದು ಅನೇಕ ಮಂದಿ ಅಮೆರಿಕಾನರಲ್ಲಿ ವಿಚಾರೋದಯವನ್ನುಂಟುಮಾಡಿರುವುದು. ಬಿಳಿ ಮನುಷ್ಯನ ಸಾಮ್ರಾಜ್ಯವಾದ ಮತ್ತು ಬ್ರಿಟನರ ಹಳೆಯ ಅಪ್ರಾಗತಿಕ ಮನೋವೃತ್ತಿಯೇ ಅದಕ್ಕೆ ಮುಖ್ಯ ಕಾರಣವೆಂದೀಗ ಅಮೆರಿಕಾನರು ಮನಗಾಣಹತ್ತಿರುತ್ತಾರೆ. ಕೆಲಮಂದಿ ಬಿಳಿ ಸೈನಿಕರು ಮತ್ತು ಹಣಕ್ಕಾಗಿ ದುಡಿಯುವ ಕರಿ ಸೈನಿಕರಿಂದ ಏಶ್ಯಾ ಖಂಡವನ್ನು ರಕ್ಷಿಸಿಕೊಳ್ಳಲು ಬ್ರಿಟನು ಪ್ರಯತ್ನ ಮಾಡಿರುವುದು ಜನಸಾಮಾನ್ಯರಿಗೆ ರಾಜಕೀಯ ಸ್ವಾತಂತ್ರ್ಯವಿತ್ತು ನಿಶ್ಶಸ್ತ್ರೀಕೃತರಾದ ಜನರಿಗೆ ಯುದ್ಧ ತರಬೇತಿಯನ್ನೀಯುವ ಮನಸ್ಸೇ ಬ್ರಿಟಿಷ್ ಸರಕಾರಕ್ಕಿಲ್ಲದುದರಿಂದ ಜಾಪಾನು ಕ್ಷಣಮಾತ್ರದಲ್ಲೇ ಬಿಳಿಬ್ರಿಟಿಷ್ ಸೇನೆಯನ್ನು ಗೆದ್ದು ವಿಜಯಿಯಾಗಿರುವುದು. ಅನಾಹುತಕಾರಿಯಾದ ಈ ಧೋರಣೆಯು ಪ್ರತಿಪಾದಕರು ಇನ್ನು ಬ್ರಿಟಿಷ್ ಸರಕಾರದ ಸೂತ್ರಧಾರಿಗಳಾಗಬಾರದು. ಅಂಥವರನ್ನು ಹೊರದಾಟಬೇಕು.. ಯುದ್ಧದಲ್ಲಿ ಜಯ ಹೊಂದಬೇಕಾದರೆ ಜನತೆಗೆ ರಾಜಕೀಯ ಸ್ವಾತಂತ್ರ್ಯವಿತ್ತು ಅವರನ್ನೆಲ್ಲಾ ಸಶಸ್ತ್ರರನ್ನಾಗಿ ಮಾಡಬೇಕು. ಜರ್ಮನಿ ಮತ್ತು ಜಾಪಾನುಗಳು ಹಿಂದು ದೇಶದ ಕತ್ತು ಹಿಡಿಯದಂತೆ ಮಾಡಬೇಕಾದರೆ ಹಿಂದೀಯರಿಗೆ ಕೂಡಲೆ ಸ್ವಾತಂತ್ರ್ಯವಿತ್ತು ಸಶಸ್ತ್ರರನ್ನಾಗಿ ಮಾಡಬೇಕು. ಅಲ್ಲವಾದರೆ ಮಹತ್ವಾದ ಅನಾಹುತವುಂಟಾಗುವುದೆಂದು ಅಮೆರಿಕದ ಪತ್ರಿಕೆಗಳು ಹಲವು ಮತ್ತು ಅನೇಕ ಮಂದಿ ಪ್ರಮುಖ ಲೇಖಕರು ಎಚ್ಚರವೀಯಹತ್ತಿದ್ದಾರೆ. ಆದರೆ ಬ್ರಿಟನು ಇನ್ನಾದರೂ ಅದಕ್ಕೆ ಕಿವಿಗೊಡಲು ಸಿದ್ಧವಿರುವಂತೆ ತೋರುವುದಿಲ್ಲ.

ಸಿಂಧಿನ ಗಲಾಟೆ

ಕೆಲಸಮಯದ ಶಾಂತತೆಯ ನಂತರ ಸಿಂಧುದೇಶವು ಪುನಹ ಈಗ ಕೊಲೆ ಸುಲಿಗೆಗಳ ತಾಣವಾಗಿರುತ್ತದೆ. ಈ ಗಲಾಟೆ ನಡಿಸುವರು ಹರ್ಸ ಎಂಬ ಅದೊಂದು ಪಂಗಡದವರೆಂದು ತಿಳಿದುಬಂದಿದೆ. ಅವರು ಪಗರೋವಿನ ಪೀರರ ಶಿಷ್ಯರು. ಈ ಪೀರರು ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಶಿಕ್ಷೆಗೊಳಗಾಗಿ ಸಿಂಧಿನ ಹೊರಗೆ ಸ್ಥಾನಬದ್ಧ ಕೈದಿಯಾಗಿರುತ್ತಾರೆ. ಸರಕಾರವು ಅವರನ್ನು ಬಿಡುಗಡೆಮಾಡುವಂತೆ ಒತ್ತಾಯಿಸಲು ಈ ಪಂಗಡಿಗರು ಗಲಾಟೆ ನಡಿಸುತ್ತಿರುವರೆಂದು ನಂಬಲಾಗಿದೆ. ಹರ್ ಪಂಗಡಿಗರ ಈ ಗಲಾಟೆಯು ಸಂಘಟಿತವಾದೊಂದು ಬಂಡಾಯದ ಸ್ವರೂಪ ತಾಳಿರುವುದು. ಅವರು ತಮ್ಮದೇ ಆದೊಂದು ಸರಕಾರ, ಅರಸ, ಸೇನೆ, ಸೇನಾನಾಯಕರುಗಳನ್ನೆಲ್ಲಾ ಸ್ಥಾಪಿಸಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವರೆಂದು ತಿಳಿದು ಬರುತ್ತದೆ. ಈ ಜನರ ಗಲಾಟೆಯ ಸ್ಥಳಗಳಲ್ಲಿ ಅಧಿಕಾರಿಗಳಾಗಲಿ ಅನಧಿಕಾರಿಗಳಾಗಲಿ ಹೊತ್ತು ಮುಳುಗಿದ ಮೇಲೆ ಸಂಚರಿಸಲಿಕ್ಕೇನೇ ಸಾಧ್ಯವಿಲ್ಲ. ಜನಸಮುಖಂಡರನ್ನು ಕೊಲ್ಲುವುದು, ಟ್ರೈನು ಮತ್ತು ಬಸ್‌ಗಳನ್ನು ತಡೆಗಟ್ಟಿ ಲುಟಾಯಿಸುವುದು. ಅವುಗಳಲ್ಲಿರುವ ಜನರನ್ನು ಕೊಲೆ ಮಾಡುವುದು, ಆಹಾರ ಸಾಮಾಗ್ರಿ ಮತ್ತು ಸ್ಟೋರುಗಳನ್ನು ಸುಟ್ಟುಹಾಕುವುದೇ ಮೊದಲಾದ ತಕ್ಷೀರುಗಳನ್ನು ಈ ಪಂಗಡಿಗರು ಇಚ್ಛಾನುಸಾರ ನಡಿಸಿ ಜನರನ್ನು ದಿಗಿಲುಗೊಳಿಸುತ್ತಿರುವರು. ಈ ತಕ್ಷೀರುಗಳನ್ನು ತಡೆಗಟ್ಟಲು ಸಿಂಧ್ ಸರಕಾರಕ್ಕೆ ಇಷ್ಟರವರೆಗೆ ಸಾಧ್ಯವಾಗಿರುವುದಿಲ್ಲ. ಅದು ಮುಂದೇನು ಮಾಡಲಿರುವುದೋ ನೋಡಬೇಕು.

Keep the enemy away
from India
Contribute AGAIN to the
Governor's war fund.
Buy MORE defence bonds
and savings certificates.
**GIVE AND LEND
FOR
VICTORY.**

ಬೇಕಾಗಿದ್ದಾರೆ

ಉಡುಪಿ ತಾಲೂಕು ಕುರುಕಾಲು ಗ್ರಾಮದ ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟ್ರಿ ಮತ್ತು ಕುಯಿಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟ್ರಿ, ಈ ಎರಡು ಶಾಲೆಗಳಲ್ಲಿ ಕೆಲಸಮಾಡುವರೇ 4ನೇ ದಿ ಸೆಕೆಂಡ್ರಿ ಗ್ರೇಡು ಟ್ರೈನ್ಡ್ ಯಾ ಹಾಯರ್ ಗ್ರೇಡು ಟ್ರೈಂನ್ಡ್ ಉಪಾಧ್ಯಾಯರು ಅಥವಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಸಂಬಳ ತಿಂಗಳು 1ರ ರೂಪ್ಯ 20 ಮತ್ತು ರೂಪ್ಯ 12 ಕೊಡೋಣಾಗುವುದು, ವಿಶೇಷ ಯೋಗ್ಯತೆಗಳೇನಾದರೂ ಇದ್ದರೆ ಹೆಚ್ಚಿನ ಸಂಬಳ ಸಹಾ ಕೊಡೋಣಾಗುವುದು. ಉಮೇದ್ವಾರಿಗಳು ಈ ಕೆಳಗಿನವರೊಡನೆ ಕೂಡಲೇ ಬರಹಮೂಲಕ ಇಲ್ಲವೇ ಮೊಖ್ತಾ ಮಾತನಾಡುವುದು.

ಕುರುಕಾಲು ಗಣಪಯ್ಯ ಶೆಟ್ಟಿ,
ಮೆನೇಜರ್.

ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟ್ರಿ ಶಾಲೆ ವ ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟ್ರಿ ಶಾಲೆ.

ಕಟಪಾಡಿ ಪೋಸ್ಟು. ದ. ಕ.

ಕುರುಕಾಲು,
25-5-42

೨ ವರ್ಷಗಳ ಯುದ್ಧದಲ್ಲಿ ಬ್ರಿಟಿಷ್ ಪ್ರಾಣಹಾನಿ.

ಕಳೆದ ೨ ವರ್ಷಗಳ ಯುದ್ಧದಲ್ಲಿ ಕೊಲ್ಲಲ್ಪಟ್ಟ, ಗಾಯಗೊಂಡ, ಸೆರೆಯಾಗಿರುವ ಮತ್ತು ಕಾಣೆಯಾದ ಬ್ರಿಟಿಷ್ ಸೈನಿಕರ ಸಂಖ್ಯೆ 183,550 ಎಂದು ಮಿ. ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ. ಇಷ್ಟೇ ಸಮಯದಲ್ಲಿ ಕಳೆದ ಮಹಾ ಯುದ್ಧದಲ್ಲಾದ ಪ್ರಾಣಹಾನಿಗಿಂತ ಇದು ಬಹಳ ಕಡಿಮೆಯಾಗಿರುತ್ತದೆ. ವಿಮಾನ ಧಾಳಿಯಿಂದ ಬ್ರಿಟನಿನಲ್ಲಿ 98,000 ಮಂದಿ ನಾಗರಿಕರು ಹತರಾಗಿರುತ್ತಾರೆ. ಕಳೆದ ಸೆಪ್ಟಂಬರ ತಿಂಗಳಿಂದ ಅತಿ ಪೂರ್ವದಲ್ಲಿ ಮತ್ತು ಲಿಬಿಯದ ಯುದ್ಧಗಳಲ್ಲಾಗಿರುವ ಪ್ರಾಣಹಾನಿಯನ್ನು ಸೇರಿಸಿದರೆ ಪ್ರಾಯಶಃ 300,000 ಆಗಬಹುದಾಗಿದೆ. ರಷ್ಯದ ಒಂದೇ ಯುದ್ಧದಲ್ಲಿ 2000,000 ಜರ್ಮನರು ಹತರಾಗಿರುತ್ತಾರೆಂದು ನಂಬಲಾಗಿದೆ.

ಚೈನಕ್ಕೆ ಯುದ್ಧ ಸಾಮಾಗ್ರಿ ಸರಬರಾಯಿ

ಬರ್ಮಾ ರಸ್ತೆಯು ಕಡಿದುಹಾಕಲ್ಪಟ್ಟರೂ ಚೈನಕ್ಕೆ ಇತರ ರಸ್ತೆಗಳಿಂದ ಯುದ್ಧೋಪಕರಣಗಳು ಕಳುಹಿಸಲ್ಪಡುತ್ತಿವೆ. ಕೆಲವು ಸಾಮಾಗ್ರಿಗಳು ವಿಮಾನ ಮೂಲಕ ಹೋಗುತ್ತಿವೆ. ಆಗ್ರಾ, ಸಾಮರ್ಕಂಡ್ ಮತ್ತು ಟಷ್ಕೆಂಟ್ ಮಾರ್ಗವಾಗಿ ಒಂಟೆಗಳ ಮೂಲಕ ಕೆಲವು ಕಳುಹಿಸಲ್ಪಡುತ್ತಿವೆ. ಕೆಲವನ್ನು ಹೇಸರ ಕತ್ತೆ, ಆನೆ ಮತ್ತು ಆಳುಗಳು ಕೊಂಡುಹೋಗುತ್ತಿದ್ದಾರೆ. ಒಂದು ಆನೆಯು ಒಂದು ಟನ್ ಭಾರದ ಸಾಮಾನುಗಳನ್ನು ದಿನಕ್ಕೆ 15 ಮೈಲು ಒಯ್ಯಬಲ್ಲುದು. ಹೇಸರಕತ್ತೆಯು 107 ರಾತ್ಲು ಮತ್ತು ಆಳು ಒಬ್ಬನು ಅದರ ಅರೆವಾಸಿ ಒಯ್ಯಬಲ್ಲನು ಯಾವ ರೀತಿಯಿಂದಾದರೂ ಚೈನಕ್ಕೆ ಯುದ್ಧ ಸಾಮಾಗ್ರಿಗಳು ಕಳುಹಿಸಲ್ಪಟ್ಟು ಅದು ತನ್ನ ಯುದ್ಧವನ್ನು ಮುನ್ನಡೆಸುವಂತಾಗುವುದೆಂದು ಅಮೇರಿಕದ ವಿಲಿಯಮ್ ಸಿಮ್ಸ್ನರೆಂಬವರು ನಿರೂಪಿಸಿರುತ್ತಾರೆ.

ಅಮೇರಿಕದಲ್ಲಿ ಪತ್ರಿಕಾ ಪ್ರಚಾರ

ಪತ್ರಿಕಾ ಪ್ರಚಾರ, ವಾರ್ತಾ ಪ್ರಸಾರದಲ್ಲಿ ಅಮೇರಿಕದಷ್ಟು ಮುಂದುವರಿದಿರುವ ದೇಶವು ಲೋಕದಲ್ಲಿ ಇನ್ನೊಂದಿಲ್ಲ. 912ನೇ ಇಸ್ವಿಯ ಗಣನೆಯ ಮೇರೆಗೆ ಯುನೈಟೆಡ್ ಸ್ಟೇಟ್ಸಿನಲ್ಲಿ 11,000 ದೈನಿಕ ಪತ್ರಿಕೆಗಳು ಮತ್ತು ಇತರ ಸಾಪ್ತಾಹಿಕ ಮತ್ತು ಮಾಸಿಕಗಳಿರುತ್ತವೆ. ವರ್ತಮಾನ ಪತ್ರಗಳ ಅನುದಿನದ ಪ್ರಚಾರವೇ 42, 000, 000 ಪ್ರತಿಗಳಿಗಿಂತಲೂ ಮಿಕ್ಕಿದೆ. ಇನ್ನು 21,000 ಸಾಪ್ತಾಹಿಕ ಮತ್ತು ಮಾಸಿಕಗಳ ಪ್ರಚಾರವು ಪ್ರತ್ಯೇಕವೇ ಇದೆ ಲೋಕದ ಸಂಗತಿಗಳನ್ನು ಅಮೇರಿಕಾನರಷ್ಟು ತಿಳಿದಿರುವ ಜನರು ಲೋಕದಲ್ಲಿ ಇನ್ನಾರೂ ಇರುವುದಿಲ್ಲ

ಬೇಕಾಗಿದ್ದಾರೆ.

ಸೆಕೆಂಡ್ರಿಗ್ರೇಡ್ ಅಥವಾ ಹಾಯರ್ ಗ್ರೇಡ್ ಟ್ರೈನಿಂಗ್ ಪಾಸಾದ ಒಬ್ಬ ಉಪಾಧ್ಯಾಯರು ಬೇಕಾಗಿದ್ದಾರೆ. ತಲಬಿಗೂ ಹೆಚ್ಚಿನ ವಿವರಕ್ಕೂ ಈ ಕೆಳಗಿನವರೊಡನೆ ಮಾತನಾಡಬಹುದು ಯಾ ಅರ್ಜಿ ಕಳಿಸಿಕೊಡಬಹುದು.

ಕೆ ತೇಜಪ್ಪ ಶೆಟ್ಟಿ.
ಮೆನೇಜರ್
ಕುತ್ಪಾಡಿ ಎಲಿಮೆಂಟ್ರಿ ಶಾಲೆ,
ಪೋಸ್ಟ್ ಉದ್ಯಾವರ.

ಸಮಾಚಾರ ಸಂಗ್ರಹ

ಚೈನದಲ್ಲಿ ಸೈನಿಕನ ಸ್ಥಾನ

ಜಪಾನರು ಚೈನದ ಮೇಲೆ ಧಾಳಿ ನಡೆಸುವ ಮೊದಲು ಚೀನೀಯರು ವಿದ್ವಾಂಸರಿಗೇನೇ ಪ್ರಥಮ ಮನ್ನಣೆ ಕೊಡುತ್ತಿದ್ದರು. ಬೇಸಾಯಗಾರನು ಎರಡನೇ, ವ್ಯಾಪಾರಿಯು ೩ನೇ ಮತ್ತು ಸೈನಿಕನು ಕಡೆಯ ಸ್ಥಾನ ಪಡೆಯುತ್ತಿದ್ದರು. ಆದುದರಿಂದಲೇ ೧೯೩೭ನೇ ಇಸ್ವಿಯವರೆಗೆ ಚೈನದಲ್ಲಿ ದೊಡ್ಡ ಸೇನೆಯೇ ಇದ್ದಿರಲಿಲ್ಲ. ಆದರೆ ಈಗ ಚೈನವು ನವಜಾಗ್ರತಿ ಹೊಂದಿ ಹಿಂದಿನ ಮೌಲ್ಯಗಳನ್ನೇ ಬದಲಾಯಿಸಿ ಸೈನಿಕನಿಗೆ ಪ್ರಥಮಸ್ಥಾನವಿತ್ತಿದೆ. ಚೀನೀಯರು ತಮ್ಮ ಹಿಂದಿನ ರೀತಿನೀತಿಗಳ ತಪ್ಪನ್ನು ಕಂಡುಕೊಂಡು ನವಸ್ಫೂರ್ತಿ ಪಡೆದು ಮಿಲ್ಯಗಟ್ಲೆ ಸೈನಿಕರನ್ನು ತಯಾರಿಸಿ ಜಪಾನರನ್ನು ಜಯಶೀಲವಾಗಿ ಪ್ರತಿಭಟಿಸುವ ವಿಶ್ವಾಸವುಳ್ಳವರಿರುತ್ತಾರೆ.

ಅಮೇರಿಕಾನರು ಜಿ ಜಿಟ್ಸು ಕಲಿಯುತ್ತಿದ್ದಾರೆ.

ಯುನೈಟೆಡ್ ಸ್ಟೇಟ್ಸಿನ ಸೈನಿಕರು ಜಪಾನರೊಡನೆ ಕೈ ಕೈ ಹೋರಾಟಕ್ಕೆ ತರಬೇತು ಮಾಡುತ್ತಿದ್ದಾರೆ. ಜಿ. ಜಿಟ್ಸು ಎಂಬುದು ಜಪಾನರ ವಿಶಿಷ್ಟವಾದೊಂದು ಜಟ್ಟಿ ಯುದ್ಧಕ್ರಮ. ಅದನ್ನೀಗ ಅಮೇರಿಕಾನ ಸೈನಿಕರು ತಮ್ಮ ಶಿಬಿರಗಳಲ್ಲಿ ಪ್ರತಿದಿನ ಅಭ್ಯಾಸ ಮಾಡುತ್ತಿದ್ದಾರೆ. ಜಪಾನರ ಔಷಧಿಯ ಗುಟುಕನ್ನು ಅವರಿಗೇನೇ ಕೊಡಲು ಅಮೇರಿಕಾನರು ಹಾತೊರೆಯುತ್ತಿದ್ದಾರೆ.

೧೦೦,೦೦೦ ನರ್ಸುಗಳ ತರಬೇತಿ

ಇತರ ಮಹತ್ವಾದ ಸಿದ್ಧತೆಯೊಂದಿಗೆ ಅಮೇರಿಕವು ೧೦೦,೦೦೦ ನರ್ಸುಗಳ ತರಬೇತಿಯ ಕಾರ್ಯಕ್ರಮವನ್ನೂ ಕೈಕೊಂಡಿರುತ್ತದೆ. ರೆಡ್‍ಕ್ರೋಸ್ ಸಂಘದವರು ಮತ್ತು ಆಸ್ಪತ್ರೆಗಳವರು ಸಾವಿರಾರು ಮಂದಿ ಸ್ತ್ರೀಯರಿಗೆ ಪ್ರಥಮ ಚಿಕಿತ್ಸೆಯ ಪಾಠಗಳನ್ನಿತ್ತು ತರಬೇತಿ ಮಾಡುತ್ತಿದ್ದಾರೆ. ಈ ನರ್ಸುಗಳು, ಚೆನ್ನಾಗಿ ತರಬೇತಾಗಿ ಪರಿಪಕ್ವ ಅನುಭವ ಪಡೆದಿರುವ ನರ್ಸುಗಳಿಗೆ ಸಹಾಯಕರಾಗಿ ರೋಗಿಗಳ ಆರೈಕೆ ಮಾಡುವ ತರಬೇತಿ ಪಡೆಯುತ್ತಿದ್ದಾರೆ

ಅಮೇರಿಕಾನ ಸ್ತ್ರೀಯರ ಯುದ್ಧ ಕೆಲಸ

ಸಾವಿರಾರು ಮಂದಿ ಅಮೇರಿಕಾನ ಸ್ತ್ರೀಯರು ಯುದ್ಧೋದ್ಯಮಗಳಲ್ಲಿ ನಿರತರಾಗಿರುವರು. ೧೬ ವರ್ಷ ಮಿಕ್ಕಿದ ೩೦೦೦ ಮಂದಿ ಸ್ತ್ರೀಯರು ದಿನಕ್ಕೆ ೩ ಡೋಲರು ಸಂಬಳ ಪಡೆದು ಬೆಳೆ ಕಟಾವು ಮೊದಲಾದ ಹೊಲಕೆಲಸ ಮಾಡತೊಡಗಿರುವರು. ಗಂಡಸರು ಸೇನೆಗೆ ಸೇರುತ್ತಿರುವಾಗ ಹೆಂಗಸರು ಹೆಚ್ಚೆಚ್ಚಾಗಿ ಹೊಲಕೆಲಸ ಮಾಡಹತ್ತಿರುವರು. ಬೇರೆಬೇರೆ ಯುದ್ಧ ಕೈಗಾರಿಕೆಗಳಲ್ಲಿ ಸ್ತ್ರೀ ಕೆಲಸಗಾರರ ಸಂಖ್ಯೆಯು ಬಹಳವಾಗಿ ಹೆಚ್ಚಿರುವುದು ರೆಡ್ ಕ್ರೋಸ್ ಸಂಘದ ಕೆಲಸಕ್ಕೆ ೨,೦೦೦,೦೦೦ ಕ್ಕಿಂತಲೂ ಮಿಕ್ಕಿದ ಸ್ತ್ರೀಯರು ಸೇರಿರುತ್ತಾರೆ. ರೆಡ್‍ಕ್ರೋಸಿನ ೬೦೦೦ ಶಾಖೆಗಳು ಅಮೇರಿಕದಲ್ಲೆಲ್ಲಾ ಸ್ಥಾಪಿಸಲ್ಪಟ್ಟವೆ. ಈ ರೆಡ್‍ಕ್ರೋಸ್ ಕೆಲಸಗಾರರು ಈ ವರೆಗೆ ೧೧,೦೦೦,೦೦೦ ಉಡುಗೆತೊಡುಗೆ ಮತ್ತು ೩೨,೦೦೦,೦೦೦ ಶಸ್ತ್ರಚಿಕಿತ್ಸಾ ಡ್ರೆಸ್ಸಿಂಗ್‍ಗಳನ್ನು ಗಾಯಗೊಂಡ ಸೈನಿಕರಿಗಾಗಿ ಪರದೇಶಗಳಿಗೆ ಕಳುಹಿಸಿರುತ್ತಾರೆ. ಮೆಕೆನಿಕ್ಸ್ ಮತ್ತು ಡ್ರೈವರ್ಸ್‍ಗಳಾಗಿ ನೂರಾರು ಮಂದಿ ಸ್ತ್ರೀಯರು ತರಬೇತಾಗುತ್ತಿದ್ದಾರೆ.

ಜಪಾನು ಮತ್ತು ಅಮೇರಿಕಗಳ ಕೈಗಾರಿಕಾ ಬಲ

ಕೈಗಾರಿಕ ದೃಷ್ಟಿಯಿಂದ ಯುನೈಟೆಡ್ ಸ್ಟೇಟ್ಸ್ ಮತ್ತು ಜಪಾನುಗಳೊಳಗೆ ಅಜಗಜಾಂತರವಿರುತ್ತದೆ. ಜಪಾನಿನಲ್ಲಿ ವರ್ಷವೊಂದಕ್ಕೆ ತಯಾರಾಗುವ ಉಕ್ಕು 7,000,000 ಟನ್. ಆದರೆ ಯುನೈಟೆಡ್ ಸ್ಟೇಟ್ಸಿನಲ್ಲಿ ವರ್ಷಕ್ಕೆ 88,000,000 ಟನ್ ತಯಾರಾಗುತ್ತದೆ. ಜಪಾನಿನಲ್ಲಿ 24,000 ಟನ್ ಅಲುಮಿನಿಯಮ್ ತಯಾರಾಗುವಾಗ ಯುನೈಟೆಡ್ ಸ್ಟೇಟ್ಸಿನಲ್ಲಿ 100,000 ಟನ್ ತಯಾರಾಗುತ್ತದೆ. ಜಪಾನು ವರ್ಷಕ್ಕೆ ಕೇವಲ 7,000,000 ಬೇಲುಗಳಷ್ಟರ ಎಣ್ಣೆಯ ಉತ್ಪತ್ತಿಯುಳ್ಳದಾಗಿದೆ. ಆದರೆ ಅದಂ 5 ಪಾಲಷ್ಟು ಹೆಚ್ಚು ಅದಕ್ಕೆ ಬೇಕಾಗಿರುತ್ತದೆ. ಜಪಾನಿಗೆ ಹೊರಗಿನಿಂದ ಆಮದಾಗುತ್ತಿದ್ದ ಕಬ್ಬಿಣ, ಎಣ್ಣೆ, ತಾಮ್ರ, ಟಿನ್, ಅಲುಮಿನಿಯಮ್, ಸೀಸ, ಪಾದರಸ, ನಿಕ್ಕೆಲ್, ಕ್ರೋಮ್, ಮೆಂಗನೀಸ್ ಮತ್ತು ಯಂತ್ರ ಸಾಮಾಗ್ರಿಗಳೆಲ್ಲಾ ಈಗ ಬಂದಾಗಿ ಹೋಗಿವೆ. ಅದಕ್ಕೆ ಕ್ರೋಮ್ ಮತ್ತು ಕಬ್ಬಿಣ ಪದಾರ್ಥಗಳನ್ನು ಫಿಲಿಪ್ಪೈನಿನಿಂದ ಎಣ್ಣೆ ಮತ್ತು ಬೋಕ್ಸೈಟನ್ನು ಡಚ್ ಈಸ್ಟ್ ಇಂಡೀಸ್ ಮತ್ತು ಬರ್ಮಾದಿಂದ, ರಬ್ಬರ್ ಮತ್ತು ಟಿನ್‍ಗಳನ್ನು ಮಲಯದಿಂದ ಪಡೆಯಲು ಸಾಧ್ಯವಾದರೂ ಅವನ್ನು ಉಪಯೋಗಿಸಿಕೊಳ್ಳುವರೆ ಬೇಕಾದ ಕಾರ್ಖಾನೆ ಮತ್ತು ತಜ್ಞ ಕೆಲಸಗಾರರ ಅನುಕೂಲತೆ ಇರುವುದಿಲ್ಲ. ಆದುದರಿಂದಲೇ ಶೀಘ್ರ ಯುದ್ಧಕ್ಕದು ಬೇಕಾದ ಸಿದ್ಧತೆ ಮಾಡಿರುವುದಾದರೂ ದೀರ್ಘ ಯುದ್ಧಕ್ಕೆ ತಯಾರಿರಲಾರದು. ಆದರೆ ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟನುಗಳು ದೀರ್ಘ ಹೋರಾಟ ನಡಿಸುವ ನಿರ್ಧಾರ ಮಾಡಿರುತ್ತವೆ. ಅವುಗಳ ಬಲವು ದಿನೇ ದಿನೇ ಅಧಿಕವಾಗುವಾಗ ಜಪಾನಿನ ಬಲ ಕುಂದಿ ಅದರ ಪರಾಜಯ ನಿಶ್ಚಯವೆಂದು ನಂಬಲಾಗಿದೆ

ದಿನವಹಿ 15 ಮಿಲ್ಯ ಪವನು ವೆಚ್ಚ

ಕಳೆದ ಮಾರ್ಚ ತಿಂಗಳ ಅನಂತರದ 32 ದಿವಸಗಳಲ್ಲಿ ಬ್ರಿಟನಿನ ಯುದ್ಧವೆಚ್ಚವು 482,500,000 ಪವನಾಗಿರುವುದು. ಅಂದರೆ ದಿನಕ್ಕೆ ಸುಮಾರು 15 ಮಿಲ್ಯ ಪವನಾಯಿತು. ಎಪ್ರಿಲ್ ತಾ. 29ರಲ್ಲು ಸರಕಾರವು ಹೊರಡಿಸಿರುವ ಹೇಳಿಕೆ ಮೇರೆಗೆ ಇಂಗ್ಲೆಂಡಿನಲ್ಲಿ ಒಟ್ಟು 771,200,000 ಪವನುಗಳಷ್ಟರ ನೋಟುಗಳು ಚಲಾವಣೆ ಮಾಡಲ್ಪಟ್ಟಿದ್ದುವು. ಅನಂತರ 20,000,000 ಪವನು ಮೌಲ್ಯದ ನೋಟುಗಳನ್ನು ಹೆಚ್ಚಿಗೆಯಾಗಿ ಹೊರಡಿಸಲಾಗಿದೆ.

ನೋಟೀಸು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. No 143/1942.
R. I. A. No 483/1942.

1. ಖಾರ್ವಿ ಚಂದ್ರ ತಂಡೇಲ.
2. ಖಾರ್ವಿ ರುಕ್ಮ ತಂಡೇಲ.
3. ಖಾರ್ವಿ ಕೃಷ್ಣ ತಂಡೇಲ.
4. ಖಾರ್ವಿ ಸುಬ್ಬಣ್ಣ ತಂಡೇಲ.

} ವಾದಿಗಳು

ಇವರು [illegible] ಬಗ್ಗೆ ಮತ್ತು ಉಡುಪಿ ತಾಲ್ಲೂಕು ಕೋಡಿಗ್ರಾಮದ ಬೆಂಗ್ರೆಯಲ್ಲಿರುವ ಮಾಮೂಲು ಹಕ್ಕಿರುವ ಬೇರೆ ಖಾರ್ವಿಜನರ ಬಗ್ಗೆ ಕೂಡಾ,

1 ಖಾರ್ವಿ ಮುತ್ತ 2. ಕೊರಗ 3. ಖಾರ್ವಿ ಪ್ರಸಾದ 4 ಮಂಜುನಾಥ 5. ಸುಬ್ಬ 6 ಖಾರ್ವಿ ರಾಮಣ 7 ಖಾರ್ವಿ ಶೀನ } ಪ್ರತಿವಾದಿಗಳು

ಉಡುಪಿ ತಾಲ್ಲೂಕು ಕೋಡಿಗ್ರಾಮದ ಬೆಂಗ್ರೆಯಲ್ಲಿರುವವರು. ಸದ್ರಿ ಪ್ರತಿವಾದಿಗಳಿಗೆ ಮತ್ತು ಇತರ ಜನರಿಗೆ ಸಹಾ–ಸದ್ರಿ ವಾದಿಗಳು ವಗೈರೆ ಖಾರ್ವಿಜನರು ಹಂಗಾರಕಟ್ಟೆ ಹೊಳೆಯ ಪಶ್ಚಿಮದಿಕ್ಕಿನಲ್ಲಿ ಅನಾದಿ ಕಾಲದಿಂದ ಮಾಮೂಲು ಪ್ರಕಾರ ನಡೆದುಕೊಂಡು ಬಂದ ಶಾಶ್ವತ ಹಕ್ಕಿನ ಮೇರೆಗೂ ತಾ 13-3-1680ರಲ್ಲಿ ಸಾದಿರ ಹಿರಿಯರು ವಗೈರೆ [illegible] ಬರಕೊಂಡ ಅರ್ಜಿ ಪ್ರಕಾರವೂ ಮತ್ತು ಈ ಕೋರ್ಟು O. S. 256/1926ನೇ ದಾವೆಯ ತೀರ್ಮಾನದ ಪ್ರಕಾರವೂ [illegible] ಗಳನ್ನು [illegible] ಅರ್ಜಿದಾರ ರಿಂದ ಅದಕ್ಕೆ ವಿರೋಧವಾಗಿ ಪ್ರತಿವಾದಿಗಳು [illegible] ಹೊಳೆಯಲ್ಲಿ ಬೇರೆ [illegible] ಮಾಡಿ [illegible] ಗಳನ್ನು [illegible] ಅವರ ಮೇಲೆ [illegible] [illegible] ಸಿವಿಲ್ ಪ್ರೊಸೀಜರ್ [illegible] ದಾವೆಯಲ್ಲಿ ವಾದಿಗಳು ಸದ್ರಿ [illegible] ದಾವೆಯನ್ನು ನಡಿಸಲಿಕ್ಕೆ [illegible] ಪರ್ಮಿಶನ್ [illegible] ಕೊಡಬೇಕೆಂದು ಮಾಡಿದ ಅರ್ಜಿಯು [illegible] ತಾ 9-6-1942ಕ್ಕೆ [illegible] ಮುಂದೆ [illegible] ವಾದಿಸಲ್ಪಡುವುದು ಎಂಬ ಸಂಗತಿ ಕೋರ್ಟು [illegible] ಈ ಮೂಲಕ ತಿಳಿಸಲಾಗಿಯದೆ

ತಾ 13-5-1942. { S. A. [illegible]
Advocate for Plffs.

FURTHER REDUCTIONS IN LENDING RATES.

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue.

CANARA BANK LIMITED.

Estd. 1906.

'ಸಿ. ಆರ್. ಪಾಪ ಭಾಗಿಯಾಗಬಹುದು– ನಾನಾಗಲಾರೆ!' —ಗಾಂಧಿಜಿ.

"ಇದಿರು ಪಕ್ಷೀಯರು ಜಗಳಾಡಲಿಚ್ಛಿಸಿದ ವಿನಹ, ಮುಸಲ್ಮಾನರು ಅಪೇಕ್ಷಿಸುವದನ್ನವರು ಪಡೆಯದಂತೆ ತಡೆಯುವಂತಹದಾವುದೂ ಪ್ರಪಂಚದಲ್ಲಿರಲಾರದು ಎಂದು ಈ ತನಕ ನೀವು ಹಲವು ಬಾರಿ ಹೇಳಿದ್ದುದನ್ನು ಮೊನ್ನೆ ಬೊಂಬಾಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಮುಂದೆ ಪುನರಾವರ್ತಿಸಿರುವಿರಿ. ಹಾಗಾದರೆ ನಿಮ್ಮ ಮತ್ತು ಶ್ರೀ ರಾಜಗೋಪಾಲಾಚಾರ್ಯರೊಳಗಿರುವ ಅಭಿಪ್ರಾಯ ಭೇದವೇನು?" ಎಂಬ ಪ್ರಶ್ನೆಗೆ ಮಹಾತ್ಮಾ ಗಾಂಧಿಯವರು ಈ ಕೆಳಗಿನ ಸ್ಪಷ್ಟ ಉತ್ತರವನ್ನಿತ್ತಿದ್ದಾರೆ–

"ಅವರು ತನ್ನ ಸಮರ್ಥನೆಗಾಗಿ ನನ್ನ ಮಾತನ್ನೆತ್ತಿ ತೋರಿಸಿದ್ದಾರೆ. ಆದರೆ ನಮ್ಮಿಬ್ಬರೊಳಗೆ ಬೆಣ್ಣೆ ಮತ್ತು ಸುಣ್ಣಕ್ಕಿರುವಷ್ಟೇ ವ್ಯತ್ಯಾಸವಿದೆ. ಜಪಾನರನ್ನು ದೂರ ಮಾಡುವ ಆಶೆಯಿಂದ,ಸ್ವಾತಂತ್ರ್ಯ ಪಡೆಯಲು ದೇಶ ವಿಭಾಗಕ್ಕವರ ಒಪ್ಪಿಗೆ ದೊರೆತಿದೆ. ಭಾರತವನ್ನು ಇಬ್ಭಾಗಿಸುವದು ಪಾಪಕರವೆಂದು ನಾನು ಅಭಿಪ್ರಾಯ ಪಡುತ್ತೇನೆ.

ನನ್ನ ನೆರೆಯವನೊಬ್ಬನು ಉದ್ದೇಶಪೂರ್ವಕ ಪಾಪಕ್ಕಿಳಿಯುವಾಗ ಅದನ್ನು ನಾನು ತಡೆಯಲಾಗದ ಸಂದರ್ಭಗಳಿಗನುಸಾರವಾಗಿ ನನ್ನ ಹಿಂದಿನ ಹೇಳಿಕೆಯಿದೆ. ನೆರೆಯವನು ಮಾಡುವ ಅಪರಾಧದಲ್ಲಿ ಶ್ರೀ ರಾಜಗೋಪಾಲಾಚಾರಿಯವರು ಭಾಗವಹಿಸಬಹುದು; ನಾನು ಭಾಗಿಯಾಗಲಾರೆ. ಮೇಲಾಗಿ ಒಕ್ಕಟ್ಟಿಗೆ ಪ್ರತಿಬಂಧವೊತ್ತುವ ಮೂರನೇ ಪಕ್ಷವೊಂದು ಇಲ್ಲಿರುವತನಕ ಐಕ್ಯವಸಾಧ್ಯವೆಂಬುದು ನನ್ನ ದೃಢಾಭಿಪ್ರಾಯ. ಅದು ಕೃತಕ ವಿಭಾಗಗಳನ್ನು ನಿರ್ಮಿಸಿ, ರಕ್ಷಿಸಿಕೊಂಡು ಬರುತ್ತಿದೆ. ಈ ಮೂರನೇ ಪಕ್ಷದ ಸಮ್ಮುಖದಲ್ಲಿ, ಹಿಂದುಗಳು,ಮುಸಲ್ಮಾನರು,ಅದರಿಂದಾಗಿಯೇ ಘರ್ಷಿಸಿಕೊಳ್ಳುತ್ತಿರುವಂತೆ ಅಥವಾ ಪರಸ್ಪರ ಹೊಂದಿಕೆಯಾಗದಂತೆ ತೋರುತ್ತಿರುವ ಮಹತ್ವಾಕಾಂಕ್ಷೆಗಳು ಮತ್ತು ಜನರು ಇವರೆಲ್ಲರೂ ತಮ್ಮ ಬೆಂಬಲಕ್ಕಾಗಿ ಅದನ್ನೇ ಆಶ್ರಯಿಸುತ್ತಾರೆ; ಹಾಗೂ ಆ ಬೆಂಬಲವನ್ನು ಪಡೆಯುತ್ತಾರೆ. ಅವರ ಸ್ವಂತ ಹಿತವು ದೇಶ ಸ್ವಾತಂತ್ರ್ಯಕ್ಕಿಂತ ದೊಡ್ಡದು. ಒಕ್ಕಟ್ಟಿಲ್ಲದೆ ಸ್ವಾತಂತ್ರ್ಯವಿಲ್ಲ ಎಂಬ ನನ್ನ ಹಿಂದಿನ ಹೇಳಿಕೆಯನ್ನು ಈ ಸಂದರ್ಭದಲ್ಲಿ ಯಾರೂ ನನ್ನ ಮುಖದಿದಿರು ಹಿಡಿಯುವ ಅಗತ್ಯವಿಲ್ಲ. ನಾನು ಅದರ ಒಂದೇ ಒಂದು ಶಬ್ದವನ್ನು ಕೂಡಾ ಅಲ್ಲವೆನ್ನಲಾರೆ.

ಅದೆಂತೂ ಸತ್ಯವೇ. ಅದರ ಅರ್ಥಕ್ಕನುಸಾರವಾಗಿಯೇ, ಹಿಂದುಸ್ಥಾನವನ್ನು ಬಿಟ್ಟುಹೋಗುವಂತೆ ಬ್ರಿಟಿಷರನ್ನು ಮಂತ್ರಿಸುವ ಯೋಚನೆಗೆ ನಾನು ಬರಬೇಕಾಯಿತು. ಅವರು ಹಿಂದೆಗೆದ ಮಾತ್ರಕ್ಕೆ ನಮಗೆ ಸ್ವಾತಂತ್ರ್ಯ ದೊರೆಯುವಂತಿಲ್ಲ. ಅದರಿಂದ ಐಕ್ಯ ಸಾಧನೆಯಾಗಬಹುದು; ಇಲ್ಲವೇ ಗೊಂದಲವೇಳಬಹುದು; ಹೀಗೆ ಖಾಲಿಯಾದ ಸ್ಥಳವನ್ನು ಇನ್ನೊಂದು ಪರಕೀಯ ಅಧಿಕಾರವು– ಅದು ಇದ್ದರೆ— ಆಕ್ರಮಿಸಿಕೊಳ್ಳುವ ಅಪಾಯವೂ ಇದೆ. ಅದು ಹೇಗಿದ್ದರೂ ಬ್ರಿಟಿಷರು, ಸ್ವೇಚ್ಛೆಯಿಂದ ವ್ಯವಸ್ಥಾಪೂರ್ವಕವಾಗಿ ಭಾರತದಿಂದ ಹಿಂದೆಗೆದರೆ ಅವರು ನೈತಿಕೋನ್ನತಿಯನ್ನಷ್ಟೇ ಅಲ್ಲ– ಒಂದು ದೊಡ್ಡ ರಾಷ್ಟ್ರದ ಮನಃಪೂರ್ವಕವಾದ ಸ್ನೇಹವನ್ನೂ ಸಂಪಾದಿಸುತ್ತಾರೆ. ಆದ್ದರಿಂದ ಪರಸ್ಪರ ತಿಕ್ಕಾಟವಾಡುತ್ತಿರುವ ಎಲ್ಲಾ ಜನರು ಹಾಗೂ ಹಿತಾಕಾಂಕ್ಷೆಗಳು, ವಿದೇಶೀ ಅಧಿಕಾರವನ್ನು ಭಾರತದಿಂದ ಘೂಷಿಸಿಬಿಡಲು ಒಮ್ಮೆಯ ಪ್ರಯತ್ನ ಮಾಡಬೇಕು. ಹಾಗೆ ಮಾಡಲಾರದಾದರೆ, ಅವರೊಳಗೆ ಮಾಡಿಕೊಳ್ಳುವ ಯಾವ ಒಪ್ಪಂದವಾದರೂ ಹೊಯಿಗೆಯ ಮನೆಯಂತಾಗುವದು. ಜಾಪಾನರು ಭಾರತವನ್ನಾಕ್ರಮಿಸುವರೆಂಬ ಭಯವು ಶ್ರೀ. ಸಿ. ಆರ್. ಇವರನ್ನು ನಿಶ್ಚಿತ ಪಕ್ಷದ ಕಡೆಗೆ ಕುರುಡನನ್ನಾಗಿ ಮಾಡಿದೆ. ಜಾಪಾನರ ಭಯ, ಅರಾಜಕತೆಯ ಭಯ ಹಾಗೂ ಬ್ರಿಟಿಷ್ ಸಿಂಹದ ಹಿಡಿತದ ಭಯ– ಇವೆಲ್ಲಾ ಭಯಗಳನ್ನು ಸ್ವಾತಂತ್ರ್ಯವು ನಿವಾರಿಸುವದು.'

ಶ್ರೀ. ಯಸ್. ವೆಂಕಟರಾಜರಿಂದ ರಚಿತವಾದ

ವೀರಭೂಮಿ

ಹಲಕೆಲವು ಚಾರಿತ್ರಿಕ ಸಂಬಂಧವುಳ್ಳ ಕಾದಂಬರಿ. ಓದುಗರನ್ನು ಬೆರಗುಗೊಳಿಸುವ ವಿಚಿತ್ರ ಸನ್ನಿವೇಶ, ಬಗೆಯನ್ನು ಬಹುದೂರ ಸೆಳೆದೊಯ್ಯುವ ಭಾವದ ಸೆಲೆ, ಉಜ್ವಲ ವಾಕ್ಯಸರಣಿ.

ಪುಟಗಳು ಬೆಲೆ 0–1–6

2–3 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ ಮಾಡಲಾಗುವುದು.

ನವಯುಗ ಆಫೀಸು, ಉಡುಪಿ.

ಅಥವಾ

ಭಾರತ ಬುಕ್ ಡಿಪೋ, ಉಡುಪಿ.

ಮಂಗಳೂರಿನಲ್ಲಿ ರಾಜಗೋಪಾಲಾಚಾರ್ಯರು

ಶ್ರೀ. ರಾಜಗೋಪಾಲಾಚಾರ್ಯರು ಶ್ರೀ. ಸಾಂಬಮೂರ್ತಿಗಳೊಂದಿಗೆ ಇದೇ ತಾ. 25ನೇ ಅಪರಾಹ್ನ ಘಂಟೆ 1ಕ್ಕೆ ಮಂಗಳೂರಿಗೆ ಬಂದಾಗ ಶ್ರೀಗಳಾದ ಎ. ಬಿ. ಶೆಟ್ಟಿ, ಜಿನರಾಜ ಹೆಗ್ಡೆ, ಡಾಕ್ಟರ್ ಮಲ್ಯ, ಡಾಕ್ಟರ್ ವಿಠಲ ಶೆಟ್ಟಿ ಮೊದಲಾದವರೂ, ಮಂಗಳೂರಿನ ಬೇರೆ ಬೇರೆ ಮಜೂರ ಸಂಘಗಳವರೂ ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಅನಂತರ ಗಣಪತಿ ಹೈಸ್ಕೂಲಿನಲ್ಲಿ ಮಜೂರ ಸಂಘಗಳವರೇ ಮೊದಲಾದವರು ವ್ಯವಸ್ಥೆಗೊಳಿಸಿದ್ದ ಫೆಸಿಸ್ಟ್ ವಿರುದ್ಧ ಪ್ರದರ್ಶನವನ್ನು ತೆರೆದು, ಚರ್ಚಿಲ್ಲರು ರಷ್ಯದೊಂದಿಗೆ ಕೂಡಿ ನಡೆಯುತ್ತಿರುವಂತೆ ತಾನೂ ಈ ಸಂದರ್ಭದಲ್ಲಿ ಮಜೂರ ಸಂಘ ಮತ್ತು ಕಮ್ಯೂನಿಸ್ಟರೇ ಮೊದಲಾದವರೊಡನೆ ಸಹಕರಿಸಲು ಮುಂದಾಗಿರುವೆನೆಂದು ಭಾಷಣವಿತ್ತರು. ಜಿಲ್ಲಾ ಬೋರ್ಡು ಮೆಂಬರಾದ ಶ್ರೀ. ಬಿ. ಕೃಷ್ಣ ಶೆಟ್ಟಿ ಈ ಪ್ರದರ್ಶನದ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು. ಬೊಂಬಾಯಿಯ ಶ್ರೀ. ಎಸ್. ಎಲ್. ಉಪಾಧ್ಯಾಯರು ಅಧ್ಯಕ್ಷರಾಗಿ ಈ ಸಂದರ್ಭದಲ್ಲಿ, ಎಲ್ಲಾ ಭಿನ್ನ ಭೇದಗಳನ್ನು ಕಡೆಗಣಿಸಿ ಲೋಕಕಂಟಕ ಫೆಸಿಸ್ಟ ರಾಷ್ಟ್ರಗಳನ್ನು ವಿರೋಧಿಸುವುದು ಆದ್ಯ ಕರ್ತವ್ಯವೆಂದು ಹೇಳಿದರು. ಶ್ರೀ. ಕೇಶವ ಕಾಮತರು ಧನ್ಯವಾದಾರ್ಪಣೆ ಮಾಡಿದರು.

ಸಂಜೆ 6 ಘಂಟೆಗೆ ಮೈದಾನಿನಲ್ಲಿ ಮುನಿಸಿಪಲ್ ಚೇರ್‌ಮೇನ್ ಶ್ರೀ. ಬಿ. ವೆಂಕಟರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸುಮಾರು ಏಳೆಂಟು ಸಾವಿರ ಜನರು ನೆರೆದುಬಂದಿದ್ದರು. ಕೆಲಮಂದಿ ಸ್ತ್ರೀಯರೂ ಬಂದಿದ್ದರು. ಮಂಗಳೂರಿಗೆ ಕೆಲದಿನಗಳ ಮೊದಲು ಬಂದಿದ್ದ ಡಾಕ್ಟರ್ ಸುಬ್ಬರಾಯನರೂ ಶ್ರೀ. ರಾಜಗೋಪಾಲಾಚಾರ್ಯರೊಂದಿಗಿದ್ದರು.

ಶ್ರೀ. ರಾಜಗೋಪಾಲಾಚಾರ್ಯರಿಗೆ ಸಹಕಾರವೀಯಕೂಡದೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಭಿಪ್ರಾಯವಿದ್ದರೂ ಶ್ರೀ. ಕೆ. ಆರ್. ಕಾರಂತರ ಹೊರತು ಇತರ ಹೆಚ್ಚಿನ ಕಾಂಗ್ರೆಸ್ ವಾದಿಗಳು ಸಭೆಗೆ ಬಂದಿದ್ದರು. ಶ್ರೀ. ರಾಜಗೋಪಾಲಾಚಾರ್ಯರೂ, ಡಾಕ್ಟರ್ ಸುಬ್ಬರಾಯನರೂ, ಸಾಂಬಮೂರ್ತಿಗಳೂ, ಜಾಪಾನರ ಆಕ್ರಮಣದ ಗಂಡಾಂತರದ ಈ ಸಂಧಿಕಾಲದಲ್ಲಿ ಹಿಂದು ಮುಸಲ್ಮಾನರು ಮತ್ತು ಇತರ ರಾಷ್ಟ್ರವು ಒಂದಾಗಿ ಕಾಂಗ್ರೆಸ್ ಮತ್ತು ಲೀಗುಗಳು ಒಪ್ಪಂದಮಾಡಿಕೊಂಡು ಬ್ರಿಟನು ರಾಷ್ಟ್ರೀಯ ಸರಕಾರವನ್ನೀಯುವಂತೆ ಮಾಡಿ ಜಾಪಾನನ್ನು ಪ್ರತಿಭಟಿಸಬೇಕು. ಮತ್ತು ಆ ಮೂಲಕ ದೇಶದ ಸ್ವಾತಂತ್ರ್ಯ ಸಾಧಿಸಬೇಕೆಂದು ವಿಚಾರಪರ ಹಾಗೂ ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು. ಶ್ರೀ. ಕಿಲ್ಲೆಯವರು ಈ ಭಾಷಣಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಭಾಷಾಂತರಿಸಿದರು. ಸಭೆಯು ಮುಗಿಯುವಾಗ 9 ಘಂಟೆಯಾಗಿದ್ದರೂ ಸಭಿಕರೆಲ್ಲರೂ ಯಾವ ಗಲಾಟೆಯೂ ಇಲ್ಲದೆ ಬಹಳ ಶಾಂತತೆಯಿಂದ ಭಾಷಣಗಳನ್ನು ಕೇಳುತ್ತಿದ್ದರು. ಸಭಾಂತ್ಯದಲ್ಲಿ ಶ್ರೀ. ಬಾಳಿಗರು ಎಲ್ಲರಿಗೂ ವಂದನೆಯನ್ನಿತ್ತರು.

ಭಾಷಣದ ಸಾರಾಂಶ

ಶ್ರೀ. ರಾಜಗೋಪಾಲಾಚಾರ್ಯರ ಭಾಷಣದ ಸಾರಾಂಶವು ಈ ರೀತಿ ಇರುತ್ತದೆ. "ನನ್ನ ವಿರುದ್ಧಾಭಿಪ್ರಾಯದಿಂದ ನಾನು ಸಂತೋಷಿಸುತ್ತೇನೆ. ಅದು ಸ್ವಾಭಾವಿಕ. ಕಾಂಗ್ರೆಸಿನ ಧೋರಣೆಯ ವಿರುದ್ಧ ಪ್ರಚಾರವನ್ನು ಸುಲಭವಾಗಿ ತಾಳಿಕೊಳ್ಳಲು ಸಾಧ್ಯವಿಲ್ಲ. ಕಾಂಗ್ರೆಸಿನ ಬಲ ಮತ್ತು ಪ್ರಭಾವವು ಅಂತಹದು. ಆದರೆ ಭಿನ್ನಾಭಿಪ್ರಾಯವು ಬಂಡಾಯವಲ್ಲ. ಸ್ವೇಚ್ಛಾಪರತೆಯಲ್ಲ. ಕಾಂಗ್ರೆಸೇ ನನ್ನ ಜೀವಾಳ. ಕಾಂಗ್ರೆಸೆಂದರೆ ನಾನು; ನಾನೆಂದರೆ ಕಾಂಗ್ರೆಸಿನ ಒಂದು ಅಂಗ. ಕಾಂಗ್ರೆಸು ನನ್ನ ನರ

(೭ನೇ ಪುಟ ನೋಡಿರಿ)

ಚಿಂತಿಸುತ್ತಿರುವುದೇಕೆ?

ವಿಮಾನ ಧಾಳಿ ಅಥವಾ, ಜನತೆಯ ಮೇಲೆ ಬೀಳುವ ಯಾವ ವಿಪತ್ತು ಕಾರ್ಯಾಚರಣೆಯಿಂದಾಗಲಿ, ಹಿಂದುಸ್ಥಾನದಲ್ಲಿ ವಿಮಾನ ಧಾಳಿ ಸಂರಕ್ಷಣಾ ಕೆಲಸದಲ್ಲಿ ಕೂಡಾ ಮರಣವುಂಟಾಗುವ ಅಪಾಯವನ್ನು ಸಂಪೂರ್ಣವಾಗಿ ಒಳಗೊಂಡಿರುವ ಪೋಲಿಸಿಗಳನ್ನು

ದಿ ಬೊಂಬೇ ಲೈಫ್ ಕೊಡುತ್ತದೆ.

ಆದುದರಿಂದ ಈ ಗಂಡಾಂತರದ ಸಂದರ್ಭದಲ್ಲಿ ನೀವು ಜೀವಿತ ವಿಮಾ ಪಾಲಿಸಿಯನ್ನು

ದಿ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರಲ್ಲಿ ಕೂಡಲೆ ತೆಗೆದುಕೊಳ್ಳುವ ಮುಂಜಾಗ್ರತೆಯುಳ್ಳವರಾಗುವುದು ನಿಮ್ಮ ಕರ್ತವ್ಯ

ಒಳ್ಳೇ ವರ್ಚಸ್ಸುಳ್ಳ ಸ್ತ್ರೀಯರು ಮತ್ತು ಪುರುಷರಿಂದ ಏಜನ್ಸಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.,

ಹಿಂದೀ ಸಂಸ್ಥಾನಗಳ ಸಮೇತ ದಕ್ಷಿಣ ಹಿಂದುಸ್ಥಾನದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ.

ಅಥವಾ ಅವರ ಈ ಕೆಳಗಿನ ಆಫೀಸುಗಳಿಗೆ ಬರೆಯಬಹುದು.

ಮಂಗಳೂರು, ಬೆಂಗಳೂರು, ಮದ್ರಾಸು, ಕಲ್ಲಿಕೋಟೆ, ತಿರುವಾಂಕೂರು ಮತ್ತು **ಬೊಂಬಾಯಿ.**

Open a Saving Bank Account to-day with us. A very small amount will suffice to make you a depositor in the Corporation which stands for

SAFETY, SERVICE & COURTESY.

The Canara Banking Corporation Limited.

(Incorporated in British India with limited liability.)

ESTD: 1906.

ಉಡುಪಿ, ಗುರುವಾರ, ೨೮-೫-೧೯೪೨

ಯಾರನ್ನು ಅನುಸರಿಸುವುದು?

ಗಾಂಧಿಜಿಯವರು ಕಾಂಗ್ರೆಸಿನ ನಾಯಕತ್ವವಹಿಸಿ ಅದನ್ನು ಜನತಾ ಹಾಗೂ ನಿಜವಾದ ರಾಷ್ಟ್ರೀಯ ಸಂಸ್ಥೆಯಾಗಿ ಮಾಡಿದಂದಿನಿಂದ ಜನಸಾಮಾನ್ಯರಿಗೆ ಅದರ ಮೇಲೆ ಹೆಚ್ಚಿನ ಭಕ್ತಿ ಮತ್ತು ವಿಶ್ವಾಸವುಂಟಾಯಿತು. ಅದರ ಹೊರತು ಮತ್ತಾವ ಪಕ್ಷಗಳಿಗೂ ಹಿಂದುದೇಶದಲ್ಲಿ ಜನತಾ ಬೆಂಬಲ ದೊರೆಯದೆ ಅವೆಲ್ಲಾ ನಾಮಾವಶೇಷವಾದುವು. ಗಾಂಧಿಜಿಯವರು ರಾಷ್ಟ್ರದ ಕರ್ಣಧಾರರಾಗಿ ಸ್ವಾತಂತ್ರ್ಯ ಸಂಗ್ರಾಮ ಹೂಡಿ ಭಾರತದ ಆತ್ಮವನ್ನು ಎಚ್ಚರಗೊಳಿಸಿದರು. ಭಾರತೀಯರು ಉಜ್ವಲ ಸ್ವಾತಂತ್ರ್ಯ ಪ್ರೇಮ ಮತ್ತು ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿದರು. ಭಾರತೀಯರ ಅಖಂಡ ಮುಖಂಡರಾಗಿ ಲೋಕವಂದ್ಯರಾದರು. ಸ್ವಾತಂತ್ರ್ಯ ಸಾಧನಾಪಥದಲ್ಲಿ ಹಿಂದುದೇಶವು ಅತಿ ದೊಡ್ಡ ಹೆಜ್ಜೆಗಳನ್ನು ಮುಂದಿಟ್ಟು ಗುರಿಯನ್ನು ಸಮೀಪಿಸುವಂತಾಯಿತು. ಆದರೆ ಮಹಾತ್ಮರ 20 ವರ್ಷಗಳ ಚಳವಳಿ, ತಪಶ್ಚರ್ಯೆ ಮತ್ತು ಪ್ರಭಾವವೂ ಹಿಂದುದೇಶಕ್ಕೆ ಸ್ವರಾಜ್ಯವನ್ನು ತರಲಿಲ್ಲ. ಬಾಯಿಗೆ ಬಂದ ತುತ್ತು ಕೈಗೆ ಬಾರದಂತಹ ದುರ್ದೈವವು ಹಿಂದುದೇಶದ ಬೆನ್ನು ಹಿಡಿದಂತಿದೆ. ಸಂಧಿಕಾಲದಲ್ಲಿ ಗೊಂದಲವೆದ್ದು ಹಿಂದುದೇಶವು ತನ್ನ ಗುರಿಮುಟ್ಟುವ ಸುವರ್ಣ ಸಂದರ್ಭಗಳನ್ನೇ ಕಳಕೊಳ್ಳುತ್ತಿರುವುದೆಂಬುದು ಚಿತ್ತಖೇದಕವಿದೆ. ಇಂಥ ಪ್ರಸಂಗದಲ್ಲಿ ಸರ್ವ ಜನವಂದ್ಯರಾದ ಮಹಾತ್ಮರಿಂದಲೂ ಈ ದುರಂತವನ್ನು ತಪ್ಪಿಸಲು ಅಸಾಧ್ಯವಾಗಿರುವುದು. ಮಾತ್ರವಲ್ಲದೆ ಇಂದೀಗ ಅವರ ನಾಯಕತ್ವವೇ ರಾಜಕೀಯ ಕ್ಷೇತ್ರದ ಗೊಂದಲವನ್ನು ಮತ್ತಷ್ಟು ಹೆಚ್ಚಿಸಲು ಕಾರಣವಾಗಿರುವುದೆಂಬುದು ಅತ್ಯಂತ ಖೇದಕರವಿದೆ.

ಕಾಂಗ್ರೆಸಿನ ಮುಂದಿದ್ದ ಎರಡು ಸ್ಪಷ್ಟ ಮಾರ್ಗ.

ಇಂಗ್ಲೆಂಡು ಜರ್ಮನಿಯೊಂದಿಗೆ ಯುದ್ಧಕ್ಕಿಳಿದಾಗ ಸ್ವಾತಂತ್ರ್ಯ ಸಾಧನೆಯ ಅಪೂರ್ವ ಸಂಧಿಯೊಂದು ಹಿಂದುದೇಶಕ್ಕೆ ದೊರೆಯಿತು. ಆದರೆ ಕಾಂಗ್ರೆಸಿಗೆ ಅದರ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಗಾಂಧಿಜಿಯವರ ಆದರ್ಶವಾದಿತ್ವ ಮತ್ತು ನಾಯಕತ್ವವೇ ಅದಕ್ಕೆ ಅಡ್ಡವಾಗಿ ಬಂತೆಂದು ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ. ಆಗ ದೇಶದ ಮುಂದೆ ಸ್ಪಷ್ಟವಾದ ಎರಡು ಮಾರ್ಗಗಳಿದ್ದುವು. ಒಂದು ಶ್ರೀ. ಎಮ್. ಎನ್. ರಾಯ್‍ಗಳದು. ಇನ್ನೊಂದು ಶ್ರೀ ಸುಭಾಸಚಂದ್ರ ಭೋಸರದು. ಶ್ರೀ. ಎಮ್. ಎನ್. ರಾಯ್‍ಗಳು ಪ್ರತಿಪಾದಿಸಿದಂತೆ ಒಂದೋ ಬ್ರಿಟಿಷ್ ಸರಕಾರದ ಆಪತ್ಕಾಲದಲ್ಲಿ ಅದಕ್ಕೆ ಸಂಪೂರ್ಣ ಸಹಕಾರವಿತ್ತು ಲೋಕಕಂಟಕ ಫೆಸಿಸ್ಟ್ ರಾಷ್ಟ್ರಗಳನ್ನು ಸದೆಬಡಿಯುವುದರಲ್ಲಿ ಕಾಂಗ್ರೆಸು ಅದಕ್ಕೆ ನೆರವಾಗಬೇಕಾಗಿತ್ತು. ಇಲ್ಲವಾದರೆ ಶ್ರೀ. ಭೋಸರಂದಂತೆ ಬ್ರಿಟಿಷ್ ಸರಕಾರವನ್ನು ತನ್ನ ಪ್ರಥಮ ವೈರಿಯಾಗಿ ಪರಿಗಣಿಸಿ ಅದರ ಆಪತ್ತೇ ತನ್ನ ಸುಸಂದರ್ಭವೆಂದು ಸ್ವಾತಂತ್ರ್ಯ ಸಾಧನೆಗಾಗಿ ಉಗ್ರ ಹಾಗೂ ಪ್ರಚಂಡ ಆಂದೋಲನ ಹೂಡಬೇಕಿತ್ತು. ಆಗ ಯುದ್ಧ ಮುಗಿದೊಡನೆ ಅಥವಾ ಯುದ್ಧಾರಂಭದಲ್ಲೇ ಹಿಂದುದೇಶದ ಸ್ವಾತಂತ್ರ್ಯ ಸಮಸ್ಯೆಯು ಬಿಡಿಸಲ್ಪಡುವ ಪರಿಸ್ಥಿತಿಯುಂಟಾಗುತ್ತಿತ್ತು. ಆದರೆ ಇಂದು ಯಾವುದೂ ಇಲ್ಲದೆ ಪರಿಸ್ಥಿತಿಯು ಮತ್ತಷ್ಟು ಗೊಂದಲಮಯವಾಗಿ ಸರಕಾರವು ಅದರ ಸದುಪಯೋಗ ಪಡೆದು ತನ್ನಿಚ್ಛೆಯಂತೆ ನಡೆಯುವಂತಾಗಿದೆ.

ನಿರರ್ಥಕ ಚಳವಳಿ.

ಬ್ರಿಟಿಷ್ ಸರಕಾರದ ಯುದ್ಧ ಪ್ರಯತ್ನದಲ್ಲಿ ಅದಕ್ಕೇನೂ ತೊಂದರೆ ಕೊಡದೆ, ಅದು ಹೂಡಿರುವ ಯುದ್ಧದ ಕುರಿತು ನೈತಿಕ ಸಹಾನುಭೂತಿ ತೋರಿಸಿ, ಅವರ ಹಿಂದುದೇಶದ ಕುರಿತಾದ ಧೋರಣೆಯನ್ನು ನಿಷೇಧಿಸುವ ಮತ್ತು ಆ ಕುರಿತು ಪ್ರಚಾರ ಮಾಡುವರೆ ವಾಕ್ ಸ್ವಾತಂತ್ರ್ಯವನ್ನು ಸ್ಥಾಪಿಸುವ ಗಾಂಧಿಜಿಯವರ ನೈತಿಕ ಸತ್ಯಾಗ್ರಹ ಚಳವಳಿವು ಹೇಗೆ ನಿರರ್ಥಕವಾಗಿರುವುದೆಂಬುದು ಇಂದೀಗ ಜನಜನಿತ ವಿಷಯ. ಬ್ರಿಟಿಷ್ ಸರಕಾರಕ್ಕೆ ಇದರಿಂದ ಅನುಕೂಲವಾಯಿತೇ ಹೊರತು ಅದರ ಹೃದಯವು ಒಂದಿಷ್ಟಾದರೂ ಮಾರ್ಪಡಲಿಲ್ಲ. ಅದು ಮತ್ತಷ್ಟು ಕಠಿಣ ಧೋರಣೆಯನ್ನೇ ವಹಿಸಿ ಹಿಂದೆ ಹಾಡಿದ ಪಲ್ಲವಿಯನ್ನೇ ಹಾಡುತ್ತಾ ಬಂತು. ಕಾಂಗ್ರೆಸು ಸತ್ಯಾಗ್ರಹವನ್ನು ನಿಲ್ಲಿಸಿ ಗಾಂಧಿಜಿಯವರ ನಾಯಕತ್ವವನ್ನು ಬಿಟ್ಟುಕೊಟ್ಟು, ಕೆಲವೊಂದು ಶರ್ತಗಳಿಂದ ಬ್ರಿಟಿಷ್ ಸರಕಾರದೊಡನೆ ಸಹಕರಿಸಲು ಮುಂದಾಗುವ ಪೂನಾ ನಿರ್ಣಯ ಮಾಡಿದರೂ ಸರಕಾರವು ಅದನ್ನು ಗಣ್ಯಮಾಡಲಿಲ್ಲ. ಬ್ರಿಟಿಷ್ ಸರಕಾರಕ್ಕೆ ನೈತಿಕ ಹೃದಯವೊಂದಿರುವುದೆಂಬ ಗಾಂಧಿಜಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರ ಭಾವನೆಯೇ ಬಯಲು ಭ್ರಾಂತಿ. ಸಂಧಿ ಸಾಧಿಸಿ ಬಗ್ಗು ಬಡಿದರೆ ಮಾತ್ರ ಅದು ದಾರಿಗೆ ಬರುವುದು. ಅಂತಹ ಸಂಧಿಯ ಸದುಪಯೋಗ ಮಾಡಿಕೊಳ್ಳದೆ, ರಾಜಕೀಯ ಹಾಗೂ ರಾಷ್ಟ್ರೀಯ ಸಂಸ್ಥೆಯನ್ನು, ಉದಾತ್ತ ನೈತಿಕ ತತ್ವ ಪ್ರಚಾರ ಸಂಸ್ಥೆಯಾಗಿ ಮಾರ್ಪಡಿಸಿದರೆ ಅದರಿಂದ ಆಳರಸರ ಹೃದಯ ಮಾರ್ಪಾಟವಾಗುವುದಾದರೂ ಹೇಗೆ? ಪೂನಾ ನಿರ್ಣಯವನ್ನು ಸರಕಾರವು ಖಂಡಿತವಾಗಿ ಒಪ್ಪುವುದೆಂಬ ಭರವಸೆಯಿದ್ದಿತು ಅದರ ಕರ್ತರಾದ ಶ್ರೀ. ರಾಜಗೋಪಾಲಾಚಾರ್ಯರಿಗೆ. ಆದಕ್ಕೆ ಒಪ್ಪದೆ ನಿರ್ವಾಹವಿಲ್ಲೆಂದವರು ಖಾತ್ರಿಯಾಗಿ ನಂಬಿ ಪ್ರಚಾರಮಾಡುತ್ತಿದ್ದರು. ಆದರೆ ಸರಕಾರವು ಕಣ್ಣುಗಿದ್ದು ಬಿಟ್ಟಿತು. ಕಾಂಗ್ರೆಸು ರೇಗಿಬಿದ್ದು ಗಾಂಧಿಜಿಯವರ ನಾಯಕತ್ವಕ್ಕೇನೇ ಪುನಃ ಕಟ್ಟುಬಿದ್ದಿತು. ಹಿಂದೆ ನೈತಿಕ ಸರಕಾರವೆಂದು ಕರೆದಿದ್ದ ಬ್ರಿಟಿಷ್ ಸರಕಾರವು ಯುದ್ಧ ನಿರತವಾದಾಗ ಅದರ ಕುರಿತು ಸಹಾನುಭೂತಿ ತೋರಿಸಿ ಅದಕ್ಕೆ ತನ್ನ ನೈತಿಕ ಬೆಂಬಲವಿದೆಯೆಂದಿದ್ದ ಮಹಾತ್ಮರು ಈಗ ತನ್ನ ತಪ್ಪನ್ನು ಮನಗಂಡಿರುವಂತೆ ತೋರುತ್ತದೆ. ಬ್ರಿಟಿಷ್ ಸರಕಾರದ ಇತ್ತಲಾಗಿನ ವರ್ತನೆಯು ಅವರನ್ನು ತೀವ್ರವಾಗಿ ನೋಯಿಸಿರುವುದು ತನ್ನ ನೈತಿಕ ಬೆಂಬಲವನ್ನೂ ಅದು ಕಳಕೊಂಡಿರುವುದೆಂದು ಗಾಂಧಿಯವರು ಇತ್ತಲಾಗಿ ಸ್ಪಷ್ಟವಾಗಿ ಹೇಳಿರುವರು ಮಾತ್ರವಲ್ಲದೆ ಸಾರ್ವತ್ರಿಕ ಕಾಯಿದೆಭಂಗ ಚಳವಳಿ ಹೂಡುವ ಆಲೋಚನೆ ಕೂಡಾ ಅವರಿಗಿರುವುದೆಂದು ಸುದ್ದಿಯುಂಟಾಗಿದೆ.

ಯುರೋಪಿನಲ್ಲಿ ಯುದ್ಧಾರಂಭವಾಗುವುದು ನಿಶ್ಚಯ. ಆದುದರಿಂದ ಈ ಸಂದರ್ಭ ಸಾಧಿಸಿ ಆ ಮೊದಲೇ ಕಾಂಗ್ರೆಸು ಸಾರ್ವತ್ರಿಕ ಕಾಯಿದೆಭಂಗ ಹೂಡಿ ಸ್ವಾತಂತ್ರ್ಯ ಸಾಧಿಸಲೆತ್ನಿಸಬೇಕೆಂದು ಸಾರಿದ ಶ್ರೀ ಭೋಸರ ವಾದವು ದೂರದೃಷ್ಟಿಯದೆಂಬುದನ್ನು ಇಂದೀಗ ಒಪ್ಪಲೇ ಬೇಕಾಗಿದೆ. ಆದರೆ ಅಂದು ಭೋಸರದು ಅರಣ್ಯರೋದನವಾಯಿತು. ಅವರು ಹಿಂದೀ ರಾಜಕೀಯ ಪರಿಸ್ಥಿತಿಯ ರೀತಿನೀತಿಯಿಂದ ಜಿಗುಪ್ಸೆಗೊಂಡು ದೇಶಭ್ರಷ್ಟರಾಗಿ ಹೋಗುವಂತಾಯಿತು. ಇಂದು ಶ್ರೀ. ರಾಜಗೋಪಾಲಾಚಾರ್ಯರು ಸಾರುತ್ತಿರುವುದರಲ್ಲಿ ಹೊಸತೇನೂ ಇಲ್ಲ. ಶ್ರೀ. ಎಮ್. ಎನ್. ರಾಯ್‍ಗಳು ಯುದ್ಧಾರಂಭದಿಂದಲೇ ಅದನ್ನು ಘೋಷಿಸುತ್ತಾ ಬಂದಿರುವರು. ಅದಕ್ಕಾಗಿ ಅವರ ಮೇಲೆ ಶಿಸ್ತು ಜ್ಯಾರಿ ಮಾಡಿ ಅವರನ್ನು ಕಾಂಗ್ರೆಸಿನಿಂದ ಹೊರಗಟ್ಟಲಾಯಿತು. ಆದರೆ ಇಂದೀಗ ಅದನ್ನೇ ಸಾರಿ ಪ್ರಚಾರಮಾಡುತ್ತಿರುವ ಶ್ರೀ. ರಾಜಗೋಪಾಲಾಚಾರ್ಯರ ಮೇಲೆ ಅಂತಹ ಶಿಸ್ತು ಜ್ಯಾರಿ ಏನೂ ನಡೆದಿರುವುದಿಲ್ಲ.

ಹೆಚ್ಚಿನ ಗೊಂದಲ.

ಇತ್ತಲಾಗಿ ಕಾಂಗ್ರೆಸು ಮಾಡಿರುವ ನಿರ್ಣಯಗಳು ದೇಶದ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿರುತ್ತವೆ. ಕಾಂಗ್ರೆಸ್ ನಾಯಕರೊಳಗಣ ಭಿನ್ನಾಭಿಪ್ರಾಯಗಳು ಜನತೆಯಲ್ಲಿ ನಾನಾ ಸಂದೇಹಗಳನ್ನುಂಟುಮಾಡಿವೆ. ಈ ಸಂಧಿ ಕಾಲದಲ್ಲಿ ಕಾಂಗ್ರೆಸಿಗೆ ಕೂಡಾ ನಿಶ್ಚಿತವಾದೊಂದು ನಾಯಕತ್ವವನ್ನು ದೇಶಕ್ಕೀಯಲು ಸಾಧ್ಯವಾಗಿಲ್ಲೆಂಬುದು ಅದೆಷ್ಟು ವಿಷಾದಕರ! ಗಾಂಧಿಜಿಯವರ ತತ್ವವೊಂದೆಡೆ; ಪಂಡಿತ ನೆಹರುಗಳ ರಾಜಕೀಯ ವಿಚಾರ ಇನ್ನೊಂದೆಡೆ. ಇಂದೀಗ ರಾಜಾಜಿಯವರ ಬಂಡಾಯಗಾರಿಕೆ ಆಂದೋಲನ ಮತ್ತೊಂದೆಡೆ. ಇನ್ನು ಬೇರೆಬೇರೆ ಕೂಗುಗಳನ್ನೆಬ್ಬಿಸುವ ಒಳ ಪಂಗಡಗಳು ಕಾಂಗ್ರೆಸಿನಲ್ಲಿಯೇ ಹಲವಿರುತ್ತವೆ. ಜನರು ಅನುಸರಿಸುವುದಾದರೂ ಯಾರನ್ನು? ಮುಸ್ಲಿಮ್ ಲೀಗಿನವರು ಮಿ. ಜಿನ್ನರೊಬ್ಬರ ನಾಯಕತ್ವವನ್ನೇ ಅಂಧಶ್ರದ್ಧೆಯಿಂದ ಅನುಸರಿಸಿ ತಮ್ಮ ಉದ್ದೇಶ ಸಾಧಿಸಲು ಮುಂದಾಗಿರುತ್ತಾರೆ. ಹಿಂದು ಮಹಾಸಭೆಯವರೂ ಶ್ರೀ ಸಾವರ್ಕರರ ಹೇಳಿಕೆಯಂತೆ ನಡೆಯಲು ಬದ್ಧಕಂಕಣರಾಗಿದ್ದಾರೆ. ಆದರೆ ರಾಷ್ಟ್ರೀಯವಾದಿಗಳು ಯಾರ ನಾಯಕತ್ವವನ್ನು ಅನುಸರಿಸುವುದು? ಸರ್ವಸಾಮಾನ್ಯರು ಅನುಸರಿಸುವುದೆಂತಿರಲಿ— ಅವರಿಗೆ ಅರ್ಥ ಕೂಡಾ ಆಗದ ಗಾಂಧಿಜಿಯ ಅವ್ಯವಹಾರ್ಯ, ಆದರ್ಶಪರ ವಿಶುದ್ಧ ನೈತಿಕ ತತ್ವಗಳನ್ನೋ? ಪಂಡಿತ ನೆಹರುಗಳ ಅಂತರ ರಾಷ್ಟ್ರೀಯ ವಿಚಾರಗಳನ್ನೋ? ಗುರುವಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟು ಬುದ್ಧಿವಂತಿಕೆಯ ಅವಲೇರಿದವರಾಗಿ ಕಾಂಗ್ರೆಸಿನ ಮೂಲಭೂತ ತತ್ವಗಳನ್ನೇ ಮೂಲೆಗೊತ್ತಿ, ಸ್ವೇಚ್ಛಾನುಸಾರ ನಡೆಯುತ್ತಿರುವ ರಾಜಗೋಪಾಲಾಚಾರ್ಯರನ್ನೋ? ಕಾಂಗ್ರೆಸಿಗರಿಂದು ಗೊಂದಲದ ಸುಳಿಯಲ್ಲಿ ಸಿಕ್ಕಿ ಇತಿ ಕರ್ತವ್ಯವೇನೆಂದು ತಿಳಿಯದೆ ತಮ್ಮೊಳಗೆ ತಾವೇ ಕಚ್ಚಾಡಿಕೊಂಡು ತಾವು ಹಿಂದೆ ಸಾಧಿಸಿರುವ ಬಲವನ್ನೂ ಕಳಕೊಳ್ಳುವ ಗಂಡಾಂತರವುಂಟಾಗಿದೆ. ಕಾಂಗ್ರೆಸು ಮಾಡಿರುವ ಪ್ರಮಾದಗಳಿಂದಾಗಿ ಅದರ ಬದ್ಧವಿರೋಧಿ ಸಂಸ್ಥೆಗಳಾದ ಮುಸ್ಲಿಮ್ ಲೀಗ್ ಮತ್ತು ಹಿಂದು ಮಹಾಸಭೆಗಳ ವರ್ಚಸ್ಸು ಭರದಿಂದ ಬೆಳೆಯುತ್ತಿದೆ. ಮಿ. ಜಿನ್ನರಿಗೆ ಗಾಂಧಿಜಿಯವರ ಬಲಗೈ ಬಂಟನಾಗಿದ್ದ ರಾಜಾಜಿಯವರೇ ಪ್ರಚಾರಕರಾಗಿ ದೊರೆತಿರುವರೆಂಬುದಕ್ಕಿಂತ ದೊಡ್ಡ ಅನಾಹುತವಾದರೂ ಇನ್ನೇನು? ಕಾಂಗ್ರೆಸಿನ ಹೃದಯವನ್ನೇ ಕೊರೆಯ ಹತ್ತಿರುವ ಇಂತಹ ಪರಿಸ್ಥಿತಿಯನ್ನು ಕೂಡಲೆ ತಡೆಗಟ್ಟಿ ಸಂದರ್ಭೋಚಿತವಾದ ಮತ್ತು ಜನತೆಯ ಉತ್ಸಾಹಪರ ಬೆಂಬಲ ಪಡೆಯುವ ಸುಸ್ಪಷ್ಟ ಹಾಗೂ ನಿಶ್ಚಿತ ಧೋರಣೆಯನ್ನು ಕಾಂಗ್ರೆಸು ವಹಿಸದಿದ್ದರೆ ಅದಕ್ಕೆ ದೊಡ್ಡ ಗಂಡಾಂತರವುಂಟಾಗಲಿದೆ.

ಬೇಕಾಗಿದ್ದಾರೆ.

ಕುತ್ಯಾರು ವಿದ್ಯಾದಾಯಿನೀ ಶಾಲೆಗೆ ಪಯರ್ ಗ್ರೇಡ್ ತರಬೇತು ಹೊಂದಿರುವ ಒಬ್ಬ ಅಧ್ಯಾಪಕನೂ ಮತ್ತು ಒಬ್ಬ ಅಧ್ಯಾಪಕಿಯೂ ಅಗತ್ಯವಿದೆ. ಹೆಚ್ಚಿನ ಮಾಹಿತಿಗೆ ಮೆನೇಜರರಿಗೆ ಬರಕೊಳ್ಳುವುದು.

ಕೆ. ಮುತ್ತಣ್ಣ ಶೆಟ್ಟಿ.
ಮೆನೇಜರ್.
ಕುತ್ಯಾರು.
Post Shirva.

ಚೀನಾದಲ್ಲಿ ಜಪಾನರ ಧಾಳಿ!

ಗಾಂಧಿಯವರು ಪುನಃ ಚಳವಳ ಹೂಡುವರೇ?

ಹೊಸ ಚಳವಳವೆ?

ಮಹಾತ್ಮಾ ಗಾಂಧಿಯವರು ಪಂಡಿತ ನೆಹರು ಮತ್ತು ಮೌಲಾನಾ ಆಜಾದರನ್ನು ವಾರ್ಧಾಕ್ಕಾಮಂತ್ರಿಸಿದ್ದಾರೆ. ಪ್ರಾಮುಖ್ಯ ವಿಷಯವೊಂದನ್ನು ಚರ್ಚಿಸಲಿರುವರೆಂದು ತಿಳಿದುಬರುತ್ತದೆ. ಮಹಾತ್ಮರು ಪುನಃ ಹೊಸ ಚಳವಳವೊಂದನ್ನು ಹೂಡಲಿರುವರೆಂದು ಕಾ. ಮೆಹರಾಲಿಯವರಂದಿರುವರು. ಕಾಂಗ್ರೆಸೇತರರನ್ನು ಕೂಡ ಆಕರ್ಷಿಸಬಲ್ಲ ನೂತನ ಕಾರ್ಯಕ್ರಮವೊಂದನ್ನು, ಅಹಿಂಸೆಯ ಅಸ್ತಿವಾರದ ಮೇಲೆ ಗಾಂಧಿಯವರು ರಚಿಸಲಿರುವರೆಂಬ ಊಹೆಯಿದ್ದಿದೆ. ನ್ಯೂಢಿಲ್ಲಿಗೆ ಹೋಗಿದ್ದ ಪಂಡಿತ ನೆಹರು ವಾರ್ಧಾಕ್ಕೆ ಹೊರಟಿದ್ದಾರೆ.

ರಶ್ಯಾನರ ಕೆರ್ಚ್‌ತ್ಯಾಗ.

ನಾಜಿ ಸೇನೆಯು ವಸಂತ ಧಾಳಿಯನ್ನಾರಂಭಿಸಿದ ಕೆರ್ಚ್ ಭೂಶಿರವನ್ನು ಸಂಪೂರ್ಣವಾಗಿ ತ್ಯಜಿಸಿ ಕೆಂಪು ಸೇನೆಯು ಹಿಂದೆಗೆದು ನಿಂತಿದೆ. ಜರ್ಮನರ ಪ್ರಬಲ ಸಲಕರಣೆಯಿಂದ ಕೂಡಿದ ಒತ್ತಡದಿಂದಿರುವಾಗೆ ಮಾಡುವದು ಅನಿವಾರ್ಯವಾಯಿತು.

ಕಾರ್ಕೋವಿನಲ್ಲಿ ಹಿಂಜರಿದರೆ?

ಮಾರ್ಶಲ್ ಟಿಮೊಶೆಂಕೋರವರ ಸೇನೆಯು ಕಾರ್ಕೋವಿನ ಕಡೆಗೆ ಪ್ರಬಲ ಧಾಳಿಯನ್ನಾರಂಭಿಸಿ ಮುಂದೊತ್ತಿದುದನ್ನು ಈಗ ಜರ್ಮನರು ವಿಶೇಷ ಪ್ರಯತ್ನದಿಂದ ಪ್ರಬಲವಾಗಿ ಪ್ರತಿಭಟಿಸಿರುವರು. ಅಲ್ಲಿಯ ಜರ್ಮನ್ ಸೇನಾಪತಿ ಮಾರ್ಶಲ್ ವೋನ್ ಬೋಕರು ವಿವಿಧ ಹಂಚಿಕೆಗಳಿಂದ ಪ್ರತಿರೋಧವೊಡ್ಡುತ್ತಿರುವರು. ಜರ್ಮನ್ ಟ್ಯಾಂಕುಗಳು ಬಹುಸಂಖ್ಯೆಯಲ್ಲಿ ಬರಹತ್ತಿವೆ. ರಶ್ಯಾನರ ಬಲವನ್ನೊಡೆದು ಮುನ್ನುಗ್ಗಲು ಹಲವು ಸಲ ಪ್ರಯತ್ನ ನಡೆದರೂ ನಿಷ್ಫಲವಾಗಿದೆ. ಆದರೂ ಒಂದು ಕಡೆಯಲ್ಲಿ ರಶ್ಯನ್ ಸೇನೆಗಳು ಬೇರೊಂದು ನೆಲೆಗೆ ಹಿಂಜರಿದು ನಿಲ್ಲಬೇಕಾಯಿತೆಂದು ತಿಳಿದುಬರುತ್ತದೆ.

ಹೊಸ ಧಾಳಿ.

ಇಸ್ಯುಮ್-ಬಾರ್ವೆಂಕೋವ ವಿಭಾಗದಲ್ಲಿ ಜರ್ಮನರು ಧಾಳಿಯನ್ನಾರಂಭಿಸಿದ್ದಾರೆ. ಟ್ಯಾಂಕು ದಳಗಳು ಅಲ್ಲಿ ತೀವ್ರ ಹೋರಾಟಹೂಡಿವೆ. ಕೆಂಪು ಸೇನೆಯು ವಿಶೇಷ ರೀತಿಯಿಂದ ಅವನ್ನು ವಿರೋಧಿಸುತ್ತಿದೆ. ರಶ್ಯದಲ್ಲಿ ಜರ್ಮನರು ಮಾಡಿ

ರುವ ಸ್ತ್ರೀ ವಿರುದ್ಧ ಅತ್ಯಾಚಾರಗಳನ್ನು ನಮೂದಿಸಿ ಮೊಲೊಟೋವರು ಸಂಬಂಧಿಕ ರಾಷ್ಟ್ರಗಳಿಗೆಲ್ಲಾ ಪುನಃ ಪತ್ರ ಬರೆದಿರುವರು.

ಚೀನ ಮುಗಿಸುವ ಯೋಚನೆ.

ಬರ್ಮವನ್ನು ಬಹುಮಟ್ಟಿಗೆ ಆಕ್ರಮಿಸಿಕೊಂಡ ಜಪಾನರೀಗ ಚೀನಾ ಯುದ್ಧವನ್ನು ಮುಗಿಸುವ ಕಡೆಗೆ ವಿಶೇಷ ಲಕ್ಷ್ಯವನ್ನಿತ್ತಂತೆ ಕಾಣುತ್ತದೆ. ಮೂರು ವಿಭಾಗಗಳಾಗಿ ಸರ್ವ ಸಲಕರಣೆಗಳೊಡನೆ ಜಪಾನೀ ಸೇನೆಯು ಚೀನಾದೊಳಗೆ ಧಾಳಿಯನ್ನಾರಂಭಿಸಿವೆ. ಚೆಕಿಯಾಂಗ್ ಪ್ರಾಂತ್ಯದ ಮುಖ್ಯ ಪಟ್ಟಣವಾದ ಕಿನ್ಹಾವನ್ನು ಜಪಾನರು ಸಮೀಪಿಸಿರುವರು. ಒಂದು ಲಕ್ಷ ಸೇನೆಯಿರುವ ಈ ವಿಭಾಗವು ಹಾದಿಯಲ್ಲಿದ್ದ ಯಿವು ಪಟ್ಟಣವನ್ನು ವಶಪಡಿಸಿಕೊಂಡು ತೀವ್ರಗತಿಯಿಂದ ಮುಂದೊತ್ತುತ್ತಿದೆ. ಚೀನೀಯರು ಪ್ರಬಲ ಹೋರಾಟಕ್ಕೆ ಸಿದ್ಧರಾಗುತ್ತಿರುವದರಿಂದ ಈ ವಿಭಾಗದಲ್ಲಿ ಮಹಾ ಸಮರವಾಗುವ ಚಿಹ್ನೆಗಳಿವೆ.

ಮೆಕ್ಸಿಕೋ- ಅಕ್ಸಿಸ್

ಮೆಕ್ಸಿಕೋ ದೇಶದ ವ್ಯಾಪಾರೀ ಹಡಗಗಳನ್ನು ಮುಳುಗಿಸಿದ್ದಕ್ಕಾಗಿ ಜರ್ಮನಿಗೆ ಕಳುಹಿಸಿದ ನಿಷೇಧವನ್ನು ಜರ್ಮನಿಯು ನಿರಾಕರಿಸಿರುವದು. ಇದರಿಂದಾಗಿ ಮೆಕ್ಸಿಕೋ ಅಕ್ಸಿಸ್ ರಾಷ್ಟ್ರಗಳ ಮೇಲೆ ಯುದ್ಧ ಸಾರುವದು ಸಂಭವನೀಯ. ದೇಶದಲ್ಲೆಲ್ಲ ಫೇಸಿಸ್ಟ ವಿರುದ್ಧ ಪ್ರದರ್ಶನಗಳಾಗುತ್ತಿವೆ

ಜಪಾನಿನ ಮೇಲೆ ಧಾಳಿಯ ಭರವಸೆ

ಟೋಕಿಯೋ ಮತ್ತು ಇತರ ಜಪಾನೀ ನೆಲೆಗಳ ಮೇಲೆ ಪುನಃ ಧಾಳಿ ನಡೆಸುವೆವೆಂದು, ಹಿಂದಿನ ಧಾಳಿಯ ನಾಯಕರಾದ ಅಮೇರಿಕದ ಜನರಲ್ ಡೂಲಿಟ್ಲ್‌ಯವರು ಒಂದು ಭಾಷಣದಲ್ಲಿ ಹೇಳಿರುವರು.

ಅಸಹನೀಯ ಆಯುಧ

"ನಾವೀಗ ಅತ್ಯಧಿಕ ಭಯಂಕರ ಶಸ್ತ್ರವನ್ನು ತಯಾರಿಸುತ್ತಿದ್ದೇವೆ. ಅದನ್ನು ಸಹಿಸಿಕೊಳ್ಳುವದು ವಿರೋಧಿಗಳಿಗಸಾಧ್ಯ" ಎಂದು ಸೋವಿಯಟ್ ಕಮಾಂಡರ್ ಪಿಗಲ್ಕಿನ್ ಎಂಬವರು ತಿಳಿಸುವರು.

ಬೇಕಾಗಿದ್ದಾರೆ.

ಹಾಯರ್ ಎಲಿಮೆಂಟರಿ ಗ್ರೇಡ್ ತರಬೇತಿ ಹೊಂದಿ ಸಂಪೂರ್ಣ ತೇರ್ಗಡೆಯಾದ ಉಪಾಧ್ಯಾಯ—ಯಾ—ಉಪಾಧ್ಯಾಯಿನಿಯೋರ್ವರು ಬೇಕಾಗಿದ್ದಾರೆ. ಉಮೇದ್ವಾರಗಳು ಮಾಸಿಕ ಸಂಬಳ ಇತ್ಯಾದಿ ಹೆಚ್ಚಿನ ಅನುಭವದ ಬಗ್ಗೆ ಇದೇ ತಾ.31-5-42ರ ಒಳಗೆ ತಲಪುವಂತೆ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಬರಕೊಳ್ಳುವುದು.

K. Deemappa.
ಮೆನೇಜರ್ ಕೆಮುಂಡೇಲ್
ಏಯಿಡೆಡ್ ಎಲಿಮೆಂಟರಿ ಶಾಲೆ,
ಎಲ್ಲೂರು ಪೋಸ್ಟ್, ದ. ಕ.

ಎಲ್ಲೂರು,
ತಾ 22-5-42

ಮಂಗಳೂರಿನಲ್ಲಿ ರಾಜಗೋಪಾಲಾಚಾರ್ಯರು.

(೫ನೇ ಪುಟದಿಂದ ಮುಂದುವರಿದುದು)

ನಾಡಿಗಳ ರಕ್ತ. ಅದನ್ನು ನಾನೆಂದಿಗೂ ದುರ್ಬಲಗೊಳಿಸಲಾರೆ. ಆದರೆ ಈ ರಕ್ತಸ್ರಾವವಾಗದಂತೆ ಮಾತ್ರ ನೋಡಿಕೊಳ್ಳಬೇಕು. ಈ ಸಂಧಿಕಾಲದಲ್ಲಿ ಕಾಂಗ್ರೆಸು ಮಾಡತಕ್ಕದೆಂದು ನಾನು ಇಚ್ಛಿಸುವುದನ್ನು ಜನತೆಯಲ್ಲಿ ಪ್ರಚಾರ ಮಾಡಿ ಅದು ಮಾಡುವಂತೆ ಪ್ರಯತ್ನಿಸುತ್ತಿದ್ದೇನೆ. ಕಾಂಗ್ರೆಸು ಸಾರ್ವಜನಿಕ ಸಂಸ್ಥೆ. ಕಾಂಗ್ರೆಸಿನಲ್ಲಿರುವವನು ಅದರ ನಿರ್ಣಯವನ್ನು ವಿರೋಧಿಸಬಾರದೆಂದು ಹೇಳಲಾಗುತ್ತದೆ. ಕಾಂಗ್ರೆಸಿನ ಅಭಿಪ್ರಾಯವನ್ನು ಬದಲಾಯಿಸುವ ಅಧಿಕಾರವು ಪ್ರತಿಯೊಬ್ಬಗಿದೆ. ಕಾಂಗ್ರೆಸಿನೊಳಗಣ ಪಂಗಡಗಳು ಈ ರೀತಿ ಮಾಡುತ್ತಾ ಬಂದಿವೆ. ಆದರೆ ಕಾಂಗ್ರೆಸು ಮಾಡಿದುದನ್ನೆಲ್ಲಾ ಯಾವಾಗಲೂ ಒಪ್ಪುತ್ತಾ ಬಂದವನು ಅದರ ವಿರುದ್ಧ ಮಾತಾಡಿದಾಗ ಮಾತ್ರ ಆಕ್ಷೇಪಿಸಲಾಗುತ್ತದೆ; ಅನುಮಾನ ಬರುತ್ತದೆ. ಯಾವಾಗಲೂ ಕಾಂಗ್ರೆಸನ್ನು ವಿರೋಧಿಸುವವನಲ್ಲಿ ದೋಷವಿರಬಹುದು. ಆದರೆ ನವೀನ ಬಂಡಾಯಗಾರನು ಸಂತನೆನ್ನಬಹುದು. ಈ ಪ್ರಶ್ನೆಯು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ನನ್ನೊಳಗಿನದು.

ಜಪಾನು ಹಿಂದೀಯರಿಗೆ ಸ್ವಾತಂತ್ರ್ಯವೀಯುವುದೆಂಬುದು ಬಯಲುಭ್ರಾಂತಿ. ಅದು ಹಿಂದುದೇಶವನ್ನು ಆಕ್ರಮಣ ಮಾಡದಂತೆ ನಾವು ನೋಡಬೇಕು. ಅದರಿಂದ ದೇಶಕ್ಕೆ ದೊಡ್ಡ ಅನಾಹುತವಾಗುವುದು. ಜಪಾನಿನ ಆಕ್ರಮಣವನ್ನು ವಿರೋಧಿಸುವ ವಿಷಯದಲ್ಲಿ ಜನತೆಯು ಸರಕಾರದೊಂದಿಗೆ ಸಹಕರಿಸಬೇಕು. ನಾವು ಸರಕಾರವನ್ನು ಜನತೆಯ ಉಪಕರಣವಾಗಿ ಮಾಡಬೇಕು. ಯಾಕೆಂದರೆ ಬ್ರಿಟಿಷರಿಂದ ಮಾತ್ರವೇ ಹಿಂದುದೇಶದ ರಕ್ಷಣೆಯಾಗಲಾರದು. ಬ್ರಿಟಿಷ್ ಸರಕಾರವು ರಾಷ್ಟ್ರೀಯ ಸರಕಾರವನ್ನು ಕೊಡುವಂತೆ ಒತ್ತಾಯಪಡಿಸಿ ಅದನ್ನು ಪಡೆದು ಜಪಾನರನ್ನು ಪ್ರತಿಭಟಿಸಬೇಕು. ಸರ್. ಸ್ಟಾಫೋರ್ಡ್ ಕ್ರಿಪ್ಸರು ಒಂದು ರಾಷ್ಟ್ರೀಯ ಸರಕಾರ ಕೊಡಲು ಸಾಧ್ಯವಿಲ್ಲೆಂದಾಕ್ಷಣ ಆಗಿ ಹೋಗಲಿಲ್ಲ. ಕ್ರಿಪ್ಸರಾಗಲಿ, ಇನ್ನಾರೇ ಆಗಲಿ, ರಾಷ್ಟ್ರೀಯ ಸರಕಾರವನ್ನೀಯದೆ ನಿರ್ವಾಹವಿಲ್ಲದಂತಹ ಪರಿಸ್ಥಿತಿಯನ್ನುಂಟುಮಾಡಬೇಕು. ಕಾಂಗ್ರೆಸು ಮತ್ತು ಲೀಗು ಒಟ್ಟಾಗದೆ ಅದು ಸಾಧ್ಯವಿಲ್ಲ. ಜಪಾನಿನ ಆಕ್ರಮಣವು ನಮ್ಮ ದ್ವಾರದಲ್ಲಿರದಿದ್ದರೆ ನಾವು ಬಹಳ ನಿಧಾನವಾಗಿ ಈ ಬಿಕ್ಕಟ್ಟನ್ನು ಸಾಧಿಸಬಹುದಿತ್ತು. ನಾವು ದೀರ್ಘ ಕಾಲ ಕಾದಿರಬಹುದಿತ್ತು. ಆದರೆ ಇಂದು ತಣ್ಣಗೆ ಕೂತು ಕಾಯಲು ಸಾಧ್ಯವಿಲ್ಲ. ಪ್ರಕೃತದ ಗಂಡಾಂತರವನ್ನು ನಿವಾರಿಸಲು ಅಪೂರ್ಣವಾದ ಉಪಾಯವನ್ನಾದರೂ ಕೈಕೊಳ್ಳಬೇಕು. ಕಾಂಗ್ರೆಸು ಮತ್ತು ಲೀಗುಗಳೊಳಗೆ ಬಹಳ ವೈಷಮ್ಯವಿರಬಹುದು. ಆದರೆ ಅಷ್ಟು ಮಾತ್ರದಿಂದ ಅವುಗಳೊಳಗೆ ಒಪ್ಪಂದವಾಗುವ ಅವಶ್ಯವಿಲ್ಲೆಂದು ಹೇಳುವುದು ಹುಚ್ಚುತನ.

ಅಲ್ಪಸಂಖ್ಯಾತರಿಗೆ ಉದಾರ ರಿಯಾಯಿತಿಗಳನ್ನು ತೋರಿಸುವುದೇ ಕಾಂಗ್ರೆಸಿನ ನೀತಿಯಾಗಿರುವುದು. ಕಾಂಗ್ರೆಸು ನ್ಯಾಯಕ್ಕಿಂತ ಹೆಚ್ಚು ಉದಾರತೆಗೆ ಪ್ರಾಮುಖ್ಯತೆ ಕೊಟ್ಟಿರುತ್ತದೆ. ಕಾಂಗ್ರೆಸು ಯಾವಾಗಲೂ ಅಸಂತೃಪ್ತರನ್ನು ಸಮಜಾಯಿಷಲೆತ್ನ ಮಾಡುತ್ತಾ ಬಂದಿದೆ. ಕೇವಲ ನ್ಯಾಯಕ್ಕೇನೇ ಅದು ಕಟ್ಟು ಬದ್ಧಿದ್ದರೆ ಬ್ರಿಟಿಷ್ ಸರಕಾರವು ಹಿಂದುದೇಶದಲ್ಲೇ ಚಿರಕಾಲ ಇರುವಂತೆ ಮಾಡಿದಂತಾಗುತ್ತಿತ್ತು. ಯಾವಾಗಲೂ ಜನತೆಯ ಮೇಲೆ ಬಲಾತ್ಕಾರವನ್ನು ಪ್ರಯೋಗಿಸಿ ಬಗ್ಗಿಸುವುದು ಕಾಂಗ್ರೆಸಿನ ರೀತಿಯಲ್ಲ. ಅದೇ ರೀತಿ ಸಮುದಾಯಿಸುವ ಉದಾರತೆಯನ್ನದು ಈಗಲೂ ತೋರಿಸಬೇಕು. ಪ್ರತಿಯೊಂದು ವ್ಯಕ್ತಿ, ಜನಾಂಗ, ಪ್ರಾದೇಶಿಕ ಭಾಗವು ಅಗ್ರಪಟ್ಟಲ್ಲಿ, ಪೃಥ್ಯೇಕವಾಗುವ ಸ್ವಾತಂತ್ರ್ಯ ಇದ್ದೇ ಇರಬೇಕು. ಈ ಸ್ವಾತಂತ್ರ್ಯವು ಪ್ರತಿಯೊಂದು ಅವಿಭಕ್ತ ಕುಟುಂಬದ ಮೆಂಬರನಿಗೂ, ಪ್ರತಿಯೊಂದು ಮಗುವಿಗೂ ಇರಬೇಕು. ಪ್ರತಿಯೊಂದು ಸಮಾಜ ಮತ್ತು ಜನಾಂಗಕ್ಕೂ ಸಂಪೂರ್ಣ ಪ್ರಭುತ್ವದ ಹಕ್ಕು ಇರಬೇಕು. ಇದು ಹಿಂದುಸ್ಥಾನವೇ ತಮ್ಮದು, ತಾವು ಅದರ ಮಾಲಕರೆಂಬ ಭಾವನೆಯುಂಟಾದಾಗ ಮಾತ್ರ ಎಲ್ಲರೂ ಒಟ್ಟಾಗಿ ಜಪಾನರನ್ನು ವಿರೋಧಿಸಲು ಸಾಧ್ಯವಾಗುವುದು.

ಉತ್ತರದ ಕೆಲವು ಪ್ರಾಂತಗಳಲ್ಲಿ ಮುಸಲ್ಮಾನ ಬಹುಸಂಖ್ಯಾತರು ಪ್ರಾಂತೀಯ ಆಡಳಿತ ನಡೆಸುತ್ತಿದ್ದಾರೆ. ಅವುಗಳಲ್ಲಿ ಸಂಪೂರ್ಣ ಪ್ರಾಂತಿಕ ಸ್ವಾಯತ್ತತೆ ಇದೆ. ಕೇಂದ್ರ ಸರಕಾರದ ಕೈಯಲ್ಲಿ ಹೆಚ್ಚಿನ ಅಧಿಕಾರವೇನೂ ಇರುವುದಿಲ್ಲ. ಬಹುಸಂಖ್ಯಾತರಿರುವ ಮುಸಲ್ಮಾನ ಪ್ರಾಂತಗಳಲ್ಲಿ ಕೇಂದ್ರ ಸರಕಾರಕ್ಕಿರುವ ಅಧಿಕಾರವನ್ನು ಕೂಡಾ ಸಂಪೂರ್ಣವಾಗಿ ಈ ಮುಸಲ್ಮಾನ ಬಹುಸಂಖ್ಯಾತರಿಗೆ ಕೊಡಬೇಕೆಂದೇ ಮುಸ್ಲಿಮ್ ಲೀಗಿನ ವಾದ. ನಾನು ಮದ್ರಾಸಿನ ಪ್ರಧಾನ ಮಂತ್ರಿಯಾಗಿದ್ದಾಗ ಅದಕ್ಕಾಗಿ ಹೋರಾಡಿದ್ದೇನೆ. ಒಂದು ಪ್ರದೇಶದ ಬಹುಸಂಖ್ಯಾತ ಜನರು ಸಂಪೂರ್ಣ ಸ್ವತಂತ್ರವಾಗಿರಲಪೇಕ್ಷಿಸಿದರೆ ಅವರ ಮೇಲೆ ಬಲಾತ್ಕಾರ ಮಾಡಲು ಸಾಧ್ಯವಿಲ್ಲೆಂದು ಗಾಂಧೀಜಿಯವರೇ ಹೇಳಿರುವರು. ಆದುದರಿಂದ ಲೀಗಿನ ವಾದವನ್ನೊಪ್ಪಿ ಮುಸ್ಲಿಮ್ ಲೀಗು ಮತ್ತು ಕಾಂಗ್ರೆಸು ಒಟ್ಟಾಗದಿರುವನಕ ಬ್ರಿಟಿಷರ ಆಳ್ವಿಕೆಯು ಇಲ್ಲದಿರುವದೆಂದು ನಾನು ಹೇಳುತ್ತೇನೆ.

ತಾ 30-5-1942ರಿಂದ
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್‌ನಲ್ಲಿ
ಜೆಮಿನಿ ಪಿಕ್ಚರ್ಸ್‌ನವರ
ಗಿರಿ, ಕುಮಾರಿ ಮೊದಲಾದವರು ನಟಿಸಿರುವ
ಸುಮಂಗಲಿ
'ವಂದೇ ಮಾತರಂ' ಎಂಬ ಚಿತ್ರವನ್ನು ಸಹಾ
ಮರೆಯಿಸುವ ಚಿತ್ರ-

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪ್ರಕಟಣೆ—ದ. ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಇನ್-ಚಾರ್ಜ್ ಅಧ್ಯಕ್ಷರಾದ ಶ್ರೀ| ಬಿ.ಎಂ. ಡಿ. ಅಧಿಕಾರಿಗಳು ಒಂದು ಪ್ರಕಟಣೆಯನ್ನು ಹೊರಡಿಸಿ, ಶ್ರೀ| ರಾಜಗೋಪಾಲಾಚಾರ್ಯರು ಅ. ಭಾ. ಕಾಂ. ಸಮಿತಿಯ ಬಹುಮತದ ನಿರ್ಧಾರವನ್ನು ಅಲಕ್ಷಿಸಿ, ಅದರ ನಿರ್ಧಾರದ ವಿರುದ್ಧ ಪ್ರಚಾರಮಾಡುವುದಕ್ಕಾಗಿ ಬಂದಿರುವುದರಿಂದ ಜಿಲ್ಲೆಯ ಎಲ್ಲಾ ಕಾಂಗ್ರೆಸಿಗರೂ ಅದರಲ್ಲಿಯೂ ಕಾಂಗ್ರೆಸ್ ಅಧಿಕಾರಿಗಳು ಪ್ರತ್ಯಕ್ಷದಲ್ಲಾಗಲಿ, ಪರೋಕ್ಷದಲ್ಲಾಗಲಿ, ಅವರ ಕಾರ್ಯಕ್ರಮದಲ್ಲಿ ಸಹಕರಿಸಕೂಡದಾಗಿ ತಿಳಿಸಿದ್ದಾರೆ.

ಭಾಷಣ—ಕಳೆದ ತಾ. 20ನೇ ಸಾಯಂಕಾಲ ಅಡ್ವೋಕೇಟ್ ಯು. ಹವ್ಯಟ್ಟ ಸಾಹೇಬರ ಅಧ್ಯಕ್ಷತೆಯಲ್ಲಿ ಹೈದರಾಬಾದಿನಿಂದ ಬಂದಿದ್ದ ಮೌಲ್ವಿ ಹಬಿಬುಲ್ಲಾ ಸಾಹೇಬರೂ ಮತ್ತು ಮೌಲ್ವಿ ಅಬ್ದುಲ್ ಜಲೀಲ್ ಸಾಹೇಬರೂ ಕ್ರಮವಾಗಿ ಉರ್ದು ಕನ್ನಡಗಳಲ್ಲಿ "ಲೋಕದಲ್ಲಿ ಶಾಂತಿಯು ಹೇಗೆ ದೊರೆಯುವುದು" ಎಂಬ ವಿಷಯದಲ್ಲಿ ಮಾತಾಡಿದರು.

ಕದ್ರಿ ಎಮ್ಮೆಕೆರೆ ನಾಟಕ ಮಂಡಳಿ—ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಮಂಡಲಿಯವರು ತಮ್ಮ ಮಂಡಲಿಯ ತೃತೀಯ ವಾರ್ಷಿಕೋತ್ಸವವನ್ನು ನಿನ್ನೆ ಸಾಯಂಕಾಲ ವಿದ್ಯಾಬೋಧಿನಿ ಶಾಲೆಯಲ್ಲಿ ಪಂಡಿತ ನಿಡ್ಡೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿಸಿದರು. ಮಾನ್ಯ ಅಧ್ಯಕ್ಷರು ತರುಣ ನಟರ ಕಲಾಕೌಶಲ್ಯವನ್ನು ಪ್ರಶಂಸಿಸಿ ಭಾಷಣಮಾಡಿದರು. ವಿದ್ವಾನ್ ಶಾಸ್ತ್ರಿಗಳ ಭಾಷಣವೂ ಇದ್ದಿತು.

ಸಾರ್ವಜನಿಕ ಸಭೆ—ಕಳೆದ ಶನಿವಾರ ಮೈದಾನದ ರೇಡಿಯೋ ಹೌಸಿನ ಬಳಿಯಲ್ಲಿ ನಿ| ಪಿ. ಸಿ. ಟೀಚೋರವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಎಚ್. ರಾಮರಾವ್, ಯಂ. ಶಂಕರರಾವ್, ಯಂ. ಎಸ್. ಶ್ರೀನಿವಾಸ ಮತ್ತು ಜ. ಅಬ್ದುಲ್ ರಹೀಂ ಆಸ್ಮಿದ್ ಅವರುಗಳು ಯುದ್ಧಕ್ಕೆ ಸಹಾಯಮಾಡಬೇಕೆಂದು ಭಾಷಣಮಾಡಿದರು. ಭಾಷಣಗಳಾಗುವ ಮೊದಲು ಮದ್ರಾಸ್ ಗವರ್ನರರ ರೇಡಿಯೋ ಸಂದೇಶವನ್ನು ಕೇಳಲಾಯಿತು.

ಉಡುಪಿ.

ದಿ. ಹಿಂದುಸ್ಥಾನ್ ಪೇಪರ್ & ಸ್ಟೇಷನರಿ ಮಾರ್ಟ್.

ಉಡುಪಿಯಲ್ಲಿ ಕಳೆದ ಎರಡು ವರ್ಷಗಳಿಂದ ಇದ್ದ ದಿ ಜನರಲ್ ಇನ್‌ವೆಸ್ಟ್‌ಮೆಂಟ್ & ಕಮರ್ಶಿಯಲ್ ಕಾರ್ಪೊರೇಶನ್, ಲಿಮಿಟೆಡ್, ಎಂಬ ಸಂಸ್ಥೆಯವರು ತಮ್ಮ ಆಫೀಸು ಮನೆಯಲ್ಲಿ ಹೊಲಿನ ಹೆಸರಿನ ಕಾಗದ ಧಂದಾವೊಂದನ್ನು ತಾರೀಕು 26-5 42ನೇ ಪ್ರಾತಃಕಾಲ ಘಂ. 8-30ಕ್ಕೆ ಶ್ರೀಯುತ ದೇವದಾಸ ಬಾಳಿಗರವರ ಅಧ್ಯಕ್ಷತೆಯಲ್ಲಿ ತೆರೆದರು. ಈ ಸಮಾರಂಭಕ್ಕೆ ಪಟ್ಟಣದ ಪ್ರಮುಖ ಮಹನೀಯರೆಲ್ಲರೂ ಸೇರಿ, ಯುದ್ಧದ ದೆಸೆಯಿಂದ ಕಾಗದದ ಅಭಾವವನ್ನು ಎಲ್ಲರೂ ಅನುಭವಿಸುತ್ತಿರುವ ಕಾಲದಲ್ಲಿ ಇಂತಹ ವ್ಯಾಪಾರವನ್ನು ತೆರೆದುದಕ್ಕಾಗಿ ಶ್ಲಾಘಿಸಿ ಆಶೀರ್ವದಿಸಿದರು.

ಹವಾಮಾನ-ಉಡುಪಿಯಲ್ಲಿ ನೀರಿನ ಕೊರತೆಯುಂಟಾಗಿದೆ ಕಳೆದ ಒಂದೆರಡು ದಿನಗಳಲ್ಲಿ ಮಳೆಯ ಚಿಹ್ನೆಗಳಿದ್ದವು.

ವರ್ಧಂತಿ—ಶ್ರೀ ಬೋರ್ಡ್ ಹಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಕಳೆದ ತಾ. 22ರಲ್ಲಿ ಡಾ| ಪಿ. ಎಲ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ವರದಿವಾಚನ, ಸಭಿಕರಲ್ಲಿ ಕೆಲವರ ಭಾಷಣ, ಅಧ್ಯಕ್ಷರಿಂದ ಬಹುಮಾನ ಹಂಚೋಣಿಕೆ ನಡೆದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಶಾಲಾ ಬಾಲಕ ಬಾಲಕಿಯರಿಂದ ನರ್ತನ ಇತ್ಯಾದಿ ವಿವಿಧ ವಿನೋದಗಳು, 'ವೀರಅಭಿಮನ್ಯು' ನಾಟಕ ಪ್ರದರ್ಶನ ನಡೆದು ಧನ್ಯವಾದಗಳಾಗಿ ಸಮಾರಂಭವು ಕೊನೆಗೊಂಡಿತು.

ಕಡಿಯಾಳಿ ಶ್ರೀ ಮಹಿಷಮರ್ದಿನಿ ಹಾ. ಎ. ಶಾಲೆಯ ವರ್ಧಂತಿಯೂ ನೂತನ ಶಾಲಾ ಕಟ್ಟಡ ಪ್ರವೇಶೋತ್ಸವವೂ ತಾ. 24-5 42ರಲ್ಲಿ ಜರಗಿತು. ಶ್ರೀ| ಅರಸರು ಲಕ್ಷ್ಮೀನಾರಾಯಣ ರಾವ್, ಉಡುಪಿ ನಗರಾಧ್ಯಕ್ಷರು ಅಗ್ರಾಸನ ವಹಿಸಿದ್ದರು. ಅಧ್ಯಕ್ಷರು ಶಿಲಾ ಸ್ಥಾಪಕರಾದ ದಿವಂಗತ, ವಿಠಲಯ್ಯನವರ ಭಾವಚಿತ್ರ ಅನಾವರಣ, ಶಾಲೆಗೆ ಹೊಸತಾಗಿ ಕಟ್ಟಿರುವ ಭವ್ಯ ಕಟ್ಟಡದ ಪ್ರವೇಶೋತ್ಸವಗಳನ್ನು ನೆರವೇರಿಸಿದ ಮೇಲೆ ವರದಿವಾಚನ, ಸ್ವಸ್ತಿವಾಚನಗಳಾಗಿ ಬಹುಮಾನ ವಿತರಣೆಯಾದ ಮೇಲೆ ಸಭಿಕರಲ್ಲಿ ಕೆಲವರ ಮತ್ತು ಅಧ್ಯಕ್ಷರ ಭಾಷಣಗಳಾದವು. ಬಾಲಕ ಬಾಲಕಿಯರಿಂದ ವಿವಿಧ ವಿನೋದಗಳ ಪ್ರದರ್ಶನ, 'ಕುಸಲೀಲಾ' ನಾಟಕ ಇತ್ಯಾದಿಗಳು ನಡೆದವು.

ಪಕಾರಳ—ಶ್ರೀ| ಬೊಳ್ಳಟ್ಟುಬೀಡು ಕೃಷ್ಣಯ್ಯ ಹೆಗ್ಡೆ ಜಿಲ್ಲಾಬೋರ್ಡು ಮೆಂಬರರ ಅಧ್ಯಕ್ಷತೆಯಲ್ಲಿ ತಾ. 24ರಲ್ಲಿ ಸಾರ್ವಜನಿಕ ಸಭೆಯೊಂದು ಸೇರಿ ಶ್ರೀ| ಸಿ. ರಾಜಗೋಪಾಲಾಚಾರ್ಯರ ಸೂಚನೆಗಳನ್ನು ಸಮರ್ಥಿಸಿ ಹಲವರ ಭಾಷಣಗಳಾದವು, ಅಧ್ಯಕ್ಷರ ಭಾಷಣವಾಗಿ ಆ ಸಂಬಂಧದಲ್ಲಿ ಒಂದು ನಿರ್ಣಯವು ಮಂಜೂರಾಯಿತು.

ಮಣಿಪುರ—ಇಲ್ಲಿಯ 'ಜಿಲ್ಲಾವ ಯೂನಿಯನ'ನ ಭಜನಾ ಸಪ್ತಾಹವು ತಾ. 18-5-42 ರಿಂದ 24-5-42ರ ವರೆಗೆ ಸಂಭ್ರಮದಿಂದ ಜರಗಿತು. ಬೇರೆ ಬೇರೆ ಕಡೆಯ 8 ಭಜನಾಮಂಡಳಿಗಳು ಇದರಲ್ಲಿ ಭಾಗ ವಹಿಸಿದ್ದವು. ಭಜನಾ ಪ್ರವೀಣರಾದ ಶ್ರೀ. ಗಿರಿಯನವರು ಮುಖ್ಯ ಭಾಗ ವಹಿಸಿದ್ದರು. ಮಂಗಲದ ದಿನ ಕೆಲವರ ಭಾಷಣವಾಗಿ ಯೂನಿಯನಿನ ಅಧ್ಯಕ್ಷ ಶ್ರೀ ಎಮ್. ರಂಗ ಇವರು ಧನ್ಯವಾದಗಳನ್ನಿತ್ತರು.

ಪಡುತೋನ್ಸೆ-ಕೆಮ್ಮಣ್ಣು— ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಇದೇ ತಾ. 16-5-42ನೇ ಶನಿವಾರ ಘಂಟೆ 6ಕ್ಕೆ ಉಡುಪಿ ರೇಂಜಿನ ಶಾಲಾ ಡಿಪ್ಯುಟಿ ಇನ್‌ಸ್ಪೆಕ್ಟರರಾದ ಶ್ರೀ| ಕೆ. ಸಂಜೀವ ಭಟ್ ಎಮ್. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀಯುತ ತೋನ್ಸೆ ವೆಂಕಟೇಶ ಪೈಗಳವರು ವರದಿಯನ್ನು ಓದಿದ ಬಳಿಕ ಶ್ರೀ. ಟಿ ಕೆ. ರಾಮರಾಯರು ಸಂಘದ ಹಿತವನ್ನು ಬಯಸಿದರು. ಮತ್ತು ನೆರೆದ ಸಭಿಕರಲ್ಲಿ ಶ್ರೀ. ಟಿ. ಗಣಪಯ್ಯ ಸೆಟ್ಟಿ, ಬಿ. ಎ., ಎಲ್. ಎಲ್. ಬಿ. ಯವರೂ ಶ್ರೀ. ಟಿ. ಎಲ್. ಉಡುಪರೂ ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿ ಭಾಷಣವಿತ್ತರು. ಬಳಿಕ ಅಧ್ಯಕ್ಷ ಮಹಾಶಯರು ಬಲ್ಯಾವಸ್ಥೆಯಲ್ಲಿರುವ ಈ ಹಳೆಯ ವಿದ್ಯಾರ್ಥಿ ಸಂಘವು ಕೆಮ್ಮಣ್ಣಿನಂತಹ ಹಳ್ಳಿಯಲ್ಲಿ ಕೂಡಾ ಇಷ್ಟು ಯಶಸ್ವಿಯಾಗಿ ಕೆಲಸಮಾಡಿಕೊಂಡಿರುವುದನ್ನು ಶ್ಲಾಘಿಸಿ ಭಾಷಣವಿತ್ತರು. ನಂತರ ಸಂಘದ ಸದಸ್ಯರು "ಕುಶ-ಲವ" ಎಂಬ ಪೌರಾಣಿಕ ನಾಟಕವನ್ನು ಬಹು ಚಲೋದಾಗಿ ನಟಿಸಿ ತೋರಿಸಿದರು. ನಾಟಕದಲ್ಲಿ ಚೆನ್ನಾದ ಅಭಿನಯವನ್ನು ಮಾಡಿದಂತಹವರಿಗೆ ರಜತ ಪದಕಗಳೂ ಬಹುಮಾನಗಳೂ ಹಂಚಲಾದ ಮೇಲೆ ಧನ್ಯವಾದಾರ್ಪಣೆಯೊಂದಿಗೆ ಉತ್ಸವವು ಕೊನೆಗೊಂಡಿತು.

ಅದೇ ದಿನ ಬೆಳಿಗ್ಗೆ ಸಂಘದ ಸದಸ್ಯರಿಗೆ ಏರ್ಪಡಿಸಲಾದ ಉಪಹಾರಕೂಟವು ಮುಗಿದ ಬಳಿಕ ಸೇರಿದ ಮಹಾಸಭೆಯಲ್ಲಿ ಹೊಸ ವರ್ಷದ ಕಾರ್ಯಕಾರೀ ಮಂಡಲಿಯ ಚುನಾವಣೆಯೂ ಸಾಗಿತು.

ಕರಂಗಿಪೇಟೆ— ಇಲ್ಲಿಯ ಶ್ರೀ ರಾಮಾ ಹಾ. ಎ. ಶಾಲೆಯ ಹಳೇ ವಿದ್ಯಾರ್ಥಿಗಳು ತಾ.18 ನೇ ದಿನ ರಾತ್ರಿ ಶಾಲೆಯಲ್ಲಿ ಸೇರಿ ಒಂದು ಸಂಘವನ್ನು ಸ್ಥಾಪಿಸಿದರು. ಹಳೇ ವಿದ್ಯಾರ್ಥಿಗಳ ಕರ್ತವ್ಯ, ಶಾಲೆಗೂ ಅವರಿಗೂ ಇರುವ ಸಂಬಂಧ ಇತ್ಯಾದಿಗಳ ಕುರಿತು ಹಲವರ ಭಾಷಣಗಳಾದ ಬಳಿಕ ಶ್ರೀ| ಎ. ಕೃಷ್ಣ ಶೆಣೈ ಎಲ್. ಎಸ್. ಇ. ಇವರ ನೇತೃತ್ವದಲ್ಲಿ ಶ್ರೀಗಳಾದ ಎ. ಕೆ. ಸದಾಶಿವ ಶೆಣೈ (ಅಧ್ಯಕ್ಷ) ಎಸ್. ಸದಾನಂದ ನಾಯ್ಕ ಮತ್ತು ಎ. ನಾರಾಯಣ ಹೆಗ್ಡೆಯವರು (ಜತೆಕಾರ್ಯದರ್ಶಿಗಳು) ಎ ಸದಾನಂದ ಶೆಣೈ, ಎ. ಕೆ. ನಾರಾಯಣ ಶೆಟ್ಟಿ, ಜನಾಬ್, ಎ. ಹಸನಬ್ಬ, ಎ. ಹಮ್ಮದ್ ಹೀಗೆ 7 ಮಂದಿಯಿಂದ ಕೂಡಿದ ಒಂದು ಕಾರ್ಯಕಾರಿ ಮಂಡಳಿಯನ್ನು ಸ್ಥಾಪಿಸಲಾಯಿತು ಶಾಲೆಯ ಏಳಿಗೆಗಾಗಿಯೂ, ಶಾರದ ರಜತ ಮಹೋತ್ಸವದ ಕಾರ್ಯಗಳಿಗಾಗಿಯೂ ಸರ್ವ ವಿಧದಲ್ಲಿಯೂ ಈ ಸಂಘವು ಪ್ರಯತ್ನಿಸಬೇಕಾಗಿ ನಿರ್ಣಯಿಸಲ್ಪಟ್ಟಿತು.

ಕಾರ್ಕಳ.

ಉದ್ಘಾಟನೆ-ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುವ ಹಿಂದೀ ತರಗತಿಗಳ ಉದ್ಘಾಟನಾ ಸಮಾರಂಭವು ತಾ 13ರ ದಿನ ಶ್ರೀ. ವಕೀಲ ಡಿ. ಪಿ. ಭಟ್ಟರವರ ಅಧ್ಯಕ್ಷತೆಯಲ್ಲಿ ಶ್ರೀ. ಕೆ. ವೆಂಕಟೇಶ ಪ್ರಭುಗಳವರಿಂದ ನಡೆಯಿತು. ಈ ತರಗತಿಗಳಲ್ಲಿ 60ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಹಿಂದೀ ಭಾಷಾಭ್ಯಾಸ ಮಾಡುತ್ತಿರುವರು

ವೈದಿಕ ವಿವಾಹ—ಇಲ್ಲಿಯ ಶ್ರೀ. ಬೇಲಾಡಿ ಶ್ರೀನಿವಾಸ ಕಾಮತರ ಪುತ್ರಿ ಕುಮಾರಿ ಬಿ. ಗಿರಿಜಾ ದೇವಿಯನ್ನು ಮೊದಲು ಕ್ರೈಸ್ತ ಮತೀಯರಾಗಿದ್ದು, ಅನಂತರ ಹಿಂದುಗಳಾಗಿ ಧರ್ಮಾಂತರ ಹೊಂದಿದ ತೀರ್ಥಹಳ್ಳಿಯ ಸಾಹುಕಾರ ಶ್ರೀ| ಜ್ಞಾನೇಂದ್ರ ಪ್ರಭುಗಳವರ ಸುಪುತ್ರ ಶ್ರೀ. ವೀರೇಂದ್ರರವರಿಗೆ ಕೊಟ್ಟು ವಿವಾಹ ನಿಶ್ಚಯವು ತಾ.24ರ ದಿನ ಇಲ್ಲಿಯ ಶ್ರೀ. ಯಂ ಅಚ್ಯುತ ಪೈ ವಕೀಲ ಅವರ ಧರ್ಮಪತ್ನಿಯವರ ಪ್ರೋತ್ಸಾಹ ಪ್ರಯತ್ನಗಳಿಂದ ಅವರ ಮನೆಯಲ್ಲಿ ನಡೆಯಿತು. ವಿವಾಹವು ಇದೇ ಜೂನ್ ತಾ. 7ರ ದಿನ ಬೆಳಿಗ್ಗೆ ಇಲ್ಲಿಯೇ ನಡೆಯಲಿದೆ.

ವರ್ಧಂತಿ ಉತ್ಸವ—ಸ್ಥಳೀಯ ಶ್ರೀ. ಕುಕ್ಕುಂದೂರು ಬೋರ್ಡ್ ಹಾಯರ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಇದೇ ತಾ. 30ರ ದಿನ ಡೆಪ್ಯುಟಿ ಇನ್ಸಪೆಕ್ಟರ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾಗಿಯುವದು. ವಿದ್ಯಾಭಿಮಾನಿಗಳ ಪ್ರೋತ್ಸಾಹವನ್ನು ಕೋರಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು, ಬೆಳಗಾಂವಿ, ೧೯೪೨.

ಇದೇ ತಿಂಗಳು ೩೦, ೩೧ ಈ ಎರಡು ದಿನಗಳಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಸೇರುವುದು. ಮುಂಬಯಿ ಹಾಯಕೋರ್ಟಿನ ಸರಕಾರಿ ವಕೀಲರಾದ ಶ್ರೀಮಾನ್ ಜಹಗೀರದಾರ ರಂಗಾಚಾರ್ಯರು ಎಂ ಎ., ಎಲ್. ಎಲ್. ಬಿ., ಇವರು ಅಧ್ಯಕ್ಷರಾಗಿ ನಿಯೋಜಿತರಾಗಿದ್ದಾರೆ. ಕನ್ನಡಿಗರೆಲ್ಲರೂ ಅಗತ್ಯವಾಗಿ ಬಂದು, ತಮ್ಮ ಬೆಲೆ ಸೂಚನೆಗಳನ್ನಿತ್ತು, ಪರಿಷತ್ತಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನೆರವೇರಿಸಬೇಕೆಂದು ಸಂಬಂಧಪಟ್ಟವರು ಕೋರುತ್ತಾರೆ.

ಮದ್ರಾಸು ಗವರ್ನರರ ಯುದ್ಧ ಫಂಡು.

ದ. ಕ. ಜಿಲ್ಲೆಯಲ್ಲಿ ಎಪ್ರಿಲ್ ತಿಂಗಳಲ್ಲಿ
ಧನ ಸಹಾಯ ಮಾಡಿದವರ
ಹೆಸರಿನ ಪಟ್ಟಿ.
ಭಾಗ ೧.

ರೂ. 50 0-0 ಡಬ್ಲ್ಯು. ಜೆಫ್ರೀ. ಡಬ್ಲ್ಯು. ಬಿ. ಜಾನ್ಸನ್. ರೂ-20-0-0 ಯಂ. ಕೇಶವನ್ ಉಣ್ಣಿ ನಾಯರ್. ರೂ. 17-0-0 ಆರ್. ಪ್ರಸಾದ್. ರೂ- 10-0-0 ಕ್ಯಾಪ್ಟನ್ ಸಿ. ಕೆ. ಮೇನನ್, ಬಿ. ಕೋರಗಪ್ಪ, ರಾವ್ ಸಾಹೇಬ್ ಎ. ಎಲ್. ಪಿಂಟೋ, ವಿಟ್ಲದ ತಮಿಮರ್ ಕೃಷ್ಣರಾಜ. ರೂ. 8-0-0 ರಾವ್ ಸಾಹೇಬ್ ಯು. ಮಂಜಪ್ಪ, ರಾವ್ ಬಹದ್ದೂರ್ ಡಾ| ಪಿ. ಪಿ. ಅಮತ್. ರೂ. 7-0-0 ಖಾನ್ ಸಾಹೇಬ್ ಯಂ. ಸುಲ್ತಾನ್ ಮೊಹಿಉದ್ದೀನ್ ಮೇಸ್ತ್ರಿ ಸಾಹೇಬ್. ರೂ- 6-8-0 ರಾವ್ ಬಹದೂರ್, ಕೆ. ಶ್ರೀನಿವಾಸರಾವ್ ರೂ 6-0-0 ಕೆ. ಯುಸ್. ಫಿಶ್. ರೂ. 5-8-0 ಪಿ. ರಾಜಗೋಪಾಲಾಚಾರಿ. ಯುಸ್. ಸ್ವಾಮಿನಾಥನ್, ರೂ. 5-0-0 ಡಾ| ಕೆ. ಶೋನನ್, ಕೆ. ಅಪ್ಪುಕುಟ್ಟ ನಾಯರ್.

(ಮುಂದೆ ನೋಡುವುದು.)

TOURISTS' ONLY IDEAL RESORT
CAFE' ROYAL
(REGISTERED)
SHIVALLI BRAHMINS'
High Class Boarding & Lodging House
HOSPITAL ROAD, UDIPI.
ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ
'ಕೆಫೆ ರೋಯಲ್'
ಆಸ್ಪತ್ರೆ ರಸ್ತೆ, ಉಡುಪಿ.

Birth Control.
ಮಿತ ಸಂತತಿ.
ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರಗಳನ್ನೂ ಉಪಾಯಗಳನ್ನೂ ಸೂಚಿಸುವ ಅತ್ಯಮೂಲ್ಯ ಪುಸ್ತಕ
ಮದುವೆಯಾದ ಸ್ತ್ರೀ ಪುರುಷರ ಸಲುವಾಗಿ ಬರೆಯಲ್ಪಟ್ಟ ಉಪಯುಕ್ತ ಸಂಗ್ರಹ ಗ್ರಂಥ
ಬೆಲೆ: 0—4—0.
5 ಆಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಲಾಗುವುದು.
ಎರಡೂ ಪುಸ್ತಕ ಬೇಕಾದವರು 9 ಆಣೆ ಸ್ಟಾಂಪು ಕಳಿಸಬೇಕು.

A Guide to Sexual Health.
ಜನನೇಂದ್ರಿಯಗಳ
ರೋಗ ಬಾಧಾ ನಿವಾರಣೆ.
ಸ್ತ್ರೀ ಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅಮೂಲ್ಯ ಸಿದ್ಧಾನುಭವದ ಉಪಯುಕ್ತ ಸಂಗ್ರಹ ಗ್ರಂಥ.
ಗುಹ್ಯೇಂದ್ರಿಯ ರೋಗಗಳನ್ನು ನಿವಾರಿಸುವ ಬಗೆ, ಆ ರೋಗದಿಂದ ನರಳುವವರ ಕಡೆಗೆ ದಯೆ—ಸೂಚಿಸುವ ಎಲ್ಲರೂ ಓದ ತಕ್ಕ ಅತ್ಯಾವಶ್ಯ ಪುಸ್ತಕ
ಬೆಲೆ: 0—4—0.
0-5-0 ಸ್ಟಾಂಪು ಕಳಿಸಿದರೆ 1 ಪ್ರತಿ ಕಳಿಸಲಾಗುವುದು.

ಪುಸ್ತಕ ದೊರೆಯುವ ಸ್ಥಳ:
ನವಭಾರತ ಪುಸ್ತಕಭಂಡಾರ, ಉಡುಪಿ.

ಮನೋರಂಜಕ ವಾರ್ತೆಗಳು.

ಮೂಢದಾರಿದ ಕಾರ್ಯ

ಅಲಹಾಬಾದಿನಲ್ಲಿ ಕಾಂಗ್ರೆಸ್ ಸಮಿತಿಯ ಮುಂದೆ ಗಾಢಾಲೋಚನೆ ಮಾಡಬೇಕಾದ ವಿಷಯಗಳಿದ್ದುವು ಬಹುಮಟ್ಟಿಗೆ ಎಲ್ಲರೂ ಗಂಭೀರವಾಗಿಯೇ ಇದ್ದರು. ಆದರೂ ಅಲ್ಲಿಯ ಕೆಲವು ವಿನೋದಕರ ಘಟನೆಗಳು ಚಿರಸ್ಮರಣೀಯವಿವೆ. ಬರ್ಮಾದ ನಿರಾಶ್ರಿತ ಹಿಂದೀಯರ ಸಂಬಂಧವಾಗಿ ಅಲ್ಲಹಾಬಾದ್ ಕಾಂಗ್ರೆಸ್ ಸಮಿತಿಯವರು ಮಾಡಿದ ಎರಡು ನಿರ್ಣಯಗಳನ್ನು ಪ್ರಕಾಶಗೊಳಿಸದಂತೆ ಸರಕಾರವು ತಡೆಹಾಕಿತ್ತಷ್ಟೆ. ಗರ್ಝೆಟಿನಲ್ಲಿ ಬಂದ ಸರಕಾರೀ ಸೂಚನೆಯೇ ಆ ನಿರ್ಣಯಗಳ ಅರ್ಥವನ್ನು ತಿಳಿಸಲು ಸಾಕಾಗಿತ್ತೆಂಬುದು ಬಹುವಿನೋದದ ಸಂಗತಿ. ಸರಕಾರೀ ಗರ್ಝೆಟಿನಲ್ಲಿದ್ದ ಕಾಂಗ್ರೆಸ್ ನಿರ್ಣಯಗಳ ಶಬ್ದಗಳು ಆ ನಿರ್ಣಯಗಳ ಒಟ್ಟರ್ಥವನ್ನು ತಿಳಿಸಲು ಸಾಕಾಗುವಷ್ಟಿದ್ದುದು ಮಾತ್ರವಲ್ಲ, ಸರಕಾರದ ದೃಷ್ಟಿಯಲ್ಲಿ ಅತ್ಯಂತ ಆಕ್ಷೇಪಾರ್ಹ ಭಾಗಗಳೇ ಅವುಗಳಾಗಿದ್ದುವು. ಸರಕಾರೀ ಅಧಿಕಾರಿಗಳ ಈ ಅವಿವೇಕವನ್ನು ಕಂಡು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮೆಂಬರರಿಗೆಲ್ಲಾ ನಗೆ ಬಂತು. ಕಾಂಗ್ರೆಸಿನ ಮಾತುಗಳನ್ನು 'ಇದನ್ನಾರೂ ಹೇಳಬಾರದು' ಎಂಬ ನಿರ್ಬಂಧದೊಡನೆ ಸರಕಾರವೇ ಹೇಳಿಬಿಟ್ಟರೆ ಮಿಕ್ಕವರಿಗೆ ಹೇಳುವ ಅಗತ್ಯವಾದರೂ ಏನು?

ಮೌಲಾನರ ಸಿಟಿ

ಅಲಹಾಬಾದು ಅಧಿವೇಶನದಲ್ಲಿ ಪಂಡಿತ ನೆಹರುಗಳು ಅಕಸ್ಮಾತ್ತಾಗಿ ಸ್ವಯಂಸೇವಕ ಸ್ತ್ರೀಯೊಬ್ಬಳಿಂದ ಕಾಣಿಸಿಕೊಂಡಾಗ ಕೆಲವರು ಅವರ ಗುರುತು ಹಚ್ಚಲಾರದೆ ಹೋದರು. ಕಾರಣವೆಂದರೆ ಆ ವೇಳೆಯಲ್ಲಿ ಪಂಡಿತರು 50 ದಾಟಿದವರಂತಿರದೆ 40ರೊಳಗಿನ ನವಯುವಕರಂತೆ ಕಾಣುತ್ತಿದ್ದರು. ಸ್ವಚ್ಛ ನೋಟವಿರದ ಸಭಿಕರು ಒಂದು ಕಪ್ ಕಾಪಿ ಅಥವಾ ನೀರಿಗಾಗಿ ಜವಾಹರರಿಗೆ ಹುಕುಂ ಕೊಟ್ಟದ್ದಕ್ಕಾಗಿ ಅವರನ್ನು ದೂರುವಂತಿರಲಿಲ್ಲ. ಇನ್ನೊಂದು ವಿನೋದವೆಂದರೆ ಸ್ವಾಗತ ದೇಹಿ ಅಧ್ಯಕ್ಷ ಮೌ ಅಜಾದರ ಅನಿಷ್ಟ ರುಜಾಜಿಯವರ ಸೂಚನೆಗಳ ದೆಸೆಯಿಂದಲೇ ತಲೆಬಿಸಿಯೇರಿದ್ದ ಮೌಲಾನರನ್ನು ಅಲಹಾಬಾದಿನ ವಿಪರೀತ ಸೆಖೆಯೂ ದಣಿಸದಿರಲೆಂದು ಪಂಡಿತ ನೆಹರುಗಳು ತನ್ನ ಸುಂದರಿ ಸೊಸೆಯಂದಿರನ್ನು ಅಧ್ಯಕ್ಷರಿಗೆ ಗಾಳಿಹಾಕಲು ನೇಮಿಸಿದರು. ಹಿಂಭಾಗದಲ್ಲಿರುವ ಈ ಸ್ವಯಂ ಸೇವಕಿಯರ ದೆಸೆಯಿಂದ ಎಲ್ಲರ ಲಕ್ಷ್ಯವೂ ತನ್ನ ಕಡೆಗೆ ಬೀಳುತ್ತಿರುವದು ಮೌಲಾನಾ ಆಜಾದರಿಗೆ ಅಷ್ಟೊಂದು ರುಚಿಸಲಿಲ್ಲ. ಅವರು ಹಲವು ಬಾರಿ ಮುಖ ತಿರುಗಿಸಿ ಹುಡುಗಿಯರನ್ನು ಹೋಗಹೇಳಿದರು. ಛಳಿಗಾಲದ ಭೀಕರತೆ ಜರ್ಮನರಿಗೆ ಗೊತ್ತು. ಸೆಕೆಕಾಲದ ಕಠಿಣತೆ ಮೌಲಾನರಂತಹ ಸ್ಥೂಲದೇಹಿಗಳಿಗೆ ಮಾತ್ರಗೊತ್ತು!

ಹಿಟ್ಲರರು ನಗ್ನ ನೃತ್ಯ ಪ್ರೇಮಿಯೆ?

'ಬ್ರಹ್ಮಚಾರಿ', 'ಸ್ತ್ರೀ ದ್ವೇಷಿ' ಎಂಬ ಹೆಸರು ಪಡೆದಿರುವ ಹಿಟ್ಲರರು ಸ್ತ್ರೀಯರ ನಗ್ನ ನೃತ್ಯಗಳನ್ನು ಕಣ್ಣು ಬಾಯಿಬಿಟ್ಟು ನೋಡುವದನ್ನು ತಾನು ಪ್ರತ್ಯಕ್ಷ ಕಂಡಿರುವದಾಗಿ ಅರ್ನೆಸ್ಟ್ ಸ್ಪೋನ್ ಎಂಬವರು 'ಸಂಡೇ ಪಿಕ್ಟೋರಿಯಲ್' ಪತ್ರಿಕೆಯಲ್ಲಿ ಬರೆದಿರುತ್ತಾರೆ. ಡೊರೋಥಿ ವಾನ್ ಬ್ರುಕ್ ಎಂಬವಳು ಹಿಟ್ಲರರ ಮೆಚ್ಚಿನ ನಗ್ನ ನಟಿ. ಮ್ಯೂನಿಚ್ ಥಿಯೇಟರ್‌ನಲ್ಲಿ 'ಮಿಸಿ ವಿಡೊ' ನೃತ್ಯವೆಂದರೆ ಹಿಟ್ಲರರು ಹಾಜರಿದ್ದೇ ಇರುತ್ತಾರೆ. ಇಲ್ಲಿ ಡೊರೋತಿ ಪೂರ್ಣ ನಗ್ನತೆಯಿಂದ ವಿವಿಧ ಭಂಗಿಗಳನ್ನು ಪ್ರದರ್ಶಿಸುತ್ತಾಳೆ. ಪ್ರತಿಯೊಂದು ಸ್ವತಂತ್ರ ರಾಷ್ಟ್ರದ ನೋಟ ಬೀಳುವ ನಾಜೀ ಸರ್ವಾಧಿಕಾರಿಯ ತೀಕ್ಷ್ಣ ದೃಷ್ಟಿಯು ಈ ಹುಟ್ಟು ಉಡುಪಿನಲ್ಲಿರುವ ಸುಂದರಿಯ ಸರ್ವಾಂಗಗಳ ಮೇಲೆ ಬೀಳುತ್ತದೆ. ಅವಳು ಹಿಂದಕ್ಕೆ ಬಗ್ಗಿ ನಾನಾ ಭಂಗಿಯನ್ನು ಪ್ರದರ್ಶಿಸುವಾಗ ಹಿಟ್ಲರರು ಮುಂಬಾಗಕ್ಕೆ ಬಾಗಿ ಆತು ದಿಂಬ ನೋಡುವದನ್ನು ತಾನು ಕಂಡಿರುವದಾಗಿ ಅರ್ನೆಸ್ಟ್ ಸ್ಪೋನರ ಹೇಳಿಕೆ. ಥಿಯೇಟರಿನಲ್ಲಿರುವ ಸ್ವತಿಷ್ಠಾವಂತ ವಿದೇಶೀಯರಾರಿಗೂ ಹಿಟ್ಲರರು ಅಲ್ಲಿ ಹಾಜರಿರುವದು ತಿಳಿದು ಅವರು ಆಶ್ಚರ್ಯಗೊಂಡರು. 'ಈ ಥಿಯೇಟರಿಗೆ ಫ್ಯೂರರರು ಎಂದಿನಂತೆ ಬಂದರು. ಇಲ್ಲಿ ಯಾವ ದೃಶ್ಯವು ಪ್ರದರ್ಶಿಸಲ್ಪಡುವದೆಂಬುದು ಅವರಿಗೆ ಗೊತ್ತಿರಲಿಲ್ಲ' ಎಂದು ಅಧಿಕಾರಿಗಳು ಕಾರಣ ಕೊಡುತ್ತಾರೆ. 'ಮೆರಿ ವಿಡೋ' ನೃತ್ಯಕ್ಕಾಗಿ ಹಿಟ್ಲರರು ತನ್ನ ಸ್ವಂತ ವಿಮಾನವನ್ನು ಮ್ಯೂನಿಕಕ್ಕೆ ಕಳುಹಿಸಿ ಅಲ್ಲಿಂದ ನರ್ತಕಿಯರನ್ನು ತರಿಸಿದ್ದರೆ. ನಗ್ನ ನೃತ್ಯದ ಪ್ರಸಿದ್ಧಿಗಾಗಿ ಜರ್ಮನಿಯ ಚಂದವೇನೂ ಇಳಿದಿದೆ. ಇಂಗ್ಲಿಷ್, ಫ್ರೆಂಚ್, ಡೇನಿಶ್, ಡಚ್, ರಷ್ಯನ್ ಮೊದಲಾದ ಎಲ್ಲವನ್ನೂ ಹಿಟ್ಲರರು ನಾಶಗೊಳಿಸಿರುವರು. ನಗ್ನ ನರ್ತಕೀ ತಂಡವು ನೃತ್ಯದ ಕೊನೆಗೆ ಬಲಗೈ ಎತ್ತಿ ಕೊಡುವ ಸೆಲ್ಯೂಟ್ ಹಿಟ್ಲರರಿಗೆ ಬಹಳ ಪ್ರೀತಿ. ಕೊಡುವ ಸ್ತ್ರೀ ಬಹಳ ಅಂದ ದವಳಾದ್ದರಿಂದ ಹೆಚ್ಚಿನ ಕೆಲಸವನ್ನೇನೂ ಕೊಡುತ್ತಿದ್ದ ದೇಶವನ್ನಾಗಲೀ, ದೇಹವನ್ನಾಗಲೀ ಬತ್ತಲೆಗೊಳಿಸಿ ನೋಡುವದರಲ್ಲಿಯೇ ಹಿಟ್ಲರರಿಗೆ ತೃಪ್ತಿಯೇ!

ಬೇಕಾಗಿದ್ದಾರೆ

ನಮ್ಮ ಪಾಂಗಾಳ ಎಲಿಮೆಂಟರಿ ಶಾಲೆಗೆ ಒಬ್ಬ ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಸಂಬಳ ಎಸ್ಟಾಂಡ್ ಗ್ರಾಂಟಿನ 85% ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಡೆಪ್ಯುಟಿ ಇನ್ಸ್‌ಪೆಕ್ಟರರ ಮುಖಾಂತರ ಅರ್ಜಿ ಮಾಡುವುದು.

P Thammanna
Manager,
Hindu Ele School
PANGAL
Date 25-5 42

ಅದರಲ್ಲಿದ್ದಂತೆಯೇ ಆಯಿತು.

"ಕಳೆದ ವರ್ಷ ನಾನು ನಿಮ್ಮ ವರ್ಷ ಭವಿಷ್ಯವನ್ನು ತರಿಸಿರುವುದು ಸರಿಯಷ್ಟೆ. ವೃಶ್ಚಿಕ ರಾಶಿಯವನಾದ ನನಗೆ ಅದರಲ್ಲಿ ಬರೆದ ಫಲಾಫಲಗಳೇ ಪ್ರಾಪ್ತವಾಗಿವೆ. ಈ ವರ್ಷವೂ ನನಗೆ ಒಂದು ಪ್ರತಿಯನ್ನು ಕೂಡಲೇ ರವಾನಿಸಿರಿ."

R N Kulkarni, Hubli

"ನೀವು ಸಕಾಲದಲ್ಲಿ ಕಳುಹಿಸಿಕೊಟ್ಟಿರುವ 1942ನೇ ಇಸವಿಯ ವರ್ಷಭವಿಷ್ಯ ಪುಸ್ತಕ ಬಂತು. ಅದನ್ನು ನನ್ನ ಸ್ನೇಹಿತರಿಗೆ ಓದಲಿಕ್ಕೆ ಕೊಟ್ಟು ಕೊಟ್ಟು ಸಾಕಾಯಿತು. ಆದರೆ ಈಗ ಅದನ್ನು ಯಾರು ಕೊಂಡು ಹೋಗಿದ್ದರೆಂದು ತಿಳಿಯುವುದಿಲ್ಲ. ಒಂದು ತಿಂಗಳಾದರೂ ಅದರ ಪತ್ತೆಯೇ ಇಲ್ಲ. ಆದ್ದರಿಂದ ಅದು ಇನ್ನು ಕಳೆದುಹೋದಂತೆಯೇ ಸರಿ. ಜನವರಿ ಫೆಬ್ರವರಿ ತಿಂಗಳಲ್ಲಿ ನನಗೆ ಅದರಲ್ಲಿ ಬರೆದಿದ್ದಂತೆಯೇ ಆಗಿದೆ. ಮುಂದೇನಾಗುವುದೆಂದು ತಿಳಿಯಲು ಇನ್ನೊಂದು ಪ್ರತಿ ಕಳುಹಿಸಿ. 0-3-9 ಸ್ಟಾಂಪು ಲಗ್ತೀಕರಿಸಿದ್ದೇನೆ."

ಸಿ. ಕೆ. ಶೆಟ್ಟಿ, ಬೊಂಬಾಯಿ.

1942ನೇ ಇಸವಿಯ ವರ್ಷಭವಿಷ್ಯ ಇದರ ಪ್ರತಿಗಳು ಅಂತರಂಗದ ಏಜಂಟರಲ್ಲೆಲ್ಲಾ ಸಿಗುತ್ತವೆ. ಅಲ್ಲಿ ಸಿಗದಿದ್ದರೆ 0-3-9 ಸ್ಟಾಂಪಿನೊಂದಿಗೆ ಬರೆಯಿರಿ.

ಅಂತರಂಗ ಆಫೀಸು ಉಡುಪಿ | ನವಭಾರತ ಪುಸ್ತಕ ಭಂಡಾರ, ಉಡುಪಿ

ಶೃಂಗಾರವಾದ ಪುಸ್ತಕ!

ಮುದ್ದಾದ ಮುದ್ರಣ!

ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೇಮದ ಪೂರ್ಣ ಟೀಕೆಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ಪ್ರಕಾರದ ಮನುಷ್ಯರು ತಿಳಿಯಬೇಕಾದ ರಹಸ್ಯಗಳ,

ಹಾಸಿಗೆಯ ಸುಖ ಸಂತೋಷಗಳು ಸ್ತ್ರೀಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೇಮದ ರಹಸ್ಯಗಳು, ಮೋಹಿಸುವ ವಿಧಗಳು, ಕನ್ಯೆಗಳ ಪ್ರೇಮ, ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೇಮದ, ಮುತ್ತು ಮುದ್ದು, ಮೋಹಿಸುವ ವಿಧಗಳು ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0

ಪ್ರಕಾಶ ಪ್ರಿಂಟಿಂಗ್ ಕಂಪೆನಿ

260. ಟ್ರಿಪ್ಲಿಕೇನ್ ರೋಡ್, ಮದರಾಸ್

ಅಹಹಾ! ಎಂತಹ ಸುಖನಿದ್ರೆ!

ಆಮಲಕೀ ತೈಲವು ಎಂತಹ ಸುಖ ನಿದ್ರೆಯನ್ನು ಕೊಡುತ್ತದೆ. ಮಾತ್ರವಲ್ಲ, ಮೆದುಳನ್ನು ತಂಪಾಗಿಸಿ. ನೇತ್ರಗಳನ್ನು ಶುಭ್ರಗೊಳಿಸುತ್ತದೆ. ಕಮನೀಯ ಕೇಶಕಲಾಪಕ್ಕೂ ಆಮಲಕೀ ತೈಲವು ಸಹಕಾರಿಯಾಗಿದೆ.

ಸಾವಿರಾರು ವಿದ್ಯಾರ್ಥಿಗಳು ಇದನ್ನು ಉಪಯೋಗಿಸಿ ಉತ್ತಮ ಫಲ ಪಡೆದಿರುತ್ತಾರೆ

೬ ಔನ್ಸಿನ ಬಾಟ್ಲಿಗೆ 0—6—0 | ೪ ಔನ್ಸಿನ ಬಾಟ್ಲಿಗೆ 0—11—0

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಕುಂಜಿಬೆಟ್ಟು, ದ. ಕ.

ಉಡುಪಿ ಸ್ಟಾಕಿಸ್ಟರು: ನವಭಾರತ ಬುಕ್ ಡಿಪೋ.

★ ರಸ್ಯದಲ್ಲಿ ನಾಝಿಗಳ ಭೀಷಣ ಅತ್ಯಾಚಾರ ★

ನಾಝಿಗಳು ಪ್ರತ್ಯಕ್ಷ ರಾಕ್ಷಸರಂತೆ ವರ್ತಿಸುತ್ತಿದ್ದಾರೆ.

ಕಾಡು ಜನರೂ ನಾಚಿಕೆಪಡುವ ಕೃತ್ಯಗಳನ್ನು ಮಾಡುತ್ತಿದ್ದಾರೆ.

ಪೈನನಲ್ಲಿ ಜಪಾನರಿಗಾಗಿರುವ ಅವಸ್ಥೆಯು ರಸ್ಯದಲ್ಲಿ ನಾಝಿಗಳಿಗಾಗಿದೆ. ಕೆಂಪು ಸೇನೆಯ ಪ್ರಚಂಡ ಹೋರಾಟ, ಜನಸಾಮಾನ್ಯರ ಪ್ರಬಲ ವಿರೋಧ ಮತ್ತು ಗೊರಿಲ್ಲಾ ಪಂಗಡಿಗರ ಅಸಹನೀಯ ಕಾಟವು ನಾಝಿಗಳನ್ನು ಉದ್ರೇಕಿಸಿ ತಲೆಗೆಡಿಸಿರುತ್ತವೆ. ಅವರು ಒಂದಿಷ್ಟಾದರೂ ಮಾನವತೆ ಇಲ್ಲದೆ ಪ್ರತ್ಯಕ್ಷ ರಾಕ್ಷಸರಂತೆ ವರ್ತಿಸುತ್ತಿದ್ದಾರೆ. ಕೆಂಪುಸೇನೆಯನ್ನವರಿಗ ನಾಶಮಾಡುವುದಕ್ಕಾಗಲಿ ಗೊರಿಲ್ಲ ಪಂಗಡಿಗರನ್ನಣಗಿಸುವುದಕ್ಕಾಗಲಿ ಅಸಾಧ್ಯವಾಗಿದೆ. ಅದುದರಿಂದ ತೀವ್ರ ಅಸಹಿಷ್ಣುಗಳಾಗಿರುವ ನಾಜಿಗಳು ರಸ್ಯದ ದುರ್ಬಲ ನಿರ್ದೋಷಿ ಜನಸಾಮಾನ್ಯರ ಮೇಲೆ ಉರಿದುಬಿದ್ದು ಇಚ್ಛಾನುಸಾರವಾಗಿ ಅವರ ಕೊಲೆಮಾಡುತ್ತಿದ್ದಾರೆ. ಈ ಹತ್ಯಾಖಾಂಡಕ್ಕೊಂದು ನೀತಿನೇಮ ಎಂಬುದೇ ಇಲ್ಲ. ಪುರಾತನ ಅನಾಗರಿಕ ಕಾಡುಜನರನ್ನು ಹಿಂದೆ ಹಾಕಿದ್ದಾರ. ನಾಗರಿಕರೆನಿಸುವ ನಾಝಿಗಳು ತಮ್ಮ ಪೈಶಾಚಿಕ ಕೃತ್ಯಗಳಿಂದ ಹೃದಯ ರಹಿತ ನಾಝಿ ಯುದ್ಧ ಯಂತ್ರದ ಅಂಗವಾಗಿ ಕೇವಲ ಯಾಂತ್ರಿಕವಾಗಿಯೇ ನಡೆಯುತ್ತಿದ್ದಾರೆ. ಚೆಂಗಿಸ್‌ಖಾನ್ ತೈಮೂರ್‌ಲೇನನ ಕಾಲದಲ್ಲಿ ನಡೆದಿರುವುದೆಂದು ಇತಿಹಾಸವು ಹೇಳುವ ಭೀಷಣ ಅತ್ಯಾಚಾರಗಳನ್ನು ಇಂದು ನಾಝಿಗಳು ಪ್ರತ್ಯಕ್ಷ ಕಂಡು ಕೇಳುವಂತೆ ಮಾಡಿರುತ್ತಾರೆ. ನಾಝಿಗಳು ನಡೆಸಿರುವ ಕೆಲವು ಪೈಶಾಚಿಕ ಕೃತ್ಯಗಳನ್ನು ಈ ಕೆಳಗೆ ಕೊಡಲಾಗಿದೆ.

ಮಾನವರು ಕುರಿಮಂದಿಗಿಂತಲೂ ಕಡೆ.

ಕ್ರಿಮಿಯದ ಕೆರ್ಚ್ ಅರ್ಧ ದ್ವೀಪದ ಮುಖ್ಯ ಪಟ್ಟಣ ಕೆರ್ಚ್. ಅಲ್ಲಿಯ ಜರ್ಮನ್ ಸೇನಾನಾಯಕನೊಂದು ಕಟ್ಟಾಜ್ಞೆ ಕೊಟ್ಟು ಅದನ್ನು ಪಟ್ಟಣದಲ್ಲೆಲ್ಲಾ ಪ್ರಚಾರಪಡಿಸಿದ. ಆ ಪ್ರಕಾರ ಸನ್ನಾಯ ಸ್ಸಾವ್ಯಯರಿಗೆ 7000ಕ್ಕಿಂತಲೂ ಮಿಕ್ಕಿದ ನಾಗರಿಕರನ್ನು ಕರೆದು ದಸ್ತಗಿರಿ ಮಾಡಿ ಪಟ್ಟಣದ ಹೊರ ಪ್ರದೇಶಕ್ಕೊಯ್ದು ಮಿಶನ್ ತೋಪುಗುಂಡು ಹಾರಿಸಿ ಕುರಿ ಮಂದೆಯಂತೆ ಕೊಲೆಮಾಡಲಾಯಿತು. ಉಕ್ರೈನಿನ ಬೇರೆಬೇರೆ ಪಟ್ಟಣಗಳಲ್ಲಿ ನೂರು, ಸಹಿರಗಟ್ಲೆಯಲ್ಲಿ ಜನರನ್ನು ಹಿಡಿದು ಕೊಲೆಗಡುಕರಿಂದ ತಲೆಗಡಿಸಲಾಗಿದೆ. ನಾಝಿಗಳು ಖಾರ್ಕೊವನ್ನು ಪ್ರವೇಶಿಸಿದಾಗಲೆ 14,000ಮಂದಿಯ ತಲೆ ಕಡಿಸಿರುವರು. ಕುರಿಮಂದೆಯನ್ನೂ ಜನರು ಹೀಗ ಮಾಡಲಿಕ್ಕಿಲ್ಲ.

ಸ್ತ್ರೀಯರ ಮೇಲೆ ಪೈಶಾಚಿಕ ಅತ್ಯಾಚಾರ

ಜರ್ಮನ್ ಸೈನ್ಯಾಧಿಪತಿಗಳ ಸಂಪೂರ್ಣ ಒಪ್ಪಿಗೆಯಿಂದಲೇ ನಾಝಿ ಪಿಶಾಚಿಗಳು ರಸ್ಯದಸ್ತ್ರೀಯರ ಮೇಲೆ ನಡಿಸುತ್ತಿರುವ ಅತ್ಯಾಚಾರವು ಅವರ್ಣನೀಯವಿರುತ್ತದೆ. ಎಷ್ಟೋ ಸ್ತ್ರೀಯರನ್ನು ಬಲಾತ್ಕಾರದಿಂದ ಕೆಡಿಸಿ ಕೊಂದುಹಾಕಲಾಗುತ್ತದೆ. ಜರ್ಮನ್ ಸೇನೆಯು ಸ್ಥಾಪಿಸಿರುವ ವೇಶ್ಯಾನಿಲಯಗಳಿಗೆ ಹೋಗಲೊಪ್ಪದ ಸ್ತ್ರೀಯರು ಮತ್ತು ಹುಡುಗಿಯರನ್ನು ನಿರ್ದಯವಾಗಿ ಕೊಂದುಹಾಕಲಾಗುತ್ತದೆ. ಕಲೂಗ ಎಂಬಲ್ಲಿ ಜರ್ಮನ್ ಸೈನ್ಯಾಧಿಕಾರಿಗಳ ಮತ್ತು ಸೈನಿಕರ ವೇಶ್ಯಾನಿಲಯಗಳಿಗೆ ಬಲಾತ್ಕಾರದಿಂದೊಯ್ಯಲ್ಪಟ್ಟ ರಸ್ಯಾದ ಸ್ತ್ರೀಯರು ತಮಗಾದ ಅಪಮಾನವನ್ನು ಸಹಿಸಿಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವರು. ಲೆನಿನ್‌ಗ್ರಾಡ್ ಪ್ರದೇಶದ ಮಸ್ಲೇನೊ ಎಂಬ ಹಳ್ಳಿಯೊಂದನ್ನು ಜರ್ಮನರು ಸುಟ್ಟುಹಾಕಿದ್ದರು. ಈ ಹಳ್ಳಿಯ ರಸ್ತೆಗಳಲ್ಲಿ ಸ್ತ್ರೀಯರ 8 ನಗ್ನ ಶರೀರಗಳು ಬಿದ್ದು ಮರಗಟ್ಟಿಹೋಗಿದ್ದುವು. ನಾಝಿಗಳು ಈ ಸ್ತ್ರೀಯರನ್ನು ಬಲಾತ್ಕಾರದಿಂದ ಸಂಭೋಗಿಸಿ ಆ ಮೇಲೆ ಗುಂಡುಹೊಡೆದುಕೊಂದು ಹಾಕಿದ್ದರು. ಅವರ ಮೂಗಗಳನ್ನು ಕೊಯ್ದುಹಾಕಿದ್ದರು. ಮುಖವನ್ನು ತಿವಿದು ವಿರೂಪಗೊಳಿಸಿದ್ದರು. ಹೊಟ್ಟೆಯನ್ನು ಬೆಯನೆಟುಗಳಿಂದ ತಿವಿದು ಕರುಳು ತೆಗೆದುಹಾಕಿದ್ದರು. ಯೊಲ್ಮಿ ಎಂಬಲ್ಲಿ ನಾಝಿ ಪಿಶಾಚಿಗಳು 15 ಮತ್ತು 17ವರ್ಷದ 6 ಹುಡುಗಿಯರನ್ನು ಹಿಡಿದು ಸಂಭೋಗಿಸಿ ಅವರ ಮೊಲೆಗಳನ್ನು ಕೊಯ್ದು, ಕಣ್ಣುಗಳನ್ನು ಕಿತ್ತು ಆ ಮೇಲೆ ಕೊಂದು ಹಾಕಿರುವರು. ಲಕ್ಸೆನೋವ ಎಂಬ ಓರ್ವ ಹುಡುಗಿಯ ಕಾಲುಗಳನ್ನು ಬಗ್ಗಿಸಲ್ಪಟ್ಟ ಎರಡು ಮರಗಳಿಗೆ ಕಟ್ಟಿ ಸೀಳಿ ಹಾಕಲಾಗಿತ್ತು.

ಮಕ್ಕಳ ಅಮಾನುಷ ಕೊಲೆ

ತಾ 9-1-'42ರಲ್ಲಿ ಕಲಿನಿನ್ ಪ್ರದೇಶದ ಕೆಸ್ಕಿ ಎಂಬಲ್ಲಿ, ನಾಝಿಗಳು ಕೆಂಪು ಸೇನೆಯ ಒತ್ತಾಯದಿಂದ ಹಿಂದೆಸರಿಯಬೇಕಾಗಿ ಬಂತು. ಆಗ ಜರ್ಮನ್ ಸೈನಿಕರು ಬಲಾತ್ಕಾರದಿಂದ ಆ ಹಳ್ಳಿಯ ಮುದುಕರು, ಸ್ತ್ರೀಯರು ಮತ್ತು ಮಕ್ಕಳನ್ನೆಲ್ಲಾ ಒಟ್ಟು ಸೇರಿಸಿದರು. ತಾಯಂದಿರು ತಮ್ಮ ಎಳೆಗೂಸುಗಳನ್ನೂ ತಮ್ಮೊಂದಿಗೆ ತರಬೇಕೆಂದು ಆಜ್ಞಾಪಿಸಿದ್ದರು. ಆ ಮೇಲೆ ಈ ಎಳೆಗೂಸುಗಳನ್ನು ತಾಯಂದಿರಿಂದ ಕಿತ್ತುಕೊಂಡು ಅವರೆದುರಲ್ಲೇ ಅವನ್ನು ಅತ್ಯಂತ ಬರ್ಬರವಾಗಿ ಕೊಂದುಹಾಕಿರುವರು. ಗರಸೇವ ಎಂಬೊಬ್ಬ ಸ್ತ್ರೀಯ ಕೈಯಲ್ಲಿದ್ದ 2ವರ್ಷದ ಗಂಡುಮಗುವನ್ನೊಬ್ಬ ನಾಝಿ ರಾಕ್ಷಸನು ಕಸಕೊಂಡು ಅವಳ ಕಣ್ಣೆದುರಲ್ಲೇ ಅದರ ಕಾಲು ಹಿಡಿದು ಕಂಬವೊಂದಕ್ಕೆ ಬಡಿದು ಕೊಂದು ಆ ಮೇಲೆ ಅವಳ 6 ಮತ್ತು 7ವರ್ಷ ಪ್ರಾಯದ ಎರಡು ಹುಡುಗಿಯರನ್ನು ಗುಂಡಿಗೆ ಬಲಿಕೊಟ್ಟನು. ಈ ರೀತಿ ಹುಡುಗರನ್ನೆಲ್ಲಾ ಕೊಂದ ಮೇಲ ಉಳಿದ 70ಮಂದಿ ಸ್ತ್ರೀಯರು ಮತ್ತು ಮುದುಕರನ್ನು ಜಾನುವಾರುಗಳಂತೆ ಕಣಜಗಳಿಗಟ್ಟಿ ಸಜೀವವಾಗಿ ಸುಟ್ಟು ಹಾಕಿರುವರು.

ಸುಲಿಗೆ ಮತ್ತು ದಹನ

ಮೋಸ್ಕೋ ಪ್ರದೇಶದ ಅಲ್ಸಯೇವೋ ಮತ್ತು ಟಿಂಕೋವ ಎಂಬ ಎರಡು ಹಳ್ಳಿಗಳಲ್ಲಿನ ಜನರಲ್ಲಿದ್ದುದನ್ನೆಲ್ಲಾ ಸುಲಿದು ಒಂದೂ ಬಿಡದೆ ಎಲ್ಲಾ ಕಟ್ಟಡಗಳಿಗೂ ಬೆಂಕಿ ಕೊಡಲಾಯಿತು. ಅನಂತರ ಈ ಹಳ್ಳಿಗಳಲ್ಲಿದ್ದ ಸುಮಾರು ೧೨೦ ಮಂದಿ ಸ್ತ್ರೀಯರು, ಮಕ್ಕಳು ಮತ್ತು ಮುದುಕರನ್ನು ಗದ್ದೆಗಳಿಗಟ್ಟಿ ಅಲ್ಲಿ ಅವರ ಮೇಲೆ ಮಿಶನ್ ತೋಪು ಗುಂಡು ಹಾರಿಸಿ ಕೊಲೆ ಮಾಡಲಾಯಿತು. ಕೆರ್ಚಿನಲ್ಲಿ ನಡೆದೊಂದು ಅತ್ಯಾಚಾರವು ಕ್ರೂರತನದ ಪರಮಾವಧಿಗೆ ಮುಟ್ಟಿರುವುದು. ಇತಿಹಾಸದಲ್ಲಿ ಇಂತಹ ಇನ್ನೊಂದು ಘಟನೆ ನಡೆದಿರಲಾರದು. ಕೆರ್ಚಿನ ಜರ್ಮನ್ ಸೇನಾನಾಯಕನು ಎಲ್ಲಾ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸಬೇಕೆಂದು ಹೆತ್ತವರಿಗೆ ಅನುಜ್ಞೆ ಕೊಟ್ಟನು. ಅದರಂತೆ ಹೆತ್ತವರೆಲ್ಲಾ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರು. ೨೪೫ ಮಂದಿ ಮಕ್ಕಳು ಸ್ಲೇಟು ಪುಸ್ತಕ ಹಿಡಿದುಕೊಂಡು ಶಾಲೆಗೆ ಹೋದರು. ಆದರೆ ಅವರು ಅನಂತರ ತಮ್ಮ ಮನೆಗಳಿಗೆ ಹಿಂದಿರುಗಲೇ ಇಲ್ಲ. ಕೆರ್ಚ್ ಪಟ್ಟಣವನ್ನು ರಸ್ಯಾನರು ಜರ್ಮನರಿಂದ ಗೆದ್ದ ಮೇಲೆ, ಪಟ್ಟಣದಿಂದ ೫ ಮೈಲು ದೂರದ ಆಳವಾದ ಕಂದರವೊಂದರಲ್ಲಿ ಈ ಮಕ್ಕಳ ಶವಗಳು ಕಂಡುಹಿಡಿಯಲ್ಪಟ್ಟವು. ಅವರನ್ನು ಜರ್ಮನರು ಕೊಂದು ಶವಗಳನ್ನೊಯ್ದು ಈ ಕಂದಕ್ಕೆ ಹಾಕಿದ್ದರು.

ನೋಟೀಸು.

ಸಿಲರ ಪಂಚ್ಯಾತ ಕೋರ್ಟಿನಲ್ಲಿ
ಪಿ. ನ್ಯಾ ನಂ 16/41
O. P No 1/42

ವೈಬಾಸಪ್ಪಾರಿ ವಾದಿ ಯಿದ್ರಿ,
[illegible] ಪ್ರತಿವಾದಿ ಅರ್ಜಿದಾರ.
[illegible] ಗ್ರಾಮದಲ್ಲಿರುವ [illegible]

[illegible] ಬಗ್ಗೆ ಅರ್ಜಿ [illegible] ತಾ15 6 42ನೇ [illegible] 11ಕ್ಕೆ ಇಟ್ಟಿರುತ್ತದೆ. [illegible] ವ್ಯವಹರಿಸಲಿಕ್ಕೆ [illegible]

K. Laxmapparasu Kundaya Hegde,
President.

[illegible]
22-5-1942

ಸೇಚಾಡುತ್ತಿರುವುದೇಕೆ?

ಓದಲು ಒಳ್ಳೆಯ ನಾಟಕವಿಲ್ಲವೆಂದು ಪೇಚಾಡುತ್ತಿರುವುದೇಕೆ? ಆಧುನಿಕ ಮನೋವೃತ್ತಿಗೊಪ್ಪುವ ಸಾಮಾಜಿಕ ಅಥವಾ ಪೌರಾಣಿಕ ನಾಟಕಗಳು ಬೇಕಾದರೆ ನಮಗೆ ಬರೆಯಿರಿ

ಇತ್ತೀಚೆಗೆ ಪ್ರಕಟವಾದ ಎರಡು ಉತ್ತಮ ನಾಟಕಗಳು

"ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳೆತಕ್ಕೆ ಸಿಕ್ಕಿ ನಲುಗಿ ತಪ್ಪುತ್ತದೆ" ಎಂಬುದನ್ನು ಮನಗಾಣಿಸುವ **ಉಜ್ವಲ ಸಾಮಾಜಿಕ ನಾಟಕ**

◎ ಪ್ರೇಮವಿಜಯ ◎

(ಬರೆದವರು. ಶ್ರೀ ಕೆ ಕೆ ಶೆಟ್ಟಿ)

ಬೆಲೆ 0—12—0. ● ಟ ಖ 0—1—6

ಜನರಲ್ಲಿ ಒಂದು ಹೊಸ ಹುರುಪು ಹುಟ್ಟಿ ಅದು ವೈಯಕ್ತಿಕ ಅಯೋಗ್ಯತೆಯಿಂದಾಗಿ ಫಲಕಾರಿಯಾಗದೆ ವಿನಾಶಕ್ಕೆ ಹೇತುವಾಗುವುದು. ಅದರಿಂದಾಗಿ ಹಲವು ಸಂಸ್ಥೆಗಳು ಗಳಿಗೆಗೊಂದರಂತೆ ಆವಿರ್ಭವಿಸಿ, ಹಿಂತೆಯೆ ಅಂತರ್ಧಾನವಾಗುತ್ತಿರುವವು. ಈ ತತ್ವದ ಸೂಕ್ಷ್ಮ ಪರಿಶೀಲನೆಯನ್ನು ಮನಗಾಣಿಸುವ ನಾಟಕ.

‖‖ 'ರಂಗಭೂಮಿ' ‖‖

(ಬರೆದವರು ಶ್ರೀ ಎಸ್ ವೆಂಕಟರಾಜರು)

●

ನಾಟಕ ಕಂಪೆನಿಯವರ ನೈಜಜೀವನವನ್ನು ವಿನೋದವಾಗಿ ಚಿತ್ರಿಸುವ ನಾಟಕವಿದು

ಬೆಲೆ 0—8—0 ● ಟ ಖ 0—1—0

ಎರಡೂ ಪುಸ್ತಕ ತರಿಸಿಕೊಳ್ಳುವವರಿಗೆ ಟ ಖ ಮುಫತ್ತು. ರೂ 1-4-0ರ ಸ್ಟಾಂಪು ಕಳಿಸಿದರೆ ಯಾ ಮನಿಯಾರ್ಡರು ಮಾಡಿದರೆ ಎರಡು ಪುಸ್ತಕಗಳನ್ನೂ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

Degrees Books Medicine

Free H L M S M P H, M. D. Free Homeo Ayur Unani Naturo degr[ees] by post also—Practitioners also get so[…] Homeo Materiamedica Rs. 5 Hom[eo] Practice book Rs 4 Insanity Cure P[…] Rs 10 Enclose 2 annas stamp:—

Principal Indian Homeopath[ic] Institute & Society (Govt Regd)
P.O. Mahava, (Kathiawar Dt. India

Sidha-Kalpa Kavach (Regd)

No 3 Rs 2, No 2 Rs. 5 No 1 Rs. Special Rs 10, Extra Special Rs. 17. [L]ove marriage health, wealth. Ask a[ny] six questions with M O Re 1/4 and [get] correct answers by return post Life r[…] Rs. phle No V P P Send M. O Fr[…]

P O ts. Prof. Dr N H Chhatbar
2 npam Mahuva (Kathiawar India.)

DIAMONDS! DIAMONDS!

K. R. K. SHET.

Opposite Govt. College, Hampankatta MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected)) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

FIXED DEPOSITS

are now accepted at all our offices, at attractive rates of interest. For further particulars please apply to any of our offices.

ಖಾಯಂ ಠೇವಣಾತಿಗಳು.

ನಮ್ಮ ಬೇಂಕಿನ ಎಲ್ಲಾ ಆಫೀಸುಗಳಲ್ಲೂ ಆಕರ್ಷಣೀಯ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು ಹೆಚ್ಚಿನ ವಿವರಗಳನ್ನು ನಮ್ಮ ಯಾವದೊಂದಾದರೂ ಆಫೀಸಿನಲ್ಲಿ ತಿಳಿಯಬಹುದು.

ದಿ ವಿಜಯಾ ಬೇಂಕ್, ಲಿಮಿಟೆಡ್.

THE VIJAYA BANK, LTD.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆ [illegible] ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೮ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡದ, ವಿಜಾಪುರ ಚಿಕ್ಕೋಡಿಯಲ್ಲಿ—ಕುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ:—ಎಚ್. ವಿರುಪಾಕ್ಷಪ್ಪ ಮರ್ಚಂಟ, ಬಳ್ಳಾರಿ, ಗೋಕಾಕ.—ಸಂಗಪ್ಪ ಶಿವಲಿಂಗಪ್ಪ ಆಂದಾನಿ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಕೆತ್ತ ಮೂಲಧನ	...	...	ರೂ. 1,82,100-0-0
ಕ್ಷೇಮ ನಿಧಿಗಳು	...	...	ರೂ. 1,71,898-2-11

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲೆ.

ಮುರಿಟಕ್ಕೆ ಯುಕ್ತವಾದ ದವಸಗಳ, ಚಿನ್ನಾಭರಣಗಳ, ಜವಾಬ್ದಾರಿಕೆಯಾದ ಇತರ ಭದ್ರತೆಗಳ ಮೇಲೂ ಡಿಮಾಂಡ್ ನೋಟುಗಳ, ಬೀಲು ಹುಂಡಿಗಳ ಮೇಲೂ ಚಿಕ್ಕ ಮತ್ತು ದೊಡ್ಡ ಸಾಲಗಳು ಮತ್ತು ಓವರ್ ಡ್ರಾಫ್ಟುಗಳು ತೃಪ್ತಿಕರವಾದ ಸುಲಭ ದರಗಳಲ್ಲಿ ವರ್ತಕರಿಗೂ ಇತರರಿಗೂ ಈ ಬೇಂಕಿನ ಪ್ರತಿ ಶಾಖೆಯಲ್ಲಿಯೂ ದೊರಕುತ್ತವೆ.

ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮುಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

UDIPI, 16th April.

ಈ ವಾರದ ಭವಿಷ್ಯ.

(೨ನೇ ಪುಟದಿಂದ ಮುಂದರಿದದ್ದು.)

ಕನ್ಯಾ—ದುಃಖದ ಪರಮಾವಧಿಯೇ ಸುಖದ ತಳಹದಿಯೆಂಬುದನ್ನು ನೀವೀಗ ಸ್ವಾನುಭವದಿಂದ ನಿರ್ಧರಿಸಿರುವಿರಿ. ಅನೇಕ ವಾರಗಳಿಂದ ನಿಮ್ಮ ಪರಿಸ್ಥಿತಿಯು ಬಹಳವಾಗಿ ಕೆಟ್ಟಿದ್ದು ಈಗೀಗ ಒಂದೆರಡು ವಾರಗಳಿಂದ ಅದು ಸುಧಾರಿಸುತ್ತಾ ಬಂದು ನಿಮ್ಮಲ್ಲಿ ಆಶೋದಯವನ್ನುಂಟುಮಾಡಿದೆ. ಯಾವ ಉದ್ಯಮದಲ್ಲೂ ಖರ್ಚಿಗಿಂತ ಹೆಚ್ಚಿಗೆ ಲಾಭವಾಗುವದು. ಜನತೆಯೂ ಕೂಡ ನಿಮಗೆ ನೆರವಾಗುವದು. ಹೃದ್ರೋಗ, ಧನನಿಮಿತ್ತ ಕಲಹ ಇತ್ಯಾದಿಗಳಿಂದ ಮನಸ್ಸಿಗೆ ಶಾಂತಿಯಿಲ್ಲವಾದರೂ ಶತ್ರುನಾಶದಿಂದಲೂ ಅರ್ಥಪ್ರಾಪ್ತಿಯಿಂದಲೂ ಸಂತಸಗೊಳ್ಳುವಿರಿ. ತಾ. 29. 30 ಈ 2 ದಿನಗಳು ಇತರ ದಿನಗಳಿಗಿಂತ ಶ್ರೇಯಸ್ಕರಗಳಿವೆ.

ತುಲಾ—ದೇಹಾಲಸ್ಯ ಮತ್ತು ಮನೋರೋಗಗಳು ಬಹುಮಟ್ಟಿಗೆ ಕಡಿಮೆಯಾಗುವವು ಅತನಿಗೆ ಕೊಂಚ ಉತ್ಸಾಹವೂ ತೋರಿಬರುವದು. ನಾರೀ ಪ್ರತ್ಯಕ್ಷ ರಾಕ್ಷಸೀ ಎಂಬ ನಾಣ್ಣುಡಿಯು ಮಾತ್ರ ಈ ವಾರದಲ್ಲಿ ನಿಮಗೆ ಪೂರ್ಣ ಅನುಭವಕ್ಕೆ ಬರಲಿದೆ ಹಲವು ಜನ ಸ್ತ್ರೀಯರೊಡನೆ ಅರ್ಧಾಂಗಿಯೊಡನೆಯೂ ಕೂಡ ಕಲಹವಾಗದಿರದು. ಕುಟುಂಬದಿಂದ ವಿಯೋಗವುಂಟಾಗಬಹುದು. ಶತ್ರುಗಳ ಪೀಡೆಯು ಕಡಿಮೆಯಾಗುವಂತಿಲ್ಲ ವಾರಾದಿಯ ಭಾಗಕ್ಕಿಂತಲೂ ಅಂತ್ಯ ಭಾಗವು ಅನೇಕ್ಕೂ ಸುಖಮಯವಾಗಿ ಕಂಡೀತು. ತಾ 28. 31. 1. 2 ಈ 4 ದಿನಗಳಲ್ಲಿ ದೈವಬಲಾಧಿಕ್ಯವಿರುವುದರಿಂದ ಜನಮನ್ನಣೆ, ವಿಜಯ, ಭೋಗ, ಲಾಭಗಳನ್ನೂ ಹೊಂದುವಿರಿ.

ವೃಶ್ಚಿಕ—'ಕುಲಕ್ಕೆ ಮೃತ್ಯು ಕೊಡಲೀಕಾವು' ಎಂಬಂತೆ ನಿಮ್ಮವರೇ ನಿಮಗೆದುರಾಗಲಿದ್ದಾರೆ ಆದಕಾರಣ ಆತ್ಮೀಯರೆಂಬ ಅಭಿಮಾನಮಾತ್ರದಿಂದ ಅವಾಚ್ಯಾರಿ ಕಾರ್ಯಗಳನ್ನು ವಹಿಸದಿರಿ ಅಂತರಂಗದ ವಿಚಾರಗಳನ್ನೂ ಮುಚ್ಚಿಡಿರಿ. ಕೈಗೆ ಸಿಕ್ಕಿದ ಅಲ್ಪ ಸ್ವಲ್ಪ ಧನವೂ ಸದ್ವಿನಿಯೋಜನಕ್ಕೊದಗಲಾರದು. ವ್ಯರ್ಥ ಸಮಾಲೋಚನೆಗಳು ಹೆಚ್ಚಾಗಿ ಸಂಭವಿಸಲಿವೆ. [illegible] ಬಹುತರದ ಕಷ್ಟನಷ್ಟಗಳು [illegible] ದೇಹಾಲಸ್ಯದಿಂದ [illegible] ಚಿಕಿತ್ಸೆಯು ಹೆಚ್ಚಿನ ಸಂಭವವಿದೆ. ತಾ. 29. 30. 3 4 ಈ ದಿನಗಳು ಕೊಂಚ ಇದ್ದುದರಲ್ಲಿ ಉತ್ತಮವೆನಿಸುವವು

ಧನು—ಈ ವಾರದಲ್ಲಿ ನಿಮಗೆ ಹಿತಶತ್ರುಗಳು ಹೆಚ್ಚಾಗಲಿರುವರು ಅವರ ಉಪಟಳದಿಂದ ಎಷ್ಟೋ ಕಾರ್ಯಗಳು ವಿಪರೀತವಾಗಲಿವೆ. ಮಾತ್ರವಲ್ಲ, ಧನಮಾನಗಳಿಗೂ ಧಕ್ಕೆಯಿದೆ. ಸಮಾಜದಲ್ಲಿ ನಿಮಗೆ ಒಳ್ಳೇ ಸ್ಥಾನಮಾನಗಳು ದೊರಕುವವು. ನಿಮ್ಮ ಮಾತು ವೇದವಾಕ್ಯದಂತೆ ಸಕಲರಿಂದಲೂ ಮನ್ನಿಸಲ್ಪಡುವದು. ಇದಕ್ಕೆ ನಿಮ್ಮ ಚಾತುರ್ಯ ಸಾಹಸಗಳೇ ಕಾರಣಗಳು. ಶಸ್ತ್ರಾಸ್ತ್ರಗಳಿಂದ ದೇಹದಲ್ಲಿ ಗಾಯಾದಿಗಳು ಸಂಭವಿಸುವಂತಿರುವುದರಿಂದ ಆ ಭಾಗದಲ್ಲಿ ಬಹಳೇ ಜಾಗರೂಕರಾಗಿರಿ ತಾ. 29. 30. 3. 4. ವ್ಯರ್ಥ ಖರ್ಚು, ವಿಘ್ನ, ಕಿಂಚಿದಾಲಸ್ಯವೂ ತಲೆದೋರಲಿವೆ.

ಮಕರ— ಸುಖಲಾಭಸತಿಯಾಗಿದ್ದ ಕುಜನು ಈ ವಾರದಲ್ಲಿ ಪ್ರತಿಕೂಲನಾಗುವದರಿಂದ ಈ ಮುಂಚೆ ನಿಮಗಿದ್ದ ಸುಖಸೌಕರ್ಯಗಳು ನಿಮಗೀವಾರದಲ್ಲಿ ಲಭಿಸಲಾರವು. ನೇತ್ರವೇದನೆ, ಮನೋರೋಗ, ಶತ್ರುಪೀಡೆ ಇತ್ಯಾದ್ಯನಿಷ್ಟಗಳು ಸದ್ಯ ಕಾಣಿಸಿಕೊಳ್ಳಲಿವೆ. ಗೃಹಕಲಹದಿಂದ ಗೃಹಕೃತ್ಯದ ಕಾರ್ಯಕಲಾಪಗಳು ಅಸ್ತವ್ಯಸ್ತವಾಗಲಿವೆ. ಆದಕ್ಕಿಂತ ವ್ಯಯವು ಅಧಿಕವಾಗುವುದರಿಂದ ಹಣದ ಬಿಕ್ಕಟ್ಟೂ ಉಂಟಾಗಲಿದೆ. ಮನೋಧೈರ್ಯವು ನಾಸ್ತ್ರವಾಗುವುದರಿಂದ ಉದಾಸೀನರಾಗಿ ಕುಳಿತುಕೊಳ್ಳುವಿರಿ. ತಾ. 31. 1. 2. ಈ ದಿನಗಳನ್ನು ಬಿಟ್ಟರೆ ಇತರ ದಿನಗಳು ಅಷ್ಟೊಂದು ಅನಿಷ್ಟಕಾರಿಗಳಾಗಿರಲಾರವು.

ಕುಂಭ—ಹಲವಾರು ವ್ಯರ್ಥ ಖರ್ಚುಗಳು ಕಡಿಮೆಯಾಗುವವು. ನಿಮ್ಮ ಶಕ್ತಿಯುಕ್ತಿಗಳಿಗೆ ಶತ್ರುಜನರೂ ತಲೆದೂಗುವರು ಗೃಹತಾಪತ್ರಯಗಳು ತುಂಬಾ ಕಂಡುಬಂದರೂ ನಿಮ್ಮ ಮನೋನೆಮ್ಮದಿಗೆ ಭಂಗಕಾರಿಗಳಾಗಲಾರವು. ಆದರೆ ಸ್ವಭಾವತಃ ಚಂಚಲವಾದ ಮನಸ್ಸು ನಿಮ್ಮ ಹತೋಟಿಯಿಂದ ತಪ್ಪಲಿದೆ. ಈ ನಿಮಿತ್ತವಾಗಿ ಕೆಲವೊಮ್ಮೆ ಮಾನಕ್ಷಯವೂ ಸಂಘಟಿಸೀತು. ಸಾಮಾಜಿಕ ಕಾರ್ಯಗಳಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸುವ ಶಕ್ತಿ ನಿಮಗಿರುವುದರಿಂದ ಜನತೆಯು ಮರ್ಯಾದೆಯಿಂದ ಕಾಣುವುದು. ತಾ 28 3. 4. ಈ ದಿನಗಳನ್ನು ಹೊರತು ಇತರ ದಿನಗಳು ಇಷ್ಟಸಿದ್ಧಿಕರಗಳಾಗಿವೆ.

ಮೀನ—ಅಶುಭ ಗ್ರಹರಿಗಿಂತ ಶುಭಗ್ರಹರು ಇಮ್ಮಡಿ ಬಲಶಾಲಿಗಳಿರುವುದರಿಂದ ನಿಮಗೀವಾರವು ಬಹ್ವಂಶ ಸುಖದಾಯಿಯಾಗಿ ಪರಿಣಮಿಸಲಿದೆ. ಕರ್ಮಠರ ಕಾರ್ಯವು ಸಿದ್ಧಿಸುವದು. ಶತ್ರುವರ್ಗವೆಂಬ ವನಕ್ಕೆ ನೀವು ದಾವಾನಲವಂತಿರುವಿರಿ. ಕುಟುಂಬಿಕರೂ ಮಿತ್ರಜನರೂ ನಿಮಗೆ ಸರ್ವತೋಮುಖದಿಂದ ಸಹಾಯಮಾಡುವರು. ಧನಧಾನ್ಯಾದಿಗಳಿಗೇನೂ ಕೊರತೆಯಿರದ ಕಾರಣ ಸಂಸಾರವು ಸಸೂತ್ರವಾಗಿ ಸಾಗಲಿದೆ. ಆದರೆ ಬಂಧುಗಳಿಂದಲೂ ಪುತ್ರರಿಂದಲೂ ನಿಮ್ಮ ಮನಸ್ಸಿಗೆ ಶಾಂತಿಯಿರದು. ವಾರಾದಿಯ 3 ದಿನಗಳನ್ನು ಬಿಟ್ಟು ಇತರ ದಿನಗಳಲ್ಲಿ ನಿಮ್ಮ ಕಾರ್ಯವು ನಿರರ್ಗಲವಾಗಿ ಮುಂದರಿಸದು

SELF ENGLISH KANNADA TUTOR.

ಸ್ವಯಂ ಇಂಗ್ಲೀಷ್ ಬೋಧಿನಿ.

(ದ್ವಿತೀಯ ಮುದ್ರಣವು)

ನವೀನ ವಿಷಯಗಳು ಸೇರಿಸಲ್ಪಟ್ಟಿವೆ.

ಕನ್ನಡ ಓದಲಿಕ್ಕೆ ತಿಳಿದವರು ಈ ಪುಸ್ತಕದಿಂದ ಇನ್ನೊಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ, ಬಹು ಬೇಗನೇ ಕಲಿತುಕೊಳ್ಳಬಹುದು, 884 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಮುದ್ರಿಸಿದೆ, ಬೇಗನೆ ಬರೆಯಿರಿ. ಕ್ರಯ ಪುಸ್ತಕ ಒಂದಕ್ಕೆ ರೂ. 2-2-0.

THE MODERN BOOK Co.,

No 21, Avadhanam Papier 2nd Lane (N. Y.) Choolai, MADRAS.

REGD

ಅಮೃತಾಂಜನ

ತಲೆನೋವು, ಶಿರೋವೇದನ ಉಳುಕು, ಕುತ್ತಿಗೆ, ಭುಜ, ಹಲ್ಲುನೋವುಗಳಿಗೂ ಎದೆನೋವು, ವಾಯುಗಳು, ಚುತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಹುಳುಕಡ್ಡಿ ಮದ್ದು

ಕಜ್ಜಿ, ಪುರಿಕಜ್ಜಿ, ಹುಳುಕಡ್ಡಿ, ಸಿಬ್ಬ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ,

ಅಮೃತಾಂಜನ ಲಿಮಿಟೆಡ್,

ಬೊಂಬಾಯಿ, ಮದ್ರಾಸು, ಕಲ್ಕತ್ತೆ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ಸಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಯೋಗ್ಯ ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ನಾನಾತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ವ ತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸಸ್ಥಾನವು ಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ, ವಿದ್ಯುದ್ದೀಪಾಲಂಕೃತ ಕೋಣೆ

ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವದಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಸುಖನಿವಾಸ.

ಉಡುಪಿ : ಮಂಗಳೂರು.

ಸೀರೆಗಳು

ನೂತನ ಶೃಂಗಗಳಿಂದ ನಮ್ಮ ಜನರಿಗೆ ಬೇಕಾಗುವ ಕಾಗಿನ ... ಮನ್ನಿಸತಕ್ಕ ಸೀರೆಗಳು ... ಕಡಿಮೆ ದರದಲ್ಲಿ ದೊರೆಯುತ್ತವೆ. ... ಮತ್ತು ... ಒಟ್ಟಿಗೆಯೂ ಮಾರಲ್ಪಡುತ್ತವೆ.

ಪಿ. ಎ. ಶೈ. ಬ್ರದರ್ಸ್,
ಆಸ್ಪತ್ರೆ ಬಳಿ, ಉಡುಪಿ

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಶೀಮಠದ ಕಟ್ಟೋಣ.

ಉಡುಪಿ

ಮೇಲ್ದರಗತಿಯ, ಉಪಹಾರ ಮತ್ತು ಭೋಜನಗೃಹ ಪ್ರಯಾಣಿಕರಿಗೆ ವಿಶಿಷ್ಟ ಅನುಕೂಲತೆಗಳಿವೆ ವಿದ್ಯಾರ್ಥಿಗಳಿಗೆ ರಿಯಾಯತಿ ದರಗಳಿವೆ

ಎಚ್. ರಾಮಚಂದ್ರ ನಾಯಕ್.
ಮ್ಯಾನೇಜರ್.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ಪಾರಮಾರ್ಥಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಕಟವಾಗಿ ಕನ್ನಡಿಗರ ಮನಾಯನ ಲಂಕರಿಸಿ ವು ಮನಸ್ಸನ್ನು ಸೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೪ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅನಾಥ ನಂದಿನಿ	ಬೆಲೆ ೧ ೮ ೦
ಭಗವಾನ್ ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನನ್ನ ಗತಿ	೦ ೮ ೦	ಪಾಣಿಗ್ರಹಣ	೦ ೩ ೦

ಕಟಲಾಗಿಗೆ ಬರೆಯಿರಿ —

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ

ಉಡುಪಿ ಏಜಂಟರು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮಧುವಾಗಿದೆ ಅರೆ ಬಿಟ್ಟಿರುವ ನಿಮ್ಮ ಮಕ್ಕಳ ತಿರುಗಿ ನಿಮ್ಮ ಕೈ ಸೇರುವುವು

ಸೀಸೆ ಒಂದಕ್ಕೆ ೧೨ ಆಣೆ;

ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು — ನವಭಾರತ ಬುಕ್ ಡಿಪೋ, ಉಡುಪಿ.

ಸ್ಥಾಪನೆ ಕ್ರೌನ್ ರಬ್ಬರ್ ಸ್ಟಾಂಪ್ ವರ್ಕ್ಸ್ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜನಾನರ ಬೇಜು, ಮೊನೊಗ್ರಾಮ್, ಸೀಲ ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.
Approved firm by the Govt. Mysore
Certified by the Agent of the Govt. of India in Ceylon

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಸ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಆಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೬ ಬಿನ್ನದ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ಆರೂವರೆ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

... AT THE NAVAYUGA PRESS UDIPI